ಕನ್ನಡ ವೇದ ಭಾಷ್ಯ ಸಂಪುಟ-೧೩

ಋಗ್ವೇದ ಭಾಷ್ಯ

ಭಾಗ-೧

ಸ್ವಾಮೀ ದಯಾನಂದ ಸರಸ್ವತೀ

ಋಗ್ವೇದ
ಯಜುರ್ವೇದ
ಸಾಮವೇದ
ಅಥರ್ವವೇದ



ವೇದ ಭಾಷ್ಯ ಪ್ರಕಾಶನ ಸಮಿತಿ
ಬೆಂಗಳೂರು

ಕನ್ನಡ ವೇದಭಾಷ್ಯ ಯೋಜನೆ ಸಂಪುಟ - ೧೩

ಋಗ್ವೇದ ಭಾಷ್ಯ

{ಭಾಗ - ೧}

ಭಾಷ್ಯಕಾರರು :

ಸ್ವಾಮೀ ದಯಾನಂದ ಸರಸ್ವತೀ

ಭಾಷ್ಯಾನುವಾದ:

ಡಾ. ಸುಕುಮಾರ ಶಾಸ್ತ್ರೀ, ಬಿ.ವಿ. ಯತಿರಾಜ್, ಶ್ರುತಿಪ್ರಿಯ ಮತ್ತು ವಾ.ವೀ.ವೆಂಕಟೇಶ

ಪ್ರಧಾನ ಸಂಪಾದಕರು : **ಪಂ. ಸುಧಾಕರ ಚತುರ್ವೇದೀ**

ಸಂಪಾದಕರು : **ಶ್ರುತಿಪ್ರಿಯ**

ವೇದಭಾಷ್ಯ ಪ್ರಕಾಶನ ಸಮಿತಿ

ಸ್ವಾಮೀ ಶ್ರದ್ಧಾನಂದ ಭವನ, ವಿಶ್ವೇಶ್ವರಪುರಂ,

ಬೆಂಗಳೂರು - 560 004

ದೂರವಾಣಿ: **080 - 26 60 29 14**

ವೈವಸ್ವತ ಮನ್ವಂತರ   ೨೮ನೆಯ ಚತುರ್ಯುಗ ಯುಗಾಬ್ದ ೫೧೦೮   ಶ್ರೀ ಸರ್ವಜಿತ್ ಸಂ।। ಮಾರ್ಗಶಿರ

ಪ್ರತಿಗಳು **4000**   ಇಸವಿ **2007**   ಸದಸ್ಯರ ವಿತರಣೆಗೆ

ऋग्वेद भाष्यम् (प्रथमो भाग:)

RIGVEDA BHASHYAM - (PART I)

Rigveda commented upon by (in Sanskrit & Hindi)	-	Swami Dayananda Saraswathi
Kannada Translation	-	Dr. Sukumar Shastri/B.V. Yathiraj/
	-	Shrutipriya/ Va.Vee.Venkatesha
First Edition	-	2007 A.D.
Copies	-	4000
Pages	-	729+15
D.T.P.	-	*Shanthala / Shivaranjini*
Cover page Design by	-	B.K.S. Varma, Artist, Bangalore
Printed by	-	Abhimani Publications Ltd Bangalore

Published by :

Vedabhashya Prakashana Samithi,

Swami Shraddhananda Bhavan Vishveswarapuram, Bangalore - 560 004

Phone : 080- 26 60 29 14

ವೇದಭಾಷ್ಯ ಪ್ರಕಾಶನ ಸಮಿತಿ

ಸಂಪಾದಕ ಮಂಡಳಿ

ಪಂ. ಸುಧಾಕರ ಚತುರ್ವೇದೀ	ಪ್ರಧಾನ ಸಂಪಾದಕರು
ಶ್ರುತಿಪ್ರಿಯ	ಸಂಪಾದಕರು
ಪಂ. ಉಪೇಂದ್ರ ಭೂಪಾಲ	ಸದಸ್ಯರು
ಸುಧಾಕರ ಶರ್ಮಾ	ಸದಸ್ಯರು
ಡಾ. ಸುಕುಮಾರ ಶಾಸ್ತ್ರೀ	ಸದಸ್ಯರು
ವಾ. ವೀ. ವೆಂಕಟೇಶ	ಸದಸ್ಯರು

ಧರ್ಮದರ್ಶಿ ಮಂಡಳಿ

ವೈ. ವಿ. ಪಾರ್ಥಸಾರಥಿ, ಅಧ್ಯಕ್ಷರು
ಡಾ. ಪುಟ್ಟಶಂಕರಪ್ಪ, ಕಾರ್ಯದರ್ಶಿಗಳು
ಎಸ್. ನಂಜುಂಡಪ್ಪ ಕೋಶಾಧಿಕಾರಿಗಳು
ರಮಾನಂದ ಆರ್ಯ
ಕೈಪು ಶೇಷಾದ್ರಿ
ಎ. ನಂಜುಂಡಪ್ಪ
ಎಚ್. ಬಿ. ರೆಡ್ಡಪ್ಪ, ಅಧ್ಯಕ್ಷರು, ಆರ್ಯಸಮಾಜ, ವಿ.ವಿ.ಪುರಂ.
ಆರ್. ಶಶಿಧರ, ಕಾರ್ಯದರ್ಶಿ, ಆರ್ಯಸಮಾಜ, ವಿ.ವಿ.ಪುರಂ.
ಬಿ. ವಿ. ಯತಿರಾಜ್

ಪ್ರಧಾನ ಸಂಪಾದಕರ ನುಡಿ

ಋಗ್ವೇದದ ಕನ್ನಡ ಭಾಷಾಂತರವನ್ನು ವಾಚಕರ ಕೈಗಿಡುವಾಗ ಪೀಠಿಕೆಯ ರೂಪದಲ್ಲಿ ನಾಲ್ಕು ಮಾತುಗಳನ್ನಾಡುವುದು ಆವಶ್ಯಕವೆಂದು ತೋರುತ್ತದೆ. ಈ ಕನ್ನಡ ಭಾಷ್ಯವು ಸ್ವಾಮಿ ದಯಾನಂದ ಸರಸ್ವತಿಗಳ ಸಂಸ್ಕೃತ - ಹಿಂದಿ ಭಾಷ್ಯವನ್ನು ಅನುಸರಿಸಿಯೇ ಮಾಡಲ್ಪಟ್ಟಿದೆ. ಇದನ್ನು ಅಕ್ಷರಶಃ ಅನುವಾದವೆಂದು ಭಾವಿಸದೆ ಛಾಯಾನುವಾದವೆಂದು ಭಾವಿಸಬಹುದು. ಎಲ್ಲಿಯವರೆಗೆ ಸ್ವಾಮೀಜಿಯವರ ಭಾಷ್ಯ ಲಭ್ಯವಾಗಿದೆಯೋ ಅಲ್ಲಿಯವರೆಗೆ ಪದ-ಪದವಲ್ಲದಿದ್ದರೂ ಅವರದೇ ಶೈಲಿಯನ್ನು ಅನುಸರಿಸಿದ್ದೇವೆ.

ಋಗ್ವೇದವನ್ನು ಪಾರಂಪರಿಕವಾಗಿ ಎಂಟು ಅಷ್ಟಕಗಳಲ್ಲಿ ಮತ್ತು ಹತ್ತು ಮಂಡಲಗಳಲ್ಲಿ ವಿಭಾಗಿಸಲಾಗಿದೆ. ಅಷ್ಟಕಗಳಿಗಿಂತಲೂ ಮಂಡಲದ ಗಣನೆ ಸುಲಭವಾಗಿರುವುದರಿಂದ ನಾವು ಮಂಡಲ, ಸೂಕ್ತ ಮತ್ತು ಮಂತ್ರ ಇದೇ ಕ್ರಮವನ್ನು ಅನುಸರಿಸಿದ್ದೇವೆ.

ಈವರೆಗೆ ಸಿಕ್ಕಿರುವ ಸಾಯಣ, ಉವ್ವಟ, ಮಹೀಧರ, ವೆಂಕಟಮಾಧವ ಇವರೆಲ್ಲರೂ ಪರಂಪರೆಯಿಂದ ನಡೆದು ಬಂದ ಕ್ರಮವನ್ನು ಅನುಸರಿಸಿದ್ದಾರೆಯೇ ಹೊರತು ಸ್ವಾಮಿ ದಯಾನಂದರಂತೆ ವೈಜ್ಞಾನಿಕವೂ, ಬುದ್ಧಿಪೂರ್ವಕವೂ ಆದ ಶೈಲಿಯನ್ನು ಅನುಸರಿಸಿಲ್ಲ. ಹೀಗಾಗಿ ವೇದಗಳು ದಿನದಿನದ ಜೀವನಕ್ಕೆ ಬೇಕಾದ ಮಾರ್ಗದರ್ಶನ ನೀಡದೆ ಕೇವಲ ಪರಲೋಕದ ಮಾತುಗಳನ್ನೇ ಹೇಳುತ್ತವೆ ಎಂಬ ಭಾವನೆ ಜನರ ಮನಸ್ಸಿಗೆ ಮೂಡಿಬಂದಿದೆ. ಇದಕ್ಕೆ ಕಾರಣವೂ ಇದೆ. ನಮ್ಮವರೇ ಸ್ವತಃ ಯಜ್ಞ ಯಾಗಾದಿಗಳ ಮಟ್ಟಿಗೆ ವೇದಗಳು ಬೇಕಾಗಿವೆ; ಅಧ್ಯಾತ್ಮ ವಿದ್ಯೆ ಅದರಲ್ಲಿಲ್ಲ, ಅಧ್ಯಾತ್ಮ ವಿದ್ಯೆ ಉಪನಿಷತ್ತುಗಳ ಕೊಡುಗೆಯಾಗಿದೆ ಎಂಬ ಭಾವನೆಯನ್ನು ಪ್ರಚುರಪಡಿಸಿದ್ದಾರೆ. ಬಹುಶಃ ಆಚಾರ್ಯರುಗಳು ಸಂಹಿತೆಗಳೊಂದಿಗೆ ಉಪನಿಷತ್ತುಗಳನ್ನೂ ಕೂಡ ಶ್ರುತಿ ಎಂದೇ ಸಾಧಿಸುತ್ತ ಬಂದಿದ್ದಾರೆ. ವೈದಿಕ ಭಾಷೆಯೇ ಬೇರೆ, ಉಪನಿಷತ್ತುಗಳ ಭಾಷೆಯೇ ಬೇರೆ. ಉಪನಿಷತ್ತುಗಳನ್ನು ಸಾಧಾರಣ ಸಂಸ್ಕೃತಜ್ಞರೂ ಸಹ ಅರ್ಥಮಾಡಿಕೊಳ್ಳಬಲ್ಲರು. ಹೀಗಾಗಿ ವೇದಗಳನ್ನು ಕೇವಲ ಮಂತ್ರ ಪಾಠಕ್ಕಾಗಿ ಉಳಿಸಿಕೊಂಡು ಸಸ್ವರ ಪಾಠ ಮಾಡಿದ ಮಾತ್ರಕ್ಕೆ ಇಷ್ಟಾರ್ಥ ಸಿದ್ಧಿಯಾಗುವುದು ಎಂಬ ತಪ್ಪು ಕಲ್ಪನೆ ಜನಜನಿತವಾಗಿದೆ. ಈ ಎಲ್ಲ ತಪ್ಪು ಕಲ್ಪನೆಗಳನ್ನು ನಿರಾಕರಿಸಲೆಂದೇ ಸ್ವಾಮಿ ದಯಾನಂದ ಸರಸ್ವತಿಯವರು ವೇದ ಭಾಷ್ಯವನ್ನು ರಚಿಸಿದ್ದಾರೆ.

ಸ್ವಾಮಿ ದಯಾನಂದ ಸರಸ್ವತಿಯವರು ತಮ್ಮ ವೇದಭಾಷ್ಯವನ್ನು ಶಿಕ್ಷಾ, ವ್ಯಾಕರಣ, ಛಂದ, ನಿರುಕ್ತ, ಜ್ಯೋತಿಷ ಹಾಗೂ ಕಲ್ಪ ಎಂಬ ವೇದಾಂಗಗಳನ್ನು ಆಧರಿಸಿ ರಚಿಸಿದ್ದಾರೆ. ಹೀಗಾಗಿ ಲುಪ್ತವಾಗಿದ್ದ ಆರ್ಷ ಪರಂಪರೆಯನ್ನು ಮತ್ತೆ ಎತ್ತಿ ಹಿಡಿದು ವೇದಗಳ ಹಿರಿಮೆಯನ್ನು ಪುನಃ ಸ್ಥಾಪಿಸಿದ್ದಾರೆ.

ಸೃಷ್ಟಿಯ ಆರಂಭದಲ್ಲಿ ಪರಮಾತ್ಮನು ಮಾನವರಿಗೆ ಅವರ ಅಂತಃಕರಣಗಳಲ್ಲಿ ಮಂತ್ರಗಳನ್ನು ಪ್ರೇರೇಪಿಸುವುದರ ಜೊತೆಗೆ ಅವುಗಳ ಅರ್ಥವನ್ನು ಸ್ಫುರಣಗೊಳಿಸಿದನು. ಈ ರೀತಿ ಪ್ರೇರಣೆ ಜ್ಞಾನ ಹಾಗೂ ಅದರ ಅರ್ಥವನ್ನು ಗ್ರಹಿಸಿದವರು ಇತರರಿಗೆ ಆ ಜ್ಞಾನವನ್ನು ನೀಡಿದರು. ಹೀಗೆ ಪಡೆದವರು ಅವರ ಮುಂದಿನ ಪೀಳಿಗೆಗೂ ಈ ಜ್ಞಾನವನ್ನು ಕ್ರಮವಾಗಿ ದಾಟಿಸಿದರು. ಮುಂದೆ ಸಂಹಿತಾ ರೂಪದಲ್ಲಿರುವ ಮಂತ್ರಗಳನ್ನು ಪದಚ್ಛೇದದೊಂದಿಗೆ ವೇದಜ್ಞರು ತೋರಿಸಿದಾಗ ಶಿಷ್ಯರು ಅವುಗಳ ಅರ್ಥಗಳನ್ನು ತಿಳಿಯಲು ಶಕ್ತರಾದರು. ಕಾಲಕ್ರಮೇಣ ಶಿಷ್ಯರಲ್ಲಿ ಗ್ರಹಣ ಶಕ್ತಿಯು ಕುಂದಿದಾಗ ಇವರುಗಳು ವ್ಯಾಖ್ಯಾನ ರೂಪದಲ್ಲಿ ಸ್ಪಷ್ಟೀಕರಣ ನೀಡತೊಡಗಿದರು. ಈ ಸ್ಪಷ್ಟೀಕರಿಸಲ್ಪಟ್ಟ ವ್ಯಾಖ್ಯಾನಗಳನ್ನು ವೇದ ಶಾಖೆಗಳೆಂದು ಗುರುತಿಸಲಾಯಿತು. ನಂತರ ಮಂತ್ರದ್ರಷ್ಟಾ ಋಷಿ ಮತ್ತು ಅವರ ಶಿಷ್ಯ ಪರಂಪರೆ ಸಮಾಪ್ತವಾದ ಮೇಲೆ ತರ್ಕದಿಂದ ವೇದ ಮಂತ್ರಗಳ ಅರ್ಥವನ್ನು ಗ್ರಹಿಸುವ ರೂಢಿ ಪ್ರಚಲಿತವಾಯಿತು. ಇವುಗಳಿಗೆ ಸಹಾಯಕವಾಗಿ ಶಿಕ್ಷಾ, ಕಲ್ಪ, ನಿರುಕ್ತ, ಜ್ಯೋತಿಷ, ವ್ಯಾಕರಣ, ಛಂದ ಇವುಗಳ ಸಹಾಯದಿಂದ ವೇದಾರ್ಥವನ್ನು ಗುರುತಿಸುವ, ಗುರುತಿಸಿದ ವೇದಾರ್ಥವನ್ನು ರಕ್ಷಿಸುವ ಪರಂಪರೆ ಪ್ರಾರಂಭವಾಯಿತು. ಸುಧೀರ್ಘ ಕಾಲದವರೆಗೆ ಈ ಪರಂಪರೆ ಉಳಿದು ಬೆಳೆದು ಬಂತು.

ವೇದಮಂತ್ರಗಳ ವ್ಯಾಖ್ಯಾನಕ್ಕಾಗಿಯೇ ರೂಪಗೊಂಡವು ಬ್ರಾಹ್ಮಣ ಗ್ರಂಥಗಳು. ಯಾಜ್ಞಿಕ ಪರಂಪರೆ ಅತಿ ಪುಷ್ಟವಾಗಿ ವೇದಗಳು ಯಜ್ಞದ ವಿನಿಯೋಗಕ್ಕಾಗಿಯೇ ಇವೆ ಎಂಬ ಭಾವನೆ ಬಂದಾಗ ಬ್ರಾಹ್ಮಣ ಗ್ರಂಥಗಳು ತಮ್ಮ ಯಥಾರ್ಥ ಉದ್ದೇಶ್ಯವನ್ನೂ ಸ್ವರೂಪವನ್ನೂ ಕಳೆದುಕೊಂಡು ಯಜ್ಞ ವ್ಯಾಖ್ಯಾನ ಗ್ರಂಥಗಳಾಗಿ ಉಳಿದವು. ಇವುಗಳ ಪುಷ್ಟಿಗಾಗಿ ಶ್ರೌತ ಸೂತ್ರಗಳೂ, ಕಲ್ಪಸೂತ್ರಗಳೂ ರಚಿಸಲ್ಪಟ್ಟವು. ಆ ಯಜ್ಞ ಪರಂಪರೆಯೂ ಕಾಲಕ್ರಮೇಣ ಭ್ರಷ್ಟವಾಗಿ ಪಶು ಬಲಿ, ನರಬಲಿಯಂತಹ ವಿಕೃತಿಗಳು ವೇದಗಳ ಹೆಸರಿನಲ್ಲಿಯೇ ತಲೆ ಎತ್ತಿದವು. ಮುಂದೆ ವಿದೇಶಿಯರ ದಾಳಿನಡೆದು ಆ ವಿದೇಶಿ ಚಿಂತನೆಗಳನ್ನು ಅಳವಡಿಸಿಕೊಂಡ ವೇದಗಳ ಅಪವ್ಯಾಖ್ಯಾನಗಳು ಪ್ರಾರಂಭವಾದವು.

ಇಂತಹ ವಿಕಟ ಪರಿಸ್ಥಿತಿಯಲ್ಲಿ ವೇದಗಳ ಗೌರವವನ್ನು, ಅವುಗಳ ಪ್ರಾಚೀನ ಪರಂಪರೆಯನ್ನು ಎತ್ತಿ ಹಿಡಿಯಲು ಜಗತ್ತು ಸ್ವಾಮಿ ದಯಾನಂದ ಸರಸ್ವತಿಯವರ ಬರುವಿಕೆಯವರೆಗೂ ಕಾಯಬೇಕಾಯಿತು. ವಿದೇಶಿ ಗುಲಾಮಗಿರಿಯನ್ನು ಧಿಕ್ಕರಿಸಿ, ಜನತೆಯಲ್ಲಿ ಆತ್ಮಗೌರವವನ್ನು ಉದ್ದೀಪಿಸಲು ಪ್ರಾಚೀನ ವೇದಪರಂಪರೆಯ ಪುನರುದ್ಧಾರವೇ ತಾರಕ ಎಂಬುದನ್ನು ಸ್ವಾಮಿ ದಯಾನಂದರು ಕಂಡುಕೊಂಡು ಈ ನಿಟ್ಟಿನಲ್ಲಿ ಉದ್ಯಮಶೀಲರಾದರು. ವೇದಗಳನ್ನು ಸಮಸ್ತ ಸತ್ಯ ವಿದ್ಯೆಗಳ ಪುಸ್ತಕವೆಂದು ಪ್ರತಿಪಾದಿಸುವುದಕ್ಕಾಗಿ ಹಾಗೂ ವೇದದ ಅಪೌರುಷೇಯ ಸಿದ್ಧಾಂತವನ್ನು ಬೆಳಕಿಗೆ ತರುವುದಕ್ಕಾಗಿ, ವೇದದ ಆಜ್ಞಾಪಾಲನೆಯೇ ಧರ್ಮ; ಇದಕ್ಕೆ ವಿರುದ್ಧವಾದದುದು ಅಧರ್ಮ ಎಂದು ತೋರಿಸುವುದಕ್ಕಾಗಿ ಅವರು ವೇದ ಭಾಷ್ಯವನ್ನು ಕೈಗೆತ್ತಿಕೊಂಡರು. ಇದಕ್ಕಾಗಿ ಮೊಟ್ಟಮೊದಲು ಚತುರ್ವೇದ ವಿಷಯ ಸೂಚಿ ಎಂಬ ಪುಸ್ತಕವನ್ನು ರಚಿಸಿ ಇದರಲ್ಲಿ ನಾಲ್ಕೂ ವೇದಗಳ ಪ್ರತ್ಯೇಕ ಅಧ್ಯಾಯ, ವರ್ಗ, ಸೂಕ್ತ, ದಶತಿ ಹಾಗೂ ಮಂತ್ರ ಮೊದಲಾದವುಗಳಲ್ಲಿನ ಪ್ರತಿಪಾಧ್ಯ ವಿಷಯಗಳ ಉಲ್ಲೇಖ ಮಾಡಿದರು. ಈ ಎಲ್ಲ ವಿವರಗಳನ್ನು ಈಗಾಗಲೇ ಪ್ರಕಟಿಸಿರುವ ಪ್ರಥಮ ಸಂಪುಟವಾಗಿ ಮೂಡಿಬಂದಿರುವ ಅವರ ಋಗ್ವೇದಾದಿ ಚತುರ್ವೇದ ಭಾಷ್ಯ ಭೂಮಿಕೆಯಲ್ಲಿ ತೋರಿಸಲಾಗಿದೆ. ಸ್ವಾಮಿ ದಯಾನಂದರ ಭಾಷ್ಯದ ಉದ್ದೇಶ್ಯ ಹಾಗೂ ಶೈಲಿಯನ್ನು ಆ ಸಂಪುಟದಲ್ಲಿ ಸ್ಪಷ್ಟವಾಗಿ ಪ್ರಕಾಶಪಡಿಸಿರುವುದರಿಂದ ಇಲ್ಲಿ ಅದರ ವಿಸ್ತಾರ ಮಾಡಬೇಕಾದ ಅಗತ್ಯವಿಲ್ಲ. ಪ್ರಾರಂಭದ ಮಂತ್ರದಲ್ಲಿ ಸ್ವಾಮಿ ದಯಾನಂದರು ಯಾವ ಶೈಲಿಯಲ್ಲಿ ಋಷಿ, ದೇವತಾ, ಛಂದಸ್ಸು, ಸ್ವರಗಳನ್ನು ಮಂತ್ರದ ಪ್ರಾರಂಭದಲ್ಲಿ ನೀಡಿ ನಂತರ ಮಂತ್ರದ ಪದಪಾಠ, ಪದಾರ್ಥ, ಅನ್ವಯ, ವ್ಯಾಖ್ಯಾನ ಇವುಗಳನ್ನು ಪ್ರಮಾಣ ಸಹಿತವಾಗಿ ಸಂಸ್ಕೃತದಲ್ಲಿ ನೀಡಿದ್ದಾರೋ ಅದೇ ರೀತಿ ತೋರಿಸಲಾಗಿದೆ. ಮುಂದೆ ಗ್ರಂಥ ವಿಸ್ತಾರದ ಶಂಕೆಯಿಂದ ಕೇವಲ ಕನ್ನಡದಲ್ಲಿ ಪ್ರತಿಪದಾರ್ಥವನ್ನೂ, ಭಾವಾರ್ಥವನ್ನೂ ತೋರಿಸಲಾಗಿದೆ.

ದಯಾನಂದ ಭಾಷ್ಯದ ವಿಶೇಷತೆಯು ಅದರ ಸಾರ್ವಕಾಲಿಕ ಉಪಯೋಗಿತ್ವದಲ್ಲಿದೆ. ಯಾಜ್ಞಿಕರಂತೆ ಕೇವಲ ಕರ್ಮಕಾಂಡಕ್ಕಷ್ಟೇ ವೇದಗಳನ್ನು ಸೀಮಿತಗೊಳಿಸದೆ, ಪಾಶ್ಚಿಮಾತ್ಯ ಭಾಷ್ಯಕಾರರಂತೆ ಕೇವಲ ಇತಿಹಾಸ ನಿರೂಪಣೆಗಾಗಿಯೇ ಬಳಸದೆ ವೇದಾರ್ಥ ಚಿಂತನೆಯನ್ನು ಅಧ್ಯಾತ್ಮಪರಕವಾಗಿಯೂ ಲೌಕಿಕ ಬದುಕಿಗೆ ಬೇಕಾದ ವ್ಯಕ್ತಿಗತ, ಪಾರಿವಾರಿಕ, ಸಾಮಾಜಿಕ, ರಾಷ್ಟ್ರೀಯ ಹಾಗೂ ವೈಶ್ವಿಕ ಉನ್ನತಿಯ ಅನುಪಮ ಸಾಧನವಾಗಿಯೂ ವೇದಗಳ ಹಿರಿಮೆಯನ್ನು ಎತ್ತಿ ಹಿಡಿದಿದ್ದಾರೆ. ಇಲ್ಲಿ ಐತಿಹಾಸಿಕ ಕಥಾನಕಗಳು ಯಾವುದೋ ಒಂದು ಸೀಮಿತ ಕಾಲಘಟ್ಟಕ್ಕೆ ಸೇರಿದ್ದಾಗಿರದೆ ಸಾರ್ವಕಾಲಿಕ ಸ್ವರೂಪವನ್ನು ಬಿತ್ತರಿಸುವಂತಹವು ಆಗಿವೆ. ದಯಾನಂದ ಭಾಷ್ಯದಲ್ಲಿ, ವೇದಗಳಲ್ಲಿ ಪಶುಬಲಿ, ನರಬಲಿ, ಬಾಲ್ಯವಿವಾಹ, ವೃದ್ಧವಿವಾಹ, ಸ್ತ್ರೀಶೋಷಣೆ, ವ್ಯಕ್ತಿಗತ ಬದುಕಿನಲ್ಲಿ ಮಾಂಸಾಹಾರ-ಮದ್ಯಪಾನ, ಜನ್ಮದಿಂದ ಬರುವ ಜಾತಿ-ಪದ್ಧತಿ, ಮೇಲುಕೀಳು ಭಾವನೆ ಇವೆಲ್ಲದರ ಸ್ಪಷ್ಟ ನಿರಾಕರಣೆಯನ್ನು ಕಾಣಬಹುದು. ವೇದಗಳನ್ನು ಈ ರೀತಿ ಇಹ ಪರಗಳೆರಡರ ಸಮನ್ವಯಕ್ಕಾಗಿ ಜಗತ್ತಿನೆದುರು ಪುನಃ ಸ್ಥಾಪಿಸಿದ ಶ್ರೇಯಸ್ಸು ಈ ಅನುಪಮ ಭಾಷ್ಯಕಾರರಾದ ದಯಾನಂದರಿಗೆ ಸಲ್ಲುತ್ತದೆ.

- ಸುಧಾಕರ ಚತುರ್ವೇದೀ

* * *

ಪ್ರಕಾಶಕರ ಎರಡು ಮಾತು

ಮಾನವೀಯತೆಯ ಮೇರುಕೃತಿ ವೇದಗಳು. ಮಾನವ ಸಮಾಜ ಸುಖ ಶಾಂತಿಯಿಂದ ಬಾಳಲು ಪ್ರೇರಣೆ ನೀಡುವ ವೇದಗಳು ಯಾವುದೇ ನಿಟ್ಟಿನಿಂದ ನೋಡಲಿ, ಸಾರ್ವಭೌಮ ಹಾಗೂ ಸಾರ್ವಕಾಲಿಕವಾದವುಗಳಾಗಿವೆ. ವೇದಗಳು ಪ್ರತಿಪಾದಿಸುವ ರಾಷ್ಟ್ರೀಯತೆ, ಪ್ರಕೃತಿ ಸಂಪತ್ತಿನ ಮಾಲಿಕತ್ವ, ಎಲ್ಲರಿಗೂ ಜ್ಞಾನದ ಬೆಳಕನ್ನು ಹಂಚುವ ವಿಶಾಲತೆ, ಪ್ರಾಣಿ- ಪಕ್ಷಿ-ಕೀಟ- ಪತಂಗಗಳೂ ಸೇರಿದಂತೆ ಜಗತ್ತಿನ ಎಲ್ಲ ಸಹಜೀವಿಗಳೊಂದಿಗೆ ಸಹಬಾಳ್ವೆ, ಅವು ಪ್ರತಿಪಾದಿಸುವ ಮನನ ಶೀಲತೆ, ಅನುಕಂಪ, ಜ್ಞಾನ- ಕರ್ಮ- ಉಪಾಸನೆಗಳ ಸುಂದರ ಸಮನ್ವಯ - ಇವುಗಳ ಬಗೆಗೆ ಪರಿಶೀಲನಾತ್ಮಕ ನೋಟವನ್ನು ಹಾಯಿಸಿದಾಗ ವೇದಗಳ ಹಿರಿಮೆ-ಗರಿಮೆಗಳು ಸಹಜವಾಗಿಯೇ ಅರಿವಿಗೆ ಬರುತ್ತವೆ. ಮುಕ್ತ ಮನಸ್ಸಿನಿಂದ, ಪೂರ್ವಗ್ರಹ ಪೀಡಿತವಲ್ಲದ ದೃಷ್ಟಿಯಿಂದ ನೋಡುವವರಾಗಬೇಕು ನಾವು, ಅಷ್ಟೇ!

ಸುಖ-ಶಾಂತಿ- ನೆಮ್ಮದಿಯಿಂದ ಬಾಳಬೇಕೆಂಬುದು ಮಾನವರೆಲ್ಲರ ಸಹಜ ಕಾಮನೆ. ಅದನ್ನು ಹೊಂದುವ ಸಾಧನಗಳ ಬಗೆಗೆ ಅಭಿಪ್ರಾಯ ಭೇದವಿರಬಹುದಾದರೂ, ಈ ಗುರಿಯ ಬಗೆಗೆ ಎಲ್ಲರದೂ ಒಂದೇ ನೆಟ್ಟ ನೋಟ; ಸಮರ್ಪಿತವಾದ ಚಿತ್ತ. ಆದರೆ ಈ ಮಾನವ ಸಹಜ ಕಾಮನೆಯು ಕ್ರಿಯಾನ್ವಿತವಾಗದಿರಲು ಕಾರಣ, ಸಾಧನಗಳ ಕುರಿತ ಅಜ್ಞಾನ ಅಥವಾ ಅಲ್ಪಜ್ಞಾನ. ವೇದಗಳು ಈ ಬಗ್ಗೆ ಸಂದೇಹಕ್ಕೆಡೆಯಿಲ್ಲದ ಮಾತುಗಳಲ್ಲಿ ಮಾರ್ಗದರ್ಶನ ಮಾಡಬಲ್ಲವಾದದುರಿಂದಲೇ ಅವು ನಮಗೆ ಸ್ವೀಕರಿಸಲು ಯೋಗ್ಯವಾಗಿವೆ.

ವೇದಗಳು ಪ್ರತಿಪಾದಿಸುವ ರಾಷ್ಟ್ರೀಯತೆಯ ಬಗೆಗೆ ಗಮನ ಹರಿಸಿದರೆ ಅವುಗಳ ಅನನ್ಯ ವಿಶಾಲ ಮನೋಭಾವವು ಗೋಚರವಾಗುತ್ತದೆ. ವೇದಗಳ ರಾಷ್ಟ್ರೀಯತೆಯು ಇಂದಿನ ಮಾನವ ನಿರ್ಮಿತ ರಾಷ್ಟ್ರೀಯತೆಗಿಂತಲೂ ಭಿನ್ನವಾದುದು. ಮಾನವ ನಿರ್ಮಿತ ರಾಷ್ಟ್ರಕ್ಕೂ ವೇದಗಳು ಹೇಳುವ ರಾಷ್ಟ್ರಕ್ಕೂ ಅಜಗಜಾಂತರ. ಮಾನವ ನಿರ್ಮಿತ ಗಡಿಗಳು ವೇದಗಳಿಗೆ ಒಪ್ಪಿತವಲ್ಲ. ವೇದಗಳ ಪ್ರಕಾರ ಇಡೀ ಪೃಥ್ವಿಯೇ ನಮ್ಮ ರಾಷ್ಟ್ರ. ಭೂಮಾತೆಯೇ ನಮ್ಮ ತಾಯಿ; ಭೂಮಿಯಲ್ಲಿ ವಾಸಿಸುವ ಜೀವಿಗಳೆಲ್ಲರೂ ಆಕೆಯ ಮಕ್ಕಳು. ಆದುದರಿಂದ ಭೂಮಿಯಲ್ಲಿ ವಾಸಿಸುವವರೆಲ್ಲರೂ ಒಂದೇ ಕುಟುಂಬದ ಅಣ್ಣ ತಮ್ಮಂದಿರು- ಅಕ್ಕತಂಗಿಯರು. ವೇದಗಳ ಈ ದೃಷ್ಟಿಕೋನ ನಮ್ಮದಾದಾಗ ಜಗತ್ತಿನಲ್ಲಿ ಕಲಹ, ಯುದ್ಧ , ಹಿಂಸಾಚಾರಗಳು ತಪ್ಪಿಹೋಗಿ ಶಾಂತಿ ನೆಮ್ಮದಿ ನೆಲೆಸುತ್ತವೆ. ಮಾನವನು ತನ್ನ ನಿಹಿತ ಸ್ವಾರ್ಥಕ್ಕಾಗಿ ರೂಪಿಸಿಕೊಂಡ ಗಡಿಗಳು ಕೃತಕ ಹಾಗೂ ಪರಿವರ್ತನ ಶೀಲ. ಪ್ರಕೃತಿ ಸಂಪತ್ತಿನ ಮೇಲೆ ಒಡೆತನ ಸ್ಥಾಪಿಸಲು ಮಾಡಿದ ತಂತ್ರ ಮಾತ್ರ. ಇವು ಇರುವವರೆಗೆ ಯುದ್ಧ ಭಯ, ಹಿಂಸೆಯ ಭಯ, ಅಸುರಕ್ಷತೆಯ ಭಯ ತಪ್ಪಿದ್ದಲ್ಲ. ಈ ಕೃತಕ ಗಡಿಗಳ ರಕ್ಷಣೆಗಾಗಿ ವಿನಿಯೋಗಿಸುವ ಶಕ್ತಿ, ಮಾನವ ಸಂಪತ್ತು, ಅಮೂಲ್ಯ ಸಮಯ, ಮಾಡುವ ರಾಜಕೀಯ ದೊಂಬರಾಟಗಳು ಅವೆಷ್ಟೋ!?

ಗಡಿಗಳನ್ನು ಅತಿಕ್ರಮಿಸಿ ಮಾಡಲಾಗುವ ನೆಲ-ಜಲ-ಸಸ್ಯ ಸಂಪತ್ತು-ಜನಶಕ್ತಿಯ ಅಪವ್ಯಯದ ಹಿಂದೆಯಂತೂ ಮಾನವನ (?) ರಾಕ್ಷಸೀ ಪ್ರವೃತಿಯೇ ತಾಂಡವವಾಡುತ್ತಿದೆ. ಅಪಾರ ನೆಲ-ಜಲ-ವಾಯು ಸೈನ್ಯಕ್ಕಾಗಿ ವಿನಿಯೋಗಿಸುವ ಸಂಪತ್ತು, ಪರಮಾಣು ವಿಸ್ಫೋಟಕಗಳು, ಕ್ಷಿಪಣಿಗಳು ಮೊದಲಾದವುಗಳಿಂದ ಆಗುವ ಅನರ್ಥ ಪರಂಪರೆಗಳು ಇವೆಲ್ಲವೂ ಕೇವಲ ಮಾನವನಿರ್ಮಿತ ಗಡಿಗಳ ರಕ್ಷಣೆಯ ಅನಿವಾರ್ಯ ಪರಿಣಾಮಗಳೇ. ರಾಷ್ಟ್ರೀಯತೆಯ ಬಗ್ಗೆ ವೇದಗಳ ವಿಶಾಲದೃಷ್ಟಿ ನಮ್ಮದಾದಾಗ ಈ ಎಲ್ಲ ಅನರ್ಥಗಳಿಗೆ ಶಾಶ್ವತವಾದ ಮುಕ್ತಾಯವನ್ನು ಘೋಷಿಸಬಹುದು.

ವೇದಗಳು ಅತಿ ಸ್ಪಷ್ಟವಾದ ಮಾತುಗಳಲ್ಲಿ, ಮಾನವರು ಪ್ರಕೃತಿ ಸಂಪತ್ತಿನ ಪಾಲಕರೇ ಹೊರತು ಮಾಲೀಕರಲ್ಲ- ಎಂದು ಘೋಷಿಸುತ್ತಿವೆ. ಆದರೆ ಮಾನವನು ಪ್ರಾಕೃತಿಕ ಸಂಪನ್ಮೂಲಗಳು ತಾನೇ, ತಾನೊಬ್ಬನೇ ಅದರ ಮಾಲಿಕನೆಂಬಂತೆ ಶೋಷಿಸಲು ಪ್ರಾರಂಭಿಸಿದಾಗಿನಿಂದ ಜಗತ್ತಿನಲ್ಲಿ ಮಾನವ-ಮಾನವರ ನಡುವೆ ಅನಾರೋಗ್ಯಕರ, ಅನೈತಿಕ ಸ್ಪರ್ಧೆಗಳು ಉಂಟಾಗಿ, ಅದರ ಪರಿಣಾಮವಾಗಿ ದ್ವೇಷ,ವೈಷಮ್ಯಗಳು ಹತ್ತಿ ಉರಿಯಲಾರಂಭಿಸಿದವು. ಮಾನವನು, ಈ ಪ್ರಾಕೃತಿಕ ಸಂಪದವಿರುವುದು ತನಗೋರ್ವನಿಗಾಗಿ, ಈ ಪ್ರಾಣಿ- ಪಕ್ಷಿ- ಕೀಟ-ಪತಂಗಾದಿ ಸಕಲ ಜೀವಿಗಳೂ ಇರುವುದು ತನ್ನ ಉಪಭೋಗಕ್ಕಾಗಿ, ಎಂಬ ರಾಕ್ಷಸೀ ಭಾವನೆಯನ್ನು ಹೊಂದಿದಾಗಿನಿಂದ ಪ್ರಾಣಿಜಗತ್ತಿನಲ್ಲಿ ಸಹಜವಾಗಿ ಇರಬೇಕಾಗಿದ್ದ ಪ್ರಾಕೃತಿಕ ಸಮತೋಲನ ತಪ್ಪಿಹೋಗಿ ಹಲವಾರು ಭೀಕರ ಸಮಸ್ಯೆಗಳು ತಲೆದೋರಿವೆ. ಸಹಜೀವಿಗಳೊಂದಿಗೆ ಸಹಬಾಳ್ವೆ ಇಲ್ಲದುದರಿಂದ, ಒಂದು ಇನ್ನೊಂದರ ಬಲಿ ತೆಗೆದುಕೊಳ್ಳುವ ಪ್ರವೃತ್ತಿ ಬಲಿಯಿತು. ಪರಿಣಾಮವಾಗಿ ಮಾನವನು ಇತರ ಜೀವ ಜಗತ್ತಿನೊಂದಿಗಿರಲಿ, ತನ್ನ ಸಹಮಾನವರೊಂದಿಗೆ ಹೊಂದಿರಬೇಕಾಗಿದ್ದ ಮಾನವೀಯ ಅನುಕಂಪಕ್ಕೇ ಎರವಾದನು. ಮನನಶೀಲನಾದುದರಿಂದಲೇ ಅವನನ್ನು ಮಾನವನೆನ್ನಲಾಗುತ್ತದೆ. ಮನನಶೀಲತೆ ಪ್ರಕಟವಾಗುವುದು ಈ ಅನುಕಂಪದಲ್ಲಿ. ಆದರೆ ಮಾನವನು ಅಮಾನವೀಯತೆಯ ಮನೋರೋಗಕ್ಕೆ ಈಡಾಗಿರುವುದು ಇಂದಿನ

ದುರಂತ. ಮನನಶೀಲನಾದವನು ಅಮಾನವೀಯನನ್ನು ಪರಿವರ್ತಿಸುವಂತಾದಾಗಲೇ ಮಾನವೀಯತೆಯ ವಿಜಯ. ವೇದಗಳು ಪ್ರತಿಪಾದಿಸುವ ತ್ಯಾಗ ಪೂರ್ವಕ ಭೋಗ ಬೇರೆಯಲ್ಲ; ಸಹಜೀವಿಗಳೊಂದಿಗಿನ ಮಾನವೀಯ ಅನುಕಂಪ ಬೇರೆಯಲ್ಲ; ಮನನಶೀಲತ್ವ ಬೇರೆಯಲ್ಲ. ಇವು ಮುಪ್ಪುರಿಗೊಂಡಾಗಲೇ ಮನುಜಕುಲ ಸುಖ-ಶಾಂತಿ- ನೆಮ್ಮದಿಯ ಬಾಳನ್ನು ಬಾಳಬಲ್ಲದು.ಈ ಪರಮ ಸತ್ಯವನ್ನು ವೇದಗಳಿಗಿಂತ ನಿಖರವಾಗಿ ಪ್ರತಿಪಾದಿಸುವ ಶಾಸ್ತ್ರಗಳನ್ನು ಇನ್ನೆಲ್ಲಿ ನೋಡೋಣ!

ಜ್ಞಾನವಿಲ್ಲದ ಕರ್ಮ ಅನರ್ಥಕಾರಿ, ಅದೇ ರೀತಿ ಕ್ರಿಯಾಶೀಲತೆಗೆ ಅಳವಡದ ಜ್ಞಾನ, ವ್ಯರ್ಥ,ಭಾರ. ಜ್ಞಾನ ಕರ್ಮಗಳು ಒಂದಕ್ಕೊಂದು ಪೂರಕ; ಪೋಷಕ. ಜಗತ್ತಿನಲ್ಲಿ ಕಂಡು ಬರುತ್ತಿರುವ ಅಶಾಂತಿ- ಗೊಂದಲಗಳ ಹಿಂದೆ ಒಂದೋ ಜ್ಞಾನವಿಲ್ಲದ ಕರ್ಮವಿರುತ್ತದೆ. ಇಲ್ಲವೇ ಕರ್ಮಕ್ಕಳವಡದ ಜ್ಞಾನವಿರುತ್ತದೆ. ನಿಷ್ಕ್ರಿಯ ಜ್ಞಾನವು ವ್ಯರ್ಥವಾಗುವಂತೆ, ಜ್ಞಾನರಹಿತ ಕರ್ಮವು ಅಪಾಯಕಾರಿಯಾಗುತ್ತದೆ. ಜ್ಞಾನವನ್ನು ಅವಲಂಬಿಸಿದ ಕರ್ಮವು ಸಫಲತೆಯತ್ತ ನಮ್ಮನ್ನೊಯ್ಯುತ್ತದೆ. ಇಂತಹ ಯಶಸ್ಸುಗಳ ಮೊತ್ತವು ಹೆಚ್ಚಾದಾಗ ಮಾನವನ ತಲೆತಿರುಗಿ, ಅಹಂಕಾರದಿಂದ ಬೀಗಿ ತನ್ನೆಲ್ಲ ಸದ್ಗುಣಗಳಿಗೂ ಎರವಾಗುವ ಸಂಭವ ಇದೆ. ಇದಕ್ಕಾಗಿ ತನ್ನ ಎಲ್ಲ ಸಫಲತೆಗಳನ್ನೂ ವಿಶ್ವಚೇತನ ಶಕ್ತಿಯೊಂದಕ್ಕೆ ಸಮರ್ಪಿಸಿ, ತನ್ನ ಅಣುಚೇತನತ್ವವನ್ನು ಮರೆಯದೆ ವಿನಮ್ರತೆಯನ್ನು ಸಾಧಿಸುವುದು ಆವಶ್ಯಕ. ಈ ಸಮರ್ಪಣೆ ಗುಲಾಮಗಿರಿಯಲ್ಲ; ಕೀಳರಿಮೆಯ ಪರಿಣಾಮವೂ ಅಲ್ಲ. ವಿಶ್ವಚೇತನ ಸತ್ತೆಯ ಅಸ್ತಿತ್ವವನ್ನು ಬುದ್ಧಿ ಪೂರ್ವಕವಾಗಿ ಸ್ವೀಕರಿಸಿ ತನ್ನ ಮಿತಿಗಳನ್ನೂ ಗುರುತಿಸಿಕೊಳ್ಳುತ್ತಾ, ಜೊತೆಗೆಯೇ ಮಿತಿಗಳನ್ನು ಮೀರಿ ಬೆಳೆಯುವ, ಸತ್ಯದ ಬಗೆಗೆ ಬದ್ಧತೆಯ ಪ್ರಕ್ರಿಯೆಯೇ ಉಪಾಸನೆ. ಹೀಗೆ ವೇದಗಳು ಜ್ಞಾನ-ಕರ್ಮ- ಉಪಾಸನೆಗಳ ಸುಂದರ ಸಮನ್ವಯದ ಹಾದಿಯನ್ನು ಅಚ್ಚುಕಟ್ಟಾಗಿ ತೋರಿಸುತ್ತವೆ. ಪ್ರತಿಯೊಬ್ಬ ಸತ್ಯಾನ್ವೇಷಕನ ಪ್ರಶ್ನೆಗೂ, ಸಂಶಯಕ್ಕೂ ಖಚಿತ ಉತ್ತರ ಈ ಜ್ಞಾನ ಭಂಡಾರದಲ್ಲಿ ಮಾನವೀಯತೆಯ ತಳಹದಿಯ ಮೇಲೆ ಸಿಕ್ಕೇ ಸಿಗುತ್ತದೆ. ಈ ಮಾತನ್ನು ಯಾರು ಬೇಕಾದರೂ ಪರೀಕ್ಷಿಸಿ ಸ್ವೀಕರಿಸಬಹುದು.

ವಿಶ್ವಮಾನವ ಸಮಾಜಕ್ಕೆ ಬುದ್ಧಿಜೀವಿಗಳು , ಶಕ್ತಿಜೀವಿಗಳು, ಉದ್ಯಮ ಜೀವಿಗಳು ಮತ್ತು ಶ್ರಮಜೀವಿಗಳು- ಈ ನಾಲ್ಕೂ ಬಗೆಯ ಜೀವಿಗಳ ಅವಶ್ಯಕತೆ ಇದ್ದೇ ಇದೆ. ಈ ಪಂಗಡಗಳಿಗೆ ಕೊಡುವ ಹೆಸರು ಯಾವುದೇ ಅದರೂ ಈ ಪಂಗಡಗಳ ಅಸ್ತಿತ್ವಕ್ಕೆ ಬಾಧಕವಿಲ್ಲ. ಹುಟ್ಟಿನಿಂದ ಮನುಷ್ಯ ಜಾತಿಗೆ ಸೇರಿದ ಯಾರೇ ಆದರೂ ತಮ್ಮ ಗುಣ- ಕರ್ಮ-ಸ್ವಭಾವಗಳಿಗನುಸಾರ ಮೇಲಿನ ಯಾವುದೇ ಪಂಗಡವನ್ನು ಆಯ್ಕೆ ಮಾಡಿಕೊಂಡು ಅದಕ್ಕೆ ಸೇರಿಕೊಳ್ಳಬಹುದು. ಬೇಕಾದಾಗ ಒಂದು ಪಂಗಡದಿಂದ ಇನ್ನೊಂದು ಪಂಗಡಕ್ಕೆ ಜಿಗಿಯಬಹುದು. ಏನೇ ಆದರೂ ಮಾನವ ಜಾತಿ ಹಾಗೇ ಇರುತ್ತದೆ. ವಿಶ್ವ ಶಾಂತಿಯ ಮೂಲ ಸುಭದ್ರ ಸಾಮಾಜಿಕ ವ್ಯವಸ್ಥೆಯಲ್ಲೂ ಸುಭದ್ರ ಸಮಾಜದ ಬೇರು ಸುಭದ್ರ ಕುಟುಂಬ- ಪರಿವಾರಗಳಲ್ಲೂ ಇದೆ. ಕೌಟುಂಬಿಕ ಜೀವನ-ಗೃಹಸ್ಥಾಶ್ರಮ - ಸುವ್ಯವಸ್ಥಿತವಾಗಲು ಬೇಕಾದ ಸರ್ವಕಾಲಿಕ ಮಾರ್ಗದರ್ಶನಗಳ ಮಹಾಪೂರವೇ ವೇದಗಳಲ್ಲಿವೆ. ಇವುಗಳ ಪಾಲನೆ ಎಲ್ಲೂ, ಯಾರೂ ಮಾಡಬಹುದಾಗಿದೆ. ಇದೇ ವೇದೋಕ್ತ ಸಾಮಾಜಿಕ ವ್ಯವಸ್ಥೆ. ಸಮಾಜದ ಪ್ರತಿಯೊಬ್ಬ ಮಾನವ- ಮನನಶೀಲನಿಗೂ ಈ ವ್ಯವಸ್ಥೆಯ ಅರಿವು ಅನಿವಾರ್ಯ. ಈ ಅರಿವಿಗಾಗಿ ಪ್ರತಿಯೊಬ್ಬ ಮಾನವನನ್ನು ಅಧ್ಯಯನಕ್ಕಾಗಿ ವೇದಗಳು ಕೈಬೀಸಿ ಕರೆಯುತ್ತವೆ.

ಇತಿಹಾಸದಲ್ಲೊಂದು ಮೈಲಿಗಲ್ಲು

ಮೇಲೆ ಹೇಳಲಾದ ತಥ್ಯಗಳನ್ನು ನಮ್ಮ ಈ ವೇದಭಾಷ್ಯದಲ್ಲಿ ಸಂದೇಹಕ್ಕೆಡೆಯಿಲ್ಲದೆ ಉದ್ಘಾಟನೆ ಮಾಡಲಾಗುತ್ತದೆ. ಆದುದರಿಂದ ಇದನ್ನು ವೈಜ್ಞಾನಿಕ - ಬುದ್ಧಿಸಂಗತ- ಸಾರ್ವಕಾಲಿಕ - ಸಾರ್ವದೇಶಿಕ ಭಾಷ್ಯ ಎನ್ನಲು ಯಾವುದೇ ಅಡ್ಡಿಯಿಲ್ಲ. ೧೫ ನೇ ಶತಮಾನದಲ್ಲಿ ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿ ನಾಲ್ಕೂ ವೇದಗಳಿಗೆ ಸಂಸ್ಕೃತದಲ್ಲಿ ರಚಿಸಿದ ಸಾಯಣಭಾಷ್ಯವೇ ಇಂದು ನಮಗೆ ಉಪಲಬ್ಧವಿರುವ ವಿಸ್ತೃತ ವೇದಭಾಷ್ಯ. ಕ್ರಿ.ಶ. ೧೯೪೬ ರಲ್ಲಿ ಮೈಸೂರು ಮಹಾರಾಜರು ಇದೇ ಸಾಯಣಭಾಷ್ಯದ ಆಧಾರದ ಮೇಲೆ ಕನ್ನಡದಲ್ಲಿ ವಿಸ್ತೃತವಾದ ಋಗ್ವೇದ ಭಾಷ್ಯವನ್ನು ಪ್ರಕಟಿಸುವ ಸಾಹಸ ಮಾಡಿದರು. ಇವೆರಡು ಪ್ರಯತ್ನಗಳ ನಂತರ ಸಮಗ್ರವಾಗಿ ನಾಲ್ಕು ವೇದಗಳ ಭಾಷ್ಯಗಳನ್ನು ಮೊಟ್ಟ ಮೊದಲ ಬಾರಿಗೆ ಕನ್ನಡದಲ್ಲಿ ರಚಿಸುವ ಐತಿಹಾಸಿಕ ಯೋಜನೆಯು ರೂಪುಗೊಂಡಿದೆ. ಮಾತ್ರವಲ್ಲದೆ ದಕ್ಷಿಣ ಭಾರತೀಯ ಭಾಷೆಯಲ್ಲಿಯೇ ಇಂತಹ ಪ್ರಯತ್ನ ಪ್ರಥಮ ಬಾರಿಗೆ ನಡೆಯುತ್ತಿದೆ. ಆದುದರಿಂದ ಈ ವೇದಭಾಷ್ಯಯೋಜನೆಯನ್ನು ಇತಿಹಾಸದ ಮೈಲಿಗಲ್ಲು ಎಂದು ಹೇಳಬಹುದು.

ವೇದಭಾಷ್ಯದ ಕಾರ್ಯ ಸಾಮಾನ್ಯ ಸಂಗತಿಯೇನಲ್ಲ. ಅದು ಹಿಮಾಲಯದಂತಹ ಮಹತ್ವದ ಕಾರ್ಯ. ವಿಜಯನಗರ ಸಾಮ್ರಾಜ್ಯದ ಆಶ್ರಯದಲ್ಲಿ, ಮೈಸೂರು ಮಹಾರಾಜರಂತಹವರ ರಾಜಾಶ್ರಯದಲ್ಲಿ ನಡೆಯಬಹುದಾದ ಈ ಕಾರ್ಯವನ್ನು ಯಾವುದೇ ಅರ್ಥಿಕತೆ ಅಥವಾ ಜನಪ್ರಿಯತೆಯ ವೈಭವದ ಹಿನ್ನಲೆಯಿಲ್ಲದ ಒಂದು ಸಂಸ್ಥೆ ಕೈಗೊಂಡಿರುವುದು ಸಾಮಾನ್ಯ ಸಂಗತಿಯೇನಲ್ಲ! ಆದರೆ, ವೇದಗಳ ಬಗೆಗೆ ನಮ್ಮ ಜನರಿಗೆ ಇರುವ ಅಚ್ಚಳಿಯದ ಗೌರವಾದರಗಳು ನಮ್ಮನ್ನು ಈ ಬೃಹದ್ಯೋಜನೆಯನ್ನು ಕೈಗೆತ್ತಿಕೊಳ್ಳುವಂತೆ ಮಾಡಿದವು. ಅಲ್ಪ ಸಾಧನ- ಸಂಪತ್ತುಗಳ ಹೊರತಾಗಿಯೂ ಈ ಕಾರ್ಯ ಸಂಪನ್ನವಾಗುತ್ತಿರುವುದಕ್ಕೆ ಕಾರಣ ನಮ್ಮ ಜನರಲ್ಲಿರುವ ವೇದಪ್ರೇಮ- ವೇದಭಕ್ತಿ- ವೇದನಿಷ್ಠೆಗಳೇ ಆಗಿವೆ. ಆ ವೇದ ಪ್ರೇಮೀ ಜನತಾ ಜನಾರ್ಧನನಿಗೆ ನಮ್ಮ ಕೃತಜ್ಞತೆಯ ಮೊದಲ ಪುಷ್ಪ ಸಮರ್ಪಿತ.

* * *

ಹದಿಮೂರನೆಯ ಸಂಪುಟವನ್ನು ಕುರಿತು.........

ಆಧುನಿಕ ಕಾಲದ ವೇದೋದ್ಧಾರಕ ರಾಷ್ಟ್ರಪುರುಷ, ಯೋಗಿರಾಜ, ಆದಿತ್ಯ ಬ್ರಹ್ಮಚಾರಿ ದಿವ್ಯದರ್ಶೀ ಮಹರ್ಷಿ ಸ್ವಾಮಿ ದಯಾನಂದ ಸರಸ್ವತೀ ಅವರು ರಚಿಸಿರುವ ಋಗ್ವೇದ ಭಾಷ್ಯದ ಮೊದಲನೆಯ ಭಾಗ ವೇದಪ್ರೇಮೀ ಕನ್ನಡಿಗರ ಕೈಯಲ್ಲಿದೆ. ಇದರಲ್ಲಿ ಪ್ರಥಮ ಮಂಡಲದ ೧೨೧ ಸೂಕ್ತಗಳ ಭಾಷ್ಯವನ್ನು ಕೊಡಲಾಗಿದೆ. ಗುರುಕುಲ ಕಾಂಗಡಿಯ ಸ್ನಾತಕರೂ, ಚಂಡೀಘಡದ ಪಂಜಾಬ್ ವಿಶ್ವವಿದ್ಯಾನಿಲಯದಿಂದ ವೇದಗಳ ಬಗೆಗೆ ಡಾಕ್ಟರೇಟ್ ಪಡೆದ ಉಡುಪಿಯ ವಿದ್ವಾಂಸರಾದ ಡಾ. ಸುಕುಮಾರಶಾಸ್ತ್ರಿಗಳು ಪ್ರಾರಂಭದ ೨೬ ಸೂಕ್ತಗಳ ವರೆಗೆ ಭಾಷ್ಯವನ್ನು ರಚಿಸಿ ನಂತರ ಅನಿವಾರ್ಯ ಕಾರಣಗಳಿಂದ ಮುಂದುವರಿಸಲಾಗಲಿಲ್ಲ. ನಂತರದ ೩೩ನೆಯ ಸೂಕ್ತದವರೆಗಿನ ಭಾಷ್ಯವನ್ನು ಶ್ರೀ ಬಿ.ವಿ. ಯತಿರಾಜ್‌ರವರೂ, ಆನಂತರದ ೬೨ನೆಯ ಸೂಕ್ತದವರೆಗಿನ ಭಾಷ್ಯವನ್ನು ಶ್ರೀ ಶ್ರುತಿಪ್ರಿಯರವರೂ, ಆಮೇಲಿನ ೧೨೧ನೆಯ ಸೂಕ್ತದವರೆಗಿನ ಭಾಷ್ಯವನ್ನು ಶ್ರೀ ವಾ.ವೀ. ವೆಂಕಟೇಶ ಇವರುಗಳು ಅನುವಾದಿಸಿದ್ದಾರೆ. ಪ್ರಾರಂಭದ ಪ್ರಥಮ ಮಂತ್ರದಲ್ಲಿ ಮಹರ್ಷಿ ದಯಾನಂದ ಸರಸ್ವತಿಯವರು ಯಾವ ರೀತಿಯಲ್ಲಿ ಪದಪಾಠ, ಅನ್ವಯ, ಸಂಸ್ಕೃತದಲ್ಲಿ ಪದಾರ್ಥ, ನಂತರ ಅದರ ಭಾಷಾನುವಾದ, ಸಂಸ್ಕೃತದಲ್ಲಿ ಭಾವಾರ್ಥ ಹಾಗೂ ಅದರ ಭಾಷಾನುವಾದಗಳನ್ನು ರಚಿಸಿದ್ದಾರೋ, ಅದೇ ರೀತಿ ಕೊಡಲಾಗಿದೆ. ನಂತರ ವಿಸ್ತಾರದ ಶಂಕೆಯಿಂದಾಗಿ ಕೇವಲ ಸಂಹಿತಾ ಪಾಠ, ಪದಾರ್ಥ ಹಾಗೂ ಭಾವಾರ್ಥಗಳನ್ನು ಮಾತ್ರ ಪ್ರಕಟಿಸಿದ್ದೇವೆ. ಇಷ್ಟಾದರೂ ಋಗ್ವೇದದ ಪೂರ್ಣ ಭಾಷ್ಯ ಮುಗಿಯಲು ೮ ಸಂಪುಟಗಳೇ ಬೇಕಾದೀತು. ಮಹರ್ಷಿ ದಯಾನಂದ ಸರಸ್ವತಿಯವರ ಮೂಲ ಆಶಯವನ್ನು ಕನ್ನಡಿಗರಿಗೆ ತಲುಪಿಸುವುದೇ ಈ ಭಾಷ್ಯಾನುವಾದದ ಮೂಲ ಉದ್ದೇಶ್ಯ ಎಂಬುದನ್ನು ವಿನಮ್ರವಾಗಿ ತಿಳಿಸಲಿಚ್ಛಿಸುತ್ತೇವೆ.

ಕಳೆದ ಹನ್ನೆರಡನೆಯ ಸಂಪುಟದ ಲೋಕಾರ್ಪಣೆಯನ್ನು ಬೆಂಗಳೂರಿನ ಪ್ರಸಿದ್ಧ ವೈದ್ಯರೂ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಅಧ್ಯಕ್ಷರೂ ಆದ ಡಾ. ಎಂ.ಆರ್.ವಿ. ಪ್ರಸಾದ್‌ರವರು ನೆರವೇರಿಸಿದರು. ಮುಖ್ಯ ಅಭ್ಯಾಗತರಾಗಿ ಆಗಮಿಸಿದ್ದವರು ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಸಂಸ್ಕೃತ ವಿಭಾಗಾಧ್ಯಕ್ಷರಾದ ಡಾ. ಎಂ. ಶಿವಕುಮಾರ ಸ್ವಾಮಿಗಳು. ಅಧ್ಯಕ್ಷತೆಯನ್ನು ವೇದಭಾಷ್ಯ ಪ್ರಕಾಶನ ಸಮಿತಿಯ ಪ್ರಧಾನ ಸಂಪಾದಕರೂ, ಶತಾಯುಷಿಗಳೂ, ಚತುರ್ವೇದಗಳ ಮರ್ಮಜ್ಞರೂ ಆದ ಪಂ.ಸುಧಾಕರ ಚತುರ್ವೇದಿಗಳು ವಹಿಸಿದ್ದರು. ಯಜುರ್ವೇದ ಭಾಷ್ಯಾನುವಾದಕರಾದ ವಿದ್ವಾನ್ ವಾಸುದೇವ ಪರಾಂಜಪೆ ಮತ್ತು ಶ್ರೀ ವಾ.ವೀ. ವೆಂಕಟೇಶ ಇವರುಗಳನ್ನು ವೇದಭಾಷ್ಯ ಪ್ರಕಾಶನ ಸಮಿತಿಯ ಪರವಾಗಿ ಸನ್ಮಾನಿಸಲಾಯಿತು. ಪ್ರಾತಃಕಾಲೀನ ವೇದಗೋಷ್ಠಿಯಲ್ಲಿ ಡಾ. ವನಿತಾ ರಾಮಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಶ್ರೀ ವಾ.ವೀ.ವೆಂಕಟೇಶ ಹಾಗೂ ಶ್ರೀ ಕೈಪು ಶೇಷಾದ್ರಿ ಇವರುಗಳು ಯಜುರ್ವೇದವನ್ನು ಕುರಿತು ತಮ್ಮ ದೃಷ್ಟಿಕೋನಗಳನ್ನು ಪ್ರಸ್ತುತ ಪಡಿಸಿದರು. ಮಧ್ಯಾಹ್ನದ ವೇದಗೋಷ್ಠಿಯು ಡಾ. ಬಿ.ಎಸ್. ರಾಮಕೃಷ್ಣ ರಾವ್ ಸಂಸ್ಕೃತ ಪ್ರಾಧ್ಯಾಪಕರು, ಸುರಾನಾ ಕಾಲೇಜು, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದು ಮೈಸೂರಿನ ಯೋಗಾಚಾರ್ಯ ಶ್ರೀ ನಾಗರಾಜ ಸೂರ್ಯನಾರಾಯಣ ಪಾಂಡೆ, ಶ್ರೀ ಸುಧಾಕರ ಶರ್ಮಾ ಇವರುಗಳ ವಿಚಾರ ಮಂಡನೆಯೊಂದಿಗೆ ಸಂಪನ್ನವಾಯಿತು. ಹೀಗೆ ಇದರಲ್ಲಿ ಭಾಗವಹಿಸಿದ ಎಲ್ಲಾ ವಿದ್ವಾಂಸರಿಗೂ, ಗಣ್ಯ ಮಹನೀಯರಿಗೂ ವೇದಭಾಷ್ಯ ಪ್ರಕಾಶನ ಸಮಿತಿಯು ತನ್ನ ಕೃತಜ್ಞತೆಯನ್ನು ಸಲ್ಲಿಸುತ್ತದೆ.

ಶತಾಯುಷೀ, ಚತುರ್ವೇದಜ್ಞ, ವೇದಶ್ರೀ, ವೇದವಾರಿಧಿ, ವೇದರತ್ನ ಪಂ. ಸುಧಾಕರ ಚತುರ್ವೇದಿಯವರು ಪ್ರಧಾನ ಸಂಪಾದಕರಾಗಿ ಈ ವೇದಸಂಪುಟಗಳನ್ನು ಹೊರತರುವುದರಲ್ಲಿ ಮಹತ್ತರ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಈ ಋಗ್ವೇದದ ಸಂಪುಟಗಳನ್ನು ಹೊರತರಲೂ ಸಹ ಅವರ ಪರಿಶ್ರಮವೇ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಿದೆ. ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲು ನಮ್ಮ ಬಳಿ ಸಾಕಾದಷ್ಟು ಶಬ್ದ ಭಂಡಾರವೇ ಇಲ್ಲ. ಆದುದರಿಂದ ವಿನಮ್ರವಾಗಿ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುವುದಷ್ಟೇ ನಮ್ಮ ಕಾರ್ಯವಾಗಿದೆ. ಪ್ರಧಾನ ಸಂಪಾದಕರ ಜೊತೆಯಲ್ಲಿ ಸಂಪಾದನಾ ಕಾರ್ಯದ ಪರಿಷ್ಕರಣ, ಶುದ್ಧಿವಾಚನಗಳನ್ನು ನೆರವೇರಿಸುತ್ತಿರುವ ಶ್ರೀ ಶ್ರುತಿಪ್ರಿಯ ಅವರಿಗೆ ವೇದಭಾಷ್ಯ ಪ್ರಕಾಶನ ಸಮಿತಿಯು ಧನ್ಯವಾದಗಳನ್ನು ಸಲ್ಲಿಸುತ್ತದೆ.

ಕೀ॥ ಶೇ॥ ಶ್ರೀ ವೈ. ವಿ. ತಿಮ್ಮಯ್ಯ (ಅಪ್ಪಾಜಿ) ನವರು ವೇದಭಾಷ್ಯಯೋಜನೆಯು ಕಾರ್ಯಗತಗೊಳ್ಳಲು ಕಾರಣರಾದ ದಿವ್ಯ ಚೇತನ. ಅವರನ್ನು ಹೃದಯದ ಅಂತರತಮದಿಂದ ಸ್ಮರಿಸಿಯೇ ಮುಂದುವರೆಯುವುದು ನಮ್ಮ ಪವಿತ್ರ ಕರ್ತವ್ಯವಾಗಿದೆ. ವೇದಸಂಪುಟಗಳ ಲೋಕಾರ್ಪಣೆ ಹಾಗೂ ವೇದಗೋಷ್ಠಿಗಳು ಅಭೂತಪೂರ್ವವಾಗಿ ನಡೆಯಲು ಅನುಕೂಲವಾಗುವಂತೆ ಆರ್.ವಿ.ಟೀಚರ್ಸ್ ಕಾಲೇಜು ಸಭಾಭವನವನ್ನು ಉಚಿತವಾಗಿ ನೀಡಿ ಪ್ರೋತ್ಸಾಹಿಸುತ್ತಾ ಬಂದಿರುವ ರಾಷ್ಟ್ರೀಯ ಶಿಕ್ಷಣ ಸಮಿತಿಯ ಸಹೃದಯೀ ಪದಾಧಿಕಾರಿಗಳಿಗೆ ನಮ್ಮ ಹಾರ್ದಿಕ ವಂದನೆಗಳು.

ಈ ಮಹಾನ್ ಕಾರ್ಯಕ್ಕೆ ಸಹಕಾರವನ್ನು ಕೋರಿ ಧರ್ಮಸ್ಥಳದ ಡಾ॥ ವೀರೇಂದ್ರ ಹೆಗ್ಗಡೆಯವರನ್ನು ಸಂದರ್ಶಿಸಿದಾಗ, ಧರ್ಮ ಸಂರಕ್ಷಕರೂ, ಸತ್ಸಾಹಿತ್ಯ ಪ್ರೋತ್ಸಾಹಕರೂ ಆದ ಧರ್ಮಾಧಿಕಾರಿಗಳು ಒಂದು ಲಕ್ಷ ರೂ.ಗಳ ಉದಾರ ಕೊಡುಗೆಯನ್ನು ನೀಡಿ ನಮ್ಮಲ್ಲಿ ಹೆಚ್ಚಿನ ಬಲವನ್ನು ತುಂಬಿದ್ದಾರೆ. ಈ ಧರ್ಮ ಪ್ರಭುಗಳೇ ಹಿಂದೆಯೂ ಒಂದು ಲಕ್ಷ ರೂ.ಗಳ ಕೊಡುಗೆಯನ್ನು ನೀಡಿ ಪ್ರೋತ್ಸಾಹಿಸಿದ್ದುದು ಸ್ಮರಣೀಯ. ಅದೇ ರೀತಿ ವೇದ ಸಂರಕ್ಷಕರಾಗಿ ನಮಗೆ ತುಂಬು ಹೃದಯದ ಅನುಗ್ರಹರೂಪವಾದ ಈ ಸಹಯೋಗಕ್ಕಾಗಿ ರಾಜರ್ಷಿ ಡಾ॥ ಡಿ.ವೀರೇಂದ್ರ ಹೆಗ್ಗಡೆಯವರಿಗೆ ಗೌರವಪೂರ್ವಕವಾದ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ. ಅದೇ ರೀತಿ ಒಂದು ಲಕ್ಷ ರೂ.ಗಳ ಕೊಡುಗೆಯನ್ನು ನೀಡಿ ಪ್ರೋತ್ಸಾಹಿಸಿದ್ದ ಶ್ರೀಮತಿ ಲಕ್ಷ್ಮೀಕಾಂತಮ್ಮ ಎಂ. ನಾರಾಯಣ ಗುಪ್ತ ಇವರುಗಳನ್ನು ಸಹ ಕೃತಜ್ಞತಾ ಪೂರ್ವಕವಾಗಿ ಸ್ಮರಿಸುತ್ತೇವೆ. ಇವರುಗಳಲ್ಲದೆ ವೇದ ಮಹಾ ಪೋಷಕರುಗಳಾಗಿ, ವೇದ ಚಿಂತಕ ಹಾಗೂ ವೇದ ಸಹಕಾರಿಗಳಾಗಿ ಈ ಸಾರಸ್ವತ ಯಜ್ಞದಲ್ಲಿ ತಮ್ಮ ಪಾಲಿನ ಹವಿಸ್ಸನ್ನು ನೀಡಿರುವ ಹಾಗೂ ನೀಡುತ್ತಿರುವ ಎಲ್ಲ ವೇದ ಭಕ್ತರಿಗೆ ನಮ್ಮ ಹೃದಯಪೂರ್ವಕ ಕೃತಜ್ಞತೆಗಳು ಸಲ್ಲುತ್ತವೆ.

ವೇದಭಾಷ್ಯದ ಬೃಹತ್ ಸಂಪುಟಗಳು ಹೊರಬರಲು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೆರವಾದ, ನೆರವಾಗುತ್ತಿರುವ, ಸದಸ್ಯತಾ ಅಭಿಯಾನದಲ್ಲಿ ಪಾಲ್ಗೊಂಡಿರುವ ಎಲ್ಲಾ ಸಹೃದಯೀ ವೇದಪ್ರೇಮೀ ಸಜ್ಜನರಿಗೆ ಹೃದಯದ ಅಂತರತಮದ ವಂದನೆಗಳನ್ನು ಸಲ್ಲಿಸುತ್ತೇವೆ.

ಈ ಬಾರಿಯ ಋಗ್ವೇದ ಭಾಷ್ಯದ ಪ್ರಥಮ ಸಂಪುಟವು ಸುಂದರ ಮುಖ ಚಿತ್ರವನ್ನು ಹೊತ್ತು ಪ್ರಕಟವಾಗುತ್ತಿರುವುದೊಂದು ವಿಶೇಷ. ಆಕರ್ಷಕವಾದ ಮುಖಪುಟದ ಚಿತ್ರವನ್ನು ರೂಪಿಸಿ ಕೊಟ್ಟಿರುವ ಖ್ಯಾತ ಕಲಾವಿದ ಶ್ರೀ ಬಿ. ಕೆ. ಎಸ್. ವರ್ಮಾರವರಿಗೆ ಆತ್ಮೀಯ ಅಭಿವಂದನೆಗಳು. ಹಾಗೆಯೆ ಸುಂದರವಾಗಿ, ಅಚ್ಚುಕಟ್ಟಾಗಿ ಗ್ರಂಥವನ್ನು ಮುದ್ರಿಸಿಕೊಟ್ಟಿರುವ ಅಭಿಮಾನಿ ಪ್ರಕಾಶನ ಸಂಸ್ಥೆಯವರಿಗೆ ನಾವು ಆಭಾರಿಗಳಾಗಿದ್ದೇವೆ.

ಧರ್ಮದರ್ಶಿ ಮಂಡಳಿ, ವೇದಭಾಷ್ಯ ಪ್ರಕಾಶನ ಸಮಿತಿ

ಋಗ್ವೇದ ಭಾಷ್ಯ

ಭಾಗ-೧

(ಮಂಡಲ ೧, ಸೂಕ್ತ ೧ರಿಂದ ೧೨೧)

ಋಗ್ವೇದ-ಭಾಷ್ಯಮ್

ಪ್ರಥಮ ಮಂಡಲಮ್

ಸೂಕ್ತ ೧

ಮಂತ್ರಸಂಖ್ಯೆ ೯ । ಋಷಿಃ - ಮಧುಚ್ಛಂದಾ ವೈಶ್ವಾಮಿತ್ರಃ । ದೇವತಾ - ಅಗ್ನಿಃ । ಛಂದಃ - ಗಾಯತ್ರೀ । ಸ್ವರ-ಷಡ್ಜಃ.

ಪ್ರಥಮ ಮಂತ್ರದಲ್ಲಿ ಅಗ್ನಿಶಬ್ದದಿಂದ ಈಶ್ವರನ ಹಾಗೂ ಭೌತಿಕ ಅಗ್ನಿಯ ಉಪದೇಶವನ್ನು ಮಾಡಲಾಗಿದೆ.

ಅಗ್ನಿಮೀಳೇ ಪುರೋಹಿತಂ ಯಜ್ಞಸ್ಯ ದೇವಮೃತ್ವಿಜಮ್ । ಹೋತಾರಂ ರತ್ನಧಾತಮಮ್ ॥೧॥

ಅಗ್ನಿಮ್ । ಈಳೇ । ಪುರಃऽ ಹಿತಮ್ । ಯಜ್ಞಸ್ಯ । ದೇವಮ್ । ಋತ್ವಿಜಮ್ । ಹೋತಾರಮ್ । ರತ್ನऽಧಾತಮಮ್ ।

ಪದಾರ್ಥಃ- (ಅಗ್ನಿಮ್) ಪರಮೇಶ್ವರಮ್ ಭೌತಿಕಂ ವಾ - ಇಂದ್ರಂ ಮಿತ್ರಂ ವರುಣಾಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್ । ಏಕಂ ಸದ್ವಿಪ್ರಾ ಬಹುಧಾ ವದನ್ತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ ॥ ಋ.೧.೧೬೪.೪೬ । ಅನೇನೈಕಸ್ಯ ಸತಃ ಪರಬ್ರಹ್ಮಣ ಇಂದ್ರಾದೀನಿ ಬಹುಧಾ ನಾಮಾನಿ ಸಂತೀತಿ ವೇದಿತವ್ಯಮ್ । ತದೇವಾಗ್ನಿಸ್ತದಾದಿತ್ಯಸ್ತದ್ವಾಯುಸ್ತದು ಚಂದ್ರಮಾಃ । ತದೇವ ಶುಕ್ರಂ ತದ್ ಬ್ರಹ್ಮಾ ತಾ ಆಪಃ ಸ ಪ್ರಜಾಪತಿಃ । ಯ.೩೨.೧ । ಯತ್ಸಚ್ಚಿದಾನಂದಾದಿಲಕ್ಷಣಂ ಬ್ರಹ್ಮ ತದೇವಾತ್ರಾಗ್ನ್ಯಾದಿನಾಮ-ವಾಚ್ಯಮಿತಿ ಬೋಧ್ಯಮ್ । ಬ್ರಹ್ಮಾ ಹ್ಯಗ್ನಿಃ । ಶ.೧.೪.೨.೧೧ । ಆತ್ಮಾ ವಾ ಅಗ್ನಿಃ । ಶ.೧.೨.೩..೨ ಅತ್ರಾಗ್ನಿರ್ಬ್ರಹ್ಮಾತ್ಮನೋರ್ವಾಚಕೋऽಸ್ತಿ । ಅಯಂ ವಾ ಅಗ್ನಿಃ ಪ್ರಜಾಶ್ಚ ಪ್ರಜಾಪತಿಶ್ಚ । ಶ. ೬.೧.೨.೪೨ ಅತ್ರ ಪ್ರಜಾಶಬ್ದೇನ ಭೌತಿಕಃ ಪ್ರಜಾಪತಿಶಬ್ದೇನೇಶ್ವರಶ್ಚಾಗ್ನಿಗ್ರಾಹ್ಯಃ । ಅಗ್ನಿರ್ವೈ ದೇವಾನಾಂ ವ್ರತಪತಿಃ ಏತದ್ಧ ವೈ ದೇವಾ ವ್ರತಂ ಚರಂತಿ ಯತ್ಸತ್ಯಮ್ । ಶ. ೧.೧.೧.೨, ೫ । ಸತ್ಯಾಚಾರನಿಯಮಪಾಲನಂ ವ್ರತಂ ತತ್ಪತಿರೀಶ್ವರಃ । ತ್ರಿಭಿಃ ಪವಿತ್ರೈರಪುಪೋದ್ಧ್ಯರ್ಕಂ ಹೃದಾ ಮತಿಂ ಜ್ಯೋತಿರನು ಪ್ರಜಾನನ್ । ವರ್ಷಿಷ್ಠಂ ರತ್ನಮಕೃತ ಸ್ವಧಾಭಿರಾದಿದ್ ದ್ಯಾವಾಪೃಥಿವೀ ಪರ್ಯಪಶ್ಯತ್ ॥ ಋ.೩.೨೬.೮ ॥ ಅತ್ರಾಗ್ನಿಶಬ್ದಸ್ಯಾನುವೃತ್ತೇಃ ಪ್ರಜಾನನ್ನಿತಿ ಜ್ಞಾನವತ್ತ್ವಾತ್ ಪರ್ಯಪಶ್ಯದಿತಿ ಸರ್ವಜ್ಞತ್ವಾದೀಶ್ವರೋ ಗ್ರಾಹ್ಯಃ ।

ಯಾಸ್ಕಮುನಿರತ್ರೋಭಯಾರ್ಥಕರಣಾಯಾಗ್ನಿಶಬ್ದ ಪುರಃ ಪರಮೇತನ್ಮಂತ್ರಮೇವಂ ವ್ಯಾಚಷ್ಟೇ - ಅಗ್ನಿಃ ಕಸ್ಮಾದಗ್ರಣೀರ್ಭವತ್ಯಗ್ರಂ ಯಜ್ಞೇಷು ಪ್ರಣೀಯತೇಽಙ್ಗಂ ನಯತಿ ಸನ್ನಮಮಾನೋಽಕಾಪನೋ ಭವತೀತಿ ಸ್ಥೌಲಾಷ್ಠೀವಿರ್ನ ಕ್ನಾಪಯತಿ ನ ಸ್ನೇಹಯತಿ ತ್ರಿಭ್ಯ ಆಖ್ಯಾಂತೇಭ್ಯೋ ಜಾಯತ ಇತಿ ಶಾಕಪೂಣಿರಿತಿದಕ್ರಾದ್ಯಗ್ಧಾದ್ವಾ ನೀತಾತ್ಸ ಖಲ್ವತೇರಕಾರಮಾದತ್ತೇ ಗಕಾರ್ಮನತ್ಕರ್ವಾ ದಹತೇರ್ವಾ ನೀಃ ಪರಸ್ತಸ್ಯೈಷಾ ಭವತೀತಿ - ಅಗ್ನಿಮೀಳೇಽಗ್ನಿಂ ಯಾಚಾಮೀಳರಧ್ಯೇಷಣಾಕರ್ಮಾ ಪೂಜಾಕರ್ಮಾ ವಾ ದೇವೋ ದಾನಾದ್ವಾ ದೀಪನಾದ್ವಾ ದ್ಯೋತನಾದ್ವಾ ದ್ಯುಸ್ಥಾನೋ ಭವತೀತಿ ವಾ ಯೋ ದೇವಃ ಸಾ ದೇವತಾ । ಹೋತಾರಂ ಹ್ವತಾರಂ ಜುಹೋತೇರ್ಹೋತರಿತ್ಯೌರ್ಣನಾಭೋ ರತ್ನಧಾತಮ ರಮಣಾಯಾನಾಂ ಧನಾನಾಂ ದಾತೃತಮಮ್। ನಿರು.೭.೧೪-೧೫.

ಅಗ್ರಣೀಃ ಸರ್ವೋತ್ತಮಃ ಸರ್ವೇಷು ಯಜ್ಞೇಷು ಪೂರ್ವಮೀಶ್ವರಸ್ಯೈವ ಪ್ರತಿಪಾದಾನಾತ್ತಸ್ಯಾತ್ರ ಪ್ರಹ್ಯಣಮ್ ದಗ್ಧಾದಿತಿ ವಿಶೇಷಣಾದ್ಭೌತಿಕಸ್ಯಾಪಿ ಚ ।

ಪ್ರಶಾಸಿತಾರಂ ಸರ್ವೇಷಾಮಣೀಯಾಂಸಮಣೋರಪಿ । ರುಕ್ಮಾಭಂ ಸ್ವಪ್ನಧೀಗಮ್ಯಂ ವಿದ್ಯಾತ್ತಂ ಪುರುಷಂ ಪರಮ್ ॥೧॥ ಏತಮೇಕೇ ವದನ್ತ್ಯಗ್ನಿಂ ಮನುಮನ್ಯಂ ಪ್ರಜಾಪತಿಮ್ । ಇಂದ್ರಮೇಕೇಽಪರೇ ಪ್ರಾಣಮಪರೇ ಬ್ರಹ್ಮ ಶಾಶ್ವತಮ್ ॥೨॥ ಮನು.ಅ.೧೨ ಶ್ಲೋಕ ೧೨೨,೧೨೩ । ಅತ್ರಾಪ್ಯಗ್ನ್ಯಾದೀನಿ ಪರಮೇಶ್ವರಸ್ಯ ನಾಮಾನಿ ಸಂತೀತಿ । ಈಳೇ ಅಗ್ನಿಂ ವಿಪಶ್ಚಿತಂ ಗಿರಾ ಯಜ್ಞಸ್ಯ ಸಾಧನಮ್ । ಶ್ರುಷ್ಟೀವಾನಂ ಧಿತಾವಾನಮ್ । ಋ. ೩.೨೭.೨ । ವಿಪಶ್ಚಿತಮೀಳೇ ಇತಿ ವಿಶೇಷಣಾದಗ್ನಿಶಬ್ದೇನಾತ್ರೇಶ್ವರೋ ಗೃಹ್ಯತೇ, ಅನಂತವಿದ್ಯಾವತ್ತ್ವಾಚ್ಚೇತನಸ್ವರೂಪತ್ವಾಚ್ಚ ।

ಅಥ ಕೇವಲಂ ಭೌತಿಕಾರ್ಥಗ್ರಹಣಾಯ ಪ್ರಮಾಣಾನಿ - ಯದಶ್ವಂ ತಂ ಪುರಾಸ್ತಾದುದಶ್ರಯಂ-ಸ್ತಸ್ಯಾಮಯೇನಾಪ್ರೇ ನಿವಾತೇಽಗ್ನಿರಜಾಯತ ತಸ್ಮಾದ್ಯತ್ರಾಗ್ನಿಂ ಮಂಥಿಧ್ಯತ್ಸ್ಯಾತ್ತದಶ್ವಮಾನೇತವೈ ಬ್ರೂಯಾತ್ । ಸ ಪೂರ್ವೇಣೋಪತಿಷ್ಠತೇ ವಜ್ರಮೇವೈತದುಚ್ಛ್ರಯಂತಿ ತಸ್ಯಾಮಯೇನಾಪ್ರೇ ನಿವಾತೇಽಗ್ನಿರ್ಜಾಯತೇ । ಶ. ೨.೧.೪.೧೬. ವೃಷೋ ಅಗ್ನಿಃ । ಅಶ್ವೋ ಹ ವಾ ಏಷ ಭೂತ್ವಾ ದೇವೇಭ್ಯೋ ಯಜ್ಞಂ ವಹತಿ। ಶ. ೧.೩.೩.೨೯-೩೦ । ವೃಷವದ್ಯಾನಾನಾಂ ವೋಢತ್ವಾದು ವೃಷೋಽಗ್ನಿಃ । ತಥಾಽಯಮಗ್ನಿರಾಶುಗಮಯಿತೃತ್ವೇ ನಾಶ್ವೋ ಭೂತ್ವಾ ಕಲಾಯಂತ್ರೈಃ ಪ್ರೇರಿತಃ ಸನ್ ದೇವೇಭ್ಯೋ ವಿದ್ವದ್ಭ್ಯಃ ಶಿಲ್ಪವಿದ್ಯಾವಿದ್ಭ್ಯೋ ಮನುಷ್ಯೇಭ್ಯೋ ವಿಮಾನಾದಿಯಾನಸಾಧನಸಂಗತಂ ಯಾನಂ ವಹತಿ ಪ್ರಾಪಯತೀತಿ । ತೂರ್ಣಿರ್ಹವ್ಯಾವಾಡಿತಿ ಶ. ೧.೩.೪.೧೨ ಅಯಮಗ್ನಿರ್ಹವ್ಯಾನಾಂ ಯಾನಾನಾಂ ಪ್ರಾಪಕತ್ವೇನ ಶೀಘ್ರತಯಾ ಗಮಕತ್ವಾದ್ಧವ್ಯಾವಾಟ್ ತೂರ್ಣಿಶ್ಚೇತಿ । ಅಗ್ನಿರ್ವೈ ಯೋನಿರ್ಯಜ್ಞಸ್ಯ ಶ.೧.೪.೩.೧೧. ಇತ್ಯಾದ್ಯನೇಕಪ್ರಮಾಣೈರಶ್ವನಾಮ್ನಾ ಭೌತಿಕೋಗ್ನಿರ್ವಾಚ ಗೃಹ್ಯತೇ, ಆಶುಗಮನಹೇತುತ್ವಾದಶ್ವೋಽಗ್ನಿರ್ವಿಜ್ಞೇಯಃ। ವೃಷೋ ಅಗ್ನಿಃ ಸಮಿಧ್ಯತೇಽಶ್ವೋ ನ ದೇವವಾಹನಃ । ತಂ ಹವಿಷ್ಮಂತ ಈಳತೇ ॥ ಋ.೩.೨೭.೧೪ । ಯದಾ ಶಿಲ್ಪಿಭಿರಯಮಗ್ನಿರ್ಯತ್ರಕಲಾಭಿರ್ಯಾನೇಷು ಪ್ರದೀಪ್ಯತೇ ತದಾ ದೇವವಾಹನೋ ದೇವಾನ್ ಯಾನಸ್ಥಾನ್ ವಿದುಷಃ ಶೀಘ್ರಂ ದೇಶಾಂತರೇಽಶ್ವ ಇವ ವೃಷ ಇವ ಚ ಪ್ರಾಪಯತಿ, ತೇ ಹವಿಷ್ಮಂತೋ ಮನುಷ್ಯಾ ವೇಗಾದಿಗುಣವಂತಮಶ್ವಮಗ್ನಿಮೀಡತೇ ಕಾರ್ಯ್ಯಾರ್ಥಮಧೀಚ್ಛಂತೀತಿ ವೇದ್ಯಮ್ ।

(ಈಳೇ) ಸ್ತುವೇ ಯಾಚೇ ಅಧೀಚ್ಛಾಮಿ ಪ್ರೇರಯಾಮಿ ವಾ (ಪುರೋಹಿತಂ) ಪುರಸ್ತಾತ್ಸರ್ವಂ ಜಗದ್ಧಾಧಾತಿ ಛೇದನಧಾರಣಾಕರ್ಷಣಾದಿಗುಣಾಂಶ್ಚಾಪಿ ತಮ್ । ಪುರೋಹಿತಃ ಪುರ ಏನಂ ದಧತಿ ಹೋತ್ರಾಯ ವೃತಃ ಕೃಪಾಯಮಾಣೋಽನ್ವಧ್ಯಾಯತ್ । ನಿರು.೨.೧೨। (ಯಜ್ಞಸ್ಯ) ಇಜ್ಯತೇಽಸೌ ಯಜ್ಞಸ್ತಸ್ಯ ಮಹಿಮ್ನಃ ಕರ್ಮಣೋ ವಿದುಷಾಂ ಸತ್ಕಾರಸ್ಯ ಸಂಗತಸ್ಯ ಸತ್ಸಂಗತ್ಯೋತ್ಪನ್ನಸ್ಯ ವಿದ್ಯಾದಿದಾನಸ್ಯ ಶಿಲ್ಪಕ್ರಿಯೋತ್ಪಾದ್ಯಸ್ಯ

ವಾ । ಯಜ್ಞಃ ಕಸ್ಮಾತ್ಪ್ರಖ್ಯಾತಂ ಯಜತಿ ಕರ್ಮೇತಿ ನೈರುಕ್ತಾ ಯಾಂಚೋ ಭವತೀತಿ ವಾ ಯಜುರುನ್ನೋ ಭವತೀತಿ ವಾ ಬಹುಕೃಷ್ಣಾಜಿನ ಇತ್ಯೌಪಮನ್ಯೋವೋ ಯಜೂಂಷ್ಯೇನಂ ನಯಂತೀತಿ ವಾ. ನಿರು. ೩.೧೯। (ದೇವಮ್) ದಾತಾರಂ ಹರ್ಷಕರಂ ವಿಜೇತಾರಂ ದ್ಯೋತಕಂ ವಾ (ಋತ್ವಿಜಮ್) ಯ ಋತೌ ಋತೌ ಪ್ರತ್ಯುತ್ಪತ್ತಿಕಾಲಂ ಸಂಸಾರಂ ಸಂಗತಂ ಯಜತಿ ಕರೋತಿ ತಥಾ ಚ ಶಿಲ್ಪಸಾಧನಾನಿ ಸಂಗಮಯತಿ ಸರ್ವೇಷು ಋತುಷು ಯಜನೀಯಸ್ತಮ್ । ಋತ್ವಿದಧೃಗ್. ಋ.೩.೨.೫ ಅನೇನ ಕರ್ತ್ತರಿ ನಿಪಾತನಮ್, ತಥಾ ಕೃತೋ ಬಹುಲಮಿತಿ ಕರ್ಮಣಿ ವಾ । (ಹೋತಾರಮ್) ದಾತಾರಮಾದಾತಾರಂ ವಾ (ರತ್ನಧಾತಮಮ್) ರಮಣೀಯಾನಿ ಪೃಥಿವ್ಯಾದೀನಿ ಸುವರ್ಣಾದೀನಿ ಚ ರತ್ನಾನಿ ದಧಾತಿ ಧಾಪಯತೀತಿ ರತ್ನಧಾ, ಅತಿಶಯೇನ ರತ್ನಧಾ ಇತಿ ರತ್ನಧಾತಮಸ್ತಮ್ ॥೧॥

ಅನ್ವಯ:- ಅಹಂ ಯಜ್ಞಸ್ಯ ಪುರೋಹಿತಮೃತ್ವಿಜಂ ಹೋತಾರಂ ರತ್ನಧಾತಮಂ ದೇವಮಗ್ನಿಮೀಳೇ ॥೧॥

ಭಾವಾರ್ಥ: ಅತ್ರ ಶ್ಲೇಷಾಲಂಕಾರೇಣೋಭಯಾರ್ಥಗ್ರಹಣಮಸ್ತೀತಿ ಬೋಧ್ಯಮ್ । ಇತೋಽಗ್ನೇ ಯತ್ರ ಯತ್ರ ಮಂತ್ರಭೂಮಿಕಾಯಾಮುಪದಿಶ್ಯತ ಇತಿ ಕ್ರಿಯಾಪದಂ ಪ್ರಯುಜ್ಯತೇಽಸ್ಯ ಸರ್ವತ್ರ ಕರ್ತ್ತೇಶ್ವರ ಏವ ಬೋಧ್ಯಃ । ಕುತಃ, ವೇದಾನಾಂ ತೇನೈವೋಕ್ತತ್ವಾತ್, ಪಿತೃವತ್ಕೃಪಾಯಮಾಣ ಈಶ್ವರಃ ಸರ್ವವಿದ್ಯಾಪ್ರಾಪ್ತಯೇ ಸರ್ವಜೀವಹಿತಾರ್ಥಂ ವೇದೋಪದೇಶಂ ಚಕಾರ । ಯಥಾ ಪಿತಾಽಧ್ಯಾಪಕೋ ವಾ ಸ್ವಪುತ್ರಂ ಶಿಷ್ಯಂ ಚ ಪ್ರತಿ ತ್ವಮೇವಂ ವದೈವಂ ಕುರು ಸತ್ಯಂ ವದ ಪಿತರಮಾಚಾರ್ಯ್ಯಂ ಚ ಸೇವಸ್ವಾನೃತಂ ಮಾ ಕುರ್ವಿತ್ಯುಪದಿಶತಿ, ತಥೈವಾತ್ರ ಬೋಧ್ಯಮ್ । ವೇದಶ್ಚ ಸರ್ವಜೀವ ಕಲ್ಯಾಣಾರ್ಥಮಾವಿರ್ಭೂತಃ । ಏವಮರ್ಥೋಽತ್ರೋತ್ತಮಪುರುಷಪ್ರಯೋಗಃ । ವೇದೋಪದೇಶಸ್ಯ ಪರೋಪಕಾರಾರ್ಥತ್ವಾತ್ ।

ಅತ್ರಾಗ್ನಿಶಬ್ದೇನ ಪರಮಾರ್ಥವ್ಯವಹಾರವಿದ್ಯಾಸಿದ್ಧಯೇ ಪರಮೇಶ್ವರಭೌತಿಕೌ ದ್ವಾವರ್ಥೋ ಗೃಹ್ಯೇತೇ । ಪುರಾ ಆರ್ಯ್ಯೈರ್ಯಾಽಶ್ವವಿದ್ಯಾನಾಮ್ನಾ ಶೀಘ್ರಗಮನಹೇತುಃ ಶಿಲ್ಪವಿದ್ಯಾ ಸಂಪಾದಿತೇತಿ ಶ್ರೂಯತೇ ಸಾಗ್ನಿವಿದ್ಯೈವಾಸೀತ್ । ಪರಮೇಶ್ವರಸ್ಯ ಸ್ವಯಂಪ್ರಕಾಶತ್ವಸರ್ವಪ್ರಕಾಶಕತ್ವಾಭ್ಯಾಮನಂತಜ್ಞಾನವತ್ತ್ವಾತ್ ಭೌತಿಕಸ್ಯ ರೂಪದಾಹಪ್ರಕಾಶವೇಗಛೇದನಾದಿಗುಣವತ್ತ್ವಾಚ್ಛಿಲ್ಪವಿದ್ಯಾಯಾಂ ಮುಖ್ಯಹೇತುತ್ವಾಚ್ಚ ಪ್ರಥಮಂ ಗ್ರಹಣಂ ಕೃತಮಸ್ತೀತಿ ವೇದಿತವ್ಯಮ್ ॥೧॥

ಪದಾರ್ಥ:- ನಾನು **[ಯಜ್ಞಸ್ಯ]** ಯಜ್ಞಯಾಗಾದಿಗಳಲ್ಲಿ, ಜಪ ತಪಾನುಷ್ಠಾನಗಳಲ್ಲಿ ಸರ್ವರಿಂದ ಪೂಜಿಸಲ್ಪಡುವವನೂ, ಉಪಾಸನೀಯನೂ ಆದ ಪರಮಾತ್ಮನ, ಸೃಷ್ಟಿಯ ಪೂರ್ವದಲ್ಲಿ ಸಮಸ್ತ ಪರಮಾಣುಗಳನ್ನು ಒಂದುಗೂಡಿಸಿ ಅತ್ಯದ್ಭುತವಾದ, ಸುಂದರವಾದ, ಸರ್ವಜೀವಹಿತಾರ್ಥ ಸಂಪೂರ್ಣ ಬ್ರಹ್ಮಾಂಡವನ್ನು ಸೃಷ್ಟಿಸಿದ ಸೃಷ್ಟಿಕರ್ತನಾದ ಪರಮಾತ್ಮನ ಹಾಗೂ ಜೀವಮಾತ್ರರ ಕಲ್ಯಾಣಕ್ಕೋಸ್ಕರ ಪರಮಪಾವನವಾದ ಸಂಪೂರ್ಣಜ್ಞಾನದ ಆಕರವಾದ ವೇದಜ್ಞಾನವನ್ನು ನಮ್ಮೆಲ್ಲರಿಗೆ ಪ್ರಧಾನ ಮಾಡಿದ ಪರಮಾತ್ಮನ **[ಪುರೋಹಿತಮ್-ಪುರಃ ಹಿತಮ್]** ಸೃಷ್ಟಿಯ ಮೊದಲು ಸಮಸ್ತ ಪರಮಾಣು ಮತ್ತು ಪ್ರಕೃತಿಯನ್ನು ಧಾರಣಮಾಡುವವನೂ ಆದ **[ಋತ್ವಿಜಮ್]** ಸಮಸ್ತ ಋತುಗಳನ್ನು ಉತ್ತಮವಾದ ರೀತಿಯಲ್ಲಿ ಸಂಯೋಜಿಸಿ ಪ್ರತಿಯೊಂದು ಋತುವಿಗೆ ಅನುಗುಣವಾಗಿ ಆಹಾರ ಪದಾರ್ಥಗಳನ್ನು, ಫಲಪುಷ್ಪಾದಿಗಳನ್ನೂ, ವನಸ್ಪತಿ-ದಿವ್ಯವಾದ ಔಷಧಿಗಳನ್ನು ಸೃಷ್ಟಿಸಿ ಮಳೆ, ಬೆಳೆ, ಸೆಕೆ, ಚಳಿಯಾದಿಯನ್ನು ಯಥಾವತ್ತಾಗಿ ಉಂಟು ಮಾಡುವವನೂ ಆದ ಪರಮಾತ್ಮನನ್ನು **[ಹೋತಾರಮ್]** ಸೃಷ್ಟಿಯ ಆದಿಯಲ್ಲಿ ಜೀವಮಾತ್ರರಿಗೆ ಬೇಕು ಬೇಕಾದ ಸಕಲ ವಸ್ತುಗಳನ್ನು ದಾನ ಮಾಡಿ ಪ್ರಳಯಕಾಲದಲ್ಲಿ ಎಲ್ಲವನ್ನು ಹಿಂದಕ್ಕೆ ಪಡೆಯುವವನೂ ಆದ ಪರಮಾತ್ಮನನ್ನು **[ರತ್ನಧಾತಮಮ್]** ಸಂಪೂರ್ಣ ಐಶ್ವರ್ಯವನ್ನೂ ಸಂಪೂರ್ಣ ಲೋಕಲೋಕಾಂತರಗಳನ್ನೂ, ಹಾಗೂ ಸಮಸ್ತ ರಮಣೀಯವಾದ ವಸ್ತುಗಳನ್ನು ಧಾರಣ ಮಾಡಿಕೊಳ್ಳುವವನೂ ಆದ ಪರಮಾತ್ಮನನ್ನು **[ದೇವಮ್]** ದಿವ್ಯಗುಣಗಳುಳ್ಳವನೂ, ಸಂಪೂರ್ಣ ಐಶ್ವರ್ಯವನ್ನೂ, ಸಂಪೂರ್ಣ ಜ್ಞಾನವನ್ನೂ

ಸಕಲ ಸೌಲಭ್ಯಗಳುಳ್ಳ ಸರ್ವಸುಖಪ್ರದವಾದ ಸೃಷ್ಟಿಯನ್ನೂ ಸೃಷ್ಟಿಸಿ ಜೀವಮಾತ್ರರಿಗೆ ದಾನ ಮಾಡುವವನೂ ಪ್ರಕಾಶವನ್ನು ಕೊಡುವ ಸಮಸ್ತ ಸೂರ್ಯ ಚಂದ್ರ ನಕ್ಷತ್ರಾದಿಗಳಿಗೆ ಪ್ರಕಾಶವನ್ನು ಕೊಡುವವನೂ ಆದ ಪರಮಾತ್ಮನನ್ನು **[ಅಗ್ನಿಮ್]** ಸ್ವಯಂ ಪ್ರಕಾಶಸ್ವರೂಪನೂ, ಸಕಲ ಬ್ರಹ್ಮಾಂಡವನ್ನು ಪ್ರಕಾಶಿಸುವವನೂ, ಸರ್ವಾಗ್ರಣಿಯೂ, ಸಮಸ್ತ ಶ್ರೇಷ್ಠಕರ್ಮಗಳಿಗೆ ಪ್ರೇರಣೆಯನ್ನು ಕೊಟ್ಟು ಮಾನಸಿಕ, ಶಾರೀರಿಕ, ಆತ್ಮಿಕಬಲವನ್ನು ಕೊಡುವವನೂ ಆದ ಪರಮಾತ್ಮನನ್ನು **[ಈಳೇ]** ಸ್ತುತಿಸುತ್ತೇನೆ ಮತ್ತು ಅತ್ಯಂತ ಶ್ರದ್ಧೆಯಿಂದ ಉಪಾಸಿಸುತ್ತೇನೆ.

ನಾವೆಲ್ಲರೂ **[ಯಜ್ಞಸ್ಯ]** ಸಮಸ್ತ ಧರ್ಮಾನುಷ್ಠಾನಗಳನ್ನೂ, ನಿತ್ಯ ನೈಮಿತ್ತಿಕ ಕರ್ಮಾನುಷ್ಠಾನಗಳನ್ನೂ ಮಾಡುವಾಗ ಹಾಗೂ ಸಮಸ್ತ ಪರ್ವಾದಿಗಳನ್ನು ಆಚರಿಸುವಾಗ ಮಾಡಲೇಬೇಕಾದ ಯಜ್ಞಯಾಗಾದಿಗಳಲ್ಲಿ **[ಪುರೋಹಿತಮ್]** ಮೊಟ್ಟ ಮೊದಲು ಯಜ್ಞ ವೇದಿಕೆಯಲ್ಲಿ ಪ್ರದೀಪ್ತಗೊಳಿಸಲ್ಪಡುವ **[ಋತ್ವಿಜಮ್]** ಪ್ರತಿಯೊಂದು ಋತುವಿನಲ್ಲಿ ಹಾಗೂ ಸಂಧಿಕಾಲದಲ್ಲಿ ದೋಷನಿವಾರಣೆ ಹಾಗೂ ಸೃಷ್ಟಿಯ ಮತ್ತು ನಮ್ಮೆಲ್ಲರ ಸಂರಕ್ಷಣೆಗೋಸ್ಕರ ಮಾಡಲ್ಪಡುವ ಯಜ್ಞಗಳಲ್ಲಿ ಪ್ರದೀಪ್ತನಾಗಿ ನಮ್ಮೆಲ್ಲರಿಗೆ ಶಕ್ತಿಯನ್ನು ಕೊಟ್ಟು ಆರೋಗ್ಯವನ್ನು ಉಂಟು ಮಾಡುವ **[ಹೋತಾರಮ್]** ಸಕಲ ವಸ್ತುಗಳಲ್ಲಿ ವಿದ್ಯಮಾನನಾಗಿ ಗತಿಯನ್ನುಂಟು ಮಾಡುವ ಹಾಗೂ ಸಕಲವಸ್ತುಗಳನ್ನು ಸುಟ್ಟು ಭಸ್ಮ ಮಾಡುವ **[ರತ್ನಧಾತಮಮ್]** ಭೂಮಿಯಲ್ಲಡಗಿದ ಸಮಸ್ತ ರತ್ನಾದಿಗಳಿಗೆ ಕಾರಣೀಭೂತನಾಗಿ ಶಕ್ತಿಯನ್ನೂ, ಪ್ರಕಾಶವನ್ನೂ ಧಾರಣ ಮಾಡಿಕೊಳ್ಳುವವನೂ ಆದ **[ದೇವಮ್]** ದಿವ್ಯಶಕ್ತಿಯುಳ್ಳವನೂ, ಸಕಲ ಯಂತ್ರಗಳಿಗೆ ಗತಿಯನ್ನು ಕೊಡುವವನೂ, ಸಕಲ ಚೇತನ ಪದಾರ್ಥಗಳ ವಿಕಾಸವನ್ನು ಮಾಡುವವನೂ ಆದ **[ಅಗ್ನಿಮ್]** ಅಗ್ನಿಯನ್ನು **[ಈಳೇ]** ನಾವೆಲ್ಲರೂ ಸ್ತುತಿಸೋಣ ಹಾಗೂ ಜೀವಮಾತ್ರರ ಹಿತಾರ್ಥ ಸದಾಕಾಲ ಅಗ್ನಿಯ ಸದ್ವಿನಿಯೋಗವನ್ನೇ ಮಾಡೋಣ. ಎಂದಿಗೂ ಯಾವುದೇ ರೀತಿಯಲ್ಲಿ ವಿನಾಶವನ್ನು ಮಾಡುವುದಕ್ಕೋಸ್ಕರ ಅಗ್ನಿಯ, ಅಗ್ನಿಶಕ್ತಿಯ ದುರುಪಯೋಗವನ್ನು ಮಾಡದಿರೋಣ.

ಭಾವಾರ್ಥ:- ನಾವೆಲ್ಲರೂ ಯಜ್ಞಯಾಗಾದಿಗಳಲ್ಲಿ ಧರ್ಮಾನುಷ್ಠಾನದಲ್ಲಿ ಹಾಗೂ ಪ್ರತಿಯೊಂದು ಶ್ರೇಷ್ಠಕರ್ಮದ ಸಾಫಲ್ಯತೆಗೋಸ್ಕರ ಮೊಟ್ಟ ಮೊದಲು ಪೂಜಿಸಲ್ಪಡುವ ಹಾಗೂ ಉಪಾಸನೀಯ ಪರಮಾತ್ಮನನ್ನು ಮತ್ತು ಸೃಷ್ಟಿಯ ಮೊದಲೇ ಪ್ರತಿಯೊಂದು ಕಣಕಣದಲ್ಲಿ ವಿದ್ಯಮಾನನಾಗಿದ್ದು ಪ್ರತಿಯೊಂದು ಪರಮಾಣುವನ್ನು ಒಂದುಗೂಡಿಸಿ ಜೀವಮಾತ್ರರ ಕಲ್ಯಾಣಾರ್ಥ ಬ್ರಹ್ಮಾಂಡವನ್ನು ಸೃಷ್ಟಿಸಿದ ಪರಮಾತ್ಮನನ್ನು ಹಾಗೂ ಜೀವಮಾತ್ರರ ಕಲ್ಯಾಣಾರ್ಥ ಸಂಪೂರ್ಣ ಜ್ಞಾನದ ಆಕರವಾದ ವೇದಜ್ಞಾನವನ್ನು ಪ್ರದಾನ ಮಾಡಿದ ಪರಮಾತ್ಮನನ್ನು ಸದಾಕಾಲ ಉಪಾಸಿಸೋಣ. ಆ ಪರಮಾತ್ಮನೇ ಸೃಷ್ಟಿಯ ಮೊದಲು ಸಮಸ್ತ ಪರಮಾಣುಗಳನ್ನು, ಪ್ರಕೃತಿಯನ್ನು ಧಾರಣ ಮಾಡುವವನೂ ಆಗಿದ್ದಾನೆ. ಆ ಪರಮಾತ್ಮನೂ ಸಮಸ್ತ ಋತುಗಳನ್ನು ಸಂಯೋಜಿಸಿ ಋತುಗಳಿಗನುಗುಣವಾಗಿ ಮಳೆ, ಬೆಳೆ, ಸೆಕೆ, ಚಳಿ ಇತ್ಯಾದಿಯನ್ನುಂಟು ಮಾಡುವವನೂ ಆಗಿದ್ದಾನೆ. ಋತುಗಳಿಗನುಗುಣವಾಗಿ ಉತ್ತಮವಾದ ಆಹಾರವನ್ನೂ, ಫಲ, ಪುಷ್ಪ, ಔಷಧಿ, ವನಸ್ಪತಿ ಇತ್ಯಾದಿಗಳನ್ನು ಸೃಷ್ಟಿಸುತ್ತಾನೆ. ಪರಮಾತ್ಮನು ಸೃಷ್ಟಿಯ ಆದಿಯಲ್ಲಿ ಜೀವಮಾತ್ರರಿಗೆ ಬೇಕಾದ ಸಕಲ ವಸ್ತುಗಳನ್ನು ಪ್ರದಾನ ಮಾಡಿ ಪ್ರಳಯಕಾಲದಲ್ಲಿ ಎಲ್ಲವನ್ನು ಪುನಃ ಹಿಂದಕ್ಕೆ ಪಡೆದುಕೊಳ್ಳುತ್ತಾನೆ.

ಸಚ್ಚಿದಾನಂದ ಪರಮಾತ್ಮನು ಸಂಪೂರ್ಣ ಐಶ್ವರ್ಯವನ್ನು ಸಮಸ್ತ ರಮಣೀಯವಾದ ವಸ್ತುಗಳನ್ನು ಧಾರಣ ಮಾಡಿಕೊಳ್ಳುವವನೂ ಆಗಿದ್ದಾನೆ. ಅಂತಹ ದಿವ್ಯ ಗುಣಗಳುಳ್ಳ ಹಾಗೂ ಸೂರ್ಯಚಂದ್ರ ನಕ್ಷತ್ರಾದಿಗಳಿಗೂ ಪ್ರಕಾಶವನ್ನು ಕೊಡುವ, ಸ್ವಯಂ ಪ್ರಕಾಶಸ್ವರೂಪನಾಗಿ ಸಕಲ ಬ್ರಹ್ಮಾಂಡವನ್ನು ಪ್ರಕಾಶಿಸುವ, ಸರ್ವಾಗ್ರಣಿಯಾದ ಪರಮಾತ್ಮನನ್ನು ಸ್ತುತಿಸೋಣ, ಪೂಜಿಸೋಣ, ಉಪಾಸಿಸೋಣ.

ಲೌಕಿಕಾರ್ಥದಲ್ಲಿ ಅಗ್ನಿಯ ಅರ್ಥ ಅಗ್ನಿ ಎಂದೇ ಆಗುತ್ತದೆ. ಸಮಸ್ತ ಯಜ್ಞ ಯಾಗಾದಿಗಳನ್ನು ಮಾಡುವಾಗ ಧಾರ್ಮಿಕ ಅನುಷ್ಠಾನ ಮಾಡುವಾಗ ಮತ್ತು ಸಭೆ ಸಮಾರಂಭಗಳಲ್ಲಿಯೂ ಮೊಟ್ಟ ಮೊದಲು ಅಗ್ನಿಯನ್ನು ಪ್ರದೀಪ್ತಗೊಳಿಸಲಾಗುತ್ತದೆ. ದೀಪವನ್ನು ಬೆಳಗಿಸುತ್ತೇವೆ. ಈ ಭೌತಿಕಾಗ್ನಿಯು ನಮಗೆ ಪ್ರಕಾಶವನ್ನು, ಶಕ್ತಿಯನ್ನು

ಕೊಡುತ್ತದೆ. ಈ ಅಗ್ನಿಯು ಶಕ್ತಿಯ ರೂಪದಲ್ಲಿದ್ದು ಸಕಲ ವಸ್ತುಗಳಲ್ಲಿ ವಿದ್ಯಮಾನವಾಗಿ ಗತಿಯನ್ನು ವಿಕಾಸವನ್ನು ಉಂಟುಮಾಡುತ್ತದೆ. ಹಾಗೂ ಎಲ್ಲವನ್ನು ಭಸ್ಮವನ್ನಾಗಿಯೂ ಮಾಡುತ್ತದೆ. ಈ ಅಗ್ನಿಯನ್ನು ಹಾಗೂ ಅಗ್ನಿ ಶಕ್ತಿಯನ್ನೂ ವಿಭಿನ್ನ ರೀತಿಯಲ್ಲಿ ಅಳವಡಿಸಿಕೊಂಡು ಸಮಸ್ತ ರೀತಿಯ ಯಂತ್ರೋಪಕರಣಗಳನ್ನು ನಮಗೆ ಬೇಕಾದಂತೆ ಉಪಯೋಗಿಸಿಕೊಳ್ಳುತ್ತೇವೆ. ಈ ಅಗ್ನಿಯೇ ಭೂಮಿಯಲ್ಲಿ ವಜ್ರ, ವೈಢೂರ್ಯ, ರತ್ನಾದಿಗಳಿಗೆ ಕಾರಣೀಭೂತವಾಗಿದೆ. ಇಂತಹ ಸರ್ವೋಪಯೋಗಿಯಾದ ಅಗ್ನಿಯನ್ನು, ಅಗ್ನಿಶಕ್ತಿಯನ್ನು ಕೇವಲ ಜೀವಮಾತ್ರರ ಕಲ್ಯಾಣಾರ್ಥ ಮಾತ್ರ ವಿನಿಯೋಗಿಸೋಣ. ಎಂದಿಗೂ ವಿನಾಶವನ್ನು ಮಾಡುವುದಕ್ಕೋಸ್ಕರ ದುರುಪಯೋಗ ಮಾಡದಿರೋಣ. ಆ ಸರ್ವಪ್ರಕಾಶಸ್ವರೂಪ ಪರಮಾತ್ಮನು ಸರ್ವರಿಗೂ ಸದಾಕಾಲ ಮಂಗಳವನ್ನೂ, ಕಲ್ಯಾಣವನ್ನೂ, ಸುಖಶಾಂತಿ ಸಮೃದ್ಧಿಯನ್ನೂ ಕರುಣಿಸಲಿ.

ಮುಂದಿನ ಮಂತ್ರದಲ್ಲಿ ಅಗ್ನಿಯು ಯಾರಿಂದ ಸ್ತುತಿಸಲ್ಪಡಲು ಮತ್ತು ಅನ್ವೇಷಿಸಲು ಯೋಗ್ಯನಾಗಿದ್ದಾನೆ ಎಂಬುದನ್ನು ತಿಳಿಸಲಾಗಿದೆ.

ಅಗ್ನಿಃ ಪೂರ್ವೇಭಿರ್‌ಋಷಿಭಿರೀಡ್ಯೋ ನೂತನೈರುತ । ಸ ದೇವಾಁ ಏಹ ವಕ್ಷತಿ ॥೨॥

ಪದಾರ್ಥ:- [ಅಗ್ನಿಃ] ಸರ್ವಜ್ಞ ಹಾಗೂ ಸರ್ವಪ್ರಕಾಶ ಸ್ವರೂಪನಾದ ಪರಮಾತ್ಮನು **[ಪೂರ್ವೇಭಿಃ]** ಪೂರ್ವ ಸೃಷ್ಟಿಯಲ್ಲಿ ಅರ್ಥಾತ್ ವರ್ತಮಾನ ಸೃಷ್ಟಿಗಿಂತ ಹಿಂದಿನ ಸೃಷ್ಟಿಯಲ್ಲಿ ಇದ್ದಂತಹ **[ಋಷಿಭಿಃ]** ಮಂತ್ರದ್ರಷ್ಟಾರರಾದ ಹಾಗೂ ವೇದವನ್ನು ಸಾಕ್ಷಾತ್ಕಾರ ಮಾಡಿಕೊಂಡು ಪರವರ್ತೀ ಜನರಿಗೆ ವೇದಜ್ಞಾನವನ್ನು ಉಪದೇಶಿಸಿದ ಋಷಿಗಳಿಂದ **[ಉತ]** ಮತ್ತು **[ನೂತನೈಃ]** ವರ್ತಮಾನ ಸೃಷ್ಟಿಯ ಆದಿಯಲ್ಲಿ ಮಂತ್ರದ್ರಷ್ಟಾರರಾದ ಋಷಿಗಳಿಂದ ಹಾಗೂ ಅವರಿಂದ ವೇದಜ್ಞಾನವನ್ನು ಪಡೆದ ಮತ್ತು ಪಡೆಯುತ್ತಿರುವ ಸಮಸ್ತ ಮಾನವರಿಂದ **[ಈಡ್ಯಃ]** ಸ್ತುತಿಸಲ್ಪಡುವವನೂ, ಉಪಾಸನೀಯನೂ, ಪೂಜಿಸಲ್ಪಡುವವನೂ, ಮನನೀಯನೂ, ವಿಚಿಂತ್ಯನೂ ಆಗಿದ್ದಾನೆ. **[ಸಃ]** ಆ ಪರಮಾತ್ಮನೇ **[ದೇವಾನ್]** ದಿವ್ಯಗುಣಗಳುಳ್ಳವನಾಗಿದ್ದೂ, ದಿವ್ಯ ಶಕ್ತಿಯನ್ನು ಧಾರಣ ಮಾಡಿಕೊಂಡವನೂ ಆಗಿದ್ದಾನೆ. ಅದೇ ರೀತಿ ನಮ್ಮೆಲ್ಲರಿಗೆ ದಿವ್ಯವಾದ ಗುಣಗಳುಳ್ಳ, ದಿವ್ಯವಾದ ಶಕ್ತಿಯುಳ್ಳ, ದಿವ್ಯವಾದ ವೇದಜ್ಞಾನದಿಂದ ಸಂಪೂರ್ಣ ಜ್ಞಾನವಂತರಾದ ಮಾನವ ಮಾತ್ರರ ಕಲ್ಯಾಣವನ್ನೇ ಅಪೇಕ್ಷಿಸುವ ಶ್ರೇಷ್ಠ ವಿದ್ವಾಂಸರನ್ನು **[ಇಹ]** ಈ ಜಗತ್ತಿನಲ್ಲಿ **[ಆ ವಕ್ಷತಿ]** ನಮ್ಮ ಕಲ್ಯಾಣಕ್ಕೋಸ್ಕರ ಸೃಷ್ಟಿಸುತ್ತಾನೆ. ಅರ್ಥಾತ್ ನಮಗೆ ಪ್ರಾಪ್ತವಾಗುವಂತೆ ಮಾಡುತ್ತಾನೆ. ಆ ಪರಮಾತ್ಮನು ನಮ್ಮೆಲ್ಲರ ಕಲ್ಯಾಣಕ್ಕೋಸ್ಕರ ಶ್ರೇಷ್ಠ ವಿದ್ವಾಂಸರನ್ನು ಸದಾಕಾಲ ಒದಗಿಸಲಿ, ಪ್ರಾಪ್ತವಾಗುವಂತೆ ಮಾಡಲಿ. ತನ್ಮೂಲಕ ನಾವು ಸದಾ ಸತ್ಯವಾದ ಶ್ರೇಷ್ಠವಾದ ಕಲ್ಯಾಣಕರವಾದ ಜ್ಞಾನವನ್ನೇ ಪಡೆಯುವಂತಾಗಲಿ. ಪ್ರಪಂಚದಲ್ಲಿ ಯಾರೂ ಅಜ್ಞಾನಿಗಳಾಗದಿರಲಿ.

ಭಾವಾರ್ಥ:- ಸರ್ವಜ್ಞನಾದ ಪರಮಾತ್ಮನು ಪ್ರತಿಯೊಂದು ಸೃಷ್ಟಿಯಲ್ಲಿ ಸೃಷ್ಟಿಯ ಆದಿಯಲ್ಲಿಯೇ ಜೀವಮಾತ್ರರ ಕಲ್ಯಾಣಕ್ಕೋಸ್ಕರ ಮಂತ್ರದ್ರಷ್ಟಾರರಾದ, ವೇದಜ್ಞಾನವನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲು ಸಮರ್ಥರಾದ ಋಷಿಗಳನ್ನು ಸೃಷ್ಟಿಸಿ ಅವರ ಮೂಲಕ ಜಗತ್ತಿಗೆ ವೇದಜ್ಞಾನವನ್ನು ಕೊಡುತ್ತಾನೆ. ಆದುದರಿಂದ ಆ ಪರಮಾತ್ಮನು ಪೂರ್ವ ಸೃಷ್ಟಿಯಲ್ಲಿ ಇದ್ದಂತಹ ಋಷಿ ಮಹರ್ಷಿಗಳಿಂದಲೂ ವಿದ್ವಾಂಸರಿಂದಲೂ ಹಾಗೂ ವರ್ತಮಾನ ಸೃಷ್ಟಿಯಲ್ಲಿದ್ದಂತಹ ಋಷಿ ಮಹರ್ಷಿಗಳಿಂದಲೂ ವಿದ್ವಾಂಸರಿಂದಲೂ ಮತ್ತು ಮಾನವ ಮಾತ್ರರಿಂದಲೂ ಪೂಜಿಸಲ್ಪಡುವವನೂ, ಉಪಾಸನೀಯನೂ, ಚಿಂತನೀಯನೂ, ಮನನೀಯನೂ ಆಗಿದ್ದಾನೆ.

ಆ ಪರಮಾತ್ಮನು ದಿವ್ಯವಾದ ಗುಣಗಳುಳ್ಳವನೂ, ದಿವ್ಯವಾದ ಶಕ್ತಿಯುಳ್ಳವನೂ, ಸರ್ವಜ್ಞನೂ ಆಗಿದ್ದು ಮಾನವಮಾತ್ರರ ಕಲ್ಯಾಣಕ್ಕೋಸ್ಕರ ದಿವ್ಯವಾದ ವೇದಜ್ಞಾನದಿಂದ ಜ್ಞಾನವಂತರಾಗಿ ದಿವ್ಯವಾದ ಗುಣಗಳುಳ್ಳ ಮಾನವ ಮಾತ್ರರ ಕಲ್ಯಾಣವನ್ನೇ ಅಪೇಕ್ಷಿಸುವ ಋಷಿ, ಮಹರ್ಷಿಗಳನ್ನೂ, ವಿದ್ವಾಂಸರನ್ನೂ, ಆಚಾರ್ಯರನ್ನೂ

ಪ್ರಾಪ್ತವಾಗುವಂತೆ ಮಾಡುತ್ತಾನೆ. ಆ ಪರಮಾತ್ಮನು ನಮ್ಮೆಲ್ಲರ ಕಲ್ಯಾಣಕ್ಕೋಸ್ಕರ ನಮ್ಮೆಲ್ಲರ ಅಜ್ಞಾನವನ್ನೂ, ಅಂಧಶ್ರದ್ಧೆಯನ್ನೂ ಹೋಗಲಾಡಿಸಿ ಸತ್ಯಜ್ಞಾನವನ್ನೂ, ಸದಾಚಾರವನ್ನೂ, ಸದ್ವಿವೇಕವನ್ನೂ ಶ್ರದ್ಧೆ ಹಾಗೂ ಪರಮಾತ್ಮನಲ್ಲಿ ಅನನ್ಯ ಭಕ್ತಿಯನ್ನು ನಮ್ಮೆಲ್ಲರಲ್ಲಿ ಉಂಟಾಗುವಂತೆ ಮಾಡುವಂತಹ ಶ್ರೇಷ್ಠ ವಿದ್ವಾಂಸರನ್ನು, ಋಷಿ ಮಹರ್ಷಿಗಳನ್ನು ಸದಾಕಾಲ ನಮ್ಮೆಲ್ಲರಿಗೆ ಪ್ರಾಪ್ತವಾಗುವಂತೆ ಮಾಡಲಿ. ತನ್ಮೂಲಕ ಈ ಜಗತ್ತಿನಲ್ಲಿ ಎಲ್ಲರೂ ಸುಜ್ಞಾನಿಗಳೂ, ಸುಸಂಸ್ಕೃತರೂ, ಧಾರ್ಮಿಕರೂ, ಸದ್ವಿವೇಕ ಉಳ್ಳವರೂ ಆಗಲಿ.

ಈಗ ಪರಮೇಶ್ವರನ ಉಪಾಸನೆ ಹಾಗೂ ಭೌತಿಕ ಅಗ್ನಿಯ ಉಪಯೋಗದಿಂದ ಯಾವ ಯಾವ ಫಲಗಳು ಪ್ರಾಪ್ತವಾಗುತ್ತವೆ ಎಂಬುದನ್ನು ಹೇಳಿದೆ

ಅಗ್ನಿನಾ ರಯಿಮಶ್ನವತ್ ಪೋಷಮೇವ ದಿವೇದಿವೇ । ಯಶಸಂ ವೀರವತ್ತಮಮ್ ॥೩॥

[ಈ ಮಂತ್ರದಲ್ಲಿ ಶ್ಲೇಷಾಲಂಕಾರ ಇರುವುದರಿಂದ ಉಭಯಾರ್ಥ, ಅರ್ಥಾತ್ ಪಾರಮಾರ್ಥಿಕ ಹಾಗೂ ಲೌಕಿಕ ಇವೆರಡು ರೀತಿಯಲ್ಲೂ ಮಂತ್ರಾರ್ಥವನ್ನು ಮಾಡಬಹುದು.]

ಪದಾರ್ಥ:- ಮಾನವನು **[ಅಗ್ನಿನೈವ]** ಪರಮಾತ್ಮನ ಉಪಾಸನೆಯನ್ನು ಮಾಡುವುದರಿಂದ ಹಾಗೂ ಅಗ್ನಿಶಕ್ತಿಯನ್ನು ಅರ್ಥಾತ್ ಬೆಂಕಿ, ವಿದ್ಯುತ್, ಸೂರ್ಯನ ಶಾಖದಿಂದ ಪ್ರಾಪ್ತವಾಗುವ ಶಕ್ತಿ (Solar Energy) ಇತ್ಯಾದಿಗಳನ್ನು ಯೋಗ್ಯವಾದ ರೀತಿಯಲ್ಲಿ ಅಳವಡಿಸಿಕೊಂಡು ಅದರ ಪೂರ್ಣ ಪ್ರಯೋಜನವನ್ನು ಪಡೆಯುವುದರಿಂದ **[ದಿವೇ ದಿವೇ]** ಪ್ರತಿದಿನ **[ಪೋಷಂ]** ಆತ್ಮೋನ್ನತಿಯನ್ನು ಮಾಡಿಕೊಂಡು ಆತ್ಮಿಕಬಲವನ್ನಾಗಿ ವರ್ಧಿಸಿಕೊಳ್ಳಬಹುದು ಹಾಗೂ ತನ್ನ ಹಾಗೂ ತನ್ನ ಪರಿವಾರದ ಸಾಮಾಜಿಕ **[ಯಶಸಂ]** ಕೀರ್ತಿ ಹಾಗೂ ಅಜಾತಶತ್ರುಗಳು ಮತ್ತು ವಿದ್ವಾಂಸರು ಹಾಗೂ ಐಶ್ವರ್ಯವಂತರು ಪ್ರಾಪ್ತ ಮಾಡಿಕೊಳ್ಳುವಂತಹ ಉತ್ತಮಪ್ರತಿಷ್ಠೆ **[ರಯಿಂ]** ಸರ್ವಶ್ರೇಷ್ಠ ಸಂಪತ್ತನ್ನು **[ಅಶ್ನವತ್]** ಪ್ರಾಪ್ತಮಾಡಿಕೊಳ್ಳುತ್ತಾನೆ.

ಭಾವಾರ್ಥ:- ಪ್ರತಿಯೊಬ್ಬ ಮಾನವನು ಪರಮಾತ್ಮನನ್ನು ಪ್ರತಿದಿನ ಅನನ್ಯ ಭಕ್ತಿಯಿಂದ ಉಪಾಸಿಸುವುದರಿಂದ, ಅವನ ನ್ಯಾಯವ್ಯವಸ್ಥೆಯಲ್ಲಿದ್ದು ಉತ್ತಮಧಾರ್ಮಿಕ ಜೀವನವನ್ನು ನಡೆಸುತ್ತಾ, ಅಗ್ನಿಶಕ್ತಿ ಅರ್ಥಾತ್ ಬೆಂಕಿ, ವಿದ್ಯುತ್, ಸೂರ್ಯನ ಶಾಖದಿಂದ ಪ್ರಾಪ್ತವಾಗುವ ಶಕ್ತಿ ಮೊದಲಾದುವುಗಳನ್ನು ಯೋಗ್ಯವಾದ ರೀತಿಯಲ್ಲಿ ಅಳವಡಿಸಿಕೊಂಡು ಆತ್ಮೋನ್ನತಿಯನ್ನು ಮಾಡಿಕೊಂಡು ತನ್ನ ಹಾಗೂ ತನ್ನ ಪರಿವಾರದ ಸಾಮಾಜಿಕ ಯಶಸ್ಸು, ಕೀರ್ತಿಯನ್ನು ಪಡೆಯಬಹುದು. ಅದೇ ರೀತಿ ವೀರಪುರುಷರು, ಅಜಾತಶತ್ರುಗಳು [ಯಾವಾಗ ಮಾನವನು ಉತ್ತಮವಾದ ಶ್ರೇಷ್ಠ ಧಾರ್ಮಿಕ ಜೀವನವನ್ನು ನಡೆಸಿಕೊಂಡು ಹೋಗುತ್ತಾನೋ, ಆಗ ಅವನನ್ನು ಯಾರೂ ದ್ವೇಷಿಸುವುದಿಲ್ಲ] ಹಾಗೂ ವಿದ್ವಾಂಸರು ಮತ್ತು ಅತ್ಯಧಿಕ ಐಶ್ವರ್ಯವುಳ್ಳವರು ಪ್ರಾಪ್ತಮಾಡಿಕೊಳ್ಳುವಂತಹ ಉತ್ತಮ ಮತ್ತು ಶ್ರೇಷ್ಠ ಸಂಪತ್ತನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಇದರಲ್ಲಿ ಭೌತಿಕ ಅಗ್ನಿ ಮತ್ತು ಪರಮೇಶ್ವರರು ಯಾವ ಯಾವ ರೀತಿ ಇದ್ದಾರೆ ಎಂಬುದನ್ನು ತಿಳಿಸಲಾಗಿದೆ

ಅಗ್ನೇ ಯಂ ಯಜ್ಞಮಧ್ವರಂ ವಿಶ್ವತಃ ಪರಿಭೂರಸಿ । ಸ ಇದ್ ದೇವೇಷು ಗಚ್ಛತಿ ॥೪॥

ಪದಾರ್ಥ:- [ಅಗ್ನೇ] ಸರ್ವಪ್ರಕಾಶ ಸ್ವರೂಪ, ಸರ್ವಾಗ್ರಣಿ ಸರ್ವಜ್ಞನಾದ ಪರಮಾತ್ಮ! [ಯಂ ಅಧ್ವರಂ] ನೀನು ಹಿಂಸೆ ಹಾಗೂ ಅಧರ್ಮಾದಿ ದೋಷರಹಿತವಾದ **[ಯಜ್ಞಂ]** ಯಜ್ಞವನ್ನು ಅರ್ಥಾತ್ ದೇವಪೂಜಾ ಸಂಗತಿಕರಣ ಮತ್ತು ಸಮಸ್ತ ಶ್ರೇಷ್ಠ ವಸ್ತುಗಳ ದಾನ ಮೊದಲಾದ ಶ್ರೇಷ್ಠಕರ್ಮಗಳನ್ನೊಳಗೊಂಡ ಯಜ್ಞವನ್ನು [ವಿಶ್ವತಃ] ಸರ್ವತ್ರ ಸಮಸ್ತ ಚರಾಚರ ಜಗತ್ತಿನಲ್ಲಿ ವ್ಯಾಪಿಸಿಕೊಂಡು [ಪರಿಭೂಃ] ಸರ್ವವ್ಯಾಪಕನಾಗಿ ಪಾಲನೆಯನ್ನು

ರಕ್ಷಣೆಯನ್ನು ನೀನು ಸದಾಕಾಲ ಮಾಡುತ್ತಿದ್ದೀಯೆ. ಅದೇ ರೀತಿ ಈ ಭೌತಿಕ ಅಗ್ನಿ ಕೂಡಾ ಪೃಥ್ವಿ, ಜಲ, ಅಂತರಿಕ್ಷ ಹಾಗೂ ದ್ಯುಲೋಕದಲ್ಲಿ ವ್ಯಾಪಿಸಿಕೊಂಡು ನಿರಂತರ ಯಜ್ಞವನ್ನು ಮಾಡುತ್ತಿದೆ. **[ಸ ಇದ್ದೇವೇಷು ಗಚ್ಛತಿ]** ಈ ಹಿಂಸಾರಹಿತವಾದ ಹಾಗೂ ಅಧರ್ಮಾದಿ ದೋಷಗಳಿಂದ ರಹಿತವಾದ ಶ್ರೇಷ್ಠ ಯಜ್ಞವು ವಿದ್ವಾಂಸರಲ್ಲಿ ಮತ್ತು ಸಮಸ್ತ ದಿವ್ಯವಾದ ಪದಾರ್ಥಗಳಲ್ಲಿ ನಿರಂತರ ಪ್ರವಾಹಿತವಾಗುತ್ತಾ ಇರುತ್ತದೆ.

ಭಾವಾರ್ಥ:- ಸಂಪೂರ್ಣ ವಿಶ್ವವೇ ಯಜ್ಞಶಾಲೆಯಾಗಿದೆ. ಸರ್ವಪ್ರಕಾಶ ಸ್ವರೂಪ, ಸರ್ವಜ್ಞನಾದ ಪರಮಾತ್ಮನೇ ಇದರ ನಿಯಾಮಕನಾಗಿದ್ದಾನೆ. ಸೂರ್ಯ, ಚಂದ್ರ ನಕ್ಷತ್ರಾದಿಗಳು ಪ್ರಾಣಪ್ರದವಾದ ವಾಯು, ಜಲ, ಅಗ್ನಿ, ಆಕಾಶ, ವೃಕ್ಷಗಳು, ಗಿಡಗಳು, ವನಸ್ಪತಿಗಳು, ಫಲಪುಷ್ಪಗಳು, ನದಿ, ಕಾಡು, ಬೆಟ್ಟ ಎಲ್ಲವೂ ಸದಾಕಾಲ ಯಾವುದೇ ರೀತಿಯ ತಾರತಮ್ಯ ಭೇದಭಾವ ಪಕ್ಷಪಾತವಿಲ್ಲದೇ ಜೀವಮಾತ್ರರಿಗೆ ಸದಾ ದಾನವನ್ನು ಮಾಡುತ್ತಾ ಇವೆ. ನಮ್ಮಿಂದ ಏನನ್ನೂ ಅಪೇಕ್ಷಿಸುವುದಿಲ್ಲ. ನಾವು ಎಷ್ಟು ಕೊಡುತ್ತೇವೆಯೋ ಅದರ ಸಾವಿರ ಪಟ್ಟು ಹೆಚ್ಚು ನಮಗೆ ಹಿಂತಿರುಗಿಸುತ್ತವೆ. ಈ ಯಜ್ಞವು ಹಾಗೂ ಯಜ್ಞೀಯ ಭಾವನೆಯು ಋಷಿ ಮಹರ್ಷಿಗಳಲ್ಲಿ ವಿದ್ವಾಂಸರಲ್ಲಿ ಸದಾ ಪ್ರವಾಹಿತವಾಗುತ್ತಾ ಇರುತ್ತದೆ. ನಾವೆಲ್ಲರೂ ಸದಾಕಾಲ ಹಿಂಸೆ, ಸ್ವಾರ್ಥ, ದ್ವೇಷ, ಲೋಭ, ಕಾಮ, ಕ್ರೋಧ ಹಾಗೂ ಅಧರ್ಮಾದಿ ದೋಷಗಳಿಂದ ರಹಿತವಾದ ವಿದ್ವಾಂಸರ ಸಾನ್ನಿಧ್ಯದಲ್ಲಿದ್ದುಕೊಂಡು ನಮ್ಮಲ್ಲಿರುವ ಸಮಸ್ತ ದೋಷಗಳ ನಿವಾರಣೆಯನ್ನು ಮಾಡುತ್ತಾ ನಿರ್ದೋಷಿಗಳಾಗಿ ಶ್ರೇಷ್ಠವಾದ, ಸರ್ವದೋಷರಹಿತವಾದ ಯಜ್ಞವನ್ನು ಮಾಡುತ್ತಾ ಈ ವಿಶ್ವವನ್ನು ಸಂರಕ್ಷಿಸೋಣ.

ಪುನಃ ಪರಮೇಶ್ವರ ಮತ್ತು ಭೌತಿಕ ಅಗ್ನಿಗಳು ಯಾವ ರೀತಿ ಇವೆ ಎಂಬುದನ್ನು ಹೇಳಲಾಗಿದೆ.

ಅಗ್ನಿರ್ಹೋತಾ ಕವಿಕ್ರತುಃ ಸತ್ಯಶ್ಚಿತ್ರಶ್ರವಸ್ತಮಃ । ದೇವೋ ದೇವೇಭಿರಾ ಗಮತ್ ॥೫॥

ಪದಾರ್ಥ:- ಯಾವನು **[ಸತ್ಯಃ]** ಸತ್-ಸದಾಕಾಲ ವಿದ್ಯಮಾನನಾಗಿದ್ದು, ಸರ್ವವ್ಯಾಪಕನೂ, ಸಜ್ಜನರ ಹಿತವನ್ನು ರಕ್ಷಣೆಯನ್ನು ಮಾಡುವವನೂ, ಸತ್ಯ ಸ್ವರೂಪನೂ, ಅಮೃತ ಅರ್ಥಾತ್ ಮುಕ್ತಾತ್ಮರನ್ನೂ ಹಾಗೂ ಮರ್ತ್ಯ ಎಂದರೆ ಮರಣಧರ್ಮ ಮನುಷ್ಯರನ್ನೂ ನಿಯಮದಲ್ಲಿಡುವವನೂ, ನಿಯಾಮಕನೂ **[ಚಿತ್ರಶ್ರವಸ್ತಮಃ]** ಅದ್ಭುತ ಶ್ರವಣ ಶಕ್ತಿಯುಳ್ಳವನೂ, ಅತ್ಯಂತ ಯಶಸ್ವಿ [ಅವನಿಗಿಂತ ಹೆಚ್ಚು ಯಶಸ್ಸು, ಕೀರ್ತಿ ಉಳ್ಳವರು ಯಾರೂ ಇಲ್ಲ] **[ಕವಿಕ್ರತುಃ]** ಕ್ರಾಂತದರ್ಶಿ ಸರ್ವದ್ರಷ್ಟಾ, ಸರ್ವವಿದ್ಯಾಯುಕ್ತನಾದ ವೇದಜ್ಞಾನವನ್ನು ಜೀವ ಮಾತ್ರರಿಗೆ ಕೊಡುವವನೂ, ಕ್ರಿಯಾಶೀಲನೂ **[ಹೋತಾ]** ಸೃಷ್ಟಿಯ ಆದಿಯಲ್ಲಿ ಸರ್ವಸ್ವವನ್ನು ಕೊಡುವವನೂ ಹಾಗೂ ಪ್ರಳಯಕಾಲದಲ್ಲಿ ಎಲ್ಲವನ್ನೂ ಕಾರಣದಲ್ಲಿ ಲೀನ ಮಾಡುವವನೂ ಆಗಿದ್ದಾನೋ ಅಂತಹ **[ದೇವಃ]** ಸರ್ವಪ್ರಕಾಶ ಸ್ವರೂಪನಾದ **[ಅಗ್ನಿಃ]** ಪರಮಾತ್ಮನು **[ದೇವೇಭಿಃ]** ತನ್ನ ದಿವ್ಯಗುಣಗಳೊಂದಿಗೆ ಹಾಗೂ ದಿವ್ಯಶಕ್ತಿಯೊಂದಿಗೆ **[ಆ ಗಮತ್]** ನಮ್ಮೆಲ್ಲರಿಗೂ ಪ್ರಾಪ್ತವಾಗಲಿ. ಯಾವಾಗ ನಾವು ಅವನ ಸಾನ್ನಿಧ್ಯವನ್ನು ಹೊಂದಲು ಪಾತ್ರರಾಗುತ್ತೇವೋ ಆಗ ಅವನು ಖಂಡಿತವಾಗಿಯೂ ಪ್ರಾಪ್ತವಾಗುತ್ತಾನೆ. ಅದೇ ರೀತಿ ಯಾರು ಸತ್ಯಸಂಧರೂ ಸತ್ಯಾಚರಣೆಯುಳ್ಳವರೂ ಆಗಿದ್ದಾರೋ, ಯಾವುದೇ ರೀತಿಯ ಪಕ್ಷಪಾತವಿಲ್ಲದೇ ಸಮಾನ ರೀತಿಯಲ್ಲಿ ಎಲ್ಲರ ಮಾತನ್ನು ತಾಳ್ಮೆಯಿಂದ ಆಲಿಸುತ್ತಾರೋ ಹಾಗೂ ಬಹುಶ್ರುತರು ಆಗಿದ್ದಾರೋ, ಯಾರು ಶ್ರೇಷ್ಠ ವಿದ್ವಾಂಸರೂ ಸ್ವಾರ್ಥರಹಿತರಾಗಿ ಎಲ್ಲರ ಹಿತಕ್ಕಾಗಿ ಸಮರ್ಪಣಭಾವದಿಂದ ಕರ್ಮವನ್ನು ಮಾಡುತ್ತಾರೋ, ಯಾರು ಸಂಪೂರ್ಣವಿದ್ಯೆಯನ್ನು ನಿಷ್ಪಕ್ಷಭಾವದಿಂದ ಕೊಟ್ಟು ಅಜ್ಞಾನವನ್ನು ಹರಣ ಮಾಡುತ್ತಾರೋ, ಅಂತಹ ಶ್ರೇಷ್ಠ ವಿದ್ವಾಂಸರು ತಮ್ಮ ದಿವ್ಯಗುಣಗಳೊಂದಿಗೆ ನಮ್ಮೆಲ್ಲರಿಗೆ ಸದಾಕಾಲ ಪ್ರಾಪ್ತವಾಗಲಿ.

ಭಾವಾರ್ಥ:- ಪರಮಾತ್ಮನು ಸರ್ವಜ್ಞನೂ, ಸರ್ವಪ್ರಕಾಶ ಸ್ವರೂಪನೂ, ಎಲ್ಲರ ಮಾತನ್ನು ಆಲಿಸುವವನೂ, ಎಲ್ಲರೂ ಮಾಡುವ ಕರ್ಮಗಳನ್ನು ನೋಡುವವನೂ, ಜೀವಮಾತ್ರರ ಕಲ್ಯಾಣಕ್ಕೋಸ್ಕರ ಸರ್ವರಿಗೆ ಸಮಾನವಾದ

ರೀತಿಯಲ್ಲಿ ವೇದಜ್ಞಾನವನ್ನು ಕೊಡುವವನೂ ಅತ್ಯಂತ ಯಶಸ್ವಿಯೂ ಕ್ರಿಯಾಶೀಲನೂ ಆಗಿದ್ದಾನೆ. ಅವನು ಮುಕ್ತ ಹಾಗೂ ಬಂಧನದಲ್ಲಿರುವ ಅರ್ಥಾತ್ ಜನ್ಮಮೃತ್ಯುವಿನ ಬಂಧನದಲ್ಲಿ ಸಿಲುಕಿರುವ ಜೀವಾತ್ಮರನ್ನು ನಿರ್ದಿಷ್ಟವಾದ ನಿಯಮದಲ್ಲಿಡುವವನೂ ಆಗಿದ್ದಾನೆ.

ಯಾವಾಗ ನಾವು ಪರಮಾತ್ಮನ ಸಾನ್ನಿಧ್ಯದಲ್ಲಿರಲು ಪಾತ್ರರಾಗುತ್ತೇವೋ ಅನನ್ಯ ಭಕ್ತಿಯಿಂದ ಅವನ ಉಪಾಸನೆಯನ್ನು ಮಾಡುತ್ತಾ ಅವನ ದಿವ್ಯಗುಣಗಳನ್ನು ನಮ್ಮ ಜೀವನದಲ್ಲಿ ಧಾರಣ ಮಾಡಿಕೊಳ್ಳುತ್ತೇವೋ ಹಾಗೂ ಅವನಂತೆಯೇ ಶ್ರೇಷ್ಠಕರ್ಮಗಳನ್ನು ಮಾಡುತ್ತೇವೆಯೋ, ಆಗ ಅವನು ಖಂಡಿತವಾಗಿಯೂ ತನ್ನ ದಿವ್ಯಶಕ್ತಿಗಳೊಂದಿಗೆ ನಮ್ಮೆಲ್ಲರಿಗೆ ಪ್ರಾಪ್ತವಾಗುತ್ತಾನೆ.

ಈಗ ಅಗ್ನಿ ಶಬ್ದದಿಂದ ಈಶ್ವರನ ಉಪದೇಶವನ್ನು ಮಾಡಲಾಗಿದೆ.

ಯದಂಗ ದಾಶುಷೇ ತ್ವ-ಮಗ್ನೇ ಭದ್ರಂ ಕರಿಷ್ಯಸಿ । ತವೇತ್ತತ್ ಸತ್ಯಮಂಗಿರಃ ॥೬॥

ಪದಾರ್ಥ:- ಹೇ [ಅಂಗಿರಃ] ಬ್ರಹ್ಮಾಂಡದ ಅಂಗಗಳಾದ ಭೂಲೋಕ, ಅಂತರಿಕ್ಷ ಲೋಕ, ದ್ಯುಲೋಕ ಇತ್ಯಾದಿ ಲೋಕಗಳನ್ನು ಪೃಥ್ವಿ ಇತ್ಯಾದಿ ಗ್ರಹೋಪಗ್ರಹಗಳನ್ನೂ, ಸೂರ್ಯ-ಚಂದ್ರ ನಕ್ಷತ್ರಾದಿಗಳನ್ನು ಯಾವ ರೀತಿ ಶರೀರದಲ್ಲಿ ಪ್ರಾಣವು ಸಮಸ್ತ ಅಂಗಗಳನ್ನು ಧಾರಣಮಾಡಿ ಅವುಗಳಿಗೆ ಚೈತನ್ಯತೆಯನ್ನು ಕೊಡುತ್ತದೆಯೋ ಅದೇ ರೀತಿ ಲೋಕ ಲೋಕಾಂತರಗಳನ್ನು ಧಾರಣ ಮಾಡಿ ಕಣಕಣದಲ್ಲಿಯೂ ವ್ಯಾಪ್ತನಾಗಿದ್ದು ಚೈತನ್ಯತೆಯನ್ನು ಗತಿಯನ್ನು ಹಾಗೂ ರಕ್ಷಣೆಯನ್ನು ಕೊಡುವ ಪರಮಾತ್ಮ! **[ಅಂಗಃ]** ಹೇ ಸರ್ವಮಿತ್ರ **[ಅಗ್ನೇ]** ಸರ್ವಪ್ರಕಾಶ ಸ್ವರೂಪನಾದ ಪರಮಾತ್ಮ! **[ತ್ವಂ]** ನೀನು **[ದಾಶುಷೇ]** ಸ್ವಾರ್ಥರಹಿತನಾಗಿ ಸಮರ್ಪಣಾಭಾವದಿಂದ ಸರ್ವಸ್ವವನ್ನು ಅರ್ಪಣೆ ಮಾಡುವ ಉಪಾಸಕನ **[ಭದ್ರಂ ಕರಿಷ್ಯಸಿ]** ಸರ್ವವಿಧದಲ್ಲಿ ಕಲ್ಯಾಣವನ್ನೇ ಮಾಡುತ್ತೀಯೆ, ಸಮಸ್ತ ಐಶ್ವರ್ಯ, ಸುಖ, ಶಾಂತಿ, ಸಮೃದ್ಧಿ, ಮೇಧಾ ಬುದ್ಧಿಯನ್ನು ಪ್ರದಾನ ಮಾಡುತ್ತೀಯೆ. **[ತವ ಇತ್ ತತ್ ಸತ್ಯಂ]** ನಿಶ್ಚಿತವಾಗಿಯೂ ಇದು ನಿನ್ನ ಸತ್ಯವ್ರತವೇ ಆಗಿದೆ.

ಭಾವಾರ್ಥ:- ಸರ್ವಮಿತ್ರನಾದ ಪರಮಾತ್ಮನು ಅತ್ಯಂತ ದಯಾಳುವೂ, ಸರ್ವೇಶ್ವರನೂ, ಸರ್ವಸುಖಪ್ರದನೂ, ಸರ್ವಜ್ಞನೂ, ಸರ್ವಪ್ರಕಾಶ ಸ್ವರೂಪನೂ ಆಗಿದ್ದಾನೆ. ಯಾವ ರೀತಿ ಶರೀರದಲ್ಲಿ ಶರೀರಧಾರಿಯು ಶರೀರದ ಪ್ರತಿಯೊಂದು ಅಂಗಗಳನ್ನು ಧಾರಣಮಾಡಿಕೊಂಡಿದ್ದಾನೆಯೋ ಮತ್ತು ಯಾವ ರೀತಿ ಪ್ರಾಣವು ಶರೀರದ ಪ್ರತಿಯೊಂದು ಅಂಗಕ್ಕೆ ಚೈತನ್ಯತೆಯನ್ನೂ, ಗತಿಯನ್ನೂ ಕೊಡುತ್ತದೆಯೋ, ಅದೇ ರೀತಿ ಪರಮಾತ್ಮನು ಲೋಕಲೋಕಾಂತರಗಳನ್ನು ಧಾರಣ ಮಾಡಿ, ಚೈತನ್ಯತೆಯನ್ನು ಗತಿಯನ್ನು ಕೊಟ್ಟು ರಕ್ಷಣೆಯನ್ನು ಮಾಡುತ್ತಾನೆ. ಪಾಲನೆ ಪೋಷಣೆಯನ್ನು ಮಾಡುತ್ತಾನೆ. ಯಾವ ಉಪಾಸಕನು ಈಶ್ವರ ಪ್ರಣಿಧಾನ ಅರ್ಥಾತ್ ಅನನ್ಯ ಭಕ್ತಿಯಿಂದ ನಿಸ್ವಾರ್ಥಭಾವದಿಂದ ಸರ್ವಸ್ವವನ್ನು ಅರ್ಪಣೆ ಮಾಡುತ್ತಾನೋ ಅವನಿಗೆ ಪರಮಾತ್ಮನು ಸಮಸ್ತ ಸುಖ, ಐಶ್ವರ್ಯ, ಸಮೃದ್ಧಿ, ಶಾಂತಿ, ಮೇಧಾ ಬುದ್ಧಿಯನ್ನು ಪ್ರದಾನ ಮಾಡುತ್ತಾನೆ. ಸದಾ ಅವನ ಕಲ್ಯಾಣವನ್ನೇ, ಅಭ್ಯುದಯವನ್ನೇ ಮಾಡುತ್ತಾನೆ. ಇದು ಅವನ ಸತ್ಯವ್ರತವಾಗಿದೆ.

ಇಂದು ನಾವು ಸತ್ಯನಾರಾಯಣ ವ್ರತದ ಕಥೆಯನ್ನು ಆಲಿಸಿದೊಡನೆ ಸಮಸ್ತ ಇಷ್ಟಾರ್ಥಗಳು ಸಿದ್ಧಿಸುತ್ತವೆ ಎಂದು ಭಾವಿಸುತ್ತೇವೆ. ಭಗವಂತನು ಸತ್ಯವೇ ಆಗಿದ್ದಾನೆ. ಅವನ ವ್ರತವು ಕೂಡಾ ಸತ್ಯವೇ ಆಗಿದೆ. ಆದರೆ ನಾವು ಮಾತ್ರ ಅಸತ್ಯ ಹಾಗೂ ಅಸತ್ಯವ್ರತವುಳ್ಳವರು ಆಗಿದ್ದೇವೆ. ನಾವು ಕೂಡಾ ಸತ್ಯವ್ರತರಾಗಿ ಸತ್ಯಾಚರಣೆಯುಳ್ಳವರಾಗಿ ಈಶ್ವರ ಪ್ರಣಿಧಾನ ಮಾಡಿದರೆ ಖಂಡಿತವಾಗಿಯೂ ನಮ್ಮ ಸಮಸ್ತ ಇಷ್ಟಾರ್ಥಗಳು ಸಿದ್ಧಿಸುತ್ತವೆ.

ಮುಂದಿನ ಮಂತ್ರದಲ್ಲಿ ಮೇಲೆ ಹೇಳಿದ ಪರಮೇಶ್ವರನ ಉಪಾಸನೆಯನ್ನು ಹೇಗೆ ಮಾಡುವುದರ ಮೂಲಕ ಪ್ರಾಪ್ತಿಮಾಡಿಕೊಳ್ಳಬೇಕು ಎಂಬುದನ್ನು ಹೇಳಲಾಗಿದೆ.

ಉಪತ್ವಾಗ್ನೇ ದಿವೇದಿವೇ ದೋಷಾವಸ್ತರ್ಧಿಯಾ ವಯಮ್ । ನಮೋ ಭರಂತ ಏಮಸಿ ॥೭॥

ಪದಾರ್ಥ:- [ಅಗ್ನೇ] ಹೇ ಸರ್ವದ್ರಷ್ಟ, ಸರ್ವಪ್ರಕಾಶ ಸ್ವರೂಪ, ಸರ್ವವ್ಯಾಪಿ ಹಾಗೂ ಸರ್ವೋಪಾಸನೀಯನಾದ ಪರಮಾತ್ಮ! ನಾವೆಲ್ಲರೂ **[ಧಿಯಾ]** ಸುಜ್ಞಾನವಂತರಾಗಿ, ಜ್ಞಾನಪೂರ್ವಕ ಶ್ರೇಷ್ಠಕರ್ಮಗಳನ್ನು ಮಾಡುತ್ತಾ **[ದಿವೇ ದಿವೇ]** ಪ್ರತಿದಿನ **[ದೋಷಾವಸ್ತ]** ಹಗಲು ರಾತ್ರಿ ನಿರಂತರ **[ತ್ವಾ ನಮೋಭರಂತ]** ನಿನ್ನನ್ನು ಉಪಾಸಿಸುತ್ತಾ ತನ್ಮೂಲಕ ನಿನ್ನ ಶ್ರೇಷ್ಠ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾ **[ಉಪ ಆ ಇಮಸಿ]** ನಿನ್ನ ಸಾನ್ನಿಧ್ಯವನ್ನು ಹೊಂದುತ್ತೇವೆ. ನಿನ್ನನ್ನು ಪ್ರಾಪ್ತಮಾಡಿಕೊಳ್ಳುತ್ತೇವೆ.

ಭಾವಾರ್ಥ:- ನಾವು ಕೇವಲ ಜಪಮಾಲೆಯನ್ನು ಹಿಡಿದು ನಾಮಸ್ಮರಣೆ ಮಾಡಿದೊಡನೆ ಅಥವಾ ಪುಸ್ತಕಗಳಲ್ಲಿ ಅಥವಾ ಸಾವಿರಾರು ಬಾರಿ ಭಗವಂತನ ನಾಮವನ್ನು ಬರೆದರೆ ಸಾಕು ಭಗವಂತನ ಪ್ರಾಪ್ತಿಯಾಗುತ್ತದೆ ಎಂದು ಭಾವಿಸುತ್ತೇವೆ. [ತಜ್ಜಪಸ್ತದರ್ಥಭಾವನಮ್-ಯೋಗದರ್ಶನ] ಭಗವಂತನ ಸಾನ್ನಿಧ್ಯವನ್ನು ಹೊಂದಬೇಕಾದರೆ ಮೊದಲು ಸುಜ್ಞಾನಿಗಳಾಗಬೇಕು. ತದನಂತರ ಜ್ಞಾನಪೂರ್ವಕ ಕರ್ಮಗಳನ್ನು ಮಾಡಬೇಕು. ಮಂತ್ರದ ಭಾವ-ಹೇ ಪ್ರಕಾಶಸ್ವರೂಪ ಸರ್ವೋಪಾಸನೀಯನಾದ ಪರಮಾತ್ಮ! ನಾವೆಲ್ಲರೂ ಸುಜ್ಞಾನಿಗಳಾಗಿ ಜ್ಞಾನಪೂರ್ವಕ ಶ್ರೇಷ್ಠಕರ್ಮಗಳನ್ನು ಮಾಡುತ್ತಾ, ಹಾಗೂ ನಿನ್ನ ಶ್ರೇಷ್ಠಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪ್ರತಿದಿನ ಹಗಲುರಾತ್ರಿ ನಿರಂತರ ನಿನ್ನ ಉಪಾಸನೆಯನ್ನು ಮಾಡುತ್ತಾ ನಿನ್ನ ಸಾನ್ನಿಧ್ಯವನ್ನು ಹೊಂದುತ್ತೇವೆ. ಭಗವಂತನು ಕೇವಲ ದೇವಸ್ಥಾನದಲ್ಲಿ ಮಾತ್ರವಲ್ಲ, ಎಲ್ಲಾ ಸ್ಥಾನಗಳೂ ದೇವಸ್ಥಾನಗಳೇ ಆಗಿವೆ ಎಂಬುದನ್ನು ಯಾವತ್ತೂ ಮರೆಯಬಾರದು.

ನಂತರ ಆ ಪರಮೇಶ್ವರನು ಯಾವ ಪ್ರಕಾರವಾಗಿದ್ದಾನೆ ಎಂಬುದನ್ನು ತಿಳಿಸಲಾಗಿದೆ.

ರಾಜಂತಮಧ್ವರಾಣಾಂ ಗೋಪಾಮೃತಸ್ಯ ದೀದಿವಿಮ್ । ವರ್ಧಮಾನಂ ಸ್ವೇ ದಮೇ ॥೮॥

ಪದಾರ್ಥ:- ನಾವೆಲ್ಲರೂ **[ಸ್ವೇ ದಮೇ]** ಸಮಸ್ತಕ್ಲೇಷಗಳಿಂದ ರಹಿತರಾಗಿ ಜನ್ಮ ಮೃತ್ಯುವಿನ ಬಂಧನದಿಂದ ಮುಕ್ತರಾಗಿ, ದಿವ್ಯವಾದ ಅನಂತ ಆನಂದದಲ್ಲಿ ಸದಾಕಾಲ ವಿದ್ಯಮಾನನಾಗಿರುವ ಆನಂದಸ್ವರೂಪನಾದ ಪರಮಾತ್ಮನನ್ನು **[ವರ್ಧಮಾನಂ ರಾಜಂತಂ]** ಎಂದೆಂದಿಗೂ ಹ್ರಾಸವಾಗದ, ಮಾಸದ, ಕ್ಷೀಣವಾಗದ ದಿವ್ಯವಾದ ತೇಜಸ್ಸುಳ್ಳ ದೇದೀಪ್ಯಮಾನನಾದ ಪರಮಾತ್ಮನನ್ನು **[ಅಧ್ವರಾಣಾಂ]** ಸಮಸ್ತ ಅಹಿಂಸನೀಯವಾದ ಎಲ್ಲ ಕಾಯಾ ವಾಚಾ ಮನಸಾ ಹಾಗೂ ಮನಸಾ ವಾಚಾ ಕರ್ಮಣಾ ಲೇಶಮಾತ್ರವೂ ಹಿಂಸೆಯಾಗುವುದಿಲ್ಲವೋ ಅಂತಹ ಯಜ್ಞಗಳ, ಅಂತಹ ಯಜ್ಞಗಳನ್ನೂ ಶ್ರೇಷ್ಠ ಕರ್ಮಗಳನ್ನೂ, ಸ್ವಾರ್ಥರಹಿತರಾಗಿ ವಿದ್ಯಾ-ಸಂಪತ್ತು-ಸೇವಾದಿಗಳ ಮೂಲಕ ದಾನ ಮಾಡುವ ಶ್ರೇಷ್ಠ ಮಾನವರ ರಕ್ಷಣೆಯನ್ನು ಮಾಡುವ ಪರಮಾತ್ಮನನ್ನು **[ಗೋಪಾಂ]** ಪೃಥಿವ್ಯಾದಿ ಸಮಸ್ತಲೋಕ ಲೋಕಾಂತರಗಳನ್ನು ಸೃಷ್ಟಿಸಿ ರಕ್ಷಿಸುವ **[ಋತಸ್ಯ]** ಸತ್ಯದ ಹಾಗೂ ಸಮಸ್ತ ಸತ್ಯವಿದ್ಯೆಗಳ ಆಕರವಾದ ವೇದಜ್ಞಾನವನ್ನು ರಕ್ಷಿಸುವ **[ದೀದಿವಿಮ್]** ಸರ್ವಪ್ರಕಾಶಸ್ವರೂಪ ಪರಮಾತ್ಮನನ್ನು ಪ್ರತಿನಿತ್ಯ ಉಪಾಸನೆಯ ಮೂಲಕ ಪ್ರಾಪ್ತಿ ಮಾಡಿಕೊಳ್ಳುತ್ತೇವೆ.

ಭಾವಾರ್ಥ:- "ದೇವೋ ಭೂತ್ವಾ ದೇವಂ ಅರ್ಚಯೇತ್" ಭಗವಂತನ ದಿವ್ಯಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಭಗವಂತನನ್ನು ಉಪಾಸಿಸಬೇಕು ಎಂದು ಋಷಿ ಮಹರ್ಷಿಗಳು ನಮಗೆ ಬೋಧಿಸಿದ್ದಾರೆ. ಭಗವಂತನು ಸಮಸ್ತ ಕ್ಲೇಶದಿಂದ ರಹಿತನಾಗಿದ್ದಾನೆ. ನಾವೂ ಕೂಡಾ ಸಮಸ್ತ ಕ್ಲೇಶಗಳಿಂದ ರಹಿತರಾದಾಗ ಜನ್ಮ

ಮತ್ತು ಮೃತ್ಯುವಿನ ಬಂಧನದಿಂದ ಮುಕ್ತರಾಗಿ ಸದಾಕಾಲ ಅನಂತ ಆನಂದದಲ್ಲಿ ವಿದ್ಯಮಾನನಾಗಿರುವ ಆನಂದ ಸ್ವರೂಪನಾದ ಪರಮಾತ್ಮನ ಸಾನ್ನಿಧ್ಯವನ್ನು ಹೊಂದುತ್ತೇವೆ.

ಪರಮಾತ್ಮನ ಸಾನ್ನಿಧ್ಯವನ್ನು ಹೊಂದಬೇಕಾದರೆ ನಾವೂ ಕೂಡಾ ಕಾಯಾ ವಾಚಾ ಮನಸಾ ಹಾಗೂ ಮನಸಾ ವಾಚಾಕರ್ಮಣಾ ಹಿಂಸಾರಹಿತರಾಗಿ, ಸತ್ಯಾಚರಣೆಯುಳ್ಳವರಾಗಿ, ವಿದ್ಯೆಯ ಮೂಲಕ ಸಂಪತ್ತಿನ ಮೂಲಕ ಮತ್ತು ಸೇವೆಯ ಮೂಲಕ ನಿಸ್ವಾರ್ಥಿಗಳಾಗಿ ಅರ್ಪಣಾಭಾವದಿಂದ ದಾನವನ್ನು ಮಾಡಬೇಕು. ಜನತಾ ಸೇವೆಯೇ ಜನಾರ್ದನ ಸೇವೆ ಎಂಬುದನ್ನು ಗಮನದಲ್ಲಿಡಬೇಕು. ಯಜ್ಞ ಯಾಗಾದಿಗಳನ್ನು ಮಾಡಬೇಕು. ಈ ಭೂಮಿಯನ್ನು ಭಗವಂತನು ಜೀವಮಾತ್ರರಿಗೆ ಕೊಟ್ಟಿದ್ದಾನೆ ಎಂಬುದನ್ನು ಗಮನದಲ್ಲಿಟ್ಟು ಇದನ್ನು ರಕ್ಷಿಸಬೇಕು. ಈ ರೀತಿ ಭಗವಂತನ ಸಾನ್ನಿಧ್ಯವನ್ನು ಹೊಂದಬಹುದು.

ಆ ಪರಮೇಶ್ವರನು ಯಾವ ರೀತಿ ಇದ್ದು ಯಾರ ರಕ್ಷಣೆ ಮಾಡುತ್ತಾನೆ ಎಂಬುದನ್ನು ಹೇಳಲಾಗಿದೆ.

ಸ ನಃ ಪಿತೇವ ಸೂನವೇಽಗ್ನೇ ಸೂಪಾಯನೋ ಭವ । ಸಚಸ್ವಾ ನಃ ಸ್ವಸ್ತಯೇ ॥೯॥

ಪದಾರ್ಥ:- [**ಅಗ್ನೇ**] ಹೇ ಜ್ಞಾನ ಸ್ವರೂಪನಾದ ಪರಮಾತ್ಮ ! ನೀನು [**ಸೂನವೇ ಪಿತೇವ**] ಯಾವ ರೀತಿಯಲ್ಲಿ ಮಕ್ಕಳಿಗೆ ತಂದೆಯಾದರೂ ಸುಲಭವಾಗಿ ಪ್ರಾಪ್ತನಾಗುತ್ತಾನೋ ಹಾಗೂ ಮಕ್ಕಳಿಗೆ ಯೋಗ್ಯವಾದ ವಿದ್ಯಾಭ್ಯಾಸವನ್ನು ಕೊಟ್ಟು ಉತ್ತಮವಾದ ರೀತಿಯಲ್ಲಿ ಜೀವನವನ್ನು ನಡೆಸುವಂತೆ ವ್ಯವಸ್ಥೆಯನ್ನು ಮಾಡುತ್ತಾನೋ ಅದೇ ರೀತಿ [**ನಃ ಸೂಪಾಯನೋ ಭವ**] ನಮ್ಮೆಲ್ಲರಿಗೆ ಸುಲಭವಾಗಿ ಪ್ರಾಪ್ತನಾಗು ಹಾಗೂ ನಾವೆಲ್ಲರೂ ಸುಜ್ಞಾನಿಗಳಾಗಿ ಶ್ರೇಷ್ಠಕರ್ಮಗಳಲ್ಲಿ ನಿರತರಾಗುವಂತೆ ಮಾಡು. [**ನಃ ಸ್ವಸ್ತಯೇ ಸಚಸ್ವ**] ಹಾಗೂ ನಮ್ಮೆಲ್ಲರನ್ನು ಸದಾಕಾಲ ಕಲ್ಯಾಣಕರವಾದ ಧರ್ಮಮಾರ್ಗದಲ್ಲಿ ನಮ್ಮ ಜೀವನವನ್ನು ವಿನಿಯೋಗಿಸುವಂತೆ ಮಾಡು. ಎಂದಿಗೂ ನಾವು ಅಧರ್ಮಮಾರ್ಗದಲ್ಲಿ ಪ್ರವೃತ್ತರಾಗದಿರಲಿ.

ಭಾವಾರ್ಥ:- ಯಾವ ರೀತಿ ತಂದೆಯಾದವನು ಸದಾಕಾಲ ತನ್ನ ಮಕ್ಕಳ ಶುಭವನ್ನೇ ಬಯಸುತ್ತಾನೋ ಹಾಗೂ ಉತ್ತಮವಾದ ರೀತಿಯಲ್ಲಿ ಲಾಲನೆ ಪಾಲನೆಯನ್ನು ಮಾಡಿ ಉತ್ತಮವಾದ ಶಿಕ್ಷಣವನ್ನು ಕೊಟ್ಟು ಯೋಗ್ಯವಾದ ರೀತಿಯಲ್ಲಿ ಜೀವನವನ್ನು ನಡೆಸುವಂತೆ ಎಲ್ಲಾ ವ್ಯವಸ್ಥೆಯನ್ನು ಮಾಡುತ್ತಾನೆ ಹಾಗೂ ತನ್ನ ಮಕ್ಕಳಿಗೆ ಸುಲಭ ಪ್ರಾಪ್ತನು ಆಗಿರುತ್ತಾನೆ. ಅದೇ ರೀತಿ ಭಗವಂತನೂ ಕೂಡಾ ನಮ್ಮೆಲ್ಲರಿಗೆ ಸುಲಭ ಪ್ರಾಪ್ತನಾಗಿ, ನಾವೆಲ್ಲರೂ ಸುಜ್ಞಾನಿಗಳಾಗಿ, ಶ್ರೇಷ್ಠವಾದ ಕರ್ಮಗಳನ್ನು ಮಾಡುತ್ತಾ, ಸುಖಸಂತೋಷದಿಂದ ಇದ್ದು ಧರ್ಮಮಾರ್ಗದಲ್ಲಿ ಜೀವನವನ್ನು ನಡೆಸುವಂತೆ ಮಾಡಲಿ. ಪರಮಾತ್ಮನನ್ನು ನಾವು ಸದಾ ಇದೇ ರೀತಿ ಪ್ರಾರ್ಥಿಸೋಣ.

ಒಂದನೆಯ ಸೂಕ್ತ ಸಮಾಪ್ತ

ಸೂಕ್ತ ೨

ಮಂತ್ರಸಂಖ್ಯೆ ೯ । ಋಷಿಃ - ಮಧುಚ್ಛಂದಾ ವೈಶ್ವಾಮಿತ್ರಃ । ದೇವತಾ - ೧-೩ ವಾಯುಃ ,

೪-೬ ಇಂದ್ರವಾಯೂ; ೭-೯ ಮಿತ್ರಾವರುಣೌ । ಛಂದಃ - ಗಾಯತ್ರೀ । ಸ್ವರಃ - ಷಡ್ಜಃ.

ಈಗ ದ್ವಿತೀಯ ಸೂಕ್ತದ ಪ್ರಾರಂಭದ ಮಂತ್ರದಲ್ಲಿ ಎಲ್ಲ ಪದಾರ್ಥಗಳನ್ನೂ ಶೋಭಿತವನ್ನಾಗಿಸಿರುವವನ ವರ್ಣನೆಯನ್ನು ಮಾಡಲಾಗಿದೆ.

ವಾಯವಾ ಯಾಹಿ ದರ್ಶತೇ-ಮೇ ಸೋಮಾ ಅರಂಕೃತಾಃ । ತೇಷಾಂ ಪಾಹಿ ಶ್ರುಧೀ ಹವಮ್ ॥೧॥

ಪದಾರ್ಥ:- [**ದರ್ಶತ**] ಹೇ ಆತ್ಮಜ್ಞಾನದಿಂದ ಮಾತ್ರ ನೋಡಲು, ಸಾಕ್ಷಾತ್ಕಾರ ಮಾಡಲು ಸಾಧ್ಯನಾದ [**ವಾಯೋ**] ಅನಂತ ಬಲವುಳ್ಳವನೂ, ಸರ್ವತ್ರಗತಿಶೀಲನೂ, ಪ್ರಾಣಸ್ವರೂಪನೂ, ಪ್ರಾಣಿ ಮಾತ್ರರಿಗೆ ಪ್ರಾಣಶಕ್ತಿಯನ್ನು ಕೊಡುವವನೂ ಆದ ಪರಮಾತ್ಮ! ನಮ್ಮೆಲ್ಲರ ಅಂತಃಕರಣದಲ್ಲಿ ಹೃದಯಮಂದಿರದಲ್ಲಿ [**ಆಯಾಹಿ**] ವಿರಾಜಮಾನನಾಗಿ, ಪ್ರಕಾಶಿತನಾಗು, ಬೆಳಕನ್ನು ಬೀರು. ನಿನ್ನಿಂದ [**ಇಮೇ**] ಈ ಸಮಸ್ತ [**ಸೋಮಾಃ**] ಪ್ರಪಂಚದಲ್ಲಿರುವ ಪದಾರ್ಥಗಳು, ಪ್ರತಿಯೊಂದು ವಸ್ತುಗಳು [**ಅರಂಕೃತಾಃ**] ಸುಶೋಭಿತವಾಗಿವೆ. ಸರ್ವಸೃಷ್ಟಿಕರ್ತ! ನೀನೇ ಚರಾಚರ ಜಗತ್ತಿನಲ್ಲಿರುವ ಸಮಸ್ತ ವಸ್ತುಗಳನ್ನು ಸೃಷ್ಟಿಸಿ ಅದರಲ್ಲಿ ವಿದ್ಯಮಾನನಾಗಿದ್ದು ಸುಶೋಭಿತವನ್ನಾಗಿಯೂ ಸುಂದರವನ್ನಾಗಿಯೂ ಮಾಡುತ್ತೀಯೆ. [**ತೇಷಾಂ ಪಾಹಿ**] ಹಾಗೂ ಸರ್ವರಕ್ಷಕನಾದ ಪರಮಾತ್ಮ! ಎಲ್ಲರನ್ನೂ ಎಲ್ಲವನ್ನೂ ನೀನೇ ರಕ್ಷಿಸುತ್ತೀಯೆ. ಎಲ್ಲರನ್ನೂ ಎಲ್ಲವನ್ನೂ ನೀನೇ ರಕ್ಷಿಸು. ಮತ್ತು [**ಹವಂಶ್ರುಧಿ**] ನಾವೆಲ್ಲರೂ ಭಕ್ತಿಯಿಂದ ಮಾಡುವ ಪ್ರಾರ್ಥನೆಯನ್ನು ಆಲಿಸು, ಅನನ್ಯ ಶ್ರದ್ಧೆಯಿಂದ ಅಂತಃಕರಣದಲ್ಲಿ ನಿನಗರ್ಪಿಸಿದ ಹವಿಸ್ಸನ್ನು ಸ್ವೀಕರಿಸಿ, ನಮ್ಮೆಲ್ಲರನ್ನೂ ಕೃತಾರ್ಥರನ್ನಾಗಿ ಮಾಡು.

ಇಲ್ಲಿ ಶ್ಲೇಷಾಲಂಕಾರದಿಂದ ಭೌತಿಕಾರ್ಥವೂ ಗ್ರಹಿಸಲ್ಪಡುತ್ತದೆ. [**ದರ್ಶತ**] ಸ್ಪರ್ಶಜ್ಞಾನದಿಂದ ಅನುಭವಗಮ್ಯನಾದ [**ವಾಯೋ**] ಪ್ರಾಣಿಮಾತ್ರರಲ್ಲಿ ಪ್ರಾಣರೂಪದಲ್ಲಿರುವವನೂ [ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಪಂಚಪ್ರಾಣಗಳು, ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ, ಪಂಚ ಉಪಪ್ರಾಣಗಳು] ಸರ್ವತ್ರ ಗಮನಶೀಲನೂ, ಸರ್ವರಿಗೂ ಶಕ್ತಿಯನ್ನು ಚೈತನ್ಯತೆಯನ್ನು ಕೊಡುವವನಾದ ವಾಯುದೇವತೆ [**ಆಯಾಹಿ**] ನಮ್ಮೆಲ್ಲರಲ್ಲಿ, ಸಂಪೂರ್ಣ ಪ್ರಪಂಚದಲ್ಲಿ ಸದಾಕಾಲ ಪರಿಶುದ್ಧನಾಗಿದ್ದು ಪ್ರಾಣಶಕ್ತಿಯನ್ನು ಚೈತನ್ಯತೆಯನ್ನೂ ನೀಡು. [**ಇಮೇ ಸೋಮಾ ಅರಂಕೃತಾಃ**] ನಿನ್ನಿಂದಲೇ ಜೀವ ಮಾತ್ರರು ಚೈತನ್ಯತೆಯನ್ನು ಪಡೆಯುತ್ತಾರೆ. ನಿನ್ನಿಂದಲೇ ಸಮಸ್ತ ಮರಗಿಡಗಳು, ಬಳ್ಳಿಗಳೂ ಔಷಧಿ-ವನಸ್ಪತಿಗಳು ಚೈತನ್ಯತೆಯನ್ನು ಪಡೆದು ಕಂಗೊಳಿಸುತ್ತಿವೆ. [**ತೇಷಾಂ ಪಾಹಿ**] ಎಲ್ಲರನ್ನೂ, ಎಲ್ಲವನ್ನೂ ನೀನು ರಕ್ಷಿಸು. ನೀನು ಬೀಸಿದ ರಭಸಕ್ಕೆ ಯಾರೂ ತತ್ತರಿಸದಿರಲಿ, ನಾಶವಾಗದಿರಲಿ. [**ಹವಂಶ್ರುಧಿ**] ನಿನ್ನ ಸಹಾಯದಿಂದಲೇ ಎಲ್ಲರೂ ಶಬ್ದವನ್ನೂ, ಮಾತನ್ನೂ ಆಲಿಸುತ್ತಾರೆ. ನಾವೆಲ್ಲರೂ ಯಜ್ಞಯಾಗಾದಿಗಳಲ್ಲಿ ಭಕ್ತಿಯಿಂದ ಶ್ರದ್ಧೆಯಿಂದ ಅರ್ಪಿಸಿದ ಹವಿಸ್ಸನ್ನು ನೀನು ಸ್ವೀಕರಿಸಿ ಸರ್ವತ್ರ ಪಸರಿಸು. ನಾವು ಅರ್ಪಿಸಿದ ಹವಿಸ್ಸು ಎಲ್ಲರಿಗೂ ಪ್ರಾಪ್ತವಾಗಲಿ. ಎಲ್ಲವೂ ಪರಿಶುದ್ಧವಾಗಲಿ.

ಭಾವಾರ್ಥ:- ಪರಮಾತ್ಮನನ್ನು ಜ್ಞಾನ ಜ್ಯೋತಿಯಿಂದ ಬೆಳಗಿಸಿದ ಹಾಗೂ ಪರಿಶುದ್ಧನಾದ ಜೀವಾತ್ಮನಿಂದ ಮಾತ್ರ ನೋಡಲು, ಸಾಕ್ಷಾತ್ಕಾರ ಮಾಡಲು ಸಾಧ್ಯ. ಅವನೆಂದಿಗೂ ಬಾಹ್ಯೇಂದ್ರಿಯಗಳಿಗೆ ಲಭ್ಯನಾಗುವುದಿಲ್ಲ. ಆ ಪರಮಾತ್ಮನು ಸರ್ವತ್ರ ಗಮನಶೀಲನೂ, ಸರ್ವವ್ಯಾಪಿಯೂ, ಪ್ರಾಣಸ್ವರೂಪನೂ ಜೀವಮಾತ್ರರಿಗೆ ಪ್ರಾಣಶಕ್ತಿಯನ್ನು ಕೊಡುವವನೂ ಆಗಿದ್ದಾನೆ. ಅವನಿಂದಲೇ ಸಂಪೂರ್ಣ ಚರಾಚರ ಜಗತ್ತು ಸೃಷ್ಟಿಸಲ್ಪಟ್ಟಿದೆ. ಅವನು ಸರ್ವಾಂತರ್ಯಾಮಿಯಾಗಿದ್ದಾನೆ. ಅವನಿಂದಲೇ ಈ ಸಂಪೂರ್ಣ ಚರಾಚರ ಜಗತ್ತು ಸುಂದರವೂ, ಮನೋಹರವೂ ಆಗಿದೆ. ಆ ಪರಮಾತ್ಮನು ಸದಾಕಾಲ ನಮ್ಮೆಲ್ಲರ ಹೃದಯಮಂದಿರದಲ್ಲಿ ವಿರಾಜಮಾನನಾಗಿ ತನ್ನ ದಿವ್ಯವಾದ ಪ್ರಕಾಶದಿಂದ ಪ್ರಕಾಶಿತವನ್ನಾಗಿ ಮಾಡಿ ಸಮಸ್ತ ಅಜ್ಞಾನಾಂಧಕಾರವೂ ದುರ್ಗುಣ ದುರ್ವ್ಯಸನಗಳೂ, ದುಃಖದಾರಿದ್ರ್ಯಗಳೂ, ವೈರಮನಸ್ತಾಪಗಳೂ ಹಾಗೂ ಅಶಾಂತಿಯೂ ನಾಶವಾಗಲಿ. ಸರ್ವರಕ್ಷಕನಾದ ಪರಮಾತ್ಮ ! ನೀನು ಎಲ್ಲರನ್ನೂ ರಕ್ಷಿಸುವವನಾಗಿದ್ದೀಯೆ. ನಾವು ಕೂಡಾ ವಿನಾಶದ ಮಾರ್ಗದಿಂದ ದೂರ ಸರಿದು ನಮ್ಮಲ್ಲಿರುವ ಹಿಂಸಾಪ್ರವೃತ್ತಿಯನ್ನೇ ಕಿತ್ತುಹಾಕಿ ಈ ಪ್ರಪಂಚವನ್ನು ಸುಂದರವನ್ನಾಗಿಯೂ ಸುಭದ್ರವನ್ನಾಗಿಯೂ ಮಾಡೋಣ.

ಆ ಪರಮಾತ್ಮನು ನಾವೆಲ್ಲರೂ ಅನನ್ಯ ಭಕ್ತಿಯಿಂದ ಅತ್ಯಂತ ಶ್ರದ್ಧೆಯಿಂದ ಮಾಡಿದ ಪ್ರಾರ್ಥನೆಯನ್ನು ಆಲಿಸುತ್ತಾನೆ. ಆಧ್ಯಾತ್ಮಯಜ್ಞದಲ್ಲಿ ಹವಿಸ್ಸಿನ ರೂಪದಲ್ಲಿ ಅರ್ಪಿಸಿದ ಪರಿಶುದ್ಧ ಆತ್ಮವನ್ನೇ ಸ್ವೀಕರಿಸುತ್ತಾನೆ.

ಇದೇ ರೀತಿ ವಾಯುವು ಕೂಡಾ ಸ್ಪರ್ಶಜ್ಞಾನದಿಂದ ಅನುಭವಗಮ್ಯವಾಗಿದ್ದಾನೆ. ಪ್ರಾಣಿಮಾತ್ರರಲ್ಲಿ ಪಂಚಪ್ರಾಣ ಹಾಗೂ ಪಂಚಉಪಪ್ರಾಣಗಳ ರೂಪದಲ್ಲಿದ್ದು ಚೈತನ್ಯತೆಯನ್ನೂ, ಶಕ್ತಿಯನ್ನೂ ನೀಡುತ್ತಾನೆ. ನಾವೆಲ್ಲರೂ ಪ್ರತಿನಿತ್ಯ ಯಜ್ಞ ಯಾಗಾದಿಗಳ ಮೂಲಕ ಈ ವಾಯುವನ್ನು ಪರಿಶುದ್ಧವನ್ನಾಗಿಯೂ, ಸುವಾಸಿತವನ್ನಾಗಿಯೂ ಮಾಡಬೇಕು. ಇದರಿಂದ ಕಾಲಕಾಲಕ್ಕೆ ಸರಿಯಾಗಿ ಮಳೆ ಬೆಳೆಯಾಗಿ ಭೂಮಿಯು ಸುಜಲವೂ, ಸುಫಲವೂ ಸಸ್ಯಶ್ಯಾಮಲದಿಂದ ಸಮೃದ್ಧವಾಗಿಯೂ ಕಾಣುತ್ತದೆ ಹಾಗೂ ನಾವೆಲ್ಲರೂ ಸದಾಕಾಲ ಪೂರ್ಣ ಆಯು, ಆರೋಗ್ಯದಿಂದ ಮತ್ತು ಸುಖಸಂತೋಷದಿಂದ ಇರಲು ಸಾಧ್ಯವಾಗುತ್ತದೆ.

ಉಕ್ತ ಪರಮೇಶ್ವರ ಹಾಗೂ ಭೌತಿಕ ವಾಯುಗಳು ಯಾವ ಪ್ರಕಾರವಾಗಿ ಸ್ತುತಿಸಲು ಯೋಗ್ಯವಾಗಿವೆ ಎಂಬುದನ್ನು ಹೇಳಲಾಗಿದೆ.

ವಾಯ ಉಕ್ಥೇಭಿರ್ಜರಂತೇ ತ್ವಾಮಚ್ಛಾ ಜರಿತಾರಃ । ಸುತಸೋಮಾ ಅಹರ್ವಿದಃ ॥೨॥

ಪದಾರ್ಥ:- [ವಾಯೋ] ಹೇ ಅನಂತಬಲಶಾಲಿಯಾದ ಹಾಗೂ ಸರ್ವತ್ರಗಮನಶೀಲ ಪರಮಾತ್ಮ ! [ಅಹರ್ವಿದಃ] ನಿನ್ನಿಂದ ಸಂಪೂರ್ಣ ಜ್ಞಾನವನ್ನೂ, ಪ್ರಕಾಶವನ್ನೂ ಪ್ರಾಪ್ತ ಮಾಡಿಕೊಂಡಂತಹ ಶ್ರೇಷ್ಠ ಜ್ಞಾನಿಗಳೂ, ಋಷಿ ಮುನಿಗಳೂ [ಸುತಸೋಮಾ] ಉಪಾಸನೆಯ ಮೂಲಕ ನಿನ್ನಲ್ಲಿರುವ ಆನಂದವನ್ನು ಪಡೆದು ಆನಂದಿತರಾದ ಉಪಾಸಕರೂ [ಜರಿತಾರಃ] ಮತ್ತು ನಿನ್ನನ್ನು ಸ್ತುತಿಸುವವರೂ ಅನನ್ಯ ಭಕ್ತಿಯಿಂದ ಶ್ರದ್ಧಾಪೂರ್ವಕವಾಗಿ ನಿನ್ನನ್ನು ಅರ್ಚಿಸುವವರೂ, ಪೂಜಿಸುವವರೂ ಆದ, ಸರ್ವ ವಿದ್ಯಾಪಾರಂಗತರಾದ ವಿದ್ವಾಂಸರು [ಉಕ್ಥೇಭಿಃ] ವೇದೋಕ್ತ ಸ್ತೋತ್ರಗಳಿಂದ, ಮಂತ್ರಗಳಿಂದ [ತ್ವಾಂ] ನಿನ್ನನ್ನು [ಅಚ್ಛಾ] ಸಾಕ್ಷಾತ್ಕಾರ ಮಾಡಿಕೊಳ್ಳುವುದಕ್ಕೋಸ್ಕರ [ಜರಂತೇ] ನಿರಂತರ ನಿನ್ನನ್ನು ಸ್ತುತಿಸುತ್ತಾರೆ ಮತ್ತು ಉಪಾಸಿಸುತ್ತಾರೆ.

ಭಾವಾರ್ಥ:- ಪರಮಾತ್ಮನಿಂದ ಸಂಪೂರ್ಣ ಜ್ಞಾನವನ್ನೂ, ಪ್ರಕಾಶವನ್ನೂ ಪಡೆದುಕೊಂಡು ಉಪಾಸನೆಯ ಮೂಲಕ, ಸಮಾಧಿಯ ಮೂಲಕ ಪರಮಾತ್ಮನಲ್ಲಿ ಆನಂದವನ್ನು ಪಡೆದು ಆನಂದಿತರಾದ ಋಷಿಮುನಿಗಳೂ, ಯೋಗಿಗಳೂ, ವಿದ್ವಾಂಸರು ಅವನನ್ನು ಅನನ್ಯ ಭಕ್ತಿಯಿಂದ, ಅತ್ಯಂತ ಶ್ರದ್ಧೆಯಿಂದ ಉಪಾಸಿಸಿ, ವೇದೋಕ್ತ ಮಂತ್ರಗಳ ಮೂಲಕ ಸ್ತುತಿಸಿ ಹಾಗೂ ಸ್ವಾಹಾಕಾರದಿಂದ ಅಹಿಂಸನೀಯವಾದ ಯಜ್ಞಗಳ ಮೂಲಕ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ. ಅದೇ ರೀತಿ ನಾವೆಲ್ಲರೂ ಪರಮಾತ್ಮನ ಸಾಕ್ಷಾತ್ಕರ ಮಾಡಿಕೊಂಡು ಮಾನವ ಜನ್ಮವನ್ನು ಸಾರ್ಥಕವನ್ನಾಗಿ ಮಾಡಿಕೊಳ್ಳೋಣ.

ವಾಯುವಿನಲ್ಲಿ ಅಪಾರವಾದ ಶಕ್ತಿಯಿದೆ. ವಾಯು ಶಕ್ತಿಯಿಂದ ದೋಣಿಯನ್ನು ಹಾಯಿ ಹಡಗನ್ನು ನಡೆಸುತ್ತಾರೆ. ವಿದ್ಯುತ್ತನ್ನು ಪಡೆಯುತ್ತಾರೆ. ಅದೇ ರೀತಿ ವಾಯುವಿನಲ್ಲಿರುವ ಅನಂತಶಕ್ತಿಯ ಬಗ್ಗೆ ವಿಶೇಷ ಚಿಂತನೆಯನ್ನು ಮಾಡಿ ವೇದ ಮಂತ್ರಗಳಿಂದ ವಿಶೇಷ ಜ್ಞಾನವನ್ನು ಪಡೆದು ಅದರ ಸಂಪೂರ್ಣ ಪ್ರಯೋಜನವನ್ನು ನಾವೆಲ್ಲರೂ ಪಡೆಯಬೇಕು. ಮಹರ್ಷಿ ಭರದ್ವಾಜರು 'ಬೃಹತ್ ವಿಮಾನಶಾಸ್ತ್ರ' ವನ್ನು ವೇದಮಂತ್ರಗಳ ಆಧಾರದ ಮೇಲೆಯೇ ಬರೆದರು. ನಾವು ಮಾತ್ರ ಅದರಿಂದ ಯಾವ ಪ್ರಯೋಜನವನ್ನು ಪಡೆಯದೇ ಪಾಶ್ಚಾತ್ಯರಿಂದ ತಾಂತ್ರಿಕತೆಯನ್ನು ಪಡೆಯಲು ಅಪೇಕ್ಷಿಸುತ್ತೇವೆ. ನಮ್ಮ ಮೂರ್ಖತೆಗೆ ಇನ್ನೊಂದು ಸಾಕ್ಷಿ ಬೇಕೆ? ಮಂಗನ ಕೈಯಲ್ಲಿ ಮಾಣಿಕ್ಯವಿದ್ದರೇನು ಪ್ರಯೋಜನ? ಹೆಲಿಕಾಪ್ಟರಿನಂತೆ ನಿಂತಲ್ಲಿಂದಲೇ ಒಮ್ಮೆಲೇ ಹಾರುವ ಪುಷ್ಪಾಕೃತಿಯ ಪುಷ್ಪಕವಿಮಾನ ಹಾಗೂ ರಾಕೆಟಿನಂತೆ ಅತ್ಯಂತ ತೀವ್ರಗತಿಯುಳ್ಳ ಗರುಡಾಕೃತಿಯ ಶ್ಯೇನವಿಮಾನ ವಿಶೇಷವಾಗಿ ವರ್ಣಿಸಲ್ಪಟ್ಟಿವೆ. ಬೃಹತ್ ವಿಮಾನಶಾಸ್ತ್ರವನ್ನು ನಾವು ಸಂಭವತಃ ಜರ್ಮನಿಯಿಂದಲೇ ಪಡೆಯಬೇಕು. ಭಾರತದಲ್ಲಿ ಲಭಿಸುವ ಗ್ರಂಥವು ಅಪೂರ್ಣವೂ ಅಸ್ಪಷ್ಟವೂ ಆಗಿದೆ.

ಯಾವುವು ಶ್ರವಣ ಮತ್ತು ಉಚ್ಚಾರಣೆಯ ನಿಮಿತ್ತವಾಗಿವೆಯೋ ಆ ಸ್ತೋತ್ರಗಳ ಪ್ರಕಾಶವನ್ನು ಇಲ್ಲಿ ಮಾಡಲಾಗಿದೆ.

ವಾಯೋ ತವ ಪ್ರಪೃಂಚತೀ ಧೇನಾ ಜಿಗಾತಿ ದಾಶುಷೇ । ಉರೂಚೀ ಸೋಮಪೀತಯೇ ॥೩॥

ಪದಾರ್ಥ:- [ವಾಯೋ] ಜೀವಮಾತ್ರರ ಕಲ್ಯಾಣಕ್ಕೋಸ್ಕರ ಸೃಷ್ಟಿಯ ಆದಿಯಲ್ಲಿಯೇ ವೇದಜ್ಞಾನವನ್ನು ಕೊಟ್ಟಂತಹ ಪರಮಾತ್ಮ ! [ತವ] ನಿನ್ನ ಕೃಪೆಯಿಂದ [ಪ್ರಪೃಂಚತೀ ಉರೂಚೀ] ಸಕಲ ವಿದ್ಯೆಗಳ ಪ್ರಕಾಶವನ್ನು ಜ್ಞಾನವನ್ನು ಅರ್ಥಸಹಿತ ಬೋಧಿಸುವ [ಧೇನಾ] ಚತುರ್ವೇದಗಳ ರೂಪದಲ್ಲಿ ಪ್ರಕಟಿತವಾದ ನಿನ್ನ ದಿವ್ಯವಾದ ವಾಣಿ [ಸೋಮಪೀತಯೇ] ಸಂಪೂರ್ಣ ಪ್ರಪಂಚದ ಪದಾರ್ಥ ಜ್ಞಾನಸುಧೆಯನ್ನೂ ಹಾಗೂ ಅಷ್ಟಾಂಗಯೋಗದ ಮೂಲಕ ನಿನ್ನ ಆನಂದರಸವನ್ನು ಪಾನ ಮಾಡಿದ ಮತ್ತು [ದಾಶುಷೇ ವಿದುಷೇ] ನಿಸ್ವಾರ್ಥಭಾವದಿಂದ ನಿಷ್ಕಪಟರಾಗಿ ಸಮಸ್ತ ಜ್ಞಾನವನ್ನು ದಾನ ಮಾಡುವ ವಿದ್ವಾಂಸರಿಗೆ [ಜಿಗಾತಿ] ಪ್ರಾಪ್ತವಾಗುತ್ತದೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರದಿಂದ ಉಭಯಾರ್ಥವನ್ನು ಬೋಧಿಸಲಾಗಿದೆ. ಸರ್ವಜ್ಞನಾದ ಪರಮಾತ್ಮನು ಸೃಷ್ಟಿಯ ಆದಿಯಲ್ಲಿಯೇ ಮಾನವಮಾತ್ರರ ಕಲ್ಯಾಣಕ್ಕೋಸ್ಕರ ವೇದವಾಣಿಯನ್ನು ಚತುರ್ವೇದಗಳ ಮೂಲಕ ಕೊಟ್ಟಿದ್ದಾನೆ. ಸರ್ವಜ್ಞಾನಗಳ ಆಕರವಾದ ವೇದವಾಣಿಯು ಸಂಪೂರ್ಣ ಪ್ರಪಂಚದ ಜ್ಞಾನವನ್ನು ಪಡೆದು ಅಷ್ಟಾಂಗಯೋಗದ ಮೂಲಕ ಪರಮಾತ್ಮನ ಆನಂದರಸವನ್ನು ಪಾನ ಮಾಡಿದ ಮತ್ತು ನಿಸ್ವಾರ್ಥಭಾವದಿಂದ ಸರ್ವಜನ ಹಿತಾರ್ಥ ಸಮಸ್ತ ಜ್ಞಾನವನ್ನು ದಾನ ಮಾಡುವ ವಿದ್ವಾಂಸರಿಗೆ ಪ್ರಾಪ್ತವಾಗುತ್ತದೆ. ಅಂತಹ ಶ್ರೇಷ್ಠಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಂಡು ಯೋಗಸಾಧನೆಯ ಮೂಲಕ ನಾವು ಕೂಡಾ ವೇದವಾಣಿಯನ್ನು ಪ್ರಾಪ್ತ ಮಾಡಿಕೊಳ್ಳಬಹುದು. ಅದೇ ರೀತಿ ವಾಯುವಿನ ಸಹಾಯದಿಂದ ಉಚ್ಚರಿಸಲ್ಪಡುವ ವಾಣಿಯ ನಾಲ್ಕು ಸ್ವರೂಪ ಪರಾ, ಪಶ್ಯಂತಿ, ಮಧ್ಯಮ, ವೈಖರೀ ಮತ್ತು ವಾಣಿಯ ಸ್ವರೂಪವನ್ನು ಬಲ್ಲವನಾಗಿ ನಿಸ್ವಾರ್ಥಭಾವದಿಂದ ಸರ್ವರಿಗೆ ಸಕಲ ಜ್ಞಾನವನ್ನು ಕೊಡುವ ವಿದ್ವಾಂಸನು ವಾಚಸ್ಪತಿಯಾಗುತ್ತಾನೆ.

ಈಗ ಸ್ತೋತ್ರಗಳಿಂದ ಪ್ರಕಾಶಿತವಾದ ಪದಾರ್ಥಗಳ ವೃದ್ಧಿ ಹಾಗೂ ರಕ್ಷಣೆಯ ನಿಮಿತ್ತವನ್ನು ಹೇಳಲಾಗುತ್ತದೆ.

ಇಂದ್ರವಾಯೂ ಇಮೇ ಸುತಾ ಉಪ ಪ್ರಯೋಭಿರಾ ಗತಮ್ । ಇಂದವೋ ವಾಮುಶಂತಿ ಹಿ ॥೪॥

ಪದಾರ್ಥ:- [ಇಂದ್ರವಾಯು] ಐಶ್ವರ್ಯಶಾಲಿಗಳು, ಪ್ರಗತಿಶೀಲರೂ ಆದ ಜನರೇ! [ಇಮೇ ಸುತಾ ಉಪ] ಉತ್ಪನ್ನವಾದ ಈ ಐಶ್ವರ್ಯದ ಕಡೆಗೆ [ಪ್ರಯೋಭಿಃ ಆಗತಮ್] ಅನ್ನಾದಿಗಳೊಂದಿಗೆ ಬನ್ನಿರಿ. [ಇಂದವಃ] ಕರುಣಾಮಯರಾದ ಜೀವರು [ವಾಂ] ನಿಮ್ಮಿಬ್ಬರನ್ನು [ಹಿ] ನಿಶ್ಚಯವಾಗಿಯೂ [ಉಷಂತಿ] ಬಯಸುತ್ತಾರೆ.

ಭಾವಾರ್ಥ:- ಐಶ್ವರ್ಯಶಾಲಿಗಳು, ಪ್ರಗತಿಶೀಲರೂ ಆದ ಮಹಾಮಹಿಮರು ಉತ್ಪನ್ನವಾದ ಸಮೃದ್ಧಿಯಡೆಗೆ, ಸಂಪತ್ತಿನ ಕಡೆಗೆ ವಿಪುಲವಾದ ಅನ್ನ ಪಾನೀಯಗಳೊಂದಿಗೆ ಬಳಿನ ಸಂಗ್ರಾಮದಲ್ಲಿ ಧುಮುಕಲು ಮುಂದೆ ಬರಲಿ. ಕರುಣಾಳುಗಳು ವಿಶಾಲ ಹೃದಯರೂ ಆದ ಜೀವಾತ್ಮರು ಈ ಐಶ್ವರ್ಯಶಾಲಿಗಳನ್ನು ಹಾಗೂ ಪ್ರಗತಿ ಶೀಲರನ್ನು ಇಚ್ಛಿಸುತ್ತಾರೆ ಹಾಗೂ ಅವರ ಜೊತೆಯಾಗಿರಲು ಇಚ್ಛಿಸುತ್ತಾರೆ.

ಈಗ ಈಶ್ವರನು ಧಾರಣೆ ಮಾಡಿರುವ ಸೂರ್ಯ ಮತ್ತು ಪವನಗಳು ಯಾವ ಯಾವ ಕರ್ಮಗಳ ಸಿದ್ಧಿಗಾಗಿ ರಚಿಸಲ್ಪಟ್ಟಿವೆ ಎಂಬುದನ್ನು ತಿಳಿಸಲಾಗಿದೆ.

ವಾಯವಿಂದ್ರಶ್ಚ ಚೇತಥಃ ಸುತಾನಾಂ ವಾಜಿನೀವಸೂ । ತಾವಾಯಾತಮುಪ ದ್ರವತ್ ॥೫॥

ಪದಾರ್ಥ:- [ವಾಯೋ] ಹೇ ಸರ್ವಜ್ಞನಾದ ಪರಮೇಶ್ವರ ! [ವಾಜೀನಿವಸೂ] ಯಾವ ರಾತ್ರಿ ಕಳೆದ ಮೇಲೆ ಉಷಾಕಾಲದಲ್ಲಿ [ಇಂದ್ರಃ ಚ] ಸೂರ್ಯ ಮತ್ತು ವಾಯು ಇವೆರಡೂ [ಸುತಾನಾಂ ಚೇತಥಃ] ನಿನ್ನಿಂದ ಸೃಷ್ಟಿಸಲ್ಪಟ್ಟ ಸಮಸ್ತ ಪದಾರ್ಥಗಳನ್ನು ಪ್ರಕಾಶಿಸಿ ಮತ್ತು ಧಾರಣಮಾಡಿ ಸಮಸ್ತ ಜೀವಗಳಿಗೆ ದೃಷ್ಟಿ ಗೋಚರವಾಗುವಂತೆ ಮಾಡುತ್ತವೆಯೋ ಅದೇ ರೀತಿ ಸದಾಕಾಲ ನಿನ್ನ ಕೃಪೆಯಿಂದ ನಮಗೆಲ್ಲರಿಗೂ ಪ್ರತಿಯೊಂದು ವಸ್ತುಗಳ ದೃಷ್ಟಿ ಗೋಚರವಾಗುತ್ತಿರಲಿ. ಅರ್ಥಾತ್ ನಮ್ಮ ದೃಷ್ಟಿಶಕ್ತಿಯು ಜೀವನಪರ್ಯಂತ ನೂರು ವರ್ಷಗಳತನಕ ಎಂದಿಗೂ ಕುಂದದಿರಲಿ. [ತೌ] ಆ ಇಂದ್ರ ಮತ್ತು ವಾಯು ಇವೆರಡು ನಮಗೆ ಪ್ರಕಾಶವನ್ನೂ, ಶಕ್ತಿಯನ್ನು ನೀಡುತ್ತಾ [ದ್ರವತ್ ಆಯಾತಮುಪ] ಶೀಘ್ರತೆಯಿಂದ ಆ ಪದಾರ್ಥಗಳ ಸಾಮಿಪ್ಯವು ಪ್ರಾಪ್ತವಾಗಲಿ.

ಭಾವಾರ್ಥ:- ಇಂದು ವಿಶ್ವದಲ್ಲಿ ಸರ್ವತ್ರ ವಾತಾವರಣವು ಅತ್ಯಂತ ಕಲುಷಿತವಾದ ಕಾರಣ ಪರಿಶುದ್ಧವಾದ ಗಾಳಿ ಬೆಳಕು ನೀರು ಮೊದಲಾದವುಗಳು ದುರ್ಲಭವಾಗಿವೆ. ಕೇವಲ ಉಷಾಕಾಲದಲ್ಲಿ ಮಾತ್ರ ವಾಯುವಿನಲ್ಲಿ ಓಝೋನ್ ಪ್ರಮಾಣ ಅಧಿಕವಾಗಿರುವುದರಿಂದ ಹಾಗೂ ಉಷಾಕಾಲದ ಸೂರ್ಯನ ಬೆಳಕು ದೃಷ್ಟಿಶಕ್ತಿಯನ್ನು ವರ್ಧಿಸುವುದರಿಂದ ಮತ್ತು ವಾತಾವರಣವು ಪರಿಶುದ್ಧವಾದ ಕಾರಣ ನಮಗೆ ವಿಶೇಷವಾದ ಪ್ರಕಾಶ ಮತ್ತು ಶಕ್ತಿಯು ಲಭಿಸುತ್ತದೆ. ಪೂರ್ಣ ಆರೋಗ್ಯ ಹಾಗೂ ಆಯಸ್ಸು ಪ್ರಾಪ್ತಿಯಾಗುತ್ತದೆ. ಇವು ನಮಗೆ ಸದಾಕಾಲ ಪ್ರಾಪ್ತಿಯಾಗುತ್ತಿರಲಿ.

ಪೂರ್ವೋಕ್ತಾ ಇಂದ್ರ ಮತ್ತು ವಾಯುಗಳ, ಶರೀರದ ಒಳ-ಹೊರಗಿನ ಕಾರ್ಯಗಳ ಬಗೆಗೆ ತಿಳಿಸಲಾಗಿದೆ.

ವಾಯವಿಂದ್ರಶ್ಚ ಸುನ್ವತ ಆ ಯಾತಮುಪ ನಿಷ್ಕೃತಮ್ । ಮಕ್ಷ್ವಿತ್ಥಾ ಧಿಯಾ ನರಾ ॥೬॥

ಪದಾರ್ಥ:- [ವಾಯೋ] ಸರ್ವಾಂತರ್ಯಾಮಿಯಾದ ಭಗವಂತ ! ಯಾವ ರೀತಿ ನಿನ್ನಿಂದ ಸೃಷ್ಟಿಸಲ್ಪಟ್ಟು ಧಾರಣ ಮಾಡಲ್ಪಟ್ಟ [ನರಾ] ಪ್ರಪಂಚದ ಸಮಸ್ತ ಪದಾರ್ಥಗಳು ನಮ್ಮೆಲ್ಲರಿಗೂ ಲಭ್ಯವಾಗುವಂತೆ ಮಾಡುವ [ಇಂದ್ರವಾಯೂ] ಸೂರ್ಯ ಮತ್ತು ವಾಯು ಇವೆರಡು ಸದಾಕಾಲ ಅಂತರಿಕ್ಷದಲ್ಲಿ ಇದ್ದು ನಮಗೆಲ್ಲರಿಗೂ ಪ್ರಕಾಶವನ್ನೂ, ಶಕ್ತಿಯನ್ನೂ ಕೊಡುತ್ತಿರುತ್ತವೆಯೋ ಮತ್ತು [ಮಕ್ಷು] ಶೀಘ್ರಗತಿಯುಳ್ಳವರಾಗಿ [ಇತ್ಥಾ] ಧಾರಣ ಪಾಲನ ವೃದ್ಧಿ ಮತ್ತು ಕ್ಷಯ ಇವೆಲ್ಲಾ ಕಾರಣಗಳಿಗಾಗಿ ಸಮಸ್ತ ಮರಗಿಡಬಳ್ಳಿ ವನಸ್ಪತಿ ಔಷಧಿಗಳನ್ನು [ಸುನ್ವತ] ಸೃಷ್ಟಿಸಿ ಅವುಗಳಲ್ಲಿ ಪುಷ್ಪ, ಫಲ, ಕಾಯಿ, ರಸ ಇತ್ಯಾದಿಗಳನ್ನು ಉಂಟು ಮಾಡುತ್ತವೆಯೋ ಅದೇ ರೀತಿ [ನರಾ] ಶರೀರದಲ್ಲಿರುವ ರಸ, ರಕ್ತ, ಮಾಂಸ, ಮಜ್ಜೆ, ಅಸ್ಥಿ, ಮೇಧಸ್ಸು, ವೀರ್ಯ ಇವೆಲ್ಲವುಗಳನ್ನು ಪ್ರಾಪ್ತವಾಗುವಂತೆ ಮಾಡುವ [ಇಂದ್ರವಾಯೂ] ಜೀವಾತ್ಮ ಮತ್ತು ಪ್ರಾಣವಾಯು ಶರೀರದಲ್ಲಿರುವ ಸಪ್ತ ಧಾತುಗಳಲ್ಲಿ ಹಾಗೂ ಸಮಸ್ತ ಇಂದ್ರಿಯಗಳಲ್ಲಿ ಪ್ರಾಣಶಕ್ತಿಯನ್ನು ಚೈತನ್ಯತೆಯನ್ನು [ಮಕ್ಷು ಇತ್ಥಾಸುನ್ವತ] ಶೀಘ್ರವಾಗಿ ತುಂಬುವಂತೆ ಮಾಡುತ್ತವೆ. ಮತ್ತು ಈ ಶರೀರದ ಧಾರಣ, ಪಾಲನೆ, ವೃದ್ಧಿ ವಿಕಾಸವನ್ನು ಮಾಡುತ್ತವೆ. [ತೌ], ಜೀವಾತ್ಮ ಹಾಗೂ ಪ್ರಾಣ ಇವೆರಡೂ [ಧಿಯಾ] ಧಾರಣಾವತೀ ಬುದ್ಧಿ ಹಾಗೂ ಕರ್ಮಗಳ ಮೂಲಕ [ನಿಷ್ಕೃತಮ್] ಕರ್ಮಗಳ ಫಲವನ್ನು [ಉಪ ಆಯಾತ] ಪ್ರಾಪ್ತಮಾಡಿಕೊಳ್ಳುತ್ತವೆ. ಅರ್ಥಾತ್ ಮಾನವನು ತನ್ನ ಬುದ್ಧಿಯಿಂದ ಹಾಗೂ ಕರ್ಮಗಳ ಮೂಲಕ ಕರ್ಮಗಳ ಫಲವನ್ನು ಅನುಭವಿಸುತ್ತಾನೆ.

ಭಾವಾರ್ಥ:- ಸರ್ವಾಂತರ್ಯಾಮಿಯಾದ ಪರಮಾತ್ಮನಿಂದ ಅನಂತಶಕ್ತಿಯುಳ್ಳ ಸೂರ್ಯ ಹಾಗೂ ವಾಯು ಇವೆರಡೂ ಸೃಷ್ಟಿಸಲ್ಪಟ್ಟಿವೆ. ಇವೆರಡೂ ಸದಾಕಾಲ ಅಂತರಿಕ್ಷದಲ್ಲಿ ವಿದ್ಯಮಾನವಾಗಿದ್ದು ದಿವ್ಯವಾದ ಪ್ರಕಾಶ ಗತಿ ಮತ್ತು ಶಕ್ತಿಯ ಮೂಲಕ ಪ್ರಪಂಚದ ಪ್ರತಿಯೊಂದು ಪದಾರ್ಥಗಳು ನಮಗೆ ಶೀಘ್ರ ಪ್ರಾಪ್ತಿಯಾಗುವಂತೆ ಮಾಡುತ್ತವೆ. ಮರ, ಗಿಡ, ಬಳ್ಳಿ ವನಸ್ಪತಿ ಹಾಗೂ ಔಷಧಿಗಳಲ್ಲಿ ಫಲ, ಪುಷ್ಪ, ಕಾಯಿ, ರಸ ಇವೆಲ್ಲವುಗಳನ್ನು ಉಂಟು ಮಾಡುತ್ತವೆ.

ಅದೇ ರೀತಿ ನಮ್ಮ ಶರೀರದಲ್ಲಿ ಜೀವಾತ್ಮ ಹಾಗೂ ಪ್ರಾಣವಾಯು ಯಾವಜ್ಜೀವ ಪರ್ಯಂತ ಸದಾಕಾಲ ವಿದ್ಯಮಾನವಾಗಿದ್ದು ಸಪ್ತಧಾತುಗಳಲ್ಲಿ ಮತ್ತು ಸಮಸ್ತ ಇಂದ್ರಿಯಗಳಲ್ಲಿ ಪ್ರಾಣಶಕ್ತಿಯನ್ನು ಚೈತನ್ಯತೆಯನ್ನು ಉಂಟು ಮಾಡುತ್ತವೆ ಹಾಗೂ ಈ ಶರೀರದ ಧಾರಣ, ಪಾಲನೆ, ಪೋಷಣೆ ವೃದ್ಧಿ ಮತ್ತು ವಿಕಾಸವನ್ನುಂಟು ಮಾಡುತ್ತವೆ. ಜೀವಾತ್ಮನು ಹಾಗೂ ಪ್ರಾಣ ಮತ್ತು ಇಂದ್ರಿಯಗಳು ಧಾರಣಾವತಿ ಬುದ್ಧಿ ಮತ್ತು ಕರ್ಮಗಳ ಮೂಲ ಸಮಸ್ತ ಕರ್ಮಗಳ ಫಲವನ್ನು ಅನುಭವಿಸುತ್ತಾನೆ. ಬುದ್ಧಿಪೂರ್ವಕವಾಗಿ ವಿವೇಕದಿಂದ ಶ್ರೇಷ್ಠಕರ್ಮಗಳನ್ನು ಮಾಡಿದರೆ ಉತ್ತಮ ಫಲವನ್ನು, ಕೆಟ್ಟ ಕರ್ಮಗಳನ್ನು ಮಾಡಿದರೆ ಕೆಟ್ಟ ಫಲವನ್ನು, ಅತ್ಯಂತ ದುಃಖವನ್ನು ದಾರಿದ್ರ್ಯವನ್ನು ಅನುಭವಿಸುತ್ತಾನೆ. ಆದುದರಿಂದಲೇ ನಾವು ಪ್ರತಿನಿತ್ಯ ಭಗವಂತನೊಡನೆ "ಧಿಯೋ ಯೋನಃ ಪ್ರಚೋದಯಾತ್" ಪರಮಾತ್ಮ ! ನಮ್ಮೆಲ್ಲರ ಬುದ್ಧಿಯನ್ನು ಸದಾಕಾಲ ಶ್ರೇಷ್ಠ ಕರ್ಮದ ಕಡೆಗೆ ಪ್ರೇರೇಪಿಸು. [ಪ್ರಪಂಚದಲ್ಲಿ ನಡೆಯುವ ಸಮಸ್ತ ಕಾರ್ಯಕ್ಕೂ ಪರಮಾತ್ಮನೇ ಮೂಲ ಆಧಾರನಾಗಿದ್ದಾನೆ].

ಪೂರ್ವೋಕ್ತ ಸೂರ್ಯ ಮತ್ತು ವಾಯುಗಳನ್ನು ಬೇರೊಂದು ಹೆಸರಿನಿಂದ ಮುಂದಿನ ಮಂತ್ರದಲ್ಲಿ ಸ್ಪಷ್ಟಗೊಳಿಸಲಾಗಿದೆ.

ಮಿತ್ರಂ ಹುವೇ ಪೂತದಕ್ಷಂ ವರುಣಂ ಚ ರಿಶಾದಸಮ್ । ಧಿಯಮ್ ಘೃತಾಚೀಂ ಸಾಧಂತಾ ॥೭॥

ಪದಾರ್ಥ:- ಸಮಸ್ತ ಪದಾರ್ಥವಿದ್ಯೆ ಹಾಗೂ ಶಿಲ್ಪವಿದ್ಯಾದಿಗಳನ್ನು ಪಡೆದು ಅದನ್ನು ವ್ಯವಹಾರದಲ್ಲಿ ಅಳವಡಿಸಲು ಅಪೇಕ್ಷಿಸುವ ಮಾನವರು, ಯಾವ ರೀತಿ [ಘೃತಾಚೀಂ] ಸೂರ್ಯನು ಸಮುದ್ರದಿಂದ ಜಲವನ್ನು ತನ್ನ ಕಿರಣಗಳ ಮೂಲಕ ಆಕರ್ಷಿಸುತ್ತಾನೋ ಅದೇ ರೀತಿ ಜ್ಞಾನದ ಸಾಗರವಾದ ವೇದಗಳಲ್ಲಿ [ಧಿಯಂ ಸಾಧಂತಾ] ತಮ್ಮ ಬುದ್ಧಿಯ ಮೂಲಕ ಏಕಾಗ್ರ ಚಿತ್ತವುಳ್ಳವರಾಗಿ ಸಾಧನೆಯನ್ನು ಮಾಡುತ್ತಾ ಜ್ಞಾನವನ್ನು ಸಂಪಾದಿಸುತ್ತಾರೆ. ಈ ಸಾಧನೆಯ ಸಿದ್ಧಿಗೋಸ್ಕರ ನಾವೆಲ್ಲರೂ [ಪೂತದಕ್ಷಂ] ಪವಿತ್ರವಾದ ಬಲವುಳ್ಳ ಮತ್ತು ಎಲ್ಲವನ್ನು ಶುದ್ಧವನ್ನಾಗಿ ಮಾಡುವ ಸಾಮರ್ಥ್ಯವುಳ್ಳ [ಮಿತ್ರಂ] ಬ್ರಹ್ಮಾಂಡದಲ್ಲಿರುವ ಸೂರ್ಯನನ್ನು ಮತ್ತು ಶರೀರದಲ್ಲಿರುವ ಪ್ರಾಣವನ್ನು ಹಾಗೂ [ರಿಶಾದಸಂ ವರುಣಂ] ದುಷ್ಟರನ್ನು ದಮನ ಮಾಡುವ ಮತ್ತು ಶಿಷ್ಟರನ್ನು ರಕ್ಷಿಸುವ ವರಣೀಯನಾದ ಪರಮಾತ್ಮನು ಹಾಗೂ ಶರೀರದಲ್ಲಿ ರೋಗವನ್ನು ಶಮನ ಮಾಡುವ ಅಪಾನವಾಯುವನ್ನು [ಹುವೇ] ನಾವೆಲ್ಲರೂ ಸ್ತುತಿಸುತ್ತೇವೆ ಮತ್ತು ನಮ್ಮಲ್ಲಿ ಧಾರಣ ಮಾಡಿಕೊಳ್ಳುತ್ತೇವೆ.

ಭಾವಾರ್ಥ:- ಸಂಪೂರ್ಣ ಜ್ಞಾನವನ್ನು ಪಡೆದುಕೊಂಡು ಅದರ ಪೂರ್ಣ ಪ್ರಯೋಜನವನ್ನು ಪಡೆಯಬೇಕಾದರೆ ಮಾನವನು ಬಹಳ ಸಾಧನೆಯನ್ನು ಮಾಡಬೇಕು. ವೇದಗಳು ಸಂಪೂರ್ಣ ಜ್ಞಾನದ ಭಂಡಾರವಾಗಿವೆ. ಯಾವ ರೀತಿ ಸೂರ್ಯನು ಸಮುದ್ರದಿಂದ ತನ್ನ ಕಿರಣಗಳ ಮೂಲಕ ಜಲವನ್ನು ಆಕರ್ಷಿಸುತ್ತಾನೋ ಅದೇ ರೀತಿ ಮಾನವನು ತನ್ನ ಪ್ರಖರವಾದ ಮೇಧಾಬುದ್ಧಿಯ ಮೂಲಕ ಸಾಧನೆಯನ್ನು ಮಾಡುತ್ತಾ ಸಂಪೂರ್ಣ ಜ್ಞಾನವನ್ನು ಪಡೆಯಬೇಕು. ಏಕೆಂದರೆ ಅಪೂರ್ಣಜ್ಞಾನ, ಅಲ್ಪ ಜ್ಞಾನ ಹಾಗೂ ಅಸತ್ಯ ಜ್ಞಾನದಿಂದ ಯಾವಾಗಲೂ ವಿನಾಶವೇ ಆಗುತ್ತದೆ. ಆಚಾರ್ಯ ಚಾಣಕ್ಯರು [ವಿಷಾದಪಿ ಅಮೃತಂ ಗ್ರಾಹ್ಯಂ] ವಿಷದಿಂದಲೂ ಕೂಡ ಅಮೃತವನ್ನು ಗ್ರಹಣ ಮಾಡಬೇಕು ಎಂದು ಹೇಳಿದ್ದಾರೆ. ಇಂದು ಮಾನವನು ಮಾನವತ್ವವನ್ನು ತೊರೆದು ದಾನವನಾಗಿ ಅಮೃತದಿಂದಲೂ ವಿಷವನ್ನೇ ಪಡೆಯುತ್ತಿದ್ದಾನೆ. ಇದರಿಂದ ಇಡೀ ಪ್ರಪಂಚವೇ ವಿಷಮಯವಾಗಿದೆ.

ಸೂರ್ಯನಲ್ಲಿರುವ ಇನ್ನೊಂದು ಗುಣ ಪವಿತ್ರವನ್ನಾಗಿ ಮಾಡುವುದು. ಸೂರ್ಯನು ತನ್ನ ಪ್ರಖರವಾದ ಕಿರಣಗಳ ಮೂಲಕ ಎಲ್ಲಾ ಕಲ್ಮಶವನ್ನು ನಿವಾರಣೆ ಮಾಡುತ್ತಾನೆ. ಅದೇ ರೀತಿ ಪ್ರಾಣವಾಯು ಕೂಡ ಶರೀರದಲ್ಲಿ ಅಶುದ್ಧ ರಕ್ತವನ್ನು ಶುದ್ಧವನ್ನಾಗಿ ಮಾಡಿ ಪ್ರಾಣ ಶಕ್ತಿಯನ್ನು ತುಂಬುತ್ತದೆ. ಈ ಗುಣಗಳನ್ನು ನಮ್ಮಲ್ಲಿ ಧಾರಣ ಮಾಡಿಕೊಂಡು ನಾವು ಪವಿತ್ರರೂ, ಶುದ್ಧರೂ ಆಗಿ ಎಲ್ಲವನ್ನೂ, ಎಲ್ಲರನ್ನೂ ಪವಿತ್ರರನ್ನಾಗಿಯೂ, ಶುದ್ಧರನ್ನಾಗಿಯೂ ಮಾಡಬೇಕು. ನಮ್ಮಲ್ಲಿರುವ ಅಜ್ಞಾನವನ್ನು ನೀಗಬೇಕು ಹಾಗೂ ಇತರರನ್ನು ಸುಜ್ಞಾನಿಗಳನ್ನಾಗಿ ಮಾಡಬೇಕು.

7

ಅದೇ ರೀತಿ ದುಷ್ಟರನ್ನು ದಮನ ಮಾಡುವ ವರಣೀಯನಾದ ಪರಮಾತ್ಮನನ್ನು ಶ್ರದ್ಧೆಯಿಂದ ಉಪಾಸಿಸಿ ನಮ್ಮಲ್ಲಿರುವ ದುಷ್ಟತನವನ್ನು, ಅರಿಷಡ್ವರ್ಗವನ್ನು ದಮನಮಾಡಬೇಕು. ಹಾಗೂ ಪ್ರಪಂಚದಲ್ಲಿರುವ ದುಷ್ಟಶಕ್ತಿಯನ್ನು ನಿಗ್ರಹಿಸಬೇಕು. ಅದೇ ರೀತಿ ಶರೀರದಲ್ಲಿರುವ ಅಪಾನವಾಯು ಶರೀರದಿಂದ ಮಲಮೂತ್ರ, ಬೆವರು ಇತ್ಯಾದಿಗಳನ್ನು ಹೊರಗೆ ಹಾಕಿ ಶರೀರವನ್ನು ರೋಗರಹಿತವನ್ನಾಗಿಯೂ, ನಿರ್ಮಲವನ್ನಾಗಿಯೂ ಮಾಡುತ್ತದೆ. ನಾವು ಸದಾ ಬಾಹ್ಯಾಂಭ್ಯಂತರ ಶುಚಿಯುಳ್ಳವರಾಗಬೇಕು ಮನಸ್ಸು, ಅಂತಃಕರಣ, ಇಂದ್ರಿಯಗಳನ್ನು ನಿರ್ಮಲವನ್ನಾಗಿ ಮಾಡಬೇಕು. ಇದರಿಂದ ಸರ್ವಾರ್ಥಸಿದ್ಧಿಯು ಪ್ರಾಪ್ತವಾಗುತ್ತದೆ.

ಯಾವ ಕಾರಣದಿಂದ ಈ ಎರಡೂ ಸಾಮರ್ಥ್ಯ ಸಂಪನ್ನವಾಗಿವೆ ಎಂಬುದರ ವಿದ್ಯೆಯನ್ನು ಈಗ ತಿಳಿಸಲಾಗುತ್ತದೆ.

ಋತೇನ ಮಿತ್ರಾವರುಣಾ-ವೃತಾವೃಧಾವೃತಸ್ಪೃಶಾ । ಕ್ರತುಂ ಬೃಹನ್ತಮಾಶಾಥೇ ॥೮॥

ಪದಾರ್ಥಃ:- **[ಋತೇನ]** ಸತ್ಯಸ್ವರೂಪ ಬ್ರಹ್ಮನಿಂದಲೇ ಸೃಷ್ಟಿಸಲ್ಪಟ್ಟು **[ಋತಾವೃಧೌ]** ಬ್ರಹ್ಮನಿಂದಲೇ ವಿಕಸಿತವಾದ ಅರ್ಥಾತ್ ಬ್ರಹ್ಮನಿಂದಲೇ ಸರ್ವವ್ಯಾಪಕವಾದ **[ಋತಸ್ಪೃಶೌ]** ವೇದಜ್ಞಾನವನ್ನು ಸರ್ವರಿಗೂ ಪ್ರಾಪ್ತವಾಗುವಂತೆ ಮಾಡುವ **[ಮಿತ್ರಾವರುಣೌ]** ಸೂರ್ಯ ಮತ್ತು ಸರ್ವಪೂಜನೀಯನಾದ ಪರಮಾತ್ಮ ಅಥವಾ ಸರ್ವಮಿತ್ರನಾದ ಹಾಗೂ ಸರ್ವಜ್ಞನಾದ ಪರಬ್ರಹ್ಮ ಮತ್ತು ಚತುರ್ವೇದ ಪಾರಂಗತ ಹಾಗೂ ಯಜ್ಞದಲ್ಲಿ ಬ್ರಹ್ಮನಸ್ಥಾನದಲ್ಲಿ ಕುಳಿತುಕೊಳ್ಳಲು ಯೋಗ್ಯನಾದ ಆಚಾರ್ಯ ಇವರಿಬ್ಬರು **[ಬೃಹಂತಂ ಕ್ರತುಂ ಆಶಾಥೇ]** ಪ್ರಕಾಶವನ್ನು ಬೀರುವ, ಸೃಷ್ಟಿಯನ್ನು ಸೃಷ್ಟಿಸುವ ಹಾಗೂ ಜ್ಞಾನವನ್ನು ಪ್ರಸಾರಮಾಡುವ ಮಹಾನ್ ಯಜ್ಞದ ಮೂಲಕ ವ್ಯಾಪ್ತವಾಗಿದ್ದಾರೆ.

ಅದೇ ರೀತಿ **[ಋತೇನ]** ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಜಲದಿಂದ **[ಋತಾವೃಧೌ]** ಜಲವನ್ನು ಆಕರ್ಷಿಸಿ ಮೋಡ ರೂಪದಲ್ಲಿ ವ್ಯಾಪಿಸುವ ಹಾಗೂ **[ಋತಸ್ಪೃಶೌ]** ಪುನಃ ವೃಷ್ಟಿಯ ಮೂಲಕ ಜಗತ್ತಿಗೆ ನೀರನ್ನುಣಿಸಿ ಜೀವನವನ್ನೂ, ಬಲವನ್ನೂ ಕೊಡುವ **[ಮಿತ್ರಾವರುಣೌ]** ಸೂರ್ಯ ಮತ್ತು ವಾಯು ಇವರಿಬ್ಬರು **[ಬೃಹಂತಂ ಕ್ರತುಂ ಆಶಾಥೇ]** ಶ್ರೇಷ್ಠವಾದ ಹಾಗೂ ವೃಷ್ಟಿಗೆ ಕಾರಣೀಭೂತವಾದ ಯಜ್ಞದ ಮೂಲಕ ಹಾಗೂ ಪ್ರಕಾಶವನ್ನು ಬೀರುವ ಜೀವನವನ್ನು, ಬಲವನ್ನು ಕೊಡುವ ಮಹಾನ್ ಕ್ರಿಯಾಮಯ ಯಜ್ಞದ ಮೂಲಕ ವ್ಯಾಪ್ತರಾಗಿದ್ದಾರೆ.

ಭಾವಾರ್ಥಃ:- ಸರ್ವಶ್ರೇಷ್ಠವಾದ ವೇದಜ್ಞಾನವು ಪರಮಾತ್ಮನಿಂದಲೇ ಸೃಷ್ಟಿಸಲ್ಪಟ್ಟು ಅವನಿಂದಲೇ ಸರ್ವವ್ಯಾಪಕವಾಗಿದೆ. ಪರಮಾತ್ಮನ ಜ್ಞಾನವನ್ನು ಪರಮಾತ್ಮನ ಅನುಗ್ರಹದಿಂದಲೇ, ಅವನ ಕೃಪೆಯಿಂದಲೇ ಎಲ್ಲರೂ ಪ್ರಾಪ್ತ ಮಾಡಿಕೊಳ್ಳುತ್ತಾರೆ. ಅವನ ಅನುಗ್ರಹವಿಲ್ಲದಿದ್ದರೆ ಯಾರೂ ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. "ದೇವರ ಭಯವೇ ಜ್ಞಾನದ ಆರಂಭ" ಎಂದು ಬಲ್ಲವರು ಹೇಳುತ್ತಾರೆ. ಇದರ ತಾತ್ಪರ್ಯ ಪ್ರತಿಯೊಂದು ಕಣಕಣದಲ್ಲಿಯೂ ಪರಮಾತ್ಮನ ಅಸ್ತಿತ್ವದ ಅರಿವು ಮಾನವನಿಗೆ ಜ್ಞಾನವನ್ನು ಪಡೆಯಲು ಪ್ರೇರೇಪಿಸುತ್ತದೆ.

ಅದೇ ರೀತಿ ಸೂರ್ಯನೂ ವೇದಜ್ಞಾನದ ಪ್ರಾಪಕನಾಗಿದ್ದಾನೆ. ಸೂರ್ಯನ ಶಕ್ತಿಯೂ ಅನಂತವಾಗಿದೆ. ಸೂರ್ಯೋದಯದ ಮೊದಲೇ ಎದ್ದು ಶೌಚ, ಸ್ನಾನ, ವ್ಯಾಯಾಮ, ಪ್ರಾಣಾಯಾಮಾದಿಗಳಿಂದ ನಿವೃತ್ತರಾಗಿ ಸರಿಯಾಗಿ ಸೂರ್ಯೋದಯದ ಸಮಯದಲ್ಲಿ ಅದೇ ರೀತಿ ಸೂರ್ಯಾಸ್ತದ ಸಮಯದಲ್ಲಿ ಯಜ್ಞವನ್ನು ಮಾಡುವ ಶ್ರೋತ್ರಿಯ ಹಾಗೂ ಉಪಾಸಕನ ಮೇಧಾಬುದ್ಧಿಯು ಪ್ರಖರವಾಗುತ್ತದೆ. ಸೂರ್ಯೋದಯ ಮತ್ತು ಸೂರ್ಯಾಸ್ತದ ಸಮಯದಲ್ಲಿ ನಮ್ಮ ಶರೀರದಲ್ಲಿ ಇಡಾ, ಪಿಂಗಳಾ ಮತ್ತು ಸುಷುಮ್ನಾ ನಾಡಿಗಳು ಪೂರ್ಣವಾಗಿ ತೆರೆದು ಜಾಗೃತವಾಗುತ್ತವೆ. ಆ ಸಮಯದಲ್ಲಿ ಯಜ್ಞವನ್ನು ಮಾಡುವುದರಿಂದ ಮಾನವನ ಬುದ್ಧಿಯು ಅತ್ಯಂತ ತೀಕ್ಷ್ಣವಾಗುತ್ತದೆ. ಯಾರು ಆಲಸ್ಯವನ್ನು ತೊರೆದು ಇವೆರಡು ಕಾಲದಲ್ಲಿ ಸರಿಯಾಗಿ ಬ್ರಹ್ಮಯಜ್ಞವನ್ನು, ದೇವಯಜ್ಞವನ್ನು ಮಾಡುತ್ತಾರೋ ಅವರು ಬಹಳ ಬೇಗ ವೇದಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಸೂರ್ಯನು ಪ್ರಕಾಶದ ಮೂಲಕ, ಪರಮಾತ್ಮನು ಸೃಷ್ಟಿಯನ್ನು ಸೃಷ್ಟಿಸುವ ಮೂಲಕ, ಆಚಾರ್ಯನು ಜ್ಞಾನಯಜ್ಞದ ಮೂಲಕ ವ್ಯಾಪ್ತರಾಗಿದ್ದಾರೆ. ಅದೇ ರೀತಿ ವಾಯುವು ಪ್ರಾಣಶಕ್ತಿಯ ಮೂಲಕ, ಜಲವು ಜೀವನಶಕ್ತಿಯ ಮೂಲಕ ವ್ಯಾಪ್ತವಾಗಿವೆ. ವಿಶಾಲವಾದ ಪ್ರಪಂಚವೇ ಒಂದು ಯಜ್ಞಶಾಲೆ. ಇಲ್ಲಿ ಪ್ರತಿಯೊಂದು ವಸ್ತುವು ಸೂರ್ಯ, ಚಂದ್ರ, ನಕ್ಷತ್ರ, ಗಾಳಿ, ಜಲ, ಅಗ್ನಿ, ಮರಗಿಡ ಬಳ್ಳಿ ವನಸ್ಪತಿಗಳು ಒಂದೊಂದು ವಿಧದಲ್ಲಿ ಯಜ್ಞವನ್ನು ಮಾಡುತ್ತಿವೆ. ನಾವೆಲ್ಲರೂ ಪ್ರತಿನಿತ್ಯ ಯಜ್ಞೀಯಭಾವನೆಯಿಂದ ಯಜ್ಞವನ್ನು ಮಾಡಿ ನಮ್ಮ ಜೀವನವನ್ನು ಯಜ್ಞಮಯವನ್ನಾಗಿ ಮಾಡೋಣ.

ಇವುಗಳು ನಮ್ಮ ಯಾವ ಯಾವ ಪದಾರ್ಥಗಳ ಧಾರಣೆ ಮಾಡುತ್ತವೆ ಎಂಬುದರ ಪ್ರಕಾಶವನ್ನು ಇಲ್ಲಿ ಬೀರಲಾಗಿದೆ.

ಕವೀ ನೋ ಮಿತ್ರಾವರುಣಾ ತುವಿಜಾತಾ ಉರುಕ್ಷಯಾ । ದಕ್ಷಂ ದಧಾತೇ ಅಪಸಮ್ ॥೯॥

ಪದಾರ್ಥಃ:- **[ತುವಿಜಾತೌ]** ಹಲವು ಕಾರಣಗಳ ಮೂಲಕ ಪ್ರಕಟವಾಗುವ **[ಉರುಕ್ಷಯೌ]** ಹಲವು ಕಾರಣಗಳಲ್ಲಿ ನಿವಾಸ ಮಾಡುವ **[ಕವೀ]** ಕ್ರಾಂತಿದರ್ಶೀ ಸಮಸ್ತ ಪದಾರ್ಥಗಳನ್ನು ನೋಡುವವರೂ ಹಾಗೂ ಯಾರ ಪ್ರಕಾಶದಿಂದ ಸಮಸ್ತ ಪದಾರ್ಥಗಳನ್ನು ಜೀವಮಾತ್ರರು ನೋಡುತ್ತಾರೋ ಅಂತಹ ಪ್ರಕಾಶ ಸ್ವರೂಪರಾದ **[ಮಿತ್ರಾವರುಣೌ]** ಸೂರ್ಯ ಮತ್ತು ವರಣೀಯನಾದ ಪರಮಾತ್ಮ ಇವರಿಬ್ಬರೂ **[ನಃ]** ನಮ್ಮೆಲ್ಲರ **[ದಕ್ಷಂ]** ಬಲಗಳನ್ನು **[ಅಪಸಂ]** ಕರ್ಮಗಳನ್ನು ಹಾಗೂ ಜಲವನ್ನು **[ದಧಾತೇ]** ಧಾರಣ ಮಾಡುತ್ತಾರೆ. ಸೂರ್ಯನು ಜಲವನ್ನು ಧಾರಣ ಮಾಡುತ್ತಾನೆ. ಪರಮಾತ್ಮನು ನಮ್ಮೆಲ್ಲರ ಕರ್ಮಗಳ ದ್ರಷ್ಟಾರನಾಗಿ ಅದಕ್ಕನುಗುಣವಾಗಿ ಫಲವನ್ನು ಕೊಡುತ್ತಾನೆ.

ಭಾವಾರ್ಥಃ:- ಸೂರ್ಯನು ತನ್ನ ಪ್ರಕಾಶದ ಮೂಲಕ ನಮಗೆಲ್ಲರಿಗೂ ದೃಷ್ಟಿಗೋಚರನಾಗುತ್ತಾನೆ. ಪರಮಾತ್ಮನು ಅದ್ಭುತವಾದ ರಮಣೀಯವಾದ ಸೃಷ್ಟಿಯ ಮೂಲಕ ಅನುಭವ ಗಮ್ಯನಾಗುತ್ತಾನೆ. ಜೀವಾತ್ಮನ ಮೂಲಕ ಅವನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಅದೇ ರೀತಿ ಸೂರ್ಯನು ದ್ಯುಲೋಕದಲ್ಲಿ ನಿವಾಸಿಸುತ್ತಾನೆ. ಪರಮಾತ್ಮನು ಪ್ರತಿಯೊಂದು ಕಣಕಣದಲ್ಲಿಯೂ ನಿವಾಸವನ್ನು ಮಾಡುತ್ತಾನೆ. ಇವರಿಬ್ಬರೂ ಕವಿ ಎಂದರೆ ಕ್ರಾಂತದರ್ಶಿಗಳಾಗಿದ್ದಾರೆ. ಸೂರ್ಯನ ಪ್ರಕಾಶದಿಂದ ಪ್ರಪಂಚದ ಸಮಸ್ತ ಪದಾರ್ಥಗಳು ದೃಷ್ಟಿಗೋಚರವಾದರೆ ಪರಮಾತ್ಮನಿಂದ ಸಮಸ್ತ ವಸ್ತುಗಳು ಪ್ರಕಾಶಿಸಲ್ಪಡುತ್ತವೆ.

ಸೂರ್ಯ ಮತ್ತು ಪರಮಾತ್ಮ ಇವರಿಬ್ಬರು ನಮ್ಮ ಕರ್ಮಗಳಿಗೆ ಸಾಕ್ಷಿಯಾಗಿದ್ದಾರೆ. ಸೂರ್ಯನು ಜಲವನ್ನು ಆಕರ್ಷಿಸಿ ಮೋಡಗಳ ಮೂಲಕ ಧಾರಣ ಮಾಡಿಕೊಳ್ಳುತ್ತಾನೆ. ಸರ್ವದ್ರಷ್ಟಾರನಾದ ಪರಮಾತ್ಮನು ನಮ್ಮೆಲ್ಲಾ ಕರ್ಮಗಳಿಗೆ ಅನುಗುಣವಾಗಿ ಫಲವನ್ನು ಕೊಡುತ್ತಾನೆ.

ಎರಡನೆಯ ಸೂಕ್ತ ಸಮಾಪ್ತ

ಸೂಕ್ತ ೩

ಮಂತ್ರಸಂಖ್ಯೆ ೧೨ । ಋಷಿಃ - ಮಧುಚ್ಛಂದಾಃ ವೈಶ್ವಾಮಿತ್ರಃ । ದೇವತಾ - ೧-೩ ಅಶ್ವಿನೌ, ೪-೬ ಇಂದ್ರಃ,
೭-೯ ವಿಶ್ವೇ ದೇವಾಃ, ೧೦-೧೨ ಸರಸ್ವತೀ । ಛಂದಃ - ಗಾಯತ್ರೀ । ಸ್ವರಃ - ಷಡ್ಜಃ.

ತೃತೀಯ ಸೂಕ್ತದ ಮೊದಲ ಮಂತ್ರದಲ್ಲಿ ಅಗ್ನಿ ಮತ್ತು ಜಲಗಳನ್ನು ಅಶ್ವಿ ಎಂಬ ಹೆಸರಿನಿಂದ ವಿವರಿಸಲಾಗಿದೆ.

ಅಶ್ವಿನಾ ಯಜ್ವರೀರಿಷೋ ದ್ರವತ್ಪಾಣೀ ಶುಭಸ್ಪತೀ । ಪುರುಭುಜಾ ಚನಸ್ಯತಮ್ ॥೧॥

ಪದಾರ್ಥ:- ವಿದ್ಯೆಯಲ್ಲಿ ನಿರತರಾಗಿರುವ ವಿದ್ವಾಂಸರೇ ! ನೀವು **[ದ್ರವತ್ಪಾಣೀ]** ಯಾವುದರಿಂದ ಮತ್ತು ಯಾವುದನ್ನು ಅಳವಡಿಸಿಕೊಂಡು ಮನುಷ್ಯನು ದ್ರುತಗಾಮಿಯಾಗಿ, ತ್ವರಿತಗತಿಯಿಂದ, ಸಮಸ್ತ ಪದಾರ್ಥ ವಿದ್ಯೆಯನ್ನು ಪ್ರಾಪ್ತವನ್ನಾಗಿ ಮಾಡುತ್ತಾರೋ ಹಾಗೂ ವ್ಯವಹಾರ ಸಿದ್ಧಿಯನ್ನು ಮಾಡಿಕೊಳ್ಳುತ್ತಾರೋ **[ಶುಭಸ್ಪತೀ]** ಸಮಸ್ತ ಶುಭವಸ್ತುಗಳ ರಕ್ಷಣೆಯನ್ನು ಮಾಡುವವರೂ ಹಾಗೂ ಯಾವುದನ್ನು ಅಳವಡಿಸಿಕೊಳ್ಳುವುದರಿಂದ ಕಾರ್ಯಸಿದ್ಧಿಯಾಗಿ ಶುಭವಾಗುತ್ತದೆಯೋ ಮತ್ತು **[ಪುರುಭುಜಾ]** ಯಾವುದರಿಂದ ನಾವೆಲ್ಲರೂ ಸಮಸ್ತ ಭೋಗಗಳನ್ನು ಐಶ್ವರ್ಯಾದಿಗಳನ್ನು ಪ್ರಾಪ್ತಮಾಡಿಕೊಳ್ಳುತ್ತೇವೆಯೋ ಅಂತಹ **[ಅಶ್ವಿನೌ]** ಜಲ ಮತ್ತು ಅಗ್ನಿ ಇವೆರಡೂ ಹಾಗೂ ಸೂರ್ಯ ಮತ್ತು ವಿದ್ಯುತ್ ಇವೆರಡೂ **[ಯಜ್ವರೀ]** ಸಮಸ್ತ ಯಂತ್ರಗಳ ಚಲನೆಗೂ, ಪ್ರಕಾಶವನ್ನು ಪಡೆಯುವುದಕ್ಕೂ ಜ್ಞಾನಾರ್ಜನೆಯನ್ನು ಮಾಡುವುದಕ್ಕೂ ಹೇತು ಅರ್ಥಾತ್ ಕಾರಣೀಭೂತವಾಗಿವೆ. ಇವುಗಳನ್ನು ಲೋಕಕಲ್ಯಾಣಾರ್ಥ ಸರಿಯಾದ ರೀತಿಯಲ್ಲಿ ಪೂರ್ಣವಾಗಿ ಉಪಯೋಗಿಸಿಕೊಳ್ಳಿರಿ. ಅದೇ ರೀತಿ ಮಾನವರೆಲ್ಲರೂ ಸಂಪೂರ್ಣ ಸುಖವನ್ನು ಪಡೆಯುವುದಕ್ಕೋಸ್ಕರ **[ಇಷಃ]** ಸಂಪೂರ್ಣ ಜ್ಞಾನವನ್ನು **[ಅನಸ್ಯತಂ]** ಸ್ವಾದಿಷ್ಟವಾದ ಭೋಜನದಂತೆ ಸೇವನೆ ಮಾಡಬೇಕು. ಅರ್ಥಾತ್ ಯಾವ ರೀತಿ ನಾವು ಸ್ವಾದಿಷ್ಟವಾದ ಭೋಜನವನ್ನು ಬಹಳ ಪ್ರೀತಿಯಿಂದ ಸೇವನೆ ಮಾಡಿ ಅರಗಿಸಿಕೊಳ್ಳುತ್ತೇವೆಯೋ ಅದೇ ರೀತಿ ಸಮಸ್ತ ಜ್ಞಾನವನ್ನು ಬಹಳ ಪ್ರೀತಿ ಹಾಗೂ ಶ್ರದ್ಧೆಯಿಂದ ಪ್ರಾಪ್ತಮಾಡಿಕೊಂಡು ಕರಗತ ಮಾಡಿಕೊಳ್ಳಬೇಕು.

ಭಾವಾರ್ಥ:- ಜ್ಞಾನವು ಅನಂತವಾಗಿದೆ. ಆದರೆ ನಮಗೆ ಮಾನವ ಜನ್ಮದಲ್ಲಿ ಸಿಗುವ ಕಾಲಾವಕಾಶವು ಸೀಮಿತವಾಗಿದೆ. ಈ ಸೀಮಿತ ಕಾಲದಲ್ಲಿ ನಾವು ಅನಂತಜ್ಞಾನವನ್ನೂ, ಸುಖವನ್ನೂ ಪಡೆಯುವುದಕ್ಕೋಸ್ಕರ ತ್ವರಿತಗತಿಯಿಂದ ಸಮಯವನ್ನು ಹಾಳು ಮಾಡದೇ ನಮ್ಮ ಕಾರ್ಯವನ್ನು ಸಿದ್ಧಿಮಾಡಿಕೊಳ್ಳಬೇಕು. ಅದಕ್ಕೋಸ್ಕರ ನಮಗೆ ವೇದವು ಸೃಷ್ಟಿಯ ಆದಿಯಲ್ಲಿಯೇ ಉಪದೇಶಿಸಿದೆ. ಮಾನವರೇ ! ಜಲ ಮತ್ತು ಅಗ್ನಿಯ ಸಹಾಯದಿಂದ ಹಾಗೂ ಸೂರ್ಯ ಮತ್ತು ವಿದ್ಯುತ್ತಿನ ಸಹಾಯದಿಂದ ಶಕ್ತಿಯನ್ನು ಪಡೆದು ಸಮಸ್ತ ಯಂತ್ರಗಳನ್ನೂ, ಯಾನಗಳನ್ನೂ ಚಲಿಸುವಂತೆ ಮಾಡಿರಿ, ಪ್ರಕಾಶವನ್ನೂ ಪಡೆಯಿರಿ, ಜ್ಞಾನಾರ್ಜನೆಯನ್ನು ಮಾಡಿಕೊಳ್ಳಿರಿ. ಸದಾಕಾಲ ಈ ಶಕ್ತಿಗಳ ಸದುಪಯೋಗವನ್ನೇ ಮಾಡಿರಿ. ಎಂದಿಗೂ ದುರುಪಯೋಗವನ್ನು ಮಾಡಬೇಡಿ. ಇದರಿಂದ ಸಮಸ್ತ ಸುಖಗಳೂ ಭೋಗೈಶ್ವರ್ಯಗಳೂ ಪ್ರಾಪ್ತವಾಗುತ್ತವೆ.

ಅದೇ ರೀತಿ ಜ್ಞಾನವನ್ನು ಅನ್ನದಂತೆ ಸೇವನೆ ಮಾಡಬೇಕು ಎಂದು ಮಂತ್ರದಲ್ಲಿ ಹೇಳಿದೆ. ಯಾವ ರೀತಿ ಸ್ವಾದಿಷ್ಟವಾದ ಭೋಜನವನ್ನು ಪ್ರೀತಿಯಿಂದ ಉಂಡು ಅರಗಿಸಿಕೊಳ್ಳುತ್ತೇವೆಯೋ ಅದೇ ರೀತಿ ಪ್ರೀತಿಯಿಂದ, ಶ್ರದ್ಧೆಯಿಂದ ಜ್ಞಾನಸಂಪಾದನೆಯನ್ನು ಮಾಡಿ ಕರಗತ ಮಾಡಿಕೊಳ್ಳಬೇಕು. ನಾವು ಪಡೆದಂತಹ ಜ್ಞಾನವು ನಮ್ಮೆಲ್ಲರ ಶ್ರೇಯೋಭಿವೃದ್ಧಿಗೂ, ಸುಖ-ಶಾಂತಿ ನೆಮ್ಮದಿಗೂ ಹಾಗೂ ಮೋಕ್ಷ ಪ್ರಾಪ್ತಿಗೂ ಕಾರಣೀಭೂತವಾಗಬೇಕು.

ನಂತರ ಆ ಅಶ್ವಿಗಳು ಯಾವ ಪ್ರಕಾರದ್ದಾಗಿವೆ ಎಂಬುದನ್ನಿಲ್ಲಿ ಹೇಳಲಾಗಿದೆ.

ಅಶ್ವಿನಾ ಪುರುದಂಸಸಾ ನರಾ ಶವೀರಯಾ ಧಿಯಾ । ಧಿಷ್ಣ್ಯಾ ವನತಂ ಗಿರಃ ॥೨॥

ಪದಾರ್ಥ:- [ಪುರುದಂಸಸಾ] ಬಹುಕರ್ಮನಿಷ್ಠರೂ [ನರೌ] ಅನ್ಯರಿಗೆ ಪ್ರೇರಣೆಯನ್ನು ಕೊಟ್ಟು ಮಾರ್ಗದರ್ಶನ ಮಾಡುವವರೂ [ಧಿಷ್ಣ್ಯಾ] ಅನ್ಯರಿಗೆ ಆಶ್ರಯದಾತ್ರರೂ ಆದ **[ಅಶ್ವಿನೌ]** ವಿದ್ವಾಂಸರೂ ಹಾಗೂ ವಿದುಷಿಯರೂ ಧರ್ಮಕಾರ್ಯದಲ್ಲಿ ಪ್ರವೃತ್ತರೂ ಆದ ಪತಿಪತ್ನಿಯರೇ ! ನೀವು **[ಶವೀರಯಾ]** ಧರ್ಮ ಮಾರ್ಗದಲ್ಲಿ ಶೀಘ್ರಗತಿಯುಳ್ಳವರಾಗಿ **[ಧಿಯಾ]** ಶ್ರೇಷ್ಠಜ್ಞಾನದಿಂದ ನಿರ್ಮಲಬುದ್ಧಿಯುಳ್ಳವರಾಗಿ ಹಾಗೂ ಜ್ಞಾನಪೂರ್ವಕ ಶ್ರೇಷ್ಠಕರ್ಮಗಳನ್ನು ಮಾಡುತ್ತಾ [ಗಿರಃ] ಅತ್ಯಂತ ಮಧುರವಾದ ಹಾಗೂ ಸತ್ಯದಿಂದ ಪವಿತ್ರವಾದ ವಾಣಿಯನ್ನು **[ವನತಮ್]** ಅಂಗೀಕರಿಸಿರಿ. ಅರ್ಥಾತ್ ಸದಾ ಸತ್ಯ ಹಾಗೂ ಮಧುರವಾದ ಮಾತನ್ನೇ ಆಡಿರಿ.

ಭಾವಾರ್ಥ:- ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸ ಈ ನಾಲ್ಕು ಆಶ್ರಮಗಳಲ್ಲಿ ಗೃಹಸ್ಥಾಶ್ರಮವು ಅತ್ಯಂತ ಶ್ರೇಷ್ಠವೂ ಅನ್ಯಾಶ್ರಮದವರಿಗೆ ಆಶ್ರಯದಾತೃವೂ ಆಗಿದೆ. ಈ ಮಂತ್ರದಲ್ಲಿ ಪರಮಾತ್ಮನು ಎಲ್ಲಾ ದಂಪತಿಗಳಿಗೆ, ಪತಿಪತ್ನಿಯರಿಗೆ ಈ ರೀತಿ ಉಪದೇಶವನ್ನೂ, ಆದೇಶವನ್ನೂ ಕೊಟ್ಟಿದ್ದಾನೆ.

ಪತಿಪತ್ನಿಯರು ಅತ್ಯಂತ ಕರ್ಮನಿಷ್ಠರೂ, ತಮ್ಮ ಸಂತಾನಕ್ಕೂ ಹಾಗೂ ಇತರರಿಗೂ ಪ್ರೇರಣೆಯನ್ನು ಕೊಟ್ಟು ಮಾರ್ಗದರ್ಶನವನ್ನು ಮಾಡುವವರೂ, ಸತ್ಪಾತ್ರರಿಗೆ ದಾನ ಮಾಡುವವರೂ ಅನ್ಯರಿಗೆ ಆಶ್ರಯದಾತರೂ ಪತಿಯಾದವನು ವಿದ್ವಾಂಸನೂ, ಪತ್ನಿಯಾದವಳು ವಿದುಷಿಯೂ ಆಗಬೇಕು. ಧರ್ಮಮಾರ್ಗದಲ್ಲಿ ಶೀಘ್ರಗತಿಯುಳ್ಳವರೂ ಆಗಬೇಕು. ಶ್ರೇಷ್ಠಜ್ಞಾನದಿಂದ ನಿರ್ಮಲ ಬುದ್ಧಿಯುಳ್ಳವರಾಗಿ ಜ್ಞಾನಪೂರ್ವಕ ಶ್ರೇಷ್ಠಕರ್ಮಗಳನ್ನು ಮಾಡುತ್ತಾ ಮಧುರ ಹಾಗೂ ಸತ್ಯವಾದ ವಾಣಿಯನ್ನೇ ಆಡಬೇಕು.

ಪುನಃ ಅದೇ ವಿಷಯವನ್ನು ತಿಳಿಸಲಾಗಿದೆ.

ದಸ್ರಾ ಯುವಾಕವಃ ಸುತಾ ನಾಸತ್ಯಾ ವೃಕ್ತಬರ್ಹಿಷಃ । ಆ ಯಾತಂ ರುದ್ರವರ್ತನೀ ॥೩॥

ಪದಾರ್ಥ:- [ಸುತಾಃ] ವೇದಗಳಿಂದ ಸಮಸ್ತ ಪದಾರ್ಥವಿದ್ಯೆಯನ್ನು ಪ್ರಾಪ್ತಮಾಡಿಕೊಂಡಂತಹ **[ಯುವಾಕವಃ]** ಜ್ಞಾನವಿಜ್ಞಾನ ಪ್ರಾಪ್ತಿಗೋಸ್ಕರ ಭೌತಿಕ ಪದಾರ್ಥಗಳ ಸಂಯೋಗ-ವಿಭಾಗ ಮಾಡುವ **[ವೃಕ್ತಬರ್ಹಿಷಃ]** ಯಜ್ಞದಲ್ಲಿ ಋತ್ವಿಜರೂ ಸಕಲ ಶಿಲ್ಪವಿದ್ಯೆಗಳಲ್ಲಿ ನಿಷ್ಣಾತರೂ ಆದ ವಿದ್ವಾಂಸ ಹಾಗೂ ವಿದುಷಿಗಳಾದ ಶ್ರೇಷ್ಠ ನರನಾರಿಯರೇ ! ನೀವು **[ರುದ್ರವರ್ತ್ತನೀ]** ಪ್ರಾಣಮಾರ್ಗದಲ್ಲಿ ಅರ್ಥಾತ್ ಯೋಗವಿದ್ಯೆಯಲ್ಲಿ ನಿರತರಾಗಿ **[ದಸ್ರೌ]** ನಿಸ್ವಾರ್ಥಭಾವದಿಂದ ಸರ್ವರ ದುಃಖಹರಣ ಮಾಡುವವರಾಗಿ **[ನಾಸತ್ಯಾ]** ಯಾವುದೇ ರೀತಿಯ ಅಸತ್ಯ, ಛಲಕಪಟ ಆದಿಗಳಿಂದ ರಹಿತರಾಗಿ **[ಆ ಯಾತಮ್]** ಎಲ್ಲಾ ದಿಕ್ಕಿನಿಂದ ಬಂದು ಎಲ್ಲರಿಗೂ ಪ್ರಾಪ್ತರಾಗಿರಿ.

ಭಾವಾರ್ಥ:- ವೇದಗಳಿಂದ ಸಕಲಪದಾರ್ಥ ವಿದ್ಯೆಗಳ ಜ್ಞಾನವನ್ನು ಪಡೆದು ಅವುಗಳ ಮೇಲೆ ವಿಶೇಷ ಅನುಸಂಧಾನವನ್ನು ಪ್ರಯೋಗಾತ್ಮಕವಾಗಿಯೂ, ಕ್ರಿಯಾತ್ಮಕವಾಗಿಯೂ ಮಾಡುವ ಹಾಗೂ ಯಜ್ಞದಲ್ಲಿ ಋತ್ವಿಜರೂ ಸದಾ ಯಜನಶೀಲರೂ, ಸಕಲ ವಿದ್ಯೆಗಳಲ್ಲಿ ನಿಷ್ಣಾತರೂ ಆದ ವಿದ್ವಾಂಸರೂ, ವಿದುಷಿಗಳೂ ಆದ ನರನಾರಿಯರೇ ! ನೀವು ಯೋಗವಿದ್ಯೆಯಲ್ಲಿ ನಿರತರಾಗಿ ನಿಸ್ವಾರ್ಥಭಾವದಿಂದ ಸರ್ವರ ದುಃಖವನ್ನು ದೂರ ಮಾಡುತ್ತಾ ಅಸತ್ಯ-ಛಲ-ಕಪಟ-ಮೋಸ-ವಂಚನೆ ಆದಿಗಳಿಂದ ರಹಿತರಾಗಿ ಎಲ್ಲಾ ದಿಕ್ಕಿನಿಂದ ಬಂದು ಎಲ್ಲರಿಗೂ ಪ್ರಾಪ್ತರಾಗಿರಿ.

ದುರ್ಭಾಗ್ಯವಶಾತ್ ಇಂದು ಎಲ್ಲಾ ಕಡೆಯಲ್ಲಿಯೂ "ಉದರ ನಿಮಿತ್ತಂ ಬಹುಕೃತವೇಷಂ" ತಮ್ಮ ಉದರ ಪೋಷಣೆಗೆ ಹಾಗೂ ಸಂಪತ್ತನ್ನು ಸೂರೆ ಮಾಡುವುದಕ್ಕೋಸ್ಕರ ಎಷ್ಟು ವಿಧದಲ್ಲಿ ಮೋಸ ಮಾಡಲು ಸಾಧ್ಯವಿದೆಯೋ ಅಷ್ಟೆಲ್ಲಾ ವಿಧಗಳಿಂದ ಮೋಸ ಮಾಡುತ್ತಾ ಸಾಮಾನ್ಯ ಜನರನ್ನು ವಂಚಿಸಿ ಎಲ್ಲಾ ರೀತಿಯಲ್ಲಿ ದುಃಖಕ್ಕೀಡು ಮಾಡುತ್ತಿದ್ದಾರೆ. ಹೇ ಪರಮಾತ್ಮ ! ಅಂತಹ ನೀಚ ಪ್ರವೃತ್ತಿಯುಳ್ಳವರು ಯಾರಿಗೂ ಪ್ರಾಪ್ತವಾಗದಿರಲಿ.

ಈಗ ಇಂದ್ರ ಶಬ್ದದಿಂದ ಪರಮೇಶ್ವರನ ಮತ್ತು ಸೂರ್ಯನ ಬಗೆಗೆ ಹೇಳಲಾಗಿದೆ.

ಇಂದ್ರಾ ಯಾಹಿ ಚಿತ್ರಭಾನೋ ಸುತಾ ಇಮೇ ತ್ವಾಯವಃ । ಅಣ್ವೀಭಿಸ್ತನಾ ಪೂತಾಸಃ ॥೪॥

ಪದಾರ್ಥ:- [ಚಿತ್ರಭಾನೋ] ಅತ್ಯಾಶ್ಚರ್ಯಕರವಾದ ಅತ್ಯಂತ ದೀಪ್ತಿ ಪ್ರಕಾಶವುಳ್ಳ [ಇಂದ್ರಃ] ಸರ್ವಪ್ರಕಾಶ ಸ್ವರೂಪ ಪರಮಾತ್ಮ ! [ಆಯಾಹಿ] ನೀನು ಅತ್ಯಂತ ಕೃಪೆ ಹಾಗೂ ದಯೆಯುಳ್ಳವನಾಗಿ ನಮ್ಮೆಲ್ಲರಿಗೂ ಪ್ರಾಪ್ತನಾಗು. [ಇಮೇ ಅಣ್ವೀಭಿಃ] ಈ ಸಮಸ್ತ ಪ್ರಪಂಚಕ್ಕೆ ಕಾರಣೀಭೂತವಾದ ಪರಮಾಣುಗಳಿಂದ ನಿರ್ಮಿತವಾದ ಹಾಗೂ

[ತನಾ] ಹೇರಳವಾದ ಸಂಪತ್ತುಳ್ಳ ಈ ವಿಸ್ತಾರವಾದ ಸುಂದರವಾದ ಜಗತ್ತಿನ ಮೂಲಕ ಮತ್ತು **[ಪೂತಾಸಃ]** ಪವಿತ್ರವಾದ ಮತ್ತು ಪ್ರಕಾಶಮಾನವಾದ ಸೂರ್ಯ ಚಂದ್ರ ನಕ್ಷತ್ರಾದಿಗಳು ಹಾಗೂ **[ತ್ವಾ ಯವಃ ಸುತಾ]** ನಿನ್ನಿಂದ ಸೃಷ್ಟಿಸಲ್ಪಟ್ಟ ಸಕಲ ಪದಾರ್ಥಗಳಿಂದ ನಾವೆಲ್ಲರೂ ಉಪಕೃತರಾಗಿ ನಿನ್ನ ಶರಣಾಗತರಾಗಿದ್ದೇವೆ. ಸದಾ ನಿನ್ನ ಆಶ್ರಯದಲ್ಲಿ ಇರುವವರಾಗಿದ್ದೇವೆ.

ಅದೇ ರೀತಿ **[ಚಿತ್ರಭಾನೋ ಇಂದ್ರಃ]** ಅತ್ಯಂತ ಪ್ರಕಾಶಮಾನನಾದ ಸೂರ್ಯನು **[ಆಯಾಹಿ]** ತನ್ನ ಪ್ರಕಾಶದ ಮೂಲಕ ನಮಗೆಲ್ಲರಿಗೂ ಪ್ರತಿದಿನ ಪ್ರಾಪ್ತನಾಗುತ್ತಾನೆ. **[ತೇನೇಮೇ ಅಣ್ವೀಭಿಃ]** ಸಮಸ್ತ ಕಿರಣಗಳಿಂದ **[ತನಾ]** ವಿಶಾಲವಾದ ಈ ಜಗತ್ತಿನಲ್ಲಿ **[ಪೂತಾಸಃ]** ಪವಿತ್ರವಾದ ಮತ್ತು ನಿನ್ನಿಂದ ಪ್ರಕಾಶಿಸಲ್ಪಡುವ ಸಮಸ್ತ ಗ್ರಹೋಪಗ್ರಹಗಳು ಹಾಗೂ **[ತ್ವಾಯವಃ ಸುತಾ]** ಅವನ ಶಕ್ತಿಯಿಂದ ಉತ್ಪನ್ನವಾದ ಸಕಲ ಪದಾರ್ಥಗಳು ನಮ್ಮೆಲ್ಲರಿಗೂ ಪ್ರಾಪ್ತವಾಗುತ್ತವೆ. ನಾವೆಲ್ಲರೂ ಸೂರ್ಯದೇವನಿಂದ ಉಪಕೃತರಾಗಿದ್ದೇವೆ.

ಭಾವಾರ್ಥ:- ಪರಮಾತ್ಮನು ಅತ್ಯಂತ ಆಶ್ಚರ್ಯಕರವಾದ ಹಾಗೂ ಅತ್ಯಂತ ದೀಪ್ತಿಯುಳ್ಳವನೂ ಆಗಿದ್ದಾನೆ. ಅದೇ ರೀತಿ ಅವನ ಶಕ್ತಿಯು ಕೂಡ ಅತ್ಯಂತ ಆಶ್ಚರ್ಯಕರವೂ ಆಗಿದೆ. **"ಊರ್ಧ್ವಮೂಲಂ ಅಧಃಶಾಖಾಃ"** ಮೂಲವು ಮೇಲೆ ಇದೆ, ಶಾಖೆಗಳು ಕಾಂಡೋಪಕಾಂಡಗಳು ಕೆಳಗೆ ಇವೆ. ಶಕ್ತಿ ಹಾಗೂ ಪ್ರಕಾಶವು ಮೇಲಿನಿಂದ ಕೆಳಗೆ ಪ್ರವಾಹಿತವಾಗುತ್ತದೆ. ಸರ್ವಪ್ರಕಾಶ ಸ್ವರೂಪನಾದ ಪರಮಾತ್ಮನು, ಯಾರು ಅವನ ಪ್ರೀತಿಗೆ, ದಯೆಗೆ ಪಾತ್ರರಾಗುತ್ತಾರೆಯೋ ಅವರಿಗೆ ಮಾತ್ರ ಪ್ರಾಪ್ತನಾಗುತ್ತಾನೆ. ಆದುದರಿಂದ ನಾವೆಲ್ಲರೂ ಅವನ ಪ್ರೀತಿಗೆ ಮತ್ತು ದಯೆಗೆ ಪಾತ್ರರಾಗೋಣ.

ಪರಮಾತ್ಮನು ಸಂಪೂರ್ಣ ಚರಾಚರ ಜಗತ್ತಿಗೆ ಕಾರಣೀಭೂತವಾದ ಪರಮಾಣುಗಳಿಂದ ಈ ಸೃಷ್ಟಿಯನ್ನು ಸೃಷ್ಟಿಸುತ್ತಾನೆ. ಅವನಿಂದ ಸೃಷ್ಟಿಸಲ್ಪಟ್ಟ ಈ ಸೃಷ್ಟಿಯು ಹಿರಣ್ಯಗರ್ಭಾ-ಹೇರಳವಾದ ಸಂಪತ್ತುಳ್ಳ ಹಾಗೂ ಅತ್ಯಂತ ಪ್ರಕಾಶಮಾನವಾದ ಸೂರ್ಯ ಚಂದ್ರನಕ್ಷತ್ರಾದಿಗಳಿಂದ ಯುಕ್ತವಾಗಿದೆ. ನಾವೆಲ್ಲರೂ ಅವನಿಂದ ಉಪಕೃತರಾಗಿದ್ದೇವೆ. ಅವನು ಮಾಡಿದ ಕೃಪೆಗೆ ಅನಂತ ಧನ್ಯವಾದಗಳನ್ನು ಅರ್ಪಿಸುತ್ತಾ, ಈ ಸಂಪೂರ್ಣ ಸೃಷ್ಟಿಯನ್ನು ಸುಂದರವನ್ನಾಗಿಯೂ, ಶಾಂತಿ ಹಾಗೂ ನೆಮ್ಮದಿಯಿಂದ ಕೂಡಿದುದನ್ನಾಗಿಯೂ ಮಾಡೋಣ.

ಅದೇ ರೀತಿ ಸೂರ್ಯದೇವನು ಕೂಡಾ ತನ್ನ ಪ್ರಕಾಶದ ಮೂಲಕ ನಮಗೆಲ್ಲರಿಗೂ ಪ್ರತಿದಿನ ಪ್ರಾಪ್ತನಾಗುತ್ತಾನೆ. ಅವನ ಕಿರಣಗಳಿಂದ ಬರುವ ಪ್ರಕಾಶದಿಂದ ಪ್ರತಿಫಲನಗೊಂಡು ಸಮಸ್ತ ಗ್ರಹೋಪಗ್ರಹಗಳು ಪ್ರಕಾಶಿಸಲ್ಪಡುತ್ತವೆ. ನಾವೆಲ್ಲರೂ ಅವನಿಂದ ಉಪಕೃತರಾಗಿದ್ದೇವೆ. ಅವನ ಅನಂತ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡು ಹಾಗೂ ಉತ್ತಮವಾದ ರೀತಿಯಲ್ಲಿ ವಿನಿಯೋಗ ಮಾಡುತ್ತಾ ನಾವೆಲ್ಲರೂ ಸುಖದಿಂದ ಹಾಗೂ ನೆಮ್ಮದಿಯಿಂದ ಬಾಳೋಣ.

ಈ ಮಂತ್ರದಲ್ಲಿ ಈಶ್ವರನ ಬಗೆಗೆ ತಿಳಿಸಲಾಗುತ್ತದೆ

ಇಂದ್ರಾ ಯಾಹಿ ಧಿಯೇಷಿತೋ ವಿಪ್ರಜೂತಃ ಸುತಾವತಃ । ಉಪ ಬ್ರಹ್ಮಾಣಿ ವಾಘತಃ ॥೫॥

ಪದಾರ್ಥ:- [ಇಂದ್ರ] ಹೇ ಸರ್ವಶಕ್ತಿಮಾನ್ ಹಾಗೂ ಸರ್ವೈಶ್ವರ್ಯವಂತನಾದ ಪರಮಾತ್ಮ ! [ಧಿಯಾ] ಪ್ರಕೃಷ್ಟವಾದ ಜ್ಞಾನದಿಂದಯುಕ್ತವಾದ ಮೇಧಾಬುದ್ಧಿಯಿಂದ ಹಾಗೂ ಸತ್ಕರ್ಮಗಳಿಂದ [ಇಷಿತಃ] ಪ್ರಾಪ್ತನಾಗುವವನು ಹಾಗೂ **[ವಿಪ್ರಜೂತಃ]** ಮೇಧಾವಿಯಾದ ವಿದ್ವಾಂಸರಿಂದ ತಿಳಿಯಲ್ಪಡುವವನೂ ಆದ ನೀನು **[ಸುತಾವತಃ]** ಸಮಸ್ತ ಪದಾರ್ಥ ಜ್ಞಾನವನ್ನು ಹಾಗೂ **[ಬ್ರಹ್ಮಾಣಿ]** ಸಂಪೂರ್ಣ ವೇದ ಜ್ಞಾನವನ್ನು ಪ್ರಾಪ್ತಮಾಡಿಕೊಂಡ ಬ್ರಾಹ್ಮಣರಿಗೆ

ಮತ್ತು **[ವಾಘತಃ]** ಯಜ್ಞಾನುಷ್ಠಾನವನ್ನು ನಿಷ್ಠೆಯಿಂದ ಮಾಡುವ ಶ್ರೋತ್ರೀಯ ಬ್ರಾಹ್ಮಣರೂ ಶ್ರೇಷ್ಠವಿದ್ವಾಂಸರಿಗೆ **[ಉಪಾಯಾಹಿ]** ಪ್ರಾಪ್ತನಾಗುತ್ತೀಯೆ.

ಭಾವಾರ್ಥ:- ಸರ್ವಶಕ್ತಿಮಾನ್ ಹಾಗೂ ಸರ್ವೇಶ್ವರನಾದ ಪರಮಾತ್ಮನು ಪ್ರಕೃಷ್ಟ ಜ್ಞಾನದಿಂದ ಯುಕ್ತವಾದ ಮೇಧಾಬುದ್ಧಿಯಿಂದ ಹಾಗೂ ಬುದ್ಧಿಪುರಸ್ಸರವಾಗಿ ಮಾಡಿದ ಶ್ರೇಷ್ಠ ಕರ್ಮಗಳಿಂದ ಪ್ರಾಪ್ತನಾಗುತ್ತಾನೆ.

ಸಚ್ಚಿದಾನಂದ ಪರಮಾತ್ಮನು ಸತ್ಯಜ್ಞಾನವುಳ್ಳ ಅತ್ಯಂತ ಮೇಧಾವಿಯಾದ ವಿದ್ವಾಂಸರಿಂದ ತಿಳಿಯಲ್ಪಡುವವನು ಆಗಿದ್ದಾನೆ. ನಾವೆಲ್ಲರೂ ಅಂತಹ ವಿದ್ವಾಂಸರ ಸಂಗವನ್ನು ಮಾಡಿ ಪರಮಾತ್ಮನ ವಾಸ್ತವಿಕ ಸ್ವರೂಪವನ್ನು ತಿಳಿದುಕೊಳ್ಳಬೇಕು. ಮಿಥ್ಯಾಜ್ಞಾನವುಳ್ಳ ಪಂಡಿತಮ್ಮನ್ಯರ ಸಂಗವನ್ನು ಮಾಡಿದರೆ ಅಜ್ಞಾನದ ಕೂಪದಲ್ಲಿ ಬಿದ್ದು ತೊಳಲಾಡಬೇಕಾಗುತ್ತದೆ.

ಆ ಪರಮಾತ್ಮನು ಸಂಪೂರ್ಣ ಪದಾರ್ಥಜ್ಞಾನವನ್ನು ಹಾಗೂ ಸಂಪೂರ್ಣ ವೇದಜ್ಞಾನವನ್ನು ಪ್ರಾಪ್ತಮಾಡಿಕೊಂಡ, ಯಜ್ಞಾನುಷ್ಠಾನವನ್ನು ನಿಷ್ಠೆಯಿಂದ ಮಾಡುವ ಬ್ರಹ್ಮವೇತ್ತಾ ಬ್ರಾಹ್ಮಣರಿಗೆ ಪ್ರಾಪ್ತನಾಗುತ್ತಾನೆ. ನಾವೆಲ್ಲರೂ ಸಂಪೂರ್ಣ ವೇದಜ್ಞಾನವನ್ನು ಸಮಸ್ತ ಪದಾರ್ಥಜ್ಞಾನವನ್ನು ಪ್ರಾಪ್ತಮಾಡಿಕೊಂಡು ಯಜ್ಞಾನುಷ್ಠಾನವನ್ನು ನಿಷ್ಠೆಯಿಂದ ಮಾಡುತ್ತಾ ಬ್ರಹ್ಮವೇತ್ತಾರರಾಗಿ ಪರಮಾತ್ಮನ ಸಾನ್ನಿಧ್ಯವನ್ನು ಹೊಂದೋಣ.

ಈಗ ಇಂದ್ರ ಶಬ್ದದಿಂದ ಭೌತಿಕ ವಾಯುವನ್ನು ವಿವರಿಸಲಾಗುತ್ತದೆ.

ಇಂದ್ರಾ ಯಾಹಿ ತೂತುಜಾನ ಉಪ ಬ್ರಹ್ಮಾಣಿ ಹರಿವಃ । ಸುತೇ ದಧಿಷ್ವ ನಶ್ಚನಃ ॥೬॥

ಪದಾರ್ಥ:- [ಹರಿವಃ] ಅತ್ಯಂತ ವೇಗವುಳ್ಳ **[ತೂತುಜಾನಃ]** ಶೀಘ್ರಗಾಮಿ **[ಇಂದ್ರಃ]** ಶರೀರಸ್ಥ ಪ್ರಾಣವಾಯು **[ಸುತೇ]** ಪ್ರತ್ಯಕ್ಷವಾಣಿಯ ವ್ಯವಹಾರದಲ್ಲಿ ಹಾಗೂ **[ನಃ ಬ್ರಹ್ಮಾಣಿ]** ನಮ್ಮೆಲ್ಲರಿಗೂ ವೇದವಾಣಿಯನ್ನು ಸುಂದರವಾಗಿ ಉಚ್ಚರಿಸಲು **[ಉಪ ಆಯಾಹಿ]** ಉತ್ತಮವಾದ ರೀತಿಯಲ್ಲಿ ಪ್ರಾಪ್ತನಾಗುತ್ತಾನೆ. ಅದೇ ಪ್ರಾಣವಾಯು ನಮ್ಮೆಲ್ಲರ **[ಚನಃ]** ಭೋಜನ, ಪಾನ, ಪಚನ, ಗ್ರಹಣ, ವಿಸರ್ಜನ ಆದಿಕ್ರಿಯೆಗಳಿಗೆ ಸಹಾಯಕವೂ ಶರೀರದಲ್ಲಿ ಎಲ್ಲಾ ಅವಯವಗಳಿಗೆ ರಕ್ತಪ್ರವಾಹ ಹಾಗೂ ಶೋಧನ ಎಂದರೆ ಶುದ್ಧವನ್ನಾಗಿ ಮಾಡುವ ಕ್ರಿಯೆಯನ್ನು **[ದಧಿಷ್ವ]** ಧಾರಣ ಮಾಡುತ್ತಾನೆ.

ಭಾವಾರ್ಥ:- ನಮ್ಮ ಶರೀರದಲ್ಲಿ ಪಂಚಪ್ರಾಣಗಳು - ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಹಾಗೂ ಪಂಚ ಉಪಪ್ರಾಣಗಳು - ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ - ಇವೆ. ಸಮೂಲಾಗ್ರವಾಗಿ ಈ ವಾಯು ವಿಭಿನ್ನ .ರೀತಿಯಲ್ಲಿ ನಮ್ಮ ಶರೀರದಲ್ಲಿ ವ್ಯಾಪಿಸಿಕೊಂಡು ಶರೀರದ ಎಲ್ಲಾ ಕ್ರಿಯೆಗಳಿಗೂ ಕಾರಣೀಭೂತವಾಗಿದೆ. ಶೀಘ್ರಗಾಮಿಯಾದಂತಹ ಈ ಪ್ರಾಣವಾಯು ನಾಭಿಯಿಂದ ಹೊರಟು ಬಾಯಿಯಿಂದ ಹೊರಗೆ ಬರುವಾಗ ನಾವು ಮಾತನಾಡುವ ಎಲ್ಲಾ ಕ್ರಿಯೆಗಳನ್ನು, ಎಲ್ಲಾ ವ್ಯವಹಾರಗಳನ್ನು ಮಾಡುತ್ತದೆ. ವೇದಮಂತ್ರಗಳ ಉಚ್ಚಾರಣೆಯಲ್ಲಿ, ಅಧ್ಯಾತ್ಮ ಸಾಧನೆಯಲ್ಲಿ ಇದೇ ವಾಯು ಎಲ್ಲಾ ಕ್ರಿಯೆಗಳಿಗೂ ಕಾರಣೀಭೂತವಾಗಿದೆ.

ವಾಣಿಯ ನಾಲ್ಕು ರೂಪಗಳು - ನಾಭಿಯಲ್ಲಿ ಪರಾ, ಹೃದಯದಲ್ಲಿ ಪಶ್ಯಂತಿ, ಕಂಠದಲ್ಲಿ ವೈಖರೀ ಹಾಗೂ ಬಾಯಿಯಿಂದ ಹೊರಡುವಾಗ ವಾಣಿ ಇವೆಲ್ಲವುಗಳಿಗೆ ವಾಯುವು ಅತ್ಯಂತ ಸಹಾಯಕವೂ, ಪೂರಕವೂ ಆಗಿದೆ. ಅಧ್ಯಾತ್ಮ ಸಾಧನೆಯಲ್ಲಿ ಮೂಲಾಧಾರ ಚಕ್ರದಿಂದ ಸಹಸ್ರಾರ ಚಕ್ರದ ತನಕ ಈ ಪ್ರಾಣವಾಯುವೇ ಪ್ರವಾಹಿತವಾಗುತ್ತದೆ. ಅದೇ ರೀತಿ ನಮ್ಮ ಭೋಜನ, ಪಾನ, ಪಚನ, ಗ್ರಹಣ, ವಿಸರ್ಜನ ಇತ್ಯಾದಿ ಊಟದ ಆರಂಭದಿಂದ

ಮಲವಿಸರ್ಜನೆಯ ಪರ್ಯಂತ ಎಲ್ಲಾ ಕ್ರಿಯೆಗಳಿಗೂ ಈ ವಾಯುವೇ ಕಾರಣೀಭೂತವಾಗಿದೆ. ಶರೀರದಲ್ಲಿ ರಕ್ತದ ಶುದ್ಧೀಕರಣ ಹಾಗೂ ಎಲ್ಲಾ ಅವಯವಗಳಿಗೆ ರಕ್ತದ ಪ್ರವಾಹ ಈ ವಾಯುವಿನ ಸಹಾಯದಿಂದಲೇ ಆಗುತ್ತದೆ. ನಾವೆಲ್ಲರೂ ಜ್ಞಾನವನ್ನು ಅರಿತುಕೊಂಡು ಪ್ರತಿನಿತ್ಯ ಪ್ರಾಣಾಯಾಮವನ್ನು ಮಾಡಿ ಯಾವಜ್ಜೀವಪರ್ಯಂತ ನೂರು ವರ್ಷಗಳಷ್ಟು ಕಾಲ ಅಥವಾ ಅದಕ್ಕಿಂತಲೂ ಹೆಚ್ಚು ಕಾಲ ಆರೋಗ್ಯವಂತರಾಗಿ ಬಾಳೋಣ.

ಮುಂದಿನ ಮಂತ್ರದಲ್ಲಿ ವಿದ್ವಾಂಸರ ಲಕ್ಷಣ ಹಾಗೂ ಆಚರಣಗಳನ್ನು ವಿವರಿಸಲಾಗಿದೆ.

ಓಮಾಸಶ್ಚರ್ಷಣೀಧೃತೋ ವಿಶ್ವೇ ದೇವಾಸ ಆ ಗತ । ದಾಶ್ವಾಂಸೋ ದಾಶುಷಃ ಸುತಮ್ ॥೭॥

ಪದಾರ್ಥ:- [ಓಮಾಸಃ] ತನ್ನ ಗುಣಗಳಿಂದ ಹಾಗೂ ಕ್ರಿಯೆಗಳಿಂದ ಪ್ರಪಂಚದ ಪ್ರಾಣಿಮಾತ್ರರ ರಕ್ಷಣೆ, ಜ್ಞಾನದಿಂದ ಪರಿಪೂರ್ಣರಾಗಿ ವಿದ್ಯೆ ಹಾಗೂ ಉಪದೇಶದಲ್ಲಿ ಅತ್ಯಂತ ಪ್ರೀತಿ, ವಿಜ್ಞಾನದಿಂದ ಹಾಗೂ ಅಪರಿಗ್ರಹದಲ್ಲಿ ತೃಪ್ತಿ, ಯಥಾರ್ಥ ಹಾಗೂ ನಿಶ್ಚಯಯುಕ್ತವಾದ ಶುಭಗುಣಗಳನ್ನುಂಟು ಮಾಡುವುದು, ಸಮಸ್ತ ವಿದ್ಯೆಗಳನ್ನು ಬೇರೆಯವರಿಗೆ ತಿಳಿಯಪಡಿಸುವುದು, ಪರಮೇಶ್ವರನ ಪ್ರಾಪ್ತಿಗೋಸ್ಕರ ಪುರುಷಾರ್ಥವನ್ನು ಮಾಡುವುದು. ಶ್ರೇಷ್ಠಜ್ಞಾನ ಮತ್ತು ಗುಣಗಳನ್ನೇ ಯಾಚಿಸುವುದು, ಅತ್ಯಂತ ಕ್ರಿಯಾಶೀಲತೆ, ಸಮಸ್ತ ಜನರ ಉಪಕಾರವನ್ನೇ ಇಚ್ಛಿಸುವುದು, ಸಮಸ್ತ ಜನರ ಶುಭೇಚ್ಛು, ದುಷ್ಟಗುಣಗಳ ಹಾಗೂ ಅಜ್ಞಾನದ ನಾಶ, ಸೇವೆಯಲ್ಲಿ ತತ್ಪರತೆ ಮೊದಲಾದ ಸಮಸ್ತ ಶ್ರೇಷ್ಠಗುಣಗಳುಳ್ಳ **[ಚರ್ಷಣೀಧೃತಃ]** ಸತ್ಯಜ್ಞಾನದ ಉಪದೇಶದ ಮೂಲಕ ಸಮಸ್ತ ಮನುಷ್ಯರಲ್ಲಿರುವ ಅಜ್ಞಾನವನ್ನು ನೀಗಿಸಿ ಎಲ್ಲರ ಸುಖಕ್ಕೆ ಕಾರಣೀಭೂತರಾಗುವ ಅಥವಾ ಎಲ್ಲರಲ್ಲಿ ಸುಖವನ್ನುಂಟು ಮಾಡುವ **[ದಾಶ್ವಾಂಸಃ]** ಎಲ್ಲರಲ್ಲಿರುವ ಭೀತಿ-ಭಯವನ್ನು ದೂರಮಾಡಿ ಎಲ್ಲರನ್ನು ನಿರ್ಭಯರನ್ನಾಗಿ ಮಾಡುವ **[ವಿಶ್ವೇದೇವಾಸಃ]** ಸ್ವಯಂ ಜ್ಞಾನ ಹಾಗೂ ಯೋಗದಿಂದ ದೇದೀಪ್ಯಮಾನರಾಗಿ ಎಲ್ಲರನ್ನೂ ಜ್ಞಾನದಿಂದ ಬೆಳಗಿಸುವ ಸಮಸ್ತ ವಿದ್ವಾಂಸರು, ಶ್ರೇಷ್ಠ ಪುರುಷರು, ಮಹಾತ್ಮರು **[ದಾಶುಷಃ ಸುತಂ]** ತಮ್ಮಲ್ಲಿರುವ ಶ್ರೇಷ್ಠ ಜ್ಞಾನವನ್ನು ದಾನಮಾಡುತ್ತಾ ಎಲ್ಲರನ್ನೂ ಸಜ್ಜನರನ್ನಾಗಿ ಮಾಡುತ್ತಾ ವಿಜ್ಞಾನದ ಪ್ರಚಾರವನ್ನು ಮಾಡುತ್ತಾ **[ಆಗತ]** ನಮಗೆಲ್ಲರಿಗೂ ಪ್ರಾಪ್ತವಾಗಲಿ, ತನ್ಮೂಲಕ ನಾವೆಲ್ಲರೂ ಸುಜ್ಞಾನಿಗಳಾಗುವಂತಾಗಲಿ.

ಭಾವಾರ್ಥ:- ಸಮಸ್ತ ಶ್ರೇಷ್ಠ ಗುಣಗಳುಳ್ಳ ವಿದ್ವಾಂಸರು, ಮಹಾತ್ಮರು, ವಿದುಷಿಯರು, ಸಾಧುಸಂತರು, ಸ್ವಯಂ ಜ್ಞಾನ ಯೋಗ ಹಾಗೂ ತಪೋಬಲದಿಂದ ದೇದೀಪ್ಯಮಾನರಾಗಿ, ತಮ್ಮ ಜ್ಞಾನ ಹಾಗೂ ತಪೋಬಲದಿಂದ ಎಲ್ಲರನ್ನೂ ಸುಜ್ಞಾನಿಗಳನ್ನಾಗಿ ಮಾಡುತ್ತಾ ಎಲ್ಲರನ್ನೂ ನಿರ್ಭಯರನ್ನಾಗಿ ಮಾಡುತ್ತಾ ತಮ್ಮ ಜ್ಞಾನ ಹಾಗೂ ಕ್ರಿಯೆಗಳ ಮೂಲಕ ನಮಗೆಲ್ಲರಿಗೂ ಪ್ರಾಪ್ತವಾಗಲಿ. ತನ್ಮೂಲಕ ನಾವೆಲ್ಲರೂ ಸುಜ್ಞಾನಿಗಳಾಗುವಂತಾಗಲಿ.

ಪುನಃ ಅದೇ ವಿಷಯವನ್ನು ತಿಳಿಸಲಾಗುತ್ತದೆ

ವಿಶ್ವೇ ದೇವಾಸೋ ಅಪ್ತುರಃ ಸುತಮಾ ಗಂತ ತೂರ್ಣಯಃ । ಉಸ್ರಾ ಇವ ಸ್ವಸರಾಣಿ ॥೮॥

ಪದಾರ್ಥ:- [ಅಪ್ತುರಃ] ಹೇ! ನಮ್ಮೆಲ್ಲರಲ್ಲಿ ಯೋಗಾಸನ ಪ್ರಾಣಾಯಾಮಾದಿಗಳ ಮೂಲಕ ಶಾರೀರಿಕ ಬಲವನ್ನೂ, ಜ್ಞಾನದ ಮೂಲಕ ಹಾಗೂ ಉಪಾಸನೆಯ ಮೂಲಕ ಮಾನಸಿಕ ಬಲವನ್ನೂ, ಆತ್ಮಿಕ ಬಲವನ್ನೂ ಉಂಟು ಮಾಡುವ [ತೂರ್ಣಯಃ] ಸರ್ವತ್ರ ವಿದ್ಯೆಯ ದಾನದ ಮೂಲಕ ಜ್ಞಾನ ಪ್ರಕಾಶವನ್ನು ಬೀರಲು ಶೀಘ್ರತೆಯನ್ನು ಮಾಡುವ [ವಿಶ್ವೇದೇವಾಸಃ] ಸಮಸ್ತ ಶ್ರೇಷ್ಠ ವಿದ್ವಾಂಸರೇ ! ಯಾವ ರೀತಿ [ಸ್ವಸರಾಣಿ] ರಾತ್ರಿಯ ಕತ್ತಲನ್ನು ದೂರ ಮಾಡಿ ಪ್ರಾತಃಕಾಲದಲ್ಲಿ ಎಲ್ಲವನ್ನೂ ಪ್ರಕಾಶಿತವನ್ನಾಗಿ ಮಾಡಲು [ಉಸ್ರಾಃ ಇವ] ಸೂರ್ಯನ

ಕಿರಣಗಳು ಧಾವಿಸಿ ಬರುತ್ತವೆಯೋ ಅದೇ ರೀತಿ **[ಸುತಂ ಆಗಂತ]** ಸಮಸ್ತ ಮಾನವರನ್ನು ಶ್ರೇಷ್ಠಕರ್ಮಗಳಲ್ಲಿ ಪ್ರವೃತ್ತರನ್ನಾಗಿ ಮಾಡಿ, ಸುಜ್ಞಾನಿಗಳನ್ನಾಗಿಯೂ, ಉಪಾಸಕರನ್ನಾಗಿಯೂ ಮಾಡಲು ಪ್ರತಿನಿತ್ಯ ಎಲ್ಲರಿಗೂ ಪ್ರಾಪ್ತವಾಗಿರಿ; ಎಲ್ಲರನ್ನೂ ಸಂಪರ್ಕಿಸಿರಿ.

ಭಾವಾರ್ಥ:- ಸಮಸ್ತ ಶ್ರೇಷ್ಠ ವಿದ್ವಾಂಸರು ಸಮಸ್ತ ಮಾನವರಲ್ಲಿ ಯೋಗಾಸನ ಪ್ರಾಣಾಯಾಮಾದಿಗಳ ಮೂಲಕ ಶಾರೀರಿಕ ಬಲವನ್ನೂ ಜ್ಞಾನ ಮತ್ತು ಉಪಾಸನೆಯ ಮೂಲಕ ಮಾನಸಿಕ ಹಾಗೂ ಆತ್ಮಿಕ ಬಲವನ್ನೂ ಉಂಟು ಮಾಡುತ್ತಾ ಎಲ್ಲರನ್ನೂ ಶ್ರೇಷ್ಠಕರ್ಮಗಳಲ್ಲಿ ಪ್ರವೃತ್ತರನ್ನಾಗಿಯೂ ಸುಜ್ಞಾನಿಗಳನ್ನಾಗಿಯೂ ಉಪಾಸಕರನ್ನಾಗಿಯೂ ಮಾಡುವುದರಲ್ಲಿ ಸದಾಕಾಲ ಕಾರ್ಯ ತತ್ಪರರಾಗಬೇಕು.

ಯಾವ ರೀತಿ ರಾತ್ರಿಯ ಅಂಧಕಾರವನ್ನು ದೂರ ಮಾಡಿ ಪ್ರಾತಃಕಾಲ ಎಲ್ಲವನ್ನೂ ಪ್ರಕಾಶಿಸಲು ಸೂರ್ಯನ ಕಿರಣಗಳು ಧಾವಿಸಿ ಬರುತ್ತವೆಯೋ ಅದೇ ರೀತಿ ವಿದ್ವಾಂಸರು ಯಾವುದೇ ರೀತಿಯ ಆಲಸ್ಯವನ್ನೂ, ಪ್ರಮಾದವನ್ನೂ ಮಾಡದೇ ಸಮಸ್ತ ಮಾನವರ ಕಲ್ಯಾಣಕ್ಕೋಸ್ಕರ ಎಲ್ಲರನ್ನೂ ಸಂಪರ್ಕಿಸಬೇಕು.

ವಿದ್ವಾಂಸರು ಎಂತಹ ಸ್ವಭಾವದವರಾಗಿ ಎಂತಹ ಕರ್ಮಗಳನ್ನು ಮಾಡಬೇಕು ಎಂಬುದರ ಬಗೆಗೆ ತಿಳಿಸಲಾಗಿದೆ.

ವಿಶ್ವೇ ದೇವಾಸೋ ಅಸ್ರಿಧ ಏಹಿಮಾಯಾಸೋ ಅದ್ರುಹಃ । ಮೇಧಂ ಜುಷಂತ ವಹ್ನಯಃ ॥೯॥

ಪದಾರ್ಥ:- ಹೇ [ಏಹಿಮಾಯಾಸಃ] ಸಮಸ್ತ ಶ್ರೇಷ್ಠಕರ್ಮಗಳಲ್ಲಿ ವಿಶೇಷವಾದ ಜ್ಞಾನ ಹಾಗೂ ಪ್ರಜ್ಞಾಬುದ್ಧಿಯುಳ್ಳ [ಅಸ್ರಿಧಃ] ಅಕ್ಷಯವಾದ ಹಾಗೂ ಸಂಪೂರ್ಣ ಜ್ಞಾನವುಳ್ಳ **[ಅದ್ರುಹಃ]** ದ್ರೋಹರಹಿತ ಹಾಗೂ ಯಾರಲ್ಲಿಯೂ ದ್ವೇಷರಹಿತರಾದ **[ವಹ್ನಯಃ]** ಸರ್ವರಿಗೂ ಸುಖವನ್ನೇ ಉಂಟು ಮಾಡುವ, ಸರ್ವರ ಕಲ್ಯಾಣವನ್ನೇ ಮಾಡುವ [ವಿಶ್ವೇದೇವಾಸಃ] ಸಮಸ್ತ ಶ್ರೇಷ್ಠ ವಿದ್ವಾಂಸರೇ ! ನೀವು **[ಮೇಧಂ ಜುಷಂತ]** ಜ್ಞಾನಯಜ್ಞ ಹಾಗೂ ಕರ್ಮ ಯಜ್ಞದ ಮೂಲಕ ಸಮಸ್ತ ಮಾನವರನ್ನು ಸುಖಿಗಳನ್ನಾಗಿ ಮಾಡಿರಿ. ಸರ್ವರಕಲ್ಯಾಣವನ್ನು ಮಾಡಿರಿ.

ಭಾವಾರ್ಥ:- ಪರಮಾತ್ಮನು ವೇದಗಳ ಮೂಲಕ ಸಮಸ್ತ ವಿದ್ವಾಂಸರಿಗೆ ಈ ರೀತಿ ಆದೇಶವನ್ನಿತ್ತಿದ್ದಾನೆ. ಸಮಸ್ತ ವಿದ್ವಾಂಸರೇ ! ನೀವೆಲ್ಲರೂ ಸಮಸ್ತ ಶ್ರೇಷ್ಠಕರ್ಮಗಳಲ್ಲಿ ಪರಿಪೂರ್ಣ ಜ್ಞಾನವುಳ್ಳವರಾಗಿ ಪ್ರಜ್ಞಾಬುದ್ಧಿಯುಳ್ಳವರಾಗಿ, ಪಕ್ಷಪಾತರಹಿತರಾಗಿ ಯಾರನ್ನೂ ದ್ವೇಷಿಸದೇ, ಯಾರಿಗೂ ದ್ರೋಹವನ್ನು ಮಾಡದೇ, ಜ್ಞಾನಯಜ್ಞ ಹಾಗೂ ಕರ್ಮಯಜ್ಞದ ಮೂಲಕ ಸಮಸ್ತ ಮಾನವರನ್ನು ಸುಖಿಗಳನ್ನಾಗಿ ಮಾಡಿರಿ. ಸದಾ ಸರ್ವರ ಕಲ್ಯಾಣವನ್ನೇ ಮಾಡಿರಿ.

ವಿದ್ವಾಂಸರು ಯಾವ ಪ್ರಕಾರವಾದ ವಾಣಿಯನ್ನು ಇಚ್ಛಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಪಾವಕಾ ನಃ ಸರಸ್ವತೀ ವಾಜೇಭಿರ್ವಾಜಿನೀವತೀ । ಯಜ್ಞಂ ವಷ್ಟು ಧಿಯಾವಸುಃ ॥೧೦॥

ಪದಾರ್ಥ:- [ವಾಜೇಭಿಃ] ಸಮಸ್ತ ವಿದ್ಯೆಗಳ ಪ್ರಾಪ್ತಿಗೆ ನಿಮಿತ್ತವಾದ ಆತ್ಮೋನ್ನತಿಗೆ ಸಾಧಕವಾದ, ಸಾತ್ವಿಕವಾದ ಅನ್ನ ಜಲಗಳಿಂದಲೂ ಪ್ರೇರಣಾದಾಯಕ ಮಂತ್ರಗಳಿಂದಲೂ ಯುಕ್ತವಾದ **[ವಾಜಿನೀವತೀ]** ಸಮಸ್ತ ವಿದ್ಯೆಗಳಿಂದಲೂ ಪ್ರಾಪ್ತವಾದ ಜ್ಞಾನವನ್ನು ಪಡೆದು, ಜ್ಞಾನಪೂರ್ವಕ ಮಾಡಿದ ಕ್ರಿಯೆಯಿಂದ ಕೂಡಿದ **[ಧಿಯಾವಸುಃ]** ನಿರ್ಮಲವಾದ ಜ್ಞಾನ ಮತ್ತು ಕರ್ಮಗಳ ಮೂಲಕ ಸರ್ವರನ್ನು ನೆಲೆಗೊಳಿಸುವ **[ನಃ ಪಾವಕಾ]** ನಮ್ಮೆಲ್ಲರನ್ನು ಪವಿತ್ರರನ್ನಾಗಿ ಮಾಡುವ ಹಾಗೂ ಶ್ರೇಷ್ಠ ಕರ್ಮ ಮತ್ತು ವ್ಯವಹಾರಗಳಿಗೆ ಪ್ರೇರಣೆಯನ್ನು ನೀಡುವ **[ಸರಸ್ವತೀ]** ಅತ್ಯಂತ ಪ್ರಶಂಸನೀಯ ಗುಣಗಳುಳ್ಳ ಹಾಗೂ ಸಕಲ ವಿದ್ಯೆ ಮತ್ತು ಸಮಸ್ತ ಜ್ಞಾನವನ್ನು ಪ್ರಾಪ್ತಿಗೊಳಿಸುವ ಪವಿತ್ರವಾದ

ವೇದವಾಣಿಯು [ಯಜ್ಞಂ ವಷ್ಟು] ಸಕಲ ಶಿಲ್ಪ ವಿದ್ಯಾ ಮಹಿಮೆಯನ್ನು ಸಮಸ್ತ ಶ್ರೇಷ್ಠಕರ್ಮಗಳನ್ನು ಪ್ರಕಾಶವನ್ನಾಗಿ ಮಾಡಲಿ. ಸಂಪೂರ್ಣ ಸಫಲತೆ ಹಾಗೂ ಕಾರ್ಯಸಿದ್ಧಿಯಾಗುವಂತೆ ಮಾಡಲಿ.

ಭಾವಾರ್ಥ:- ವಾಣಿಯಲ್ಲಿ ಪಾವಿತ್ರ್ಯತೆ ಮತ್ತು ಮನಸ್ಸಿನಲ್ಲಿ ಪರಿಶುದ್ಧತೆ ಹಾಗೂ ಆತ್ಮಿಕ ಉನ್ನತಿಯುಂಟಾಗಬೇಕಾದರೆ ಸಾತ್ವಿಕವಾದ ಅನ್ನ, ಸತ್ಯಾಚರಣೆ ಹಾಗೂ ಉದ್ಬೋದಕವಾದ ಪ್ರೇರಣಾದಾಯಕವಾದ, ಸಕಲ ಜ್ಞಾನದಿಂದ ಕೂಡಿದ ಅತ್ಯಂತ ಪ್ರಶಂಸನೀಯ ಗುಣಗಳುಳ್ಳ ಸಕಲ ಶಿಲ್ಪ ವಿದ್ಯಾಮಹಿಮೆಯನ್ನು ಸಂಪೂರ್ಣ ಶ್ರೇಷ್ಠಕರ್ಮಗಳನ್ನು ಪ್ರಕಾಶಿತವನ್ನಾಗಿ ಮಾಡಿ ನಮ್ಮೆಲ್ಲರನ್ನೂ ಪಾವನಗೊಳಿಸುವ ವೇದವಾಣಿಯನ್ನು ನಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಬೇಕು. ಇದರಿಂದ ನಮ್ಮೆಲ್ಲರ ಜೀವನವು ಸಫಲವೂ, ಸಾರ್ಥಕವೂ ಆಗುತ್ತದೆ. ಆದುದರಿಂದ ಮಾನವ ಮಾತ್ರರ ಕಲ್ಯಾಣಕ್ಕೋಸ್ಕರ ಪರಮಾತ್ಮನು ಸೃಷ್ಟಿಯ ಆದಿಯಲ್ಲಿಯೇ ಕೊಟ್ಟಂತಹ ದಿವ್ಯವಾದ ವೇದವಾಣಿಯನ್ನು ನಾವೆಲ್ಲರೂ ಪ್ರಾಪ್ತ ಮಾಡಿಕೊಳ್ಳೋಣ.

ಆ ವಾಣಿಯು ಹೇಗಿರಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಚೋದಯಿತ್ರೀ ಸೂನೃತಾನಾಂ ಚೇತಂತೀ ಸುಮತೀನಾಮ್ । ಯಜ್ಞಂ ದಧೇ ಸರಸ್ವತೀ ॥೧೧॥

ಪದಾರ್ಥ:- **[ಸೂನೃತಾನಾಂ]** ಅಸತ್ಯವನ್ನು ಸಂಪೂರ್ಣ ನಾಶಮಾಡಿ ಅರ್ಥಾತ್ ಅಸತ್ಯವನ್ನು ಸಂಪೂರ್ಣ ತೊರೆದು ಸತ್ಯವಚನ ಹಾಗೂ ಸತ್ಯಾಚರಣೆಯನ್ನೇ ಮಾಡುವ **[ಸುಮತೀನಾಮ್]** ಸುಂದರಮತಿ ಅರ್ಥಾತ್ ಸದ್ಬುದ್ಧಿಯುಳ್ಳ ಹಾಗೂ ಸತ್ಯಜ್ಞಾನ ಇರುವಂತಹ ವಿದ್ವಾಂಸರನ್ನು **[ಚೇತಂತೀ]** ಜಾಗ್ರತರನ್ನಾಗಿ ಮಾಡುವ, ಎಚ್ಚರಿಸುವಂತಹುದೂ ಆದ **[ಚೋದಯಿತ್ರೀ]** ಶುಭಗುಣಗಳನ್ನು ಗ್ರಹಣ ಮಾಡಲು ಹಾಗೂ ಸದಾ ಸತ್ಕರ್ಮಗಳಲ್ಲಿ ನಿರತರಾಗಲು ಪ್ರೇರೇಪಿಸುವಂತಹ **[ಸರಸ್ವತೀ]** ವೇದವಾಣಿ-ವೇದಜ್ಞಾನವು **[ಯಜ್ಞಂ ದಧೇ]** ಶ್ರೇಷ್ಠತಮ ಕರ್ಮವನ್ನು ಸಂಗತಿಕರಣವನ್ನು, ಭಗವಂತನ ಉಪಾಸನೆಯನ್ನು ಹಾಗೂ ದಾನಮಾಡುವ ಪ್ರವೃತ್ತಿಯನ್ನು ನಮ್ಮೆಲ್ಲರಲ್ಲಿ ಧರಿಸುತ್ತದೆ. ನಮ್ಮೆಲ್ಲರಲ್ಲಿ ಇವೆಲ್ಲಾ ಶ್ರೇಷ್ಠಗುಣಗಳು ಆವಿರ್ಭಾವವಾಗುವಂತೆ, ಮೂಡಿಬರುವಂತೆ ಮಾಡುತ್ತದೆ.

ಭಾವಾರ್ಥ:- ಪರಮ ಪಾವನವಾದ ವೇದವಾಣಿ ವೇದಜ್ಞಾನವು ನಮ್ಮೆಲ್ಲರಿಗೆ ಅಸತ್ಯವನ್ನು ತೊರೆದು ಸದಾ ಸತ್ಯವಚನ ಹಾಗೂ ಸತ್ಯಾಚರಣೆಯನ್ನೇ ಮಾಡಲು ಪ್ರೇರೇಪಿಸುತ್ತದೆ. ನಾವೆಲ್ಲರೂ ಸದ್ಬುದ್ಧಿಯುಳ್ಳವರಾಗಿ, ಸತ್ಯಜ್ಞಾನವುಳ್ಳವರೂ, ಸದ್ಬುದ್ಧಿಯುಳ್ಳವರೂ, ಶುಭಗುಣಗ್ರಾಹಿಗಳೂ, ಸತ್ಕರ್ಮಗಳಲ್ಲಿ ಸದಾ ನಿರತರಾಗಿರುವವರೂ ಆಗುವಂತೆ ಪ್ರೇರೇಪಿಸುತ್ತದೆ. ಅದೇ ರೀತಿ ನಮ್ಮೆಲ್ಲರ ಯಜ್ಞವನ್ನು ಅರ್ಥಾತ್ ಶ್ರೇಷ್ಠತಮಕರ್ಮ, ಭಗವಂತನ ಉಪಾಸನೆ, ಸತ್ಪಾತ್ರರಿಗೆ ದಾನ ಹಾಗೂ ಸಂಘಟನೆ ಇವೆಲ್ಲಾ ಶ್ರೇಷ್ಠ ಗುಣಗಳನ್ನು ನಮ್ಮೆಲ್ಲರಲ್ಲಿ ಮೂಡಿ ಬರುವಂತೆ ಮಾಡುತ್ತದೆ. ಆದುದರಿಂದ ನಾವೆಲ್ಲರೂ ಭಗವಂತನು ನಮಗೆಲ್ಲರಿಗೂ ಪ್ರದಾನ ಮಾಡಿದಂತಹ ಶ್ರೇಷ್ಠ ವೇದಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳಲು ಸದಾ ತತ್ಪರರಾಗೋಣ.

ಮತ್ತೆ ಅದೇ ವಿಷಯವನ್ನು ವಿವರಿಸಲಾಗುತ್ತದೆ

ಮಹೋ ಅರ್ಣಃ ಸರಸ್ವತೀ ಪ್ರ ಚೇತಯತಿ ಕೇತುನಾ । ಧಿಯೋ ವಿಶ್ವಾ ವಿ ರಾಜತಿ ॥೧೨॥

ಪದಾರ್ಥ:- [ಸರಸ್ವತೀ] ಸರ್ವಜ್ಞಾನಯುಕ್ತವಾದ ವೇದವಾಣಿಯು **[ಕೇತುನಾ]** ಕಲ್ಯಾಣಕರವಾದ ಸತ್ಕರ್ಮಗಳಿಂದ ಹಾಗೂ ಪ್ರಕೃಷ್ಟವಾದ ಜ್ಞಾನದಿಂದ **[ಮಹಃಅರ್ಣಃ]** ಅಪಾರವಾದ ಜಲರಾಶಿಯುಳ್ಳ ಸಾಗರದಂತೆಯೇ ಇರುವ ಮಹಾನ್ ವಿದ್ಯಾಸಮುದ್ರವನ್ನು **[ಪ್ರಚೇತಯತಿ]** ಉತ್ಕೃಷ್ಟವಾದ ರೀತಿಯಲ್ಲಿ ಜ್ಞಾಪಿಸುತ್ತದೆ. ಹಾಗೂ **[ವಿಶ್ವಾಃ ಧಿಯಃ]**

ಸಮಸ್ತ ಮಾನವ ಮಾತ್ರರ ಧಾರಣಾವತಿ ಬುದ್ಧಿಯನ್ನು [ವಿರಾಜತಿ] ವಿಶೇಷವಾಗಿ ಪ್ರಕಾಶಪಡಿಸುತ್ತದೆ. ಶ್ರೇಷ್ಠಕರ್ಮದ ಕಡೆಗೆ ಪ್ರೇರೇಪಿಸುತ್ತದೆ.

ಭಾವಾರ್ಥ:- ಸಮಸ್ತ ವಿದ್ಯೆಗಳ ಆಕರವಾದ ವೇದಗಳು ರತ್ನಾಕರವೆನಿಸಿಕೊಳ್ಳುವ ಜಲಾರ್ಣವದಂತೆಯೇ ಅನಂತಜ್ಞಾನದ ಸಾಗರವಾಗಿದೆ. ಮಹರ್ಷಿ ಮಹೀದಾಸ ಐತರೇಯರು ಐತರೇಯ ಬ್ರಾಹ್ಮಣದಲ್ಲಿ **"ಅನಂತಾ ವೈ ವೇದಾಃ"** ಎಂದು ಹೇಳಿದ್ದಾರೆ. ಯಾವ ರೀತಿ ಸಮುದ್ರದಲ್ಲಿರುವ ಸಂಪತ್ತನ್ನು ಪಡೆಯಬೇಕಾದರೆ ಅತ್ಯಂತ ಆಳಕ್ಕೆ ಇಳಿಯಬೇಕಾಗುತ್ತದೆಯೋ ಅದೇ ರೀತಿ ಜ್ಞಾನ ಸಾಗರವಾದ ವೇದಗಳನ್ನು ಅತ್ಯಂತ ನಿಷ್ಠೆಯಿಂದ ಗಹನವಾದ ಅಧ್ಯಯನ ಮಾಡಿದಾಗ ನಮ್ಮ ಧಾರಣಾವತಿ ಬುದ್ಧಿಯನ್ನು ಮೇಧಾಬುದ್ಧಿಯನ್ನಾಗಿ ಮಾಡಿ ಸಮಸ್ತ ಜ್ಞಾನದ ಪ್ರಕಾಶವನ್ನು ಮಾಡುತ್ತಾ ಶ್ರೇಷ್ಠ ಕರ್ಮದ ಕಡೆಗೆ ಪ್ರೇರೇಪಿಸುತ್ತದೆ.

ಅತ್ರ ವಾಚಕೋಪಮೇಯ ಲುಪ್ತೋಪಮಾಲಂಕಾರಃ । ಯಥಾ ವಾಯುನಾ ಚಾಲಿತಃ ಸೂರ್ಯೇಣ ಪ್ರಕಾಶಿತೋ ಜಲರತ್ನೋರ್ಮಿ ಸಹಿತೋ ಮಹಾನ್ ಸಮುದ್ರೋನೇಕ ವ್ಯವಹಾರ ರತ್ನಪ್ರದೋ ವರ್ತ್ತತೇ । ತಥೈವಾಸ್ಯಾಕಾಶಸ್ಥಸ್ಯ ವೇದಸ್ಥಸ್ಯಚ ಮಹತಃ ಶಬ್ದ ಸಮುದ್ರಸ್ಯ ಪ್ರಕಾಶ ಹೇತುರ್ವೇದವಾಣೀ ವಿದುಷಾಮುಪದೇಶಶ್ಚೇತರೇಷಾಂ ಮನುಷ್ಯಾಣಾಂ ಯತಾರ್ಥತಯಾ ಮೇಧಾವಿಜ್ಞಾನಪ್ರದೋ ಭವತೀತಿ ॥

ಸೂಕ್ತದ್ವಯ ಸಂಬಂಧಿ ಅರ್ಥದ ಉಪದೇಶಾನಂತರ ತೃತೀಯ ಸೂಕ್ತದ ಮೂಲಕ ಕ್ರಿಯಾ ಹೇತು ವಿಷಯವಾದ ಅಕ್ವಿ ಶಬ್ದದ ಅರ್ಥವನ್ನು ವಿವರಿಸಿ ಅದರ ಸಿದ್ಧಿಯನ್ನು ಸಾಧಿಸುವ ವಿದ್ವಾಂಸರ ಲಕ್ಷಣದ ವಿವರಣಾನಂತರ ವಿದ್ವಾಂಸರಾಗಲು ಹಾಗೂ ಸಮಸ್ತ ಜ್ಞಾನವನ್ನು ಪ್ರಾಪ್ತಿಮಾಡಿಕೊಳ್ಳಲು ಕಾರಣೀಭೂತವಾದ ಸರಸ್ವತೀ ಅರ್ಥಾತ್ ವೇದಜ್ಞಾನವನ್ನು ಮಾನವ ಮಾತ್ರರು ಪಡೆದುಕೊಂಡು ಅಭ್ಯುದಯವನ್ನು, ನಿಶ್ರೇಯಸ್ಸನ್ನು ಹೊಂದಬೇಕು ಎಂದು ಬೋಧಿಸಲಾಗಿದೆ. ಈ ರೀತಿ ಪೂರ್ವಸೂಕ್ತದೊಂದಿಗೆ ಈ ಸೂಕ್ತದ ಸಂಗತಿಯಾಗುತ್ತದೆ.

ಮೂರನೆಯ ಸೂಕ್ತ ಸಮಾಪ್ತ

ಸೂಕ್ತ ೪

ಮಂತ್ರಸಂಖ್ಯೆ ೧೦ । ಋಷಿಃ - ಮಧುಚ್ಛಂದಾ ವೈಶ್ವಾಮಿತ್ರಃ । ದೇವತಾ - ಇಂದ್ರಃ । ಛಂದಃ - ಗಾಯತ್ರೀ । ಸ್ವರ - ಷಡ್ಜಃ

ಚತುರ್ಥ ಸೂಕ್ತದ ಮೊದಲ ಮಂತ್ರದಲ್ಲಿ ಉಕ್ತ ವಿದ್ಯೆಯನ್ನು ಪೂರ್ಣಗೊಳಿಸುವ ಸಾಧನದ ಮೇಲೆ ಪ್ರಕಾಶವನ್ನು ಬೀರಲಾಗಿದೆ.

ಸುರೂಪಕೃತ್ನುಮೂತಯೇ ಸುದುಘಾಮಿವ ಗೋದುಹೇ । ಜುಹೂಮಸಿ ದ್ಯವಿದ್ಯವಿ ॥೧॥

ಪದಾರ್ಥ:- [ಗೋದುಹೇ ಸುದುಘಾಮಿವ] ಪರಿಶುದ್ಧವಾದ ಹಾಲನ್ನು ಅಪೇಕ್ಷಿಸುವ ಮಾನವನು ಯಾವ ರೀತಿ ಉತ್ತಮವಾದ ದೋಷರಹಿತವಾದ, ಆರೋಗ್ಯವಂತ ಗೋವನ್ನೇ ದೋಹನ ಮಾಡುತ್ತಾನೋ ಅದೇ ರೀತಿ ನಾವೆಲ್ಲರೂ [ದ್ಯವಿದ್ಯವಿ] ಪ್ರತಿದಿನವೂ [ಊತಯೇ] ಜ್ಞಾನಪ್ರಾಪ್ತಿಗಾಗಿ, ಆತ್ಮರಕ್ಷಣೆಗಾಗಿ, ಅಭೀಷ್ಟ ಸಿದ್ಧಿಗಾಗಿ [ಸುರೂಪಕೃತ್ನುಂ] ತನ್ನ ಪ್ರಕಾಶದಿಂದ ಸೂರ್ಯ ಚಂದ್ರ ನಕ್ಷತ್ರಾದಿಗಳನ್ನು ಪ್ರಕಾಶಿಸಿ ಜೀವಮಾತ್ರರ ಹಿತ-ರಕ್ಷಣೆ ಮತ್ತು ಕಲ್ಯಾಣಕ್ಕೋಸ್ಕರ ಸುಂದರವಾದ ಸೃಷ್ಟಿಯನ್ನು ಸೃಷ್ಟಿಸಿದ ಪರಮಾತ್ಮನನ್ನು [ಜುಹೂಮಸಿ] ನಾವೆಲ್ಲರೂ ಸ್ತುತಿಸುತ್ತೇವೆ, ಉಪಾಸಿಸುತ್ತೇವೆ.

ಭಾವಾರ್ಥ:- ಪರಿಶುದ್ಧವಾದ ಆರೋಗ್ಯವರ್ಧಕವಾದ ಉತ್ಕೃಷ್ಟವಾದ ಹಾಲನ್ನು ಅಪೇಕ್ಷಿಸುವ ಮಾನವನು ಯಾವ ರೀತಿ ಶ್ರೇಷ್ಠವಾದ ದೋಷರಹಿತವಾದ ಗೋವನ್ನೇ ಕರೆಯುತ್ತಾನೋ, ದೋಹನ ಮಾಡುತ್ತಾನೋ ಅದೇ

ರೀತಿ ಜೀವಮಾತ್ರರ ಕಲ್ಯಾಣಕ್ಕೋಸ್ಕರ ಹಿತ ಹಾಗೂ ರಕ್ಷಣೆಗೋಸ್ಕರ, ಸೂರ್ಯ ಚಂದ್ರ ನಕ್ಷತ್ರಾದಿಗಳನ್ನು ಸ್ವಪ್ರಕಾಶದಿಂದ ಪ್ರಕಾಶಿತವನ್ನಾಗಿ ಮಾಡಿ ಸುಂದರವಾದ ಸೃಷ್ಟಿಯನ್ನು ಸೃಷ್ಟಿಸಿದ ಪರಮೇಶ್ವರನನ್ನು ನಾವೆಲ್ಲರೂ ಸಂಪೂರ್ಣ ಜ್ಞಾನಪ್ರಾಪ್ತಿಗಾಗಿ, ನಮ್ಮೆಲ್ಲರ ರಕ್ಷಣೆಗಾಗಿ ಹಾಗೂ ಅಭೀಷ್ಟ ಸಿದ್ಧಿಗಾಗಿ ಉಪಾಸಿಸುತ್ತೇವೆ, ಸ್ತುತಿಸುತ್ತೇವೆ, ಪ್ರಾರ್ಥಿಸುತ್ತೇವೆ. ಸರ್ವಜ್ಞನಾದ ಪರಮಾತ್ಮನು ನಮ್ಮೆಲ್ಲರ ಕಲ್ಯಾಣಕ್ಕೋಸ್ಕರ ಸೃಷ್ಟಿಯ ಆದಿಯಲ್ಲಿಯೇ ಅನಂತವಾದ ವೇದಜ್ಞಾನವನ್ನು ಕೊಟ್ಟಿದ್ದಾನೆ. ಅವನ ಕೃಪೆ ಇಲ್ಲದೇ ನಮಗೆ ಯಾವ ಜ್ಞಾನವೂ ಪ್ರಾಪ್ತಿಯಾಗಲಾರದು. ಆದುದರಿಂದ ಸಂಪೂರ್ಣ ಜ್ಞಾನಪ್ರಾಪ್ತಿಗಾಗಿ ನಾವೆಲ್ಲರೂ ಅನನ್ಯ ಶ್ರದ್ಧೆಯಿಂದ ಪ್ರತಿದಿನವೂ ಪರಮಾತ್ಮನನ್ನು ಉಪಾಸಿಸೋಣ.

ಈಗ ಇಂದ್ರ ಶಬ್ದದಿಂದ ಸೂರ್ಯನ ಗುಣವರ್ಣನೆ ಮಾಡಲಾಗುತ್ತದೆ

ಉಪ ನಃ ಸವನಾ ಗಹಿ ಸೋಮಸ್ಯ ಸೋಮಪಾಃ ಪಿಬ । ಗೋದಾ ಇದ್ರೇವತೋ ಮದಃ ॥೨॥

ಪದಾರ್ಥ:- [**ಸೋಮಪಾಃ**] ಸಂಪೂರ್ಣ ಜಗತ್ತಿನ ಹಾಗೂ ಸಮಸ್ತ ಪದಾರ್ಥಗಳ ರಕ್ಷಕ [**ಗೋದಾ**] ನಮ್ಮೆಲ್ಲರ ಚಕ್ಷುರಿಂದ್ರಿಯಗಳಿಗೆ ಅರ್ಥಾತ್ ಕಣ್ಣುಗಳಿಗೆ ಎಲ್ಲವೂ ದೃಷ್ಟಿ ಗೋಚರವಾಗುವಂತೆ ಮಾಡುವ ಸೂರ್ಯನು [**ಸೋಮಸ್ಯಪಿಬ**] ಉತ್ಪನ್ನವಾದ ಈ ಜಗತ್ತಿನ ಮಧ್ಯದಲ್ಲಿ ತನ್ನ ಕಿರಣಗಳ ಮೂಲಕ ರಾತ್ರಿಯ ಅಂಧಕಾರವನ್ನು ಪಾನ ಮಾಡುತ್ತಾ ಅರ್ಥಾತ್ ನಾಶ ಮಾಡುತ್ತಾ [**ಸವನಾ ಉಪ ಆಗಹಿ**] ಸಕಲ ಐಶ್ವರ್ಯದಿಂದ ಕೂಡಿದ ಈ ಜಗತ್ತನ್ನು ಬೆಳಗಿಸಲು ಪ್ರಾತಃಕಾಲ ಬರುತ್ತಾನೆ, ನಮ್ಮೆಲ್ಲರಿಗೂ ಪ್ರಾಪ್ತನಾಗುತ್ತಾನೆ. ಇದರಿಂದ [**ರೇವತಃ ಮದಃ ಇತ್**] ಪುರಾಷಾರ್ಥಿಗಳಾದ ಮಾನವರಿಗೆ ಅತ್ಯಂತ ಹರ್ಷವಾಗುತ್ತದೆ.

ಪರಮೇಶ್ವರ ಹಾಗೂ ವಿದ್ವಾಂಸರ ಪಕ್ಷದಲ್ಲಿ ಮಂತ್ರಾರ್ಥ-

[**ಸೋಮಪಾಃ**] ಸಕಲ ಚರಾಚರ ಜಗತ್ತಿನ ರಕ್ಷಕನಾದ ಪರಮಾತ್ಮನು, ಪರಮಾತ್ಮನಿಂದ ಪ್ರಾಪ್ತವಾದ ಜ್ಞಾನವನ್ನು ರಕ್ಷಿಸುವ ವಿದ್ವಾಂಸರು [**ಗೋದಾ**] ಮಾನವ ಮಾತ್ರರಿಗೋಸ್ಕರ ಸೂರ್ಯ, ಚಂದ್ರ, ನಕ್ಷತ್ರಾದಿಗಳನ್ನೂ ವೇದಜ್ಞಾನವನ್ನೂ, ಪೃಥ್ವಿಯನ್ನೂ, ವಾಣಿಯನ್ನೂ, ಸಕಲೇಂದ್ರಿಯಗಳನ್ನೂ, ಗೋವು ಇತ್ಯಾದಿ ಪಶುಗಳನ್ನು ದಯಪಾಲಿಸುವ ಪರಮಾತ್ಮನು, ಜ್ಞಾನದ ಮೂಲಕ ಎಲ್ಲರ ಕಣ್ಣನ್ನು ತೆರೆಯುವ ವಿದ್ವಾಂಸರು [**ಸೋಮಸ್ಯಪಿಬ**] ನಮ್ಮೆಲ್ಲರ ಭಕ್ತಿರಸದ ಪಾನವನ್ನು ಮಾಡುತ್ತಾ, ವಿದ್ವಾಂಸರು ತಮ್ಮ ಜ್ಞಾನದ ಮೂಲಕ ನಮ್ಮೆಲ್ಲರ ಅಜ್ಞಾನದ ಪಾನವನ್ನು ಮಾಡುತ್ತಾ, ಅರ್ಥಾತ್ ನಮ್ಮೆಲ್ಲರ ಅಜ್ಞಾನವನ್ನು ದೂರ ಮಾಡುತ್ತಾ [**ಸವನಾ ಉಪಆಗಹಿ**] ಸಕಲೈಶ್ವರ್ಯಯುಕ್ತವಾದ ಪದಾರ್ಥಗಳನ್ನು ಕೊಡಲು ಪ್ರಾಪ್ತನಾಗುತ್ತಾನೆ. ವಿದ್ವಾಂಸರು ಸಮಸ್ತ ಪದಾರ್ಥ ಜ್ಞಾನದ ಮೂಲಕ, ಸಕಲ ಶಿಲ್ಪ ಕಲಾವಿದ್ಯೆಯ ಮೂಲಕ ನಮ್ಮೆಲ್ಲರಿಗೆ ಸುಖ ಸಂಪತ್ತು ಲಭಿಸುವಂತೆ ಮಾಡಲು ಅತ್ಯಂತ ನಿಕಟದಿಂದ ಪ್ರಾಪ್ತವಾಗುತ್ತಾರೆ. ಇದರಿಂದ [**ರೇವತಃ ಮದಃ ಇತ್**] ಸಕಲ ಅಭೀಷ್ಟ ಪದಾರ್ಥ ಪ್ರಾಪ್ತಿಗೋಸ್ಕರ ಸಕಲ ಇಷ್ಟಾರ್ಥ ಸಿದ್ಧಿಗೋಸ್ಕರ ಪುರುಷಾರ್ಥಿಯಾದ ಹಾಗೂ ಪರಿಶ್ರಮಿಯಾದ ಮಾನವರಿಗೆ ಅತ್ಯಂತ ಆನಂದವಾಗುತ್ತದೆ.

ಭಾವಾರ್ಥ:- ಈ ಮಂತ್ರದಲ್ಲಿ ಇಂದ್ರ ಶಬ್ದದ ಪರಮೇಶ್ವರ, ಸೂರ್ಯ ಮತ್ತು ವಿದ್ವಾಂಸ ಈ ಮೂರು ಅರ್ಥಗಳೂ ಗ್ರಾಹ್ಯವಾಗುತ್ತದೆ. ಪರಮಾತ್ಮನು ಸಂಪೂರ್ಣ ಚರಾಚರ ಜಗತ್ತನ್ನು ಸೃಷ್ಟಿಸಿ ಅದರ ರಕ್ಷಣೆಯನ್ನು ಮಾಡುತ್ತಾನೆ. ನಮ್ಮೆಲ್ಲರಿಗೆ ಸೂರ್ಯ, ಚಂದ್ರ, ನಕ್ಷತ್ರಾದಿ ಪ್ರಕಾಶಪುಂಜಗಳನ್ನು, ವಿಶಾಲವಾದ ಭೂಮಿಯನ್ನೂ, ವಾಣಿಯನ್ನೂ, ಸಕಲ ಇಂದ್ರಿಯಗಳನ್ನೂ, ಗೋ ಸಂಪತ್ತನ್ನೂ ಪ್ರದಾನ ಮಾಡುತ್ತಾನೆ. ನಾವೆಲ್ಲರೂ ಶ್ರದ್ಧೆಯಿಂದ ಮಾಡಿದ ಅನನ್ಯ ಭಕ್ತಿಯ ರಸವನ್ನು ಪಾನ ಮಾಡುತ್ತಾ ತನ್ನ ಉಪಾಸಕರ ಭಕ್ತರ ದುಃಖ ದಾರಿದ್ರ್ಯವನ್ನೂ ಕಷ್ಟಕ್ಲೇಶವನ್ನೂ ಅಜ್ಞಾನ ತಿಮಿರವನ್ನೂ ನಾಶ ಮಾಡಿ ಸಕಲೈಶ್ವರ್ಯವನ್ನೂ ಕೊಡಲು ಪ್ರಾಪ್ತನಾಗುತ್ತಾನೆ. ಇದರಿಂದ ಉಪಾಸಕರಿಗೆ, ಭಕ್ತರಿಗೆ ಧರ್ಮ, ಅರ್ಥ, ಕಾಮ, ಮೋಕ್ಷ ಈ ಪುರುಷಾರ್ಥ ಚತುಷ್ಟಯದ ಸಿದ್ಧಿಗಾಗಿ ಪರಿಶ್ರಮವನ್ನು ಮಾಡುವ ಪ್ರಯತ್ನಶೀಲ ಎಲ್ಲಾ ಮಾನವರಿಗೆ ಅತ್ಯಂತ ಆನಂದದ ಪ್ರಾಪ್ತಿಯಾಗುತ್ತದೆ.

ಅದೇ ರೀತಿ ವಿದ್ವಾಂಸರು ಪರಮಾತ್ಮನಿಂದ ಪ್ರಾಪ್ತವಾದ ಜ್ಞಾನದ ರಕ್ಷಣೆಯನ್ನು ಮಾಡುತ್ತಾ, ತಮ್ಮ ಜ್ಞಾನದ ಮೂಲಕ ಎಲ್ಲರ ಕಣ್ಣನ್ನು ತೆರೆದು ತಮ್ಮ ಶಿಷ್ಯರ ಹಾಗೂ ಸಮಸ್ತ ಮಾನವರ ಅಜ್ಞಾನವನ್ನು ದೂರ ಮಾಡುತ್ತಾ ಸಕಲ ಪದಾರ್ಥ ಜ್ಞಾನ ಹಾಗೂ ಶಿಲ್ಪಕಲಾವಿದ್ಯೆಯ ಮೂಲಕ ಎಲ್ಲರಿಗೂ ಸದಾ ಸುಖವೇ ಪ್ರಾಪ್ತಿಯಾಗುವಂತೆ ಮಾಡಿ ಅತ್ಯಂತ ಸನಿಹದಿಂದ ಪ್ರಾಪ್ತರಾಗುತ್ತಾರೆ. ಅದಕ್ಕೋಸ್ಕರ ಸಕಲ ದುಃಖಕಷ್ಟಗಳನ್ನು ಸ್ವತಃ ಅನುಭವಿಸಿ ಎಲ್ಲಾ ಎಡರು ತೊಡರುಗಳನ್ನು ಎದುರಿಸಿ, ಹಾಗೂ ಹಲವನ್ನು ಕೂಡಾ ಪಾನ ಮಾಡಿ ಇತರರಿಗೆ ಅಮೃತವನ್ನೇ ಧಾರೆಯೆರೆಯುತ್ತಾರೆ. ಇದರಿಂದ ಎಲ್ಲಾ ಆಲಸ್ಯರಹಿತರಾದ, ಅಪ್ರಮಾದಿ ಪುರುಷಾರ್ಥಿಯಾದ ಮಾನವರಿಗೆ ಅತ್ಯಂತ ಹರ್ಷವಾಗುತ್ತದೆ.

ಅದೇ ರೀತಿ ಸೂರ್ಯನು ಸಕಲ ಪದಾರ್ಥಗಳ ರಕ್ಷಣೆಯನ್ನು ಮಾಡುತ್ತಾ ಸಮಸ್ತ ಪದಾರ್ಥಗಳು ನಮ್ಮ ಕಣ್ಣುಗಳಿಗೆ ದೃಷ್ಟಿಗೋಚರವಾಗುವಂತೆ ಮಾಡುತ್ತಾ, ಸಂಪೂರ್ಣ ಜಗತ್ತಿನ ಮಧ್ಯದಲ್ಲಿ ಹಿರಣ್ಯಗರ್ಭಾ ಭೂಮಿಯನ್ನು ತನ್ನ ಕಿರಣಗಳ ಮೂಲಕ, ರಾತ್ರಿಯ ಅಂಧಕಾರವನ್ನು ನಾಶ ಮಾಡಿ ಪ್ರಾತಃಕಾಲ ಎಲ್ಲವನ್ನು ಬೆಳಗಿಸುತ್ತಾ ನಮ್ಮೆಲ್ಲರಿಗೆ ಪ್ರಾಪ್ತನಾಗುತ್ತಾನೆ. ಇದರಿಂದ ಉದ್ಯಮಿ, ಪರಿಶ್ರಮಿ ಹಾಗೂ ಪುರುಷಾರ್ಥಿಯಾದ ಮಾನವರಿಗೆ ಅತ್ಯಂತ ಹರ್ಷವಾಗುತ್ತದೆ.

ಸೂರ್ಯನನ್ನು ನಿರ್ಮಾಣ ಮಾಡಿದ ಪರಮೇಶ್ವರನನ್ನು ತಿಳಿಯುವ ಉಪಾಯವನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಅಥಾ ತೇ ಅಂತಮಾನಾಂ ವಿದ್ಯಾಮ ಸುಮತೀನಾಮ್ । ಮಾ ನೋ ಅತಿಖ್ಯ ಆ ಗಹಿ ॥೩॥

ಪದಾರ್ಥ:- ಹೇ ಪರಮೈಶ್ವರ್ಯವಾನ್ ಪರಮೇಶ್ವರ! ನಾವೆಲ್ಲರೂ [**ತೇ**] ನಿನ್ನ [**ಅಂತಮಾನಾಂ**] ಅತ್ಯಂತ ಸನಿಹದಲ್ಲಿ ಅರ್ಥಾತ್ ನಿನ್ನ ಸ್ವರೂಪವನ್ನು ಅರಿತು, ನಿನ್ನನ್ನು ಸಾಕ್ಷಾತ್ಕಾರ ಮಾಡಿಕೊಂಡು ನಿನ್ನ ಆಜ್ಞೆಯನ್ನೇ ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವ ಹಾಗೂ [**ಸುಮತೀನಾಮ್**] ವೇದಾದಿಶಾಸ್ತ್ರಗಳಲ್ಲಿ, ಪರೋಪಕಾರದಲ್ಲಿ ಮತ್ತು ಧರ್ಮಾಚರಣೆಯಲ್ಲಿ ಯಾರ ಬುದ್ಧಿಯು ಸದಾ ಪ್ರೇರಣೆಯನ್ನೀಯುತ್ತದೆಯೋ, ಅರ್ಥಾತ್ ಯಾರು ಇಂತಹ ಶ್ರೇಷ್ಠ ಕರ್ಮಗಳಲ್ಲಿ ಸದಾ ನಿರತರಾಗಿರುತ್ತಾರೋ ಅಂತಹ ಆಪ್ತ ಪುರುಷರ, ಶ್ರೇಷ್ಠವಿದ್ವಾಂಸರ ಸಾನ್ನಿಧ್ಯದಲ್ಲಿದ್ದು [**ವಿದ್ಯಾಮ**] ನಿನ್ನನ್ನು ನಿನ್ನ ವಾಸ್ತವಿಕ ಸ್ವರೂಪವನ್ನು ಅರಿತುಕೊಳ್ಳುತ್ತೇವೆ. ನೀನು [**ನಃ ಆಗಹಿ**] ನಮ್ಮೆಲ್ಲರ ಅಂತಃಕರಣದಲ್ಲಿ ಹೃದಯಮಂದಿರದಲ್ಲಿ ವಿರಾಜಮಾನನಾಗಿ ಪ್ರಕಾಶವನ್ನು ಬೀರು. [**ಅಥಾ**] ಆನಂತರ ಕೃಪೆಮಾಡಿ ಅಂತರ್ಯಾಮಿ ರೂಪದಿಂದ ನಮ್ಮ ಆತ್ಮದಲ್ಲಿ ಸ್ಥಿತನಾಗು. [**ಮಾ ಅತಿಖ್ಯಃ**] ಎಂದಿಗೂ ನಮ್ಮಿಂದ ದೂರಸರಿಯಬೇಡ.

ಭಾವಾರ್ಥ:- ಹೇ ಪರಮೇಶ್ವರ್ಯವಾನ್, ಸರ್ವಾಂತರ್ಯಾಮಿ, ಸಚ್ಚಿದಾನಂದ ಪರಮಾತ್ಮ ! ನಾವೆಲ್ಲರೂ ಯಾರು ನಿನ್ನ ಅತ್ಯಂತ ಸನಿಹದಲ್ಲಿದ್ದು ನಿನ್ನ ಸಾಕ್ಷಾತ್ಕಾರವನ್ನು ಮಾಡಿಕೊಂಡು ಸದಾ ನಿನ್ನಾಜ್ಞೆಯಲ್ಲಿಯೇ ಇರುತ್ತಾರೋ ಹಾಗೂ ವೇದಶಾಸ್ತ್ರಗಳ ಅಧ್ಯಯನ-ಅಧ್ಯಾಪನ, ಯಜನ-ಯಾಜನ, ಪರೋಪಕಾರ ಹಾಗೂ ನಿಃಸ್ವಾರ್ಥ ಭಾವನೆಯಿಂದ ಧರ್ಮಾಚರಣೆಯಲ್ಲಿ ನಿರತರಾಗಿರುತ್ತಾರೋ ಅಂತಹ ಶ್ರೇಷ್ಠ ಯೋಗಿಗಳ, ಆಚಾರ್ಯರ, ವಿದ್ವಾಂಸರ ಸಾನ್ನಿಧ್ಯದಲ್ಲಿದ್ದು ನಿನ್ನ ವಾಸ್ತವಿಕ ಸ್ವರೂಪವನ್ನು ಅರಿತುಕೊಳ್ಳುತ್ತೇವೆ. ನೀನು ನಮ್ಮೆಲ್ಲರ ಅಂತಃಕರಣದಲ್ಲಿ ಸದಾಕಾಲ ವಿದ್ಯಮಾನನಾಗಿದ್ದು ನಿನ್ನ ಅತ್ಯಂತ ಪ್ರಖರವಾದ ಪ್ರಕಾಶವನ್ನು ಬೀರು. ತನ್ಮೂಲಕ ನಮ್ಮೆಲ್ಲರಲ್ಲಿರುವ ಅಜ್ಞಾನ-ಅಂಧಕಾರ, ಅಸತ್ಯ, ಅಧರ್ಮಾಚರಣೆ, ದುಃಖ, ದಾರಿದ್ರ್ಯ, ಅಶಾಂತಿ ಇವೆಲ್ಲವೂ ತೊಲಗಲಿ. ಎಂದಿಗೂ ನೀನು ನಮ್ಮಿಂದ ದೂರ ಸರಿಯಬೇಡ. ನಾವೆಂದಿಗೂ ನಿನ್ನಿಂದ ದೂರವಾಗದೇ ಸದಾ ನಿನ್ನ ಸಾನ್ನಿಧ್ಯದಲ್ಲಿಯೇ ಇರುವಂತಾಗಲಿ.

ಜನಸಾಮಾನ್ಯರು ವಿದ್ವಾಂಸರ ಬಳಿಗೆ ಹೋಗಿ ಏನನ್ನು ಮಾಡಬೇಕು ಮತ್ತು ಅವರೊಂದಿಗೆ ಹೇಗೆ ವರ್ತಿಸಬೇಕು

ಎಂಬುದನ್ನು ಇಲ್ಲಿ ಹೇಳಲಾಗಿದೆ.

ಪರೇಹಿ ವಿಗ್ರಮಸ್ತೃತ-ಮಿಂದ್ರಂ ಪೃಚ್ಛಾ ವಿಪಶ್ಚಿತಮ್ । ಯಸ್ತೇ ಸಖಿಭ್ಯ ಆ ವರಮ್ ॥೪॥

ಪದಾರ್ಥಃ- ಸದಾಕಾಲ ಸತ್ಯಜ್ಞಾನವನ್ನೇ ಪಡೆಯಲಪೇಕ್ಷಿಸುವ ಜಿಜ್ಞಾಸುವಾದ ಮಾನವನೇ ! ಯಾರು **[ತೇ ಸಖಿಭ್ಯಃ]** ಯಾವ ವಿದ್ವಾಂಸರು ನಿನ್ನ ಹಾಗೂ ನಿನ್ನ ಮಿತ್ರರಿಗೆ **[ಆ ವರಮ್]** ಪರಿಪೂರ್ಣವಾದ ವಿಶೇಷ ಜ್ಞಾನವನ್ನೇ ಕೊಡುತ್ತಾರೋ ಅಂತಹ **[ವಿಗ್ರಂ]** ಶ್ರೇಷ್ಠ ಮೇಧಾವಿಗಳಾದ **[ಅಸ್ತೃತಂ]** ಅಹಿಂಸಕರು, ಅರ್ಥಾತ್ ಹಿಂಸಾಭಾವನೆಯಿಂದ ದೂರವಿರುವವರೂ, ರಾಗ-ದ್ವೇಷರಹಿತರೂ, ನಿಷ್ಕಪಟಿಗಳೂ, ಕ್ರೋಧರಹಿತರೂ ಸಮಸ್ತ ಸತ್ಯಜ್ಞಾನವುಳ್ಳವರೂ-ಸತ್ಯಸಂಧರೂ **[ವಿಪಶ್ಚಿತಮ್]** ಆಪ್ತಪುರುಷರೂ, ಯೋಗಿಗಳೂ, ಪ್ರಜ್ಞಾಬುದ್ಧಿಯುಳ್ಳವರೂ, ಪ್ರತ್ಯುತ್ಪನ್ನಮತಿಗಳೂ ಸದಾ ಧರ್ಮಾಚರಣೆಯಲ್ಲಿ ಹಾಗೂ ನಿಃಸ್ವಾರ್ಥ ಭಾವನೆಯಿಂದ ಪರೋಪಕಾರದಲ್ಲಿ ನಿರತರಾಗಿರುವವರೂ ಆದ **[ಇಂದ್ರಂ]** ಶ್ರೇಷ್ಠ ಜ್ಞಾನ ಸಂಪತ್ತುಳ್ಳವರಾದ ವಿದ್ವಾಂಸರನ್ನು ಸಂಪರ್ಕಿಸಿ ಅವರ ಸಾನ್ನಿಧ್ಯದಲ್ಲಿ, ಅವರ ಚರಣಗಳಲ್ಲಿದ್ದು **[ಪೃಚ್ಛ]** ನಿನ್ನ ಸಮಸ್ತ ಸಂದೇಹಗಳನ್ನು, ಪ್ರಶ್ನೆಗಳನ್ನು ಜಿಜ್ಞಾಸು ಭಾವದಿಂದ ಕೇಳಿ ಸರಿಯಾದ ರೀತಿಯಲ್ಲಿ ಅರಿತುಕೊಂಡು ಶಂಕೆಯನ್ನು, ಸಂದೇಹವನ್ನು, ಸಂಶಯವನ್ನು ನಿವಾರಣೆ ಮಾಡಿಕೊಳ್ಳು ಹಾಗೂ ಅನ್ಯರಿಗೂ ತಿಳಿಯಪಡಿಸು. ಯಾರು ಸ್ವಾರ್ಥಿಗಳು, ಅಜ್ಞಾನಿಗಳು, ಕಪಟಿಗಳು, ರಾಗ ದ್ವೇಷವುಳ್ಳವರು, ಅಹಂಕಾರಿಗಳು ತನಗಿಂತ ಮಿಗಿಲಾದ ವಿದ್ವಾಂಸರು ಯಾರೂ ಇಲ್ಲ ಎಂದು ಭಾವಿಸುವವರು, ಎಲ್ಲರನ್ನೂ ಎಲ್ಲಾ ರೀತಿಯಲ್ಲಿ ವಂಚಿಸುವುದರಲ್ಲಿ ನಿಸ್ಸೀಮರು ಆದ ಧೂರ್ತರಿಂದ **[ಪರೇಹಿ]** ಸದಾ ದೂರವಿರು.

ಭಾವಾರ್ಥಃ- ಮಾನವನು ಸದಾಕಾಲ ಜ್ಞಾನ ಪಿಪಾಸುವಾಗಿರಬೇಕು. ಜ್ಞಾನಕ್ಕೆಂದೂ ಅಂತ್ಯವಿಲ್ಲ. ಅದರೊಂದಿಗೆ ಸದಾ ಸತ್ಯ ಜ್ಞಾನವನ್ನೇ ಪಡೆಯಲಪೇಕ್ಷಿಸಬೇಕು. ಸತ್ಯಜ್ಞಾನ, ಶ್ರೇಷ್ಠಜ್ಞಾನ, ಸಮಸ್ತ ಜನರ ಅಭ್ಯುದಯ ಹಾಗೂ ನಿಃ ಶ್ರೇಯಸ್ಸಿಗೆ ಕಾರಣೀಭೂತವಾದ ಜ್ಞಾನವನ್ನು ಪಡೆಯಲು ಜಿಜ್ಞಾಸಾಭಾವದಿಂದ, ಸತ್ಯಸಂಧರೂ, ಧರ್ಮಾತ್ಮರೂ, ರಾಗದ್ವೇಷರಹಿತರೂ ಕ್ರೋಧ-ವಂಚನೆ-ಮೋಸ ಮತ್ತು ಸ್ವಾರ್ಥದಿಂದ ಸದಾ ದೂರವಿರುವವರೂ, ಸದಾಕಾಲ ಎಲ್ಲರ ಕಲ್ಯಾಣವನ್ನೇ ಅಪೇಕ್ಷಿಸುವವರೂ, ಯೋಗಿಗಳೂ, ಆಪ್ತಪುರುಷರೂ ಸಂಪೂರ್ಣಜ್ಞಾನವುಳ್ಳವರೂ ಮೇಧಾವಿ ಹಾಗೂ ಪ್ರತ್ಯುತ್ಪನ್ನಮತಿಗಳೂ ಆದ ಶ್ರೇಷ್ಠ ವಿದ್ವಾಂಸರ ಸಾನ್ನಿಧ್ಯದಲ್ಲಿ ಅವರ ಚರಣಗಳಲ್ಲಿ ವಿನೀತ ಭಾವನೆಯಿಂದ ತನ್ನ ಸಮಸ್ತ ಪ್ರಶ್ನೆಗಳನ್ನು ಕೇಳಿ ಸರಿಯಾದ ರೀತಿಯಲ್ಲಿ ಅರಿತುಕೊಂಡು ಸಮಸ್ತ ಶಂಕೆ-ಸಂದೇಹ-ಸಂಶಯವನ್ನು ನಿವಾರಣೆ ಮಾಡಿಕೊಳ್ಳಬೇಕು ಹಾಗೂ ಇತರರಿಗೂ ತಿಳಿಯಪಡಿಸಬೇಕು.

ಎಂದಿಗೂ ಸ್ವಯಂ ಘೋಷಿತ ಭಗವಾನರನ್ನು, ಎಲ್ಲರನ್ನು ಎಲ್ಲಾ ರೀತಿಯಲ್ಲಿ ವಂಚಿಸುವಲ್ಲಿ ನಿಸ್ಸೀಮರನ್ನು, ಸ್ವಾರ್ಥಿಗಳು ಕಪಟಿಗಳು ಬೇರೆಯವರ ಹಣವನ್ನು ದೋಚುವ ಠಕ್ಕರನ್ನು ಮೂರ್ಖರಾಗಿದ್ದೂ ತನಗಿಂತ ಮಿಗಿಲಾದ ವಿದ್ವಾಂಸರು ಯಾರೂ ಇಲ್ಲ ಎಂದು ಭಾವಿಸುವವರನ್ನು ಕ್ರೋಧವುಳ್ಳವರೂ, ದ್ವೇಷಾಸೂಯೆಯುಳ್ಳವರೂ, ಕಾಮಿಗಳೂ, ಆದ ಧೂರ್ತರನ್ನು ಎಂದಿಗೂ ಸಂಪರ್ಕಿಸಬಾರದು. ಸದಾ ಅವರಿಂದ ದೂರವಿರಬೇಕು. ಜ್ಞಾನಿಯಾದವನು ಪ್ರಶ್ನೆಗೆ ಉತ್ತರವನ್ನು ಹೇಳದಿದ್ದರೂ ತೊಂದರೆ ಇಲ್ಲ. ಅಜ್ಞಾನಿಯಿಂದ ಉತ್ತರವನ್ನು ಪಡೆಯಲಪೇಕ್ಷಿಸಬಾರದು. ಏಕೆಂದರೆ ಅರ್ಧಜ್ಞಾನ ಹಾಗೂ ಮಿಥ್ಯಾಜ್ಞಾನ ವಿನಾಶಕ್ಕೆ ಕಾರಣೀಭೂತವಾಗುತ್ತದೆ. ಜ್ಞಾನಿಗಳು ಪಾತ್ರಾಪಾತ್ರತ್ವವನ್ನು, ಸಮಯಾಸಮಯವನ್ನು ಗಮನದಲ್ಲಿಟ್ಟುಕೊಂಡು ಸರಿಯಾದ ಸಮಯದಲ್ಲಿ ಸತ್ಪಾತ್ರರಿಗೆ ಸತ್ಯವಾದ ಜ್ಞಾನವನ್ನೇ ಕೊಡುತ್ತಾರೆ. ಅಜ್ಞಾನಿಗಳು ಸ್ವಾರ್ಥ ಸಾಧನೆಗೋಸ್ಕರ ಅಪಾತ್ರರಿಗೆ ಮಿಥ್ಯಾಜ್ಞಾನವನ್ನು ಕೊಡುತ್ತಾರೆ.

ಮತ್ತೆ ಅದೇ ವಿಷಯವನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಉತ ಬ್ರುವಂತು ನೋ ನಿದೋ ನಿರನ್ಯತಶ್ಚಿದಾರತ । ದಧಾನಾ ಇಂದ್ರ ಇದ್ದುವಃ ॥೫॥

ಪದಾರ್ಥಃ- **[ಯ ಇಂದ್ರೇ]** ಯಾರು ಪರಮಾತ್ಮನಲ್ಲಿ **[ದುವಃ ದಧಾನಾಃ]** ಪರಿಚರ್ಯೆ ಅರ್ಥಾತ್ ಮಾನವ ಮಾತ್ರರಲ್ಲಿ, ಪ್ರಾಣಿ-ಪಕ್ಷಿ ಮರಗಿಡ ಬಳ್ಳಿಗಳಲ್ಲಿ, ಪ್ರತಿಯೊಂದು ಕಣಕಣದಲ್ಲಿಯೂ ಪರಮಾತ್ಮನ ಅಸ್ತಿತ್ವವನ್ನೇ ಕಾಣುತ್ತಾ ಪ್ರಾಣಿಮಾತ್ರರ ಸೇವೆಯೇ ಭಗವಂತನ ಸೇವೆ ಎಂಬ ಭಾವನೆಯಿಂದ ಎಲ್ಲರ ಸೇವೆಯನ್ನೇ ಮಾಡುತ್ತಾ ಸಮಸ್ತ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ನಿಃಸ್ವಾರ್ಥಭಾವದಿಂದ ಎಲ್ಲರಿಗೂ ವಿದ್ಯೆಯ ದಾನ ಮಾಡುತ್ತಾ, ಧರ್ಮಾಚರಣೆಯಲ್ಲಿ ಹಾಗೂ ಪುರುಷಾರ್ಥ ಸಾಧನೆಯಲ್ಲಿ ತತ್ಪರರಾಗಿದ್ದಾರೋ, ಅಂತಹ ಶ್ರೇಷ್ಠ ವಿದ್ವಾಂಸರೇ ಆಪ್ತ ಪುರುಷರೇ **[ನಃ ಬ್ರುವಂತು]** ನಮಗೆಲ್ಲರಿಗೂ ಸಮಸ್ತ ಜ್ಞಾನವನ್ನು ಸಂಪೂರ್ಣ ಜ್ಞಾನವನ್ನೂ ಪ್ರದಾನ ಮಾಡಲಿ. **[ಚಿತ್]** ಇವರಿಗಿಂತ ಭಿನ್ನ ಗುಣವುಳ್ಳವರಾದ **[ನಿದಃ]** ನಿಂದನೀಯರೂ, ನಾಸ್ತಿಕರೂ, ಅವಿದ್ಯಾವಂತರೂ, ಧೂರ್ತರೂ, ವಂಚಕರೂ ಆದವರು ಯಾರು ಇದ್ದಾರೋ ಅವರೆಲ್ಲರೂ ನಮ್ಮೆಲ್ಲರಿಂದ **[ನಿಃ ಆರತ]** ಅತ್ಯಂತ ದೂರವಾಗಲಿ. ನಮ್ಮ ದೇಶದಲ್ಲಿಯೇ ಇರುವುದು ಬೇಡ. **[ಉತ ಅನ್ಯತಃ]** ಅನ್ಯ ದೇಶ ಪ್ರದೇಶಗಳಲ್ಲಿಯೂ ಇಲ್ಲದಿರಲಿ. ಅಧಾರ್ಮಿಕ ಪುರುಷ-ಸ್ತ್ರೀಯರು ಯಾವ ಸ್ಥಾನದಲ್ಲಿಯೂ ಇಲ್ಲದಿರಲಿ. ಅರ್ಥಾತ್ ಸಂಪೂರ್ಣ ವಿಶ್ವದಲ್ಲಿ ಎಲ್ಲರೂ ಸುಜ್ಞಾನಿಗಳೂ, ಧಾರ್ಮಿಕರೂ ಆಗಲಿ.

ಭಾವಾರ್ಥಃ- ಯಾರು ಪರಮಾತ್ಮನಲ್ಲಿ ಪರಿಚರ್ಯೆ ಅರ್ಥಾತ್ ಸಮಸ್ತ ಸ್ಥಾವರ ಜಂಗಮಗಳಲ್ಲಿ, ಸಂಪೂರ್ಣ ಚರಾಚರ ಜಗತ್ತಿನಲ್ಲಿ ಭಗವಂತನನ್ನೇ ಪರಮಾತ್ಮನ ಅಸ್ತಿತ್ವವನ್ನು ಕಾಣುತ್ತಾರೋ ಹಾಗೂ ಪ್ರಾಣಿಮಾತ್ರರ ಸೇವೆಯೇ ಪರಮಾತ್ಮನ ಸೇವೆಯೆಂಬ ಭಾವನೆಯಿಂದ ಎಲ್ಲರ ಸೇವೆಯನ್ನೇ ಮಾಡುತ್ತಾ ಸಮಸ್ತ ಹಾಗೂ ಸಂಪೂರ್ಣ ಜ್ಞಾನವುಳ್ಳವರಾಗಿ ಧರ್ಮಾಚರಣೆಯಲ್ಲಿ ಹಾಗೂ ಪುರುಷಾರ್ಥ ಸಾಧನೆಯಲ್ಲಿ ನಿರತರಾಗಿರುವ ಶ್ರೇಷ್ಠ ವಿದ್ವಾಂಸರೇ ನಮಗೆಲ್ಲರಿಗೂ ಸಮಸ್ತ ಹಾಗೂ ಸಂಪೂರ್ಣ ಜ್ಞಾನವನ್ನು ಪ್ರದಾನ ಮಾಡಲಿ.

ಇವರಿಗಿಂತ ಭಿನ್ನ ಗುಣವುಳ್ಳವರಾದ ಅಜ್ಞಾನಿಗಳೂ, ಅಧಾರ್ಮಿಕರೂ, ನಾಸ್ತಿಕರೂ, ವಂಚಕರೂ, ಧೂರ್ತರೂ ಆದ ಅವಿದ್ವಾಂಸರು ಹಾಗೂ ಪಂಡಿತಮ್ಮನ್ಯರು ನಮ್ಮೆಲ್ಲರಿಂದ ಅತ್ಯಂತ ದೂರವಾಗಲಿ. ನಮ್ಮ ದೇಶದಲ್ಲಿಯೇ ಮಾತ್ರವಲ್ಲ, ಯಾವ ದೇಶ ಪ್ರದೇಶದಲ್ಲಿಯೂ ಕೂಡ ಅಂತಹವರು ಇರುವುದೇ ಬೇಡ. ಇದರ ತಾತ್ಪರ್ಯವೇನೆಂದರೆ ಸಂಪೂರ್ಣ ವಿಶ್ವದಲ್ಲಿ ಎಲ್ಲರೂ ಸುಜ್ಞಾನಿಗಳೂ, ಧಾರ್ಮಿಕರೂ, ಪರೋಪಕಾರಿಗಳೂ, ಆಸ್ತಿಕರೂ, ಸ್ವಾರ್ಥರಹಿತರೂ ಆಗಲಿ. ತನ್ಮೂಲಕ ಸಂಪೂರ್ಣ ವಿಶ್ವದಲ್ಲಿ ಸುಖ-ಶಾಂತಿ ನೆಮ್ಮದಿ ಸರ್ವತ್ರ ಸದಾಕಾಲ ನೆಲೆಸಲಿ.

ಈಗ ಮನುಷ್ಯರು ಎಂತಹ ಸ್ವಭಾವವನ್ನು ಹೊಂದಿರಬೇಕು ಎಂಬುದನ್ನು ವಿವರಿಸಲಾಗಿದೆ.

ಉತ ನಃ ಸುಭಗಾँ ಅರಿ-ರ್ವೋಚೇಯುರ್ದಸ್ಮ ಕೃಷ್ಟಯಃ । ಸ್ಯಾಮೇ ದಿಂದ್ರಸ್ಯ ಶರ್ಮಣಿ ॥೬॥

ಪದಾರ್ಥಃ- ನಾವೆಲ್ಲರೂ **[ದಸ್ಮ]** ದುಷ್ಟ ಸ್ವಭಾವವನ್ನೇ ನಷ್ಟ ಮಾಡುವ **[ಇಂದ್ರಸ್ಯಶರ್ಮಣಿ ಸ್ಯಾಮ]** ಸರ್ವೈಶ್ವರ್ಯವಾನ್ ಸಕಲ ಜೀವೋದ್ಧಾರಕ ಪರಮಾತ್ಮನ ಆಶ್ರಯದಲ್ಲಿ, ಅವನ ಆಜ್ಞಾಪಾಲನೆಯಲ್ಲಿ ಪ್ರವೃತ್ತಿಯುಳ್ಳವರಾಗಿ, ಸಕಲ ಶ್ರೇಷ್ಠ ಕರ್ಮಗಳನ್ನೇ ಮಾಡುವುದರಲ್ಲಿ ನಿರತರಾಗಿರೋಣ. ಪರಮಾತ್ಮ ! ನಿನ್ನ ಸೃಷ್ಟಿಯಲ್ಲಿರುವ **[ಕೃಷ್ಟಯಃ]** ಸಕಲ ಮಾನವರು ಪರಸ್ಪರ ಪ್ರೀತಿ ಸೌಹಾರ್ದದಿಂದ ಇದ್ದು ಸ್ವತಃ ಸಮಸ್ತ ಹಾಗೂ ಸಂಪೂರ್ಣ ಜ್ಞಾನವುಳ್ಳವರಾಗಿ **[ವೋಚೇಯುಃ]** ಎಲ್ಲರಿಗೂ ಸಂಪೂರ್ಣ ಜ್ಞಾನವನ್ನು ಉಪದೇಶಿಸಲಿ. ಇದರಿಂದ ಸತ್ಯೋಪದೇಶವನ್ನು ಪಡೆದು **[ನಃ ಅರಿ ಉತ]** ನಮ್ಮ ಶತ್ರುಗಳು ಕೂಡ **[ಸುಭಗಾನ್]** ಸಕಲ ಶ್ರೇಷ್ಠ ಜ್ಞಾನೈಶ್ವರ್ಯ ಸಂಪನ್ನರಾಗಲಿ.

ಭಾವಾರ್ಥ:- ದುಷ್ಟಸ್ವಭಾವವನ್ನೇ ನಷ್ಟ ಮಾಡುವ ಪರಮಾತ್ಮ ! ನೀನು ಸರ್ವೈಶ್ವರ್ಯಶಾಲಿಯೂ, ಸಕಲ ಜೀವೋದ್ಧಾರಕನೂ ಆಗಿದ್ದೀಯೆ. ನಾವೆಲ್ಲರೂ ನಿನ್ನ ಆಶ್ರಯದಲ್ಲಿದ್ದು ನಿನ್ನ ಆದೇಶ ಮತ್ತು ಉಪದೇಶಗಳನ್ನು ಪಾಲಿಸುತ್ತಾ ಎಂದಿಗೂ ನಿನ್ನ ನಿಯಮವನ್ನು ಮೀರದೇ ಸದಾ ಶ್ರೇಷ್ಠಕರ್ಮಗಳಲ್ಲಿಯೇ ನಿರತರಾಗುವಂತಾಗಲಿ.

ಸರ್ವಜ್ಞನಾದ ಪರಮಾತ್ಮ! ನಿನ್ನ ಸೃಷ್ಟಿಯಲ್ಲಿರುವ ಸಮಸ್ತ ಮಾನವರು ಸ್ವತಃ ಸಂಪೂರ್ಣ ಜ್ಞಾನವುಳ್ಳವರಾಗಿ, ಎಲ್ಲರನ್ನೂ ಸುಜ್ಞಾನಿಗಳನ್ನಾಗಿ ಮಾಡಲಿ. ಇದರಿಂದ ಸತ್ಯೋಪದೇಶವನ್ನು ಪಡೆದು ನಮ್ಮ ಶತ್ರುಗಳು ಕೂಡ ಸಕಲ ಜ್ಞಾನೈಶ್ವರ್ಯ ಸಂಪನ್ನರಾಗಲಿ. ಇದರಿಂದ ಮಾನವ ಮಾತ್ರರು ಸಂಪೂರ್ಣ ವೈರಭಾವನೆಯನ್ನು ತೊರೆದು ಪರಸ್ಪರ ಪ್ರೀತಿ, ಸೌಹಾರ್ದದಿಂದ ಇರಲು ಸಾಧ್ಯವಾಗುತ್ತದೆ. ವಿಶ್ವದೆಲ್ಲೆಡೆ ಶಾಂತಿಯು ನೆಲೆಸುತ್ತದೆ.

ಪರಮೇಶ್ವರನು ಏಕೆ ಪ್ರಾರ್ಥಿಸಲು ಯೋಗ್ಯನಾಗಿದ್ದಾನೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ಏಮಾಶುಮಾಶವೇ ಭರ ಯಜ್ಞಶ್ರಿಯಂ ನೃಮಾದನಮ್ । ಪತಯನ್ ಮಂದಯತ್ಸಖಮ್ ॥೭॥

ಪದಾರ್ಥ:- ಸರ್ವೈಶ್ವರ್ಯವಾನ್ ಹಾಗೂ ಸರ್ವಜ್ಞನಾದ ಪರಮೇಶ್ವರ! ನೀನು ಕೃಪೆಯಿಂದ ನಮ್ಮೆಲ್ಲರಿಗೂ **[ಆಶವೇ]** ಅತ್ಯಂತ ವೇಗವಾಗಿ **[ಈಂ]** ಕ್ಲಪ್ತಕಾಲದಲ್ಲಿ ಸುರಿಯುವ ಜಲವನ್ನೂ ವಿಶಾಲವಾದ ಪೃಥ್ವಿಯನ್ನೂ **[ಆಶುಂ]** ಶೀಘ್ರಗಾಮಿಯಾದ ವಾಯುವನ್ನೂ ಅಗ್ನಿ ಹಾಗೂ ಇತರ ಪದಾರ್ಥ ಸಮೂಹವನ್ನೂ **[ಯಜ್ಞಶ್ರಿಯಂ]** ಅತ್ಯಂತ ಮಹಿಮೆಯುಳ್ಳ ಯಜ್ಞ ಸಂಪತ್ತನ್ನೂ **[ನೃಮಾದನಂ]** ಯಾವುದರಿಂದ ಸಮಸ್ತ ಮಾನವರು ಹರ್ಷಿತರಾಗುತ್ತಾರೋ **[ಪತಯತ್]** ಹಾಗೂ ಯಾವುದರಿಂದ ಮಾನವರು ಸ್ವಾಮಿತ್ವವನ್ನು ಸಂಪಾದಿಸುತ್ತಾರೋ, ಅರ್ಥಾತ್ ಅಧಿಕಾರವನ್ನು ಪ್ರಾಪ್ತಮಾಡಿಕೊಳ್ಳುತ್ತಾರೋ, ಅಂತಹ **[ಮಂದಯತ್ಸಖಂ]** ವಿಜ್ಞಾನ ಐಶ್ವರ್ಯಾದಿಗಳನ್ನು **[ಆಭರ]** ಎಲ್ಲಾ ದಿಕ್ಕುಗಳಿಂದ, ಎಲ್ಲಾ ಕಾಲದಲ್ಲಿಯೂ ಪ್ರಾಪ್ತವಾಗುವಂತೆ ಮಾಡು.

ಭಾವಾರ್ಥ:- ಸರ್ವೈಶ್ವರ್ಯವಂತ, ಸಕಲಸೃಷ್ಟಿಕರ್ತ ಹಾಗೂ ಸರ್ವಜ್ಞನಾದ ಪರಮಾತ್ಮ ! ನೀನು ಅತ್ಯಂತ ಕೃಪೆಯಿಂದ ನಮ್ಮೆಲ್ಲರಿಗೂ ಕಾಲಕಾಲದಲ್ಲಿ, ಕ್ಲಪ್ತವಾದ ಕಾಲದಲ್ಲಿ ಉತ್ತಮವಾದ ಮಳೆಯನ್ನೂ, ಸಸ್ಯ ಶ್ಯಾಮಲತೆಯಿಂದ ಕೂಡಿದ ಹಿರಣ್ಯಗರ್ಭಾ ವಸುಂಧರೆಯನ್ನೂ, ಶೀಘ್ರಗಾಮಿಯಾದ ಹಾಗೂ ಪರಿಶುದ್ಧವಾದ ವಾಯುವನ್ನೂ, ಎಲ್ಲಾ ಕ್ರಿಯೆಗೂ ಕಾರಣೀಭೂತವಾದ ಅಗ್ನಿ ತತ್ವವನ್ನೂ ಅರ್ಥಾತ್ ಅಗ್ನಿ, ಪ್ರಕಾಶ, ವಿದ್ಯುತ್ತು ಮತ್ತು ಶಕ್ತಿಯನ್ನೂ ಅತ್ಯಂತ ಮಹಿಮೆಯುಳ್ಳ ಯಜ್ಞ ಸಂಪತ್ತನ್ನೂ ಅರ್ಥಾತ್ ವಾಯುವನ್ನೂ, ಜಲವನ್ನೂ ಪರಿಶುದ್ಧವನ್ನಾಗಿ ಮಾಡುವ ಹಾಗೂ ಪರ್ಜನ್ಯಕ್ಕೆ ಕಾರಣೀಭೂತವಾದ ತನ್ಮೂಲಕ ಉತ್ತಮವಾದ ಮಳೆ ಹಾಗೂ ಬೆಳೆ ಉಂಟಾಗುವ ಪ್ರತ್ಯಕ್ಷ ಯಜ್ಞವನ್ನೂ, ಸಕಲ ಶ್ರೇಷ್ಠಕರ್ಮಗಳನ್ನು ಮಾಡುವ ಪ್ರವೃತ್ತಿಯನ್ನೂ, ಆತ್ಮಿಕ ಉನ್ನತಿ ಹಾಗೂ ಆನಂದದಾಯಕವಾದ ಆಧ್ಯಾತ್ಮಿಕ ಯಜ್ಞವನ್ನೂ, ಯಾವುದರಿಂದ ಸಮಸ್ತ ಮಾನವರು ಅತ್ಯಂತ ಹರ್ಷಿತರಾಗುತ್ತಾರೋ ಹಾಗೂ ಸ್ವಾಮಿತ್ವವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೋ ಅಂತಹ ಜ್ಞಾನ-ವಿಜ್ಞಾನ ಸಕಲ ಐಶ್ವರ್ಯಾದಿಗಳನ್ನೂ ಎಲ್ಲರಿಗೂ ಎಲ್ಲಾ ಕಾಲದಲ್ಲಿ ಎಲ್ಲಾ ದಿಕ್ಕಿನಿಂದ ಪ್ರಾಪ್ತವಾಗುವಂತೆ ಮಾಡು.

ಈಶ್ವರಃ ಪುರುಷಾರ್ಥಿನೋ ಮನುಷ್ಯಸ್ಯೋಪರಿಕೃಪಾಂ ದಧಾತಿ ನಾಲಸಸ್ಯ । ಯಾವನ್ಮನುಷ್ಯಃ ಸ್ವಯಂಪೂರ್ಣಂ ಪುರುಷಾರ್ಥಃ ನ ಕರೋತಿ ನೈವ ತಾವದೀಶ್ವರ ಕೃಪಾ ಪ್ರಾಪ್ತಾನ್ ಪದಾರ್ಥಾನ್ ರಕ್ಷಿತುಮಪಿ ಸಮರ್ಥೋಽಭವತಿ ಅತೋ ಮನುಷ್ಯೈಃ ಪುರುಷಾರ್ಥವದ್ಭಿರ್ಭೂತ್ವಾ ಈಶ್ವರ ಕೃಪೇಷ್ಟವ್ಯೇತಿ ॥

ಪರಮಾತ್ಮನು ಪುರುಷಾರ್ಥಿಯಾದ ಮಾನವನ ಮೇಲೆ ಮಾತ್ರ ತನ್ನ ಕೃಪಾದೃಷ್ಟಿಯನ್ನು ಬೀರುತ್ತಾನೆ; ಆಲಸಿಗಳನ್ನೆಂದಿಗೂ ಅವನು ಪೋಷಿಸುವುದಿಲ್ಲ. [ಹುಟ್ಟಿಸಿದವನು ಹುಲ್ಲನ್ನು ಮೇಯಿಸದೇ ಇರುತ್ತಾನೆಯೇ ಎಂಬುದು

ಆಲಸಿ ಮತ್ತು ಪ್ರಮಾದಿಗಳು ಹೇಳುವ ಮಾತು] ಎಷ್ಟರ ತನಕ ಸ್ವತಃ ಪೂರ್ಣ ಪುರುಷಾರ್ಥಿಯಾಗಿ ಪರಿಶ್ರಮಿಯಾಗಿ ಭಗವಂತನಿಂದ ಪ್ರಾಪ್ತವಾದುದನ್ನು ಸ್ವಯಂ ರಕ್ಷಣೆ ಮಾಡುವುದಿಲ್ಲವೋ ಅಷ್ಟರತನಕ ಭಗವಂತನ ಕೃಪೆಯು ಪ್ರಾಪ್ತವಾಗಲಾರದು. ಅದನ್ನು ರಕ್ಷಿಸುವ ಸಾಮರ್ಥ್ಯವೂ ದೊರಕಲಾರದು. [ತನ್ನ ಸೃಷ್ಟಿಯನ್ನು ರಕ್ಷಿಸಲು ಸ್ವತಃ ಭಗವಂತನೇ ಅವತಾರವನ್ನು ತಾಳಿ ಧಾವಿಸಿ ಬರುತ್ತಾನೆ ಎಂದು ಅಜ್ಞಾನಿಗಳು ಹೇಳುತ್ತಾರೆ ವಿನಾ ಸುಜ್ಞಾನಿಗಳಲ್ಲ] ಆದುದರಿಂದ ಪ್ರತಿಯೋರ್ವ ಮಾನವನು ಪುರುಷಾರ್ಥಿಯಾಗಿ ಪರಮೇಶ್ವರನ ಕೃಪೆಯನ್ನು ಸಂಪಾದಿಸಿಕೊಳ್ಳಬೇಕು, ಪ್ರಾಪ್ತಮಾಡಿಕೊಳ್ಳಬೇಕು.

ನಂತರ ಸೂರ್ಯಲೋಕದ ಸ್ವಭಾವವನ್ನು ತಿಳಿಸಲಾಗಿದೆ.

ಅಸ್ಯ ಪೀತ್ವಾ ಶತಕ್ರತೋ ಘನೋ ವೃತ್ರಾಣಾಮಭವಃ । ಪ್ರಾವೋ ವಾಜೇಷು ವಾಜಿನಮ್ ॥೮॥

ಪದಾರ್ಥ:- **[ಶತಕ್ರತೋ]** ಅನಂತ ಕರ್ತೃತ್ವಶಕ್ತಿಯುಳ್ಳ **[ಇಂದ್ರ]** ಸರ್ವಶಕ್ತಿಮಾನ್ ಪರಮಾತ್ಮ ! **[ಅಸ್ಯ ಪೀತ್ವಾ]** ನಮ್ಮೆಲ್ಲರ ಉಪಾಸನಾರಸವನ್ನು, ಭಕ್ತಿರಸವನ್ನು ಪಾನ ಮಾಡುತ್ತಾ **[ವೃತ್ರಾಣಾಂ]** ನಮ್ಮ ಸಕಲ ಪಾಪಗಳನ್ನು **[ಘನಃ ಅಭವಃ]** ನಿಶ್ಚಿತವಾಗಿ ನಾಶಮಾಡುವವನೂ ಆಗಿರುತ್ತೀಯೆ. **[ವಾಜೇಷು]** ನಮ್ಮ ಅಂತಃಕರಣಗಳಲ್ಲಿ ನಡೆಯುವ ಯಾವ ದೇವಾಸುರ ಸಂಗ್ರಾಮವಿದೆಯೋ ಅರ್ಥಾತ್ ದಿವ್ಯಗುಣಗಳು ಹಾಗೂ ಆಸುರೀ ಪ್ರವೃತ್ತಿಗಳ ನಡುವೆ ಯಾವ ಸಂಗ್ರಾಮವು ನಡೆಯುತ್ತದೆಯೋ ಆ ಸಂಗ್ರಾಮದಲ್ಲಿ **[ವಾಜಿನಂ]** ಧಾರ್ಮಿಕ ಪ್ರವೃತ್ತಿ ಹಾಗೂ ದಿವ್ಯಗುಣಗಳನ್ನು **[ಪ್ರಅವಃ]** ಪ್ರಕೃಷ್ಟವಾಗಿ ರಕ್ಷಿಸುತ್ತೀಯೆ.

ಭಾವಾರ್ಥ:- ಪರಮಾತ್ಮನು ಅನಂತ ಕರ್ತೃತ್ವ ಶಕ್ತಿಯುಳ್ಳವನೂ, ಸರ್ವಶಕ್ತಿವಂತನೂ ಆಗಿದ್ದಾನೆ. ಅವನು ನಮ್ಮೆಲ್ಲರ ಉಪಾಸನೆಯನ್ನು ಭಕ್ತಿ ರಸವನ್ನು ಪಾನ ಮಾಡುತ್ತಾನೆ ಅರ್ಥಾತ್ ಸ್ವೀಕರಿಸುತ್ತಾನೆ. ಪರಮಾತ್ಮನು ಆನಂದಮಯ ಪುರುಷನಾದ ಕಾರಣ ಅವನು ಅನನ್ಯ ಭಕ್ತಿಯಿಂದ ಹಾಗೂ ಉಪಾಸನೆಯಿಂದ ಸಂಪ್ರೀತನಾಗುತ್ತಾನೆ. ಆ ಭಕ್ತಿ ಮತ್ತು ಉಪಾಸನೆಯೇ ಇಂದ್ರ, ಅರ್ಥಾತ್ ಪರಮಾತ್ಮನು ಪಾನ ಮಾಡುವ ಸೋಮವಾಗಿದೆ.

ಪರಮಾತ್ಮನು ಪ್ರತಿಯೊಂದು ಕಣಕಣದಲ್ಲಿ ವಿದ್ಯಮಾನನಾಗಿದ್ದರೂ ಅವನು ತನ್ನ ಉಪಾಸಕನ ಅಂತಃಕರಣದಲ್ಲಿ ಸದಾ ವಿರಾಜಮಾನನಾಗುತ್ತಾನೆ. ಅದೇ ಅವನ ಗರ್ಭಗುಡಿಯಾಗಿದೆ. ಅವನು ಆ ಗುಡಿಯಲ್ಲಿ ಭದ್ರವಾಗಿ ನೆಲೆಯೂರಿ ವೃತ್ರನನ್ನು ಅರ್ಥಾತ್ ಪಾಪವನ್ನು ಹಾಗೂ ಅಜ್ಞಾನವನ್ನು ನಿಶ್ಚಯವಾಗಿಯೂ ನಾಶ ಮಾಡುತ್ತಾನೆ. ನಾವೆಲ್ಲರೂ ಅನನ್ಯ ಭಕ್ತಿಯಿಂದ ಹಾಗೂ ಅತ್ಯಂತ ಶ್ರದ್ಧೆಯಿಂದ ಭಗವಂತನ ಉಪಾಸನೆಯನ್ನು ಮಾಡಿದಾಗ ನಮ್ಮಲ್ಲಿ ಪಾಪ ಮಾಡುವ ಪ್ರವೃತ್ತಿಯು ಕ್ಷೀಣವಾಗಿ ಕ್ರಮೇಣ ಪೂರ್ಣವಾಗಿ ನಾಶವಾಗುತ್ತದೆ. ದೇವಾಸುರ ಸಂಗ್ರಾಮ ಅರ್ಥಾತ್ ಪಾಪ ಮಾಡುವ ಆಸುರೀ ಪ್ರವೃತ್ತಿಗಳೊಂದಿಗೆ ದೈವೀಗುಣಗಳ ಸಂಗ್ರಾಮವಾದಾಗ ಭಗವಂತನು ಆಸುರೀ ಪ್ರವೃತ್ತಿಗಳನ್ನೇ ನಾಶ ಮಾಡುತ್ತಾನೆ. ಏಕೆಂದರೆ ಸಮಸ್ತ ದಿವ್ಯಗುಣಗಳು ಭಗವಂತನ ಗುಣಗಳೇ ಆಗಿವೆ. ಅವನೆಂದಿಗೂ ತನ್ನ ಪರಾಜಯವನ್ನು ಅಪೇಕ್ಷಿಸುವುದಿಲ್ಲ. ಅವನೆಂದಿಗೂ ಪರಾಜಿತನಾಗುವುದಿಲ್ಲ.

ಪುನಃ ಇಂದ್ರ ಶಬ್ದದಿಂದ ಈಶ್ವರನ ಪ್ರಕಾಶವನ್ನು ಮಾಡಲಾಗಿದೆ.

ತಂ ತ್ವಾ ವಾಜೇಷು ವಾಜಿನಂ ವಾಜಯಾಮಃ ಶತಕ್ರತೋ । ಧನಾನಾಮಿಂದ್ರ ಸಾತಯೇ ॥೯॥

ಪದಾರ್ಥ:- ಹೇ **[ಶತಕ್ರತೋ]** ಅಸಂಖ್ಯಾತ ವಸ್ತುಗಳಲ್ಲಿ ಪ್ರಜ್ಞಾ, ಪ್ರಕೃಷ್ಟವಾದ ಜ್ಞಾನವುಳ್ಳ ಅರ್ಥಾತ್ ಸರ್ವಜ್ಞನಾದ ಹಾಗೂ **[ಇಂದ್ರ]** ಸರ್ವೈಶ್ವರ್ಯಶಾಲಿಯಾದ ಪರಮಾತ್ಮ ! ನಾವೆಲ್ಲರೂ **[ಧನಾನಾಂ]** ಸಂಪೂರ್ಣ

ಜ್ಞಾನ, ಐಶ್ವರ್ಯ ಹಾಗೂ ಸುಸಂಸ್ಕೃತ ಮತ್ತು ಸುಸಂಘಟಿತವಾದ ರಾಷ್ಟ್ರದ ಸ್ವಾಮಿತ್ವದ **[ಸಾತಯೇ]** ಸುಖವನ್ನೂ ಹಾಗೂ ಅದರ ಸಂಪೂರ್ಣ ಸದ್ವಿನಿಯೋಗ ಮತ್ತು ಪ್ರಾಪ್ತಿಗೋಸ್ಕರ **[ವಾಜೇಷು]** ಬಾಹ್ಯ ಹಾಗೂ ಅಂತಃಕರಣದಲ್ಲಿ ನಡೆಯುವ ಸಂಗ್ರಾಮದಲ್ಲಿ **[ವಾಜಿನಂ]** ವಿಜಯಪ್ರಾಪ್ತಿಗೋಸ್ಕರ ಸರ್ವವಿಜಯೀ ಹಾಗೂ ಅಪರಾಜಿತನಾದ ನಿನ್ನನ್ನು **[ವಾಜಯಾಮಃ]** ನಮ್ಮ ಅಂತಃಕರಣದಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳುತ್ತೇವೆ ಹಾಗೂ ಇತರರಿಗೂ ನಿನ್ನ ಸ್ವರೂಪವನ್ನು ತಿಳಿಯಪಡಿಸುತ್ತೇವೆ.

ಭಾವಾರ್ಥ:- ಸರ್ವಜ್ಞನಾದ ಹಾಗೂ ಸರ್ವೈಶ್ವರ್ಯವಂತನಾದ ಪರಮಾತ್ಮ ! ನಾವೆಲ್ಲರೂ ಸಂಪೂರ್ಣ ಜ್ಞಾನ-ಐಶ್ವರ್ಯ ಹಾಗೂ ಸುಸಂಸ್ಕೃತ ಮತ್ತು ಸುಸಂಘಟಿತವಾದ ರಾಷ್ಟ್ರದ ಸ್ವಾಮಿತ್ವದ ಸುಖವನ್ನು ಪ್ರಾಪ್ತಿಮಾಡಿ ಅದರ ಸದ್ವಿನಿಯೋಗವನ್ನು ಮಾಡುವುದಕ್ಕೋಸ್ಕರ ಬಾಹ್ಯ-ಆಂತರಿಕ ಮತ್ತು ನಮ್ಮ ಅಂತಃಕರಣದಲ್ಲಿ ನಡೆಯುವ ಸಕಲ ಸಂಗ್ರಾಮಗಳಲ್ಲಿ ವಿಜಯ ಪ್ರಾಪ್ತಿಗೋಸ್ಕರ ಸರ್ವ ವಿಜಯೀ ಹಾಗೂ ಅಪರಾಜಿತನಾದ ನಿನ್ನನ್ನು ನಮ್ಮ ಅಂತಃಕರಣದಲ್ಲಿಯೇ ಸಾಕ್ಷಾತ್ಕಾರ ಮಾಡಿಕೊಳ್ಳುತ್ತೇವೆ. ನಾವೆಲ್ಲರೂ ನಿನ್ನ ವಾಸ್ತವಿಕ ಸ್ವರೂಪವನ್ನು ಸರಿಯಾದ ರೀತಿಯಲ್ಲಿ ತಿಳಿದುಕೊಂಡು ಇತರರಿಗೂ ತಿಳಿಯಪಡಿಸುತ್ತೇವೆ.

ಆಮೇಲೆ ಆ ಪರಮೇಶ್ವರನು ಹೇಗಿದ್ದಾನೆ ಮತ್ತು ಏಕೆ ಸ್ತುತಿ ಮಾಡಲು ಯೋಗ್ಯನಾಗಿದ್ದಾನೆ ಎಂಬುದನ್ನು ಹೇಳಲಾಗಿದೆ.

ಯೋ ರಾಯೋಽವನಿರ್ಮಹಾನ್ತ್ಸುಪಾರಃ ಸುನ್ವತಃ ಸಖಾ । ತಸ್ಮಾ ಇಂದ್ರಾಯ ಗಾಯತ ॥೧೦॥

ಪದಾರ್ಥ:- ಹೇ ವಿದ್ವಾಂಸರೇ! **[ಯಃ]** ಯಾವ **[ಮಹಾನ್]** ಸರ್ವಜ್ಯೇಷ್ಠ ಹಾಗೂ ಸರ್ವಶ್ರೇಷ್ಠನಾದ **[ಸುಪಾರಃ]** ತನ್ನ ಉಪಾಸಕರ ಸಮಸ್ತ ಮನೋಕಾಮನೆಗಳನ್ನೂ, ಇಷ್ಟಾರ್ಥಗಳನ್ನೂ ಬಹಳ ಉತ್ತಮವಾದ ರೀತಿಯಲ್ಲಿ ಈಡೇರಿಸುವ **[ಸುನ್ವತಃ]** ಧರ್ಮಾಚರಣೆಯಲ್ಲಿ ನಿರತರಾಗಿದ್ದು ಪರಿಪೂರ್ಣ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡಂತಹ ಮಾನವರ **[ಸಖಾ]** ಸನ್ಮಿತ್ರನಾಗಿ ಅತ್ಯಂತ ಸುಖವನ್ನು ಕೊಡುವವನೂ **[ರಾಯಃ]** ಜ್ಞಾನ-ಐಶ್ವರ್ಯ ಹಾಗೂ ಆಯುರಾರೋಗ್ಯವನ್ನು **[ಅವನಿ]** ಕೊಡುವವನೂ, ರಕ್ಷಕನೂ ಮತ್ತು ಸರ್ವ ವಿಧದಲ್ಲಿ, ಸಕಾಲದಲ್ಲಿ ಪ್ರಾಪ್ತಿಯಾಗುವಂತೆ ಮಾಡುವವನೂ, ಅತ್ಯಂತ ಪರಮದಯಾಳುವೂ ಆದ **[ತಸ್ಮೈ ಇಂದ್ರಾಯ]** ಆ ಸರ್ವೈಶ್ವರ್ಯವಾನ್ ಸರ್ವರಕ್ಷಕ ಭಕ್ತವತ್ಸಲ, ಸರ್ವಜ್ಞನಾದ ಪರಮಾತ್ಮನನ್ನು **[ಗಾಯತ]** ಅನುದಿನವೂ ಎಲ್ಲರೂ ಅನನ್ಯ ಭಕ್ತಿಯಿಂದ, ಶ್ರದ್ಧೆಯಿಂದ, ಕಾಯಾ ವಾಚಾ ಮನಸಾ ಅರ್ಚಿಸಿರಿ, ಸ್ತುತಿಸಿರಿ ಮತ್ತು ಉಪಾಸಿಸಿರಿ.

ಭಾವಾರ್ಥ:- ಪರಮಾತ್ಮನು ಸರ್ವಜ್ಯೇಷ್ಠನೂ, ಸರ್ವಶ್ರೇಷ್ಠನೂ, ಸರ್ವಜ್ಞನೂ, ಸರ್ವಗಮ್ಯನೂ, ಭಕ್ತವತ್ಸಲನೂ, ಸರ್ವೋಪಾಸ್ಯನೂ ಸರ್ವರಕ್ಷಕನೂ ಆಗಿದ್ದಾನೆ. ಯಾರು ಪರಿಪೂರ್ಣ ಸತ್ಯಜ್ಞಾನವುಳ್ಳವರಾಗಿ ಧರ್ಮಾಚರಣೆಯಲ್ಲಿ, ಸತ್ಯಾಚರಣೆಯಲ್ಲಿ ನಿಸ್ವಾರ್ಥಭಾವನೆಯಿಂದ ಪರೋಪಕಾರದಲ್ಲಿ ನಿರತರಾಗಿರುತ್ತಾರೋ ಹಾಗೂ ಅನನ್ಯ ಭಕ್ತಿಯಿಂದ ಅತ್ಯಂತ ಶ್ರದ್ಧೆಯಿಂದ ಅವನನ್ನು ಉಪಾಸಿಸುತ್ತಾರೋ ಅವರೆಲ್ಲರ ಸಮಸ್ತ ಮನೋಕಾಮನೆಗಳನ್ನು ಇಷ್ಟಾರ್ಥಗಳನ್ನು ಪರಿಪೂರ್ಣವಾಗಿ ಈಡೇರಿಸುತ್ತಾನೆ. ಉತ್ತಮ ಸನ್ಮಿತ್ರನಾಗಿ ಸರ್ವವಿಧದಲ್ಲಿ ಸುಖವನ್ನು ಕೊಡುತ್ತಾನೆ. ಜ್ಞಾನ-ಐಶ್ವರ್ಯವನ್ನೂ, ಆಯುರಾರೋಗ್ಯವನ್ನೂ ಕೊಟ್ಟು ಸಕಲ ವಿಧದಲ್ಲಿ ರಕ್ಷಣೆಯನ್ನು ಮಾಡುತ್ತಾ ಎಲ್ಲವನ್ನು ಸಕಾಲದಲ್ಲಿ ಪ್ರಾಪ್ತವಾಗುವಂತೆ ಮಾಡುತ್ತಾನೆ. ಅಂತಹ ಶರಣಾಗತ ಭಕ್ತವತ್ಸಲನನ್ನು ನಾವೆಲ್ಲರೂ ಅನನ್ಯ ಭಕ್ತಿಯಿಂದ ಅತ್ಯಂತ ಶ್ರದ್ಧೆಯಿಂದ ಅನುದಿನವೂ ಸ್ತುತಿಸೋಣ, ಅರ್ಚಿಸೋಣ, ಉಪಾಸಿಸೋಣ.

ನಾಲ್ಕನೆಯ ಸೂಕ್ತ ಸಮಾಪ್ತ

ಸೂಕ್ತ ೫

ಮಂತ್ರಸಂಖ್ಯೆ ೧೦ । ಋಷಿಃ - ಮಧುಚ್ಛಂದಾ ವೈಶ್ವಾಮಿತ್ರಃ । ದೇವತಾ - ಇಂದ್ರಃ । ಛಂದಃ - ಗಾಯತ್ರೀ ।

ಸ್ವರಃ - ೧, ೩ -೧೦ ಷಡ್ಜಃ, ೨ ಋಷಭಃ.

ಈ ಮಂತ್ರದಲ್ಲಿ ಇಂದ್ರ ಶಬ್ದದಿಂದ ಪರಮೇಶ್ವರ ಮತ್ತು ಸ್ಪರ್ಶಗುಣವುಳ್ಳ ವಾಯುವಿನ ವರ್ಣನೆ ಮಾಡಲಾಗಿದೆ

ಆ ತ್ವೇತಾ ನಿ ಷೀದತೇಂದ್ರಮಭಿ ಪ್ರ ಗಾಯತ । ಸಖಾಯಃ ಸ್ತೋಮವಾಹಸಃ ॥೧॥

ಪದಾರ್ಥ:- **[ಸ್ತೋಮವಾಹಸಃ]** ಅತ್ಯಂತ ಪ್ರಶಂಸನೀಯ ಗುಣಗಳುಳ್ಳ ಹಾಗೂ ಇತರರನ್ನೂ ಯೋಗ್ಯರನ್ನಾಗಿ ಮಾಡಿ ತಮ್ಮೊಂದಿಗೆ ಕರೆದೊಯ್ಯುವ **[ಸಖಾಯಃ]** ಸರ್ವರೊಂದಿಗೆ ಮಿತ್ರತ್ವವನ್ನೇ ಮಾಡುವ ಯಾರೊಂದಿಗೂ ವೈರಭಾವ ಇಲ್ಲದ ವಿದ್ವಾಂಸರೇ ! ತಾವೆಲ್ಲರೂ ಒಂದಾಗಿ ಪರಸ್ಪರ ಪ್ರೀತಿಭಾವದಿಂದ ವೈಮನಸ್ಯವಿಲ್ಲದೇ ಪಾರಮಾರ್ಥಿಕವಾದ ಮೋಕ್ಷಸಾಧನೆ ಹಾಗೂ ಭೌತಿಕೋನ್ನತ್ಯರ್ಥ ಸರ್ವಜನರ ಕಲ್ಯಾಣ ಮತ್ತು ಏಳಿಗೆಗೋಸ್ಕರ, ಸಮಸ್ತ ರೀತಿಯ ಶಿಲ್ಪಕಲಾ ವಿಜ್ಞಾನಾದಿಗಳಿಂದ ಸಮಸ್ತ ರೀತಿಯ ಉದ್ಯೋಗ ಸಂಪಾದನಾರ್ಥ **[ಆನಿಷೀದತ]** ಸರ್ವ ವಿಧದಲ್ಲಿಯೂ ನಿರತರಾಗಿರಿ ಹಾಗೂ **[ಆ ಇತ]** ಎಲ್ಲರಿಗೂ ಎಲ್ಲಾ ವಿಧದಲ್ಲಿಯೂ ಪ್ರಾಪ್ತವಾಗಿರಿ. ಸರ್ವ ಜನರ ಸಮಸ್ತ ಅಭೀಷ್ಟ ಸಾಧನೆಯ ಸಿದ್ಧಿಗೋಸ್ಕರ **[ಇಂದ್ರಂ]** ಪಾರಮಾರ್ಥಿಕ ಉನ್ನತಿಗೋಸ್ಕರ ಮತ್ತು ಮೋಕ್ಷ ಸಾಧನೆಗೋಸ್ಕರ ಪರಮಾತ್ಮನನ್ನು ಹಾಗೂ ಭೌತಿಕ ಉನ್ನತಿಗೋಸ್ಕರ ವಿದ್ಯುತ್ ಇತ್ಯಾದಿಗಳನ್ನು **[ಅಭಿ ಪ್ರಗಾಯತ]** ಸರ್ವ ವಿಧದಲ್ಲಿ ಉಪಾಸಿಸಿರಿ, ವಿದ್ಯುಚ್ಛಕ್ತಿ ಇತ್ಯಾದಿಗಳನ್ನು ಸಮಸ್ತ ರೀತಿಯ ಉದ್ಯೋಗ ಸಂಪಾದನಾರ್ಥ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿ, ಅದರೊಂದಿಗೆ ಸೂರ್ಯನ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸಿರಿ. ಈ ರೀತಿಯಲ್ಲಿ ತಾವೆಲ್ಲರೂ ಸರ್ವವಿಧದಲ್ಲಿ ಸುಖವನ್ನು, ಆನಂದವನ್ನು ಅನುಭವಿಸಿರಿ ಮತ್ತು ಇತರರನ್ನೂ ಸುಖಿಗಳನ್ನಾಗಿಯೂ ಆನಂದಿತರನ್ನಾಗಿಯೂ ಮಾಡಿರಿ.

ಭಾವಾರ್ಥ:- ಅತ್ಯಂತ ಪ್ರಶಂಸನೀಯ ಗುಣಗಳುಳ್ಳ ಹಾಗೂ ಇತರರನ್ನು ಪ್ರಶಂಸಿಸಲರ್ಹರನ್ನಾಗಿಯೂ, ಯೋಗ್ಯವಿದ್ವಾಂಸರನ್ನಾಗಿಯೂ ಮಾಡುವ, ಸರ್ವರೊಂದಿಗೆ ಮಿತ್ರತ್ವವನ್ನೇ ಮಾಡುವ ಮತ್ತು ಯಾರೊಂದಿಗೂ ದ್ವೇಷವನ್ನು ಮಾಡದ ಶ್ರೇಷ್ಠ ವಿದ್ವಾಂಸರೇ ! ತಾವೆಲ್ಲರೂ ಪರಸ್ಪರ ಪ್ರೀತಿಸೌಹಾರ್ದದಿಂದ ಅನ್ಯೋನ್ಯರಾಗಿದ್ದು, ಮೋಕ್ಷ ಸಾಧನೆಗೋಸ್ಕರ ಮತ್ತು ಪಾರಮಾರ್ಥಿಕ ಉನ್ನತಿಗೋಸ್ಕರ ಪರಮೇಶ್ವರನನ್ನು ಸರ್ವ ವಿಧದಲ್ಲಿ ಉಪಾಸಿಸಿರಿ. ಎಲ್ಲರಿಗೂ ಪರಮಾತ್ಮನ ವಾಸ್ತವಿಕ ಸ್ವರೂಪವನ್ನು ತಿಳಿಯಪಡಿಸಿ, ಉಪಾಸನೆಯನ್ನು ಮಾಡಲು ಪ್ರೇರೇಪಿಸಿರಿ.

ಅದೇ ರೀತಿ ಸಮಸ್ತ ಜನರ ಭೌತಿಕೋನ್ನತಿಗಾಗಿ, ಏಳಿಗೆ ಹಾಗೂ ಅಭಿವೃದ್ಧಿಗೋಸ್ಕರ ಶಿಲ್ಪವಿದ್ಯೆ ಅರ್ಥಾತ್ ಯಾಂತ್ರಿಕ ವಿದ್ಯೆ ಹಾಗೂ ವಿಜ್ಞಾನಾದಿಗಳಿಂದ (Science and Technology) ಸಮಸ್ತ ರೀತಿಯ ಉದ್ಯೋಗ ಸಂಪಾದನಾರ್ಥ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿ, ಅದರೊಂದಿಗೆ ಸೂರ್ಯನ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ವಿನಿಯೋಗಿಸಿರಿ. ಈ ರೀತಿಯಲ್ಲಿ ತಾವೆಲ್ಲರೂ ಸರ್ವವಿಧದಲ್ಲಿ ಸುಖವನ್ನು, ಆನಂದವನ್ನು ಅನುಭವಿಸಿರಿ ಮತ್ತು ಇತರರನ್ನೂ ಸುಖಿಗಳನ್ನಾಗಿಯೂ ಆನಂದಿತರನ್ನಾಗಿಯೂ ಮಾಡಿರಿ.

ಮತ್ತೆ ಅದೇ ವಿಷಯವನ್ನು ವರ್ಣಿಸಲಾಗಿದೆ.

ಪುರೂತಮಂ ಪುರೂಣಾಮೀಶಾನಂ ವಾರ್ಯಾಣಾಮ್ । ಇಂದ್ರಂ ಸೋಮೇ ಸಚಾ ಸುತೇ ॥೨॥

ಪದಾರ್ಥ:- ಸಮಸ್ತ ವಿದ್ವಾಂಸರೇ ! **[ವಾರ್ಯಾಣಾಂ]** ಅತ್ಯಂತ ವರಣೀಯತಮನಾದ **[ಪುರೂತಮಮ್]** ದುಷ್ಟ ಸ್ವಭಾವವುಳ್ಳ ಜೀವರು ಮಾಡಿದ ಪಾಪ ಕರ್ಮಗಳಿಗೆ ಯೋಗ್ಯರೀತಿಯಲ್ಲಿ ದಂಡಿಸುವವನೂ **[ಪುರೂಣಾಂ**

ಈಶಾನಂ] ಸಕಲ ಬ್ರಹ್ಮಾಂಡವನ್ನು ಸೃಷ್ಟಿಸಲು ಸಮರ್ಥನಾದ ಹಾಗೂ ಅದರ ಏಕೈಕ ಸ್ವಾಮಿಯಾದ **[ಇಂದ್ರಂ]** ಸಕಲ ಐಶ್ವರ್ಯಪ್ರದನಾದ ಪರಮಾತ್ಮನನ್ನು **[ಸುತೇ]** ಅವನಿಂದ ಉತ್ಪನ್ನವಾದ ಹಾಗೂ ಪ್ರಾಣಿಮಾತ್ರರ ಕಲ್ಯಾಣಕ್ಕೋಸ್ಕರ ಪ್ರಾಪ್ತವಾದ ಸಂಪೂರ್ಣ ಜ್ಞಾನೈಶ್ವರ್ಯವನ್ನು **[ಸೋಮೇ]** ಸಂಪೂರ್ಣ ವಿಶ್ವದಲ್ಲಿ **[ಸಚಾ]** ಯಾವುದೇ ರೀತಿಯಲ್ಲಿ ತಾರತಮ್ಯ ಹಾಗೂ ಭೇದಭಾವವಿಲ್ಲದೇ ಸರ್ವರ ಹಿತಕ್ಕಾಗಿ ವಿನಿಯೋಗಿಸಿರಿ.

ಭಾವಾರ್ಥ:- ಸಮಸ್ತ ವಿದ್ವಾಂಸರೇ ! ಅತ್ಯಂತ ವರಣೀಯತಮನೂ, ದುಷ್ಟ ಸ್ವಭಾವವುಳ್ಳವರನ್ನು ಯೋಗ್ಯವಾದ ರೀತಿಯಲ್ಲಿ ದಂಡಿಸುವವನೂ, ಪಾಪಕರ್ಮಗಳಿಗೆ ತಕ್ಕುದಾದ ಫಲವನ್ನು ಕೊಡುವವನೂ, ಸಕಲ ಬ್ರಹ್ಮಾಂಡವನ್ನು ಸೃಷ್ಟಿಸಿ ಅದರ ಏಕೈಕನಾದ ಸ್ವಾಮಿಯಾದ ಸಕಲ ಐಶ್ವರ್ಯಪ್ರದನಾದ ಪರಮಾತ್ಮನನ್ನು ಉಪಾಸಿಸಿರಿ ಮತ್ತು ಅವನಿಂದ ಉತ್ಪನ್ನವಾದ ಹಾಗೂ ಪ್ರಾಣಿಮಾತ್ರರ ಕಲ್ಯಾಣಕ್ಕೋಸ್ಕರ ಪ್ರಾಪ್ತವಾದ ಸಂಪೂರ್ಣ ಜ್ಞಾನೈಶ್ವರ್ಯವನ್ನು, ಸಂಪೂರ್ಣ ವಿಶ್ವದಲ್ಲಿ ಯಾವುದೇ ರೀತಿಯ ತಾರತಮ್ಯ ಹಾಗೂ ಭೇದಭಾವವಿಲ್ಲದೇ ಸರ್ವರ ಹಿತಕ್ಕಾಗಿ ವಿನಿಯೋಗಿಸಿರಿ.

ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಪ್ರತಿಯೊಂದು ವಸ್ತುವು ಜೀವಮಾತ್ರರಿಗೋಸ್ಕರ ಪ್ರಾಪ್ತವಾಗಬೇಕು. ಅದರ ಮೇಲೆ ಏಕೈಕ ಸ್ವಾಮಿತ್ವವನ್ನು ಹೊಂದಲು ಯಾರಿಗೂ ಅಧಿಕಾರವಿಲ್ಲ. ಇಂದು ಅಕ್ಕಿ, ಗೋಧಿ, ಅರಸಿನ, ತುಳಸಿ, ಬೇವು ಹಲವಾರು ವನಸ್ಪತಿಗಳ ಪೇಟೆಂಟಿನ ಮೂಲಕ ತಮ್ಮ ಏಕೈಕ ಸ್ವಾಮಿತ್ವವನ್ನು ಹೊಂದಲು ಅಮೇರಿಕಾದವರು ಸರ್ವವಿಧದಲ್ಲಿ ಪ್ರಯತ್ನಿಸುತ್ತಿದ್ದಾರೆ. ಇದು ಪರಮಾತ್ಮನ ಸೃಷ್ಟಿಯ ನಿಯಮಕ್ಕೆ ಸಂಪೂರ್ಣವಾಗಿ ವಿರುದ್ಧವಾದ ಕಾರಣ ಯಾರು ಇಂತಹ ಪರಮ ನೀಚಕಾರ್ಯವನ್ನು ಮಾಡುತ್ತಾರೋ, ಮಾಡುತ್ತಿದ್ದಾರೋ ಅವರೆಲ್ಲರೂ ದಂಡನೀಯರು. ಎಲ್ಲರೂ ಒಂದಾಗಿ ಅವರನ್ನು ಸರಿಯಾದ ರೀತಿಯಲ್ಲಿ ದಂಡಿಸಬೇಕು.

ಅವರು ನಮ್ಮ ನಿಮ್ಮ ಹಾಗೂ ಸಮಸ್ತ ಪ್ರಾಣಿಗಳಿಗಾಗಿ ಏನು ಮಾಡುತ್ತಾರೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಸ ಘಾ ನೋ ಯೋಗ ಆ ಭುವತ್ ಸ ರಾಯೇ ಸ ಪುರಂಧ್ಯಾಮ್ । ಗಮದ್ವಾಜೇಭಿರಾ ಸ ನಃ ॥೩॥

ಪದಾರ್ಥ:- [ಸಃ ಘಾ] ಸರ್ವೇಶ್ವರನಾದ ಪರಮಾತ್ಮ ಹಾಗೂ ಸರ್ವರಿಗೂ ಜೀವನ ಶಕ್ತಿಯನ್ನು ಕೊಡುವ ವಾಯು ಇವರಿಬ್ಬರೂ [ನಃ] ನಮ್ಮೆಲ್ಲರಿಗೂ **[ಯೋಗೇ]** ಸರ್ವ ಸುಖ ಸಾಧನವನ್ನು ಪ್ರಾಪ್ತಿ ಮಾಡುವುದರಲ್ಲಿ ಹಾಗೂ ಸಮಸ್ತ ಪದಾರ್ಥಗಳನ್ನು ಉತ್ತಮ ರೀತಿಯಲ್ಲಿ ನಿರ್ಮಾಣ ಮಾಡಿ ಅವುಗಳನ್ನು ವ್ಯವಸ್ಥಿತವಾದ ರೀತಿಯಲ್ಲಿ ಮತ್ತು ಸಮರ್ಪಕವಾದ ರೀತಿಯಲ್ಲಿ ವಿನಿಯೋಗ ಮಾಡಲು ಪರಮಾತ್ಮನು ಸಹಾಯಕಾರಿಯಾಗಿಯೂ, ಯೋಗಾಸನ, ಪ್ರಾಣಾಯಾಮಾದಿಗಳ ಮೂಲಕ ಪೂರ್ಣ ಆಯುರಾರೋಗ್ಯವನ್ನು ಹೊಂದಲು ಮತ್ತು ನಮ್ಮ ಭೌತಿಕೋನ್ನತಿಗೋಸ್ಕರ **[ಆ ಭುವತ್]** ನಾವು ಪ್ರತಿನಿತ್ಯ ಉಪಯೋಗಿಸುವ ಯಂತ್ರ ಯಾನಾದಿಗಳು ಉತ್ತಮ ರೀತಿಯಲ್ಲಿ ಚಲಿಸಲು ವಾಯುವು ಸಹಕಾರಿಯೂ ಆಗಿದ್ದಾರೆ. ಪುನಶ್ಚ [ಸಃ] ಸರ್ವೈಶ್ವರ್ಯನಾದ ಪರಮಾತ್ಮನು ಹಾಗೂ ವಾಯುವು **[ರಾಯೇ]** ಉತ್ತಮವಾದ ಐಶ್ವರ್ಯದ ಪ್ರಾಪ್ತಿಗೋಸ್ಕರ ಮತ್ತು **[ಸ ಪುರಂಧ್ಯಾಂ]** ಸಮಸ್ತ ವೇದಶಾಸ್ತ್ರಗಳ ಸಂಪೂರ್ಣ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳಲು ಸಹಾಯಕವಾದ, ಉತ್ತಮವಾದ ಮೇಧಾಬುದ್ಧಿಗೋಸ್ಕರ ನಮ್ಮೆಲ್ಲರಿಗೂ ಪ್ರಾಪ್ತವಾಗಲಿ. ಪುನಶ್ಚ [ಸಃ] ಸರ್ವೈಶ್ವರ್ಯಪ್ರದನಾದ ಪರಮಾತ್ಮ ಹಾಗೂ ಭೌತಿಕವಾಯು [ನಃ] ನಮಗೆಲ್ಲರಿಗೂ **[ವಾಜೇಭಿಃ ಆಗಮತ್]** ಅತ್ಯಂತ ಉತ್ತಮವಾದ ಅನ್ನವು ಸದಾಕಾಲ ಪುಷ್ಕಳವಾಗಿ ಜೀವಮಾತ್ರರಿಗೆ ಪ್ರಾಪ್ತಿಯಾಗುವಂತೆ ಮಾಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರದಿಂದ ಇಂದ್ರ ಶಬ್ದದ ಅರ್ಥ ಪರಮಾತ್ಮ ಹಾಗೂ ಭೌತಿಕ ವಾಯು ಇವೆರಡೂ ಗ್ರಾಹ್ಯವಾಗುತ್ತವೆ. ಸರ್ವೇಶ್ವರನಾದ ಪರಮಾತ್ಮನು ನಮಗೆಲ್ಲರಿಗೂ ಸಮಸ್ತ ಸುಖಸಾಧನವನ್ನು ಪ್ರಾಪ್ತಿ ಮಾಡಲು, ಸಮಸ್ತ ಭೌತಿಕ ಪದಾರ್ಥಗಳನ್ನು ಉತ್ತಮವಾದ ರೀತಿಯಲ್ಲಿ ನಿರ್ಮಾಣ ಮಾಡಿ ಅವುಗಳನ್ನು

ವ್ಯವಸ್ಥಿತವಾದ ರೀತಿಯಲ್ಲಿ ಮತ್ತು ಸಮರ್ಪಕವಾದ ರೀತಿಯಲ್ಲಿ ವಿನಿಯೋಗ ಮಾಡಲು ಪೂರ್ಣಸಹಾಯಕಾರಿಯಾಗಿದ್ದಾನೆ. ಅವನ ಸಹಾಯ ಮತ್ತು ಕೃಪೆ ಇಲ್ಲದೆ ನಾವು ಏನನ್ನೂ ಮಾಡಲಾರೆವು. ಅದೇ ರೀತಿ ಪರಮಾತ್ಮನು ಸಮಸ್ತ ಹಾಗೂ ಸಂಪೂರ್ಣ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳಲು ಉತ್ತಮವಾದ ಮೇಧಾಬುದ್ಧಿಯನ್ನು ನಮಗೆಲ್ಲರಿಗೂ ಕರುಣಿಸಲಿ. ಅವನ ಕೃಪೆಯಿಂದಲೇ ನಮಗೆಲ್ಲರಿಗೂ ಉತ್ತಮವಾದ ಐಶ್ವರ್ಯ, ಅತ್ಯಂತ ಉತ್ತಮವಾದ ಅನ್ನವು ಸದಾಕಾಲ ಜೀವಮಾತ್ರರಿಗೆ ಪ್ರಾಪ್ತಿಯಾಗಲಿ.

ಸರ್ವರಿಗೂ ಜೀವನಶಕ್ತಿಯನ್ನೂ, ಚೈತನ್ಯವನ್ನೂ ಕೊಡುವಂತಹ ವಾಯುವು ಯೋಗಾಸನ ಪ್ರಾಣಾಯಾಮಾದಿಗಳ ಮೂಲಕ ನಾವೆಲ್ಲರೂ ಪೂರ್ಣ ಆಯುರಾರೋಗ್ಯವನ್ನು ಹೊಂದಲು ಮತ್ತು ನಮ್ಮೆಲ್ಲರ ಭೌತಿಕೋನ್ನತಿಗೋಸ್ಕರ ಪ್ರತಿನಿತ್ಯ ನಾವೆಲ್ಲರೂ ಬಳಸುವ ಯಂತ್ರಯಾನಾದಿಗಳು ಉತ್ತಮವಾದ ರೀತಿಯಲ್ಲಿ ಚಲಿಸಲು ಸಹಾಯಕವಾಗಿದೆ. ಈ ಪ್ರಾಣ ವಾಯುವಿನಿಂದ ಪ್ರಾಣಾಯಾಮದ ಮೂಲಕ ನಾವೆಲ್ಲರೂ ನಮ್ಮ ಬುದ್ಧಿ ಶಕ್ತಿಯನ್ನು ಅತ್ಯಧಿಕ ವರ್ಧಿಸಿಕೊಂಡು ಮೇಧಾಬುದ್ಧಿಯನ್ನಾಗಿ ಮಾಡಬಹುದು. ಈ ವಾಯುವು ಎಲ್ಲರಿಗೂ ಜೀವನ ಪ್ರದವಾಗಿದ್ದು ನಮಗೆಲ್ಲರಿಗೂ ಪುಷ್ಕಳವಾದ ಅನ್ನವು ಪ್ರಾಪ್ತಿಯಾಗುವಂತೆ ಬೀಸಲಿ. ಎಂದಿಗೂ ಚಂಡಮಾರುತ, ಬಿರುಗಾಳಿ, ಸುಂಟರಗಾಳಿಯಾಗಿ ವಿನಾಶಕ್ಕೆ ಕಾರಣೀಭೂತವಾಗದಿರಲಿ. ನಾವೆಲ್ಲರೂ ಸದಾಕಾಲ ಸುಖ ಸಂತೋಷದಿಂದ ಇರುವಂತಾಗಲಿ.

ಈ ಮಂತ್ರದಲ್ಲಿ ಈಶ್ವರ ಮತ್ತು ಸೂರ್ಯಲೋಕದ ಗುಣ ವರ್ಣನೆ ಮಾಡಲಾಗಿದೆ.

ಯಸ್ಯ ಸಂಸ್ಥೇ ನ ವೃಣ್ವತೇ ಹರೀ ಸಮತ್ಸು ಶತ್ರವಃ । ತಸ್ಮಾ ಇಂದ್ರಾಯ ಗಾಯತ ॥೪॥

ಪದಾರ್ಥ:- ಸಮಸ್ತ ಮಾನವರೇ ! ನೀವೆಲ್ಲರೂ **[ಯಸ್ಯ]** ಯಾವನ **[ಹರೀ]** ಬಲ ಪರಾಕ್ರಮ ಹಾಗೂ ಕೃಪಾಶ್ರಯದಲ್ಲಿ **[ಸಂಸ್ಥೇ]** ಸುದೃಢವಾಗಿ ವ್ಯವಸ್ಥಿತವಾಗಿ ಶಾಶ್ವತ ಸತ್ಯ ನಿಯಮಾನುಸಾರ ನೆಲೆಗೊಂಡಿರುವ ಈ ಜಗತ್ತಿನಲ್ಲಿ ನಿವಾಸಿಸುತ್ತಿದ್ದೀರೋ, ಯಾರ ಸಹಾಯದಿಂದ **[ಶತ್ರವಃ]** ಅಮಿತ್ರರು, ದುಷ್ಟಸ್ವಭಾವವುಳ್ಳವರು, ಅಸತ್ಯಾಚರಣೆ ಅಧರ್ಮಾಚರಣೆ ಹಾಗೂ ಅನ್ಯಾಯ ಅತ್ಯಾಚಾರದಲ್ಲಿ ನಿರತರಾಗಿರುವವರು ಎಂದಿಗೂ **[ಸಮತ್ಸು]** ಯುದ್ಧದಲ್ಲಿ, ಜೀವನ ಸಂಗ್ರಾಮದಲ್ಲಿ **[ನವೃಣ್ವತೇ]** ಬಲವನ್ನು ಹೊಂದಲಾರರೋ ಜಯವನ್ನು ಸಾಧಿಸಲಾರರೋ, ವಿಜಯವನ್ನು ಪ್ರಾಪ್ತಿಮಾಡಿಕೊಳ್ಳಲಾರರೋ **[ತಸ್ಮೈ ಇಂದ್ರಾಯ ಗಾಯತ]** ಅಂತಹ ಶಿಷ್ಟರಕ್ಷಕ, ದುಷ್ಟರ ವಿನಾಶಕನಾದ, ಸರ್ವಶಕ್ತನಾದ ಶರಣಾಗತ ಭಕ್ತವತ್ಸಲನಾದ ಪರಮಾತ್ಮನನ್ನು ಅನುದಿನವೂ ಉಪಾಸಿಸಿರಿ.

ಭಾವಾರ್ಥ:- ಸಮಸ್ತ ಮಾನವರೇ! ನೀವೆಲ್ಲರೂ ಪರಮಾತ್ಮನ ಬಲ ಪರಾಕ್ರಮ ಹಾಗೂ ಕೃಪಾಶ್ರಯದಲ್ಲಿ ಮತ್ತು ಸುದೃಢ ಹಾಗೂ ವ್ಯವಸ್ಥಿತವಾಗಿ ಶಾಶ್ವತನಿಯಮಾನುಸಾರ ನೆಲೆಗೊಂಡಿರುವ ಈ ಜಗತ್ತಿನಲ್ಲಿ ನಿವಾಸಿಸುತ್ತಿದ್ದೀರಿ. ಆ ಪರಮಾತ್ಮನ ಮೇಲೆ ಯಾವುದೇ ರೀತಿಯ ಸಂದೇಹವನ್ನಾಗಲೀ ಸಂಶಯವನ್ನಾಗಲೀ ಮಾಡದೇ ಪೂರ್ಣ ವಿಶ್ವಾಸವನ್ನಿಡಿರಿ. ಅವನೆಂದಿಗೂ ದುಷ್ಟರನ್ನು ದುಷ್ಟಸ್ವಭಾವವುಳ್ಳವರನ್ನು ಅಸತ್ಯಾಚರಣೆ, ಅಧರ್ಮಾಚರಣೆ ಹಾಗೂ ಅನ್ಯಾಯ ಅತ್ಯಾಚಾರದಲ್ಲಿ ನಿರತರಾಗಿರುವವರನ್ನು ರಕ್ಷಿಸುವುದಿಲ್ಲ. ಶಿಷ್ಟರಕ್ಷಕ ಹಾಗೂ ದುಷ್ಟರ ವಿನಾಶವನ್ನು ಮಾಡುವ ಶರಣಾಗತ ಭಕ್ತವತ್ಸಲನಾದ ಪರಮಾತ್ಮನನ್ನು ಉಪಾಸಿಸಿರಿ.

ಇಂದು ಸರ್ವತ್ರ ಅಧರ್ಮಿಗಳು ಎಲ್ಲೆಡೆ ವ್ಯಾಪಿಸುತ್ತಿದ್ದು ಅವರ ಪ್ರಾಬಲ್ಯವೇ ಹೆಚ್ಚುತ್ತಿದೆ. ಇದರಿಂದ ಭಗವಂತನ ನ್ಯಾಯ ವ್ಯವಸ್ಥೆಯ ಮೇಲೆ ಆಸ್ತಿಕರು ಅವಿಶ್ವಾಸವನ್ನು ಮಾಡುತ್ತಿದ್ದಾರೆ. ಈ ಮಂತ್ರದಲ್ಲಿ ಭಗವಂತನ ಮೇಲೆ ಎಂದಿಗೂ ಅವಿಶ್ವಾಸವನ್ನು ಮಾಡಬೇಡಿ ಎಂದು ಹೇಳಿದೆ.

ಅಧರ್ಮೇಣೈಧತೇ ತಾವತ್ತತೋ ಭದ್ರಾಣಿ ಪಶ್ಯತಿ । ತತಃ ಸಪತ್ನಾನ್ ಜಯತಿ ಸಮೂಲಸ್ತು ವಿನಶ್ಯತಿ ॥

ಅಧರ್ಮಾಚರಣೆಯಿಂದ ಮಾನವನು ಮೊದಲು ಬಹಳ ವೇಗವಾಗಿ ವೃದ್ಧಿಯನ್ನು ಹೊಂದುತ್ತಾನೆ. ಎಲ್ಲವನ್ನೂ ತನಗೆ ಅನುಕೂಲವಾಗುವಂತೆ ಮಾಡಿಕೊಳ್ಳುತ್ತಾನೆ. ತನ್ನ ಶತ್ರುಗಳ ಮೇಲೆ ಜಯವನ್ನೂ ಸಾಧಿಸುತ್ತಾನೆ. ಕೊನೆಗೆ ಸಮೂಲವಾಗಿ ಸರ್ವನಾಶವನ್ನು ಹೊಂದುತ್ತಾನೆ. ಆದುದರಿಂದ ಭಗವಂತನ ನ್ಯಾಯವ್ಯವಸ್ಥೆಯಲ್ಲಿ ಎಂದಿಗೂ ಅವಿಶ್ವಾಸವನ್ನು ಮಾಡುವುದು ಬೇಡ. ಅವನು ಶರಣಾಗತ ಭಕ್ತವತ್ಸಲನಾಗಿದ್ದಾನೆ. ಅವನೆಂದಿಗೂ ಯಾರ ಕೆಡುಕನ್ನು ಮಾಡುವುದಿಲ್ಲ. ಯಾರು ಕೆಡುಕನ್ನು ಮಾಡುತ್ತಾನೋ ಅವನೆಂದಿಗೂ ಭಗವಂತನು ಆಗಲು ಸಾಧ್ಯವೇ ಇಲ್ಲ. ಅವನು ದುಷ್ಟರನ್ನು ದುಷ್ಟಸ್ವಭಾವವುಳ್ಳವರನ್ನು, ಅಧರ್ಮಿಗಳನ್ನು ದಂಡಿಸುತ್ತಾನೆ. ನಮಗೆ ನಾವು ಈ ಜನ್ಮದಲ್ಲಿ ಮಾಡಿದ ಹಾಗೂ ಮಾಡುತ್ತಿರುವ ಕರ್ಮಗಳ ಬಗ್ಗೆ ಜ್ಞಾನವಿರುತ್ತದೆಯೇ ವಿನಾ ಹಿಂದಿನ ಜನ್ಮಗಳಲ್ಲಿ ಮಾಡಿದ ಕರ್ಮಗಳ ಬಗ್ಗೆ ಯಾವ ಜ್ಞಾನವೂ ಇರುವುದಿಲ್ಲ. ಅದರೊಂದಿಗೆ ನಾವು ಮಾಡಿದ್ದೇ ಸರಿ ಎಂಬ ದುರಭಿಮಾನವೂ ನಮ್ಮೆಲ್ಲರಲ್ಲಿದೆ. ಆದುದರಿಂದ ನಾವು ಮಾಡಿದ ಕರ್ಮಗಳಿಗೆ ಅನುಗುಣವಾಗಿ ಫಲವನ್ನು ಅನುಭವಿಸಲೇಬೇಕು. ನಮ್ಮ ರಕ್ಷಣೆಗೋಸ್ಕರ ಸರ್ವಶಕ್ತ ಹಾಗೂ ಸರ್ವರಕ್ಷಕನಾದ ಏಕೈಕ ಪರಮಾತ್ಮನ ಉಪಾಸನೆಯನ್ನೇ ಮಾಡಬೇಕು. ಅವನು ಅನಂತಗುಣವುಳ್ಳವನೂ, ಅನಂತ ಶಕ್ತಿಯುಳ್ಳವನೂ ಆಗಿದ್ದಾನೆ. ಆದರೆ ಪರಮಾತ್ಮನು ಅಸಂಖ್ಯನು ಅಲ್ಲ. ಅವನು ಏಕೈಕನಾಗಿದ್ದಾನೆ. ಅವನ ಸಮಾನರು ಅಥವಾ ಅವನಿಗಿಂತ ಮಿಗಿಲಾದವರು ಯಾರೂ ಇಲ್ಲ.

ಈ ಸಾಂಸಾರಿಕ ಪದಾರ್ಥಗಳು ಏತಕ್ಕಾಗಿ ಉತ್ಪನ್ನವಾಗಿವೆ, ಹೇಗಿವೆ ಮತ್ತು ಯಾರಿಂದ ಪವಿತ್ರಗೊಳಿಸಲ್ಪಡುತ್ತವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಸುತಪಾವ್ನೇ ಸುತಾ ಇಮೇ ಶುಚಯೋ ಯಂತಿ ವೀತಯೇ । ಸೋಮಾಸೋ ದಧ್ಯಾಶಿರಃ ॥೫॥

ಪದಾರ್ಥ:- ಸರ್ವರಕ್ಷಕನಾದ ಪರಮಾತ್ಮನು **[ಸುತಪಾವ್ನೇ]** ಅವನಿಂದ ಸೃಷ್ಟಿಸಲ್ಪಟ್ಟ ಸೃಷ್ಟಿಯನ್ನು ರಕ್ಷಿಸುವ ಜೀವಮಾತ್ರರಿಗೆ ಮತ್ತು **[ವೀತಯೇ]** ಜೀವಮಾತ್ರರು ತಾವು ಮಾಡಿದ ಕರ್ಮಗಳ ಫಲವನ್ನು ಅನುಭವಿಸಲು ಹಾಗೂ ಪರಮಾತ್ಮನ ವಾಸ್ತವಿಕ ಸ್ವರೂಪವನ್ನು ತಿಳಿದು ಸಂಪೂರ್ಣ ಸತ್ಯ ಜ್ಞಾನ ಹಾಗೂ ಶ್ರೇಷ್ಠಕರ್ಮಗಳ ಮೂಲಕ ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳುವುದಕ್ಕೋಸ್ಕರ **[ದಧ್ಯಾಶಿರಃ]** ಎಲ್ಲಿ ಸಾಧನೆಯ ಮೂಲಕ ಸಮಸ್ತ ಕರ್ಮಫಲಗಳು ನಾಶವಾಗುತ್ತವೆಯೋ ಅಂತಹ **[ಇಮೇ ಶುಚಯಃ]** ಈ ಪವಿತ್ರವಾದ ಸಮಸ್ತ **[ಸೋಮಾಸಃ]** ಸೂರ್ಯ, ಚಂದ್ರ, ನಕ್ಷತ್ರ ಹಾಗೂ ವಾಯು, ಜಲ, ಪೃಥ್ವಿ, ಅಗ್ನಿ, ಆಕಾಶಾದಿಗಳಿಂದ ನಿರ್ಮಿತವಾದ ಈ ಕಾರ್ಯ ಜಗತ್ತನ್ನು ಅತ್ಯಂತ ಸುಂದರವಾಗಿ **[ಸುತಾ]** ಸೃಷ್ಟಿಸಿದ್ದಾನೆ. ಯಾರು ಪವಿತ್ರವಾದ ಗುಣಕರ್ಮ ಸ್ವಭಾವವುಳ್ಳವರಾಗಿ ಪುರುಷಾರ್ಥಿಗಳಾಗಿ ಪರಮಾತ್ಮನ ಸುಂದರವಾದ ಸೃಷ್ಟಿಯ ಪಾವಿತ್ರ್ಯತೆಯನ್ನು ಉಳಿಸಿಕೊಂಡು ಅದರ ಸದುಪಯೋಗವನ್ನು ಮಾಡುತ್ತಾರೋ **[ಯಂತಿ]** ಅವರು ಈ ಸೃಷ್ಟಿಯಲ್ಲಿ ಸಮಸ್ತ ಸುಖಭೋಗೈಶ್ವರ್ಯಗಳನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಭಾವಾರ್ಥ:- ಪರಮಾತ್ಮನು ಅವನಿಂದ ಸೃಷ್ಟಿಸಲ್ಪಟ್ಟ ಸೃಷ್ಟಿಯನ್ನು ರಕ್ಷಿಸುವ ಜೀವಮಾತ್ರರಿಗೆ ಮತ್ತು ತಾವು ಮಾಡಿದ ಕರ್ಮಗಳ ಫಲವನ್ನು ಅನುಭವಿಸಲು ಹಾಗೂ ಪರಮಾತ್ಮನ ವಾಸ್ತವಿಕ ಸ್ವರೂಪವನ್ನು ತಿಳಿದು ಸಂಪೂರ್ಣ ಸತ್ಯಜ್ಞಾನ ಮತ್ತು ಶ್ರೇಷ್ಠಕರ್ಮಗಳ ಮೂಲಕ ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳುವುದಕ್ಕೋಸ್ಕರ, ಎಲ್ಲ ಸಾಧನೆಯ ಮೂಲಕ ಸಮಸ್ತ ಕರ್ಮಫಲಗಳು ನಾಶವಾಗುತ್ತವೆಯೋ ಅಂತಹ ಪವಿತ್ರವಾದ ಸಮಸ್ತ ಸೂರ್ಯ, ಚಂದ್ರ, ನಕ್ಷತ್ರ ಹಾಗೂ ವಾಯು, ಜಲ, ಅಗ್ನಿ, ಪೃಥ್ವಿ, ಆಕಾಶ ಇತ್ಯಾದಿಗಳಿಂದ ಈ ಕಾರ್ಯ ಜಗತ್ತನ್ನು ಸೃಷ್ಟಿಸಿದ್ದಾನೆ. ಯಾರು ಪವಿತ್ರವಾದ ಗುಣಕರ್ಮ ಸ್ವಭಾವವುಳ್ಳವರಾಗಿ, ಪುರುಷಾರ್ಥಿಗಳಾಗಿ ಪರಮಾತ್ಮನ ಸೃಷ್ಟಿಯ ಪಾವಿತ್ರ್ಯತೆಯನ್ನು ಉಳಿಸಿಕೊಂಡು ಅದರ ಸಂಪೂರ್ಣ ಸದುಪಯೋಗವನ್ನು ಮಾಡುತ್ತಾರೋ ಅವರು ಈ

ಸೃಷ್ಟಿಯಲ್ಲಿ ಸಮಸ್ತ ಸುಖಭೋಗೈಶ್ವರ್ಯಗಳನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ಪರಮಾತ್ಮನು ನಮ್ಮೆಲ್ಲರನ್ನು, ಅವನ ಸೃಷ್ಟಿಯನ್ನು ಸಂರಕ್ಷಿಸುವುದಕ್ಕೋಸ್ಕರ ಸೃಷ್ಟಿಸಿದ್ದಾನೆ. ಅವನ ಸೃಷ್ಟಿಯು, ಸೃಷ್ಟಿಯಲ್ಲಿರುವ ಸಮಸ್ತ ಪದಾರ್ಥಗಳು ಅವನಂತೆಯೇ ಪವಿತ್ರವಾಗಿವೆ. ಯಾರು ಸೃಷ್ಟಿಯ ಪಾವಿತ್ರ್ಯತೆಯನ್ನು ಉಳಿಸಿಕೊಂಡು ಈ ಸುಂದರವಾದ ಸೃಷ್ಟಿಯನ್ನು ಸಂರಕ್ಷಿಸಿ ಅದರ ಸದುಪಯೋಗವನ್ನು ಮಾಡುತ್ತಾರೋ ಅವರು ಈ ಸೃಷ್ಟಿಯಲ್ಲಿ ಸಮಸ್ತ ಸುಖಭೋಗೈಶ್ವರ್ಯಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಅದೇ ರೀತಿ ಈ ಸೃಷ್ಟಿಯು ಪಲಾಯನವಾದಿಗಳಿಗೆ ಹಾಗೂ ಹೇಡಿಗಳಿಗೋಸ್ಕರ ಸೃಷ್ಟಿಸಿಲ್ಲ. ಯಾರು ಪುರುಷಾರ್ಥಿಗಳಾಗಿ ಸಾಧನೆಯನ್ನು ಮಾಡುತ್ತಾರೋ, ಭಗವಂತನ ಸ್ವರೂಪವನ್ನು ತಿಳಿದು ಶ್ರೇಷ್ಠಕರ್ಮಗಳ ಮೂಲಕ ತಮ್ಮ ಮಾನವ ಜನ್ಮವನ್ನು ಸಾರ್ಥಕವನ್ನಾಗಿ ಮಾಡಿಕೊಳ್ಳುತ್ತಾರೋ ಅಂತಹ ಶ್ರೇಷ್ಠ ಸುಸಂಸ್ಕೃತ ಮಾನವರಿಗೋಸ್ಕರ ಈ ಸೃಷ್ಟಿಯನ್ನು ಸೃಷ್ಟಿಸಿದ್ದಾನೆ. ಜೀವಮಾತ್ರರು ಈ ಸೃಷ್ಟಿಯಲ್ಲಿಯೇ ಜೀವಿಸುತ್ತಾ ತಮ್ಮ ಸಮಸ್ತ ಕರ್ಮ ಫಲಗಳನ್ನು ನಾಶ ಮಾಡಿ ಗುಣಾತೀತರಾಗಿ ಅಮರತ್ವವನ್ನು ಹೊಂದಬೇಕು. ಇದೇ ಭಗವಂತನ ಆದೇಶವಾಗಿದೆ.

ಜೀವಾತ್ಮನು ಏನನ್ನು ಮಾಡಿ ಪೂರ್ವೋಕ್ತ ಉಪಯೋಗದ ಗ್ರಹಣ ಮಾಡಲು ಸಮರ್ಥನಾಗುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತ್ವಂ ಸುತಸ್ಯ ಪೀತಯೇ ಸದ್ಯೋ ವೃದ್ಧೋ ಅಜಾಯಥಾಃ । ಇಂದ್ರ ಜ್ಯೈಷ್ಠ್ಯಾಯ ಸುಕ್ರತೋ ॥೬॥

ಪದಾರ್ಥ:- ಹೇ **[ಇಂದ್ರ]** ಸಕಲ ಹಾಗೂ ಸಂಪೂರ್ಣ ಜ್ಞಾನೈಶ್ವರ್ಯಗಳಿಂದ ಕೂಡಿದ **[ಸುಕ್ರತೋ]** ಶ್ರೇಷ್ಠಕರ್ಮಗಳನ್ನೇ ಮಾಡುವ ಉತ್ತಮ ಮೇಧಾಬುದ್ಧಿಯುಳ್ಳ ವಿದ್ವಾಂಸನೇ ! **[ತ್ವಂ]** ನೀನು **[ಸದ್ಯಃ]** ಶೀಘ್ರವಾಗಿ **[ಸುತಸ್ಯ]** ಭಗವಂತನಿಂದ ಸೃಷ್ಟಿಸಲ್ಪಟ್ಟ ಸಕಲ ಪದಾರ್ಥ ಸಮೂಹಗಳನ್ನು **[ಪೀತಯೇ]** ಗ್ರಹಣ ಮಾಡಿ ಅವೆಲ್ಲವನ್ನು ಉತ್ತಮವಾದ ರೀತಿಯಲ್ಲಿ ಸಂರಕ್ಷಿಸುವುದಕ್ಕೋಸ್ಕರ ಹಾಗೂ **[ಜ್ಯೈಷ್ಠ್ಯಾಯ]** ಸಕಲ ಶ್ರೇಷ್ಠಕರ್ಮಗಳನ್ನು ಅನುಷ್ಠಾನದಲ್ಲಿ ತರುವುದಕ್ಕೋಸ್ಕರ **[ವೃದ್ಧಃ]** ಸಮಸ್ತ ಶುಭಗುಣಗಳನ್ನು ಗ್ರಹಣ ಮಾಡಿ ನಿಸ್ವಾರ್ಥಭಾವದಿಂದ ಜೀವಮಾತ್ರರ ಉಪಕಾರವನ್ನೂ ಕಲ್ಯಾಣವನ್ನು ಮಾಡುವುದರಲ್ಲಿ ಶ್ರೇಷ್ಠನಾಗಿ, ಸರ್ವಾಗ್ರಣಿಯಾಗಿ **[ಅಜಾಯಥಾಃ]** ಪ್ರಾದುರ್ಭೂತನಾಗು. ಅರ್ಥಾತ್ ಸಮಸ್ತ ಜನರ ಮುಂದೆ ಪ್ರಕಟನಾಗು. ಎಲ್ಲರನ್ನೂ ಪ್ರತಿದಿನವೂ ಸಂಪರ್ಕಿಸು.

ಭಾವಾರ್ಥ:- ಮಾನವ ಮಾತ್ರರಿಗೆ ಭಗವಂತನು ಈ ರೀತಿ ಉಪದೇಶಿಸುತ್ತಾನೆ. ಎಲೈ ಮಾನವನೇ ! ಎಷ್ಟರತನಕ ನೀನು ಸಕಲ ಹಾಗೂ ಸಂಪೂರ್ಣ ಜ್ಞಾನವನ್ನು ಪಡೆದು ಸಮಸ್ತ ಶುಭಗುಣಗ್ರಾಹಿಯಾಗಿ, ಉತ್ತಮ ಮೇಧಾಬುದ್ಧಿಯುಳ್ಳವನಾಗಿ, ಉತ್ತಮವಾದ ರೀತಿಯಲ್ಲಿ ಪುರುಷಾರ್ಥಿಯಾಗಿ, ಪರೋಪಕಾರಿಯಾಗುವುದಿಲ್ಲವೋ, ಸಮಸ್ತ ಶ್ರೇಷ್ಠಕರ್ಮಗಳನ್ನು ಅನುಷ್ಠಾನದಲ್ಲಿ ತಂದು ಜೀವಮಾತ್ರರ ಶುಭೇಚ್ಛು ಆಗುವುದಿಲ್ಲವೋ ಅಷ್ಟರತನಕ ಮಾನವತ್ವವನ್ನು ಹೊಂದಲಾರೆ ಹಾಗೂ ನೀನೆಂದಿಗೂ ಸಂಪೂರ್ಣ ಸರ್ವೋತ್ತಮ ಸುಖವನ್ನೂ, ಆನಂದವನ್ನೂ ಪ್ರಾಪ್ತ ಮಾಡಿಕೊಳ್ಳಲಾರೆ. ಆದುದರಿಂದ ನೀನು ಸದಾ ಸರ್ವದಾ-ಸರ್ವಥಾ ಧಾರ್ಮಿಕನಾಗಿಯೂ, ಪುರುಷಾರ್ಥಿಯಾಗಿಯೂ, ಜ್ಞಾನವಂತನಾಗಿಯೂ, ಪರೋಪಕಾರಿಯಾಗಿಯೂ ಬಾಳನ್ನು ಬೆಳಗಿಸಿಕೊ.

ಮೇಲೆ ಹೇಳಿದ ಆಚರಣೆಯನ್ನು ಮಾಡುವ ಜೀವಾತ್ಮನಿಗೆ ಯಾರು ಆಶೀರ್ವಾದ ಮಾಡುತ್ತಾರೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ಆ ತ್ವಾ ವಿಶಂತ್ವಾಶವಃ ಸೋಮಾಸ ಇಂದ್ರ ಗಿರ್ವಣಃ । ಶಂ ತೇ ಸಂತು ಪ್ರಚೇತಸೇ ॥೭॥

ಪದಾರ್ಥ:- ಧಾರ್ಮಿಕನಾದ [ಗಿರ್ವಣಃ] ಅತ್ಯಂತ ಶ್ರೇಷ್ಠಗುಣಗಳುಳ್ಳ ಹಾಗೂ ಸರ್ವರಿಂದಲೂ ಅತ್ಯಂತ ಪ್ರಶಂಸಿಸಲ್ಪಡುವ [ಇಂದ್ರ] ಸಕಲ ಸಂಪೂರ್ಣ ಜ್ಞಾನೈಶ್ವರ್ಯಗಳಿಂದ ಕೂಡಿದ ಶ್ರೇಷ್ಠ ವಿದ್ವಾಂಸನೇ ! **[ಆ ಶವಃ ಸೋಮಾಸಃ]** ಅತ್ಯಂತ ಶೀಘ್ರಗತಿಯಿಂದ ಕೂಡಿದ ಹಾಗೂ ಉತ್ತಮ ಗುಣಗಳುಳ್ಳ ಸಮಸ್ತ ಶ್ರೇಷ್ಠ ಪದಾರ್ಥಗಳು ಹಾಗೂ ಸಕಲ ಸಂಪತ್ತು **[ತ್ವಾ ಆ ವಿಶಂತು]** ನಿನಗೆ ಸಮಸ್ತ ದಿಕ್ಕುಗಳಿಂದ ಪ್ರಾಪ್ತವಾಗಲಿ. ಈ ರೀತಿ ಸಕಲ ಸಂಪತ್ತನ್ನು ಪ್ರಾಪ್ತ ಮಾಡಿಕೊಂಡ **[ಪ್ರಚೇತಸೇ]** ನಿರಹಂಕಾರಿ, ನಿಗರ್ವಿ, ನಿಸ್ವಾರ್ಥಿ, ಉತ್ತಮ ಜ್ಞಾನಿ ಹಾಗೂ ಪರೋಪಕಾರಿಯಾದ **[ತೇ]** ನಿನಗೆ **[ಶಂ ಸಂತು]** ನನ್ನ ಅನುಗ್ರಹದಿಂದ ಸಕಲೈಶ್ವರ್ಯಗಳು ಸುಖ ಶಾಂತಿ ಹಾಗೂ ನೆಮ್ಮದಿಯನ್ನು ನೀಡಲಿ. ನಿನ್ನ ಸಂಪೂರ್ಣ ಕಲ್ಯಾಣವಾಗಲಿ.

ಭಾವಾರ್ಥ:- ಪರಮಾತ್ಮನು ಪುಣ್ಯಾತ್ಮರಿಗೆ ಆಶೀರ್ವಾದವನ್ನೂ, ವರವನ್ನೂ ಈ ರೀತಿ ಕೊಡುತ್ತಾನೆ - ಧಾರ್ಮಿಕವಾದ ಅತ್ಯಂತ ಶ್ರೇಷ್ಠ ಗುಣಗಳುಳ್ಳ ಹಾಗೂ ಸರ್ವರಿಂದಲೂ ಅತ್ಯಂತ ಪ್ರಶಂಸಿಸಲ್ಪಡುವ ಸಕಲ ಸಂಪೂರ್ಣ ಜ್ಞಾನೈಶ್ವರ್ಯಗಳಿಂದ ಕೂಡಿದ ಶ್ರೇಷ್ಠ ವಿದ್ವಾಂಸನೇ ! ಅತ್ಯಂತ ಶೀಘ್ರಗತಿಯಿಂದ ಕೂಡಿದ ಹಾಗೂ ಉತ್ತಮ ಗುಣಗಳುಳ್ಳ ಸಮಸ್ತ ಶ್ರೇಷ್ಠ ಪದಾರ್ಥಗಳೂ ಹಾಗೂ ಸಕಲ ಸಂಪತ್ತು ನಿನಗೆ ಎಲ್ಲಾ ದಿಕ್ಕುಗಳಿಂದ, ಎಲ್ಲಾ ರೀತಿಯಲ್ಲಿ ಪ್ರಾಪ್ತವಾಗಲಿ. ಈ ರೀತಿ ಸಕಲ ಸಂಪತ್ತನ್ನು ಪ್ರಾಪ್ತಮಾಡಿಕೊಂಡ ನಿರಹಂಕಾರಿ, ನಿಗರ್ವಿ, ನಿಸ್ವಾರ್ಥಿ, ಜ್ಞಾನಿ ಹಾಗೂ ಪರೋಪಕಾರಿಯಾದ ನಿನಗೆ ನನ್ನ ಅನುಗ್ರಹದಿಂದ ಸಕಲೈಶ್ವರ್ಯಗಳು ಸುಖ ಶಾಂತಿ ಮತ್ತು ನೆಮ್ಮದಿಯನ್ನೇ ನೀಡಲಿ. ನಿನ್ನ ಸಂಪೂರ್ಣ ಕಲ್ಯಾಣವಾಗಲಿ.

ಮೇಲಿನ ಅರ್ಥವನ್ನೇ ಪ್ರಕಾಶಗೊಳಿಸುವ ಇಂದ್ರ ಶಬ್ದದ ವಿವರಣೆಯನ್ನು ಇಲ್ಲಿ ಮಾಡಲಾಗಿದೆ.

ತ್ವಾಂ ಸ್ತೋಮಾ ಅವೀವೃಧನ್ ತ್ವಾಮುಕ್ಥಾ ಶತಕ್ರತೋ । ತ್ವಾಂ ವರ್ಧಂತು ನೋ ಗಿರಃ ॥೮॥

ಪದಾರ್ಥ:- [ಶತಕ್ರತೋ] ಸರ್ವಶಕ್ತ ಹಾಗೂ ಸರ್ವಜ್ಞನಾದ ಪರಮಾತ್ಮ! **[ಸ್ತೋಮಾಃ]** ಋಗ್ವೇದ, ಯಜುರ್ವೇದ ಹಾಗೂ ಅಥರ್ವವೇದ ಋಚೆಗಳು, ಮಂತ್ರಗಳು **[ತ್ವಾಂ ಅವೀವೃಧನ್]** ನಿನ್ನನ್ನು ವರ್ಧಿಸುತ್ತವೆ. ಅರ್ಥಾತ್ ಪ್ರತಿಯೊಂದು ಕಣಕಣದಲ್ಲಿ, ಅಣುಅಣುವಿನಲ್ಲಿಯೂ ನಿನ್ನ ಸರ್ವವ್ಯಾಪಕ ಸ್ವರೂಪವನ್ನೂ, ನಿನ್ನ ಸರ್ವಶಕ್ತಿತ್ವದ ಹಾಗೂ ಸರ್ವಜ್ಞತ್ವದ ಪರಿಚಯವನ್ನು ಮಾಡುತ್ತವೆ ಹಾಗೂ ಬೋಧಿಸುತ್ತವೆ. **[ತ್ವಾಂ ಉಕ್ಥಾ]** ನಿನ್ನ ಸ್ತುತಿಯನ್ನು ಮಾಡುವ, ನಿನ್ನ ಉಪಾಸನೆಯನ್ನು ಮಾಡುವ ರೀತಿಯನ್ನು ತಿಳಿಯಪಡಿಸುವ ಸಾಮಗಾನಗಳು ನಮ್ಮೆಲ್ಲರ ಅಂತಃಕರಣದಲ್ಲಿ ಉಪಾಸನೆಯ ಮೂಲಕ ವ್ಯಾಪಿಸುವಂತೆ ಮಾಡುತ್ತವೆ. **[ನಃ ಗಿರಃ]** ನಮ್ಮೆಲ್ಲರ ಪವಿತ್ರವಾದ ವಾಣಿ **[ತ್ವಾಂ ವರ್ಧಂತು]** ನಿನ್ನನ್ನು ವರ್ಧಿಸಲಿ. ಅರ್ಥಾತ್ ಪ್ರತಿಕ್ಷಣವೂ ನಿನ್ನನ್ನು, ನಿನ್ನ ಗುಣಗಳನ್ನು ಕೊಂಡಾಡಲಿ. ನಿನ್ನ ಸರ್ವವ್ಯಾಪಕ ಹಾಗೂ ಸರ್ವಜ್ಞತ್ವದ ವಾಸ್ತವಿಕ ಸ್ವರೂಪವನ್ನು ಮತ್ತು ನಿನ್ನ ಆನಂದ ಸ್ವರೂಪವನ್ನು ಹಾಗೂ ನಿನ್ನ ಉಪಾಸನೆಯ ವಿಧಾನವನ್ನು ಸರಿಯಾಗಿ ತಿಳಿದುಕೊಂಡು ಇತರರಿಗೂ ತಿಳಿಯಪಡಿಸಲಿ. ತನ್ಮೂಲಕ ಎಲ್ಲರೂ ಸುಜ್ಞಾನಿಗಳೂ ಹಾಗೂ ನಿನ್ನ ಉಪಾಸಕರೂ ಆಗಿ ಆನಂದವನ್ನನುಭವಿಸಲಿ.

ಭಾವಾರ್ಥ:- ಸರ್ವಶಕ್ತ ಹಾಗೂ ಸರ್ವಜ್ಞನಾದ ಪರಮಾತ್ಮ ! ಋಗ್ವೇದ, ಯಜುರ್ವೇದ ಮತ್ತು ಅಥರ್ವವೇದದ ಮಂತ್ರಗಳು, ಪ್ರತಿಯೊಂದು ಕಣಕಣದಲ್ಲಿಯೂ, ಪ್ರತಿಯೊಂದು ಅಣುಅಣುವಿನಲ್ಲಿಯೂ ಇರುವ ನಿನ್ನ ಸರ್ವವ್ಯಾಪಕ ಸ್ವರೂಪವನ್ನೂ ನಿನ್ನ ಸರ್ವಶಕ್ತಿತ್ವ ಹಾಗೂ ಸರ್ವಜ್ಞತ್ವದ ಪರಿಚಯವನ್ನು ಮಾಡುತ್ತವೆ ಹಾಗೂ ಬೋಧಿಸುತ್ತವೆ. ನಿನ್ನ ಸ್ತುತಿಯನ್ನು ಮಾಡುವ ಹಾಗೂ ನಿನ್ನ ಉಪಾಸನಾ ವಿಧಾನವನ್ನು ಬೋಧಿಸುವ ಸಾಮಗಾನಗಳು ಉಪಾಸನೆಯ ಮೂಲಕ ನಮ್ಮೆಲ್ಲರ ಅಂತಃಕರಣದಲ್ಲಿ ವ್ಯಾಪಿಸುವಂತೆ ಸದಾಕಾಲ ವಿರಾಜಮಾನನಾಗುವಂತೆ ಮಾಡುತ್ತವೆ. ನಮ್ಮೆಲ್ಲರ ಪವಿತ್ರವಾದ ವಾಣಿಯು ಸದಾಕಾಲ ನಿನ್ನ ಗುಣಗಳನ್ನು ಕೊಂಡಾಡಲಿ. ನಿನ್ನ ವಾಸ್ತವಿಕ ಸ್ವರೂಪವನ್ನೂ, ಆನಂದ ಸ್ವರೂಪವನ್ನೂ, ನಿನ್ನ ಉಪಾಸನಾ ವಿಧಾನವನ್ನೂ ಸರಿಯಾಗಿ ತಿಳಿದು ಇತರರಿಗೂ ತಿಳಿಯಪಡಿಸಲಿ. ತನ್ಮೂಲಕ ಎಲ್ಲರೂ ಸುಜ್ಞಾನಿಗಳೂ, ನಿನ್ನ ಉಪಾಸಕರೂ ಆಗಿ ಆನಂದವನ್ನನುಭವಿಸಲಿ.

ಆ ಜಗದೀಶ್ವರನು ನಮಗಾಗಿ ಏನನ್ನು ಮಾಡಬೇಕು ಎಂಬುದನ್ನು ಇಲ್ಲಿ ಹೇಳಲಾಗಿದೆ.

ಅಕ್ಷಿತೋತಿಃ ಸನೇದಿಮಂ ವಾಜಮಿಂದ್ರಃ ಸಹಸ್ರಿಣಮ್ । ಯಸ್ಮಿನ್ ವಿಶ್ವಾನಿ ಪೌಂಸ್ಯಾ ॥೯॥

ಪದಾರ್ಥ:- [ಅಕ್ಷಿತೋತಿಃ] ಎಂದಿಗೂ ನಶಿಸದ ಅನಂತ ಜ್ಞಾನಿಯಾದ **[ಇಂದ್ರಃ]** ಸರ್ವೈಶ್ವರ್ಯಪ್ರದ ಪರಮಾತ್ಮ ! ನೀನು ನಮ್ಮೆಲ್ಲರ ಮೇಲೆ ಕೃಪೆದೋರು. **[ಯಸ್ಮಿನ್]** ಯಾವುದರಲ್ಲಿ **[ವಿಶ್ವಾನಿ ಪೌಂಸ್ಯಾ]** ಸಮಸ್ತ ಬಲವೂ ವ್ಯಾಪಿಸಿಕೊಂಡಿವೆಯೋ ಅರ್ಥಾತ್ ಯಾವ ಕರ್ಮಗಳನ್ನು ಮಾಡುವುದರಿಂದ ನಮ್ಮೆಲ್ಲರಿಗೆ ಶಾರೀರಿಕ ಬಲವೂ, ಮಾನಸಿಕ ಬಲವೂ, ಆತ್ಮಿಕ ಬಲವೂ, ಧೈರ್ಯ ಸ್ಥೈರ್ಯ ಸಾಹಸಗಳು ಪ್ರಾಪ್ತವಾಗುತ್ತವೆಯೋ ಅಂತಹ ಶ್ರೇಷ್ಠ ಕರ್ಮಗಳನ್ನೇ **[ಸನೇತ್]** ನಮ್ಮಿಂದ ಮಾಡಿಸು. ಅರ್ಥಾತ್ ಸದಾ ನಾವು ಮಾಡುವಂತಾಗಲಿ. ಅದೇ ರೀತಿ **[ಇಮಂ ಸಹಸ್ರಿಣಂ]** ಸಂಪೂರ್ಣ ಸುಖ ಪ್ರಾಪ್ತಿಯಾಗುವಂತಹ ಹಾಗೂ ಮೋಕ್ಷಾನಂದವು ಲಭಿಸುವಂತಹ **[ವಾಜಂ]** ಯಾವ ಸರ್ವೋತ್ತಮ ಜ್ಞಾನವಿದೆಯೋ ಇವೆಲ್ಲವೂ ನಮಗೆ ಲಭಿಸುವಂತೆ ಮಾಡು, **[ಸನೇತ್]** ನಮ್ಮೆಲ್ಲರಿಗೂ ಪ್ರಾಪ್ತವಾಗಲಿ.

ಭಾವಾರ್ಥ:- ಅನಂತ ಜ್ಞಾನ ಹಾಗೂ ಅನಂತ ಐಶ್ವರ್ಯವುಳ್ಳ ಪರಮಾತ್ಮ ! ನಿನ್ನ ಕೃಪೆಯಿಂದ ನಾವೆಲ್ಲರೂ ಯಾವ ಕರ್ಮಗಳನ್ನು ಮಾಡುವುದರಿಂದ ಸಮಸ್ತ ಶಾರೀರಿಕ, ಮಾನಸಿಕ ಹಾಗೂ ಆತ್ಮಿಕ ಬಲವು ಲಭಿಸುತ್ತದೆಯೋ ಮತ್ತು ಯಾವ ಕರ್ಮಗಳನ್ನು ಮಾಡುವುದರಿಂದ ನಮ್ಮಲ್ಲಿ ಧೈರ್ಯ, ಸ್ಥೈರ್ಯ, ಸಾಹಸಗಳುಂಟಾಗುತ್ತವೆಯೋ ಅಂತಹ ಶ್ರೇಷ್ಠ ಕರ್ಮಗಳನ್ನೇ ಮಾಡುವಂತಾಗಲಿ. ಅದೇ ರೀತಿ ಯಾವುದರಿಂದ ಸಂಪೂರ್ಣ ಸುಖ ಪ್ರಾಪ್ತಿಯಾಗುತ್ತದೆಯೋ ಹಾಗೂ ಮೋಕ್ಷಾನಂದವು ಲಭಿಸುತ್ತದೆಯೋ ಯಾವುದು ನಮ್ಮೆಲ್ಲರ ಅಭ್ಯುದಯ ಮತ್ತು ನಿಃಶ್ರೇಯಸ್ಸಿಗೆ ಕಾರಣೀಭೂತವಾಗುತ್ತದೆಯೋ ಅಂತಹ ಸರ್ವೋತ್ತಮ ಜ್ಞಾನವು ನಮ್ಮೆಲ್ಲರಿಗೆ ಪ್ರಾಪ್ತವಾಗಲಿ.

ಯಾರ ರಕ್ಷಣೆಯಿಂದ ಪುರುಷಾರ್ಥ ಸಿದ್ಧವಾಗುತ್ತದೆ ಎಂಬುದನ್ನು ಇಲ್ಲಿ ಹೇಳಲಾಗುತ್ತದೆ

ಮಾ ನೋ ಮರ್ತಾ ಅಭಿ ದ್ರುಹನ್ ತನೂನಾಮಿಂದ್ರ ಗಿರ್ವಣಃ । ಈಶಾನೋ ಯವಯಾ ವಧಮ್ ॥೧೦॥

ಪದಾರ್ಥ:- [ಗಿರ್ವಣಃ] ವೇದಮಂತ್ರಾದಿಗಳಿಂದ ಸ್ತವನ ಮಾಡಲ್ಪಡುವ ಹಾಗೂ ಎಲ್ಲರಿಂದ ಸ್ತುತಿಸಲ್ಪಡುವ [ಇಂದ್ರ] ಸರ್ವಶಕ್ತನಾದ ಪರಮೇಶ್ವರನೇ ! **[ತ್ವಂ ಈಶಾನಃ]** ನೀನು ನಮ್ಮೆಲ್ಲರ ಸ್ವಾಮಿಯೂ ಸಕಲ ಜಗದೊಡೆಯನೂ ಆಗಿದ್ದೀಯೆ. **[ನಃ]** ನಮ್ಮೆಲ್ಲರ **[ತನೂನಾಂ]** ಶರೀರದ ಹಾಗೂ ಸಮಸ್ತ ಪದಾರ್ಥಗಳ **[ವಧಂ ಮಾ ಯವಯಾ]** ನಾಶವಾಗಲು ಬಿಡಬೇಡ. ಅರ್ಥಾತ್ ನಿನ್ನ ಕೃಪೆಯಿಂದ ನಮ್ಮ ಶರೀರದ ಹಾಗೂ ಸಕಲ ಪದಾರ್ಥಗಳ ನಾಶವಾಗದಿರಲಿ. **[ಇಮೇ ಮರ್ತಾಃ]** ಇವೆಲ್ಲಾ ಮನುಷ್ಯರು ದುಷ್ಟ ಸ್ವಭಾವದಿಂದ ಹಾಗೂ ದ್ವೇಷ ಭಾವನೆಯಿಂದ **[ನಃ]** ನಮ್ಮೆಲ್ಲರನ್ನು **[ಮಾ ಅಭಿದ್ರುಹನ್]** ನಾಶ ಮಾಡದಿರಲಿ.

ಭಾವಾರ್ಥ:- ಸರ್ವರಿಂದ ಸ್ತುತಿಸಲ್ಪಡುವ ಸರ್ವಶಕ್ತನಾದ ಪರಮಾತ್ಮ ! ನೀನು ನಮ್ಮೆಲ್ಲರ ಸ್ವಾಮಿಯೂ ಸಕಲ ಜಗದೊಡೆಯನೂ ಆಗಿದ್ದೀಯೆ. ನಿನ್ನ ಕೃಪೆಯಿಂದ ನಮ್ಮೆಲ್ಲರ ಶರೀರದ ಹಾಗೂ ಸಕಲ ಪದಾರ್ಥಗಳ ನಾಶವಾಗದಿರಲಿ. ಇವೆಲ್ಲಾ ಮನುಷ್ಯರು ದುಷ್ಟ ಸ್ವಭಾವದಿಂದ ಹಾಗೂ ದ್ವೇಷಭಾವನೆಯಿಂದ ನಮ್ಮೆಲ್ಲರನ್ನು ನಾಶ ಮಾಡದಿರಲಿ. ನೈವ ಕೋಪಿ ಮನುಷ್ಯೋಽನ್ಯಾಯೇನ ಕಂಚಿದಪಿ ಪ್ರಾಣಿನಂ ಹಿಂಸಿತುಮಿಚ್ಛೇತ್ ಕಿಂತು ಸರ್ವೈಸಹ ಮಿತ್ರತಾಮಾಚರೇತ್ । ಯಥೇಶ್ವರಃ ಕಂಚಿದಪಿ ನಾಭಿದ್ರುಹ್ಯತಿ ತಥೈವ ಸರ್ವೈರ್ಮನುಷ್ಯೈಃ ಅನುಷ್ಠಾತವ್ಯಮ್ ॥

ಈ ಪಂಚಮ ಸೂಕ್ತದಲ್ಲಿ ಸಮಸ್ತ ಮಾನವರು ಯಾವ ರೀತಿ ಪುರುಷಾರ್ಥವನ್ನು ಹಾಗೂ ಪರೋಪಕಾರವನ್ನು ಮಾಡಬೇಕು ಎಂದು ವರ್ಣಿಸಲಾಗಿದೆ. ಹೀಗಾಗಿ ಇದರೊಂದಿಗೆ ಚತುರ್ಥ ಸೂಕ್ತದ ಸಂಗತಿ ಇದೆ ಎಂಬುದನ್ನು ಗಮನಿಸಬೇಕು.

ಐದನೆಯ ಸೂಕ್ತ ಸಮಾಪ್ತ

ಸೂಕ್ತ ೬

ಮಂತ್ರಸಂಖ್ಯೆ ೧೦ । ಋಷಿಃ - ಮಧುಚ್ಛಂದಾ ವೈಶ್ವಾಮಿತ್ರಃ । ದೇವತಾ - ಮರುತಃ , ೧-೩, ೧೦ ಇಂದ್ರಃ,

೫, ೭ ಮರುತ ಇಂದ್ರಶ್ಚ , । ಛಂದಃ- ಗಾಯತ್ರೀ । ಸ್ವರಃ - ಷಡ್ಜಃ.

ಯಥಾಯೋಗ್ಯ ಕಾರ್ಯಗಳಲ್ಲಿ ಯಾವ ಪ್ರಕಾರದಿಂದ ಯಾವ ಯಾವ ಪದಾರ್ಥಗಳನ್ನು ಸಂಯುಕ್ತಗೊಳಿಸಬೇಕು

ಎಂಬುದನ್ನು ಈ ಮಂತ್ರದಲ್ಲಿ ಹೇಳಲಾಗಿದೆ.

ಯುಂಜಂತಿ ಬ್ರಧ್ನಮರುಷಂ ಚರಂತಂ ಪರಿ ತಸ್ಥುಷಃ । ರೋಚಂತೇ ರೋಚನಾ ದಿವಿ ॥೧॥

ಪದಾರ್ಥಃ:- ಯಾರು **[ಅರುಷಂ]** ಅತ್ಯಂತ ತೇಜಸ್ಸುಳ್ಳವನೂ, ಅಹಿಂಸಕನೂ ಸರ್ವರಿಗೂ ಸುಖ ಹಾಗೂ ಆನಂದವನ್ನು ಕೊಡುವವನೂ ಆದ **[ಬ್ರಧ್ನಂ]** ಎಲ್ಲರನ್ನೂ ಹಾಗೂ ಎಲ್ಲವನ್ನೂ ವ್ಯವಸ್ಥೆಯಲ್ಲಿ ಮತ್ತು ನಿಯಮದಲ್ಲಿ ಬಂಧಿಸುವವನೂ ಅರ್ಥಾತ್ ಸರ್ವನಿಯಾಮಕನೂ, ಸರ್ವಶ್ರೇಷ್ಠನೂ ಆದ **[ಪರಿತಸ್ಥುಷಃ]** ಸಮಸ್ತ ಸ್ಥಾವರ ಜಂಗಮಗಳಲ್ಲಿ ಸಂಪೂರ್ಣ ಚರಾಚರ ಜಗತ್ತಿನಲ್ಲಿ ವ್ಯಾಪಕನಾಗಿದ್ದು **[ಚರಂತಂ]** ಪ್ರತಿಯೊಂದು ಕಣಕಣಕ್ಕೂ, ಅಣುಅಣುವಿಗೂ ಗತಿಯನ್ನು ಕೊಡುವವನೂ, ಪ್ರಳಯ ಕಾಲದಲ್ಲಿ ಎಲ್ಲವನ್ನೂ ಕಾರಣದಲ್ಲಿ ಲೀನ ಮಾಡುವವನೂ ಆದ ಸರ್ವಾಂತರ್ಯಾಮಿ ಹಾಗೂ ಸರ್ವೋಪಾಸ್ಯನಾದ ಪರಮಾತ್ಮನನ್ನು ತಮ್ಮ ಅಂತಃಕರಣದಲ್ಲಿ **[ಯುಂಜಂತಿ]** ಯೋಗಾಭ್ಯಾಸದಿಂದ ಅಷ್ಟಾಂಗಯೋಗದ ಮೂಲಕ ಪರಿಶುದ್ಧ ಆತ್ಮ ಉಳ್ಳವರಾಗಿ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೋ ಅವರು **[ರೋಚನಾಃ]** ಅತ್ಯಂತ ಕಾಂತಿಯುಳ್ಳವರಾಗಿ ಜ್ಞಾನದಿಂದ ಪ್ರಕಾಶಮಾನರಾಗಿ **[ದಿವಿ]** ಪ್ರಕಾಶ ಸ್ವರೂಪನಾದ ಪರಮಾತ್ಮನಲ್ಲಿ **[ರೋಚಂತೇ]** ಪ್ರಕಾಶಿತರಾಗುತ್ತಾರೆ.

ಯಾರು **[ಅರುಷಂ]** ತನ್ನ ಪ್ರಕಾಶದ ಮೂಲಕ, ಸಮಸ್ತ ಪದಾರ್ಥಗಳನ್ನು ಸರ್ವರಿಗೂ ದೃಷ್ಟಿ ಗೋಚರವಾಗುವಂತೆ ಮಾಡುವ ಹಾಗೂ ಅಗ್ನಿರೂಪನಾದ ಕಾರಣ ರಕ್ತವರ್ಣನಾದ **[ಚರಂತಮ್]** ತನ್ನ ಕಕ್ಷೆಯಲ್ಲಿ ತಿರುಗುತ್ತಾ ತನ್ನ ಕಿರಣಗಳ ಮೂಲಕ ಹಾಗೂ ಪ್ರಕಾಶದ ಮೂಲಕ ಎಲ್ಲರಲ್ಲಿಯೂ ಗತಿಯನ್ನುಂಟು ಮಾಡುವವನೂ ಇತರ ಗ್ರಹಗಳನ್ನು ಪ್ರಕಾಶಿಸುವವನೂ ಆದ **[ಬ್ರಧ್ನಂ]** ಅತ್ಯಂತ ಮಹಿಮೆಯುಳ್ಳ ಸೂರ್ಯನ ಶಕ್ತಿಯನ್ನು ಯಥಾವತ್ತಾಗಿ ಯೋಗ್ಯ ರೀತಿಯಲ್ಲಿ **[ಯುಂಜಂತಿ]** ಅಳವಡಿಸಿಕೊಂಡು ಎಲ್ಲರಿಗೂ ಪ್ರಯೋಜನವಾಗುವಂತೆ ಮಾಡುತ್ತಾರೋ ಅಂತಹ ವಿಜ್ಞಾನಿಗಳು ಶಿಲ್ಪ ವಿದ್ಯಾನಿಷ್ಣಾತರು [ಇಂಜಿನಿಯರರು] **[ದಿವಿ]** ಯಾವ ರೀತಿ ಸೂರ್ಯನ ಬೆಳಕಿನಿಂದ ಎಲ್ಲವೂ ಬೆಳಗುತ್ತವೆಯೋ ಅದೇ ರೀತಿ ತಮ್ಮ ಜ್ಞಾನದ ಮೂಲಕ ಹಾಗೂ ತಮ್ಮ ಸಾಧನೆಯ ಮೂಲಕ **[ರೋಚನಾಃ ರೋಚಂತೇ]** ತಮ್ಮ ಯಶಸ್ಸು ಹಾಗೂ ಕೀರ್ತಿಯಿಂದ ಅತ್ಯಂತ ಗೌರವವನ್ನು ಹೊಂದುತ್ತಾರೆ.

ಭಾವಾರ್ಥ:- ಅಹಿಂಸಕನೂ ಸರ್ವರಿಗೂ ಸುಖ ಹಾಗೂ ಆನಂದವನ್ನುಂಟುಮಾಡುವ ಸರ್ವಶ್ರೇಷ್ಠನಾದ, ಸರ್ವನಿಯಾಮಕನೂ, ಸಂಪೂರ್ಣ ಚರಾಚರ ಜಗತ್ತಿನಲ್ಲಿ ವ್ಯಾಪಕನಾಗಿ ಪ್ರತಿಯೊಂದು ಕಣಕಣದಲ್ಲಿಯೂ ಅಣುಅಣುವಿನಲ್ಲಿಯೂ ಗತಿಯನ್ನುಂಟು ಮಾಡಿ ಪ್ರಳಯ ಕಾಲದಲ್ಲಿ ಎಲ್ಲವನ್ನೂ ಕಾರಣದಲ್ಲಿ ಲೀನ ಮಾಡುವವನೂ ಆದ ಸರ್ವಾಂತರ್ಯಾಮಿ ಪರಮಾತ್ಮನನ್ನು ಯಾರು ತಮ್ಮ ಅಂತಃಕರಣದಲ್ಲಿ, ಅಷ್ಟಾಂಗಯೋಗ [ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ]ದ ಮೂಲಕ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೋ, ಅವರು ಅತ್ಯಂತ ಕಾಂತಿಯುಳ್ಳವರಾಗಿ ಜ್ಞಾನದಿಂದ ಪ್ರಕಾಶಮಾನರಾಗಿ ಪ್ರಕಾಶ ಸ್ವರೂಪನಾದ ಪರಮಾತ್ಮನಲ್ಲಿ ಪ್ರಕಾಶಿತರಾಗುತ್ತಾರೆ.

ಭೌತಿಕಾರ್ಥ:- ಸಮಸ್ತ ಪದಾರ್ಥಗಳನ್ನು ಸರ್ವರಿಗೂ ತನ್ನ ಪ್ರಕಾಶದಿಂದ ದೃಷ್ಟಿಗೋಚರವಾಗುವಂತೆ ಮಾಡುವ, ಮತ್ತು ಅಗ್ನಿರೂಪನಾದ ಕಾರಣ ರಕ್ತವರ್ಣನಾದ, ಸ್ವಯಂ ಗತಿಮಾನನಾಗಿ ತನ್ನ ಪ್ರಕಾಶದಿಂದ ಮತ್ತು

ತಾಪದಿಂದ ಎಲ್ಲರಲ್ಲಿಯೂ ಗತಿಯನ್ನುಂಟು ಮಾಡುವವನೂ, ಇತರ ಗ್ರಹೋಪಗ್ರಹಗಳನ್ನು ಬೆಳಗಿಸುವವನೂ ಆದ ಅತ್ಯಂತ ಮಹಿಮೆಯುಳ್ಳ ಸೂರ್ಯನ ಶಕ್ತಿಯನ್ನು ಯಥಾವತ್ತಾಗಿ ಯೋಗ್ಯ ರೀತಿಯಲ್ಲಿ ಅಳವಡಿಸಿಕೊಂಡು, ಎಲ್ಲರಿಗೂ ಪ್ರಯೋಜನವಾಗುವಂತೆ ಮಾಡುತ್ತಾರೋ ಅಂತಹ ವಿಜ್ಞಾನಿಗಳು, ಶಿಲ್ಪವಿದ್ಯಾನಿಷ್ಣಾತರು ಯಂತ್ರವಿದ್ಯೆಯಲ್ಲಿ ಪರಿಣತರೂ ಆದವರು ತಮ್ಮ ಜ್ಞಾನದ ಮೂಲಕ ಹಾಗೂ ತಮ್ಮ ಸಾಧನೆಯ ಮೂಲಕ ಪ್ರಪಂಚದಲ್ಲಿ ಅತ್ಯಂತ ಗೌರವವನ್ನು ಹೊಂದುತ್ತಾರೆ.

ಸೂರ್ಯನ ಶಕ್ತಿಯಿಂದ (Solar Energy) ನಾವು ವಿದ್ಯುಚ್ಛಕ್ತಿಯನ್ನೂ, ಪ್ರಕಾಶವನ್ನೂ ಪಡೆಯಬಹುದು. ಸಮಸ್ತ ಯಂತ್ರಯಾನಗಳಿಗೂ ಗತಿಯನ್ನುಂಟು ಮಾಡಬಹುದು. ಹಲವು ವಿಧದ ರೋಗಗಳನ್ನು ಸೂರ್ಯ ಚಿಕಿತ್ಸೆಯ ಮೂಲಕ ಗುಣಪಡಿಸಬಹುದು.

ಮೇಲೆ ಹೇಳಿದ ಸೂರ್ಯ ಮೊದಲಾದವುಗಳಿಗೆ ಎಂತಹ ಗುಣಗಳಿವೆ ಮತ್ತು ಅವುಗಳು ಎಲ್ಲೆಲ್ಲಿ ಉಪಯೋಗಿಸಲು

ಯೋಗ್ಯ ಎಂಬುದನ್ನು ಇಲ್ಲಿ ಹೇಳಲಾಗಿದೆ.

ಯುಂಜಂತ್ಯಸ್ಯ ಕಾಮ್ಯಾ ಹರೀ ವಿಪಕ್ಷಸಾ ರಥೇ । ಶೋಣಾ ಧೃಷ್ಣೂ ನೃವಾಹಸಾ ॥೨॥

ಪದಾರ್ಥಃ:- ಯೋಗಿಗಳು **[ಅಸ್ಯರಥೇ]** ಶರೀರವೆಂಬ ಈ ರಥದಲ್ಲಿ **[ಕಾಮ್ಯಾ]** ಸಮಸ್ತ ಕಾಮನೆಗಳನ್ನು **[ಹರೀ]** ಹರಣ ಮಾಡಲು ಸಮರ್ಥವಾದ **[ವಿಪಕ್ಷಸಾ]** ವಿಭಿನ್ನ ಸ್ಥಾನದಲ್ಲಿದ್ದು ವಿಭಿನ್ನ ವಿಷಯಗಳ ಕಡೆಗೆ **[ಶೋಣಾ]** ಗಮನಶೀಲವಾದ **[ಧೃಷ್ಣೂ]** ಅತ್ಯಂತ ದೃಢವಾದ **[ನೃವಾಹಸಾ]** ಮಾನವರನ್ನು ಊರ್ಧ್ವ ಗತಿಗೆ ಕೊಂಡೊಯ್ಯುವಂತಹ ಬುದ್ಧಿ ಹಾಗೂ ಆತ್ಮನನ್ನು ಒಂದಾಗಿ ಮಾಡಿ ಕ್ರೋಢೀಕರಿಸಿ ಯೋಗಸಾಧನೆಯ ಮೂಲಕ **[ಯುಂಜಂತಿ]** ಪರಮಾತ್ಮನಲ್ಲಿ ಸಂಲಗ್ನವಾಗುವಂತೆ ಮಾಡುತ್ತಾರೆ.

ಭೌತಿಕಾರ್ಥ:- [ಅಸ್ಯ ಇಂದ್ರಃ] ಈ ಜಗತ್ತಿನ ವಿಜ್ಞಾನಿಗಳು, ವಿದ್ವಾಂಸರು **[ಕಾಮ್ಯಾ]** ಸಮಸ್ತ ಮನೋಕಾಮನೆಗಳನ್ನು ಈಡೇರಿಸಲು **[ಶೋಣಾ]** ಅತ್ಯಂತ ಗತಿಶೀಲವಾದ **[ಧೃಷ್ಣೂ]** ಅತ್ಯಂತ ದೃಢವಾದ **[ವಿಪಕ್ಷಸಾ]** ವಿವಿಧ ರೀತಿಯ ಚಕ್ರಗಳು ಹಾಗೂ ರೆಕ್ಕೆಗಳು ಇರುವಂತಹ **[ನೃವಾಹಸಾ]** ಮನುಷ್ಯರನ್ನು ಪ್ರಪಂಚದಾದ್ಯಂತ ಕೊಂಡೊಯ್ಯಲು ಸಮರ್ಥವಾದ **[ರಥೇ]** ಭೂ, ಜಲ, ಆಕಾಶದಲ್ಲಿ ಸಂಚರಿಸುವ ವಿವಿಧ ಯಾನಗಳಲ್ಲಿ **[ಹರೀ]** ಆಕರ್ಷಣ ಹಾಗೂ ವೇಗಗುಣಗಳುಳ್ಳ ಸೂರ್ಯಶಕ್ತಿ ಹಾಗೂ ವಿದ್ಯುಚ್ಛಕ್ತಿಯನ್ನು ಅಥವಾ ತೈಲ ಹಾಗೂ ಬಾಷ್ಪವನ್ನು [ಯುಂಜಂತಿ] ಸರಿಯಾದ ರೀತಿಯಲ್ಲಿ ಅಳವಡಿಸಿಕೊಳ್ಳುತ್ತಾರೆ.

ಭಾವಾರ್ಥ:- ಯೋಗಿಗಳು ಈ ಶರೀರದಲ್ಲಿ ಪ್ರತಿಯೊಂದು ಕ್ಷಣಕ್ಷಣದಲ್ಲಿ ಸಮುದ್ರದಲ್ಲಿ ಅಲೆಗಳು ಏಳುವಂತೆ ಏಳುತ್ತಾ ಇರುವ ಹುಚ್ಚು ಬಯಕೆಗಳನ್ನು ಹರಣ ಮಾಡಲು ಸಮರ್ಥವಾದ ಹಾಗೂ ಅತ್ಯಂತ ಗತಿಯುಳ್ಳ ಮತ್ತು ದೃಢವಾದ ಶಕ್ತಿಯುಳ್ಳ ಮಾನವರನ್ನು ಊರ್ಧ್ವಗತಿಗೆ ಹಾಗೂ ಅಭ್ಯುದಯ ಮತ್ತು ನಿಃಶ್ರೇಯಸ್ಸಿಗೆ ಕೊಂಡೊಯ್ಯುವ ಬುದ್ಧಿಯನ್ನು ಮತ್ತು ಆತ್ಮನನ್ನು ಯೋಗಸಾಧನೆಯ ಮೂಲಕ ಪರಮಾತ್ಮನಲ್ಲಿ ಸಂಲಗ್ನವಾಗುವಂತೆ ಮಾಡುತ್ತಾರೆ.

ನಮ್ಮ ಬುದ್ಧಿಯಲ್ಲಿ ಹಲವಾರು ವಿಕಾರಗಳಿದ್ದು ಅವು ನಮ್ಮನ್ನು ದುಷ್ಟಕರ್ಮದ ಕಡೆಗೆ ಪ್ರವೃತ್ತರನ್ನಾಗಿ ಮಾಡುತ್ತವೆ. ಇದಕ್ಕೆ ನಮ್ಮಲ್ಲಿರುವ ಅಜ್ಞಾನ ಹಾಗೂ ಅಪೂರ್ಣ ಜ್ಞಾನವೇ ಕಾರಣವಾಗಿದೆ. ಯಾವಾಗ ನಾವು ಅಷ್ಟಾಂಗಯೋಗದ ಮೂಲಕ ಬುದ್ಧಿಯನ್ನು ನಿರ್ಮಲವನ್ನಾಗಿ ಮಾಡಿ, ಆತ್ಮನನ್ನು ಪವಿತ್ರವನ್ನಾಗಿ ಮಾಡಿ ಇವೆರಡನ್ನೂ ಒಂದಾಗಿ ಸೇರಿಸಿ ಪರಮಾತ್ಮನಲ್ಲಿ ಸಂಲಗ್ನವಾಗುವಂತೆ ಮಾಡುತ್ತೇವೋ ಆಗ ಮೋಕ್ಷಾನಂದವನ್ನು ಅನುಭವಿಸುತ್ತೇವೆ. ಶರೀರದಲ್ಲಿದ್ದು ಕೂಡಾ ಜೀವನ್ಮುಕ್ತರಾಗುತ್ತೇವೆ.

ವಿಜ್ಞಾನಿಗಳು ಈ ಜಗತ್ತಿನಲ್ಲಿ ನಮ್ಮೆಲ್ಲರ ಸಮಸ್ತ ಕಾಮನೆಗಳನ್ನು ಈಡೇರಿಸಲು, ಅತ್ಯಂತ ಗತಿಯುಳ್ಳ ಹಾಗೂ ದೃಢವಾದ, ವಿವಿಧ ರೀತಿಯ ಚಕ್ರಗಳು, ರೆಕ್ಕೆಗಳು ಇರುವಂತಹ, ಮಾನವರನ್ನು ಪ್ರಪಂಚದಾದ್ಯಂತ ಕೊಂಡೊಯ್ಯಲು ಸಮರ್ಥವಾದ, ಭೂ, ಜಲ, ಆಕಾಶದಲ್ಲಿ ಸಂಚರಿಸುವಂತಹ ವಿವಿಧಯಾನಗಳಲ್ಲಿ ಸೂರ್ಯಶಕ್ತಿ ಮತ್ತು ವಿದ್ಯುಚ್ಛಕ್ತಿಯನ್ನು ಅಥವಾ ಪೆಟ್ರೋಲ್ ಡೀಸೆಲ್ ಮೊದಲಾದ ತೈಲವನ್ನು ಮತ್ತು ಬಾಷ್ಪವನ್ನು ಸರಿಯಾದ ರೀತಿಯಲ್ಲಿ ಅಳವಡಿಸಿಕೊಳ್ಳುತ್ತಾರೆ.

ಜಗತ್ತಿನ ಎಲ್ಲ ಪದಾರ್ಥಗಳನ್ನು ಉತ್ಪನ್ನ ಮಾಡಿದವನು ಹೇಗಿದ್ದಾನೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಕೇತುಂ ಕೃಣ್ವನ್ನಕೇತವೇ ಪೇಶೋ ಮರ್ಯಾ ಅಪೇಶಸೇ । ಸಮುಷದ್ಭಿರಜಾಯಥಾಃ ॥೩॥

ಪದಾರ್ಥ:- ಮಾನವರೇ ! ಸರ್ವಜ್ಞ ಮತ್ತು ಸರ್ವೈಶ್ವರ್ಯಪ್ರದನಾದ ಪರಮಾತ್ಮನು **[ಅಕೇತವೇ]** ಅಜ್ಞಾನಾಂಧಕಾರವನ್ನು ನಾಶ ಮಾಡಲು ಮಾನವ ಮಾತ್ರರಿಗೆ ಸೃಷ್ಟಿಯ ಆದಿಯಲ್ಲಿಯೇ **[ಕೇತುಮ್]** ಸರ್ವಶ್ರೇಷ್ಠವಾದ ವೇದಜ್ಞಾನವನ್ನೂ ಹಾಗೂ **[ಅಪೇಶಸೇ]** ನಿರ್ಧನತೆ, ದಾರಿದ್ರ್ಯ ಹಾಗೂ ಕುರೂಪವನ್ನು ನಾಶ ಮಾಡಲು **[ಪೇಶಃ]** ಸುವರ್ಣ ಮೊದಲಾದ ಸಕಲೈಶ್ವರ್ಯವನ್ನು ಸುಂದರವಾದ ರೂಪವನ್ನೂ **[ಕೃಣ್ವನ್]** ಸೃಷ್ಟಿ ಮಾಡುತ್ತಾನೆ ಹಾಗೂ ಜೀವಮಾತ್ರರಿಗೆ ಪ್ರದಾನ ಮಾಡುತ್ತಾನೆ. ಇವೆಲ್ಲವನ್ನೂ ಪ್ರಾಪ್ತಮಾಡಿಕೊಳ್ಳಲು **[ಸಮುಷದ್ಭಿಃ ಸಹ]** ಯಾರು ಆ ಸಮಸ್ತ ವಿದ್ಯೆಯನ್ನು ಹಾಗೂ ಜ್ಞಾನವನ್ನು ಪ್ರಾಪ್ತಮಾಡಿಕೊಂಡಿದ್ದಾರೋ ಅಂತಹ ಸುಜ್ಞಾನಿ ಹಾಗೂ ಶ್ರೇಷ್ಠ ಜ್ಞಾನಿಗಳೊಂದಿಗೆ ಸಂಗವನ್ನು ಸಾನ್ನಿಧ್ಯವನ್ನು ಮಾಡಿ **[ಅಜಾಯಥಾಃ]** ಎಲ್ಲವನ್ನೂ ಪ್ರಾಪ್ತ ಮಾಡಿಕೊಳ್ಳಿರಿ.

ಅದೇ ರೀತಿ ಜಿಜ್ಞಾಸುವಾದ ಮಾನವನೇ ! ನೀನು, ಪರಮಾತ್ಮನ ಉಪಾಸನೆಯನ್ನು ಮಾಡಿ ಅವನ ಕೃಪೆಯಿಂದ ಸಂಪೂರ್ಣ ಜ್ಞಾನವನ್ನೂ, ಸಕಲೈಶ್ವರ್ಯವನ್ನೂ ಪ್ರಾಪ್ತ ಮಾಡಿಕೊಂಡು ಪ್ರಸಿದ್ಧನಾಗು. ಭಗವಂತನ ಕೃಪೆಯಿಲ್ಲದಿದ್ದರೆ ಯಾವ ವಸ್ತುವೂ ಪ್ರಾಪ್ತವಾಗಲಾರದು. ಆದುದರಿಂದ ಸದಾ ಅವನನ್ನು ಭಕ್ತಿಯಿಂದ ಆರಾಧಿಸಬೇಕು.

ಭಾವಾರ್ಥ:- ಮಾನವರೇ ! ಸರ್ವಜ್ಞ ಹಾಗೂ ಸರ್ವೈಶ್ವರ್ಯಶಾಲಿಯಾದ ಪರಮಾತ್ಮನು, ಸೃಷ್ಟಿಯ ಆದಿಯಲ್ಲಿಯೇ ಮಾನವಮಾತ್ರರ ಕಲ್ಯಾಣಕ್ಕೋಸ್ಕರ ಹಾಗೂ ಅಜ್ಞಾನಾಂಧಕಾರವನ್ನು ನಾಶಮಾಡಲು ಶ್ರೇಷ್ಠವಾದ ವೇದಜ್ಞಾನವನ್ನೂ, ನಿರ್ಧನತೆ, ದಾರಿದ್ರ್ಯ ಹಾಗೂ ಕುರೂಪವನ್ನು ನಾಶ ಮಾಡಲು ಸಕಲೈಶ್ವರ್ಯ ಸಂಪತ್ತನ್ನು, ಸುಂದರವಾದ ರೂಪವನ್ನೂ ಸೃಷ್ಟಿ ಮಾಡಿದ್ದಾನೆ. ಸಮಸ್ತ ಹಾಗೂ ಸಂಪೂರ್ಣ ಜ್ಞಾನ ಮತ್ತು ಸಕಲೈಶ್ವರ್ಯವನ್ನು ಪ್ರಾಪ್ತಮಾಡಿಕೊಳ್ಳುವುದಕ್ಕೋಸ್ಕರ ಯಾರು ಸಂಪೂರ್ಣ ವಿದ್ಯೆಯನ್ನೂ ಹಾಗೂ ಕಲೆಯನ್ನೂ ಪ್ರಾಪ್ತಮಾಡಿಕೊಂಡಿದ್ದಾರೋ ಅಂತಹ ಸುಜ್ಞಾನಿ ಹಾಗೂ ಶ್ರೇಷ್ಠ ಜ್ಞಾನಿಗಳಾದ ಧಾರ್ಮಿಕ ವಿದ್ವಾಂಸರೊಂದಿಗೆ ಸಂಗವನ್ನು ಮಾಡಿ ಅವರ ಸಾನ್ನಿಧ್ಯದಲ್ಲಿದ್ದು ಸಮಸ್ತ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳಿರಿ. ಎಂದಿಗೂ ಅಧಾರ್ಮಿಕ ಹಾಗೂ ನೀಚ ವಿದ್ವಾಂಸರ ಮತ್ತು ದುಷ್ಟರ ಸಂಗವನ್ನು ಮಾಡಬೇಡಿ. ಅಧಾರ್ಮಿಕರು, ನೀಚರು ಮತ್ತು ದುಷ್ಟರು ಯಾವಾಗಲೂ ಜ್ಞಾನ ಮತ್ತು ಐಶ್ವರ್ಯದ ದುರುಪಯೋಗವನ್ನು ಮಾಡಿ ವಿನಾಶವನ್ನೇ ಮಾಡುತ್ತಾರೆ.

ಅದೇ ರೀತಿ ಹೇ ಜಿಜ್ಞಾಸು ! ಸಕಲ ಜ್ಞಾನವನ್ನು ಮತ್ತು ಐಶ್ವರ್ಯವನ್ನು ಪ್ರಾಪ್ತಮಾಡಿಕೊಳ್ಳಲು, ನೀನು ಪರಮಾತ್ಮನ ಉಪಾಸನೆಯನ್ನು ಮಾಡಿ ಅವನ ಕೃಪೆಯಿಂದ ಸಂಪೂರ್ಣ ಜ್ಞಾನವನ್ನು ಮತ್ತು ಸಕಲೈಶ್ವರ್ಯವನ್ನು ಪ್ರಾಪ್ತ ಮಾಡಿಕೊಂಡು ಪ್ರಸಿದ್ಧನಾಗು. ಭಗವಂತನ ಕೃಪೆಯಿಲ್ಲದಿದ್ದರೆ ಯಾವ ವಸ್ತುವೂ ಪ್ರಾಪ್ತವಾಗಲಾರದು. ಆದುದರಿಂದ ಸದಾಕಾಲ ಅವನನ್ನು ಭಕ್ತಿಯಿಂದ ಆರಾಧಿಸಬೇಕು.

ಇಲ್ಲಿ ವಾಯುವಿನ ಕರ್ಮಗಳ ವರ್ಣನೆ ಮಾಡಲಾಗಿದೆ.

ಆದಹ ಸ್ವಧಾಮನು ಪುನರ್ಗರ್ಭತ್ವಮೇರಿರೇ । ದಧಾನಾ ನಾಮ ಯಜ್ಞಿಯಮ್ ॥೪॥

ಪದಾರ್ಥ:- ವಾಯುವು **[ಯಜ್ಞಿಯಂ]** ಯಜ್ಞದ ಮೂಲಕ, ಯಜ್ಞಾಗ್ನಿಯಲ್ಲಿ ಅರ್ಪಿಸಿದ ಘೃತ, ಸಮಿತ್ತು ಹಾಗೂ ವನಸ್ಪತಿಗಳ ಮೂಲಕ ಉಂಟಾದ ಧೂಮದ ಸಹಾಯದಿಂದ **[ನಾಮದಧಾನಾಃ]** ಜಲವನ್ನು ಧಾರಣ ಮಾಡಿಕೊಂಡು **[ಸ್ವಧಾಮನು]** ಆ ಜಲವನ್ನು ಅತ್ಯಂತ ಸೂಕ್ಷ್ಮ ಕಣಗಳನ್ನಾಗಿ ಮಾಡಿ ಬಾಷ್ಪೀಕರಣದ ಮೂಲಕ ಮೇಲಕ್ಕೆ ಕೊಂಡೊಯ್ದು **[ಪುನರ್ಗರ್ಭತ್ವಮೇರಿರೇ]** ಅದರ ಗರ್ಭತ್ವ ಅರ್ಥಾತ್ ಮೇಘದ ನಿರ್ಮಾಣ ಮಾಡಿ **[ಆತ್]** ಅನಂತರ ವೃಷ್ಟಿಯನ್ನು ಮಾಡಿ **[ಅಹ]** ಭೂಮಿಯ ಮೇಲೆ ವಿನಿಗ್ರಹ ಅರ್ಥಾತ್ ಮಳೆಯ ಮೂಲಕ ಜಲವು ಭೂಮಿಯ ಮೇಲೆ ಬೀಳುವಂತೆ ಮಾಡುತ್ತವೆ.

ಭಾವಾರ್ಥ:- ಈ ಮಂತ್ರದ ದೇವತೆ ಮರುತ್. ಇದರ ಭೌತಿಕಾರ್ಥವನ್ನು ಮಾತ್ರ ಮಾಡಲಾಗಿದೆ. ವಾಯುವು ಯಜ್ಞದ ಮೂಲಕ, ಯಜ್ಞಾಗ್ನಿಯಲ್ಲಿ ಅರ್ಪಿಸಿದ ಘೃತ, ಸಮಿತ್ತು ಹಾಗೂ ವನಸ್ಪತಿ ಚರು ಪುರೋಡಾಶಾದಿಗಳಿಂದ ಉಂಟಾಗುವ ಧೂಮದ ಸಹಾಯದಿಂದ ಜಲವನ್ನು ಧಾರಣ ಮಾಡಿಕೊಂಡು, ಆ ಜಲವನ್ನು ಸೂಕ್ಷ್ಮ ಕಣಗಳನ್ನಾಗಿ ಮಾಡಿ ಬಾಷ್ಪೀಕರಣದ ಮೂಲಕ ಮೇಲಕ್ಕೆ ಕೊಂಡೊಯ್ದು ಗರ್ಭತ್ವ ಅರ್ಥಾತ್ ಬೃಹದಾಕಾರದ ಮೇಘದ ರೂಪವನ್ನು ತಾಳುತ್ತವೆ.

ಅನಂತರ ಸೂರ್ಯನ ತಾಪದಿಂದ ಮೋಡವು ಭಿನ್ನವಾಗಿ ವಾಯುವಿನ ಸಹಾಯದಿಂದ ಸರ್ವತ್ರ ಕೊಂಡೊಯ್ಯಲ್ಪಡುತ್ತದೆ. ವೃಷ್ಟಿಯ ಮೂಲಕ ಭೂಮಿಯ ಮೇಲೆ ಪುನಃ ಜಲವು ಬೀಳುವಂತೆ ಮಾಡುತ್ತದೆ. ಗೀತೆಯಲ್ಲಿ ಕೂಡಾ "ಯಜ್ಞಾದ್ ಭವತಿ ಪರ್ಜನ್ಯಃ" ಎಂದು ಹೇಳಿದೆ. ವಾಯುವು "ಯಜ್ಞಿಯಮ್" ಯಜ್ಞದ ಮೂಲಕ, ಯಜ್ಞದಲ್ಲಿ ಅರ್ಪಿಸಿದ ಘೃತ ಸಮಿತ್ತು ವನಸ್ಪತಿ ಚರು ಪುರೋಡಾಶಾದಿಗಳ ಮೂಲಕ ಅತ್ಯಂತ ಬಲವಾನ್ ಆಗುತ್ತದೆ. ಪ್ರತಿನಿತ್ಯ ನಾವು ನಮ್ಮೆಲ್ಲರ ಮನೆಗಳಲ್ಲಿ, ಮಂದಿರಗಳಲ್ಲಿ ಯಜ್ಞವನ್ನು ಮಾಡಿದರೆ ಕಾಲಕಾಲಕ್ಕೆ ಸರಿಯಾಗಿ ಮಳೆಯಾಗುತ್ತದೆ. ಇಲ್ಲದಿದ್ದರೆ ಸರಿಯಾದ ಸಮಯದಲ್ಲಿ ಮಳೆಯಾಗದೇ ಅತಿವೃಷ್ಟಿ-ಅನಾವೃಷ್ಟಿಗಳಿಂದ ಆಗುವ ಅಲ್ಪ ಸ್ವಲ್ಪ ಬೆಳೆಯೂ ಕೂಡಾ ನಾಶವಾಗುತ್ತದೆ. ನಾವೆಲ್ಲರೂ ಪ್ರತಿನಿತ್ಯ ಯಜ್ಞವನ್ನು ಮಾಡೋಣ. ವಾಯುವನ್ನು ಹಾಗೂ ನಭೋಮಂಡಲವನ್ನು ಯಜ್ಞಮಯವನ್ನಾಗಿ ಮಾಡಿ, ಭಗವಂತನ ಸುಂದರವಾದ ಸೃಷ್ಟಿಯನ್ನು ಸಂರಕ್ಷಿಸೋಣ. ತನ್ಮೂಲಕ ಎಲ್ಲರೂ ಸುಖ ಸಂತೋಷದಿಂದ ಬಾಳುವಂತಾಗಲಿ.

ಈಗ ಆ ವಾಯುವಿನೊಂದಿಗೆ ಸೂರ್ಯನು ಏನನ್ನು ಮಾಡುತ್ತಾನೆ ಎಂಬುದನ್ನು ವಿವರಿಸಲಾಗಿದೆ.

ವೀಳು ಚಿದಾರುಜತ್ನುಭಿ-ರ್ಗುಹಾ ಚಿದಿಂದ್ರ ವಹ್ನಿಭಿಃ । ಅವಿಂದ ಉಸ್ರಿಯಾ ಅನು ॥೫॥

ಪದಾರ್ಥ:- **[ಚಿತ್]** ಯಾವ ರೀತಿ **[ಇಂದ್ರಃ]** ಸೂರ್ಯನು **[ವೀಳು]** ತನ್ನ ಬಲ ಮತ್ತು ಪ್ರಕಾಶದಿಂದ ಹಾಗೂ **[ಉಸ್ರಿಯಾಃ]** ಕಿರಣಗಳ ಸಹಾಯದಿಂದ ಜಲವನ್ನು ಹೀರಿಕೊಂಡು **[ಅವಿಂದಃ]** ಪ್ರಾಪ್ತಮಾಡಿಕೊಳ್ಳುತ್ತಾನೆ, **[ಅನು]** ತದನಂತರ **[ಆ ರುಜತ್ನುಭಿಃ]** ಅವುಗಳನ್ನು ಸೂಕ್ಷ್ಮ ಕಣಗಳಲ್ಲಿ ವಿಭಜಿಸಿ **[ವಹ್ನಿಭಿಃ]** ಯಜ್ಞಾಗ್ನಿಯ ಸಹಾಯದಿಂದ ಹಾಗೂ ವಹನ ಮಾಡಲು ಸಮರ್ಥವಾದ ವಾಯುವಿನ ಸಹಾಯದಿಂದ **[ಗುಹಾ]** ಅಂತರಿಕ್ಷದಲ್ಲಿ ಮೋಡಗಳ ರೂಪದಲ್ಲಿ ಸ್ಥಾಪಿಸುತ್ತಾನೆ. **[ಇತ್]** ಅದೇ ರೀತಿ **[ಇಂದ್ರಃ]** ಪರಮಾತ್ಮನು **[ವೀಳು]** ತನ್ನ ಬಲದಿಂದ **[ಉಸ್ರಿಯಾಃ]** ತನ್ನ ತೇಜಸ್ಸಿನಿಂದ ಪ್ರಳಯಕಾಲದಲ್ಲಿ ಎಲ್ಲವನ್ನು **[ಅವಿಂದಃ]** ಪುನಃ ಪ್ರಾಪ್ತ ಮಾಡಿಕೊಳ್ಳುತ್ತಾನೆ.

[ಅನು] ತದನಂತರ **[ಆ ರುಜತ್ನುಭಿಃ]** ಚರಾಚರ ಜಗತ್ತಿನಲ್ಲಿರುವ ಸಮಸ್ತ ಪದಾರ್ಥಗಳನ್ನು ಭಿನ್ನಭಿನ್ನವಾಗಿ ಮಾಡಿ ಸೂಕ್ಷ್ಮ ಪರಮಾಣುಗಳಲ್ಲಿ ವಿಭಜಿಸಿ **[ವಹ್ನಿಭಿಃ]** ಎಲ್ಲವನ್ನೂ ವಹನ ಮಾಡುವ ಸಾಮರ್ಥ್ಯದಿಂದ **[ಗುಹಾ]** ಕಾರಣ ಪ್ರಕೃತಿಯಲ್ಲಿ ಲೀನವನ್ನಾಗಿ ಮಾಡುತ್ತಾನೆ.

ಭಾವಾರ್ಥ:- ಯಾವ ರೀತಿ ಸೂರ್ಯನು ತನ್ನ ಬಲ ಮತ್ತು ಪ್ರಕಾಶದಿಂದ ಹಾಗೂ ಸಮಸ್ತ ಕಿರಣಗಳ ಸಹಾಯದಿಂದ ಜಲವನ್ನು ಹೀರಿಕೊಂಡು, ಅವುಗಳನ್ನು ಸೂಕ್ಷ್ಮಕಣಗಳಲ್ಲಿ ವಿಭಾಜಿಸಿ ಯಜ್ಞಾಗ್ನಿಯ ಸಹಾಯದಿಂದ ಹಾಗೂ ವಾಯುವಿನ ಸಹಾಯದಿಂದ ಅಂತರಿಕ್ಷದಲ್ಲಿ ಮೋಡಗಳ ರೂಪದಲ್ಲಿ ಸ್ಥಾಪನೆ ಮಾಡುತ್ತಾನೋ, ಅದೇ ರೀತಿ ಪರಮಾತ್ಮನು ತನ್ನ ಬಲದಿಂದ ಹಾಗೂ ತೇಜಸ್ಸಿನಿಂದ ಪ್ರಳಯಕಾಲದಲ್ಲಿ ಎಲ್ಲವನ್ನೂ ಪ್ರಾಪ್ತಮಾಡಿಕೊಳ್ಳುತ್ತಾನೆ. ತದನಂತರ ಚರಾಚರ ಜಗತ್ತಿನಲ್ಲಿರುವ ಸಮಸ್ತ ಪದಾರ್ಥಗಳನ್ನು ಅತ್ಯಂತ ಸೂಕ್ಷ್ಮ ಪರಮಾಣುಗಳ ರೂಪದಲ್ಲಿ ವಿಭಾಜಿಸಿ ತನ್ನ ವಹನ ಮಾಡುವ ಸಾಮರ್ಥ್ಯದಿಂದ ಎಲ್ಲವನ್ನೂ ಕಾರಣ ಪ್ರಕೃತಿಯಲ್ಲಿ ಲೀನವನ್ನಾಗಿ ಮಾಡುತ್ತಾನೆ. ಯಥಾ ಬಲವಂತೋ ಮರುತೋ ದೃಢೇನ ಸ್ವವೇಗೇನ ದೃಢಾನಪಿ ವೃಕ್ಷಾದೀನ್ ಭಂಜಂತಿ ತಥಾ ಸೂರ್ಯಸ್ತಾವಹರ್ನಿಶಂ ಕಿರಣೈಶ್ಛಿನತ್ತಿ ಮರುತಶ್ಚ ತಾನುಪರ್ಯಧೋ ನಯಂತಿ ॥ ಏವ ಮೇವೇಶ್ವರ ನಿಯಮೇನ ಸರ್ವೇಪದಾರ್ಥಾ ಉತ್ಪತ್ತಿ ವಿನಾಶಾವಪಿ ಪ್ರಾಪ್ನುವಂತಿ ॥

ಪುನಃ ಆ ವಾಯು ಹೇಗಿದೆ ಎಂಬುದನ್ನು ತಿಳಿಸಲಾಗಿದೆ.

ದೇವಯಂತೋ ಯಥಾ ಮತಿಮಚ್ಛಾ ವಿದದ್ವಸುಂ ಗಿರಃ । ಮಹಾಮನೂಷತ ಶ್ರುತಮ್ ॥೬॥

ಪದಾರ್ಥ:- **[ದೇವಯಂತೋ]** ಸಮಸ್ತ ಹಾಗೂ ಸಂಪೂರ್ಣ ಜ್ಞಾನವನ್ನು ಪಡೆಯಲಿಚ್ಛಿಸುವ **[ಗಿರಃ]** ವಿದ್ವಾಂಸನ್ನು, **[ವಿದದ್ವಸುಂ]** ಸಕಲ ಪದಾರ್ಥ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳಲು ಸಮರ್ಥವಾದ **[ಮಹಾಮತಿಂ]** ಅತ್ಯಂತ ಮಹಿಮೆಯುಳ್ಳ ಮಹತೀ ಮೇಧಾಬುದ್ಧಿಯನ್ನು ಯೋಗ ಸಾಧನೆಯ ಮೂಲಕ ಹಾಗೂ ಭಗವಂತನ ಉಪಾಸನೆಯ ಮೂಲಕ ಪ್ರಾಪ್ತಮಾಡಿಕೊಳ್ಳುತ್ತಾರೆ. ತನ್ಮೂಲಕ **[ಶ್ರುತಂ ಅಚ್ಛ ಅನೂಷತ]** ಸಕಲ ಶಾಸ್ತ್ರಗಳನ್ನು ವಿಶ್ಲೇಷಣೆ ಮಾಡಿ ಅತ್ಯುತ್ತಮ ರೀತಿಯಲ್ಲಿ ಪ್ರವಚನ, ಗ್ರಂಥ ನಿರ್ಮಾಣಾದಿಗಳ ಮೂಲಕ ಪ್ರಕಾಶಕ್ಕೆ ತರುತ್ತಾರೆ. ಎಲ್ಲರಿಗೂ ಪ್ರಾಪ್ತವಾಗುವಂತೆ ಮಾಡುತ್ತಾರೆ. ಅದೇ ರೀತಿ ವಾಯುವು ವಾಣಿ ಮತ್ತು ಶ್ರವಣೇಂದ್ರಿಯಗಳಿಗೆ ಸಂಬಂಧಿಸಿದ ಸಕಲ ವ್ಯವಹಾರಗಳನ್ನು ಮಾಡಲು ಸಹಾಯಕಾರಿಯಾಗಿ ತನ್ನ ವೇಗದಿಂದ ಹಲವು ರೀತಿಯ ಯಂತ್ರಗಳನ್ನು ಚಲಿಸುವಂತೆ ಮಾಡುತ್ತದೆ.

ಭಾವಾರ್ಥ:- ಯಾವ ರೀತಿ ಸಂಪೂರ್ಣ ಜ್ಞಾನವನ್ನು ಪಡೆಯಲಿಚ್ಛಿಸುವ ವಿದ್ವಾಂಸನು, ಸಕಲ ಪದಾರ್ಥ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳಲು ಸಮರ್ಥವಾದ ಮಹತೀ ಮೇಧಾಬುದ್ಧಿಯನ್ನು ಯೋಗ ಸಾಧನೆಯ ಮೂಲಕ ಹಾಗೂ ಪರಮಾತ್ಮನ ಉಪಾಸನೆಯ ಮೂಲಕ ಪ್ರಾಪ್ತ ಮಾಡಿಕೊಳ್ಳುತ್ತಾನೋ, ತನ್ನ ಮೇಧಾಬುದ್ಧಿಯ ಮೂಲಕ ಸಕಲ ವೇದ ಶಾಸ್ತ್ರಗಳನ್ನು ವಿಶೇಷವಾದ ಚಿಂತನ ಮನನಾದಿಗಳ ಮೂಲಕ ವಿಶ್ಲೇಷಿಸಿ, ಅತ್ಯುತ್ತಮ ರೀತಿಯಲ್ಲಿ ಪ್ರವಚನ ಹಾಗೂ ಗ್ರಂಥಗಳ ನಿರ್ಮಾಣವನ್ನು ಮಾಡಿ ಎಲ್ಲರಿಗೂ ಜ್ಞಾನವು ಪ್ರಾಪ್ತವಾಗುವಂತೆ ಮಾಡುತ್ತಾನೋ, ಅದೇ ರೀತಿ ವಾಯುವು ವಾಣಿ ಮತ್ತು ಶ್ರವಣೇಂದ್ರಿಯಗಳಿಗೆ ಸಂಬಂಧಿಸಿದ ಸಕಲ ವ್ಯವಹಾರಗಳನ್ನು ಮಾಡಲು ಸಹಾಯಕಾರಿಯಾಗಿದ್ದು, ತನ್ನ ವೇಗದಿಂದ ಹಲವು ರೀತಿಯ ಯಂತ್ರಗಳನ್ನು ಚಲಿಸುವಂತೆ ಮಾಡುತ್ತದೆ.

ಉಕ್ತ ಪದಾರ್ಥವು ಯಾರ ಸಹಾಯದಿಂದ ಕಾರ್ಯದ ಸಿದ್ಧಿಯನ್ನು ಮಾಡುವಂತಹವುದಾಗಿದೆ ಎಂಬುದನ್ನಿಲ್ಲಿ ಹೇಳಲಾಗಿದೆ.

ಇಂದ್ರೇಣ ಸಂ ಹಿ ದೃಕ್ಷಸೇ ಸಂಜಗ್ಮಾನೋ ಅಬಿಭ್ಯುಷಾ । ಮಂದೂ ಸಮಾನವರ್ಚಸಾ ॥೭॥

ಪದಾರ್ಥ:- ಈ ವಾಯು **[ಆಬಿಭ್ಯುಷಾ]** ಎಲ್ಲರನ್ನೂ ಭಯರಹಿತರನ್ನಾಗಿ ಅರ್ಥಾತ್ ಯಾರ ಆಶ್ರಯದಲ್ಲಿ ಜೀವಮಾತ್ರರು ನಿರ್ಭಯರಾಗಿರುತ್ತಾರೋ, ಅಂತಹ **[ಇಂದ್ರೇಣ]** ಸರ್ವವ್ಯಾಪಕ ಮತ್ತು ಸರ್ವೈಶ್ವರ್ಯವಾನ್ ಪರಮಾತ್ಮನ ವ್ಯವಸ್ಥೆಯಲ್ಲಿ **[ಸಂಜಗ್ಮಾನಃ]** ಎಲ್ಲರಿಗೂ ಪ್ರಾಣಶಕ್ತಿಯನ್ನೂ, ಚೈತನ್ಯವನ್ನೂ ಕೊಡುತ್ತಾ ಸ್ಪರ್ಶದಿಂದ ಅನುಭವಗಮ್ಯನಾಗಿ ಸೂರ್ಯನ ಪ್ರಕಾಶದಿಂದ **[ಸಂ ದೃಕ್ಷಸೇ]** ದೃಷ್ಟಿಗೋಚರವಾಗುತ್ತದೆ. **[ಹಿ]** ಯಾವ ಕಾರಣದಿಂದ ಸೂರ್ಯ ಮತ್ತು ವಾಯು ಇವೆರಡೂ **[ಸಮಾನವರ್ಚಸಾ]** ಸಮಾನ ವರ್ಚಸ್ಸುಳ್ಳದ್ದಾಗಿವೆಯೋ ಇವೆರಡರಿಂದ ಜೀವಮಾತ್ರರಿಗೆ **[ಮಂದೂ]** ಸುಖವೂ, ಆನಂದವೂ ಲಭಿಸುತ್ತದೆ.

ಭಾವಾರ್ಥ:- ಪರಮಾತ್ಮನು ಸರ್ವವ್ಯಾಪಕನಾಗಿದ್ದು ಅವನ ಆಶ್ರಯದಲ್ಲಿರುವ ಜೀವಮಾತ್ರರಿಗೋಸ್ಕರ ಪ್ರಕಾಶವನ್ನು ನೀಡಲು ಸೂರ್ಯನನ್ನೂ, ಜೀವನವನ್ನೂ, ಪ್ರಾಣಶಕ್ತಿಯನ್ನೂ, ಚೈತನ್ಯವನ್ನೂ ನೀಡಲು ವಾಯುವನ್ನು ಸೃಷ್ಟಿಸಿ ಧಾರಣ ಮಾಡಿದ್ದಾನೆ. ಅವನ ಶಕ್ತಿಯಿಂದಲೇ ಹಾಗೂ ಪ್ರಕಾಶದಿಂದಲೇ ಇವೆರಡೂ ಬಲ ಹಾಗೂ ಪ್ರಕಾಶವುಳ್ಳದ್ದಾಗಿವೆ. ಸೂರ್ಯ ಮತ್ತು ವಾಯು ಇವೆರಡರ ಧಾರಣಾ ಶಕ್ತಿ, ಆಕರ್ಷಣಾ ಶಕ್ತಿ ಮತ್ತು ಪ್ರಕಾಶ ಹಾಗೂ ವೇಗದಿಂದ ಎಲ್ಲಾ ಪದಾರ್ಥಗಳೂ, ಜೀವನವನ್ನೂ, ಪ್ರಾಣಶಕ್ತಿಯನ್ನೂ ಪಡೆದು ಸುಶೋಭಿತವಾಗಿವೆ. ಇವೆರಡರಿಂದ ಎಲ್ಲರಲ್ಲೂ ಉತ್ಸಾಹ ಹಾಗೂ ಲವಲವಿಕೆ ಇರುತ್ತದೆ.

ಯಾವಾಗ ಮಾನವನು ಸೂರ್ಯ ಮತ್ತು ವಾಯು ಇವೆರಡರ ಶಕ್ತಿಯನ್ನು ಪಡೆದು, ವಾತಾವರಣದ ಧಾರಣಾಶಕ್ತಿಗೆ ಅನುಗುಣವಾಗಿ ತನ್ನ ಸಮಸ್ತ ವ್ಯವಹಾರಗಳನ್ನು ಮಾಡುತ್ತಾನೋ ಆಗ ಸುಖದಿಂದ ಹಾಗೂ ಆನಂದದಿಂದ ಇರುತ್ತಾನೆ. ಯಾವಾಗ ಮಾನವನು ಆಯಾಯಾ ಪ್ರದೇಶದ ಧಾರಣಾಶಕ್ತಿಯನ್ನು ಅರಿಯದೇ ಪ್ರಕೃತಿಯ ನಿಯಮಕ್ಕೆ ಹಾಗೂ ಪರಮಾತ್ಮನ ವ್ಯವಸ್ಥೆಗೆ ವ್ಯತಿರೇಕವಾಗಿ ನಡೆಯುತ್ತಾನೋ, ಆಚರಣೆಯನ್ನು ಮಾಡುತ್ತಾನೋ ಆಗ ಎಲ್ಲಾ ರೀತಿಯ ದುಃಖಗಳನ್ನೂ, ಕಷ್ಟಗಳನ್ನೂ ಅನುಭವಿಸುತ್ತಾನೆ.

ಪೂರ್ವೋಕ್ತ ವ್ಯವಹಾರವು ಯಾವ ಪ್ರಕಾರದಿಂದ ನಿತ್ಯವೂ ವರ್ತಮಾನವಾಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅನವದ್ಯೈ ರಭಿದ್ಯುಭಿ-ರ್ಮಖಃ ಸಹಸ್ವದರ್ಚತಿ । ಗಣೈರಿಂದ್ರಸ್ಯ ಕಾಮ್ಯೈಃ ॥೮॥

ಪದಾರ್ಥ:- **[ಮಖಃ]** ಸರ್ವರಿಗೂ ಸುಖವನ್ನೂ, ಸರ್ವರ ಸಂರಕ್ಷಣೆಯನ್ನೂ, ಸರ್ವರ ಪಾಲನೆಯನ್ನೂ ಮಾಡುವ ಮತ್ತು ಉತ್ತಮವಾದ ಮಳೆ, ಬೆಳೆ ಹಾಗೂ ಆರೋಗ್ಯಪ್ರದವಾದ ಈ ಯಜ್ಞವು **[ಇಂದ್ರಸ್ಯ]** ಸೂರ್ಯನ **[ಅನವದ್ಯೈ]** ದೋಷರಹಿತವಾದ ಹಾಗೂ ಎಲ್ಲಾ ದೋಷಗಳನ್ನು ನಿವಾರಣೆ ಮಾಡಲು ಸಮರ್ಥವಾದ **[ಅಭಿದ್ಯುಭಿಃ]** ಸಮಸ್ತ ದಿಕ್ಕುಗಳಲ್ಲಿಯೂ ಸರ್ವತ್ರ ಪ್ರಕಾಶವನ್ನು ಬೀರುವ **[ಕಾಮ್ಯೈಃ]** ಕಮನೀಯ ಹಾಗೂ ಸರ್ವರಿಂದಲೂ ಪ್ರಾಪ್ತ ಮಾಡಲಿಚ್ಛಿಸುವ ಅರ್ಥಾತ್ ಎಲ್ಲರಿಂದಲೂ ಅಪೇಕ್ಷಣೀಯವಾದ **[ಗಣೈಃ]** ಕಿರಣಗಳೊಂದಿಗೆ ಮತ್ತು ವಾಯುವಿನೊಂದಿಗೆ ಒಂದಾಗಿ **[ಸಹಸ್ವತ್]** ಸಮಸ್ತ ಪದಾರ್ಥಗಳನ್ನು ಅತ್ಯಂತ ಸಹನೀಯ ಹಾಗೂ ಸೇವನೀಯವನ್ನಾಗಿ ಮಾಡಿ **[ಅರ್ಚತಿ]** ಪ್ರಶಂಸನೀಯ ಹಾಗೂ ಶ್ರೇಷ್ಠಗುಣವುಳ್ಳದ್ದನ್ನಾಗಿ ಮಾಡುತ್ತದೆ.

ಭಾವಾರ್ಥ:- ಘೃತ, ಸಮಿತ್ತು, ಚರು, ಪುರೋಡಾಶಾದಿಗಳಿಂದ ಹಾಗೂ ಶ್ರೇಷ್ಠವನಸ್ಪತಿಗಳಿಂದ ಮಾಡಲ್ಪಟ್ಟ ಈ ಯಜ್ಞವು ಸರ್ವರಿಗೂ ಸುಖವನ್ನೂ, ಸರ್ವರ ಸಂರಕ್ಷಣೆಯನ್ನೂ, ಸರ್ವರ ಪಾಲನೆಯನ್ನೂ ಮಾಡುತ್ತದೆ. ಈ ಯಜ್ಞವು ಉತ್ತಮವಾದ ಮಳೆ, ಬೆಳೆ ಹಾಗೂ ಆರೋಗ್ಯವನ್ನು ಪ್ರದಾನ ಮಾಡುತ್ತದೆ. ಅರ್ಥಾತ್ ಯಜ್ಞದಿಂದ ಉತ್ತಮವಾದ ಮಳೆ ಮತ್ತು ಬೆಳೆಯು ಪ್ರಾಪ್ತವಾಗಿ ಎಲ್ಲಾ ರೋಗಗಳ ನಿವಾರಣೆಯಾಗುತ್ತದೆ. ಯಾವಾಗ, ದೋಷರಹಿತವಾದ ಹಾಗೂ ಸಮಸ್ತ ದೋಷಗಳನ್ನು ನಿವಾರಣೆ ಮಾಡುವ, ಎಲ್ಲಾ ದಿಕ್ಕುಗಳಲ್ಲಿ ಪ್ರಕಾಶವನ್ನು ಬೀರುವ ಸೂರ್ಯನ ಕಿರಣಗಳೊಂದಿಗೆ ಹಾಗೂ ವಾಯುವಿನೊಂದಿಗೆ ಯಜ್ಞದ ಧೂಮವು ಸೇರುತ್ತದೆಯೋ ಆಗ

ಸಂಪೂರ್ಣ ವಾತಾವರಣವು ಪರಿಶುದ್ಧವಾಗಿ, ಸಮಸ್ತ ಪದಾರ್ಥಗಳು ನಿರ್ಮಲವಾಗುತ್ತವೆ ಹಾಗೂ ಪ್ರತಿಯೊಂದು ವಸ್ತುವೂ ಕೂಡ ಶ್ರೇಷ್ಠಗುಣವುಳ್ಳದ್ದಾಗುತ್ತದೆ. ಆದುದರಿಂದ ನಾವೆಲ್ಲರೂ ನಮ್ಮೆಲ್ಲರ ಹಾಗೂ ಈ ಸೃಷ್ಟಿಯ ಮತ್ತು ಜೀವಮಾತ್ರರ ಸಂರಕ್ಷಣೆಗೋಸ್ಕರ ಪ್ರತಿನಿತ್ಯ ಯಜ್ಞವನ್ನು ಮಾಡೋಣ.

ಈ ಮಂತ್ರದಲ್ಲಿ ಗಮನಶೀಲ ಸ್ವಭಾವದ ವಾಯುವಿನ ಪ್ರಕಾಶವನ್ನು ಬೀರಲಾಗಿದೆ.

ಅತಃ ಪರಿಜ್ಮನ್ನಾ ಗಹಿ ದಿವೋ ವಾ ರೋಚನಾದಧಿ । ಸಮಸ್ಮಿನ್ನೃಂಜತೇ ಗಿರಃ ॥೯॥

ಪದಾರ್ಥ:- [ಗಿರಃ **ಸಮೃಂಜತೇ**] ಯಾವ ವಾಯುವಿನ ಮೂಲಕ ವಾಣಿಯ ಸಮಸ್ತ ವ್ಯವಹಾರಗಳು ಸಿದ್ಧವಾಗುತ್ತವೆಯೋ ಅರ್ಥಾತ್ ಯಾವ ವಾಯುವಿನ ಮೂಲಕ ವಾಣಿಯು ಪ್ರಕಟವಾಗುತ್ತದೆಯೋ ಆ ವಾಯುವು [**ಪರಿಜ್ಮಾ**] ಸರ್ವತ್ರ ಗಮನಶೀಲವಾಗಿದ್ದು, ಸಮಸ್ತ ಪದಾರ್ಥಗಳನ್ನು ಮೇಲೆ ಕೆಳಗೆ ಮಾಡುತ್ತದೆ ಹಾಗೂ [**ಅತಃ**] ಈ ಭೂಮಿಯಿಂದ ಜಲಕಣಗಳನ್ನು ಮೇಲಕ್ಕೆ ಕೊಂಡೊಯ್ಯುತ್ತದೆ. ತದನಂತರ [**ದಿವಃ**] ಸೂರ್ಯನ ಪ್ರಕಾಶದೊಂದಿಗೆ [ವಾ] ಅಥವಾ [**ರೋಚನಾತ್**] ರುಚಿಯನ್ನು ವರ್ಧಿಸುವ ಮೇಘ ಮಂಡಲದಿಂದ [**ಸಂ ಅಸ್ಮಿನ್**] ಈ ಭೂಮಿಯ ಮೇಲೆ ಉತ್ತಮ ರೀತಿಯಲ್ಲಿ [**ಅಧಿ ಆಗಹಿ**] ವೃಷ್ಟಿಯ ಮೂಲಕ ಬೀಳುತ್ತದೆ.

ಅದೇ ರೀತಿ -

[ಗಿರಃ **ಸಮೃಂಜತೇ**] ಯಾವ ವಾಯುವಿನ ಮೂಲಕ ವಾಣಿಯು ಪ್ರಕಟವಾಗುತ್ತದೆಯೋ ಆ ವಾಯು [**ಪರಿಜ್ಮಾ**] ಸರ್ವತ್ರ ಗಮನಶೀಲವಾಗಿದ್ದು ಪ್ರಕಟವಾದ ವಾಣಿಯನ್ನು [**ಅಧಿ ಆಗಹಿ**] ಮೇಲೆ ಕೊಂಡೊಯ್ಯುತ್ತದೆ. [**ಅತಃ**] ತದನಂತರ ಆ ವಾಣಿಯು [**ದಿವಃ ರೋಚನಾತ್**] ಸೂರ್ಯನ ಪ್ರಕಾಶದೊಂದಿಗೆ ಸಂಯುಕ್ತವಾಗಿ [**ಸಂ ಅಸ್ಮಿನ್**] ಉತ್ತಮ ರೀತಿಯಲ್ಲಿ ಈ ನಭೋಮಂಡಲದಲ್ಲಿ ವ್ಯಾಪಿಸಿಕೊಳ್ಳುತ್ತದೆ. [**ಅತಃ ಆ ಗಹಿ**] ತದನಂತರ ಪ್ರಕಾಶದಿಂದ ಹಾಗೂ ವಾಯುವಿನ ಸಹಾಯದಿಂದ ನಮ್ಮೆಲ್ಲರ ಶ್ರೋತ್ರಗ್ರಾಹಿಯಾಗಿ ಪುನಃ ಎಲ್ಲರಿಗೂ ಪ್ರಾಪ್ತವಾಗುತ್ತದೆ. ಅರ್ಥಾತ್ ಎಲ್ಲರೂ ಕೇಳುವಂತೆ ಮಾಡುತ್ತದೆ.

ಭಾವಾರ್ಥ:- ಈ ಮಂತ್ರವು ಮಾನವ ಮಾತ್ರರಿಗೆ ಸಾಮಾನ್ಯ ಜ್ಞಾನವನ್ನು ಹಾಗೂ ವಿಶೇಷಜ್ಞಾನ ಅರ್ಥಾತ್ ವಿಜ್ಞಾನವನ್ನು ಬೋಧಿಸುತ್ತದೆ.

ಸಾಮಾನ್ಯಜ್ಞಾನ:- ವಾಯುವಿನಿಂದ ಭೂಮಿಯ ಮೇಲೆ ಇರುವ ಜಲಕಣಗಳು ಮೇಲೆ ಹೋಗಿ ಸೂರ್ಯನ ಶಾಖದಿಂದ ಆವಿಯಾಗಿ ಅಂತರಿಕ್ಷದಲ್ಲಿ ಮೇಘಗಳ ರೂಪದಲ್ಲಿ ವ್ಯಾಪಿಸಿಕೊಳ್ಳುತ್ತವೆ. ಅದೇ ವಾಯುವಿನ ಹಾಗೂ ಸೂರ್ಯನ ಪ್ರಕಾಶದ ಸಹಾಯದಿಂದ ವೃಷ್ಟಿಯಾಗಿ ಪುನಃ ಜಲವು ಭೂಮಿಯ ಮೇಲೆ ಬೀಳುತ್ತದೆ.

ವಿಶೇಷಜ್ಞಾನ:- ಈ ವಾಯುವಿನ ಮೂಲಕವೇ ನಮ್ಮ ವಾಣಿಯು ಪ್ರಕಟವಾಗುತ್ತದೆ. ನಾಭಿಯಿಂದ ವಾಯುವು ಮೇಲೆ ಹೋಗಿ, ಹೃದಯದ ಮೂಲಕ ಹಾಯ್ದು ಕಂಠವನ್ನು ಸೇರಿ ಬಾಯಿಯಲ್ಲಿ ಆಯಾಯಾ ಸ್ಥಾನಗಳೊಂದಿಗೆ ಸಂಪರ್ಕಿಸಿ ವಾಣಿಯ ರೂಪದಲ್ಲಿ ಪ್ರಕಟವಾಗಲು ಸಹಾಯವಾಗುತ್ತದೆ. ಈ ರೀತಿಯಲ್ಲಿ ಪ್ರಕಟವಾದ ವಾಣಿಯು ವಾಯುವಿನ ಸಹಾಯದಿಂದಲೇ ಮೇಲೆ ಹೋಗುತ್ತದೆ. ತದನಂತರ ಪ್ರಕಾಶದೊಂದಿಗೆ ಸಂಯುಕ್ತವಾಗಿ ಆಕಾಶದಲ್ಲಿ ವ್ಯಾಪಿಸಿಕೊಳ್ಳುತ್ತದೆ. ಸೂರ್ಯನ ಪ್ರಕಾಶ ಹಾಗೂ ವಾಯುವಿನ ಸಹಾಯದಿಂದ ವಾಣಿಯು ಮತ್ತು ಶಬ್ದವು ನಮ್ಮೆಲ್ಲರ ಕಿವಿಗಳಿಗೆ ಕೇಳಿಸುತ್ತದೆ. ಈ ವಿಜ್ಞಾನದ ಮೂಲಕವೇ ನಾವು ಇಂದು ರೇಡಿಯೋ ಇತ್ಯಾದಿಗಳನ್ನು ಉಪಯೋಗಿಸಿಕೊಂಡು ವಿಶ್ವದ ಯಾವುದೋ ಒಂದು ಪ್ರದೇಶದಲ್ಲಿ ಪ್ರಕಟವಾಗುವ ಸುದ್ಧಿ ಸಮಾಚಾರಗಳನ್ನು, ಸಂಗೀತ ಇತ್ಯಾದಿಗಳನ್ನು ವಿಶ್ವದಾದ್ಯಂತ ಎಲ್ಲರೂ ಆಲಿಸುತ್ತೇವೆ.

ಮುಂದಿನ ಮಂತ್ರದಲ್ಲಿ ಸೂರ್ಯನ ಕರ್ಮವನ್ನು ಉಪದೇಶಿಸಲಾಗುತ್ತದೆ.

ಇತೋ ವಾ ಸಾತಿಮೀಮಹೇ ದಿವೋ ವಾ ಪಾರ್ಥಿವಾದಧಿ । ಇಂದ್ರಂ ಮಹೋ ವಾ ರಜಸಃ ॥೧೦॥

ಪದಾರ್ಥ:- [ವಯಂ ಇತಃ **ಪಾರ್ಥಿವಾತ್**] ನಾವೆಲ್ಲರೂ ಈ ಪೃಥ್ವಿಯಿಂದ ಅಥವಾ ಭೂಲೋಕದಿಂದ [ವಾ] ಮತ್ತು [**ದಿವಃ** ವಾ] ದ್ಯುಲೋಕದಿಂದಲೂ ಮತ್ತು [**ಸಾತಿಂ**] ಎಲ್ಲವನ್ನೂ ಪ್ರತ್ಯಪ್ರತ್ಯೇಕವಾಗಿ ವಿಭಾಜಿಸಿ [**ರಜಸಃ**] ಲೋಕಲೋಕಾಂತರಗಳನ್ನು ಸೃಷ್ಟಿಸಿ, ಎಲ್ಲವನ್ನೂ ಕ್ರಮಬದ್ಧವಾಗಿ ವ್ಯವಸ್ಥಾಪೂರ್ವಕವಾಗಿ ಗತಿಶೀಲವನ್ನಾಗಿ ಮಾಡುತ್ತಾ ಸಕಲ ಸುಖ ಸೌಲಭ್ಯಗಳನ್ನು ಜೀವಮಾತ್ರರಿಗೆ ಪ್ರಾಪ್ತವಾಗುವಂತೆ ಮಾಡಿ [**ಅಧಿವಾ**] ಪ್ರತಿಯೊಂದು ಕಣಕಣದಲ್ಲಿಯೂ ಮತ್ತು ಸಕಲ ಲೋಕಲೋಕಾಂತರಗಳಿಗಿಂತಲೂ ಮೇಲೆ ತನ್ನ ದೇದೀಪ್ಯಮಾನ ಪ್ರಕಾಶ ಹಾಗೂ ಆನಂದದೊಂದಿಗೆ ಸದಾಕಾಲ ವಿದ್ಯಮಾನನಾಗಿರುವ [**ಮಹಾಂತಂ ಇಂದ್ರಂ**] ಎಲ್ಲರಿಗಿಂತಲೂ ಮಹತ್ತಮನೂ, ಸರ್ವಜ್ಯೇಷ್ಠನೂ, ಸರ್ವಶ್ರೇಷ್ಠನೂ ಆದ ಪರಮೇಶ್ವರನನ್ನು ಅವನ ವಾಸ್ತವಿಕ ಸ್ವರೂಪವನ್ನು [**ಈಮಹೇ**] ನಾವೆಲ್ಲರೂ ಸರಿಯಾಗಿ ಅರಿತುಕೊಂಡು ಆನಂದವನ್ನು ಅನುಭವಿಸೋಣ.

ಭಾವಾರ್ಥ:- ಪರಮಾತ್ಮನು ಈ ಭೂಲೋಕವನ್ನು ಮತ್ತು ಇದಕ್ಕಿಂತಲೂ ಮೇಲೆ ಅಂತರಿಕ್ಷ ಲೋಕವನ್ನೂ, ಅದಕ್ಕಿಂತಲೂ ಮೇಲೆ ದ್ಯುಲೋಕವನ್ನೂ ಹಾಗೂ ಸಕಲ ಲೋಕಲೋಕಾಂತರಗಳನ್ನೂ ಸೃಷ್ಟಿಸಿ ಎಲ್ಲವನ್ನೂ ಕ್ರಮಬದ್ಧವಾಗಿ ಮತ್ತು ವ್ಯವಸ್ಥಾಪೂರ್ವಕವಾಗಿ ಗತಿಶೀಲವನ್ನಾಗಿ ಮಾಡುತ್ತಾ, ಸಕಲ ಪದಾರ್ಥಗಳನ್ನು ಸೃಷ್ಟಿಸಿ, ಜೀವಮಾತ್ರರಿಗೆ ಸಕಲ ಸುಖಸೌಲಭ್ಯಗಳನ್ನು ಒದಗಿಸಿ, ಸುಂದರವಾದ ಸಮಸ್ತ ಜೀವಮಾತ್ರರ ಕಲ್ಯಾಣವನ್ನೇ ಮಾಡುವ ಅತ್ಯಂತ ಶ್ರೇಷ್ಠವಾದ, ಅಮರವಾದ ವೇದಜ್ಞಾನವನ್ನು ಸೃಷ್ಟಿಯ ಆದಿಯಲ್ಲಿಯೇ ಕೊಟ್ಟು, ಪ್ರತಿಯೊಂದು ಕಣಕಣದಲ್ಲಿ ವ್ಯಾಪಿಸಿಕೊಂಡು, ಸಮಸ್ತ ಲೋಕಲೋಕಾಂತರಗಳಿಗಿಂತಲೂ ಮೇಲೆ ತನ್ನ ಅತ್ಯಂತ ದೇದೀಪ್ಯಮಾನವಾದ ಪ್ರಕಾಶ ಹಾಗೂ ಅನಂತ ಆನಂದದೊಂದಿಗೆ ಸದಾಕಾಲ ವಿದ್ಯಮಾನನಾಗಿದ್ದಾನೆ.

ನಾವೆಲ್ಲರೂ ಎಲ್ಲರಿಗಿಂತಲೂ ಅತ್ಯಂತ ಮಹತ್ತಮವಾದ ಸರ್ವಜ್ಯೇಷ್ಠನೂ, ಸರ್ವಶ್ರೇಷ್ಠನೂ ಆದ ಪರಮಾತ್ಮನ ವಾಸ್ತವಿಕ ಸ್ವರೂಪವನ್ನು ಅರಿತುಕೊಂಡು ಆನಂದವನ್ನು ಅನುಭವಿಸೋಣ.

ಅದೇ ರೀತಿ ಸೂರ್ಯನು ಕೂಡಾ ಈ ಭೂಲೋಕ ಮತ್ತು ಅಂತರಿಕ್ಷ ಲೋಕಕ್ಕಿಂತಲೂ ಮೇಲೆ ದ್ಯುಲೋಕದಲ್ಲಿದ್ದು, ಸಕಲ ಗ್ರಹೋಪಗ್ರಹಗಳನ್ನು ತನ್ನ ಪ್ರಕಾಶದಿಂದ ಬೆಳಗಿಸುತ್ತಾ, ತನ್ನ ಗುರುತ್ವಾಕರ್ಷಣ ಶಕ್ತಿಯಿಂದ ಎಲ್ಲಾ ಗ್ರಹೋಪಗ್ರಹಗಳನ್ನು ಚಲಿಸುವಂತೆ ಮಾಡುತ್ತಾನೆ. ನಾವೆಲ್ಲರೂ ಅತ್ಯಂತ ಪ್ರಕಾಶಮಾನನಾದ ಹಾಗೂ ಅತ್ಯಂತ ಮಹತ್ತರವಾದ ಸೂರ್ಯನ ಸ್ವರೂಪವನ್ನು ಅರಿತುಕೊಳ್ಳೋಣ.

ಆರನೆಯ ಸೂಕ್ತ ಸಮಾಪ್ತ

ಸೂಕ್ತ ೭

ಮಂತ್ರಸಂಖ್ಯೆ ೧೦ । ಋಷಿಃ ಮಧುಚ್ಛಂದಾ ವೈಶ್ವಾಮಿತ್ರಃ । ದೇವತಾ - ಇಂದ್ರಃ । ಛಂದಃ - ೧, ೩, ೫-೭ ಗಾಯತ್ರೀ । ೨, ೪ ನಿಚೃದ್ ಗಾಯತ್ರೀ । ೮, ೧೦ ಪಿಪೀಲಿಕಾ ಮಧ್ಯಾ ನಿಚೃದ್‌ಗಾಯತ್ರೀ । ೯, ಪಾದನಿಚೃದ್‌ಗಾಯತ್ರೀ । ಸ್ವರಃ - ಷಡ್ಜಃ.

ಈ ಮಂತ್ರದಲ್ಲಿ ಇಂದ್ರ ಶಬ್ದದಿಂದ ಮೂರು ಅರ್ಥಗಳ ಪ್ರಕಾಶವನ್ನು ಮಾಡಲಾಗಿದೆ.

ಇಂದ್ರಮಿದ್ಗಾಥಿನೋ ಬೃಹ-ದಿಂದ್ರಮರ್ಕೇಭಿರರ್ಕಿಣಃ । ಇಂದ್ರಂ ವಾಣೀರನೂಷತ ॥೧॥

ಪದಾರ್ಥ:- ಹೇ **[ಗಾಥಿನಃ]** ಭಗವಂತನ ಗುಣಗಳನ್ನು ಗಾನ ಮಾಡುವ **[ಅರ್ಕಿಣಃ]** ಅತ್ಯಂತ ವಿಚಾರಶೀಲ ಹಾಗೂ ವಿವೇಕಿಗಳಾದ ವಿದ್ವಾಂಸರೇ ! ನೀವು **[ಅರ್ಕೇಭಿಃ]** ಸತ್ಯಭಾಷಣ ಅರ್ಥಾತ್ ಸತ್ಯವನ್ನೇ ನುಡಿಯುವವರಾಗಿ, ಸಕಲ ಪದಾರ್ಥ ಜ್ಞಾನವನ್ನು ಕೊಡುವ, ಶ್ರೇಷ್ಠಕರ್ಮಗಳ ಕಡೆಗೆ ಪ್ರೇರಣೆಯನ್ನು ನೀಡುವ, ಜೀವಮಾತ್ರರ ಕಲ್ಯಾಣವನ್ನೇ ಮಾಡುವ ವೇದಮಂತ್ರಗಳ ಮೂಲಕ **[ವಾಣೀಃ]** ಭಗವಂತನ ವಾಣಿಯಾದ ಚತುರ್ವೇದಗಳಲ್ಲಿ ಬೋಧಿಸುವ ಸಂಪೂರ್ಣಜ್ಞಾನದ ಪ್ರಾಪ್ತಿಗಾಗಿ **[ಬೃಹತ್ ಇಂದ್ರಂ]** ಸರ್ವಜ್ಯೇಷ್ಠ ಹಾಗೂ ಸರ್ವಶ್ರೇಷ್ಠನಾದ ಪರಮೇಶ್ವರನನ್ನು ಸ್ತುತಿಸಿರಿ, ಉಪಾಸಿಸಿರಿ. ಪ್ರಕಾಶ ಮತ್ತು ಶಕ್ತಿಯ ಪ್ರಾಪ್ತಿಗಾಗಿ **[ಇಂದ್ರಂ]** ಸೂರ್ಯನನ್ನು, ಪ್ರಾಣಶಕ್ತಿಯನ್ನು ವರ್ಧಿಸಲು ಮತ್ತು ಚೈತನ್ಯಕ್ಕಾಗಿ **[ಇಂದ್ರಂ]** ವಾಯುವನ್ನು **[ಅನೂಷತ]** ಪೂಜಿಸಿರಿ. ಅರ್ಥಾತ್ ಸಂಪೂರ್ಣ ಸದ್ವಿನಿಯೋಗವನ್ನು ಮಾಡಿರಿ.

ಭಾವಾರ್ಥ:- ಭಗವಂತನ ಗುಣಗಳನ್ನು ಗಾನ ಮಾಡುವ ಅತ್ಯಂತ ವಿಚಾರಶೀಲ ಹಾಗೂ ವಿವೇಕಿಗಳಾದ ವಿದ್ವಾಂಸರೇ ! ನೀವೆಲ್ಲರೂ ಸತ್ಯವಂತರಾಗಿ, ಅನಂತಜ್ಞಾನವುಳ್ಳ, ಸದಾಶ್ರೇಷ್ಠಕರ್ಮಗಳ ಕಡೆಗೆ, ಅರ್ಥಾತ್ ಸತ್ಕರ್ಮಗಳನ್ನೇ ಮಾಡಲು ಪ್ರೇರೇಪಿಸುವ, ಸರ್ವೋಭ್ಯುದಯ ಮತ್ತು ನಿಶ್ರೇಯಸ್ಸಿಗೆ ಕಾರಣೀಭೂತವಾದ ವೇದಮಂತ್ರಗಳ ಮೂಲಕ ಚತುರ್ವೇದಗಳಲ್ಲಿ ಬೋಧಿಸಿದ ಸಂಪೂರ್ಣ ಜ್ಞಾನದ ಪ್ರಾಪ್ತಿಗಾಗಿ ಸರ್ವಜ್ಞನಾದ ಪರಮಾತ್ಮನನ್ನು ಅನನ್ಯ ಭಕ್ತಿ ಹಾಗೂ ಶ್ರದ್ಧೆಯಿಂದ ಉಪಾಸಿಸಿರಿ. ಪ್ರಕಾಶ ಮತ್ತು ಶಕ್ತಿಗಾಗಿ ಸೂರ್ಯನ ಪ್ರಕಾಶ ಮತ್ತು ಶಕ್ತಿಯನ್ನು ಉತ್ತಮ ರೀತಿಯಲ್ಲಿ ಉಪಯೋಗಿಸಿಕೊಳ್ಳಿರಿ. ಪ್ರಾಣಶಕ್ತಿಯನ್ನು ವರ್ಧಿಸಲು ಮತ್ತು ಸಂಪೂರ್ಣ ಚೈತನ್ಯವನ್ನು ಪಡೆದು ಆಯುರಾರೋಗ್ಯವು ಪ್ರಾಪ್ತವಾಗಲು ಪ್ರಾಣಾಯಾಮಾದಿಗಳ ಮೂಲಕ ವಾಯುವಿನ ಸದ್ವಿನಿಯೋಗವನ್ನು ಮಾಡಿರಿ.

ಹಿಂದಿನ ಮಂತ್ರದಲ್ಲಿ ಹೇಳಲಾದ ಇಂದ್ರ ಶಬ್ದದ ಮೂರು ಅರ್ಥಗಳಲ್ಲಿ ವಾಯು ಮತ್ತು ಸೂರ್ಯರ ಪ್ರಕಾಶವನ್ನು ಈ ಮಂತ್ರದಲ್ಲಿ ಬೀರಲಾಗಿದೆ.

ಇಂದ್ರ ಇದ್ಧರ್ಯೋಃ ಸಚಾ ಸಂಮಿಶ್ಲ ಆ ವಚೋಯುಜಾ । ಇಂದ್ರೋ ವಜ್ರೀ ಹಿರಣ್ಯಯಃ ॥೨॥

ಪದಾರ್ಥ:- **[ಇಂದ್ರ, ಇತ್]** ಸರ್ವಜ್ಞನಾದ ಪರಮಾತ್ಮನೇ! **[ವಚೋಯುಜಾ]** ಸದಾ ಅನಂತ ಜ್ಞಾನಮಯವಾದ ವೇದವಾಣಿಯೊಂದಿಗೆ ಯುಕ್ತನಾಗಿ ತನ್ನ ವಾಣಿ, ಅರ್ಥಾತ್ ತನ್ನ ಅನಂತಜ್ಞಾನದ ಮೂಲಕ ಜೀವಮಾತ್ರರ **[ಹರ್ಯೋಃ]** ಅಜ್ಞಾನದ ಹರಣ ಮತ್ತು ಜ್ಞಾನದ ಪ್ರಕಾಶ **[ಸಚಾ]** ಇವೆರಡನ್ನೂ ಒಂದಿಗೇ ಮಾಡುತ್ತಾ, ದುಷ್ಕರ್ಮಗಳಿಂದ ನಿವೃತ್ತರನ್ನಾಗಿ ಮಾಡಿ **[ಆ ಸಂ ಮಿಶ್ಲ]** ಸತ್ಕರ್ಮಗಳೊಂದಿಗೆ ಸರಿಯಾದ ರೀತಿಯಲ್ಲಿ ಸಂಯುಕ್ತರನ್ನಾಗಿ ಮಾಡುತ್ತಾನೆ. ಅದೇ ರೀತಿ **[ಇಂದ್ರಃ]** ಸೂರ್ಯನೂ ಕೂಡ **[ವಜ್ರೀ]** ಸಂವತ್ಸರದ ಮೂಲಕ ಋತುಗಳ ಸಮ್ಮಿಲನವನ್ನು ಮಾಡಿ **[ಹಿರಣ್ಮಯಃ]** ಅತ್ಯಂತ ಪ್ರಕಾಶವನ್ನು ಬೀರುತ್ತಾನೆ. ಅದರಿಂದ ಸಮಸ್ತ ಅಂಧಕಾರದ ನಾಶವಾಗುತ್ತದೆ.

ಭಾವಾರ್ಥ:- ಸರ್ವಜ್ಞನಾದ ಪರಮಾತ್ಮನೇ, ಸರ್ವಜ್ಞಾನದ ಆಕರವಾದ, ಸಂಪೂರ್ಣ ಜ್ಞಾನವುಳ್ಳ ವೇದವಾಣಿಯೊಂದಿಗೆ ಸದಾಕಾಲ ಯುಕ್ತನಾಗಿದ್ದಾನೆ. ಅವನಂತೆಯೇ ಅವನ ಜ್ಞಾನವು ಕೂಡಾ ಅನಂತವೂ, ಅಮರವೂ ಆಗಿದೆ. ಪರಮಾತ್ಮನು ನಮ್ಮೆಲ್ಲರ ಅಜ್ಞಾನದ ಹರಣ ಮತ್ತು ಜ್ಞಾನದ ಪ್ರಕಾಶ ಇವೆರಡನ್ನೂ ತನ್ನ ಅನಂತಜ್ಞಾನದ ಮೂಲಕ ಮಾಡುತ್ತಾ, ನಮ್ಮೆಲ್ಲರನ್ನೂ ದುಷ್ಕರ್ಮಗಳಿಂದ ನಿವೃತ್ತರನ್ನಾಗಿ ಮಾಡಿ ಸತ್ಕರ್ಮಗಳೊಂದಿಗೆ ಸರಿಯಾದ ರೀತಿಯಲ್ಲಿ ಸಂಯುಕ್ತರನ್ನಾಗಿ ಮಾಡುತ್ತಾನೆ. ಅದೇ ರೀತಿ ಸೂರ್ಯನು ಕೂಡ ಸಂವತ್ಸರದ ಮೂಲಕ ಋತುಗಳ ಮಿಲನವನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥಾಬದ್ಧವಾಗಿ ಮಾಡಿ, ತನ್ನ ಪ್ರಕಾಶದ ಮೂಲಕ ಸಂಪೂರ್ಣ ಅಂಧಕಾರದ ನಾಶವನ್ನು ಮಾಡುತ್ತಾನೆ.

ಈ ಮಂತ್ರವು ನಮಗೆ ಕೊಡುವ ಸಂದೇಶವೇನೆಂದರೆ, ಭಗವಂತನು ಸರ್ವಜ್ಞನಾಗಿದ್ದು ತನ್ನ ಜ್ಞಾನದ ಮೂಲಕ ಅಜ್ಞಾನದ ನಿವಾರಣೆಯನ್ನು ಮಾಡುತ್ತಾನೆ. ದುಷ್ಕರ್ಮಗಳಿಂದ ನಿವೃತ್ತರನ್ನಾಗಿ ಮಾಡಿ ಸದಾ ಸತ್ಕರ್ಮಗಳೊಂದಿಗೇ ಸಂಯುಕ್ತರನ್ನಾಗಿ ಮಾಡುತ್ತಾನೆ. ಅವನೆಂದಿಗೂ ದುಷ್ಕರ್ಮಗಳನ್ನು ಮಾಡಲು ಪ್ರೇರೇಪಿಸುವುದಿಲ್ಲ. ಆದುದರಿಂದ ಸಮಸ್ತ ಶ್ರೇಷ್ಠಕರ್ಮಗಳನ್ನು ಭಗವಂತನು ಮಾನವರ ಮೂಲಕ ಮಾಡಿಸುತ್ತಾನೆ. ಸಮಸ್ತ ದುಷ್ಕರ್ಮಗಳನ್ನು ಮಾನವನು ತನ್ನ ಸ್ವಂತಬುದ್ಧಿಯಿಂದ ಮಾಡುತ್ತಾನೆ. ಯಾರು ಅಜ್ಞಾನವನ್ನು ಹಾಗೂ ಅಸತ್ಯಜ್ಞಾನವನ್ನು ಕೊಡುತ್ತಾನೋ ಹಾಗೂ ದುಷ್ಕರ್ಮಗಳನ್ನು ಮಾಡಲು ಪ್ರೇರೇಪಿಸುತ್ತಾನೋ ಅವನೆಂದಿಗೂ ಭಗವಂತನಾಗಲು ಸಾಧ್ಯವೇ ಇಲ್ಲ. ಆದುದರಿಂದ ಅಂತಹ ದುಷ್ಟರನ್ನೂ, ದುಷ್ಟಶಕ್ತಿಯನ್ನೂ ನಾವೆಲ್ಲರೂ ಸರ್ವಥಾ ಸರ್ವದಾ ತ್ಯಾಜ್ಯ ಮಾಡಬೇಕು.

ನಂತರ ಯಾರು ಯಾರಿಗಾಗಿ ಸೂರ್ಯ್ಯಲೋಕವನ್ನು ನಿರ್ಮಿಸಿದ್ದಾರೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಇಂದ್ರೋ ದೀರ್ಘಾಯ ಚಕ್ಷಸ ಆ ಸೂರ್ಯಂ ರೋಹಯದ್ ದಿವಿ । ವಿ ಗೋಭಿರದ್ರಿಮೈರಯತ್ ॥೩॥

ಪದಾರ್ಥ:- **[ಇಂದ್ರಃ]** ಸೃಷ್ಟಿಕರ್ತನಾದ ಜಗದೀಶ್ವರನು **[ದೀರ್ಘಾಯ]** ಅತ್ಯಂತ ದೀರ್ಘಕಾಲದ ತನಕ, ಸೃಷ್ಟಿಯ ಆರಂಭದಿಂದ ಅಂತ್ಯದ ತನಕ **[ಚಕ್ಷಸೇ]** ಜೀವಮಾತ್ರರು ಸಕಲ ಪದಾರ್ಥಗಳನ್ನು ಯಾವುದೇ ರೀತಿಯ ತೊಂದರೆಯಿಲ್ಲದೆ ಸ್ಪಷ್ಟವಾಗಿ ನೋಡಲು **[ಸೂರ್ಯಂ]** ಅತ್ಯಂತ ಪ್ರಕಾಶಮಾನನಾದ ಸೂರ್ಯನನ್ನು **[ದಿವಿ ಆರೋಹಯತ್]** ಪ್ರಕಾಶದ ನಿಮಿತ್ತ ಹಾಗೂ ಚಂದ್ರ ಮತ್ತು ಸಕಲ ಗ್ರಹೋಪಗ್ರಹಗಳನ್ನು ಪ್ರಕಾಶಿಸಲು, ಪ್ರತಿಯೊಂದು ಸೃಷ್ಟಿಯ ಆರಂಭದಲ್ಲಿಯೇ ದ್ಯುಲೋಕದಲ್ಲಿ ಪ್ರತಿಷ್ಠಿತವನ್ನಾಗಿ ಮಾಡುತ್ತಾನೆ. ಆ ಸೂರ್ಯನು **[ಗೋಭಿಃ]** ತನ್ನ ಕಿರಣಗಳ ಮೂಲಕ **[ಅದ್ರಿಂ]** ವೃಷ್ಟಿಯನ್ನು ಮಾಡುವುದಕ್ಕೋಸ್ಕರ ಮೇಘಗಳನ್ನುಂಟು ಮಾಡಿ, ಆಮೇಲೆ **[ವಿ ಐರಯತ್]** ಅವುಗಳನ್ನು ವಿದೀರ್ಣವನ್ನಾಗಿ ಅರ್ಥಾತ್ ಛಿನ್ನಭಿನ್ನವನ್ನಾಗಿ ಮಾಡಿ ಮಳೆಯಾಗುವಂತೆ ಮಾಡುತ್ತಾನೆ.

ಭಾವಾರ್ಥ:- ಸಕಲ ಚರಾಚರ ಜಗತ್ತಿನ ಸೃಷ್ಟಿಕರ್ತನಾದ ಪರಮಾತ್ಮನು, ಸೃಷ್ಟಿಯ ಆರಂಭದಿಂದ ಪ್ರಳಯಕಾಲದ ತನಕ ಜೀವಮಾತ್ರರು ಸಕಲ ಪದಾರ್ಥಗಳನ್ನು ಯಾವುದೇ ರೀತಿಯ ಅಡೆತಡೆಗಳಿಲ್ಲದೆ ನೋಡಲು, ಪ್ರತಿಯೊಂದು ಪದಾರ್ಥಗಳು ಜೀವಮಾತ್ರರಿಗೆ ದೃಷ್ಟಿಗೋಚರವಾಗಲು, ಅತ್ಯಂತ ಪ್ರಕಾಶಮಾನನಾದ ಸೂರ್ಯನನ್ನು ಪ್ರತಿಯೊಂದು ಸೃಷ್ಟಿಯ ಆರಂಭದಲ್ಲಿಯೇ ದ್ಯುಲೋಕದಲ್ಲಿ ಪ್ರತಿಷ್ಠಿತವನ್ನಾಗಿ ಮಾಡುತ್ತಾನೆ. ಸಮಸ್ತ ಗ್ರಹೋಪಗ್ರಹಗಳು ಸೂರ್ಯನ ಪ್ರಕಾಶದಿಂದಲೇ ಬೆಳಗುತ್ತವೆ.

ಆ ಸೂರ್ಯನು ತನ್ನ ಕಿರಣಗಳ ಮೂಲಕ ಜಲರಾಶಿಯನ್ನು ಹೀರಿ ಮೇಘದ ನಿರ್ಮಾಣವನ್ನು ಮಾಡುತ್ತಾನೆ. ಆಮೇಲೆ ಮೇಘಗಳನ್ನು ಛಿನ್ನಭಿನ್ನವನ್ನಾಗಿ ಮಾಡಿ ಮಳೆಯನ್ನು ಸುರಿಸುತ್ತಾನೆ.

ಇಂದ್ರ ಶಬ್ದದಿಂದ ವ್ಯಾವಹಾರಿಕ ಅರ್ಥವನ್ನು ತೋರಿಸಿ ಈಗ ಪ್ರಾರ್ಥನಾ ರೂಪದಿಂದ ಪರಮೇಶ್ವರಾರ್ಥವನ್ನು ಪ್ರಕಾಶಗೊಳಿಸಲಾಗಿದೆ.

ಇಂದ್ರ ವಾಜೇಷು ನೋಽವ ಸಹಸ್ರಪ್ರಧನೇಷು ಚ । ಉಗ್ರ ಉಗ್ರಾಭಿರೂತಿಭಿಃ ॥೪॥

ಪದಾರ್ಥ:- **[ಇಂದ್ರ]** ಪರಮೈಶ್ವರ್ಯಪ್ರದನಾದ ಸಕಲೈಶ್ವರ್ಯವಾನ್ ಪರಮಾತ್ಮ ! ನೀನು **[ಉಗ್ರಃ]** ಸರ್ವೋತ್ಕೃಷ್ಟನೂ, ಸರ್ವಜ್ಯೇಷ್ಠನೂ ಆಗಿದ್ದೀಯೆ. ನಮ್ಮೆಲ್ಲರನ್ನು **[ಸಹಸ್ರಪ್ರಧನೇಷು]** ಅಪರಿಮಿತ ಸಂಪತ್ತು ಹಾಗೂ ಅನಂತ ಆನಂದ ಪ್ರಾಪ್ತಿಯಾಗಲು ಸಾಧ್ಯವಾಗುವಂತಹ ಸಕಲ ಪುರುಷಾರ್ಥಗಳಲ್ಲಿ **[ವಾಜೇಷು]** ಬಾಹ್ಯ ಹಾಗೂ ಆಂತರಿಕವಾಗಿ ನಡೆಯುವ ಸಕಲ ಸಣ್ಣಪುಟ್ಟ ಮತ್ತು ಮಹಾಸಂಗ್ರಾಮಗಳಲ್ಲಿ **[ಉಗ್ರಾಭಿಃ]** ಅತ್ಯಂತ ಉತ್ಕೃಷ್ಟವಾದ **[ಊತಿಭಿಃ]** ರಕ್ಷಣೆಯ ಮೂಲಕ, ಸಕಲ ಪದಾರ್ಥ ಜ್ಞಾನದ ಮೂಲಕ, ವಿಜ್ಞಾನದ ಮೂಲಕ ಹಾಗೂ ಸಕಲ ಸುಖಸಾಧನಗಳ ಮೂಲಕ **[ನಃ ರಕ್ಷ]** ನಮ್ಮೆಲ್ಲರನ್ನೂ ರಕ್ಷಿಸು; ಸತತವಿಜಯಿಗಳನ್ನಾಗಿ ಮಾಡು.

ಭಾವಾರ್ಥ:- ಪರಮೈಶ್ವರ್ಯಪ್ರದನಾದ ಸಕಲೈಶ್ವರ್ಯವಾನ್ ಪರಮಾತ್ಮ ! ನೀನು ಸರ್ವೋತ್ಕೃಷ್ಟನೂ, ಸರ್ವಜ್ಯೇಷ್ಠನೂ ಆಗಿದ್ದೀಯೆ. ನೀನು ನಮ್ಮೆಲ್ಲರಿಗೂ ಯಾವುದರಿಂದ ಅಪರಿಮಿತ ಸಂಪತ್ತು ಹಾಗೂ ಅನಂತ ಆನಂದವು ಪ್ರಾಪ್ತವಾಗುತ್ತದೆಯೋ ಅಂತಹ ಶ್ರೇಷ್ಠ ಪುರುಷಾರ್ಥ ಸಾಧನೆಗಳಲ್ಲಿ ಸದಾ ನಿರತರಾಗುವಂತೆ ಮಾಡು. ಎಂದಿಗೂ ನಾವು ಹತಾಶರಾಗಿ ಧೃತಿಗೆಟ್ಟು ಪುರುಷಾರ್ಥ ಸಾಧನೆಯಿಂದ ಹಿಂಜರಿಯದಂತೆ ಮಾಡು. ನಿನ್ನ ಕೃಪೆ ಮತ್ತು ಆಶ್ರಯ ಸದಾಕಾಲ ನಮ್ಮ ಮೇಲಿರಲಿ.

ನಮ್ಮ ಜೀವನದಲ್ಲಿ ಹಲವು ರೀತಿಯ ಸಂಗ್ರಾಮಗಳು ಬಾಹ್ಯ ಹಾಗೂ ಆಂತರಿಕವಾಗಿ ನಡೆಯುತ್ತಿರುತ್ತವೆ. ಅದೇ ರೀತಿ ನಮ್ಮ ರಾಷ್ಟ್ರದಲ್ಲಿ ಹಾಗೂ ಇಡೀ ವಿಶ್ವದಲ್ಲಿ ಭವ್ಯವಾದ ವೈದಿಕ ಸಂಸ್ಕೃತಿಯನ್ನು ನಾಶ ಮಾಡುವಂತಹ ಆಸುರೀಶಕ್ತಿಗಳು, ದುಷ್ಟರು, ಸ್ವಾರ್ಥಸಾಧಕರು, ವಿಮತೀಯರು ಹಾಗೂ ಕುಮತೀಯರು ನಮ್ಮ ಮೇಲೆ ಸತತವಾಗಿ ಆಕ್ರಮಣವನ್ನು ಮಾಡುತ್ತಾ ಇರುತ್ತಾರೆ. ನೀನು ನಮ್ಮೆಲ್ಲರನ್ನು ಅತ್ಯಂತ ಉತ್ಕೃಷ್ಟವಾದ ರಕ್ಷಣೆಯ ಮೂಲಕ, ಸಕಲ ಪದಾರ್ಥಜ್ಞಾನದ ಮೂಲಕ, ವಿಜ್ಞಾನದ ಮೂಲಕ ಹಾಗೂ ಸಕಲ ಸುಖ ಸೌಲಭ್ಯಗಳ ಮೂಲಕ ಸತತವಾಗಿ ರಕ್ಷಿಸು. ಸದಾ ವಿಜಯಿಗಳನ್ನಾಗಿ ಮಾಡು. ನಾವೆಂದಿಗೂ ಪರಾಧೀನರಾಗದಿರಲಿ.

ಮತ್ತೆ ಉಕ್ತ ಅರ್ಥ ಮತ್ತು ಸೂರ್ಯ ಮತ್ತು ವಾಯುಗಳ ಗುಣಪ್ರಕಾಶವನ್ನು ಮಾಡಲಾಗಿದೆ.

ಇಂದ್ರಂ ವಯಂ ಮಹಾಧನ ಇಂದ್ರಮರ್ಭೇ ಹವಾಮಹೇ । ಯುಜಂ ವೃತ್ರೇಷು ವಜ್ರಿಣಮ್॥೫॥

ಪದಾರ್ಥ:- ನಾವೆಲ್ಲರೂ **[ಮಹಾಧನೇ]** ದೊಡ್ಡ ದೊಡ್ಡ ಸಂಗ್ರಾಮಗಳಲ್ಲಿ **[ಚ]** ಮತ್ತು **[ಅರ್ಭೇ]** ಸಣ್ಣ ಸಣ್ಣ ಕಲಹ ಮತ್ತು ಗಲಭೆಗಳಲ್ಲಿ **[ಇಂದ್ರಂ]** ಸರ್ವಶಕ್ತನಾದ ಹಾಗೂ ಸರ್ವರಕ್ಷಕನಾದ ಪರಮಾತ್ಮನನ್ನು **[ಹವಾಮಹೇ]** ಆಹ್ವಾನಿಸುತ್ತೇವೆ. ನಮ್ಮೆಲ್ಲರ ರಕ್ಷಣೆಗಾಗಿ ಪ್ರಾರ್ಥಿಸುತ್ತೇವೆ. ಅದೇ ರೀತಿ **[ವಜ್ರಿಣಂ]** ಅತ್ಯಂತ ಪ್ರಕಾಶಯುಕ್ತವಾದ ಕಿರಣಗಳುಳ್ಳ ಹಾಗೂ ತನ್ನ ಪ್ರಕಾಶದಿಂದ ಮತ್ತು ತಾಪದಿಂದ **[ವೃತ್ರೇಷು]** ಮೇಘಗಳಲ್ಲಿ **[ಯುಜಂ]** ಯುಕ್ತನಾಗಿ ಅವುಗಳನ್ನು ಛಿನ್ನಭಿನ್ನವನ್ನಾಗಿ ಮಾಡುವ **[ಇಂದ್ರಂ]** ಸೂರ್ಯನನ್ನು ಸ್ತುತಿಸುತ್ತೇವೆ ಮತ್ತು ಮೇಘಗಳನ್ನು ಅತ್ತ ಇತ್ತ ಕೊಂಡೊಯ್ಯುವ, ದೂರದೂರ ಕೊಂಡೊಯ್ಯುವ ವಾಯುವನ್ನು ಪುಷ್ಕಳವಾದ ಮಳೆಯ ಪ್ರಾಪ್ತಿಗೋಸ್ಕರ **[ಹವಾಮಹೇ]** ಯಜ್ಞದಲ್ಲಿ ಅರ್ಪಿಸಲ್ಪಡುವ ಘೃತ, ವನಸ್ಪತಿ, ಚರು, ಪುರೋಡಾಶಾದಿಗಳ ಮೂಲಕ ಅತ್ಯಂತ ಬಲವತ್ತರವನ್ನಾಗಿ ಮಾಡುತ್ತೇವೆ.

ಭಾವಾರ್ಥ:- ನಾವೆಲ್ಲರೂ ದೊಡ್ಡ ದೊಡ್ಡ ಯುದ್ಧಗಳಲ್ಲಿ, ಬೃಹತ್ಸಂಗ್ರಾಮಗಳಲ್ಲಿ ಆತ್ಮರಕ್ಷಣೆಗೋಸ್ಕರ ಮತ್ತು ವಿಜಯಪ್ರಾಪ್ತಿಗೋಸ್ಕರ, ಸರ್ವಶಕ್ತನಾದ ಹಾಗೂ ಸರ್ವರಕ್ಷಕನಾದ ಪರಮಾತ್ಮನನ್ನು ಆಹ್ವಾನಿಸುತ್ತೇವೆ, ಪ್ರಾರ್ಥಿಸುತ್ತೇವೆ. ಭಗವಂತನನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುವುದರಿಂದ ನಮ್ಮಲ್ಲಿ ಧೈರ್ಯ, ಸ್ಥೈರ್ಯ, ಸಾಹಸ ಹಾಗೂ ಬಲದ ವೃದ್ಧಿಯಾಗುತ್ತದೆ. ಪರಮಾತ್ಮನನ್ನು ನಾವು ಎರಡು ದೃಷ್ಟಿಕೋಣದಲ್ಲಿ ಪ್ರಾರ್ಥಿಸುತ್ತೇವೆ. ಬೃಹತ್ ಯುದ್ಧಗಳಾಗಲೀ ಸಣ್ಣ ಸಣ್ಣ ಕಲಹ ಗಲಭೆಗಳಾಗಲೀ ಎಲ್ಲದರಲ್ಲಿಯೂ ನಾವು ವಿಜಯವನ್ನು ಸಾಧಿಸಬೇಕು. ಆಸುರೀಶಕ್ತಿಗಳು, ದುಷ್ಟರು, ಸ್ವಾರ್ಥಸಾಧಕರು, ವಿಮತೀಯರು ಹಾಗೂ ಕುಮತೀಯರು ನಮ್ಮ ದೇಶದ ಮೇಲೆ, ನಮ್ಮ ಸಂಸ್ಕೃತಿಯ ಮೇಲೆ ಎಂದಿಗೂ ವಿಜಯವನ್ನು ಹೊಂದಬಾರದು. ಸಂಪೂರ್ಣ ವಿಶ್ವಕ್ಕೆ ಯಾವ ರೀತಿ ಒಬ್ಬನೇ ಭಗವಂತನಿದ್ದಾನೋ, ಅದೇ ರೀತಿ ಧರ್ಮ ಮತ್ತು ಸಂಸ್ಕೃತಿಯು ಕೂಡಾ ಒಂದೇ ಆಗಿದೆ. ಆದುದರಿಂದ ಎಂದಿಗೂ ಅಸುರರ, ಆಸುರೀ ಶಕ್ತಿಗಳ, ದುಷ್ಟರ ಪ್ರಾಬಲ್ಯವು ವರ್ಧಿಸಬಾರದು. ಅಸುರರ ಆಸುರೀಶಕ್ತಿಗಳ ಪ್ರಾಬಲ್ಯವು ಹೆಚ್ಚಾದರೆ ವಿಶ್ವದ ವಿನಾಶವಾಗುತ್ತದೆ. ಧರ್ಮ ಮತ್ತು ಸಂಸ್ಕೃತಿಯ ಅಧಃಪತನವಾಗುತ್ತದೆ. ಜ್ಞಾನವಿಜ್ಞಾನಗಳು, ಅತ್ಯಂತ ಶ್ರೇಷ್ಠಗ್ರಂಥಗಳು, ವಿದ್ವಾಂಸರು ಹಾಗೂ ವಿಜ್ಞಾನಿಗಳ ನಾಶವಾಗುತ್ತದೆ. ಆದುದರಿಂದ ಎಂದಿಗೂ ಯುದ್ಧಗಳು, ಗಲಭೆಗಳು, ಕಲಹಗಳು

ಆಗಬಾರದು. ಒಂದು ವೇಳೆ ಯಾವುದೇ ಕಾರಣದಿಂದ ಆದಲ್ಲಿ ಅಸುರರು ಹಾಗೂ ಆಸುರೀ ಶಕ್ತಿಗಳು ಜಯವನ್ನು ಹೊಂದಬಾರದು. ಅವರೆಲ್ಲರೂ ಸಂಪೂರ್ಣವಾಗಿ ನಾಶವಾಗಬೇಕು.

ಅದೇ ರೀತಿ ತನ್ನ ಕಿರಣಗಳ ಮೂಲಕ ಮೇಘಗಳಲ್ಲಿ ಪ್ರವೇಶವನ್ನು ಮಾಡಿ ಅವುಗಳನ್ನು ಛಿನ್ನಭಿನ್ನವನ್ನಾಗಿ ಮಾಡುವ ಸೂರ್ಯನನ್ನು ಸ್ತುತಿಸುತ್ತೇವೆ. ಮೇಘಗಳನ್ನು ದೂರದೂರಕೊಂಡೊಯ್ದು ಸರ್ವತ್ರ ಮಳೆಯಾಗುವಂತೆ ಮಾಡುವ ವಾಯುವನ್ನು, ಯಜ್ಞಯಾಗಾದಿಗಳ ಮೂಲಕ ಬಲವತ್ತರವನ್ನಾಗಿ ಮಾಡುತ್ತೇವೆ.

ಮನುಷ್ಯನು ಪರಮೇಶ್ವರನ ಪ್ರಾರ್ಥನೆಯನ್ನು ಯಾವ ಪ್ರಯೋಜನಕ್ಕಾಗಿ ಮಾಡಬೇಕು ಮತ್ತು ಸೂರ್ಯನು ಯಾರ ನಿಮಿತ್ತನಾಗಿದ್ದಾನೆ ಎಂಬುದನ್ನು ಈ ಮಂತ್ರದಲ್ಲಿ ತಿಳಿಸಲಾಗಿದೆ.

ಸ ನೋ ವೃಷನ್ನಮುಂ ಚರುಂ ಸತ್ರಾದಾವನ್ನಪಾ ವೃಧಿ । ಅಸ್ಮಭ್ಯಮಪ್ರತಿಷ್ಕುತಃ ॥೬॥

ಪದಾರ್ಥ:- ಹೇ **[ವೃಷನ್]** ಸಮಸ್ತ ಸುಖಸೌಲಭ್ಯಗಳನ್ನು ನೀಡಿ ಸದಾ ಸುಖ ಮತ್ತು ಆನಂದದ ವೃಷ್ಟಿಯನ್ನೇ ಮಾಡುವ **[ಸತ್ರಾದಾವನ್]** ಸಂಪೂರ್ಣ ಸತ್ಯಜ್ಞಾನವನ್ನೇ ಕೊಡುವ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮ ! **[ಸಃ]** ಆ ನೀನು **[ಅಸ್ಮಭ್ಯಂ]** ಸದಾ ನಿನ್ನ ಆದೇಶ ಮತ್ತು ಉಪದೇಶಗಳನ್ನು ಪಾಲನೆ ಮಾಡುತ್ತಾ ಪುರುಷಾರ್ಥ ಸಾಧನೆಯಲ್ಲಿಯೇ ನಿರತರಾದ ನಮ್ಮೆಲ್ಲರಿಗೆ ಹಾಗೂ **[ಅಪ್ರತಿಷ್ಕುತಃ]** ಎಂದೆಂದಿಗೂ ಸದಾಕಾಲ ನಿನ್ನಲ್ಲಿ ಅಚಲವಾದ ಶ್ರದ್ಧೆ, ಅಚಲವಾದ ವಿಶ್ವಾಸ ಮತ್ತು ದೃಢವಾದ ಭಕ್ತಿಯುಳ್ಳ **[ನಃ]** ನಮ್ಮೆಲ್ಲರಿಗೆ **[ಚರುಂ]** ಅತ್ಯಂತ ಶ್ರೇಷ್ಠ ಜ್ಞಾನವನ್ನು ನೀಡು. ತನ್ಮೂಲಕ **[ಅಮುಂ ಅಪಾವೃಧಿ]** ಮೋಕ್ಷದ ಮಾರ್ಗವನ್ನು, ಮೋಕ್ಷಾನಂದವು ಪ್ರಾಪ್ತಿಯಾಗುವ ದಾರಿಯನ್ನು ತೆರೆದು ನಮ್ಮೆಲ್ಲರನ್ನು ಮೋಕ್ಷದ ಕಡೆಗೆ ಕೊಂಡೊಯ್ಯು.

ಅದೇ ರೀತಿ ಸಕಲ ಜಗದ್ರಚಯಿತನಾದ, ಸಕಲ ಸೃಷ್ಟಿಯನ್ನು ಸೃಷ್ಟಿಸುವ ಪರಮಾತ್ಮ ! **[ವೃಷನ್]** ಮಳೆಯನ್ನು ಸುರಿಯುವಂತೆ ಮಾಡುವ **[ಸತ್ರಾದಾವನ್]** ಸಕಲ ಪದಾರ್ಥಗಳು ಪ್ರಾಪ್ತಿಯಾಗಲು ಸಹಾಯಕನಾದ **[ಅಪ್ರತಿಷ್ಕುತಃ]** ಸದಾ ತನ್ನ ಕಕ್ಷೆಯಲ್ಲಿಯೇ ಇರುವ ಸೂರ್ಯನು **[ಅಸ್ಮಭ್ಯಂ]** ನಮ್ಮೆಲ್ಲರಿಗೆ **[ಅಮುಂ ಚರುಂ]** ಆಕಾಶದಲ್ಲಿರುವ ಮೇಘವನ್ನು **[ಅಪಾವೃಧಿ]** ಛಿನ್ನವನ್ನಾಗಿ ಮಾಡಿ ಭೂಮಿಯ ಮೇಲೆ ಸುರಿಯುವಂತೆ ಮಾಡುತ್ತಾನೆ.

ಭಾವಾರ್ಥ:- ಸಕಲ ಸುಖ ಸೌಲಭ್ಯಗಳನ್ನು ನೀಡಿ, ಆನಂದದ ವೃಷ್ಟಿಯನ್ನೇ ಮಾಡುವ ಹಾಗೂ ಸದಾ ಸಂಪೂರ್ಣ ಸತ್ಯಜ್ಞಾನವನ್ನೇ ನೀಡುವ ಸಚ್ಚಿದಾನಂದ ಸ್ವರೂಪ ಮತ್ತು ಸರ್ವಜ್ಞನಾದ ಪರಮಾತ್ಮ ! ನಿನ್ನ ಆದೇಶ ಉಪದೇಶಗಳನ್ನು ಪರಿಪೂರ್ಣವಾಗಿ ಪಾಲಿಸುತ್ತಾ ಸದಾ ಪುರುಷಾರ್ಥಗಳ ಸಾಧನೆಯಲ್ಲಿಯೇ ನಿರತರಾಗಿರುವ ನಮ್ಮೆಲ್ಲರಿಗೆ ಹಾಗೂ ನಿನ್ನಲ್ಲಿ ಅಚಲವಾದ ಶ್ರದ್ಧೆ, ಅಚಲವಾದ ವಿಶ್ವಾಸ ಮತ್ತು ದೃಢವಾದ ಭಕ್ತಿಯುಳ್ಳ ನಮ್ಮೆಲ್ಲರಿಗೆ ಯಾವುದರಿಂದ ಮೋಕ್ಷದ ಆನಂದವು ಲಭಿಸುತ್ತದೆಯೋ ಅಂತಹ ಶ್ರೇಷ್ಠ ಜ್ಞಾನವನ್ನು ನೀಡು. ನಾವೆಲ್ಲರೂ ನಿನ್ನ ಕೃಪೆಯಿಂದ, ಅಷ್ಟಾಂಗಯೋಗದ ಸಾಧನೆಯಿಂದ, ತ್ರಿವಿಧ ತಾಪ, ಅವಿದ್ಯಾ, ಅಸ್ಮಿತಾ, ರಾಗದ್ವೇಷ ಮೊದಲಾದ ಕ್ಲೇಶಗಳಿಂದ ರಹಿತರಾಗಿ ಕರ್ಮವಿಪಾಕದಿಂದ ಮುಕ್ತರಾಗಿ, ಗುಣಾತೀತರಾಗಿ ಮೋಕ್ಷದ ಆನಂದವನ್ನು ಸದಾಕಾಲ ಅನುಭವಿಸುವಂತಾಗಲಿ.

ಯಾವ ರೀತಿ ಪರಮಾತ್ಮನು ಆನಂದದ ವೃಷ್ಟಿಯನ್ನು ಮಾಡುತ್ತಾನೋ ಅದೇ ರೀತಿ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ, ಸದಾ ತನ್ನ ಕಕ್ಷೆಯಲ್ಲಿ ಇರುವ, ಸಕಲ ಪದಾರ್ಥಗಳು ಪ್ರಾಪ್ತಿಯಾಗಲು ಸಹಾಯಕನಾದ ಸೂರ್ಯನು ಮೇಘಗಳನ್ನು ಛಿನ್ನಭಿನ್ನವನ್ನಾಗಿ ಮಾಡಿ ಮಳೆಯನ್ನು ಸುರಿಯುವಂತೆ ಮಾಡುತ್ತಾನೆ. ಈ ಮಂತ್ರದಲ್ಲಿ ಮಾನವ ಮಾತ್ರರಿಗೆ ಈ ರೀತಿಯ ಸಂದೇಶವನ್ನು ಕೊಡಲಾಗಿದೆ. ಪರಮಾತ್ಮನು ಸದಾ ಸುಖ ಮತ್ತು ಆನಂದದ ವೃಷ್ಟಿಯನ್ನೇ ಮಾಡುತ್ತಾನೆ. ಸಕಲ ಸುಖ ಸೌಲಭ್ಯಗಳನ್ನು ಕೊಡುತ್ತಾನೆ. ಸದಾಕಾಲ ಸತ್ಯಜ್ಞಾನವನ್ನೇ ಕೊಡುತ್ತಾನೆ.

ಅವನ ಕೃಪಾಪಾತ್ರರಾಗಬೇಕಾದರೆ ನಾವು ಸದಾ ಅವನ ಉಪದೇಶ ಮತ್ತು ಆದೇಶಗಳನ್ನು ಅಕ್ಷರಶಃ ಪಾಲಿಸುತ್ತಾ ಧರ್ಮ, ಅರ್ಥ, ಕಾಮ, ಮೋಕ್ಷ ಈ ಪುರುಷಾರ್ಥ ಚತುಷ್ಟಯಗಳ ಸಾಧನೆಯಲ್ಲಿ ನಿರತರಾಗಬೇಕು. ಪರಮಾತ್ಮನಲ್ಲಿ ಅಚಲವಾದ ಶ್ರದ್ಧೆ, ಅಚಲವಾದ ವಿಶ್ವಾಸ ಮತ್ತು ದೃಢಭಕ್ತಿಯುಳ್ಳವರಾಗಬೇಕು. ಆಗ ಅವನು ನಮ್ಮೆಲ್ಲರ ಮೇಲೆ ಕೃಪೆದೋರಿ ಮೋಕ್ಷದ ಆನಂದದ ವೃಷ್ಟಿಯನ್ನೇ ಮಾಡುತ್ತಾನೆ.

ಮತ್ತೆ ಇಂದ್ರ ಶಬ್ದದಿಂದ ಪರಮೇಶ್ವರನ ಪ್ರಕಾಶವನ್ನು ಬೀರಲಾಗಿದೆ.

ತುಂಜೇತುಂಜೇ ಯ ಉತ್ತರೇ ಸ್ತೋಮಾ ಇಂದ್ರಸ್ಯ ವಜ್ರಿಣಃ । ನ ವಿಂಧೇ ಅಸ್ಯ ಸುಷ್ಟುತಿಮ್ ॥೭॥

ಪದಾರ್ಥ:- ನಾನು **[ತುಂಜೇ ತುಂಜೇ]** ಮಾನವ ಮಾತ್ರರ, ಜೀವಮಾತ್ರರ ಕಲ್ಯಾಣಕ್ಕೋಸ್ಕರ ಸುಖಕ್ಕೋಸ್ಕರ ಪರಮಾತ್ಮನು ಈ ಸೃಷ್ಟಿಯಲ್ಲಿ ಏನೆಲ್ಲಾ ಸೃಷ್ಟಿಸಿದ್ದಾನೋ ಅವೆಲ್ಲವನ್ನು ಗಮನದಲ್ಲಿಟ್ಟು **[ಉತ್ತರೇ]** ಸಿದ್ಧಾಂತಗಳಿಂದ ನಿಶ್ಚಯಿಸಲ್ಪಟ್ಟ ಹಾಗೂ ಶ್ರೇಷ್ಠ ವಿದ್ವಾಂಸರು, ಯೋಗಿಗಳು, ಋಷಿ ಮುನಿಗಳು ಹೇಳಿದಂತಹ ಹಾಗೂ ಮಾಡಿದಂತಹ **[ಸ್ತೋಮಾಃ]** ಯಾವ ಸ್ತುತಿ ಸಮೂಹಗಳಿವೆಯೋ ಅವುಗಳಿಂದಲೂ **[ವಜ್ರಿಣಃ]** ಅನಂತ ಪ್ರಶಂಸನೀಯ ಬಲವುಳ್ಳವನಾದ **[ಅಸ್ಯ ಇಂದ್ರಸ್ಯ]** ಸಕಲದುಃಖ ನಿವಾರಕನಾದ ಆ ಪರಮಾತ್ಮನ **[ಸುಷ್ಟುತಿಂ]** ಸುಂದರವಾದ ಗುಣಗಳು ಸ್ತುತಿಗಳಿವೆಯೋ ಹಾಗೂ ಅನಂತ ಜ್ಞಾನವಿದೆಯೋ ಅವುಗಳನ್ನು **[ನ ವಿಂಧೇ]** ಪ್ರಾಪ್ತಮಾಡಿಕೊಳ್ಳಲು ಅವುಗಳನ್ನು ತಿಳಿದುಕೊಳ್ಳಲು ಅಸಮರ್ಥನಾಗಿದ್ದೇನೆ.

ಭಾವಾರ್ಥ:- ಪರಮಾತ್ಮನು ಅಪರಿಮಿತನೂ, ಅತುಲ್ಯನೂ, ಅನಂತನೂ, ವರ್ಣಿಸಲಸಾಧ್ಯನಾದವನೂ ಆಗಿದ್ದಾನೆ. ಅವನು ಈ ಸೃಷ್ಟಿಯಲ್ಲಿ ಜೀವಮಾತ್ರರ ಸುಖ ಮತ್ತು ಕಲ್ಯಾಣಕ್ಕೋಸ್ಕರ ಏನೆಲ್ಲಾ ವಸ್ತುಗಳನ್ನು, ಪದಾರ್ಥಗಳನ್ನು ಸೃಷ್ಟಿಸಿದ್ದಾನೋ ಅವೆಲ್ಲವನ್ನೂ ತಿಳಿದುಕೊಳ್ಳಲು ನಾವು ಅಸಮರ್ಥರಾಗಿದ್ದೇವೆ. ಅದೇ ರೀತಿ ಅವನು ಸೃಷ್ಟಿಸಿದ ಎಲ್ಲಾ ವಸ್ತುಗಳನ್ನು ಗಮನದಲ್ಲಿಟ್ಟು ಮಾಡಿದ ಎಷ್ಟೆಲ್ಲಾ ಸ್ತುತಿ ಸಮೂಹಗಳಿವೆಯೋ ಅವನ ಗುಣಗಳನ್ನು ವರ್ಣಿಸುವ ಮಂತ್ರಗಳಿವೆಯೋ ಹಾಗೂ ಅವನ ಗುಣಗಾನವನ್ನು ಮಾಡಲು ವಿದ್ವಾಂಸರು, ಯೋಗಿಗಳು ಋಷಿಮುನಿಗಳು ಎಷ್ಟೆಲ್ಲಾ ಶ್ಲೋಕಗಳ ಗ್ರಂಥಗಳನ್ನು ರಚಿಸಿದ್ದಾರೋ ಅವೆಲ್ಲವುಗಳಿಂದ, ಅವೆಲ್ಲವುಗಳ ಮೂಲಕ ಅವನ ಜ್ಞಾನವನ್ನು, ಅವನ ಸ್ವರೂಪವನ್ನು ಸಂಪೂರ್ಣವಾಗಿ ತಿಳಿಯಲು ಅಸಮರ್ಥರಾಗಿದ್ದೇವೆ.

ಈ ಮಂತ್ರದಲ್ಲಿ ನಮಗೆ ಉತ್ತಮವಾದ ಸಂದೇಶವಿದೆ. ಪರಮಾತ್ಮನು ಅನಾದಿಯೂ, ಅನಂತನೂ, ಸರ್ವಜ್ಞನೂ, ಸರ್ವಶಕ್ತನೂ, ನಿರಾಕಾರನೂ, ಸರ್ವೈಶ್ವರ್ಯಶಾಲಿಯೂ ಆಗಿದ್ದಾನೆ. ಅವನು ಸರ್ವವ್ಯಾಪಕನೂ, ಸರ್ವಾಂತರ್ಯಾಮಿಯೂ, ಸರ್ವಪ್ರಕಾಶ ಸ್ವರೂಪನೂ ಆಗಿದ್ದಾನೆ. ಅದರಂತೆಯೇ ಅವನ ಜ್ಞಾನವೂ ಅನಾದಿಯೂ, ಅನಂತವೂ ಆಗಿದೆ. ಈ ಸೃಷ್ಟಿಯಲ್ಲಿ ಅವನಿಂದ ಸೃಷ್ಟಿಸಲ್ಪಟ್ಟ ಸಮಸ್ತ ಪದಾರ್ಥಗಳನ್ನು ತಿಳಿದವರು ಯಾರೂ ಇಲ್ಲ. ಆದರೆ ಅವನಿಂದ ಸೃಷ್ಟಿಸಲ್ಪಟ್ಟ ಸಕಲ ಪದಾರ್ಥಗಳಿಂದ ಸರ್ವಜನ ಹಿತಕ್ಕೋಸ್ಕರ, ಕಲ್ಯಾಣಕ್ಕೋಸ್ಕರ ಎಷ್ಟೆಲ್ಲಾ ಪ್ರಯೋಜನಗಳನ್ನು ಪಡೆಯಲು ಸಾಧ್ಯವಿದೆಯೋ ಅವೆಲ್ಲಾ ಪ್ರಯೋಜನಗಳನ್ನು ಪಡೆದು, ಎಲ್ಲಾ ಪದಾರ್ಥಗಳ ಸದ್ವಿನಿಯೋಗವನ್ನೇ ಮಾಡಿ ಸದಾ ಸುಖಶಾಂತಿಯಿಂದ ಇರೋಣ.

ಪರಮೇಶ್ವರನು ಮನುಷ್ಯರಿಗೆ ಹೇಗೆ ಪ್ರಾಪ್ತನಾಗುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ವೃಷಾ ಯೂಥೇವ ವಂಸಗಃ ಕೃಷ್ಟೀರಿಯರ್ತ್ಯೋಜಸಾ । ಈಶಾನೋ ಅಪ್ರತಿಷ್ಕುತಃ ॥೮॥

ಪದಾರ್ಥ:- **[ವೃಷಾ]** ಸೂರ್ಯನು **[ಅಪ್ರತಿಷ್ಕುತಃ]** ತನ್ನ ಕಕ್ಷೆಯಲ್ಲಿಯೇ ಇದ್ದು, **[ಓಜಸಾ]** ತನ್ನ ಪ್ರಕಾಶದಿಂದ ಹಾಗೂ **[ಕೃಷ್ಟೀಃ]** ಆಕರ್ಷಣ ಶಕ್ತಿಯಿಂದ **[ಯೂಥೇವ]** ತನ್ನ ಸನಿಹದಲ್ಲಿರುವ ಗ್ರಹೋಪಗ್ರಹಗಳ ಸಮೂಹವನ್ನು

[ಇಯರ್ತಿ] ಪ್ರಾಪ್ತವಾಗುತ್ತಾನೋ ಆಕರ್ಷಿತನನ್ನಾಗಿ ಮಾಡುತ್ತಾನೋ, ಅದೇ ರೀತಿ **[ಈಶಾನಃ]** ಪರಮಾತ್ಮನು **[ವಂಸಗಃ]** ಸದಾ ಧರ್ಮಾಚರಣೆಯಲ್ಲಿಯೇ ನಿರತರಾದ ಹಾಗೂ **[ಅಪ್ರತಿಷ್ಕುತಃ]** ಎಂದಿಗೂ ಧರ್ಮಮಾರ್ಗದಿಂದ, ಸತ್ಯಮಾರ್ಗದಿಂದ ಮತ್ತು ನ್ಯಾಯಮಾರ್ಗದಿಂದ ವಿಚಲಿತರಾಗದೇ ಇರುವ ತನ್ನ ಭಕ್ತರಿಗೆ ಪ್ರಾಪ್ತನಾಗುತ್ತಾನೆ.

ಭಾವಾರ್ಥ:- ಯಾವ ರೀತಿ ಸೂರ್ಯನು ತನ್ನ ವೃತ್ತದಲ್ಲಿ ಮತ್ತು ಕಕ್ಷೆಯಲ್ಲಿಯೇ ಇದ್ದು, ತನ್ನ ಪ್ರಕಾಶದಿಂದ ಹಾಗೂ ಗುರುತ್ವಾಕರ್ಷಣ ಶಕ್ತಿಯಿಂದ ತನ್ನ ಸನಿಹದಲ್ಲಿರುವ ಗ್ರಹೋಪಗ್ರಹಗಳನ್ನು ಆಕರ್ಷಿತವನ್ನಾಗಿ ಮಾಡುತ್ತಾನೋ, ಅದೇ ರೀತಿ ಭಕ್ತವತ್ಸಲನಾದ ಪರಮಾತ್ಮನು ಸದಾ ಧರ್ಮಾಚರಣೆಯಲ್ಲಿ ನಿರತರಾಗಿದ್ದು ಎಂದಿಗೂ ಸತ್ಯಧರ್ಮ ಮತ್ತು ನ್ಯಾಯಮಾರ್ಗದಿಂದ ವಿಚಲಿತರಾಗದೇ ಇರುವ ತನ್ನ ಉಪಾಸಕರಿಗೆ ಪ್ರಾಪ್ತನಾಗುತ್ತಾನೆ.

ಎಲ್ಲ ಪ್ರಕಾರದಿಂದ ಎಲ್ಲರ ಸಹಾಯಕಾರಿಯು ಪರಮಾತ್ಮನೇ ಆಗಿದ್ದಾನೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಯ ಏಕಶ್ಚರ್ಷಣೀನಾಂ ವಸೂನಾಮಿರಜ್ಯತಿ । ಇಂದ್ರಃ ಪಂಚ ಕ್ಷಿತೀನಾಮ್ ॥೯॥

ಪದಾರ್ಥ:- **[ಯಃ ಏಕಃ ಇಂದ್ರಃ]** ಏಕಮೇವಾದ್ವಿತೀಯನಾದ ಪರಮಾತ್ಮನು **[ವಸೂನಾಮ್ ಕ್ಷಿತೀನಾಮ್]** ಜೀವಮಾತ್ರರು ವಾಸಿಸಲು ಯೋಗ್ಯವಾದ ಪೃಥಿವ್ಯಾದಿ ಲೋಕಗಳಲ್ಲಿ ನಿವಾಸಿಸುವ **[ಚರ್ಷಣೀನಾಮ್]** ದರ್ಶನ ಮಾಡಲು, ನೋಡಲು ಸಮರ್ಥರಾದ ಸಮಸ್ತ ಪ್ರಾಣಿಮಾತ್ರರಿಗೆ **[ಪಂಚ]** ಐದು ವಸ್ತುಗಳನ್ನು ಗಾಳಿ, ಬೆಳಕು, ನೀರು, ಅನ್ನ ಮತ್ತು ಜ್ಞಾನ ಹಾಗೂ **[ಇರಜ್ಯತಿ]** ಸಮಸ್ತ ಐಶ್ವರ್ಯವನ್ನು ಸಮಸ್ತ ಪದಾರ್ಥಗಳನ್ನು ಕೊಡುತ್ತಾನೆ.

ಭಾವಾರ್ಥ:- ಏಕಮೇವಾದ್ವಿತೀಯನಾದ ಅರ್ಥಾತ್ ಕೇವಲ ಏಕಮಾತ್ರ [ಅವನಿಗೆ ಸರಿಸಮಾನರಾದವರಾಗಲೀ, ಅವನಿಗಿಂತ ಮಿಗಿಲಾದವರಾಗಲೀ ಯಾರೂ ಇಲ್ಲ] ಸಕಲೈಶ್ವರ್ಯಪ್ರದನಾದ ನಿರಾಕಾರ, ನಿರ್ವಿಕಾರ, ಅಜನ್ಮಾ, ಅವಿನಾಶೀ, ಸರ್ವವ್ಯಾಪಕ ಸರ್ವಾಂತರ್ಯಾಮಿ, ಸರ್ವಜ್ಞ, ಸರ್ವಶಕ್ತನಾದ ಪರಮಾತ್ಮ. ಅವನಿಗೆ ಹೆಂಡತಿ ಮಕ್ಕಳು ಯಾರೂ ಇಲ್ಲ, ಅವನು ಎಂದಿಗೂ ಜನ್ಮವನ್ನಾಗಲೀ, ಅವತಾರವನ್ನಾಗಲೀ ತಾಳುವುದೇ ಇಲ್ಲ. ಜೀವಮಾತ್ರರೇ ಅವನ ಮಕ್ಕಳು. ಆ ಪರಮಾತ್ಮನು ಜೀವಮಾತ್ರರು ವಾಸಿಸಲು ಯೋಗ್ಯವಾದ ಪೃಥ್ವಿ, ಅರ್ಥಾತ್ ಭೂಮಿ ಇತ್ಯಾದಿ ಲೋಕಗಳಲ್ಲಿರುವ ಸಮಸ್ತ ಪ್ರಾಣಿಮಾತ್ರರಿಗೆ ಗಾಳಿ, ಬೆಳಕು, ನೀರು, ಅನ್ನ ಮತ್ತು ಜ್ಞಾನ ಈ ಐದು ಅತ್ಯಂತ ಆವಶ್ಯಕವಾದ ವಸ್ತುಗಳನ್ನು ಹಾಗೂ ಸಮಸ್ತ ಪದಾರ್ಥಗಳನ್ನು, ಸಕಲೈಶ್ವರ್ಯಗಳನ್ನು ನೀಡುತ್ತಾನೆ.

ಇದರಿಂದ ಸ್ಪಷ್ಟವಾಗುವುದೇನೆಂದರೆ ಕೇವಲ ಈ ಭೂಮಿಯಲ್ಲಿ ಮಾತ್ರವಲ್ಲ, ಇನ್ನು ಅನೇಕ ಲೋಕ ಲೋಕಾಂತರಗಳಲ್ಲಿ ಕೂಡಾ ಜೀವಮಾತ್ರರು ಜೀವಿಸುತ್ತಾರೆ.

ಪರಮಾತ್ಮನು ಸರ್ವೋಪರಿ ವಿರಾಜಮಾನನಾಗಿದ್ದಾನೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಇಂದ್ರಂ ವೋ ವಿಶ್ವತಸ್ಪರಿ ಹವಾಮಹೇ ಜನೇಭ್ಯಃ । ಅಸ್ಮಾಕಮಸ್ತು ಕೇವಲಃ ॥೧೦॥

ಪದಾರ್ಥ:- ಸಮಸ್ತ ಮಾನವರೇ ! ಯಾರನ್ನು ನಾವು **[ವಿಶ್ವತಃ ಜನೇಭ್ಯಃ]** ಈ ಚರಾಚರ ಜಗತ್ತಿನಲ್ಲಿ ಸೃಷ್ಟಿಸಲ್ಪಟ್ಟ ಹಾಗೂ ಮುಂದೆ ಸೃಷ್ಟಿಸಲ್ಪಡುವ ಸಕಲ ಪದಾರ್ಥಗಳಿಗಿಂತಲೂ, ನಿರ್ಮಿತವಾದ, ನಿರ್ಮಾಣವಾಗುತ್ತಿರುವ ಹಾಗೂ ಇನ್ನು ಮುಂದೆ ನಿರ್ಮಿಸಲ್ಪಡುವ, ನಿರ್ಮಾಣವಾಗಲಿಕ್ಕಿರುವ ಸಮಸ್ತ ವಸ್ತುಗಳಿಗಿಂತಲೂ, ಉತ್ಪನ್ನವಾದ ಹಾಗೂ ಜನ್ಮವನ್ನು ತಾಳಿದ, ಇನ್ನು ಮುಂದೆಯೂ ಉತ್ಪನ್ನವಾಗುವ ಮತ್ತು ಜನ್ಮವನ್ನು ತಾಳಲಿಕ್ಕಿರುವ ಸಮಸ್ತ ಜೀವಮಾತ್ರರ [ಜರಾಯುಜ, ಅಂಡಜ, ಉದ್ಭಿಜ, ಸ್ವೇದಜ] ಅವರಿಗಿಂತಲೂ ಶ್ರೇಷ್ಠನಾದ ಹಾಗೂ ಸಕಲ ಗುಣಗಳಿಂದಲೂ ಉತ್ಕೃಷ್ಟನಾದ **[ಇಂದ್ರಂ]** ಸಕಲ ಜಗದುತ್ಪಾದಕ, ಸಕಲೈಶ್ವರ್ಯಪ್ರದ, ನಿರಾಕಾರನಾದ ಸರ್ವ

ಜಗದೊಡೆಯನಾದ ಏಕೈಕ ಪರಮಾತ್ಮನನ್ನು **[ಪರಿ ಹವಾಮಹೇ]** ಸರ್ವೋಪರಿ, ಸರ್ವಜ್ಯೇಷ್ಠ, ಸರ್ವಶ್ರೇಷ್ಠನಾದ ಪರಮಾತ್ಮನನ್ನು ಸರ್ವಾತ್ಮನಾ ಉಪಾಸಿಸುತ್ತೇವೋ, ಆ ಪರಮಾತ್ಮನು **[ಅಸ್ಮಾಕಂ]** ನಮ್ಮೆಲ್ಲರಿಗೂ, **[ವಃ]** ನಿಮ್ಮೆಲ್ಲರಿಗೂ, ಜೀವಮಾತ್ರರಿಗೂ **[ಕೇವಲಃ ಅಸ್ತು]** ಏಕೈಕ ಉಪಾಸ್ಯದೇವನಾಗಿದ್ದಾನೆ.

ಭಾವಾರ್ಥ:- ಸಮಸ್ತ ವಿದ್ವಾಂಸರು, ಆಚಾರ್ಯರು, ಋಷಿಮುನಿಗಳು, ಸಾಧುಸಂತರು ಸಮಸ್ತ ಮಾನವರಿಗೆ ಈ ರೀತಿ ಉಪದೇಶಿಸಬೇಕು - ಈ ಜಗತ್ತಿನಲ್ಲಿರುವ ಸಮಸ್ತ ಮಾನವರೇ ! ಯಾರನ್ನು ನಾವೆಲ್ಲರೂ, ಈ ಚರಾಚರ ಜಗತ್ತಿನಲ್ಲಿ ಸೃಷ್ಟಿಸಲ್ಪಟ್ಟ ಹಾಗೂ ಇನ್ನು ಮುಂದೆ ಸೃಷ್ಟಿಸಲ್ಪಡುವ, ನಿರ್ಮಿತವಾದ, ನಿರ್ಮಾಣವಾಗುತ್ತಿರುವ ಇನ್ನು ಮುಂದೆ ನಿರ್ಮಿಸಲ್ಪಡುವ ಸಮಸ್ತ ಪದಾರ್ಥಗಳಿಗಿಂತಲೂ, ಉತ್ಪನ್ನವಾದ ಮತ್ತು ಜನ್ಮವನ್ನು ಪಡೆದ ಮತ್ತು ಇನ್ನು ಮುಂದೆ ಉತ್ಪನ್ನವಾಗಲಿರುವ ಹಾಗೂ ಜನ್ಮವನ್ನು ಪಡೆಯಲಿಕ್ಕಿರುವ ಸಮಸ್ತ ಜೀವಮಾತ್ರರಿಗಿಂತಲೂ, ಅತ್ಯಂತ ಶ್ರೇಷ್ಠ ಹಾಗೂ ಸರ್ವೋತ್ಕೃಷ್ಟನಾದ, ಸಕಲ ಜಗದುತ್ಪಾದಕ, ಸಕಲೈಶ್ವರ್ಯಪ್ರದ, ನಿರಾಕಾರ, ಸರ್ವಜಗದೊಡೆಯನಾದ ಏಕೈಕ ಪರಮಾತ್ಮನನ್ನು ಸರ್ವಾತ್ಮನಾ ಉಪಾಸಿಸುತ್ತೇವೋ, ಆ ಪರಮಾತ್ಮನು ನಮ್ಮೆಲ್ಲರಿಗೂ, ನಿಮ್ಮೆಲ್ಲರಿಗೂ ಹಾಗೂ ಜೀವಮಾತ್ರರಿಗೂ ಏಕೈಕ ಉಪಾಸ್ಯದೇವನಾಗಿದ್ದಾನೆ. ಅವನಿಗಿಂತ ಹೊರತಾದ, ಅವನಿಗಿಂತಲೂ ಭಿನ್ನವಾದ ಯಾವುದೇ ವ್ಯಕ್ತಿ ಅಥವಾ ಜೀವನವನ್ನು ಧಾರಣ ಮಾಡುವ ಯಾವುದೇ ಜೀವಿಯಾಗಲೀ [ಜರಾಯುಜ, ಅಂಡಜ, ಉದ್ಭಿಜ ಮತ್ತು ಸ್ವೇದಜ] ಯಾವುದೇ ವಸ್ತುವಾಗಲೀ ಯಾವುದೇ ಪದಾರ್ಥವಾಗಲೀ ಎಂದಿಗೂ ಉಪಾಸನೀಯನಾಗಲು ಸಾಧ್ಯವೇ ಇಲ್ಲ.

ಪೂಜೆ ಎಂದರೆ ಆದರ, ಸತ್ಕಾರ, ಸದ್ವಿನಿಯೋಗ. ಈ ದೃಷ್ಟಿಕೋಣದಿಂದ ಯಾವ ವ್ಯಕ್ತಿಯನ್ನೂ ಪೂಜಿಸಬಹುದು. ಯಾವುದೇ ವಸ್ತುವನ್ನು, ಪದಾರ್ಥವನ್ನು ಪೂಜಿಸಬಹುದು. ಆದರೆ ಉಪಾಸಿಸಲು ಖಂಡಿತವಾಗಿಯೂ ಸಾಧ್ಯವಿಲ್ಲ. ಪರಮಾತ್ಮನು ನಿರಾಕಾರನೂ, ನಿರ್ವಿಕಾರನೂ, ಸರ್ವವ್ಯಾಪಕನೂ, ಸರ್ವಾಂತರ್ಯಾಮಿಯೂ ಆಗಿದ್ದಾನೆ. ಪರಮಾತ್ಮನು ಸಕಲ ವಸ್ತುವಿನಲ್ಲಿ ಇದ್ದಾನೆ, ಸಕಲ ವಸ್ತುವಲ್ಲ. ಸಕಲ ಪದಾರ್ಥದಲ್ಲಿಯೂ ಇದ್ದಾನೆ, ಸಕಲ ಪದಾರ್ಥವಲ್ಲ. ಜೀವಮಾತ್ರರಲ್ಲಿ ಇದ್ದಾನೆ, ಆದರೆ ಜೀವಮಾತ್ರನಲ್ಲ. ಅವನು ಸರ್ವಪ್ರಕಾಶಸ್ವರೂಪನೂ, ಎಲ್ಲವನ್ನೂ ಪ್ರಕಾಶಿಸುವವನೂ ಆಗಿದ್ದಾನೆ, ಪ್ರಕಾಶಿಸಲ್ಪಡುವ ಯಾವುದೇ ವಸ್ತು ಪರಮಾತ್ಮನಲ್ಲ. ಅವನಿಂದ ಶಕ್ತಿಯನ್ನು ಪಡೆದು ಎಲ್ಲಾ ಇಂದ್ರಿಯಗಳು ಕೆಲಸ ಮಾಡುತ್ತವೆ. ಆದರೆ ಅವನು ಇಂದ್ರಿಯಾತೀತನೂ ಯಾವುದೇ ಇಂದ್ರಿಯಗಳಿಂದಲೂ ತಿಳಿಯಲಸಾಧ್ಯನಾದವನೂ, ಅವರ್ಣನೀಯನೂ, ಅನಿರ್ವಚನೀಯನೂ, ಗುಣಾತೀತನೂ ಆಗಿದ್ದಾನೆ. ಅಜನ್ಮಾ ಅರ್ಥಾತ್ ಎಂದಿಗೂ ಜನ್ಮವನ್ನು ತಾಳುವುದಿಲ್ಲ. ಅವನ ಅವತಾರ ಎಂದಿಗೂ ಆಗುವುದಿಲ್ಲ. ಅವನು ಎಂದಿಗೂ ಯಾವುದೇ ರೂಪದಲ್ಲಿ ಯಾವುದೇ ರೀತಿಯಲ್ಲಿ ಪ್ರಕಟನಾಗುವುದಿಲ್ಲ. ಅವನು ಅವಿನಾಶಿಯಾಗಿದ್ದಾನೆ. ಎಂದಿಗೂ ಸಾಯುವುದಿಲ್ಲ, ಎಂದಿಗೂ ನಾಶವಾಗುವುದಿಲ್ಲ. ಅವನಿಗೆ ಅವಿದ್ಯಾ, ಅಸ್ಮಿತಾ, ರಾಗ-ದ್ವೇಷ, ಕರ್ಮವಿಪಾಕ ಈ ಪಂಚಕ್ಲೇಶಗಳು ಎಂದಿಗೂ ತಟ್ಟುವುದಿಲ್ಲ. ಅವನನ್ನು ಕೇವಲ ಆತ್ಮನಿಂದ, ಆತ್ಮನ ಮೂಲಕ ನಮ್ಮ ಅಂತಃಕರಣದಲ್ಲಿಯೇ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಬೇರೆ ಎಲ್ಲಿಯೂ ಸಾಧ್ಯವಿಲ್ಲ. [ಆತ್ಮನಾ ಆತ್ಮಾನಾಂ ಅಭಿ ಸಂವಿವೇಶ=ಜೀವಾತ್ಮನಾ ಪರಮಾತ್ಮಾನಾಂ ಅಭಿಸಂ ವಿವೇಶ - ಯಜುರ್ವೇದ].

ಏಳನೆಯ ಸೂಕ್ತ ಸಮಾಪ್ತ

ಸೂಕ್ತ ೮

ಮಂತ್ರಸಂಖ್ಯೆ ೧೦ । ಋಷಿಃ -ಮಧುಚ್ಛಂದಾ ವೈಶ್ವಾಮಿತ್ರಃ । ದೇವತಾ - ಇಂದ್ರಃ । ಛಂದಃ - ೧, ೫, ೮ ನಿಚೃದ್ ಗಾಯತ್ರೀ, ೨ ಪ್ರತಿಷ್ಠಾ ಗಾಯತ್ರೀ, ೩, ೪, ೬, ೭, ೯ ಗಾಯತ್ರೀ, ೧೦ ವರ್ಧಮಾನಾ ಗಾಯತ್ರೀ । ಸ್ವರಃ-ಷಡ್ಜಃ.

ಈಶ್ವರನ ಅನುಗ್ರಹ ಮತ್ತು ನಮ್ಮ ಪುರುಷಾರ್ಥದಿಂದ ಹೇಗೆ ಧನವನ್ನು ಸಂಪಾದಿಸಬೇಕು ಎಂಬುದನ್ನಿಲ್ಲಿ ವಿವರಿಸಲಾಗಿದೆ.

ಏಂದ್ರ ಸಾನಸಿಂ ರಯಿಂ ಸಜಿತ್ವಾನಂ ಸದಾಸಹಮ್ । ವರ್ಷಿಷ್ಠಮೂತಯೇ ಭರ ॥೧॥

ಪದಾರ್ಥ:- **[ಇಂದ್ರಃ]** ಹೇ ಪರಮೇಶ್ವರ್ಯಪ್ರದ ಪರಮಾತ್ಮ ! ಸಕಲೈಶ್ವರ್ಯವನ್ನೂ ಕೊಡುವ ಪರಮಾತ್ಮ ! ನೀನು ಕೃಪೆದೋರಿ **[ಊತಯೇ]** ನಮ್ಮೆಲ್ಲರ ರಕ್ಷಣೆಗಾಗಿ ಹಾಗೂ ಸಕಲ ಸುಖ ಸೌಲಭ್ಯ ಪ್ರಾಪ್ತಿಗಾಗಿ ಮತ್ತು ಸರ್ವತೋಮುಖ ಅಭಿವೃದ್ಧಿಗೋಸ್ಕರ **[ವರ್ಷಿಷ್ಠಂ]** ಸದಾ ವೃದ್ಧಿಯನ್ನೇ ಹೊಂದುವ ಎಂದಿಗೂ ನ್ಯೂನವಾಗದ **[ಸಾನಸಿಂ]** ನಿರಂತರ ಸೇವನೀಯ ಅರ್ಥಾತ್ ಸದಾ ಉಪಭೋಗಿಸಲು ಯೋಗ್ಯವಾದ **[ಸದಾಸಹಂ]** ದುಷ್ಟ ದುಷ್ಟ ಶತ್ರುಗಳ ಹಾನಿಯನ್ನು ಮಾಡುವ ಮತ್ತು ಸಮಸ್ತ ದುಃಖಗಳನ್ನು, ಕಷ್ಟಗಳನ್ನು, ಅಭಾವವನ್ನು, ತೊಂದರೆಗಳನ್ನು ಹಾಗೂ ಎಲ್ಲಾ ರೀತಿಯ ಅಡೆತಡೆಗಳನ್ನು ಎದುರಿಸಲು ಮತ್ತು ನಿವಾರಣೆ ಮಾಡಲು ಸಮರ್ಥವಾದ **[ಸಜಿತ್ವಾನಂ]** ನಿರಂತರ ಪೀಡೆಯನ್ನು ಕೊಡುವ ಸಮಾನ ಶತ್ರುಗಳ ಮೇಲೆ ಸಂಪೂರ್ಣ ವಿಜಯ ಪ್ರಾಪ್ತಿಗೋಸ್ಕರ **[ರಯಿಂ]** ಅಪರಿಮಿತವಾದ ಶ್ರೇಷ್ಠ ಸಂಪತ್ತನ್ನು **[ಆ ಭರ]** ಎಲ್ಲಾ ದಿಕ್ಕಿನಿಂದ, ಎಲ್ಲಾ ವಿಧದಿಂದ ಪ್ರಾಪ್ತಿಯಾಗುವಂತೆ ಮಾಡು.

ಭಾವಾರ್ಥ:- ಹೇ ಸಕಲೈಶ್ವರ್ಯವನ್ನು ಕೊಡುವ ಪರಮಾತ್ಮ ! ನೀನು ಕೃಪೆದೋರಿ, ನಮ್ಮೆಲ್ಲರ ರಕ್ಷಣೆಗಾಗಿ ಹಾಗೂ ಸಕಲ ಸುಖ ಸೌಲಭ್ಯಗಳ ಪ್ರಾಪ್ತಿಗಾಗಿ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ಹಾಗೂ ನಿರಂತರ ವಿಕಾಸಕ್ಕಾಗಿ, ಸದಾ ವೃದ್ಧಿಯನ್ನೇ ಹೊಂದುವ ಎಂದಿಗೂ ಯಾವುದೇ ರೀತಿಯಲ್ಲಿ ನ್ಯೂನವಾಗದ, ನಿರಂತರ ಸೇವನೀಯ, ಸದಾ ಉಪಭೋಗಿಸಲು ಯೋಗ್ಯವಾದ, ದುಷ್ಟಶತ್ರುಗಳನ್ನು ನಾಶಮಾಡುವ ಮತ್ತು ಸಮಸ್ತ ದುಃಖಗಳನ್ನು, ಕಷ್ಟಗಳನ್ನು, ಅಭಾವವನ್ನು, ತೊಂದರೆಗಳನ್ನು ದೈವೀ ಪ್ರಕೋಪವನ್ನು, ಪ್ರಕೃತಿಯ ವೈಪರೀತ್ಯಗಳನ್ನು ಹಾಗೂ ಎಲ್ಲಾ ರೀತಿಯ ಅಡೆತಡೆಗಳನ್ನು ಎದುರಿಸಲು ಮತ್ತು ನಿವಾರಣೆ ಮಾಡಲು ಸಮರ್ಥವಾದ, ನಿರಂತರ ಪೀಡೆಯನ್ನು ಕೊಟ್ಟು ಸದಾ ಹಾನಿಯನ್ನೇ ಮಾಡುತ್ತಾ ಇರುವ ಸಮಾನ ಶತ್ರುಗಳ ಮೇಲೆ ಸಂಪೂರ್ಣ ವಿಜಯಪ್ರಾಪ್ತಿಗೋಸ್ಕರ, ಅಪರಿಮಿತವಾದ ಶ್ರೇಷ್ಠ ಸಂಪತ್ತನ್ನು ಹಾಗೂ ಎಂದಿಗೂ ನ್ಯೂನವಾಗದ, ಕಡಿಮೆಯಾಗದ, ಸದಾ ವೃದ್ಧಿಯನ್ನೇ ಹೊಂದುವ ಸಕಲ ಸಂಪನ್ಮೂಲಗಳನ್ನು ಎಲ್ಲಾ ದಿಕ್ಕಿನಿಂದ, ಎಲ್ಲಾ ವಿಧದಿಂದಲೂ ಪ್ರಾಪ್ತಿಯಾಗುವಂತೆ ಮಾಡು. ನಾವೆಲ್ಲರೂ ಸದಾ ಸ್ವಾವಲಂಬಿಗಳಾಗಿ, ಸ್ವಾಧೀನರಾಗಿ, ಅತ್ಯಂತ ಗೌರವಾನ್ವಿತರಾಗಿ, ಯಾರ ಮುಂದೆಯೂ ದೀನರಾಗದೇ ಯಾರ ಮುಂದೆಯೂ ತಲೆಯನ್ನು ಬಾಗಿಸದೇ, ಎಂದಿಗೂ ಧೃತಿಗೆಡದೇ, ಅತ್ಯಂತ ಶ್ರೇಷ್ಠಜೀವನವನ್ನು ಬಾಳುವಂತಾಗಲಿ.

ಈ ಮಂತ್ರವು ವಿಶ್ವದ ವರ್ತಮಾನ ಸ್ಥಿತಿಗಳಿಗೆ ಕನ್ನಡಿ ಹಿಡಿದಂತಿದೆ. ಈ ಮಂತ್ರದಲ್ಲಿ ಯಾವ ಯಾವ ಸಾಧನಗಳ ಪ್ರಾಪ್ತಿಗಾಗಿ ಪ್ರಾರ್ಥನೆಗಳನ್ನು ಮಾಡಿದೆಯೋ ಅವೆಲ್ಲಾ ಸಾಧನಗಳನ್ನು, ನಮ್ಮೆಲ್ಲರ ತಂದೆ-ತಾಯಿ-ಬಂಧು-ಬಳಗ ಸರ್ವಸ್ವವೂ ಆದ ಪರಮಾತ್ಮನು ಅತ್ಯಂತ ಕೃಪೆದೋರಿ ನಮ್ಮೆಲ್ಲರಿಗೆ, ಈ ಜಗತ್ತಿಗೆ ಸದಾಕಾಲ ಪ್ರಾಪ್ತಿಯಾಗುವಂತೆ ಮಾಡಲಿ.

ಎಂತಹ ಧನದಿಂದ ಪರಮಸುಖ ಉಂಟಾಗುತ್ತದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ನಿ ಯೇನ ಮುಷ್ಟಿಹತ್ಯಯಾ ನಿ ವೃತ್ರಾ ರುಣಧಾಮಹೈ । ತ್ವೋತಾಸೋ ನ್ಯರ್ವತಾ ॥೨॥

ಪದಾರ್ಥ:- ಸರ್ವರಕ್ಷಕನಾದ ಹೇ ಜಗದೀಶ್ವರ ! **[ತ್ವೋತಾಸಃ]** ನಿನ್ನಿಂದ ರಕ್ಷಿಸಲ್ಪಟ್ಟ, ಸದಾ ನಿನ್ನ ರಕ್ಷಣೆಯಲ್ಲಿಯೇ ಇರುವ ನಾವೆಲ್ಲರೂ **[ಯೇನ]** ನೀನು ಕೊಡುವ ಸಂಪತ್ತಿನಿಂದ ಅತ್ಯಂತ ಬಲವುಳ್ಳವರಾಗಿ **[ಮುಷ್ಟಿಹತ್ಯಯಾ]** ನಮ್ಮ ಬಾಹುಬಲದಿಂದ ಹಾಗೂ ಕೈಯಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದು ಮತ್ತು **[ನಿ ಅರ್ವತಾ]** ನಿಶ್ಚಯವಾಗಿಯೂ ಅತ್ಯಂತ ತೀವ್ರಗತಿಯುಳ್ಳ ಅಶ್ವಾರೂಢರಾಗಿ ಹಾಗೂ ಅತ್ಯಂತ ತೀವ್ರಗತಿಯುಳ್ಳ ಯಾನಗಳಲ್ಲಿ [ಭೂಮಿ, ವಾಯು ಮತ್ತು ಜಲದಲ್ಲಿ ಸಂಚರಿಸುವ ಯಾನಗಳಲ್ಲಿ] ಸಂಚರಿಸಿ **[ನಿ ವೃತ್ರಾನ್]** ನಿಶ್ಚಿತವಾಗಿಯೂ

ಯಾರು ನಮ್ಮ ಶತ್ರುಗಳು (ನಮ್ಮ ಸಮಾಜವನ್ನು, ರಾಷ್ಟ್ರವನ್ನು, ಧರ್ಮವನ್ನು ಹಾಗೂ ಸಂಸ್ಕೃತಿಯನ್ನು ನಾಶ ಮಾಡಲು ಹವಣಿಸುವ, ಕುಠಾರಾಘಾತವನ್ನು ಮಾಡುವ, ದ್ವೇಷಿಸುವ ದುಷ್ಟರು ಯಾರಿದ್ದಾರೋ ಅಂತಹ ಶತ್ರುಗಳನ್ನು) **[ನಿ ರುಣಧಾಮಹೈ]** ನಿರ್ಬಲರನ್ನಾಗಿಯೂ, ನಿಃಶೇಷವನ್ನಾಗಿಯೂ ಮಾಡುತ್ತೇವೆ. ಭಗವಂತ ! ದುಷ್ಟರ ದಮನಕ್ಕೋಸ್ಕರ ಹಾಗೂ ನಮ್ಮೆಲ್ಲರ ಸಂರಕ್ಷಣೆಗೋಸ್ಕರ ವಿಪುಲವಾದ ಸಂಪತ್ತನ್ನು ನೀಡು.

ಭಾವಾರ್ಥ:- ಸರ್ವರಕ್ಷಕನಾದ ಜಗದೀಶ್ವರ ! ನಿನ್ನಿಂದ ರಕ್ಷಿಸಲ್ಪಟ್ಟ ಹಾಗೂ ಸದಾ ನಿನ್ನ ರಕ್ಷಣೆಯಲ್ಲಿಯೇ ಇರುವ ನಾವೆಲ್ಲರೂ, ನಿನ್ನಿಂದ ಪ್ರಾಪ್ತವಾದ ಸಂಪತ್ತಿನಿಂದ ಅತ್ಯಂತ ಬಲವುಳ್ಳವರಾಗಿ, ನಮ್ಮ ಕೈಯಲ್ಲಿ ಶಸ್ತ್ರಾಸ್ತ್ರಗಳನ್ನು ಹಿಡಿದು ಹಾಗೂ ಬಾಹುಬಲದಿಂದ, ಅತ್ಯಂತ ತೀವ್ರಗತಿಯುಳ್ಳ ಅಶ್ವಾರೂಢರಾಗಿಯೂ ಮತ್ತು ಭೂಮಿ; ಜಲ, ವಾಯುವಿನಲ್ಲಿ ಸಂಚರಿಸುವ ತೀವ್ರಗತಿಯುಳ್ಳ ಯಾನಗಳಲ್ಲಿ ಸಂಚರಿಸಿ, ನಮ್ಮ ಸಮಾಜ, ರಾಷ್ಟ್ರ ಧರ್ಮ ಮತ್ತು ಸಂಸ್ಕೃತಿಯನ್ನು ದ್ವೇಷಿಸುವ, ನಾಶವನ್ನು ಮಾಡಲು ಹವಣಿಸುವ ಮತ್ತು ಕುಠಾರಾಘಾತವನ್ನು ಮಾಡುವ ಸಮಸ್ತ ಆಂತರಿಕ ಮತ್ತು ಬಾಹ್ಯ ಶತ್ರುಗಳನ್ನು ಅತ್ಯಂತ ನಿರ್ಬಲರನ್ನಾಗಿಯೂ, ಪೂರ್ಣ ನಿಃಶೇಷರನ್ನಾಗಿಯೂ ಮಾಡುತ್ತೇವೆ. ಭಗವಂತ ! ದುಷ್ಟರ ದಮನಕ್ಕೋಸ್ಕರ ಹಾಗೂ ನಮ್ಮೆಲ್ಲರ ಸಂರಕ್ಷಣೆಗೋಸ್ಕರ ವಿಪುಲವಾದ ಸಂಪತ್ತನ್ನು ನೀಡು. ಯಾವುದೇ ರೀತಿಯ ಶತ್ರುಗಳಿರಲಿ, ಅವರನ್ನೆಂದಿಗೂ ಮೇಲೆ ಬರಲು ಬಿಡಬಾರದು.

ಮನುಷ್ಯರು ಯಾವುದನ್ನು ಧಾರಣ ಮಾಡುವುದರಿಂದ ಶತ್ರುಗಳನ್ನು ಜಯಿಸುತ್ತಾರೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಇಂದ್ರ ತ್ವೋತಾಸ ಆ ವಯಂ ವಜ್ರಂ ಘನಾ ದದೀಮಹಿ । ಜಯೇಮ ಸಂ ಯುಧಿ ಸ್ಪೃಧಃ ॥೩॥

ಪದಾರ್ಥ:- ಹೇ **[ಇಂದ್ರ]** ಅತ್ಯಂತ ಬಲಶಾಲಿಯೂ, ಸರ್ವರಕ್ಷಕನೂ ಆದ ಜಗದೀಶ್ವರ ! **[ತ್ವೋತಾಸಃ]** ನಿನ್ನಿಂದ ಸಂಪೂರ್ಣ ಬಲವನ್ನು ಪಡೆದುಕೊಂಡು **[ವಯಂ]** ಅತ್ಯಂತ ಬಲಶಾಲಿಗಳೂ, ಶೂರರೂ, ಧಾರ್ಮಿಕರೂ ಆದ ನಾವೆಲ್ಲರೂ ನಮ್ಮೆಲ್ಲರ ವಿಜಯ ಪ್ರಾಪ್ತಿಗೋಸ್ಕರ ದೇಶ, ಧರ್ಮ ಮತ್ತು ಸಂಸ್ಕೃತಿಯ ಸಂರಕ್ಷಣೆಗೋಸ್ಕರ **[ವಜ್ರಂ]** ಶತ್ರುಗಳನ್ನು ಸಂಪೂರ್ಣ ನಿರ್ಬಲರನ್ನಾಗಿಯೂ ನಿಃಶೇಷವನ್ನಾಗಿಯೂ ಮಾಡುವುದಕ್ಕೋಸ್ಕರ ಆಗ್ನೇಯಾದಿ ಪ್ರಬಲ ಅಸ್ತ್ರಗಳನ್ನು [ಅತ್ಯಂತ ಮಾರಕವಾದ ಸ್ಫೋಟಕ ಮೊದಲಾದವುಗಳನ್ನು] ಹಾಗೂ **[ಘನಾ]** ಅತ್ಯಂತ ಪ್ರಬಲವಾದ ತೋಪು, ಬಂದೂಕು, ಪ್ರಕ್ಷೇಪಾಸ್ತ್ರಗಳನ್ನು ಹಾಗೂ ನಿಕಟದಿಂದ ಯುದ್ಧ ಮಾಡಲು ಬಿಲ್ಲು ಬಾಣ ಖಡ್ಗ ಇತ್ಯಾದಿ ಸಕಲ ಯುದ್ಧ ಸಾಮಗ್ರಿಗಳನ್ನು **[ಆ ದದೀಮಹಿ]** ಸರ್ವವಿಧದಿಂದಲೂ ಉತ್ತಮವಾದ ರೀತಿಯಲ್ಲಿ ಪ್ರಾಪ್ತ ಮಾಡಿಕೊಳ್ಳುತ್ತೇವೆ. ಈ ರೀತಿ ಅತ್ಯಂತ ಬಲಶಾಲಿಗಳಾಗಿ **[ಸ್ಪೃಧಃ ಯುಧಿ ಸಂಜಯೇಮ]** ನಮ್ಮ ಮೇಲೆ ತಮ್ಮ ಆಧಿಪತ್ಯವನ್ನು ಮಾಡಲಿಚ್ಛಿಸುವ ಪ್ರತಿಸ್ಪರ್ಧಿಗಳನ್ನು, ದುಷ್ಟ ಶತ್ರುಗಳನ್ನು ಯುದ್ಧದಲ್ಲಿ ಜಯಿಸುತ್ತೇವೆ.

ಭಾವಾರ್ಥ:- ಅತ್ಯಂತ ಬಲಶಾಲಿಯೂ, ಸರ್ವರಕ್ಷಕನೂ ಆದ ಜಗದೀಶ್ವರ! ನಿನ್ನಿಂದ ಸಂಪೂರ್ಣ ಬಲವನ್ನು ಪಡೆದುಕೊಂಡು ಅತ್ಯಂತ ಬಲಶಾಲಿಗಳೂ, ಶೂರರೂ, ಧಾರ್ಮಿಕರೂ ಆದ ನಾವೆಲ್ಲರೂ, ನಮ್ಮೆಲ್ಲರ ವಿಜಯ ಪ್ರಾಪ್ತಿಗೋಸ್ಕರ, ದೇಶ-ಧರ್ಮ ಮತ್ತು ಸಂಸ್ಕೃತಿಯ ರಕ್ಷಣೆಗೋಸ್ಕರ ಹಾಗೂ ನಮ್ಮ ದೇಶ, ಧರ್ಮ ಮತ್ತು ಸಂಸ್ಕೃತಿಯ ಮೇಲೆ ಆಕ್ರಮಣ ಮಾಡುವ ದುಷ್ಟ ಶತ್ರುಗಳನ್ನು ಸಂಪೂರ್ಣ ನಿರ್ಬಲರನ್ನಾಗಿಯೂ ನಿಃಶೇಷವನ್ನಾಗಿಯೂ ಮಾಡುವುದಕ್ಕೋಸ್ಕರ ಅಗ್ನೇಯಾಸ್ತ್ರ ಅರ್ಥಾತ್ ಅತ್ಯಂತೆ ಮಾರಕ ಸ್ಫೋಟಕಗಳನ್ನು ಹಾಗೂ ಅತ್ಯಂತ ಪ್ರಬಲವಾದ ತೋಪು, ಬಂದೂಕು ಪ್ರಕ್ಷೇಪಾಸ್ತ್ರಗಳನ್ನು, ಕ್ಷಿಪಣಿಗಳನ್ನು ಹಾಗೂ ನಿಕಟದಿಂದ ಯುದ್ಧ ಮಾಡಲು ಬಿಲ್ಲು, ಬಾಣ, ಖಡ್ಗ ಇತ್ಯಾದಿ ಸಕಲ ಯುದ್ಧ ಸಾಮಗ್ರಿಗಳನ್ನು ಸರ್ವ ವಿಧದಿಂದಲೂ ಉತ್ತಮವಾದ ರೀತಿಯಲ್ಲಿ ಪ್ರಾಪ್ತಮಾಡಿಕೊಳ್ಳುತ್ತೇವೆ. ಈ ರೀತಿ ಅತ್ಯಂತ ಬಲಶಾಲಿಗಳಾಗಿ ನಮ್ಮ ಮೇಲೆ ತಮ್ಮ ಆಧಿಪತ್ಯವನ್ನು ಮಾಡಲಿಚ್ಛಿಸುವ, ನಮ್ಮನ್ನು ಪರಾಧೀನರನ್ನಾಗಿಯೂ ಪರಾವಲಂಬಿಯನ್ನಾಗಿಯೂ ಮಾಡಲಿಚ್ಛಿಸುವ ದುಷ್ಟ ಶತ್ರುಗಳನ್ನು ಯುದ್ಧದಲ್ಲಿ ಜಯಿಸುತ್ತೇವೆ.

ಯಾವ ಯಾವುದರ ಸಹಾಯದಿಂದ ಮೇಲೆ ಹೇಳಿದ ಸುಖದ ಸಿದ್ಧಿಯಾಗುತ್ತದೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ವಯಂ ಶೂರೇಭಿರಸ್ತೃಭಿರಿಂದ್ರ ತ್ವಯಾ ಯುಜಾ ವಯಮ್ । ಸಾಸಹ್ಯಾಮ ಪೃತನ್ಯತಃ ॥೪॥

ಪದಾರ್ಥ:- ಹೇ **[ಇಂದ್ರ]** ಅತ್ಯಂತ ಪರಾಕ್ರಮಶಾಲಿಯಾದ, ಧರ್ಮಯುದ್ಧದಲ್ಲಿ ನಿರಂತರ ಉತ್ಸಾಹವನ್ನೂ, ಬಲವನ್ನೂ ಕೊಡುವ ಹಾಗೂ ವರ್ಧಿಸುವ ಪರಮಾತ್ಮ ! **[ತ್ವಯಾಯುಜಾ]** ನಿನ್ನನ್ನೇ ಅತ್ಯಂತ ಪರಮ ಇಷ್ಟದೇವನೆಂದು ತಿಳಿದು ನಿನ್ನ ಸಹಾಯದಿಂದ ಹಾಗೂ ನಿನ್ನ ಕೃಪೆಯಿಂದ, ಧರ್ಮದಿಂದ ಯುಕ್ತವಾದ ಸಮಸ್ತ ಶ್ರೇಷ್ಠ ಕರ್ಮಗಳಲ್ಲಿಯೇ ಉದ್ಯುಕ್ತರಾಗಿ, ನಮ್ಮ ಶರೀರಾತ್ಮಬಲವನ್ನು ವರ್ಧಿಸಿಕೊಂಡು **[ವಯಂ]** ಯೋದ್ಧಾರರಾದ ನಾವು **[ಅಸ್ತೃಭಿಃ]** ಸಮಸ್ತ ಅಸ್ತ್ರಶಸ್ತ್ರಗಳಿಂದ ಕೂಡಿದ **[ಶೂರೇಭಿಃ]** ಅತ್ಯಂತ ಪರಾಕ್ರಮಶಾಲಿಗಳೂ ಯುದ್ಧವಿದ್ಯೆಯಲ್ಲಿ ಅತ್ಯಂತ ಪ್ರವೀಣರೂ ಆದ ವೀರಯೋಧರೊಂದಿಗೆ **[ಪೃತನ್ಯತಃ]** ವಿಶಾಲವಾದ ಸೇನಾಬಲವುಳ್ಳ ಶತ್ರುಗಳನ್ನು ಕೂಡಾ **[ವಯಂ ಸಾಸಹ್ಯಾಮ]** ಅತ್ಯಂತ ನಿರ್ಬಲರನ್ನಾಗಿ ಮಾಡಿ ನಾವು ಹಿಮ್ಮೆಟ್ಟಿಸುತ್ತೇವೆ.

ಭಾವಾರ್ಥ:- ಧರ್ಮಯುದ್ಧದಲ್ಲಿ ಹಾಗೂ ರಾಷ್ಟ್ರದ ಸಂರಕ್ಷಣೆಯಲ್ಲಿ ನಿರಂತರ ಉತ್ಸಾಹವನ್ನೂ, ಬಲವನ್ನೂ ಕೊಡುವ ಹಾಗೂ ವರ್ಧಿಸುವ ಅತ್ಯಂತ ಪರಾಕ್ರಮಶಾಲಿಯಾದ ಪರಮಾತ್ಮ ! ನಿನ್ನನ್ನೇ ಏಕಮೇವ ಉಪಾಸ್ಯ ಹಾಗೂ ಅತ್ಯಂತ ಇಷ್ಟದೇವನೆಂದು ತಿಳಿದು, ನಿನ್ನ ಸಹಾಯದಿಂದ ಹಾಗೂ ಕೃಪೆಯಿಂದ ಸದಾ ಧರ್ಮದಿಂದ ಯುಕ್ತವಾದ ಸಮಸ್ತ ಶ್ರೇಷ್ಠ ಕರ್ಮಗಳನ್ನು ಮಾಡುತ್ತಾ ಶರೀರ ಮತ್ತು ಆತ್ಮಬಲವನ್ನು ವರ್ಧಿಸಿಕೊಂಡು ನಾವು, ಸಮಸ್ತ ಅಸ್ತ್ರಶಸ್ತ್ರಗಳಿಂದ ಕೂಡಿದ ಅತ್ಯಂತ ಪರಾಕ್ರಮಶಾಲಿಗಳೂ ಯುದ್ಧ ವಿದ್ಯಾವಿಶಾರದರೂ ಆದ ಸೈನಿಕರ ನೆರವಿನಿಂದ, ವಿಶಾಲವಾದ ಸೇನಾ ಬಲವುಳ್ಳ ಶತ್ರುಗಳನ್ನು ಕೂಡಾ ಯುದ್ಧದಲ್ಲಿ ಅತ್ಯಂತ ನಿರ್ಬಲರನ್ನಾಗಿ ಮಾಡಿ, ಮುಂದೆ ಎಂದಿಗೂ ನಮ್ಮೊಂದಿಗೆ ಯುದ್ಧ ಮಾಡಲಸಾಧ್ಯರನ್ನಾಗಿ ಮಾಡಿ ಹಿಮ್ಮೆಟ್ಟಿಸುತ್ತೇವೆ.

ಶೌರ್ಯವು ದ್ವಿವಿಧ ಅರ್ಥಾತ್ ಎರಡು ಪ್ರಕಾರದ್ದಾಗಿದೆ. ಅತ್ಯಂತ ಹೃಷ್ಟಪುಷ್ಟವಾದ ಶರೀರದಿಂದ ಕೂಡಿದ ಶಾರೀರಿಕ ಬಲವೊಂದಾದರೆ, ವಿದ್ಯೆ, ಜ್ಞಾನ, ಧರ್ಮ ಮತ್ತು ಶ್ರೇಷ್ಠ ಕರ್ಮಗಳಿಂದ ಪ್ರಾಪ್ತವಾದ ಆತ್ಮಬಲ ಇನ್ನೊಂದು. ರಾಷ್ಟ್ರದ ನಾಯಕರು ಹಾಗೂ ರಾಷ್ಟ್ರದ ಸಂರಕ್ಷಕರು ಶರೀರ ಮತ್ತು ಆತ್ಮಬಲ ಇವೆರಡೂ ಉಳ್ಳವರಾಗಿದ್ದು, ಪರಮೇಶ್ವರನ ಸೃಷ್ಟಿ ರಚನಾಕ್ರಮವನ್ನು ತಿಳಿದವರಾಗಿ ನ್ಯಾಯ, ಧೈರ್ಯ, ಸೌಜನ್ಯ ಉದ್ಯೋಗಾದಿ ಸದ್ಗುಣಗಳಿಂದ ಕೂಡಿದವರಾಗಿ ಸುವ್ಯವಸ್ಥಿತವಾದ ರೀತಿಯಲ್ಲಿ ಸಭೆ ಅರ್ಥಾತ್ ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಇತ್ಯಾದಿಗಳನ್ನು ನಡೆಸಿಕೊಂಡು, ಯೋಗ್ಯವಾದ ರೀತಿಯಲ್ಲಿ ಪ್ರಜಾಪಾಲನವನ್ನು ಮತ್ತು ದುಷ್ಟಶತ್ರುಗಳ ದಮನವನ್ನು ಮಾಡಬೇಕು.

ಮೇಲೆ ಹೇಳಿದ ಕಾರ್ಯಗಳಲ್ಲಿ ಸಹಾಯ ಮಾಡುವ ಜಗದೀಶ್ವರನು ಹೇಗಿರುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಮಹಾँ ಇಂದ್ರಃ ಪರಶ್ಚ ನು ಮಹಿತ್ವಮಸ್ತು ವಜ್ರಿಣೇ । ದ್ಯೌರ್ನ ಪ್ರಥಿನಾ ಶವಃ ॥೫॥

ಪದಾರ್ಥ:- ಯಾವ ರೀತಿ ಮೂರ್ತಿಮಾನ್ ಸಂಸಾರವನ್ನು, ಈ ಸ್ಥೂಲ ದೃಶ್ಯಮಾನ ಜಗತ್ತನ್ನು ಪ್ರಕಾಶಯುಕ್ತವನ್ನಾಗಿ ಮಾಡಲು, ಬೆಳಗಿಸಲು **[ದ್ಯೌಃ]** ಸೂರ್ಯನ ಪ್ರಕಾಶವು **[ಪ್ರಥಿನಾ]** ಅತ್ಯಂತ ವ್ಯಾಪಕವಾಗಿ ಪ್ರಖರವಾಗಿ ಪ್ರಾಪ್ತವಾಗುತ್ತದೆಯೋ, ಅದೇ ರೀತಿ **[ಮಹಾನ್]** ಅನಂತಗುಣ ಸ್ವಭಾವ ಹಾಗೂ ಅಪರಿಮಿತ ಸಾಮರ್ಥ್ಯವುಳ್ಳ **[ಪರಃ ಇಂದ್ರಃ]** ಸರ್ವಶ್ರೇಷ್ಠನಾದ ಹಾಗೂ ಸರ್ವಜಗದ್ರಕ್ಷಕನಾದ ಪರಮಾತ್ಮನು ಎಲ್ಲಾ ವಿಧದಲ್ಲಿ ಎಲ್ಲರನ್ನು ರಕ್ಷಿಸುತ್ತಾನೆ. ಅವನು **[ವಜ್ರಿಣೇ]** ತನ್ನ ನ್ಯಾಯವ್ಯವಸ್ಥೆ ಹಾಗೂ ದಂಡವ್ಯವಸ್ಥೆಯ ಮೂಲಕ **[ನು]** ನಿಶ್ಚಯವಾಗಿಯೂ ನಮ್ಮೆಲ್ಲರನ್ನು ರಕ್ಷಿಸುತ್ತಾನೆ ಹಾಗೂ ದುಷ್ಟರನ್ನು ದಂಡಿಸುತ್ತಾನೆ. ಈ ಸಂಪೂರ್ಣ ಚರಾಚರ ಜಗತ್ತು **[ಮಹಿತ್ವಂ]** ಅವನ ಮಹಿಮೆಯಿಂದ **[ಶವಃ ಚ ಅಸ್ತು]** ಹಾಗೂ ಬಲದಿಂದಲೇ ನಡೆಯುತ್ತದೆ.

ಭಾವಾರ್ಥ:- ಯಾವ ರೀತಿ ಈ ಸ್ಥೂಲ ಜಗತ್ತನ್ನು ಸೂರ್ಯನು ತನ್ನ ಪ್ರಕಾಶದಿಂದ ಬೆಳಗಿಸುತ್ತಾನೋ, ಅದೇ ರೀತಿ ಅನಂತ ಗುಣ ಸ್ವಭಾವ ಹಾಗೂ ಅಪರಿಮಿತ ಬಲಶಾಲಿಯಾದ ಪರಮಾತ್ಮನು ತನ್ನ ನ್ಯಾಯವ್ಯವಸ್ಥೆಯ ಮೂಲಕ, ದಂಡವ್ಯವಸ್ಥೆಯ ಮೂಲಕ ಜೀವಮಾತ್ರರ ಪರಿಪಾಲನೆಯನ್ನು ಸಂರಕ್ಷಣೆಯನ್ನು ಮಾಡುತ್ತಾನೆ. ಈ ಸಂಪೂರ್ಣ ಚರಾಚರ ಜಗತ್ತು ಅವನ ಮಹಿಮೆಯಿಂದ ಹಾಗೂ ಬಲದಿಂದಲೇ ನಡೆಯುತ್ತದೆ. ಆದುದರಿಂದ ನಾವೆಲ್ಲರೂ ನಿರಭಿಮಾನಿಗಳಾಗಿ ನಮಗೆ ಪ್ರಾಪ್ತವಾದ ವಿಜಯವನ್ನು ಭಗವಂತನ ಕೃಪೆಯೆಂದು ತಿಳಿದು ಅವನಿಗೆ ಧನ್ಯವಾದವನ್ನರ್ಪಿಸಬೇಕು. ಎಂದಿಗೂ ನಾವೇ ಮಾಡಿದ್ದು, ನಮ್ಮಿಂದಲೇ ಆದದ್ದು ಎಂದು ಅಹಂಕಾರವನ್ನು ಪಡಬಾರದು.

ಮನುಷ್ಯರು ಹೇಗಾಗಿ ಯುದ್ಧ ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಸಮೋಹೇ ವಾ ಯ ಆಶತ ನರಸ್ತೋಕಸ್ಯ ಸನಿತೌ । ವಿಪ್ರಾಸೋ ವಾ ಧಿಯಾಯವಃ ॥೬॥

ಪದಾರ್ಥ:- [ಯೇ ವಿಪ್ರಾಸಃ] ಯಾರು ಬುದ್ಧಿವಂತರಾದ ರಾಷ್ಟ್ರನಾಯಕರಾಗುತ್ತಾರೋ ಅವರು ಸದಾ [ಸಮೋಹೇ] ಸಂಗ್ರಾಮದಲ್ಲಿ ಹಾಗೂ ರಾಷ್ಟ್ರವನ್ನು ಸುಸಂಘಟಿತವನ್ನಾಗಿ ಮಾಡಲು ಬಾಧಕರಾದ ದುಷ್ಟರ ನಿರ್ಮೂಲನ ಮಾಡಲು ಮಾಡಬೇಕಾದ ಸಂಘರ್ಷದಲ್ಲಿ [ಆಶತ] ಶತ್ರುಗಳನ್ನು ಹಾಗೂ ರಾಷ್ಟ್ರದ ವಿಘಟನಕಾರಿ ದುಷ್ಟಶಕ್ತಿಗಳನ್ನು ನಿರ್ಮೂಲನ ಮಾಡಲು ತತ್ಪರರಾಗಿರುತ್ತಾರೆ. [ವಾ] ಹಾಗೂ [ಧಿಯಾಯವಃ] ಯಾರು ವಿಶೇಷವಾದ ಜ್ಞಾನ-ವಿಜ್ಞಾನವನ್ನು ಕೊಡಲು ಅಪೇಕ್ಷಿಸುತ್ತಾರೋ ಅವರು [ತೋಕಸ್ಯ] ತಮ್ಮ ಸಂತಾನ ಅರ್ಥಾತ್ ಮಕ್ಕಳ [ಸನಿತೌ] ವಿದ್ಯಾಭ್ಯಾಸದಲ್ಲಿ [ಆಶತ] ತತ್ಪರರಾಗಿರುತ್ತಾರೆ.

ಭಾವಾರ್ಥ:- ಬುದ್ಧಿವಂತರಾದ ರಾಷ್ಟ್ರನಾಯಕರು ಸದಾ ಸಂಗ್ರಾಮದಲ್ಲಿ, ಯುದ್ಧದಲ್ಲಿ ದುಷ್ಟ ಶತ್ರುಗಳನ್ನು ಹಾಗೂ ರಾಷ್ಟ್ರವನ್ನು ಸುಸಂಘಟಿತವನ್ನಾಗಿ ಮಾಡಲು ಬಾಧಕರಾದ ದುಷ್ಟರ - ದುಷ್ಟ ಶಕ್ತಿಗಳ ನಿರ್ಮೂಲನ ಮಾಡಲು, ಮಾಡಲೇ ಬೇಕಾದ ಸಂಘರ್ಷದಲ್ಲಿ ಶತ್ರುಗಳನ್ನು ಹಾಗೂ ರಾಷ್ಟ್ರದ ವಿಘಟನಕಾರೀ ತತ್ವಗಳನ್ನು, ದುಷ್ಟಶಕ್ತಿಗಳನ್ನು ನಿರ್ಮೂಲನ ಮಾಡಲು ತತ್ಪರರಾಗಿರುತ್ತಾರೆ. ಅದೇ ರೀತಿ ಯಾರು ವಿಶೇಷವಾದ ಜ್ಞಾನ-ವಿಜ್ಞಾನವನ್ನು ಕೊಡಲು ಅಪೇಕ್ಷಿಸುತ್ತಾರೋ ಅವರು ತಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ತತ್ಪರರಾಗುತ್ತಾರೆ.

ಯಾವುದೇ ದೇಶದ ಮೇಲೆ ಇನ್ನೊಂದು ದೇಶದವರು ಪದೇ ಪದೇ ಆಕ್ರಮಣವನ್ನು ಮಾಡುತ್ತಾರೋ ಅಂತಹ ದುಷ್ಟರನ್ನು ಎಂದಿಗೂ ಬಿಡಬಾರದು. ಶತ್ರುಗಳನ್ನು ಮತ್ತು ರೋಗವನ್ನು ಎಂದಿಗೂ ಉಪೇಕ್ಷೆ ಮಾಡದೇ ಸಂಪೂರ್ಣವಾಗಿ ನಾಶ ಮಾಡಬೇಕು. ಅದೇ ರೀತಿ ರಾಷ್ಟ್ರವನ್ನು ಸುಸಂಘಟಿತವನ್ನಾಗಿ ಮಾಡಲು ಬಾಧಕರಾದ ದುಷ್ಟರನ್ನು ಹಾಗೂ ದುಷ್ಟಶಕ್ತಿಗಳನ್ನು ಸಂಪೂರ್ಣವಾಗಿ ನಿರ್ಮೂಲನ ಮಾಡಬೇಕು. ಇದನ್ನು ಯಾರು ಮಾಡುತ್ತಾನೋ ಅವನೇ ಯಥಾರ್ಥರೂಪದಲ್ಲಿ ರಾಷ್ಟ್ರನಾಯಕನಾಗಲು ಅರ್ಹನು. ಇದಕ್ಕೆ ವಿಪರೀತವಾಗಿ ಮಾಡುವವನು ಆ ರಾಷ್ಟ್ರದ ವಿನಾಶಕ್ಕೆ ಕಾರಣೀಭೂತನಾಗುತ್ತಾನೆ.

ಅದೇ ರೀತಿ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಉತ್ತಮವಾದ ಜ್ಞಾನ-ವಿಜ್ಞಾನವನ್ನು ಕೊಡಲು, ಶ್ರೇಷ್ಠವಾದ ಸಂಸ್ಕಾರಗಳನ್ನುಂಟುಮಾಡಿ ಬುದ್ಧಿವಂತರನ್ನಾಗಿ ಮಾಡಲು, ಉತ್ತಮವಾದ ವಿದ್ಯಾಭ್ಯಾಸದ ಕಡೆಗೆ ವಿಶೇಷವಾದ ಗಮನ ಕೊಡಬೇಕು. ಇಲ್ಲದಿದ್ದರೆ ಆ ಮಕ್ಕಳು ವಿನಾಶವನ್ನು ಮಾಡುತ್ತಾರೆ. ವಿದ್ಯಾಭ್ಯಾಸವನ್ನು ಕೊಡದೇ ಇರುವ ತಂದೆ ತಾಯಿಗಳು ವಿನಾಶಕ್ಕೆ ಕಾರಣೀಭೂತರಾಗುತ್ತಾರೆ.

ಹಿಂದಿನ ಮಂತ್ರದಲ್ಲಿ ಇಂದ್ರ ಶಬ್ದದಿಂದ ಸೂರ್ಯಲೋಕದ ಗುಣಗಳನ್ನು ವ್ಯಾಖ್ಯಾನ ಮಾಡಲಾಗಿದೆ.

ಯಃ ಕುಕ್ಷಿಃ ಸೋಮಪಾತಮಃ ಸಮುದ್ರ ಇವ ಪಿನ್ವತೇ । ಉರ್ವೀರಾಪೋ ನ ಕಾಕುದಃ ॥೭॥

ಪದಾರ್ಥ:- [ಯಃ ಕುಕ್ಷಿಃ] ಯಾವ ರೀತಿ ಸಮಸ್ತ ಪದಾರ್ಥಗಳ ರಸವನ್ನು ಹೀರಿ [ಸೋಮಪಾತಮಃ] ತನ್ನ ಕಿರಣಗಳ ಮೂಲಕ ಸಮಸ್ತ ಪದಾರ್ಥಗಳನ್ನು ಸೂರ್ಯನು ಸಂರಕ್ಷಿಸುತ್ತಾನೋ, ಯಾವ ರೀತಿ ಜಲವನ್ನು ವೃಷ್ಟಿಸಲು, ಮಳೆಯನ್ನುಂಟು ಮಾಡಲು [ಸಮುದ್ರಂ] ಸಮುದ್ರವನ್ನೂ, ಅಂತರಿಕ್ಷವನ್ನೂ ಸೃಷ್ಟಿಸಿದ್ದಾನೋ, ಯಾವ ರೀತಿ [ಆ ಪೋ ನ ಕಾಕುದಃ] ಶಬ್ದೋಚ್ಚಾರಣವನ್ನು ಮಾಡಲು ಪ್ರಾಣವು ವಾಣಿಯನ್ನು ಆಕೃಷ್ಟವನ್ನಾಗಿ ಮಾಡುತ್ತದೆಯೋ ಅದೇ ರೀತಿ ಪರಮಾತ್ಮನು ಪ್ರಾಣಿಮಾತ್ರರು ಜೀವನವನ್ನು ಧಾರಣ ಮಾಡುವುದಕ್ಕೋಸ್ಕರ ಭೋಗವನ್ನು ಭೋಗಿಸುವುದಕ್ಕೋಸ್ಕರ [ಉರ್ವೀ] ವಿಶಾಲವಾದ ಭೂಮಿಯನ್ನು ಸೃಷ್ಟಿಸಿದ್ದಾನೆ. ಈ ಭೂಮಿಯಲ್ಲಿ ಜೀವಮಾತ್ರರು [ಪಿನ್ವತೇ] ಕರ್ಮಗಳನ್ನು ಮಾಡಿ ಅದಕ್ಕನುಗುಣವಾಗಿ ಭೋಗವನ್ನೂ, ಫಲವನ್ನೂ ಪ್ರಾಪ್ತಮಾಡಿ ಕೊಳ್ಳುತ್ತಾರೆ ಮತ್ತು ಅನುಭವಿಸುತ್ತಾರೆ.

ಭಾವಾರ್ಥ:- ಪರಮಾತ್ಮನು ಯಾವ ರೀತಿ ಸಮಸ್ತ ಪದಾರ್ಥಗಳ ರಸವನ್ನು ಹೀರಿ, ಎಲ್ಲವನ್ನೂ ಸಂರಕ್ಷಿಸಲು ಹಾಗೂ ಪ್ರಕಾಶವನ್ನು ಬೀರಲು ಸೂರ್ಯನನ್ನು ಸೃಷ್ಟಿಸಿದ್ದಾನೋ, ಯಾವ ರೀತಿ ಜಲವನ್ನು ಆಕರ್ಷಿಸಲು ಸಮುದ್ರವನ್ನೂ, ಮೋಡಗಳ ನಿರ್ಮಾಣವಾಗಿ ಮಳೆಯು ಸುರಿಸುವಂತೆ ಮಾಡಲು ಅಂತರಿಕ್ಷವನ್ನು ಸೃಷ್ಟಿಸಿದ್ದಾನೆಯೋ, ಯಾವ ರೀತಿ ಶಬ್ದೋಚ್ಚಾರಣೆಯನ್ನು ಮಾಡುವುದಕ್ಕೋಸ್ಕರ ವಾಣಿಯನ್ನು ಆಕರ್ಷಿಸಲು ಪ್ರಾಣವಾಯುವನ್ನು ಸೃಷ್ಟಿಸಿದ್ದಾನೆಯೋ, ಅದೇ ರೀತಿ ಸಮಸ್ತ ಜೀವಿಗಳು ಸಕಲ ಭೋಗವನ್ನು ತಮ್ಮ ತಮ್ಮ ಕರ್ಮಗಳಿಗನುಗುಣವಾಗಿ ಭೋಗಿಸಲು ಈ ಭೂಮಿಯನ್ನು ಸೃಷ್ಟಿಸಿದ್ದಾನೆ. ನಾವೆಲ್ಲರೂ ಸರ್ವಜಗದ್ರಚಯಿತನಾದ ಪರಮಾತ್ಮನಿಗೆ ಅನಂತ ಧನ್ಯವಾದಗಳನ್ನು ಅರ್ಪಿಸಿ ಅವನು ಸೃಷ್ಟಿಸಿದ ಸಕಲ ಪದಾರ್ಥಗಳನ್ನು ಯೋಗ್ಯವಾದ ರೀತಿಯಲ್ಲಿ ಉಪಯೋಗಿಸಿಕೊಂಡು, ಶ್ರೇಷ್ಠವಾದ ಜೀವನವನ್ನು ಬಾಳೋಣ.

ಉಕ್ತ ಅರ್ಥಗಳ ನಿಮಿತ್ತವನ್ನು ಹಾಗೂ ಕಾರ್ಯದ ಪ್ರಕಾಶವನ್ನು ಮುಂದಿನ ಮಂತ್ರದಲ್ಲಿ ಮಾಡಲಾಗಿದೆ.

ಏವಾ ಹ್ಯಸ್ಯ ಸೂನೃತಾ ವಿರಪ್ಶೀ ಗೋಮತೀ ಮಹೀ । ಪಕ್ವಾ ಶಾಖಾ ನ ದಾಶುಷೇ ॥೮॥

ಪದಾರ್ಥ:- [ಪಕ್ವಾ ಶಾಖಾ ನ] ಯಾವ ರೀತಿ ರಸವತ್ತಾದ ಸ್ವಾದಿಷ್ಟ ಅತ್ಯಂತ ಉತ್ತಮ ಹಣ್ಣುಗಳಿಂದ ಕೂಡಿದ ಮರದ ಶಾಖೆಗಳು, ಕೊಂಬೆಗಳು ಪ್ರಾಣಿಮಾತ್ರರಿಗೆ ಅತ್ಯಂತ ಸುಖವನ್ನು ಕೊಡುತ್ತವೆಯೋ ಅದೇ ರೀತಿ [ಅಸ್ಯಹಿ] ಪರಮಾತ್ಮನ ವಾಣಿ ಅನೇಕ ಪ್ರಕಾರದ ಶ್ರೇಷ್ಠಜ್ಞಾನವನ್ನು ಕೊಡುವ [ಗೋಮತೀ] ಅನೇಕ ಅಸಂಖ್ಯಾತ ವಿದ್ವಾಂಸರಿಂದ ಪ್ರತಿದಿನ ಜ್ಞಾನ ಪ್ರಾಪ್ತಿಗೋಸ್ಕರ ಅಧ್ಯಯನ ಮಾಡಲ್ಪಡುವ ಹಾಗೂ ಎಲ್ಲರಿಂದ ಸ್ತುತಿಸಲ್ಪಡುವ, ಗೌರವಿಸಲ್ಪಡುವ ಅತ್ಯಂತ ಪ್ರಶಂಸನೀಯ [ಸೂನೃತಾ] ಅತ್ಯಂತ ಪ್ರಿಯನಾದ ಹಾಗೂ ಸತ್ಯವನ್ನೇ ಪ್ರಕಾಶಿಸುವ ಅರ್ಥಾತ್ ಸತ್ಯಜ್ಞಾನವನ್ನೇ ಕೊಡುವ [ವಿರಪ್ಶೀ] ಮಹತ್ತಮವಾದ ಹಾಗೂ ಅತ್ಯಂತ ಶ್ರೇಷ್ಠ ಜ್ಞಾನವುಳ್ಳ [ಮಹೀ] ಎಲ್ಲರಿಗೂ ಪೂಜನೀಯವಾದ, ಆದರಣೀಯವಾದ, ಜೀವಮಾತ್ರರ ಕಲ್ಯಾಣವನ್ನೇ ಮಾಡುವ ವೇದಗಳು [ದಾಶುಷೇ] ಸಮಗ್ರ ಜ್ಞಾನವನ್ನು ಪಡೆದು ಸುಜ್ಞಾನಿಯಾಗಿ ಇತರರಿಗೂ ಜ್ಞಾನದ ದಾನವನ್ನು ಮಾಡುವ ಶ್ರೇಷ್ಠ ವಿದ್ವಾಂಸರಿಗೆ ಸದಾ ಸುಖವನ್ನೂ ಸಂತೃಪ್ತಿಯನ್ನೂ ಕೊಡುತ್ತದೆ.

ಭಾವಾರ್ಥ:- ಯಾವ ರೀತಿ ರಸವತ್ತಾದ ಸ್ವಾದಿಷ್ಟವಾದ ಅತ್ಯಂತ ಉತ್ತಮ ಹಣ್ಣುಗಳಿಂದ ಕೂಡಿದ ಮರದ ಕೊಂಬೆಗಳು ಬಿಸಿಲಿನ ಬೇಗೆಯಿಂದ ಬಳಲಿದ ನೆರಳನ್ನೂ, ಹಸಿದವನಿಗೆ ಆಹಾರವನ್ನೂ ಕೊಟ್ಟು ಅತ್ಯಂತ ಸುಖವನ್ನುಂಟು ಮಾಡುತ್ತವೆಯೋ, ಅದೇ ರೀತಿ ಪರಮಾತ್ಮನ ವಾಣಿಯು ಅನೇಕ ಪ್ರಕಾರದ ಶ್ರೇಷ್ಠಜ್ಞಾನವನ್ನು

ಕೊಡುತ್ತದೆ. ಅಸಂಖ್ಯಾತ ವಿದ್ವಾಂಸರಿಂದ ಶ್ರೇಷ್ಠಜ್ಞಾನ ಪ್ರಾಪ್ತಿಗೋಸ್ಕರ ಪ್ರತಿದಿನ ಅಧ್ಯಯನ ಮಾಡಲ್ಪಡುವ, ಯಜ್ಞಯಾಗಾದಿಗಳಲ್ಲಿ ಪಠನ ಮಾಡಲ್ಪಡುವ, ಹಾಗೂ ಪರಮಾತ್ಮನ ಸ್ತುತಿಯನ್ನೂ ಉಪಾಸನೆಯನ್ನೂ ಮಾಡಲು ಸಹಾಯಕವಾದ ಅತ್ಯಂತ ಪ್ರಿಯವಾದ ಸದಾ ಸತ್ಯಜ್ಞಾನವನ್ನೇ ಕೊಡುವ, ಮಹತ್ತಮವಾದ ಹಾಗೂ ಶ್ರೇಷ್ಠಜ್ಞಾನವುಳ್ಳ, ಎಲ್ಲರಿಗೂ ಪರಮಾದರಣೀಯವಾದ ಜೀವಮಾತ್ರರ ಕಲ್ಯಾಣವನ್ನೇ ಮಾಡುವ ವೇದಗಳು, ಸಮಗ್ರಜ್ಞಾನವನ್ನು ಪಡೆದು ತಾನು ಸ್ವತಃ ಸುಜ್ಞಾನಿಯಾಗಿ ಇತರರಿಗೂ ಜ್ಞಾನದ ದಾನ ಮಾಡುವ, ವಿದ್ಯಾದಾನ ಮಾಡುವ ಶ್ರೇಷ್ಠವಿದ್ವಾಂಸರಿಗೆ ಸದಾ ಸುಖವನ್ನೂ ಸಂತೃಪ್ತಿಯನ್ನೂ ಕೊಡುತ್ತದೆ.

ಈ ರೀತಿ ಮಾಡುವ ಮನುಷ್ಯರಿಗೆ ಏನು ಸಿದ್ಧಿಯಾಗುತ್ತದೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಏವಾ ಹಿ ತೇ ವಿಭೂತಯ ಊತಯ ಇಂದ್ರ ಮಾವತೇ । ಸದ್ಯಶ್ಚಿತ್ ಸಂತಿ ದಾಶುಷೇ ॥೯॥

ಪದಾರ್ಥ:- ಹೇ [ಇಂದ್ರ] ಜಗದೀಶ್ವರ! ಸಕಲಲೋಕೈಕ ಸ್ವಾಮಿಯಾದ ಪರಮಾತ್ಮ! [ತೇ] ನಿನ್ನ ಕೃಪೆಯಿಂದ [ವಿಭೂತಯಃ] ಯಾವ ರೀತಿ ವಿವಿಧ ಸುಖ ಸೌಲಭ್ಯಗಳು, ಐಶ್ವರ್ಯವು ಹಾಗೂ [ಊತಯಃ ಸಂತಿ] ಜ್ಞಾನ ಮತ್ತು ಸಂರಕ್ಷಣೆಗಳು ಇವೆಯೋ, ನನಗೆ ಪ್ರಾಪ್ತವಾಗಿದೆಯೋ ಅದೇ ರೀತಿ [ಮಾವತೇ] ನನ್ನಂತೆಯೇ [ದಾಶುಷೇ ಚಿತ್ ಹಿ] ನಿಸ್ವಾರ್ಥ ಭಾವದಿಂದ ಎಲ್ಲರ ಉಪಕಾರವನ್ನೂ ಮಾಡುವ, ಕಲ್ಯಾಣವನ್ನೇ ಬಯಸುವ, ಧರ್ಮಾನುಷ್ಠಾನಗಳಲ್ಲಿ ಪ್ರವೃತ್ತಿಯುಳ್ಳ ಎಲ್ಲರಿಂದಲೂ ಗೌರವಿಸಲ್ಪಡುವ ವಿದ್ವಾಂಸನಿಗೆ [ಸದ್ಯ ಏವ] ಶೀಘ್ರ ಅವಿಲಂಬವಾಗಿ ಪ್ರಾಪ್ತವಾಗಲಿ.

ಭಾವಾರ್ಥ:- ಸಕಲ ಜಗದೊಡೆಯ ಹಾಗೂ ಸರ್ವರಕ್ಷಕನಾದ ಪರಮಾತ್ಮ! ನಿನ್ನ ಕೃಪೆಯಿಂದ ಯಾವ ರೀತಿ ವಿವಿಧ ಸುಖಸೌಲಭ್ಯಗಳು ಐಶ್ವರ್ಯ, ಜ್ಞಾನ ಹಾಗೂ ಸಂರಕ್ಷಣೆಯು ನನಗೆ ಪ್ರಾಪ್ತವಾಗಿದೆಯೋ, ಅದೇ ರೀತಿ ನನ್ನಂತೆಯೇ ನಿಸ್ವಾರ್ಥ ಭಾವದಿಂದ ಎಲ್ಲರ ಉಪಕಾರವನ್ನು ಮಾಡುವ ಎಲ್ಲರ ಕಲ್ಯಾಣವನ್ನೇ ಬಯಸುವ ಧರ್ಮಾನುಷ್ಠಾನಗಳಲ್ಲಿ ಪ್ರವೃತ್ತಿಯುಳ್ಳವನಾಗಿದ್ದು ಎಲ್ಲರಿಂದಲೂ ಗೌರವಿಸಲ್ಪಡುವ ವಿದ್ವಾಂಸನಿಗೆ ಶೀಘ್ರ ಪ್ರಾಪ್ತವಾಗಲಿ. ಅದರಿಂದ ಅವನು ಯಾವುದೇ ರೀತಿಯ ಅಡೆತಡೆಗಳಿಲ್ಲದೇ ಅತ್ಯಧಿಕ ಶ್ರೇಷ್ಠ ಕರ್ಮಗಳನ್ನೂ, ಲೋಕಹಿತಕಾರ್ಯವನ್ನೂ ಮಾಡುವಂತಾಗಲಿ.

ಮೇಲಿನ ಈ ಎಲ್ಲಾ ಪ್ರಶಂಸೆ ಯಾರಿಗೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ಏವಾ ಹ್ಯಸ್ಯ ಕಾಮ್ಯಾ ಸ್ತೋಮ ಉಕ್ಥಂ ಚ ಶಂಸ್ಯಾ । ಇಂದ್ರಾಯ ಸೋಮಪೀತಯೇ ॥೧೦॥

ಪದಾರ್ಥ:- [ಅಸ್ಯ] ಯಾವ ವೇದಚತುಷ್ಟಯ - ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಈ ನಾಲ್ಕು ವೇದಗಳ [ಕಾಮ್ಯೇ] ಅತ್ಯಂತ ಕಮನೀಯ ಅರ್ಥಾತ್ ಅಜ್ಞಾನದ ತಿಮಿರವನ್ನು ನಿರ್ಮೂಲ ಮಾಡಿ ಜ್ಞಾನದ ಪ್ರಕಾಶವನ್ನು ಬೀರುವ ಮಂತ್ರಗಳಲ್ಲಿ ಪರಮಾಣುವಿನಿಂದ ಪರಮಾತ್ಮನವರೆಗೆ ಸಮಗ್ರಜ್ಞಾನವನ್ನು ಬೀರುವ ಯಾವ ಋಗ್ವೇದದ ಮಂತ್ರಗಳಿವೆಯೋ, [ಶಂ ಸ್ಯೇ] ಅತ್ಯಂತ ಶ್ರೇಷ್ಠಕರ್ಮವಾದ ಯಜ್ಞಗಳಲ್ಲಿ ಹೇಳುವ [ಸ್ತೋಮಃ] ಸಾಮಗಾನ ಸಮೂಹಗಳಿವೆಯೋ [ಏವ ಉಕ್ಥಂ ಚ] ಅದೇ ರೀತಿ ಪರಮಾತ್ಮನ ಗುಣಗಳನ್ನೂ ವರ್ಣಿಸುವ ಸಕಲ ಕರ್ಮಗಳ ಸ್ವರೂಪವನ್ನು ಬೋಧಿಸುವ ಹಾಗೂ ಕರ್ಮಪ್ರಧಾನವಾದ ಯಜುರ್ವೇದ ಹಾಗೂ ವಿಜ್ಞಾನ ಪ್ರಧಾನವಾದ ಅಥರ್ವವೇದದ ಮಂತ್ರಗಳಿವೆಯೋ ಅವುಗಳ ಮೂಲಕ [ಸೋಮಪೀತಯೇ] ಸಂಪೂರ್ಣ ಚರಾಚರ ಜಗತ್ತಿನ ಸಕಲ ಪದಾರ್ಥಗಳನ್ನು ಸೃಷ್ಟಿಸಿ, ಪೋಷಿಸಿ, ಸಂರಕ್ಷಿಸಿ ಕೊನೆಗೆ ಲಯವನ್ನು ಮಾಡುವ [ಇಂದ್ರಾಯ ಹಿ] ಏಕೈಕ ಉಪಾಸ್ಯದೇವನಾದ ಪರಮಾತ್ಮನನ್ನು ವಿಶೇಷವಾದ ರೀತಿಯಲ್ಲಿ ಭಕ್ತಿಯಿಂದ ಉಪಾಸನೆಯನ್ನು ಮಾಡಿ ಅತ್ಯಂತ ಆನಂದವನ್ನು ಅನುಭವಿಸಿರಿ.

ಭಾವಾರ್ಥ:- ಯಾವ ವೇದಚತುಷ್ಟಯ ಅರ್ಥಾತ್ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದಗಳಿವೆಯೋ ಅವುಗಳಲ್ಲಿ ಮಾನವ ಮಾತ್ರರ ಅಜ್ಞಾನಾಂಧಕಾರವನ್ನು ನಿರ್ಮೂಲನ ಮಾಡಿ ಜ್ಞಾನದ ಪ್ರಕಾಶವನ್ನು ಬೀರುವ ಋಗ್ವೇದದ ಮಂತ್ರಗಳಿವೆಯೋ ಅತ್ಯಂತ ಶ್ರೇಷ್ಠಕರ್ಮವಾದ ಯಜ್ಞಗಳಲ್ಲಿ ಹೇಳುವ ಸಾಮಗಾನದ ಸಮೂಹಗಳಿವೆಯೋ, ಸಕಲ ಕರ್ಮದ ಸ್ವರೂಪವನ್ನು ಬೋಧಿಸುವ ಕರ್ಮಪ್ರಧಾನವಾದ ಯಜುರ್ವೇದದ ಮಂತ್ರಗಳಿವೆಯೋ, ಹಾಗೂ ವಿಜ್ಞಾನಪ್ರದವಾದ ಅಥರ್ವವೇದದ ಮಂತ್ರಗಳಿವೆಯೋ ಅವುಗಳ ಮೂಲಕ, ಸಂಪೂರ್ಣ ಚರಾಚರ ಜಗತ್ತಿನ ಸಕಲ ಪದಾರ್ಥಗಳನ್ನು ಸೃಷ್ಟಿಸಿ, ಪೋಷಿಸಿ, ಸಂರಕ್ಷಿಸಿ ಕೊನೆಗೆ ಲಯವನ್ನು ಮಾಡುವ ಏಕೈಕ ಉಪಾಸ್ಯದೇವನಾದ ಪರಮಾತ್ಮನನ್ನು ವಿಶೇಷವಾದ ರೀತಿಯಲ್ಲಿ ಭಕ್ತಿಯಿಂದ ಉಪಾಸನೆಯನ್ನು ಮಾಡಿ ಅತ್ಯಂತ ಆನಂದವನ್ನು ಅನುಭವಿಸಿರಿ.

ಈ ರೀತಿ ಪರಮಾತ್ಮನ ಉಪಾಸನೆಯನ್ನು ಮಾಡಿ ಅವನಿಂದ ಪ್ರಾಪ್ತವಾದ ಚತುರ್ವೇದಗಳ ಮೂಲಕ ಜ್ಞಾನವನ್ನು ಪಡೆದು ತದನುಸಾರ ಶ್ರೇಷ್ಠ ಕರ್ಮಗಳನ್ನು ಹಾಗೂ ಆಚರಣೆಯನ್ನು ಮಾಡಬೇಕು. ಇದರಿಂದ ನಮ್ಮೆಲ್ಲರ ಹಾಗೂ ಸಂಪೂರ್ಣ ವಿಶ್ವದ ಕಲ್ಯಾಣವಾಗುತ್ತದೆ. ಇದಕ್ಕೆ ಅವರೋಧವನ್ನು ಮಾಡುವ ಯಾವ ದುಷ್ಟಶಕ್ತಿಗಳಿವೆಯೋ ಅದೆಲ್ಲವನ್ನೂ ಸಂಪೂರ್ಣ ದಮನ ಮಾಡಿ ಲೋಕಕಲ್ಯಾಣವನ್ನು ಮಾಡಬೇಕು. ಈ ರೀತಿ ಅಷ್ಟಮ ಸೂಕ್ತದ ಅರ್ಥದೊಂದಿಗೆ ಸಪ್ತಮ ಸೂಕ್ತದ ಸಂಗತಿಯಿದೆ ಎಂಬುದನ್ನು ಎಲ್ಲರೂ ಗಮನಿಸಬೇಕು.

ಎಂಟನೆಯ ಸೂಕ್ತ ಸಮಾಪ್ತ

ಸೂಕ್ತ ೯

ಮಂತ್ರಸಂಖ್ಯೆ ೧೦ । ಋಷಿಃ - ಮಧುಚ್ಛಂದಾ ವೈಶ್ವಾಮಿತ್ರಃ । ದೇವತಾ - ಇಂದ್ರಃ । ಛಂದಃ - ೧,೩,೭,೧೦ ನಿಚೃದ್ ಗಾಯತ್ರೀ, ೨, ೪, ೮, ೯ ಗಾಯತ್ರೀ, ೫, ೬ ಪಿಪೀಲಿಕಾಮಧ್ಯಾನಿಚೃದ್‌ಗಾಯತ್ರೀ । ಸ್ವರಃ-ಷಡ್ಜಃ.

ನವಮ ಸೂಕ್ತದ ಪ್ರಥಮ ಮಂತ್ರದಲ್ಲಿ ಇಂದ್ರ ಶಬ್ದದಿಂದ ಪರಮೇಶ್ವರ ಮತ್ತು ಸೂರ್ಯರನ್ನು ಗ್ರಹಿಸಲಾಗಿದೆ.

ಇಂದ್ರೇಹಿ ಮತ್ಸ್ಯಂಧಸೋ ವಿಶ್ವೇಭಿಃ ಸೋಮಪರ್ವಭಿಃ । ಮಹಾँ ಅಭಿಷ್ಟಿರೋಜಸಾ ॥೧॥

ಪದಾರ್ಥ:- [ಇಂದ್ರ] ಹೇ ಸರ್ವವ್ಯಾಪಕ ಸರ್ವಪ್ರಕಾಶ ಸ್ವರೂಪ ಪರಮಾತ್ಮ! ಯಾವ ರೀತಿ ನೀನು [ಓಜಸಾ ಮಹಾನ್] ಸಕಲ ಚರಾಚರ ಜಗತ್ತನ್ನು ಪ್ರಕಾಶಿಸುವುದರ ಮೂಲಕ ಹಾಗೂ ಅತ್ಯಂತ ಬಲಶಾಲಿಯಾಗಿದ್ದು ಸರ್ವಶಕ್ತನಾದ ಕಾರಣ ಸರ್ವೋತ್ತಮನಾಗಿದ್ದೀಯೆ. [ಅಭಿಷ್ಟಿಃ] ಸರ್ವಜ್ಞನಾಗಿದ್ದು ಸಂಪೂರ್ಣ ಜ್ಞಾನವನ್ನು ಕೊಡುವವನಾಗಿದ್ದೀಯೆ. [ವಿಶ್ವೇಭಿಃ ಸೋಮಪರ್ವಭಿಃ] ಸಂಪೂರ್ಣ ಪದಾರ್ಥ ಹಾಗೂ ಸಕಲೈಶ್ವರ್ಯದೊಂದಿಗೆ ವಿದ್ಯಮಾನನಾಗಿದ್ದು ಅವೆಲ್ಲವುಗಳ ಮೂಲಕ ನಮ್ಮೆಲ್ಲರಿಗೆ [ಏಹಿ] ಪ್ರಾಪ್ತನಾಗುತ್ತೀಯೆ. ಹಾಗೂ [ಅಂಧಸಃ] ಸಕಲ ಸುಖ ಸೌಲಭ್ಯಗಳುಳ್ಳ ಪೃಥ್ವಿ ಮತ್ತು ಜೀವಮಾತ್ರರಿಗೆ ಅನ್ನವನ್ನು ಆಹಾರವನ್ನು ಕೊಟ್ಟು [ಮತ್ಸಿ] ಎಲ್ಲಾ ರೀತಿಯಲ್ಲಿ ಸುಖವನ್ನೇ ಕೊಡುತ್ತೀಯೆ. ಅದೇ ರೀತಿ [ಇಂದ್ರಃ] ಈ ಸೂರ್ಯನೂ ಕೂಡಾ [ಓಜಸಾ] ತನ್ನ ಪ್ರಕಾಶದ ಮೂಲಕ ಹಾಗೂ ಆಕಾರದಲ್ಲಿ [ಮಹಾನ್] ಪೃಥ್ವಿ ಇತ್ಯಾದಿ ಸಕಲ ಗ್ರಹೋಪಗ್ರಹಗಳಿಗಿಂತಲೂ ದೊಡ್ಡವನಾಗಿ [ಅಭಿಷ್ಟಿಃ] ಸಕಲಮೂರ್ತ ಪದಾರ್ಥಗಳನ್ನು ಸಕಲ ಗ್ರಹಗಳನ್ನು ತನ್ನ ಪ್ರಕಾಶದಿಂದ ಬೆಳಗಿಸುತ್ತಾನೆ. [ವಿಶ್ವೇಭಿಃ ಸೋಮಪರ್ವಭಿಃ] ಆ ಸೂರ್ಯನೂ ಕೂಡಾ ಸಮಸ್ತ ಪದಾರ್ಥಗಳಿಗೆ ಚೈತನ್ಯವನ್ನೂ ಗತಿಯನ್ನೂ ಕೊಡುವ ಶಕ್ತಿಯೊಂದಿಗೆ ವಿದ್ಯಮಾನನಾಗಿದ್ದು ಅವೆಲ್ಲವುಗಳ ಮೂಲಕ ನಮಗೆ ಪ್ರಾಪ್ತನಾಗುತ್ತಾನೆ. ಹಾಗೂ [ಅಂಧಸಃ] ಸಕಲ ಆಹಾರವನ್ನೂ ಅನ್ನವನ್ನೂ ಕೊಟ್ಟು [ಮತ್ಸಿ] ನಮ್ಮೆಲ್ಲರಿಗೂ ಸುಖವನ್ನೇ ಕೊಡುತ್ತಾನೆ.

ಭಾವಾರ್ಥ:- ಹೇ ಸರ್ವವ್ಯಾಪಕ! ಸರ್ವ ಪ್ರಕಾಶ ಸ್ವರೂಪ ಪರಮಾತ್ಮ! ನೀನು ಸರ್ವಶಕ್ತನಾಗಿದ್ದು ಸಂಪೂರ್ಣ ಚರಾಚರ ಜಗತ್ತನ್ನು ಬೆಳಗಿಸುವವನೂ ಆಗಿದ್ದೀಯೆ. ನಿನ್ನ ಪ್ರಕಾಶದಿಂದಲೇ ಸೂರ್ಯ ಚಂದ್ರ ನಕ್ಷತ್ರಾದಿಗಳು ಬೆಳಗುತ್ತವೆ. ನೀನು ಸರ್ವಜ್ಞನಾಗಿದ್ದು ಸಂಪೂರ್ಣ ಜ್ಞಾನವನ್ನೂ ಕೊಡುವವನಾಗಿದ್ದೀಯೆ. ನೀನು ಸಂಪೂರ್ಣ ಪದಾರ್ಥ ಹಾಗೂ ಸಕಲೈಶ್ವರ್ಯದೊಂದಿಗೆ ವಿದ್ಯಮಾನನಾಗಿದ್ದು ಅವೆಲ್ಲವುಗಳ ಮೂಲಕ ನಮ್ಮೆಲ್ಲರಿಗೆ ಪ್ರಾಪ್ತನಾಗುತ್ತೀಯೆ. ಸಕಲ ಸುಖ ಸೌಲಭ್ಯಗಳುಳ್ಳ ಪೃಥ್ವಿಯನ್ನು ಸೃಷ್ಟಿಸಿ ಜೀವಮಾತ್ರರಿಗೆ ಅನ್ನವನ್ನೂ, ಆಹಾರವನ್ನೂ ಕೊಟ್ಟು ಎಲ್ಲಾ ರೀತಿಯಲ್ಲಿ ಸುಖವನ್ನೇ ಕೊಡುತ್ತೀಯೆ. ಅದೇ ರೀತಿ ನಿನ್ನಿಂದ ಸೃಷ್ಟಿಸಲ್ಪಟ್ಟ ಸೂರ್ಯನೂ ಕೂಡ ಸಕಲ ಗ್ರಹೋಪಗ್ರಹಗಳನ್ನು ತನ್ನ ಪ್ರಕಾಶದಿಂದ ಬೆಳಗಿಸುತ್ತಾನೆ. ಅಪಾರವಾದ ಶಕ್ತಿಯ ಮೂಲಕ ಹಾಗೂ ಆಕಾಶದಲ್ಲಿ ಸಕಲ ಗ್ರಹೋಪಗ್ರಹಗಳಿಗಿಂತಲೂ ದೊಡ್ಡವನಾಗಿದ್ದು ಸಕಲ ಪದಾರ್ಥಗಳಿಗೆ ಸಕಲ ಜೀವಿಗಳಿಗೆ ಚೈತನ್ಯವನ್ನೂ, ಗತಿಯನ್ನೂ ಕೊಡುವ ಶಕ್ತಿಯೊಂದಿಗೆ ವಿದ್ಯಮಾನನಾಗಿದ್ದು ನಮ್ಮೆಲ್ಲರಿಗೆ ಪ್ರಾಪ್ತನಾಗುತ್ತಾನೆ. ಹಾಗೂ ಜೀವಮಾತ್ರರಿಗೆ ಅನ್ನ ಆಹಾರ ಪ್ರಾಪ್ತಿಯಾಗಲು ಸಹಾಯಕನಾಗಿದ್ದು ನಮ್ಮೆಲ್ಲರಿಗೆ ಸುಖವನ್ನು ಕೊಡುತ್ತಾನೆ. ನಾವೆಲ್ಲರೂ ನಿನ್ನಿಂದ ಸಕಲೈಶ್ವರ್ಯವನ್ನೂ, ಸಂಪೂರ್ಣ ಜ್ಞಾನವನ್ನೂ, ಅನಂತ ಆನಂದವನ್ನೂ ಪ್ರಾಪ್ತಮಾಡಿಕೊಂಡು ನಿನ್ನಿಂದ ಸೃಷ್ಟಿಸಲ್ಪಟ್ಟ ಈ ಸೂರ್ಯನ ಬೆಳಕು ಹಾಗೂ ಅಪರಿಮಿತವಾದ ಬಲವನ್ನು ಸರಿಯಾಗಿ ಉಪಯೋಗಿಸಿಕೊಂಡು, ಸದಾ ಸುಖ ಶಾಂತಿ ಹಾಗೂ ಆನಂದದಿಂದ ಬಾಳುವಂತಾಗಲಿ. ಯಾರಿಗೂ ಯಾವುದೇ ರೀತಿಯ ಅಭಾವ ದುಃಖ ಕಷ್ಟ ಕ್ಲೇಶಗಳುಂಟಾಗದಿರಲಿ.

ಶಿಲ್ಪವಿದ್ಯೆಯ ಉತ್ತಮ ಸಾಧನಗಳಾದ ಜಲ ಮತ್ತು ಅಗ್ನಿಗಳ ವರ್ಣನೆಯನ್ನು ಮಾಡಲಾಗಿದೆ.

ಏಮೇನಂ ಸೃಜತಾ ಸುತೇ ಮಂದಿಮಿಂದ್ರಾಯ ಮಂದಿನೇ । ಚಕ್ರಿಂ ವಿಶ್ವಾನಿ ಚಕ್ರಯೇ ॥೨॥

ಪದಾರ್ಥ:- ಶ್ರೇಷ್ಠ ವಿದ್ವಾಂಸರೇ **[ಸುತ]** ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಸಕಲ ಪದಾರ್ಥ ಸಮೂಹಗಳುಳ್ಳ ಈ ಪ್ರಪಂಚದಲ್ಲಿ **[ವಿಶ್ವಾನಿ]** ಸಮಸ್ತ ಕಾರ್ಯಗಳ ಸಿದ್ಧಿಗೋಸ್ಕರ ಹಾಗೂ **[ಮಂದಿನೇ]** ಸಕಲ ಸುಖ ಸೌಲಭ್ಯಗಳನ್ನು ಅಪೇಕ್ಷಿಸುವ ಮತ್ತು **[ಇಂದ್ರಾಯ]** ಸಕಲೈಶ್ವರ್ಯವನ್ನು ಪ್ರಾಪ್ತಿ ಮಾಡಲಿಚ್ಛಿಸುವ ಮಾನವನಿಗೋಸ್ಕರ **[ಮಂದಿಂ ಚಕ್ರಯೇ]** ಅತ್ಯಂತ ಸುಖವನ್ನು ಕೊಡುವ ಹಾಗೂ ಸಕಲ ಪುರುಷಾರ್ಥಗಳನ್ನು ಶೀಘ್ರವಾಗಿ ಸಾಧಿಸಲು ಸಾಧ್ಯವಾದ **[ಚಕ್ರಿಂ]** ಅತ್ಯಂತ ವೇಗವಾಗಿ ಚಲಿಸುವ ಸಕಲ ಯಾನಗಳನ್ನು ಹಾಗೂ ಯಂತ್ರಾದಿಗಳನ್ನು ನಿರ್ಮಾಣಮಾಡಲು **[ಈಂ]** ಅಗ್ನಿ ಮತ್ತು ಜಲವನ್ನು ಉಪಯೋಗಿಸಿಕೊಂಡು ಅರ್ಥಾತ್ ಅಗ್ನಿ ಮತ್ತು ಜಲದ ಸಮ್ಮಿಲನದಿಂದ ಅತ್ಯಂತ ಪ್ರಬಲ ಶಕ್ತಿಯನ್ನು ಪ್ರಾಪ್ತಮಾಡಿಕೊಂಡು **[ಆ ಸೃಜತ]** ಸಕಲ ಯಂತ್ರಾದಿಗಳನ್ನು ನಿರ್ಮಾಣ ಮಾಡಿರಿ.

ಭಾವಾರ್ಥ:- ವಿದ್ವಾಂಸರು ಮತ್ತು ವಿಜ್ಞಾನಿಗಳು ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಸಕಲ ಪದಾರ್ಥ ಸಮೂಹಗಳಿಂದ ಸಂಪನ್ನವಾದ ಈ ಜಗತ್ತಿನಲ್ಲಿ ಸಕಲ ಕಾರ್ಯಸಾಧನೆಗೋಸ್ಕರ, ಸಕಲ ಸುಖ ಸೌಲಭ್ಯಗಳನ್ನು ಸಕಲೈಶ್ವರ್ಯವನ್ನು ಪ್ರಾಪ್ತಿಮಾಡಲಿಚ್ಛಿಸುವ ಮಾನವರಿಗೆ, ಸಕಲ ಪುರುಷಾರ್ಥಗಳನ್ನು ಶೀಘ್ರವಾಗಿ ಸಾಧಿಸುವುದಕ್ಕೋಸ್ಕರ, ಅತ್ಯಂತ ವೇಗವಾಗಿ ಚಲಿಸುವ ವಿವಿಧ ರೀತಿಯ ಯಾನಗಳನ್ನು ನಿರ್ಮಾಣ ಮಾಡಲು ಹಾಗೂ ಸಕಲ ಯಂತ್ರಾದಿಗಳನ್ನು ಉತ್ತಮ ರೀತಿಯಲ್ಲಿ ಚಲಿಸುವಂತೆ ಮಾಡಲು ಅಗ್ನಿಯನ್ನು ಮತ್ತು ಜಲವನ್ನು ಸೇರಿಸಿಕೊಂಡು ಅದರಿಂದ ಪ್ರಾಪ್ತವಾದ ಬಾಷ್ಪದ ಮೂಲಕ ಪ್ರಬಲ ಶಕ್ತಿಯನ್ನು ಪ್ರಾಪ್ತ ಮಾಡಿಕೊಂಡು, ಸಕಲ ಯಂತ್ರಾದಿಗಳ ನಿರ್ಮಾಣವನ್ನು ಮಾಡಿರಿ ಅಥವಾ ಜಲದಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿ ಸಕಲ ಯಂತ್ರಾದಿಗಳನ್ನು ಚಲಿಸುವಂತೆ ಮಾಡಿರಿ.

ಇದರ ತಾತ್ಪರ್ಯವೇನೆಂದರೆ ವಿಜ್ಞಾನಿಗಳು ಜಲದಿಂದ ವಿದ್ಯುಚ್ಛಕ್ತಿಯನ್ನು, ಜಲ ಮತ್ತು ಅಗ್ನಿಯ ಸಮ್ಮಿಲನದಿಂದ ಬಾಷ್ಪ [steam] ಶಕ್ತಿಯನ್ನೂ ಪಡೆದು ಸಕಲ ಯಂತ್ರಗಳನ್ನೂ, ಸಕಲ ಯಾನಗಳನ್ನೂ ಶೀಘ್ರಗತಿಯಿಂದ ಚಲಿಸುವಂತೆ ಮಾಡಿ ಅದರಿಂದ ಪೂರ್ಣ ಪ್ರಯೋಜನವನ್ನು ಪಡೆಯಬೇಕು.

ಮುಂದಿನ ಮಂತ್ರದಲ್ಲಿ ಇಂದ್ರ ಶಬ್ದದಿಂದ ಪರಮಾತ್ಮನನ್ನು ವರ್ಣಿಸಲಾಗಿದೆ.

ಮತ್ಸ್ವಾ ಸುಶಿಪ್ರ ಮಂದಿಭಿಃ ಸ್ತೋಮೇಭಿರ್ವಿಶ್ವಚರ್ಷಣೇ । ಸಚೈಷು ಸವನೇಷ್ವಾ ॥೩॥

ಪದಾರ್ಥ:- ಹೇ **[ವಿಶ್ವಚರ್ಷಣೇ]** ಸರ್ವದ್ರಷ್ಟಾ! **[ಸುಶಿಪ್ರ]** ಸರ್ವಶ್ರೇಷ್ಠ ಜ್ಞಾನವುಳ್ಳ ಸರ್ವಜ್ಞನಾದ ಹಾಗೂ ಉಪಾಸಕರಿಗೆ ಶೀಘ್ರವಾಗಿ ಜ್ಞಾನವನ್ನು ಪ್ರದಾನ ಮಾಡುವ ಪರಮಾತ್ಮ! ನೀನು **[ಮಂದಿಭಿಃ]** ವಿಶೇಷವಾದ ಜ್ಞಾನವನ್ನು ಕೊಡುವ ಹಾಗೂ ಆನಂದವನ್ನು ವರ್ಧಿಸುವ **[ಸ್ತೋಮೇಭಿಃ]** ವೇದಮಂತ್ರಗಳ ಮೂಲಕ ಹಾಗೂ ನಿನ್ನ ಗುಣಗಳನ್ನು ವರ್ಣಿಸುವ ಸ್ತುತಿಸಮೂಹಗಳ ಮೂಲಕ ಆರಾಧಿಸಲ್ಪಡುವ ಹಾಗೂ ಭಕ್ತಿಯಿಂದ ಉಪಾಸಿಸಲ್ಪಡುವ ನೀನು **[ಏಷು ಸವನೇಷು]** ಈ ಸಮಸ್ತ ಐಶ್ವರ್ಯ ಪ್ರಾಪ್ತಿ ಮಾಡಲು ಸಾಧ್ಯವಾದ **[ಸಚಾ]** ಸಕಲ ಸಾಧನಗಳಲ್ಲಿ ನಮ್ಮೆಲ್ಲರನ್ನೂ ಯುಕ್ತವನ್ನಾಗಿ ಮಾಡಿ ಅರ್ಥಾತ್ ಯಾವುದರಿಂದ ನಮಗೆ ಸಕಲ ಐಶ್ವರ್ಯವು ಪ್ರಾಪ್ತಿಯಾಗುತ್ತದೆಯೋ, ಅವೆಲ್ಲಾ ಕ್ರಿಯೆಗಳಲ್ಲಿ ತೊಡಗಿಸಿ **[ಮತ್ಸ್ವ]** ಆನಂದಿತರನ್ನಾಗಿ ಮಾಡು. ನಿನ್ನ ಕೃಪೆಯಿಂದ ನಾವೆಲ್ಲರೂ ಸುಖ ಸಂತೋಷವನ್ನೂ ಆನಂದವನ್ನೂ ಅನುಭವಿಸುವಂತಾಗಲಿ.

ಭಾವಾರ್ಥ:- ಹೇ ಸರ್ವದ್ರಷ್ಟಾ! ಸರ್ವಜ್ಞ! ಉಪಾಸಕರಿಗೆ ಶೀಘ್ರವಾಗಿ ಸಕಲಜ್ಞಾನವನ್ನು ಪ್ರದಾನ ಮಾಡುವ ಪರಮಾತ್ಮ! ವಿಶೇಷವಾದ ಜ್ಞಾನವನ್ನು ಕೊಡುವ ಹಾಗೂ ಆನಂದವನ್ನು ವರ್ಧಿಸುವ ವೇದ ಮಂತ್ರಗಳ ಮೂಲಕ, ಹಾಗೂ ನಿನ್ನ ಗುಣಗಳನ್ನು ವರ್ಣಿಸುವ ಸಾಮಗಾನ ಸಮೂಹಗಳ ಮೂಲಕ ಆರಾಧಿಸಲ್ಪಟ್ಟು ಹಾಗೂ ಆರಾಧಿಸಲ್ಪಡುವ ಮತ್ತು ಭಕ್ತಿಯಿಂದ ಉಪಾಸಿಸಲ್ಪಡುವ ನೀನು ನಮ್ಮೆಲ್ಲರಿಗೆ ಸಮಸ್ತ ಐಶ್ವರ್ಯ ಪ್ರಾಪ್ತಿಯಾಗಲು ಸಾಧಕವಾದ ಸಕಲ ಸಾಧ್ಯಗಳೊಂದಿಗೆ ನಮ್ಮೆಲ್ಲರನ್ನು ಯುಕ್ತರನ್ನಾಗಿ ಮಾಡು. ಅರ್ಥಾತ್ ನಿನ್ನ ಕೃಪೆಯಿಂದ ನಾವೆಲ್ಲರೂ ಸಕಲ ಪುರುಷಾರ್ಥಗಳ ಸಾಧನೆಯನ್ನೂ ಮಾಡಿ ಸಮಸ್ತ ಐಶ್ವರ್ಯವನ್ನು ಪ್ರಾಪ್ತಿ ಮಾಡುವಂತಾಗಲಿ. ಈ ರೀತಿ ನಾವೆಲ್ಲರೂ ಸದಾ ಸದಾ ಸುಖಶಾಂತಿ ಮತ್ತು ಆನಂದವನ್ನು ಅನುಭವಿಸುವಂತಾಗಲಿ.

ಮುಂದಿನ ಮಂತ್ರದಲ್ಲೂ ಪರಮಾತ್ಮನನ್ನೇ ವರ್ಣಿಸಲಾಗಿದೆ.

ಅಸೃಗ್ರಮಿಂದ್ರ ತೇ ಗಿರಃ ಪ್ರತಿ ತ್ವಾಮುದಹಾಸತ । ಅಜೋಷಾ ವೃಷಭಂ ಪತಿಮ್ ॥೪॥

ಪದಾರ್ಥ:- ಹೇ **[ಇಂದ್ರ]** ಸರ್ವಜ್ಞ, ಸರ್ವೋಪಾಸ್ಯ ಸಕಲೈಶ್ವರ್ಯಪ್ರದನಾದ ಪರಮಾತ್ಮ! **[ತೇ ಗಿರಃ]** ಯಾವ ನಿನ್ನ ವಾಣಿಯಾದ ವೇದವಾಣಿಯು **[ವೃಷಭಂ]** ಸಕಲ ಮನೋಕಾಮನೆಯನ್ನೂ ಪೂರ್ಣಗೊಳಿಸಿ, ಸಕಲ ಅಭೀಷ್ಟ ಸಿದ್ಧಿಯನ್ನು ಮಾಡಿ ಸದಾ ಸುಖ ಮತ್ತು ಆನಂದದ ವೃಷ್ಟಿಯನ್ನೇ ಮಾಡುವ **[ಪತಿಂ]** ಸರ್ವರಕ್ಷಕನಾದ **[ತ್ವಾಂ ಉದಹಾಸತ]** ಹಾಗೂ ಸರ್ವಜ್ಞನಾದ ನಿನ್ನನ್ನು ವರ್ಣಿಸುತ್ತದೆ. ನಿನ್ನ ವಾಸ್ತವಿಕ ಸ್ವರೂಪವನ್ನು ಪ್ರಕಾಶಿಸುತ್ತದೆ. ಬೋಧಿಸುತ್ತದೆ, ತಿಳಿಯಪಡಿಸುತ್ತದೆ. **[ಅಜೋಷಾಃ]** ಯಾವ ವೇದವಾಣಿಯ ಮೂಲಕ ನೀನು ಸಮಸ್ತ ವಿದ್ಯೆಯನ್ನು ಸಂಪೂರ್ಣ ಜ್ಞಾನವನ್ನು ಮಾನವ ಮಾತ್ರರ ಕಲ್ಯಾಣಕ್ಕೋಸ್ಕರ ಕೊಡುತ್ತೀಯೋ ಅದೇ ವೇದವಾಣಿಯ ಮೂಲಕ **[ಪ್ರತಿ]** ಸಮಸ್ತ ಇಂದ್ರಿಯಗಳಿಗೆ ಅಗೋಚರನಾದ **[ತ್ವಾಮಸೃಗ್ರಮ್]** ನಿನ್ನನ್ನು ನಿನ್ನ ವಾಸ್ತವಿಕ ಸ್ವರೂಪವನ್ನು ತಿಳಿದು ಸರಿಯಾದ ರೀತಿಯಲ್ಲಿ ವರ್ಣಿಸುತ್ತೇನೆ ಹಾಗೂ ಇತರರಿಗೂ ತಿಳಿಯಪಡಿಸುತ್ತೇನೆ.

ಭಾವಾರ್ಥ:- ಹೇ ಸರ್ವಜ್ಞ, ಸರ್ವೋಪಾಸ್ಯ ಸಕಲೈಶ್ವರ್ಯಪ್ರದನಾದ ಪರಮಾತ್ಮ! ನಿನ್ನ ವಾಣಿಯಾದ ವೇದವಾಣಿಯು, ಸಕಲ ಮನೋಕಾಮನೆಗಳನ್ನು ಪೂರ್ಣಗೊಳಿಸುವ, ಸಕಲ ಅಭೀಷ್ಟ ಸಿದ್ಧಿಯನ್ನು ಮಾಡಿ ಸದಾ ಸುಖ ಹಾಗೂ ಆನಂದದ ವೃಷ್ಟಿಯನ್ನೇ ಮಾಡುವ ಸರ್ವಪಾಲಕ, ಸರ್ವರಕ್ಷಕ ಹಾಗೂ ಸರ್ವಜ್ಞನಾದ ನಿನ್ನ ವಾಸ್ತವಿಕ ಸ್ವರೂಪವನ್ನು ತಿಳಿಯಪಡಿಸುತ್ತದೆ.

ಯಾವ ವೇದವಾಣಿಯ ಮೂಲಕ ನೀನು ಸಮಸ್ತ ವಿದ್ಯೆಯನ್ನೂ, ಸಂಪೂರ್ಣಜ್ಞಾನವನ್ನೂ ಮಾನವ ಮಾತ್ರರ ಕಲ್ಯಾಣಕ್ಕೋಸ್ಕರ ಕೊಡುತ್ತೀಯೋ ಅದೇ ವೇದವಾಣಿಯ ಮೂಲಕ, ಸಮಸ್ತ ಇಂದ್ರಿಯಗಳಿಗೆ ಅಗೋಚರನಾದ, ಇಂದ್ರಿಯಾತೀತನಾದ ನಿನ್ನ ವಾಸ್ತವಿಕ ಸ್ವರೂಪವನ್ನು ತಿಳಿದು ನಾನು ಸರಿಯಾದ ರೀತಿಯಲ್ಲಿ ವರ್ಣಿಸುತ್ತೇನೆ ಹಾಗೂ ಇತರರರಿಗೂ ತಿಳಿಯಪಡಿಸುತ್ತೇನೆ.

ಭಗವಂತನ ವಾಸ್ತವಿಕ ಸ್ವರೂಪವನ್ನು ಅರಿಯಬೇಕಾದರೆ, ಸರಿಯಾದ ರೀತಿಯಲ್ಲಿ ತಿಳಿಯಬೇಕಾದರೆ ಭಗವಂತನ ವಾಣಿಯಾದ ವೇದವಾಣಿಯನ್ನೇ, ವೇದಗಳನ್ನೇ ಅಧ್ಯಯನ ಮಾಡಬೇಕು. ಅಪೌರುಷೇಯವಾದ ವೇದಗಳು ಯಾವ ರೀತಿಯಲ್ಲಿ ಹಾಗೂ ಎಷ್ಟು ಸ್ಪಷ್ಟವಾದ ರೀತಿಯಲ್ಲಿ ಮತ್ತು ಎಷ್ಟು ಉತ್ತಮವಾದ ರೀತಿಯಲ್ಲಿ ಭಗವಂತನ ವಾಸ್ತವಿಕ ಸ್ವರೂಪದ ವರ್ಣನೆಯನ್ನು ಮಾಡುತ್ತವೆಯೋ ಆ ರೀತಿಯಲ್ಲಿ ಯಾವುದೇ ಮಾನುಷೀ ಗ್ರಂಥ ಅರ್ಥಾತ್ ಮನುಷ್ಯನಿಂದ ನಿರ್ಮಿತವಾದ ಗ್ರಂಥದಿಂದ ವರ್ಣನೆಯನ್ನು ಮಾಡಲು ಸಾಧ್ಯವಿಲ್ಲ. ಅವನು ಇಂದ್ರಿಯಾತೀತನಾದ ಕಾರಣ ಹಾಗೂ ವರ್ಣನಾತೀತನಾದ ಕಾರಣ ವೇದಗಳ ಮೂಲಕವೇ ತಿಳಿದು ನಮ್ಮ ಅಂತಃಕರಣದಲ್ಲಿಯೇ ಆತ್ಮನ ಮೂಲಕ ಅನುಭವಿಸಬೇಕು. ಬೇರೆ ಯಾವ ರೀತಿಯಲ್ಲಿಯೂ ಸಾಧ್ಯವಿಲ್ಲ. ಜೀವಾತ್ಮನು ವಿಜ್ಞಾನಮಯ ಪುರುಷನಾದ ಕಾರಣ, ಸರ್ವಜ್ಞನಾದ ಪರಮಾತ್ಮನ ಬಾಷೆ ಕೇವಲ ಜೀವಾತ್ಮನಿಗೆ ಮಾತ್ರ ಅರ್ಥವಾಗುತ್ತದೆ. ಆದುದರಿಂದಲೇ ಉಪನಿಷತ್ತಿನಲ್ಲಿ ಭಗವಂತನ ವರ್ಣನೆ ಮಾಡುವಾಗ "ನೇತಿ" "ನೇತಿ" ಈ ರೀತಿಯಲ್ಲಿಲ್ಲ, ಈ ರೀತಿಯಲ್ಲಿಲ್ಲ ಎಂಬ ಪದದ ಪ್ರಯೋಗವನ್ನು ಮಾಡಲಾಗಿದೆ.

ಅತ್ಯಂತ ಮಹತ್ವಪೂರ್ಣವಾದ ಇನ್ನೊಂದು ವಿಷಯವನ್ನು ನಮಗೆ ಈ ಮಂತ್ರವು ಬೋಧಿಸುತ್ತದೆ. ಅದೇನೆಂದರೆ, ಪರಮಾತ್ಮನು ಸಕಲ ಮನೋಕಾಮನೆಗಳನ್ನು ಪೂರ್ಣಗೊಳಿಸುತ್ತಾನೆ. ನಮ್ಮ ಮನೋಕಾಮನೆಗಳು ಒಳ್ಳೆಯದಾಗಿದ್ದರೆ ನಮಗೆ ಒಳ್ಳೆಯದೇ ಆಗುತ್ತದೆ. ನಮ್ಮ ಮನೋಕಾಮನೆಗಳು ಕೆಟ್ಟದ್ದಾಗಿದ್ದರೆ ನಮಗೆ ಕೆಟ್ಟದ್ದೇ ಆಗುತ್ತದೆ. ನಾವು ಎಂದಿಗೂ ಬೇರೆಯವರಿಗೂ ಕೂಡಾ ಕೇಡನ್ನು ಬಯಸಬಾರದು. ಬೇರೆಯವರಿಗೆ ಕೇಡನ್ನು ಬಯಸಿದರೆ ನಮಗೇ ಕೇಡಾಗುತ್ತದೆ. "ಪರರ ಕೇಡು ತನ್ನ ಹಾಳು" ಎಂಬ ಉಕ್ತಿಯು ಅತ್ಯಂತ ಮಾರ್ಮಿಕವೂ ಮನೋಜ್ಞವೂ ಆಗಿದೆ.

ಈಶ್ವರೋಪಾಸನೆಯಿಂದ ಏನು ಲಾಭವಾಗುತ್ತದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಸಂ ಚೋದಯ ಚಿತ್ರಮರ್ವಾಗ್ರಾಧ ಇಂದ್ರ ವರೇಣ್ಯಮ್ । ಅಸದಿತ್ತೇ ವಿಭು ಪ್ರಭು ॥೫॥

ಪದಾರ್ಥ:- ಹೇ [ಇಂದ್ರ] ದಯಾಮಯ, ಕೃಪಾಲು, ಸರ್ವಸುಖ ಸಾಧನಪ್ರದನಾದ ಪರಮಾತ್ಮ! ನಿನ್ನ ಸೃಷ್ಟಿಯಲ್ಲಿ ಯಾವುದೆಲ್ಲಾ [ವರೇಣ್ಯಂ] ವರಣೀಯ, ಅತ್ಯಂತ ಶ್ರೇಷ್ಠವಾದ [ವಿಭು] ಅತ್ಯಂತ ಸುಖವನ್ನು ಕೊಡುವ [ಪ್ರಭು] ಅತ್ಯುತ್ತಮ ಹಾಗೂ ಅತ್ಯಂತ ಪ್ರಭಾವಕಾರಿ ಪದಾರ್ಥಗಳಿವೆಯೋ ಮತ್ತು [ಚಿತ್ರಂ] ಯಾವುದರಿಂದ ಶ್ರೇಷ್ಠವಿದ್ಯೆ ಹಾಗೂ ಸಮಗ್ರಜ್ಞಾನ ಪ್ರಾಪ್ತವಾಗುತ್ತದೆಯೋ ಅಂತಹ ವೇದಾದಿಗಳು, ಯಾವುದರಿಂದ ಸಕಲ ಐಶ್ವರ್ಯ ಶ್ರೇಷ್ಠ ರಾಜ್ಯ ಭೋಗಾದಿಗಳು ಪ್ರಾಪ್ತವಾಗುತ್ತದೆಯೋ ಅಂತಹ [ರಾಧಃ] ಶ್ರೇಷ್ಠವಾದ ಶ್ರೀ, ಸಂಪತ್ತು, ಯಶಸ್ಸು, ಕೀರ್ತಿ ಇತ್ಯಾದಿಗಳು [ಅಸತ್] ಇವೆಯೋ ಅವೆಲ್ಲವೂ ನಿನ್ನ ಕೃಪೆಯಿಂದ [ಅರ್ವಾಗ್] ನಮ್ಮೆಲ್ಲರಿಗೂ ಸಮ್ಮುಖದಲ್ಲಿಯೇ [ಸಂ ಚೋದಯ] ಉತ್ತಮ ರೀತಿಯಲ್ಲಿ ಪ್ರಾಪ್ತವಾಗಲಿ ಹಾಗೂ ಅವೆಲ್ಲವನ್ನೂ ಪ್ರಾಪ್ತಿಮಾಡುವ ಸಾಮರ್ಥ್ಯವನ್ನೂ ಪ್ರೇರಣೆಯನ್ನೂ ನೀಡು.

ಭಾವಾರ್ಥ:- ಹೇ ದಯಾನಿಧೇ, ಸಕಲೈಶ್ವರ್ಯಪ್ರದನಾದ ಪರಮಾತ್ಮ! ನಿನ್ನ ಸೃಷ್ಟಿಯಲ್ಲಿ ಯಾವುದೆಲ್ಲಾ ಅತ್ಯಂತ ಶ್ರೇಷ್ಠವಾದ ಪದಾರ್ಥಗಳಿವೆಯೋ ಅತ್ಯುತ್ತಮ ಹಾಗೂ ಅತ್ಯಂತ ಪ್ರಭಾವವನ್ನು ಬೀರುವ ಹಾಗೂ ಯಾವುದರಿಂದ ಶ್ರೇಷ್ಠವಿದ್ಯೆ ಮತ್ತು ಸಂಪೂರ್ಣ ಸತ್ಯಜ್ಞಾನ ಪ್ರಾಪ್ತವಾಗುತ್ತದೆಯೋ ಅಂತಹ ವೇದ ಇತ್ಯಾದಿಗಳು

ಹಾಗೂ ಯಾವುದರಿಂದ ಸಕಲ ಐಶ್ವರ್ಯ ಮತ್ತು ರಾಜ್ಯವೈಭವ ಪ್ರಾಪ್ತವಾಗುತ್ತವೆಯೋ ಅಂತಹ ತೀಕ್ಷ್ಣವಾದ ಶ್ರೀ, ಸಂಪತ್ತು, ಯಶಸ್ಸು, ಕೀರ್ತಿ ಇತ್ಯಾದಿಗಳು ಇವೆಯೋ ಅವೆಲ್ಲವೂ ನಮ್ಮೆಲ್ಲರಿಗೆ ನಿನ್ನ ಕೃಪೆಯಿಂದ ಸಮ್ಮುಖದಲ್ಲಿಯೇ ಅರ್ಥಾತ್ ಈ ಜನ್ಮದಲ್ಲಿಯೇ ಪ್ರಾಪ್ತವಾಗಲಿ. ಅವೆಲ್ಲವನ್ನೂ ಪ್ರಾಪ್ತಿಮಾಡಿಕೊಳ್ಳುವ ಸಾಮರ್ಥ್ಯವನ್ನೂ ಪ್ರೇರಣೆಯನ್ನೂ ನೀಡು. ಜ್ಞಾನ, ಸಂಪತ್ತು, ಐಶ್ವರ್ಯ, ಕೀರ್ತಿ, ಯಶಸ್ಸು ಇವೆಲ್ಲವೂ ಪ್ರಾಪ್ತಿಯಾಗಲು ಪೂರ್ವಜನ್ಮದ ಸುಕೃತ, ಈ ಜನ್ಮದ ಪುರುಷಾರ್ಥ ಹಾಗೂ ಭಗವಂತನ ದಯೆ ಇವೆಲ್ಲವೂ ಇರಬೇಕು. ಈ ಮೂರು ಇದ್ದರೆ ಮಾತ್ರ ನಾವು ಸಮ್ಮುಖದಲ್ಲಿಯೇ ಅರ್ಥಾತ್ ಜೀವಂತ ಇರುವಾಗಲೇ ಎಲ್ಲವನ್ನೂ ಪ್ರಾಪ್ತ ಮಾಡಿಕೊಳ್ಳಬಹುದು. ನಾವು ಸತ್ತ ನಂತರ ಮಕ್ಕಳು ಮತ್ತು ಸಂಬಂಧಿಕರು ಅನುಭವಿಸಿದರೆ ನಮಗೇನು ಪ್ರಯೋಜನ? ನಾವು ಜೀವಂತ ಇರುವಾಗಲೇ ಎಲ್ಲರೂ ಒಟ್ಟಿಗೇ ಎಲ್ಲವನ್ನೂ ಅನುಭವಿಸಬೇಕು.

ಅಂತರ್ಯಾಮಿಯಾದ ಪರಮಾತ್ಮನು ಇವರಿಗೆ ಯಾವ ಯಾವ ಕೆಲಸಗಳಲ್ಲಿ ಪ್ರೇರಣೆ ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಅಸ್ಮಾನ್ ಸು ತತ್ರ ಚೋದಯೇಂದ್ರ ರಾಯೇ ರಭಸ್ವತಃ । ತುವಿದ್ಯುಮ್ನ ಯಶಸ್ವತಃ ॥೬॥

ಪದಾರ್ಥ:- ಹೇ [ತುವಿದ್ಯುಮ್ನ] ಸರ್ವಜ್ಞ! ಸಕಲೈಶ್ವರ್ಯವಾನ್ [ಇಂದ್ರ] ಸರ್ವಾಂತರ್ಯಾಮಿಯಾದ ಪರಮಾತ್ಮ! ನೀನು [ರಭಸ್ವತಃ ಯಶಸ್ವತಃ] ಆಲಸ್ಯವನ್ನು ಪ್ರಮಾದವನ್ನು ಸರ್ವಥಾ ತ್ಯಾಗ ಮಾಡಿ ಶ್ರೇಷ್ಠಕರ್ಮಗಳನ್ನು ಮಾಡುತ್ತಾ ಸತ್ಕೀರ್ತಿಯನ್ನು ಪ್ರಾಪ್ತಮಾಡಿಕೊಂಡಂತಹ ಹಾಗೂ [ಅಸ್ಮಾನ್] ಪುರುಷಾರ್ಥ, ವಿದ್ಯೆ, ಧರ್ಮ ಮತ್ತು ಸರ್ವರ ಏಳಿಗೆಯಲ್ಲಿಯೇ ಸಮಸ್ತ ಮಾನವರ ಕಲ್ಯಾಣದಲ್ಲಿಯೇ ನಿರತರಾದ ನಮ್ಮನ್ನು [ತತ್ರ ರಾಯೇ] ಅತ್ಯಂತ ಶ್ರೇಷ್ಠ ಸಂಪತ್ತು, ಐಶ್ವರ್ಯ, ಯಶಸ್ಸು, ಕೀರ್ತಿ, ಜ್ಞಾನ ಹಾಗೂ ನಿನ್ನಲ್ಲಿ ಅಚಲವಾದ ಶ್ರದ್ಧೆ ಮತ್ತು ಭಕ್ತಿ ಇವುಗಳೊಂದಿಗೆ [ಸುಚೋದಯ] ಸಂಯುಕ್ತವನ್ನಾಗಿ ಮಾಡು. ಅರ್ಥಾತ್ ಇವೆಲ್ಲವೂ ನಿನ್ನ ಕೃಪೆಯಿಂದ ನಮ್ಮೆಲ್ಲರಿಗೆ ಪ್ರಾಪ್ತವಾಗಲಿ ಹಾಗೂ ಇವೆಲ್ಲವನ್ನೂ ಪ್ರಾಪ್ತಿ ಮಾಡಿಕೊಳ್ಳುವ ಸಾಮರ್ಥ್ಯವನ್ನೂ ಪ್ರೇರಣೆಯನ್ನೂ ನೀಡು.

ಭಾವಾರ್ಥ:- ಹೇ ಸರ್ವಜ್ಞ! ಸಕಲೈಶ್ವರ್ಯಪ್ರದ ಸರ್ವಾಂತರ್ಯಾಮಿಯಾದ ಪರಮಾತ್ಮ! ನೀನು ಯಾವುದೇ ರೀತಿಯ ಆಲಸ್ಯವನ್ನೂ ಪ್ರಮಾದವನ್ನೂ ಮಾಡದೇ ಶ್ರೇಷ್ಠ ಕರ್ಮಗಳಲ್ಲಿ ನಿರತರಾಗಿ ಸತ್ಕೀರ್ತಿಯನ್ನು ಪ್ರಾಪ್ತಮಾಡಿಕೊಂಡ ಹಾಗೂ ಪುರುಷಾರ್ಥ, ವಿದ್ಯೆ, ಧರ್ಮ ಮತ್ತು ಸಮಸ್ತ ಮಾನವರ ಏಳಿಗೆಯಲ್ಲಿಯೇ ನಿರತರಾದ ನಮ್ಮನ್ನು, ಸಕಲ ಶ್ರೇಷ್ಠ ಸಂಪತ್ತು, ಐಶ್ವರ್ಯ, ವಿದ್ಯೆ, ಕೀರ್ತಿ, ಯಶಸ್ಸು, ಬಲ ಹಾಗೂ ನಿನ್ನಲ್ಲಿ ಅಚಲವಾದ ಶ್ರದ್ಧೆ ಮತ್ತು ಭಕ್ತಿಯೊಂದಿಗೆ ಸಂಯುಕ್ತವನ್ನಾಗಿ ಮಾಡು. ಅವೆಲ್ಲವನ್ನೂ ಪ್ರಾಪ್ತ ಮಾಡಿಕೊಳ್ಳುವ ಸಾಮರ್ಥ್ಯವನ್ನೂ ಪ್ರೇರಣೆಯನ್ನೂ ನೀಡು.

ನಂತರ ಉಕ್ತ ಧನವು ಹೇಗಿದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಸಂ ಗೋಮದಿಂದ್ರ ವಾಜವದಸ್ಮೇ ಪೃಥು ಶ್ರವೋ ಬೃಹತ್ । ವಿಶ್ವಾಯುರ್ಧೇಹ್ಯಕ್ಷಿತಮ್ ॥೭॥

ಪದಾರ್ಥ:- ಹೇ [ಇಂದ್ರ] ಅನಂತಜ್ಞಾನವುಳ್ಳ, ಸಕಲೈಶ್ವರ್ಯಪ್ರದ ಹಾಗೂ ಸರ್ವರಕ್ಷಕನಾದ ಪರಮಾತ್ಮ! ನೀನು [ಅಸ್ಮೇ] ನಮ್ಮೆಲ್ಲರಿಗೆ [ಗೋಮತ್] ಅತ್ಯಂತ ಪ್ರಶಂಸನೀಯ ವಾಣಿಯುಳ್ಳ, ಹಾಗೂ ನಿನ್ನಲ್ಲಿ ಅಚಲವಾದ ಶ್ರದ್ಧೆ ವಿಶ್ವಾಸ ಮತ್ತು ಭಕ್ತಿಯಿಂದ ಕೂಡಿದ, [ವಾಜವತ್] ಪುಷ್ಕಳವಾದ ಅನ್ನ ಹಾಗೂ ಸಕಲ ಭೋಗ ಪದಾರ್ಥಗಳಿಂದ ಯುಕ್ತವಾದ [ಪೃಥು] ವಿವಿಧ ವಿದ್ಯೆಗಳಲ್ಲಿ ಪ್ರಾವೀಣ್ಯತೆ ಹಾಗೂ ಸಂಪೂರ್ಣಜ್ಞಾನದಿಂದ

ಯುಕ್ತವಾದ **[ಬೃಹತ್ ಅಕ್ಷಿತಮ್]** ಎಲ್ಲಕ್ಕಿಂತಲೂ ಹಿರಿದಾದ, ಎಂದಿಗೂ ಕ್ಷೀಣವಾಗದ ಹಾಗೂ ಸದಾ ವೃದ್ಧಿಯನ್ನು ಹೊಂದುವ **[ಶ್ರವಃ]** ಶ್ರೇಷ್ಠ ಸಂಪತ್ತು, ಐಶ್ವರ್ಯ, ಯಶಸ್ಸು ಮತ್ತು ಕೀರ್ತಿಗಳಿಂದ ಯುಕ್ತವಾದ ಮತ್ತು ಪೂರ್ಣ ಆರೋಗ್ಯದಿಂದ ಕೂಡಿದ ಹಾಗೂ ಯಾವುದೇ ರೀತಿಯ ಶಾರೀರಿಕ ಹಾಗೂ ಮಾನಸಿಕ ರೋಗಗಳಿಂದ ಸಂಪೂರ್ಣ ಮುಕ್ತವಾದ **[ವಿಶ್ವಾಯುಃ]** ಸಂಪೂರ್ಣ ಎಂದರೆ ನೂರು ವರ್ಷ ಅಥವಾ ಅದಕ್ಕಿಂತಲೂ ಹೆಚ್ಚು ಆಯುಷ್ಯವನ್ನು **[ಸಂಧೇಹಿ]** ಸರಿಯಾದ ರೀತಿಯಲ್ಲಿ ಎಂದರೆ ಯಾವುದೇ ರೀತಿಯ ಕುಂದುಕೊರತೆ, ಲೋಪ-ದೋಷ ಹಾಗೂ ಅಭಾವದಿಂದ ರಹಿತವಾಗಿ ಕೊಡು.

ಭಾವಾರ್ಥ:- ಹೇ ಸರ್ವಜ್ಞ, ಸಕಲೈಶ್ವರ್ಯಪ್ರದ, ಸರ್ವಶಿಕ್ಷಕ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮ! ನೀನು ಅತ್ಯಂತ ಕೃಪೆಯಿಂದ ನಮ್ಮೆಲ್ಲರಿಗೆ ಅತ್ಯಂತ ಪ್ರಶಂಸನೀಯ ಮಧುರವಾದ ಹಾಗೂ ಶ್ರೇಷ್ಠವಾದ ವಾಣಿಯಿಂದ ಯುಕ್ತವಾದ ಸದಾ ನಿನ್ನಲ್ಲಿ ಅಚಲವಾದ ಶ್ರದ್ಧೆ ಭಕ್ತಿ ಮತ್ತು ದೃಢವಾದ ವಿಶ್ವಾಸದಿಂದ ಯುಕ್ತವಾದ, ಹೇರಳವಾದ ಅನ್ನ ಹಾಗೂ ಸಕಲ ಭೋಗಗಳಿಂದ ಯುಕ್ತವಾದ, ನಾನಾವಿಧವಾದ ವಿದ್ಯೆಗಳಲ್ಲಿ ಪೂರ್ಣ ಪ್ರಾವೀಣ್ಯತೆಯನ್ನು ಹೊಂದಿದ ಹಾಗೂ ಸಂಪೂರ್ಣ ಸತ್ಯಜ್ಞಾನಗಳಿಂದ ಯುಕ್ತವಾದ, ಎಂದಿಗೂ ಕ್ಷೀಣವಾಗದ ಮತ್ತು ಸದಾ ವೃದ್ಧಿಯನ್ನು ಹೊಂದುವ ಶ್ರೇಷ್ಠ ಸಂಪತ್ತು, ಐಶ್ವರ್ಯ, ಯಶಸ್ಸು ಮತ್ತು ಕೀರ್ತಿಗಳಿಂದ ಯುಕ್ತವಾದ ಹಾಗೂ ಯಾವುದೇ ರೀತಿಯ ರೋಗ ರುಜಿನಗಳಿಲ್ಲದ ದೃಢವಾದ ಶರೀರವುಳ್ಳ ಹಾಗೂ ಯಾವುದೇ ರೀತಿಯ ಮಾನಸಿಕ ಕ್ಲೇಶ ಮತ್ತು ಅಶಾಂತಿಗಳಿಂದ ರಹಿತವಾದ ಸಂಪೂರ್ಣ ಆಯುಷ್ಯ ಎಂದರೆ ನೂರು ಅಥವಾ ಅದಕ್ಕಿಂತಲೂ ಹೆಚ್ಚು ಆಯುಷ್ಯವನ್ನು ಯಾವುದೇ ರೀತಿಯ ಕುಂದು ಕೊರತೆ, ಲೋಪ-ದೋಷ ಮತ್ತು ಅಭಾವಗಳಿಂದ ರಹಿತವಾಗಿ ನೀಡು. ನಮ್ಮೆಲ್ಲರಿಗೆ ಪ್ರಾಪ್ತವಾಗಲಿ.

ಮನುಷ್ಯನು ಮಧುರವಾದ ವಾಣಿ, ಸಂಪೂರ್ಣ ಸತ್ಯಜ್ಞಾನ, ವಿಫುಲವಾದ ಅನ್ನ ಹಾಗೂ ಸಮಸ್ತ ಭೋಗ, ಸದಾ ವೃದ್ಧಿಯನ್ನೇ ಹೊಂದುವ ಶ್ರೇಷ್ಠವಾದ ಐಶ್ವರ್ಯ, ಸಂಪತ್ತು, ಯಶಸ್ಸು ಮತ್ತು ಕೀರ್ತಿ, ದೃಢವಾದ ಶರೀರ, ಸಂಪೂರ್ಣ ಆರೋಗ್ಯ, ಮಾನಸಿಕ ಶಾಂತಿ ಮತ್ತು ನೆಮ್ಮದಿಯಿಂದ ಕೂಡಿದ ಸಂಪೂರ್ಣ ಆಯುಷ್ಯವನ್ನು ಪಡೆಯಲು ಅಪೇಕ್ಷಿಸಬೇಕು. ಇದಕ್ಕೋಸ್ಕರ ಸದಾ ಪುರುಷಾರ್ಥವನ್ನು ಮಾಡಬೇಕು. ಅರ್ಥಾತ್ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಪ್ರಾಪ್ತಿಗೋಸ್ಕರ ಪ್ರಯತ್ನಶೀಲನಾಗಬೇಕು.

ಮತ್ತೆ ಪೂರ್ವೋಕ್ತ ಧನವು ಹೇಗಿರಬೇಕು ಇಲ್ಲಿ ತಿಳಿಸಲಾಗಿದೆ.

ಅಸ್ಮೇ ಧೇಹಿ ಶ್ರವೋ ಬೃಹದ್ ದ್ಯುಮ್ನಂ ಸಹಸ್ರಸಾತಮಮ್ । ಇಂದ್ರ ತಾ ರಥಿನೀರಿಷಃ ॥೮॥

ಪದಾರ್ಥ:- ಹೇ **[ಇಂದ್ರ]** ಅತ್ಯಂತ ಬಲಶಾಲಿ ಹಾಗೂ ಸರ್ವಶಕ್ತನಾದ ಪರಮಾತ್ಮ! ನೀನು **[ಅಸ್ಮೇ]** ನಮ್ಮೆಲ್ಲರಿಗೆ **[ಸಹಸ್ರಸಾತಮಮ್]** ಅಪರಿಮಿತ ಸುಖಸೌಲಭ್ಯಗಳನ್ನು ಪ್ರಾಪ್ತಿ ಮಾಡಲು ಬೇಕಾದ ಸಾಧನಗಳ ಮೂಲವನ್ನು ಮತ್ತು **[ಬೃಹತ್]** ನಿತ್ಯವೃದ್ಧಿಯನ್ನು ಹೊಂದುವ ಹಾಗೂ ಎಂದಿಗೂ ನ್ಯೂನವಾಗದ **[ದ್ಯುಮ್ನಂ]** ಅತ್ಯಂತ ಉತ್ಕೃಷ್ಟವಾದ ಪ್ರಕಾಶಮಯ ಜ್ಞಾನವನ್ನು **[ಶ್ರವಃ]** ಶ್ರೇಷ್ಠ ಸಂಪತ್ತು, ಐಶ್ವರ್ಯ ಯಶಸ್ಸು ಹಾಗೂ ಕೀರ್ತಿಯನ್ನು **[ರಥಿನೀರಿಷಶ್ಚ]** ಅತ್ಯಂತ ಸುಖಪ್ರದವಾದ ಹಾಗೂ ತೀವ್ರಗತಿಯುಳ್ಳ ಯಾನಗಳನ್ನೂ ಹಾಗೂ ಎಲ್ಲಾ ವಿಧದಲ್ಲಿ ರಕ್ಷಿಸಲು ಸಮರ್ಥವಾದ ಸೈನ್ಯವನ್ನು **[ಧೇಹಿ]** ಸುವ್ಯವಸ್ಥಿತವಾದ ರೀತಿಯಲ್ಲಿ ಪ್ರದಾನ ಮಾಡು.

ಭಾವಾರ್ಥ:- ಅತ್ಯಂತ ಬಲಶಾಲಿ ಹಾಗೂ ಸರ್ವಶಕ್ತನಾದ ಪರಮಾತ್ಮ! ನೀನು ನಮ್ಮೆಲ್ಲರಿಗೆ ಅತ್ಯಂತ ಕೃಪೆಯಿಂದ, ಸಕಲ ಸುಖ ಸೌಲಭ್ಯಗಳನ್ನು ಪ್ರಾಪ್ತಿ ಮಾಡಿಕೊಳ್ಳಲು ಬೇಕಾದ ಸಾಧನಗಳನ್ನು ಹಾಗೂ ಅದರ ಮೂಲವನ್ನೂ, ನಿತ್ಯ ವೃದ್ಧಿಯನ್ನು ಹೊಂದುವ ಹಾಗೂ ಎಂದಿಗೂ ನ್ಯೂನವಾಗದ, ಅತ್ಯಂತ ಉತ್ಕೃಷ್ಟವಾದ ಜ್ಞಾನ

ಮತ್ತು ಶ್ರೇಷ್ಠ ಸಂಪತ್ತು ಸಕಲ ಐಶ್ವರ್ಯ, ಯಶಸ್ಸು ಮತ್ತು ಧವಲವಾದ ಕೀರ್ತಿ ಅರ್ಥಾತ್ ಕೆಟ್ಟ ಕರ್ಮಗಳಿಂದ ಕುಖ್ಯಾತರಾಗಿ ಅಪಯಶಸ್ಸನ್ನು ಪ್ರಾಪ್ತ ಮಾಡಿಕೊಳ್ಳದೇ, ಶ್ರೇಷ್ಠ ಕರ್ಮಗಳನ್ನು ಮಾಡಿ ವಿಖ್ಯಾತರಾಗಿ ಅತ್ಯಂತ ಕೀರ್ತಿಶಾಲಿಗಳಾಗುವಂತೆ ಮಾಡು. ಹಾಗೂ ಅತ್ಯಂತ ಸುಖಪ್ರದವಾದ ಮತ್ತು ತೀವ್ರಗತಿಯುಳ್ಳ ಯಾನ ಅರ್ಥಾತ್ ಭೂಯಾನ, ಜಲಯಾನ, ವಾಯುಯಾನ ಮತ್ತು ನಮ್ಮೆಲ್ಲರ ಸರ್ವವಿಧದಲ್ಲಿ ಸಂರಕ್ಷಣೆಯನ್ನು ಮಾಡಲು ಸಮರ್ಥವಾದ ಉತ್ಕೃಷ್ಟವಾದ ಸೈನ್ಯವನ್ನು ಪ್ರದಾನಮಾಡು. ಯಾವುದೇ ರಾಷ್ಟ್ರವು ಸುಸಮೃದ್ಧವಾಗ ಬೇಕಾದರೆ ಆ ರಾಷ್ಟ್ರದ ಪ್ರಜೆಗಳು ಸುಜ್ಞಾನಿಗಳೂ ಸುಸಂಸ್ಕೃತರೂ ವಿವೇಕಶಾಲಿಗಳೂ ರಾಷ್ಟ್ರಪ್ರೇಮವುಳ್ಳವರೂ ಆಗಬೇಕು. ಆ ರಾಷ್ಟ್ರದಲ್ಲಿ ಸಕಲ ಸುಖ ಸೌಲಭ್ಯಗಳು ಪ್ರಾಪ್ತಿ ಮಾಡಿಕೊಳ್ಳಬೇಕಾದ ಮತ್ತು ಎಂದಿಗೂ ನ್ಯೂನವಾಗದ ಹಾಗೂ ಸದಾ ವೃದ್ಧಿಯನ್ನು ಹೊಂದುವ ಸಂಪತ್ತು ಪ್ರಾಪ್ತಿಯಾಗಲು ಸಕಲ ಸಾಧನಗಳೂ ಮತ್ತು ಅವುಗಳ ಮೂಲ ಸಮೃದ್ಧವಾದ ಬೆಳೆ, ವಿಫುಲವಾದ ಖನಿಜ, ಎಂದಿಗೂ ಕುಂಠಿತವಾಗದ ವ್ಯಾಪಾರ-ವಾಣಿಜ್ಯ ಎಲ್ಲರಿಗೂ ಉದ್ಯೋಗ, ಕಾಲ ಕಾಲಕ್ಕೆ ಯೋಗ್ಯವಾದ ಮಳೆ, ವಿಪುಲವಾದ ವಿದ್ಯುಚ್ಛಕ್ತಿ, ಪರಮಾತ್ಮನ ಅನಂತ ಕೃಪೆ ಇವೆಲ್ಲವೂ ಪ್ರಾಪ್ತವಾಗಬೇಕು. ಅದರೊಂದಿಗೆ ರಾಷ್ಟ್ರವು ಸುವ್ಯವಸ್ಥಿತವಾಗಿ ನಡೆಯಲು ಸಮರ್ಥವಾದ ಸರಕಾರ, ಸುದೃಢವಾದ ಸೈನ್ಯ, ಇವೆಲ್ಲವನ್ನೂ ಸರ್ವಶಕ್ತನಾದ ಪರಮಾತ್ಮನು ಅತ್ಯಂತ ಕೃಪೆಯಿಂದ ಎಲ್ಲರಿಗೂ ಪ್ರಾಪ್ತವಾಗುವಂತೆ ಮಾಡಲಿ.

ಮತ್ತೆ ಈ ಇಂದ್ರನು ಹೇಗಿದ್ದಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ವಸೋರಿಂದ್ರಂ ವಸುಪತಿಂ ಗೀರ್ಭಿರ್ಗೃಣಂತ ಋಗ್ಮಿಯಮ್ । ಹೋಮ ಗಂತಾರಮೂತಯೇ ॥೯॥

ಪದಾರ್ಥ:- **[ಗೀರ್ಭಿಃ]** ವೇದಮಂತ್ರಗಳ ಮೂಲಕ ಹಾಗೂ ವೇದಮಂತ್ರಗಳಿಂದ ಸುಸಂಸ್ಕೃತವಾದ ವಾಣಿಯ ಮೂಲಕ **[ಗೃಣಂತಃ]** ಸ್ತುತಿಯನ್ನು ಮಾಡುತ್ತಾ ನಾವೆಲ್ಲರೂ **[ವಸುಪತಿಮ್]** ಅಗ್ನಿ, ಪೃಥ್ವಿ, ವಾಯು, ಅಂತರಿಕ್ಷ ಆದಿತ್ಯ, ದ್ಯುಲೋಕ, ಚಂದ್ರ ಮತ್ತು ನಕ್ಷತ್ರ ಈ ಅಷ್ಟ ವಸುಗಳ ಸೃಷ್ಟಿಕರ್ತ ಹಾಗೂ ಇವುಗಳ ಸ್ವಾಮಿ ಮತ್ತು ರಕ್ಷಕನಾದ **[ಋಗ್ಮಿಯಂ]** ಜೀವಮಾತ್ರರ ಕಲ್ಯಾಣಕ್ಕೋಸ್ಕರ ವೇದಜ್ಞಾನವನ್ನು ಪ್ರದಾನ ಮಾಡಿದ **[ಗಂತಾರಂ]** ಸರ್ವವ್ಯಾಪಕನಾದ ಕಾರಣ ಎಲ್ಲರನ್ನೂ ಹಾಗೂ ಎಲ್ಲವನ್ನೂ ಪ್ರಾಪ್ತ ಮಾಡಿಕೊಂಡವನಾದ **[ಇಂದ್ರಂ]** ಸರ್ವಧಾರಕನಾದ ಹಾಗೂ ಸರ್ವಾಧಾರನಾದ ಪರಮಾತ್ಮನನ್ನು **[ವಸೋಃ]** ಈ ಚರಾಚರ ಜಗತ್ತಿನಲ್ಲಿ ನಿವಾಸ ಮಾಡುವ ಅರ್ಥಾತ್ ಜೀವಿಸಲು ಹೇತು ಎಂದರೆ ಕಾರಣೀಭೂತವಾದ ಜ್ಞಾನ ಐಶ್ವರ್ಯ ಮತ್ತು ಸಕಲ ಭೋಗಗಳನ್ನು **[ಊತಯೇ]** ಪ್ರಾಪ್ತಿ ಮಾಡಿಕೊಳ್ಳಲು ಹಾಗೂ ರಕ್ಷಿಸಲು **[ಹೋಮ]** ಪ್ರಾರ್ಥಿಸುತ್ತೇವೆ, ಸ್ತುತಿಸುತ್ತೇವೆ, ಉಪಾಸಿಸುತ್ತೇವೆ.

ಭಾವಾರ್ಥ:- ನಾವೆಲ್ಲರೂ ವೇದಮಂತ್ರಗಳ ಮೂಲಕ ಹಾಗೂ ವೇದ ಮಂತ್ರಗಳಿಂದ ಸುಸಂಸ್ಕೃತವಾದ ವಾಣಿಯ ಮೂಲಕ ಸ್ತುತಿಯನ್ನು ಮಾಡುತ್ತಾ, ಅಗ್ನಿ, ಪೃಥ್ವಿ, ವಾಯು, ಅಂತರಿಕ್ಷ, ಆದಿತ್ಯ, ದ್ಯುಲೋಕ, ಚಂದ್ರ ಮತ್ತು ನಕ್ಷತ್ರ ಈ ಅಷ್ಟ ವಸುಗಳ ಸೃಷ್ಟಿಕರ್ತನಾದ ಹಾಗೂ ಅವುಗಳ ಸಂರಕ್ಷಕನಾದ, ಜೀವಮಾತ್ರರ ಕಲ್ಯಾಣಕ್ಕೋಸ್ಕರ ವೇದಜ್ಞಾನವನ್ನು ಪ್ರದಾನ ಮಾಡಿದ, ಸರ್ವ ವ್ಯಾಪಕನಾದ ಕಾರಣ ಎಲ್ಲರನ್ನೂ ಹಾಗೂ ಎಲ್ಲವನ್ನೂ ಪ್ರಾಪ್ತ ಮಾಡಿಕೊಂಡವನಾದ ಸರ್ವಧಾರಕ ಹಾಗೂ ಸರ್ವಾಧಾರನಾದ ಪರಮಾತ್ಮನನ್ನು ಈ ಪ್ರಪಂಚದಲ್ಲಿ ಈ ಚರಾಚರ ಜಗತ್ತಿನಲ್ಲಿ ಜೀವಿಸಲು ಕಾರಣೀಭೂತವಾದ ಜ್ಞಾನ ಐಶ್ವರ್ಯ ಹಾಗೂ ಸಕಲ ಭೋಗಗಳನ್ನು ಪ್ರಾಪ್ತ ಮಾಡಿಕೊಳ್ಳಲು ಹಾಗೂ ಸಂರಕ್ಷಿಸುವುದಕ್ಕೋಸ್ಕರ ಭಗವಂತನನ್ನು ಪ್ರಾರ್ಥಿಸುತ್ತೇವೆ, ಸ್ತುತಿಸುತ್ತೇವೆ, ಉಪಾಸಿಸುತ್ತೇವೆ.

ಪಂಚಭೂತಗಳು - ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ ಇವುಗಳು ಈ ಚರಾಚರ ಜಗತ್ತಿನ ಸೃಷ್ಟಿಗೆ ಕಾರಣೀಭೂತವಾಗಿವೆ. ಅರ್ಥಾತ್ ಈ ಪಂಚಭೂತಗಳ ಸಂಯೋಗದಿಂದ ಎಲ್ಲವೂ ಸೃಷ್ಟಿಸಲ್ಪಡುತ್ತವೆ. ಇವುಗಳಲ್ಲಿ ಹಾಗೂ ಇವುಗಳಿಂದ ನಿರ್ಮಿತವಾದ ಈ ಜಗತ್ತಿನಲ್ಲಿ ಎಲ್ಲವೂ ಎಲ್ಲರೂ ನಿವಾಸಿಸುತ್ತಾರೆ. ಆದುದರಿಂದ ಇವುಗಳನ್ನು ವಸು ಎಂದು ಹೇಳುತ್ತಾರೆ. ಅದೇ ರೀತಿ ಸೂರ್ಯ ಚಂದ್ರ ನಕ್ಷತ್ರಾದಿಗಳ ಪ್ರಕಾಶದಿಂದ ಹಾಗೂ ಶಕ್ತಿಯಿಂದ

ಜೀವಮಾತ್ರರು ಜೀವಿಸಲು, ವೃದ್ಧಿಯನ್ನು ಹೊಂದಲು ಸಾಧ್ಯವಾಗುತ್ತದೆ. ಇವುಗಳಿಲ್ಲದಿದ್ದರೆ ಯಾರೂ ಜೀವಿಸಲು ಸಾಧ್ಯವಿಲ್ಲ. ಆದುದರಿಂದ ಇವುಗಳನ್ನು ವಸು ಎಂದು ಹೇಳುತ್ತಾರೆ. ಅಂತರಿಕ್ಷದಲ್ಲಿ ಮತ್ತು ದ್ಯುಲೋಕದಲ್ಲಿ ಜೀವಿಗಳು ಜೀವಿಸಲು ಸಾಧ್ಯವಾದಂತಹ ಎಷ್ಟೋ ಲೋಕ ಲೋಕಾಂತರಗಳಿವೆ. ನಮ್ಮ ಸೌರ ಮಂಡಲದಿಂದ ಹೊರಗೆ ಹೋದರೆ ಇಂತಹ ಎಷ್ಟೋ ಸೌರಮಂಡಲಗಳಿವೆ. ಇವೆಲ್ಲವೂ ಅಂತರಿಕ್ಷ ಮತ್ತು ದ್ಯುಲೋಕದಲ್ಲಿ ನಿವಾಸಿಸುತ್ತವೆ. ಆದುದರಿಂದ ಇವುಗಳನ್ನೂ ಕೂಡಾ ವಸು ಎಂದು ಹೇಳುತ್ತಾರೆ. ಪರಮಾತ್ಮನು ಸಕಲ ಲೋಕ ಲೋಕಾಂತರಗಳ ಸೃಷ್ಟಿಕರ್ತನಾದ ಕಾರಣ ಹಾಗೂ ಎಲ್ಲವೂ ಅವನ ಗರ್ಭದಲ್ಲಿಯೇ ಇರುವ ಕಾರಣ ಮತ್ತು ಸರ್ವಾಧಾರ ಹಾಗೂ ಸರ್ವರಕ್ಷಕನಾದ ಕಾರಣ ಅವನು ವಸುಪತಿಯಾಗಿದ್ದಾನೆ.

ಈ ಮಂತ್ರದಲ್ಲಿ ಅತ್ಯಂತ ಮನನ ಯೋಗ್ಯವಾದ ಹಾಗೂ ಚಿಂತನೀಯವಾದ ವಿಷಯವೇನೆಂದರೆ ಮಾನವನ ಸೃಷ್ಟಿ ಮೂರು ಉದ್ದೇಶದಿಂದ ಆಗಿದೆ. ೧. ಭಗವಂತನ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳಲು, ೨. ಕರ್ಮಗಳನ್ನು ಮಾಡಿ ಅದಕ್ಕನುಗುಣವಾಗಿ ಫಲವನ್ನು ಅನುಭವಿಸಲು, ೩. ಭಗವಂತನ ಸೃಷ್ಟಿಯನ್ನು ಸಂರಕ್ಷಿಸಲು. ಯಾರು ಭಗವಂತನ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ಶ್ರೇಷ್ಠಕರ್ಮಗಳನ್ನು ಮಾಡುತ್ತಾ ಸೇವಾಭಾವದಿಂದ ಹಾಗೂ ಸಮರ್ಪಣಾ ಭಾವದಿಂದ ಭಗವಂತನ ಸೃಷ್ಟಿಯನ್ನು ಸಂರಕ್ಷಿಸುತ್ತಾರೋ ಭಗವಂತನು ಅವರನ್ನು ಸಂರಕ್ಷಿಸುತ್ತಾನೆ ಹಾಗೂ ಭಗವಂತನು ಅವರಿಗೆ ಮಾತ್ರ ಪ್ರಾಪ್ತನಾಗುತ್ತಾನೆ.

ಯಾವ ಪ್ರಯೋಜನಕ್ಕಾಗಿ ಪರಮೇಶ್ವರನ ಪ್ರಾರ್ಥನೆಯನ್ನು ಮಾಡಬೇಕು ಎಂಬುದನ್ನು ಇಲ್ಲಿ ಹೇಳಲಾಗಿದೆ.

ಸುತೇಸುತೇ ನ್ಯೋಕಸೇ ಬೃಹದ್ ಬೃಹತ ಏದರಿಃ । ಇಂದ್ರಾಯ ಶೂಷಮರ್ಚತಿ ॥೧೦॥

ಪದಾರ್ಥ:- [ಅರಿಃ ಇತ್] ಅನ್ಯಾಯದಿಂದ ಸುಖವನ್ನು ಪ್ರಾಪ್ತ ಮಾಡಿಕೊಳ್ಳುವವನಾದರೂ ಕೂಡಾ ಯಾವನು, ಯಾವ ಮನುಷ್ಯನು, [ಸುತೇ ಸುತೇ] ಉತ್ಪನ್ನವಾದ ಪ್ರತಿಯೊಂದು ಪದಾರ್ಥಗಳ ಅರ್ಥಾತ್ ಸೃಷ್ಟಿಯಲ್ಲಿರುವ ಸಕಲ ವಸ್ತುಗಳ ಪ್ರತಿಯೊಂದು ಪದಾರ್ಥಗಳ [ನ್ಯೋಕಸೇ] ಸ್ಥಾನವನ್ನು ನಿಶ್ಚಿತವನ್ನಾಗಿ ಮಾಡುವ ಅರ್ಥಾತ್ ಪ್ರತಿಯೊಂದು ಪದಾರ್ಥವನ್ನು ವ್ಯವಸ್ಥಿತವಾಗಿ ನಿಶ್ಚಿತವಾದ ಸ್ಥಾನದಲ್ಲೇ ಇಡುವ [ಬೃಹತೇ] ಸರ್ವೋತ್ಕೃಷ್ಟ ಗುಣಗಳ ಮೂಲಕ ಅತ್ಯಂತ ಮಹಿಮೆಯುಳ್ಳವನಾದ ಹಾಗೂ ಸರ್ವವ್ಯಾಪಕನಾದ [ಇಂದ್ರಾಯ] ಪರಮಾತ್ಮನಿಗೆ [ಬೃಹತ್] ಹಿರಿದಾದ [ಶೂಷಂ] ತನ್ನ ಸುಖವನ್ನೂ, ಬಲವನ್ನೂ [ಅರ್ಚತಿ] ಅರ್ಪಿಸುತ್ತಾನೋ ಅವನು ಅತ್ಯಂತ ಭಾಗ್ಯಶಾಲಿಯಾಗುತ್ತಾನೆ.

ಭಾವಾರ್ಥ:- ಅನ್ಯಾಯದಿಂದ, ದುರ್ಮಾರ್ಗದಿಂದ, ದುಷ್ಕರ್ಮಗಳ ಮೂಲಕ ಸುಖವನ್ನು ಪಡೆಯುವವನೂ ಕೂಡಾ, ಸುಖವನ್ನು ಅನುಭವಿಸುವವನಾದರೂ ಕೂಡಾ, ಯಾವ ಮನುಷ್ಯನು, ಈ ಸೃಷ್ಟಿಯಲ್ಲಿ ಉತ್ಪನ್ನವಾದ ಪದಾರ್ಥಗಳ ಸ್ಥಾನವನ್ನು ನಿಶ್ಚಿತವನ್ನಾಗಿ ಮಾಡುವ ಅರ್ಥಾತ್ ಸೂರ್ಯ ಚಂದ್ರ ನಕ್ಷತ್ರ, ಗ್ರಹೋಪಗ್ರಹಗಳು, ನದಿ, ಸಮುದ್ರ, ಪರ್ವತ, ಕಾಡು, ಬೆಟ್ಟ, ವೃಕ್ಷ, ವನಸ್ಪತಿಗಳು, ಗಿಡಮೂಲಿಕೆಗಳು, ಪ್ರಾಣಿಗಳು, ಜಲಚರಗಳು, ಪಕ್ಷಿಗಳು, ಮನುಷ್ಯನು, ಅವುಗಳಲ್ಲಿರುವ ಸಮಸ್ತ ಅವಯವಗಳು ಋತುಗಳು, ಋತುಗಳಿಗನುಗುಣವಾಗಿ ಫಲಪುಷ್ಪ, ತರಕಾರಿ, ಅನ್ನ, ದವಸಧಾನ್ಯಗಳು ಎಲ್ಲವನ್ನೂ ವ್ಯವಸ್ಥಿತವನ್ನಾಗಿ ಮಾಡುವ, ತನ್ನ ಸರ್ವೋತ್ಕೃಷ್ಟ ಗುಣಗಳ ಮೂಲಕ ಅತ್ಯಂತ ಮಹಿಮೆಯುಳ್ಳವನೂ ಸರ್ವವ್ಯಾಪಕನೂ ಆದ ಆ ಪರಮಾತ್ಮನಿಗೆ, ತಾನು ಅನ್ಯಾಯದಿಂದ ಅಧರ್ಮಾಚರಣೆಯಿಂದ ಪ್ರಾಪ್ತ ಮಾಡಿಕೊಂಡ ಸಮಸ್ತ ಸುಖವನ್ನು ಮತ್ತು ಅನ್ಯಾಯವನ್ನೂ, ಅಧರ್ಮಾಚರಣೆಯನ್ನೂ ಮಾಡಲು ಪ್ರೇರಣೆಯನ್ನು ಮಾಡಿದ ಮಾನಸಿಕ ಬಲವನ್ನೂ, ದುರ್ಬುದ್ಧಿಯನ್ನೂ ಹಾಗೂ ಅನ್ಯಾಯ ಮತ್ತು ಅಧರ್ಮಾಚರಣೆಯನ್ನು ಮಾಡಲು ಉಪಯೋಗಿಸುವ ಸಮಸ್ತ ಬಲವನ್ನೂ ಸಂಪೂರ್ಣವಾಗಿ ಅರ್ಪಿಸುತ್ತಾನೋ ಅವನು ಭಾಗ್ಯಶಾಲಿಯಾಗುತ್ತಾನೆ.

ಇಂದು ಪ್ರತಿಯೊಬ್ಬನೂ ಕೂಡ ಭಗವಂತನನ್ನು ಒಲಿಸಲು ಧನ-ಕನಕಾದಿಗಳನ್ನು ಅರ್ಪಿಸುತ್ತಾನೆ. ದೊಡ್ಡ ದೇವಾಲಯಗಳನ್ನು, ಗುಡಿಗೋಪುರಗಳನ್ನು ಕಟ್ಟಿ ಚಿನ್ನ ಬೆಳ್ಳಿಯ ಪಲ್ಲಕ್ಕಿಯನ್ನೂ ಯಾ ರಥವನ್ನೂ ಅರ್ಪಿಸುತ್ತಾನೆ. ಎಲ್ಲರ ಮನಸ್ಸಿನಲ್ಲಿಯೂ ಕೂಡ ಭಗವಂತನಿಗೆ ಐಶ್ವರ್ಯವನ್ನು ಅರ್ಪಿಸಿದ ಕೂಡಲೇ ಸಮಸ್ತ ಪಾಪಗಳು ಪರಿಹಾರವಾಗುತ್ತವೆ ಎಂಬ ಭಾವನೆ ಮನಸ್ಸಿನಲ್ಲಿ ಬೇರೂರಿದೆ. ಪ್ರಸ್ತುತಃ ಐಶ್ವರ್ಯವನ್ನೂ ಅರ್ಪಿಸಿದ ಕೂಡಲೇ ಪಾಪಗಳ ಪರಿಹಾರವಾಗುವುದಿಲ್ಲ. ಅನ್ಯಾಯದಿಂದ ಪ್ರಾಪ್ತಮಾಡಿಕೊಂಡ ಸುಖದೊಂದಿಗೆ ಅನ್ಯಾಯ ಮತ್ತು ಅಧರ್ಮಾಚರಣೆಯನ್ನು ಮಾಡುವ ಪ್ರವೃತ್ತಿಯನ್ನೂ ಕೂಡ ಭಗವಂತನಿಗೆ ಅರ್ಪಿಸಬೇಕು. ಮನಸಾ, ವಾಚಾ ಕರ್ಮಣಾ ಪರಿಶುದ್ಧನಾಗಿ ಶ್ರೇಷ್ಠ ಕರ್ಮಗಳಲ್ಲಿ, ಧರ್ಮಾಚಾರಣೆಯಲ್ಲಿ, ನ್ಯಾಯಮಾರ್ಗದಲ್ಲಿ ಪ್ರವೃತ್ತನಾದಾಗ ಮೊದಲು ಅನ್ಯಾಯ ಮಾರ್ಗದಿಂದ ಸುಖವನ್ನು ಪಡೆಯುತ್ತಾನಾದರೂ ಕೂಡಾ ಅದನ್ನು ಸರ್ವಥಾ, ಮತ್ತು ಸರ್ವದಾ ತ್ಯಾಗ ಮಾಡುವುದರಿಂದ ಭಾಗ್ಯಶಾಲಿಯಾಗಿದ್ದಾನೆ.

ಈ ಮಂತ್ರದಲ್ಲಿ ಭಗವಂತನಿಗೆ ನ್ಯೋಕಸೇ ಎಂಬ ಪದವನ್ನು ಅರ್ಥಾತ್ ಸರ್ವನಿಯಾಮಕನು ಎಂದು ಹೇಳಿದೆ. ಪರಮಾತ್ಮನು ಪ್ರತಿಯೊಬ್ಬನನ್ನು ಮನುಷ್ಯನನ್ನಾಗಿ ಸೃಷ್ಟಿಸಿ ಮಾನವನಾಗಿ ಬಾಳು ಎಂದು ಹೇಳಿದ್ದಾನೆ. ಅದನ್ನು ತೊರೆದು ಅವನು ದಾನವನಾಗಿ ಬಾಳಿದರೆ ಭಗವಂತನ ಸೃಷ್ಟಿಯ ನಾಶವಾಗುತ್ತದೆ. ಇದನ್ನು ಭಗವಂತನು ಎಂದಿಗೂ ಸಹಿಸುವುದಿಲ್ಲ, ಕ್ಷಮಿಸುವುದಿಲ್ಲ. ಮಾನವನ ಸೃಷ್ಟಿ, ಭಗವಂತನ ಸೃಷ್ಟಿಯ ಸಂರಕ್ಷಣೆಗೋಸ್ಕರವಾಗಿದೆ ಅರ್ಥಾತ್ ಭಗವಂತನು ಮಾನವನನ್ನು ಸೃಷ್ಟಿಸಿದುದು ಅವನ ಸೃಷ್ಟಿಯನ್ನು ಸಂರಕ್ಷಿಸುವುದಕ್ಕೋಸ್ಕರ ಮಾತ್ರ, ವಿನಾಶವನ್ನು ಎಂದಿಗೂ ಸಹಿಸುವುದಿಲ್ಲ. ಮಾನವನು ವಿನಾಶವನ್ನು ಮಾಡಿದರೆ ಭಗವಂತನು ಲಯವನ್ನು ಮಾಡುತ್ತಾನೆ.

ನವಮ ಸೂಕ್ತದಲ್ಲಿ ಇಂದ್ರಶಬ್ದ ಮೂಲಕ ಉತ್ತಮವಾದ ಐಶ್ವರ್ಯ, ಶ್ರೇಷ್ಠಜ್ಞಾನ ಹಾಗೂ ಪುರುಷಾರ್ಥದಿಂದ ಸರ್ವಸುಖಪ್ರಾಪ್ತಿ ಮಾಡಲು ಬೋಧಿಸಲಾಗಿದೆ. ಈ ಸೂಕ್ತದೊಂದಿಗೆ ಪೂರ್ವೋಕ್ತ ಅಷ್ಟಮ ಸೂಕ್ತದ ಸಂಗತಿಕರಣ ಇದೆ ಎಂಬುದನ್ನು ಎಲ್ಲರೂ ಗಮನಿಸಬೇಕು.

ಒಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೧೦

ಮಂತ್ರಸಂಖ್ಯೆ ೧೨। ಋಷಿಃ - ಮಧುಚ್ಛಂದಾ ವೈಶ್ವಾಮಿತ್ರಃ । ದೇವತಾ - ಇಂದ್ರಃ । ಛಂದಃ - ೧-೩, ೫, ೬ ವಿರಾಡ್ ಅನುಷ್ಟುಪ್, ೪ ಭುರಿಗುಷ್ಣಿಕ್, ೬, ೯-೧೨ ಅನುಷ್ಟುಪ್, ೮ ನಿಚೃದನುಷ್ಟುಪ್ । ಸ್ವರಃ - ೧-೩, ೫-೧೨ ಗಾಂಧಾರಃ, ೪ ವೃಷಭಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಯಾವ ಯಾವ ಪುರುಷರು ಯಾವ ಯಾವ ಪ್ರಕಾರದಿಂದ ಇಂದ್ರ ಸಂಜ್ಞಕ ಪರಮೇಶ್ವರನನ್ನು ಪೂಜಿಸುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ಗಾಯಂತಿ ತ್ವಾ ಗಾಯತ್ರಿಣೋಽರ್ಚಂತ್ಯರ್ಕಮರ್ಕಿಣಃ ।
ಬ್ರಹ್ಮಾಣಸ್ತ್ವಾ ಶತಕ್ರತ ಉದ್ ವಂಶಮಿವ ಯೇಮಿರೇ ॥೧॥

ಪದಾರ್ಥ:- ಹೇ [ಶತಕ್ರತೋ] ಅನಂತಜ್ಞಾನವುಳ್ಳವನಾದ ಹಾಗೂ ಅನಂತಕರ್ಮಶೀಲನಾದ ಪರಮಾತ್ಮ! [ಬ್ರಹ್ಮಾಣಃ] ವೇದಗಳ ಅಧ್ಯಯನವನ್ನು ಮಾಡಿ ತದನುಸಾರ ಕರ್ಮಗಳನ್ನು ಹಾಗೂ ಆಚರಣೆಯನ್ನು ಮಾಡುವ ಬ್ರಾಹ್ಮಣರು ಯಾವ ರೀತಿ [ವಂಶಂ ಇವ] ತಮ್ಮ ವಂಶವನ್ನು ತಮ್ಮ ಪುತ್ರ ಪುತ್ರಿಯರನ್ನು ಶ್ರೇಷ್ಠ ಉಪದೇಶ, ಸದ್ಗುಣ ಮತ್ತು ಅತ್ಯುತ್ತಮ ಜ್ಞಾನದ ಮೂಲಕ [ಉದ್ಯೇಮಿರೇ] ಸುಸಂಸ್ಕೃತರನ್ನಾಗಿಯೂ ಸುಜ್ಞಾನಿಗಳನ್ನಾಗಿಯೂ ಮಾಡಿ ಉದ್ಯಮಶೀಲರನ್ನಾಗಿ ಮಾಡುತ್ತಾರೋ ಅದೇ ರೀತಿ [ಗಾಯತ್ರಿಣಃ] ಗಾಯತ್ರ್ಯಾದಿ ಛಂದಗಳ ಮೂಲಕ

ವೇದಮಂತ್ರಗಳನ್ನು ಪಠನ ಮಾಡಿ ಅನುಷ್ಠಾನ ಮಾಡುವ ವಿದ್ವಾಂಸರು ಶ್ರೋತ್ರಿಯರು **[ತ್ವಾ]** ಸೃಷ್ಟಿಕರ್ತನಾದ ನಿನ್ನನ್ನು **[ಗಾಯಂತಿ]** ಸಾಮವೇದ ಮಂತ್ರಗಳ ಮೂಲಕ ಸಾಮಗಾನವನ್ನು ಮಾಡುತ್ತಾ ಸ್ತುತಿಸುತ್ತಾ **[ಅರ್ಕಿಣಃ]** ಮಂತ್ರದ ಸಾಧನೆಯನ್ನು ಮಾಡಿ, ಜ್ಞಾನವನ್ನೂ ಸಿದ್ಧಿಯನ್ನೂ ಪ್ರಾಪ್ತ ಮಾಡಿಕೊಳ್ಳುವ ಋಷಿಮುನಿಗಳು ಬ್ರಹ್ಮವೇತ್ತರು **[ಅರ್ಕಂ]** ಜೀವಮಾತ್ರರಿಂದ ಸ್ತುತಿಸಲ್ಪಡುವ ಉಪಾಸಿಸಲ್ಪಡುವ, ಏಕೈಕ ಸರ್ವೋಪಾಸ್ಯನಾದ **[ತ್ವಾಂ]** ನಿನ್ನನ್ನು **[ಅರ್ಚಂತಿ]** ಪ್ರತಿದಿನ ಸರ್ವಾರ್ಥ ಸಿದ್ಧಿಗಾಗಿ ಉಪಾಸಿಸುತ್ತಾರೆ.

ಭಾವಾರ್ಥ:- ಹೇ ಅನಂತ ಜ್ಞಾನವುಳ್ಳ ಹಾಗೂ ಅನಂತ ಕರ್ಮಶೀಲನಾದ ಪರಮಾತ್ಮ! ಯಾವ ರೀತಿ ವೇದಗಳಿಂದ ಸಂಪೂರ್ಣ ಜ್ಞಾನವನ್ನು ಪ್ರಾಪ್ತಮಾಡಿಕೊಂಡು, ತದನುಸಾರ ಕರ್ಮವನ್ನೂ ಆಚರಣೆಯನ್ನು ಮಾಡುವ ಶ್ರೇಷ್ಠ ಬ್ರಾಹ್ಮಣರು, ತಮ್ಮ ವಂಶವನ್ನು ತಮ್ಮ ಪುತ್ರ ಪುತ್ರಿಯರನ್ನು, ಶ್ರೇಷ್ಠ ಉಪದೇಶ, ಸದ್ಗುಣ ಹಾಗೂ ಶ್ರೇಷ್ಠ ಜ್ಞಾನದ ಮೂಲಕ ಸುಜ್ಞಾನಿಗಳನ್ನಾಗಿಯೂ, ಸುಸಂಸ್ಕೃತರನ್ನಾಗಿಯೂ ಮಾಡಿ ಶ್ರೇಷ್ಠ ಕರ್ಮಗಳಲ್ಲಿ ನಿರತರನ್ನಾಗಿಯೂ ಉದ್ಯಮಶೀಲರನ್ನಾಗಿಯೂ, ಪರೋಪಕಾರಿಗಳನ್ನಾಗಿಯೂ ಮಾಡುತ್ತಾರೋ, ಅದೇ ರೀತಿ ಗಾಯತ್ರ್ಯಾದಿ ಛಂದಗಳ ಮೂಲಕ ವೇದಮಂತ್ರಗಳ ಪಠನ ಮಾಡಿ, ಯಜ್ಞಾನುಷ್ಠಾನ ಮಾಡುವ ಶ್ರೋತ್ರಿಯ ಬ್ರಾಹ್ಮಣರು, ಸೃಷ್ಟಿಕರ್ತನಾದ ನಿನ್ನನ್ನು ಸಾಮವೇದದ ಮಂತ್ರಗಳ ಮೂಲಕ ಸಾಮಗಾನವನ್ನು ಮಾಡಿ ಸ್ತುತಿಸುತ್ತಾರೆ.

ಮಂತ್ರದ ಸಾಧನೆಯನ್ನು ಮಾಡಿ ಜ್ಞಾನವನ್ನೂ, ಸಿದ್ಧಿಯನ್ನೂ, ಪ್ರಾಪ್ತಮಾಡಿಕೊಳ್ಳುವ ಋಷಿಮುನಿಗಳು, ಬ್ರಹ್ಮವೇತ್ತರು ಜೀವಮಾತ್ರರಿಂದ ಸ್ತುತಿಸಲ್ಪಡುವ ಉಪಾಸಿಸಲ್ಪಡುವ ಏಕೈಕ ಸರ್ವೋಪಾಸ್ಯನಾದ ನಿನ್ನನ್ನು ಸರ್ವಾರ್ಥ ಸಿದ್ಧಿ ಪ್ರಾಪ್ತಿಗೋಸ್ಕರ ಉಪಾಸಿಸುತ್ತಾರೆ.

ಪರಮಾತ್ಮನು ಅನಂತಜ್ಞಾನವುಳ್ಳವನೂ, ಅನಂತಕರ್ಮಶೀಲನೂ ಆದ ಕಾರಣ ಅವನ ಉಪಾಸನೆಯನ್ನು ಮಾಡುವ ನಾವೆಲ್ಲರೂ ವೇದಗಳ ಮೂಲಕ ಸಕಲಜ್ಞಾನವನ್ನೂ ತದನುಸಾರ ಕರ್ಮ ಮತ್ತು ಆಚರಣೆಯನ್ನೂ ಮಾಡುತ್ತಾ ನಮ್ಮ ಪುತ್ರಪುತ್ರಿಯರನ್ನೂ ಸುಜ್ಞಾನಿಗಳನ್ನಾಗಿಯೂ, ಸುಸಂಸ್ಕೃತರನ್ನಾಗಿಯೂ ಮಾಡಿ ಉದ್ಯಮಶೀಲರನ್ನಾಗಿಯೂ ಶ್ರೇಷ್ಠ ಕರ್ಮಗಳಲ್ಲಿ ನಿರತರನ್ನಾಗಿಯೂ ಪರೋಪಕಾರಿಗಳನ್ನಾಗಿಯೂ ಮಾಡಬೇಕು. ಆ ರೀತಿಯಲ್ಲಿ ಮಾಡಿದರೆ ಮಾತ್ರ ಪರಮಾತ್ಮನ ಉಪಾಸನೆಯನ್ನು ಮಾಡುವುದು ಸಾರ್ಥಕವಾಗುತ್ತದೆ. ಸದಾ ಸರ್ವೋಪಾಸ್ಯನಾದ ಏಕೈಕ ಪರಮಾತ್ಮನನ್ನು ಉಪಾಸಿಸಬೇಕು. ನಿರಾಕಾರ ಸರ್ವೇಶ್ವರನಾದ ಪರಮಾತ್ಮನ ಹೊರತು ಬೇರೆ ಯಾರನ್ನೂ ಉಪಾಸಿಸಬಾರದು.

ಅರ್ಕ ಶಬ್ದದ ಅರ್ಥ ಮಹರ್ಷಿ ಯಾಸ್ಕರ ಮತಾನುಸಾರ ಪರಮಾತ್ಮ, ಮಂತ್ರ, ಅನ್ನ, ವೃಕ್ಷ ಅಥವಾ ವನಸ್ಪತಿ ಎಂದಾಗುತ್ತದೆ. ಅದಕ್ಕನುಗುಣವಾಗಿ ಅರ್ಚನೆ ಶಬ್ದದ ಅರ್ಥ ಅರ್ಚನೆ - ಪರಮಾತ್ಮನ ಉಪಾಸನೆ, ಅರ್ಚನೆ - ಸ್ತುತಿ ಹಾಗೂ ಜ್ಞಾನದ ಪ್ರಾಪ್ತಿ, ಅರ್ಚನೆ - ಪ್ರಾಣಿಮಾತ್ರರಿಗೆ ಅನ್ನ-ಆಹಾರಾದಿಗಳನ್ನು ಕೊಡುವುದು, ಅರ್ಚನೆ - ಉತ್ತಮವಾದ ರೀತಿಯಲ್ಲಿ ವೃಕ್ಷ ಮತ್ತು ವನಸ್ಪತಿಯ ಪೂರ್ಣ ಪ್ರಯೋಜನವನ್ನು ಪಡೆದು ಸದುಪಯೋಗವನ್ನು ಮಾಡುವುದು, ಅರ್ಕ ಶಬ್ದದ ಅರ್ಥ ಸೂರ್ಯ ಎಂದು ಕೂಡ ಆಗುತ್ತದೆ. ಅದಕ್ಕನುಗುಣವಾಗಿ ಅರ್ಚನೆ - ಪ್ರಕಾಶವನ್ನೂ, ಶಕ್ತಿಯನ್ನೂ ಪ್ರಾಪ್ತಮಾಡಿಕೊಳ್ಳುವುದು. ಅಜ್ಞಾನವಶಾತ್ ಭಗವಂತನ ಮೂರ್ತಿಯನ್ನು ವಿಗ್ರಹವನ್ನು ರಚಿಸಿ ನೈವೇದ್ಯವನ್ನು ಕೊಡುತ್ತಾರೆ. ಯಥಾರ್ಥ ರೂಪದಲ್ಲಿ ಭಗವಂತನಿಂದ ಸೃಷ್ಟಿಸಲ್ಪಟ್ಟ ಪ್ರಾಣಿಮಾತ್ರರಿಗೆ ಅನ್ನ ಜಲ ಆಹಾರಾದಿಗಳನ್ನು ಕೊಡುವುದೇ ಯಥಾರ್ಥರೂಪದಲ್ಲಿ ಭಗವಂತನಿಗೆ ಮಾಡುವ ನೈವೇದ್ಯವಾಗಿದೆ.

ನಂತರ ಈಶ್ವರನನ್ನು ಹೇಗೆ ತಿಳಿಯಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಯತ್ ಸಾನೋಃ ಸಾನುಮಾರುಹದ್ ಭೂರ್ಯಸ್ಪಷ್ಟ ಕರ್ತ್ವಮ್ ।

ತದಿಂದ್ರೋ ಅರ್ಥಂ ಚೇತತಿ ಯೂಥೇನ ವೃಷ್ಣಿರೇಜತಿ ॥೨॥

ಪದಾರ್ಥ:- ಯಾವ ರೀತಿ **[ಯೂಥೇನ]** ಮಂದಮಾರುತದೊಂದಿಗೆ **[ವೃಷ್ಣಿಃ]** ಮಳೆಯನ್ನು ಸುರಿಸುವ ಸೂರ್ಯನು ತನ್ನ ಕಿರಣ ಸಮೂಹಗಳ ಮೂಲಕ, ಪ್ರಕಾಶವನ್ನು ಬೀರುತ್ತಾ **[ಸಾನೋಃ]** ಪರ್ವತದ ಒಂದು ಶಿಖರದಿಂದ **[ಸಾನುಂ]** ಇನ್ನೊಂದು ಶಿಖರವನ್ನು **[ಭೂರಿ]** ಬಹಳವಾಗಿ **[ಆರುಹತ್]** ಪ್ರಾಪ್ತವಾಗಿ **[ಅಸ್ಪಷ್ಟ]** ಸ್ಪರ್ಶವನ್ನು ಮಾಡುತ್ತಾ ಪ್ರಕಾಶವನ್ನು ಬೀರುತ್ತಾ **[ಏಜತಿ]** ತನ್ನ ಕಕ್ಷೆಯಲ್ಲಿದ್ದುಕೊಂಡು ನಿರ್ದಿಷ್ಟಗತಿಯಲ್ಲಿ ತಿರುಗುತ್ತಾ ಇತರ ಗ್ರಹೋಪಗ್ರಹಗಳನ್ನು ಪ್ರಕಾಶಿಸುತ್ತಾ ಹಾಗೂ ಚಲಿಸುವಂತೆ ಮಾಡುತ್ತವೆಯೋ ಅದೇ ರೀತಿ ಯಾವ ಮನುಷ್ಯನು **[ಯೂಥೇನ]** ಸುಖಸೌಲಭ್ಯಗಳ ಪ್ರಾಪ್ತಿಗಾಗಿ ಹಾಗೂ ಪುರುಷಾರ್ಥ ಸಾಧನೆಯನ್ನು ಮಾಡುವುದಕ್ಕೋಸ್ಕರ **[ಸಾನೋಃ ಸಾನುಂ]** ಒಂದು ಕರ್ಮವನ್ನು, ಒಂದು ಕೆಲಸವನ್ನು ಸಂಪೂರ್ಣಮಾಡಿ ಇನ್ನೊಂದು ಕರ್ಮವನ್ನು **[ಕರ್ತ್ವಂ]** ಮಾಡುವುದಕ್ಕೋಸ್ಕರ **[ಭೂರಿ]** ವಿಶೇಷವಾಗಿ **[ಆರುಹತ್]** ಆರಂಭವನ್ನು ಮಾಡುತ್ತಾ **[ಅಸ್ಪಷ್ಟ]** ಸ್ಪರ್ಶಮಾಡುತ್ತಾ ಅರ್ಥಾತ್ ಕರ್ಮಗಳನ್ನು ಮಾಡುತ್ತಾ ಪುರುಷಾರ್ಥವನ್ನು ಮಾಡುತ್ತಾ **[ಏಜತಿ]** ಎಲ್ಲರಿಗೂ ಸದಾ ಪ್ರಾಪ್ತವಾಗುತ್ತಾನೋ ಅಂತಹ ಪುರುಷಾರ್ಥಿಯಾದ ಮಾನವನಿಗೆ **[ಇಂದ್ರಃ]** ಸಕಲೈಶ್ವರ್ಯಪ್ರದನಾದ ಪರಮಾತ್ಮನು ಆಯಾಯ ಕರ್ಮಗಳನ್ನು ಮಾಡುವುದಕ್ಕೋಸ್ಕರ **[ಸಾನೋಃ]** ಅನುಕ್ರಮವಾಗಿ **[ಅರ್ಥಂ]** ಪ್ರಯೋಜನ ವಿಭಾಗದೊಂದಿಗೆ ಐಶ್ವರ್ಯವನ್ನೂ, ಸಾಮರ್ಥ್ಯವನ್ನೂ **[ಭೂರಿ]** ವಿಶೇಷವಾಗಿ ಅತ್ಯಧಿಕವಾಗಿ ಉತ್ತಮವಾದ ರೀತಿಯಲ್ಲಿ **[ಚೇತತಿ]** ಪ್ರಾಪ್ತವಾಗಲು ಜ್ಞಾನವನ್ನೂ, ಎಲ್ಲಾ ರೀತಿಯಲ್ಲಿ ಸಹಾಯವನ್ನೂ ಒದಗಿಸುತ್ತಾನೆ.

ಭಾವಾರ್ಥ:- ಯಾವ ರೀತಿ ಮಂದಮಾರುತದೊಂದಿಗೆ ಮಳೆಯನ್ನು ಸುರಿಸುವ ಸೂರ್ಯನು ತನ್ನ ಕಿರಣಗಳ ಮೂಲಕ ಪ್ರಕಾಶವನ್ನು ಬೀರುತ್ತಾ ಪರ್ವತದ ಒಂದು ಶಿಖರದಿಂದ ಇನ್ನೊಂದು ಶಿಖರವನ್ನು ಪ್ರಾಪ್ತ ಮಾಡುತ್ತಾ ಅರ್ಥಾತ್ ಬೆಳಗಿಸುತ್ತಾ ತನ್ನ ಕಕ್ಷೆಯಲ್ಲಿದ್ದುಕೊಂಡೇ ನಿರ್ದಿಷ್ಟವಾದ ಗತಿಯಲ್ಲಿ ಚಲಿಸುತ್ತಾ ಇತರ ಗ್ರಹೋಪಗ್ರಹಗಳನ್ನು ಪ್ರಕಾಶಿಸಿ ಅವುಗಳು ಸರಿಯಾದ ರೀತಿಯಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಚಲಿಸುವಂತೆ ಮಾಡುತ್ತಾನೆಯೋ ಅದೇ ರೀತಿ,

ಯಾವ ಮನುಷ್ಯನು ಸಕಲ ಸೌಲಭ್ಯಗಳ ಪ್ರಾಪ್ತಿಗಾಗಿ ಮತ್ತು ಪುರುಷಾರ್ಥ ಸಾಧನೆಯನ್ನು ಮಾಡುವುದಕ್ಕೋಸ್ಕರ ಒಂದು ಕರ್ಮವನ್ನು, ಒಂದು ಕೆಲಸವನ್ನು ಮಾಡಿ ಇನ್ನೊಂದು ಕೆಲಸವನ್ನು ಆರಂಭಿಸಿ ಅದನ್ನು ಕೂಡಾ ಮಾಡುತ್ತಾ ಎಲ್ಲರಿಗೂ ಪ್ರಾಪ್ತನಾಗುತ್ತಾನೆಯೋ, ಭಗವಂತನು ಅಂತಹ ಪುರುಷಾರ್ಥಿ ಹಾಗೂ ಉದ್ಯಮಶೀಲನಾದ ಮಾನವನಿಗೆ, ಸಮಸ್ತ ಕರ್ಮಗಳನ್ನು ಮಾಡಲು ಐಶ್ವರ್ಯದೊಂದಿಗೆ ಸಾಮರ್ಥ್ಯವನ್ನೂ, ಜ್ಞಾನವನ್ನೂ ಎಲ್ಲಾ ರೀತಿಯಲ್ಲಿ ಸಹಾಯವನ್ನೂ ಒದಗಿಸುತ್ತಾನೆ. ಹಾಗೂ ಅನುಕ್ರಮವಾಗಿ ಎಲ್ಲವೂ ಪ್ರಾಪ್ತವಾಗುವಂತೆ ಮಾಡುತ್ತಾನೆ.

ಯಾವ ಕಾರ್ಯವನ್ನೂ ಮಾಡಲು ಕೂಡಾ ಸಮಯದ ಅಭಾವ, ಶಕ್ತಿಯ ಸಾಮರ್ಥ್ಯದ ಅಭಾವ ಹಾಗೂ ಸಂಪತ್ತು ಮತ್ತು ಸಾಧನಗಳ ಅಭಾವ ಎಂಬ ನೆಪವನ್ನೊಡ್ಡಿ ಮಾನವರು ಜೀವನದ ಅತ್ಯಮೂಲ್ಯವಾದ ಸಮಯವನ್ನು ಹಾಳು ಮಾಡುತ್ತಾ ಶ್ರೇಷ್ಠವಾದ ಮಾನವ ಜೀವನವನ್ನು ನಿರರ್ಥಕವಾಗಿಯೂ, ನಿಷ್ಪ್ರಯೋಜಕವನ್ನಾಗಿಯೂ ಮಾಡುತ್ತಾರೆ. ಅಂತಹ ಪ್ರಮಾದಿ ಮತ್ತು ಆಲಸಿಗಳಿಗೆ ಭಗವಂತನು ಎಂದಿಗೂ ಸಹಾಯವನ್ನು ಮಾಡುವುದಿಲ್ಲ. ಯಾರು ಸತತವಾಗಿ ಪುರುಷಾರ್ಥಿ ಹಾಗೂ ಉದ್ಯಮಶೀಲರಾಗಿರುತ್ತಾರೋ, ಅವರಿಗೆ ಪ್ರತಿಯೊಂದು ಕರ್ಮವನ್ನು ಮಾಡಲು ಸಾಮರ್ಥ್ಯವನ್ನೂ, ಜ್ಞಾನವನ್ನೂ, ಶಕ್ತಿಯನ್ನೂ ಸಹಾಯವನ್ನೂ ಒದಗಿಸುತ್ತಾನೆ. ಅನುಕ್ರಮವಾಗಿ ಎಲ್ಲವೂ ಪ್ರಾಪ್ತವಾಗುವಂತೆ ಮಾಡುತ್ತಾನೆ.

ಯಾರೂ ಕೂಡಾ ಏಕಕಾಲದಲ್ಲಿ ಎಲ್ಲಾ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ. ಎಲ್ಲವನ್ನೂ ಅನುಕ್ರಮವಾಗಿಯೇ ಮಾಡಬೇಕು. ಆದುದರಿಂದ ಸಮಯದ ಅಭಾವವಿದೆ ಎಂದು ನೆಪವನ್ನೊಡ್ಡುವ ಬದಲು ಸಮಯದ ವಿಭಾಜನವನ್ನು ವ್ಯವಸ್ಥಿತವಾದ ರೀತಿಯಲ್ಲಿ ಮಾಡಿ ಸತತ ಪುರುಷಾರ್ಥಿಯಾಗಿಯೂ ಉದ್ಯಮಶೀಲನಾಗಿಯೂ ಇರಬೇಕು. ಅದರೊಂದಿಗೆ ಎಲ್ಲವನ್ನೂ ಭಗವಂತನಿಗೆ ಅರ್ಪಿಸುತ್ತಾ ಸಮರ್ಪಣಾ ಭಾವದಿಂದ ಶ್ರೇಷ್ಠಕರ್ಮಗಳನ್ನು ಮಾಡುತ್ತಾ ಇರಬೇಕು. ಈ ರೀತಿಯಲ್ಲಿ ಮಾಡಿದರೆ ಯಾವ ರೀತಿಯ ಅಭಾವವೂ ಬಾಧಕವಾಗುವುದಿಲ್ಲ.

ಮುಂದಿನ ಮಂತ್ರದಲ್ಲಿ ಇಂದ್ರ ಶಬ್ದದಿಂದ ಪರಮೇಶ್ವರ ಮತ್ತು ಸೂರ್ಯಲೋಕದ ಪ್ರಕಾಶವನ್ನು ಬೀರಲಾಗಿದೆ.

ಯುಕ್ಷ್ವಾ ಹಿ ಕೇಶಿನಾ ಹರೀ ವೃಷಣಾ ಕಕ್ಷ್ಯಪ್ರಾ ।
ಅಥಾ ನ ಇಂದ್ರ ಸೋಮಪಾ ಗಿರಾಮುಪಶ್ರುತಿಂ ಚರ ॥೩॥

ಪದಾರ್ಥ:- ಹೇ **[ಸೋಮಪಾಃ]** ಸಮಸ್ತ ಶ್ರೇಷ್ಠ ಪದಾರ್ಥಗಳ ರಕ್ಷಣೆಯನ್ನು ಮಾಡುವ **[ಇಂದ್ರಃ]** ಸರ್ವರಕ್ಷಕನಾದ ಪರಮಾತ್ಮ! ಯಾವ ರೀತಿ ನಿನ್ನಿಂದ ಸೃಷ್ಟಿಸಲ್ಪಟ್ಟ ಸೂರ್ಯನು ತನ್ನ **[ಕೇಶಿನಾ]** ಪ್ರಕಾಶಯುಕ್ತ ಅರ್ಥಾತ್ ತನ್ನ ಪ್ರಕಾಶದಿಂದ ಹಾಗೂ ಆಕರ್ಷಣ ಶಕ್ತಿಯಿಂದ **[ವೃಷಣಾ]** ವೃಷ್ಟಿಯ ನಿಮಿತ್ತ ಜಲವನ್ನು ಆಕರ್ಷಿಸುತ್ತಾನೆಯೋ ಮತ್ತು **[ಕಕ್ಷ್ಯಪ್ರಾ]** ತಮ್ಮ ತಮ್ಮ ಕಕ್ಷೆಯೊಳಗೆ ಪರಿಧಿಯೊಳಗೆ ಉತ್ಪನ್ನವಾದ ಸಮಸ್ತ ಪದಾರ್ಥಗಳ ಪೋಷಣೆಯನ್ನು ಮಾಡುತ್ತಾನೆಯೋ ಹಾಗೂ **[ಹರೀ]** ಹರಣ ಮತ್ತು ಆಕರ್ಷಣಗುಣಗಳುಳ್ಳ ಕಿರಣಗಳನ್ನು ಅಂಧಕಾರವನ್ನು ಹರಣ ಮಾಡಿ ಪ್ರಕಾಶವನ್ನು ಬೀರಲು ಹಾಗೂ ಸಮಸ್ತ ಪದಾರ್ಥಗಳನ್ನು ತನ್ನೆಡೆಗೆ ಆಕರ್ಷಿಸಲು ಯೋಜಿಸುತ್ತಾನೆಯೋ ಅದೇ ರೀತಿ **[ನಃ]** ನಮ್ಮೆಲ್ಲರನ್ನು ಸಮಸ್ತ ವಿದ್ಯೆ ಹಾಗೂ ಸಂಪೂರ್ಣ ಜ್ಞಾನದ ಪ್ರಕಾಶವನ್ನು ಪ್ರಾಪ್ತಮಾಡಿಕೊಳ್ಳಲು ಮತ್ತು ಅಜ್ಞಾನದ ತಿಮಿರವನ್ನು ನಷ್ಟ ಮಾಡಲು ನಿನ್ನ ದಿವ್ಯಜ್ಞಾನವಾದ ವೇದದೊಂದಿಗೆ **[ಯುಕ್ಷ್ವ]** ಯುಕ್ತವನ್ನಾಗಿ, ಸಂಲಗ್ನವನ್ನಾಗಿ ಮಾಡು. **[ಅಥ]** ತದನಂತರ ನಿನ್ನ ಸ್ತುತಿಯಲ್ಲಿ ಪ್ರವೃತ್ತವಾದ **[ನಃ ಗಿರಾಂ]** ಭಕ್ತಿಯಿಂದ ಕೂಡಿದ ನಮ್ಮೆಲ್ಲರ ವಾಣಿಯನ್ನು **[ಉಪಶ್ರುತಿಂ]** ಸರಿಯಾದ ರೀತಿಯಲ್ಲಿ ಆಲಿಸಿಕೊಂಡು **[ಚರ]** ನಮ್ಮಲ್ಲಿರುವ ಸಮಸ್ತ ದುರ್ಗುಣ, ದುರ್ವ್ಯಸನ, ದಾರಿದ್ರ್ಯ, ಕಷ್ಟಕ್ಲೇಶಗಳನ್ನು ನಷ್ಟಮಾಡಿ, ಸುಖ,ಶಾಂತಿ,ನೆಮ್ಮದಿ ಮತ್ತು ಆನಂದದ ಪ್ರಾಪ್ತಿಯಾಗುವಂತೆ ಮಾಡು.

ಭಾವಾರ್ಥ:- ಹೇ ಸಮಸ್ತ ಶ್ರೇಷ್ಠ ಪದಾರ್ಥಗಳ ರಕ್ಷಣೆಯನ್ನು ಮಾಡುವ ಸರ್ವರಕ್ಷಕನಾದ ಪರಮಾತ್ಮ! ಯಾವ ರೀತಿ ನಿನ್ನಿಂದ ಸೃಷ್ಟಿಸಲ್ಪಟ್ಟ ಸೂರ್ಯನು ತನ್ನ ಪ್ರಕಾಶದಿಂದ ಮತ್ತು ಆಕರ್ಷಣಾಶಕ್ತಿಯಿಂದ ವೃಷ್ಟಿಯ ನಿಮಿತ್ತ ಸಮುದ್ರದ ಜಲವನ್ನು ಆಕರ್ಷಿಸುತ್ತಾನೆಯೋ, ತಮ್ಮ ತಮ್ಮ ಪರಿಧಿಯೊಳಗೆ ಅರ್ಥಾತ್ ತಮ್ಮ ತಮ್ಮ ಸ್ಥಾನದಲ್ಲಿ ಉತ್ಪನ್ನವಾದ ಸಮಸ್ತ ಪದಾರ್ಥಗಳನ್ನು ಪೋಷಿಸುತ್ತಾನೆಯೋ, ಹರಣ ಮತ್ತು ಆಕರ್ಷಣ ಶಕ್ತಿಯುಳ್ಳ ಕಿರಣಗಳ ಮೂಲಕ ಅಂಧಕಾರವನ್ನು ಹರಣ ಮಾಡಿ ಪ್ರಕಾಶವನ್ನು ಬೀರಲು ಮತ್ತು ಸಮಸ್ತ ಪದಾರ್ಥಗಳನ್ನು ತನ್ನೆಡೆಗೆ ಆಕರ್ಷಿಸಲು ಯೋಜಿಸುತ್ತಾನೆಯೋ, ಅದೇ ರೀತಿ ನಮ್ಮೆಲ್ಲರನ್ನು ಸಮಸ್ತ ವಿದ್ಯೆ ಹಾಗೂ ಸಂಪೂರ್ಣ ಜ್ಞಾನದ ಪ್ರಕಾಶವನ್ನು ಪ್ರಾಪ್ತಮಾಡಿಕೊಳ್ಳಲು ಮತ್ತು ನಮ್ಮಲ್ಲಿರುವ ಸಮಸ್ತ ಅಜ್ಞಾನಾಂಧಕಾರವನ್ನು, ದುರಿತಗಳನ್ನು ನಷ್ಟಮಾಡಲು ನಿನ್ನ ದಿವ್ಯಜ್ಞಾನವಾದ ವೇದದೊಂದಿಗೆ ಸಂಲಗ್ನವನ್ನಾಗಿ ಮಾಡು. ತನ್ಮೂಲಕ ನಾವೆಲ್ಲರೂ ಸತ್ಯದ ಮಾರ್ಗದಲ್ಲಿ ಧರ್ಮದ ಮಾರ್ಗದಲ್ಲಿ ಜ್ಞಾನ ಮತ್ತು ಪ್ರಕಾಶದ ಮಾರ್ಗದಲ್ಲಿ ನಡೆಯುವಂತಾಗಲಿ.

ತದನಂತರ ನಿನ್ನ ಸ್ತುತಿಯಲ್ಲಿ ಪ್ರವೃತ್ತವಾದ, ಭಕ್ತಿಯಿಂದ ಕೂಡಿದ ನಮ್ಮೆಲ್ಲರಿಗೆ ವಾಣಿಯನ್ನು ಸರಿಯಾದ ರೀತಿಯಲ್ಲಿ ಆಲಿಸಿಕೊಂಡು ನಮ್ಮಲ್ಲಿರುವ ಸಮಸ್ತ ದುರ್ಗುಣ, ದುರ್ವ್ಯಸನ, ದಾರಿದ್ರ್ಯ,ಕಷ್ಟಕ್ಲೇಶಗಳನ್ನು ನಷ್ಟಮಾಡಿ ಸುಖ, ಶಾಂತಿ ಮತ್ತು ಆನಂದದ ಪ್ರಾಪ್ತಿಯಾಗುವಂತೆ ಮಾಡು. ನಮ್ಮಲ್ಲಿರುವ ದುರ್ಗುಣ, ದುರ್ವ್ಯಸನಗಳನ್ನು ತ್ಯಾಗ ಮಾಡಿದರೆ ಮಾತ್ರ ನಮ್ಮ ಸ್ತುತಿ - ಅರ್ಚನೆ - ಆರಾಧನೆ - ಉಪಾಸನೆ ಎಲ್ಲವೂ ಸಾರ್ಥಕವಾಗುತ್ತದೆ. ಇಲ್ಲದಿದ್ದರೆ ಎಲ್ಲವೂ ನಿರರ್ಥಕ ಮತ್ತು ನಿಷ್ಪ್ರಯೋಜಕವಾಗುತ್ತದೆ. ಮಾನವ ಜನ್ಮವೇ ವ್ಯರ್ಥವಾಗುತ್ತದೆ.

ಮಾನವರು ಪರಮಾತ್ಮನಿಂದ ಏನೇನನ್ನು ಯಾಚಿಸಬೇಕು ಎಂಬುದನ್ನು ಇಲ್ಲಿ ತಿಳಿಸಿದೆ.

ಏಹಿ ಸ್ತೋಮಾँ ಅಭಿ ಸ್ವರಾ-ಭಿ ಗೃಣೀಹ್ಯಾ ರುವ ।
ಬ್ರಹ್ಮ ಚ ನೋ ವಸೋ ಸಚೇ-ಂದ್ರ ಯಜ್ಞಂ ಚ ವರ್ಧಯ ॥೪॥

ಪದಾರ್ಥ:- ಹೇ [ಇಂದ್ರ] ಸರ್ವೋಪಾಸ್ಯ ಸಕಲೈಶ್ವರ್ಯಪ್ರದಾತಾ ಪರಮಾತ್ಮ! ಯಾವ ರೀತಿ ಸಕಲ ವಿದ್ಯಾ ಪಾರಂಗತನಾದ ವಿದ್ವಾಂಸನು **[ಸ್ತೋಮಾನ್]** ನಿನ್ನ ಸ್ತುತಿಗಳ, ನಿನ್ನ ಗುಣಗಳ ಅರ್ಥವನ್ನು **[ಅಭಿಸ್ವರ]** ಯಥಾವತ್ ಸ್ವೀಕಾರ ಮಾಡಿ ಅರ್ಥಾತ್ ನಿನ್ನ ಗುಣಗಳನ್ನು ತನ್ನ ಜೀವನದಲ್ಲಿ ಅಳವಡಿಸಿ ಇತರರಿಗೂ ತಿಳಿಯಪಡಿಸುತ್ತಾನೆಯೋ ಅದೇ ರೀತಿ **[ನಃ]** ನಮ್ಮೆಲ್ಲರನ್ನು **[ಆ ಇಹಿ]** ಸರ್ವವಿಧದಲ್ಲಿ ನಿನ್ನ ಗುಣಗ್ರಾಹಿಗಳಾಗುವಂತೆ ಮಾಡು. ನಾವೆಲ್ಲರೂ ನಿನ್ನ ಶ್ರೇಷ್ಠಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವಂತಾಗಲಿ.

ಹೇ **[ವಸೋ]** ಸಮಸ್ತ ಲೋಕಲೋಕಾಂತರಗಳು, ಜೀವಮಾತ್ರರು, ಸಮಸ್ತ ಪದಾರ್ಥಗಳು ಯಾರಲ್ಲಿ ಅಡಕವಾಗಿವೆಯೋ ಹಾಗೂ ಯಾರು ಈ ಸಂಪೂರ್ಣ ಚರಾಚರ ಜಗತ್ತಿನ ಪ್ರತಿಯೊಂದು ಕಣ ಕಣದಲ್ಲಿಯೂ ನಿವಾಸ ಮಾಡುತ್ತಾರೋ, ಅಂತಹ ಸರ್ವವ್ಯಾಪಕ ಮತ್ತು ಸರ್ವಾಂತರ್ಯಾಮಿಯಾದ ಪರಮಾತ್ಮ! ನೀನು ಕೃಪೆಯಿರಿಸಿ **[ಆ ರುವ]** ಸರ್ವವಿಧದಲ್ಲಿ ಸರ್ವದಿಕ್ಕಿನಿಂದಲೂ ನಿನ್ನ ಜ್ಞಾನದ ಪ್ರಕಾಶವನ್ನು ಬೀರು. **[ನಃ]** ನಮ್ಮೆಲ್ಲರ **[ಸ್ತೋಮಾನ್]** ಸ್ತುತಿ ಸಮೂಹಗಳನ್ನು ನಿನ್ನ ಗುಣಗಳ ವರ್ಣನೆಯನ್ನು **[ಸಚಾ]** ನಮ್ಮೆಲ್ಲರ ಜ್ಞಾನ ಮತ್ತು ಕರ್ಮಗಳೊಂದಿಗೆ ಸಂಯುಕ್ತವನ್ನಾಗಿ ಮಾಡಿ **[ಅಭಿಸ್ವರ]** ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ತದನುಸಾರ ನಾವು ಆಚರಣೆ ಮಾಡುವಂತೆ ಮಾಡು. **[ಬ್ರಹ್ಮ ಚ]** ವೇದಜ್ಞಾನದ ವೇದಮಂತ್ರಗಳ ಅರ್ಥದ **[ಅಭಿ ಗೃಣೀಹಿ]** ಪ್ರಕಾಶವನ್ನು ಮಾಡು. ನಿನ್ನ ಕೃಪೆಯಿಂದ ದುರೂಹವಾದ ವೇದಮಂತ್ರಗಳ ಅರ್ಥವು ಸ್ಫುಟವಾಗಲಿ. ನಾವೆಲ್ಲರೂ ಆ ಜ್ಞಾನವನ್ನು ಅರಿತುಕೊಂಡು ಆನಂದಿಸುವಂತಾಗಲಿ. **[ಯಜ್ಞಂ ಚ]** ಮತ್ತು ನಾವೆಲ್ಲರೂ ಮಾಡುವ ದೇವಪೂಜೆ, ಸಂಗತಿಕರಣ, ದಾನ, ಅನುಷ್ಠಾನ ಹಾಗೂ ಸಮಸ್ತ ಶ್ರೇಷ್ಠ ಕರ್ಮಗಳಲ್ಲಿ ಪ್ರವೃತ್ತಿ ಇವೆಲ್ಲವನ್ನೂ ಪ್ರತಿನಿತ್ಯ **[ವರ್ಧಂತಿ]** ವರ್ಧಿಸುವಂತೆ ಮಾಡು. ಯಾವುದೇ ರೀತಿಯಲ್ಲಿ, ಯಾವುದೇ ರೀತಿಯ ಬಾಧಕಗಳಿಂದ ಎಂದೆಂದಿಗೂ ಕುಂಠಿತವಾಗದಂತೆ ಮಾಡು. ನಾವೆಲ್ಲರೂ ಇವೆಲ್ಲವನ್ನು ಅನುದಿನವೂ ಅಬಾಧಿತವಾಗಿ ಮಾಡುವಂತಾಗಲಿ.

ಭಾವಾರ್ಥ:- ಹೇ ಸರ್ವೋಪಾಸ್ಯ ಸಕಲೈಶ್ವರ್ಯ ಪ್ರದಾತಾ ಪರಮಾತ್ಮ! ಯಾವ ರೀತಿ ಸಕಲ ವಿದ್ಯಾಪಾರಂಗತನಾದ ವಿದ್ವಾಂಸನು ನಿನ್ನ ಸ್ತುತಿಯನ್ನು ಮಾಡುತ್ತಾ ನಿನ್ನ ಗುಣಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು, ಇತರರಿಗೂ ತಿಳಿಯಪಡಿಸುತ್ತಾನೋ ಅದೇ ರೀತಿ ನಾವೆಲ್ಲರೂ ಮಾಡಿದ ನಿನ್ನ ಸ್ತುತಿಯ ಮೂಲಕ ನಿನ್ನ ಗುಣಗಳು ನಮ್ಮೆಲ್ಲರ ಜೀವನದಲ್ಲಿ ಅಳವಡಿಸಲ್ಪಡಲಿ. ಅರ್ಥಾತ್ ನಿನ್ನ ಗುಣಗ್ರಾಹಿಗಳಾದ ನಾವು ನಿನ್ನ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ತದನುಸಾರ ಆಚರಣೆಯನ್ನು ಮಾಡುವಂತಾಗಲಿ.

ಹೇ ಸರ್ವವ್ಯಾಪಕ, ಸರ್ವಾಂತರ್ಯಾಮಿ, ಸರ್ವೇಶ್ವರನಾದ ಪರಮಾತ್ಮ! ಕರುಣಾಳುವಾದ ನೀನು ನಮ್ಮೆಲ್ಲರ ಮೇಲೆ ಕೃಪೆದೋರಿ ಎಲ್ಲಾ ವಿಧದಲ್ಲಿ ಎಲ್ಲಾ ದಿಕ್ಕಿನಿಂದಲೂ ನಿನ್ನ ಜ್ಞಾನದ ಪ್ರಕಾಶವನ್ನು ಬೀರು. ಎಂದಿಗೂ ಯಾವುದೇ ರೀತಿಯಲ್ಲಿ ನಮ್ಮೆಲ್ಲರ ಮೇಲೆ ಅಜ್ಞಾನದ ಛಾಯೆಯೂ ಕೂಡ ಬೀಳದಿರಲಿ. ನಾವೆಲ್ಲರೂ ಮಾಡಿದ ಸ್ತುತಿ ಸಮೂಹಗಳನ್ನು ನಿನ್ನ ಸಮಸ್ತ ಗುಣಗಳನ್ನು ನಾವು ಪ್ರಾಪ್ತ ಮಾಡಿಕೊಳ್ಳುವ ಜ್ಞಾನ ಮತ್ತು ನಾವು ಮಾಡುವ ಸಮಸ್ತ ಕರ್ಮಗಳೊಂದಿಗೆ ಸಂಯುಕ್ತವನ್ನಾಗಿ ಮಾಡು. ನಿನ್ನ ಕೃಪೆಯಿಂದ ಸಮಸ್ತ ವೇದಮಂತ್ರಗಳ ಸಂಪೂರ್ಣ ಸತ್ಯ ಮತ್ತು ವಾಸ್ತವಿಕ ಅರ್ಥವು ನಮ್ಮೆಲ್ಲರಿಗೆ ಸ್ಫುಟವಾಗಲಿ. ನಾವೆಲ್ಲರೂ ಆ ಜ್ಞಾನವನ್ನು ಅರಿತುಕೊಂಡು ಆನಂದಿಸುವಂತಾಗಲಿ. ನಾವೆಲ್ಲರೂ ಮಾಡುವಂತಹ ಯಜ್ಞ, ಅರ್ಥಾತ್ ದೇವಪೂಜಾ, ಸಂಗತಿಕರಣ, ದಾನ, ಅನುಷ್ಠಾನ, ಸತ್ಯವ್ರತ, ಸತ್ಯಸಂಕಲ್ಪ ಹಾಗೂ ಸಮಸ್ತ ಶ್ರೇಷ್ಠ ಕರ್ಮಗಳಲ್ಲಿ ಪ್ರವೃತ್ತಿ ಇವೆಲ್ಲವನ್ನೂ ಪ್ರತಿನಿತ್ಯ ವರ್ಧಿಸುವಂತೆ ಮಾಡು. ಯಾವುದೇ ರೀತಿಯ ಬಾಧೆಗಳು, ತೊಂದರೆಗಳು, ಎಡರು-ತೊಡರುಗಳು, ಅಭಾವಗಳು ನಾವು ಮಾಡುವ ಯಜ್ಞಕ್ಕೆ ಬಾಧಕವಾಗದಿರಲಿ. ನಾವೆಲ್ಲರೂ ಸಮಗ್ರಯಜ್ಞವನ್ನು ಅನುದಿನವೂ ಅಬಾಧಿತವಾಗಿ ಮಾಡುವಂತಾಗಲಿ. ಹಿಂಸೆ, ವೈರ, ದ್ವೇಷಾಸೂಯೆಗಳು ಅಹಂಕಾರ ಮತ್ತು ಸ್ವಾರ್ಥ, ಲೋಭ, ಮೋಹ ಮತ್ತು ಕ್ರೋಧ ಇವುಗಳೆಂದಿಗೂ ನಮ್ಮೆಲ್ಲರಲ್ಲಿ ಕನಸಿನಲ್ಲಿಯೂ ಮನಸ್ಸಿಗೆ ತಟ್ಟದಿರಲಿ.

ಪುನಃ ಈಶ್ವರನು ಹೇಗಿದ್ದಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಉಕ್ಥಮಿಂದ್ರಾಯ ಶಂಸ್ಯಂ ವರ್ಧನಂ ಪುರುನಿಷ್ಷಿಧೇ ।
ಶಕ್ರೋ ಯಥಾ ಸುತೇಷು ಣೋ ರಾರಣತ್ ಸಖ್ಯೇಷು ಚ ॥೫॥

ಪದಾರ್ಥ:- [ಯಥಾ] ಯಾವ ರೀತಿ ಯಾವುದೇ ಮನುಷ್ಯನು **[ಸುತೇಷು]** ತನ್ನ ಮಕ್ಕಳಿಗೆ ಮತ್ತು **[ಸಖ್ಯೇಷು]** ಮಿತ್ರರಿಗೆ ಉಪಕಾರಿಯಾಗಿರುತ್ತಾನೆಯೋ, ಸದಾ ಹಿತವನ್ನೇ ಬಯಸುತ್ತಾ ಅವರಲ್ಲಿ ಯೋಗ್ಯ ಕರ್ತೃತ್ವ ಶಕ್ತಿಯನ್ನುಂಟುಮಾಡಿ ತಾನು ಸುಖಿಯಾಗಿರುತ್ತಾನೆಯೋ ಅದೇ ರೀತಿ **[ಶಕ್ರಃ]** ಸರ್ವಶಕ್ತನಾದ ಪರಮಾತ್ಮನು ಅತ್ಯಂತ ಕೃಪೆದೋರಿ **[ಪುರುನಿಷ್ಷಧೇ]** ಸಕಲ ಶಾಸ್ತ್ರಗಳ ಅಧ್ಯಯನವನ್ನು ಮಾಡಿ ಧರ್ಮಮಾರ್ಗದಲ್ಲಿ ನಡೆಯುತ್ತಾ ಪುರುಷಾರ್ಥಿಯಾದ **[ಇಂದ್ರಾಯ]** ಸರ್ವರ ಮಿತ್ರನಾದ ಹಾಗೂ ಸಕಲೈಶ್ವರ್ಯವನ್ನು ಪ್ರಾಪ್ತ ಮಾಡಲಪೇಕ್ಷಿಸುವ ಜೀವಾತ್ಮನಿಗೆ ಅರ್ಥಾತ್ ಯೋಗ್ಯ ಮಾನವನಿಗೆ **[ವರ್ಧನಂ]** ಸದಾ ವೃದ್ಧಿಯನ್ನು, ಸರ್ವವಿಧದಲ್ಲಿ ಜ್ಞಾನ ಮತ್ತು ಐಶ್ವರ್ಯದ ಮೂಲಕ ಅಭಿವೃದ್ಧಿಯನ್ನೇ ಹೊಂದುವಂತೆ ಮಾಡುತ್ತಾ **[ಶಂಸ್ಯಂ]** ಅತ್ಯಂತ ಪ್ರಶಂಸನೀಯ, ಎಲ್ಲರಿಂದಲೂ ಪ್ರಶಂಸಿಸಲ್ಪಡುವ ಗಣ್ಯವ್ಯಕ್ತಿಯನ್ನಾಗಿ ಮಾಡಿ **[ಚ]** ಮತ್ತು **[ಉಕ್ಥಂ]** ಉತ್ತಮ ರೀತಿಯಲ್ಲಿ ಉಪದೇಶಿಸಲ್ಪಡುವ ವೇದಮಂತ್ರಗಳ ಅರ್ಥವನ್ನು **[ನಃ ರಾರಣತ್]** ನಮಗೆ ಯಥಾವತ್ತಾಗಿ ಪ್ರಾಪ್ತವಾಗುವಂತೆ ಮಾಡುತ್ತಾನೆ.

ಭಾವಾರ್ಥ:- ಯಾವ ರೀತಿ ಯೋಗ್ಯ ಮನುಷ್ಯನು ತನ್ನ ಮಕ್ಕಳ ಮತ್ತು ಮಿತ್ರರ ಸದಾಹಿತವನ್ನೇ ಬಯಸುತ್ತಾ ಅವರಲ್ಲಿ ಯೋಗ್ಯ ಕರ್ತೃತ್ವ ಶಕ್ತಿಯನ್ನುಂಟುಮಾಡಿ ಉತ್ತಮವಾದ ಕರ್ಮಗಳಲ್ಲಿ ಉದ್ಯೋಗದಲ್ಲಿ ತೊಡಗಿಸಿ ತಾನು ಸುಖಿಯಾಗಿರುತ್ತಾನೆಯೋ ಅದೇ ರೀತಿ ಸರ್ವಶಕ್ತನಾದ ಹಾಗೂ ಸರ್ವರ ಮಿತ್ರನಾದ ಪರಮಾತ್ಮನು ಅತ್ಯಂತ ಕೃಪೆದೋರಿ, ಸಕಲ ಶಾಸ್ತ್ರಗಳ ಅಧ್ಯಯನವನ್ನು ಮಾಡಿ ಧರ್ಮಮಾರ್ಗದಲ್ಲಿ ನಡೆಯುತ್ತಾ ಪುರುಷಾರ್ಥಿಯಾದ ಹಾಗೂ ಸರ್ವರ ಮಿತ್ರನಾದ ಮತ್ತು ಸಕಲೈಶ್ವರ್ಯವನ್ನು ಯೋಗ್ಯರೀತಿಯಲ್ಲಿ ಪ್ರಾಪ್ತಮಾಡಲಪೇಕ್ಷಿಸುವ ಯೋಗ್ಯ ಮಾನವನಿಗೆ ಸದಾ ವೃದ್ಧಿಯನ್ನು ಅರ್ಥಾತ್ ಜ್ಞಾನ ಮತ್ತು ಐಶ್ವರ್ಯದ ಮೂಲಕ ಸರ್ವವಿಧದಲ್ಲಿ ಅಭಿವೃದ್ಧಿಯನ್ನೇ ಹೊಂದುವಂತೆ ಮಾಡುತ್ತಾ, ಎಲ್ಲರಿಂದಲೂ ಪ್ರಶಂಸಿಸಲ್ಪಡುವ ಗಣ್ಯವಕ್ತಿಯನ್ನಾಗಿ ಮಾಡುತ್ತಾನೆ ಮತ್ತು ಉತ್ತಮ ರೀತಿಯಲ್ಲಿ ವೇದಮಂತ್ರಗಳ ಅರ್ಥವನ್ನು ಯಥಾವತ್ತಾಗಿ ಪ್ರಾಪ್ತವಾಗುವಂತೆ ಮಾಡುತ್ತಾನೆ. ಸಂಪೂರ್ಣ ವೇದಜ್ಞಾನವನ್ನು ನೀಡುತ್ತಾನೆ.

ಯಾವ ಯಾವ ಪದಾರ್ಥಗಳ ಪ್ರಾಪ್ತಿಗಾಗಿ ಪರಮಾತ್ಮನನ್ನು ಪ್ರಾರ್ಥಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತಮಿತ್ ಸಖಿತ್ವ ಈಮಹೇ ತಂ ರಾಯೇ ತಂ ಸುವೀರ್ಯೇ ।
ಸ ಶಕ್ರ ಉತ ನಃ ಶಕದಿಂದ್ರೋ ವಸು ದಯಮಾನಃ ॥೬॥

ಪದಾರ್ಥ:- [ನಃ] ನಮ್ಮೆಲ್ಲರಿಗೆ **[ದಯಮಾನಃ]** ಸಕಲಜ್ಞಾನದ ಪ್ರಕಾಶವನ್ನು ಮಾಡಲು, ಸರ್ವವಿಧದಲ್ಲಿ ಸತತವಾಗಿ ರಕ್ಷಿಸಲು, ಸಮಸ್ತ ದುಃಖ ದಾರಿದ್ರ್ಯ, ಕ್ಲೇಶ, ಅನಾರೋಗ್ಯ ಮತ್ತು ಆಂತರಿಕ ಹಾಗೂ ಬಾಹ್ಯ ಶತ್ರುಗಳನ್ನು ಸರ್ವಥಾ ಮತ್ತು ಸರ್ವದಾ ನಾಶ ಮಾಡಲು, ಸತ್ಯ, ಧರ್ಮಾಚರಣೆ ಮತ್ತು ಭಕ್ತಿಯ ಮಾರ್ಗದಲ್ಲಿ ಎಂದಿಗೂ ವಿಚಲಿತರಾಗದೇ ನಿರಂತರವಾಗಿ ಸಾಗುತ್ತಾ ಇರಲು, **[ಶಕ್ರಃ]** ಸರ್ವಶಕ್ತ, ಸಕಲೈಶ್ವರ್ಯಪ್ರದಾತಾ **[ಇಂದ್ರಃ]** ಸಕಲ ದುಃಖ ನಿವಾರಕ ಹಾಗೂ ಸದಾ ಆನಂದದಾಯಕನಾದ ಪರಮಾತ್ಮನು **[ವಸು]** ಅತ್ಯಂತ ಸುಖದಿಂದ ಜೀವಿಸಲು ಬೇಕಾದ ಉತ್ತಮ ಐಶ್ವರ್ಯ, ಆರೋಗ್ಯ ಹಾಗೂ ಜ್ಞಾನವನ್ನು ಕೊಡಲು **[ಶಕತ್]**

ಪೂರ್ಣ ಸಮರ್ಥನಾಗಿದ್ದಾನೆ. **[ತಮಿತ್ ಏವ]** ಆ ಸರ್ವಶಕ್ತ ಹಾಗೂ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನನ್ನೇ ನಾವೆಲ್ಲರೂ **[ಸಖಿತ್ವೇ]** ಅತ್ಯಂತ ಶ್ರೇಷ್ಠಮಿತ್ರತ್ವಕ್ಕಾಗಿ ಹಾಗೂ ಸಮಸ್ತ ಶ್ರೇಷ್ಠ ಕರ್ಮಗಳನ್ನು ಮಾಡಲು ಬೇಕಾದ **[ರಾಯೇ]** ಎಂದಿಗೂ ನಶಿಸದ ಹಾಗೂ ಸದಾವೃದ್ಧಿಯನ್ನು ಹೊಂದುವ ಶ್ರೇಷ್ಠ ಸಂಪತ್ತಿಗಾಗಿ **[ಸುವೀರ್ಯೇ]** ಸಮಸ್ತ ಶಾರೀರಿಕ, ಮಾನಸಿಕ ಹಾಗೂ ಆತ್ಮಿಕ ಬಲಪ್ರಾಪ್ತಿಗಾಗಿ ಮತ್ತು ಸಕಲ ಸದ್ಗುಣಗಳನ್ನು ನಮ್ಮ ಜೀವನದಲ್ಲಿ ಧಾರಣ ಮಾಡಿಕೊಂಡು ತದನುಸಾರ ಆಚರಣೆಯನ್ನು ಮಾಡುವುದಕ್ಕಾಗಿ **[ಈಮಹೇ]** ಯಾಚಿಸುತ್ತೇವೆ, ಪ್ರಾರ್ಥಿಸುತ್ತೇವೆ, ಅರ್ಚಿಸುತ್ತೇವೆ.

ಭಾವಾರ್ಥ:- ನಮ್ಮೆಲ್ಲರಿಗೆ ಸಕಲ ಜ್ಞಾನದ ಪ್ರಕಾಶವನ್ನು ಮಾಡಲು, ಸರ್ವವಿಧದಲ್ಲಿ ರಕ್ಷಿಸಲು, ಸಮಸ್ತ ದುಃಖ ದಾರಿದ್ರ್ಯ ಕ್ಲೇಶ, ಅನಾರೋಗ್ಯ ಮತ್ತು ಆಂತರಿಕ ಹಾಗೂ ಬಾಹ್ಯಶತ್ರುಗಳನ್ನು ಸರ್ವಥಾ ಹಾಗೂ ಸರ್ವದಾ ನಾಶ ಮಾಡಲು, ಸತ್ಯ ಧರ್ಮಾಚರಣೆ ಭಕ್ತಿಯ ಮಾರ್ಗದಲ್ಲಿ ಎಂದಿಗೂ ವಿಚಲಿತರಾಗದೇ ನಿರಂತರವಾಗಿ ಸಾಗುತ್ತಾ ಇರಲು, ಸರ್ವಶಕ್ತ ಮತ್ತು ಸಕಲೈಶ್ವರ್ಯ ಪ್ರದನಾದ ಸಕಲ ದುಃಖ ನಿವಾರಕನೂ ಹಾಗೂ ಸದಾ ಆನಂದದಾಯಕನೂ ಆದ ಪರಮಾತ್ಮನು, ಅತ್ಯಂತ ಸುಖದಿಂದ ಜೀವಿಸಲು ಬೇಕಾದ ಉತ್ತಮ ಐಶ್ವರ್ಯ, ಆರೋಗ್ಯ ಮತ್ತು ಜ್ಞಾನವನ್ನು ಕೊಡಲು ಸಮರ್ಥನಾಗಿದ್ದಾನೆ. ಆ ಸರ್ವಶಕ್ತ ಹಾಗೂ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನನ್ನೇ ನಾವೆಲ್ಲರೂ ಅತ್ಯಂತ ಶ್ರೇಷ್ಠ ಮಿತ್ರತ್ವಕ್ಕಾಗಿ ಹಾಗೂ ಸಮಸ್ತ ಶ್ರೇಷ್ಠ ಕರ್ಮಗಳನ್ನು ಮಾಡಲು ಬೇಕಾದ ಎಂದಿಗೂ ನಶಿಸದ ಹಾಗೂ ಸದಾವೃದ್ಧಿಯನ್ನೇ ಹೊಂದುವ ಐಶ್ವರ್ಯದ ಪ್ರಾಪ್ತಿಗಾಗಿ, ಸಮಸ್ತ ಶಾರೀರಿಕ, ಮಾನಸಿಕ ಮತ್ತು ಆತ್ಮಿಕ ಬಲಪ್ರಾಪ್ತಿಗಾಗಿ ಮತ್ತು ಸಮಸ್ತ ಸದ್ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ತದನುಸಾರ ಆಚರಣೆಯನ್ನು ಮಾಡುವುದಕ್ಕಾಗಿ ಅತ್ಯಂತ ಶ್ರದ್ಧಾ ಭಕ್ತಿ ಪುರಸ್ಸರವಾಗಿ ಯಾಚಿಸುತ್ತೇವೆ, ಪ್ರಾರ್ಥಿಸುತ್ತೇವೆ, ಅರ್ಚಿಸುತ್ತೇವೆ.

ಸದಾ ಸರ್ವಶಕ್ತನಾದ, ಸರ್ವೋಪಾಸ್ಯನಾದ ಏಕೈಕ ಪರಮಾತ್ಮನನ್ನು ಯಾಚಿಸಬೇಕು. ಅವನು ಮಾತ್ರ ಸಂಪೂರ್ಣನೂ, ಪರಿಪೂರ್ಣನೂ ಸರ್ವಪ್ರದಾತನೂ ಆಗಿದ್ದಾನೆ. ಅವನ ಹೊರತಾಗಿ ಎಲ್ಲರೂ ಅಪೂರ್ಣರೇ ಆಗಿದ್ದಾರೆ.

ಮುಂದಿನ ಮಂತ್ರದಲ್ಲಿ ಇಂದ್ರ ಶಬ್ದದಿಂದ ಪರಮಾತ್ಮ ಮತ್ತು ಸೂರ್ಯಲೋಕದ ಪ್ರಕಾಶವನ್ನು ಬೀರಲಾಗಿದೆ.

ಸುವಿವೃತಂ ಸುನಿರಜ-ಮಿಂದ್ರ ತ್ವಾದಾತಮಿದ್ಯಶಃ ।
ಗವಾಮಾಪ ವ್ರಜಂ ವೃಧಿ ಕೃಣುಷ್ವ ರಾಧೋ ಅದ್ರಿವಃ ॥೭॥

ಪದಾರ್ಥ:- ಯಾವ ರೀತಿ **[ಅದ್ರಿವಃ]** ಮೇಘಗಳನ್ನು ನಿರ್ಮಾಣ ಮಾಡುವ **[ಇಂದ್ರಃ]** ಸೂರ್ಯನು **[ಸುನಿರಜಂ]** ಸುಖದಿಂದ, ಸುಲಭವಾಗಿ ಪ್ರಾಪ್ತವಾಗುವ ಹಾಗೂ **[ತ್ವಾದಾತಂ]** ಅವನಿಂದಲೇ ಆಕರ್ಷಿಸಲ್ಪಟ್ಟ **[ಯಶಂ]** ಜಲವನ್ನು **[ಸುವಿವೃತಂ]** ಉತ್ತಮವಾದ ರೀತಿಯಲ್ಲಿ ಅಂತರಿಕ್ಷದಲ್ಲಿ ವ್ಯಾಪಿಸುವಂತೆ ಮಾಡಿ **[ಗವಾಂ]** ಕಿರಣಗಳ **[ವ್ರಜಂ]** ಸಮೂಹವನ್ನು ಈ ಸಂಪೂರ್ಣ ಜಗತ್ತನ್ನು ಬೆಳಗಿಸುವುದಕ್ಕೋಸ್ಕರ **[ಅಪವೃಧಿ]** ಎಲ್ಲಾ ಕಡೆಯಲ್ಲಿ ವಿಸ್ತರಿಸುತ್ತಾ **[ರಾಧಃ ಕೃಣುಷ್ವ]** ಉತ್ತಮವಾದ ಮಳೆ ಬೆಳೆಯ ಮೂಲಕ ಎಲ್ಲರನ್ನೂ ಸಮೃದ್ಧರನ್ನಾಗಿ ಮಾಡುತ್ತಾನೋ, ಅದೇ ರೀತಿ ಹೇ **[ಅದ್ರಿವಃ]** ಅತ್ಯಂತ ಪ್ರಶಂಸನೀಯ ಗುಣಗಳುಳ್ಳ ಹಾಗೂ ಸಕಲೈಶ್ವರ್ಯವಾನ್ **[ಇಂದ್ರ]** ಮಹಾ ಯಶಸ್ವೀ, ಪ್ರತಿಯೊಂದು ಕಣಕಣಗಳನ್ನೂ ಪ್ರಳಯ ಕಾಲದಲ್ಲಿ ವಿಭಾಜಿಸಿ, ಸೃಷ್ಟಿಯ ಸಮಯದಲ್ಲಿ ಅವೆಲ್ಲವನ್ನೂ ಒಂದುಗೂಡಿಸುವ ಹಾಗೂ ಸಕಲ ಪದಾರ್ಥಗಳನ್ನೂ ಸರ್ವರಿಗೂ ಸಮಾನರೂಪದಲ್ಲಿ ಕೊಡುವ ಪರಮಾತ್ಮ! ನೀನು **[ಸುವಿವೃತಂ]** ಸರ್ವವ್ಯಾಪಕನಾಗಿ **[ಸುನಿರಜಂ]** ನಿನ್ನ ಕೃಪೆಯಿಂದ ಸರ್ವರಿಗೂ ಸುಲಭವಾಗಿ

ಪ್ರಾಪ್ತವಾಗುವ ಸುಖವನ್ನೂ **[ತ್ವಾದಾತಂ]** ನಿನ್ನಿಂದಲೇ ಪ್ರಾಪ್ತವಾಗುವ **[ರಾಧಃ]** ಐಶ್ವರ್ಯವನ್ನೂ, ಯಶಸ್ಸನ್ನೂ, ನಮ್ಮೆಲ್ಲರಿಗೂ **[ಕೃಣುಷ್ವ]** ಪ್ರದಾನ ಮಾಡುತ್ತೀಯೆ. ಅದೇ ರೀತಿ ಹೇ ಸರ್ವಜ್ಞನಾದ ಪರಮಾತ್ಮ! **[ಗವಾಂ ವ್ರಜಂ]** ನಮ್ಮೆಲ್ಲರ ಇಂದ್ರಿಯಗಳಲ್ಲಿರುವ ದೋಷವನ್ನು ನಿವಾರಣೆ ಮಾಡಿ, ಸನ್ಮಾರ್ಗದಲ್ಲಿಯೇ ಪ್ರವೃತ್ತವಾಗುವಂತೆ ಮಾಡುತ್ತಾ, ನಿನ್ನ ಜ್ಞಾನದ ಪ್ರಕಾಶದ ಮೂಲಕ **[ಅಪವೃಧಿ]** ನಮ್ಮಲ್ಲಿರುವ ಅಜ್ಞಾನಾಂಧಕಾರವನ್ನು ನಷ್ಟಮಾಡು.

ಭಾವಾರ್ಥ:- ಯಾವ ರೀತಿ ಮೇಘಗಳನ್ನು ನಿರ್ಮಾಣ ಮಾಡುವ ಸೂರ್ಯನು, ಅವನಿಂದಲೇ ಆಕರ್ಷಿಸಲ್ಪಟ್ಟ ಜಲವನ್ನು ಉತ್ತಮವಾದ ರೀತಿಯಲ್ಲಿ ಅಂತರಿಕ್ಷದಲ್ಲಿ ವ್ಯಾಪಿಸುವಂತೆ ಮಾಡಿ, ಸಂಪೂರ್ಣ ಜಗತ್ತನ್ನು ಬೆಳಗಿಸುವದಕ್ಕೋಸ್ಕರ ಕಿರಣಗಳ ಸಮೂಹವನ್ನು ಸರ್ವತ್ರ ವಿಸ್ತರಿಸುತ್ತಾ ಉತ್ತಮವಾದ ಮಳೆ ಬೆಳೆಯ ಮೂಲಕ ಎಲ್ಲರನ್ನೂ ಸಮೃದ್ಧರನ್ನಾಗಿ ಮಾಡುತ್ತಾನೋ ಅದೇ ರೀತಿ ಹೇ ಅತ್ಯಂತ ಪ್ರಶಂಸನೀಯ ಗುಣಗಳುಳ್ಳ ಹಾಗೂ ಸಕಲೈಶ್ವರ್ಯಪ್ರದಾತನಾದ ಮತ್ತು ಸಮಸ್ತ ಸುಖ ಸೌಲಭ್ಯಗಳನ್ನೂ ಸಕಲ ಪದಾರ್ಥಗಳನ್ನೂ ಸರ್ವರಿಗೂ ಸಮಾನವಾದ ರೀತಿಯಲ್ಲಿ ಕೊಡುವ ಪರಮಾತ್ಮ! ನೀನು, ನಿನ್ನ ಕೃಪೆಯಿಂದ ಸುಲಭವಾಗಿ ಪ್ರಾಪ್ತವಾಗುವ ಸುಖವನ್ನೂ, ನಿನ್ನಿಂದಲೇ ಪ್ರಾಪ್ತವಾಗುವ ಐಶ್ವರ್ಯ ಸಂಪತ್ತು ಮತ್ತು ಯಶಸ್ಸನ್ನು ನಮ್ಮೆಲ್ಲರಿಗೂ ಪ್ರದಾನ ಮಾಡುತ್ತೀಯೆ. ಹೇ ಸರ್ವಜ್ಞನಾದ ಪರಮಾತ್ಮ! ನೀನು ನಮ್ಮೆಲ್ಲರ ಸಮಸ್ತ ಇಂದ್ರಿಯಗಳಲ್ಲಿರುವ ದೋಷಗಳನ್ನು ನಿವಾರಣೆ ಮಾಡಿ. ಸದಾ ಶ್ರೇಷ್ಠ ಕರ್ಮಗಳಲ್ಲಿಯೇ ಪ್ರವೃತ್ತವಾಗುವಂತೆ ಮಾಡುತ್ತಾ ನಿನ್ನ ಜ್ಞಾನ ಪ್ರಕಾಶದ ಮೂಲಕ ನಮ್ಮೆಲ್ಲರ ಅಜ್ಞಾನಾಂಧಕಾರವನ್ನು ನಷ್ಟ ಮಾಡು.

ಮುಂದಿನ ಮಂತ್ರದಲ್ಲಿ ಈಶ್ವರನ ವಿಷಯವನ್ನು ತಿಳಿಸಲಾಗಿದೆ.

ನಹಿ ತ್ವಾ ರೋದಸೀ ಉಭೇ ಋಘಾಯಮಾಣಮಿನ್ವತಃ ।

ಜೇಷಃ ಸ್ವರ್ವತೀರಪಃ ಸಂ ಗಾ ಅಸ್ಮಭ್ಯಂ ಧೂನುಹಿ ॥೮॥

ಪದಾರ್ಥ:- ಹೇ ಸರ್ವವ್ಯಾಪಕ ಈಶ್ವರ! ಈ **[ಇಮೇ ಉಭೇ ರೋದಸೀ]** ಎರಡು ಪೃಥ್ವಿ ಮತ್ತು ದ್ಯುಲೋಕಗಳು, **[ಋಘಾಯಮಾಣಂ]** ಅತ್ಯಂತ ಪೂಜನೀಯ ಹಾಗೂ ಸರ್ವೋಪಾಸ್ಯನಾದ **[ತ್ವಾಂ ನಹೀನ್ವತಃ]** ನಿನ್ನನ್ನು ವ್ಯಾಪಕತ್ವದಲ್ಲಿ ಮೀರಿಸಲಾರವು. ಅರ್ಥಾತ್ ನಿನಗಿಂತ ಮಿಗಿಲಾದವರು ಯಾರೂ ಇಲ್ಲ. ನೀನು ನಮ್ಮೆಲ್ಲರ ಮೇಲೆ ಕೃಪೆದೋರಿ **[ಸ್ವರ್ವತೀ]** ಯಾವುದರಿಂದ ಅತ್ಯಂತ ಸುಖ, ಯಶಸ್ಸು ಮತ್ತು ಕೀರ್ತಿಯು ಪ್ರಾಪ್ತವಾಗುತ್ತದೆಯೋ ಅಂತಹ **[ಅಪಃ]** ಶ್ರೇಷ್ಠ ಕರ್ಮಗಳನ್ನು ಮಾಡುವ ಸೌಭಾಗ್ಯವನ್ನು **[ಜೇಷಃ]** ಸಮಸ್ತ ಆಂತರಿಕ ಮತ್ತು ಬಾಹ್ಯಶತ್ರುಗಳ ಮೇಲೆ ವಿಜಯವನ್ನು ಪ್ರಾಪ್ತಿ ಮಾಡುವ ಸಾಮರ್ಥ್ಯವನ್ನು **[ಗಾಃ]** ಅತ್ಯುತ್ತಮ ಇಂದ್ರಿಯಗಳನ್ನು ಹಾಗೂ ಜ್ಞಾನವನ್ನೂ **[ಅಸ್ಮಭ್ಯಂ ಧೂನುಹಿ]** ಸತ್ಯಾಚರಣೆಯಲ್ಲಿ ಮತ್ತು ಧರ್ಮಾಚರಣೆಯಲ್ಲಿ ಸದಾ ನಡೆಯುವಂತೆ ಪ್ರೇರಣೆಯನ್ನೂ ನಮ್ಮಲ್ಲಿ ಉಂಟು ಮಾಡು.

ಭಾವಾರ್ಥ:- ಹೇ ಸರ್ವವ್ಯಾಪಕ ಪರಮೇಶ್ವರ! ಈ ಎರಡು ಪೃಥ್ವಿ ಮತ್ತು ದ್ಯುಲೋಕಗಳು ವ್ಯಾಪಕತ್ವದಲ್ಲಿ ನಿನ್ನನ್ನು ಮೀರಿಸಲಾರವು. ನೀನು ಸರ್ವವ್ಯಾಪಕನೂ, ಸರ್ವಾಂತರ್ಯಾಮಿಯೂ ಆಗಿದ್ದೀಯೆ. ನಿನಗಿಂತ ಮಿಗಿಲಾದವರು ಯಾರೂ ಇಲ್ಲ. ಹೇ ಸರ್ವಜ್ಞ ಸಚ್ಚಿದಾನಂದ ಸ್ವರೂಪ ಪರಮಾತ್ಮ! ಯಾವುದರಿಂದ ನಮಗೆ ಸುಖ ಕೀರ್ತಿ ಮತ್ತು ಯಶಸ್ಸು ಪ್ರಾಪ್ತವಾಗುತ್ತದೆಯೋ ಅಂತಹ ಶ್ರೇಷ್ಠ ಕರ್ಮಗಳನ್ನು ಮಾಡುವ ಸೌಭಾಗ್ಯವನ್ನು ನೀಡು. ಸಮಸ್ತ ಆಂತರಿಕ ಮತ್ತು ಬಾಹ್ಯ ಶತ್ರುಗಳನ್ನೂ ದುರಿತಗಳನ್ನೂ ದಮನ ಮಾಡುವ ಸಾಮರ್ಥ್ಯವನ್ನು ನೀಡು. ಅತ್ಯುತ್ತಮವಾದ ಇಂದ್ರಿಯಗಳನ್ನೂ, ಇಂದ್ರಿಯಗಳಲ್ಲಿ ಪಾವಿತ್ರ್ಯತೆಯನ್ನೂ, ಜ್ಞಾನವನ್ನೂ ಹಾಗೂ ಸತ್ಯ ಮತ್ತು ಧರ್ಮದ ಮಾರ್ಗದಲ್ಲಿಯೇ ನಡೆಯುವಂತೆ ಮಾಡು.

ಈ ಮಂತ್ರದಲ್ಲಿ ಮತ್ತೆ ಪರಮೇಶ್ವರನ ನಿರೂಪಣೆಯನ್ನು ಮಾಡಲಾಗಿದೆ.

ಆಶ್ರುತ್ಕರ್ಣ ಶ್ರುಧೀ ಹವಂ ನೂ ಚಿದ್ದಧಿಷ್ವ ಮೇ ಗಿರಃ ।

ಇಂದ್ರಸ್ತೋಮಮಿಮಂ ಮಮ ಕೃಷ್ವಾ ಯುಜಶ್ಚಿದಂತರಮ್ ॥೯॥

ಪದಾರ್ಥ:- ಹೇ **[ಆಶ್ರುತ್ಕರ್ಣ]** ಎಲ್ಲಾ ಕಡೆಯಿಂದ ಎಲ್ಲವನ್ನೂ ಎಲ್ಲರ ಮಾತನ್ನೂ ಆಲಿಸುವ ಸಾಮರ್ಥ್ಯವುಳ್ಳ **[ಇಂದ್ರ]** ಸರ್ವಾಂತರ್ಯಾಮಿಯಾದ ಸರ್ವಶ್ರೋತ ಪರಮಾತ್ಮ! **[ಚಿತ್]** ಯಾವ ರೀತಿ ಪ್ರಿಯನಾದ ಮಿತ್ರನು, ಬೇರೆಯವರನ್ನು ಪ್ರೀತಿಸುವವನು ಯಾವ ರೀತಿ **[ಯುಜಃ]** ಸತ್ಯಜ್ಞಾನ ಹಾಗೂ ಉತ್ತಮ ಕರ್ಮಗಳಲ್ಲಿ ಯುಕ್ತನಾದ, ಸಂಲಗ್ನನಾದ ನಿರತನಾದ ಮಿತ್ರನ **[ಗಿರಃ]** ವಾಣಿಯನ್ನು, ಮಾತನ್ನು ಪ್ರೀತಿಯಿಂದ ಆಲಿಸುತ್ತಾನೋ, ಅದೇ ರೀತಿ ನಮ್ಮೆಲ್ಲರ ವಾಣಿಯನ್ನು ಹಾಗೂ **[ಹವಂ]** ಸತ್ಯವಚನವನ್ನು **[ನು]** ಶೀಘ್ರವಾಗಿ **[ಶ್ರುಧಿ]** ಆಲಿಸು. **[ಮಮ ಇಮಂ ಸ್ತೋಮಂ]** ನನ್ನ ಈ ಸ್ತುತಿ ಸಮೂಹವನ್ನು ಪ್ರಾರ್ಥನೆಯನ್ನು **[ಅಂತರಮ್ ದಧಿಷ್ವ]** ನಿನ್ನೊಳಗೆ ಧಾರಣ ಮಾಡು. ಅರ್ಥಾತ್ ಎಂದಿಗೂ ಕಡೆಗಣಿಸಬೇಡ. **[ಯುಜಃ]** ಸತ್ಯಜ್ಞಾನ, ಸತ್ಕರ್ಮ ಮತ್ತು ನಿನ್ನ ಉಪಾಸನೆಯಲ್ಲಿ ನಿರತರಾದ **[ಮೇ]** ನಮ್ಮೆಲ್ಲರ **[ಅಂತರಂ]** ಅಂತಃಕರಣವನ್ನು ಶುದ್ಧವನ್ನಾಗಿಯೂ ಪವಿತ್ರವನ್ನಾಗಿಯೂ **[ಕೃಷ್ವ]** ಮಾಡು. ನಮ್ಮೆಲ್ಲರ ಅಂತಃಕರಣವು ನಿನ್ನ ದೇಗುಲವಾಗಲಿ, ಮಂದಿರವಾಗಲಿ.

ಭಾವಾರ್ಥ:- ಎಲ್ಲಾ ಕಡೆಯಿಂದಲೂ ಎಲ್ಲರ ಮಾತನ್ನೂ ಏಕಕಾಲದಲ್ಲಿಯೇ ಆಲಿಸುವ ಸಾಮರ್ಥ್ಯವುಳ್ಳ ಸರ್ವಾಂತರ್ಯಾಮಿ ಸರ್ವಶ್ರೋತನಾದ ಪರಮಾತ್ಮ! ಯಾವ ರೀತಿ ಬೇರೆಯವರನ್ನು ಪ್ರೀತಿಸುವ ಗುಣವುಳ್ಳವನು ಸತ್ಯಜ್ಞಾನ ಮತ್ತು ಸತ್ಕರ್ಮಗಳಲ್ಲಿ ನಿರತನಾದ ಪ್ರಿಯಮಿತ್ರನ ಮಾತನ್ನು ಪ್ರೀತಿಯಿಂದ ಆಲಿಸಿ ಅದಕ್ಕೆ ಕೂಡಲೇ ಸ್ಪಂದಿಸುತ್ತಾನೋ, ಅದೇ ರೀತಿ ನಮ್ಮೆಲ್ಲರ ಮಾತನ್ನು ವಾಣಿಯನ್ನು, ಸತ್ಯವಚನವನ್ನು ಶೀಘ್ರವಾಗಿ ಆಲಿಸು. ನಮ್ಮ ಸ್ತುತಿಯನ್ನು ಪ್ರಾರ್ಥನೆಯನ್ನು ನಿನ್ನೊಳಗೆ ಧಾರಣ ಮಾಡು ಅರ್ಥಾತ್ ಎಂದಿಗೂ ಕಡೆಗಾಣಿಸಬೇಡ. ಸತ್ಯಜ್ಞಾನ, ಸತ್ಕರ್ಮ ಹಾಗೂ ನಿನ್ನ ಉಪಾಸನೆಯಲ್ಲಿ ನಿರತರಾದ ನಮ್ಮೆಲ್ಲರ ಅಂತಃಕರಣವನ್ನು ಶುದ್ಧವನ್ನಾಗಿಯೂ ಪವಿತ್ರವನ್ನಾಗಿಯೂ ಮಾಡು. ನಮ್ಮ ಅಂತಃಕರಣವೇ ನಿನ್ನ ದೇಗುಲವಾಗಲಿ. ಪವಿತ್ರಮಂದಿರವಾಗಲಿ.

ಮನುಷ್ಯರು ಪರಮಾತ್ಮನನ್ನು ಹೇಗೆ ತಿಳಿಯಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ವಿದ್ಮಾ ಹಿ ತ್ವಾ ವೃಷಂತಮಂ ವಾಜೇಷು ಹವನಶ್ರುತಮ್ ।

ವೃಷಂತಮಸ್ಯ ಹೂಮಹ ಊತಿಂ ಸಹಸ್ರಸಾತಮಾಮ್ ॥೧೦॥

ಪದಾರ್ಥ:- ಹೇ ಸರ್ವಸುಖಪ್ರದಾತಾ, ಆನಂದ ಸ್ವರೂಪ ಪರಮಾತ್ಮ! **[ವಯಂ]** ನಾವೆಲ್ಲರೂ **[ವಾಜೇಷು]** ಸಕಲ ಆಂತರಿಕ ಹಾಗೂ ಬಾಹ್ಯ ಸಂಗ್ರಾಮಗಳಲ್ಲಿ **[ಹವನಶ್ರುತಮ್]** ಭಕ್ತಿಯಿಂದ ಮಾಡಿದ ಸಮರ್ಪಣಾಭಾವದಿಂದ ಮಾಡಿದ ಪ್ರೀತಿಯ ಕರೆಯನ್ನು ಆಲಿಸುವ **[ವೃಷಂತಮಂ]** ಸಕಲ ಮನೋಕಾಮನೆಗಳನ್ನು ಈಡೇರಿಸುವವನಾದ **[ತ್ವಾಂ]** ಭಕ್ತವತ್ಸಲನೂ, ಸರ್ವರಕ್ಷಕನೂ ಸರ್ವಶಕ್ತನೂ ಆದ ನಿನ್ನನ್ನು ನಿನ್ನ ಗುಣಗಳನ್ನು **[ವಿದ್ಮ]** ಅರಿತಿದ್ದೇವೆ. ಇನ್ನು ಮುಂದೆಯೂ ನಿನ್ನ ಸಕಲ ಗುಣಗಳನ್ನು ಪ್ರಾಪ್ತ ಮಾಡಿಕೊಳ್ಳಲು ನಿರಂತರ ಪ್ರಯತ್ನಿಸುತ್ತೇವೆ. **[ಹಿ]** ಆದುದರಿಂದ **[ವೃಷಂತಮಸ್ಯ]** ಯಾವ ರೀತಿ ಮೇಘವು ವೃಷ್ಟಿಯನ್ನು ಮಾಡುತ್ತದೆಯೋ ಅದೇ ರೀತಿ ಸಕಲ ಶ್ರೇಷ್ಠ ಕಾಮನೆಗಳನ್ನು ಈಡೇರಿಸಿ ಸದಾ ಆನಂದದ ವೃಷ್ಟಿಯನ್ನೇ ಮಾಡುವವನಾದ ನಿನ್ನ **[ಸಹಸ್ರಸಾತಮಾಮ್]** ಸಕಲ ಸುಖ ಸೌಲಭ್ಯಗಳನ್ನೂ ಶ್ರೇಷ್ಠ ಸಂಪತ್ತನ್ನೂ ಕೊಟ್ಟು **[ಊತಿಂ]** ಸರ್ವವಿಧದಲ್ಲಿ ರಕ್ಷಣೆಯನ್ನು ಮಾಡುವ ಸರ್ವಶಕ್ತನಾದ ನಿನ್ನನ್ನು **[ಹೂಮಹೇ]** ಅತ್ಯಂತ ಶ್ರದ್ಧೆ ಭಕ್ತಿಯಿಂದ ಉಪಾಸಿಸುತ್ತೇವೆ.

ಭಾವಾರ್ಥ:- ಹೇ ಸರ್ವಸುಖಪ್ರದಾತಾ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮ! ನಾವೆಲ್ಲರೂ ನಮ್ಮ ಅಂತಃಕರಣದಲ್ಲಿ ನಡೆಯುವ ಹಾಗೂ ಬಾಹ್ಯಸಂಗ್ರಾಮದಲ್ಲಿ ಮತ್ತು ನಮ್ಮ ಪರಿವಾರ, ಸಮಾಜ, ರಾಷ್ಟ್ರದಲ್ಲಿ ನಡೆಯುವ ಸಕಲ ಸಂಘರ್ಷ, ಗಲಭೆ, ಆಂತರಿಕ ಗಲಭೆ ಹಾಗೂ ಪರದೇಶಗಳೊಂದಿಗೆ ನಡೆಯುವ ಯುದ್ಧ ಎಲ್ಲಾ ಕಡೆಯಲ್ಲಿಯೂ ಎಲ್ಲಾ ಸಂದರ್ಭಗಳಲ್ಲಿಯೂ ಸಮರ್ಪಣಾಭಾವದಿಂದ ಮಾಡಿದ ಪ್ರೀತಿಯ ಕರೆಯನ್ನು ಆಲಿಸುವ ಹಾಗೂ ಸಕಲ ಮನೋಕಾಮನೆಗಳನ್ನು ಈಡೇರಿಸುವ ನಿನ್ನನ್ನು, ಸರ್ವವಿಧದಲ್ಲಿ ಶಕ್ತಿಯನ್ನೂ ಕೊಡುವ ಸ್ವರೂಪವನ್ನು ತಿಳಿಯುತ್ತೇವೆ, ಸ್ಮರಿಸುತ್ತೇವೆ. ನಿನ್ನ ಹೊರತಾಗಿ ಬೇರೆ ಯಾರೂ ನಮ್ಮನ್ನು ರಕ್ಷಿಸಲಾರರು. ಒಮ್ಮೆ ರಕ್ಷಿಸಿದರೂ ಇನ್ನೊಮ್ಮೆ ಮಗದೊಮ್ಮೆ ಪುನಃ ಪುನಃ ಸಂಘರ್ಷಗಳು ನಡೆಯದಂತೆ ಮಾಡುವ ಶಕ್ತಿಯು ಯಾರಲ್ಲಿಯೂ ಇಲ್ಲ. ನಮ್ಮಲ್ಲಿರುವ ನಮ್ಮ ವೈರಿಗಳಲ್ಲಿರುವ ಶತ್ರುತ್ವ, ದ್ವೇಷ ಮತ್ತು ವೈರಭಾವನೆಯು ನಿನ್ನ ಸಾನಿಧ್ಯದಲ್ಲಿದ್ದರೆ ಮಾತ್ರ ದೂರವಾಗಲು ಸಾಧ್ಯವಾಗುತ್ತದೆ.

ಆದುದರಿಂದ ಯಾವ ರೀತಿ ಮೇಘವು ವೃಷ್ಟಿಯನ್ನು ಮಾಡುತ್ತದೆಯೋ, ಮಳೆಯನ್ನು ಸುರಿಸುತ್ತದೆಯೋ ಅದೇ ರೀತಿ ಸಕಲ ಶ್ರೇಷ್ಠ ಕಾಮನೆಗಳನ್ನು ಈಡೇರಿಸಿ ಸದಾ ಆನಂದದ ವೃಷ್ಟಿಯನ್ನೇ ಮಾಡುವ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮ! ನಮ್ಮೆಲ್ಲರಿಗೂ ಸಕಲ ಸುಖಸೌಲಭ್ಯಗಳನ್ನೂ ಶ್ರೇಷ್ಠ ಸಂಪತ್ತನ್ನೂ ಕೊಟ್ಟು ಸರ್ವವಿಧದಲ್ಲಿ ರಕ್ಷಣೆಯನ್ನು ಮಾಡುವ ನಿನ್ನನ್ನು, ಸದಾ ಸುಖ ಶಾಂತಿ ನೆಮ್ಮದಿಗಾಗಿ, ಪರಸ್ಪರ ಪ್ರೀತಿ, ಪ್ರೇಮ ಸೌಹಾರ್ದದಿಂದ ಇದ್ದು ಅನ್ಯೋನ್ಯರಾಗಿ ಬಾಳುವುದಕ್ಕಾಗಿ, ವಿಶ್ವದ ಕಲ್ಯಾಣಕ್ಕಾಗಿ, ಜೀವಮಾತ್ರರ ಸಂರಕ್ಷಣೆಗಾಗಿ ಅತ್ಯಂತ ಶ್ರದ್ಧೆ ಮತ್ತು ಭಕ್ತಿಯಿಂದ ಉಪಾಸಿಸುತ್ತೇವೆ.

ಪುನಃ ಪರಮೇಶ್ವರನು ಹೇಗೆ ಮತ್ತು ಮನುಷ್ಯರಿಗಾಗಿ ಏನನ್ನು ಮಾಡುತ್ತಾನೆ ಎಂಬುದನ್ನು ವಿವರಿಸಲಾಗಿದೆ.

ಆ ತೂ ನ ಇಂದ್ರ ಕೌಶಿಕ ಮಂದಸಾನಃ ಸುತಂ ಪಿಬ ।
ನವ್ಯಮಾಯುಃ ಪ್ರ ಸೂ ತಿರ ಕೃಧಿ ಸಹಸ್ರಸಾಮೃಷಿಮ್ ॥೧೧॥

ಪದಾರ್ಥ:- ಹೇ **[ಕೌಶಿಕ]** ಸಮಸ್ತ ವಿದ್ಯೆಗಳ ಉಪದೇಶವನ್ನೂ ಮತ್ತು ನಿರಂತರ ವೇದಮಂತ್ರಗಳ ಅರ್ಥದ ಪ್ರಕಾಶವನ್ನೂ ಮಾಡುವ **[ಇಂದ್ರ]** ಸರ್ವಜ್ಞ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮ! ನೀನು **[ಮಂದಸಾನಃ]** ಶ್ರದ್ಧಾಭಕ್ತಿಯಿಂದ ಮಾಡಿದ ಸ್ತುತಿಗಳನ್ನೂ ಆಲಿಸುವವನೂ ಹಾಗೂ ನಿನ್ನ ಭಕ್ತರು ಮಾಡುವ ಸಮಸ್ತ ಕ್ರಿಯೆಗಳನ್ನೂ ಹಾಗೂ ಅವರ ಸುಖ ದುಃಖ ಕಷ್ಟ ಇತ್ಯಾದಿಗಳನ್ನು ಬಲ್ಲವನೂ ಆಗಿದ್ದೀಯೆ. **[ನಃ]** ನಮ್ಮೆಲ್ಲರ **[ಸುತಃ]** ಸ್ತುತಿಸಮೂಹವನ್ನೂ ಪುರುಷಾರ್ಥ ಸಾಧನೆಗಳನ್ನೂ ಶ್ರದ್ಧೆಯಿಂದ ಮಾಡಿದ ಉಪಾಸನೆಯನ್ನೂ **[ಆ ಪಿಬ]** ಉತ್ತಮವಾದ ರೀತಿಯಲ್ಲಿ ಗಮನಿಸು. **[ತು]** ಮತ್ತು ಕೃಪೆದೋರಿ ನಮ್ಮೆಲ್ಲರಿಗೆ **[ನವ್ಯಂ]** ನಿತ್ಯ ನವೀನವಾದ **[ಆಯುಃ]** ಆಯುಷ್ಯವನ್ನೂ ಅರ್ಥಾತ್ ನಿರಂತರ ಜೀವನವನ್ನೂ **[ಪ್ರಸುತಿರ]** ಉತ್ತಮವಾದ ರೀತಿಯಲ್ಲಿ ಕೊಟ್ಟು ಸರ್ವವಿಧದಲ್ಲಿ ಸಂರಕ್ಷಿಸುತ್ತಾ **[ನಃ]** ನಮ್ಮೆಲ್ಲರ ಅಜ್ಞಾನಾಂಧಕಾರವನ್ನು ಹೋಗಲಾಡಿಸಿ ಸಂಪೂರ್ಣ ಜ್ಞಾನದ ಪ್ರಕಾಶವನ್ನು ಬೀರಲು **[ಸಹಸ್ರಸಾಮ್]** ಅನೇಕ ವಿದ್ಯೆಗಳನ್ನು ಸರ್ವೋತ್ತಮ ರೀತಿಯಲ್ಲಿ ಬಲ್ಲವನಾದ **[ಋಷಿಮ್]** ಮಂತ್ರದ್ರಷ್ಟಾರನಾದ ಋಷಿಯನ್ನು **[ಕೃಧಿ]** ಸದಾ ಪ್ರಾಪ್ತವಾಗುವಂತೆ ಮಾಡು.

ಭಾವಾರ್ಥ:- ಹೇ ಸಮಸ್ತ ವಿದ್ಯೆಗಳ ಉಪದೇಶವನ್ನು ವೇದಮಂತ್ರಗಳ ಅರ್ಥದ ಪ್ರಕಾಶವನ್ನು ಮಾಡುವ ಸರ್ವಜ್ಞನೂ ಸಚ್ಚಿದಾನಂದ ಸ್ವರೂಪನೂ ಆದ ಪರಮಾತ್ಮಾ! ಶ್ರದ್ಧಾ ಭಕ್ತಿಯಿಂದ ಮಾಡಿದ ಸ್ತುತಿಗಳನ್ನು ಹಾಗೂ ನಿನ್ನ ಭಕ್ತರು ಮಾಡುವ ಸಮಸ್ತ ಕ್ರಿಯಾ ಕಲಾಪಗಳನ್ನೂ ಅವರ ಸುಖ, ದುಃಖ ಕಷ್ಟ ಕಾರ್ಪಣ್ಯಗಳನ್ನು ಬಲ್ಲವನೂ ಆಗಿದ್ದೀಯೆ. ಭಕ್ತವತ್ಸಲನಾದ ಪರಮಾತ್ಮ! ನಾವೆಲ್ಲರೂ ಭಕ್ತಿಯಿಂದ ಮಾಡುವ ಸ್ತುತಿಯನ್ನೂ,

ಪುರುಷಾರ್ಥ ಸಾಧನೆಯನ್ನೂ ಶ್ರದ್ಧೆಯಿಂದ ಮಾಡಿದ ಉಪಾಸನೆಯನ್ನು ಸರಿಯಾದ ರೀತಿಯಲ್ಲಿ ಗಮನಿಸು. ನಮ್ಮೆಲ್ಲರ ಮೇಲೆ ಕೃಪೆದೋರಿ ನಮಗೆ ನಿತ್ಯನವೀನವಾದ ಆಯುಷ್ಯ ಅರ್ಥಾತ್ ನಿರಂತರ ಜೀವನ ಹಾಗೂ ಯಾವಜ್ಜೀವ ಪರ್ಯಂತ ಆರೋಗ್ಯವಂತರಾಗಿದ್ದು ಸಮಸ್ತ ಕಾರ್ಯಗಳನ್ನು ಮಾಡುವ ಸಾಮರ್ಥ್ಯವನ್ನು ಉತ್ತಮವಾದ ರೀತಿಯಲ್ಲಿ ಕೊಟ್ಟು ಸರ್ವವಿಧದಲ್ಲಿ ಸಂರಕ್ಷಣೆಯನ್ನೂ ಮಾಡು. ಹಾಗೂ ನಮ್ಮೆಲ್ಲರ ಅಜ್ಞಾನಾಂಧಕಾರವನ್ನು ಹೋಗಲಾಡಿಸಿ, ಸಂಪೂರ್ಣ ಜ್ಞಾನದ ಪ್ರಕಾಶವನ್ನು ಮಾಡುವ, ಸಮಸ್ತ ವಿದ್ಯೆಗಳನ್ನು ಸರ್ವೋತ್ತಮ ರೀತಿಯಲ್ಲಿ ಬಲ್ಲವನಾದ ವೇದಮಂತ್ರಗಳ ದ್ರಷ್ಟಾರನಾದ ಋಷಿಯನ್ನು ಸದಾ ಪ್ರಾಪ್ತವಾಗುವಂತೆ ಮಾಡು.

ಈ ಮಂತ್ರದಲ್ಲಿ ಮೇಲಿನ ಎಲ್ಲಾ ಸ್ತುತಿಗಳು ಈಶ್ವರನದೇ ಗುಣಗಳ ಸಂಕೀರ್ತನವನ್ನು ಮಾಡುತ್ತಿವೆ ಎಂಬುದನ್ನು ಹೇಳಿದೆ.

ಪರಿ ತ್ವಾ ಗಿರ್ವಣೋ ಗಿರ ಇಮಾ ಭವಂತು ವಿಶ್ವತಃ ।
ವೃದ್ಧಾಯುಮನು ವೃದ್ಧಯೋ ಜುಷ್ಟಾ ಭವಂತು ಜುಷ್ಟಯಃ ॥೧೨॥

ಪದಾರ್ಥ:- ಹೇ **[ಗಿರ್ವಣಃ]** ವೇದಮಂತ್ರಗಳ ಮೂಲಕ ಹಾಗೂ ಸಾಧುಸಂತರು ಮಾಡಿದ ಸ್ತುತಿಗಳಿಂದ ಸ್ತುತಿಸಲ್ಪಡುವ **[ಇಂದ್ರ]** ಸರ್ವೋಪಾಸ್ಯನಾದ ಪರಮಾತ್ಮ! **[ವಿಶ್ವತಃ]** ಈ ವಿಶ್ವದಲ್ಲಿ **[ಯಾ ಇಮಾ ಗಿರಃ]** ವೇದಸ್ಥ ಅರ್ಥಾತ್ ವೇದೋಕ್ತ ಸ್ತುತಿಗಳು ಮತ್ತು ವಿದ್ವಾಂಸರಿಂದ ಸಾಧುಸಂತರಿಂದ ಸಜ್ಜನರಿಂದ ಮಾಡಲ್ಪಡುವ ಸ್ತುತಿಸಮೂಹಗಳು, ಗ್ರಂಥಗಳು ಇವೆಯೋ ಅವೆಲ್ಲವೂ **[ತ್ವಾ ಪರಿಭವಂತು]** ನಿನ್ನನ್ನು ಮತ್ತು ನಿನ್ನ ಯಥಾರ್ಥ ಸ್ವರೂಪವನ್ನು ಹಾಗೂ ವಾಸ್ತವಿಕ ಜ್ಞಾನವನ್ನೇ ಬೋಧಿಸುವವುಗಳಾಗಲಿ. ಎಂದಿಗೂ ಅಜ್ಞಾನವನ್ನು ಬೀರುವ ಹಾಗೂ ಅಂಧಕಾರದಲ್ಲಿ ತೊಳಲಾಡುವಂತೆ ಮಾಡುವ ಸ್ತುತಿಗಳು, ಹಾಡುಗಳು ಗ್ರಂಥಗಳು ನಮಗೆಂದಿಗೂ ಪ್ರಾಪ್ತವಾಗದಿರಲಿ. ಹಾಗೂ **[ಇಮಾವೃದ್ಧಯಃ]** ಸರ್ವರ ಅಭಿವೃದ್ಧಿಯನ್ನೇ ಮಾಡುವ **[ಜುಷ್ಟಯಃ]** ಯಾವುದರ ಮೂಲಕ ನಿನ್ನ ಸ್ತುತಿಯನ್ನು ಮಾಡುತ್ತೇವೆಯೋ, ಉಪಾಸನೆಯನ್ನು ಮಾಡುತ್ತೇವೆಯೋ ಅಂತಹ **[ಜುಷಾ]** ಶ್ರದ್ಧೆಯನ್ನೂ, ಭಕ್ತಿಯನ್ನೂ, ಪ್ರೀತಿಯನ್ನೂ ಉಂಟುಮಾಡುವ ಅಮೃತವಾಣಿಯ ಮೂಲಕ **[ವೃದ್ಧಾಯುಂ]** ಆತ್ಮ ವಿಕಾಸವನ್ನು ಜೀವನ ಪರ್ಯಂತ ಮಾಡುತ್ತಾ ನಿನ್ನ ಆನಂದವನ್ನು ನಾವೆಲ್ಲರೂ **[ಅನುಭವಂತು]** ಸದಾಕಾಲ ಅನುಭವಿಸುವಂತಾಗಲಿ.

ಭಾವಾರ್ಥ:- ವೇದಮಂತ್ರಗಳ ಮೂಲಕ, ವಿದ್ವಾಂಸರು, ಸಾಧುಸಂತರು ಮಾಡುವ ಸ್ತುತಿಸಮೂಹಗಳ ಮೂಲಕ ಸ್ತುತಿಸಲ್ಪಡುವ ಸರ್ವೋಪಾಸ್ಯನಾದ ಪರಮಾತ್ಮ! ಈ ಜಗತ್ತಿನಲ್ಲಿ ಈ ಪ್ರಪಂಚದಲ್ಲಿ ಯಾವುದೆಲ್ಲಾ ವೇದೋಕ್ತ ಸ್ತುತಿಗಳಿವೆಯೋ ಹಾಗೂ ವಿದ್ವಾಂಸರಿಂದ ಸಜ್ಜನರಿಂದ ಸಾಧುಸಂತರಿಂದ ಮಾಡಲ್ಪಡುವ ಸ್ತುತಿಗಳು, ವಚನಗಳು, ಹಾಡುಗಳು, ಗ್ರಂಥಗಳು ಇವೆಯೋ ಅವೆಲ್ಲವೂ ನಿನ್ನ ಯಥಾರ್ಥ ಸ್ವರೂಪವನ್ನು, ವಾಸ್ತವಿಕ ಸ್ವರೂಪವನ್ನು ಬೋಧಿಸುವವುಗಳಾಗಲಿ. ಎಂದಿಗೂ ಅಜ್ಞಾನವನ್ನು ಬೀರುವ ಅಂಧಕಾರದಲ್ಲಿ ತೊಳಲಾಡುವಂತೆ ಮಾಡುವ ಸ್ತುತಿಗಳು, ವಚನಗಳು, ಪ್ರಾರ್ಥನೆಗಳು, ಹಾಡುಗಳು, ಗ್ರಂಥಗಳು ನಮಗೆಂದಿಗೂ ಪ್ರಾಪ್ತವಾಗದಿರಲಿ.

ಸರ್ವರ ಅಭಿವೃದ್ಧಿಯನ್ನೇ ಮಾಡುವ ಹಾಗೂ ಯಾವುದರ ಮೂಲಕ ನಿನ್ನ ಸ್ತುತಿಯನ್ನೂ, ಉಪಾಸನೆಯನ್ನೂ ನಾವೆಲ್ಲರೂ ಮಾಡುತ್ತೇವೆಯೋ ಅಂತಹ ಶ್ರದ್ಧೆಯನ್ನೂ, ಭಕ್ತಿಯನ್ನೂ, ಪ್ರೀತಿಯನ್ನೂ ವರ್ಧಿಸುವ ಸುಜ್ಞಾನವನ್ನೇ ಬೀರುವ ಆತ್ಮನ ವಿಕಾಸವನ್ನು ಜೀವನ ಪರ್ಯಂತ ಮಾಡುವ ಅಮೃತವಾಣಿಯ ಮೂಲಕ ನಿನ್ನ ಆನಂದವನ್ನು ಸದಾಕಾಲ ನಾವೆಲ್ಲರೂ ಅನುಭವಿಸುವಂತಾಗಲಿ.

ಈ ಸೂಕ್ತದಲ್ಲಿ ವಿದ್ಯೆ, ಜ್ಞಾನ, ಸದ್ಗುಣ ಇತ್ಯಾದಿಗಳನ್ನು ಪ್ರಾಪ್ತ ಮಾಡಿಕೊಂಡು ಪುರುಷಾರ್ಥದ ಮೂಲಕ ಶ್ರೇಷ್ಠ ಸಂಪತ್ತನ್ನೂ ಪರಾಕ್ರಮದ ಮೂಲಕ ದುಷ್ಟರ ನಾಶವನ್ನೂ, ಸತ್ಯಜ್ಞಾನದ ಮೂಲಕ ಅಜ್ಞಾನದ ನಿವಾರಣೆಯನ್ನೂ

ಮಾಡುತ್ತಾ ದೀರ್ಘಾಯುಗಳೂ ವಿದ್ವಾಂಸರೂ ಆಗಿ ಸದಾ ಸುಖ, ಶಾಂತಿ, ನೆಮ್ಮದಿ, ಆನಂದವನ್ನು ಸರ್ವರೂ ಸದಾಕಾಲ ಪ್ರಾಪ್ತ ಮಾಡುವಂತಾಗಲಿ ಎಂದು ವರ್ಣಿಸಲಾಗಿದೆ. ಈ ಸೂಕ್ತದೊಂದಿಗೆ ನವಮ ಸೂಕ್ತದ ಸಂಗತಿಕರಣವಿದೆ ಎಂಬುದನ್ನು ಸರ್ವರೂ ಗಮನಿಸಬೇಕು.

ಹತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೧೧

ಮಂತ್ರಸಂಖ್ಯೆ ೮ । ಋಷಿಃ - ಜೇತಾ ಮಾಧುಚ್ಛಂದಸಃ । ದೇವತಾ - ಇಂದ್ರಃ । ಛಂದಃ - ಅನುಷ್ಟುಪ್ । ಸ್ವರಃ- ಗಾಂಧಾರಃ.

ಈ ಸೂಕ್ತದ ಮೊದಲ ಮಂತ್ರದಲ್ಲಿ ಇಂದ್ರ ಶಬ್ದದಿಂದ ಈಶ್ವರ ಮತ್ತು ವಿಜಯಶಾಲೀ ಪುರುಷನ ಬಗೆಗೆ ವಿವರಿಸಲಾಗಿದೆ.

ಇಂದ್ರಂ ವಿಶ್ವಾ ಅವೀವೃಧನ್-ತ್ಸಮುದ್ರವ್ಯಚಸಂ ಗಿರಃ ।
ರಥೀತಮಂ ರಥೀನಾಂ ವಾಜಾನಾಂ ಸತ್ಪತಿಂ ಪತಿಮ್ ॥೧॥

ಪದಾರ್ಥ:- ನಮ್ಮೆಲ್ಲರ **[ಇಮಾ ವಿಶ್ವಾ ಗಿರಃ]** ಈ ಸಮಸ್ತ ಶ್ರದ್ಧಾ ಭಕ್ತಿಯಿಂದ ಮಾಡಲ್ಪಟ್ಟ ಸ್ತುತಿಗಳು ಮತ್ತು ಸಮಸ್ತ ವೇದಮಂತ್ರ **[ಸಮುದ್ರವ್ಯಚಸಂ]** ಅಂತರಿಕ್ಷದಲ್ಲಿ ವ್ಯಾಪಕನಾಗಿದ್ದಂತಹ ಸರ್ವವ್ಯಾಪಕನಾದ **[ರಥೀನಾಂ]** ಪ್ರತಿಯೊಂದು ಕ್ಷಣಕ್ಷಣವೂ ನಿರಂತರವಾಗಿ ರಥದಂತೆ ಚಲಿಸುತ್ತಿರುವ **[ರಥೀತಮಮ್]** ಸೂರ್ಯ ಚಂದ್ರ ನಕ್ಷತ್ರಾದಿಗಳು ಗ್ರಹೋಪಗ್ರಹಗಳು ಯಾವನಲ್ಲಿ ಇವೆಯೋ ಅರ್ಥಾತ್ ಸಮಸ್ತ ಪ್ರಕಾಶಪುಂಜಗಳು ಯಾವನಿಂದ ಪ್ರಕಾಶವನ್ನು ಪಡೆದು ಎಲ್ಲವನ್ನೂ ಪ್ರಕಾಶಿಸುತ್ತವೆಯೋ ಯಾರಿಂದ ಶಕ್ತಿಯನ್ನೂ, ಗತಿಯನ್ನೂ ಪಡೆದು ಸಮಸ್ತ ಗ್ರಹೋಪಗ್ರಹಗಳು ಲೋಕ-ಲೋಕಾಂತರಗಳು ವ್ಯವಸ್ಥಿತವಾಗಿ ಚಲಿಸುತ್ತವೆಯೋ ಹಾಗೂ ಯಾರಿಂದ ಎಲ್ಲವೂ ಆಧರಿಸಲ್ಪಟ್ಟಿವೆಯೋ ಅಂತಹ ಸರ್ವಶಕ್ತ ಮತ್ತು ಸರ್ವಾಧಾರನಾದ **[ವಾಜಾನಾಂ]** ಸಂಪೂರ್ಣ ಐಶ್ವರ್ಯ ಹಾಗೂ ಸಕಲ ಪದಾರ್ಥಗಳ ಮತ್ತು **[ಸತ್ಪತಿಂ]** ಸದಾ ಅಸ್ತಿತ್ವದಲ್ಲಿರುವ ಪ್ರಕೃತಿ ಹಾಗೂ ಜೀವಮಾತ್ರರ **[ಪತಿಂ]** ಏಕಮಾತ್ರ ಸ್ವಾಮಿಯೂ ಸಂರಕ್ಷಕನೂ ಆದ **[ಇಂದ್ರಂ]** ಪರಮಾತ್ಮನನ್ನು **[ಅವೀವೃಧನ್]** ವರ್ಧಿಸುತ್ತವೆ. ಅಂತಹ ವೇದವಾಣಿಯನ್ನು ಸಮಸ್ತ ಮಾನವರು ಅಧ್ಯಯನ ಅಧ್ಯಾಪನದಿಂದ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಹಾಗೂ ಅವುಗಳಿಂದ ಸಂಪೂರ್ಣಜ್ಞಾನವನ್ನು ಪಡೆದು ಜೀವಮಾತ್ರರ ಕಲ್ಯಾಣವನ್ನು ಮಾಡುವುದರ ಮೂಲಕ ಸಂಪೂರ್ಣ ವಿಶ್ವದಲ್ಲಿ ವ್ಯಾಪಕವಾಗುವಂತೆ ಮಾಡಲಿ.

ಭಾವಾರ್ಥ:- ಈ ಸಮಸ್ತ ವೇದಮಂತ್ರಗಳು, ಸರ್ವವ್ಯಾಪಕ ಹಾಗೂ ಸರ್ವಾಂತರ್ಯಾಮಿಯಾದ ಪ್ರತಿಯೊಂದು ಕ್ಷಣ ಕ್ಷಣದಲ್ಲಿಯೂ ನಿರಂತರವಾಗಿ ಚಲಿಸುತ್ತಿರುವ ಹಾಗೂ ಇತರ ಗ್ರಹೋಪಗ್ರಹಗಳಿಗೆ ಪ್ರಕಾಶವನ್ನೂ, ಗತಿಯನ್ನೂ ಉಂಟು ಮಾಡುವ ಸೂರ್ಯ ಮೊದಲಾದ ಸಮಸ್ತ ಪ್ರಕಾಶಪುಂಜಗಳಿಗೆ ಪ್ರಕಾಶವನ್ನು ಕೊಟ್ಟು ವ್ಯವಸ್ಥಿತವಾಗಿ ಚಲಿಸುವಂತೆ ಎಲ್ಲವನ್ನು ಆಧರಿಸಿ ಎತ್ತಿ ಹಿಡಿದ ಸರ್ವಶಕ್ತ ಹಾಗೂ ಸರ್ವಾಧಾರನಾದ ಮತ್ತು ಸಕಲೈಶ್ವರ್ಯ ಹಾಗೂ ಸಕಲ ಪದಾರ್ಥಗಳ ಏಕೈಕ ಸ್ವಾಮಿಯೂ ಸಂರಕ್ಷಕನೂ ಆದ ಪರಮಾತ್ಮನ ಮಹಿಮೆಯ ವರ್ಣನೆಯನ್ನು ಮಾಡುತ್ತವೆ. ಅಂತಹ ವೇದವಾಣಿಯನ್ನು ನಾವೆಲ್ಲರೂ ಅಧ್ಯಯನ ಅಧ್ಯಾಪನದ ಮೂಲಕ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ ಹಾಗೂ ಅವುಗಳಿಂದ ಸಂಪೂರ್ಣ ಜ್ಞಾನವನ್ನು ಪಡೆದು ಜೀವಮಾತ್ರರ ಕಲ್ಯಾಣವನ್ನು ಮಾಡುವುದರ ಮೂಲಕ ಸಂಪೂರ್ಣ ವಿಶ್ವದಲ್ಲಿ ವ್ಯಾಪಕವಾಗುವಂತೆ ಮಾಡೋಣ.

ಈ ಮಂತ್ರದಲ್ಲಿ ಮತ್ತೆ ಅದೇ ವಿಷಯವನ್ನು ಪ್ರತಿಪಾದಿಸಲಾಗಿದೆ.

ಸಖ್ಯೇ ತ ಇಂದ್ರ ವಾಜಿನೋ ಮಾ ಭೇಮ ಶವಸಸ್ಪತೇ ।
ತ್ವಾಮಭಿ ಪ್ರ ಣೋನುಮೋ ಜೇತಾರಮಪರಾಜಿತಮ್ ॥೨॥

ಪದಾರ್ಥ:- ಹೇ **[ಶವಸಃ]** ಅನಂತ ಹಾಗೂ ಅಪರಿಮಿತ ಬಲಶಾಲಿಯಾದ ಪರಮಾತ್ಮ! **[ಪತೇ]** ಸಕಲ ಚರಾಚರ ಜಗತ್ತಿನ ಏಕೈಕ ಸ್ವಾಮಿಯಾದ ಜಗದೀಶ್ವರ! **[ಅಭಿಜೇತಾರಂ]** ಸರ್ವವಿಧದಲ್ಲಿ ಶತ್ರುಗಳನ್ನು, ದುಷ್ಟರನ್ನು ಸದೆಬಡಿದು ಜಯಿಸುವವನೂ **[ಅಪರಾಜಿತಂ]** ಯಾರಿಂದಲೂ, ಯಾವುದರ ಮೂಲಕವೂ, ಹಾಗೂ ಯಾವ ವಿಧದಲ್ಲಿಯೂ ಜಯಿಸಲಸಾಧ್ಯವಾದವನೂ ಆದ **[ತ್ವಾಂ]** ನಿನ್ನನ್ನು **[ವಾಜಿನಃ]** ಪರಮೋತ್ಕೃಷ್ಟವಾದ ಜ್ಞಾನವಂತನೂ, ಬಲವಂತನೂ ಐಶ್ವರ್ಯವಂತನೂ ಆಗಿರುವೆ ಎಂದು ತಿಳಿದು ನಾವೆಲ್ಲರೂ **[ಪ್ರಣೋನುಮಃ]** ಪುನಃ ಪುನಃ ಅತ್ಯಂತ ಶ್ರದ್ಧಾ ಭಕ್ತಿಯಿಂದ ಉಪಾಸಿಸುತ್ತೇವೆ. ಹೇ ಸರ್ವಾಧಾರ, ಅನಾಥ ರಕ್ಷಕ, ದೀನಬಂಧು! **[ತೇ ಸಖ್ಯೇ]** ನಿನ್ನ ಮಿತ್ರತ್ವದ ಬಲದಿಂದ, ನಿನ್ನ ಕೃಪಾಶ್ರಯದಲ್ಲಿದ್ದು **[ಮಾ ಭೇಮ]** ದುಷ್ಟಶಕ್ತಿ, ಆಸುರೀ ಶಕ್ತಿ, ಶತ್ರುಗಳು, ಸಕಲ ವಿಧದ ಕಷ್ಟಕಾರ್ಪಣ್ಯಗಳು ಹಾಗೂ ದುಃಖ ದಾರಿದ್ರ್ಯ ಇವೆಲ್ಲವುಗಳಿಂದ ಎಂದಿಗೂ ಭಯಭೀತರಾಗುವುದಿಲ್ಲ.

ಭಾವಾರ್ಥ:- ಹೇ ಅನಂತ ಅಪರಿಮಿತ ಬಲಶಾಲಿಯಾದ ಹಾಗೂ ಸಕಲ ಜಗದೊಡೆಯನೂ, ಸರ್ವ ಜಗದಾಧಾರನೂ ಆದ ಪರಮಾತ್ಮ! ಸಮಸ್ತ ಶತ್ರುಗಳನ್ನೂ, ಸಕಲ ದುಷ್ಟಶಕ್ತಿಗಳನ್ನೂ ಸರ್ವವಿಧದಲ್ಲಿ ಸದೆಬಡಿಯಲು ಸಮರ್ಥನಾದವನೂ, ಯಾರ ಸಹಾಯವಿಲ್ಲದೇ ಎಲ್ಲವನ್ನೂ ಮಾಡುವ ಸರ್ವಶಕ್ತನೂ, ಯಾರಿಂದಲೂ ಯಾವುದರ ಮೂಲಕವೂ, ಯಾವ ವಿಧದಲ್ಲಿಯೂ ಜಯಿಸಲಸಾಧ್ಯನಾದವನೂ ಆದ ನಿನ್ನನ್ನು ಪರಮೋತ್ಕೃಷ್ಟ ಜ್ಞಾನವಂತನೂ, ಬಲವುಳ್ಳವನೂ ಐಶ್ವರ್ಯಶಾಲಿಯೂ ಆಗಿರುವೆ ಎಂದು ತಿಳಿದು ನಾವೆಲ್ಲರೂ ಅತ್ಯಂತ ಶ್ರದ್ಧಾ ಭಕ್ತಿಯಿಂದ ಉಪಾಸಿಸುತ್ತೇವೆ. ತನ್ಮೂಲಕ ಶಾರೀರಿಕ, ಮಾನಸಿಕ ಹಾಗೂ ಆತ್ಮಿಕ ಬಲವನ್ನು ವರ್ಧಿಸಿಕೊಳ್ಳುತ್ತೇವೆ. ಹೇ ಸರ್ವಾಧಾರ! ಅನಾಥರಕ್ಷಕ! ದೀನಬಂಧು! ನಿನ್ನ ಮಿತ್ರತ್ವದ ಬಲದಿಂದ ನಿನ್ನ ಕೃಪಾಶ್ರಯದಲ್ಲಿದ್ದು ದುಷ್ಟಶಕ್ತಿ, ಆಸುರೀ ಶಕ್ತಿ, ಶತ್ರುಗಳು, ಸಕಲವಿಧದ ಕಷ್ಟಕಾರ್ಪಣ್ಯಗಳು, ದುಃಖದಾರಿದ್ರ್ಯಗಳು, ಅಭಾವ ಇವೆಲ್ಲವುಗಳಿಂದ ಯಾವುದೇ ರೀತಿಯಲ್ಲಿ ಎಂದಿಗೂ ನಾವು ಭಯಭೀತರಾಗುವುದಿಲ್ಲ.

ಮತ್ತೆ ಅದೇ ವಿಷಯವನ್ನು ಪ್ರತಿಪಾದಿಸಲಾಗಿದೆ.

ಪೂರ್ವೀರಿಂದ್ರಸ್ಯ ರಾತಯೋ ನ ವಿ ದಸ್ಯಂತ್ಯೂತಯಃ ।
ಯದಿ ವಾಜಸ್ಯ ಗೋಮತಃ ಸ್ತೋತೃಭ್ಯೋ ಮಂಹತೇ ಮಘಮ್ ॥ ೩॥

ಪದಾರ್ಥ:- **[ಯದಿ]** ಒಂದು ವೇಳೆ **[ಪೂರ್ವೀ]** ಸೃಷ್ಟಿಯ ಆದಿಯಲ್ಲಿಯೇ **[ಇಂದ್ರಸ್ಯ]** ಸರ್ವರಕ್ಷಕ ಹಾಗೂ ಸಕಲೈಶ್ವರ್ಯಪ್ರದಾತನಾದ ಪರಮಾತ್ಮನ **[ರಾತಯಃ ಊತಯಃ]** ದಾನವು ಮತ್ತು ಜೀವಮಾತ್ರರಿಗೆ ರಕ್ಷಣೆ **[ವಿ ದಸ್ಯಂತಿ]** ಉಪೇಕ್ಷಿಸಲ್ಪಡುತ್ತಿದ್ದರೂ ಅರ್ಥಾತ್ ಪ್ರಾಪ್ತವಾಗದೇ ಇರುತ್ತಿದ್ದರೆ **[ಸ್ತೋತೃಭ್ಯಃ]** ಪರಮಾತ್ಮನ ಹಾಗೂ ಸೃಷ್ಟಿಯ ಗುಣಗಳನ್ನು ಅರಿತುಕೊಂಡು ಅವನ ಸ್ತುತಿಯನ್ನು ಮಾಡುವ ಸಕಲ ಧಾರ್ಮಿಕ ಹಾಗೂ ವಿದ್ವಜ್ಜನರಿಗೆ **[ವಾಜಸ್ಯ]** ಯಾವುದರಿಂದ ಸಂಪೂರ್ಣ ಸುಖ ಶಾಂತಿ ನೆಮ್ಮದಿ ಪ್ರಾಪ್ತವಾಗುತ್ತದೆಯೋ ಅಂತಹ ಶ್ರೇಷ್ಠ ಕರ್ಮಗಳನ್ನೂ ವ್ಯವಹಾರ ಉದ್ಯೋಗ ಇತ್ಯಾದಿಗಳನ್ನು ಮಾಡುವ ಜನರ ಹಾಗೂ **[ಗೋಮತಃ]** ಈ ಪೃಥ್ವಿಯ, ಪೃಥ್ವಿಯಲ್ಲಿದ್ದ ಸಮಸ್ತ ಜೀವಮಾತ್ರರ ಸಕಲ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ವೇದವಾಣಿಯನ್ನು

ಸಂರಕ್ಷಿಸುವವರ **[ಮಘಂ]** ಸಕಲ ಐಶ್ವರ್ಯವನ್ನೂ, ಸುಖಸೌಲಭ್ಯಗಳನ್ನೂ **[ನ ಮಂಹತೇ]** ಬೇರೆ ಯಾರೂ ಕೊಡುತ್ತಿರಲಿಲ್ಲ, ದಾನ ಮಾಡುತ್ತಿರಲಿಲ್ಲ.

ಭಾವಾರ್ಥ:- ಒಂದು ವೇಳೆ ಸೃಷ್ಟಿಯ ಆದಿಯಲ್ಲಿಯೇ ಸಕಲೈಶ್ವರ್ಯ ಪ್ರದಾತ ಹಾಗೂ ಸರ್ವರಕ್ಷಕನಾದ ಪರಮಾತ್ಮನ ದಾನ ಮತ್ತು ಜೀವಮಾತ್ರರಿಗೆ ಸಂರಕ್ಷಣೆ ಉಪೇಕ್ಷಿಸಲ್ಪಡುತ್ತಿದ್ದರೆ ಅರ್ಥಾತ್ ಪ್ರಾಪ್ತವಾಗದೇ ಇರುತ್ತಿದ್ದರೆ, ಪರಮಾತ್ಮನ ಸಮಸ್ತ ಉಪಾಸಕರಿಗೆ ಹಾಗೂ ಸೃಷ್ಟಿಯ ಗುಣಗಳನ್ನು ಕ್ರಮವನ್ನು ಅರಿತುಕೊಂಡು ಅವನ ಸ್ತುತಿಯನ್ನು ಮಾಡುವ ಸಕಲ ಧಾರ್ಮಿಕ ಮತ್ತು ವಿದ್ವಜ್ಜನರಿಗೆ, ಯಾವುದರಿಂದ ಸಕಲ ಸೌಲಭ್ಯಗಳು ಪ್ರಾಪ್ತವಾಗುತ್ತದೆಯೋ, ಸಂಪೂರ್ಣ ಸುಖ, ಶಾಂತಿ, ಮತ್ತು ನೆಮ್ಮದಿ ಪ್ರಾಪ್ತವಾಗುತ್ತದೆಯೋ ಅಂತಹ ಶ್ರೇಷ್ಠ ಕರ್ಮಗಳನ್ನೂ ವ್ಯವಹಾರ ಉದ್ಯೋಗ ಇತ್ಯಾದಿಗಳನ್ನೂ ಮಾಡುವ ಜನರಿಗೆ, ಈ ಪೃಥ್ವಿಯ, ಪೃಥ್ವಿಯಲ್ಲಿದ್ದ ಸಕಲ ಜೀವಮಾತ್ರರ ಸಕಲ ಜ್ಞಾನವನ್ನು ಪಡೆದು ವೇದವಾಣಿಯನ್ನು ಸಂರಕ್ಷಿಸುವವನ, ಸಕಲ ಐಶ್ವರ್ಯವನ್ನು ಸುಖಸೌಲಭ್ಯಗಳನ್ನು ಬೇರೆ ಯಾರೂ ಕೊಡುತ್ತಿರಲಿಲ್ಲ, ದಾನ ಮಾಡುತ್ತಿರಲಿಲ್ಲ. ಅರ್ಥಾತ್ ಸರ್ವರಕ್ಷಕ, ಸಕಲೈಶ್ವರ್ಯ ಪ್ರದಾತ, ಸರ್ವೋಪಾಸ್ಯನಾದ ಪರಮಾತ್ಮನ ಹೊರತಾಗಿ ಬೇರೆ ಯಾರೂ ಕೂಡಾ ಜೀವಮಾತ್ರರಿಗೆ ಐಶ್ವರ್ಯವನ್ನೂ, ಸುಖವನ್ನೂ, ಶಾಂತಿಯನ್ನೂ ಕೊಡುವುದಿಲ್ಲ. ಪರಮಾತ್ಮನ ಹೊರತಾಗಿ ಬೇರೆ ಯಾರೂ ಕೂಡಾ ಜೀವಮಾತ್ರರ ಸಂರಕ್ಷಣೆಯನ್ನು ಮಾಡುವುದಿಲ್ಲ. ಎಲ್ಲದಕ್ಕೂ ಮೂಲಕಾರಣ ಅವನೇ ಆಗಿದ್ದಾನೆ. ಆದುದರಿಂದ ನಾವೆಲ್ಲರೂ ಇತರರಿಗೆ ದಾನ ಮಾಡುವಾಗ ರಕ್ಷಣೆಯನ್ನು ಮಾಡುವಾಗ ಯಾವುದೂ ನಮ್ಮದಲ್ಲ, ಎಲ್ಲವೂ ಭಗವಂತನಿಗೆ ಸೇರಿದುದು, ನಾವು ಕೇವಲ ನಿಮಿತ್ತ ಮಾತ್ರರು ಎಂದು ತಿಳಿದು ದಾನವನ್ನೂ, ಸಂರಕ್ಷಣೆಯನ್ನೂ ಮಾಡಬೇಕು. ಹಾಗೂ ಎಲ್ಲರೂ ಎಲ್ಲವನ್ನೂ ಕೊಡುವವನಾದ ಏಕೈಕ ಪರಮಾತ್ಮನ ಉಪಾಸನೆಯನ್ನು ಮಾಡಬೇಕು.

ಈ ಮಂತ್ರದಲ್ಲಿ ಇಂದ್ರ ಶಬ್ದದಿಂದ ಸೂರ್ಯ ಮತ್ತು ಸೇನಾಪತಿಯ ಗುಣಗಳನ್ನು ವರ್ಣಿಸಲಾಗಿದೆ.

ಪುರಾಂ ಭಿಂದುರ್ಯುವಾ ಕವಿರಮಿತೌಜಾ ಅಜಾಯತ ।
ಇಂದ್ರೋ ವಿಶ್ವಸ್ಯ ಕರ್ಮಣೋ ಧರ್ತಾ ವಜ್ರೀ ಪುರುಷ್ಟುತಃ ॥೪॥

ಪದಾರ್ಥ:- **[ಅಮಿತೌಜಾ]** ಅಪರಿಮಿತವಾದ ಆಕರ್ಷಣಾ ಶಕ್ತಿ ಹಾಗೂ ಪ್ರಕಾಶವುಳ್ಳವನಾಗಿದ್ದು ಯಾವನಿಂದ ಸಮಸ್ತ ಗ್ರಹೋಪಗ್ರಹಗಳು ಆಕರ್ಷಿಸಲ್ಪಡುತ್ತದೆಯೋ ಹಾಗೂ ಯಾವನಿಂದ ಅಪರಿಮಿತವಾದ ವೃಷ್ಟಿಯಾಗಲು ಸಾಧ್ಯವಾಗುತ್ತದೆಯೋ, ಅರ್ಥಾತ್ ವಿಪುಲವಾದ ಮಳೆಯುಂಟಾಗಲು ಸಾಧಕವಾಗಿರುವನೋ ಅಂತಹ **[ವಜ್ರೀ]** ಎಲ್ಲವನ್ನೂ ಛಿದ್ರ ಛಿದ್ರವನ್ನಾಗಿ ಮಾಡಲು ಸಮರ್ಥವಾದ ಪ್ರಖರವಾದ ತೇಜವುಳ್ಳ ಕಿರಣವುಳ್ಳವನೂ **[ಪುರಾಂ]** ಸಮಸ್ತ ಮೇಘ ಸಮೂಹಗಳನ್ನು **[ಭಿಂದು]** ಭೇದನವನ್ನು ಮಾಡುವವನೂ **[ಯುವಾ]** ಎಲ್ಲರನ್ನೂ ಎಲ್ಲವನ್ನೂ ಸೇರಿಸಲು ಮತ್ತು ಪ್ರತ್ಯೇಕಿಸುವವನೂ **[ಕವಿಃ]** ಕ್ರಾಂತ ಚಕ್ರದಲ್ಲಿ ಕ್ರಮಿಸುವವನೂ ಅರ್ಥಾತ್ ಉತ್ತರಾಯಣ ಮತ್ತು ದಕ್ಷಿಣಾಯನದಲ್ಲಿ ಒಂದು ವೃತ್ತದಿಂದ ಇನ್ನೊಂದು ವೃತ್ತಕ್ಕೆ ಚಲಿಸುವವನೂ **[ಪುರುಷ್ಟುತಃ]** ಸರ್ವರಿಂದ ಸ್ತುತಿಸಲ್ಪಡುವವನೂ ಆದ **[ಇಂದ್ರಃ]** ಈ ಸೂರ್ಯನು **[ವಿಶ್ವಸ್ಯ ಕರ್ಮಣಃ ಧರ್ತಾ]** ಸಕಲ ಕರ್ಮಗಳನ್ನು ಧಾರಣ ಮಾಡಿಸುವವನೂ (ಸೂರ್ಯೋದಯವಾದ ಕೂಡಲೇ ಪ್ರಾಣಿಮಾತ್ರರು ತಮ್ಮ ತಮ್ಮ ಕರ್ಮಗಳಲ್ಲಿ ಪ್ರವೃತ್ತರಾಗುತ್ತಾರೆ.) **[ಅಜಾಯತ]** ಪ್ರತಿ ದಿನ ನಮ್ಮ ಮುಂದೆ ಪ್ರಕಟವಾಗುತ್ತಾನೆ.

ಭಾವಾರ್ಥ:- ಅಪರಿಮಿತವಾದ ಗುರುತ್ವಾಕರ್ಷಣ ಶಕ್ತಿ ಹಾಗೂ ಪ್ರಕಾಶವುಳ್ಳವನಾಗಿದ್ದು, ಜಲವನ್ನು ಆಕರ್ಷಿಸಿ ಮೋಡಗಳನ್ನಾಗಿ ಮಾಡಿ ಮಳೆಯಾಗಲು ಕಾರಣೀಭೂತನಾಗುವವನೂ, ಎಲ್ಲವನ್ನೂ ಛಿದ್ರ ಛಿದ್ರವನ್ನಾಗಿ ಮಾಡಿ, ಸಕಲ ಕಲ್ಮಶವನ್ನು ನಿವಾರಣೆ ಮಾಡಿ, ರೋಗ ರುಜಿನಗಳನ್ನೂ ಅಂಧಕಾರವನ್ನೂ ನಷ್ಟ ಮಾಡಲು ಸಮರ್ಥವಾದ

ತೀಕ್ಷ್ಣಕಿರಣಗಳುಳ್ಳವನೂ, ಮೇಘಗಳನ್ನು ಭೇದಿಸುವವನೂ, ಎಲ್ಲವನ್ನೂ ಹಾಗೂ ಎಲ್ಲರನ್ನೂ ಒಟ್ಟುಮಾಡುವವನೂ ಮತ್ತು ಪ್ರತ್ಯೇಕಿಸುವವನೂ (ಹಗಲಿನಲ್ಲಿ ಎಲ್ಲಾ ಮನುಷ್ಯರು ಪ್ರಾಣಿಗಳು ಪಕ್ಷಿಗಳು ಕೀಟಪತಂಗಗಳು ಕೆಲಸವನ್ನು ಮಾಡಲು ಒಂದಾಗುತ್ತಾರೆ. ರಾತ್ರಿಯಾದ ಕೂಡಲೇ ಎಲ್ಲವೂ ಪ್ರತ್ಯಪ್ರತ್ಯೇಕವಾಗುತ್ತವೆ.) ಕ್ರಾಂತ ಚಕ್ರದಲ್ಲಿ ಕ್ರಮಿಸುವವನೂ ಅರ್ಥಾತ್ ದಕ್ಷಿಣಾಯನದಲ್ಲಿ ಮಕರ ವೃತ್ತದಿಂದ ಕರ್ಕ ವೃತ್ತಕ್ಕೂ, ಉತ್ತರಾಯಣದಲ್ಲಿ ಕರ್ಕವೃತ್ತದಿಂದ ಮಕರ ವೃತ್ತಕ್ಕೂ ಸಂಚರಿಸುವವನೂ ಎಲ್ಲರಿಂದ ಸ್ತುತಿಸಲ್ಪಡುವವನೂ (ಅರ್ಥಾತ್ ಎಲ್ಲರೂ ಸೂರ್ಯನ ಮಹಿಮೆಯನ್ನು ಕೊಂಡಾಡುತ್ತಾರೆ ಹಾಗೂ ಅವನಿಂದ ಅನಂತ ಪ್ರಯೋಜನವನ್ನು ಪಡೆಯುತ್ತಾರೆ. ಸೂರ್ಯನಿಂದ ಪ್ರಕಾಶವನ್ನು ಶಕ್ತಿಯನ್ನೂ ಪಡೆದುಕೊಂಡು ಸಂಪೂರ್ಣ ಸದ್ವಿನಿಯೋಗವನ್ನು ಮಾಡುವುದೇ ಯಥಾರ್ಥರೂಪದಲ್ಲಿ ಅವನ ಸ್ತುತಿ ಹಾಗೂ ಅರ್ಚನೆಯಾಗಿದೆ. ಸೂರ್ಯನಿಗೆ ಅರ್ಘ್ಯವನ್ನು ಕೊಡುವುದು, ದೀಪವನ್ನು ತೋರಿಸುವುದು, ಆರತಿಯನ್ನು ಬೆಳಗುವುದು ಇವೆಲ್ಲವೂ ಅಜ್ಞಾನದ ಪ್ರತೀಕವಾಗಿದೆ.) ಆದ ಸೂರ್ಯನು ಸಕಲ ಜಗತ್ತಿನ ಕರ್ಮಗಳನ್ನು ಧಾರಣ ಮಾಡಿಸುವವನೂ ಆಗಿ ಪ್ರತಿನಿತ್ಯ ಪ್ರಕಟವಾಗುತ್ತಾನೆ.

ಸೂರ್ಯೋದಯವಾದ ಕೂಡಲೇ ಪ್ರಾಣಿಮಾತ್ರರು ತಮ್ಮ ತಮ್ಮ ಕರ್ಮಗಳಲ್ಲಿ ಪ್ರವೃತ್ತರಾಗುತ್ತಾರೆ. ಯಾರು ಸೂರ್ಯೋದಯವಾದ ನಂತರವೂ ನಿದ್ರೆಯನ್ನು ಮಾಡುತ್ತಾರೋ ಸೂರ್ಯನು ಅವರ ಶಕ್ತಿಯನ್ನು ಹರಣ ಮಾಡುತ್ತಾನೆ. ಆದುದರಿಂದ ಸೂರ್ಯೋದಯದ ಮುಂಚೆಯೇ ಎದ್ದು ಸೂರ್ಯೋದಯವಾದಾಗ ತಮ್ಮ ಕರ್ಮದಲ್ಲಿ ಪ್ರವೃತ್ತರಾಗಿರಬೇಕು.

ಈ ಮಂತ್ರದಲ್ಲಿ ಸೂರ್ಯನ ಗುಣಗಳ ವರ್ಣನೆ ಮಾಡಲಾಗಿದೆ.

ತ್ವಂ ಬಲಸ್ಯ ಗೋಮತೋಽಪಾವರದ್ರಿವೋ ಬಿಲಮ್ ।
ತ್ವಾಂ ದೇವಾ ಅಬಿಭ್ಯುಷ-ಸ್ತುಜ್ಯಮಾನಾಸ ಆವಿಷುಃ ॥೫॥

ಪದಾರ್ಥ:- **[ಅದ್ರಿವಃ]** ಮೇಘಗಳನ್ನು ನಿರ್ಮಾಣ ಮಾಡುವ ಸೂರ್ಯನು **[ಗೋಮತಃ]** ತೀಕ್ಷ್ಣವಾದ ರಶ್ಮಿ-ಕಿರಣಗಳುಳ್ಳವನಾಗಿದ್ದು, **[ಅಬಿಭ್ಯುಷಃ]** ನಿರ್ಭಯವಾಗಿ ಘರ್ಜನೆ ಮಾಡುತ್ತಾ ಅತ್ತಿಂದಿತ್ತ ನಿರಂತರವಾಗಿ ಸಾಗುತ್ತಿರುವ **[ಬಲಸ್ಯ]** ಮೇಘದ ಭೇದನವನ್ನು ಮಾಡಿ ಮೇಘಗಳನ್ನು ಛಿದ್ರ ಛಿದ್ರವನ್ನಾಗಿ ಮಾಡಿ **[ಬಿಲಮ್]** ಜಲವನ್ನು **[ಅಪ ಅವ]** ಕೆಳಗೆ ಬೀಳುವಂತೆ ಮಾಡುತ್ತಾನೆ ಅರ್ಥಾತ್ ಮಳೆಯನ್ನು ಸುರಿಸುವಂತೆ ಮಾಡುತ್ತಾನೆ. ಆ ಸೂರ್ಯನನ್ನು **[ತುಜ್ಯಮಾನಾಸಃ]** ತಮ್ಮ ತಮ್ಮ ಕಕ್ಷೆಯೊಳಗೆ ತಮ್ಮ ಪರಿಧಿಯೊಳಗೆ ಚಲಿಸುತ್ತಿರುವ **[ದೇವಾ]** ದಿವ್ಯಗುಣಗಳುಳ್ಳ, ಜೀವಮಾತ್ರರಿಗೆ ಆಶ್ರಯವನ್ನು ಕೊಡುವ ಪೃಥ್ವಿಲೋಕವು ಸುತ್ತುತ್ತಾ **[ಆವಿಷುಃ]** ಪ್ರಾಪ್ತವಾಗುತ್ತದೆ. ಅರ್ಥಾತ್ ತನ್ನ ಪರಿಧಿಯೊಳಗೆ ಸುತ್ತುವ ಭೂಮಿಯು ಸೂರ್ಯನ ಆಕರ್ಷಣಾ ಶಕ್ತಿಯಿಂದ ಸೂರ್ಯನ ಕಡೆಗೆ ಸೆಳೆಯಲ್ಪಡುತ್ತದೆ ಹಾಗೂ ತನ್ನ ಪರಿಧಿಯೊಳಗೆ ಚಲಿಸುತ್ತಾ ಸೂರ್ಯನ ಸುತ್ತ ಚಲಿಸುತ್ತದೆ.

ಭಾವಾರ್ಥ:- ಮೇಘಗಳನ್ನು ನಿರ್ಮಾಣ ಮಾಡುವ ಸೂರ್ಯನು ಅತ್ಯಂತ ತೀಕ್ಷ್ಣಕಿರಣವುಳ್ಳವನಾಗಿದ್ದು, ಘರ್ಜನೆಯನ್ನು ಮಾಡುತ್ತಾ ನಿರ್ಭಯವಾಗಿ ಅತ್ತಿಂದಿತ್ತ ಸಂಚರಿಸುವ ಮೇಘವನ್ನು ಛಿದ್ರ ಛಿದ್ರವನ್ನಾಗಿ ಮಾಡಿ ಮಳೆಯನ್ನು ಸುರಿಸುವಂತೆ ಮಾಡುತ್ತಾನೆ.

ಅಂತಹ ಪ್ರಖರ ತೇಜವುಳ್ಳ ಸೂರ್ಯನನ್ನು ಸಕಲ ಜೀವರಾಶಿಗೆ ಆಶ್ರಯವನ್ನು ಕೊಡುವ ಭೂಮಿಯು ಮತ್ತು ಇತರ ಗ್ರಹೋಪಗ್ರಹಗಳು ತಮ್ಮ ತಮ್ಮ ಕಕ್ಷೆಯೊಳಗೆ, ಪರಿಧಿಯೊಳಗೆ ಚಲಿಸುತ್ತಾ, ಸೂರ್ಯನ ಆಕರ್ಷಣ ಶಕ್ತಿಯಿಂದ ಸೆಳೆಯಲ್ಪಟ್ಟು ಪರಮಾತ್ಮನ ವ್ಯವಸ್ಥೆಗೆ ಅನುಗುಣವಾಗಿ ಸೂರ್ಯನ ಸುತ್ತ ಚಲಿಸುತ್ತವೆ.

ಈ ಮಂತ್ರದಲ್ಲಿ ಇಂದ್ರ ಶಬ್ದದಿಂದ ಶೂರ-ವೀರರ ಗುಣಗಳನ್ನು ವಿವರಿಸಲಾಗಿದೆ.

ತವಾಹಂ ಶೂರ ರಾತಿಭಿಃ ಪ್ರತ್ಯಾಯಂ ಸಿಂಧುಮಾವದನ್ ।

ಉಪಾತಿಷ್ಠಂತ ಗಿರ್ವಣೋ ವಿದುಷ್ಟೇ ತಸ್ಯ ಕಾರವಃ ॥೬॥

ಪದಾರ್ಥ:- ಹೇ [**ಶೂರ**] ದುಷ್ಟನಿವಾರಕ, ಶಿಷ್ಟರ ಸಂರಕ್ಷಕ ಅಪ್ರತಿಮ ಶೂರನಾದ ಪರಮಾತ್ಮ! [**ಯೇ ತವ ರಾತಿಭಿಃ**] ಯಾವುದೆಲ್ಲಾ ನಿನ್ನ ದುಷ್ಟರ ನಾಶ, ಶಿಷ್ಟರ ಪಾಲನೆ, ಧರ್ಮಾತ್ಮರ ಸಂರಕ್ಷಣೆ, ಜೀವಮಾತ್ರರ ಪೋಷಣೆ, ಸರ್ವರಿಗೂ ಅಭಯದಾನವನ್ನಿತ್ತು ಸಕಲ ಚರಾಚರ ಜಗತ್ತನ್ನು ನಡೆಸುವ ಕ್ರಿಯೆಗಳಿಂದ ಅರ್ಥಾತ್ ಈ ಸಂಪೂರ್ಣ ಸೃಷ್ಟಿಯಲ್ಲಿ ನಡೆಯುವ ಪ್ರತಿಯೊಂದು ಕ್ರಿಯೆಗಳ ಅವಲೋಕನವನ್ನು ಮಾಡಿ [**ತ್ವಾಂ**] ನಿನ್ನನ್ನು [**ಸಿಂಧುಮ್**] ಅಪರಿಮಿತ ಸುಖವನ್ನು ಕೊಡುವವನೂ, ಸಮುದ್ರದಂತೆ ಅಥವಾ ಅದಕ್ಕಿಂತ ಮಿಗಿಲಾಗಿ ಗಂಭೀರ ಸ್ವಭಾವವುಳ್ಳವನು ಎಂದು [**ಆ ವದನ್**] ನಿರಂತರವಾಗಿ ಹೇಳುತ್ತೇನೆ. ಹಾಗೂ [**ಪ್ರತಿ ಆಯಮ್**] ನಿನ್ನ ಶ್ರೇಷ್ಠ ಗುಣವನ್ನು ನನ್ನಲ್ಲಿ ಧಾರಣ ಮಾಡಿಕೊಂಡು ನಿನ್ನ ಸಾಮೀಪ್ಯವನ್ನು ಹೊಂದುತ್ತೇವೆ. ನಿನ್ನನ್ನು ಪ್ರಾಪ್ತಿ ಮಾಡಿಕೊಳ್ಳುತ್ತೇನೆ. ಹೇ [**ಗಿರ್ವಣಃ**] ಸರ್ವರಿಂದಲೂ ಸ್ತುತಿಸಲ್ಪಡುವವನೂ ಸರ್ವೋಪಾಸ್ಯನೂ, ಆದ ಪರಮಾತ್ಮ! [**ತವ**] ನಿನ್ನ [**ತಸ್ಯ ಕಾರವಃ**] ಸೃಷ್ಟಿಯ ನಿಯಮಾನುಸಾರ, ಧರ್ಮಾಚರಣೆಯಲ್ಲಿ ಹಾಗೂ ಸತ್ಯಾಚರಣೆಯಲ್ಲಿ ಅರ್ಥಾತ್ ಧಾರ್ಮಿಕ ಮತ್ತು ಸತ್ಯದಿಂದ ಕೂಡಿದ ಸಾತ್ವಿಕ ಜೀವನವನ್ನು ನಡೆಸುತ್ತಾ ಶ್ರೇಷ್ಠ ಕರ್ಮಗಳನ್ನು ಮಾಡುವವರು [**ತ್ವಾಂ ಶೂರಂ ವಿದುಃ**] ನಿನ್ನನ್ನೇ ಎಲ್ಲಾ ಶಕ್ತಿಯ ಮೂಲವೆಂದು ತಿಳಿದು [**ಉಪಾತಿಷ್ಠಂತ**] ನಿನ್ನ ಉಪಾಸನೆಯನ್ನು ಮಾಡುತ್ತಾರೋ, ನಿನ್ನ ಸಾನ್ನಿಧ್ಯವನ್ನು ಹೊಂದುತ್ತಾರೋ [**ತೇ**] ಅವರೆಲ್ಲರೂ ಸದಾ ಸುಖವನ್ನೂ ಆನಂದವನ್ನೂ ಅನುಭವಿಸುತ್ತಾರೆ. ಅತ್ಯಂತ ಸುಖಿಗಳಾಗುತ್ತಾರೆ.

ಭಾವಾರ್ಥ:- ಹೇ ದುಷ್ಟನಿವಾರಕ, ಶಿಷ್ಟರ ಸಂರಕ್ಷಕ ಅಪ್ರತಿಮ ಶೂರನಾದ ಪರಮಾತ್ಮ! ಈ ನಿನ್ನ, ದುಷ್ಟರ ನಾಶ, ಶಿಷ್ಟರ ಪಾಲನೆ, ಧರ್ಮಾತ್ಮರ ಸಂರಕ್ಷಣೆ, ಜೀವಮಾತ್ರರ ಪೋಷಣೆ ಹಾಗೂ ಸರ್ವರಿಗೂ ಅಭಯದಾನ ಇವೆಲ್ಲವುದರ ಮೂಲಕ ಈ ಚರಾಚರ ಜಗತ್ತನ್ನು ನಡೆಸುವ, ಅದ್ವಿತೀಯ ಹಾಗೂ ಅನುಪಮವಾದ ವ್ಯವಸ್ಥೆಯನ್ನು ನೋಡಿ, ನಿನ್ನನ್ನು ಅಪರಿಮಿತವಾದ ಸುಖವನ್ನು ಕೊಡುವವನೂ, ಸಮುದ್ರದಂತೆ ಅಥವಾ ಅದಕ್ಕಿಂತ ಮಿಗಿಲಾಗಿ ಗಂಭೀರ ಸ್ವಭಾವವುಳ್ಳವನು ಎಂದು ತಿಳಿದು, ನಿರಂತರವಾಗಿ ಹೇಳುತ್ತಾ, ನಿನ್ನ ಶ್ರೇಷ್ಠ ಗುಣಗಳನ್ನು ನನ್ನ ಜೀವನದಲ್ಲಿ ಅಳವಡಿಸಿಕೊಂಡು ನಿನ್ನ ಸಾನ್ನಿಧ್ಯವನ್ನು ಹೊಂದಿ ನಿನ್ನನ್ನು ಪ್ರಾಪ್ತ ಮಾಡಿಕೊಳ್ಳುತ್ತೇನೆ.

ಸರ್ವರಿಂದ ಸ್ತುತಿಸಲ್ಪಡುವವನೂ, ಸರ್ವೋಪಾಸ್ಯನೂ ಆದ ಪರಮಾತ್ಮ! ನಿನ್ನ ಸೃಷ್ಟಿಯ ನಿಯಮಾನುಸಾರ ಧಾರ್ಮಿಕ ಮತ್ತು ಸತ್ಯದಿಂದ ಕೂಡಿದ ಸಾತ್ವಿಕ ಜೀವನವನ್ನು ನಡೆಸುತ್ತಾ ಶ್ರೇಷ್ಠಕರ್ಮಗಳನ್ನು ಮಾಡುವವರು, ನಿನ್ನನ್ನೇ ಶಕ್ತಿಯ ಮೂಲವೆಂದು ತಿಳಿದು ಅರ್ಥಾತ್ ಯಾವುದೇ ಕೆಲಸವನ್ನು ಮಾಡುವುದಕ್ಕೂ, ಯಾವುದನ್ನೇ ಆದರೂ ಪ್ರಾಪ್ತಮಾಡಿಕೊಳ್ಳುವುದಕ್ಕೂ ನಿನ್ನ ಶಕ್ತಿ ಮತ್ತು ದಯೆಯಿಂದ ಮಾತ್ರ ಸಾಧ್ಯ. ಅದಿಲ್ಲದಿದ್ದರೆ, ಏನನ್ನೂ ಮಾಡಲಾರೆವು ಎಂದು ತಿಳಿದು ನಿನ್ನ ಉಪಾಸನೆಯನ್ನು ಮಾಡುತ್ತಾರೋ ಅವರು ಅತ್ಯಂತ ಸುಖಿಗಳಾಗುತ್ತಾರೆ. ಸದಾ ಸುಖಶಾಂತಿ ನೆಮ್ಮದಿ ಮತ್ತು ಆನಂದವನ್ನು ಅನುಭವಿಸುತ್ತಾರೆ.

ಮುಂದಿನ ಮಂತ್ರದಲ್ಲಿ ಸೂರ್ಯನ ಗುಣಗಳ ವರ್ಣನೆಯನ್ನು ಮಾಡಲಾಗಿದೆ.

ಮಾಯಾಭಿರಿಂದ್ರ ಮಾಯಿನಂ ತ್ವಂ ಶುಷ್ಣಮವಾತಿರಃ ।

ವಿದುಷ್ಟೇ ತಸ್ಯ ಮೇಧಿರಾ-ಸ್ತೇಷಾಂ ಶ್ರವಾಂಸ್ಯುತ್ತಿರ ॥೭॥

ಪದಾರ್ಥ:- ಹೇ [ಇಂದ್ರ] ಶೂರವೀರನಾದ ರಾಜ ಅಥವಾ ರಾಷ್ಟ್ರದ ನೇತಾರನೇ! [**ತ್ವಂ**] ನೀನು [**ಮಾಯಾಭಿಃ**] ನಿನ್ನ ಪ್ರಜ್ಞಾಬುದ್ಧಿಯ ಮೂಲಕ ವಿವೇಚನೆಯನ್ನು ಮಾಡಿ ವಿಜ್ಞಾನ ಹಾಗೂ ಶಕ್ತಿಯ ಸಹಾಯದಿಂದ, [**ಶುಷ್ಣಂ**] ಸಜ್ಜನರನ್ನು ಹಾಗೂ ಜನಸಾಮಾನ್ಯರನ್ನು ಯಾರು ಪೀಡಿಸುತ್ತಾರೋ ಮತ್ತು [**ಮಾಯಿನಂ**] ತಮ್ಮ ಜ್ಞಾನವಿಜ್ಞಾನದ ದುರುಪಯೋಗವನ್ನು ಮಾಡಿ ನೀಚಕೃತ್ಯವನ್ನು ಮಾಡುತ್ತಾರೋ, ರಾಷ್ಟ್ರದ ಶೋಷಣೆಯನ್ನು ಮಾಡುತ್ತಾರೋ ಅಂತಹ ರಾಷ್ಟ್ರಘಾತಕರನ್ನು [**ಅವ ಆತಿರ**] ಸಂಪೂರ್ಣವಾಗಿ ದಮನ ಮಾಡು, ನಾಶ ಮಾಡು. [**ತಸ್ಯ**] ಅಂತಹ ರಾಷ್ಟ್ರಘಾತಕರನ್ನು ನಾಶ ಮಾಡುವುದರಲ್ಲಿ [**ಮೇಧಿರಾಃ**] ಅತ್ಯಂತ ಪ್ರವೀಣರಾದವರು ಯಾರು ಇದ್ದಾರೋ ಅವರೆಲ್ಲರನ್ನು ಒಂದುಗೂಡಿಸು. ಅಂತಹ ರಾಷ್ಟ್ರ ಸಂರಕ್ಷಕರು [**ತೇ**] ನಿನ್ನ ಆಶ್ರಯದಲ್ಲಿದ್ದು ನಿನ್ನ ಸಹಾಯದಿಂದ [**ಶ್ರವಾಂಸಿ**] ಅನ್ನ ಮೊದಲಾದ ಆಹಾರ ಪದಾರ್ಥಗಳನ್ನು ಸಕಲ ಜೀವನಾವಶ್ಯಕ ವಸ್ತುಗಳನ್ನು ಪಡೆಯುವಂತಾಗಲಿ. ಅವರಿಗೆ ಯಾವುದೇ ರೀತಿಯ ತೊಂದರೆ ಆಗದಿರಲಿ. [**ತ್ವಂ**] ನೀನು ಅವರ ಸಹಾಯದಿಂದ [**ಅರೀಣಾಂ**] ಶತ್ರುಗಳ, ದುಷ್ಟರ, ರಾಷ್ಟ್ರಘಾತುಕ ಶಕ್ತಿಗಳ [**ಬಲಾನಿ ಉತ್ತಿರ**] ಬಲವನ್ನು ಸಂಪೂರ್ಣವಾಗಿ ಕುಂಠಿತವನ್ನಾಗಿ ಮಾಡು. ಎಂದಿಗೂ ನೀಚಕೃತ್ಯಗಳನ್ನು ಮಾಡುವವರು ತಲೆಎತ್ತಲು ಕೂಡಾ ಸಾಧ್ಯವಾಗದಿರಲಿ.

ಭಾವಾರ್ಥ:- ಹೇ ಶೂರವೀರನಾದ ರಾಷ್ಟ್ರದ ಸಂಪೂರ್ಣ ನೇತೃತ್ವವನ್ನು ವಹಿಸಿಕೊಂಡಂತಹ ನೇತಾರನೇ! ನೀನು ನಿನ್ನ ಪ್ರಜ್ಞಾಬುದ್ಧಿಯ ಮೂಲಕ ವಿವೇಚನೆಯನ್ನು ಮಾಡಿ, ನಿನ್ನ ಬುದ್ಧಿಶಕ್ತಿಯಿಂದ ವಿಜ್ಞಾನದ ಬಲದಿಂದ ಹಾಗೂ ವಿಜ್ಞಾನಿಗಳ ಸಹಾಯವನ್ನು ಪಡೆದು, ರಾಷ್ಟ್ರಘಾತಕರನ್ನು ಪ್ರಜೆಗಳ ಶೋಷಣೆಯನ್ನು ಮಾಡುವವರನ್ನು ಮತ್ತು ಜ್ಞಾನ ಹಾಗೂ ವಿಜ್ಞಾನದ ದುರುಪಯೋಗವನ್ನು ಮಾಡಿಕೊಂಡು ಅತ್ಯಂತ ನೀಚಕೃತ್ಯಗಳನ್ನು ಮಾಡುವವರನ್ನು ಸಂಪೂರ್ಣವಾಗಿ ದಮನಮಾಡು. ಅಂತಹ ನೀಚಶತ್ರುಗಳನ್ನು ನಾಶ ಮಾಡಲು ಸಮರ್ಥರಾದವರನ್ನು ಹಾಗೂ ಅತ್ಯಂತ ಪ್ರವೀಣರಾದವರನ್ನು ಒಂದುಗೂಡಿಸು. ಅವರೆಲ್ಲರೂ ನಿನ್ನ ಆಶ್ರಯದಲ್ಲಿದ್ದು ಸಕಲ ಸುಖಸೌಲಭ್ಯಗಳನ್ನು ಪಡೆದು ಸರ್ವವಿಧದಲ್ಲಿಯೂ ನಿಶ್ಚಿಂತರಾಗಲಿ. ನೀನು ಅವರ ಸಹಾಯದಿಂದ ಶತ್ರುಗಳ, ದುಷ್ಟರ, ರಾಷ್ಟ್ರಘಾತುಕರ, ರಾಷ್ಟ್ರವನ್ನು ಶೋಷಣೆ ಮಾಡುವವರ ಮತ್ತು ಪ್ರಜಾಪೀಡಕರ ಬಲವನ್ನು ಸಂಪೂರ್ಣವಾಗಿ ಕುಂಠಿತಗೊಳಿಸು. ಅವರು ಸಂಪೂರ್ಣವಾಗಿ ನಾಶವಾಗಲಿ. ಮುಂದೆಂದಿಗೂ ತಲೆ ಎತ್ತಲು ಸಾಧ್ಯವಾಗದಿರಲಿ. ಇದರಿಂದ ರಾಷ್ಟ್ರದಲ್ಲಿ ಸದಾ ಭಯಭೀತಿಯ ನಾಶವಾಗಿ ಎಲ್ಲರೂ ನಿರ್ಭಯರಾಗಿ ನಿಶ್ಚಿಂತರಾಗಿ ಬಾಳುವಂತಾಗಲಿ.

ಈ ಮಂತ್ರದಲ್ಲಿ ಈಶ್ವರನ ಗುಣಗಳನ್ನು ವಿವರಿಸಲಾಗಿದೆ.

ಇಂದ್ರಮೀಶಾನಮೋಜಸಾ-ಭಿ ಸ್ತೋಮಾ ಅನೂಷತ ।

ಸಹಸ್ರಂ ಯಸ್ಯ ರಾತಯ ಉತ ವಾ ಸಂತಿ ಭೂಯಸೀಃ ॥೮॥

ಪದಾರ್ಥ:- [**ಯಸ್ಯಸ್ತೋಮಾಃ**] ಯಾವ ಪರಮಾತ್ಮನ ಸ್ತುತಿಸಮೂಹಗಳು [**ಸಹಸ್ರಂ**] ಸಾವಿರಾರು [**ಉತ ವಾ**] ಅಥವಾ [**ಭೂಯಸೀಃ**] ಅದಕ್ಕಿಂತಲೂ ಅಧಿಕ ಮತ್ತು [**ರಾತಯಃ**] ಪರಮಾತ್ಮನಿಂದ ಪ್ರಾಣಿಮಾತ್ರರಿಗೆ ಪ್ರಾಪ್ತವಾದ ದಾನಗಳು [**ಸಂತಿ**] ಇವೆಯೋ ಅವೆಲ್ಲವೂ [**ಓಜಸಾ**] ಯಾವನ ಸದಾ ತನ್ನ ಬಲವು ಮತ್ತು ಪ್ರಕಾಶವು ಎಂದಿಗೂ ನ್ಯೂನವಾಗುವುದಿಲ್ಲವೋ ನಶಿಸುವುದಿಲ್ಲವೋ ಅಂತಹ [**ಇಂದ್ರಂ**] ಸರ್ವಶಕ್ತನಾದ ಪರಮಾತ್ಮನನ್ನು [**ಅಭ್ಯನೂಷತ**] ಎಲ್ಲಾ ವಿಧದಲ್ಲಿ ಸ್ತುತಿಸುತ್ತವೆ. ಅವನ ಸ್ವರೂಪವನ್ನು ವರ್ಣಿಸುತ್ತವೆ. ಅಂತಹ ಪರಮಾತ್ಮನನ್ನೇ ಎಲ್ಲರೂ ಉಪಾಸಿಸಬೇಕು.

ಭಾವಾರ್ಥ:- ಯಾವ ಪರಮಾತ್ಮನ ಸ್ತುತಿ ಸಮೂಹಗಳು ಸಹಸ್ರಾರು ಇವೆಯೋ ಅರ್ಥಾತ್ ಯಾವ ಪರಮಾತ್ಮನನ್ನು ಹಲವು ವಿಧದಿಂದ ಹಲವು ಮಂತ್ರಗಳಿಂದ ಸ್ತುತಿಸುತ್ತೇವೆಯೋ ಮತ್ತು ಯಾವ ಪರಮಾತ್ಮನಿಂದ

ಪ್ರಾಣಿಮಾತ್ರರಿಗೋಸ್ಕರ ಪ್ರಾಪ್ತವಾದ ದಾನಗಳು ಇವೆಯೋ ಅರ್ಥಾತ್ ಈ ಸೃಷ್ಟಿಯಲ್ಲಿ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಸಮಸ್ತ ಪದಾರ್ಥಗಳು ಇವೆಯೋ ಅವೆಲ್ಲವೂ, ಯಾವ ಪರಮಾತ್ಮನು ಸದಾ ತನ್ನ ಅನಂತ ಬಲ ಮತ್ತು ಪ್ರಕಾಶದೊಂದಿಗೆ ವಿದ್ಯಮಾನನಾಗಿರುತ್ತಾನೆಯೋ, ಯಾವನ ಬಲ ಮತ್ತು ಪ್ರಕಾಶವು ಎಂದಿಗೂ ನ್ಯೂನವಾಗುವುದಿಲ್ಲವೋ, ನಶಿಸುವುದಿಲ್ಲವೋ ಅಂತಹ ಸರ್ವಶಕ್ತನಾದ ಪರಮಾತ್ಮನ ಸ್ವರೂಪವನ್ನು ವರ್ಣಿಸುತ್ತವೆ. ಅವನ ಗುಣಗಾನವನ್ನು ಮಾಡುತ್ತವೆ. ಅಂತಹ ಪರಮಾತ್ಮನನ್ನೇ ಉಪಾಸಿಸಬೇಕು. ಸೃಷ್ಟಿಯಲ್ಲಿರುವ ಸಮಸ್ತ ಪದಾರ್ಥಗಳು ಸೃಷ್ಟಿಕರ್ತನಾದ ಪರಮಾತ್ಮನ ಸ್ವರೂಪವನ್ನು ವರ್ಣಿಸುತ್ತವೆ. ಆದುದರಿಂದ ಈ ಚರಾಚರ ಜಗತ್ತಿನಲ್ಲಿ ಪ್ರತಿಯೊಂದು ಕಣಕಣದಲ್ಲಿ, ಪ್ರತಿಯೊಂದು ವಸ್ತುವಿನಲ್ಲಿ ಪ್ರಾಣಿಮಾತ್ರರಲ್ಲಿ ಪರಮಾತ್ಮನ ಸ್ವರೂಪವನ್ನು ಕಂಡು ಎಲ್ಲವನ್ನೂ ಸಂರಕ್ಷಿಸಬೇಕು. ಎಲ್ಲಾ ಪದಾರ್ಥಗಳ ಸದುಪಯೋಗವನ್ನು ಪಡೆದು ಸದ್ವಿನಿಯೋಗವನ್ನು ಮಾಡಬೇಕು. ಎಲ್ಲರಲ್ಲಿ ಪರಮಾತ್ಮನನ್ನೇ ಕಂಡು ಸಮಭಾವದಿಂದ ಪ್ರೀತಿಸಬೇಕು.

ಈ ಸೂಕ್ತದಲ್ಲಿ ಇಂದ್ರ ಶಬ್ದದ ಮೂಲಕ ಈಶ್ವರನ ಸ್ತುತಿ, ನಿರ್ಭಯತೆ, ಸೂರ್ಯನ ಕಾರ್ಯ, ಶೂರವೀರರ ಗುಣಗಳು, ದುಷ್ಟ ಶತ್ರುಗಳ ನಿವಾರಣೆ, ಪ್ರಜೆಗಳ ಸಂರಕ್ಷಣೆ ಹಾಗೂ ಈಶ್ವರನ ಅನಂತ ಸಾಮರ್ಥ್ಯ ಇತ್ಯಾದಿಗಳನ್ನು ವರ್ಣಿಸಲಾಗಿದೆ. ಈ ಏಕಾದಶ ಸೂಕ್ತದೊಂದಿಗೆ ಪೂರ್ವೋಕ್ತ ದಶಮ ಸೂಕ್ತದ ಸಂಗತಿಕರಣ ಇದೆಯೊಂದು ಸರ್ವರೂ ಗಮನಿಸಬೇಕು.

ಹನ್ನೊಂದನೆಯ ಸೂಕ್ತ ಸಮಾಪ್ತ

ಸೂಕ್ತ ೧೨

ಮಂತ್ರಸಂಖ್ಯೆ ೧೨ । ಋಷಿಃ - ಮೇಧಾತಿಥಿಃ ಕಾಣ್ವಃ । ದೇವತಾ - ಅಗ್ನಿಃ । ಛಂದಃ - ಗಾಯತ್ರೀ । ಸ್ವರಃ - ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಭೌತಿಕ ಅಗ್ನಿಯ ಗುಣಗಳನ್ನು ವರ್ಣಿಸಲಾಗಿದೆ.

ಅಗ್ನಿಂ ದೂತಂ ವೃಣೀಮಹೇ ಹೋತಾರಂ ವಿಶ್ವವೇದಸಮ್ । ಅಸ್ಯ ಯಜ್ಞಸ್ಯ ಸುಕ್ರತುಮ್ ॥೧॥

ಪದಾರ್ಥಃ:- [ಅಸ್ಯ ಯಜ್ಞಸ್ಯ] ಈ ಬ್ರಹ್ಮಾಂಡರೂಪೀ ಯಜ್ಞದ **[ಸುಕ್ರತುಮ್]** ಜ್ಞಾತಾ, ಕರ್ತಾ ಮತ್ತು ಧರ್ತಾ ಅರ್ಥಾತ್ ಸಂಪೂರ್ಣ ಜ್ಞಾನವುಳ್ಳವನೂ ಸರ್ವೋತ್ಕೃಷ್ಟ ಸೃಷ್ಟಿಕರ್ತನೂ ಹಾಗೂ ಎಲ್ಲವನ್ನೂ ಧಾರಣೆ ಮಾಡಿಕೊಂಡು ಆಧಾರನೂ ಆದ **[ವಿಶ್ವವೇದಸಮ್]** ಸಂಪೂರ್ಣ ಚರಾಚರ ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು ಆಗುಹೋಗುಗಳನ್ನು, ಪ್ರತಿಯೊಂದು ಕ್ರಿಯಾಕಲಾಪಗಳನ್ನು ಪೂರ್ಣವಾಗಿ ಬಲ್ಲವನು ಹಾಗೂ ಸಕಲೈಶ್ವರ್ಯಸ್ವಾಮಿಯೂ ಆದ, **[ಹೋತಾರಮ್]** ಸೃಷ್ಟಿಯ ಆದಿಯಲ್ಲಿ ಎಲ್ಲವನ್ನೂ ಕೊಟ್ಟು ಪ್ರಳಯ ಕಾಲದಲ್ಲಿ ಸರ್ವಸ್ವವನ್ನು ಹರಣ ಮಾಡುವವನೂ ಆದ **[ದೂತಂ]** ಸರ್ವೋಪಾಸ್ಯನೂ, ಪ್ರತಿಯೊಂದು ಪದಾರ್ಥದಲ್ಲಿ ಪ್ರತಿಯೊಂದು ಅಣು ಅಣುವಿನಲ್ಲಿಯೂ ಗತಿಯನ್ನುಂಟುಮಾಡುವವನೂ, ಹಾಗೂ ದುಷ್ಟರಿಗೆ ಸಂತಾಪವನ್ನುಂಟುಮಾಡುವವನೂ ಆದ **[ಅಗ್ನಿಂ]** ಸರ್ವಾಗ್ರಣಿಯೂ, ಸರ್ವಪ್ರಕಾಶಸ್ವರೂಪನೂ, ಸಚ್ಚಿದಾನಂದನೂ ಆದ ಪರಮಾತ್ಮನನ್ನು **[ವೃಣೀಮಹೇ]** ವರಣಮಾಡುತ್ತೇವೆ, ಉಪಾಸಿಸುತ್ತೇವೆ.

ಭಾವಾರ್ಥ:- ಈ ಬ್ರಹ್ಮಾಂಡವೇ ಒಂದು ಯಜ್ಞವಾಗಿದೆ. ಈ ಯಜ್ಞದ ಅರ್ಥಾತ್ ಈ ಬ್ರಹ್ಮಾಂಡದ ಸಂಪೂರ್ಣ ಜ್ಞಾನವುಳ್ಳವನೂ ಹಾಗೂ ಪ್ರಾಣಿಮಾತ್ರರ ಕಲ್ಯಾಣಕ್ಕೋಸ್ಕರ ಸೃಷ್ಟಿಯ ಆದಿಯಲ್ಲಿಯೇ ವೇದಗಳ ಮೂಲಕ ಜ್ಞಾನವನ್ನು ಕೊಡುವವನೂ, ಸಕಲ ಚರಾಚರಜಗತ್ತಿನ ಸರ್ವೋತ್ಕೃಷ್ಟ ಸೃಷ್ಟಿಕರ್ತನೂ, ಎಲ್ಲವನ್ನೂ ಧಾರಣ ಮಾಡಿಕೊಂಡು ಸರ್ವಾಧಾರನೂ ಆದ, ಸಂಪೂರ್ಣ ಚರಾಚರ ಜಗತ್ತಿನಲ್ಲಿ ನಡೆಯುವ ಪ್ರತಿಯೊಂದು

ಕ್ರಿಯಾಕಲಾಪಗಳನ್ನು ಪೂರ್ಣವಾಗಿ ಬಲ್ಲವನೂ ಹಾಗೂ ಸಕಲೈಶ್ವರ್ಯಸ್ವಾಮಿಯೂ ಆದ, ಸೃಷ್ಟಿಯ ಆದಿಯಲ್ಲಿ ಎಲ್ಲವನ್ನೂ ಕೊಟ್ಟು ಪ್ರಳಯ ಕಾಲದಲ್ಲಿ ಸರ್ವಸ್ವವನ್ನೂ ಹರಣ ಮಾಡುವವನೂ ಆದ, ಸರ್ವೋಪಾಸ್ಯನೂ, ಪ್ರತಿಯೊಂದು ಪದಾರ್ಥದಲ್ಲಿಯೂ, ಪ್ರತಿಯೊಂದು ಅಣು ಅಣುವಿನಲ್ಲಿಯೂ ಗತಿಯನ್ನುಂಟು ಮಾಡುವವನೂ ಹಾಗೂ ದುಷ್ಟರನ್ನು ದಂಡಿಸುವವನೂ ಸಂತಪ್ತರನ್ನಾಗಿ ಮಾಡುವವನೂ ಆದ, ಸರ್ವಾಗ್ರಣಿಯೂ, ಸರ್ವಪ್ರಕಾಶ ಸ್ವರೂಪನೂ, ಸಚ್ಚಿದಾನಂದನೂ ಆದ ಪರಮಾತ್ಮನನ್ನು ನಾವೆಲ್ಲರೂ ವರಣ ಮಾಡುತ್ತೇವೆ. ಅತ್ಯಂತ ಶ್ರದ್ಧಾ ಭಕ್ತಿಯಿಂದ ಉಪಾಸಿಸುತ್ತೇವೆ.

ಮುಂದಿನ ಮಂತ್ರದಲ್ಲಿ ದ್ವಿವಿಧಾಗ್ನಿ ಅರ್ಥಾತ್ ಪರಮಾತ್ಮ ಹಾಗೂ ಭೌತಿಕ ಅಗ್ನಿಯ ಸ್ವರೂಪದ ವರ್ಣನೆಯನ್ನು ಮಾಡಲಾಗುತ್ತದೆ.

ಅಗ್ನಿಮಗ್ನಿಂ ಹವೀಮಭಿಃ ಸದಾ ಹವಂತ ವಿಶ್ಪತಿಮ್ । ಹವ್ಯವಾಹಂ ಪುರುಪ್ರಿಯಮ್ ॥೨॥

ಪದಾರ್ಥ:- [ಪುರುಪ್ರಿಯಂ] ಯಾವನಿಂದ ಸಮಸ್ತ ಸುಖ ಸೌಲಭ್ಯಗಳು, ಸಂತೋಷ ಹಾಗೂ ಆನಂದದ ಪ್ರಾಪ್ತಿಯಾಗುತ್ತದೆಯೋ, ಯಾವನು ಜೀವಮಾತ್ರರಿಗೆ ಅತ್ಯಂತ ಪ್ರಿಯನಾಗಿದ್ದಾನೆಯೋ **[ವಿಶ್ಪತಿಂ]** ಸಕಲ ಪ್ರಜೆಗಳ ಜೀವಮಾತ್ರರ ಪಾಲಕನೂ, ಪೋಷಕನೂ ಸಂರಕ್ಷಕನೂ, ಸ್ವಾಮಿಯೂ ಆಗಿದ್ದಾನೆಯೋ, **[ಹವ್ಯವಾಹಂ]** ಸೃಷ್ಟಿಯ ಆದಿಯಲ್ಲಿ ಎಲ್ಲವನ್ನೂ ಕೊಡುವವನೂ, ಪ್ರಳಯಕಾಲದಲ್ಲಿ ಸರ್ವಸ್ವವನ್ನೂ ಲಯಮಾಡುತ್ತಾ ಕಾರಣದಲ್ಲಿ ಲೀನ ಮಾಡುವವನೂ, ಭಕ್ತರ ಕಷ್ಟ, ದುಃಖ, ದಾರಿದ್ರ್ಯ, ಅಜ್ಞಾನ, ಕ್ಲೇಶಗಳನ್ನು ನಿವಾರಣೆ ಮಾಡುವವನೂ ಆಗಿದ್ದಾನೆಯೋ ಅಂತಹ **[ಅಗ್ನಿಮ್]** ಪ್ರಕಾಶ ಸ್ವರೂಪ, ಸರ್ವಾಗ್ರಣಿ ಸಚ್ಚಿದಾನಂದನೂ ಆದ ಪರಮಾತ್ಮನನ್ನು **[ಹವೀಮಭಿಃ]** ಅವನ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉಪಾಸನೆಯ ಮೂಲಕ ನಾವೆಲ್ಲರೂ **[ವೃಣೀಮಹೇ]** ವರಣ ಮಾಡುತ್ತೇವೆ. ಸರ್ವಥಾ ನಮ್ಮವನನ್ನಾಗಿ ಮಾಡಿಕೊಳ್ಳುತ್ತೇವೆ. ಅದೇ ರೀತಿ ನೀವೆಲ್ಲರೂ **[ಸದಾಹವಂತ]** ಸದಾಕಾಲ ಉಪಾಸಿಸಿರಿ.

ಭೌತಿಕಾರ್ಥ:- **[ಹವೀಮಭಿಃ]** ಯಾವುದರಿಂದ ಎಲ್ಲಾ ರೀತಿಯ ಸುಖ ಮತ್ತು ಆರಾಮದಾಯಕವಾದ ವಸ್ತುಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತೇವೆಯೋ, **[ಪುರುಪ್ರಿಯಂ]** ಯಾವುದರಿಂದ ಎಲ್ಲಾ ರೀತಿಯ ಸುಖವನ್ನು, ಸೌಲಭ್ಯಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತೇವೆಯೋ, ಯಾವುದು ಎಲ್ಲರಿಗೂ ಅತ್ಯಂತ ಪ್ರಿಯವಾಗಿದೆಯೋ **[ವಿಶ್ಪತಿಂ]** ಯಾವುದು ಎಲ್ಲರ ಮೇಲೆ ತನ್ನ ಆಧಿಪತ್ಯವನ್ನು ನಡೆಸುತ್ತದೆಯೋ **[ಹವ್ಯವಾಹಂ]** ಯಾವುದು ಬರುವಾಗ ಎಲ್ಲರಿಗೂ ಸಂತೋಷವನ್ನುಂಟುಮಾಡಿ ಹೋಗುವಾಗ ಎಲ್ಲರನ್ನೂ ಪೀಡಿಸುತ್ತದೆಯೋ ಅಂತಹ **[ಅಗ್ನಿಮ್]** ವಿದ್ಯುತ್ತನ್ನು, ವಿದ್ಯುದ್ರೂಪ ಅಗ್ನಿಯನ್ನು ನಾವೆಲ್ಲರೂ **[ವೃಣೀಮಹೇ]** ಎಲ್ಲಾ ವಿಧದಲ್ಲಿ ಪ್ರಾಪ್ತ ಮಾಡಿಕೊಂಡು ಅದರ ಸದುಪಯೋಗವನ್ನೂ, ಸದ್ವಿನಿಯೋಗವನ್ನೂ ಮಾಡುತ್ತೇವೆ. ಅದೇ ರೀತಿ ನೀವೆಲ್ಲರೂ **[ಸದಾಹವಂತ]** ಸದಾಕಾಲ ಸರ್ವವಿಧದಲ್ಲಿ ವಿದ್ಯುತ್ತನ್ನು ಪ್ರಾಪ್ತಮಾಡಿಕೊಂಡು ಅದರ ಸದ್ವಿನಿಯೋಗವನ್ನು ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ **[ಅಗ್ನಿಮಗ್ನಿಮ್]** ಅಗ್ನಿಂ ಅಗ್ನಿಮ್ = ಈ ರೀತಿ ಎರಡು ಬಾರಿ ಅಗ್ನಿ ಶಬ್ದದ ಪ್ರಯೋಗವಾಗಿದೆ. ಮೊದಲನೆಯ ಅಗ್ನಿಯ ಪರಮಾತ್ಮ ಎಂಬರ್ಥವನ್ನೂ ಎರಡನೆಯ ಅಗ್ನಿಯ ವಿದ್ಯುತ್ ಎಂಬರ್ಥವನ್ನೂ ಗ್ರಹಣ ಮಾಡಬೇಕು. ಈ ರೀತಿ ಈ ಮಂತ್ರಕ್ಕೆ ಆಧ್ಯಾತ್ಮಿಕ ಹಾಗೂ ಭೌತಿಕ ಎರಡು ಅರ್ಥಗಳೂ ಆಗುತ್ತವೆ.

ಪರಮಾತ್ಮನು ಸರ್ವರಿಗೂ ಸರ್ವವಿಧದಲ್ಲಿ ಸುಖಸಂತೋಷ, ಆನಂದ ಆಯುರಾರೋಗ್ಯ, ವಿದ್ಯೆ ಬುದ್ಧಿ ಮೊದಲಾದುವನ್ನು ಕೊಡುವವನೂ ಎಲ್ಲರಿಗೂ ಅತ್ಯಂತ ಪ್ರಿಯನಾದವನೂ, ಭಕ್ತವತ್ಸಲನೂ, ಸೃಷ್ಟಿಯ ಆದಿಯಲ್ಲಿ

ಎಲ್ಲವನ್ನೂ ಕೊಟ್ಟು ಪ್ರಳಯ ಕಾಲದಲ್ಲಿ ಎಲ್ಲವನ್ನೂ ಹಿಂದಕ್ಕೆ ಪಡೆಯುವವನೂ, ಜೀವಮಾತ್ರರ ಪಾಲಕನೂ, ಪೋಷಕನೂ, ಸಂರಕ್ಷಕನೂ, ಸ್ವಾಮಿಯೂ ಆಗಿದ್ದಾನೆ. ಅಂತಹ ಭಗವಂತನನ್ನು, ಅವನ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಶ್ರದ್ಧಾಭಕ್ತಿಯಿಂದ ಒಲೈಸಿಕೊಂಡು ನಮ್ಮವನನ್ನಾಗಿ ಮಾಡಿಕೊಳ್ಳುತ್ತೇವೆ. ಅರ್ಥಾತ್ ಪ್ರಾಪ್ತ ಮಾಡಿಕೊಳ್ಳುತ್ತೇವೆ. ಅದೇ ರೀತಿ ನೀವೆಲ್ಲರೂ ಭಗವಂತನ ಗುಣಗಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಶ್ರದ್ಧಾಭಕ್ತಿಯಿಂದ ಒಲೈಸಿಕೊಂಡು ಉಪಾಸನೆಯ ಮೂಲಕ ಪ್ರಾಪ್ತಮಾಡಿಕೊಳ್ಳಿರಿ.

ಭೌತಿಕಾರ್ಥದಲ್ಲಿ ಅಗ್ನಿಯ ಅರ್ಥ ವಿದ್ಯುತ್ ಎಂದಾಗುತ್ತದೆ. ನಾವೆಲ್ಲರೂ ವಿದ್ಯುತ್ತಿನ ಸಹಾಯದಿಂದ ಎಲ್ಲಾ ರೀತಿ ಸುಖ ಮತ್ತು ಆರಾಮದಾಯಕವಾದ ವಸ್ತುಗಳನ್ನು ಪ್ರಾಪ್ತಮಾಡಿಕೊಳ್ಳುತ್ತೇವೆ. ವಿದ್ಯುತ್ತಿನ ಸಹಾಯದಿಂದ ಎಲ್ಲಾ ರೀತಿಯ ಸುಖವನ್ನು ಅನುಭವಿಸುತ್ತಾ ಸೌಲಭ್ಯಗಳನ್ನು ಪಡೆದುಕೊಳ್ಳುತ್ತೇವೆ. ಎಲ್ಲರಿಗೂ ಪ್ರಿಯವಾದ ವಿದ್ಯುತ್ತಿನ ಸಹಾಯದಿಂದ ಎಲ್ಲಾ ರೀತಿಯ ಸುಖವನ್ನು ಅನುಭವಿಸುತ್ತಾ ಸೌಲಭ್ಯಗಳನ್ನು ಪಡೆದುಕೊಳ್ಳುತ್ತೇವೆ. ಎಲ್ಲರಿಗೂ ಪ್ರಿಯವಾದ ಈ ವಿದ್ಯುತ್ತು ಸರ್ವರ ಮೇಲೆ ತನ್ನ ಆಧಿಪತ್ಯವನ್ನು ತೋರಿಸುತ್ತದೆ. ಇದು ಬರುವಾಗ ಎಲ್ಲರಿಗೂ ಸಂತೋಷವಾಗುತ್ತದೆ. ಹೋಗುವಾಗ ಎಲ್ಲರನ್ನೂ ಪೀಡಿಸುತ್ತದೆ. ಎಲ್ಲರ ನೆಮ್ಮದಿಯನ್ನು ಹಾಳು ಮಾಡುತ್ತದೆ. ಇಂತಹ ಸರ್ವಜನೋಪಯೋಗಿ ವಿದ್ಯುತ್ತನ್ನು ಎಲ್ಲಾ ವಿಧದಲ್ಲಿ ಪ್ರಾಪ್ತಮಾಡಿಕೊಂಡು ಅದರ ಸದುಪಯೋಗವನ್ನೂ, ಸದ್ವಿನಿಯೋಗವನ್ನೂ ಮಾಡುತ್ತೇವೆ.

ಅದೇ ರೀತಿ ನೀವೆಲ್ಲರೂ ಸರ್ವವಿಧದಲ್ಲಿ ವಿದ್ಯುಚ್ಛಕ್ತಿಯನ್ನು ಪಡೆದುಕೊಂಡು ಅದರ ಸದುಪಯೋಗವನ್ನೂ ಸದ್ವಿನಿಯೋಗವನ್ನೂ ಮಾಡಿರಿ.

ಮುಂದಿನ ಮಂತ್ರದಲ್ಲಿ ಅಗ್ನಿ ಶಬ್ದದಿಂದ ಈಶ್ವರ ಮತ್ತು ಭೌತಿಕ ಗುಣಗಳೆರಡರ ವರ್ಣನೆ ಮಾಡಲಾಗಿದೆ.

ಅಗ್ನೇ ದೇವಾँ ಇಹಾ ವಹ ಜಜ್ಞಾನೋ ವೃಕ್ತಬರ್ಹಿಷೇ । ಅಸಿ ಹೋತಾ ನ ಈಡ್ಯಃ ॥೩॥

ಪದಾರ್ಥ:- ಹೇ **[ಅಗ್ನೇ]** ಸರ್ವೋಪಾಸ್ಯ ವಂದನೀಯ, ಪೂಜನೀಯ ಪರಮಾತ್ಮ! **[ಇಹ]** ನೀನು ಈ ಜಗತ್ತಿನಲ್ಲಿ **[ಜಜ್ಞಾನಃ]** ಸೃಷ್ಟಿಯ ಆದಿಯಲ್ಲಿಯೇ ಪ್ರತಿಯೊಂದು ಪದಾರ್ಥವನ್ನು ಪ್ರಕಟವನ್ನಾಗಿ ಮಾಡಿ **[ಹೋತಾ]** ನಿನ್ನಿಂದ ಸೃಷ್ಟಿಸಲ್ಪಟ್ಟು ಪ್ರಕಟವಾದ ಸಮಸ್ತ ಪದಾರ್ಥಗಳನ್ನು ಜೀವಮಾತ್ರರಿಗೆ ಕೊಡುವವನಾದ ಕಾರಣ **[ಈಡ್ಯಃ ಅಸಿ]** ಸರ್ವರಿಂದಲೂ ಉಪಾಸಿಸಲ್ಪಡುವವನೂ, ಸ್ತುತಿಸಲ್ಪಡುವವನೂ ಆಗಿದ್ದೀಯೆ. **[ನಃ]** ನಮ್ಮೆಲ್ಲರಿಗೆ ಮತ್ತು **[ವೃಕ್ತ ಬರ್ಹಿಷೇ]** ಯಜ್ಞದಲ್ಲಿ ಸ್ವಾಹಾಕಾರದ ಮೂಲಕ ಹವಿಸ್ಸನ್ನು ಅರ್ಪಿಸಿ ಅದನ್ನು ಅಂತರಿಕ್ಷದಲ್ಲಿ ವ್ಯಾಪಿಸುವಂತೆ ಮಾಡುವ ಋತ್ವಿಜರಿಗೆ **[ದೇವಾನ್]** ದಿವ್ಯಗುಣಗಳುಳ್ಳ ಸಮಸ್ತ ಪದಾರ್ಥಗಳನ್ನು ಸಮಸ್ತ ಶ್ರೇಷ್ಠ ಪದಾರ್ಥಗಳನ್ನು **[ಆ ವಹ]** ಎಲ್ಲಾ ವಿಧದಲ್ಲಿ ಪ್ರಾಪ್ತವಾಗುವಂತೆ ಮಾಡು.

ಅಥ ದ್ವಿತೀಯೋರ್ಥಃ:- **[ಅಯಂ ಹೋತಾ]** ಯಜ್ಞದಲ್ಲಿ ಹಾಕಿದ ಸಮಸ್ತ ಹವಿಸ್ಸನ್ನು ಸಮಸ್ತ ಪದಾರ್ಥಗಳನ್ನು ಪ್ರಾಪ್ತ ಮಾಡಿಕೊಂಡು, ಎಲ್ಲವನ್ನೂ ಸೂಕ್ಷ್ಮಕಣಗಳಲ್ಲಿ ವಿಭಾಜಿಸಿ, ನಭೋ ಮಂಡಲದಲ್ಲಿ ವ್ಯಾಪಿಸಿ, **[ಜಜ್ಞಾನಃ]** ಜೀವಮಾತ್ರರಿಗೆ ಪ್ರಾಪ್ತವಾಗುವಂತೆ ಮಾಡುವ **[ಅಗ್ನೇ]** ಯಜ್ಞಾಗ್ನಿಯೇ **[ವೃಕ್ತ ಬರ್ಹಿಷೇ]** ಸಮಸ್ತ ಋತ್ವಿಜರಿಗೆ ಮತ್ತು **[ನಃ]** ನಮ್ಮೆಲ್ಲರಿಗೆ **[ದೇವಾನ್ ಆ ವಹ]** ಎಲ್ಲಾ ಉತ್ತಮ ಪದಾರ್ಥಗಳು ಪ್ರಾಪ್ತವಾಗುವಂತೆ ಮಾಡುತ್ತದೆ. ಆದುದರಿಂದ **[ನಃ]** ನಮ್ಮೆಲ್ಲರಿಗೆ ಅಗ್ನಿಯು **[ಈಡ್ಯಃ]** ಆದರಣೀಯನು ಆಗಿದ್ದಾನೆ.

ಭಾವಾರ್ಥ:- ಹೇ ಸರ್ವೋಪಾಸ್ಯನಾದ ಪರಮಾತ್ಮ! ನೀನು ಈ ಚರಾಚರ ಜಗತ್ತಿನಲ್ಲಿ ಸಕಲ ಪದಾರ್ಥಗಳನ್ನು ಸೃಷ್ಟಿಸಿ ಜೀವಮಾತ್ರರಿಗೆ ಕೊಡುವವನು ಆದಕಾರಣ ನಮ್ಮೆಲ್ಲರಿಗೆ ವಂದನೀಯನೂ ಪೂಜನೀಯನೂ ಉಪಾಸ್ಯನೂ

ಆಗಿದ್ದೀಯೆ. ಹೇ ಸರ್ವಾಧಾರ! ಸಕಲೈಶ್ವರ್ಯಪ್ರದಾತಾ! ನಮ್ಮೆಲ್ಲರಿಗೆ ಮತ್ತು ಯಾರು ಯಜ್ಞದಲ್ಲಿ ಸಕಲ ಪದಾರ್ಥಗಳನ್ನು ಹವಿಸ್ಸನ್ನು ಸ್ವಾಹಾಕಾರದ ಮೂಲಕ ಅರ್ಪಿಸಿ ಎಲ್ಲವನ್ನೂ ಅಂತರಿಕ್ಷದಲ್ಲಿ ವ್ಯಾಪಿಸುವಂತೆ ಮಾಡುತ್ತಾರೋ ಅಂತಹ ಋತ್ವಿಜರಿಗೆ ಸಮಸ್ತ ದಿವ್ಯಪದಾರ್ಥಗಳನ್ನು ಸಮಸ್ತ ಶ್ರೇಷ್ಠ ಪದಾರ್ಥಗಳನ್ನು ಸರ್ವವಿಧದಲ್ಲಿ ಪ್ರಾಪ್ತವಾಗುವಂತೆ ಮಾಡು.

ಯಜ್ಞದಲ್ಲಿ ಅರ್ಪಿಸಿದ ಸಮಸ್ತ ಹವಿಸ್ಸನ್ನು ಸಕಲ ಪದಾರ್ಥಗಳನ್ನೂ ಪಡೆದುಕೊಂಡು ಎಲ್ಲವನ್ನೂ ಸೂಕ್ಷ್ಮ ಕಣಗಳಲ್ಲಿ ವಿಭಾಜಿಸಿ ಅಂತರಿಕ್ಷದಲ್ಲಿ ವ್ಯಾಪಿಸುವಂತೆ ಮಾಡಿ, ಜೀವಮಾತ್ರರಿಗೆ ಪ್ರಾಪ್ತವಾಗುವಂತೆ ಮಾಡುವ ಅಗ್ನಿಯು ನಮ್ಮೆಲ್ಲರಿಗೆ ಮತ್ತು ಸಮಸ್ತ ಋತ್ವಿಜರಿಗೆ ಸಕಲ ದಿವ್ಯಪದಾರ್ಥಗಳನ್ನು ಪ್ರಾಪ್ತವಾಗುವಂತೆ ಮಾಡುತ್ತಾನೆ. ಆದುದರಿಂದ ಅಗ್ನಿಯು ನಮ್ಮೆಲ್ಲರಿಗೆ ಆದರಣೀಯನು ಆಗಿದ್ದಾನೆ.

ಈ ಮಂತ್ರದಲ್ಲಿ ಭೌತಿಕ ಅಗ್ನಿಯ ಗುಣಗಳನ್ನು ವರ್ಣಿಸಲಾಗಿದೆ.

ತಾँ ಉಶತೋ ವಿ ಬೋಧಯ ಯದಗ್ನೇ ಯಾಸಿ ದೂತ್ಯಮ್ । ದೇವೈರಾ ಸತ್ಸಿ ಬರ್ಹಿಷಿ ॥೪॥

ಪದಾರ್ಥ:- ಹೇ **[ಅಗ್ನೇ]** ಯಜ್ಞದಲ್ಲಿ ಪ್ರಜ್ವಲಿಸಲ್ಪಟ್ಟ ಅಗ್ನಿಯೇ! **[ಯತ್ ದೇವೈಃ ಸಹ]** ನಿನ್ನಲ್ಲಿ ಅರ್ಪಿಸಲ್ಪಟ್ಟ ಯಾವುದೆಲ್ಲಾ ದಿವ್ಯ ಪದಾರ್ಥಗಳು (ಉತ್ತಮವಾದ ಸಮಿತ್ತುಗಳು, ವನಸ್ಪತಿ, ಘೃತ, ಚರು, ಪುರೋಡಾಶ) ಇವೆಯೋ ಅವೆಲ್ಲವನ್ನೂ ಸೂಕ್ಷ್ಮಕಣಗಳಲ್ಲಿ ವಿಭಾಜಿಸಿ **[ಬರ್ಹಿಷಿ]** ಅಂತರಿಕ್ಷದಲ್ಲಿ ವಾಯುಮಂಡಲದಲ್ಲಿ ವ್ಯಾಪಿಸುವಂತೆ ಮಾಡಿ **[ದೂತ್ಯಂ ಆಯಾಸಿ]** ಜೀವಮಾತ್ರರಿಗೆ ಮತ್ತು ಪ್ರತಿಯೊಂದು ಕಣಕಣದಲ್ಲಿ ಪ್ರತಿಯೊಂದು ವಸ್ತುವಿನಲ್ಲಿ ಸೇರುವಂತೆ ಮಾಡುತ್ತೀಯೆ. **[ತಾನ್ ಉಶತೋ ವಿಬೋಧಯ]** ಎಲ್ಲಾ ಪದಾರ್ಥಗಳಲ್ಲಿ ಸೇರಿದ ಬಳಿಕ ಅದರ ಪರಿಣಾಮವನ್ನು ನೋಡಲು, ಅನುಭವಿಸಲು ಅಪೇಕ್ಷಿಸುವ ವಿದ್ವಾಂಸರಿಗೆ ವಿಜ್ಞಾನಿಗಳಿಗೆ ಉತ್ತಮವಾದ ರೀತಿಯಲ್ಲಿ ಬೋಧನೆಯಾಗುವಂತೆ ಜ್ಞಾನಪ್ರಾಪ್ತವಾಗುವಂತೆ ಮಾಡುತ್ತೀಯೆ. ಹಾಗೂ **[ತೇಷಾಂ]** ಸಮಸ್ತ ಜೀವಮಾತ್ರರಲ್ಲಿ ವಸ್ತುವಿನಲ್ಲಿ, ಪದಾರ್ಥಗಳಲ್ಲಿರುವ **[ಸತ್ಸಿ]** ಸಕಲ ದೋಷಗಳನ್ನು ನಿವಾರಣೆ ಮಾಡುತ್ತೀಯೇ. ಎಲ್ಲರನ್ನೂ ಎಲ್ಲವನ್ನೂ ಪರಿಶುದ್ಧವನ್ನಾಗಿ ಮಾಡುತ್ತೀಯೆ. ಆದುದರಿಂದ ಸಕಲ ಮಾನವರೇ! ಈ ಯಜ್ಞಾಗ್ನಿಯಲ್ಲಿ ಸಕಲ ಉತ್ತಮ ಪದಾರ್ಥಗಳನ್ನು ಅರ್ಪಿಸಿ ಜ್ಞಾನವನ್ನು ಪ್ರಾಪ್ತಿ ಮಾಡುವುದಕ್ಕೋಸ್ಕರ ಸದಾಕಾಲ ಎಲ್ಲ ವಿಧದಲ್ಲಿ ಪರೀಕ್ಷಿಸಿ, ಹೊಸ ಹೊಸ ಪ್ರಯೋಗಗಳನ್ನು ಮಾಡಿ ಸರಿಯಾದ ರೀತಿಯಲ್ಲಿ ಪ್ರಯೋಜನವನ್ನು ಪಡೆಯಿರಿ.

ಭಾವಾರ್ಥ:- ಯಜ್ಞದಲ್ಲಿ ಅರ್ಪಿಸಲ್ಪಟ್ಟ ಸಕಲ ಶ್ರೇಷ್ಠ ಪದಾರ್ಥಗಳು ಹಲವು ವಿಧದ ಉತ್ತಮವಾದ ಸಮಿತ್ತುಗಳು (ಮಾವು, ಅಶ್ವತ್ಥ, ದೇವದಾರು, ಪಲಾಶ, ಉದುಂಬರ, ಶ್ರೀಗಂಧ, ಚಂದನ, ಅರ್ಕ, ಕರೀರ, ತುಳಸಿ, ಬಿಲ್ವ, ಶಮೀವೃಕ್ಷ, ಅರಳೀಮರ, ಲಕ್ಕೀಗಿಡ ಇತ್ಯಾದಿ) ಸಕಲ ವನಸ್ಪತಿಗಳನ್ನು, ಘೃತ, ಚರು, ಪುರೋಡಾಶ, ಮೃಷ್ಟಾನ್ನ ಶ್ರೇಷ್ಠವಾದ ಭಕ್ಷ್ಯ ಪದಾರ್ಥಗಳನ್ನು ಅತ್ಯಂತ ಸೂಕ್ಷ್ಮ ಕಣಕಣಗಳಲ್ಲಿ ವಿಭಾಜಿಸಿ ಅಂತರಿಕ್ಷದಲ್ಲಿ ವ್ಯಾಪಿಸಿಕೊಂಡು ವಾಯುಮಂಡಲವನ್ನು ಸೇರಿ, ಜೀವಮಾತ್ರರಿಗೆ, ಸಕಲ ಪದಾರ್ಥಗಳಿಗೆ ಪ್ರಾಪ್ತವಾಗುತ್ತದೆ. ಮತ್ತು ಪ್ರಾಣಿಮಾತ್ರರಲ್ಲಿ ಹಾಗೂ ಸಕಲ ಪದಾರ್ಥಗಳಲ್ಲಿರುವ ದೋಷವನ್ನು ನಿವಾರಣೆ ಮಾಡುತ್ತದೆ. ಯಜ್ಞದಲ್ಲಿ ಉತ್ತಮವಾದ ಪದಾರ್ಥಗಳನ್ನು ಅರ್ಪಿಸುವುದರಿಂದ ಆಗುವ ಪರಿಣಾಮ ಮತ್ತು ಪ್ರಯೋಜನವನ್ನು ತಿಳಿಯಲಪೇಕ್ಷಿಸುವ ವಿಜ್ಞಾನಿಗಳಿಗೆ, ವಿದ್ವಾಂಸರಿಗೆ ಜ್ಞಾನವು ಪ್ರಾಪ್ತಿಯಾಗುತ್ತದೆ. ಆದುದರಿಂದ ಸಕಲ ಮಾನವರು ಯಜ್ಞದಲ್ಲಿ ಸಮಸ್ತ ಉತ್ತಮವಾದ ಪದಾರ್ಥಗಳನ್ನು ಅರ್ಪಿಸಿ, ನೂತನವಾದ ಪ್ರಯೋಗಗಳನ್ನು ಮಾಡಿ ಅದರಿಂದ ಸಂಪೂರ್ಣ ಪ್ರಯೋಜನವನ್ನು ಪಡೆಯಬೇಕು.

[ಸ್ವಾಮೀ ಸತ್ಯಪ್ರಕಾಶರು ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಯಜ್ಞದ ಮೂಲಕ ಹಲವಾರು ಪ್ರಯೋಗಗಳನ್ನು ಮಾಡಿ, ಯಜ್ಞದಲ್ಲಿ ಉತ್ತಮವಾದ ಸಮಿತ್ತುಗಳನ್ನು ವನಸ್ಪತಿಗಳನ್ನು ಚರು-ಪುರೋಡಾಶಾದಿಗಳನ್ನು ಅರ್ಪಿಸುವುದರಿಂದ ತುಂಬಾ ಪ್ರಯೋಜನವು ಸಿಗುತ್ತದೆ; ಹಲವಾರು ರೋಗ ರುಜಿನಗಳು ನಷ್ಟವಾಗುತ್ತವೆ ಎಂಬುದನ್ನು ವೈಜ್ಞಾನಿಕವಾಗಿ ಸಿದ್ಧಪಡಿಸಿದ್ದಾರೆ, ನಿರೂಪಿಸಿದ್ದಾರೆ. ಅದೇ ರೀತಿ ಸ್ವಾಮೀ ಬ್ರಹ್ಮಾನಂದ ದಂಡಿಯವರು ರಾಜಸ್ಥಾನದಲ್ಲಿ ಸಿಗುವ ಕರೀರ ಗಿಡದ ಸಮಿತ್ತುಗಳನ್ನು ಯಜ್ಞದಲ್ಲಿ ಹಾಕಿ, ಹಸಿಶುಂಠಿಯನ್ನು ಯಜ್ಞದಲ್ಲಿ ಹಾಕಿ ಪರ್ಜನ್ಯವು ಯಜ್ಞದ ಮೂಲಕ ಮಳೆಯನ್ನು ಸುರಿಸಲು ಸಾಧ್ಯವಿದೆ ಎಂಬುದನ್ನು ಅನಾವೃಷ್ಟಿಯಾದಾಗ ಮಾಡಿ ತೋರಿಸಿದ್ದಾರೆ. ಈ ಯಜ್ಞವನ್ನು ಕನಿಷ್ಠ ಐದು ದಿನವಾದರೂ ಮಾಡಬೇಕು. ತುಳಸಿಯಿಂದ ಮಲೇರಿಯಾ, ಒಣದ್ರಾಕ್ಷಿ ಮತ್ತು ಖಂಡಸಾರಿ ಸಕ್ಕರೆಯಿಂದ ಟೈಫಾಯಿಡ್, ಕೇಸರಿ ಮತ್ತು ಕಸ್ತೂರಿ ಮತ್ತು ಪಾಲಿಷ್ ಮಾಡದ ಅಕ್ಕಿಯಿಂದ ಪ್ಲೇಗು ರೋಗದ ನಿವಾರಣೆಯಾಗುತ್ತದೆ, ಈ ರೋಗದ ಕ್ರಿಮಿಗಳು ನಷ್ಟವಾಗುತ್ತವೆ ಎಂಬುದು ಪ್ರಯೋಗಗಳ ಮೂಲಕ ಸಿದ್ಧವಾಗಿದೆ.]

ಉಕ್ತ ಅಗ್ನಿಯು ಮತ್ತೆ ಏನೇನು ಮಾಡುತ್ತದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಘೃತಾಹವನ ದೀದಿವಃ ಪ್ರತಿಷ್ಮ ರಿಷತೋ ದಹ । ಅಗ್ನೇ ತ್ವಂ ರಕ್ಷಸ್ವಿನಃ ॥೫॥

ಪದಾರ್ಥ:- **[ಘೃತಾಹವನ]** ಯಜ್ಞದಲ್ಲಿ ಘೃತದ ಮೂಲಕ ಅರ್ಥಾತ್ ತುಪ್ಪವನ್ನು ಹಾಕುವುದರಿಂದ **[ದೀದಿವಃ]** ಪ್ರದೀಪ್ತನಾಗುವ **[ಅಗ್ನೇ]** ಯಜ್ಞಾಗ್ನಿಯೇ! **[ತ್ವಂ]** ನೀನು **[ರಕ್ಷಸ್ವಿನಃ]** ಯಜ್ಞದಲ್ಲಿ ಅರ್ಪಿಸಿದ ವನಸ್ಪತಿಗಳನ್ನು, ಘೃತವನ್ನು ಹಾಗೂ ಹಲವಾರು ಶ್ರೇಷ್ಠ ಪದಾರ್ಥಗಳನ್ನು ಅತ್ಯಂತ ತೀವ್ರ ಪರಿಣಾಮಕಾರಿಯನ್ನಾಗಿ ಮಾಡಿ ಯಾವುದರಿಂದ ನಾವು ನಮ್ಮನ್ನು ರಕ್ಷಿಸಿಕೊಳ್ಳಬೇಕೋ ಅಂತಹ ಅತ್ಯಂತ ಅಪಾಯಕಾರಿಯಾದ ರೋಗಾಣುಗಳನ್ನು, ಕೀಟಾಣುಗಳನ್ನು, ಕ್ರಿಮಿ ಸೊಳ್ಳೆ ಇತ್ಯಾದಿಗಳನ್ನು **[ರಿಷತಃ]** ಹಿಂಸಿಸಿ **[ಪ್ರತಿ ಸ್ಮ ದಹ]** ಪುನಃ ಪುನಃ ಭಸ್ಮ ಭಸ್ಮವನ್ನಾಗಿ ಮಾಡುತ್ತೀಯೆ; ಸಂಪೂರ್ಣವಾಗಿ ನಾಶಮಾಡುತ್ತೀಯೆ. ಅದೇ ರೀತಿ ನಮ್ಮೆಲ್ಲರಲ್ಲಿರುವ **[ರಕ್ಷಸ್ವಿನಃ]** ರಾಕ್ಷಸೀ ಪ್ರವೃತ್ತಿಯನ್ನು **[ರಿಷತಃ]** ಹಿಂಸಾಪ್ರವೃತ್ತಿಯನ್ನು ಮತ್ತು ದುಷ್ಟ ಸ್ವಭಾವವನ್ನು **[ಪ್ರತಿ ಸ್ಮ ದಹ]** ಪುನಃ ಪುನಃ ಅರ್ಥಾತ್ ಸಂಪೂರ್ಣವಾಗಿ ನಾಶಮಾಡುತ್ತೀಯೆ.

ಭಾವಾರ್ಥ:- ಯಜ್ಞದಲ್ಲಿ ಘೃತದ ಮೂಲಕ ಪ್ರದೀಪ್ತವಾಗುವ ಅಗ್ನಿಯೇ! [ಇಲ್ಲಿ ಒಂದು ವಿಷಯ ಸ್ಪಷ್ಟವಾಗುವುದೇನೆಂದರೆ ಯಜ್ಞದಲ್ಲಿ ಅಗ್ನಿಯನ್ನು ಪ್ರದೀಪ್ತಗೊಳಿಸಲು ಸದಾಕಾಲ ತುಪ್ಪವನ್ನೇ ಉಪಯೋಗಿಸಬೇಕು. ಎಣ್ಣೆಯನ್ನು ಎಂದಿಗೂ ಉಪಯೋಗಿಸಬಾರದು] ಯಜ್ಞದಲ್ಲಿ ಹಾಕಿದ ವಿಶೇಷವಾದ ವನಸ್ಪತಿ ಘೃತ ಇತ್ಯಾದಿಗಳನ್ನು ಅತ್ಯಂತ ತೀವ್ರ ಪರಿಣಾಮಕಾರಿಯನ್ನಾಗಿ ಮಾಡಿ ವಾತಾವರಣದಲ್ಲಿರುವ ಅತ್ಯಂತ ಹಾನಿಕಾರಕವಾದ, ರೋಗ ರುಜಿನಗಳನ್ನು ಹರಡುವ ರೋಗಾಣುಗಳನ್ನು, ಬ್ಯಾಕ್ಟೀರಿಯಾಗಳನ್ನು, ಸಂಪೂರ್ಣವಾಗಿ ನಾಶಮಾಡಿ ನಮ್ಮೆಲ್ಲರನ್ನು ರೋಗದಿಂದ ಮುಕ್ತರನ್ನಾಗಿ ಮಾಡುತ್ತದೆ. ಆದುದರಿಂದ ನಾವೆಲ್ಲರೂ ಪ್ರತಿನಿತ್ಯ ಹವನವನ್ನು ಮಾಡಬೇಕು.

ಅದೇ ರೀತಿ ಅದರ ಇನ್ನೊಂದು ಪ್ರಯೋಜನ ವೇದಮಂತ್ರಗಳ ಉಚ್ಚಾರಣೆಯನ್ನು ಮಾಡಿ ಶ್ರದ್ಧಾ ಭಕ್ತಿಯಿಂದ ಯಜ್ಞವನ್ನು ಮಾಡುವುದರಿಂದ ನಮ್ಮಲ್ಲಿರುವ ರಾಕ್ಷಸೀ ಪ್ರವೃತ್ತಿ, ಹಿಂಸೆ ಮಾಡುವ ಪ್ರವೃತ್ತಿ ಹಾಗೂ ದುಷ್ಟ ಸ್ವಭಾವ ಸಂಪೂರ್ಣವಾಗಿ ನಾಶವಾಗುತ್ತದೆ.

ಆ ಅಗ್ನಿಯು ಹೇಗೆ ಪ್ರಕಾಶಿತವಾಗುತ್ತದೆ ಮತ್ತು ಯಾವರೀತಿಯದಾಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಗ್ನಿನಾಗ್ನಿಃ ಸಮಿಧ್ಯತೇ ಕವಿರ್ಗೃಹಪತಿರ್ಯುವಾ । ಹವ್ಯವಾಡ್ ಜುಹ್ವಾಸ್ಯಃ ॥೬॥

ಪದಾರ್ಥ:- **[ಜುಹ್ವಾಸ್ಯಃ]** ಯಾವುದರಲ್ಲಿ ಸಮಸ್ತ ಹವಿಸ್ಸನ್ನು ಸ್ವಾಹಾಕಾರದ ಮೂಲಕ ಅರ್ಪಿಸಲಾಗುತ್ತದೆಯೋ, **[ಯುವಾ]** ಯಾವುದರಿಂದ ಸಕಲಪದಾರ್ಥಗಳು ಒಂದಾಗಿ, ಆಮೇಲೆ ಅತ್ಯಂತ ಸೂಕ್ಷ್ಮ ಕಣಗಳಲ್ಲಿ ವಿಭಾಜಿಸಲ್ಪಡುತ್ತದೆಯೋ, **[ಹವ್ಯವಾಟ್]** ಸಂಪೂರ್ಣ ಹವಿಸ್ಸನ್ನು ಎಲ್ಲಾ ಕಡೆಯಲ್ಲಿ ವ್ಯಾಪಿಸುವಂತೆ, ಪಸರಿಸುವಂತೆ, ಮಾಡುತ್ತದೆಯೋ, **[ಕವಿಃ]** ಯಾವುದನ್ನು ನಿಯಮಿತವಾಗಿ ಮಾಡುವುದರಿಂದ ಮಾನವನು ತನ್ನ ಜ್ಞಾನವನ್ನು ಸಂವರ್ಧನೆ ಮಾಡಿಕೊಳ್ಳುತ್ತಾನೋ, ಅರ್ಥಾತ್ ಜ್ಞಾನವು ವೃದ್ಧಿಸಲು ಯಾವುದು ಸಹಾಯಕವಾಗುತ್ತದೆಯೋ **[ಗೃಹಪತಿಃ]** ಯಾರು ಗೃಹದ ಸ್ವಾಮಿಯಾಗಿದ್ದು ಗೃಹವನ್ನು ಗೃಹದಲ್ಲಿ ಇರುವವರನ್ನು ದುಷ್ಟಶಕ್ತಿಗಳಿಂದ ಹಾಗೂ ಎಲ್ಲಾ ರೀತಿಯ ರೋಗರುಜಿನಗಳಿಂದ ಸಂರಕ್ಷಿಸುತ್ತಾನೋ, ಅಂತಹ **[ಅಗ್ನಿಃ]** ಯಜ್ಞಾಗ್ನಿಯು **[ಅಗ್ನಿನಾ]** ಸೂರ್ಯನಿಂದ **[ಸಮ್ ಇಧ್ಯತೇ]** ಬೆಳಗುತ್ತಾನೆ.

[ಜುಹ್ವಾಸ್ಯಃ] ಸಂಪೂರ್ಣ ಜ್ಞಾನ ಮತ್ತು ಉಪಾಸನಾ ರೂಪೀ ಹವಿಸ್ಸನ್ನು ಯಾವನಲ್ಲಿ ಅರ್ಪಿಸಲಾಗುತ್ತದೆಯೋ **[ಯುವಾ]** ಯಾವನು ಸದಾ ಯೌವ್ವನಾವಸ್ಥೆಯಲ್ಲಿಯೇ ಇರುತ್ತಾನೋ ಹಾಗೂ ಎಂದಿಗೂ ಜೀರ್ಣವಾಗುವುದಿಲ್ಲವೋ ಹಾಗೂ ಯಾವುದೇ ವಿಧದಿಂದ ನಶಿಸುವುದಿಲ್ಲವೋ **[ಹವ್ಯವಾಟ್]** ತನ್ನಲ್ಲಿ ಅರ್ಪಿಸಲ್ಪಟ್ಟ ಜ್ಞಾನ, ಕರ್ಮ, ಉಪಾಸನೆ ಹಾಗೂ ತನ್ಮೂಲಕ ಉಂಟಾದ ಶ್ರೇಷ್ಠ ಸಂಸ್ಕಾರಗಳನ್ನೂ, ದುಷ್ಕರ್ಮ, ಅಧರ್ಮಾಚರಣೆಯನ್ನು ಮಾಡಿದರೆ ದೂಷಿತ ಸಂಸ್ಕಾರಗಳನ್ನೂ, ಜನ್ಮ ಜನ್ಮಾಂತರಕ್ಕೆ ಅರ್ಥಾತ್ ಒಂದು ಶರೀರವನ್ನು ತ್ಯಾಗ ಮಾಡಿ, ಇನ್ನೊಂದು ಶರೀರವನ್ನು ಪ್ರವೇಶಿಸುವಾಗ ಕೊಂಡೊಯ್ಯುವವನೂ **[ಕವಿಃ]** ಕ್ರಾಂತದರ್ಶಿ, ಸಂಪೂರ್ಣ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳಲು ಸಮರ್ಥನಾದವನು, **[ಗೃಹಪತಿಃ]** ಈ ಶರೀರರೂಪೀ ಗೃಹದ ಏಕೈಕಸ್ವಾಮಿಯಾದವನೂ ಆದ **[ಅಗ್ನಿಃ]** ಜೀವಾತ್ಮನು **[ಅಗ್ನಿನಾ ಸಮಿಧ್ಯತೇ]** ಸರ್ವಜ್ಞ, ಸರ್ವಪ್ರಕಾಶ ಸ್ವರೂಪ ಹಾಗೂ ಸಚ್ಚಿದಾನಂದ ಪರಮಾತ್ಮನಿಂದ ಬೆಳಗುತ್ತಾನೆ. ಅತ್ಯಂತ ದೀಪ್ತಿಮಂತನಾಗುತ್ತಾನೆ.

ಭಾವಾರ್ಥ:- ಸಮಸ್ತ ಹವಿಸ್ಸನ್ನು ಯಾವುದರಲ್ಲಿ ಅರ್ಪಿಸಲಾಗುತ್ತದೆಯೋ ಮತ್ತು ಜ್ವಾಲೆಯೇ ಯಾವುದರ ಮುಖವಾಗಿದೆಯೋ, (ಯಜ್ಞವನ್ನು ಮಾಡುವಾಗ ಯಾವಾಗಲೂ ಅಗ್ನಿಯು ಪ್ರದೀಪ್ತವಾಗಿಯೇ ಇರಬೇಕು. ಎಂದಿಗೂ ನಂದಿಹೋಗಲು ಬಿಡಬಾರದು.) ಸಮಸ್ತ ಪದಾರ್ಥಗಳನ್ನು ಒಂದಾಗಿ ಸೇರಿಸಿ ತದನಂತರ ಎಲ್ಲವನ್ನೂ ಅತ್ಯಂತ ಸೂಕ್ಷ್ಮ ಕಣಗಳಲ್ಲಿ ವಿಭಾಜಿಸುತ್ತದೆಯೋ, ತನ್ನಲ್ಲಿ ಅರ್ಪಿಸಿದ ಸಮಸ್ತ ಪದಾರ್ಥಗಳನ್ನು ಎಲ್ಲಾ ಕಡೆಯಲ್ಲಿ ಪಸರಿಸುವಂತೆ ಮಾಡುತ್ತದೆಯೋ, ಯಾವುದನ್ನು ನಿಯಮಿತವಾಗಿ ಮಾಡುವುದರಿಂದ ಮನುಷ್ಯನ ಜ್ಞಾನಸಂವರ್ಧನೆಯಾಗುತ್ತದೆಯೋ, ಯಾವುದು ಗೃಹದ ಸ್ವಾಮಿಯಂತೆ ಇದ್ದು ಗೃಹವನ್ನೂ ಗೃಹದಲ್ಲಿ ಇರುವವರನ್ನು ಸಮಸ್ತ ದುಷ್ಟ ಶಕ್ತಿಗಳಿಂದ ಹಾಗೂ ಸಕಲ ರೋಗ ರುಜಿನಗಳಿಂದ ರಕ್ಷಿಸುತ್ತದೆಯೋ ಅಂತಹ ಯಜ್ಞಾಗ್ನಿಯು ಸೂರ್ಯನಿಂದ ಬೆಳಗುತ್ತದೆ. ಅರ್ಥಾತ್ ಪ್ರತಿದಿನ ಸೂರ್ಯೋದಯದ ಕಾಲದಲ್ಲಿಯೇ ಯಜ್ಞವನ್ನು ಮಾಡಬೇಕು.

ಸಂಪೂರ್ಣ ಜ್ಞಾನ ಹಾಗೂ ಉಪಾಸನಾ ರೂಪೀ ಹವಿಸ್ಸನ್ನು ಯಾವನಲ್ಲಿ ಅರ್ಪಿಸಲಾಗುತ್ತದೆಯೋ (ಆತ್ಮನು ವಿಜ್ಞಾನಮಯ ಪುರುಷನಾದ ಕಾರಣ ಆತ್ಮನ ವಿಕಾಸಕ್ಕೋಸ್ಕರ ನಿರಂತರ ಜ್ಞಾನದ ಪ್ರಾಪ್ತಿ ಹಾಗೂ ಭಗವಂತನ ಉಪಾಸನೆಯನ್ನು ಮಾಡಬೇಕು.) ಯಾವನು ಎಂದಿಗೂ ಯಾವುದೇ ವಿಧದಲ್ಲಿ ನಾಶವಾಗದೇ ಸದಾ ಸಂಪೂರ್ಣ ಯೌವ್ವನಾವಸ್ಥೆಯಲ್ಲಿಯೇ ಇರುತ್ತಾನೋ ಯಾವನು ಶರೀರವನ್ನು ತ್ಯಾಗಮಾಡಿ ಇನ್ನೊಂದು ಶರೀರಕ್ಕೆ ಹೋಗುವಾಗ ತನ್ನೊಂದಿಗೆ ಕರ್ಮಬಂಧನವನ್ನೂ, ಉತ್ತಮ ಹಾಗೂ ಕೆಟ್ಟ ಸಂಸ್ಕಾರಗಳನ್ನೂ ಕೊಂಡೊಯ್ಯುತ್ತಾನೋ, ಯಾವನು ಸಂಪೂರ್ಣ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳಲು ಸಮರ್ಥನಾಗಿದ್ದಾನೋ ಹಾಗೂ ಗೃಹರೂಪೀ ಈ ಶರೀರದ ಏಕೈಕ ಸ್ವಾಮಿಯಾಗಿದ್ದಾನೆಯೋ ಅಂತಹ ಜೀವಾತ್ಮನು, ಸರ್ವಜ್ಞ, ಸರ್ವಶಕ್ತ, ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನಿಂದ ಪ್ರಕಾಶಿಸಲ್ಪಡುತ್ತಾನೆ. ದೇದೀಪ್ಯಮಾನನಾಗುತ್ತಾನೆ.

ಈ ಮಂತ್ರದಲ್ಲಿ ಅಗ್ನಿ ಶಬ್ದದಿಂದ ಈಶ್ವರ ಹಾಗೂ ಭೌತಿಕ ಅಗ್ನಿಗಳ ವರ್ಣನೆ ಮಾಡಲಾಗಿದೆ.

ಕವಿಮಗ್ನಿಮುಪ ಸ್ತುಹಿ ಸತ್ಯಧರ್ಮಾಣಮಧ್ವರೇ । ದೇವಮಮೀವಚಾತನಮ್ ||೭||

ಪದಾರ್ಥ:- ಹೇ ಉಪಾಸಕನೇ! ನೀನು **[ಅಧ್ವರೇ]** ಅಂತಃಕರಣದಲ್ಲಿಯೇ ಭಕ್ತಿಯಿಂದ ಮಾಡಲ್ಪಡುವ ಬ್ರಹ್ಮಯಜ್ಞದಲ್ಲಿ **[ಸತ್ಯಧರ್ಮಾಣಮ್]** ಸತ್ಯ ಮತ್ತು ಶಾಶ್ವತವಾದ ನಾಶರಹಿತ ಧರ್ಮವುಳ್ಳವನೂ ಆದ **[ಅಮೀವಚಾತನಮ್]** ಸಂಪೂರ್ಣ ಅಜ್ಞಾನ, ದುರಿತ ಮತ್ತು ಸಕಲಕ್ಲೇಶಗಳನ್ನು ನಾಶಮಾಡುವವನೂ ಆದ **[ಕವಿಂ]** ಸರ್ವಜ್ಞನೂ, ಮಾನವ ಮಾತ್ರರ ಬುದ್ಧಿಯನ್ನು ಜ್ಞಾನದ ಮೂಲಕ, ಸಕಲ ಜೀವರ ಆತ್ಮನಲ್ಲಿ ಪ್ರೇರಣೆಯ ಮೂಲಕ ಪ್ರಾಪ್ತನಾಗುವವನೂ ಆದ **[ದೇವಮ್]** ಸದಾ ಸುಖ ಮತ್ತು ಆನಂದದ ವೃಷ್ಟಿಯನ್ನೇ ಮಾಡುವ **[ಅಗ್ನಿಂ]** ಪ್ರಕಾಶ ಸ್ವರೂಪನೂ, ಸಚ್ಚಿದಾನಂದ ಸ್ವರೂಪನೂ ಆದ ಪರಮಾತ್ಮನನ್ನು **[ಉಪಸ್ತುಹಿ]** ಅತ್ಯಂತ ಸಮೀಪದಿಂದ ಅರ್ಥಾತ್ ನಿನ್ನ ಅಂತಃಕರಣದಲ್ಲಿಯೇ ಉಪಾಸಿಸು.

ಅಥ ದ್ವಿತೀಯೋರ್ಥ : ಪ್ರತಿನಿತ್ಯ ಯಜ್ಞವನ್ನು ಮಾಡುವ ಯಜನಶೀಲ ಮಾನವನೇ, ಯಾಜ್ಞಿಕನೇ! ನೀನು **[ಅಧ್ವರೇ]** ಕಾಯಾ, ವಾಚಾ, ಮನಸಾ ಮತ್ತು ಮನಸಾ, ವಾಚಾ, ಕರ್ಮಣಾ ಲೇಶ ಮಾತ್ರ ಅರ್ಥಾತ್ ಕಿಂಚಿತ್ತಾದರೂ ಹಿಂಸೆಯನ್ನು ಮಾಡದೇ ಇರುವ ಯಜ್ಞದಲ್ಲಿ **[ಸತ್ಯಧರ್ಮಾಣಮ್]** ಅವಿನಾಶಿಯಾದ ಹಾಗೂ ಸಕಲ ಪದಾರ್ಥಗಳಲ್ಲಿ ವಿದ್ಯಮಾನನಾಗಿರುವ **[ಅಮೀವಚಾತನಮ್]** ಸಕಲ ರೋಗರುಜಿನಗಳನ್ನು ನಾಶಮಾಡಲು ಕಾರಣೀಭೂತನಾದ **[ಕವಿಂ]** ಪ್ರತಿಯೊಂದು ಪದಾರ್ಥವು ದೃಷ್ಟಿಗೋಚರವಾಗುವಂತೆ ಮಾಡುವ **[ದೇವಂ]** ಸುಖವನ್ನೇ ಉಂಟುಮಾಡುವವನಾದ **[ಅಗ್ನಿಂ]** ಭೌತಿಕ ಅಗ್ನಿಯನ್ನು **[ಉಪಸ್ತುಹಿ]** ಉತ್ತಮವಾದ ರೀತಿಯಲ್ಲಿ ಪ್ರಜ್ವಲಿಸು.

ಭಾವಾರ್ಥ:- ಹೇ ಉಪಾಸಕನೇ! ನೀನು ಅಂತಕರಣದಲ್ಲಿಯೇ, ಪ್ರತಿನಿತ್ಯ ಮಾಡಲೇಬೇಕಾದ ಸಂಧ್ಯಾವಂದನೆ ಅರ್ಥಾತ್ ಭಕ್ತಿಯಿಂದ ಮಾಡಲ್ಪಡುವ ಬ್ರಹ್ಮಯಜ್ಞದಲ್ಲಿ, ಸತ್ಯಸ್ವರೂಪನೂ, ಅವಿನಾಶಿಯೂ, ಸರ್ವಾಂತರ್ಯಾಮಿಯೂ, ಶಾಶ್ವತವಾದ ನಾಶರಹಿತವಾದ ಧರ್ಮವುಳ್ಳವನೂ ಅರ್ಥಾತ್ ಎಲ್ಲರನ್ನೂ ಎಲ್ಲವನ್ನೂ ಧಾರಣಮಾಡಿ ಸರ್ವಾಧಾರನೂ ಆದ, ಸಂಪೂರ್ಣ ಅಜ್ಞಾನ, ದುರಿತ ಮತ್ತು ಸಕಲ ಕ್ಲೇಶಗಳನ್ನು ನಾಶಮಾಡುವವನೂ ಆದ, ಸರ್ವಜ್ಞನೂ ಮಾನವ ಮಾತ್ರರ ಬುದ್ಧಿಯನ್ನೂ, ಜ್ಞಾನದ ಮೂಲಕ ಹಾಗೂ ಜೀವಮಾತ್ರರ ಆತ್ಮನನ್ನು ಪ್ರೇರಣೆಯ ಮೂಲಕ ಪ್ರಾಪ್ತನಾಗುವವನೂ ಆದ ಸದಾ ಸುಖ ಮತ್ತು ಆನಂದದ ವೃಷ್ಟಿಯನ್ನೇ ಮಾಡುವ ಸರ್ವ ಪ್ರಕಾಶ ಸ್ವರೂಪನೂ, ಸಚ್ಚಿದಾನಂದನೂ ಆದ ಪರಮಾತ್ಮನನ್ನು ನಿನ್ನ ಅಂತಃಕರಣದಲ್ಲಿಯೇ ಉಪಾಸಿಸು. ಅವನು ಸದಾಕಾಲ ಎಲ್ಲರ ಅಂತಃಕರಣದಲ್ಲಿಯೇ ವಿರಾಜಮಾನನಾಗಿದ್ದಾನೆ. ಆದುದರಿಂದ ಅವನ ಉಪಾಸನೆಯನ್ನು ನಮ್ಮ ಅಂತಃಕರಣದಲ್ಲಿಯೇ ಮಾಡಬೇಕು. ಅನ್ಯತ್ರ ಹುಡುಕಲು ಹೋದರೆ ನಮ್ಮ ಜೀವನದ ಅಮೂಲ್ಯ ಕ್ಷಣಗಳು ವ್ಯರ್ಥವಾಗುವುದೇ ಹೊರತು ಬೇರೇನೂ ಪ್ರಾಪ್ತವಾಗಲಾರದು.

ಅದೇ ರೀತಿ ಯಾವದೇ ರೀತಿಯಲ್ಲಿ ಯಾವುದೇ ವಿಧದಲ್ಲಿ ಲೇಶಮಾತ್ರವೂ ಹಿಂಸೆಯನ್ನು ಮಾಡಲೇಬಾರದ ಸರ್ವಥಾ ಅಹಿಂಸನೀಯ ಯಜ್ಞದಲ್ಲಿ ಅವಿನಾಶಿಯೂ ಸಕಲ ಪದಾರ್ಥದಲ್ಲಿ ವಿದ್ಯಮಾನನೂ ಆದ, ಸಕಲ ರೋಗರುಜಿನಗಳು ನಾಶವಾಗಲು ಕಾರಣೀಭೂತನಾದ, ಸಕಲ ಪದಾರ್ಥಗಳು ದೃಷ್ಟಿ ಗೋಚರವಾಗುವಂತೆ ಮಾಡುವ, ಸದಾಸುಖವನ್ನೇ ಉಂಟುಮಾಡುವ ಅಗ್ನಿಯನ್ನು ಯಜ್ಞದಲ್ಲಿ ಪ್ರಜ್ವಲಿಸು. ಅರ್ಥಾತ್ ಪ್ರತಿನಿತ್ಯ ಯಜ್ಞವನ್ನು ಮಾಡು.

ಈ ಮಂತ್ರದಲ್ಲಿ ಮತ್ತೆ ಈಶ್ವರ ಮತ್ತು ಭೌತಿಕ ಅಗ್ನಿಯ ವಿವರಣೆ ನೀಡಿದೆ.

ಯಸ್ತ್ವಾಮಗ್ನೇ ಹವಿಷ್ಪತಿರ್ದೂತಂ ದೇವ ಸಪರ್ಯತಿ । ತಸ್ಯ ಸ್ಮ ಪ್ರಾವಿತಾ ಭವ ||೮||

ಪದಾರ್ಥ:- ಹೇ **[ದೇವ]** ಸರ್ವಪ್ರಕಾಶ ಸ್ವರೂಪ **[ಅಗ್ನೇ]** ಸರ್ವಜ್ಞನಾದ ಪರಮಾತ್ಮ! ಯಾವ ಮಾನವನು **[ಹವಿಷ್ಪತಿಃ]** ಸಂಪೂರ್ಣ ಚರಾಚರ ಜಗತ್ತಿನಲ್ಲಿರುವ ಸಕಲ ಪದಾರ್ಥಗಳ ಏಕೈಕ ಸ್ವಾಮಿಯಾದ **[ದೂತಮ್]** ಸರ್ವರಿಗೂ ಜ್ಞಾನವನ್ನೂ, ಸುಖವನ್ನೂ, ಕೊಡುವವನೂ ಆದ ನಿನ್ನನ್ನು **[ಸಪರ್ಯತಿ]** ಶ್ರದ್ಧಾಭಕ್ತಿಯಿಂದ ಉಪಾಸಿಸುತ್ತಾನೋ, ನಿನ್ನ ಸಾನ್ನಿಧ್ಯವನ್ನು ಹೊಂದುತ್ತಾನೋ **[ತಸ್ಯ]** ಅವನ ಸಕಲ ದುಃಖ ಕ್ಲೇಶಗಳನ್ನು ನಾಶಮಾಡಿ **[ಪ್ರಾವಿತಾ ಭವ ಸ್ಮ]** ಸದಾ ಆನಂದದ ವೃಷ್ಟಿಯನ್ನೇ ಮಾಡುತ್ತೀಯೆ.

ಅಥ ದ್ವಿತೀಯೋರ್ಥಃ - ಯಾವನು **[ಹವಿಷ್ಪತಿಃ]** ಯಜ್ಞದಲ್ಲಿ ಅರ್ಪಿಸಿದ ಸಮಸ್ತ ಹವಿಸ್ಸನ್ನು ಪ್ರಾಪ್ತ ಮಾಡಿಕೊಂಡು, ಸರ್ವತ್ರ ವ್ಯಾಪಿಸುವಂತೆ ಮಾಡುವ **[ದೂತಂ]** ವಾಯುಮಂಡಲದಲ್ಲಿ ವ್ಯಾಪಿಸಿಕೊಂಡಂತಹ ಸಕಲ ವಿಷಮಯವಾದ ಪದಾರ್ಥಗಳನ್ನು, ರೋಗರುಜಿನಗಳನ್ನು ಹರಡುವಂತಹ ಸಕಲ ಕೀಟಾಣುಗಳನ್ನು ನಾಶ ಮಾಡುವ **[ದೇವಂ]** ದಿವ್ಯಗುಣ ಹಾಗೂ ಶಕ್ತಿಯುಳ್ಳ ಮತ್ತು ಪ್ರಕಾಶವನ್ನು ಬೀರುವ **[ಅಗ್ನಿಂ]** ಅಗ್ನಿಯನ್ನು **[ಸಪರ್ಯತಿ]** ನಿರಂತರ ಯಜ್ಞಾದಿಗಳ ಮೂಲಕ ಮತ್ತು ಯಾನ ಹಾಗೂ ಯಂತ್ರಗಳನ್ನು ಚಾಲಿಸಲು ಉಪಯೋಗಿಸುತ್ತಾನೋ ಅವನಿಗೆ **[ಪ್ರಾವಿತಾಭವಸ್ಮ]** ಸದಾ ಸುಖವನ್ನೇ ಕೊಡುತ್ತೀಯೆ.

ಭಾವಾರ್ಥ:- ಹೇ ಸರ್ವಪ್ರಕಾಶ ಸ್ವರೂಪ ಸರ್ವಜ್ಞನಾದ ಪರಮಾತ್ಮ! ಯಾವ ಮಾನವನು, ಸಂಪೂರ್ಣ ಚರಾಚರ ಜಗತ್ತಿನಲ್ಲಿರುವ ಸಕಲ ಪದಾರ್ಥಗಳ ಏಕೈಕಸ್ವಾಮಿಯಾದ, ಸರ್ವರಿಗೂ ಜ್ಞಾನವನ್ನೂ, ಸುಖವನ್ನೂ ಕೊಡುವವನೂ ಆದ ನಿನ್ನನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಉಪಾಸಿಸುತ್ತಾನೋ ಅವನ ಸಕಲ ದುಃಖ ಮತ್ತು ಕ್ಲೇಶಗಳನ್ನು ಸಂಪೂರ್ಣವಾಗಿ ದೂರಮಾಡಿ ಸದಾ ಸುಖ ಮತ್ತು ಆನಂದದ ವೃಷ್ಟಿಯನ್ನೇ ಮಾಡುತ್ತೀಯೆ.

ಯಾವ ಮನುಷ್ಯನು ಯಜ್ಞದಲ್ಲಿ ಅರ್ಪಿಸಿದ ಸಮಸ್ತ ಹವಿಸ್ಸನ್ನು ಪ್ರಾಪ್ತ ಮಾಡಿಕೊಂಡು ಸರ್ವತ್ರ ವ್ಯಾಪಿಸುವಂತೆ ಮಾಡುವ, ದಿವ್ಯಗುಣ ಮತ್ತು ಶಕ್ತಿಯುಳ್ಳ ಹಾಗೂ ಸದಾಪ್ರಕಾಶವನ್ನೇ ಬೀರುವ, ವಾಯುಮಂಡಲದಲ್ಲಿ ವ್ಯಾಪಿಸಿದಂತಹ ಸಕಲ ವಿಷಮಯವಾದ ಪದಾರ್ಥವನ್ನೂ, ರೋಗರುಜಿನಗಳನ್ನು ಹರಡುವ ಕೀಟಾಣುಗಳನ್ನು ನಾಶಮಾಡುವಂತಹ, ಅಗ್ನಿಯನ್ನು, ಪವಿತ್ರ ಯಜ್ಞದ ಮೂಲಕ ಸೇವನೆಯನ್ನು ಮಾಡುತ್ತಾನೋ, ಅರ್ಥಾತ್ ತನ್ನ ಪರಿವಾರದಲ್ಲಿ ಪ್ರತಿನಿತ್ಯ ಯಜ್ಞವನ್ನು ಮಾಡುತ್ತಾನೋ ಹಾಗೂ ಯಾನ ಮತ್ತು ಯಂತ್ರಗಳನ್ನು ಚಲಿಸುವುದಕ್ಕೋಸ್ಕರ ಸಕಲ ಶಿಲ್ಪಕ್ರಿಯಾದಿಗಳಿಗೆ ವಿನಿಯೋಗಿಸುತ್ತಾನೋ ಅವನಿಗೆ ಸದಾ ಸುಖವನ್ನೇ ಉಂಟುಮಾಡುತ್ತಾನೆ.

ಮತ್ತೆ ಅದೇ ಅರ್ಥವನ್ನು ಪ್ರಕಾಶಗೊಳಿಸಲಾಗುತ್ತದೆ.

ಯೋ ಅಗ್ನಿಂ ದೇವವೀತಯೇ ಹವಿಷ್ಮಾँ ಆವಿವಾಸತಿ । ತಸ್ಮೈ ಪಾವಕ ಮೃಳಯ ||೯||

ಪದಾರ್ಥ:- ಹೇ **[ಪಾವಕ]** ಎಲ್ಲರನ್ನೂ ಪವಿತ್ರರನ್ನಾಗಿ ಮಾಡುವ ಪರಮಾತ್ಮ! **[ಯಃ ಹವಿಷ್ಮಾನ್]** ಯಾವನು ಉತ್ತಮ ಪದಾರ್ಥಗಳುಳ್ಳವನೂ, ಉತ್ತಮ ಗುಣ ಮತ್ತು ಸ್ವಭಾವವುಳ್ಳವನೂ ಆಗಿರುವನೋ ಅಂತಹ ಮನುಷ್ಯನು **[ದೇವವೀತಯೇ]** ತನ್ನ ದುರಿತಗಳನ್ನು ದೂರ ಮಾಡಿಕೊಂಡು ಸದ್ಗುಣಗಳನ್ನು ಹಾಗೂ ಉತ್ತಮ ಭೋಗಗಳನ್ನು ಪ್ರಾಪ್ತಿ ಮಾಡಿಕೊಳ್ಳುವುದಕ್ಕೋಸ್ಕರ **[ತ್ವಾಮಗ್ನಿಂ]** ಸರ್ವೋಪಾಸ್ಯನಾದ ನಿನ್ನನ್ನು **[ಆವಿವಾಸತಿ]** ಎಲ್ಲಾ ವಿಧದಲ್ಲಿ ಉತ್ತಮ ರೀತಿಯಲ್ಲಿ ಉಪಾಸಿಸುತ್ತಾನೋ, ಸದಾ ನಿನ್ನ ಸಾನ್ನಿಧ್ಯದಲ್ಲಿರುತ್ತಾನೋ **[ತಸ್ಮೈ]** ಅಂತಹ ಉಪಾಸಕನಿಗೆ ನೀನು **[ಮೃಳಯ]** ಸದಾ ಸುಖ ಮತ್ತು ಆನಂದದ ವೃಷ್ಟಿಯನ್ನೇ ಮಾಡುತ್ತೀಯೆ. ಎಲ್ಲಾ ವಿಧದಲ್ಲಿ ಅತ್ಯಂತ ಸುಖಿಯನ್ನಾಗಿ ಮಾಡುತ್ತೀಯೆ.

ಅಥ ದ್ವಿತೀಯೋರ್ಥಃ - **[ಯೋ ಹವಿಷ್ಮಾನ್]** ಯಾವನು ಪ್ರತಿನಿತ್ಯ ಪ್ರತಿದಿನ ಯಜ್ಞದಲ್ಲಿ ಶ್ರದ್ಧೆಯಿಂದ ಹವಿಸ್ಸನ್ನು ಅರ್ಪಿಸುತ್ತಾನೋ **[ದೇವವೀತಯೇ]** ಉತ್ತಮವಾದ ಗುಣನಡತೆಯನ್ನೂ, ಉತ್ತಮ ಪದಾರ್ಥಗಳನ್ನು,

ಆರೋಗ್ಯವನ್ನೂ ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ **[ಅಗ್ನಿಂ ಆವಿವಾಸತಿ]** ಈ ಭೌತಿಕ ಅಗ್ನಿಯನ್ನು ಯಜ್ಞಾನುಷ್ಠಾನದ ಮೂಲಕ ಹಾಗೂ ಸಕಲ ಶಿಲ್ಪಕಲೆ ಮತ್ತು ವ್ಯವಸಾಯ ಹಾಗೂ ವಾಣಿಜ್ಯಕ್ಕೋಸ್ಕರ ಉತ್ತಮ ರೀತಿಯಲ್ಲಿ ಉಪಯೋಗಿಸುತ್ತಾನೋ **[ತಸ್ಮೈ ಅಯಂ ಪಾವಕೋಗ್ನಿ]** ಅಂತಹವನಿಗೆ ಅಗ್ನಿಯು ಮತ್ತು ಅಗ್ನಿಯ ಸ್ವರೂಪವಾದಂತಹ ವಿದ್ಯುತ್ ಎಲ್ಲಾ ವಿಧದಲ್ಲಿ ಸುಖವನ್ನುಂಟುಮಾಡುತ್ತದೆ.

ಭಾವಾರ್ಥ:- ಎಲ್ಲರನ್ನೂ ಪವಿತ್ರರನ್ನಾಗಿ ಮಾಡುವ ಪರಮಾತ್ಮ! ಯಾವ ಮನುಷ್ಯನು ಉತ್ತಮ ಗುಣ ಮತ್ತು ಕರ್ಮಗಳುಳ್ಳವನೂ, ಉತ್ತಮ ಪದಾರ್ಥಗಳುಳ್ಳವನೂ ಆಗಿರುವನೋ, ಹಾಗೂ ಸಕಲ ದುರಿತಗಳನ್ನು ದೂರಮಾಡಿಕೊಂಡು ಉತ್ತಮವಾದ ಗುಣ ಕರ್ಮಸ್ವಭಾವ ಹಾಗೂ ಉತ್ತಮ ಭೋಗಗಳ ಪ್ರಾಪ್ತಿಗೋಸ್ಕರ, ಸರ್ವೋಪಾಸ್ಯನೂ, ಸಕಲೈಶ್ವರ್ಯ ಪ್ರದಾತನೂ ಆಗಿರುವ ನಿನ್ನನ್ನು, ಸಕಲವಿಧದಲ್ಲಿ ಉಪಾಸಿಸುತ್ತಾನೋ ಹಾಗೂ ನಿನ್ನ ಶ್ರೇಷ್ಠಗುಣಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ನಿನ್ನವನೇ ಆಗಿರುತ್ತಾನೋ ಅಂತಹ ಶ್ರೇಷ್ಠ ಉಪಾಸಕನನ್ನು ಸದಾ ಸುಖಿಯನ್ನಾಗಿಯೇ ಮಾಡುತ್ತೀಯೆ.

ಯಾವನು ಸದಾ ಯಜ್ಞಾನುಷ್ಠಾನವನ್ನು ಶ್ರದ್ಧೆಯಿಂದ ಮಾಡುತ್ತಾ ಉತ್ತಮವಾದ ಹವಿಸ್ಸನ್ನು ಅರ್ಪಿಸುತ್ತಾನೋ, ಹಾಗೂ ಸಕಲ ಉತ್ತಮ ಪದಾರ್ಥಗಳನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ, ಸಂಪೂರ್ಣ ಆಯುರಾರೋಗ್ಯವನ್ನು ಪ್ರಾಪ್ತ ಮಾಡಿಕೊಳ್ಳುವದಕ್ಕೋಸ್ಕರ, ಈ ಭೌತಿಕ ಅಗ್ನಿಯನ್ನು ಯಜ್ಞದ ಮೂಲಕ ಮತ್ತು ಅಗ್ನಿಯ ರೂಪವಾದಂತಹ ವಿದ್ಯುತ್ತನ್ನು ಸಕಲ ಜ್ಞಾನ, ವಿಜ್ಞಾನ, ಉದ್ಯೋಗ ವ್ಯಾಪಾರಗಳಿಗೋಸ್ಕರ ಉತ್ತಮವಾದ ರೀತಿಯಲ್ಲಿ ವಿನಿಯೋಗಿಸಿಕೊಳ್ಳುತ್ತಾನೋ ಅವನನ್ನು ಈ ಅಗ್ನಿಯು ಸದಾ ಸುಖಿಯನ್ನಾಗಿ ಮಾಡುತ್ತದೆ.

ಮುಂದಿನ ಮಂತ್ರದಲ್ಲಿಯೂ ಮತ್ತವುಗಳದೇ ಆದ ವಿವರಣೆ ಇದೆ.

ಸ ನಃ ಪಾವಕ ದೀದಿವೋಽಗ್ನೇ ದೇವಾಁ ಇಹಾ ವಹ । ಉಪ ಯಜ್ಞಂ ಹವಿಶ್ಚ ನಃ ॥೧೦॥

ಪದಾರ್ಥ:- ಹೇ **[ದೀದಿವಃ]** ಸ್ವಯಂಪ್ರಕಾಶ ಸ್ವರೂಪ ಮತ್ತು ಎಲ್ಲವನ್ನೂ ಹಾಗೂ ಎಲ್ಲರನ್ನೂ ತನ್ನ ಪ್ರಕಾಶದಿಂದ ಪ್ರಕಾಶಿಸುವ **[ಪಾವಕ]** ಸರ್ವರನ್ನು ಪವಿತ್ರರನ್ನಾಗಿ ಮಾಡುವ **[ಅಗ್ನೇ]** ತನ್ನ ಉಪಾಸಕರಿಗೆ ಹಾಗೂ ಪ್ರಾಣಿಮಾತ್ರರಿಗೆ ಸಕಲ ಪದಾರ್ಥಗಳನ್ನು ಪ್ರಾಪ್ತವಾಗುವಂತೆ ಮಾಡುವ ಪರಮಾತ್ಮ! **[ತ್ವಂ]** ನೀನು **[ನಃ]** ನಮ್ಮೆಲ್ಲರ ಕಲ್ಯಾಣಕ್ಕೋಸ್ಕರ ಈ ಜಗತ್ತಿನಲ್ಲಿ **[ದೇವಾನ್]** ಸಕಲ ದಿವ್ಯ ಪದಾರ್ಥಗಳನ್ನೂ, ಸಂಪೂರ್ಣ ಜ್ಞಾನವನ್ನೂ, ಶ್ರೇಷ್ಠ ವಿದ್ವಾಂಸರನ್ನೂ, ವಿಜ್ಞಾನಿಗಳನ್ನೂ **[ಉಪ ಆ ವಹ]** ಸದಾಕಾಲ ಎಲ್ಲಾ ವಿಧದಲ್ಲಿ ಎಲ್ಲಾ ದಿಕ್ಕಿನಿಂದ ಪ್ರಾಪ್ತವಾಗುವಂತೆ ಮಾಡುತ್ತೀಯೆ. ನಿನ್ನ ಕೃಪೆಯಿಂದ ನಮಗೆಲ್ಲರಿಗೂ ಸದಾ ಶ್ರೇಷ್ಠ ವಿದ್ವಾಂಸರ, ಧರ್ಮಾತ್ಮರ ಸಂಗತಿಯು ಸಾನ್ನಿಧ್ಯವು ಪ್ರಾಪ್ತವಾಗುತ್ತಾ ಇರಲಿ. **[ನಃ]** ನಮ್ಮೆಲ್ಲರಿಗೂ **[ಯಜ್ಞಂ]** ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಅತಿಥಿಯಜ್ಞ ಮತ್ತು ಬಲಿವೈಶ್ವದೇವಯಜ್ಞ ಎಂಬ ಪಂಚವಿಧದ ಯಜ್ಞಗಳು, ಸಮಸ್ತ ಶ್ರೇಷ್ಠ ಕರ್ಮಗಳನ್ನು ಮಾಡುವ ಸಾಮರ್ಥ್ಯ, ಉತ್ತಮ ಗುಣಕರ್ಮಸ್ವಭಾವ, ಸಂಪೂರ್ಣ ಆಯುರಾರೋಗ್ಯ, **[ಹವಿಃ]** ಸಕಲ ಶ್ರೇಷ್ಠ ಪದಾರ್ಥಗಳನ್ನು ಪಡೆದುಕೊಳ್ಳುವ ಹಾಗೂ ಕೊಡುವ ಅರ್ಪಿಸುವ ಮತ್ತು ದಾನಮಾಡುವ ಸಾಮರ್ಥ್ಯ ಹಾಗೂ ಗುಣ ಮತ್ತು ಪ್ರವೃತ್ತಿ **[ಉಪ ಆವಹ]** ನಿನ್ನ ಅನಂತ ಕೃಪೆಯಿಂದ ಸದಾಕಾಲವೂ ಪ್ರಾಪ್ತವಾಗಲಿ.

ಅಥ ದ್ವಿತೀಯೋರ್ಥ - **[ದೀದಿವಃ]** ಸ್ವಯಂ ಪ್ರಕಾಶವುಳ್ಳವನೂ ಇತರರನ್ನು ತನ್ನ ಪ್ರಕಾಶದಿಂದ ಬೆಳಗಿಸುವವನೂ ಆದ **[ಪಾವಕ]** ಎಲ್ಲರನ್ನೂ ಪವಿತ್ರರನ್ನಾಗಿ ಮಾಡುವ **[ಅಗ್ನೇ]** ಭೌತಿಕ ಅಗ್ನಿಯೇ! ನೀನು ಯಜ್ಞಾದಿಗಳಲ್ಲಿ ಹಾಗೂ ಸಕಲ ಶಿಲ್ಪ ಕಲಾದಿಗಳಲ್ಲಿ, ಸಕಲ ಯಂತ್ರ ಯಾನಾದಿಗಳಲ್ಲಿ, ಉತ್ತಮವಾದ ರೀತಿಯಲ್ಲಿ ಪ್ರಯುಕ್ತನಾಗಿ **[ನಃ]** ನಮ್ಮೆಲ್ಲರಿಗೋಸ್ಕರ ಹಾಗೂ ನಾವೆಲ್ಲರೂ ಮಾಡುವ ಯಜ್ಞಾದಿಗಳಲ್ಲಿ **[ದೇವಾನ್ ಆವಹ]**

ಶ್ರೇಷ್ಠ ವಿದ್ವಾಂಸರನ್ನು ಯಾಜ್ಞಿಕರನ್ನೂ, ಸಕಲ ಸಾಧುಸಂತರನ್ನೂ ಎಲ್ಲಾ ದಿಕ್ಕಿನಿಂದ ಆಗಮಿಸುವಂತೆ ಮಾಡುತ್ತೀಯೆ. **[ನಃ]** ನಮ್ಮೆಲ್ಲರ **[ಯಜ್ಞಂ]** ದೇವಪೂಜಾ, ಸಂಗತಿಕರಣ ಮತ್ತು ದಾನ ಹಾಗೂ **[ಹವಿಶ್ಚ]** ನಾವೆಲ್ಲರೂ ಯಜ್ಞದಲ್ಲಿ ಅರ್ಪಿಸುವ ಶ್ರೇಷ್ಠ ಪದಾರ್ಥಗಳನ್ನು ಪ್ರಾಪ್ತಮಾಡಿಕೊಂಡು **[ಉಪ ಆವಹ]** ಕಾಲಕಾಲಕ್ಕೆ ಸರಿಯಾಗಿ ಮಳೆಬೆಳೆಯಾಗುವಂತೆ ಮಾಡಿ, ಯಜ್ಞದಲ್ಲಿ ಆಗಮಿಸಿದ ವಿದ್ವಾಂಸರಿಂದ, ಸಾಧುಸಂತರಿಂದ ಜ್ಞಾನವು ಪ್ರಾಪ್ತವಾಗುವಂತೆ ಮಾಡಿ ಶಿಲ್ಪಕಲಾ ನಿಪುಣರು, ತಜ್ಞರು, ವಿಜ್ಞಾನಿಗಳ ಮೂಲಕ ಉದ್ಯೋಗ, ವ್ಯಾಪಾರ ಸಂಪತ್ತು ಇತ್ಯಾದಿಗಳು ವರ್ಧಿಸುವಂತೆ ಮಾಡಿ ಸರ್ವವಿಧದಲ್ಲಿ ಎಲ್ಲರಿಗೂ ಸುಖ ಶಾಂತಿ, ಸಮೃದ್ಧಿ ಪ್ರಾಪ್ತವಾಗುವಂತೆ ಮಾಡುತ್ತೀಯೆ.

ಭಾವಾರ್ಥ:- ಹೇ ಸ್ವಯಂ ಪ್ರಕಾಶಸ್ವರೂಪನಾದ ಹಾಗೂ ಸ್ವಪ್ರಕಾಶದಿಂದ ಸಕಲ ಚರಾಚರ ಜಗತ್ತನ್ನು ಬೆಳಗುವಂತೆ ಮಾಡುವ ಪರಮಾತ್ಮ! ನೀನು ಪತಿತ ಪಾವನನಾಗಿದ್ದು, ಎಲ್ಲರನ್ನೂ ಪವಿತ್ರರನ್ನಾಗಿ ಮಾಡಿ, ತನ್ನ ಉಪಾಸಕರಿಗೆ ಹಾಗೂ ಜೀವಮಾತ್ರರಿಗೆ ಸಕಲ ಪದಾರ್ಥಗಳನ್ನು ಪ್ರಾಪ್ತವಾಗುವಂತೆ ಮಾಡುತ್ತೀಯೆ. ಹೇ ಜಗದೀಶ್ವರ! ನೀನು ನಮ್ಮೆಲ್ಲರ ಕಲ್ಯಾಣಕ್ಕೋಸ್ಕರ ಸಕಲ ಶ್ರೇಷ್ಠ ಪದಾರ್ಥಗಳನ್ನೂ, ಸಕಲ ದಿವ್ಯಶಕ್ತಿ ಹಾಗೂ ಗುಣಗಳನ್ನೂ, ಶ್ರೇಷ್ಠವಿದ್ವಾಂಸರನ್ನೂ, ಋಷಿ ಮುನಿಗಳನ್ನೂ, ವಿಜ್ಞಾನಿಗಳನ್ನೂ, ಶ್ರೇಷ್ಠ ಸಾಧುಸಂತರನ್ನೂ, ಉತ್ತಮ ಗುಣಗಳುಳ್ಳ ಕರ್ಮಯೋಗಿಗಳನ್ನೂ ಕಾಲ ಕಾಲಕ್ಕೆ ಅರ್ಥಾತ್ ಎಲ್ಲಾ ಕಾಲದಲ್ಲಿ ಪ್ರಾಪ್ತವಾಗುವಂತೆ ಮಾಡುತ್ತೀಯೆ. ನಿನ್ನ ಕೃಪೆಯಿಂದ ಇವರೆಲ್ಲರೂ ನಮಗೆಲ್ಲರಿಗೆ ಸದಾಕಾಲವೂ ಪ್ರಾಪ್ತವಾಗುತ್ತಾ ಇರಲಿ.

ನಾವೆಲ್ಲರೂ ಪ್ರತಿದಿನ ಮಾಡಲೇಬೇಕಾದ, ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಅತಿಥಿಯಜ್ಞ ಮತ್ತು ಬಲಿವೈಶ್ವದೇವಯಜ್ಞ ಎಂಬ ಪಂಚಯಜ್ಞಗಳು ಹಾಗೂ ನಮ್ಮೆಲ್ಲರಿಗೆ ಸಮಸ್ತ ಶ್ರೇಷ್ಠ ಕರ್ಮಗಳನ್ನು ಮಾಡುವ ಸಾಮರ್ಥ್ಯ, ಉತ್ತಮ ಗುಣಕರ್ಮಸ್ವಭಾವ, ಸಂಪೂರ್ಣ ಆಯುರಾರೋಗ್ಯ ಹಾಗೂ ಸಕಲ ಶ್ರೇಷ್ಠ ಪದಾರ್ಥಗಳನ್ನು ಪಡೆದುಕೊಳ್ಳುವ, ಕೊಡುವ-ಅರ್ಪಿಸುವ ಮತ್ತು ದಾನ ಮಾಡುವ ಸಾಮರ್ಥ್ಯ ಹಾಗೂ ಗುಣ ಮತ್ತು ಪ್ರವೃತ್ತಿ ನಿನ್ನ ಅನಂತ ಕೃಪೆಯಿಂದ ಸದಾಕಾಲ ಪ್ರಾಪ್ತವಾಗಲಿ.

ಸ್ವಯಂಪ್ರಕಾಶವುಳ್ಳವನಾಗಿ, ಬೆಳಕನ್ನು ಬೀರಿ, ಇತರ ಪದಾರ್ಥಗಳನ್ನು ದೃಷ್ಟಿಗೋಚರವಾಗುವಂತೆ ಮಾಡುವ, ಎಲ್ಲಾ ಕಶ್ಮಲಗಳನ್ನು ನಾಶಮಾಡಿ ತನ್ನಲ್ಲಿ ಅರ್ಪಿಸಲ್ಪಟ್ಟ ಅಥವಾ ಹಾಕಿದ ಸಕಲ ಪದಾರ್ಥಗಳನ್ನು ಪವಿತ್ರವನ್ನಾಗಿ ಮಾಡುವ ಭೌತಿಕ ಅಗ್ನಿಯೇ! ಯಜ್ಞಾದಿಗಳಲ್ಲಿ ಪ್ರಜ್ವಲಿಸಲ್ಪಟ್ಟ ಸಕಲ ಯಂತ್ರ ಯಾನಾದಿಗಳಲ್ಲಿ ಶಕ್ತಿ ಮತ್ತು ಗತಿಯನ್ನುಂಟು ಮಾಡಲು ಉತ್ತಮ ರೀತಿಯಲ್ಲಿ ವಿನಿಯೋಗಿಸಲ್ಪಡುವ (ಅಗ್ನಿಯನ್ನು ಹಲವು ರೀತಿಯಲ್ಲಿ ಹಲವು ವಿಧದಲ್ಲಿ ವಿನಿಯೋಗಿಸುತ್ತಾರೆ. ಆಹವನೀಯಾಗ್ನಿ, ಆವಸಥ್ಯಾಗ್ನಿ, ಗಾರ್ಹಪತ್ಯಾಗ್ನಿ, ಯಜ್ಞಾಗ್ನಿ ಇವೆಲ್ಲಾ ಯಜ್ಞಕ್ಕೆ ಸಂಬಂಧಪಟ್ಟವುಗಳಾಗಿವೆ. ದ್ರವ್ಯಾದ ಇದನ್ನು ಎಲ್ಲಾ ಕೆಲಸಗಳಿಗೆ ಮತ್ತು ಬೆಳಕನ್ನು ಬೀರಲು ಉಪಯೋಗಿಸುತ್ತಾರೆ. ಕ್ರವ್ಯಾದ ಇದನ್ನು ಸ್ಮಶಾನದಲ್ಲಿ ಉಪಯೋಗಿಸುತ್ತಾರೆ. ಅದೇ ರೀತಿ ನೀರನ್ನು ಕುದಿಸಿ ಬಾಷ್ಪವನ್ನಾಗಿ ಮಾಡಲು ಯಂತ್ರ ಯಾನಾದಿಗಳನ್ನು ಚಲಿಸುವಂತೆ ಮಾಡಲು, ವಿದ್ಯುತ್ತನ್ನು ತಯಾರಿಸಲು ಕೂಡ ಅಗ್ನಿಯನ್ನು ವಿನಿಯೋಗಿಸುತ್ತಾರೆ.) ಅಗ್ನಿಯೇ! ನೀನು ನಮ್ಮೆಲ್ಲರ ಕಲ್ಯಾಣಕ್ಕೋಸ್ಕರ, ವಿದ್ವಾಂಸರನ್ನು, ಸಾಧುಸಂತರನ್ನು, ಋಷಿಮುನಿಗಳನ್ನು, ಕರ್ಮಯೋಗಿಗಳನ್ನು, ವಿಜ್ಞಾನಿಗಳನ್ನು ಬರುವಂತೆ ಮಾಡುತ್ತೀಯೆ. ನಮ್ಮೆಲ್ಲರ ದೇವಪೂಜಾ, ಸಂಗತಿಕರಣ ಮತ್ತು ದಾನ ಎಂಬ ತ್ರಿವಿಧ ಯಜ್ಞವನ್ನೂ, ಶ್ರೇಷ್ಠವಾದ ಪದಾರ್ಥಗಳನ್ನೂ ಸ್ವೀಕರಿಸಿ ನಮ್ಮೆಲ್ಲರನ್ನೂ ಸದಾಕಾಲ ಸುಖಿಗಳನ್ನಾಗಿ ಮಾಡುತ್ತೀಯೆ. ಇದರ ತಾತ್ಪರ್ಯವೇನೆಂದರೆ ನಾವು ಅಗ್ನಿಯನ್ನು ಸದಾಕಾಲ ಯಜ್ಞಾದಿಗಳಿಗೆ ಮತ್ತು ಸಕಲ ಶ್ರೇಷ್ಠಕರ್ಮಗಳಿಗೆ ಉಪಯೋಗಿಸಿಕೊಂಡು ಎಲ್ಲಾ ರೀತಿಯ ಸದುಪಯೋಗವನ್ನು ಮಾಡಬೇಕು.

ಮುಂದಿನ ಮಂತ್ರದಲ್ಲಿಯೂ ಮತ್ತೆ ಅದೇ ವಿಷಯ.

ಸ ನಃ ಸ್ತವಾನ ಆ ಭರ ಗಾಯತ್ರೇಣ ನವೀಯಸಾ । ರಯಿಂ ವೀರವತೀಮಿಷಮ್ ॥೧೧॥

ಪದಾರ್ಥ:- ಹೇ ಸರ್ವೋಪಾಸ್ಯನಾದ ಪರಮಾತ್ಮ! ನೀನು **[ನವೀಯಸಾ]** ಅತ್ಯಂತ ನವೀನವಿಧದಲ್ಲಿ ಮಾಡಲ್ಪಡುವ ಮಂತ್ರಪಾಠ ಹಾಗೂ, **[ಗಾಯತ್ರೇಣ]** ಗಾಯತ್ರ್ಯಾದಿ ಛಂದಗಳುಳ್ಳ ಪ್ರಗಾಥಗಳ ಮೂಲಕ **[ಸ್ತವಾನಃ]** ಸ್ತುತಿಸಲ್ಪಡುವ ನೀನು **[ನಃ]** ನಮ್ಮೆಲ್ಲರಿಗೂ **[ರಯಿಂ]** ವಿದ್ಯೆ, ಐಶ್ವರ್ಯ, ಸಂಪತ್ತು, ಯಶಸ್ಸು, ಕೀರ್ತಿ ಮತ್ತು **[ವೀರವತೀಂ]** ದುಷ್ಟರನ್ನು ಮತ್ತು ಶತ್ರುಗಳನ್ನು ಎಲ್ಲಾ ವಿಧದಲ್ಲಿ ದಮನ ಮಾಡಲು ಸಮರ್ಥರಾದ ವೀರರಿಂದ ಕೂಡಿದ ಚಕ್ರವರ್ತೀರಾಜ್ಯ **[ಇಷಂ]** ಶ್ರೇಷ್ಠವಾದ ಜ್ಞಾನ ಮತ್ತು ಜ್ಞಾನಪೂರ್ವಕ ಮಾಡಿದ ಶ್ರೇಷ್ಠಕರ್ಮ ಇವೆಲ್ಲವುಗಳನ್ನು **[ಆ ಭರ]** ಪ್ರಾಪ್ತವಾಗುವಂತೆ ಮಾಡು. ನಿನ್ನ ಕೃಪೆಯಿಂದ ಮತ್ತು ನಮ್ಮ ಪುರುಷಾರ್ಥದಿಂದ ಇವೆಲ್ಲವನ್ನೂ ನಾವೆಲ್ಲರೂ ಧಾರಣಮಾಡುವಂತಾಗಲಿ.

ಅದೇ ರೀತಿ ಭೌತಿಕಾಗ್ನಿಯು ಯಜ್ಞದಲ್ಲಿ **[ನವೀಯಸಾ ಗಾಯತ್ರೇಣ]** ನವೀನ ವಿಧದಿಂದ ಗಾಯತ್ರ್ಯಾದಿ ಛಂದಗಳುಳ್ಳ ಪ್ರಗಾಥಗಳ ಮೂಲಕ **[ಸ್ತವಾನಃ]** ಸ್ವಾಹಾಕಾರದ ಮೂಲಕ ಪ್ರಜ್ವಲಿಸಲ್ಪಟ್ಟು **[ರಯಿಂ]** ಉತ್ತಮವಾದ ಮಳೆ ಬೆಳೆ ಔಷಧಿ ವನಸ್ಪತಿಗಳ ಮೂಲಕ ಪ್ರಾಪ್ತವಾಗುವ ಐಶ್ವರ್ಯವನ್ನು **[ವೀರವತೀಮ್]** ಸಕಲ ಕಶ್ಮಲಗಳು, ವಿಷಾನಿಲಗಳು, ರೋಗರುಜಿನಗಳನ್ನುಂಟುಮಾಡುವ ಕ್ರಿಮಿಗಳು, ಕೀಟಾಣುಗಳು ನಾಶವಾಗಿ ತನ್ಮೂಲಕ ಆರೋಗ್ಯವಂತ ಶರೀರವನ್ನು **[ಇಷಂ]** ಯಜ್ಞಕ್ಕೆ ಆಗಮಿಸಿದ ಶ್ರೇಷ್ಠ ವಿದ್ವಾಂಸರು, ಸಾಧುಸಂತರುಗಳಿಂದ ಪ್ರಾಪ್ತವಾಗುವ ಜ್ಞಾನ ಮತ್ತು ಪ್ರೇರಣೆಯನ್ನು **[ಆಭರ]** ನಮಗೆಲ್ಲರಿಗೂ ಪ್ರಾಪ್ತವಾಗುವಂತೆ ಮಾಡುತ್ತದೆ. ಇವೆಲ್ಲವನ್ನೂ ನಮ್ಮ ಜೀವನದಲ್ಲಿ ಧಾರಣಮಾಡಿಕೊಳ್ಳಲು ಸ್ಫೂರ್ತಿಯನ್ನು ನೀಡುತ್ತದೆ.

ಭಾವಾರ್ಥ:- ಸರ್ವೋಪಾಸ್ಯನಾದ ಪರಮಾತ್ಮನು ಅತ್ಯಂತ ನವೀನವಾದ ಅರ್ಥಾತ್ ಭಿನ್ನ ಭಿನ್ನ ರೀತಿಯಲ್ಲಿ ಮಾಡಿದ ಸುಶ್ರಾವ್ಯವಾದ ಮಂತ್ರಪಾಠ ಮತ್ತು ಗಾನಗಳಿಂದ, ಭಕ್ತಿಯಿಂದ ಕೂಡಿದ ಭಜನೆಗಳಿಂದ, ಗಾಯತ್ರ್ಯಾದಿ ಛಂದಗಳುಳ್ಳ ಪ್ರಗಾಥಗಳ ಮೂಲಕ ಸ್ತುತಿಸಲ್ಪಡುತ್ತಾನೆ. ಭಕ್ತಿ ಹಾಗೂ ಭಾವಗಳಿಂದ ಕೂಡಿದ ಸುಶ್ರಾವ್ಯ ಮತ್ತು ಕರ್ಣ ಮಧುರವಾದ ಯಾವ ರಾಗದಲ್ಲಿಯೂ ಹಾಡಬಹುದು, ಹೇಳಬಹುದು. "ಸಹಸ್ರವರ್ತ್ಮಾಸಾಮವೇದ" ಎಂದರೆ ಸಾಮವೇದದ ಸಹಸ್ರ ಶಾಖೆಗಳಿದ್ದವು. ಎಲ್ಲಾ ಶಾಖೆಯವರು ತಮ್ಮ ತಮ್ಮದೇ ಆದ ವಿಶಿಷ್ಟ ಧಾಟಿಯಲ್ಲಿ ಸ್ವರದಲ್ಲಿ ಸಾಮಗಾನವನ್ನು ಮಾಡಿ ಭಗವಂತನ ಸ್ತುತಿಯನ್ನು ಮಾಡುತ್ತಿದ್ದರು. ಇದರಿಂದ ವೇದಾರ್ಥಕ್ಕೆ ಯಾವ ಚ್ಯುತಿಯೂ ಬರುವುದಿಲ್ಲ. ಇದರಲ್ಲಿ ಭಗವಂತನ ಸ್ತುತಿ ಮತ್ತು ಭಕ್ತಿಯೇ ಮುಖ್ಯ.

ಈ ರೀತಿ ಸಮಸ್ತ ಭಕ್ತರಿಂದ ಸ್ತುತಿಸಲ್ಪಡುವ ಭಗವಂತನು ನಮ್ಮೆಲ್ಲರಿಗೆ ಉತ್ತಮವಾದ, ವಿದ್ಯೆ, ಐಶ್ವರ್ಯ, ಸಂಪತ್ತು, ಯಶಸ್ಸು ಮತ್ತು ಕೀರ್ತಿ ಹಾಗೂ ದುಷ್ಟರನ್ನು ಶತ್ರುಗಳನ್ನು ಎಲ್ಲಾ ವಿಧದಲ್ಲಿ ದಮನ ಮಾಡಲು ಸಮರ್ಥರಾದ ವೀರರುಳ್ಳ ಚಕ್ರವರ್ತೀ ಸಾಮ್ರಾಜ್ಯ, ಶ್ರೇಷ್ಠವಾದ ಜ್ಞಾನ ಮತ್ತು ಜ್ಞಾನಪೂರ್ವಕ ಮಾಡುವ ಶ್ರೇಷ್ಠಕರ್ಮ ಇವೆಲ್ಲವುಗಳನ್ನು ಪ್ರಾಪ್ತವಾಗುವಂತೆ ಮಾಡಲಿ. ಭಗವಂತನ ಕೃಪೆಯಿಂದ ಮತ್ತು ನಮ್ಮ ಪುರುಷಾರ್ಥದಿಂದ ಇವೆಲ್ಲವನ್ನೂ ನಾವೆಲ್ಲರೂ ಧಾರಣ ಮಾಡುವಂತಾಗಲಿ.

ಅದೇ ರೀತಿ ಈ ಭೌತಿಕ ಅಗ್ನಿಯು ಯಜ್ಞದಲ್ಲಿ ನವೀನ ವಿಧದಲ್ಲಿ ಮತ್ತು ಗಾಯತ್ರ್ಯಾದಿ ಛಂದಗಳುಳ್ಳ ಪ್ರಗಾಥಗಳ ಮೂಲಕ ಹಾಗೂ ಸ್ವಾಹಾಕಾರಗಳ ಮೂಲಕ ಪ್ರಜ್ವಲಿಸಲ್ಪಟ್ಟು ಉತ್ತಮವಾದ ಮಳೆ, ಬೆಳೆ, ಫಲ ಪುಷ್ಪ, ಔಷಧಿ ವನಸ್ಪತಿಗಳ ಮೂಲಕ ಪ್ರಾಪ್ತವಾಗುವ ಐಶ್ವರ್ಯವನ್ನೂ, ಅನಾರೋಗ್ಯವನ್ನುಂಟು ಮಾಡುವ ಸಕಲ ವಿಷಾನಿಲಗಳು, ರೋಗರುಜಿನಗಳನ್ನುಂಟು ಮಾಡುವ ಕ್ರಿಮಿ-ಕೀಟಾಣುಗಳು ನಾಶವಾಗಿ ತನ್ಮೂಲಕ ಆರೋಗ್ಯವಂತ ಶರೀರವನ್ನು, ಯಜ್ಞಕ್ಕೆ ಆಗಮಿಸಿದ ಸಕಲ ಶ್ರೇಷ್ಠ ವಿದ್ವಾಂಸರು ಸಾಧುಸಂತರುಗಳಿಂದ ಪ್ರಾಪ್ತವಾಗುವ ಜ್ಞಾನ ಮತ್ತು ಪ್ರೇರಣೆಯನ್ನು ಉತ್ತಮವಾದ ಸಂಸ್ಕಾರಗಳನ್ನು ನಮಗೆಲ್ಲರಿಗೂ ಪ್ರಾಪ್ತವಾಗುವಂತೆ ಮಾಡುತ್ತದೆ. ಎಲ್ಲವನ್ನೂ ನಮ್ಮ ಜೀವನದಲ್ಲಿ ಧಾರಣ ಮಾಡಿಕೊಳ್ಳುವ ಸ್ಫೂರ್ತಿಯನ್ನು ನೀಡುತ್ತದೆ.

ಈ ಮಂತ್ರದಲ್ಲೂ ಮತ್ತೆ ಅದೇ ಗುಣಗಳ ವರ್ಣನೆ ಇದೆ.

ಅಗ್ನೇ ಶುಕ್ರೇಣ ಶೋಚಿಷಾ ವಿಶ್ವಾಭಿರ್ದೇವಹೂತಿಭಿಃ । ಇಮಂ ಸ್ತೋಮಂ ಜುಷಸ್ವ ನಃ॥೧೨॥

ಪದಾರ್ಥ:- **[ಅಗ್ನೇ]** ಹೇ ಸರ್ವಪ್ರಕಾಶ ಸ್ವರೂಪ ಪರಮೇಶ್ವರ! ನೀನು ಅನಂತಕೃಪೆಯಿಂದ **[ಶುಕ್ರೇಣ]** ಅನಂತ ವೀರ್ಯ ಅರ್ಥಾತ್ ಅನಂತ ಬಲ ಮತ್ತು ಪರಾಕ್ರಮದೊಂದಿಗೆ **[ಶೋಚಿಷಾ]** ಎಲ್ಲವನ್ನೂ ಶುದ್ಧವನ್ನಾಗಿಯೂ ಪವಿತ್ರವನ್ನಾಗಿಯೂ ಮಾಡುವ ದಿವ್ಯಪ್ರಕಾಶದೊಂದಿಗೆ **[ವಿಶ್ವಾಭಿಃ ದೇವಹೂತಿಭಿಃ]** ಸಮಸ್ತ ವಿದ್ವಜ್ಜನರಿಂದ ಪ್ರಾಪ್ತಮಾಡಿಕೊಳ್ಳಲ್ಪಡುವ ವೇದವಾಣಿಯ ಮೂಲಕ ಮಾಡಿದ **[ನಃ ಇಮಂ ಸ್ತೋಮಂ]** ನಮ್ಮೆಲ್ಲರ ಈ ಸ್ತುತಿ ಸಮೂಹವನ್ನು **[ಜುಷಸ್ವ]** ಪ್ರೀತಿಯಿಂದ ಸೇವಿಸು. ಮತ್ತು ನಮ್ಮೆಲ್ಲರನ್ನು ಎಲ್ಲಾ ವಿಧದಲ್ಲಿ ಸಂರಕ್ಷಿಸಿ, ಪವಿತ್ರರನ್ನಾಗಿಯೂ ಪಾವನರನ್ನಾಗಿಯೂ ಮಾಡಿ ಸದಾಕಾಲ ನಿನ್ನ ಜ್ಞಾನದ ಪ್ರಕಾಶವು ಬೀರುವಂತೆ ಮಾಡು. ಈ ಭೌತಿಕ ಅಗ್ನಿಯ ಯಜ್ಞದಲ್ಲಿ ಪ್ರಜ್ವಲಿತನಾಗಿ **[ವಿಶ್ವಾಭಿಃ ದೇವಹೂತಿಭಿಃ]** ಸಮಸ್ತ ಋತ್ವಿಜರಿಂದ ವೇದಮಂತ್ರಗಳಿಂದ ಮಾಡಿದ ಸ್ವಾಹಾಕಾರದ ಮೂಲಕ ಅರ್ಪಿಸಿದ ಹವಿಸ್ಸನ್ನು ಪ್ರಾಪ್ತಮಾಡಿಕೊಂಡು **[ಶುಕ್ರೇಣ ಶೋಚಿಷಾ]** ತನ್ನ ಕಾಂತಿ ಮತ್ತು ಎಲ್ಲವನ್ನೂ ಹಾಗೂ ಎಲ್ಲರನ್ನೂ ಪವಿತ್ರರನ್ನಾಗಿ ಮಾಡುವ ಪ್ರಕಾಶ ಹಾಗೂ ಧೂಮವನ್ನು ಪಸರಿಸುತ್ತಾ **[ಇಮಂ ಸ್ತೋಮಂ]** ನಮ್ಮೆಲ್ಲರ ಸ್ತುತಿಸಮೂಹವನ್ನು **[ಜುಷಸ್ವ]** ಸ್ವೀಕರಿಸುತ್ತದೆ.

ಅದೇ ರೀತಿ ಭೌತಿಕ ಅಗ್ನಿಯು ಸಕಲ ಕಲಾ ಯಂತ್ರ ಯಾನಾದಿಗಳಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ವಿನಿಯೋಗಿಸಲ್ಪಡುವುದರಿಂದ ಸರ್ವಜನೋಪಯೋಗಿಯಾಗಿ ಎಲ್ಲಾ ರೀತಿಯ ಸುಖವನ್ನು ಕೊಡುತ್ತದೆ.

ಭಾವಾರ್ಥ:- ಹೇ ಸರ್ವಪ್ರಕಾಶ ಸ್ವರೂಪ ಪರಮಾತ್ಮ! ನೀನು ಅನಂತಕೃಪೆಯಿಂದ, ಅನಂತ ಬಲ ಮತ್ತು ಪರಾಕ್ರಮದೊಂದಿಗೆ ಹಾಗೂ ಎಲ್ಲವನ್ನೂ ಸಕಲ ಮಾನವರನ್ನೂ, ಸಕಲ ಪದಾರ್ಥಗಳನ್ನೂ, ಸಕಲ ಪ್ರಾಣಿಮಾತ್ರರನ್ನೂ ಶುದ್ಧ ಹಾಗೂ ಪವಿತ್ರರನ್ನಾಗಿಯೂ ಮಾಡುವ ಪ್ರಕಾಶದೊಂದಿಗೆ ಸಮಸ್ತ ವಿದ್ವಜ್ಜನರಿಂದ ಪ್ರಾಪ್ತ ಮಾಡಿಕೊಳ್ಳಲ್ಪಡುವ ವೇದವಾಣಿಯ ಮೂಲಕ ಮಾಡಿದ ನಮ್ಮೆಲ್ಲರ ಸ್ತುತಿ ಸಮೂಹವನ್ನು ಪ್ರೀತಿಯಿಂದ ಸ್ವೀಕರಿಸು. ನಮ್ಮೆಲ್ಲರನ್ನು ಎಲ್ಲಾ ವಿಧದಲ್ಲಿ ಸಂರಕ್ಷಿಸಿ, ಪವಿತ್ರರನ್ನಾಗಿ ಮಾಡಿ ಸದಾ ಕಾಲ ನಿನ್ನ ಜ್ಞಾನದ ಪ್ರಕಾಶವು ಬೀರುವಂತೆ ಮಾಡು.

ಈ ಭೌತಿಕ ಅಗ್ನಿಯು ಯಜ್ಞದಲ್ಲಿ ಪ್ರಜ್ವಲಿತನಾಗಿ ಸಮಸ್ತ ಋತ್ವಿಜರು ವೇದಮಂತ್ರಗಳಿಂದ ಮಾಡಿದ ಸ್ವಾಹಾಕಾರದ ಮೂಲಕ ಅರ್ಪಿಸಿದ ಹವಿಸ್ಸನ್ನು ಪ್ರಾಪ್ತ ಮಾಡಿಕೊಂಡು ತನ್ನ ಕಾಂತಿ ಮತ್ತು ಎಲ್ಲವನ್ನೂ ಪವಿತ್ರರನ್ನಾಗಿ ಮಾಡುವ ಪ್ರಕಾಶ ಮತ್ತು ಧೂಮವನ್ನು ಪಸರಿಸುತ್ತಾ ನಮ್ಮೆಲ್ಲರ ಸ್ತುತಿಗಳನ್ನು ಸ್ವೀಕರಿಸುತ್ತದೆ.

ಅದೇ ರೀತಿ ಈ ಭೌತಿಕ ಅಗ್ನಿಯು ಸಕಲ ಯಂತ್ರಯಾನಾದಿಗಳಲ್ಲಿ ಜಲದ ಸಂಪರ್ಕದಿಂದ ಉಂಟಾಗುವ ಬಾಷ್ಪ ಶಕ್ತಿಯ ಮೂಲಕ ಹಾಗೂ ವಿದ್ಯುಚ್ಛಕ್ತಿಯ ಮೂಲಕ ಎಲ್ಲವನ್ನೂ ವೇಗವಾಗಿ ಚಲಿಸುವಂತೆ ಮಾಡಿ, ಪ್ರಕಾಶವನ್ನೂ ಬೀರಿ, ಸರ್ವವಿಧದಲ್ಲಿ ಸುಖವು ಪ್ರಾಪ್ತವಾಗುವಂತೆ ಮಾಡುತ್ತದೆ.

ಈ ದ್ವಾದಶಸೂಕ್ತದಲ್ಲಿ ಅಗ್ನಿ ಶಬ್ದದಿಂದ ಪರಮಾತ್ಮ ಮತ್ತು ಭೌತಿಕ ಅಗ್ನಿ ದ್ವಿವಿಧಾರ್ಥದ ಗ್ರಹಣ ಮಾಡುವುದರಿಂದ ಪರಮಾತ್ಮನ ಉಪಾಸನೆ ಹಾಗೂ ಸಕಲ ಪ್ರಯೋಜನವು ಪ್ರಾಪ್ತವಾಗುವುದರಿಂದ ಈ ಸೂಕ್ತದೊಂದಿಗೆ ಪೂರ್ವಸೂಕ್ತದ ಸಂಗತಿಕರಣ ಆಗುತ್ತದೆ ಎಂಬುದನ್ನು ಸರ್ವರೂ ಗಮನಿಸಬೇಕು.

ಹನ್ನೆರಡನೆಯ ಸೂಕ್ತ ಸಮಾಪ್ತ

ಸೂಕ್ತ ೧೩

ಮಂತ್ರಸಂಖ್ಯೆ ೧೨ । ಋಷಿಃ - ಮೇಧಾತಿಥಿಃ ಕಾಣ್ವಃ (ಆಪ್ರೀಸೂಕ್ತಂ, ಅಗ್ನಿರೂಪಾ ದೇವತಾಃ) ೧ ಇಧ್ಮಃ ಸಮಿದ್ಧೋಽಗ್ನಿರ್ವಾ, ೨ ತನೂನಪಾತ್, ೩ ನರಾಶಂಸಃ, ೪ ಇಳಃ, ೫ ಬರ್ಹಿಃ, ೬ ದೇವೀರ್ದ್ವಾರಃ, ೭ ಉಷಾಸಾನಕ್ತಾಃ, ೮ ದೈವ್ಯಾ ಹೋತಾರಾ ಪ್ರಚೇತಸಾ, ೯ ತಿಸ್ರೋ ದೇವ್ಯಃ ಸರಸ್ವತೀಳಾಭಾರತ್ಯಃ, ೧೦ ತ್ವಷ್ಟಾ, ೧೧ ವನಸ್ಪತಿಃ, ೧೨ ಸ್ವಾಹಾಕೃತಯಃ । ಛಂದಃ-ಗಾಯತ್ರೀ । ಸ್ವರಃ-ಷಡ್ಜಃ.

ಈ ಸೂಕ್ತದ ಮೊದಲ ಮಂತ್ರದಲ್ಲಿ ಪರಮೇಶ್ವರ ಮತ್ತು ಭೌತಿಕ ಅಗ್ನಿಯ ಗುಣಗಳನ್ನು ವರ್ಣಿಸಲಾಗಿದೆ.

ಸುಸಮಿದ್ಧೋ ನ ಆ ವಹ ದೇವಾ ಅಗ್ನೇ ಹವಿಷ್ಮತೇ । ಹೋತಃ ಪಾವಕ ಯಕ್ಷಿ ಚ ॥೧॥

ಪದಾರ್ಥ:- ಹೇ **[ಹೋತಃ]** ಸೃಷ್ಟಿಯ ಆದಿಯಲ್ಲಿ ಸಕಲ ಪದಾರ್ಥಗಳನ್ನು ಕೊಡುವವನೂ, ಸೃಷ್ಟಿಯ ಅಂತ್ಯದಲ್ಲಿ ಸರ್ವಸ್ವವನ್ನೂ ಲೀನ ಮಾಡುವವನೂ ಆದ **[ಪಾವಕ ಅಗ್ನೇ]** ಪತಿತ ಪಾವನ, ಸಕಲೈಶ್ವರ್ಯ ಪ್ರದಾತನಾದ ಪರಮಾತ್ಮ! **[ಸುಸಮಿದ್ಧಃ]** ಅನಂತ ಪ್ರಕಾಶವುಳ್ಳವನೂ, ತನ್ನ ದೀಪ್ತಿಯಿಂದ ಸಕಲ ಪ್ರಕಾಶ ಪುಂಜಗಳನ್ನು ಬೆಳಗಿಸುವವನೂ ಆದ **[ತ್ವಂ]** ನೀನು **[ಅಸ್ಮಭ್ಯಂ]** ನಮ್ಮೆಲ್ಲರ ಕಲ್ಯಾಣಕ್ಕೋಸ್ಕರ **[ಚ]** ಮತ್ತು **[ಹವಿಷ್ಮತೇ]** ಅತ್ಯಂತ ಶ್ರದ್ಧಾ ಭಕ್ತಿಯಿಂದ ಪ್ರತಿದಿನ ಯಜ್ಞದಲ್ಲಿ ಹವಿಸ್ಸನ್ನು ಅರ್ಪಿಸಿ, ತನ್ನ ಸರ್ವಸ್ವವನ್ನೂ ಮತ್ತು ತನ್ನ ಜೀವನವನ್ನು ಲೋಕಕಲ್ಯಾಣಕ್ಕೋಸ್ಕರ ಮುಡಿಪಾಗಿಡುವ ಶ್ರೇಷ್ಠ ಮಾನವನಿಗೆ **[ದೇವಾನ್]** ಸಕಲ ದಿವ್ಯ ಪದಾರ್ಥಗಳನ್ನೂ, ಜ್ಞಾನವನ್ನೂ, ಶ್ರೇಷ್ಠ ಕರ್ಮಗಳನ್ನು ನಿರಂತರ ಮಾಡಲು ದಿವ್ಯವಾದ ಶಕ್ತಿಯನ್ನೂ **[ಆ ವಹಸಿ]** ಎಲ್ಲ ವಿಧದಲ್ಲಿ ಪ್ರಾಪ್ತವಾಗುವಂತೆ ಮಾಡುತ್ತೀಯೆ. ಹೇ ಅನಂತ ದಯಾಳು ಪರಮಾತ್ಮ! ನಿನ್ನನ್ನು ಸದಾಕಾಲ **[ಯಕ್ಷಿ]** ಉಪಾಸಿಸುತ್ತೇನೆ.

ಅಥ ದ್ವಿತೀಯೋರ್ಥಃ:- ಹೇ **[ಹೋತಃ]** ಅತ್ಯಂತ ಪರಿಶ್ರಮದಿಂದ ಹಾಗೂ ಸಾಧನಾ ಸಂಪನ್ನನಾಗಿ ಸಂಪೂರ್ಣ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು, ನಿಃಸ್ವಾರ್ಥ ಭಾವದಿಂದ ಎಲ್ಲವನ್ನೂ ಅರ್ಪಿಸುವ **[ಪಾವಕ]** ತನ್ನ ಜ್ಞಾನದ ಮೂಲಕ ಅಜ್ಞಾನಿಗಳ ಅಜ್ಞಾನವನ್ನು ದೂರೀಕರಿಸಿ ಅವರನ್ನು ಉತ್ತಮ ಮಾನವರನ್ನಾಗಿ ಮಾಡುವ **[ಅಗ್ನೇ]** ಶ್ರೇಷ್ಠ ವಿದ್ವಾಂಸನೇ! ನೀನು **[ಸುಸಮಿದ್ಧಃ]** ನಿನ್ನ ಯೋಗಸಾಧನೆ ಹಾಗೂ ತಪಶ್ಶಕ್ತಿಯ ಮೂಲಕ ಅತ್ಯಂತ ತೇಜಸ್ಸುಳ್ಳವನಾಗಿ ಜ್ಞಾನದ ದೀಪ್ತಿಯಿಂದ ಕಂಗೊಳಿಸುತ್ತಾ **[ನಃ]** ನಮ್ಮೆಲ್ಲರ ಕಲ್ಯಾಣಕ್ಕೋಸ್ಕರ **[ಚ]** ಮತ್ತು **[ಹವಿಷ್ಮತೇ]** ಲೋಕಕಲ್ಯಾಣಕ್ಕೋಸ್ಕರ ತನ್ನ ಜೀವನವನ್ನೇ ಮುಡಿಪಾಗಿಡುವ ಯೋಗ್ಯ ಶ್ರೇಷ್ಠ ಮಾನವನಿಗೆ **[ದೇವಾನ್]** ಸಂಪೂರ್ಣ ಜ್ಞಾನವನ್ನೂ ಹಾಗೂ ನಿನ್ನ ತಪೋಬಲವನ್ನೂ **[ಆ ವಹಸಿ]** ಪೂರ್ಣವಾಗಿ ಧಾರೆಯೆರೆದು ಕೊಡುತ್ತೀಯೇ. ಸಂಪೂರ್ಣ ಜ್ಞಾನವನ್ನೂ ಹಾಗೂ ನಿನ್ನ ತಪೋಬಲವನ್ನೂ ಧಾರೆಯೆರೆದು ಕೊಡುವ ಅಂತಹ ಪ್ರಾತಃ ಸ್ಮರಣೀಯನಾದ ನಿನ್ನನ್ನು ನಾನು ಸದಾ ಕಾಲ **[ಯಕ್ಷಿ]** ಗೌರವಿಸುತ್ತೇನೆ. ಹಾಗೂ ನಿನ್ನ ಸಾನ್ನಿಧ್ಯದಲ್ಲಿರುತ್ತೇನೆ. ನೀನು ತೋರಿಸಿದಂತಹ ಜ್ಞಾನದ ಮಾರ್ಗದಲ್ಲಿಯೇ ಮುಂದುವರೆಯುತ್ತೇನೆ.

ಭಾವಾರ್ಥ:- ಸೃಷ್ಟಿಯ ಆದಿಯಲ್ಲಿ ಸಕಲ ಪದಾರ್ಥಗಳನ್ನು ಜೀವಮಾತ್ರರಿಗೆ ಕೊಟ್ಟು ಸೃಷ್ಟಿಯ ಅಂತ್ಯದಲ್ಲಿ ಸರ್ವಸ್ವವನ್ನೂ ಹರಣ ಮಾಡುವವನೂ, ಪತಿತ ಪಾವನನೂ, ಸಕಲೈಶ್ವರ್ಯಪ್ರದಾತನೂ ಆದ ಪರಮಾತ್ಮ! ನೀನು ನಿನ್ನ ಅನಂತ ತೇಜಸ್ಸು ಹಾಗೂ ಪ್ರಕಾಶದ ಮೂಲಕ ಸಕಲ ಪ್ರಕಾಶಪುಂಜಗಳನ್ನು ಬೆಳಗಿಸುತ್ತಾ, ನಮ್ಮೆಲ್ಲರ ಕಲ್ಯಾಣಕ್ಕೋಸ್ಕರ ಮತ್ತು ಅತ್ಯಂತ ಶ್ರದ್ಧಾ ಭಕ್ತಿಯಿಂದ ಯಜ್ಞವನ್ನು ಮಾಡುವ ಯಾಜ್ಞಿಕನೂ, ತನ್ನ ಸರ್ವಸ್ವವನ್ನೂ ಲೋಕ ಕಲ್ಯಾಣಕ್ಕೋಸ್ಕರ ಅರ್ಪಿಸುವವನೂ ಆದ ಶ್ರೇಷ್ಠ ಮಾನವನಿಗೆ ಸಕಲ ದಿವ್ಯ ಪದಾರ್ಥಗಳನ್ನೂ, ದಿವ್ಯಶಕ್ತಿಯನ್ನೂ ಪ್ರದಾನ ಮಾಡುತ್ತೀಯೆ. ಅತ್ಯಂತ ದಯಾಳುವಾದ ಪರಮಾತ್ಮ! ನಿನ್ನನ್ನು ಅತ್ಯಂತ ಶ್ರದ್ಧಾ ಭಕ್ತಿಯಿಂದ ಸದಾಕಾಲ ಉಪಾಸಿಸುತ್ತೇನೆ.

ಅತ್ಯಂತ ಪರಿಶ್ರಮದಿಂದ ಸಂಪೂರ್ಣ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ನಿಸ್ವಾರ್ಥಭಾವದಿಂದ ಸರ್ವಸ್ವವನ್ನೂ ಅರ್ಪಿಸುವ ಹಾಗೂ ತನ್ನ ಜ್ಞಾನದ ಮೂಲಕ ಅಜ್ಞಾನವನ್ನು ದೂರೀಕರಿಸಿ ಅವರನ್ನು ಉತ್ತಮ ಮಾನವರನ್ನಾಗಿ ಮಾಡುವ ಶ್ರೇಷ್ಠ ವಿದ್ವಾಂಸನೇ! ಯೋಗಸಾಧನೆಯ ಮೂಲಕ ಮತ್ತು ಬ್ರಹ್ಮಚರ್ಯ ಹಾಗೂ ತಪಶ್ಶಕ್ತಿಯ ಮೂಲಕ ಕಂಗೊಳಿಸುತ್ತಾ ನಮ್ಮೆಲ್ಲರ ಕಲ್ಯಾಣಕ್ಕೋಸ್ಕರ ತನ್ನ ಜೀವನವನ್ನೇ ಮುಡಿಪಾಗಿಡುವ ಯೋಗ್ಯ ಶ್ರೇಷ್ಠ ಮಾನವನಿಗೆ ಸಂಪೂರ್ಣ ಜ್ಞಾನವನ್ನೂ ತಪೋಬಲವನ್ನೂ ಪೂರ್ಣವಾಗಿ ಧಾರೆಯೆರೆದು ಕೊಡುತ್ತೀಯೆ. ಅಂತಹ ಪ್ರಾತಃಸ್ಮರಣೀಯನಾದ ನಿನ್ನನ್ನು ನಾನು ಸದಾಕಾಲ ಗೌರವಿಸುತ್ತೇನೆ. ನೀನು ನಮಗೆ ತೋರಿಸಿದ ಜ್ಞಾನದ ಮಾರ್ಗವನ್ನೇ ಸದಾ ಅನುಸರಿಸುತ್ತೇನೆ.

ಈ ಮಂತ್ರದಲ್ಲಿ ಶರೀರ ಮೊದಲಾದವುಗಳ ರಕ್ಷಣೆ ಮಾಡುವ ಭೌತಿಕ ಅಗ್ನಿಯ ಗುಣಗಳನ್ನು ವರ್ಣಿಸಲಾಗಿದೆ.

ಮಧುಮಂತಂ ತನೂನಪಾ-ದ್ಯಜ್ಞಂ ದೇವೇಷು ನಃ ಕವೇ । ಅದ್ಯಾ ಕೃಣುಹಿ ವೀತಯೇ ॥೨॥

ಪದಾರ್ಥ:- **[ತನೂನಪಾತ್]** ಜೀವಮಾತ್ರರ ಶರೀರ ಹಾಗೂ ಸಮಸ್ತ ಔಷಧಿ ತಥಾ ವನಸ್ಪತಿಗಳ ಪ್ರತಿಯೊಂದು ಭಾಗವನ್ನೂ ರಕ್ಷಿಸುವ **[ಕವಿ]** ಸಮಸ್ತ ಪದಾರ್ಥಗಳು ದೃಷ್ಟಿಗೋಚರವಾಗುವಂತೆ ಮಾಡುವ ಭೌತಿಕ ಅಗ್ನಿಯು **[ದೇವೇಷು]** ವಿದ್ವಾಂಸರಲ್ಲಿ ಮತ್ತು ದಿವ್ಯಪದಾರ್ಥಗಳಲ್ಲಿ **[ವೀತಯೇ]** ಸುಖಪ್ರಾಪ್ತ್ಯರ್ಥ ಹಾಗೂ ದೋಷಗಳನ್ನು ನಿವಾರಣೆ ಮಾಡುವುದಕ್ಕೋಸ್ಕರ **[ಮಧುಮಂತಮ್ ಯಜ್ಞಂ]** ಅತ್ಯಂತ ಮಧುರವಾದ ಹಾಗೂ ಸುವಾಸಿತ ದ್ರವ್ಯಗಳಿಂದ ಸಂಪೂರ್ಣ ವಾತಾವರಣವನ್ನು ಸುಗಂಧಿತವನ್ನಾಗಿಯೂ, ಮಧುರವನ್ನಾಗಿಯೂ ಮಾಡುವ ಯಜ್ಞವನ್ನು **[ಅದ್ಯಾ ಕೃಣುಹಿ]** ಈ ದಿನವೇ ನಮ್ಮೆಲ್ಲರಿಗೋಸ್ಕರ ಮಾಡುತ್ತಾನೆ. ಅರ್ಥಾತ್ ಯಜ್ಞದ ಮೂಲಕ ಅಗ್ನಿಯು ನಮ್ಮೆಲ್ಲರನ್ನು ಸಂರಕ್ಷಿಸುತ್ತಾನೆ.

ಭಾವಾರ್ಥ:- ಭೌತಿಕ ಅಗ್ನಿಯು ಎಂದಿಗೂ ತಾನೇ ಯಜ್ಞವನ್ನು ಮಾಡುವುದಿಲ್ಲ. ಪ್ರತಿಯೋರ್ವ ಮಾನವನೂ ಪ್ರತಿನಿತ್ಯ ಮಧುರವಾದ, ಸುವಾಸಿತವಾದ, ಪುಷ್ಟಿಕಾರಕವಾದ, ವಾತಾವರಣವನ್ನು ನಿರ್ಮಲವನ್ನಾಗಿ ಮಾಡಿ ರೋಗರುಜಿನಗಳನ್ನು ನಾಶಮಾಡುವ ಉತ್ತಮ ದ್ರವ್ಯಗಳನ್ನು ಯಜ್ಞದಲ್ಲಿ ಅರ್ಪಿಸಿದಾಗ, ಅಗ್ನಿಯು ಸಮಸ್ತ ಪದಾರ್ಥಗಳನ್ನು ಅತ್ಯಂತ ಸೂಕ್ಷ್ಮ ಕಣಗಳಲ್ಲಿ ವಿಭಾಜಿಸಿ, ಪ್ರಾಣಿಮಾತ್ರರ ಶರೀರದ ಪ್ರತಿಯೊಂದು ಭಾಗವನ್ನೂ, ಸಕಲ ವನಸ್ಪತಿಗಳನ್ನೂ ಸಂರಕ್ಷಿಸುತ್ತಾನೆ. ಇದರಿಂದ ಸರ್ವತ್ರ ಸುಖ ಮತ್ತು ಸಮೃದ್ಧಿಯು ಉಂಟಾಗುತ್ತದೆ.

ಈ ಮಂತ್ರದಲ್ಲಿ ಮಾನವರ ಪ್ರಶಂಸೆ ಮಾಡಲು ಯೋಗ್ಯವಾದ ಭೌತಿಕ ಅಗ್ನಿಯ ಗುಣಗಳನ್ನು ವಿವರಿಸಲಾಗಿದೆ.

ನರಾಶಂಸಮಿಹ ಪ್ರಿಯ-ಮಸ್ಮಿನ್ ಯಜ್ಞ ಉಪ ಹ್ವಯೇ । ಮಧುಜಿಹ್ವಂ ಹವಿಷ್ಕೃತಮ್ ॥೩॥

ಪದಾರ್ಥ:- ನಾನು **[ಅಸ್ಮಿನ್ ಯಜ್ಞೇ]** ಅನುಷ್ಠಾನ ಮಾಡಲು ಯೋಗ್ಯವಾದ ಈ ಯಜ್ಞದಲ್ಲಿ ಹಾಗೂ **[ಇಹ]** ಈ ಪ್ರಪಂಚದಲ್ಲಿ ಅಥವಾ ಈ ಜಗತ್ತಿನಲ್ಲಿ **[ಹವಿಷ್ಕೃತಮ್]** ಹವಿಸ್ಸನ್ನು ಅರ್ಪಿಸಿ ಪ್ರದೀಪ್ತವನ್ನಾಗಿ ಮಾಡಲ್ಪಡುವ, ಪ್ರಜ್ವಲಿತವನ್ನಾಗಿ ಮಾಡಲ್ಪಡುವ **[ಮಧುಜಿಹ್ವಂ]** ಆಕರ್ಷಣೀಯವಾದ, ಚೇತೋಹಾರಿಯಾದ ಕಾಲೀ, ಕರಾಲೀ, ಮನೋಜವಾ, ಸುಲೋಹಿತಾ, ಸುಧೂಮ್ರವರ್ಣಾ, ಸ್ಫುಲಿಂಗಿನೀ ಮತ್ತು ವಿಶ್ವರೂಪೀ ಎಂಬ ಸಪ್ತ ಜಿಹ್ವೆಗಳುಳ್ಳ (ಜ್ವಾಲೆಯೇ ಜಿಹ್ವೆಗಳಾಗಿವೆ.) **[ಪ್ರಿಯಂ]** ಸಕಲ ಜೀವರಾಶಿಗಳನ್ನು ಪ್ರೀತಿಸುವ ಹಾಗೂ ಸುಖವನ್ನೇ ಕೊಡುವ **[ನರಾಶಂಸಮ್]** ಸಮಸ್ತ ಮಾನವರಿಂದ ಪ್ರಶಂಸಿಸಲ್ಪಡುವ ಹಾಗೂ ಸರ್ವರಿಗೂ ಸುಖ-ಶಾಂತಿ ಸಮೃದ್ಧಿ ಮತ್ತು ಆರೋಗ್ಯವನ್ನು ಪ್ರದಾನ ಮಾಡುವ ಯಜ್ಞಾಗ್ನಿಯನ್ನು **[ಉಪಹ್ವಯೇ]** ಪ್ರತಿದಿನ ಅತ್ಯಂತ ಸಮೀಪದಲ್ಲಿ ಪ್ರಜ್ವಲಿತವನ್ನಾಗಿ ಮಾಡುತ್ತೇನೆ.

ಭಾವಾರ್ಥ:- ಅನುಷ್ಠಾನ ಮಾಡಲು ಯೋಗ್ಯವಾದ ಹಾಗೂ ಜೀವಮಾತ್ರರ ಅಭ್ಯುದಯವನ್ನು ಮಾಡುವ ಈ ಯಜ್ಞದಲ್ಲಿ ಹಾಗೂ ಈ ಜಗತ್ತಿನಲ್ಲಿ ಹವಿಸ್ಸನ್ನು ಅರ್ಪಿಸಿ ಪ್ರಜ್ವಲಿತವನ್ನಾಗಿ ಮಾಡಲ್ಪಡುವ ಅತ್ಯಂತ ಮಧುರ ಹಾಗೂ ಚೇತೋಹಾರಿಯಾದ ಕಾಲಿ - ಶುಕ್ಲ ಮತ್ತು ಇತರ ವರ್ಣಗಳಿಂದ ಕೂಡಿದ ಜ್ವಾಲೆಗಳ ಮೂಲಕ ಪ್ರಕಾಶವನ್ನು ಬೀರುವ, ಕರಾಲೀ - ಅತ್ಯಂತ ಅಸಹನೀಯವಾದ, ತೀವ್ರವಾದ ತಾಪವನ್ನುಂಟು ಮಾಡುವ, ಮನೋಜವಾ- ಮನಸ್ಸಿನಂತೆ ವೇಗವುಳ್ಳ, ಸುಲೋಹಿತಾ - ಸುಂದರವಾದ ರಕ್ತವರ್ಣವುಳ್ಳ, ಸುಧೂಮ್ರ ವರ್ಣಾ- ಸುಂದರವಾದ ಧೂಮ್ರ ವರ್ಣವುಳ್ಳ, ಸ್ಫುಲಿಂಗಿನೀ - ಹಲವಾರು ಸ್ಫುಲಿಂಗಗಳು ಅರ್ಥಾತ್ ಕಿಡಿಗಳುಳ್ಳ, ವಿಶ್ವರೂಪೀ - ಎಲ್ಲಾ ರೀತಿಯ ರೂಪಗಳುಳ್ಳ ಈ ರೀತಿಯ ಸಪ್ತ ಜಿಹ್ವಾ - ಏಳು ವಿಧದ ಜ್ವಾಲೆ ಎಂಬ ನಾಲಗೆಗಳುಳ್ಳ [ಜ್ವಾಲೆಯೇ ಅಗ್ನಿಯ ನಾಲಗೆಗಳು] ಅತ್ಯಂತ ಪ್ರಿಯ ಹಾಗೂ ಸಕಲ ಮಾನವರಿಂದ ಪ್ರಶಂಸಿಸಲ್ಪಡುವ ಮತ್ತು ಸಮಸ್ತ ಜೀವರಾಶಿಗಳಿಗೆ ಸುಖ-ಶಾಂತಿ-ಸಮೃದ್ಧಿ ಹಾಗೂ ಆರೋಗ್ಯವನ್ನು ಪ್ರದಾನ ಮಾಡುವ ಯಜ್ಞಾಗ್ನಿಯನ್ನು ನಾವೆಲ್ಲರೂ ಪ್ರತಿದಿನ ಅತ್ಯಂತ ಸಮೀಪದಿಂದ ಪ್ರಜ್ವಲಿತವನ್ನಾಗಿ ಮಾಡೋಣ. ಅರ್ಥಾತ್ ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಗಳಲ್ಲಿ ಪ್ರತಿದಿನವೂ ಯಜ್ಞವನ್ನು ಮಾಡಬೇಕು.

ಉಕ್ತ ಅಗ್ನಿಯು ಈ ಪ್ರಕಾರವಾಗಿ ಉಪಕರಿಸಲ್ಪಟ್ಟದ್ದು ಯಾವುದರ ಕಾರಣಕ್ಕಾಗಿ ಎಂಬುದನ್ನು ತಿಳಿಸಲಾಗಿದೆ.

ಅಗ್ನೇ ಸುಖತಮೇ ರಥೇ ದೇವಾ ಈಳಿತ ಆ ವಹ । ಅಸಿ ಹೋತಾ ಮನುರ್ಹಿತಃ ॥೪॥

ಪದಾರ್ಥ:- [**ಈಡಿತಃ ಅಗ್ನೇ**] ಸರ್ವೋಪಾಸ್ಯನೂ ಸರ್ವಪ್ರಕಾಶ ಸ್ವರೂಪನೂ ಆದ ಪರಮಾತ್ಮ! [**ಸುಖತಮೇ ರಥೇ**] ನೀನು ನಮ್ಮೆಲ್ಲರಿಗೂ ಪ್ರದಾನ ಮಾಡಿದ ಅತ್ಯಂತ ಸುಖಪ್ರದವಾದ ಈ ಶರೀರವೆಂಬ ರಥದಲ್ಲಿ [ಆತ್ಮಾನಾಂ ರಥಿನಂ ವಿದ್ಧಿ ಶರೀರಂ ರಥಮೇವ ಚ] [**ದೇವಾನ್ ಆ ವಹ**] ನಿನ್ನ ದಿವ್ಯವಾದ ಜ್ಞಾನವನ್ನೂ, ದಿವ್ಯವಾದ ಶಕ್ತಿಯನ್ನೂ ನೀಡು. ನಿನ್ನ ಕೃಪೆಯಿಂದ ನಮ್ಮೆಲ್ಲರಲ್ಲಿ ನಿನ್ನ ಸಮಸ್ತ ದಿವ್ಯ ಗುಣಗಳ ಆವಿರ್ಭಾವವಾಗಲಿ. ನೀನು [**ಮನುಃ**] ಮನನೀಯನು ಅರ್ಥಾತ್ ಎಲ್ಲರಿಂದಲೂ ಮನನ ಮಾಡಲ್ಪಡುವವನೂ, ವಿಚಿಂತ್ಯನೂ [**ಹಿತಃ**] ಪ್ರಾಣಿಮಾತ್ರರ ಹಿತವನ್ನೇ ಮಾಡುವವನೂ [**ಹೋತಾ**] ಸರ್ವಸುಖಪ್ರದಾತನೂ [**ಅಸಿ**] ಆಗಿದ್ದೀಯೆ.

ಭಾವಾರ್ಥ:- ಸರ್ವೋಪಾಸ್ಯನೂ ಸರ್ವಪ್ರಕಾಶಸ್ವರೂಪನೂ ಆದ ಪರಮಾತ್ಮ! ನೀನು ನಮ್ಮೆಲ್ಲರಿಗೆ ಪ್ರದಾನ ಮಾಡಿದ ಸುಂದರವಾದ ಹಾಗೂ ಅತ್ಯಂತ ಸುಖಪ್ರದವಾದ ಈ ಶರೀರದಲ್ಲಿ, ನಿನ್ನ ದಿವ್ಯವಾದ ಜ್ಞಾನವನ್ನೂ, ದಿವ್ಯವಾದ ಶಕ್ತಿಯನ್ನೂ ಉಂಟುಮಾಡು. ನಮ್ಮೆಲ್ಲರಲ್ಲಿ ನಿನ್ನ ಸಮಸ್ತ ದಿವ್ಯಗುಣಗಳ ಆವಿರ್ಭಾವವಾಗಲಿ, ಆಸುರೀ ಶಕ್ತಿಗಳು, ಆಸುರೀ ಪ್ರವೃತ್ತಿಗಳು, ಅಜ್ಞಾನಾಂಧಕಾರ ರೋಗರುಜಿನಗಳು ಎಂದಿಗೂ ನಮ್ಮ ಶರೀರವನ್ನು ವ್ಯಾಪಿಸದಿರಲಿ. ಹೇ ಭಕ್ತವತ್ಸಲನಾದ ಪರಮಾತ್ಮ! ನೀನು ಮನನೀಯನೂ, ವಿಚಿಂತ್ಯನೂ ಆಗಿದ್ದೀಯೆ. ಸದಾಕಾಲ ಪ್ರಾಣಿಮಾತ್ರರ ಹಿತವನ್ನೇ ಮಾಡುತ್ತೀಯೆ. ನಾವೆಲ್ಲರೂ ಅನುದಿನವೂ ನಿನ್ನ ಗುಣಗಳ ಮನನವನ್ನೂ, ಚಿಂತನವನ್ನೂ ನಿನ್ನ ನಾಮ ಸ್ಮರಣೆಯನ್ನೂ ಮಾಡುತ್ತಾ, ಪ್ರಾಣಿಮಾತ್ರರು ನಮ್ಮಂತೆಯೇ ಎಂದು ಭಾವಿಸಿಕೊಂಡು ಪರಸ್ಪರ ಪ್ರೀತಿ ಸೌಹಾರ್ದದಿಂದ ಬಾಳುವಂತಾಗಲಿ.

ನಂತರ ಆ ಭೌತಿಕ ಅಗ್ನಿಯು ಮೇಲೆ ಹೇಳಿದ ರೀತಿಯಲ್ಲಿ ಕ್ರಿಯೆಯಲ್ಲಿ ಯುಕ್ತನಾಗಿ ಏನನ್ನು ಮಾಡುತ್ತಾನೆ ಎಂಬುದನ್ನು ಹೇಳಿದೆ

ಸ್ತೃಣೀತ ಬರ್ಹಿರಾನುಷ-ಗ್ಘೃತಪೃಷ್ಠಂ ಮನೀಷಿಣಃ । ಯತ್ರಾಮೃತಸ್ಯ ಚಕ್ಷಣಮ್ ॥೫॥

ಪದಾರ್ಥ:- ಹೇ [**ಮನೀಷಿಣಃ**] ಮೇಧಾವಿಗಳಾದ ವಿದ್ವಾಂಸರೇ! [**ಯತ್ರ ಅಮೃತಸ್ಯ ಚಕ್ಷಣಮ್**] ಯಾವಾಗ ಅಂತರಿಕ್ಷದಲ್ಲಿ ಮೋಡಗಳಿಂದ ಆವೃತವಾಗಿ ಜಲಸಮೂಹದ ದರ್ಶನವಾಗುತ್ತದೆಯೋ [**ತದಾ ಆನುಷಕ್ ಘೃತಪೃಷ್ಠಂ**] ಆಗ ನಾಲ್ಕೂ ದಿಕ್ಕಿನಿಂದ ಮಳೆಯನ್ನು ಸುರಿಸುವ ಮೋಡಗಳಿಂದ ತುಂಬಿದ [**ಬರ್ಹಿಃ**] ಅಂತರಿಕ್ಷವನ್ನು [**ಸ್ತೃಣೀತ**] ಯಜ್ಞದ ಧೂಮದಿಂದ ಆಚ್ಛಾದಿತವನ್ನಾಗಿ ಮಾಡಿರಿ.

ಭಾವಾರ್ಥ:- ಮೇಧಾವಿಗಳಾದ ವಿದ್ವಾಂಸರೇ! ಯಾವಾಗ ಅಂತರಿಕ್ಷದಲ್ಲಿ ಮಳೆಯನ್ನು ಸುರಿಸಲು ಸಮರ್ಥವಾದ ಮೋಡಗಳು ನಾಲ್ಕೂ ದಿಕ್ಕಿನಿಂದ ಆವೃತವಾಗುತ್ತವೆಯೋ, ಆಗ ವಿಶಿಷ್ಟವಾದ ವನಸ್ಪತಿಗಳನ್ನು, ಸುಗಂಧಿತವಾದ, ಪದಾರ್ಥಗಳನ್ನು, ಪುಷ್ಟಿಕಾರಕವಾದ ದ್ರವ್ಯಗಳನ್ನು ಯಜ್ಞದಲ್ಲಿ ಅರ್ಪಿಸಿ ಯಜ್ಞದ ಧೂಮದಿಂದ ಅಂತರಿಕ್ಷವನ್ನು ಆಚ್ಛಾದಿತವನ್ನಾಗಿ ಮಾಡಿರಿ.

ಇಂದು ನೂರಾರು ಕಾರ್ಖಾನೆಗಳು, ಬೃಹತ್ ಕೈಗಾರಿಕೆಗಳು, ನಿರಂತರ ವಿಷಾನಿಲವನ್ನು ಉಗುಳುತ್ತಾ, ಅಂತರಿಕ್ಷದಲ್ಲಿ ವ್ಯಾಪಕವಾಗಿ, ಪಸರಿಸುತ್ತಿವೆ. ಪ್ರಾಣಿ ಮಾತ್ರರಿಗೂ ಸಕಲ ಸಸ್ಯಗಳಿಗೂ ಸಂಪೂರ್ಣ ವಿನಾಶವನ್ನೂ ಮಾಡುವಂತಹ ಧೂಮವನ್ನು ವಾಯುಮಂಡಲದಲ್ಲಿ ವ್ಯಾಪಕವಾಗಿ ಹಬ್ಬುವಂತೆ ಮಾಡಿ ಮಳೆಯನ್ನೂ ಬೆಳೆಯನ್ನೂ ವಿಷಮಯವನ್ನಾಗಿ ಮಾಡುತ್ತಿವೆ. ಇದರಿಂದ ಮನುಕುಲಕ್ಕೆ ಮಾರಕವಾದ ಹಾಗೂ ಪ್ರಾಣಿಮಾತ್ರರಿಗೆ ಮತ್ತು ಸಸ್ಯಗಳಿಗೆ ವಿನಾಶಕಾರಿಯಾದಂತಹ ಭಯಂಕರ ರೋಗಗಳುಂಟಾಗುತ್ತಿವೆ. ಈ ರೀತಿ ಭಯಂಕರವಾದ ರೋಗರುಜಿನಗಳು ಉಂಟಾಗದಂತೆ ಮಾಡಲು ಮತ್ತು ಅತ್ಯಂತ ಪುಷ್ಟಿಕಾರಕವಾದ, ಆರೋಗ್ಯವರ್ಧಕ ಬೆಳೆಗಳುಂಟಾಗುವಂತೆ ಮಾಡಲು ವಿಶಿಷ್ಟವಾದ ವನಸ್ಪತಿಗಳನ್ನು, ಸುಗಂಧಿತವಾದ ದ್ರವ್ಯಗಳನ್ನು ಪುಷ್ಟಿಕಾರಕವಾದ ಪದಾರ್ಥಗಳನ್ನು ಯಜ್ಞದಲ್ಲಿ ಅರ್ಪಿಸಿ, ಯಜ್ಞದ ಧೂಮದಿಂದ ಅಂತರಿಕ್ಷವನ್ನು ಆಚ್ಛಾದಿತವನ್ನಾಗಿ ಮಾಡಲು ವೇದವು ಆದೇಶವನ್ನೂ, ಉಪದೇಶವನ್ನೂ ಮಾಡುತ್ತದೆ. ಪ್ರತಿಯೊಬ್ಬರೂ ಆ ಸಮಯದಲ್ಲಿ ಯಜ್ಞ ಮಾಡಿದರೆ ಭಯಾನಕವಾದ ರೋಗರುಜಿನಗಳನ್ನು ತಡೆಗಟ್ಟಲು ಸಾಧ್ಯವಿದೆ. ಆರೋಗ್ಯವರ್ಧಕವಾದ ಮತ್ತು ಪುಷ್ಟಿಕಾರಕವಾದ ಬೆಳೆ, ಹಣ್ಣು ಹಂಪಲುಗಳು ಪ್ರಾಪ್ತವಾಗಿ ಜನರು ಆರೋಗ್ಯವಂತರೂ, ಬುದ್ಧಿವಂತರೂ ಆಗಲು ಸಾಧ್ಯವಾಗುತ್ತದೆ.

ಈಗ ಮನೆಯನ್ನು, ಯಜ್ಞಶಾಲೆ ಮತ್ತು ವಿಮಾನಾದಿ ರಥಗಳನ್ನು ಅನೇಕ ದ್ವಾರಗಳೊಂದಿಗೆ ನಿರ್ಮಿಸಬೇಕು ಎಂಬುದನ್ನು ಹೇಳಲಾಗಿದೆ.

ವಿ ಶ್ರಯಂತಾಮೃತಾವೃಧೋ ದ್ವಾರೋ ದೇವೀರಸಶ್ಚತಃ । ಅದ್ಯಾ ನೂನಂ ಚ ಯಷ್ಟವೇ ॥೬॥

ಪದಾರ್ಥ:- ಗೃಹಸ್ಥರೇ! [**ಋತಾವೃಧಃ**] ಸತ್ಯಜ್ಞಾನದ ಪ್ರಾಪ್ತಿಗೋಸ್ಕರ ಹಾಗೂ ಸುಖ ಮತ್ತು ಶಾಂತಿಯ ವೃದ್ಧಿಗೋಸ್ಕರ [**ಯಷ್ಟವೇ**] ಯಜ್ಞ (ಅರ್ಥಾತ್ ದೇವಪೂಜಾ, ಸಂಗತಿಕರಣ ಮತ್ತು ದಾನ) ಮಾಡುವುದಕ್ಕೋಸ್ಕರ [**ವಿಶ್ರಯಂತಾಮ್**] ಸತ್ಪುರುಷರು, ಶ್ರೇಷ್ಠ ವಿದ್ವಾಂಸರು ನಿನ್ನ ಮನೆಗೆ ಆಗಮಿಸಿ ವಿಶ್ರಾಂತಿಯನ್ನು ಹೊಂದಲಿ. [**ಚ**] ಮತ್ತು [**ದೇವೀಃ ದ್ವಾರಃ**] ಪ್ರಕಾಶದಿಂದ ಕೂಡಿದ ಜ್ಞಾನದ ದ್ವಾರಗಳು [**ನೂನಮ್**] ನಿಶ್ಚಯವಾಗಿಯೂ [**ಅದ್ಯ ಅಸಶ್ಚತಃ**] ಇಂದೇ ತೆರೆಯಲಿ.

ಭಾವಾರ್ಥ:- ಗೃಹಸ್ಥರೇ! ನಿಮಗೆ ಸದಾಕಾಲ ಸತ್ಯಜ್ಞಾನದ ಪ್ರಾಪ್ತಿಗಾಗಿ ಹಾಗೂ ಸುಖ-ಶಾಂತಿ ವೃದ್ಧಿಗಾಗಿ ಮತ್ತು ಯಜ್ಞ ಅರ್ಥಾತ್ ದೇವಪೂಜಾ, ಸಂಗತಿಕರಣ ಮತ್ತು ಸತ್ಪಾತ್ರರಿಗೆ ದಾನ ಇವುಗಳು ನಿರಂತರ ನಡೆಯುವುದಕ್ಕೋಸ್ಕರ ಶ್ರೇಷ್ಠ ಪುರುಷರು, ಶ್ರೇಷ್ಠ ವಿದ್ವಾಂಸರು, ನಿಸ್ವಾರ್ಥಿಗಳಾಗಿದ್ದು ಸದಾ ನಿಮ್ಮ ಹಿತವನ್ನೇ ಬಯಸುವವರು, ನಿಮ್ಮ ಮನೆಯಲ್ಲಿ ವಿಶ್ರಾಂತಿಯನ್ನು ಹೊಂದಲಿ. ಅವರು ಕೇವಲ ಭೋಜನ ಮತ್ತು ದಕ್ಷಿಣೆಯನ್ನು ಪಡೆದು ಹೋಗುವುದು ಬೇಡ. ನಿಮ್ಮ ಕಷ್ಟ-ಸುಖಗಳಲ್ಲಿ ಸಹಭಾಗಿಗಳಾಗಿ, ನಿಮಗೆ ಸತ್ಯಜ್ಞಾನವನ್ನೂ, ಉತ್ತಮವಾದ ಮಾರ್ಗದರ್ಶನವನ್ನೂ ನೀಡಿ, ಯಜ್ಞಾದಿಗಳನ್ನು ಮಾಡಿ ನಿಮ್ಮ ಮನೆಯಲ್ಲಿ ಸುಖಶಾಂತಿ ಸಮೃದ್ಧಿಯನ್ನು ನೆಲೆಸುವಂತೆ ಮಾಡಲು ನಿಮ್ಮ ಮನೆಯಲ್ಲಿ ಕೆಲವು ಕಾಲ ವಿಶ್ರಾಂತಿಯನ್ನು ಹೊಂದಲಿ. ಅದರಿಂದ ನಿಮ್ಮ ದುಃಖಗಳು ಕ್ಲೇಶಗಳು, ಅಜ್ಞಾನವು ದೂರವಾಗಿ ನಿಶ್ಚಯವಾಗಿಯೂ ಪ್ರಕಾಶದಿಂದ ಕೂಡಿದ ಜ್ಞಾನದ ದ್ವಾರಗಳು ಇಂದೇ ತೆರೆಯಲಿ. ಸರ್ವವಿಧದಲ್ಲಿಯೂ ನಿಮ್ಮ ಶ್ರೇಯೋಭಿವೃದ್ಧಿಯು ಆಗಲಿ.

ಸತ್ಯಜ್ಞಾನವನ್ನು ನೀಡುವ, ಸದಾ ನಮ್ಮ ಕಲ್ಯಾಣವನ್ನೇ ಬಯಸುವ ಶ್ರೇಷ್ಠ ವಿದ್ವಾಂಸರು, ಸಜ್ಜನರು, ಸಾಧುಸಂತರು, ಇವರ ಆಗಮನದಿಂದ ಯಜ್ಞಾದಿಗಳು ನಡೆಯುವುದರಿಂದ ಮನೆಯಲ್ಲಿ ಸದಾಕಾಲ ಸುಖಶಾಂತಿಯು

ನೆಲೆಸುತ್ತದೆ. ಧೂರ್ತರು, ಕಪಟಿಗಳು, ಕಳ್ಳಕಾಕರು, ತಿಂಡಿಪೋತರು, ವ್ಯರ್ಥಾಕಾಲಹರಣ ಮಾಡುವವರು, ಅಜ್ಞಾನಿಗಳು, ನಯವಂಚಕರು ಇವರ ಆಗಮನದಿಂದ ಮನೆಯಲ್ಲಿ ದುಃಖದಾರಿದ್ರ್ಯಗಳುಂಟಾಗುತ್ತವೆ. ಆದುದರಿಂದ ಇಂತಹವರ ಸಂಗವನ್ನೆಂದಿಗೂ ಮಾಡಬಾರದು. ದುರ್ಭಾಗ್ಯವಶಾತ್ ಮಾನವನು ಮದಿರಾಪಾನ, ಜೂಜು ಮತ್ತು ಇತರ ದುಶ್ಚಟಗಳಿಗೆ ಬಲಿಯಾಗಿ ಅಂತಹವರನ್ನೇ ತನ್ನ ಮನೆಗೆ ಕರೆದೊಯ್ದು ಸ್ವರ್ಗತುಲ್ಯ ಗೃಹಸ್ಥಾಶ್ರಮವನ್ನು ನರಕ ಸದೃಶವನ್ನಾಗಿ ಮಾಡುತ್ತಿದ್ದಾನೆ.

ಮೇಲೆ ಹೇಳಿದ ಕರ್ಮದಿಂದ ಹಗಲಿರುಳು ಸುಖವುಂಟಾಗುತ್ತದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ನಕ್ತೋಷಸಾ ಸುಪೇಶಸಾಸ್ಮಿನ್ ಯಜ್ಞ ಉಪ ಹ್ವಯೇ । ಇದಂ ನೋ ಬರ್ಹಿರಾಸದೇ ॥೭॥

ಪದಾರ್ಥ:- ನಾನು [ಅಸ್ಮಿನ್] ಈ ಮನೆಯಲ್ಲಿ ಅರ್ಥಾತ್ ನನ್ನ ಮನೆಯಲ್ಲಿ **[ಯಜ್ಞೇ]** ಸಮಸ್ತ ಯಜ್ಞಾನುಷ್ಠಾನಗಳಲ್ಲಿ ಮಾಡುವಂತಹ, ದೇವಪೂಜಾ, ಸಂಗತಿಕರಣ, ಹಾಗೂ ಎಲ್ಲಾ ರೀತಿಯ ದಾನಗಳನ್ನು ಮಾಡುವುದಕ್ಕೋಸ್ಕರ ಹಾಗೂ **[ಸುಪೇಶಸಾ]** ಭಗವಂತನು ನಿರ್ಮಿಸಿದಂತಹ ಸುಂದರವಾದ **[ನಕ್ತೋಷಸಾ]** ಪ್ರತಿಯೊಂದು ಹಗಲು ರಾತ್ರಿಗಳಲ್ಲಿ **[ಉಪಹ್ವಯೇ]** ಪರೋಪಕಾರಗಳನ್ನು ಮಾಡುವುದಕ್ಕೋಸ್ಕರ ವಿನಿಯೋಗಿಸುತ್ತೇನೆ. ಇದರಿಂದ **[ನಃ]** ನಮ್ಮ **[ಇದಂ ಬರ್ಹಿಃ]** ಈ ನಿವಾಸಸ್ಥಾನವು **[ಆಸದೇ]** ಅತ್ಯಂತ ಸುಖದಾಯಕವಾಗಲಿ.

ಭಾವಾರ್ಥ:- ಪ್ರತಿಯೋರ್ವ ಗೃಹಸ್ಥನು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಪುರುಷಾರ್ಥಗಳ ಸಾಧನೆಗಾಗಿ ಪವಿತ್ರವಾದ ಸಂಕಲ್ಪವನ್ನು ಮಾಡಬೇಕು. ನಾನು ನನ್ನ ಮನೆಯಲ್ಲಿ ಸಮಸ್ತ ಯಜ್ಞಾನುಷ್ಠಾನ (ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಅತಿಥಿಯಜ್ಞ, ಬಲಿವೈಶ್ವದೇವಯಜ್ಞ ಹಾಗೂ ಸ್ವಾಧ್ಯಾಯ ಪರ್ವಗಳಲ್ಲಿ ಮಾಡುವಂತಹ ಯಜ್ಞ, ಶ್ರೇಯೋಭಿವೃದ್ಧಿಗಾಗಿ ಮಾಡುವಂತಹ ಎಲ್ಲಾ ರೀತಿಯ ಯಜ್ಞ ಹಾಗೂ ಸ್ವಾಧ್ಯಾಯ, ಶ್ರೇಷ್ಠ ವಿದ್ವಾಂಸರ ಸತ್ಪುರುಷರ ಸಂಗತೀಕರಣ ಅರ್ಥಾತ್ ಸತ್ಸಂಗ, ಹಾಗೂ ಎಲ್ಲಾ ರೀತಿಯ ಯಥಾ ಶಕ್ತ್ಯಾನುಸಾರ ದಾನ, ಅರ್ಥಾತ್ ವಿದ್ಯಾದಾನ, ಅನ್ನದಾನ, ಸೇವಾದಾನ) ಇತ್ಯಾದಿಗಳನ್ನು ಮಾಡುವುದಕ್ಕೋಸ್ಕರ ಭಗವಂತನು ನಿರ್ಮಿಸಿದಂತಹ ಸುಂದರವಾದ ಪ್ರತಿಯೊಂದು ಹಗಲು ರಾತ್ರಿಗಳನ್ನು ವಿನಿಯೋಗಿಸುತ್ತೇನೆ. ಇದರಿಂದ ನಮ್ಮ ನಿವಾಸ ಸ್ಥಾನವು ಅತ್ಯಂತ ಸುಖದಾಯಕವೂ ಮಂಗಳದಾಯಕವೂ ಆಗಲಿ. ಪರೋಪಕಾರವನ್ನು ಮಾಡುವುದಕ್ಕೆ, ಎಲ್ಲಾ ರೀತಿಯ ಶ್ರೇಷ್ಠ ಕರ್ಮಗಳನ್ನು ಮಾಡುವುದಕ್ಕೆ, ಸ್ವಾಧ್ಯಾಯ ಸತ್ಸಂಗಗಳಿಗೆ ಯಾವ ಕ್ಷಣವೂ ಕೆಟ್ಟದ್ದಲ್ಲ. ಪ್ರತಿಯೊಂದು ಕ್ಷಣವೂ ಉತ್ತಮವೇ ಆಗಿದೆ. ಈ ಕ್ಷಣ, ಈ ತಿಥಿ, ಈ ವಾರ, ಈ ನಕ್ಷತ್ರ ಪ್ರಶಸ್ತವಾಗಿಲ್ಲ ಎಂಬ ನೆಪವನ್ನೊಡ್ಡಿ ಶ್ರೇಷ್ಠಕರ್ಮಗಳನ್ನು ಮಾಡುವುದನ್ನು ಮುಂದೂಡದೇ, ಜೀವನದ ಪ್ರತಿಯೊಂದು ಕ್ಷಣವನ್ನು ಯೋಗ್ಯವಾದ ರೀತಿಯಲ್ಲಿ ವ್ಯವಸ್ಥಾಬದ್ಧವಾಗಿ ವಿಭಾಜಿಸಿ ನಿರಂತರ ಶ್ರೇಷ್ಠ ಕರ್ಮಗಳನ್ನು ಮಾಡುತ್ತಾ ಇರಬೇಕು. [ಯಜ್ಞೋ ವೈ ಶ್ರೇಷ್ಠತಮಮ್ ಕರ್ಮ] ಶತಪಥ ಬ್ರಾಹ್ಮಣದ ಈ ವಚನಾನುಸಾರ ಸಮಸ್ತ ಶ್ರೇಷ್ಠ ಕರ್ಮಗಳು ಯಜ್ಞವೆಂದೇ ಪರಿಗಣಿಸಲ್ಪಡುತ್ತವೆ. ಆದುದರಿಂದ ಪ್ರತಿಯೊಂದು ಕ್ಷಣದಲ್ಲಿ ಯಾವುದಾದರೊಂದು ಶ್ರೇಷ್ಠಕರ್ಮಗಳನ್ನು ಮಾಡುತ್ತಾ ಜೀವನವನ್ನು ಯಜ್ಞಮಯವನ್ನಾಗಿ ಮಾಡಬೇಕು. ಇದರಿಂದ ನಮ್ಮ ಜೀವನ ಮತ್ತು ನಮ್ಮ ನಿವಾಸಸ್ಥಾನ ಸ್ವರ್ಗತುಲ್ಯವಾಗುತ್ತದೆ.

ಶುದ್ಧಿಕಾರಕವಾದ ವಿದ್ಯುದ್ರೂಪದಿಂದ ಅಪ್ರಸಿದ್ಧವೂ, ಪ್ರತ್ಯಕ್ಷ ಸ್ಥೂಲರೂಪದಿಂದ ಪ್ರಸಿದ್ಧವೂ ಆದ ಅಗ್ನಿಗಳನ್ನು ಇಲ್ಲಿ ವರ್ಣಿಸಲಾಗಿದೆ.

ತಾ ಸುಜಿಹ್ವಾ ಉಪ ಹ್ವಯೇ ಹೋತಾರಾ ದೈವ್ಯಾಕವೀ । ಯಜ್ಞಂ ನೋ ಯಕ್ಷತಾಮಿಮಮ್ ॥೮॥

ಪದಾರ್ಥ:- ಪ್ರತಿದಿನ ಕರ್ಮಕಾಂಡಗಳ ಮೂಲಕ ಯಜ್ಞಾನುಷ್ಠಾನ ಮಾಡುವವನಾದ ನಾನು ನನ್ನ ಮನೆಯಲ್ಲಿ [ನಃ] ನಮ್ಮೆಲ್ಲರ [ಇಮಂ ಯಜ್ಞಮ್ ಯಕ್ಷತಾಂ] ಈ ಯಜ್ಞವನ್ನು ಅರ್ಥಾತ್ ನಾವೆಲ್ಲರೂ

ಪ್ರತಿದಿನ ಪ್ರಾತಃಕಾಲ ಮತ್ತು ಸಾಯಂಕಾಲ ಮಾಡುವ ಯಜ್ಞವನ್ನು ಹಾಗೂ ಸಕಲ ಶಿಲ್ಪ ಕ್ರಿಯಾದಿಗಳಿಗೆ ಉಪಯೋಗಿಸುವಂತಹ ವಿದ್ಯುತ್ತನ್ನು ಪ್ರಾಪ್ತ ಮಾಡಿಕೊಳ್ಳುತ್ತೇನೆ. [ತಾ ಸುಜಿಹ್ವಾ] ಸಪ್ತ ಜಿಹ್ವೆಗಳಿರುವ [ಹೋತಾರಾ] ಹವಿಸ್ಸನ್ನು ಪ್ರಾಪ್ತ ಮಾಡಿಕೊಳ್ಳುವ ಯಜ್ಞಾಗ್ನಿಯನ್ನು ಹಾಗೂ [ಕವೀ] ಪ್ರತಿಯೊಂದು ವಸ್ತುಗಳನ್ನು ದೃಷ್ಟಿಗೋಚರವಾಗುವಂತೆ ಮಾಡುವ ಮತ್ತು ಪ್ರತಿಯೊಂದು ವಸ್ತುವಿಗೆ ಗತಿಯನ್ನು ಕೊಡುವ [ದೈವ್ಯಾ] ದಿವ್ಯಗುಣಗಳುಳ್ಳ ಮತ್ತು ಅದ್ಭುತಶಕ್ತಿಯುಳ್ಳ ಅಗ್ನಿ ಮತ್ತು ವಿದ್ಯುತ್ತನ್ನು [ಉಪಹ್ವಯೇ] ಅತ್ಯಂತ ಸಮೀಪದಿಂದ ಪ್ರಾಪ್ತಮಾಡಿಕೊಂಡು ಸರಿಯಾದ ರೀತಿಯಲ್ಲಿ ವಿನಿಯೋಗಿಸುತ್ತೇನೆ.

ಭಾವಾರ್ಥ:- ಪ್ರತಿಯೊಬ್ಬ ಗೃಹಸ್ಥನು ಮಾಡಬೇಕಾದ ಸಂಕಲ್ಪವಿದು. ಮೊದಲನೆಯದಾಗಿ ನನ್ನ ಮನೆಯಲ್ಲಿ ನನ್ನ ಪರಿವಾರದ ಸಕಲ ಸದಸ್ಯರೂ ಪ್ರತಿದಿನ ಪ್ರಾತಃಕಾಲ ಮತ್ತು ಸಾಯಂಕಾಲ ಎಲ್ಲರೂ ಒಟ್ಟಿಗೆ ಕುಳಿತುಕೊಂಡು ಯಜ್ಞವನ್ನು ಮಾಡುತ್ತೇವೆ. [ಪ್ರತಿದಿನ ಎರಡು ಬಾರಿ ಮಾಡಲು ಸಾಧ್ಯವಾಗದಿದ್ದಲ್ಲಿ ದಿನಕ್ಕೊಂದಾವರ್ತಿಯಾದರೂ ಯಜ್ಞವನ್ನು ಮಾಡಲೇಬೇಕು.] ಈ ಯಜ್ಞವು ಸಕಲ ವಿಧದಲ್ಲಿ ಸಂಪೂರ್ಣ ಪರಿವಾರದ ಸಂರಕ್ಷಣೆಯನ್ನು ಮಾಡುತ್ತದೆ. ಅದರೊಂದಿಗೆ ಮನೆಯಲ್ಲಿ ಪ್ರಕಾಶಕ್ಕೋಸ್ಕರ ಹಾಗೂ ಸಕಲ ಯಂತ್ರಾದಿಗಳು ಸರಿಯಾದ ರೀತಿಯಲ್ಲಿ ಚಲಿಸುವಂತೆ ಮಾಡುವುದಕ್ಕೋಸ್ಕರ ಬೇಕಾದ ವಿದ್ಯುಚ್ಛಕ್ತಿಯನ್ನು ಪ್ರಾಪ್ತ ಮಾಡಿಕೊಂಡು ಯೋಗ್ಯವಾದ ರೀತಿಯಲ್ಲಿ ವಿನಿಯೋಗಿಸಬೇಕು. ಈ ವಿದ್ಯುಚ್ಛಕ್ತಿಯನ್ನು ಸೂರ್ಯನ ಶಾಖದಿಂದಾಗಲೀ, ದನ, ಎಮ್ಮೆ, ಎತ್ತು, ಕೋಣ ಇತ್ಯಾದಿ ಪಶುಗಳ ಸೆಗಣಿಯಿಂದ ಪ್ರಾಪ್ತ ಮಾಡಿದ ಶಕ್ತಿಯಿಂದಾಗಲೀ ಅಥವಾ ತೈಲದಿಂದಾಗಲೀ ನಮಗೆ ಬೇಕಾದ ವಿದ್ಯುಚ್ಛಕ್ತಿಯನ್ನು ನಾವೇ ಪ್ರಾಪ್ತಮಾಡಿಕೊಳ್ಳಬೇಕು. ಇದರಿಂದ ಪ್ರತಿಯೊಬ್ಬರೂ ಸ್ವಾವಲಂಬಿಯಾಗಲು ಸಾಧ್ಯವಾಗುತ್ತದೆ.

ಅಲ್ಲಿ ಮೂರು ಪ್ರಕಾರದ ಕ್ರಿಯೆಗಳ ಪ್ರಯೋಗ ಮಾಡಲ್ಪಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಇಳಾ ಸರಸ್ವತೀ ಮಹೀ ತಿಸ್ರೋ ದೇವೀರ್ಮಯೋಭುವಃ । ಬರ್ಹಿಃ ಸೀದಂತ್ವಸ್ರಿಧಃ ॥೯॥

ಪದಾರ್ಥ:- [ಇಳಾ] ಯಾವುದರ ಮೂಲಕ ಮಾನವ ಮಾತ್ರರು ಜ್ಞಾನವಂತರಾಗುತ್ತಾರೋ ಹಾಗೂ ಯಾವುದರ ಮೂಲಕ ಭಗವಂತನ ಗುಣಗಳ ಪರಿಚಯವನ್ನು ಪ್ರಾಪ್ತ ಮಾಡಿಕೊಂಡು ಭಗವಂತನನ್ನು ಸ್ತುತಿಸುತ್ತಾರೋ ಅಂತಹ ಋಗ್ವೇದದ ವಾಣಿಯು **[ಸರಸ್ವತೀ]** ಯಾವುದರ ಮೂಲಕ ಸಕಲ ವಿಧದ ಜ್ಞಾನವನ್ನು ಪಡೆದು ಮಾನವ ಮಾತ್ರರು ಜ್ಞಾನಪೂರ್ವಕ ಕರ್ಮವನ್ನು ಮಾಡುತ್ತಾರೋ, ಅಂತಹ ಯಜುರ್ವೇದದ ವಾಣಿಯು [ಮಹೀ] ಯಾವುದರ ಮೂಲಕ ಪರಮಾತ್ಮನ ಅನಂತ ಮಹಿಮೆಯನ್ನು ವಾಸ್ತವಿಕ ಸ್ವರೂಪವನ್ನೂ ತಿಳಿದು ಅನನ್ಯ ಭಕ್ತಿಯಿಂದ ಉಪಾಸಿಸುತ್ತಾರೋ, ಅಂತಹ ಸಾಮವೇದದ ವಾಣಿ [ತಿಸ್ರಃ ದೇವೀಃ] ವೇದತ್ರಯಗಳ ದಿವ್ಯವಾದ ವಾಣಿಯು ಅತ್ಯಂತ ದಿವ್ಯವಾದ ಗುಣಗಳುಳ್ಳವೂ ದಿವ್ಯ ಶಕ್ತಿಯುಳ್ಳವೂ ಆಗಿವೆ. [ಮಯಃ ಭುವಃ] ಮಾನವ ಮಾತ್ರರಿಗೆ ಅತ್ಯಂತ ಸುಖವನ್ನೂ, ಆನಂದವನ್ನೂ ಸದಾಕಾಲ ಕೊಡುತ್ತದೆ. [ಅಸ್ರಿಧಃ] ಯಾರಿಗೂ ಯಾವುದೇ ರೀತಿಯ ಹಿಂಸೆಯನ್ನು ಮಾಡದ, ಜೀವಮಾತ್ರರ ಕಲ್ಯಾಣವನ್ನೇ ಮಾಡುವ ಹಾಗೂ ಯಾರಿಂದಲೂ ನಾಶ ಮಾಡಲಸಾಧ್ಯವಾದ ಅತ್ಯಂತ ಪವಿತ್ರವಾದ ಪರಮಾತ್ಮನ ಅಮರವಾಣಿಯು [ಬರ್ಹಿಃ ಸೀದಂತು] ಪ್ರತಿಯೊಬ್ಬ ಮಾನವನ ಮನೆಯಲ್ಲಿಯೂ, ಪ್ರತಿಯೊಬ್ಬ ಮಾನವನ ಮನಸ್ಸಿನಲ್ಲಿಯೂ ಸದಾಕಾಲ ನೆಲೆಸಲಿ.

ಭಾವಾರ್ಥ:- ಯಾವುದರ ಮೂಲಕ ಮಾನವಮಾತ್ರರು ಸಂಪೂರ್ಣ ಚರಾಚರ ಜಗತ್ತಿನಲ್ಲಿರುವ ಸಕಲ ಪದಾರ್ಥಗಳ ಜ್ಞಾನವನ್ನು ಪಡೆದು, ಜ್ಞಾನವಂತರೂ, ಬುದ್ಧಿವಂತರೂ, ವಿವೇಕಿಗಳೂ ಆಗುತ್ತಾರೋ ಹಾಗೂ ಯಾವುದರ ಮೂಲಕ ಭಗವಂತನ ಸಕಲ ಗುಣಗಳ ಪರಿಚಯವನ್ನು ಪ್ರಾಪ್ತ ಮಾಡಿಕೊಂಡು ಅವನನ್ನು ಸ್ತುತಿಸುತ್ತಾರೋ ಅಂತಹ ಋಗ್ವೇದದ ವಾಣಿಯು, ಯಾವುದರ ಮೂಲಕ ಮಾನವ ಮಾತ್ರರು ಸಕಲ ವಿಧದ ಜ್ಞಾನವನ್ನು ಪ್ರಾಪ್ತ

ಮಾಡಿಕೊಂಡು, ತದನುಸಾರ ಕರ್ಮವನ್ನು ಮಾಡುತ್ತಾರೋ, ಹಾಗೂ ಜ್ಞಾನ ಮತ್ತು ಕರ್ಮದ ಸ್ವರೂಪವನ್ನು ತಿಳಿಯುತ್ತಾರೋ, ಅಂತಹ ಯಜುರ್ವೇದದ ವಾಣಿಯು, ಯಾವುದರ ಮೂಲಕ ಮಾನವ ಮಾತ್ರರು ಭಗವಂತನ ಅನಂತ ಮಹಿಮೆಯನ್ನೂ, ವಾಸ್ತವಿಕ ಸ್ವರೂಪವನ್ನೂ ತಿಳಿದುಕೊಂಡು ಅವನನ್ನು ಅನನ್ಯ ಭಕ್ತಿಯಿಂದ ಉಪಾಸಿಸುತ್ತಾರೋ ಅಂತಹ ಸಾಮವೇದದ ವಾಣಿ, ಈ ವೇದತ್ರಯಗಳ ದಿವ್ಯವಾದ ವಾಣಿ, ಜ್ಞಾನ, ಕರ್ಮ, ಉಪಾಸನೆ ಮತ್ತು ವಿಜ್ಞಾನವಿರುವ ಅಥರ್ವವೇದದ ವಾಣಿ ಅತ್ಯಂತ ದಿವ್ಯವಾದ ಗುಣಗಳುಳ್ಳವೂ ದಿವ್ಯವಾದ ಶಕ್ತಿಯುಳ್ಳವೂ ಆಗಿವೆ. ಮಾನವ ಮಾತ್ರರಿಗೆ ಸದಾಕಾಲ ಸುಖ ಮತ್ತು ಆನಂದವನ್ನೇ ಉಂಟುಮಾಡುತ್ತದೆ. ಯಾರಿಗೂ ಯಾವುದೇ ರೀತಿಯಲ್ಲಿ ಹಿಂಸೆಯನ್ನು ಮಾಡದ ಸದಾಕಾಲ ಜೀವಮಾತ್ರರ ಕಲ್ಯಾಣವನ್ನೇ ಮಾಡುವ ಹಾಗೂ ಯಾರಿಂದಲೂ ನಾಶ ಮಾಡಲಸಾಧ್ಯವಾದ ಮತ್ತು ಎಂದಿಗೂ ನಷ್ಟವಾಗದ ಅತ್ಯಂತ ಪವಿತ್ರವಾದ ಭಗವಂತನ ಅಮರವಾಣಿಯು ಪ್ರತಿಯೊಬ್ಬ ಮಾನವನ ಮನೆಯಲ್ಲಿಯೂ ಮನಸ್ಸಿನಲ್ಲಿಯೂ ಸದಾಕಾಲ ನೆಲೆಸಲಿ.

ಅಥ ದ್ವಿತೀಯೋರ್ಥ: ಯಾವುದರ ಮೂಲಕ ಮಾನವಮಾತ್ರರು ಜ್ಞಾನವಂತರೂ, ಬುದ್ಧಿವಂತರೂ ವಿವೇಕಿಗಳೂ ಆಗುತ್ತಾರೆಯೋ ಅಂತಹ ವೇದವಾಣಿ, ಯಾವುದರ ಮೂಲಕ ಮಾನವಮಾತ್ರರು ಅತ್ಯಂತ ಸಭ್ಯರೂ, ಸುಸಂಸ್ಕೃತರೂ ಆಗುತ್ತಾರೋ ಅಂತಹ ಪವಿತ್ರವಾದ ವೈದಿಕ ಸಂಸ್ಕೃತಿ ಹಾಗೂ ಸದಾಕಾಲ ಸರ್ವರಿಗೆ ಸುಖವನ್ನೂ, ಆಶ್ರಯವನ್ನೂ ನೀಡುತ್ತದೆಯೋ ಅಂತಹ ವಿಶಾಲವಾದ ಮಹತೀಭೂಮಿ ಇವು ಮೂರು ದೇವಿಗಳಾಗಿವೆ.

ಈ ಮೂರು ದೇವತೆಗಳು ಸದಾಕಾಲ ಪ್ರಾಣಿಮಾತ್ರರಿಗೆ ಸುಖವನ್ನೇ ಉಂಟುಮಾಡುತ್ತವೆ. ಈ ಮೂರು ದೇವತೆಗಳನ್ನು ಯಾರು ಕೂಡ ಎಂದಿಗೂ ಹಿಂಸಿಸಬಾರದು, ಸದಾಕಾಲ ಸರ್ವವಿಧದಲ್ಲಿ ಸಂರಕ್ಷಿಸಬೇಕು. ಈ ಮೂರು ದೇವತೆಗಳು ಸರ್ವರ ಮನಸ್ಸಿನಲ್ಲಿ ಸದಾಕಾಲ ನೆಲೆಸಲಿ ಹಾಗೂ ಸರ್ವರಿಂದ ಪೂಜಿಸಲ್ಪಡಲಿ.

ಮತ್ತೆ ಏನೇನನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಇಹ ತ್ವಷ್ಟಾರಮಗ್ರಿಯಂ ವಿಶ್ವರೂಪಮುಪ ಹ್ವಯೇ । ಅಸ್ಮಾಕಮಸ್ತು ಕೇವಲಃ ॥೧೦॥

ಪದಾರ್ಥ:- ನಾನು **[ವಿಶ್ವರೂಪಂ]** ಸಂಪೂರ್ಣ ವಿಶ್ವ ಅರ್ಥಾತ್ ಚರಾಚರ ಜಗತ್ತಿನ ರೂಪವು ಯಾವನಲ್ಲಿ ಅಡಕವಾಗಿದೆಯೋ, ವಿಶ್ವವೇ ಒಂದು ರೂಪ ಮಾತ್ರವಾಗಿ ಯಾವನಲ್ಲಿ ಸಮಾಹಿತವಾಗಿದೆಯೋ ಅಂತಹ ಸರ್ವವ್ಯಾಪಕ ಸರ್ವಾಂತರ್ಯಾಮಿಯಾದ **[ಅಗ್ರಿಯಂ]** ಎಲ್ಲರಿಗಿಂತಲೂ ಅಗ್ರಸ್ಥಾನದಲ್ಲಿರುವವನು ಹಾಗೂ ಯಾವುದೇ ಕಾರ್ಯವನ್ನು ಮಾಡಬೇಕಾದರೂ ಮೊಟ್ಟ ಮೊದಲು ಸ್ಮರಿಸಲ್ಪಡುವವನೂ, ಉಪಾಸಿಸಲ್ಪಡುವವನೂ ಆದ **[ತ್ವಷ್ಟಾರಮ್]** ಸಕಲ ಕಷ್ಟಗಳನ್ನೂ, ಬಾಧಕಗಳನ್ನೂ, ದುರಿತಗಳನ್ನೂ ನಷ್ಟ ಮಾಡುವವನೂ ಸರ್ವೋಪಾಸ್ಯನೂ ಆದ ಪರಮಾತ್ಮನನ್ನು **[ಉಪಹ್ವಯೇ]** ಅತ್ಯಂತ ಶ್ರದ್ಧಾಭಕ್ತಿಯಿಂದ ಉಪಾಸಿಸುತ್ತೇನೆ. **[ಅಸ್ಮಾಕಂ ಕೇವಲಃ ಅಸ್ತು]** ಆ ಪರಮಾತ್ಮನೇ ನಮ್ಮೆಲ್ಲರ ಜೀವಮಾತ್ರರ ಏಕೈಕ ಹಿತಚಿಂತಕನೂ ಕಲ್ಯಾಣವನ್ನು ಮಾಡುವವನೂ ಇಷ್ಟದೇವನೂ ಆಗಿದ್ದಾನೆ. ಕೇವಲ ಸರ್ವಾಂತರ್ಯಾಮಿಯಾದ ಪರಮಾತ್ಮನು ಮಾತ್ರ ಜೀವಮಾತ್ರರ ಕಲ್ಯಾಣವನ್ನೇ ಮಾಡುತ್ತಾನೆ. ಸುಖವನ್ನೇ ಉಂಟುಮಾಡುತ್ತಾನೆ.

ದ್ವಿತೀಯೋರ್ಥಃ: ನಾನು **[ವಿಶ್ವರೂಪಂ]** ವಿವಿಧ ರೂಪ ಹಾಗೂ ಗುಣಗಳುಳ್ಳ **[ಅಗ್ರಿಯಂ]** ಸಕಲ ಧಾರ್ಮಿಕ ಕಾರ್ಯಗಳಲ್ಲಿ ಮತ್ತು ಸಕಲ ಸಮಾರಂಭಗಳಲ್ಲಿ ಹಾಗೂ ಸಕಲ ಪರ್ವಗಳ ಆಚರಣೆಯ ಸಮಯದಲ್ಲಿ ಯಜ್ಞದ ಮೂಲಕ ದೀಪವನ್ನು ಬೆಳಗಿಸುವುದರ ಮೂಲಕ ಪ್ರದೀಪ್ತಗೊಳಿಸಲ್ಪಡುವ **[ತ್ವಷ್ಟಾರಂ]** ಸಕಲ ಪದಾರ್ಥಗಳನ್ನು ತನ್ನ ತೇಜದಿಂದ ಭಿನ್ನ ಭಿನ್ನವನ್ನಾಗಿ ಮಾಡುವ ಭೌತಿಕ ಅಗ್ನಿಯನ್ನು [ಇಹ ಉಪಹ್ವಯೇ] ನಾವೆಲ್ಲರೂ ಯಜ್ಞಾದಿಗಳ ಮೂಲಕ ಸಕಲ ಯಂತ್ರಯಾನಾದಿಗಳಲ್ಲಿ ಭಿನ್ನ ಭಿನ್ನ ರೀತಿಯಲ್ಲಿ ಉಪಯೋಗಿಸುವುದರ ಮೂಲಕ

ಪ್ರಾಪ್ತ ಮಾಡಿಕೊಳ್ಳುತ್ತೇವೆ. ವಿವಿಧ ರೀತಿಯಲ್ಲಿ ಬಳಕೆಯಾಗುವ ಈ ಅಗ್ನಿಶಕ್ತಿಯು [ಅಸ್ಮಾಕಂ ಕೇವಲಃ ಅಸ್ತು] ನಮ್ಮೆಲ್ಲರ ಜೀವನವನ್ನು ಸುಖಮಯವನ್ನಾಗಿ ಮಾಡುವ ಏಕಮಾತ್ರ ಸಾಧನವಾಗಿದೆ.

ಭಾವಾರ್ಥ;- ನಾನು ಸರ್ವವ್ಯಾಪಕ, ಸರ್ವಾಂತರ್ಯಾಮಿಯಾದ, ಸಮಸ್ತ ಶ್ರೇಷ್ಠ ಕಾರ್ಯಗಳಿಗೆ ಪ್ರೇರಕನೂ, ಸಮಸ್ತ ಕಾರ್ಯಗಳನ್ನು ಮಾಡುವ ಮೊದಲು ಸ್ಮರಿಸಲ್ಪಡುವವನೂ, ಉಪಾಸಿಸಲ್ಪಡುವವನೂ ಆದ, ಸಕಲ ದುಃಖಭಂಜಕನಾದ ಪರಮಾತ್ಮನನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಉಪಾಸಿಸುತ್ತೇನೆ. ಆ ಪರಮಾತ್ಮನು ಜೀವಮಾತ್ರರ ಕಲ್ಯಾಣವನ್ನೇ ಮಾಡುವವನೂ ಸಕಲ ಸುಖ ಸೌಲಭ್ಯಗಳನ್ನೇ ಕೊಡುವವನೂ ಹಾಗೂ ನಮ್ಮೆಲ್ಲರ ಏಕಮಾತ್ರ ಉಪಾಸ್ಯನೂ ಆಗಿದ್ದಾನೆ.

ದ್ವಿತೀಯೋರ್ಥಃ: ನಾನು ವಿವಿಧ ರೂಪ ಮತ್ತು ವಿವಿಧ ಗುಣಗಳುಳ್ಳ (ಅಗ್ನಿಯ ವಿವಿಧರೂಪಗಳು ಅಗ್ನಿ, ವಿದ್ಯುತ್ತು, ಮಿಂಚು, ಶಕ್ತಿ, ಸೂರ್ಯ) ಸಕಲ ಧಾರ್ಮಿಕ ಕಾರ್ಯಗಳಲ್ಲಿ, ಸಕಲ ಪರ್ವಾಚರಣೆಯಲ್ಲಿ ಸಕಲ ಸಭೆ ಸಮಾರಂಭಗಳಲ್ಲಿ ಯಜ್ಞದ ಮೂಲಕ ಮತ್ತು ದೀಪವನ್ನು ಬೆಳಗಿಸುವುದರ ಮೂಲಕ ಮೊಟ್ಟ ಮೊದಲು ಪ್ರದೀಪ್ತವನ್ನಾಗಿ ಮಾಡಲ್ಪಡುವ ಹಾಗೂ ತನ್ನ ತೇಜದಿಂದ ಸಕಲ ಪದಾರ್ಥಗಳನ್ನು ಭಿನ್ನ ಭಿನ್ನವನ್ನಾಗಿ ಮಾಡುವ ಶಕ್ತಿಯುಳ್ಳ ಭೌತಿಕ ಅಗ್ನಿಯನ್ನು, ಅಗ್ನಿಶಕ್ತಿಯನ್ನು ಯಜ್ಞಾದಿಗಳ ಮೂಲಕ ಹಾಗೂ ಸಕಲಯಂತ್ರ ಯಾನಾದಿಗಳಲ್ಲಿ ಯೋಗ್ಯವಾದ ರೀತಿಯಲ್ಲಿ ವಿನಿಯೋಗಿಸುವುದರ ಮೂಲಕ ಅತ್ಯಂತ ಸನಿಹದಿಂದ ಪ್ರಾಪ್ತ ಮಾಡಿಕೊಳ್ಳುತ್ತೇನೆ. ಆ ಅಗ್ನಿಯು ನಮ್ಮೆಲ್ಲರಿಗೆ ಸಕಲ ಸುಖವನ್ನು ಕೊಡುವ ಏಕಮಾತ್ರ ಸಾಧನವಾಗಿದ್ದಾನೆ.

ಯಾವುದರಿಂದ ಪ್ರಜ್ವಲಿತವಾದ ಆ ಅಗ್ನಿಯು ಈ ಕಾರ್ಯಗಳನ್ನು ಸಿದ್ಧಗೊಳಿಸುತ್ತದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅವ ಸೃಜಾ ವನಸ್ಪತೇ ದೇವ ದೇವೇಭ್ಯೋ ಹವಿಃ । ಪ್ರ ದಾತುರಸ್ತು ಚೇತನಮ್ ॥೧೧॥

ಪದಾರ್ಥ:- ಈ ಅಗ್ನಿಯು **[ದೇವಃ]** ಸಕಲ ಫಲಪುಷ್ಪಾದಿಗಳನ್ನು ಪ್ರದಾನ ಮಾಡುವವನು **[ವನಸ್ಪತಿಃ]** ಯಜ್ಞದ ಮೂಲಕ ವೃಷ್ಟಿಗೆ ಕಾರಣೀಭೂತನಾಗಿ ವೃಕ್ಷ, ವನಸ್ಪತಿ, ಔಷಧಿ ಫಲ ಪುಷ್ಪಾದಿಗಳನ್ನು ಸಂರಕ್ಷಿಸುವವನೂ **[ದೇವೇಭ್ಯಃ]** ಸಕಲ ರೋಗಕ್ಕೆ ಕಾರಣೀಭೂತವಾದ ಕೀಟಾಣುಗಳನ್ನು ನಾಶ ಮಾಡಿ, ಸಕಲ ದೋಷಗಳನ್ನು ನಿವಾರಣೆ ಮಾಡಿ ಸಕಲ ಪದಾರ್ಥಗಳಲ್ಲಿ ದಿವ್ಯವಾದ ಗುಣಗಳನ್ನುಂಟು ಮಾಡಿ **[ಹವಿಃ]** ಹವನೀಯವಾದ ಪದಾರ್ಥಗಳನ್ನು ಉತ್ತಮವಾದ ರೀತಿಯಲ್ಲಿ **[ಅವಸೃಜ]** ಉತ್ಪನ್ನಮಾಡುತ್ತಾನೆ. ಈ ಅಗ್ನಿಯು **[ಪ್ರದಾತುಃ]** ಸಕಲ ಪದಾರ್ಥಗಳ ದೋಷವನ್ನು ನಿವಾರಣೆ ಮಾಡಿ ಪರಿಶುದ್ಧವನ್ನಾಗಿ ಮಾಡಲಪೇಕ್ಷಿಸುವ ವಿದ್ವಾಂಸರಲ್ಲಿ ಮತ್ತು ವಿಜ್ಞಾನಿಗಳಲ್ಲಿ **[ಚೇತನಮ್]** ವಿಶಿಷ್ಟವಾದ ಜ್ಞಾನವನ್ನು ಬೀರುವವನೂ [ಅಸ್ತು] ಆಗಿದ್ದಾನೆ.

ಭಾವಾರ್ಥ:- ಅಗ್ನಿಯನ್ನು ಯಜ್ಞದಲ್ಲಿ ಪ್ರದೀಪ್ತವನ್ನಾಗಿ ಮಾಡಿ ಉತ್ತಮವಾದ ಪುಷ್ಟಿಕಾರಕವಾದ ಪದಾರ್ಥಗಳನ್ನು, ಸುಗಂಧವನ್ನು ಬೀರುವ ಪದಾರ್ಥಗಳನ್ನು, ರೋಗರುಜಿನಗಳನ್ನು ನಾಶಮಾಡಲು ಸಮರ್ಥವಾದ ದಿವ್ಯ ಔಷಧಿ ವನಸ್ಪತಿಗಳನ್ನು ಅರ್ಪಿಸುವುದರಿಂದ ಜೀವಮಾತ್ರರಿಗೆ ಪ್ರಯೋಜನಗಳು ಲಭಿಸುತ್ತವೆ ಎಂಬುದನ್ನು ಈ ಮಂತ್ರದಲ್ಲಿ ಹೇಳಿದೆ. ಈ ಯಜ್ಞಾಗ್ನಿಯು ವೃಷ್ಟಿಗೆ ಕಾರಣೀಭೂತವಾಗಿ ಅರ್ಥಾತ್ ಯಜ್ಞವನ್ನು ಮಾಡುವುದರಿಂದ ಸಮೃದ್ಧವಾದ ಮಳೆ ಬೆಳೆ ಉಂಟಾಗುವುದರಿಂದ ಹಾಗೂ ಸಕಲ ರೋಗ ರುಜಿನಗಳನ್ನು ನಾಶ ಮಾಡುವುದರ ಮೂಲಕ ಫಲ ಪುಷ್ಪಾದಿಗಳನ್ನು ವನಸ್ಪತಿಯನ್ನು ಸಂರಕ್ಷಿಸುವುದರಿಂದ ಅಗ್ನಿಯನ್ನು ವನಸ್ಪತಿ ಎಂದು ಸಂಬೋಧಿಸಲಾಗಿದೆ. ಅದರೊಂದಿಗೆ ಅಗ್ನಿಯು ಸಕಲ ಪದಾರ್ಥಗಳ ದೋಷವನ್ನು ನಿವಾರಣೆ ಮಾಡಿ ಪರಿಶುದ್ಧವನ್ನಾಗಿ ಮಾಡಲಪೇಕ್ಷಿಸುವ ವಿದ್ವಾಂಸರಲ್ಲಿ ಜ್ಞಾನ ಶಕ್ತಿಯನ್ನು ಬೀರುತ್ತದೆ. ಇದರ ತಾತ್ಪರ್ಯವೇನೆಂದರೆ ಮಾನವನು ಯಜ್ಞದ ಮೂಲಕ ಎಷ್ಟು ಪ್ರಯೋಗಗಳನ್ನು

ಮಾಡುತ್ತಾನೋ ಅವನ ಬುದ್ಧಿಯು ಅಷ್ಟೇ ವಿಕಸಿತವಾಗಿ ವಿಶೇಷವಾದ ಜ್ಞಾನವು ಲಭಿಸುತ್ತದೆ. ಇದರಿಂದ ಪ್ರಾಣಿಮಾತ್ರರಿಗೆ ಸಂಪೂರ್ಣಲಾಭವು ಲಭಿಸುತ್ತದೆ.

ಈ ಕ್ರಿಯಾಕಾಂಡವನ್ನು ಮನುಷ್ಯರು ಯಾವ ರೀತಿ ಮಾಡಬೇಕು ಎಂಬುದನ್ನು ವಿವರಿಸಲಾಗಿದೆ.

ಸ್ವಾಹಾ ಯಜ್ಞಂ ಕೃಣೋತನೇಂದ್ರಾಯ ಯಜ್ವನೋ ಗೃಹೇ । ತತ್ರ ದೇವಾಁ ಉಪ ಹ್ವಯೇ॥೧೨॥

ಪದಾರ್ಥ:- [ಇಂದ್ರಾಯ] ಆತ್ಮೋನ್ನತಿಯನ್ನು ಮಾಡಲಪೇಕ್ಷಿಸುವ ಮಾನವನಿಗೆ, ತನ್ನ ಆತ್ಮನ ವಿಕಾಸಕ್ಕೋಸ್ಕರ, ಅಭ್ಯುದಯ ಹಾಗೂ ನಿಃಶ್ರೇಯಸ್ಸಿನ ಪ್ರಾಪ್ತಿಗೋಸ್ಕರ [ಯಜ್ವನಃ] ಯಜ್ಞಾನುಷ್ಠಾನವನ್ನು ಮಾಡಲಪೇಕ್ಷಿಸುವ ಮಾನವನು [ಗೃಹೇ] ತನ್ನ ಮನೆಯಲ್ಲಿಯೇ [ಸ್ವಾಹಾ ಯಜ್ಞಂ ಕೃಣೋತನ] ಸುಂದರವಾದ ವಾಣಿಯ ಮೂಲಕ ಸ್ವಾಹಾಕಾರದಿಂದ ಮಂತ್ರವನ್ನುಚ್ಚರಿಸುತ್ತಾ ಯಜ್ಞವನ್ನು ಪ್ರತಿದಿನ ಮಾಡಬೇಕು. ಬಾಹ್ಯ ಶುದ್ಧಿಗೋಸ್ಕರ, ವಾತಾವರಣವನ್ನು ನಿರ್ಮಲವನ್ನಾಗಿ ಮಾಡುವುದಕ್ಕೋಸ್ಕರ, ಸಮಾಜದ ಸಂಘಟನೆಯನ್ನು ಮಾಡುವುದಕ್ಕೋಸ್ಕರ ಹಾಗೂ ಜ್ಞಾನ ಸಂವರ್ಧನೆಗೋಸ್ಕರ ಯಜ್ಞವನ್ನು ಮಾಡಬೇಕು. ಆತ್ಮೋನ್ನತಿಗೋಸ್ಕರ ಆಧ್ಯಾತ್ಮಿಕ ಯಜ್ಞವನ್ನು ಅರ್ಥಾತ್ ತನ್ನ ಅಂತಃಕರಣದಲ್ಲಿಯೇ ಪರಮಾತ್ಮನನ್ನು ಉಪಾಸಿಸಬೇಕು. ಯಾವ ಮಾನವನು ತನ್ನ ಮನೆಯಲ್ಲಿಯೇ ಆಧಿಭೌತಿಕ, ಆಧಿದೈವಿಕ, ಹಾಗೂ ಆಧ್ಯಾತ್ಮಿಕ ತ್ರಿವಿಧ ಯಜ್ಞವನ್ನು ಮಾಡುತ್ತಾನೋ, ಭಕ್ತವತ್ಸಲನಾದ ಪರಮಾತ್ಮನು **[ತತ್ರದೇವಾನ್ ಉಪಹ್ವಯೇ]** ಅಂತಹ ಉಪಾಸಕನ ಮನೆಯಲ್ಲಿ ಸಕಲ ದಿವ್ಯ ಪದಾರ್ಥಗಳನ್ನೂ, ಸಕಲ ದಿವ್ಯ ಶಕ್ತಿಗಳನ್ನೂ ಸಕಲ ಶ್ರೇಷ್ಠ ವಿದ್ವಾಂಸರನ್ನೂ ಪ್ರಾಪ್ತವಾಗುವಂತೆ ಮಾಡುತ್ತಾನೆ.

ಭಾವಾರ್ಥ:- ಯಾವ ಮಾನವನು ತನ್ನ ಆತ್ಮನ ವಿಕಾಸವನ್ನೂ, ಅಭ್ಯುದಯ ನಿಃಶ್ರೇಯಸ್ಸನ್ನೂ, ಹಾಗೂ ತನ್ನ ಪರಿವಾರದ ಕಲ್ಯಾಣವನ್ನೂ, ಸುಖಶಾಂತಿ ಸಮೃದ್ಧಿಯನ್ನೂ ಪ್ರಾಪ್ತಮಾಡಲಪೇಕ್ಷಿಸುತ್ತಾನೋ, ಆತನು ತನ್ನ ಸಕಲ ಇಷ್ಟಾರ್ಥ ಸಿದ್ಧಿಗೋಸ್ಕರ ಯಜ್ಞಾನುಷ್ಠಾನವನ್ನು ತನ್ನ ಮನೆಯಲ್ಲಿಯೇ ಸುಂದರವಾದ ವಾಣಿಯ ಮೂಲಕ ಸ್ವಾಹಾಕಾರವನ್ನು ಮಾಡುತ್ತಾ ತನ್ನ ಪರಿವಾರ ಸಮೇತ ಯಜ್ಞವನ್ನು ಮಾಡಬೇಕು. ತನ್ನ ಪರಿವಾರವನ್ನು ಹಾಗೂ ತನ್ನ ಪರಿವಾರದವರನ್ನು ಬಿಟ್ಟು ಅನ್ಯತ್ರ ಯಜ್ಞಾನುಷ್ಠಾನವನ್ನು ಮಾಡುವ ಮಾನವನಿಗೆ ಯಜ್ಞದ ಸಂಪೂರ್ಣಫಲವು ಎಂದಿಗೂ ಪ್ರಾಪ್ತವಾಗಲಾರದು. ಈ ರೀತಿ ಆಧಿಭೌತಿಕ, ಆಧಿದೈವಿಕ ಹಾಗೂ ಆಧ್ಯಾತ್ಮಿಕ ಈ ತ್ರಿವಿಧ ಯಜ್ಞವನ್ನು ಮಾಡುವ ಉಪಾಸಕನ ಮನೆಯಲ್ಲಿ ಪರಮಾತ್ಮನು ಸಕಲ ದಿವ್ಯಶಕ್ತಿಗಳನ್ನೂ, ಸಕಲ ಶ್ರೇಷ್ಠ ವಿದ್ವಾಂಸರನ್ನೂ ಪ್ರಾಪ್ತವಾಗುವಂತೆ ಮಾಡುತ್ತಾನೆ. ಸಕಲ ಶ್ರೇಷ್ಠ ಪದಾರ್ಥಗಳು ಪ್ರಾಪ್ತವಾಗುವುದರಿಂದ ಮಾನವನು ಅತ್ಯಂತ ಶ್ರೀಮಂತನಾಗುತ್ತಾನೆ. ಸಕಲ ದಿವ್ಯಶಕ್ತಿಗಳು ಪ್ರಾಪ್ತವಾಗುವುದರಿಂದ ಮಾನವನು ಬಲಶಾಲಿಯೂ, ಕೀರ್ತಿವಂತನೂ, ಅತ್ಯಂತ ಯಶಸ್ಸುಳ್ಳವನೂ ಆಗುತ್ತಾನೆ. ಸಕಲ ಶ್ರೇಷ್ಠ ವಿದ್ವಾಂಸರು ಪ್ರಾಪ್ತವಾಗುವುದರಿಂದ ಮಾನವನು ಸಂಪೂರ್ಣ ಜ್ಞಾನವಂತನೂ ಆಗುತ್ತಾನೆ.

ಈ ತ್ರಯೋದಶ ಸೂಕ್ತದಲ್ಲಿ ಅಗ್ನಿಯ ಮೂಲಕ ಎಲ್ಲಾ ವಿಧದಲ್ಲಿ ಪ್ರಯೋಜನವನ್ನು ಪಡೆದು ಯಜ್ಞಾನುಷ್ಠಾನವನ್ನು ತನ್ನ ಮನೆಯಲ್ಲಿಯೇ ಮಾಡುವುದರಿಂದ ಸಕಲ ಸುಖಸಮೃದ್ಧಿಗಳು ಪ್ರಾಪ್ತವಾಗುತ್ತವೆ ಎಂದು ಉಪದೇಶಿಸಲಾಗಿದೆ. ಈ ಸೂಕ್ತದೊಂದಿಗೆ ದ್ವಾದಶಸೂಕ್ತದ ಸಂಗತಿಕರಣ ಇದೆ ಎಂಬುದನ್ನು ಸರ್ವರೂ ಗಮನಿಸಬೇಕು.

ಹದಿಮೂರನೆಯ ಸೂಕ್ತ ಸಮಾಪ್ತ

ಸೂಕ್ತ ೧೪

ಮಂತ್ರಸಂಖ್ಯೆ ೧೨ । ಋಷಿಃ - ಮೇಧಾತಿಥಿಃ ಕಾಣ್ವಃ । ದೇವತಾ - ವಿಶ್ವೇದೇವಾಃ (ವಿಶ್ವೈರ್ದೇವೈಃ ಸಹಿತೋಽಗ್ನಿಃ), ೩ ಇಂದ್ರವಾಯುಬೃಹಸ್ಪತಿಮಿತ್ರಾಗ್ನಿಪೂಷಭಗಾದಿತ್ಯಮರುದ್ಗಣಾಃ, ೧೦ ವಿಶ್ವೇದೇವಾಗ್ನೀಂದ್ರವಾಯುಮಿತ್ರಧಾಮಾನಿ, ೧೧ ಅಗ್ನಿಃ । ಛಂದಃ - ಗಾಯತ್ರೀ । ಸ್ವರಃ - ಷಡ್ಜಃ.

ಈಸೂಕ್ತದ ಮೊದಲ ಮಂತ್ರದಲ್ಲಿ ಬಹಳ ಪದಾರ್ಥಗಳೊಂದಿಗೆ ಸಂಯೋಗವಾಗುವ ಈಶ್ವರ ಹಾಗೂ ಭೌತಿಕ ಅಗ್ನಿಯ ವರ್ಣನೆ ಮಾಡಲಾಗಿದೆ.

ಐಭಿರಗ್ನೇ ದುವೋ ಗಿರೋ ವಿಶ್ವೇಭಿಃ ಸೋಮಪೀತಯೇ । ದೇವೇಭಿರ್ಯಾಹಿ ಯಕ್ಷಿ ಚ ॥೧॥

ಪದಾರ್ಥ:- ಹೇ [ಅಗ್ನೇ] ಸರ್ವ ಪ್ರಕಾಶಸ್ವರೂಪ ಸಕಲೈಶ್ವರ್ಯ ಪ್ರದಾತಾ ಪರಮೇಶ್ವರನೇ! ನೀನು [ಏಭಿಃ ವಿಶ್ವೇಭಿಃ ದೇವೇಭಿಃ] ಈ ಸಮಸ್ತ ದಿವ್ಯವಾದ ಸೂರ್ಯಚಂದ್ರ ನಕ್ಷತ್ರಾದಿ ಪ್ರಕಾಶ ಪುಂಜಗಳೊಂದಿಗೆ ಸಂಪೂರ್ಣ ಹಾಗೂ ದಿವ್ಯವಾದ ಜ್ಞಾನವನ್ನು ಬೀರುವ ವೇದಗಳೊಂದಿಗೆ ವೇದಜ್ಞಾನದ ಪ್ರಕಾಶವನ್ನು ಬೀರುವ ಋಷಿ-ಮಹರ್ಷಿ ವಿದ್ವಾಂಸರೊಂದಿಗೆ **[ಸೋಮಪೀತಯೇ]** ಸರ್ವಸುಖ ಪ್ರಾಪ್ತಿಗಾಗಿ ಸಕಲ ಸುಖ ಸೌಲಭ್ಯಗಳನ್ನೂ ಪ್ರಾಣಿಮಾತ್ರರಿಗೆ ಪ್ರಾಪ್ತವಾಗುವಂತೆ ಪ್ರದಾನ ಮಾಡುವ ಕಾರಣ **[ದುವಃ]** ಸತ್ಕಾರಾದಿ ವ್ಯವಹಾರಗಳನ್ನು **[ಗಿರಃ ಯಾಹಿ]** ನಮ್ಮೆಲ್ಲರಿಂದ ಸ್ತುತಿಸಲ್ಪಡುವ ಸ್ತುತಿ ಸಮೂಹವನ್ನು ಹಾಗೂ ಭಕ್ತಿಪುರಸ್ಸರವಾದ ಕೀರ್ತನೆ ಭಜನೆಗಳನ್ನು ಪ್ರಾಪ್ತಮಾಡುತ್ತೀಯೆ. **[ಚ]** ಮತ್ತು ಹೇ ಶರಣಾಗತ ಭಕ್ತವತ್ಸಲ! ನಾವೆಲ್ಲರೂ ನಿನ್ನನ್ನು ಅತ್ಯಂತ ಶ್ರದ್ಧೆಯಿಂದ ಅನನ್ಯ ಭಕ್ತಿಯಿಂದ **[ಯಕ್ಷಿ]** ಉಪಾಸಿಸುತ್ತೇವೆ.

ಭಾವಾರ್ಥ:- ಸರ್ವ ಪ್ರಕಾಶಸ್ವರೂಪ ಸಕಲೈಶ್ವರ್ಯ ಪ್ರದಾತನಾದ ಪರಮಾತ್ಮನು, ಪ್ರಾಣಿಮಾತ್ರರಿಗೋಸ್ಕರ ಸೂರ್ಯಚಂದ್ರ ನಕ್ಷತ್ರ ಮೊದಲಾದ ಪ್ರಕಾಶ ಪುಂಜಗಳನ್ನೂ, ಗಾಳಿ, ನೀರು, ಆಹಾರ ಫಲಪುಷ್ಪ ಔಷಧಿ ವನಸ್ಪತಿ ಹಾಗೂ ಸಕಲ ಸಂಪತ್ತು ಮತ್ತು ಸುಖ ಸೌಲಭ್ಯಗಳನ್ನು ಪ್ರದಾನ ಮಾಡುತ್ತಾನೆ. ಅದರೊಂದಿಗೆ ಸಂಪೂರ್ಣಜ್ಞಾನದ ಭಂಡಾರವಾದ ವೇದಗಳನ್ನೂ, ಅವುಗಳನ್ನು ಬೋಧಿಸಲು ಋಷಿ ಮಹರ್ಷಿಗಳನ್ನು ಶ್ರೇಷ್ಠ ವಿದ್ವಾಂಸರನ್ನೂ ಪ್ರತಿಯೊಂದು ಸೃಷ್ಟಿಯಲ್ಲಿಯೂ ಸೃಷ್ಟಿಸುತ್ತಾನೆ. ಆದುದರಿಂದ ನಾವೆಲ್ಲರೂ ಅವನನ್ನು ಅತ್ಯಂತ ಶ್ರದ್ಧೆಯಿಂದ, ಅನನ್ಯ ಭಕ್ತಿಯಿಂದ ಉಪಾಸಿಸೋಣ. ಸುಂದರವಾದ ಕೀರ್ತನೆ ಭಜನೆಗಳಿಂದ ಭಜಿಸೋಣ.

ಮುಂದಿನ ಮಂತ್ರದಲ್ಲಿ ಅಗ್ನಿ ಶಬ್ದದಿಂದ ಎರಡು ಅರ್ಥಗಳನ್ನು ಮಾಡಲಾಗಿದೆ.

ಆ ತ್ವಾ ಕಣ್ವಾ ಅಹೂಷತ ಗೃಣಂತಿ ವಿಪ್ರ ತೇ ಧಿಯಃ । ದೇವೇಭಿರಗ್ನ ಆ ಗಹಿ ॥೨॥

ಪದಾರ್ಥ:- ಹೇ [ಅಗ್ನೇ] ಜಗದೀಶ್ವರ! ಯಾವ ರೀತಿ **[ಕಣ್ವಾಃ]** ಮೇಧಾವಿಯಾದ ವಿದ್ವಾಂಸರು **[ತ್ವಾ]** ನಿನ್ನನ್ನು ಪೂಜಿಸುತ್ತಾರೋ, ಅರ್ಚಿಸುತ್ತಾರೋ ಹಾಗೂ **[ಅಹೂಷತ]** ನಮ್ಮ ಅಂತಃಕರಣದಲ್ಲಿ ಆಹ್ವಾನವನ್ನು ಮಾಡಿ ಉಪಾಸಿಸುತ್ತಾರೋ, ಅದೇ ರೀತಿ ನಾವೆಲ್ಲರೂ ಅತ್ಯಂತ ಶ್ರದ್ಧಾ ಭಕ್ತಿಯಿಂದ ನಿನ್ನನ್ನು ಪ್ರಾರ್ಥಿಸಿ ನಮ್ಮ ಅಂತಃಕರಣದಲ್ಲಿಯೇ ನಿನ್ನ ಪ್ರತಿಷ್ಠಾಪನೆಯನ್ನು ಮಾಡಿ ಉಪಾಸಿಸುತ್ತೇವೆ. ಹೇ **[ವಿಪ್ರ]** ವಿವಿಧಜ್ಞಾನದ ಮೂಲಕ ಮತ್ತು ವಿಶೇಷ ಜ್ಞಾನದ ಮೂಲಕ ಸಕಲ ಪದಾರ್ಥಗಳ ಪೂರ್ತಿಕೆಯನ್ನು ಮಾಡುವ ವಿದ್ವಾಂಸನೇ! **[ತೇ ಧಿಯಃ]** ಯಾವ ರೀತಿ ನಿನ್ನ ಮೇಧಾಬುದ್ಧಿಯು, ಯಾವ ರೀತಿ ನಿನ್ನ ಪ್ರಜ್ಞಾ ಬುದ್ಧಿಯು, ಯಾವ ರೀತಿ ನಿನ್ನ ಧಾರಣಾಬುದ್ಧಿಯು ಪರಮಾತ್ಮನ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಜ್ಞಾನಪೂರ್ವಕ ಶ್ರೇಷ್ಠ ಕರ್ಮಗಳನ್ನು

ಮಾಡುತ್ತಾ [ಗೃಣಂತಿ] ಪರಮಾತ್ಮನ ವಾಸ್ತವಿಕ ಸ್ವರೂಪದ ಸಾಕ್ಷಾತ್ಕಾರವನ್ನು ಮಾಡಿಕೊಂಡು ಆ ಪರಮಾತ್ಮನ ವರ್ಣನೆಯನ್ನು ಮಾಡುತ್ತವೆಯೋ, ಅದೇ ರೀತಿ ನಾವೆಲ್ಲರೂ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನ ಉಪಾಸನೆಯನ್ನು ಪ್ರತಿದಿನ ಮಾಡುತ್ತೇವೆ. ಸರ್ವರಿಗೂ ಮಂಗಳವನ್ನೇ, ಕಲ್ಯಾಣವನ್ನೇ ಮಾಡುವ ಪರಮಾತ್ಮ! ನೀನು ನಮ್ಮೆಲ್ಲರ ಮೇಲೆ ದಯೆತೋರಿ [ದೇವೇಭಿಃ] ಸಕಲ ದಿವ್ಯಗುಣಗಳೊಂದಿಗೆ, ಸಕಲ ದಿವ್ಯಶಕ್ತಿಗಳೊಂದಿಗೆ ಸಕಲ ದಿವ್ಯ ಪದಾರ್ಥಗಳೊಂದಿಗೆ ನಮ್ಮೆಲ್ಲರಿಗೆ [ಆ ಗಹಿ] ಪ್ರಾಪ್ತನಾಗು.

ದ್ವಿತೀಯೋರ್ಥಃ : ಹೇ [ವಿಪ್ರ] ವಿವಿಧ ಜ್ಞಾನದ ಮೂಲಕ ಹಾಗೂ ವಿಶೇಷ ಜ್ಞಾನದ ಮೂಲಕ ಸಕಲ ಪದಾರ್ಥಗಳ ಸ್ವರೂಪವನ್ನು ಹಾಗೂ ಪ್ರಯೋಜನವನ್ನು ಅರಿತುಕೊಂಡು ಸರಿಯಾದ ರೀತಿಯಲ್ಲಿ ವಿನಿಯೋಗಿಸುವ ವಿದ್ವಾಂಸನೇ! ಯಾವ ರೀತಿ [ಕಣ್ವಾಃ] ಅತ್ಯಂತ ಜ್ಞಾನಸಂಪನ್ನರಾದ ಹಾಗೂ ಅತ್ಯಂತ ಮೇಧಾವಿಗಳಾಗಿ ಇತರ ವಿದ್ವಾಂಸರು [**ಅಗ್ನಿಂ ಗೃಣಂತಿ**] ಹಲವು ವಿಧದಲ್ಲಿ ಅಗ್ನಿಯ ಶಕ್ತಿಯನ್ನು ಪ್ರಾಪ್ತಮಾಡಿಕೊಳ್ಳುತ್ತಾರೋ, [**ಅಹೂಷತ**] ಹಾಗೂ ಶಿಲ್ಪ ವಿದ್ಯಾದಿಗಳಲ್ಲಿ ಮತ್ತು ಯಾರು ಯಾಗಾದಿಗಳಲ್ಲಿ ವಿನಿಯೋಗಿಸುತ್ತಾರೋ ಅದೇ ರೀತಿ ನೀನು ಕೂಡಿ ಹಾಗೂ ಅಗ್ನಿಶಕ್ತಿಯನ್ನು ಪ್ರಾಪ್ತ ಮಾಡಿಕೊಂಡು ಉತ್ತಮವಾದ ರೀತಿಯಲ್ಲಿ ವಿನಿಯೋಗಿಸು. ಈ [**ಅಗ್ನಿ**] ಅಗ್ನಿಶಕ್ತಿಯು [**ದೇವೇಭಿಃ ಸಹ ಆ ಗಹಿ**] ದಿವ್ಯವಾದ ಗುಣ ಮತ್ತು ಶಕ್ತಿಯೊಂದಿಗೆ ನಮ್ಮೆಲ್ಲರ ಮುಂದೆ ಹಲವು ರೂಪದಲ್ಲಿ ಪ್ರಕಟವಾಗಿ ಎಲ್ಲರಿಗೂ ಎಲ್ಲರಲ್ಲಿಯೂ ದಿವ್ಯಗುಣಗಳನ್ನು ಹಾಗೂ ಎಲ್ಲರಿಗೂ ಉತ್ತಮವಾದ ಸುಖವು ಪ್ರಾಪ್ತವಾಗುವಂತೆ ಮಾಡುತ್ತದೆ. [**ತೇ ಧಿಯಃ**] ಯಾವ ಅಗ್ನಿಯನ್ನು ನಿನ್ನ ಬುದ್ಧಿಶಕ್ತಿಯು ಹಾಗೂ ಕರ್ತೃತ್ವ ಶಕ್ತಿಯು ಉತ್ತಮವಾದ ರೀತಿಯಲ್ಲಿ ಪ್ರಾಪ್ತಮಾಡಿಕೊಂಡು ಸರಿಯಾದ ರೀತಿಯಲ್ಲಿ ವಿನಿಯೋಗಿಸುವಂತೆ ಪ್ರೇರೇಪಿಸುತ್ತದೆಯೋ ಅದೇ ರೀತಿ ಮಾಡಿಕೊಂಡು [**ಗೃಣಂತಿ**] ಹಲವು ರೀತಿಯಲ್ಲಿ ಕಾರ್ಯಗಳನ್ನು ಸಾಧಿಸಿಕೊಂಡು ಸರ್ವರಿಗೂ ಸುಖವು ಪ್ರಾಪ್ತವಂತೆ ಮಾಡು.

ಭಾವಾರ್ಥ:- ಪ್ರಥಮಾರ್ಥದಲ್ಲಿ ತನ್ನ ಅಂತಃಕರಣದಲ್ಲಿ ಪರಮಾತ್ಮನನ್ನು ಪ್ರತಿಷ್ಠಾಪಿಸಿ ತನ್ನ ಶರೀರವನ್ನೇ ದೇಗುಲವನ್ನಾಗಿ ಮಾಡಿಕೊಂಡು ಎಲ್ಲರೂ ಪರಮಾತ್ಮನನ್ನು ಉಪಾಸಿಸಬೇಕು ಎಂದು ಬೋಧಿಸಲಾಗಿದೆ. ದ್ವಿತೀಯಾರ್ಥದಲ್ಲಿ ಅಗ್ನಿಶಕ್ತಿಯನ್ನು ಎಷ್ಟು ವಿಧದಲ್ಲಿ ಎಷ್ಟು ರೀತಿಯಲ್ಲಿ ಪ್ರಾಪ್ತ ಮಾಡಿಕೊಳ್ಳಲು ಸಾಧ್ಯವಿದೆಯೋ ಅಷ್ಟೆಲ್ಲಾ ವಿಧಗಳಿಂದ ಪ್ರಾಪ್ತ ಮಾಡಿಕೊಂಡು ಸರಿಯಾದ ರೀತಿಯಲ್ಲಿ ವಿನಿಯೋಗಿಸಿಕೊಂಡು ಸಂಪೂರ್ಣ ಸುಖವನ್ನು ಪ್ರಾಪ್ತಮಾಡಿಕೊಳ್ಳಬೇಕು ಎಂದು ಹೇಳಿದೆ. ಅಗ್ನಿಯನ್ನು ಅರ್ಥಾತ್ ವಿದ್ಯುತ್ ಶಕ್ತಿಯನ್ನು ನಾವು ಸೂರ್ಯನ ಶಾಖದಿಂದ ಅಥವಾ ಸೂರ್ಯನ ಶಕ್ತಿಯಿಂದ, ಗಾಳಿಯಿಂದ, ಜಲದಿಂದ, ಪಶುಗಳ ಸೆಗಣಿ ಇತ್ಯಾದಿಗಳಿಂದ ಮಲದ ಮೂಲಕ, ತೈಲದ ಮೂಲಕ, ಕಸದ ಮೂಲಕ ಇನ್ನು ಎಷ್ಟೆಲ್ಲಾ ವಿಧದಿಂದ ಪ್ರಾಪ್ತ ಮಾಡಿಕೊಳ್ಳಲು ಸಾಧ್ಯವಿದೆಯೋ ಅಷ್ಟೆಲ್ಲಾ ವಿಧಗಳಿಂದ ವಿದ್ಯುತ್ ಶಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳಬೇಕು. ಪ್ರಕಾಶ ಮತ್ತು ಶಕ್ತಿ ಮಾನವನ ಜೀವನದ ಅವಿಭಾಜ್ಯ ಅಂಗವಾಗಿದೆ. ಪಶುಪಕ್ಷಿಗಳು ಕೇವಲ ಸೂರ್ಯಚಂದ್ರರ ಪ್ರಕಾಶದ ಮೇಲೆ ನಿರ್ಭರವಾಗಿವೆ. ಆದರೆ ಮಾನವ ಪಶುಪಕ್ಷಿಗಳಂತೆ ಭೋಗಯೋನಿಯಲ್ಲ, ಕರ್ಮಯೋನಿ. ಆದುದರಿಂದ ಸಮಸ್ತ ಕರ್ಮಗಳನ್ನು ಮಾಡಲು ಸಮಸ್ತ ಕಾರ್ಯಸಾಧನೆಗೆ ವಿದ್ಯುತ್ ಶಕ್ತಿ ಅತ್ಯಂತ ಆವಶ್ಯಕವಾಗಿದೆ. ಆದರೆ ಈ ವಿದ್ಯುತ್ ಶಕ್ತಿಯನ್ನು ಎಂದೂಕೂಡ ದುರುಪಯೋಗ ಮಾಡಬಾರದು. ಅಗ್ನಿಯನ್ನು ಲೋಕಕಲ್ಯಾಣಾರ್ಥಕ್ಕೋಸ್ಕರ ವಿನಿಯೋಗಿಸಬೇಕೇ ಹೊರತು ಮಾರಕಾಸ್ತ್ರಗಳಲ್ಲಿ ಅಳವಡಿಸಿಕೊಂಡು ವಿನಾಶವನ್ನು ಮಾಡಬಾರದು. ಹೀಗೆ ಮಾಡಿದಲ್ಲಿ ಅಗ್ನಿಯು ಒಂದಲ್ಲ ಒಂದು ವಿಧದಲ್ಲಿ ನಮ್ಮ ವಿನಾಶವನ್ನೇ ಮಾಡುತ್ತದೆ. ಪರಮಾತ್ಮನು ದಂಡಿಸುವ ವಿಧಾನ ಅತ್ಯಂತ ಭಯಾನಕವಾಗಿರುತ್ತದೆ. ಅವನ ದಂಡದ ಪ್ರಹಾರವನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ.

ಈ ಮಂತ್ರದಲ್ಲಿ ಎಲ್ಲ ದೇವತೆಗಳಲ್ಲಿ ಯಾವುದೋ ಒಂದರ ವಿವರಣೆ ನೀಡಲಾಗಿದೆ.

ಇಂದ್ರವಾಯೂಬೃಹಸ್ಪತಿಂ ಮಿತ್ರಾಗ್ನಿಂ ಪೂಷಣಂ ಭಗಮ್ । ಆದಿತ್ಯಾನ್ಮಾರುತಂ ಗಣಮ್ ॥೩॥

ಪದಾರ್ಥ:- ಮೇಧಾವಿಗಳಾದ ವಿದ್ವಾಂಸರೇ! ನೀವೆಲ್ಲರೂ ಜ್ಞಾನಪೂರ್ವಕ ಶ್ರೇಷ್ಠ ಕರ್ಮಗಳನ್ನು ಮಾಡುತ್ತಾ ತನ್ಮೂಲಕ ಆನಂದ ಪ್ರಾಪ್ತಿಗೋಸ್ಕರ [**ಇಂದ್ರವಾಯೂ**] ವಿದ್ಯುತ್‌ಶಕ್ತಿ ಹಾಗೂ ವಾಯುವನ್ನು [**ಬೃಹಸ್ಪತಿಮ್**] ಸಕಲ ಪದಾರ್ಥಗಳ ಸಂರಕ್ಷಣೆಗೋಸ್ಕರ ಸೂರ್ಯನ ಶಕ್ತಿಯನ್ನು [**ಮಿತ್ರಾ**] ಶಾರೀರಿಕ ಮಾನಸಿಕ ಹಾಗೂ ಆತ್ಮಿಕ ಬಲ ಪ್ರಾಪ್ತಿಗಾಗಿ ಪ್ರಾಣಶಕ್ತಿಯನ್ನೂ [**ಅಗ್ನಿಂ**] ಸಕಲ ಕಾರ್ಯ ಸಿದ್ಧಿಗೋಸ್ಕರ ಅಗ್ನಿಯನ್ನೂ [**ಪೂಷಣಮ್**] ಸಕಲ ಔಷಧಿ ವನಸ್ಪತಿಗಳ ಸಂವರ್ಧನೆ ಮತ್ತು ಸಂರಕ್ಷಣೆಗೋಸ್ಕರ ಚಂದ್ರನನ್ನೂ [**ಭಗಮ್**] ಪರಮಾತ್ಮನಿಂದ ಪ್ರಾಪ್ತವಾದ ಸಕಲ ಶ್ರೇಷ್ಠಪದಾರ್ಥಗಳನ್ನೂ [**ಮಾರುತಂಗಣಮ್**] ಸುಖಪ್ರದಾನಮಾಡುವ ಹಾಗೂ ಆರೋಗ್ಯದ ವರ್ಧಕವಾದ, ಪ್ರಾತಃಕಾಲದಲ್ಲಿ ಬೀಸುವ ಮಂದಮಾರುತ ಸಮೂಹವನ್ನೂ [**ಆದಿತ್ಯಾನ್**] ಸೂರ್ಯ ಮತ್ತು ಭೂಮಿಯ ಗತಿಯಿಂದ ಉಂಟಾಗುವ ದ್ವಾದಶ ಮಾಸಗಳನ್ನು ಆತ್ಮೋನ್ನತಿಗಾಗಿ ಹಾಗೂ ಸಕಲ ಪ್ರಾಣಿಮಾತ್ರರ ಕಲ್ಯಾಣಕ್ಕಾಗಿ ಉತ್ತಮವಾದ ರೀತಿಯಲ್ಲಿ ಪ್ರಾಪ್ತಮಾಡಿಕೊಂಡು ಸರಿಯಾದ ರೀತಿಯಲ್ಲಿ ವಿನಿಯೋಗಿಸಿರಿ.

ಭಾವಾರ್ಥ:- ಪರಮಾತ್ಮನು ಎಲ್ಲಾ ದಿಕ್ಕುಗಳಿಂದ, ಎಲ್ಲಾ ಪದಾರ್ಥಗಳಲ್ಲಿ ಹಲವು ವಿಧದ ಶಕ್ತಿಯನ್ನು ಸದಾಕಾಲ ಕೊಡುತ್ತಾ ಇರುತ್ತಾನೆ. ಮೇಧಾವಿಗಳಾದ ವಿದ್ವಾಂಸರು ಪ್ರತಿಯೊಂದು ಪದಾರ್ಥದಿಂದ ಶಕ್ತಿಯನ್ನು ಪ್ರಾಪ್ತಮಾಡಿಕೊಂಡು ಆತ್ಮೋನ್ನತಿಯನ್ನು ಮಾಡಿಕೊಂಡು ಅದರೊಂದಿಗೆ ಸಕಲ ಪ್ರಾಣಿಮಾತ್ರರ ಕಲ್ಯಾಣಕ್ಕೋಸ್ಕರ ಸರಿಯಾದ ರೀತಿಯಲ್ಲಿ ವಿನಿಯೋಗಿಸಬೇಕು. ವಿದ್ಯುತ್‌ಶಕ್ತಿ, ವಾಯು, ಸೂರ್ಯ, ಪ್ರಾಣಶಕ್ತಿ, ಅಗ್ನಿ, ಚಂದ್ರ, ಸಕಲ ಶ್ರೇಷ್ಠ ಪದಾರ್ಥಗಳು ಅರ್ಥಾತ್ ಚಿನ್ನ ಮುತ್ತು ರತ್ನ ಹವಳ ಬೆಳ್ಳಿ ತಾಮ್ರ ಎಲ್ಲಾ ರೀತಿಯ ಖನಿಜ ಪದಾರ್ಥಗಳು, ಔಷಧಿ ವನಸ್ಪತಿಗಳು, ಅನ್ನ, ಆಹಾರ, ಫಲ, ಪುಷ್ಪ, ಮುಳ್ಳು, ಹುಲ್ಲು ಈ ರೀತಿ ಪ್ರತಿಯೊಂದು ಪದಾರ್ಥಗಳಲ್ಲಿ ದಿವ್ಯವಾದ ಗುಣಗಳನ್ನೂ, ಶಕ್ತಿಯನ್ನೂ ಕ್ರೋಢೀಕರಿಸಿದ್ದಾನೆ. ಇವೆಲ್ಲ ಪದಾರ್ಥಗಳನ್ನು ದ್ವಾದಶಮಾಸಗಳಲ್ಲಿಯೂ ಪ್ರತಿಯೊಂದು ಕ್ಷಣದಲ್ಲಿಯೂ, ಸರಿಯಾದ ರೀತಿಯಲ್ಲಿ ವಿನಿಯೋಗಿಸಿ, ಸರ್ವವಿಧದ ಸುಖಪ್ರಾಪ್ತಿಯನ್ನು ಮಾಡಿಕೊಂಡು ಸಕಲ ಪ್ರಾಣಿ ಮಾತ್ರರ ಕಲ್ಯಾಣವನ್ನು ಸಾಧಿಸಬೇಕು.

ಉಕ್ತ ಪದಾರ್ಥಗಳು ಈ ರೀತಿ ಸಂಯೋಗಗೊಂಡು ಯಾವ ಯಾವ ಕಾರ್ಯಗಳನ್ನು ಸಿದ್ಧಿಸುತ್ತವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಪ್ರ ವೋ ಭ್ರಿಯಂತ ಇಂದವೋ ಮತ್ಸರಾ ಮಾದಯಿಷ್ಣವಃ । ದ್ರಪ್ಸಾ ಮಧ್ವಶ್ಚಮೂಷದಃ ॥೪॥

ಪದಾರ್ಥ:- ಸದಾಕಾಲ ಶ್ರೇಷ್ಠ ಕರ್ಮಗಳಲ್ಲಿ ನಿರತರಾಗಿರುವ ಮಾನವರೇ! ನೀವೆಲ್ಲರೂ [**ಮಧ್ವಃ**] ಅತ್ಯಂತ ಮಧುರ ಗುಣವುಳ್ಳ [**ಮತ್ಸರಾಃ**] ಅತ್ಯಂತ ಹರ್ಷವನ್ನೂ, ಉಲ್ಲಾಸವನ್ನೂ, ಉಂಟುಮಾಡಿ ಸದಾಕಾಲ ಚೈತನ್ಯತೆಯಲ್ಲಿರುವಂತೆ ಮಾಡುವ, [**ಮಾದಯಿಷ್ಣವಃ**] ಸದಾಕಾಲ ಲವಲವಿಕೆಯಿಂದ ಇದ್ದು ಕರ್ಮಗಳನ್ನು ಮಾಡಲು ಸ್ಫೂರ್ತಿಯನ್ನುಂಟು ಮಾಡುವ [**ದ್ರಪ್ಸಾಃ**] ಶಾರೀರಿಕ ಬಲವನ್ನೂ, ಮಾನಸಿಕ ಬಲವನ್ನೂ, ಪ್ರಾಪ್ತವಾಗುವಂತೆ ಮಾಡುವ [**ಚಮೂಷದಃ**] ಸೈನಿಕರಲ್ಲಿ ಶೌರ್ಯವನ್ನೂ, ಸಾಹಸವನ್ನೂ ಉಂಟುಮಾಡುವ [**ಇಂದವಃ**] ಅತ್ಯಂತ ಉತ್ಕೃಷ್ಟವಾದ ಗುಣವುಳ್ಳ ಸೋಮರಸವನ್ನು [**ಪ್ರಭ್ರಿಯಂತೇ**] ನೀವೆಲ್ಲರೂ ಪಾನ ಮಾಡಿಕೊಂಡು ಸಕಲ ಶಕ್ತಿಯನ್ನೂ ಧಾರಣ ಮಾಡಿಕೊಳ್ಳಿರಿ.

ದ್ವಿತೀಯೋರ್ಥ:- ಅತ್ಯಂತ ಮೇಧಾವಿಯಾದ ಹಾಗೂ ಯೋಗಸಾಧನೆಗಳಲ್ಲಿ ನಿರತರಾದ ಶ್ರೇಷ್ಠ ವಿದ್ವಾಂಸರು [**ಮಧ್ವಃ**] ಅತ್ಯಂತ ಮಧುರವಾದ ಗುಣಗಳುಳ್ಳ, [**ಮತ್ಸರಾಃ**] ಸಕಲ ದುರಿತಗಳನ್ನು ದೂರ ಮಾಡುವ [**ಮಾದಯಿಷ್ಣವಃ**] ಸದಾಕಾಲ ಆನಂದವನ್ನೇ ಉಂಟುಮಾಡುವ [**ದ್ರಪ್ಸಾಃ**] ಶಾರೀರಿಕ ಬಲವನ್ನೂ, ಮಾನಸಿಕ ಬಲವನ್ನೂ, ಆತ್ಮಿಕ ಬಲವನ್ನೂ, ಉಂಟು ಮಾಡುವ [**ಚಮೂಷದಃ**] ಅಂತಕರಣದಲ್ಲಿರುವ ಆಸುರೀ ಪ್ರವೃತ್ತಿಗಳನ್ನು ಸದೆ ಬಡಿಯಲು ಸಮರ್ಥವಾದ [**ಇಂದವಃ**] ಭಗವಂತನನ್ನು ಅನನ್ಯ ಭಕ್ತಿಯಿಂದ ಭಜಿಸುವುದರಿಂದ, ಉಪಾಸಿಸುವುದರಿಂದ ಪ್ರಾಪ್ತವಾಗುವ

ಅತ್ಯಂತ ಆನಂದಪ್ರದವಾದ ಉಪಾಸನಾರಸವನ್ನು [ಪ್ರಭ್ರಿಯಂತೇ] ಸದಾಕಾಲ ತಮ್ಮಲ್ಲಿ ಧಾರಣ ಮಾಡಿಕೊಳ್ಳುತ್ತಾರೋ, ಅಂತಹ ಅತ್ಯಂತ ಶ್ರೇಷ್ಠವಾದ ಭಗವದ್ಭಕ್ತಿಯನ್ನೂ ಉಪಾಸನಾ ಶಕ್ತಿಯನ್ನೂ ನಿಮ್ಮೆಲ್ಲರ ಜೀವನದಲ್ಲಿ ಧಾರಣ ಮಾಡಿಕೊಂಡು ಮಾನವ ಜನ್ಮವನ್ನು ಸಾರ್ಥಕವನ್ನಾಗಿ ಮಾಡಿಕೊಳ್ಳಬೇಕು.

ಭಾವಾರ್ಥ:- ಸದಾಕಾಲ ಶ್ರೇಷ್ಠ ಕರ್ಮಗಳಲ್ಲಿ ನಿರತರಾಗಿರುವ ಮಾನವರು, ಅತ್ಯಂತ ಮಧುರ ಗುಣವುಳ್ಳ ಶಾರೀರಿಕ ಬಲವನ್ನೂ ಮಾನಸಿಕ ಬಲವನ್ನೂ ಉಂಟುಮಾಡಿ, ಕರ್ಮಗಳನ್ನು ಮಾಡಲು ಸ್ಫೂರ್ತಿದಾಯಕವಾದ, ಶೌರ್ಯ, ಧೈರ್ಯ, ಸ್ಥೈರ್ಯ ಹಾಗೂ ಸಾಹಸವನ್ನುಂಟುಮಾಡುವ ಸೋಮರಸದ ಪಾನವನ್ನೂ ಮಾಡಬೇಕು.

ಅದೇ ರೀತಿ ಅತ್ಯಂತ ಮಧುರವಾದ ಗುಣಗಳುಳ್ಳ, ಸಕಲ ದುರಿತಗಳನ್ನು ದೂರಮಾಡಿ, ಸದಾಕಾಲ ಆನಂದವನ್ನೇ ಉಂಟು ಮಾಡುವ ಶಾರೀರಿಕ ಮಾನಸಿಕ ಹಾಗೂ ಆತ್ಮಿಕ ಬಲವನ್ನು ಪ್ರದಾನ ಮಾಡುವ, ಅಂತಃಕರಣದಲ್ಲಿ ಅಡಗಿರುವ ಆಸುರೀ ಪ್ರವೃತ್ತಿಗಳನ್ನು ನಾಶ ಮಾಡುವ ಭಗವಂತನ ಭಕ್ತಿಯನ್ನೂ ಉಪಾಸನಾ ಶಕ್ತಿಯನ್ನೂ ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮಾನವ ಜನ್ಮವನ್ನು ಸಾರ್ಥಕವನ್ನಾಗಿ ಮಾಡಿಕೊಳ್ಳಬೇಕು. ಸಾಧಾರಣವಾಗಿ ಕೆಲವರು ಸೋಮರಸ ಎಂದರೆ ಸುರಾ ಎಂದು ತಿಳಿದು ದೇವತೆಗಳೂ ಸುರಾಪಾನವನ್ನು ಮಾಡುತ್ತಿದ್ದರು ಎಂದು ಭಾವಿಸುತ್ತಾರೆ. ಹಾಗೂ ತಾವೂ ಕೂಡ ಸುರಾಪಾನವನ್ನು ಮಾಡಿಕೊಂಡು ಜೀವನವನ್ನು ಹಾಳು ಮಾಡಿಕೊಳ್ಳುತ್ತಾರೆ. ಇಲ್ಲಿ ಸೋಮರಸ ಎಂದರೆ ಸುರಾ ಅಲ್ಲ. ಸುರಾಪಾನವನ್ನು ಮಾಡಿದವ ಯಾವ ಕೆಲಸವನ್ನೂ ಸರಿಯಾಗಿ ಮಾಡಲಾರ. ಆದರೆ ಸೋಮರಸ ಪಾನ ಮಾಡಿದರೆ ಕರ್ಮವನ್ನು ಮಾಡಲು ಸ್ಫೂರ್ತಿ ಬರುತ್ತದೆ. ಶಾರೀರಿಕ ಬಲವೂ ಮಾನಸಿಕ ಬಲವೂ ಪ್ರಾಪ್ತಿಯಾಗುತ್ತದೆ. ಶೌರ್ಯ ಧೈರ್ಯ ಸ್ಥೈರ್ಯ ಸಾಹಸ ಇವೆಲ್ಲವೂ ಪ್ರಾಪ್ತಿಯಾಗಿ ಮಾನವನು ಸರ್ವವಿಧದಲ್ಲಿ ತನ್ನ ಭೌತಿಕ ಉನ್ನತಿಯನ್ನು ಪ್ರಾಪ್ತ ಮಾಡಿಕೊಳ್ಳಬಹುದು. ಇದೊಂದು ದಿವ್ಯವಾದ ಔಷಧಿಯಾಗಿದೆ. ಅದೇ ರೀತಿ ಸೋಮರಸ ಎಂದರೆ ಅನನ್ಯ ಭಕ್ತಿಯಿಂದ ಭಗವಂತನನ್ನು ಭಜಿಸುವುದರಿಂದ, ಉಪಾಸಿಸುವುದರಿಂದ ಪ್ರಾಪ್ತವಾಗುವ ಆನಂದರಸ. ಇದರಿಂದ ಮಾನವನಲ್ಲಿರುವ ಸಕಲ ದುರಿತಗಳೂ ಆಸುರೀ ಪ್ರವೃತ್ತಿಗಳೂ ನಾಶವಾಗಿ ಅವನು ಮಾನವತ್ವದಿಂದ ದೇವತ್ವದ ಕಡೆಗೆ ತೆರಳುತ್ತಾನೆ.

ಮುಂದಿನ ಮಂತ್ರದಲ್ಲಿ ಅಗ್ನಿ ಶಬ್ದದಿಂದ ಈಶ್ವರನ ವಿಷಯವನ್ನು ತಿಳಿಸಲಾಗಿದೆ.

ಈಳತೇ ತ್ವಾಮವಸ್ಯವಃ ಕಣ್ವಾಸೋ ವೃಕ್ತಬರ್ಹಿಷಃ । ಹವಿಷ್ಮಂತೋ ಅರಂಕೃತಃ ॥೫॥

ಪದಾರ್ಥ:- ಹೇ ಸಕಲ ಜಗದೊಡೆಯ ಸರ್ವೋಪಾಸ್ಯನಾದ ಪರಮಾತ್ಮ! ನಾವೆಲ್ಲರೂ [ಹವಿಷ್ಮಂತಃ] ಸಕಲ ಶ್ರೇಷ್ಠ ಪದಾರ್ಥಗಳನ್ನು ಪುರುಷಾರ್ಥದಿಂದ ಹಾಗೂ ಪರಿಶ್ರಮದಿಂದ ಪ್ರಾಪ್ತ ಮಾಡಿಕೊಂಡು, ಸತ್ಪಾತ್ರರಿಗೆ ದಾನ ಮಾಡುವ ಹಾಗೂ ತ್ಯಾಗ ಪೂರ್ವಕ ಭೋಗವನ್ನು ಮಾಡುವ ಗುಣವುಳ್ಳವರಾಗಿ, [ಅರಂಕೃತಃ] ಸಕಲ ಪದಾರ್ಥಗಳನ್ನು ಸಂರಕ್ಷಿಸಿ, ವ್ಯವಸ್ಥಿತವಾದ ರೀತಿಯಲ್ಲಿ ಮತ್ತು ಸುಂದರವಾದ ರೀತಿಯಲ್ಲಿ ಇಡುವ ಗುಣವುಳ್ಳವರೂ, [ಅವಸ್ಯವಃ] ನೀನೋರ್ವನೇ ಪ್ರಾಪ್ತ ಸರ್ವಸ್ವ ಎಂದು ತಿಳಿದು, ಸರ್ವಥಾ ನಿನ್ನ ಶರಣದಲ್ಲಿದ್ದು ನಿನ್ನಿಂದಲೇ ನಮ್ಮ ರಕ್ಷಣೆಯನ್ನು ಅಪೇಕ್ಷಿಸುವ ಗುಣವುಳ್ಳವರೂ [ಕಣ್ವಾಸಃ] ಜ್ಞಾನಸಂಪನ್ನರೂ ಹಾಗೂ ಮೇಧಾವಿಗಳೂ ಆದವರು [ವೃಕ್ತಬರ್ಹಿಷಃ] ಕಾಲಕಾಲಕ್ಕೆ ಸರಿಯಾದ ರೀತಿಯಲ್ಲಿ ಯಜ್ಞಾನುಷ್ಠಾನವನ್ನು ಮಾಡುವ ಗುಣವುಳ್ಳವರೂ ಆಗಿ [ತ್ವಾಂ ಈಳತೇ] ನಿನ್ನನ್ನು ಅನನ್ಯ ಭಕ್ತಿಯಿಂದ ಅತ್ಯಂತ ಶ್ರದ್ಧೆಯಿಂದ ಉಪಾಸಿಸುತ್ತೇವೆ.

ಭಾವಾರ್ಥ:- ಭಗವಂತನ ಉಪಾಸನೆಯನ್ನು ಅರ್ಥಾತ್ ಭಗವಂತನ ಸಾನ್ನಿಧ್ಯವನ್ನು ಅಪೇಕ್ಷಿಸುವ ಮಾನವನಲ್ಲಿ ಭಗವಂತನ ಕೆಲವೊಂದು ಗುಣಗಳು ಇರುವುದು ನಿತಾಂತ ಆವಶ್ಯಕವಾಗಿದೆ. ಪಾಪೋಹಂ ಪಾಪಕರ್ಮೋಹಂ

ಪಾಪಾತ್ಮಾ ಪಾಪಸಂಭವಃ ಎಂದು ಹೇಳುತ್ತಾ ಪಾಪಕರ್ಮಗಳಲ್ಲಿ ನಿರತನಾಗಿರುವ ಮಾನವನು ಭಗವಂತನ ಉಪಾಸಕನಾಗಲು ಎಂದಿಗೂ ಸಾಧ್ಯವಿಲ್ಲ, ಪುರುಷಾರ್ಥದಿಂದ ಮತ್ತು ಪರಿಶ್ರಮದಿಂದ ವಿದ್ಯೆ, ಜ್ಞಾನ, ಐಶ್ವರ್ಯ ಯಶಸ್ಸು ಮತ್ತು ಕೀರ್ತಿಗಳನ್ನು ಪ್ರಾಪ್ತ ಮಾಡಿಕೊಳ್ಳಬೇಕು. ಆಮೇಲೆ ಸತ್ಪಾತ್ರರಿಗೆ ದಾನವನ್ನು ಮಾಡಬೇಕು. ತ್ಯಾಗಪೂರ್ವಕ ಭೋಗವನ್ನು ಮಾಡಬೇಕು. ಸಕಲ ಪದಾರ್ಥಗಳನ್ನು ಉತ್ತಮವಾದ ರೀತಿಯಲ್ಲಿ ಸಂರಕ್ಷಿಸಿ, ವ್ಯವಸ್ಥಿತವಾದ ರೀತಿಯಲ್ಲಿ ಹಾಗೂ ಸುಂದರವಾದ ರೀತಿಯಲ್ಲಿ ಇಡುವ ಗುಣವುಳ್ಳವರಾಗಬೇಕು. ಪ್ರಕೃತಿಯನ್ನು, ಪರಿಸರವನ್ನು ಹಾಳು ಮಾಡುವವನು ಎಂದಿಗೂ ಭಗವಂತನ ಭಕ್ತನಾಗಲಾರ. ಭಗವಂತನೋರ್ವನೇ ಪ್ರಾಪ್ತ ಸರ್ವಸ್ವನೆಂದು ತಿಳಿದು, ಸಂಪೂರ್ಣವಾಗಿ ಶರಣಾಗತನಾಗಿ ಅವನಿಂದಲೇ ತನ್ನ ರಕ್ಷಣೆಯನ್ನಪೇಕ್ಷಿಸುವ ಗುಣವುಳ್ಳವರಾಗಬೇಕು. ಸದಾಕಾಲ ಜ್ಞಾನ ಪಿಪಾಸುಗಳಾಗಿ ಸಂಪೂರ್ಣ ಜ್ಞಾನವಂತರೂ ಮೇಧಾವಿಗಳು ಆಗಬೇಕು. ಕಾಲಕಾಲಕ್ಕೆ ಅರ್ಥಾತ್ ಪ್ರಾತಃಕಾಲ ಮತ್ತು ಸಾಯಂಕಾಲ ಹಾಗೂ ಪ್ರತಿಯೊಂದು ಋತುಗಳಲ್ಲಿಯೂ ಸರಿಯಾದ ರೀತಿಯಲ್ಲಿ ಯಜ್ಞಾನುಷ್ಠಾನವನ್ನು ಮಾಡುವವರಾಗಬೇಕು. ಇಂತಹ ಸದ್ಗುಣಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡವನೇ ಭಗವಂತನ ಉಪಾಸಕನಾಗಲು ಅರ್ಹನಾಗುತ್ತಾನೆ. ಆಮೇಲೆ ಅನನ್ಯ ಭಕ್ತಿಯಿಂದ ಅತ್ಯಂತ ಶ್ರದ್ಧೆಯಿಂದ ಭಗವಂತನ ಉಪಾಸನೆಯನ್ನು ಮಾಡುವವರಿಗೆ ಭಗವಂತನ ಸಂಪೂರ್ಣಕೃಪೆಯು ಪ್ರಾಪ್ತವಾಗುತ್ತದೆ.

ಈಶ ನಿರ್ಮಿತ ವಿದ್ಯುತ್ತು ಮೊದಲಾದ ಪದಾರ್ಥಗಳು ಎಂತಹ ಗುಣವುಳ್ಳದ್ದಾಗಿದೆ ಎಂಬುದನ್ನು ಇಲ್ಲಿ ಹೇಳಿದೆ.

ಘೃತಪೃಷ್ಠಾ ಮನೋಯುಜೋ ಯೇ ತ್ವಾ ವಹಂತಿ ವಹ್ನಯಃ । ಆ ದೇವಾನ್ತ್ಸೋಮಪೀತಯೇ ॥೬॥

ಪದಾರ್ಥ:- ಹೇ ವಿದ್ವಾಂಸರೇ! ಯುಕ್ತಿಯಿಂದ ಸಂಯುಕ್ತವನ್ನಾಗಿ ಮಾಡಿದ [**ಘೃತಪೃಷ್ಠಾಃ**] ಯಾವುದರ ಆಧಾರವು ಜಲವಾಗಿದೆಯೋ ಹಾಗೂ [**ಮನೋಯುಜಃ**] ಯಾವುದನ್ನು ಜ್ಞಾನ, ವಿಜ್ಞಾನದ ಮೂಲಕ ಯಂತ್ರ ಯಾನಾದಿಗಳಲ್ಲಿ ಸರಿಯಾದ ರೀತಿಯಲ್ಲಿ ಅಳವಡಿಸಿಕೊಳ್ಳುವುದರಿಂದ, ಸಕಲ ಯಂತ್ರ ಯಾನಗಳು ಉತ್ತಮವಾದ ರೀತಿಯಲ್ಲಿ ಚಲಿಸುತ್ತವೆಯೋ [**ವಹ್ನಯಃ**] ಯಾವ ಶಕ್ತಿಯ ಮೂಲಕ ವಾರ್ತೆಯನ್ನು ಹಾಗೂ ಇತರ ಪದಾರ್ಥಗಳನ್ನು ದೂರದೇಶಗಳಿಗೆ ಕೊಂಡೊಯ್ಯಲಾಗುತ್ತದೆಯೋ ಅಂತಹ ಸರ್ವಜನಹಿತಕಾರಿ ವಿದ್ಯುತ್ ಶಕ್ತಿಯನ್ನು [**ಸೋಮಪೀತಯೇ**] ಸಕಲ ಶ್ರೇಷ್ಠ ಪದಾರ್ಥಗಳ ಪ್ರಾಪ್ತಿಗಾಗಿ ಮತ್ತು [**ತ್ವಾ**] ನಿಮ್ಮೆಲ್ಲರಿಗೋಸ್ಕರ [**ದೇವಾನ್ ಆವಹಂತಿ**] ದಿವ್ಯವಾದ ಶಕ್ತಿಗಳನ್ನು ಪ್ರಾಪ್ತವಾಗುವಂತೆ ಮಾಡುತ್ತದೆ. ಇಂತಹ ವಿದ್ಯುತ್ ಶಕ್ತಿಯ ಪ್ರಯೋಜನವನ್ನು ಸಂಪೂರ್ಣವಾಗಿ ತಿಳಿದು ಸಮಸ್ತ ಕಾರ್ಯಸಿದ್ಧಿಯನ್ನು ಮಾಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಜಲದ ಮೂಲಕ ವಿದ್ಯುತ್ ಶಕ್ತಿಯನ್ನು ತಯಾರಿಸಿಕೊಂಡು, ಅದರ ಪ್ರಯೋಜನವನ್ನು ಪಡೆಯಲು ಉಪದೇಶಿಸಲಾಗಿದೆ. ಯಾವುದರ ಮೂಲ ಅಥವಾ ಆಧಾರ ಜಲವಾಗಿದೆಯೋ [ನದಿಯ ಜಲದ ಮೂಲಕವಾಗಲೀ ಅಥವಾ ಸಮುದ್ರದ ಅಲೆಗಳಿಂದಾಗಲೀ ಸಮುದ್ರದ ಅಲೆಗಳಲ್ಲಿ ಅಪಾರವಾದ ಶಕ್ತಿಯಿದೆ. ಆ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡರೆ, ಬಹಳ ಕಡಿಮೆ ವೆಚ್ಚದಲ್ಲಿ ವಿದ್ಯುತ್ ಶಕ್ತಿಯನ್ನು ಉತ್ಪಾದಿಸಬಹುದು.] ಯಾವುದನ್ನು ಯಂತ್ರಯಾನಾದಿಗಳಲ್ಲಿ ಸರಿಯಾದ ರೀತಿಯಲ್ಲಿ ಅಳವಡಿಸಿಕೊಳ್ಳುವುದರಿಂದ, ಸಕಲ ಯಂತ್ರಯಾನಾದಿಗಳು ಉತ್ತಮವಾದ ರೀತಿಯಲ್ಲಿ ಚಲಿಸುತ್ತವೆಯೋ ಯಾವ ಶಕ್ತಿಯ ಮೂಲಕ ವಾರ್ತೆ (News and communication) ಹಾಗೂ ಸಕಲ ಪದಾರ್ಥಗಳನ್ನು ದೂರದಲ್ಲಿರುವ ದೇಶ, ಪ್ರದೇಶಗಳಿಗೆ ಕೊಂಡೊಯ್ಯಲಾಗುತ್ತದೆಯೋ ಅಂತಹ ವಿದ್ಯುತ್ ಶಕ್ತಿಯನ್ನು ಸರಿಯಾಗಿ ಅರಿತುಕೊಂಡು ಸರ್ವಜನಹಿತಕ್ಕಾಗಿ ಸರಿಯಾದ ರೀತಿಯಲ್ಲಿ ವಿನಿಯೋಗಿಸಬೇಕು.

ಮುಂದಿನ ಮಂತ್ರದಲ್ಲಿ ಅಗ್ನಿ ಶಬ್ದದಿಂದ ಈಶ್ವರ ಮತ್ತು ಭೌತಿಕ ಅಗ್ನಿಯ ವರ್ಣನೆ ಮಾಡಲಾಗಿದೆ.

ತಾನ್ ಯಜತ್ರಾ಼ ಋತಾವೃಧೋಽಗ್ನೇ ಪತ್ನೀವತಸ್ಕೃಧಿ । ಮಧ್ವಃ ಸುಜಿಹ್ವ ಪಾಯಯ ॥೭॥

ಪದಾರ್ಥಃ:- ಹೇ [ಅಗ್ನೇ] ಪ್ರಕಾಶಸ್ವರೂಪ ಪರಮಾತ್ಮ! ನೀನು [ತಾನ್ ಯಜತ್ರಾನ್] ಸರ್ವರನ್ನೂ ಉತ್ತಮ ರೀತಿಯಲ್ಲಿ ಒಂದುಗೂಡಿಸುವವರೂ, ಉಪಾಸಕರೂ ಹಾಗೂ ಯಜ್ಞದ ಸಂರಕ್ಷಣೆಯನ್ನು ಮಾಡುವವರೂ ಆದ ಮತ್ತು [ಋತಾವೃಧಃ] ಸತ್ಯಸಂಧರೂ, ಜ್ಞಾನವೃದ್ಧರೂ ಆಗಿ ಸತ್ಯಜ್ಞಾನ ಮತ್ತು ರಾಷ್ಟ್ರದ ಸಂವರ್ಧನೆಯನ್ನು ಮಾಡುವವರೂ ಆದ ಶ್ರೇಷ್ಠ ಮಾನವರನ್ನು [ದೇವಾನ್ ಕೃಧಿ] ದಿವ್ಯಶಕ್ತಿಯುಳ್ಳವರನ್ನಾಗಿಯೂ, ದಿವ್ಯಗುಣವುಳ್ಳವರನ್ನಾಗಿಯೂ ಐಶ್ವರ್ಯವಂತರನ್ನಾಗಿಯೂ ಮಾಡುತ್ತೀಯೆ. ಅದೇ ದಿವ್ಯತ್ವದ ಮೂಲಕ ನಮ್ಮೆಲ್ಲರನ್ನು [ಪತ್ನೀವತಃ ಕೃಧಿ] ಪ್ರಶಂಸನೀಯಗುಣವುಳ್ಳ ಮತ್ತು ಧಾರ್ಮಿಕ ಗುಣಗಳುಳ್ಳ ಪತ್ನಿಯುಳ್ಳವರನ್ನಾಗಿ ಮಾಡು. ಹೇ [ಸುಜಿಹ್ವ] ತನ್ನ ಶಕ್ತಿಯ ಮೂಲಕ ಶ್ರೇಷ್ಠ ಪದಾರ್ಥಗಳೆಲ್ಲವನ್ನೂ ಧಾರಣ ಮಾಡಿಕೊಳ್ಳುವ ಪರಮಾತ್ಮ! ನಮ್ಮೆಲ್ಲರನ್ನೂ [ಮಧ್ವಃ ಪಾಯಯ] ಮಧುರವಾದ ಗುಣ ಮತ್ತು ಸ್ವಭಾವವುಳ್ಳವರನ್ನಾಗಿ ಮಾಡಿ ನಮ್ಮೆಲ್ಲರಿಗೆ ಮಧುರವಾದ ರಸ ಮತ್ತು ಭೋಗಗಳನ್ನು ಪ್ರಾಪ್ತವಾಗುವಂತೆ ಮಾಡು.

ದ್ವಿತೀಯೋಽರ್ಥಃ:- [ಅಗ್ನೇ] ಈ ಭೌತಿಕ ಅಗ್ನಿಯು **[ಸುಜಿಹ್ವಃ]** ಯಜ್ಞದಲ್ಲಿ ಪ್ರಜ್ವಲಿಸಿ ಉತ್ತಮವಾದ ಮತ್ತು ಮಧುರವಾದ ಹವಿಸ್ಸನ್ನು ಪ್ರಾಪ್ತ ಮಾಡಿಕೊಂಡು **[ಋತಾವೃಧಃ]** ಮಳೆಯ ಮೂಲಕ ಜಲವನ್ನು ವರ್ಧಿಸುವಂತೆ ಮಾಡುತ್ತಾ **[ಯಜತ್ರಾನ್]** ಪ್ರತಿದಿನ ಯಜ್ಞ ಮಾಡುವವರನ್ನು ಆರೋಗ್ಯವಂತರನ್ನಾಗಿಯೂ ದಿವ್ಯಗುಣ ಮತ್ತು ಶಕ್ತಿಯುಳ್ಳವರನ್ನಾಗಿಯೂ ಮಾಡುತ್ತದೆ. ಈ ಯಜ್ಞಾಗ್ನಿಯು ನಮ್ಮೆಲ್ಲರನ್ನು **[ಪತ್ನೀವತಃ]** ಏಕಪತ್ನೀವ್ರತರನ್ನಾಗಿಯೂ, ಉತ್ತಮ ಗೃಹಸ್ಥರನ್ನಾಗಿಯೂ ಮಾಡುತ್ತದೆ. **[ಮಧ್ವಃ ಪಾಯಯ]** ಸದಾಕಾಲ ಮಧುರವಾದ ರಸ ಭೋಗಗಳನ್ನೇ ಭೋಗಿಸುವಂತೆ ಮಾಡುತ್ತದೆ.

ಭಾವಾರ್ಥ:- ಸಕಲ ಜಗದೊಡೆಯನಾದ ಪರಮಾತ್ಮನು, ಎಲ್ಲರನ್ನೂ ಉತ್ತಮವಾದ ರೀತಿಯಲ್ಲಿ ಸೇರಿಸಿಕೊಂಡು ಯಜ್ಞ ಮಾಡುವವರನ್ನು, ಸತ್ಯಸಂಧರೂ, ಜ್ಞಾನವಂತರೂ ಆಗಿ, ಸತ್ಯಜ್ಞಾನ ಮತ್ತು ರಾಷ್ಟ್ರದ ಸಂವರ್ಧನೆಯನ್ನು ಮಾಡುವವರನ್ನು ದಿವ್ಯವಾದ ಶಕ್ತಿ ಗುಣ ಮತ್ತು ಐಶ್ವರ್ಯವಂತರನ್ನಾಗಿ ಮಾಡುತ್ತಾನೆ. ಸಕಲ ಶ್ರೇಷ್ಠ ಪದಾರ್ಥಗಳನ್ನು ತನ್ನ ಶಕ್ತಿಯಿಂದ ಧಾರಣ ಮಾಡುವ ಪರಮಾತ್ಮ! ನಮ್ಮೆಲ್ಲರನ್ನು ಪ್ರಶಂಸನೀಯ ಗುಣಗಳುಳ್ಳ ಮತ್ತು ಧಾರ್ಮಿಕ ಪ್ರವೃತ್ತಿಯುಳ್ಳ ಪತ್ನಿಯುಳ್ಳವರನ್ನಾಗಿ ಮಾಡು. ಏಕೆಂದರೆ ಪತಿಯನ್ನು ಪತನದಿಂದ ಸಂರಕ್ಷಿಸುವವಳೇ ಪತ್ನಿಯಾಗುತ್ತಾಳೆ. ನಾವೆಲ್ಲರೂ ಸದಾಕಾಲ ಮಧುರವಾದ ಗುಣಕರ್ಮ ಸ್ವಭಾವವುಳ್ಳವರಾಗಿದ್ದು ಸಾತ್ವಿಕ ಹಾಗೂ ಮಧುರವಾದ ಭೋಗಗಳನ್ನೇ ಭೋಗಿಸುವಂತಾಗಲಿ.

ಈ ಭೌತಿಕ ಅಗ್ನಿಯು ಯಜ್ಞದಲ್ಲಿ ಪ್ರಜ್ವಲಿಸಲ್ಪಟ್ಟು ಮಧುರವಾದ ಹವಿಸ್ಸನ್ನೇ ಪ್ರಾಪ್ತ ಮಾಡಿಕೊಂಡು ಉತ್ತಮವಾದ ಮಳೆಯನ್ನು ಸುರಿಸುವಂತೆ ಮಾಡುತ್ತದೆ. ಪ್ರತಿನಿತ್ಯ ಸಪತ್ನೀಕರಾಗಿ ಯಜ್ಞಮಾಡುವ ಕಾರಣ ಏಕಪತ್ನೀವ್ರತಸ್ಥರನ್ನಾಗಿಯೂ, ಉತ್ತಮಗೃಹಸ್ಥರನ್ನಾಗಿಯೂ ಮಾಡುತ್ತದೆ. ಯಜ್ಞದಲ್ಲಿ ಉತ್ತಮವಾದ ಮತ್ತು ಮಧುರವಾದ ಹವಿಸ್ಸನ್ನೇ ಅರ್ಪಿಸುವ ಕಾರಣ ನಮ್ಮೆಲ್ಲರಿಗೆ ಸದಾಕಾಲ ಮಧುರವಾದ ಭೋಗಪದಾರ್ಥಗಳು ಪ್ರಾಪ್ತವಾಗುವಂತೆ ಮಾಡುತ್ತದೆ.

ನಂತರ ಮೇಲೆ ಹೇಳಿದ ಪದಾರ್ಥಗಳು ಯಾವ ಪ್ರಕಾರದ್ದಾಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಯೇ ಯಜತ್ರಾ಼ ಯ ಈಡ್ಯಾ-ಸ್ತೇ ತೇ ಪಿಬಂತು ಜಿಹ್ವಯಾ । ಮಧೋರಗ್ನೇ ವಷಟ್ಕೃತಿ ॥೮॥

ಪದಾರ್ಥಃ:- [ಯೇ] ಯಾವ ಮಾನವರು [ಯಜತ್ರಾಃ] ಯಜನಶೀಲರು ಅರ್ಥಾತ್ ನಿರಂತರ ಯಜ್ಞಾನುಷ್ಠಾನವನ್ನು ಮಾಡುತ್ತಾರೋ, [ಯೇ ಈಡ್ಯಾಃ] ಯಾವ ಮಾನವರು ನಿರಂತರ ಉಪಾಸನಾಶೀಲರು ಅರ್ಥಾತ್ ಆಧ್ಯಾತ್ಮ ಯಜ್ಞದ ಮೂಲಕ ಭಗವಂತನ ಉಪಾಸನೆಯನ್ನು ಮಾಡುತ್ತಾರೋ, [ತೇ ಜಿಹ್ವಯಾ] ಅವರೆಲ್ಲರೂ ಉತ್ತಮವಾದ ಮತ್ತು ಮಧುರವಾದ ವಾಣಿಯ ಮೂಲಕ ಮಂತ್ರೋಚ್ಚಾರಣೆಯನ್ನು ಮಾಡುತ್ತಾ [ಅಗ್ನೇ-ಅಗ್ನೌ] ಅಗ್ನಿಯಲ್ಲಿ [ವಷಟ್ ಕೃತಿ] ವಷಟ್‌ಕಾರದಿಂದ ಯುಕ್ತವಾದ ಯಜ್ಞದಲ್ಲಿ, ಹಾಗೂ ಗೃಹಸ್ಥರು ಶ್ರೇಷ್ಠಸಂತಾನವನ್ನು ನಿರ್ಮಾಣ ಮಾಡುವ ಕಾರ್ಯದಲ್ಲಿ [ಮಧೋಃ ಪಿಬಂತು] ಉತ್ತಮವಾದ ಸತ್ಯಜ್ಞಾನವುಳ್ಳವರಾಗಿ, ಮಧುರವಾದ ಬಲ, ಬುದ್ಧಿ ಮತ್ತು ಆಯುಷ್ಯವನ್ನು ವೃದ್ಧಿ ಮಾಡುವಂತಹ ಅನ್ನದ ಸೇವನೆಯನ್ನು ಮಾಡಲಿ.

ಭಾವಾರ್ಥ:- ಶರೀರದಲ್ಲಿ ವಾಣಿ ಮತ್ತು ಪ್ರಾಣ ವಷಟ್‌ಕಾರಗಳಾಗಿವೆ. ವಾಣಿಯ ಮೂಲಕ ವೇದಮಂತ್ರೋಚ್ಚಾರಣೆಯನ್ನೂ, ಪ್ರಾಣಶಕ್ತಿಯ ಮೂಲಕ ಯೋಗಸಾಧನೆಯನ್ನೂ ಮಾಡಲಾಗುತ್ತದೆ. ವೀರ್ಯಸೇಚನವು ಕೂಡಾ ವಷಟ್‌ಕಾರವಾಗಿದೆ. ಇದರಿಂದ ಶ್ರೇಷ್ಠಸಂತಾನವನ್ನು ನಿರ್ಮಾಣ ಮಾಡಲಾಗುತ್ತದೆ. ಸೂರ್ಯನು ವಷಟ್‌ಕಾರನಾಗಿದ್ದಾನೆ. ಸಕಲ ಪದಾರ್ಥಗಳನ್ನು ತನ್ನ ಪ್ರಕಾಶದಿಂದ ದೃಷ್ಟಿ ಗೋಚರವಾಗುವಂತೆ ಮಾಡುತ್ತಾನೆ. ಆರು ಋತುಗಳಲ್ಲಿಯೂ ಸರಿಯಾದ ರೀತಿಯಲ್ಲಿ ಋತುಗಳಿಗನುಗುಣವಾಗಿ, ಮಳೆ, ಬೆಳೆ, ಫಲ, ಪುಷ್ಪ, ವನಸ್ಪತಿ ಇತ್ಯಾದಿಗಳನ್ನು ಪ್ರಾಣಿಮಾತ್ರರಿಗೆ ಪ್ರಾಪ್ತವಾಗುವಂತೆ ಮಾಡುತ್ತಾನೆ. ಬ್ರಹ್ಮಯಜ್ಞದಲ್ಲಿ ವೇಗವಾಗಿ ಚಲಿಸುವ ಮತ್ತು ಎಲ್ಲರಿಗೂ ಪ್ರಾಣಶಕ್ತಿಯನ್ನು ನೀಡುವ ವಾಯು, ಪ್ರಖರವಾದ ಮಿಂಚು ಮೋಡಗಳ ಗರ್ಜನೆ ಮತ್ತು ಉತ್ತಮವಾದ ಮಳೆ ಇವೆಲ್ಲವೂ ವಷಟ್‌ಕಾರಗಳಾಗಿವೆ.

ಯಾವ ಪ್ರಕಾರವಾಗಿ ಮನುಷ್ಯನು ಆ ಗುಣಗಳನ್ನು ಗ್ರಹಿಸಬಲ್ಲನು ಎಂಬುದನ್ನು ಈ ಮಂತ್ರದಲ್ಲಿ ತಿಳಿಸಲಾಗಿದೆ.

ಆಕೀಂ ಸೂರ್ಯಸ್ಯ ರೋಚನಾ-ದ್ವಿಶ್ವಾನ್ ದೇವಾ಼ ಉಷರ್ಬುಧಃ । ವಿಪ್ರೋ ಹೋತೇಹ ವಕ್ಷತಿ॥೯॥

ಪದಾರ್ಥ:- **[ಹೋತಾ]** ನಿಯಮಿತವಾಗಿ ಯಜ್ಞಾನುಷ್ಠಾನ ಮಾಡುವವನೂ, ಋಗ್ವೇದದಲ್ಲಿ ಪಾರಂಗತನಾದವನೂ ಆದ [ವಿಪ್ರಃ] ಅತ್ಯಂತ ಮೇಧಾವಿಯಾದ ವಿದ್ವಾಂಸನೂ, ನಿಯಮಿತವಾಗಿ ವೇದಪಾಠ ಮಾಡುವವನೂ **[ಸೂರ್ಯಸ್ಯ ರೋಚನಾತ್]** ಚರಾಚರ ಜಗತ್ತನ್ನು ಪ್ರಕಾಶಿಸುವ ಪರಮಾತ್ಮನಿಂದ ಪ್ರಕಾಶವನ್ನು ಪಡೆದು [ಇಹ] ಈ ಪ್ರಪಂಚದಲ್ಲಿ ಹಾಗೂ ಇದೇ ಮಾನವ ಜನ್ಮದಲ್ಲಿ **[ಉಷರ್ಬುಧಃ]** ಉಷಾಕಾಲದಲ್ಲಿಯೇ, ಧರ್ಮ ಅರ್ಥ ಕಾಮ ಮತ್ತು ಮೋಕ್ಷ ಎಂಬ ನಾಲ್ಕು ಪುರುಷಾರ್ಥಗಳ ಸಿದ್ಧಿಗಾಗಿ ಸಾಧನೆಯನ್ನು ಮಾಡುತ್ತಾನೋ ಅವನು **[ದೇವಾನ್ ವಕ್ಷತಿ]** ಸಕಲ ದಿವ್ಯಪದಾರ್ಥಗಳನ್ನೂ, ಸಕಲ ದಿವ್ಯಶಕ್ತಿಗಳನ್ನೂ, ಪರಮಾತ್ಮನ ಕೃಪೆಯನ್ನೂ ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಭಾವಾರ್ಥ:- ನಿಯಮಿತವಾಗಿ ಯಜ್ಞಾನುಷ್ಠಾನವನ್ನು ಮಾಡುವವನೂ, ಅತ್ಯಂತ ಮೇಧಾವಿಯಾಗಿದ್ದು ನಿಯಮಿತವಾಗಿ ವೇದಾಧ್ಯಯನವನ್ನು ಮಾಡುವವನೂ ಆದ ವಿದ್ವಾಂಸನು ಪ್ರಕಾಶಸ್ವರೂಪನಾದ ಪರಮಾತ್ಮನಿಂದ ಪ್ರಕಾಶವನ್ನು ಪಡೆದು, ಉಷಾಕಾಲದಲ್ಲಿಯೇ ಧರ್ಮ ಅರ್ಥ ಕಾಮ [ಶ್ರೇಷ್ಠ ಸಂಕಲ್ಪ] ಮತ್ತು ಮೋಕ್ಷ ಎಂಬ ಪುರುಷಾರ್ಥ ಚತುಷ್ಟಯದ ಸಿದ್ಧಿಗಾಗಿ ಸಾಧನೆಯನ್ನು ಮಾಡುತ್ತಾನೋ, ಅವನು ಪ್ರಪಂಚದಲ್ಲಿ ಇದೇ ಮಾನವ ಜನ್ಮದಲ್ಲಿಯೇ ಸಕಲ ದಿವ್ಯ ಪದಾರ್ಥಗಳನ್ನೂ, ಸಕಲ ದಿವ್ಯಶಕ್ತಿಗಳನ್ನೂ, ಪರಮಾತ್ಮನ ಕೃಪೆಯನ್ನೂ ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಪ್ರಾತಃಕಾಲ ನಾಲ್ಕರಿಂದ ಆರು ಘಂಟೆಯ ತನಕ ಅತ್ಯಂತ ಶ್ರೇಷ್ಠವಾದ ಸಮಯವಾಗಿದೆ. ಯಾವ ಮಾನವನು ಈ ಸಮಯದಲ್ಲಿ ಪುರುಷಾರ್ಥವನ್ನು ಮಾಡುತ್ತಾನೋ ಅವನು ಸಕಲ ಸುಖ ಸಂಪತ್ತು, ಸಂತೋಷ, ಆನಂದವನ್ನು ಪ್ರಾಪ್ತಮಾಡಿಕೊಳ್ಳುತ್ತಾನೆ.

ಯಾವುದರೊಂದಿಗೆ ಈ ವಿದ್ಯುತ್ತು ಅಗ್ನಿಯು ಕ್ರಿಯೆಗಳ ಸಿದ್ಧಿಯನ್ನು ಮಾಡಬಲ್ಲದುದಾಗುತ್ತದೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ವಿಶ್ವೇಭಿಃ ಸೋಮ್ಯಂ ಮಧ್ವ-ಗ್ನ ಇಂದ್ರೇಣ ವಾಯುನಾ । ಪಿಬಾ ಮಿತ್ರಸ್ಯ ಧಾಮಭಿಃ ॥೧೦॥

ಪದಾರ್ಥ:- [ಅಗ್ನಿಃ] ಈ ಭೌತಿಕಾಗ್ನಿಯು [ಇಂದ್ರೇಣ] ಸೂರ್ಯನ ಪ್ರಖರವಾದ ತೇಜದ ಮೂಲಕ ಮತ್ತು [ವಾಯುನಾ] ಸರ್ವತ್ರ ಗತಿಶೀಲವಾದ ವಾಯುವಿನೊಂದಿಗೆ ಹಾಗೂ [ಮಿತ್ರಸ್ಯ ವಿಶ್ವೇಭಿಃ ಧಾಮಭಿಃ] ಜೀವನಾಧಾರನಾದ ಜಲದ ಸಕಲ ಆಶ್ರಯಸ್ಥಾನಗಳಿಂದ [ಸೋಮ್ಯಂ ಮಧು ಪಿಬಾ-ಪಿಬತಿ] ಮಧುರವಾದ ಸೋಮದ ಪಾನವನ್ನು ಮಾಡುತ್ತದೆ.

ಭಾವಾರ್ಥ:- ಪ್ರತಿಯೊಂದು ವಸ್ತುವಿನಲ್ಲಿ ವ್ಯಾಪಕವಾಗಿರುವ ಅಗ್ನಿಶಕ್ತಿಯು ಸೂರ್ಯನ ಪ್ರಖರವಾದ ತೇಜದ ಮೂಲಕ ಮತ್ತು ಸರ್ವತ್ರ ಗತಿಶೀಲವಾದ ವಾಯುವಿನ ಮೂಲಕ, ಜೀವನಾಧಾರವಾದ ಜಲದ ಸಕಲ ಆಶ್ರಯ ಸ್ಥಾನಗಳಿಂದ ಮಧುರವಾದ ಸೋಮದ ಪಾನವನ್ನು ಮಾಡುತ್ತದೆ. 'ಅಗ್ನಿ ಸೋಮಾಭ್ಯಾಂ ಇದಂ ಜಗತ್' ಈ ಜಗತ್ತು ಅಗ್ನಿ ಮತ್ತು ಸೋಮ ಇವೆರಡು ತತ್ವಗಳಿಂದ ಸ್ಥಿರವಾಗಿದೆ. ಇವೆರಡು ತತ್ವಗಳು ಸರಿಸಮನಾಗಿದ್ದರೆ ಮಾತ್ರ ಜಗತ್ತಿನಲ್ಲಿರುವ ಪ್ರತಿಯೊಂದು ಪದಾರ್ಥಗಳು ಉತ್ತಮವಾದ ರೀತಿಯಲ್ಲಿ ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ಇರುತ್ತವೆ. ಅಗ್ನಿ ತತ್ವವು ಪ್ರಬಲವಾದಾಗ ಪ್ರತಿಯೊಂದು ಪದಾರ್ಥಗಳು ಒಣಗಿಹೋಗುತ್ತವೆ. ನೀರಸವಾಗುತ್ತವೆ. ಇನ್ನೂ ಹೆಚ್ಚು ಆದಾಗ ಸುಟ್ಟು ಭಸ್ಮವಾಗುತ್ತವೆ. ಅದೇ ರೀತಿ ಸೋಮತತ್ವವು ಪ್ರಬಲವಾದಾಗ ಪ್ರತಿಯೊಂದು ಪದಾರ್ಥವು ಕೊಳೆತು ಹೋಗುತ್ತದೆ. ಕೇವಲ ಅಗ್ನಿಯಿಂದ ದೀಪವು ಬೆಳಗುವುದಿಲ್ಲ. ಕೇವಲ ಎಣ್ಣೆಯಿಂದ ದೀಪವು ಬೆಳಗುವುದಿಲ್ಲ. ಎಣ್ಣೆಯಿಂದ ಆರ್ದ್ರವಾದ ಬತ್ತಿಯೊಂದಿಗೆ ಅಗ್ನಿಯ ಸಂಪರ್ಕವಾದಾಗ ದೀಪವು ಬೆಳಗುತ್ತದೆ. ದೀಪದಲ್ಲಿ ನಿರಂತರವಾಗಿ ಎಣ್ಣೆಯನ್ನು ಸರಿಯಾದ ರೀತಿಯಲ್ಲಿ ಹಾಕುತ್ತಾ ಇದ್ದರೆ ಅದೇ ನಂದಾದೀಪವಾಗುತ್ತದೆ. ಅದೇ ರೀತಿ ಪ್ರತಿಯೊಂದು ವಸ್ತುವಿನಲ್ಲಿ ವ್ಯಾಪಕವಾದ ಅಗ್ನಿಯು, ಜಲದ ಸಕಲ ಆಶ್ರಯ ಸ್ಥಾನಗಳಿಂದ ಸೋಮವನ್ನು ಗ್ರಹಣ ಮಾಡಿಕೊಂಡು, ಎಲ್ಲಾ ಪದಾರ್ಥಗಳನ್ನು ಉತ್ತಮವಾದ ರೀತಿಯಲ್ಲಿ ಮತ್ತು ವ್ಯವಸ್ಥಿತವಾದ ರೀತಿಯಲ್ಲಿರುವಂತೆ ಮಾಡುತ್ತದೆ.

ಋಗ್ವೇದದ ದಶಮಮಂಡಲದಲ್ಲಿ ಇರುವ ಹಾಗೆ ಈ ಬ್ರಹ್ಮಾಂಡದಲ್ಲಿರುವ ಸಕಲ ಆದಿತ್ಯಗಳು ಸೋಮನಿಂದಾಗಿಯೇ ಪ್ರಬಲವಾಗಿ ನಿರಂತರ ಪ್ರಕಾಶವನ್ನು ಬೀರುತ್ತದೆ. ಈ ಪೃಥ್ವಿಯೂ ಕೂಡ ಸೋಮನಿಂದಾಗಿಯೇ ಅತ್ಯಂತ ಮಹಿಮೆಯುಳ್ಳದ್ದಾಗಿದ್ದು, ಸಸ್ಯಶ್ಯಾಮಲೆಯಿಂದ ಸಂಪನ್ನವಾಗಿ ಸಂಪದ್ಭರಿತವಾಗಿದೆ. ಸಕಲ ನಕ್ಷತ್ರ ಪುಂಜಗಳು ಸೋಮನಿಂದಾಗಿಯೇ ಸದಾಕಾಲ ಬೆಳಗುತ್ತಿರುತ್ತವೆ. ಸೋಮತತ್ವವು ಕಡಿಮೆಯಾದಂತೆಯೇ, ಅಗ್ನಿತತ್ವವು ಪ್ರಬಲವಾಗುತ್ತಾ ಹೋಗುತ್ತವೆ. ಅಗ್ನಿಯ ತತ್ವವು ಪ್ರಬಲವಾದಂತೆಯೇ ಪ್ರತಿಯೊಂದು ಪದಾರ್ಥಗಳು ಒಳಗಿಂದೊಳಗೆ ಸವೆಯುತ್ತವೆ, ನಶಿಸುತ್ತವೆ. ನಮ್ಮ ಶರೀರದಲ್ಲಿಯೂ ಕೂಡ ಇದೇ ಪ್ರಕ್ರಿಯೆಯು ನಡೆಯುತ್ತದೆ. ಸೋಮತತ್ವವು ಕಡಿಮೆಯಾದಾಗ ಪ್ರತಿಯೊಂದು ಅಸ್ಥಿಗಳು ಸವೆಯಲು ಆರಂಭವಾಗುತ್ತದೆ. ಮೂರ್ಖ ಮಾನವವನು ಪ್ರಕೃತಿಯ ಮೂಲಭೂತ ಸಿದ್ಧಾಂತವನ್ನರಿಯದೇ ಪದೇ ಪದೇ ಅಣುಬಾಂಬುಗಳನ್ನು ಕ್ಷಿಪಣಿಗಳನ್ನು ಪ್ರಕ್ಷೇಪಾಸ್ತ್ರಗಳನ್ನು ವಿಸ್ಫೋಟಿಸಿ ಸೋಮತತ್ವವನ್ನು ನಾಶಮಾಡುತ್ತಾ ಇದ್ದಾನೆ. ಈರೀತಿ ಕೃತ್ರಿಮವಾದ ಪ್ರಳಯಕ್ಕೆ ನಾಂದಿಯನ್ನು ಮಾಡುತ್ತಿದ್ದಾನೆ.

ನಂತರ ಈ ಮಂತ್ರದಲ್ಲಿ ಅಗ್ನಿ ಶಬ್ದದಿಂದ ಈಶ್ವರನ ಕುರಿತು ಹೇಳಲಾಗಿದೆ.

ತ್ವಂ ಹೋತಾ ಮನುರ್ಹಿತೋಽಗ್ನೇ ಯಜ್ಞೇಷು ಸೀದಸಿ । ಸೇಮಂ ನೋ ಅಧ್ವರಂ ಯಜ ॥೧೧॥

ಪದಾರ್ಥ:- [ಅಗ್ನೇ] ಅತ್ಯಂತ ಪೂಜನೀಯನೂ, ಸರ್ವೋಪಾಸ್ಯನೂ, ಸರ್ವಪ್ರಕಾಶಸ್ವರೂಪನೂ, ಸಚ್ಚಿದಾನಂದನೂ ಆದ ಪರಮಾತ್ಮ! [ತ್ವಂ] ನೀನು [ಮನುರ್ಹಿತಃ] ಮನನಶೀಲರಾದ ಮನುಷ್ಯರನ್ನೂ, ಹಾಗೂ

ಸಕಲಚರಾಚರ ಜಗತ್ತಿನಲ್ಲಿರುವ ಸಮಸ್ತ ಪದಾರ್ಥಗಳನ್ನೂ ಸೃಷ್ಟಿಸಿ ಧಾರಣ ಮಾಡಿ [ಹೋತಾ] ಜೀವಮಾತ್ರರಿಗೋಸ್ಕರ ಸಕಲ ಸಂಪತ್ತನ್ನೂ, ಜ್ಞಾನವನ್ನೂ, ಪ್ರಕಾಶವನ್ನೂ ಪ್ರದಾನ ಮಾಡುತ್ತೀಯೆ. [ಯಜ್ಞೇಷು] ನಾವೆಲ್ಲರೂ ಮಾಡುವ ಸಕಲ ಕ್ರಿಯಾಕರ್ಮಗಳಲ್ಲಿ, ಯಜ್ಞಾನುಷ್ಠಾನಗಳಲ್ಲಿ, ಜ್ಞಾನವಿಜ್ಞಾನಗಳಲ್ಲಿ ಸಂಗತೀಕರಣ, ದಾನಪ್ರತಿದಾನಾದಿಗಳಲ್ಲಿ [ಸೀದಸಿ] ಸದಾಕಾಲ ನಮ್ಮೊಂದಿಗೆ ಸ್ಥಿರವಾಗಿ, ಸ್ಥಿತವಾಗಿರುತ್ತೀಯೆ. [ಸಃ] ಆ ಸರ್ವವ್ಯಾಪಕ, ಸರ್ವಾಂತರ್ಯಾಮಿಯಾದ ಪರಮಾತ್ಮ! [ನಃ] ನಮ್ಮೆಲ್ಲರ ಮೇಲೆ ಕೃಪೆದೋರಿ. ನಾವೆಲ್ಲರೂ ಮಾಡುವ [ಇಮಂ ಅಧ್ವರಮ್] ಈ ಹಿಂಸಾರಹಿತವಾದ, ಸಕಲ ಜೀವಮಾತ್ರರಿಗೋಸ್ಕರ ಹಾಗೂ ಸಕಲ ಕಲ್ಯಾಣಾರ್ಥ ಮಾಡುವ ಈ ಪವಿತ್ರವಾದ ಯಜ್ಞಾನುಷ್ಠಾನವನ್ನು [ಯಜ] ಉತ್ತಮವಾದ ರೀತಿಯಲ್ಲಿ ಸಂಪನ್ನವಾಗುವಂತೆ ಮಾಡು.

ಭಾವಾರ್ಥ:- ಯಾವ ಪರಮಾತ್ಮನು, ಸಕಲ ಜೀವಿಗಳನ್ನೂ, ಸಕಲ ಪದಾರ್ಥಗಳನ್ನೂ, ಸಕಲ ಮನನ ಶೀಲ ಮಾನವರನ್ನೂ ಸೃಷ್ಟಿಸಿ, ಧಾರಣ ಮಾಡಿಕೊಂಡಿದ್ದಾನೆಯೋ, ಅವನು ಸದಾಕಾಲ ನಾವೆಲ್ಲರೂ ಲೋಕ ಕಲ್ಯಾಣಾರ್ಥ ಮಾಡುವ ಸಕಲ ಯಜ್ಞಾನುಷ್ಠಾನಾದಿಗಳಲ್ಲಿಯೂ ಜ್ಞಾನವಿಜ್ಞಾನ, ಹಾಗೂ ಸಕಲ ಶ್ರೇಷ್ಠಕರ್ಮಗಳನ್ನು ಮಾಡುವಾಗ ಸದಾಕಾಲ ನಮ್ಮೊಂದಿಗೇ ಇರುತ್ತಾನೆ. ಆದುದರಿಂದ ಅವನು ಸದಾಕಾಲ ಅತ್ಯಂತ ಪೂಜನೀಯನೂ, ಸರ್ವೋಪಾಸ್ಯನೂ ಆಗಿದ್ದಾನೆ.

ಪುನಃ ಭೌತಿಕ ಅಗ್ನಿಯ ಗುಣಗಳನ್ನು ಹೇಳಲಾಗಿದೆ.

ಯುಕ್ಷ್ವಾ ಹ್ಯರುಷೀ ರಥೇ ಹರಿತೋ ದೇವ ರೋಹಿತಃ । ತಾಭಿರ್ದೇವಾँ ಇಹಾ ವಹ॥೧೨॥

ಪದಾರ್ಥ:- ಹೇ **[ದೇವ]** ಜ್ಞಾನ, ವಿಜ್ಞಾನವನ್ನು ಅತ್ಯುತ್ತಮವಾದ ರೀತಿಯಲ್ಲಿ ಬಲ್ಲವನಾದ ವಿದ್ವಾಂಸನೇ! ನೀನು **[ರಥೇ]** ಭೂಮಿ, ಜಲ ಮತ್ತು ಆಕಾಶಗಳಲ್ಲಿ ಸಂಚರಿಸಲು ಸಮರ್ಥವಾದ ಯಾನಗಳಲ್ಲಿ **[ರೋಹಿತಃ]** ಎಲ್ಲರೂ ಸುಖವಾಗಿ ಪ್ರಯಾಣಿಸಲು ಸಾಧ್ಯವಾದ ಯಾನಗಳಲ್ಲಿ **[ಹರಿತಃ]** ಸರ್ವತ್ರ ಸುಲಭವಾಗಿ ಕೊಂಡೊಯ್ಯಲು ಸಾಧ್ಯವಾದ ಯಾನಗಳಲ್ಲಿ **[ಅರುಷೀ]** ಆರಾಮದಾಯಕವಾದ ಹಾಗೂ ಸುಖಪ್ರದವಾದ ಆಸನಗಳನ್ನೂ ಹಾಗೂ ಇತರ ಎಲ್ಲಾ ರೀತಿಯ ಆವಶ್ಯಕವಾದ ಸಾಮಗ್ರಿಗಳನ್ನು **[ಯುಕ್ಷ್ವ]** ಜೋಡಿಸು. ಸರಿಯಾದ ರೀತಿಯಲ್ಲಿ ವ್ಯವಸ್ಥಾಬದ್ಧವಾಗಿ, ಯಾವುದೇ ರೀತಿಯಲ್ಲಿ ತೊಂದರೆಗಳಾಗದ ರೀತಿಯಲ್ಲಿ ಹಲವಾರು ವರ್ಷಗಳ ತನಕ ಬಾಳಿಕೆಗೆ ಬರುವ ರೀತಿಯಲ್ಲಿ ಉತ್ತಮವಾದ ರೀತಿಯಲ್ಲಿ ಜೋಡಿಸು. **[ತಾಭಿಃ ಇಹ ದೇವಾನ್ ಆವಹ]** ಈ ಯಾನಗಳ ಮೂಲಕ ಎಲ್ಲಾ ರೀತಿಯಲ್ಲಿ ದಿವ್ಯವಾದ, ಸಕಲ ದಿವ್ಯಮಾನವರನ್ನು ಸಕಲ ದಿವ್ಯ ಪದಾರ್ಥಗಳನ್ನೂ, ಸಕಲ ಕಾರ್ಯಸಿದ್ಧಿಗೋಸ್ಕರ ಹಾಗೂ ಸಕಲ ಕಾರ್ಯಗಳನ್ನು ಮಾಡುವುದಕ್ಕೋಸ್ಕರ ಆಯಾಯ ಕಾರ್ಯಗಳಿಗೆ ಬೇಕಾದ ಸಕಲ ಪದಾರ್ಥಗಳನ್ನೂ ಪ್ರಾಪ್ತವಾಗುವಂತೆ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಯಾನಗಳು, ವಾಹನಗಳು, ವಾಹಕಗಳು ಯಾವ ರೀತಿ ಇರಬೇಕು ಎಂಬುದನ್ನು ವರ್ಣಿಸಲಾಗಿದೆ. ವಾಹನಗಳು, ಯಾನಗಳು, ಭೂಮಿಯ ಮೇಲೆ, ಜಲದ ಮೇಲೆ, ಆಕಾಶದಲ್ಲಿಯೂ ಸಂಚರಿಸುವಂತಿರಬೇಕು. [ಮಹರ್ಷಿ ಭರದ್ವಾಜರು ಬೃಹತ್ ವಿಮಾನ ಸಂಚಾರದಲ್ಲಿ ಭೂಮಿ, ಜಲ ಮತ್ತು ಆಕಾಶದಲ್ಲಿ ಸಂಚರಿಸಲು ಸಾಧ್ಯವಾದ ಅರ್ಥಾತ್ ಒಂದೇ ಯಾನವು ಮೂರು ಕಡೆಯಲ್ಲಿಯೂ ಸಂಚರಿಸಬಹುದು. ಇಂತಹ ಯಾನದ ವರ್ಣನೆಯನ್ನು ಹಾಗೂ ಮಾಡುವ ವಿಧಾನವನ್ನೂ ಬರೆದಿದ್ದರು. ದುರ್ಭಾಗ್ಯವಶಾತ್ ಆ ಗ್ರಂಥದ ಅಧಿಕಾಂಶ ಭಾಗವು ಲುಪ್ತವಾಗಿದೆ. ಈಗ ಪ್ರಾಪ್ತವಾಗುತ್ತಿಲ್ಲ.] ನಾವು ಸಂಚರಿಸುವಂತಹ ವಾಹನಗಳು ಸುಲಭವಾಗಿ ಕೊಂಡೊಯ್ಯುವಂತಿರಬೇಕು. ಹಾಗೂ ಎಲ್ಲಾ ಸ್ಥಾನಗಳಲ್ಲಿ ಸಂಚರಿಸಲು ಸಾಧ್ಯವಾಗುವಂತಿರಬೇಕು. ಅದರಲ್ಲಿ ಎಲ್ಲಾ ರೀತಿಯ ಆರಾಮದಾಯಕವಾದ ಮತ್ತು ಸುಖಪ್ರದವಾದ ಸಕಲ ಸಾಮಗ್ರಿಗಳು ವ್ಯವಸ್ಥಾಬದ್ಧವಾಗಿ ಅಚ್ಚುಕಟ್ಟಾಗಿರಬೇಕು. ಸಾಮಗ್ರಿ ವಾಹಕಗಳು ಉತ್ತಮವಾದ ರೀತಿಯವುಗಳಾಗಿರಬೇಕು. ನಾವು ಸಾಗಿಸುವ, ಕಳುಹಿಸುವ

ಮತ್ತು ನಮಗೆ ಪ್ರಾಪ್ತವಾಗುವ ಸಕಲ ಸಾಮಾನುಗಳು ಸುರಕ್ಷಿತವಾಗಿರಬೇಕು. ಆದರೆ ದುರ್ಭಾಗ್ಯವಶಾತ್ ಎಲ್ಲವೂ ತದ್ವಿರುದ್ಧವಾಗಿದೆ. ಇದಕ್ಕೆ ಮುಖ್ಯ ಕಾರಣ ಎಲ್ಲರೂ ತಮ್ಮ ಕರ್ತವ್ಯ ಮತ್ತು ದಾಯಿತ್ವದಿಂದ ನುಣುಚಿಕೊಳ್ಳಲು ಎಲ್ಲಾ ರೀತಿಯ ಪ್ರಯತ್ನವನ್ನೂ ಮಾಡುತ್ತಾರೆ. ಸಕಲ ಶ್ರೇಷ್ಠಕರ್ಮಗಳನ್ನು ಮಾಡುವುದೇ ಧರ್ಮ. ಸಕಲ ಕರ್ಮಗಳನ್ನು ಸಮಸ್ತ ಜನರ ಹಿತಕ್ಕಾಗಿ ಸಮರ್ಪಣಾಭಾವದಿಂದ ಮಾಡುವುದೇ ಧರ್ಮ.

ಹೀಗೆ ಹದಿನಾಲ್ಕನೆಯ ಸೂಕ್ತದಲ್ಲಿ ಎಲ್ಲ ದಿವ್ಯಶಕ್ತಿಗಳ ಗುಣಗಳ ಪ್ರಕಾಶವನ್ನು ಹಾಗೂ ಕ್ರಿಯೆಗಳನ್ನು ವಿವರಿಸಲಾಗಿದೆ. ಆದುದರಿಂದ ಈ ಸೂಕ್ತವು ಹದಿಮೂರನೆಯ ಸೂಕ್ತದೊಂದಿಗೆ ಸಂಬಂಧವನ್ನು ಹೊಂದಿದೆ ಎಂದು ತಿಳಿಯಬಹುದು.

ಹದಿನಾಲ್ಕನೆಯ ಸೂಕ್ತ ಸಮಾಪ್ತ

ಸೂಕ್ತ ೧೫

ಮಂತ್ರಸಂಖ್ಯೆ ೧೨ । ಋಷಿಃ - ಮೇಧಾತಿಥಿಃ ಕಾಣ್ವಃ । ದೇವತಾ - (ಪ್ರತಿದೈವತಂ ಋತುಸಹಿತಮ್) ೧ ಋತವಃ, ೫ ಇಂದ್ರಃ, ೨ ಮರುತಃ, ೩ ತ್ವಷ್ಟಾ, ೪, ೧೨ ಅಗ್ನಿಃ, ೬ ಮಿತ್ರಾವರುಣೌ, ೭-೧೦ ದ್ರವಿಣೋದಾಃ, ೧೧ ಅಶ್ವಿನೌ । ಛಂದಃ - ಗಾಯತ್ರೀ। ಸ್ವರಃ-ಷಡ್ಜಃ.

ಈ ಸೂಕ್ತದ ಪ್ರಾರಂಭದ ಮಂತ್ರದಲ್ಲಿ ಋತು-ಋತುಗಳಲ್ಲಿ ಉಂಟಾಗುವ ರಸೋತ್ಪತ್ತಿ ಹಾಗೂ ಗತಿಯ ವರ್ಣನೆ ಮಾಡಲಾಗಿದೆ.

ಇಂದ್ರ ಸೋಮಂ ಪಿಬ ಋತುನಾಽಽತ್ವಾ ವಿಶಂತ್ವಿಂದವಃ । ಮತ್ಸರಾಸಸ್ತದೋಕಸಃ ॥೧॥

ಪದಾರ್ಥಃ:- ಹೇ ಮಾನವರೇ! [ಇಂದ್ರ] ಸಮಯದ ವಿಭಾಜನ ಮಾಡುವ ಸೂರ್ಯನು **[ಋತುನಾ]** ವಸಂತ ಮೊದಲಾದ ಋತುಗಳ ಮೂಲಕ **[ಸೋಮಂ ಪಿಬ]** ಸಕಲ ಔಷಧಿ ವನಸ್ಪತಿಗಳ ರಸವನ್ನು ಪಾನ ಮಾಡುತ್ತಾನೆ. ಮತ್ತು ಈ **[ತದೋಕಸಃ]** ಅಂತರಿಕ್ಷದಲ್ಲಿರುವ ವಾಯು ಮಂಡಳದಲ್ಲಿ **[ಮತ್ಸರಾಸಃ]** ಹರ್ಷವನ್ನೂ ಆನಂದವನ್ನೂ ಉತ್ಪನ್ನ ಮಾಡುವ **[ಇಂದವಃ]** ಜಲದೊಂದಿಗೆ ವ್ಯಾಪಿಸಿಕೊಂಡು **[ಋತುನಾ ಸಹ]** ಆಯಾಯಾ ಋತುಗಳಲ್ಲಿ **[ತ್ವಾ ಆವಿಶಂತು]** ಸಕಲ ಪ್ರಾಣಿ ಮತ್ತು ಆ ಪ್ರಾಣಿಗಳಲ್ಲಿ ಅರ್ಥಾತ್ ಸಕಲ ಚೇತನ ಹಾಗೂ ಜಡ ಪದಾರ್ಥಗಳಲ್ಲಿ ಪ್ರವಿಷ್ಟವಾಗುತ್ತವೆ. ಸಕಲ ಪದಾರ್ಥಗಳಿಗೆ ಪ್ರಾಪ್ತವಾಗುತ್ತವೆ.

ಭಾವಾರ್ಥಃ:- ಪರಮಾತ್ಮನು ಪ್ರಾಣಿಗಳನ್ನೂ, ಪಕ್ಷಿಗಳನ್ನು, ಜಲಚರಗಳನ್ನೂ, ಮನುಷ್ಯನನ್ನೂ, ಸಕಲ ಜೀವರಾಶಿಗಳನ್ನೂ ಸೃಷ್ಟಿಸುವ ಮೊದಲು ಫಲ, ಪುಷ್ಪ, ಔಷಧಿ, ವನಸ್ಪತಿ, ಕಾಯಿಪಲ್ಲೆ, ದವಸ-ಧಾನ್ಯಗಳನ್ನು ಸೃಷ್ಟಿಸುತ್ತಾನೆ. ಸೂರ್ಯನು ತನ್ನ ಕಿರಣಗಳ ಮೂಲಕ ಎಲ್ಲಾ ಪದಾರ್ಥಗಳಲ್ಲಿರುವ ರಸವನ್ನು ಹೀರುತ್ತಾನೆ. ಆ ರಸವು ಅಂತರಿಕ್ಷದಲ್ಲಿರುವ ವಾಯುಮಂಡಲದಲ್ಲಿ ಹಾಗೂ ಜಲದಲ್ಲಿ ವ್ಯಾಪಿಸಿಕೊಂಡು, ಆಯಾಯ ಋತುಗಳಲ್ಲಿ ಪುನಃ ಸಕಲ ಚೇತನ ಮತ್ತು ಜಡವಸ್ತುಗಳಿಗೆ ಪ್ರಾಪ್ತವಾಗುತ್ತವೆ. ಒಂದೇ ಹೊಲದಲ್ಲಿ ಅಥವಾ ತೋಟದಲ್ಲಿ ನೆಟ್ಟ ಕಬ್ಬು ಸಿಹಿಯಾಗಿರುತ್ತದೆ. ಮೆಣಸು ಖಾರವಾಗಿರುತ್ತದೆ. ಹುಣಸೆ ಹುಳಿಯಾಗಿರುತ್ತದೆ. ಹಾಗಲಕಾಯಿ ಕಹಿಯಾಗಿರುತ್ತದೆ. ಈ ರೀತಿ ವಿಭಿನ್ನ ವಸ್ತುಗಳಲ್ಲಿ ವಿಭಿನ್ನ ರೀತಿಯ ಸ್ವಾದ ಮತ್ತು ರಸವಿರುತ್ತದೆ. ಇದು ಎಲ್ಲಿಂದ ಬಂತು? ಭೂಮಿಯ ಗುಣ ರಸವಲ್ಲ. ಭೂಮಿಯ ಗುಣ ಗಂಧ. ಜಲದ ಗುಣ ರಸ. ಸೂರ್ಯನು ತನ್ನ ಕಿರಣಗಳ ಮೂಲಕ ಪ್ರತಿಯೊಂದು ಪದಾರ್ಥಗಳಲ್ಲಿರುವ ರಸವನ್ನು ಹೀರುತ್ತಾನೆ. ಜಲದ ಮೂಲ ಸ್ಥಾನಗಳಿಂದ ಜಲವನ್ನೂ ಹೀರುತ್ತಾನೆ. ಅಂತರಿಕ್ಷದಲ್ಲಿ ಸಕಲ ಪದಾರ್ಥಗಳ ರಸ ಮತ್ತು ಜಲದ ಸಮ್ಮಿಶ್ರಣವಾಗುತ್ತದೆ. ಮಳೆಯ ಮೂಲಕ ಪುನಃ ಭೂಮಿಗೆ ಪ್ರಾಪ್ತವಾಗುತ್ತದೆ. ಆದರೆ ಎಲ್ಲಾ ರೀತಿಯ ರಸವನ್ನೂ ಎಲ್ಲಾ ವಸ್ತುಗಳು ಪ್ರಾಪ್ತ ಮಾಡಿಕೊಳ್ಳುವುದಿಲ್ಲ.

ಯಾವ ಯಾವ ಪದಾರ್ಥ ಆಯಾಯ ಪದಾರ್ಥಗಳಲ್ಲಿರುವ ಗುಣಗಳಿಗೆ ಅನುಗುಣವಾಗಿ, ಋತುಗಳಿಗನುಗುಣವಾಗಿ ಪ್ರತಿಯೊಂದು ಪದಾರ್ಥಗಳಿಗೆ ರಸವು ಪ್ರಾಪ್ತವಾಗುತ್ತದೆ. ಇದೇ ಪರಮಾತ್ಮನ ಸೃಷ್ಟಿಯ ವೈಚಿತ್ರ್ಯ. ಕಬ್ಬು ಏಕೆ ಸಿಹಿಯಾಗಿದೆ? ಮೆಣಸು ಏಕೆ ಖಾರವಾಗಿದೆ? ಹುಣಸೆ ಏಕೆ ಹುಳಿಯಾಗಿದೆ? ಹಾಗಲಕಾಯಿ ಏಕೆ ಕಹಿಯಾಗಿದೆ? ಅದರ ರಹಸ್ಯ ಆ ಸೃಷ್ಟಿಕರ್ತನೇ ಬಲ್ಲ. ಆದರೆ ಎಲ್ಲವನ್ನೂ ವ್ಯವಸ್ಥಾ ಬದ್ಧವಾಗಿ, ಸುಂದರವಾಗಿ, ಸರ್ವರಿಗೂ ಹರ್ಷ ಮತ್ತು ಆನಂದವಾಗುವಂತೆ ಸೃಷ್ಟಿಯನ್ನು ಸೃಷ್ಟಿಸಿದ ಆ ಸೃಷ್ಟಿಕರ್ತನಿಗೆ ನಮ್ಮೆಲ್ಲರ ಅನಂತ ಪ್ರಣಾಮಗಳು.

ಈಗ ಋತುಗಳೊಂದಿಗೆ ಪವನ ಮೊದಲಾದ ಪದಾರ್ಥಗಳು ಎಲ್ಲವನ್ನೂ ಸೆಳೆಯುತ್ತವೆ ಮತ್ತು ಪವಿತ್ರಗೊಳಿಸುತ್ತವೆ ಎಂಬುದನ್ನು ವರ್ಣಿಸಲಾಗಿದೆ.

ಮರುತಃ ಪಿಬತ ಋತುನಾ ಪೋತ್ರಾದ್ ಯಜ್ಞಂ ಪುನೀತನ । ಯೂಯಂ ಹಿ ಷ್ಠಾ ಸುದಾನವಃ॥೨॥

ಪದಾರ್ಥಃ:- [ಮರುತಃ] ಈ ಪವನವು [ಋತುನಾ] ವಸಂತ ಮೊದಲಾದ ಋತುಗಳಲ್ಲಿ ಅನುಕ್ರಮವಾಗಿ [ಪಿಬತ] ಸಕಲ ಪುಷ್ಪ, ಫಲ, ಔಷಧಿ, ವನಸ್ಪತಿ ಇತ್ಯಾದಿಗಳ ರಸವನ್ನು ಹೀರಿಕೊಳ್ಳುತ್ತದೆ. ಅದೇ ಪವನವು [ಪೋತ್ರಾತ್] ಎಲ್ಲವನ್ನೂ ಪವಿತ್ರವನ್ನಾಗಿ ಮಾಡುವ ಗುಣಗಳ ಮೂಲಕ [ಯಜ್ಞಂ ಪುನೀತನ] ಯಜ್ಞವನ್ನು ಪವಿತ್ರವನ್ನಾಗಿ ಮಾಡುತ್ತದೆ. [ಯೂಯಂ ಹಿ] ಅವುಗಳೇ ಈ ರೀತಿ [ಸುದಾನವಃ ಸ್ಥ] ಸಕಲ ಪದಾರ್ಥಗಳನ್ನು ಎಲ್ಲರಿಗೂ ಪ್ರಾಪ್ತವಾಗುವಂತೆ ಮಾಡುತ್ತವೆ. ಇದರಿಂದ ಸಕಲ ಕಾರ್ಯಗಳ ಸಿದ್ಧಿಯಾಗುತ್ತದೆ.

ಭಾವಾರ್ಥಃ:- ಸರ್ವರಿಗೂ ಜೀವನವನ್ನು ಶಕ್ತಿಯನ್ನೂ ಕೊಡುವ ಈ ಪವನವು ಪ್ರತಿಯೊಂದು ಋತುಗಳಲ್ಲಿ ಸಕಲ ಪುಷ್ಪ, ಫಲ, ಔಷಧಿ ವನಸ್ಪತಿಗಳ ರಸವನ್ನು ಹೀರುತ್ತದೆ. ಸಕಲ ಪದಾರ್ಥಗಳನ್ನು ಪವಿತ್ರವನ್ನಾಗಿ ಮಾಡುವ ಪವನವು ಆಧಿದೈವಿಕ ಮತ್ತು ಆಧಿಭೌತಿಕ ಯಜ್ಞವನ್ನು ಮಾಡುತ್ತದೆ. ಮೋಡವನ್ನು ಚಲಿಸುವಂತೆ ಮಾಡಿ ಮಳೆಯುಂಟಾಗಲು ಸಹಾಯವನ್ನು ಮಾಡುತ್ತದೆ. ಪುಷ್ಪಗಳಲ್ಲಿರುವ ಪರಾಗವನ್ನು ಇನ್ನೊಂದು ಪುಷ್ಪಗಳಿಗೆ ಸಂಪರ್ಕವಾಗುವಂತೆ ಮಾಡಿ ಫಲವುಂಟಾಗುವಂತೆ ಮಾಡುತ್ತದೆ. ಬೀಜಗಳನ್ನು ಪಸರಿಸುವಂತೆ ಮಾಡಿ ಔಷಧಿ ವನಸ್ಪತಿಗಳನ್ನು ಉತ್ತಮವಾದ ರೀತಿಯಲ್ಲಿ ಮತ್ತು ಅಧಿಕ ಸಂಖ್ಯೆಯಲ್ಲಿ ಬೆಳೆಯುವಂತೆ ಮಾಡುತ್ತದೆ. ಈ ರೀತಿ ಸಕಲ ಪದಾರ್ಥಗಳು ಸರ್ವರಿಗೂ ಪ್ರಾಪ್ತವಾಗುವಂತೆ ಮಾಡುತ್ತದೆ. ಕಾಡುಗಳಲ್ಲಿ ಯಾರೂ ಕೂಡ ಯಾವುದನ್ನೂ ನೆಡಲು ಹೋಗುವುದಿಲ್ಲ. ಆದರೆ ಎಲ್ಲಾ ಕೆಲಸವನ್ನು ಈ ಪವನವೇ ಮಾಡುತ್ತದೆ. ಸೃಷ್ಟಿಯ ರಹಸ್ಯವನ್ನು ಅರಿಯದ ಮೂರ್ಖ ಮಾನವ ಸ್ವಾಭಾವಿಕವಾಗಿ ನಿರ್ಮಾಣವಾದ ಕಾಡನ್ನು ಕಡಿದು ಕೃತ್ರಿಮವಾಗಿ ಮಾಡಲು ಪ್ರಯತ್ನಿಸುತ್ತಾನೆ. ಇದರಿಂದ ಲಾಭಕ್ಕಿಂತ ಹಾನಿಯೇ ಹೆಚ್ಚಾಗುತ್ತವೆ. ಸಕಲ ಔಷಧಿ ವನಸ್ಪತಿಗಳು ನಾಶವಾಗಿ ರೋಗರುಜಿನಗಳು ವ್ಯಾಪಕವಾಗಿ ಹರಡುತ್ತವೆ. ಆದುದರಿಂದ ನಾವೆಲ್ಲರೂ ಪ್ರಕೃತಿಯ ಸ್ವಾಭಾವಿಕ ಪ್ರಕ್ರಿಯೆಗೆ ಅನುಗುಣವಾಗಿ ನಮ್ಮ ಸಕಲ ಕರ್ಮಗಳನ್ನೂ, ಸರ್ವರಿಗೂ ಕಲ್ಯಾಣವಾಗುವಂತೆ ಮಾಡೋಣ.

ಈಗ ಋತುಗಳೊಂದಿಗೆ ವಿದ್ಯುದಗ್ನಿಯು ಏನನ್ನು ಮಾಡುತ್ತದೆ ಎಂಬುದನ್ನು ಹೇಳಲಾಗಿದೆ.

ಅಭಿ ಯಜ್ಞಂ ಗೃಣೀಹಿ ನೋ ಗ್ನಾವೋ ನೇಷ್ಟಃ ಪಿಬ ಋತುನಾ । ತ್ವಂ ಹಿ ರತ್ನಧಾ ಅಸಿ ॥೩॥

ಪದಾರ್ಥಃ:- ಓ ವಿದ್ವಾಂಸರೇ! ಈ [ನೇಷ್ಟಃ] ಪ್ರತಿಯೊಂದು ಪದಾರ್ಥಗಳನ್ನು ಶುದ್ಧವನ್ನಾಗಿಯೂ ಪುಷ್ಟಕಾರಕವನ್ನಾಗಿಯೂ ಮಾಡಿ ಪ್ರಕಾಶಿತ ಅರ್ಥಾತ್ ಪ್ರಕಟಿತವನ್ನಾಗಿ ಮಾಡುವ ವಿದ್ಯುತ್ ಎಂದರೆ ಮಿಂಚು [ಋತುನಾ] ಋತುವಿನೊಂದಿಗೆ [ವಚನವ್ಯತ್ಯಯ] ಋತುವಿನಲ್ಲಿ ಎಂದರೆ ವರ್ಷಾ ಋತುವಿನಲ್ಲಿ ಅಥವಾ ಕಾರಣವಶಾತ್ ಮಳೆಯಾಗುವ ಸಮಯದಲ್ಲಿ ಪ್ರತಿಯೊಂದು ಪದಾರ್ಥಗಳಲ್ಲಿರುವ ರಸವನ್ನು [ಪಿಬ] ಪಾನವನ್ನು ಮಾಡುತ್ತದೆ

ಅರ್ಥಾತ್ ಹೀರುತ್ತದೆ. [ಹಿ] ಹೀಗೆ ಈ ಮಿಂಚು [ರತ್ನಧಾ ಅಸಿ] ರಮಣೀಯ ಪದಾರ್ಥಗಳನ್ನು, ಉತ್ತಮ ಪದಾರ್ಥಗಳನ್ನು ಧಾರಣ ಮಾಡಿಕೊಳ್ಳುತ್ತದೆ. [ತ್ವಂ] ಇದು ಈ ರೀತಿ [ಗ್ನಾವಃ] ಪ್ರತಿಯೊಂದು ಪದಾರ್ಥಗಳನ್ನು ಪ್ರಾಪ್ತಿ ಮಾಡಿಕೊಳ್ಳಲು ಸಹಾಯಕವಾದ [ನಃ ಯಜ್ಞಂ] ನಮ್ಮೆಲ್ಲರ ಆಧಿಭೌತಿಕ ಹಾಗೂ ಆಧಿದೈವಿಕ ಯಜ್ಞ ಎಂದರೆ ಪ್ರತಿಯೊಂದು ಪದಾರ್ಥಗಳ ಸಮ್ಮಿಶ್ರಣವನ್ನು ಮಾಡುವ ಯಜ್ಞವನ್ನು [ಅಭಿ ಗೃಣೀಹಿ] ಎಲ್ಲಾ ರೀತಿಯಲ್ಲಿ ಸಮರ್ಪಕವಾಗಿ ಗ್ರಹಣ ಮಾಡುತ್ತದೆ. ನೀವೆಲ್ಲರೂ ಇದನ್ನು ಸರಿಯಾಗಿ ಅರಿತುಕೊಂಡು ಸಕಲ ಕಾರ್ಯಗಳ ಸಿದ್ಧಿಯನ್ನು ಮಾಡಿರಿ.

ಭಾವಾರ್ಥ:- ಅಗ್ನಿಯ ಸೂಕ್ಷ್ಮರೂಪವಾದ ಈ ಮಿಂಚು ಜಲದಲ್ಲಿರುವ ಶಕ್ತಿಯಾಗಿದೆ. ಮಳೆ ಬರುವಾಗ ಸಕಲ ಪದಾರ್ಥಗಳನ್ನು ತನ್ನ ಪ್ರಕಾಶದಿಂದ ಪ್ರಕಾಶಿತವನ್ನಾಗಿಯೂ, ಪ್ರಕಟಿತ ಅರ್ಥಾತ್ ದೃಷ್ಟಿಗೋಚರವಾಗುವಂತೆ ಮಾಡುತ್ತದೆ. ಅದರೊಂದಿಗೆ ಪ್ರತಿಯೊಂದು ಪದಾರ್ಥಗಳನ್ನು ಶುದ್ಧವನ್ನಾಗಿಯೂ ಪುಷ್ಟಿಕಾರಕವನ್ನಾಗಿಯೂ ಮಾಡುವ ಗುಣ ಈ ಮಿಂಚಿನಲ್ಲಿದೆ. ಈ ಮಿಂಚು ಪ್ರತಿಯೊಂದು ವಸ್ತುವಿನಲ್ಲಿರುವ ರಸವನ್ನು ಹೀರುತ್ತದೆ. ಹಾಗೂ ಅಂತರಿಕ್ಷದಲ್ಲಿ ಎಲ್ಲವನ್ನೂ ಸಮ್ಮಿಶ್ರಣವನ್ನಾಗಿ ಮಾಡುತ್ತದೆ. ಯಜ್ಞದ ಒಂದು ಅರ್ಥ ಸೇರುವುದು ಮತ್ತು ಸೇರಿಸುವುದು, ಸಂಘಟನೆಯನ್ನು ಮಾಡುವುದು ಆಗಿದೆ. ಮಳೆಯಾಗುವಾಗ ಜಲದೊಂದಿಗೆ ಎಲ್ಲಾ ರಸವನ್ನು ಆಯಾಯ ಪದಾರ್ಥಗಳಲ್ಲಿ ಸೇರಲು ಈ ಮಿಂಚು ಕೂಡಾ ಸಹಾಯವನ್ನು ಮಾಡುತ್ತದೆ. ವಿದ್ವಾಂಸರು ಈ ವಿದ್ಯುತ್ತಿನ ಶಕ್ತಿಯನ್ನು ಅರಿತುಕೊಂಡು ತಮ್ಮ ಸಕಲ ಕಾರ್ಯಗಳನ್ನು ಸಿದ್ಧಿಸಿಕೊಳ್ಳಬೇಕು ಹಾಗೂ ಇತರರಿಗೂ ಬೋಧಿಸಬೇಕು ಎಂದು ಈ ಮಂತ್ರವು ನಮಗೆಲ್ಲರಿಗೂ ತಿಳಿಸುತ್ತಿವೆ.

ಅಗ್ನಿಯೂ ಸಹ ಋತುಗಳ ಸಂಯೋಜಕವಾಗುತ್ತದೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ಅಗ್ನೇ ದೇವಾँ ಇಹಾ ವಹ ಸಾದಯಾ ಯೋನಿಷು ತ್ರಿಷು । ಪರಿ ಭೂಷ ಪಿಬ ಋತುನಾ ॥೪॥

ಪದಾರ್ಥ:- [ಅಗ್ನಿಃ] ಈ ಭೌತಿಕ ಅಗ್ನಿಯು ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ ಅರ್ಥಾತ್ ಗೋಚರವಾಗಿಯೂ ಅಗೋಚರವಾಗಿಯೂ ಇದ್ದು [ಇಹ] ಈ ಜಗತ್ತಿನಲ್ಲಿ **[ಋತುನಾ]** ಸಕಲ ಋತುಗಳೊಂದಿಗೆ [ವಚನ ವ್ಯತ್ಯಯ] ಸಕಲ ಋತುಗಳಲ್ಲಿ **[ತ್ರಿಷು ಯೋನಿಷು]** ಭೂಲೋಕ, ಅಂತರಿಕ್ಷಲೋಕ, ದ್ಯುಲೋಕ ಎಂಬ ಮೂರು ಸ್ಥಾನಗಳಲ್ಲಿದ್ದ ಕಾರ್ಯಕಾರಣಗಳಲ್ಲಿ ಸಕಲ ಪದಾರ್ಥಗಳನ್ನು ಮಿಶ್ರಣ ಮಾಡುತ್ತಾ **[ದೇವಾನ್]** ಶ್ರೇಷ್ಠ ಗುಣಗಳುಳ್ಳ ಸಕಲ ದಿವ್ಯ ಪದಾರ್ಥಗಳನ್ನು **[ಆ ವಹ]** ಉತ್ತಮವಾದ ರೀತಿಯಲ್ಲಿ ಪ್ರಾಪ್ತಮಾಡಿಕೊಂಡು **[ಸಾದಯ]** ವ್ಯವಸ್ಥಿತವಾದ ರೀತಿಯಲ್ಲಿ ವಿಭಜನೆಯನ್ನು ಮಾಡುತ್ತದೆ. **[ಪರಿಭೂಷ]** ಸಕಲ ಪದಾರ್ಥಗಳನ್ನು ಉತ್ತಮವಾದ ರೀತಿಯಲ್ಲಿ ಸುಶೋಭಿತವನ್ನಾಗಿ ಮಾಡುತ್ತದೆ. ಹಾಗೂ [ಪಿಬ] ಸಕಲ ಪದಾರ್ಥಗಳ ರಸವನ್ನು ಪಾನ ಮಾಡುತ್ತದೆ.

ಭಾವಾರ್ಥ:- ಈ ಅಗ್ನಿತತ್ವವು ಪ್ರತ್ಯಕ್ಷವಾಗಿಯೂ ಅಪ್ರತ್ಯಕ್ಷವಾಗಿಯೂ, ಗೋಚರವಾಗಿಯೂ ಅಗೋಚರವಾಗಿಯೂ ಸಕಲ ಪದಾರ್ಥಗಳಲ್ಲಿ ಭೂಲೋಕ, ಅಂತರಿಕ್ಷಲೋಕ ಮತ್ತು ದ್ಯುಲೋಕ ಈ ಮೂರು ಲೋಕಗಳಲ್ಲಿಯೂ ಸದಾ ವಿದ್ಯಮಾನವಾಗಿರುತ್ತದೆ. ಭೂಲೋಕದಲ್ಲಿ ಅಗ್ನಿಯು ಬೆಂಕಿಯ ರೂಪದಲ್ಲಿ, ಅನಲ ರೂಪದಲ್ಲಿ [ದಾವಾನಲ, ಬಡವಾನಲ]ರುತ್ತದೆ. ಅಂತರಿಕ್ಷದಲ್ಲಿ ಮಿಂಚಿನರೂಪದಲ್ಲಿರುತ್ತದೆ. ದ್ಯುಲೋಕದಲ್ಲಿ ಸೂರ್ಯ ನಕ್ಷತ್ರ, ಗ್ರಹೋಪಗ್ರಹಗಳಲ್ಲಿ ಅನಿಲ ರೂಪದಲ್ಲಿಯೂ ವಿದ್ಯಮಾನವಾಗಿರುತ್ತದೆ. ಸಕಲ ಪದಾರ್ಥಗಳ ಕಾರ್ಯ ಕಾರಣಗಳಲ್ಲಿದ್ದು ಎಲ್ಲವನ್ನೂ ಸೇರಿಸುವ ಹಾಗೂ ವ್ಯವಸ್ಥಿತನಾಗಿ ವಿಭಜನಮಾಡುವ ಕಾರ್ಯವನ್ನು ಮಾಡುತ್ತದೆ. ಸಕಲ ಪದಾರ್ಥಗಳನ್ನು ಸುಶೋಭಿತವಾಗುವಂತೆಯೂ ಮಾಡುತ್ತದೆ. ಹಾಗೂ ಸಕಲ ಪದಾರ್ಥಗಳಲ್ಲಿರುವ ರಸವನ್ನು ಪಾನ ಮಾಡುತ್ತದೆ ಅರ್ಥಾತ್ ಹೀರುತ್ತದೆ.

ಋತುಗಳೊಂದಿಗೆ ವಾಯುವು ಏನೇನನ್ನು ಮಾಡುತ್ತದೆ ಎಂಬುದರ ವರ್ಣನೆ ಇಲ್ಲಿದೆ.

ಬ್ರಾಹ್ಮಣಾದಿಂದ್ರ ರಾಧಸಃ ಪಿಬಾ ಸೋಮಮೃತೂರನು । ತವೇದ್ಧಿ ಸಖ್ಯಮಸ್ತೃತಮ್ ॥೫॥

ಪದಾರ್ಥ:- [ಇಂದ್ರ] ಹೇ ಭಕ್ತವತ್ಸಲ! ಸರ್ವೈಶ್ವರ್ಯವಾನ್ ಪರಮಾತ್ಮ! ನೀನು [ಬ್ರಾಹ್ಮಣಾತ್] ವೇದವೇತ್ತಾ ಬ್ರಾಹ್ಮಣನ ಮೂಲಕ [ಋತೂನ್ ಅನು] ಪ್ರತಿಯೊಂದು ಋತುಗಳಲ್ಲಿ ಅತ್ಯಂತ ಶ್ರದ್ಧಾ ಭಕ್ತಿಯಿಂದ ಮಾಡುವ ಯಜ್ಞಾನುಷ್ಠಾನದಿಂದ ಹಾಗೂ [ರಾಧಸಃ] ನಿನ್ನ ಕೃಪೆಯನ್ನು ಮತ್ತು ನಿನ್ನ ಸನ್ನಿಧಿಯನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ ಮಾಡುವ ಯೋಗಸಾಧನೆಯಿಂದ ಸಂಪ್ರೀತನಾಗಿ ಸಂತುಷ್ಟನಾಗಿ [ಸೋಮಂ ಪಿಬ] ಭಕ್ತಿರಸದ ಪಾನವನ್ನು ಮಾಡುತ್ತೀಯೆ. [ತವ ಇತ್ ಹಿ] ನಿಶ್ಚಿತವಾಗಿಯೂ, ಖಂಡಿತವಾಗಿಯೂ ಭಕ್ತರೊಂದಿಗೆ ನಿನ್ನ [ಅಸ್ತೃತಮ್] ಎಂದಿಗೂ ನಶಿಸದ [ಸಖ್ಯಮ್] ಸಖ್ಯತನವು ಸದಾಕಾಲ ಇರುತ್ತದೆ.

ಭಾವಾರ್ಥ:- ಹೇ ಭಕ್ತವತ್ಸಲನಾದ ಪರಮಾತ್ಮ! ನೀನು, ವೇದವೇತ್ತಾ ಬ್ರಾಹ್ಮಣನು ಪ್ರತಿಯೊಂದು ಋತುಗಳಲ್ಲಿ ಶ್ರದ್ಧಾಭಕ್ತಿಯಿಂದ ಮಾಡುವ ಯಜ್ಞಾನುಷ್ಠಾನದಿಂದ ಹಾಗೂ ನಿನ್ನ ಸಾನ್ನಿಧ್ಯವನ್ನು ಹೊಂದಲು ಪ್ರತಿನಿತ್ಯ ಮಾಡುವ ಯೋಗಸಾಧನೆಯಿಂದ ಸಂಪ್ರೀತನಾಗಿ ಸಂತುಷ್ಟನಾಗಿ, ನಿನ್ನ ಭಕ್ತನ ಭಕ್ತಿಯನ್ನು ಸ್ವೀಕರಿಸುತ್ತಾ ಅವನ ಸಂಪೂರ್ಣ ಕಲ್ಯಾಣವನ್ನೂ, ಸರ್ವತೋಮುಖ ಅಭಿವೃದ್ಧಿಯನ್ನೂ ಮಾಡುತ್ತೀಯೆ. ಏಕೆಂದರೆ ಖಂಡಿತವಾಗಿಯೂ ಭಕ್ತರೊಂದಿಗೆ ಎಂದಿಗೂ ನಶಿಸದ ನಿನ್ನ ಸಖ್ಯತನ ಸದಾಕಾಲ ಇರುತ್ತದೆ. ಭಗವಂತನು ಭಕ್ತವತ್ಸಲನು. ಜೀವಮಾತ್ರರೊಂದಿಗೆ ಅವನ ಸಖ್ಯತನ ಸದಾಕಾಲ ಇರುತ್ತದೆ. ಅವನ ಸಖ್ಯತನದಲ್ಲಿ ಎಂದಿಗೂ ಯಾವುದೇ ರೀತಿಯ ಚ್ಯುತಿ ಇರುವುದಿಲ್ಲ. ಆದುದರಿಂದ ಅವನನ್ನು ಅಚ್ಯುತ ಎಂದು ಹೇಳುತ್ತಾರೆ. ಪ್ರತಿಯೊಂದು ಋತುಗಳಲ್ಲಿ ಶ್ರದ್ಧಾಭಕ್ತಿಯಿಂದ ಮಾಡುವ ಯಜ್ಞಾನುಷ್ಠಾನದಿಂದ ಹಾಗೂ ಪ್ರತಿನಿತ್ಯ ಮಾಡುವ ಯೋಗಸಾಧನೆಯಿಂದ [ಯೋಗ ಎಂದರೆ ಕೇವಲ ವ್ಯಾಯಾಮ, ಆಸನ ಮತ್ತು ಪ್ರಾಣಾಯಾಮವಲ್ಲ. ಯೋಗ ಎಂದರೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿ] ಸಂಪ್ರೀತನಾಗುತ್ತಾನೆ, ಸಂತುಷ್ಟನಾಗುತ್ತಾನೆ. ಅವನು ಭಕ್ತರಿಂದ ಅನನ್ಯ ಭಕ್ತಿಯನ್ನು ಮತ್ತು ಪ್ರಾಣಿಮಾತ್ರರ ಸೇವೆಯನ್ನು ಮಾತ್ರ ಸ್ವೀಕರಿಸುತ್ತಾನೆ. ಜನತಾ ಸೇವೆಯೇ ಜನಾರ್ದನ ಸೇವೆ. ಅವನೆಂದಿಗೂ ಧನಕನಕ ರತ್ನಾದಿಗಳನ್ನು ಅಪೇಕ್ಷಿಸುವುದಿಲ್ಲ, ಸ್ವೀಕರಿಸುವುದಿಲ್ಲ. ಅವನಲ್ಲಿ ಅನಂತ ಭಂಡಾರವಿದೆ.

ಈಗ ವಾಯುವಿಶೇಷದ ಪ್ರಾಣ ಮತ್ತು ಉದಾನಗಳು ಋತುವಿನೊಂದಿಗೆ ಏನೇನನ್ನು ಪ್ರಕಟಿಸುತ್ತವೆ ಎಂಬುದನ್ನು ತಿಳಿಸಲಾಗುತ್ತದೆ.

ಯುವಂ ದಕ್ಷಂ ಧೃತವ್ರತ ಮಿತ್ರಾವರುಣ ದೂಳಭಮ್ । ಋತುನಾ ಯಜ್ಞಮಾಶಾಥೇ ॥೬॥

ಪದಾರ್ಥ:- [ಧೃತವ್ರತ] ಸತ್ಸಂಕಲ್ಪಗಳಲ್ಲಿ, ಸತ್ಯಾಚರಣೆಯಲ್ಲಿ ದೃಢರಾಗಿದ್ದು, ಸತ್ಯನಿಯಮಗಳನ್ನು ಪಾಲಿಸುವವರಾದ [ಮಿತ್ರಾವರುಣಾ] ಗೃಹಸ್ಥಾಶ್ರಮದಲ್ಲಿ ಪತಿಪತ್ನಿಯರೇ! ರಾಷ್ಟ್ರದ ಸಂರಕ್ಷಣೆ, ಸಂವರ್ಧನೆ, ಸಂಘಟನೆಯ ಮಹಾನ್ ಕಾರ್ಯದಲ್ಲಿ ಸರ್ವರನ್ನೂ ಮಿತ್ರರನ್ನಾಗಿ ಕಾಣುವ ಸಕಲ ಮಂತ್ರಿಪರಿಷತ್ತು ಹಾಗೂ ರಾಷ್ಟ್ರದ ಸಕಲ ಪ್ರಜಾಸಮೂಹ ಇವೆರಡು ವರ್ಗಗಳು ಅರ್ಥಾತ್ ಸರಕಾರ ಮತ್ತು ಪ್ರಜೆಗಳೇ! [ಯುವಮ್] ನೀವಿಬ್ಬರು, [ಋತುನಾ] ಯಾವರೀತಿ ಸೂರ್ಯಚಂದ್ರರು ಋತುಚಕ್ರದ ಸಹಾಯದಿಂದ ಸಂವತ್ಸರವನ್ನು ಧಾರಣ ಮಾಡುತ್ತವೆಯೋ, ಯಾವ ರೀತಿ ಪ್ರಾಣ ಮತ್ತು ಅಪಾನಗಳು ಈ ದೇಹವನ್ನು ಉತ್ತಮವಾದ ರೀತಿಯಲ್ಲಿ ಧಾರಣ ಮಾಡಿಕೊಳ್ಳುತ್ತವೆಯೋ ಅದೇ ರೀತಿ [ದಕ್ಷಂ] ಪ್ರಬಲವಾದ ಹಾಗೂ [ದೂಳಭಮ್] ಶತ್ರುಗಳಿಂದ, ದುಷ್ಟರಿಂದ, ದುಷ್ಟಶಕ್ತಿಗಳಿಂದ ಭೇದಿಸಲು, ಛಿನ್ನಭಿನ್ನವನ್ನಾಗಿ ಮಾಡಲು ಅಸಾಧ್ಯವಾದ [ಯಜ್ಞಮ್] ಸಂಘಟನಾ ಶಕ್ತಿಯನ್ನೂ, ಪ್ರೀತಿ ವಿಶ್ವಾಸ ಮತ್ತು ಸೌಹಾರ್ದವನ್ನು [ಆಶಾಥೇ] ಅತ್ಯುತ್ತಮವಾದ ರೀತಿಯಲ್ಲಿ ಧಾರಣ ಮಾಡಿಕೊಳ್ಳಿರಿ.

ಭಾವಾರ್ಥ:- ಗೃಹಾಸ್ಥಶ್ರಮದಲ್ಲಿ ಪತಿಪತ್ನಿಯರು ಸತ್ಸಂಕಲ್ಪವುಳ್ಳವರೂ, ಸತ್ಯಾಚರಣೆಯುಳ್ಳವರೂ, ಸತ್ಯ ನಿಯಮಗಳನ್ನು ಪಾಲಿಸುವವರೂ, ಆಗಿರಬೇಕು. ಅವರಲ್ಲಿ ಎಂದಿಗೂ ಸುಳ್ಳು, ಅವಿಶ್ವಾಸ, ದ್ವೇಷ, ಕಲಹ, ಪೈಪೋಟಿ ಇರಬಾರದು. ಇಬ್ಬರೂ ಬಲಶಾಲಿಗಳಾಗಿದ್ದು, ಅನ್ಯೋನ್ಯತೆಯಿಂದ ಪ್ರೀತಿ ವಿಶ್ವಾಸದಿಂದ ಒಂದಾಗಿದ್ದು, ಯಾರಿಂದಲೂ ಯಾವುದೇ ರೀತಿಯಲ್ಲಿ ಬೇರ್ಪಡಿಸಲು ಅಸಾಧ್ಯವಾದ ರೀತಿಯಲ್ಲಿ ದೇಹ ಎರಡಾದರೂ ಪ್ರಾಣ ಒಂದು ಎಂಬ ರೀತಿಯಲ್ಲಿ ಇರಬೇಕು. ಆಗ ಆ ಪರಿವಾರ ಎಷ್ಟು ಕಷ್ಟ ನಷ್ಟಗಳು ಬಂದರೂ ಛಿನ್ನ ಭಿನ್ನವಾಗುವುದಿಲ್ಲ. ಗೃಹಸ್ಥಾಶ್ರಮವು ಅತ್ಯಂತ ಸುಂದರ ಮತ್ತು ಮಧುರವಾಗುತ್ತದೆ. ಅದೇ ರೀತಿ ರಾಷ್ಟ್ರದ ಸಂರಕ್ಷಣೆ, ಸಂವರ್ಧನೆ ಮತ್ತು ಸಂಘಟನೆಯಲ್ಲಿ ಸರಕಾರ ಹಾಗೂ ಪ್ರಜೆಗಳು ಒಂದಾಗಬೇಕು. ಯಾವುದೇ ರೀತಿಯಲ್ಲಿಯೂ ಶತ್ರುಗಳು ಹೊರಗಿನಿಂದ ಆಕ್ರಮಣವನ್ನು ಮಾಡಿ, ಒಳಗಿನಿಂದ ಒಳಜಗಳಗಳನ್ನುಂಟು ಮಾಡಿ ರಾಷ್ಟ್ರವನ್ನು ದುರ್ಬಲವನ್ನಾಗಿ ಛಿನ್ನಭಿನ್ನವನ್ನಾಗಿ ಮಾಡಲು ಅಸಾಧ್ಯವಾದ ರೀತಿಯಲ್ಲಿ ಒಂದಾಗಿರಬೇಕು. ಆಗ ರಾಷ್ಟ್ರವು ಸುಸಂಘಟಿತವಾಗಿಯೂ ಸುಸಂಮೃದ್ಧವಾಗಿಯೂ ಇರಲು ಸಾಧ್ಯವಾಗುತ್ತದೆ. ಪ್ರಜೆಗಳಲ್ಲಿ ಮತ್ತು ಸರಕಾರದಲ್ಲಿ ಅನ್ಯೋನ್ಯತೆ, ಪ್ರೀತಿ ವಿಶ್ವಾಸ ಸೌಹಾರ್ದತೆ ಇದ್ದರೆ ಮಾತ್ರ ಆ ರಾಷ್ಟ್ರವು ಪ್ರಬಲವಾಗಿಯೂ ಅಬೇಧ್ಯವಾಗಿಯೂ, ಅಯೋಧ್ಯವಾಗಿಯೂ ಇರಲು ಸಾಧ್ಯವಾಗುತ್ತದೆ.

ದುರ್ಭಾಗ್ಯವಶಾತ್ ನಮ್ಮ ದೇಶದಲ್ಲಿ ಅನ್ಯೋನ್ಯತೆ ಪ್ರೀತಿ ವಿಶ್ವಾಸ, ಸೌಹಾರ್ದತೆ ಇವೆಲ್ಲವೂ ಸಂಪೂರ್ಣವಾಗಿ ನಶಿಸಿಹೋಗಿದೆ. ಜಾತಿ, ಪಕ್ಷಪಂಗಡ, ಭೇದಭಾವ, ಉಚ್ಚನೀಚ, ಮತಪಂಥ, ಇವುಗಳೇ ಹೆಚ್ಚಾಗಿ ಒಳಜಗಳಗಳು ಉಂಟಾದುದರಿಂದ ನಮ್ಮ ಶತ್ರುಗಳು ಹೊರಗಿನಿಂದ ಆಕ್ರಮಣವನ್ನೂ, ಒಳಗಿನಿಂದಲೂ ಸಂಘರ್ಷಗಳನ್ನೂ ಉಂಟು ಮಾಡಿ ನಮ್ಮ ದೇಶವನ್ನು ಛಿನ್ನ ಭಿನ್ನವನ್ನಾಗಿ ಮಾಡಲು ಪ್ರಯತ್ನಿಸುತ್ತಿದ್ದಾರೆ. ನಾವೆಲ್ಲರೂ ನಮ್ಮಲ್ಲಿರುವ ಎಲ್ಲಾ ರೀತಿಯ ಭೇದಭಾವಗಳನ್ನು ಮರೆತು ರಾಷ್ಟ್ರವನ್ನು ಸಂರಕ್ಷಿಸೋಣ. ಸರ್ವತೋಮುಖ ಅಭಿವೃದ್ಧಿಯಾಗುವಂತೆ ಸದಾಕಾಲ ಪ್ರಯತ್ನಿಸೋಣ. ಪರಮಾತ್ಮನು ನಮ್ಮೆಲ್ಲರಿಗೆ ಶಕ್ತಿಯನ್ನೂ, ಸದ್ಬುದ್ಧಿಯನ್ನೂ, ಶಾಂತಿಯನ್ನೂ ಕರುಣಿಸಿ ಸನ್ಮಂಗಳವನ್ನುಂಟುಮಾಡಲಿ.

ನಂತರ ಈಶ್ವರ ಮತ್ತು ಭೌತಿಕ ಅಗ್ನಿಯ ಗುಣಗಳ ವರ್ಣನೆಯನ್ನು ಮಾಡಲಾಗಿದೆ.

ದ್ರವಿಣೋದಾ ದ್ರವಿಣಸೋ ಗ್ರಾವಹಸ್ತಾಸೋ ಅಧ್ವರೇ । ಯಜ್ಞೇಷು ದೇವಮೀಳತೇ ॥೭॥

ಪದಾರ್ಥ:- [ದ್ರವಿಣೋದಾಃ] ಸಕಲ ಐಶ್ವರ್ಯವನ್ನೂ, ಸಂಪೂರ್ಣ ಜ್ಞಾನವನ್ನೂ, ಸಮಸ್ತ ಬಲವನ್ನೂ [ಶಾರೀರಿಕ, ಮಾನಸಿಕ, ಆತ್ಮಿಕ] ರಾಜಲಕ್ಷ್ಮಿಯನ್ನೂ, ಆಯುರಾರೋಗ್ಯ ಸಮೃದ್ಧಿ ಸುಖಶಾಂತಿ ಮತ್ತು ಆನಂದವನ್ನೂ ಕೊಡುವ [ದೇವಮ್] ಸಕಲ ದಿವ್ಯಗುಣಗಳುಳ್ಳ ಪರಮಾತ್ಮನನ್ನು [ಗ್ರಾವಹಸ್ತಾಸಃ] ಅತ್ಯಂತ ಶ್ರದ್ಧಾಭಕ್ತಿಯಿಂದ ಸ್ತುತಿ ಅರ್ಚನೆ ಮತ್ತು ಉಪಾಸನೆಯನ್ನು ಮಾಡುವವರೂ, ಶಿಲ್ಪವಿದ್ಯಾ ನಿಷ್ಣಾತರೂ, ಯಜ್ಞಾನುಷ್ಠಾನಗಳಲ್ಲಿ ಪರಿಣತರೂ ಹಾಗೂ ಅತ್ಯಂತ ನಿಷ್ಠೆಯಿಂದ ಮಾಡುವವರೂ ಆದ ಮತ್ತು [ದ್ರವಿಣಸಃ] ಋತ್ವಿಜರು [ಅಧ್ವರೇ] ಯಾವ ಕಾರ್ಯವನ್ನು ಕರ್ಮಗಳನ್ನು ಮಾಡುವಾಗ ಕಾಯಾ ವಾಚಾ ಮನಸಾ ಹಾಗೂ ಮನಸಾ ವಾಚಾ ಕರ್ಮಣಾ ಲೇಶಮಾತ್ರವೂ ಹಿಂಸೆಯನ್ನು ಮಾಡಬಾರದೋ ಅಂತಹ [ಯಜ್ಞೇಷು] ಅಗ್ನಿಹೋತ್ರದಿಂದ ಅಶ್ವಮೇಧಪರ್ಯಂತ ಸಕಲ ಯಜ್ಞಗಳಲ್ಲಿ [ಈಳತೇ] ಅತ್ಯಂತ ಶ್ರದ್ಧೆಯಿಂದ ಪರಮಾತ್ಮನ ಉಪಾಸನೆಯನ್ನು ಮಾಡುತ್ತಾ ಅವನ ಗುಣಗಳನ್ನು ತಮ್ಮ ಜೀವನದಲ್ಲಿ ಧಾರಣ ಮಾಡಿಕೊಳ್ಳುತ್ತಾರೋ, ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೋ ಅವರು ಸದಾಕಾಲ ಆನಂದದಿಂದ ಇರುತ್ತಾರೆ.

ಭಾವಾರ್ಥ:- ಪರಮಾತ್ಮನು ಮಾನವ ಮಾತ್ರರಿಗೆ ಸಕಲ ಐಶ್ವರ್ಯ, ಸಂಪೂರ್ಣಜ್ಞಾನ, ಸಮಸ್ತಬಲ, ರಾಜ್ಯಸುಖ, ಆಯುರಾರೋಗ್ಯ ಸಮೃದ್ಧಿ ಸುಖಶಾಂತಿ ಮತ್ತು ಆನಂದವನ್ನು ಕರುಣಿಸುತ್ತಾನೆ. ಪ್ರಾಣಿಮಾತ್ರರಲ್ಲಿ

ಯಾವುದೇ ರೀತಿಯಲ್ಲಿ ತಾರತಮ್ಯ ಭೇದಭಾವವನ್ನು ಮಾಡುವುದಿಲ್ಲ. ತೆಗೆದುಕೊಳ್ಳುವವನಲ್ಲಿ ನ್ಯೂನತೆಗಳಿರುತ್ತವೆ ವಿನಾ ಕೊಡುವವನಲ್ಲಿ ಯಾವುದೇ ರೀತಿಯ ನ್ಯೂನತೆ ಇಲ್ಲ. ಯಾರು ಯಾವುದನ್ನು ಪಡೆಯಲು ಅಪೇಕ್ಷಿಸುತ್ತಾನೋ ಅವನು ಸತ್ಪಾತ್ರನಾದಲ್ಲಿ ಖಂಡಿತವಾಗಿ ಪ್ರಾಪ್ತಮಾಡಿಕೊಳ್ಳುತ್ತಾನೆ. ಎಲ್ಲರಿಗೂ ಅವರವರ ಕರ್ಮಗಳಿಗನುಗುಣವಾಗಿ ಫಲವು ದೊರೆಯುತ್ತದೆ. ಅಂತಹ ಪರಮಾತ್ಮನನ್ನು ಯಾರು ಅತ್ಯಂತ ಶ್ರದ್ಧಾಭಕ್ತಿಯಿಂದ ಉಪಾಸಿಸುತ್ತಾ ಅವನ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ತಮ್ಮಲ್ಲಿರುವ ದುರ್ಗುಣ ದುರ್ವ್ಯಸನಗಳನ್ನು ತ್ಯಜಿಸುತ್ತಾರೋ, ಅವರು ಸದಾ ಆನಂದದಿಂದ ಇರುತ್ತಾರೆ.

ಉಕ್ತ ಅಗ್ನಿಯೇ ಎಲ್ಲ ಪದಾರ್ಥಗಳನ್ನು ಕೊಡುವ ಮತ್ತು ಕೊಡಿಸುವಂತಹುದಾಗಿದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ದ್ರವಿಣೋದಾ ದದಾತು ನೋ ವಸೂನಿ ಯಾನಿ ಶೃಣ್ವಿರೇ । ದೇವೇಷು ತಾ ವನಾಮಹೇ ॥೮॥

ಪದಾರ್ಥ:- ನಮ್ಮೆಲ್ಲರಿಂದ [ಯಾನಿ] ಯಾವ ರೀತಿಯ [ದೇವೇಷು] ಶ್ರೇಷ್ಠ ವಿದ್ವಾಂಸರಲ್ಲಿ ಸಕಲ ದಿವ್ಯ ಪದಾರ್ಥಗಳಲ್ಲಿ, ಸಕಲ ದಿವ್ಯ ಮತ್ತು ಶ್ರೇಷ್ಠ ಕರ್ಮಗಳಲ್ಲಿ, ರಾಜ್ಯಭೋಗ ಹಾಗೂ ವೈಭವದಲ್ಲಿ ಸಕಲ ರೀತಿಯ ಶಿಲ್ಪ ವಿದ್ಯಾ ಸಿದ್ಧಿಗಳಲ್ಲಿ ವಿಮಾನಾದಿಗಳಲ್ಲಿ ಇರುವ [ವಸೂನಿ] ಶ್ರೇಷ್ಠ ಜ್ಞಾನ, ಸಕಲ ಸುಕೃತಗಳಿಂದ ಪ್ರಾಪ್ತವಾಗುವ ಸಂಪೂರ್ಣ ಉತ್ತಮ ಫಲಗಳು ಸಕಲ ಸುಖ ಸಮೃದ್ಧಿ ಭೋಗೈಶ್ವರ್ಯ ಆನಂದ ಇತ್ಯಾದಿಗಳನ್ನು [ಶೃಣ್ವಿರೇ] ಇತರರಿಂದ ಕೇಳಿ ಕಲ್ಪಿಸಿಕೊಳ್ಳುತ್ತೇವೆಯೋ [ತಾನಿ] ಅವೆಲ್ಲವನ್ನೂ [ವನಾಮಹೇ] ನಾವೆಲ್ಲರೂ ಅನುಭವಿಸುವಂತಾಗಲಿ. [ದ್ರವಿಣೋದಾ] ಸಕಲೈಶ್ವರ್ಯ ಪ್ರದಾತನಾದ ಪರಮಾತ್ಮನು [ನಃ ದದಾತು] ನಮ್ಮೆಲ್ಲರಿಗೆ ಕರುಣಿಸಲಿ.

ಭಾವಾರ್ಥ:- ಸಕಲೈಶ್ವರ್ಯ ಪ್ರದಾತನಾದ ಪರಮಾತ್ಮನು ನಮ್ಮೆಲ್ಲರಿಗೆ ಶ್ರೇಷ್ಠಜ್ಞಾನ, ಸಕಲ ಸುಕೃತಗಳಿಂದ ಪ್ರಾಪ್ತವಾಗುವ ಸಂಪೂರ್ಣ ಉತ್ತಮ ಫಲಗಳು, ಸುಸಮೃದ್ಧ, ಸುಸಂಸ್ಕೃತ, ಸುಸಂಘಟಿತ, ಸಂಪೂರ್ಣ ಸ್ವಾವಲಂಬಿ ರಾಜ್ಯ ವೈಭವ ಹಾಗೂ ಸಮೃದ್ಧಿ ಸುಖ, ಶಾಂತಿ ಆನಂದವನ್ನು ನಮ್ಮೆಲ್ಲರಿಗೆ ಕರುಣಿಸಲಿ. ಮಾನವನು ಸಾಮಾಜಿಕ ಪ್ರಾಣಿ. ಮಾನವನ ಸಂಬಂಧ ಈ ಚರಾಚರ ಜಗತ್ತಿನಲ್ಲಿರುವ ಸಕಲ ಜಡ ಮತ್ತು ಚೇತನಗಳೊಂದಿಗಿದೆ. ಪ್ರಪಂಚದಲ್ಲಿರುವ ಯಾವ ಮಾನವನೂ ತಾನೊಬ್ಬನೇ ಸಕಲ ಸುಖವನ್ನು ಅನುಭವಿಸುತ್ತೇನೆ ಅಥವಾ ಅನುಭವಿಸಲು ಸಾಧ್ಯ ಎಂದು ಭಾವಿಸಿದರೆ ಅವನಿಗಿಂತ ದೊಡ್ಡ ಮೂರ್ಖ ಯಾರೂ ಇಲ್ಲ. ಅದರೊಂದಿಗೆ ಸುಖ-ಸಂತೋಷ ಶಾಂತಿ-ನೆಮ್ಮದಿ ಮತ್ತು ಆನಂದ ಇವೆಲ್ಲವನ್ನೂ ಕೇವಲ ಧನದ ಬಲದಿಂದ ಪ್ರಾಪ್ತಮಾಡಿಕೊಳ್ಳಲು ಸಾಧ್ಯವಿದೆ ಎಂದು ತಿಳಿಯುವುದು ಕೂಡಾ ಮೂರ್ಖತನವೇ ಆಗಿದೆ. ಪೂರ್ವಜನ್ಮದಲ್ಲಿ ಮಾಡಿದ ಸುಕೃತಗಳಿಂದ ಹಾಗೂ ಈ ಜನ್ಮದಲ್ಲಿ ಮಾಡುವ ಸತತ ಪ್ರಯತ್ನಗಳಿಂದ ಮಾತ್ರ ನಮಗೆಲ್ಲವೂ ಪ್ರಾಪ್ತವಾಗಲು ಸಾಧ್ಯ. ದೇಶದಲ್ಲಿ ದೊಂಬಿಗಳು ಗಲಭೆ, ಅತ್ಯಾಚಾರ, ಅನಾಚಾರ, ಯುದ್ಧ ಕಲಹ, ಹಲವಾರು ರೀತಿಯ ರೋಗರುಜಿನಗಳು ನಿರುದ್ಯೋಗ, ಬಡತನ, ಅಜ್ಞಾನ, ಅತಿವೃಷ್ಟಿ, ಅನಾವೃಷ್ಟಿ ಬರಗಾಲ ಇತ್ಯಾದಿಗಳಿದ್ದರೆ ಯಾರೂ ಸುಖದಿಂದಿರಲು ಶಾಂತಿ ಮತ್ತು ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ಭೀತಿ ಹಾಗೂ ಮೃತ್ಯುವಿನ ಛಾಯೆಯಲ್ಲಿ ಸುಖದ ಕಲ್ಪನೆ ಯನ್ನು ಕೂಡಾ ಮಾಡಲು ಸಾಧ್ಯವಿಲ್ಲ.

ಆದುದರಿಂದ ನಾವೆಲ್ಲರೂ ಉತ್ತಮ ಜ್ಞಾನಿಗಳಾಗಿ, ಶ್ರೇಷ್ಠ ವಿದ್ವಾಂಸರಾಗಿ, ಉತ್ತಮಗುಣ ನಡತೆಯುಳ್ಳವರಾಗಿ, ಶ್ರೇಷ್ಠಕರ್ಮಗಳನ್ನು ಸಮರ್ಪಣಾ ಭಾವದಿಂದ ಮಾಡುವವರಾಗಿ, ಸಂಪೂರ್ಣ ಸ್ವಾವಲಂಬಿಗಳಾಗಿ, ಸಭ್ಯ ಮತ್ತು ಸುಸಂಸ್ಕೃತ ಮಾನವರಾಗಿ ಪರಸ್ಪರ ಪ್ರೀತಿ ಸೌಹಾರ್ದದಿಂದ ಅನ್ಯೋನ್ಯರಾಗಿ ಬಾಳಿದರೆ ಮಾತ್ರ ಸರ್ವತ್ರ ಸುಖ ಸಮೃದ್ಧಿ ಶಾಂತಿ ಮತ್ತು ನೆಮ್ಮದಿ ಇರಲು ಸಾಧ್ಯವಾಗುತ್ತದೆ.

ಯಜ್ಞ ಮಾಡುವ ಮನುಷ್ಯರಿಗೆ ಋತುಗಳಿಗನುಗುಣವಾಗಿ ಮಾಡಬೇಕಾದ ಯೋಗ್ಯ ಕಾರ್ಯಗಳನ್ನು ಇಲ್ಲಿ ವಿವರಿಸಲಾಗಿದೆ.

ದ್ರವಿಣೋದಾಃ ಪಿಪೀಷತಿ ಜುಹೋತ ಪ್ರ ಚ ತಿಷ್ಠತ । ನೇಷ್ಟ್ರಾದೃತುಭಿರಿಷ್ಯತ ॥೯॥

ಪದಾರ್ಥ:- ಹೇ ಕ್ರತುಶೀಲ ಮಾನವರೇ! ಯಾವ ರೀತಿ [ದ್ರವಿಣೋದಾಃ] ಯಜ್ಞಾನುಷ್ಠಾನವನ್ನು ಮಾಡುವ ವಿದ್ವಾಂಸನು, ಋತ್ವಿಜನು ಯಜ್ಞಾದಿಗಳಲ್ಲಿ [ಪಿಪೀಷತಿ] ತನ್ನ ಆರೋಗ್ಯದ ಸಂರಕ್ಷಣೆಗೋಸ್ಕರ ಅರ್ಥಾತ್ ಯಾವುದೇ ರೀತಿಯ ರೋಗರುಜಿನಗಳಿಂದ ಯಜ್ಞಾನುಷ್ಠಾನದಲ್ಲಿ ವ್ಯವಧಾನವಾಗದಂತೆ ತಡೆಯಲು ಸೋಮಲತೆಯ ರಸವನ್ನು ಪಾನ ಮಾಡಲು ಅಪೇಕ್ಷಿಸುತ್ತಾನೋ, ಅದೇ ರೀತಿ ನೀವೆಲ್ಲರೂ ಸಕಲ ಯಜ್ಞಾದಿಗಳ [ನೇಷ್ಟ್ರಾತ್ ಜುಹೋತ] ವಿಶೇಷವಾದ ವಿಜ್ಞಾನದ ಮೂಲಕ ಸಕಲ ಪ್ರಾಣಿಮಾತ್ರರಿಗೂ ಪ್ರಯೋಜನಕಾರಿಯಾಗುವಂತೆ ಮಾಡಿರಿ. ಈ ರೀತಿ ಯಜ್ಞಾನುಷ್ಠಾನವನ್ನು ಮಾಡುತ್ತಾ [ಋತುಭಿಃ ಪ್ರತಿಷ್ಠತ] ಸಕಲ ಋತುಗಳಿಗನುಗುಣವಾಗಿ, ಕಾಲ ದೇಶ ಪರಿಸ್ಥಿತಿಯನ್ನು ಹೊಂದುವಂತೆ ಮಾಡಿ ಎಲ್ಲಾ ರೀತಿಯ ಸುಖವನ್ನು ಪ್ರಾಪ್ತಮಾಡಿಕೊಳ್ಳಿರಿ ಹಾಗೂ ಸಂಪೂರ್ಣ ಜ್ಞಾನವನ್ನು [ಇಷ್ಯತ] ಪ್ರಾಪ್ತಮಾಡಿಕೊಳ್ಳಿರಿ.

ಭಾವಾರ್ಥ:- ಪುರುಷಾರ್ಥಿಗಳಾದ ಮಾನವರೇ! ಯಜ್ಞಾನುಷ್ಠಾನವನ್ನು ಮಾಡುವ ವಿದ್ವಾಂಸನು ಮತ್ತು ಋತ್ವಿಜನು ತಾನು ಮಾಡುವ ಅನುಷ್ಠಾನಗಳಲ್ಲಿ, ಶಾರೀರಿಕ ಹಾಗೂ ಮಾನಸಿಕ ತೊಂದರೆಗಳಿಂದಾಗುವ ಸಕಲ ವ್ಯವಧಾನವನ್ನು ನಿವಾರಣೆ ಮಾಡುವುದಕ್ಕೋಸ್ಕರ ಸೋಮಲತೆಯ ರಸವನ್ನು ಪಾನ ಮಾಡುತ್ತಾನೆ. ಈ ಸೋಮರಸದ ಪಾನ ಮಾಡುವುದರಿಂದ ಅವನು ಶಾರೀರಿಕವಾಗಿಯೂ ಮಾನಸಿಕವಾಗಿಯೂ ಪೂರ್ಣವಾಗಿ ಆರೋಗ್ಯವಂತನಾಗಿರುತ್ತಾನೆ. ಅದೇ ರೀತಿ ನೀವೆಲ್ಲರೂ ಸಕಲ ಋತುಗಳಲ್ಲಿ ಹಾಗೂ ಋತುಗಳಿಗನುಗುಣವಾಗಿ, ಸಕಲ ಪ್ರಾಣಿಮಾತ್ರರಿಗೆ ಸಂಪೂರ್ಣ ಪ್ರಯೋಜನಕಾರಿಯಾಗುವಂತಹ ಮತ್ತು ಲೋಕಕಲ್ಯಾಣವಾಗುವ ರೀತಿಯಲ್ಲಿ ಯಜ್ಞಾನುಷ್ಠಾನವನ್ನು ಮಾಡಿರಿ. ಋತುಗಳ ಪರಿವರ್ತನೆಯಾಗುವಾಗ ಸಂಧಿಕಾಲದಲ್ಲಿ ವಿಶೇಷವಾದ ರೋಗರುಜಿನಗಳುಂಟಾಗುವ ಸಾಧ್ಯತೆಯಿರುತ್ತದೆ. ಅದೇ ರೀತಿ ಋತುಗಳಲ್ಲಿ ವೈಪರೀತ್ಯ ಉಂಟಾದಾಗ ಹಲವು ರೀತಿಯ ಅನಾಹುತಗಳುಂಟಾಗುವ ಸಾಧ್ಯತೆಯಿರುತ್ತದೆ. ಅವೆಲ್ಲವನ್ನೂ ನಿವಾರಣೆ ಮಾಡಿ ಸಕಲ ಪ್ರಾಣಿಮಾತ್ರರು ಸುಖವಾಗಿರಲು ವಿಶೇಷವಾದ ಜ್ಞಾನ, ವಿಜ್ಞಾನ ಮತ್ತು ಅನುಸಂಧಾನ ಅರ್ಥಾತ್ ಸಂಶೋಧನೆಗಳನ್ನು ಮಾಡಿ ಸರ್ವತ್ರ ಸದಾಕಾಲ ಸುಖ-ಶಾಂತಿ ಮತ್ತು ಸಮೃದ್ಧಿ ಶಾಶ್ವತವಾಗಿ ನೆಲೆಸುವಂತೆ ಮಾಡಿರಿ.

ನಂತರ ಪ್ರತಿಋತುವಿನಲ್ಲಿಯೂ ಈಶನ ಧ್ಯಾನವನ್ನು ಮಾಡಬೇಕು ಎಂಬುದನ್ನು ಇಲ್ಲಿ ಹೇಳಲಾಗಿದೆ.

ಯತ್ ತ್ವಾ ತುರೀಯಮೃತುಭಿ-ರ್ದ್ರವಿಣೋದೋ ಯಜಾಮಹೇ । ಅಧ ಸ್ಮಾ ನೋ ದದಿರ್ಭವ॥೧೦॥

ಪದಾರ್ಥ:- [ದ್ರವಿಣೋದಾಃ] ನಮ್ಮೆಲ್ಲರ ಆತ್ಮವನ್ನು ಪರಿಶುದ್ಧವನ್ನಾಗಿಯೂ, ಪವಿತ್ರವನ್ನಾಗಿಯೂ ಮಾಡುವಂತಹ ಶ್ರೇಷ್ಠವಾದ ಜ್ಞಾನವನ್ನು ಪ್ರದಾನ ಮಾಡುವ ಪರಮಾತ್ಮ! [ಯತ್ ತ್ವಂ ತುರೀಯಮ್] ನೀನು ಸ್ಥೂಲ, ಸೂಕ್ಷ್ಮ, ಕಾರಣ ಎಂಬ ತ್ರಿವಿಧ ಜಗತ್ತಿಗಿಂತ ಭಿನ್ನವಾಗಿದ್ದೀಯೆ. ಅರ್ಥಾತ್ ಈ ಜಗತ್ತು ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂಬ ಮೂರು ವಿಧದಲ್ಲಿದೆ. ನೀನು ನಿನ್ನ ಸರ್ವವ್ಯಾಪಕತ್ವದಿಂದ ಹಾಗೂ ಸರ್ವಾಂತರ್ಯಾಮಿತ್ವದಿಂದ ಎಲ್ಲದರಲ್ಲಿಯೂ ಇದ್ದು ಸಕಲ ಪದಾರ್ಥಗಳಿಗಿಂತ ಭಿನ್ನವೇ ಆಗಿದ್ದೀಯೆ. [ತ್ವಾ] ನಿನ್ನನ್ನು [ಋತುಭಿಃ] ಸಕಲ ಪದಾರ್ಥಗಳು ಪ್ರಾಪ್ತವಾಗುವಂತೆ ಮಾಡುವ ಋತುಗಳಲ್ಲಿ [ಯಜಾಮಹೇಸ್ಮ] ನಾವೆಲ್ಲರೂ ಸರ್ವವಿಧದಲ್ಲಿ ನಿನ್ನ ಉಪಾಸನೆಯನ್ನು ಮಾಡುತ್ತೇವೆ. ನೀನು [ನಃ] ನಮ್ಮೆಲ್ಲರಿಗೆ ಸಕಲ ಶ್ರೇಷ್ಠ ಸಂಪತ್ತನ್ನೂ ಸಕಲ ದಿವ್ಯ ಪದಾರ್ಥಗಳನ್ನೂ [ಅಧ] ನಿಶ್ಚಯವಾಗಿಯೂ [ದದಿಃ ಭವ] ಕೊಡುವವನಾಗಿದ್ದೀಯೆ. ಸದಾಕಾಲ ಪ್ರದಾನ ಮಾಡುತ್ತಾ ಇರುತ್ತೀಯೆ.

ಭಾವಾರ್ಥ:- ಪರಮಾತ್ಮನು ಈ ಚರಾಚರ ಜಗತ್ತಿನಲ್ಲಿ ಪ್ರತಿಯೊಂದು ಕಣಕಣದಲ್ಲಿಯೂ ವಿದ್ಯಮಾನನಾಗಿದ್ದಾನೆ. ಈ ಜಗತ್ತು ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಎಂಬ ಮೂರು ವಿಧದಲ್ಲಿದೆ. ಪೃಥ್ವಿ, ಜಲ, ತೇಜ, ವಾಯು ಮತ್ತು ಆಕಾಶ ಎಂಬ ಪಂಚಮಹಾಭೂತಗಳಿಂದ ನಿರ್ಮಿತವಾದ ಈ ದೃಶ್ಯಮಾನ ಜಗತ್ತು ಸ್ಥೂಲ - ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ಪಂಚ ತನ್ಮಾತ್ರೆಗಳು, ಸೂಕ್ಷ್ಮ - ಸತ್ವಗುಣ, ರಜೋಗುಣ, ತಮೋಗುಣ ಎಂಬ ತ್ರಿಗುಣಾತ್ಮಕ ಪ್ರಕೃತಿಯೇ ಕಾರಣ. ಈ ಮೂರರಿಂದಲೂ ಭಿನ್ನವಾದ ಹಾಗೂ ಈ ಮೂರರಲ್ಲಿಯೂ ವ್ಯಾಪಕನಾಗಿರುವ ಪರಮಾತ್ಮನೇ ತುರೀಯ ಅರ್ಥಾತ್ ನಾಲ್ಕನೆಯವನು. ಆದರೆ ಯಾವತ್ತೂ ಪರಮಾತ್ಮನ ಸ್ಥಾನ ಮೊದಲು; ಮಿಕ್ಕಿದ್ದೆಲ್ಲವೂ ಅವನಿಗಿಂತ ಪ್ರತ್ಯೇಕವಾಗಿದ್ದು ಅವನೊಳಗೆಯೇ ಇದೆ. ಪರಮಾತ್ಮನು ಪ್ರತಿಯೊಂದು ಪರಮಾಣುವಿನ ಒಳಗೂ, ಹೊರಗೂ ಇದ್ದಾನೆ. ಅವನಿಗೆ ಸಮಾನರಾದವರು ಮತ್ತು ಅವನಿಗಿಂತ ಮಿಗಿಲಾದವರು ಯಾರೂ ಇಲ್ಲ. ಸರ್ವಾಂತರ್ಯಾಮಿಯಾದ ನಮ್ಮೆಲ್ಲರ ಆತ್ಮವನ್ನು ಬೆಳಗುವ ಹಾಗೂ ನಮ್ಮೆಲ್ಲರ ಆತ್ಮವನ್ನು ಪರಿಶುದ್ಧವನ್ನಾಗಿ ಮಾಡುವಂತಹ ಶ್ರೇಷ್ಠ ಜ್ಞಾನವನ್ನು ಸೃಷ್ಟಿಯ ಆದಿಯಲ್ಲಿಯೇ ವೇದಗಳ ಮೂಲಕ ಕೊಡುತ್ತಾನೆ. ಅವನ ಕೃಪೆಯಿಂದ ಸರ್ವಋತುಗಳಲ್ಲಿ ನಮಗೆ ಸಕಲ ಪದಾರ್ಥಗಳು ಪ್ರಾಪ್ತವಾಗುತ್ತವೆ. ಸಕಲ ಪದಾರ್ಥಗಳು ಪ್ರಾಪ್ತವಾಗಲು ಸಹಾಯಕವಾದ ಸರ್ವ ಋತುಗಳಲ್ಲಿ ಹಾಗೂ ಸಮಸ್ತ ಪರ್ವಾದಿಗಳಲ್ಲಿ ನಾವೆಲ್ಲರೂ ನಿನ್ನನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಉಪಾಸಿಸುತ್ತೇವೆ. ಭಕ್ತವತ್ಸಲನಾದ ಪರಮಾತ್ಮ! ನಮಗೆಲ್ಲರಿಗೂ ಸಮೃದ್ಧಿಯನ್ನೂ ಸುಖವನ್ನೂ ಶಾಂತಿಯನ್ನೂ ಕರುಣಿಸು.

ನಂತರ ಋತುಗಳೊಂದಿಗೆ ಸೂರ್ಯ ಮತ್ತು ಚಂದ್ರರ ಗುಣವರ್ಣನೆಯನ್ನು ಮಾಡಲಾಗುತ್ತದೆ.

ಅಶ್ವಿನಾ ಪಿಬತಂ ಮಧು ದೀದ್ಯಗ್ನೀ ಶುಚಿವ್ರತಾ । ಋತುನಾ ಯಜ್ಞವಾಹಸಾ ॥೧೧॥

ಪದಾರ್ಥ:- ಹೇ ವಿದ್ವಾಂಸರೇ! ನೀವೆಲ್ಲರೂ [**ಶುಚಿವ್ರತಾ**] ಸಕಲ ಪದಾರ್ಥಗಳನ್ನು ಶುದ್ಧವನ್ನಾಗಿಯೂ ಪವಿತ್ರವನ್ನಾಗಿಯೂ ಮಾಡುವ [**ಯಜ್ಞವಾಹಸಾ**] ಯಜ್ಞದಲ್ಲಿ ಅರ್ಪಿಸಿದ ಸಕಲ ದ್ರವ್ಯಗಳನ್ನೂ, ಸಕಲ ಪದಾರ್ಥಗಳನ್ನೂ ಪ್ರಾಪ್ತ ಮಾಡಿಕೊಂಡು, ಪುನಃ ವೃಷ್ಟಿಯ ಮೂಲಕ ಸಮಸ್ತ ಪ್ರಾಣಿ ಮಾತ್ರರಿಗೆ ಪ್ರಾಪ್ತವಾಗುವಂತೆ ಮಾಡುವ, [**ದೀದ್ಯಗ್ನೀ**] ಸಂಪೂರ್ಣ ಜಗತ್ತನ್ನು ಬೆಳಗಿಸುವ ಪ್ರಕಾಶ ಪುಂಜಗಳಾದ [**ಅಶ್ವಿನೌ**] ಸೂರ್ಯಚಂದ್ರರು [**ಮಧು ಪಿಬತಂ**] ಮಧುರವಾದ ರಸದ ಪಾನವನ್ನು ಮಾಡುತ್ತವೆ. ತದನಂತರ [**ಋತುನಾ**] ಪ್ರತಿಯೊಂದು ಋತುಗಳೊಂದಿಗೆ ಅಥವಾ ಪ್ರತಿಯೊಂದು ಋತುಗಳಲ್ಲಿ ಸಕಲ ಪದಾರ್ಥಗಳಲ್ಲಿ, ಗಿಡ, ಮರಬಳ್ಳಿ, ಹೂ ಹಣ್ಣು ವನಸ್ಪತಿಗಳಲ್ಲಿ ರಸವು ಪ್ರಾಪ್ತವಾಗುವಂತೆ ಮಾಡುತ್ತವೆ.

ಭಾವಾರ್ಥ:- ಪರಮಾತ್ಮನು ಸೃಷ್ಟಿಸಿದ ಸೂರ್ಯ ಮತ್ತು ಚಂದ್ರರು ಸಂಪೂರ್ಣ ಜಗತ್ತನ್ನು ತಮ್ಮ ಪ್ರಕಾಶದಿಂದ ಪ್ರಕಾಶಿತವನ್ನಾಗಿ ಮಾಡುತ್ತಾರೆ. ಹಗಲಿನಲ್ಲಿ ಸೂರ್ಯನು ಜಗತ್ತನ್ನು ಪ್ರಕಾಶಿಸಿದರೆ, ಚಂದ್ರನು ರಾತ್ರಿಯಲ್ಲಿ ತನ್ನ ಬೆಳಕಿನಿಂದ ಬೆಳಗಿಸುತ್ತಾನೆ. ಅದರೊಂದಿಗೆ ಇವೆರಡೂ ಈ ಜಗತ್ತಿನಲ್ಲಿರುವ ಸಕಲ ಪದಾರ್ಥಗಳನ್ನು ಶುದ್ಧವನ್ನಾಗಿಯೂ ಪವಿತ್ರವನ್ನಾಗಿಯೂ ಮಾಡುತ್ತವೆ. ನಾವು ಯಜ್ಞದಲ್ಲಿ ಅರ್ಪಿಸಿದ ಸಕಲ ಪದಾರ್ಥಗಳನ್ನೂ, ಸಕಲ ದ್ರವ್ಯಗಳನ್ನೂ, ಪ್ರಾಪ್ತ ಮಾಡಿಕೊಂಡು, ಪುನಃ ವೃಷ್ಟಿಯ ಮೂಲಕ ಈ ಜಗತ್ತಿಗೆ ಸಕಲ ಪ್ರಾಣಿಮಾತ್ರರಿಗೆ ಪ್ರಾಪ್ತವಾಗುವಂತೆ ಮಾಡುತ್ತವೆ. ಆದುದರಿಂದ ಯಜ್ಞದಲ್ಲಿ ಅರ್ಪಿಸಿದ ಯಾವ ದ್ರವ್ಯವೂ ವ್ಯರ್ಥವಾಗುವುದಿಲ್ಲ. ನಾವು ಯಜ್ಞದಲ್ಲಿ ಸುಗಂಧವನ್ನು ಬೀರುವ, ಪುಷ್ಟಿದಾಯಕವಾದ ಹಾಗೂ ಆರೋಗ್ಯವರ್ಧಕ ವಸ್ತುಗಳನ್ನೇ ಅರ್ಪಿಸಬೇಕು. ಇದರಿಂದ ನಾವು ಸೇವಿಸುವ ಗಾಳಿ, ಜಲ ಮತ್ತು ಆಹಾರವು ಸುವಾಸಿತವಾಗಿಯೂ, ಶುದ್ಧವೂ, ಪುಷ್ಟಿಕಾರಕವೂ, ಆರೋಗ್ಯವರ್ಧಕವೂ ಆಗುತ್ತದೆ. ಸೂರ್ಯ ಮತ್ತು ಚಂದ್ರರು ಸಕಲ ಪದಾರ್ಥಗಳಲ್ಲಿರುವ ರಸವನ್ನು ಹೀರಿಕೊಂಡು ಪುನಃ ಪ್ರತಿಯೊಂದು ಋತುಗಳಲ್ಲಿ ವೃಕ್ಷ, ಗಿಡ, ಬಳ್ಳಿ, ಹೂವು ಕಾಯಿ ಹಣ್ಣು, ಮತ್ತು ಸಕಲ ವನಸ್ಪತಿಗಳಲ್ಲಿ

ಪುನಃ ರಸವು ಪ್ರಾಪ್ತವಾಗುವಂತೆ ಮಾಡುತ್ತವೆ. ಆದುದರಿಂದ ಸಮೃದ್ಧವಾದ ಕಾಡನ್ನು ಕಡಿಯುವುದು, ಗಿಡಗಳಲ್ಲಿರುವ ಹೂವುಗಳನ್ನು ಕಿತ್ತು ಹಾಳು ಮಾಡುವುದು ಅತ್ಯಂತ ಪ್ರಮಾದವಾಗುತ್ತದೆ. ಬಂಜರು ಭೂಮಿಯಲ್ಲಿ ಯಾವ ರಸವೂ ಇರುವುದಿಲ್ಲ, ಭೂಮಿಯ ಗುಣ ಗಂಧ, ರಸವಲ್ಲ. ಆದುದರಿಂದ ಗಿಡ ಮರಗಳನ್ನು ಬಳ್ಳಿ ಮತ್ತು ವನಸ್ಪತಿಗಳನ್ನು ನಾಶಮಾಡುವುದರಿಂದ ಎಲ್ಲವೂ ನೀರಸವಾಗುತ್ತದೆ. ಮರುಭೂಮಿಯಲ್ಲಿ ಎಷ್ಟು ಮಳೆಬಂದರೂ ಅಲ್ಲಿ ಏನೂ ಬೆಳೆಯುವುದಿಲ್ಲ, ಆದುದರಿಂದ ಸಸ್ಯಶ್ಯಾಮಲೆಯಿಂದ ತುಂಬಿದ ಭೂಮಿಯನ್ನು ಬರಡನ್ನಾಗಿ ಮಾಡಿದರೆ ಎಲ್ಲಾ ಕಡೆಯಲ್ಲಿ ಮರುಭೂಮಿಗಳ ಸಂಖ್ಯೆ ಹೆಚ್ಚಾಗುತ್ತದೆ. ಇದರಿಂದ ಪ್ರಾಣಿಮಾತ್ರರು ಜೀವಿಸುವುದು ಅಸಾಧ್ಯವಾಗುತ್ತದೆ.

ಪುನಃ ಭೌತಿಕ ಅಗ್ನಿಗಳ ಗುಣಗಳ ವರ್ಣನೆ ಇಲ್ಲಿದೆ.

ಗಾರ್ಹಪತ್ಯೇನ ಸಂತ್ಯ ಋತುನಾ ಯಜ್ಞನೀರಸಿ । ದೇವಾನ್ ದೇವಯತೇ ಯಜ ॥೧೨॥

ಪದಾರ್ಥ:- [ಸಂತ್ಯ] ಪ್ರತಿನಿತ್ಯ ಮಾಡಬೇಕಾದ ಕರ್ಮಗಳನ್ನೂ ಉತ್ತಮರೀತಿಯಲ್ಲಿ ವಿಭಾಗಗಳನ್ನಾಗಿ ಮಾಡಿ ಯೋಗ್ಯವಾದ ರೀತಿಯಲ್ಲಿ ಮಾರ್ಗದರ್ಶನ ಮಾಡುವ ಅಗ್ನಿಯು **[ಗಾರ್ಹಪತ್ಯೇನ]** ಗೃಹಸ್ಥರ ದೈನಂದಿನ ವ್ಯವಹಾರದೊಂದಿಗೆ ಮತ್ತು **[ಋತುನಾ]** ಪ್ರತಿಯೊಂದು ಋತುಗಳಲ್ಲಿ ಮಾಡುವ ಯಜ್ಞಾನುಷ್ಠಾನ ಹಾಗೂ ಪರ್ವಾಚರಣೆಗಳೊಂದಿಗೆ **[ಯಜ್ಞನೀಃ ಅಸಿ]** ಪಂಚಯಜ್ಞಗಳನ್ನು ಮಾಡಲೂ ಸಹಾಯಕವಾಗಿದೆ. **[ದೇವಯತೇ]** ಶಿಲ್ಪವಿದ್ಯಾದಿಗಳನ್ನು ಮಾಡುವವರಿಗೂ ಇದು ಅತ್ಯಂತ ಸಹಾಯಕವಾಗಿದ್ದು **[ದೇವಾನ್ ಯಜ]** ಸಕಲ ವಿದ್ವಾಂಸರನ್ನೂ ಒಂದುಗೂಡಿಸುವಂತೆ ಮಾಡುತ್ತದೆ.

ಭಾವಾರ್ಥ:- ಪ್ರತಿಯೋರ್ವಗೃಹಸ್ಥನೂ ತನ್ನ ಜೀವನದಲ್ಲಿ ಪುರುಷಾರ್ಥ ಸಾಧನೆಗಾಗಿ ಪ್ರತಿನಿತ್ಯ ಮಾಡಲೇಬೇಕಾದ ಕರ್ತವ್ಯಗಳಿವೆ. ಆ ಕರ್ತವ್ಯಗಳ ಪಾಲನೆಯನ್ನು ಮಾಡಿದರೆ ಮಾತ್ರ ಪರಿವಾರ, ಸಮಾಜ, ದೇಶ ಮತ್ತು ವಿಶ್ವ ಸಂಘಟಿತವಾಗಿದ್ದು ಶಾಂತಿಯಿಂದ ಇರಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸರ್ವತ್ರ ಅಶಾಂತಿಯೇ ಇರುತ್ತದೆ. ಮಾನವನು ತನ್ನ ದೈನಂದಿನ ಜೀವನದಲ್ಲಿ ಪಂಚ ಮಹಾಯಜ್ಞಗಳನ್ನು [ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಅತಿಥಿಯಜ್ಞ, ಬಲಿವೈಶ್ವದೇವ ಯಜ್ಞ] ಮಾಡಬೇಕು. ಆತ್ಮೋನ್ನತಿಗಾಗಿ ಬ್ರಹ್ಮಯಜ್ಞ, ದೇವಪೂಜಾ, ಸಂಗತೀಕರಣ ಮತ್ತು ದಾನ ಹಾಗೂ ಪರಿಸರವನ್ನು ರಕ್ಷಿಸುವುದಕ್ಕೋಸ್ಕರ ದೇವಯಜ್ಞ, ತಂದೆತಾಯಿಗಳನ್ನು ಗುರುಹಿರಿಯರನ್ನು ಗೌರವದಿಂದ ಕಾಣುವುದು, ಶ್ರದ್ಧೆಯಿಂದ ಅವರ ಸೇವೆಯನ್ನು ಮಾಡುವುದು, ಅವರ ರಕ್ಷಣೆಯನ್ನೂ ಪೋಷಣೆಯನ್ನೂ ಮಾಡುವುದು ಮತ್ತು ಅವರಿಂದ ಜ್ಞಾನವನ್ನೂ, ಅನುಭವವನ್ನೂ, ಹಾಗೂ ಆಶೀರ್ವಾದವನ್ನೂ ಪ್ರಾಪ್ತಮಾಡಿಕೊಳ್ಳುವುದು ಪಿತೃಯಜ್ಞ, ಬಡವರಿಗೆ, ಹಸಿದವರಿಗೆ, ಅನಾಥರಿಗೆ ನಿರಾಶ್ರಿತರಿಗೆ ಅನ್ನಾದಿಗಳನ್ನು ಕೊಡುವುದು, ಮನೆಗೆ ಬಂದ ಅತಿಥಿ ಮತ್ತು ಶ್ರೇಷ್ಠ ವಿದ್ವಾಂಸರಿಗೆ ಯೋಗ್ಯವಾದ ರೀತಿಯಲ್ಲಿ ಸತ್ಕರಿಸುವುದು ಹಾಗೂ ಯಥಾಶಕ್ತಿ ಅವರ ಸೇವೆಯನ್ನು ಮಾಡುವುದು, ವಿದ್ವಾಂಸರಿಂದ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುವುದು ಅತಿಥಿಯಜ್ಞ, ಸಕಲ ಪ್ರಾಣಿವರ್ಗಕ್ಕೆ ಆಹಾರವನ್ನು ಕೊಟ್ಟು ಅವುಗಳ ಪೋಷಣೆಯನ್ನೂ ರಕ್ಷಣೆಯನ್ನೂ ಮಾಡುವುದು ಬಲಿವೈಶ್ವದೇವಯಜ್ಞ, ಈ ಪಂಚ ಮಹಾಯಜ್ಞಗಳೊಂದಿಗೆ ಪ್ರತಿಯೊಂದು ಋತುಗಳಲ್ಲಿ ಋತುಗಳಿಗನುಗುಣವಾಗಿ ಯಜ್ಞಾನುಷ್ಠಾನ ಮತ್ತು ಪರ್ವಾಚರಣೆಯನ್ನು ಮಾಡುವುದರಿಂದ ಪರಿಸರದ ಸಂರಕ್ಷಣೆ, ರೋಗರುಜಿನಗಳ ನಾಶ, ಸುಖ, ಶಾಂತಿ, ಹರ್ಷ, ಉಲ್ಲಾಸ ನೆಮ್ಮದಿ ಇವೆಲ್ಲವೂ ಸದಾಕಾಲ ಇರುತ್ತವೆ. ವಿಶೇಷವಾದ ಯಜ್ಞದಲ್ಲಿ ಶ್ರೇಷ್ಠವಿದ್ವಾಂಸರು ಒಂದು ಗೂಡುತ್ತಾರೆ. ಅದರಿಂದ ಅವಿದ್ಯೆಯ ನಾಶ ಮತ್ತು ಜ್ಞಾನದ ಸಂವರ್ಧನೆಯಾಗುತ್ತದೆ. ಈ ರೀತಿ ಸಕಲ ಪುರುಷಾರ್ಥ ಸಾಧನೆಗೆ ಸಹಾಯಕವಾದ ಅಗ್ನಿಯನ್ನು ಮಾನವ ಮಾತ್ರರು ಸದಾ ಕಾಲ ಯಜ್ಞಾದಿಗಳಲ್ಲಿ ಆಧಾನ ಮಾಡಿ ಪ್ರಜ್ವಲಿಸಬೇಕು, ತಾವೂ ಬೆಳಗಬೇಕು, ಇತರರನ್ನೂ ಬೆಳಗಿಸಬೇಕು.

ಈ ಹದಿನೈದನೆಯ ಸೂಕ್ತದೊಂದಿಗೆ ಪೂರ್ವೋಕ್ತ ಹದಿನಾಲ್ಕನೇ ಸೂಕ್ತದ ಸಂಗತೀಕರಣ ಇದೆ ಎಂಬುದನ್ನು ಎಲ್ಲರೂ ಗಮನಿಸಬೇಕು.

ಹದಿನೈದನೆಯ ಸೂಕ್ತ ಸಮಾಪ್ತ

ಸೂಕ್ತ ೧೬

ಮಂತ್ರಸಂಖ್ಯೆ ೯ । ಋಷಿಃ - ಮೇಧಾತಿಥಿಃ ಕಾಣ್ವಃ । ದೇವತಾ - ಇಂದ್ರಃ । ಛಂದಃ - ಗಾಯತ್ರೀ । ಸ್ವರಃ-ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಸೂರ್ಯನ ಗುಣಗಳನ್ನು ವರ್ಣಿಸಲಾಗಿದೆ.

ಆ ತ್ವಾ ವಹಂತು ಹರಯೋ ವೃಷಣಂ ಸೋಮಪೀತಯೇ । ಇಂದ್ರ ತ್ವಾ ಸೂರಚಕ್ಷಸಃ ॥೧॥

ಪದಾರ್ಥ:- ಹೇ [ಇಂದ್ರ] ಸಕಲೈಶ್ವರ್ಯಪ್ರದಾತನೂ, ಸರ್ವಪ್ರಕಾಶ ಸ್ವರೂಪನೂ, ಭಕ್ತವತ್ಸಲನೂ ಆದ ಪರಮಾತ್ಮ! [ಹರಯಃ] ಯಾವ ರೀತಿ ಜಲವನ್ನು ಆಕರ್ಷಿಸುವ ಸೂರ್ಯನ ಪ್ರಖರವಾದ ಕಿರಣಗಳು **[ಸೋಮಪೀತಯೇ]** ಜಲದ ಸಕಲ ಆಶ್ರಯ ಸ್ಥಾನದಿಂದ ಜಲವನ್ನು ಹೀರಲು **[ವೃಷಣಂ]** ವೃಷ್ಟಿಯನ್ನು ಮಾಡಲು ಸಮರ್ಥನಾದ ಸೂರ್ಯನನ್ನು ಆಶ್ರಯಿಸುತ್ತವೆಯೋ ಅದೇ ರೀತಿ **[ಸೂರಚಕ್ಷಸಃ]** ಸ್ವಯಂ ಪ್ರಕಾಶಸ್ವರೂಪನಾಗಿದ್ದು, ಸೂರ್ಯಚಂದ್ರ ನಕ್ಷತ್ರಾದಿಗಳನ್ನು ಕೂಡ ತನ್ನ ಪ್ರಕಾಶದಿಂದ ಪ್ರಕಾಶಿಸುವ **[ತ್ವಾ]** ನಿನ್ನನ್ನು ತಮ್ಮ ಜ್ಞಾನದಿಂದ ಇತರರ ಅಜ್ಞಾನವನ್ನು ದೂರ ಮಾಡುವ ಮತ್ತು ನಿಸ್ವಾರ್ಥ ಭಾವದಿಂದ ಹಾಗೂ ಸೇವಾಭಾವದಿಂದ ಪ್ರಾಣಿ ಮಾತ್ರರ ದುಃಖವನ್ನು ದೂರ ಮಾಡುವುದೇ ತಮ್ಮ ಧರ್ಮವೆಂದು ತಿಳಿಯುವ ಮಹಾತ್ಮರು ಆನಂದ ಪ್ರಾಪ್ತಿಗಾಗಿ **[ಆ ವಹಂತು-]** ವಹ್ ಪ್ರಾಪಣೇ - ಸರ್ವವಿಧದಲ್ಲಿ ಪ್ರಾಪ್ತ ಮಾಡಿಕೊಳ್ಳುತ್ತಾರೆ ಮತ್ತು **[ತ್ವಾ]** ನಿನ್ನನ್ನು ತಮ್ಮ ಅಂತಃಕರಣದಲ್ಲಿ ತಮ್ಮ ಹೃದಯ ಮಂದಿರದಲ್ಲಿ ಧಾರಣ ಮಾಡಿಕೊಳ್ಳುತ್ತಾರೆ.

ಭಾವಾರ್ಥ:- 'ದೇವೋ ಭೂತ್ವಾ ದೇವಂ ಅರ್ಚಯೇತ್' - ತಾನು ಮೊದಲು ದಿವ್ಯಗುಣ ಸಂಪನ್ನನಾಗಿ ಆಮೇಲೆ ಪರಮಾತ್ಮನನ್ನು ಉಪಾಸಿಸಬೇಕು ಎಂದು ಋಷಿ ಮುನಿಗಳು ಹೇಳುತ್ತಾರೆ. ಈ ಮಂತ್ರದಲ್ಲಿ ಅದೇ ವಿಷಯುವನ್ನು ನಿರೂಪಿಸಲಾಗಿದೆ. ಯಾರು ಮೊದಲು ಶ್ರೇಷ್ಠ ಜ್ಞಾನಿಯಾಗಿ ಇತರರ ಅಜ್ಞಾನವನ್ನು ಹೋಗಲಾಡಿಸುತ್ತಾನೋ ಮತ್ತು ನಿಸ್ವಾರ್ಥಭಾವದಿಂದ ಹಾಗೂ ಸೇವಾಭಾವದಿಂದ ಪ್ರಾಣಿಮಾತ್ರರ ದುಃಖವನ್ನು ಹರಣ ಮಾಡುವುದೇ, ದೂರ ಮಾಡುವುದೇ ತನ್ನ ಧರ್ಮ ಎಂದು ಭಾವಿಸುತ್ತಾನೋ ಅವನು ತನ್ನ ಅಂತಃಕರಣದಲ್ಲಿಯೇ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೆ ಮತ್ತು ತನ್ನ ಹೃದಯ ಮಂದಿರದಲ್ಲಿ ಪರಮಾತ್ಮನನ್ನು ಧಾರಣ ಮಾಡಿಕೊಳ್ಳುತ್ತಾನೆ. ಅಂತಹ ಶ್ರೇಷ್ಠ ಮಾನವರೇ ಜಗದ್ವಂದ್ಯರಾಗುತ್ತಾರೆ.

ಪುನಃ ಸೂರ್ಯಲೋಕದ ಗುಣವರ್ಣನೆ ಇಲ್ಲಿದೆ

ಇಮಾ ಧಾನಾ ಘೃತಸ್ನುವೋ ಹರೀ ಇಹೋಪ ವಕ್ಷತಃ । ಇಂದ್ರಂ ಸುಖತಮೇ ರಥೇ ॥೨॥

ಪದಾರ್ಥ:- [ಹರೀ] ಹರಣಶೀಲ (ಹೃಞ್ಹರಣೇ) ಯಾವ ರೀತಿ ಶುಕ್ಲಪಕ್ಷ ಮತ್ತು ಕೃಷ್ಣಪಕ್ಷ ಇವೆರಡು ಮಾಸವನ್ನು ಹರಣ ಮಾಡುತ್ತವೆಯೋ, ಉತ್ತರಾಯಣ ಮತ್ತು ದಕ್ಷಿಣಾಯನ ಇವೆರಡು ಕಾಲವನ್ನು ಹರಣ ಮಾಡುತ್ತವೆಯೋ ಅಥವಾ ಎರಡೂ ಪಕ್ಷಗಳು ಮತ್ತು ಎರಡೂ ಆಯನಗಳು ಸೂರ್ಯ, ಚಂದ್ರರನ್ನು ಹರಣ ಮಾಡುತ್ತವೆಯೋ ಅದೇ ರೀತಿ ಪ್ರಾಣ ಮತ್ತು ಅಪಾನಗಳು ಮನುಷ್ಯನ ಆಯುಷ್ಯವನ್ನು ಹರಣ ಮಾಡುತ್ತವೆ.

ಆದರೆ ಯಾವಾಗ ಮಾನವನು ಅಷ್ಟಾಂಗ ಯೋಗದ ಪೂರ್ಣತಃ ಪಾಲನೆಯನ್ನು ಮಾಡುತ್ತಾನೋ ಆಗ ಇವೆರಡೂ ಪ್ರಾಣಾಪಾನಗಳು [ಇಹ] ಈ ಜೀವಿತ ಕಾಲದಲ್ಲಿಯೇ [ಸುಖತಮೇ] ಅತ್ಯಂತ ಸುಖಕಾರಿಯಾದ [ರಥೇ] ಈ ಶರೀರದಲ್ಲಿ [ಇಂದ್ರಮ್] ಆತ್ಮನನ್ನು [ಉಪವಕ್ಷತಃ] ಧಾರಣ ಮಾಡಿಕೊಳ್ಳುತ್ತವೆ. [ಇಮಾಃ ಧಾನಾಃ] ದೀಪ್ತಿಯಿಂದ, ಶಾಖೆಯಿಂದ ಯುಕ್ತವಾದ ನಾಡಿಗಳು [ಘೃತಸ್ನುವಃ] ಅಮೃತವರ್ಷಿಣಿಗಳಾಗುತ್ತವೆ.

ಭಾವಾರ್ಥ:- ಎಷ್ಟು ಪಕ್ಷಗಳು, ಮಾಸಗಳು, ಆಯನಗಳು, ಸಂವತ್ಸರಗಳು ಕಳೆಯುತ್ತವೆಯೋ ಅಷ್ಟೇ ಕಾಲವು ನಶಿಸುತ್ತಾ ಹೋಗುತ್ತದೆ. ಈ ಸತ್ಯವನ್ನು ಅರಿತು ಅರಿಯಲಪೇಕ್ಷಿಸದ ಮಾನವ ತನ್ನ ಹುಟ್ಟುಹಬ್ಬವನ್ನು ವಿಜೃಂಭಣೆಯಿಂದ ಆಚರಿಸುತ್ತಾನೆ.

ನಾವು ಭೋಗಗಳನ್ನು ಭೋಗಿಸುವಾಗ ಬಹಳ ಸಂತೋಷಪಡುತ್ತೇವೆ. ಮತ್ತು ಭೋಗಗಳ ಹಿಂದೆ ಧಾವಿಸುತ್ತೇವೆ. ಯಥಾರ್ಥ ರೂಪದಲ್ಲಿ ನಾವು ಭೋಗಗಳನ್ನು ಭೋಗಿಸುವುದಿಲ್ಲ. ಭೋಗಗಳೇ ನಮ್ಮನ್ನು ಭೋಗಿಸುತ್ತವೆ. ನಾವು ಕಾಲವನ್ನು ಕಳೆಯುತ್ತಿದ್ದೇವೆ ಎಂದು ಭಾವಿಸುತ್ತೇವೆ. ಯಥಾರ್ಥ ರೂಪದಲ್ಲಿ ಕಾಲವೇ ನಮ್ಮನ್ನು ಹರಣ ಮಾಡುತ್ತದೆ. ಜೀವನದ ಪ್ರತಿಯೊಂದು ಕ್ಷಣದಲ್ಲಿಯೂ ನಮ್ಮ ಆಯುಷ್ಯಕ್ಷೀಣಿಸುತ್ತದೆ. ನಮ್ಮ ಶರೀರದಲ್ಲಿ ಸಂಚರಿಸುವ ಪ್ರಾಣಾಪಾನಗಳು ನಮ್ಮ ಆಯುಷ್ಯವನ್ನು ಹರಣ ಮಾಡುತ್ತವೆ.

ಯಾವಾಗ ಮಾನವನು ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ ಮತ್ತು ಸಮಾಧಿ ಎಂಬ ಅಷ್ಟಾಂಗ ಯೋಗದ ಮೂಲಕ ಪ್ರಾಣಾಪಾನಗಳನ್ನು ತನ್ನ ವಶದಲ್ಲಿಟ್ಟುಕೊಳ್ಳುತ್ತಾನೋ ಆಗ ಅವನ ಆಯುಷ್ಯವೃದ್ಧಿಯಾಗುತ್ತದೆ. ಪ್ರಾಣಾಪಾನ ಅತ್ಯಂತ ಬಲಶಾಲಿಗಳಾಗಿ ಆತ್ಮನನ್ನು ಧಾರಣ ಮಾಡಿಕೊಳ್ಳುತ್ತವೆ. ಆತ್ಮನನ್ನು ಈ ಶರೀರದಿಂದ ಹೊರಗೆ ಹೋಗಲು ಬಿಡುವುದಿಲ್ಲ. ಅವನು ಮೃತ್ಯುಂಜಯಿಯಾಗುತ್ತಾನೆ. ಇಚ್ಛಾಮೃತ್ಯು ಉಳ್ಳವನಾಗುತ್ತಾನೆ. ಶರೀರದಲ್ಲಿ ಕಾಂತಿಯಿಂದ ಕೂಡಿದ ಇಡಾ, ಪಿಂಗಳ, ಸುಷುಮ್ನಾ, ಸೂರ್ಯ, ಚಂದ್ರ ಮೊದಲಾದ ಕಾಂತಿಯಿಂದ ಯುಕ್ತವಾದ ನಾಡಿಗಳು ಅಮೃತವರ್ಷಿಣಿಗಳಾಗುತ್ತವೆ. ನೂರು ವರ್ಷ ಮಾತ್ರವಲ್ಲ, ನೂರಾರು ವರ್ಷಗಳ ತನಕ ಜೀವಿಸುತ್ತಾನೆ. ಕೇವಲ ಜೀವಿಸುವುದು ಮಾತ್ರವಲ್ಲ ಆರೋಗ್ಯವಂತನಾಗಿದ್ದು ಕೊನೆ ಕ್ಷಣದ ತನಕವೂ ಪುರುಷಾರ್ಥವನ್ನು ಮಾಡುತ್ತಾನೆ.

ನಂತರದ ಮಂತ್ರದಲ್ಲಿ ಇಂದ್ರ ಶಬ್ದದಿಂದ ಮೂರು ಅರ್ಥಗಳನ್ನು ಗ್ರಹಿಸಲಾಗುತ್ತದೆ.

ಇಂದ್ರಂ ಪ್ರಾತರ್ಹವಾಮಹ ಇಂದ್ರಂ ಪ್ರಯತ್ಯಧ್ವರೇ । ಇಂದ್ರಂ ಸೋಮಸ್ಯ ಪೀತಯೇ ।।೩।।

ಪದಾರ್ಥ:- ನಾವೆಲ್ಲರೂ ಪ್ರತಿದಿನ **[ಪ್ರಾತಃ]** ಪ್ರಾತಃಕಾಲ **[ಇಂದ್ರಮ್ ಹವಾಮಹೇ]** ಸರ್ವೈಶ್ವರ್ಯ ಪ್ರದಾತನಾದ ಪರಮಾತ್ಮನನ್ನು ಸ್ತುತಿಸುತ್ತೇವೆ, ಉಪಾಸಿಸುತ್ತೇವೆ. ನಾವೆಲ್ಲರೂ ಪ್ರತಿದಿನ **[ಪ್ರಯತಿ ಅಧ್ವರೇ]** ಶ್ರೇಷ್ಠವಾದ ಜ್ಞಾನದ ಪ್ರಾಪ್ತಿಗಾಗಿ ಮತ್ತು ತನ್ಮೂಲಕ ನಮ್ಮೆಲ್ಲರಲ್ಲಿರುವ ಹಿಂಸಾಪ್ರವೃತ್ತಿ, ದ್ವೇಷ, ಅಸೂಯೆ, ಕ್ರೋಧ ಮೊದಲಾದ ಆಸುರೀ ಪ್ರವೃತ್ತಿಗಳನ್ನು ಹೋಗಲಾಡಿಸುವುದಕ್ಕೋಸ್ಕರ ಸಕಲ ದುರ್ಗುಣ ದುರ್ವ್ಯಸನಗಳನ್ನು ನಾಶ ಮಾಡುವುದಕ್ಕೋಸ್ಕರ **[ಇಂದ್ರಂ ಹವಾಮಹೇ]** ಸರ್ವ ಪ್ರಕಾಶಸ್ವರೂಪನೂ ಸರ್ವಜ್ಞನೂ ಆದ ಪರಮಾತ್ಮನನ್ನು ಉಪಾಸಿಸುತ್ತೇವೆ. ನಾವೆಲ್ಲರೂ **[ಸೋಮಸ್ಯ ಪೀತಯೇ]** ಸುಖ ಶಾಂತಿ ಮತ್ತು ಆನಂದದ ಪ್ರಾಪ್ತಿಗಾಗಿ **[ಇಂದ್ರಂ ಹವಾಮಹೇ]** ಆನಂದ ಸ್ವರೂಪನಾದ ಪರಮಾತ್ಮನನ್ನು ಉಪಾಸಿಸುತ್ತೇವೆ.

ಭಾವಾರ್ಥ:- ನಾವೆಲ್ಲರೂ ಪ್ರತಿದಿನ ಪ್ರಾತಃಕಾಲ, ಸಕಲ ಐಶ್ವರ್ಯ ಸುಖ ಸಂಪತ್ತು ಮತ್ತು ಸಮೃದ್ಧಿಯನ್ನು ಸರ್ವರಿಗೂ ಪ್ರದಾನ ಮಾಡುವ ಪರಮಾತ್ಮನನ್ನು ಉಪಾಸಿಸುತ್ತೇವೆ. ನಾವೆಲ್ಲರೂ ಪ್ರತಿದಿನ ಶ್ರೇಷ್ಠಜ್ಞಾನ ಪ್ರಾಪ್ತಿಗಾಗಿ ಮತ್ತು ನಮ್ಮೆಲ್ಲರಲ್ಲಿರುವ ಸಮಸ್ತ ಆಸುರೀ ಪ್ರವೃತ್ತಿಗಳನ್ನು ನಾಶ ಮಾಡುವುದಕ್ಕಾಗಿ ಸರ್ವಪ್ರಕಾಶ ಸ್ವರೂಪನೂ

ಸರ್ವಜ್ಞನೂ ಆದ ಪರಮಾತ್ಮನನ್ನು ಉಪಾಸಿಸುತ್ತೇವೆ. ನಾವೆಲ್ಲರೂ ಸುಖಶಾಂತಿ ನೆಮ್ಮದಿ ಮತ್ತು ಆನಂದದ ಪ್ರಾಪ್ತಿಗಾಗಿ ಪ್ರತಿದಿನ ಆನಂದ ಸ್ವರೂಪನಾದ ಪರಮಾತ್ಮನನ್ನು ಉಪಾಸಿಸುತ್ತೇವೆ. ಅವನ ಕೃಪೆ ಮತ್ತು ನಮ್ಮ ಪುರುಷಾರ್ಥ ಇವೆರಡೂ ಒಂದುಗೂಡಿದಾಗ ಜ್ಞಾನ, ಐಶ್ವರ್ಯ ಮತ್ತು ಆನಂದದ ಪ್ರಾಪ್ತಿಯಾಗುತ್ತದೆ.

ಈಗ ಇಂದ್ರ ಶಬ್ದದಿಂದ ವಾಯುವಿನ ಗುಣಗಳನ್ನು ಗ್ರಹಿಸಲಾಗುತ್ತದೆ

ಉಪ ನಃ ಸುತಮಾ ಗಹಿ ಹರಿಭಿರಿಂದ್ರ ಕೇಶಿಭಿಃ । ಸುತೇ ಹಿ ತ್ವಾ ಹವಾಮಹೇ ।।೪।।

ಪದಾರ್ಥ:- [ಇಂದ್ರ] ಸೂರ್ಯನು [ಹರಿಭಿಃ ಕೇಶಿಭಿಃ] ಅಂಧಕಾರವನ್ನು ಹರಣವನ್ನು ಮಾಡುವ ಪ್ರಖರವಾದ ಕಿರಣಗಳ ಮೂಲಕ [ನಃ] ನಮ್ಮೆಲ್ಲರ, ನಮ್ಮೆಲ್ಲರಿಂದ [ಸುತಮ್] ಮಾಡಲ್ಪಟ್ಟ ಯಜ್ಞಾದಿಗಳನ್ನು ಮತ್ತು ಉತ್ಪಾದಿತ ಶಿಲ್ಪಾದಿಗಳನ್ನು [ಉಪ ಆಸಹಿ] ಅತ್ಯಂತ ಸನಿಹದಿಂದ ಎಲ್ಲಾ ದಿಕ್ಕುಗಳಿಂದಲೂ ಪ್ರಾಪ್ತವಾಗುತ್ತಾನೆ. [ಸುತೇ] ಈ ರೀತಿ ನಮ್ಮಿಂದ ಉತ್ಪಾದಿಸಲ್ಪಟ್ಟ ಸಕಲ ಪದಾರ್ಥಗಳ ಮೂಲಕ [ತ್ವಾ-ತ್ವಂ] ಅವನನ್ನು ಅರ್ಥಾತ್ ಸೂರ್ಯನ ಶಕ್ತಿಯನ್ನು [ಹವಾಮಹೇ-ಆದದ್ಮ] ಗ್ರಹಣ ಮಾಡುತ್ತೇವೆ. ಪ್ರಾಪ್ತ ಮಾಡಿಕೊಳ್ಳುತ್ತೇವೆ.

ಭಾವಾರ್ಥ:- ಸೂರ್ಯನು ಅಂಧಕಾರವನ್ನು ಹರಣ ಮಾಡಲು ಸಮರ್ಥವಾದ ಹಾಗೂ ಅತ್ಯಂತ ಶಾಖವನ್ನುಂಟುಮಾಡುವ ಕಿರಣಗಳ ಮೂಲಕ ನಾವೆಲ್ಲರೂ ಮಾಡಿದ ಹೋಮ ಧೂಮವನ್ನು ಮತ್ತು ಶಿಲ್ಪಾದಿಗಳನ್ನು ಅತ್ಯಂತ ಸನಿಹದಿಂದ ಪ್ರಾಪ್ತನಾಗುತ್ತಾನೆ. ಸೂರ್ಯನು ನಮ್ಮಿಂದ ಲಕ್ಷಾಂತರ ಮೈಲುಗಳಷ್ಟು ದೂರವಿದ್ದರೂ ಅವನ ಅತ್ಯಂತ ಪ್ರಖರವಾದ ಕಿರಣಗಳು ನಮಗೆ ಪ್ರಾಪ್ತವಾಗುತ್ತವೆ. ನಾವು ಮಾಡಿದಂತಹ ಯಜ್ಞದ ಧೂಮವನ್ನು ಅವನು ಪ್ರಾಪ್ತ ಮಾಡಿಕೊಳ್ಳುತ್ತಾನೆ. ಅದರೊಂದಿಗೆ ನಾವು ಸೂರ್ಯನ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಪ್ರಾಪ್ತ ಮಾಡಿಕೊಳ್ಳಲು, ವಿವಿಧ ರೀತಿಯ ಧಾತುಗಳಿಂದ ಮಾಡಲ್ಪಟ್ಟ ಪದಾರ್ಥಗಳನ್ನು ಸೂರ್ಯನ ಕಿರಣಗಳು ಅತ್ಯಂತ ಸನಿಹದಿಂದ ಸ್ಪರ್ಶಿಸುತ್ತವೆ. ಈ ರೀತಿ ಅತ್ಯಂತ ಸನಿಹದಿಂದ ಪ್ರಾಪ್ತವಾದ ಸೂರ್ಯನ ಪ್ರಖರವಾದ ಕಿರಣಗಳನ್ನು ವಿವಿಧ ಪದಾರ್ಥಗಳ ಮೂಲಕ ಕೇಂದ್ರೀಕರಿಸಿ ಸೂರ್ಯನ ಶಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತೇವೆ.

ಇಂದು ಎಲ್ಲಾ ಕಡೆ ವಿದ್ಯುತ್ತಿನ ಅಭಾವವಿರುವಾಗ ಮತ್ತು ಕೇವಲ ಜಲದಿಂದಲೇ ಪ್ರಾಪ್ತವಾಗುವ ವಿದ್ಯುತ್ತನ್ನು ಅವಲಂಬಿಸದೇ, ಸೂರ್ಯನ ಶಕ್ತಿಯನ್ನು ಎಲ್ಲಾ ವಿಧದಿಂದಲೂ ಪ್ರಾಪ್ತ ಮಾಡಿಕೊಂಡು ಸಂಪೂರ್ಣ ಪ್ರಯೋಜನವನ್ನು ಪಡೆಯಬೇಕು.

ನಂತರ ಇಂದ್ರನ ಗುಣಗಳನ್ನು ವರ್ಣಿಸಲಾಗುತ್ತದೆ.

ಸೇಮಂ ನಃ ಸ್ತೋಮಮಾ ಗಹ್ಯು-ಪೇದಂ ಸವನಂ ಸುತಮ್ । ಗೌರೋ ನ ತೃಷಿತಃ ಪಿಬ ।।೫।।

ಪದಾರ್ಥ:- [ಇಂದ್ರಃ] ಸೂರ್ಯನು [ನಃ] ನಮ್ಮೆಲ್ಲರ ಮೂಲಕ [ಇಮಂ ಸ್ತೋಮಮ್] ಮಾಡಲ್ಪಟ್ಟ, ನಾವೆಲ್ಲರೂ ಮಾಡಿದ ಯಜ್ಞಾನುಷ್ಠಾನವನ್ನು [ಸವನಂ] ಐಶ್ವರ್ಯವನ್ನು ಪ್ರಾಪ್ತಿಮಾಡಿಕೊಳ್ಳಲು ಸಾಧ್ಯವಾಗುವಂತಹ ಅರ್ಥಾತ್ ಉತ್ತಮವಾದ ಐಶ್ವರ್ಯವನ್ನು ಪ್ರಾಪ್ತಿಮಾಡಿಕೊಳ್ಳಲು ಪೂರಕವಾದಂತಹ ಕ್ರಿಯೆಗಳನ್ನೂ, ಕರ್ಮಗಳನ್ನೂ [ತೃಷಿತಃ] ಪಿಪಾಸೆಯಿಂದ ಪೀಡಿತವಾದ ಅರ್ಥಾತ್ ಬಾಯಾರಿಕೆಯಿಂದ ಬಳಲಿದ [ಗೌರಃ ನ] ಗೌರವರ್ಣದ ಜಿಂಕೆಯಂತೆ [ಉಪಾಗಹಿ] ಅತ್ಯಂತ ಸನಿಹದಿಂದ ಪ್ರಾಪ್ತನಾಗುತ್ತಾನೆ. [ಸಃ] ಆ ಸೂರ್ಯನು ತನ್ನ ಕಿರಣಗಳ ಮೂಲಕ [ಇದಂ ಸುತಂ] ಉತ್ಪನ್ನವಾದ ಔಷಧಿ ವನಸ್ಪತಿಗಳ ರಸವನ್ನು [ಪಿಬ] ಪಾನ ಮಾಡುತ್ತಾನೆ.

ಭಾವಾರ್ಥ:- ಸೂರ್ಯನು, ನಾವೆಲ್ಲರೂ ಮಾಡುವ ಯಜ್ಞಾನುಷ್ಠಾನಗಳನ್ನೂ ಹಾಗೂ ಐಶ್ವರ್ಯ ಸಂಪಾದನೆಯನ್ನೂ ಮಾಡಲು ಪೂರಕವಾದಂತಹ ಕ್ರಿಯೆಗಳನ್ನೂ ತನ್ನ ಕಿರಣಗಳ ಮೂಲಕ ಪ್ರಾಪ್ತವಾಗುತ್ತಾನೆ.

ಇದರ ತಾತ್ಪರ್ಯವೇನೆಂದರೆ ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಸೂರ್ಯನ ಪ್ರಖರವಾದ ಕಿರಣಗಳು ಈ ಜಗತ್ತಿನಲ್ಲೆಲ್ಲಾ ಪಸರಿಸಿ ಪ್ರಕಾಶವನ್ನು ಬೀರುತ್ತವೆ. ಅತ್ಯಧಿಕ ತಾಪವನ್ನೂ ಉಂಟುಮಾಡುತ್ತವೆ. ಸೂರ್ಯನ ಕಿರಣಗಳಲ್ಲಿ ಅಪರಿಮಿತವಾದ ಶಕ್ತಿಯಿದೆ. ನಾವು ಸೂರ್ಯನ ಶಕ್ತಿಯನ್ನು ಉತ್ತಮ ರೀತಿ ಉಪಯೋಗಿಸಿಕೊಂಡು ಐಶ್ವರ್ಯವನ್ನು ಪ್ರಾಪ್ತಮಾಡಿಕೊಳ್ಳಬೇಕು. ಅದೇ ರೀತಿ ಸೂರ್ಯನು ತನ್ನ ಕಿರಣಗಳ ಮೂಲಕ ಔಷಧಿ ವನಸ್ಪತಿಗಳ ರಸವನ್ನೂ ಪಾನ ಮಾಡುತ್ತಾನೆ. ಈ ರೀತಿ ಔಷಧಿ ವನಸ್ಪತಿಗಳ ರಸವನ್ನು ಸೂರ್ಯನ ಕಿರಣಗಳು ಹೀರುವುದರಿಂದ ಎಲ್ಲವೂ ಶುಷ್ಕವಾಗುತ್ತದೆ. ಎಲ್ಲವೂ ಶುಷ್ಕವಾಗದಂತೆ ಮರಗಿಡ ಬಳ್ಳಿಗಳಿಗೆ ಸರಿಯಾದ ರೀತಿಯಲ್ಲಿ ನೀರನ್ನು ಹಾಕಬೇಕು. ಔಷಧಿ ವನಸ್ಪತಿಗಳ ರಸವು ಸಂಪೂರ್ಣ ನಾಶವಾಗದಂತೆ ತಡೆಯಲು ಹಾಗೂ ಸೂರ್ಯನ ಶಕ್ತಿಯನ್ನು ಪ್ರಾಪ್ತಮಾಡಿಕೊಳ್ಳಲು ಆಯುರ್ವೇದದಲ್ಲಿ ತಿಳಿಸಿದಂತೆ ಗೋಮೂತ್ರ ಇತ್ಯಾದಿಗಳ ಮೂಲಕ ಭಾವನಾ ಕ್ರಿಯೆಯನ್ನು ಮಾಡಬೇಕು. ಹಾಗೂ ಮರಗಿಡಗಳ ಬುಡದಲ್ಲಿ ವನಸ್ಪತಿಗಳ ಬುಡದಲ್ಲಿ ಗೋಮೂತ್ರವನ್ನೂ, ಪಶುಗಳ ಸೆಗಣಿ ಇತ್ಯಾದಿಗಳನ್ನೂ ಹಾಕಿ ಅವುಗಳನ್ನು ಸಂರಕ್ಷಿಸಬೇಕು.

ಈಗ ವಾಯುವು ಏತಕ್ಕಾಗಿ ಯಾವುದರಲ್ಲಿ ಯಾವ ಪದಾರ್ಥಗಳ ರಸವನ್ನು ಕುಡಿಯುತ್ತದೆ ಎಂಬುದನ್ನು ತಿಳಿಸಲಾಗಿದೆ.

ಇಮೇ ಸೋಮಾಸ ಇಂದವಃ ಸುತಾಸೋ ಅಧಿ ಬರ್ಹಿಷಿ । ತಾँ ಇಂದ್ರ ಸಹಸೇ ಪಿಬ ॥೬॥

ಪದಾರ್ಥ:- ಹೇ [ಇಂದ್ರ] ಸಕಲೈಶ್ವರ್ಯಪ್ರದಾತನೂ, ಸಕಲ ಜಗದ್ರಕ್ಷಕನೂ ಆದ ಪರಮಾತ್ಮ! **[ಇಮೇ ಸೋಮಾಸಃ ಸುತಾಸಃ]** ನಿನ್ನಿಂದ ಸೃಷ್ಟಿಸಲ್ಪಟ್ಟ **[ಇಂದವಃ]** ಪ್ರಕಾಶವನ್ನು ಬೀರುವ, ಈ ಜಗತ್ತನ್ನು ಬೆಳಗಿಸುವ ಸೂರ್ಯ ಚಂದ್ರ ನಕ್ಷತ್ರಾದಿಗಳು **[ಬರ್ಹಿಷಿ ಅಧಿ]** ಅಂತರಿಕ್ಷಕ್ಕಿಂತಲೂ ಮೇಲೆ ದ್ಯುಲೋಕದಲ್ಲಿ ಸದಾಕಾಲ ವಿದ್ಯಮಾನವಾಗಿವೆ. **[ತಾನ್]** ಅವೆಲ್ಲವನ್ನೂ **[ಸಹಸೇ]** ನಿನ್ನ ಬಲದಿಂದಲೇ **[ಪಿಬ]** ರಕ್ಷಿಸುತ್ತೀಯೆ.

ಭಾವಾರ್ಥ:- ಅಂತರಿಕ್ಷಕ್ಕಿಂತಲೂ ಮೇಲೆ ದ್ಯುಲೋಕದಲ್ಲಿ ಸದಾಕಾಲ ವಿದ್ಯಮಾನವಾಗಿದ್ದು ಈ ಚರಾಚರ ಜಗತ್ತನ್ನು ಬೆಳಗಿಸುವ ಸೂರ್ಯ ಚಂದ್ರ ನಕ್ಷತ್ರಾದಿಗಳನ್ನು ಸಕಲೈಶ್ವರ್ಯಪ್ರದಾತನೂ, ಸಕಲ ಜಗದುತ್ಪಾದಕನೂ ಸಕಲ ಜಗದ್ರಕ್ಷಕನೂ ಆದ ಪರಮಾತ್ಮನು ತನ್ನ ಪ್ರಕಾಶದಿಂದ ಪ್ರಕಾಶಿಸುತ್ತಾ ತನ್ನ ಬಲದಿಂದಲೇ ಸದಾಕಾಲ ರಕ್ಷಿಸುತ್ತಾನೆ. ಪರಮಾತ್ಮನು ಕೇವಲ ಸೂರ್ಯಚಂದ್ರ ನಕ್ಷತ್ರಾದಿಗಳನ್ನು ಮಾತ್ರವಲ್ಲ ಸಂಪೂರ್ಣ ಚರಾಚರ ಜಗತ್ತನ್ನೂ ರಕ್ಷಿಸುತ್ತಾನೆ. ಅವನ ರಕ್ಷಣೆಯ ಬಗ್ಗೆ ಯಾವ ಸಂದೇಹವೂ ಬೇಡ. ಕೆಲವರು ಪ್ರಳಯದ ಬಗ್ಗೆ ತಪ್ಪು ಕಲ್ಪನೆಯನ್ನು ಮಾಡಿ ಜನರಲ್ಲಿ ಭೀತಿಯನ್ನುಂಟು ಮಾಡುತ್ತಿದ್ದಾರೆ. ಪರಮಾತ್ಮನು ಪೂರ್ವ ನಿರ್ಧಾರಿತ ಸಮಯಕ್ಕಿಂತ ಮೊದಲು ಎಂದಿಗೂ ಪ್ರಳಯವನ್ನು ಮಾಡುವುದಿಲ್ಲ. ಆದರೆ ಮಾನವರು ಮಾಡುವ ಸ್ವಯಂ ಕೃತಾಪರಾಧದಿಂದ ಲಯವಾಗುತ್ತದೆ, ಲಯ ಆಗಲು ಸಾಧ್ಯವೂ ಇದೆ. ಅದಕ್ಕೆ ಪರಮಾತ್ಮನೆಂದಿಗೂ ಹೊಣೆಗಾರನಾಗುವುದಿಲ್ಲ.

ಉಕ್ತವಾಯುವು ಎಂತಹ ಗುಣವುಳ್ಳದ್ದು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಅಯಂ ತೇ ಸ್ತೋಮೋ ಅಗ್ರಿಯೋ ಹೃದಿಸ್ಪೃಗಸ್ತು ಶಂತಮಃ । ಅಥಾ ಸೋಮಂ ಸುತಂ ಪಿಬ ॥೭॥

ಪದಾರ್ಥ:- ಹೇ ಸಚ್ಚಿದಾನಂದ ಸ್ವರೂಪ ಪರಮಾತ್ಮ! **[ಹೃದಿಸ್ಪೃಕ್]** ನಮ್ಮೆಲ್ಲರ ಹೃದಯದಲ್ಲಿ ಸ್ಪರ್ಶವಾದೊಡನೆ, ಅಂತಃಕರಣದಲ್ಲಿ ಮತ್ತು ಆತ್ಮನಲ್ಲಿ ಅನಂತ ಪ್ರಕಾಶವನ್ನು ಬೀರಿ ಅತ್ಯಂತ ಆನಂದವನ್ನುಂಟು ಮಾಡುವ **[ಅಯಂ ತೇ ಸ್ತೋಮಃ]** ಈ ನಿನ್ನ ಅನಂತಗುಣಗಳು ಮತ್ತು ಪ್ರಕಾಶ ಹಾಗೂ ಆನಂದವು **[ಅಗ್ರಿಯಃ]** ನಮ್ಮ ಜೀವನವನ್ನು ಸರ್ವಶ್ರೇಷ್ಠವನ್ನಾಗಿ ಮಾಡುತ್ತಾ **[ಶಂತಮಃ ಅಸ್ತು]** ಸದಾಕಾಲ ಸರ್ವವಿಧದಲ್ಲಿ ಮಂಗಳವನ್ನೇ,

ಕಲ್ಯಾಣವನ್ನೇ ಮಾಡುತ್ತವೆ. **[ಅಥಾ]** ಹೀಗಾಗಿ, ಪರಮಾತ್ಮ! **[ಸುತಂ]** ನಿನ್ನ ಸುತನಾದ **[ಸೋಮಂ]** ಜೀವಾತ್ಮನನ್ನು **[ಪಿಬ]** ರಕ್ಷಿಸು, ಉದ್ಧರಿಸು. ಜನ್ಮ ಮೃತ್ಯುವಿನ ಜಂಜಾಟದಿಂದ ಸಂಪೂರ್ಣ ಮುಕ್ತನನ್ನಾಗಿ ಮಾಡು.

ಭಾವಾರ್ಥ:- ಹೇ ಸಚ್ಚಿದಾನಂದ ಪರಮಾತ್ಮ! ನಿನ್ನ ಗುಣಗಳು ಅನಂತವಾಗಿವೆ. ನಿನ್ನ ಪ್ರಕಾಶವು ಅದ್ವಿತೀಯವಾಗಿದೆ. ನಿನ್ನ ಆನಂದವು ಅನುಪಮವಾಗಿದೆ. ನಿನ್ನ ಗುಣ, ಪ್ರಕಾಶ ಮತ್ತು ಆನಂದವು ನಮ್ಮ ಹೃದಯದಲ್ಲಿ ಕೇವಲ ಸ್ಪರ್ಶಮಾತ್ರವಾದೊಡನೆಯೇ ನಮ್ಮ ಸಕಲ ದುರ್ಗುಣ, ದುಃಖ, ದಾರಿದ್ರ್ಯ, ಕ್ಲೇಶ, ಅಜ್ಞಾನಾಂಧಕಾರವು ನಷ್ಟವಾಗಿ ನಮ್ಮ ಅಂತಃಕರಣದಲ್ಲಿ ಮತ್ತು ಆತ್ಮನಲ್ಲಿ ಅನಂತ ಪ್ರಕಾಶವನ್ನು ಮತ್ತು ಆನಂದವನ್ನುಂಟು ಮಾಡುತ್ತದೆ. ಶರಣಾಗತ ವತ್ಸಲನಾದ ಪರಮಾತ್ಮ! ನಮ್ಮನ್ನು ಜನ್ಮಮೃತ್ಯುವಿನ ಜಂಜಾಟದಿಂದ ಬಂಧನದಿಂದ ಮುಕ್ತರನ್ನಾಗಿ ಮಾಡಿ, ನಿನ್ನ ಸುತನಾದ ಈ ಜೀವಾತ್ಮನನ್ನು ಉದ್ಧರಿಸು. ನಿನ್ನ ಸಾನ್ನಿಧ್ಯದಲ್ಲಿ ನಮ್ಮೆಲ್ಲರ ಜೀವನವು ಸರ್ವಶ್ರೇಷ್ಠವಾಗಿ, ಪಾವನವಾಗಲಿ.

ನಂತರ ಅದೇ ಗುಣಗಳ ವರ್ಣನೆ ಮುಂದುವರೆಯುತ್ತದೆ.

ವಿಶ್ವಮಿತ್ಸವನಂ ಸುತ-ಮಿಂದ್ರೋ ಮದಾಯ ಗಚ್ಛತಿ । ವೃತ್ರಹಾ ಸೋಮಪೀತಯೇ ॥೮॥

ಪದಾರ್ಥ:- [ಇಂದ್ರಃ] ಸರ್ವೈಶ್ವರ್ಯವಾನ್ ಸರ್ವರಕ್ಷಕನಾದ ಪರಮಾತ್ಮನು **[ಸುತಮ್]** ಉತ್ಪನ್ನವಾದ ಪಂಚಭೂತಗಳಿಂದ ಆಕಾಶ, ವಾಯು, ಅಗ್ನಿ, ಜಲ ಮತ್ತು ಪೃಥ್ವಿ ನಿರ್ಮಿತವಾದ **[ವಿಶ್ವಂ ಇತ್ ಸವನಂ]** ಸಂಪೂರ್ಣ ಜಗತ್ತನ್ನೇ **[ಮದಾಯ]** ಸಕಲ ಜೀವಮಾತ್ರರಿಗೆ ಆನಂದ ರಸದ ಮೂಲಕ ಸಂತೃಪ್ತರನ್ನಾಗಿ ಮಾಡಲು, ಸುಖ ಮತ್ತು ಸಂತೋಷವನ್ನುಂಟು ಮಾಡಲು **[ಸೋಮಪೀತಯೇ]** ಚೈತನ್ಯ ತತ್ವವು ಪ್ರಾಪ್ತಿಯಾಗುವಂತೆ ಮಾಡಲು ಹಾಗೂ **[ವೃತ್ರಹಾ]** ವಿನಾಶಕಾರಿ ಆವರಣವನ್ನು ದಮನಮಾಡಿ **[ಗಚ್ಛತಿ]** ಸರ್ವತ್ರ ವ್ಯಾಪಿಸಿಕೊಂಡಿದ್ದಾನೆ.

ಭಾವಾರ್ಥ:- ಸರ್ವರಕ್ಷಕನಾದ ಪರಮಾತ್ಮನು ಸಂಪೂರ್ಣ ಜಗತ್ತನ್ನು ರಕ್ಷಿಸಲು ಸಕಲ ಜೀವಮಾತ್ರರಿಗೆ ಆನಂದ, ಸುಖ, ಸಂತೋಷದಿಂದ ಸಂತೃಪ್ತರನ್ನಾಗಿ ಮಾಡಲು, ಚೈತನ್ಯತತ್ವವು ಪ್ರಾಪ್ತಿಯಾಗುವಂತೆ ಮಾಡಲು ವಿನಾಶಕಾರೀ ಆವರಣವನ್ನು ದಮನಮಾಡಿ ಸರ್ವತ್ರ ವ್ಯಾಪಿಸಿಕೊಂಡಿದ್ದಾನೆ.

ಈ ಮಂತ್ರವು ನಮಗೆ ಅತ್ಯಂತ ವೈಜ್ಞಾನಿಕತೆಯನ್ನು ಬೋಧಿಸುತ್ತದೆ. ಸಕಲ ಜೀವಿಗಳು ಜೀವಿಸುವ ಈ ಜಗತ್ತಿನಲ್ಲಿ ವಾಯುಮಂಡಲವಿದೆ. ಈ ವಾಯುಮಂಡಲದಲ್ಲಿ ಶೇಕಡಾ. ೭೮ರಷ್ಟು ನೈಟ್ರೋಜನ್ ಇದೆ. ಶೇಕಡಾ ೨೧ ಆಕ್ಸಿಜನ್ ಇದೆ. .೦೧ ಹೈಡ್ರೋಜನ್ ಇದೆ. ಉಳಿದ ಭಾಗದಲ್ಲಿ ಇತರ ಅನಿಲ ಅಂದರೆ ಗ್ಯಾಸ್‌ಗಳು ಇವೆ. ನಾವು ಪ್ರಯೋಗ ಶಾಲೆಯಲ್ಲಿ ನೈಟ್ರೋಜನ್‌ನೊಂದಿಗೆ ನೀರನ್ನು ಬೆರೆಸಿದರೆ ಅದು ನೈಟ್ರೋಜನ್ ಪೆರಾಕ್ಸೈಡ್ ಅಥವಾ ನೈಟ್ರಿಕ್ ಆಸಿಡ್ ಆಗುತ್ತದೆ. ಆದರೆ ಭಗವಂತನ ಈ ಸೃಷ್ಟಿಯಲ್ಲಿ ಹಾಗೆ ಆಗುವುದಿಲ್ಲ. ಒಂದು ವೇಳೆ ಹಾಗೆಯೇ ಆಗುತ್ತಿದ್ದರೆ ಜಗತ್ತು ಬಹಳ ಮೊದಲೇ ನಾಶವಾಗುತ್ತಿತ್ತು. ಮಳೆಯು ಬಂದಾಗ ವಾಯುಮಂಡಲದಲ್ಲಿದ್ದ ೭೮% ನೈಟ್ರೋಜನ್ ಜಲದೊಂದಿಗೆ ಸೇರಿದೊಡನೆ ಅದು ನೈಟ್ರೋಜನ್ ಪೆರಾಕ್ಸೈಡ್ ಅಥವಾ ನೈಟ್ರಿಕ್ ಆಸಿಡ್ ಆಗಬೇಕಿತ್ತು. ಒಂದು ವೇಳೆ ಹಾಗೆಯೇ ಆಗುತ್ತಿದ್ದರೆ ಈ ಜಗತ್ತು ಯಾವಾಗಲೋ ನಾಶವಾಗುತ್ತಿತ್ತು. ಸಂಪೂರ್ಣ ಜಗತ್ತು ಮರುಭೂಮಿಯಾಗುತ್ತಿತ್ತು. ಆದರೆ ಹಾಗಾಗುವುದಿಲ್ಲ. ಭಗವಂತನು ವೃತ್ರಹಾ - ವಿನಾಶಕಾರೀ ಆವರಣವನ್ನು (ನಾಶ=ನಶ್ ಅದರ್ಶನೇ) = ರೂಪಾಂತರ ಮಾಡುತ್ತಾನೆ. ನೈಟ್ರಿಕ್ ಆಸಿಡ್ ಆಗುವ ಬದಲು ನೈಟ್ರೇಟ್ ಆಗಿ ರೂಪಾಂತರಗೊಂಡು ಭೂಮಿಯನ್ನು ಸೇರುತ್ತದೆ. ಇದರಿಂದ ಜಗತ್ತು ವಿನಾಶವಾಗುವ ಬದಲು ಅದರಲ್ಲಿ ಚೈತನ್ಯತೆ

ಯುಂಟಾಗಿ ಈ ಭೂಮಿಯು ಸಮೃದ್ಧವಾದ ಸಸ್ಯ ಶ್ಯಾಮಲೆಯಿಂದ ತುಂಬಿ ತುಳುಕುತ್ತದೆ. ಸಂಪದ್ಭರಿತವಾಗುತ್ತದೆ. ಸಕಲ ಜೀವರಾಶಿಗಳು ಸಂತೋಷ ಮತ್ತು ಸುಖದಿಂದ ಜೀವಿಸುತ್ತಾರೆ.

ಇಂದ್ರ ಶಬ್ದದಿಂದ ಈಶ್ವರನ ಗುಣಗಳ ಗ್ರಹಿಕೆ ಇಲ್ಲಿದೆ

ಸೇಮಂ ನಃ ಕಾಮಮಾ ಪೃಣ ಗೋಭಿರಶ್ವೈಃ ಶತಕ್ರತೋ । ಸ್ತವಾಮ ತ್ವಾ ಸ್ವಾಧ್ಯಃ ॥೯॥

ಪದಾರ್ಥ:- ಹೇ **[ಶತಕ್ರತೋ]** ಅನಂತ ಜ್ಞಾನಪ್ರದೇಶ್ವರ! ನಿನ್ನ ಭಕ್ತರಿಗೆ ಅಸಂಖ್ಯಾತ ಕರ್ಮಗಳನ್ನು ಮಾಡುವ ಸಾಮರ್ಥ್ಯವನ್ನೂ, ಶಾರೀರಿಕ ಬಲವನ್ನೂ, ಮಾನಸಿಕ ಬಲವನ್ನೂ, ಆತ್ಮಿಕ ಬಲವನ್ನೂ, ಪ್ರಖರವಾದ ಮೇಧಾಬುದ್ಧಿಯನ್ನೂ ಕೊಡುವ ಪರಮಾತ್ಮ! **[ಸ್ವಾಧ್ಯಃ]** ಸಾಙ್ ಪೂರ್ವಾದ್ಧ್ಯೈ ಚಿಂತಾಯಾಮ್ = ಅತ್ಯಂತ ವಿಚಿಂತ್ಯನಾದ **[ತ್ವಾ]** ನಿನ್ನನ್ನು **[ವಯಂ]** ನಾವೆಲ್ಲರೂ **[ಸ್ತವಾಮಃ]** ಅತ್ಯಂತ ಶ್ರದ್ಧಾಭಕ್ತಿಯಿಂದ ಅನುದಿನವೂ ನಿನ್ನನ್ನು ಸ್ತುತಿಸುತ್ತೇವೆ. ನಮ್ಮ ಹೃದಯವನ್ನೇ ನಿನ್ನ ದೇಗುಲವನ್ನಾಗಿ ಮಾಡಿ ಪೂಜಿಸುತ್ತೇವೆ. **[ಸ ತ್ವಂ]** ಸರ್ವೋಪಾಸ್ಯನಾದ ನೀನು **[ಗೋಭಿಃ]** ಸಂಪೂರ್ಣ ಶ್ರೇಷ್ಠಜ್ಞಾನ ಮತ್ತು ವಿದ್ಯೆಯ ಪ್ರಕಾಶದಿಂದ ಉತ್ತಮವಾದ ಪರಿಶುದ್ಧ ಮನಸ್ಸು ಮತ್ತು ಇಂದ್ರಿಯಗಳಿಂದ, ಮಧುರವಾದ ವಾಣಿಯಿಂದ ಉತ್ತಮ ಪಶುಸಂಪತ್ತು ಹಾಗೂ ಸೂರ್ಯನ ಅನಂತ ಶಕ್ತಿಯಿಂದ ಹಾಗೂ **[ಅಶ್ವೈಃ]** ಸುಸಮೃದ್ಧ ಸುಸಂಘಟಿತ, ಸುಸಂಸ್ಕೃತ, ಸ್ವಾಭಿಮಾನೀ ಸ್ವಾವಲಂಬೀ ರಾಷ್ಟ್ರದೊಂದಿಗೆ ಸಕಲ ಸುಖ ಸೌಲಭ್ಯಗಳಿಂದೊಳಗೊಂಡ ಯಾನಗಳೊಂದಿಗೆ ಸದಾಕಾಲ ಸಂಯುಕ್ತವನ್ನಾಗಿ ಮಾಡಿ **[ಅಸ್ಮಾಕಂ]** ನಮ್ಮೆಲ್ಲರ **[ಕಾಮಮಾಪೃಣ]** ಸಕಲ ಶ್ರೇಷ್ಠ ಮನೋಕಾಮನೆಗಳನ್ನೂ, ಸತ್ಸಂಕಲ್ಪಗಳನ್ನೂ ಸದಿಚ್ಛೆಗಳನ್ನೂ ಉತ್ತಮವಾದ ರೀತಿಯಲ್ಲಿ ಈಡೇರಿಸು.

ಭಾವಾರ್ಥ:- ಭಗವಂತನು ಅನಂತ ಜ್ಞಾನವುಳ್ಳವನೂ, ಅನಂತ ಜ್ಞಾನಪ್ರದನೂ, ಸರ್ವಶಕ್ತನೂ ತನ್ನ ಭಕ್ತಾದಿಗಳಿಗೆ ಅಸಂಖ್ಯಾತ ಕರ್ಮಗಳನ್ನು ಮಾಡುವ ಸಾಮರ್ಥ್ಯವನ್ನೂ, ಶಾರೀರಿಕ ಬಲವನ್ನೂ, ಆತ್ಮಿಕ ಬಲವನ್ನೂ, ಮಾನಸಿಕ ಬಲವನ್ನೂ, ಆಯುರಾರೋಗ್ಯವನ್ನೂ ಕೊಡುತ್ತಾನೆ. ಶರಣಾಗತ ಭಕ್ತವತ್ಸಲನಾದ ಪರಮಾತ್ಮನು ವಿಚಿಂತ್ಯನು ಅರ್ಥಾತ್ ವಿಶೇಷವಾದ ರೀತಿಯಲ್ಲಿ ಚಿಂತನೆ, ಮನನ, ನಿಧಿಧ್ಯಾಸನ, ಆತ್ಮಸಮರ್ಪಣದಿಂದ ಪ್ರಾಪ್ತನಾಗುವವನು ಆಗಿದ್ದಾನೆ. ಆ ಪರಮಾತ್ಮನನ್ನು ಅತ್ಯಂತ ಶ್ರದ್ಧಾಭಕ್ತಿಯಿಂದ ಉಪಾಸಿಸಬೇಕು.

ಪರಮಾತ್ಮನು ನಮಗೆಲ್ಲರಿಗೂ ಸಂಪೂರ್ಣ ಶ್ರೇಷ್ಠಜ್ಞಾನ ಮತ್ತು ವಿದ್ಯೆಯ ಪ್ರಕಾಶ, ಪರಿಶುದ್ಧವಾದ ಮನಸ್ಸು ಮತ್ತು ಇಂದ್ರಿಯ, ಮಧುರವಾದ ವಾಣಿ, ಸೂರ್ಯನ ಅನಂತಶಕ್ತಿ ಹಾಗೂ ಅಪಾರವಾದ ಪಶುಸಂಪತ್ತುಗಳಿಂದ ಮತ್ತು ಸಂಪದ್ಭರಿತವಾದ, ಸುಸಂಘಟಿತ, ಸುಸಂಸ್ಕೃತ, ಸ್ವಾಭಿಮಾನಿ ಸ್ವಾವಲಂಬಿ ರಾಷ್ಟ್ರ ಹಾಗೂ ಶೀಘ್ರ ಗಮನಾಗಮನ ಸಾಮರ್ಥ್ಯವುಳ್ಳ ಸಕಲ ಸುಖ ಸೌಲಭ್ಯಗಳನ್ನೊಳಗೊಂಡ ಯಾನಗಳಿಂದ ಸದಾಕಾಲ ಸಂಯುಕ್ತರನ್ನಾಗಿ ಮಾಡಿ ನಮ್ಮೆಲ್ಲರ ಸಕಲ ಶ್ರೇಷ್ಠ ಮನೋಕಾಮನೆಗಳನ್ನೂ, ಸತ್ಸಂಕಲ್ಪಗಳನ್ನೂ, ಸದಿಚ್ಛೆಗಳನ್ನೂ ಉತ್ತಮವಾದ ರೀತಿಯಲ್ಲಿ ಈಡೇರಿಸುತ್ತಾನೆ. ಇವೆಲ್ಲವನ್ನೂ ಪ್ರಾಪ್ತಿ ಮಾಡಿಕೊಳ್ಳುವುದಕ್ಕೋಸ್ಕರ ನಾವೆಲ್ಲರೂ ಸದಾಕಾಲ ಸತ್ಪಾತ್ರರಾಗೋಣ.

ಈ ಸೂಕ್ತದೊಂದಿಗೆ ಪೂರ್ವಸೂಕ್ತದ ಸಂಗತೀಕರಣವಾಗುತ್ತದೆ ಎಂದು ಸರ್ವರೂ ಗಮನಿಸಬೇಕು.

ಹದಿನಾರನೆಯ ಸೂಕ್ತ ಸಮಾಪ್ತ

ಸೂಕ್ತ ೧೭

ಮಂತ್ರಸಂಖ್ಯೆ ೯ । ಋಷಿಃ - ಮೇಧಾತಿಥಿಃ ಕಾಣ್ವಃ । ದೇವತಾ - ಇಂದ್ರಾವರುಣೌ । ಛಂದಃ - ೧, ೩, ೭, ೯ ಗಾಯತ್ರೀ, ೨ ಯವಮಧ್ಯಾ ವಿರಾಡ್ ಗಾಯತ್ರೀ ೪ ಪಾದನಿಚೃತ್ ಗಾಯತ್ರೀ, ೫ ಭುರಿಗಾರ್ಚೀ ಗಾಯತ್ರೀ, ೬ ನಿಚೃದ್ಗಾಯತ್ರೀ, ೮ ಪಿಪಿಲಿಕಾ ಮಧ್ಯಾ ನಿಚೃದ್ಗಾಯತ್ರೀ । ಸ್ವರಃ-ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಇಂದ್ರ ಮತ್ತು ವರುಣರ ಗುಣಗಳ ವರ್ಣನೆ ಮಾಡಲಾಗಿದೆ.

ಇಂದ್ರಾವರುಣಯೋರಹಂ ಸಮ್ರಾಜೋರವ ಆ ವೃಣೇ । ತಾ ನೋ ಮೃಳಾತ ಈದೃಶೇ ॥೧॥

ಪದಾರ್ಥ:- **[ಅಹಂ]** ನಾನು, ಇವರಿಬ್ಬರು **[ಸಮ್ರಾಜೋಃ]** ರಾಜ್ರ್ ದೀಪ್ತೌ ಅತ್ಯಂತ ಪ್ರಕಾಶವುಳ್ಳವರೂ ಆದ **[ಇಂದ್ರಾವರುಣಯೋಃ]** ಇಂದ್ರ=ಜೀವಾತ್ಮ, ವರುಣ - ವೃಞ್ ವರಣೇ - ವರಣೀಯನಾದ ಪರಮಾತ್ಮ ಇವರಿಬ್ಬರ ಸಾನ್ನಿಧ್ಯದಿಂದ, ಇವರಿಬ್ಬರ ಗುಣಗಳಿಂದ **[ಅವ ಆವೃಣೇ]** ರಕ್ಷಣೆಯನ್ನು ಸ್ವೀಕರಿಸುತ್ತೇನೆ. ಅರ್ಥಾತ್ ಜೀವಾತ್ಮ ಮತ್ತು ಪರಮಾತ್ಮರ ಗುಣಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಂಪೂರ್ಣವಾಗಿ ರಕ್ಷಣೆಯನ್ನು ಪ್ರಾಪ್ತ ಮಾಡಿಕೊಳ್ಳುತ್ತೇನೆ. **[ತೌ]** ಅವರಿಬ್ಬರು **[ಈದೃಶೇ]** ಈ ರೀತಿಯ ವ್ಯವಹಾರದಲ್ಲಿ **[ನಃ]** ನಮ್ಮೆಲ್ಲರನ್ನು **[ಮೃಳಾತಃ]** ಸದಾಕಾಲ ಸುಖಿಗಳನ್ನಾಗಿ ಮಾಡುತ್ತಾರೆ.

ಅಥ ಭೌತಿಕಾರ್ಥ:- **[ಅಹಂ]** ನಾನು, ಇವೆರಡು **[ಸಮ್ರಾಜೋ]** ಅತ್ಯಂತ ಪ್ರಕಾಶವುಳ್ಳವರಾದ **[ಇಂದ್ರಾವರುಣಯೋಃ]** ಸೂರ್ಯ ಚಂದ್ರರ ಗುಣಗಳಿಂದ ಉತ್ತಮವಾದ ರೀತಿಯಲ್ಲಿ **[ಅವಃ]** ರಕ್ಷಣೆಯನ್ನು **[ಆವೃಣೇ]** ಪ್ರಾಪ್ತ ಮಾಡಿಕೊಳ್ಳುತ್ತೇನೆ. **[ತೌ]** ಅವರಿಬ್ಬರು **[ಈದೃಶೇ]** ಈ ರೀತಿಯ ವ್ಯವಹಾರದಲ್ಲಿ **[ನಃ]** ನಮ್ಮೆಲ್ಲರನ್ನು **[ಮೃಳಾತಃ]** ಅತ್ಯಂತ ಸುಖಿಗಳನ್ನಾಗಿ ಮಾಡುತ್ತಾರೆ.

ಭಾವಾರ್ಥ:- ಜೀವಾತ್ಮ ಮತ್ತು ಪರಮಾತ್ಮ ಇವರಿಬ್ಬರು ಅತ್ಯಂತ ಪ್ರಕಾಶವುಳ್ಳವರು. ಇಬ್ಬರಲ್ಲಿಯೂ ಅಪರಿಮಿತವಾದ ಬಲವಿದೆ. ಪರಮಾತ್ಮನಿಂದ ಜೀವಾತ್ಮನು ಪ್ರಕಾಶವನ್ನೂ ಬಲವನ್ನೂ ಪ್ರಾಪ್ತ ಮಾಡಿಕೊಳ್ಳುತ್ತಾನೆ. ಆತ್ಮನಿಂದ ಏಕಾದಶ ಇಂದ್ರಿಯಗಳು ಮತ್ತು ಅಂತಃಕರಣ ಎಂದರೆ ಬುದ್ಧಿ, ಚಿತ್ತ ಮತ್ತು ಅಹಂಕಾರ ಇವೆಲ್ಲವೂ ಪ್ರಕಾಶಿತವಾಗುತ್ತವೆ. ಆತ್ಮನಿಂದಲೇ ಶಾರೀರಿಕ ಬಲ ಮತ್ತು ಮಾನಸಿಕ ಬಲವು ಪ್ರಾಪ್ತವಾಗುತ್ತವೆ. ಇವರಿಬ್ಬರ ಸಾನ್ನಿಧ್ಯದಲ್ಲಿದ್ದು, ಇವರಿಬ್ಬರ ಸ್ವರೂಪವನ್ನು ಅರಿತು ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಬೇರೆ ಯಾವ ರಕ್ಷಣೆಯೂ ಬೇಕಾಗಿಲ್ಲ. ಪರಮಾತ್ಮನ ರಕ್ಷಣೆ ಮತ್ತು ಆತ್ಮನಲ್ಲಿ ದೃಢ ವಿಶ್ವಾಸ ಮತ್ತು ಕರ್ತೃತ್ವ ಶಕ್ತಿ ಇವೆರಡರಿಂದ ನಾವೆಲ್ಲರೂ ಸದಾಕಾಲ ಸುಖಸಂತೋಷ ನೆಮ್ಮದಿ ಮತ್ತು ಆನಂದದಿಂದ ಇರಬಹುದು. ಸೂರ್ಯ ಮತ್ತು ಚಂದ್ರ ಇವೆರಡು ಇಡೀ ಜಗತ್ತನ್ನು ಬೆಳಗಿಸುತ್ತವೆ. ಇವೆರಡರಲ್ಲಿಯೂ ಅಪರಿಮಿತವಾದ ಪ್ರಕಾಶ ಮತ್ತು ಶಕ್ತಿ ಇದೆ. ಸೂರ್ಯನು ಶಾಖವನ್ನು ಬೀರುತ್ತಾನೆ, ಪ್ರಕಾಶವನ್ನುಂಟುಮಾಡುತ್ತಾನೆ ಮತ್ತು ಶಕ್ತಿಯನ್ನು ಕೊಡುತ್ತಾನೆ. ಸೂರ್ಯನಿಂದ ಶಕ್ತಿಯನ್ನು ಪಡೆದು ವಿದ್ಯುಚ್ಛಕ್ತಿಯನ್ನುಂಟು ಮಾಡಬಹುದು. ಬಾಲಸೂರ್ಯನ ಕಿರಣಗಳಿಂದ ಶ್ವೇತಕುಷ್ಠ ಮತ್ತು ತೊನ್ನು ರೋಗವನ್ನು ಗುಣಪಡಿಸುವ ವಿಧಾನವನ್ನು ಅಥರ್ವವೇದದಲ್ಲಿ ಮತ್ತು ಆಯುರ್ವೇದದಲ್ಲಿ ವರ್ಣಿಸಲಾಗಿದೆ. ಕೆಂಪು ಬಣ್ಣದ ಗೋವಿನ ಮೂತ್ರವನ್ನು ಶರೀರಕ್ಕೆ ಲೇಪಿಸಿಕೊಂಡು ಪ್ರಾತಃಕಾಲ ಕಿರಣಗಳು ತಾಗುವಂತೆ ಕುಳಿತುಕೊಳ್ಳಬೇಕು. ಮಧ್ಯಾಹ್ನದ ಸೂರ್ಯನ ಕಿರಣದಿಂದ ಶಕ್ತಿಯನ್ನು ಪಡೆದು ಅದನ್ನು ಜಲದೊಂದಿಗೆ ಸಂಯುಕ್ತವನ್ನಾಗಿ ಮಾಡಿ ಹಲವಾರು ರೋಗಗಳನ್ನು ಗುಣಪಡಿಸುವ ವಿಧಾನವನ್ನು ಆಯುರ್ವೇದದಲ್ಲಿ ಮತ್ತು ಅಥರ್ವವೇದದಲ್ಲಿ ವರ್ಣಿಸಲಾಗಿದೆ. ಏಳು ಬಣ್ಣದ ಬಾಟಲುಗಳಲ್ಲಿ ನೀರನ್ನು ತುಂಬಿಸಿ ಬಿಗಿಯಾದ ಮುಚ್ಚಳವನ್ನು ಹಾಕಿ ನಡು ಮಧ್ಯಾಹ್ನದ ಬಿಸಿಲಿನಲ್ಲಿ ಇಟ್ಟರೆ ಆ ಬಾಟಲಿಯಲ್ಲಿದ್ದ ಜಲವು ದಿವ್ಯ ಔಷಧಿಯಾಗುತ್ತದೆ.

ಅದೇ ರೀತಿ ಚಂದ್ರನಲ್ಲಿ ಅನೇಕ ಗುಣಗಳಿವೆ. ಚಂದ್ರನನ್ನು ಸೋಮ ಎಂದು ಹೇಳುತ್ತಾರೆ. ಹೂವು ಬಲಿತು ಕಾಯಿಯಾಗಿ ಹಣ್ಣುಗಳಾಗುವುದು ಚಂದ್ರನಿಂದಲೇ. ಚಂದ್ರನ ಕಿರಣಗಳಲ್ಲಿ ಕೂಡ ಔಷಧಿಯ ಗುಣವಿದೆ. ಶರದೃತುವಿನ ಹುಣ್ಣಿಮೆಯಂದು ಚಂದ್ರನು ಅಮೃತ ವೃಷ್ಟಿಯನ್ನು ಮಾಡುತ್ತಾನೆ ಎಂದು ಆಯುರ್ವೇದದ ಪಂಡಿತರು ಹೇಳುತ್ತಾರೆ. ಅಂದು ರಾತ್ರಿ ಬೀಳುವ ಇಬ್ಬನಿಯನ್ನು ಔಷಧಿಗೆ ಉಪಯೋಗಿಸುತ್ತಾರೆ. ಶರದೃತುವಿನ ಹುಣ್ಣಿಮೆಯ ರಾತ್ರಿ ಸರಿಯಾದ ರೀತಿಯಲ್ಲಿ ಚಂದ್ರನ ಬೆಳಕು ಬೀಳುವ ಜಾಗದಲ್ಲಿ ಖೀರನ್ನು ಇಡೀ ರಾತ್ರಿ ಇಡಬೇಕು. ಪ್ರಾತಃಕಾಲ ಎದ್ದ ಕೂಡಲೇ ಅದನ್ನು ತಿನ್ನುವುದರಿಂದ ಶರೀರದಲ್ಲಿರುವ ಹಲವಾರು ವಿಕಾರಗಳು ನಷ್ಟವಾಗುತ್ತವೆ. ಅದೇರೀತಿ ಚಳಿಗಾಲದಲ್ಲಿ ಸೂರ್ಯೋದಯಕ್ಕಿಂತ ಮೊದಲೇ ಹುಲ್ಲಿನ ಮೇಲೆ ಬರಿಗಾಲಲ್ಲಿ ನಡೆಯಬೇಕು. ರಾತ್ರಿ ಬಿದ್ದ ಇಬ್ಬನಿಯು ಪಾದವನ್ನು ಸ್ಪರ್ಶಿಸುವುದರಿಂದ ಕಣ್ಣಿನಲ್ಲಿರುವ ದೋಷಗಳು ನಿವಾರಣೆಯಾಗಿ ನೇತ್ರಜ್ಯೋತಿಯು ಹೆಚ್ಚುತ್ತದೆ.

ಈಗ ಇಂದ್ರ ಮತ್ತು ವರುಣರಿಂದ ಸಂಯುಕ್ತಗೊಳಿಸಲ್ಪಟ್ಟ ಅಗ್ನಿ ಮತ್ತು ಜಲದ ಗುಣದ ವರ್ಣನೆ ಮಾಡಲಾಗಿದೆ.

ಗಂತಾರಾ ಹಿ ಸ್ಥೋಽವಸೇ ಹವಂ ವಿಪ್ರಸ್ಯ ಮಾವತಃ । ಧರ್ತಾರಾ ಚರ್ಷಣೀನಾಮ್ ॥೨॥

ಪದಾರ್ಥಃ:- [ಹಿ] ನಿಶ್ಚಯವಾಗಿಯೂ ಇವೆರಡು ಸೂರ್ಯ ಮತ್ತು ಜಲ ಅರ್ಥಾತ್ ಸೂರ್ಯನ ಪ್ರಖರವಾದ ಕಿರಣಗಳಿಂದ ಪ್ರಾಪ್ತವಾಗುವ ಶಾಖ ಮತ್ತು ಶಕ್ತಿಯನ್ನು ಜಲದೊಂದಿಗೆ ಸಂಯುಕ್ತವನ್ನಾಗಿ ಮಾಡಿ ಉತ್ತಮ ರೀತಿಯಲ್ಲಿ ಸರ್ವರಿಗೂ ಪ್ರಯೋಜನವಾಗುವಂತೆ ಮಾಡುವ **[ಮಾವತಃ]** ನನ್ನಂತಹ ವೈದ್ಯನು ಮತ್ತು **[ವಿಪ್ರಸ್ಯ]** ಮೇಧಾವಿಯಾದ ವಿಜ್ಞಾನಿಯ **[ಹವಂ]** ಸಮ್ಮಿಶ್ರಣ ಆದಾನ ಪ್ರದಾನ ಮೊದಲಾದ ಕ್ರಿಯೆಗಳು ನಡೆಯುತ್ತವೆಯೋ ಅಂತಹ ವೈದ್ಯಕೀಯ ಚಿಕಿತ್ಸೆಯಲ್ಲಿ ಹಾಗೂ ಶಿಲ್ಪ ಕಲಾದಿಗಳಲ್ಲಿ, ಸೂರ್ಯ ಮತ್ತು ಜಲ ಇವೆರಡು ಉತ್ತಮವಾದ ರೀತಿಯಲ್ಲಿ ಬಹಳ ಸುಲಭವಾದ ರೀತಿಯಲ್ಲಿ ಪ್ರಾಪ್ತವಾಗುತ್ತದೆ. ಅದರೊಂದಿಗೆ ಇವೆರಡೂ **[ಚರ್ಷಣೀನಾಂ]** ಪ್ರಾಣಿಮಾತ್ರರನ್ನು **[ಧರ್ತಾರಾ]** ಧಾರಣ ಮಾಡುವವೂ ಅರ್ಥಾತ್ ಉತ್ತಮವಾದ ರೀತಿಯಲ್ಲಿ ಸಂರಕ್ಷಣೆಯನ್ನು ಮಾಡುವ ಗುಣವುಳ್ಳವೂ ಆಗಿವೆ. ಇಂತಹ ಧಾರಣಾ ಶೀಲ ಇವೆರಡೂ ಶಕ್ತಿಗಳನ್ನೂ ನಾನು ಸಮಸ್ತ ಪ್ರಾಣಿಮಾತ್ರರ **[ಅವಸೇ]** ರಕ್ಷಣೆಗೋಸ್ಕರ **[ಆವೃಣೇ]** ಸ್ವೀಕಾರಮಾಡುತ್ತೇನೆ. ಸರಿಯಾದ ರೀತಿಯಲ್ಲಿ ಅಳವಡಿಸಿಕೊಳ್ಳುತ್ತೇನೆ.

ಭಾವಾರ್ಥಃ:- ಸೂರ್ಯನ ಕಿರಣಗಳಲ್ಲಿ ಅಪರಿಮಿತವಾದ ಶಕ್ತಿಯಿದೆ. ಅತ್ಯುತ್ತಮವಾದ ಗುಣಗಳಿವೆ. ಈ ಸೂರ್ಯನ ಶಕ್ತಿ (solar energy)ಯನ್ನು ಯಾವ ಯಾವ ವಿಧದಲ್ಲಿ ಪಡೆಯಲು ಸಾಧ್ಯವಿದೆಯೋ ಅವೆಲ್ಲಾ ವಿಧಗಳಿಂದ ಪಡೆದು ಅದರಿಂದ ಎಲ್ಲಾ ರೀತಿಯ ಪ್ರಯೋಜನವನ್ನು ಪಡೆದುಕೊಳ್ಳಬೇಕು. ನಮ್ಮ ಮನೆಯಲ್ಲಿಯೂ ನಾವು ಸೂರ್ಯನ ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಪಡೆದುಕೊಂಡು ನಮ್ಮ ಎಲ್ಲಾ ಕಾರ್ಯಗಳನ್ನೂ ಮಾಡಲು ಸಾಧ್ಯವಿದೆ.

ಅದೇ ರೀತಿ ಜಲದಲ್ಲಿ ಹಲವಾರು ಗುಣಗಳಿವೆ. 'ಅಪ್ಸ್ವಂತರಮೃತಮ್ ಅಪ್ಸು ಭೇಷಜಮ್'- ಜಲದಲ್ಲಿ ಅಮೃತವಿದೆ. ಜಲದಲ್ಲಿ ಜೀವನವಿದೆ. ಜಲದಲ್ಲಿ ಹಲವಾರು ಔಷಧೀಯ ಗುಣಗಳಿವೆ. ಪ್ರಾಕೃತಿಕ ಚಿಕಿತ್ಸಾ ಪದ್ಧತಿಯಲ್ಲಿ ಕೇವಲ ಜಲದಿಂದಲೇ ಹಲವಾರು ರೀತಿಯಲ್ಲಿ ಚಿಕಿತ್ಸೆಯನ್ನು ಮಾಡುತ್ತಾರೆ. ಇಂದಿನ ಡಾಕ್ಟರರು ಗಾಯವಾದರೆ ನೀರನ್ನು ತಾಗಿಸಬಾರದು ಎಂದು ಹೇಳುತ್ತಾರೆ. ಆದರೆ ಜಲ ಚಿಕಿತ್ಸಾ ಪದ್ಧತಿಯಲ್ಲಿ ನೀರೇ ಅದಕ್ಕೆ ಮದ್ದು. ಗಾಯವಾದ ಭಾಗವನ್ನು ಶುದ್ಧ ಜಲದಿಂದ ಸರಿಯಾದ ರೀತಿಯಲ್ಲಿ ತೊಳೆದುಕೊಡು, ಒಂದು ಶುಭ್ರವಾದ ಬಿಳಿಬಟ್ಟೆಯನ್ನು ನೀರಿನಲ್ಲಿ ಸರಿಯಾಗಿ ಒದ್ದೆ ಮಾಡಿ, ಒದ್ದೆಯಾದ ಬಟ್ಟೆಯಿಂದಲೇ ಗಾಯವಾದ ಭಾಗದಲ್ಲಿ ಸರಿಯಾಗಿ ಕಟ್ಟಬೇಕು. ಆಮೇಲೆ ಆ ಬಟ್ಟೆಯನ್ನು ಮೂರು ದಿನಗಳ ಕಾಲ ಅಥವಾ ನಾಲ್ಕು ದಿನಗಳ ಕಾಲ

ಒಣಗಲು ಬಿಡಬಾರದು. ಆಗಾಗ ನೀರು ಹಾಕುತ್ತಾ ಇರಬೇಕು. ನಾಲ್ಕನೆಯ ದಿನ ಗಾಯದ ಕಲೆಯೂ ಕೂಡ ಇರುವುದಿಲ್ಲ. ಇದಕ್ಕೆ ಶೀತಲ ಜಲವನ್ನೇ . ಉಪಯೋಗಿಸಬೇಕು. ಬಿಸಿಮಾಡಿದ ನೀರನ್ನು ಉಪಯೋಗಿಸಬಾರದು.

ಪ್ರಾತಃಕಾಲ ಹಾಸಿಗೆಯಿಂದ ಎದ್ದ ನಂತರ ಮುಖವನ್ನು ಶೀತಲ ಜಲದಿಂದ ತೊಳೆದುಕೊಂಡು ಆಮೇಲೆ ೬ ಗ್ಲಾಸು ನೀರನ್ನು ಕುಡಿದು ಸ್ವಲ್ಪ ಸಮಯ ಭ್ರಮಣ ಅಥವಾ ಓಡಬೇಕು. ಇದರಿಂದ ಗ್ಯಾಸ್‌ಟ್ರಬಲ್, ಆಸಿಡಿಟಿ, ಡಯಾಬಿಟಿಸ್, ಬ್ಲಡ್‌ಪ್ರೆಶರ್ ಮೊದಲಾದ ಹಲವಾರು ರೋಗಗಳಿಂದ ಮುಕ್ತರಾಗಿ ನಾವು ಆರೋಗ್ಯವಂತರಾಗಿ ಬಾಳಬಹುದು.

ಸ್ನಾನ ಮಾಡುವಾಗ ನಾಭಿಯ ಮೇಲೆ ಎರಡು ತಂಬಿಗೆ ನೀರನ್ನು ಧಾರೆ ಎರೆದು ಹಾಕುವುದರಿಂದ ಗ್ಯಾಸ್ ಟ್ರಬಲ್ ಮತ್ತು ಆಸಿಡಿಟಿಯಿಂದ ಮುಕ್ತರಾಗಬಹುದು. ನಾಭಿಯ ಮೇಲೆ ನೀರನ್ನು ಧಾರೆ ಎರೆದು ಹಾಕುವುದರಿಂದ ನಾಭಿಯಲ್ಲಿ ಸುತ್ತಿಕೊಂಡಿರುವ ಅಪಾನವಾಯು ಕರಗಿ ಗುದಾಭಾಗದಿಂದ ಹೊರಗೆ ಹೋಗುತ್ತದೆ. ಇದರಿಂದ ಅಪಾನವಾಯುವಿನಲ್ಲಿ ಯಾವ ರೀತಿಯ ದೋಷಗಳುಂಟಾಗುವುದಿಲ್ಲ. ಸೂರ್ಯನ ಕಿರಣದೊಂದಿಗೆ ಜಲವನ್ನು ಸಂಯುಕ್ತವನ್ನಾಗಿ ಮಾಡಿದರೆ ಅದರಲ್ಲಿ ಹಲವಾರು ರೀತಿಯ ಔಷಧೀಯ ಗುಣಗಳುಂಟಾಗುತ್ತದೆ. ಮಾತ್ರವಲ್ಲ ಅದೇ ಒಂದು ಔಷಧಿಯಾಗುತ್ತದೆ ಎಂದು ಪೂರ್ವಮಂತ್ರದಲ್ಲಿ ವಿವರಿಸಲಾಗಿದೆ. ಇತರ ವಿಷಯಗಳನ್ನು ಜಲಚಿಕಿತ್ಸಾ ಪದ್ಧತಿಯಿಂದ ಮತ್ತು ಸೂರ್ಯಚಿಕಿತ್ಸಾ ಪದ್ಧತಿಯಿಂದ ತಿಳಿದುಕೊಳ್ಳಬಹುದು.

ಈ ಪ್ರಕಾರವಾಗಿ ಸಾಧಿಸಲ್ಪಟ್ಟು ಯಾವುದಕ್ಕೆ ಕಾರಣವಾಗುತ್ತವೆ ಎಂಬುದನ್ನು ವಿವರಿಸಲಾಗಿದೆ.

ಅನುಕಾಮಂ ತರ್ಪಯೇಥಾ-ಮಿಂದ್ರಾವರುಣ ರಾಯ ಆ । ತಾ ವಾಂ ನೇದಿಷ್ಠಮೀಮಹೇ ॥೩॥

ಪದಾರ್ಥಃ:- [ಇಮೌ] ಇವರಿಬ್ಬರು **[ಇಂದ್ರ]** ಸರ್ವೈಶ್ವರ್ಯಪ್ರದಾತನಾದ ಪರಮಾತ್ಮ ಮತ್ತು **[ವರುಣ]** ಸಕಲ ಪ್ರಜೆಗಳ ಹಿತವನ್ನೇ ಬಯಸುವ ಹಾಗೂ ಎಲ್ಲಾ ಪ್ರಜೆಗಳಿಂದಲೂ ಗೌರವಿಸಲ್ಪಡುವ ರಾಜ **[ಅನುಕಾಮಂ]** ನಮ್ಮ ಪ್ರತಿಯೊಂದು ಕಾರ್ಯಗಳಲ್ಲಿ ಅರ್ಥಾತ್ ನಾವು ಮಾಡುವ ಪ್ರತಿಯೊಂದು ಉತ್ತಮವಾದ ಕರ್ಮಗಳಲ್ಲಿ, ಯಾವುದೇ ರೀತಿಯ ತೊಂದರೆಗಳುಂಟಾಗದಂತೆ **[ರಾಯಃ ಆ]** ಸಂಪತ್ತನ್ನು ಹಾಗೂ ಅದಕ್ಕೆ ಬೇಕಾದ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿ ಎಲ್ಲೆಡೆಗಳಿಂದಲೂ **[ತರ್ಪಯೇಥಾಂ]** ತೃಪ್ತಿಯನ್ನುಂಟುಮಾಡುತ್ತಾರೆ. **[ತೌ ವಾಂ]** ಅವರಿಬ್ಬರನ್ನೂ ನಾವೆಲ್ಲರೂ **[ನೇದಿಷ್ಠಮ್]** ಅತ್ಯಂತ ಸನಿಹದಿಂದ **[ಈಮಹೇ]** ಪ್ರಾಪ್ತಮಾಡಿಕೊಳ್ಳುತ್ತೇವೆ.

ಭಾವಾರ್ಥಃ:- ನಾವು ಮಾಡುವ ಪ್ರತಿಯೊಂದು ಶ್ರೇಷ್ಠ ಕರ್ಮಗಳನ್ನು ಪೂರ್ಣವಾಗುವಂತೆ ಮಾಡಲು ಸರ್ವೈಶ್ವರ್ಯಪ್ರದಾತನಾದ ಪರಮಾತ್ಮನು ಎಲ್ಲಾ ವಿಧದಲ್ಲಿ ಸಹಾಯವನ್ನು ಮಾಡುತ್ತಾನೆ. ಅವನು ನಮಗೆ ಶಾರೀರಿಕ ಬಲವನ್ನೂ, ಮಾನಸಿಕ ಬಲವನ್ನೂ ಆತ್ಮಿಕ ಬಲವನ್ನೂ ನೀಡಿ ಧನಸಂಪತ್ತು ಕೂಡಾ ಪ್ರಾಪ್ತವಾಗುವಂತೆ ಮಾಡುತ್ತಾನೆ. ಆದರೆ ಆ ಕಾರ್ಯವು ಸರ್ವಜನೋಪಯೋಗಿ ಹಾಗೂ ಪ್ರಾಣಿಮಾತ್ರರ ಕಲ್ಯಾಣವನ್ನೇ ಮಾಡುವ ಕರ್ಮವೇ ಆಗಿರಬೇಕು. ಆಗ ಮಾತ್ರ ಪರಮಾತ್ಮನು ನಮಗೆ ಎಲ್ಲಾ ವಿಧದಲ್ಲಿ ಸಹಾಯವನ್ನು ಮಾಡುತ್ತಾನೆ. ಅದೇ ರೀತಿ ರಾಜನು ಕೂಡಾ ಸಮಸ್ತ ಜನರ ಕಲ್ಯಾಣಕ್ಕಾಗಿ ಮಾಡುವ ಪ್ರತಿಯೊಂದು ಕಾರ್ಯಗಳಿಗೆ ಎಲ್ಲಾ ವಿಧದಲ್ಲಿ ನೆರವನ್ನೂ ಒದಗಿಸಬೇಕು. ಆಗ ಮಾತ್ರ ಅವನು ವರುಣ ಅರ್ಥಾತ್ ಸಮಸ್ತ ಪ್ರಜೆಗಳಿಂದ ಗೌರವಿಸಲ್ಪಡುವವನೂ ಆದರಣೀಯನೂ ಆಗುತ್ತಾನೆ.

ಮೇಲೆ ಹೇಳಿದ ಕಾರ್ಯವನ್ನು ಮಾಡುವುದರಿಂದ ಏನು ಆಗುತ್ತದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಯುವಾಕು ಹಿ ಶಚೀನಾಂ ಯುವಾಕು ಸುಮತೀನಾಮ್ । ಭೂಯಾಮ ವಾಜದಾವ್ನಾಮ್ ॥೪॥

ಪದಾರ್ಥ:- [ಹಿ] ನಿಶ್ಚಯವಾಗಿಯೂ ನಾವೆಲ್ಲರೂ [ಶಚೀನಾಮ್] ಉತ್ತಮ ವಾಣಿಯೊಂದಿಗೆ ಶ್ರೇಷ್ಠಕರ್ಮಗಳನ್ನು [ಯುವಾಕು] ಸಂಯುಕ್ತವನ್ನಾಗಿ ಮಾಡಿ ಹಾಗೂ [ವಾಜದಾವ್ನಾಮ್] ಉತ್ತಮ ಜ್ಞಾನದ ಉಪದೇಶವನ್ನು ಮಾಡುತ್ತಾ, ಹಸಿದವರಿಗೆ ಅನ್ನದಾನವನ್ನು ಮಾಡುತ್ತಾ [ಸುಮತೀನಾಮ್] ಶ್ರೇಷ್ಠಬುದ್ಧಿಯುಳ್ಳ, ಧರ್ಮಮಾರ್ಗದಲ್ಲಿ ಸದಾ ಪ್ರವೃತ್ತರಾಗಿರುವ ವಿದ್ವಾಂಸರೊಂದಿಗೆ ಸತ್ಸಂಗವನ್ನು ಮಾಡುತ್ತಾ [ಯುವಾಕು] ನಮ್ಮ ಸಮಸ್ತ ದುರ್ಗುಣಗಳನ್ನು ದೂರೀಕರಿಸಲು, ಅಜ್ಞಾನಾಂಧಕಾರವನ್ನು ನಾಶಮಾಡಲು [ಭೂಯಾಮ] ಸಮರ್ಥರಾಗೋಣ.

ಭಾವಾರ್ಥ:- ನಾವೆಲ್ಲರೂ ಉತ್ತಮವಾದ ಮತ್ತು ಮಧುರವಾಣಿಯುಳ್ಳವರಾಗಬೇಕು. ಅದರೊಂದಿಗೆ ನಮ್ಮ ಕರ್ಮಗಳೂ, ವ್ಯವಹಾರವೂ ಶ್ರೇಷ್ಠವಾಗಿರಬೇಕು. ಕೆಲವರು ಬಹಳ ಮಧುರವಾದ ವಾಣಿಯುಳ್ಳವರಿರುತ್ತಾರೆ. ಆದರೆ ಅವರ ಕರ್ಮಗಳು ಮತ್ತು ವ್ಯವಹಾರವು ನೀಚವಾಗಿರುತ್ತವೆ. ಅವರು ತಮ್ಮ ಮಧುರವಾದ ವಾಣಿಯಿಂದ ಜನರನ್ನು ಮರಳು ಮಾಡಿ ಮೋಸ ಮತ್ತು ವಂಚನೆಯನ್ನು ಮಾಡುತ್ತಾರೆ. ನಾವು ಅಂತಹ ದುಷ್ಕರ್ಮಗಳನ್ನೆಂದಿಗೂ ಮಾಡಬಾರದು. ಮಧುರವಾದ ವಾಣಿಯೊಂದಿಗೆ ನಮ್ಮ ಕರ್ಮಗಳೂ ಶ್ರೇಷ್ಠವಾಗಿರಬೇಕು. ಉತ್ತಮವಾದ ಜ್ಞಾನವನ್ನು ಸತ್ಯಜ್ಞಾನವನ್ನು ಪೂರ್ಣವಾಗಿ ಪ್ರಾಪ್ತ ಮಾಡಿಕೊಂಡು ಬೇರೆಯವರ ಅಜ್ಞಾನವನ್ನು ದೂರ ಮಾಡಬೇಕು. ಬಡವರಿಗೆ ನಿರ್ಗತಿಕರಿಗೆ ಅನ್ನದಾನವನ್ನು ಮಾಡಬೇಕು. ಉತ್ತಮ ಬುದ್ಧಿಯುಳ್ಳವರಾದ ಹಾಗೂ ಸದಾ ಧರ್ಮಮಾರ್ಗದಲ್ಲಿ ಪ್ರವೃತ್ತರಾದ ವಿದ್ವಾಂಸರೊಂದಿಗೆ ಸತ್ಸಂಗವನ್ನು ಮಾಡಿ, ನಮ್ಮಲ್ಲಿರುವ ದುರ್ಗುಣಗಳನ್ನು ಮತ್ತು ಅಜ್ಞಾನವನ್ನು ದೂರ ಮಾಡಬೇಕು. ಕೆಲವರು ಧಾರ್ಮಿಕ ಮಾರ್ಗದಲ್ಲಿ ನಡೆಯುವ ಸೋಗನ್ನು ಹಾಕಿ ಡಂಬಾಚಾರವನ್ನೂ, ಪಾಖಂಡಿತನವನ್ನೂ ಮಾಡುತ್ತಾರೆ. ಅಂತಹವರೊಂದಿಗೆ ಎಂದಿಗೂ ಸಂಗವನ್ನು ಮಾಡಬಾರದು. ಅಂತಹವರೊಂದಿಗೆ ಸಂಗವನ್ನು ಮಾಡಿದರೆ ಲಾಭಕ್ಕಿಂತ ಹಾನಿಯೇ ಹೆಚ್ಚಾಗುವುದು.

ನಂತರ ಇಂದ್ರ ಮತ್ತು ವರುಣರು ಯಾವ ಪ್ರಕಾರವಾಗಿ ಇರುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ಇಂದ್ರಃ ಸಹಸ್ರದಾವ್ನಾಂ ವರುಣಃ ಶಂಸ್ಯಾನಾಮ್ । ಕ್ರತುರ್ಭವತ್ಯುಕ್ಥ್ಯಃ ॥೫॥

ಪದಾರ್ಥ:- [ಸಹಸ್ರದಾವ್ನಾಂ] ಸಹಸ್ರಃ = ಅಸಂಖ್ಯಾತಾಃ. ಅಸಂಖ್ಯಾತ ಅಪರಿಮಿತವಾದ ಸಂಪತ್ತನ್ನು ಕೊಡುವವರಲ್ಲಿ [ಇಂದ್ರಃ] ಸರ್ವೈಶ್ವರ್ಯ ಸಂಪನ್ನನಾದ ಪರಮಾತ್ಮನು [ಕ್ರತುಃ] ಕ್ರಿಯಾವಾನ್ ಅರ್ಥಾತ್ ಗತಿಶೀಲನೂ, ತತ್ಪರನೂ [ಉಕ್ಥ್ಯಃ] ಪ್ರಶಂಸನೀಯನೂ ಆಗಿದ್ದಾನೆ. [ಶಂಸ್ಯಾನಾಮ್] ಸ್ತುತಿಸಲ್ಪಡುವವರಲ್ಲಿ, ಪೂಜಿಸಲ್ಪಡುವವರಲ್ಲಿ ಅರ್ಥಾತ್ ಯಾರು ಅತ್ಯಂತ ಸ್ತುತ್ಯರೋ, ಯಾರು ಅತ್ಯಂತ ಪೂಜನೀಯರೋ, ಅಂತಹವರಲ್ಲಿ [ವರುಣಃ] ವರಣೀಯನಾದ ಪರಮಾತ್ಮನು ಅತ್ಯಂತ ಪೂಜನೀಯನೂ, ಸ್ತುತ್ಯನೂ, ಉಪಾಸ್ಯನೂ [ಕ್ರತುಃ] ಅತ್ಯಂತ ಗತಿಶೀಲನೂ, ನಮ್ಮ ಪ್ರಾರ್ಥನೆಯನ್ನು ಆಲಿಸುವವನೂ ಆಗಿದ್ದು, [ಉಕ್ಥ್ಯಃ] ಅತ್ಯಂತ ಪ್ರಶಂಸನೀಯನು ಆಗಿದ್ದಾನೆ.

ಭಾವಾರ್ಥ:- ಅಪರಿಮಿತವಾದ ಸಂಪತ್ತು ಎಂದರೆ, ಸಂಪತ್ತು, ಐಶ್ವರ್ಯ, ಸುಖ, ಶಾಂತಿ, ಆನಂದ, ವಿದ್ಯೆ, ಬುದ್ಧಿ, ಆರೋಗ್ಯ, ಶಕ್ತಿ, ಅನುರೂಪಳಾದ ಪತ್ನಿ, ಅನುವ್ರತರಾದ ಮತ್ತು ಉತ್ತಮ ಸಂಸ್ಕಾರಗಳುಳ್ಳ ಮಕ್ಕಳು, ಸುಂದರವಾದ ಮನೆ ಪ್ರತಿಯೊಂದು ರೀತಿಯಲ್ಲಿ ಸಹಕರಿಸುವ ಉತ್ತಮ ಬಂಧುಬಾಂಧವರು, ಉತ್ತಮ ಮಿತ್ರರು, ಶ್ರೇಷ್ಠ ಪ್ರಜೆಗಳು, ಪ್ರಜಾರಂಜಕನೂ, ಪ್ರಜಾಪಾಲಕನೂ ಆದ ರಾಜ, ಅಥವಾ ಸರಕಾರ, ಕಾಲಕಾಲಕ್ಕೆ ಉತ್ತಮವಾದ ಮಳೆ, ಬೆಳೆ, ಉತ್ತಮ ಪಶುಸಂಪತ್ತು ಹಾಗೂ ಎಲ್ಲಾ ವಿಧವಾದ ಶ್ರೇಷ್ಠ ವಸ್ತುಗಳನ್ನು ಕೊಡುವವರಲ್ಲಿ ಸರ್ವೈಶ್ವರ್ಯ ಪ್ರದಾತನಾದ ಪರಮಾತ್ಮನು ಅಗ್ರಗಣ್ಯನು. ಅವನು ಸದಾಕಾಲ ಕೊಡುತ್ತಾ ಇರುತ್ತಾನೆ. ಅವನಿಗಿಂತ ಮಿಗಿಲಾದ ದಾನಿಗಳು ಯಾರೂ ಇಲ್ಲ. "ತಂದೆ, ಬಂಧು ಮಿತ್ರರು ಕೊಡುವುದು ಮನೆಯತನಕ, ಪರಮಾತ್ಮನು ಕೊಡುವುದು ಕೊನೆಯ ತನಕ ಎಂಬ ಗಾದೆಯ ಮಾತಿದೆ. ಆದರೆ ಅವೆಲ್ಲವನ್ನೂ ಪ್ರಾಪ್ತ ಮಾಡಿಕೊಳ್ಳಲು

ಮೊದಲು ಸತ್ಪಾತ್ರರೂ, ಅರ್ಹರೂ, ಯೋಗ್ಯತೆ ಉಳ್ಳವರೂ ಆಗಬೇಕು. ಮತ್ತು ಅತ್ಯಂತ ಭಕ್ತಿಯಿಂದ ಪರಮಾತ್ಮನನ್ನೇ ಯಾಚಿಸಬೇಕು. ಇತರ ಎಲ್ಲಾ ಜಡ ಹಾಗೂ ಚೇತನ ದೇವತೆಗಳು (ಸೂರ್ಯ, ಚಂದ್ರ, ಅಗ್ನಿ, ವಿದ್ವಾಂಸ, ತಂದೆ, ತಾಯಿ, ಆಚಾರ್ಯ, ಬಂಧು ಮಿತ್ರ) ಇವರೆಲ್ಲರೂ ಕೇವಲ ಒಂದೋ ಎರಡೋ, ಮೂರೋ, ಪದಾರ್ಥಗಳನ್ನು ಕೊಡಬಹುದು. ಆದರೆ ಪರಮಾತ್ಮನು ಸರ್ವಸ್ವವನ್ನೂ ಸಮಸ್ತ ಪದಾರ್ಥಗಳನ್ನೂ ಕೊಡುತ್ತಾನೆ. ಅದೇ ರೀತಿ ಸ್ತುತಿಸಲ್ಪಡುವವರಲ್ಲಿ ಪೂಜಿಸಲ್ಪಡುವವರಲ್ಲಿ ಉಪಾಸಿಸಲ್ಪಡುವವರಲ್ಲಿ ಪರಮಾತ್ಮನೇ ಅತ್ಯಂತ ವರಣೀಯನೂ, ಶ್ರೇಷ್ಠನೂ ಆಗಿದ್ದಾನೆ. ಮಿಕ್ಕವರಾರೂ ಎಲ್ಲಾ ಸಮಯದಲ್ಲಿ, ಎಲ್ಲಾ ಕಾಲದಲ್ಲಿ ನಮ್ಮ ಪ್ರಾರ್ಥನೆಗಳನ್ನು ಆಲಿಸುವುದಿಲ್ಲ, ಆಲಿಸುವವರು ಎಲ್ಲಾ ಸಮಯದಲ್ಲಿ ಸ್ಪಂದಿಸುವುದಿಲ್ಲ. ಆದರೆ ಪರಮಾತ್ಮನು ಎಲ್ಲಾ ಸಮಯದಲ್ಲಿ ಎಲ್ಲಾ ಕಾಲದಲ್ಲಿ ನಮ್ಮ ಪ್ರಾರ್ಥನೆಯನ್ನು ಆಲಿಸುತ್ತಾನೆ. ಎಲ್ಲಾ ಕಾಲದಲ್ಲಿಯೂ ನಮ್ಮ ಪ್ರಾರ್ಥನೆಗೆ ಸ್ಪಂದಿಸುತ್ತಾನೆ. ನಾವು ಅನನ್ಯ ಭಕ್ತಿಯಿಂದ ಅತ್ಯಂತ ಶ್ರದ್ಧೆಯಿಂದ ಅವನನ್ನು ಉಪಾಸಿಸಿದರೆ, ಅವನು ನಮಗೆ ಶಾರೀರಿಕ ಬಲವನ್ನೂ, ಮಾನಸಿಕ ಬಲವನ್ನೂ, ಆತ್ಮಿಕ ಬಲವನ್ನೂ, ಧೃಡತೆಯನ್ನೂ, ಕಷ್ಟಗಳನ್ನು ಎದುರಿಸುವ ಸಾಮರ್ಥವನ್ನೂ, ಅತ್ಯಂತ ಶಾಂತಿ ನೆಮ್ಮದಿ ಮತ್ತು ಆನಂದವನ್ನು ಕೊಡುತ್ತಾನೆ. ದುರ್ಗುಣಗಳಿಂದ ದೂರ ಮಾಡುತ್ತಾನೆ. ಸತ್ಯಜ್ಞಾನವನ್ನೂ, ಸದ್ವಿವೇಕವನ್ನೂ, ಶ್ರೇಷ್ಠಸಂಸ್ಕಾರಗಳನ್ನು ನೀಡುತ್ತಾನೆ. ಇದಕ್ಕಿಂತ ಮಿಗಿಲಾದ ಸಂಪತ್ತು ಪ್ರಪಂಚದಲ್ಲಿ ಬೇರೆ ಯಾವುದೂ ಇಲ್ಲ. ಆದುದರಿಂದ ಇತರರನ್ನು ನಾವು ಗೌರವಿಸಬೇಕು, ಆದರಿಸಬೇಕು. ಸತ್ಕರಿಸಬೇಕು, ತಂದೆ ತಾಯಿಗಳ ಗುರುಹಿರಿಯರ ಸೇವೆಯನ್ನು ಮಾಡಬೇಕು. ಬಡವರಿಗೆ ಸಹಕರಿಸಬೇಕು. ಭಗವಂತನ ಉಪಾಸನೆಯನ್ನು ಮಾಡಬೇಕು. ಅವನಿಗಿಂತ ಮಿಗಿಲಾದ ಆದರಣೀಯನು, ಪೂಜ್ಯನು, ಉಪಾಸ್ಯನು ಬೇರೆ ಯಾರೂ ಇಲ್ಲ. ಅವನಿಗೆ ಸರಿಸಮವಾದವರೂ ಕೂಡ ಯಾರೂ ಇಲ್ಲ.

ಇತಿ ದ್ವಾತ್ರಿಂಶೋವರ್ಗಃ ಸಮಾಪ್ತಃ

ನಂತರ ಅವರಿಬ್ಬರಿಂದ ಮನುಷ್ಯರು ಏನೇನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ತಯೋರಿದವಸಾ ವಯಂ ಸನೇಮ ನಿ ಚ ಧೀಮಹಿ । ಸ್ಯಾದುತ ಪ್ರರೇಚನಮ್ ॥೬॥

ಪದಾರ್ಥ:- ನಾವೆಲ್ಲರೂ ಯಾವ ಎರಡು ಪದಾರ್ಥಗಳ ಗುಣಗಳ [ಅವಸಾ] ಸಂಪೂರ್ಣ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು, ಅದರಿಂದ ಪೂರ್ಣ ಪ್ರಯೋಜನವನ್ನು ಪಡೆದು ತನ್ಮೂಲಕ [ಚ ಸನೇಮ] ಯಾವ ಯಾವ ಸುಖಗಳನ್ನು ಹಾಗೂ ಸಂಪತ್ತನ್ನು ಪ್ರಾಪ್ತ ಮಾಡಿಕೊಳ್ಳುತ್ತೇವೋ [ತಯೋಃ] ಅವೆರಡು ಇಂದ್ರ ಮತ್ತು ವರುಣ ಇಂದ್ರ=ಸೂರ್ಯ, ವರುಣ=ಜಲ ಇವುಗಳಿಂದ [ನಿ ಧೀಮಹಿ] ಅಪಾರವಾದ ಸಂಪತ್ತನ್ನು ಪ್ರಾಪ್ತಮಾಡಿಕೊಂಡು ಯೋಗ್ಯವಾದುದನ್ನು ಸಂಗ್ರಹಿಸುತ್ತೇವೆ. ಅವುಗಳ ಮೂಲಕ ಪ್ರಾಪ್ತವಾದ ಸಂಪತ್ತಿನಿಂದ ನಮ್ಮ ಭಂಡಾರವನ್ನು, ಕೋಶಾಗಾರವನ್ನು ತುಂಬಿಸಿಕೊಳ್ಳುತ್ತೇವೆ. [ಉತ] ಮತ್ತು [ಪ್ರರೇಚನಸ್ಯಾತ್] ಈ ಸಂಪತ್ತಿನಿಂದ ನಮ್ಮ ವ್ಯಯ ಅರ್ಥಾತ್ ಖರ್ಚು-ವೆಚ್ಚಗಳು ಸರಿಯಾಗಿ ನಡೆಯಲು ಸಾಧ್ಯವಾಗುತ್ತದೆ.

ಭಾವಾರ್ಥ:- ಪರಮಾತ್ಮನಿಂದ ಪ್ರಾಪ್ತವಾದ ಹಾಗೂ ಪ್ರಕೃತಿ ಪ್ರದತ್ತವಾದ, ಸ್ವಾಭಾವಿಕ ಸಂಪನ್ಮೂಲಗಳನ್ನು, ಸರಿಯಾದ ರೀತಿಯಲ್ಲಿ ವಿನಿಯೋಗಿಸಿಕೊಳ್ಳದೇ ಪರದಾಡುತ್ತಾ, ಅನ್ಯರ ಮುಂದೆ ಕೈಚಾಚುವ ಭಾರತೀಯರಿಗೆ, ಈ ಮಂತ್ರವು ಅತ್ಯಂತ ಬೋಧಪ್ರದವಾಗಿದೆ. ನಾವು ನಮ್ಮ ಜಿಲ್ಲೆಯಲ್ಲಿ, ಪ್ರಾಂತ್ಯದಲ್ಲಿ, ರಾಷ್ಟ್ರದಲ್ಲಿ, ಸದಾಕಾಲ ಹರಿಯುತ್ತಿರುವ ನದಿಗಳನ್ನು, ಉತ್ತಮವಾದ ರೀತಿಯಲ್ಲಿ ಬಳಸಿಕೊಂಡು ವಿದ್ಯುಚ್ಛಕ್ತಿಯನ್ನು ಪ್ರಾಪ್ತಮಾಡಿಕೊಳ್ಳದೇ, ಪರಕೀಯ ರಾಷ್ಟ್ರದವರಿಂದ ಕಲ್ಲಿದ್ದಲಿನ ಮೂಲಕ ವಿದ್ಯುಚ್ಛಕ್ತಿಯನ್ನು ಪ್ರಾಪ್ತಮಾಡಿಕೊಳ್ಳುವ ಬೃಹತ್ ಯೋಜನೆಗಳನ್ನು ಹಾಕಿ, ಪರಿಸರವನ್ನೂ ನಾಶಮಾಡುತ್ತಿದ್ದೇವೆ. ಈ ಮಂತ್ರವು ನಮಗೆ, ಪರಮಾತ್ಮನು ಕೊಟ್ಟಂತಹ ಸೂರ್ಯಶಕ್ತಿಯನ್ನು

ಹಾಗೂ ಜಲವನ್ನೂ ಉತ್ತಮವಾದ ರೀತಿಯಲ್ಲಿ ಬಳಸಿಕೊಂಡು, ಇವೆರಡರಿಂದ ಎಲ್ಲಾ ರೀತಿಯ ಪ್ರಯೋಜನವನ್ನು ಪಡೆದು, ನಮ್ಮ ರಾಷ್ಟ್ರದ ಕೋಶವನ್ನು ತುಂಬಿಸಿಕೊಳ್ಳಬೇಕು. ನಮ್ಮಲ್ಲಿ ಉಪಲಬ್ಧವಿರುವ ಸಂಪನ್ಮೂಲಗಳನ್ನು ಬಳಸಿಕೊಂಡು, ನಾವು ಸ್ವಾವಲಂಬಿಯಾಗಬೇಕು ಎಂದು ನಮಗೆ ಬೋಧಿಸುತ್ತದೆ.

ಎಂತಹ ಧನಕ್ಕಾಗಿ ಉಪಾಯ ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಇಂದ್ರಾವರುಣ ವಾಮಹಂ ಹುವೇ ಚಿತ್ರಾಯ ರಾಧಸೇ । ಅಸ್ಮಾನ್ತ್ಸು ಜಿಗ್ಯುಷಸ್ಕೃತಮ್ ॥೭॥

ಪದಾರ್ಥ:- [ಇಂದ್ರಾವರುಣೌ] ಇಂದ್ರ= ಸರ್ವೈಶ್ವರ್ಯ ಪ್ರದಾತನಾದ ಪರಮಾತ್ಮ!, ಎಲ್ಲರಿಂದಲೂ ಆದರಿಸಲ್ಪಡುವ ಸಕಲ ಜ್ಞಾನ ವಿಜ್ಞಾನಗಳಿಂದ ಸಂಪನ್ನನಾದ ಶ್ರೇಷ್ಠ ವಿದ್ವಾಂಸನೇ! **[ಅಹಂ]** ನಾನು **[ಚಿತ್ರಾಯ ರಾಧಸೇ]** ಅದ್ಭುತವಾದ ಜ್ಞಾನದ ರಹಸ್ಯವನ್ನು ಅರಿಯಲು ಮತ್ತು ಸಕಲ ಲೌಕಿಕ ಸಂಪತ್ತನ್ನು ಪ್ರಾಪ್ತ ಮಾಡಿಕೊಳ್ಳಲು **[ವಾಮ್]** ನಿಮ್ಮಿಬ್ಬರನ್ನು **[ಹುವೇ]** ಯಜ್ಞದಲ್ಲಿ ಆಹ್ವಾನಿಸುತ್ತೇನೆ. **[ಅಸ್ಮಾನ್]** ನಮ್ಮೆಲ್ಲರನ್ನು **[ಜಿಗ್ಯುಷಃ]** ಸಕಲ ಲೌಕಿಕ ಮತ್ತು ಪಾರಮಾರ್ಥಿಕ ಸಂಘರ್ಷದಲ್ಲಿ ವಿಜಯಶೀಲರನ್ನಾಗಿ ಮಾಡಿ **[ಸುಕೃತಮ್]** ಶ್ರೇಷ್ಠ ಕರ್ಮ ಶೀಲರನ್ನಾಗಿ ಮಾಡಿರಿ.

ಭಾವಾರ್ಥ:- ಪರಮಾತ್ಮನ ಕೃಪೆ ಮತ್ತು ಸದಾ ಸತ್ಯಜ್ಞಾನವನ್ನೇ ಕೊಡುವ ಶ್ರೇಷ್ಠ ವಿದ್ವಾಂಸರ ಮಾರ್ಗದರ್ಶನ ಇವೆರಡಿಲ್ಲದಿದ್ದರೆ ನಾವು ಯಾವ ಪುರುಷಾರ್ಥವನ್ನೂ ಸಾಧಿಸಲಾರೆವು. ಸಕಲ ಲೌಕಿಕ ಕಾರ್ಯಸಿದ್ಧಿಗಾಗಿ ಸಂಪತ್ತಿನ ಆವಶ್ಯಕತೆ ಇದೆ. ಆ ಸಂಪತ್ತನ್ನು ಕೊಡುವವನೂ, ಕೊಡಿಸುವವನೂ, ಪರಮಾತ್ಮನೇ ಆಗಿದ್ದಾನೆ. ಪರಮಾತ್ಮನ ಕೃಪೆ ಇಲ್ಲದಿದ್ದರೆ, ಸಂಪತ್ತು ಲಭಿಸಲು ಸಾಧ್ಯವಿಲ್ಲ. ಆದರೆ ಆ ಸಂಪತ್ತನ್ನು ಪ್ರಾಪ್ತ ಮಾಡಿಕೊಳ್ಳಲು ನಾವು ಮೊದಲು ಸತ್ಪಾತ್ರರಾಗಬೇಕು. ಸತ್ಪಾತ್ರರಾಗ್ಬೇಕಾದರೆ, ಮೊದಲು ಸದಾ ಸತ್ಯಜ್ಞಾನವನ್ನೇ ಕೊಡುವ, ಸಕಲ ಜ್ಞಾನ, ವಿಜ್ಞಾನದಿಂದ, ಸಂಪನ್ನರಾದ ಶ್ರೇಷ್ಠ ವಿದ್ವಾಂಸರ ಮಾರ್ಗದರ್ಶನವನ್ನು ಪಡೆದು, ನಮ್ಮಲ್ಲಿರುವ ಅಜ್ಞಾನವನ್ನೂ, ದುರ್ಗುಣಗಳನ್ನೂ ದೂರಮಾಡಿಕೊಂಡು, ಶ್ರೇಷ್ಠಕರ್ಮಶೀಲರಾಗಬೇಕು. ಕೇವಲ ನಾವು ಮಾತ್ರ ಆದರೆ ಸಾಲದು, ಇತರರನ್ನೂ ವಿದ್ವಾಂಸರನ್ನಾಗಿಯೂ, ಶ್ರೇಷ್ಠ ಕರ್ಮಗಳಲ್ಲಿ ಪ್ರವೃತ್ತರನ್ನಾಗಿಯೂ ಮಾಡಬೇಕು. ಆಗ ಪರಮಾತ್ಮನ ಕೃಪೆ ನಮಗೆ ಪ್ರಾಪ್ತವಾಗುತ್ತದೆ. ಪರಮಾತ್ಮನು ನಮಗೆ ಸಕಲ ಲೌಕಿಕ ಸಂಪತ್ತನ್ನೂ, ಪಾರಮಾರ್ಥಿಕ ಆನಂದವನ್ನೂ ಕೊಡುತ್ತಾನೆ, ಪ್ರಾಪ್ತವಾಗುವಂತೆ ಮಾಡುತ್ತಾನೆ. ನಮ್ಮ ಜೀವನವು ಸದಾ ಸಂಘರ್ಷಮಯವಾಗಿರಬೇಕು. ಈ ಸಂಘರ್ಷವು ಇತರರೊಂದಿಗಲ್ಲ. ನಮ್ಮಲ್ಲಿರುವ, ನಮ್ಮ ಪರಿವಾರದಲ್ಲಿ, ಸಮಾಜದಲ್ಲಿ, ರಾಷ್ಟ್ರದಲ್ಲಿ, ಮಾತ್ರವಲ್ಲ, ಸಂಪೂರ್ಣ ವಿಶ್ವದಲ್ಲಿರುವ ಅಜ್ಞಾನ ಮತ್ತು ದಾರಿದ್ರ್ಯದೊಂದಿಗೆ ನಾವು ಸಂಘರ್ಷವನ್ನು ಮಾಡಬೇಕು. "ಸರ್ವೇ ಜನಾಃ ಸುಖಿನೋ ಭವಂತು" ಇದು ನಮ್ಮ ಜೀವನದ ಮುಖ್ಯ ಧ್ಯೇಯವಾಗಬೇಕು.

ಮತ್ತೆ ಅವುಗಳಿಂದ ಏನೇನು ಸಿದ್ಧಿಸಲ್ಪಡುತ್ತದೆ ಎಂಬುದನ್ನು ವರ್ಣಿಸಲಾಗಿದೆ.

ಇಂದ್ರಾವರುಣ ನೂ ನು ವಾಂ ಸಿಷಾಸಂತೀಷು ಧೀಷ್ವಾ । ಅಸ್ಮಭ್ಯಂ ಶರ್ಮ ಯಚ್ಛತಮ್ ॥೮॥

ಪದಾರ್ಥ:- [ಇಂದ್ರಾವರುಣೌ] ಇಂದ್ರ = ಸರ್ವಜ್ಞನೂ, ಸಕಲ ಚರಾಚರ ಜಗತ್ತನ್ನು ಪ್ರಕಾಶಿಸುವವನೂ ಆದ ಪರಮಾತ್ಮ ಮತ್ತು ವರುಣ = ಸದಾ ಸತ್ಯಜ್ಞಾನವನ್ನೇ ಕೊಡುವ ಹಾಗೂ ಸಮಸ್ತ ಜ್ಞಾನವಿಜ್ಞಾನವನ್ನು ಅತ್ಯಂತ ಉತ್ತಮವಾದ ವಿಧದಲ್ಲಿ ಪ್ರಾಪ್ತ ಮಾಡಿಕೊಂಡ ವಿದ್ವಾಂಸನೇ! [ಸಿಷಾಸಂತೀಷು] ಸತ್ಯಾಸತ್ಯವನ್ನು ಹಾಗೂ ಒಳಿತುಕೆಡುಕನ್ನು ಸರಿಯಾದ ರೀತಿಯಲ್ಲಿ ವಿವೇಚಿಸುವಂತಹ ಸಾಮರ್ಥ್ಯವು [ಧೀಷು] ನಮ್ಮ ಧಾರಣಾವತಿ ಬುದ್ಧಿಯಲ್ಲಿ [ನೂನು] ಅತ್ಯಂತ ಶೀಘ್ರವಾಗಿ ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ [ವಾಮ್] ನಿಮ್ಮಿಬ್ಬರನ್ನು [ಆ

ಹುವೇ] ಆಹ್ವಾನಿಸುತ್ತೇನೆ. ಸದಾಕಾಲ ಸ್ಮರಿಸುತ್ತೇನೆ. [ಅಸ್ಮಭ್ಯಂ] ನಮ್ಮೆಲ್ಲರಿಗೆ [ಶರ್ಮ ಯಚ್ಛತಮ್] ಸದಾ ಸುಖವನ್ನೇ ಪ್ರದಾನ ಮಾಡಿರಿ. ಅರ್ಥಾತ್ ನಿಮ್ಮಿಬ್ಬರ ಕೃಪೆಯಿಂದ, ನಾವು ಸದಾ ಸುಖವನ್ನೇ ಅನುಭವಿಸುವಂತಾಗಲಿ.

ಭಾವಾರ್ಥ:- ಸರ್ವಜ್ಞ ಹಾಗೂ ಸಕಲ ಚರಾಚರ ಜಗತ್ತನ್ನು ಪ್ರಕಾಶಿಸುವ ಪರಮಾತ್ಮ ಮತ್ತು ಸದಾ ಸತ್ಯಜ್ಞಾನವನ್ನೇ ಕೊಡುವ ಶ್ರೇಷ್ಠ ವಿದ್ವಾಂಸ ಇವರ ಸಾನ್ನಿಧ್ಯದಲ್ಲಿದ್ದುಕೊಂಡು ನಮ್ಮ ವಿವೇಕವನ್ನೂ, ವಿವೇಚನಾ ಶಕ್ತಿಯನ್ನೂ ವರ್ಧಿಸಿಕೊಳ್ಳಬೇಕು. ಸಕಲ ಕರ್ಮಗಳನ್ನು ಮಾಡುವ ಮೊದಲು, ಸತ್ಯಾಸತ್ಯವನ್ನು ಹಾಗೂ ಒಳಿತುಕೆಡುಕನ್ನು ಸರಿಯಾದ ರೀತಿಯಲ್ಲಿ, ಮತ್ತು ಅತ್ಯಂತ ತ್ವರಿತವಾಗಿ ವಿವೇಚಿಸುವಂತಹ ಸಾಮರ್ಥ್ಯ, ನಮ್ಮ ಧಾರಣಾವತಿ ಬುದ್ಧಿಯಲ್ಲಿ ಪ್ರಾಪ್ತವಾಗಬೇಕು. ಪ್ರತಿಯೊಂದು ಕ್ಷಣ ಕ್ಷಣದಲ್ಲಿಯೂ ಹಲವು ವಿಧದಲ್ಲಿ ವಂಚಿಸುವ ನಯವಂಚಕರ ಬಲೆಗೆ ಸಿಲುಕಿ, ನರಳುವ ಪರಿಸ್ಥಿತಿ ಎಂದಿಗೂ ಬಾರದಿರಲಿ. ಸರ್ವಜ್ಞನಾದ ಪರಮಾತ್ಮನ ಸ್ಮರಣೆ, ಹಾಗೂ ಸದಾ ಸತ್ಯಜ್ಞಾನವನ್ನೇ ಕೊಡುವ ಶ್ರೇಷ್ಠ ವಿದ್ವಾಂಸರೊಂದಿಗೆ ಸತ್ಸಂಗ, ಇವೆರಡನ್ನೂ ಪ್ರತಿದಿನವೂ ಮಾಡುವುದರಿಂದ, ನಾವು ಸದಾ ಕಾಲ ಸುಖ ಮತ್ತು ಶಾಂತಿಯಿಂದ ಇರಲು ಸಾಧ್ಯವಿದೆ. ಸರ್ವಜ್ಞನಾದ ಪರಮಾತ್ಮನನ್ನು ಸದಾ ಸ್ಮರಿಸುವುದರಿಂದ, ಅವನು ನಮ್ಮ ಆತ್ಮನ ಮೇಲೆ, ತನ್ನ ಜ್ಞಾನದ ಪ್ರಕಾಶವನ್ನು ಬೀರುತ್ತಾನೆ. ಸದಾ ಸತ್ಯಜ್ಞಾನವನ್ನೇ ಕೊಡುವ ಶ್ರೇಷ್ಠ ವಿದ್ವಾಂಸರ ಸತ್ಸಂಗವನ್ನು ಮಾಡುವುದರಿಂದ, ಅವರು ನಮಗೆ ಉತ್ತಮವಾದ ರೀತಿಯಲ್ಲಿ ಮಾರ್ಗದರ್ಶನವನ್ನು ಮಾಡುತ್ತಾ, ತಮ್ಮ ಜ್ಞಾನದ ಮೂಲಕ ನಮ್ಮ ಬುದ್ಧಿಯನ್ನು ವಿಕಸಿತವನ್ನಾಗಿ ಮಾಡುತ್ತಾರೆ. ಇದರಿಂದ ನಮಗೆ ಬಹಳ ಬೇಗ ವಿವೇಚನೆಯನ್ನು ಮಾಡುವ ಸಾಮರ್ಥ್ಯವು ಪ್ರಾಪ್ತವಾಗುತ್ತದೆ.

ಉಕ್ತ ಇಂದ್ರ ವರುಣರ ಯಥಾ ಯೋಗ್ಯ ಗುಣಕೀರ್ತನೆ ಮಾಡುವ ಯೋಗ್ಯತೆಯನ್ನು ವಿವರಿಸಲಾಗಿದೆ.

ಪ್ರ ವಾಮಶ್ನೋತು ಸುಷ್ಟುತಿ-ರಿಂದ್ರಾವರುಣ ಯಾಂ ಹುವೇ । ಯಾಮೃಧಾಥೇ ಸಧಸ್ತುತಿಮ್॥೯॥

ಪದಾರ್ಥ:- [ಇಂದ್ರಾವರುಣೌ] ಸರ್ವರಿಗೂ ಜ್ಞಾನ ಮತ್ತು ಪ್ರಕಾಶವನ್ನು ಕೊಡುವ ಪರಮಾತ್ಮ! ಮತ್ತು ಸದಾಸತ್ಯಜ್ಞಾನವನ್ನೇ ಕೊಡುವ ಶ್ರೇಷ್ಠ ವಿದ್ವಾಂಸನೇ! **[ಯಾಮ್]** ಯಾವ **[ಸುಸ್ತುತಿಃ]** ಸುಂದರವಾದ ಸ್ತುತಿ ಅರ್ಥಾತ್ ಗುಣವರ್ಣನೆಯ ಮೂಲಕ ನಾನು **[ವಾಮ್]** ನಿಮ್ಮಿಬ್ಬರನ್ನು **[ಹುವೇ]** ಸ್ತುತಿಸುತ್ತೇನೋ **[ತತ್]** ಆ ಗುಣಗಳು **[ಮಯಿ]** ನನ್ನಲ್ಲಿ **[ಪ್ರ ಅಶ್ನೋತು]** ಉತ್ತಮವಾದ ರೀತಿಯಲ್ಲಿ ವ್ಯಾಪ್ತವಾಗಲಿ. **[ಯಾಮ್]** ಯಾವ **[ಸಧಸ್ತುತಿಮ್]** ನಿಮ್ಮಿಬ್ಬರನ್ನು ಒಂದಿಗೆ ಮಾಡಿದಂತಹ ಸ್ತುತಿ ಅರ್ಥಾತ್ ಗುಣವರ್ಣನೆ ಇದೆಯೋ **[ತತ್]** ಅದು **[ಮಾಮ್]** ನನ್ನನ್ನು **[ಋಧಾಥೇ]** ವರ್ಧಿಸಲಿ. **[ತದಹಂ ಹುವೇ]** ಅವೆಲ್ಲಾ ಗುಣಗಳನ್ನು ನಾನು ಗ್ರಹಣ ಮಾಡುತ್ತೇನೆ, ನನ್ನ ಜೀವನದಲ್ಲಿ ಅಳವಡಿಸಿಕೊಳ್ಳುತ್ತೇನೆ.

ಭಾವಾರ್ಥ:- ಸದಾ ಸರ್ವರಿಗೂ ಜ್ಞಾನ ಹಾಗೂ ಪ್ರಕಾಶವನ್ನು ಕೊಡುವ ಪರಮಾತ್ಮನು, ಎಲ್ಲರ ಕಲ್ಯಾಣಕ್ಕೋಸ್ಕರ, ಸಕಲ ಸುಖಸಂಪತ್ತನ್ನೂ ಕೊಡುತ್ತಾನೆ. ಅದೇ ರೀತಿ, ಸದಾ ಸತ್ಯಜ್ಞಾನವನ್ನೇ ಕೊಡುವ ಶ್ರೇಷ್ಠ ವಿದ್ವಾಂಸನೂ ಕೂಡ, ಸರ್ವರಿಗೂ ಉತ್ತಮವಾದ ಮಾರ್ಗದರ್ಶನದ ಮೂಲಕ, ಸುಖವನ್ನೇ ಕೊಡುತ್ತಾನೆ. ನಾವು ಪರಮಾತ್ಮನ ಮತ್ತು ಶ್ರೇಷ್ಠ ವಿದ್ವಾಂಸರ ಗುಣವರ್ಣನೆಯ ಮೂಲಕ, ಸ್ತುತಿಯನ್ನು ಮಾಡುತ್ತೇವೆ. ಆದರೆ ಆ ಸ್ತುತಿಗಳು ಅವರನ್ನು ಹೊಗಳಿ ಅಟ್ಟಕ್ಕೇರಿಸಲು ಮಾತ್ರವಲ್ಲ, ಅವರ ಗುಣಗಳನ್ನು, ನಮ್ಮ ಜೀವನದಲ್ಲಿ ಅಳವಡಿಸಿಕೊಂಡು, ನಮ್ಮ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು.

ಪೂರ್ವೋಕ್ತ ಹದಿನಾರನೆಯ ಸೂಕ್ತದೊಂದಿಗೆ ಈ ಸೂಕ್ತದ ಸಂಗತಿಕರಣ ಇದೆ ಎಂಬುದನ್ನು ಎಲ್ಲರೂ ಗಮನಿಸಬೇಕು.

ಹದಿನೇಳನೆಯ ಸೂಕ್ತ ಸಮಾಪ್ತ

ಸೂಕ್ತ ೧೮

ಮಂತ್ರಸಂಖ್ಯೆ ೯ । ಋಷಿಃ - ಮೇಧಾತಿಥಿಃ ಕಾಣ್ವಃ , ೧-೩ ಬ್ರಹ್ಮಣಸ್ಪತಿಃ, ೪ ಇಂದ್ರಬೃಹಸ್ಪತೀಂದ್ರಸೋಮಾಃ, ೫ ಬೃಹಸ್ಪತಿ ದಕ್ಷಿಣೇ, ೬-೮ ಸದಸಸ್ಪತಿಃ ೯, ಸದಸಸ್ಪತಿರ್ನರಾಶಂಸೋ ವಾ । ಛಂದಃ- ೧ ವಿರಾಡ್ ಗಾಯತ್ರೀ, ೨, ೭, ೯ ಗಾಯತ್ರೀ, ೩ , ೬, ೮ ಪಿಪೀಲಿಕಾಮಧ್ಯಾನಿಚೃದ್ಗಾಯತ್ರೀ. ೪ ನಿಚೃದ್ ಗಾಯತ್ರೀ, ೫ ಪಾದನಿಚೃದ್ಗಾಯತ್ರೀ ।
ಸ್ವರಃ-ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಯಜಮಾನನಾದವನು ಪರಮಾತ್ಮನ ಪ್ರಾರ್ಥನೆಯನ್ನು ಹೇಗೆ ಮಾಡಬೇಕು ಎಂಬುದನ್ನು ಹೇಳಿದೆ.

ಸೋಮಾನಂ ಸ್ವರಣಂ ಕೃಣುಹಿ ಬ್ರಹ್ಮಣಸ್ಪತೇ । ಕಕ್ಷೀವಂತಂ ಯ ಔಶಿಜಃ ॥೧॥

ಪದಾರ್ಥಃ:- ಹೇ [ಬ್ರಹ್ಮಣಸ್ಪತೇ] ಸರ್ವಜ್ಞನೂ, ಸಕಲಜ್ಞಾನ ಪ್ರದಾತನೂ, ಸಂಪೂರ್ಣವೇದ ಜ್ಞಾನದ ಸ್ವಾಮಿಯೂ ಆದ ಪರಮಾತ್ಮ! [ಯಃ ಔಶಿಜಃ] ವಿದ್ಯೆಯ ಪ್ರಕಾಶದ ಮೂಲಕ ಜ್ಞಾನದ ಬೆಳಕಿನಲ್ಲಿ ಪ್ರಪಂಚವನ್ನು ಅರಿತುಕೊಂಡು, ಪ್ರಪಂಚದ ಪ್ರತಿಯೊಂದು ಆಗುಹೋಗುಗಳನ್ನು ಬಲ್ಲವನಾಗಿದ್ದು, ವಿದ್ವಾಂಸರ ಪುತ್ರನಂತೆಯೇ ಆಗಿದ್ದೇನೆ. ಅಂತಹ ನನ್ನನ್ನು **[ಸೋಮಾನಮ್]** ಸದಾ ಶ್ರೇಷ್ಠ ಕರ್ಮದಲ್ಲಿ ನಿರತನನ್ನಾಗಿಯೂ, ಯಜನಶೀಲನನ್ನಾಗಿಯೂ, **[ಕಕ್ಷೀವಂತಮ್]** ಐಶ್ವರ್ಯವಂತನನ್ನಾಗಿಯೂ, **[ಸ್ವರಣಂ]** ಪ್ರತಿಯೊಂದು ಶಬ್ದದ ಅರ್ಥವನ್ನು ಬಲ್ಲವನನ್ನಾಗಿಯೂ **[ಕೃಣುಹಿ]** ಉಂಟು ಮಾಡು. ನನ್ನ ಬೆರಳುಗಳಲ್ಲಿ ಉತ್ತಮ ಕಲಾಕುಶಲತೆ, ಶಿಲ್ಪವಿದ್ಯೆಯಲ್ಲಿ ಪ್ರಾವೀಣ್ಯತೆಯನ್ನೂ **[ಕೃಣುಹಿ]** ಉಂಟು ಮಾಡು. ಅರ್ಥಾತ್ ಎಲ್ಲಾ ರೀತಿಯ ಯೋಗ್ಯತೆ, ಅರ್ಹತೆ ಮತ್ತು ಪಾತ್ರತೆಯು ನನಗೆ ಪ್ರಾಪ್ತವಾಗಲಿ.

ಭಾವಾರ್ಥಃ:- ಸರ್ವಜ್ಞನೂ, ಸಕಲ ಜ್ಞಾನಪ್ರದಾತನೂ, ಸಂಪೂರ್ಣ ವೇದಜ್ಞಾನದ ಏಕಮಾತ್ರ ಸ್ವಾಮಿಯೂ ಆದ ಪರಮಾತ್ಮ! ನಿನ್ನ ಕೃಪೆಯಿಂದ, ನಾನು ಜ್ಞಾನವಂತನೂ, ವಿದ್ಯಾವಂತನೂ, ಬುದ್ಧಿವಂತನೂ ಆಗಿ ನಿನ್ನ ಜ್ಞಾನದ ಪ್ರಕಾಶದಲ್ಲಿ ಪ್ರಪಂಚವನ್ನು ಉತ್ತಮ ರೀತಿಯಲ್ಲಿ ಅರಿತವನಾಗಿ, ವಿದ್ವಾಂಸರ ಪುತ್ರನಂತೆಯೇ ಇದ್ದೇನೆ. ಅಂತಹ ನನ್ನನ್ನು, ಸದಾ ಶ್ರೇಷ್ಠ ಕರ್ಮದಲ್ಲಿ ನಿರತನನ್ನಾಗಿಯೂ, ಯಜನಶೀಲನನ್ನಾಗಿಯೂ ಐಶ್ವರ್ಯವಂತನನ್ನಾಗಿಯೂ ಮಾಡು. ಪ್ರತಿಯೊಂದು ಶಬ್ದದ ಅರ್ಥವನ್ನೂ ಅರಿತು, ಪ್ರತಿಯೊಂದು ವಸ್ತುವಿನ ಮಹತ್ವವನ್ನೂ ತಿಳಿದು, ಅದರ ಸದುಪಯೋಗ ಮಾಡುವ ಪ್ರವೃತ್ತಿಯುಳ್ಳವನನ್ನಾಗಿಯೂ ಮಾಡು. ನನ್ನ ಬೆರಳುಗಳಲ್ಲಿ ನಿಪುಣತೆ, ಉತ್ತಮ ಕಲಾಕುಶಲತೆ, ಹಾಗೂ ನಾನು ಮಾಡುವ ಪ್ರತಿಯೊಂದು ಕರ್ಮಗಳಲ್ಲಿ ನನಗೆ ಪ್ರಾವೀಣ್ಯತೆಯು ಪ್ರಾಪ್ತವಾಗಲಿ. ದುರ್ಭಾಗ್ಯವಶಾತ್ ನಮ್ಮ ದೇಶದಲ್ಲಿ, ಅಧಿಕಾಂಶ ಜನರು ಯೋಗ್ಯತೆ, ಅರ್ಹತೆ ಮತ್ತು ಪಾತ್ರತೆ ಇಲ್ಲದೆಯೇ, ಎಲ್ಲವನ್ನೂ ಪ್ರಾಪ್ತಮಾಡಿಕೊಳ್ಳಲು ಅಪೇಕ್ಷಿಸುತ್ತಾರೆ. ಅದರೊಂದಿಗೆ ತಾವು ಮಾಡಿದ್ದೇ ಸರಿ, ತಾವು ಹೇಳಿದ್ದೇ ವೇದವಾಕ್ಯ, ಎಲ್ಲರೂ ಅದನ್ನೇ ಅನುಸರಿಸಬೇಕು, ಎಂದು ಎಲ್ಲರ ಮೇಲೆ ಒತ್ತಡವನ್ನು ಹೇರುತ್ತಾರೆ. ನಮ್ಮೆಲ್ಲರ ಅತ್ಯಂತ ದುರ್ಭಾಗ್ಯವೇನೆಂದರೆ, ಯಾರು ಅಪಾತ್ರರೋ, ಯಾರು ಕುಪಾತ್ರರೋ, ಅಂತಹವರಿಗೆ ಎಲ್ಲವೂ ಪ್ರಾಪ್ತವಾಗುತ್ತಿದೆ. ಇದರಿಂದ ನಾವೆಲ್ಲರೂ ನರಕಯಾತನೆಯನ್ನು ಅನುಭವಿಸಬೇಕಾದ ಪ್ರಮೇಯ ನಮ್ಮ ದೈನಂದಿನ ಜೀವನದ ಪ್ರತಿಯೊಂದು ಕ್ಷಣದಲ್ಲಿಯೂ ಒದಗಿಬರುತ್ತಾ ಇದೆ. ಜೀವಮಾತ್ರರ ದುಃಖವನ್ನೂ, ವಿಘ್ನವನ್ನೂ, ಸಂಕಟವನ್ನೂ ಹರಣಮಾಡುವ ಪರಮಾತ್ಮನು, ನಮ್ಮೆಲ್ಲರನ್ನು ಈ ನರಕಯಾತನೆಯಿಂದ ಮುಕ್ತರನ್ನಾಗಿ ಮಾಡಲಿ.

ನಂತರ ಆ ಪರಮಾತ್ಮನು ಹೇಗಿದ್ದಾನೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಯೋ ರೇವಾನ್ ಯೋ ಅಮೀವಹಾ ವಸುವಿತ್ ಪುಷ್ಟಿವರ್ಧನಃ । ಸ ನಃ ಸಿಷಕ್ತು ಯಸ್ತುರಃ ॥೨॥

ಪದಾರ್ಥಃ:- [ಯಃ] ಯಾವನು [ರೇವಾನ್] ಸಕಲಜ್ಞಾನ ಸಂಪನ್ನ, ಅರ್ಥಾತ್ ಸರ್ವಜ್ಞನೂ, ಸಕಲೈಶ್ವರ್ಯ ಸಂಪತ್ತಿನ ಏಕಮಾತ್ರ ಸ್ವಾಮಿಯೂ ಆಗಿದ್ದಾನೋ [ಯಃ] ಯಾವನು [ಪುಷ್ಟಿವರ್ಧನಃ] ತನ್ನ ಉಪಾಸಕರ ಶರೀರ, ಮನಸ್ಸು ಮತ್ತು ಆತ್ಮನ ಬಲವನ್ನು ವರ್ಧಿಸುತ್ತಾನೋ [ಯಃ] ಯಾವನು [ವಸುವಿತ್] ಈ ಸಂಪೂರ್ಣ ಚರಾಚರ ಜಗತ್ತಿನಲ್ಲಿ ಸಂಪೂರ್ಣ ವಿಶ್ವ ಬ್ರಹ್ಮಾಂಡದಲ್ಲಿರುವ ಸಕಲ ಪದಾರ್ಥಗಳನ್ನು ಬಲ್ಲವನಾಗಿದ್ದಾನೋ [ಯಃ] ಯಾವನು [ಅಮೀವಹಾ] ತನ್ನ ಭಕ್ತರ ಉಪಾಸಕರ, ಅವಿದ್ಯಾಂಧಕಾರವನ್ನೂ, ಸಕಲ ಕ್ಲೇಶಗಳನ್ನೂ, ಸಕಲ ರೋಗ ರುಜಿನಗಳನ್ನೂ ನಾಶ ಮಾಡುತ್ತಾನೋ, [ಯಃ] ಯಾವನು [ತುರಃ] ಅತ್ಯಂತ ಶೀಘ್ರವಾಗಿ ತನ್ನ ಉಪಾಸಕರಿಗೆ ಸಕಲ ಸುಖ-ಶಾಂತಿ ಹಾಗೂ ಆನಂದವನ್ನು ಪ್ರದಾನ ಮಾಡುತ್ತಾನೋ, ಅಂತಹ ಸಂಪೂರ್ಣ ಬ್ರಹ್ಮಾಂಡದ ಏಕಮಾತ್ರ ಸ್ವಾಮಿ ಆಗಿದ್ದಾನೋ, ಆ ಪರಮಾತ್ಮನು, ನಮ್ಮೆಲ್ಲರಿಗೆ, ಸಕಲ ಜ್ಞಾನ ಮತ್ತು ಐಶ್ವರ್ಯಗಳಿಂದ [ಸಿಷಕ್ತು] ಸಂಪನ್ನರನ್ನಾಗಿ ಮಾಡಲಿ. ಸದಾ ನಮ್ಮನ್ನು ಜ್ಞಾನ ಮತ್ತು ಐಶ್ವರ್ಯದೊಂದಿಗೆ ಸಂಯುಕ್ತರನ್ನಾಗಿ ಮಾಡಲಿ. ಪ್ರಪಂಚದಲ್ಲಿ ಯಾರೂ ಕೂಡ ಅಜ್ಞಾನಿ ಹಾಗೂ ದರಿದ್ರರಾಗಿರುವುದು ಬೇಡ. "ಸರ್ವೇ ಜನಾಃ ಸುಖಿನೋ ಭವಂತು".

ಭಾವಾರ್ಥಃ:- ಯಾವನು ಸರ್ವಜ್ಞನೂ, ಸಕಲೈಶ್ವರ್ಯಪ್ರದಾತನೂ ಆಗಿದ್ದಾನೋ, ಯಾವನು ತನ್ನ ಉಪಾಸಕರ ಶರೀರ-ಮನಸ್ಸು ಮತ್ತು ಆತ್ಮನ ಬಲವನ್ನೂ ವರ್ಧಿಸುತ್ತಾನೋ, ಯಾವನು ಸಂಪೂರ್ಣ ಬ್ರಹ್ಮಾಂಡದಲ್ಲಿರುವ ಪ್ರತಿಯೊಂದು ಪದಾರ್ಥಗಳನ್ನು ಬಲ್ಲವನಾಗಿದ್ದಾನೋ, ಯಾವನು ತನ್ನ ಉಪಾಸಕರ, ಅವಿದ್ಯಾಂಧಕಾರವನ್ನೂ, ಸಕಲ ಕ್ಲೇಶಗಳನ್ನೂ ಸಕಲ ರೋಗ ರುಜಿನಗಳನ್ನೂ ನಾಶ ಮಾಡುತ್ತಾನೋ, ಯಾವನು ತನ್ನ ಉಪಾಸಕರಿಗೆ ಅತ್ಯಂತ ಶೀಘ್ರವಾಗಿ ಸುಖ-ಶಾಂತಿ ಮತ್ತು ನೆಮ್ಮದಿ ಹಾಗೂ ಆನಂದವನ್ನು ಕೊಡುತ್ತಾನೋ, ಅಂತಹ ಸಕಲ ಜಗದೊಡೆಯನಾದ ಪರಮಾತ್ಮನು, ನಮ್ಮೆಲ್ಲರಿಗೆ ಸಂಪೂರ್ಣ ಜ್ಞಾನ ಮತ್ತು ಐಶ್ವರ್ಯವನ್ನು ಪ್ರದಾನ ಮಾಡಲಿ. ನಾವೆಲ್ಲರೂ ಸದಾಕಾಲ ಜ್ಞಾನ ಮತ್ತು ಐಶ್ವರ್ಯದೊಂದಿಗೆ ಸಂಯುಕ್ತರಾಗಿರುವಂತಾಗಲಿ. ಪ್ರಪಂಚದಲ್ಲಿ ಯಾರೂ ಕೂಡ ಅಜ್ಞಾನಿ ಮತ್ತು ದರಿದ್ರರಾಗಿರುವುದು ಬೇಡ. ಲೋಕಾಃ ಸಮಸ್ತಾ ಸುಖಿನೋ ಭವಂತು.

ಮುಂದಿನ ಮಂತ್ರದಲ್ಲಿ ಪರಮಾತ್ಮನ ಪ್ರಾರ್ಥನೆಯನ್ನು ಕುರಿತು ಹೇಳಲಾಗಿದೆ.

ಮಾ ನಃ ಶಂಸೋ ಅರರುಷೋ ಧೂರ್ತಿಃ ಪ್ರಣಙ್ಮರ್ತ್ಯಸ್ಯ । ರಕ್ಷಾ ಣೋ ಬ್ರಹ್ಮಣಸ್ಪತೇ ॥೩॥

ಪದಾರ್ಥಃ:- ಹೇ [ಬ್ರಹ್ಮಣಸ್ಪತೇ] ಸರ್ವಜ್ಞನೂ, ಸರ್ವಜ್ಯೇಷ್ಠನೂ, ಸರ್ವಶ್ರೇಷ್ಠನೂ ಆದ ಪರಮಾತ್ಮ! ನೀನು **[ಅರರುಷಃ]** ಅದಾನಶೀಲರೂ ಅಧರ್ಮಮಾರ್ಗದಲ್ಲಿ ಪ್ರವೃತ್ತರೂ, ಹಿಂಸೆಯಲ್ಲಿ ನಿರತರಾದವರೂ ಆದ **[ಮರ್ತ್ಯಸ್ಯ]** ಮನುಷ್ಯರ ಸಂಪರ್ಕದಿಂದ **[ನಃ]** ನಮ್ಮೆಲ್ಲರನ್ನೂ ರಕ್ಷಿಸು. **[ನಃ]** ನಮ್ಮೆಲ್ಲರ ಮಧ್ಯದಲ್ಲಿ ಯಾರೂ ಕೂಡಾ **[ಧೂರ್ತಿಃ]** ಧೂರ್ತರು, ಅರ್ಥಾತ್ ಕೇವಲ ತಮ್ಮ ಸ್ವಾರ್ಥಕ್ಕೋಸ್ಕರ, ಇತರರನ್ನು ಹಿಂಸಿಸುವವರು, ವಂಚಿಸುವವರು ಮತ್ತು ಕೊಲೆ ಸುಲಿಗೆ ದರೋಡೆ ಇತ್ಯಾದಿಗಳನ್ನು ಮಾಡುವವರು ಇಲ್ಲದಿರಲಿ. ನಿನ್ನ ಕೃಪೆಯಿಂದ **[ನಃ]** ನಮ್ಮೆಲ್ಲರ **[ಶಂಸಃ]** ಪ್ರಶಂಸನೀಯ, ಅರ್ಥಾತ್ ಎಲ್ಲರೂ ಪ್ರಶಂಸಿಸುವಂತಹ ಸಕಲ ಶ್ರೇಷ್ಠ ಕರ್ಮಗಳು, ಯಾವುದೇ ಕಾರಣದಿಂದ **[ಮಾ ಪ್ರಣಕ್]** ಎಂದಿಗೂ ನಾಶವಾಗದಿರಲಿ.

ಭಾವಾರ್ಥಃ:- ಸರ್ವಜ್ಞನೂ, ಸರ್ವಜ್ಯೇಷ್ಠನೂ, ಸರ್ವಶ್ರೇಷ್ಠನೂ ಆದ ಪರಮಾತ್ಮ! ನೀನು, ನಮ್ಮೆಲ್ಲರನ್ನೂ ಅದಾನಶೀಲ ಅರ್ಥಾತ್ ದಾನ ಮಾಡದೇ ಇರುವ ಪ್ರವೃತ್ತಿ, ಅಧರ್ಮಾಚರಣೆ ಮತ್ತು ಹಿಂಸಾಚರಣೆಯಿಂದ ದೂರಮಾಡು. ನಮ್ಮಲ್ಲಿ ಯಾರೂ ಕೂಡಾ ಅಧಾರ್ಮಿಕರೂ, ಅದಾನಶೀಲರೂ, ಹಿಂಸೆಯಲ್ಲಿ ನಿರತರಾದವರೂ ಇರುವುದು ಬೇಡ. ನಮ್ಮೆಲ್ಲರನ್ನೂ ಅಂತಹ ದುಷ್ಟ ಮತ್ತು ಆಸುರೀ ಪ್ರವೃತ್ತಿಗಳಿಂದ ಹಾಗೂ ದುಷ್ಟ ಪ್ರವೃತ್ತಿಗಳುಳ್ಳ ಮನುಷ್ಯರ ಸಂಪರ್ಕದಿಂದ ಸದಾಕಾಲ ರಕ್ಷಿಸು. ನಮ್ಮ ಮಧ್ಯದಲ್ಲಿ ಯಾವ ಧೂರ್ತರೂ ಅರ್ಥಾತ್ ಕೇವಲ ತಮ್ಮ

ಸ್ವಾರ್ಥಕ್ಕೋಸ್ಕರ, ಪರರನ್ನು ವಂಚಿಸುವವರು ಕೊಲೆ, ಸುಲಿಗೆ, ದರೋಡೆ ಇತ್ಯಾದಿಗಳನ್ನು ಮಾಡುವವರು ನುಸುಳದಿರಲಿ. ಅಂತಹ ನೀಚರ ನೆರಳೂ ಕೂಡಾ ನಮಗೆ ಸೋಕದಿರಲಿ.

ಸರ್ವರಕ್ಷಕ ಪರಮಾತ್ಮ! ನಿನ್ನ ಕೃಪೆಯಿಂದ ನಾವು ಸದಾಕಾಲ ಎಲ್ಲರೂ ಪ್ರಶಂಸಿಸುವಂತಹ, ಶ್ರೇಷ್ಠ ಕರ್ಮಗಳನ್ನೇ ಮಾಡುವಂತಾಗಲಿ. ಯಾವುದೇ ಕಾರಣದಿಂದ, ನಾವು ಮಾಡುವಂತಹ ಶ್ರೇಷ್ಠ ಕರ್ಮಗಳು ನಾಶವಾಗದಿರಲಿ. ಯಾವುದೇ ರೀತಿಯ ವಿಘ್ನ, ಬಾಧೆ, ಅಭಾವ ಹಾಗೂ ಎಡರು ತೊಡರುಗಳಿಂದ ನಿಲ್ಲದೇ ಸದಾಕಾಲ ನಮ್ಮ ಮೂಲಕ ಶ್ರೇಷ್ಠ ಕರ್ಮಗಳು ಅಬಾಧಿತವಾಗಿ ನಡೆಯುತ್ತಾ ಇರಲಿ.

ನಂತರ ಇಂದ್ರಾದಿಗಳ ಕಾರ್ಯಗಳನ್ನು ವರ್ಣಿಸಲಾಗಿದೆ.

ಸ ಘಾ ವೀರೋ ನ ರಿಷ್ಯತಿ ಯಮಿಂದ್ರೋ ಬ್ರಹ್ಮಣಸ್ಪತಿಃ । ಸೋಮೋ ಹಿನೋತಿ ಮರ್ತ್ಯಮ್ ॥೪॥

ಪದಾರ್ಥ:- [ಯಮ್] ಯಾವ [ಮರ್ತ್ಯಮ್] ಮನುಷ್ಯನನ್ನು [ಇಂದ್ರಃ] ಪ್ರಾಣವಾಯುಃ [ಸೋಮಃ] ಸೋಮಲತೆ ಮತ್ತು [ಬ್ರಹ್ಮಣಃ ಪತಿಃ] ಬ್ರಹ್ಮಾಂಡದ ಮತ್ತು ವೇದಜ್ಞಾನದ ಏಕಮಾತ್ರ ಸ್ವಾಮಿಯಾದ ಪರಮಾತ್ಮ [ಹಿನೋತಿ] ವರ್ಧಿಸುತ್ತಾರೋ [ಸಃ ಘಾ ವೀರಃ] ನಿಶ್ಚಯವಾಗಿಯೂ ಆ ವೀರಪುರುಷನು [ನ ರಿಷ್ಯತಿ] ಎಂದಿಗೂ ನಾಶವಾಗುವುದಿಲ್ಲ. ಅರ್ಥಾತ್ ಮೃತ್ಯುವನ್ನು ಜಯಿಸುತ್ತಾನೆ.

ಭಾವಾರ್ಥ:- ಯಾವ ಮನುಷ್ಯನು, ಯೋಗಸಾಧನೆ ಮತ್ತು ಪ್ರಾಣಾಯಾಮದ ಮೂಲಕ, ತನ್ನ ಪ್ರಾಣಶಕ್ತಿಯನ್ನು ವರ್ಧಿಸಿಕೊಳ್ಳುತ್ತಾನೋ, ಬ್ರಹ್ಮಚರ್ಯದ ಮೂಲಕ ತನ್ನ ಆತ್ಮಶಕ್ತಿಯನ್ನು ವರ್ಧಿಸಿಕೊಳ್ಳುತ್ತಾನೋ, ಯಾವನು ಸೋಮಲತೆಯಂತಹ ದಿವ್ಯವನಸ್ಪತಿಯ ರಸವನ್ನು ಪಾನ ಮಾಡುತ್ತಾನೋ ಹಾಗೂ ಯಾವನು ಬ್ರಹ್ಮಾಂಡದ ಸ್ವಾಮಿಯಾದ ಪರಮಾತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾನೋ, ಪರಮಾತ್ಮನ ಶಕ್ತಿಯನ್ನೂ, ಗುಣಗಳನ್ನೂ ತನ್ನಲ್ಲಿ ಧಾರಣ ಮಾಡಿಕೊಳ್ಳುತ್ತಾನೋ, ಅವನು ಮೃತ್ಯುವನ್ನು ಜಯಿಸುತ್ತಾನೆ. "ಬ್ರಹ್ಮಚರ್ಯೇಣ ತಪಸಾ ದೇವಾಃ ಮೃತ್ಯುಮಪಾಘ್ನತ" ಅಥರ್ವವೇದದ ಈ ಮಂತ್ರಭಾಗದಲ್ಲಿ "ಬ್ರಹ್ಮಚರ್ಯದ ಬಲದಿಂದ ದೇವತೆಗಳು ಮೃತ್ಯುವನ್ನು ಜಯಿಸಿದರು" ಎಂದು ಹೇಳಿದೆ. ಯೋಗಸಾಧನೆ, ಪ್ರಾಣಾಯಾಮ ಮತ್ತು ಬ್ರಹ್ಮಚರ್ಯದ ಪಾಲನೆಯಿಂದ ಅಪಾರವಾದ ಶಕ್ತಿಯನ್ನು ಪ್ರಾಪ್ತಮಾಡಿಕೊಳ್ಳಬಹುದು.

ಯಾವನು ಪರಮಾತ್ಮನ ಗುಣಗಳನ್ನು ಮತ್ತು ಶಕ್ತಿಯನ್ನು ತನ್ನಲ್ಲಿ ಧಾರಣ ಮಾಡಿಕೊಳ್ಳುತ್ತಾನೋ ಅವನು ಸತ್ತರೂ ಅಮರನಾಗುತ್ತಾನೆ. ಸೋಮಲತೆ ಒಂದು ದಿವ್ಯವಾದ ವನಸ್ಪತಿ. ಮೊದಲು ಋಷಿಗಳು ಸೋಮಲತೆಯ ರಸವನ್ನು ಕುಡಿದು, ಹಲವು ದಿನಗಳ ತನಕ, ಯಾವ ಆಹಾರವನ್ನು ತೆಗೆದುಕೊಳ್ಳದೇ, ಯಜ್ಞಾನುಷ್ಠಾನವನ್ನು ಮಾಡುತ್ತಿದ್ದರು. ಈ ವನಸ್ಪತಿಯಿಂದ ಹಸಿವು, ಬಾಯಾರಿಕೆ, ನಿದ್ರೆ, ಆಲಸ್ಯ, ಕಾಮ, ಕ್ರೋಧ ಎಲ್ಲವೂ ದೂರವಾಗುತ್ತವೆ. ಶರೀರದಲ್ಲಿ ಅದ್ಭುತವಾದ ಶಕ್ತಿ ಹಾಗೂ ಚೈತನ್ಯಯುಂಟಾಗುತ್ತದೆ.

ಅವರು ಹೇಗೆ ರಕ್ಷಣೆ ಮಾಡುವವರಾಗುತ್ತಾರೆ ಎಂಬುದನ್ನು ಮುಂದಿನ ಮಂತ್ರದಲ್ಲಿ ವಿವರಿಸಲಾಗಿದೆ.

ತ್ವಂ ತಂ ಬ್ರಹ್ಮಣಸ್ಪತೇ ಸೋಮ ಇಂದ್ರಶ್ಚ ಮರ್ತ್ಯಮ್ । ದಕ್ಷಿಣಾ ಪಾತ್ವಂಹಸಃ ॥೫॥

ಪದಾರ್ಥ:- ಹೇ [ಬ್ರಹ್ಮಣಸ್ಪತೇ] ಸರ್ವಜ್ಞನೂ, ಸಕಲ ಜಗದೋದ್ಧಾರಕನೂ ಆದ ಪರಮಾತ್ಮ! [ಮರ್ತ್ಯಮ್] ಯಾವ ಮನುಷ್ಯನನ್ನು [ಸೋಮಃ] ವೇದವಿದ್ಯಾ ಪಾರಂಗತನಾದ ಆಚಾರ್ಯನು, [ಇಂದ್ರಃ] ಪ್ರಾಣವಾಯು ಮತ್ತು [ದಕ್ಷಿಣಾ] ಸದಾ ವೃದ್ಧಿ ಮತ್ತು ಅಭ್ಯುದಯದ ಕಡೆಗೆ ಕೊಂಡೊಯ್ಯುವ ಧರ್ಮ ಮತ್ತು ಉಪಾಸನೆ ಇವೆಲ್ಲವೂ

[ಪಾತು] ರಕ್ಷಿಸುತ್ತಾರೋ [ತಂ] ಆ ಸದಾ ಧರ್ಮಮಾರ್ಗದಲ್ಲಿಯೇ ಸತ್ಯಮಾರ್ಗದಲ್ಲಿಯೇ ನಡೆಯುವ ನಿನ್ನ ಉಪಾಸಕನನ್ನು [ತ್ವಂ] ನೀನು [ಅಂಹಸಃ] ಪಾಪ, ದುಃಖ ಮತ್ತು ಕ್ಲೇಶಗಳಿಂದ [ಪಾತು] ಸದಾಕಾಲ ರಕ್ಷಿಸುತ್ತೀಯೆ.

ಭಾವಾರ್ಥ:- ಹೇ ಸರ್ವಜ್ಞ! ಸಕಲ ಜಗದೋದ್ಧಾರಕನಾದ ಪರಮಾತ್ಮ! ಯಾವ ಮನುಷ್ಯನನ್ನು ವೇದವಿದ್ಯಾ ಪಾರಂಗತನಾದ ಆಚಾರ್ಯನು, ಪ್ರಾಣವಾಯು, ಮತ್ತು ಅಭ್ಯುದಯ ನಿಶ್ರೇಯಸ್ಸಿನ ಕಡೆಗೆ ಕೊಂಡೊಯ್ಯುವ ಧರ್ಮ ಮತ್ತು ಪರಮಾತ್ಮನ ಉಪಾಸನೆ, ರಕ್ಷಿಸುತ್ತವೆಯೋ, ಅಂತಹ, ಧರ್ಮಮಾರ್ಗದಲ್ಲಿ ಮತ್ತು ಸತ್ಯಾಚರಣೆಯಲ್ಲಿಯೇ ನಡೆಯುವ, ಪರಮಾತ್ಮನ ಉಪಾಸಕನನ್ನು, ಪರಮಾತ್ಮನು ಸದಾಕಾಲ ಪಾಪ, ದುಃಖ, ಮತ್ತು ಕ್ಲೇಶದಿಂದ ರಕ್ಷಿಸುತ್ತಾನೆ.

ಯಾವ ಮಾನವ ವೇದ ವಿದ್ಯಾಪಾರಂಗತನಾದ ಆಚಾರ್ಯನ ಸನಿಹದಲ್ಲಿ ಕುಳಿತುಕೊಂಡು, ಬ್ರಹ್ಮಚರ್ಯದ ಪಾಲನೆಯನ್ನು ಮಾಡುತ್ತಾ, ಸಕಲವಿದ್ಯೆಯನ್ನು ಅತ್ಯಂತ ಶ್ರದ್ಧೆಯಿಂದ ಮತ್ತು ನಿಷ್ಠೆಯಿಂದ ಪ್ರಾಪ್ತಿಮಾಡಿಕೊಳ್ಳುತ್ತಾನೋ, ಯಾವ ಮಾನವನು ಯಮ ನಿಯಮ, ಆಸನ, ಪ್ರಾಣಾಯಾಮ, ಯೋಗಾಭ್ಯಾಸ ಮೊದಲಾದ ಅಷ್ಟಾಂಗ ಯೋಗಗಳನ್ನು ಪಾಲಿಸುತ್ತಾನೋ, ಯಾವ ಮಾನವನು ಸದಾಕಾಲ ಧರ್ಮ ಮಾರ್ಗದಲ್ಲಿಯೇ ನಡೆಯುತ್ತಾ ಸತ್ಯಾಚರಣೆಯಲ್ಲಿದ್ದುಕೊಂಡು ಅನನ್ಯ ಭಕ್ತಿಯಿಂದ ಪರಮಾತ್ಮನ ಉಪಾಸನೆಯನ್ನು ಮಾಡುತ್ತಾನೋ ಅಂತವನನ್ನು ಪರಮಾತ್ಮನು, ಪಾಪ ದುಃಖ ಮತ್ತು ಕ್ಲೇಶದಿಂದ ರಕ್ಷಿಸುತ್ತಾನೆ.

ಮಾನವನು ಜನ್ಮ ಜನ್ಮಾಂತರಗಳಲ್ಲಿ ಹಲವಾರು ರೀತಿಯ ಪಾಪಗಳನ್ನು ಮಾಡುತ್ತಾನೆ. ಆ ಪಾಪಗಳ ಫಲವನ್ನು ಅವನು ಅನುಭವಿಸಲೇಬೇಕು. ಆದರೆ ಯಾವ ಮಾನವನು, ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು, ಅಷ್ಟಾಂಗಯೋಗದ ಪಾಲನೆಯನ್ನು ಮಾಡುತ್ತಾ, ಅನನ್ಯ ಭಕ್ತಿಯಿಂದ ಪರಮಾತ್ಮನ ಉಪಾಸನೆಯನ್ನು ಮಾಡುತ್ತಾನೋ, ಅವನಲ್ಲಿ ಶಾರೀರಿಕ ಬಲ, ಮಾನಸಿಕ ಬಲ, ಮತ್ತು ಆತ್ಮಿಕ ಬಲವು ಹೆಚ್ಚುತ್ತದೆ. ಅದರಿಂದ ಯಾವುದೇ ರೀತಿಯ ದುಃಖ ಕ್ಲೇಶಗಳು ಬಾಧಿಸುವುದಿಲ್ಲ. ಅವನನ್ನು ವಿಚಲಿತನನ್ನಾಗಿ ಮಾಡುವುದಿಲ್ಲ. ಎಲ್ಲವನ್ನು ಎದುರಿಸುವಂತಹ ಸಾಮರ್ಥ್ಯ ಮತ್ತು ಪರಮಾತ್ಮನ ದಯೆ ಅವನಿಗೆ ರಕ್ಷಾಕವಚಗಳಾಗುತ್ತವೆ. ಅಷ್ಟು ಮಾತ್ರವಲ್ಲ, ಭಗವಂತನ ಉಪಾಸಕನೆಂದಿಗೂ, ನೀಚಕೃತ್ಯಗಳನ್ನು ಮಾಡುವುದಿಲ್ಲ. ಮನಸ್ಸಿನಲ್ಲಿ ದುಷ್ಟ ಭಾವನೆಗಳುಂಟಾದರೂ, ಎಲ್ಲವೂ ಸಮುದ್ರದಲ್ಲಿ ಏಳುವ ಅಲೆಗಳು, ಸಮುದ್ರದಲ್ಲಿಯೇ ನಶಿಸುವಂತೆಯೇ ಮನಸ್ಸಿನಲ್ಲಿಯೇ ನಷ್ಟವಾಗುತ್ತವೆ. ಅವೆಂದಿಗೂ ಕ್ರಿಯಾರೂಪಕ್ಕೆ ಕಾರ್ಯರೂಪದಲ್ಲಿ ಬರುವುದಿಲ್ಲ. ಕೇವಲ ಸದ್ಭಾವನೆಗಳು, ಸತ್ಕರ್ಮಗಳು ಮತ್ತು ಸತ್ಸಂಕಲ್ಪಗಳು ಮಾತ್ರ ಕಾರ್ಯರೂಪಕ್ಕೆ ಬರುತ್ತವೆ. ಇಂದಿನ ಪುರೋಹಿತರು, ದಕ್ಷಿಣೆಯ ಅರ್ಥ ಕೇವಲ ಧನವೆಂದು ಭಾವಿಸುತ್ತಾರೆ. ಅಂತೆಯೇ ದಕ್ಷಿಣೆಗೋಸ್ಕರ ಯಜಮಾನನನ್ನು ಪೀಡಿಸುತ್ತಾರೆ. ಯಥಾರ್ಥರೂಪದಲ್ಲಿ, ದಕ್ಷಿಣೆ ಎಂದರೆ ಸದಾಕಾಲ ವೃದ್ಧಿ, ಅಭ್ಯುದಯ ಮತ್ತು ನಿಶ್ರೇಯಸ್ಸಿನ ಕಡೆಗೆ ಕೊಂಡೊಯ್ಯುವ ಧಾರ್ಮಿಕ ಮಾರ್ಗ, ಸತ್ಯಾಚರಣೆ ಮತ್ತು ಭಗವಂತನ ಉಪಾಸನೆ. "ದಕ್ಷಂತೇ ವರ್ಧಂತೇ ಯಯಾ ಸಾ ದಕ್ಷಿಣಾ".

ನಂತರ ಇಂದ್ರಶಬ್ದದಿಂದ ಪರಮಾತ್ಮನ ಗುಣಗಳ ವರ್ಣನೆ ಮಾಡಲಾಗಿದೆ.

ಸದಸಸ್ಪತಿಮದ್ಭುತಂ ಪ್ರಿಯಮಿಂದ್ರಸ್ಯ ಕಾಮ್ಯಮ್ । ಸನಿಂ ಮೇಧಾಮಯಾಸಿಷಮ್ ॥೬॥

ಪದಾರ್ಥ:- [ಅಹಂ] ನಾನು [ಇಂದ್ರಸ್ಯ] ಜೀವಾತ್ಮನ [ಕಾಮ್ಯಂ] ಸಕಲ ಕಾಮನೆಗಳನ್ನು ಈಡೇರಿಸುವವನೂ, ಅತ್ಯಂತ ಕಾಂತಿಯುಕ್ತನೂ, ಕಮನೀಯನೂ ಆದ [ಸನಿಂ] ಸಕಲ ಪಾಪ-ಪುಣ್ಯ ಕರ್ಮಗಳಿಗೆ ಯಥಾವತ್ತಾಗಿ ಫಲವನ್ನು ಕೊಡುವವನೂ ಆದ [ಪ್ರಿಯಮ್] ಸಕಲ ಜೀವರಾಶಿಗಳಿಗೆ ಅತ್ಯಂತ ಪ್ರಿಯನೂ ಹಾಗೂ ಪ್ರಾಣಿಮಾತ್ರರನ್ನು ಪ್ರಸನ್ನ ಚಿತ್ತರನ್ನಾಗಿ ಮಾಡುವವನೂ ಆದ [ಅದ್ಭುತಂ] ಆಶ್ಚರ್ಯಕರವಾದ ಗುಣ ಮತ್ತು ಸ್ವಭಾವವುಳ್ಳವನೂ [ಸದಸಃ ಪತಿಮ್] ಸಕಲ ಜೀವರಾಶಿಗಳು ಆಶ್ರಯವನ್ನು ಪಡೆದುಕೊಂಡು, ಭೋಗಗಳನ್ನು ಭೋಗಿಸುತ್ತಾರೋ,

ಅಂತಹ ಬ್ರಹ್ಮಾಂಡದ ಏಕಮಾತ್ರ ಸ್ವಾಮಿಯಾದ ಪರಮಾತ್ಮನನ್ನು ಉಪಾಸಿಸುತ್ತಾ [ಮೇಧಾಮ್] ಧಾರಣಾವತೀ ಬುದ್ಧಿ =ಮೇಧಾಬುದ್ಧಿಯನ್ನು [ಅಯಾಸಿಷಮ್] ಪ್ರಾಪ್ತ ಮಾಡಿಕೊಳ್ಳುತ್ತೇನೆ.

ಭಾವಾರ್ಥ:- ಜೀವಾತ್ಮನ ಸಕಲ ಕಾಮನೆಗಳನ್ನು ಈಡೇರಿಸುವವನೂ, ಅತ್ಯಂತ ಶಾಂತಿಯುಕ್ತನೂ (**ಕಮುಕಾಂತೌ**) ಕಮನೀಯನೂ, ಸಕಲ ಪಾಪ-ಪುಣ್ಯಕರ್ಮಗಳಿಗೆ, ಯಥಾವತ್ತಾಗಿ, ಯಾವುದೇ ರೀತಿಯ ತಾರತಮ್ಯ, ಪಕ್ಷಪಾತ ಭೇದಭಾವವಿಲ್ಲದೇ ಫಲವನ್ನು ಕೊಡುವವನೂ, ಸಕಲ ಜೀವರಾಶಿಗಳಿಗೆ ಅತ್ಯಂತ ಪ್ರಿಯನೂ, ಹಾಗೂ ಪ್ರಾಣಿಮಾತ್ರರನ್ನು ಪ್ರಸನ್ನ ಚಿತ್ತರನ್ನಾಗಿ ಮಾಡುವವನೂ, ಮತ್ತು ಅದ್ಭುತವಾದ ಗುಣ ಸ್ವಭಾವವುಳ್ಳವನೂ ಆದ, ಸಕಲ ಜೀವರಾಶಿಗಳು ಎಲ್ಲಿ ಆಶ್ರಯವನ್ನು ಪಡೆದುಕೊಂಡು, ತಮ್ಮ ಭೋಗಗಳನ್ನು ಭೋಗಿಸುತ್ತಾರೋ ಹಾಗೂ ತಾವು ಮಾಡುವ ಸಕಲ ಸತ್ಕರ್ಮ ಮತ್ತು ದುಷ್ಕರ್ಮಗಳಿಗೆ ಅನುಗುಣವಾಗಿ ಫಲವನ್ನು ಅನುಭವಿಸುತ್ತಾರೋ, ಅಂತಹ ಬ್ರಹ್ಮಾಂಡದ ಏಕಮಾತ್ರ ಸ್ವಾಮಿಯಾದ ಪರಮಾತ್ಮನನ್ನು ಉಪಾಸಿಸುತ್ತಾ, ಶ್ರೇಷ್ಠವಾದ ಧಾರಣಾವತಿ-ಮೇಧಾಬುದ್ಧಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತೇವೆ. ಪರಮಾತ್ಮನ ಗುಣ ಮತ್ತು ಸ್ವಭಾವವು ಅದ್ಭುತವಾದುದು. ಅವನ ಸೃಷ್ಟಿಯೂ ಅದ್ಭುತವಾದುದು. ಅವನ ಜ್ಞಾನವೂ ಕೂಡ ಅದ್ಭುತವಾಗಿಯೇ ಇದೆ. ಸಾಧಾರಣ ಮತಿಯುಳ್ಳ ಮಾನವನು ಎಂದಿಗೂ ಪರಮಾತ್ಮನು ಕೊಟ್ಟಂತಹ ಜ್ಞಾನವನ್ನು, ಅವನ ಸೃಷ್ಟಿಯ ರಹಸ್ಯವನ್ನೂ, ಅವನ ಗುಣ ಮತ್ತು ಶಕ್ತಿಗಳನ್ನು ಅರಿತುಕೊಳ್ಳಲು ಸಾಧ್ಯವಿಲ್ಲ. ಪ್ರತಿಯೋರ್ವ ಮಾನವನು ಮೊದಲು ತನ್ನನ್ನು ತಾನು ಅರಿತುಕೊಳ್ಳಬೇಕು. ನಮ್ಮನ್ನು ನಾವು ಅರಿತುಕೊಳ್ಳದೇ, ಪರಮಾತ್ಮನನ್ನು ಅರಿತುಕೊಳ್ಳಲು ಸಾಧ್ಯವಿಲ್ಲ.

ನಮ್ಮಲ್ಲಿ ಪ್ರತಿಯೊಬ್ಬರೂ ಕೂಡಾ, ನಮ್ಮನ್ನು ನಾವು ಅರಿತುಕೊಂಡಿದ್ದೇವೆ ಎಂದು ಭಾವಿಸುತ್ತೇವೆ. ಅದರ ಪರಿಣಾಮವೇನೆಂದರೆ ಬೇರೆಯವರನ್ನು ವಂಚಿಸುವುದಕ್ಕಿಂತ ಮಿಗಿಲಾಗಿ, ಪ್ರತಿಯೊಂದು ಕ್ಷಣದಲ್ಲಿಯೂ ಆತ್ಮವಂಚನೆಯನ್ನು ಮಾಡುತ್ತಾ ಇರುತ್ತೇವೆ. ಕೇವಲ ಒಂದೆರಡು ಉಪಾಧಿಗಳನ್ನು ಪ್ರಾಪ್ತ ಮಾಡಿಕೊಂಡ ಮಾತ್ರಕ್ಕೆ ನಾವು ಶಿಕ್ಷಿತರು, ನಮಗಿಂತ ಮಿಗಿಲಾದವರು ಯಾರೂ ಇಲ್ಲ ಎಂದು ಅಹಂಕಾರವನ್ನು ಪಡುತ್ತೇವೆ. ಯಥಾರ್ಥ ರೂಪದಲ್ಲಿ ಪ್ರಪಂಚದಲ್ಲಿ ಶೇಕಡಾ ೯೫ ಜನರು ಅಶಿಕ್ಷಿತರೇ ಆಗಿದ್ದಾರೆ. ಶಿಕ್ಷಿತರೆಂದೆನಿಸಿಕೊಳ್ಳಬೇಕಾದರೆ, ಸತ್ಯಾಸತ್ಯವನ್ನು, ಧರ್ಮಾಧರ್ಮವನ್ನು, ನ್ಯಾಯ ಅನ್ಯಾಯವನ್ನು, ಪಾಪ-ಪುಣ್ಯವನ್ನು, ಒಳಿತುಕೆಡುಕುಗಳನ್ನು ಅರಿತುಕೊಳ್ಳಲು ಸಮರ್ಥವಾದಂತಹ ಧಾರಣಾವತಿ ಬುದ್ಧಿ ಇರಬೇಕು. ಉತ್ತಮ ಗುಣ-ನಡತೆ-ಕರ್ಮ-ಜ್ಞಾನ ಮತ್ತು ಶ್ರೇಷ್ಠ ಸಂಸ್ಕಾರಗಳುಳ್ಳವರಾದಾಗ ಮಾತ್ರ, ನಾವು ಯಥಾರ್ಥರೂಪದಲ್ಲಿ ಶಿಕ್ಷಿತರಾದ ಮಾನವರು, ಎಂದು ನಮ್ಮನ್ನು ನಾವು ಹೇಳಿಕೊಳ್ಳಬಹುದು.

ಗಾಯತ್ರೀ ಮಂತ್ರದಲ್ಲಿ ನಾವು ಬೇರೇನನ್ನೂ ಪರಮಾತ್ಮನಲ್ಲಿ ಬೇಡುವುದಿಲ್ಲ. ಪರಮಾತ್ಮ! ನಮಗೆ ಉತ್ತಮವಾದ ಮೇಧಾಬುದ್ಧಿಯನ್ನು ಕೊಡು. ಮತ್ತು ಸದಾಕಾಲ ನಮ್ಮ ಬುದ್ಧಿಯು, ಸತ್ಕರ್ಮದ ಕಡೆಗೆ ಪ್ರವೃತ್ತವಾಗಲಿ. ಎಂದೆಂದಿಗೂ ನಮ್ಮಿಂದ ಯಾವುದೇ ರೀತಿಯ ದುಷ್ಕರ್ಮಗಳು ಆಗದಿರಲಿ. ಗಾಯತ್ರೀ ಮಂತ್ರವನ್ನು ವೇದಮಾತೆ ಎಂದು ಹೇಳುತ್ತಾರೆ. ಏಕೆಂದರೆ ಬುದ್ಧಿಯು ಪವಿತ್ರವಾದಾಗ ಮತ್ತು ಆತ್ಮನು ಪರಿಶುದ್ಧವಾದೊಡನೆ ಪರಮಾತ್ಮನ ಸಾಕ್ಷಾತ್ಕಾರ ತನ್ನಿಂದ ತಾನೇ ಆಗುತ್ತಿದೆ. ಅವನು ಇಲ್ಲಿಯೇ ಇದ್ದಾನೆ. ಅವನನ್ನು ಹುಡುಕಿಕೊಂಡು ಎಲ್ಲಿಯೂ ಹೋಗಬೇಕಾಗಿಲ್ಲ.

ಅವನೇ ಎಲ್ಲಾ ಜಗತ್ತನ್ನು ರಚಿಸುತ್ತಾನೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ಯಸ್ಮಾದೃತೇ ನ ಸಿಧ್ಯತಿ ಯಜ್ಞೋ ವಿಪಶ್ಚಿತಶ್ಚನ । ಸ ಧೀನಾಂ ಯೋಗಮಿನ್ವತಿ ॥೭॥

ಪದಾರ್ಥ:- ಮಾನವರೇ! [ಯಸ್ಮಾತ್] ಯಾವ [ವಿಪಶ್ಚಿತಃ] ಅನಂತ ಜ್ಞಾನವುಳ್ಳವನೂ, ಸರ್ವಶಕ್ತನೂ ಆದ ಪರಮಾತ್ಮನ [ಋತೇ] ಹೊರತಾಗಿ [ಯಜ್ಞಃ] ಸಕಲ ಪರಮಾಣುಗಳ ಸಂಗತೀಕರಣದಿಂದ = ಸೇರುವಿಕೆಯಿಂದ

ಉಂಟಾದ ಬ್ರಹ್ಮಾಂಡ [ಚ] ಮತ್ತು ಸಕಲ ಜೀವರಾಶಿಗಳು [ನ ಸಿಧ್ಯತಿ] ಎಂದಿಗೂ ಸೃಷ್ಟಿಸಲ್ಪಡುತ್ತಿರಲಿಲ್ಲ. ಅರ್ಥಾತ್ ಪರಮಾತ್ಮನ ಶಕ್ತಿಯಿಂದಲೇ, ಸಂಪೂರ್ಣ ಬ್ರಹ್ಮಾಂಡ, ಹಾಗೂ ಸಕಲ ಜೀವರಾಶಿಗಳು ಸೃಷ್ಟಿಸಲ್ಪಟ್ಟಿವೆ. [ಸಃ] ಆ ಪರಮಾತ್ಮನು ಸಕಲ ಮಾನವರ ಹಾಗೂ ಪ್ರಾಣಿಮಾತ್ರರ [ಧೀನಾಮ್] ಬುದ್ಧಿಯನ್ನು ಮತ್ತು ಕರ್ಮಗಳನ್ನು [ಇನ್ವತಿ] ಬಲ್ಲವನಾಗಿದ್ದಾನೆ.

ಭಾವಾರ್ಥ:- ಸರ್ವಜ್ಞನೂ, ಸರ್ವಶಕ್ತನೂ ಆದ ಪರಮಾತ್ಮನ ಹೊರತಾಗಿ ಬೇರೆ ಯಾರಿಂದಲೂ ಈ ಸಂಪೂರ್ಣ ಬ್ರಹ್ಮಾಂಡವನ್ನಾಗಲೀ ಸಕಲ ಜೀವರಾಶಿಗಳನ್ನಾಗಲೀ ಸೃಷ್ಟಿಸಲು ಸಾಧ್ಯವಿಲ್ಲ. ಅವನೇ ಈ ಸಂಪೂರ್ಣ ಚರಾಚರ ಜಗತ್ತಿನ ಏಕಮಾತ್ರ ಸೃಷ್ಟಿಕರ್ತನಾಗಿದ್ದಾನೆ. ಆ ಸರ್ವಾಂತರ್ಯಾಮಿಯಾದ ಪರಮಾತ್ಮನೇ, ಸಕಲ ಮಾನವರ ಮತ್ತು ಪ್ರಾಣಿಮಾತ್ರರ ಬುದ್ಧಿಯನ್ನು ಹಾಗೂ ಕರ್ಮಗಳನ್ನು ಬಲ್ಲವನಾಗಿದ್ದಾನೆ. ಪ್ರತಿಯೋರ್ವ ಮಾನವನು, ತನ್ನ ಮನಸ್ಸಿನಲ್ಲಿ, ಬುದ್ಧಿಯಲ್ಲಿ ಏನನ್ನು ಚಿಂತಿಸುತ್ತಾನೆ, ಆಲೋಚಿಸುತ್ತಾನೆ, ಯಾವ ಕರ್ಮಗಳನ್ನು ಮಾಡಲು ತತ್ಪರನಾಗುತ್ತಾನೆ, ಯಾವ ಕರ್ಮಗಳನ್ನು ಮಾಡುತ್ತಾನೆ, ಯಾವ ಕರ್ಮಗಳನ್ನು ಮುಂದೆ ಮಾಡಲಿಕ್ಕಿದ್ದಾನೆ ಇವೆಲ್ಲವನ್ನೂ ಸಂಪೂರ್ಣವಾಗಿ ಬಲ್ಲವನಾಗಿದ್ದಾನೆ.

ನಾವು ಮೊಟ್ಟಮೊದಲ ಬಾರಿ ಯಾವುದೇ ರೀತಿಯ ದುಷ್ಕರ್ಮಗಳನ್ನು ಮಾಡಲು ಪ್ರವೃತ್ತರಾದರೆ, ಪರಮಾತ್ಮನು ನಮ್ಮ ಅಂತಕರಣದಲ್ಲಿ ಅದನ್ನು ಮಾಡದಂತೆ, ಪ್ರೇರಣೆಯನ್ನು ನೀಡುತ್ತಾನೆ. ದುಷ್ಕರ್ಮಗಳನ್ನು ಮಾಡುವಾಗ, ನಮ್ಮಲ್ಲಿ ಭೀತಿ ಎಂದರೆ ಭಯ, ಶಂಕೆ ಎಂದರೆ ಸಂದೇಹ, ಮತ್ತು ಲಜ್ಜೆ ಉಂಟಾಗುತ್ತವೆ. ಇದೇ ಪರಮಾತ್ಮನ ಪ್ರೇರಣೆ. ಆಸ್ತಿಕನು, ಧಾರ್ಮಿಕನು, ತನ್ನ ಮನಸ್ಸಿನಲ್ಲಿ ತಮೋಗುಣದ ಪ್ರಭಾವದಿಂದ ಹಲವಾರು ರೀತಿಯ ದುಷ್ಕರ್ಮಗಳನ್ನು ಮಾಡಲು ಆಲೋಚಿಸಬಹುದು. ವಾಣಿಯಿಂದ ಪ್ರಕಟಿಸಲೂ ಬಹುದು. ಆದರೆ ಕರ್ಮದಲ್ಲಿ ಪ್ರವೃತ್ತನಾಗುವುದಿಲ್ಲ. ದುಷ್ಕರ್ಮಗಳನ್ನು ಮಾಡುವುದಿಲ್ಲ. ಅವನು ಸದಾ ಪರಮಾತ್ಮನ ಹತೋಟಿಯಲ್ಲಿರುತ್ತಾನೆ. ಆದರೆ ಯಾರು ಆಸ್ತಿಕರಲ್ಲವೋ ಯಾರು ಧಾರ್ಮಿಕರಲ್ಲವೋ ಅವರು ಪರಮಾತ್ಮನ ಪ್ರೇರಣೆಯನ್ನು ಧಿಕ್ಕರಿಸಿ, ನಿರಂತರ ದುಷ್ಕರ್ಮಗಳನ್ನು ಮಾಡುತ್ತಾ ಇರುತ್ತಾರೆ. ಅವರು ಅದರ ಫಲವನ್ನೂ ಅನುಭವಿಸುತ್ತಾರೆ. ಅದೇ ರೀತಿ ನಾವು ಸತ್ಕರ್ಮಗಳನ್ನು ಮಾಡಲು ಅಪೇಕ್ಷಿಸಿದರೆ, ಭಗವಂತನು ಸತ್ಕರ್ಮಗಳನ್ನು ಮಾಡುವಂತೆ ಪ್ರೇರೇಪಿಸುತ್ತಾನೆ. ಕರ್ಮದಲ್ಲಿ ಪ್ರವೃತ್ತರಾದರೆ, ಅದಕ್ಕೆ ಛಲವನ್ನೂ, ಬಲವನ್ನೂ ಕೊಡುತ್ತಾನೆ. ನಾವು ಮಾಡುವ ಕರ್ಮಗಳಿಗೆ ಸಹಕರಿಸುವಂತೆಯೇ, ಇತರರಿಗೂ ಪ್ರೇರಣೆಯನ್ನೂ ನೀಡುತ್ತಾನೆ. ನಾವು ಮಾಡುವ ಎಲ್ಲಾ ದುಷ್ಕರ್ಮಗಳಿಗೂ, ಸತ್ಕರ್ಮಗಳಿಗೂ ಯಥಾವತ್ತಾಗಿ ಯಾವುದೇ ರೀತಿಯ ಪಕ್ಷಪಾತವಿಲ್ಲದೇ ಫಲವನ್ನೂ ಕೊಡುತ್ತಾನೆ. "ಅವಶ್ಯಮೇವಭೋಕ್ತವ್ಯಂ ಯತ್ಕರ್ಮ ಶುಭಾಶುಭಂ".

ನಂತರ ಆ ಯಜ್ಞವು ಹೇಗಿರುತ್ತದೆ ಎಂಬುದನ್ನು ವರ್ಣಿಸಲಾಗಿದೆ.

ಆದೃಧ್ನೋತಿ ಹವಿಷ್ಕೃತಿಂ ಪ್ರಾಂಚಂ ಕೃಣೋತ್ಯಧ್ವರಮ್ । ಹೋತ್ರಾ ದೇವೇಷು ಗಚ್ಛತಿ ॥೮॥

ಪದಾರ್ಥ:- ಸರ್ವಜ್ಞನೂ, ಸಕಲ ಬ್ರಹ್ಮಾಂಡದ ಸ್ವಾಮಿಯೂ ಆದ ಪರಮಾತ್ಮನು [ಪ್ರಾಂಚಂ] ಸಂಪೂರ್ಣ ಚರಾಚರ ಜಗತ್ತನ್ನು, ಸರ್ವತೋ ಮುಖವಾಗಿ ವ್ಯಾಪ್ತವಾಗಿ, ಅರ್ಥಾತ್ ಎಲ್ಲಾ ಕಡೆಯಿಂದ ವ್ಯಾಪಿಸಿಕೊಂಡು, ಪ್ರತಿಯೊಂದು ಪದಾರ್ಥಗಳಿಗೆ ಗತಿಯನ್ನು ಕೊಡುತ್ತಾನೆ. ಈ ಚರಾಚರ ಜಗತ್ತಿನಲ್ಲಿರುವ ಸಕಲ ಜೀವರಾಶಿಗಳು ಅವನನ್ನೇ ಆಶ್ರಯಿಸಿಕೊಂಡಿವೆ. ಅವನೇ ಏಕಮಾತ್ರ ಸರ್ವಾಧಾರನಾಗಿದ್ದಾನೆ. [ಹವಿಷ್ಕೃತಿಮ್] ಸಕಲ ಪ್ರಾಣಿಮಾತ್ರರಿಗೆ, ಸಮಸ್ತ ಪದಾರ್ಥಗಳನ್ನೂ, ಸಂಪೂರ್ಣ ಜ್ಞಾನವನ್ನೂ ಪ್ರದಾನ ಮಾಡುತ್ತಾನೆ. ಸಮಸ್ತ ಪ್ರಾಣಿಗಳ ದುಃಖ, ದಾರಿದ್ರ್ಯ, ಅಜ್ಞಾನ, ಕಷ್ಟ, ಅಂಧಕಾರ, ಕ್ಲೇಶ ಎಲ್ಲವನ್ನೂ ಹರಣ ಮಾಡುತ್ತಾನೆ. ಮತ್ತು ಭಕ್ತರ ಉಪಾಸಕರ

ಪ್ರಾರ್ಥನೆಯನ್ನು ಆಲಿಸುತ್ತಾನೆ ಹಾಗೂ ಎಲ್ಲರ ಭಕ್ತಿಯನ್ನೂ ಸ್ವೀಕರಿಸುತ್ತಾನೆ. [ಅಧ್ವರಂ] ಪ್ರಾಣಿ ಮಾತ್ರರಿಗೆ ಸಕಲ ಸುಖವನ್ನೂ ಪ್ರದಾನ ಮಾಡುವ, ಭೋಗ, ತ್ಯಾಗ ಮತ್ತು ಕರ್ಮ ಪ್ರಧಾನವಾದ ಈ ಜಗತ್ತನ್ನು ಸೃಷ್ಟಿಸಿ, ಈ ಜಗದ್ರೂಪೀ ಯಜ್ಞದಲ್ಲಿ, [**ಹೋತ್ರಾ ಕೃಣೋತಿ**] ಸಕಲ ಶ್ರೇಷ್ಠ ಕರ್ಮಗಳನ್ನೂ, ಸಕಲ ಶ್ರೇಷ್ಠ ಪದಾರ್ಥಗಳನ್ನೂ, ಸಕಲ ಶ್ರೇಷ್ಠ ಗುಣಗಳನ್ನೂ, ಸಕಲ ದಿವ್ಯ ಶಕ್ತಿಗಳನ್ನೂ ಉತ್ಪನ್ನ ಮಾಡುತ್ತಾನೆ. [**ಆದೃಧ್ನೋತಿ**] ಅವೆಲ್ಲವನ್ನೂ ಸರ್ವತೋಮುಖವಾಗಿ ಎಲ್ಲಾ ಕಡೆಯಿಂದ ವರ್ಧಿಸುತ್ತಾನೆ. [**ದೇವೇಷು**] ಅವೆಲ್ಲವೂ ದೇವತೆಗಳಲ್ಲಿ, ದಿವ್ಯಗುಣಗಳುಳ್ಳ ಪದಾರ್ಥಗಳಲ್ಲಿ ಹಾಗೂ ಮಾನವರಲ್ಲಿ [**ಗಚ್ಛತಿ**] ಪ್ರವಿಷ್ಟವಾಗುತ್ತವೆ.

ಭಾವಾರ್ಥ:- ಸರ್ವಜ್ಞನೂ, ಸಕಲ ಜಗದೊಡೆಯನೂ ಆದ ಪರಮಾತ್ಮನು, ಸಂಪೂರ್ಣ ಚರಾಚರ ಜಗತ್ತನ್ನು ವ್ಯಾಪಿಸಿಕೊಂಡು, ಸರ್ವವ್ಯಾಪಕನಾಗಿಯೂ, ಸರ್ವಾಂತರ್ಯಾಮಿಯಾಗಿಯೂ ಆಗಿದ್ದು, ಸಕಲ ಪದಾರ್ಥಗಳಿಗೆ ನಿರ್ದಿಷ್ಟವಾದ ಗತಿಯನ್ನು ಕೊಡುತ್ತಾನೆ. ಪ್ರಕಾಶವನ್ನು ಬೀರುವಂತಹ, ಸೂರ್ಯ ಚಂದ್ರ ನಕ್ಷತ್ರಾದಿಗಳನ್ನು ಪ್ರಕಾಶಿಸುತ್ತಾನೆ. ಈ ಚರಾಚರ ಜಗತ್ತಿನಲ್ಲಿರುವ ಸಕಲ ಜೀವರಾಶಿಗಳೂ ಅವನನ್ನೇ ಆಶ್ರಯಿಸಿಕೊಂಡಿವೆ. ಸರ್ವಾಧಾರನಾದ ಪರಮಾತ್ಮನು, ಪ್ರಾಣಿಮಾತ್ರರಿಗೆ ಸಮಸ್ತ ಪದಾರ್ಥಗಳನ್ನೂ, ಸಂಪೂರ್ಣ ಜ್ಞಾನವನ್ನೂ ಕೊಡುತ್ತಾನೆ. ಸರ್ವಮಂಗಳಮಯನಾದ ಪರಮಾತ್ಮನು, ಪ್ರಾಣಿಮಾತ್ರರಿಗೆ ಭೋಗ, ತ್ಯಾಗ ಮತ್ತು ಕರ್ಮಪ್ರಧಾನವಾದ ಜಗತ್ತನ್ನು ಸೃಷ್ಟಿಸಿ, ಈ ಜಗದ್ರೂಪೀ ಯಜ್ಞದಲ್ಲಿ ಸಕಲ ಶ್ರೇಷ್ಠ ಕರ್ಮಗಳನ್ನೂ, ಸಕಲ ಶ್ರೇಷ್ಠ ಪದಾರ್ಥಗಳನ್ನೂ, ಸಕಲ ಶ್ರೇಷ್ಠ ಗುಣಗಳನ್ನೂ, ಸಕಲ ದಿವ್ಯ ಶಕ್ತಿಗಳನ್ನೂ, ಉತ್ಪನ್ನ ಮಾಡಿ, ಎಲ್ಲವನ್ನೂ ಸರ್ವತೋಮುಖವಾಗಿ ವರ್ಧಿಸುತ್ತಾನೆ. ಅವೆಲ್ಲಾ ಗುಣಗಳು ದೇವತೆಗಳಲ್ಲಿ ಪ್ರವಿಷ್ಟವಾಗುತ್ತವೆ. ನ್ಯಾಯಕಾರಿಯೂ, ಕರುಣಾಳುವೂ ಆದ ಪರಮಾತ್ಮನು, ಎಲ್ಲರ ದುಃಖ ದಾರಿದ್ರ್ಯ, ಕ್ಲೇಶ, ಅಜ್ಞಾನ, ಅಂಧಕಾರ, ಅಶಾಂತಿ, ಅಪಜಯ ಎಲ್ಲವನ್ನೂ ಹರಣ ಮಾಡುತ್ತಾನೆ. ಎಲ್ಲರ ಭಕ್ತಿಯನ್ನೂ ಸ್ವೀಕರಿಸುತ್ತಾನೆ.

ಅತ್ಯಂತ ಸುಂದರ, ಮಾರ್ಮಿಕ ಮತ್ತು ಬೋಧಪ್ರದವಾದ ಈ ಮಂತ್ರವು, ನಮಗೆ, ಪರಮಾತ್ಮನು ತನ್ನ ಸೃಷ್ಟಿಯನ್ನು ವ್ಯವಸ್ಥಿತವಾಗಿ, ಯಾವ ರೀತಿ ನಡೆಸುತ್ತಾನೆ ಹಾಗೂ ಪರಮಾತ್ಮನ ಈ ಸೃಷ್ಟಿಯಜ್ಞವನ್ನು ನಾವು ಯಾವ ರೀತಿ ಮುಂದುವರೆಸಿಕೊಂಡು ಹೋಗಬೇಕು ಎಂಬುದನ್ನು ಬಹಳ ಮನೋಜ್ಞವಾಗಿ ತಿಳಿಯಪಡಿಸುತ್ತದೆ. ಪರಮಾತ್ಮನೆಂದಿಗೂ ನಮ್ಮ ಬಾಹ್ಯ ಇಂದ್ರಿಯಗಳಿಗೆ ಗೋಚರವಾಗುವುದಿಲ್ಲ. ಅವನ ಅನಂತ ಗುಣಗಳು, ಅನಂತ ಶಕ್ತಿ ಹಾಗೂ ಅನಂತ ಜ್ಞಾನವು ದೇವತೆಗಳಲ್ಲಿ ಪ್ರವಿಷ್ಟವಾಗಿವೆ. ಇವುಗಳಲ್ಲಿ ಕೆಲವು ಜಡ ದೇವತೆಗಳು. ಮತ್ತು ಕೆಲವು ಚೇತನ ದೇವತೆಗಳು. ಸೂರ್ಯದೇವತಾ, ಚಂದ್ರ ದೇವತಾ, ಅಗ್ನಿರ್ದೇವತಾ, ವಾತೋದೇವತಾ, ಆಪೋ ದೇವತಾ, ವೃಕ್ಷೋದೇವತಾ, ಪೃಥ್ವಿ ದೇವತಾ, ಇವೆಲ್ಲಾ ಜಡದೇವತೆಗಳು. ಮಾತೃದೇವೋಭವ, ಪಿತೃದೇವೋ ಭವ, ಆಚಾರ್ಯದೇವೋ ಭವ, ಅತಿಥಿದೇವೋ ಭವ, ವಿದ್ವಾಂಸೋ ವೈ ದೇವಾಃ, ಯೋ ದದಾತಿ ಸ ದೇವತಾ. ಇವೆಲ್ಲಾ ಚೇತನ ದೇವತೆಗಳು. ಜಡ ದೇವತೆಗಳಲ್ಲಿ ಪರಮಾತ್ಮನು ತನ್ನ ದಿವ್ಯಶಕ್ತಿಗಳನ್ನೂ, ತನ್ನ ದಿವ್ಯಗುಣಗಳನ್ನೂ, ತುಂಬಿಸಿದ್ದಾನೆ. ಎಲ್ಲಾ ಜಡದೇವತೆಗಳು ಪರಮಾತ್ಮನ ಶಕ್ತಿಯನ್ನು ಮತ್ತು ಗುಣಗಳನ್ನು ಪ್ರಾಪ್ತ ಮಾಡಿಕೊಂಡು ತಮ್ಮ ತಮ್ಮ ಕಾರ್ಯಗಳನ್ನು ನಿರಂತರವಾಗಿ ಮಾಡುತ್ತಿವೆ. ಯಾರಿಗೂ ಕೂಡ ನೀನು ದೇವತೆಯಾಗಿದ್ದೀಯೆ ಎಂದು ಹೇಳಬೇಕಾಗಿಲ್ಲ. ಆದರೆ ಮಾನವನಿಗೆ ಮಾತ್ರ, ನೀನು ಹಡೆದವ್ವ ಮಾತ್ರವಲ್ಲ, ಮಾತೃದೇವತೆಯೂ ಆಗಿದ್ದೀಯೆ. ನೀನು ಕೇವಲ ಜನ್ಮವನ್ನು ಕೊಡಲು ನಿಮಿತ್ತಮಾತ್ರನಾದ ತಂದೆ ಮಾತ್ರವಲ್ಲ, ಪಿತೃದೇವತೆ ಆಗಿದ್ದೀಯೆ. ನೀನು ಕೇವಲ ಧನೋಪಾರ್ಜನೆಗಾಗಿ ಕಲಿಸುವವಳಲ್ಲ, ಆಚಾರ್ಯದೇವತೆಯೇ ಆಗಿದ್ದೀಯೆ. ನೀನು ಕೇವಲ, ಹೊಟ್ಟೆಯನ್ನು ತುಂಬಿಸುವುದಕ್ಕೋಸ್ಕರ ಮಾತ್ರ ಬೇರೆಯವರ ಮನೆಗೆ ಹೋಗುವುದಲ್ಲ, ಅತಿಥಿ ದೇವತೆಯಾಗಿದ್ದೀಯೆ. ಸಮಸ್ತ ವಿದ್ವಾಂಸರೂ ಕೂಡ ದೇವತಾ ಸ್ವರೂಪಿಗಳೇ ಆಗಬೇಕು. ಮತ್ತು ಯಾವುದೇ ರೀತಿಯ ಫಲಾಪೇಕ್ಷೆ ಇಲ್ಲದೇ ಯಾರು ಕೊಡುತ್ತಾರೋ, ದಾನ ಮಾಡುತ್ತಾರೋ, ಅವರೆಲ್ಲಾ ದೇವತೆಗಳು. ಈ ರೀತಿಯಲ್ಲಿ ಪ್ರತಿಯೊಬ್ಬ ಮಾನವನು ಪುರುಷನಾಗಲೀ, ಸ್ತ್ರೀಯಾಗಲೀ ತಂದೆಯೂ ಆಗುತ್ತಾನೆ, ತಾಯಿಯೂ ಆಗುತ್ತಾಳೆ. ಅತಿಥಿಯೂ ಆಗುತ್ತಾನೆ. ಕನಿಷ್ಠ ಪಕ್ಷ ತನ್ನ ಮಕ್ಕಳಿಗಾದರೂ ಗುರು ಆಗುತ್ತಾನೆ. ಅದರೊಂದಿಗೆ ವಿದ್ವಾಂಸನೂ ಆಗಬೇಕು ಮತ್ತು

ದಾನಶೀಲನೂ ಆಗಬೇಕು ಎಂದು ಮಾನವ ಮಾತ್ರರಿಗೆ ಬೋಧಿಸುತ್ತದೆ. ಅದಕ್ಕೋಸ್ಕರವಾಗಿ ನಮ್ಮೆಲ್ಲರ ಜೀವನವನ್ನು ಯಜ್ಞಮಯವನ್ನಾಗಿ ಮಾಡಬೇಕು. "ಯಜ್ಞೋ ವೈ ಶ್ರೇಷ್ಠತಮಮ್ ಕರ್ಮ" ಸಮಸ್ತ ಶ್ರೇಷ್ಠ ಕರ್ಮಗಳೂ ಕೂಡ ಯಜ್ಞವೇ ಆಗಿವೆ. ಅದರೊಂದಿಗೆ ಪ್ರತಿದಿನ ಬ್ರಹ್ಮಯಜ್ಞ, ದೇವಯಜ್ಞ, ಪಿತೃಯಜ್ಞ, ಅತಿಥಿಯಜ್ಞ ಮತ್ತು ಬಲಿವೈಶ್ವದೇವ ಯಜ್ಞ ಎಂಬ ಈ ಪಂಚಮಹಾಯಜ್ಞಗಳನ್ನು ತಪ್ಪದೇ ಮಾಡಬೇಕು. ಇದರಿಂದ "ಯಜ್ಞೋ ವೈ ವಿಷ್ಣುಃ" ಸರ್ವವ್ಯಾಪಕನೂ, ಸರ್ವಪಾಲಕನೂ, ಆದ ಪರಮಾತ್ಮನು ಸಂಪ್ರೀತನಾಗುತ್ತಾನೆ. "ಯಜ್ಞೇನ ಯಜ್ಞಮಯಜಂತ ದೇವಾಃ" ಎಂಬುದರ ತಾತ್ಪರ್ಯವೂ ಕೂಡಾ ಇದೇ ಆಗಿದೆ.

ನಂತರ ಅವನು ಹೇಗಿದ್ದಾನೆ ಎಂಬುದನ್ನು ಹೇಳಲಾಗುತ್ತವೆ.

ನರಾಶಂಸಂ ಸುಧೃಷ್ಟಮ-ಮಪಶ್ಯಂ ಸಪ್ರಥಸ್ತಮಮ್ । ದಿವೋ ನ ಸದ್ಮಮಖಸಮ್ ॥೯॥

ಪದಾರ್ಥ:- [ನರಾಶಂಸಮ್] ಮಾನವ ಮಾತ್ರರಿಂದ ಪೂಜಿಸಲ್ಪಡುವವನೂ, ಉಪಾಸ್ಯನೂ, [**ಸುಧೃಷ್ಟಮಮ್**] ಸಕಲ ಚರಾಚರ ಜಗತ್ತನ್ನು ಉತ್ತಮವಾದ ರೀತಿಯಲ್ಲಿ ಧಾರಣ ಮಾಡಿಕೊಂಡವನೂ [**ಸ ಪ್ರಥಸ್ತಮಮ್**] ಅತ್ಯಂತ ವಿಶಾಲವಾದ ಆಕಾಶಕ್ಕಿಂತಲೂ ವಿಶಾಲನಾಗಿ, ಎಲ್ಲದರಲ್ಲಿಯೂ ವ್ಯಾಪಕನಾಗಿರುವವನೂ, [**ದಿವೋನ**] ಜಗತ್ತನ್ನೇ ಬೆಳಗಿಸುವ ಸೂರ್ಯನಂತೆಯೇ, ಸಕಲ ಜಗತ್ತನ್ನು ಬೆಳಗಿಸುತ್ತಾ, ಸಕಲ ಪ್ರಕಾಶ ಪುಂಜಗಳಿಗೂ ಪ್ರಕಾಶವನ್ನು ಬೀರುವವನೂ, [**ಸದ್ಮಮಖಸಮ್**] ಸಕಲ ಜೀವರಾಶಿಗಳಿಗೂ ಆಶ್ರಯವನ್ನು ಕೊಡುವ ಜಗತ್ತಿಗೂ, ಆಶ್ರಯವನ್ನು ಕೊಡುವವನೂ ಆದ [**ಸದಸಸ್ಪತಿಂ**] ಸಕಲ ಬ್ರಹ್ಮಾಂಡದ ಏಕಮಾತ್ರ ಸ್ವಾಮಿಯಾದ ಪರಮಾತ್ಮನನ್ನು [**ಅಪಶ್ಯಮ್**] ಪ್ರತಿಯೊಂದು ಕಣಕಣದಲ್ಲಿಯೂ, ಪ್ರತಿಯೊಂದು ಪದಾರ್ಥದಲ್ಲಿಯೂ, ಪ್ರತಿಯೊಂದು ಪ್ರಾಣಿಯಲ್ಲಿಯೂ ಕಾಣುತ್ತೇವೆ.

ಭಾವಾರ್ಥ:- ಸಂಪೂರ್ಣ ಬ್ರಹ್ಮಾಂಡದ ಏಕಮಾತ್ರ ಸ್ವಾಮಿಯಾದ ಪರಮಾತ್ಮನು, ಆಕಾಶಕ್ಕಿಂತಲೂ ವ್ಯಾಪಕನಾಗಿ, ಸಕಲ ಚರಾಚರ ಜಗತ್ತನ್ನು ಉತ್ತಮವಾದ ರೀತಿಯಲ್ಲಿ ಧಾರಣ ಮಾಡಿಕೊಂಡು, ತನ್ನ ಪ್ರಕಾಶದಿಂದ ಜಗತ್ತನ್ನೇ ಬೆಳಗಿಸುವ ಸೂರ್ಯ ಚಂದ್ರ ನಕ್ಷತ್ರಾದಿಗಳನ್ನೂ ತನ್ನ ಪ್ರಕಾಶದಿಂದ ಪ್ರಕಾಶಿಸುತ್ತಾ, ಸಕಲ ಜೀವರಾಶಿಗಳಿಗೂ ಆಶ್ರಯದಾತನಾಗಿ, ಮಾನವ ಮಾತ್ರರಿಂದ ಉಪಾಸಿಸಲ್ಪಡುತ್ತಾನೆ. ಅಂತಹ ಸರ್ವಾಧಾರ, ಸರ್ವರಕ್ಷಕ, ಸರ್ವೋಪಾಸ್ಯನಾದ ಪರಮಾತ್ಮನನ್ನು ಪ್ರತಿಯೊಂದು ಕಣಕಣದಲ್ಲಿಯೂ, ಪ್ರತಿಯೊಂದು ಪದಾರ್ಥದಲ್ಲಿಯೂ ಪ್ರಾಣಿಮಾತ್ರರಲ್ಲಿಯೂ ಕಾಣುತ್ತೇವೆ. ಭಗವಂತನ ಉಪಾಸನೆ ಎಂದರೆ ಕಣ್ಣು ಮುಚ್ಚಿಕೊಂಡು ಧ್ಯಾನ ಮಾಡುವುದು ಮಾತ್ರವಲ್ಲ. ಭಗವಂತನು ಸೃಷ್ಟಿಸಿದ ಸಕಲ ಪದಾರ್ಥಗಳನ್ನೂ, ಪ್ರಾಣಿಮಾತ್ರರನ್ನೂ ಪ್ರೀತಿಸಬೇಕು, ಗೌರವಿಸಬೇಕು, ರಕ್ಷಿಸಬೇಕು. ಪ್ರತಿಯೊಂದು ಕಣಕಣದಲ್ಲಿಯೂ, ಪ್ರಾಣಿಮಾತ್ರರಲ್ಲಿಯೂ ಭಗವಂತನ ಸ್ವರೂಪವನ್ನೇ ಕಾಣಬೇಕು. ಇದೇ ನಿಜವಾದ ರೀತಿಯಲ್ಲಿ ಭಗವಂತನ ಉಪಾಸನೆಯಾಗಿದೆ.

ಪೂರ್ವೋಕ್ತ ಹದಿನೇಳನೆಯ ಸೂಕ್ತದೊಂದಿಗೆ ಈ ಸೂಕ್ತದ ಸಂಗತೀಕರಣವಿದೆ ಎಂಬುದನ್ನು ತಿಳಿಯಬೇಕು.

ಹದಿನೆಂಟನೆಯ ಸೂಕ್ತ ಸಮಾಪ್ತ

ಸೂಕ್ತ ೧೯

ಮಂತ್ರಸಂಖ್ಯೆ ೯ । ಋಷಿಃ - ಮೇಧಾತಿಥಿಃ ಕಾಣ್ವಃ । ದೇವತಾ - ಅಗ್ನಿರ್ಮರುತಶ್ಚ । ಛಂದಃ - ೧, ೩-೮ ಗಾಯತ್ರೀ, ೨ ನಿಚೃದ್ ಗಾಯತ್ರೀ, ೯ ಪಿಪೀಲಿಕಾಮಧ್ಯಾನಿಚೃದ್ಗಾಯತ್ರೀ । ಸ್ವರಃ-ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಭೌತಿಕಾಗ್ನಿಯ ಗುಣಗಳ ವರ್ಣನೆ ಮಾಡಲಾಗಿದೆ.

ಪ್ರತಿ ತ್ಯಂ ಚಾರುಮಧ್ವರಂ ಗೋಪೀಥಾಯ ಪ್ರ ಹೂಯಸೇ । ಮರುದ್ಭಿರಗ್ನ ಆ ಗಹಿ ॥೧॥

ಪದಾರ್ಥ:- ಹೇ [ಅಗ್ನೇ] ಭೌತಿಕ ಅಗ್ನಿಯೇ ! [ತ್ವಂ] ನೀನು [ಪ್ರತಿ] ನಾವು ಮಾಡುವ ಪ್ರತಿಯೊಂದು [ಚಾರುಮ್] ಸುಂದರವಾದ, ವಿಶೇಷವಾದ [ಅಧ್ವರಮ್] ಯಜ್ಞವನ್ನು [ಗೋಪೀಥಾಯ] ರಕ್ಷಿಸಲು ಅಥವಾ ನಾವೆಲ್ಲರೂ ಮಾಡುವ ಸುಂದರವಾದ ಹಾಗೂ ವಿಶೇಷವಾದ ಯಜ್ಞದಲ್ಲಿ ನಮ್ಮೆಲ್ಲರನ್ನು ರಕ್ಷಿಸಲು [ಪ್ರಹೂಯಸೇ] ವಿಶೇಷವಾದ ಹವಿಸ್ಸುಗಳ ಮೂಲಕ ಪ್ರಜ್ವಲಿಸಲ್ಪಡುತ್ತೀಯೆ. [ಮರುದ್ಭಿಃ=ಮರುತಃ] ನಮ್ಮೆಲ್ಲರಿಗೆ ಜೀವನವನ್ನು ಮತ್ತು ಶಕ್ತಿಯನ್ನು ಪ್ರದಾನಮಾಡುವ ಪರಿಶುದ್ಧವಾದ ವಾಯುವು, [ಆಗಹಿ] ಎಲ್ಲಾ ದಿಕ್ಕಿನಿಂದ ಪ್ರಾಪ್ತವಾಗಲಿ.

ಭಾವಾರ್ಥ:- ನಾವೆಲ್ಲರೂ ಮಾಡುವ ಸುಂದರವಾದ ಹಾಗೂ ವಿಶೇಷವಾದ ಪ್ರತಿಯೊಂದು ಯಜ್ಞದಲ್ಲಿ ಈ ಅಗ್ನಿಯು, ವಿಶೇಷವಾದ ಹವಿಸ್ಸಿನ ಮೂಲಕ ಪ್ರಜ್ವಲಿಸಲ್ಪಡುತ್ತದೆ. ಯಜ್ಞದಲ್ಲಿ ಹಾಕಿದ ವಿಶೇಷವಾದ ಹವಿಸ್ಸಿನ ಮೂಲಕ, ವಾಯುವು ಪರಿಶುದ್ಧವಾಗಿ ನಮ್ಮೆಲ್ಲರಿಗೆ ಜೀವನವನ್ನೂ, ಶಕ್ತಿಯನ್ನೂ ಪ್ರದಾನಮಾಡಲಿ. ಮರುದ್ಭಿಃ = ತೃತೀಯಾ ವಿಭಕ್ತಿಯ ಬಹುವಚನದ ಸ್ಥಾನದಲ್ಲಿ ವಚನ ವ್ಯತ್ಯಯವನ್ನು ಮಾಡಿ ಪ್ರಥಮಾ ವಿಭಕ್ತಿಯ ಬಹುವಚನವನ್ನು ಬಳಸಿಕೊಳ್ಳಲಾಗಿದೆ. ಆಕಾಶತತ್ವದಿಂದ ವಾಯು, ವಾಯುವಿನಿಂದ ಅಗ್ನಿ, ಇದು ಸೃಷ್ಟಿಯ ಕ್ರಮ. ಆದರೆ ಈ ಮಂತ್ರದಲ್ಲಿ ಯಜ್ಞದಲ್ಲಿ ಹಾಕಿದ ವಿಶೇಷ ಹವಿಸ್ಸಿನ ಮೂಲಕ ವಾಯುಮಂಡಲವು ಪರಿಶುದ್ಧವಾಗಿ, ಪ್ರಾಣಿಮಾತ್ರರಿಗೆ ಜೀವನವೂ, ಶಕ್ತಿಯೂ ಪ್ರಾಪ್ತವಾಗಲಿ. ಪ್ರಾಣಿಮಾತ್ರರು ಎಲ್ಲಾ ರೀತಿಯ ರೋಗರುಜಿನಗಳಿಂದ ಮುಕ್ತರಾಗಲಿ, ಎಂಬುದೇ ಏಕಮಾತ್ರ ಉದ್ದೇಶ್ಯವಾಗಿದೆ.

ಪುನಃ ಅಗ್ನಿ ಶಬ್ದದಿಂದ ಪರಮಾತ್ಮ ಮತ್ತು ಭೌತಿಕಾಗ್ನಿಯ ಗುಣಗಳ ವರ್ಣನೆ ಮಾಡಲಾಗಿದೆ.

ನಹಿ ದೇವೋ ನ ಮರ್ತ್ಯೋ ಮಹಸ್ತವ ಕ್ರತುಂ ಪರಃ । ಮರುದ್ಭಿರಗ್ನ ಆ ಗಹಿ ॥೨॥

ಪದಾರ್ಥ:- ಹೇ [ಅಗ್ನೇ] ಸರ್ವಪ್ರಕಾಶ ಸ್ವರೂಪನೂ, ಸರ್ವಜ್ಞನೂ, ಆದ ಪರಮಾತ್ಮ! ನೀನು **[ಮರುದ್ಭಿಃ]** ಅಷ್ಟಾಂಗಯೋಗದ ಪಾಲನೆಯೊಂದಿಗೆ ಪ್ರಾಣಾಯಾಮ ಮತ್ತು ಸಾಧನೆಯ ಮೂಲಕ ನಮ್ಮೆಲ್ಲರ ಅಂತಃಕರಣದಲ್ಲಿಯೇ ಪ್ರಕಟವಾಗುತ್ತೀಯೆ. ಓ ಅನಂತಶಕ್ತಿಯುಳ್ಳ ಪರಮಾತ್ಮ! ನಿನ್ನ **[ಮಹಃ]** ಮಹಿಮೆಯು **[ಪರಃ]** ಅತ್ಯುತ್ತಮವೂ ಅನಂತವೂ ಆಗಿದೆ. **[ತವ]** ನಿನ್ನ **[ಕ್ರತುಮ್]** ಸೃಷ್ಟಿ-ಸ್ಥಿತಿ-ಲಯ ಮೊದಲಾದ ಕರ್ಮಗಳನ್ನು **[ನ ದೇವಃ]** ಯಾವುದೆಲ್ಲ ರೀತಿಯ ವಿದ್ವಾಂಸರಾಗಲೀ, ಋಷಿ-ಮುನಿಗಳು, ಯೋಗಿಗಳಾಗಲೀ, **[ನ ಮರ್ತ್ಯಃ]** ಯಾವುದೇ ರೀತಿಯ ಸಾಧಾರಣ ಮನುಷ್ಯನಾಗಲೀ ಸಂಪೂರ್ಣವಾಗಿ ಅರಿತುಕೊಳ್ಳಲು ಸಾಧ್ಯವಿಲ್ಲ, ಅರಿತವರೂ ಇಲ್ಲ. **[ಅಗ್ನೇ]** ಭೌತಿಕಾಗ್ನಿಯೇ! **[ತವ ಮಹಃ]** ನಿನ್ನ ಮಹಿಮೆಯೂ ಅಪಾರವಾಗಿದೆ. ನಿನ್ನ **[ಕ್ರತುಂ]** ಗುಣಗಳನ್ನು ಮತ್ತು ಶಕ್ತಿಯನ್ನು **[ನ ದೇವಃ]** ಯಾವುದೇ ವಿದ್ವಾಂಸನಾಗಲೀ, ಋಷಿಮುನಿಯಾಗಲೀ **[ನ ಮರ್ತ್ಯಃ]** ಯಾವುದೇ ಸಾಧಾರಣ ಮಾನವನಾಗಲೀ ಸಂಪೂರ್ಣ ಅರಿತವರು ಯಾರೂ ಇಲ್ಲ. **[ಮರುದ್ಭಿಃ ಆ ಗಹಿ]** ನೀನು ವಾಯುವಿನ ಸಹಾಯದಿಂದ ಪ್ರಜ್ವಲಿಸಲ್ಪಡುತ್ತೀಯೆ.

ಭಾವಾರ್ಥ:- ಸರ್ವಜ್ಞನೂ, ಸರ್ವಶಕ್ತನೂ, ಸರ್ವಪ್ರಕಾಶ ಸ್ವರೂಪನೂ, ಸರ್ವವ್ಯಾಪಕನೂ, ಸರ್ವಾಂತರ್ಯಾಮಿಯೂ ಆದ ಪರಮಾತ್ಮನ ಮಹಿಮೆಯು ಅತ್ಯುತ್ತಮ ಮತ್ತು ಅಪಾರವಾಗಿದೆ. ಅವನ ಅನಂತ ಗುಣಗಳನ್ನೂ, ಅನಂತ ಕರ್ಮಗಳನ್ನೂ, ಅನಂತ ಶಕ್ತಿಯನ್ನೂ, ಯಾವುದೇ ವಿದ್ವಾಂಸನಾಗಲೀ, ಋಷಿಮುನಿ ಯೋಗಿಗಳಿಂದಾಗಲೀ, ಸಂಪೂರ್ಣವಾಗಿ ಅರಿತುಕೊಳ್ಳಲು ಸಾಧ್ಯವಿಲ್ಲ. ಅವನನ್ನು ಸಂಪೂರ್ಣವಾಗಿ ಅರಿತವರು ಯಾರೂ ಇಲ್ಲ. ಅವನು ಅಷ್ಟಾಂಗಯೋಗದ ಪಾಲನೆಯೊಂದಿಗೆ ಪ್ರಾಣಾಯಾಮ ಮತ್ತು ಸಾಧನೆಯ ಮೂಲಕ ನಮ್ಮ ಅಂತಃಕರಣದಲ್ಲಿಯೇ ಪ್ರಕಟವಾಗುತ್ತಾನೆ. ಕೆಲವರು ಕೇವಲ ನಾಮಸ್ಮರಣೆಯಿಂದ, ಇನ್ನು ಕೆಲವರು ಕೇವಲ ಪ್ರಾಣಾಯಾಮ ಮತ್ತು ಧ್ಯಾನದ ಮೂಲಕ ಭಗವಂತನ ಸಾಕ್ಷಾತ್ಕಾರವಾಗುತ್ತದೆ ಎಂದು ಹೇಳುತ್ತಾರೆ. ಅದು ಕೇವಲ ಬೂಟಾಟಿಕೆ ಮಾತ್ರ. ಅಂತವರು ಬೇರೆಯವರನ್ನು ಮಾತ್ರವಲ್ಲ, ತಮ್ಮನ್ನು ತಾವೇ ವಂಚಿಸುತ್ತಾರೆ. ಭೌತಿಕ ಅಗ್ನಿಯ ಮಹಿಮೆಯೂ

ಅಪಾರವಾಗಿದೆ. ಈ ಅಗ್ನಿಯ ಗುಣಗಳನ್ನಾಗಲೀ, ಶಕ್ತಿಯನ್ನಾಗಲೀ, ರೂಪವನ್ನಾಗಲೀ, ಸರಿಯಾಗಿ ಅರಿತುಕೊಂಡವರು ಯಾರೂ ಇಲ್ಲ. ಯಾವ ವಿದ್ವಾಂಸರೂ, ಋಷಿ-ಮುನಿ-ಯೋಗಿಗಳು ಕೂಡ ಸಂಪೂರ್ಣವಾಗಿ ಅರಿತುಕೊಂಡವರು ಯಾರೂ ಇಲ್ಲ. ಮತ್ತು ಅರಿತುಕೊಳ್ಳಲೂ ಸಾಧ್ಯವಿಲ್ಲ. ಈ ಅಗ್ನಿಯು ಮಿಂಚಿನ ರೂಪದಲ್ಲಿಯೂ, ವಿದ್ಯುತ್ತಿನ ರೂಪದಲ್ಲಿಯೂ, ಕಾಡ್ಗಿಚ್ಚಿನ ರೂಪದಲ್ಲಿಯೂ, ಜ್ವಾಲಾಮುಖಿಯ ರೂಪದಲ್ಲಿಯೂ, ಸಮುದ್ರದಲ್ಲಿಯೂ, ಈ ರೀತಿಯಲ್ಲಿ ಅನೇಕ ವಿಧದಲ್ಲಿ ಅನೇಕ ರೂಪದಲ್ಲಿ ಅನೇಕ ಕಾರಣಗಳಿಂದ ಪ್ರಕಟವಾಗುತ್ತದೆ. ಈ ಅಗ್ನಿಯು ವಾಯುವಿನ ಸಹಾಯದಿಂದ ಪ್ರಜ್ವಲಿತವಾಗುತ್ತದೆ. ಸೃಷ್ಟಿಕ್ರಮದ ಪ್ರಕಾರ ಆಕಾಶದಿಂದ ವಾಯು, ವಾಯುವಿನಿಂದ ಅಗ್ನಿ ಪ್ರಕಟವಾಗುತ್ತದೆ.

ಈಗ ಅಗ್ನಿಶಬ್ದದಿಂದ ಈಶ್ವರ ಮತ್ತು ಭೌತಿಕ ಅಗ್ನಿಯ ಗುಣಗಳನ್ನು ವರ್ಣಿಸಲಾಗಿದೆ

ಯೇ ಮಹೋ ರಜಸೋ ವಿದುರ್ವಿಶ್ವೇ ದೇವಾಸೋ ಅದ್ರುಹಃ । ಮರುದ್ಭಿರಗ್ನ ಆ ಗಹಿ ॥೩॥

ಪದಾರ್ಥ:- **[ಯೇ]** ಯಾರು **[ಮರುದ್ಭಿಃ]** ಪ್ರಾಣಾಯಾಮದ ಮೂಲಕ ತಮ್ಮ ಪ್ರಾಣವನ್ನು ಸಹಸ್ರಾರ ಚಕ್ರದಲ್ಲಿ ಸ್ಥಿರಗೊಳಿಸಿ, ಯೋಗಸಾಧನೆಯ ಮೂಲಕ, ಸಮಾಧಿಸ್ಥಿತಿಯಲ್ಲಿ **[ಅಗ್ನ]** ಸರ್ವಪ್ರಕಾಶ ಸ್ವರೂಪನೂ, ಸರ್ವಜ್ಞನೂ, ಸರ್ವಶಕ್ತನೂ ಆದ ಪರಮಾತ್ಮನನ್ನು, ತಮ್ಮ ಅಂತಃಕರಣದಲ್ಲಿಯೇ **[ಆ]** ಅತ್ಯುತ್ತಮವಾದ ರೀತಿಯಲ್ಲಿ **[ಗಹಿ]** ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೋ (ಗಮ್ ಧಾತು = ಜ್ಞಾನಂ, ಗಮನಂ, ಪ್ರಾಪ್ತಿಶ್ಚೇತಿ) **[ತೇ]** ಅಂತಹ **[ಅದ್ರುಹಃ]** ಯಾರಿಗೂ ದ್ರೋಹವನ್ನು ಮಾಡದೇ ಯಾರೊಂದಿಗೂ ವೈರತ್ವವನ್ನು ಮಾಡದೇ, ಸರ್ವರೊಂದಿಗೆ ಸಮಾನ ರೀತಿಯಲ್ಲಿ, ನಿಷ್ಕಪಟತನದಿಂದ ಸ್ನೇಹವನ್ನೂ, ಪ್ರೇಮವನ್ನೂ ಮಾಡುವ, ರಾಗ-ದ್ವೇಷ ರಹಿತರಾದ **[ವಿಶ್ವೇ ದೇವಾಸಃ]** ಸಮಸ್ತ ವಿದ್ವಾಂಸರು **[ಮಹೋ]** ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಬೃಹತ್ ವಿಶಾಲವಾದ **[ರಜಸಃ]** ಲೋಕಲೋಕಾಂತರಗಳನ್ನು **[ವಿದುಃ]** ಬಲ್ಲವರಾಗುತ್ತಾರೆ. ಸಕಲ ಲೋಕ ಲೋಕಾಂತರಗಳ ಜ್ಞಾನವನ್ನೂ, ಭಗವಂತನ ಜ್ಞಾನ ಜ್ಯೋತಿಯ ಮೂಲಕ ಪ್ರಾಪ್ತಮಾಡಿಕೊಳ್ಳುತ್ತಾರೆ.

ಭಾವಾರ್ಥ:- ಯಾರು, ಪ್ರಾಣಾಯಾಮದ ಮೂಲಕ ತಮ್ಮ ಕುಂಡಲಿನೀ ಶಕ್ತಿಯನ್ನು ಜಾಗೃತವನ್ನಾಗಿ ಮಾಡಿ, ಪ್ರಾಣ ಶಕ್ತಿಯನ್ನು ಸಹಸ್ರಾರ ಚಕ್ರದಲ್ಲಿ ಸ್ಥಿರಗೊಳಿಸಿ, ಯೋಗಸಾಧನೆಯ ಮೂಲಕ ಸಮಾಧಿ ಸ್ಥಿತಿಯಲ್ಲಿ, ಸರ್ವ ಪ್ರಕಾಶಸ್ವರೂಪನೂ, ಸರ್ವಜ್ಞನೂ ಆದ ಪರಮಾತ್ಮನನ್ನು ತಮ್ಮ ಅಂತಃಕರಣದಲ್ಲಿಯೇ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೋ, ಅಂತಹ ಯಾರಿಗೂ ದ್ರೋಹ ಮಾಡದೇ, ಯಾರೊಂದಿಗೂ ವೈರತ್ವವನ್ನು ಮಾಡದೇ, ಸರ್ವರನ್ನೂ ಸಮಾನ ರೀತಿಯಲ್ಲಿ ನಿಷ್ಕಪಟತನದಿಂದ ಪ್ರೀತಿಸುವ, ರಾಗ-ದ್ವೇಷರಹಿತರಾದ ಸಮಸ್ತ ವಿದ್ವಾಂಸರೂ, ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಿಶಾಲವಾದ ಲೋಕ ಲೋಕಾಂತರಗಳನ್ನು, ಲೋಕ-ಲೋಕಾಂತರಗಳ ಜ್ಞಾನವನ್ನು ಪರಮಾತ್ಮನ ಜ್ಞಾನ-ಜ್ಯೋತಿಯ ಮೂಲಕ ಪ್ರಾಪ್ತ ಮಾಡಿಕೊಳ್ಳುತ್ತಾರೆ. ಇಂದು ವಿಜ್ಞಾನಿಗಳು, ಪ್ರತಿಯೊಂದು ಗ್ರಹೋಪಗ್ರಹಗಳಿಗೆ ರಾಕೆಟಿನ ಮೂಲಕ ಉಪಗ್ರಹಗಳನ್ನು ಕಳುಹಿಸಿ, ಸಾಧ್ಯವಾದ ಕಡೆಗಳಲ್ಲೆಲ್ಲಾ ವಿಜ್ಞಾನಿಗಳನ್ನು ಕಳುಹಿಸಿ, ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ. ಕೆಲವನ್ನು ಕಣ್ಣಾರೆ ಕಂಡು, ಕೆಲವನ್ನು ಉಪಗ್ರಹಗಳು ಕಳುಹಿಸುವ ಚಿತ್ರದ ಮೂಲಕ, ಇನ್ನು ಕೆಲವನ್ನು ಊಹಿಸಿ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಹಿಂದಿನ ಕಾಲದಲ್ಲಿ ಋಷಿ, ಮುನಿಗಳು, ಯೋಗಿಗಳು ತಮ್ಮ ಯೋಗ ಸಾಧನೆಯ ಮೂಲಕ ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿ, ಪರಮಾತ್ಮನ ಜ್ಞಾನ ಜ್ಯೋತಿಯ ಮೂಲಕ ತಮ್ಮ ಪಿಂಡದಲ್ಲಿಯೇ ಬ್ರಹ್ಮಾಂಡವನ್ನು ಕಾಣುತ್ತಿದ್ದರು. ಈ ಸಾಧನೆಯನ್ನು ಇಂದಿಗೂ ಮಾಡಬಹುದು. ಮುಂದೆಯೂ ಮಾಡಲು ಸಾಧ್ಯವಿದೆ. ಯಾರೆಲ್ಲಾ ಯೋಗ ಸಾಧನೆಯ ಮೂಲಕ ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳುತ್ತಾರೋ, ಅವರು ಸದಾಕಾಲದಲ್ಲಿಯೂ ಪರಮಾತ್ಮನ ಸೃಷ್ಟಿಯ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳುತ್ತಾರೆ.

ಪುನಃ ಉಕ್ತ ವಾಯುವು ಯಾವ ಪ್ರಕಾರದ್ದು ಎಂಬುದನ್ನು ತಿಳಿಸಲಾಗಿದೆ.

ಯ ಉಗ್ರಾ ಅರ್ಕಮಾನೃಚು-ರನಾಧೃಷ್ಟಾಸ ಓಜಸಾ । ಮರುದ್ಭಿರಗ್ನ ಆ ಗಹಿ ॥೪॥

ಪದಾರ್ಥ:– [ಯೇ ಉಗ್ರಾ] ಈ ಉಗ್ರವಾದ = ಅತ್ಯಂತ ತೀವ್ರವೇಗಗತಿಯಿಂದ ಚಲಿಸುವ [ಅನಾಧೃಷ್ಟಾಸಃ] ಯಾರಿಂದಲೂ ತಡೆಯಲು ಅಸಾಧ್ಯವಾದ ವಾಯುವು [ಓಜಸಾ] ತನ್ನ ಬಲ ಹಾಗೂ ಗುಣಗಳಿಂದ ಸಂಯುಕ್ತವಾಗಿ [ಅರ್ಕಮ್] ಸೂರ್ಯನ ಪ್ರಖರವಾದ ಕಿರಣಗಳನ್ನು ತಡೆದು ಅವುಗಳ ದೋಷವನ್ನು ನಿವಾರಣೆ ಮಾಡಿ [ಆನೃಚುಃ] ಸೂರ್ಯನ ಸರ್ವಹಿತಕಾರಿ ಗುಣಗಳನ್ನು ಪ್ರಕಟಪಡಿಸುತ್ತದೆ. [ಮರುದ್ಭಿಃ] ಸಂಪೂರ್ಣ ಜಗತ್ತಿನ ಮತ್ತು ಜಗತ್ತಿನಲ್ಲಿರುವ ಸಕಲ ಜೀವರಾಶಿಗಳ ಕಲ್ಯಾಣವನ್ನೇ ಮಾಡುವ ವಾಯುವಿನೊಂದಿಗೆ [ಅಗ್ನಿಃ] ಎಲ್ಲರಿಗೂ ಪ್ರಕಾಶವನ್ನು ಬೀರುವ ಹಾಗೂ ಶಕ್ತಿಯನ್ನು ಕೊಡುವ ಈ ಅಗ್ನಿಯು ಹಲವು ವಿಧದಲ್ಲಿ, ಹಲವು ರೂಪದಲ್ಲಿ ಪ್ರಕಟವಾಗಿ [ಆ ಗಹಿ] ಎಲ್ಲರಿಗೂ, ಎಲ್ಲಾ ರೀತಿಯಲ್ಲಿ ಪ್ರಯೋಜನವನ್ನೇ ಮಾಡುತ್ತದೆ.

ಭಾವಾರ್ಥ:– ವಾಯುವು ಅತ್ಯಂತ ತೀವ್ರಗತಿಯುಳ್ಳದ್ದೂ, ಅತ್ಯಂತ ಬಲಶಾಲಿಯೂ ಆಗಿದೆ. ಅದರ ಗತಿಯನ್ನಾಗಲೀ, ಬಲವನ್ನಾಗಲೀ ಯಾರಿಂದಲೂ ಎದುರಿಸಲು ಸಾಧ್ಯವಿಲ್ಲ. ಈ ವಾಯುವು ತನ್ನ ಬಲದಿಂದ ಸಂಯುಕ್ತವಾಗಿದ್ದುಕೊಂಡು, ಸೂರ್ಯನ ಪ್ರಖರವಾದ ಕಿರಣಗಳನ್ನು ತಡೆಯುತ್ತದೆ. ವಾತಾವರಣದಲ್ಲಿ ಓಜೋನಿನ ದಟ್ಟವಾದ ಆವರಣವು, ಸೂರ್ಯನ ಅಲ್ಟ್ರಾ ವಾಯ್‌ಲೆಟ್ ಕಿರಣಗಳನ್ನು ತಡೆಯುತ್ತದೆ. ಈ ಅಲ್ಟ್ರಾ ವಾಯ್ ಲೆಟ್ ಕಿರಣಗಳು ನೇರವಾಗಿ ಭೂಮಿಗೆ ಪ್ರವೇಶಿಸಿದರೆ, ಭೂಮಿಯಲ್ಲಿರುವ ಎಲ್ಲವನ್ನೂ ನಾಶಮಾಡುತ್ತದೆ. ಈ ವಾಯುಮಂಡಲವು ಸೂರ್ಯನ ವಿನಾಶಕಾರೀ ಕಿರಣಗಳನ್ನು ಮತ್ತು ಶಕ್ತಿಯನ್ನು ತಡೆದು, ಲೋಕಹಿತಕಾರೀ ಗುಣಗಳನ್ನು ಮಾತ್ರ ಪ್ರಕಟವಾಗುವಂತೆ ಮಾಡುತ್ತದೆ. ಅದೇ ರೀತಿ ಉಲ್ಕಾಪಾತವಾದಾಗ ಅದನ್ನು ಅಲ್ಲಿಯೇ ತಡೆದು, ಭಸ್ಮವನ್ನಾಗಿ ಮಾಡಿ ಭೂಮಿಗೆ ಯಾವುದೇ ರೀತಿಯ ಹಾನಿಯಾಗದಂತೆ ಜಾಗ್ರತೆವಹಿಸುತ್ತದೆ. ಆದುದರಿಂದ ಈ ವಾಯುವನ್ನು "ವಾತೋ ದೇವತಾ" ಎಂದು ಹೇಳುತ್ತಾರೆ. ಜೀವಮಾತ್ರರಿಗೆ ಜೀವನವನ್ನು ಕೊಡುವ ವಾಯುವಿನೊಂದಿಗೆ ಅಗ್ನಿಯೂ ಎಲ್ಲರಿಗೂ ಪ್ರಕಾಶವನ್ನೂ, ಶಕ್ತಿಯನ್ನೂ ಕೊಡುತ್ತದೆ. ಈ ಅಗ್ನಿಯು ಹಲವು ವಿಧದಲ್ಲಿ ಹಲವು ರೂಪದಲ್ಲಿ ನಮ್ಮ ಮುಂದೆ ಪ್ರಕಟವಾಗುತ್ತದೆ. ಸಮಸ್ತ ಮಾನವರು, ವಾಯು ಮತ್ತು ಅಗ್ನಿಯ ಮೂಲಕ ಸಕಲ ಪ್ರಯೋಜನಗಳನ್ನು ಪಡೆಯಬೇಕು ಎಂಬುದೇ ಈ ಮಂತ್ರದ ಆಶಯ.

ನಂತರ ಉಕ್ತವಾಯುವು ಹೇಗಿದೆ ಎಂಬುದನ್ನು ವರ್ಣಿಸಲಾಗುತ್ತದೆ.

ಯೇ ಶುಭ್ರಾ ಘೋರವರ್ಪಸಃ ಸುಕ್ಷತ್ರಾಸೋ ರಿಶಾದಸಃ । ಮರುದ್ಭಿರಗ್ನ ಆ ಗಹಿ ॥೫॥

ಪದಾರ್ಥ:– ಹೇ [ಅಗ್ನೇ] ಓ ಸರ್ವರಕ್ಷಕನಾದ ಪರಮಾತ್ಮ! [ಯೇ ಘೋರವರ್ಪಸಃ] ಈ ಅತ್ಯಂತ ಭಯಂಕರ ವೃಷ್ಟಿಯನ್ನು ಮಾಡುವ, [ಸುಕ್ಷತ್ರಾಸಃ] ಅಂತರಿಕ್ಷದಲ್ಲಿ ವ್ಯಾಪಿಸಿಕೊಂಡು ತಮ್ಮದೇ ಆದ ವಿನಾಶಕಾರೀ ರಾಜ್ಯವನ್ನು ಮಾಡುವ [ವಾಯವಃ] ಉಗ್ರವಾದ ಚಂಡಮಾರುತ, ಸುಂಟರಗಾಳಿ ಮೊದಲಾದುವೆಲ್ಲಾ ತಮ್ಮ ವಿನಾಶಕಾರೀ ರೂಪವನ್ನು ತೋರೆದು [ರಿಶಾದಸಃ] ಸಕಲ ರೋಗ ರುಜಿನಗಳನ್ನು ದೂರಮಾಡುವ, [ಶುಭ್ರಾ] ಪರಿಶುದ್ಧವಾದ ಹಾಗೂ ಸರ್ವರಿಗೂ ಜೀವನವನ್ನು ಪ್ರದಾನವನ್ನು ಮಾಡುವ [ಮರುದ್ಭಿಃ] ಮಂದಮಾರುತದೊಂದಿಗೆ [ಆ ಗಹಿ] ಎಲ್ಲಾ ದಿಕ್ಕಿನಿಂದ ಸದಾಕಾಲ ಪ್ರಾಪ್ತವಾಗಲಿ.

ಭಾವಾರ್ಥ:– ಓ ಸರ್ವರಕ್ಷಕನಾದ ಪರಮಾತ್ಮ! ನಿನ್ನ ಕೃಪೆಯಿಂದ ಈ ಅತ್ಯಂತ ಭಯಾನಕ ವೃಷ್ಟಿಯನ್ನು ಮಾಡುವ ಚಂಡಮಾರುತ ಮತ್ತು, ಅಂತರಿಕ್ಷದಲ್ಲಿ ವ್ಯಾಪಿಸಿಕೊಂಡು ತಮ್ಮದೇ ಆದ ವಿನಾಶಕಾರೀ ರಾಜ್ಯವನ್ನು

ಮಾಡುವ, ಅರ್ಥಾತ್ ಎಲ್ಲಾ ರೀತಿಯಲ್ಲಿ ವಿನಾಶವನ್ನೇ ಮಾಡುವ ಸುಂಟರಗಾಳಿ ಮೊದಲಾದ ಅನೇಕ ವಿನಾಶಕಾರೀ ರೂಪದಲ್ಲಿ ಬೀಸುವ ಉಗ್ರವಾಯು, ತನ್ನ ರುದ್ರರೂಪವನ್ನು ತೊರೆದು, ಎಲ್ಲಾ ರೀತಿಯ ರೋಗರುಜಿನಗಳನ್ನು ದೂರ ಮಾಡುವ ಪರಿಶುದ್ಧವಾದ ಹಾಗೂ ಸರ್ವರಿಗೂ ಜೀವನವನ್ನೇ ಪ್ರದಾನ ಮಾಡುವ, ಮಂದ ಮಾರುತದೊಂದಿಗೆ ಎಲ್ಲಾ ದಿಕ್ಕಿನಿಂದ ಸದಾಕಾಲ ನಮ್ಮೆಲ್ಲರಿಗೆ ಪ್ರಾಪ್ತವಾಗಲಿ:

ನಂತರ ಅದೇ ವಿಷಯವನ್ನು ಹೇಳಲಾಗುತ್ತದೆ.

ಯೇ ನಾಕಸ್ಯಾಧಿ ರೋಚನೇ ದಿವಿ ದೇವಾಸ ಆಸತೇ । ಮರುದ್ಭಿರಗ್ನ ಆ ಗಹಿ ॥೬॥

ಪದಾರ್ಥ:– [ನಾಕಸ್ಯ] ಸರ್ವರಿಗೂ ಪ್ರಕಾಶವನ್ನು ಬೀರುವ ಹಾಗೂ ಸುಖವನ್ನು ಪ್ರದಾನ ಮಾಡುವ ಸೂರ್ಯನ [ಅಧಿ] ಮೇಲೆ ಅರ್ಥಾತ್ ನಮಗೆ ಕಣ್ಣಿಂದ ಕಾಣುವ ಈ ಸೂರ್ಯನಿಗಿಂತಲೂ ಮೇಲೆ, [ರೋಚನೇ ದಿವಿ] ಅತ್ಯಂತ ಪ್ರಕಾಶಮಾನ ದ್ಯುಲೋಕದಲ್ಲಿ ಇರುವ [ಯೇ ದೇವಾಸಃ ಆಸತೇ] ಯಾವ ಸೂರ್ಯಚಂದ್ರಾದಿ ಪ್ರಕಾಶಮಾನ ಲೋಕಲೋಕಾಂತರಗಳಿವೆಯೋ, ಗ್ರಹೋಪಗ್ರಹಗಳಿವೆಯೋ ಅಲ್ಲಿಯೂ ಕೂಡ [ಮರುದ್ಭಿಃ] ವಾಯುವಿನೊಂದಿಗೆ [ಅಗ್ನ ಆಗಹಿ] ಅಗ್ನಿಯು ಪ್ರಾಪ್ತವಾಗುತ್ತದೆ.

ಭಾವಾರ್ಥ:– ಪರಮಾತ್ಮನು ಸೃಷ್ಟಿಸಿದ ಈ ಬ್ರಹ್ಮಾಂಡದಲ್ಲಿ ಹಲವಾರು ಸೂರ್ಯ, ಚಂದ್ರ, ಗ್ರಹೋಪಗ್ರಹಗಳಿವೆ. ನಮಗೆ ಕಣ್ಣಿಂದ ಕಾಣಲು ಸಿಗುವ, ಎಲ್ಲರಿಗೂ ಪ್ರಕಾಶವನ್ನು ಬೀರುತ್ತಾ ಸುಖವನ್ನು ಪ್ರದಾನ ಮಾಡುವ, ಈ ಸೂರ್ಯನಿಗಿಂತಲೂ ಮೇಲೆ, ಅತ್ಯಂತ ಪ್ರಕಾಶಮಾನ ದ್ಯುಲೋಕದಲ್ಲಿ ಇರುವ, ಯಾವ ಸೂರ್ಯ, ಚಂದ್ರ, ನಕ್ಷತ್ರ, ಗ್ರಹೋಪಗ್ರಹಗಳಿವೆಯೋ, ಅಲ್ಲಿಯೂ ಕೂಡಾ ವಾಯುವಿನೊಂದಿಗೆ ಅಗ್ನಿಯೂ ಪ್ರಾಪ್ತವಾಗುತ್ತದೆ.

ಮಾನವನು, ಈ ವಿಶಾಲವಾದ ಬ್ರಹ್ಮಾಂಡದಲ್ಲಿ, ಒಂದು ಧೂಳಿನ ಕಣದಂತೆಯೇ ಎಂದು ತಿಳಿದು, ತನ್ನ ಅಹಂಕಾರವನ್ನು ತಡೆದು, ತನ್ನ ಜ್ಞಾನವನ್ನೂ, ಶಕ್ತಿಯನ್ನೂ ವರ್ಧಿಸಿಕೊಂಡು, ಎಲ್ಲವನ್ನೂ ಅರಿತುಕೊಳ್ಳಲು ಪ್ರಯತ್ನಿಸಬೇಕು. ಹಾಗೂ ಪ್ರತಿಯೊಂದು ಪದಾರ್ಥದಿಂದ ಸಂಪೂರ್ಣ ಪ್ರಯೋಜನವನ್ನು ಪಡೆದು, ಅದರ ಸದುಪಯೋಗವನ್ನು ಮಾಡಬೇಕು. ಭಗವಂತನು ಮಾನವನನ್ನು ಈ ಸೃಷ್ಟಿಯ ಸಂರಕ್ಷಣೆಗೋಸ್ಕರ ಸೃಷ್ಟಿಸಿದ್ದಾನೆ. ಸರ್ವರಕ್ಷಕನೂ, ಸರ್ವಶಕ್ತನೂ ಆದ ಪರಮಾತ್ಮನು, ಎಲ್ಲವನ್ನೂ ಮತ್ತು ಎಲ್ಲರನ್ನೂ ರಕ್ಷಿಸುತ್ತಾನೆ. ಆದರೆ ಪರಮಾತ್ಮನು ಭೋಕ್ತವಲ್ಲ. ಈ ಸೃಷ್ಟಿಯು ಭೋಗ್ಯ. ಸಕಲ ಜೀವರಾಶಿಗಳು ಇದನ್ನು ಭೋಗಿಸುವವರು. ಆದರೆ ಬುದ್ಧಿ ಮತ್ತು ವಿವೇಕ ಕೇವಲ ಮಾನವನಲ್ಲಿ ಮಾತ್ರ ಇರುವ ಕಾರಣ ಸೃಷ್ಟಿಯನ್ನು ಕಾಪಾಡುವ ಹೊಣೆಗಾರಿಕೆ, ಜವಾಬ್ದಾರಿ ಮಾನವನ ಮೇಲೆ ಇದೆ. ಇದನ್ನು ಸರಿಯಾಗಿ ಅರಿತುಕೊಂಡು ಪ್ರತಿಯೊಂದು ಪದಾರ್ಥದ ಸದುಪಯೋಗವನ್ನೂ ಮಾಡಬೇಕು ವಿನಾ ದುರುಪಯೋಗವನ್ನಲ್ಲ.

ನಂತರ ಉಕ್ತವಾಯುವು ಯಾವ ಕಾರ್ಯಗಳಿಗೆ ಕಾರಣನಾಗುತ್ತಾನೆ ಎಂಬುದನ್ನು ವಿವರಿಸಲಾಗಿದೆ.

ಯ ಈಙ್ಖಯಂತಿ ಪರ್ವತಾನ್ ತಿರಃ ಸಮುದ್ರಮರ್ಣವಮ್ । ಮರುದ್ಭಿರಗ್ನ ಆ ಗಹಿ ॥೭॥

ಪದಾರ್ಥ:– [ಯೇ] ಯಾವ ವಾಯುವು [ಪರ್ವತಾನ್] ಮೇಘಗಳನ್ನು [ಈಙ್ಖಯಂತಿ] ಭಿನ್ನ ಭಿನ್ನ ಮಾಡುತ್ತದೆಯೋ, [ಸಮುದ್ರಂ] ಅಂತರಿಕ್ಷವನ್ನು ಹಾಗೂ ಅಂತರಿಕ್ಷದ ಕೆಳಗೆ [ತಿರಃ ಅರ್ಣವಂ] ಭೂಮಿಯ ಮೇಲಿರುವ ಸಮುದ್ರವನ್ನೂ, ಜಲದಿಂದ ಪೂರ್ಣವನ್ನಾಗಿ ಮಾಡುತ್ತದೆಯೋ [ಮರುದ್ಭಿಃ] ಆ ವಾಯುವಿನೊಂದಿಗೆ [ಅಗ್ನ ಆಗಹಿ] ವಿದ್ಯುತ್ ಅರ್ಥಾತ್ ಮಿಂಚು ಪ್ರಾಪ್ತವಾಗುತ್ತದೆ.

ಭಾವಾರ್ಥ:- ಯಾವ ವಾಯುವು ಮೋಡಗಳನ್ನು ಭಿನ್ನ ಭಿನ್ನವನ್ನಾಗಿ ಮಾಡುತ್ತದೆಯೋ, ಅಂತರಿಕ್ಷವನ್ನೂ ಹಾಗೂ ಅಂತರಿಕ್ಷದ ಕೆಳಗೆ ಭೂಮಿಯಲ್ಲಿ ಇರುವ ಸಮುದ್ರವನ್ನು ಜಲದಿಂದ ಪೂರ್ಣವನ್ನಾಗಿ ಮಾಡುತ್ತದೆಯೋ, ಆ ಜಲದಿಂದ ಕೂಡಿದ ವಾಯುವಿನೊಂದಿಗೆ ವಿದ್ಯುತ್ ಅರ್ಥಾತ್ ಮಿಂಚು ಪ್ರಾಪ್ತವಾಗುತ್ತವೆ. ಮೋಡಗಳು, ವಾಯುವಿನ ಮೂಲಕ ಅತ್ತಿಂದಿತ್ತ ಸಂಚರಿಸುವಾಗ ಪರಸ್ಪರ ಢಿಕ್ಕಿ ಹೊಡೆದು, ಗುಡುಗು ಮತ್ತು ಮಿಂಚು ಉಂಟಾಗುತ್ತದೆ.

ಇವೇ ಪ್ರಕಾಶ ಮೊದಲಾದ ಗುಣಗಳ ವಿಸ್ತಾರವನ್ನು ಮಾಡುತ್ತವೆ ಎಂಬುದು ಮುಂದಿನ ಮಂತ್ರದಲ್ಲಿ ಹೇಳಲಾದ ವಿಷಯ

ಆ ಯೇ ತನ್ವಂತಿ ರಶ್ಮಿಭಿ-ಸ್ತಿರಃ ಸಮುದ್ರಮೋಜಸಾ । ಮರುದ್ಭಿರಗ್ನ ಆ ಗಹಿ ॥೮॥

ಪದಾರ್ಥ:- [ಆ ಯೇ] ಯಾವ ವಾಯು [ರಶ್ಮಿಭಿಃ] ಸೂರ್ಯನ ಪ್ರಖರವಾದ ಕಿರಣಗಳ ತಾಪದಿಂದ [ತನ್ವಂತಿ] ಅಂತರಿಕ್ಷದಲ್ಲಿ ವ್ಯಾಪಿಸುತ್ತದೆಯೋ, ಅದು [ಓಜಸಾ] ತನ್ನ ಬಲದಿಂದ, ಅತ್ಯಂತ ವೇಗದಿಂದ [ಸಮುದ್ರಮ್] ಅಂತರಿಕ್ಷವನ್ನೂ ಹಾಗೂ ಜಲಮಯ ಸಾಗರವನ್ನೂ [ತಿರಃ **ಕುರ್ವಂತಿ**] ಅಲ್ಲೋಲ ಕಲ್ಲೋಲವನ್ನಾಗಿ ಮಾಡುತ್ತದೆ. [**ಮರುದ್ಭಿಃ**] ಅಂತಹ ಮರುತ್ ಗಣ ಅರ್ಥಾತ್ ತೀವ್ರವಾದ ಗತಿಯಲ್ಲಿ ಚಲಿಸುವ ಗಾಳಿಯೊಂದಿಗೆ [**ಅಗ್ನ ಆಗಹಿ**] ಅಗ್ನಿಯು ವಿದ್ಯುತ್ತು ಅರ್ಥಾತ್ ಮಿಂಚಿನ ರೂಪದಲ್ಲಿ ಪ್ರಾಪ್ತವಾಗುತ್ತದೆ.

ಭಾವಾರ್ಥ:- ಸಾಧಾರಣವಾಗಿ ಸರ್ವರಿಗೂ ಜೀವನವನ್ನೂ, ಚೈತನ್ಯತೆಯನ್ನೂ ಪ್ರದಾನಮಾಡುವ ವಾಯುವು, ಸೂರ್ಯನ ಪ್ರಖರ ಕಿರಣಗಳಿಂದ, ಅತ್ಯಂತ ತಪ್ತವಾಗಿ ಅರ್ಥಾತ್ ಬಿಸಿಯಾಗಿ, ಅಂತರಿಕ್ಷದಲ್ಲಿ ಬಿರುಗಾಳಿಯ ರೂಪದಲ್ಲಿ ವ್ಯಾಪಿಸಿಕೊಳ್ಳುತ್ತದೆ. ಆ ಗಾಳಿಯು ತನ್ನ ಬಲದಿಂದ ಹಾಗೂ ತೀವ್ರವಾದ ವೇಗದಿಂದ, ಅಂತರಿಕ್ಷವನ್ನೂ ಮತ್ತು ಜಲದಿಂದ ಕೂಡಿದ ಸಮುದ್ರವನ್ನೂ ಅಲ್ಲೋಲಕಲ್ಲೋಲವನ್ನಾಗಿ ಮಾಡುತ್ತದೆ. ಇದರಿಂದ ಭಯಂಕರವಾದ ಮಳೆಯು ಉಂಟಾಗುತ್ತದೆ. ಈ ಮರುತ್ ಗಣದೊಂದಿಗೆ ಅಗ್ನಿಯು ಮಿಂಚಿನ ರೂಪದಲ್ಲಿ ನಮಗೆ ಪ್ರಾಪ್ತವಾಗುತ್ತದೆ.

ನಂತರ ಅವುಗಳಿಂದ ಏನನ್ನು ಸಾಧಿಸಬೇಕು ಎಂಬುದನ್ನು ವಿವರಿಸಲಾಗುತ್ತದೆ.

ಅಭಿ ತ್ವಾ ಪೂರ್ವಪೀತಯೇ ಸೃಜಾಮಿ ಸೋಮ್ಯಂ ಮಧು । ಮರುದ್ಭಿರಗ್ನ ಆ ಗಹಿ ॥೯॥

ಪದಾರ್ಥ:- [ಮರುದ್ಭಿಃ] ಯಾವ ವಾಯುವಿನಿಂದ [ಅಗ್ನ ಆಗಹಿ] ವಿದ್ಯುಚ್ಛಕ್ತಿ ಪ್ರಾಪ್ತವಾಗುತ್ತದೆಯೋ ಹಾಗೂ ಅದರಿಂದ ಸಕಲ ಕಾರ್ಯಗಳು ಸಿದ್ಧವಾಗುತ್ತವೆಯೋ, ಆ ವಿದ್ಯುತ್ತಿನಿಂದ [**ಪೂರ್ವಪೀತಯೇ**] ಮೊದಲು ಪಾನ ಮಾಡಲು ಅರ್ಥಾತ್ ಕುಡಿಯಲು ಪುಷ್ಕಳವಾದ ನೀರನ್ನೂ, [**ಸೋಮ್ಯಂ**] ಸುಖಕಾರಕವಾದ [**ಮಧು**] ಮಧುರವಾದ, ಸರ್ವರಿಗೂ ಸುಖವನ್ನು ಕೊಡುವ ಸಕಲ ಪದಾರ್ಥಗಳನ್ನು [ಅಭಿಸೃಜಾಮಿ] ನಾನು ಉತ್ತಮವಾದ ರೀತಿಯಲ್ಲಿ ನಿರ್ಮಾಣ ಮಾಡುತ್ತೇನೆ.

ಆಧ್ಯಾತ್ಮಿಕ ಅರ್ಥ : [**ಮರುದ್ಭಿಃ**] ಯಾವ ಪ್ರಾಣಾಯಾಮದೊಂದಿಗೆ, ಯೋಗಸಾಧನೆಯ ಮೂಲಕ [**ಅಗ್ನಃ ಆಗಹಿ**] ಆತ್ಮನು ಪ್ರಾಪ್ತವಾಗುತ್ತಾನೋ, ಅರ್ಥಾತ್ ಆತ್ಮನ ಸ್ವರೂಪವು ಹಾಗೂ ಆತ್ಮಶಕ್ತಿಯು ಪ್ರಾಪ್ತವಾಗುತ್ತದೆಯೋ, ಆ ಶಕ್ತಿಯನ್ನು [**ಪೂರ್ವಪೀತಯೇ**] ಮೊದಲು ರಕ್ಷಿಸುವುದಕ್ಕೋಸ್ಕರ, ಉತ್ತಮವಾದ ರೀತಿಯಲ್ಲಿ ಕಾಪಾಡಿಕೊಂಡು ಸತ್ಕರ್ಮಗಳಲ್ಲಿ ವಿನಿಯೋಗಿಸುವುದಕ್ಕೋಸ್ಕರ [**ಸೋಮ್ಯಂ**] ಅತ್ಯಂತ ಸುಖಕರವಾದ [**ಮಧು**] ಮಧುರವಾದ

ಜ್ಞಾನದ ರಸವನ್ನೂ ಹಾಗೂ ಪ್ರಭು ಭಕ್ತಿಯಿಂದ ಪ್ರಾಪ್ತವಾಗುವ ಆನಂದರಸವನ್ನೂ [ಅಭಿಸೃಜಾಮಿ] ಉತ್ತಮವಾದ ರೀತಿಯಲ್ಲಿ ನಿರ್ಮಾಣ ಮಾಡುತ್ತೇನೆ.

ಭಾವಾರ್ಥ:- ಗಾಳಿಯ ಚಕ್ರದಿಂದ, ವಾಯುವಿನ ಸಹಾಯದಿಂದ, ಯಾವ ವಿದ್ಯುಚ್ಛಕ್ತಿಯು ಪ್ರಾಪ್ತವಾಗುತ್ತದೆಯೋ, ಆ ವಿದ್ಯುಚ್ಛಕ್ತಿಯ ಮೂಲಕ, ಮೊದಲು ಎಲ್ಲರಿಗೂ ಕುಡಿಯಲು ಪುಷ್ಕಳವಾದ ಜಲವನ್ನೂ, ಬೇಸಾಯಕ್ಕೆ ಬೇಕಾದ ನೀರಿನ ವ್ಯವಸ್ಥೆಯನ್ನೂ, ಹಾಗೂ ಸರ್ವರಿಗೂ ಸುಖವನ್ನು ಕೊಡುವ ಸರ್ವಜನ ಹಿತೋಪಯೋಗಿ ಪದಾರ್ಥಗಳನ್ನು ಉತ್ತಮವಾದ ರೀತಿಯಲ್ಲಿ ನಿರ್ಮಾಣ ಮಾಡುತ್ತೇನೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿಕೊಂಡು ನದಿಗಳಿಗೆ ಬೃಹತ್ ಅಣೆ ಕಟ್ಟುಗಳನ್ನು ಕಟ್ಟಿ ವಿದ್ಯುತ್ತನ್ನು ನಿರ್ಮಾಣ ಮಾಡುವ ಬದಲು, ಪ್ರತಿಯೊಂದು ಹಳ್ಳಿಯಲ್ಲಿಯೂ ಗಾಳಿಚಕ್ರದ ಮೂಲಕ ವಿದ್ಯುತ್ತನ್ನು ಪ್ರಾಪ್ತ ಮಾಡಿಕೊಂಡು, ಸಕಲ ಕಾರ್ಯಗಳನ್ನು, ಸಿದ್ಧಿಸಿಕೊಳ್ಳಬಹುದು. ಸಕಲ ಪದಾರ್ಥಗಳನ್ನು ನಿರ್ಮಾಣ ಮಾಡಬಹುದು. ಪ್ರತಿಯೊಂದು ಹಳ್ಳಿಯನ್ನು ಸ್ವಾವಲಂಬಿಯನ್ನಾಗಿ ಮಾಡುವುದಕ್ಕೋಸ್ಕರ, ಸುಲಭವಾಗಿ ಪ್ರಾಪ್ತ ಮಾಡಿಕೊಳ್ಳಲು ಸಾಧ್ಯವಾದ, ಸೂರ್ಯಶಕ್ತಿ, ಗಾಳಿಚಕ್ರ ಮೊದಲಾದವುಗಳ ಮೂಲಕ ವಿದ್ಯುಚ್ಛಕ್ತಿಯನ್ನು ಪ್ರಾಪ್ತ ಮಾಡಿಕೊಂಡು, ಅದರಿಂದ ಪೂರ್ಣ ಪ್ರಯೋಜನವನ್ನು ಪಡೆಯಬಹುದು ಎಂಬುದೇ ಈ ಮಂತ್ರದ ಆಶಯ.

ದ್ವಿತೀಯ ಅರ್ಥ:- ಪ್ರಾಣಾಯಾಮದೊಂದಿಗೆ, ಯೋಗಸಾಧನೆಯ ಮೂಲಕ, ಆತ್ಮಶಕ್ತಿಯು ಪ್ರಾಪ್ತವಾಗುತ್ತದೆ. ಆತ್ಮನ ಸ್ವರೂಪವೂ, ಆತ್ಮಜ್ಞಾನವೂ ಪ್ರಾಪ್ತವಾಗುತ್ತದೆ. ಪ್ರತಿಯೊಬ್ಬರೂ ಕೂಡ, ಆತ್ಮಶಕ್ತಿಯನ್ನೂ, ಆತ್ಮಜ್ಞಾನವನ್ನೂ ಪ್ರಾಪ್ತಮಾಡಿಕೊಳ್ಳಬೇಕು. ಅದರೊಂದಿಗೆ, ಆತ್ಮಶಕ್ತಿಯನ್ನೂ ಉತ್ತಮವಾದ ರೀತಿಯಲ್ಲಿ ರಕ್ಷಿಸಿ, ಸದಾಕಾಲ ಶ್ರೇಷ್ಠ ಕರ್ಮಗಳನ್ನು ಮಾಡುವುದಕ್ಕೋಸ್ಕರ ಆ ಶಕ್ತಿಯನ್ನು ವಿನಿಯೋಗಿಸಬೇಕು.

ಆತ್ಮಶಕ್ತಿಯನ್ನು ಉತ್ತಮವಾದ ರೀತಿಯಲ್ಲಿ ರಕ್ಷಿಸಿಕೊಂಡು ಸದ್ವಿನಿಯೋಗವನ್ನು ಮಾಡಬೇಕಾದರೆ, ಶ್ರೇಷ್ಠವಾದ ಜ್ಞಾನ ಮತ್ತು ಪರಮಾತ್ಮನ ಉಪಾಸನೆ, ಇವೆರಡನ್ನೂ ಪ್ರಾಪ್ತ ಮಾಡಿಕೊಳ್ಳಬೇಕು. ಬ್ರಹ್ಮಚರ್ಯದ ಸಾಧನೆಯಿಂದ ಹಾಗೂ ಪ್ರಾಣಾಯಾಮದಿಂದ ಅಪಾರವಾದ ಶಕ್ತಿಯು ಪ್ರಾಪ್ತವಾಗುತ್ತದೆ. ಆತ್ಮಶಕ್ತಿಗಿಂತ ಮಿಗಿಲಾದ ಶಕ್ತಿ ಬೇರೆ ಯಾವುದೂ ಇಲ್ಲ. ಕೆಲವರು ಈ ಶಕ್ತಿಯನ್ನು ಪ್ರಾಪ್ತ ಮಾಡಿಕೊಂಡು, ಅದರ ದುರುಪಯೋಗವನ್ನು ಮಾಡುತ್ತಾರೆ. ಆ ಶಕ್ತಿಯನ್ನು ಪರರನ್ನು ಪೀಡಿಸುವುದಕ್ಕೋಸ್ಕರ ವಿನಿಯೋಗಿಸುತ್ತಾರೆ. ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು, ದುಷ್ಕರ್ಮಗಳಿಗೆ ವಿನಿಯೋಗಿಸುವುದು, ಶಕ್ತಿಯನ್ನು ಪ್ರಾಪ್ತ ಮಾಡಿಕೊಂಡು, ಪರರನ್ನು ಪೀಡಿಸುವುದು, ಇವು ರಾಕ್ಷಸರ ಲಕ್ಷಣವಾಗಿದೆ. ಆದುದರಿಂದ ಪ್ರತಿಯೊಬ್ಬ ಮಾನವನು ಆತ್ಮಶಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳುವುದರೊಂದಿಗೆ ಶ್ರೇಷ್ಠಜ್ಞಾನವನ್ನೂ ಪ್ರಾಪ್ತ ಮಾಡಿಕೊಂಡು, ಪರಮಾತ್ಮನ ಉಪಾಸನೆಯನ್ನು ಮಾಡಬೇಕು ಹಾಗೂ ಸದಾ ಸತ್ಕರ್ಮಗಳಲ್ಲಿಯೇ ನಿರತನಾಗಬೇಕು. ವಿದ್ವಾಂಸರು ವಾಯು ಅಗ್ನಿ ಮೊದಲಾದವುಗಳಿಂದ ಸಕಲ ಕಾರ್ಯಗಳನ್ನೂ ಸಿದ್ಧಿಸಿಕೊಂಡು ಸಮಸ್ತ ಜನರಿಗೂ, ಪ್ರಾಣಿಮಾತ್ರರಿಗೂ ಪ್ರಯೋಜನವಾಗುವ ರೀತಿಯಲ್ಲಿ ಎಲ್ಲಾ ಯೋಜನೆಗಳನ್ನು ಮಾಡಬೇಕು. ಅದೇ ರೀತಿಯಲ್ಲಿ ಪ್ರಾಣಾಯಾಮ, ಯೋಗಸಾಧನೆಯ ಮೂಲಕ ಆತ್ಮಜ್ಞಾನವನ್ನು ಪ್ರಾಪ್ತಮಾಡಿಕೊಂಡು, ಆತ್ಮನ ಸ್ವರೂಪವನ್ನು ಕಂಡುಕೊಂಡು ತನ್ಮೂಲಕ ಪರಮಾತ್ಮನ ಸಾಕ್ಷಾತ್ಕಾರ ಮಾಡಿಕೊಳ್ಳಲು ಸತತ ಸಾಧನೆಯನ್ನು ಮಾಡಬೇಕು.

ಈ ಸೂಕ್ತದೊಂದಿಗೆ ಪೂರ್ವಸೂಕ್ತದ ಸಂಗತಿಕರಣವಿದೆ ಎಂಬುದನ್ನು ಎಲ್ಲರೂ ಗಮನಿಸಬೇಕು.

ಹತ್ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೨೦

ಮಂತ್ರಸಂಖ್ಯೆ ೮ । ಋಷಿಃ - ಮೇಧಾತಿಥಿಃ ಕಾಣ್ವಃ । ದೇವತಾ - ಋಭವಃ । ಛಂದಃ - ೧, ೨, ೬, ೭ ಗಾಯತ್ರೀ, ೩ ವಿರಾಡ್ಗಾಯತ್ರೀ, ೪ ನಿಚೃದ್ ಗಾಯತ್ರೀ, ೫, ೮ ಪಿಪೀಲಿಕಾ ಮಧ್ಯಾನಿಚೃದ್ಗಾಯತ್ರೀ । ಸ್ವರಃ - ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಋಭುವಿನ ಸ್ತುತಿಯನ್ನು ಮಾಡಲಾಗಿದೆ.

ಅಯಂ ದೇವಾಯ ಜನ್ಮನೇ ಸ್ತೋಮೋ ವಿಪ್ರೇಭಿರಾಸಯಾ । ಅಕಾರಿ ರತ್ನಧಾತಮಃ ॥೧॥

ಪದಾರ್ಥಃ:- [ವಿಪ್ರೇಭಿಃ] ಋಭು ಅರ್ಥಾತ್ ವಿದ್ವಾಂಸರಿಂದ [ಆಸಯಾ] ತಮ್ಮ ಬಾಯಿಯ ಮೂಲಕ ಅರ್ಥಾತ್ ತಮ್ಮ ವಾಣಿಯ ಮೂಲಕ, [ದೇವಾಯ ಜನ್ಮನೇ] ಉತ್ತಮ ಗುಣ, ನಡತೆ, ಸಂಸ್ಕಾರಗಳಿಂದ ಕೂಡಿದ, ಶ್ರೇಷ್ಠ ಜ್ಞಾನ ಸಂಪನ್ನವಾದ, ವಿದ್ಯಾಸಂಪನ್ನವಾದ, ಸಕಲ ಸುಖ-ಸಂಪತ್ತುಗಳಿಂದ ಕೂಡಿದ ಶಾಂತಿ ಹಾಗೂ ನೆಮ್ಮದಿಯುಳ್ಳ ಶ್ರೇಷ್ಠ ಜನ್ಮದ ಪ್ರಾಪ್ತಿಗಾಗಿ [ರತ್ನಧಾತಮಃ] ಯಾವುದರಿಂದ ಅತ್ಯಂತ ಸುಖ ಮತ್ತು ಆನಂದವು ಲಭಿಸುತ್ತದೋ, ಅಭ್ಯುದಯ ಮತ್ತು ನಿಶ್ರೇಯಸ್ಸು ಪ್ರಾಪ್ತವಾಗುತ್ತದೆಯೋ ಅಂತಹ [ಸ್ತೋಮಃ] ಪ್ರಭುವಿನ, ಸಕಲ ಜಗದೋದ್ಧಾರಕನಾದ ಪರಮಾತ್ಮನ, ಸ್ತುತಿ-ಪ್ರಾರ್ಥನೆ-ಉಪಾಸನೆಯನ್ನು [ಅಕಾರಿ] ಮಾಡಲ್ಪಡುತ್ತದೆಯೋ, ಅರ್ಥಾತ್ ವಿದ್ವಾಂಸರು ತಮ್ಮ ವಾಣಿಯ ಮೂಲಕ, ಪರಮಾತ್ಮನ ಸ್ತುತಿ-ಪ್ರಾರ್ಥನೆಯನ್ನು ಮಾಡುತ್ತಾ ಅವನ ಗುಣಗ್ರಹಣವನ್ನು ಮಾಡಿಕೊಂಡು, ಅವುಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಶ್ರೇಷ್ಠಕರ್ಮಗಳನ್ನು ಮಾಡುವುದರಿಂದ [ಅಯಂ ಜನ್ಮನೇ] ಅಂತಹ ಶ್ರೇಷ್ಠ ಜನ್ಮ ಮತ್ತು ಭೋಗಗಳು ಪ್ರಾಪ್ತವಾಗುತ್ತವೆ.

ಭಾವಾರ್ಥಃ:- ಋಭು ಅರ್ಥಾತ್ ವಿದ್ವಾಂಸರು, ವಿಪ್ರರು ಎಂದರೆ ವೇದಜ್ಞಾನವನ್ನು ಪ್ರಾಪ್ತ ಮಾಡಿಕೊಂಡ ಕರ್ಮನಿಷ್ಠ ಬ್ರಾಹ್ಮಣರು, ಹಾಗೂ ತಮ್ಮ ಮಾನವ ಜನ್ಮವನ್ನು ಸಾರ್ಥಕವನ್ನಾಗಿ ಮಾಡಿಕೊಳ್ಳಲು ಬಯಸುವ ಸಕಲ ಮಾನವ ಮಾತ್ರರು, ತಮ್ಮ ಇಹ ಜನ್ಮವನ್ನೂ ಮತ್ತು ಪುನರ್ಜನ್ಮವನ್ನೂ ಪಾವನ ಮಾಡಿಕೊಳ್ಳುವುದಕ್ಕೋಸ್ಕರ, ಹಾಗೂ ಉತ್ತಮ ಗುಣ-ನಡತೆ ಮತ್ತು ಸಂಸ್ಕಾರಗಳಿಂದ ಕೂಡಿದ, ಶ್ರೇಷ್ಠ ಜ್ಞಾನ ಮತ್ತು ವಿದ್ಯಾ ಸಂಪನ್ನರಾಗಿ ಸಕಲ ಸುಖ-ಸಂಪತ್ತು, ಸಮೃದ್ಧಿ, ಶಾಂತಿ, ನೆಮ್ಮದಿ ಹಾಗೂ ಆನಂದದಿಂದ ಕೂಡಿದ ಶ್ರೇಷ್ಠ ಜನ್ಮದ ಪ್ರಾಪ್ತಿಗಾಗಿ, ಪರಮಾತ್ಮನ ಸ್ತುತಿ-ಪ್ರಾರ್ಥನೆ, ಅನನ್ಯಭಕ್ತಿ, ಅವನ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಶ್ರೇಷ್ಠ ಕರ್ಮಗಳನ್ನು ಮಾಡುತ್ತಾ, ನಿಸ್ವಾರ್ಥ ಭಾವನೆಯಿಂದ ಸೇವೆಯನ್ನು ಮಾಡುವುದರಿಂದ, ಶ್ರೇಷ್ಠ ಜನ್ಮ ಹಾಗೂ ಭೋಗವು ಪ್ರಾಪ್ತಿಯಾಗುತ್ತದೆ.

ನಂತರ ಆ ಋಭುಗಳು ಹೇಗಿದ್ದಾರೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಯ ಇಂದ್ರಾಯ ವಚೋಯುಜಾ ತತಕ್ಷುರ್ಮನಸಾ ಹರೀ । ಶಮೀಭಿರ್ಯಜ್ಞಮಾಶತ ॥೨॥

ಪದಾರ್ಥಃ:- [ಯೇ] ಯಾವ ವಿದ್ವಾಂಸರು [ಮನಸಾ] ತಮ್ಮ ಮನಸ್ಸಿನೊಂದಿಗೆ, ತಮ್ಮ ಮನಸ್ಸನ್ನು ನಿರ್ಮಲವನ್ನಾಗಿ ಮಾಡಿ, ಅದರೊಂದಿಗೆ [ವಚೋಯುಜಾ] ಮಧುರವಾದ ಮತ್ತು ಸತ್ಯದಿಂದ ಕೂಡಿದ ವಾಣಿಯನ್ನು ಸಂಯುಕ್ತವನ್ನಾಗಿ ಮಾಡಿಕೊಂಡು [ಹರೀತತಕ್ಷುಃ] ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುತ್ತಾರೋ ಅರ್ಥಾತ್ ಸಂಯಮದಲ್ಲಿರುತ್ತಾರೋ [ಶಮೀಭಿಃ] ಶ್ರೇಷ್ಠ ಕರ್ಮಗಳನ್ನು ಮಾಡುತ್ತಾ [ಇಂದ್ರಾಯ] ಸರ್ವೈಶ್ವರ್ಯನೂ ಸರ್ವೋಪಾಸ್ಯನೂ ಆದ ಪರಮಾತ್ಮನ ಉಪಾಸನೆಯನ್ನು ಮಾಡುವುದಕ್ಕೋಸ್ಕರ [ಯಜ್ಞಂ ಆಶತ] ಯಜ್ಞವನ್ನು

ಮಾಡುತ್ತಾರೋ ಅವರು ಸಂಪೂರ್ಣ ಸುಖವನ್ನು ಹಾಗೂ ಆನಂದವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ ಹಾಗೂ ಅನುಭವಿಸುತ್ತಾರೆ.

ಭಾವಾರ್ಥಃ:- ಯಾವ ವಿದ್ವಾಂಸರು, ನಿರ್ಮಲವಾದ ಮನಸ್ಸಿನೊಂದಿಗೆ, ಮಧುರವಾದ ಮತ್ತು ಸತ್ಯದಿಂದ ಕೂಡಿದ ವಾಣಿಯನ್ನು ಸಂಯುಕ್ತವನ್ನಾಗಿ ಮಾಡಿ, ಇಂದ್ರಿಯಗಳನ್ನು ವಶದಲ್ಲಿಟ್ಟುಕೊಳ್ಳುತ್ತಾರೋ, ಶ್ರೇಷ್ಠ ಕರ್ಮಗಳನ್ನು ಮಾಡುತ್ತಾ, ಸರ್ವೈಶ್ವರ್ಯನೂ ಸರ್ವೋಪಾಸ್ಯನೂ ಆದ ಪರಮಾತ್ಮನ ಉಪಾಸನೆಯನ್ನು ಮಾಡುವುದಕ್ಕೋಸ್ಕರ, ಯಜ್ಞವನ್ನು ಮಾಡುತ್ತಾರೋ, ಅವರು ಸಂಪೂರ್ಣ ಸುಖ ಮತ್ತು ಆನಂದವನ್ನು ಪ್ರಾಪ್ತ ಮಾಡಿಕೊಂಡು ಅದನ್ನು ಪೂರ್ಣವಾಗಿ ಅನುಭವಿಸುತ್ತಾರೆ. ಸಾಧಾರಣತಃ ಎಂದರೆ ಸರ್ವಸಾಧಾರಣವಾಗಿ, ಮಾನವರು, ದುಃಖ ಮತ್ತು ಕ್ಲೇಶಗಳನ್ನು ದೂರಮಾಡಿಕೊಳ್ಳುವುದಕ್ಕೋಸ್ಕರ ಹಾಗೂ ಸುಖ ಮತ್ತು ಐಶ್ವರ್ಯವನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ, ಹಲವಿಧವಾದ ಯಜ್ಞ-ಯಾಗಾದಿಗಳನ್ನು ಆಚರಿಸುತ್ತಾರೆ. ಆದರೆ ಈ ರೀತಿ ಮಾಡುವುದರಿಂದ ಸುಖ ಮತ್ತು ಐಶ್ವರ್ಯ ಪ್ರಾಪ್ತವಾಗುವುದೆಂಬುದು ಸತ್ಯಕ್ಕೆ ದೂರವಾಗಿದೆ. ಮಾನವನು ಮೊದಲು ವಿದ್ಯಾವಂತನೂ, ಜ್ಞಾನವಂತನೂ ಆಗಿ, ನಿರ್ಮಲವಾದ ಮನಸ್ಸುಳ್ಳವನಾಗಿ, ಸತ್ಯ ಹಾಗೂ ಮಧುರವಾಣಿಯೊಂದಿಗೆ, ಸಂಯಮಿಯಾಗಬೇಕು. ಅರ್ಥಾತ್ ಸದಾ ಸತ್ಯವನ್ನೇ ಆಡುತ್ತಾ, ಇಂದ್ರಿಯಗಳನ್ನು ತನ್ನ ವಶದಲ್ಲಿರಿಸಿಕೊಳ್ಳಬೇಕು. ಸದಾ ಶ್ರೇಷ್ಠಕರ್ಮಗಳನ್ನು ಮಾಡುತ್ತಾ, ಸರ್ವೈಶ್ವರ್ಯನೂ, ಸರ್ವೋಪಾಸ್ಯನೂ ಆದ ಪರಮಾತ್ಮನ ಉಪಾಸನೆ ಅರ್ಥಾತ್ ಸಾನ್ನಿಧ್ಯವನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ ಯಜ್ಞವನ್ನು ಮಾಡಬೇಕು. ಇವೆಲ್ಲವುಗಳಿಂದ ಸಂಯುಕ್ತರಾಗಿ ಯಜ್ಞವನ್ನು ಮಾಡಿದರೆ ಮಾತ್ರ ಸಕಲ ಸುಖ ಸಂಪತ್ತುಗಳೂ ಹಾಗೂ ಆನಂದವೂ ಲಭಿಸುತ್ತವೆ. ಯಾವುದೇ ರೀತಿಯ ಅರ್ಹತೆ, ಯೋಗ್ಯತೆ ಮತ್ತು ಪಾತ್ರತೆ ಹಾಗೂ ಪವಿತ್ರತೆ ಇಲ್ಲದೇ ಕೇವಲ ಯಜ್ಞ ಮಾಡಿದರೆ, ವಾತಾವರಣ ಶುದ್ಧವಾಗುತ್ತದೆ ಹಾಗೂ ಪುರೋಹಿತರಿಗೆ ದಕ್ಷಿಣೆ ಲಭಿಸುತ್ತದೆ. ಇದಕ್ಕಿಂತ ಹೆಚ್ಚು ಫಲ ಖಂಡಿತವಾಗಿಯೂ ಪ್ರಾಪ್ತವಾಗಲಾರದು.

ಉಕ್ತ ಋಭುಗಳು ಯಾವುದರಿಂದ ಏನೇನನ್ನು ಸಾಧಿಸುತ್ತಾರೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತಕ್ಷನ್ನಾಸತ್ಯಾಭ್ಯಾಂ ಪರಿಜ್ಮಾನಂ ಸುಖಂ ರಥಮ್ । ತಕ್ಷನ್ ಧೇನುಂ ಸಬರ್ದುಘಾಮ್ ॥೩॥

ಪದಾರ್ಥಃ:- ಯಾವ ವಿದ್ವಾಂಸರು [ನಾಸತ್ಯಾಭ್ಯಾಂ] = ನ ಅಸತ್ಯಾಭ್ಯಾಂ - ಲೇಶಮಾತ್ರವೂ ಅಸತ್ಯ, ಹಾಗೂ ಅಸತ್ಯಾಚರಣೆಯನ್ನು ಮಾಡದೇ ಅರ್ಥಾತ್ ಪೂರ್ಣವಾಗಿ ಸತ್ಯವಾಣಿ, ಸತ್ಯಜ್ಞಾನ ಮತ್ತು ಸತ್ಯಾಚರಣೆಯ ಮೂಲಕ, ಸತ್ಕರ್ಮಗಳ ಮೂಲಕ, [ರಥಮ್] ತಮ್ಮ ಶರೀರವನ್ನು [ಸುಖಮ್ ತಕ್ಷನ್] ಸುಂದರವನ್ನಾಗಿಯೂ ಪವಿತ್ರವನ್ನಾಗಿಯೂ ಮಾಡುತ್ತಾರೋ ಅವರು [ಪರಿಜ್ಮಾನಂ] ಸಂಪೂರ್ಣ ಪೃಥ್ವಿಯನ್ನು, ಅರ್ಥಾತ್ ಪೃಥ್ವಿಯಲ್ಲಿರುವ ಸಕಲ ಮಾನವರಿಗೆ [ಸಬರ್ದುಘಾಮ್] ಸಂಪೂರ್ಣ ಸತ್ಯಜ್ಞಾನವನ್ನೇ ಕೊಡುವ, ಶ್ರೇಷ್ಠಜ್ಞಾನವನ್ನೇ ಬೀರುವ [ಧೇನುಂ] ವಾಣಿಯನ್ನು [ತಕ್ಷನ್] ಪ್ರಕಟಪಡಿಸುತ್ತಾರೆ. ಅರ್ಥಾತ್ ಸಂಪೂರ್ಣ ಸತ್ಯಜ್ಞಾನವನ್ನು ಬೀರುವ ವಾಣಿಯ ಮೂಲಕ ಉಪದೇಶವನ್ನು ಕೊಡುತ್ತಾರೆ; ಉಪದೇಶಿಸುತ್ತಾರೆ.

ಭಾವಾರ್ಥಃ:- ಯಾವ ವಿದ್ವಾಂಸರು, ಲೇಶಮಾತ್ರವೂ ಅಸತ್ಯಭಾಷಣ ಹಾಗೂ ಅಸತ್ಯಾಚರಣೆಯನ್ನು ಮಾಡದೇ, ಅರ್ಥಾತ್ ಪೂರ್ಣ ಸತ್ಯವನ್ನೇ ಹೇಳುತ್ತಾ, ಸತ್ಯಾಚರಣೆ ಮತ್ತು ಸತ್ಕರ್ಮಗಳಲ್ಲಿ ನಿರತರಾಗಿರುತ್ತಾರೋ, ಅವರೇ ಸಂಪೂರ್ಣ ವಿಶ್ವದಲ್ಲಿರುವ ಮಾನವರಿಗೆ ಸದಾ ಸತ್ಯಜ್ಞಾನವನ್ನು ಕೊಡುತ್ತಾರೆ. ಈ ಮಂತ್ರದಲ್ಲಿ ಯಾರು ಸತ್ಯವನ್ನು ಹೇಳುತ್ತಾರೋ ಎಂದು ಹೇಳದೇ ಯಾರು ನಾಸತ್ಯಾಭ್ಯಾಂ ಎಂದು ಹೇಳಿದೆ. ನ ಸತ್ಯ ಅಂದರೆ ಅಸತ್ಯ ಯಾವುದು ಸತ್ಯವಲ್ಲವೋ ಅದು ನ ಸತ್ಯ. ಈ ರೀತಿ ಕೇವಲ ಸತ್ಯಭಾಷಣೆ, ಸತ್ಯಾಚರಣೆ ಮತ್ತು ಸತ್ಕರ್ಮಗಳ ಮೂಲಕ ತಮ್ಮ ಶರೀರವನ್ನು ಪವಿತ್ರವನ್ನಾಗಿಯೂ ಸುಂದರವನ್ನಾಗಿಯೂ ಮಾಡಿಕೊಂಡಿದ್ದಾರೋ, ಅರ್ಥಾತ್

ಯಾವನಲ್ಲಿ ಸತ್ಯವು ಪ್ರತಿಷ್ಠಿತವಾಗಿದೆಯೋ, ಅವನೇ ಸಂಪೂರ್ಣ ವಿಶ್ವದಲ್ಲಿರುವ ಮಾನವ ಮಾತ್ರರಿಗೆ, ಸಂಪೂರ್ಣ ಸತ್ಯಜ್ಞಾನವನ್ನು ಕೊಡುತ್ತಾನೆ. ಅವರ ಭಾಷಣದಿಂದ ಸಂಪೂರ್ಣ ವಿಶ್ವದ ಮಾನವರು ಪ್ರಭಾವಿತರಾಗುತ್ತಾರೆ. ಅವರ ಮಾತನ್ನು ಕೇಳಲು ಹಾತೊರೆಯುತ್ತಾರೆ.

ಭಾಷಣವನ್ನು ಪ್ರವಚನವನ್ನು ತುಂಬಾ ಜನರು ಮಾಡುತ್ತಾರೆ. ವೇದದ ವ್ಯಾಖ್ಯಾನವನ್ನು ಮಾಡುತ್ತಾರೆ. ಆದರೆ ಅದರ ಪ್ರಭಾವ ಯಾರ ಮೇಲೂ ಬೀಳುವುದಿಲ್ಲ. ಮಹರ್ಷಿಗಳು ಮಾತ್ರ ಸಂಪೂರ್ಣ ವಿಶ್ವಕ್ಕೇನೇ ಸತ್ಯಜ್ಞಾನವನ್ನು ಬೀರುತ್ತಾರೆ. ಅವರ ಒಂದೊಂದು ಮಾತಿನಿಂದಲೇ ಜನರ ಜೀವನವು ಸಂಪೂರ್ಣ ಬದಲಾಗುತ್ತದೆ. ಅತ್ಯಂತ ದುಷ್ಕರ್ಮಗಳಲ್ಲಿ ನಿರತರಾದವರೂ ಕೂಡಾ ಅವರ ಒಂದೊಂದು ಮಾತಿನಿಂದಲೇ ತಮ್ಮ ಸಂಪೂರ್ಣ ಜೀವನವನ್ನು ಬದಲಾಯಿಸಿ ಮಹಾಪುರುಷರಾಗುತ್ತಾರೆ. ಪ್ರತಿಯೊಬ್ಬನೂ ಕೂಡ ಮೊದಲು ಸತ್ಯಭಾಷಿ ಹಾಗೂ ಸತ್ಯಾಚರಣೆಯನ್ನು ಮಾಡುತ್ತಾ, ಸತ್ಕರ್ಮಗಳಲ್ಲಿ ನಿರತನಾಗಿ ಆಮೇಲೆ ಬೇರೆಯವರಿಗೆ ಸತ್ಯಜ್ಞಾನವನ್ನು ಬೋಧಿಸಬೇಕು. ಆಗ ಮಾತ್ರ ಆ ಜ್ಞಾನವು ಫಲೀಭೂತವಾಗುತ್ತದೆ. ಇಲ್ಲದಿದ್ದರೆ ಎಷ್ಟು ಭಾಷಣ ಮತ್ತು ಪ್ರವಚನ ಮಾಡಿದರೂ ನಿರರ್ಥಕವಾಗುತ್ತದೆ.

ಮತ್ತೆ ಆ ವಿದ್ವಾಂಸರು ಹೇಗಿದ್ದಾರೆ ಎಂಬ ವಿಷಯವಾಗಿ ತಿಳಿಸಲಾಗುತ್ತದೆ.

ಯುವಾನಾ ಪಿತರಾ ಪುನಃ ಸತ್ಯಮಂತ್ರಾ ಋಜೂಯವಃ । ಋಭವೋ ವಿಷ್ಟ್ಯಕ್ರತ ॥೪॥

ಪದಾರ್ಥ:- [**ಸತ್ಯಮಂತ್ರಾಃ**] ಸತ್ಯಜ್ಞಾನ ಹಾಗೂ ಸತ್ಯವಿಚಾರವುಳ್ಳವರಾಗಿ, ಸದಾ ಸತ್ಕರ್ಮದಲ್ಲಿ ನಿರತರಾದ, [**ಋಜೂಯವಃ**] ಧರ್ಮಮಾರ್ಗವನ್ನೇ ಅನುಸರಿಸುವ, ಹಾಗೂ ಸಾತ್ವಿಕ ಮತ್ತು ಸರಳ ಜೀವನವನ್ನು ನಡೆಸುವ, [**ಋಭವಃ**] ಅತ್ಯಂತ ಮೇಧಾವಿಯಾದ ವಿದ್ವಾಂಸರು, [**ಯುವಾನಾ**] ಎಲ್ಲರನ್ನೂ ಪ್ರೀತಿಯಿಂದ ಸೇರಿಸಿಕೊಂಡು, ಸದಾ ಶ್ರೇಷ್ಠಕರ್ಮಗಳಲ್ಲೇ ನಿರತರಾಗಿ [**ಪಿತರಾ**] ತಂದೆ-ತಾಯಿಯರನ್ನು, ಗುರುಹಿರಿಯರನ್ನು [**ವಿಷ್ಟೀ ಅಕ್ರತ**] ಆದರ ಪೂರ್ವಕ ಮತ್ತು ಶ್ರದ್ಧೆಯಿಂದ ಅವರ ಸೇವೆಯನ್ನು ಮಾಡುತ್ತಾ ತಮ್ಮೊಂದಿಗೆ ಸೇರಿಸಿಕೊಂಡು ತಮ್ಮ ಅನುಕೂಲವನ್ನಾಗಿ ಮಾಡಿಕೊಂಡು, ಅವರಿಂದ ಜ್ಞಾನವನ್ನೂ, ಅನುಭವವನ್ನೂ ಪಡೆದುಕೊಳ್ಳುತ್ತಾರೆ.

ಭಾವಾರ್ಥ:- ಸತ್ಯಜ್ಞಾನ ಹಾಗೂ ಸತ್ಯವಿಚಾರವುಳ್ಳವರಾಗಿ, ಸದಾ ಸತ್ಕರ್ಮದಲ್ಲಿ ನಿರತರಾದ, ಸದಾ ಧರ್ಮಮಾರ್ಗವನ್ನೇ ಅನುಸರಿಸುತ್ತಾ, ಸಾತ್ವಿಕ ಜೀವನವನ್ನು ನಡೆಸುವ, ಅತ್ಯಂತ ಮೇಧಾವಿಯಾದ ವಿದ್ವಾಂಸರು, ಎಲ್ಲರನ್ನೂ ಪ್ರೀತಿಯಿಂದ ಸೇರಿಸಿಕೊಂಡು, ಸದಾ ಶ್ರೇಷ್ಠ ಕರ್ಮಗಳಲ್ಲಿ ನಿರತರಾಗಿದ್ದು, ತಂದೆ ತಾಯಿಯರನ್ನೂ ಗುರುಹಿರಿಯರನ್ನೂ ಗೌರವಿಸಿ, ಶ್ರದ್ಧೆಯಿಂದ ಅವರ ಸೇವೆಯನ್ನು ಮಾಡುತ್ತಾ, ತಮ್ಮ ಅನುಕೂಲವಾಗಿ ಮಾಡಿಕೊಂಡು, ಅವರಿಂದ ಜ್ಞಾನವನ್ನೂ, ಅನುಭವವನ್ನೂ ಪಡೆಯುತ್ತಾರೆ. ಇಂದಿನ ಬಹಳ ದೊಡ್ಡ ಸಮಸ್ಯೆ ಹಿರಿಯರಲ್ಲಿ ಮತ್ತು ಕಿರಿಯರಲ್ಲಿ ಇರುವ ನಡುವಿನ ಅಂತರ. ಇದರಿಂದ ಪರಿವಾರದಲ್ಲಿ ಮತ್ತು ಸಮಾಜದಲ್ಲಿ ಅಶಾಂತಿಯುಂಟಾಗಿದೆ. ಮಾತ್ರವಲ್ಲ, ಹಿರಿಯರಲ್ಲಿರುವ ಜ್ಞಾನ ಮತ್ತು ಅನುಭವದಿಂದ ಕಿರಿಯರು ವಂಚಿತರಾಗುತ್ತಿದ್ದಾರೆ. ಇದರಿಂದಾಗಿ ಜ್ಞಾನ-ವಿಜ್ಞಾನವು ನಶಿಸುತ್ತಿವೆ. ಪ್ರತಿಯೊಬ್ಬನೂ ಕೂಡಾ, ತನ್ನ ತಂದೆ-ತಾಯಿಗಳನ್ನು, ಗುರು ಹಿರಿಯರನ್ನು ಗೌರವಿಸಬೇಕು. ಶ್ರದ್ಧೆಯಿಂದ ಅವರ ಸೇವೆಯನ್ನು ಮಾಡಿ, ಅವರನ್ನು ತಮ್ಮ ಅನುಕೂಲವನ್ನಾಗಿ ಮಾಡಿಕೊಂಡು ಅವರಿಂದ ಜ್ಞಾನವನ್ನೂ, ಅನುಭವವನ್ನೂ ಪ್ರಾಪ್ತ ಮಾಡಿಕೊಳ್ಳಬೇಕು. ಮಹಾಲಯದ ಉದ್ದೇಶವು ಕೂಡಾ ಇದೇ ಆಗಿದೆ. ತಮ್ಮ ಪರಿವಾರದ ಮತ್ತು ಸಮಾಜದ ಸಕಲ ಜ್ಞಾನವೃದ್ಧರನ್ನು ವಯೋವೃದ್ಧವನ್ನು ಕರೆದು, ಅವರನ್ನು ಆದರಿಸಿ, ಸತ್ಕರಿಸಿ, ಅವರ ಸೇವೆಯನ್ನು ಮಾಡುತ್ತಾ, ಅವರ ತೊಂದರೆಗಳನ್ನು ನಿವಾರಿಸಿಕೊಂಡು, ಅವರಿಂದ ಜ್ಞಾನವನ್ನೂ-ಅನುಭವವನ್ನೂ ಪ್ರಾಪ್ತ ಮಾಡಿಕೊಳ್ಳಬೇಕು. ಆಗ ಮಾತ್ರ ಪ್ರತಿಯೊಂದು ಪರಿವಾರವೂ ಮಹಾ ಆಲಯವಾಗುತ್ತದೆ. ಇಲ್ಲದಿದ್ದರೆ, ಮಹಾ-ಲಯವಾಗುತ್ತದೆ.

ಪುನಃ ಇವರು ಯಾವುದರಿಂದ ಏನನ್ನು ಮಾಡುತ್ತಾರೆ ಎಂಬುದನ್ನು ತಿಳಿಸುತ್ತಾರೆ.

ಸಂ ವೋ ಮದಾಸೋ ಅಗ್ಮತೇಂದ್ರೇಣ ಚ ಮರುತ್ವತಾ । ಆದಿತ್ಯೇಭಿಶ್ಚ ರಾಜಭಿಃ ॥೫॥

ಪದಾರ್ಥ:- ಓ ಮೇಧಾವಿಗಳಾದ ವಿದ್ವಾಂಸರೇ! [**ಮರುತ್ವತಾ**] ಕ್ರಿಯಾಶೀಲರಾದ ಪ್ರಜೆಗಳ ಮೂಲಕ, [**ಇಂದ್ರೇಣ**] ಉತ್ತಮ ಬ್ರಹ್ಮವರ್ಚಸ್ಸುಳ್ಳ ಆಚಾರ್ಯರ ಮೂಲಕ [**ಚ**] ಮತ್ತು [**ಆದಿತ್ಯೇಭಿಃ**] ಸೂರ್ಯನಂತೆ ತೇಜಸ್ವಿ ಹಾಗೂ ಪರಾಕ್ರಮಿಯಾದ [**ರಾಜಭಿಃ**] ರಾಜರುಗಳ ಮೂಲಕ [**ವಃ**] ನೀವೆಲ್ಲರೂ [**ಸಂಮದಾಸಃ ಅಗ್ಮ**] ಉತ್ತಮವಾದ ರೀತಿಯಲ್ಲಿ ಸುಖ ಮತ್ತು ಶಾಂತಿ ಹಾಗೂ ನೆಮ್ಮದಿಯನ್ನು ಪ್ರಾಪ್ತಮಾಡಿಕೊಳ್ಳುತ್ತೀರಿ.

ಭಾವಾರ್ಥ:- ಓ ವಿದ್ವಾಂಸರೇ! ಕ್ರಿಯಾಶೀಲರಾದ ಪ್ರಜೆಗಳ ಮೂಲಕ ಮತ್ತು ಬ್ರಹ್ಮವರ್ಚಸ್ಸುಳ್ಳ ಆಚಾರ್ಯರ ಮೂಲಕ, ಹಾಗೂ ಸೂರ್ಯನಂತೆ ತೇಜಸ್ವಿಯಾದ ಹಾಗೂ ಪರಾಕ್ರಮಿಯಾದ ರಾಜರುಗಳ ಮೂಲಕ, ನೀವೆಲ್ಲರೂ ಸುಖ ಸಂತೋಷ ಮತ್ತು ನೆಮ್ಮದಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತೀರಿ.

ಯಾವ ದೇಶದಲ್ಲಿ ಬುದ್ಧಿವಂತರೂ, ಕ್ರಿಯಾಶೀಲರೂ ಆದ ಪ್ರಜೆಗಳು ಇರುತ್ತಾರೋ, ಬ್ರಹ್ಮವರ್ಚಸ್ಸುಳ್ಳ ಆಚಾರ್ಯರಿರುತ್ತಾರೋ, ಹಾಗೂ ಕ್ಷಾತ್ರ ತೇಜಸ್ಸುಳ್ಳ ರಾಜರು, ಅರ್ಥಾತ್ ಅತ್ಯಂತ ಕುಶಲ, ನಿರ್ಭೀತ, ಯಾವುದೇ ರೀತಿಯ ಭಯ-ಭೀತಿಯಿಲ್ಲದ, ಕ್ಷಣಮಾತ್ರದಲ್ಲಿ ಬಾಹ್ಯ ಮತ್ತು ಅಭ್ಯಂತರ ಆಕ್ರಮಣಗಳನ್ನು ದಂಗೆಗಳನ್ನು ಆತಂಕವಾದವನ್ನು ಎದುರಿಸುವ, ಎದೆಗಾರಿಕೆಯುಳ್ಳ ಸಮರ್ಥ ಆಡಳಿತ ವರ್ಗವಿರುತ್ತದೆಯೋ, ಆ ರಾಷ್ಟ್ರವು ಸದಾಕಾಲ ಸುಖ-ಶಾಂತಿ ಮತ್ತು ಸಮೃದ್ಧಿಯಿಂದ ಕೂಡಿದ್ದು, ಸ್ವಾವಲಂಬಿ ಹಾಗೂ ಬಲಾಢ್ಯವಾಗಿರುತ್ತದೆ.

ಮೇಲಿನ ಕಾರ್ಯವನ್ನು ಮಾಡುವುದರಲ್ಲಿ ಯಾರ ಸಾಮರ್ಥ್ಯವಿರುತ್ತದೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಉತ ತ್ಯಂ ಚಮಸಂ ನವಂ ತ್ವಷ್ಟುರ್ದೇವಸ್ಯ ನಿಷ್ಕೃತಮ್ । ಅಕರ್ತ ಚತುರಃ ಪುನಃ ॥೬॥

ಪದಾರ್ಥ:- ಯಾವಾಗ ವಿದ್ವಾಂಸರು [**ತ್ವಷ್ಟುಃ**] ಅತ್ಯಂತ ಕುಶಲ ಕರ್ಮಿಗಳಾದ ಶಿಲ್ಪಿಗಳ ಮತ್ತು [**ದೇವಸ್ಯ**] ಸಂಪೂರ್ಣ ಜ್ಞಾನವನ್ನು ಪಡೆದ ವಿಜ್ಞಾನಿಗಳ ಮೂಲಕ [**ನಿಷ್ಕೃತಮ್**] ಸಿದ್ಧ ಮಾಡಿದ ಪದಾರ್ಥಗಳನ್ನೂ ಹಾಗೂ [**ತ್ಯಂ ನವಮ್ ಚಮಸಮ್**] ಆ ನವೀನ ಆವಿಷ್ಕಾರಗಳನ್ನೂ ಅರಿತುಕೊಂಡು, [**ಉತ**] ತದನಂತರ [**ಪುನಃ**] ಪುನಃ ಪುನಃ ಪ್ರಯೋಗಾತ್ಮಕವಾಗಿ ಹಾಗೂ ಕ್ರಿಯಾತ್ಮಕವಾಗಿ ಅರ್ಥಾತ್ ಪ್ರಯೋಗಗಳ ಮೂಲಕ ಮತ್ತು ವಿಭಿನ್ನ ಕ್ರಿಯೆಗಳ ಮೂಲಕ, ಸರ್ವರಿಗೂ ಪ್ರಯೋಜನಕಾರಿಯಾಗುವಂತೆ ಅಳವಡಿಸಿಕೊಂಡು, [**ಚತುರಃ**] ಭೂ, ಜಲ, ಅಗ್ನಿ, ಮತ್ತು ವಾಯು ಈ ನಾಲ್ಕು ತತ್ವಗಳ ಮೂಲಕ ಪ್ರಾಪ್ತವಾಗುವ ಶಕ್ತಿಯನ್ನು ಉಪಯೋಗಿಸಿಕೊಂಡು [**ಅಕರ್ತ**] ಉತ್ತಮವಾದ ರೀತಿಯಲ್ಲಿ ಪದಾರ್ಥಗಳನ್ನು ಸಿದ್ಧಪಡಿಸುವುದರಿಂದ ಎಲ್ಲರಿಗೂ ಸುಖವು ಪ್ರಾಪ್ತವಾಗುತ್ತದೆ.

ಭಾವಾರ್ಥ:- ಕುಶಲಕರ್ಮಿಗಳು ಅರ್ಥಾತ್ ಇಂಜಿನಿಯರರು ಹಾಗೂ ವಿಜ್ಞಾನಿಗಳು ಹೊಸ ಹೊಸ ಆವಿಷ್ಕಾರಗಳನ್ನು ಮಾಡುತ್ತಾ ಇರುತ್ತಾರೆ. ವಿದ್ವಾಂಸರು ಅವೆಲ್ಲವನ್ನು ಚೆನ್ನಾಗಿ ಅರಿತುಕೊಂಡು, ನೂತನ ಪ್ರಯೋಗಗಳ ಮೂಲಕ, ವಿಭಿನ್ನ ಕ್ರಿಯೆಗಳಲ್ಲಿ ಅಳವಡಿಸಿಕೊಂಡು, ಭೂಮಿ, ಜಲ, ವಾಯು ಮತ್ತು ಅಗ್ನಿ ಈ ನಾಲ್ಕು ತತ್ವಗಳ ಮೂಲಕ ಪ್ರಾಪ್ತವಾಗುವ ಶಕ್ತಿಯನ್ನು ಉಪಯೋಗಿಸಿಕೊಂಡು, ಉತ್ತಮವಾದ ರೀತಿಯಲ್ಲಿ ಹಾಗೂ ಸರ್ವರಿಗೂ ಪ್ರಯೋಜನಕಾರಿಯಾಗುವ ಪದಾರ್ಥಗಳನ್ನು ಸಿದ್ಧಪಡಿಸುವುದರಿಂದ, ಎಲ್ಲರಿಗೂ ಸುಖವು ಪ್ರಾಪ್ತವಾಗುತ್ತದೆ. ಮಾನವನು ಸದಾಕಾಲ ಹೊಸ ಹೊಸ ಸಂಶೋಧನೆಗಳನ್ನೂ, ಆವಿಷ್ಕಾರವನ್ನೂ ಮಾಡುತ್ತಾ ಇರಬೇಕು. ಹಾಗೂ ವಿಜ್ಞಾನಿಗಳು ಮತ್ತು ಇಂಜಿನಿಯರರು ಮಾಡಿದ ಆವಿಷ್ಕಾರಗಳನ್ನು, ವಿಭಿನ್ನ ಕ್ರಿಯೆಗಳಲ್ಲಿ ಅಳವಡಿಸಿಕೊಂಡು, ಸರ್ವರಿಗೂ

ಪ್ರಯೋಜನಕಾರಿಯಾಗುವ ರೀತಿಯಲ್ಲಿ ಪದಾರ್ಥಗಳನ್ನು ಸಿದ್ಧಪಡಿಸಬೇಕು. ಉತ್ತಮ ಆವಿಷ್ಕಾರಗಳಿಂದಿಗೂ ನಿರರ್ಥಕವಾಗಬಾರದು.

ಈ ರೀತಿ ಸಿದ್ಧವಾದ ಪ್ರದಾರ್ಥಗಳಿಂದ ಯಾವ ಫಲ ದೊರೆಯುತ್ತದೆ ಎಂಬುದನ್ನು ತಿಳಿಸಲಾಗಿದೆ.

ತೇ ನೋ ರತ್ನಾನಿ ಧತ್ತನ ತ್ರಿರಾಸಾಪ್ತಾನಿ ಸುನ್ವತೇ । ಏಕಮೇಕಂ ಸುಶಸ್ತಿಭಿಃ ॥೭॥

ಪದಾರ್ಥಃ:- ಯಾವ ವಿದ್ವಾಂಸರು [ಸುಶಸ್ತಿಭಿಃ] ಅತ್ಯಂತ ಪ್ರಶಂಸನೀಯ ಕರ್ಮಗಳ ಮೂಲಕ [ಸಾಪ್ತಾನಿ] ಏಳು ಪ್ರಕಾರದ ಅರ್ಥಾತ್ ಏಳು ವಿಧದ ಕರ್ಮಗಳನ್ನು ದೇವಪೂಜಾ, ಸಂಘಟನೆ, ದಾನ, ಮಾನವ ಮಾತ್ರರಿಗೆ ಉಪಕಾರ, ಪ್ರಾಣಿಮಾತ್ರರ ಸೇವೆ, ಸಂಪೂರ್ಣ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುವುದು, ಸರ್ವರಿಗೂ ವಿದ್ಯೆ ಮತ್ತು ಜ್ಞಾನವನ್ನು ಪ್ರದಾನ ಮಾಡುವುದು [ಏಕಮೇಕಮ್] ಒಂದೊಂದಾಗಿ ಕ್ರಮಶಃ ಮತ್ತು ನಿರಂತರ ಮಾಡುತ್ತಾ [ತ್ರಿಃ ಸುಖಾನಿ] ಮೂರು ವಿಧದ ಆಧಿಭೌತಿಕ, ಆಧಿ ದೈವಿಕ ಮತ್ತು ಆಧ್ಯಾತ್ಮಿಕ ಸುಖ-ಶಾಂತಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೋ, [ತೇ] ಅವರೆಲ್ಲರೂ [ನೋ] ನಮ್ಮೆಲ್ಲರಿಗೋಸ್ಕರ [ರತ್ನಾನಿ ಧತ್ತನ] ಸಕಲ ರಮಣೀಯ ಪದಾರ್ಥಗಳನ್ನು ಧಾರಣ ಮಾಡಿಕೊಳ್ಳುತ್ತಾರೆ. ಪ್ರಾಪ್ತ ಮಾಡಿಕೊಳ್ಳುತ್ತಾರೆ.

ಭಾವಾರ್ಥಃ:- 'ಪರೋಪಕಾರಾರ್ಥಂ ಇದಂ ಶರೀರಮ್' ಪರಮಾತ್ಮನು ನಮಗೆ ಈ ಮಾನವ ಶರೀರವನ್ನು ಪರೋಪಕಾರ ಮಾಡುವುದಕ್ಕೋಸ್ಕರವೇ ಕೊಟ್ಟಿದ್ದಾನೆ. ಯಾರು ಪ್ರತಿನಿತ್ಯ ದೇವಪೂಜಾ, ಸಂಘಟನೆ, ದಾನ, ಮಾನವ ಮಾತ್ರರಿಗೆ ಉಪಕಾರ, ಪ್ರಾಣಿಮಾತ್ರರ ಸೇವೆ, ಸಂಪೂರ್ಣ ಜ್ಞಾನದ ಪ್ರಾಪ್ತಿ, ಮತ್ತು ಸರ್ವರಿಗೂ ವಿದ್ಯೆ ಹಾಗೂ ಜ್ಞಾನವನ್ನು ಪ್ರದಾನ ಮಾಡುವುದು. ಈ ಏಳು ವಿಧದ ಪ್ರಶಂಸನೀಯ ಕರ್ಮಗಳನ್ನು ಒಂದೊಂದಾಗಿ, ಕ್ರಮಶಃ ಮತ್ತು ನಿರಂತರ ಮಾಡುತ್ತಾರೋ, ಅವರು ತ್ರಿವಿಧ ಶಾಂತಿ, ಅರ್ಥಾತ್ ಆಧಿಭೌತಿಕ, ಆಧಿದೈವಿಕ ಮತ್ತು ಆಧ್ಯಾತ್ಮಿಕ ಶಾಂತಿಯನ್ನೂ ಸುಖವನ್ನೂ ಪ್ರಾಪ್ತ ಮಾಡಿಕೊಂಡು, ನಮ್ಮೆಲ್ಲರ ಕಲ್ಯಾಣವನ್ನೇ ಮಾಡುತ್ತಾರೆ. ಸದಾ ಮನಸಾ, ವಾಚಾ, ಕರ್ಮಣಾ, ಸಮಸ್ತ ಪ್ರಾಣಿಮಾತ್ರರ ಹಿತವನ್ನೇ ಬಯಸುತ್ತಾರೆ. ಅವರನ್ನೇ ಮಹಾತ್ಮರೆನ್ನುತ್ತಾರೆ. ಪರಮಾತ್ಮನ ಕೃಪೆಯಿಂದ ಇಂತಹ ಶ್ರೇಷ್ಠ ಮಹಾತ್ಮರು ಸದಾಕಾಲ ನಮಗೆ ಪ್ರಾಪ್ತವಾಗಲಿ ಮತ್ತು ನಾವೆಲ್ಲರೂ ಮಹಾತ್ಮರ ಸಂಗದಿಂದ ಮತ್ತು ಅವರ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಮೂಲಕ, ಶ್ರೇಷ್ಠ ಮಾನವರಾಗೋಣ.

ಈ ಉಕ್ತ ಕರ್ಮಗಳನ್ನು ಮಾಡಿ ಏನನ್ನು ಹೊಂದುತ್ತಾರೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಧಾರಯಂತ ವಹ್ನಯೋಽಭಜಂತ ಸುಕೃತ್ಯಯಾ । ಭಾಗಂ ದೇವೇಷು ಯಜ್ಞಿಯಮ್ ॥೮॥

ಪದಾರ್ಥಃ:- ಯಾರು [ವಹ್ನಯಃ] ಉತ್ತಮ ಗುಣಗಳನ್ನು ಧಾರಣ ಮಾಡಿಕೊಂಡು, ಶುಭ ಕರ್ಮಗಳನ್ನು ಮಾಡುತ್ತಾ ವಿದ್ವಾಂಸರೂ, ಮೇಧಾವಿಗಳೂ ಆಗುತ್ತಾರೋ, ಅವರು [ಸುಕೃತ್ಯಯಾ] ತಮ್ಮ ಶ್ರೇಷ್ಠ ಕರ್ಮಗಳ ಮೂಲಕ [ದೇವೇಷು] ವಿದ್ವಾಂಸರು ಮತ್ತು ಮಹಾತ್ಮರ ಮಧ್ಯದಲ್ಲಿ ಇದ್ದುಕೊಂಡು [ಯಜ್ಞಿಯಮ್] ಪೂರ್ವಮಂತ್ರದಲ್ಲಿ ಹೇಳಿದಂತ ಏಳು ಕರ್ಮಗಳನ್ನು - [ದೇವಪೂಜಾ, ಸಂಗತಿಕರಣ, ದಾನ, ಮಾನವ ಮಾತ್ರರ ಉಪಕಾರ, ಪ್ರಾಣಿಮಾತ್ರರ ಸೇವೆ, ಸಂಪೂರ್ಣ ಜ್ಞಾನದ ಪ್ರಾಪ್ತಿ, ಮತ್ತು ಸರ್ವರಿಗೂ ವಿದ್ಯೆ ಮತ್ತು ಜ್ಞಾನವನ್ನು ಪ್ರದಾನ ಮಾಡುವುದು] [ಆಧಾರಯಂತ] ನಿರಂತರ ಮಾಡುತ್ತಾರೋ, ಅವರು [ಭಾಗಂ ಅಭಜಂತ] ಸದಾಕಾಲ ಆನಂದವನ್ನು ಅನುಭವಿಸುತ್ತಾರೆ. ಮೋಕ್ಷಾನಂದವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ.

ಭಾವಾರ್ಥಃ:- ಸಕಲ ಸದ್ಗುಣಗಳನ್ನು ಧಾರಣ ಮಾಡಿಕೊಂಡು, ಸತ್ಕರ್ಮಗಳನ್ನು ಮಾಡುತ್ತಾ, ವಿದ್ವಾಂಸರೂ, ಮೇಧಾವಿಗಳೂ ಆಗುವವರು, ತಮ್ಮ ಶ್ರೇಷ್ಠ ಕರ್ಮಗಳ ಮೂಲಕ ಮಹಾತ್ಮರ ಮಧ್ಯದಲ್ಲಿ ಇದ್ದುಕೊಂಡು, ತಾವೂ ಮಹಾತ್ಮರಾಗುತ್ತಾರೆ. ಪೂರ್ವ ಮಂತ್ರದಲ್ಲಿ ಹೇಳಿರುವ, ಸಪ್ತ ಕರ್ಮಗಳನ್ನು ನಿರಂತರವಾಗಿ ಮಾಡುತ್ತಾ, ತಮ್ಮ ಕರ್ಮಗಳ ಮೂಲಕ ಮೃತ್ಯುವನ್ನು ಜಯಿಸಿ, ಜ್ಞಾನದ ಮೂಲಕ ಮೋಕ್ಷವನ್ನು ಪಡೆಯುತ್ತಾರೆ. ಅವರು ಸದಾಕಾಲ ಆನಂದವನ್ನೇ ಅನುಭವಿಸುತ್ತಾರೆ. ಆದುದರಿಂದ ಸಕಲ ಮಾನವರು, ಸದಾ ಸದ್ಗುಣವಂತರಾಗಿಯೂ, ಸಚ್ಚಾರಿತ್ರವಂತರಾಗಿಯೂ, ಸುಶೀಲರಾಗಿಯೂ, ಶ್ರೇಷ್ಠ ಸಂಸ್ಕಾರವುಳ್ಳವರಾಗಿಯೂ ಆಗಿ, ಶ್ರೇಷ್ಠ ಕರ್ಮಗಳನ್ನು ಮಾಡುತ್ತಾ ಜ್ಞಾನಸಂಪನ್ನರೂ, ವಿದ್ಯಾವಂತರೂ ಆಗಿ, ಪರಮಾತ್ಮನ ಉಪಾಸನೆಯನ್ನು ಮಾಡುತ್ತಾ, ಮೋಕ್ಷಾನಂದವನ್ನು ಅನುಭವಿಸಬೇಕು.

ಪೂರ್ವೋಕ್ತ ಏಕೋನವಿಂಶತಿ ಅರ್ಥಾತ್ ಹತ್ತೊಂಭತ್ತನೆಯ ಸೂಕ್ತದಲ್ಲಿ ಸಕಲ ಪದಾರ್ಥಗಳಿಂದ ಪ್ರಯೋಜನವನ್ನು ಪಡೆಯಲು ಮೇಧಾವಿಗಳೇ ಸಮರ್ಥರಾಗುತ್ತಾರೆ. ಈ ಅಭಿಪ್ರಾಯದಿಂದ ಈ ಸೂಕ್ತದೊಂದಿಗೆ ಸಂಗತಿಕರಣ ಆಗುತ್ತದೆ ಎಂಬುದನ್ನು ಗಮನಿಸಬೇಕು.

ಇಪ್ಪತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೨೧

ಮಂತ್ರಸಂಖ್ಯೆ ೬ । ಋಷಿಃ - ಮೇಧಾತಿಥಿಃ ಕಾಣ್ವಃ । ದೇವತಾ - ಇಂದ್ರಾಗ್ನಿ । ಛಂದಃ - ೧, ೩, ೪, ೬, ಗಾಯತ್ರೀ ೨ ಪಿಪೀಲಿಕಾ ಮಧ್ಯಾ ನಿಚೃದ್ ಗಾಯತ್ರೀ, ೫ ನಿಚೃದ್ ಗಾಯತ್ರೀ । ಸ್ವರಃ - ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಇಂದ್ರ ಮತ್ತು ಅಗ್ನಿಯ ಗುಣಗಳ ವರ್ಣನೆ ಮಾಡಲಾಗಿದೆ.

ಇಹೇಂದ್ರಾಗ್ನೀ ಉಪ ಹ್ವಯೇ ತಯೋರಿತ್ ಸ್ತೋಮಮುಶ್ಮಸಿ । ತಾ ಸೋಮಂ ಸೋಮಪಾತಮಾ॥೧॥

ಪದಾರ್ಥಃ:- **[ಇಹ]** ಈ ಪ್ರಪಂಚದಲ್ಲಿ ಪ್ರತಿನಿತ್ಯ ನಾವು ಮಾಡುವ ಯಜ್ಞ ಹಾಗೂ ಸಕಲ ರೀತಿಯ ಶಿಲ್ಪಕಲೆಗಳ ಮೂಲಕ ಯಾವೆಲ್ಲಾ **[ಸೋಮಪಾತಮಾ]** ಪದಾರ್ಥಗಳು ಅರ್ಥಾತ್ ವಸ್ತುಗಳು ಇವೆಯೋ ಅವೆಲ್ಲವನ್ನೂ ಉತ್ಪಾದಿಸಲು ಮತ್ತು ಪೋಷಿಸಲು **[ಇಂದ್ರಾಗ್ನೀ]** ವಾಯು ಮತ್ತು ಅಗ್ನಿ ಅಥವಾ ಸೂರ್ಯನ ಶಕ್ತಿ ಹಾಗೂ ವಿದ್ಯುಚ್ಛಕ್ತಿ ಇವೆರಡರ ಮೂಲಕ **[ಸೋಮಂ ರಕ್ಷತ]** ಸಕಲ ಪದಾರ್ಥಗಳನ್ನು ರಕ್ಷಿಸಲು **[ತೌ]** ಅವೆರಡನ್ನೂ **[ಉಪಹ್ವಯೇ]** ನಾನು ಅತ್ಯಂತ ಉತ್ತಮರೀತಿಯಲ್ಲಿ ಬಳಸಿಕೊಳ್ಳುತ್ತೇನೆ. **[ತಯೋಃ]** ಅವೆರಡರ ಸಹಯೋಗದಲ್ಲಿ ಉಂಟಾಗುವ ಅಥವಾ ಪ್ರಾಪ್ತವಾಗುವ **[ಸ್ತೋಮಂ]** ಯಾವೆಲ್ಲಾ ಗುಣಗಳಿವೆಯೋ **[ತಾನ್ ಉಶ್ಮಸಿ]** ಅವೆಲ್ಲವನ್ನೂ ನಾವು ಪ್ರಾಪ್ತ ಮಾಡಿಕೊಳ್ಳುತ್ತೇವೆ.

ಭಾವಾರ್ಥಃ:- ಪರಮಾತ್ಮನು ನಮಗೆ ವಾಯು ಮತ್ತು ಅಗ್ನಿಯನ್ನೂ, ಸೂರ್ಯನ ವಿಪುಲವಾದ ಶಕ್ತಿ ಹಾಗೂ ವಿದ್ಯುಚ್ಛಕ್ತಿಯನ್ನೂ, ಧಾರಾಳವಾಗಿ ಕೊಟ್ಟಿದ್ದಾನೆ. ನಮಗೆ ಪ್ರಕೃತಿದತ್ತವಾದ ಈ ಕೊಡುಗೆಗಳನ್ನು ಉತ್ತಮವಾದ ರೀತಿಯಲ್ಲಿ ಬಳಸಿಕೊಂಡು, ನಾವು ಸಕಲ ಪದಾರ್ಥಗಳನ್ನು ಉತ್ಪಾದಿಸಬೇಕು. ಉತ್ಪನ್ನವಾದ ಪದಾರ್ಥಗಳನ್ನು ಸರಿಯಾದ ರೀತಿಯಲ್ಲಿ ಪೋಷಿಸಬೇಕು ಮತ್ತು ರಕ್ಷಿಸಬೇಕು. ಕೇವಲ ಜಲದಿಂದ ಉತ್ಪನ್ನವಾಗುವ ವಿದ್ಯುಚ್ಛಕ್ತಿಯ ಮೇಲೆ ನಿರ್ಭರವಾಗಿರದೇ, ಸೂರ್ಯನ ಶಕ್ತಿಯ ಮೂಲಕವೂ ವಿದ್ಯುಚ್ಛಕ್ತಿಯನ್ನು ಪ್ರಾಪ್ತ ಮಾಡಿಕೊಂಡು, ಕೆಲವು ಪದಾರ್ಥಗಳನ್ನು ಉಷ್ಣ ವಾಯುವಿನ ಸಹಾಯದಿಂದ ಒಣಗಿಸಿಕೊಂಡು, ಕೆಲವು ಪದಾರ್ಥಗಳನ್ನು ಶೈತ್ಯಾಗಾರದಲ್ಲಿ ಇಟ್ಟುಕೊಂಡು ಸರಿಯಾದ ರೀತಿಯಲ್ಲಿ ಸಕಲ ಪದಾರ್ಥಗಳನ್ನು ರಕ್ಷಿಸುತ್ತಾ, ಎಲ್ಲರಿಗೂ ಉತ್ತಮವಾದ ರೀತಿಯಲ್ಲಿ

ಪ್ರಾಪ್ತವಾಗುವಂತೆ ಮಾಡಬೇಕು. ಯಾವುದೇ ಪರಿಸ್ಥಿತಿಯಲ್ಲಿ ಬೆಳೆದ ಹಾಗೂ ಉತ್ಪನ್ನವಾದ ಸಕಲ ಪದಾರ್ಥಗಳು ಯಾವುದೇ ರೀತಿಯಲ್ಲಿ ಕೆಡದಂತೆ, ಹಾಳಾಗದಂತೆ ಜಾಗ್ರತೆ ವಹಿಸಬೇಕು.

ಪುನಃ ಅವು ಹೇಗಿರುತ್ತವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ತಾ ಯಜ್ಞೇಷು ಪ್ರ ಶಂಸತೇಂದ್ರಾಗ್ನೀ ಶುಂಭತಾ ನರಃ । ತಾ ಗಾಯತ್ರೇಷು ಗಾಯತ ॥೨॥

ಪದಾರ್ಥ:- [ನರಃ] ಓ ಯಜನಶೀಲರಾದ ಮಾನವರೇ! ನೀವೆಲ್ಲರೂ ಯಾವ [ಇಂದ್ರಾಗ್ನಿ] ವಾಯು ಮತ್ತು ಅಗ್ನಿಯನ್ನು ಅಥವಾ ಸೂರ್ಯ ಮತ್ತು ಅಗ್ನಿಯನ್ನು, ಅಥವಾ ಸೂರ್ಯ ಮತ್ತು ವಿದ್ಯುಚ್ಛಕ್ತಿಯನ್ನು ಅಥವಾ ಪರಮಾತ್ಮ ಮತ್ತು ಜೀವಾತ್ಮನನ್ನು **[ಯಜ್ಞೇಷು ಪ್ರಶಂಸತ]** ಯಜ್ಞದಲ್ಲಿ ಮಂತ್ರಗಳ ಮೂಲಕ ಪ್ರಶಂಸಿಸುತ್ತೀರೋ, ಅರ್ಥಾತ್ ಅವುಗಳ ಗುಣಗಳನ್ನು ವರ್ಣಿಸುತ್ತೀರೋ, ಹವಿಸ್ಸನ್ನು ಅರ್ಪಿಸುವುದರ ಮೂಲಕ ಅವುಗಳನ್ನು ಉತ್ತಮವಾದ ರೀತಿಯಲ್ಲಿ ಪೋಷಿಸುತ್ತೀರೋ, ಸಕಲ ರೀತಿಯ ಶಿಲ್ಪಕಲೆಗಳಲ್ಲಿ ವಾಯು ಮತ್ತು ಅಗ್ನಿಯನ್ನು ಹಾಗೂ ಸೂರ್ಯಶಕ್ತಿಯನ್ನು ಮತ್ತು ವಿದ್ಯುಚ್ಛಕ್ತಿಯನ್ನು ಉತ್ತಮವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತೀರೋ, ಉಪಾಸನೆಯ ಮೂಲಕ ಪರಮಾತ್ಮನ ಶಕ್ತಿಯನ್ನು ಹಾಗೂ ಆತ್ಮಶಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತೀರೋ, **[ತಾ]** ಅವೆಲ್ಲವನ್ನೂ **[ಶುಂಭತ]** ಉತ್ತಮವಾದ ರೀತಿಯಲ್ಲಿ ಬಳಸಿಕೊಳ್ಳಿರಿ. ಅರ್ಥಾತ್ ಸಕಲ ಭೌತಿಕ ಶಕ್ತಿಯನ್ನೂ, ಆತ್ಮಿಕ ಶಕ್ತಿಯನ್ನೂ ಪ್ರಾಪ್ತ ಮಾಡಿಕೊಂಡು ಅದರ ಸದ್ವಿನಿಯೋಗವನ್ನು ಮಾಡಿರಿ. ಹಾಗೂ **[ತಾ ಗಾಯತ್ರೇಷು]** ಈ ಭೂಮಿಯಲ್ಲಿರುವ ಆ ಎಲ್ಲ ಮಾನವ ಮಾತ್ರರಿಗೆ **[ಗಾಯತ]** ಸಕಲ ಪದಾರ್ಥಗಳ ಗುಣಗಳನ್ನು ಬೋಧಿಸಿರಿ.

ಭಾವಾರ್ಥ:- ಹೇ ಯಜನಶೀಲರಾದ ಮಾನವರೇ! ನೀವೆಲ್ಲರೂ ವಾಯು ಮತ್ತು ಅಗ್ನಿಯನ್ನೂ, ಅಥವಾ ಸೂರ್ಯ ಮತ್ತು ವಿದ್ಯುಚ್ಛಕ್ತಿಯನ್ನೂ ಅಥವಾ ಸೂರ್ಯ ಮತ್ತು ಅಗ್ನಿಯನ್ನೂ, ಪರಮಾತ್ಮ ಮತ್ತು ಆತ್ಮನನ್ನು ಯಜ್ಞದಲ್ಲಿ ಮಂತ್ರಗಳ ಮೂಲಕ, ಅವೆಲ್ಲದರ ಗುಣ ಮತ್ತು ಸ್ವರೂಪಗಳ ವರ್ಣನೆಯನ್ನು ಮಾಡುತ್ತಾ, ಹವಿಸ್ಸನ್ನು ಅರ್ಪಿಸುವುದರ ಮೂಲಕ ಸಕಲ ಭೌತಿಕ ಪದಾರ್ಥಗಳನ್ನು ಪೋಷಿಸುತ್ತೀರೋ, ಯೋಗ್ಯವಾದ ರೀತಿಯಲ್ಲಿ ಬಳಸಿಕೊಂಡು ಸದ್ವಿನಿಯೋಗವನ್ನು ಮಾಡುತ್ತೀರೋ, ಉಪಾಸನೆಯ ಮೂಲಕ ಪರಮಾತ್ಮ ಮತ್ತು ಜೀವಾತ್ಮರ ಸಕಲ ಶಕ್ತಿಯನ್ನೂ ಪ್ರಾಪ್ತ ಮಾಡಿಕೊಳ್ಳುತ್ತೀರೋ, ಅವೆಲ್ಲವನ್ನೂ ಉತ್ತಮವಾದ ರೀತಿಯಲ್ಲಿ ಸಕಲ ಪ್ರಾಣಿಮಾತ್ರರ ಹಿತಕ್ಕೋಸ್ಕರ ವಿನಿಯೋಗಿಸಿರಿ. ನೀವು ಪ್ರಾಪ್ತ ಮಾಡಿಕೊಂಡ ಸಕಲ ಭೌತಿಕ ಪದಾರ್ಥಗಳೂ, ಸಕಲ ಭೌತಿಕ ಮತ್ತು ಆತ್ಮಿಕ ಶಕ್ತಿಯು ಸರ್ವಜನರ ಹಿತಕ್ಕಾಗಿಯೇ ವಿನಿಯೋಗವಾಗಲಿ. ಹಾಗೂ ಸಕಲ ಪದಾರ್ಥಗಳ ಗುಣಗಳನ್ನು ಈ ಭೂಮಿಯಲ್ಲಿರುವ ಮಾನವ ಮಾತ್ರರಿಗೆ ಬೋಧಿಸಿರಿ.

ಅವು ಯಾವ ರೀತಿ ಉಪಕಾರ ಮಾಡುವಂತಹುದಾಗಿದೆ ಎಂಬುದನ್ನು ಇಲ್ಲಿ ವರ್ಣಿಸಲಾಗಿದೆ.

ತಾ ಮಿತ್ರಸ್ಯ ಪ್ರಶಸ್ತಯ ಇಂದ್ರಾಗ್ನೀ ತಾ ಹವಾಮಹೇ । ಸೋಮಪಾ ಸೋಮಪೀತಯೇ ॥೩॥

ಪದಾರ್ಥ:- ಯಾವ ರೀತಿ ವಿದ್ವಾಂಸರು, ವಾಯು ಮತ್ತು ಅಗ್ನಿಯ ಗುಣಗಳನ್ನು ಹಾಗೂ ಪ್ರಯೋಜನವನ್ನೂ ಉತ್ತಮವಾದ ರೀತಿಯಲ್ಲಿ ಅರಿತುಕೊಂಡು, ಅವೆರಡನ್ನು ಯೋಗ್ಯವಾದ ರೀತಿಯಲ್ಲಿ ಉಪಯೋಗಿಸಿಕೊಳ್ಳುತ್ತಾರೋ, ಅದೇ ರೀತಿ ನಾವೂ ಕೂಡಾ **[ತಾ]** ಅವೆರಡೂ ಎಂದರೆ ಇಂದ್ರಾಗ್ನೀ ಅರ್ಥಾತ್ ವಾಯು ಮತ್ತು ಅಗ್ನಿಯ **[ಮಿತ್ರಸ್ಯ ಪ್ರಶಸ್ತಯೇ]** ಸರ್ವರಿಗೂ ಜೀವನವನ್ನೂ, ಶಕ್ತಿಯನ್ನೂ ಕೊಟ್ಟು ಜೀವಮಾತ್ರರ ಮಿತ್ರರಾಗಿರುವ ಹಾಗೂ ಸಮಸ್ತ ಪ್ರಾಣಿಮಾತ್ರರಿಗೂ ಪ್ರಶಂಸನೀಯವಾದ ಸುಖವನ್ನು ಕೊಡುವ ಹಾಗೂ **[ಸೋಮಪೀತಯೇ]** ಯಾವ ಯಾವ ವ್ಯವಹಾರಗಳಲ್ಲಿ ಸಕಲ ಪದಾರ್ಥಗಳ ಅತ್ಯುತ್ತಮವಾದ ರೀತಿಯಲ್ಲಿ ರಕ್ಷಣೆಯಾಗುತ್ತದೆಯೋ, ಅಂತಹ

[ತಾ ಸೋಮಪಾ] ಆ ಸಕಲ ಪದಾರ್ಥಗಳ ರಕ್ಷಣೆಯನ್ನು ಮಾಡುವ **[ಇಂದ್ರಾಗ್ನೀ]** ವಾಯು ಮತ್ತು ಅಗ್ನಿಯನ್ನು **[ಹವಾಮಹೇ]** ಅತ್ಯುತ್ತಮವಾದ ರೀತಿಯಲ್ಲಿ ಪ್ರಾಪ್ತ ಮಾಡಿಕೊಳ್ಳುತ್ತೇವೆ.

ಭಾವಾರ್ಥ:- ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಮತ್ತು ಪಂಚಮಹಾಭೂತಗಳಲ್ಲಿ ಪ್ರಮುಖವಾದ ಅಗ್ನಿ ಮತ್ತು ವಾಯು, ಇವೆರಡರ ಸಂಪೂರ್ಣವಾದ ಗುಣ ಮತ್ತು ಪ್ರಯೋಜನಗಳನ್ನು ಹಾಗೂ ಪ್ರತಿಯೊಂದು ಕಾರ್ಯದಲ್ಲಿ, ಪ್ರತಿಯೊಂದು ವ್ಯವಹಾರದಲ್ಲಿ ಬಳಸಿಕೊಳ್ಳುವ ವಿಧಾನವನ್ನು ವಿದ್ವಾಂಸರು ಅರಿತುಕೊಳ್ಳುತ್ತಾರೋ, ಅವೆಲ್ಲವನ್ನೂ ನಾವು ಕೂಡಾ ಅರಿತುಕೊಂಡು, ಪ್ರಪಂಚದಲ್ಲಿ ಉತ್ಪನ್ನವಾದ ಹಾಗೂ ಉತ್ಪನ್ನವಾಗಲಿರುವ ಸಕಲ ಪದಾರ್ಥಗಳನ್ನೂ ಸರಿಯಾದ ರೀತಿಯಲ್ಲಿ ರಕ್ಷಿಸುವುದಕ್ಕೋಸ್ಕರ ಅಗ್ನಿ ಮತ್ತು ವಾಯುವನ್ನು ಅಥವಾ ಸೂರ್ಯನ ಶಕ್ತಿಯನ್ನು ಹಾಗೂ ವಿದ್ಯುಚ್ಛಕ್ತಿಯನ್ನು ಎಲ್ಲಾ ರೀತಿಯಲ್ಲಿ ಪ್ರಾಪ್ತಮಾಡಿಕೊಳ್ಳುತ್ತೇವೆ.

ಪುನಃ ಅವು ಹೇಗಿರುತ್ತವೆ ಎಂಬುದನ್ನು ತಿಳಿಸಲಾಗುತ್ತದೆ.

ಉಗ್ರಾ ಸಂತಾ ಹವಾಮಹ ಉಪೇದಂ ಸವನಂ ಸುತಮ್ । ಇಂದ್ರಾಗ್ನೀ ಏಹ ಗಚ್ಛತಾಮ್ ॥೪॥

ಪದಾರ್ಥ:- ನಾವೆಲ್ಲರೂ ಯಾವುದೆಲ್ಲಾ **[ಸುತಂ]** ಶಿಲ್ಪ ಕ್ರಿಯಾದಿಗಳ ಮೂಲಕ ಉತ್ಪನ್ನವಾದ **[ಇದಂ ಸವನಂ]** ಈ ಸಕಲ ಪದಾರ್ಥಗಳನ್ನೂ **[ಉಪಾಗಚ್ಛತಾಂ]** ಯೋಗ್ಯವಾದ ರೀತಿಯಲ್ಲಿ ಪ್ರಾಪ್ತ ಮಾಡಿಕೊಳ್ಳುತ್ತೇವೆಯೋ ಅವೆಲ್ಲವನ್ನೂ ತಯಾರಿಸಲು **[ಉಗ್ರೌ]** ಅತ್ಯಂತ ತೀಕ್ಷ್ಣವಾದ ಶಕ್ತಿಗಳಾದ **[ಸಂತಾ]** ಸರ್ವತ್ರ ವಿದ್ಯಮಾನವಾದ **[ಇಂದ್ರಾಗ್ನೀ]** ವಾಯು ಮತ್ತು ಅಗ್ನಿಯನ್ನು ಅಥವಾ ಸೂರ್ಯನ ಶಕ್ತಿ ಹಾಗೂ ವಿದ್ಯುಚ್ಛಕ್ತಿಯನ್ನು **[ಹವಾಮಹೇ]** ಸಕಲ ವಿದ್ಯಾಸಿದ್ಧ್ಯರ್ಥ ಪ್ರಾಪ್ತಮಾಡಿಕೊಳ್ಳುತ್ತೇವೆ.

ಭಾವಾರ್ಥ:- ನಾವೆಲ್ಲರೂ, ಯಾವುದೆಲ್ಲಾ, ಶಿಲ್ಪವಿದ್ಯೆ ಮತ್ತು ಶಿಲ್ಪಕ್ರಿಯಾದಿಗಳ ಮೂಲಕ ಉತ್ಪನ್ನವಾದ ಪದಾರ್ಥಗಳಿವೆಯೋ, ವಸ್ತುಗಳಿವೆಯೋ, ಅವೆಲ್ಲವನ್ನೂ ತಯಾರಿಸಲು ಸಾಧಕಗಳಾದ ಅತ್ಯಂತ ತೀಕ್ಷ್ಣ ಶಕ್ತಿಯುಳ್ಳ ಹಾಗೂ ಸರ್ವತ್ರ ವಿದ್ಯಮಾನವಾದ ವಾಯು ಮತ್ತು ಅಗ್ನಿಯನ್ನು ಅಥವಾ ಸೂರ್ಯನ ಶಕ್ತಿ ಮತ್ತು ವಿದ್ಯುಚ್ಛಕ್ತಿಯನ್ನು ಸಕಲ ವಿದ್ಯಾ ಸಿದ್ಧ್ಯರ್ಥ ಹಾಗೂ ಸಕಲ ಕಾರ್ಯ ಸಿದ್ಧ್ಯರ್ಥ ಉತ್ತಮವಾದ ರೀತಿಯಲ್ಲಿ ಪ್ರಾಪ್ತಮಾಡಿಕೊಳ್ಳುತ್ತೇವೆ.

ಶಿಲ್ಪ ವಿದ್ಯೆ ಮತ್ತು ಶಿಲ್ಪಕ್ರಿಯೆ ಎಂದರೆ ಕೇವಲ ಕಲ್ಲಿನಿಂದ, ಮರದಿಂದ ಅಥವಾ ಲೋಹದಿಂದ ಮಾಡಿದ ಕೆತ್ತನೆಯ ಕೆಲಸ ಎಂದು ಭಾವಿಸಬಾರದು. ಇವತ್ತಿನ ಆಂಗ್ಲ ಭಾಷೆಯಲ್ಲಿ ಯಾವುದನ್ನು ನಾವು ಇಂಜಿನಿಯರಿಂಗ್ ಮತ್ತು ಟೆಕ್ನೋಲಜಿ ಎಂದು ಹೇಳುತ್ತೇವೆಯೋ, ಅವೆಲ್ಲವೂ ಶಿಲ್ಪ ವಿದ್ಯೆಗಳೆಂದೇ ಅರ್ಥೈಸಬೇಕು. ಈ ರೀತಿ ಸಕಲ ವಿಜ್ಞಾನಿಗಳು ಮತ್ತು ಸಕಲ ಇಂಜಿನಿಯರರು ಹಾಗೂ ಸಕಲ ಕುಶಲ ಕರ್ಮಿಗಳು ತಯಾರಿಸುವ ಸಮಸ್ತ ಪದಾರ್ಥಗಳು, ವಸ್ತುಗಳು, ಎಲ್ಲವನ್ನೂ ಶಿಲ್ಪಕ್ರಿಯೆ ಎಂದೇ ಪರಿಗಣಿಸಬೇಕು. ಎಲ್ಲಾ ವಿಧದ ಗ್ಯಾಸ್‌ಗಳು ಎಂದರೆ ಅನಿಲಗಳು ವಾಯುವಿನ ರೂಪಗಳೇ ಆಗಿವೆ. ಅದೇ ರೀತಿಯಲ್ಲಿ ಸಕಲ ವಿಧದ ಅನಿಲಗಳು, ಮಿಂಚು ಹಾಗೂ ವಿದ್ಯುತ್ತು ಎಲ್ಲವೂ ಅಗ್ನಿಯ ರೂಪಗಳೇ ಆಗಿವೆ.

ನಂತರ ಅವು ಯಾವ ಪ್ರಕಾರದ್ದಾಗಿವೆ ಎಂಬುದನ್ನು ತಿಳಿಸಿದೆ.

ತಾ ಮಹಾಂತಾ ಸದಸ್ಪತೀ ಇಂದ್ರಾಗ್ನೀ ರಕ್ಷ ಉಬ್ಜತಮ್ । ಅಪ್ರಜಾಃ ಸಂತ್ವತ್ರಿಣಃ ॥೫॥

ಪದಾರ್ಥ:- **[ತಾ]** ಅವರಿಬ್ಬರೂ **[ಮಹಾಂತಾ]** ಅತ್ಯಂತ ಪ್ರಬಲರೂ, ಶಕ್ತಿಶಾಲಿಗಳೂ, ಶ್ರೇಷ್ಠರೂ, ಸಕಲ ಸದ್ಗುಣವುಳ್ಳವರಾಗಿದ್ದು, ರಾಷ್ಟ್ರದ ಹಿತಕ್ಕಾಗಿ ಸರ್ವತೋಮುಖ ಅಭಿವೃದ್ಧಿಗಾಗಿ, ಎಲ್ಲಾ ವಿಧದ ಶ್ರೇಷ್ಠ ಕರ್ಮಗಳನ್ನೂ,

ಶ್ರೇಷ್ಠ ಯೋಜನೆಗಳನ್ನೂ ಮಾಡುವವರೂ ಆದ [ಇಂದ್ರಾಗ್ನೀ] ರಾಷ್ಟ್ರದ ಅಧಿಪತಿ ಮತ್ತು ಪ್ರಧಾನಮಂತ್ರಿ ಇವರಿಬ್ಬರು [ಸದಸ್ಪತೀ] ಉತ್ತಮ ಪ್ರಜಾಪಾಲಕರೂ, ಎಲ್ಲಾ ವಿಧದಲ್ಲಿ ಪ್ರಜೆಗಳನ್ನು ಪೋಷಿಸುತ್ತಾ, ಸಂಪೂರ್ಣ ರಕ್ಷಣೆಯನ್ನು ಕೊಡುವವರೂ ಆಗಿದ್ದು [ರಕ್ಷಃ] ರಾಷ್ಟ್ರವನ್ನು ನಾಶ ಮಾಡುವ, ವಿಘಟನಕಾರೀ ತತ್ವಗಳನ್ನು ದುಷ್ಟ ವ್ಯವಹಾರಗಳನ್ನೂ, ದುಷ್ಟ ಪ್ರವೃತ್ತಿಗಳನ್ನೂ [ಉಬ್ಜತಮ್] ಕುಟಿಲತೆಯನ್ನು ಸಂಪೂರ್ಣ ನಷ್ಟ ಮಾಡಬೇಕು. ಅದೇ ರೀತಿ [ಅತ್ರಿಣಃ] ರಾಷ್ಟ್ರದ ಮೇಲೆ ಬಾಹ್ಯ ಆಕ್ರಮಣಗಳನ್ನು ಮಾಡುವ ಹಾಗೂ ರಾಷ್ಟ್ರದಲ್ಲಿ, ದಂಗೆ ಮತ್ತು ಗಲಭೆಗಳನ್ನು ಮಾಡುವ ಎಲ್ಲಾ ವಿಧದ ಶತ್ರುಗಳನ್ನು ಮತ್ತು ಆತಂಕವಾದಿಗಳನ್ನು [ಅಪ್ರಜಾಃ ಸಂತು] ಮೂಲ ಸಹಿತ ಸಂಪೂರ್ಣವಾಗಿ ನಷ್ಟಮಾಡಬೇಕು.

ಭಾವಾರ್ಥ:- ರಾಷ್ಟ್ರದ ಅಧಿಪತಿ ಅರ್ಥಾತ್ ರಾಷ್ಟ್ರಪತಿ ಮತ್ತು ಪ್ರಧಾನಮಂತ್ರಿ, ಇವರಿಬ್ಬರು, ಅತ್ಯಂತ ಪ್ರಬಲರೂ, ಪರಾಕ್ರಮಿಗಳೂ, ಸಕಲ ಸದ್ಗುಣವುಳ್ಳವರಾಗಿದ್ದು, ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಗಾಗಿ, ಸಕಲ ಶ್ರೇಷ್ಠ ಯೋಜನೆಗಳನ್ನು ಮಾಡುವವರೂ ಆಗಬೇಕು. ರಾಷ್ಟ್ರದ ವಿಘಟನೆಯನ್ನು ಮಾಡುವ ದುಷ್ಟ ಶಕ್ತಿಗಳನ್ನು ದುಷ್ಟ ವ್ಯವಹಾರಗಳನ್ನು ದುಷ್ಟ ಪ್ರವೃತ್ತಿಗಳನ್ನು ಸಂಪೂರ್ಣವಾಗಿ ನಷ್ಟ ಮಾಡಬೇಕು. ಅದೇ ರೀತಿ, ರಾಷ್ಟ್ರದ ಒಳಗೆ ಗಲಭೆ ಮತ್ತು ದಂಗೆಗಳನ್ನು ಮಾಡುವ ಸಮಸ್ತ ಆತಂಕವಾದಿಗಳನ್ನು, ಹೊರಗಿನಿಂದ ಆಕ್ರಮಣ ಮಾಡುವ ಎಲ್ಲಾ ಶತ್ರುಗಳನ್ನೂ, ಸಂಪೂರ್ಣವಾಗಿ ಮೂಲ ಸಹಿತ ನಷ್ಟ ಮಾಡಬೇಕು, ನಿರ್ಮೂಲ ಮಾಡಬೇಕು. ಇನ್ನೊಂದು ಬಾರಿ ಅಂತಹ ದುಷ್ಟ ಕರ್ಮಗಳನ್ನು ಮಾಡುವವರು ಇರಲೇಬಾರದು.

ಪುನಃ ಅವು ಯಾವ ಪ್ರಕಾರದ್ದಾಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗುತ್ತದೆ.

ತೇನ ಸತ್ಯೇನ ಜಾಗೃತಮಧಿ ಪ್ರಚೇತುನೇ ಪದೇ । ಇಂದ್ರಾಗ್ನೀ ಶರ್ಮ ಯಚ್ಛತಮ್ ॥೬॥

ಪದಾರ್ಥ:- ಅಷ್ಟಾಂಗ ಯೋಗದ ಸಾಧನೆ ಹಾಗೂ ಉಪಾಸನೆಯ ಮೂಲಕ ಪವಿತ್ರವಾದ [ಇಂದ್ರಾಗ್ನೀ] ಆತ್ಮ ಮತ್ತು ಬುದ್ಧಿಯ [**ಅಧಿ ಜಾಗೃತಮ್**] ಸಮಸ್ತ ಕ್ಲೇಶಗಳಿಂದ ಮುಕ್ತವಾಗಿ, ಅತ್ಯಂತ ಜಾಗ್ರತವಾದ ಹಾಗೂ ಸಕಲ ಶ್ರೇಷ್ಠ ಗುಣಗಳಿಂದ ವ್ಯಾಪಿಸಿಕೊಂಡು, [**ತೇನ ಸತ್ಯೇನ**] ಆ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನ ಸಾನ್ನಿಧ್ಯದಿಂದ [**ಪ್ರಚೇತುನೇ ಪದೇ**] ಅತ್ಯಂತ ಶ್ರೇಷ್ಠವಾದ ಜ್ಞಾನದಿಂದ ಮತ್ತು ಆನಂದದಿಂದ ಕೂಡಿದ ಸ್ಥಾನದಲ್ಲಿ ಇದ್ದು [ಶರ್ಮ **ಯಚ್ಛತಮ್**] ಸದಾ ಆನಂದವನ್ನೇ ಅನುಭವಿಸುತ್ತಾ, ಎಲ್ಲರಿಗೂ ಸರ್ವವಿಧದಲ್ಲಿ ಸುಖವನ್ನೇ ಕೊಡುತ್ತವೆ.

ಭಾವಾರ್ಥ:- ಯಾವಾಗ ಮಾನವ ಅಷ್ಟಾಂಗಯೋಗದ ಸಾಧನೆಯ ಮೂಲಕ ಹಾಗೂ ಉಪಾಸನೆಯ ಮೂಲಕ, ಸಕಲ ಕ್ಲೇಶ ಅರ್ಥಾತ್ ಅವಿದ್ಯಾ, ಅಸ್ಮಿತಾ, ರಾಗ-ದ್ವೇಷ ಮೊದಲಾದ ಸಕಲ ಕ್ಲೇಶಗಳಿಂದ ಮುಕ್ತನಾಗಿ, ಪರಿಶುದ್ಧ ಆತ್ಮ ಮತ್ತು ಬುದ್ಧಿಯುಳ್ಳವನಾಗುತ್ತಾನೋ, ಆಗ ಅವನು ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನ ಸಾನ್ನಿಧ್ಯದಲ್ಲಿ ಇದ್ದು, ತನ್ಮೂಲಕ, ಸಕಲ ಶ್ರೇಷ್ಠಗುಣ ಮತ್ತು ಶಕ್ತಿಗಳನ್ನು ಪ್ರಾಪ್ತ ಮಾಡಿಕೊಂಡು, ಸಂಪೂರ್ಣ ಜ್ಞಾನ ಜ್ಯೋತಿಯಿಂದ ಕಂಗೊಳಿಸುತ್ತಾ, ಅತ್ಯಂತ ಉತ್ತಮ ಹಾಗೂ ಉನ್ನತವಾದ ಸ್ಥಾನವನ್ನು ಹೊಂದಿ, ಸದಾಕಾಲ ಆನಂದವನ್ನು ಅನುಭವಿಸುತ್ತಾನೆ ಹಾಗೂ ಪ್ರಾಣಿಮಾತ್ರರಿಗೆ ಸದಾ ಸುಖ ಮತ್ತು ಕಲ್ಯಾಣವನ್ನೇ ಉಂಟು ಮಾಡುತ್ತಾನೆ. ಅವನ ಸಂಪರ್ಕದಲ್ಲಿ ಮತ್ತು ಸಾನ್ನಿಧ್ಯದಲ್ಲಿ ಬಂದ ಪ್ರತಿಯೊಬ್ಬ ಮಾನವನು ಮಾತ್ರವಲ್ಲ, ಪ್ರಾಣಿಗಳು ಕೂಡ ಸುಖ ಮತ್ತು ಶಾಂತಿಯನ್ನೇ ಪ್ರಾಪ್ತ ಮಾಡುತ್ತವೆ.

ಈ ಸೂಕ್ತದೊಂದಿಗೆ ಹಿಂದಿನ ಸೂಕ್ತದ ಸಂಗತಿಕರಣ ಇದೆ ಎಂದು ತಿಳಿಯಬೇಕು.

ಇಪ್ಪತ್ತೊಂದನೆಯ ಸೂಕ್ತ ಸಮಾಪ್ತ

ಸೂಕ್ತ ೨೨

ಮಂತ್ರಸಂಖ್ಯೆ ೨೧ । ಋಷಿಃ - ಮೇಧಾತಿಥಿಃ ಕಾಣ್ವಃ । ದೇವತಾ - ೧-೪ ಅಶ್ವಿನೌ, ೫-೮ ಸವಿತಾ, ೯-೧೦ ಅಗ್ನಿಃ, ೧೧ ದೇವ್ಯಃ ೧೨ ಇಂದ್ರಾಣೀ ವರುಣಾನ್ಯಗ್ನಾಯ್ಯಃ ೧೩-೧೪ ದ್ಯಾವಾಪೃಥಿವ್ಯೌ , ೧೫ ಪೃಥಿವೀ ೧೬ ವಿಷ್ಣುರ್ದೇವೋ ವಾ, ೧೭-೨೧ ವಿಷ್ಣುಃ । ಛಂದಃ- ೧-೩, ೮, ೧೨, ೧೭, ೧೮ ಪಿಪೀಲಿಕಾ ಮಧ್ಯಾನಿಚೃದ್ಗಾಯತ್ರೀ, ೪, ೫, ೭, ೯-೧೧ ೧೩, ೧೪, ೧೬, ೨೦, ೨೧ ಗಾಯತ್ರೀ, ೬, ೧೯ ನಿಚೃದ್ಗಾಯತ್ರೀ, ೧೫ ವಿರಾಡ್ಗಾಯತ್ರೀ । ಸ್ವರಃ - ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಅಶ್ವಿಯ ಗುಣಗಳನ್ನು ವರ್ಣಿಸಲಾಗಿದೆ.

ಪ್ರಾತರ್ಯುಜಾ ವಿ ಬೋಧಯಾಶ್ವಿನಾವೇಹ ಗಚ್ಛತಾಮ್ । ಅಸ್ಯ ಸೋಮಸ್ಯ ಪೀತಯೇ ॥೧॥

ಪದಾರ್ಥ:- ಆ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮ! [ಪ್ರಾತರ್ಯುಜಾ] ಪ್ರಾತಃಕಾಲ ಮೊಟ್ಟ ಮೊದಲ ಅರ್ಥಾತ್ ಸೂರ್ಯಚಂದ್ರರು ಇರುವ ವೇಳೆಯಲ್ಲಿ ರಾತ್ರಿ ಮತ್ತು ಹಗಲು ಒಂದಾಗಿ ಇರುವ ವೇಳೆಯಲ್ಲಿ ಅರ್ಥಾತ್ ಚಂದ್ರನು ಇನ್ನೂ ಪೂರ್ತಿ ಅಸ್ತನಾಗಿರುವುದಿಲ್ಲ, ಸೂರ್ಯನು ಉದಯೋನ್ಮುಖನಾಗಿರುತ್ತಾನೆ. ಅರುಣೋದಯಕಾಲ ಅರ್ಥಾತ್ ಉಷಾಕಾಲದಲ್ಲಿ [**ಅಸ್ಯ ಸೋಮಸ್ಯ ಪೀತಯೇ**] ನಿನ್ನ ಉಪಾಸನೆಯಿಂದ ಪ್ರಾಪ್ತವಾಗುವ ಆನಂದದ ಪಾನವನ್ನು ಮಾಡುವುದಕ್ಕೋಸ್ಕರ [ಇಹ **ಗಚ್ಛತಾಮ್**] ಈ ಪ್ರಪಂಚದಲ್ಲಿ ನಿನ್ನ ಸಾನ್ನಿಧ್ಯವನ್ನು ಪ್ರಾಪ್ತಿ ಮಾಡಲು ನಿನ್ನ ಬಳಿ ಹೋಗುವ [**ಅಶ್ವಿನೌ**] ಸಕಲ ಸ್ತ್ರೀ ಮತ್ತು ಪುರುಷರಿಗೆ [**ವಿಬೋಧಯ**] ವಿಶೇಷವಾದ ಜ್ಞಾನವನ್ನೂ, ಪ್ರಖರವಾದ ಮೇಧಾಬುದ್ಧಿಯನ್ನೂ ಕೊಡುತ್ತೀಯೆ.

ಭಾವಾರ್ಥ:- ಪ್ರಾತಃಕಾಲ ಮೊಟ್ಟಮೊದಲು ಹಗಲು ಮತ್ತು ರಾತ್ರಿ ಒಂದಾಗಿರುವ ವೇಳೆಯಲ್ಲಿ ಆಗ ಚಂದ್ರನು ಇನ್ನೂ ಪೂರ್ತಿಯಾಗಿ ಅಸ್ತನಾಗಿರುವುದಿಲ್ಲ. ಸೂರ್ಯನು ಉದಯೋನ್ಮುಖನಾಗಿರುತ್ತಾನೆ. ಇದನ್ನು ಉಷಾಕಾಲ ಎನ್ನುತ್ತಾರೆ. ಈ ಸಮಯದಲ್ಲಿ ಯಾರು ಪರಮಾತ್ಮನ ಉಪಾಸನೆಯಿಂದ ಪ್ರಾಪ್ತವಾಗುವ ಆನಂದಾಮೃತದ ಪಾನವನ್ನು ಮಾಡಲು, ಭಗವಂತನ ಸಾನ್ನಿಧ್ಯದಲ್ಲಿರುತ್ತಾರೋ, ಅರ್ಥಾತ್ ಉಷಾಕಾಲದಲ್ಲಿ ಯಾರು ಭಗವಂತನನ್ನು ಅನನ್ಯ ಭಕ್ತಿಯಿಂದ ಉಪಾಸಿಸುತ್ತಾರೋ ಅಂತಹ ಸಕಲ ಸ್ತ್ರೀ ಮತ್ತು ಪುರುಷರಿಗೆ ಭಗವಂತನು ವಿಶೇಷವಾದ ಜ್ಞಾನವನ್ನೂ, ಪ್ರಖರವಾದ ಮೇಧಾಬುದ್ಧಿಯನ್ನೂ ಕೊಡುತ್ತಾನೆ.

ನಂತರ ಅವು ಯಾವ ಪ್ರಕಾರದ್ದಾಗಿರುತ್ತವೆ ಎಂಬುದನ್ನು ವಿವರಿಸಲಾಗಿದೆ.

ಯಾ ಸುರಥಾ ರಥೀತಮೋಭಾ ದೇವಾ ದಿವಿಸ್ಪೃಶಾ । ಅಶ್ವಿನಾ ತಾ ಹವಾಮಹೇ ॥೨॥

ಪದಾರ್ಥ:- ನಾವೆಲ್ಲರೂ [**ಯಾ**] ಯಾವ [ದಿವಿಸ್ಪೃಶಾ] ಆಕಾಶಮಾರ್ಗದಿಂದ ಹೋಗುವ ಅರ್ಥಾತ್ ಆಕಾಶದಲ್ಲಿ ಸಂಚರಿಸುವ [**ರಥೀತಮಾ**] ಸುಂದರವಾದ ಮತ್ತು ದೃಢವಾದ ವಿಮಾನಯಾನಗಳನ್ನು ಸಿದ್ಧ ಮಾಡಲು ಸಹಾಯಕವಾದ [**ಸುರಥಾ**] ಯಾವುದರ ಸಹಾಯದಿಂದ ವಿಮಾನಯಾನವು ಸುಗಮವಾಗಿ ಚಲಿಸಬಲ್ಲುದೋ, ಅಂತಹ [**ದೇವಾ**] ಉತ್ತಮವಾದ ಗುಣ ಮತ್ತು ಶಕ್ತಿಯುಳ್ಳ [**ಅಶ್ವಿನೌ**] ಸೂರ್ಯನ ಶಕ್ತಿಯಿಂದ ಪ್ರಾಪ್ತವಾಗುವ ವಿದ್ಯುಚ್ಛಕ್ತಿ ಮತ್ತು ಖನಿಜತೈಲಗಳು [ತಾ **ಉಭೌ**] ಆ ಇವೆರಡನ್ನೂ [**ಹವಾಮಹೇ**] ಸ್ವೀಕಾರ ಮಾಡುತ್ತೇವೆ.

ಭಾವಾರ್ಥ:- ಆಕಾಶದಲ್ಲಿ ಸಂಚರಿಸಲು ಅನುಕೂಲವಾಗುವಂತೆ, ಸುಂದರವಾದ ಮತ್ತು ದೃಢವಾದ ವಿಮಾನಯಾನಗಳನ್ನು, ಸೂರ್ಯನ ಶಕ್ತಿಯಿಂದ ಉತ್ಪನ್ನವಾಗುವ ವಿದ್ಯುಚ್ಛಕ್ತಿಯ ಮೂಲಕ ಹಾಗೂ ಖನಿಜ

ತೈಲಗಳ ಅರ್ಥಾತ್ ಪೆಟ್ರೋಲ್ ಇತ್ಯಾದಿಗಳ ಮೂಲಕ ಅತ್ಯಂತ ವೇಗವಾಗಿ ಚಲಿಸಲು ಸೂಕ್ತವಾಗಿ ಮತ್ತು ಅತ್ಯುತ್ತಮವಾಗಿ, ನಾವೆಲ್ಲರೂ ಇವೆರಡನ್ನೂ ಬಳಸಿಕೊಳ್ಳುತ್ತೇವೆ.

ಇಲ್ಲಿ ಎರಡು ವಿಷಯಗಳನ್ನು ಗಮನಿಸಬೇಕು. ಮಂತ್ರದ ದೇವತೆ ಅಶ್ವಿನೌ. ಅಶ್ವಿನೌ ಎಂದರೆ, ಸಾಧಾರಣವಾಗಿ ಎಲ್ಲರೂ ಅಶ್ವಿನೀ ಕುಮಾರರು ಎಂಬ ವಿಶಿಷ್ಟವಾದ ದೇವತೆಗಳು ಎಂದು ಭಾವಿಸುತ್ತಾರೆ. ಇದು ಸರಿಯಲ್ಲ; ಇಲ್ಲಿ ದೇವತೆ ಎಂದರೆ ದೇವತಾ ವಿಶೇಷವಾಗಿರದೇ, (subject matter) ವಿಷಯವಸ್ತು ಎಂದೇ ಗ್ರಹಿಸಬೇಕು.

ಎರಡನೆಯ ವಿಷಯ ಅತ್ಯಂತ ಉಪಯುಕ್ತವಾದದ್ದು. ಇಂದು ಹೆಚ್ಚಾಗಿ ವಿಮಾನಗಳಲ್ಲಿ ಪೆಟ್ರೋಲನ್ನು ಮಾತ್ರ ಬಳಸುತ್ತಾರೆ. ಕೇವಲ ಉಪಗ್ರಹಗಳಲ್ಲಿ ಮಾತ್ರ, ಸೂರ್ಯನ ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಪಡೆದು ತನ್ಮೂಲಕ ಅದು ನಿರಂತರವಾಗಿ ಚಲಿಸುವ ವ್ಯವಸ್ಥೆಯನ್ನು ಮಾಡುತ್ತಾರೆ. ಯಾವ ವ್ಯವಸ್ಥೆಯನ್ನು ಉಪಗ್ರಹದಲ್ಲಿ ಮಾಡಲಾಗುತ್ತದೆಯೋ ಅದೇ ವ್ಯವಸ್ಥೆಯನ್ನು ವಿಮಾನಗಳಲ್ಲಿ ಮಾಡಿಕೊಂಡು, ಸೂರ್ಯನ ಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಪಡೆದು ವಿಮಾನಗಳನ್ನು ಚಲಿಸುವಂತೆ ಮಾಡಿದರೆ ಹಾಗೂ ಮಳೆಗಾಲದಲ್ಲಿ ಅಥವಾ ಕೆಲವು ಸಂದಿಗ್ಧ ಪರಿಸ್ಥಿತಿಯಲ್ಲಿ ಪೆಟ್ರೋಲನ್ನು ಬಳಸುವ ವ್ಯವಸ್ಥೆಯನ್ನು ಮಾಡಿದರೆ, ಪೆಟ್ರೋಲಿನ ಉಳಿತಾಯವಾಗುತ್ತದೆ. ಮಾತ್ರವಲ್ಲ, ವಿಮಾನಗಳು ದೀರ್ಘಕಾಲ ಬಾಳುವಂತಾಗುತ್ತವೆ. ಇದರಲ್ಲಿ ಎರಡೂ ವ್ಯವಸ್ಥೆಯಿರಬೇಕು. ಸಮಯಕ್ಕನುಗುಣವಾಗಿ, ಪೆಟ್ರೋಲ್ ಮತ್ತು ಸೂರ್ಯನ ಶಕ್ತಿಯಿಂದ ಪಡೆದ ವಿದ್ಯುಚ್ಛಕ್ತಿಯನ್ನು ಕೂಡಲೇ, ಬದಲಿಸುವಂತೆ ಮಾಡಬೇಕು.

ಈ ಕ್ರಿಯೆಯಲ್ಲಿ ಯಾವುದರೊಂದಿಗೆ ಸಂಯುಕ್ತವಾಗಬಹುದು ಎಂಬುದನ್ನು ವರ್ಣಿಸಲಾಗಿದೆ.

ಯಾ ವಾಂ ಕಶಾ ಮಧುಮತ್ಯಶ್ವಿನಾ ಸೂನೃತಾವತೀ । ತಯಾ ಯಜ್ಞಂ ಮಿಮಿಕ್ಷತಮ್ ॥೩॥

ಪದಾರ್ಥ:- ಹೇ **[ಅಶ್ವಿನಾ]** ಸಕಲ ವಿದ್ಯೆಗಳನ್ನು ಪ್ರಕಾಶಕ್ಕೆ ತಂದು ಸರ್ವರಿಗೂ ಪ್ರಾಪ್ತವಾಗುವಂತೆ ಮಾಡುವ ಗುರುಶಿಷ್ಯರೇ! **[ವಾಂ]** ನಿಮ್ಮಿಬ್ಬರ **[ಯಾ ಮಧುಮತೀ]** ಯಾವ ಮಧುರವಾದ **[ಸೂನೃತಾವತೀ]** ಸಕಲ ಸತ್ಯ ಹಾಗೂ ಶ್ರೇಷ್ಠ ಜ್ಞಾನದಿಂದ ಕೂಡಿದ **[ಕಶಾ]** ಸಕಲ ವಿದ್ಯೆಗಳನ್ನು ಅರ್ಥಪೂರ್ಣವಾಗಿ ವಿವರಿಸುವ ಯಾವ ವಾಣಿಯಿದೆಯೋ **[ತಯಾ]** ಆ ಅರ್ಥಪೂರ್ಣವಾದ ವಾಣಿಯ ಮೂಲಕ **[ಯಜ್ಞಂ]** ಸತ್ಕರ್ಮಗಳ ಆಚರಣೆ, ಪರಸ್ಪರ ಸತ್ಸಂಗ, ವಿದ್ಯೆಯ ದಾನ, ಮತ್ತು ಪರಿಶುದ್ಧವಾದ ಆತ್ಮನ ಮೂಲಕ ಪರಮಾತ್ಮನ ಉಪಾಸನೆಯ ಸ್ವರೂಪವನ್ನು **[ಮಿಮಿಕ್ಷತಮ್]** ನಿರಂತರ ಅತ್ಯುತ್ತಮವಾದ ರೀತಿಯಲ್ಲಿ ಉಪದೇಶಿಸಿರಿ.

ಭಾವಾರ್ಥ:- ಸಕಲ ವಿದ್ಯೆಗಳನ್ನು ಪ್ರಕಾಶಕ್ಕೆ ತಂದು, ಸರ್ವರಿಗೂ ಪ್ರಾಪ್ತವಾಗುವಂತೆ ಮಾಡುವ, ಗುರುಶಿಷ್ಯರೇ! ನಿಮ್ಮ ಮಧುರವಾದ ಸಕಲ ಸತ್ಯ ಮತ್ತು ಶ್ರೇಷ್ಠ ಜ್ಞಾನದಿಂದ ಕೂಡಿದ, ಸಕಲ ಸತ್ಯವಿದ್ಯೆಗಳನ್ನು, ಅರ್ಥಪೂರ್ಣವಾಗಿ ಪ್ರಕಟಪಡಿಸುವ ಯಾವ ವಾಣಿಯಿದೆಯೋ, ಅದರ ಮೂಲಕ ಸಮಸ್ತ ಮಾನವ ಮಾತ್ರರಿಗೆ, ಅತ್ಯುತ್ತಮವಾದ ರೀತಿಯಲ್ಲಿ, ಸತ್ಕರ್ಮಗಳ ಆಚರಣೆ, ಪರಸ್ಪರ ಸತ್ಸಂಗ, ವಿದ್ಯೆಯ ದಾನ ಮತ್ತು ಪರಿಶುದ್ಧವಾದ ಆತ್ಮನ ಮೂಲಕ ಪರಮಾತ್ಮನ ಉಪಾಸನೆಯ ಸ್ವರೂಪವನ್ನು ನಿರಂತರ ಉಪದೇಶಿಸಿರಿ. ಯಾವ ರೀತಿ ನಾವು ಮೊಸರನ್ನು ಕಡೆದು ಬೆಣ್ಣೆಯನ್ನು ತೆಗೆಯುತ್ತೇವೆಯೋ ಅದೇ ರೀತಿ, ಗುರು ಮತ್ತು ಶಿಷ್ಯರು ನಿರಂತರ ಸಕಲ ವಿದ್ಯೆ ಮತ್ತು ಜ್ಞಾನದ ಮಂಥನವನ್ನು ಅತ್ಯುತ್ತಮವಾದ ರೀತಿಯಲ್ಲಿ ಮಾಡುತ್ತಾ, ಮಾನವ ಮಾತ್ರರಿಗೆ, ಸಂಪೂರ್ಣ ಸತ್ಯಜ್ಞಾನದ ಪ್ರಕಾಶವು ಲಭಿಸುವಂತೆ ಮಾಡಬೇಕು. ಪ್ರತಿಯೊಂದು ಗುರುಕುಲವು, ವಿದ್ಯಾಲಯವು, ವಿಶ್ವ ವಿದ್ಯೆಗಳ ಆಲಯವಾಗಬೇಕು. ಶಾಲಾಕಾಲೇಜುಗಳಲ್ಲಿ ಪಾಠಗಳನ್ನು ಬೋಧಿಸುವ ಅಧ್ಯಾಪಕ, ಅಧ್ಯಾಪಿಕೆಯರು, ಕೇವಲ ತಮ್ಮ ಪಾಠ್ಯವಿಷಯಗಳನ್ನು ಪೂರ್ಣಗೊಳಿಸಲು ಪ್ರಯತ್ನ ಪಟ್ಟರೆ ಸಾಲದು. ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳ ಬಗ್ಗೆ, ಅಥವಾ ಹೆಚ್ಚೆಚ್ಚು ವಿಷಯಗಳ ಬಗ್ಗೆ ಪೂರ್ಣಜ್ಞಾನವನ್ನು ಕೊಡಲು ನಿರಂತರ ಪ್ರಯತ್ನಿಸಬೇಕು. ವಿದ್ಯಾರ್ಥಿಗಳು

ಕೂಡಾ ಪ್ರಾಪ್ತ ಮಾಡಿಕೊಂಡ ಜ್ಞಾನವನ್ನು ವರ್ಧಿಸಿಕೊಂಡು ಅದರ ಪ್ರಯೋಜನವು ಸಮಸ್ತ ಮಾನವ ಮಾತ್ರರಿಗೆ ಪ್ರಾಪ್ತವಾಗುವಂತೆ ಪ್ರಯತ್ನಿಸಬೇಕು.

ಇದನ್ನು ಮಾಡಿ ಅಶ್ವಿನಿಗಳ ಯೋಗದಿಂದ ಏನಾಗುತ್ತದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ನಹಿ ವಾಮಸ್ತಿ ದೂರಕೇ ಯತ್ರಾ ರಥೇನ ಗಚ್ಛಥಃ । ಅಶ್ವಿನಾ ಸೋಮಿನೋ ಗೃಹಮ್ ॥೪॥

ಪದಾರ್ಥ:- ಓ **[ಅಶ್ವಿನೌ]** ವಿದ್ಯೆ ಮತ್ತು ಕರಕುಶಲಗಳಲ್ಲಿ ಪಾರಂಗತರಾದ ವಿದ್ವಾಂಸರೇ! ನೀವಿಬ್ಬರೂ **[ಯತ್ರ]** ಯಾವ ಸ್ಥಳಗಳಲ್ಲಿ, ಯಾವ ಸ್ಥಾನಕ್ಕೆ **[ರಥೇನ]** ಯಾನದ ಮೂಲಕ **[ಗಚ್ಛಥಃ]** ಹೋಗುತ್ತೀರೋ, ಆ ಸ್ಥಾನವು **[ಸೋಮಿನಃ]** ಸಕಲ ಸುಖ ಸಾಧನಗಳಿಂದ ಸಂಪನ್ನನಾದ ಹಾಗೂ ಸೌಮ್ಯ ಮತ್ತು ದಾನಶೀಲ ವ್ಯಕ್ತಿಯ **[ಗೃಹಮ್]** ನಿವಾಸ ಸ್ಥಾನವು **[ವಾಮ್]** ನಿಮ್ಮಿಬ್ಬರಿಗೂ **[ದೂರಕೇ ನಹಿ ಅಸ್ತಿ]** ದೂರವಾಗಿ ಇರುವುದಿಲ್ಲ.

ಭಾವಾರ್ಥ:- ವಿದ್ಯೆ ಅರ್ಥಾತ್ ಜ್ಞಾನಸಂಪನ್ನವಾದ ಮತ್ತು ಕರಕುಶಲಗಳಲ್ಲಿ ಪಾರಂಗತರಾದ ಬಳಿಕ, ತಾವು ಪ್ರಾಪ್ತ ಮಾಡಿಕೊಂಡ ಜ್ಞಾನವನ್ನು ಸಾರ್ಥಕ ಮಾಡಿಕೊಳ್ಳುವುದಕ್ಕೋಸ್ಕರ ಹಾಗೂ ತಾನು ತಯಾರಿಸಿದ ಕರಕುಶಲ ಸಾಮಗ್ರಿಗಳನ್ನು ಸರಿಯಾದ ರೀತಿಯಲ್ಲಿ, ವಿನಿಯೋಗವಾಗುವಂತೆ ಅಥವಾ ಎಲ್ಲರಿಗೂ ಪ್ರಾಪ್ತವಾಗುವಂತೆ ಮಾಡಲು, ಅದರ ವ್ಯವಸ್ಥೆಯನ್ನು ಮಾಡುವ, ಸಕಲ ಸುಖಸೌಲಭ್ಯಗಳಿಂದ ಸೌಮ್ಯ ಸ್ವಭಾವದ ವ್ಯಕ್ತಿಯ ಮನೆ ಅಥವಾ ನಿವಾಸ ಸ್ಥಾನಕ್ಕೆ ಯಾನದ ಮೂಲಕ ಹೋದಾಗ, ಆ ಗಂತವ್ಯ ಸ್ಥಾನ ನಿಮಗೆ ದೂರವಾಗುವುದಿಲ್ಲ. ಇದರ ತಾತ್ಪರ್ಯವೇನೆಂದರೆ, ಪ್ರತಿಯೊಬ್ಬ ಮನುಷ್ಯನು ತಾನು ಪ್ರಾಪ್ತಮಾಡಿಕೊಂಡ ಜ್ಞಾನವನ್ನು ಹಾಗೂ ತಾನು ತಯಾರಿಸಿದ ಅತ್ಯುತ್ತಮ ವಸ್ತುಗಳನ್ನು ಎಲ್ಲರಿಗೂ ಲಭ್ಯವಾಗುವುದಕ್ಕೋಸ್ಕರ, ಯಾರು ಅದರ ವ್ಯವಸ್ಥೆಯನ್ನು ಮಾಡುತ್ತಾರೋ, ಅವರ ಹತ್ತಿರ ಹೋಗಬೇಕು. ಯಾನದ ಮೂಲಕ ಹೋದರೆ ಪ್ರಪಂಚದ ಯಾವ ಸ್ಥಾನವೂ ದೂರವಾಗುವುದಿಲ್ಲ. ಪ್ರತಿಯೊಬ್ಬ ಮಾನವನು ಪ್ರಾಪ್ತ ಮಾಡಿಕೊಂಡ ಜ್ಞಾನ ಹಾಗೂ ತಾನು ತಯಾರಿಸಿದ ವಸ್ತು ಯೋಗ್ಯವಾದ ರೀತಿಯಲ್ಲಿ, ಮತ್ತು ಎಲ್ಲರಿಗೂ ಪ್ರಯೋಜನಕಾರಿಯಾಗುವಂತೆ ಅದರ ವಿನಿಯೋಗವನ್ನು ಮಾಡಲು ಅಪೇಕ್ಷಿಸಬೇಕು. ಹಾಗೂ ಅದಕ್ಕೆ ಪ್ರಯತ್ನಿಸಬೇಕು. ಪ್ರಾಪ್ತವಾದ ಜ್ಞಾನ ಮತ್ತು ಸಿದ್ಧ ಪಡಿಸಿದ ಉತ್ತಮ ವಸ್ತು ಎಂದಿಗೂ ನಿರರ್ಥಕವಾಗಬಾರದು.

ನಂತರ ಪರಮೈಶ್ವರ್ಯದಾಯಕನಾದ ಪರಮೇಶ್ವರನ ಗುಣವರ್ಣನೆ ಇದೆ.

ಹಿರಣ್ಯಪಾಣಿಮೂತಯೇ ಸವಿತಾರಮುಪ ಹ್ವಯೇ । ಸ ಚೇತ್ತಾ ದೇವತಾ ಪದಮ್ ॥೫॥

ಪದಾರ್ಥ:- ನಾನು **[ಊತಯೇ]** ಪ್ರೀತಿಗಾಗಿ ಮತ್ತು ರಕ್ಷಣೆಗಾಗಿ **[ಪದಮ್]** ಯಾವನು ತನ್ನ ಸರ್ವ ವ್ಯಾಪಕತ್ವದಿಂದ ಸಂಪೂರ್ಣ ಚರಾಚರ ಜಗತ್ತನ್ನು ವ್ಯಾಪಿಸಿದ್ದಾನೋ **[ಹಿರಣ್ಯಪಾಣಿಂ]** ಯಾರ ಕೃಪೆಯಿಂದ ಉದ್ಯೋಗ ಮತ್ತು ವ್ಯಾಪಾರದ ಮೂಲಕ ಹಿರಣ್ಯಾದಿ ಸಕಲ ಸುಖಸಂಪತ್ತುಗಳು ಪ್ರಾಪ್ತವಾಗುತ್ತವೆಯೋ, ಅಂತಹ **[ಸವಿತಾರಂ]** ಸಕಲ ಜಗದುತ್ಪಾದಕನಾದ ಹಾಗೂ ಸರ್ವಾಂತರ್ಯಾಮಿಯಾದ ಪರಮಾತ್ಮನನ್ನು **[ಉಪಹ್ವಯೇ]** ಉಪಾಸನೆಯ ಮೂಲಕ ಸ್ವೀಕಾರ ಮಾಡುತ್ತೇನೆ. **[ಸ ಚೇತ್ತಾ]** ಸರ್ವಜ್ಞನಾದ ಆ ಪರಮಾತ್ಮನೇ **[ದೇವತಾ]** ಸರ್ವೋಪಾಸ್ಯನಾಗಿದ್ದಾನೆ.

ಭಾವಾರ್ಥ:- ಸಕಲ ಪ್ರಾಣಿಮಾತ್ರರ ಅತ್ಯಂತ ಪ್ರಿಯನಾದವನು ಸಕಲ ಜೀವಮಾತ್ರರ ರಕ್ಷಣೆಯನ್ನು ಮಾಡುವವನು, ಸರ್ವವ್ಯಾಪಕತ್ವದ ಮೂಲಕ ಸಂಪೂರ್ಣ ಚರಾಚರ ಜಗತ್ತನ್ನು ಯಾವನು ವ್ಯಾಪ್ತನಾಗಿದ್ದಾನೋ, ಯಾರ ಕೃಪೆಯಿಂದ ಉದ್ಯೋಗ ಮತ್ತು ವ್ಯಾಪಾರದ ಮೂಲಕ ಹಿರಣ್ಯಾದಿ ಸಕಲ ಸುಖ ಸಂಪತ್ತುಗಳು

ಪ್ರಾಪ್ತವಾಗುತ್ತವೆಯೋ ಅಂತಹ ಸಕಲ ಜಗದುತ್ಪಾದಕನಾದ ಮತ್ತು ಸರ್ವಾಂತರ್ಯಾಮಿಯಾದ ಪರಮಾತ್ಮನನ್ನು ಉಪಾಸನೆಯ ಮೂಲಕ ನಾನು ಸ್ವೀಕಾರ ಮಾಡುತ್ತೇನೆ. ಸರ್ವಜ್ಞನಾದ ಆ ಪರಮಾತ್ಮನೇ ಸರ್ವೋಪಾಸ್ಯನಾಗಿದ್ದಾನೆ.

ಸಾಧಾರಣವಾಗಿ ಎಲ್ಲರೂ ಹಿರಣ್ಯಪಾಣಿ ಎಂದರೆ ಹಿರಣ್ಯ ಅರ್ಥಾತ್ ಸ್ವರ್ಣರತ್ನಾದಿಗಳನ್ನು ಕೈಯಲ್ಲಿ ಧಾರಣ ಮಾಡಿಕೊಂಡವನು ಅಥವಾ ಯಾರ ಕೈಯಲ್ಲಿ ಸ್ವರ್ಣ ರತ್ನಾದಿಗಳಿವೆಯೋ ಅವನು ಹಿರಣ್ಯಪಾಣಿ ಎಂದು ಅರ್ಥ ಮಾಡುತ್ತಾರೆ. ಈ ಮಂತ್ರದಲ್ಲಿ ಪರಮಾತ್ಮನಿಗೆ ಹಿರಣ್ಯಪಾಣಿಂ ಎಂದು ಹೇಳಿದೆ. ಇದರ ಅರ್ಥ ಹಿರಣ್ಯಾನಿ ಸುವರ್ಣಾದೀನಿ ರತ್ನಾದಿ ಪಾಣೌ ವ್ಯವಹಾರೇ ಲಭಂತೇ ಯಸ್ಮಾತ್ತಮ್ ಅಂದರೆ ಯಾರ ಕೃಪೆಯಿಂದ ಉದ್ಯೋಗ ಮತ್ತು ವ್ಯವಹಾರದ ಮೂಲಕ ಸ್ವರ್ಣಾದಿ ರತ್ನಗಳು ಪ್ರಾಪ್ತವಾಗುತ್ತವೆಯೋ ಅವರು ಹಿರಣ್ಯಪಾಣಿ. ಈ ರೀತಿ ಪರಮಾತ್ಮನ ಕೃಪೆಯಿಂದ ಸಕಲ ಸುಖ ಸಂಪತ್ತು ಪ್ರಾಪ್ತವಾಗುವ ಕಾರಣ ಭಗವಂತನು ಹಿರಣ್ಯಪಾಣಿಯಾಗಿದ್ದಾನೆ.

ಪುನಃ ಆ ಪರಮೇಶ್ವರನ ಸ್ತುತಿಯನ್ನೇ ಮಾಡಬೇಕು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಅಪಾಂ ನಪಾತಮವಸೇ ಸವಿತಾರಮುಪ ಸ್ತುಹಿ । ತಸ್ಯ ವ್ರತಾನ್ಯುಶ್ಮಸಿ ॥೬॥

ಪದಾರ್ಥ:- ಓ ವಿದ್ವಾಂಸರೇ! ಯಾವ ರೀತಿ ನಾನು [ಅವಸೇ] ರಕ್ಷಣೆಗೋಸ್ಕರ ಯಾವ [ಅಪಾಂ] ಸರ್ವವ್ಯಾಪಕನಾದ ಮತ್ತು [ನಪಾತಮ್] ಅವಿನಾಶಿಯಾದ [ಸವಿತಾರಂ] ಸಕಲೈಶ್ವರ್ಯಪ್ರದನಾದ ಪರಮಾತ್ಮನನ್ನು ಉಪಾಸಿಸುತ್ತೇನೆಯೋ, ಅದೇ ರೀತಿ ನೀವೆಲ್ಲರೂ ಅತ್ಯಂತ ಶ್ರದ್ಧಾ ಭಕ್ತಿಯಿಂದ [ಉಪಸ್ತುಹಿ] ಆ ಪರಮಾತ್ಮನ ಉಪಾಸನೆಯನ್ನು ಮಾಡಿರಿ. ಯಾವ ರೀತಿ ನಾವೆಲ್ಲರೂ [ತಸ್ಯ] ಆ ಪರಮಾತ್ಮನ ಯಾವ [ವ್ರತಾನಿ] ನಿರಂತರ ಮಾಡಬೇಕಾದ ಧರ್ಮಯುಕ್ತವಾದ ಶ್ರೇಷ್ಠಕರ್ಮಗಳು ಹಾಗೂ ಗುಣ ಮತ್ತು ಸ್ವಭಾವಗಳಿವೆಯೋ ಅವೆಲ್ಲವನ್ನೂ ಪ್ರಾಪ್ತ ಮಾಡಲು, ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು [ಉಶ್ಮಸಿ] ನಿರಂತರ ಪ್ರಯತ್ನಶೀಲರಾಗುತ್ತೇವೆಯೋ, ಸದಾ ಕಾಮನೆಯನ್ನೇ ಮಾಡುತ್ತೇವೆಯೋ, ಅದೇ ರೀತಿ ನೀವು ಕೂಡಾ ನಿರಂತರ ಧರ್ಮಯುಕ್ತ ಕರ್ಮಗಳಲ್ಲಿ ನಿರತರಾಗಿ ಪರಮಾತ್ಮನ ಗುಣ ಮತ್ತು ಸ್ವಭಾವಗಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಶೀಲರಾಗಿರಿ.

ಭಾವಾರ್ಥ:- ಓ ವಿದ್ವಾಂಸರೇ! ಯಾವ ರೀತಿ ನಾನು ನನ್ನ ರಕ್ಷಣೆಗೋಸ್ಕರ ಸರ್ವರಕ್ಷಕ, ಸರ್ವವ್ಯಾಪಕ ಮತ್ತು ಅವಿನಾಶಿಯಾದ ಹಾಗೂ ಸಕಲೈಶ್ವರ್ಯಪ್ರದನಾದ ಪರಮಾತ್ಮನ ಉಪಾಸನೆಯನ್ನು ಮಾಡುತ್ತೇನೆಯೋ, ಅದೇ ರೀತಿ ನೀವೆಲ್ಲರೂ ಅತ್ಯಂತ ಶ್ರದ್ಧಾಭಕ್ತಿಯಿಂದ ಆ ಪರಮಾತ್ಮನ ಉಪಾಸನೆಯನ್ನು ಮಾಡಿರಿ. ಇದರ ತಾತ್ಪರ್ಯವೇನೆಂದರೆ, ಪರಮಾತ್ಮನಿಗೆ ಸಮಾನರಾದವರು ಮತ್ತು ಪರಮಾತ್ಮನಿಗಿಂತ ಮಿಗಿಲಾದವರು ಯಾರೂ ಇಲ್ಲ. ಆದುದರಿಂದ ಕೇವಲ ಸರ್ವಶಕ್ತನಾದ ಪರಮಾತ್ಮನ ಉಪಾಸನೆಯನ್ನೇ ಮಾಡಬೇಕು. ಪರಮಾತ್ಮನ ಹೊರತಾಗಿ ಬೇರೆ ಯಾರ ಉಪಾಸನೆಯನ್ನು ಮಾಡಿದರೂ ಅದು ನಿರರ್ಥಕವಾಗುತ್ತದೆ.

ಯಾವ ರೀತಿ ನಾವೆಲ್ಲರೂ ಪರಮಾತ್ಮನ ಆದೇಶ ಮತ್ತು ಉಪದೇಶದಂತೆ, ನಿರಂತರ ಮಾಡಬೇಕಾದ ಧರ್ಮಯುಕ್ತವಾದ ಶ್ರೇಷ್ಠ ಕರ್ಮಗಳಿವೆಯೋ ಹಾಗೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಗುಣ ಮತ್ತು ಸ್ವಭಾವಗಳಿವೆಯೋ, ಅವೆಲ್ಲವನ್ನೂ ಪ್ರಾಪ್ತ ಮಾಡಿಕೊಳ್ಳಲು ಕಾಮನೆಯನ್ನು ಮಾಡುತ್ತೇವೆಯೋ ಹಾಗೂ ಪ್ರಯತ್ನಶೀಲರಾಗುತ್ತೇವೆಯೋ, ಅದೇ ರೀತಿ ನೀವು ಕೂಡ ನಿರಂತರ ಧರ್ಮಯುಕ್ತವಾದ ಕರ್ಮಗಳನ್ನು ಮಾಡುತ್ತಾ, ಪರಮಾತ್ಮನ ಗುಣ ಮತ್ತು ಸ್ವಭಾವವನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಶೀಲರಾಗಿರಿ.

ಸಾಧಾರಣವಾಗಿ ಎಲ್ಲರೂ ವ್ರತ ಎಂದರೆ ಉಪವಾಸ ಎಂಬ ಅರ್ಥವನ್ನು ಮಾಡುತ್ತಾರೆ ಮತ್ತು ಇಡೀ ದಿವಸ ಊಟವನ್ನು ಮಾಡದೇ ಹಸಿವೆಯಿಂದ ಇರುವುದೇ ವ್ರತ ಎಂದು ಭಾವಿಸುತ್ತಾರೆ. ಈ ಮಂತ್ರದಲ್ಲಿ ವ್ರತ ಶಬ್ದದ ಅರ್ಥ. ವ್ರತಾನಿ=ನಿಯತ ಧರ್ಮಯುಕ್ತಾನಿ ಕರ್ಮಾಣಿ ಗುಣಕರ್ಮ ಸ್ವಭಾವಾಂಶ್ಚ । ಅರ್ಥಾತ್ ನಿರಂತರ

ಮಾಡಬೇಕಾದ ಧರ್ಮಯುಕ್ತ ಶ್ರೇಷ್ಠ ಕರ್ಮಗಳು ಮತ್ತು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಪರಮಾತ್ಮನ ಗುಣಕರ್ಮ ಸ್ವಭಾವಗಳು ಎಂದು ಆಗುತ್ತದೆ. ಈ ರೀತಿ ವ್ರತ ಕೇವಲ ಒಂದೊಂದು ದಿನಕ್ಕೆ ಸೀಮಿತವಾಗಿರದೇ ಸಂಪೂರ್ಣ ಜೀವನ ಪರ್ಯಂತ ಮಾಡಬೇಕಾದ ಸಾಧನೆಯಾಗಿದೆ.

ಈ ಮಂತ್ರದಲ್ಲಿ ಸವಿತಾ ಶಬ್ದದಿಂದ ಈಶ್ವರ ಮತ್ತು ಸೂರ್ಯನ ಗುಣಗಳನ್ನು ವರ್ಣಿಸಲಾಗಿದೆ.

ವಿಭಕ್ತಾರಂ ಹವಾಮಹೇ ವಸೋಶ್ಚಿತ್ರಸ್ಯ ರಾಧಸಃ । ಸವಿತಾರಂ ನೃಚಕ್ಷಸಮ್ ॥೭॥

ಪದಾರ್ಥ:- ಓ ಮನನಶೀಲ ಮಾನವರೇ! ಯಾವ ರೀತಿ ನಾವೆಲ್ಲರೂ [ನೃಚಕ್ಷಸಮ್] ಮಾನವರಲ್ಲಿ ಅಂತರ್ಯಾಮಿಯಾಗಿದ್ದು, ವಿಶೇಷ ಜ್ಞಾನದ ಪ್ರಕಾಶವನ್ನು ಮಾಡುವವನಾದ [ವಸೋಃ] ಜೀವಮಾತ್ರರು ಯಾರ ಆಶ್ರಯದಲ್ಲಿರುತ್ತಾರೋ, ಅಂತಹ ಸರ್ವಾಶ್ರಯಪ್ರದಾತನಾದ [ಚಿತ್ರಸ್ಯ] ಅದ್ಭುತನಾದ [ರಾಧಸೋ] ಜ್ಞಾನ, ಐಶ್ವರ್ಯ, ಸುಖ, ಸಮೃದ್ಧಿ ರಾಜ್ಯಭೋಗಾದಿಗಳನ್ನು, ಪುತ್ರ ಕಲತ್ರ ಅರ್ಥಾತ್ ಗಂಡ ಹೆಂಡತಿ ಮತ್ತು ಮಕ್ಕಳನ್ನು, ಆಯುರಾರೋಗ್ಯವನ್ನು [ವಿಭಕ್ತಾರಂ] ಜೀವಮಾತ್ರರಿಗೆ ಅವರವರು ಮಾಡಿದ ಶುಭಾಶುಭ ಕರ್ಮಗಳಿಗನುಗುಣವಾಗಿ ಮತ್ತು ಯಥಾಯೋಗ್ಯಾನುಸಾರ ಕೊಡುವವನಾದ [ಸವಿತಾರಂ] ನ್ಯಾಯಕಾರಿಯಾದ ಪರಮಾತ್ಮನನ್ನು [ಹವಾಮಹೇ] ಅತ್ಯಂತ ಶ್ರದ್ಧಾಭಕ್ತಿಯಿಂದ ಉಪಾಸನೆಯ ಮೂಲಕ ಸ್ವೀಕರಿಸುತ್ತೇವೆ ಅರ್ಥಾತ್ ಪ್ರಾಪ್ತ ಮಾಡಿಕೊಳ್ಳುತ್ತೇವೆ. ಅದೇ ರೀತಿ ನೀವೆಲ್ಲರೂ ಉಪಾಸನೆಯ ಮೂಲಕ ಪರಮಾತ್ಮನನ್ನು ಪ್ರಾಪ್ತಮಾಡಿಕೊಳ್ಳಿರಿ.

ಭಾವಾರ್ಥ:- ಓ ಮನನಶೀಲ ಮಾನವರೇ! ಯಾವ ರೀತಿ ನಾವೆಲ್ಲರೂ, ಮಾನವನಲ್ಲಿ ಅಂತರ್ಯಾಮಿಯಾಗಿದ್ದು ವಿಶೇಷಜ್ಞಾನದ ಪ್ರಕಾಶವನ್ನುಂಟು ಮಾಡುವವನಾದ, ಸರ್ವಾಶ್ರಯ ಪ್ರದಾತನೂ, ಸಕಲ ಸುಖ ಸಂಪತ್ತನ್ನು ಜೀವಮಾತ್ರರಿಗೆ ಅವರವರು ಮಾಡಿದ ಕರ್ಮಕ್ಕನುಗುಣವಾಗಿ ಮತ್ತು ಯಥಾ ಯೋಗ್ಯಾನುಸಾರ ಕೊಡುವವನಾದ ಪರಮಾತ್ಮನನ್ನು ಉಪಾಸನೆಯ ಮೂಲಕ ಪ್ರಾಪ್ತ ಮಾಡಿಕೊಳ್ಳುತ್ತೇವೆ. ಅದೇ ರೀತಿ ನೀವೆಲ್ಲರೂ ಭಗವಂತನನ್ನು ಉಪಾಸನೆಯ ಮೂಲಕ ಪ್ರಾಪ್ತ ಮಾಡಿಕೊಳ್ಳಿರಿ.

ಎಂತಹ ಮನುಷ್ಯರು ಈ ಉಪಕಾರವನ್ನು ಸ್ವೀಕರಿಸುತ್ತಾರೆ ಎಂಬುದನ್ನು ತಿಳಿಸಿದೆ.

ಸಖಾಯ ಆ ನಿ ಷೀದತ ಸವಿತಾ ಸ್ತೋಮ್ಯೋ ನು ನಃ । ದಾತಾ ರಾಧಾಂಸಿ ಶುಂಭತಿ ॥೮॥

ಪದಾರ್ಥ:- ಓ ಮಾನವರೇ! ನೀವೆಲ್ಲರೂ ಸದಾ [ಸಖಾಯಃ] ಪರಸ್ಪರ ಪ್ರೀತಿ ಸೌಹಾರ್ದದಿಂದ ಇದ್ದು ಪರೋಪಕಾರಿಗಳಾಗಿ [ಆ ನಿಸೀದತ] ಸರ್ವತೋಮುಖ ಅಭಿವೃದ್ಧಿಯನ್ನು ಮಾಡುತ್ತಾ ಉತ್ತಮವಾಗಿ ಬಾಳಿರಿ. [ಯಃ] ಯಾವನು [ಸ್ತೋಮ್ಯಃ] ಅತ್ಯಂತ ಪ್ರಶಂಸನೀಯನು ಆಗಿದ್ದು [ನಃ] ನಮ್ಮೆಲ್ಲರಿಗೆ [ರಾಧಾಂಸಿ ದಾತಾ] ಸಕಲ ಶ್ರೇಷ್ಠ ಸಂಪತ್ತನ್ನು ಕೊಡುವವನೂ ಆದ [ಸವಿತಾ] ಸಕಲೈಶ್ವರ್ಯಪ್ರದನಾದ ಜಗದೀಶ್ವರನು [ಶುಂಭತಿ] ನಮ್ಮನ್ನು ಸುಶೋಧಿಸುತ್ತಾನೋ [ನು] ಆ ಪರಮಾತ್ಮನನ್ನು ಪ್ರತಿನಿತ್ಯ ಸ್ಮರಿಸಿರಿ ಮತ್ತು ಅವನ ಗುಣಗಾನ ಹಾಗೂ ಕೀರ್ತನೆಯನ್ನು ಮಾಡಿರಿ. ಅದೇ ರೀತಿ ಸೂರ್ಯನೂ ಕೂಡ ತನ್ನ ಪ್ರಕಾಶದ ಮೂಲಕ ಜಗವನ್ನು ಬೆಳಗಿಸುತ್ತಾನೆ. ಪ್ರತಿನಿತ್ಯ ಆ ಸೂರ್ಯನ ಮಹಿಮೆಯನ್ನು ವರ್ಣನೆ ಮಾಡಿರಿ.

ಭಾವಾರ್ಥ:- ಓ ಮಾನವರೇ! ನೀವೆಲ್ಲರೂ ಪರಸ್ಪರ ಪ್ರೀತಿ ಸೌಹಾರ್ದದಿಂದ ಇದ್ದು ಪರೋಪಕಾರಿಗಳಾಗಿ, ಸರ್ವತೋಮುಖ ಅಭಿವೃದ್ಧಿಯನ್ನು ಮಾಡುತ್ತಾ ಉತ್ತಮವಾಗಿ ಬಾಳಿರಿ. ಯಾವನು ನಮ್ಮೆಲ್ಲರಿಗೆ ಶ್ರೇಷ್ಠ ಸಂಪತ್ತನ್ನು ಪ್ರದಾನ ಮಾಡಿ ನಮ್ಮ ಶೋಭೆಯನ್ನು ವರ್ಧಿಸುತ್ತಾನೋ, ಅಂತಹ ಸಕಲೈಶ್ವರ್ಯಪ್ರದಾತನಾದ ಪರಮೇಶ್ವರನ ಗುಣಗಾನವನ್ನು ಮಾಡಿರಿ. ಅದೇ ರೀತಿ ಯಾವನು ಸಂಪೂರ್ಣ ಜಗತ್ತನ್ನು ತನ್ನ ಪ್ರಕಾಶದಿಂದ ಪ್ರಕಾಶಿಸುತ್ತಾನೋ ಆ ಸೂರ್ಯನ ಗುಣವರ್ಣನೆಯನ್ನು ಮಾಡಿರಿ.

ವಿಶೇಷ:- ಸಾಧಾರಣವಾಗಿ ಜನರು ಸಖಾ ಎಂಬ ಶಬ್ದದ ಅರ್ಥ "ಸಮಾನಂಖ್ಯಾನಂ ಏಷಾಂತೆ ಸಖಾ ಅಥವಾ ಸಮಾನಶೀಲಂ ವ್ಯಸನೇಷು ಸಖ್ಯಂ" ಸಮಾನವಾದ ಗುಣ ನಡೆತೆಯುಳ್ಳವರು ಒಂದಾದಾಗ ಅವರು ಸಖಾ ಎಂದರೆ ಮಿತ್ರರು ಎನಿಸುತ್ತಾರೆ ಎಂಬರ್ಥವನ್ನು ಮಾಡುತ್ತಾರೆ. ಸಖಾಯಃ ಶಬ್ದದ ಅರ್ಥ ಪರಸ್ಪರಂ ಸುಹೃದಃ ಪರೋಪಕಾರಕಾ ಭೂತ್ವಾ ಎಂದಾಗುತ್ತದೆ. ಅರ್ಥಾತ್ ಪರಸ್ಪರ ಪ್ರೀತಿ ಸೌಹಾರ್ದದಿಂದ ಇದ್ದು ಪರೋಪಕಾರಿಗಳಾಗಿ, ಆ ನಿ ಸೀದತ ಎಂದರೆ ಸರ್ವತೋಮುಖ ಅಭಿವೃದ್ಧಿಯನ್ನು ಮಾಡುತ್ತಾ ಬಾಳಿರಿ.

ಶುಂಭತಿ ಶಬ್ದದ ಅರ್ಥ ಶೋಭಯತಿ ಎಂದಾಗುತ್ತದೆ. ಧನಸಂಪತ್ತು ಪ್ರಾಪ್ತವಾದ ಬಳಿಕ ನಮ್ಮ ಶೋಭೆ ಹೆಚ್ಚಾಗಬೇಕು. ನಾವು ಸಂಪತ್ತನ್ನು ಅತ್ಯುತ್ತಮವಾದ ರೀತಿಯಲ್ಲಿ ಸದುಪಯೋಗವನ್ನು ಮಾಡುತ್ತಾ ಸತ್ಕೀರ್ತಿಯನ್ನು ಪ್ರಾಪ್ತ ಮಾಡಿಕೊಳ್ಳಬೇಕು. ನಾವು ವಿಖ್ಯಾತರಾಗಬೇಕೇ ವಿನಹ ಎಂದಿಗೂ ಕುಖ್ಯಾತರಾಗಬಾರದು. ಸೂರ್ಯನ ಗುಣವರ್ಣನೆಯ ಕ್ರಮ ಹೇಗೆಂದರೆ, ಸೂರ್ಯ ನಮಸ್ಕಾರ ಮಂತ್ರಗಳನ್ನು ಹೇಳುತ್ತಾ ಸೂರ್ಯ ನಮಸ್ಕಾರ ವ್ಯಾಯಾಮವನ್ನು ಮಾಡಬೇಕು.

ಪುನಃ ಅಗ್ನಿಯ ಗುಣಗಳನ್ನು ಇಲ್ಲಿ ವರ್ಣಿಸಲಾಗಿದೆ.

ಅಗ್ನೇ ಪತ್ನೀರಿಹಾ ವಹ ದೇವಾನಾಮುಶತೀರುಪ । ತ್ವಷ್ಟಾರಂ ಸೋಮಪೀತಯೇ ॥೯॥

ಪದಾರ್ಥ:- [ಅಗ್ನಿಃ] ಈ ಭೌತಿಕ ಅಗ್ನಿಯು **[ಸೋಮಪೀತಯೇ]** ಯಾವ ವ್ಯವಹಾರದಲ್ಲಿ ಸೋಮ ಅರ್ಥಾತ್ ಭೌತಿಕ ಪದಾರ್ಥಗಳ ಗ್ರಹಣವಾಗುತ್ತದೆಯೋ, ಅವುಗಳನ್ನು ಉತ್ತಮವಾದ ರೀತಿಯಲ್ಲಿ ಹಾಗೂ ವ್ಯವಸ್ಥಿತವಾದ ರೀತಿಯಲ್ಲಿ, ಸರ್ವಹಿತಕಾರಿಯಾಗುವಂತೆ **[ದೇವಾನಾಂ]** ಪೃಥಿವ್ಯಾದಿ ೩೧ ದೇವತೆಗಳ **[ಉಶತೀಃ]** ಸ್ವ ಸ್ವ ಆಧಾರಭೂತ ಗುಣಗಳನ್ನು ಪ್ರಕಾಶಮಾಡುವ **[ಪತ್ನೀ]** ಪತ್ನಿಯಂತೆಯೇ ಸದಾ ಒಂದಿಗಿದ್ದು ಶಕ್ತಿಯನ್ನು ಮತ್ತು ಸಾಮರ್ಥ್ಯವನ್ನು ಕೊಡುವ ಹಾಗೂ **[ತ್ವಷ್ಟಾರಂ]** ಉತ್ತಮ ಕುಶಲಕರ್ಮಿಗಳನ್ನು **[ಉಪಾವಹ]** ಉತ್ತಮವಾದ ರೀತಿಯಲ್ಲಿ ಬಳಸಿಕೊಳ್ಳಲು ಪ್ರಯುಕ್ತವಾಗುತ್ತವೆಯೋ ಅಂತಹ ಪ್ರಯೋಗಗಳನ್ನು ವಿದ್ವಾಂಸರು ಯೋಗ್ಯವಾದ ರೀತಿಯಲ್ಲಿ ಮಾಡಬೇಕು.

ಭಾವಾರ್ಥ:- ವಿದ್ವಾಂಸರು, ವಿಜ್ಞಾನಿಗಳು ಈ ಭೌತಿಕ ಅಗ್ನಿಯನ್ನು ಅರ್ಥಾತ್ ಅಗ್ನಿಯ ತ್ರಿವಿಧ ರೂಪಗಳಾದ ಸೂರ್ಯ, ವಿದ್ಯುತ್ ಮತ್ತು ಬೆಂಕಿಯನ್ನು ಸಕಲ ಶಿಲ್ಪವಿದ್ಯಾ ಸಿದ್ಧಿಗೋಸ್ಕರ, ಸಕಲ ಭೌತಿಕ ಪದಾರ್ಥಗಳನ್ನು ಯೋಗ್ಯವಾದ ರೀತಿಯಲ್ಲಿ ಜೀವಮಾತ್ರರಿಗೆ ಹಿತಕಾರಿಯಾಗುವಂತೆ, ಪೃಥಿವ್ಯಾದಿ ೩೧ ದೇವತೆಗಳ [೮ ವಸುಗಳು ಅಗ್ನಿ ಪೃಥಿವೀ, ವಾಯು, ಅಂತರಿಕ್ಷ, ಆದಿತ್ಯ, ದ್ಯುಲೋಕ ಚಂದ್ರ ಮತ್ತು ನಕ್ಷತ್ರ ಇವುಗಳನ್ನು ವಸು ಎಂದು ಹೇಳುತ್ತಾರೆ. ಏಕೆಂದರೆ ಇವುಗಳಲ್ಲಿ ಜೀವಿಗಳು ವಾಸಿಸುತ್ತವೆ.

ಏಕಾದಶ ರುದ್ರಾ : ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನ ಎಂಬ ಪಂಚ ಪ್ರಾಣಗಳು, ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ ಎಂಬ ಪಂಚ ಉಪಪ್ರಾಣಗಳು ಹಾಗೂ ಆತ್ಮ ಇವುಗಳನ್ನು ರುದ್ರ ಎಂದು ಹೇಳುತ್ತಾರೆ. ಏಕೆಂದರೆ ಯಾವಾಗ ಇವುಗಳು ಈ ಶರೀರದಿಂದ ಹೊರಟುಹೋಗುತ್ತವೆಯೋ ಆಗ ದೇಹಧಾರೀ ಸಕಲ ಜೀವಮಾತ್ರರ ಮೃತ್ಯು ಆಗುತ್ತದೆ. ಇದರಿಂದ ಸಕಲ ಸಂಬಂಧಿಕರು, ಮಿತ್ರರು ರೋದನವನ್ನು ಮಾಡುತ್ತಾರೆ. ದ್ವಾದಶ ಆದಿತ್ಯ : ದ್ವಾದಶ ಮಾಸಗಳು, ವಿವಸ್ವಾನ್, ಆರ್ಯಮಾ, ಪೂಷಾ, ತ್ವಷ್ಟಾ, ಸವಿತಾ, ಭಗಃ, ಧಾತಾ, ವಿಧಾತಾ, ವರುಣಃ, ಮಿತ್ರಃ, ಶಕ್ರಃ, ಪುರುಕ್ರಮಃ. ಈ ಆದಿತ್ಯಗಳು ಒಂದೊಂದು ಮಾಸದಲ್ಲಿ ಕ್ರಮಶಃ ಉದಯವಾಗುತ್ತವೆ. ಯಥಾರ್ಥ ರೂಪದಲ್ಲಿ ಒಂದೇ ಸೂರ್ಯನ ದ್ವಾದಶ ರೂಪಗಳು ಅಥವಾ ದ್ವಾದಶ ಗುಣಗಳಾಗಿವೆ. ಸೂರ್ಯನನ್ನು ಆದಿತ್ಯ ಎಂದೇಕೆ ಹೇಳುತ್ತಾರೆ? ಏಕೆಂದರೆ 'ಆಧತ್ತೇ ರಾಸನ್' ಪ್ರತಿಯೊಂದು

ಪದಾರ್ಥಗಳ ರಸವನ್ನು ಸೂರ್ಯನು ಹೀರುತ್ತಾನೆ. ದ್ವಾದಶ ಮಾಸಗಳು ಆದಿತ್ಯಾ ಎಂದು ಏಕೆ ಹೇಳುತ್ತಾರೆ? ಏಕೆಂದರೆ ಸರ್ವಂ ಜಗದಾದದಾನ ಅರ್ಥಾದಾಸಮಾಂತಾತ್ ಗೃಹ್ಯಂತಃ ಪ್ರತಿಕ್ಷಣಂ ಉತ್ಪನ್ನಸ್ಯ ವಸ್ತುಃ ನ ಆಯುಷಃ ಪ್ರಲಯಾದಿ ನಿಕಟಮಾನಯಂತೋ ಯಂತಿ ಗಚ್ಛಂತಿ - ಭಗವಂತನ ಸೃಷ್ಟಿಯಾದ ಪ್ರತಿಯೊಂದು ಪದಾರ್ಥಗಳ ಆಯುಷ್ಯವನ್ನು ಪ್ರತಿಕ್ಷಣದಲ್ಲಿಯೂ ಹರಣ ಮಾಡುತ್ತಾ ಪ್ರಲಯದ ಕಡೆಗೆ ಕೊಂಡೊಯ್ಯುತ್ತದೆ. ಸ್ವ ಸ್ವ ಆಧಾರ ಗುಣಗಳ ಪ್ರಕಾಶವನ್ನು ಮಾಡುವಂತಹ ಸಾಮರ್ಥ್ಯವನ್ನು ಕೊಡುವ ಶಕ್ತಿಯ ಸ್ರೋತವನ್ನು ಸ್ವೀಕಾರ ಮಾಡಬೇಕು. ಇಲ್ಲಿ ಶಿಲ್ಪವಿದ್ಯಾ ಯಜ್ಞದಲ್ಲಿ ಪೃಥಿವ್ಯಾದಿ ೨೧ ದೇವತೆಗಳ ಸ್ವ ಸ್ವ ಆಧಾರ ಗುಣಗಳ ಪ್ರಕಾಶವನ್ನು ಮಾಡುವಂತಹ ಸಾಮರ್ಥ್ಯವನ್ನು ಕೊಡುವ ಶಕ್ತಿಯ ಸ್ರೋತವನ್ನು ಪತ್ನಿ ಎಂದು ಹೇಳಿದೆ. ಇದು ಕೇವಲ ಪೃಥಿವ್ಯಾದಿ ಜಡ ದೇವತೆಗಳಿಗೆ ಮಾತ್ರ ಅನ್ವಯಿಸುವುದಲ್ಲ, ಮಾನವರಿಗೂ ಅನ್ವಯಿಸುತ್ತದೆ. ಪತ್ನಿಯಾದವಳು ಪತಿಯ ಶಕ್ತಿಯ ಮೂಲಸ್ರೋತ ಆಗಿದ್ದಾಳೆ. ಆದುದರಿಂದಲೇ ಅವಳನ್ನು ಪತ್ನಿ ಎಂದು ಹೇಳುತ್ತಾರೆ. 'ಪತ್ಯುರ್ನೋ ಯಜ್ಞ ಸಂಯೋಗೇ' ಪತಿಯೊಂದಿಗೆ ಸೇರಿ ಯಜ್ಞವನ್ನು ಮಾಡುವವಳು ಪತ್ನಿ. ಪತಿಯ ಉತ್ತಮ ಗುಣಗಳನ್ನು ಕಂಡುಹಿಡಿದು ಅವುಗಳನ್ನು ಅಭಿವೃದ್ಧಿ ಪಡಿಸಲು, ಪ್ರೇರಣೆಯನ್ನು ಸಹಾಯವನ್ನು ಮತ್ತು ಶಕ್ತಿಯನ್ನು ನೀಡುವವಳೇ ಪತ್ನಿ. ವಿದ್ವಾಂಸರು ಮತ್ತು ವಿಜ್ಞಾನಿಗಳು ಪ್ರತಿಯೊಂದು ದೇವತೆಯ ಶಕ್ತಿಯ ಮೂಲ ಸ್ರೋತವನ್ನು ಕಂಡುಹಿಡಿದು ಅವುಗಳೊಂದಿಗೆ ಅಗ್ನಿಯನ್ನು ಸಂಯುಕ್ತವನ್ನಾಗಿ ಮಾಡಿ, ಕುಶಲ ಕರ್ಮಿಗಳ ಸಹಾಯದಿಂದ ಎಲ್ಲರಿಗೂ ಉಪಯೋಗವಾಗುವಂತೆ ಹಾಗೂ ಪ್ರತಿಯೊಂದು ಪದಾರ್ಥಗಳ ಸದುಪಯೋಗವಾಗುವಂತೆ ಪ್ರಯತ್ನಿಸಬೇಕು.

ಅವು ಯಾವ ಯಾವ ದೇವಪತ್ನೀ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಆ ಗ್ನಾ ಅಗ್ನ ಇಹಾವಸೇ ಹೋತ್ರಾಂ ಯವಿಷ್ಠ ಭಾರತೀಮ್ । ವರೂತ್ರೀಂ ಧಿಷಣಾಂ ವಹ ॥೧೦॥

ಪದಾರ್ಥ:- ಹೇ **[ಯವಿಷ್ಠ]** ಸಕಲ ಪದಾರ್ಥಗಳನ್ನು ಉತ್ತಮವಾದ ರೀತಿಯಲ್ಲಿ ಮಿಶ್ರಣ ಮಾಡುವುದರಲ್ಲಿ ಹಾಗೂ ಬೇರ್ಪಡಿಸುವುದರಲ್ಲಿ ನಿಷ್ಣಾತನಾದ **[ಅಗ್ನೇ]** ಕ್ರಿಯಾಶೀಲನಾದ ವಿದ್ವಾಂಸನೇ! ನೀನು **[ಇಹ]** ಶಿಲ್ಪ ಕಾರ್ಯಗಳಲ್ಲಿ **[ಅವಸೇ]** ಉತ್ತಮವಾದ ರೀತಿಯಲ್ಲಿ ಪ್ರವೇಶವನ್ನು ಮಾಡುವುದಕ್ಕೋಸ್ಕರ ಅರ್ಥಾತ್ ಸರ್ವರಿಗೂ ಲಾಭಕಾರಿಯಾಗುವ ರೀತಿಯಲ್ಲಿ, ಯೋಗ್ಯವಾದ ರೀತಿಯಲ್ಲಿ ಎಲ್ಲವನ್ನು ಬಳಸಿಕೊಂಡು ಉತ್ತಮವಾದ ಪ್ರಯೋಜನವನ್ನು ಪಡೆಯುವುದಕ್ಕೋಸ್ಕರ **[ಗ್ನಾಃ]** ಪೃಥ್ವಿ ಅರ್ಥಾತ್ ಭೂಮಿಯಲ್ಲಿರುವ ಸಕಲ ಖನಿಜಪದಾರ್ಥಗಳನ್ನು **[ಹೋತ್ರಾಂ]** ಅಗ್ನಿಯಲ್ಲಿ ಅರ್ಪಿಸಿದ ಪದಾರ್ಥಗಳನ್ನು ಯೋಗ್ಯವಾದ ರೀತಿಯಲ್ಲಿ ಉಪಯುಕ್ತವಾಗುವಂತೆ ಮಾಡುವ ಜ್ಞಾನವನ್ನು **[ಭಾರತೀಮ್]** ಸೂರ್ಯನ ಶಕ್ತಿಯನ್ನೂ **[ವರೂತ್ರೀಮ್]** ಸ್ವೀಕರಣೀಯವಾದ ಅಹೋರಾತ್ರಿಗಳನ್ನೂ **[ಧಿಷಣಾಮ್]** ಉತ್ತಮವಾದ ರೀತಿಯಲ್ಲಿ ವ್ಯವಹಾರವನ್ನು ಮಾಡಲು ಉಪಯುಕ್ತವಾದ ವಾಣಿಯನ್ನು **[ಆವಹ]** ಯೋಗ್ಯವಾದ ರೀತಿಯಲ್ಲಿ ಪ್ರಾಪ್ತಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಅತ್ಯುತ್ತಮವಾದ ರೀತಿಯಲ್ಲಿ ವ್ಯಾಪಾರ, ಉದ್ಯೋಗ, ವ್ಯವಸಾಯ, ಸಕಲ ಪದಾರ್ಥಗಳ ನಿರ್ಮಾಣವನ್ನು ಮಾಡಲು ಹಾಗೂ ನಿರ್ಮಿತವಾದ ಪದಾರ್ಥಗಳನ್ನು ಎಲ್ಲರಿಗೂ ಪ್ರಯೋಜನಕಾರಿಯಾಗುವ ರೀತಿಯಲ್ಲಿ ಉಪಲಬ್ಧವಾಗುವಂತೆ ಮಾಡಲು ಏನೆಲ್ಲಾ ಬೇಕೋ ಅವೆಲ್ಲವನ್ನೂ ತಿಳಿಯಪಡಿಸಲಾಗಿದೆ. ಸಕಲ ಪದಾರ್ಥಗಳನ್ನು ಉತ್ತಮವಾದ ರೀತಿಯಲ್ಲಿ ಮಿಶ್ರಣ ಮಾಡಲು ಮತ್ತು ಯೋಗ್ಯವಾದ ರೀತಿಯಲ್ಲಿ ಬೇರ್ಪಡಿಸಲು, ಯೋಗ್ಯವಾದ ವಿದ್ಯೆಯನ್ನು ಹಾಗೂ ಜ್ಞಾನವನ್ನು ಸಂಪಾದಿಸಿ ಅದರಲ್ಲಿ ನಿಷ್ಣಾತನಾದ ವಿದ್ವಾಂಸನೇ! ನೀನು ಸಕಲ ಶಿಲ್ಪಕಲೆಗಳಲ್ಲಿ, ಶಿಲ್ಪ ವಿದ್ಯೆಗಳಲ್ಲಿ (ಇಲ್ಲಿ ಶಿಲ್ಪವಿದ್ಯೆ ಅಥವಾ ಶಿಲ್ಪಕಲೆ ಎಂದರೆ ಕಲ್ಲಿನಿಂದ, ಮರದಿಂದ, ಧಾತುವಿನಿಂದ ಕೆತ್ತನೆಯ ಕೆಲಸಗಳನ್ನು ಮಾಡುವುದು ಮಾತ್ರವಲ್ಲ, ವಿಜ್ಞಾನ, ತಂತ್ರಜ್ಞಾನ ಹಾಗೂ ಯಂತ್ರ ಕಲಾಕೌಶಲ್ಯಗಳಲ್ಲಿ) ಅತ್ಯುತ್ತಮವಾದ ರೀತಿಯಲ್ಲಿ ಪಾರಂಗತನಾಗಿ, ಅದರ ಪ್ರಯೋಜನವನ್ನು

ಎಲ್ಲರೂ ಪಡೆಯುವಂತೆ ಮಾಡುವುದಕ್ಕೋಸ್ಕರ, ಭೂಮಿಯಲ್ಲಿರುವ ಸಕಲ ಖನಿಜಪದಾರ್ಥಗಳನ್ನೂ ಅಗ್ನಿಯಲ್ಲಿ ಅರ್ಪಿಸಿದ ಪದಾರ್ಥಗಳನ್ನು ಯೋಗ್ಯವಾದ ರೀತಿಯಲ್ಲಿ ಹಾಗೂ ಆಯಾಯ ಪದಾರ್ಥಗಳನ್ನು ನಿರ್ಮಾಣ ಮಾಡಲು, ಉಪಯುಕ್ತವಾದ ಜ್ಞಾನವನ್ನು ಸೂರ್ಯನ ಶಕ್ತಿಯನ್ನೂ, ಸ್ವೀಕರಣೀಯವಾದ ಅಹೋರಾತ್ರಿಗಳನ್ನು ಅರ್ಥಾತ್ ಉಪಯುಕ್ತವಾದ ಸಮಯವನ್ನೂ, ವ್ಯವಹಾರವನ್ನೂ ಮಾಡಲು ಉಪಯುಕ್ತವಾದ ಭಾಷೆಯನ್ನು ಯೋಗ್ಯವಾದ ರೀತಿಯಲ್ಲಿ ಪ್ರಾಪ್ತ ಮಾಡಿಕೊಳ್ಳಬೇಕು.

ಈಗ ವಿದ್ವಾಂಸರ ಪತ್ನಿಯರೂ ಸಹ ಉಕ್ತ ಕಾರ್ಯಗಳನ್ನು ಮಾಡಬೇಕು ಎಂಬುದನ್ನು ವರ್ಣಿಸಲಾಗಿದೆ.

ಅಭಿ ನೋ ದೇವೀರವಸಾ ಮಹಃ ಶರ್ಮಣಾ ನೃಪತ್ನೀಃ । ಅಚ್ಛಿನ್ನಪತ್ರಾಃ ಸಚಂತಾಮ್ ॥೧೧॥

ಪದಾರ್ಥ:- [ಅಚ್ಛಿನ್ನಪತ್ರಾಃ] ಯಾರ ಕರ್ಮ ಮತ್ತು ಸಾಧನೆಗಳು ಅವಿಚ್ಛಿನ್ನವಾಗಿವೆಯೋ, ಅರ್ಥಾತ್ ಯಾರು ನಿರಂತರ ಶ್ರೇಷ್ಠ ಕರ್ಮ ಮತ್ತು ಸಾಧನೆಗಳನ್ನು ನಿರಂತರ ಮಾಡುತ್ತಿರುತ್ತಾರೆಯೋ, ಅಂತಹ [ದೇವೀಃ] ದಿವ್ಯಗುಣಗಳುಳ್ಳ [ನೃಪತ್ನಿ] ವಿದ್ವಾಂಸರ ಪತ್ನಿಯರು ಇದ್ದಾರೆಯೋ ಅವರು [ಮಹಃ] ಉತ್ತಮವಾದ ಮತ್ತು ಪ್ರಶಂಸನೀಯವಾದ [ಶರ್ಮಣಾ] ಎಲ್ಲರಿಗೂ ಸುಖಸಂತೋಷವನ್ನು ಕೊಡುವ [ಅವಸಾ] ರಕ್ಷಣೆ, ಜ್ಞಾನ ಹಾಗೂ ಕರ್ಮಗಳಲ್ಲಿ ಕುಶಲತೆಯೊಂದಿಗೆ [ನಃ] ನಮ್ಮೆಲ್ಲರಿಗೆ [ಅಭಿಸಚಂತಾಂ] ಎಲ್ಲಾ ವಿಧದಲ್ಲಿ ಪ್ರಾಪ್ತವಾಗಲಿ.

ಭಾವಾರ್ಥ:- ಪತ್ನಿಯ ಸಹಾಯವಿಲ್ಲದೇ, ಪತಿಯು ಧಾರ್ಮಿಕ ಕಾರ್ಯಗಳನ್ನು, ಶ್ರೇಷ್ಠ ಕರ್ಮಗಳನ್ನು ಉತ್ತಮವಾದ ರೀತಿಯಲ್ಲಿ ಮಾಡಲು ಅಸಮರ್ಥನಾಗುತ್ತಾನೆ. ಆದುದರಿಂದ ಶ್ರೇಷ್ಠ ಕರ್ಮಗಳನ್ನು ಮಾಡುವ ವಿದ್ವಾಂಸರ ಪತ್ನಿಯರೂ ಕೂಡಾ, ನಿರಂತರ ಶ್ರೇಷ್ಠ ಕರ್ಮಗಳನ್ನು ಹಾಗೂ ಸಾಧನೆಗಳನ್ನು ಮಾಡುತ್ತಾ ತನ್ನ ಪತಿಗೆ ಅನುರೂಪಳಾಗಿ, ದಿವ್ಯಗುಣಗಳುಳ್ಳವಳಾಗಿ, ಎಲ್ಲರಿಗೂ ಆಶ್ರಯ, ರಕ್ಷಣೆ, ಜ್ಞಾನ ಹಾಗೂ ಸುಖ ಸಂತೋಷವನ್ನು ಕೊಡುವವಳಾಗಿದ್ದು, ಸಕಲ ಕರ್ಮಗಳಲ್ಲಿ ಅತ್ಯಂತ ನಿಪುಣಳೂ, ಎಲ್ಲರಿಗೂ ಮಾರ್ಗದರ್ಶನವನ್ನು ನೀಡುವವಳೂ ಆಗಿ ನಮ್ಮೆಲ್ಲರಿಗೆ ಪ್ರಾಪ್ತವಾಗಲಿ. ಆ ದೇವಿಯು ನಮ್ಮೆಲ್ಲರಿಗೆ ಮಹಾಮಾತೆಯಾಗಲಿ.

ನಂತರ ಅವರು ಎಂತಹ ದೇವಪತ್ನಿಯರು ಎಂಬುದನ್ನು ತಿಳಿಸಲಾಗಿದೆ.

ಇಹೇಂದ್ರಾಣೀಮುಪ ಹ್ವಯೇ ವರುಣಾನೀಂ ಸ್ವಸ್ತಯೇ । ಅಗ್ನಾಯೀಂ ಸೋಮಪೀತಯೇ ॥೧೨॥

ಪದಾರ್ಥ:- ಓ ಮನನಶೀಲರಾದ ಮಾನವರೇ! ಯಾವ ರೀತಿ ನಾನು ಈ ಜನ್ಮದಲ್ಲಿಯೇ [ಸ್ವಸ್ತಯೇ] ಅವಿನಾಶಿಯಾದ ಹಾಗೂ ಸರ್ವರಿಂದ ಪ್ರಶಂಸಿಸಲ್ಪಡುವ ಸುಖಕ್ಕಾಗಿ ಹಾಗೂ ಸರ್ವರ ಕಲ್ಯಾಣಕ್ಕಾಗಿ [ಸೋಮಪೀತಯೇ] ಯಾವುದರ ಮೂಲಕ ಉತ್ತಮವಾದ ಐಶ್ವರ್ಯದ ಭೋಗವು ಪ್ರಾಪ್ತವಾಗುತ್ತದೆಯೋ ಅಂತಹ ಕರ್ಮಗಳಿಗಾಗಿ [ಇಂದ್ರಾಣೀಂ] ಸೂರ್ಯನಂತೆ ತೇಜಸ್ಸುಳ್ಳವಳೂ, ವಾಯುವಿನಂತೆ ಗತಿಶೀಲಳೂ [ವರುಣಾನೀಂ] ಜಲದಂತೆ ಶಾಂತಿ ಮತ್ತು ಮಾಧುರ್ಯ ಸ್ವಭಾವವುಳ್ಳವಳೂ [ಅಗ್ನಾಯೀಂ] ಅಗ್ನಿಯಂತೆ ಕಾಂತಿಯುಳ್ಳವಳೂ ಹಾಗೂ ಪ್ರಕಾಶವನ್ನು ಬೀರುವವಳೂ ಆದ [ಉಪಹ್ವಯೇ] ಪತ್ನಿಯನ್ನು ಪ್ರಾಪ್ತಮಾಡಿಕೊಳ್ಳುತ್ತೇನೆಯೋ, ಅದೇ ರೀತಿ ನೀವು ಕೂಡ ಪ್ರಯತ್ನದಿಂದ ಅಂತಹ ಗುಣಗಳುಳ್ಳ ಪತ್ನಿಯನ್ನೇ ಪ್ರಾಪ್ತ ಮಾಡಿಕೊಳ್ಳಿರಿ.

ಭಾವಾರ್ಥ:- ಪ್ರತಿಯೊಬ್ಬ ಮಾನವನು ಕ್ಷಣಿಕ ಸುಖ ಮತ್ತು ಕೇವಲ ತನ್ನ ಸ್ವಾರ್ಥವನ್ನು ಅಪೇಕ್ಷಿಸಬಾರದು. ಯಾವುದರಿಂದ ಸದಾಕಾಲ ಸುಖ, ಶಾಂತಿ, ಸಂತೃಪ್ತಿ, ಮತ್ತು ನೆಮ್ಮದಿಯು ಪ್ರಾಪ್ತವಾಗುತ್ತದೆಯೋ, ಹಾಗೂ ಇತರರಿಂದ ಪ್ರಶಂಸಿಸಲ್ಪಡುತ್ತದೆಯೋ ಅಂತಹ ಸುಖವನ್ನು ಅಪೇಕ್ಷಿಸಬೇಕು. ಯಾವಾಗ ನಾವು ಕೇವಲ ನಮ್ಮ ಸ್ವಾರ್ಥವನ್ನು ಅಪೇಕ್ಷಿಸದೆ ಅದರೊಂದಿಗೆ ಪರಾರ್ಥವನ್ನೂ, ಪರರ ಕಲ್ಯಾಣವನ್ನೂ ಅಪೇಕ್ಷಿಸುತ್ತೇವೆಯೋ ಆಗ

ನಾವು ಸುಖವನ್ನು ಪಡೆಯುವುದನ್ನು ನೋಡಿ ಯಾರೂ ಈರ್ಷ್ಯೆ ಪಡುವುದಿಲ್ಲ. ಮತ್ಸರ ಮತ್ತು ಅಸೂಯೆಯನ್ನು ಮಾಡುವುದಿಲ್ಲ. ಇದರಿಂದ ಅವನಿಗೆ ಶಾಶ್ವತವಾದ ಸುಖದೊಂದಿಗೆ ಯಶಸ್ಸು ಮತ್ತು ಕೀರ್ತಿಯೂ ಲಭಿಸುತ್ತದೆ. ಇಂತಹ ಸರ್ವರ ಹಿತಕ್ಕಾಗಿ, ಶ್ರೇಷ್ಠ ಕರ್ಮಗಳನ್ನು ಮಾಡುವಾಗ ಆ ಕರ್ಮಗಳು ಸಂಪೂರ್ಣ ಯಶಸ್ವಿಯಾಗ ಬೇಕಾದರೆ, ಧರ್ಮಪತ್ನಿಯ ಸಂಪೂರ್ಣ ಸಹಕಾರ ಅತ್ಯಂತ ಆವಶ್ಯಕ. ಆದುದರಿಂದ ಭಗವಂತನ ಕೃಪೆಯಿಂದ, ಹಾಗೂ ಪ್ರಯತ್ನದಿಂದ ನಮಗೆ ಅನುರೂಪಳಾದ, ಸೂರ್ಯನಂತೆ ತೇಜಸ್ಸುಳ್ಳವಳೂ ಮತ್ತು ವಾಯುವಿನಂತೆ ಗತಿಶೀಲಳೂ, ಜಲದಂತೆ ಶಾಂತಿ ಮತ್ತು ಮಾಧುರ್ಯ ಸ್ವಭಾವವುಳ್ಳವಳೂ, ಅಗ್ನಿಯಂತೆ ಕಾಂತಿಯುಕ್ತಳೂ ಹಾಗೂ ಪ್ರಕಾಶವನ್ನು ಬೀರುವವಳೂ ಆದ ಶ್ರೇಷ್ಠ ವಿದುಷಿ ಸ್ತ್ರೀಯನ್ನು, ಪತ್ನಿಯಾಗಿ ವರಣ ಮಾಡುತ್ತೇವೆ. ಅದರಂತೆ ನೀವೆಲ್ಲರೂ ಸದಾ ಸರ್ವರ ಹಿತಕ್ಕಾಗಿ ಶ್ರೇಷ್ಠ ಕರ್ಮಗಳನ್ನು ಮಾಡುತ್ತಾ ಅನುರೂಪಳಾದ ಪತ್ನಿಯನ್ನು ಪ್ರಾಪ್ತ ಮಾಡಿಕೊಳ್ಳಿರಿ.

ಶಿಲ್ಪ ವಿದ್ಯೆಯಲ್ಲಿ ಭೂಮಿ ಮತ್ತು ಅಗ್ನಿಗಳು ಸುಖ ಸಾಧನಗಳಾಗಿವೆ ಎಂಬುದನ್ನು ವಿವರಿಸಲಾಗಿದೆ.

ಮಹೀ ದ್ಯೌಃ ಪೃಥಿವೀ ಚ ನ ಇಮಂ ಯಜ್ಞಂ ಮಿಮಿಕ್ಷತಾಮ್ । ಪಿಪೃತಾಂ ನೋ ಭರೀಮಭಿಃ॥೧೩॥

ಪದಾರ್ಥ:- ಎಲ್ಲರಿಗೂ ಉತ್ತಮವಾದ ಉಪದೇಶ ಮಾಡುವ ವಿದ್ವಾಂಸರೇ ಹಾಗೂ ಉಪದೇಶವನ್ನು ಗ್ರಹಣ ಮಾಡುವ ಶ್ರೋತೃಗಳೇ! ನೀವಿಬ್ಬರೂ [ಮಹೀ] ಅತ್ಯಂತ ಶ್ರೇಷ್ಠ ಗುಣಗಳುಳ್ಳ, ಬೃಹದಾಕಾರವುಳ್ಳ ಪ್ರಕಾಶಪುಂಜಗಳಾದ [ದ್ಯೌಃ] ಸೂರ್ಯ-ಚಂದ್ರ ನಕ್ಷತ್ರಾದಿಗಳು ಮತ್ತು [ಪೃಥಿವೀ] ಪ್ರಕಾಶವನ್ನು ಬೀರದೇ ಎಲ್ಲವನ್ನೂ ಧಾರಣೆ ಮಾಡಿಕೊಳ್ಳುವ ಪೃಥ್ವಿ ಹಾಗೂ ಇತರ ಗ್ರಹೋಪಗ್ರಹಗಳು [ಭರೀಮಭಿಃ] ಡುಭೃಞ್ ಧಾರಣ ಪೋಷಣಯೋಃ - ತಮ್ಮ ಧಾರಣೆ ಮತ್ತು ಪೋಷಣೆ ಗುಣಗಳ ಮೂಲಕ [ನಃ] ನಮ್ಮೆಲ್ಲರ [ಇಮಮ್ ಯಜ್ಞಂ] ಈ ಶಿಲ್ಪವಿದ್ಯಾಮಯ ಯಜ್ಞವನ್ನು [ಚ] ಮತ್ತು [ನಃ ಪಿಪೃತಾಮ್] ನಮ್ಮೆಲ್ಲರ ಸುಖವನ್ನು ಪೂರ್ತಿಗೊಳಿಸುತ್ತಾನೆ. ಅರ್ಥಾತ್ ನಮ್ಮೆಲ್ಲರ ಸಕಲ ಸುಖ ಸೌಲಭ್ಯಗಳನ್ನು ಪೂರ್ತಿಗೊಳಿಸುತ್ತವೆ. ಅದೇ ರೀತಿ ನೀವು ಕೂಡಾ [ಇಮಂ ಯಜ್ಞಂ] ಸಮಸ್ತ ಪ್ರಾಣಿ ಮಾತ್ರರಿಗೆ ಹಿತಕಾರಿಯಾಗುವಂತಹ ಶಿಲ್ಪ ವಿದ್ಯಾಮಯ ಜ್ಞಾನಯಜ್ಞವನ್ನು, ಕರ್ಮಯಜ್ಞವನ್ನೂ [ಪಿಪೃತಾಮ್] ಅತ್ಯುತ್ತಮವಾದ ರೀತಿಯಲ್ಲಿ ಪೂರ್ಣಗೊಳಿಸಿರಿ.

ಭಾವಾರ್ಥ:- ಎಲ್ಲರಿಗೂ ಶ್ರೇಷ್ಠವಾದ ಸತ್ಯಜ್ಞಾನವನ್ನು ಕೊಡುವ ವಿದ್ವಾಂಸರೇ! ಹಾಗೂ ವಿದ್ವಾಂಸರಿಂದ ಜ್ಞಾನವನ್ನೂ, ಉಪದೇಶವನ್ನೂ ಪಡೆಯುವ ಶ್ರೋತೃಗಳೇ! ನೀವಿಬ್ಬರೂ ಕೂಡಾ ಯಾವ ರೀತಿ ಪ್ರಕಾಶ ಪುಂಜಗಳಾದ ಸೂರ್ಯ ಚಂದ್ರ ನಕ್ಷತ್ರಗಳು ಮತ್ತು ಸಕಲ ಪದಾರ್ಥಗಳನ್ನು ಧಾರಣ ಮಾಡಿಕೊಳ್ಳುವ ಪೃಥ್ವಿಯು ತಮ್ಮ ಧಾರಣಾಶಕ್ತಿಯ ಮೂಲಕ ಹಾಗೂ ಪೋಷಣೆಯನ್ನು ಮಾಡುವ ಗುಣಗಳ ಮೂಲಕ ನಮ್ಮೆಲ್ಲರ ಸುಖ ಸೌಲಭ್ಯಗಳನ್ನು ಪೂರ್ಣಗೊಳಿಸುತ್ತವೆಯೋ ಅದೇ ರೀತಿ ನೀವೂ ಕೂಡ ನಮ್ಮೆಲ್ಲರ ಶಿಲ್ಪವಿದ್ಯಾಮಯ ಜ್ಞಾನ ಯಜ್ಞವನ್ನೂ ಹಾಗೂ ಸಮಸ್ತ ಪ್ರಾಣಿ ಮಾತ್ರರಿಗೆ ಹಿತಕಾರಿಯಾಗುವಂತಹ ಕರ್ಮ ಯಜ್ಞವನ್ನೂ ಪೂರ್ಣಗೊಳಿಸಿರಿ.

ಉಕ್ತ ಎರಡು ಪ್ರಕಾರದ ಲೋಕಗಳಿಂದ ಏನೇನನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತಯೋರಿದ್ ಘೃತವತ್ ಪಯೋ ವಿಪ್ರಾ ರಿಹಂತಿ ಧೀತಿಭಿಃ । ಗಂಧರ್ವಸ್ಯ ಧ್ರುವೇ ಪದೇ ॥೧೪॥

ಪದಾರ್ಥ:- ಯಾವ ವಿದ್ವಾಂಸರು ಹಾಗೂ ವಿಜ್ಞಾನಿಗಳು ಯಾವುದರ ಮೂಲಕ ಅತ್ಯಂತ ಪ್ರಶಂಸಿಸಲ್ಪಡುತ್ತಾರೋ ಅಂತಹ [ತಯೋಃ] ದ್ಯುಲೋಕ ಮತ್ತು ಪೃಥ್ವಿಯ [ಧೀತಿಭಿಃ] ಧಾರಣ ಮತ್ತು ಆಕರ್ಷಣ ಗುಣಗಳ ಮೂಲಕ [ಗಂಧರ್ವಸ್ಯ] ಪೃಥ್ವಿಯನ್ನು ಧಾರಣ ಮಾಡುವ ವಾಯುವಿನ [ಧ್ರುವೇ ಪದೇ] ಆಶ್ರಯಸ್ಥಾನವಾದ ಹಾಗೂ ನಿಶ್ಚಲವಾದ ಸರ್ವತ್ರ ವ್ಯಾಪ್ತನಾದ ಅಂತರಿಕ್ಷದಲ್ಲಿ ವಿಮಾನಾದಿ ಯಾನಗಳ ಮೂಲಕ [ರಿಹಂತಿ]

ಗಮನಾಗಮನವನ್ನು ಮಾಡುತ್ತಾರೋ ಅವರು ಪ್ರಶಂಸಿಸಲ್ಪಡುತ್ತಾರೆ. ಅವರು [ಘೃತವತ್] ಪ್ರಶಸ್ತವಾದ ಜಲವು ಎಲ್ಲಿರುತ್ತದೆಯೋ ಅರ್ಥಾತ್ ಪುಷ್ಕಳನಾದ ಜಲವು ಯಾವುದರಲ್ಲಿರುತ್ತದೆಯೋ ಅಂತಹ ಸಮುದ್ರದಲ್ಲಿಯೂ ಗಮನಾಗಮನವನ್ನು ಮಾಡಿ [ವಿಪ್ರಾಃ ಪಯಃ] ಮೇಧಾವಿಗಳಾದ ಜನರು ಸಕಲ ರಸಾದಿಗಳನ್ನು ಗ್ರಹಣ ಮಾಡುತ್ತಾರೆ.

ಭಾವಾರ್ಥ:- ವಿದ್ವಾಂಸರು ಮತ್ತು ವಿಜ್ಞಾನಿಗಳು ದ್ಯುಲೋಕ ಮತ್ತು ಪೃಥ್ವಿಯ ಧಾರಣ ಹಾಗೂ ಆಕರ್ಷಣ ಗುಣಗಳ ಮೂಲಕ ಪೃಥ್ವಿಯನ್ನು ಧಾರಣ ಮಾಡುವ ವಾಯುವಿನ ಆಶ್ರಯಸ್ಥಾನವಾದ ಆಕಾಶದಲ್ಲಿ ವಿಮಾನ ಯಾನಗಳ ಮೂಲಕ ಗಮನಾಗಮನವನ್ನು ಅರ್ಥಾತ್ ಸಂಚಾರ ಮಾಡುತ್ತಾರೆ. ಅವರು ಎಲ್ಲರಿಂದಲೂ ಪ್ರಶಂಸಿಸಲ್ಪಡುತ್ತಾರೆ. ಅದೇ ರೀತಿ ಪುಷ್ಕಳವಾದ ಜಲವು ಎಲ್ಲಿರುತ್ತದೆಯೋ ಅಂತಹ ಸಮುದ್ರದಲ್ಲಿಯೂ ಸಂಚಾರವನ್ನು ಮಾಡಿ ಸಕಲ ಪದಾರ್ಥಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ.

ಈ ಭೂಮಿಯು ಯಾರಿಗಾಗಿ ಮತ್ತು ಹೇಗೆ ಇದೆ ಎಂಬುದನ್ನಿಲ್ಲಿ ವಿವರಿಸಲಾಗಿದೆ.

ಸ್ಯೋನಾ ಪೃಥಿವಿ ಭವಾನೃಕ್ಷರಾ ನಿವೇಶನೀ । ಯಚ್ಛಾ ನಃ ಶರ್ಮ ಸಪ್ರಥಃ ॥೧೫॥

ಪದಾರ್ಥ:- ಈ [ಪೃಥಿವೀ] ಅತ್ಯಂತ ವಿಶಾಲವಾದ ಭೂಮಿಯು [ಸ್ಯೋನಾ] ಅತ್ಯಂತ ಸುಖದಾತ್ರಿಯೂ [ಅನೃಕ್ಷರಾ] ಸಕಲ ದುಃಖ, ಕಂಟಕ, ಬಾಧೆಗಳಿಂದ ರಹಿತವಾಗಿಯೂ [ನಿವೇಶನೀ ಭವ] ಜೀವಮಾತ್ರರಿಗೆ ನಿವಾಸಿಸಲು ಯೋಗ್ಯವಾಗಿಯೂ ಆಗಿದೆ. ಹಾಗೂ [ನಃ] ನಮ್ಮೆಲ್ಲರಿಗೆ [ಸಪ್ರಥಃ] ಸಕಲ ಸುಖ ಭೋಗ ಪದಾರ್ಥಗಳಿಂದ ಯುಕ್ತವಾಗಿಯೂ ಆಗಿದ್ದು [ಶರ್ಮ ಯಚ್ಛ] ಸರ್ವಾಶ್ರಯದಾತ್ರಿಯೂ ಆಗಿದೆ.

ಭಾವಾರ್ಥ:- ಅತ್ಯಂತ ವಿಶಾಲವಾದ ಈ ಭೂಮಿ, ಅತ್ಯಂತ ಸುಖದಾತ್ರಿಯೂ, ಸಕಲ ದುಃಖಕ್ಲೇಶ ಕಂಟಕ ಮತ್ತು ಬಾಧೆಗಳಿಂದ ರಹಿತವಾಗಿಯೂ, ಜೀವಮಾತ್ರರಿಗೆ ನಿವಾಸಿಸಲು ಯೋಗ್ಯವೂ ಆಗಿದೆ. ಈ ಭೂಮಿಯು ಸಕಲ ಸುಖ-ಸಂಪತ್ತು ಮತ್ತು ಭೋಗ ಪದಾರ್ಥಗಳಿಂದ ಕೂಡಿದ್ದು ಎಲ್ಲರಿಗೂ ಆಶ್ರಯವನ್ನು ಕೊಡುತ್ತದೆ.

ಪರಮಾತ್ಮನು ರಚಿಸಿದ ಸೃಷ್ಟಿಯಲ್ಲಿ ಯಾವುದೇ ರೀತಿಯ ದುಃಖಕ್ಲೇಶ ಬಾಧೆ, ಕಷ್ಟಗಳಿಲ್ಲ. ಭಗವಂತನು ಸುಖಸ್ವರೂಪನೂ ಆನಂದ ಸ್ವರೂಪನೂ ಆಗಿದ್ದಾನೆ. ಅವನಲ್ಲೇನಿದೆಯೋ ಅದನ್ನೇ ಎಲ್ಲರಿಗೂ ಕೊಟ್ಟಿದ್ದಾನೆ. ಕಷ್ಟ ದುಃಖಗಳೆಲ್ಲವು ಮನುಷ್ಯನ ಸ್ವಯಂಕೃತಾಪರಾಧದಿಂದ ಲಭ್ಯವಾಗುತ್ತವೆ. "ಅವಶ್ಯಮೇವ ಭೋಕ್ತವ್ಯಂ ಯತ್ಕರ್ಮಶುಭಾಶುಭಮ್" ಪ್ರತಿಯೊಬ್ಬ ಮಾನವನು ತಾನು ಮಾಡಿದ ಶುಭ ಮತ್ತು ಅಶುಭ ಕರ್ಮಗಳಿಗನುಗುಣವಾಗಿ ಫಲವನ್ನು ಅನುಭವಿಸಲೇಬೇಕು.

ಪೃಥಿವೀ ಮೊದಲಾದ ಪದಾರ್ಥಗಳ ರಚನೆ ಮತ್ತು ಧಾರಣೆ ಮಾಡುವವನು ಯಾರು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅತೋ ದೇವಾ ಅವಂತು ನೋ ಯತೋ ವಿಷ್ಣುರ್ವಿಚಕ್ರಮೇ । ಪೃಥಿವ್ಯಾಃ ಸಪ್ತ ಧಾಮಭಿಃ ॥೧೬॥

ಪದಾರ್ಥ:- [ಯತಃ] ಯಾವ ಅನಾದಿ ಹಾಗೂ ನಿತ್ಯಕಾರಣದ ಮೂಲಕ [ವಿಷ್ಣುಃ] ಈ ಚರಾಚರಾ ಜಗತ್ತಿನಲ್ಲಿ ಸರ್ವವ್ಯಾಪಕನಾದ ಪರಮಾತ್ಮನು [ಪೃಥಿವ್ಯಾಃ] ವಿಸ್ತಾರವಾದ ಪೃಥ್ವಿಯಿಂದ ಆರಂಭಗೊಂಡು [ಸಪ್ತ] ಏಳು ಅರ್ಥಾತ್ ಭೂಹು, ಭುವಃ, ಸ್ವಃ, ಮಹಃ, ಜನಃ, ತಪಃ, ಸತ್ಯಗಳೆಂಬ ಲೋಕಗಳನ್ನು ಅಂದರೆ ನೆಲೆಗಳವರೆಗೆ [ಧಾಮಭಿಃ] ಯಾವುವು ಸಕಲ ಪದಾರ್ಥಗಳನ್ನು ಧಾರಣ ಮಾಡುತ್ತವೆಯೋ ಅವುಗಳೊಂದಿಗೆ [ವಿಚಕ್ರಮೇ] ಸೃಷ್ಟಿಸುತ್ತಾನೆ. [ಅತಃ] ಅವುಗಳ ಮೂಲಕವೇ [ದೇವಾಃ] ವಿದ್ವಾಂಸರು [ನಃ] ನಮ್ಮೆಲ್ಲರನ್ನು [ಅವಂತು] = ಅವಗಮಯಂತು- ಸಕಲ ಲೋಕ ಲೋಕಾಂತರಗಳ ಹಾಗೂ ಪದಾರ್ಥಗಳ ಜ್ಞಾನವನ್ನು ಬೋಧಿಸುತ್ತಾರೆ.

ಭಾವಾರ್ಥ:- ಸಂಪೂರ್ಣ ಚರಾಚರ ಜಗತ್ತಿನಲ್ಲಿ ಸರ್ವವ್ಯಾಪಕನಾದ ಪರಮಾತ್ಮನು ಅನಾದಿ ಹಾಗೂ ನಿತ್ಯಕಾರಣದ ಮೂಲಕ ಪೃಥ್ವಿಯಿಂದ ಆರಂಭಗೊಂಡು ಭೂಹು, ಭುವಃ, ಸ್ವಃ, ಮಹಃ, ಜನಃ, ತಪಃ, ಸತ್ಯಗಳೆಂಬ ಏಳು ಲೋಕಗಳನ್ನು ಹಾಗೂ ಯಾವುವು ಸಕಲ ಪದಾರ್ಥಗಳನ್ನು ಧಾರಣ ಮಾಡಿಕೊಳ್ಳುತ್ತವೆಯೋ ಅವುಗಳೊಂದಿಗೆ ಸೃಷ್ಟಿಸುತ್ತಾನೆ. ವಿದ್ವಾಂಸರು ನಮ್ಮೆಲ್ಲರಿಗೆ ಸಕಲ ಲೋಕ ಲೋಕಾಂತರಗಳ ಹಾಗೂ ಸಕಲ ಪದಾರ್ಥಗಳ ಬಗ್ಗೆ ಉತ್ತಮವಾದ ಜ್ಞಾನವನ್ನು ಬೋಧಿಸುತ್ತಾರೆ.

ಪರಮಾತ್ಮನು ಈ ಜಗತ್ತನ್ನು ಯಾವ ರೀತಿ ರಚಿಸಿದ್ದಾನೆ ಎಂಬುದನ್ನು ಹೇಳಲಾಗಿದೆ.

ಇದಂ ವಿಷ್ಣುರ್ವಿ ಚಕ್ರಮೇ ತ್ರೇಧಾ ನಿ ದಧೇ ಪದಮ್। ಸಮೂಳ್ಹಮಸ್ಯ ಪಾಂಸುರೇ ॥೧೭॥

ಪದಾರ್ಥ:- [ವಿಷ್ಣುಃ] ಸಂಪೂರ್ಣ ಚರಾಚರ ಜಗತ್ತಿನಲ್ಲಿ ವ್ಯಾಪಕನಾದ ಯಾವ ಪರಮಾತ್ಮನಿದ್ದಾನೋ, ಯಾವನು ಸರ್ವಾಂತರ್ಯಾಮಿಯೂ ಆಗಿದ್ದಾನೋ ಆ ಪರಮಾತ್ಮನು [ತ್ರೇಧಾ] ತ್ರಿವಿಧಪ್ರಕಾರವಾದ ಅಂದರೆ ಸಕಲ ಜೀವರಾಶಿಗಳು ಜೀವಿಸಿಕೊಂಡು ಭೋಗಿಸುವಂತಹ ಭೂಲೋಕ, ಸೂಕ್ಷ್ಮಾತಿಸೂಕ್ಷ್ಮ ಕಣಗಳು ತುಂಬಿ ಕೊಂಡಿರುವ ಹಾಗೂ ವಾಯುಮಂಡಲದಿಂದ ಆವೃತವಾದ ಅಂತರಿಕ್ಷಲೋಕ, ಸಕಲ ಜಗತ್ತಿಗೆ ಬೆಳಕನ್ನು ಬೀರುವಂತಹ, ಸೂರ್ಯ ಚಂದ್ರ ನಕ್ಷತ್ರಾದಿಗಳು ಇರುವಂತಹ ದ್ಯುಲೋಕ ಈ ತ್ರಿವಿಧ [ಇದಂ ಪದಂ] ಈ ದೃಶ್ಯಮಾನ ಜಗತ್ತನ್ನು [ವಿಚಕ್ರಮೇ] ವಿಶಿಷ್ಟವಾದ ರೀತಿಯಲ್ಲಿ ಅತ್ಯಂತ ಆಶ್ಚರ್ಯಜನಕವಾದ ರೀತಿಯಲ್ಲಿ ಸೃಷ್ಟಿಸಿದ್ದಾನೆ. [ಅಸ್ಯ] ಈ ತ್ರಿವಿಧ ಜಗತ್ತಿನ [ಸಮೂಳ್ಹಂ] ಯಾವುದು ಕೇವಲ ಸತ್ಯಜ್ಞಾನದಿಂದ ಹಾಗೂ ತರ್ಕದ ಮೂಲಕ ಮಾತ್ರ ತಿಳಿಯಲು ಸಾಧ್ಯವಿದೆಯೋ ಅಂತರಿಕ್ಷದಲ್ಲಿರುವ [ಪಾಂಸುರೇ] ಪರಮಾಣುಗಳಿಂದ ಕೂಡಿದ ಅತ್ಯಂತ ಸೂಕ್ಷ್ಮ ಜಗತ್ತನ್ನು [ನಿದಧೇ] ಆಕಾಶದಲ್ಲಿ ಧಾರಣಮಾಡಿದ್ದಾನೆ. ಸಕಲ ಮಾನವ ಮಾತ್ರರಿಂದ ಅಂತಹ ಸೃಷ್ಟಿಕರ್ತನಾದ ಪರಮಾತ್ಮನೇ ಉಪಾಸಿಸಲ್ಪಡಬೇಕು. ಅರ್ಥಾತ್ ಸಕಲ ಮಾನವರು ಸೃಷ್ಟಿಕರ್ತನಾದ ಏಕಮಾತ್ರ ಪರಮಾತ್ಮನನ್ನು ಉಪಾಸಿಸಬೇಕು.

ಭಾವಾರ್ಥ:- ಯಾವ ಪರಮಾತ್ಮನು ಸಂಪೂರ್ಣ ಚರಾಚರ ಜಗತ್ತಿನಲ್ಲಿ ವ್ಯಾಪಕನಾಗಿದ್ದಾನೋ, ಯಾವ ಪರಮಾತ್ಮನು ಸರ್ವಾಂತರ್ಯಾಮಿಯೂ ಆಗಿದ್ದಾನೋ, ಆ ಪರಮಾತ್ಮನು, ತ್ರಿವಿಧ ಪ್ರಕಾರವಾದ ಅರ್ಥಾತ್ ಸಕಲ ಜೀವಮಾತ್ರರು ಜೀವಿಸಿಕೊಂಡು, ತಮ್ಮ ತಮ್ಮ ಭೋಗಗಳನ್ನು ಭೋಗಿಸುತ್ತಾರೋ, ಅಂತಹ ಭೂಲೋಕವನ್ನು, ಸೂಕ್ಷ್ಮಾತಿಸೂಕ್ಷ್ಮ ಕಣಗಳು ತುಂಬಿಕೊಂಡಂತಹ ಹಾಗೂ ವಾಯು ಮಂಡಲದಿಂದ ಆವೃತವಾದ ಅಂತರಿಕ್ಷ ಮತ್ತು ಸಕಲ ಜಗತ್ತನ್ನು ತಮ್ಮ ಬೆಳಕಿನಿಂದ ಬೆಳಗುವಂತಹ ಸೂರ್ಯ ಚಂದ್ರ ನಕ್ಷತ್ರಾದಿಗಳು ಇರುವ ದ್ಯುಲೋಕ. ಈ ತ್ರಿವಿಧ ದೃಶ್ಯಮಾನ ಅರ್ಥಾತ್ ಕಣ್ಣಿಗೆ ಕಾಣಿಸುವಂತಹ ಜಗತ್ತನ್ನು ವಿಶೇಷವಾದ ರೀತಿಯಲ್ಲಿ ಸೃಷ್ಟಿಸಿದ್ದಾನೆ. ಆ ಪರಮಾತ್ಮನು ಸಕಲ ಪರಮಾಣುಗಳನ್ನು ಆಕಾಶದಲ್ಲಿ ಅತ್ಯಂತ ವ್ಯವಸ್ಥಿತವಾದ ರೀತಿಯಲ್ಲಿ ಇಟ್ಟುಕೊಂಡು, ಅವೆಲ್ಲವನ್ನೂ ಧಾರಣ ಮಾಡಿಕೊಂಡಿದ್ದಾನೆ. ಭಗವಂತನ ಈ ಸೃಷ್ಟಿಯನ್ನು ಸತ್ಯವಾದ ಜ್ಞಾನದ ಮೂಲಕ ಹಾಗೂ ತರ್ಕದ ಮೂಲಕ ಮಾತ್ರ ತಿಳಿದುಕೊಳ್ಳಲು ಸಾಧ್ಯ. ಅಂತಹ ಸೃಷ್ಟಿಕರ್ತನಾದ ಏಕಮಾತ್ರ ಪರಮಾತ್ಮನನ್ನೇ ಮಾನವ ಮಾತ್ರರು ಉಪಾಸಿಸಬೇಕು. ಆ ಸರ್ವೋಪಾಸ್ಯನಾದ ಪರಮಾತ್ಮನನ್ನು ಹೊರತು ಬೇರೆ ಯಾರ ಉಪಾಸನೆಯನ್ನೂ ಮಾಡಬಾರದು. ಏಕೆಂದರೆ ಆ ಪರಮಾತ್ಮನಿಗೆ ಸರಿಸಮನಾದವರಾಗಲೀ ಅಥವಾ ಅವನಿಗಿಂತ ಮಿಗಿಲಾದವರಾಗಲೀ ಯಾರೂ ಇಲ್ಲ.

ನಂತರ ಆ ಸರ್ವವ್ಯಾಪಕ ಪರಮಾತ್ಮನು ಏನೇನನ್ನು ಮಾಡುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತ್ರೀಣಿ ಪದಾ ವಿ ಚಕ್ರಮೇ ವಿಷ್ಣುರ್ಗೋಪಾ ಅದಾಭ್ಯಃ । ಅತೋ ಧರ್ಮಾಣಿ ಧಾರಯನ್ ॥೧೮॥

ಪದಾರ್ಥ:- [ಅದಾಭ್ಯಃ] ಅವಿನಾಶಿಯಾದ ಕಾರಣ ಯಾರಿಂದಲೂ ಹಾಗೂ ಯಾವುದರ ಮೂಲಕವೂ, ಹಿಂಸಿಸಲು ಅಥವಾ ನಾಶವನ್ನು ಮಾಡಲು ಅಸಾಧ್ಯವಾದ, [ಗೋಪಾ] ಸಂಪೂರ್ಣ ಚರಾಚರ ಜಗತ್ತನ್ನು ರಕ್ಷಿಸುವ [ವಿಷ್ಣುಃ] ಸರ್ವವ್ಯಾಪಕನಾದ ಪರಮಾತ್ಮನು [ಧಾರಯನ್] ಸಂಪೂರ್ಣ ಬ್ರಹ್ಮಾಂಡವನ್ನೇ ಧಾರಣ ಮಾಡುತ್ತಾ [ತ್ರೀಣಿ ಪದಾ] ಪ್ರಾಣಿಮಾತ್ರರು ತಿಳಿಯಬೇಕಾದ ಮತ್ತು ಪ್ರಾಪ್ತಮಾಡಿಕೊಳ್ಳಬೇಕಾದ ತ್ರಿವಿಧ ವ್ಯವಹಾರಗಳನ್ನು ಅರ್ಥಾತ್ ಸೃಷ್ಟಿ- ಸ್ಥಿತಿ- ಪ್ರಳಯ ಎಂಬ ತ್ರಿವಿಧ ಕಾರ್ಯಗಳ [ವಿಚಕ್ರಮೇ] ವಿಧಾನವನ್ನು ಮಾಡುತ್ತಾನೆ. [ಅತಃ] ಈ ವಿಧಾನದಿಂದಲೇ, ಈ ವ್ಯವಸ್ಥೆಯ ಮೂಲಕವೇ ಸಕಲ ಪದಾರ್ಥಗಳು ಉತ್ಪನ್ನವಾಗಿ ತಮ್ಮ [ಧರ್ಮಾಣಿ] ಧರ್ಮಗಳನ್ನು ಪಾಲಿಸುತ್ತವೆ. ಅರ್ಥಾತ್ ಸಂಪೂರ್ಣ ಬ್ರಹ್ಮಾಂಡದಲ್ಲಿರುವ ಸಕಲ ಪದಾರ್ಥಗಳು ಜಡವಾಗಲಿ, ಚೇತನವಾಗಲೀ, ಪರಮಾತ್ಮನ ವಿಧಾನಕ್ಕೆ ಅನುಗುಣವಾಗಿ ತಮ್ಮ ಕರ್ತವ್ಯದ ಪಾಲನೆಯನ್ನು ಮಾಡುತ್ತವೆ.

ಭಾವಾರ್ಥ:- ಅಜರ, ಅಮರ ಮತ್ತು ಅವಿನಾಶಿಯಾದ ಪರಮಾತ್ಮನನ್ನು ಯಾರಿಂದಲೂ ಹಿಂಸಿಸಲು ಮತ್ತು ನಾಶ ಮಾಡಲು ಸಾಧ್ಯವಿಲ್ಲ. ಯಾರು ನಿಜವಾಗಿ ಅವಿನಾಶಿಯಾಗಿದ್ದಾನೋ, ಅವನು ಮಾತ್ರ ಸಂಪೂರ್ಣ ಚರಾಚರ ಜಗತ್ತಿನ ರಕ್ಷಣೆಯನ್ನೂ, ಪಾಲನೆಯನ್ನೂ ಮಾಡಲು ಸಾಧ್ಯ. ಸ್ವತಃ ಬೇರೆಯವರ ರಕ್ಷಣೆಯಲ್ಲಿದ್ದು ಜನ್ಮ ಮೃತ್ಯುವಿನ ಬಂಧನದಲ್ಲಿ ಸಿಲುಕುವವನು, ಬೇರೆಯವರನ್ನು ರಕ್ಷಿಸಲು ಸಾಧ್ಯವಿಲ್ಲ. ಈ ರೀತಿ ಸಂಪೂರ್ಣ ಜಗತ್ತಿನ ಸಂರಕ್ಷಕನಾದ ಮತ್ತು ಪಾಲಕನಾದ ಪರಮಾತ್ಮನು ಸೃಷ್ಟಿ, ಸ್ಥಿತಿ, ಲಯವೆಂಬ ತ್ರಿವಿಧ ವಿಧಾನವನ್ನು ಮಾಡುತ್ತಾನೆ. ಸಂಪೂರ್ಣ ಬ್ರಹ್ಮಾಂಡದಲ್ಲಿರುವ ಸಕಲ ಪದಾರ್ಥಗಳು, ಸಕಲ ಜೀವರಾಶಿಗಳು ಈ ವ್ಯವಸ್ಥೆಯಲ್ಲಿಯೇ ಇದ್ದು ತಮ್ಮ ತಮ್ಮ ಕರ್ತವ್ಯಗಳ ಪಾಲನೆಯನ್ನು ಮಾಡುತ್ತವೆ. ಯಾರೂ ಕೂಡ ಅವನ ವಿಧಾನವನ್ನಾಗಲೀ, ಸಂವಿಧಾನವನ್ನಾಗಲೀ ಮೀರಲು ಸಾಧ್ಯವಿಲ್ಲ.

ಪುನಃ ವ್ಯಾಪಕ ಪರಮಾತ್ಮನು ಮಾಡಿರುವ ಕರ್ಮಗಳನ್ನು ಮನುಷ್ಯನಾದವನು ನಿತ್ಯವೂ ಅವಲೋಕಿಸಲಿ ಎಂದಿಲ್ಲಿ ಹೇಳಲಾಗಿದೆ.

ವಿಷ್ಣೋಃ ಕರ್ಮಾಣಿ ಪಶ್ಯತ ಯತೋ ವ್ರತಾನಿ ಪಸ್ಪಶೇ । ಇಂದ್ರಸ್ಯ ಯುಜ್ಯಃ ಸಖಾ ॥೧೯॥

ಪದಾರ್ಥ:- ಓ ಮನನಶೀಲರಾದ ಮಾನವರೇ! ಸತ್ಯಾಸತ್ಯವನ್ನು, ಒಳಿತುಕೆಡುಕನ್ನು ಸರಿಯಾಗಿ ಅರಿತುಕೊಂಡು, ಕರ್ಮಗಳನ್ನು ಮಾಡುವ ಕರ್ಮಶೀಲ ಮಾನವರೇ! ನೀವೆಲ್ಲರೂ ಯಾವನು **[ಇಂದ್ರಸ್ಯ]** ಜೀವಾತ್ಮನ **[ಯುಜ್ಯಃ]** ಸದಾಕಾಲ ಅತ್ಯಂತ ನಿಕಟದಲ್ಲಿಯೂ, ಒಳಗೂ ಹೊರಗೂ ವಿದ್ಯಮಾನನಾಗಿದ್ದು, ಯಾವುದನ್ನು ಅಪೇಕ್ಷಿಸದೇ ಸದಾಕಾಲ ಕಲ್ಯಾಣವನ್ನೇ ಮಾಡುವ, ಅಭ್ಯುದಯ ಮತ್ತು ನಿಃಶ್ರೇಯಸ್ಸನ್ನೇ ಬಯಸುವ **[ಸಖಾ]** ಅತ್ಯಂತ ಆತ್ಮೀಯನಾದ ಮಿತ್ರನಾಗಿದ್ದಾನೋ, **[ಯತೋವ್ರತಾನಿ ಪಸ್ಪಶೇ]** ಯಾವನ ವ್ಯವಸ್ಥೆಯಲ್ಲಿದ್ದು ಮಾನವ ಮಾತ್ರರು ಸತ್ಯ, ನ್ಯಾಯ ಮತ್ತು ಧರ್ಮದ ಪಾಲನೆಯನ್ನು ಮಾಡುವ ಸಂಕಲ್ಪವನ್ನು ಮಾಡುತ್ತಾ ಅದರಂತೆ ಆಚರಣೆಯನ್ನು ಮಾಡುತ್ತಾರೋ ಅಂತಹ **[ವಿಷ್ಣೋಃ]** ಸರ್ವಜಗನ್ನಿಯಾಮಕನಾದ ಪರಮಾತ್ಮನ **[ಕರ್ಮಾಣಿ ಪಶ್ಯತ]** ಸೃಷ್ಟಿ, ಸ್ಥಿತಿ ಮತ್ತು ಪ್ರಳಯವೆಂಬ ತ್ರಿವಿಧ ಕರ್ಮ ಹಾಗೂ ಅವುಗಳ ವ್ಯವಸ್ಥೆಯನ್ನು ನೋಡಿ ಚೆನ್ನಾಗಿ ಅರಿತುಕೊಳ್ಳಿರಿ.

ಭಾವಾರ್ಥ:- ಸತ್ಯಾಸತ್ಯವನ್ನು ಅರಿತುಕೊಂಡು, ಒಳಿತುಕೆಡುಕನ್ನು ಸರಿಯಾದ ರೀತಿಯಲ್ಲಿ ತಿಳಿದುಕೊಂಡು, ಒಳಿತಾದುದನ್ನೇ ಮಾಡುವ ಕರ್ಮಶೀಲ ಮಾನವರೇ! ನೀವೆಲ್ಲರೂ, ಯಾವನು ಜೀವಾತ್ಮನ ಅತ್ಯಂತ ನಿಕಟದಲ್ಲಿ ಮಾತ್ರವಲ್ಲ, ಸರ್ವವ್ಯಾಪಕ ಮತ್ತು ಸರ್ವಾಂತರ್ಯಾಮಿಯಾದ ಕಾರಣ, ಒಳಗೂ ಹೊರಗೂ ಸದಾಕಾಲ ವಿದ್ಯಮಾನನಾಗಿದ್ದು, ಯಾವುದನ್ನೂ ಅಪೇಕ್ಷಿಸದೇ, ಸದಾಕಲ್ಯಾಣವನ್ನೇ ಮಾಡುವ ಹಾಗೂ ಕಲ್ಯಾಣವನ್ನೇ ಬಯಸುವ, ಮತ್ತು ಯಾವನ ವ್ಯವಸ್ಥೆಯಲ್ಲಿದ್ದು, ಮಾನವ ಮಾತ್ರರು ಸತ್ಯ, ನ್ಯಾಯ ಮತ್ತು ಧರ್ಮದ ಪಾಲನೆಯನ್ನು ಮಾಡುವ ಸಂಕಲ್ಪವನ್ನು ಮಾಡುತ್ತಾ ಅದರಂತೆಯೇ ಆಚರಣೆಯನ್ನು ಮಾಡುತ್ತಾರೋ, ಅಂತಹ ಸರ್ವ ಜಗನ್ನಿಯಾಮಕನಾದ ಪರಮಾತ್ಮನ ಸೃಷ್ಟಿ, ಸ್ಥಿತಿ ಮತ್ತು ಪ್ರಳಯವೆಂಬ ತ್ರಿವಿಧ ಕರ್ಮಗಳನ್ನು ಹಾಗೂ ಅವುಗಳ

ಸ್ವರೂಪವನ್ನು ನೋಡಿ ಸರಿಯಾಗಿ ಅರಿತುಕೊಳ್ಳಿರಿ ಮತ್ತು ಸದಾಕಾಲ ಅವನ ನಿಯಮದಲ್ಲಿಯೇ, ವ್ಯವಸ್ಥೆಯಲ್ಲಿಯೇ ಅರ್ಥಾತ್ ಅವನ ನಿಯಮಕ್ಕೆ ಅನುಗುಣವಾಗಿ ನಡೆಯಿರಿ.

ಆ ಪರಬ್ರಹ್ಮನು ಹೇಗಿದ್ದಾನೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ತದ್ ವಿಷ್ಣೋಃ ಪರಮಂ ಪದಂ ಸದಾ ಪಶ್ಯಂತಿ ಸೂರಯಃ । ದಿವೀವ ಚಕ್ಷುರಾತತಮ್ ॥೨೦॥

ಪದಾರ್ಥ:- [ಸೂರಯಃ] ಧಾರ್ಮಿಕ ಗುಣವುಳ್ಳವರೂ, ಮೇಧಾವಿಗಳೂ, ಪುರುಷಾರ್ಥಿಗಳೂ ಹಾಗೂ ಸದಾ ಪರಮಾತ್ಮನ ಅನನ್ಯ ಭಕ್ತಿಯಿಂದ ಸ್ತುತಿ ಮತ್ತು ಉಪಾಸನೆಯನ್ನು ಮಾಡುವವರೂ ಆದ ವಿದ್ವಾಂಸರು [ದಿವಿ] ಸೂರ್ಯನ ಪ್ರಕಾಶದಲ್ಲಿ [ಆತತಮ್ ಚಕ್ಷುರಿವ] ಪ್ರಾಣಿಮಾತ್ರರು ಯಾವರೀತಿ ತೆರೆದ ನೇತ್ರಗಳ ಮೂಲಕ ಸಕಲ ಪದಾರ್ಥಗಳನ್ನು ಸ್ಪಷ್ಟವಾಗಿ ನೋಡುತ್ತಾರೋ ಅದೇ ರೀತಿ [ತದ್ ವಿಷ್ಣೋಃ] ಆ ಸರ್ವವ್ಯಾಪಕ, ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನ ವಿಸ್ತೃತವಾದ [ಪರಮಂ] ಸರ್ವೋತ್ಕೃಷ್ಟವಾದ [ಪದಂ] ಎಲ್ಲರೂ ಅಷ್ಟಾಂಗಯೋಗದ ಮೂಲಕ ತಿಳಿದುಕೊಂಡು, ಪ್ರಾಪ್ತಮಾಡಿಕೊಳ್ಳಬೇಕಾದ ಯಾವ ಪದವಿದೆಯೋ ಅದನ್ನು [ಸದಾ ಪಶ್ಯಂತಿ] ಯಾವಾಗಲೂ ತಮ್ಮ ಅಂತಃಕರಣದಲ್ಲಿಯೇ ಆತ್ಮನ ಮೂಲಕ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ.

ಭಾವಾರ್ಥ:- ಪ್ರಾಣಿಮಾತ್ರರು ಹಗಲಿನಲ್ಲಿ ಸೂರ್ಯನ ಪ್ರಕಾಶದಲ್ಲಿ ತೆರೆದ ನೇತ್ರಗಳ ಮೂಲಕ ಸಕಲ ಪದಾರ್ಥಗಳನ್ನು ಸ್ಪಷ್ಟವಾಗಿ ನೋಡುತ್ತಾರೋ, ಅದೇ ರೀತಿ ಹಾಗೂ ಅಷ್ಟೇ ಸ್ಪಷ್ಟವಾಗಿ ಧಾರ್ಮಿಕಗುಣವುಳ್ಳವರೂ, ಧಾರ್ಮಿಕ ಪ್ರವೃತ್ತಿಯುಳ್ಳವರೂ, ಅತ್ಯಂತ ಮೇಧಾವಿಗಳೂ, ಸದಾ ಶ್ರೇಷ್ಠಕರ್ಮಗಳಲ್ಲಿ ನಿರತರಾದವರೂ, ಪುರುಷಾರ್ಥಿಗಳೂ, ಅತ್ಯಂತ ಅನನ್ಯ ಭಕ್ತಿಯಿಂದ ಭಗವಂತನ ಸ್ತುತಿ ಮತ್ತು ಉಪಾಸನೆಯನ್ನು ಮಾಡುವ ವಿದ್ವಾಂಸರು, ಸರ್ವವ್ಯಾಪಕನಾದ ಸಚ್ಚಿದಾನಂದ ಸ್ವರೂಪನಾದ ಪರಮಾತ್ಮನ ಸರ್ವೋತ್ಕೃಷ್ಟವಾದ ಎಲ್ಲರೂ ಅಷ್ಟಾಂಗಯೋಗದ ಮೂಲಕ ತಿಳಿದುಕೊಂಡು ಪ್ರಾಪ್ತಮಾಡಿಕೊಳ್ಳಬೇಕಾದ, ಪದವನ್ನು ಎಂದರೆ ಅವನ ಅತ್ಯಂತ ತೇಜಸ್ವಿಯಾದ ಸ್ವರೂಪವನ್ನು ತಮ್ಮ ಅಂತಃಕರಣದಲ್ಲಿಯೇ ಆತ್ಮನ ಮೂಲಕ ನೋಡುತ್ತಾರೆ. ಅರ್ಥಾತ್ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ.

ಎಂತಹ ಮನುಷ್ಯರು ಉಕ್ತ ಪದವನ್ನು ಹೊಂದುತ್ತಾರೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ತದ್ ವಿಪ್ರಾಸೋ ವಿಪನ್ಯವೋ ಜಾಗೃವಾಂಸಃ ಸಮಿಂಧತೇ । ವಿಷ್ಣೋರ್ಯತ್ ಪರಮಂ ಪದಮ್ ॥೨೧॥

ಪದಾರ್ಥ:- [ವಿಷ್ಣೋಃ] ಸರ್ವವ್ಯಾಪಕನೂ, ಸಚ್ಚಿದಾನಂದ ಸ್ವರೂಪನೂ ಆದ ಪರಮಾತ್ಮನ **[ಯತ್ ಪರಮಂ ಪದಂ]** ಯಾವ ಸರ್ವೋತ್ಕೃಷ್ಟವಾದ ಹಾಗೂ ಸರ್ವೋತ್ತಮಗುಣ ಮತ್ತು ಪ್ರಕಾಶಗಳಿಂದ ಕೂಡಿದ, ಎಲ್ಲರೂ ಪ್ರಾಪ್ತ ಮಾಡಿಕೊಳ್ಳಬೇಕಾದ ಪದವಿದೆಯೋ, ಸ್ವರೂಪವಿದೆಯೋ **[ತತ್]** ಅದನ್ನು [ವಿಪನ್ಯವಃ] ಪರಮಾತ್ಮನ ವಿವಿಧ ಗುಣಗಳನ್ನು ಸ್ತುತಿಸುತ್ತಾ ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, [ಜಾಗೃವಾಂಸಃ] ಅಜ್ಞಾನ ಮತ್ತು ಅಧರ್ಮಾಚರಣೆ ಮೊದಲಾದ ನಿದ್ರೆ ಅರ್ಥಾತ್ ಮೋಹ ಮತ್ತು ಮಾಯೆಯನ್ನು ತ್ಯಜಿಸಿ, ಸದಾ ಸತ್ಯಜ್ಞಾನ, ಧರ್ಮಾಚರಣೆಯ ಮೂಲಕ ಶ್ರೇಷ್ಠಕರ್ಮಗಳಲ್ಲಿ ನಿರತರಾಗಿರುವ ಜಾಗೃತರಾದ [ವಿಪ್ರಾಸಃ] ಮೇಧಾವಿ ಮತ್ತು ಸಜ್ಜನರಾದ ವಿದ್ವಾಂಸರು **[ಸಮಿಂಧತೇ]** ತಮ್ಮ ಅಂತಃಕರಣದಲ್ಲಿಯೇ ಪ್ರಾಪ್ತಮಾಡಿಕೊಳ್ಳುತ್ತಾರೆ. ಪರಮಾತ್ಮನ ಜ್ಯೋತಿಯನ್ನು ತಮ್ಮ ಅಂತಃಕರಣದಲ್ಲಿಯೇ ಪ್ರಕಾಶಿಸುತ್ತಾರೆ.

ಭಾವಾರ್ಥ:- ಯಾವ ಮಾನವರು ಅವಿದ್ಯೆ, ಅಧರ್ಮಾಚರಣೆ, ಅನೀತಿಯುಕ್ತ ವ್ಯವಹಾರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮೋಹ ಮತ್ತು ಮಾಯೆಗೆ ವಶೀಭೂತರಾಗಿ ಅದರಿಂದ ಪ್ರಾಪ್ತವಾಗುವ ಸುಖವೆಂಬ ನಿದ್ರೆಯನ್ನು

ಸರ್ವಥಾ ತ್ಯಜಿಸಿ, ಸತ್ಯಜ್ಞಾನ, ಧರ್ಮಾಚರಣೆಯ ಮೂಲಕ ಶ್ರೇಷ್ಠ ಕರ್ಮಗಳಲ್ಲಿ ನಿರತರಾಗಿದ್ದು ಜಾಗೃತರಾಗುತ್ತಾರೋ ಅಂತಹ ಮೇಧಾವಿಗಳೂ, ಸಜ್ಜನರೂ ಕ್ರಿಯಾಶೀಲರೂ ಆದ ವಿದ್ವಾಂಸರು ಸರ್ವವ್ಯಾಪಕನೂ, ಸಚ್ಚಿದಾನಂದ ಸ್ವರೂಪನೂ ಆದ ಪರಮಾತ್ಮನ ಸರ್ವೋತ್ಕೃಷ್ಟವಾದ, ಸರ್ವೋತ್ತಮ ಗುಣಗಳ ಸ್ತುತಿಯನ್ನು ಮಾಡುತ್ತಾ, ಅವನ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೋ ಅಂತಹ ಶ್ರೇಷ್ಠ ವಿದ್ವಾಂಸರು, ತಮ್ಮ ಅಂತಃಕರಣದಲ್ಲಿಯೇ ಪರಮಾತ್ಮನ ಜ್ಯೋತಿಯನ್ನು ಬೆಳಗಿಸುತ್ತಾರೆ. ಪರಮಾತ್ಮನ ಭರ್ಗವನ್ನು ತಮ್ಮ ಅಂತಃಕರಣದಲ್ಲಿಯೇ ಪ್ರಕಾಶಿಸುತ್ತಾರೆ.

ಪೂರ್ವೋಕ್ತವಾದ ೨೧ನೇ ಸೂಕ್ತದೊಂದಿಗೆ ಈ ೨೨ನೇ ಸೂಕ್ತವು ಸಂಗತಿಯಾಗುತ್ತದೆ ಎಂಬುದನ್ನು ಗಮನಿಸಬೇಕು.

ಇಪ್ಪತ್ತೆರಡನೆಯ ಸೂಕ್ತ ಸಮಾಪ್ತ

ಸೂಕ್ತ ೨೩

ಮಂತ್ರಸಂಖ್ಯೆ ೨೪ । ಋಷಿಃ - ಮೇಧಾತಿಥಿಃ ಕಾಣ್ವಃ । ದೇವತಾ - ೧ ವಾಯುಃ, ೨-೩ ಇಂದ್ರವಾಯೂ, ೪-೬ ಮಿತ್ರಾವರುಣೌ, ೭-೯ ಇಂದ್ರೋ ಮರುತ್ವಾನ್, ೧೦-೧೨ ವಿಶ್ವೇದೇವಾಃ, ೧೩-೧೫ ಪೂಷಾ, ೧೬-೨೨ (೨೩ ಪೂರ್ವಾರ್ಧ) ಆಪಃ, (೨೩ ಉತ್ತರಾರ್ಧ) ೨೪ ಅಗ್ನಿಃ । ಛಂದಃ - ೧-೮ ಗಾಯತ್ರೀ, ೧೯ ಪುರಉಷ್ಣಿಕ್, ೨೦, ೨೨-೨೪ ಅನುಷ್ಟುಪ್, ೨೧ ಪ್ರತಿಷ್ಠಾ । ಸ್ವರಃ-೧-೧೮, ೨೧ ಷಡ್ಜಃ, ೧೯ ಋಷಭಃ, ೨೦, ೨೨-೨೪ ಗಾಂಧಾರಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ವಾಯುವಿನ ಗುಣಗಳನ್ನು ಪ್ರಕಾಶಿಸಲಾಗುತ್ತದೆ.

ತೀವ್ರಾಃ ಸೋಮಾಸ ಆ ಗಹ್ಯಾಶೀರ್ವಂತಃ ಸುತಾ ಇಮೇ । ವಾಯೋ ತಾನ್ ಪ್ರಸ್ಥಿತಾನ್ ಪಿಬ ॥೧॥

ಪದಾರ್ಥಃ:- [ಇಮೇ ತೀವ್ರಾಃ] ಯಾವ ಈ ಅತ್ಯಂತ ತೀಕ್ಷ್ಣ ವೇಗ ಅರ್ಥಾತ್ ಶೀಘ್ರವೇಗದಿಂದ ಚಲಿಸುವ [ಆಶೀರ್ವಂತಃ] ಯಾರ ಕಾಮನೆಗಳು ಅತ್ಯಂತ ಪ್ರಶಂಸನೀಯವಾಗಿವೆಯೋ [ಸುತಾಃ] ಇಂತಹ ಉತ್ಪನ್ನವಾದ ಯಾವ [ಸೋಮಾಸಃ] ಸಕಲ ಪದಾರ್ಥಗಳಿವೆಯೋ ಅವೆಲ್ಲವನ್ನೂ [ವಾಯೋ] ವಾಯು [ಆ ಗಹಿ] ಪೂರ್ಣವಾಗಿ ಪ್ರಾಪ್ತಿಸುತ್ತದೆ. ಅದೇ ವಾಯು [ತಾನ್ ಪ್ರಸ್ಥಿತಾನ್] ಚಲಿಸುವ ಪದಾರ್ಥಗಳನ್ನು [ಪಿಬ] ತನ್ನ ಒಳಗೆ ಸೇರಿಸಿಕೊಳ್ಳುತ್ತದೆ ಮತ್ತು ಯಥಾಸ್ಥಾನದಲ್ಲಿ ತಲುಪಿಸುತ್ತದೆ.

ಭಾವಾರ್ಥಃ:- ಈ ಮಂತ್ರದಲ್ಲಿ ಜಡ ಪದಾರ್ಥಗಳ ಮೇಲೆ ಚೇತನತೆಯ ಅಧ್ಯಾರೋಪವನ್ನು ಮಾಡಿದೆ. ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಉತ್ಪನ್ನವಾದ ಸಕಲ ಪದಾರ್ಥಗಳು ಅತ್ಯಂತ ಪ್ರಶಂಸನೀಯ ಕಾಮನೆಗಳುಳ್ಳವಾಗಿವೆ. ಪ್ರಾತಃಕಾಲ ಸೂರ್ಯೋದಯವಾದೊಡನೆ ಕೋಟ್ಯಾಂತರ ಮೈಲುಗಳಷ್ಟು ದೂರವಿರುವ ಭೂಮಿಯನ್ನು ಬೆಳಗಲು ಹಾಗೂ ಸಕಲ ಜೀವರಾಶಿಗೆ ಚೈತನ್ಯವನ್ನೂ, ಶಕ್ತಿಯನ್ನೂ ಕೊಡುವ ಸದಿಚ್ಛೆಯಿಂದ, ಸೂರ್ಯಕಿರಣಗಳು ಅತ್ಯಂತ ತೀಕ್ಷ್ಣ ವೇಗದಿಂದ ಧಾವಿಸಿ ಬರುತ್ತವೆ. ಕೇವಲ ಎಂಟು ನಿಮಿಷಗಳಲ್ಲಿಯೇ ಭೂಮಿಯನ್ನು ತಲುಪುತ್ತವೆ. ಅಷ್ಟು ವೇಗದಿಂದ ಬರುವ ಸೂರ್ಯನ ಕಿರಣಗಳನ್ನು ವಾಯುವು ತನ್ನೊಡಲಲ್ಲಿ ಸೇರಿಸಿಕೊಂಡು, ವಿನಾಶಕಾರಿ ಶಕ್ತಿಯನ್ನು ನಾಶಮಾಡಿ, ಭೂಮಿಯನ್ನು ತಲುಪುವಂತೆ ಮಾಡುತ್ತದೆ. ಅದೇ ರೀತಿ ಬಿಸಿಲ ಬೇಗೆಯಿಂದ ಬಳಲಿ, ಒಣಗಿದ ಭೂಮಿಗೆ ತಂಪೆರೆಯುವ ಸದಿಚ್ಛೆಯುಳ್ಳ ಮೋಡಗಳನ್ನು ಚಲಿಸುವಂತೆ ಮಾಡಿ, ಎಲ್ಲಾ ಕಡೆಯಲ್ಲಿಯೂ ಮಳೆ ಬರುವಂತೆ ಮಾಡುತ್ತದೆ. ಹೂವಿನಲ್ಲಿರುವ ಪರಾಗಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸುವಂತೆ ಮಾಡಿ, ಕಾಯಿ ಹಣ್ಣುಗಳುಂಟಾಗುವಂತೆ ಮಾಡುತ್ತದೆ. ಈ ರೀತಿ ಭಗವಂತನ ಸೃಷ್ಟಿಯಲ್ಲಿ, ಸಕಲ ಪದಾರ್ಥಗಳು, ಸದಿಚ್ಛೆಯಿಂದ ಕೂಡಿದುದಾಗಿವೆ. ಆದುದರಿಂದಲೇ ಪ್ರಕೃತಿಗಿಂತ ಮಿಗಿಲಾದ ಪಾಠಶಾಲೆ ಬೇರೆ ಇಲ್ಲ. ಮಾನವರು ಪ್ರತಿಯೊಂದು ಪದಾರ್ಥಗಳ ಗುಣಗಳನ್ನು ಅರಿತುಕೊಂಡು, ಅವುಗಳಿಂದ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕು.

ಪುನಃ ಪರಸ್ಪರ ಸಂಯೋಗಗೊಳ್ಳುವ ಪದಾರ್ಥಗಳ ಪ್ರಕಾಶವನ್ನಿಲ್ಲಿ ಬೀರಲಾಗಿದೆ.

ಉಭಾ ದೇವಾ ದಿವಿಸ್ಪೃಶೇಂದ್ರವಾಯೂ ಹವಾಮಹೇ । ಅಸ್ಯ ಸೋಮಸ್ಯ ಪೀತಯೇ ॥೨॥

ಪದಾರ್ಥಃ:- ನಾವೆಲ್ಲರೂ [ಅಸ್ಯ ಸೋಮಸ್ಯ] ಸಕಲ ಪದಾರ್ಥಗಳು ಅರ್ಥಾತ್ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಸಕಲ ಭೋಗ ಪದಾರ್ಥಗಳನ್ನು [ಪೀತಯೇ] ಅತ್ಯಂತ ಉತ್ತಮವಾದ ರೀತಿಯಲ್ಲಿ ಭೋಗಿಸುವುದಕ್ಕೋಸ್ಕರ, ಹಾಗೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಸಕಲ ಪ್ರಕಾಶಮಯ ಸೂರ್ಯ ಚಂದ್ರ ನಕ್ಷತ್ರಾದಿಗಳನ್ನೂ ಮತ್ತು ಗ್ರಹೋಪಗ್ರಹಗಳ ಜ್ಞಾನವನ್ನು ಪಡೆಯುವುದಕ್ಕೋಸ್ಕರ [ದಿವಿಸ್ಪೃಶಾ] ದ್ಯುಲೋಕವನ್ನೇ ಸ್ಪರ್ಶಿಸುವಂತಹ ಅತ್ಯಂತ ತೀವ್ರಗತಿಯಿಂದ ಚಲಿಸುವ ವಿಮಾನಾದಿಗಳನ್ನು ಚಲಿಸುವಂತೆ ಮಾಡಲು [ದೇವೋ ಉಭಾ ಇಂದ್ರವಾಯೂ] ದಿವ್ಯಶಕ್ತಿಗಳುಳ್ಳ ಅಗ್ನಿ ಮತ್ತು ವಾಯು, ಅಗ್ನಿ ಎಂದರೆ ಭೌತಿಕಾಗ್ನಿ, ಸೂರ್ಯನ ಶಕ್ತಿ ವಿದ್ಯುತ್ತು ಹಾಗೂ ಅಗ್ನಿಯ ವಿವಿಧ ರೂಪಗಳು ಯಾವುದು ಅತ್ಯಂತ ಉಪಯುಕ್ತವಾಗುತ್ತದೆಯೋ ಯಾವುದೇ ವಿಧಾನದಿಂದ ಪ್ರಾಪ್ತ ಮಾಡಿಕೊಂಡ ಅಗ್ನಿ ಶಕ್ತಿಯನ್ನು ಮತ್ತು ವಾಯುವನ್ನು [ಹವಾಮಹೇ] ಅತ್ಯಂತ ಉತ್ತಮವಾದ ರೀತಿಯಲ್ಲಿ ಪ್ರಾಪ್ತಮಾಡಿಕೊಂಡು, ಬಳಸಿಕೊಳ್ಳುತ್ತೇವೆ.

ದ್ವಿತೀಯಾರ್ಥಃ:- [ಅಸ್ಯ ಸೋಮಸ್ಯ ಪೀತಯೇ] ಈ ಶಾಶ್ವತವಾದ ಆನಂದದ ಪ್ರಾಪ್ತಿಗೋಸ್ಕರ [ಉಭಾ ದೇವಾ] ದಿವ್ಯಗುಣಗಳುಳ್ಳ ಎರಡು [ಇಂದ್ರವಾಯೂ] ಇಂದ್ರ ಎಂದರೆ ಜೀವಾತ್ಮ, ವಾಯು = ವಾತಿಗಚ್ಛತಿ ಇತಿ ವಾಯು - ಅತ್ಯಂತ ಗತಿಶೀಲವಾದ ಮನಸ್ಸು, ಇವೆರಡನ್ನೂ [ದಿವಿಸ್ಪೃಶಾ] ಅತ್ಯಂತ ಪ್ರಕಾಶದಿಂದ ಕೂಡಿದ, ಸಕಲ ಸೂರ್ಯಚಂದ್ರ ನಕ್ಷತ್ರಾದಿಗಳನ್ನೂ ಪ್ರಕಾಶಿಸುವ, ಪರಮಾತ್ಮನ ಪ್ರಕಾಶವನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ [ಹವಾಮಹೇ] ಸತ್ಯಜ್ಞಾನ ಹಾಗೂ ಅಷ್ಟಾಂಗ ಯೋಗ ಸಾಧನೆಯ ಮೂಲಕ, ಅತ್ಯಂತ ಪವಿತ್ರ ಮತ್ತು ಪರಿಶುದ್ಧವನ್ನಾಗಿ ಮಾಡಿ ಪರಮಾತ್ಮನಿಗೆ ಅರ್ಪಿಸುತ್ತೇವೆ.

ಭಾವಾರ್ಥಃ:- ಪರಮಾತ್ಮನು ಸೃಷ್ಟಿಸಿದ ಸಕಲ ಪದಾರ್ಥಗಳನ್ನು ಉತ್ತಮವಾದ ರೀತಿಯಲ್ಲಿ ಭೋಗಿಸುವುದಕ್ಕೋಸ್ಕರ ಹಾಗೂ ಸೂರ್ಯ ಚಂದ್ರ ನಕ್ಷತ್ರ, ಗ್ರಹೋಪಗ್ರಹಗಳ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ ಆಕಾಶದಲ್ಲಿ ತೀವ್ರಗತಿಯಲ್ಲಿ ಚಲಿಸುವಂತಹ ವಿಮಾನ, ರಾಕೇಟ್ ಮೊದಲಾದುವುಗಳನ್ನು ಅತ್ಯಂತ ಉತ್ತಮವಾದ ರೀತಿಯಲ್ಲಿ ಚಲಿಸುವಂತೆ ಮಾಡಲು, ಅಗ್ನಿ ಅರ್ಥಾತ್ ಅಗ್ನಿಶಕ್ತಿಯನ್ನು ಅದನ್ನು ಯಾವುದೇ ವಿಧಾನದಿಂದಲೂ ತೈಲ, ಸೂರ್ಯನಶಕ್ತಿ, ವಿದ್ಯುತ್ ಅಥವಾ ಇನ್ನಾವುದೇ ವಿಧಾನದಿಂದ ಪ್ರಾಪ್ತ ಮಾಡಿಕೊಂಡಂತಹ ಅಗ್ನಿಯ ಶಕ್ತಿಯನ್ನು ಹಾಗೂ ವಾಯುವನ್ನು ಉತ್ತಮವಾದ ರೀತಿಯಲ್ಲಿ ಪ್ರಾಪ್ತಮಾಡಿಕೊಂಡು ಸೂಕ್ತವಾದ ರೀತಿಯಲ್ಲಿ ಬಳಸಿಕೊಳ್ಳುತ್ತೇವೆ.

ಶಾಶ್ವತವಾದ ಆನಂದದ ಪ್ರಾಪ್ತಿಗೋಸ್ಕರ, ಜನ್ಮಮೃತ್ಯುವಿನ ಬಂಧನದಿಂದ ಮುಕ್ತರಾಗಿ, ಅನಂತಕಾಲದ ತನಕ ಪರಮಾತ್ಮನ ಸಾನ್ನಿಧ್ಯದಲ್ಲಿರುವುದಕ್ಕೋಸ್ಕರ, ಜೀವಾತ್ಮನನ್ನು ಮತ್ತು ಅತ್ಯಂತ ತೀವ್ರಗತಿಯಿಂದ ಚಲಿಸುವ ಮನಸ್ಸನ್ನು ಅತ್ಯಂತ ಪವಿತ್ರವನ್ನಾಗಿಯೂ, ಪರಿಶುದ್ಧವನ್ನಾಗಿಯೂ ಮಾಡಿ ಸೂರ್ಯ ಚಂದ್ರ ನಕ್ಷತ್ರಾದಿಗಳನ್ನೂ ಪ್ರಕಾಶಿಸುವ, ಸರ್ವಪ್ರಕಾಶಸ್ವರೂಪನಾದ ಪರಮಾತ್ಮನಿಗೆ ಅರ್ಪಿಸುತ್ತೇವೆ.

ಪುನಃ ಅವು ಯಾವ ಪ್ರಕಾರದ್ದು ಎಂದು ಹೇಳಲಾಗುತ್ತದೆ.

ಇಂದ್ರವಾಯೂ ಮನೋಜುವಾ ವಿಪ್ರಾ ಹವಂತ ಊತಯೇ । ಸಹಸ್ರಾಕ್ಷಾ ಧಿಯಸ್ಪತೀ ॥೩॥

ಪದಾರ್ಥಃ:- ವಿದ್ವಾಂಸರು [ಊತಯೇ] ಕ್ರಿಯಾಸಿದ್ಧಿಗಾಗಿ ಅರ್ಥಾತ್ ಸಕಲ ಕಾರ್ಯಸಾಧನೆಗಾಗಿ [ಸಹಸ್ರಾಕ್ಷಾ] ಯಾವುದರ ಮೂಲಕ ಅಸಂಖ್ಯಾತ ಕರ್ಮಗಳನ್ನು ಮಾಡಬಹುದೋ, ಅಥವಾ ಯಾವುದರ ಮೂಲಕ ಅಸಂಖ್ಯಾತ

ಪದಾರ್ಥಗಳನ್ನು ಪ್ರಾಪ್ತ ಮಾಡಿಕೊಳ್ಳಬಹುದೋ, ತಯಾರಿಸಬಹುದೋ ಅಂತಹ [ಧಿಯಸ್ಪತೀ] ಶಿಲ್ಪವಿದ್ಯೆಯನ್ನು ಪಾಲಿಸುವ, ಪೋಷಿಸುವ [ಮನೋಜುವಾ] ಮನಸ್ಸಿನಂತೆ ಅತ್ಯಂತ ತೀವ್ರಗತಿಯುಳ್ಳ [ಇಂದ್ರವಾಯೂ] ವಿದ್ಯುತ್ ಶಕ್ತಿ ಹಾಗೂ ವಾಯುವನ್ನು [ಹವಂತೆ] ಅತ್ಯಂತ ಉತ್ತಮವಾದ ರೀತಿಯಲ್ಲಿ ಪ್ರಾಪ್ತ ಮಾಡಿಕೊಳ್ಳುತ್ತಾರೆ. ವಿದ್ವಾಂಸರಂತೆ, ಶಿಲ್ಪವಿದ್ಯೆಯಲ್ಲಿ ನಿಪುಣರಾದ ಶಿಲ್ಪಿಗಳು, ತಂತ್ರಜ್ಞಾನವನ್ನು ಬಲ್ಲ ಇಂಜಿನಿಯರರು ಯಾವ ರೀತಿ ವಿದ್ಯುತ್ತನ್ನು ಮತ್ತು ವಾಯುವಿನ ಶಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೋ ಅದೇ ರೀತಿ ಇತರರೂ ಕೂಡ ಏಕೆ ಪ್ರಾಪ್ತ ಮಾಡಿಕೊಳ್ಳಬಾರದು?

ಭಾವಾರ್ಥ:- ವಿದ್ವಾಂಸರು, ಶಿಲ್ಪಿಗಳು, ತಂತ್ರಜ್ಞಾನವನ್ನು ಬಲ್ಲ ಇಂಜಿನಿಯರರು ಯಾವ ರೀತಿ, ತಮ್ಮ ಕಾರ್ಯ ಸಾಧನೆಗೋಸ್ಕರ ವಿದ್ಯುಚ್ಛಕ್ತಿಯನ್ನೂ, ಗಾಳಿಯನ್ನೂ ಉತ್ತಮವಾದ ರೀತಿಯಲ್ಲಿ ಬಳಸಿಕೊಂಡು, ಸಕಲ ಕಾರ್ಯಸಿದ್ಧಿಯನ್ನು ಮಾಡಿಕೊಳ್ಳುತ್ತಾರೋ ಅಸಂಖ್ಯಾತ ವಸ್ತುಗಳನ್ನು ನಿರ್ಮಾಣ ಮಾಡುತ್ತಾರೋ ಅದೇ ರೀತಿ ಇತರರೂ ಏಕೆ ಮಾಡಬಾರದು? ನಾವು ಎಲ್ಲದಕ್ಕೂ, ವಿದ್ಯುತ್ ಮಂಡಳಿಯನ್ನು ಅವಲಂಬಿಸಿಕೊಳ್ಳದೇ, ನಮ್ಮ ನಮ್ಮ ಮನೆಗಳಲ್ಲಿಯೇ ವಿದ್ಯುಚ್ಛಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಸೂರ್ಯನ ಶಾಖದಿಂದಲೂ ಗೋಬರ್ ಗ್ಯಾಸಿನಿಂದಲೂ ಪೆಟ್ರೋಲ್ ಡೀಸಿಲ್ ಅಥವಾ ಚಿಮಿಣಿ ಎಣ್ಣೆ ಮೊದಲಾದುವುಗಳಿಂದಲೂ, ಯಾವುದೇ ವಿಧದಲ್ಲಿ ವಿದ್ಯುಚ್ಛಕ್ತಿಯನ್ನು ಪ್ರಾಪ್ತ ಮಾಡಿಕೊಂಡು ಸೂಕ್ತವಾದ ರೀತಿಯಲ್ಲಿ ಬಳಸಿಕೊಳ್ಳಬೇಕು.

ಈ ವಿದ್ಯೆಯನ್ನು ಪ್ರಾಪ್ತಿಸಿಕೊಂಡವು ಪ್ರಾಣ ಮತ್ತು ಉದಾನಗಳಾಗಿವೆ ಎಂಬುದನ್ನಿಲ್ಲಿ ವರ್ಣಿಸಲಾಗಿದೆ.

ಮಿತ್ರಂ ವಯಂ ಹವಾಮಹೇ ವರುಣಂ ಸೋಮಪೀತಯೇ । ಜಜ್ಞಾನಾ ಪೂತದಕ್ಷಸಾ ॥೪॥

ಪದಾರ್ಥ:- ಪುರುಷಾರ್ಥಿಗಳಾದ, ಯೋಗಸಾಧನೆಯನ್ನು ಮಾಡುವ ನಾವೆಲ್ಲರೂ **[ಸೋಮಪೀತಯೇ]** ಸಂಪೂರ್ಣ ಆರೋಗ್ಯ ಮತ್ತು ದೀರ್ಘಾಯುಷ್ಯವನ್ನು ಪ್ರಾಪ್ತ ಮಾಡಿಕೊಂಡು ತನ್ಮೂಲಕ ಸುಖ ಮತ್ತು ಆನಂದವನ್ನು ಪ್ರಾಪ್ತಮಾಡಿಕೊಳ್ಳುವುದಕ್ಕೋಸ್ಕರ **[ಪೂತದಕ್ಷಸಾ]** ಯಾವುದರ ಮೂಲಕ ಪವಿತ್ರವಾದ ಶರೀರ ಮತ್ತು ಆತ್ಮಬಲವು ಪ್ರಾಪ್ತವಾಗುತ್ತದೆಯೋ ಹಾಗೂ **[ಜಜ್ಞಾನಾ]** ಯಾವುದರ ಮೂಲಕ ವಿಶೇಷವಾದ ಜ್ಞಾನ ಅಥವಾ ಮೇಧಾಬುದ್ಧಿಯು ಪ್ರಾಪ್ತವಾಗುತ್ತದೆಯೋ ಅಂತಹ **[ಮಿತ್ರಾವರುಣೌ]** ಮಿತ್ರ=ಬಾಹ್ಯಾಭ್ಯಂತರಸ್ಥ ಪ್ರಾಣವಾಯುವನ್ನು ಮತ್ತು ಉದಾನ ವರುಣ=ಪ್ರಾಣಶಕ್ತಿಯನ್ನು ಊರ್ಧ್ವಕ್ಕೆ ಕೊಂಡೊಯ್ಯುವ ಉದಾನವಾಯುವನ್ನು **[ಹವಾಮಹೇ]** ಉತ್ತಮವಾದ ರೀತಿಯಲ್ಲಿ ಪ್ರಾಪ್ತ ಮಾಡಿಕೊಂಡು ಧಾರಣ ಮಾಡಿಕೊಳ್ಳುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ಪ್ರಾಣಾಯಾಮದ ಮೂಲಕ ಸಂಪೂರ್ಣ ಆರೋಗ್ಯ, ದೀರ್ಘವಾದ ಆಯುಷ್ಯ, ಉತ್ತಮವಾದ ಶಾರೀರಿಕ ಬಲ ಹಾಗೂ ಪವಿತ್ರವಾದ ಆತ್ಮಿಕ ಬಲವು ಪ್ರಾಪ್ತವಾಗುತ್ತದೆ ಎಂಬುದನ್ನು ತಿಳಿಯಪಡಿಸಲಾಗಿದೆ. ಪುರುಷಾರ್ಥಿಗಳು ಯೋಗಸಾಧನೆಯನ್ನು ಮಾಡುವ ನಾವೆಲ್ಲರೂ, ಸಂಪೂರ್ಣ ಆರೋಗ್ಯ, ಸುದೀರ್ಘ ಆಯುಷ್ಯ, ಉತ್ತಮವಾದ ಮತ್ತು ಶಾರೀರಿಕ ಹಾಗೂ ಆತ್ಮಿಕ ಬಲ, ಮೇಧಾಬುದ್ಧಿ ಇವೆಲ್ಲವುಗಳ ಪ್ರಾಪ್ತಿಗಾಗಿ ಬಾಹ್ಯಾಭ್ಯಂತರಸ್ಥ ಪ್ರಾಣವಾಯುವನ್ನು ಹಾಗೂ ಪ್ರಾಣಶಕ್ತಿಯನ್ನು ಊರ್ಧ್ವಗಾಮಿಯನ್ನಾಗಿ ಮಾಡುವ ಉದಾನ ವಾಯುವನ್ನು ಉತ್ತಮವಾದ ರೀತಿಯಲ್ಲಿ ಪ್ರಾಪ್ತ ಮಾಡಿಕೊಂಡು ಧಾರಣ ಮಾಡಿಕೊಳ್ಳುತ್ತೇವೆ.

ಆಭ್ಯಂತರ ಕುಂಭಕದಿಂದ ಆಯುಷ್ಯವು ವರ್ಧಿಸುತ್ತದೆ ಮತ್ತು ಶರೀರವು ಆರೋಗ್ಯವಂತವಾಗುತ್ತದೆ. ಬಾಹ್ಯ ಕುಂಭಕದಿಂದ ಸ್ಮರಣಶಕ್ತಿಯು ವರ್ಧಿಸುತ್ತದೆ ಹಾಗೂ ಮೇಧಾಬುದ್ಧಿಯು ಪ್ರಾಪ್ತವಾಗುತ್ತದೆ. ಪ್ರಾಣಶಕ್ತಿಯನ್ನು ಉದಾನವಾಯುವಿನ ಮೂಲಕ ಊರ್ಧ್ವಗಾಮಿಯನ್ನಾಗಿ ಮಾಡಿದಾಗ, ಆತ್ಮಿಕ ಬಲ ಪ್ರಾಪ್ತವಾಗುತ್ತದೆ. ಇವೆಲ್ಲವೂ ಯೌಗಿಕ ಕ್ರಿಯೆಗಳು. ಸುಯೋಗ್ಯ ಗುರುವಿನ ಮಾರ್ಗದರ್ಶನವನ್ನು ಪಡೆದು, ಪ್ರಾಣಾಯಾಮವನ್ನು ಅತ್ಯುತ್ತಮವಾದ ರೀತಿಯಲ್ಲಿ ಮಾಡಬೇಕು.

ಪುನಃ ಅವು ಯಾವ ಪ್ರಕಾರದ್ದಾಗಿವೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಋತೇನ ಯಾವೃತಾವೃಧಾ-ವೃತಸ್ಯ ಜ್ಯೋತಿಷಸ್ಪತೀ । ತಾ ಮಿತ್ರಾವರುಣಾ ಹುವೇ ॥೫॥

ಪದಾರ್ಥ:- ನಾನು [ಯೌ] ಯಾವುದು [ಋತೇನ] ಪರಮಾತ್ಮನಿಂದಲೇ ಸೃಷ್ಟಿಸಲ್ಪಟ್ಟು ಧಾರಣ ಮಾಡಿಕೊಂಡಂತಹ [ಋತಾವೃಧೌ] ಜಲವನ್ನು ವರ್ಧಿಸಲು ಮತ್ತು [ವೃತಸ್ಯ] ಯಥಾರ್ಥ ಸ್ವರೂಪ [ಜ್ಯೋತಿಷಃ] ಜ್ಯೋತಿಯ, ಪ್ರಕಾಶದ [ಪತೀ] ಪಾಲಕರಾದ [ತಾ ಮಿತ್ರಾವರುಣೌ] ಆ ಸೂರ್ಯ ಮತ್ತು ವಾಯುವನ್ನು [ಹುವೇ] ಪ್ರಾಪ್ತ ಮಾಡಿಕೊಳ್ಳುತ್ತೇನೆ. ಅರ್ಥಾತ್ ಸೂರ್ಯನ ಶಕ್ತಿಯನ್ನು ಮತ್ತು ವಾಯುವಿನ ಶಕ್ತಿಯನ್ನು ಪ್ರಾಪ್ತಮಾಡಿಕೊಳ್ಳುತ್ತೇನೆ.

ಭಾವಾರ್ಥ:- ಸೂರ್ಯ ಮತ್ತು ವಾಯುವಿನ ಹೊರತಾಗಿ ಜಲ ಮತ್ತು ಜ್ಯೋತಿ ಅರ್ಥಾತ್ ಪ್ರಕಾಶವು ಉತ್ಪನ್ನವಾಗಲು ಸಾಧ್ಯವಿಲ್ಲ. ಪರಮಾತ್ಮನು ಸೃಷ್ಟಿಸದಿದ್ದಲ್ಲಿ ಸೂರ್ಯ ಮತ್ತು ವಾಯುವಿನ ಉತ್ಪತ್ತಿ ಅಸಂಭವ. ಇವೆರಡಿಲ್ಲದಿದ್ದರೆ, ಮನುಷ್ಯರ ಯಾವ ವ್ಯವಹಾರಗಳೂ ನಡೆಯಲಾರವು.

ಪುನಃ ಅವು ಏನು ಮಾಡುತ್ತವೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ

ವರುಣಃ ಪ್ರಾವಿತಾ ಭುವನ್ಮಿತ್ರೋ ವಿಶ್ವಾಭಿರೂತಿಭಿಃ । ಕರತಾಂ ನಃ ಸುರಾಧಸಃ ॥೬॥

ಪದಾರ್ಥ:- ಯಾವ ರೀತಿ ಅತ್ಯುತ್ತಮವಾದ ರೀತಿಯಲ್ಲಿ ಹಾಗೂ ಕ್ರಮಬದ್ಧವಾಗಿ ಸೇವಿಸಲ್ಪಟ್ಟ **[ವರುಣಃ]** ವಾಯುವು **[ವಿಶ್ವಾಭಿಃ ಊತಿಭಿಃ]** ಸಂಪೂರ್ಣ ಆರೋಗ್ಯದ ರಕ್ಷಣೆಯನ್ನು ಮಾಡುತ್ತಾ **[ಪ್ರಾವಿತಾ ಭುವತ್]** ಸರ್ವವಿಧದಲ್ಲಿ ಸುಖವನ್ನೇ ಉಂಟುಮಾಡುತ್ತದೆಯೋ, ಯಾವ ರೀತಿ **[ಮಿತ್ರಃ]** ಸೂರ್ಯನು **[ನೋ]** ನಮ್ಮೆಲ್ಲರನ್ನೂ **[ಸುರಾಧಸಃ]** ಶ್ರೇಷ್ಠ ಜ್ಞಾನಿಗಳನ್ನಾಗಿಯೂ ಐಶ್ವರ್ಯವಂತರನ್ನಾಗಿಯೂ **[ಕರತಾಂ]** ಮಾಡುತ್ತಾನೆಯೋ, ಇವೆರಡರ ಮೂಲಕ ವಿದ್ವಾಂಸರು, ಯೋಗಿಗಳು, ವಿಜ್ಞಾನಿಗಳು ತಮ್ಮ ಹಲವು ವಿಧದ ಕಾರ್ಯಗಳನ್ನು ಸಾಧಿಸಿಕೊಳ್ಳುತ್ತಾರೆಯೋ, ಅದೇ ರೀತಿ ನಾವೆಲ್ಲರೂ ಕೂಡ ಏಕೆ ಪ್ರಯೋಜನವನ್ನು ಪಡೆದುಕೊಳ್ಳಬಾರದು?

ಭಾವಾರ್ಥ:- ಕ್ರಮಬದ್ಧವಾಗಿ ಮತ್ತು ಉತ್ತಮವಾದ ರೀತಿಯಲ್ಲಿ ಮಾಡಿದ ಪ್ರಾಣಾಯಾಮದ ಮೂಲಕ ನಮ್ಮೆಲ್ಲರ ಆರೋಗ್ಯದ ಸಂಪೂರ್ಣ ರಕ್ಷಣೆಯಾಗುತ್ತದೆ. ಇದರಿಂದ ನಮಗೆ ಸಂಪೂರ್ಣ ಸುಖದ ಪ್ರಾಪ್ತಿಯೂ ಆಗುತ್ತದೆ. 'ಶರೀರಮಾದ್ಯಂ ಖಲು ಧರ್ಮಸಾಧನಮ್.' - ಸಕಲ ಧರ್ಮ ಕರ್ಮ ಮತ್ತು ಪುರುಷಾರ್ಥಗಳನ್ನು ಮಾಡಲು ಶರೀರವೇ ಅತ್ಯುತ್ತಮ ಸಾಧನವಾಗಿದೆ. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬ ಈ ನಾಲ್ಕು ಪುರುಷಾರ್ಥಗಳನ್ನು ಆರೋಗ್ಯವಂತವಾದ ಶರೀರವುಳ್ಳ ಮಾನವನು ಮಾತ್ರ ಮಾಡಲು ಸಾಧ್ಯ. ಆದುದರಿಂದ ಮಾನವನು ಮೊದಲು ಪ್ರಾಣಾಯಾಮ ಆಸನಾದಿಗಳ ಮೂಲಕ ತನ್ನ ಶರೀರವನ್ನು ರಕ್ಷಿಸಿಕೊಂಡು ಸುದೃಢವನ್ನಾಗಿ ಮಾಡಿಕೊಳ್ಳಬೇಕು. 'ನಾಯಮಾತ್ಮಾ ಬಲಹೀನೇನ ಲಭ್ಯಃ' ನಿರ್ಬಲವಾದವನಿಗೆ ಎಂದಿಗೂ ಆತ್ಮಶಕ್ತಿ ಪ್ರಾಪ್ತವಾಗುವುದಿಲ್ಲ.

ಅದೇ ರೀತಿ ಸೂರ್ಯನಲ್ಲಿರುವ ಅಪಾರಶಕ್ತಿಯನ್ನು ಉತ್ತಮವಾದ ರೀತಿಯಲ್ಲಿ ಬಳಸಿಕೊಂಡು ಸಂಪತ್ತನ್ನು ಪ್ರಾಪ್ತಮಾಡಿಕೊಳ್ಳಬಹುದು.

ಈಗ ವಾಯುವಿನ ಸಹಚಾರಿಯಾದ ಇಂದ್ರನ ಗುಣಗಳನ್ನು ಹೇಳಲಾಗಿದೆ

ಮರುತ್ವಂತಂ ಹವಾಮಹ ಇಂದ್ರಮಾ ಸೋಮಪೀತಯೇ । ಸಜೂರ್ಗಣೇನ ತೃಂಪತು ॥೭॥

ಪದಾರ್ಥ:- ಓ ಮನನಶೀಲಮಾನವರೇ! ಯಾವ ರೀತಿ ಈ ಜಗತ್ತಿನಲ್ಲಿ ನಾವೆಲ್ಲರೂ [ಸೋಮಪೀತಯೇ] ಸಕಲ ಸುಖ ಸೌಲಭ್ಯಗಳ ಪ್ರಾಪ್ತಿಗಾಗಿ [ಮರುತ್ವಂತಂ] ವಾಯುವಿನ ಸಂಬಂಧದಿಂದ ಅರ್ಥಾತ್ ವಾಯುವಿನ

ಮೂಲಕ **[ಇಂದ್ರಂ]** ವಿದ್ಯುತ್ತನ್ನು **[ಹವಾಮಹೇ]** ಪ್ರಾಪ್ತ ಮಾಡಿಕೊಳ್ಳುತ್ತೇವೆಯೋ, ಯಾವುದು **[ಸಜೂಃ ಗಣೇನ]** ಸಕಲ ಪದಾರ್ಥಗಳಿಗೆ, ಸಕಲ ವಸ್ತುಗಳಿಗೆ, ಸಕಲ ಪ್ರಾಣಿ ಮಾತ್ರರಿಗೆ ಸಮಾನವಾಗಿ ಪ್ರಾಪ್ತವಾಗುತ್ತದೆಯೋ ಅಂತಹ ಬೀಸುವ ಗಾಳಿಯ ಮೂಲಕ ಪ್ರಾಪ್ತವಾದ ವಿದ್ಯುತ್ತು ನಮ್ಮೆಲ್ಲರನ್ನು **[ಆ ತೃಂಪತು]** ಎಲ್ಲಾ ವಿಧದಲ್ಲಿ ತೃಪ್ತಿಗೊಳಿಸಲಿ.

ಭಾವಾರ್ಥ:- ಓ ಮನನಶೀಲ ಮಾನವರೇ! ನಾವೆಲ್ಲರೂ ಸಕಲ ಸುಖ ಸೌಲಭ್ಯಗಳ ಪ್ರಾಪ್ತಿಗಾಗಿ, ವಾಯುವಿನ ಮೂಲಕ, ತೀವ್ರವಾಗಿ ಬೀಸುವ ಗಾಳಿಯ ಮೂಲಕ, ವಿದ್ಯುತ್ತನ್ನು ಪ್ರಾಪ್ತ ಮಾಡಿಕೊಂಡು, ಅದರಿಂದ ಎಲ್ಲಾ ಪ್ರಯೋಜನವನ್ನು ಪಡೆದುಕೊಳ್ಳೋಣ. ಭೂಮಿಯಲ್ಲಿರುವ ಖನಿಜ ಪದಾರ್ಥಗಳಿಗೆ ಒಂದು ಇತಿಮಿತಿ ಇದೆ. ಕಲ್ಲಿದ್ದಲಾಗಲೀ, ಪೆಟ್ರೋಲಾಗಲೀ ಅಥವಾ ಇತರ ಯಾವುದೇ ವಸ್ತುಗಳಾಗಲೀ ಕೆಲವು ವರ್ಷಗಳ ನಂತರ ಸಮಾಪ್ತವಾಗಬಹುದು. ಆಗ ನಮಗೆ ತೀವ್ರವಾದ ವಿದ್ಯುತ್ತಿನ ಕೊರತೆಯಾಗಬಹುದು. ಅದಕ್ಕೋಸ್ಕರವಾಗಿ, ವಾಯುವಿನ ಮೂಲಕ, ಸೂರ್ಯನ ಶಕ್ತಿಯ ಮೂಲಕ ಕೂಡಾ ವಿದ್ಯುತ್ತನ್ನು ಪ್ರಾಪ್ತ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಇದರಿಂದ ವಾತಾವರಣವೂ ಕೆಡುವುದಿಲ್ಲ.

ಈಗ ಆ ಪವನಗಳ ಸಮೂಹ ಯಾವ ರೀತಿಯದಾಗಿದೆ ಎಂಬುದರ ವಿವರಣೆ ಇಲ್ಲಿದೆ

ಇಂದ್ರಜ್ಯೇಷ್ಠಾ ಮರುದ್ಗಣಾ ದೇವಾಸಃ ಪೂಷರಾತಯಃ । ವಿಶ್ವೇ ಮಮ ಶ್ರುತಾ ಹವಮ್ ॥೮॥

ಪದಾರ್ಥ:- **[ಪೂಷರಾತಯ]** ಪರಮಾತ್ಮನ ಮೂಲಕ ಪ್ರಕಾಶವನ್ನೂ, ಶಕ್ತಿಯನ್ನೂ ಪಡೆಯುವ ಪದಾರ್ಥಗಳಲ್ಲಿ **[ಇಂದ್ರಜ್ಯೇಷ್ಠ]** ಸೂರ್ಯನೇ ಅತ್ಯಂತ ಜ್ಯೇಷ್ಠನೂ, ಶ್ರೇಷ್ಠನೂ ಆಗಿದ್ದಾನೆ. ಸೂರ್ಯನು ಪರಮಾತ್ಮನಿಂದ ಪ್ರಕಾಶವನ್ನು ಪಡೆದು ಸಂಪೂರ್ಣ ಜಗತ್ತನ್ನು ಬೆಳಗಿಸುತ್ತಾನೆ. **[ದೇವಾಸಃ]** ದಿವ್ಯಗುಣಗಳುಳ್ಳ **[ವಿಶ್ವೇ ಮರುದ್‌ಗಣಾಃ]** ಸಂಪೂರ್ಣ ಪವನ = ವಾಯುವಿನ ಸಮೂಹವು **[ಮಮ ಹವಂ ಶ್ರುತಾ]** ನನ್ನ ವಿಚಾರವನ್ನು, ನನ್ನ ಮಾತುಗಳನ್ನು ಇತರರಿಗೆ ಕೇಳಿಸುವಂತೆ ಮಾಡುತ್ತದೆ.

ಭಾವಾರ್ಥ:- ಪರಮಾತ್ಮನಿಂದ ಸೃಷ್ಟಿಸಲ್ಪಡುವ ಈ ಚರಾಚರ ಜಗತ್ತಿನಲ್ಲಿ, ಸೂರ್ಯನೇ ಅತ್ಯಂತ ಜ್ಯೇಷ್ಠನೂ ಶ್ರೇಷ್ಠನೂ ಆಗಿದ್ದಾನೆ. ಪರಮಾತ್ಮನಿಂದ ಶಕ್ತಿಯನ್ನೂ, ಪ್ರಕಾಶವನ್ನೂ ಪಡೆದು ಸಂಪೂರ್ಣ ಜಗತ್ತನ್ನು ಬೆಳಗಿಸುತ್ತಾನೆ ಹಾಗೂ ಜಗತ್ತಿಗೆ ಶಕ್ತಿಯನ್ನೂ ಚೈತನ್ಯತೆಯನ್ನೂ ಕೊಡುತ್ತಾನೆ. ಸೂರ್ಯನಿಂದಲೇ ಸಕಲ ಗ್ರಹಗಳು ಬೆಳಗುತ್ತವೆ. ಸೂರ್ಯನ ಗುರುತ್ವಾಕರ್ಷಣ ಶಕ್ತಿಗೆ ಒಳಗಾಗಿ ಸಕಲ ಗ್ರಹಗಳು ಅವನ ಸುತ್ತ ಸುತ್ತುತ್ತಾ ಇರುತ್ತವೆ. ಅದೇ ರೀತಿ ದಿವ್ಯಗುಣಗಳುಳ್ಳ ಈ ವಾಯುವು ಅಂತರಿಕ್ಷದಲ್ಲಿ ವ್ಯಾಪಿಸಿಕೊಂಡು, ನಮ್ಮ ಮಾತುಗಳನ್ನು ಇತರರಿಗೆ ಕೇಳಿಸುವಂತೆ ಮಾಡುತ್ತದೆ. ಶಬ್ದವು ಆಕಾಶದ ಗುಣವಾದರೂ, ಗಾಳಿಯು ಎತ್ತ ಬೀಸುತ್ತದೆಯೋ ಶಬ್ದವು ಕೂಡಾ ಆ ದಿಕ್ಕಿನಲ್ಲಿಯೇ ಕೇಳಿಸುತ್ತದೆ.

ಪುನಃ ಅವುಗಳು ಯಾವ ಪ್ರಕಾರದ್ದಾಗಿವೆ ಎಂಬುದನ್ನು ತಿಳಿಸಲಾಗಿದೆ.

ಹತ ವೃತ್ರಂ ಸುದಾನವ ಇಂದ್ರೇಣ ಸಹಸಾ ಯುಜಾ । ಮಾ ನೋ ದುಃಶಂಸ ಈಶತ ॥೯॥

ಪದಾರ್ಥ:- **[ಸುದಾನವಃ]** ಉತ್ತಮವಾದ ಜಲವು ಪ್ರಾಣಿಮಾತ್ರರಿಗೆ ಪ್ರಾಪ್ತವಾಗುವಂತೆ ಮಾಡುವ ವಾಯುವು **[ಸಹಸಾಯುಜಾ]** ತನ್ನ ಸಾಮರ್ಥ್ಯ, ತನ್ನ ಬಲದೊಂದಿಗೆ **[ಇಂದ್ರೇಣ]** ವಿದ್ಯುತ್ತಿನ ಎಂದರೆ ಮಿಂಚಿನೊಂದಿಗೆ ಸಂಯುಕ್ತವಾಗಿ **[ವೃತ್ರಂ ಹತ]** ಮೇಘವನ್ನು ಛಿನ್ನ ಭಿನ್ನವಾಗಿ ಮಾಡುತ್ತದೆ. **[ನಃ]** ಅವುಗಳ ಮೂಲಕ ಅರ್ಥಾತ್

ಛಿನ್ನ ಭಿನ್ನವಾಗಿ ನಿರಂತರ ಮಳೆಯನ್ನು ಸುರಿಸುವ ಮೇಘಗಳಿಂದ ನಮ್ಮೆಲ್ಲರನ್ನು **[ದುಃಶಂಸ ಮಾ ಈಶತ]** ಎಂದಿಗೂ ದುಃಖಕ್ಕೀಡಾಗುವಂತೆ ಮಾಡದಿರಲಿ.

ಭಾವಾರ್ಥ:- ವಾಯುವು ಪ್ರಾಣಿಮಾತ್ರರಿಗೆ ಜಲವು ಪ್ರಾಪ್ತವಾಗುವಂತೆ ಮಾಡುತ್ತದೆ. ಮಾನ್ಸೂನ್ ಮಾರುತವು ಮುಂಗಾರು ಮಳೆಯನ್ನೂ, ಮುಂಗಾರು ಮಳೆಯಾದ ಬಳಿಕ ಹಿಂಗಾರು ಮಳೆಯನ್ನೂ ಉಂಟು ಮಾಡಿ ಎಲ್ಲರಿಗೂ ಜಲವು ಪ್ರಾಪ್ತವಾಗುವಂತೆ ಮಾಡುತ್ತದೆ. ಈ ಮಾರುತವು ಬೀಸುತ್ತಾ ಇರುವುದರಿಂದ ವಿಶ್ವದಾದ್ಯಂತ ಎಲ್ಲರಿಗೂ ಜಲವು ಪ್ರಾಪ್ತವಾಗುತ್ತದೆ. ಅದರೊಂದಿಗೆ ಮಿಂಚು ಕೂಡಾ ಸೇರಿ ಮೋಡಗಳನ್ನು ಛಿನ್ನ ಭಿನ್ನವನ್ನಾಗಿ ಮಾಡುತ್ತದೆ. ಇಲ್ಲಿ ಇಂದ್ರಶಬ್ದದ ಅರ್ಥ ಮಿಂಚು ಅಥವಾ ಸೂರ್ಯ ಇವೆರಡೂ ಆಗುತ್ತದೆ. ಸೂರ್ಯನ ಪ್ರಖರವಾದ ಕಿರಣಗಳೂ ಮೋಡವನ್ನೂ ಛಿನ್ನ ಭಿನ್ನವಾಗಿ ಮಾಡುತ್ತದೆ. ಈ ರೀತಿ ಛಿನ್ನ ಭಿನ್ನವಾದ ಮೋಡಗಳು ಸರ್ವತ್ರ ವ್ಯಾಪಿಸಿಕೊಂಡು, ಎಲ್ಲರಿಗೂ ಏಕಪ್ರಕಾರವಾಗಿ ಜಲವು ಪ್ರಾಪ್ತವಾಗುವಂತಾಗಲಿ. ಎಲ್ಲಾ ಮಳೆಯು ಒಂದೇ ಕಡೆ ಸುರಿದರೆ, ಒಂದು ಕಡೆ ಅತಿವೃಷ್ಟಿಯು ಇನ್ನೊಂದುಕಡೆ ಅನಾವೃಷ್ಟಿಯೂ ಆಗುತ್ತದೆ. ಇದರಿಂದಾಗಿ ಯಾರಿಗೂ ಸುಖವು ಪ್ರಾಪ್ತವಾಗುವುದಿಲ್ಲ. ಎಲ್ಲರೂ ದುಃಖವನ್ನೇ ಅನುಭವಿಸುತ್ತಾರೆ. ಯಾರಿಗೂ ಇಂತಹ ದುಃಖ ಮತ್ತು ಕ್ಲೇಶ ಎಂದಿಗೂ ಪ್ರಾಪ್ತವಾಗದಿರಲಿ. ವಿದ್ವಾಂಸರು ಮತ್ತು ವಿಜ್ಞಾನಿಗಳು, ವೃಷ್ಟಿ ವಿಜ್ಞಾನವನ್ನು ಉತ್ತಮವಾದ ರೀತಿಯಲ್ಲಿ ಅರಿತುಕೊಂಡು, ಯಾರಿಗೂ ಯಾವುದೇ ರೀತಿಯ ಹಾನಿಯಾಗದಂತೆ ಪ್ರಯತ್ನಿಸಬೇಕು.

ಇಂದು ಅತಿವೃಷ್ಟಿ ಮತ್ತು ಅನಾವೃಷ್ಟಿಯ ಮೂಲಕ ಪ್ರತಿವರ್ಷ ನೂರಾರು ಜನರು, ಕೆಲವೊಮ್ಮೆ ಸಾವಿರಾರು ಮಾತ್ರವಲ್ಲ, ಲಕ್ಷಾಂತರ ಜನರು ತಮ್ಮ ಪ್ರಾಣವನ್ನೇ ಕಳೆದುಕೊಳ್ಳಬೇಕಾದ ಪ್ರಸಂಗವು ಬರುತ್ತದೆ. ಚಂಡಮಾರುತದ ಮೂಲಕ ಉಂಟಾಗುವ ಭಯಾನಕ ಮಳೆ ಪ್ರಳಯ ಸದೃಶ ಪ್ರಸಂಗವನ್ನು ವಿದ್ವಾಂಸರು ಮತ್ತು ವಿಜ್ಞಾನಿಗಳು ವೃಷ್ಟಿ ವಿಜ್ಞಾನದ ಮೇಲೆ ಸಂಶೋಧನೆಯನ್ನು ಅನುಸಂಧಾನವನ್ನು ಮಾಡಿ ದುರ್ಘಟನೆಗಳು ಎಂದಿಗೂ ಸಂಭವಿಸದಂತೆ ಪ್ರಯತ್ನಿಸಬೇಕು. ಪ್ರತಿಯೊಬ್ಬರೂ ತಮ್ಮ ತಮ್ಮ ಮನೆಗಳಲ್ಲಿ ಪ್ರತಿನಿತ್ಯ ಯಜ್ಞವನ್ನು ಮಾಡಿದರೆ, ಇಂತಹ ದುರ್ಘಟನೆಗಳು ಖಂಡಿತವಾಗಿಯೂ ಸಂಭವಿಸಲಿಕ್ಕಿಲ್ಲ. ಯಜ್ಞದಿಂದ ವಾತಾವರಣದಲ್ಲಿ ಸದಾಕಾಲ ಸಮತೋಲನ ಉಂಟಾಗುತ್ತದೆ. ವಾತಾವರಣದಲ್ಲಿ ಸಮತೋಲನ ಉಂಟಾದಾಗ, ಎಂದಿಗೂ ಚಂಡಮಾರುತವು ಬೀಸುವುದಿಲ್ಲ.

ಈಗ ಅವು ಯಾವ ಪ್ರಕಾರದ್ದಾಗಿವೆ ಎಂಬುದನ್ನು ತಿಳಿಸಲಾಗುತ್ತದೆ

ವಿಶ್ವಾನ್ ದೇವಾನ್ ಹವಾಮಹೇ ಮರುತಃ ಸೋಮಪೀತಯೇ । ಉಗ್ರಾ ಹಿ ಪೃಶ್ನಿಮಾತರಃ ॥೧೦॥

ಪದಾರ್ಥ:- ವಿದ್ಯೆಯನ್ನು ಪ್ರಾಪ್ತಮಾಡಿಕೊಳ್ಳಲು ಅಪೇಕ್ಷಿಸುವ, ಇಚ್ಛಿಸುವ ನಾವೆಲ್ಲರೂ **[ಉಗ್ರಾಃ]** ಅತ್ಯಂತ ಸಂವೇದನಶೀಲ ಗುಣಗಳುಳ್ಳ **[ಪೃಶ್ನಿಮಾತರಃ]** ಯಾವುದರ ಉತ್ಪತ್ತಿಯು ಅಂತರಿಕ್ಷದಿಂದ ಆಗುತ್ತದೆಯೋ ಅಂತಹ **[ವಿಶ್ವಾನ್ ದೇವಾನ್]** ಸಕಲ ದಿವ್ಯಗುಣಗಳುಳ್ಳ, ಹಾಗೂ ಉತ್ತಮವಾದ ಜ್ಞಾನ, ಸಾಹಿತ್ಯ, ಸಂಗೀತ ಮೊದಲಾದವುಗಳನ್ನು ಪ್ರಕಟಪಡಿಸುವಂತಹ **[ಮರುತಃ]** ಜ್ಞಾನ ಪ್ರಾಪ್ತ್ಯರ್ಥ ಹಾಗೂ ಕ್ರಿಯಾಸಿದ್ಧಿಗೋಸ್ಕರ ವಿಶಿಷ್ಟವಾದ ಗುಣಗಳುಳ್ಳ ಮರುತ್ ಶಕ್ತಿಯನ್ನು **[ಹಿ]** ನಿಶ್ಚಯವಾಗಿ **[ಸೋಮಪೀತಯೇ]** ಸಕಲ ಪದಾರ್ಥಗಳನ್ನು ಯಥಾವತ್ತಾಗಿ ಅರ್ಥಾತ್ ಅತ್ಯುತ್ತಮವಾದ ರೀತಿಯಲ್ಲಿ ಭೋಗಿಸುವುದಕ್ಕೋಸ್ಕರ **[ಹವಾಮಹೇ]** ಜ್ಞಾನ ಸಂಪಾದನೆಗೋಸ್ಕರ ಉತ್ತಮವಾದ ರೀತಿಯಲ್ಲಿ ಪ್ರಾಪ್ತಮಾಡಿಕೊಳ್ಳುತ್ತೇವೆ.

ಭಾವಾರ್ಥ:- ಯಾವುದರಿಂದ ಈ ವಾಯುವು ಅಂತರಿಕ್ಷದಲ್ಲಿಯೇ ಉತ್ಪನ್ನವಾಗಿ ಅಂತರಿಕ್ಷದಲ್ಲಿ ಬಂದುಹೋಗುವ ತೇಜಸ್ವೀ ಭಾವದ್ದಾಗಿದೆಯೋ ಅದರಿಂದಲೇ ವಿದ್ವಾಂಸರು ಕಾರ್ಯಾರ್ಥವಾಗಿ ಇದನ್ನು ಸ್ವೀಕರಿಸುತ್ತಾರೆ, ಮಾನ್ಯಮಾಡುತ್ತಾರೆ.

ಈ ಮಂತ್ರದಲ್ಲಿ ವಾಯು ಮತ್ತು ವಿದ್ಯುತ್‌ಗಳ ಗುಣಗಳನ್ನು ವಿವರಿಸಲಾಗಿದೆ.

ಜಯತಾಮಿವ ತನ್ಯತುರ್ಮರುತಾಮೇತಿ ಧೃಷ್ಣುಯಾ । ಯಚ್ಛುಭಂ ಯಾಥನಾ ನರಃ ॥೧೧॥

ಪದಾರ್ಥ:– ಹೇ [ನರಃ] ಧರ್ಮಯುಕ್ತ, ಶಿಲ್ಪವಿದ್ಯಾ ವ್ಯವಹಾರಗಳನ್ನೂ ಪ್ರಾಪ್ತ ಮಾಡುವ ಮಾನವರೇ! ತಾವೂ ಕೂಡ [ಜಯತಾಮಿವ] ಯಾವ ರೀತಿ ವಿಜಯಶೀಲ ಸೈನಿಕರ ಸಹಾಯದಿಂದ ರಾಜನು ಜಯವನ್ನು ಹೊಂದುತ್ತಾನೋ ಮತ್ತು ಯಾವ ರೀತಿ [ಮರುತಾಮ್] ವಾಯುವಿನ ಸಹಾಯದಿಂದ [ಧೃಷ್ಣುಯಾ] ಧೃಢತೆಯಿಂದ ಕೂಡಿದ ಅರ್ಥಾತ್ ಅತ್ಯಂತ ಧೃಢವಾದ ಗುಣವುಳ್ಳ [ತನ್ಯತುಃ] ತನ್ನ ಅತ್ಯಂತ ವೇಗದ ಗತಿಯನ್ನು ವಿಸ್ತಾರವನ್ನಾಗಿ ಮಾಡುವ ಅರ್ಥಾತ್ ಸರ್ವತ್ರ ವ್ಯಾಪಿಸುವ ವಿದ್ಯುತ್ ಎಂದರೆ ಮಿಂಚು, ಮೇಘಗಳನ್ನು ಜಯಿಸುತ್ತದೆಯೋ, ಅದೇ ರೀತಿ [ಯತ್ ಶುಭಮ್] ಅತ್ಯಂತ ಶುಭ ಮತ್ತು ಕಲ್ಯಾಣಯುಕ್ತವಾದ ಯಾವ ಸುಖವಿದೆಯೋ, ಅವೆಲ್ಲವನ್ನೂ [ಯಾಥನಾ] ನೀವೆಲ್ಲರೂ ಪ್ರಾಪ್ತಮಾಡಿಕೊಳ್ಳಿರಿ.

ಭಾವಾರ್ಥ:– ಧರ್ಮಮಾರ್ಗವನ್ನನುಸರಿಸುತ್ತಾ ಶಿಲ್ಪವಿದ್ಯಾವ್ಯವಹಾರಗಳನ್ನು ಪ್ರಾಪ್ತ ಮಾಡುವ ಮಾನವರೇ! ತಾವೂ ಕೂಡ, ಯಾವ ರೀತಿ, ವಿಜಯಶೀಲ ಸೈನಿಕರ ಸಹಾಯದಿಂದ ರಾಜನು ಜಯವನ್ನು ಹೊಂದುತ್ತಾನೋ ಮತ್ತು ಯಾವ ರೀತಿ, ವಾಯುವಿನ ಸಹಾಯದಿಂದ ಅತ್ಯಂತ ದೃಢವಾದ ಗುಣವುಳ್ಳ ಹಾಗೂ ತನ್ನ ವೇಗವಾದ ಗತಿಯಿಂದ ಸರ್ವತ್ರ ವ್ಯಾಪಿಸುವ ಮಿಂಚು, ಮೇಘಗಳನ್ನು ಜಯಿಸುತ್ತದೆಯೋ ಅದೇ ರೀತಿ ನೀವೆಲ್ಲರೂ ಸರ್ವಕಾರ್ಯಗಳಲ್ಲಿ ಜಯಶೀಲರಾಗಿ ಯಶಸ್ವಿಗಳಾಗಿ, ಅತ್ಯಂತ ಶುಭ ಮತ್ತು ಕಲ್ಯಾಣಯುಕ್ತವಾದ ಯಾವ ಸುಖವಿದೆಯೋ ಅವೆಲ್ಲವನ್ನೂ ಪ್ರಾಪ್ತ ಮಾಡಿಕೊಳ್ಳಿರಿ.

ನಂತರ ಆ ವಾಯುಗಳು ಯಾವ ಪ್ರಕಾರದ್ದಾಗಿರುತ್ತವೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಹಸ್ಕಾರಾದ್ವಿದ್ಯುತಸ್ಪರ್ಯತೋ ಜಾತಾ ಅವಂತುಃ ನಃ । ಮರುತೋ ಮೃಳಯಂತು ನಃ ॥೧೨॥

ಪದಾರ್ಥ:– ನಾವೆಲ್ಲರೂ **[ಹಸ್ಕಾರಾತ್]** ಅತ್ಯಂತ ಪ್ರಕಾಶದೊಂದಿಗೆ **[ಜಾತಾಃ]** ಪ್ರಕಟವಾಗುವ **[ವಿದ್ಯುತಃ]** ವಿವಿಧರೂಪದಲ್ಲಿ ಈ ಮಿಂಚು ಪ್ರಕಾಶಿತವಾಗುತ್ತದೆ. ಆ ವಿದ್ಯುತ್ **[ನಃ]** ನಮ್ಮೆಲ್ಲರಿಗೂ **[ಅವಂತು]** ಸುಖವನ್ನೇ ಕೊಡಲಿ. ಆ ವಿದ್ಯುತ್ತಿನ ಸಹಾಯದಿಂದ **[ಪರಿ]** ಎಲ್ಲಾ ವಿಧದಲ್ಲಿ ಪ್ರಯೋಜನವನ್ನೇ ಪಡೆಯುವಂತಾಗಲಿ. **[ಮರುತಃ]** ತೀವ್ರವೇಗದಲ್ಲಿ ಬೀಸುವ ವಾಯುವು **[ನಃ ಮೃಳಯಂತು]** ನಮ್ಮೆಲ್ಲರಿಗೆ ಸುಖವನ್ನೇ ಕೊಡಲಿ. **[ಅತಃ ಪರಿ]** ಆ ಬೀಸುವ ವಾಯುವಿನ ಮೂಲಕವೂ ಕೂಡ ನಾವೆಲ್ಲರೂ ಎಲ್ಲಾ ವಿಧದಲ್ಲಿ ಪ್ರಯೋಜನವನ್ನೇ ಪಡೆಯುವಂತಾಗಲಿ.

ಭಾವಾರ್ಥ:– ಆಕಾಶದಲ್ಲಿ ಅತ್ಯಂತ ಪ್ರಕಾಶದೊಂದಿಗೆ ಪ್ರಕಟವಾಗುವ ಮಿಂಚು ಹಗಲಿನಂತೆ ಬೆಳಕನ್ನು ಬೀರುತ್ತದೆ. ಮಿಂಚು ಪ್ರಕಟವಾಗುವಾಗ ಸರ್ವತ್ರ ಪ್ರಕಾಶವಾಗುತ್ತದೆ. ಅಂತಹ ಅತ್ಯಂತ ಪ್ರಕಾಶಮಾನವಾದ ಮಿಂಚು ನಮಗೆ ಎಲ್ಲಾ ರೀತಿಯ ಸುಖವನ್ನೇ ಕೊಡಲಿ. ಅದರಿಂದ ಯಾರಿಗೂ ಯಾವುದೇ ರೀತಿಯ ತೊಂದರೆ, ನಾಶ ಆಗದಿರಲಿ. ನಾವೆಲ್ಲರೂ ಅದರಿಂದ ಎಲ್ಲಾ ವಿಧವಾದ ಪ್ರಯೋಜನ ಪಡೆಯುವಂತಾಗಲಿ. ಅದೇ ರೀತಿ ತೀವ್ರವೇಗದಿಂದ ಬೀಸುವ ಗಾಳಿಯು ಎಲ್ಲರಿಗೂ ಸುಖವನ್ನೇ ಉಂಟುಮಾಡಲಿ. ಹಾಗೂ ನಾವೆಲ್ಲರೂ ಆ ವಾಯುವಿನಿಂದ ಎಲ್ಲಾ ವಿಧದ ಪ್ರಯೋಜನವನ್ನೇ ಪಡೆಯುವಂತಾಗಲಿ.

ಈಗ ಸೂರ್ಯಲೋಕದ ಗುಣಗಳನ್ನು ವರ್ಣಿಸಲಾಗುತ್ತದೆ.

ಆ ಪೂಷಞ್ಚಿತ್ರಬರ್ಹಿಷಮಾಘೃಣೇ ಧರುಣಂ ದಿವಃ । ಆಜಾ ನಷ್ಟಂ ಯಥಾ ಪಶುಮ್ ॥೧೩॥

ಪದಾರ್ಥ:– [ಯಥಾ] ಯಾವ ರೀತಿ ಪಶುಪಾಲನೆಯನ್ನು ಮಾಡುವವನು [ನಷ್ಟಂ ಪಶುಮ್] ಕಳೆದು ಹೋದ ಪಶುವನ್ನು ಪ್ರಾಪ್ತವಾದ ಬಳಿಕ ಎಲ್ಲರಿಗೂ ತೋರಿಸುತ್ತಾನೋ ಅಥವಾ ತಿಳಿಸುತ್ತಾನೋ, ಅದೇ ರೀತಿ [ಆ ಘೃಣೇ] ಸರ್ವತ್ರ ತನ್ನ ಕಿರಣಗಳ ಮೂಲಕ ಪ್ರಕಾಶವನ್ನು ಬೀರುವ [ಪೂಷನ್] 'ಪೂಷಾ ಸೂರ್ಯಲೋಕ - ಸೂರ್ಯನು [ದಿವಃ] ಸ್ವಪ್ರಕಾಶದ ಮೂಲಕ [ಚಿತ್ರಬರ್ಹಿಷಂ] ವಿಚಿತ್ರವಾದ ಈ ಅಂತರಿಕ್ಷವು ಮತ್ತು [ಧರುಣಂ] ಧಾರಣಾಗುಣಗಳುಳ್ಳ, ಸಮಸ್ತ ಜೀವರಾಶಿಗಳನ್ನು ಧಾರಣಾ ಮಾಡುವ ಧರಿತ್ರಿಯನ್ನು [ಆಜಾ] ಉತ್ತಮವಾದ ರೀತಿಯಲ್ಲಿ ಬೆಳಗಿಸುತ್ತಾನೆ.

ಭಾವಾರ್ಥ:– ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಪಶುಪಾಲಕನು ಕಳೆದುಹೋದ ಪಶುವನ್ನು ಪ್ರಾಪ್ತವಾದ ಕೂಡಲೇ ಎಲ್ಲರಿಗೂ ತೋರಿಸುತ್ತಾನೋ, ಅದೇ ರೀತಿ ರಾತ್ರಿಯಲ್ಲಿ ಅಂಧಕಾರದಲ್ಲಿ ಲೀನವಾದ, ಗ್ರಹೋಪಗ್ರಹಗಳಿಂದ ಕೂಡಿದ ವಿಚಿತ್ರವಾದ ಅಂತರಿಕ್ಷವನ್ನು ಮತ್ತು ಧಾರಣಾಗುಣವುಳ್ಳ ಧರಿತ್ರಿಯನ್ನು ತನ್ನ ಪ್ರಕಾಶದ ಮೂಲಕ ಬೆಳಗಿಸುತ್ತಾನೆ. ಎಲ್ಲರಿಗೂ ದೃಷ್ಟಿಗೋಚರವಾಗುವಂತೆ ಮಾಡುತ್ತಾನೆ.

ಈಗ ಪೂಷನ್ ಶಬ್ದದಿಂದ ಈಶ್ವರನ ಸರ್ವಜ್ಞತ್ವವನ್ನು ಪ್ರಕಾಶಿಸಲಾಗುತ್ತದೆ.

ಪೂಷಾ ರಾಜಾನಮಾಘೃಣಿರಪಗೂಳ್ಹಂ ಗುಹಾ ಹಿತಮ್ । ಅವಿಂದಚ್ಚಿತ್ರಬರ್ಹಿಷಮ್ ॥೧೪॥

ಪದಾರ್ಥ:– [ಆಘೃಣಿಃ] ಸರ್ವಪ್ರಕಾಶಸ್ವರೂಪನೂ **[ಪೂಷಾ]** ಸರ್ವವ್ಯಾಪಕನಾಗಿದ್ದು, ಸಕಲ ಪ್ರಾಣಿಮಾತ್ರರನ್ನು ಸಂಪೂರ್ಣ ಚರಾಚರ ಜಗತ್ತನ್ನು ಪೋಷಿಸುವವನೂ ಆದ ಪರಮೇಶ್ವರನು **[ಗುಹಾ ಹಿತಮ್]** ಜೀವಮಾತ್ರರ ಅಂತಃಕರಣದಲ್ಲಿರುವ **[ಚಿತ್ರ ಬರ್ಹಿಷಮ್]** ಹಲವು ವಿಧದ ಕಾರ್ಯಗಳನ್ನು ಮಾಡಲು ಸಮರ್ಥವಾದ **[ಅಪಗೂಢಮ್]** ಅತ್ಯಂತ ಗುಪ್ತವಾಗಿರುವ **[ರಾಜಾನಮ್]** ಅತ್ಯಂತ ಪ್ರಕಾಶಮಾನವಾದ ಆತ್ಮನನ್ನು **[ಅವಿಂದತ್]** ಎಲ್ಲಾ ವಿಧದಲ್ಲಿಯೂ ಬಲ್ಲವನಾಗಿದ್ದಾನೆ. ಆದುದರಿಂದಲೇ ಅವನು ಸರ್ವಜ್ಞನಾಗಿದ್ದಾನೆ.

ಭಾವಾರ್ಥ:– ಸರ್ವಪ್ರಕಾಶಸ್ವರೂಪನೂ, ಸರ್ವವ್ಯಾಪಕನೂ, ಸಂಪೂರ್ಣ ಚರಾಚರ ಜಗತ್ತಿನಲ್ಲಿರುವ ಸಕಲ ಚೇತನ ಮತ್ತು ಜಡ ತತ್ವಗಳನ್ನು ಉತ್ತಮವಾದ ರೀತಿಯಲ್ಲಿ ಪೋಷಿಸುವವನೂ ಆದ ಪರಮಾತ್ಮನು, ಜೀವಮಾತ್ರರ ಅಂತಃಕರಣದಲ್ಲಿ ಅತ್ಯಂತ ಗುಪ್ತವಾಗಿದ್ದು, ಸಕಲ ಕಾರ್ಯಗಳನ್ನು ಹಲವು ವಿಧದಲ್ಲಿ ಮಾಡುವವನೂ ಆದ ಆತ್ಮನನ್ನು ಉತ್ತಮವಾದ ರೀತಿಯಲ್ಲಿ ಬಲ್ಲವನಾಗಿದ್ದಾನೆ. ಆದುದರಿಂದಲೇ ಅವನು ಸರ್ವಜ್ಞನಾಗಿದ್ದಾನೆ.

ನಂತರ ಆ ಈಶ್ವರನದೇ ಗುಣಗಳ ವರ್ಣನೆ ಇಲ್ಲಿದೆ.

ಉತೋ ಸ ಮಹ್ಯಮಿಂದುಭಿಃ ಷಡ್ ಯುಕ್ತಾ ಅನುಸೇಷಿಧತ್ । ಗೋಭಿರ್ಯವಂ ನ ಚರ್ಕೃಷತ್॥೧೫॥

ಪದಾರ್ಥ:– [ಉತ] ಯಾವ ರೀತಿ ಕೃಷಿಕನು ಧಾನ್ಯವನ್ನು ಉತ್ತಮವಾಗಿ ಮತ್ತು ಹೇರಳವಾಗಿ ಪ್ರಾಪ್ತ ಮಾಡುವುದಕ್ಕೋಸ್ಕರ ಭೂಮಿಯನ್ನು ಅತ್ಯುತ್ತಮವಾಗಿ [ಚರ್ಕೃಷತ್] ಪುನಃ ಪುನಃ ಉಳುತ್ತಾನೋ [ನ] ಅದೇರೀತಿ [ಸಃ] ಆ ಸಕಲೈಶ್ವರ್ಯಪ್ರದಾತನಾದ ಪರಮಾತ್ಮನು [ಮಹ್ಯಮ್] ಧರ್ಮಾತ್ಮನೂ, ಪುರುಷಾರ್ಥಿಯೂ ಆದ ನನಗೆ [ಇಂದುಭಿಃ] ಸಕಲ ಶ್ರೇಷ್ಠ ಪದಾರ್ಥಗಳೊಂದಿಗೆ [ಷಡ್ ಯುಕ್ತಾನ್] ಆರು ಋತುಗಳನ್ನು ಸಂಯುಕ್ತವನ್ನಾಗಿ ಮಾಡುತ್ತಾನೆ. ಅರ್ಥಾತ್ ಸದಾ ಕಾಲ ಸಕಲ ಪದಾರ್ಥಗಳೊಂದಿಗೆ ಸಂಯುಕ್ತನನ್ನಾಗಿ ಮಾಡಿ [ಗೋಭಿಃ] ಉತ್ತಮವಾದ ಜ್ಞಾನ, ದೃಢವಾದ ಶರೀರ ಎಂದರೆ ಸಂಪೂರ್ಣ ಆರೋಗ್ಯ; ಸಕಲ ಪಶು ಸಂಪತ್ತು, ಸಕಲ ವಾಹನಗಳೊಂದಿಗೆ [ಯವಮ್] ಸಂಪೂರ್ಣ ಅನ್ನವನ್ನು [ಅನುಸೇಷಿಧತ್] ಪುನಃ ಪುನಃ ಪ್ರಾಪ್ತವಾಗುವಂತೆ ಮಾಡುತ್ತಾನೆ. ಆದುದರಿಂದಲೇ ಆ ಪರಮಾತ್ಮನನ್ನೇ ಏಕಮಾತ್ರ ಉಪಾಸ್ಯನು ಹಾಗೂ ಪ್ರಾಪ್ಯ ಸರ್ವಸ್ವ ಮತ್ತು ಇಷ್ಟದೇವನೆಂದು ತಿಳಿಯುತ್ತೇನೆ.

ಭಾವಾರ್ಥ:- ಯಾವ ರೀತಿ ರೈತನು ಹೇರಳವಾಗಿ ದವಸ ಧಾನ್ಯಗಳನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ ಗದ್ದೆಯನ್ನು ಪುನಃ ಪುನಃ ಅತ್ಯುತ್ತಮವಾದ ರೀತಿಯಲ್ಲಿ ಉಳುತ್ತಾನೋ, ಅದೇ ರೀತಿ ಸಕಲೈಶ್ವರ್ಯನಾದ ಪರಮಾತ್ಮನು, ಧರ್ಮಾತ್ಮನೂ ಮತ್ತು ಪುರುಷಾರ್ಥಿಯೂ ಆದ ನನಗೆ ಸದಾಕಾಲ ಸಕಲ ಐಶ್ವರ್ಯವನ್ನೂ, ಸಂಪೂರ್ಣ ಆರೋಗ್ಯವನ್ನೂ, ಉತ್ತಮವಾದ ಜ್ಞಾನವನ್ನೂ, ಶ್ರೇಷ್ಠವಾದ ಅನ್ನವನ್ನೂ, ಸಕಲ ಯಾನಗಳನ್ನೂ ಪುನಃ ಪುನಃ ಪ್ರದಾನ ಮಾಡುತ್ತಾನೆ. ಆದುದರಿಂದ ಏಕಮಾತ್ರ ಉಪಾಸ್ಯನಾದ ಪರಮಾತ್ಮನನ್ನು ನನ್ನ ಇಷ್ಟದೇವನೆಂದು ತಿಳಿಯುತ್ತೇನೆ ಹಾಗೂ ಅತ್ಯಂತ ಶ್ರದ್ಧಾ ಭಕ್ತಿಯಿಂದ ಅವನ ಉಪಾಸನೆಯನ್ನು ಮಾಡುತ್ತೇನೆ.

ಈ ಮಂತ್ರದ ತಾತ್ಪರ್ಯವೇನೆಂದರೆ ಮನುಷ್ಯನು ಧರ್ಮಾತ್ಮನೂ ಅರ್ಥಾತ್ ಸದಾ ಧರ್ಮಮಾರ್ಗವನ್ನೇ ಅನುಸರಿಸುವವನೂ, ಪುರುಷಾರ್ಥಿಯೂ ಆಗಿ ಪರಮಾತ್ಮನಲ್ಲಿ ಅತ್ಯಂತ ಶ್ರದ್ಧೆ ಮತ್ತು ಭಕ್ತಿಯುಳ್ಳವನಾಗಿರಬೇಕು. ಅವನೇ ನಮ್ಮೆಲ್ಲರ ಪ್ರಾಪ್ತ ಸರ್ವಸ್ವ, ಅವನ ಹೊರತಾಗಿ ಬೇರೆ ಯಾರೂ ನನ್ನನ್ನು ಉದ್ಧರಿಸುವವರಿಲ್ಲ ಎಂಬ ಭಾವನೆಯಿಂದ ಅವನನ್ನು ಉಪಾಸಿಸಬೇಕು. ಆಗ ಪರಮಾತ್ಮನು ಸದಾಕಾಲ ಸರ್ವಸ್ವವನ್ನೂ ಪ್ರದಾನ ಮಾಡುತ್ತಾನೆ.

ಈಗ ಜಲದ ಗುಣಗಳನ್ನು ವರ್ಣಿಸಲಾಗುತ್ತದೆ.

ಅಂಬಯೋ ಯಂತ್ಯಧ್ವಭಿರ್ಜಾಮಯೋ ಅಧ್ವರೀಯತಾಮ್ । ಪೃಂಚತೀರ್ಮಧುನಾ ಪಯಃ ॥೧೬॥

ಪದಾರ್ಥ:- ಯಾವ ರೀತಿ ಬಂಧುಗಳನ್ನು, ಸಹೋದರರನ್ನು **[ಜಾಮಯಃ]** ಸಹೋದರರು, ಬಂಧುಗಳು, ಸಹೋದರರಂತೆ ಮತ್ತು ಬಂಧುಗಳಂತೆ ಉತ್ತಮ ಬಾಂಧವ್ಯದ ಮೂಲಕ ಉತ್ತಮ ಆಚರಣೆಯ ಮೂಲಕ ಸುಖವನ್ನೇ ಉಂಟು ಮಾಡುತ್ತಾರೋ ಅದೇ ರೀತಿ **[ಅಂಬಯಃ]** ಎಲ್ಲರಿಗೂ ಜೀವನವನ್ನೇ ಕೊಡುವ ಈ ಜಲವು **[ಅಧ್ವರೀಯತಾಮ್]** ಯಜ್ಞವನ್ನು ಮಾಡಲಿಚ್ಛಿಸುವ ಹಾಗೂ ಯಜ್ಞೀಯ ಭಾವನೆಗಳುಳ್ಳ ನಮ್ಮೆಲ್ಲರಿಗೆ **[ಅಧ್ವಭಿಃ]** ಉತ್ತಮವಾದ ಮಾರ್ಗಗಳ ಮೂಲಕ **[ಮಧುನಾಪಯಃ]** ಮಧುರವಾದ ರಸವನ್ನು **[ಪೃಂಚತೀಃ]** ಸ್ಪರ್ಶಿಸುತ್ತಾ ಒದಗಿಸುತ್ತಾ **[ಯಂತಿ]** ಪ್ರಾಪ್ತವಾಗುತ್ತವೆ.

ಭಾವಾರ್ಥ:- ಯಾವ ರೀತಿ ಬಂಧುಗಳನ್ನು - ಬಂಧುಗಳು, ಸಹೋದರರನ್ನು - ಸಹೋದರರು ಪರಸ್ಪರ ಉತ್ತಮ ಬಾಂಧವ್ಯದ ಮೂಲಕ ಹಾಗೂ ಉತ್ತಮ ಆಚರಣೆಯ ಮೂಲಕ ಸುಖವನ್ನೇ ಉಂಟು ಮಾಡುತ್ತಾರೋ, ಅದೇ ರೀತಿ ಎಲ್ಲರಿಗೂ ಜೀವನವನ್ನೇ ಕೊಡುವ ಹಾಗೂ ಎಲ್ಲರನ್ನು ಪೋಷಿಸುವ ಈ ಜಲವು, ಯಜ್ಞೀಯ ಭಾವನೆಗಳುಳ್ಳ ಮತ್ತು ಯಜ್ಞವನ್ನು ಮಾಡಲಿಚ್ಛಿಸುವ ನಮ್ಮೆಲ್ಲರಿಗೆ, ಉತ್ತಮವಾದ ಮಾರ್ಗಗಳ ಮೂಲಕ, ಮಧುರವಾದ ರಸವನ್ನು ಹಾಗೂ ಶ್ರೇಷ್ಠವಾದ ವನಸ್ಪತಿಗಳನ್ನು ಸ್ಪರ್ಶಿಸುತ್ತಾ ಪ್ರಾಪ್ತವಾಗುತ್ತದೆ.

ಪರಮಾತ್ಮನು ನಮಗೆ ಜಲವನ್ನು ಕೊಡುವಾಗ ಅತ್ಯುತ್ತಮವಾದುದನ್ನೇ ಕೊಟ್ಟಿದ್ದಾನೆ. ಗಂಗಾನದಿಯ ಜಲವನ್ನು ತಂದಿಟ್ಟರೆ, ಇಂದಿಗೂ ಎಷ್ಟು ವರ್ಷಗಳಿಟ್ಟರೂ ಹಾಳಾಗುವುದಿಲ್ಲ. ಅದರಲ್ಲಿ ಹುಳಗಳು ಉಂಟಾಗುವುದಿಲ್ಲ. ಗಂಗೋತ್ರಿಯಲ್ಲಿರುವ ಅದ್ಭುತವಾದ ಔಷಧಿ ಮತ್ತು ವನಸ್ಪತಿಗಳಿಂದ, ಗಂಗಾನದಿಯ ನೀರಿನಲ್ಲಿ ಇಂತಹ ಅದ್ಭುತವಾದ ಔಷಧೀಯ ಗುಣ ಉಂಟಾಗಿದೆ. ಯಾವ ರೀತಿ ಜಲವು ನಮ್ಮನ್ನು ರಕ್ಷಿಸುತ್ತದೆಯೋ, ಅದೇ ರೀತಿ ನಾವು ಕೂಡ ಜಲವನ್ನು ರಕ್ಷಿಸಬೇಕು. "ಅಧ್ವರೀಯತಾಮ್' ಶಬ್ದದ ಅರ್ಥವು ಅತ್ಯಂತ ಸ್ಪಷ್ಟವಾಗಿದೆ. ನಾವು ಯಾವುದೇ ರೀತಿಯಲ್ಲಿ ಜಲವನ್ನು ವ್ಯರ್ಥವಾಗಿ ಹಾಳು ಮಾಡಬಾರದು. ಅದರ ಸದುಪಯೋಗವನ್ನೇ ಮಾಡಬೇಕು. ಎರಡನೆಯದಾಗಿ ಯಜ್ಞಾದಿಗಳ ಮೂಲಕ ಜಲವು ಪರಿಶುದ್ಧವಾಗುತ್ತದೆ. ಆದುದರಿಂದ ಪ್ರತಿಯೊಬ್ಬರು ವಾತಾವರಣವನ್ನು, ವಾಯುವನ್ನು, ಜಲವನ್ನು ಪರಿಶುದ್ಧವನ್ನಾಗಿ ಮಾಡಲು ಪ್ರತಿದಿನ ಯಜ್ಞವನ್ನು ಮಾಡಬೇಕು.

ಪುನಃ ಆ ಜಲವು ಹೇಗಿದೆ ಎಂಬುದನ್ನು ತಿಳಿಸಲಾಗುತ್ತದೆ.

ಅಮೂರ್ಯಾ ಉಪ ಸೂರ್ಯೇ ಯಾಭಿರ್ವಾ ಸೂರ್ಯಃ ಸಹ । ತಾ ನೋ ಹಿನ್ವಂತ್ವಧ್ವರಮ್ ॥೧೭॥

ಪದಾರ್ಥ:- [ಯಾಃ ಅಮೂಃ ಆಪಃ] ಯಾವ ಜಲವು ಪರೋಕ್ಷವಾಗಿದ್ದು ದೃಷ್ಟಿಗೋಚರವಾಗುವುದಿಲ್ಲವೋ [ಸೂರ್ಯೇ] ಸೂರ್ಯನಲ್ಲಿ ಅಥವಾ ಅವನ ಪ್ರಕಾಶದಲ್ಲಿದ್ದು ಅಂತರಿಕ್ಷದಲ್ಲಿ ವ್ಯಾಪಿಸಿಕೊಂಡಿರುತ್ತವೆಯೋ [ಯಾಭಿಃ ಸಹ] ಯಾವ ಜಲದೊಂದಿಗೆ [ಸೂರ್ಯಃ ವರ್ತತೇ] ಸೂರ್ಯನ ಪ್ರಕಾಶವಿರುತ್ತದೆಯೋ ಆ ಜಲವೇ ನಮ್ಮೆಲ್ಲರ [ಅಧ್ವರಮ್ ಉಪಹಿನ್ವಂತಿ] ಜೀವನ ಯಜ್ಞದ ರಕ್ಷಣೆಯನ್ನು ಮಾಡುತ್ತವೆ.

ಭಾವಾರ್ಥ:- ಯಾವುದು ಪರೋಕ್ಷವಾಗಿದ್ದು ಅರ್ಥಾತ್ ಪ್ರತ್ಯಕ್ಷವಾಗಿ ಕಾಣದೇ, ಮೋಡದ ರೂಪದಲ್ಲಿ ಅಂತರಿಕ್ಷದಲ್ಲಿ ವ್ಯಾಪಿಸಿಕೊಂಡಿರುತ್ತದೆಯೋ, ಯಾವ ಜಲದೊಂದಿಗೆ ಸೂರ್ಯನ ಪ್ರಕಾಶವು ಸಂಲಗ್ನವಾಗಿರುತ್ತದೆಯೋ ಅಂತಹ ಜಲವೇ ನಮ್ಮನ್ನು ಅತ್ಯುತ್ತಮವಾದ ರೀತಿಯಲ್ಲಿ ರಕ್ಷಿಸುತ್ತದೆ. ಇದರ ತಾತ್ಪರ್ಯವೇನೆಂದರೆ ಜಲದ ಮೇಲೆ ಸೂರ್ಯನ ಪ್ರಕಾಶವು ಬೀಳುತ್ತಿರಬೇಕು. ಮಳೆಯ ನೀರು, ಸೂರ್ಯನ ಕಿರಣಗಳ ಮೂಲಕ ಆವಿಯಾಗಿ ಮೋಡದ ರೂಪದಲ್ಲಿ ಆವರಿಸಿಕೊಂಡಿರುತ್ತದೆ. ಮಳೆಯ ನೀರು ಅತ್ಯಂತ ಪರಿಶುದ್ಧವಾಗಿರುತ್ತದೆ. ಅದೇ ರೀತಿ ಇತರ ಜಲವು ಕೂಡ ಸೂರ್ಯನ ಪ್ರಕಾಶದೊಂದಿಗೆ ಸಂಲಗ್ನವಾಗಿರಬೇಕು. ಅಂತಹ ಜಲವು ನಮ್ಮನ್ನು ರಕ್ಷಿಸುತ್ತದೆ. ಯಾವ ಜಲದೊಂದಿಗೆ ಸೂರ್ಯನ ಪ್ರಕಾಶ ಮತ್ತು ಶಾಖದ ಲೇಶಮಾತ್ರವೂ ಸಂಪರ್ಕವಾಗುವುದಿಲ್ಲವೋ ಅಂತಹ ಜಲವನ್ನು ಸೇವಿಸಬಾರದು. ಆ ಜಲವು ನಮ್ಮನ್ನು ರಕ್ಷಿಸುವುದಿಲ್ಲ.

ಪುನಃ ಅದೇ ವಿಷಯವನ್ನು ಹೇಳಲಾಗುತ್ತದೆ.

ಅಪೋ ದೇವೀರುಪ ಹ್ವಯೇ ಯತ್ರ ಗಾವಃ ಪಿಬಂತಿ ನಃ । ಸಿಂಧುಭ್ಯಃ ಕರ್ತ್ವಂ ಹವಿಃ ॥೧೮॥

ಪದಾರ್ಥ:- [ಯತ್ರ] ಯಾವ ವ್ಯವಹಾರದಲ್ಲಿ ಅರ್ಥಾತ್ ಯಾವ ವಿಧದ ಮೂಲಕ **[ಗಾವಃ]** 'ಗೌರಿತಿ ಭೂಮಿಃ' (ನಿಘಂಟು) ನಮ್ಮ ಫಲವತ್ತಾದ ಭೂಮಿಯು ಹಾಗೂ ಪಶುಗಳು **[ಸಿಂಧುಭ್ಯಃ ದೇವೀರಪಃ ಪಿಬಂತಿ]** ವಿಶಾಲವಾದ ನದಿಗಳಿಂದ ಪ್ರಾಪ್ತವಾಗುವ ದಿವ್ಯಗುಣಗಳುಳ್ಳ ಜಲವನ್ನು ಪಾನ ಮಾಡುತ್ತವೆಯೋ **[ತಾ]** ಆ ಜಲವನ್ನು [ನಃ] ನಮ್ಮೆಲ್ಲರ **[ಹವಿಃಕರ್ತ್ವಂ]** ಅನ್ನವನ್ನು ಉತ್ಪಾದಿಸುವುದಕ್ಕೋಸ್ಕರ **[ಉಪಹ್ವಯೇ]** ನಾವು ಅತ್ಯುತ್ತಮವಾದ ರೀತಿಯಲ್ಲಿ ಪ್ರಾಪ್ತಮಾಡಿಕೊಳ್ಳುತ್ತೇವೆ.

ಭಾವಾರ್ಥ:- ವಿಶಾಲವಾದ ನದಿಗಳ ನೀರನ್ನು ವ್ಯರ್ಥವಾಗಿ ಹರಿಯಲು ಬಿಡದೇ, ಯೋಗ್ಯವಾದ ರೀತಿಯಲ್ಲಿ ಅಣೆಕಟ್ಟುಗಳನ್ನು ಕಟ್ಟಿ ಕಾಲುವೆಗಳ ಮೂಲಕ, ಕೃಷಿಗೋಸ್ಕರ ಬಳಸಿಕೊಂಡು ಎಲ್ಲರಿಗೂ ಬೇಕಾದ ಶ್ರೇಷ್ಠವಾದ ಬೆಳೆಯನ್ನು ಬೆಳೆಸಲು ಪ್ರಯತ್ನಿಸಬೇಕು. ಇದರಿಂದ ಸಕಲ ಮಾನವರು, ಪಶುಗಳು, ಉತ್ತಮವಾದ ಜಲವನ್ನು ಸೇವಿಸಲು ಅನುಕೂಲವಾಗುವುದರೊಂದಿಗೆ ಉತ್ತಮವಾದ, ಸಮೃದ್ಧವಾದ ಬೆಳೆಯನ್ನು ಬೆಳೆಸಲು ಸಾಧ್ಯವಾಗುತ್ತದೆ.

ಪುನಃ ಅವು ಹೇಗಿವೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಪ್ಸ್ವಂತರಮೃತಮಪ್ಸು ಭೇಷಜಮಪಾಮುತ ಪ್ರಶಸ್ತಯೇ । ದೇವಾ ಭವತ ವಾಜಿನಃ ॥೧೯॥

ಪದಾರ್ಥ:- ಹೇ [ದೇವಾ] ವಿದ್ವಾಂಸರೇ! ನೀವೆಲ್ಲರೂ [ಪ್ರಶಸ್ತಯೇ] ಸಕಲ ಜೀವ ರಾಶಿಗಳ ಕಲ್ಯಾಣಕ್ಕೋಸ್ಕರ [ಅಪ್ಸು ಅಂತಃ] ಜಲದಲ್ಲಿ ನಿಹಿತವಾದ ಮೃತ್ಯುವನ್ನು ಕೂಡ ದೂರ ಮಾಡುವ ಅರ್ಥಾತ್ ಯಾವ ರೋಗಗಳಿಂದ

ಮೃತ್ಯುವು ಪ್ರಾಪ್ತವಾಗುತ್ತದೆಯೋ ಅಂತಹ ಭಯಾನಕ ಮಾರಕವಾದ ರೋಗಗಳನ್ನು ನಿವಾರಿಸುವಂತಹ [ಅಮೃತಂ] ಅಮೃತ ತುಲ್ಯರಸವನ್ನು ಹಾಗೂ [ಅಪ್ಸು] ಜಲದಲ್ಲಿರುವ [ಭೇಷಜಮ್] ಸಕಲ ಔಷಧೀಯ ಗುಣಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ತಿಳಿದುಕೊಂಡು [ಅಪಾಂ ವಾಜಿನ ಭವತ] ಹಲವು ವಿಧದ ಪ್ರಯೋಗಗಳ ಮೂಲಕ ಜಲಚಿಕಿತ್ಸಕರಾಗಿರಿ.

ಭಾವಾರ್ಥ:– ಉತ್ತಮವಾದ ರೀತಿಯಲ್ಲಿ ಚಿಕಿತ್ಸೆಯನ್ನು ಮಾಡುವ ವೈದ್ಯ ವಿದ್ವಾಂಸರೇ! ನೀವು ಯಾವ ರೋಗಗಳ ಮೂಲಕ ಮೃತ್ಯುವಾಗುತ್ತದೆಯೋ ಅಂತಹ ಭಯಾನಕವಾದ ರೋಗಗಳನ್ನು ಕೂಡ ನಿವಾರಿಸುವಂತಹ, ಜಲದಲ್ಲಿರುವ ಅಮೃತತುಲ್ಯವಾದ ರಸವನ್ನು ಹಾಗೂ ಜಲದಲ್ಲಿರುವ ಸಕಲ ಔಷಧೀಯ ಗುಣಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ತಿಳಿದುಕೊಂಡು ಹಲವು ವಿಧದ ಪ್ರಯೋಗಗಳ ಮೂಲಕ ಜಲಚಿಕಿತ್ಸೆಯನ್ನು ಮಾಡಿ ಜೀವಮಾತ್ರರ ಕಲ್ಯಾಣವನ್ನು ಮಾಡಿರಿ.

ಈ ಮಂತ್ರದಲ್ಲಿ ಮೃತ್ಯುಪ್ರಾಪ್ತವಾಗುವಂತಹ, ಅರ್ಥಾತ್ ಯಾವುದರ ಮೂಲಕ ಮೃತ್ಯುವು ಸಂಭವಿಸಬಹುದೋ ಅಂತಹ ಮಾರಕವಾದ ರೋಗಗಳನ್ನು ಕೂಡ ಜಲಚಿಕಿತ್ಸೆಯ ಮೂಲಕ ನಿವಾರಿಸಬಹುದು ಎಂದು ಹೇಳಲಾಗಿದೆ. ಜಲದಲ್ಲಿ ಅದ್ಭುತವಾದ ಔಷಧೀಯ ಗುಣವಿದೆ. ಜಲದಲ್ಲಿ ಅಮೃತವಿದೆ.

೧. ಪ್ರಾತಃಕಾಲ, ಉಷಾಕಾಲದಲ್ಲಿ ಎದ್ದು ಮುಖವನ್ನು ತೊಳೆದು, ೫ ರಿಂದ ೬ ಲೋಟದ ತನಕ ನೀರನ್ನು ಸೇವಿಸಿ ಭ್ರಮಣವನ್ನು ಮಾಡಬೇಕು. ರಾತ್ರಿ ಉತ್ತಮವಾದ ತಾಮ್ರದ ಪಾತ್ರೆಯಲ್ಲಿ ನೀರನ್ನು ಕುದಿಸಿ, ಅದನ್ನು ಹಾಗೆಯೇ ಮುಚ್ಚಿ ಇಡಬೇಕು. ಪ್ರಾತಃಕಾಲ ಎದ್ದು ಮುಖ ತೊಳೆದ ನಂತರ ಆ ನೀರನ್ನು ಹಾಗೆಯೇ ಕುಡಿಯಬೇಕು. ಈ ರೀತಿ ಜಲವನ್ನು ಸೇವಿಸಿ ಭ್ರಮಣವನ್ನು ಮಾಡಿದರೆ ಗ್ಯಾಸ್ ಟ್ರಬಲ್, ಎಸಿಡಿಟಿ, ಡಯಾಬಿಟೀಸ್, ಬ್ಲಡ್‌ಪ್ರೆಶರ್, ಅಸ್ತಮಾ, ಅಲ್ಸರ್, ಮೊದಲಾದ ಎಲ್ಲಾ ರೋಗಗಳಿಂದ ದೂರ ಇರಬಹುದು ಹಾಗೂ ಇಂತಹ ರೋಗಗಳನ್ನು ನಿವಾರಿಸಬಹುದು.

೨. ಶರೀರದ ಯಾವುದೇ ಭಾಗದಲ್ಲಿ ಗಾಯವಾದರೆ, ಗಾಯವಾದ ಜಾಗವನ್ನು ಉತ್ತಮವಾದ ರೀತಿಯಲ್ಲಿ ಶೀತಲವಾದ ನೀರಿನಿಂದ ಸರಿಯಾಗಿ ತೊಳೆದು ಒದ್ದೆ ಮಾಡಿದ ಶುಭ್ರವಾದ ಬಟ್ಟೆಯಿಂದ ಗಾಯವಾದ ಜಾಗದಲ್ಲಿ ಕಟ್ಟಬೇಕು. ಆ ಬಟ್ಟೆಯನ್ನು ಮೂರು ದಿನ ಪೂರ್ತಿಯಾಗಿ ಒಣಗಲು ಬಿಡಬಾರದು. ಆಗಾಗ ನೀರು ಹಾಕುತ್ತಾ ಇರಬೇಕು. ಮೂರು ದಿನದ ಬಳಿಕ ಗಾಯದ ಕಲೆಯೂ ಕೂಡ ಉಳಿಯುವುದಿಲ್ಲ.

೩. ಏಳು ಬಣ್ಣದ ಸೀಸೆಗಳಲ್ಲಿ ಶುದ್ಧವಾದ ನೀರನ್ನು ತುಂಬಿಸಿ, ಬಿಸಿಲಿನಲ್ಲಿ ಇಡಬೇಕು. ಈ ರೀತಿ ಬಿಸಿಲಿನಲ್ಲಿ ಇಟ್ಟಂತಹ ಬಣ್ಣದ ಸೀಸೆಗಳಲ್ಲಿ ಹಾಕಿದ ನೀರಿನ ಮೂಲಕ ಅತ್ಯಂತ ಮಾರಕವಾದ ರೋಗಗಳನ್ನು ನಿವಾರಿಸಬಹುದು. ಯಾವ ರೋಗಕ್ಕೆ ಯಾವ ಯಾವ ಬಣ್ಣದ ಸೀಸೆಗಳಲ್ಲಿರುವ ನೀರನ್ನು ಸೇರಿಸಿ ಕುಡಿಯಬೇಕು ಎಂಬುದನ್ನು ನುರಿತ ಜಲಚಿಕಿತ್ಸೆಯನ್ನು ಮಾಡುವವರ ಮೂಲಕ ಅರಿತುಕೊಳ್ಳಬೇಕು.

೪. ಸ್ನಾನ ಮಾಡುವಾಗ ನಾಭಿಯ ಮೇಲೆ ಧಾರೆ ಎರೆದು ನೀರು ಹಾಕುವುದರಿಂದ ಎಸಿಡಿಟಿ ಮತ್ತು ಗ್ಯಾಸ್‌ಟ್ರಬಲ್ ರೋಗವನ್ನು ನಿವಾರಿಸಬಹುದು.

೫. ಕಟಿಸ್ನಾನ, ಸ್ಟೀಮ್‌ಬಾತ್, ಟಬ್‌ಬಾತ್ ಮೊದಲಾದ ಹಲವು ವಿಧದ ಸ್ನಾನಗಳಿಂದ ಹಲವು ವಿಧದ ರೋಗಗಳನ್ನು ನಿವಾರಿಸಬಹುದು.

ಜಲಚಿಕಿತ್ಸೆಯನ್ನು ಮಾಡುವವನ ಮೂಲಕ ಎಲ್ಲಾ ರೋಗಗಳನ್ನು ಯಾವ ರೀತಿ ನಿವಾರಿಸಬಹುದು ಎಂದು ನಾವು ಅರಿತುಕೊಳ್ಳಬಹುದು. ಜಲದಲ್ಲಿ ಅಮೃತವಿದೆ ಎಂಬುದು ಅಕ್ಷರಶಃ ಸತ್ಯ. ಇದರಲ್ಲಿ ಯಾವ ಸಂದೇಹವೂ ಇಲ್ಲ.

ನಂತರ ಆ ಜಲ ಯಾವ ಪ್ರಕಾರದ್ದಾಗಿದೆ ಎಂಬುದನ್ನು ತಿಳಿಸಲಾಗಿದೆ.

ಅಪ್ಸು ಮೇ ಸೋಮೋ ಅಬ್ರವೀದಂತರ್ವಿಶ್ವಾನಿ ಭೇಷಜಾ ।
ಅಗ್ನಿಂ ಚ ವಿಶ್ವಶಂಭುವ ಮಾಪಶ್ಚ ವಿಶ್ವಭೇಷಜೀಃ ॥೨೦॥

ಪದಾರ್ಥ:– ಯಾವ ರೀತಿ [ಅಯಂ ಸೋಮಃ] ಔಷಧಿ ವನಸ್ಪತಿಗಳ ರಾಜನಾದ ಚಂದ್ರ ಹಾಗೂ ಸೋಮಲತೆಯು [ಮೇ] ನನಗೋಸ್ಕರ [ಅಪ್ಸ್ವಂತಃ] ಜಲದಲ್ಲಿರುವ [ವಿಶ್ವಾನಿ ಭೇಷಜಾ] ಸಮಸ್ತ ಔಷಧೀಯ ಗುಣಗಳನ್ನು [ಚ] ಮತ್ತು [ವಿಶ್ವ ಶಂಭುವಮ್] ಸಮಸ್ತ ಜಗತ್ತಿಗೆ ಸುಖವನ್ನು ಕೊಡುವ [ಅಗ್ನಿಮ್] ವಿದ್ಯುತ್ತನ್ನು [ಅಬ್ರವೀತ್] ಪ್ರಕಟ ಪಡಿಸುತ್ತದೆಯೋ ಅದೇ ರೀತಿ [ವಿಶ್ವಭೇಷಜೀಃ] ಜಲದಲ್ಲಿರುವ ಸಮಸ್ತ ಔಷಧೀಯ ಗುಣಗಳನ್ನು ಹಾಗೂ ತನ್ನಲ್ಲಿರುವ ವಿದ್ಯುತ್ತನ್ನು [ಆಪಃ] ಜಲವು ಪ್ರಕಟಪಡಿಸುತ್ತದೆ.

ಭಾವಾರ್ಥ:– ರಾತ್ರಿಯಲ್ಲಿ, ಬೆಳದಿಂಗಳಿನಲ್ಲಿ ವನಸ್ಪತಿಗಳು ಔಷಧಿಗಳ ವೃದ್ಧಿಯನ್ನು ಹೊಂದುತ್ತವೆ. ಆದುದರಿಂದ ಚಂದ್ರನನ್ನು ಔಷಧಿಗಳ ರಾಜ ಎಂದು ಹೇಳುತ್ತಾರೆ.

ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸಮಸ್ತ ಪದಾರ್ಥಗಳು ತಮ್ಮ ಗುಣಗಳ ಮೂಲಕ ತಮ್ಮನ್ನು ಪ್ರಕಟಪಡಿಸುತ್ತವೆಯೋ, ಅದೇ ರೀತಿ ಔಷಧಿಗಳ ಪುಷ್ಟಿಕಾರಕನಾದ ಚಂದ್ರನು ತನ್ನ ಸಂಪರ್ಕದಿಂದ ವೃದ್ಧಿ ಮತ್ತು ಹ್ರಾಸ ಹೊಂದುವ ಜಲದಲ್ಲಿರುವ ಔಷಧೀಯ ಗುಣಗಳನ್ನು ಹಾಗೂ ಜಲದಲ್ಲಿರುವ ವಿದ್ಯುತ್ತನ್ನು ಪ್ರಕಟಪಡಿಸುತ್ತಾನೆ. ಅದೇ ರೀತಿ ಜಲವು ಕೂಡ ತನ್ನಲ್ಲಿರುವ ಔಷಧೀಯ ಗುಣಗಳನ್ನು ಮತ್ತು ವಿದ್ಯುಚ್ಛಕ್ತಿಯನ್ನು ಪ್ರಕಟಪಡಿಸುತ್ತದೆ.

ಪ್ರತಿಯೊಂದು ಹುಣ್ಣಿಮೆ ಮತ್ತು ಅಮಾವಾಸ್ಯೆಯಂದು ಸಮುದ್ರದಲ್ಲಿ ಏರಿಳಿತಗಳು ಉಂಟಾಗುವುದನ್ನು ನಾವು ಸಮುದ್ರದಲ್ಲಿ ಕಾಣುತ್ತೇವೆ. ಈ ರೀತಿ ಚಂದ್ರನಿಂದ ಜಲವು ಅತ್ಯಂತ ಪ್ರಭಾವಿತವಾಗುತ್ತದೆ. ಸಂಭವತಃ ಹುಣ್ಣಿಮೆ ಮತ್ತು ಅಮಾವಾಸ್ಯೆಯಂದು ಜಲದಲ್ಲಿ ಕೆಲವೊಂದು ವಿಶಿಷ್ಟ ಔಷಧೀಯ ಗುಣಗಳು ಉಂಟಾಗುತ್ತವೆ ಎಂದು ಈ ಮಂತ್ರದ ಮೂಲಕ ತಿಳಿಯಬರುತ್ತದೆ. ಇದನ್ನು ವಿಶೇಷ ಪ್ರಯೋಗಗಳ ಮೂಲಕ ನಾವು ಕಂಡುಕೊಳ್ಳಬೇಕಾಗಿದೆ. ಅದೇ ರೀತಿ ಸಮುದ್ರದ ಅಲೆಗಳಲ್ಲಿ ಅತ್ಯಂತ ಶಕ್ತಿಯಿದೆ. ಸಮುದ್ರದ ಅಲೆಗಳ ಮೂಲಕ ವಿದ್ಯುಚ್ಛಕ್ತಿಯನ್ನು ಪಡೆದುಕೊಳ್ಳಬಹುದು.

ಕೆಲವೊಮ್ಮೆ ಕೆಲವೊಂದು ಪದಾರ್ಥಗಳು ನಮಗೆ ತಿಳಿಯದೆ ತಮ್ಮ ಸ್ವಾಭಾವಿಕ ಗುಣಧರ್ಮಗಳ ಮೂಲಕ ಪ್ರಯೋಜನವನ್ನುಂಟು ಮಾಡುತ್ತವೆ. ಅದನ್ನು ನಾವು ಅಲ್ಲಿಗೇ ಬಿಟ್ಟು ಬಿಡದೇ ಅನೇಕ ಪ್ರಯೋಗಗಳಿಗೆ ಅವುಗಳನ್ನು ಒಳಪಡಿಸಿ, ಅದರಿಂದ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಅದೇ ರೀತಿ ಜಲದಲ್ಲಿರುವ ಔಷಧೀಯ ಗುಣಗಳನ್ನು ಮತ್ತು ವಿದ್ಯುಚ್ಛಕ್ತಿಯನ್ನು ನಾವು ವಿಶೇಷ ಪ್ರಯೋಗಗಳ ಮೂಲಕ ತಿಳಿದುಕೊಳ್ಳಬೇಕು.

ನಂತರ ಆ ಜಲವು ಹೇಗಿದೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ಆಪಃ ಪೃಣೀತ ಭೇಷಜಂ ವರೂಥಂ ತನ್ವೇ೩ ಮಮ । ಜ್ಯೋಕ್ ಚ ಸೂರ್ಯಂ ದೃಶೇ ॥೨೧॥

ಪದಾರ್ಥ:– [ಆಪಃ] ಸಕಲ ಪದಾರ್ಥಗಳನ್ನು ವ್ಯಾಪಿಸಿಕೊಂಡಂತಹ ಪ್ರಾಣಶಕ್ತಿಯನ್ನು (ಆಪ್ನುವಂತಿ ಸರ್ವಾನ್ ಪದಾರ್ಥಾನ್ ತೇ ಪ್ರಾಣಾಃ) [ಸೂರ್ಯಂ ದೃಶೇ] ಸೂರ್ಯನ ಪ್ರಕಾಶವನ್ನು ನೋಡುವುದಕ್ಕೋಸ್ಕರ

[ಜ್ಯೋಕ್] ಚಿರಕಾಲ ತನಕ ಜೀವಿಸುವುದಕ್ಕೋಸ್ಕರ ಅರ್ಥಾತ್ ದೀರ್ಘಾಯುಗಳಾಗಿ ಬಾಳುವುದಕ್ಕೋಸ್ಕರ [ಮಮ ತನ್ವೇ] ನನ್ನ ಶರೀರಕ್ಕೋಸ್ಕರ [ವರೂಥಮ್] ಶ್ರೇಷ್ಠವಾದ [ಭೇಷಜಮ್] ರೋಗನಾಶ ಮಾಡುವ ವ್ಯವಹಾರವನ್ನು [ಪೃಣೀತ] ಪರಿಪೂರ್ಣವಾಗಿ ಪ್ರಕಟಿಸುತ್ತವೆ. ಅದನ್ನು ಸಕಲ ಮಾನವರು ಪ್ರಯತ್ನದಿಂದ ಹಾಗೂ ಯುಕ್ತಿಯಿಂದ ಮಾಡಬೇಕು.

ಭಾವಾರ್ಥ:- ಸಕಲ ಪದಾರ್ಥಗಳನ್ನು ವ್ಯಾಪಿಸಿಕೊಂಡಂತಹ ಪ್ರಾಣ ಶಕ್ತಿಯು ಆಪಃ ಎನಿಸುತ್ತದೆ. ಇದು ದೀರ್ಘಾಯುಗಳಾಗಿ ಬಾಳುವುದಕ್ಕೋಸ್ಕರ ಹಾಗೂ ಜೀವನ ಪರ್ಯಂತ ಸೂರ್ಯನ ಪ್ರಕಾಶವನ್ನು ನೋಡುವುದಕ್ಕೋಸ್ಕರ ನನ್ನ ಶರೀರದಲ್ಲಿ ಶ್ರೇಷ್ಠವಾದ ರೋಗನಾಶ ಮಾಡುವ ವ್ಯವಹಾರವನ್ನು ಅತ್ಯುತ್ತಮವಾದ ರೀತಿಯಲ್ಲಿ ಮಾಡುತ್ತವೆ. ಅದನ್ನು ನೀವೆಲ್ಲರೂ ಪ್ರಯತ್ನದಿಂದ ಹಾಗೂ ಯುಕ್ತಿಯಿಂದ ಮಾಡಬೇಕು.

ಪ್ರಾಣ ಶಕ್ತಿಯ ಅಭಾವದಿಂದ ಯಾವ ಪ್ರಾಣಿಯು ಹಾಗೂ ವೃಕ್ಷಾದಿಗಳು ಶರೀರವನ್ನು ಧಾರಣ ಮಾಡಲು ಸಾಧ್ಯವಿಲ್ಲ. ಅರ್ಥಾತ್ ಜೀವಿಸಲು ಸಾಧ್ಯವಿಲ್ಲ. ಆದುದರಿಂದ ಹಸಿವು ಮತ್ತು ಬಾಯಾರಿಕೆ ಮೊದಲಾದ ರೋಗಗಳನ್ನು ನಿವಾರಿಸುವುದಕ್ಕೋಸ್ಕರ ಪ್ರಾಣಾಯಾಮವೇ ಅತ್ಯುತ್ತಮವಾದ ಉತ್ತಮ ಔಷಧಿ ಎಂದು ತಿಳಿಯಬೇಕು.

ಹಸಿವು ಮತ್ತು ಬಾಯಾರಿಕೆಯು ಕೂಡ ಒಂದು ರೀತಿಯ ರೋಗ. ಇದು ವಿಚಿತ್ರವಾದರೂ ಸತ್ಯ. ಪ್ರಪಂಚ ದಲ್ಲಿ ಹಸಿವೆಯಿಂದ ಸಾಯುವವರಿಗಿಂತ, ಹೆಚ್ಚು ತಿಂದು ಸಾಯುವವರ ಸಂಖ್ಯೆ ಜಾಸ್ತಿ. ಮನುಷ್ಯನು ಜೀವಿಸಲು ತಿನ್ನಬೇಕೇ ವಿನಹ ತಿನ್ನಲು ಜೀವಿಸಬಾರದು. ದಿನಕ್ಕೊಂದು ಬಾರಿ ಊಟ ಮಾಡುವವನನ್ನು ಯೋಗಿ, ಎರಡು ಬಾರಿ ಊಟ ಮಾಡುವವನು ಭೋಗಿ, ಮೂರು ಬಾರಿ ಊಟ ಮಾಡುವವನು ರೋಗಿ, ನಾಲ್ಕು ಬಾರಿ ಊಟ ಮಾಡುವವನು ಬಹಳ ಬೇಗ ಸಾಯುತ್ತಾನೆ. ಆದುದರಿಂದ ಅಧಿಕ ಹಸಿವು ಮತ್ತು ಆಧಿಕ ಬಾಯಾರಿಕೆ ಇದು ಕೂಡ ಒಂದು ರೀತಿಯ ರೋಗವೇ. ಈ ರೋಗಗಳನ್ನು ನಿವಾರಿಸಲು ಪ್ರಾಣಾಯಾಮ ಅತ್ಯುತ್ತಮ ಸಾಧನ. ಮನುಷ್ಯನು ಪ್ರಾಣಾಯಾಮದ ಮೂಲಕ, ತನ್ನ ಪ್ರಾಣಶಕ್ತಿಯನ್ನು ವರ್ಧಿಸಿಕೊಂಡು ಪೂರ್ಣ ಆರೋಗ್ಯವಂತನಾಗಲು ಪ್ರಯತ್ನಿಸಬೇಕು.

ಪುನಃ ಆ ಜಲ ಯಾವ ಪ್ರಕಾರದ್ದಾಗಿದೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ಇದಮಾಪಃ ಪ್ರ ವಹತ ಯತ್ ಕಿಂ ಚ ದುರಿತಂ ಮಯಿ ।
ಯದ್ವಾಹಮಭಿದುದ್ರೋಹ ಯದ್ ವಾ ಶೇಪ ಉತಾನೃತಮ್ ॥೨೨॥

ಪದಾರ್ಥ:- ನಾನು [ಯತ್ಕಿಂಚ ಮಯಿದುರಿತಮ್] ನನ್ನಲ್ಲಿ ಯಾವುದೆಲ್ಲಾ ದುರಿತಗಳಿವೆಯೋ ಅರ್ಥಾತ್ ಯಾವುದೆಲ್ಲಾ ನಾನು ದುಷ್ಕರ್ಮಗಳನ್ನು ಮಾಡಿದ್ದೇನೆಯೋ ಹಾಗೂ [ಯತ್] ಯಾವುದೆಲ್ಲಾ ನಾನು ಪುಣ್ಯಕಾರ್ಯಗಳನ್ನು ಅಂದರೆ ಸತ್ಕರ್ಮಗಳನ್ನು ಮಾಡಿದ್ದೇನೆಯೋ [ಅಭಿದುದ್ರೋಹ] ನಾನು ಅತ್ಯಂತ ಕ್ರೋಧದಿಂದ ಬೇರೆಯವರಿಗೆ ದ್ರೋಹವನ್ನು ಮಾಡಿ ವೈರತ್ವವನ್ನು ಬೆಳೆಸಿಕೊಂಡಿದ್ದೇನೆಯೋ ಹಾಗೂ ಪ್ರೀತಿಯಿಂದ ಹಾಗೂ ಉತ್ತಮ ಆಚರಣೆಯ ಮೂಲಕ ಮಿತ್ರತ್ವವನ್ನು ಪ್ರಾಪ್ತ ಮಾಡಿಕೊಂಡಿದ್ದೇನೆಯೋ [ಯದ್ವಾಕಂಚಿತ್ ಶೇಪೆ] ಯಾರಿಗಾದರೂ ಈರ್ಷ್ಯೆಯಿಂದ ಕ್ರೋಧದಿಂದ ಶಪಿಸಿದ್ದೇನೆಯೋ ಪ್ರೀತಿಯಿಂದ, ಕೃಪಾದೃಷ್ಟಿಯಿಂದ ಅನುಗ್ರಹೀತನನ್ನಾಗಿ ಮಾಡಿದ್ದೇನೆಯೋ [ಯತ್ ವಾ ಅನೃತಂ] ಯಾವುದೆಲ್ಲಾ ಅಸತ್ಯಾಚರಣೆಯನ್ನು ಮಾಡಿದ್ದೇನೆಯೋ ಹಾಗೂ ಯಾವುದೆಲ್ಲಾ ಸತ್ಯಾಚರಣೆಯನ್ನು ಮಾಡಿದ್ದೇನೆಯೋ ಅವೆಲ್ಲವನ್ನೂ [ಆಪಃ] ನನ್ನ ಪ್ರಾಣಗಳು ನನ್ನ ಆತ್ಮದೊಂದಿಗೆ [ಪ್ರ ವಹತ] ಕೊಂಡೊಯ್ಯುತ್ತವೆ.

ಭಾವಾರ್ಥ:- ಕರ್ಮಾನುಷ್ಠಾನಗಳನ್ನು ಮಾಡುವ ನನ್ನಲ್ಲಿ ಯಾವುದೆಲ್ಲಾ ದುರಿತಗಳಿವೆಯೋ, ಸ್ವಾರ್ಥದಿಂದ ಪ್ರೇರಿತನಾಗಿ ಯಾವುದೆಲ್ಲಾ ನಾನು ದುಷ್ಕರ್ಮಗಳನ್ನು ಮಾಡಿದ್ದೇನೆಯೋ, ಅದೇ ರೀತಿ ಯಾವುದೆಲ್ಲಾ ಸತ್ಕರ್ಮ

ಮಾಡುವುದರ ಮೂಲಕ ಪುಣ್ಯವನ್ನು ಸಂಚಯನ ಮಾಡಿದ್ದೇನೆಯೋ, ಕ್ರೋಧ, ಲೋಭ, ಈರ್ಷ್ಯೆ, ದ್ವೇಷ ಮೊದಲಾದವುಗಳಿಂದ ಪ್ರಭಾವಿತನಾಗಿ ಅನ್ಯರಿಗೆ ದ್ರೋಹವನ್ನು ಮಾಡಿ ವೈರತ್ವವನ್ನು ಬೆಳೆಸಿಕೊಂಡಿದ್ದೇನೆಯೋ, ಅದೇ ರೀತಿ ಪ್ರೀತಿ ಸೌಹಾರ್ದದಿಂದ ಸ್ನೇಹವನ್ನು ಮಿತ್ರತ್ವವನ್ನು ಪ್ರಾಪ್ತ ಮಾಡಿಕೊಂಡಿದ್ದೇನೆಯೋ, ಈರ್ಷ್ಯಾಸೂಯೆ ಮತ್ತು ಕ್ರೋಧದಿಂದ ಯಾರನ್ನಾದರೂ ಶಪಿಸಿದ್ದೇನೆಯೋ ಹಾಗೂ ಕೃಪಾದೃಷ್ಟಿಯಿಂದ ಬೇರೆಯವರ ಕಲ್ಯಾಣವನ್ನೇ ಅಪೇಕ್ಷಿಸುತ್ತಾ ಅನುಗ್ರಹೀತರನ್ನಾಗಿ ಮಾಡಿದ್ದೇನೆಯೋ ಯಾವುದೆಲ್ಲಾ ಅಸತ್ಯ ಭಾಷಣ ಮತ್ತು ಅಸತ್ಯಾಚರಣೆಯನ್ನು ಮಾಡಿದ್ದೇನೆಯೋ ಅವೆಲ್ಲವನ್ನೂ ನನ್ನ ಪ್ರಾಣಗಳು ನನ್ನ ಆತ್ಮನೊಂದಿಗೆ ಕೊಂಡೊಯ್ಯುತ್ತವೆ.

ಮಾನವನು ಸತ್ತನಂತರ, ತನ್ನೊಂದಿಗೆ ಯಾವುದೇ ರೀತಿಯ ಸಂಪತ್ತು, ಭೋಗ, ಐಶ್ವರ್ಯಾದಿಗಳನ್ನೂ ತನ್ನ ಬಂಧು ಬಳಗದವರನ್ನೂ ಕೊಂಡೊಯ್ಯುವುದಿಲ್ಲ. ಎಲ್ಲವನ್ನೂ, ಎಲ್ಲರನ್ನೂ ಇಲ್ಲಿಯೇ ಬಿಟ್ಟು ಒಬ್ಬಂಟಿಗನಾಗಿಯೇ ಹೋಗುತ್ತಾನೆ. ಅವನು ಜನ್ಮದಿಂದ ಮೃತ್ಯುವಿನ ತನಕ ಮಾಡಿದ ಸಕಲ ಪಾಪ-ಪುಣ್ಯಗಳನ್ನು ಮಾತ್ರ ತನ್ನೊಂದಿಗೆ ಕೊಂಡೊಯ್ಯುತ್ತಾನೆ. ನಮ್ಮ ದೇಹದಲ್ಲಿರುವ ಪ್ರಾಣಗಳು ನಾವು ಸಂಚಯನ ಮಾಡಿದ ಸಕಲ ಪಾಪ ಪುಣ್ಯಗಳನ್ನು ನಮ್ಮ ಆತ್ಮನೊಂದಿಗೆ ಕೊಂಡೊಯ್ಯುತ್ತವೆ. ಆದುದರಿಂದ ತನ್ನಲ್ಲಿರುವ ಕಾಮ, ಕ್ರೋಧ, ಲೋಭ, ಮೋಹ, ಈರ್ಷ್ಯೆ ಈ ಷಡ್ರಿಪುಗಳನ್ನು ಸಂಪೂರ್ಣವಾಗಿ ನಾಶ ಮಾಡಿ ಸದಾ ಸಮರ್ಪಣಾ ಭಾವದಿಂದ ಜೀವ ಮಾತ್ರರ ಕಲ್ಯಾಣವನ್ನೇ ಬಯಸುತ್ತಾ ಶ್ರೇಷ್ಠ ಕರ್ಮಗಳನ್ನೇ ಮಾಡಬೇಕು; ಎಂದಿಗೂ ಯಾವುದೇ ಕಾರಣದಿಂದ ದುಷ್ಕರ್ಮಗಳನ್ನು ಮಾಡಬಾರದು.

ನಂತರ ಆ ಜಲವು ಯಾವ ಪ್ರಕಾರದ್ದಾಗಿದೆ ಎಂಬುದನ್ನು ತಿಳಿಸಲಾಗುತ್ತದೆ.

ಆಪೋ ಅದ್ಯಾನ್ವಚಾರಿಷಂ ರಸೇನ ಸಮಗಸ್ಮಹಿ । ಪಯಸ್ವಾನಗ್ನ ಆ ಗಹಿ ತಂ ಮಾ ಸಂ ಸೃಜ ವರ್ಚಸಾ ॥೨೩॥

ಪದಾರ್ಥ:- ನಾವೆಲ್ಲರೂ **[ರಸೇನ]** ರಸಗುಣದಿಂದ ಯುಕ್ತವಾದ ಯಾವ **[ಆಪಃ]** ಜಲವಿದೆಯೋ ಅದನ್ನು **[ಸಮಗಸ್ಮಹಿ]** ಅತ್ಯುತ್ತಮವಾದ ರೀತಿಯಲ್ಲಿ ಪ್ರಾಪ್ತ ಮಾಡಿಕೊಳ್ಳುತ್ತೇವೆ. ಆ ಜಲದ ಮೂಲಕ ನಾನು **[ಪಯಸ್ವಾನ್]** ರಸಯುಕ್ತವಾದ ರಸದಿಂದ ಕೂಡಿದ ಶರೀರವುಳ್ಳವನಾಗಿ ಯಾವುದೆಲ್ಲಾ **[ಅನ್ವಚಾರಿಷಂ]** ವಿದ್ವಾಂಸರಿಗೆ ತಕ್ಕುದಾದ ಅತ್ಯುತ್ತಮ ಆಚರಣೆ ಹಾಗೂ ಉತ್ತಮ ಕರ್ಮಗಳನ್ನು ಮಾಡಿ ಅದನ್ನು ಪ್ರಾಪ್ತ ಮಾಡಿಕೊಳ್ಳುತ್ತೇನೆ. ಮತ್ತು ಯಾವ **[ಅಗ್ನೇ]** ಭೌತಿಕ ಅಗ್ನಿ ಅರ್ಥಾತ್ ಬೆಂಕಿಯು **[ಮಾ]** ನನಗೆ ಈ ಜನ್ಮ ಮತ್ತು ಜನ್ಮಾಂತರಗಳಲ್ಲಿಯೂ ಅರ್ಥಾತ್ ಮುಂದಿನ ಜನ್ಮದಲ್ಲಿಯೂ **[ಆಗಹಿ]** ಪ್ರಾಪ್ತವಾಗುತ್ತದೆ. ಅದೇ ಪೂರ್ವಜನ್ಮದಲ್ಲಿ **[ತಮ್]** ಮಾಡಿದಂತಹ ಶ್ರೇಷ್ಠ ಕರ್ಮಗಳಿವೆಯೋ, ಅದಕ್ಕನುಗುಣವಾಗಿಯೇ **[ಮಾ]** ನನಗೆ **[ಅದ್ಯ]** ಈ ಜನ್ಮದಲ್ಲಿ ಇಂದಿಗೂ **[ವರ್ಚಸಾ]** ದೀಪ್ತಿ ಎಂದರೆ ಪ್ರಕಾಶದೊಂದಿಗೆ **[ಸಂಸೃಜ]** ಸಂಬಂಧವನ್ನುಂಟು ಮಾಡುತ್ತದೆ. ಆದುದರಿಂದ ಅವೆಲ್ಲವನ್ನೂ ನಾವು ಅತ್ಯುತ್ತಮವಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಎಂದಿಗೂ ದುರುಪಯೋಗ ಮಾಡಬಾರದು.

ಭಾವಾರ್ಥ:- ಸಮಸ್ತ ಜೀವಮಾತ್ರರು ಪೂರ್ವಜನ್ಮದಲ್ಲಿ ಮಾಡಿದ ಕರ್ಮಗಳಿಗನುಗುಣವಾಗಿಯೇ ಈ ಜನ್ಮದಲ್ಲಿಯೂ, ಈ ಜನ್ಮದಲ್ಲಿ ಮಾಡಿದ ಕರ್ಮಗಳಿಗನುಗುಣವಾಗಿ ಮುಂದಿನ ಜನ್ಮದಲ್ಲಿಯೂ ವಾಯು ಜಲ ಅಗ್ನ್ಯಾದಿಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ಆದುದರಿಂದ ಎಲ್ಲರಿಗೂ ವಿದ್ವಾಂಸರಿಗೆ ತಕ್ಕುದಾದ ಉತ್ತಮ ಆಚರಣೆಯನ್ನೂ ಶ್ರೇಷ್ಠ ಕರ್ಮಗಳನ್ನೂ ಮಾಡಬೇಕು. ಪರಮಾತ್ಮನು ನಮಗೆ ಕೊಟ್ಟಂತಹ ಸಕಲ ಪದಾರ್ಥಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ಬಳಸಿಕೊಂಡು, ಅದರ ಸದುಪಯೋಗವನ್ನೇ ಮಾಡಬೇಕು. ಎಂದಿಗೂ ದುರುಪಯೋಗ ಮಾಡಬಾರದು. ಪರಮಾತ್ಮನು ಸಕಲ ಪದಾರ್ಥಗಳನ್ನು ಜೀವಮಾತ್ರರಿಗೋಸ್ಕರ ಸೃಷ್ಟಿಸಿದ್ದಾನೆ. ಆದುದರಿಂದ ಅವು ಎಲ್ಲರಿಗೂ ಪ್ರಾಪ್ತವಾಗುವಂತೆ ಪ್ರಯತ್ನಿಸಬೇಕು. ಎಂದಿಗೂ ಕೇವಲ ಸ್ವಾರ್ಥಕ್ಕೋಸ್ಕರ ಮಾತ್ರ ಉಪಯೋಗಿಸಬಾರದು.

ಆ ಅಗ್ನಿಯು ಯಾವ ಪ್ರಕಾರದ್ದಾಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಸಂ ಮಾಗ್ನೇ ವರ್ಚಸಾ ಸೃಜ ಸಂ ಪ್ರಜಯಾ ಸಮಾಯುಷಾ ।

ವಿದ್ಯುರ್ಮೇ ಅಸ್ಯ ದೇವಾ ಇಂದ್ರೋ ವಿದ್ಯಾತ್ ಸಹ ಋಷಿಭಿಃ ॥೨೪॥

ಪದಾರ್ಥ:- ಸಕಲ ಮಾನವರು ಮಾಡಬೇಕಾದ ಕರ್ತವ್ಯವೇನೆಂದರೆ ಯಾರು ನಮ್ಮನ್ನು [ಋಷಿಭಿಃ ಸಹ] ವೇದಾರ್ಥವನ್ನು ತಿಳಿದು ಸದಾ ಸತ್ಯಜ್ಞಾನವನ್ನೇ ನೀಡುತ್ತಾರೋ ಅಂತಹ ಋಷಿಗಳೊಂದಿಗೆ [ದೇವಾಃ] ವಿದ್ವಾಂಸರು ಮತ್ತು [ಇಂದ್ರಃ] ಪರಮಾತ್ಮನು [ಮಾ] ನನ್ನನ್ನು [ಸಂ ಅಗ್ನೇ] ಭೌತಿಕ ಅಗ್ನಿಯೊಂದಿಗೆ [ವರ್ಚಸಾ] ದೀಪ್ತಿ ಎಂದರೆ ಪ್ರಕಾಶ [ಪ್ರಜಯಾ] ಉತ್ತಮ ಸಂತಾನ ಮತ್ತು [ಸಂ ಆಯುಷಾ] ಸಂಪೂರ್ಣ ಆರೋಗ್ಯದಿಂದ ಯುಕ್ತವಾದ ದೀರ್ಘ ಆಯುಷ್ಯ [ಮಾ] ನನ್ನನ್ನು [ಸಂಸೃಜ] ಸಂಯುಕ್ತವನ್ನಾಗಿ ಮಾಡುತ್ತಾನೆ. ಮತ್ತು [ವಿದ್ಯುಃ] ತಿಳಿಯಲ್ಪಡುತ್ತಾನೆ. [ಮೇ] ನನ್ನ [ಅಸ್ಯ] ಈ ಜನ್ಮದ ಕಾರಣವನ್ನು ಅರ್ಥಾತ್ ಪೂರ್ವಾಪರವನ್ನು [ವಿದ್ಯಾತ್] ಉತ್ತಮವಾದ ರೀತಿಯಲ್ಲಿ ಬಲ್ಲವನಾಗಿದ್ದಾನೆ. ಆದುದರಿಂದ ನಾವೆಲ್ಲರೂ ಈ ಸರ್ವಜ್ಞ ಸರ್ವಪ್ರಕಾಶ ಸ್ವರೂಪ, ಸಕಲೈಶ್ವರ್ಯಪ್ರದಾತನಾದ ಪರಮಾತ್ಮನನ್ನು ಪ್ರತಿದಿನ ತಪ್ಪದೇ ಉಪಾಸಿಸಬೇಕು.

ಭಾವಾರ್ಥ:- ಸರ್ವಜ್ಞನೂ, ಸರ್ವಪ್ರಕಾಶ ಸ್ವರೂಪನೂ ಸಕಲೈಶ್ವರ್ಯಪ್ರದಾತನೂ ಆದ ಪರಮಾತ್ಮನು ನಮ್ಮೆಲ್ಲರನ್ನು ವೇದಮಂತ್ರಗಳ ಅರ್ಥವನ್ನು ಬಲ್ಲ ಹಾಗೂ ಸದಾಸತ್ಯ ಜ್ಞಾನವನ್ನೇ ಕೊಡುವಂತಹ ಋಷಿಗಳೊಂದಿಗೆ ಶ್ರೇಷ್ಠ ವಿದ್ವಾಂಸರನ್ನು ಭೌತಿಕ ಅಗ್ನಿಯನ್ನೂ, ಪ್ರಕಾಶವನ್ನೂ ಶ್ರೇಷ್ಠ ಸಂತಾನವನ್ನೂ, ಸಂಪೂರ್ಣ ಆರೋಗ್ಯದಿಂದ ಕೂಡಿದ ದೀರ್ಘ ಆಯುಷ್ಯವನ್ನೂ ಸಕಲ ಐಶ್ವರ್ಯವನ್ನೂ ಮಾತ್ರವಲ್ಲ, ತನ್ನೊಂದಿಗೆ ಕೂಡಾ ಸಂಯುಕ್ತನನ್ನಾಗಿ ಮಾಡುತ್ತಾನೆ. ಆದುದರಿಂದ ನಾವೆಲ್ಲರೂ ಸದಾಕಾಲ ಪ್ರತಿದಿನ ತಪ್ಪದೇ ದಯಾಮಯನೂ, ಕರುಣಾಳುವೂ, ಸಕಲ ಸುಖ ಪ್ರದಾತನೂ ಆದ ಪರಮಾತ್ಮನ ಉಪಾಸನೆಯನ್ನು ಮಾಡಬೇಕು.

ಪೂರ್ವಸೂಕ್ತದಲ್ಲಿ ವರ್ಣಿಸಲ್ಪಟ್ಟ ಅಶ್ವಿ ಮೊದಲಾದ ಪದಾರ್ಥಗಳ ಅನುಷಂಗಿಗಳಾದ ವಾಯು ಮೊದಲಾದ ಪದಾರ್ಥಗಳನ್ನು ಈ ಸೂಕ್ತದಲ್ಲಿಯೂ ವರ್ಣಿಸಲ್ಪಟ್ಟಿದೆ. ಅಥಃ ಶಬ್ದದಿಂದ ಪ್ರಾಣ ವಾಯು ಎಂಬರ್ಥವೂ ಗ್ರಾಹ್ಯವಾಗುತ್ತದೆ. ಆದುದರಿಂದ ಪೂರ್ವಸೂಕ್ತದೊಂದಿಗೆ ಈ ಸೂಕ್ತದ ಸಂಗತಿಕರಣವಾಗುತ್ತದೆ ಎಂಬುದನ್ನು ಗ್ರಹಿಸಬೇಕು.

ಇಪ್ಪತ್ತಮೂರನೆಯ ಸೂಕ್ತ ಸಮಾಪ್ತ

ಸೂಕ್ತ ೨೪

ಮಂತ್ರಸಂಖ್ಯೆ ೧೫ । ಋಷಿಃ - ಆಜೀಗರ್ತಿಃ ಶುನಃಶೇಪಃ ಕೃತ್ರಿಮೋ ವೈಶ್ವಾಮಿತ್ರೋ ದೇವರಾತಿಃ । ದೇವತಾ - ೧ ಪ್ರಜಾಪತಿಃ, ೨ ಅಗ್ನಿಃ, ೩-೫ ಸವಿತಾ ಭಗೋ ವಾ, ೬-೧೫ ವರುಣಃ । ಛಂದಃ - ೧-೨, ೬-೧೫ ತ್ರಿಷ್ಟುಪ್, ೩-೫ ಗಾಯತ್ರೀ । ಸ್ವರಃ- ೧,೨, ೬-೧೫ ಧೈವತಃ, ೩-೫ ಷಡ್ಜಃ.

ಈ ಸೂಕ್ತದ ಮೊದಲ ಮಂತ್ರದಲ್ಲಿ ಪ್ರಜಾಪತಿಯ ವರ್ಣನೆಯನ್ನು ಮಾಡಲಾಗಿದೆ.

ಕಸ್ಯ ನೂನಂ ಕತಮಸ್ಯಾಮೃತಾನಾಂ ಮನಾಮಹೇ ಚಾರು ದೇವಸ್ಯ ನಾಮ । ಕೋ ನೋ

ಮಹ್ಯಾ ಅದಿತಯೇ ಪುನರ್ದಾತ್ಪಿತರಂ ಚ ದೃಶೇಯಂ ಮಾತರಂ ಚ ॥೧॥

ಪದಾರ್ಥ:- ನಾವೆಲ್ಲರೂ [ಕಸ್ಯ] ಯಾವ ಗುಣಗಳುಳ್ಳ [ಕತಮಸ್ಯ] ಹಲವು ಜನರು [ಅಮೃತಾನಾಂ] ಉತ್ಪತ್ತಿ ವಿನಾಶರಹಿತ ಅನಾದಿ ಮೋಕ್ಷಾನಂದವನ್ನು ಪ್ರಾಪ್ತ ಮಾಡಿದಂತಹ ಜೀವಾತ್ಮರ ಹಾಗೂ ಯಾರು ಜಗತ್ತಿನ

ಕಾರಣ ಮತ್ತು ನಿತ್ಯ ಸ್ವರೂಪದ ಮಧ್ಯದಲ್ಲಿ ವ್ಯಾಪಕನೂ, ಅಮೃತ ಸ್ವರೂಪನೂ, ಅನಾದಿಯೂ, ಅನಂತನೂ ಆದ ಏಕಮಾತ್ರ [ದೇವಸ್ಯ] ಪರಮಾತ್ಮನ [ಚಾರು] ಅತ್ಯಂತ ಸುಂದರವಾದ [ನಾಮ] ಪ್ರಸಿದ್ಧ ಹೆಸರನ್ನು [ನೂನಂ ಮನಾಮಹೇ] ನಿಶ್ಚಯವಾಗಿಯೂ ತಿಳಿಯೋಣ. [ಕಃ] ಯಾವ ಸುಖಸ್ವರೂಪನೂ ಆನಂದ ಸ್ವರೂಪನೂ ಆದ [ದೇವಃ] ದಿವ್ಯಗುಣಗಳುಳ್ಳ ದೇವನು [ನಃ] ಮೋಕ್ಷಾನಂದವನ್ನು ಪಡೆದ ನಂತರವೂ ನಮ್ಮನ್ನು [ಮಹ್ಯಾ] ಅತ್ಯಂತ ಮಹಾನ್ [ಅದಿತಯೇ] ಅಖಂಡನೀಯ ಅರ್ಥಾತ್ ಯಾರ ನಾಶವನ್ನು ಎಂದಿಗೂ ಮಾಡಕೂಡದೋ ಅಂತಹ ಪೃಥ್ವಿಯ ಮಧ್ಯದಲ್ಲಿ [ಪುನಃ ದಾತ್] ಪುನಃ ಜನ್ಮವನ್ನು ಕೊಡುತ್ತಾನೆ. ಅದರಿಂದ ನಾವು ಪುನಃ [ಪಿತರಂ ಚ ಮಾತರಂ ಚ] ತಂದೆ ಮತ್ತು ತಾಯಿಯನ್ನು, ಪಿತಾ ಮತ್ತು ಮಾತೆಯನ್ನು [ದೃಶೇಯಮ್] ನೋಡುತ್ತೇವೆ, ನೋಡಲಪೇಕ್ಷಿಸುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ಬಹಳ ಸುಂದರವಾದ ಪ್ರಶ್ನೆಯನ್ನು ಕೇಳಲಾಗಿದೆ. ಯಾವ ಅತ್ಯುತ್ತಮ ಗುಣಕರ್ಮ ಸ್ವಭಾವಗಳುಳ್ಳ, ಅನಾದಿ ಅನಂತ ಮತ್ತು ಅವಿನಾಶಿ ಹಾಗೂ ನಿತ್ಯ ಸ್ವರೂಪರಾದ ಪ್ರಕೃತಿ, ಜೀವಾತ್ಮ ಮತ್ತು ಪರಮಾತ್ಮ ಇವುಗಳ ಮಧ್ಯದಲ್ಲಿ ಕೇವಲ ಏಕಮಾತ್ರನೂ, ಅನಾದಿ ಅನಂತನೂ, ಆನಂದ ಸ್ವರೂಪನೂ ಆದ ಯಾವ ದೇವನು ಮೋಕ್ಷವನ್ನು ಪ್ರಾಪ್ತ ಮಾಡಿದ ನಂತರವೂ ನಮಗೆ ಪುನಃ ಈ ಅಖಂಡನೀಯವಾದ ಅರ್ಥಾತ್ ಯಾವುದೇ ರೀತಿಯಲ್ಲಿ ನಾಶವನ್ನು ಮಾಡಬಾರದೋ ಅಂತಹ ಪೃಥ್ವಿಯ ಮಧ್ಯದಲ್ಲಿ ಪುನಃ ಜನ್ಮವನ್ನು ಕೊಟ್ಟು ಮಾತಾ ಪಿತರರನ್ನು ನೋಡುವಂತೆ, ಪ್ರಾಪ್ತವಾಗುವಂತೆ ಮಾಡುತ್ತಾನೆ. ಆ ದೇವನ ಅತ್ಯಂತ ಸುಂದರವಾದ ನಾಮವನ್ನು ನಾವು ತಿಳಿಯಬೇಕು. ತಿಳಿದು ಅವನನ್ನೇ ಉಪಾಸಿಸಬೇಕು. ಮೋಕ್ಷವನ್ನು ಪಡೆದ ನಂತರವೂ ನಾವು ಪುನಃ ಜನ್ಮವನ್ನು ಪಡೆಯುತ್ತೇವೆ ಎಂಬ ವಿಷಯವು ಈ ಮಂತ್ರದಿಂದ ಸ್ಪಷ್ಟವಾಗುತ್ತದೆ.

ಈ ಪ್ರಶ್ನೆಗಳ ಉತ್ತರವನ್ನು ಇಲ್ಲಿ ಕೊಡಲಾಗಿದೆ.

ಅಗ್ನೇರ್ವಯಂ ಪ್ರಥಮಸ್ಯಾಮೃತಾನಾಂ ಮನಾಮಹೇ ಚಾರು ದೇವಸ್ಯ ನಾಮ । ಸ ನೋ

ಮಹ್ಯಾ ಅದಿತಯೇ ಪುನರ್ದಾತ್ ಪಿತರಂ ಚ ದೃಶೇಯಂ ಮಾತರಂ ಚ ॥೨॥

ಪದಾರ್ಥ:- [ವಯಂ] ನಾವೆಲ್ಲರೂ ಯಾವ [ಅಗ್ನೇ] ಜ್ಞಾನಸ್ವರೂಪ ಸರ್ವಜ್ಞನಾದ [ಅಮೃತಾನಾಮ್] ವಿನಾಶರಹಿತ ಪದಾರ್ಥಗಳು ಹಾಗೂ ಮೋಕ್ಷಪ್ರಾಪ್ತ ಜೀವಾತ್ಮರ ಮಧ್ಯದಲ್ಲಿ [ಪ್ರಥಮಸ್ಯ] ಸರ್ವಪ್ರಥಮನಾದ ಅನಾದಿ, ಅನಂತ ಅದ್ವಿತೀಯ ಹಾಗೂ ಅನುಪಮನಾದ [ದೇವಸ್ಯ] ಸಂಪೂರ್ಣ ಚರಾಚರ ಜಗತ್ತನ್ನು ತನ್ನ ಪ್ರಕಾಶದಿಂದ ಪ್ರಕಾಶಿಸುವ ಹಾಗೂ ಸಕಲೈಶ್ವರ್ಯಪ್ರದಾತನಾದ ಪರಮೇಶ್ವರನ [ಚಾರು] ಅತ್ಯಂತ ಸುಂದರ ಹಾಗೂ ಪವಿತ್ರವಾದ [ನಾಮ] ಗುಣಗಳ ಗಾನವನ್ನು ಮಾಡಲು [ಮನಾಮಹೇ] ಬಲ್ಲವರಾಗುತ್ತೇವೆ. ಅರ್ಥಾತ್ ಭಗವಂತನ ಗುಣಗಳನ್ನು ನಮ್ಮಲ್ಲಿ ಅಳವಡಿಸಿಕೊಂಡು ಅವನ ಸ್ವರೂಪವನ್ನು ಬಲ್ಲವರಾಗುತ್ತೇವೆ. [ಸಃ ಏವ] ಆ ಪರಮಾತ್ಮನೇ [ನಃ] ನಮ್ಮೆಲ್ಲರನ್ನು [ಮಹ್ಯೈ] ಅತ್ಯಂತ ಮಹಿಮೆಯುಳ್ಳ [ಅದಿತಯೇ] ಈ ಪೃಥ್ವಿಯ ಮಧ್ಯದಲ್ಲಿ [ಪುನಃ ದಾತ್] ಪುನಃ ಜನ್ಮವನ್ನು ಕೊಡುತ್ತಾನೆ. ಅದರಿಂದ ನಾವು ಪುನಃ [ಪಿತರಂ ಚ ಮಾತರಂ ಚ] ತಂದೆ ಮತ್ತು ತಾಯಿಯನ್ನು, ಸ್ತ್ರೀ-ಪುತ್ರ-ಬಂಧು-ಬಾಂಧವರನ್ನು [ದೃಶೇಯಮ್] ನೋಡುತ್ತೇವೆ.

ಭಾವಾರ್ಥ:- ನಾವೆಲ್ಲರೂ ಯಾವ ಅನಾದಿಯೂ, ಅಮರನೂ, ಅಜರನೂ, ಅನಂತನೂ ಆದ ಸಕಲ ಅನಾದಿ ಪದಾರ್ಥಗಳಲ್ಲಿ ಹಾಗೂ ಮೋಕ್ಷ ಪ್ರಾಪ್ತ ಜೀವಾತ್ಮರುಗಳ ಮಧ್ಯದಲ್ಲಿ ಇದ್ದು ಸರ್ವಾಗ್ರಣಿಯೂ ಏಕಮೇವಾ ದ್ವಿತೀಯನೂ ಆದ ನಮ್ಮೆಲ್ಲರ ಪಾಪ ಪುಣ್ಯಾನುಸಾರ ಫಲದ ವ್ಯವಸ್ಥೆಯನ್ನು ಮಾಡಿ ಅದಕ್ಕನುಗುಣವಾಗಿ ಪುನರ್ಜನ್ಮವನ್ನು ಕೊಡುವ ಪರಮಾತ್ಮನ ಗುಣಗಳನ್ನು ಗ್ರಹಣ ಮಾಡಿ, ಅವನ ಸ್ವರೂಪವನ್ನು ತಿಳಿದು, ಉಪಾಸನೆಯನ್ನು

ಮಾಡುತ್ತೇವೆ. ಪ್ರಪಂಚದ ಸಕಲ ಮಾನವರೇ! ನೀವೆಲ್ಲರೂ ಕೂಡ ಯಾವ ನ್ಯಾಯ ವ್ಯವಸ್ಥೆಯ ಮೂಲಕ ಎಲ್ಲರೂ ಪುನರ್ಜನ್ಮವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೋ ಅಂತಹ ನ್ಯಾಯಕಾರಿಯಾದ ಪರಮಾತ್ಮನ ಪವಿತ್ರವಾದ ಗುಣಗಳನ್ನು ಗ್ರಹಣ ಮಾಡಿ, ಅವನ ಸ್ವರೂಪವನ್ನು ತಿಳಿದುಕೊಂಡು ಅವನನ್ನೇ ಉಪಾಸಿಸಿರಿ. ಅವನ ನ್ಯಾಯ ವ್ಯವಸ್ಥೆಗಳಿಗನುಗುಣವಾಗಿ ನಾವೆಲ್ಲರೂ ಪುನರ್ಜನ್ಮವನ್ನು ಪಡೆದು ಪುನಃ ಮಾತಾಪಿತರನ್ನು, ಪತ್ನಿ ಪುತ್ರ ಬಂಧು ಆದಿಗಳನ್ನು ನೋಡುತ್ತೇವೆ. ಮೋಕ್ಷವನ್ನು ಪಡೆದ ನಂತರವೂ ಮಹಾಕಲ್ಪಾಂತದಲ್ಲಿ ಪುನಃ ಜನ್ಮವನ್ನು ಪಡೆಯುತ್ತೇವೆ.

ಪೂರ್ವಮಂತ್ರದಲ್ಲಿ ಚಾರು ನಾಮ ಎಂದರೆ ಸುಂದರವಾದ ಪ್ರಸಿದ್ಧ ಹೆಸರು ಇದೆ. ಆದರೆ ಈ ಮಂತ್ರದಲ್ಲಿ ಚಾರು ನಾಮ ಎಂದರೆ "ಪವಿತ್ರವಾದ ಗುಣಗಳನ್ನು" ಎಂದಾಗುತ್ತದೆ. ಎಷ್ಟರ ತನಕ ಪರಮಾತ್ಮನ ಗುಣಗಳನ್ನು ನಾವು ಗ್ರಹಣ ಮಾಡುವುದಿಲ್ಲವೋ ಅಷ್ಟರತನಕ ಎಲ್ಲವೂ ನಿರರ್ಥಕ.

ಪುನಃ ಆ ಜಗದೀಶ್ವರನು ಹೇಗಿದ್ದಾನೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ಅಭಿ ತ್ವಾ ದೇವ ಸವಿತರೀಶಾನಂ ವಾರ್ಯಾಣಾಮ್ । ಸದಾವನ್ ಭಾಗಮೀಮಹೇ ॥೩॥

ಪದಾರ್ಥ:- ಹೇ [ಸವಿತಃ] ಪೃಥಿವ್ಯಾದಿ ಸಕಲ ಲೋಕ ಲೋಕಾಂತರಗಳ ಸೃಷ್ಟಿಕರ್ತ ಹಾಗೂ [ಅವನ್] ಎಲ್ಲವನ್ನು ಹಾಗೂ ಎಲ್ಲರನ್ನೂ ರಕ್ಷಿಸುವವನಾದ **[ದೇವಃ]** ಆನಂದಸ್ವರೂಪನೂ ಆನಂದದಾಯಕನೂ ಆದ ಪರಮಾತ್ಮ! ನಾವೆಲ್ಲರೂ **[ವಾರ್ಯಾಣಾಮ್]** ಸ್ವೀಕರಣೀಯವಾದ ಪೃಥಿವ್ಯಾದಿ ಸಕಲ ಲೋಕಗಳ **[ಈಶಾನಮ್]** ಯಥಾಯೋಗ್ಯ ವ್ಯವಸ್ಥೆಯನ್ನು ಮಾಡಿ ಎಲ್ಲವನ್ನೂ ಸಂರಕ್ಷಿಸುವ **[ಭಾಗಮ್]** ಎಲ್ಲರಿಂದಲೂ ಉಪಾಸಿಸಲ್ಪಡುವ ಸರ್ವೋಪಾಸ್ಯನಾದ **[ತ್ವಾ]** ನಿನ್ನನ್ನು [ಸದಾ] ಸದಾಕಾಲವೂ **[ಅಭಿಈಮಹೇ]** ನಿನ್ನಿಂದಲೇ ಯಾಚಿಸುತ್ತೇವೆ. ನಿನ್ನಿಂದಲೇ ನಿನ್ನ ಕೃಪೆಯಿಂದಲೇ ಸಕಲ ಪದಾರ್ಥಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತೇವೆ.

ಭಾವಾರ್ಥ:- ಸಕಲ ಮಾನವರು, ಸರ್ವ ಪ್ರಕಾಶ ಸ್ವರೂಪನೂ, ಸಕಲ ಜಗದುತ್ಪಾದಕನೂ, ಸರ್ವರಕ್ಷಕನೂ ಆದ ಪರಮಾತ್ಮನನ್ನೇ ಉಪಾಸಿಸಬೇಕು. ಪರಮಾತ್ಮನನ್ನು ಹೊರತು ಬೇರೆ ಯಾರ ಉಪಾಸನೆಯನ್ನು ಮಾಡಿದರೂ ಭಗವಂತನ ಉಪಾಸನೆಯ ಫಲವು ಖಂಡಿತವಾಗಿಯೂ ಪ್ರಾಪ್ತವಾಗಲಾರದು. ಆ ಪರಮಾತ್ಮನೇ ಸಂಪೂರ್ಣ ಚರಾಚರ ಜಗತ್ತನ್ನು ಸೃಷ್ಟಿಸಿ ಸಂರಕ್ಷಿಸುತ್ತಾನೆ. ಅವನಿಂದಲೇ ಎಲ್ಲವನ್ನೂ ಮಾಡಿಸಬೇಕು. ಹಾಗೂ ಅವನಿಂದಲೇ ಎಲ್ಲವನ್ನೂ ಪ್ರಾಪ್ತಮಾಡಿಕೊಳ್ಳಲು ಅಪೇಕ್ಷಿಸಬೇಕು.

ಪುನಃ ಪರಮೇಶ್ವರನ ವರ್ಣನೆಯನ್ನು ಇಲ್ಲಿ ಕಾಣಬಹುದು.

ಯಶ್ಚಿದ್ಧಿ ತ ಇತ್ಥಾ ಭಗಃ ಶಶಮಾನಃ ಪುರಾ ನಿದಃ । ಅದ್ವೇಷೋ ಹಸ್ತಯೋರ್ದಧೇ ॥೪॥

ಪದಾರ್ಥ:- ಓ ಜೀವಾತ್ಮರೇ! ಮನನಶೀಲ ಮಾನವರೇ! ಯಾವ ರೀತಿ [ಅದ್ವೇಷಃ] ದ್ವೇಷಾಸೂಯೆ ಈರ್ಷ್ಯೆ ಮೊದಲಾದ ದೋಷ ರಹಿತನಾದ ಸರ್ವೈಶ್ವರ್ಯಪ್ರದನಾದ ನಾನು [ಇತ್ಥಾ] ಈ ರೀತಿ ಸುಖಪ್ರಾಪ್ತಿಗೋಸ್ಕರ [ಯಃ] ಯಾವ [ಶಶಮಾನಃ] ಪ್ರಶಂಸನೀಯವಾದ [ಭಗಃ ಅಸಿ] ಸ್ವೀಕರಣೀಯವಾದ ಐಶ್ವರ್ಯವಿದೆಯೋ [ತಂ] ಅದನ್ನು, [ಹಿ] ಶ್ರೇಷ್ಠ ಕರ್ಮಗಳನ್ನು ಮಾಡುವ ಹಾಗೂ ಧರ್ಮಾತ್ಮನಾದ ಧರ್ಮಮಾರ್ಗವನ್ನೇ ಅನುಸರಿಸುವ [ತೇ] ನಿನ್ನ [ಹಸ್ತಯೋಃ] ಕೈಗಳಲ್ಲಿ ನೆಲ್ಲಿಕಾಯಿಯಂತೆ [ದಧೇ] ಇಡುತ್ತೇನೆ. ಅರ್ಥಾತ್ ಸಕಲ ಸಂಪತ್ತು ನಿನಗೆ ಸುಲಭವಾಗಿ ಲಭ್ಯವಾಗುವಂತೆ ಮಾಡುತ್ತೇನೆ. [ಚ] ಮತ್ತು [ಯಃ] ಯಾರು [ಪುರಾ ನಿದಃ ಚಿತ್] ಮೊದಲು ಎಲ್ಲರನ್ನೂ ನಿಂದಿಸುವವನಿದ್ದಾನೋ [ಹಸ್ತಯೋಃ] ಅವನ ಕೈಗಳಿಂದ ನಿಶ್ಚಿತವಾಗಿಯೂ ಆ ಸಂಪತ್ತಿನ ವಿನಾಶವನ್ನು ಮಾಡುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪರಮಾತ್ಮನು ಈ ಮಂತ್ರದ ಮೂಲಕ ಮಾನವಮಾತ್ರರಿಗೆ ಉಪದೇಶವನ್ನು ಕೊಡುತ್ತಾನೆ. ಓ ಮನನಶೀಲ ಮಾನವರೇ! ದ್ವೇಷ, ಅಸೂಯೆ, ಈರ್ಷ್ಯೆ ಮೊದಲಾದ ದೋಷಗಳಿಂದ ಸರ್ವಥಾ ರಹಿತನಾಗಿ ಎಲ್ಲರನ್ನೂ ಪ್ರೀತಿಸುವ ಸಕಲೈಶ್ವರ್ಯಪ್ರದನಾದ, ನಾನು ಸುಖಪ್ರಾಪ್ತಿಗೋಸ್ಕರ ಯಾವ ಪ್ರಶಂಸನೀಯವಾದ ಹಾಗೂ ಸ್ವೀಕರಣೀಯವಾದ ಐಶ್ವರ್ಯವಿದೆಯೋ ಅದನ್ನು, ಸದಾಶ್ರೇಷ್ಠ ಕರ್ಮಗಳನ್ನೇ ಮಾಡುವ ಹಾಗೂ ಧರ್ಮಮಾರ್ಗವನ್ನೇ ಅನುಸರಿಸುವವನಾದ ನಿನ್ನ ಕೈಗಳಲ್ಲಿ ಇಡುತ್ತೇನೆ. ಅರ್ಥಾತ್ ಬಹಳ ಸುಲಭವಾಗಿ ಪ್ರಾಪ್ತವಾಗುವಂತೆ ಮಾಡುತ್ತೇನೆ. ಮತ್ತು ಯಾರು ಸದಾಕಾಲ ಪರರನ್ನು ನಿಂದಿಸುತ್ತಾನೋ ಅವನ ಕೈಗಳಿಂದ ಸಂಪತ್ತಿನ ವಿನಾಶವನ್ನು ಮಾಡುತ್ತೇನೆ.

ಈ ಮಂತ್ರದ ಭಾವವೇನೆಂದರೆ ಸದಾಕಾಲ ನಾವೆಲ್ಲರೂ ಶ್ರೇಷ್ಠಕರ್ಮಗಳನ್ನೇ ಮಾಡುತ್ತಾ ಧರ್ಮ ಮಾರ್ಗವನ್ನೇ ಅನುಸರಿಸಬೇಕು.

ಪುನಃ ಪರಮೇಶ್ವರನ ವಿಷಯವನ್ನೇ ಹೇಳಲಾಗುತ್ತದೆ.

ಭಗಭಕ್ತಸ್ಯ ತೇ ವಯಮುದಶೇಮ ತವಾವಸಾ । ಮೂರ್ಧಾನಂ ರಾಯ ಆರಭೇ ॥೫॥

ಪದಾರ್ಥ:- ಸಕಲ ಜಗದ್ರಕ್ಷಕನೂ ನ್ಯಾಯಕಾರಿಯೂ ದಯಾಳುವೂ ಆದ ಪರಮಾತ್ಮ! [ವಯಂ] ನಾವೆಲ್ಲರೂ [ಭಗಭಕ್ತಸ್ಯ] ಜೀವಮಾತ್ರರಿಂದ, ಪ್ರಾಣಿಮಾತ್ರರಿಂದ ಸೇವಿಸಲ್ಪಡುವ ಅರ್ಥಾತ್ ಭೋಗಿಸಲ್ಪಡುವ ಸಕಲ ಪದಾರ್ಥಗಳನ್ನು ಯಥಾಯೋಗ್ಯ ವಿಭಾಗವನ್ನು ಮಾಡುವ **[ತೇ]** ನಿನ್ನ ಕೀರ್ತಿಯನ್ನು [ಭಗವಂತನ ಗುಣಕರ್ಮ ಹಾಗೂ ಸೃಷ್ಟಿಯೇ ಅವನ ಕೀರ್ತಿಗೆ ನಿದರ್ಶನವಾಗಿದೆ.] **[ಉತ್]** ನಮ್ಮ ಉತ್ಕರ್ಷೆಗಾಗಿ **[ಅಶೇಮ]** ನಮ್ಮಲ್ಲಿ ವ್ಯಾಪಿಸಿಕೊಳ್ಳುತ್ತೇವೆ. ಅರ್ಥಾತ್ ಭಗವಂತನ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತೇವೆ. ತನ್ಮೂಲಕ ನಿನ್ನ **[ಅವಸಾ]** ರಕ್ಷಣೆಯಲ್ಲಿದ್ದು, ನಿನ್ನ ಕೃಪೆಗೆ ಪಾತ್ರರಾಗಿ, ನಿನ್ನ ಕೃಪೆಯಿಂದ **[ರಾಯಃ]** ಸಕಲ ಸಂಪತ್ತಿನ **[ಮೂರ್ಧಾನಮ್]** ಸರ್ವೋತ್ತಮ ಭಾಗವನ್ನು ಪ್ರಾಪ್ತವನ್ನಾಗಿ ಮಾಡಿ **[ಆರಭೇ]** ನಾವು ಆರಂಭ ಮಾಡುವ ಪ್ರತಿಯೊಂದು ವ್ಯವಹಾರದಲ್ಲಿ ಪ್ರತಿನಿತ್ಯ ಪ್ರವೃತ್ತರಾಗುತ್ತೇವೆ.

ಭಾವಾರ್ಥ:- ಸಕಲೈಶ್ವರ್ಯಪ್ರದಾತನೂ, ನ್ಯಾಯಕಾರಿಯೂ ದಯಾಳುವೂ ಆದ ಪರಮಾತ್ಮ! ನಿನ್ನ ಕೀರ್ತಿಯನ್ನು ಅರ್ಥಾತ್ ನಿನ್ನ ಗುಣಗಳನ್ನು ಹಾಗೂ ನಿನ್ನ ಸುಂದರವಾದ ನ್ಯಾಯವ್ಯವಸ್ಥೆಯನ್ನು ನಮ್ಮ ಜೀವನದ ಉತ್ಕರ್ಷೆಗಾಗಿ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತೇವೆ. ಪ್ರಾಣಿ ಮಾತ್ರರಿಗೆ ಸಕಲ ಭೋಗಗಳನ್ನು ಯಥಾ ಯೋಗ್ಯ ಅವರ ಕರ್ಮಾನುಸಾರ ಕೊಡುವ ಪರಮಾತ್ಮ! ನಾವೆಲ್ಲರೂ ನಿನ್ನ ಗುಣಗಳನ್ನು ನಮ್ಮ ಜೀವನದಲ್ಲಿ ಧಾರಣ ಮಾಡಿಕೊಂಡು ನಿನ್ನ ನಿಯಮಕ್ಕೆ ಅನುಗುಣವಾಗಿ ನಮ್ಮ ಜೀವನವನ್ನು ನಡೆಸುತ್ತಾ ನಿನ್ನ ರಕ್ಷಣೆಯಲ್ಲಿದ್ದು, ನಿನ್ನ ಕೃಪೆಯಿಂದ ಸಕಲ ಭೋಗೈಶ್ವರ್ಯಗಳನ್ನು ಪ್ರಾಪ್ತ ಮಾಡಿಕೊಂಡು ನಮ್ಮ ಪ್ರತಿಯೊಂದು ವ್ಯವಹಾರಗಳನ್ನು ಪ್ರತಿನಿತ್ಯ ಆರಂಭಿಸುತ್ತೇವೆ. ನಿನ್ನ ಕೃಪೆಯಿಂದ ನಮ್ಮೆಲ್ಲರ ಸಕಲ ವ್ಯವಹಾರ ಅರ್ಥಾತ್ ಸಕಲ ವ್ಯಾಪಾರ, ಉದ್ಯೋಗ, ಕೃಷಿ ಮತ್ತು ನಾವು ಮಾಡುವ ಸಕಲ ಶ್ರೇಷ್ಠ ಕರ್ಮಗಳೂ ನಿರ್ವಿಘ್ನವಾಗಿ ನೆರವೇರಲಿ.

ಯಾರು ಭಗವಂತನ ಗುಣಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡು ಅವನ ನ್ಯಾಯವ್ಯವಸ್ಥೆಗೆ ಅನುಗುಣವಾಗಿ ತನ್ನ ಜೀವನವನ್ನು ನಡೆಸುತ್ತಾರೋ, ಭಗವಂತನು ಅವರ ರಕ್ಷಣೆಯನ್ನು ಮಾಡುತ್ತಾನೆ ಹಾಗೂ ಭಗವಂತನ ಕೃಪಾದೃಷ್ಟಿ ಸದಾಕಾಲ ಅಂತವರ ಮೇಲೆಯೇ ಇರುತ್ತದೆ ಎಂಬುದೇ ಈ ಮಂತ್ರದ ಭಾವಾರ್ಥ.

ನಂತರ ಆ ಈಶ್ವರನು ಹೇಗಿದ್ದಾನೆ ಎಂಬುದನ್ನು ವಿವರಿಸಲಾಗುತ್ತದೆ.

ನಹಿ ತೇ ಕ್ಷತ್ರಂ ನ ಸಹೋ ನ ಮನ್ಯುಂ ವಯಶ್ಚನಾಮೀ ಪತಯಂತ ಆಪುಃ ।
ನೇಮಾ ಆಪೋ ಅನಿಮಿಷಂ ಚರಂತೀರ್ನ ಯೇ ವಾತಸ್ಯ ಪ್ರಮಿನಂತ್ಯಭ್ವಮ್ ॥೬॥

ಪದಾರ್ಥ:- ಓ ಜಗದೀಶ್ವರ! **[ತವಕ್ಷತ್ರೇ]** ನಿನ್ನ ವಿಶಾಲವಾದ ಅಖಂಡ ರಾಜ್ಯವನ್ನು **[ಪತಯಂತಃ]** ಇತಸ್ತತಃ ಚಲಾಯಮಾನ ಅರ್ಥಾತ್ ಚಲಿಸುವ **[ಅಮೀ]** ಈ ಲೋಕ ಲೋಕಾಂತರಗಳು **[ನ ಆಪುಃ]** ವ್ಯಾಪಿಸಿಕೊಳ್ಳಲಾರವು. ಮತ್ತು **[ನ ವಯಃ]** ಈ ಪಕ್ಷಿಗಳು ಕೂಡ ವ್ಯಾಪಿಸಿಕೊಳ್ಳಲಾರವು. **[ನ ಸಹಃ]** ಯಾರ ಬಲವೂ **[ನ ಮನ್ಯುಂ]** ಯಾರ ಕ್ರೋಧವೂ ಕೂಡ ನಿನ್ನ ರಾಜ್ಯವನ್ನು ವ್ಯಾಪಿಸಿಕೊಳ್ಳಲಾರದು. **[ಅನಿಮಿಷಂ ಚರಂತೀ ಆಪಃ]** ನಿರಂತರವಾಗಿ ಹರಿಯುವ ನೀರು ನಿನ್ನ ಸಾಮರ್ಥ್ಯವನ್ನು, **[ಯೇ ವಾತಸ್ಯ]** ವಾಯುವಿನ ಯಾವ ವೇಗವಿದೆ ಅರ್ಥಾತ್ ಅತ್ಯಂತ ತೀವ್ರ ವೇಗದಿಂದ ಚಲಿಸುವ ವಾಯು **[ನ ಪ್ರಮಿನಂತಿ]** ನಿನ್ನ ಅಸ್ತಿತ್ವವನ್ನು ಪರೀಕ್ಷಿಸಲಾರವು. ಅದೇ ರೀತಿ ಚರಾಚರ ಜಗತ್ತಿನಲ್ಲಿರುವ ಯಾವ ಪದಾರ್ಥವು ಕೂಡ **[ತವ ಅಭ್ವಮ್]** ನಿನ್ನ ಅಸ್ತಿತ್ವವನ್ನು. ನಿನ್ನ ಶಕ್ತಿಯನ್ನು **[ನ ಪ್ರಮಿನಂತಿ]** ಅಪ್ರಮಾಣಿತವನ್ನಾಗಿ ಮಾಡಲಾರವು.

ಭಾವಾರ್ಥ:- ಈ ಮಂತ್ರದಲ್ಲಿ ಪರಮಾತ್ಮನ ಅಖಂಡ, ಅಪ್ರತಿಮ ಶಕ್ತಿಯ ಪರಿಚಯವನ್ನು ಕೊಡಲಾಗಿದೆ. ಅಂತರಿಕ್ಷದಲ್ಲಿ ದ್ಯುಲೋಕದಲ್ಲಿ ತನ್ನ ಕಕ್ಷೆಯಲ್ಲಿ ತಿರುಗುತ್ತಿರುವ ಯಾವ ಲೋಕ ಲೋಕಾಂತರಗಳು, ಯಾವುದೇ ರೀತಿಯ ಗ್ರಹೋಪಗ್ರಹಗಳು ಒಟ್ಟಾಗಿ ಒಂದು ಸೇರಿ ಪರಮಾತ್ಮನ ಅಖಂಡವಾದ ಈ ಪ್ರಪಂಚವನ್ನು ವ್ಯಾಪಿಸಿಕೊಳ್ಳಲಾರವು. ಅತ್ಯಂತ ವೇಗವಾಗಿ ಚಲಿಸುವ ವಾಯು, ನಿರಂತರವಾಗಿ ಹರಿಯುವ, ಚರಾಚರ ಜಗತ್ತಿನಲ್ಲಿರುವ ಯಾವ ಪದಾರ್ಥವೂ ಕೂಡ ಪರಮಾತ್ಮನ ಅಸ್ತಿತ್ವವನ್ನು ಶಕ್ತಿಯನ್ನು, ಪರೀಕ್ಷಿಸಲಾರವು, ಕೆದಕಲಾರವು ಹಾಗೂ ಪರಮಾತ್ಮನ ಅಸ್ತಿತ್ವವನ್ನು ಅಪ್ರಮಾಣಿತವನ್ನಾಗಿ ಮಾಡಲಾರವು.

ಋಗ್ವೇದದ ಈ ಮಂತ್ರದಿಂದ ಅತ್ಯಂತ ಸ್ಪಷ್ಟವಾಗುವ ವಿಷಯವೇನೆಂದರೆ, ಪರಮಾತ್ಮನ ಶಕ್ತಿಯನ್ನಾಗಲಿ, ಪರಮಾತ್ಮನ ಸೃಷ್ಟಿಯನ್ನಾಗಲಿ ಯಾರಿಂದಲೂ ನಷ್ಟ ಮಾಡಲು ಸಾಧ್ಯವಿಲ್ಲ. ಪರಮಾತ್ಮನು ಸ್ವಯಂ ಸಮರ್ಥನು. ಸರ್ವಶಕ್ತನು. ಸಕಲ ಪ್ರಾಣಿಮಾತ್ರರನ್ನು ಸಂಪೂರ್ಣಸೃಷ್ಟಿಯನ್ನು ರಕ್ಷಿಸಲು ಅವನು ಸ್ವಯಂ ಸಮರ್ಥನಾಗಿದ್ದಾನೆ. ಅವನಿಗೆ ಯಾರ ಸಹಾಯವೂ ಅಗತ್ಯವಿಲ್ಲ. ಯಾರಿಂದಲೂ ಯಾವುದೇ ರೀತಿಯ ಕೇಡನ್ನುಂಟುಮಾಡಲೂ ಸಾಧ್ಯವಿಲ್ಲ. ಮಾನವನು ಸೃಷ್ಟಿಯ ನಿಯಮಕ್ಕೆ ವಿರುದ್ಧವಾಗಿ ಧರ್ಮಕ್ಕೆ ವಿರುದ್ಧವಾಗಿ ಆಚರಣೆಯನ್ನು ಮಾಡುವುದರಿಂದ, ಎಲ್ಲಾ ಅನಾಹುತಗಳಾಗುತ್ತವೆ. ಮಾನವನು ಸ್ವಯಂಕೃತಾಪರಾಧದಿಂದ ಎಲ್ಲಾ ವಿಧದ ಕಷ್ಟ, ನಷ್ಟ ಹಾಗೂ ದುಃಖಗಳನ್ನು ಸ್ವತಃ ಅನುಭವಿಸುತ್ತಾನೆ.

ಈಗ ವಾಯು ಮತ್ತು ಸವಿತೃಗಳ ಗುಣವನ್ನು ವರ್ಣಿಸಲಾಗಿದೆ.

ಅಬುಧ್ನೇ ರಾಜಾ ವರುಣೋ ವನಸ್ಯೋರ್ಧ್ವಂ ಸ್ತೂಪಂ ದದತೇ ಪೂತದಕ್ಷಃ ।
ನೀಚೀನಾಃ ಸ್ಥುರುಪರಿ ಬುಧ್ನ ಏಷಾ-ಮಸ್ಮೇ ಅಂತರ್ನಿಹಿತಾಃ ಕೇತವಃ ಸ್ಯುಃ ॥೭॥

ಪದಾರ್ಥ:- **[ರಾಜಾವರುಣಃ]** ದೇದೀಪ್ಯಮಾನನಾದ ಸೂರ್ಯನು **[ಪೂತದಕ್ಷಃ]** ಅತ್ಯಂತ ಪವಿತ್ರ ಹಾಗೂ ಪಾವನವಾದ ತೇಜ ಮತ್ತು ಬಲದಿಂದ ಯುಕ್ತನಾಗಿ **[ವನಸ್ಯಸ್ತೂಪಂ]** ಸಕಲ ಗ್ರಹೋಪಗ್ರಹಗಳಿಂದ ಪ್ರಾಪ್ತಮಾಡಲ್ಪಡುವ ತೇಜಸ್ಸನ್ನು **[ಊರ್ಧ್ವಂ]** ದ್ಯುಲೋಕದಲ್ಲಿ ಹಾಗೂ **[ಅಬುಧ್ನೇ]** ಯಾವುದೇ ರೀತಿಯ ಬಂಧನವಿಲ್ಲದ ಮುಕ್ತ ಆಕಾಶದಲ್ಲಿ ಅಂತರಿಕ್ಷದಲ್ಲಿ **[ದಧತೇ]** ಧಾರಣ ಮಾಡುತ್ತಾನೆ. ಆ ತೇಜಃಪುಂಜನಾದ ಸೂರ್ಯನ ಕಿರಣಗಳು **[ನೀಚೀನಾಃ]** ಅಂತರಿಕ್ಷದ ಕೆಳಗೆ ಇರುವ ಈ ಭೂಮಿಗೂ **[ಸ್ಯುಃ]** ಪ್ರಾಪ್ತವಾಗುತ್ತವೆ. **[ಏಷಾಮ್]** ಇವೆಲ್ಲದರ ಕೇಂದ್ರವು **[ಉಪರಿ]** ಮೇಲೆ ಇದೆ. ಮೇಲೆ ಇರುವ **[ಕೇತವಃ]** ಪ್ರಕಾಶದ ಕಿರಣಗಳೇ **[ಅಸ್ಮೇ ಅಂತಃ]** ನಮ್ಮೆಲ್ಲರ ಅಂತಃಕರಣದಲ್ಲಿ ಹಾಗೂ ನಮ್ಮ ಆತ್ಮನ ಮೇಲೆ ಪ್ರಕಾಶವನ್ನು ಬೀರುತ್ತಾ **[ನಿಹಿತಾಃ ಸ್ಯುಃ]** ನಮ್ಮೊಳಗೆ ವಿದ್ಯಮಾನವಾಗಿದೆ.

ಭಾವಾರ್ಥ:- ದೇದೀಪ್ಯಮಾನನಾದ ಸೂರ್ಯನು ತನ್ನ ಪವಿತ್ರ ಹಾಗೂ ಪಾವನವಾದ ತೇಜ ಮತ್ತು ಬಲದಿಂದ ಯುಕ್ತನಾಗಿ, ದ್ಯುಲೋಕದಲ್ಲಿರುವ ಗ್ರಹೋಪಗ್ರಹಗಳನ್ನು ಬೆಳಗಿಸುತ್ತಾನೆ. ಅದೇ ಸೂರ್ಯನು ಯಾವುದೇ ರೀತಿಯ ಬಂಧನರಹಿತವಾದ ಅಂತರಿಕ್ಷದಲ್ಲಿಯೂ ತನ್ನ ತೇಜಸ್ಸನ್ನು ಧಾರಣ ಮಾಡುತ್ತಾನೆ. ಆ ತೇಜಃಪುಂಜನಾದ ಸೂರ್ಯನ ಕಿರಣಗಳು ಅಂತರಿಕ್ಷದ ಕೆಳಗೆ ಇರುವ ಭೂಮಿಗೂ ಪ್ರಾಪ್ತವಾಗುತ್ತದೆ. ಆದರೆ ಇವೆಲ್ಲಾ ಪ್ರಕಾಶದ ಕೇಂದ್ರಬಿಂದು ಸರ್ವೋಪರಿ ವಿದ್ಯಮಾನವಾಗಿದೆ. ಪರಮಾತ್ಮನ ಪ್ರಕಾಶವೇ ಸೂರ್ಯ ಚಂದ್ರ ನಕ್ಷತ್ರ ಗ್ರಹೋಪಗ್ರಹಗಳನ್ನು ಬೆಳಗಿಸುತ್ತಾ, ಅಂತರಿಕ್ಷದಲ್ಲಿಯೂ ಭೂಮಿಯಲ್ಲಿಯೂ ಪ್ರಕಾಶವನ್ನು ಬೀರುತ್ತಾ, ನಮ್ಮ ಅಂತಃಕರಣದಲ್ಲಿಯೂ ನಮ್ಮೆಲ್ಲರ ಆತ್ಮನ ಮೇಲೆಯೂ ತನ್ನ ಪ್ರಕಾಶವನ್ನು ಬೀರುತ್ತದೆ. ಆ ಸರ್ವಪ್ರಕಾಶ ಸ್ವರೂಪನಾದ ಪರಮಾತ್ಮನ ಪ್ರಕಾಶವು ನಮ್ಮಲ್ಲಿಯೇ ವಿದ್ಯಮಾನವಾಗಿದೆ. ಜ್ಞಾನ, ಯೋಗ ಹಾಗೂ ಭಕ್ತಿಯ ಮೂಲಕ ನಾವೆಲ್ಲರೂ ನಮ್ಮ ಅಂತಃಕರಣದಲ್ಲಿಯೇ ಆ ಪರಮಾತ್ಮನ ಪ್ರಕಾಶವನ್ನು ಕಾಣಬಹುದು.

ಈಗ ವರುಣ ಶಬ್ದದಿಂದ ಆತ್ಮ ಮತ್ತು ವಾಯುವಿನ ಗುಣಗಳನ್ನು ಪ್ರಕಾಶಪಡಿಸಲಾಗುತ್ತದೆ.

ಉರುಂ ಹಿ ರಾಜಾ ವರುಣಶ್ಚಕಾರ ಸೂರ್ಯಾಯ ಪಂಥಾಮನ್ವೇತವಾ ಉ ।
ಅಪದೇ ಪಾದಾ ಪ್ರತಿಧಾತವೇ-ಕರುತಾಪವಕ್ತಾ ಹೃದಯಾವಿಧಶ್ಚಿತ್ ॥೮॥

ಪದಾರ್ಥ:- **[ಹೃದಯಾವಿಧಃ]** ಅನ್ಯಾಯ ಹಾಗೂ ಪರರನ್ನು ಪೀಡಿಸುವ ಮೂಲಕ ಇತರರ ಕೋಮಲ ಹೃದಯವನ್ನು ಘಾಸಿಗೊಳಿಸುವವರನ್ನು **[ಅಪವಕ್ತಾ]** ವೃಥಾ ದೋಷಾರೋಪಣೆ ಮಾಡುವವರನ್ನು, ನಿಂದಿಸುವವರನ್ನು **[ಚಿತ್]** ಯಾವ ರೀತಿ ದಂಡಿಸಿ ಬಂಧನದಲ್ಲಿಡಲಾಗುತ್ತದೆಯೋ ಅದೇ ರೀತಿ **[ವರುಣಃ]** ವರಣೀಯ, ಪೂಜನೀಯ ಅತ್ಯಂತ ಶ್ರೇಷ್ಠನಾದ **[ರಾಜಾ]** ಪ್ರಕಾಶ ಸ್ವರೂಪನಾದ ಹಾಗೂ ಜಗತ್ತನ್ನು ಧಾರಣ ಮಾಡಿ ರಕ್ಷಿಸುವವನಾದ ಪರಮಾತ್ಮನು **[ಸೂರ್ಯಾಯ]** ಸೂರ್ಯನ **[ಅನ್ವೇತವೈ]** ಗಮನಾಗಮನವನ್ನು ಮಾಡುವುದಕ್ಕೋಸ್ಕರ ಅರ್ಥಾತ್ ಸೂರ್ಯನು ನಿರ್ದಿಷ್ಟವಾದ ರೀತಿಯಲ್ಲಿ ತನ್ನ ಪಥದಲ್ಲಿ ಸಂಚರಿಸಲು ಯಾವುದೇ ರೀತಿಯ ಅಡೆತಡೆಗಳಿಲ್ಲದ **[ಉರುಮ್]** ವಿಶಾಲವಾದ **[ಪಂಥಾಮ್]** ಮಾರ್ಗವನ್ನು **[ಚಕಾರ]** ನಿರ್ಮಿಸುತ್ತಾನೆ. **[ಉತ]** ಆದರೂ **[ಅಪದೇ]** ಆಕಾಶದಲ್ಲಿ ಆ ಮಾರ್ಗದ ಯಾವ ಚಾಕ್ಷುಷ ಎಂದರೆ ದೃಷ್ಟಿಗೋಚರವಾದ ಚಿಹ್ನೆಯೇ ಇಲ್ಲ. ಆ ಅಂತರಿಕ್ಷದಲ್ಲಿ **[ಪಾದಾ ಪ್ರತಿಧಾತವೇ ಉ]** ಸೂರ್ಯನ ಗಮನಾಗಮನವು ನಿರಾಂತಕವಾಗಿರಲು ಹಾಗೂ ಸಕಲ ಗ್ರಹೋಪಗ್ರಹಗಳನ್ನು ಧಾರಣ ಮಾಡುವುದಕ್ಕೋಸ್ಕರ ಸೂರ್ಯನನ್ನು ಸೃಷ್ಟಿಸುತ್ತಾನೆ. ಪರಮಾತ್ಮನು ಎಲ್ಲವನ್ನೂ ಧಾರಣ ಮಾಡುವವನೂ, ರಕ್ಷಿಸುವವನೂ ಆಗಿದ್ದಾನೆ. ಆದುದರಿಂದ ಎಲ್ಲರೂ ಆ ಪರಮಾತ್ಮನನ್ನು ಉಪಾಸಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರಗಳಿವೆ. ಪರಮಾತ್ಮನು, ಸೂರ್ಯನಿಗೆ ತನ್ನ ಕಕ್ಷೆಯಲ್ಲಿ ಹಾಗೂ ತನ್ನ ಕಕ್ಷೆಯಲ್ಲಿ ಹಾಗೂ ತನ್ನ ನಿರ್ದಿಷ್ಟವಾದ ಪಥದಲ್ಲಿ ಸಂಚರಿಸಲು ವಿಶಾಲವಾದ ಮಾರ್ಗವನ್ನು ಸೃಷ್ಟಿಸುತ್ತಾನೆ. ಈ ಸೂರ್ಯನು ಸದಾಕಾಲ ಪ್ರಕಾಶವನ್ನು ಬೀರುವಂತೆ ವಾಯು ಎಂದರೆ ವಾಯುವಿನ ವಿಭಿನ್ನ ರೂಪಗಳಾದ ಗ್ಯಾಸ್, [ಹೈಡ್ರೋಜನ್ ಗ್ಯಾಸ್] ಮೊದಲಾದವುಗಳನ್ನು ಇಂಧನ ರೂಪದಲ್ಲಿ, ಸೂರ್ಯನಲ್ಲಿಯೇ ಇಡುತ್ತಾನೆ. ಸಕಲ ಗ್ರಹೋಪಗ್ರಹಗಳು ಅಂತರಿಕ್ಷದಲ್ಲಿ ತಮ್ಮ ಪರಿಧಿಯಲ್ಲಿದ್ದು ಸಂಚರಿಸುತ್ತವೆ. ಯಾವ ಗ್ರಹವೂ ಯಾವ ನಕ್ಷತ್ರವೂ ಇನ್ನೊಂದು ಗ್ರಹಕ್ಕೆ ಅಥವಾ ನಕ್ಷತ್ರಕ್ಕೆ ಡಿಕ್ಕಿ ಹೊಡೆಯುವುದಿಲ್ಲ. ಯಾವ ಉಪಗ್ರಹವೂ ಗ್ರಹಗಳ ಸಂಚಲನಕ್ಕೆ ಬಾಧಕವಾಗುವುದಿಲ್ಲ. ಎಲ್ಲಾ ಗ್ರಹೋಪಗ್ರಹಗಳು ಆಕರ್ಷಣ ಹಾಗೂ ಧಾರಣ ಶಕ್ತಿಯ ಮೂಲಕ ತಮ್ಮ ನಿರ್ದಿಷ್ಟವಾದ ಪಥದಲ್ಲಿ ಸಂಚರಿಸುತ್ತವೆ. ಸಕಲ ಗ್ರಹೋಪಗ್ರಹಗಳನ್ನು ಆಕರ್ಷಿಸಿ ಧಾರಣ ಮಾಡಲು ಹಾಗೂ ಅವುಗಳನ್ನು ಬೆಳಗಿಸಲು ಪರಮಾತ್ಮನು ಸೂರ್ಯನನ್ನು ಸೃಷ್ಟಿಸುತ್ತಾನೆ. ಆ ಸೂರ್ಯನನ್ನು ಪರಮಾತ್ಮನು

ತನ್ನ ಪ್ರಕಾಶದಿಂದ ಪ್ರಕಾಶಿತನನ್ನಾಗಿ ಮಾಡಿ ಧಾರಣ ಮಾಡುತ್ತಾನೆ. ಈ ರೀತಿ ಸಕಲ ಚರಾಚರ ಜಗತ್ತನ್ನು ಸೃಷ್ಟಿಸಿ ಧಾರಣ ಮಾಡುವ ಪರಮಾತ್ಮನನ್ನು ಎಲ್ಲರೂ ಉಪಾಸಿಸಬೇಕು.

ಅದೇ ರೀತಿ ಶರೀರದಲ್ಲಿ ಅನೇಕ ರೀತಿಯ ರೋಗರುಜಿನಗಳು ವ್ಯಾಪಿಸಿಕೊಳ್ಳುತ್ತವೆ. ಆ ರೋಗರುಜಿನಗಳನ್ನು ತಡೆಗಟ್ಟಲು ಹಾಗೂ ಪ್ರತಿರೋಧಿಸಲು ಪ್ರಾಣವಾಯು ಸಮರ್ಥವಾಗಿದೆ. ಆದುದರಿಂದ ಎಲ್ಲರೂ ಪ್ರಾಣಾಯಾಮದ ಮೂಲಕ ಪ್ರಾಣಶಕ್ತಿಯನ್ನು ವರ್ಧಿಸಿಕೊಂಡು ಸಕಲ ರೋಗರುಜಿನಗಳನ್ನು ಗುಣಪಡಿಸಬೇಕು. ಮಾತ್ರವಲ್ಲ, ಅವನ್ನು ತಡೆಹಿಡಿದು ಎಂದಿಗೂ ಬಾರದಂತೆ ಜಾಗ್ರತೆ ವಹಿಸಬೇಕು.

ಈಗ ರಾಜಾ ಮತ್ತು ಪ್ರಜೆಗಳು ಯಾವ ರೀತಿ ಇರಬೇಕು ಎಂಬುದನ್ನು ತಿಳಿಸಲಾಗಿದೆ.

ಶತಂ ತೇ ರಾಜನ್ ಭಿಷಜಃ ಸಹಸ್ರ-ಮುರ್ವೀ ಗಭೀರಾ ಸುಮತಿಷ್ಟೇ ಅಸ್ತು ।
ಬಾಧಸ್ವ ದೂರೇ ನಿರ್‌ಋತಿಂ ಪರಾಚೈಃ ಕೃತಂ ಚಿದೇನಃ ಪ್ರ ಮುಮುಗ್ಧ್ಯಸ್ಮತ್ ॥೮॥

ಪದಾರ್ಥ:- **[ರಾಜನ್]** ಓ ಪ್ರಜಾಪಾಲಕನಾದ ರಾಜನೇ! **[ಭಿಷಜಃ]** ಸರ್ವರೋಗಗಳನ್ನು ನಿವಾರಣ ಮಾಡುವ **[ತೇ ಶತಮ್]** ಯಾವ ನಿನ್ನ ಅಸಂಖ್ಯಾತ ಔಷಧಿಗಳಿವೆಯೋ ಮತ್ತು **[ಸಹಸ್ರಮ್]** ಸಾವಿರಾರು ಮೈಲುಗಳಷ್ಟು ವಿಸ್ತೃತವಾದ ಯಾವ ನಿನ್ನ **[ಗಭೀರಾ ಉರ್ವೀ]** ಫಲವತ್ತಾದ ಭೂಮಿ ಇದೆಯೋ ಆ **[ನಿರ್‌ಋತಿಮ್]** ಭೂಮಿಯನ್ನು **[ತೇ ಸುಮತಿಃ ಅಸ್ತು]** ನಿನ್ನ ಅತ್ಯುತ್ತಮವಾದ ಬುದ್ಧಿವಂತಿಕೆಯಿಂದ ರಕ್ಷಿಸು. ಯಾವ ದುಷ್ಟ ಸ್ವಭಾವಯುಕ್ತವಾದ ಪ್ರಾಣಿಗಳಿವೆಯೋ ಅವುಗಳನ್ನು **[ಪ್ರಮುಮುಗ್ಧಿ]** ದುಷ್ಟ ಸ್ವಭಾವದಿಂದ ದೂರವಾಗುವಂತೆ ಮಾಡು. ಅರ್ಥಾತ್ ದುಷ್ಟ ಸ್ವಭಾವಯುಕ್ತವಾದ ಪ್ರಾಣಿಗಳನ್ನು ಉತ್ತಮವಾದ ರೀತಿಯಲ್ಲಿ ಪಳಗಿಸಿ, ಅವುಗಳಿಂದ ಯಾವುದೇ ರೀತಿಯ ಹಾನಿಯಾಗದಂತೆ ಜಾಗ್ರತೆ ವಹಿಸು. ಮತ್ತು **[ಪರಾಚೈಃ]** ಧರ್ಮ ಮಾರ್ಗದಿಂದ ವಿಮುಖರಾದ ಮಾನವರು **[ಕೃತಮ್]** ಮಾಡಿದಂತಹ ಹಾಗೂ ಮಾಡುವಂತಹ **[ಏನಃ ಚಿತ್]** ಪಾಪಗಳಿವೆಯೋ ಅವುಗಳಿಂದ **[ಅಸ್ಮತ್ ದೂರೇ ಬಾಧಸ್ವ]** ನಮ್ಮನ್ನು ದೂರವಿರಿಸಿ ರಕ್ಷಿಸು. ಅಧರ್ಮಿಗಳು, ದುಷ್ಟರು, ಪಾಪಿಗಳು ಮಾಡುವಂತಹ ನೀಚಕೃತ್ಯಗಳಿಂದ ನಮಗೆ ಯಾವುದೇ ರೀತಿಯ ಹಾನಿ ಮತ್ತು ತೊಂದರೆಯಾಗದಿರಲಿ. ಅವರೆಲ್ಲರನ್ನೂ ಅವರ ಕರ್ಮಗಳಿಗೆ ಅನುಗುಣವಾಗಿ ಯೋಗ್ಯರೀತಿಯಲ್ಲಿ ದಂಡಿಸು. ನಮ್ಮನ್ನು ಶತ್ರುಚೋರ ದಸ್ಯು ಮೊದಲಾದವರಿಂದ ರಕ್ಷಿಸು. ಅದೇ ರೀತಿ ನಾವು ಕೂಡ ದುಷ್ಟ ಸ್ವಭಾವದವರಾಗದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವ ರಾಜನು ಅತ್ಯುತ್ತಮವಾದ ವ್ಯವಸ್ಥೆಯ ಮೂಲಕ, ಸಕಲ ಔಷಧಿ ವನಸ್ಪತಿಗಳನ್ನು ಫಲವತ್ತಾದ ಭೂಮಿಯನ್ನು ಭೂಮಿಯಲ್ಲಿ ಬೆಳೆಸಿದ ಉತ್ತಮವಾದ ಬೆಳೆಯನ್ನು ರಕ್ಷಿಸುತ್ತಾನೋ, ದುಷ್ಟ ಸ್ವಭಾವದಿಂದ ಪ್ರಾಣಿಗಳಿಂದ ಅಧರ್ಮಿಗಳು, ದುಷ್ಟರು, ಪಾಪಿಗಳು, ಚೋರರು, ಶತ್ರುಗಳು, ವಂಚಕರು, ದರೋಡೆಕೋರರು ಮೊದಲಾದವರು ಮಾಡುವಂತಹ ನೀಚಕೃತ್ಯಗಳಿಂದ ಪ್ರಜೆಗಳನ್ನು ಉತ್ತಮವಾದ ರೀತಿಯಲ್ಲಿ ರಕ್ಷಿಸಿ, ದುಷ್ಟರಿಗೆ ಅವರು ಮಾಡಿದ ಮತ್ತು ಮಾಡುವ ಕರ್ಮಗಳಿಗೆ ಅನುಗುಣವಾಗಿ ಯೋಗ್ಯವಾದ ರೀತಿಯಲ್ಲಿ ದಂಡಿಸಿ ಉತ್ತಮವಾದ ರೀತಿಯಲ್ಲಿ ಪ್ರಜೆಗಳ ಪಾಲನೆಯನ್ನು ಮಾಡುತ್ತಾನೋ, ಅಂತಹ ರಾಜನನ್ನೇ, ಅಂತಹ ಸಮರ್ಥ ನಾಯಕರನ್ನೇ ಆರಿಸಬೇಕು ಮತ್ತು ಸಹಕರಿಸಬೇಕು. ಹಾಗೂ ಸಮರ್ಥಿಸಬೇಕು.

ಯಾವ ಮಾನವನೂ ಕೂಡ ಭೂತಕಾಲದಲ್ಲಿ ಮಾಡಿದ, ವರ್ತಮಾನಕಾಲದಲ್ಲಿ ಮಾಡುತ್ತಾ ಇರುವ ಹಾಗೂ ಭವಿಷ್ಯತ್ತಿನಲ್ಲಿ ಮಾಡಲಿರುವ ಸಕಲ ಪಾಪಗಳ ಫಲವನ್ನು ಅನುಭವಿಸದೇ ಅವುಗಳಿಂದ ಮುಕ್ತನಾಗಲು ಸಾಧ್ಯವಿಲ್ಲ. ಪರಮಾತ್ಮನ ಪ್ರಾರ್ಥನೆ, ಉಪಾಸನೆ ಹಾಗೂ ಪುರುಷಾರ್ಥದಿಂದ, ನಾವು ಪಾಪದಿಂದ ದುಷ್ಟಕರ್ಮಗಳಿಂದ

ದೂರವಿರಲು ಸಾಧ್ಯವಿದೆ. ಆದರೆ ಮಾಡಿದಂತಹ ಹಾಗೂ ಮಾಡುವ ಯಾವ ಪಾಪದ ಫಲದಿಂದಲೂ ಮುಕ್ತರಾಗಲು ಖಂಡಿತ ಸಾಧ್ಯವಿಲ್ಲ. ಅದರ ಫಲವನ್ನು ಅನುಭವಿಸಲೇಬೇಕು.

ಯಾವ ಲೋಕಗಳು ಅಂತರಿಕ್ಷದಲ್ಲಿ ಕಂಡುಬರುತ್ತವೆಯೋ ಅವುಗಳನ್ನು ಯಾರು ಯಾವ ಪ್ರಕಾರದಿಂದ ಧಾರಣೆ ಮಾಡಿದ್ದಾರೆ ಎಂಬುದನ್ನು ತಿಳಿಸಲಾಗಿದೆ.

ಅಮೀ ಯ ಋಕ್ಷಾ ನಿಹಿತಾಸ ಉಚ್ಚಾ ನಕ್ತಂ ದದೃಶ್ರೇ ಕುಹ ಚಿದ್ ದಿವೇಯುಃ ।
ಅದಬ್ಧಾನಿ ವರುಣಸ್ಯ ವ್ರತಾನಿ ವಿಚಾಕಶಚ್ಚಂದ್ರಮಾ ನಕ್ತಮೇತಿ ॥೧೦॥

ಪದಾರ್ಥ:- ನಾವು ಕೇಳುವ ಪ್ರಶ್ನೆ ಅರ್ಥಾತ್ ನಮ್ಮ ಒಂದು ಜಿಜ್ಞಾಸೆ **[ಅಮೀ]** ಈ ದೃಶ್ಯಾದೃಶ್ಯ ಅರ್ಥಾತ್ ಒಂದು ಸಮಯದಲ್ಲಿ ದೃಷ್ಟಿಗೋಚರವಾಗಿ ಇನ್ನೊಂದು ಸಮಯದಲ್ಲಿ ಅದೃಶ್ಯವಾಗುವ **[ಋಕ್ಷಾಃ]** ಚಂದ್ರ ನಕ್ಷತ್ರ ಮೊದಲಾದವುಗಳು ಹಾಗೂ ಗ್ರಹೋಪಗ್ರಹಗಳನ್ನು **[ಉಚ್ಚಾಃ]** ಮೇಲೆ ಅಂತರಿಕ್ಷಕ್ಕಿಂತಲೂ ಮೇಲೆ ದ್ಯುಲೋಕದಲ್ಲಿ **[ನಿಹಿತಾಸಃ]** ಸ್ಥಿರವಾಗಿರುವಂತೆ ಹಾಗೂ ವ್ಯವಸ್ಥಿತವಾದ ರೀತಿಯಲ್ಲಿ ಯಾರು ಇಟ್ಟಿದ್ದಾರೆ? **[ನಕ್ತಂ ನಃ ದದೃಶ್ರೇ]** ರಾತ್ರಿಯಲ್ಲಿ ನಮ್ಮೆಲ್ಲರಿಗೂ ದೃಷ್ಟಿಗೋಚರವಾಗುತ್ತವೆ, ಆದರೆ **[ದಿವಾ]** ಹಗಲಿನಲ್ಲಿ **[ಕುಹ ಚಿತ್]** ಎಲ್ಲಿಗೆ **[ಈಯುಃ]** ಹೋಗುತ್ತವೆ? ಮಂತ್ರದ ಉತ್ತರ ಭಾಗದಲ್ಲಿ ಅದರ ಉತ್ತರ ಈ ರೀತಿ ಇದೆ:-

[ವರುಣಸ್ಯ] ಪರಮಾತ್ಮನ ಹಾಗೂ ಸೂರ್ಯನ **[ಅದಬ್ಧಾನಿ]** ಅಹಿಂಸನೀಯ ಅರ್ಥಾತ್ ಹಿಂಸಾರಹಿತವಾದ **[ವ್ರತಾನಿ]** ಯಾವ ವ್ಯವಸ್ಥೆ ಮತ್ತು ನಿಯಮವಿದೆಯೋ ಅದಕ್ಕೆ ಅನುಗುಣವಾಗಿ ಅವೆಲ್ಲವೂ ಮೇಲೆ ಸ್ಥಿರವಾಗಿ ಸ್ಥಿತವಾಗಿವೆ. **[ನಕ್ತಂ]** ರಾತ್ರಿಯಲ್ಲಿ **[ವಿಚಾಕಶತ್]** ಉತ್ತಮವಾದ ರೀತಿಯಲ್ಲಿ ಪ್ರಕಾಶಿತವಾಗುತ್ತವೆ. ಇವೆಲ್ಲಿಗೂ ಹೋಗುವುದಿಲ್ಲ. ಆಕಾಶದ ಮಧ್ಯದಲ್ಲಿಯೇ ಇರುತ್ತವೆ. **[ಚಂದ್ರಮಾಃ]** ಚಂದ್ರ ಮೊದಲಾದ ಲೋಕಗಳು **[ಏತಿ]** ಪ್ರಕಾಶಮಾನವಾಗುತ್ತವೆ ಹಾಗೂ ಹಗಲಿನಲ್ಲಿ ಸೂರ್ಯನ ಪ್ರಕಾಶದಲ್ಲಿ ಮರೆಯಾಗುತ್ತವೆ. ಸೂರ್ಯನ ಅತ್ಯಂತ ತೀಕ್ಷ್ಣವಾದ ಪ್ರಕಾಶದಿಂದ ಅವೆಲ್ಲವೂ ತಿರೋಹಿತವಾಗುತ್ತವೆ. ಅಗೋಚರವಾಗುತ್ತವೆ. ನಮ್ಮ ದೃಷ್ಟಿಗೆ ಗೋಚರವಾಗುವುದಿಲ್ಲ. ಸರ್ವಪ್ರಕಾಶ ಸ್ವರೂಪನಾದ ಪರಮಾತ್ಮನೇ ಇವೆಲ್ಲವನ್ನು ಸೃಷ್ಟಿಸಿ ಪ್ರಕಾಶಿಸುವವನಾಗಿದ್ದಾನೆ.

ಭಾವಾರ್ಥ:- ಈ ಮಂತ್ರದ ಪೂರ್ವಾರ್ಧದಲ್ಲಿ ಪ್ರಶ್ನೆ ಮತ್ತು ಉತ್ತರಾರ್ಧದಲ್ಲಿ ಅದರ ಉತ್ತರ ಇದೆ. ಈ ಚಂದ್ರ ನಕ್ಷತ್ರಾದಿಗಳನ್ನು ಅಂತರಿಕ್ಷಕ್ಕಿಂತಲೂ ಮೇಲೆ ದ್ಯುಲೋಕದಲ್ಲಿ ವ್ಯವಸ್ಥಾಬದ್ಧವಾಗಿ ಯಾರು ಇಟ್ಟಿದ್ದಾರೆ? ರಾತ್ರಿಯಲ್ಲಿ ಪ್ರಕಾಶಮಾನವಾಗಿ ನಮ್ಮೆಲ್ಲರಿಗೆ ದೃಷ್ಟಿಗೋಚರವಾಗುವ ಚಂದ್ರ ನಕ್ಷತ್ರಾದಿಗಳು ಗ್ರಹೋಪಗ್ರಹಗಳು, ಹಗಲಿನಲ್ಲಿ ಎಲ್ಲಿ ಹೋಗುತ್ತಿವೆ? ಹಗಲಿನಲ್ಲಿ ನಮಗೆ ಏಕೆ ದೃಷ್ಟಿಗೋಚರವಾಗುವುದಿಲ್ಲ? ಇದೊಂದು ಜಿಜ್ಞಾಸೆ. ಇದರ ಉತ್ತರ ಹೀಗಿದೆ - ಚಂದ್ರ ನಕ್ಷತ್ರಾದಿಗಳು ಎಲ್ಲಿಗೂ ಹೋಗುವುದಿಲ್ಲ. ಆಕಾಶದಲ್ಲಿಯೇ ಇರುತ್ತವೆ. ಪರಮಾತ್ಮನ ಮತ್ತು ಸೂರ್ಯನ ನಿರ್ದಿಷ್ಟವಾದ ವ್ಯವಸ್ಥೆ ಹಾಗೂ ನಿಯಮಾನುಸಾರ ಅವೆಲ್ಲವೂ ಆಕಾಶದಲ್ಲಿ ಸ್ಥಿರವಾಗಿವೆ. ರಾತ್ರಿಯಲ್ಲಿ ಪ್ರಕಾಶಮಾನವಾಗುತ್ತವೆ. ಹಗಲಿನಲ್ಲಿ ಸೂರ್ಯನ ಅತ್ಯಂತ ಪ್ರಖರವಾದ ಪ್ರಕಾಶದಲ್ಲಿ ಅವೆಲ್ಲವೂ ಅಗೋಚರವಾಗುತ್ತವೆ. ಪರಮಾತ್ಮನೇ ಇವೆಲ್ಲವನ್ನೂ ಸೃಷ್ಟಿಸಿ ಪ್ರಕಾಶಿಸುತ್ತಾನೆ.

ನಂತರ ಆ ವರುಣನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗಿದೆ.

ತತ್ ತ್ವಾ ಯಾಮಿ ಬ್ರಹ್ಮಣಾ ವಂದಮಾನ-ಸ್ತದಾಶಾಸ್ತೇ ಯಜಮಾನೋ ಹವಿರ್ಭಿಃ ।
ಅಹೇಳಮಾನೋ ವರುಣೇಹ ಬೋಧ್ಯು-ರುಶಂಸ ಮಾ ನ ಆಯುಃ ಪ್ರ ಮೋಷೀಃ ॥೧೧॥

ಪದಾರ್ಥ:- ಹೇ [ಉರುಶಂಸ] ಎಲ್ಲರಿಂದಲೂ ಪ್ರಶಂಸಿಸಲ್ಪಡುವವನೂ, ಸ್ತುತಿಸಲ್ಪಡುವವನೂ ಆದ [ವರುಣ] ಸರ್ವೋಪಾಸ್ಯನಾದ ಪರಮಾತ್ಮ! [ತ್ವಾ] ನಿನ್ನ ಆಶ್ರಯವನ್ನು ಪಡೆದು [ಯಜಮಾನಃ] ತ್ರಿವಿಧ ಯಜ್ಞ = ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ ಯಜ್ಞ, ೨] ಜ್ಞಾನಯಜ್ಞ, ಕರ್ಮಯಜ್ಞ, ಉಪಾಸನಾ ಯಜ್ಞ ೩] ಜ್ಞಾನಯಜ್ಞ, ದಾನಯಜ್ಞ, ಸೇವಾ ಯಜ್ಞವನ್ನು ಮಾಡುವ ವಿದ್ವಾಂಸನು [ಹವಿಭಿಃ] ಹವಿಸ್ಸನ್ನು ಅರ್ಪಿಸುವ ಮೂಲಕ [ತತ್] ಆ ಅನಂತ ಸುಖದ [ಆಶಾಸ್ತೇ] ಕಾಮನೆಯನ್ನು ಮಾಡುತ್ತಾನೆ. [ತಂ ತ್ವಾ] ಸಕಲ ಮನೋಕಾಮನೆಗಳನ್ನು ಈಡೇರಿಸುವ ನಿನ್ನನ್ನು [ಬ್ರಹ್ಮಣಾ] ವೇದಮಂತ್ರಗಳ ಮೂಲಕ ಸ್ತುತಿಸುತ್ತಾ ಉಪಾಸಿಸುತ್ತಾ [ವಂದಮಾನಃ] ವಿನಯದಿಂದ ವಂದಿಸುತ್ತಾ [ಅಹೇಡಮಾನಃ] ಎಂದಿಗೂ ನಿನ್ನ ಅಪಮಾನವನ್ನು ಮಾಡದೇ, ನಿನ್ನ ಆದೇಶವನ್ನು , ಉಪದೇಶವನ್ನು ಅವಹೇಳನ ಮಾಡದೇ ನಾನು [ಯಾಮಿ] ನಿನ್ನ ಸಾನ್ನಿಧ್ಯವನ್ನು ಹೊಂದುತ್ತೇನೆ. ನಿನ್ನನ್ನು ಪ್ರಾಪ್ತ ಮಾಡಿಕೊಳ್ಳುತ್ತೇನೆ. ನಮ್ಮೆಲ್ಲರ ಮೇಲೆ ಕೃಪೆ ದೋರಿ [ಬೋಧಿ] ನಮಗೆ ಬೋಧಿಸು. ನಮ್ಮ ಬುದ್ಧಿಯನ್ನು ಉತ್ತಮ ಕರ್ಮದ ಕಡೆಗೆ ಪ್ರೇರೇಪಿಸು. ಹಾಗೂ [ನಃ] ಆಯುಃ] ನಮ್ಮೆಲ್ಲರ ಆಯುಷ್ಯವನ್ನು [ಮಾ ಪ್ರಮೋಷೀಃ] ವ್ಯರ್ಥವನ್ನಾಗಿ ಮಾಡಬೇಡ. ಅರ್ಥಾತ್ ನಾವೆಲ್ಲರೂ ನಮ್ಮ ಅಮೂಲ್ಯವಾದ ಮಾನವ ಜನ್ಮವನ್ನು ವ್ಯರ್ಥವಾಗಿ ಕಳೆಯದೇ ಸದಾ ಸತ್ಕರ್ಮದಲ್ಲಿ ನಿರತರಾಗುವಂತಾಗಲಿ. ನಮ್ಮೆಲ್ಲರ ಆತ್ಮವು ನಿನ್ನ ಪ್ರಕಾಶದಿಂದ ಬೆಳಗಲಿ.

ಆ ಅನಂತ ಸುಖವನ್ನು ಹಾಗೂ ಶಕ್ತಿಯನ್ನು ಪಡೆದುಕೊಳ್ಳಲು ಬಯಸುವ **[ಯಜಮಾನಃ]** ಆಧಿಭೌತಿಕ ಆಧಿದೈವಿಕ ಹಾಗೂ ಆಧ್ಯಾತ್ಮಿಕ ತ್ರಿವಿಧ ಯಜ್ಞವನ್ನು ಮಾಡುವ ಯಜನಶೀಲನಾದ ಮಾನವನು **[ಉರುಶಂಸಃ]** ಸರ್ವರಿಂದಲೂ ಪ್ರಶಂಸಿಸಲ್ಪಡುವ **[ವರುಣಂ]** ಸೂರ್ಯನನ್ನು **[ಆಶಾಸ್ತೇ]** ಬಯಸುತ್ತಾನೆ. ಸೂರ್ಯನಿಂದ ಪ್ರಕಾಶವನ್ನು ಹಾಗೂ ಶಕ್ತಿಯನ್ನು ಪ್ರಾಪ್ತ ಮಾಡಿಕೊಳ್ಳಲು ಅಪೇಕ್ಷಿಸುತ್ತಾನೆ. **[ತ್ವಾ]** ಸಂಪೂರ್ಣ ಜಗತ್ತನ್ನು ತನ್ನ ಪ್ರಕಾಶದಿಂದ ಬೆಳಗಿಸುವ ನಿನ್ನನ್ನು **[ಬ್ರಹ್ಮಣಾ]** ಜ್ಞಾನ ಮತ್ತು ಕ್ರಿಯೆಯ ಮೂಲಕ **[ವಂದಮಾನಃ]** ಸಕಲ ಪ್ರಯೋಜನಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾ **[ಅಹೇಡಮಾನಃ]** ಎಂದಿಗೂ ಸೂರ್ಯನ ಗುಣಗಳನ್ನು ಹಾಗೂ ಶಕ್ತಿಯನ್ನು ಕಡೆಗಣಿಸದೇ **[ತತ್]** ಆ ನಿನ್ನ ಪ್ರಕಾಶ ಮತ್ತು ಶಕ್ತಿಯಿಂದ ಸಕಲ ಪ್ರಯೋಜನವನ್ನು ಅಪೇಕ್ಷಿಸುತ್ತಾ **[ಯಾಮಿ]** ನಿನ್ನನ್ನು ಪ್ರಾಪ್ತ ಮಾಡಿಕೊಳ್ಳುತ್ತೇವೆ. **[ಉರುಶಂಸಃ]** ಸರ್ವರಿಂದ ಪ್ರಶಂಸಿಸಲ್ಪಡುವ **[ವರುಣಃ]** ಸೂರ್ಯನು **[ನಃ ಬೋಧಿ]** ನಮ್ಮೆಲ್ಲರಿಗೂ ತನ್ನ ಪ್ರಕಾಶವನ್ನು ಬೀರುತ್ತಾ ಶಕ್ತಿಯನ್ನು ಪ್ರದಾನ ಮಾಡಲಿ. **[ನಃ ಆಯುಃ]** ನಮ್ಮೆಲ್ಲರ ಆಯುಷ್ಯವು **[ಮಾ ಪ್ರಮೋಷೀಃ]** ಎಂದಿಗೂ ಕ್ಷೀಣಿಸದಿರಲಿ. ನಮ್ಮ ಶಕ್ತಿಯು ಎಂದಿಗೂ ಕುಂಠಿತವಾಗದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಪ್ರತಿಯೊಬ್ಬ ಮಾನವನು ಪರಮಾತ್ಮನ ಸ್ವರೂಪವನ್ನು ಹಾಗೂ ಸೂರ್ಯನ ಶಕ್ತಿಯನ್ನು ಸಂಪೂರ್ಣವಾಗಿ ತಿಳಿಯಲು ಪ್ರಯತ್ನಿಸಬೇಕು. ಎಂದಿಗೂ ಪರಮಾತ್ಮನ ಆಜ್ಞೆಯನ್ನು ಉಲ್ಲಂಘಿಸದೇ, ಸೂರ್ಯನ ಶಕ್ತಿಯನ್ನು ಕಡೆಗಾಣಿಸದೇ, ಎರಡನ್ನೂ ಯೋಗ್ಯವಾದ ರೀತಿಯಲ್ಲಿ ಪ್ರಾಪ್ತ ಮಾಡಿಕೊಳ್ಳಬೇಕು. ಮಾನವ ಜನ್ಮವನ್ನು ವ್ಯರ್ಥವಾಗಿ ಕಳೆಯದೇ ಸದಾ ಸತ್ಕರ್ಮದಲ್ಲಿ ನಿರತರಾಗುತ್ತಾ, ಪ್ರಕಾಶವನ್ನು ಮತ್ತು ಶಕ್ತಿಯನ್ನು ಹೊಂದುತ್ತಾ ಅನಂತಸುಖವನ್ನು ಪ್ರಾಪ್ತಮಾಡಿಕೊಳ್ಳಲು ಬಯಸಬೇಕು. ಪರಮಾತ್ಮನು ನಮ್ಮೆಲ್ಲರ ಬುದ್ಧಿಯನ್ನು ಉತ್ತಮ ಕರ್ಮದ ಕಡೆಗೆ ಪ್ರೇರೇಪಿಸಲಿ. ನಮ್ಮ ಆಯುಷ್ಯ ಮತ್ತು ಶಕ್ತಿಯು ಎಂದಿಗೂ ಕ್ಷೀಣಿಸದೇ, ಕುಂಠಿತವಾಗದೇ, ನಾವೆಲ್ಲರೂ ದೀರ್ಘಾಯುಗಳಾಗಿ ಆರೋಗ್ಯವಂತರಾಗಿ ಶ್ರೇಷ್ಠಮಾನವರಾಗಿ ಬಾಳೋಣ. ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ - ಜ್ಞಾನಯಜ್ಞ, ದಾನಯಜ್ಞ ಮತ್ತು ಸೇವಾಯಜ್ಞವನ್ನು ಅಜೀವ ಪರ್ಯಂತ ನಿರಂತರವಾಗಿ ಮಾಡುತ್ತಾ ಈ ಭೂಮಿಯನ್ನೇ ಸ್ವರ್ಗವನ್ನಾಗಿ ಮಾಡೋಣ.

ಪುನಃ ಆ ವರುಣನು ಹೇಗಿದ್ದಾನೆ ಎಂಬುದನ್ನೇ ಹೇಳಲಾಗಿದೆ.

ತದಿನ್ನಕ್ತಂ ತದ್ ದಿವಾ ಮಹ್ಯಮಾಹು-ಸ್ತದಯಂ ಕೇತೋ ಹೃದ ಆ ವಿ ಚಷ್ಟೇ। ಶುನಃ
ಶೇಪೋ ಯಮಹ್ವದ್ ಗೃಭೀತಃ ಸೋ ಅಸ್ಮಾನ್ ರಾಜಾ ವರುಣೋ ಮುಮೋಕ್ತು ॥೧೨॥

ಪದಾರ್ಥ:- ವಿದ್ವಾಂಸರು [ನಕ್ತಂ] ರಾತ್ರಿಯಲ್ಲಿ [ದಿವಾ] ಹಗಲಿನಲ್ಲಿ ಯಾವ ಜ್ಞಾನದ [ಆಹುಃ] ಉಪದೇಶವನ್ನು ಮಾಡುತ್ತಾರೋ [ತತ್] ಆ ಜ್ಞಾನವು [ಮಹ್ಯಂ] ಜ್ಞಾನಸಂಪತ್ತನ್ನು ಸಂಪೂರ್ಣವಾಗಿ ಪ್ರಾಪ್ತ ಮಾಡಿಕೊಳ್ಳಲಪೇಕ್ಷಿಸುವವನಾದ ನನಗೆ [ಹೃದಃ] ಮನಸ್ಸಿನೊಂದಿಗೆ ನನ್ನ ಆತ್ಮವನ್ನೂ ಪ್ರಕಾಶಿಸುತ್ತದೆ. ನನ್ನ ಆತ್ಮವನ್ನೂ ಬೆಳಗಿಸುತ್ತವೆ. [ತದಿತ್] ನನ್ನ ಆತ್ಮವನ್ನು ಪ್ರಕಾಶಿಸುವಂತಹ ವೇದದ ಶ್ರೇಷ್ಠ ಜ್ಞಾನವನ್ನು [ಆವಿಚಷ್ಟೇ] ನಾನು ಸಂಪೂರ್ಣವಾಗಿ ಪ್ರಾಪ್ತ ಮಾಡಿಕೊಳ್ಳುತ್ತೇನೆ. ಅದನ್ನೇ ವಾಣಿಯ ಮೂಲಕ ಪ್ರಕಟಪಡಿಸುತ್ತೇನೆ. ಹಾಗೂ ಕರ್ಮದ ಮೂಲಕ ನನ್ನ ಜೀವನದಲ್ಲಿ ಅಳವಡಿಸಿಕೊಳ್ಳುತ್ತೇನೆ. [ಯಂ ಶುನಃಶೇಪಃ] ಯಾವ ಜ್ಞಾನವನ್ನು ಶ್ರೇಷ್ಠ ವಿದ್ವಾಂಸನು ಕರ್ಮದಲ್ಲಿ ವ್ಯವಹಾರದಲ್ಲಿ ಅಳವಡಿಸಿಕೊಂಡು, ಬಳಸಿಕೊಂಡು ಪರಮಾತ್ಮನ ಮತ್ತು ಸೂರ್ಯನ ಸ್ವರೂಪದ ಹಾಗೂ ಶಕ್ತಿಯ [ಅಹ್ವತ್] ಉಪದೇಶವನ್ನು ಮಾಡುತ್ತಾನೋ ಅದರಿಂದ ಅರ್ಥಾತ್ ಆ ಜ್ಞಾನದ ಮೂಲಕ [ವರುಣಃ] ವರಣೀಯನಾದ, ಸರ್ವೋಪಾಸ್ಯನಾದ [ರಾಜಾ] ಸರ್ವಪ್ರಕಾಶ ಸ್ವರೂಪನಾದ ಪರಮಾತ್ಮನು ನಮ್ಮೆಲ್ಲರ ಉಪಾಸನೆಯನ್ನು ಹಾಗೂ ಭಕ್ತಿಯನ್ನು ಸ್ವೀಕರಿಸಿ [ಅಸ್ಮಾನ್] ಪುರುಷಾರ್ಥಿ ಹಾಗೂ ಧರ್ಮಮಾರ್ಗವನ್ನೇ ಅನುಸರಿಸುವ ನಮ್ಮೆಲ್ಲರನ್ನು [ಮುಮೋಕ್ತು] ಪಾಪದಿಂದ ಮತ್ತು ದುಃಖದಿಂದ ರಕ್ಷಿಸಲಿ. ಪರಮಾತ್ಮನ ಉಪಾಸನೆಯ ಮೂಲಕ ನಾವೆಲ್ಲರೂ ಪಾಪದಿಂದ ಮುಕ್ತರಾಗಿ ದುಃಖದಾರಿದ್ರ್ಯದಿಂದಲೂ ಮುಕ್ತರಾಗುವಂತಾಗಲಿ. ನಾವೆಲ್ಲರೂ ಜನ್ಮಜನ್ಮಾಂತರಗಳಲ್ಲಿ ಮಾಡಿದ ಪಾಪ ಪುಣ್ಯಗಳನ್ನು ಮತ್ತು ಈ ಜನ್ಮದಲ್ಲಿಯೂ ಮಾಡಿದ, ಮಾಡುತ್ತಿರುವ ಮತ್ತು ಮಾಡಲಿರುವ ಸಕಲ ಕರ್ಮಗಳನ್ನು ಬಲ್ಲವನಾದ ಪರಮಾತ್ಮನು [ಮಹ್ಯಂ] ನನ್ನನ್ನು ಸಕಲ ಪಾಪಗಳಿಂದಲೂ, ಸಕಲ ದುಷ್ಕರ್ಮಗಳಿಂದಲೂ ಮುಕ್ತನನ್ನಾಗಿ ಮಾಡಿ, ದುಃಖದಾರಿದ್ರ್ಯದಿಂದಲೂ ಮುಕ್ತನನ್ನಾಗಿ ಮಾಡುತ್ತಾನೆ. ಆ ದಯಾಮಯನಾದ ಪರಮಾತ್ಮನ ಉಪಾಸನೆಯನ್ನು ನಾವೆಲ್ಲರೂ ಅತ್ಯಂತ ಶ್ರದ್ಧಾಭಕ್ತಿಯಿಂದ ಮಾಡೋಣ.

ಭಾವಾರ್ಥ:- ವಿದ್ವಾಂಸರು, ವೇದವು ಹಾಗೂ ಪರಮಾತ್ಮನು ನಮಗೆ ಯಾವ ಜ್ಞಾನವನ್ನು ಯಾವ ಬೋಧವನ್ನು ಮಾಡುತ್ತಾರೋ, ಆ ಜ್ಞಾನವನ್ನು ಹಾಗೂ ಬೋಧವನ್ನು ಸಂಪೂರ್ಣವಾಗಿ ಪ್ರಾಪ್ತಮಾಡಿಕೊಂಡು ಮನಸ್ಸಿನೊಂದಿಗೆ ಆತ್ಮವನ್ನೂ ಬೆಳಗಿಸಿಕೊಳ್ಳಬೇಕು. ಯಾವ ಸತ್ಯ ಜ್ಞಾನವನ್ನು ನಾವು ಪ್ರಾಪ್ತ ಮಾಡಿಕೊಂಡಿದ್ದೇವೋ, ಅದನ್ನೇ ನಮ್ಮ ವಾಣಿಯ ಮೂಲಕ ಪ್ರಕಟಪಡಿಸಬೇಕು. ಮತ್ತು ಅದನ್ನೇ ನಮ್ಮ ಆಚರಣೆಯ ಮೂಲಕ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅತ್ಯಂತ ಶ್ರದ್ಧಾಭಕ್ತಿಯಿಂದ ಪರಮಾತ್ಮನ ಉಪಾಸನೆಯನ್ನು ಮಾಡಿದಾಗ ಪರಮಾತ್ಮನು ನಮ್ಮ ಆತ್ಮನ ಮೇಲೆ ತನ್ನ ಪ್ರಕಾಶವನ್ನು ಬೀರುತ್ತಾನೆ ಹಾಗೂ ನಮ್ಮನ್ನು ದುಷ್ಕರ್ಮಗಳಿಂದ ದುರ್ಮಾರ್ಗಗಳಿಂದ, ಅಜ್ಞಾನದಿಂದ, ದುಃಖ ಹಾಗೂ ದಾರಿದ್ರ್ಯದಿಂದ ಮುಕ್ತರನ್ನಾಗಿ ಮಾಡುತ್ತಾನೆ. ಸರ್ವಜ್ಞನಾದ

ಪರಮಾತ್ಮನು ನಮ್ಮ ಜನ್ಮ ಜನ್ಮಾಂತರಗಳ ಪಾಪಪುಣ್ಯಗಳನ್ನು ಈ ಜನ್ಮದಲ್ಲಿ ಮಾಡಿದ ಮಾಡುತ್ತಿರುವ ಹಾಗೂ ಮಾಡಲಿರುವ ಸಕಲ ಕರ್ಮಗಳನ್ನು ಬಲ್ಲವನಾಗಿದ್ದಾನೆ. ಆದುದರಿಂದ ಅವನ ಆಜ್ಞೆಯನ್ನು ಉಪದೇಶವನ್ನು ಪ್ರೇರಣೆಯನ್ನು ಪ್ರಾಪ್ತ ಮಾಡಿಕೊಂಡು ಅನನ್ಯಭಕ್ತಿಯಿಂದ ಉಪಾಸಿಸುತ್ತಾ ನಾವೆಲ್ಲರೂ ಪಾಪದಿಂದ ದುಃಖದಿಂದ ಮತ್ತು ದಾರಿದ್ರ್ಯದಿಂದ ಮುಕ್ತರಾಗೋಣ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಶುನಃ ಶೇಪೋ ಹ್ಯಹ್ವದ್ ಗೃಭೀತ-ಸ್ತ್ರಿಷ್ವಾದಿತ್ಯಂ ದ್ರುಪದೇಷು ಬದ್ಧಃ ।
ಅವೈನಂ ರಾಜಾ ವರುಣಃ ಸಸೃಜ್ಯಾ-ದ್ವಿದ್ವಾ ಅದಬ್ಧೋ ವಿ ಮುಮೋಕ್ತು ಪಾಶಾನ್ ॥೧೩॥

ಪದಾರ್ಥ:- ಓ ಕರ್ಮಶೀಲ ಮಾನವರೇ! ನೀವೆಲ್ಲರೂ ಯಾವರೀತಿ [ಶುನಃಶೇಪಃ] ಶ್ರೇಷ್ಠ ಕ್ರಿಯಾಶೀಲ ವಿದ್ವಾಂಸನು [ತ್ರಿಷು] ಕರ್ಮ, ಉಪಾಸನೆ ಮತ್ತು ಜ್ಞಾನಯಜ್ಞದಲ್ಲಿ [ಆದಿತ್ಯಂ ಅಹ್ವತ್] ಯಾವ ಸರ್ವ ಪ್ರಕಾಶ

ಸ್ವರೂಪ, ಸರ್ವಜ್ಞನಾದ ಪರಮಾತ್ಮನನ್ನು ಆಹ್ವಾನ ಮಾಡುತ್ತಾನೋ, ಆ ಪರಮಾತ್ಮನು ನಮ್ಮೆಲ್ಲರಿಂದ [ಗೃಭೀತಃ] ಸ್ವೀಕರಣೀಯವಾದ ಅರ್ಥಾತ್ ನಾವೆಲ್ಲರೂ ಮಾಡುವ ಕರ್ಮ, ಉಪಾಸನೆ ಮತ್ತು ಜ್ಞಾನಯಜ್ಞದಲ್ಲಿ ತನ್ನ ಪ್ರಕಾಶವನ್ನು ಬೀರುತ್ತಾನೆ. ಮತ್ತು ಯಾವ ರೀತಿ ವಿದ್ವಾಂಸರು [ದ್ರುಪದೇಷು] ಕ್ರಿಯಾಕುಶಲತೆಯ ಸಿದ್ಧಿಗೋಸ್ಕರ ವಿಮಾನ ಮೊದಲಾದ ಯಾನಗಳಲ್ಲಿ [ಬದ್ಧಃ] ವ್ಯವಸ್ಥಿತವಾದ ರೀತಿಯಲ್ಲಿ ಯೋಜಿಸಲ್ಪಟ್ಟ ವಾಯುವಿನ ಮೂಲಕ ಯಾವ ಕಾರ್ಯಸಿದ್ಧಿಯನ್ನು ಮಾಡುತ್ತಾರೋ [ಸಃ] ಅಂತಹ ಕಾರ್ಯಸಿದ್ಧಿಯನ್ನು ನಾವು ಕೂಡ ಗ್ರಹಣ ಮಾಡಬೇಕು. ಅರ್ಥಾತ್ ಯಾವ ರೀತಿ ವಿದ್ವಾಂಸರು ತಮ್ಮ ಕಾರ್ಯಕುಶಲತೆಯಿಂದ ವಾಯು ಜಲವಿದ್ಯುತ್ ಮೊದಲಾದುವುಗಳನ್ನು ಯೋಗ್ಯವಾದ ರೀತಿಯಲ್ಲಿ ಬಳಸಿಕೊಂಡು ವಿಮಾನ ಮೊದಲಾದ ಯಾನಗಳನ್ನು ಯಂತ್ರಾದಿಗಳನ್ನು ಚಲಿಸುವಂತೆ ಮಾಡಿ, ಅದರಿಂದ ಪೂರ್ಣ ಪ್ರಯೋಜನವನ್ನು ಹೊಂದುತ್ತಾರೋ, ಅದೇ ರೀತಿ ನಾವು ಕೂಡ ಮಾಡಬೇಕು. ಯಾವ ಯಾವ ಗುಣಗಳುಳ್ಳ ಪದಾರ್ಥಗಳನ್ನು [ಅದಬ್ಧ] ಸರ್ವರಿಂದ ಸ್ತುತಿಸಲ್ಪಡುವ ಸರ್ವೋಪಾಸ್ಯನಾದ **[ವರುಣಃ ರಾಜಾ]** ಅತ್ಯಂತ ಶ್ರೇಷ್ಠನೂ ಸರ್ವಪ್ರಕಾಶಸ್ವರೂಪನೂ ಆದ ಪರಮಾತ್ಮನು **[ಅವಸಸೃಜ್ಯಾತ್]** ಜೀವಮಾತ್ರರ ಕಲ್ಯಾಣಕ್ಕೋಸ್ಕರ ಪುನಃ ಪುನಃ ಸೃಷ್ಟಿಸುತ್ತಾರೋ, ಸಕಲ ಪದಾರ್ಥಗಳ ಗುಣಗಳನ್ನು ಹಾಗೂ ಪ್ರಯೋಜನವನ್ನು ಅತ್ಯುತ್ತಮವಾದ ರೀತಿಯಲ್ಲಿ ಅರಿತುಕೊಂಡು ಅವುಗಳಿಂದ ಪೂರ್ಣಪ್ರಯೋಜನವನ್ನು ಪಡೆಯಬೇಕು.

ಸಕಲ ಜೀವೋದ್ಧಾರಕನಾದ ಪರಮಾತ್ಮ! **[ಅಸ್ಮಾಕಂ ಪಾಶಾನ್]** ನಮ್ಮೆಲ್ಲರ ಅಧರ್ಮಾಚರಣೆಯಿಂದ ಪ್ರಾಪ್ತವಾದ ಬಂಧನಗಳನ್ನು **[ವಿಮುಮೋಕ್ತು]** ಸಂಪೂರ್ಣವಾಗಿ ಕತ್ತರಿಸು. ನಮ್ಮೆಲ್ಲರ ಪಾಪದ ಬಂಧನದಿಂದ ಮುಕ್ತಗೊಳಿಸು. ನಾವ್ಯಾರೂ ಯಾರೂ ಕೂಡ ಈ ಪಾಪದ ಬಂಧನದಲ್ಲಿ ಸಿಲುಕುವಂತಾಗದಿರಲಿ. ಅದೇ ರೀತಿ ಸಂಸಾರಸ್ಥರಾದ ನಾವೆಲ್ಲರೂ ಈ ಭೌತಿಕ ಪ್ರಪಂಚದಲ್ಲಿ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಸೂರ್ಯಚಂದ್ರ ನಕ್ಷತ್ರ ನೆಲ, ಜಲ, ವಾಯು ಮೊದಲಾದ ಪದಾರ್ಥಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ಬಳಸಿಕೊಂಡು ಯೋಗ್ಯವಾದ ರೀತಿ ಜೀವನವನ್ನು ನಡೆಸುವ ನಮ್ಮೆಲ್ಲರನ್ನು **[ಪಾಶಾನ್]** ಸಕಲ ದಾರಿದ್ರ್ಯ ದುಃಖ ಕಷ್ಟ ಕ್ಲೇಶದ ಬಂಧನಗಳಿಂದ ಪರಮಾತ್ಮನು ಮುಕ್ತಗೊಳಿಸುತ್ತಾನೆ. ಸಕಲ ಮಾನವರೂ ಅಂತಹ ಕರ್ಮಗಳನ್ನೇ ಮಾಡಬೇಕು.

ಭಾವಾರ್ಥ:- ಶ್ರೇಷ್ಠಕ್ರಿಯಾಶೀಲನಾದ ವಿದ್ವಾಂಸನು ಜ್ಞಾನ-ಕರ್ಮ-ಮತ್ತು ಉಪಾಸನಾ ಯಜ್ಞದಲ್ಲಿ ಸರ್ವಜ್ಞನೂ ಸರ್ವಪ್ರಕಾಶ ಸ್ವರೂಪನೂ ಆದ ಪರಮಾತ್ಮನನ್ನು ತಮ್ಮ ಅಂತಃಕರಣದಲ್ಲಿಯೇ ಉಪಾಸಿಸುತ್ತಾರೆ. ಆ ಸರ್ವಾಂತರ್ಯಾಮಿಯಾದ ಪರಮಾತ್ಮನು, ನಮ್ಮೆಲ್ಲರ ಜ್ಞಾನ ಕರ್ಮ ಮತ್ತು ಉಪಾಸನಾ ಯಜ್ಞದಲ್ಲಿ ತನ್ನ ಪ್ರಕಾಶವನ್ನು ಬೀರುತ್ತಾನೆ. ಆ ಪರಮಾತ್ಮನ ಪ್ರಕಾಶವನ್ನು ಪ್ರಾಪ್ತಮಾಡಿಕೊಳ್ಳುವುದಕ್ಕೋಸ್ಕರ ನಾವು ಪ್ರತಿಯೊಂದು ಕರ್ಮವನ್ನು ಸಮರ್ಪಣಾಭಾವದಿಂದ ಮತ್ತು ನಿಷ್ಕಾಮಭಾವದಿಂದ ಮಾಡಬೇಕು.

ವಿದ್ವಾಂಸರು, ಕುಶಲಕರ್ಮಿಗಳು ವಿಮಾನ ಮೊದಲಾದ ಯಾನಗಳಲ್ಲಿ ಹಾಗೂ ಯಂತ್ರಗಳಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಯೋಜಿಸಲ್ಪಟ್ಟ ವಾಯುವಿನ ಮೂಲಕ, ಯಾವ ಕಾರ್ಯಸಿದ್ಧಿಯನ್ನು ಮಾಡುತ್ತಾರೋ ಅಂತಹ ಕಾರ್ಯಸಿದ್ಧಿಯನ್ನು ನಾವು ಕೂಡ ಮಾಡಬೇಕು. ಅರ್ಥಾತ್ ವಾಯು, ಜಲ, ವಿದ್ಯುತ್ ಮೊದಲಾದುವುಗಳನ್ನು ಯೋಗ್ಯವಾದ ರೀತಿಯಲ್ಲಿ ಬಳಸಿಕೊಂಡು ಸಕಲ ಯಾನಗಳನ್ನು ಹಾಗೂ ಯಂತ್ರಗಳನ್ನು ಚಲಿಸುವಂತೆ ಮಾಡಿ ಅದರಿಂದ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುತ್ತಾರೋ, ಅದೇ ರೀತಿ ನಾವು ಕೂಡ ಮಾಡಬೇಕು.

ಸೃಷ್ಟಿಕರ್ತನಾದ ಪರಮಾತ್ಮನು ಜೀವಮಾತ್ರರ ಕಲ್ಯಾಣಕ್ಕೋಸ್ಕರ ಸಕಲ ಪದಾರ್ಥಗಳನ್ನು ಸೃಷ್ಟಿಸಿದ್ದಾನೆ. ನಾವೆಲ್ಲರೂ ಆ ಪದಾರ್ಥಗಳ ಗುಣಗಳನ್ನು ಸಂಪೂರ್ಣವಾಗಿ ಅರಿತುಕೊಂಡು ಅವುಗಳಿಂದ ಅತ್ಯುತ್ತಮವಾದ ರೀತಿಯಲ್ಲಿ ಪ್ರಯೋಜನವನ್ನು ಪಡೆಯಬೇಕು. ಸಕಲ ಜಗದೋದ್ಧಾರಕನಾದ ಪರಮಾತ್ಮನು ನಾವೆಲ್ಲರೂ ಅಧರ್ಮಾಚರಣೆಯಿಂದ ಮಾಡುವ ಸಕಲ ಪಾಪದ ಬಂಧನಗಳಿಂದ ಮುಕ್ತಗೊಳಿಸುವವನಾಗಿದ್ದಾನೆ. ಅರ್ಥಾತ್ ನಾವೆಲ್ಲರೂ ಪರಮಾತ್ಮನ ಆಜ್ಞೆಯನ್ನು ಪಾಲಿಸುತ್ತಾ ಧರ್ಮಾಚರಣೆಯಲ್ಲಿ ಸದಾ ನಡೆಯುವಂತೆ ನಮ್ಮನ್ನು ಪ್ರೇರೇಪಿಸುತ್ತಾನೆ. ಅಂತೆಯೇ ನಾವು ಸದಾ ಪಾಪದಿಂದ ದೂರ ಇಡಬೇಕು.

ಸಂಸಾರಸ್ಥರಾದ ನಾವೆಲ್ಲರೂ ಈ ಭೌತಿಕಪ್ರಪಂಚದಲ್ಲಿ ಪರಮಾತ್ಮನು ಸೃಷ್ಟಿಸಿದ ನೆಲ-ಜಲ-ವಾಯು ಮೊದಲಾದ ಪದಾರ್ಥಗಳನ್ನು ಯೋಗ್ಯವಾದ ರೀತಿಯಲ್ಲಿ ಬಳಸಿಕೊಂಡು ಧಾರ್ಮಿಕರಾಗಿ ಹಾಗೂ ಪುರುಷಾರ್ಥಿಗಳಾಗಿ ಬಾಳಿದರೆ, ನಮ್ಮೆಲ್ಲರ ದಾರಿದ್ರ್ಯವನ್ನು ದುಃಖವನ್ನು ಕ್ಲೇಶಗಳನ್ನು ನಷ್ಟ ಮಾಡುತ್ತಾನೆ. ಆದುದರಿಂದ ನಾವೆಲ್ಲರೂ ವೇದ ಪ್ರತಿಪಾದಿತ ಮಾರ್ಗವನ್ನೇ ಅನುಸರಿಸುತ್ತಾ ಮಾನವ ಜೀವನವನ್ನು ಸಾರ್ಥಕಗೊಳಿಸಬೇಕು.

ನಂತರ ಆ ವರುಣನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗಿದೆ.

ಅವ ತೇ ಹೇಳೋ ವರುಣ ನಮೋಭಿ-ರವ ಯಜ್ಞೇಭಿರೀಮಹೇ ಹವಿರ್ಭಿಃ ।
ಕ್ಷಯನ್ನಸ್ಮಭ್ಯಮಸುರ ಪ್ರಚೇತಾ ರಾಜನ್ನೇನಾಂಸಿ ಶಿಶ್ರಥಃ ಕೃತಾನಿ ॥೧೪॥

ಪದಾರ್ಥ:- [ರಾಜನ್] ಮಾನವ ಮಾತ್ರರ ಆತ್ಮನಲ್ಲಿ ಜ್ಞಾನದ ಪ್ರಕಾಶವನ್ನು ಬೀರುವ ಹಾಗೂ ಸಕಲ ಸೂರ್ಯ ಚಂದ್ರ ನಕ್ಷತ್ರಾದಿಗಳನ್ನೂ ತನ್ನ ಪ್ರಕಾಶದಿಂದ ಪ್ರಕಾಶಿಸುವ ಸರ್ವತ್ರ ಪ್ರಕಾಶಸ್ವರೂಪ ಪರಮಾತ್ಮ! [ಪ್ರಚೇತಃ] ಸಂಪೂರ್ಣ ಜ್ಞಾನದ ಏಕಮಾತ್ರ ನಿಧಿ ಅರ್ಥಾತ್ ಏಕಮಾತ್ರ ಸರ್ವಜ್ಞನೂ **[ಅಸುರಃ]** 'ಅಸೂನ್ ಪ್ರಾಣಾನ್ ರಾತಿ ದದಾತಿ' ಸಕಲ ಪ್ರಾಣಿಮಾತ್ರರಿಗೆ ಪ್ರಾಣಶಕ್ತಿಯನ್ನು ಕೊಡುವವನೂ 'ಅಸುಷು ರಮಂತೇ ಇತಿ ಅಸುರಃ' ಸಕಲ ಪ್ರಾಣಿಮಾತ್ರರ ಪ್ರಾಣದಲ್ಲಿಯೂ ಸದಾಕಾಲ ವಿದ್ಯಮಾನನಾಗಿರುವ ಸರ್ವಾಂತರ್ಯಾಮಿ **[ವರುಣಃ]** ವರಣೀಯನೂ ಸರ್ವೋಪಾಸ್ಯನೂ **[ಅಸ್ಮಭ್ಯಂ]** ನಮ್ಮೆಲ್ಲರಿಗೆ ಅರ್ಥಾತ್ ಮಾನವಮಾತ್ರರಿಗೆ ಸೃಷ್ಟಿಯ ಆದಿಯಲ್ಲಿಯೇ ವೇದಗಳ ಮೂಲಕ ಸಂಪೂರ್ಣ ಜ್ಞಾನವನ್ನೂ ಕೊಡುವ ಪರಮಾತ್ಮ! **[ಕೃತಾನಿ ಏನಾಂಸಿ]** ನಾವೆಲ್ಲರೂ ಮಾಡಿದ ಪಾಪಗಳನ್ನು **[ಕ್ಷಯನ್]** ನಾಶಮಾಡುತ್ತಾ **[ಅವಶಿಶ್ರಥಃ]** ಶ್ರೇಷ್ಠವಾದ ಜ್ಞಾನದ ಮೂಲಕ ಪಾಪವನ್ನೂ, ಪಾಪ ಮಾಡುವ ಪ್ರವೃತ್ತಿಯನ್ನೂ ನಾಶಮಾಡುವವನಾಗಿದ್ದೀಯೆ. ಆದುದರಿಂದ ನಾವೆಲ್ಲರೂ **[ನಮೋಭಿಃ]** ಉಪಾಸನೆಯ ಮೂಲಕ ಹಾಗೂ ನಿರ್ಗತಿಕರಿಗೆ, ದೀನರಿಗೆ ಮತ್ತು ದರಿದ್ರರಿಗೆ ಅನ್ನ ಜಲಾದಿಗಳನ್ನು ದಾನ ಮಾಡುವುದರ ಮೂಲಕ **[ಯಜ್ಞೇಭಿಃ]** ಕರ್ಮೋಪಾಸನಾ ಜ್ಞಾನದಿಂದ ನಿಷ್ಪಾದಿತ ಕರ್ಮಗಳ ಮೂಲಕ ಅರ್ಥಾತ್ ಶ್ರೇಷ್ಠ ಕರ್ಮಗಳ ಮೂಲಕ ನಿನ್ನ ಉಪಾಸನೆಯನ್ನು ಮಾಡುತ್ತಾ ಜ್ಞಾನಪೂರ್ವಕ ಮಾಡುವ ಕರ್ಮಗಳ ಮೂಲಕ **[ಹವಿರ್ಭಿಃ]** ಯಜ್ಞದಲ್ಲಿ ಹವಿಸ್ಸನ್ನು ಅರ್ಪಿಸುವುದರ ಮೂಲಕ **[ತವ ಹೇಳೋ ಅವ ಈಮಹೇ]** ಎಂದೆಂದಿಗೂ ನಿನ್ನ ಅವಹೇಳನವನ್ನು ಮಾಡದೇ, ನಿನ್ನ ಆಜ್ಞೆಯನ್ನು ಮತ್ತು ಪ್ರೇರಣೆಯನ್ನು ಧಿಕ್ಕರಿಸದೇ ಸದಾಕಾಲ ನಿನ್ನ ಆಜ್ಞಾನುವರ್ತಿಯಾಗಿ ನಿನ್ನ ಸಾನ್ನಿಧ್ಯದಲ್ಲಿಯೇ ಇರುತ್ತೇನೆ. ಅದೇ ರೀತಿ ಮುಖ್ಯವಾದ ಪ್ರಾಣವಿದ್ಯೆಯನ್ನೂ ಆತ್ಮಜ್ಞಾನವನ್ನೂ ಪ್ರಾಪ್ತಮಾಡಿಕೊಳ್ಳಲು ಅಪೇಕ್ಷಿಸುತ್ತೇವೆ.

ಭಾವಾರ್ಥ:- ಸರ್ವಾಂತರ್ಯಾಮಿಯೂ, ಸರ್ವಜ್ಞನೂ, ಸಕಲಪ್ರಾಣಿಮಾತ್ರರಿಗೆ ಪ್ರಾಣಶಕ್ತಿಯನ್ನು ಕೊಡುವವನೂ, ಸೃಷ್ಟಿಯ ಆದಿಯಲ್ಲಿಯೇ ಜೀವಮಾತ್ರರಿಗೆ ವೇದಗಳ ಮೂಲಕ ಸಂಪೂರ್ಣ ಜ್ಞಾನವನ್ನು ಕೊಟ್ಟು ಪ್ರತಿಯೊಂದು ಕ್ಷಣದಲ್ಲಿಯೂ ಆತ್ಮನಲ್ಲಿ ಪ್ರೇರಣೆಯನ್ನು ಮಾಡುವ ಪರಮಾತ್ಮನನ್ನು, ಶ್ರೇಷ್ಠ ಕರ್ಮಗಳ ಮೂಲಕ ಉಪಾಸನೆಯನ್ನು ಮಾಡುತ್ತಾ, ಜ್ಞಾನ ಪೂರ್ವಕ ಕರ್ಮಗಳನ್ನು ಮಾಡುತ್ತಾ, ನಿರ್ಗತಿಕರಿಗೆ, ದೀನರಿಗೆ ದರಿದ್ರರಿಗೆ ಅನ್ನ ಜಲಾದಿಗಳನ್ನು ಕೊಡುತ್ತಾ, ಯಜ್ಞಾನುಷ್ಠಾನದ ಮೂಲಕ ಉಪಾಸಿಸಬೇಕು. ಎಂದಿಗೂ ಅವನ ಆಜ್ಞೆಯನ್ನು ಧಿಕ್ಕರಿಸದೇ ಅವನ ಅವಹೇಳನವನ್ನು ಮಾಡದೇ, ಪರಮಾತ್ಮನ ಆಜ್ಞಾನುವರ್ತಿಯಾಗಿ ಅವನ ಸಾನ್ನಿಧ್ಯದಲ್ಲಿಯೇ ಇರಬೇಕು. ಸದಾಕಾಲ ಪ್ರಾಣವಿದ್ಯೆಯನ್ನೂ, ಆತ್ಮವಿದ್ಯೆಯನ್ನೂ ಪ್ರಾಪ್ತ ಮಾಡಿಕೊಳ್ಳಲು ಅಪೇಕ್ಷಿಸಬೇಕು. ಆಗ ಪರಮಾತ್ಮನು ನಾವು ಮಾಡಿದ ಪಾಪಕರ್ಮಗಳ ಫಲವನ್ನು ಶಿಥಿಲವನ್ನಾಗಿ ಮಾಡುತ್ತಾನೆ. ಸುಜ್ಞಾನಿಯಾದವನಿಗೆ ಎಂದಿಗೂ ಪಾಪದ ಭೀತಿ ಇರುವುದಿಲ್ಲ, ಅಜ್ಞಾನಿಯಾದವನು ಪಾಪದ ಭೀತಿಯಿಂದ ತತ್ತರಿಸುತ್ತಾ, ತನ್ನ ಪಾಪಕರ್ಮಗಳ ಫಲವನ್ನು ನಾಶ ಮಾಡಲು ಸಕಲ ತೀರ್ಥಕ್ಷೇತ್ರಾದಿಗಳಿಗೆ ಅಲೆಯುತ್ತಾನೆ.

ನಂತರ ಮುಂದಿನ ಮಂತ್ರದಲ್ಲಿ ವರುಣ ಶಬ್ದದ ಪ್ರಕಾಶವನ್ನೇ ಬೀರಲಾಗುತ್ತದೆ.

ಉದುತ್ತಮಂ ವರುಣ ಪಾಶಮಸ್ಮ-ದವಾಧಮಂ ವಿ ಮಧ್ಯಮಂ ಶ್ರಥಾಯ ।

ಅಥಾ ವಯಮಾದಿತ್ಯ ವ್ರತೇ ತವಾ-ನಾಗಸೋ ಅದಿತಯೇ ಸ್ಯಾಮ ॥೧೫॥

ಪದಾರ್ಥ:- ಹೇ [ವರುಣ] ವರಣೀಯನೂ ಸರ್ವೋಪಾಸ್ಯನೂ ಆದ ಪರಮಾತ್ಮ! ನೀನು ನಮ್ಮೆಲ್ಲರ [ಅಧಮಮ್] ನಿಕೃಷ್ಟ ತಮೋಗುಣದಿಂದ, ತಾಮಸೀ ಪ್ರವೃತ್ತಿಯಿಂದ ಉಂಟಾದ [ಮಧ್ಯಮಮ್] ಮಧ್ಯಮ, ಅರ್ಥಾತ್ ರಜೋಗುಣದಿಂದ, ರಾಜಸೀ ಪ್ರವೃತ್ತಿಯಿಂದ ಉಂಟಾದ [ಉತ್ತಮಮ್] ಉತ್ತಮ ಅರ್ಥಾತ್ ಸತ್ವಗುಣದಿಂದ, ಸಾತ್ವಿಕ ಪ್ರವೃತ್ತಿಯಿಂದ ಉಂಟಾದ [ಪಾಶಮ್] ಬಂಧನಗಳನ್ನು [ವಿ ಶ್ರಥಾಯ] ಸಂಪೂರ್ಣವಾಗಿ ನಷ್ಟ ಮಾಡು. ತದನಂತರ [ಆದಿತ್ಯ] ಅಜರನೂ ಅಮರನೂ ಆದ ಪರಮಾತ್ಮ! [ತವ] ಸಕಲ ವಿದ್ವಾಂಸರಿಗೂ, ಮುನಿಗಳಿಗೂ, ಋಷಿಗಳಿಗೂ ಗುರುವಾದ ನಿನ್ನ [ವ್ರತೇ] ಸತ್ಯಾಚರಣೆಯ ವ್ರತವನ್ನು ಕಾಯಾ, ವಾಚಾ, ಮನಸಾ, ಮತ್ತು ಮನಸಾ ವಾಚಾ ಕರ್ಮಣಾ ಸಂಪೂರ್ಣವಾಗಿ ಪಾಲಿಸುತ್ತಾ [ಅನಾಗಸಃ] ಸಕಲ ಪಾಪಗಳಿಂದ ಸಕಲ ಅಪರಾಧಗಳಿಂದ ಮುಕ್ತರಾಗಿ ನಾವೆಲ್ಲರೂ [ಅದಿತಯೇ] ಅಖಂಡ ಹಾಗೂ ಎಂದಿಗೂ ನಷ್ಟವಾಗದ ಶಾಶ್ವತವಾದ ಆನಂದವನ್ನು [ಸ್ಯಾಮ] ಪ್ರಾಪ್ತಮಾಡುತ್ತೇವೆ. ಸದಾಕಾಲ ನಿನ್ನ ಅನಂತ ಆನಂದವನ್ನು ಅನುಭವಿಸುತ್ತೇವೆ.

ಭಾವಾರ್ಥ:- ಮಾನವ ಜನ್ಮದ ಏಕಮಾತ್ರ ಉದ್ದೇಶ ಮೋಕ್ಷ ಪ್ರಾಪ್ತಿ. ಜನ್ಮ ಮೃತ್ಯುವಿನ ಬಂಧನದಿಂದ ಮುಕ್ತನಾಗಿ ಅನಂತ ಆನಂದವನ್ನು ಅನುಭವಿಸುವುದು ಜೀವಾತ್ಮನ ಏಕಮಾತ್ರ ಗುರಿಯಾಗಿದೆ. ತನ್ನ ಉದ್ದೇಶವನ್ನು ಈಡೇರಿಸುವುದಕ್ಕೋಸ್ಕರ ಸತ್ವಗುಣ, ರಜೋಗುಣ ಮತ್ತು ತಮೋಗುಣಗಳ ಪಾಶದಿಂದ ಮುಕ್ತನಾಗಲು ಅಷ್ಟಾಂಗ ಯೋಗದ ಪರಿಪಾಲನೆಯನ್ನು ಮಾಡುತ್ತಾ, ಅನನ್ಯ ಭಕ್ತಿಯಿಂದ ಭಗವಂತನನ್ನು ಉಪಾಸಿಸಬೇಕು. ಪ್ರಥಮವಾಗಿ ತಮೋಗುಣದ ತಾಮಸೀ ಪ್ರವೃತ್ತಿಯಿಂದ ಉಂಟಾದ ನಿಕೃಷ್ಟ ಪಾಶದಿಂದ ಮುಕ್ತನಾಗಲು ಪ್ರಯತ್ನಿಸಬೇಕು. ರಾಕ್ಷಸೀ ಪ್ರವೃತ್ತಿಯನ್ನು, ಪಾಶವೀ ಪ್ರವೃತ್ತಿಯನ್ನು ಸಂಪೂರ್ಣವಾಗಿ ತ್ಯಜಿಸಬೇಕು. ತದನಂತರ ರಜೋಗುಣ ಪ್ರಧಾನವಾದ ರಾಜಸೀ ಪ್ರವೃತ್ತಿಯನ್ನು, ದುಷ್ಕರ್ಮಗಳನ್ನು ಸಂಪೂರ್ಣವಾಗಿ ತ್ಯಜಿಸಿ ಪೂರ್ಣ ಜ್ಞಾನಿಯಾಗಬೇಕು. ಆಗ ಮಾನವನು ಮಧ್ಯಮ ಪಾಶಗಳಿಂದ ಮುಕ್ತನಾಗುತ್ತಾನೆ. ತದನಂತರ ಸತ್ವಗುಣ ಪ್ರಧಾನವಾದ ಸಾತ್ವಿಕ ಪ್ರವೃತ್ತಿಯನ್ನು ತ್ಯಜಿಸಿ, ವಿದೇಹನಾಗಬೇಕು. ಅರ್ಥಾತ್ ಇದಾವುದೂ ನನ್ನದಲ್ಲ. ನಾನು ಕೇವಲ ನಿಮಿತ್ತ ಮಾತ್ರನಾಗಿದ್ದೇನೆ. ಸರ್ವ ವ್ಯಾಪಕ ಮತ್ತು ಸರ್ವಾಂತರ್ಯಾಮಿಯಾದ ಪರಮಾತ್ಮನಿಂದಲೇ ಸಕಲ ಕಾರ್ಯಗಳು ನಡೆಯುತ್ತಿವೆ ಎಂದು ಭಾವಿಸಿ. ಸಕಲ ಜೀವರಾಶಿಗಳಲ್ಲಿ ಪರಮಾತ್ಮನ ಅಸ್ತಿತ್ವವನ್ನೇ ಕಾಣಬೇಕು. ಈ ರೀತಿ ಗುಣಾತೀತನಾದ ಮಾನವನು ಜನ್ಮಮೃತ್ಯುವಿನ ಬಂಧನದಿಂದ ಮುಕ್ತನಾಗಿ, ಪರಮಾತ್ಮನ ಅನಂತ ಆನಂದದಲ್ಲಿ ಲೀನವಾಗಿ ಶಾಶ್ವತವಾದ ಸುಖವನ್ನು ಅನುಭವಿಸುತ್ತಾನೆ.

ಹಲವು ಭಾಷ್ಯಕಾರರು ಬರೆದಂತೆ, ಈ ಸೂಕ್ತದಲ್ಲಿ ಯಾವ ಕಥಾನಕವೂ ಇಲ್ಲ. ಯೂಪದಲ್ಲಿ ಪಾಶದಿಂದ ಬಂಧಿಸಲ್ಪಟ್ಟ ಶುನಃಶೇಪನು ತನ್ನನ್ನು ಪಾಶದಿಂದ ಮುಕ್ತನನ್ನಾಗಿ ಮಾಡಲು ವರುಣನನ್ನು ಪರಿಪರಿಯಾಗಿ ಪ್ರಾರ್ಥಿಸುತ್ತಾನೆ. ಮಹರ್ಷಿ ವಿಶ್ವಾಮಿತ್ರ ವರುಣನನ್ನು ಒಲಿಸಿ, ನರಮೇಧದಲ್ಲಿ ಯೂಪಕ್ಕೆ ಪಾಶದಿಂದ ಬಂಧಿಸಲ್ಪಟ್ಟ ಶುನಃಶೇತನನ್ನು ಮುಕ್ತನನ್ನಾಗಿ ಮಾಡುತ್ತಾನೆ. ಈ ರೀತಿಯ ಕಥಾನಕವನ್ನು ಸಾಯಣಾಚಾರ್ಯ ಮೊದಲಾದ ಭಾರತೀಯ ಹಾಗೂ ಮ್ಯಾಕ್ಸ್‌ಮುಲ್ಲರ್‌ರಂತಹ ಪಾಶ್ಚಾತ್ಯ ಭಾಷ್ಯಕಾರರು ಮಂತ್ರಾರ್ಥವನ್ನು ಮಾಡಿದ್ದಾರೆ. ಇವೆಲ್ಲವೂ ವೇದವಿರುದ್ಧವಾದುದು ಮತ್ತು ಕಪೋಲಕಲ್ಪಿತವೆಂದು ತಿಳಿಯಬೇಕು. ಈ ಕಥಾನಕಕ್ಕೆ ಹಾಗೂ ಮಂತ್ರಕ್ಕೆ ಯಾವ ಸಂಬಂಧವೂ ಇಲ್ಲ. ಜೀವಾತ್ಮನು ತ್ರಿಗುಣಾತೀತನಾಗಿ ಪರಮಾತ್ಮನ ಅನಂತ ಆನಂದವನ್ನು ಶಾಶ್ವತವಾಗಿ ಅನುಭವಿಸಲು ಅಪೇಕ್ಷಿಸಬೇಕು ಎಂಬುದೇ ಈ ಸೂಕ್ತದ ಆಶಯ.

ಈ ಸೂಕ್ತದೊಂದಿಗೆ ಹಿಂದಿನ ಸೂಕ್ತದ ಸಂಗತಿಕರಣವಿದೆಯೆಂದು ತಿಳಿಯಬೇಕು.

ಇಪ್ಪತ್ತನಾಲ್ಕನೆಯ ಸೂಕ್ತ ಸಮಾಪ್ತ

ಸೂಕ್ತ ೨೫

ಮಂತ್ರಸಂಖ್ಯೆ ೨೧ । ಋಷಿಃ - ಅಜೀಗರ್ತಿಃ ಶುನಃಶೇಪಃ ಸ ಕೃತ್ರಿಮೋ ವೈಶ್ವಾಮಿತ್ರೋ ದೇವರಾತಃ ।
ದೇವತಾ - ವರುಣಃ। ಛಂದಃ - ಗಾಯತ್ರೀ । ಸ್ವರಃ - ಷಡ್ಜಃ.

ಈ ಸೂಕ್ತದ ಪ್ರಾರಂಭದ ಮಂತ್ರದಲ್ಲಿ ಪರಮೇಶ್ವರನ ಪ್ರಾರ್ಥನೆಯನ್ನು ಮಾಡಲಾಗಿದೆ.

ಯಚ್ಚಿದ್ಧಿ ತೇ ವಿಶೋ ಯಥಾ ಪ್ರ ದೇವ ವರುಣ ವ್ರತಮ್ । ಮಿನೀಮಸಿ ದ್ಯವಿದ್ಯವಿ ॥೧॥

ಪದಾರ್ಥ:- ಹೇ [ದೇವ] ಅತ್ಯಂತ ಸುಖಪ್ರದನೂ, ಆನಂದಸ್ವರೂಪನೂ ಆದ [ವರುಣ] ಸರ್ವೋತ್ಕೃಷ್ಟನಾದ ಪರಮಾತ್ಮ! ನೀನು [ಯಥಾ] ಯಾವ ರೀತಿ ಅಜ್ಞಾನದಿಂದ [ವಿಶಃ] ಯಾವುದೇ ರಾಜನ ಪ್ರಜೆ ಅಥವಾ ಸಂತಾನ, ಮಕ್ಕಳು, [ದ್ಯವಿದ್ಯವಿ] ಪ್ರತಿದಿನ ಅಪರಾಧಗಳನ್ನು ಮಾಡುತ್ತಾರೆ. ಯಾವುದೇ ಕಾರ್ಯಗಳನ್ನು ಪದಾರ್ಥಗಳನ್ನು ನಾಶ ಮಾಡುತ್ತಾರೆ. ಆ ರಾಜನು ಅಥವಾ ಪರಿಪಾಲಕನು, ಅಪರಾಧಿಗಳ ಮೇಲೆ ನ್ಯಾಯಯುಕ್ತ ದಂಡನೆ ಹಾಗೂ ಕರುಣೆಯನ್ನು ಮಾಡುತ್ತಾನೆ. ಅದೇ ರೀತಿ ನಾವು [ತೇ] ನಿನ್ನ [ಯತ್ ವ್ರತಮ್ ಹಿ] ಯಾವ ಸತ್ಯ ಆಚರಣೆ ಮೊದಲಾದ ನಿಯಮಗಳಿವೆಯೋ, ಅವುಗಳನ್ನು [ಪ್ರಮಿನೀಮಸಿ] ಅಜ್ಞಾನದಿಂದ ತಿಳಿದೋ ತಿಳಿಯದೆಯೋ ನಿಯಮಗಳ ಪರಿಪಾಲನೆಯನ್ನು ಬಿಟ್ಟು ಬಿಡುತ್ತೇವೆ. ಅದರ ಯಥಾಯೋಗ್ಯ ನ್ಯಾಯ ಮತ್ತು ದಂಡನೆಗಾಗಿ [ಚಿತ್] ನಮ್ಮ ಮೇಲೆ ಕರುಣೆಯನ್ನು ತೋರುತ್ತೀಯೆ.

ಭಾವಾರ್ಥ:- ಆನಂದ ಸ್ವರೂಪನೂ, ನ್ಯಾಯಕಾರಿಯೂ, ದಯಾಳುವೂ ಆದ ಸರ್ವೋತ್ಕೃಷ್ಟನಾದ ಪರಮಾತ್ಮ! ಯಾವ ರೀತಿ ರಾಜನ ಯಾವುದೇ ಪ್ರಜೆ, ತಂದೆ ತಾಯಿಯಿಂದ ಯಾವುದೇ ಸಂತಾನ ಮಕ್ಕಳು, ಪ್ರತಿದಿನ ಅಪರಾಧಗಳನ್ನು ಅಥವಾ ಯಾವುದೇ ರೀತಿಯ ಹಿಂಸೆ ಎಂದರೆ ಯಾವುದೇ ಕಾರ್ಯಗಳ ನಾಶ ಅಥವಾ ಯಾವುದೇ ವಸ್ತುಗಳ ನಾಶವನ್ನು ಮಾಡಿದರೆ, ಆ ರಾಜನು ಅಥವಾ ಪರಿಪಾಲಕರು ಯೋಗ್ಯವಾದ ರೀತಿಯಲ್ಲಿ ನ್ಯಾಯಯುಕ್ತ ದಂಡನೆ ಹಾಗೂ ಕರುಣೆಯನ್ನು ಮಾಡುತ್ತೀರೋ ಅದೇ ರೀತಿ ನೀನು ಕೂಡ ನಿನ್ನ ಯಾವ ಸತ್ಯಾಚರಣೆ ಮೊದಲಾದ ನಿಯಮಗಳಿವೆಯೋ, ಅವುಗಳನ್ನು ಅಜ್ಞಾನದಿಂದ ಉಲ್ಲಂಘಿಸುತ್ತೇವೆ, ಅದಕ್ಕೇ ಯೋಗ್ಯವಾದ ರೀತಿಯಲ್ಲಿ ನ್ಯಾಯಯುಕ್ತ ದಂಡನೆ ಮತ್ತು ಕರುಣೆಯನ್ನು ತೋರುತ್ತೀಯೆ.

ಇಲ್ಲಿ ನ್ಯಾಯಯುಕ್ತ ದಂಡ ಎಂದರೆ ವಿದ್ವಾಂಸನು, ತಪ್ಪು ಕೆಲಸಗಳನ್ನು ಮಾಡಿರೆ, ಅವನಿಗೆ ವಿಶೇಷವಾದ ದಂಡಿಸಿ, ಅಲ್ಪಬುದ್ಧಿಯುಳ್ಳವನೂ, ಉನ್ಮತ್ತನೂ, ಅಬೋಧ ಬಾಲಕನೂ ಅಪರಾಧಗಳನ್ನು ಮಾಡಿದರೆ ಅವರಿಗೆ ಅವರ ಅವಸ್ಥಾ ವಿಶೇಷಕ್ಕೆ ಅನುಗುಣವಾಗಿ ದಂಡನೆಯನ್ನು ಅವರೊಂದಿಗೆ ಕರುಣೆಯನ್ನು ತೋರುತ್ತಾನೆ.

ನಂತರ ಈ ಮಂತ್ರದಲ್ಲೂ ಉಕ್ತ ಅರ್ಥವನ್ನೇ ಪ್ರಕಾಶಪಡಿಸಲಾಗುತ್ತದೆ.

ಮಾ ನೋ ವಧಾಯ ಹತ್ನವೇ ಜಿಹೀಳಾನಸ್ಯ ರೀರಧಃ । ಮಾ ಹೃಣಾನಸ್ಯ ಮನ್ಯವೇ ॥೨॥

ಪದಾರ್ಥ:- ಹೇ [ವರುಣ] ಓ ದಯಾಮಯನಾದ ಪರಮಾತ್ಮ! ನೀನು, [ಜಿಹೀಳಾನಸ್ಯ] ಅಜ್ಞಾನದಿಂದ ಯಾರು ನಮ್ಮ ಅನಾದರ ಹಾಗೂ ಅಪಮಾನವನ್ನು ಮಾಡುತ್ತಾರೋ, ಅವರನ್ನು [ವಧಾಯ ಹತ್ನವೇ] ಹೊಡೆಯಲು, ದಂಡಿಸಲು, [ನಃ] ನಮ್ಮನ್ನು [ಮಾ ರೀರಧಃ] ಎಂದಿಗೂ ಪ್ರೇರೇಪಿಸಬೇಡ. ಮತ್ತು ಅದೇ ರೀತಿ [ಹೃಣಾನಸ್ಯ] ಯಾವನು ಅಪರಾಧವನ್ನು ಮಾಡಿ ನಮ್ಮ ಮುಂದೆ ಲಜ್ಜಿತನಾಗುತ್ತಿದ್ದಾನೋ ಅವರ ಮೇಲೆ [ಮನ್ಯವೇ] ಕ್ರೋಧವನ್ನು ಮಾಡಲು [ಮಾ] ಎಂದಿಗೂ ನಾವು ಪ್ರವೃತ್ತರಾಗದಿರಲಿ.

ಭಾವಾರ್ಥ:- ಅಜ್ಞಾನದಿಂದ, ತಿಳಿಯದೇ ಯಾರಾದರೂ ನಮ್ಮ ನಿಂದನೆಯನ್ನು ಅಪಮಾನವನ್ನು ಮಾಡಿದರೆ, ಅವರನ್ನು ದಂಡಿಸಲು, ಹೊಡೆಯಲು ಎಂದಿಗೂ ನಾವು ಪ್ರವೃತ್ತರಾಗಬಾರದು. ಅದೇ ರೀತಿ ಅಪರಾಧವನ್ನು ಮಾಡಿದ ಬಳಿಕ, ನಮ್ಮೆದುರು ಯಾರು ಲಜ್ಜಿತರಾಗುತ್ತಾರೋ, ಕ್ಷಮೆಯನ್ನು ಕೇಳುತ್ತಾರೋ, ಅವರ ಮೇಲೆ ಕ್ರೋಧವನ್ನು ಪ್ರಕಟಿಸಬಾರದು.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ವಿ ಮೃಳೀಕಾಯ ತೇ ಮನೋ ರಥೀರಶ್ವಂ ನ ಸಂದಿತಮ್ । ಗೀರ್ಭಿರ್ವರುಣ ಸೀಮಹಿ ॥೩॥

ಪದಾರ್ಥ:- ಹೇ [ವರುಣ] ಸಕಲ ಜಗದೊಡೆಯನಾದ ಪರಮಾತ್ಮ! ನಾವೆಲ್ಲರೂ, ಯಾವ ರೀತಿ [ರಥೀಃ] ರಥದ ಸ್ವಾಮಿಯು [ಸಂದಿತಮ್] ರಥದಲ್ಲಿ ಜೋಡಿಸಲ್ಪಟ್ಟ, ಬಂಧಿಸಲ್ಪಟ್ಟು ಬಳಲಿದ [ಅಶ್ವಂ] ಕುದುರೆಯನ್ನು [ಗೀರ್ಭಿಃ] ಪ್ರೀತಿಯ ವಾಣಿಯಿಂದ ಲಲ್ಲೆಗರೆಯುತ್ತಾ ತನ್ನ ವಶದಲ್ಲಿಟ್ಟುಕೊಳ್ಳುತ್ತಾನೋ ಅದೇ ರೀತಿ ನಾವೂ ಕೂಡ [ಮೃಳೀಕಾಯ] ಅತ್ಯಂತ ಸುಖಪ್ರಾಪ್ತಿಗೋಸ್ಕರ [ತೇ ಮನಃ] ಸರ್ವರಿಗೂ ಆಹ್ಲಾದವನ್ನುಂಟು ಮಾಡುವ ನಿನ್ನ ಜ್ಞಾನವನ್ನು ಸ್ತುತಿ, ಭಕ್ತಿ ಮತ್ತು ಉಪಾಸನೆಯ ಮೂಲಕ [ಸೀಮಹಿ] ನಮ್ಮ ಹೃದ್ಗತವನ್ನಾಗಿ ಮಾಡುತ್ತೇವೆ, ಹೃದಯಂಗಮವನ್ನಾಗಿ ಮಾಡುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ರಥದಲ್ಲಿ ಜೋಡಿಸಲ್ಪಟ್ಟ ಕುದುರೆಯು ಬಳಲಿ ಬೆಂಡಾದಾಗ, ಆ ರಥದ ಸ್ವಾಮಿಯು, ಕುದುರೆಯನ್ನು ಪ್ರೀತಿಯಿಂದ, ಲಲ್ಲೆಗರೆಯುತ್ತಾ, ತನ್ನ ವಶದಲ್ಲಿಟ್ಟುಕೊಳ್ಳುತ್ತಾನೋ, ಅದೇ ರೀತಿ, ಅತ್ಯಂತ ದುರ್ಲಭ ಹಾಗೂ ಅಪ್ರಾಪ್ಯವಾದ ಕಷ್ಟಸಾಧ್ಯವಾದ ಭಗವಂತನ ಜ್ಞಾನವನ್ನು ಜ್ಞಾನಸಾಧನೆಯೊಂದಿಗೆ ಸ್ತುತಿ ಭಕ್ತಿ ಮತ್ತು ಉಪಾಸನೆಯ ಮೂಲಕ ಭಗವಂತನನ್ನು ಒಲಿಸಿಕೊಂಡು ಹೃದಯಂಗಮವನ್ನಾಗಿ ಮಾಡುತ್ತೇವೆ.

ಎಷ್ಟರ ತನಕ ಭಗವಂತನ ಕೃಪೆಯು ನಮಗೆ ಪ್ರಾಪ್ತವಾಗುವುದಿಲ್ಲವೋ ಅಷ್ಟರ ತನಕ ಜ್ಞಾನವೂ ಪ್ರಾಪ್ತವಾಗಲಾರದು. ಆದುದರಿಂದ ಪ್ರತಿಯೊಬ್ಬನೂ ಕೂಡ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳಬೇಕಾದರೆ, ಪ್ರಯತ್ನ ಮತ್ತು ಸಾಧನೆಯೊಂದಿಗೆ ಭಗವಂತನನ್ನು ಅನನ್ಯ ಭಕ್ತಿಯಿಂದ ಉಪಾಸಿಸಬೇಕು.

ಪುನಃ ಅದೇ ಅರ್ಥವನ್ನು ದೃಷ್ಟಾಂತದಿಂದ ಸಿದ್ಧಗೊಳಿಸಲಾಗಿದೆ.

ಪರಾ ಹಿ ಮೇ ವಿಮನ್ಯವಃ ಪತಂತಿ ವಸ್ಯಇಷ್ಟಯೇ । ವಯೋ ನ ವಸತೀರುಪ ॥೪॥

ಪದಾರ್ಥ:- ಓ ಸಕಲೈಶ್ವರ್ಯಪ್ರದನಾದ ಪರಮಾತ್ಮ! [**ವಯಃ ವಸತೀಃ**] ಯಾವ ರೀತಿ ತಮ್ಮ ವಾಸಸ್ಥಾನಗಳನ್ನು ತೊರೆದು ಪಕ್ಷಿಗಳು ದೂರ ದೂರದಲ್ಲಿರುವ ಪ್ರದೇಶಗಳಿಗೆ ಹೋಗುತ್ತವೆಯೋ ಅದೇ ರೀತಿ ನಿನ್ನ ಕೃಪೆಯಿಂದ [ವಸ್ಯ ಇಷ್ಟಯೇ] ನ್ಯಾಯಮಾರ್ಗದಲ್ಲಿ ಹಾಗೂ ಧರ್ಮಮಾರ್ಗದಲ್ಲಿ ನಡೆಯುತ್ತಾ ಪುಷ್ಕಳವಾದ ಸಂಪತ್ತನ್ನು ಪ್ರಾಪ್ತ ಮಾಡಿಕೊಳ್ಳಲಪೇಕ್ಷಿಸುವ [ಮೇ] ನನ್ನ ವಾಸಸ್ಥಾನದಿಂದ [ವಿಮನ್ಯವಃ] ಕಾರಣವಿಲ್ಲದೇ ಹಲವು ವಿಧದಲ್ಲಿ ಕ್ರೋಧವನ್ನು ಪ್ರಕಟಿಸುವ, ಜಗಳವನ್ನು ಮಾಡುವ ದುಷ್ಟ ಜನರು [ಪರಾ ಪತಂತಿ] ಅತ್ಯಂತ ದೂರ ಹೋಗಲಿ. ಎಂದಿಗೂ ಅವರು ನಮ್ಮ ಹತ್ತಿರ ಬಾರದಿರಲಿ.

ಭಾವಾರ್ಥ:- ಓ ಸಕಲೈಶ್ವರ್ಯಪ್ರದನಾದ ಪರಮಾತ್ಮ! ಯಾವ ರೀತಿ ಪಕ್ಷಿಗಳು ತಮ್ಮ ವಾಸಸ್ಥಾನವನ್ನು ತೊರೆದು ದೂರ ದೂರ ಪ್ರದೇಶಗಳಿಗೆ ಹೋಗುತ್ತವೆಯೋ, ಅದೇ ರೀತಿ ನ್ಯಾಯ ಮತ್ತು ಧರ್ಮಮಾರ್ಗದಲ್ಲಿ ಜೀವನವನ್ನು ನಡೆಸುತ್ತಾ ಪುಷ್ಕಳವಾದ ಸಂಪತ್ತನ್ನು ಪ್ರಾಪ್ತ ಮಾಡಿಕೊಳ್ಳಲಪೇಕ್ಷಿಸುವ ನಮ್ಮ ವಾಸ ಸ್ಥಾನದಿಂದ,

ಕಾರಣ ಇಲ್ಲದೇ ಕ್ರೋಧವನ್ನು ಪ್ರಕಟಪಡಿಸಿ, ಕಾಲುಕೆರೆದು ಜಗಳವನ್ನು ಮಾಡುವ ದುಷ್ಟ ಜನರು ದೂರ ಹೋಗಲಿ. ನಾವೆಲ್ಲರೂ ಸದಾಕಾಲ ಶಾಂತಿಯಿಂದ ಇರುವಂತಾಗಲಿ.

ಪುನಃ ಆ ವರುಣನು ಹೇಗಿದ್ದಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಕದಾ ಕ್ಷತ್ರಶ್ರಿಯಂ ನರ-ಮಾ ವರುಣಂ ಕರಾಮಹೇ । ಮೃಳೀಕಾಯೋರುಚಕ್ಷಸಮ್ ॥೫॥

ಪದಾರ್ಥ:- [ವಯಂ] ನಾವೆಲ್ಲರೂ [ಕದಾ] ಯಾವಾಗ [ಮೃಳೀಕಾಯ] ಅತ್ಯಂತ ಸುಖಪ್ರಾಪ್ತಿಗೋಸ್ಕರ [ಉರುಚಕ್ಷಸಮ್] ಯಾವನನ್ನು ವೇದವು ಅನೇಕ ರೀತಿಯಲ್ಲಿ ವರ್ಣಿಸುತ್ತವೆಯೋ ಆ [ನರಮ್] ಎಲ್ಲರಿಗೂ ಸನ್ಮಾರ್ಗವನ್ನು ತೋರಿಸುವವನಾದ [ವರುಣಮ್] ಸರ್ವೋಪಾಸ್ಯನಾದ ಪರಮಾತ್ಮನ ಉಪಾಸನೆಯನ್ನು ಮಾಡುತ್ತಾ [ಕ್ಷತ್ರಶ್ರಿಯಂ] ಚಕ್ರವರ್ತಿ ರಾಜ್ಯಲಕ್ಷ್ಮಿಯನ್ನು [ಕರಾಮಹೇ] ಪ್ರಾಪ್ತಮಾಡಿಕೊಳ್ಳುತ್ತೇವೆ.

ಭಾವಾರ್ಥ:- ನಾವೆಲ್ಲರೂ ಯಾವಾಗ ಅತ್ಯಂತ ಸುಖಪ್ರಾಪ್ತಿಗೋಸ್ಕರ, ವೇದಗಳಲ್ಲಿ ವರ್ಣಿಸಲ್ಪಟ್ಟ ಸರ್ವಶ್ರೇಷ್ಠನಾದ ಪರಮಾತ್ಮನನ್ನು ಉಪಾಸಿಸುತ್ತಾ ಚಕ್ರವರ್ತೀ ರಾಜ್ಯದ ಸ್ಥಾಪನೆಯನ್ನು ಮಾಡಿ, ಅದನ್ನು ಭೋಗಿಸುತ್ತೇವೆ? ಈ ಮಂತ್ರದಲ್ಲಿ ಪ್ರಶ್ನೆ ಮತ್ತು ಉತ್ತರ ಎರಡೂ ಇದೆ. ಪರಮಾತ್ಮನ ಉಪಾಸನೆಯನ್ನು ಮಾಡುತ್ತಾ, ಅವನ ಆಜ್ಞೆಯನ್ನು ಉಲ್ಲಂಘಿಸದೇ, ಸೃಷ್ಟಿಯ ನಿಯಮಕ್ಕೆ ಪ್ರಕೃತಿಯ ನಿಯಮಕ್ಕೆ ವಿರುದ್ಧವಾಗಿ ಆಚರಣೆಯನ್ನು ಮಾಡದೇ, ನ್ಯಾಯ ಮತ್ತು ಧರ್ಮ ಮಾರ್ಗದಲ್ಲಿ ನಮ್ಮ ಜೀವನವನ್ನು ನಡೆಸಿದಾಗ ಖಂಡಿತವಾಗಿಯೂ ಅತ್ಯಂತ ಸುಂದರವಾದ ಚಕ್ರವರ್ತಿ ರಾಜ್ಯದ ಸ್ಥಾಪನೆಯನ್ನು ಮಾಡಿ ಅದರ ಭೋಗವನ್ನು ಭೋಗಿಸಬಹುದು.

ಈಗ ಸೂರ್ಯ ಮತ್ತು ವಾಯುವಿನ ವರ್ಣನೆಯನ್ನು ಮಾಡಲಾಗುತ್ತದೆ.

ತದಿತ್ ಸಮಾನಮಾಶಾತೇ ವೇನಂತಾ ನ ಪ್ರ ಯುಚ್ಛತಃ । ಧೃತವ್ರತಾಯ ದಾಶುಷೇ ॥೬॥

ಪದಾರ್ಥ:- [**ವೇನಂತಾ ಪ್ರಯುಚ್ಛತಃ ನ**] ಯಾವ ರೀತಿ ಇಬ್ಬರು ವಾದ್ಯವನ್ನು ಉತ್ತಮವಾದ ರೀತಿಯಲ್ಲಿ ಮೊಳಗಿಸುವವರು ಆನಂದದಿಂದ ವಾದ್ಯವನ್ನು ನುಡಿಸುತ್ತಾರೋ, ಅದೇ ರೀತಿ ಸೂರ್ಯ ಮತ್ತು ವಾಯು [**ಧೃತವ್ರತಾಯ ದಾಶುಷೇ**] ಸತ್ಯವನ್ನೇ ಹೇಳುವ ಸಂಕಲ್ಪವನ್ನು ಮಾಡಿದ್ದಾರೋ, ಹಾಗೂ ಕ್ರಿಯಾಮಯ ಯಜ್ಞವನ್ನು ಧಾರಣ ಮಾಡುತ್ತಾರೋ ಅರ್ಥಾತ್ ಯಜ್ಞವನ್ನು = ಸರ್ವಶ್ರೇಷ್ಠ ಕರ್ಮಗಳನ್ನು, ಶ್ರೇಷ್ಠ ಗುಣಗಳನ್ನು ತಮ್ಮ ಅನುಷ್ಠಾನಕ್ಕೆ ತಂದಿದ್ದಾರೋ, ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದಾರೋ ಅಂತಹ ವಿದ್ವಾಂಸರು [**ತತ್**] ಯಜ್ಞದಲ್ಲಿ ಹಾಕಿದ ಯಾವ ಹವಿಸ್ಸು ಇದೆಯೋ [**ಇತ್**] ಅದನ್ನೇ [**ಸಮಾನಮ್ ಆಶಾತೇ**] ಸಮಾನವಾಗಿ ವ್ಯಾಪ್ತವನ್ನಾಗಿ ಮಾಡುತ್ತಾರೆ. ಸರ್ವತ್ರ ವ್ಯಾಪ್ತವಾಗುವಂತೆ ಮಾಡುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಇಬ್ಬರು ನುರಿತ ವಾದ್ಯವಿಶಾರದರು, ಆನಂದದಿಂದ ಅತ್ಯುತ್ತಮವಾದ ರೀತಿಯಲ್ಲಿ ವಾದ್ಯವನ್ನು ನುಡಿಸುತ್ತಾರೋ, ಹಾಗೂ ಸಂಗೀತವನ್ನು ಬಲ್ಲವರಿಗೆ ಅತ್ಯಂತ ಆನಂದವನ್ನುಂಟುಮಾಡುತ್ತಾರೋ, ಅದೇ ರೀತಿ ಯಾರು ತಮ್ಮ ಜೀವನದಲ್ಲಿ ಸತ್ಯವನ್ನೇ ಹೇಳುವ ಸಂಕಲ್ಪವನ್ನು ಮಾಡುತ್ತಾರೋ, ಹಾಗೂ ಶ್ರೇಷ್ಠ ಕರ್ಮಗಳನ್ನು ಮತ್ತು ಶ್ರೇಷ್ಠ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೋ ಅಂತಹ ವಿದ್ವಾಂಸರು ಯಜ್ಞದಲ್ಲಿ ಅರ್ಪಿಸಿದ ಹವಿಸ್ಸನ್ನೇ ಸೂರ್ಯ ಮತ್ತು ವಾಯು ಸರ್ವತ್ರ ವ್ಯಾಪಿಸುವಂತೆ ಮಾಡುತ್ತಾರೆ. ಈ ಮಂತ್ರದ ಭಾವವೇನೆಂದರೆ, ಕೇವಲ ಬೆಂಕಿಯನ್ನು ಉರಿಸಿ ಅದರಲ್ಲಿ ಇತರ ಸಾಮಗ್ರಿಗಳನ್ನು ಅಥವಾ ಕಸಕಡ್ಡಿಗಳನ್ನು ಹಾಕಿದಂತೆ ಹವಿಸ್ಸನ್ನು ಹಾಕಿದರೆ ಅದು ಯಜ್ಞವಾಗುವುದಿಲ್ಲ. ಯಜ್ಞವನ್ನು ಮಾಡುವವನು, ಸತ್ಯಭಾಷಣ, ಸತ್ಯಾಚರಣೆ ಹಾಗೂ ಯಜ್ಞಾನುಷ್ಠಾನವನ್ನು, ಅರ್ಥಾತ್ ಶ್ರೇಷ್ಠ ಗುಣ

ಕರ್ಮಗಳನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾನೋ, ಅಂತಹ ವಿದ್ವಾಂಸನು ಮಾಡಿದ ಯಜ್ಞವು ಮಾತ್ರ ಸಾರ್ಥಕವಾಗುತ್ತದೆ.

ಉಕ್ತವಿದ್ಯೆಯನ್ನು ಯಥಾವತ್ತಾಗಿ ಯಾರು ತಿಳಿಯುತ್ತಾರೆ ಎಂಬುದನ್ನು ಹೇಳಲಾಗಿದೆ

ವೇದಾ ಯೋ ವೀನಾಂ ಪದ-ಮಂತರಿಕ್ಷೇಣ ಪತತಾಮ್ । ವೇದ ನಾವಃ ಸಮುದ್ರಿಯಃ ॥೭॥

ಪದಾರ್ಥ:- [ಯಃ] ಯಾವ ಮಾನವನು [ಅಂತರಿಕ್ಷೇಣ ಪತತಾಂ] ಆಕಾಶಮಾರ್ಗದ ಮೂಲಕ ಹೋಗುವ [ವೀನಾಂ] ವಿಮಾನಾದಿ ಯಾನಗಳ [ಪದಂ ವೇದ] ರಚನೆ ಹಾಗೂ ಚಲಿಸುವ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೋ, [ಯಃ ಸಮುದ್ರಿಯಃ] ಯಾವ ಮಾನವನು ಸಮುದ್ರದಲ್ಲಿ ಚಲಿಸುವ [ನಾವಃ] ಬೃಹತ್ ನೌಕೆ, ಹಡಗು ಮೊದಲಾದ ಯಾನಗಳ [ವೇದ] ರಚನೆ ಹಾಗೂ ಚಲಿಸುವ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೋ, ಅಂತಹ ಪುರುಷಾರ್ಥಿಯಾದ ಮಾನವನೇ ಶಿಲ್ಪವಿದ್ಯಾಸಿದ್ಧಿಯನ್ನು ಪ್ರಾಪ್ತ ಮಾಡಿಕೊಳ್ಳಲು ಅರ್ಹನಾಗುತ್ತಾನೆ.

ಭಾವಾರ್ಥ:- ಪರಮಾತ್ಮನು ವೇದಗಳಲ್ಲಿ, ಅಂತರಿಕ್ಷ ಹಾಗೂ ಸಮುದ್ರಗಳಲ್ಲಿ ಸಂಚರಿಸುವ ಯಾನಗಳ ಸಂಪೂರ್ಣ ಜ್ಞಾನವನ್ನು ಉಪದೇಶಿಸಿದ್ದಾನೆ. ಹಾಗೂ ಪ್ರತಿಯೊಂದು ಸರ್ಗದಲ್ಲಿಯೂ ಉಪದೇಶಿಸುತ್ತಾನೆ. ಯಾವ ಪುರುಷಾರ್ಥಿಯಾದ ಮಾನವನು ಈ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೋ, ಅವನು ಸಂಪೂರ್ಣ ಶಿಲ್ಪವಿದ್ಯಾ ಸಿದ್ಧಿಯನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಇದರ ತಾತ್ಪರ್ಯವೇನೆಂದರೆ ಮನುಷ್ಯನು ಕೂಪ ಮಂಡೂಕನಂತೆ ಇರದೇ, ದೇಶ ದೇಶಾಂತರಗಳಿಗೆ ಸಂಚರಿಸಲು ಸಮರ್ಥವಾದ ನೆಲ, ಜಲ, ಹಾಗೂ ವಾಯು ಮಾರ್ಗದಲ್ಲಿ ಸಂಚರಿಸುವ ಯಾನಗಳನ್ನು ನಿರ್ಮಿಸಿ ಸರ್ವತ್ರ ಗಮನಾಗಮನವನ್ನು ಮಾಡಿ, ಸಕಲ ಶಿಲ್ಪವಿದ್ಯೆಯನ್ನು ಯಂತ್ರಕಲಾಕೌಶಲ್ಯವನ್ನು ಪ್ರಾಪ್ತ ಮಾಡಿಕೊಳ್ಳಬೇಕು.

ಪುನಃ ಅವರು ಏನನ್ನು ತಿಳಿಯುತ್ತಾರೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ವೇದ ಮಾಸೋ ಧೃತವ್ರತೋ ದ್ವಾದಶ ಪ್ರಜಾವತಃ । ವೇದಾ ಯ ಉಪಜಾಯತೇ ॥೮॥

ಪದಾರ್ಥ:- [ಯಃ ಧೃತವತಃ] ಯಾವ ಮಾನವನು ಸತ್ಯಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುವ ಹಾಗೂ ಸತ್ಯಾಚರಣೆಯನ್ನು ಮಾಡುವ ವ್ರತವನ್ನು ಧಾರಣ ಮಾಡಿದ್ದಾನೋ ಹಾಗೂ [ಪ್ರಜಾವತಃ] ಪ್ರತಿಯೊಂದು ಉತ್ತಮವಾದ ಪದಾರ್ಥಗಳು ಪರಮಾತ್ಮನ ಸೃಷ್ಟಿನಿಯಮಕ್ಕೆ ಅನುಗುಣವಾಗಿ ಹಾಗೂ ಪ್ರಕೃತಿಯ ನಿಯಮಕ್ಕೆ ಅನುಗುಣವಾಗಿ ಉತ್ಪನ್ನವಾಗುತ್ತದೆಯೋ ಅಂತಹ [ದ್ವಾದಶ ಮಾಸಃ] ದ್ವಾದಶ ಮಾಸಗಳನ್ನು ಹಾಗೂ [ಉಪಜಾಯತೇ] ಅಲ್ಲಿ ಉತ್ಪನ್ನವಾಗುವ ಹದಿಮೂರನೆಯ ಅಧಿಕ ಮಾಸವನ್ನು [ವೇದ] ಬಲ್ಲವನಾಗುತ್ತಾನೋ ಅವನು ಕಾಲದ ಮತ್ತು ಸಮಯದ ಸಕಲ ಅವಯವಗಳನ್ನು ಬಲ್ಲವನಾಗಿ ಸಂಪೂರ್ಣ ಜಗತ್ತಿಗೆ ಉಪಕಾರವನ್ನು ಮಾಡುವವನಾಗುತ್ತಾನೆ.

ಭಾವಾರ್ಥ:- ಯಾವ ಮಾನವನು, ಸತ್ಯಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುವ ಹಾಗೂ ಸತ್ಯಾಚರಣೆಯನ್ನೇ ಮಾಡುವ ಸಂಕಲ್ಪವನ್ನು ಮಾಡಿದ್ದಾನೋ, ಪ್ರತಿಯೊಂದು ವಸ್ತುಗಳು, ಪದಾರ್ಥಗಳು ಮಾಸಗಳಿಗನುಗುಣವಾಗಿ ಋತುಗಳಿಗನುಗುಣವಾಗಿ ಉತ್ಪನ್ನವಾಗುವಂತಹ ದ್ವಾದಶ ಮಾಸಗಳನ್ನು ಅರ್ಥಾತ್ ಯಾವ ಯಾವ ಮಾಸಗಳಲ್ಲಿ ಯಾವ ಯಾವ ಪದಾರ್ಥಗಳು ಉತ್ಪನ್ನವಾಗುತ್ತವೆ, ಯಾವ ಯಾವ ಋತುಗಳಲ್ಲಿ ಯಾವ ವಸ್ತುಗಳು ಉತ್ಪನ್ನವಾಗುತ್ತವೆ, ಅವೆಲ್ಲವನ್ನೂ ಸಂಪೂರ್ಣವಾಗಿ ಬಲ್ಲವನಾಗುತ್ತಾನೋ, ಅದರೊಂದಿಗೆ, ಅಧಿಕಮಾಸವನ್ನು, ಋತುವಿನ ಪರಿವರ್ತನೆಯನ್ನು ಸಂಪೂರ್ಣವಾಗಿ ಬಲ್ಲವನಾಗುತ್ತಾನೋ, ಅವನು ಜಗತ್ತಿಗೆ ಉಪಕಾರಿಯಾಗುತ್ತಾನೆ.

ಪರಮಾತ್ಮನ ಸೃಷ್ಟಿಯಲ್ಲಿ ಯಾವ ವಸ್ತುವೂ ಯಾವ ಪದಾರ್ಥವೂ ನಿರರ್ಥಕವಾದುದಿಲ್ಲ. ಪ್ರತಿಯೊಂದು ಪದಾರ್ಥವೂ ಪ್ರತಿಯೊಂದು ವಸ್ತುವೂ ಸಾರ್ಥಕ ಹಾಗೂ ಪೂರ್ಣ ಪ್ರಯೋಜನಕಾರಿಯಾಗಿದೆ. ಇವೆಲ್ಲಾ ವಸ್ತುಗಳ, ಪದಾರ್ಥಗಳ ಸಂಪೂರ್ಣ ಸತ್ಯಜ್ಞಾನವನ್ನು ಅರಿತುಕೊಂಡು ಯಾವ ಯಾವ ಮಾಸದಲ್ಲಿ ಯಾವ ಯಾವ ಋತುವಿನಲ್ಲಿ, ಯಾವ ಯಾವ ವಸ್ತುಗಳು ಯಾವ ಪದಾರ್ಥಗಳು ಉತ್ಪನನ್ನವಾಗುತ್ತವೆ ಹಾಗೂ ಯಾವ ಯಾವ ಸಮಯದಲ್ಲಿ ಪ್ರತಿಯೊಂದು ಪದಾರ್ಥಗಳು ಯಾವ ಪ್ರಭಾವವನ್ನು ಬೀರುತ್ತವೆ, ಯಾವ ಯಾವ ಪರಿಣಾಮವನ್ನುಂಟು ಮಾಡುತ್ತವೆ ಎಂಬುದನ್ನು ಪೂರ್ಣವಾಗಿ ಅರಿತುಕೊಂಡು ಸಂಪೂರ್ಣ ಪ್ರಾಣಿಮಾತ್ರರಿಗೆ ಅದರಿಂದ ಪ್ರಯೋಜನ ಲಭಿಸುವಂತೆ ಪ್ರಯತ್ನಿಸಬೇಕು.

ಪುನಃ ಅವನು ಏನೇನನ್ನು ತಿಳಿಯುತ್ತಾನೆ ಎಂಬುದನ್ನು ಇಲ್ಲಿ ಹೇಳಲಾಗಿದೆ.

ವೇದ ವಾತಸ್ಯ ವರ್ತನಿ-ಮುರೋರ್‌ಋಷ್ವಸ್ಯ ಬೃಹತಃ । ವೇದಾ ಯೇ ಅಧ್ಯಾಸತೇ ॥೯॥

ಪದಾರ್ಥ:- [ಯಃ] ಯಾವ ಮಾನವನು [ಋಷ್ವಸ್ಯ] ಸರ್ವತ್ರ ಗತಿಶೀಲವಾದ [ಉರೋಃ] ಅತ್ಯಧಿಕ ಗುಣಗಳುಳ್ಳ ಹಾಗೂ ಸಕಲ ಜೀವರಾಶಿಗಳಿಗೆ ಜೀವನವನ್ನು ನೀಡುವ [ಬೃಹತಃ ವಾತಸ್ಯ] ಅತ್ಯಂತ ಬಲಶಾಲಿಯೂ, ತೀವ್ರವೇಗದಿಂದಲೂ ಚಲಿಸುವ ವಾಯುವಿನ [ವರ್ತ್ತನಿಂ] ಆವರ್ತನವನ್ನು ಮತ್ತು ಮಾರ್ಗವನ್ನು [ವೇದ] ಬಲ್ಲವನಾಗುತ್ತಾನೋ [ಯೇ] ಯಾವ ಪದಾರ್ಥಗಳು [ಅಧ್ಯಾಸತೇ] ಆ ವಾಯುವಿನಲ್ಲಿ ಅಡಕವಾಗಿವೆಯೋ, ಯಾವ ಪದಾರ್ಥಗಳು ವಾಯುವಿನ ಆಧಾರದಿಂದ ಸ್ಥಿರವಾಗಿದೆಯೋ ಆ ಪದಾರ್ಥಗಳ ಮಾರ್ಗವನ್ನೂ, ಬಲ್ಲವನಾಗುತ್ತಾನೋ ಆ ವಿದ್ವಾಂಸನು [ವೇದ] ಭೂಮಿಯ ಹಾಗೂ ಖಗೋಲದ ಗುಣಗಳನ್ನು ಬಲ್ಲವನಾಗುತ್ತಾನೆ.

ಭಾವಾರ್ಥ:- ಯಾವ ಮಾನವನು ಸರ್ವತ್ರ ಗತಿಶೀಲವಾದ, ತೀವ್ರವೇಗದಿಂದ ಚಲಿಸುವ ವಾಯುವಿನ ಗತಿಯನ್ನು, ಆವರ್ತನವನ್ನು ಹಾಗೂ ವಾಯುವಿನಲ್ಲಿ ಅಡಕವಾಗಿರುವ ಸಕಲ ಪದಾರ್ಥಗಳು ಎಂದರೆ ವಾಯುವಿನಲ್ಲಿರುವ ಸಕಲ ಅನಿಲ [ಆಕ್ಸಿಜನ್, ಹೈಡ್ರೋಜನ್, ನೈಟ್ರೋಜನ್, ಕಾರ್ಬನ್ ಡೈ ಆಕ್ಸೈಡ್ ಮೊದಲಾದವು]ಗಳು, ಸಾಧಾರಣ ವಾಯು, ಓಜೋನ್, ವಾಯುವಿನ ಇತರ ರೂಪಗಳಾದ ಬಿರುಗಾಳಿ, ಸುಂಟರಗಾಳಿ, ಚಂಡಮಾರುತ, ಮಳೆಯನ್ನು ತರುವ ಮಾನ್ಸೂನ್ ಮೊದಲಾದವುಗಳ ಗತಿಯನ್ನು, ಸ್ವರೂಪವನ್ನು ಬಲ್ಲವನಾಗುತ್ತಾನೋ, ವಾಯುವಿನ ಆಧಾರದಿಂದ ಯಾವ ಪದಾರ್ಥಗಳು ಸ್ಥಿರವಾಗಿವೆಯೋ ಆ ಪದಾರ್ಥಗಳ ಸ್ವರೂಪವನ್ನು, ಮಾರ್ಗವನ್ನು ಬಲ್ಲವನಾಗುತ್ತಾನೋ, ಅಂತಹ ವಿದ್ವಾಂಸನು ಭೂಗೋಲ ಹಾಗೂ ಖಗೋಲದ ಗುಣಗಳನ್ನು ಬಲ್ಲವನಾಗುತ್ತಾನೆ. ಈ ಜಗತ್ತು ಪಂಚಭೂತಗಳಿಂದ ನಿರ್ಮಿತವಾಗಿದೆ. ಈ ಪಂಚ ಮಹಾಭೂತಗಳಲ್ಲಿ ವಾಯುವು ಕೂಡ ಒಂದು. ಪ್ರತಿಯೊಂದು ಕಡೆಯಲ್ಲಿಯೂ ಭೂಲೋಕ, ಅಂತರಿಕ್ಷಲೋಕ ಮತ್ತು ದ್ಯುಲೋಕ ಎಲ್ಲಾ ಕಡೆಗಳಲ್ಲಿಯೂ ವಾಯುವಿದೆ. ವಾಯುವಿಲ್ಲದ ಸ್ಥಳವಿಲ್ಲ. ಆದರೆ ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ಪದಾರ್ಥಗಳಲ್ಲಿ ವಾಯುವು ಯಾವ ಸ್ವರೂಪದಲ್ಲಿದೆ, ಅದನ್ನು ಪೂರ್ಣವಾಗಿ ತಿಳಿಯಬೇಕು. ಅದೇ ರೀತಿ ಯಾವ ಯಾವ ದಿಕ್ಕಿನಲ್ಲಿ ವಾಯು ಯಾವ ರೀತಿ ಬೀಸುತ್ತದೆ, ಯಾವ ಕಾಲದಲ್ಲಿ, ಯಾವ ಋತುವಿನಲ್ಲಿ, ಗಾಳಿಯು ಯಾವ ರೀತಿ ಬೀಸುತ್ತದೆ ಸಮುದ್ರದಲ್ಲಿ ಗಾಳಿಯ ಒತ್ತಡ ಹೇಗಿರುತ್ತದೆ, ಮರುಭೂಮಿಯಲ್ಲಿ ಗಾಳಿಯ ಒತ್ತಡ ಹೇಗಿರುತ್ತದೆ ಯಾವ ಯಾವ ಸಮಯದಲ್ಲಿ ಇವುಗಳಲ್ಲಿ ವ್ಯತಿರೇಕ ಉಂಟಾಗುತ್ತದೆ ಹಾಗೂ ಇದರಿಂದ ಉಂಟಾಗುವ ಹಾನಿ ಹಾಗೂ ಪ್ರಯೋಜನ ಇವೆಲ್ಲವನ್ನೂ ಅತ್ಯುತ್ತಮವಾದ ರೀತಿಯಲ್ಲಿ ಅರಿತುಕೊಂಡರೆ, ಮಾನವನು ಭೂ ಮತ್ತು ಖಗೋಲದ ಗುಣಗಳನ್ನು ಸಂಪೂರ್ಣವಾಗಿ ಬಲ್ಲವನಾಗುತ್ತಾನೆ. ಇದರಿಂದ ಪ್ರತಿವರ್ಷ ವಿಶ್ವದಾದ್ಯಂತ ಉಂಟಾಗುವ ಅಪಾರ ಹಾನಿಯನ್ನು ತಡೆಗಟ್ಟಬಹುದು.

ಯಾವ ಮನುಷ್ಯರು ಈ ವಾಯುವನ್ನು ಸರಿಯಾಗಿ ತಿಳಿಯುತ್ತಾರೋ ಅವರು ಏನನ್ನು ಪಡೆಯುತ್ತಾರೆ ಎಂಬುದನ್ನಿಲ್ಲಿ ತಿಳಿಸಿದೆ.

ನಿ ಷಸಾದ ಧೃತವ್ರತೋ ವರುಣಃ ಪಸ್ತ್ಯಾ೩ಸ್ವಾ । ಸಾಮ್ರಾಜ್ಯಾಯ ಸುಕ್ರತುಃ ॥೧೦॥

ಪದಾರ್ಥ:- ಯಾರು [ಧೃತವ್ರತಃ] ಸತ್ಯಭಾಷಣ ಹಾಗೂ ಸತ್ಯಾಚರಣೆಯ ದೃಢವಾದ ಸಂಕಲ್ಪವನ್ನು ಮಾಡಿದ್ದಾರೋ, ಅರ್ಥಾತ್ ಸದಾ ಸತ್ಯಭಾಷಣ ಹಾಗೂ ಸತ್ಯಾಚರಣೆಯನ್ನು ಮಾಡುತ್ತಾರೋ [ಸುಕ್ರತುಃ] ಶ್ರೇಷ್ಠವಾದ ಕರ್ಮಗಳನ್ನು ಜ್ಞಾನಪೂರ್ವಕವಾಗಿ ಬುದ್ಧಿಪೂರ್ವಕವಾಗಿ ಮಾಡುತ್ತಾರೋ ಅಂತಹ [ವರುಣಃ] ವರಣೀಯನಾದ ಎಲ್ಲರಿಂದಲೂ ಆದರಿಸಲ್ಪಡುವ, ಗೌರವಿಸಲ್ಪಡುವ ರಾಜನು [ಪಸ್ತ್ಯಾಸು] ಅತ್ಯುತ್ತಮ ಮನೆಯಲ್ಲಿ ಶಾಂತಿ ಹಾಗೂ ನೆಮ್ಮದಿಯಿಂದ ಬಾಳುವ [ಪ್ರಜಾಸು] ಪ್ರಜೆಗಳಲ್ಲಿ [ಸಾಮ್ರಾಜ್ಯಾಯ] ಉತ್ತಮವಾದ ಚಕ್ರವರ್ತಿ ರಾಜ್ಯವನ್ನು ಮಾಡಲು [ಆ ನಿಷಸಾದ] ಸಂಪೂರ್ಣವಾಗಿ ಸಮರ್ಥನಾಗುತ್ತಾನೆ.

ಭಾವಾರ್ಥ:- ಯಾವ ಮಾನವನು ಸತ್ಯಾಚರಣೆ ಹಾಗೂ ಸತ್ಯಭಾಷಣವನ್ನೇ ಮಾಡುವ ದೃಢವಾದ ಸಂಕಲ್ಪವನ್ನೇ ಮಾಡಿದ್ದಾನೋ, ಯಾವ ಮಾನವನು ಶ್ರೇಷ್ಠವಾದ ಕರ್ಮಗಳನ್ನು ಜ್ಞಾನಪೂರ್ವಕವಾಗಿ ಮತ್ತು ಬುದ್ಧಿಪೂರ್ವಕವಾಗಿ ಮಾಡುತ್ತಾನೋ, ಅಂತಹ ಸರ್ವಾದರಣೀಯನಾದ ರಾಜನೇ, ಅತ್ಯುತ್ತಮವಾದ ಮನೆಗಳಲ್ಲಿ, ಸುಖ ಶಾಂತಿ, ಮತ್ತು ನೆಮ್ಮದಿಯಿಂದ ಬಾಳುವ ಪ್ರಜೆಗಳಲ್ಲಿ ಅತ್ಯುತ್ತಮವಾದ ಚಕ್ರವರ್ತಿ ಸಾಮ್ರಾಜ್ಯವನ್ನು ಸ್ಥಾಪಿಸಲು ಸಮರ್ಥನಾಗುತ್ತಾನೆ.

ಒಬ್ಬ ರಾಜನು ಅಥವಾ ರಾಷ್ಟ್ರದ ನಾಯಕನು ಸ್ವತಹ ಸತ್ಯಸಂಧನೂ ಸತ್ಯಾಚರಣೆಯನ್ನು ಮಾಡುವವನೂ ಆಗಿರಬೇಕು. ಸದಾ ಶ್ರೇಷ್ಠ ಕರ್ಮಗಳನ್ನು ರಾಷ್ಟ್ರದ ಹಿತ ಹಾಗೂ ಪ್ರಜೆಗಳ ಹಿತವೇ ಆಗುವಂತೆ ಜ್ಞಾನಪೂರ್ವಕವಾಗಿ ಮತ್ತು ಬುದ್ಧಿಪೂರ್ವಕವಾಗಿ ಮಾಡುವವನಾಗಿರಬೇಕು. ರಾಷ್ಟ್ರದಲ್ಲಿರುವ ಸಮಸ್ತ ಪ್ರಜೆಗಳು ಅತ್ಯುತ್ತಮವಾದ ಮನೆಯಲ್ಲಿ, ಸುಖ, ಶಾಂತಿ ಹಾಗೂ ನೆಮ್ಮದಿಯಿಂದ ಬಾಳುವಂತಾಗಬೇಕು. ಅತ್ಯುತ್ತಮ ಮನೆಯಲ್ಲಿ ನಿವಾಸವನ್ನು ಮಾಡಬೇಕಾದರೆ ಹೇರಳವಾದ ಸಂಪತ್ತು ಇರಬೇಕು. ಸುಖ, ಶಾಂತಿ ಮತ್ತು ನೆಮ್ಮದಿಯಿಂದ ಬಾಳ ಬೇಕಾದರೆ ಎಲ್ಲರೂ ಜ್ಞಾನಿಗಳೂ, ವಿದ್ಯಾವಂತರೂ, ಕರ್ಮಶೀಲರೂ ಅರ್ಥಾತ್ ಉದ್ಯೋಗ, ಕೃಷಿ, ವಾಣಿಜ್ಯ ವ್ಯಾಪಾರದಲ್ಲಿ ನಿರತರಾಗಿರುವವರಾಗಿರಬೇಕು. ಎಲ್ಲಕ್ಕಿಂತ ಮಿಗಿಲಾಗಿ ಯಾರಿಗೂ ಯಾವುದೇ ರೀತಿಯ ಭೀತಿ ಮತ್ತು ಭಯ ಇರಕೂಡದು. ಸಂಪೂರ್ಣ ರಾಷ್ಟ್ರದಲ್ಲಿ ಸುಖ ಶಾಂತಿ ಮತ್ತು ಸಮೃದ್ಧಿಯಿರಬೇಕು. ಅಂತಹ ರಾಷ್ಟ್ರದ ನಾಯಕನೇ ತನ್ನ ಪ್ರಜೆಗಳ ಮೂಲಕ ಚಕ್ರವರ್ತೀ ರಾಜ್ಯದ ಅರ್ಥಾತ್ ಅತ್ಯಂತ ವಿಶಾಲವಾದ ರಾಷ್ಟ್ರದ ಸ್ಥಾಪನೆಯನ್ನು ಮಾಡಲು ಸಮರ್ಥನಾಗುತ್ತಾನೆ. ಭಗವಂತನು ವಿಶ್ವದಲ್ಲಿರುವ ಸಮಸ್ತ ಮಾನವರಿಗೆ ಇಂತಹ ಸೌಭಾಗ್ಯವನ್ನು ಕರುಣಿಸಲಿ. ಮಾನವ ಮಾತ್ರರು ಸದಾಕಾಲ ಸುಖಶಾಂತಿ ಮತ್ತು ನೆಮ್ಮದಿಯಿಂದ ಬಾಳುವಂತಾಗಲಿ.

ಪುನಃ ಉಕ್ತ ಅರ್ಥವನ್ನೇ ಪ್ರಕಾಶಪಡಿಸಲಾಗುತ್ತದೆ.

ಅತೋ ವಿಶ್ವಾನ್ಯದ್ಭುತಾ ಚಿಕಿತ್ವಾ ಅಭಿ ಪಶ್ಯತಿ । ಕೃತಾನಿ ಯಾ ಚ ಕರ್ತ್ವಾ ॥೧೧॥

ಪದಾರ್ಥ:- ಯಾವ ಕಾರಣದಿಂದ [ಚಿಕಿತ್ವಾನ್] ಎಲ್ಲರನ್ನು ಪ್ರೇರಿಸುವ ಸರ್ವಾದರಣೀಯನೂ, ಧಾರ್ಮಿಕ - ಸದಾ ಧರ್ಮ ಮಾರ್ಗದಲ್ಲಿಯೇ ತನ್ನ ಜೀವನವನ್ನು ನಡೆಸುವವನು, ಅಖಿಲವಿದ್ಯೆ - ಸಂಪೂರ್ಣ ವಿದ್ಯೆಯನ್ನು ಪಡೆದ ಸುಜ್ಞಾನಿಯಾಗುತ್ತಾನೋ ನ್ಯಾಯಕಾರೀ- ಸ್ವತಹ ನ್ಯಾಯ ಮಾರ್ಗದಲ್ಲಿ ಜೀವಿಸುತ್ತಾ ಯಾರಿಗೂ ಯಾವುದೇ ವಿಧದಲ್ಲಿ ಅನ್ಯಾಯ ಮಾಡದವನು ಇತರರಿಗೆ ಯಥಾಯೋಗ್ಯ ನ್ಯಾಯವನ್ನು ಅತ್ಯುತ್ತಮವಾದ ರೀತಿಯಲ್ಲಿ

ಮಾಡುವವನು ಆದ ಮನುಷ್ಯನು [ಯಾ] ಯಾವ [ವಿಶ್ವಾನಿ] ಸಮಸ್ತ [ಕೃತಾನಿ] ಕಾರ್ಯಗಳನ್ನು [ಚ] ಮತ್ತು [ಕರ್ತ್ವಾ] ಉತ್ತಮ ಕರ್ಮಗಳನ್ನೇ ಮಾಡುತ್ತಾನೋ ಮತ್ತು [ಅದ್ಭುತಾನಿ] ಆಶ್ಚರ್ಯಕರವಾದ ವಸ್ತುಗಳನ್ನು [ಅಭಿ ಪಶ್ಯತಿ] ಎಲ್ಲ ಪ್ರಕಾರದಿಂದಲೂ ವೀಕ್ಷಿಸುತ್ತಾನೋ [ಅತಃ] ಇದೇ ಕಾರಣದಿಂದ ಅವನು ನ್ಯಾಯಾಧೀಶನಾಗಲು ಸಮರ್ಥನಾಗುತ್ತಾನೆ.

ಭಾವಾರ್ಥ:- ಯಾವ ಮಾನವನು ಸ್ವತಃ ಸುಜ್ಞಾನಿಯಾಗಿದ್ದು ಎಲ್ಲರಿಗೂ ಪ್ರೇರಣಾ ಸ್ವರೂಪನಾಗುತ್ತಾನೋ, ಸರ್ವಾದರಣೀಯನೂ, ಸದಾ ಧರ್ಮಮಾರ್ಗದಲ್ಲಿಯೇ ತನ್ನ ಜೀವನವನ್ನು ನಡೆಸುವವನೂ, ಯಾರಿಗೂ ಯಾವುದೇ ವಿಧದಲ್ಲಿ ಅನ್ಯಾಯವನ್ನು ಮಾಡದೇ, ಎಲ್ಲರೊಡನೆ ಪ್ರೀತಿ, ಪ್ರೇಮ ಮತ್ತು ಸೌಹಾರ್ದದಿಂದ ಇದ್ದು, ಯಥಾಯೋಗ್ಯ ವ್ಯವಹಾರವನ್ನು ಹಾಗೂ ನ್ಯಾಯವನ್ನು ಮಾಡುತ್ತಾ ಸದಾ ಉತ್ತಮ ಕರ್ಮಗಳನ್ನೇ ಮಾಡುತ್ತಾನೋ ಅವನೇ ನ್ಯಾಯಾಧೀಶನಾಗುತ್ತಾನೆ.

ಪುನಃ ಅದೇ ಅರ್ಥವನ್ನು ತಿಳಿಸಲಾಗುತ್ತದೆ.

ಸ ನೋ ವಿಶ್ವಾಹಾ ಸುಕ್ರತುರಾದಿತ್ಯಃ ಸುಪಥಾ ಕರತ್ । ಪ್ರ ಣ ಆಯೂಂಷಿ ತಾರಿಷತ್ ॥೧೨॥

ಪದಾರ್ಥ:- ಯಾವ ರೀತಿ [ಆದಿತ್ಯಃ] ಅವಿನಾಶಿಯಾದ ಪರಮಾತ್ಮನು ಪ್ರಾಣಶಕ್ತಿ ಮತ್ತು ಸೂರ್ಯನು [ವಿಶ್ವಾಹಾ] ಎಲ್ಲಾ ದಿನಗಳಲ್ಲಿ ನಮ್ಮೆಲ್ಲರನ್ನು [ಸುಪಥಾ] ಉತ್ತಮವಾದ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುತ್ತಾನೋ [ಆಯೂಂಷಿ] ನಮ್ಮೆಲ್ಲರ ಆಯುಷ್ಯವನ್ನು [ಪ್ರ ತಾರಿಷತ್] ಉತ್ತಮವಾದ ರೀತಿಯಲ್ಲಿ ವರ್ಧಿಸುತ್ತಾನೋ ಅದೇ ರೀತಿ [ಸುಕ್ರತುಃ ಆದಿತ್ಯಃ] ಸದಾ ಶ್ರೇಷ್ಠ ಕರ್ಮಗಳನ್ನೇ ಮಾಡುವ ನ್ಯಾಯಕಾರಿಯಾದ ಮಾನವನು ಎಲ್ಲಾ ದಿನಗಳಲ್ಲಿ [ನಃ ಸುಪಥಾಕರತ್] ನಮ್ಮೆಲ್ಲರನ್ನು ಉತ್ತಮವಾದ ಮಾರ್ಗದಲ್ಲಿ ನಡೆಯುವಂತೆ ಪ್ರೇರೇಪಿಸುತ್ತಾ ನಮ್ಮೆಲ್ಲರ ಆಯುಷ್ಯವನ್ನು ವರ್ಧಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವ ಮಾನವನು, ಬ್ರಹ್ಮಚರ್ಯವ್ರತದ ಪಾಲನೆಯನ್ನು ಮಾಡುತ್ತಾ ಜಿತೇಂದ್ರಿಯನಾಗಿ ಅಷ್ಟಾಂಗಯೋಗದ ಪರಿಪಾಲನೆಯನ್ನು ಮಾಡುತ್ತಾನೋ, ಪರಮಾತ್ಮನು ಅವನಿಗೆ ಸಕಲ ಸುಖ ಆನಂದದೊಂದಿಗೆ ದೀರ್ಘವಾದ ಆಯುಷ್ಯವನ್ನು ಕೊಡುತ್ತಾನೆ. ಅದೇ ರೀತಿ ಸದಾ ಶ್ರೇಷ್ಠ ಕರ್ಮಗಳನ್ನು ಮಾಡುತ್ತಾ ಧರ್ಮಮಾರ್ಗದಲ್ಲಿಯೇ ತನ್ನ ಜೀವನವನ್ನು ನಡೆಸುವ ಸುಜ್ಞಾನಿಯಾದ ವಿದ್ವಾಂಸರು ನಮ್ಮೆಲ್ಲರಿಗೆ ಸದಾ ಉತ್ತಮ ರೀತಿಯಲ್ಲಿ ಜೀವನ ನಡೆಸುವಂತೆ ಪ್ರೇರೇಪಿಸಿ ಸಕಲ ಸುಖ ಆನಂದದೊಂದಿಗೆ ನಮ್ಮೆಲ್ಲರಿಗೆ ದೀರ್ಘವಾದ ಆಯುರಾರೋಗ್ಯವು ಪ್ರಾಪ್ತವಾಗುವಂತೆ ಮಾಡಲಿ. ನಮ್ಮೆಲ್ಲರಿಗೆ ಸದಾಕಾಲ ಶ್ರೇಷ್ಠ ವಿದ್ವಾಂಸರ ಸಂಗವೇ ಪ್ರಾಪ್ತವಾಗಲಿ. ಎಂದಿಗೂ ದುರ್ಜನರ ದುಷ್ಟರ ಸಂಗ, ಒಡನಾಟ ಪ್ರಾಪ್ತವಾಗದಿರಲಿ.

ಪುನಃ ಅವನು ಯಾವ ಪ್ರಕಾರದವನು ಎಂಬುದನ್ನು ತಿಳಿಸಲಾಗುತ್ತದೆ.

ಬಿಭ್ರದ್ದ್ರಾಪಿಂ ಹಿರಣ್ಯಯಂ ವರುಣೋ ವಸ್ತ ನಿರ್ಣಿಜಮ್ । ಪರಿ ಸ್ಪಶೋ ನಿ ಷೇದಿರೇ ॥೧೩॥

ಪದಾರ್ಥ:- [ವರುಣಃ] ಸರ್ವೋಪಾಸ್ಯನಾದ ಪರಮಾತ್ಮನು [ನಿರ್ಣಿಜಮ್] ತನ್ನ ಪರಿಶುದ್ಧವಾದ [ಹಿರಣ್ಯಯಂ] 'ಜ್ಯೋತಿರ್ವೈ ಹಿರಣ್ಯಂ' - ಪ್ರಕಾಶವೆಂಬ [ದ್ರಾಪಿಮ್] ಬಲ ಮತ್ತು ತೇಜವನ್ನು [ಬಿಭ್ರತ್] ಧಾರಣ ಮಾಡಿಕೊಂಡು [ವಸ್ತ] ತನ್ನ ಪ್ರಕಾಶದ ಮೂಲಕ, ತನ್ನ ಶಕ್ತಿಯ ಮೂಲಕ ಸಂಪೂರ್ಣ ಚರಾಚರ

ಜಗತ್ತನ್ನು, ಆಚ್ಛಾದಿತವನ್ನಾಗಿ ಮಾಡುತ್ತಾನೆ. ಸರ್ವಪ್ರಕಾಶ ಸ್ವರೂಪನಾದ ಪರಮಾತ್ಮನು, ತನ್ನ ಪ್ರಕಾಶದ ಮೂಲಕ [ಪರಿ ಸ್ಪಶಃ] ಸಕಲ ಪ್ರಕಾಶ ಪುಂಜಗಳನ್ನು ಎಲ್ಲಾ ದಿಕ್ಕಿನಿಂದಲೂ ಸ್ಪರ್ಶಿಸುತ್ತಾನೆ. ಸಕಲ ಸೂರ್ಯ ಚಂದ್ರ ನಕ್ಷತ್ರಾದಿಗಳು, ಗ್ರಹೋಪಗ್ರಹಗಳು ಅವನಲ್ಲಿಯೇ [ನಿಃ ಸೇದಿರೇ] ಸಂಪೂರ್ಣವಾಗಿ ಸ್ಥಿರವಾಗಿವೆ. ಚರಾಚರ ಜಗತ್ತಿನ ಸಮಸ್ತ ಪದಾರ್ಥಗಳು ಅವನ ವ್ಯವಸ್ಥೆಗೆ ಅನುಗುಣವಾಗಿಯೇ ತಮ್ಮ ತಮ್ಮ ಕಾರ್ಯವನ್ನು ಮಾಡುತ್ತವೆ.

ದ್ವಿತೀಯಾರ್ಥ :- [ವರುಣಃ] ಸರ್ವಾದರಣೀಯನೂ, ಸಂಪೂರ್ಣ ಸತ್ಯಜ್ಞಾನವುಳ್ಳವನೂ ಆದ ವಿದ್ವಾಂಸನು [ನಿರ್ಣಿಜಮ್] ತನ್ನ ಪರಿಶುದ್ಧವಾದ [ಹಿರಣ್ಮಯಂ ದ್ರಾಪಿಮ್] ಜ್ಞಾನದ ಹಾಗೂ ತೇಜಸ್ಸಿನ [ಬಿಭ್ರತ್] ಧಾರಣ ಮಾಡಿಕೊಂಡು [ವಸ್ತ] ತನ್ನ ಜ್ಞಾನ, ಗುಣ ಮತ್ತು ಶ್ರೇಷ್ಠ ಕರ್ಮ ಹಾಗೂ ಸ್ವಭಾವಗಳ ಮೂಲಕ, ಎಲ್ಲರನ್ನೂ ಆಕರ್ಷಿಸುತ್ತಾನೆ. ಎಲ್ಲರನ್ನು ಸಂಪರ್ಕಿಸುತ್ತಾನೆ. ಸಂಪೂರ್ಣ ಸತ್ಯಜ್ಞಾನ ಹಾಗೂ ಲೋಕದ ಮೂಲಕ ಕಂಗೊಳಿಸುವ ಆ ವಿದ್ವಾಂಸನು [ಪರಿಸ್ಪಶಃ] ಎಲ್ಲರನ್ನೂ ತನ್ನ ಜ್ಞಾನ ಮತ್ತು ಗುಣ ಹಾಗೂ ಶಾಂತ ಮೃದು ಸ್ವಭಾವದ ಮೂಲಕ ಸ್ಪರ್ಶಿಸುತ್ತಾನೆ. ಎಲ್ಲರೂ ಅವನಿಂದ ಪ್ರಭಾವಿತರಾಗಿ [ನಿಃ ಸೇದಿರೇ] ಅವನ ಸಾನ್ನಿಧ್ಯದಲ್ಲಿಯೇ ಇರುತ್ತಾರೆ.

ಭಾವಾರ್ಥ:- ಸರ್ವೋಪಾಸ್ಯನೂ ಸರ್ವಪ್ರಕಾಶ ಸ್ವರೂಪನೂ ಆದ ಪರಮಾತ್ಮನು ತನ್ನ ಪರಿಶುದ್ಧವಾದ ಜ್ಯೋತಿಯ ಮೂಲಕ ಸಮಸ್ತ ಪ್ರಕಾಶ ಪುಂಜಗಳನ್ನು ಪ್ರಕಾಶಿಸುತ್ತಾನೆ. ಸಂಪೂರ್ಣ ಚರಾಚರ ಜಗತ್ತಿನಲ್ಲಿರುವ ಸಮಸ್ತ ಪದಾರ್ಥಗಳು ಅವನಲ್ಲಿಯೇ ಸ್ಥಿರವಾಗಿದ್ದು ಅವನ ವ್ಯವಸ್ಥೆಗೆ ಅನುಗುಣವಾಗಿ ತಮ್ಮ ಕಾರ್ಯಗಳನ್ನು ಮಾಡುತ್ತವೆ. ಅದೇ ರೀತಿ ಸರ್ವಾದರಣೀಯನೂ ಸಂಪೂರ್ಣ ಸತ್ಯಜ್ಞಾನವನ್ನು ಪ್ರಾಪ್ತ ಮಾಡಿಕೊಂಡ ವಿದ್ವಾಂಸನೂ ಜ್ಞಾನ ಮತ್ತು ತೇಜಸ್ಸಿನಿಂದ ಕಂಗೊಳಿಸುತ್ತಾನೆ. ಅವನು ತನ್ನ ಸತ್ಯಜ್ಞಾನ ಶ್ರೇಷ್ಠ ಗುಣ ಮತ್ತು ಕರ್ಮ ಹಾಗೂ ಶಾಂತ ಸ್ವಭಾವದ ಮೂಲಕ ಎಲ್ಲರನ್ನೂ ಆಕರ್ಷಿಸುತ್ತಾನೆ. ಎಲ್ಲರೂ ಅವನಿಂದ ಪ್ರಭಾವಿತರಾಗಿ ಅವನ ಸಾನ್ನಿಧ್ಯದಲ್ಲಿಯೇ ಇರುತ್ತಾರೆ.

ನಾವೂ ಕೂಡ ಸತ್ಯಜ್ಞಾನ, ಶ್ರೇಷ್ಠಗುಣಕರ್ಮ ಮತ್ತು ಶಾಂತಮೃದು ಸ್ವಭಾವದ ಮೂಲಕ ಎಲ್ಲರನ್ನೂ ನಮ್ಮೆಡೆಗೆ ಆಕರ್ಷಿಸಬೇಕು. ಪ್ರೀತಿ ಸೌಹಾರ್ದ ಮತ್ತು ಸೇವೆಯ ಮೂಲಕ ಎಲ್ಲರನ್ನೂ ನಮ್ಮವರನ್ನಾಗಿ ಮಾಡಬೇಕು.

ಪುನಃ ಆ ವರುಣ ಯಾವ ಪ್ರಕಾರದವನಾಗಿದ್ದಾನೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ನ ಯಂ ದಿಪ್ಸಂತಿ ದಿಪ್ಸವೋ ನ ದ್ರುಹ್ವಾಣೋ ಜನಾ.ನಾಮ್ । ನ ದೇವಮಭಿಮಾತಯಃ ॥೧೪॥

ಪದಾರ್ಥ:- ಓ ಮನನಶೀಲ ಮಾನವರೇ! ನೀವೆಲ್ಲರೂ [ಜನಾನಾಮ್] ವಿದ್ವಾಂಸರು ಹಾಗೂ ಧಾರ್ಮಿಕ ಮನುಷ್ಯರಿಂದ [ದಿಪ್ಸವಃ] ಮಿಥ್ಯಾಭಿಮಾನ - ಮಿಥ್ಯಾಪ್ರಶಂಸೆ ಹಾಗೂ ಮಿಥ್ಯಾ ವ್ಯವಹಾರವನ್ನು ಅಪೇಕ್ಷಿಸುವ ಶತ್ರು ಜನರು [ಯಂ] ಯಾವ [ದೇವಮ್] ದಿವ್ಯ ಗುಣಗಳುಳ್ಳ ಪರಮಾತ್ಮನನ್ನು [ನ ದಿಪ್ಸಂತಿ] ವಿರೋಧಿಸಲು ಇಚ್ಛಿಸುವುದಿಲ್ಲವೋ [ದ್ರುಹ್ವಾಣಃ] ಎಲ್ಲರನ್ನೂ ದ್ವೇಷಿಸುವವರು [ಯಂ] ಯಾರೊಂದಿಗೆ ದ್ರೋಹವನ್ನು ಮಾಡಲಪೇಕ್ಷಿಸುವುದಿಲ್ಲವೋ [ಅಭಿಮಾತಯಃ] ಮಿಥ್ಯಾಭಿಮಾನಿ ಹಾಗೂ ದುರಭಿಮಾನಿಗಳು [ಯಂ ನ] ಯಾರ ಮುಂದೆ ದುರಂಹಕಾರವನ್ನು ಮಾಡುವುದಿಲ್ಲವೋ [ದೇವಂ] ಅಂತಹ ಸರ್ವೋಪಾಸ್ಯನಾದ ಪರಮಾತ್ಮನನ್ನು ಉಪಾಸಿಸುತ್ತಾ, ನಿಮ್ಮ ಕಾರ್ಯಸಿದ್ಧಿಗೋಸ್ಕರ ಅಂತಹ ಶ್ರೇಷ್ಠಗುಣಗಳುಳ್ಳ ವಿದ್ವಾಂಸರ ಸಂಗವನ್ನೇ ಮಾಡಿರಿ.

ಭಾವಾರ್ಥ:- ಓ ಮನನಶೀಲ ಮಾನವರೇ! ನೀವೆಲ್ಲರೂ, ವಿದ್ವಾಂಸರು ಹಾಗೂ ಧಾರ್ಮಿಕರು ಆದ ಜನರಿಂದ, ಮಿಥ್ಯಾಭಿಮಾನ, ಮಿಥ್ಯಾಪ್ರಶಂಸೆ ಹಾಗೂ ಮಿಥ್ಯಾ ವ್ಯವಹಾರವನ್ನು ಅಪೇಕ್ಷಿಸುವ ಶತ್ರುಗಳು ಕೂಡ, ಯಾವ ದಿವ್ಯಗುಣಗಳುಳ್ಳ ಪರಮಾತ್ಮನನ್ನು ವಿರೋಧಿಸಲು ಅಪೇಕ್ಷಿಸುವುದಿಲ್ಲವೋ, ಎಲ್ಲರನ್ನೂ ದ್ವೇಷಿಸುವವರು,

ಯಾರನ್ನು ದ್ವೇಷಿಸಲು ಅಪೇಕ್ಷಿಸುವುದಿಲ್ಲವೋ ಎಲ್ಲರ ಮುಂದೆ ಅಹಂಕಾರವನ್ನು ಪ್ರದರ್ಶಿಸುವವರು ಯಾರ ಮುಂದೆ ದೀನರಾಗುತ್ತಾರೋ, ಅಂತಹ ಸರ್ವೋಪಾಸ್ಯನಾದ ಪರಮಾತ್ಮನನ್ನು ಉಪಾಸಿಸುತ್ತಾ, ನಿಮ್ಮ ಕಾರ್ಯಸಿದ್ಧಿಗೋಸ್ಕರ ಸರ್ವಶ್ರೇಷ್ಠ ಗುಣಗಳುಳ್ಳ ವಿದ್ವಾಂಸರ ಸಂಗವನ್ನು ಮಾಡಿರಿ.

ಪುನಃ ಅದೇ ಅರ್ಥವನ್ನು ತಿಳಿಸಲಾಗುತ್ತದೆ.

ಉತ ಯೋ ಮಾನುಷೇಷ್ವಾ ಯಶಶ್ಚಕ್ರೇ ಅಸಾಮ್ಯಾ । ಅಸ್ಮಾಕಮುದರೇಷ್ವಾ ॥೧೫॥

ಪದಾರ್ಥ:- [ಯಃ] ಯಾವ ಪರಮಾತ್ಮನು [ಅಸ್ಮಾಕಮುದರೇಷು] ನಮ್ಮೆಲ್ಲರ ದೇಹದ ಒಳಗೆ [ಉತ] ಮತ್ತು ಹೊರಗೆ [ಅಸಾಮಿ] ಪೂರ್ಣವಾಗಿ [ಯಶ ಆಚಕ್ರೇ] ಅತ್ಯಂತ ಪ್ರಶಂಸನೀಯವಾದ ರಚನೆಯನ್ನು, ಸೃಷ್ಟಿಯನ್ನು ಮಾಡುತ್ತಾನೋ, [ಯಃ ಮಾನುಷೇಷು] ಯಾವ ಪರಮಾತ್ಮನು ಸಕಲ ಜೀವರಾಶಿಗಳಲ್ಲಿ, ಸಕಲ ಜಡ ಪದಾರ್ಥಗಳಲ್ಲಿ ಅತ್ಯಂತ ಪ್ರಶಂಸನೀಯವಾದ ರಚನೆಯನ್ನು ಸೃಷ್ಟಿಸುತ್ತಾನೋ ಆ ಸರ್ವೋಪಾಸ್ಯನಾದ ಪರಮಾತ್ಮನು ಸಮಸ್ತ ಮಾನವರಿಂದ ಏಕೆ ಉಪಾಸಿಸಲ್ಪಡಬಾರದು, ಅರ್ಥಾತ್ ಸಮಸ್ತ ಮಾನವಮಾತ್ರರು ಸರ್ವೋಪಾಸ್ಯನಾದ ಪರಮಾತ್ಮನನ್ನು ಉಪಾಸಿಸಬೇಕು.

ಭಾವಾರ್ಥ:- ಸೃಷ್ಟಿಕರ್ತನಾದ ಪರಮಾತ್ಮನು ನಮ್ಮ ದೇಹದ ಒಳಗೆ ಹಾಗೂ ಹೊರಗೆ ಅತ್ಯಂತ ಅದ್ಭುತವಾದ ಹಾಗೂ ಪ್ರಶಂಸನೀಯವಾದ ರಚನೆಯನ್ನು ಮಾಡಿದ್ದಾನೆ. ಆ ಪರಮಾತ್ಮನೇ ಸಕಲ ಜೀವರಾಶಿಗಳಲ್ಲಿ ಹಾಗೂ ಜಡ ಪದಾರ್ಥಗಳಲ್ಲಿಯೂ ಅದ್ಭುತವಾದ ಹಾಗೂ ಪ್ರಶಂಸನೀಯವಾದ ರಚನೆಯನ್ನೂ, ಸೃಷ್ಟಿಯನ್ನೂ ಮಾಡುತ್ತಾನೆ. (ಇಲ್ಲಿ ರಚನೆ ಎಂದರೆ ದೇಹರಚನೆ. ದೇಹದ ಒಳಗೂ ಹಾಗೂ ಹೊರಗೂ ರಚನೆಯನ್ನು ಮಾಡುತ್ತಾನೆ. ಸೃಷ್ಟಿ ಎಂದರೆ ಜೀವರಾಶಿಗಳಲ್ಲಿ, ಮನುಷ್ಯರಲ್ಲಿ ಪಶುಪಕ್ಷಿಗಳಲ್ಲಿ, ಗಂಡುಹೆಣ್ಣಿನ ಮಿಲನದ ಮೂಲಕ ಆಗುವ ಇನ್ನೊಂದು ಜೀವದ ಸೃಷ್ಟಿ) ಸಂಪೂರ್ಣ ಸೃಷ್ಟಿಯನ್ನು ಮಾಡಿದ ಬಳಿಕ ಪ್ರತಿಯೊಂದು ಜೀವಕ್ಕೆ ಪ್ರತಿಯೊಂದು ಜೀವಿಗೆ ಉತ್ಪನ್ನವಾದ ಕೂಡಲೇ ಆಹಾರವನ್ನು ಒದಗಿಸುತ್ತಾನೆ. ಈ ರೀತಿ ಸೃಷ್ಟಿಕರ್ತನೂ ಪಾಲಕನೂ ಆದ ಪರಮಾತ್ಮನನ್ನು ಸಮಸ್ತ ಮಾನವ ಮಾತ್ರರು ಉಪಾಸಿಸಬೇಕು.

ಪುನಃ ಅದೇ ವಿಷಯವನ್ನು ತಿಳಿಸಲಾಗುತ್ತದೆ.

ಪರಾ ಮೇ ಯಂತಿ ಧೀತಯೋ ಗಾವೋ ನ ಗವ್ಯೂತೀರನು । ಇಚ್ಛಂತೀರುರುಚಕ್ಷಸಮ್ ॥೧೬॥

ಪದಾರ್ಥ:- ಯಾವ ರೀತಿ [ಗಾವಃ] ಹಗಲಿಡೀ ಗುಡ್ಡಗಳಲ್ಲಿ ಬಯಲಿನಲ್ಲಿ ಸಂಚರಿಸುವ ಗೋವುಗಳು [ಗವ್ಯೂತೀಃ ಅನು ಇಚ್ಛಂತೀ] ಸಾಯಂಕಾಲವಾದೊಡನೆ ತಮ್ಮ ತಮ್ಮ ನಿವಾಸಸ್ಥಾನವನ್ನು ಪ್ರಾಪ್ತವಾಗಲು, ಹೋಗಲು ಅಪೇಕ್ಷಿಸುತ್ತವೆಯೋ, ಅದೇ ರೀತಿ [ಮೇ=ಮಮ] ನನ್ನ [ಧೀತಯಃ] ಜನ್ಮ ಜನ್ಮಾಂತರದ ಕರ್ಮದ ವೃತ್ತಿಗಳು, ಬಂಧನಗಳು [ಉರುಚಕ್ಷಸಮ್] ಹಲವು ವಿಧದ ಜ್ಞಾನ ವಿಜ್ಞಾನಗಳಲ್ಲಿ, ಪ್ರಕಾಶವನ್ನು ಕಂಡು ಕರ್ಮಗಳನ್ನು ಮಾಡುವ ಅರ್ಥಾತ್, ಸಕಲ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ತದನುಸಾರ ಕರ್ಮಗಳನ್ನು ಮಾಡುವ [ಪರಿಯಂತಿ] ನನಗೆ ಪ್ರಾಪ್ತವಾಗುತ್ತವೆ. ಅದೇ ರೀತಿ ಸಮಸ್ತ ಕರ್ಮಶೀಲ ಮಾನವರಿಗೂ ಪ್ರಾಪ್ತವಾಗುತ್ತವೆ. ಇದನ್ನು ಎಲ್ಲರೂ ಗಮನಿಸಬೇಕು ಹಾಗೂ ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಹಗಲಿಡೀ ಆಹಾರವನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ ಗುಡ್ಡಗಳಲ್ಲಿ, ಬಯಲುಪ್ರದೇಶದಲ್ಲಿ, ಕಾಡಿನಲ್ಲಿ, ಸಂಚರಿಸುವ ಗೋವು ಮೊದಲಾದ

ಪಶುಗಳು ಸಾಯಂಕಾಲವಾದೊಡನೆ, ತಮ್ಮ ತಮ್ಮ ನಿವಾಸಸ್ಥಾನವನ್ನು ತಲುಪಲು ಅಪೇಕ್ಷಿಸುತ್ತವೆಯೋ ಮತ್ತು ಧಾವಿಸುತ್ತಾ ತಮ್ಮ ನಿವಾಸ ವಾಸವನ್ನು ಪ್ರಾಪ್ತವಾಗುತ್ತವೆಯೋ, ಹಕ್ಕಿಗಳು ಸಾಯಂಕಾಲ ತಮ್ಮ ತಮ್ಮ ಗೂಡುಗಳನ್ನು ಸೇರಿಕೊಳ್ಳುತ್ತವೆಯೋ ಅದೇ ರೀತಿ ನನ್ನ ಜನ್ಮ ಜನ್ಮಾಂತರದ ಕರ್ಮದ ಬಂಧನಗಳು, ವೃತ್ತಿಗಳು, ಫಲಗಳು, ಸಂಪೂರ್ಣ ಜ್ಞಾನವನ್ನು ಪ್ರಾಪ್ತ ಮಾಡಿಕೊಂಡು ತದನುಸಾರ ಕರ್ಮಗಳನ್ನು ಮಾಡುವ ನನಗೆ ಪ್ರಾಪ್ತವಾಗುತ್ತವೆ. ಅದೇ ರೀತಿ ಎಲ್ಲರಿಗೂ ಪ್ರಾಪ್ತವಾಗುತ್ತವೆ ಎಂಬುದನ್ನು ಎಲ್ಲರೂ ಗಮನಿಸಬೇಕು ಹಾಗೂ ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಎಷ್ಟೇ ದೊಡ್ಡ ವಿದ್ವಾಂಸನಾಗಲೀ, ಎಷ್ಟೇ ಮೂರ್ಖನಾಗಲೀ, ಜನ್ಮ ಜನ್ಮಾಂತರದಲ್ಲಿ ಮಾಡಿದ ಕರ್ಮಗಳ ಬಂಧನದಿಂದ ಅವುಗಳ ಫಲದಿಂದ ಹಾಗೂ ಕರ್ಮಜನ್ಯ ಸಂಸ್ಕಾರಗಳಿಂದ ಯಾರೂ ಕೂಡ ಮುಕ್ತನಾಗಲು ಸಾಧ್ಯವಿಲ್ಲ, ಮೂರ್ಖರು, ಅಜ್ಞಾನಿಗಳು ಮಾತ್ರ ಕರ್ಮಫಲವನ್ನು ಅನುಭವಿಸುತ್ತಾರೆ. ವಿದ್ವಾಂಸರು, ಸಾಧುಗಳು, ಸಂತರು, ಋಷಿ ಮುನಿಗಳು ಇವರೆಲ್ಲರೂ ಪೂರ್ವಜನ್ಮದ ಕರ್ಮಗಳ ಬಂಧನದಿಂದ ಅವುಗಳ ಫಲದಿಂದ ಮುಕ್ತರಾಗುತ್ತಾರೆ. ಅಥವಾ ಭಗವಂತನು ಅವರಿಗೆ ರಿಯಾಯತಿಯನ್ನು ತೋರಿಸುತ್ತಾನೆ ಎಂಬುದನ್ನು ಯಾರೂ ಭಾವಿಸಕೂಡದು. ಆದುದರಿಂದ ಸದಾಕಾಲ ಶ್ರೇಷ್ಠ ಕರ್ಮಗಳನ್ನೇ ಮಾಡಬೇಕು. ಸತ್ಯಜ್ಞಾನವನ್ನೇ ಪ್ರಾಪ್ತ ಮಾಡಿಕೊಳ್ಳಬೇಕು. ಮತ್ತು ಜ್ಞಾನಪೂರ್ವಕ ಸತ್ಕರ್ಮಗಳನ್ನೇ ಮಾಡಬೇಕು. ಈ ರೀತಿ ಜ್ಞಾನಪೂರ್ವಕ ಸತ್ಕರ್ಮಗಳನ್ನೇ ಮಾಡುವ ಶ್ರೇಷ್ಠ ಮಾನವನು ಪುನಃ ಪುನಃ ಕರ್ಮಬಂಧನದಲ್ಲಿ ಸಿಲುಕುವುದಿಲ್ಲ.

ಮನುಷ್ಯರು ಯಥಾಯೋಗ್ಯ ವಿದ್ಯೆಯನ್ನು ಯಾವ ರೀತಿ ಪಡೆಯಬೇಕು ಎಂಬುದನ್ನು ಇಲ್ಲಿ ವರ್ಣಿಸಲಾಗಿದೆ.

ಸಂ ನು ವೋಚಾವಹೈ ಪುನ-ರ್ಯತೋ ಮೇ ಮಧ್ವಾಭೃತಮ್ । ಹೋತೇವ ಕ್ಷದಸೇ ಪ್ರಿಯಮ್ ॥೧೭॥

ಪದಾರ್ಥ:– ಆಚಾರ್ಯ ಮತ್ತು ಶಿಷ್ಯರಾದ ನಾವಿಬ್ಬರೂ **[ಹೋತೇವ]** ಯಜ್ಞವನ್ನು ಮಾಡಿಸುವ ವಿದ್ವಾಂಸ ಅರ್ಥಾತ್ ಯಜ್ಞದ ಪುರೋಹಿತ ಹಾಗೂ ಯಜಮಾನ **[ನು]** ಪರಸ್ಪರ **[ಕ್ಷದಸೇ]** ಅವಿದ್ಯೆ ಅರ್ಥಾತ್ ಅಜ್ಞಾನಾಂಧಕಾರ ಮತ್ತು ರೋಗಜನ್ಯದುಃಖ ಇವೆರಡನ್ನು ನಾಶ ಮಾಡುವುದಕ್ಕೋಸ್ಕರ **[ಆಭೃತಮ್]** ವಿದ್ವಾಂಸರ ಉಪದೇಶದ ಮೂಲಕ ಯಾವುದನ್ನು ಧಾರಣ ಮಾಡಲಾಗುತ್ತದೆಯೋ, ಅರ್ಥಾತ್ ಯಾವುದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲಾಗುತ್ತದೆಯೋ ಅಂತಹ **[ಮಧು]** ಮಧುರವಾದ ಹಾಗೂ ವಿಶಿಷ್ಟ ಗುಣಗಳುಳ್ಳ **[ಪ್ರಿಯಮ್]** ಎಲ್ಲರಿಗೂ ಪ್ರಿಯವಾದ ಅರ್ಥಾತ್ ಎಲ್ಲರ ಹಿತವನ್ನೇ ಮಾಡುವ ವಿಶೇಷವಾದ ಜ್ಞಾನವನ್ನು **[ಪುನಃ ಸಂ ವೋಚಾವಹೈ]** ಮತ್ತೆ ಅತ್ಯುತ್ತಮವಾದ ರೀತಿಯಲ್ಲಿ ಪರಸ್ಪರ ಅಧ್ಯಾಪನ ಮತ್ತು ಅಧ್ಯಯನದ ಮೂಲಕ ಹಾಗೂ ಪ್ರವಚನದ ಮೂಲಕ ಉಪದೇಶವನ್ನು ಮಾಡೋಣ. ಅದರಿಂದ **[ಯತಃ ಮೇ]** ಯಾವುದರಿಂದ = ಮಮತವ ನಮ್ಮಿಬ್ಬರ ಜ್ಞಾನದ ಅಭಿವೃದ್ಧಿ ಸದಾಕಾಲ ನಿರಂತರ ಆಗುತ್ತಾ ಇರಲಿ.

ಭಾವಾರ್ಥ:– ಗುರು ಮತ್ತು ಶಿಷ್ಯರು ಸದಾಕಾಲ ಹಾಗೂ ನಿರಂತರ ಜ್ಞಾನದ ಅಭಿವೃದ್ಧಿಗೋಸ್ಕರ ಪ್ರಯತ್ನಿಸಬೇಕು. ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಪುರೋಹಿತ ಮತ್ತು ಯಜಮಾನ ಇವರಿಬ್ಬರೂ ಪರಸ್ಪರ, ಪ್ರೀತಿಯಿಂದ ಒಂದಾಗಿ ಸೇರಿಕೊಂಡು, ಅಜ್ಞಾನಾಂಧಕಾರ ಮತ್ತು ರೋಗಜನ್ಯ ದುಃಖ ಇವೆರಡನ್ನೂ ಸಂಪೂರ್ಣವಾಗಿ ನಾಶ ಮಾಡುವುದಕ್ಕೋಸ್ಕರ, ಯಜ್ಞವನ್ನು ಮಾಡುತ್ತಾರೋ ಹಾಗೂ ವಿದ್ವಾಂಸರಿಂದ ಉಪದೇಶಿಸಲ್ಪಟ್ಟ ಜ್ಞಾನವನ್ನು ಮತ್ತು ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೋ ಅದೇ ರೀತಿ ಪರಸ್ಪರ ಅಧ್ಯಾಪನ ಮತ್ತು ಅಧ್ಯಯನದ ಮೂಲಕ ಸದಾಕಾಲ ಹಾಗೂ ನಿರಂತರ ತಮ್ಮ ಜ್ಞಾನದ ಅಭಿವೃದ್ಧಿಯನ್ನು ಮಾಡುತ್ತಾ ಇರಬೇಕು. ತಾವು ಪ್ರಾಪ್ತ ಮಾಡಿಕೊಂಡಂತಹ ಜ್ಞಾನವನ್ನು ಉಪದೇಶದ ಮೂಲಕ, ಮಾನವ ಮಾತ್ರರ ಕಲ್ಯಾಣವಾಗುವಂತೆ ಪ್ರಯತ್ನಿಸಬೇಕು.

ಮತ್ತೆ ಅವವು ಏನೇನನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ದರ್ಶಂ ನು ವಿಶ್ವದರ್ಶತಂ ದರ್ಶಂ ರಥಮಧಿ ಕ್ಷಮಿ । ಏತಾ ಜುಷತ ಮೇ ಗಿರಃ ॥೧೮॥

ಪದಾರ್ಥ:– ಓ ಮನನಶೀಲ ಮಾನವರೇ! ನೀವೆಲ್ಲರೂ **[ಅಧಿಕ್ಷಮಿ]** ಕ್ಷಮೆ ಹಾಗೂ ದಯೆ ಮೊದಲಾದ ಉತ್ತಮ ಗುಣಗಳನ್ನು ನಿಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಯೋಗ್ಯವಾದ ರೀತಿಯಲ್ಲಿ ದೈನಂದಿನ ವ್ಯವಹಾರಗಳನ್ನು ಮಾಡುತ್ತಾ **[ವಿಶ್ವದರ್ಶತಂ]** ಸಕಲ ವಿದ್ವಾಂಸರು ಜ್ಞಾನ ದೃಷ್ಟಿಯ ಮೂಲಕ ಯಾರನ್ನು ಸಾಕ್ಷಾತ್ಕಾರ ಮಾಡಿಕೊಳ್ಳಬೇಕೋ ಅಂತಹ ಸರ್ವೋಪಾಸ್ಯನಾದ ಪರಮಾತ್ಮನನ್ನು **[ದರ್ಶಂ]** ಪುನಃ ಪುನಃ ನಿಮ್ಮ ಅಂತಃಕರಣದಲ್ಲಿಯೇ ಸಾಕ್ಷಾತ್ಕಾರ ಮಾಡಿಕೊಂಡು **[ನು]** ಅನುಸೃಷ್ಟೆ - ತದನಂತರ **[ರಥಮ್]** ನಿಮ್ಮ ಲೌಕಿಕ ವ್ಯವಹಾರಗಳನ್ನು ಉತ್ತಮವಾದ ರೀತಿಯಲ್ಲಿ ನಡೆಸುವುದಕ್ಕೋಸ್ಕರ, ಸಕಲ ಯಾನಗಳನ್ನು **[ದರ್ಶಮ್]** ಪುನಃ ಪುನಃ ಎಂದರೆ ಸರಿಯಾಗಿ ನೋಡಿಕೊಂಡು ಇನ್ನೂ ಉತ್ಕೃಷ್ಟವಾದ ರೀತಿಯಲ್ಲಿ ಯಾನ ಮತ್ತು ಯಂತ್ರಗಳನ್ನು ನಿರ್ಮಾಣ ಮಾಡುವುದಕ್ಕೋಸ್ಕರ **[ಏತಾ]** ಈ ರೀತಿ **[ಮೇ ಗಿರಃ ಜುಷತ]** ನನ್ನ ವಾಣಿಯನ್ನು ಸರಿಯಾಗಿ ಆಲಿಸಿರಿ. ಹಾಗೂ ಪ್ರತಿದಿನ ಚಿಂತನ ಮತ್ತು ಮನನ ಮಾಡಿರಿ.

ಭಾವಾರ್ಥ:– ಸಕಲ ಮಾನವರು ಕ್ಷಮೆ, ದಯೆ, ದಾನ, ಪ್ರೇಮ, ಸೌಹಾರ್ದ ಮೊದಲಾದ ಉತ್ತಮ ಗುಣಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು, ಯೋಗ್ಯವಾದ ರೀತಿಯಲ್ಲಿ ಧರ್ಮ ಮತ್ತು ನ್ಯಾಯಮಾರ್ಗದಲ್ಲಿ ಜೀವನವನ್ನು ನಡೆಸಬೇಕು. ಸಕಲ ವಿದ್ವಾಂಸರು ಜ್ಞಾನದೃಷ್ಟಿಯ ಮೂಲಕ ಯಾರನ್ನು ತಮ್ಮ ಅಂತಃಕರಣದಲ್ಲಿಯೇ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಪರಮಾತ್ಮನೆಂದಿಗೂ ಬಾಹ್ಯ ಚಕ್ಷುಗಳಿಂದ ದೃಷ್ಟಿ ಗೋಚರನಾಗುವುದಿಲ್ಲ. ಯಾರನ್ನು ಬಾಹ್ಯಚಕ್ಷುಗಳು ನೋಡುತ್ತವೆಯೋ ಅಥವಾ ಯಾರನ್ನು ಬಾಹ್ಯಚಕ್ಷುಗಳಿಂದ ನೋಡಲು ಸಾಧ್ಯವಿದೆಯೋ ಅವನೆಂದಿಗೂ ಪರಮಾತ್ಮನಾಗಲು ಸಾಧ್ಯವಿಲ್ಲ.

ಸಕಲ ಮಾನವರು ಆಧ್ಯಾತ್ಮಿಕ ಉನ್ನತಿಯೊಂದಿಗೆ ಭೌತಿಕ ಉನ್ನತಿಯನ್ನು ಸಾಧಿಸುವುದಕ್ಕೋಸ್ಕರ ಯಂತ್ರ ಯಾನ ಮೊದಲಾದವುಗಳನ್ನು ಉತ್ತಮವಾದ ರೀತಿಯಲ್ಲಿ ನೋಡಿಕೊಂಡು, ಸಕಲ ಶಿಲ್ಪವಿದ್ಯಾ ಸಿದ್ಧಿಯನ್ನು ಪ್ರಾಪ್ತ ಮಾಡಿಕೊಳ್ಳುವುದಕ್ಕೋಸ್ಕರ ವೇದವಾಣಿಯಲ್ಲಿ ವಿದ್ವಾಂಸರ ಮೂಲಕ ಆಲಿಸಿಕೊಂಡು ಪ್ರಶ್ನೋತ್ತರಗಳ ಮೂಲಕ ಸಂಪೂರ್ಣಜ್ಞಾನವನ್ನು ಪ್ರಾಪ್ತಿ ಮಾಡಿಕೊಳ್ಳಬೇಕು. ಈ ರೀತಿ ಪಾರಮಾರ್ಥಿಕ ಆನಂದವನ್ನು, ಲೌಕಿಕ ಸುಖವನ್ನು ಪ್ರಾಪ್ತ ಮಾಡಿಕೊಳ್ಳಬೇಕು.

ಪುನಃ ಅವನು ಹೇಗಿದ್ದಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಇಮಂ ಮೇ ವರುಣ ಶ್ರುಧೀ ಹವಮದ್ಯಾ ಚ ಮೃಳಯ । ತ್ವಾಮವಸ್ಯುರಾ ಚಕೇ ॥೧೯॥

ಪದಾರ್ಥ:– [ವರುಣ] ಓ ಸರ್ವೋತ್ಕೃಷ್ಟನೂ, ಸರ್ವೋಪಾಸ್ಯನೂ ಸಚ್ಚಿದಾನಂದ ಸ್ವರೂಪನೂ ಆದ ಪರಮಾತ್ಮ! [ಅದ್ಯ] ಇಂದೇ [ಅವಸ್ಯುಃ] ನನ್ನ ರಕ್ಷಣೆಯನ್ನೂ, ಸಕಲ ಸತ್ಯಜ್ಞಾನವನ್ನೂ, ಸಂಪೂರ್ಣ ಸುಖಶಾಂತಿ ಮತ್ತು ಆನಂದವನ್ನೂ ಪ್ರಾಪ್ತ ಮಾಡಿಕೊಳ್ಳಲಿಚ್ಛಿಸುವ ನಾನು **[ತ್ವಾಮ್]** ನಿನ್ನನ್ನು [ಆ ಚಕೇ] ಸ್ತುತಿ, ಅರ್ಚನೆ, ಪ್ರಾರ್ಥನೆಯ ಮೂಲಕ ನಿನ್ನ ಗುಣಗಳನ್ನು ಪ್ರಶಂಸಿಸುತ್ತಾ ನಿನ್ನ ಧ್ಯಾನವನ್ನು ಮಾಡುತ್ತಾ ಉಪಾಸಿಸುತ್ತೇನೆ. ನೀನು **[ಇಮಂ ಮೇ ಹವಮ್]** ಪ್ರತ್ಯಕ್ಷವಾಗಿ ಅನುಷ್ಠಾನ ಮಾಡಲ್ಪಟ್ಟ ಈ ಭಕ್ತಿಯಿಂದ ಮಾಡಿದ ನನ್ನ ಪ್ರಾರ್ಥನೆಯನ್ನು [ಶ್ರುಧೀ] ಸ್ವೀಕರಿಸು. [ಚ] ಮತ್ತು [ಮಾಂ ಮೃಳಯ] ನನ್ನನ್ನು ಸಕಲ ಸತ್ಯಜ್ಞಾನದ ಮೂಲಕ ಉದ್ಧರಿಸಿ,

ನನ್ನಲ್ಲಿರುವ ಸಂಪೂರ್ಣ ಅಜ್ಞಾನಾಂಧಕಾರವನ್ನು ದುಃಖದಾರಿದ್ರ್ಯ ಮತ್ತು ಕ್ಲೇಶಗಳನ್ನು ನಷ್ಟ ಮಾಡಿ ಸಂಪೂರ್ಣ ಆನಂದವನ್ನು ಪ್ರದಾನ ಮಾಡು.

ಭಾವಾರ್ಥ:- ಓ ಸರ್ವರಕ್ಷಕನೂ, ಸರ್ವೋಪಾಸ್ಯನೂ, ಸಚ್ಚಿದಾನಂದ ಸ್ವರೂಪನೂ ಆದ ಪರಮಾತ್ಮ! ನನ್ನ ಸಂಪೂರ್ಣ ರಕ್ಷಣೆಯನ್ನು, ಸಕಲ ಸತ್ಯಜ್ಞಾನವನ್ನೂ ಸಂಪೂರ್ಣ ಸುಖಶಾಂತಿ ಮತ್ತು ಆನಂದವನ್ನು ಪ್ರಾಪ್ತ ಮಾಡಿಕೊಳ್ಳಲಪೇಕ್ಷಿಸುವ ನಾನು, ಇಂದೇ ನಿನ್ನನ್ನು ಅತ್ಯಂತ ಭಕ್ತ್ಯಾದರಗಳ ಮೂಲಕ, ಸ್ತುತಿ, ಅರ್ಚನೆ, ಪ್ರಾರ್ಥನೆಯ ಮೂಲಕ ಉಪಾಸಿಸುತ್ತೇನೆ. ನಿನ್ನ ಗುಣಗಳನ್ನು ಪ್ರಶಂಸಿಸುತ್ತಾ, ನನ್ನ ಜೀವನದಲ್ಲಿಯೂ ಅಳವಡಿಸಿಕೊಳ್ಳುತ್ತೇನೆ. ನಾನು ಭಕ್ತಿಯಿಂದ ಮಾಡಿದ ಪ್ರಾರ್ಥನೆಯನ್ನು ಸ್ವೀಕರಿಸಿ, ನನ್ನಲ್ಲಿರುವ ಸಕಲ ಅಜ್ಞಾನಾಂಧಕಾರ, ದುಃಖದಾರಿದ್ರ್ಯ ಮತ್ತು ಕ್ಲೇಶಗಳನ್ನು ಸಂಪೂರ್ಣವಾಗಿ ನಾಶ ಮಾಡಿ ಸಂಪೂರ್ಣ ಸತ್ಯಜ್ಞಾನ, ಸುಖಶಾಂತಿ, ಸಮೃದ್ಧಿ ಮತ್ತು ಆನಂದವನ್ನು ಪ್ರದಾನ ಮಾಡು.

ಪುನಃ ಆ ಪರಮಾತ್ಮನು ಹೇಗಿದ್ದಾನೆ ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ತ್ವಂ ವಿಶ್ವಸ್ಯ ಮೇಧಿರ ದಿವಶ್ಚ ಗ್ಮಶ್ಚ ರಾಜಸಿ । ಸ ಯಾಮನಿ ಪ್ರತಿ ಶ್ರುಧಿ ॥೨೦॥

ಪದಾರ್ಥ:- ಹೇ [**ಮೇಧಿರ**] ಸಮಸ್ತ ಪರಮಾಣುಗಳನ್ನು ಸುಸಂಘಟಿತವನ್ನಾಗಿ ಮಾಡಿ, ಅತ್ಯುತ್ತಮವಾದ ರೀತಿಯಲ್ಲಿ ವ್ಯವಸ್ಥಾ ಬದ್ಧವಾಗಿ ಸೃಷ್ಟಿಯನ್ನು ಸೃಷ್ಟಿಸುವ, ಸೃಷ್ಟಿಕರ್ತನೂ ಸರ್ವೋಪಾಸ್ಯನೂ ಆದ ಪರಮಾತ್ಮ! [**ತ್ವಂ**] ನೀನು [**ವಿಶ್ವಸ್ಯ**] ಸಂಪೂರ್ಣ ಚರಾಚರ ಜಗತ್ತಿನ [**ದಿವಃ**] ಪ್ರಕಾಶವನ್ನು ಬೀರುವ ಸೂರ್ಯ ಚಂದ್ರ ನಕ್ಷತ್ರಾದಿಗಳು ಇರುವ ದ್ಯುಲೋಕವನ್ನು [**ಚ**] ಮತ್ತು [**ಗ್ಮ**] ಪ್ರಕಾಶವನ್ನು ಬೀರದ ಪೃಥಿವ್ಯಾದಿ ಗ್ರಹೋಪಗ್ರಹಗಳನ್ನೂ ಸೃಷ್ಟಿಸಿ [**ರಾಜಸಿ**] ಸರ್ವಾಂತರ್ಯಾಮಿಯಾಗಿ ವಿರಾಜಮಾನನಾಗಿದ್ದೀಯೆ. [**ಸ ತ್ವಂ**] ಸರ್ವಾಧಿಷ್ಠಾತನೂ, ಸರ್ವವ್ಯಾಪಕನೂ, ಸರ್ವಾಂತರ್ಯಾಮಿಯೂ ಆದ ನೀನು [**ಯಾಮನಿ**] ಪ್ರತಿಯೊಂದು ಕ್ಷಣಕ್ಷಣದಲ್ಲಿಯೂ [**ಪ್ರತಿಶ್ರುಧಿ**] ಪ್ರತಿಯೊಂದು ಜೀವಿಯ ಅರ್ಥಾತ್ ಜೀವಮಾತ್ರರ ಸಂಕಲ್ಪಗಳನ್ನೂ, ಪ್ರಾರ್ಥನೆಗಳನ್ನೂ, ಸ್ತುತಿಗಳನ್ನೂ ಆಲಿಸು.

ಭಾವಾರ್ಥ:- ಸಮಸ್ತ ಪರಮಾಣುಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ಸುಸಂಘಟಿತವನ್ನಾಗಿ ಮಾಡಿ, ಅತ್ಯಂತ ವ್ಯವಸ್ಥಾಬದ್ಧವಾಗಿ ಸೃಷ್ಟಿಯನ್ನು ಸೃಷ್ಟಿಸುವ ಸೃಷ್ಟಿಕರ್ತನಾದ ಪರಮಾತ್ಮನು ಸೂರ್ಯಚಂದ್ರ ನಕ್ಷತ್ರಾದಿಗಳು ನಿವಾಸಿಸುವ, ಪ್ರಕಾಶಮಯವಾದ ದ್ಯುಲೋಕವನ್ನು, ಪ್ರಕಾಶವನ್ನು ಬೀರದ ಪೃಥಿವ್ಯಾದಿ ಗ್ರಹೋಪಗ್ರಹಗಳನ್ನೂ, ಸೃಷ್ಟಿಸಿ, ಸರ್ವಾಂತರ್ಯಾಮಿಯಾಗಿ ಸರ್ವತ್ರ ವಿರಾಜಮಾನನಾಗಿದ್ದಾನೆ. ಸರ್ವಾಧಿಷ್ಠಾತನೂ, ಸರ್ವ ವ್ಯಾಪಕನೂ ಆದ ಪರಮಾತ್ಮನು, ಪ್ರತಿಯೊಂದು ಕ್ಷಣದಲ್ಲಿಯೂ, ಪ್ರತಿಯೊಂದು ಜೀವಿಯ ಅರ್ಥಾತ್ ಜೀವಮಾತ್ರರ, ಸಂಕಲ್ಪಗಳನ್ನೂ, ವಾಣಿಯನ್ನೂ, ಸ್ತುತಿಯನ್ನೂ ಪ್ರಾರ್ಥನೆಯನ್ನೂ ಆಲಿಸುತ್ತಾನೆ. ಆದುದರಿಂದ ನಾವು ಎಂದಿಗೂ ಮನಸ್ಸಿನಲ್ಲಿಯೂ ಕೂಡ ಅಧರ್ಮಾಚರಣೆಯ ಸಂಕಲ್ಪವನ್ನು ಮಾಡಬಾರದು. ಎಂದಿಗೂ ನಮ್ಮ ಪ್ರಾರ್ಥನೆಯಲ್ಲಿ, ಬೇರೆಯವರ, ಅವನು ನಮ್ಮ ಶತ್ರುವೇ ಆಗಲಿ ವಿನಾಶವನ್ನೇ ಮಾಡುತ್ತೇನೆ, ಅದಕ್ಕೋಸ್ಕರವಾಗಿ ನಮಗೆ ಶಕ್ತಿಯನ್ನು ನೀಡು ಎಂದು ಪ್ರಾರ್ಥಿಸಬಾರದು. ಶಿಷ್ಟರನ್ನು ಪಾಲಿಸುವವನೂ, ದುಷ್ಟರನ್ನು ದಂಡಿಸುವವನೂ ಆ ಪರಮಾತ್ಮನೇ ಆಗಿದ್ದಾನೆ. ಸರ್ವರಕ್ಷಕನಾದ ಪರಮಾತ್ಮನು, ಎಲ್ಲರಿಗೂ ಸದ್ಬುದ್ಧಿಯನ್ನು ನೀಡಿ, ಸನ್ಮಂಗಳವನ್ನು ಮಾಡಲಿ ಎಂದು ಪ್ರಾರ್ಥಿಸಬೇಕು.

ನಂತರ ಆ ಪರಮೇಶ್ವರನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗುತ್ತದೆ.

ಉದುತ್ತಮಂ ಮುಮುಗ್ಧಿ ನೋ ವಿ ಪಾಶಂ ಮಧ್ಯಮಂ ಚೃತ । ಅವಾಧಮಾನಿ ಜೀವಸೇ॥೨೧॥

ಪದಾರ್ಥ:- ಹೇ ಅವಿದ್ಯಾಂಧಕಾರವನ್ನು ನಾಶ ಮಾಡುವ ಪರಮಾತ್ಮ! ನೀನು ಕೃಪೆದೋರಿ [**ನಃ**] ನಮ್ಮೆಲ್ಲರ [**ಜೀವಸೇ**] ಬಹಳವಾಗಿ ಜೀವಿಸಲಿಕ್ಕಾಗಿ, [**ಉತ್ತಮಂ**] ಸಾತ್ವಿಕ ವೃತ್ತಿಗಳಿಂದ, ಸಾತ್ವಿಕ ಕರ್ಮಗಳಿಂದ ಸತ್ವಗುಣಜನ್ಯ ಪಾಶಗಳನ್ನು ಅರ್ಥಾತ್ ಕರ್ಮಬಂಧನಗಳನ್ನು [**ಮಧ್ಯಮಂ ಪಾಶಂ**] ರಾಜಸೀ ಪ್ರವೃತ್ತಿ - ರಜೋಗುಣಜನ್ಯ ಪಾಶಗಳನ್ನು ಅರ್ಥಾತ್ ಕರ್ಮಬಂಧನಗಳನ್ನು [**ಉನ್ಮುಮುಗ್ಧಿ**] ಸಂಪೂರ್ಣವಾಗಿ ಕತ್ತರಿಸಿ ನಮ್ಮೆಲ್ಲರನ್ನು ಮುಕ್ತರನ್ನಾಗಿ ಮಾಡು. [**ಅಧಮಾನಿ**] ಅತ್ಯಂತ ನಿಕೃಷ್ಟವಾದ ತಮೋಗುಣದಿಂದ ಉಂಟಾಗುವ ತಾಮಸೀ ಪ್ರವೃತ್ತಿಯನ್ನು ಸಕಲ ದುರ್ಗುಣ, ದುರ್ವ್ಯಸನಗಳನ್ನು ನಷ್ಟಮಾಡಿ [**ಅವ ಚೃತ**] ನಮ್ಮಲ್ಲಿರುವ ದುಷ್ಕರ್ಮಗಳನ್ನು ಮಾಡುವ ಪ್ರವೃತ್ತಿಯನ್ನೇ ನಾಶ ಮಾಡು. ನಾವು ಸದಾ ಕಾಲ ಶ್ರೇಷ್ಠ ಕರ್ಮಗಳನ್ನೇ ಮಾಡುವಂತಾಗಲಿ.

ಭಾವಾರ್ಥ:- ಸಂಪೂರ್ಣ ಅವಿದ್ಯಾಂಧಕಾರವನ್ನು, ಅಜ್ಞಾನವನ್ನು ಸಂಪೂರ್ಣವಾಗಿ ನಷ್ಟ ಮಾಡುವ ಪರಮಾತ್ಮ! ನೀನು ನಮ್ಮೆಲ್ಲರ ಮೇಲೆ ಕೃಪೆದೋರಿ, ನಮ್ಮಲ್ಲಿರುವ ದುರ್ಗುಣಗಳನ್ನು ದುರ್ವ್ಯಸನಗಳನ್ನು ನಷ್ಟ ಮಾಡು. ಸಕಲ ತಾಮಸೀ ಪ್ರವೃತ್ತಿಗಳು ನಷ್ಟವಾಗಲಿ, ನಮ್ಮಲ್ಲಿರುವ ದುಷ್ಕರ್ಮಗಳನ್ನು ಮಾಡುವ ಪ್ರವೃತ್ತಿಯನ್ನೇ ನಾಶಮಾಡು.

ಓ ಜಗದೀಶ್ವರಾ! ನೀನು ನಮ್ಮೆಲ್ಲರ ಮೇಲೆ ಕೃಪೆದೋರಿ, ನಮ್ಮೆಲ್ಲರ ದುಃಖ ದಾರಿದ್ರ್ಯಗಳನ್ನು ನಾಶ ಮಾಡು. ನಮ್ಮಲ್ಲಿರುವ ಅಜ್ಞಾನಾಂಧಕಾರ, ಸ್ವಾರ್ಥ, ದ್ವೇಷ, ಅಹಂಕಾರ ಹಾಗೂ ಸಕಲ ರಾಜಸೀ ಪ್ರವೃತ್ತಿಗಳನ್ನೂ, ರಜೋಗುಣಜನ್ಯ ಕರ್ಮಬಂಧನವನ್ನೂ ನಾಶಮಾಡು.

ಓ ಸಚ್ಚಿದಾನಂದ ಪರಮಾತ್ಮ! ನೀನು ನಮ್ಮೆಲ್ಲರ ಮೇಲೆ ಕೃಪೆದೋರಿ, ನಮ್ಮಲ್ಲಿರುವ ಸಾತ್ವಿಕ ಪ್ರವೃತ್ತಿಗಳನ್ನೂ, ಸತ್ವಗುಣಜನ್ಯ ಕರ್ಮಬಂಧವನ್ನೂ ನಾಶಮಾಡು. ನಾವೆಲ್ಲರೂ ಮಾನವತ್ವದಿಂದ ದೇವತ್ವದ ಕಡೆಗೆ ತೆರಳಿ, ದೇವತ್ವದಿಂದಲೂ ಮೇಲೇರಿ, ಅಮರತ್ವವನ್ನು ಹೊಂದುವಂತಾಗಲಿ. ನಾವೆಲ್ಲರೂ ಅಸತ್ಯದಿಂದ ಸತ್ಯದ ಕಡೆಗೆ ಅಜ್ಞಾನಾಂಧಕಾರದಿಂದ ಸುಜ್ಞಾನ, ಸತ್ಯಜ್ಞಾನ ಹಾಗೂ ಪ್ರಕಾಶದ ಕಡೆಗೆ, ಮೃತ್ಯುವಿನಿಂದ ಅಮರತ್ವದ ಕಡೆಗೆ ತೆರಳುವಂತಾಗಲಿ.

ಚತುರ್ವಿಂಶ ಸೂಕ್ತದಲ್ಲಿ ವರ್ಣಿಸಲ್ಪಟ್ಟ ಪ್ರಜಾಪತಿ ಮೊದಲಾದ ಅರ್ಥಗಳ ನಡುವೆ ಬಂದಿರುವ ಯಾವ ವರುಣ ಶಬ್ದವಿದೆಯೋ, ಅದರ ಅರ್ಥವನ್ನು ಈ ಸೂಕ್ತದಲ್ಲಿಯೂ ವರ್ಣಿಸಲ್ಪಟ್ಟ ಕಾರಣ ಪೂರ್ವಸೂಕ್ತದೊಂದಿಗೆ ಈ ಸೂಕ್ತದ ಸಂಗತಿಯಿದೆ ಎಂಬುದನ್ನು ಎಲ್ಲರೂ ಗಮನಿಸಬೇಕು.

ಇಪ್ಪತ್ತೈದನೆಯ ಸೂಕ್ತ ಸಮಾಪ್ತ

ಸೂಕ್ತ ೨೬

ಮಂತ್ರಸಂಖ್ಯೆ ೧೦ । ಋಷಿಃ - ಅಜೀಗರ್ತಿಃ ಶುನಃಶೇಪಃ, ಸ ಕೃತ್ರಿಮೋ ವೈಶ್ವಾಮಿತ್ರೋ ದೇವರಾತಃ । ದೇವತಾ - ಅಗ್ನಿಃ । ಛಂದಃ- ೧, ೮, ೯ ಆರ್ಚೀ ಉಷ್ಣಿಕ್, ೨. ೬ ನಿಚೃದ್ ಗಾಯತ್ರೀ, ೩ ಪ್ರತಿಷ್ಠಾ ಗಾಯತ್ರೀ, ೪, ೧೦, ಗಾಯತ್ರೀ, ೫, ೭ ವಿರಾಡ್ ಗಾಯತ್ರೀ, । ಸ್ವರಃ - ಋಷಭಃ, ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಯಜ್ಞವನ್ನು ಮಾಡಿಸುವವರ ಮತ್ತು ಮಾಡುವವರ ಗುಣಗಳನ್ನು ವರ್ಣಿಸಲಾಗಿದೆ.

ವಸಿಷ್ವಾ ಹಿ ಮಿಯೇಧ್ಯ ವಸ್ತ್ರಾಣ್ಯೂರ್ಜಾಂ ಪತೇ । ಸೇಮಂ ನೋ ಅಧ್ವರಂ ಯಜ ॥೧॥

ಪದಾರ್ಥ:- ಹೇ [**ಊರ್ಜಾಂ ಪತೇ**] ಅನ್ನವನ್ನು ಅರ್ಥಾತ್ ಸಕಲ ಖಾದ್ಯ ಪದಾರ್ಥಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ಸಂರಕ್ಷಿಸುವ ವಿದ್ವಾಂಸನೇ! [**ಮಿಯೇಧ್ಯ**] ಯಜ್ಞಾಗ್ನಿಯ ಮೂಲಕ, ಸಕಲ ಉತ್ತಮ

ಪದಾರ್ಥಗಳನ್ನು ಅಂತರಿಕ್ಷದಲ್ಲಿ ವ್ಯಾಪಿಸುವಂತೆ ಮಾಡುವ ಹೋತೃವೇ! (ಮಿನೋತಿ ಪ್ರಕ್ಷಿಪತ್ಯಂತರಿಕ್ಷಂ ಪ್ರತ್ಯಗ್ನಿದ್ವಾರಾ ಪದಾರ್ಥಾನ್ ತಸ್ಸಂಬುದ್ಧೌ) [ಸಃ ತ್ವಮ್] ಆ ನೀನು [ವಸ್ತ್ರಾಣಿ ವಸಿಷ್ವ] ಈ ಉತ್ತಮವಾದ ವಸ್ತ್ರಗಳನ್ನು ಧಾರಣ ಮಾಡು, ಧರಿಸು. [ನಃ] ನಮ್ಮೆಲ್ಲರ [ಇಮಂ ಅಧ್ವರಮ್] ಈ ತ್ರಿವಿಧ ಯಜ್ಞ= ಆಧಿಭೌತಿಕ, ಆಧಿಧೈವಿಕ, ಆಧ್ಯಾತ್ಮಿಕ ಯಜ್ಞಗಳನ್ನು [ಯಜ] ಅತ್ಯುತ್ತಮವಾದ ರೀತಿಯಲ್ಲಿ ಮತ್ತು ವ್ಯವಸ್ಥಾಬದ್ಧವಾಗಿ ಪೂರ್ಣವಾಗುವಂತೆ ಮಾಡು.

ಭಾವಾರ್ಥ:- ಓ ಅನ್ನಾದಿ ಸಕಲ ಖಾದ್ಯ ಪದಾರ್ಥಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ಸಂರಕ್ಷಿಸುವ ವಿದ್ವಾಂಸನೇ! ಯಜ್ಞಾಗ್ನಿಯ ಮೂಲಕ ಸಕಲ ಉತ್ತಮ ಪದಾರ್ಥಗಳನ್ನು [ಪುಷ್ಟಿಕಾರಕವಾದ ಖಾದ್ಯ ಪದಾರ್ಥಗಳು, ವಾತಾವರಣವನ್ನು ಸುಗಂಧಿತವನ್ನಾಗಿ ಮಾಡುವ ಸುಗಂಧಿತ ಪದಾರ್ಥಗಳು, ಸಕಲ ರೋಗರುಜಿನಗಳನ್ನೂ ದೂರ ಮಾಡುವ ದಿವ್ಯ ಔಷಧಿಗಳು] ಇವೆಲ್ಲವನ್ನೂ ಅಂತರಿಕ್ಷದಲ್ಲಿ ವ್ಯಾಪಿಸಿರುವಂತೆ ಮಾಡುವ ಹೋತೃವೇ! ಉತ್ತಮವಾದ ವಸ್ತ್ರಗಳನ್ನು ಧಾರಣೆ ಮಾಡಿ, ಧರಿಸಿಕೊಂಡು ನಮ್ಮ ತ್ರಿವಿಧ = ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿ ಭೌತಿಕ ಯಜ್ಞಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ವ್ಯವಸ್ಥಾಬದ್ಧವಾಗಿ ಪೂರ್ಣಗೊಳ್ಳುವಂತೆ ಮಾಡು.

ಆಧ್ಯಾತ್ಮಿಕ ಯಜ್ಞವೆಂದರೆ ಬ್ರಹ್ಮಯಜ್ಞ=ಉಪಾಸನಾ ಯಜ್ಞ, ಆಧಿದೈವಿಕ ಯಜ್ಞವೆಂದರೆ ದೇವಯಜ್ಞ = ಅಗ್ನಿಹೋತ್ರದಿಂದ ಅಶ್ವಮೇಧ ಪರ್ಯಂತ, ಆಧಿಭೌತಿಕ ಯಜ್ಞವೆಂದರೆ = ಪಿತೃಯಜ್ಞ, ಅತಿಥಿಯಜ್ಞ, ಮತ್ತು ಬಲಿವೈಶ್ವದೇವ ಯಜ್ಞ, ರಾಷ್ಟ್ರದಲ್ಲಿ ಬೆಳೆಯುವ ಸಂಪೂರ್ಣ ಅನ್ನ ಎಂದರೆ ಸಕಲ ಖಾದ್ಯ ಪದಾರ್ಥಗಳನ್ನು ಅತ್ಯುತ್ತಮವಾದ ರೀತಿಯಲ್ಲಿ ಸಂರಕ್ಷಿಸುವ ವಿದ್ವಾಂಸರು, ತಜ್ಞರು, ವಿಜ್ಞಾನಿಗಳು, ಇರಬೇಕು. ದುರ್ಭಾಗ್ಯವಶಾತ್ ಭಾರತದಲ್ಲಿ ನಾಶವಾಗುವಷ್ಟು ಖಾದ್ಯ ಪದಾರ್ಥಗಳು ವಿಶ್ವದ ಇತರ ಯಾವ ದೇಶಗಳಲ್ಲಿಯೂ ಆಗಲಿಕ್ಕಿಲ್ಲ. ನಮ್ಮ ದೇಶದಲ್ಲಿ ಖಾದ್ಯ ಪದಾರ್ಥವನ್ನು ಅತ್ಯುತ್ತಮವಾದ ರೀತಿಯಲ್ಲಿ ಸಂರಕ್ಷಿಸಲು ಬೇಕಾದ ಸಾಧನಗಳ ಅತ್ಯಂತ ಕೊರತೆ ಇದೆ. ಸಕಲ ಖಾದ್ಯ ಪದಾರ್ಥಗಳನ್ನು ಉತ್ತಮವಾದ ರೀತಿಯಲ್ಲಿ ಸಂರಕ್ಷಿಸಿದರೆ ಎಂದಿಗೂ ದುರ್ಭಿಕ್ಷೆಯಾಗಲು ಸಾಧ್ಯವೇ ಇಲ್ಲ. ಪ್ರತಿಯೊಂದು ಸರಕಾರವೂ ಇದಕ್ಕೆ ಮೊದಲು ಯೋಗ್ಯವಾದ ವ್ಯವಸ್ಥೆಯನ್ನು ಮಾಡಬೇಕು.

ಮತ್ತೆ ಅವರು ಹೇಗಿರುತ್ತಾರೆ ಎಂಬುದನ್ನು ವಿವರಿಸಲಾಗಿದೆ.

ನಿ ನೋ ಹೋತಾ ವರೇಣ್ಯಃ ಸದಾ ಯವಿಷ್ಠ ಮನ್ಮಭಿಃ । ಅಗ್ನೇ ದಿವಿತ್ಮತಾ ವಚಃ ॥೨॥

ಪದಾರ್ಥ:- ಹೇ [ಯವಿಷ್ಠ] ಅತ್ಯಂತ ಬಲಶಾಲಿಯಾದ [ಅಗ್ನೇ] ಅಗ್ನಿಯಂತೆ ತೇಜಸ್ವಿಯಾದ ವಿದ್ವಾಂಸನೇ! ನೀನು [ನಃ] ನಮ್ಮೆಲ್ಲರಿಗೆ [ಹೋತಾ] ಅತ್ಯಂತ ಸುಖವನ್ನು ಕೊಡುವ ಹಾಗೂ ಕಲ್ಯಾಣಪ್ರದವಾದ [ವರೇಣ್ಯಃ] ಎಲ್ಲರಿಂದಲೂ ಸ್ವೀಕರಣೀಯವಾದ [ಮನ್ಮಭಿಃ] ಮನನೀಯ ಹಾಗೂ ಬೋಧಪ್ರದವಾದ [ದಿವಿತ್ಮತಾ] ಅಜ್ಞಾನಾಂಧಕಾರವನ್ನು ನಾಶಮಾಡಿ ಸತ್ಯಜ್ಞಾನವನ್ನೇ ಕೊಡುವ [ವಚಃ] ಶ್ರೇಷ್ಠವಾದ ವೇದವಾಣಿಯನ್ನೇ [ಸದಾ] ಸದಾಕಾಲ ಅರ್ಥಾತ್ ಯಾವಾಗಲೂ ಉಪದೇಶಿಸು.

ಭಾವಾರ್ಥ:- ಓ ಅತ್ಯಂತ ಬಲಶಾಲಿಯಾದ ಹಾಗೂ ಅಗ್ನಿಯಂತೆ ತೇಜಸ್ವಿಯಾದ ವಿದ್ವಾಂಸನೇ! ನೀನು ನಮ್ಮೆಲ್ಲರಿಗೆ, ಅತ್ಯಂತ ಸುಖವನ್ನು ಕೊಡುವ ಹಾಗೂ ಕಲ್ಯಾಣಪ್ರದವಾದ ಮತ್ತು ಸರ್ವತೋಮುಖ ಅಭಿವೃದ್ಧಿಯನ್ನೇ ಮಾಡುವ ಎಲ್ಲರಿಗೂ ಸ್ವೀಕರಣೀಯವಾದ, ಮನನೀಯ ಅರ್ಥಾತ್ ಚಿಂತನ ಮತ್ತು ಮನನದ ಮೂಲಕ ವಿವೇಕವನ್ನು ವರ್ಧಿಸುವ ಸಂಪೂರ್ಣ ಅಜ್ಞಾನಾಂಧಕಾರವನ್ನು ನಾಶಮಾಡಿ ಸತ್ಯಜ್ಞಾನವನ್ನೇ ಕೊಡುವ ವಚಃ ಶ್ರೇಷ್ಠವಾದ ವೇದವಾಣಿಯನ್ನು ಯಾವಾಗಲೂ ಉಪದೇಶಿಸು.

ವಿದ್ವಾಂಸನು ಯಾವಾಗಲೂ ಅತ್ಯಂತ ಬಲಶಾಲಿಯೂ ಮತ್ತು ತೇಜಸ್ವಿಯೂ ಆಗಿರಬೇಕು. ಎಲ್ಲರ ಹಿತವನ್ನೇ ಬಯಸುವವನು, ಎಲ್ಲರಿಗೂ ಹಿತವನ್ನೇ ಮಾಡುವವನೂ, ಸಂಪೂರ್ಣ ಅಜ್ಞಾನಾಂಧಕಾರವನ್ನು ನಾಶಮಾಡಿ ಸತ್ಯಜ್ಞಾನವನ್ನೇ ಕೊಡುವವನೂ ಆಗಿರಬೇಕು. ಎಂದಿಗೂ ಅಜ್ಞಾನ ಮತ್ತು ಮಿಥ್ಯಾಜ್ಞಾನವನ್ನು ಕೊಡುವವನಾಗಿರಬಾರದು.

ನಂತರ ಅವರು ಯಾವ ಪ್ರಕಾರದವರಾಗಿರುತ್ತಾರೆ ಎಂಬುದನ್ನು ತಿಳಿಸಲಾಗಿದೆ

ಆ ಹಿ ಷ್ಮಾ ಸೂನವೇ ಪಿತಾ-ಪಿರ್ಯಜತ್ಯಾಪಯೇ । ಸಖಾ ಸಖ್ಯೇ ವರೇಣ್ಯಃ ॥೩॥

ಪದಾರ್ಥ:- ಓ ಪುರುಷಾರ್ಥಿಗಳಾದ ಮಾನವರೇ! ಯಾವ ರೀತಿ [ಪಿತಾ] ತಂದೆಯಾದವನು [ಸೂನವೇ] ತನ್ನ ಮಗನಿಗೋಸ್ಕರ [ಸಖಾ] ಮಿತ್ರನಾದವನು [ಸಖ್ಯೇ] ತನ್ನ ಮಿತ್ರನಿಗೋಸ್ಕರ [ವರೇಣ್ಯಃ ಆಪಿಃ] ಸ್ವೀಕರಣೀಯನಾದ ಶ್ರೇಷ್ಠ ಗುಣಗಳುಳ್ಳ ವಿದ್ವಾಂಸನು [ಆಪಯೇ] ಉತ್ತಮ ಗುಣನಡತೆಗಳುಳ್ಳ ವಿದ್ಯಾರ್ಥಿಯ ಸಲುವಾಗಿ [ಆ ಯಜತಿ] ಎಲ್ಲಾ ವಿಧದಲ್ಲಿ ಪ್ರಯತ್ನವನ್ನು ಮಾಡುತ್ತಾನೋ ಅದೇ ರೀತಿ ಪರಸ್ಪರ ಅನ್ಯೋನ್ಯರಾಗಿದ್ದು ಸಕಲ ಉತ್ತಮ ಕರ್ಮಗಳನ್ನು ಮಾಡುತ್ತಾ [ಹಿಷ್ಮ] ಎಲ್ಲರ ಎಂದರೆ ಮಾನವ ಮಾತ್ರರಿಗೆ ಪ್ರಾಣಿ ಮಾತ್ರರಿಗೆ ಉಪಕಾರವನ್ನು ಮಾಡುವುದಕ್ಕೋಸ್ಕರ ನೀವೆಲ್ಲರೂ ಒಂದಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ತಂದೆಯಾದವನು ತನ್ನ ಮಗನ ಅಥವಾ ಮಗಳ ಶ್ರೇಯೋಭಿವೃದ್ಧಿಗಾಗಿ, ಉತ್ತಮ ಮಿತ್ರನು ತನ್ನ ಮಿತ್ರನ ಕಲ್ಯಾಣಕ್ಕಾಗಿ, ಶ್ರೇಷ್ಠ ವಿದ್ವಾಂಸನು ಉತ್ತಮ ಗುಣ ನಡತೆಗಳುಳ್ಳ ತನ್ನ ವಿದ್ಯಾರ್ಥಿಯ ಸರ್ವತೋಮುಖ ಅಭಿವೃದ್ಧಿಗಾಗಿ ಸದಾಕಾಲ ಪ್ರಯತ್ನಶೀಲರಾಗಿರುತ್ತಾರೋ, ಅದೇ ರೀತಿ ಪುರುಷಾರ್ಥಿಗಳಾದ ಮಾನವರು, ಪರಸ್ಪರ ಅನ್ಯೋನ್ಯರಾಗಿದ್ದು ಪ್ರೀತಿಯಿಂದ ಸಕಲ ಉತ್ತಮ ಕರ್ಮಗಳನ್ನು ಮಾಡುತ್ತಾ, ಜೀವಮಾತ್ರರಿಗೆ ಉಪಕಾರವನ್ನು ಮಾಡುವುದಕ್ಕೋಸ್ಕರ ಒಂದಾಗಿರಬೇಕು. ಅರ್ಥಾತ್ ಏಕತೆಯಿಂದ ಇರಬೇಕು. ಆಗ ಮಾತ್ರ ಸಮಸ್ತ ಶ್ರೇಷ್ಠ ಕರ್ಮಗಳು ಅತ್ಯುತ್ತಮವಾದ ರೀತಿಯಲ್ಲಿ ಪೂರ್ಣವಾಗುತ್ತವೆ. ಶ್ರೇಷ್ಠ ಕರ್ಮಗಳನ್ನು ಮಾಡುವುದಕ್ಕೋಸ್ಕರ ಸದಾ ಒಂದಾಗಬೇಕು. ಮುಂದುವರಿಯಬೇಕು. ದುಷ್ಕರ್ಮಗಳನ್ನು ಮಾಡಲು ಎಂದೂ ಒಂದಾಗಬಾರದು, ಮುಂದಾಗಬಾರದು ಅರ್ಥಾತ್ ಮುಂದುವರಿಯಬಾರದು.

ಮತ್ತೆ ಅವರು ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಆ ನೋ ಬರ್ಹೀ ರಿಶಾದಸೋ ವರುಣೋ ಮಿತ್ರೋ ಅರ್ಯಮಾ । ಸೀದಂತು ಮನುಷೋ ಯಥಾ ॥೪॥

ಪದಾರ್ಥ:- ಓ ಸಭ್ಯ ಮಾನವರೇ! ಯಾವ ರೀತಿ [ರಿಶಾದಸಃ] ದುಷ್ಟರನ್ನು ದಂಡಿಸುವ ಹಾಗೂ ಸಕಲ ರೋಗಗಳ ನಿವಾರಣೆಯನ್ನು ಮಾಡುವ [ವರುಣಃ] ಸಕಲ ವಿದ್ಯೆಗಳಲ್ಲಿ ಪಾರಂಗತರಾದ ಮತ್ತು ಶ್ರೇಷ್ಠ ಗುಣಗಳುಳ್ಳ [ಮಿತ್ರಃ] ಎಲ್ಲರ ಮಿತ್ರರಾದ ಮತ್ತು ಎಲ್ಲರ ಹಿತವನ್ನೇ ಬಯಸುವ [ಅರ್ಯಮಾ] ನ್ಯಾಯಕಾರಿಗಳಾದ [ಮನುಷಃ] ಸಭ್ಯ ಮಾನವರು [ಯಥಾ] ಯಾವ ರೀತಿ [ನಃ ಬರ್ಹಿಃ] ನಮ್ಮೆಲ್ಲರ ಸಭೆಯಲ್ಲಿ ಅಲಂಕೃತವಾದ ಸುಖಾಸನದಲ್ಲಿ ಆಸೀನರಾಗುತ್ತಾರೋ ಅದೇ ರೀತಿ ನೀವೆಲ್ಲರೂ ಗೌರವಾನ್ವಿತರಾಗಿ [ಸೀದಂತು] ಆಸೀನರಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಸಕಲ ವಿದ್ಯೆಗಳಲ್ಲಿ ಪಾರಂಗತರಾದ ಶ್ರೇಷ್ಠಗುಣಗಳುಳ್ಳ ವಿದ್ವಾಂಸರು, ಎಲ್ಲರ ಹಿತವನ್ನೇ ಬಯಸುವ, ಎಲ್ಲರ ಹಿತವನ್ನೇ ಮಾಡುವ ಸಭ್ಯ ಮಾನವರು ಸಭೆಯಲ್ಲಿ ಗೌರವಿಸಲ್ಪಟ್ಟು ಉತ್ತಮ ಆಸನದಲ್ಲಿ ಆಸೀನರಾಗುತ್ತಾರೋ, ಅದೇ ರೀತಿ ಎಲ್ಲಾ ಮಾನವರು ಸದಾಕಾಲ ಎಲ್ಲರಿಂದಲೂ ಆದರಿಸಲ್ಪಡುವವರೂ, ಗೌರವಿಸಲ್ಪಡುವವರೂ, ಆದರ್ಶಪ್ರಾಯರೂ, ಸುಸಂಸ್ಕೃತರೂ ಆಗಬೇಕು.

ಪುನಃ ಅವರು ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಪೂರ್ವ್ಯ ಹೋತರಸ್ಯ ನೋ ಮಂದಸ್ವ ಸಖ್ಯಸ್ಯ ಚ । ಇಮಾ ಉ ಷು ಶ್ರುಧೀ ಗಿರಃ ॥೫॥

ಪದಾರ್ಥ:- [ಪೂರ್ವ್ಯ] ಪೂರ್ವ ಮಂತ್ರಗಳಲ್ಲಿ ವರ್ಣಿಸಲ್ಪಟ್ಟ ಶ್ರೇಷ್ಠ ಗುಣಗಳುಳ್ಳ [ಹೋತಃ] ಯಜ್ಞಾನುಷ್ಠಾನವನ್ನು ಮಾಡುವವನೂ ಹಾಗೂ ಇತರರಿಂದ ಮಾಡಿಸುವವನೂ ಆದ ವಿದ್ವಾಂಸನೇ! [ತ್ವಂ] ನೀನು [ನಃ] ನಮ್ಮೆಲ್ಲರ [ಅಸ್ಯ] ಈ [ಸಖ್ಯಸ್ಯ ಮಂದಸ್ವ] ಮಿತ್ರತ್ವವನ್ನು ಅಪೇಕ್ಷಿಸು. ಅರ್ಥಾತ್ ಸದಾಕಾಲ ನಮ್ಮೊಂದಿಗೆ ಇರು, ಎಂದಿಗೂ ನಮ್ಮಿಂದ ದೂರ ಹೋಗಬೇಡ. [ಉ] ನಿಶ್ಚಯವಾಗಿಯೂ, ಖಂಡಿತವಾಗಿಯೂ [ನಃ] ನಮ್ಮೆಲ್ಲರ [ಗಿರಃ] ವೇದಜ್ಞಾನದಿಂದ ಸುಸಂಸ್ಕೃತವಾದ ವಾಣಿಯನ್ನು [ಸು ಶ್ರುಧೀ] ಉತ್ತಮವಾದ ರೀತಿಯಲ್ಲಿ ಆಲಿಸು ಹಾಗೂ ನಿನ್ನ ಶ್ರೇಷ್ಠ ಸುಸಂಸ್ಕೃತವಾದ ವಾಣಿಯ ಮೂಲಕ ಸದಾಕಾಲ ನಮ್ಮೆಲ್ಲರಿಗೆ ಉಪದೇಶವನ್ನು ಮಾಡು.

ಭಾವಾರ್ಥ:- ಸಂಪೂರ್ಣ ಸತ್ಯಜ್ಞಾನವನ್ನು ಪ್ರಾಪ್ತ ಮಾಡಿಕೊಂಡ ಶ್ರೇಷ್ಠ ಗುಣಗಳುಳ್ಳ ಯಜ್ಞಾನುಷ್ಠಾನಗಳನ್ನು ಮಾಡುವ ಹಾಗೂ ಇತರರಿಂದ ಮಾಡಿಸುವ ವಿದ್ವಾಂಸನು, ಎಂದಿಗೂ ನಮ್ಮಿಂದ ದೂರವಾಗದೇ ಸದಾಕಾಲ ನಮ್ಮೊಂದಿಗೆ ಇರಬೇಕು. ಶ್ರೇಷ್ಠವಿದ್ವಾಂಸರ ಮಿತ್ರತ್ವ, ಸಖ್ಯತನವು ಸದಾಕಾಲ ನಮಗೆ ಪ್ರಾಪ್ತವಾಗಬೇಕು. ಶ್ರೇಷ್ಠ ವಿದ್ವಾಂಸನು ನಮ್ಮ ವಾಣಿಯನ್ನು ಪ್ರೀತಿಯಿಂದ ಮತ್ತು ತಾಳ್ಮೆಯಿಂದ ಆಲಿಸಬೇಕು ಹಾಗೂ ಸದಾ ಕಾಲ ತನ್ನ ಸುಂದರವಾದ ವಾಣಿಯ ಮೂಲಕ ನಮಗೆ ವೇದಜ್ಞಾನದ ಸುಧೆಯನ್ನು ಕೊಡುತ್ತಾ ಇರಬೇಕು. ನಾವೆಂದಿಗೂ ಶ್ರೇಷ್ಠ ವಿದ್ವಾಂಸರೊಂದಿಗೆ ವೈರತ್ವವನ್ನು ಮಾಡಬಾರದು. ಶ್ರೇಷ್ಠ ವಿದ್ವಾಂಸರು ಎಂದಿಗೂ ಅಹಂಕಾರಕ್ಕೆ ವಶೀಭೂತರಾಗಿ, ಬೇರೆಯವರಿಂದ ದೂರವಿರಬಾರದು.

ಮತ್ತೆ ಮಾಡುವ, ಮಾಡಿಸುವವರಾದ ನಮಗೆ ಇರುವ ಕರ್ತವ್ಯವೇನು ಎಂಬುದನ್ನು ತಿಳಿಸಲಾಗಿದೆ.

ಯಚ್ಚಿದ್ಧಿ ಶಶ್ವತಾ ತನಾ ದೇವಂದೇವಂ ಯಜಾಮಹೇ । ತ್ವೇ ಇದ್ಧೂಯತೇ ಹವಿಃ ॥೬॥

ಪದಾರ್ಥ:- ಓ ಯಜನಶೀಲ ಮಾನವರೇ! ಯಾವ ರೀತಿ ನಾವೆಲ್ಲರೂ **[ಯತ್]** ಯಾವ **[ಶಶ್ವತಾ]** ಅನಾದಿ ಹಾಗೂ ನಿತ್ಯ **[ತನಾ ಇತ್]** ವಿಶಾಲವಾದ ಕಾರಣದಿಂದಲೇ ಉತ್ಪನ್ನವಾಗಿದ್ದೇವೆಯೋ **[ಯಮ್]** ಯಾವುದನ್ನು **[ದೇವಂ ದೇವಂ]** ಸಕಲ ಪೃಥಿವ್ಯಾದಿ ದಿವ್ಯ ಲೋಕ ಲೋಕಾಂತರಗಳನ್ನು ಸೃಷ್ಟಿಸಲು ಕಾರಣೀಭೂತವಾಗಿದೆ ಎಂದು ತಿಳಿಯುತ್ತೇವೆಯೋ ಅದನ್ನು **[ಯಜಾಮಹೇ]** ಉತ್ತಮವಾದ ರೀತಿಯಲ್ಲಿ ತಿಳಿಯುತ್ತೇವೆ ಹಾಗೂ ಪ್ರಾಪ್ತ ಮಾಡಿಕೊಳ್ಳುತ್ತೇವೆ. [ತ್ವೇ ಹಿ] ಅದರಲ್ಲಿಯೇ ನಾವು [ಹವಿಃ] ಹವಿಸ್ಸನ್ನು ಹಾಗೂ ನಮ್ಮ ಸರ್ವಸ್ವವನ್ನು **[ಹೂಯತೇ]** ಅರ್ಪಿಸುತ್ತೇವೆ. ಅದೇ ರೀತಿ ನೀವೆಲ್ಲರೂ ಕೂಡ ನಿಮ್ಮ ಸರ್ವಸ್ವವನ್ನು ಸಮರ್ಪಿಸಿ ಜೀವನವನ್ನು ಸಾರ್ಥಕಮಾಡಿಕೊಳ್ಳಿರಿ.

ಭಾವಾರ್ಥ:- ಈ ಮಂತ್ರದ ದೇವತೆ ಅಗ್ನಿ. ಅಗ್ನಿ ಎಂದರೆ ಸಕಲ ಸೃಷ್ಟಿಕರ್ತನೂ, ಸರ್ವಪ್ರಕಾಶಸ್ವರೂಪನೂ ಆದ ಪರಮಾತ್ಮನು ನಮ್ಮೆಲ್ಲರ ಸೃಷ್ಟಿಗೆ ಕಾರಣೀಭೂತನಾಗಿದ್ದಾನೆ. ಅವನೇ ಪೃಥಿವ್ಯಾದಿ ಸಕಲ ದಿವ್ಯ ಲೋಕ ಲೋಕಾಂತರಗಳನ್ನೂ ಸೃಷ್ಟಿಸುತ್ತಾನೆ. ಯಾವ ರೀತಿ ಯಜ್ಞಾಗ್ನಿಯಲ್ಲಿ ಹವಿಸ್ಸನ್ನು ಅರ್ಪಿಸುತ್ತೇವೆಯೋ ಅದೇ ರೀತಿ ಸರ್ವ ಪ್ರಕಾಶಸ್ವರೂಪವನೂ, ಸೃಷ್ಟಿಕರ್ತನೂ ಸಚ್ಚಿದಾನಂದ ಸ್ವರೂಪನೂ ಆದ ಪರಮಾತ್ಮನಿಗೆ ನಮ್ಮ ಸರ್ವಸ್ವವನ್ನೂ ಅತ್ಯಂತ ಶ್ರದ್ಧಾ ಭಕ್ತಿಯಿಂದ ಅರ್ಪಿಸುತ್ತೇವೆ. ಓ ಯಜನಶೀಲ ಮಾನವರೇ! ನೀವೆಲ್ಲರೂ ಅದೇ ರೀತಿ ನಿಮ್ಮ ಸರ್ವಸ್ವವನ್ನು ಪರಮಾತ್ಮನಿಗೆ ಅರ್ಪಿಸಿ ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಿರಿ.

ಪುನಃ ನಾವುಗಳು ಪರಸ್ಪರ ಹೇಗೆ ವರ್ತಿಸಬೇಕು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಪ್ರಿಯೋ ನೋ ಅಸ್ತು ವಿಶ್ಪತಿ-ರ್ಹೋತಾ ಮಂದ್ರೋ ವರೇಣ್ಯಃ । ಪ್ರಿಯಾಃ ಸ್ವಗ್ನಯೋ ವಯಮ್ ॥೭॥

ಪದಾರ್ಥ:- [ಮಂದ್ರಃ] ಎಲ್ಲರಿಂದಲೂ ಉಪಾಸಿಸಲ್ಪಡಲೂ, ಸ್ತುತಿಸಲ್ಪಡಲೂ ಅರ್ಹನಾದವನು ಅರ್ಥಾತ್ ಎಲ್ಲರೂ ಯಾರನ್ನು ಉಪಾಸಿಸಬೇಕೋ ಅಂತಹ ಏಕಮಾತ್ರ ಉಪಾಸನೀಯನೂ [ವರೇಣ್ಯಃ] ಎಲ್ಲರಿಂದಲೂ ವರಣೀಯನೂ [ಹೋತಾ] ಸೃಷ್ಟಿಯ ಆದಿಯಲ್ಲಿ ಸರ್ವಸ್ವವನ್ನು ಪ್ರದಾನ ಮಾಡಿ ಪ್ರಳಯಕಾಲದಲ್ಲಿ ಎಲ್ಲವನ್ನೂ ಹರಣ ಮಾಡುವವನು [ವಿಶ್ಪತಿಃ] ತನ್ನ ಪ್ರಜೆಗಳಾದ ಸಕಲ ಪ್ರಾಣಿಮಾತ್ರರ ಪಾಲಕನೂ ಆದ ಪರಮಾತ್ಮನು [ನಃ] ನಮ್ಮೆಲ್ಲರ [ಪ್ರಿಯಃ] ಅತ್ಯಂತ ಪ್ರಿಯನಾದವನು [ಅಸ್ತು] ಆಗಿದ್ದಾನೆ. ಪರಮಾತ್ಮನೊಬ್ಬನೇ ಎಲ್ಲರನ್ನೂ ಪ್ರೀತಿಸುವವನೂ, ಎಲ್ಲರಿಗೂ ಪ್ರಿಯನಾದವನೂ ಆಗಿದ್ದಾನೆ. [ವಯಮ್] ನಾವೆಲ್ಲರೂ [ಸು ಅಗ್ನೇಯಃ] ಉತ್ತಮ ಜ್ಞಾನಿಗಳು, ಯಜ್ಞಾನುಷ್ಠಾನವನ್ನು ಮಾಡುವವರೂ, ಸದಾ ಸತ್ಕರ್ಮಗಳನ್ನೇ ಮಾಡುವವರೂ, ಧಾರ್ಮಿಕರೂ [ಪ್ರಿಯಾಃ] ಎಲ್ಲರನ್ನೂ ಪ್ರೀತಿಸುವವರೂ ಹಾಗೂ ಎಲ್ಲರ ಪ್ರೀತಿಗೆ ಪಾತ್ರರಾದವರೂ ಆಗೋಣ.

ಭಾವಾರ್ಥ:- ಸರ್ವೋಪಾಸ್ಯನೂ, ವರಣೀಯನೂ, ಸೃಷ್ಟಿಯ ಆದಿಯಲ್ಲಿ ಸರ್ವಸ್ವವನ್ನು ಪ್ರದಾನ ಮಾಡಿ, ಪ್ರಳಯ ಕಾಲದಲ್ಲಿ ಎಲ್ಲವನ್ನೂ ಹರಣ ಮಾಡುವವನೂ, ಸಕಲ ಪ್ರಾಣಿಮಾತ್ರರ ಪಾಲನೆಯನ್ನು ಮಾಡುವವನೂ ಆದ ಪರಮಾತ್ಮನು ನಮ್ಮೆಲ್ಲರ ಅತ್ಯಂತ ಪ್ರಿಯನಾದವನು ಆಗಿದ್ದಾನೆ. ನಾವೆಲ್ಲರೂ ಉತ್ತಮ ಜ್ಞಾನಿಗಳೂ, ಯಜ್ಞಾನುಷ್ಠಾನವನ್ನು ಮಾಡುವವರೂ, ಸದಾ ಸತ್ಕರ್ಮಗಳನ್ನೂ ಮಾಡುವವರೂ, ಧಾರ್ಮಿಕರೂ, ಸತ್ಯಭಾಷಣ ಮತ್ತು ಸತ್ಯಾಚರಣೆಯನ್ನೇ ಮಾಡುವವರೂ, ಎಲ್ಲರನ್ನೂ ಪ್ರೀತಿಸುವವರೂ ಹಾಗೂ ಎಲ್ಲರ ಪ್ರೀತಿಗೆ ಪಾತ್ರರಾದವರೂ ಆಗೋಣ. ಭಗವಂತನು ನಮ್ಮೆಲ್ಲರಿಗೆ ಪ್ರಿಯನಾಗಬೇಕಾದರೆ, ನಾವು ಕೂಡ ಎಲ್ಲರನ್ನೂ ಪ್ರೀತಿಸಬೇಕು ಹಾಗೂ ಎಲ್ಲರ ಪ್ರೀತಿಗೆ ಪಾತ್ರರಾಗಬೇಕು.

ಮತ್ತೆ ಅವರು ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಿದೆ.

ಸ್ವಗ್ನಯೋ ಹಿ ವಾರ್ಯಂ ದೇವಾಸೋ ದಧಿರೇ ಚ ನಃ । ಸ್ವಗ್ನಯೋ ಮನಾಮಹೇ ॥೮॥

ಪದಾರ್ಥ:- ಯಾವ ರೀತಿ [ಸ್ವಗ್ನಯಃ] ಉತ್ತಮ ರೀತಿಯಲ್ಲಿ ಯಜ್ಞಾನುಷ್ಠಾನವನ್ನು ಮಾಡುವ [ದೇವಾಸಃ] ದಿವ್ಯಗುಣಗಳುಳ್ಳ ವಿದ್ವಾಂಸರು [ನಃ] ನಮ್ಮೆಲ್ಲರಿಗೋಸ್ಕರ [ವಾರ್ಯಂ] ವರಣೀಯವಾದ, ಎಲ್ಲರೂ ಪ್ರಾಪ್ತ ಮಾಡಿಕೊಳ್ಳಲೇ ಬೇಕಾದ ಸತ್ಯಜ್ಞಾನವನ್ನು [ದಧಿರೇ] ಧಾರಣ ಮಾಡಿಕೊಳ್ಳುತ್ತಾರೋ, ಪ್ರಾಪ್ತ ಮಾಡಿಕೊಳ್ಳುತ್ತಾರೋ [ಹಿ ಚ] ಹಾಗೂ ಅದೇ ರೀತಿ ನಾವೆಲ್ಲರೂ ಕೂಡ [ಸ್ವಗ್ನಯಃ] ಅತ್ಯುತ್ತಮವಾದ ರೀತಿಯಲ್ಲಿ ಯಜ್ಞಾನುಷ್ಠಾನವನ್ನು ಮಾಡುತ್ತಾ [ಮನಾಮಹೇ] ಶ್ರೇಷ್ಠವಿದ್ವಾಂಸರಿಂದ ಸಂಪೂರ್ಣ ಸತ್ಯಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತೇವೆ.

ಭಾವಾರ್ಥ:- ಹೇಗೆ ಉತ್ತಮ ರೀತಿಯಲ್ಲಿ ಯಜ್ಞಾನುಷ್ಠಾನವನ್ನು ಮಾಡುವ ದಿವ್ಯ ಗುಣಗಳುಳ್ಳ ಶ್ರೇಷ್ಠ ವಿದ್ವಾಂಸರು ನಮ್ಮೆಲ್ಲರಿಗೋಸ್ಕರ ಸಂಪೂರ್ಣ ಜ್ಞಾನವನ್ನು ಧಾರಣ ಮಾಡಿಕೊಳ್ಳುತ್ತಾರೋ, ಅದೇ ರೀತಿ ನಾವು ಕೂಡ ಅತ್ಯುತ್ತಮವಾದ ರೀತಿಯಲ್ಲಿ ಯಜ್ಞಾನುಷ್ಠಾನವನ್ನು ಮಾಡುತ್ತಾ ಶ್ರೇಷ್ಠ ವಿದ್ವಾಂಸರಿಂದ ಸಂಪೂರ್ಣ ಸತ್ಯಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತೇವೆ. ಹಲವಾರು ವಿದ್ವಾಂಸರು ಅತ್ಯಂತ ಪ್ರಯತ್ನದಿಂದ, ಶ್ರೇಷ್ಠವಾದ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ. ವಿದ್ವಾಂಸರು ಪ್ರಾಪ್ತ ಮಾಡಿಕೊಂಡಂತಹ ಜ್ಞಾನವು ಎಂದಿಗೂ ನಿರರ್ಥಕವಾಗಬಾರದು. ನಾವೆಲ್ಲರೂ ಶ್ರೇಷ್ಠ ವಿದ್ವಾಂಸರನ್ನು ಅತ್ಯಂತ ಗೌರವದಿಂದ ಆದರಿಸಿ, ಸತ್ಕರಿಸಿ, ಅವರಿಂದ ಸಂಪೂರ್ಣ ಜ್ಞಾನವನ್ನು ಪ್ರಾಪ್ತಮಾಡಿಕೊಳ್ಳಬೇಕು.

ನಂತರ ಯಾವುದಕ್ಕಾಗಿ ಆ ಈಶ್ವರನ ಪ್ರಾರ್ಥನೆಯನ್ನು ಮಾಡಬೇಕು ಮತ್ತು ಮನುಷ್ಯರು ಪರಸ್ಪರ ಹೇಗೆ ವರ್ತಿಸಬೇಕು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ಅಥಾ ನ ಉಭಯೇಷಾ-ಮಮೃತ ಮರ್ತ್ಯಾನಾಮ್ । ಮಿಥಃ ಸಂತು ಪ್ರಶಸ್ತಯಃ ॥೯॥

ಪದಾರ್ಥ:- [ಅಮೃತ] ಓ ಅಜರಾಮರ ನಿತ್ಯ ಹಾಗೂ ಅವಿನಾಶಿಯಾದ ಪರಮಾತ್ಮ! ನಿನ್ನ ಕೃಪೆಯಿಂದ ಉತ್ತಮ ಗುಣ, ನಡತೆ, ಕರ್ಮ ಮತ್ತು ಆಚರಣೀಯ ವ್ರತವನ್ನು ಪ್ರಾಪ್ತ ಮಾಡಿಕೊಂಡ ನಂತರ [ಅಥ ನಃ] ನಾವೆಲ್ಲರೂ [ಉಭಯೇಷಾಮ್] ಪಂಡಿತರು ಹಾಗೂ ಪಾಮರರೆಂಬ ಉಭಯ ಪ್ರಕಾರದ [ಮರ್ತ್ಯಾನಾಮ್] ಮಾನವರ [ಮಿಥಃ] ಪರಸ್ಪರ ಹೊಂದಾಣಿಕೆಯಿಂದ [ಪ್ರಶಸ್ತಯಃ] ಸರ್ವತ್ರ ಪ್ರಶಂಸೆ [ಸಂತು] ಆಗಲಿ. ಅರ್ಥಾತ್ ಎಲ್ಲರೂ ನಮ್ಮನ್ನು ಪ್ರಶಂಸಿಸುವಂತಾಗಲಿ. ಅದೇ ರೀತಿ ಎಲ್ಲರೂ ಪ್ರಶಂಸನೀಯರಾಗಲಿ ಎಂದು ನಿನ್ನನ್ನು ಪ್ರಾರ್ಥಿಸುತ್ತೇವೆ.

ಭಾವಾರ್ಥ:- ಓ ಅಜರ, ಅಮರ, ನಿತ್ಯ ಪವಿತ್ರ ಹಾಗೂ ಅವಿನಾಶಿಯಾದ ಪರಮಾತ್ಮ! ನಿನ್ನ ಕೃಪೆಯಿಂದ ನಾವೆಲ್ಲರೂ, ಉತ್ತಮ ಗುಣ ನಡತೆ ಕರ್ಮ ಹಾಗೂ ಆಚರಣೆಯುಳ್ಳವರಾದ ನಂತರ, ಪಂಡಿತರು ಮತ್ತು ಪಾಮರರು ಎಂಬ ಉಭಯ ಪ್ರಕಾರದ ಮಾನವರು ಪರಸ್ಪರ ಹೊಂದಾಣಿಕೆಯಿಂದ, ಅನ್ಯೋನ್ಯರಾಗಿದ್ದು ಸರ್ವತ್ರ ಪ್ರಶಂಸೆಗೆ ಪಾತ್ರರಾಗುವಂತಾಗಲಿ. ಅದೇ ರೀತಿ ಎಲ್ಲರೂ ಪ್ರಶಂಸನೀಯರಾಗಲಿ ಎಂದು ನಿನ್ನನ್ನು ಪ್ರಾರ್ಥಿಸುತ್ತೇವೆ. ಎಲ್ಲರೂ ನಮ್ಮನ್ನು ಪ್ರಶಂಸಿಸಬೇಕಾದರೆ ನಾವು ಅದಕ್ಕೆ ಅರ್ಹರೂ, ಮತ್ತು ಪಾತ್ರರೂ ಆಗಬೇಕು. ವಿದ್ವಾಂಸರೇ ಆಗಲಿ ಸಾಧಾರಣ ಜನರೇ ಆಗಲಿ, ಉತ್ತಮ ಗುಣ ಕರ್ಮ, ನಡತೆ, ಸ್ವಭಾವ ಮತ್ತು ಆಚರಣೆಯಿಂದ ಹಾಗೂ ಎಲ್ಲರೊಂದಿಗೆ ಪ್ರೀತಿ ಪ್ರೇಮ ಮತ್ತು ಸೌಹಾರ್ದದಿಂದ ಬೆರೆತು ಯಾವುದೇ ರೀತಿಯ ಭೇದಭಾವ ವಿಲ್ಲದೇ ಅನ್ಯೋನ್ಯರಾಗಿರುವುದರಿಂದ ಎಲ್ಲರೂ ನಮ್ಮನ್ನು ಪ್ರಶಂಸಿಸುತ್ತಾರೆ. ಇದಕ್ಕೆ ವಿದ್ವಾಂಸನೂ ಹೊರತಲ್ಲ. ವಿದ್ವಾಂಸನಾಗಿದ್ದರೂ ಅವನಲ್ಲಿಯೂ ಇಂತಹ ಶ್ರೇಷ್ಠ ಗುಣಗಳು ಇರಲೇಬೇಕು. ಎಲ್ಲರಲ್ಲಿಯೂ ಜ್ಞಾನವು ಅಭಿವೃದ್ಧಿಯಾಗಬೇಕಾದರೆ, ಎಲ್ಲರೂ ಸುಜ್ಞಾನಿಗಳಾಗಬೇಕಾದರೆ ವಿದ್ವಾಂಸರು ತಮ್ಮ ಅಹಂಕಾರವನ್ನು ತೊರೆದು, ಸಾಧಾರಣ ಜನರೊಂದಿಗೆ ಬೆರೆತು ಅವರಿಗೆ ಉತ್ತಮವಾದ ರೀತಿಯಲ್ಲಿ ನಿಸ್ವಾರ್ಥಭಾವದಿಂದ ತಮ್ಮಲ್ಲಿರುವ ಜ್ಞಾನವನ್ನು ಕೊಡಬೇಕು. ಸಾಧಾರಣ ಜನರೂ ರಾಗದ್ವೇಷಗಳನ್ನು ತೊರೆದು, ವಿದ್ವಾಂಸರನ್ನು ಆದರಿಸಿ ಗೌರವಿಸಬೇಕು. ವಿದ್ವಾಂಸರ ಸಾನ್ನಿಧ್ಯದಲ್ಲಿದ್ದು ಅವರಿಂದ ಎಲ್ಲಾ ಜ್ಞಾನವನ್ನು ಪ್ರಾಪ್ತ ಮಾಡಿಕೊಳ್ಳಬೇಕು. ಈ ರೀತಿ ಎಲ್ಲರೂ ಆಚರಣೆಯನ್ನು ಮಾಡಿದರೆ ಎಲ್ಲರೂ ಸುಜ್ಞಾನಿಗಳಾಗಿ ಪ್ರಶಂಸನೀಯರಾಗುತ್ತಾರೆ.

ಪುನಃ ಅವರು ಹೇಗೆ ವರ್ತಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ವಿಶ್ವೇಭಿರಗ್ನೇ ಅಗ್ನಿಭಿ-ರಿಮಂ ಯಜ್ಞಮಿದಂ ವಚಃ । ಚನೋ ಧಾಃ ಸಹಸೋ ಯಹೋ॥೧೦॥

ಪದಾರ್ಥ:- [ಅಗ್ನೇ] ಓ ಸರ್ವಶಕ್ತ ಸರ್ವಜ್ಞ ಸರ್ವ ಪ್ರಕಾಶ ಸ್ವರೂಪ ಪರಮಾತ್ಮ! ನೀನು [ವಿಶ್ವೇಭಿಃ ಅಗ್ನಿಭಿಃ] ಅಗ್ನಿಯ ವಿವಿಧ ಸ್ವರೂಪಗಳಾದ ಸೂರ್ಯ, ಮಿಂಚು, ವಿದ್ಯುಚ್ಛಕ್ತಿ, ಭೌತಿಕಾಗ್ನಿ, ಜಾಠರಾಗ್ನಿ, ಮೊದಲಾದ ಸಮಸ್ತ ಅಗ್ನಿಶಕ್ತಿಯ ಮೂಲಕ [ಇಮಂ ಯಜ್ಞಮ್] ಸಂಪೂರ್ಣ ಚರಾಚರ ಜಗದ್ರೂಪಿ ಯಜ್ಞವನ್ನು ಅತ್ಯುತ್ತಮವಾದ ರೀತಿಯಲ್ಲಿ ವ್ಯವಸ್ಥಾಬದ್ಧವಾಗಿ ನಿರಂತರ ನಡೆಸುತ್ತಾ [ಇದಂ ವಚಃ] ಸಂಪೂರ್ಣ ಜ್ಞಾನದ ಆಕರವಾದ ಜೀವಮಾತ್ರರ ಕಲ್ಯಾಣವನ್ನೇ ಮಾಡುವ ವೇದವಾಣಿಯನ್ನೂ [ಚನಃ] ಜೀವಮಾತ್ರರಿಗೆ ಅನ್ನವನ್ನೂ, ಆಹಾರವನ್ನೂ [ಧಾಃ]

ಧಾರಣೆ ಮಾಡಿ ಪೋಷಣೆಯನ್ನೂ ಮಾಡುತ್ತೀಯೆ. ಸರ್ವ ರಕ್ಷಕನಾದ ಪರಮಾತ್ಮ! [ನಃ ಯಹೋ] ನಮ್ಮೆಲ್ಲರ ಮಕ್ಕಳನ್ನು [ಸಹಸಃ] ಬಲಶಾಲಿಗಳನ್ನಾಗಿಯೂ ಪೂರ್ಣ ಆರೋಗ್ಯವಂತರನ್ನಾಗಿಯೂ, ಅತ್ಯುತ್ತಮ ಜ್ಞಾನಿಗಳನ್ನಾಗಿಯೂ, ಪುರುಷಾರ್ಥಿಗಳನ್ನಾಗಿಯೂ ಮಾಡು.

ಭಾವಾರ್ಥ:- ಓ ಸರ್ವಶಕ್ತ ಸರ್ವಜ್ಞ, ಸರ್ವಪ್ರಕಾಶಸ್ವರೂಪನಾದ ಪರಮಾತ್ಮ! ನೀನು ಸೂರ್ಯ, ಮಿಂಚು, ವಿದ್ಯುಚ್ಛಕ್ತಿ, ಭೌತಿಕಾಗ್ನಿ, ಜಾಠರಾಗ್ನಿ ಮೊದಲಾದ ಅಗ್ನಿಯ ಸಮಸ್ತ ಸ್ವರೂಪಗಳ ಮೂಲಕ ಈ ಸೃಷ್ಟಿಯ ಯಜ್ಞವನ್ನು ನಿರಂತರ ಅತ್ಯಂತ ವ್ಯವಸ್ಥಾಬದ್ಧವಾಗಿ ನಡೆಸುತ್ತಾ, ಸಂಪೂರ್ಣ ಜ್ಞಾನದ ಆಕರವಾದ ಜೀವಮಾತ್ರರ ಕಲ್ಯಾಣವನ್ನೇ ಮಾಡುವ ವೇದವಾಣಿಯನ್ನೂ, ಜೀವಮಾತ್ರರಿಗೆ ಬೇಕಾದ ಅನ್ನ ಜಲ ಆಹಾರವನ್ನು ಧಾರಣ ಮಾಡಿ ಪೋಷಣೆ ಮಾಡುತ್ತೀಯೆ. ನೀನು ನಮ್ಮೆಲ್ಲರ ಮೇಲೆ ಕೃಪೆದೋರಿ ನಮ್ಮೆಲ್ಲರ ಮಕ್ಕಳನ್ನು ಶಾರೀರಿಕ, ಮಾನಸಿಕ, ಆತ್ಮಿಕ ಬಲದಿಂದ ಯುಕ್ತರನ್ನಾಗಿಯೂ, ಪೂರ್ಣ ಆರೋಗ್ಯವಂತರನ್ನಾಗಿಯೂ ಸುಜ್ಞಾನಿಗಳನ್ನಾಗಿಯೂ ಪುರುಷಾರ್ಥಿಗಳನ್ನಾಗಿಯೂ ಮಾಡು.

ಪೂರ್ವಸೂಕ್ತದಲ್ಲಿ ವರ್ಣಿಸಲ್ಪಟ್ಟ ವರುಣ ಶಬ್ದದ ಅರ್ಥದ ಅನುಷಙ್ಗಿ ಅರ್ಥಾತ್ ಸಹಾಯಕವಾದ ಅಗ್ನಿ ಶಬ್ದದ ಪ್ರತಿಪಾದನೆಯನ್ನು ಈ ಸೂಕ್ತದಲ್ಲಿ ಮಾಡಿರುವುದರಿಂದ ಪೂರ್ವಸೂಕ್ತದೊಂದಿಗೆ ಈ ಸೂಕ್ತದ ಅರ್ಥದ ಸಂಗತಿಯಿದೆ ಎಂಬುದನ್ನು ಎಲ್ಲರೂ ಗಮನಿಸಬೇಕು.

ಇಪ್ಪತ್ತಾರನೆಯ ಸೂಕ್ತ ಸಮಾಪ್ತ

ಸೂಕ್ತ ೨೭

ಮಂತ್ರಸಂಖ್ಯೆ ೧೩ । ಋಷಿಃ - ಆಜೀಗರ್ತಿಃ ಶುನಃಶೇಪಃ ಸ ಕೃತ್ರಿಮೋ ವೈಶ್ವಾಮಿತ್ರೋ ದೇವರಾತಃ । ದೇವತಾ - ೧-೧೨ ಅಗ್ನಿಃ ೧೩ ವಿಶ್ವೇದೇವಾ । ಛಂದಃ - ೧-೧೨ ಗಾಯತ್ರೀ, ೧೩ ತ್ರಿಷ್ಟುಪ್ । ಸ್ವರಃ- ೧-೧೨ ಷಡ್ಜಃ, ೧೩ ಧೈವತಃ ॥

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಅಗ್ನಿಯ ಮೇಲೆ ಪ್ರಕಾಶವನ್ನು ಬೀರಲಾಗಿದೆ.

ಅಶ್ವಂ ನ ತ್ವಾ ವಾರವಂತಂ ವಂದಧ್ಯಾ ಅಗ್ನಿಂ ನಮೋಭಿಃ । ಸಮ್ರಾಜಂತಮಧ್ವರಾಣಾಮ್ ॥೧॥

ಪದಾರ್ಥ:- [ವಯಂ] ನಾವೆಲ್ಲರೂ [ನಮೋಭಿಃ] ನಮಸ್ಕಾರ, ಸ್ತುತಿ ಮತ್ತು ಅನ್ನಾಹಾರಾದಿ ಪದಾರ್ಥಗಳೊಂದಿಗೆ **[ವಾರವಂತಮ್]** ಉತ್ತಮವಾದ ಕೇಶಗಳುಳ್ಳ, ಉದ್ದವಾದ ಬಾಲವಿರುವ **[ಅಶ್ವಮ್ ನ]** ವೇಗವಾಗಿ ಚಲಿಸುವ ಕುದುರೆಯಂತೆ **[ಅಧ್ವರಾಣಾಮ್]** ಅಗ್ನಿಹೋತ್ರ, ರಾಜ್ಯಪಾಲನೆ, ಶಿಲ್ಪವಿದ್ಯೆ ಮೊದಲಾದ ಸಕಲ ಯಜ್ಞಗಳಲ್ಲಿ **[ಸಮ್ರಾಜಂತಮ್]** ಜ್ಞಾನ ಜ್ಯೋತಿಯಿಂದ ಸ್ವಯಂಪ್ರಕಾಶಮಾನನಾಗಿರುವ ಅರ್ಥಾತ್ ಸಮಸ್ತ ವಿದ್ಯೆಗಳಲ್ಲಿ ಪಾರಂಗತನಾಗಿರುವ **[ಅಗ್ನಿಮ್]** ಸರ್ವಶ್ರೇಷ್ಠವಿದ್ವಾಂಸನೂ, ಸಮಾಜವನ್ನೂ ರಾಷ್ಟ್ರವನ್ನೂ ಸರ್ವತೋಮುಖ ಅಭಿವೃದ್ಧಿಯ ಮೂಲಕ ಮುಂದಕ್ಕೆ ಕೊಂಡೊಯ್ಯಲು ಸಮರ್ಥನಾದ **[ತ್ವಾ]** ನಿನ್ನನ್ನು **[ವಂದಧ್ಯೈ]** - ವಂತಿತಾಂ ಪ್ರವೃತ್ತಾ ಸೇವಾಮಹೇ - ಸದಾ ವಂದಿಸುತ್ತಾ ನಿನ್ನ ಸೇವೆಯನ್ನು ಮಾಡುತ್ತೇವೆ.

ಭಾವಾರ್ಥ:- ನಾವೆಲ್ಲರೂ ನಮಸ್ಕಾರ, ಸ್ತುತಿ, ಹಾಗೂ ಅನ್ನಾಹಾರ ವಸ್ತ್ರ ಧನಕನಕಾದಿಗಳೊಂದಿಗೆ ಉತ್ತಮವಾದ ಕೇಶಗಳುಳ್ಳ, ಉದ್ದವಾದ ಬಾಲವಿರುವ ಹಾಗೂ ವೇಗವಾಗಿ ಚಲಿಸುವ ಕುದುರೆಯಂತೆ, ಅಗ್ನಿಹೋತ್ರದಿಂದ - ಅಶ್ವಮೇಧ ಪರ್ಯಂತ ರಾಜ್ಯಪಾಲನೆ, ಶಿಲ್ಪವಿದ್ಯೆ ಮೊದಲಾದ ಸಕಲ ಯಜ್ಞಗಳಲ್ಲಿ ಭಾಗವಹಿಸಿ ಸಮಸ್ತ ವಿದ್ಯೆಗಳಲ್ಲಿ ಪಾರಂಗತನಾಗಿದ್ದು, ಸಮಾಜವನ್ನೂ, ರಾಷ್ಟ್ರವನ್ನೂ ಸರ್ವತೋಮುಖ ಅಭಿವೃದ್ಧಿಯ ಮೂಲಕ ಮುಂದಕ್ಕೆ ಕೊಂಡೊಯ್ಯುವ ಶ್ರೇಷ್ಠ ವಿದ್ವಾಂಸನಾದ ನಿನ್ನನ್ನು ಸದಾಕಾಲ ವಂದಿಸುತ್ತಾ ನಿನ್ನ ಸೇವೆಯನ್ನು ಮಾಡುತ್ತೇನೆ.

ಈ ಮಂತ್ರದಲ್ಲಿ ಪುಷ್ಕಳವಾಗಿ ಕೇಶಗಳುಳ್ಳ ಉದ್ದವಾದ ಬಾಲವಿರುವ ವೇಗವಾಗಿ ಚಲಿಸುವ ಕುದುರೆಯ ಉಪಮೆಯನ್ನು ಕೊಡಲಾಗಿದೆ. ಪುಷ್ಕಳವಾದ ಕೇಶಗಳುಳ್ಳ ಉದ್ದವಾದ ಬಾಲವನ್ನು ಬೀಸಿ ಕುದುರೆ, ತನ್ನ ಶರೀರದ ಮೇಲಿನ ಸೊಳ್ಳೆಗಳನ್ನು, ಕ್ರಿಮಿ ಕೀಟಗಳನ್ನು ಓಡಿಸಿ, ತನ್ನ ರಕ್ಷಣೆಯನ್ನು ಮಾಡಿಕೊಳ್ಳುತ್ತದೆ. ವಿದ್ವಾಂಸರಿಗೆ ಸಮಾಜ ಮತ್ತು ರಾಷ್ಟ್ರವೇ ಶರೀರದಂತೆ. ರಾಷ್ಟ್ರದ ಸಕಲ ಪ್ರಜೆಗಳ ಅಜ್ಞಾನಾಂಧಕಾರರನ್ನು ದೂರ ಮಾಡುತ್ತಾ, ಪ್ರಜೆಗಳಲ್ಲಿರುವ ವೈಷಮ್ಯ, ವೈರಭಾವ, ದ್ವೇಷ, ಉಚ್ಚನೀಚ, ಮೇಲುಕೀಳು, ಮತ, ಪಂಥ ಪಂಗಡಗಳಲ್ಲಿರುವ ವೈಮನಸ್ಯ ಮೊದಲಾದವುಗಳನ್ನು ಹೋಗಲಾಡಿಸಿ, ಪರಸ್ಪರ ಸಾಮರಸ್ಯ, ಭ್ರಾತೃಪ್ರೇಮ, ಪ್ರೀತಿ ಸೌಹಾರ್ದಗಳನ್ನು ಬೆಳೆಸಿ ರಾಷ್ಟ್ರವನ್ನು ಸಂಘಟಿತವನ್ನಾಗಿ ಮಾಡುವುದು ಸಕಲ ಶಿಲ್ಪವಿದ್ಯೆಗಳಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿ ಜನರಿಗೆ ಅತ್ಯಧಿಕ ಲಾಭದ ಮತ್ತು ಪ್ರಯೋಜನ ಲಭಿಸುವಂತೆ ಮಾಡುವುದು ವಿದ್ವಾಂಸರ ಕರ್ತವ್ಯ. ಯಾವ ರೀತಿ ಕುದುರೆಯು ವೇಗವಾಗಿ ಧಾವಿಸುತ್ತದೆಯೋ ಅದೇ ರೀತಿ ವಿದ್ವಾಂಸನಾದವನು ಸರ್ವತ್ರ ಶೀಘ್ರವಾಗಿ ಪ್ರತಿಯೊಂದು ಕಡೆಯಲ್ಲಿ ಸಂಚರಿಸುತ್ತಾ, ರಾಷ್ಟ್ರದ ವಿವಿಧ ಕ್ಷೇತ್ರಗಳಲ್ಲಿರುವ ಕುಂದು ಕೊರತೆಗಳನ್ನು ಹೋಗಲಾಡಿಸಿ ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಯಾಗಲು ಪೂರ್ಣಪ್ರಯತ್ನಿಸಬೇಕು. ರಾಷ್ಟ್ರದ ಮೇಲೆ ಹೊರಗಿನಿಂದಲೂ, ಒಳಗಿನಿಂದಲೂ ಯಾವುದೇ ರೀತಿಯಲ್ಲಿ ಆಕ್ರಮಣಗಳು ಸಂಘರ್ಷಗಳು, ಗಲಭೆಗಳು ಆಗದಂತೆ ನೋಡಿಕೊಂಡು ಸಮಸ್ತ ಪ್ರಜೆಗಳನ್ನು ಸುಸಂಘಟಿತರನ್ನಾಗಿಯೂ ಸುಸಂಸ್ಕೃತರನ್ನಾಗಿಯೂ ಮಾಡಿ, ಪ್ರಜೆಗಳಲ್ಲಿ ಸ್ವಾಭಿಮಾನ, ಸ್ವದೇಶಾಭಿಮಾನ ಮತ್ತು ರಾಷ್ಟ್ರಾಭಿಮಾನ ಬೆಳೆಸಿ, ರಾಷ್ಟ್ರವನ್ನು ರಕ್ಷಿಸುವುದು ವಿದ್ವಾಂಸರ ಆಚಾರ್ಯರ ಋಷಿ ಮುನಿಗಳ ಸಾಧುಸಂತರ ಪರಮ ಕರ್ತವ್ಯವಾಗಿದೆ. 'ವಯಂ ರಾಷ್ಟ್ರೇ ಜಾಗೃಯಾಮ ಪುರೋಹಿತಾಃ' ನಾವು ರಾಷ್ಟ್ರದಲ್ಲಿ ಜಾಗ್ರತರಾಗಿದ್ದು ರಾಷ್ಟ್ರವನ್ನು ಸರ್ವತೋಮುಖ ಅಭಿವೃದ್ಧಿಯ ಮೂಲಕ ಮುನ್ನಡೆಸುವವರಾಗೋಣ. ಇದೇ ಈ ಮಂತ್ರದ ಆಶಯ.

ಈಗ ಸಂತಾನದ ಗುಣಗಳನ್ನು ಪ್ರಕಾಶಿತಗೊಳಿಸಲಾಗುತ್ತದೆ.

ಸ ಘಾ ನಃ ಸೂನುಃ ಶವಸಾ ಪೃಥುಪ್ರಗಾಮಾ ಸುಶೇವಃ । ಮೀಢ್ವಾ ಅಸ್ಮಾಕಂ ಬಭೂಯಾತ್ ॥೨॥

ಪದಾರ್ಥ:- [ಸಃ] ಆ ಯಾವ [**ಸೂನುಃ**] ಸುಪುತ್ರನು ಇದ್ದಾನೋ [**ಶವಸಾ**] ತನ್ನ ಪುರುಷಾರ್ಥದ ಬಲದಿಂದ ಹಾಗೂ ಅತ್ಯುತ್ತಮ ಗುಣಗಳುಳ್ಳವನಾಗಿ [**ಪೃಥುಪ್ರಗಾಮಾ**] ವಿಶಾಲವಾದ ಸುಂದರವಾದ ವಾಹನಗಳಲ್ಲಿ ಸಂಚರಿಸುತ್ತಾ [**ಸುಶೇವಾಃ**] ಶೋಭಾಯಮಾನವೂ, ಸುಖವರ್ಧಕವೂ, [**ಮೀಢ್ವಾನ್**] ಎಲ್ಲಾ ವಿಧದಲ್ಲಿ ಸುಖವನ್ನೇ ಕೊಡುವವನು ಆಗಿದ್ದಾನೋ, ಅವನು [ನಃ] ನಮ್ಮ [**ಘ**] ಸಕಲ ಧಾರ್ಮಿಕ ಕರ್ಮಗಳನ್ನೂ, ಸಕಲ ಶಿಲ್ಪ ವಿದ್ಯಾಕರ್ಮಗಳನ್ನು ಅರ್ಥಾತ್ ಸಮಸ್ತ ವಾಣಿಜ್ಯ ವ್ಯವಹಾರಾದಿಗಳನ್ನು ಯಂತ್ರ ಕಲಾಕೌಶಲಗಳನ್ನೂ, ಅತ್ಯುತ್ತಮ ರೀತಿಯಲ್ಲಿ ಮಾಡುವವನು [**ಅಸ್ಮಾಕಂ**] ಪುರುಷಾರ್ಥಿಯೂ, ಕ್ರಿಯಾಶೀಲನೂ [**ಬಭೂಯಾತ್**] ಆಗಲಿ.

ಭಾವಾರ್ಥ:- ಪ್ರತಿಯೊಬ್ಬ ತಂದೆ ತಾಯಿಗೆ ಆಸೆ ಆಕಾಂಕ್ಷೆಗಳನ್ನು ಈ ಮಂತ್ರದಲ್ಲಿ ವ್ಯಕ್ತಪಡಿಸಲಾಗಿದೆ. ಪರಮಾತ್ಮನ ಕೃಪೆಯಿಂದ ನಮ್ಮ ಸುಪುತ್ರನು ತನ್ನ ಪುರುಷಾರ್ಥದ ಬಲದಿಂದ ಅರ್ಥಾತ್ ಪುರುಷಾರ್ಥಿಯಾಗಿಯೂ ಉತ್ತಮ ಗುಣ ನಡತೆ ಸಂಸ್ಕಾರಗಳುಳ್ಳವನಾಗಿಯೂ, ವಿಶಾಲವಾದ ಸುಂದರ ಯಾನಗಳಲ್ಲಿ ವಾಹನಗಳಲ್ಲಿ ಸಂಚರಿಸುತ್ತಾ ನಮ್ಮ ಆಜ್ಞಾನುವರ್ತಿಯಾಗಿ ಎಲ್ಲಾ ವಿಧದಲ್ಲಿ ಸುಖ ಸಂತೋಷವನ್ನೇ ಕೊಡುವವನಾಗಿದ್ದು, ನಮ್ಮ ಸಕಲ ಧಾರ್ಮಿಕ ಕರ್ಮಗಳನ್ನೂ, ಸಕಲ ಶಿಲ್ಪ ವಿದ್ಯಾ ಕರ್ಮಗಳನ್ನೂ ವಾಣಿಜ್ಯ ವ್ಯವಹಾರಗಳನ್ನೂ, ಯಂತ್ರ ಕಲಾಕೌಶಲಗಳನ್ನೂ ಅತ್ಯುತ್ತಮವಾದ ರೀತಿಯಲ್ಲಿ ಮಾಡುವವನೂ ಆಗಲಿ.

ಮತ್ತೆ ಅವನು ಹೇಗಿದ್ದಾನೆ ಎಂಬುದನ್ನಿಲ್ಲಿ ವಿವರಿಸಲಾಗಿದೆ.

ಸ ನೋ ದೂರಾಚ್ಚಾಸಾಚ್ಚ ನಿ ಮರ್ತ್ಯಾದಘಾಯೋಃ । ಪಾಹಿ ಸದಮಿದ್ ವಿಶ್ವಾಯುಃ ॥೩॥

ಪದಾರ್ಥ:- [ಸಃ] ಸರ್ವರಕ್ಷಕನಾದ ಆ ಪರಮಾತ್ಮನು [ವಿಶ್ವಾಯುಃ] ಸಂಪೂರ್ಣ ಆಯುಷ್ಯವನ್ನೂ, ಆರೋಗ್ಯವನ್ನೂ ಕೊಡುತ್ತಾ [ಅಘಾಯೋಃ ಮರ್ತ್ಯಾತ್] ಯಾರು ಪಾಪಗಳನ್ನು, ದುಷ್ಟಕರ್ಮಗಳನ್ನು ಮಾಡುತ್ತಾರೋ ಅಂತಹ ಶತ್ರುಗಳಿಂದ [ದೂರಾತ್] ದೂರದಿಂದಲೂ [ಚ] ಮತ್ತು [ಆಸಾತ್] ಸಮೀಪದಿಂದಲೂ [ನಃ] ನಮ್ಮೆಲ್ಲರನ್ನೂ ಮತ್ತು ನಮ್ಮೆಲ್ಲರ [ಸದಂ ಇತ್] ನಿವಾಸ ಸ್ಥಾನಗಳನ್ನು ಹಾಗೂ ವಾಣಿಜ್ಯ, ವ್ಯವಹಾರ ಉದ್ಯೋಗ, ಕೃಷಿ, ಕಾರ್ಖಾನೆ ಮೊದಲಾದುವುಗಳನ್ನೂ [ನಿ ಪಾಹಿ] ನಿರಂತರ ಸತತವಾಗಿ ರಕ್ಷಿಸುತ್ತಾನೆ.

ಭಾವಾರ್ಥ:- ಸರ್ವರಕ್ಷಕನೂ, ಸರ್ವಪಾಲಕನೂ ಆದ ಪರಮಾತ್ಮನು ನಮ್ಮೆಲ್ಲರಿಗೆ ಸಂಪೂರ್ಣ ಆಯುಷ್ಯವನ್ನೂ, ಆರೋಗ್ಯವನ್ನೂ ಕೊಡುವವನಾಗಿದ್ದಾನೆ. ಆ ಪರಮದಯಾಳುವಾದ ಪರಮಾತ್ಮನು, ಯಾರು ಪಾಪವನ್ನು ದುಷ್ಟಕರ್ಮಗಳನ್ನು, ವಿನಾಶವನ್ನು ಮಾಡುತ್ತಾರೋ, ಅಂತಹ ಶತ್ರುಗಳಿಂದ, ದೂರದಿಂದಲೂ ಮತ್ತು ಹತ್ತಿರದಿಂದಲೂ ನಮ್ಮೆಲ್ಲರನ್ನು ಹಾಗೂ ನಮ್ಮೆಲ್ಲಗ ನಿವಾಸಸ್ಥಾನಗಳನ್ನು ವಾಣಿಜ್ಯ ವ್ಯವಹಾರಗಳನ್ನು ಕೃಷಿ, ಉದ್ಯೋಗ ಕಾರ್ಖಾನೆ ಮೊದಲಾದುವುಗಳನ್ನು ಸದಾಕಾಲ ನಿರಂತರ ರಕ್ಷಿಸುತ್ತಾನೆ. ನಾವೆಲ್ಲರೂ ನಮ್ಮೆಲ್ಲರ ತಂದೆಯೂ ತಾಯಿಯೂ ಬಂಧುವೂ ಮಿತ್ರನೂ ಆದ ಆ ಪರಮಾತ್ಮನ ಮೇಲೆ ಸಂಪೂರ್ಣ ವಿಶ್ವಾಸವನ್ನಿಟ್ಟು ಅತ್ಯಂತ ಶ್ರದ್ಧಾ ಭಕ್ತಿಯಿಂದ ಅವನ ಉಪಾಸನೆಯನ್ನು ಮಾಡೋಣ.

ಈಗ ಅಗ್ನಿ ಶಬ್ದದಿಂದ ಈಶ್ವರನ ಮೇಲೆ ಬೆಳಕನ್ನು ಬೀರಲಾಗುತ್ತದೆ.

ಇಮಮೂ ಷೂ ತ್ವಮಸ್ಮಾಕಂ ಸನಿಂ ಗಾಯತ್ರಂ ನವ್ಯಾಂ ಸಮ್ । ಅಗ್ನೇ ದೇವೇಷು ಪ್ರ ವೋಚಃ ॥೪॥

ಪದಾರ್ಥ:- ಹೇ [**ಅಗ್ನೇ**] ಅನಂತ ವಿದ್ಯಾಮಯ ಜಗದೀಶ್ವರ! [**ತ್ವಮ್**] ಸಮಸ್ತ ವಿದ್ಯೆಗಳ ಉಪದೇಶಕನಾದ ಮತ್ತು ಮಂಗಳಮಯನಾದ ನೀನು ಹೇಗೆ ಸೃಷ್ಟಿಯ ಆದಿಯಲ್ಲಿ [**ಇಮಂ ದೇವೇಷು**] ಈ ಪುಣ್ಯಾತ್ಮರುಗಳಾದ ಅಗ್ನಿ, ವಾಯು, ಆದಿತ್ಯ, ಅಂಗಿರಾ ಎಂಬ ಹೆಸರನ್ನುಳ್ಳ ಅಥವಾ ಆಯಾ ಗುಣಗಳನ್ನು ಅಪೇಕ್ಷಿಸುವ 'ಸ್ಥಾನ'ಗಳನ್ನಲಂಕರಿಸುವ ಮಾನವರ ಆತ್ಮಗಳಲ್ಲಿ [**ನವ್ಯಾಂಸಮ್**] ಹೊಸ ಹೊಸ ಜ್ಞಾನವನ್ನು ನೀಡುವ [**ಗಾಯತ್ರಮ್**] ಗಾಯತ್ರೀ ಆದಿ ಛಂದಗಳಿಂದ ಕೂಡಿದ [**ಸುಸನಿಮ್**] ಪ್ರಾಣಿಮಾತ್ರರೆಲ್ಲರೂ ಸುಖವನ್ನು ಪ್ರಾಪ್ತ ಮಾಡಿಕೊಳ್ಳುವಂತಹ ಆ ನಾಲ್ಕು ವೇದಗಳ [**ಪ್ರವೋಚಃ**] ಉಪದೇಶವನ್ನು ಮಾಡಲಾಗಿದೆ. ಮತ್ತು ಮುಂದಿನ ಕಲ್ಪಾಂತರಗಳಲ್ಲಿಯೂ ಸಹ ಉಪದೇಶಿಸಲಾಗುತ್ತದೆ. ಅಂತೆಯೇ ಅವುಗಳನ್ನು [**ಊ**] ವಿವಿಧ ಪ್ರಕಾರವಾಗಿ [**ಅಸ್ಮಾಕಮ್**] ನಮ್ಮಗಳ ಆತ್ಮಗಳಲ್ಲಿ [**ಸು**] ಉತ್ತಮ ಪ್ರಕಾರವಾಗಿ ಬೆಳಗಿಸು.

ಭಾವಾರ್ಥ:- ಹೇ ಜಗದೀಶ್ವರ! ನೀನು ಯಾವ ರೀತಿ ಬ್ರಹ್ಮ ಮೊದಲಾದ ಮಹರ್ಷಿಗಳಲ್ಲಿ ಹಾಗೂ ಧಾರ್ಮಿಕ ವಿದ್ವಾಂಸರುಗಳ ಆತ್ಮಗಳಲ್ಲಿ ವೇದದ ಮೂಲಕ ಸತ್ಯಬೋಧೆಯ ಬೆಳಕನ್ನು ಉಂಟುಮಾಡಿ ಅವರಿಗೆ ಉತ್ತಮ ಸುಖವನ್ನಿತ್ತಿರುವೆಯೋ, ಅದೇ ರೀತಿ ನಮ್ಮಗಳ ಆತ್ಮಗಳಲ್ಲಿಯೂ ಸುಜ್ಞಾನವನ್ನು ಪ್ರಕಾಶಿತವನ್ನಾಗಿ ಮಾಡು. ಇದರಿಂದ ನಾವೂ ಸಹ ವಿದ್ವಾಂಸರಾಗಿ ಉತ್ತಮೋತ್ತಮ ಧರ್ಮಕಾರ್ಯಗಳ ಆಚರಣೆಯನ್ನು ನಿರಂತರವಾಗಿ ಮಾಡುವಂತಾಗಲಿ.

ಈ ಮಂತ್ರದಲ್ಲಿ ವಿದ್ವಾಂಸರು ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಲಾಗಿದೆ.

ಆ ನೋ ಭಜ ಪರಮೇಷ್ವಾ ವಾಜೇಷು ಮಧ್ಯಮೇಷು । ಶಿಕ್ಷಾ ವಸ್ವೋ ಅಂತಮಸ್ಯ ॥೫॥

ಪದಾರ್ಥ:- ಹೇ ವಿದ್ವಾನ್ ಮನುಷ್ಯ! [ಪರಮೇಷು ಮಧ್ಯಮೇಷು] ಉತ್ತಮ ಮತ್ತು ಮಧ್ಯಮ ಆನಂದವನ್ನು ನೀಡುವ ಅಥವಾ [ವಾಜೇಷು] ಸುಖ ಸ್ವರೂಪವಾದ ಯುದ್ಧಗಳಲ್ಲಿ ಅಥವಾ ಉತ್ತಮ ಅನ್ನಾದಿಗಳಲ್ಲಿ

[ಅಂತಮಸ್ಯ] ಸುಖವನ್ನು ಒದಗಿಸುವ ಸಂಘರ್ಷದಲ್ಲಿ [ನಃ] ನಮಗೆ [ಆ ಶಿಕ್ಷ] ಎಲ್ಲ ವಿದ್ಯೆಗಳ ಶಿಕ್ಷಣವನ್ನು ನೀಡು. ಈ ರೀತಿಯಾಗಿ ನಮ್ಮೆಲ್ಲರ [ವಸ್ವಃ] ಧನಾದಿ ಉತ್ತಮ ಪದಾರ್ಥಗಳನ್ನು [ಆ ಭಜ] ಒಳ್ಳೆಯ ರೀತಿಯಲ್ಲಿ ಹಂಚಿಕೊಡು.

ಭಾವಾರ್ಥ:- ಧಾರ್ಮಿಕ ಪುರುಷಾರ್ಥಿಗಳಿಂದ ಸೇವೆಯನ್ನು ಕೈಕೊಂಡ ವಿದ್ವಾಂಸರು ಅವರಿಗೆ ಎಲ್ಲ ವಿದ್ಯೆಗಳನ್ನೂ ದೊರಕಿಸಿ ಕೊಟ್ಟು ಅವರನ್ನು ಸುಖಪೂರ್ವಕವಾಗಿರುವಂತೆ ಮಾಡಬೇಕು. ಮತ್ತು ಈ ಜಗತ್ತಿನಲ್ಲಿ ಉತ್ತಮ, ಮಧ್ಯಮ ಮತ್ತು ನಿಕೃಷ್ಟ ಭೇದಗಳಿಂದ ಮೂರು ಪ್ರಕಾರದ ಭೋಗಗಳನ್ನು ಅನುಭವಿಸುವವರಿಗೆ ಅವರವರ ಬುದ್ಧಿಗನುಗುಣವಾಗಿ ವಿದ್ಯೆಯನ್ನು ನೀಡುತ್ತಿರಬೇಕು.

ಪುನಃ ಅವನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗುತ್ತದೆ.

ವಿಭಕ್ತಾಸಿ ಚಿತ್ರಭಾನೋ ಸಿಂಧೋರೂರ್ಮಾ ಉಪಾಕ ಆ । ಸದ್ಯೋ ದಾಶುಷೇ ಕ್ಷರಸಿ ॥೬॥

ಪದಾರ್ಥ:- ಹೇ [ಚಿತ್ರಭಾನೋ] ವಿವಿಧ ಪ್ರಕಾರದ ವಿದ್ಯೆಯಿಂದ ಕೂಡಿದ ವಿದ್ವಾನ್ ಮನುಷ್ಯ! ನೀನು [ಸಿಂಧೋಃ] ಸಮುದ್ರದ [ಊರ್ಮೌ] ಅಲೆಗಳಲ್ಲಿನ ನೀರಿನ ಕಣಗಳಂತೆ ಎಲ್ಲ ಪದಾರ್ಥವಿದ್ಯೆಯನ್ನು **[ವಿಭಕ್ತಾ ಅಸಿ]** ಬೇರ್ಪಡಿಸುವವನಾಗಿದ್ದೀಯೆ. ಮತ್ತು **[ದಾಶುಷೇ]** ವಿದ್ಯೆಯನ್ನು ಗ್ರಹಿಸುವ ಅಥವಾ ಅನುಷ್ಠಾನ ಮಾಡುವ ಮನುಷ್ಯರಿಗಾಗಿ **[ಉಪಾಕೇ]** ಅವರ ಬಳಿ ಇದ್ದುಕೊಂಡು ಸತ್ಯಜ್ಞಾನದ ಉಪದೇಶವನ್ನು **[ಸದ್ಯಃ]** ಶೀಘ್ರವಾಗಿಯೂ **[ಆ ಕ್ಷರಸಿ]** ಒಳ್ಳೆಯ ರೀತಿಯಲ್ಲಿ ಕರುಣಿಸುತ್ತೀಯೆ. ಅಂತೆಯೇ ಭಾಗ್ಯಶಾಲಿ ವಿದ್ವಾಂಸನಾದ ನೀನು ನಮ್ಮೆಲ್ಲರ ಸತ್ಕಾರಕ್ಕೆ ಯೋಗ್ಯನಾಗಿದ್ದೀಯೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಸಮುದ್ರದಲ್ಲಿನ ನೀರಿನ ಕಣಗಳು ಬೇರ್ಪಟ್ಟು ಆಕಾಶದಲ್ಲಿ ಸೇರಿ ಒಟ್ಟಾಗಿ ಮಳೆ ಸುರಿಸುವಂತೆಯೇ, ವಿದ್ವಾಂಸನು ತಾನು ರೂಪಿಸಿಕೊಂಡಿರುವ ವಿದ್ಯೆಯಿಂದ ಎಲ್ಲ ಪದಾರ್ಥ ವಿದ್ಯೆಗಳನ್ನು ಬೇರ್ಪಡಿಸಿ ಅವುಗಳನ್ನು ಮನುಷ್ಯರ ಆತ್ಮಗಳಲ್ಲಿ ಸ್ಥಿರಪಡಿಸುತ್ತಾನೆ.

ಮತ್ತೆ ಅದೇ ವಿಷಯವನ್ನು ತಿಳಿಸಲಾಗುತ್ತದೆ.

ಯಮಗ್ನೇ ಪೃತ್ಸು ಮರ್ತ್ಯ-ಮವಾ ವಾಜೇಷು ಯಂ ಜುನಾಃ । ಸ ಯಂತಾ ಶಶ್ವತೀರಿಷಃ ॥೭॥

ಪದಾರ್ಥ:- ಹೇ [ಅಗ್ನೇ] ಸೇನಾಧ್ಯಕ್ಷನೇ! ನೀನು [ಯಮ್] ಯಾವ ಯುದ್ಧದಲ್ಲಿ ಪಾಲ್ಗೊಳ್ಳುವ [ಮರ್ತ್ಯಮ್] ಮನುಷ್ಯರಿಗೆ [ಪೃತ್ಸು] ಸೇನೆಗಳ ಮಧ್ಯದಲ್ಲಿ [ಅವಾಃ] ರಕ್ಷಿಸಿ [ಯಮ್] ಯಾವ ಧಾರ್ಮಿಕ ಶೂರ-ವೀರರಿಗೆ [ವಾಜೇಷು] ಸಂಗ್ರಾಮದಲ್ಲಿ ಪಾಲ್ಗೊಳ್ಳುವಂತೆ [ಜುನಾಃ] ಪ್ರೇರಿಸಿ, ಈ ರೀತಿ [ಶಶ್ವತೀಃ ಇಷಃ] ಅನಾದಿ ಕಾಲದಿಂದ ಇಂದಿನವರೆಗೆ ಅವರನ್ನು ರಕ್ಷಿಸಿದ್ದೀಯೆ. ಈ ಕಾರಣದಿಂದಾಗಿಯೂ ಸಹ [ಸಃ ಯಂತಾ] ಆ ನೀನು ನಿಯಮಗಳ ಮೂಲಕ ಆರಿಸಲಾಗುವ ನಮ್ಮ ನಾಯಕನಾಗಿರು ಎಂದು ಈ ಪ್ರಕಾರ ಅಪೇಕ್ಷಿಸುತ್ತೇವೆ.

ಭಾವಾರ್ಥ:- ಅನಾದಿ ಕಾಲದಿಂದಲೂ ಜನರ ರಕ್ಷಣೆ, ಜಗತ್ತಿನ ರಚನೆ ಹಾಗೂ ವ್ಯವಸ್ಥೆಯನ್ನು ಪರಮಾತ್ಮನು ಹೇಗೆ ಮಾಡುತ್ತಿದ್ದಾನೋ, ಅಂತೆಯೇ ಮನುಷ್ಯರು ಆ ಸರ್ವವ್ಯಾಪೀ ಮತ್ತು ಎಲ್ಲ ಪ್ರಕಾರದಿಂದಲೂ ರಕ್ಷಣೆ ಮಾಡುತ್ತಿರುವ ಆ ಪರಮೇಶ್ವರನ ಉಪಾಸನೆ ಮಾಡಬೇಕು ಮತ್ತು ಯಥಾ ರೀತಿ ಕರ್ಮವನ್ನು ಆಚರಿಸಬೇಕು. ಇಂತಹ ಮನುಷ್ಯರಿಗೆ ಯಾವ ತೊಂದರೆಯೂ ಆಗುವುದಿಲ್ಲ ಹಾಗೂ ಅವರು ಎಂದಿಗೂ ಪರಾಜಿತರಾಗುವುದಿಲ್ಲ.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ನಕಿರಸ್ಯ ಸಹಂತ್ಯ ಪರ್ಯೇತಾ ಕಯಸ್ಯ ಚಿತ್ । ವಾಜೋ ಅಸ್ತಿ ಶ್ರವಾಯ್ಯಃ ॥೮॥

ಪದಾರ್ಥ:- ಹೇ [ಸಹಂತ್ಯ] ಸಹನಶೀಲ ವಿದ್ವಾನ್! [ನಕಿಃ] ಧರ್ಮದ ಎಲ್ಲೆಯನ್ನು ಉಲ್ಲಂಘಿಸದ ಮತ್ತು [ಪರ್ಯೇತಾ] ಎಲ್ಲರ ಬಗ್ಗೆಯೂ ಪೂರ್ಣ ಕೃಪೆಯನ್ನು ತೋರುವ ನೀನು [ಯಸ್ಯ] ಯಾವ [ಅಸ್ಯ ಕಯಸ್ಯ] ಈ ಸುಖ ಸ್ವರೂಪನ, ಯುದ್ಧಮಾಡಿ ಶತ್ರುಗಳನ್ನು ಪರಾಜಯಗೊಳಿಸುವಂತಹ ಶೂರ-ವೀರ ಪುರುಷರ [ಶ್ರವಾಯ್ಯಃ] ಮಾತುಗಳನ್ನು ಆಲಿಸುವುದು ಯೋಗ್ಯ. [ಚಿತ್] ಮತ್ತು [ವಾಜಃ ಅಸ್ತಿ] ಯುದ್ಧ ಮಾಡಬೇಕಾದಾಗ ಅವರಿಗೆ ಉತ್ತಮ ಪದಾರ್ಥಗಳನ್ನು ಕೊಡುವುದು ಅಗತ್ಯ. ಈ ರೀತಿ ನಿನ್ನ ಆದೇಶವನ್ನು ನಾವು ಪಾಲಿಸುತ್ತೇವೆ.

ಭಾವಾರ್ಥ:- ಅನಂತ ಶುಭಗುಣಗಳಿಂದ ಕೂಡಿದ ಹಾಗೂ ಎಲ್ಲರಿಗಿಂತ ಉತ್ತಮನಾದ ಆ ಪರಮೇಶ್ವರನ ಗುಣಗಳ ಬಗ್ಗೆ ಯಾವುದೇ ಜೀವರು ದೋಷಗಳನ್ನು ಹುಡುಕುವುದು ಯೋಗ್ಯವಲ್ಲ. ಪರಮಾತ್ಮನ ಜ್ಞಾನವು ಸಂದೇಹಾತೀತವಾಗಿದ್ದು ಮತ್ತು ಯಾವ ಮನುಷ್ಯರು ಅದರಂತೆ ವರ್ತಿಸುತ್ತಾರೋ ಅಂತಹವರನ್ನು ನೇತಾರರನ್ನಾಗಿ ನಿಯಮಿಸುವುದು ಯೋಗ್ಯವಾಗಿದೆ.

ಮತ್ತೆ ಅದೇ ವಿಷಯವನ್ನು ತಿಳಿಸಲಾಗುತ್ತದೆ.

ಸ ವಾಜಂ ವಿಶ್ವಚರ್ಷಣಿ-ರರ್ವದ್ಭಿರಸ್ತು ತರುತಾ । ವಿಪ್ರೇಭಿರಸ್ತು ಸನಿತಾ ॥೯॥

ಪದಾರ್ಥ:- [ಸಃ] ಆ ಸೇನಾಧ್ಯಕ್ಷನು [ವಿಶ್ವಚರ್ಷಣಿಃ] ಎಲ್ಲ ಮಾನವರ ರಕ್ಷಣೆ ಮಾಡಲು ಯೋಗ್ಯನೋ **[ತರುತಾ]** ಶತ್ರುವಿನಿಂದೊದಗಿದ ದುಃಖದಿಂದ ಪಾರು ಮಾಡುವವನೂ [ಸನಿತಾ] ಜ್ಞಾನ ಮತ್ತು ಸುಖಗಳನ್ನು ಬೇರ್ಪಡಿಸಿ ಕೊಡುವವನೂ ಆಗಿದ್ದಾನೆ. ನಮ್ಮ ಸೇನೆಯಲ್ಲಿ [ವಿಪ್ರೇಭಿಃ ಅಸ್ತು] ಬುದ್ಧಿ-ಚಾತುರ್ಯಗಳಿಂದ ಕೂಡಿದ ಪುರುಷನಾಗಿರಲಿ. [ಅರ್ವದ್ಭಿಃ] ಅಶ್ವಾದಿಗಳನ್ನು ಹೊಂದಿ [ವಾಜಮ್ ಅಸ್ತು] ಯುದ್ಧದಲ್ಲಿ ವಿಜಯಿಯಾಗಿ ಶತ್ರುಗಳನ್ನು ಪರಾಜಯಗೊಳಿಸುವಂತಹವನೇ ನಮ್ಮ ಸೇನಾಪತಿಯಾಗಿದ್ದು ಅವನೇ ನಮ್ಮ ಸೇನೆಯ ಸ್ವಾಮಿಯಾಗಿರಲಿ.

ಭಾವಾರ್ಥ:- ಯಾವ ಮನುಷ್ಯನು ಎಲ್ಲರನ್ನೂ ದುಃಖರೂಪೀ ಸಾಗರದಿಂದ ಪಾರು ಮಾಡಿ, ಯುದ್ಧದಲ್ಲಿ ವಿಜಯಗಳಿಸುವ ವಿದ್ವಾಂಸನಾಗಿದ್ದಾನೋ, ಅವನೇ ಒಳ್ಳೆಯ ವಿದ್ವಾಂಸರ ಸಮಾಗಮದಿಂದ ಸೇನೆಯ ಅಧಿಪತಿಯಾಗಲು ಯೋಗ್ಯನಾಗಿದ್ದಾನೆ.

ಪುನಃ ಅವನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗಿದೆ.

ಜರಾಬೋಧ ತದ್ ವಿವಿಡ್ಢಿ ವಿಶೇವಿಶೇ ಯಜ್ಞಿಯಾಯ । ಸ್ತೋಮಂ ರುದ್ರಾಯ ದೃಶೀಕಮ್ ॥೧೦॥

ಪದಾರ್ಥ:- ಹೇ [ಜರಾಬೋಧ] ಗುಣಗಾನದಿಂದ ಪ್ರಕಾಶಿತನಾಗುವ ಸೇನಾಪತಿ! ನೀನು ಯಾವುದರಿಂದ [ವಿಶೇ ವಿಶೇ] ಪ್ರಾಣಿಮಾತ್ರರ ಸುಖಕ್ಕೋಸ್ಕರ [ಯಜ್ಞಿಯಾಯ] ಯಜ್ಞಕರ್ಮ ಮಾಡಲು ಯೋಗ್ಯವಾದ [ರುದ್ರಾಯ] ದುಷ್ಟರನ್ನು ವ್ಯಾಕುಲಚಿತ್ತರನ್ನಾಗಿ ಮಾಡುವ ಮತ್ತು ಎಲ್ಲ ಪದಾರ್ಥಗಳನ್ನು ಪ್ರಕಾಶಿತಗೊಳಿಸುವ [ದೃಶೀಕಮ್] ನೋಡಲು ಯೋಗ್ಯವೆನಿಸುವ [ಸ್ತೋಮಮ್] ಸ್ತುತಿಸಮೂಹದ ಗುಣಗಾನವನ್ನು [ವಿವಿಡ್ಢಿ] ಪೂರ್ಣಗೊಳಿಸುತ್ತೀಯೋ [ತತ್] ಅದರಿಂದ ಮಾನನೀಯನಾಗುತ್ತೀಯೆ.

ಭಾವಾರ್ಥ:- ಈ ಮಂತ್ರದಲ್ಲಿ ಪೂರ್ಣೋಪಮಾಲಂಕಾರವಿದೆ. ಯುದ್ಧ ವಿದ್ಯೆಯನ್ನು ತಿಳಿಯಲಿಚ್ಛಿಸುವವರ ಗುಣಗಳನ್ನು ಆಲಿಸದಿದ್ದಲ್ಲಿ ಅದರ ಜ್ಞಾನವನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಮತ್ತು ಯಾರು ಪ್ರಜೆಗಳ ಸುಖಕ್ಕೋಸ್ಕರ ಅತಿ ತೀಕ್ಷ್ಣಸ್ವಭಾವದ ಹಾಗೂ ಶತ್ರುಗಳ ಬಲವನ್ನು ನಾಶಗೊಳಿಸುವ ಭೃತ್ಯರನ್ನು ಒಳ್ಳೆಯ ಶಿಕ್ಷಣವನ್ನು ನೀಡಿ ಇಟ್ಟುಕೊಳ್ಳಬೇಕು. ಅವನೇ ಪ್ರಜಾಪಾಲನೆಯಲ್ಲಿ ಯೋಗ್ಯನಾಗುತ್ತಾನೆ [ವಾಸ್ತವಿಕ ಜೀವನ ಸಂಘರ್ಷದ ವರ್ಣನೆ.]

ಈಗ ಭೌತಿಕ ಅಗ್ನಿಯ ಗುಣಗಳನ್ನು ಪ್ರಕಾಶಿತಗೊಳಿಸಲಾಗುತ್ತದೆ.

ಸ ನೋ ಮಹಾಁ ಅನಿಮಾನೋ ಧೂಮಕೇತುಃ ಪುರುಶ್ಚಂದ್ರಃ । ಧಿಯೇ ವಾಜಾಯ ಹಿನ್ವತು ॥೧೧॥

ಪದಾರ್ಥ:- [ಧೂಮಕೇತುಃ] ಯಾವುದರ ಹೊಗೆ ಧ್ವಜಕ್ಕೆ ಸಮಾನವಾಗಿರುತ್ತದೋ [ಪುರುಶ್ಚಂದ್ರಃ] ಬಹಳಷ್ಟು ಮಂದಿಗೆ ಆನಂದನೀಡುತ್ತದೋ [ಅನಿಮಾನಃ] ಯಾವುದಕ್ಕೆ ಬೆಲೆ ಕಟ್ಟಲಾಗದೋ [ಮಹಾನ್] ಅತ್ಯಂತ ಗುಣಯುಕ್ತ ಭೌತಿಕಾಗ್ನಿಯಾಗಿರುತ್ತದೋ [ಸಃ] ಅದು [ಧಿಯೇ] ಉತ್ತಮಕರ್ಮ ಅಥವಾ [ವಾಜಾಯ] ವಿಜ್ಞಾನರೂಪೀ ಶಕ್ತಿಯನ್ನು ಪಡೆದುಕೊಂಡು [ನಃ] ನಮಗೆ [ಹಿನ್ವತು] ತೃಪ್ತಿ ನೀಡುತ್ತದೆ.

ಭಾವಾರ್ಥ:- ಯಾವನು ಎಲ್ಲ ಪ್ರಕಾರದಿಂದಲೂ ಶ್ರೇಷ್ಠನಾಗಿದ್ದಾನೋ, ಯಾವನನ್ನು ಯಾವುದೇ ರೀತಿಯಲ್ಲೂ ಭಿನ್ನ-ಭಿನ್ನ ಮಾಡಲಾಗದೋ, ಎಲ್ಲರಿಗೂ ಆಧಾರನಾಗಿದ್ದಾನೋ, ಎಲ್ಲರಿಗೂ ಆನಂದ ನೀಡುತ್ತಾನೋ, ಅವನು ವಿಜ್ಞಾನರೂಪೀ ಪರಮೇಶ್ವರನಾಗಿದ್ದಾನೆ. ಮತ್ತು ಅವನು ಮಹಾಗುಣಯುಕ್ತ ಭೌತಿಕಾಗ್ನಿಯನ್ನು ನಿರ್ಮಾಣ ಮಾಡಿದ್ದಾನೆ. ಅವನೇ ಉತ್ತಮ ಕರ್ಮಮಾಡುವಂತೆ ಅಥವಾ ಪರಿಶುದ್ಧ ವಿಜ್ಞಾನವನ್ನು ಪಡೆದುಕೊಳ್ಳುವಂತೆ ನಮಗೆ ಸದಾ ಆಧ್ಯಾತ್ಮಿಕ ಪ್ರೇರಣೆ ನೀಡಲಿ.

ಪುನಃ ಅವನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗಿದೆ.

ಸ ರೇವಾಁ ಇವ ವಿಶ್ಪತಿರ್ದೈವ್ಯಃ ಕೇತುಃ ಶೃಣೋತು ನಃ । ಉಕ್ಥೈರಗ್ನಿರ್ಬೃಹದ್ಭಾನುಃ ॥೧೨॥

ಪದಾರ್ಥ:- ಹೇ ವಿದ್ವಾನ್ ಮನುಷ್ಯ! ನೀನು ಯಾವ [ದೈವ್ಯಃ] ವಿದ್ವಾಂಸರಲ್ಲಿ ಬಹಳ ಬುದ್ಧಿವಂತನೂ [ಕೇತುಃ] ರೋಗವನ್ನು ದೂರ ಮಾಡುವವನೂ [ವಿಶ್ಪತಿಃ] ಪ್ರಜಾಪಾಲಕನೂ [ಬೃಹದ್ಭಾನುಃ] ಅತ್ಯಂತ ಪ್ರಕಾಶ ಸ್ವರೂಪನೂ [ರೇವಾನ್ ಇವ] ಧನವಂತನಿಗೆ ಸಮಾನನೂ [ಅಗ್ನಿಃ] ಎಲ್ಲರಿಗೂ ಸುಖವನ್ನು ನೀಡುವ ಅಗ್ನಿಯಂತಿದ್ದೀಯೆ. [ಉಕ್ಥೈಃ] ವೇದೋಕ್ತ ಸ್ತೋತ್ರಗಳನ್ನು ಆಲಿಸಿ ಸುಖಪಡುವವನಿಂದ [ಶೃಣೋತು] ಆ ಸ್ತೋತ್ರಗಳನ್ನು ಆಲಿಸು ಮತ್ತು [ನಃ] ನಮ್ಮನ್ನೂ ಕೇಳಿಸಿಕೊಳ್ಳುವಂತೆ ಮಾಡು. (ವಚನ ವ್ಯತ್ಯಯ)

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಧನವಂತನಾದ ವಿದ್ವಾನ್ ಮನುಷ್ಯನು ಶ್ರೀಮಂತಿಕೆಯ ಅನುಭವವನ್ನು ಪಡೆಯಲು ಯೋಗ್ಯ ಪದಾರ್ಥಗಳಿಂದ ಎಲ್ಲ ಮನುಷ್ಯರಿಗೂ ಸುಖವನ್ನು ನೀಡುತ್ತಾ ಅವರೆಲ್ಲರ ಸುದ್ದಿಗಳನ್ನೂ ಆಲಿಸುತ್ತಾನೋ, ಅಂತೆಯೇ, ಜಗದೀಶ್ವರನು ಎಲ್ಲರ ಸ್ತುತಿಗಳನ್ನು ಆಲಿಸುವ ಮೂಲಕ ಅವರಿಗೆ ಸುಖಸಮೃದ್ಧಿಗಳನ್ನು ನೀಡುತ್ತಾನೆ.

ಎಲ್ಲರ ಸತ್ಕಾರಗಳನ್ನು ಮಾಡುವುದು ಅವಶ್ಯ ಎಂಬುದನ್ನು ಹೇಳಲಾಗಿದೆ.

ನಮೋ ಮಹದ್ಭ್ಯೋ ನಮೋ ಅರ್ಭಕೇಭ್ಯೋ ನಮೋ ಯುವಭ್ಯೋ ನಮ ಆಶಿನೇಭ್ಯಃ ।
ಯಜಾಮ ದೇವಾನ್ ಯದಿ ಶಕ್ನವಾಮ ಮಾ ಜ್ಯಾಯಸಃ ಶಂಸಮಾ ವೃಕ್ಷಿ ದೇವಾಃ ॥೧೩॥

ಪದಾರ್ಥ:- ಹೇ [ದೇವಾಃ] ಸಕಲ ವಿದ್ಯೆಗಳನ್ನೂ ಪ್ರಕಾಶಗೊಳಿಸುವ ವಿದ್ವಾಂಸರೇ! ನಾವು [ಮಹದ್ಭ್ಯಃ] ಪೂರ್ಣ ವಿದ್ಯೆಯನ್ನು ಪಡೆದಿರುವ [ನಮಃ ಯಜಾಮ] ವಿದ್ವಾಂಸರುಗಳನ್ನು ಅನ್ನಾದಿ ಪದಾರ್ಥಗಳನ್ನು ನೀಡುವ ಮೂಲಕ ಸತ್ಕರಿಸುತ್ತೇವೆ ಮತ್ತು [ಅರ್ಭಕೇಭ್ಯಃ] ಅಲ್ಪಗುಣಗಳನ್ನು ಹೊಂದಿರುವ ವಿದ್ಯಾರ್ಥಿಗಳನ್ನು ತೃಪ್ತಿ ಪಡಿಸುತ್ತೇವೆ. [ಯುವಭ್ಯಃ] ಯುವಾವಸ್ಥೆಯಲ್ಲಿರುವವರಲ್ಲಿ ಬಲಿಷ್ಠರಾದ ವಿದ್ವಾಂಸರನ್ನೂ ಸಹ [ನಮಃ] ಸತ್ಕರಿಸುತ್ತೇವೆ. [ಆಶಿನೇಭ್ಯಃ] ಸಕಲ ವಿದ್ಯೆಗಳನ್ನೂ ಅರಿತಿರುವ ವಯೋವೃದ್ಧ ವಿದ್ವಾಂಸರನ್ನೂ ಸಹ [ನಮಃ] ಸೇವಾಪೂರ್ವಕ ಸತ್ಕರಿಸುತ್ತೇವೆ. [ಯದಿ ಶಕ್ನವಾಮ] ಸಾಮರ್ಥ್ಯಾನುಕೂಲ ವಿಚಾರಗಳಲ್ಲಿ ಸಮರ್ಥರಾಗಿದ್ದಲ್ಲಿ [ಜ್ಯಾಯಸಃ] ವಿದ್ಯಾದಿ ಉತ್ತಮ ಗುಣಗಳಿಂದ ಅತ್ಯಂತ ಪ್ರಶಂಸನೀಯರಾಗಿದ್ದಲ್ಲಿ ಅಂತಹ [ದೇವಾನ್] ವಿದ್ವಾಂಸರು [ಅಯಜಾಮ] ಉತ್ತಮ ರೀತಿಯಲ್ಲಿ ವಿದ್ಯೆಯನ್ನು ಸ್ವೀಕರಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ಪರಮಾತ್ಮನ ಉಪದೇಶವು ಹೀಗಿದೆ. ಮನುಷ್ಯರು ಅಹಂಕಾರವನ್ನು ತ್ಯಜಿಸಿ ಅನ್ನಾದಿಗಳಿಂದ ಉತ್ತಮೋತ್ತಮ ಜನರ ಸತ್ಕಾರಗಳನ್ನು ಸೇವೆಯನ್ನು ಮಾಡಲಿ. ಎಂದರೆ ಎಷ್ಟೆಲ್ಲಾ ಧನ ಸಂಪತ್ತುಗಳು ಹಾಗೂ ಉತ್ತಮ ವಚನಗಳಿವೆಯೋ ಅವುಗಳನ್ನು ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಆ ವಿದ್ವಜ್ಜನರ ಸತ್ಸಂಗವನ್ನು ಆಚರಿಸಿ ವಿದ್ಯೆಯನ್ನು ಪಡೆದುಕೊಳ್ಳಲಿ. ಆ ಸತ್ಪುರುಷರ ನಿಂದೆಯನ್ನು ಎಂದಿಗೂ ಮಾಡದಿರಲಿ.

ಹಿಂದಿನ ಸೂಕ್ತದಲ್ಲಿ ಅಗ್ನಿಯ ವರ್ಣನೆ ಇದೆ. ಅದನ್ನು ಉತ್ತಮ ಪ್ರಕಾರದಿಂದ ತಿಳಿಯುವವರು ವಿದ್ವಾಂಸರೇ ಆಗುತ್ತಾರೆ. ಅಂತಹ ವಿದ್ವಾಂಸರ ವರ್ಣನೆಯನ್ನು ಮಾಡಿರುವುದರಿಂದ ೨೬ ನೆಯ ಸೂಕ್ತದೊಂದಿಗೆ ೨೭ ನೆಯ ಸೂಕ್ತದ ಸಂಗತಿಕರಣವಾಗುತ್ತದೆಂದು ಹೇಳಲಾಗಿದೆ.

ಇಪ್ಪತ್ತೇಳನೆಯ ಸೂಕ್ತ ಸಮಾಪ್ತ

ಸೂಕ್ತ ೨೮

ಮಂತ್ರಸಂಖ್ಯೆ ೯ । ಋಷಿಃ - ಆಜೀಗರ್ತಿಃ ಶುನಃಶೇಪಃ ಸ ಕೃತ್ರಿಮೋ ವೈಶ್ವಾಮಿತ್ರೋ ದೇವರಾತಃ । ದೇವತಾ - ಇಂದ್ರಃ, ೫-೬ ಉಲೂಖಲಂ, ೭-೮ ಉಲೂಖಲಮುಸಲೇ, ೯ ಪ್ರಜಾಪತಿರ್ಹರಿಶ್ಚಂದ್ರಃ, (ಅಧಿಷವಣ) ಚರ್ಮ ಸೋಮೋ ವಾ । ಛಂದಃ - ಅನುಷ್ಟುಪ್ , ೭-೯ ಗಾಯತ್ರೀ । ಸ್ವರಃ- ೧-೬ ಗಾಂಧಾರ, ೭-೯ ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಕರ್ಮದ ಅನುಷ್ಠಾನ ಮಾಡುವ ಜೀವನು ಏನೇನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಯತ್ರ ಗ್ರಾವಾ ಪೃಥುಬುಧ್ನ ಊರ್ಧ್ವೋ ಭವತಿ ಸೋತವೇ ।
ಉಲೂಖಲಸುತಾನಾ-ಮವೇದ್ವಿಂದ್ರ ಜಲ್ಗುಲಃ ॥೧॥

ಪದಾರ್ಥ:- ಹೇ [ಇಂದ್ರ] ಐಶ್ವರ್ಯಯುಕ್ತ ಕರ್ಮಗಳನ್ನು ಮಾಡುವ ಮನುಷ್ಯರೇ! [ಯತ್ರ] ಯಾವ ಯಜ್ಞಾದಿ ಕಾರ್ಯಗಳಲ್ಲಿ [ಪೃಥುಬುಧ್ನಃ ಊರ್ಧ್ವಃ] ಭೂಮಿಯಲ್ಲಿ ವಿಸ್ತೃತವಾಗಿ ಬೇರುಬಿಟ್ಟಿರುವ ಮತ್ತು ಭೂಮಿಯಿಂದ ಮೇಲುಗಡೆಗೆ ಬೆಳೆದಿರುವ ಗಿಡಗಳಿಂದ ಆಹಾರಧಾನ್ಯಗಳನ್ನು ಪಡೆದು [ಗ್ರಾವಾ] ಒರಳು ಮತ್ತು ಒನಕೆಗಳ ಮೂಲಕ [ಸೋತವೇ ಭವತಿ] ಆಹಾರಧಾನ್ಯಗಳನ್ನು ಕುಟ್ಟಿ ಒಟ್ಟುಗೂಡಿಸಲಾಗುತ್ತದೋ ಅವುಗಳಲ್ಲಿ [ಉಲೂಖಲಸುತಾನಾಮ್] ಒರಳು ಮತ್ತು ಒನಕೆಗಳ ಮೂಲಕ ಕುಟ್ಟಿತೆಗೆದ ಮಿಶ್ರಣದಿಂದ ಹೊಟ್ಟನ್ನು ತೆಗೆದು ಉತ್ತಮವಾದುದನ್ನು ಬೇರ್ಪಡಿಸಿ [ಅವ ಇತ್] ರಕ್ಷಿಸಬೇಕಾಗುತ್ತದೆ. [ಉ] ಮತ್ತು ಒಳ್ಳೊಳ್ಳೆಯ ವಿಚಾರಗಳಿಂದ ಮುಖ್ಯ ತತ್ವವನ್ನು ಸಿದ್ಧಗೊಳಿಸಬೇಕೆಂದು [ಜಲ್ಗುಲಃ] ಉಪದೇಶಿಸಬೇಕು.

ಭಾವಾರ್ಥ:- ಹೇ ಮನುಷ್ಯರೇ! ಯವ ಆದಿ ಔಷಧೀ ಪದಾರ್ಥಗಳಲ್ಲಿನ ನಿಸ್ಸಾರ ಪದಾರ್ಥವನ್ನು ಬೇರ್ಪಡಿಸಿ ಸಾರ ಪದಾರ್ಥಗಳನ್ನು ಪಡೆಯಲೋಸುಗ ಕಲ್ಲಿನ ಒರಳನ್ನು ಸಿದ್ಧಗೊಳಿಸಿ ಭೂಮಿಯಲ್ಲಿ ಸ್ವಲ್ಪ ಭಾಗ

ಮೇಲಿರುವಂತೆ ಹೂಳಿ ಅದನ್ನು ಇದಕ್ಕಾಗಿ ಉಪಯೋಗಿಸಬೇಕು. ನಂತರ ಒನಕೆಯಿಂದ ಯವ ಆದಿ ಔಷಧಿ ಪದಾರ್ಥಗಳನ್ನು ಕುಟ್ಟಿ ಸಾರ ಪದಾರ್ಥವನ್ನು ಬೇರ್ಪಡಿಸಬೇಕೆಂದು ಈಶ್ವರನು ಉಪದೇಶಿಸಿದ್ದಾನೆ.

ಆರೋಗ್ಯಪ್ರದವಾದ ಶುದ್ಧ ಆಹಾರ ಸೇವನೆ ಹಾಗೂ ಸ್ವಸ್ಥನಾಗಿ ಜ್ಞಾನ ಪ್ರಚಾರ ಮಾಡಬೇಕು. ಒರಳು-ಒನಕೆಗಳು, ಬೀಸುವ ಕಲ್ಲು - ಇವೆಲ್ಲಾ ಆವಶ್ಯಕ ಸಾಧನಗಳು. ಕಾಲ-ಕಾಲಕ್ಕೆ ರೂಪಾಂತರ ಹೊಂದಬಹುದು.

ಪುನಃ ಅವು ಹೇಗಿವೆ ಎಂಬುದನ್ನು ತಿಳಿಸಲಾಗಿದೆ.

ಯತ್ರ ದ್ವಾವಿವ ಜಘನಾ-ಧಿಷವಣ್ಯಾ ಕೃತಾ । ಉಲೂಖಲಸುತಾನಾ-ಮವೇದ್ವಿಂದ್ರ ಜಲ್ಗುಲಃ ॥೨॥

ಪದಾರ್ಥ:- ಹೇ [ಇಂದ್ರ] ಶರೀರದ ಒಳ ಹಾಗೂ ಹೊರಗಿನ ಸಾಧನಗಳಿಂದ ಐಶ್ವರ್ಯವಂತನಾದ ವಿದ್ವಾಂಸನೇ! ನೀನು [ದ್ವಾವಿವ ಜಘನಾ] ಎರಡೂ ತೊಡೆಗಳಂತೆ ಸಮಾನನಾಗಿ ರಕ್ಷಣೆ ನೀಡುವವನಾಗಿದ್ದೀಯೆ. [ಯತ್ರ] ಯಾವುದೇ ರೀತಿಯಲ್ಲಿ [ಅಧಿಷವಣ್ಯಾ] ಪದಾರ್ಥಗಳಲ್ಲಿನ ನಿಸ್ಸಾರ ಭಾಗವನ್ನು ಬೇರ್ಪಡಿಸಿ ಸಾರ ಪದಾರ್ಥವನ್ನು [ಕೃತಾ] ಉತ್ತಮ ರೀತಿಯಲ್ಲಿ ಸಿದ್ಧಪಡಿಸಿ ಅದನ್ನು [ಉಲೂಖಲಸುತಾನಾಮ್] ಕಲ್ಲಿನ ಜಾಡಿಯಲ್ಲಿ ತುಂಬಿಡಬೇಕು. ಹೀಗೆ ಶುದ್ಧಪಡಿಸಿದ ಸಾರ ಪದಾರ್ಥವನ್ನು [ಅವ ಇತ್] ರಕ್ಷಿಸಬೇಕು. [ಉ] ಮತ್ತು ಈ ರೀತಿ ಉತ್ತಮ ಮಾರ್ಗದಿಂದ ಹಾಗೂ ಯುಕ್ತಿಪೂರ್ವಕವಾಗಿ ಸಾರ ಪದಾರ್ಥವನ್ನು ಸಿದ್ಧಪಡಿಸಬೇಕೆಂದು [ಜಲ್ಗುಲಃ] ಉಪದೇಶಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಎರಡೂ ತೊಡೆಗಳ ಸಹಾಯದಿಂದ ಮಾರ್ಗವನ್ನು ಕ್ರಮಿಸಲು ಸಾಧ್ಯವಾಗುತ್ತದೋ ಹಾಗೆಯೇ ಬೀಸುವ ಕಲ್ಲಿನ ಎರಡೂ ಭಾಗಗಳಿಂದ ಪದಾರ್ಥಗಳನ್ನು ಸಿದ್ಧಪಡಿಸಿ ಅದರಿಂದ ಔಷಧಿ, ಭಕ್ಷ್ಯ ಇತ್ಯಾದಿಗಳನ್ನು ತಯಾರಿಸಿ ಉಪಯೋಗಿಸುವಂತೆಯೇ ಒರಳು ಹಾಗೂ ಒನಕೆಯಿಂದಲೂ ಪದಾರ್ಥಗಳನ್ನು ಸಿದ್ಧಪಡಿಸಬೇಕೆಂದು ಉಪದೇಶಿಸಲಾಗಿದೆ.

ಈಗ ಈ ವಿದ್ಯೆಯನ್ನು ಹೇಗೆ ಗ್ರಹಣ ಮಾಡಬೇಕು ಎಂಬುದನ್ನು ವಿವರಿಸಲಾಗಿದೆ.

ಯತ್ರ ನಾರ್ಯಪಚ್ಯವ-ಮುಪಚ್ಯವಂ ಚ ಶಿಕ್ಷತೇ । ಉಲೂಖಲಸುತಾನಾ-ಮವೇದ್ವಿಂದ್ರ ಜಲ್ಗುಲಃ ॥೩॥

ಪದಾರ್ಥ:- ಹೇ [ಇಂದ್ರ] ಇಂದ್ರಿಯಗಳ ಸ್ವಾಮಿಯಾದ ಜೀವಾತ್ಮನೇ! ನೀನು **[ಯತ್ರ]** ಯಾವ ಕಾರ್ಯದಲ್ಲಿ ನಿರತರಾಗಿರುವ ಮನೆ-ಮನೆಗಳಲ್ಲಿನ ಸ್ತ್ರೀಯರು **[ನಾರೀ]** ಕಾರ್ಯ ಪ್ರವೃತ್ತರಾಗಿರುವ ಅವರ ಸಂಗಾತಿ ಸ್ತ್ರೀಯರಿಗೋಸ್ಕರ **[ಉಲೂಖಲಸುತಾನಾಮ್]** ಒರಳು-ಒನಕೆ ಮತ್ತು ಬೀಸುಕಲ್ಲಿನಿಂದ ತಯಾರಿಸಿದ ಹಿಟ್ಟಿನಂತೆ ಸಿದ್ಧಪಡಿಸಿದ ಕಲೆಯನ್ನು **[ಅಪಚ್ಯವಮ್ ಉಪಚ್ಯವಮ್ ಚ]** ಹಾಕುವ-ತೆಗೆಯುವಂತಹ ಕ್ರಿಯೆಗಳಿಂದ ಹೇಗೆ ಹಿಟ್ಟನ್ನು ತಯಾರಿಸಲಾಗುತ್ತದೋ ಅಂತೆಯೇ ಸಿದ್ಧ ಪಡಿಸುವ ಕಲೆಯನ್ನು **[ಅವ ಇತ್]** ರಕ್ಷಿಸುವಂತೆ **[ಶಿಕ್ಷತೇ]** ಶಿಕ್ಷಣದ ಮೂಲಕ ಗ್ರಹಿಸಿಕೊಂಡು ಇತರರಿಗೆ ತಿಳಿಸಿಕೊಡಬೇಕು. [ಉ] ಮತ್ತು ವಿವಿಧ ತರ್ಕಗಳೊಡನೆ [ಜಲ್ಗುಲಃ] ವಿದ್ಯೆಯನ್ನು ಉಪದೇಶಿಸಬೇಕು.

ಭಾವಾರ್ಥ:- ಭೋಜನಾದಿ ಪದಾರ್ಥಗಳನ್ನು ಸಿದ್ಧಗೊಳಿಸುವ ಮತ್ತು ಗೃಹ ಸಂಬಂಧವಾದ ಕಾರ್ಯಗಳನ್ನು ಸಿದ್ಧಗೊಳಿಸುವ ವಿದ್ಯೆಯನ್ನು ಉಲೂಖಲ ವಿದ್ಯೆ (ಒರಳು-ಒನಕೆ ಮತ್ತು ಬೀಸುವ ಕಲ್ಲಿನಿಂದ ಹಿಟ್ಟನ್ನು ತಯಾರಿಸುವ ವಿದ್ಯೆ) ಎಂದು ಕರೆಯಲಾಗಿದೆ. ಗೃಹಕಾರ್ಯಕ್ಕೆ ಸಂಬಂಧಪಟ್ಟುದರಿಂದ ಇದನ್ನು ಸ್ತ್ರೀಯರು ಅರಿತುಕೊಂಡು ಇತರ ಸ್ತ್ರೀಯರಿಗೆ ಕಲಿಸಬೇಕಾಗಿದೆ. ಎಲ್ಲಿ ಅಡಿಗೆಯನ್ನು ಸಿದ್ಧಮಾಡಬೇಕಾಗಿದೆಯೋ ಅಲ್ಲಿ ಉಲೂಖಲಾದಿ ಸಾಧನಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಏಕೆಂದರೆ ಇವುಗಳ ವಿನಾ, ಕುಟ್ಟುವುದು ಮತ್ತು ಹಿಟ್ಟು ತಯಾರಿಸುವ ಕ್ರಿಯೆಯನ್ನು ಮಾಡಲಾಗುವುದಿಲ್ಲ.

ಇದರ ಸಂಬಂಧೀ ಹಾಗೂ ಇತರ ಸಾಧನಗಳ ಬಗೆಗೆ ವರ್ಣಿಸಲಾಗುತ್ತದೆ.

ಯತ್ರ ಮಂಥಾಂ ವಿಬಧ್ನತೇ ರಶ್ಮೀನ್ ಯಮಿತವಾ ಇವ । ಉಲೂಖಲಸುತಾನಾ-ಮವೇದ್ವಿಂದ್ರ ಜಲ್ಗುಲಃ ॥೪॥

ಪದಾರ್ಥ:- ಹೇ [ಇಂದ್ರ] ಸುಖಪ್ರಾಪ್ತಿಸಿಕೊಳ್ಳಬೇಕೆಂದು ಇಚ್ಛಿಸುವ ಮನುಷ್ಯನೇ! ನೀನು [ರಶ್ಮೀನ್ ಇವ ಯಮಿತವೈ] ಅಶ್ವ ಆದಿಗಳನ್ನು ಹಗ್ಗಗಳಿಂದ ನಿಯಂತ್ರಣದಲ್ಲಿಟ್ಟುಕೊಳ್ಳಲಾಗುತ್ತದೋ ಹಾಗೆ ಸೂರ್ಯನು ತನ್ನ ಕಿರಣಗಳನ್ನು ನಿಯಂತ್ರಣದಲ್ಲಿಟ್ಟುಕೊಂಡಿರುತ್ತಾನೆ [ಮಂಥಾಮ್] ತುಪ್ಪ ಇತ್ಯಾದಿ ಪದಾರ್ಥಗಳನ್ನು ಪಡೆಯಲೋಸುಗ ಕಡೆಗೋಲುಗಳನ್ನು [ವಿಬಧ್ನತೇ] ಸರಿಯಾದ ರೀತಿಯ ಹಗ್ಗದಿಂದ ಕಟ್ಟಲಾಗುತ್ತದೆ. [ಉಲೂಖಲಸುತಾನಾಮ್] ಉಲೂಖದಿಂದ ಸಿದ್ಧಪಡಿಸಿದ ಪದಾರ್ಥಗಳಂತೆಯೇ [ಅವ] ಸಿದ್ಧಪಡಿಸಲಿಚ್ಛಿಸಿ [ಉ] ಮತ್ತು [ಇತ್] ಅದೇ ಕಲೆಯನ್ನು [ಜಲ್ಗುಲಃ] ಯುಕ್ತಿಯಿಂದ ಉಪದೇಶಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಈಶ್ವರನು ಉಪದೇಶಿಸುವುದೇನೆಂದರೆ, ಹೇ ವಿದ್ವಾಂಸರೇ! ಯಾವ ರೀತಿ ಸಾರಥಿಯು ಕುದುರೆಗಳನ್ನು ಹಗ್ಗದಿಂದ ನಿಯಂತ್ರಿಸುತ್ತಾನೆಯೋ ಹಾಗೆ ಸೂರ್ಯನು ತನ್ನ ಕಿರಣಗಳಿಂದ ಭೂಮಿಯನ್ನು ಆಕರ್ಷಣ ಶಕ್ತಿಯಿಂದ ಬಂಧಿಸುತ್ತಾನೆ ಮತ್ತು ಭೂಮಿಯ ಚಲನ-ವಲನಗಳನ್ನು ತಿಳಿಯುವ ವಿದ್ಯೆಯಿಂದ ಹಾಲು ಮೊದಲಾದ ಮತ್ತು ಔಷಧಿ ಮೊದಲಾದ ಪದಾರ್ಥಗಳಿಂದ ಬೆಣ್ಣೆ ಮೊದಲಾದವುಗಳನ್ನು ತೆಗೆಯುವ ಕಲೆಯನ್ನು ರೂಢಿಸಿಕೊಳ್ಳಿ.

ಉಕ್ತ ಉಲೂಖಲದಿಂದ ಏನೇನನ್ನು ಮಾಡಬಹುದು ಎಂಬುದನ್ನು ತಿಳಿಸಲಾಗಿದೆ.

ಯಚ್ಚಿದ್ಧಿ ತ್ವಂ ಗೃಹೇಗೃಹ ಉಲೂಖಲಕ ಯುಜ್ಯಸೇ ।
ಇಹ ದ್ಯುಮತ್ತಮಂ ವದ ಜಯತಾಮಿವ ದುಂದುಭಿಃ ॥೫॥

ಪದಾರ್ಥ:- ಹೇ **[ಉಲೂಖಲಕ]** ಉಲೂಖ ಕಲೆಯಿಂದ ಎಂದರೆ ಒರಳಿನ ಪ್ರಯೋಗದಿಂದ ಪ್ರಯೋಜನ ಪಡೆದುಕೊಳ್ಳುವ ವಿದ್ವಾಂಸನೇ! ನೀನು **[ಯತ್]** ಯಾವ ಕಾರಣದಿಂದ **[ಹಿ]** ಪ್ರಸಿದ್ಧನಾಗಿದ್ದು **[ಗೃಹೇ ಗೃಹೇ]** ಮನೆ-ಮನೆಯಲ್ಲಿ **[ಯುಜ್ಯಸೇ]** ಆ ಕಲೆಯ ಪ್ರಯೋಜನದಿಂದ ಹೇಗೆ ಸಾರವನ್ನು ಗ್ರಹಿಸುತ್ತೀಯೋ ಅಂತೆಯೇ **[ಇಹ]** ಈ ವಿಶ್ವದಲ್ಲಿನ ಗೃಹ ಅಥವಾ ಸ್ಥಾನದಲ್ಲಿ **[ಜಯತಾಮ್]** ಶತ್ರುಗಳನ್ನು ಜಯಿಸುವ **[ದುಂದುಭಿಃ ಇವ]** ನಗಾರಿಗೆ ಸಮಾನವಾಗಿದ್ದು **[ದ್ಯುಮತ್ತಮಮ್]** ಅದರಿಂದ ಯಾವ ರೀತಿ ಒಳ್ಳೆಯ ಶಬ್ದ ಬರುತ್ತದೋ ಅಂತೆಯೇ ಉಲೂಖಲ ಕಲೆಯ ಪ್ರಯೋಜನ ಪಡೆದುಕೊಳ್ಳುವ **[ವದ]** ಈ ವಿದ್ಯೆಯನ್ನು ಉಪದೇಶಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಎಲ್ಲ ಮನೆಗಳಲ್ಲಿಯೂ ಒರಳು ಮತ್ತು ಒನಕೆಗಳನ್ನು ಸ್ಥಾಪಿಸಬೇಕಾಗಿದೆ. ಹೇಗೆ ಶತ್ರುಗಳನ್ನು ಜಯಿಸುವ ಶೂರ-ವೀರ ಮನುಷ್ಯರು ಅವರ ನಗರಗಳನ್ನು ಉಳಿಸಿಕೊಳ್ಳಲು ಯುದ್ಧ ಮಾಡುತ್ತಾರೋ ಅಂತೆಯೇ ರಸವನ್ನು ಪಡೆಯಲಿಚ್ಛಿಸುವ ಮನುಷ್ಯರು ಒರಳಿನಲ್ಲಿ ಯವೆ ಆದಿ ಔಷಧೀ ಪದಾರ್ಥಗಳನ್ನು ಹಾಕಿ ಒನಕೆಯಿಂದ ಕುಟ್ಟಿ ಹೊಟ್ಟನ್ನು ತೆಗೆದುಹಾಕಿ ಸಾರವತ್ತಾದ ಪದಾರ್ಥವನ್ನು ಪಡೆದುಕೊಳ್ಳಬೇಕಾಗಿದೆ.

ನಂತರ ಅದನ್ನು ಏತಕ್ಕಾಗಿ ಗ್ರಹಣ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಉತ ಸ್ಮ ತೇ ವನಸ್ಪತೇ ವಾತೋ ವಿ ವಾತ್ಯಗ್ರಮಿತ್ ।
ಅಥೋ ಇಂದ್ರಾಯ ಪಾತವೇ ಸುನು ಸೋಮಮುಲೂಖಲ ॥೬॥

ಪದಾರ್ಥ:- ಹೇ ವಿದ್ವಾಂಸರೇ! [ವಾತಃ ಇತ್] ವಾಯು [ತೇ ವನಸ್ಪತೇ ಅಗ್ರಂ ಉತ] ವೃಕ್ಷಆದಿ ವನಸ್ಪತಿ ಪದಾರ್ಥಗಳನ್ನು ವೃದ್ಧಿಗೊಳಿಸುತ್ತದೆ. [ವಿವಾತಿ ಸ್ಮ] ಹೀಗೆ ವೃದ್ಧಿಯಾದ ಪದಾರ್ಥಗಳು ಒಂದು ಕಡೆಯಿಂದ ಮತ್ತೊಂದು ಕಡೆಗೆ ತಲುಪುತ್ತವೆ. [ಅಥೋ] ಇದರ ನಂತರ [ಇಂದ್ರಾಯ] ಮಾನವ ಮಾತ್ರರಿಗಾಗಿ, [ಸೋಮಮ್] ಎಲ್ಲಾ ಔಷಧೀ ಪದಾರ್ಥಗಳ ಸಾರವನ್ನು [ಪಾತವೇ] ಕುಡಿಯುವ ಸಲುವಾಗಿ ಸಿದ್ಧಗೊಳಿಸಲಾಗುತ್ತದೆ. ಅಂತೆಯೇ [ಉಲೂಖಲ] ಒರಳಿನಲ್ಲಿ ಯವ ಆದಿ ಔಷಧೀ ಪದಾರ್ಥಗಳ ಸಾರವನ್ನು [ಸುನು] ಸಿದ್ಧಗೊಳಿಸಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವಾಗ ವಾಯು ಎಲ್ಲ ವನಸ್ಪತಿಗಳನ್ನೂ, ಔಷಧಿಗಳನ್ನೂ ತನ್ನ ವೇಗದಿಂದ ಸ್ಪರ್ಶಿಸುತ್ತದೆಯೋ ಮತ್ತು ವೃದ್ಧಿಗೊಳಿಸುತ್ತದೆಯೋ ಆಗ ಮಾನವ ಮಾತ್ರರು ಆ ವನಸ್ಪತಿ-ಔಷಧಿಗಳನ್ನು ಒರಳಿನಲ್ಲಿ ಹಾಕಿ ಸಾರವನ್ನು ತೆಗೆದು ಆ ರಸವನ್ನು ಕುಡಿಯುತ್ತಾರೆ. ಈ ವಾಯುವಿನ ವಿನಾ ಯಾವುದೇ ಪದಾರ್ಥದ ವೃದ್ಧಿ ಅಥವಾ ಪುಷ್ಟಿಯಾಗುವ ಸಂಭವವಿರುವುದಿಲ್ಲ.

ಪುನಃ ಅವುಗಳಿಂದ ಏನೇನನ್ನು ಸಿದ್ಧಪಡಿಸಬಹುದು?

ಆಯಜೀ ವಾಜಸಾತಮಾ ತಾ ಹ್ಯುಗ್ಚಾ ವಿಜರ್ಭೃತಃ । ಹರೀ ಇವಾಂಧಾಂಸಿ ಬಪ್ಸತಾ॥೭॥

ಪದಾರ್ಥ:- [ಆಯಜೀ] ಯಾರು ಉತ್ತಮ ಪ್ರಕಾರದಲ್ಲಿ ಪದಾರ್ಥಗಳನ್ನು ಪಡೆದುಕೊಳ್ಳುತ್ತಾರೋ [ವಾಜಸಾತಮಾ] ಅವರು ಸಂಗ್ರಾಮಗಳಲ್ಲಿ ವಿಜಯಿಗಳಾಗುತ್ತಾರೆ. [ತಾ] ಅಂತಹ ಸ್ತ್ರೀ ಪುರುಷರು [ಅಂಧಾಂಸಿ] ಅನ್ನಾದಿ ಆಹಾರವನ್ನು [ಬಪ್ಸತಾ] ಸೇವಿಸುತ್ತಾ [ಹರೀ ಇವ] ಅಶ್ವಗಳಿಗೆ ಸಮಾನವಾಗಿ [ಈ ಉಚ್ಚ] ಯಾವುದು ಅತ್ಯಂತ ಉತ್ತಮ ಕರ್ಮವಿದೆಯೋ ಅದನ್ನು [ವಿಜರ್ಭೃತಃ] ವಿವಿಧ ರೀತಿಯಲ್ಲಿ ಪ್ರಾಪ್ತಿಸಿಕೊಳ್ಳುತ್ತಾರೆ,

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಆಹಾರವನ್ನು ಸೇವಿಸುವ ಅಶ್ವವು ರಥ ಇತ್ಯಾದಿಗಳನ್ನು ಎಳೆದೊಯ್ಯುತ್ತದೋ ಅಂತೆಯೇ ಸ್ತ್ರೀ ಪುರುಷರು ಒನಕೆ ಹಾಗೂ ಒರಳುಗಳ ಮೂಲಕ ಪದಾರ್ಥಗಳನ್ನು ಬೇರ್ಪಡಿಸುವಂತಹ ಅನೇಕ ಕಾರ್ಯಗಳನ್ನು ಪ್ರಾಪ್ತಿಸಿಕೊಳ್ಳುತ್ತಾರೆ.

ಪುನಃ ಅವು ಹೇಗೆ ಮಾಡಬೇಕು ಎಂಬ ವಿಷಯವನ್ನು ತಿಳಿಸಲಾಗುತ್ತದೆ

ತಾ ನೋ ಅದ್ಯ ವನಸ್ಪತೀ ಋಷ್ವಾವೃಷ್ವೇಭಿಃ ಸೋತೃಭಿಃ ।
ಇಂದ್ರಾಯ ಮಧುಮತ್ ಸುತಮ್ ॥೮॥

ಪದಾರ್ಥ:- ಯಾರು [ಸೋತೃಭಿಃ] ರಸವನ್ನು ತೆಗೆಯುವಲ್ಲಿ ಚತುರರೂ [ಋಷ್ವೇಭಿಃ] ಉತ್ತಮ ವಿದ್ವಾಂಸರೂ [ಋಷ್ವಾ] ಸ್ಥೂಲಕಾಯರೂ ಆಗಿದ್ದು [ವನಸ್ಪತೀ] ಮರದ ಒರಳು-ಒನಕೆಗಳನ್ನು ಸಿದ್ಧ ಮಾಡಿದ್ದಾರೋ ಅವರು [ನಃ] ನಮ್ಮ [ಇಂದ್ರಾಯ] ಐಶ್ವರ್ಯವನ್ನು ಪಡೆದುಕೊಳ್ಳುವ ಕಾರ್ಯಕ್ಕಾಗಿ [ಅದ್ಯ] ಇಂದು [ಮಧುಮತ್] ಮಧುರ ಆದಿ ಪ್ರಶಂಸನೀಯ ಗುಣಗಳುಳ್ಳ ಪದಾರ್ಥಗಳನ್ನು [ಸುತಮ್] ಸಿದ್ಧಗೊಳಿಸಲು ಕಾರಣಕರ್ತರಾಗಿದ್ದಾರೆ. [ತಾ] ಅವರು ಎಲ್ಲರಿಗೂ ಅಭ್ಯಾಸ ಮಾಡಿಸಲು ಯೋಗ್ಯರಾಗಿದ್ದಾರೆ.

ಭಾವಾರ್ಥ:- ಹೇಗೆ ಕಲ್ಲಿನ ಒರಳು ಒನಕೆಗಳು ಇರುತ್ತವೋ ಹಾಗೆಯೇ ಮರದ, ಕಬ್ಬಿಣದ, ಹಿತ್ತಾಳೆಯ, ಬೆಳ್ಳಿಯ, ಚಿನ್ನದ ಹಾಗೂ ಇತರೇ ಪದಾರ್ಥಗಳಿಂದಲೂ ಅವುಗಳನ್ನು ತಯಾರಿಸಲಾಗುತ್ತದೆ. ಆ ಉತ್ತಮ ಒರಳು ಮತ್ತು ಒನಕೆಗಳಿಂದ ಮಾನವನು ಔಷಧಿ ಆದಿಗಳಿಂದ ರಸವನ್ನು ತೆಗೆಯುವ ಕಾರ್ಯವನ್ನು ಮಾಡಬೇಕು.

ಪುನಃ ಅವುಗಳಿಂದ ಏನೇನನ್ನು ಸಿದ್ಧಗೊಳಿಸಲಾಗುತ್ತದೆ ಎಂಬುದನ್ನು ಹೇಳಲಾಗಿದೆ.

ಉಚ್ಛಿಷ್ಟಂ ಚಮ್ವೋರ್ಭರ ಸೋಮಂ ಪವಿತ್ರ ಆ ಸೃಜ । ನಿ ಧೇಹಿ ಗೋರಧಿ ತ್ವಚಿ ॥೯॥

ಪದಾರ್ಥ:- ಹೇ ವಿದ್ವಾಂಸರೇ! ತಾವು [ಚಂವ್ವೋಃ] ಕಾಲಾಳುಗಳು, ಅಶ್ವ ಇತ್ಯಾದಿಗಳ ಮೇಲೆ ಸವಾರಿ ಮಾಡುವ ಸೇನೆಗಳಿಗೆ ಸಮಾನರೂ, [ಶಿಷ್ಟಮ್] ಶಿಕ್ಷಣವನ್ನು ಪಡೆಯಲು ಯೋಗ್ಯರಾದವರೂ [ಸೋಮಮ್] ಸರ್ವರೋಗ ನಿವಾರಕ, ಬಲ, ಪುಷ್ಟಿ ಮತ್ತು ಬುದ್ಧಿಯನ್ನು ವರ್ಧಿಸುವ ಔಷಧಿಗಳ ರಸವನ್ನು [ಉತ್ ಭರ] ಉತ್ತಮ ರೀತಿಯಲ್ಲಿ ಪಡೆದುಕೊಂಡು ಅದರಿಂದ ಎರಡೂ ಸೇನೆಗಳನ್ನು [ಪವಿತ್ರೇ ಆಸೃಜ] ಉತ್ತಮವಾಗಿ ಸಜ್ಜುಗೊಳಿಸಿ [ಗೋಃ ಅಧಿ] ಪೃಥಿವಿಯ ಮೇಲೆ ಎಂದರೆ [ತ್ವಚಿನಿಧೇಹಿ] ಪೃಥಿವಿಯಲ್ಲಿ ಸೇನೆಗಳನ್ನು ಸ್ಥಾಪಿಸಿರಿ.

ಭಾವಾರ್ಥ:- ಎರಡು ಪ್ರಕಾರದ ಸೇನೆಗಳನ್ನು ಇರಿಸಿಕೊಳ್ಳುವುದು ರಾಜಪುರುಷರ ಕರ್ತವ್ಯವಾಗಿದೆ. ಒಂದು ಕುದುರೆ ಸವಾರರದು. ಇನ್ನೊಂದು ಕಾಲಾಳುಗಳದು. ಅವರಿಗೆ ಉತ್ತಮ ರಸ ಹಾಗೂ ಶಸ್ತ್ರವೇ ಮೊದಲಾದ ಸಾಮಗ್ರಿಗಳನ್ನು ಒಟ್ಟು ಮಾಡಿ ಉತ್ತಮ ಶಿಕ್ಷಣ ಹಾಗೂ ಓಷಧಿಯನ್ನು ನೀಡಿ ಶುದ್ಧ ಬಲಯುಕ್ತ ಹಾಗೂ ನಿರೋಗಿಯನ್ನಾಗಿಸಿ ಪೃಥ್ವಿಯ ಮೇಲೆ ಚಕ್ರವರ್ತಿ ಸಾಮ್ರಾಜ್ಯವನ್ನು ಸ್ಥಾಪಿಸಬೇಕು.

೨೭ನೇ ಸೂಕ್ತದಿಂದ ಅಗ್ನಿ ಮತ್ತು ವಿದ್ವಾಂಸರ ಯಾವ ಯಾವ ಗುಣಗಳನ್ನು ಹೇಳಲಾಗಿದೆಯೋ ಅವು ಮುಸಲ ಮತ್ತು ಉಲೂಖಲ ಮೊದಲಾದ ಸಾಧನಗಳನ್ನು ಸ್ವೀಕರಿಸಿ ಓಷಧ್ಯಾದಿ ಪದಾರ್ಥಗಳಿಂದ ಜಗತ್ತಿನ ಪದಾರ್ಥಗಳಿಂದ ಅನೇಕ ಪ್ರಕಾರದ ಉತ್ತಮೋತ್ತಮ ಪದಾರ್ಥಗಳನ್ನು ಉತ್ಪನ್ನ ಮಾಡಬೇಕು. ಈ ಅರ್ಥವನ್ನು ಈ ಸೂಕ್ತದಲ್ಲಿ ಸಂಪಾದಿಸುವುದರಿಂದ ೨೭ನೆಯ ಸೂಕ್ತದೊಂದಿಗೆ ೨೮ ನೇ ಸೂಕ್ತದ ಸಂಗತಿಕರಣ ಆಗುತ್ತದೆ ಎಂಬುದನ್ನು ಗಮನಿಸಬೇಕು.

ಇಪ್ಪತ್ತೆಂಟನೆಯ ಸೂಕ್ತ ಸಮಾಪ್ತ

ಸೂಕ್ತ ೨೯

ಮಂತ್ರಸಂಖ್ಯೆ ೭ । ಋಷಿಃ - ಅಜೀಗರ್ತಿಃ ಶುನಶೇಫಃ ಸ ಕೃತ್ರಿಮೋ ವೈಶ್ವಾಮಿತ್ರೋ ದೇವರಾತಃ । ದೇವತಾ - ಇಂದ್ರಃ ।

ಛಂದಃ - ಪಂಕ್ತಿಃ । ಸ್ವರಃ-ಪಂಚಮಃ.

ಈ ಮಂತ್ರದಲ್ಲಿ ಇಂದ್ರ ಶಬ್ದದಿಂದ ನ್ಯಾಯಾಧೀಶನ ಗುಣಗಳನ್ನು ಪ್ರಕಾಶಪಡಿಸಲಾಗುತ್ತದೆ.

ಯಚ್ಚಿದ್ಧಿ ಸತ್ಯ ಸೋಮಪಾ ಅನಾಶಸ್ತಾ ಇವ ಸ್ಮಸಿ । ಆ ತೂ ನ ಇಂದ್ರ ಶಂಸಯ
ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥೧॥

ಪದಾರ್ಥ:- ಹೇ [ಸೋಮಪಾಃ] ಉತ್ತಮ ಪದಾರ್ಥಗಳನ್ನು ರಕ್ಷಿಸುವ [ತುವೀಮಘ] ವಿವಿಧ ರೀತಿಯಲ್ಲಿ ಪ್ರಶಂಸನೆಗೆ ಪಾತ್ರನಾದವನು, ಧನವಂತನು [ಸತ್ಯ] ಅವಿನಾಶಿ ಸ್ವರೂಪನು [ಇಂದ್ರ] ಉತ್ತಮ ಐಶ್ವರ್ಯವಂತನಾದ ನ್ಯಾಯಾಧೀಶನೇ! ನೀನು [ಯಚ್ಚಿತ್] ನಾವು ಯಾವಾಗಲೂ [ಅನಾಶಸ್ತಾ ಇವ ಸ್ಮಸಿ] ಪ್ರಶಂಸನೀಯವಲ್ಲದ ಸ್ವಭಾವ ಹಾಗೂ ಸಾಮರ್ಥ್ಯವುಳ್ಳವರಾಗಿದ್ದೇವೆ. [ತು] ಆದ್ದರಿಂದ ನೀನು [ನಃ] ನಮಗೆ [ಸಹಸ್ರೇಷು] ಅಸಂಖ್ಯಾತ [ಶುಭ್ರಿಷು] ಉತ್ತಮ ಸುಖವನ್ನು ನೀಡುವ [ಗೋಷು] ಪೃಥಿವೀ, ಉತ್ತಮ ಜ್ಞಾನೇಂದ್ರಿಯ, ಗೋ ಇತ್ಯಾದಿ ಪಶುಗಳನ್ನು [ಅಶ್ವೇಷು ಹಿ] ಅಶ್ವ ಆದಿಗಳನ್ನು ನೀಡಿ [ಆಶಂಸಯ] ಪ್ರಶಂಸನೀಯರನ್ನಾಗಿ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ನಾವು ಆಲಸ್ಯದಿಂದ ಕೀರ್ತಿರಹಿತ ಮನುಷ್ಯರಾಗಿದ್ದೇವೆ. ಈ ನ್ಯಾಯಾಧೀಶರು ನಮ್ಮನ್ನು ಪ್ರಶಂಸನೀಯರನ್ನಾಗಿಯೂ, ಪುರುಷಾರ್ಥಿಗಳನ್ನಾಗಿಯೂ, ಉತ್ತಮ ಗುಣವಂತರನ್ನಾಗಿಯೂ ಮಾಡಲಿ. ಆಗ ನಾವು ಪೃಥಿವೀ ಆದಿ ರಾಜ್ಯವನ್ನು ಮತ್ತು ಉತ್ತಮ ಗಜ, ಅಶ್ವ, ಗೋವು, ಎತ್ತುಗಳಾದಿ ಪಶುಗಳನ್ನು ಹೊಂದಿ ಅವುಗಳ ಪಾಲನೆ-ಪೋಷಣೆ ಮಾಡಿ ಅವುಗಳನ್ನು ವೃದ್ಧಿಗೊಳಿಸಿ ಅವುಗಳ ಉಪಕಾರದಿಂದ ಪ್ರಶಂಸನೀಯರಾಗೋಣ.

ಪುನಃ ಆ ಐಶ್ವರ್ಯಯುಕ್ತ ಸಭಾಧ್ಯಕ್ಷನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗುತ್ತದೆ.

ಶಿಪ್ರಿನ್ ವಾಜಾನಾಂ ಪತೇ ಶಚೀವಸ್ತವ ದಂಸನಾ । ಆ ತೂ ನ ಇಂದ್ರ ಶಂಸಯ

ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥೨॥

ಪದಾರ್ಥ:- ಹೇ [ಶಿಪ್ರಿನ್] ಸ್ವೀಕರಿಸಲು ಯೋಗ್ಯನಾದ, ಪ್ರಶಂಸನೀಯನಾದ ಐಹಿಕ ಹಾಗೂ ಪಾರಮಾರ್ಥಿಕ ಸುಖಗಳನ್ನು ನೀಡುವಂತಹ [ಶಚೀವಃ] ವಿವಿಧ ರೀತಿಯ ಪ್ರಜ್ಞೆಯನ್ನು ಹೊಂದಿರುವ ಅಥವಾ ವಿವಿಧ ಕರ್ಮಯುಕ್ತ [ವಾಜಾನಾಮ್] ದೊಡ್ಡ ದೊಡ್ಡ ಯುದ್ಧಗಳನ್ನು [ಪತೇ] ನಿರ್ವಹಿಸಿರುವ ಮತ್ತು [ತುವೀಮಘ] ವಿವಿಧ ರೀತಿಯಲ್ಲಿ ಪ್ರಶಂಸೆಗೆ ಪಾತ್ರನಾದ ವಿದ್ಯಾಧನಯುಕ್ತ [ಇಂದ್ರ] ಪರಮೈಶ್ವರ್ಯಯುಕ್ತ ಸಭಾಧ್ಯಕ್ಷನೇ! [ತವ] ಯಾವ ನಿನ್ನ [ದಂಸನಾ] ವೇದವಿದ್ಯಾಯುಕ್ತ ವಾಣಿಯಿಂದ ಕೂಡಿದ ವಿದ್ಯೆಯಿದೆಯೋ ಅದರಿಂದ ನೀವು ನಮಗೆ [ಸಹಸ್ರೇಷು] ಸಹಸ್ರ ರೀತಿಯಲ್ಲಿ [ಶುಭ್ರಿಷು] ಉತ್ತಮ ವಿಮಾನ ಆದಿ ವಾಹನಗಳ ಉತ್ತಮ ಸಾಧನೆಯಿಂದ [ಗೋಷು] ಸತ್ಯಭಾಷಣ ಮತ್ತು ಶಾಸ್ತ್ರ ಶಿಕ್ಷಣವನ್ನು ನೀಡಿ ವಾಣಿ ಆದಿ ಇಂದ್ರಿಯಗಳನ್ನು [ಅಶ್ವೇಷು] ಅಗ್ನಿಯಂತೆ ತೇಜೋಯುಕ್ತರನ್ನಾಗಿ ಅಶ್ವದಂತೆ ತೀವ್ರಗಾಮಿಗಳನ್ನಾಗಿ [ನಃ] ನಮ್ಮನ್ನು [ಆಶಂಸಯ] ಉತ್ತಮ ಗುಣವಂತರಾಗುವಂತೆ ಮಾಡು.

ಭಾವಾರ್ಥ:- ಹೇ ಭಗವನ್! ಹೇಗೆ ನ್ಯಾಯಾಧೀಶನು ಅತ್ಯುತ್ತಮ ರಾಜ್ಯ ಆದಿಗಳನ್ನು ಸಂಪಾದಿಸುತ್ತಾನೋ ಹಾಗೆಯೇ ಕೃಪೆಮಾಡಿ ನಾವೂ ಸಹ ಪೃಥಿವಿಯಲ್ಲಿ ರಾಜ್ಯವನ್ನು ಗಳಿಸುವಲ್ಲಿ, ಸತ್ಯವನ್ನು ನುಡಿಯುವಲ್ಲಿ ಶಿಲ್ಪವಿದ್ಯೆಯಂತಹ ವ್ಯವಹಾರವನ್ನು ಕೈಕೊಳ್ಳುವಂತಹ ಬುದ್ಧಿವಂತಿಕೆಯನ್ನು ಪಡೆದುಕೊಳ್ಳುವಂತೆ ಮಾಡು.

ಪುನಃ ಅವನು ಏನೇನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ನಿ ಷ್ವಾಪಯಾ ಮಿಥೂದೃಶಾ ಸಸ್ತಾಮಬುಧ್ಯಮಾನೇ । ಆ ತೂ ನ ಇಂದ್ರ ಶಂಸಯ

ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥೩॥

ಪದಾರ್ಥ:- ಹೇ [ತುವೀಮಘ] ವಿವಿಧ ರೀತಿಯಲ್ಲಿ ಧನವನ್ನು ಸಂಗ್ರಹಿಸುವ [ಇಂದ್ರ] ಅವಿದ್ಯಾರೂಪೀ ನಿದ್ರೆ ಮತ್ತು ದೋಷಗಳನ್ನು ದೂರಮಾಡುವ ವಿದ್ವಾಂಸರೇ! [ಮಿಥೂದೃಶಾ] ಇಂದ್ರಿಯ ಸುಖಗಳಲ್ಲಿ ಆಸಕ್ತಿ ಹಾಗೂ ಅಜಾಗರೂಕತೆಯಿಂದಿದ್ದು ಹಿಂಸೆಯನ್ನು ಪ್ರದರ್ಶಿಸುವವನ [ಅಬುಧ್ಯಮಾನೇ] ಜ್ಞಾನ ಪಡೆದುಕೊಳ್ಳುವಲ್ಲಿ ಶರೀರ ಹಾಗೂ ಮನಸ್ಸಿನ ಆಲಸ್ಯ ಇವುಗಳು [ಸಸ್ತಾಮ್] ನಿದ್ರೆ ಹಾಗೂ ಪುರುಷಾರ್ಥಗಳನ್ನು ನಾಶ ಮಾಡುತ್ತವೆ. ಅವುಗಳನ್ನು ನೀವು [ನಿಷ್ವಾಪಯಾ] ಉತ್ತಮ ರೀತಿಯಲ್ಲಿ ನಿವಾರಣೆ ಮಾಡಿರಿ. [ತು] ಮತ್ತು [ಸಹಸ್ರೇಷು] ಸಹಸ್ರರೀತಿಯಲ್ಲಿ [ಶುಭ್ರಿಷು] ಪ್ರಶಂಸನೀಯ ಗುಣಗಳನ್ನುಳ್ಳ [ಗೋಷು] ಪೃಥಿವೀ ಆದಿ ಪದಾರ್ಥಗಳಲ್ಲಿ ಹಾಗೂ [ಅಶ್ವೇಷು] ಪ್ರತಿಯೊಂದು ವಸ್ತುವಿನಲ್ಲಿಯೂ ಇರತಕ್ಕ ಅಗ್ನಿಯಂತೆ [ನಃ] ನಮ್ಮನ್ನೂ ಸಹ [ಆಶಂಸಯ] ಉತ್ತಮ ಗುಣವಂತರನ್ನಾಗಿ ಮಾಡಿರಿ.

ಭಾವಾರ್ಥ:- ಮನುಷ್ಯರು ತಮ್ಮ ಶರೀರ ಮತ್ತು ಆತ್ಮಗಳ ಆಲಸ್ಯವನ್ನು ದೂರ ಮಾಡಿ ಉತ್ತಮ ಕರ್ಮಗಳಲ್ಲಿ ನಿರತರಾಗಿರುವಂತೆ ಪ್ರಯತ್ನ ಮಾಡಬೇಕು.

ಮನುಷ್ಯರು ಎಂತಹ ವೀರರನ್ನು ಗ್ರಹಣ ಮಾಡಿ ಶತ್ರುನಿವಾರಣೆ ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಸಸಂತು ತ್ಯಾ ಅರಾತಯೋ ಬೋಧಂತು ಶೂರ ರಾತಯಃ । ಆ ತೂ ನ ಇಂದ್ರ ಶಂಸಯ

ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥೪॥

ಪದಾರ್ಥ:- [ತುವೀಮಘ] ವಿದ್ಯಾ, ಸುವರ್ಣ, ಸೇನೆ ಇತ್ಯಾದಿ ಧನದಿಂದ ಕೂಡಿದ [ಶೂರ] ಶತ್ರುವಿನ ಬಲವನ್ನು ನಾಶಗೊಳಿಸುವ ಸೇನಾಪತಿಯೇ! ನಿಮ್ಮ [ಅರಾತಯಃ] ದಾನ ಆದಿ ಧರ್ಮರಹಿತರಾದ ಯಾವ ಶತ್ರುಜನರಿದ್ದಾರೋ ಅವರು [ಸಸಂತು] ನಿದ್ರಾವಶರಾಗಲಿ ಮತ್ತು ಯಾವ [ರಾತಯಃ] ದಾನ ಆದಿ ಧರ್ಮವನ್ನಾಚರಿಸುವ ಕರ್ತೃಗಳಿದ್ದಾರೋ [ತ್ಯಾಃ] ಅವರು [ಬೋಧಂತು] ಜಾಗೃತರಾಗಿ ಶತ್ರು ಮತ್ತು ಮಿತ್ರರನ್ನು ತಿಳಿದುಕೊಳ್ಳಲಿ. [ತು] ಮತ್ತು [ಇಂದ್ರ] ಅತ್ಯುತ್ತಮ ಐಶ್ವರ್ಯಯುಕ್ತ ಸಭಾಧ್ಯಕ್ಷ ಸೇನಾಪತಿ ವೀರಪುರುಷ! [ತೂ] ನೀನು [ಸಹಸ್ರೇಷು] ಸಹಸ್ರ ರೀತಿಯಲ್ಲಿ [ಶುಭ್ರಿಷು] ಉತ್ತಮ ಗುಣಗಳನ್ನು [ಗೋಷು] ಗೋವು ಅಥವಾ [ಅಶ್ವೇಷು] ಅಶ್ವ, ಆನೆ, ಸುವರ್ಣ ಆದಿ ಧನದಲ್ಲಿ [ನಃ] ನಮ್ಮನ್ನು [ಆಶಂಸಯ] ಶತ್ರುಗಳ ವಿಜಯದೊಡನೆ ಪ್ರಶಂಸಿತರನ್ನಾಗಿ ಮಾಡು.

ಭಾವಾರ್ಥ:- ನಮ್ಮ ಸೇನೆಯಲ್ಲಿ ಶೂರ-ವೀರರೇ ಆದ ಮನುಷ್ಯರನ್ನು ಇಟ್ಟುಕೊಂಡು ನಾವು ಆನಂದಿತರಾಗಿರಬೇಕಾಗಿದೆ. ಭಯಕ್ಕೆ ಕಾರಣರಾದ ದುಷ್ಟ ಮತ್ತು ಶತ್ರುಜನರು ನಿದ್ರೆಯಲ್ಲಿ ಹೇಗೆ ಶಾಂತರಾಗಿರುತ್ತಾರೋ ಹಾಗೆಯೇ ನಾವು ನಿಷ್ಕಂಟರಾಗಿ ಅಥವಾ ನಿಸ್ಸಂಕೋಚವಾಗಿ ಚಕ್ರವರ್ತಿರಾಜ್ಯವನ್ನು ಪ್ರಾಪ್ತಿಸಿಕೊಳ್ಳೋಣ.

ಆ ವೀರನು ಹೇಗಿರುತ್ತಾನೆ ಎಂಬುದನ್ನು ಇಲ್ಲಿ ಹೇಳಲಾಗುತ್ತದೆ.

ಸಮಿಂದ್ರ ಗರ್ದಭಂ ಮೃಣ ನುವಂತಂ ಪಾಪಯಾಮುಯಾ । ಆ ತೂ ನ ಇಂದ್ರ

ಶಂಸಯ ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥೫॥

ಪದಾರ್ಥ:- ಹೇ [ಇಂದ್ರ] ಸಭಾಧ್ಯಕ್ಷ! ನೀನು [ಗರ್ದಭಂ] ಗಾರ್ದಭಕ್ಕೆ ಸಮಾನನಾಗಿ [ಅಮುಯಾ] ನಮ್ಮ ಹಿಂದೆ [ಪಾಪಯಾ] ಪಾಪರೂಪೀ ಮಿಥ್ಯಾಭಾಷಣದಿಂದ ಸಾಕ್ಷಿ ಮತ್ತು ಭಾಷಣಾದಿ ಕಪಟ ಮಾತುಗಳಿಂದ ನಮ್ಮ [ನುವಂತಂ] ಸ್ತುತಿ ಮಾಡುತ್ತಾ ಶತ್ರುಗಳಿಗೆ [ಸಂಮೃಣ] ಸರಿಯಾದ ದಂಡವನ್ನು ನೀಡು. [ತು] ಮತ್ತು [ತುವೀಮಘ] ಹೇ ಹೆಚ್ಚು ವಿದ್ಯಾವಂತನಾದ ಅಥವಾ ಧರ್ಮರೂಪೀ ಧನವಂತನಾದ [ಇಂದ್ರ] ನ್ಯಾಯಾಧೀಶನೇ! ನೀನು [ಸಹಸ್ರೇಷು] ಸಹಸ್ರರೀತಿಯಲ್ಲಿ [ಶುಭ್ರಿಷು] ಶುದ್ಧಭಾವನೆ ಅಥವಾ ಧರ್ಮಯುಕ್ತ ವ್ಯವಹಾರದಿಂದ ಕೂಡಿದ್ದು [ಗೋಷು] ಪೃಥಿವೀ ಆದಿ ಪದಾರ್ಥಗಳ ಅಥವಾ [ಅಶ್ವೇಷು] ಅಶ್ವ, ಆನೆ ಆದಿ ಪಶುಗಳನ್ನು ಪಡೆದುಕೊಳ್ಳಲೋಸುಗ [ನಃ] ನಮ್ಮನ್ನು [ಆಶಂಸಯ] ಉತ್ತಮ ವ್ಯವಹಾರ ನಡೆಸುವಂತಹ ಅಪರಾಧರಹಿತರನ್ನಾಗಿ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ಸಭಾಧ್ಯಕ್ಷನು ನ್ಯಾಯಯುತವಾಗಿ ತನ್ನ ಸಿಂಹಾಸನದ ಮೇಲೆ ಕುಳಿತು, ಗಾರ್ದಭದಂತೆ ಒರಟಾಗಿ ಹಾಗೂ ಕೆಟ್ಟ ಮಾತುಗಳಿಂದ ಬೇರೆಯವರನ್ನು ನಿಂದಿಸುವ ಜನರಿಗೆ ದಂಡ ಹಾಕುತ್ತಾನೋ ಮತ್ತು ಯಾರು ಸತ್ಯವಾದಿಗಳೂ, ಧಾರ್ಮಿಕರೂ ಆದವರನ್ನು ಸತ್ಕರಿಸುವನೋ, ಯಾರು ಅನ್ಯಾಯದಿಂದ ಇತರರ ಪದಾರ್ಥಗಳನ್ನು ತೆಗೆದುಕೊಂಡಿದ್ದಾರೋ ಆ ಪದಾರ್ಥಗಳನ್ನು ದಂಡ ಹಾಕುವ ಮೂಲಕ ಅವರವರಿಗೆ ಕೊಡಿಸುತ್ತಾನೋ ಅಂತಹ ನ್ಯಾಯ ನಿರ್ಣಯ ಮಾಡುವ ಧರ್ಮಾತ್ಮರ ಸತ್ಕಾರವನ್ನು ನಾವು ನಿರಂತರ ಮಾಡುತ್ತಿರೋಣ.

ಈಗ ಅಶುದ್ಧ ವಾಯುವಿನ ನಿವಾರಣೆ ಮಾಡುವ ವಿಧಾನವನ್ನು ತಿಳಿಸಲಾಗುತ್ತದೆ.

ಪತಾತಿ ಕುಂಡೃಣಾಚ್ಯಾ ದೂರಂ ವಾತೋ ವನಾದಧಿ । ಆ ತೂ ನ ಇಂದ್ರ ಶಂಸಯ
ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥೬॥

ಪದಾರ್ಥ:– ಹೇ [ತುವೀಮಘ] ವಿವಿಧ ರೀತಿಯಲ್ಲಿ ಧನವನ್ನು ಸಂಗ್ರಹಿಸುವ [ಇಂದ್ರ] ಸರ್ವೋತ್ಕೃಷ್ಟ ವಿದ್ವಾಂಸರೇ! ಹೇಗೆ [ವಾತಃ] ವಾಯು [ಕುಂಡೃಣಾಚ್ಯಾ] ವಕ್ರಗತಿಯಲ್ಲಿ ಬೀಸುತ್ತಾ [ವನಾತ್] ವಾತಾವರಣದಲ್ಲಿನ ಸೂರ್ಯ ಕಿರಣಗಳ ಮೂಲಕ [ಅಧಿ ಪತಾತಿ] ಮೇಲೆ ಮತ್ತು ಕೆಳಗೆ ಹಾದುಹೋಗಿ ಆನಂದವನ್ನುಂಟುಮಾಡುವುದೋ ಹಾಗೆಯೇ [ತು] ಮತ್ತೆ ಮತ್ತೆ [ಸಹಸ್ರೇಷು] ಬಹಳಷ್ಟು ಮಟ್ಟಿಗೆ [ಅಶ್ವೇಷು] ವೇಗಾದಿ ಗುಣಗಳುಳ್ಳ ಕುದುರೆ ಇತ್ಯಾದಿ [ಗೋಷು] ಪೃಥಿವಿ, ಇಂದ್ರಿಯ, ಕಿರಣ ಮತ್ತು ಚತುಷ್ಪಾದ ಪ್ರಾಣಿಗಳ [ಶುಭ್ರಿಷು] ಶುದ್ಧಭಾವನೆಯಿಂದ ಪ್ರಾಣಿ ಮಾತ್ರರೆಲ್ಲರನ್ನೂ ಸುಶೋಭಿತರನ್ನಾಗಿ ಮಾಡಲಾಗುತ್ತದೋ ಹಾಗೆಯೇ [ನಃ] ನಮ್ಮನ್ನು [ಆಶಂಸಯ] ಪ್ರಶಂಸನೀಯರನ್ನಾಗಿ ಮಾಡಿ.

ಭಾವಾರ್ಥ:– ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ವಾಯು ಎಲ್ಲ ಕಡೆ ಹರಡಿ ಅಗ್ನಿ ಆದಿ ಪದಾರ್ಥಗಳೊಡನೆ ಸೇರಿ ಅಧಿಕ ವೇಗದಿಂದ ಕ್ರಮಿಸುತ್ತದೋ, ಹಾಗೆಯೇ ಬಹಳಷ್ಟು ಐಶ್ವರ್ಯವನ್ನು ಪಡೆದು ಹಾಗೂ ಪಶುವೃಕ್ಷಾದಿ ಪದಾರ್ಥಗಳ ಬಗ್ಗೆ ವ್ಯವಹರಿಸುವುದು ಹಾಗೂ ಅವುಗಳನ್ನು ವೃದ್ಧಿಗೊಳಿಸುವುದು ಮತ್ತು ಸಮಸ್ತವಾಣಿಯ ವ್ಯವಹಾರಕ್ಕೆ ಕಾರಣವಾಗುವುದೆಂದು ಮನುಷ್ಯರು ತಿಳಿಯಬೇಕು.

ಪುನಃ ಅವನು ಏನು ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಸರ್ವಂ ಪರಿಕ್ರೋಶಂ ಜಹಿ ಜಂಭಯಾ ಕೃಕದಾಶ್ವಮ್ । ಆ ತೂ ನ ಇಂದ್ರ ಶಂಸಯ
ಗೋಷ್ವಶ್ವೇಷು ಶುಭ್ರಿಷು ಸಹಸ್ರೇಷು ತುವೀಮಘ ॥೭॥

ಪದಾರ್ಥ:– ಹೇ [ತುವೀಮಘ] ಅನಂತಬಲರೂಪೀ ಧನಯುಕ್ತ [ಇಂದ್ರ] ಶತ್ರುಗಳೆಲ್ಲರನ್ನೂ ವಿನಾಶಗೊಳಿಸುವ ಸೇನಾಧ್ಯಕ್ಷ! ನೀನು, ಯಾವ [ನಃ] ನಮ್ಮ [ಸಹಸ್ರೇಷು] ಅನೇಕ [ಶುಭ್ರಿಷು] ಶುದ್ಧಕರ್ಮಯುಕ್ತ ವ್ಯವಹಾರಗಳನ್ನು [ಗೋಷು] ಪೃಥಿವಿಯಲ್ಲಿನ ರಾಜ್ಯ ಇತ್ಯಾದಿ ವ್ಯವಹಾರಗಳನ್ನು ಹಾಗೂ [ಅಶ್ವೇಷು] ಅಶ್ವ ಆದಿ ಸೇನೆಯ ವಿಭಾಗದಲ್ಲಿ ವಿನಾಶಗೊಳಿಸುವಂತಹ ಕಾರ್ಯವನ್ನು ಮಾಡುತ್ತಿದ್ದಾರೋ ಅವರ [ಪರಿಕ್ರೋಶಮ್] ಎಲ್ಲ ರೀತಿಯಿಂದಲೂ ದುಃಖ ನೀಡುವ ವ್ಯವಹಾರವನ್ನು [ಜಹಿ] ನಾಶಗೊಳಿಸು. ಮತ್ತು [ನಃ] ನಮ್ಮ ಶತ್ರು ಯಾರಿದ್ದಾರೋ [ಕೃಕದಾಶ್ವಮ್] ಅಂತಹ ದುಃಖನೀಡುವವರನ್ನೂ ಸಹ [ಜಂಭಯ] ನಾಶಗೊಳಿಸು [ತು] ಮತ್ತು ಇದೇ ರೀತಿಯಲ್ಲಿ [ನಃ] ನಮ್ಮನ್ನೂ [ಆಶಂಸಯ] ಶತ್ರುಗಳಿಂದ ಮುಕ್ತಗೊಳಿಸಿ ಸುಖಯುಕ್ತರನ್ನಾಗಿ ಮಾಡು.

ಭಾವಾರ್ಥ:– ಹೇ ಜಗದೀಶ್ವರ ಪರಮಾತ್ಮ! ನಮ್ಮಲ್ಲಿ ಯಾರು ದುಷ್ಟ ವ್ಯವಹಾರವನ್ನು ಮಾಡುವವರಿದ್ದಾರೋ ಮತ್ತು ಯಾರು ನಮ್ಮ ಶತ್ರುಗಳಿದ್ದಾರೋ ಅವರನ್ನು ನಮ್ಮಿಂದ ದೂರ ಮಾಡಿ ನಮಗೆ ಸಕಲ ಐಶ್ವರ್ಯವನ್ನು ನೀಡಿ ಎಂದು ಮನುಷ್ಯರು ಪರಮಾತ್ಮನನ್ನು ಪ್ರಾರ್ಥಿಸಬೇಕು.

ಈ ಸೂಕ್ತದೊಂದಿಗೆ ೨೮ನೆಯ ಸೂಕ್ತದ ಸಂಗತಿ ಆಗುತ್ತದೆ ಎಂಬುದನ್ನು ಗಮನಿಸಬೇಕು.

ಇಪ್ಪತ್ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೩೦

ಮಂತ್ರಸಂಖ್ಯೆ ೨೨ । ಋಷಿಃ - ಅಜೀಗರ್ತಿಃ ಶುನಃಶೇಪಃ ಸ ಕೃತ್ರಿಮೋ ವೈಶ್ವಾಮಿತ್ರೋ ದೇವರಾತಃ । ದೇವತಾ - ಇಂದ್ರಃ, ೧೬-೧೯ ಅಶ್ವಿನೌ, ೨೦-೨೨ ಉಷಾಃ । ಛಂದಃ - ೧-೧೦, ೧೨-೧೫, ೧೭-೨೨ ಗಾಯತ್ರೀ, ೧೧ ಪಾದನಿಚೃದ್ಗಾಯತ್ರೀ, ೧೬ ತ್ರಿಷ್ಟುಪ್ । ಸ್ವರಃ-೧-೨೨ ಷಡ್ಜಃ, ೧೬ ಧೈವತಃ ।

ಈ ಸೂಕ್ತದ ಮೊದಲ ಮಂತ್ರದಲ್ಲಿ ಇಂದ್ರ ಶಬ್ದದಿಂದ ಶೂರ-ವೀರರ ಗುಣಗಳ ಪ್ರಕಾಶವನ್ನು ಬೀರಲಾಗುತ್ತದೆ

ಆ ವ ಇಂದ್ರಂ ಕ್ರಿವಿಂ ಯಥಾ ವಾಜಯಂತಃ ಶತಕ್ರತುಮ್ । ಮಂಹಿಷ್ಠಂ ಸಿಂಚ ಇಂದುಭಿಃ ॥೧॥

ಪದಾರ್ಥ:– ಹೇ ಸಭಾಧ್ಯಕ್ಷ! [ಯಥಾ] ಬೇಸಾಯ ಮಾಡುವ ರೈತನು ಹೇಗೆ [ಕ್ರಿವಿಂ] ಬಾವಿಯನ್ನು ತೋಡಿ ನೀರನ್ನು ಪಡೆದು ಆ ನೀರಿನಿಂದ ಜಮೀನಿಗೆ [ಸಿಂಚ] ನೀರುಣಿಸುತ್ತಾನೋ ಮತ್ತು [ವಾಜಯಂತಃ] ವೇಗಯುಕ್ತವಾಯು [ಇಂದುಭಿಃ] ಹೇಗೆ ನೀರಿನಿಂದ ಕೂಡಿ [ಶತಕ್ರತುಮ್] ಅನೇಕ ಕಾರ್ಯಗಳನ್ನು ನಿರ್ವಹಿಸುತ್ತದೋ ಮತ್ತು [ಮಂಹಿಷ್ಠಂ] ಅತ್ಯಂತ ಮಹತ್ವವುಳ್ಳ [ಇಂದ್ರಮ್] ಸೂರ್ಯನ ಶಾಖವನ್ನು ಹೇಗೆ ಸೆಳೆದುಕೊಳ್ಳುವುದೋ [ಆ ವ] ಅಂತೆಯೇ ನೀನೂ ಸಹ ಪ್ರಜೆಗಳನ್ನು ಸುಖದಿಂದಿರುವಂತೆ ಮಾಡು.

ಭಾವಾರ್ಥ:– ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ರೈತನು ಹೇಗೆ ಮೊದಲಿಗೆ ಬಾವಿಯನ್ನು ತೋಡಿ ಅದರ ನೀರನ್ನು ಸ್ನಾನ ಮಾಡಲು, ಕುಡಿಯಲು ಮತ್ತು ಜಮೀನು, ತೋಟ ಇತ್ಯಾದಿಗಳಿಗೆ ನೀರುಣಿಸಿ ಸುಖ ಪಡುತ್ತಾನೋ, ಅಂತೆಯೇ ವಿದ್ವಾಂಸರು ಯಥಾಯೋಗ್ಯ ಕಲಾಯಂತ್ರಗಳನ್ನು ಸ್ಥಾಪಿಸಿ ಅವುಗಳಲ್ಲಿ ವಿದ್ಯುತ್ ರೂಪೀ ಅಗ್ನಿಯನ್ನು ಪ್ರವಿಷ್ಟಗೊಳಿಸಿ ಅವುಗಳೊಳಗೆ ನೀರನ್ನು ಹಾಯಿಸುವ ಮೂಲಕ ಚಾಲನೆಯನ್ನು ನೀಡುವುದರಿಂದ ಅನೇಕ ಕಾರ್ಯಗಳನ್ನು ಮಾಡುವ ಮೂಲಕ ಸುಖವನ್ನು ಪಡೆಯುತ್ತಾರೆ.

ಪುನಃ ಅವರು ಹೇಗಿರುತ್ತಾರೆ

ಶತಂ ವಾ ಯಃ ಶುಚೀನಾಂ ಸಹಸ್ರಂ ವಾ ಸಮಾಶಿರಾಮ್ । ಏದು ನಿಮ್ನಂ ನ ರೀಯತೇ ॥೨॥

ಪದಾರ್ಥ:– ಯಾವ ಶುದ್ಧ ಗುಣಕರ್ಮ ಸ್ವಭಾವಯುಕ್ತ ವಿದ್ವಾಂಸನಿದ್ದಾನೋ ಅವನಿಂದ ಯಾವ ಭೌತಿಕಾಗ್ನಿ ಇದೆಯೋ ಅದು [ನಿಮ್ನಮ್ ನ] ಹೇಗೆ ಕೆಳಸ್ತರಕ್ಕೆ ಹೋಗುತ್ತದೋ ಹಾಗೆ [ಶುಚೀನಾಮ್] ಶುದ್ಧ ಕಲಾಯಂತ್ರ ಅಥವಾ ಪ್ರಕಾಶವನ್ನು ನೀಡುವಂತಹ ಪದಾರ್ಥಗಳು [ಶತಮ್ ವಾ] ನೂರಕ್ಕೆ ನೂರರಷ್ಟು ಅಥವಾ [ಸಮಾಶಿರಾಮ್] ಎಲ್ಲ ರೀತಿಯಿಂದಲೂ ಒಟ್ಟುಗೂಡುತ್ತವೋ ಆ ಪದಾರ್ಥಗಳು [ಸಹಸ್ರಮ್] ಸಾವಿರದಷ್ಟು [ಆ ಇತ್ ಉ] ಗುಣವುಳ್ಳವುಗಳಾಗಿರುತ್ತವೆ ಹಾಗೂ ಉಷ್ಣ ಗುಣವನ್ನೂ ಹೊಂದಿರುತ್ತವೆಂಬುದು [ರೀಯತೇ] ತಿಳಿದುಬರುತ್ತದೆ.

ಭಾವಾರ್ಥ:– ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಕೆಳಸ್ತರಕ್ಕೆ ಹೋಗುವ ನೀರನ್ನು ಮೇಲ್ಸ್ತರಕ್ಕೆ ಹೋಗುವ ಅಗ್ನಿಯನ್ನು ಅದಲು ಬದಲು ಮಾಡಿದಾಗ ಅಥವಾ ಇವೆರಡನ್ನೂ ಸಂಯೋಜಿಸಿದಾಗ ಶಕ್ತಿ ಉತ್ಪನ್ನವಾಗುತ್ತದೆಯೋ ಅಂತೆಯೇ ಸೂರ್ಯ ಮತ್ತು ವಿದ್ಯುತ್ತುಗಳ ಪ್ರಸಿದ್ಧರೂಪವಾಗಿರುವ ಈ ಭೌತಿಕಾಗ್ನಿ ಶಕ್ತಿರೂಪದಲ್ಲಿ ನೂರಾರು ಪದಾರ್ಥಗಳನ್ನು ಶುದ್ಧಿ ಮಾಡುತ್ತದೆ. ಮತ್ತು ಜೀರ್ಣಿಸಲು ಯೋಗ್ಯವಾದ ಪದಾರ್ಥಗಳ ಪೈಕಿ ಸಾವಿರಾರು ಪದಾರ್ಥಗಳನ್ನು ತನ್ನ ಸಾಮರ್ಥ್ಯದಿಂದ ಪಕ್ವ ಮಾಡುತ್ತದೆ.

ಪುನಃ ಅವು ಹೇಗಿರುತ್ತವೆ ಎಂಬುದನ್ನು ತಿಳಿಸಲಾಗುತ್ತದೆ.

ಸಂ ಯನ್ಮದಾಯ ಶುಷ್ಮಿಣ ಏನಾ ಹ್ಯಸ್ಯೋದರೇ । ಸಮುದ್ರೋ ನ ವ್ಯಚೋ ದಧೇ ॥೩॥

ಪದಾರ್ಥ:- ನಾನು [ಹಿ] ನನ್ನ ನಿಶ್ಚಯದಿಂದ [ಮದಾಯ] ಆನಂದ ಮತ್ತು [ಶುಷ್ಮಿಣೇ] ಪ್ರಶಂಸನೀಯ ಬಲ ಮತ್ತು ಶಕ್ತಿಗಳನ್ನು ಯಾವುದರಲ್ಲಿ ತೊಡಗಿಸುತ್ತೇನೋ [ಸಮುದ್ರಃ ಅಸ್ಯ ಉದರೇ ನ] ಹೇಗೆ ಸಮುದ್ರ ಮಧ್ಯದಲ್ಲಿ [ವ್ಯಚಃ] ವಿವಿಧ ವಾಸ್ತವಿಕ ಪದಾರ್ಥಗಳು [ನ] ಸಹಸ್ರಾರು ಗುಣಗಳಿಂದ ಕೂಡಿದ್ದು [ಯತ್] ಯಾವ ಕ್ರಿಯೆಯನ್ನು ಮಾಡುತ್ತವೋ ಆ ಕ್ರಿಯೆಗಳನ್ನು [ಸಂದಧೇ] ಉತ್ತಮ ರೀತಿಯಲ್ಲಿ ಧಾರಣೆ ಮಾಡುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಸಮುದ್ರ ಮಧ್ಯದಲ್ಲಿ ಅನೇಕ ಗುಣಗಳಿಂದ ಕೂಡಿದ ರತ್ನಗಳು ಮತ್ತು ಜೀವ ಜಂತುಗಳು ಹಾಗೂ ಅಗಾಧ ಜಲವಿದೆಯೋ, ಅಂತೆಯೇ ಅಗ್ನಿ ಮತ್ತು ಜಲಗಳ ನಿಕಟ ಸಂಪರ್ಕ ಕಲ್ಪಿಸುವುದರಿಂದ ಬಹುವಿಧ ಉಪಕಾರವನ್ನು ಪಡೆದುಕೊಳ್ಳಬೇಕಾಗಿದೆ.

ಮತ್ತೆ ಅದನ್ನೇ ಹೇಳಲಾಗುತ್ತದೆ

ಅಯಮು ತೇ ಸಮತಸಿ ಕಪೋತ ಇವ ಗರ್ಭಧಿಮ್ । ವಚಸ್ತಚ್ಚಿನ್ನ ಓಹಸೇ ॥೪॥

ಪದಾರ್ಥ:- **[ಅಯಮ್]** ಈ ಇಂದ್ರ ಅಗ್ನಿ ಯಾವುದಿದೆಯೋ ಅದು ಪರಮಾತ್ಮನ ರಚನೆಯಾಗಿದೆ. [ಉ] ಇದು ನಮಗೆ ಗೊತ್ತಿದೆ. ಹೇಗೆ **[ಗರ್ಭಧಿಮ್]** ಗರ್ಭಸ್ಥ ಹೆಣ್ಣು ಪಾರಿವಾಳಕ್ಕೆ **[ಕಪೋತ ಇವ]** ಗಂಡು ಪಾರಿವಾಳ ಪ್ರಾಪ್ತವಾಗುತ್ತದೋ ಹಾಗೆಯೇ [ನಃ] ನಮ್ಮ **[ವಚಃ]** ವಾಣಿ **[ಸಮೋಹಸೇ]** ಉತ್ತಮ ಪ್ರಕಾರದಲ್ಲಿ ದೊರಕುತ್ತದೆ. ಮತ್ತು ಅದೇ ಶಕ್ತಿಯಿಂದ [ನಃ] ನಮಗೆ **[ತತ್‌ಚಿತ್]** ಹಿಂದೆ ತಿಳಿಸಿರುವ ಬಲ ಆದಿ ಗುಣಗಳನ್ನು ವರ್ಧಿಸುವಂತಹ ಆನಂದ **[ಅತಸಿ]** ನಿರಂತರವಾಗಿ ದೊರಕುತ್ತದೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಪಾರಿವಾಳವು ಪ್ರೇಯಸಿ ಪಾರಿವಾಳವನ್ನು ತನ್ನ ವೇಗದಿಂದ ಕೂಡಿಕೊಳ್ಳುತ್ತದೋ ಹಾಗೆಯೇ ಶಿಲ್ಪವಿದ್ಯೆಯಿಂದ ಸಿದ್ಧಗೊಳಿಸಿದ ಅಗ್ನಿಯ ಅನುಕೂಲಕ್ಕನುಗುಣವಾಗಿ ಎಂದರೆ ಯಾವ ರೀತಿ ಇಚ್ಛಿಸಲಾಗುತ್ತದೋ ಅದೇ ರೀತಿ ಪ್ರಾಪ್ತವಾಗುತ್ತದೆ. ಮಾನವ ಈ ವಿದ್ಯೆಯನ್ನು ಉಪದೇಶದ ಮೂಲಕ ಅಥವಾ ಕೇಳಿಸಿಕೊಳ್ಳುವ ಮೂಲಕ ಹೊಂದಬಹುದಾಗಿದೆ.

ಈಗ ಇಂದ್ರಶಬ್ದದಿಂದ ಸಭೆ ಮತ್ತು ಸೇನೆಯ ಅಧ್ಯಕ್ಷನನ್ನು ವರ್ಣಿಸಲಾಗುತ್ತದೆ.

ಸ್ತೋತ್ರಂ ರಾಧಾನಾಂ ಪತೇ ಗಿರ್ವಾಹೋ ವೀರ ಯಸ್ಯ ತೇ । ವಿಭೂತಿರಸ್ತು ಸೂನೃತಾ ॥೫॥

ಪದಾರ್ಥ:- ಹೇ [ಗಿರ್ವಾಹಃ ವೀರ] ತಿಳಿಯಲು ಯೋಗ್ಯನಾದ, ಪದಾರ್ಥಜ್ಞಾನದ ಅರಿವು ಹಾಗೂ ಎಲ್ಲ ದುಃಖಗಳನ್ನೂ ನಾಶಗೊಳಿಸುವ ಮತ್ತು [ರಾಧಾನಾಮ್] ಪೃಥಿವಿ ಆದಿ ಪದಾರ್ಥಗಳಲ್ಲಿ ದೊರಕುವ ಸುಖದ [ಪತೇ] ರಕ್ಷಣೆ ಮಾಡುವ ಸಭೆಯ ಅಥವಾ ಸೇನೆಯ ಒಡೆಯನಾದ ವಿದ್ವಾಂಸನೇ! [ಯಸ್ಯ] ಯಾವ [ತೇ] ನಿನ್ನ [ಸೂನೃತಾ] ಎಲ್ಲ ಗುಣಗಳನ್ನು ಉತ್ತಮ ರೀತಿಯಲ್ಲಿ ಪ್ರಕಾಶಗೊಳಿಸುವ [ವಿಭೂತಿಃ] ಅನೇಕ ಪ್ರಕಾರದ ಐಶ್ವರ್ಯವನ್ನು ಹೊಂದಿರುವ ನಿಮ್ಮ ನಿಕಟ ಸಂಪರ್ಕದೊಡನೆ ನಮಗೋಸ್ಕರ [ಸ್ತೋತ್ರಮ್] ಸ್ತುತಿಯನ್ನೂ [ನಃ] ನಮ್ಮ ಪೂರ್ವೋಕ್ತ [ಮದಾಯ] ಆನಂದ ಮತ್ತು [ಶುಷ್ಮಿಣೇ] ಬಲಪ್ರಾಪ್ತಿಗೋಸ್ಕರ [ಅಸ್ತು] ಆಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಹಿಂದಿನ ಮೂರನೇ ಮಂತ್ರದಲ್ಲಿನ [ಮದಾಯ] [ಶುಷ್ಮಿಣೇ ನಃ] - ಈ ಮೂರು ಪದಗಳ ಪುನರುಕ್ತಿಯಾಗಿದೆ. ನಮ್ಮೆಲ್ಲರ ಒಡೆಯನಾದ ವೇದಗಳಲ್ಲಿ ಪರಿಪೂರ್ಣತೆಯನ್ನು ಹೊಂದಿರುವ ವಿಜ್ಞಾನದಲ್ಲಿ ನಿರತನಾದ, ಐಶ್ವರ್ಯವಂತನಾದ ಮತ್ತು ಯಥಾಯೋಗ್ಯ ನ್ಯಾಯವನ್ನು ದೊರಕಿಸುವ ವಿದ್ವಾಂಸನಾದ ಸಭಾಧ್ಯಕ್ಷ ಅಥವಾ ಸೇನಾಪತಿಯನ್ನು ನ್ಯಾಯಾಧೀಶನೆಂದು ಸ್ವೀಕರಿಸಬೇಕಾಗಿದೆ.

ಪುನಃ ಈ ಸಭಾಧ್ಯಕ್ಷ ಅಥವಾ ಸೇನಾಪತಿ ಹೇಗಿದ್ದಾನೆ ಎಂಬುದನ್ನು ತಿಳಿಸಲಾಗಿದೆ.

ಊರ್ಧ್ವಸ್ತಿಷ್ಠಾ ನ ಊತಯೇಽಸ್ಮಿನ್ ವಾಜೇ ಶತಕ್ರತೋ । ಸಮನ್ಯೇಷು ಬ್ರವಾವಹೈ ॥೬॥

ಪದಾರ್ಥ:- ಹೇ [ಶತಕ್ರತೋ] ಅನೇಕ ಪ್ರಕಾರದ ಕರ್ಮನಿರತನೂ, ಅಥವಾ ಅನೇಕ ಪ್ರಕಾರದ ಬುದ್ಧಿಯನ್ನು ಹೊಂದಿರುವವನೂ ಆದ ಸಭೆಯ ಅಥವಾ ಸೇನೆಯ ಒಡೆಯನೇ! ನಿನ್ನ ಸಹಾಯಕ್ಕೆ ಯೋಗ್ಯವಾದ ಆ ಎಲ್ಲ ಕಾರ್ಯಗಳಲ್ಲಿಯೂ ನಾವು **[ಸಂಬ್ರವಾವಹೈ]** ಪರಸ್ಪರರು ಹೇಳಿ-ಕೇಳುವ ಸಮ್ಮತಿಯಿಂದ ಮುಂದುವರಿಯೋಣ. ನೀನು [ನಃ] ನಮ್ಮ **[ಊತಯೇ]** ರಕ್ಷಣೆ ಮಾಡುವ ಸಲುವಾಗಿ **[ಊರ್ಧ್ವಃ]** ಸಭೆಗಳಲ್ಲಿ ಉನ್ನತ ಸ್ಥಳದಲ್ಲಿ **[ತಿಷ್ಠ]** ವಿರಾಜಮಾನನಾಗು. ಈ ರೀತಿ ನೀನು ಮತ್ತು ನಾವು ಸಭೆಗಳಲ್ಲಿ ಇಬ್ಬಿಬ್ಬರಾಗಿ **[ಅಸ್ಮಿನ್ ವಾಜೇ]** ವರ್ತಮಾನವಾದ ಯುದ್ಧ ಹಾಗೂ **[ಅನ್ಯೇಷು]** ಅನ್ಯ ಕರ್ತವ್ಯ ಎಂದರೆ ಉಪದೇಶ ಅಥವಾ ಆಲಿಸುವಂತಹ ಕಾರ್ಯವನ್ನು ನಿತ್ಯವೂ ಮಾಡೋಣ.

ಭಾವಾರ್ಥ:- ಸತ್ಯಪಾಲನೆ ಹಾಗೂ ಆಚಾರ ಪರಿಪಾಲನೆಗಳು ವಿಚಾರಶೀಲಪುರುಷರಿಗೆ ಯೋಗ್ಯವಾಗಿದೆ. ಎಂದರೆ ನಮ್ಮ ಆತ್ಮದಲ್ಲಿ ಯಾವ ಅಂತರ್ಯಾಮಿ ಜಗದೀಶ್ವರನಿದ್ದಾನೋ ಅವನ ಆಜ್ಞೆಯ ಮೇರೆಗೆ ಸಭಾಪತಿ ಅಥವಾ ಸೇನಾಪತಿಯೊಡನೆ ಸೇರಿ ಸತ್ಯ ಮತ್ತು ಮಿಥ್ಯಾ ಅಥವಾ ಮಾಡಲು ಯೋಗ್ಯವಾದ ಮತ್ತು ಮಾಡಲು ಯೋಗ್ಯವಲ್ಲದ ಕರ್ಮಗಳ ಬಗ್ಗೆ ಚರ್ಚಿಸಿ ನಿಶ್ಚಯ ಮಾಡಬೇಕಾಗಿದೆ. ಇದಲ್ಲದೆ ಯಾರೂ ವಿಜಯಿಯಾಗಲಾರರು ಅಥವಾ ಸತ್ಯಬೋಧನೆ ಎಂದಿಗೂ ಮಾಡಲಾಗದು. ಏಕೆಂದರೆ, ಸರ್ವವ್ಯಾಪೀ ಜಗದೀಶ್ವರನನ್ನು ನ್ಯಾಯಾಧೀಶನೆಂದು ಒಪ್ಪಿ ಅಥವಾ ಯಾವ ಧಾರ್ಮಿಕ ಶೂರವೀರನು ಸೇನಾಪತಿಯಾಗಿ ನೇಮಕ ಮಾಡಲಾಗಿದ್ದು ಅವನು ಶತ್ರುಗಳೊಡನೆ ಯುದ್ಧ ಮಾಡುತ್ತಾನೋ ಅವನು ನಿಶ್ಚಯವಾಗಿಯೂ ವಿಜಯಿಯಾಗುತ್ತಾನಲ್ಲದೆ ಇತರರಲ್ಲ.

ಪುನಃ ಈಶ್ವರ ಅಥವಾ ಸೇನಾಧ್ಯಕ್ಷರು ಹೇಗಿದ್ದಾರೆ ಎಂಬುದನ್ನು ತಿಳಿಸಲಾಗುತ್ತದೆ.

ಯೋಗೇಯೋಗೇ ತವಸ್ತರಂ ವಾಜೇವಾಜೇ ಹವಾಮಹೇ । ಸಖಾಯ ಇಂದ್ರಮೂತಯೇ ॥೭॥

ಪದಾರ್ಥ:- ನಾವು [ಸಖಾಯಃ] ಪರಸ್ಪರ ಮಿತ್ರರಾಗಿದ್ದು ನಮ್ಮ **[ಊತಯೇ]** ಉನ್ನತಿ ಮಾಡುವ ಅಥವಾ ರಕ್ಷಣೆ ನೀಡುವ ಸಲುವಾಗಿ **[ಯೋಗೇ ಯೋಗೇ]** ಅತಿ ಕಷ್ಟದಿಂದ ಪ್ರಾಪ್ತವಾಗುವ ಪ್ರತಿಯೊಂದು ಪದಾರ್ಥದಲ್ಲಿ ಅಥವಾ **[ವಾಜೇ ವಾಜೇ]** ಪ್ರತಿಯೊಂದು ಯುದ್ಧದಲ್ಲಿ, ಸಂಘರ್ಷದಲ್ಲಿ **[ತವಸ್ತರಮ್]** ಯಾವುದನ್ನು ಉತ್ತಮ ರೀತಿಯಲ್ಲಿ ವೇದಗಳಿಂದ ತಿಳಿಯಲಾಗುತ್ತದೋ ಆ **[ಇಂದ್ರಮ್]** ಎಲ್ಲದರಲ್ಲಿಯೂ ವಿಜಯವನ್ನು ನೀಡುವ ಜಗದೀಶ್ವರನ ಅಥವಾ ದುಷ್ಟಶತ್ರುಗಳಿಂದ ದೂರ ಮಾಡುವ ಮತ್ತು ಆತ್ಮ ಅಥವಾ ಶರೀರಕ್ಕೆ ಬಲ ಹೊಂದಿರುವ ಧಾರ್ಮಿಕ ಸಭಾಧ್ಯಕ್ಷನನ್ನು **[ಹವಾಮಹೇ]** ಕರೆಯೋಣ ಎಂದರೆ ಪದೇ ಪದೇ ಅವನಿಗೆ ಮನವಿ ಸಲ್ಲಿಸುತ್ತಿರೋಣ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮಾನವರು ಪರಸ್ಪರ ಮಿತ್ರತ್ವವನ್ನು ಸಾಧಿಸಬೇಕು. ಅಲಭ್ಯ ಪದಾರ್ಥಗಳ ರಕ್ಷಣೆ ಮಾಡಬೇಕು. ಮತ್ತು ಎಲ್ಲ ಸ್ಥಳಗಳಲ್ಲಿಯೂ ವಿಜಯ ಸಾಧಿಸಬೇಕು. ಹಾಗೂ

ಪರಮೇಶ್ವರ ಮತ್ತು ಸೇನಾಪತಿಗಳ ಆಶ್ರಯವನ್ನು ನಿತ್ಯವೂ ಪ್ರಾಪ್ತಿಸಿಕೊಳ್ಳಬೇಕು. ಈ ಆಶ್ರಯದಿಂದಲೇ ಉತ್ತಮಕಾರ್ಯ ಸಿದ್ಧಿ ಪಡೆದುಕೊಳ್ಳಲು ಯೋಗ್ಯವೋ ಅಲ್ಲವೋ ಎಂಬುದನ್ನೂ ಸಹ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆದರೆ ವಿದ್ಯೆ ಮತ್ತು ಪುರುಷಾರ್ಥಗಳನ್ನೂ ಸಹ ಅವರಿಗೋಸ್ಕರ ಆಚರಿಸಬೇಕು.

ಅವನು ಯಾರೊಂದಿಗೆ ಪ್ರಾಪ್ತನಾಗುತ್ತಾನೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಆ ಘಾ ಗಮದ್ಯದಿ ಶ್ರವತ್ ಸಹಸ್ರಿಣೀಭಿರೂತಿಭಿಃ । ವಾಜೇಭಿರುಪ ನೋ ಹವಮ್ ॥೮॥

ಪದಾರ್ಥ:– [ಯದಿ] ಯಾವನು ಆ ಸಭೆಯ ಅಥವಾ ಸೇನೆಯ ಒಡೆಯನಾಗಿದ್ದಾನೋ ಅವನು [ನಃ] ನಮ್ಮ [ಆ ಹವಮ್] ಪ್ರಾರ್ಥನೆಯನ್ನು [ಶ್ರವತ್] ಆಲಿಸಲಿ. [ಘ] ಅವನು, [ಸಹಸ್ರಿಣೀಭಿಃ] ಸಹಸ್ರಾರು ಪ್ರಶಂಸನೀಯ ಪದಾರ್ಥಗಳು ಲಭಿಸುತ್ತವೋ ಅವುಗಳ ಪೈಕಿ ಯಾವುದು [ಊತಿಭಿಃ] ರಕ್ಷಣೆ ಮೊದಲಾದುವನ್ನು ಪಡೆದುಕೊಳ್ಳುವ ಬಗ್ಗೆ [ವಾಜೇಭಿಃ] ಅನ್ನ, ಜ್ಞಾನ, ಯುದ್ಧ, ಇತ್ಯಾದಿಗಳನ್ನು ಸಹ ಪಡೆದುಕೊಳ್ಳಲು ಕಾರಣವಾದ ವಿಜಯದೊಂದಿಗೆ ಪ್ರಾರ್ಥನೆಯನ್ನು [ಉಪಾಗಮತ್] ಉತ್ತಮ ರೀತಿಯಲ್ಲಿ ಪಡೆದುಕೊಳ್ಳುವಂತಾಗಲಿ.

ಭಾವಾರ್ಥ:– ಇಲ್ಲಿ ಮನುಷ್ಯ ಸಭೆಯ ಅಥವಾ ಸೇನೆಯ ಒಡೆಯನ ಸೇವೆ ಮಾಡುತ್ತಾನೆ. ಅಲ್ಲಿ ಆ ಸಭಾಧ್ಯಕ್ಷನು ತನ್ನ ಸೇನೆಯ ಒಂದು ಭಾಗವನ್ನು ಅಥವಾ ಅನ್ನಾದಿ ಪದಾರ್ಥಗಳೊಡನೆ ಅವನ ಸಮೀಪದಲ್ಲಿ ನಿಲ್ಲುತ್ತಾನೆ. ಸಭಾಧ್ಯಕ್ಷನ ಸಹಾಯವಿಲ್ಲದೆ ಯಾರಿಗೂ ಸತ್ಯ- ಸುಖಗಳನ್ನು ಅಥವಾ ವಿಜಯವನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ.

ಈಗ ಈಶ್ವರ ಮತ್ತು ಸಭಾಧ್ಯಕ್ಷರ ಪ್ರಾರ್ಥನೆಯನ್ನು ಎಲ್ಲ ಮನುಷ್ಯರೂ ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಅನು ಪ್ರತ್ನಸ್ಯೌಕಸೋ ಹುವೇ ತುವಿಪ್ರತಿಂ ನರಮ್ । ಯಂ ತೇ ಪೂರ್ವಂ ಪಿತಾ ಹುವೇ ॥೯॥

ಪದಾರ್ಥ:– ಹೇ ಮನುಷ್ಯ! [ತೇ] ನಿನ್ನ [ಪಿತಾ] ತಂದೆ ಅಥವಾ ಆಚಾರ್ಯ **[ಯಮ್]** ಜಗದೀಶ್ವರ ಅಥವಾ ಸಭಾಸೇನಾಧ್ಯಕ್ಷ **[ಪ್ರತ್ನಸ್ಯ]** ಸನಾತನ ಕಾರಣ ಅಥವಾ **[ಓಕಸಃ]** ಎಲ್ಲರೂ ವಾಸಿಸಲು ಯೋಗ್ಯವಾದ ಆಕಾಶದಂತಿರುವ **[ತುವಿಪ್ರತಿಮ್]** ಅನೇಕ ಪದಾರ್ಥಗಳನ್ನು ಪ್ರಸಿದ್ಧಗೊಳಿಸುವ ಮತ್ತು **[ನರಮ್]** ಎಲ್ಲರನ್ನೂ ಯಥಾಯೋಗ್ಯ ಕಾರ್ಯಗಳಲ್ಲಿ ತೊಡಗಿಸುವ ಪರಮೇಶ್ವರ ಅಥವಾ ಸಭಾಧ್ಯಕ್ಷನನ್ನು **[ಪೂರ್ವಂ]** ಮೊದಲಿಗೆ **[ಹುವೇ]** ಆಹ್ವಾನಿಸಲಾಗುತ್ತದೆ. ಅವನನ್ನು ನಾನೂ ಸಹ **[ಅನುಹುವೇ]** ಅನುಕೂಲಕ್ಕೆ ತಕ್ಕಂತೆ ಗುಣಗಾನ ಮಾಡುತ್ತೇನೆ.

ಭಾವಾರ್ಥ:– ಈಶ್ವರನು ಮನುಷ್ಯರಿಗೆ ಉಪದೇಶ ಮಾಡುತ್ತಾನೆ. ಹೇಗೆಂದರೆ ಹೇ ಮನುಷ್ಯರೇ! ನೀವು ಇತರೆಯವರಿಗೆ ಹೀಗೆ ಉಪದೇಶ ಮಾಡಬೇಕಾಗುತ್ತದೆ. ಯಾರು ಅನಾದಿಯಿಂದಲೂ ಅನೇಕ ರೀತಿಯ ಕೆಲಸಗಳನ್ನು ಉತ್ಪನ್ನ ಮಾಡುತ್ತಾನೋ ಮತ್ತು ಯಾವನ ಉಪಾಸನೆಯನ್ನು ವಿದ್ವಾಂಸರು ಹಿಂದಿನಿಂದಲೂ ಮಾಡಿಕೊಂಡು ಬಂದಿದ್ದಾರೋ, ಈಗಲೂ ಮಾಡುತ್ತಿದ್ದಾರೋ ಮತ್ತು ಮುಂದೆಯೂ ಮಾಡುತ್ತಾರೋ ಅವನ ಉಪಾಸನೆಯನ್ನು ನಿತ್ಯವೂ ಮಾಡಬೇಕೆಂದು ಉಪದೇಶಿಸಬೇಕು. ನೀನು ಯಾರ ಉಪಾಸನೆಯನ್ನು ಮಾಡುತ್ತೀ ಎಂದೂ ಯಾರಾದರೂ ಕೇಳಿದಲ್ಲಿ ಅವರಿಗೆ ಹೀಗೆ ಉತ್ತರವನ್ನು ನೀಡಬೇಕೆಂದು ಈ ಮಂತ್ರದಲ್ಲಿ ವಿಷಯವನ್ನು ನಿರೂಪಿಸಲಾಗಿದೆ. ಹೇಗೆಂದರೆ, ನಿನ್ನ ತಂದೆ ಅಥವಾ ವಿದ್ವಾಂಸರು ಯಾವನನ್ನು ಉಪಾಸನೆ ಮಾಡುತ್ತಿದ್ದಾರೋ ಮತ್ತು ವೇದಗಳು ಯಾವ ನಿರಾಕಾರ, ಸರ್ವವ್ಯಾಪೀ, ಸರ್ವಶಕ್ತಿಮಾನ್, ಅಜ ಮತ್ತು ಅನಾದಿ ಸ್ವರೂಪ ಜಗದೀಶ್ವರನನ್ನು ಪ್ರತಿಪಾದನೆ ಮಾಡುತ್ತವೆಯೋ ಅವನ ಉಪಾಸನೆಯನ್ನೇ ನಾನು ನಿರಂತರವೂ ಮಾಡುತ್ತೇನೆಂದು ತಿಳಿಸಬೇಕು.

ಈಗ ಈಶ್ವರನ ಪ್ರಾರ್ಥನೆಯ ವಿಷಯವನ್ನು ಹೇಳಲಾಗುತ್ತದೆ.

ತಂ ತ್ವಾ ವಯಂ ವಿಶ್ವವಾರಾऽಶಾಸ್ಮಹೇ ಪುರುಹೂತ । ಸಖೇ ವಸೋ ಜರಿತೃಭ್ಯಃ ॥೧೦॥

ಪದಾರ್ಥ:– ಹೇ [ವಿಶ್ವವಾರ] ಎಲ್ಲರಿಂದಲೂ ಅನೇಕ ಪ್ರಕಾರವಾಗಿ ಸಿದ್ಧಗೊಳಿಸುವ [ಪುರೂಹೂತ] ಸಭೆಗಳಲ್ಲಿ ಸ್ತುತಿಸಲ್ಪಡುವ [ವಸೋ] ಎಲ್ಲರಲ್ಲಿಯೂ ಇರತಕ್ಕ ಅಥವಾ ಎಲ್ಲರನ್ನೂ ತನ್ನಲ್ಲಿಯೇ ಇಟ್ಟುಕೊಂಡಿರತಕ್ಕ [ಸಖೇ] ಎಲ್ಲರ ಮಿತ್ರ ಜಗದೀಶ್ವರ! [ತಮ್] ಹಿಂದೆ ತಿಳಿಸಿರುವಂತೆ [ತ್ವಾ] ನಿಮ್ಮ [ವಯಮ್] ನಾವು [ಜರಿತೃಭ್ಯಃ] ಸ್ತುತಿ ಮಾಡುವ ಧಾರ್ಮಿಕ ವಿದ್ವಾಂಸರಿಂದ [ಆ] ಎಲ್ಲ ಪ್ರಕಾರದಿಂದಲೂ [ಶಾಸ್ಮಹೇ] ಆಶಿಸುತ್ತೇವೆ ಎಂದರೆ, ತಮ್ಮ ವಿಶೇಷ ಜ್ಞಾನ ಪ್ರಕಾಶವನ್ನು ಸಭೆಗಳಲ್ಲಿ ಬೆಳಗಿಸುವ ಇಚ್ಛೆಯನ್ನು ಪ್ರಕಟಿಸುತ್ತೇವೆ.

ಭಾವಾರ್ಥ:– ಮಾನವರು ಹಾಗೂ ವಿದ್ವಾಂಸರ ಸಮಾಗಮದಿಂದಲೇ ಜಗತ್ತನ್ನು ರಚಿಸಿರುವ ಎಲ್ಲರೂ ಪೂಜಿಸಲು ಯೋಗ್ಯನಾದ, ಎಲ್ಲರ ಮಿತ್ರ, ಎಲ್ಲರ ಆಧಾರಕ, ಹಿಂದಿನ ಮಂತ್ರದಲ್ಲಿ ಪ್ರತಿಪಾದಿಸಿರುವಂತೆ ಪರಮೇಶ್ವರನ ವಿಶೇಷ ಜ್ಞಾನ ಹಾಗೂ ಉಪಾಸನೆಯನ್ನು ನಿತ್ಯವೂ ಮಾಡುವುದಾಗಿ ಇಚ್ಛೆಯನ್ನು ಪ್ರಕಟಿಸಬೇಕಾಗಿದೆ. ಏಕೆಂದರೆ ವಿದ್ವಾಂಸರ ಉಪದೇಶದ ವಿನಾ ಯಾರಿಗೂ ಯಥಾಯೋಗ್ಯ ವಿಶೇಷ ಜ್ಞಾನ ದೊರಕುವುದಿಲ್ಲ.

ಪುನಃ ಸಭಾ ಸೇನಾಧ್ಯಕ್ಷನನ್ನು ಹೊಂದುವ ಇಚ್ಛೆ ಮಾಡಬೇಕೆಂಬುದನ್ನು ಹೇಳಲಾಗುತ್ತದೆ.

ಅಸ್ಮಾಕಂ ಶಿಪ್ರಿಣೀನಾಂ ಸೋಮಪಾಃ ಸೋಮಪಾವ್ನಾಮ್ । ಸಖೇ ವಜ್ರಿನ್ತ್ಸಖೀನಾಮ್ ॥೧೧॥

ಪದಾರ್ಥ:– **[ಸೋಮಪಾಃ]** ಉತ್ಪಾದಿಸಲಾದ ಪದಾರ್ಥಗಳ ರಕ್ಷಣೆಯನ್ನು ಮಾಡುವ **[ವಜ್ರಿನ್]** ಎಲ್ಲ ಅವಿನಾಶೀ ರೂಪೀ ಅಂಧಕಾರವನ್ನು ನಾಶಗೊಳಿಸಿ ಉತ್ತಮಜ್ಞಾನವನ್ನು ಹೊಂದಿರುವ **[ಸಖೇ]** ಸಮಸ್ತ ಸುಖವನ್ನು ಕೊಡುವ **[ಸೋಮಪಾವ್ನಾಮ್]** ಸಾಂಸಾರಿಕ ಪದಾರ್ಥಗಳ ರಕ್ಷಣೆ ಮಾಡುವ **[ಸಖೀನಾಮ್]** ನಮ್ಮೆಲ್ಲರ ಮಿತ್ರ ಹಾಗೂ ಎಲ್ಲರ ಹಿತವನ್ನು ಇಚ್ಛಿಸುವ **[ಶಿಪ್ರಿಣೀನಾಮ್]** ಇಹಲೋಕದ ಹಾಗೂ ಪರಲೋಕದ ವ್ಯವಹಾರಜ್ಞಾನವುಳ್ಳ ಹಾಗೂ ನಮ್ಮ ಸ್ತ್ರೀಯರಿಗೆ ಎಲ್ಲ ಪ್ರಕಾರದ ಪ್ರಾಮುಖ್ಯತೆಯನ್ನು ಬಯಸುವ **[ತ್ವಾ]** ಈ ಎಲ್ಲವನ್ನೂ ಮಾಡುವ ನಿಮ್ಮನ್ನು **[ವಯಮ್]** ನಾವು **[ಆಶಾಸ್ಮಹೇ]** ಪಡೆದುಕೊಳ್ಳಲಿಚ್ಛಿಸುತ್ತೇವೆ.

ಭಾವಾರ್ಥ:– ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮತ್ತು ಹಿಂದಿನ ಮಂತ್ರದಿಂದ [ತ್ವಾ ವಯಂ ಆ ಶಾಸ್ಮಹೇ] - ಈ ನಾಲ್ಕು ಪದಗಳನ್ನು ಪುನರುಕ್ತಿ ಮಾಡಲಾಗಿದೆ. ಎಲ್ಲ ಪುರುಷರು ಹಾಗೂ ಎಲ್ಲ ಸ್ತ್ರೀಯರು ಪರಸ್ಪರ ಮಿತ್ರಭಾವನೆಯಿಂದ ವರ್ತಿಸಬೇಕಾಗಿದ್ದು ವ್ಯವಹಾರದ ಸಿದ್ಧಿಗೋಸ್ಕರ ಪರಮಾತ್ಮನ ಪ್ರಾರ್ಥನೆ ಮಾಡಬೇಕು ಮತ್ತು ಆರ್ಯರು ರಾಜವಿದ್ಯೆ ಮತ್ತು ಧರ್ಮ ಸಭೆಯ ಪ್ರಯತ್ನದೊಡನೆ ನಿತ್ಯವೂ ಕಾರ್ಯವನ್ನು ಆಚರಿಸಬೇಕು.

ಈಗ ಸಭಾಧ್ಯಕ್ಷನಿಗೆ ಯಾವ ಯಾವ ಉಪದೇಶ ಮಾಡಲು ಯೋಗ್ಯವಾಗಿದೆ ಎಂಬುದನ್ನು ತಿಳಿಸಲಾಗಿದೆ.

ತಥಾ ತದಸ್ತು ಸೋಮಪಾಃ ಸಖೇ ವಜ್ರಿನ್ ತಥಾ ಕೃಣು । ಯಥಾ ತ ಉಶ್ಮಸೀಷ್ಟಯೇ ॥೧೨॥

ಪದಾರ್ಥ:– ಹೇ [ಸೋಮಪಾಃ] ಉತ್ಪಾದಿತ ಪದಾರ್ಥಗಳಿಂದ ಜೀವಿಗಳ ರಕ್ಷಣೆ ಮಾಡುವ [ವಜ್ರಿನ್] ಸಭಾಧ್ಯಕ್ಷ! [ಯಥಾ] ಯಾವ ರೀತಿ ನಾವು [ಇಷ್ಟಯೇ] ನಮ್ಮ ಸುಖಕ್ಕಾಗಿ [ತೇ] ಶಸ್ತ್ರಾಸ್ತ್ರಯುಕ್ತರಾದ ನೀವು [ಸಖೇ] ಮಿತ್ರನ ಮಿತ್ರತ್ವಕ್ಕೆ ಅನುಕೂಲವಾಗಿ ಯಾವ ಮಿತ್ರಾಚರಣೆಯನ್ನು ಮಾಡಲು [ಉಶ್ಮಸಿ] ಇಚ್ಛಿಸುತ್ತೀರೋ

[ತಥಾ] ಅದೇ ಪ್ರಕಾರವಾಗಿ ನಿಮ್ಮ [ತತ್] ಮಿತ್ರತ್ವ ನಮ್ಮಲ್ಲಿ [ಅಸ್ತು] ಉಂಟಾಗಲಿ. ನೀವೂ ಸಹ [ತಥಾ] ಹಾಗೆಯೇ [ಕೃಣು] ಮಾಡಿರಿ.

ಭಾವಾರ್ಥ:- ಹೇಗೆ ಎಲ್ಲರ ಹಿತವನ್ನೂ ಬಯಸುವ ಮತ್ತು ಸಕಲ ವಿದ್ಯಾಸಂಪನ್ನ ಸಭಾ ಸೇನಾಧ್ಯಕ್ಷನು ನಿರಂತರ ಪ್ರಜೆಗಳ ರಕ್ಷಣೆಯನ್ನು ಮಾಡುತ್ತಾನೋ ಹಾಗೆಯೇ ಪ್ರಜೆಗಳೂ ಸಹ ಸೇನೆಯವರನ್ನು ಗೌರವಿಸಬೇಕಾಗಿದೆ.

ಅದರಲ್ಲಿ ಏನೇನನ್ನು ಸ್ಥಾಪಿಸಿ ಎಲ್ಲರಿಗೂ ಸುಖಯುಕ್ತವಾಗುವಂತೆ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ರೇವತೀರ್ನಃ ಸಧಮಾದ ಇಂದ್ರೇ ಸಂತು ತುವಿವಾಜಾಃ । ಕ್ಷುಮಂತೋ ಯಾಭಿರ್ಮದೇಮ ॥೧೩॥

ಪದಾರ್ಥ:- [ಕ್ಷುಮಂತಃ] ಅನೇಕ ವಿಧವಾದ ಅನ್ನ ಸಂಪತ್ತನ್ನು ಹೊಂದಿದವರು [ಯಾಭಿಃ] ಯಾವ ಪ್ರಜೆಗಳೊಡನೆ [ಸಧಮಾದೇ] ಆನಂದಯುಕ್ತವಾದ ಸ್ಥಳವೊಂದರಲ್ಲಿ [ಮದೇಮ] ಹೇಗೆ ಆನಂದ ಪಡೆಯುತ್ತೇವೋ ಹಾಗೆ [ತುವಿವಾಜಾಃ] ಅನೇಕ ಪ್ರಕಾರದ ವಿದ್ಯೆಯನ್ನು ಬೋಧಿಸುವ [ರೇವತೀಃ ನಃ] ಪ್ರಶಂಸನೀಯವಾದ ಯಾರ ಧನವಿದೆಯೋ ಆ ಪ್ರಜೆಗಳು [ಇಂದ್ರೇ ಸಂತು] ಪರಮೈಶ್ವರ್ಯದ ಕಾರಣರಾಗಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಜನರು ಸಭಾಧ್ಯಕ್ಷ ಹಾಗೂ ಸೇನಾಧ್ಯಕ್ಷರೊಡಗೂಡಿ ಸಭೆಗಳಲ್ಲಿ ಎಲ್ಲ ರಾಜವಿದ್ಯಾ ಮತ್ತು ಧರ್ಮಪ್ರಚಾರ ಮಾಡುವ ಕಾರ್ಯಗಳನ್ನು ಪ್ರಾರಂಭಿಸಿ ಸುಖವನ್ನನುಭವಿಸಬೇಕು ಅಥವಾ ಸುಖದ ಅನುಭವವಾಗುವಂತೆ ಮಾಡಬೇಕು. ವೇದಾಜ್ಞೆಯಂತೆ ಸಮಾನವಿದ್ಯಾರೂಪ, ಸ್ವಭಾವವುಳ್ಳ ಯುವಾವಸ್ಥಾ ಸ್ತ್ರೀ-ಪುರುಷರು ಪರಸ್ಪರರ ಇಚ್ಛೆಯಂತೆ ಸ್ವಯಂವರ ವಿಧಾನದ ಮೂಲಕ ವಿವಾಹವಾಗುವುದು ಯೋಗ್ಯ. ಮತ್ತು ಅವರು ತಮ್ಮ ಮನೆಯ ಕಾರ್ಯಗಳಲ್ಲಿ ಹಾಗೂ ಪ್ರತಿನಿತ್ಯ ಒಬ್ಬರಿಗೊಬ್ಬರು ಸತ್ಕರಿಸುವ ಪ್ರಯತ್ನ ಮಾಡಬೇಕು. ಅವರು ಈಶ್ವರೋಪಾಸನೆ ಮತ್ತು ಅವನ ಆಜ್ಞೆಯ ಮೇರೆಗೆ ಸತ್ಪುರುಷರ ಅನುಮತಿಯ ಮೇರೆಗೆ ಚಿತ್ತವನ್ನು ಸದಾ ಉಪಾಸನೆಯ ಕಡೆಗೆ ತೊಡಗಿಸಿರಬೇಕು. ಇದಲ್ಲದೆ ಆ ರೀತಿಯ ವ್ಯವಹಾರದ ವಿರುದ್ಧವಾಗಿ ವ್ಯವಹರಿಸುವುದರಿಂದ ಎಂದಿಗೂ ಯಾರೊಬ್ಬರೂ (ಸ್ತ್ರೀ ಪುರುಷರು) ಕ್ಷಣ ಮಾತ್ರವೂ ಜತೆಯಲ್ಲಿರಲು ಸಾಧ್ಯವಾಗುವುದಿಲ್ಲ.

ಪುನಃ ಅವರು ಹೇಗಿದ್ದಾರೆ ಎಂಬುದನ್ನು ತಿಳಿಸಲಾಗಿದೆ.

ಆ ಘ ತ್ವಾವಾನ್ ತ್ಮನಾಪ್ತಃ ಸ್ತೋತೃಭ್ಯೋ ಧೃಷ್ಣವಿಯಾನಃ । ಋಣೋರಕ್ಷಂ ನ ಚಕ್ರ್ಯೋಃ ॥೧೪॥

ಪದಾರ್ಥ:- ಹೇ [ಧೃಷ್ಣೋ] ಮಿತಿಮೀರಿದ ದಿಟ್ಟತನದ [ತ್ಮನಾ] ತನ್ನ ಕೌಶಲ್ಯದಿಂದ [ಆಪ್ತಃ] ಸರ್ವವಿದ್ಯಾದಿ ಸದ್ಗುಣಗಳಿಂದ ಕೂಡಿದ ಸತ್ಯೋಪದೇಶ ಮಾಡುವ ಮತ್ತು [ಇಯಾನಃ] ರಾಜ್ಯದ ಆಗುಹೋಗುಗಳನ್ನು ಅರಿತುಕೊಳ್ಳುವ ರಾಜನೇ! [ತ್ವಾವಾನ್] ತಮ್ಮಂದ [ಘ] ತಾವೇ ಯಾರು ತಮ್ಮ [ಚಕ್ರ್ಯೋಃ ಅಕ್ಷಂ] ರಥದ ಚಕ್ರಗಳ ಮಧ್ಯೆ ಇರುವ ಗುಂಬಕ್ಕೆ (ಅಚ್ಚಿಗೆ) [ನ] ಸಮಾನವಾದಂತೆ [ಸ್ತೋತೃಭ್ಯಃ] ಸ್ತುತಿ ಮಾಡುವವರಿಗೆ [ಆ ಋಣೋಃ] ಲಭ್ಯವಾಗುತ್ತೀಯೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರ ಹಾಗೂ ಪ್ರತೀಪಾಲಂಕಾರಗಳಿವೆ. ಹೇಗೆ ಚಕ್ರಗಳನ್ನು ಗುಂಬಗಳ ಮೂಲಕ ರಥಕ್ಕೆ ಜೋಡಿಸುವ ದೂರಿ [ಕೀಲು]ಯೂ ಸಹ ಚಕ್ರಗಳಲ್ಲಿಯೇ ಉಳಿದುಕೊಳ್ಳುತ್ತದೋ ಮತ್ತು ದೇಶ ಪರ್ಯಟನೆ ಮಾಡುತ್ತದೋ ಅಂತೆಯೇ ತಾವು ರಾಜ್ಯವನ್ನು ಆವರಿಸಿಕೊಂಡು ಯಥಾ ಯೋಗ್ಯ ನಿಯಮವನ್ನು ಆಚರಣೆಗೆ ತರುತ್ತೀರಿ.

ಪುನಃ ಅದರ ಸೇವನೆಯಿಂದ ಯಾವ ಫಲ ಉಂಟಾಗುತ್ತದೆ ಎಂಬುದನ್ನು ತಿಳಿಸಲಾಗುತ್ತದೆ.

ಆ ಯದ್ ದುವಃ ಶತಕ್ರತವಾ ಕಾಮಂ ಜರಿತೄಣಾಮ್ । ಋಣೋರಕ್ಷಂ ನ ಶಚೀಭಿಃ ॥೧೫॥

ಪದಾರ್ಥ:- ಹೇ [ಶತಕ್ರತೋ] ಅನೇಕ ವಿಧವಾದ ವಿದ್ಯೆ, ಬುದ್ಧಿ, ಮತ್ತು ಕರ್ಮಯುಕ್ತ ರಾಜಸಭೆಯ ಸ್ವಾಮಿಯೇ! ತಾವು ಸ್ತುತಿ ಮಾಡುವ ಧಾರ್ಮಿಕ ಜನರೊಡನೆ [ಯತ್] ಯಾವ ನಿಮ್ಮ [ದುವಃ] ಸೇವೆ ಇದೆಯೋ ಅದು ಅವರಿಗೆ ಲಭಿಸಲಿ. [ಶಚೀಭಿಃ] ರಥದ ಯೋಗ್ಯ ಕಾರ್ಯದಿಂದ [ಅಕ್ಷಮ್] ಅದರ ಗುಂಬಕ್ಕೆ [ನ] ಸಮಾನವಾಗಿರುವಂತೆ ಅವರ [ಜರಿತೄಣಾಮ್] ಸ್ತುತಿ ಮಾಡುವ ಧಾರ್ಮಿಕ ಜನರ [ಕಾಮಮ್] ಕಾಮನೆಗಳಿಗೆ [ಆ ಋಣೋಃ] ಉತ್ತಮ ಪ್ರಕಾಶವನ್ನು ಪೂರ್ತಿ ಮಾಡುತ್ತೀಯೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ವಿದ್ವಾಂಸರ ಸೇವೆ, ವಿದ್ಯಾರ್ಥಿಗಳ ಅಭೀಷ್ಟೆ ಎಂದರೆ ಅವರ ಇಚ್ಛೆಗೆ ಅನುಕೂಲವಾದ ಕಾಮನೆಗಳನ್ನು ಪೂರೈಸಲಾಗುತ್ತದೋ ಹಾಗೆಯೇ ಪರಮೇಶ್ವರನ ಸೇವೆ ಧಾರ್ಮಿಕ ಸಜ್ಜನರ ಅಭೀಷ್ಟೆಯನ್ನು ಪೂರ್ತಿ ಮಾಡುತ್ತದೆ. ಆದ್ದರಿಂದ ನಿತ್ಯವೂ ಪರಮೇಶ್ವರನ ಸೇವೆ ಮಾಡುವುದು ಅತ್ಯಾವಶ್ಯಕ.

ಪುನಃ ಆ ಸಭಾಧ್ಯಕ್ಷ ಹೇಗಿರುತ್ತಾನೆ ಮತ್ತು ಏನನ್ನು ಮಾಡುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಶಶ್ವದಿಂದ್ರಃ ಪೋಪ್ರುಥದ್ಭಿರ್ಜಿಗಾಯ ನಾನದದ್ಭಿಃ ಶಾಶ್ವಸದ್ಭಿರ್ಧನಾನಿ । ಸ ನೋ ಹಿರಣ್ಯರಥಂ
ದಂಸನಾವಾನ್ ತ್ಸ ನಃ ಸನಿತಾ ಸನಯೇ ಸ ನೋಽದಾತ್ ॥೧೬॥

ಪದಾರ್ಥ:- [ಇಂದ್ರಃ] ಜಗತ್ತನ್ನು ರಚಿಸಿರುವ ಪರಮಾತ್ಮನು [ಶಶ್ವತ್] ಅನಾದಿ ಹಾಗೂ ಶಾಶ್ವತ ಕಾರಣಗಳಿಂದ [ನಾನದದ್ಭಿಃ] ಆರ್ಭಟ ಮತ್ತು ಗರ್ಜನೆ ಇತ್ಯಾದಿ ಶಬ್ದಗಳನ್ನು ಮಾಡುತ್ತಾ ಗುಡುಗು ಮಿಂಚು ಮತ್ತು ನದಿ, ಅಚೇತನ ಮತ್ತು ಜೀವಿಗಳ ಹಾಗೂ [ಶಾಶ್ವಸದ್ಭಿಃ] ಅತಿ ಪ್ರಶಂಸನೀಯ ಪ್ರಾಣವನ್ನು ಹೊಂದಿರುವ ಹಾಗೂ ಚಲಿಸುವ ಜೀವಿಗಳ ಅಥವಾ [ಪೋಪ್ರುತದ್ಭಿಃ] ಸ್ಥೂಲರೂಪೀ ಪದಾರ್ಥಗಳಲ್ಲಿ ಯಾವುದು ಅಚರವಾಗಿದೆಯೋ ಅವುಗಳ ಕಾರ್ಯರೂಪೀ ಪದಾರ್ಥಗಳಿಂದ [ಧನಾನಿ] ಪೃಥಿವೀ, ಸುವರ್ಣ ಮತ್ತು ವಿದ್ಯಾ ಆದಿ ಧನವನ್ನು [ಜಿಗಾಯ] ಉನ್ನತಿಗೋಸ್ಕರ ನೀಡುತ್ತಾನೆ. [ಸಃ] ಅವನು [ದಂಸನಾವಾನ್] ಕರ್ಮಗಳಿಗೆ ಫಲ ನೀಡುವ ಮತ್ತು ಸಾಧನಗಳಿಂದ ಕೂಡಿದ ಈಶ್ವರನಾಗಿದ್ದು [ನಃ] ನಮಗೋಸ್ಕರ [ಹಿರಣ್ಯರಥಂ] ಪ್ರಕಾಶಮಾನನಾದ ಸೂರ್ಯ ಆದಿಲೋಕಗಳನ್ನು ಅಥವಾ ಸುವರ್ಣ ಆದಿಗಳನ್ನು ಪಡೆದುಕೊಳ್ಳಲಾಗುವ ಪದಾರ್ಥಗಳನ್ನು ಮತ್ತು ವಿಮಾನಾದಿ ರಥಗಳನ್ನು [ಅದಾತ್] ಕಣ್ಣಿಗೆ ಗೋಚರವಾಗುವಂತೆ ಮಾಡುತ್ತಾನೆ. [ಸಃ] ಅವನು [ನಃ] ನಮಗೆ ಸುಖಗಳನ್ನು [ಸನಯೇ] ಭೋಗಿಸಲೋಸುಗ [ಸನಿತಾ] ವಿದ್ಯೆ, ಕರ್ಮ ಮತ್ತು ಉಪದೇಶಗಳಿಂದ ವಿಂಗಡನೆ ಮಾಡುವವನಾಗಿದ್ದು ಎಲ್ಲ ಸುಖಗಳನ್ನು [ಸಃ ನಃ ಅದಾತ್] ಅವನು ನಮಗೆ ಹೇಗೆ ನೀಡುತ್ತಾನೋ ಅಂತೆಯೇ ಸಭೆಯ ಸೇನಾಪತಿ ಮತ್ತು ನ್ಯಾಯಾಧೀಶನೂ ಸಹ ಅದೇ ರೀತಿ ವರ್ತಿಸಲಿ.

ಭಾವಾರ್ಥ:- ಹೇಗೆ ಜಗದೀಶ್ವರನು ಶಾಶ್ವತವಾದ ಹಾಗೂ ಪ್ರಾಚೀನವಾದ ಕಾರಣಗಳಿಂದ ಚರಾಚರ ಕಾರ್ಯಗಳನ್ನು ಉತ್ಪತ್ತಿ ಮಾಡಿ ಅವುಗಳಿಂದ ಎಲ್ಲ ಜೀವಿಗಳಿಗೆ ಸುಖ ನೀಡುತ್ತಾನೋ ಅಂತೆಯೇ ಸಭೆಯ ಸೇನಾಪತಿ, ನ್ಯಾಯಾಧೀಶರಾಗಿರುವವರು ಸಭೆಯ ಸೇನೆ ಹಾಗೂ ನ್ಯಾಯದ ಅಂಗಗಳನ್ನು ಸಿದ್ಧಗೊಳಿಸಿ ಎಲ್ಲ ಪ್ರಜೆಗಳಿಗೆ ನಿರಂತರ ಆನಂದದಿಂದ ಕೂಡಿರುವಂತೆ ಮಾಡಬೇಕು. ಯಾವರೀತಿ ಯಾರಾದರೂ ಜಗತ್ತಿನ ರಚನೆ ಅಥವಾ ಕರ್ಮಫಲವನ್ನು ನೀಡುವವರು ಹಾಗೂ ಉತ್ತಮ ನ್ಯಾಯದಿಂದ ರಾಜ್ಯದ ಪಾಲನೆ ಮಾಡುವವರು ಇಲ್ಲದಂತಾಗುತ್ತಾರೋ ಅದೇ ರೀತಿ ಅವರೂ ಸಹ ಎಲ್ಲ ಕಾರ್ಯಗಳನ್ನು ಮಾಡಬೇಕು.

ಪುನಃ ಅವರು ಹೇಗಿರುತ್ತಾರೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ

ಆಶ್ವಿನಾವಶ್ವಾವತ್ಯೇ-ಷಾ ಯಾತಂ ಶವೀರಯಾ । ಗೋಮದ್ದಸ್ರಾ ಹಿರಣ್ಯವತ್ ॥೧೭॥

ಪದಾರ್ಥ:- ಹೇ [ದಸ್ರಾ] ದಾರಿದ್ರ್ಯವನ್ನು ನಾಶಗೊಳಿಸುವ [ಅಶ್ವಿನೌ] ವಿದ್ಯುತ್ ಹಾಗೂ ಪೃಥಿವಿಗಳ ಸಮಾನವಾದ ವಿದ್ಯೆ ಮತ್ತು ನಿತ್ಯ ಕರ್ಮಗಳಲ್ಲಿ ಕುಶಲಿಗಳಾದ ಶಿಲ್ಪಿ ಜನರೇ! ನೀವು [ಇಷಾ] ಪ್ರೀತಿಪಾತ್ರವಾದ [ಅಶ್ವವತ್ಯಾ] ವೇಗಾದಿ ಗುಣಗಳಿಂದ ಕೂಡಿದ [ಶವೀರಯಾ] ದೇಶಾಂತರವನ್ನು ಪಡೆದುಕೊಳ್ಳುವಂತೆ ಮಾಡುವ ಗತಿಯೊಡನೆ [ಹಿರಣ್ಯವತ್] ಅದರಲ್ಲಿ ಸುವರ್ಣಾದಿ ಸಾಧನವಿದೆಯೋ ಮತ್ತು [ಗೋಮತ್] ಅದರಲ್ಲಿ ಸಿದ್ಧ ಮಾಡಲಾದ ಧನದಿಂದ ಸುಖಪ್ರಾಪ್ತಿ ಮಾಡುವ ಬಹಳ ಕ್ರಿಯೆಗಳಿವೆಯೋ ಆ ರಥವನ್ನು [ಆಯಾತಮ್] ಉತ್ತಮ ಪ್ರಕಾರದಿಂದ ದೇಶಾಂತರಕ್ಕೆ ಕಳುಹಿಸಿ.

ಭಾವಾರ್ಥ:- ಹಿಂದೆ ತಿಳಿಸಿರುವಂತೆ ಅಶ್ವ ಎಂದರೆ ಸೂರ್ಯ ಮತ್ತು ಪೃಥಿವಿಗಳ ಗುಣಗಳಿಂದ ಚಲಿಸುವಂತೆ ಮಾಡುವ ರಥವು ಶೀಘ್ರಗತಿಯೊಡನೆ ಭೂಮಿ, ಜಲ ಮತ್ತು ಅಂತರಿಕ್ಷಗಳಲ್ಲಿ ಪದಾರ್ಥಗಳನ್ನು ಪಡೆದುಕೊಳ್ಳುತ್ತದೆ. ಆದ್ದರಿಂದ ಇದಕ್ಕೆ ಶೀಘ್ರಸಾಧನೆ ಆವಶ್ಯಕ.

ಪುನಃ ಅವು ಯಾವ ಪ್ರಕಾರದ್ದಾಗಿವೆ ಎಂಬುದನ್ನು ತಿಳಿಸಲಾಗಿದೆ.

ಸಮಾನಯೋಜನೋ ಹಿ ವಾಂ ರಥೋ ದಸ್ರಾವಮರ್ತ್ಯಃ । ಸಮುದ್ರೇ ಅಶ್ವಿನೇಯತೇ ॥೧೮॥

ಪದಾರ್ಥ:- ಹೇ [ದಸ್ರೌ] ಮಾರ್ಗವನ್ನು ಕ್ರಮಿಸುವಲ್ಲಿ ಆಗುವ ನೋವನ್ನು ನಾಶಗೊಳಿಸುವ [ಅಶ್ವಿನಾ] ಹಿಂದೆ ತಿಳಿಸಿರುವ ರೀತಿಯಾದ ಕುಶಲಿ ಶಿಲ್ಪಿಜನರೇ! [ವಾಮ್] ನಿಮ್ಮ ಯಾವ ಸಿದ್ಧ ಮಾಡಿರುವುದಿದೆಯೋ [ಸಮಾನಯೋಜನಃ] ಯಾವುದರಲ್ಲಿ ಸಮಾನಗುಣವನ್ನು ಹೊಂದಿರುವ ಅಶ್ವವನ್ನು ತೊಡಗಿಸಲಾಗಿದೆಯೋ [ಅಮರ್ತ್ಯಃ] ಯಾವುದನ್ನು ಎಳೆಯುವುದರಿಂದ ಮನುಷ್ಯ ಆದಿ ಪ್ರಾಣಿಗಳನ್ನು ತೊಡಗಿಸಲಾಗುವುದಿಲ್ಲವೋ ಅದು [ರಥಃ] ನಾವೆ ಇತ್ಯಾದಿ ರಥ ಸಮೂಹವನ್ನು [ಸಮುದ್ರೇ] ನೀರಿನಿಂದ ತುಂಬಿರುವ ಸಾಗರದಲ್ಲಿ ಅಥವಾ ಅಂತರಿಕ್ಷದಲ್ಲಿ [ಈಯತೇ ಅಶ್ವವತ್ಯಾ] ವೇಗಾದಿ ಗುಣಗಳಿಂದ ಕೂಡಿದ [ಶವೀರಯಾ] ದೇಶಾಂತರದಲ್ಲಿ ತೊಡಗಿಸುವ ಗತಿಯೊಡನೆ ಸಮುದ್ರವನ್ನು ದಾಟಿ ದಡವನ್ನು ಸೇರುವವನಾಗುತ್ತಾನೆ. ಅದಕ್ಕಾಗಿ ಸಿದ್ಧತೆ ನಡೆಸಿ.

ಭಾವಾರ್ಥ:- ಈ ಮಂತ್ರದಲ್ಲಿ ಹಿಂದಿನ ಮಂತ್ರದ [ಅಶ್ವವತ್ಯಾ] [ಶವೀರಯಾ] ಪದಗಳ ಪುನರುಕ್ತಿಯಾಗಿದೆ. ಮನುಷ್ಯ ರಚನೆಯಾದ ಅಗ್ನಿ, ವಾಯು ಮತ್ತು ಜಲದಿಂದ ಕೂಡಿದ ಕಲಾಯಂತ್ರದಿಂದ ಸಿದ್ಧಗೊಳಿಸಿದ ನಾವೆಯಾಗಿದೆ. ಅದು ನಿಸ್ಸಂದೇಹವಾಗಿಯೂ ಸಮುದ್ರದ ಕೊನೆಗೆ ಶೀಘ್ರವಾಗಿ ತಲುಪಿಸುತ್ತದೆ. ಇಂತಹ ನಾವೆಯ ವಿನಾ, ಇಚ್ಛಿತ ಸಮಯದಲ್ಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲು ಸಾಧ್ಯವಾಗುವುದಿಲ್ಲ.

ಪುನಃ ಅವರು ಹೇಗಿದ್ದಾರೆ ಎಂಬುದನ್ನು ತಿಳಿಸಲಾಗುತ್ತದೆ.

ನ್ಯಗ್ಘ್ನ್ಯಸ್ಯ ಮೂರ್ಧನಿ ಚಕ್ರಂ ರಥಸ್ಯ ಯೇಮಥುಃ । ಪರಿ ದ್ಯಾಮನ್ಯದೀಯತೇ ॥೧೯॥

ಪದಾರ್ಥ:- ಹೇ ವಿದ್ಯುತ್ ಹಾಗೂ ಪೃಥಿವೀ ಸಮಾನರಾದ ವಿದ್ಯಾಯುಕ್ತ ಶಿಲ್ಪಿಜನರೇ! ನೀವಿಬ್ಬರೂ [ಅಘ್ನ್ಯಸ್ಯ] ಯಾವುದು ವಿನಾಶ ಯೋಗ್ಯವಲ್ಲವೋ ಅದು [ರಥಸ್ಯ] ವಿಮಾನಾದಿ ಸಂಚಾರೀ ವಾಹನದ [ಮೂರ್ಧನಿ]

ಉತ್ತಮ ಅಂಗವಾದ ಅಗ್ರಭಾಗದಲ್ಲೊಂದು ಮತ್ತು [ಅನ್ಯತ್] ಮತ್ತೊಂದು ಕೆಳಗಡೆ ಇರುವ ಕಲಾಯಂತ್ರವೊಂದನ್ನು ತಯಾರು ಮಾಡಿದಲ್ಲಿ ಆ ಎರಡು ಚಕ್ರಗಳು ಸಮುದ್ರ ಅಥವಾ [ಪರಿ] ಸರ್ವತಃ [ದ್ಯಾಮ್] ಅಂತರಿಕ್ಷದಲ್ಲಿಯೂ ಸಹ [ವಿಯೇಮಥುಃ] ದೇಶದೇಶಾಂತರದಲ್ಲಿ ಚಲಿಸಲು ಬಹಳ ಉಪಯುಕ್ತವಾಗಿರುತ್ತದೆ. ಈ ಎರಡು ಚಕ್ರಗಳಿಂದ ಜೋಡಿಸಿರುವ ರಥ ಎಲ್ಲಿ ಬೇಕಾದರೂ ಅಲ್ಲಿಗೆ [ಈಯತೇ] ತಲುಪಿಸುವಂತಹದಾಗಿರುತ್ತದೆ.

ಭಾವಾರ್ಥ:- ಶೀಘ್ರವಾಗಿ ಹೋಗಿ-ಬರುವುದಕ್ಕೋಸ್ಕರ ರಥವನ್ನು ತಯಾರಿಸಬೇಕಾದಲ್ಲಿ ಅದರ- ಮುಂದೆ ಒಂದೊಂದು ಕಲಾಯಂತ್ರವನ್ನೊಳಗೊಂಡ ಚಕ್ರ ಹಾಗೂ ಎಲ್ಲ ಕಲೆಗಳಿಂದಲೂ ತಿರುಗಿಸುವ ಸಲುವಾಗಿ ಮತ್ತೊಂದು ಚಕ್ರವನ್ನು ಕೆಳಭಾಗದಲ್ಲಿ ಅಳವಡಿಸಿ ಅದರಲ್ಲಿ ಯಂತ್ರದ ಜೊತೆ ಜಲ ಮತ್ತು ಅಗ್ನಿ ಆದಿ ಪದಾರ್ಥಗಳಿಂದ ಪ್ರಯೋಗ ನಡೆಸಬೇಕಾದ್ದು ಶಿಲ್ಪಿ ವಿದ್ವಾಂಸರಿಗೆ ಯೋಗ್ಯವಾಗಿದೆ. ಈ ರೀತಿ ಸಿದ್ಧ ಪಡಿಸಿದ ವಾಹನ ಭಾರ ಸಹಿತ ಶಿಲ್ಪಿ ವಿದ್ವಾಂಸರಿಗೆ ಭೂಮಿ, ಸಮುದ್ರ ಮತ್ತು ಆಂತರಿಕ್ಷ ಮಾರ್ಗದಲ್ಲಿ ಸುಖಪೂರ್ವಕ ದೇಶಾಂತರವನ್ನು ಕೈಕೊಳ್ಳುವಂತೆ ಮಾಡುತ್ತದೆ.

ಈಗ ಈ ವಿದ್ಯೆಯ ಉಪಯೋಗ ಮಾಡುವ ಪ್ರಾತಃಕಾಲದ ಉಪದೇಶವನ್ನು ಇಲ್ಲಿ ನೀಡಲಾಗಿದೆ.

ಕಸ್ತ ಉಷಃ ಕಧಪ್ರಿಯೇ ಭುಜೇ ಮರ್ತೋ ಅಮರ್ತ್ಯೇ । ಕಂ ನಕ್ಷಸೇ ವಿಭಾವರಿ ॥೨೦॥

ಪದಾರ್ಥ:- ಹೇ ವಿದ್ಯಾಪ್ರಿಯಜನರೇ! ಯಾವ ಈ [ಅಮರ್ತ್ಯೇ] ಕಾರಣ ಪ್ರವಾಹ ರೂಪದಿಂದ ನಾಶರಹಿತ [ಕಧಪ್ರಿಯೇ] ಕಥನ ಪ್ರಿಯ ಮತ್ತು [ವಿಭಾವರಿ] ವಿವಿಧ ಜಗತ್ತಿಗೆ ಪ್ರಕಾಶ ನೀಡುವ [ಉಷಾ] ಪ್ರಾತಃ ಸಮಯದಲ್ಲಿ [ಭುಜೇ] ಸುಖ-ಭೋಗಗಳನ್ನು ಅನುಭವಿಸುವುದಕ್ಕೋಸ್ಕರ ಪಡೆದುಕೊಳ್ಳಲಾಗುತ್ತದೆ. ಅದನ್ನು ಪಡೆದುಕೊಂಡ ನೀವು [ಕಮ್] ಅದನ್ನು ಯಾವ ಮನುಷ್ಯನೂ [ನಕ್ಷಸೇ] ಪಡೆದುಕೊಳ್ಳಲಾರ ಮತ್ತು [ಕಃ] ಯಾವ [ಮರ್ತಃ] ಮನುಷ್ಯರೂ [ಭುಜೇ] ಸುಖವನ್ನು ಭೋಗಿಸಲು [ತೇ] ನಿಮ್ಮ ಆಶ್ರಯವನ್ನು ಪಡೆದುಕೊಳ್ಳಲಾರ.

ಭಾವಾರ್ಥ:- ಈ ಮಂತ್ರದಲ್ಲಿ ಕಾಕ್ಕರ್ಥವಿದೆ. ಯಾವ ಮನುಷ್ಯನು ಈ ಕಾಲದ ಸೂಕ್ಷ್ಮಗತಿಯನ್ನು ವ್ಯರ್ಥವಾಗಿ ಕಳೆದುಕೊಳ್ಳಲು ಅಸಮರ್ಥನಾಗುತ್ತಾನೋ ಅದನ್ನು ತಿಳಿದುಕೊಳ್ಳಬೇಕು. ಪುರುಷಾರ್ಥದ ಆರಂಭದ ಆದಿ ಸಮಯ ಪ್ರಾತಃಕಾಲವಾಗಿರುತ್ತದೆ. ಈ ನಿಶ್ಚಯದಿಂದ ಪ್ರಾತಃಕಾಲದಲ್ಲಿ ಎದ್ದು ಮಲಗುವವರೆಗೂ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯಬಾರದು. ಈ ಪ್ರಕಾರವಾಗಿ ಸಮಯದ ಸಾರ್ಥಕತೆಯನ್ನು ತಿಳಿದುಕೊಂಡು ಮನುಷ್ಯರು ಎಲ್ಲ ಕಾಲದಲ್ಲೂ ಸುಖವನ್ನು ಭೋಗಿಸಬಹುದಾಗಿದೆ. ಆದರೆ ಆಲಸಿಗಳಾಗಬಾರದು.

ಪುನಃ ಆ ವೇಳೆಯನ್ನು ಹೇಗೆ ತಿಳಿಯತಕ್ಕದ್ದು ಎಂಬುದನ್ನು ಹೇಳಲಾಗಿದೆ.

ವಯಂ ಹಿ ತೇ ಅಮನ್ಮಹ್ಯಾಽಽಂತಾದಾ ಪರಾಕಾತ್ । ಅಶ್ವೇ ನ ಚಿತ್ರೇ ಅರುಷಿ ॥೨೧॥

ಪದಾರ್ಥ:- ಹೇ ಕಲಾವಿದ್ಯೆಯಲ್ಲಿ ಚತುರರಾದ ಜನರೇ! ಹೇಗೆ [ವಯಂ] ಸಮಯದ ಪ್ರಭಾವವನ್ನು ತಿಳಿಯಬೇಕಾದ ನಾವು, ಯಾವ [ಚಿತ್ರೇ] ಆಶ್ಚರ್ಯಕರವಾದ [ಅರುಷಿ] ಅದ್ವಿತೀಯ ಕೆಂಪು ಬಣ್ಣದಿಂದ ಕೂಡಿದ ಉಷೆ ಇದೆಯೋ ಅದಕ್ಕೆ [ಆ ಅಂತಾತ್] ಪ್ರತ್ಯಕ್ಷವಾಗಿ ಸಮೀಪದಲ್ಲಿ ಅಥವಾ [ಆ ಪರಾಕಾತ್] ರೂಪಿಸಿರುವ ಒಂದು ನಿಯಮದಂತೆ ದೂರದೇಶದಿಂದ [ಅಶ್ವೇ] ಪ್ರತಿನಿತ್ಯವೂ ಶಿಕ್ಷಣಕ್ಕೆ ಯೋಗ್ಯವಾದ ಕುದುರೆಯ ಮೇಲೆ ಕುಳಿತು ಹೋಗಿ-ಬರುವವರ [ನ] ಸಮಾನರಾಗಿರುವುದಾಗಿ [ಹಿ] ನಿಶ್ಚಯವಾಗಿಯೂ [ಅಮನ್ಮಹಿ] ತಿಳಿದುಕೊಳ್ಳಬೇಕು ಮತ್ತು ಅಂತೆಯೇ ನೀವೂ ಕೂಡ ತಿಳಿದುಕೊಳ್ಳಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ಮನುಷ್ಯರು ಭೂತ, ಭವಿಷ್ಯತ್ ಮತ್ತು ವರ್ತಮಾನ ಕಾಲಗಳನ್ನು ಯಥಾಯೋಗ್ಯ ಉಪಯೋಗಿಸಿಕೊಳ್ಳುವುದನ್ನು ತಿಳಿದುಕೊಳ್ಳುತ್ತಾರೋ ಅವರ ಪುರುಷಾರ್ಥದಿಂದ ಸಮೀಪದಲ್ಲಿನ ಅಥವಾ ದೂರದಲ್ಲಿನ ಎಲ್ಲ ಕಾರ್ಯಗಳೂ ಸಿದ್ಧಗೊಳ್ಳುತ್ತವೆ. ಇದರಿಂದ ಯಾವ ಮನುಷ್ಯನಾಗಲೀ, ಯಾವುದೇ ಕ್ಷಣವನ್ನು ವ್ಯರ್ಥವಾಗಿ ಕಳೆದುಕೊಳ್ಳಬಾರದು.

ಪುನಃ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ತ್ವಂ ತ್ಯೇಭಿರಾ ಗಹಿ ವಾಜೇಭಿರ್ದುಹಿತರ್ದಿವಃ । ಅಸ್ಮೇ ರಯಿಂ ನಿ ಧಾರಯ ॥೨೨॥

ಪದಾರ್ಥ:- ಹೇ ಕಾಲದ ಮಹಿಮೆಯನ್ನು ತಿಳಿಯುವ ವಿದ್ವಾಂಸನೇ! [**ತ್ವಮ್**] ನೀನು ಯಾವ [**ದಿವಃ**] ಸೂರ್ಯಕಿರಣಗಳಿಂದ ಉತ್ಪನ್ನವಾಗಿರುವ ಅವನ [**ದುಹಿತಂ**] ಮಗಳಿಗೆ ಸಮಾನವಾದ ಪ್ರಾತಃಕಾಲದ ಸಮಯ [**ತ್ಯೇಭಿರಾ**] ಅವನ ಉತ್ತಮ ಅವಯವ ಎಂದರೆ ದಿನ, ತಿಂಗಳು ಇತ್ಯಾದಿ ವಿಭಾಗಗಳೊಡನೆ ಅವನು ನಮಗೆ [**ವಾಜೇಭಿಃ**] ಅನ್ನಾದಿ ಪದಾರ್ಥಗಳೊಡನೆ ಪ್ರಾಪ್ತವಾಗುತ್ತಾನೆ ಮತ್ತು ಧನಾದಿ ಪದಾರ್ಥಗಳ ಪ್ರಾಪ್ತಿಯ ಕಾರಣವಾಗುತ್ತಾನೆ. ಅದರಿಂದ [**ಅಸ್ಮೇ**] ನಮಗೋಸ್ಕರ [**ರಯಿಮ್**] ವಿದ್ಯಾ, ಸುವರ್ಣಾದಿ ಧನವನ್ನು [**ನಿಧಾರಯ**] ನಿರಂತರವಾಗಿ ಸ್ವೀಕರಿಸಬೇಕಾಗಿದೆ. ಮತ್ತು [**ಆಗಹಿ**] ಈ ರೀತಿ ವಿದ್ಯೆಯನ್ನು ಪ್ರಾಪ್ತಿಸಿಕೊಳ್ಳಲೋಸುಗ ಅದನ್ನು ಗ್ರಹಣ ಮಾಡಿರಿ. ಅದರಿಂದ ನಾವೂ ಸಹ ಸಮಯವನ್ನು ನಿರರ್ಥಕ ಮಾಡದಿರೋಣ.

ಭಾವಾರ್ಥ:- ಯಾವ ಮನುಷ್ಯನು ಸಮಯವನ್ನು ಸ್ವಲ್ಪವೂ ಸಹ ವ್ಯರ್ಥ ಮಾಡುವುದಿಲ್ಲವೋ ಅವನ ಪೂರ್ಣಸಮಯವು ಕಾರ್ಯಸಿದ್ಧಿಯನ್ನು ಮಾಡುವಂತಹದಾಗಿರುತ್ತದೆ.

ಈ ಮಂತ್ರದಲ್ಲಿ ಹಿಂದಿನ ಸೂಕ್ತದ [ಇಂದ್ರ] [ಅಶ್ವಿ] ಮತ್ತು [ಉಷಾ] ಸಮಯದ ವರ್ಣನೆಯ ಸಂಬಂಧವಿದ್ದು ಹಿಂದಿನ ಸೂಕ್ತಕ್ಕೆ ಸಂಬಂಧಪಟ್ಟಂತೆ ಅರ್ಥಗಳೊಡನೆ ಈ ಸೂಕ್ತದ ಅರ್ಥವನ್ನು ಮಾಡಲಾಗಿದೆ ಎಂದು ತಿಳಿಯಬೇಕು.

ಮೂವತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೩೧

ಮಂತ್ರಸಂಖ್ಯೆ ೧೮ । ಋಷಿಃ- ಹಿರಣ್ಯಸ್ತೂಪ ಆಂಗಿರಸಃ । ದೇವತಾ- ಅಗ್ನಿಃ । ಛಂದಃ -ಜಗತೀ ೮, ೧೬, ೧೮ ತ್ರಿಷ್ಟುಪ್। ಸ್ವರಃ - ಧೈವತಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಈಶ್ವರನ ವರ್ಣನೆಯನ್ನು ಮಾಡಲಾಗುತ್ತದೆ.

ತ್ವಮಗ್ನೇ ಪ್ರಥಮೋ ಅಂಗಿರಾ ಋಷಿ-ರ್ದೇವೋ ದೇವಾನಾಮಭವಃ ಶಿವಃ ಸಖಾ ।
ತವ ವ್ರತೇ ಕವಯೋ ವಿದ್ಮನಾಪಸೋಽಜಾಯಂತ ಮರುತೋ ಭ್ರಾಜದೃಷ್ಟಯಃ ॥೧॥

ಪದಾರ್ಥ:- ಹೇ [**ಅಗ್ನೇ**] ಪ್ರಕಾಶವಂತನೂ ಮತ್ತು ವಿಜ್ಞಾನಸ್ವರೂಪನೂ ಆದ ಪರಮೇಶ್ವರ! ಯಾವ ಕಾರಣದಿಂದ [**ತ್ವಮ್**] ನೀನು [**ಪ್ರಥಮಃ**] ಅನಾದಿ ಸ್ವರೂಪನೂ ಎಂದರೆ ಜಗತ್‌ಕಲ್ಪದ ಆದಿಯಲ್ಲಿ ಸದಾ ನೆಲೆಯಾಗಿದ್ದವನೂ [**ಅಂಗಿರಾಃ**] ಬ್ರಹ್ಮಾಂಡದ ಪೃಥ್ವಿ ಆದಿ ಶರೀರದ ಹಸ್ತ ಪಾದಾದಿ ಅಂಗಗಳ ರಸರೂಪ ಎಂದರೆ ಅಂತರ್ಯಾಮಿಯೂ [**ಋಷಿಃ**] ಸರ್ವವಿದ್ಯೆಗಳಿಂದ ಪರಿಪೂರ್ಣನು, ವೇದಗಳ ಉಪದೇಶ ಮಾಡುವವನು ಮತ್ತು [**ದೇವಾನಾಮ್**] ವಿದ್ವಾಂಸರ [**ದೇವಃ**] ಆನಂದವನ್ನುಂಟು ಮಾಡುವ [**ಶಿವಃ**] ಮಂಗಳಮಯ ಹಾಗೂ

ಪ್ರಾಣಿಗಳಿಗೆ ಮಂಗಳವನ್ನುಂಟುಮಾಡುವ ಹಾಗೂ [**ಸಖಾ**] ಅವರ ದುಃಖವನ್ನು ದೂರ ಮಾಡುವಲ್ಲಿ ಸಹಾಯಕನೂ [**ಅಭವಃ**] ಆಗಿದ್ದೀಯೆ ಮತ್ತು ಯಾವ [**ವಿದ್ಮನಾಪಸಃ**] ಜ್ಞಾನದ ಕಾರಣನೂ, ಕರ್ಮಯುಕ್ತನೂ [**ಮರುತಃ**] ಧರ್ಮವನ್ನು ಪಡೆದುಕೊಂಡ ಮಾನವನು [**ತವ**] ನಿನ್ನ [**ವ್ರತೇ**] ಆಜ್ಞಾ ನಿಯಮದಲ್ಲಿರುವವನು, ಇದರಿಂದ ಅದೇ [**ಭ್ರಾಜದೃಷ್ಟಯಃ**] ಪ್ರಕಾಶವಾನ್ ಎಂದರೆ ಜ್ಞಾನವನ್ನು ಪಡೆದುಕೊಂಡಿರುವ [**ಕವಯಃ**] ಕವಿ ಹಾಗೂ ವಿದ್ವಾಂಸನೂ [**ಅಜಾಯಂತ**] ಆಗುತ್ತೀಯೆ.

ಭಾವಾರ್ಥ:- ಯಾವ ಈಶ್ವರನ ಆಜ್ಞಾಪಾಲನೆ ಧರ್ಮ ಮತ್ತು ವಿದ್ವಾಂಸರ ಸಂಗವನ್ನಲ್ಲದೆ ಯಾವ ಕಾರ್ಯವನ್ನೂ ಮಾಡಲಾಗುವುದಿಲ್ಲವೋ ಅವರಿಗೆ ಪರಮೇಶ್ವರನ ಜತೆ ಮಿತ್ರತ್ವ ಬೆಳೆಯುತ್ತದೆ. ಮತ್ತು ಆ ಮಿತ್ರತ್ವದಿಂದ ಅವರ ಆತ್ಮದಲ್ಲಿ ಸತ್ಯವಿದ್ಯೆಯ ಪ್ರಕಾಶವುಂಟಾಗುತ್ತದೆ ಮತ್ತು ಆ ವಿದ್ವಾಂಸರಾಗಿ ಉತ್ತಮ ಕರ್ಮಾಚರಣೆ ಮಾಡುವ ಮೂಲಕ ಎಲ್ಲ ಪ್ರಾಣಿಗಳಿಗೂ ಸುಖವನ್ನುಂಟುಮಾಡಲು ಪ್ರಸಿದ್ಧರಾಗುತ್ತಾರೆ.

ಪುನಃ ಅವನು ಎಂತಹವನು ಎಂದು ಹೇಳಲಾಗುತ್ತದೆ.

ತ್ವಮಗ್ನೇ ಪ್ರಥಮೋ ಅಂಗಿರಸ್ತಮಃ ಕವಿರ್ದೇವಾನಾಂ ಪರಿ ಭೂಷಸಿ ವ್ರತಮ್ । ವಿಭುರ್ವಿಶ್ವಸ್ಮೈ
ಭುವನಾಯ ಮೇಧಿರೋ ದ್ವಿಮಾತಾ ಶಯುಃ ಕತಿಧಾ ಚಿದಾಯವೇ ॥೨॥

ಪದಾರ್ಥ:- ಹೇ [**ಅಗ್ನೇ**] ಎಲ್ಲ ದುಃಖಗಳನ್ನೂ ನಾಶಗೊಳಿಸುವವನು ಮತ್ತು ಎಲ್ಲ ದುಷ್ಟ ಶತ್ರುಗಳನ್ನೂ ದಹಿಸುವವನೂ ಆದ ಜಗದೀಶ್ವರ ಅಥವಾ ಸಭಾಸೇನಾಧ್ಯಕ್ಷ! ಯಾವ ಕಾರಣದಿಂದ [**ತ್ವಮ್**] ನೀನು [**ಪ್ರಥಮಃ**] ಅನಾದಿ ಸ್ವರೂಪ ಅಥವಾ ಮೊದಲಿಗನೆಂದು ಸ್ವೀಕರಿಸಲು ಯೋಗ್ಯನಾದ [**ಶಯುಃ**] ಪ್ರಳಯಕಾಲದಲ್ಲಿ ಎಲ್ಲ ಪ್ರಾಣಿಗಳನ್ನೂ ಮಲಗಿಸಲು [**ಮೇಧಿರಃ**] ಸೃಷ್ಟಿ ಸಮಯದಲ್ಲಿ ಎಲ್ಲರನ್ನು ಎಚ್ಚರಿಸುವ [**ದ್ವಿಮಾತಾ**] ಪ್ರಕಾಶಿತ ಅಥವಾ ಪ್ರಕಾಶಿತವಲ್ಲದ ಲೋಕಗಳ ನಿರ್ಮಾಣ ಎಂದರೆ ಆ ವಿದ್ಯೆಯನ್ನು ತಿಳಿಯುವವನ [**ಅಂಗಿರಸ್ತಮಃ**] ಜೀವ, ಪ್ರಾಣ ಮತ್ತು ಮನುಷ್ಯರಲ್ಲಿ ಅತ್ಯಂತ ಉತ್ತಮನಾದ [**ವಿಭುಃ**] ಸರ್ವವ್ಯಾಪಕನಾದ ಅಥವಾ ಸಭಾಸೇನೆಯ ಅಂಗಗಳಿಂದ ಶತ್ರುಬಲದಿಂದ ವ್ಯಾಪ್ತ ಸ್ವಭಾವವುಳ್ಳ ಮತ್ತು [**ಕವಿಃ**] ಎಲ್ಲರನ್ನೂ ತಿಳಿದುಕೊಳ್ಳುವವನಾಗಿದ್ದೀಯೆ. [**ಚಿತ್**] ಅದೇ ಕಾರಣದಿಂದ [**ಆಯವೇ**] ಮನುಷ್ಯ ಅಥವಾ [**ವಿಶ್ವಸ್ಮೈ**] ಎಲ್ಲ [**ಭುವನಾಯ**] ಲೋಕಕ್ಕೋಸ್ಕರ [**ದೇವಾನಾಮ್**] ವಿದ್ವಾನ್ ಅಥವಾ ಸೂರ್ಯ ಮತ್ತು ಪೃಥಿವೀ ಆದಿ ಲೋಕಗಳ [**ವ್ರತಮ್**] ಧರ್ಮಯುಕ್ತ ನಿಯಮಗಳನ್ನು [**ಕತಿಧಾ**] ಅನೇಕ ಪ್ರಕಾರದಿಂದ [**ಪರಿಭೂಷಸಿ**] ಉತ್ತಮ ರೀತಿಯಲ್ಲಿ ಮಂಗಳಕರವನ್ನಾಗಿ ಮಾಡುತ್ತೀಯೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಪರಮೇಶ್ವರನು ವೇದಗಳ ಮೂಲಕ ಅಥವಾ ಅವುಗಳನ್ನು ಕಲಿಸುವುದರಿಂದ ವಿದ್ವಾಂಸನಿಗೆ ವಿದ್ಯಾಧರ್ಮರೂಪೀ ವ್ರತ ಅಥವಾ ಲೋಕಗಳ ನಿಯಮರೂಪೀ ವ್ರತವನ್ನು ಮಂಗಳಕಾರಿಯಾಗಿ ಮಾಡಲಾಗುತ್ತದೆ. ಈಶ್ವರನು ರಚಿಸಿರುವ ಸೃಷ್ಟಿಯಿಂದ ಸೂರ್ಯಾದಿ ಪ್ರಕಾಶಿತ ಅಥವಾ ವಾಯು ಪೃಥಿವೀ ಆದಿ ಅಪ್ರಕಾಶಿತ ಲೋಕ ಸಮೂಹಗಳ ರಚನೆಯಾಗಿದ್ದು ಅದು ಸರ್ವವ್ಯಾಪಿಯಾಗಿದೆ. ಮತ್ತು ಈಶ್ವರನ ರಚನೆಯಾದ ಸೃಷ್ಟಿಯಿಂದ ವಿದ್ಯೆಯನ್ನು ಪ್ರಕಾಶಗೊಳಿಸಲಾಗುತ್ತದೆ ಮತ್ತು ಅದರಿಂದ ಅವನು ವಿದ್ವಾಂಸನಾಗುತ್ತಾನೆ. ಆ ಈಶ್ವರ ಅಥವಾ ವಿದ್ವಾಂಸನ ವಿನಾ ಯಾವುದೇ ಪದಾರ್ಥವಿದ್ಯೆಯು ಅಥವಾ ಕಾರಣದಿಂದ ಕರ್ಮರೂಪವಾದ ಎಲ್ಲ ಲೋಕಗಳ ರಚನೆ ಧಾರಣೆಯನ್ನು ತಿಳಿಯಲು ಸಮರ್ಥವಾಗುವುದಿಲ್ಲ.

ಪುನಃ ಆ ಎರಡು ಹೇಗಿವೆ ಎಂಬುದನ್ನು ತಿಳಿಸಲಾಗುತ್ತದೆ

ತ್ವಮಗ್ನೇ ಪ್ರಥಮೋ ಮಾತರಿಶ್ವನ ಆವಿರ್ಭವ ಸುಕ್ರತೂಯಾ ವಿವಸ್ವತೇ । ಅರೇಜೇತಾಂ
ರೋದಸೀ ಹೋತೃವೂರ್ಯೇಽಸಘ್ನೋರ್ಭಾರಮಯಜೋ ಮಹೋ ವಸೋ ॥೩॥

ಪದಾರ್ಥ:- ಹೇ [**ಅಗ್ನೇ**] ಪರಮಾತ್ಮನೇ ಅಥವಾ ವಿದ್ವಾಂಸನೇ! [**ಪ್ರಥಮಃ**] ಸಮಸ್ತ ಕಾರ್ಯಗಳಲ್ಲಿ ಅಗ್ರಣೀಯನು ಆದ [**ತ್ವಂ**] ನೀನು ಯಾವ [**ಸುಕ್ರತೂಯಾ**] ಶ್ರೇಷ್ಠ ಬುದ್ಧಿ ಮತ್ತು ಕರ್ಮಗಳನ್ನು ಸಿದ್ಧಗೊಳಿಸುವ ವಾಯುವಿನಿಂದ [**ಹೋತೃವೂರ್ಯೇ**] ಹೋತೃಗಳನ್ನು ಸ್ವೀಕರಿಸಲು ಯೋಗ್ಯವುಳ್ಳ [**ರೋದಸೀ**] ವಿದ್ಯುತ್ ಮತ್ತು ಪೃಥಿವಿಗಳು [**ಅರೇಜೇತಾಂ**] ತಮ್ಮ ತಮ್ಮ ಕಕ್ಷೆಯಲ್ಲಿ ತಿರುಗುತ್ತಿರುತ್ತವೆ. ಅವು [**ಮಾತರಿಶ್ವನೇ**] ಅವುಗಳ ಆಕಾಶ ಸದೃಶವಾದ ಮಾತೆಯಂತಿದ್ದು ಅಲ್ಲಿ ಇರತಕ್ಕ ವಾಯು ಅಥವಾ [**ವಿವಸ್ವತೇ**] ಸೂರ್ಯಲೋಕಕ್ಕೋಸ್ಕರ ಅವುಗಳನ್ನು [**ಆವಿಃ ಭವ**] ಪ್ರಸಿದ್ಧಗೊಳಿಸಿ [**ವಸೋ**] ಎಲ್ಲರಿಗೂ ವಾಸಸ್ಥಾನವನ್ನು ಕಲ್ಪಿಸುವ ನೀನು ಶತ್ರುಗಳನ್ನು [**ಅಸಘ್ನೋಃ**] ವಿನಾಶಗೊಳಿಸು. ಅದರಿಂದ [**ಮಹಃ**] ದೊಡ್ಡದೊಡ್ಡ [**ಭಾರಮ್**] ಭಾರವಾದ ವಾಹನವನ್ನು [**ಅಯಜಃ**] ದೇಶ ದೇಶಾಂತರಗಳಿಗೆ ತಲುಪಿಸುತ್ತೀಯೆ. ಅವುಗಳ ಜ್ಞಾನವನ್ನು ನಮಗೆ ಮಾಡಿಕೊಡು.

ಭಾವಾರ್ಥ:- ಕಾರಣರೂಪವಾದ ಅಗ್ನಿಯು ತನ್ನ ನಿಮಿತ್ತ ಮಾತ್ರದಿಂದ ಮತ್ತು ವಾಯುವಿನ ಕಾರಣದಿಂದ ಸೂರ್ಯರೂಪದಲ್ಲಿ ಪ್ರಸಿದ್ಧವಾಗುತ್ತದೆ ಹಾಗೂ ಅಂಧಕಾರವನ್ನು ವಿನಾಶಗೊಳಿಸಿ ಪೃಥಿವಿ ಅಥವಾ ಪ್ರಕಾಶವನ್ನು ಧಾರಣೆ ಮಾಡುತ್ತದೆ. ಅದು ಯಜ್ಞ ಅಥವಾ ಶಿಲ್ಪ ವಿದ್ಯೆಯ ಕಾರಣದಿಂದ ಕಲಾಯಂತ್ರಗಳಲ್ಲಿ ಜೋಡಿಸಿರುವ ದೊಡ್ಡ ದೊಡ್ಡ ಭಾರಯುಕ್ತ ವಿಮಾನಾದಿ ವಾಹನದಲ್ಲಿ ದೇಶದೇಶಾಂತರಗಳಿಗೆ ತಲುಪಿಸುತ್ತದೆ.

ಪುನಃ ಆ ಈಶ್ವರನು ಹೇಗಿದ್ದಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತ್ವಮಗ್ನೇ ಮನವೇ ದ್ಯಾಮವಾಶಯಃ ಪುರೂರವಸೇ ಸುಕೃತೇ ಸುಕೃತ್ತರಃ । ಶ್ವಾತ್ರೇಣ
ಯತ್ ಪಿತ್ರೋರ್ಮುಚ್ಯಸೇ ಪರ್ಯಾ-ತ್ವಾ ಪೂರ್ವಮನಯನ್ನಾಪರಂ ಪುನಃ ॥೪॥

ಪದಾರ್ಥ:- ಹೇ [ಅಗ್ನೇ] ಜಗದೀಶ್ವರ! [ಸುಕೃತ್ತರಃ] ಉತ್ತಮ ಕರ್ಮವನ್ನಾಚರಿಸುವ [**ತ್ವಮ್**] ಸರ್ವಪ್ರಕಾಶಕನಾದ ನೀನು [**ಪುರೂರವಸೇ**] ಯಾವನಲ್ಲಿ ಬಹಳ ಉತ್ತಮೋತ್ತಮ ವಿದ್ಯಾಯುಕ್ತ ವಚನವಿದೆಯೋ ಮತ್ತು [**ಸುಕೃತೇ**] ಉತ್ತಮ ಕರ್ಮಗಳನ್ನು ಆಚರಿಸುತ್ತಾನೋ ಆ [**ಮನವೇ**] ಜ್ಞಾನವಂತ ವಿದ್ವಾಂಸನಿಗೋಸ್ಕರ [**ದ್ಯಾಮ್**] ಉತ್ತಮ ಸೂರ್ಯಲೋಕವನ್ನು [**ಅವಾಶಯಃ**] ಪ್ರಕಾಶಪಡಿಸಲಾಗಿದೆ. ವಿದ್ವಾಂಸರು [**ಶ್ವಾತ್ರೇಣ**] ಧನ ಹಾಗೂ ವಿಜ್ಞಾನದೊಡನೆ ಇರುವ [**ಪೂರ್ವಮ್**] ಪೂರ್ವಕಲ್ಪ ಅಥವಾ ಪೂರ್ವಜನ್ಮದಲ್ಲಿ ಅರ್ಹತೆ ಪಡೆಯಲು ಯೋಗ್ಯರಾಗಿದ್ದು [**ಅಪರಮ್**] ಇನ್ನು ಮುಂದೆ ಜನ್ಮಮರಣಾದಿಗಳಿಂದ ಬೇರ್ಪಟ್ಟು ವಿಖ್ಯಾತರಾಗುವ ನಿಮಗೆ [**ಪುನಃ**] ಪ್ರತಿಸಾರಿಯೂ [**ಅನಯನ್**] ಪ್ರಾಪ್ತವಾಗುತ್ತದೆ. ಹೇ ಜೀವ! ನೀನು ಯಾವ ಪರಮೇಶ್ವರನ ವೇದವಾಣಿ ಹಾಗೂ ವಿದ್ವಾಂಸರ ಉಪದೇಶದಿಂದ ಪ್ರತೀತನಾಗುತ್ತೀಯೋ, ಯಾವುದು [**ತ್ವಾ**] ನಿನಗೆ [**ಶ್ವಾತ್ರೇಣ**] ಧನ ಹಾಗೂ ವಿಜ್ಞಾನದೊಡನೆ ಇರುವ [**ಪೂರ್ವಮ್**] ಹಿಂದಿನ [**ಅಪರಮ್**] ಮುಂದಿನ ದೇಹವನ್ನು ದೊರಕುವಂತೆ ಮಾಡುತ್ತದೆ. ಮತ್ತು ಅದರ ಉತ್ತಮ ಜ್ಞಾನದಿಂದ ಮುಕ್ತ ದಿಸೆಯಲ್ಲಿ [**ಪಿತ್ರೋಃ**] ಮಾತಾ-ಪಿತೃಗಳಿಂದ ನೀನು [**ಪರ್ಯಾಮುಚ್ಯತೇ**] ಎಲ್ಲ ಪ್ರಕಾರದ ದುಃಖದಿಂದ ಬಿಡುಗಡೆಹೊಂದಿ ಅವನ ನಿಯಮದಿಂದ ಮುಕ್ತಿಯಿಂದ ಮಹಾಕಲ್ಪದ ಅಂತ್ಯದಲ್ಲಿ ಪುನಃ ಜಗತ್ತಿಗೆ ಬರುತ್ತೀಯೆ. ಅವನ ವಿಶೇಷ ಜ್ಞಾನ ಅಥವಾ ಸೇವನೆಯಿಂದ ನೀನು [ಆ] ಉತ್ತಮ ಜ್ಞಾನವನ್ನು ಪಡೆದುಕೋ.

ಭಾವಾರ್ಥ:- ಯಾವ ಜಗದೀಶ್ವರನು ಸೂರ್ಯಾದಿ ಜಗತ್ತನ್ನು ರಚಿಸಿದನೋ ಅಥವಾ ಯಾವ ವಿದ್ವಾಂಸರಿಂದ ಸುಶಿಕ್ಷೆಯನ್ನು ಪಡೆದುಕೊಳ್ಳುವಂತೆ ಮಾಡುತ್ತಾನೋ ಆ ಪರಮೇಶ್ವರ ಅಥವಾ ವಿದ್ವಾಂಸನು ಉತ್ತಮ ಕರ್ಮದ ಮೂಲಕ ಅರ್ಹತೆ ಪಡೆಯುತ್ತಾನೋ ಹಾಗೂ ಚಕ್ರವರ್ತಿ ರಾಜ್ಯ ಆದಿ ಧನದ ಸುಖ ಸಹ ಹಾಗೆಯೇ ಪಡೆಯಲಾಗುತ್ತದೆ.

ಪುನಃ ಅದೇ ವಿಷಯವನ್ನು ತಿಳಿಸಲಾಗುತ್ತದೆ.

ತ್ವಮಗ್ನೇ ವೃಷಭಃ ಪುಷ್ಟಿವರ್ಧನ ಉದ್ಯತಸ್ರುಚೇ ಭವಸಿ ಶ್ರವಾಯ್ಯಃ । ಯ ಆಹುತಿಂ ಪರಿ
ವೇದಾ ವಷಟ್ ಕೃತಿ-ಮೇಕಾಯುರಗ್ರೇ ವಿಶ ಆವಿವಾಸತಿ ॥೫॥

ಪದಾರ್ಥ:- ಹೇ [**ಅಗ್ನೇ**] ಯಜ್ಞಕ್ರಿಯಾ ಫಲಯುಕ್ತ ಜಗದ್ಗುರು ಪರಮೇಶ್ವರ! ಯಾವ [**ತ್ವಮ್**] ನೀನು [**ಅಗ್ರೇ**] ಮೊದಲಿಗನಾಗಿ [**ಉದ್ಯತಸ್ರುಚೇ**] ಸ್ರುಕ್ ಎಂದರೆ, ಹೋಮ ಮತ್ತು ಅದನ್ನಾಚರಿಸುವವನಿಗೆ ಅವಶ್ಯಕವಾದ ವಸ್ತುಗಳನ್ನು ಪಡೆದುಕೊಂಡು ಉತ್ತಮ ರೀತಿಯಲ್ಲಿ ಹೋಮವನ್ನಾಚರಿಸುವ ಮನುಷ್ಯನಿಗೋಸ್ಕರ [**ಶ್ರವಾಯ್ಯಃ**] ಆಲಿಸಲು ಮತ್ತು ಆಲಿಸುವಂತೆ ಮಾಡಲು ಯೋಗ್ಯವಾದ [**ವೃಷಭಃ**] ಸುಖವನ್ನು ನೀಡುವವನು ಮತ್ತು [**ಏಕಾಯುಃ**] ಒಂದು ಸತ್ಯಗುಣಕರ್ಮ ಸ್ವಭಾವರೂಪವಾಗಿರುವ ಮತ್ತು [**ಪುಷ್ಟಿವರ್ಧನಃ**] ಪುಷ್ಟಿಯನ್ನು ವೃದ್ಧಿಗೊಳಿಸುವವನೂ [**ಭವಸಿ**] ಆಗುತ್ತಾನೆ. [**ಯಃ**] ಯಾವ ನೀನು [**ವಷಟ್ ಕೃತಿಮ್**] ಅದರಲ್ಲಿ ಉತ್ತಮ ಕ್ರಿಯೆಯನ್ನು ಮಾಡಿಸುತ್ತೀಯೆ. [**ಆಹುತಿಮ್**] ಮತ್ತು ಅದರಿಂದ ಧರ್ಮಯುಕ್ತ ಆಚರಣೆಯನ್ನು ಮಾಡಿಸುತ್ತೀಯೆ. [**ವೇದಾ**] ಅದರ ವಿಶೇಷ ಜ್ಞಾನವನ್ನು ನೀಡುತ್ತೀಯೆ. [**ವಿಶಃ**] ಪ್ರಜಾಸೃಷ್ಟಿಯ ವೃದ್ಧಿಯೊಂದಿಗೆ ನೀನು ಅವನ ಸುಖಕ್ಕಾಗಿ [**ಪರ್ಯಾವಿವಾಸತಿ**] ಉತ್ತಮ ರೀತಿಯಲ್ಲಿ ಸೇವನೆಯನ್ನು ಮಾಡಿಸುತ್ತೀಯೆ.

ಭಾವಾರ್ಥ:- ಪ್ರಥಮವಾಗಿ ಜಗತ್ತಿನ ರಚನೆಯ ಕಾರಣ ಬ್ರಹ್ಮಜ್ಞಾನ ಮತ್ತು ಯಜ್ಞವಿದ್ಯೆಯಲ್ಲಿ ಯಾವ ಕ್ರಿಯೆಯನ್ನು ಯಾವ ಯಾವ ಪ್ರಕಾರದಲ್ಲಿ ಹೋಮವನ್ನು ಮಾಡಲು ಯೋಗ್ಯ ಪದಾರ್ಥಗಳಿವೆಯೋ ಅವುಗಳನ್ನು ಉತ್ತಮ ರೀತಿಯಲ್ಲಿ ತಿಳಿದುಕೊಂಡು ಅದರ ಯಥಾಯೋಗ್ಯ ಕ್ರಿಯೆಯನ್ನೂ ತಿಳಿದುಕೊಂಡು ಶುದ್ಧವಾಯು ಮತ್ತು ಮಳೆಯ ನೀರಿನ ಶುದ್ಧಿಯ ನಿಮಿತ್ತ ಯಾವ ಪದಾರ್ಥಗಳಿವೆಯೋ ಅವುಗಳನ್ನು ಅಗ್ನಿಯಲ್ಲಿ ಹೋಮ ಮಾಡುವುದರಿಂದ ಈ ಜಗತ್ತಿನಲ್ಲಿ ಹೆಚ್ಚು ಹೆಚ್ಚು ಉತ್ತಮ ಸುಖವನ್ನು ವೃದ್ಧಿಸಿಕೊಳ್ಳುವುದು ಮನುಷ್ಯರಿಗೆ ಉಚಿತವಾಗಿದೆ ಮತ್ತು ಅದರಿಂದ ಎಲ್ಲ ಪ್ರಜೆಗಳೂ ಆನಂದವನ್ನು ಪಡೆಯುತ್ತಾರೆ.

ಈಗ ಈಶ್ವರನ ಉಪಾಸಕ ಹಾಗೂ ಪ್ರಜಾಪಾಲನೆ ಮಾಡುವ ಪುರುಷ ಇವರುಗಳು ಏನೇನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ತ್ವಮಗ್ನೇ ವೃಜಿನವರ್ತನಿಂ ನರಂ ಸಕ್ಮನ್ ಪಿಪರ್ಷಿ ವಿದಥೇ ವಿಚರ್ಷಣೇ । ಯಃ ಶೂರಸಾತಾ
ಪರಿತಕ್ಮ್ಯೇ ಧನೇ ದಭ್ರೇಭಿಶ್ಚಿತ್ ಸಮೃತಾ ಹಂಸಿ ಭೂಯಸಃ ॥೬॥

ಪದಾರ್ಥ:- ಹೇ [**ಸಕ್ಮನ್**] ಎಲ್ಲ ಪದಾರ್ಥಗಳ ಸಂಬಂಧವನ್ನು ಮಾಡಿಸುವ [**ವಿಚರ್ಷಣೇ**] ಅನೇಕ ಪ್ರಕಾರದ ಪದಾರ್ಥಗಳನ್ನು ಉತ್ತಮ ರೀತಿಯಲ್ಲಿ ನೋಡುವ [**ಅಗ್ನೇ**] ರಾಜನೀತಿ ವಿದ್ಯೆಯಿಂದ ಶೋಭಾಯಮಾನನಾದ ಸೇನಾಪತಿ! [**ಯಃ**] ಯಾವ ನೀನು [**ವಿದಥೇ**] ಧರ್ಮಯುಕ್ತ ಯಜ್ಞರೂಪೀ [**ಶೂರಸಾತಾ**] ಸಂಗ್ರಾಮದಲ್ಲಿ [**ದಭ್ರೇಭಿಃ**] ಸ್ವಲ್ಪವೇ ಸಾಧನೆಯೊಡನೆ [**ವೃಜಿನವರ್ತನಿಂ**] ಅಧರ್ಮ ಮಾರ್ಗದಲ್ಲಿ ಚಲಿಸುವ [**ನರಮ್**] ಮನುಷ್ಯ ಮತ್ತು [**ಭೂಯಸಃ**] ಬಹಳ ಶತ್ರುಗಳನ್ನು [**ಹಂಸಿ**] ವಧಿಸಲಾಗುತ್ತದೆ. ಮತ್ತು [**ಸಮೃತಾ**] ಉತ್ತಮ ರೀತಿಯಲ್ಲಿ ಸತ್ಯ ಕರ್ಮಗಳನ್ನು [**ಪಿಪರ್ಷಿ**] ಪಾಲನೆ ಮಾಡಲಾಗುತ್ತದೆ. ಯಾವ ಚೋರರು ಪರರ ಪದಾರ್ಥಗಳನ್ನು ಅಪಹರಿಸುವ ಇಚ್ಛೆಯಿಂದ [**ಪರಿತಕ್ಮ್ಯೇ**] ಎಲ್ಲ ಕಡೆಗಳಿಂದ ವೀಕ್ಷಿಸಲು ಯೋಗ್ಯವಾದ [**ಧನೇ**] ಸುವರ್ಣವಿದ್ಯೆ ಮತ್ತು ಚಕ್ರವರ್ತಿ ರಾಜ್ಯಾದಿ ಧನದ ರಕ್ಷಣೆ ನೀಡುವ ಕಾರಣ ನೀನು ಸೇನಾಪತಿ ಪದವನ್ನು ಸ್ವೀಕರಿಸು ಎಂಬುದು ಪರಮಾತ್ಮನ ಆಶಯ.

ಭಾವಾರ್ಥ:- ಯಾರು ಅಧರ್ಮವನ್ನು ಬಿಟ್ಟು ಧರ್ಮವನ್ನಾಚರಿಸುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾರೋ ಅವರು ತಮ್ಮ ಕೃಪೆಯಿಂದ ಶೀಘ್ರವೇ ಧರ್ಮಮಾರ್ಗದಲ್ಲಿ ಸ್ಥಿರವಾಗಿರುತ್ತಾರೆ. ಯಾರು ಧರ್ಮ ಮಾರ್ಗದಲ್ಲಿ ಯುದ್ಧ ಮಾಡುತ್ತಾರೋ ಅಥವಾ ಧನವನ್ನು ಪಡೆಯಲು ಇಚ್ಛಿಸುತ್ತಾರೋ ಅವರನ್ನು ರಕ್ಷಿಸಿ ಅವರ ಕರ್ಮಕ್ಕನುಸಾರವಾಗಿ ಅವರಿಗೆ ಧನವನ್ನು ನೀಡಬೇಕು. ಮತ್ತು ಯಾರು ಖೋಟಾ ಆಚರಣೆಯಲ್ಲಿ ನಿರತರಾಗುತ್ತಾರೋ ಅವರಿಗೆ ಅವರ ಕರ್ಮಕ್ಕನುಸಾರ ದಂಡ ನೀಡಬೇಕು. ಯಾವ ಈಶ್ವರನ ಆಜ್ಞೆಯನ್ನು ಪಾಲಿಸುವ ಧರ್ಮಾತ್ಮರು ಸ್ವಲ್ಪವೇ ಯುದ್ಧದ ಪದಾರ್ಥಗಳಿಂದ ಯುದ್ಧ ಮಾಡಲು ತೊಡಗುತ್ತಾರೋ ಅವರನ್ನು ಈಶ್ವರನು ವಿಜಯಿಗಳನ್ನಾಗಿ ಮಾಡುತ್ತಾನಲ್ಲದೆ ಇತರರನ್ನಲ್ಲ.

ಮತ್ತೆ ಆ ಈಶ್ವರನು ಜೀವರಿಗಾಗಿ ಏನನ್ನು ಮಾಡುತ್ತಾನೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ತ್ವಂ ತಮಗ್ನೇ ಅಮೃತತ್ವ ಉತ್ತಮೇ ಮರ್ತಂ ದಧಾಸಿ ಶ್ರವಸೇ ದಿವೇದಿವೇ । ಯಸ್ತಾತೃಷಾಣ
ಉಭಯಾಯ ಜನ್ಮನೇ ಮಯಃ ಕೃಣೋಷಿ ಪ್ರಯ ಆ ಚ ಸೂರಯೇ ॥೭॥

ಪದಾರ್ಥ:- ಹೇ **[ಅಗ್ನೇ]** ಜಗದೀಶ್ವರ! **[ತ್ವಂ]** ನೀನು **[ಯಃ]** ಯಾವ ಬುದ್ಧಿವಂತನಾದ ಮನುಷ್ಯನು **[ದಿವೇ ದಿವೇ]** ಪ್ರತಿನಿತ್ಯ **[ತಾತೃಷಾಣಃ]** ಪುನರ್ಜನ್ಮದಲ್ಲಿ ತೃಪ್ತನಾಗುತ್ತಾನೋ **[ಶ್ರವಸೇ]** ಆಲಿಸಲು ಯೋಗ್ಯವಾಗಿದ್ದು ತನಗೋಸ್ಕರ ಮೋಕ್ಷವನ್ನು ಇಚ್ಛಿಸುತ್ತಾನೋ **[ಮರ್ತಮ್]** ಅಂತಹ ಮನುಷ್ಯನಿಗೆ **[ಉತ್ತಮೇ]** ಅತ್ಯುತ್ತಮವಾದ **[ಅಮೃತತ್ವೇ]** ಮೋಕ್ಷದಲ್ಲಿ **[ದಧಾಸಿ]** ಸ್ಥಿರಪಡಿಸುತ್ತೀಯೆ ಮತ್ತು ಯಾವ ಬುದ್ಧಿವಂತನು ಅತ್ಯಂತ ಸುಖವನ್ನು ಅನುಭವಿಸಿ ಪುನಃ **[ಉಭಯಾಯ]** ಹಿಂದಿನ ಮತ್ತು ಮುಂದಿನ **[ಜನ್ಮನೇ]** ಜನ್ಮಕ್ಕಾಗಿ ಇಚ್ಛಿಸುವ ಆ ಮೋಕ್ಷಪದದಿಂದ ನಿವೃತ್ತನಾಗುತ್ತಾನೋ ಆ **[ಸೂರಯೇ]** ಬುದ್ಧಿವಂತನಾದ ಸಜ್ಜನಿಗಾಗಿ **[ಮಯಃ]** ಸುಖ ಮತ್ತು **[ಪ್ರಯಃ]** ಪ್ರಸನ್ನತೆಯು **[ಆ ಕೃಣೋಷಿ]** ಸ್ವೀಕಾರಾರ್ಹವಾಗಿದೆ.

ಭಾವಾರ್ಥ:- ಯಾವ ಜ್ಞಾನಿ ಅಥವಾ ಧರ್ಮಾತ್ಮನಾದ ಮನುಷ್ಯನು ಮೋಕ್ಷಪದವನ್ನು ಪಡೆದುಕೊಳ್ಳುತ್ತಾನೋ ಅವನಿಗೆ ಆ ಸಮಯದಲ್ಲಿ ಈಶ್ವರನೇ ಆಧಾರವಾಗಿರುತ್ತಾನೆ. ಯಾವನು ಜನ್ಮವೆತ್ತುತ್ತಾನೋ ಅವನು ಮೊದಲನೆಯವನು ಮತ್ತು ಯಾವನು ಮೃತ್ಯುಹೊಂದುತ್ತಾನೋ ಅವನು ಎರಡನೆಯವನು ಯಾವನು ಇದ್ದಾನೋ ಅವನು ಮೂರನೆಯವನು, ಯಾವನು ವಿದ್ಯೆಯನ್ನು ಆಚಾರ್ಯನಿಂದ ಪಡೆಯುತ್ತಾನೋ ಅವನು ನಾಲ್ಕನೆಯವನಾಗಿ ಜನ್ಮವೆತ್ತುತ್ತಾನೆ. ಈ ನಾಲ್ಕೂ ಜನ್ಮಗಳು ಸೇರಿ ಯಾವನು ಮೋಕ್ಷದ ನಂತರ ಜನ್ಮವೆತ್ತುತ್ತಾನೋ ಅವನದು ಎರಡನೆಯ ಜನ್ಮ. ಈ ಎರಡೂ ಜನ್ಮಗಳ ಧಾರಣೆ ಮಾಡಲು ಎಲ್ಲ ಜೀವಗಳೂ ಆಸಕ್ತಿ ಹೊಂದುತ್ತವೆ. ಮೋಕ್ಷ ಪದದಿಂದ ಬಿಡುಗಡೆ ಹೊಂದಿ ಜಗತ್ತಿನಲ್ಲಿ ಜನ್ಮವೆತ್ತುತ್ತವೆ. ಈ ವ್ಯವಸ್ಥೆಯೂ ಸಹ ಈಶ್ವರನ ಅಧೀನದಲ್ಲಿರುತ್ತದೆ.

ಮತ್ತೆ ಪರಮಾತ್ಮನ ಉಪಾಸಕರು ಪ್ರಜೆಗಳ ಸಲುವಾಗಿ ಹೇಗಿರಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತ್ವಂ ನೋ ಅಗ್ನೇ ಸನಯೇ ಧನಾನಾಂ ಯಶಸಂ ಕಾರುಂ ಕೃಣುಹಿ ಸ್ತವಾನಃ ।
ಋಧ್ಯಾಮ ಕರ್ಮಾಪಸಾ ನವೇನ ದೇವೈರ್ದ್ಯಾವಾಪೃಥಿವೀ ಪ್ರಾವತಂ ನಃ ॥೮॥

ಪದಾರ್ಥ:- ಹೇ [ಅಗ್ನೇ] ಕೀರ್ತಿ ಮತ್ತು ಉತ್ಸಾಹಗಳನ್ನು ಪ್ರಾಪ್ತಿ ಮಾಡಿಕೊಳ್ಳುವ ಜಗದೀಶ್ವರ ಅಥವಾ ಪರಮೇಶ್ವರನ ಉಪಾಸಕನೇ! [ತ್ವಂ] ನೀನು [ಸ್ತವಾನಃ] ಸ್ತುತಿಸಲ್ಪಡುತ್ತಾ [ನಃ] ನಮ್ಮ [ಧನಾನಾಮ್] ವಿದ್ಯೆ,

ಸುವರ್ಣ, ಚಕ್ರವರ್ತಿರಾಜ್ಯದ ಪ್ರಸಿದ್ಧ ಧನವನ್ನು [ಸನಯೇ ಕರ್ಮ] ಯಥಾಯೋಗ್ಯ ಕಾರ್ಯಗಳಲ್ಲಿ ವ್ಯಯ ಮಾಡುವುದಕ್ಕೋಸ್ಕರ [ಯಶಸಂ] ಕೀರ್ತಿಯುಕ್ತ [ಕಾರುಮ್] ಉತ್ಸಾಹದಿಂದ ಉತ್ತಮ ಕರ್ಮ ಮಾಡುವ ಉದ್ಯೋಗಿ ಮನುಷ್ಯನನ್ನು ನಿಯುಕ್ತರನ್ನಾಗಿ [ಕೃಣುಹಿ] ಮಾಡಿ, ಆದರಿಂದ ನಾವು [ನವೇನ] ನವೀನ [ಅಪಸಾ] ಪುರುಷಾರ್ಥದೊಡನೆ [ಋಧ್ಯಾಮ] ಪ್ರತಿನಿತ್ಯವೂ ವೃದ್ಧಿಯಾಗುತ್ತಾ ಹೋಗುತ್ತೇವೆ. ಮತ್ತು ನೀವಿಬ್ಬರೂ ವಿದ್ಯೆಯನ್ನು ಪಡೆದುಕೊಳ್ಳಲೋಸುಗ [ದೇವೈಃ] ವಿದ್ವಾಂಸರೊಡನೆ ಕಾರ್ಯ ನಿರ್ವಹಿಸುತ್ತಾ [ನಃ] ನಮ್ಮನ್ನು ಮತ್ತು [ದ್ಯಾವಾ ಪೃಥಿವೀ] ಪ್ರಕಾಶಮಾನನಾದ ಸೂರ್ಯನನ್ನು ಮತ್ತು ಭೂಮಿಯನ್ನು [ಪ್ರಾವತಮ್] ರಕ್ಷಿಸಿರಿ.

ಭಾವಾರ್ಥ:- ಹೇ ಪರಮೇಶ್ವರ! ಕೃಪೆಮಾಡಿ ನಮ್ಮಲ್ಲಿ ಉತ್ತಮ ಧನವನ್ನು ನೀಡುವ, ಎಲ್ಲ ಶಿಲ್ಪ ವಿದ್ಯೆಯ ಅರಿವಿರುವ ಉತ್ತಮ ವಿದ್ವಾಂಸರನ್ನು ತಯಾರುಮಾಡು. ಅದರಿಂದ ನಾವು ಅವರೊಡನೆ ಹೊಸ ಹೊಸ ಪುರುಷಾರ್ಥದಿಂದ ಪೃಥಿವೀ ರಾಜ್ಯ ಮತ್ತು ಎಲ್ಲ ಪದಾರ್ಥಗಳೊಡನೆ ಉಪಕಾರವನ್ನು ಮಾಡೋಣ.

ಮತ್ತೆ ಅವನು ಹೇಗಿದ್ದಾನೆ ಎಂಬ ವಿಷಯವನ್ನು ಇಲ್ಲಿ ತಿಳಿಸಲಾಗುತ್ತದೆ.

ತ್ವಂ ನೋ ಅಗ್ನೇ ಪಿತ್ರೋರುಪಸ್ಥ ಆ ದೇವೋ ದೇವೇಷ್ವನವದ್ಯ ಜಾಗೃವಿಃ ।
ತನೂಕೃದ್ ಬೋಧಿ ಪ್ರಮತಿಶ್ಚ ಕಾರವೇ ತ್ವಂ ಕಲ್ಯಾಣ ವಸು ವಿಶ್ವಮೋಪಿಷೇ ॥೯॥

ಪದಾರ್ಥ:- ಹೇ **[ಅನವದ್ಯ]** ಉತ್ತಮ ಕರ್ಮಯುಕ್ತ ಎಲ್ಲ ಪದಾರ್ಥಗಳನ್ನು ತಿಳಿಯುವ ಸಭಾಪತಿ! **[ಅಗ್ನೇ]** ವಿಜ್ಞಾನ ಪ್ರಕಾಶಕನಾದ ನಾಯಕನೇ! **[ತ್ವಂ]** ನೀನು **[ಜಾಗೃವಿಃ]** ಧರ್ಮಯುಕ್ತ ಪುರುಷಾರ್ಥದಲ್ಲಿ ಪ್ರಸಿದ್ಧನಾಗಿರುವ **[ದೇವಃ]** ಎಲ್ಲವನ್ನೂ ಪ್ರಕಾಶಗೊಳಿಸುವ **[ಚ]** ಮತ್ತು **[ತನೂಕೃತ್]** ವಿಶಾಲವಾದ ಪೃಥಿವಿ ಆದಿ ದೊಡ್ಡ ದೊಡ್ಡ ಲೋಕಗಳಲ್ಲಿ ಇರತಕ್ಕ ನೀನು **[ದೇವೇಷು]** ವಿದ್ವಾಂಸ ಅಥವಾ ಅಗ್ನಿ ಆದಿ ತೇಜಸ್ವೀ ದಿವ್ಯಗುಣಯುಕ್ತ ಲೋಕಗಳಲ್ಲಿ **[ಪಿತ್ರೋಃ]** ಮಾತಾ-ಪಿತೃಗಳ **[ಉಪಸ್ಥೇ]** ಸಮೀಪಸ್ಥ ವ್ಯವಹಾರದಲ್ಲಿ **[ನಃ]** ನಮ್ಮನ್ನು **[ಊಪಿಷೇ]** ಪ್ರತಿಬಾರಿಯೂ ತೊಡಗಿಸು. ಹೇ ಅನಂತ ಸುಖವನ್ನು ನೀಡುವ ರಾಜನೇ! **[ಪ್ರಮತಿಃ]** ಉತ್ತಮ ಜ್ಞಾನವನ್ನು ನೀಡುವ **[ತ್ವಂ]** ನೀನು **[ಕಾರವೇ]** ಶಿಲ್ಪಕಲೆಯನ್ನು ಅಥವಾ ಕಲಾಕೌಶಲ್ಯವನ್ನು ಇಚ್ಛಿಸುವವನೇ! ನನಗೆ **[ಕಲ್ಯಾಣ]** ಕಲ್ಯಾಣಕಾರಕವಾದ **[ವಸು]** ವಿದ್ಯೆ, ಚಕ್ರವರ್ತೀರಾಜ್ಯ ಇತ್ಯಾದಿ ಪದಾರ್ಥಗಳೊಡನೆ ಸಜ್ಜುಗೊಂಡಿರುವ **[ವಿಶ್ವಮ್]** ಸಮಸ್ತ ಧನದ **[ಆಬೋಧಿ]** ಉತ್ತಮ ಪ್ರಕಾರದೊಡನೆ ಬೋಧನೆ ಮಾಡು.

ಭಾವಾರ್ಥ:- ಹೇ ಭಗವನ್! ನೀನು ಯಾವಾಗಲೆಲ್ಲಾ ಜನ್ಮವನ್ನು ನೀಡುತ್ತೀಯೋ ಆವಾಗಲೆಲ್ಲಾ ಶ್ರೇಷ್ಠ ವಿದ್ವಾಂಸರ ಸಂಬಂಧದಲ್ಲಿ ಬರುವಂತೆ ಜನ್ಮವನ್ನು ನೀಡು ಮತ್ತು ಅಲ್ಲಿ ನಮಗೆ ಸರ್ವವಿದ್ಯೆಯನ್ನೂ ಅನುಗ್ರಹಿಸುವಂತೆ ಮಾಡು. ಅದರಿಂದ ನಾವು ಎಲ್ಲ ಧನವನ್ನೂ ಪಡೆದು ಸುಖದಿಂದಿರುವಂತೆ ಮಾಡು ಎಂದು ಪುನಃ ಈಶ್ವರನನ್ನು ಪ್ರಾರ್ಥಿಸಬೇಕು.

ಮತ್ತೆ ಅವನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗುತ್ತದೆ.

ತ್ವಮಗ್ನೇ ಪ್ರಮತಿಸ್ತ್ವಂ ಪಿತಾಸಿ ನಸ್ತ್ವಂ ವಯಸ್ಕೃತ್ತವ ಜಾಮಯೋ ವಯಮ್ ।
ಸಂ ತ್ವಾ ರಾಯಃ ಶತಿನಃ ಸಂ ಸಹಸ್ರಿಣಃ ಸುವೀರಂ ಯಂತಿ ವ್ರತಪಾಮದಾಭ್ಯ ॥೧೦॥

ಪದಾರ್ಥ:- ಹೇ [ಅದಾಭ್ಯ] ಉತ್ತಮಕರ್ಮಯುಕ್ತ [ಅಗ್ನೇ] ರಚನಾಕಾರ್ಯವನ್ನು ಯಥಾಯೋಗ್ಯ ತಿಳಿದಿರುವ ಸಭಾಧ್ಯಕ್ಷನೇ! [ಪ್ರಮತಿಃ] ಅತ್ಯಂತ ಪ್ರತಿಷ್ಠಾವಂತನಾದ [ತ್ವಮ್] ಸಮಸ್ತ ಸುಖವನ್ನು ಪ್ರಕಟಪಡಿಸುವ

ನೀನು **[ನಃ]** ನಮ್ಮ ಪಾಲನೆ ಮಾಡುವ ಹಾಗೂ **[ತ್ವಮ್]** ಆಯುಸ್ಸನ್ನು ವೃದ್ಧಿಗೊಳಿಸುವ ನೀನು ನಮಗೆ **[ವಯಃ ಕೃತ್]** ವೃದ್ಧಾವಸ್ಥೆಯವರೆಗೆ ವಿದ್ಯಾಸುಖದಲ್ಲಿ ಆಯುಸ್ಸನ್ನು ಕಳೆಯುವಂತೆ ಮಾಡುತ್ತೀಯೆ. **[ತವ]** ಸುಖವನ್ನು ನೀಡುವ ನಿನ್ನ ಕೃಪೆಯಿಂದ ನಾವು **[ಜಾಮಯಃ]** ಜ್ಞಾನವಂತ ಸಂತಾನವನ್ನು ಪಡೆಯುವಂತಾಗಲಿ. ದಯಾವಂತನಾದ **[ತ್ವಮ್]** ನೀನು ಅಂತಹ ವ್ಯವಸ್ಥೆಯನ್ನು ಮಾಡು. ಮತ್ತು ಹೇಗೆ **[ಶತಿನಃ]** ನೂರಾರು ಅಥವಾ **[ಸಹಸ್ರಿಣಃ]** ಸಹಸ್ರಾರು ಪ್ರಶಂಸನೀಯ ಪದಾರ್ಥವಿದ್ಯೆಯ ಅಥವಾ ಕರ್ಮಯುಕ್ತ ವಿದ್ವಾಂಸರು **[ವ್ರತಪಾಮ್]** ಸತ್ಯವನ್ನು ಪಾಲಿಸುವವರು **[ಸುವೀರಮ್]** ಆದ ಉತ್ತಮ ವೀರರನ್ನು ಪಡೆದುಕೊಂಡು **[ರಾಯಃ]** ಧನವನ್ನು **[ಸಮ್ ಯಂತಿ]** ಉತ್ತಮ ರೀತಿಯಲ್ಲಿ ಪಡೆದುಕೊಳ್ಳುತ್ತಾರೋ ಅಂತೆಯೇ ನಿಮ್ಮ ಆಶ್ರಯದಲ್ಲಿರುವ ನಾವೂ ಸಹ ಆ ಧನವನ್ನು ಪಡೆದುಕೊಳ್ಳುವಂತಾಗಲಿ.

ಭಾವಾರ್ಥ:- ಹೇಗೆ ಪಾಲನೆ ಮಾಡುವವರು ಸಂತಾನವನ್ನು ಮಾನ್ಯಮಾಡಿ ಸತ್ಕಾರ ಮಾಡಲು ಯೋಗ್ಯರನ್ನಾಗಿ ಮಾಡುತ್ತಾರೋ, ಅಂತೆಯೇ ಪ್ರಜೆಗಳಿಗೆ ಸಭಾಪತಿ ರಾಜನು ಇರುತ್ತಾನೆ.

ಮತ್ತೆ ಅವನು ಹೇಗಿದ್ದಾನೆ ಮತ್ತು ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ತ್ವಾಮಗ್ನೇ ಪ್ರಥಮಮಾಯುಮಾಯವೇ ದೇವಾ ಅಕೃಣ್ವನ್ನಹುಷಸ್ಯ ವಿಶ್ಪತಿಮ್ । ಇಳಾಮಕೃಣ್ವನ್
ಮನುಷಸ್ಯ ಶಾಸನೀಂ ಪಿತುರ್ಯತ್ ಪುತ್ರೋ ಮಮಕಸ್ಯ ಜಾಯತೇ ॥೧೧॥

ಪದಾರ್ಥ:- ಹೇ **[ಅಗ್ನೇ]** ವಿಶೇಷಜ್ಞಾನವಾನ್ ಸಭಾಧ್ಯಕ್ಷ! ಅಥವಾ ಅಮೃತ ಸ್ವರೂಪ ಸಭಾಪತೇ! **[ದೇವಾಃ]** ವಿದ್ವಾಂಸರು **[ಶಾಸನೀಮ್]** ಸತ್ಯಾಸತ್ಯದ ನಿರ್ಣಯದ ಕಾರಣ **[ಇಳಾಮ್]** ನಾಲ್ಕೂ ವೇದಗಳ ಜ್ಞಾನದ **[ಆಕೃಣ್ವನ್]** ಪ್ರಕಟಣೆಯನ್ನು ಮಾಡಿದರು. **[ನಹುಷಸ್ಯ]** ಮನುಷ್ಯನ **[ಆಯವೇ]** ವಿಶೇಷ ಜ್ಞಾನದ ವೃದ್ಧಿಗಾಗಿ **[ಶಾಸನೀಮ್]** ಯಾವುದರಿಂದ ಎಲ್ಲ ವಿದ್ಯೆ ಮತ್ತು ಧರ್ಮಾಚರಣೆಯಿಂದ ಕೂಡಿದ ನೀತಿಯಿಂದ ಅದನ್ನು ಗ್ರಹಿಸಿ **[ಪ್ರಥಮಮ್]** ಅನಾದಿ ಸ್ವರೂಪನು ಯಾವ ನ್ಯಾಯದೊಡನೆ ಪ್ರಜೆಗಳ ಯೋಗ್ಯತೆಯನ್ನು ಪಡೆದುಕೊಂಡು **[ವಿಶ್ಪತಿಮ್]** ಪ್ರಜಾಪುತ್ರ ಇತ್ಯಾದಿಗಳ ರಕ್ಷಣೆ ಮಾಡುವ ಸಭಾಪತಿ ರಾಜನಿಗೆ ನಾಲ್ಕೂ ವೇದಗಳ ಜ್ಞಾನ ಅಥವಾ ಸತ್ಯವ್ಯವಸ್ಥೆಯನ್ನು **[ಆ ಕೃಣ್ವನ್]** ಪ್ರಕಟಣೆ ಮಾಡಲಾಗಿದೆ. **[ಪಿತುಃ]** ತಂದೆಯು **[ಯತ್]** ಯಾವರೀತಿ **[ಪುತ್ರಃ]** ಮಗನಿಗೆ ಮಾಗದರ್ಶನ ಮಾಡುತ್ತಾನೋ ಹಾಗೆಯೇ **[ಮಮಕಸ್ಯ]** ಜ್ಞಾನವಂತನಾದ **[ಮನುಷಸ್ಯ ಜಾಯತೇ]** ಮನುಷ್ಯನ ಯಾವ ವೇದವಾಣಿ ಇದೆಯೋ ಅದನ್ನು ನೀನು ಪ್ರಕಟಗೊಳಿಸು.

ಭಾವಾರ್ಥ:- ಈಶ್ವರನ ವ್ಯವಸ್ಥೆಯನ್ನು ಆಚರಣೆಗೆ ತರುವವರು ವೇದಶಾಸ್ತ್ರ ಮತ್ತು ರಾಜನೀತಿಗಳ ವಿನಾ ಪ್ರಜಾಪಾಲನೆ ಮಾಡುವ ಸಭಾಪತಿ ರಾಜನು ಪ್ರಜೆಗಳನ್ನು ಪಾಲಿಸಲಾಗುವುದಿಲ್ಲವೋ ಮತ್ತು ರಾಜನ ಆಜ್ಞೆ ಪ್ರಜೆಗಳಿಗೆ, ಮಕ್ಕಳಿಗೆ ಸಮಾನವಾಗುತ್ತದೆ. ಇದರಿಂದ ಸಭಾಪತಿ ರಾಜನು ಪ್ರಜೆಗಳನ್ನು ಮಕ್ಕಳಂತೆ ಪರಿಗಣಿಸಿ ಶಿಕ್ಷಣವನ್ನು ನೀಡಬೇಕು.

ಮತ್ತೆ ಸಭಾಪತಿಯ ವರ್ಣನೆಯನ್ನೇ ಮಾಡಲಾಗಿದೆ.

ತ್ವಂ ನೋ ಅಗ್ನೇ ತವ ದೇವ ಪಾಯುಭಿ-ರ್ಮಘೋನೋ ರಕ್ಷ ತನ್ವಶ್ಚ ವಂದ್ಯ ।
ತ್ರಾತಾ ತೋಕಸ್ಯ ತನಯೇ ಗವಾಮ-ಸ್ಯನಿಮೇಷಂ ರಕ್ಷಮಾಣಸ್ತವ ವ್ರತೇ ॥೧೨॥

ಪದಾರ್ಥ:- ಹೇ **[ದೇವ]** ಎಲ್ಲ ಸುಖವನ್ನೂ ನೀಡುವ **[ವಂದ್ಯ]** ಸ್ತುತಿಸಲು ಯೋಗ್ಯನಾದ ಮತ್ತು **[ಅಗ್ನೇ]** ಎಲ್ಲರ ರಕ್ಷಣೆಯನ್ನು ಯಥೋಚಿತವಾಗಿ ಮಾಡುವ ಸಭೇಶ್ವರ! **[ತವ]** ಸರ್ವಾಧಿಪತಿಯಾದ ನಿನ್ನ **[ವ್ರತೇ]** ಸತ್ಯಪಾಲನೆ ಇತ್ಯಾದಿ ನಿಯಮದಲ್ಲಿ ಪ್ರವೃತ್ತನಾಗಿರುವ ಮತ್ತು **[ಮಘೋನಃ]** ಪ್ರಶಂಸನೀಯನೂ ಧನವಂತನೂ ಆದ **[ತ್ವಂ]** ನೀನು **[ನಃ]** ನಮ್ಮ ಮತ್ತು ನಮ್ಮವರ **[ತನ್ವಃ]** ಶರೀರಗಳಿಗೆ **[ಪಾಯುಭಿಃ]** ಉತ್ತಮ ರಕ್ಷಣೆ ಇತ್ಯಾದಿ ವ್ಯವಹಾರಗಳೊಡನೆ **[ಅನಿಮೇಷಮ್]** ಪ್ರತಿಕ್ಷಣವೂ **[ರಕ್ಷ]** ಪಾಲಿಸು. **[ಚ]** ಮತ್ತು **[ರಕ್ಷಮಾಣಃ]** ರಕ್ಷಣೆ ಮಾಡುತ್ತಾ ನೀನು ಯಾವ ನಿನ್ನ ಮೇಲೆ ತಿಳಿಸಿದ ನಿಯಮದಲ್ಲಿ ಪ್ರಸಕ್ತ **[ತೋಕಸ್ಯ]** ಚಿಕ್ಕ ಪುಟ್ಟ ಮಕ್ಕಳ ಅಥವಾ **[ಗವಾಮ್]** ಪ್ರಾಣಿಗಳ ಮನಸ್ಸು ಇತ್ಯಾದಿ ಇಂದ್ರಿಯಗಳ ಮತ್ತು ಗೋವು, ಎತ್ತು ಇತ್ಯಾದಿ ಪಶುಗಳಿವೆಯೋ ಅವುಗಳ ಹಾಗೂ **[ಅಸ್ಯ]** ಎಲ್ಲ ಚರಾಚರ ಜಗತ್ತನ್ನು ಪ್ರತಿಕ್ಷಣ **[ತ್ರಾತಾ]** ರಕ್ಷಣೆ ಮಾಡುವುದಲ್ಲದೆ ಅತ್ಯಂತ ಆನಂದವನ್ನೂ ಸಹ ನೀಡುವಂತಹವನಾಗು.

ಭಾವಾರ್ಥ:- ಈಶ್ವರನ ಯಾವ ಜಗತ್ತಿನ ಧಾರಣೆ ಮತ್ತು ಪಾಲನೆ ಇತ್ಯಾದಿ ಗುಣಗಳಿವೆಯೋ ಅವುಗಳಿಗೆ ಸಮಾನವಾಗಿ ಸಭಾಪತಿ ರಾಜನು ಉತ್ತಮ ಗುಣಗಳೊಡನೆ ತನ್ನ ರಾಜ್ಯದ ನಿಯಮಗಳಲ್ಲಿ ಪ್ರವೃತ್ತರಾಗಿರುವ ಪ್ರಜೆಗಳ ರಕ್ಷಣೆಯನ್ನು ನಿರಂತರವೂ ಮಾಡಬೇಕು.

ಈಗ ಭೌತಿಕ ಅಗ್ನಿಗುಣಯುಕ್ತನಾದ ಸಭಾಪತಿಯ ಬಗೆಗೆ ಹೇಳಲಾಗುತ್ತದೆ.

ತ್ವಮಗ್ನೇ ಯಜ್ಯವೇ ಪಾಯುರಂತರೋಽನಿಷಂಗಾಯ ಚತುರಕ್ಷ ಇಧ್ಯಸೇ । ಯೋ
ರಾತಹವ್ಯೋಽವೃಕಾಯ ಧಾಯಸೇ ಕೀರೇಶ್ಚಿನ್ಮಂತ್ರಂಮನಸಾವನೋಷಿತಮ್ ॥೧೩॥

ಪದಾರ್ಥ:- ಹೇ **[ಅಗ್ನೇ]** ಸಭಾಪತಿಯೇ! **[ತ್ವಂ]** ನೀನು **[ಮನಸಾ]** ವಿಶೇಷ ಜ್ಞಾನದಿಂದ **[ಮಂತ್ರಮ್]** ವಿಚಾರ ಅಥವಾ ವೇದಮಂತ್ರ ಪಠನ ಮಾಡುವವರ **[ಚಿತ್]** ಸಮಾನವಾದ **[ರಾತಹವ್ಯಃ]** ಹೋಮದಲ್ಲಿ ವಿನಿಯೋಗಿಸುವಲ್ಲಿ ಯೋಗ್ಯವಾದ ಪದಾರ್ಥಗಳನ್ನು ಕೊಡ ಮಾಡುವ **[ಪಾಯುಃ]** ಪಾಲನೆಗೆ ಕಾರಣವಾದವರ **[ಅಂತರಃ]** ಮಧ್ಯದಲ್ಲಿ ಇರುವವರ ಮತ್ತು **[ಚತುರಕ್ಷಃ]** ಸೇನೆಯ ಅಂಗವಾಗಿರುವ ಎಂದರೆ ಆನೆ, ಕುದುರೆ ಮತ್ತು ರಥಗಳ ಆಸರೆಯಿಂದ ಯುದ್ಧವನ್ನು ಮಾಡುವವರ ಮತ್ತು ಕಾಲಾಳು ಯೋದ್ಧರಲ್ಲಿ ಉತ್ತಮ ಪ್ರಕಾರದ ಮನಸ್ಸನ್ನು ನೀಡುವವರ **[ಅನಿಷಂಗಾಯ]** ಯಾವ ಪಕ್ಷಪಾತ ರಹಿತ ನ್ಯಾಯಯುಕ್ತ **[ಅವೃಕಾಯ]** ಕಳ್ಳತನ ಇತ್ಯಾದಿ ದೋಷವನ್ನು ಸರ್ವಥಾ ತ್ಯಾಗ ಮಾಡುವ ಮತ್ತು **[ಧಾಯಸೇ]** ಉತ್ತಮ ಗುಣಗಳ ಧಾರಣೆ **[ಯಜ್ಯವೇ]** ಹಾಗೂ ಯಜ್ಞ ಅಥವಾ ಶಿಲ್ಪವಿದ್ಯೆಯನ್ನು ಅಭ್ಯಾಸ ಮಾಡುವ ಮನುಷ್ಯನು **[ಇಧ್ಯಸೇ]** ತೇಜಸ್ವಿಯಾಗಿ ತನ್ನ ಪ್ರತಾಪವನ್ನು ತೋರಿಸುತ್ತಾನೋ **[ತಂ]** ಅವನನ್ನು **[ವನೋಷಿ]** ಉಪಚರಿಸಲಾಗುತ್ತದೋ **[ಕೀರೇಃ]** ಪ್ರಶಂಸನೀಯ ಮಾತುಗಳನ್ನಾಡುವ ವಿದ್ವಾಂಸನಿಂದ ವಿನೀತನಾಗಿ ಅವನು ಪ್ರಜೆಗಳ ಪಾಲನೆಯನ್ನು ಮಾಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ವಿದ್ಯಾರ್ಥಿಗಳು ಅಧ್ಯಾಪಕರೊಡನೆ ಎಂದರೆ ಕಲಿಸುವವರೊಂದಿಗೆ ಉತ್ತಮ ವಿಚಾರಗಳಿಂದ ಕೂಡಿ ವಿದ್ಯಾರ್ಥಿಗಳಾಗಿ ಸೇವೆಯನ್ನು ಮಾಡುತ್ತಾರೋ ಅಂತೆಯೇ ನೀನೂ ಸಹ ಧಾರ್ಮಿಕ ವಿದ್ವಾಂಸರ ಉಪದೇಶಕ್ಕನುಕೂಲವಾಗಿದ್ದು ರಾಜಧರ್ಮದ ಪಾಲನೆಯನ್ನು ಮಾಡುತ್ತಿರು.

ಮತ್ತೆ ಅದೇ ವಿಷಯವನ್ನು ಇಲ್ಲಿ ತಿಳಿಸಲಾಗುತ್ತದೆ.

ತ್ವಮಗ್ನ ಉರುಶಂಸಾಯ ವಾಘತೇ ಸ್ಪಾರ್ಹಂ ಯದ್ರೇಕ್ಣಃ ಪರಮಂ ವನೋಷಿ ತತ್ ।
ಆಧ್ರಸ್ಯ ಚಿತ್ ಪ್ರಮತಿರುಚ್ಯಸೇ ಪಿತಾ ಪ್ರ ಪಾಕಂ ಶಾಸ್ಸಿ ಪ್ರ ದಿಶೋ ವಿದುಷ್ಟರಃ ॥೧೪॥

ಪದಾರ್ಥ:- ಹೇ **[ಅಗ್ನೇ]** ವಿಶೇಷಜ್ಞಾನವನ್ನು ಹೊಂದಿರುವ ನ್ಯಾಯಕಾರಿಯೇ! **[ಯತ್]** ಯಾವ ಕಾರಣಕ್ಕಾಗಿ **[ಪ್ರಮತಿಃ]** ಉತ್ತಮ ಜ್ಞಾನದಿಂದ ಕೂಡಿದ **[ವಿದುಷ್ಟರಃ]** ನಾನಾ ಪ್ರಕಾರದ ದುಃಖಗಳಿಂದ ದೂರವಾಗುವ **[ತ್ವಂ]** ನೀನು **[ಉರುಶಂಸಾಯ]** ಬಹಳ ಪ್ರಕಾರದ ಸ್ತುತಿ ಮಾಡುವ **[ವಾಘತೇ]** ಋತ್ವಿಜರಿಗೋಸ್ಕರ **[ಸ್ಪಾರ್ಹಮ್]** ಇಷ್ಟ ಪಡಲು ಯೋಗ್ಯವಾದ **[ಪರಮಮ್]** ಅತ್ಯುತ್ತಮವಾದ **[ರೇಕ್ಣ್ಣಃ]** ಧನ **[ಪ್ರ ಪಾಕಮ್]** ಪವಿತ್ರ ಧರ್ಮ ಮತ್ತು **[ದಿಶಃ]** ಉತ್ತಮ ವಿದ್ವಾಂಸರುಗಳಿಗೆ **[ವನೋಷಿ]** ಉತ್ತಮ ರೀತಿಯಲ್ಲಿ ಇಚ್ಛಿಸುವಂತಹ ಮತ್ತು ರಾಜ್ಯವನ್ನು ಧರ್ಮದಿಂದ **[ಆಧ್ರುಸ್ಯ]** ಧಾರಣೆ ಮಾಡಿಕೊಳ್ಳುವ **[ಪಿತಾ ಚಿತ್]** ಪಿತನಿಗೆ ಸಮಾನನಾಗಿದ್ದು ಎಲ್ಲರಿಗೂ **[ಪ್ರ ಶಾಸ್ಸಿ]** ಉಪದೇಶ ಮಾಡುತ್ತೀಯೆ. **[ತತ್ ಉಚ್ಯಸೇ]** ಇದರಿಂದ ನೀನು ಎಲ್ಲರಿಗೂ ಮಾನನೀಯನಾಗು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ತಂದೆಯು ತನ್ನ ಮಕ್ಕಳನ್ನು ಪಾಲನೆ ಮಾಡುತ್ತಾನೋ ಅಥವಾ ಅವರಿಗೆ ಧನವನ್ನು ನೀಡುತ್ತಾನೋ ಅಥವಾ ಶಿಕ್ಷಣ ಇತ್ಯಾದಿಗಳನ್ನು ಕೊಡುತ್ತಾನೋ ಅಂತೆಯೇ ರಾಜನು ಎಲ್ಲ ಪ್ರಜೆಗಳ ರಕ್ಷಣೆ ಮಾಡುತ್ತಾ ಎಲ್ಲ ಜೀವರುಗಳಿಗೆ ಯಥಾಯೋಗ್ಯ ಧನವನ್ನು ನೀಡುವುದರಿಂದ ಅವರವರ ಕರ್ಮಗಳಿಗನುಸಾರ ಸುಖದುಃಖಗಳನ್ನು ಕೊಡುತ್ತಿರುತ್ತಾನೆ.

ಅವನು ಏನನ್ನು ಮಾಡುತ್ತಾನೆ ಎಂಬುದನ್ನು ಹೇಳಲಾಗಿದೆ.

ತ್ವಮಗ್ನೇ ಪ್ರಯತದಕ್ಷಿಣಂ ನರಂ ವರ್ಮೇವ ಸ್ಯೂತಂ ಪರಿ ಪಾಸಿ ವಿಶ್ವತಃ । ಸ್ವಾದುಕ್ಷದ್ಮಾ
ಯೋ ವಸತಾ ಸ್ಯೋನಕೃ-ಜ್ಜೀವಯಾಜಂ ಯಜತೇ ಸೋಪಮಾ ದಿವಃ ॥೧೫॥

ಪದಾರ್ಥ:- ಹೇ **[ಅಗ್ನೇ]** ಎಲ್ಲರನ್ನೂ ಉತ್ತಮ ರೀತಿಯಲ್ಲಿ ತಿಳಿದುಕೊಳ್ಳುವ ಸಭಾಪತಿ! **[ವರ್ಮೇವ]** ದೇಹವನ್ನು ರಕ್ಷಿಸುವ ಕವಚಕ್ಕೆ ಸಮಾನವಾಗಿರುವ **[ತ್ವಂ]** ನೀನು **[ಯಃ]** ಯಾವ **[ಸ್ವಾದುಕ್ಷದ್ಮಾ]** ಮಧುರವಾದ ಅನ್ನ ಹಾಗೂ ಶುದ್ಧ ನೀರನ್ನು ಸೇವಿಸುವ **[ಸ್ಯೋನಕೃತ್]** ಎಲ್ಲರಿಗೂ ಸುಖಕಾರಿಯಾದ ಮನುಷ್ಯನ **[ಯಃ ವಸತಾ]** ಯಾವ ನಿವಾಸ ಸ್ಥಳದಲ್ಲಿ ನಾನಾ ಸಲಕರಣೆಗಳಿಂದ ಕೂಡಿದ **[ಯಜತೇ]** ಯಜ್ಞವನ್ನು ಮಾಡಲಾಗುತ್ತದೋ ಆ **[ಪ್ರಯತದಕ್ಷಿಣಮ್]** ಉಚ್ಚರೀತಿಯಲ್ಲಿ ವಿದ್ಯಾಧರ್ಮದ ಉಪದೇಶ ಮಾಡುವ ಮತ್ತು **[ಜೀವಯಾಜಮ್]** ಜೀವರುಗಳಿಗೆ ಯಜ್ಞ ಮಾಡಿಸುವ **[ಸ್ಯೂತಮ್]** ಅನೇಕ ಸಾಧನೆಗಳಿಂದ ಕಲಾಕೌಶಲ್ಯದಲ್ಲಿ ಚತುರನಾದ **[ನರಮ್]** ನಮ್ರನಾದ ಮನುಷ್ಯನನ್ನು **[ವಿಶ್ವತಃ]** ಎಲ್ಲ ಪ್ರಕಾರದಿಂದ **[ಪರಿಪಾಸಿ]** ಪಾಲಿಸುತ್ತೀಯೆ. **[ಸಃ]** ಅಂತಹ ಧರ್ಮಾತ್ಮ ಹಾಗೂ ಪರೋಪಕಾರಿ ವಿದ್ವಾಂಸನಾದ ನೀನು **[ದಿವಃ]** ಸೂರ್ಯನ ಪ್ರಕಾಶದಂತೆ, **[ಉಪಮಾ]** ಸೂರ್ಯನ ಸದೃಶನಾಗುತ್ತೀಯೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಎಲ್ಲರಿಗೂ ಸುಖವನ್ನು ಉಂಟುಮಾಡುವ ಪುರುಷಾರ್ಥಿ ಮನುಷ್ಯರು ಸ್ವಪ್ರಯತ್ನದೊಡನೆ ಯಜ್ಞವನ್ನು ಆಚರಿಸುತ್ತಾರೋ ಅವರು, ಹೇಗೆ ಸೂರ್ಯನು ಎಲ್ಲರನ್ನೂ ಪ್ರಕಾಶಿತರನ್ನಾಗಿ ಮಾಡಿ ಸುಖವನ್ನು ನೀಡುತ್ತಾನೋ ಅಂತೆಯೇ ಎಲ್ಲರಿಗೂ ಸುಖವನ್ನು ನೀಡುವವರಾಗುತ್ತಾರೆ. ಹೇಗೆಂದರೆ ಯುದ್ಧದಲ್ಲಿ ಪ್ರವೃತ್ತರಾದ ವೀರರನ್ನು ಶಸ್ತ್ರಗಳಿಂದಾಗುವ ಗಾಯಗಳಿಂದ ಕವಚಗಳು ಹೇಗೆ ರಕ್ಷಿಸುತ್ತವೋ ಹಾಗೆಯೇ ಸಭಾಪತಿ ರಾಜ ಮತ್ತು ರಾಜನ ಸಿಬ್ಬಂದಿವರ್ಗ ಎಲ್ಲ ಧರ್ಮಾತ್ಮ ಸಜ್ಜನರನ್ನು ಎಲ್ಲ ದುಃಖಗಳಿಂದ ರಕ್ಷಿಸುತ್ತಿರಲಿ.

ಮತ್ತೆ ಅದೇ ವಿಷಯವನ್ನು ತಿಳಿಸಲಾಗುತ್ತದೆ.

ಇಮಾಮಗ್ನೇ ಶರಣಿಂ ಮೀಮೃಷೋ ನ ಇಮಮಧ್ವಾನಂ ಯಮಗಾಮ ದೂರಾತ್ ।
ಆಪಿಃ ಪಿತಾ ಪ್ರಮತಿಃ ಸೋಮ್ಯಾನಾಂ ಭೃಮಿರಸ್ಯೃಷಿಕೃನ್ಮರ್ತ್ಯಾನಾಮ್ ॥೧೬॥

ಪದಾರ್ಥ:- **[ಅಗ್ನೇ]** ಎಲ್ಲರಿಗೂ ತಾಳ್ಮೆಯನ್ನು ನೀಡುವ ಸರ್ವೋತ್ತಮ ವಿದ್ವಾನ್! ಯಾವ ನೀನು **[ಸೋಮ್ಯಾನಾಮ್]** ಶಾಂತಿ ಆದಿ ಗುಣಗಳನ್ನು ಹೊಂದಿರುವ **[ಮರ್ತ್ಯಾನಾಮ್]** ಮಾನವರಿಗೆ **[ಆಪಿಃ]** ಪ್ರೀತಿಯಿಂದ ಪ್ರಾಪ್ತನೂ ಮತ್ತು **[ಪಿತಾ]** ಸರ್ವಪಾಲಕನೂ **[ಪ್ರಮತಿಃ]** ಉತ್ತಮ ವಿದ್ಯಾಯುಕ್ತನೂ **[ಭೃಮಿಃ]** ನಿತ್ಯವೂ ಭ್ರಮಣ ಮಾಡುವವನೂ ಮತ್ತು **[ಋಷಿಕೃತ್ ಅಸಿ]** ವೇದಾರ್ಥವನ್ನು ಬೋಧಿಸುವವನೂ ಆಗಿದ್ದೀಯೆ. ಹಾಗೂ **[ನಃ]** ನಮ್ಮ **[ಇಮಾಮ್]** ಈ **[ಶರಣಿಂ]** ವಿದ್ಯಾನಾಶಕ ಅವಿದ್ಯೆಯನ್ನು **[ಮೀಮೃಷಃ]** ಅತ್ಯಂತ ದೂರಮಾಡುವವನೂ ಆಗಿದ್ದೀಯೆ. ಆ ನೀನು ಮತ್ತು ನಾವು **[ಯಮ್]** ಯಾವುದಕ್ಕೆ **[ದೂರಾತ್]** ದೂರದಿಂದ ಉಲ್ಲಂಘನ ಮಾಡಿ **[ಇಮಮ್ ಅಧ್ವಾನಮ್]** ಈ ಧರ್ಮಮಾರ್ಗದ **[ಅಗಾಮ್]** ಸಮ್ಮುಖದಲ್ಲಿ ಬರಲಿ. ಅವರ ಸೇವೆಯನ್ನು ಮಾಡೋಣ.

ಭಾವಾರ್ಥ:- ಮಾನವನು ಯಾವಾಗ ಸತ್ಯಭಾವದಿಂದ ಉನ್ನತ ಮಾರ್ಗವನ್ನು ಹೊಂದಲು ಇಚ್ಛಿಸುತ್ತಾನೋ ಆಗ ಜಗದೀಶ್ವರನು ಅವನಿಗೆ ಉತ್ತಮ ಜ್ಞಾನವನ್ನು ಪ್ರಕಾಶಪಡಿಸುವ ವಿದ್ವಾಂಸರ ಸಂಗವನ್ನು ಪ್ರಾಪ್ತಿಸಿಕೊಳ್ಳುವುದಕ್ಕಾಗಿ ಪ್ರೀತಿ ಮತ್ತು ಜಿಜ್ಞಾಸೆ ಎಂದರೆ ಅವರ ಉಪದೇಶದ ಇಚ್ಛೆಯನ್ನು ಅವನಲ್ಲಿ ಉತ್ಪನ್ನ ಮಾಡುತ್ತಾನೆ. ಇದರಿಂದ ಅವನು ಶ್ರದ್ಧಾವಂತನಾಗಿ ಅತ್ಯಂತ ದೂರದಲ್ಲಿಯೂ ವಾಸಿಸುತ್ತಿರುವ ಸತ್ಯವಾದಿ ಯೋಗಿ ವಿದ್ವಾಂಸರ ಬಳಿ ಹೋಗಿ ಅವರ ಸಂಗವನ್ನು ಪ್ರಾಪ್ತಿಸಿಕೊಂಡು ಅಭೀಷ್ಟಬೋಧನೆಯನ್ನು ಪಡೆದುಕೊಂಡು ಧರ್ಮಾತ್ಮನಾಗುತ್ತಾನೆ.

ಮತ್ತೆ ಅದೇ ವಿಷಯವನ್ನು ಹೇಳಲಾಗುತ್ತದೆ.

ಮನುಷ್ವದಗ್ನೇ ಅಂಗಿರಸ್ವದಂಗಿರೋ ಯಯಾತಿವತ್ಸದನೇ ಪೂರ್ವವಚ್ಛುಚೇ । ಅಚ್ಛ
ಯಾಹ್ಯಾ ವಹಾ ದೈವ್ಯಂ ಜನ-ಮಾ ಸಾದಯ ಬರ್ಹಿಷಿ ಯಕ್ಷಿ ಚ ಪ್ರಿಯಮ್ ॥೧೭॥

ಪದಾರ್ಥ:- ಹೇ **[ಶುಚೇ]** ಪವಿತ್ರನಾದ **[ಅಂಗಿರಃ]** ಪ್ರಾಣಕ್ಕೆ ಸಮಾನನಾಗಿ ಧಾರಣೆ ಮಾಡುವ **[ಅಗ್ನೇ]** ಸರ್ವವಿದ್ಯೆಯಲ್ಲಿ ಸರ್ವತ್ರ ವ್ಯಾಪಿಸಿರುವ ಸಭಾಧ್ಯಕ್ಷ! ನೀನು **[ಮನುಷ್ಯವತ್]** ಮಾನವರ ಹೋಗಿ-ಬರುವುದಕ್ಕೆ ಸಮಾನರಾದ ಅಥವಾ **[ಅಂಗಿರಸ್ವತ್]** ಶರೀರದಲ್ಲಿ ವ್ಯಾಪ್ತವಾಗಿರುವ ಪ್ರಾಣ ವಾಯುವಿನ ಸದೃಶ ರಾಜ್ಯಕರ್ಮವನ್ನು ವ್ಯಾಪಿಸಿರುವ ಪುರುಷರಂತೆ ಅಥವಾ **[ಯಯಾತಿವತ್]** ಹೇಗೆ ಪುರುಷಯತ್ನದೊಡನೆ ಕರ್ಮಗಳನ್ನು ಸಿದ್ಧಗೊಳಿಸುತ್ತಾರೋ ಅಥವಾ ಸಿದ್ಧಗೊಳಿಸುವಂತೆ ಮಾಡುತ್ತಾರೋ ಅಥವಾ **[ಪೂರ್ವವತ್]** ಹೇಗೆ ಉತ್ತಮ ಘನತೆಯ ವಿದ್ವಾಂಸರು ವಿದ್ಯೆಯನ್ನು ನೀಡುವವರಾಗಿದ್ದಾರೋ ಅಂತೆಯೇ **[ಪ್ರಿಯಮ್]** ಎಲ್ಲರನ್ನೂ ಪ್ರಸನ್ನರಾಗುವಂತೆ ಮಾಡುವ **[ದೈವ್ಯಮ್]** ವಿದ್ವಾಂಸರಲ್ಲಿ ಅತಿ ಚತುರರಾದ **[ಜನಮ್]** ಮಾನವರಿಗೆ **[ಶುಚೇ]** ಪವಿತ್ರಕಾರಕವಾದುದನ್ನು **[ಅಚ್ಛ]** ಒಳ್ಳೆಯ ರೀತಿಯಲ್ಲಿ **[ಆಯಾಹಿ]** ಪ್ರಾಪ್ತವಾಗುವಂತೆ ಮಾಡಿ ಆ ಮಾನವರಿಗೆ ವಿದ್ಯೆ ಮತ್ತು ಧರ್ಮದ ಕಡೆಗೆ **[ವಹ]** ಪ್ರಾಪ್ತರಾಗುವಂತೆ ಮಾಡಿ **[ಬರ್ಹಿಷಿ ಸದನೇ]** ಉತ್ತಮ ಮೋಕ್ಷಸಾಧನೆಯಲ್ಲಿ **[ಅಸಾದಯ]** ಅಚಲರಾಗಿರುವಂತೆ **[ಚ]** ಮತ್ತು **[ಯಕ್ಷಿ]** ಅಲ್ಲಿ ಅವರನ್ನು ಸ್ಥಾಪಿಸಿ.

ಭಾವಾರ್ಥ:- ಯಾವ ಮಾನವರು ವಿದ್ಯಾ, ಧರ್ಮಾನುಷ್ಠಾನ ಮತ್ತು ಪ್ರೇಮಗಳಿಂದ ಸಭಾಪತಿಯ ಸೇವೆಯನ್ನು ಮಾಡುತ್ತಾರೋ ಅವರು ಉತ್ತಮೋತ್ತಮ ಧರ್ಮದ ಕರ್ಮಗಳಲ್ಲಿ ತೊಡಿಗುತ್ತಾರೆ.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಏತೇನಾಗ್ನೇ ಬ್ರಹ್ಮಣಾ ವಾವೃಧಸ್ವ ಶಕ್ತೀ ವಾ ಯತ್ ತೇ ಚಕೃಮಾ ವಿದಾ ವಾ ।
ಉತ ಪ್ರ ಣೇಷ್ಯಭಿ ವಸ್ಯೋ ಅಸ್ಮಾನ್ ತ್ಸಂ ನಃ ಸೃಜ ಸುಮತ್ಯಾ ವಾಜವತ್ಯಾ ॥೧೮॥

ಪದಾರ್ಥ:- ಹೇ [**ಅಗ್ನೇ**] ಸರ್ವೋತ್ಕೃಷ್ಟ ವಿದ್ವಾನ್! ನೀವು [**ಬ್ರಹ್ಮಣಾ**] ವೇದವಿದ್ಯೆಯನ್ನು [**ವಾಜವತ್ಯಾ**] ಉತ್ತಮ ಅನ್ನವನ್ನು, ಪ್ರಶಂಸನೀಯವಾದ ಯುದ್ಧವನ್ನು ಮತ್ತು ವಿಶೇಷ ಜ್ಞಾನವನ್ನು ಅಥವಾ [**ಸುಮತ್ಯಾ**] ಶ್ರೇಷ್ಠ ವಿಚಾರ ಮತ್ತು [**ಶಕ್ತಿ**] ಶಕ್ತಿಗಳಿಂದ [**ನಃ**] ನಮಗೋಸ್ಕರ [**ವಸ್ವಃ**] ಬಹಳ ಧನವನ್ನು [**ಅಭಿಸೃಜ**] ಎಲ್ಲ ಪ್ರಕಾರದಿಂದಲೂ ದೊರಕುವಂತೆ ಮಾಡಿ. [**ಉತ**] ಮತ್ತು ನೀವು [**ವಿದಾ**] ನಿಮ್ಮ ಉತ್ತಮ ಜ್ಞಾನದಿಂದ [**ವಾವೃಧಸ್ವ**] ನಿತ್ಯವೂ ಉನ್ನತಿಯಾಗುವಂತೆ ಮಾಡಿರಿ. [**ತೇ**] ನಿಮ್ಮ [**ಯತ್**] ಯಾವ ಪ್ರೇಮವಿದೆಯೋ ಅದನ್ನು ನಾವು [**ಚಕೃಮಾ**] ಮಾಡೋಣ. ಮತ್ತು ನೀವು [**ಅಸ್ಮಾನ್**] ನಮಗೆ [**ಪ್ರಣೇಷಿ**] ಶ್ರೇಷ್ಠ ಬೋಧನೆಯನ್ನು ಪಡೆದುಕೊಳ್ಳುವಂತೆ ಮಾಡಿರಿ.

ಭಾವಾರ್ಥ:- ಯಾವ ಮಾನವರು ವೇದವಿಧಾನದಿಂದ ಧರ್ಮಯುಕ್ತ ವ್ಯವಹಾರವನ್ನು ಮಾಡುತ್ತಾರೋ ಅವರು ಜ್ಞಾನವಂತರೂ ಮತ್ತು ಶ್ರೇಷ್ಠಮತಿಗಳೂ ಆಗಿ ಉತ್ತಮ ವಿದ್ವಾಂಸರ ಸೇವೆಯನ್ನು ಮಾಡುತ್ತಾರೆ. ಮತ್ತು ಆ ವಿದ್ವಾಂಸರು ಅವರನ್ನು ಶ್ರೇಷ್ಠರನ್ನಾಗಿಯೂ, ಸಮರ್ಥಕರನ್ನಾಗಿಯೂ ಮತ್ತು ಉತ್ತಮ ವಿದ್ಯಾಯುಕ್ತರನ್ನಾಗಿಯೂ ಮಾಡುತ್ತಾರೆ.

ಈ ಸೂಕ್ತದಲ್ಲಿ ಸಭಾಸೇನಾಪತಿ ಮೊದಲಾದವರ ಅನುಕೂಲಾರ್ಥಗಳನ್ನು ಪ್ರಕಾಶಪಡಿಸುವುದರಿಂದ ಹಿಂದಿನ ಸೂಕ್ತದೊಂದಿಗೆ ಈ ಸೂಕ್ತದ ಸಂಗತಿ ಉಂಟಾಗುತ್ತದೆ ಎಂದು ಹೇಳಬಹುದು.

ಮೂವತ್ತೊಂದನೆಯ ಸೂಕ್ತ ಸಮಾಪ್ತ

ಸೂಕ್ತ ೩೨

ಮಂತ್ರಸಂಖ್ಯೆ ೧೫ । ಋಷಿಃ - ಹಿರಣ್ಯಸ್ತೂಪ ಆಂಗೀರಸಃ । ದೇವತಾ- ಇಂದ್ರಃ । ಛಂದಃ - ತ್ರಿಷ್ಟುಪ್ । ಸ್ವರಃ-ಧೈವತಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಇಂದ್ರಶಬ್ದದಿಂದ ಸೂರ್ಯಲೋಕದ ಉಪಮೆಯನ್ನು ಮಾಡಿ ರಾಜನ ಗುಣಗಳನ್ನು ಪ್ರಕಾಶಪಡಿಸಲಾಗುತ್ತದೆ.

ಇಂದ್ರಸ್ಯ ನು ವೀರ್ಯಾಣಿ ಪ್ರ ವೋಚಂ ಯಾನಿ ಚಕಾರ ಪ್ರಥಮಾನಿ ವಜ್ರೀ ।
ಅಹನ್ನಹಿಮನ್ವಪಸ್ತತರ್ದ ಪ್ರ ವಕ್ಷಣಾ ಅಭಿನತ್ ಪರ್ವತಾನಾಮ್ ॥೧॥

ಪದಾರ್ಥ:- ಹೇ ವಿದ್ವಾನ್ ಮಾನವರೇ! ನೀವು ಹೇಗೆ [**ಇಂದ್ರಸ್ಯ**] ಸರ್ವಪದಾರ್ಥವಿದಾರಕನಾದ ಸೂರ್ಯನಂತಿರುವ ಸಭಾಪತಿ ರಾಜನು [**ಯಾನಿ ಪ್ರಥಮಾನಿ**] ಆ ಪ್ರಸಿದ್ಧ [**ವೀರ್ಯಾಣಿ**] ಪರಾಕ್ರಮಗಳನ್ನು ಹೇಳುತ್ತಾನೋ ಅವನಿಗೆ ನಾನೂ ಸಹ [**ನು ಪ್ರವೋಚಮ್**] ಶೀಘ್ರದಲ್ಲಿಯೇ ತಿಳಿಸುತ್ತೇನೆ. ಹೇಗೆ ಅವನು [**ವಜ್ರೀ**] ಎಲ್ಲ ಪದಾರ್ಥಗಳನ್ನೂ ಛೇದನವನ್ನು ಮಾಡುವ ಕಿರಣಗಳಿಂದ ಯುಕ್ತನಾದ ಸೂರ್ಯನು [**ಅಹಿಮ್**] ಮೇಘವನ್ನು [**ಅಹನ್**] ಒಡೆದು ಮಳೆಯನ್ನು ಸುರಿಸುತ್ತಾನೋ ಆ ಮೇಘದ ಅವಯವರೂಪೀ [**ಅಪಃ**] ಜಲವನ್ನು ಮೇಲೆ ಕೆಳಗೆ [**ಚಕಾರ**] ಮಾಡಿ ಅದನ್ನು ಪೃಥಿವಿಯ ಮೇಲೆ ಬೀಳಿಸುತ್ತಾನೆ. ಮತ್ತು [**ಪರ್ವತಾನಾಮ್**] ಆ ಮೇಘಗಳ ಸಹಾಯದಿಂದ [**ಪ್ರವಕ್ಷಣಂ**] ನದಿಗಳಿಗೆ ಭಿನ್ನ-ಭಿನ್ನಮಾಡಿ ಹರಿಸುತ್ತಾನೆ. ಅಂತೆಯೇ ನಾನು ಶತ್ರುಗಳನ್ನು ಪ್ರಹಾರ ಅವರನ್ನು ಅಲ್ಲಿ-ಇಲ್ಲಿ ಬಿಸುಡುತ್ತೇನೆ ಮತ್ತು ಅವರನ್ನು ಕೋಟೆ ಆದಿ ಸ್ಥಳಗಳಲ್ಲಿ ಯುದ್ಧ ಮಾಡುವುದಕ್ಕಾಗಿ ಬಂದಿರುವ ಸೇನೆಗಳನ್ನು ಭಿನ್ನ-ಭಿನ್ನ ಮಾಡುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಈಶ್ವರನು ಉತ್ಪತ್ತಿ ಮಾಡಿರುವ ಈ ಅಗ್ನಿಮಯ ಸೂರ್ಯಲೋಕ, ಹೇಗೆ ತನ್ನ ಸ್ವಾಭಾವಿಕ ಗುಣಗಳಿಂದ ಕೂಡಿದ್ದು ಅನಾದಿ ಪ್ರಕಾಶ, ಆಕರ್ಷಣ, ದಾಹ, ಛೇದನ ಹಾಗೂ ಮಳೆಯ ಉತ್ಪತ್ತಿಗಳ ಕಾರಣದಿಂದ ದಿನ-ರಾತ್ರಿಗಳನ್ನುಂಟು ಮಾಡುತ್ತದೋ ಹಾಗೆಯೇ ಪ್ರಜೆಗಳ ಪಾಲನೆಯಲ್ಲಿ ತತ್ಪರನಾಗಿರುವ ರಾಜಪುರುಷನಿದ್ದಾನೋ ಅವನೂ ಸಹ ನಿತ್ಯವೂ ಅದೇ ರೀತಿ ಮಾಡಬೇಕಾಗಿದೆ.

ಪುನಃ ಆ ಸೂರ್ಯ ಸಭಾಪತಿಗಳು ಏನನ್ನು ಮಾಡುತ್ತಾರೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಅಹನ್ನಹಿಂ ಪರ್ವತೇ ಶಿಶ್ರಿಯಾಣಂ ತ್ವಷ್ಟಾಸ್ಮೈ ವಜ್ರಂ ಸ್ವರ್ಯಂ ತತಕ್ಷ ।
ವಾಶ್ರಾ ಇವ ಧೇನವಃ ಸ್ಯಂದಮಾನಾ ಅಂಜಃ ಸಮುದ್ರಮವ ಜಗ್ಮುರಾಪಃ ॥೨॥

ಪದಾರ್ಥ:- ಹೇಗೆ ಈ [**ತ್ವಷ್ಟಾ**] ಸೂರ್ಯನು [**ಪರ್ವತೇ**] ಮೇಘ ಮಂಡಲದಲ್ಲಿ [**ಶಿಶ್ರಿಯಾಣಂ**] ಇರುವ [**ಸ್ವರ್ಯಂ**] ಗರ್ಜನ ಶೀಲ [**ಅಹಿಮ್**] ಮೇಘವನ್ನು ಛಿದ್ರಮಾಡಿ [**ಅಸ್ಮೈ**] ಈ ಮೇಘಕ್ಕೆ [**ವಜ್ರಮ್**] ಕತ್ತರಿಸುವ ಸ್ವಭಾವವುಳ್ಳ ಕಿರಣಗಳನ್ನು [**ತತಕ್ಷ**] ಬಿಡುಗಡೆ ಮಾಡುತ್ತಾನೆ. ಈ ಕಾರ್ಯದಿಂದ [**ವಾಶ್ರಾಧೇನವ ಇವ**] ಕರುಗಳನ್ನು ಪ್ರೀತಿ ಪೂರ್ವಕವಾಗಿ ಇಚ್ಛಿಸುವ ಗೋವುಗಳಿಗೆ ಸಮನಾಗಿ [**ಸ್ಯಂದಮಾನಾಃ**] ಚಲಿಸುತ್ತಾ [**ಅಂಜಃ**] ವ್ಯಕ್ತ ಪಡಿಸುವ ಗಮನಶೀಲ [**ಅಪಃ**] ನೀರಿನಂತೆ [**ಸಮುದ್ರಮ್**] ನೀರಿನಿಂದ ಪೂರ್ಣವಾಗಿ ಸಮುದ್ರಕ್ಕೆ [**ಅವಜಗ್ಮುಃ**] ನದಿಗಳ ಮೂಲಕ ಹರಿಯುತ್ತದೆ. ಅಂತೆಯೇ ಸಭಾಧ್ಯಕ್ಷ ರಾಜನಿಗೆ, ಕೋಟೆಯೊಳಗೆ ಇರತಕ್ಕ ದುಷ್ಟ ಶತ್ರುಗಳನ್ನು ಪ್ರಹರಿಸಿ ಆ ಶತ್ರುಗಳನ್ನು ಉತ್ತಮ ಶಸ್ತ್ರಗಳಿಂದ ಹರಣಗೊಳಿಸುವುದು ಆವಶ್ಯಕ. ಈ ರೀತಿಯಾಗಿ ಕರುಗಳನ್ನು ಇಚ್ಛಿಸುವ ಗೋವುಗಳಂತೆ ಚಲಿಸುತ್ತಾ ಪ್ರಸಿದ್ಧ ಪ್ರಾಣಗಳನ್ನು ಅಂತರಿಕ್ಷದಲ್ಲಿ ಪಡೆದುಕೊಂಡು ಆ ಕಂಟಕಶತ್ರುಗಳನ್ನು ಹೊಡೆದೋಡಿಸಿ ಪ್ರಜೆಗಳಿಗೆ ಸುಖವನ್ನು ನೀಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಸೂರ್ಯನು ತನ್ನ ಕಿರಣಗಳಿಂದ ಅಂತರಿಕ್ಷದಲ್ಲಿರುವ ಮೇಘಗಳನ್ನು ಭೂಮಿಯ ಮೇಲೆ ಬೀಳಿಸಿ ವಿಶ್ವವನ್ನು ಜಲಾವೃತಗೊಳಿಸುತ್ತಾನೋ ಅಂತೆಯೇ ಸೇನಾಪತಿಯೂ ಕೋಟೆ, ಪರ್ವತ, ಇತ್ಯಾದಿಗಳಲ್ಲಿ ವಾಸಿಸುತ್ತಿರುವ ಶತ್ರುಗಳನ್ನೂ ಸಹ ಪೃಥ್ವಿಯ ಮೇಲೆ ಹೊಡೆದುರುಳಿಸಿ ಪ್ರಜೆಗಳನ್ನು ನಿರಂತರ ಸುಖವಾಗಿ ಇರಿಸುತ್ತಾನೆ.

ಪುನಃ ಅವನು ಹೇಗಿದ್ದಾನೆ ಎಂಬುದನ್ನು ಇಲ್ಲಿ ವಿವರಿಸಲಾಗುತ್ತದೆ.

ವೃಷಾಯಮಾಣೋಽವೃಣೀತ ಸೋಮಂ ತ್ರಿಕದ್ರುಕೇಷ್ವಪಿಬತ್ ಸುತಸ್ಯ ।
ಆ ಸಾಯಕಂ ಮಘವಾದತ್ತ ವಜ್ರ-ಮಹನ್ನೇನಂ ಪ್ರಥಮಜಾಮಹೀನಾಮ್ ॥೩॥

ಪದಾರ್ಥ:- ಯಾವ [**ವೃಷಾಯಮಾಣಃ**] ವೀರ್ಯವೃದ್ಧಿಯ ಆಚರಣೆಯನ್ನು ಮಾಡುತ್ತಾ ಸೂರ್ಯಲೋಕದ ಮೇಘಕ್ಕೆ ಸಮಾನವಾದ [**ಸುತಸ್ಯ**] ಈ ಉತ್ಪನ್ನ ಜಗತ್ತಿನ [**ತ್ರಿಕದ್ರುಕೇಷು**] ಅದರ ಉತ್ಪತ್ತಿ, ಸ್ಥಿರತೆ ಮತ್ತು ವಿನಾಶ - ಈ ಮೂರು ಕಲೆಗಳ ವ್ಯವಹಾರದಲ್ಲಿ ತೊಡಗಿಸಲಾಗಿದೆಯೋ ಆ ಪದಾರ್ಥಗಳಲ್ಲಿ [**ಸೋಮಮ್**] ಉತ್ಪನ್ನ ವಾಗುವ ರಸವನ್ನು [**ಅವೃಣೀತ**] ಸ್ವೀಕರಿಸಲಾಗುತ್ತದೆ. [**ಅಪಿಬತ್**] ಅದನ್ನು ತನ್ನ ತಾಪದಿಂದ ಕುಡಿಯಲಾಗುತ್ತದೆ. [**ಮಘವಾ**] ಈ ಬಹುವಿಧದ ಧನವನ್ನು ಸೂರ್ಯನು ಕೊಡಲಿದ್ದು [**ಸಾಯಕಮ್**] ಶಸ್ತ್ರರೂಪ [**ವಜ್ರಮ್**] ಕಿರಣ ಸಮೂಹದಿಂದ [**ಆದತ್ತ**] ತೆಗೆದುಕೊಂಡು [**ಅಹೀನಾಮ್**] ಮೇಘಗಳಲ್ಲಿ [**ಪ್ರಥಮಜಾಮ್**] ಮೊದಲು ಪ್ರಕಟವಾದ [**ಏನಮ್**] ಈ ಮೇಘಕ್ಕೆ [**ಅಹನ್**] ಅಪ್ಪಳಿಸುತ್ತಾನೆ. ಅಂತೆಯೇ ಗುಣಕರ್ಮ ಸ್ವಭಾವಯುಕ್ತ ಪುರುಷ ಸೇನಾಪತಿಯು ಅಧಿಕಾರವನ್ನು ಪಡೆದುಕೊಳ್ಳಲು ಯೋಗ್ಯನಾಗುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ವೃಷಭ ವೀರ್ಯವೃದ್ಧಿ ಹೊಂದಿ ಬಹಳ ಬಲಿಷ್ಠವಾಗಿ ಸುಖವಾಗಿರುತ್ತದೆಯೋ ಅಂತೆಯೇ ಸೇನಾಪತಿ ಹಾಲು ಇತ್ಯಾದಿಗಳನ್ನು ಪಾನ ಮಾಡಿ ಬಲಿಷ್ಠನಾಗಿ ಸುಖವನ್ನು ಹೊಂದಬೇಕು. ಮತ್ತು ಹೇಗೆ ಸೂರ್ಯರಸ ಪಾನ ಮಾಡಿ ಉತ್ತಮ ರೀತಿಯಲ್ಲಿ ಮಳೆ ಸುರಿಸುತ್ತಾನೋ ಅಂತೆಯೇ ಸೇನಾಪತಿ ಶತ್ರುಗಳ ಬಲವನ್ನು ಸೆಳೆದುಕೊಂಡು ತನ್ನ ಬಲವನ್ನಾಗಿ ಪರಿವರ್ತಿಸಿ ಬಲವನ್ನು ವೃದ್ಧಿಪಡಿಸಿಕೊಂಡು ಪ್ರಜೆಗಳಲ್ಲಿ ಸುಖದ ವೃಷ್ಟಿಯನ್ನು ಕರೆಯಲಿ.

ಪುನಃ ಅವನು ಯಾವ ಪ್ರಕಾರದವನಾಗಿದ್ದಾನೆ ಎಂಬುದನ್ನು ತಿಳಿಸಲಾಗಿದೆ.

ಯದಿಂದ್ರಾಹನ್ ಪ್ರಥಮಜಾಮಹೀನಾ-ಮಾನ್ಮಾಯಿನಾಮಮಿನಾಃ ಪ್ರೋತ ಮಾಯಾಃ ।
ಆತ್ ಸೂರ್ಯಂ ಜನಯನ್ ದ್ಯಾಮುಷಾಸಂ ತಾದೀತ್ನಾ ಶತ್ರುಂ ನ ಕಿಲಾ ವಿವಿತ್ಸೇ ॥೪॥

ಪದಾರ್ಥ:- ಹೇ ಸೇನಾಪತೇ! ಹೇಗೆ [ಇಂದ್ರಃ] ಎಲ್ಲ ಪದಾರ್ಥಗಳನ್ನೂ ನಾಶ ಮಾಡುವ ಎಂದರೆ, ಭಿನ್ನ ಭಿನ್ನ ಮಾಡುವ ಸೂರ್ಯಲೋಕದಂತೆ [ಅಹೀನಾಮ್] ಸಣ್ಣಪುಟ್ಟ ಮೇಘಗಳ ಮಧ್ಯದಲ್ಲಿ [ಪ್ರಥಮಜಾಮ್] ಸೃಷ್ಟಿಯುಗ ಉತ್ಪನ್ನವಾಗುವ ಸಮಯದಲ್ಲಿ ಉತ್ಪನ್ನವಾದ ಮೇಘವನ್ನು [ಅಹನ್] ನಾಶಗೊಳಿಸುತ್ತದೆ. ಅದರ [ಮಾಯಿನಾಮ್] ಸೂರ್ಯನ ಪ್ರಕಾಶಕ್ಕೆ ಆವರಣವನ್ನು ಕಲ್ಪಿಸುವ ದೊಡ್ಡ ದೊಡ್ಡ ಮೇಘಮಾಲೆಗಳು ಉತ್ಪನ್ನವಾಗುತ್ತವೆ. ಆ ಮೇಘಗಳ [ಮಾಯಾಃ] ಆ ಅಂಧಕಾರರೂಪೀ ಮೇಘಮಾಲೆಗಳನ್ನು [ಪ್ರಮಿನಾಃ] ಹರಣ ಮಾಡುತ್ತದೆ. [ತಾದೀತ್ನಾ] ಆಗ [ಯತ್] ಯಾವ [ಸೂರ್ಯಮ್] ಕಿರಣ ಸಮೂಹ [ಉಷಸಮ್] ಪ್ರಾತಃಕಾಲ ಮತ್ತು [ದ್ಯಾಮ್] ಅದರ ಪ್ರಕಾಶವನ್ನು [ಪ್ರಜನಯನ್] ಪ್ರಕಟಿಸುತ್ತಾ ಹಗಲನ್ನು ಉತ್ಪನ್ನಮಾಡುತ್ತದೆ. [ನ] ಅಂತೆಯೇ ನೀನು ಶತ್ರುಗಳನ್ನು [ವಿವಿತ್ಸೇ] ಸಂಧಿಸಿ ಅವರ ಛಲ ಕಪಟ ಇತ್ಯಾದಿ ಧೂರ್ತತನಗಳನ್ನು ನಾಶಮಾಡಿ, ಆಗ ಸೂರ್ಯರೂಪೀ ನ್ಯಾಯವನ್ನು ಪ್ರಕಟಗೊಳಿಸಿ ಸತ್ಯವಿದ್ಯೆಯ ವ್ಯವಹಾರರೂಪೀ ಸೂರ್ಯನನ್ನು ಪ್ರಕಾಶಗೊಳಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವನೇ ರಾಜಪುರುಷನು ತನ್ನ ವೈರಿಗಳ ಬಲ ಮತ್ತು ಛಲಗಳನ್ನು ನಿವಾರಣೆ ಮಾಡಿ ಅವರನ್ನು ಜಯಿಸಿ ತನ್ನ ರಾಜ್ಯದಲ್ಲಿ ಸುಖ ಮತ್ತು ನ್ಯಾಯಗಳನ್ನು ಪ್ರಕಾಶ ಪಡಿಸುತ್ತಾನೋ ಅಂತೆಯೇ ಸೂರ್ಯನೂ ಸಹ ಮೇಘಮಾಲೆಗಳಲ್ಲಿನ ಮೋಡಗಳನ್ನು ಹಾಗೂ ಪ್ರಕಾಶವನ್ನು ಮುಚ್ಚಿಹಾಕುವ ಮೇಘವನ್ನು ನಿವಾರಣೆ ಮಾಡಿ ತನ್ನ ಕಿರಣಗಳನ್ನು ಪಸರಿಸಿ ಮೇಘವನ್ನು ಛಿನ್ನ-ಭಿನ್ನಗೊಳಿಸಿ ಅಂಧಕಾರವನ್ನು ದೂರ ಮಾಡಿ ತನ್ನ ಪ್ರಜ್ವಲತೆಯನ್ನು ಪ್ರಸಿದ್ಧಗೊಳಿಸುತ್ತಾನೆ.

ಪುನಃ ಆ ಸೂರ್ಯನು ಆ ಮೇಘಗಳನ್ನು ಹೇಗೆ ಮಾಡುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಅಹನ್ ವೃತ್ರಂ ವೃತ್ರತರಂ ವ್ಯಂಸ-ಮಿಂದ್ರೋ ವಜ್ರೇಣ ಮಹತಾ ವಧೇನ ।
ಸ್ಕಂಧಾಸೀವ ಕುಲಿಶೇನಾ ವಿವೃಕ್ಣಾ-ಹಿಃ ಶಯತ ಉಪಪೃಕ್ ಪೃಥಿವ್ಯಾಃ ॥೫॥

ಪದಾರ್ಥ:- ಹೇ ಮಹಾವೀರ ಸೇನಾಪತೇ! ತಾವು ಹೇಗೆ [ಇಂದ್ರಃ] ಸೂರ್ಯ ಅಥವಾ ವಿದ್ಯುತ್ [ಮಹತಾ] ಅತಿವಿಸ್ತಾರದಿಂದ ಕೂಡಿದ [ಕುಲಿಶೇನ] ಅತ್ಯಂತ ಹರಿತವಾದ ಕತ್ತಿಯ ರೂಪದ [ವಜ್ರೇಣ] ಪದಾರ್ಥಗಳನ್ನು ಛಿನ್ನ-ಭಿನ್ನ ಮಾಡುವ ಅತಿ ತಾಪದಿಂದ ಕೂಡಿದ ಕಿರಣ ಸಮೂಹದಿಂದ [ವಿವೃಕ್ಣಾ] ಕತ್ತರಿಸಲ್ಪಟ್ಟ [ಸ್ಕಂಧಾಂಸೀವ] ಹೆಗಲುಗಳಿಗೆ ಸಮಾನವಾದ [ವ್ಯಂಸಂ] ಛಿನ್ನ-ಭಿನ್ನ ಅಂಗಗಳು ಹೇಗಿರುತ್ತವೋ ಹಾಗೆ [ವೃತ್ರತರಮ್] ಅತ್ಯಂತ ದಟ್ಟವಾದ [ವೃತ್ರಮ್] ಮೇಘವನ್ನು [ಅಹನ್] ನಾಶಗೊಳಿಸುತ್ತದೆ. ಎಂದರೆ, ಛಿನ್ನ-ಭಿನ್ನ ಮಾಡಿ ಪೃಥಿವಿಯ

ಮೇಲೆ ಮಳೆಯನ್ನು ಸುರಿಸುತ್ತದೆ. ಮತ್ತು ಅದು [ವಧೇನ] ಸೂರ್ಯನ ಗುಣಗಳಿಂದ ನಿಶ್ಚೇಷ್ಟಿತವಾಗಿ [ಅಹಿಃ] ಮೇಘವು [ಪೃಥಿವ್ಯಾಃ] ಪೃಥಿವಿಯ [ಉಪಪೃಕ್] ಮೇಲೆ [ಶಯತೇ] ಮಲಗಿದಂತೆ ಕಾಣುತ್ತದೆ. ಹಾಗೆಯೇ ವೈರಿಗಳನ್ನು ನಾಶಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾ ಮತ್ತು ಉಪಮಾಲಂಕಾರಗಳಿವೆ. ಯಾರಾದರೂ ಅತಿ ತೀಕ್ಷ್ಣವಾದ ಖಡ್ಗ ಇತ್ಯಾದಿ ಶಸ್ತ್ರಗಳಿಂದ ಶತ್ರುಗಳ ಶರೀರಗಳನ್ನು ಕತ್ತರಿಸಿ ಭೂಮಿಯ ಮೇಲೆ ಬೀಳಿಸುತ್ತಾರೋ ಮತ್ತು ಮೃತಶತ್ರು ಪೃಥಿವಿಯ ಮೇಲೆ ನಿರಂತರ ಮಲಗುವಂತೆ ಮಾಡುತ್ತಾರೋ ಅಂತೆಯೇ ಈ ಸೂರ್ಯ ಮತ್ತು ವಿದ್ಯುತ್ ಮೇಘವನ್ನು ಭೇದಿಸಿ ಭೂಮಿಯ ಮೇಲೆ ಬೀಳಿಸುತ್ತವೆ. ಈ ರೀತಿಯ ಭೂಮಿಯ ಮೇಲೆ ಬಿದ್ದ ಮೇಘ ಭೂಮಿಯ ಮೇಲೆ ಮಲಗಿದಂತೆ ಕಾಣುತ್ತದೆ.

ಅವರು ಯುದ್ಧವನ್ನು ಹೇಗೆ ಮಾಡುತ್ತಾರೆ ಎಂಬ ವಿಷಯವನ್ನು ತಿಳಿಸಲಾಗಿದೆ.

ಅಯೋದ್ಧೇವ ದುರ್ಮದ ಆ ಹಿ ಜುಹ್ವೇ ಮಹಾವೀರಂ ತುವಿಬಾಧಮೃಜೀಷಮ್ ।
ನಾತಾರೀದಸ್ಯ ಸಮೃತಿಂ ವಧಾನಾಂ ಸಂ ರುಜಾನಾಃ ಪಿಪಿಷ ಇಂದ್ರಶತ್ರುಃ ॥೬॥

ಪದಾರ್ಥ:- [ದುರ್ಮದಃ] ದುಷ್ಟ ಅಭಿಮಾನೀ [ಅಯೋದ್ಧೇವ] ಯುದ್ಧದ ಇಚ್ಛೆಯನ್ನು ಮಾಡದ ಪುರುಷನಿಗೆ ಸಮಾನವಾದ ಮೇಘವು [ಋಜೀಷಮ್] ಪದಾರ್ಥಗಳ ರಸವನ್ನು ಒಂದುಗೂಡಿಸುವ ಮತ್ತು [ತುವಿಬಾಧಮ್] ಬಹಳ ಶತ್ರುಗಳನ್ನು ಹೊಡೆದುರುಳಿಸುವವನಂತೆ [ಮಹಾವೀರಮ್] ಅತ್ಯಂತ ಬಲವಾನ್ ಶೂರವೀರನಿಗೆ ಸಮಾನವಾದ ಸೂರ್ಯಲೋಕವನ್ನು [ಆ ಜುಹ್ವೇ] ಈರ್ಷೆಯಿಂದ ಕರೆಯುವವನ ಹಾಗೆ ವರ್ತಿಸುತ್ತಾನೆ ಯಾವಾಗ ಅವನು ಅಳುವವನಂತೆ ಸೂರ್ಯನು ಹೊಡೆಯುತ್ತಾನೋ ಆಗ ಆ ರೀತಿ ಹೊಡೆದ [ಇಂದ್ರಶತ್ರುಃ] ಸೂರ್ಯನ ಶತ್ರುವಾದ ಮೇಘವು [ಪಿಪೀಷೇ] ಸೂರ್ಯನಿಂದ ಪುಡಿಪುಡಿಯಾಗುತ್ತದೆ. ಮತ್ತು ಅದು [ಅಸ್ಯ] ಈ ಸೂರ್ಯನ [ವಧಾನಾಮ್] ತಾಡನಗಳ [ಸಮೃತಿಮ್] ಸಮೂಹವನ್ನು [ನಾತಾರೀತ್] ಸಹಿಸಲಾಗುವುದಿಲ್ಲ ಮತ್ತು [ಹಿ] ನಿಶ್ಚಯವಾಗಿಯೂ ಈ ಮೇಘದಿಂದ ಉತ್ಪನ್ನವಾದ [ಸಂ ರುಜಾನಾಃ] ಉತ್ತಮ ರೀತಿಯ ನದಿಗಳು ಪರ್ವತ ಮತ್ತು ಪೃಥಿವಿಯ ದೊಡ್ಡ ದೊಡ್ಡ ದಿಣ್ಣೆಗಳನ್ನು ಛಿನ್ನ ಭಿನ್ನಗೊಳಿಸುತ್ತಾ ಹರಿಯುತ್ತವೆ. ಅಂತೆಯೇ ಸೇನೆಗಳಲ್ಲಿ ಪ್ರಕಾಶಮಾನನಾದ ಸೇನಾಧ್ಯಕ್ಷನು ಶತ್ರುಗಳಲ್ಲಿ ಸಂಚಲನವನ್ನು ಉಂಟುಮಾಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಮೇಘ ಜಗತ್ತಿನ ಪ್ರಕಾಶಕ್ಕಾಗಿ ಇದೆಯೋ ಸೂರ್ಯನ ಪ್ರಕಾಶಕ್ಕೆ ಅಕಸ್ಮಾತ್ ಪೃಥಿವಿಯಿಂದ ಎದ್ದು ಅದನ್ನು ತಡೆದು ಅದರೊಡನೆ ಯುದ್ಧ ಮಾಡುವಂತೆ ವರ್ತಿಸುತ್ತದೋ ಆಗ ಆ ಮೇಘಕ್ಕೆ ಸೂರ್ಯನ ಸಾಮರ್ಥ್ಯವನ್ನು ಎದುರಿಸಲು ಸಾಧ್ಯವಾಗುವುದಿಲ್ಲ - ಯಾವಾಗ ಈ ಸೂರ್ಯ ಕಿರಣವು ಮೇಘವನ್ನಪ್ಪಳಿಸಿ ಭೂಮಿಯ ಮೇಲೆ ಬೀಳಿಸುತ್ತದೋ ಆಗ ಆ ಮೇಘದಿಂದ ಉಂಟಾದ ನೀರಿನಿಂದ ನದಿ ತುಂಬಿ ಹರಿದು ಸಮುದ್ರವನ್ನು ಸೇರುತ್ತದೆ. ಅಂತೆಯೇ ಶತ್ರುಗಳನ್ನು ಹೊಡೆದುರುಳಿಸಿ ನಿರ್ಮೂಲ ಮಾಡಬೇಕಾದ್ದು ರಾಜನಿಗೆ ಆವಶ್ಯಕ.

ಪುನಃ ಆ ಮೇಘವು ಹೇಗಾಗಿ ಪೃಥ್ವಿಯ ಮೇಲೆ ಬೀಳುತ್ತದೆ ಎಂಬುದನ್ನು ತಿಳಿಸಲಾಗುತ್ತದೆ.

ಅಪಾದಹಸ್ತೋ ಅಪೃತನ್ಯದಿಂದ್ರ-ಮಾಸ್ಯ ವಜ್ರಮಧಿ ಸಾನೌ ಜಘಾನ । ವೃಷ್ಣೋ ವಧ್ರಿಃ
ಪ್ರತಿಮಾನಂ ಬುಭೂಷನ್ ಪುರುತ್ರಾ ವೃತ್ರೋ ಅಶಯದ್ ವ್ಯಸ್ತಃ ॥೭॥

ಪದಾರ್ಥ:- ಹೇ ಎಲ್ಲ ಸೇನೆಗಳ ಸ್ವಾಮಿಯೇ! ನೀವು [ವೃತ್ರಃ] ಹೇಗೆ ಮೇಘ [ವೃಷ್ಣಃ] ವೀರ್ಯಸೇಚನಾ ಸಾಮರ್ಥ್ಯವುಳ್ಳ ಪುರುಷನಿಗೆ [ಪ್ರತಿಮಾನಮ್] ಸಮಾನವಾಗಿರುವಂತೆ [ಬುಭೂಷನ್] ಇಚ್ಛಿಸುತ್ತಾ [ವಧ್ರಿಃ] ನಿರ್ಬಲ ನಪುಂಸಕನಿಗೆ ಸಮಾನವಾಗಿರುವಂತೆ ಯಾವ [ಇಂದ್ರಮ್] ಸೂರ್ಯಲೋಕಕ್ಕೆ ವಿರುದ್ಧವಾಗಿ [ಅಪೃತನ್ಯತ್] ಯುದ್ಧ ಮಾಡಲಿಚ್ಛಿಸುವವನಂತೆ [ಅಸ್ಯ] ಈ ಮೇಘದ [ಸಾನೌ ಅಧಿ] ಪರ್ವತ ಶಿಖರಗಳಂತಿರುವ ಸೂರ್ಯಲೋಕ [ವಜ್ರಮ್] ತನ್ನ ಕಿರಣರೂಪೀ ವಜ್ರವನ್ನು [ಆ ಜಘಾನ] ಬಿಡುತ್ತದೆ. ಇದರಿಂದ ಭಿನ್ನ ಭಿನ್ನಗೊಂಡ ಮೇಘ [ಅಪಾದಹಸ್ತಃ] ಕೈಕಾಲುಗಳನ್ನು ತುಂಡರಿಸಿದ ಮನುಷ್ಯನಂತೆ [ವ್ಯಸ್ತಃ] ವಿವಿಧ ಪ್ರಕಾರವಾಗಿ ಹರಡಿಕೊಂಡು ಬಿದ್ದಿರುವ [ಪುರುತ್ರ] ಅನೇಕ ಸ್ಥಾನಗಳಲ್ಲಿ [ಅಶಯತ್] ಮಲಗಿರುವಂತೆ ಕಂಡುಬರುತ್ತದೋ ಹಾಗೆ ಅಂತಹ ಶತ್ರುಗಳನ್ನು ಭಿನ್ನ-ಭಿನ್ನ ಮಾಡಿ ಸದಾ ಜಯಿಸುವಂತೆ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಯಾರಾದರೂ ನಿರ್ಬಲ ಪುರುಷನು ಅತ್ಯಂತ ಬಲವಂತನಾದವನೊಡನೆ ಯುದ್ಧ ಮಾಡಲಿಚ್ಛಿಸುತ್ತಾನೋ ಅಂತೆಯೇ ವೃತ್ರವೆಂಬ ಮೇಘ ಸೂರ್ಯನೊಡನೆ ಹೋರಾಡಲು ಪ್ರವೃತ್ತವಾಗುತ್ತದೆ. ಮತ್ತು ಹೇಗೆ ಅಂತ್ಯದಲ್ಲಿ ಆ ಮೇಘ ಸೂರ್ಯನಿಂದ ಭಿನ್ನ-ಭಿನ್ನವಾಗಿ ಪರಾಜಿತವಾಗಿ ಪೃಥಿವಿಯ ಮೇಲೆ ಬೀಳುತ್ತದೋ ಅಂತೆಯೇ ಯಾವನು ಧರ್ಮಾತ್ಮನೂ ಹಾಗೂ ಬಲವಂತನಾದ ಪುರುಷನ ಸಂಗದೊಡನೆ ಯುದ್ಧ ಮಾಡಲು ಪ್ರವೃತ್ತನಾಗುತ್ತಾನೋ ಅವನಿಗೂ ಸಹ ಅಂತಹ ದೆಸೆಯೇ ಉಂಟಾಗುತ್ತದೆ.

ಪುನಃ ಆ ಇಬ್ಬರು ಪರಸ್ಪರ ಏನನ್ನು ಮಾಡುತ್ತಾರೆ ಎಂಬುದನ್ನಿಲ್ಲಿ ಹೇಳಲಾಗಿದೆ.

ನದಂ ನ ಭಿನ್ನಮಮುಯಾ ಶಯಾನಂ ಮನೋ ರುಹಾಣಾ ಅತಿ ಯಂತ್ಯಾಪಃ ।
ಯಾಶ್ಚಿದ್ ವೃತ್ರೋ ಮಹಿನಾ ಪರ್ಯತಿಷ್ಠ-ತ್ತಾಸಾಮಹಿಃ ಪತ್ಸುತಃಶೀರ್ಬಭೂವ ॥೮॥

ಪದಾರ್ಥ:- ಹೇ ರಾಜಾಧಿರಾಜ! ನೀವು ಹೇಗೆ ಈ [ವೃತ್ರಃ] ತನ್ನ ಮಹಿಮೆಯಿಂದ **[ಪರ್ಯತಿಷ್ಠತ್]** ಎಲ್ಲ ಕಡೆಯಿಂದಲೂ ಒಟ್ಟಿಗೆ ಪಡೆದುಕೊಂಡ ಮತ್ತು **[ಅಹಿಃ]** ಸೂರ್ಯನ ತಾಪದಿಂದ ಕರಗಿ ಹೋಗಿದ್ದು **[ತಾಸಾಮ್]** ಆ ನೀರಿನ ಮಧ್ಯದಲ್ಲಿ ಸ್ಥಿರವಾಗಿರುತ್ತದೆ. **[ಪತ್ಸುತಃಶೀಃ]** ಪಾದತಳದಲ್ಲಿ ಮಲಗಿರುವಂತೆ **[ಬಭೂವ]** ಆಗುತ್ತದೆ. ಆ ಮೇಘದ ಶರೀರ **[ಮನಃ]** ಮನನಶೀಲ ಅಂತಃಕರಣದಂತೆ **[ರುಹಾಣಾಃ]** ಉತ್ಪನ್ನವಾಗಿ ಹರಿಯುವ ನದಿ ಯಾವ ಅಂತರಿಕ್ಷದಲ್ಲಿರುವ **[ಚಿತ್]** ನಿಶ್ಚಯವಾಗಿ **[ಯಾಃ]** ಯಾವ ಅಂತರಿಕ್ಷದಲ್ಲಿ ಅಥವಾ ಭೂಮಿಯಲ್ಲಿರುವ **[ಆಪಃ]** ನೀರು **[ಭಿನ್ನಮ್]** ಭಿನ್ನ-ಭಿನ್ನದಡದ **[ಶಯನಮ್ ನ]** ಮಲಗಿರುವಂತೆ **[ನದಮ್]** ಮಹಾಪ್ರವಾಹಯುಕ್ತ ನದಿಗೆ **[ಯಂತಿ]** ಸೇರುತ್ತದೆ ಮತ್ತು ಈ ನೀರು **[ನ ಅಮುಯಾ]** ಈ ಪೃಥ್ವಿಯೊಡನೆ ಪ್ರಾಪ್ತವಾಗುತ್ತದೆ. ಅಂತೆಯೇ ಎಲ್ಲ ಶತ್ರುಗಳನ್ನೂ ಕಟ್ಟಿಹಾಕಿ ವಶಪಡಿಸಿಕೊಳ್ಳಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾ ಮತ್ತು ಉಪಮಾಲಂಕಾರಗಳಿವೆ. ಸೂರ್ಯನಿಂದ ಭಿನ್ನ-ಭಿನ್ನವಾಗಿ ಗಾಳಿಯೊಡನೆ ಎಷ್ಟು ನೀರು ಮೇಘಮಂಡಲಕ್ಕೆ ಹೋಗುತ್ತದೋ ಆ ಎಲ್ಲ ನೀರೂ ಮೇಘ ರೂಪವಾಗುತ್ತದೆ. ಯಾವಾಗ ಮೇಘದಲ್ಲಿನ ನೀರಿನ ಕಣಗಳು ಅತ್ಯಂತ ಹೆಚ್ಚಾಗುತ್ತವೋ ಆಗ ಘನೀ ರೂಪದಲ್ಲಿರುವ ಮೇಘಮಾಲೆಯಿಂದ ಮೋಡಗಳು ಸೂರ್ಯನ ಪ್ರಕಾಶವನ್ನು ಮುಚ್ಚಿಬಿಡುತ್ತವೆ. ಅವುಗಳನ್ನು ಸೂರ್ಯ ತನ್ನ ಕಿರಣಗಳಿಂದ ಯಾವಾಗ ಭಿನ್ನ ಭಿನ್ನ ಮಾಡುತ್ತಾನೋ ಆಗ ಎಲ್ಲೆಡೆಯಿಂದಲೂ ಬಂದ ನೀರು ದೊಡ್ಡದೊಡ್ಡ

ನದಿಗಳು, ಕೆರೆಗಳು ಹಾಗೂ ಸಮುದ್ರ ಸ್ಥಳಗಳಲ್ಲಿ ಒಟ್ಟುಗೂಡುತ್ತದೆ. ಆ ಮೇಘ ಸಹ ಪೃಥ್ವಿಯಲ್ಲಿ ಪ್ರಕಟವಾಗಿ ಎಲ್ಲೆಂದರಲ್ಲಿ ಒಟ್ಟುಗೂಡುತ್ತದೆ. ಎಂದರೆ ಮನುಷ್ಯ ಆದಿ ಪ್ರಾಣಿಗಳ ಕಾಲ್ಗಳಡಿಯಲ್ಲಿ ಮಲಗಿದಂತೆ ಭಾಸವಾಗುತ್ತದೆ. ಅಂತೆಯೇ ಆ ಧಾರ್ಮಿಕ ಮನುಷ್ಯನೂ ಸಹ ಮೊದಲಿಗೆ ಉನ್ನತಿ ಹೊಂದಿ ಶೀಘ್ರವೇ ಪತನ ಹೊಂದುತ್ತಾನೆ.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ನೀಚಾವಯಾ ಅಭವದ್ ವೃತ್ರಪುತ್ರೇ-ಂದ್ರೋ ಅಸ್ಯಾ ಅವ ವಧರ್ಜಭಾರ । ಉತ್ತರಾ
ಸೂರಧರಃ ಪುತ್ರ ಆಸೀದ್ ದಾನುಃ ಶಯೇ ಸಹವತ್ಸಾ ನ ಧೇನುಃ ॥೯॥

ಪದಾರ್ಥ:- ಹೇ ಸಭಾಪತೇ! [ವೃತ್ರಪುತ್ರಾ] ಮೇಘ ಯಾರಿಗೆ ಮಗನ ಸಮಾನವಾಗಿದೆಯೋ ಅದು ಮೇಘದ ಮಾತೆ. [ನೀಚಾವಯಃ] ಅದು ಕಡಿಮೆ ವಯಸ್ಸಿನದು. [ಸೂಃ] ಕೆಳಗೆ ಪೃಥಿವಿ ಮತ್ತು [ಉತ್ತರ] ಮೇಲೆ ಅಂತರಿಕ್ಷಗಳಿವೆ. [ಅಸ್ಯಾಃ] ಇವನ ಪುತ್ರ ಮೇಘದ [ವಧಃ] ವಧೆಯನ್ನು ಎಂದರೆ ಹೊಡೆಯುವುದನ್ನು [ಇಂದ್ರಃ] ಸೂರ್ಯನು [ಅವಜಭಾರ] ಮಾಡುತ್ತಾನೆ. ಇದರಿಂದ ಮೇಘದ [ನೀಚಾವಯಾಃ] ಕಡಿಮೆ ವಯಸ್ಸು ಪ್ರಾಪ್ತವಾಯಿತು. [ಪುತ್ರಃ] ಪುತ್ರ ಮೇಘ [ಅಧರಃ] ಕೆಳಕ್ಕೆ [ಆಸೀತ್] ಬಿದ್ದಿತು. ಮತ್ತು ಯಾವ [ದಾನುಃ] ಎಲ್ಲ ಪದಾರ್ಥಗಳನ್ನೂ ನೀಡುವ ಭೂಮಿ ಹೇಗೆ [ಸಹವತ್ಸಾ] ಕರುವಿನೊಡನೆ [ಧೇನುಃ] ಹಸುವಿರುತ್ತದೋ [ನ] ಅಂತೆಯೇ ತನ್ನ ಪುತ್ರನೊಡನೆ [ಶಯೇ] ಮಲಗಿದಂತೆ ಕಂಡು ಬರುತ್ತದೆ. ಹಾಗೆಯೇ ಸಭಾಪತಿಯಾದ ನೀವು ನಿಮ್ಮ ಶತ್ರುಗಳನ್ನು ಭೂಮಿಯೊಡನೆ ಮಲಗಿದಂತೆ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮೇಘಕ್ಕೆ ಇಬ್ಬರು ಮಾತೆಯರು. ಮೊದಲನೆಯದು ಪೃಥಿವಿ, ಎರಡನೆಯದು ಅಂತರಿಕ್ಷ. ಎಂದರೆ ಈ ಇಬ್ಬರಿಂದ ಮೇಘ ಉತ್ಪನ್ನವಾಗುತ್ತದೆ. ಹೇಗೆ ಹಸು ತನ್ನ ಕರುವಿನೊಡನೆ ಇರುತ್ತದೋ ಅಂತೆಯೇ ಯಾವಾಗ ನೀರಿನ ಕಣಗಳು ಅಂತರಿಕ್ಷದಲ್ಲಿ ಸೇರಿ ಮೇಘದ ರೂಪದಲ್ಲಿ ನಿಲ್ಲುತ್ತವೋ ಆಗ ಮೇಘದ ಮಾತೆ ಅಂತರಿಕ್ಷ ತನ್ನ ಪುತ್ರ ಮೇಘದೊಡನೆ ಇರುತ್ತದೆ. ಮತ್ತು ಯಾವಾಗ ಅದು ಮಳೆಯಿಂದ ಭೂಮಿಯ ಮೇಲೆ ಬೀಳುತ್ತದೋ ಆಗ ಭೂಮಿ ತನ್ನ ಪುತ್ರನಾದ ಮೇಘದೊಡನೆ ಮಲಗಿದಂತೆ ಭಾಸವಾಗುತ್ತದೆ. ಈ ಮೇಘವನ್ನು ಉತ್ಪನ್ನ ಮಾಡುವ ಸೂರ್ಯ ಇದರಿಂದಾಗಿ ಪಿತನ ಸ್ಥಾನದಲ್ಲಿರುವಂತೆ ತಿಳಿದು ಬರುತ್ತದೆ. ಆ ಸೂರ್ಯನ ಭೂಮಿ ಮತ್ತು ಅಂತರಿಕ್ಷ ಎರಡೂ ಇಬ್ಬರು ಸ್ತ್ರೀಯರಿಗೆ ಸಮಾನವಾಗಿವೆ. ಸೂರ್ಯನು ಪದಾರ್ಥಗಳಿಂದ ನೀರನ್ನು ವಾಯುವಿನ ಮೂಲಕ ಸೆಳೆದುಕೊಂಡು ಯಾವಾಗ ಅಂತರಿಕ್ಷಕ್ಕೆ ಏರಿಸುತ್ತಾನೋ ಆಗ ಪುತ್ರ ಮೇಘ ಉನ್ಮತ್ತನಂತೆ ವೃದ್ಧಿಹೊಂದಿ ನಂತರ ಸೂರ್ಯನ ಪ್ರಕಾಶವನ್ನು ಮುಚ್ಚಿಬಿಡುತ್ತದೋ ಆಗ ಸೂರ್ಯ ಮೇಘವನ್ನಪ್ಪಳಿಸಿ ಭೂಮಿಯ ಮೇಲೆ ಬೀಳಿಸುತ್ತಾನೆ. ಎಂದರೆ ಭೂಮಿಯ ಮೇಲೆ ವೀರ್ಯಸೇಚನೆ ಮಾಡಿದಂತೆ ನೀರು ಭೂಮಿಯ ಮೇಲೆ ಹರಡುತ್ತದೆ. ಈ ಪ್ರಕಾರ ಈ ಮೇಘ ಕೆಲವು ಬಾರಿ ಮೇಲೆ ಮತ್ತು ಕೆಲವು ಬಾರಿ ಕೆಳಗೆ ಸಂಚರಿಸುತ್ತದೆ. ಅಂತೆಯೇ ಕಂಟಕರೂಪ ಶತ್ರುಗಳನ್ನು ಹೀಗೆ-ಹಾಗೆ ನಿರ್ಜೀವರನ್ನಾಗಿ ಮಾಡಿ ಪ್ರಜೆಗಳ ಪಾಲನೆ ಮಾಡುವುದು ರಾಜಪುರುಷರಿಗೆ ಉಚಿತವಾಗಿರುತ್ತದೆ.

ಪುನಃ ಆ ಮೇಘದ ಶರೀರವು ಹೇಗೆ ಮತ್ತು ಎಲ್ಲಿ ಸ್ಥಿತವಾಗಿರುತ್ತದೆ ಎಂಬುದನ್ನು ತಿಳಿಸಲಾಗುತ್ತದೆ

ಅತಿಷ್ಠಂತೀನಾಮನಿವೇಶನಾನಾಂ ಕಾಷ್ಠಾನಾಂ ಮಧ್ಯೇ ನಿಹಿತಂ ಶರೀರಮ್ ।
ವೃತ್ರಸ್ಯ ನಿಣ್ಯಂ ವಿ ಚರಂತ್ಯಾಪೋ ದೀರ್ಘಂ ತಮ ಆಶಯದಿಂದ್ರಶತ್ರುಃ ॥೧೦॥

ಪದಾರ್ಥ:- ಹೇ ಸಭಾಪತೇ! ಯಾವ **[ವೃತ್ರಸ್ಯ]** ಮೇಘದ **[ಅನಿವೇಶನಾನಾಂ]** ಯಾವುದಕ್ಕೆ ಸ್ಥಿರತೆ ಇರುವುದಿಲ್ಲವೋ **[ಅತಿಷ್ಠಂತೀನಾಮ್ ಮಧ್ಯೇ]** ಯಾವುದು ಸದಾ ಹರಿಯುತ್ತಿರುತ್ತದೋ ಆ ನೀರಿನ ಮಧ್ಯೆ **[ನಿಣ್ಯಮ್]** ನಿಶ್ಚಯಮಾಡಿ ಸ್ಥಿರತೆಯನ್ನು **[ಶರೀರಮ್]** ಯಾರ ಛೇದನವಾಗುತ್ತದೋ ಅಂತೆಯೇ ಶರೀರವಿದೆ. ಅದು **[ಕಾಷ್ಠಾನಾಮ್]** ಎಲ್ಲ ದಿಕ್ಕುಗಳ ನಡುವೆ **[ನಿಹಿತಮ್]** ಸ್ಥಿರವಾಗಿರುತ್ತದೆ. ಹಾಗೂ ಯಾರ ಶರೀರ ರೂಪೀ **[ಆಪಃ]** ನೀರಿನ **[ದೀರ್ಘಂ]** ಮಹತ್ತರವಾದ **[ತಮಃ]** ಅಂಧಕಾರ ರೂಪೀ ಮೇಘ ಮಾಲೆಯಲ್ಲಿ **[ವಿಚರಂತಿ]** ಅತ್ತ ಇತ್ತ ಚಲಿಸುತ್ತದೋ ಅದು **[ಇಂದ್ರ ಶತ್ರುಃ]** ಮೇಘ ಆ ನೀರಿನಲ್ಲಿ ಒಟ್ಟಾಗಿ ಅಥವಾ ಬೇರೆ ಬೇರೆಯಾಗಿ ಸಣ್ಣ ಸಣ್ಣ ಕಣಗಳಾಗಿ **[ಅಶಯತ್]** ಚಲನೆಯಿಲ್ಲದೆ ಬಿದ್ದಿರುತ್ತದೆ. ಅಂತೆಯೇ ಪ್ರಜೆಗಳ ದ್ರೋಹಿಯಾದ ಶತ್ರುಗಳನ್ನು ಅವರ ಅನುಚರರ ಸಮೇತ ಕಟ್ಟಿ ಹಾಕಿ ಎಲ್ಲ ದಿಕ್ಕುಗಳಿಂದಲೂ ವಿಚಲಿತರಾಗದಂತೆ ಮಾಡುವುದು ಸಭಾಪತಿಯ ಕರ್ತವ್ಯ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಈ ಮೇಘ ಅಂತರಿಕ್ಷದಲ್ಲಿ ಇರುವ ನೀರಿನಲ್ಲಿ ಸೂಕ್ಷ್ಮ ರೂಪದಲ್ಲಿರುವುದರಿಂದ ನೋಡಲಾಗುವುದಿಲ್ಲ. ಮತ್ತು ಅದು ಯಾವಾಗ ಘನ ರೂಪದಲ್ಲಿದ್ದು ಮಳೆಯ ಮೂಲಕ ನೀರಿನ ಕಣಗಳ ರೂಪ ಹೊಂದುತ್ತದೆ. ಆಗ ಅದನ್ನು ನೋಡಲು ಸಾಧ್ಯವಾಗುತ್ತದೆ. ಮತ್ತು ಹೇಗೆ ಈ ನೀರು ಒಂದು ಕ್ಷಣವೂ ಸಹ ಅದರ ಸ್ಥಿತಿಯನ್ನು ಪಡೆಯುವುದಿಲ್ಲ. ಆದರೆ, ಎಲ್ಲ ಸಮಯದಲ್ಲಿಯೂ ಮೇಲೆ ಹೋಗಿ ಕೆಳಕ್ಕೆ ಇಳಿಯುತ್ತದೆ. ಈ ಪ್ರಕಾರವಾಗಿ ಅದು ಸುತ್ತುತ್ತಲೇ ಇರುತ್ತದೆ. ಮತ್ತು ಯಾವುದು ಮೇಘದ ಶರೀರ ರೂಪವಿದೆಯೋ ಅದು ಅಂತರಿಕ್ಷದಲ್ಲಿ ಇರುತ್ತಾ ಅತಿ ಸೂಕ್ಷ್ಮವಾಗಿರುವುದರಿಂದ ಕಣ್ಣಿಗೆ ಕಾಣುವುದಿಲ್ಲ. ಅಂತೆಯೇ ಮಹಾಬಲಶಾಲಿಗಳಾದ ಶತ್ರುಗಳನ್ನೂ ಸಹ ಅಲ್ಪ ಬಲಶಾಲಿಗಳನ್ನಾಗಿಸಿ ವಶೀಕರಿಸಿಕೊಳ್ಳುವುದು ಸಭಾಪತಿಗೆ ಯೋಗ್ಯ.

ಪುನಃ ಸೂರ್ಯನು ಆ ಮೇಘದ ಬಗೆಗೆ ಏನನ್ನು ಮಾಡುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ದಾಸಪತ್ನೀರಹಿಗೋಪಾ ಅತಿಷ್ಠನ್ ನಿರುದ್ಧಾ ಆಪಃ ಪಣಿನೇವ ಗಾವಃ । ಅಪಾಂ ಬಿಲಮಪಿಹಿತಂ

ಯದಾಸೀದ್ ವೃತ್ರಂ ಜಘನ್ವಾಁ ಅಪ ತದ್ ವವಾರ ॥೧೧॥

ಪದಾರ್ಥ:- ಹೇ ಸಭಾಪತೇ! **[ಪಣಿನೇವ]** ಗೋವು ಇತ್ಯಾದಿ ಪಶುಗಳನ್ನು ಪಾಲಿಸುವ ಮತ್ತು **[ಗಾವಃ]** ಗೋವುಗಳಿಗೆ ಯಥಾಯೋಗ್ಯ ಸ್ಥಳಗಳಲ್ಲಿ ತಡೆಯುವವನಂತೆ **[ದಾಸಪತ್ನೀಃ]** ಹೆಚ್ಚು ಬಲನೀಡುವ ಮೇಘದ ಪತಿಗೆ ಸಮಾನವಾದ ಮತ್ತು **[ಅಹಿಗೋಪಾಃ]** ರಕ್ಷಣೆ ನೀಡುವವನಾಗಿದ್ದಾನೆ. ಅವನು **[ನಿರುದ್ಧಾಃ]** ತಡೆದಿರುವ **[ಆಪಃ]** ನೀರು **[ಅತಿಷ್ಠನ್]** ಸ್ಥಿರವಾಗಿರುತ್ತದೆ. ಆ **[ಅಪಾಮ್]** ನೀರಿನ **[ಯತ್]** ಯಾವ **[ಬಿಲಮ್]** ಬಿಲ ಎಂದರೆ ಕೋಟೆಯಂತೆ **[ಅಪಿಹಿತಮ್ ಆಸೀತ್]** ಮುಚ್ಚಿ ಬಿಟ್ಟಿರುತ್ತದೆ. ಆ **[ವೃತ್ರಮ್]** ಮೇಘವನ್ನು ಸೂರ್ಯನು **[ಜಘನ್ವಾನ್]** ಅಪ್ಪಳಿಸುತ್ತಾನೆ. ಅಪ್ಪಳಿಸಿ **[ತತ್]** ಆ ನೀರನ್ನು **[ಅಪ ವವಾರ]** ಭಿನ್ನ ಭಿನ್ನ ಮಾಡುತ್ತಾನೆ. ಅಂತೆಯೇ ಸಭಾಪತಿಯಾದ ನೀನು ಶತ್ರುಗಳನ್ನು ದುರ್ವರ್ತನೆಯಿಂದ ತಡೆಗಟ್ಟಿ ನ್ಯಾಯವನ್ನು ಎಂದರೆ ಧರ್ಮಮಾರ್ಗವನ್ನು ಪ್ರಸಿದ್ಧವಾಗುವಂತೆ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಹೇಗೆ ಗೋಪಾಲಕನು ತನ್ನ ಗೋವುಗಳನ್ನು ತನಗೆ ಅನುಕೂಲವಾದ ಸ್ಥಳಗಳಲ್ಲಿ ತಡೆದಿಡುತ್ತಾನೋ ಮತ್ತು ಪುನಃ ಆ ಸ್ಥಳದ ಬಾಗಿಲನ್ನು ತೆರೆದು ಅವುಗಳನ್ನು ಹೊರಹೋಗುವಂತೆ ಮಾಡುತ್ತಾನೋ, ಹೇಗೆ ಮೇಘ ಅದರ ಮೇಘಮಾಲೆಯಲ್ಲಿನ ನೀರಿನ ದ್ವಾರವನ್ನು ತಡೆದು ಆ ನೀರನ್ನು ತನ್ನ ವಶದಲ್ಲಿಟ್ಟುಕೊಳ್ಳುತ್ತದೋ ಅಂತೆಯೇ ಸೂರ್ಯನು ಆ ಮೇಘವನ್ನು ಅಪ್ಪಳಿಸಿ ಆ ನೀರಿನ ತಡೆಯನ್ನು ತೆರವುಗೊಳಿಸಿ ಉತ್ತಮ ರೀತಿಯಲ್ಲಿ ಮಳೆಯನ್ನು ಸುರಿಸುತ್ತಾನೆ. ಅಂತೆಯೇ ರಾಜಪುರುಷರು ಶತ್ರುಗಳನ್ನು ತಡೆಹಿಡಿದು ಪ್ರಜೆಗಳ ಪಾಲನೆಯನ್ನು ಯಥಾಯೋಗ್ಯ ಮಾಡಬೇಕು.

ಪುನಃ ಆ ಇಬ್ಬರು ಪರಸ್ಪರ ಏನನ್ನು ಮಾಡುತ್ತಾರೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಅಶ್ವ್ಯೋ ವಾರೋ ಅಭವಸ್ತದಿಂದ್ರ ಸೃಕೇ ಯತ್ ತ್ವಾ ಪ್ರತ್ಯಹನ್ ದೇವ ಏಕಃ ।

ಅಜಯೋ ಗಾ ಅಜಯಃ ಶೂರ ಸೋಮ-ಮವಾಸೃಜಃ ಸರ್ತವೇ ಸಪ್ತ ಸಿಂಧೂನ್ ॥೧೨॥

ಪದಾರ್ಥ:- ಹೇ **[ಶೂರ]** ವೀರನಂತೆ ಭಯರಹಿತನಾದ **[ಇಂದ್ರ]** ಶತ್ರುಗಳನ್ನು ನಾಶಮಾಡುವ ಸೇನೆಯ ಸ್ವಾಮಿಯೇ! ನಿಮ್ಮಂತಹ **[ಯತ್]** ಯಾವ **[ಅಶ್ವ್ಯಃ]** ವೇಗ ಮತ್ತು ಗರ್ಜನೆ ಇತ್ಯಾದಿ ಗುಣಗಳಲ್ಲಿ ನಿಪುಣರಾದ **[ವಾರಃ]** ಸ್ವೀಕಾರಕ್ಕೆ ಯೋಗ್ಯರಾದ **[ಏಕಃ]** ಅಸಹಾಯ ಮತ್ತು **[ದೇವಃ]** ಉತ್ತಮ ಗುಣಗಳನ್ನುಳ್ಳ ಮೇಘವು ಸೂರ್ಯನೊಡನೆ ಯುದ್ಧ ಮಾಡುವಂತೆ **[ಅಭವಃ]** ಆಗುತ್ತದೆ. **[ಸೃಕೇ]** ಕಿರಣ ರೂಪೀ ವಜ್ರದಲ್ಲಿ ತನ್ನ ಕಣಗಳ ಜಾಲವನ್ನು **[ಪ್ರತ್ಯಹನ್]** ಬೀಸುತ್ತದೆ. ಎಂದರೆ, ಕಿರಣಗಳನ್ನು ಆ ಘನಜಾಲದಲ್ಲಿ ತಡೆಹಿಡಿಯುತ್ತದೆ. ಸೂರ್ಯ ಆ ಮೇಘವನ್ನು ಜಯಿಸಿ, **[ಗಾಃ]** ಅದರಿಂದ ತನ್ನ ಕಿರಣಗಳನ್ನು **[ಅಜಯಃ]** ಬೇರೆ ಮಾಡುತ್ತಾನೆ. ಎಂದರೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಳುಹಿಸುತ್ತಾನೆ. ಮತ್ತು **[ಸೋಮಮ್]** ಪದಾರ್ಥಗಳ ರಸಸಮೂಹವನ್ನು **[ಅಜಯಃ]** ಜಯಿಸುತ್ತಾನೆ. ಈ ರೀತಿ ಮಾಡುತ್ತಾ ಆ ಸೂರ್ಯಲೋಕ ನೀರನ್ನು **[ಸರ್ತವೇ]** ಮೇಲೆ-ಕೆಳಗೆ ಹೋಗಿ ಬರುವುದಕ್ಕೋಸ್ಕರ ಎಲ್ಲ ಲೋಕಗಳಲ್ಲೂ ಸ್ಥಿರಪಡಿಸುವ **[ಸಪ್ತ ಸಿಂಧೂನ್]** ಮಹಾನ್ ಜಲಾಶಯ, ನದಿ, ಬಾವಿ ಮತ್ತು ಸಾಧಾರಣ ಕೆರೆ - ಈ ನಾಲ್ಕು ನೀರಿನ ಸ್ಥಾನಗಳನ್ನು ಪೃಥ್ವಿಯ ಮೇಲೆ ಮತ್ತು ಸಮೀಪದಲ್ಲಿ, ಮಧ್ಯದಲ್ಲಿ ಮತ್ತು ದೂರದೇಶಗಳಲ್ಲಿ ಇರತಕ್ಕ ಮೂರು ಜಲಾಶಯಗಳು - ಹೀಗೆ ಈ ಏಳು ಜಲಾಶಯಗಳನ್ನು **[ಅವಾಸೃಜಃ]** ಉತ್ಪನ್ನ ಮಾಡುತ್ತಾನೆ. ಅಂತೆಯೇ ಶತ್ರುಗಳಲ್ಲಿ ಚೇಷ್ಟೆ ಮಾಡುವವರನ್ನು **[ತತ್]** ಈ ಕಾರಣದಿಂದ **[ತ್ವಾ]** ನಿಮ್ಮನ್ನು ನಾವು ಯುದ್ಧಗಳಲ್ಲಿ ಅಧ್ಯಕ್ಷರನ್ನಾಗಿ ಮಾಡುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಈ ಮೇಘ ಸೂರ್ಯಪ್ರಕಾಶವನ್ನು ಮುಚ್ಚಿ ಬಿಡುತ್ತದೋ ಆಗ ಆ ಸೂರ್ಯ ತನ್ನ ಕಿರಣಗಳಿಂದ ಆ ಮೇಘವನ್ನು ಭಿನ್ನ-ಭಿನ್ನ ಮಾಡಿ ಭೂಮಿಯ ಮೇಲೆ ಆ ಜಲವನ್ನು ಸುರಿಸುತ್ತಾನೆ. ಇದರಿಂದ ಈ ಸೂರ್ಯ ಆ ಜಲರಾಶಿಯನ್ನು ಗಮನ ಆಗಮನಕ್ಕಾಗಿ ಸಮುದ್ರವನ್ನು ರಚಿಸಲು ಕಾರಣವಾಗುತ್ತದೆ. ಅಂತೆಯೇ ಪ್ರಜೆಗಳ ರಕ್ಷಕ ರಾಜನಾಗಿದ್ದು ಶತ್ರುಗಳನ್ನು ಬಂಧಿಸಿ ಶಸ್ತ್ರಗಳಿಂದ ಘಾಸಿಗೊಳಿಸಿ ಅಧೋಗತಿಗೆ ಇಳಿಸಿ ಪ್ರಜೆಗಳಿಗೆ ಧರ್ಮಯುಕ್ತ ಮಾರ್ಗದಲ್ಲಿ ಚಲಿಸಲು ಕಾರಣನಾಗುತ್ತಾನೆ.

ಇವರಿಬ್ಬರ ಈ ಯುದ್ಧದಲ್ಲಿ ಯಾರ ವಿಜಯವು ಉಂಟಾಗುತ್ತದೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ನಾಸ್ಮೈ ವಿದ್ಯುನ್ನ ತನ್ಯತುಃ ಸಿಷೇಧ ನ ಯಾಂ ಮಿಹಮಕಿರದ್ಧ್ರಾದುನಿಂ ಚ । ಇಂದ್ರಶ್ಚ

ಯದ್ ಯುಯುಧಾತೇ ಅಹಿಶ್ಚೋ-ತಾಪರೀಭ್ಯೋ ಮಘವಾ ವಿ ಜಿಗ್ಯೇ ॥೧೩॥

ಪದಾರ್ಥ:- ಹೇ ಸೇನಾಪತೇ! ನೀನು, ಹೇಗೆ ಮೇಘ [**ಅಸ್ಮೈ**] ಈ ಸೂರ್ಯಲೋಕವನ್ನು ತ್ಯಜಿಸಿದಾಗ [**ವಿದ್ಯುತ್**] ಮಿಂಚು [**ನ ಸಿಷೇಧ**] ಅದರ ತಡೆಯನ್ನು ಮಾಡಲಾಗುವುದಿಲ್ಲವೋ [**ತನ್ಯತುಃ**] ಆ ಮೇಘದ ಗರ್ಜನೆ ಸಹ ಆ ಸೂರ್ಯನನ್ನು [**ನ ಸಿಷೇಧ**] ತಡೆಯಲಾಗುವುದಿಲ್ಲ. ಮತ್ತು ಆ [**ಅಹಿಃ**] ಮೇಘವು [**ಯಾಮ್**] ಯಾವ [**ಹ್ರಾದುನಿಮ್**] ಗರ್ಜನೆ ಆದಿ ಗುಣಗಳನ್ನುಳ್ಳ [**ಮಿಹಮ್ ಚ**] ಮಳೆಯನ್ನೂ ಸಹ [**ಅಕಿರತ್**] ತೊರೆದು ಅದೂ ಸಹ ಸೂರ್ಯನಿಗೆ [**ನ ಸಿಷೇಧ**] ಹಾನಿ ಮಾಡಲಾಗುವುದಿಲ್ಲ. ಈ [**ಇಂದ್ರಃ**] ಸೂರ್ಯಲೋಕ ತನ್ನ ಕಿರಣ ರೂಪೀ ಪೂರ್ಣ ಸೇನೆಯಿಂದ ಸಜ್ಜುಗೊಂಡು [**ಉತ**] ಮತ್ತು ತನ್ನ [**ಅಪರಿಭ್ಯಃ**] ಅಪೂರ್ಣಸೇನೆಯಿಂದೊಳಗೊಂಡು [**ಅಹಿಃ**] ಮೇಘವೂ [**ಚ**] ಸಹ - ಈ ಎರಡೂ [**ಯುಯುಧಾತೇ**] ಪರಸ್ಪರ ಯುದ್ಧ ಮಾಡುತ್ತವೆ. [**ಯತ್**] ಹೆಚ್ಚು ಬಲಶಾಲಿಯಾದ ಕಾರಣದಿಂದ [**ಮಘವಾ**] ಅತ್ಯಂತ ಪ್ರಕಾಶಮಯನಾದ ಸೂರ್ಯನು ಆ ಮೇಘವನ್ನೂ [**ಚ**] ಸಹ [**ವಿಜಿಗ್ಯೇ**] ಉತ್ತಮ ರೀತಿಯಲ್ಲಿ ಜಯಿಸುತ್ತಾನೆ. ಅಂತೆಯೇ ಧರ್ಮಯುಕ್ತ ಪೂರ್ಣಬಲಶಾಲಿಯಾಗಿ ಶತ್ರುಗಳ ಮೇಲೆ ವಿಜಯಸಾಧಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ವೃತ್ರ ಎಂದರೆ ಮೇಘದ ಎಷ್ಟು ಮಿಂಚು ಮುಂತಾದ ಯುದ್ಧದ ಸಾಧನಗಳಿವೆಯೋ ಅವೆಲ್ಲವೂ ಸೂರ್ಯನ ಮುಂದೆ ಕ್ಷುದ್ರ ಎಂದರೆ ಎಲ್ಲ ಪ್ರಕಾರದಲ್ಲೂ ನಿರ್ಬಲ ಮತ್ತು ಕೀಳ್ಮಟ್ಟದ್ದಾಗಿರುತ್ತದೆ. ಮತ್ತು ಸೂರ್ಯನ ಯುದ್ಧಸಾಧನಗಳು ಅದರ ನಿರೀಕ್ಷೆಗಿಂತ ಬಹಳ ಹೆಚ್ಚಾಗಿದೆ. ಇದರಿಂದ ಎಲ್ಲ ಕಾಲದಲ್ಲಿಯೂ ಸೂರ್ಯನೇ ವಿಜಯಿಯಾಗುತ್ತಾನೆ ಮತ್ತು ಮೇಘದ ಪರಾಜಯವಾಗುತ್ತಿರುತ್ತದೆ. ಅಂತೆಯೇ ಧರ್ಮದಿಂದಲೇ ಶತ್ರುಗಳನ್ನು ಜಯಿಸಿರಿ.

ಪುನಃ ಆ ಇಬ್ಬರಲ್ಲಿ ಪರಸ್ಪರ ಏನಾಗುತ್ತದೆ ಎಂಬ ವಿಷಯವನ್ನು ತಿಳಿಸಲಾಗುತ್ತದೆ.

ಅಹೇರ್ಯಾತಾರಂ ಕಮಪಶ್ಯ ಇಂದ್ರ ಹೃದಿ ಯತ್ ತೇ ಜಘ್ನುಷೋ ಭೀರಗಚ್ಛತ್ ।
ನವ ಚ ಯನ್ನವತಿಂ ಚ ಸ್ರವಂತೀಃ ಶ್ಯೇನೋ ನ ಭೀತೋ ಅತರೋ ರಜಾಂಸಿ ॥೧೪॥

ಪದಾರ್ಥ:- ಹೇ ಇಂದ್ರ! ವೀರಪುರುಷ! ಯುದ್ಧದ ವ್ಯವಹಾರದಲ್ಲಿ ಶತ್ರುಗಳ [**ಜಘ್ನುಷಃ**] ಹತ ಮಾಡುವಲ್ಲಿ [**ತೇ**] ನಿಮ್ಮ ಪ್ರಭಾವ [**ಅಹೇಃ**] ಮೇಘದ ಗರ್ಜನೆ ಮುಂತಾದ ಶಬ್ದಗಳಿಂದ ಪ್ರಾಣಿಗಳಿಗೆ [**ಯತ್**] ಯಾವಾಗ [**ಭೀಃ**] ಭಯವು [**ಅಗಚ್ಛತ್**] ಉಂಟಾಗುತ್ತದೋ ವಿದ್ವಾಂಸರು ಆ ಮೇಘವನ್ನು [**ಯಾತಾರಮ್**] ದೇಶ ದೇಶಾಂತರಗಳಲ್ಲಿ ತಲುಪಿಸುವ ಸೂರ್ಯನನ್ನು ಕಳುಹಿಸುತ್ತಾರೆ ಮತ್ತು [**ಕಮ್**] ಯಾರನ್ನು ನೋಡುತ್ತಾರೆ? ಸೂರ್ಯನ ತಾಡನೆಗೆ ಸಿಕ್ಕಿದ ಮೇಘ [**ಭೀತಃ**] ಭಯಪಡುತ್ತಾ [**ಶ್ಯೇನಃ ನ**] ಗಿಡುಗ ಪಕ್ಷಿಯಂತೆ [**ಚ**] ಭೂಮಿಯ ಮೇಲೆ ಬಿದ್ದು [**ನವನವತಿಮ್**] ಅನೇಕ [**ಸ್ರವಂತೀಃ**] ನೀರನ್ನು ಹರಿಸುವ ನದಿ ಅಥವಾ ನದಿಗಳಿಗೆ ನೀರನ್ನು ಪೂರೈಸುತ್ತದೆ. [**ಯತ್**] ಯಾವ ಕಾರಣದಿಂದ ಸೂರ್ಯನು ತನ್ನ ಪ್ರಕಾಶವನ್ನು ಆಕರ್ಷಣ, ಛೇದನ ಮುಂತಾದ ಗುಣಗಳಿಂದ ಶ್ರೇಷ್ಠನಾಗುತ್ತಾನೋ ಇದರಿಂದ [**ರಜಾಂಸಿ**] ಎಲ್ಲ ಲೋಕಗಳಿಗೂ [**ಅತರಃ**] ಪ್ರಕಾಶವನ್ನೀಯುತ್ತಾನೆ. ಅಂತೆಯೇ ತಾವೂ ಸಹ ಇದ್ದೀರಿ. ನೀವು [**ಹೃದಿ**] ನಿಮ್ಮ ಮನಸ್ಸಿನಲ್ಲಿ ಯಾರನ್ನು ಶತ್ರುವೆಂದು [**ಅಪಶ್ಯಃ**] ತಿಳಿಯುತ್ತೀರೋ ಅವರನ್ನು ಹೊಡೆದುರುಳಿಸಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾರಿಂದಲಾದರೂ ತೊಂದರೆಯನ್ನನುಭವಿಸಿ ಭಯಭೀತವಾದ ಗಿಡುಗ ಪಕ್ಷಿ ಅಲ್ಲಲ್ಲಿ ಬೀಳುತ್ತಾ ಏಳುತ್ತಾ ಎದ್ದು ಬಿದ್ದು ಹಾರುತ್ತದೋ ಅಥವಾ ಸೂರ್ಯನಿಂದ ಅನೇಕ ಪ್ರಕಾರದ ತಾಡನೆಗೊಳಗಾದ ಮತ್ತು ಆಕರ್ಷಣೆಗೆ ಸಿಕ್ಕಿದ ಮೇಘ ಅತ್ತಿಂದಿತ್ತ ದೇಶ ದೇಶಾಂತರದಲ್ಲಿ ಅನೇಕ ನದಿ ಅಥವಾ ನದಿಗಳಿಗೆ ನೀರನ್ನು ಪೂರೈಸುತ್ತದೆ. ಈ ಮೇಘದ ಉತ್ಪತ್ತಿ ಸೂರ್ಯನಿಂದಲ್ಲದೆ ಇತರ ಯಾರೂ ಕಾರಣರಲ್ಲ. ಮತ್ತು ಹೇಗೆ ಅಂಧಕಾರದಲ್ಲಿ ಪ್ರಾಣಿಗಳಿಗೆ ಭಯವಾಗುತ್ತದೋ ಅಂತೆಯೇ ಮೇಘದ ಮಿಂಚು ಮತ್ತು ಗರ್ಜನೆ ಮುಂತಾದ ಗುಣಗಳಿಂದ ಭಯ ಉಂಟಾಗುತ್ತದೆ. ಆ ಭಯವನ್ನು ದೂರ ಮಾಡುವವನೂ ಸಹ ಸೂರ್ಯನೇ ಆಗಿರುತ್ತಾನೆ. ಹಾಗೂ ಎಲ್ಲ ಲೋಕಗಳ ವ್ಯವಹಾರಗಳೂ ತನ್ನ ಪ್ರಕಾಶ ಮತ್ತು ಆಕರ್ಷಣೆ ಮುಂತಾದ ಗುಣಗಳಿಂದ ನಡೆಯುವಂತೆ ಮಾಡುವವನೂ ಅವನೇ. ಅಂತೆಯೇ ದುಷ್ಟ ಶತ್ರುಗಳನ್ನು ಜಯಿಸಿ ಈ ಮಂತ್ರದಲ್ಲಿ [ನವನವತಿಮ್] - ಇದು ಸಂಖ್ಯೆಯ ಉಪಲಕ್ಷಣವಾಗಿರುವುದರಿಂದ ಅಸಂಖ್ಯಾತ ಎಂಬ ಅರ್ಥ ಬಂದಿದೆ.

ಪುನಃ ಉಕ್ತ ಸೂರ್ಯನು ಹೇಗಿದ್ದಾನೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಇಂದ್ರೋ ಯಾತೋಽವಸಿತಸ್ಯ ರಾಜಾ ಶಮಸ್ಯ ಚ ಶೃಂಗಿಣೋ ವಜ್ರಬಾಹುಃ । ಸೇದು
ರಾಜಾ ಕ್ಷಯತಿ ಚರ್ಷಣೀನಾ-ಮರಾನ್ ನ ನೇಮಿಃ ಪರಿ ತಾ ಬಭೂವ ॥೧೫॥

ಪದಾರ್ಥ:- ಸೂರ್ಯನಿಗೆ ಸಮಾನವಾದ [**ವಜ್ರಬಾಹುಃ**] ಶಸ್ತ್ರಾಸ್ತ್ರಗಳಿಂದ ಕೂಡಿದ ತೋಳುಗಳುಳ್ಳ [**ಇಂದ್ರಃ**] ದುಷ್ಟರನ್ನು ನಿವಾರಣೆ ಮಾಡುವವನಾದ [**ಯಾತಃ**] ಗಮನಾದಿ ವ್ಯವಹಾರಗಳನ್ನು ನಡೆಸುವ ಸಭಾಪತಿ [**ಅವಸಿತಸ್ಯ**] ನಿಶ್ಚಿತವಾದ ಚರಾಚರ ಜಗತ್ತಿನ [**ಶಮಸ್ಯ**] ಶಾಂತಿ ಬಯಸುವ ಮನುಷ್ಯಾದಿ ಪ್ರಾಣಿಗಳ [**ಶೃಂಗಿಣಃ**] ಕೊಂಬುಗಳುಳ್ಳ ಗೋವು ಮತ್ತಿತರ ಪಶುಗಳ ಮತ್ತು [**ಚರ್ಷಣೀನಾಮ್**] ಮನುಷ್ಯರ ಮಧ್ಯೆ [**ಅರಾನ್**] ಚಕ್ರಗಳನ್ನು ಹೊಂದಿರುವ [**ನೇಮಿಃ**] ಗುಂಬ [ಗಾಲಿಯ ಅಚ್ಚು] ಕ್ಕೆ [**ನ**] ಸಮಾನನಾದ [**ರಾಜಾ**] ಪ್ರಕಾಶಮಾನನಾಗಿ [**ತಾ**] ಉತ್ತಮನಾದ ಹಾಗೂ ನಿಕೃಷ್ಟಕರ್ಮಗಳನ್ನು ಮಾಡುವವನಿಗೆ ಸುಖ-ದುಃಖಗಳನ್ನು ಹಾಗೂ [**ರಜಾಂಸಿ**] ಮೇಲೆ ತಿಳಿಸಿದ ಲೋಕಗಳಿಗೆ [**ಪರಿಕ್ಷಯತಿ**] ಕಳುಹಿಸಿ ವಾಸಿಸುವಂತೆ ಮಾಡುತ್ತಾನೆ. [ಉ ಇತ್] ಅಂತೆಯೇ [**ಸಃ**] ಅವರೆಲ್ಲರ [**ರಾಜಾ**] ನ್ಯಾಯವನ್ನು ಪ್ರಸಿದ್ಧಿಗೊಳಿಸುವಂತಹವನಾಗಿ [**ಬಭೂವ**] ಆಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮತ್ತು ಹಿಂದಿನ ಮಂತ್ರದಲ್ಲಿನ [ರಜಾಂಸಿ] ಪದದ ಪುನರುಕ್ತಿಯಾಗಿದೆ. ಹೇಗೆ ರಥದ ಚಕ್ರಗಳು ಗುಂಬ [ಗಾಲಿಯ ಅಚ್ಚು] ಗಳನ್ನು ಮಾಡುತ್ತವೋ ಹಾಗೆಯೇ ಈ ಸೂರ್ಯ ಚರಾಚರ ಶಾಂತ ಹಾಗೂ ಅಶಾಂತ ಜಗತ್ತಿನಲ್ಲಿ ಪ್ರಕಾಶಮಾನನಾಗಿದ್ದು ಎಲ್ಲ ಲೋಕಗಳನ್ನು ಧಾರಣೆ ಮಾಡಿದ್ದು ಅದರದರ ಕಕ್ಷೆಯಲ್ಲಿ ಚಲಿಸುತ್ತದೋ ಹಾಗೆ ಸೂರ್ಯನ ವಿನಾ ಅತಿ ನಿಕಟ ಮೂರ್ತಿಮಂತ ಜಗತ್ತಿನ ಧಾರಣೆ, ಆಕರ್ಷಣೆ, ಪ್ರಕಾಶ ಮತ್ತು ಮೇಘದ ಮಳೆ ಸುರಿಸುವುದೇ ಮುಂತಾದ ಕಾರ್ಯಗಳನ್ನು ಕೈಗೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಅಂತೆಯೇ ಧರ್ಮದಿಂದ ಪ್ರಜೆಗಳ ಪಾಲನೆಯನ್ನು ಮಾಡುತ್ತಿರಿ.

ಈ ಸೂಕ್ತದಲ್ಲಿ ಸೂರ್ಯ ಮತ್ತು ಮೇಘಗಳ ಯುದ್ಧವರ್ಣನೆ ಇರುವುದರಿಂದ ಈ ಸೂಕ್ತವು ಹಿಂದಿನ ಸೂಕ್ತದೊಂದಿಗೆ ಸಂಗತಿಯನ್ನು ಹೊಂದಿದೆ ಎಂಬುದನ್ನು ಗಮನಿಸತಕ್ಕದ್ದು.

ಮೂವತ್ತೆರಡನೆಯ ಸೂಕ್ತ ಸಮಾಪ್ತ

ಸೂಕ್ತ ೩೩

ಮಂತ್ರಸಂಖ್ಯೆ ೧೫ । ಋಷಿಃ - ಹಿರಣ್ಯಸ್ತೂಪ ಆಂಗಿರಸಃ । ದೇವತಾ - ಇಂದ್ರಃ । ಛಂದಃ -೩, ೬, ೧೦ ನಿಚೃತ್ ತ್ರಿಷ್ಟುಪ್, ೫, ೭, ೧೧ ವಿರಾಟ್ ತ್ರಿಷ್ಟುಪ್, ೧೪, ೧೫ ಭುರಿಕ್ಪಂಕ್ತಿ । ಸ್ವರಃ- ಧೈವತಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಇಂದ್ರ ಶಬ್ದದಿಂದ ಈಶ್ವರ ಮತ್ತು ಸಭಾಪತಿಗಳ ವರ್ಣನೆ ಮಾಡಲಾಗುತ್ತದೆ.

ಏತಾಯಾಮೋಪ ಗವ್ಯಂತ ಇಂದ್ರ-ಮಸ್ಮಾಕಂ ಸು ಪ್ರಮತಿಂ ವಾವೃಧಾತಿ ।
ಅನಾಮೃಣಃ ಕುವಿದಾದಸ್ಯ ರಾಯೋ ಗವಾಂ ಕೇತಂ ಪರಮಾವರ್ಜತೇ ನಃ ॥೧॥

ಪದಾರ್ಥ:- ಹೇ ಮನುಷ್ಯರೇ! **[ಗವ್ಯಂತಃ]** ನಿಮ್ಮ ಆತ್ಮಗಳನ್ನು ಗೋ ಆದಿ ಪಶು ಹಾಗೂ ಶುದ್ಧ ಇಂದ್ರಿಯಗಳ ಇಚ್ಛೆಯನ್ನು ಮಾಡುವ **[ಅಸ್ಮಾಕಂ]** ನಮ್ಮ ಮತ್ತು **[ಅಸ್ಯ]** ಈ ಜಗತ್ತಿನ **[ಕುವಿತ್]** ಅನೇಕ ಪ್ರಕಾರದ **[ರಾಯಃ]** ಉತ್ತಮ ಸಂಪತ್ತುಗಳನ್ನು **[ವಾವೃಧಾತಿ]** ವರ್ಧಿಸುತ್ತಾ ಮತ್ತು ಯಾವ **[ಆತ್]** ಇದರ ನಂತರ **[ನಃ]** ನಮ್ಮ **[ಅನಾಮೃಣಃ]** ಹಿಂಸೆ, ವೈರಭಾವ, ಪಕ್ಷಪಾತ ರಹಿತರಾಗಿ **[ಗವಾಂ]** ಮನಸ್ಸು ಮೊದಲಾದ ಇಂದ್ರಿಯಗಳು ಪೃಥಿವೀ ಆದಿ ಲೋಕಗಳು ಮತ್ತು ಗೋವು ಮೊದಲಾದ ಪಶುಗಳ **[ಪರಂ]** ಉತ್ತಮವಾದ **[ಕೇತಂ]** ಜ್ಞಾನವನ್ನು ವರ್ಧಿಸುತ್ತಾ ಮತ್ತು ಅಜ್ಞಾನದ **[ಆವರ್ಜತೇ]** ನಾಶ ಮಾಡುತ್ತಾ **[ಸುಪ್ರಮತಿಂ]** ಉತ್ತಮ ಜ್ಞಾನಯುಕ್ತ **[ಇಂದ್ರಂ]** ಐಶ್ವರ್ಯಶಾಲೀ ಪರಮಾತ್ಮನನ್ನು ಮತ್ತು ನ್ಯಾಯಕರ್ತನನ್ನು **[ಉಪಯಾಮ]** ಹೊಂದುತ್ತೇವೋ ಹಾಗೆಯೇ ನೀವೂ ಸಹ **[ಏತಾ]** ಹೊಂದಿರಿ.

ಭಾವಾರ್ಥ:- ಇಲ್ಲಿ ಶ್ಲೇಷಾಲಂಕಾರವಿದೆ. ಯಾವ ಪುರುಷನು ಜಗತ್ತಿನಲ್ಲಿ ಅವಿದ್ಯೆಯ ನಾಶವನ್ನು ವಿದ್ಯೆಯ ದಾನದಿಂದ ಉತ್ತಮೋತ್ತಮ ಧನೈಶ್ವರ್ಯಗಳನ್ನು ವೃದ್ಧಿಸುತ್ತಾನೋ, ಪರಮೇಶ್ವರನ ಆಜ್ಞೆಯ ಪಾಲನೆ ಮತ್ತು ಉಪಾಸನೆಯನ್ನು ಮಾಡುತ್ತಾ ತನ್ನ ಶರೀರ ಹಾಗೂ ಆತ್ಮದ ಬಲವನ್ನು ನಿತ್ಯವೂ ವೃದ್ಧಿಸಿಕೊಳ್ಳುತ್ತಾನೋ, ಅವನ ಸಹಾಯವಿಲ್ಲದೆ ಯಾವುದೇ ಮನುಷ್ಯನು ಧರ್ಮ, ಅರ್ಥ, ಮೋಕ್ಷರೂಪಿ ಫಲವನ್ನು ಪ್ರಾಪ್ತಿಸಲು ಸಮರ್ಥನಾಗಲಾರನು.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ

ಉಪೇದಹಂ ಧನದಾಮಪ್ರತೀತಂ ಜುಷ್ಟಾಂ ನ ಶ್ಯೇನೋ ವಸತಿಂ ಪತಾಮಿ ।
ಇಂದ್ರಂ ನಮಸ್ಯನ್ನುಪಮೇಭಿರರ್ಕೈರ್ಯಃ ಸ್ತೋತೃಭ್ಯೋ ಹವ್ಯೋ ಅಸ್ತಿ ಯಾಮನ್ ॥೨॥

ಪದಾರ್ಥ:- **[ಯಃ]** ಯಾವ **[ಹವ್ಯಃ]** ಗ್ರಹಣ ಮಾಡಲು ಯೋಗ್ಯನಾದ ಈಶ್ವರನು **[ಸ್ತೋತೃಭ್ಯಃ]** ತನ್ನ ಸ್ತುತಿಯನ್ನು ಮಾಡುವವರಿಗಾಗಿ ಧನೈಶ್ವರ್ಯಗಳ ಪ್ರದಾಯಕನು **[ಅಸ್ತಿ]** ಆಗಿದ್ದಾನೋ ಆ **[ಅಪ್ರತೀತಂ]** ಚಕ್ಷುರಾದಿ ಇಂದ್ರಿಯಗಳಿಗೆ ಅಗೋಚರನೂ **[ಧನದಾಂ]** ಸಂಪತ್ತನ್ನು ನೀಡುವವನೂ ಆದ **[ಇಂದ್ರಂ]** ಪರಮೇಶ್ವರನನ್ನು **[ನಮಸ್ಯನ್]** ನಮಸ್ಕರಿಸುತ್ತಾ **[ಅಹಂ]** ನಾನು **[ನ]** ಯಾವ ರೀತಿ **[ಜುಷ್ಟಾಂ]** ಹಿಂದೆ ಸೇವಿಸಿರುವ ಅರ್ಥಾತ್ ವಾಸಿಸಿರುವ **[ವಸತಿಂ]** ಗೂಡನ್ನು **[ಶ್ಯೇನಃ]** ಗಿಡುಗ ಪಕ್ಷಿಯು ಪ್ರಾಪ್ತಿಸುತ್ತದೆಯೋ ಹಾಗೆಯೇ **[ಯಾಮನ್]** ಗಮನಶೀಲವಾದ ಅರ್ಥಾತ್ ಚಲನಶೀಲವಾದ ಈ ಜಗತ್ತಿನಲ್ಲಿ **[ಉಪಮೇಭಿಃ]** ಉಪಮೆಗೆ ಯೋಗ್ಯವಾದ **[ಅರ್ಕೈಃ ಇತ್]** ಅನೇಕ ಸೂರ್ಯರಿಂದಲೇ **[ಉಪ ಪತಾಮಿ]** ಪ್ರಾಪ್ತಿಸುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಶ್ಯೇನ ಅಥವಾ ವೇಗಶಾಲಿ ಪಕ್ಷಿಯು ತಾನು ಮೊದಲು ನೆಲೆಸಿದ್ದ ಸುಖಕರವಾದ ಸ್ಥಾನವನ್ನು ಸ್ಥಾನಾಂತರದಿಂದ ಮತ್ತೆ ಪಡೆಯುತ್ತದೆಯೋ ಅದೇ ರೀತಿ ಪರಮಾತ್ಮನನ್ನು ಉಪಾಸಿಸುತ್ತಾ ಮನುಷ್ಯನು ಅವನಿಂದಲೇ ನಿರ್ಮಿತವಾದ ಈ ಜಗತ್ತಿನಿಂದ ಸೂರ್ಯ ಮೊದಲಾದ ಲೋಕಗಳ ಉಪಮೆ-ದೃಷ್ಟಾಂತಗಳಲ್ಲಿ ಪರಮಾತ್ಮನ ನಿಶ್ಚಯವನ್ನು ಮಾಡಿ ಅವನನ್ನು ಪ್ರಾಪ್ತಿಸಿಕೊಳ್ಳಲಿ. ಏಕೆಂದರೆ ಈ ಜಗತ್ತಿನಲ್ಲಿ ರಚಿಸಲ್ಪಟ್ಟ ಎಷ್ಟೆಲ್ಲಾ ಪದಾರ್ಥಗಳಿವೆಯೋ ಅವೆಲ್ಲವೂ ಅದನ್ನು ರಚಿಸಿದವನನ್ನು ನಿಶ್ಚಯಗೊಳಿಸುತ್ತದೆ ಮತ್ತು ರಚಿಸುವವನಿಲ್ಲದೆ ಯಾವೊಂದೂ ಜಡಪದಾರ್ಥದ ರಚನೆಯೂ ಸಾಧ್ಯವಾಗುವುದಿಲ್ಲ. ಯಾವ ರೀತಿ ರಚಿಸುವವನಿಲ್ಲದೆ ಯಾವ ಪದಾರ್ಥವೂ ರಚನೆಗೊಳ್ಳುವುದಿಲ್ಲವೋ ಅದೇ ರೀತಿ ಈಶ್ವರನ ಈ ಸೃಷ್ಟಿಯಲ್ಲಿಯೂ ತಿಳಿಯಬೇಕು. ಈ ರೀತಿ ನಿಶ್ಚಯವಾದ ನಂತರವೂ ಯಾವನು ಈಶ್ವರನನ್ನು ಅನಾದರ ಮಾಡಿ ನಾಸ್ತಿಕನಾಗಿಬಿಡುತ್ತಾನೋ ಅವನಿಗಿಂತ ದೊಡ್ಡ ಅಜ್ಞಾನಿ ಮತ್ತಾರು ತಾನೇ ಇರಲು ಸಾಧ್ಯ?

ಈಗ ಇಂದ್ರಶಬ್ದದಿಂದ ಶೂರ-ವೀರರ ಗುಣವನ್ನು ಪ್ರಕಾಶಿತಗೊಳಿಸಲಾಗುತ್ತದೆ.

ನಿ ಸರ್ವಸೇನ ಇಷುಧೀಂರಸಕ್ತ ಸಮರ್ಯೋ ಗಾ ಅಜತಿ ಯಸ್ಯ ವಷ್ಟಿ ।
ಚೋಷ್ಕೂಯಮಾಣ ಇಂದ್ರ ಭೂರಿ ವಾಮಂ ಮಾ ಪಣಿರ್ಭೂರಸ್ಮದಧಿ ಪ್ರವೃದ್ಧ ॥೩॥

ಪದಾರ್ಥ:- **[ಅಧಿ ಪ್ರವೃದ್ಧ]** ಹೇ ಮಹೋನ್ನತ ಗುಣಯುಕ್ತ! **[ಇಂದ್ರ]** ಶತ್ರುಗಳನ್ನು ವಿದೀರ್ಣಗೊಳಿಸುವವನಾದ **[ಸರ್ವಸೇನಃ]** ಯಾರ ಸೈನ್ಯವೆಲ್ಲವೂ **[ಪಣಿಃ]** ಸತ್ಯವ್ಯವಹಾರಿಯೂ **[ಚೋಷ್ಕೂಯಮಾಣಃ]** ಎಲ್ಲ ಶತ್ರುಗಳನ್ನು ಪಲಾಯನ ಮಾಡಿಸಲು ಸಮರ್ಥವೂ ಆದ ನಿನ್ನ **[ಭೂರಿ]** ಬಹಳವಾದ **[ಇಷುಧೀನ್]** ಯಾವುದರಲ್ಲಿ ಬಾಣವು ಇರಿಸಲ್ಪಡುತ್ತದೆಯೋ ಅದನ್ನು ಧರಿಸಿ ಯಾವರೀತಿ **[ಅರ್ಯಃ]** ವೈಶ್ಯನು **[ಗಾಃ]** ಪಶುಗಳನ್ನು **[ಸಮಜತಿ]** ನಡೆಸುತ್ತಾನೋ ಹಾಗೆ **[ನ್ಯಸಕ್ತ]** ಶತ್ರುಗಳನ್ನು ದೃಢ ಬಂಧನಗಳಿಂದ ಬಂಧಿಸಿ **[ಅಸ್ಮತ್]** ನಮ್ಮಿಂದ **[ವಾಮಂ]** ಅರುಚಿಕರ ಹಾಗೂ ಅನಿಷ್ಟಕರ ಕರ್ಮಗಳನ್ನು ಮಾಡಿಸುವವನು **[ಮಾ ಭೂಃ]** ಆಗದಿರು. ಇದರಿಂದ **[ಯಸ್ಯ]** ಯಾವ ನಿನ್ನ ಪ್ರತಾಪವಿದೆಯೋ ಅದು **[ವಷ್ಟಿ]** ಪ್ರಕಾಶಿತವಾಗಿ ನೀನು ವಿಜಯಿಯಾಗುವೆ.

ಭಾವಾರ್ಥ:- ಇಲ್ಲಿ ಲುಪ್ತೋಪಮಾಲಂಕಾರವಿದೆ. ವೈಶ್ಯನು ಯಾವ ರೀತಿ ಗೋವುಗಳ ಪಾಲನೆಯನ್ನು ಮಾಡುತ್ತಾ ಅವುಗಳನ್ನು ಮೇಯಿಸುತ್ತಾ ಹಾಲು ಮೊದಲಾದವುಗಳ ವ್ಯವಹಾರಗಳನ್ನು ಸಿದ್ಧಗೊಳಿಸುತ್ತಾನೋ ಹಾಗೆಯೇ ಈಶ್ವರನಿಂದ ಉತ್ಪನ್ನವಾದ ಎಲ್ಲ ಲೋಕಗಳಲ್ಲಿ ದೊಡ್ಡದಾದ ಸೂರ್ಯಲೋಕದ ಕಿರಣಗಳು ಬಾಣಗಳಂತೆ ಭೇದನ ಮಾಡುವ ಎಲ್ಲ ಪದಾರ್ಥಗಳನ್ನು ಪ್ರವೇಶಿಸಿ ವಾಯುವಿನಿಂದ ಮೇಲೆ ಕೆಳಗೆ ಮಾಡಿ ರಸಸಹಿತವಾಗಿ ಎಲ್ಲ ಪದಾರ್ಥಗಳನ್ನು ಸಿದ್ಧಗೊಳಿಸುವಂತೆ ರಾಜನೂ ಸಹ ಪ್ರಜೆಗಳ ಪಾಲನೆಯನ್ನು ಮಾಡಬೇಕು.

ಈಗ ಇಂದ್ರ ಶಬ್ದದಿಂದ ಅವನ ಗುಣಗಳ ವರ್ಣನೆ ಮಾಡಲಾಗುತ್ತದೆ.

ವಧೀರ್ಹಿ ದಸ್ಯುಂ ಧನಿನಂ ಘನೇನಁ ಏಕಶ್ಚರನ್ನುಪಶಾಕೇಭಿರಿಂದ್ರ ।
ಧನೋರಧಿ ವಿಷುಣಕ್ ತೇ ವ್ಯಾಯನ್ನಯಜ್ವಾನಃ ಸನಕಾಃ ಪ್ರೇತಿಮೀಯುಃ ॥೪॥

ಪದಾರ್ಥ:- ಹೇ **[ಇಂದ್ರ]** ಐಶ್ವರ್ಯಯುಕ್ತ ಶೂರವೀರ! ಏಕಾಕಿಯಾಗಿಯೇ ನೀನು ಯಾವರೀತಿ ಈಶ್ವರ ಅಥವಾ ಸೂರ್ಯನು **[ಉಪಶಾಕೇಭಿಃ]** ತನ್ನ ಸಾಮರ್ಥ್ಯರೂಪೀ ಕರ್ಮಗಳಿಂದ **[ಏಕಃ]** ಏಕಾಂಗಿಯಾಗಿಯೇ **[ಚರನ್]** ಜ್ಞಾತ ದುಷ್ಟರನ್ನು ಕೊಲ್ಲುತ್ತಾರೆಯೋ ಅದೇ ರೀತಿ **[ಘನೇನ]** ವಜ್ರರೂಪೀ ಶಸ್ತ್ರದಿಂದ **[ದಸ್ಯುಂ]** ಬಲ

ಮತ್ತು ಅನ್ಯಾಯದಿಂದ ಇತರರ ಧನವನ್ನು ಲೂಟಿ ಮಾಡುವ ದುಷ್ಟರನ್ನು [ವಧೀಃ] ನಾಶಮಾಡು. ಮತ್ತು [ವಿಷುಣಕ್] ಅಧರ್ಮದಿಂದ ಧರ್ಮಾತ್ಮರನ್ನು ದುಃಖಿಗಳನ್ನಾಗಿ ಮಾಡುವವರನ್ನು ನಾಶಗೊಳಿಸುವವನಾದ ನೀನು [ಧನೋಃ] ಧನುಸ್ಸಿನ [ಅಧಿ] ಮೇಲಿನ ಬಾಣಗಳನ್ನು ಹೊರತೆಗೆದು ದುಷ್ಟರ ನಿವಾರಣೆ ಮಾಡಿ [ಧನಿನಂ] ಧಾರ್ಮಿಕ ಧನಾಢ್ಯರ ವೃದ್ಧಿಯನ್ನು ಮಾಡು. ಯಾವ ರೀತಿ ಈಶ್ವರನ ನಿಂದೆ ಮಾಡುವವರು ಹಾಗೂ ಸೂರ್ಯಲೋಕದ ಶತ್ರುವಾದ ಮೋಡಗಳು [ಘನೇನ] ತನ್ನ ಸಾಮರ್ಥ್ಯ ಅಥವಾ ಕಿರಣಸಮೂಹದಿಂದ [ವ್ಯಾಯನ್] ನಾಶಹೊಂದುತ್ತದೆಯೋ ಅದೇ ರೀತಿ [ಹಿ] ನಿಶ್ಚಯವಾಗಿ [ತೇ] ನಿನ್ನ [ಅಯಜ್ವಾನಃ] ಯಜ್ಞವನ್ನು ಮಾಡದಿರುವವನು [ಸನಕಾಃ] ಅಧರ್ಮದಿಂದ ಇತರರ ಪದಾರ್ಥಗಳನ್ನು ಸೇವಿಸುವವನು [ಪ್ರೇತಿಮ್] ಮರಣವನ್ನು [ಈಯುಃ] ಹೊಂದುವಂತೆ ಪ್ರಯತ್ನ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಪರಮಾತ್ಮನು ಶತ್ರುಗಳಿಂದ ರಹಿತನೂ ಹಾಗೂ ಸೂರ್ಯಲೋಕವು ಮೋಡಗಳಿಂದ ನಿವೃತ್ತವೂ ಆಗಿರುತ್ತವೆಯೋ ಅದೇ ರೀತಿ ಮನುಷ್ಯರು ಕಳ್ಳ, ದರೋಡೆಕೋರ ಅಥವಾ ವಿನಾಶಕಾರೀ ಶತ್ರುಗಳನ್ನು ಕೊಂದು ಐಶ್ವರ್ಯಸಂಪನ್ನ ಧರ್ಮಾತ್ಮರುಗಳ ರಕ್ಷಣೆ ಮಾಡುತ್ತಾ ಶತ್ರುಗಳಿಂದ ರಹಿತವಾದ ವಾತಾವರಣವನ್ನುಂಟುಮಾಡಬೇಕು.

ಈಗ ಇಂದ್ರ ಶಬ್ದದಿಂದ ಶೂರ-ವೀರರ ಕಾರ್ಯಗಳನ್ನು ವರ್ಣಿಸಲಾಗುತ್ತದೆ.

ಪರಾ ಚಿಚ್ಛೀರ್ಷಾ ವವೃಜುಸ್ತ ಇಂದ್ರಾ-ಯಜ್ವಾನೋ ಯಜ್ವಭಿಃ ಸ್ಪರ್ಧಮಾನಾಃ ।
ಪ್ರ ಯದ್ ದಿವೋ ಹರಿವಃ ಸ್ಥಾತರುಗ್ರ ನಿರವ್ರತಾ ಅಧಮೋ ರೋದಸ್ಯೋಃ ।।೫।।

ಪದಾರ್ಥ:- ಹೇ [ಹರಿವಃ] ಪ್ರಶಂಸಿತ ಸೇನೆ ಮೊದಲಾದ ಸಾಧನಗಳಾದ ಕುದುರೆ, ಆನೆಗಳಿಂದ ಯುಕ್ತ [ಪ್ರಸ್ಥಾತಃ] ಯುದ್ಧದಲ್ಲಿ ಸ್ಥಿತರಾದ ಮತ್ತು [ಉಗ್ರ] ದುಷ್ಟರ ಬಗೆಗೆ ತೀಕ್ಷ್ಣವ್ರತಧಾರಣೆ ಮಾಡಿದ [ಇಂದ್ರಾ] ಸೇನಾಪತೀ! [ಚಿತ್] ಯಾವ ರೀತಿ ಹರಣ ಆಕರ್ಷಣ ಗುಣಯುಕ್ತ ಕಿರಣಗಳುಳ್ಳನೂ, ಯುದ್ಧದಲ್ಲಿ ಸ್ಥಿತನಾದ ಮತ್ತು ದುಷ್ಟರನ್ನು ಅತ್ಯಂತ ತಪ್ತಗೊಳಿಸುವ ಸೂರ್ಯಲೋಕ [ರೋದಸ್ಯೋಃ] ಅಂತರಿಕ್ಷ ಹಾಗೂ ಪೃಥಿವಿಗಳ ಪ್ರಕಾಶ ಹಾಗೂ ಆಕರ್ಷಣೆಯನ್ನು ಮಾಡುತ್ತಾ ಇರುವ ಮೇಘಗಳ ಅವಯವಗಳನ್ನು ಛಿನ್ನ-ಭಿನ್ನ ಮಾಡಿ ಅದರ ನಿವಾರಣೆ ಮಾಡುತ್ತದೆಯೋ ಹಾಗೆಯೇ ನೀನು [ಯತ್] ಯಾವ [ಅಯಜ್ವಾನಃ] ಯಜ್ಞ ಮಾಡದಿರುವವನು [ಯಜ್ವಭಿಃ] ಯಜ್ಞವನ್ನು ಮಾಡುವವರನ್ನು [ಸ್ಪರ್ಧಮಾನಾಃ] ಈರ್ಷ್ಯೆಯಿಂದ ಕಾಣುತ್ತಾನೋ ಅವನು ಯಾವ ರೀತಿ [ಪರ ಚೀರ್ಷಾಃ] ತನ್ನ ಶಿರಗಳನ್ನು [ತೇ] ನಿನ್ನಿಂದ [ವವೃಜುಃ] ಬೀಳಿಸುತ್ತಾನೋ ಹಾಗೆ ಆ [ಅವ್ರತಾನ್] ಸತ್ಯಾಚರಣ ಮೊದಲಾದ ವ್ರತಗಳಿಂದ ರಹಿತರಾದ ಮನುಷ್ಯರನ್ನು [ನಿರಧಮಃ] ಉತ್ತಮ ರೀತಿಯಲ್ಲಿ ದಂಡವನ್ನಿತ್ತು ಶಿಕ್ಷಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಸೂರ್ಯನು ಹಗಲು ಮತ್ತು ಪೃಥಿವಿಯನ್ನು ಧಾರಣೆ ಮಾಡಿ ಮೇಘರೂಪಿ ಅಂಧಕಾರವನ್ನು ನಿವಾರಣೆ ಮಾಡಿ ಮಳೆಯ ಮೂಲಕ ಎಲ್ಲ ಪ್ರಾಣಿಗಳನ್ನು ಸುಖಯುಕ್ತರನ್ನಾಗಿ ಮಾಡುತ್ತಾನೋ ಹಾಗೆಯೇ ಮನುಷ್ಯರು ಉತ್ತಮೋತ್ತಮ ಗುಣಗಳನ್ನು ಧಾರಣೆ ಮಾಡಿ ದುರ್ಗುಣಗಳನ್ನು ತ್ಯಜಿಸಿ ಧಾರ್ಮಿಕರ ರಕ್ಷಣೆಯನ್ನೂ ಅಧರ್ಮೀ ದುಷ್ಟರ ನಾಶವನ್ನೂ ದಂಡ ನೀಡುವುದರ ಮೂಲಕ ಮಾಡುತ್ತಾ ವಿದ್ಯೆ, ಉತ್ತಮ ಶಿಕ್ಷಣ ಹಾಗೂ ಧರ್ಮೋಪದೇಶದ ವರ್ಷಣದಿಂದ ಎಲ್ಲ ಪ್ರಾಣಿಗಳನ್ನು ಸುಖಿಗಳನ್ನಾಗಿ ಮಾಡಿ ಸತ್ಯರಾಜ್ಯದ ಪ್ರಚಾರ ಮಾಡಬೇಕು.

ಪುನಃ ಅವನ ಕಾರ್ಯವೇನು ಎಂಬುದನ್ನು ವಿವರಿಸಲಾಗುತ್ತದೆ.

ಅಯುಯುತ್ಸನ್ನನವದ್ಯಸ್ಯ ಸೇನಾ-ಮಯಾತಯಂತ ಕ್ಷಿತಯೋ ನವಗ್ವಾಃ ।
ವೃಷಾಯುಧೋ ನ ವಧ್ರಯೋ ನಿರಷ್ಟಾಃ ಪ್ರವದ್ಭಿರಿಂದ್ರಾಚ್ಚಿತಯಂತ ಆಯನ್ ।।೬।।

ಪದಾರ್ಥ:- ಹೇ [ನವಗ್ವಾಃ] ನವನವೀನ ಶಿಕ್ಷಣ ಹಾಗೂ ವಿದ್ಯೆಯನ್ನು ಪಡೆದ ಅಥವಾ ಪಡೆಯುವಂತೆ ಮಾಡುವ [ವೃಷಾಯುಧಃ] ಅತಿಪ್ರಬಲ ಶಕ್ತಿಯೊಂದಿಗೆ ಯುದ್ಧಮಾಡುವ [ಚಿತಯಂತ] ಯುದ್ಧವಿದ್ಯೆಯಿಂದ ಕೂಡಿದ [ಕ್ಷಿತಯಃ] ಮನುಷ್ಯರೇ! ನೀವು [ಅನವದ್ಯಸ್ಯ] ಯಾವ ಉತ್ತಮ ಗುಣಗಳಿಂದ ಪ್ರಶಂಸನೀಯನಾದ ಸೇನಾಧ್ಯಕ್ಷನ [ಸೇನಾಂ] ಸೇನೆಯನ್ನು [ಅಯಾತಯಂತ] ಉತ್ತಮ ಶಿಕ್ಷಣದಿಂದ ಯತ್ನಶೀಲವಂತನನ್ನಾಗಿ ಮಾಡಿ ಶತ್ರುಗಳೊಂದಿಗೆ [ಅಯುಯುತ್ಸನ್] ಯುದ್ಧದ ಇಚ್ಛೆಯನ್ನು ಮಾಡಿರಿ. [ಇಂದ್ರಾತ್] ಯಾವ ಶೂರವೀರ ಸೇನಾಧ್ಯಕ್ಷನಿಂದ [ವಧ್ರಯಃನ] ನಿರ್ಬಲ ನಪುಂಸಕರಂತಹ ಶತ್ರುಗಳನ್ನು [ನಿರಷ್ಟಾಃ] ದೂರತೊಲಗಿಸುತ್ತಾ [ಪ್ರವದ್ಭಿಃ] ಪಲಾಯನ ಯೋಗ್ಯ ಮಾರ್ಗಗಳಿಂದ [ಆಯನ್] ಹೊರಟುಹೋಗಲಿ. ಅಂತಹ ಪುರುಷನನ್ನು ಸೇನಾಪತಿಯನ್ನಾಗಿ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ಮನುಷ್ಯರು ಶರೀರ ಮತ್ತು ಆತ್ಮಬಲಯುಕ್ತ ಶೂರವೀರ ಧಾರ್ಮಿಕ ಪುರುಷನನ್ನು ಸೇನಾಧ್ಯಕ್ಷನನ್ನಾಗಿಸಿ ಹಾಗೂ ಸರ್ವಥಾ ಉತ್ತಮ ಸೇನೆಯನ್ನು ಸಂಪಾದನೆ ಮಾಡಿ ದುಷ್ಟರೊಂದಿಗೆ ಯುದ್ಧವನ್ನು ಮಾಡುತ್ತಾರೋ ಆಗ ಸಿಂಹದ ಬಳಿ ಕುರಿ ಮತ್ತು ವೀರ ಪುರುಷನ ಬಳಿ ಹೇಡಿ ಹಾಗೂ ಸೂರ್ಯನ ತಾಪದಿಂದ ಮೇಘಾವಯವಗಳು ನಷ್ಟವಾಗುವಂತೆ ಅಂತಹ ವೀರರ ಸಮೀಪದಿಂದ ಶತ್ರುಜನರು ಹೆದರಿ, ಬೆನ್ನುತೋರಿಸಿ ಪಲಾಯನ ಮಾಡುತ್ತಾರೆ. ಇದರಿಂದ ಎಲ್ಲ ಮನುಷ್ಯರೂ ಈ ರೀತಿ ಸಾಮರ್ಥ್ಯ ಸಂಪಾದನೆ ಮಾಡಿ ರಾಜ್ಯಭೋಗವನ್ನು ಸದಾ ಮಾಡಬೇಕು.

ಈಗ ಇಂದ್ರ ಶಬ್ದದಿಂದ ಶೂರ-ವೀರರ ಕಾರ್ಯವನ್ನು ವಿವರಿಸಲಾಗುತ್ತದೆ.

ತ್ವಮೇತಾನ್ ರುದತೋ ಜಕ್ಷತಶ್ಚಾ-ಯೋಧಯೋ ರಜಸ ಇಂದ್ರ ಪಾರೇ ।
ಅವಾದಹೋ ದಿವ ಆ ದಸ್ಯುಮುಚ್ಚಾ ಪ್ರ ಸುನ್ವತಃ ಸ್ತುವತಃ ಶಂಸಮಾವಃ ।।೭।।

ಪದಾರ್ಥ:- ಹೇ [ಇಂದ್ರ] ಸೇನೆಯೆಂಬ ಐಶ್ವರ್ಯದಿಂದ ಕೂಡಿದ ಸೇನಾಧ್ಯಕ್ಷನೇ! [ತ್ವಂ] ನೀನು [ಏತಾನ್] ಇತರರಿಗೆ ಪೀಡನೆಯನ್ನುಂಟುಮಾಡುವ ಈ ದುಷ್ಟರು [ರುದಿತಃ] ರೋಧಿಸುತ್ತಾ ಇರುವ ಜೀವರ [ಚ] ಮತ್ತು [ದಸ್ಯುಂ] ದುಷ್ಟರಿಗೆ ದಂಡವನ್ನು ವಿಧಿಸು. ಹಾಗೂ ತನ್ನ ಭೃತ್ಯರನ್ನು [ಜಕ್ಷತಃ] ಅನೇಕ ಪ್ರಕಾರದಿಂದ ಭೋಜನಾದಿಗಳನ್ನಿತ್ತು ಆನಂದಿತರನ್ನಾಗಿಸುವ ಮನುಷ್ಯರನ್ನು ಅವರೊಂದಿಗೆ [ಅಯೋಧಯಃ] ಉತ್ತಮ ರೀತಿಯಿಂದ ಯುದ್ಧಮಾಡಿಸು ಮತ್ತು ಈ ಧರ್ಮದ ಶತ್ರುಗಳನ್ನು [ರಜಸಃ] ಪೃಥಿವೀ ಲೋಕದಿಂದ [ಪಾರೇ] ದೂರ ಮಾಡಿ [ಅವಾದಹಃ] ಭಸ್ಮ ಮಾಡು. ಇದೇ ರೀತಿ [ದಿವಃ] ಉತ್ತಮ ಶಿಕ್ಷಣದಿಂದ ಈಶ್ವರ, ಧರ್ಮ, ಶಿಲ್ಪ ಯುದ್ಧವಿದ್ಯೆ, ಮತ್ತು ಪರೋಪಕಾರಾದಿಗಳ ಪ್ರಕಾಶನದಿಂದ [ಉಚ್ಚಾ] ಉತ್ತಮೋತ್ತಮ ಕರ್ಮ ಹಾಗೂ ಸುಖಗಳನ್ನು [ಪ್ರಸುನ್ವತಃ] ಸಿದ್ಧಗೊಳಿಸಲು ಹಾಗೂ [ಆಸ್ತುವತಃ] ಗುಣಸ್ತುತಿ ಮಾಡುವವರನ್ನು [ಪ್ರ ಆವಃ] ರಕ್ಷಣೆ ಮಾಡು ಮತ್ತು [ಶಂಸಂ] ಅವರಿಂದ ಪ್ರಶಂಸೆಯನ್ನು ಹೊಂದು.

ಭಾವಾರ್ಥ:- ಮನುಷ್ಯರು ಯುದ್ಧಕ್ಕಾಗಿ ಅನೇಕ ಪ್ರಕಾರದ ಕರ್ಮಗಳನ್ನು ಅಂದರೆ ಮೊದಲು ತಮ್ಮ ಸೇನೆಯ ಎಲ್ಲ ಮನುಷ್ಯರ ಪುಷ್ಟಿ, ಆನಂದದ ವೃದ್ಧಿಯನ್ನೂ ಹಾಗೂ ದುಷ್ಟರ ದೌರ್ಬಲ್ಯ ಹಾಗೂ ಉತ್ಸಾಹ

ಭಂಗವನ್ನು ನಿರಂತರ ಮಾಡುತ್ತಿರಬೇಕು. ಯಾವ ರೀತಿ ಸೂರ್ಯನು ತನ್ನ ಕಿರಣಗಳಿಂದ ಎಲ್ಲವನ್ನೂ ಪ್ರಕಾಶಿತಗೊಳಿಸಿ ಮೇಘದಿಂದ ಆವೃತವಾದ ಅಂಧಕಾರವನ್ನು ನಿವಾರಣೆ ಮಾಡಲು ಪ್ರವೃತ್ತನಾಗಿರುತ್ತಾನೋ, ಅದೇ ರೀತಿ ಸದಾಕಾಲದಲ್ಲಿಯೂ ಉತ್ತಮ ಕರ್ಮ ಮತ್ತು ಗುಣಗಳ ಪ್ರಕಾಶವನ್ನು, ದುಷ್ಟ ಕರ್ಮಗಳ ದೋಷದ ನಿವೃತ್ತಿಯನ್ನೂ ನಿರಂತರವಾಗಿ ಮಾಡುತ್ತಿರಬೇಕು.

ಮತ್ತೆ ಇಂದ್ರನ ಕೃತ್ಯಗಳ ವಿವರಣೆ ಇಲ್ಲಿದೆ.

ಚಕ್ರಾಣಾಸಃ ಪರೀಣಹಂ ಪೃಥಿವ್ಯಾ ಹಿರಣ್ಯೇನ ಮಣಿನಾ ಶುಂಭಮಾನಾಃ ।
ನ ಹಿನ್ವಾನಾಸಸ್ತಿತಿರುಸ್ತ ಇಂದ್ರಂ ಪರಿ ಸ್ಪಶೋ ಅದಧಾತ್ ಸೂರ್ಯೇಣ ॥೮॥

ಪದಾರ್ಥ:- ಯಾವರೀತಿ ಸೂರ್ಯನು **[ಪರ್ಯ್ಯದಧಾತ್]** ಎಲ್ಲೆಡೆಗಳಿಂದ ಯಾವುದನ್ನು ಧಾರಣ ಮಾಡುತ್ತಾನೋ **[ತೇ]** ಆ ಮೇಘದ ಅವಯವವು ಸೂರ್ಯನ ಪ್ರಕಾಶವನ್ನು **[ಸ್ಪಶಃ]** ಬಂಧಿಸುವ **[ಪೃಥಿವ್ಯಾ]** ಪೃಥಿವಿಯನ್ನು **[ಪರೀಣಹಂ]** ನಾಲ್ದೆಸೆಯಿಂದಲೂ ಸುತ್ತುವರಿಯುವಂತೆ **[ಚಕ್ರಾಣಾಸಃ]** ಯುದ್ಧ ಮಾಡುತ್ತಾ **[ಹಿರಣ್ಯೇನ]** ಪ್ರಕಾಶರೂಪೀ **[ಮಣಿನಾ]** ಮಣಿಯಿಂದ ಯಾವರೀತಿ **[ಸೂರ್ಯೇಣ]** ಸೂರ್ಯನ ತೇಜಸ್ಸಿನಿಂದ **[ಶುಂಭಮಾನಾಃ]** ಶೋಭಾಯಮಾನವಾದ **[ಹಿನ್ವಾನಾಸಃ]** ಸುಖಗಳನ್ನು ಸಂಪಾದಿಸುತ್ತಾ **[ಇಂದ್ರಂ]** ಸೂರ್ಯಲೋಕವನ್ನು **[ನ ತಿತಿರುಃ]** ಉಲ್ಲಂಘನೆ ಮಾಡುವುದಿಲ್ಲವೋ ಹಾಗೆಯೇ ಸೇನಾಧ್ಯಕ್ಷನು ತನ್ನ ಧಾರ್ಮಿಕ ಶೂರ-ವೀರಾದಿಗಳನ್ನು ಶತ್ರುಜನರು ಜಯಿಸಲು ಸಮರ್ಥರಾಗುವುದಿಲ್ಲ. ಅಂತಹ ಪ್ರಯತ್ನವನ್ನು ಎಲ್ಲರೂ ಮಾಡುತ್ತಿರಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಪರಮೇಶ್ವರನು ಸೂರ್ಯನೊಂದಿಗೆ, ಪ್ರಕಾಶ-ಆಕರ್ಷಣಾದಿ ಕರ್ಮಗಳ ನಿಬಂಧನೆಯನ್ನು ಮಾಡಿದ್ದಾನೋ ಅದೇ ರೀತಿ ವಿದ್ಯಾ - ಧರ್ಮ - ನ್ಯಾಯ - ಶೂರವೀರರಿಂದ ಕೂಡಿ ಸೇನಾದಿ ಸಾಮಗ್ರಿಗಳನ್ನು ಹೊಂದಿದ ಪುರುಷನೊಂದಿಗೆ ಈ ಪೃಥ್ವಿಯ ರಾಜ್ಯವನ್ನು ನಿಯುಕ್ತಗೊಳಿಸಿದ್ದಾನೆ.

ಮತ್ತೆ ಅದೇ ವಿಷಯವನ್ನು ತಿಳಿಸಲಾಗಿದೆ.

ಪರಿ ಯದಿಂದ್ರ ರೋದಸೀ ಉಭೇ ಅಬುಭೋಜೀರ್ಮಹಿನಾ ವಿಶ್ವತಃ ಸೀಮ್ ।
ಅಮನ್ಯಮಾನಾ ಅಭಿ ಮನ್ಯಮಾನೈ-ರ್ನಿರ್ಬ್ರಹ್ಮಭಿರಧಮೋ ದಸ್ಯುಮಿಂದ್ರ ॥೯॥

ಪದಾರ್ಥ:- ಹೇ **[ಇಂದ್ರ]** ಐಶ್ವರ್ಯದ ಯೋಗವನ್ನು ಮಾಡುವ ರಾಜನ್! ನಿನಗೆ ಯೋಗ್ಯವಾದುದೇನೆಂದರೆ ಯಾವ ಸೂರ್ಯಲೋಕವು **[ಮಹಿನಾ]** ತನ್ನ ಮಹಿಮೆಯಿಂದ **[ಉಭೇ]** ಎರಡೂ **[ರೋದಸೀ]** ದ್ಯಾವಾಪೃಥಿವಿಗಳನ್ನು **[ಸೀಮ್]** ಜೀವರ ಸುಖದ ಪ್ರಾಪ್ತಿಗಾಗಿ **[ವಿಶ್ವತಃ]** ಎಲ್ಲ ಪ್ರಕಾರದ ಆಕರ್ಷಣದಿಂದ ಪಾಲನೆ ಮಾಡುತ್ತಾ **[ಮನ್ಯ ಮಾನೈ]** ಜ್ಞಾನ ಸಂಪಾದಕವಾದ **[ಬ್ರಹ್ಮಭಿಃ]** ಬೃಹತ್ ಆಕರ್ಷಣಾದಿ ಬಲಯುಕ್ತ ಕಿರಣಗಳಿಂದ **[ದಸ್ಯು]** ಮೇಘವನ್ನು ಮತ್ತು **[ಅಮನ್ಯಮಾನಂ]** ಸೂರ್ಯಪ್ರಕಾಶವನ್ನು ತಡೆಯುವ ಮೇಘಾವಯವಗಳನ್ನು **[ನಿರಧಮಃ]** ನಾಲ್ಕೂ ಕಡೆಗಳಿಂದ ತನ್ನ ತಾಪರೂಪೀ ಅಗ್ನಿಯಿಂದ ನಿವಾರಣಗೊಳಿಸುತ್ತಾನೋ ಹಾಗೆಯೇ ಎಲ್ಲ ಪ್ರಕಾರದ ತನ್ನ ಮಹಿಮೆಯಿಂದ ಪ್ರಾಣಿಗಳನ್ನು ಸುಖಿಗಳನ್ನಾಗಿಸಲು **[ಉಭೇ]** ಎರಡೂ **[ರೋದಸಿಃ]** ದ್ಯಾವ್ಯಾಪೃಥಿವಿಗಳ **[ಪರ್ಯಅಬುಭೋಜೀಃ]** ಭೋಗವನ್ನನುಭವಿಸು. ಇದೇ ರೀತಿ ಹೇ **[ಇಂದ್ರ]** ರಾಜ್ಯಐಶ್ವರ್ಯಯುಕ್ತ ಸೇನಾಧ್ಯಕ್ಷ ಅಥವಾ ಶೂರವೀರ ಪುರುಷನೇ! ನೀನು **[ಮನ್ಯಮಾನೈಃ]** ವಿದ್ಯೆಯಿಂದ ನಮ್ರತಾಯುಕ್ತನೂ, ಹಠದುರಾಗ್ರಹರಹಿತನೂ

[ಬ್ರಹ್ಮಭಿಃ] ವೇದವನ್ನು ತಿಳಿದ ವಿದ್ವಾಂಸರಿಂದ **[ಅಮನ್ಯಮಾನಾನ್]** ಅಜ್ಞಾನಿ, ದುರಾಗ್ರಹೀ ಮನುಷ್ಯರನ್ನು **[ಅಭಿನಿರಧಮಃ]** ಸಾಕ್ಷಾತ್ ಶಿಕ್ಷಣದಿಂದ ಕೂಡಿದವರನ್ನಾಗಿ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯಲೋಕವು ಪೃಥಿವ್ಯಾದಿ ಮೂರ್ತಿಮಾನ್ ಲೋಕಗಳನ್ನು ಪ್ರಕಾಶ ಮತ್ತು ಆಕರ್ಷಣೆಯಿಂದ, ಧಾರಣೆ ಮತ್ತು ಪಾಲನೆ ಮಾಡಿ ಮೇಘವನ್ನು, ರಾತ್ರಿಯ ಅಂಧಕಾರವನ್ನು ನಿವಾರಣೆ ಮಾಡುತ್ತದೋ ಅದೇ ರೀತಿ ಹೇ ಮನುಷ್ಯರೇ! ನೀವು ಉತ್ತಮ ವಿದ್ವಾಂಸರಿಂದ ಮೂರ್ಖರ ಮೂಢತೆಯನ್ನು ತೊಲಗಿಸಿ ದುಷ್ಟ ಶತ್ರುಗಳನ್ನು ಶಿಕ್ಷಿಸಿ ರಾಜ್ಯದ ಸುಖಭೋಗವನ್ನು ನಿತ್ಯವೂ ಅನುಭವಿಸಿರಿ.

ಮತ್ತೆ ಇಂದ್ರನ ಕರ್ಮಗಳ ವಿವರಣೆ ಇಲ್ಲಿದೆ.

ನ ಯೇ ದಿವಃ ಪೃಥಿವ್ಯಾ ಅಂತಮಾಪು-ರ್ನ ಮಾಯಾಭಿರ್ಧನದಾಂ ಪರ್ಯಭೂವನ್ ।
ಯುಜಂ ವಜ್ರಂ ವೃಷಭಶ್ಚಕ್ರ ಇಂದ್ರೋ ನಿರ್ಜ್ಯೋತಿಷಾ ತಮಸೋ ಗಾ ಅದುಕ್ಷತ್ ॥೧೦॥

ಪದಾರ್ಥ:- ಹೇ ಸಭಾಧ್ಯಕ್ಷ! ನೀನು, ಯಾವ ರೀತಿ ಈ ಮೇಘದ **[ಯೇ]** ಯಾವ ಅವಯವಗಳು **[ದಿವಃ]** ಸೂರ್ಯನ ಪ್ರಕಾಶ ಮತ್ತು **[ಪೃಥಿವ್ಯಾಃ]** ಅಂತರಿಕ್ಷದ **[ಅಂತಂ]** ಸೀಮೆಯನ್ನು **[ನಾಪುಃ]** ಹೊಂದಲಾರದೋ **[ಮಾಯಾಭಿಃ]** ತನ್ನ ಗರ್ಜನೆ ಅಂಧಕಾರ ಮತ್ತು ವಿದ್ಯುತ್ತಿನ ಮಾಯೆಯಿಂದ **[ಧನದಾಂ]** ಪೃಥ್ವಿಯ **[ನ ಪರ್ಯಭೂವನ್]** ಉತ್ತಮ ಆಚ್ಛಾದನೆಯನ್ನು ಮಾಡಲಾರದೋ ಅದರ ಮೇಲೆ **[ವೃಷಭಃ]** ವೃಷ್ಟಿಕರ್ತನಾದ **[ಇಂದ್ರಃ]** ಭೇದನ ಮಾಡಬಲ್ಲ ಸೂರ್ಯನು **[ಯುಜಂ]** ಪ್ರಹರಿಸಲು ಯೋಗ್ಯವಾದ **[ವಜ್ರಂ]** ಕಿರಣಸಮೂಹವನ್ನು ಎಸೆದು **[ಜ್ಯೋತಿಷಾ]** ತನ್ನ ತೇಜಃಪ್ರಕಾಶದಿಂದ **[ತಮಸಃ]** ಕತ್ತಲೆಯನ್ನು **[ನಿಚಕ್ರೇ]** ತೊಲಗಿಸುತ್ತಾನೆ. ಮತ್ತು **[ಗಾಃ]** ಪೃಥಿವೀ ಲೋಕಗಳನ್ನು ಮಳೆಯಿಂದ **[ಅದುಕ್ಷತ್]** ಪೂರ್ಣಗೊಳಿಸುತ್ತಾನೆ. ಅದೇ ರೀತಿ ಯಾವ ಶತ್ರುಜನರು ನ್ಯಾಯದ ಪ್ರಕಾಶ ಮತ್ತು ಭೂಮಿ ರಾಜ್ಯದ ಅಂತ್ಯವನ್ನು ಹೊಂದಲಾರರೋ, ಧನವನ್ನು ನೀಡುವ ರಾಜನೀತಿಯ ನಾಶವನ್ನು ಮಾಡಲಾರರೋ ಆ ವೈರಿಗಳ ಮೇಲೆ ತನ್ನ ಪ್ರಭುತ್ವ, ವಿದ್ಯಾದಾನದಿಂದ ಅವಿದ್ಯೆಯ ನಿವೃತ್ತಿ ಹಾಗೂ ಪ್ರಜೆಗಳನ್ನು ಸುಖದಿಂದ ಪೂರ್ಣರನ್ನಾಗಿ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯನಿಗೆ ಯೋಗ್ಯವಾದುದೇನೆಂದರೆ ಸೂರ್ಯನ ತೇಜಃರೂಪೀ ಸ್ವಭಾವ ಹಾಗೂ ಪ್ರಕಾಶದಂತಹ ಕರ್ಮಗಳನ್ನು ಮಾಡಿ ಎಲ್ಲ ಶತ್ರುಗಳ ಅನ್ಯಾಯರೂಪೀ ಅಂಧಕಾರವನ್ನು ನಾಶಮಾಡಿ ಧರ್ಮದಿಂದ ರಾಜ್ಯಭೋಗವನ್ನು ಅನುಭವಿಸಬೇಕು. ಏಕೆಂದರೆ ಛಲ, ಕಪಟಗಳಿಂದ ಕೂಡಿದವರ ರಾಜ್ಯವು ಎಂದಿಗೂ ಸ್ಥಿರವಾಗಿರುವುದಿಲ್ಲ. ಆದುದರಿಂದ ಎಲ್ಲರೂ ಛಲ ಕಪಟಾದಿ ದೋಷಗಳಿಂದ ರಹಿತರಾಗಿ ವಿದ್ಯಾವಂತರಾಗಿ ಶತ್ರುಗಳ ಮಾಯೆಯಲ್ಲಿ ಸಿಲುಕದೆ ರಾಜ್ಯಪಾಲನೆಯ ಉದ್ಯಮವನ್ನು ಸದಾ ಮಾಡಬೇಕು.

ಮತ್ತೆ ಇಂದ್ರನ ಕರ್ಮಗಳ ಉಪದೇಶ ಇಲ್ಲಿದೆ

ಅನು ಸ್ವಧಾಮಕ್ಷರನ್ನಾಪೋ ಅಸ್ಯಾ-ವರ್ಧತ ಮಧ್ಯ ಆ ನಾವ್ಯಾನಾಮ್ ।
ಸಧ್ರೀಚೀನೇನ ಮನಸಾ ತಮಿಂದ್ರ ಓಜಿಷ್ಠೇನ ಹನ್ಮನಾಹನ್ನಭಿ ದ್ಯೂನ್ ॥೧೧॥

ಪದಾರ್ಥ:- ಹೇ ಸೇನಾಧ್ಯಕ್ಷ! ನೀನು ಹೇಗೆ **[ಅಸ್ಯ]** ಈ ಮೇಘದ ಶರೀರವಾದ **[ನಾವ್ಯಾನಾಮ್]** ನದಿ, ಕೆರೆ ಮತ್ತು ಸಮುದ್ರಗಳಲ್ಲಿ **[ಆವರ್ಧತ]** ಯಾವ ರೀತಿ ಈ ಮೇಘದಿಂದ ಸ್ಥಿತವಾದ **[ಆಪಃ]** ಜಲವು ಸೂರ್ಯನಿಂದ ಭಿನ್ನ-ಭಿನ್ನವಾಗಿ **[ಅನುಸ್ವಧಾಮ್]** ಅನ್ನ-ಅನ್ನದ ಬಗೆಗೆ **[ಅಕ್ಷರನ್]** ಪ್ರಾಪ್ತವಾಗುತ್ತದೆಯೋ ಅದೇ ರೀತಿ ಮೇಘವು **[ಸಧ್ರೀಚೀನೇನ]** ಜೊತೆಯಲ್ಲಿ ನಡೆಯುವ **[ಓಜಿಷ್ಠೇನ]** ಅತ್ಯಂತ ಬಲಯುಕ್ತ **[ಹನ್ಮನಾ]** ಹನನ ಮಾಡುವ ಸಾಧನವಾದ **[ಮನಸಾ]** ಮನಸ್ಸಿನ ಸದೃಶ ವೇಗದಿಂದ ಈ ಸೂರ್ಯನ **[ಅಭಿದ್ಯೂನ್]** ಪ್ರಕಾಶಯುಕ್ತ ದಿನಗಳನ್ನು **[ಅಹನ್]** ಅಂಧಕಾರದಿಂದ ಮುಚ್ಚಿಡುತ್ತಾನೋ ಮತ್ತು ಯಾವ ರೀತಿ ಸೂರ್ಯನು ತನ್ನೊಂದಿಗೆ ನಡೆಯುವ ಕಿರಣಸಮೂಹಗಳ ಬಲ ಮತ್ತು ವೇಗದಿಂದ **[ತಂ]** ಆ ಮೇಘವನ್ನು **[ಅಹನ್]** ಕೊಲ್ಲುತ್ತಾನೆ ಮತ್ತು ತನ್ನ **[ಅಭಿದ್ಯೂನ್]** ಪ್ರಕಾಶಯುಕ್ತ ದಿನಗಳನ್ನು ಬೆಳಗಿಸುತ್ತಾನೋ ಅದೇ ರೀತಿ ನದಿ, ಕೆರೆ ಮತ್ತು ಸಮುದ್ರಗಳ ನಡುವೆ ನೌಕೆ ಮೊದಲಾದ ಸಾಧನಗಳೊಂದಿಗೆ ನಿನ್ನ ಸೇನೆಯನ್ನು ವೃದ್ಧಿಗೊಳಿಸು ಹಾಗೂ ಈ ಯುದ್ಧದಲ್ಲಿ ಪ್ರಾಣ ಮೊದಲಾದ ಎಲ್ಲ ಇಂದ್ರಿಯಗಳನ್ನು ಅನ್ನಾದಿಗಳಿಂದ ಪುಷ್ಟಗೊಳಿಸಿ ಆ ನಿನ್ನ ಸೇನೆಯಿಂದ **[ತಂ]** ಆ ಶತ್ರುವನ್ನು **[ಅಹನ್]** ಕೊಂದು ಹಾಕು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ವಿದ್ಯುತ್ ಮೇಘವನ್ನು ಹೊಡೆದು ಪೃಥ್ವಿಯ ಮೇಲೆ ಮಳೆಯನ್ನು ಸುರಿಸಿ ಯವ ಮೊದಲಾದ ಅನ್ನವನ್ನು ಹೆಚ್ಚಿಸುತ್ತದೋ ಮತ್ತು ನದಿ ಕೆರೆ ಮತ್ತು ಸಮುದ್ರಗಳ ಜಲವನ್ನು ವೃದ್ಧಿಪಡಿಸುತ್ತದೋ ಅದೇ ರೀತಿ ಎಲ್ಲ ಮನುಷ್ಯರೂ ಎಲ್ಲ ಪ್ರಕಾರದ ಶುಭ ಗುಣಗಳ ವರ್ಷಣದಿಂದ ಶತ್ರುಗಳನ್ನು ಕೊಂದು ವಿದ್ಯಾವೃದ್ಧಿಯಿಂದ ಉತ್ತಮ ಗುಣಗಳ ಪ್ರಕಾಶವನ್ನು ಮಾಡಿ ಧರ್ಮಾಚರಣೆಯಿಂದ ಪ್ರಜೆಗಳ ಸುಖವನ್ನು ವರ್ಧಿಸಬೇಕು.

ಮತ್ತೆ ಅದೇ ವಿಷಯವನ್ನು ತಿಳಿಸಲಾಗಿದೆ.

ನ್ಯಾವಿಧ್ಯದಿಲೀಬಿಶಸ್ಯ ದೃಳ್ಹಾ ವಿ ಶೃಂಗಿಣಮಭಿನಚ್ಛುಷ್ಣಮಿಂದ್ರಃ । ಯಾವತ್ತರೋ ಮಘವನ್
ಯಾವದೋಜೋ ವಜ್ರೇಣ ಶತ್ರುಮವಧೀಃ ಪೃತನ್ಯುಮ್ ॥೧೨॥

ಪದಾರ್ಥ:- ಹೇ **[ಮಘವನ್]** ಅತ್ಯಂತ ಐಶ್ವರ್ಯಸಂಪನ್ನ ಮಹಾಧನಯುಕ್ತ ವೀರ! ನೀನು, ಯಾವ ರೀತಿ **[ಇಂದ್ರಃ]** ವಿದ್ಯುತ್ ಮೊದಲಾದ ಬಲಯುಕ್ತ ಸೂರ್ಯಲೋಕವು **[ಇಲೀಬಿಶಸ್ಯ]** ಪೃಥ್ವಿಯ ಮೇಲೆ ಮಲಗಿರುವ ಮೇಘ ಸಂಬಂಧೀ **[ದೃಢಾ]** ದೃಢರೂಪೀ ಮೇಘಾವಯವಗಳನ್ನು **[ಅಭಿನತ್]** ಭಿನ್ನ ಭಿನ್ನಗೊಳಿಸುತ್ತಾ ತನ್ನ **[ಯಾವತ್]** ಎಷ್ಟು **[ತರಃ]** ಬಲ ಮತ್ತು **[ಯಾವತ್ ಓಜಃ]** ಎಷ್ಟೆಲ್ಲಾ ಪರಾಕ್ರಮವಿದೆಯೋ ಅದರಿಂದ ಕೂಡಿದವನಾಗಿ **[ವಜ್ರೇಣ]** ಕಿರಣಸಮೂಹದಿಂದ **[ಶೃಂಗಿಣಂ]** ಕೊಂಬುಗಳಂತೆ ಉನ್ನತವಾದ **[ಶುಷ್ಣಂ]** ಮೇಲೇರುತ್ತಿರುವ ಪದಾರ್ಥಗಳನ್ನು ಶುಷ್ಕಗೊಳಿಸುವ ಮೇಘವನ್ನು **[ನ್ಯವಿಧ್ಯತ್]** ನಷ್ಟಗೊಳಿಸಿ **[ಪೃತನ್ಯುಮ್]** ಸೇನೆಯನ್ನು ಬಯಸುತ್ತಾ **[ಶತ್ರುಂ]** ಶತ್ರುವಿನ ಸಮಾನವಾದ ಮೇಘದ **[ಅವಧೀಃ]** ಹನನ ಮಾಡುತ್ತದೆಯೋ ಹಾಗೆಯೇ ಶತ್ರುಗಳೊಂದಿಗೂ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ವಿದ್ಯುತ್ ಮೇಘಾವಯವಗಳನ್ನು ಭಿನ್ನ-ಭಿನ್ನಗೊಳಿಸಿ ಮಳೆಗರೆಯುವಂತೆ ಮಾಡಿ ಎಲ್ಲರಿಗೂ ಸುಖವನ್ನು ಉಂಟು ಮಾಡುತ್ತದೆಯೋ ಅದೇ ರೀತಿ ಎಲ್ಲ ಮನುಷ್ಯರೂ ಉತ್ತಮೋತ್ತಮ ಶಿಕ್ಷಣಯುಕ್ತ ಸೇನೆಯಿಂದ ದುಷ್ಟ ಗುಣಯುಕ್ತ ದಸ್ಯುಗಳನ್ನು ಶಿಕ್ಷಿಸಿ ಪ್ರಜೆಗಳಲ್ಲಿ ಸುಖದ ಮಳೆಯನ್ನು ನಿರಂತರವಾಗಿ ಸುರಿಸುತ್ತಿರಬೇಕು.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗಿದೆ.

ಅಭಿ ಸಿಧ್ಮೋ ಅಜಿಗಾದಸ್ಯ ಶತ್ರೂನ್ ವಿ ತಿಗ್ಮೇನ ವೃಷಭೇಣಾ ಪುರೋ ಭೇತ್ ।
ಸಂ ವಜ್ರೇಣಾಸೃಜದ್ ವೃತ್ರಮಿಂದ್ರಃ ಪ್ರ ಸ್ವಾಂ ಮತಿಮತಿರಚ್ಛಾಶದಾನಃ ॥೧೩॥

ಪದಾರ್ಥ:- ಯಾವ ರೀತಿ **[ಅಸ್ಯ]** ಈ ಸೂರ್ಯನ **[ಸಿಧ್ಮಃ]** ವಿಜಿಗೀಷುವಾದ ವೇಗವು **[ತಿಗ್ಮೇನ ವೃಷಭೇಣ]** ತೀಕ್ಷ್ಣವಾದ ವೃಷ್ಟಿಕಾರಕ ತೇಜಸ್ಸಿನಿಂದ **[ಶತ್ರೂನ್]** ಮೇಘದ ಅವಯವಗಳನ್ನು **[ವ್ಯಜಿಗಾತ್]** ಪ್ರಾಪ್ತವಾಗುತ್ತದೆಯೋ ಮತ್ತು ಆ ಮೇಘದ **[ಪುರಃ]** ನಗರ ಸದೃಶ ಸಮುದಾಯಗಳನ್ನು **[ವ್ಯಭೇತ್]** ಭೇದನ ಮಾಡುತ್ತದೋ ಅದೇ ರೀತಿ **[ಸಂ]** ಸಂಮ್ಯಕ್ ಪ್ರಕಾರದಿಂದ **[ವಜ್ರೇಣ]** ತೀಕ್ಷ್ಣ ತೇಜಸ್ಸಿನಿಂದ **[ಶಾಶದಾನಃ]** ಅತ್ಯಂತವಾಗಿ ಭೇದನಗೊಳಿಸುವ **[ಇಂದ್ರಃ]** ವಿದ್ಯುತ್ **[ವೃತ್ರಂ]** ಮೇಘವನ್ನು **[ಸ್ವಾಂ]** ಸಂಮ್ಯಕ್ ರೂಪದಿಂದ **[ಮತಿಂ ಪ್ರಾತಿರತ್]** ಉತ್ತಮ ಪ್ರಕಾರದಿಂದ ಕೆಳಗಿಳಿಸುತ್ತದೆಯೋ ಹಾಗೆ ಈ ಸೇನಾಧ್ಯಕ್ಷನೂ ಮಾಡತಕ್ಕದ್ದು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ವಿದ್ಯುತ್ ಮೇಘಾವಯವಗಳನ್ನು ತೀಕ್ಷ್ಣವೇಗದಿಂದ ಭಿನ್ನ-ಭಿನ್ನಗೊಳಿಸುತ್ತದೋ ಮತ್ತು ಭೂಮಿಯ ಮೇಲೆ ಹರಡಿ ಅದನ್ನು ವಶವರ್ತಿಯನ್ನಾಗಿ ಮಾಡಿಕೊಳ್ಳುತ್ತದೋ ಹಾಗೆಯೇ ಸಭಾಸೇನಾಧ್ಯಕ್ಷನು ಬುದ್ಧಿ, ಶರೀರಬಲ ಹಾಗೂ ಸೇನೆಯ ವೇಗಶಾಲಿ ಆಚರಣೆಯಿಂದ ಶತ್ರುಗಳನ್ನು ಭಿನ್ನಭಿನ್ನಗೊಳಿಸಿ ಶಸ್ತ್ರಗಳಿಂದ ಉತ್ತಮ ರೀತಿಯಲ್ಲಿ ಪ್ರಹಾರವನ್ನು ಮಾಡಿ ಪೃಥ್ವಿಯ ಮೇಲೆ ಹರಡಿ ಅವರನ್ನು ತಮಗನುಕೂಲವಾಗುವಂತೆ ವಶವರ್ತಿಗಳನ್ನಾಗಿಸಿಕೊಳ್ಳಬೇಕು.

ಈಗ ಇಂದ್ರನ ಕೃತ್ಯಗಳ ವಿಷಯವನ್ನು ಹೇಳಲಾಗಿದೆ.

ಆವಃ ಕುತ್ಸಮಿಂದ್ರ ಯಸ್ಮಿಞ್ಚಾಕನ್ ಪ್ರಾವೋ ಯುಧ್ಯಂತಂ ವೃಷಭಂ ದಶದ್ಯುಮ್।
ಶಫಚ್ಯುತೋ ರೇಣುರ್ನಕ್ಷತ ದ್ಯಾ-ಮುಚ್ಛ್ವೈತ್ರೇಯೋ ನೃಷಾಹ್ಯಾಯ ತಸ್ಥೌ ॥೧೪॥

ಪದಾರ್ಥ:- ಹೇ **[ಇಂದ್ರ]** ಸಭಾಪತಿಯೇ! ಯಾವ ರೀತಿ ಸೂರ್ಯಲೋಕವು **[ಯಸ್ಮಿನ್]** ಯಾವ ಯುದ್ಧದಲ್ಲಿ **[ಯುಧ್ಯಂತಂ]** ಸಂಘರ್ಷ ಮಾಡುತ್ತಾ **[ವೃಷಭಂ]** ವೃಷ್ಟಿಯನ್ನು ಮಾಡಿಸುವ **[ದಶದ್ಯುಮ್]** ಹತ್ತುದಿಕ್ಕುಗಳಲ್ಲಿಯೂ ಪ್ರಕಾಶಮಾನವಾದ ಮೇಘದ ಬಗೆಗೆ **[ಕುತ್ಸಂ]** ವಜ್ರಾಘಾತವನ್ನು ಮಾಡಿ ಜಗತ್ತಿನ **[ಪ್ರಾವಃ]** ರಕ್ಷಣೆಯನ್ನು ಮಾಡುತ್ತದೆಯೋ ಮತ್ತು **[ಶ್ವೈತ್ರೇಯಃ]** ಭೂಮಿಯ ಪುತ್ರನಾದ ಮೇಘವು **[ಶಫಚ್ಯುತಃ]** ಗೋವು ಮೊದಲಾದ ಪಶುಗಳ ಗೊರಸುಗಳ ಚಿಹ್ನೆಯಲ್ಲಿ ಬಿದ್ದಿರುವ **[ರೇಣುಃ]** ಧೂಳು **[ದ್ಯಾಂ]** ಬೆಳಕಿನ ಲೋಕಗಳನ್ನು **[ನಕ್ಷತ]** ಪ್ರಾಪ್ತವಾಗುತ್ತದೆ. ಅದನ್ನು **[ನೃಷಾಹ್ಯಾಯ]** ಮನುಷ್ಯರಿಗಾಗಿ **[ಚಾಕನ್]** ಆ ಕಾಂತಿಯುಕ್ತ ಮೇಘವು **[ಉತ್ತಸ್ಥೌ]** ಮೇಲೇಳುತ್ತದೆ ಮತ್ತು ಸುಖವನ್ನು ನೀಡುತ್ತದೆಯೋ ಅದೇ ರೀತಿ ಸಭಾಸಹಿತನಾಗಿ ನೀನು ಪ್ರಜೆಗಳ ಪಾಲನೆಯ ಯತ್ನವನ್ನು ಮಾಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯಲೋಕವು ತನ್ನ ಕಿರಣಗಳಿಂದ ಪೃಥ್ವಿಯಲ್ಲಿ ಮೇಘವನ್ನು ಹರಡಿ ಎಲ್ಲ ಪ್ರಾಣಿಗಳಿಗೂ ಸುಖವನ್ನು ಉಂಟುಮಾಡುತ್ತದೆಯೋ ಅದೇ ರೀತಿ ಹೇ ಸಭಾಧ್ಯಕ್ಷನೇ! ನೀನೂ ಸಹ ಸೇನೆಯ ಶಿಕ್ಷಣದಿಂದ ಶಸ್ತ್ರಬಲದಿಂದ ಶತ್ರುಗಳನ್ನು ಅಸ್ತವ್ಯಸ್ತಗೊಳಿಸಿ, ದಮನಿಸಿ ಪ್ರಜೆಗಳ ರಕ್ಷಣೆಯನ್ನು ನಿರಂತರ ಮಾಡುತ್ತಿರು.

ಪುನಃ ಇಂದ್ರನ ಕೃತ್ಯವೇನು ಎಂಬುದನ್ನು ತಿಳಿಸಲಾಗುತ್ತದೆ.

ಆವಃ ಶಮಂ ವೃಷಭಂ ತುಗ್ರ್ಯಾಸು ಕ್ಷೇತ್ರಜೇಷೇ ಮಘವಞ್ಛ್ವಿತ್ರ್ಯಂ ಗಾಮ್ ।
ಜ್ಯೋಕ್ ಚಿದತ್ರ ತಸ್ಥಿವಾಂಸೋ ಅಕ್ರಞ್-ಛತ್ರೂಯತಾಮಧರಾ ವೇದನಾಕಃ ॥೧೫॥

ಪದಾರ್ಥ:- ಹೇ [ಮಘವನ್] ಬೃಹದೈಶ್ವರ್ಯದ ಕಾರಣನಾದ ಸಭಾಧ್ಯಕ್ಷನೇ! ನೀನು, ಯಾವರೀತಿ ಸೂರ್ಯಲೋಕವು [ಕ್ಷೇತ್ರಜೇಷೇ] ಅನ್ನಾದಿಗಳೊಂದಿಗೆ ಪೃಥ್ವೀರಾಜ್ಯವನ್ನು ಪ್ರಾಪ್ತಿಸಲಿಕ್ಕಾಗಿ [ಶ್ವಿತ್ರ್ಯಂ] ಭೂಮಿಯನ್ನು ಮುಚ್ಚುವುದರಲ್ಲಿ ಕುಶಲವಾದ [ಶಮಂ ವೃಷಭಂ] ಶಾಂತಿಕಾರಕ ವರ್ಷಣ ಸ್ವಭಾವವುಳ್ಳ ಮೇಘದ [ತುಗ್ರ್ಯಾಸು] ಜಲದೊಂದಿಗೆ [ಗಾಂ] ಕಿರಣ ಸಮೂಹವನ್ನು [ಆವಃ] ಪ್ರವೇಶಿಸುತ್ತಾ [ಶತ್ರೂಯತಾಂ] ಶತ್ರುಗಳಂತೆ ಆಚರಣೆ ಮಾಡುವ ಆ ಮೇಘಾವಯವಗಳ [ಅಧರಾ] ಕೆಳಗೆ [ವೇದನಾ] ದುಷ್ಟರನ್ನು ವೇದನಾಪೂರ್ಣ ಪಾಪಫಲಗಳನ್ನು [ತಸ್ಥಿವಾಂಸಃ] ಹೊಂದಿರುವ ಕಿರಣಗಳು ಛೇದನವನ್ನು [ಜ್ಯೋಕ್] ನಿರಂತರವಾಗಿ [ಅಕ್ರನ್] ಮಾಡುತ್ತಿರುತ್ತವೆ. [ಅತ್ರ] ಮತ್ತು ಪುನಃ ಈ ಭೂಮಿಯಲ್ಲಿ ಆ ಮೇಘವು [ಅಕಃ] ಗಮನ ಮಾಡುತ್ತದೆ. [ಚಿತ್] ಅದರಂತೆ ಶತ್ರುಗಳ ನಿವಾರಣೆ ಮತ್ತು ಪ್ರಜೆಗಳಿಗೆ ಸುಖವನ್ನು ಪ್ರದಾನ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಸೂರ್ಯನು ಅಂತರಿಕ್ಷದಿಂದ ಮೇಘಜಲವನ್ನು ಭೂಮಿಯ ಮೇಲೆ ಸುರಿಸಿ ಎಲ್ಲ ಪ್ರಾಣಿಗಳಿಗೆ ಸುಖವನ್ನುಂಟುಮಾಡುತ್ತಾನೋ ಅದೇ ರೀತಿ ಸೇನಾಧ್ಯಕ್ಷನು ದುಷ್ಟರಾದ ಶತ್ರುಗಳನ್ನು ಬಂಧಿಸಿ ಧಾರ್ಮಿಕ ಮನುಷ್ಯರ ರಕ್ಷಣೆ ಮಾಡಿ ತಾನೂ ಸುಖವನ್ನು ಅನುಭವಿಸಬೇಕು ಹಾಗೂ ಇತರರೂ ಅನುಭವಿಸುವಂತೆ ಮಾಡಬೇಕು.

ಈ ಸೂಕ್ತದಲ್ಲಿ ಸೂರ್ಯ-ಮೇಘಗಳ ಯುದ್ಧದ ವರ್ಣನೆ ಹಾಗೂ ಉಪಮೇಯ ಅಲಂಕಾರಗಳ ಮೂಲಕ ಮನುಷ್ಯರಿಗೆ ಯುದ್ಧವಿದ್ಯೆಯ ಉಪದೇಶವಿರುವುದರಿಂದ ಹಿಂದಿನ ಸೂಕ್ತದೊಂದಿಗೆ ಈ ಸೂಕ್ತದ ಅರ್ಥವು ಸಂಗತಿ ಆಗುತ್ತದೆ ಎಂದು ತಿಳಿಯಬೇಕು.

ಮೂವತ್ತಮೂರನೆಯ ಸೂಕ್ತ ಸಮಾಪ್ತ

ಸೂಕ್ತ ೩೪

ಮಂ.ಸಂ. ೧೨ । ಋಷಿಃ - ಹಿರಣ್ಯಸ್ತೂಪ ಆಂಗಿರಸಃ । ದೇವತಾ - ಅಶ್ವಿನೌ । ಛಂದಃ- ೧, ೬ ವಿರಾಡ್ ಜಗತೀಃ, ೨, ೩, ೭, ೮ ನಿಚೃದ್ ಜಗತೀ, ೫, ೧೦, ೧೧ ಜಗತೀ, ೪, ಭುರಿಕ್ ತ್ರಿಷ್ಟುಪ್ ೯ ಭುರಿಕ್ ಪಂಕ್ತಿಃ ೧೨ ನಿಚೃದ್ ತ್ರಿಷ್ಟುಪ್ । ಸ್ವರಃ- ನಿಷಾದಃ, ಧೈವತಃ, ಪಂಚಮಃ.

ಈ ಸೂಕ್ತದ ಪ್ರಾರಂಭದಲ್ಲಿ ಅಶ್ವಿಯ ದೃಷ್ಟಾಂತದಿಂದ ಶಿಲ್ಪಕಲಾ ಕುಶಲಿಗಳ ಗುಣಗಳನ್ನು ವರ್ಣಿಸಲಾಗುತ್ತದೆ.

ತ್ರಿಶ್ಚಿನ್ನೋ ಅದ್ಯಾ ಭವತಂ ನವೇದಸಾ ವಿಭುರ್ವಾಂ ಯಾಮ ಉತ ರಾತಿರಶ್ವಿನಾ ।
ಯುವೋರ್ಹಿ ಯಂತ್ರಂ ಹಿಮ್ಯೇವ ವಾಸಸೋಽಭ್ಯಾಯಂಸೇನ್ಯಾ ಭವತಂ ಮನೀಷಿಭಿಃ ॥೧॥

ಪದಾರ್ಥ:- ಹೇ ಪರಮ ಉಪಕಾರಕ ಮತ್ತು ಮಿತ್ರನೇ! [ಅಭ್ಯಾಯಂ ಸೇನ್ಯಾ] ಸಾಕ್ಷಾತ್ ಕಾರ್ಯಸಿದ್ಧಿಗಾಗಿ ಲಭಿಸಿರುವ [ನವೇದಸಾ] ಸಕಲ ವಿದ್ಯೆಗಳನ್ನು ತಿಳಿದವನು [ಅಶ್ವಿನಾ] ತನ್ನ ಪ್ರಕಾಶದಿಂದ ವ್ಯಾಪ್ತ ಸೂರ್ಯ ಚಂದ್ರರಂತೆ ಎಲ್ಲಾ ವಿದ್ಯೆಗಳಲ್ಲಿ ವ್ಯಾಪಿಸಿರುವ ಕುಶಲಕರ್ಮಿಗಳೇ! ನೀವು [ಮನೀಷಿಭಿಃ] ಎಲ್ಲ ವಿದ್ವಾಂಸರೊಂದಿಗೆ

ದಿನಗಳ ಜೊತೆಯಲ್ಲಿ [ಹಿಮ್ಯಾ ಇವ] ಶೀತಕಾಲದ ರಾತ್ರಿಗಳಂತೆ [ನಃ] ನಮ್ಮ [ಅದ್ಯಾ] ಈ ವರ್ತಮಾನ ದಿನಗಳಲ್ಲಿ ಶಿಲ್ಪಕಾರ್ಯದ ಸಾಧಕರು [ಭವತಂ] ಆಗಿರಿ. [ಹಿ] ಇದರಿಂದ [ಯುವೋಃ] ನಿಮ್ಮ ಬಳಿಯಿಂದ [ಯಂತ್ರಂ] ಕಲಾಯಂತ್ರಗಳನ್ನು ಸಿದ್ಧಗೊಳಿಸಿ ಯಾನಸಮೂಹಗಳನ್ನು ನಡೆಯಿಸಿರಿ. ಹೀಗೆ [ನಃ] ನಮ್ಮ [ವಾಸಸಃ] ರಾತ್ರಿದಿನಗಳ ನಡುವಿನ [ರಾತಿಃ] ವೇಗಾದಿ ಗುಣಗಳಿಂದ ದೂರದೇಶವನ್ನು ಪ್ರಾಪ್ತಹೊಂದಿರಿ. [ಉತ] ಮತ್ತು [ವಾಂ] ನಿಮ್ಮಿಂದ [ವಿಭುಃ] ಎಲ್ಲ ಮಾರ್ಗಗಳಲ್ಲಿ ನಡೆಯುವ [ಯಾಮಃ] ರಥವನ್ನು ಹೊಂದಿ ನಾವುಗಳು ದೇಶಾಂತರವನ್ನು ಸುಖದಿಂದ [ತ್ರಿಃ] ಮೂರು ಬಾರಿ ತಲುಪುವಂತಾಗಲಿ. ಇದಕ್ಕಾಗಿಯೇ ನಾವು ನಿಮ್ಮ ಸಂಗವನ್ನು ಮಾಡುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ರಾತ್ರಿ ಮತ್ತು ಹಗಲಿನ ಕ್ರಮವಾದ ಸಂಗತಿಕರಣವು ಆಗುತ್ತದೆಯೋ ಹಾಗೆಯೇ ಮನುಷ್ಯರು ಸಂಗತಿಯನ್ನು ಮಾಡಬೇಕು. ವಿದ್ವಾಂಸರು ಪೃಥ್ವೀ ವಿಕಾರಗಳ ಯಾನಕಲೆಯ ಕೀಲುಗಳನ್ನು ಹಾಗೂ ಯಂತ್ರಾದಿಗಳನ್ನು ರಚಿಸಿ ಅವುಗಳನ್ನು ನಡೆಯಿಸಲು ಮತ್ತು ಅವುಗಳಲ್ಲಿ ಅಗ್ನ್ಯಾದಿಗಳ ಸಂಯೋಗದಿಂದ ಭೂಮಿ, ಸಮುದ್ರ, ಮತ್ತು ಆಕಾಶದಲ್ಲಿ ಹೋಗಿಬರಲು ಯಾನಗಳನ್ನು ಸಿದ್ಧಗೊಳಿಸುತ್ತಾರೆ. ಅದೇ ರೀತಿ ನಮಗೂ ಸಹ ವಿಮಾನಾದಿ ಯಾನಗಳ ಸಿದ್ಧಿಯನ್ನು ಹೊಂದಬೇಕಾಗಿದೆ. ಏಕೆಂದರೆ ಈ ವಿದ್ಯೆಯ ವಿನಾ ದಾರಿದ್ರ್ಯದ ನಾಶ ಮತ್ತು ಸಂಪತ್ತಿನ ವೃದ್ಧಿ ಎಂದಿಗೂ ಆಗುವುದಿಲ್ಲ. ಇದರಿಂದ ಈ ವಿದ್ಯೆಯಲ್ಲಿ ಎಲ್ಲಾ ಮನುಷ್ಯರೂ ಅತ್ಯಂತ ಪ್ರಯತ್ನಶೀಲರಾಗಿರಬೇಕು. ಯಾವರೀತಿ ಮನುಷ್ಯರು ಹೇಮಂತ ಋತುವಿನಲ್ಲಿ ಉತ್ತಮ ವಸ್ತ್ರಗಳನ್ನು ಧಾರಣೆ ಮಾಡುತ್ತಾರೋ ಅದೇ ರೀತಿ ಎಲ್ಲ ಪ್ರಕಾರದ ಕಲಾಯಂತ್ರಗಳಿಂದ ಯಾನಗಳನ್ನು ಸಂಯುಕ್ತಗೊಳಿಸಬೇಕಾಗುತ್ತದೆ.

ಪುನಃ ಅವುಗಳಿಂದ ಏನೇನನ್ನು ಸಿದ್ಧಿಸಬಹುದು ಎಂಬುದನ್ನು ತಿಳಿಸಲಾಗುತ್ತದೆ.

ತ್ರಯಃ ಪವಯೋ ಮಧುವಾಹನೇ ರಥೇ ಸೋಮಸ್ಯ ವೇನಾಮನು ವಿಶ್ವ ಇದ್ವಿದುಃ।
ತ್ರಯಃ ಸ್ಕಂಭಾಸಃ ಸ್ಕಭಿತಾಸ ಆರಭೇ ತ್ರಿರ್ನಕ್ತಂ ಯಾಥಸ್ತ್ರಿರ್ವಶ್ವಿನಾ ದಿವಾ ॥೨॥

ಪದಾರ್ಥ:- ಹೇ [ಅಶ್ವಿನಾ] ವಾಯು ಮತ್ತು ವಿದ್ಯುತ್ತುಗಳಂತೆ ಶಿಲ್ಪವಿದ್ಯೆಗಳನ್ನು ಯಥಾವತ್ತಾಗಿ ತಿಳಿದ ವಿದ್ವಜ್ಜನರೇ! ನೀವು ಯಾವ [ಮಧುವಾಹನೇ] ಮಧುರ ಗುಣಯುಕ್ತ ದ್ರವ್ಯಗಳ ಪ್ರಾಪ್ತಿಗಾಗಿ [ರಥೇ] ವಿಮಾನದಲ್ಲಿ [ತ್ರಯಃ] ಮೂರು [ಪವಯಃ] ವಜ್ರದಂತೆ ಕಲಾಯುಕ್ತವಾದ ತಿರುಗುವ ಚಕ್ರ ಮತ್ತು [ತ್ರಯಃ] ಮೂರು [ಸ್ಕಂಭಾಸಃ] ಬಂಧನಗಳಿಗಾಗಿ ಕಂಭವನ್ನು [ಸ್ಕಭಿತಾಸಃ] ಸ್ಥಾಪಿಸಿ ಧಾರಣ ಮಾಡುತ್ತೀರೋ ಅದರಲ್ಲಿ ಸ್ಥಿತವಾದ ಅಗ್ನಿ ಮತ್ತು ಜಲಕ್ಕೆ ಸಮಾನವಾಗಿ ಕಾರ್ಯಸಿದ್ಧಿಯನ್ನು ಮಾಡಿ [ತ್ರಿಃ] ಮೂರು ಬಾರಿ [ನಕ್ತಂ] ರಾತ್ರಿ ಮತ್ತು [ತ್ರಿಃ] ಮೂರು ಬಾರಿ [ದಿವಾ] ಹಗಲಿನಲ್ಲಿ ಇಚ್ಛಿತಸಮಯವನ್ನು [ಉಪಯಾಥಃ] ತಲುಪುವವರಾಗಿ. ಅಲ್ಲಿಯೂ ನೀವಿಲ್ಲದೆ ಕಾರ್ಯಸಿದ್ಧಿ ಎಂದಿಗೂ ಉಂಟಾಗುವುದಿಲ್ಲ. ಮನುಷ್ಯರು ಯಾವುದರಲ್ಲಿ ಕುಳಿತು [ಸೋಮಸ್ಯ] ಐಶ್ವರ್ಯದ [ವೇನಾಮ್] ಪ್ರಾಪ್ತಿಯನ್ನು ಮಾಡುತ್ತಾ ಚಂದ್ರಲೋಕದ ಕಾಂತಿಯನ್ನು ಹೊಂದಿ ಅದರಿಂದ [ಆರಭೇ] ಆರಂಭಿಸಲು ಯೋಗ್ಯವಾದ ಗಮನಾಗಮನ ವ್ಯವಹಾರದಲ್ಲಿ [ವಿಶ್ವೇ] ಎಲ್ಲ ವಿದ್ವಾಂಸರು [ಇತ್] ನಿಶ್ಚಯವಾಗಿಯೂ [ವಿದುಃ] ತಿಳಿಯುತ್ತಾರೆ. [ಉ] ಆ ಅದ್ಭುತ ರಥವನ್ನು ಉತ್ತಮೋತ್ತಮ ರೀತಿಯಲ್ಲಿ ಸಿದ್ಧಪಡಿಸಿ ಅಭೀಷ್ಟ ಸ್ಥಾನಗಳಲ್ಲಿ ಶೀಘ್ರವಾಗಿ ಹೋಗಿಬಂದು ಮಾಡಿರಿ.

ಭಾವಾರ್ಥ:- ಭೂಮಿ, ಸಮುದ್ರ ಮತ್ತು ಅಂತರಿಕ್ಷಗಳಲ್ಲಿ ಹೋಗಿಬರುವ ಇಚ್ಛೆಯನ್ನು ಮಾಡುವ ಮನುಷ್ಯರಿಗೆ ಯೋಗ್ಯವಾದುದೇನೆಂದರೆ ಮೂರು ಮೂರು ಚಕ್ರಯುಕ್ತವಾದ, ಅಗ್ನಿಯ ಆಶ್ರಯವಾದ ಮತ್ತು ಸ್ತಂಭಯುಕ್ತ ಯಾನವನ್ನು ರಚಿಸಿ ಅದರಲ್ಲಿ ಕುಳಿತು ಒಂದು ದಿನ ರಾತ್ರಿಯಲ್ಲಿ ಭೂಗೋಳ, ಸಮುದ್ರ, ಅಂತರಿಕ್ಷ ಮಾರ್ಗದಲ್ಲಿ

ಮೂರು ಮೂರು ಬಾರಿ ಹೋಗಿಬರಲು ಸಮರ್ಥರಾಗಬೇಕು. ಆ ಯಾನದಲ್ಲಿ ಕಲಾವಯವಗಳಿಂದ ಕೂಡಿದ ಕಾಷ್ಠ ಲೋಷ್ಠ ಮೊದಲಾದ ಸ್ಥಂಭಗಳ ಅವಯವಗಳನ್ನು ಸ್ಥಿರಗೊಳಿಸಿರತಕ್ಕದ್ದು. ಪುನಃ ಅಲ್ಲಿ ಅಗ್ನಿ, ಜಲಗಳ ಸಂಪ್ರಯೋಗವನ್ನು ಮಾಡಿ ನಡೆಯಿಸತಕ್ಕದ್ದು. ಏಕೆಂದರೆ ಇವಿಲ್ಲದೆ ಯಾವುದೇ ಮನುಷ್ಯನು ಶೀಘ್ರವಾಗಿ ಭೂಮಿ, ಸಮುದ್ರ ಅಂತರಿಕ್ಷಗಳಲ್ಲಿ ಹೋಗಿ ಬರಲು ಸಮರ್ಥನಾಗುವುದಿಲ್ಲ. ಆದುದರಿಂದ ಇವುಗಳ ಸಿದ್ಧಿಗಾಗಿ ಎಲ್ಲ ಮನುಷ್ಯರು ಬಹಳವಾದ ಪ್ರಯತ್ನವನ್ನು ಅವಶ್ಯವಾಗಿ ಮಾಡತಕ್ಕದ್ದು.

ಪುನಃ ಅವುಗಳಿಂದ ತಯಾರಿಸಲ್ಪ ಮಾಡಲ್ಪಟ್ಟ ಯಾನಗಳಿಂದ ಏನೇನನ್ನು ಸಿದ್ಧಿಬಹುದು?

ಸಮಾನೇ ಅಹನ್ ತ್ರಿರವದ್ಯಗೋಹನಾ ತ್ರಿರದ್ಯ ಯಜ್ಞಂ ಮಧುನಾ ಮಿಮಿಕ್ಷತಮ್ ।
ತ್ರಿರ್ವಾಜವತೀರಿಷೋ ಅಶ್ವಿನಾ ಯುವಂ ದೋಷಾ ಅಸ್ಮಭ್ಯಮುಷಸಶ್ಚ ಪಿನ್ವತಮ್ ॥೩॥

ಪದಾರ್ಥ:- ಹೇ **[ಅಶ್ವಿನಾ]** ಅಗ್ನಿ - ಜಲಗಳಂತೇ ಯಾನಗಳನ್ನು ಸಿದ್ಧ ಮಾಡಿ ಪ್ರೇರಣೆ ಮಾಡುವ ಮತ್ತು ನಡೆಯಿಸುವ ಹಾಗೂ **[ಅವದ್ಯಗೋಹನಾ]** ನಿಂದಿತ ದುಷ್ಟ ಕರ್ಮಗಳನ್ನು ದೂರ ಮಾಡುವ ವಿದ್ವಜ್ಜನರೇ! **[ಯುವಂ]** ನೀವಿಬ್ಬರೂ **[ಸಮಾನೇ ಅಹನ್]** ಒಂದೇ ದಿನದಲ್ಲಿ **[ಮಧುನಾ]** ಜಲದಿಂದ **[ಯಜ್ಞಂ]** ಗ್ರಹಣ ಮಾಡಲು ಯೋಗ್ಯವಾದ ಶಿಲ್ಪಾದಿ ವಿದ್ಯಾಸಿದ್ಧಿಯನ್ನುಂಟುಮಾಡುವ ಯಜ್ಞವನ್ನು **[ತ್ರಿಃ]** ಮೂರು ಬಾರಿ **[ಮಿಮಿಕ್ಷತಮ್]** ಸಿಂಚನ ಮಾಡುವ ಇಚ್ಛೆಯನ್ನು ಮಾಡಿರಿ. ಮತ್ತು **[ಅದ್ಯಾ]** ಈ ದಿನ **[ಅಸ್ಮಭ್ಯಂ]** ಶಿಲ್ಪಕ್ರಿಯೆಗಳನ್ನು ಸಿದ್ಧಗೊಳಿಸುವ ನಮಗಾಗಿ **[ದೋಷಾಃ]** ರಾತ್ರಿಗಳೂ ಮತ್ತು **[ಉಷಸಃ]** ಮುಂಬೆಳಗುಗಳನ್ನು ಹೊಂದಿದ ದಿನಗಳಲ್ಲಿ **[ತ್ರಿಃ]** ಮೂರುಬಾರಿ ಯಾನಗಳ **[ಪಿನ್ವತಮ್]** ಸೇವನೆಯನ್ನು ಮಾಡಿರಿ. **[ಅಜವತೀಃ]** ಉತ್ತಮೋತ್ತಮ ಸುಖದಾಯಕ **[ಇಷಃ]** ಇಚ್ಛಾ ಸಿದ್ಧಿಯನ್ನು ಮಾಡುವ ನೌಕಾದಿ ಯಾನಗಳನ್ನು **[ತ್ರಿಃ]** ಮೂರು ಬಾರಿ **[ಪಿನ್ವತಮ್]** ಪ್ರೀತಿಯಿಂದ ಸೇವನೆ ಮಾಡಿರಿ.

ಭಾವಾರ್ಥ:- ಶಿಲ್ಪವಿದ್ಯೆಯನ್ನು ತಿಳಿಯಲು ಮತ್ತು ಕಲಾಯಂತ್ರಗಳಿಂದ ಯಾನಗಳನ್ನು ನಡೆಸಲು ಯೋಗ್ಯರಾದ ವರು ಪ್ರತಿದಿನ ಶಿಲ್ಪವಿದ್ಯೆಯಿಂದ ಯಾನಗಳನ್ನು ಸಿದ್ಧಗೊಳಿಸಿ ಮೂರು ಪ್ರಕಾರ ಅರ್ಥಾತ್ ಶಾರೀರಿಕ, ಆತ್ಮಿಕ, ಮತ್ತು ಮಾನಸಿಕ ಸುಖಕ್ಕಾಗಿ ಧನ ಮೊದಲಾದ ಅನೇಕ ಉತ್ತಮೋತ್ತಮ ಪದಾರ್ಥಗಳನ್ನು ಸಂಗ್ರಹಿಸಿ ಎಲ್ಲ ಪ್ರಾಣಿಗಳನ್ನು ಸುಖಯುಕ್ತರನ್ನಾಗಿ ಮಾಡಲಿ. ಇದರಿಂದ ಹಗಲು ರಾತ್ರಿಗಳಲ್ಲಿ ಎಲ್ಲ ಜನರೂ ತಮ್ಮ ಪುರುಷಾರ್ಥದಿಂದ ಈ ವಿದ್ಯೆಯ ಉನ್ನತಿಯನ್ನು ಮಾಡಿ ಆಲಸ್ಯವನ್ನು ತ್ಯಜಿಸಿ ಉತ್ಸಾಹದಿಂದ ಅದರ ರಕ್ಷಣೆಯಲ್ಲಿ ನಿರಂತರ ಪ್ರಯತ್ನಶೀಲರಾಗಲಿ.

ಪುನಃ ಅವುಗಳಿಂದ ಯಾವ ಕಾರ್ಯವನ್ನು ಮಾಡಬೇಕು ಎಂಬ ವಿಷಯವನ್ನು ತಿಳಿಸಲಾಗಿದೆ.

ತ್ರಿರ್ವರ್ತಿರ್ಯಾತಂ ತ್ರಿರನುವ್ರತೇ ಜನೇ ತ್ರಿಃ ಸುಪ್ರಾವ್ಯೇ ತ್ರೇಧೇವ ಶಿಕ್ಷತಮ್ ।
ತ್ರಿರ್ನಾಂದ್ಯಂ ವಹತಮಶ್ವಿನಾ ಯುವಂ ತ್ರಿಃ ಪೃಕ್ಷೋ ಅಸ್ಮೇ ಅಕ್ಷರೇವ ಪಿನ್ವತಮ್ ॥೪॥

ಪದಾರ್ಥ:- ಹೇ **[ಅಶ್ವಿನಾ]** ವಿದ್ಯಾದಾಯಕರೂ ಮತ್ತು ವಿದ್ಯಾಗ್ರಹಣ ಮಾಡುವವರೂ ಆದ ವಿದ್ವಾಂಸರೇ! **[ಯುವಂ]** ನೀವುಗಳು **[ಅಸ್ಮೇ]** ನಮಗೆ **[ವರ್ತಿಃ]** ಮಾರ್ಗವನ್ನು **[ತ್ರಿಃ]** ಮೂರು ಬಾರಿ **[ಯಾತಂ]** ಪ್ರಾಪ್ತಿಸಿರಿ. ಹಾಗೂ **[ಸುಪ್ರಾವ್ಯೇ]** ಉತ್ತಮ ಪ್ರಕಾರವಾಗಿ ಪ್ರವೇಶಿಸಲು ಯೋಗ್ಯವಾದ **[ಅನುವ್ರತೇ]** ಯಾವುದರ ಅನುಕೂಲ ವಾದ ಸತ್ಯಾಚರಣ ವ್ರತವಿದೆಯೋ ಅದನ್ನು **[ಜನೇ]** ಬುದ್ಧಿಯನ್ನು ಉತ್ಪಾದಿಸುವ ಮನುಷ್ಯರ ನಿಮಿತ್ತ **[ತ್ರಿಃ]**

ಮೂರು ಬಾರಿ **[ಯಾತಂ]** ಹೊಂದಿರಿ. ಮತ್ತು ಶಿಷ್ಯರಿಗಾಗಿ **[ತ್ರೇಧೇವ]** ಮೂರು ಪ್ರಕಾರದ ಅರ್ಥಾತ್ ಕುಶಲ ಕಲೆಯ ರಕ್ಷಣೆ, ಮತ್ತು ಯಾನ ಚಾಲನೆಯ ಜ್ಞಾನವನ್ನು ತಿಳಿಸಿಕೊಡುವ ಅಧ್ಯಾಪಕನಂತೆ **[ಅಸ್ಮೇ]** ನಮಗಾಗಿ **[ತ್ರಿಃ]** ಮೂರು ಬಾರಿ **[ಶಿಕ್ಷತಮ್]** ಶಿಕ್ಷಣ ಮತ್ತು **[ನಾಂದ್ಯಂ]** ಸಮೃದ್ಧಿಹೊಂದಲು ಯೋಗ್ಯವಾದ ಶಿಲ್ಪಜ್ಞಾನವನ್ನು **[ತ್ರಿಃ]** ಮೂರು ಬಾರಿ **[ವಹತಮ್]** ಪ್ರಾಪ್ತಿಸಿರಿ ಮತ್ತು **[ಅಕ್ಷರೇವ]** ಯಾವ ರೀತಿ ನದೀ, ಕೆರೆ, ಮತ್ತು ಸಮುದ್ರಾದಿ ಜಲಾಶಯಗಳು ಮೇಘಗಳಿಂದ ಜಲವನ್ನು ಪ್ರಾಪ್ತಿಸುತ್ತವೆಯೋ ಹಾಗೆಯೇ ನಮಗೂ ಸಹ **[ಪೃಕ್ಷಃ]** ವಿದ್ಯಾಸಂಪರ್ಕವನ್ನು **[ತ್ರಿಃ]** ಮೂರು ಬಾರಿ **[ಪಿನ್ವತಮ್]** ಪ್ರಾಪ್ತಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಎರಡು ಉಪಮಾಲಂಕಾರಗಳಿವೆ. ಶಿಲ್ಪವಿದ್ಯೆಯನ್ನು ತಿಳಿದ ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ವಿದ್ಯೆಯ ಇಚ್ಛೆಯನ್ನು ಮಾಡುವ ಬುದ್ಧಿವಂತ ಮನುಷ್ಯರನ್ನು ಪದಾರ್ಥ ವಿದ್ಯೆಯಿಂದ ಶಿಕ್ಷಿತರನ್ನಾಗಿ ಮಾಡಬೇಕು ಮತ್ತು ಉತ್ತಮೋತ್ತಮ ಶಿಕ್ಷಣವನ್ನು ಪದೇ ಪದೇ ನೀಡಿ ಕಾರ್ಯಗಳನ್ನು ಸಿದ್ಧಗೊಳಿಸಲು ಸಮರ್ಥರನ್ನಾಗಿಸಬೇಕು. ಮತ್ತು ಅವರೂ ಸಹ ಈ ವಿದ್ಯೆಯನ್ನು ಸಂಪಾದಿಸಿ ಯಥಾವತ್ ಚಾತುರ್ಯ ಮತ್ತು ಪುರುಷಾರ್ಥದಿಂದ ಜನರಿಗೆ ಸುಖವರ್ಧನೆಯ ಉಪಕಾರವನ್ನು ಮಾಡಬೇಕು.

ಪುನಃ ಅವರು ಯಾವ ಕಾರ್ಯದ ಸಾಧಕರಾಗಿದ್ದಾರೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ತ್ರಿರ್ನೋ ರಯಿಂ ವಹತಮಶ್ವಿನಾ ಯುವಂ ತ್ರಿರ್ದೇವತಾತಾ ತ್ರಿರುತಾವತಂ ಧಿಯಃ । ತ್ರಿಃ
ಸೌಭಗತ್ವಂ ತ್ರಿರುತ ಶ್ರವಾಂಸಿ ನ-ಸ್ತ್ರಿಷ್ಠಂ ವಾಂ ಸೂರೇ ದುಹಿತಾ ರುಹದ್ ರಥಮ್ ॥೫॥

ಪದಾರ್ಥ:- ಹೇ **[ದೇವತಾತಾ]** ಶಿಲ್ಪಕ್ರಿಯೆ ಮತ್ತು ಯಜ್ಞಸಂಪತ್ತಿಯ ಮುಖ್ಯಕಾರಣರೂ ವಿದ್ವಾಂಸರು ಹಾಗೂ ಶುಭಗುಣಗಳನ್ನು ವರ್ಧಿಸುವವರೂ ಮತ್ತು **[ಅಶ್ವಿನಾ]** ಆಕಾಶ ಪೃಥ್ವಿಗಳಂತೆ ಪ್ರಾಣಿಮಾತ್ರರಿಗೆ ಸುಖವನ್ನು ನೀಡುವ ವಿದ್ವಾಂಸರೇ! **[ಯುವಂ]** ನೀವುಗಳು **[ನಃ]** ನಮಗಾಗಿ **[ರಾಯಿಂ]** ಉತ್ತಮ ಧನವನ್ನೂ **[ತ್ರಿಃ]** ಮೂರು ಬಾರಿ ಅರ್ಥಾತ್ ವಿದ್ಯಾ-ರಾಜ್ಯ-ಶ್ರೀಯ ಪ್ರಾಪ್ತಿ ಮತ್ತು ರಕ್ಷಣೆ ಕ್ರಿಯಾರೂಪೀ ಐಶ್ವರ್ಯವನ್ನು **[ವಹತಂ]** ಪ್ರಾಪ್ತಿಸಿರಿ. **[ನಃ]** ನಮಗೆ **[ಧಿಯಃ]** ಬುದ್ಧಿಗಳನ್ನು **[ಉತ]** ಮತ್ತು ಬಲವನ್ನು **[ತ್ರಿಃ]** ಮೂರು ಬಾರಿ **[ಅವತಂ]** ಪ್ರವೇಶಗೊಳಿಸಿರಿ. **[ನಃ]** ನಮಗಾಗಿ **[ಸ್ತ್ರಿಷ್ಠಂ]** ಮೂರು ಅರ್ಥಾತ್ ಶರೀರ ಆತ್ಮ ಮತ್ತು ಮನಸ್ಸಿನ ಸುಖದಲ್ಲಿರುವ ಹಾಗೂ **[ಸೌಭಗತ್ವಂ]** ಉತ್ತಮ ಐಶ್ವರ್ಯದ ಉತ್ಪನ್ನ ಮಾಡುವ ಪುರುಷಾರ್ಥವನ್ನು **[ತ್ರಿಃ]** ಮೂರು ಅರ್ಥಾತ್ ಭೃತ್ಯ, ಸಂತಾನ ಮತ್ತು ಸ್ವಾತ್ಮ ಭಾರ್ಯಾದಿಗಳನ್ನು ಹೊಂದಿರಿ. **[ಉತ]** ಮತ್ತು **[ಶ್ರವಾಂಸಿ]** ವೇದಾದಿ ಶಾಸ್ತ್ರ ಹಾಗೂ ಧನ ಸಂಪತ್ತುಗಳನ್ನು **[ತ್ರಿಃ]** ಶರೀರ, ಪ್ರಾಣ ಮತ್ತು ಮನದ ರಕ್ಷಣೆಯ ಸಹಿತ ಪಡೆದು **[ವಾಂ]** ಯಾವ ಅಶ್ವಿಗಳ ಬಳಿಯಿಂದ **[ಸೂರೇಃ]** ಸೂರ್ಯನ **[ದುಹಿತಾ]** ಪುತ್ರಿಯಂತಿರುವ ಕಾಂತಿಯು **[ನಃ]** ನಮಗೆ **[ರಥಮ್]** ವಿಮಾನಾದಿ ಯಾನ ಸಮೂಹವನ್ನು **[ತ್ರಿಃ]** ಮೂರು ಅರ್ಥಾತ್ ಪ್ರೇರಕ, ಸಾಧಕ ಮತ್ತು ಚಾಲನ ಕ್ರಿಯೆಯಿಂದ **[ಆ ರುಹತ್]** ಕೊಂಡೊಯ್ಯುತ್ತದೆ. ಆ ಎರಡನ್ನು ನಾವು ಶಿಲ್ಪಕಾರ್ಯಗಳಲ್ಲಿ ಉತ್ತಮ ರೀತಿಯಿಂದ ಯುಕ್ತ ಗೊಳಿಸುವಂತಾಗಲಿ.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ ಅಗ್ನಿ, ಭೂಮಿಗಳ ಅವಲಂಬನದಿಂದ ಶಿಲ್ಪಕಾರ್ಯಗಳ ಸಿದ್ಧಿ ಮತ್ತು ಬುದ್ಧಿಯನ್ನು ವೃದ್ಧಿಸಿ ಸೌಭಾಗ್ಯ ಮತ್ತು ಉತ್ತಮ ಅನ್ನಾದಿ ಪದಾರ್ಥಗಳನ್ನು ಹೊಂದಬೇಕು ಹಾಗೂ ಈ ಎಲ್ಲ ಸಾಮಗ್ರಿಗಳಿಂದ ಸಿದ್ಧವಾದ ಯಾನಗಳಲ್ಲಿ ಕುಳಿತು ದೇಶದೇಶಾಂತರಗಳಿಗೆ ಹೋಗಿ ಬರುವ ಮತ್ತು ವ್ಯವಹಾರ ಕುಶಲತೆಯ ಮೂಲಕ ಧನವನ್ನು ವೃದ್ಧಿಗೊಳಿಸಿ ಎಲ್ಲ ಕಾಲದಲ್ಲೂ ಆನಂದದಿಂದಿರಬೇಕು.

ಪುನಃ ಅವರಿಂದ ಏನು ಮಾಡಲ್ಪಡುತ್ತದೆ ಎಂಬುದನ್ನು ತಿಳಿಸಲಾಗಿದೆ.

ತ್ರಿರ್ನೋ ಅಶ್ವಿನಾ ದಿವ್ಯಾನಿ ಭೇಷಜಾ ತ್ರಿಃ ಪಾರ್ಥಿವಾನಿ ತ್ರಿರು ದತ್ತಮದ್ಭ್ಯಃ । ಓಮಾನಂ
ಶಂಯೋರ್ಮಮಕಾಯ ಸೂನವೇ ತ್ರಿಧಾತು ಶರ್ಮ ವಹತಂ ಶುಭಸ್ಪತೀ ॥೬॥

ಪದಾರ್ಥ:- ಹೇ [**ಶುಭಸ್ಪತೀ**] ಕಲ್ಯಾಣಕಾರಕ ಮನುಷ್ಯರ ಕರ್ಮಗಳ ಪಾಲನೆ ಮಾಡುವ ಮತ್ತು [**ಅಶ್ವಿನಾ**] ವಿದ್ಯೆಯ ಜ್ಯೋತಿಯನ್ನು ವರ್ಧಿಸುವ ಶಿಲ್ಪಿ ಜನರೇ! ನೀವುಗಳು [**ನಃ**] ನಮಗಾಗಿ [**ಅದ್ಭ್ಯಃ**] ಜಲರಾಶಿಗಳಿಂದ [**ದಿವ್ಯಾನಿ**] ವಿದ್ಯಾದಿ ಗುಣಪ್ರಕಾಶ ಮಾಡುವ [**ಭೇಷಜಾ**] ರಸಮಯ ಸೋಮಾದಿ ಔಷಧಿಗಳನ್ನು [**ತ್ರಿಃ**] ಮೂರು ತಾಪಗಳ ನಿವಾರಣಾರ್ಥವಾಗಿ [**ದತ್ತಂ**] ನೀಡಿರಿ. [**ಉ**] ಮತ್ತು [**ಪಾರ್ಥಿವಾನಿ**] ಪೃಥ್ವಿಯ ವಿಕಾರಯುಕ್ತ ಔಷಧಿಗಳನ್ನು [**ತ್ರಿಃ**] ಮೂರು ಪ್ರಕಾರದಿಂದ ನೀಡಿರಿ ಮತ್ತು [**ಮಮಕಾಯ**] ನನ್ನ [**ಸೂನವೇ**] ಔರಸ ಸಂತಾನಕ್ಕಾಗಿ ಅಥವಾ ವಿದ್ಯಾಪುತ್ರನಿಗಾಗಿ [**ಶಂಯೋಃ**] ಸುಖ ಹಾಗೂ [**ಓಮಾನಂ**] ವಿದ್ಯೆಯಲ್ಲಿ ಪ್ರವೇಶ ಹಾಗೂ ಕ್ರಿಯೆಯ ಬೋಧೆಯನ್ನುಂಟು ಮಾಡುವ ರಕ್ಷಣೆಯ ವ್ಯವಹಾರಗಳನ್ನು [**ತ್ರಿಃ**] ಮೂರು ಬಾರಿ ಮಾಡಿರಿ. ಮತ್ತು [**ತ್ರಿಧಾತು**] ಕಬ್ಬಿಣ, ತಾಮ್ರ, ಹಿತ್ತಾಳೆ ಈ ಮೂರು ಧಾತುಗಳ ಸಹಿತ ಭೂ ಜಲ ಮತ್ತು ಅಂತರಿಕ್ಷಗಳಲ್ಲಿ ಹೋಗುವ [**ಶರ್ಮ**] ಗೃಹಸ್ವರೂಪ ಯಾನವನ್ನು ನನ್ನ ಪುತ್ರರಿಗಾಗಿ [**ತ್ರಿಃ**] ಮೂರು ಬಾರಿ [**ವಹತಂ**] ತಲುಪಿಸಿರಿ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ ಯಾವುದು ಜಲ ಮತ್ತು ಪೃಥಿವಿಗಳಲ್ಲಿ ಉತ್ಪನ್ನವಾದ ರೋಗವನ್ನು ನಷ್ಟಮಾಡುವಂತಹ ಔಷಧಿಗಳಿವೆಯೋ ಅವುಗಳನ್ನು ಒಂದು ದಿನದಲ್ಲಿ ಮೂರು ಬಾರಿ ಸೇವಿಸಬೇಕು ಮತ್ತು ಅನೇಕ ಧಾತುಗಳಿಂದ ಯುಕ್ತವಾದ ಕಾಷ್ಠಮಯ ಗೃಹಕ್ಕೆ ಸಮಾನವಾದ ಯಾನವನ್ನು ಮಾಡಿ ಅದರಲ್ಲಿ ಉತ್ತಮೋತ್ತಮ ಜವೆ ಆದಿ ಔಷಧಿಗಳ ಸ್ಥಾಪನೆ ಮಾಡಿ ಅಗ್ನಿಯ ಮನೆಯಲ್ಲಿ ಅಗ್ನಿಯನ್ನು ಕಾಷ್ಠಗಳಿಂದ ಪ್ರಜ್ವಲಿತಗೊಳಿಸಿ ಜಲದ ಮನೆಯಲ್ಲಿ ಜಲವನ್ನು ಸ್ಥಾಪಿಸಿ, ಬಾಷ್ಪದ ಬಲದಿಂದ ಯಾನಗಳನ್ನು ನಡೆಯಿಸಿ ವ್ಯವಹಾರೋದ್ಯಮಗಳಿಗಾಗಿ ದೇಶದೇಶಾಂತರಗಳಿಗೆ ಹೋಗಿ ಅಲ್ಲಿಂದ ಬಂದು ಬೇಗನೇ ತನ್ನ ಸ್ಥಾನವನ್ನು, ದೇಶವನ್ನು ಪ್ರಾಪ್ತಿಸುವಂತಾಗಬೇಕು. ಈ ಪ್ರಕಾರವಾಗಿ ಬಹಳವಾದ ಸುಖಗಳನ್ನು ಪಡೆಯಬೇಕು.

ಪುನಃ ಅವರು ಹೇಗಿದ್ದಾರೆ ಎಂಬ ವಿಷಯವನ್ನು ತಿಳಿಸಲಾಗುತ್ತದೆ.

ತ್ರಿರ್ನೋ ಅಶ್ವಿನಾ ಯಜತಾ ದಿವೇದಿವೇ ಪರಿ ತ್ರಿಧಾತು ಪೃಥಿವೀಮಶಾಯತಮ್ ।
ತಿಸ್ರೋ ನಾಸತ್ಯಾ ರಥ್ಯಾ ಪರಾವತ ಆತ್ಮೇವ ವಾತಃ ಸ್ವಸರಾಣಿ ಗಚ್ಛತಮ್ ॥೭॥

ಪದಾರ್ಥ:- ಹೇ [**ನಾಸತ್ಯಾ**] ಅಸತ್ಯ ವ್ಯವಹಾರ ರಹಿತರೂ [**ಯಜತಾ**] ಜೊತೆಗೂಡಿಸುವವರೂ ಹಾಗೂ [**ರಥ್ಯಾ**] ವಿಮಾನಾದಿ ಯಾನಗಳನ್ನು ಹೊಂದುವವರೂ ಆದ [**ಅಶ್ವಿನಾ**] ಜಲ ಮತ್ತು ಅಗ್ನಿಯ ಸಮಾನವಾದ ಕುಶಲ ಕರ್ಮಿಗಳೇ! ನೀವುಗಳು [**ಪೃಥಿವೀ**] ಭೂಮಿ ಮತ್ತು ಅಂತರಿಕ್ಷವನ್ನು ಪ್ರಾಪ್ತಿಸಿ [**ತ್ರಿಃ**] ಮೂರು ಬಾರಿ [**ಪರ್ಯಶಾಯತಮ್**] ಶಯನ ಮಾಡಿರಿ. [**ಆತ್ಮೇವ**] ಯಾವ ರೀತಿ ಜೀವಾತ್ಮನಂತೆ [**ವಾತಃ**] ಪ್ರಾಣವು [**ಸ್ವಸರಾಣಿ**] ತನ್ನ ಕಾರ್ಯಗಳಲ್ಲಿ ಪ್ರವೃತ್ತವಾಗುವ ದಿನಗಳನ್ನು ನಿತ್ಯವೂ ಪ್ರಾಪ್ತಿಹೊಂದುತ್ತವೋ ಹಾಗೆ [**ಗಚ್ಛತಮ್**] ದೇಶ ದೇಶಾಂತರಗಳನ್ನು ಪ್ರಾಪ್ತಿಸುವವರಾಗಿರಿ ಮತ್ತು ಯಾರು [**ನಃ**] ನಮಗೆ [**ತ್ರಿಧಾತುಃ**] ಚಿನ್ನ ಬೆಳ್ಳಿ ತಾಮ್ರ ಮೊದಲಾದ ಧಾತುಗಳಿಂದ ನಿರ್ಮಿಸಲ್ಪಟ್ಟ ಯಾನವು [**ಪರಾವತಃ**] ದೂರಸ್ಥಾನಗಳಿಗೆ [**ತಿಸ್ರಃ**] ಮೇಲೆ ಕೆಳಗೆ ಮತ್ತು ಸಮತಲದಲ್ಲಿ ನಡೆಸುತ್ತಾ ಮನುಷ್ಯಾದಿ ಪ್ರಾಣಿಗಳನ್ನು ತಲುಪಿಸುತ್ತದೆಯೋ ಅವುಗಳನ್ನು ಕಾರ್ಯಸಿದ್ಧಿಗಾಗಿ ನಮಗೋಸ್ಕರ ಮಾಡುವವರಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಸಂಸಾರ ಸುಖವನ್ನು ಇಚ್ಛಿಸುವ ಪುರುಷರು ಯಾವ ರೀತಿ ಜೀವನು ಅಂತರಿಕ್ಷಾದಿ ಮಾರ್ಗಗಳಲ್ಲಿ ಇನ್ನೊಬ್ಬರ ಶರೀರವನ್ನು ಶೀಘ್ರವಾಗಿ ಪ್ರಾಪ್ತಿಸುತ್ತಾನೋ, ಯಾವ ರೀತಿ ವಾಯು ಶೀಘ್ರವಾಗಿ ಚಲಿಸುತ್ತದೆಯೋ ಅದೇ ರೀತಿ ಪೃಥಿವ್ಯಾದಿ ವಿಕಾರಗಳಿಂದ ಕಲಾಯಂತ್ರಯುಕ್ತ ಯಾನಗಳನ್ನು ರಚಿಸಿ, ಅವುಗಳಲ್ಲಿ ಅಗ್ನಿ, ಜಲ ಮೊದಲಾದವುಗಳನ್ನು ಉತ್ತಮ ರೀತಿಯಲ್ಲಿ ಪ್ರಯೋಗಿಸಿ ದೂರದೇಶಗಳಿಗೆ ಶೀಘ್ರವಾಗಿ ತಲುಪಿಸಿರಿ. ಈ ಕೆಲಸ ಇಲ್ಲದೆ ಸಂಸಾರ ಸುಖ ಉಂಟಾಗುವುದು ಸಂಭವವಲ್ಲ.

ಪುನಃ ಅವು ಹೇಗಿವೆ ಮತ್ತು ಅವುಗಳಿಂದ ಏನೇನು ಸಿದ್ಧಿಸಲ್ಪಡುತ್ತದೆ ಎಂಬುದನ್ನು ಹೇಳಲಾಗುತ್ತದೆ.

ತ್ರಿರಶ್ವಿನಾ ಸಿಂಧುಭಿಃ ಸಪ್ತಮಾತೃಭಿ-ಸ್ತ್ರಯ ಆಹಾವಾಸ್ತ್ರೇಧಾ ಹವಿಷ್ಕೃತಮ್ ।
ತಿಸ್ರಃ ಪೃಥಿವೀರುಪರಿ ಪ್ರವಾ ದಿವೋ ನಾಕಂ ರಕ್ಷೇಥೇ ದ್ಯುಭಿರಕ್ತುಭಿರ್ಹಿತಮ್ ॥೮॥

ಪದಾರ್ಥ:- ಹೇ [**ಪ್ರವಾ**] ಚಲನೆಯನ್ನು ಮಾಡಿಸುವ [**ಅಶ್ವಿನಾ**] ಸೂರ್ಯ ಮತ್ತು ವಾಯುಗಳಂತಿರುವ ಕುಶಲಕರ್ಮಿ ಜನರೇ! ನೀವು [**ಸಪ್ತಮಾತೃಭಿಃ**] ಯಾರು ಏಳು ಅಂದರೆ ಪೃಥ್ವಿ, ಅಗ್ನಿ, ಸೂರ್ಯ, ವಾಯು, ವಿದ್ಯುತ್, ಜಲ ಮತ್ತು ಆಕಾಶಗಳೆಂಬ ಸಪ್ತ ಮಾತೆಯರಂತೆ ಉತ್ಪನ್ನ ಮಾಡುವವರಾಗಿದ್ದೀರೋ ಆ [**ಸಿಂಧುಭಿಃ**] ನದಿಗಳು ಹಾಗೂ [**ದ್ಯುಭಿಃ**] ಹಗಲುಗಳು [**ಅಕ್ತುಭಿಃ**] ರಾತ್ರಿಗಳೊಂದಿಗೆ ಯಾರ [**ತ್ರಯಃ**] ಮೇಲೆ ಕೆಳಗೆ ಮತ್ತು ಮಧ್ಯದಲ್ಲಿ ನಡೆಯುವ [**ಆಹಾವಾ**] ಜಲಾಧಾರಮಾರ್ಗಗಳಿವೆಯೋ ಆ [**ತ್ರೇಧಾ**] ಮೂರು ಪ್ರಕಾರದಿಂದ [**ಹವಿಷ್ಕೃತಮ್**] ಗ್ರಹಣ ಮಾಡಲು ಯೋಗ್ಯವಾದ, ಶೋಧಿಸಲ್ಪಟ್ಟ [**ನಾಕಂ**] ಸಮಸ್ತ ದುಃಖಗಳಿಂದ ರಹಿತವಾದ [**ಹಿತಂ**] ಸ್ಥಿತದ್ರವ್ಯವನ್ನು [**ಉಪರಿ**] ಮೇಲಕ್ಕೆತ್ತಿ [**ತಿಸ್ರಃ**] ಸ್ಥೂಲ, ತ್ರಸರೇಣು ಮತ್ತು ಪರಮಾಣು ಎಂಬ ಮೂರು ಪ್ರಕಾರದ [**ಪೃಥಿವೀಃ**] ವಿಸ್ತಾರಯುಕ್ತ ಪೃಥಿವೀ ಮತ್ತು [**ದಿವಃ**] ಪ್ರಕಾಶಸ್ವರೂಪ ಕಿರಣಗಳನ್ನು ಪ್ರಾಪ್ತಿಸಿ ಅವುಗಳನ್ನು ಅತ್ತಿತ್ತ ನಡೆಯಿಸಿ ಕೆಳಗೆ ಸುರಿಸಿ ಇದರಿಂದ ಎಲ್ಲ ಜಗತ್ತನ್ನು [**ತ್ರಿಃ**] ಮೂರು ಬಾರಿ [**ರಕ್ಷೇಥೇ**] ರಕ್ಷಣೆ ಮಾಡಿರಿ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಯಾವ ಸೂರ್ಯ ವಾಯುಗಳ ಭೇದನ, ಆಕರ್ಷಣ ಮತ್ತು ವೃಷ್ಟಿಯನ್ನುಂಟುಮಾಡುವ ಗುಣಗಳಿಂದ ನದಿಗಳು ನಡೆಯುತ್ತವೆಯೋ ಹಾಗೂ ಹವನ ಮಾಡಲ್ಪಟ್ಟ ದ್ರವ್ಯವೂ ದುರ್ಗಂಧಾದಿ ದೋಷಗಳನ್ನು ನಿವಾರಿಸಿ ಸಮಸ್ತ ದುಃಖಗಳಿಂದ ರಹಿತವಾದ ಸುಖವನ್ನು ಸಿದ್ಧಿಸುತ್ತದೆ. ಇದರಿಂದ ಹಗಲು ರಾತ್ರಿ ಸುಖವು ವರ್ಧಿಸುತ್ತದೆ. ಇದಲ್ಲದೆ ಯಾವುದೇ ಪ್ರಾಣಿ ಬದುಕಲು ಸಮರ್ಥವಾಗುವುದಿಲ್ಲ. ಆದುದರಿಂದ ಇವುಗಳ ಶುದ್ಧಿಗಾಗಿ ಯಜ್ಞರೂಪ ಕರ್ಮವನ್ನು ನಿತ್ಯವೂ ಆಚರಿಸಿರಿ.

ಪುನಃ ಅವುಗಳಿಂದ ಏನನ್ನು ಮಾಡಬೇಕು ಎಂಬ ವಿಷಯವನ್ನು ತಿಳಿಸಲಾಗುತ್ತದೆ.

ಕ್ವ೧ ತ್ರೀ ಚಕ್ರಾ ತ್ರಿವೃತೋ ರಥಸ್ಯ ಕ್ವ೧ ತ್ರಯೋ ವಂಧುರೋ ಯೇ ಸನೀಳಾಃ ।
ಕದಾ ಯೋಗೋ ವಾಜಿನೋ ರಾಸಭಸ್ಯ ಯೇನ ಯಜ್ಞಂ ನಾಸತ್ಯೋಪಯಾಥಃ ॥೯॥

ಪದಾರ್ಥ:- ಹೇ [**ನಾಸತ್ಯಾ**] ಸತ್ಯ ಗುಣ ಕರ್ಮ ಸ್ವಭಾವಗಳ ಕುಶಲಕರ್ಮಿಗಳೇ! ನೀವುಗಳು [**ಯಜ್ಞಂ**] ದಿವ್ಯಗುಣಯುಕ್ತ ವಿಮಾನಾದಿ ಯಾನಗಳಿಂದ ಹೋಗಿಬರುವ ಯೋಗ್ಯ ಮಾರ್ಗವನ್ನು [**ಕದಾ**] ಯಾವಾಗ [**ಉಪಯಾಥಃ**] ಶೀಘ್ರವಾಗಿ ಬಳಿಸಾರುವಂತೆ ತಲುಪಿಸುತ್ತೀರೋ ಮತ್ತು [**ಯೇನ**] ಯಾವುದರಿಂದ ತಲುಪಿಸುತ್ತೀರೋ ಆ [**ರಾಸಭಸ್ಯ**] ಶಬ್ದವನ್ನು ಉಂಟುಮಾಡುವ [**ವಾಜಿನಃ**] ಪ್ರಶಂಸನೀಯ ವೇಗದಿಂದ ಕೂಡಿದ [**ತ್ರಿವೃತಃ**] ರಚನ ಚಾಲನ ಮೊದಲಾದ ಸಾಮಗ್ರಿಗಳಿಂದ ಪರಿಪೂರ್ಣವಾದ [**ರಥಸ್ಯ**] ಭೂಮಿ, ಜಲ ಮತ್ತು ಅಂತರಿಕ್ಷ ಮಾರ್ಗಗಳಲ್ಲಿ ಚಲಿಸುವ ವಿಮಾನದಲ್ಲಿ [**ಕ್ವ**] ಎಲ್ಲಿ [**ತ್ರೀ**] ಮೂರು [**ಚಕ್ರಾ**] ಚಕ್ರಗಳನ್ನು ರಚಿಸಬೇಕಾಗುವುದೋ ಮತ್ತು ಈ

ವಿಮಾನಾದಿ ಯಾನದಲ್ಲಿ [ಯೇ] ಯಾವ [ಸನೀಳಾಃ] ಉತ್ತಮ ಬಂಧನಗಳ ಸ್ಥಾನ ಅಥವಾ ಅಗ್ನಿಯ ನೆಲೆಯನ್ನು [ವಂದುರಃ] ನಿಯಮಪೂರ್ವಕವಾಗಿ ನಡೆಸುವುದಕ್ಕಾಗಿ ಯಾವ ಕೋಷ್ಠಗಳಿರುತ್ತವೆಯೋ ಅವುಗಳ [ಯೋಗಃ] ಜೋಡಿಯ [ಕ್ವ] ಎಲ್ಲಿರಬೇಕು? ಎಂಬ ಮೂರು ಪ್ರಶ್ನೆಗಳಿವೆ.

ಭಾವಾರ್ಥ:- ಈ ಮಂತ್ರದಲ್ಲಿ ಕೇಳಲಾದ ಮೂರು ಪ್ರಶ್ನೆಗಳ ಈ ಉತ್ತರವನ್ನು ತಿಳಿಯಬೇಕು. ಐಶ್ವರ್ಯದ ಇಚ್ಛೆಯನ್ನು ಮಾಡುವ ಪುರುಷರಿಗೆ ಉಚಿತವಾದುದೇನೆಂದರೆ ರಥದ ಆದಿ, ಮಧ್ಯ ಮತ್ತು ಅಂತ್ಯದಲ್ಲಿ ಎಲ್ಲ ಕಲೆಗಳ ಬಂಧನದ ಆಧಾರಕ್ಕಾಗಿ ಮೂರು ಬಂಧನ ವಿಶೇಷಗಳನ್ನು ಸಂಪಾದಿಸಬೇಕು. ಹಾಗೂ ಮೂರು ಕಲೆಗಳನ್ನು ತಿರುಗಲು, ತಿರುಗಿಸಲು ಸಂಪಾದಿಸಬೇಕು. ಒಂದು ಮನುಷ್ಯರು ಕುಳಿತುಕೊಳ್ಳುವ, ಎರಡು ಅಗ್ನಿಯ ಸ್ಥಿತಿಯನ್ನುಂಟುಮಾಡುವ ಮತ್ತು ಮೂರು ಜಲದ ಸ್ಥಿತಿಯನ್ನು ಸಾಧಿಸುವ ಮೂಲಕ ಚಲಿಸುವ ಇಚ್ಛೆ ಉಂಟಾದಾಗಲೆಲ್ಲ ಯಥಾಯೋಗ್ಯ ಜಲಕಾಷ್ಠಗಳನ್ನು ಸ್ಥಾಪಿಸಿ ಅಗ್ನಿಯನ್ನು ವ್ಯಕ್ತಗೊಳಿಸಿ ಕಲೆಯನ್ನು ವಾಯುವಿನಿಂದ ಪ್ರದೀಪ್ತಗೊಳಿಸಿ ಬಾಷ್ಪದ ವೇಗದಿಂದ ನಡೆಯಿಸಲಾದ ಯಾನದಿಂದ ಶೀಘ್ರವಾಗಿ ದೂರಸ್ಥಳಗಳಿಗೂ, ಹತ್ತಿರದ ಸ್ಥಳಗಳಂತೆಯೇ ಹೋಗಿಬರುವ ಸಾಮರ್ಥ್ಯವನ್ನು ಪಡೆಯಿರಿ. ಏಕೆಂದರೆ ಈ ರೀತಿ ಮಾಡಿದ್ದಲ್ಲದೆ ನಿರ್ವಿಘ್ನತೆಯಿಂದ ಸ್ಥಾನಾಂತರಗಳಿಗೆ ಯಾವುದೇ ಮನುಷ್ಯನು ಶೀಘ್ರವಾಗಿ ಹೋಗಿಬರಲಾರನು.

ಮತ್ತೆ ಅವುಗಳಿಂದ ಏನನ್ನು ಸಿದ್ಧಿಸಲಾಗುತ್ತದೆ ಎಂಬುದನ್ನು ತಿಳಿಯೋಣ.

ಆ ನಾಸತ್ಯಾ ಗಚ್ಛತಂ ಹೂಯತೇ ಹವಿ-ರ್ಮಧ್ವಃ ಪಿಬತಂ ಮಧುಪೇಭಿರಾಸಭಿಃ । ಯುವೋರ್ಹಿ
ಪೂರ್ವಂ ಸವಿತೋಷಸೋ ರಥ-ಮೃತಾಯ ಚಿತ್ರಂ ಘೃತವಂತಮಿಷ್ಯತಿ ॥೧೦॥

ಪದಾರ್ಥ:- ಹೇ ಕುಶಲಕರ್ಮಿಗಳಾದ ಶಿಲ್ಪಿಜನರೇ! ನೀವುಗಳು [ನಾಸತ್ಯಾ] ಜಲ ಮತ್ತು ಅಗ್ನಿಯಂತೆ ಯಾವ [ಹವಿಃ] ಸಾಮಗ್ರಿಯ [ಹೂಯತೇ] ಹವನವನ್ನು ಮಾಡುತ್ತೀರೋ ಆ ಹವಿಸ್ಸಿನಿಂದ ಶುದ್ಧವಾದ [ಮಧ್ವಃ] ಮಧುರ ಜಲವು [ಮಧುಪೇಭಿಃ] ಮಧುರವಾದ ಜಲವನ್ನು ಕುಡಿಯುವವರು [ರಾಸಭಿಃ] ತಮ್ಮ ಬಾಯಿಯಿಂದ [ಪಿಬತಂ] ಕುಡಿಯಲಿ ಮತ್ತು ನಮಗೆ ಆನಂದವನ್ನು ನೀಡಲು [ಘೃತವಂತು] ಸಂಮೃದ್ಧ ಜಲದ ಕಲೆಗಳಿಂದ ಕೂಡಿದ [ಚಿತ್ರಂ] ವೇಗಾದಿ ಅದ್ಭುತವಾದ ಗುಣಸಹಿತ [ರಥಂ] ವಿಮಾನಾದಿ ಯಾನಗಳಿಂದ ದೇಶಾಂತರಗಳಿಗೆ [ಗಚ್ಛತಂ] ಶೀಘ್ರವಾಗಿ ಹೋಗಿ ಬಂದು ಮಾಡಿರಿ. [ಯುವಾಃ] ನಿಮ್ಮ ಯಾವ ರಥವಿದೆಯೋ [ಉಷಸಃ] ಪ್ರಾತಃಕಾಲದಿಂದ [ಪೂರ್ವಂ] ಮೊದಲೇ [ಸವಿತಾ] ಸೂರ್ಯಲೋಕಕ್ಕೆ ಸಮಾನವಾಗಿ ಪ್ರಕಾಶಮಾನವಾಗಿ ಇರುತ್ತಾ [ಈಷ್ಯತಿ] ಶೀಘ್ರವಾಗಿ ಚಲಿಸುತ್ತದೋ [ಹಿ] ಅದೇ [ಋತಾಯ] ಸತ್ಯಸುಖಕ್ಕಾಗಿ ಸಮರ್ಥವಾಗುತ್ತದೆ.

ಭಾವಾರ್ಥ:- ಯಾವಾಗ ಯಾನಗಳಲ್ಲಿ ಜಲ ಮತ್ತು ಅಗ್ನಿಯನ್ನು ಪ್ರದೀಪ್ತಗೊಳಿಸಿ ನಡೆಸಲಾಗುತ್ತದೋ ಆಗ ಈ ಯಾನಗಳು ಶೀಘ್ರವಾಗಿ ಸ್ಥಾನವನ್ನು ಪ್ರಾಪ್ತಿಸುತ್ತವೆ ಅವುಗಳಲ್ಲಿ ಜಲ ಮತ್ತು ಬಾಷ್ಪಗಳು ಹೊರಡುವಂತಹ ಒಂದು ಸ್ಥಾನವನ್ನು ರಚಿಸಿ ಅದರ ಮೂಲಕ ಬಾಷ್ಪವು ಹೊರಡುವಂತೆ ಮಾಡುವುದರಿಂದ ವೇಗದ ವೃದ್ಧಿಯಾಗುತ್ತದೆ. ಈ ವಿದ್ಯೆಯನ್ನು ತಿಳಿಯುವವನೇ ಉತ್ತಮ ಪ್ರಕಾರದ ಸುಖಗಳನ್ನು ಹೊಂದುತ್ತಾನೆ.

ಪುನಃ ಅವುಗಳಿಂದ ಏನೇನನ್ನು ಸಿದ್ಧಗೊಳಿಸಬೇಕು ಎಂಬುದನ್ನು ತಿಳಿಸಲಾಗುತ್ತದೆ

ಆ ನಾಸತ್ಯಾ ತ್ರಿಭಿರೇಕಾದಶೈರಿಹ ದೇವೇಭಿರ್ಯಾತಂ ಮಧುಪೇಯಮಶ್ವಿನಾ । ಪ್ರಾಯುಸ್ತಾರಿಷ್ಟಂ
ನೀ ರಪಾಂಸಿ ಮೃಕ್ಷತಂ ಸೇಧತಂ ದ್ವೇಷೋ ಭವತಂ ಸಚಾಭುವಾ ॥೧೧॥

ಪದಾರ್ಥ:- ಹೇ [ಅಶ್ವಿನಾ] ಶಿಲ್ಪಿಜನರೇ! ನೀವುಗಳು [ನಾಸತ್ಯಾ] ಸತ್ಯಗುಣ ಸ್ವಭಾವಯುಕ್ತರೂ [ಸಚಾಭುವಾ] ಸೇರಿಸುವ ಜಲ ಮತ್ತು ಅಗ್ನಿಯಂತೆ [ದೇವೇಭಿಃ] ವಿದ್ವಾಂಸರೊಂದಿಗೆ [ಇಹ] ಈ ಉತ್ತಮ ಯಾನಗಳಲ್ಲಿ ಕುಳಿತು [ತ್ರಿಭಿಃ] ಮೂರು ದಿನ ಮತ್ತು ಮೂರು ರಾತ್ರಿಗಳಲ್ಲಿ ಮಹಾಸಮುದ್ರವನ್ನು ದಾಟಿ [ಏಕಾದಶೈಃ] ಹನ್ನೊಂದು ದಿನ ಮತ್ತು ಹನ್ನೊಂದು ರಾತ್ರಿಗಳಲ್ಲಿ ಭೂಗೋಳದ ಪೃಥ್ವಿಯ ಅಂತ್ಯವನ್ನು [ಯಾತಂ] ತಲುಪಿರಿ. [ದ್ವೇಷಃ] ಶತ್ರು ಮತ್ತು [ರಪಾಂಸಿ] ಪಾಪಗಳನ್ನು [ನಿ ಮೃಕ್ಷತಂ] ಉತ್ತಮ ಪ್ರಕಾರಗಳಿಂದ ದೂರಗೊಳಿಸಿರಿ. [ಮಧುಪೇಯಂ] ಮಧುರ ಗುಣಯುಕ್ತ ಪಾನಯೋಗ್ಯ ದ್ರವ್ಯ ಹಾಗೂ [ಆಯುಃ] ಆಯುಸ್ಸನ್ನು [ಪ್ರತಾರಿಷ್ಟಂ] ಪ್ರಯತ್ನದಿಂದ ವೃದ್ಧಿಸಿರಿ. ಉತ್ತಮ ಸುಖಗಳನ್ನು [ಸೇಧತಂ] ಸಿದ್ಧಗೊಳಿಸಿರಿ ಮತ್ತು ಶತ್ರುಗಳನ್ನು ಗೆಲ್ಲುವವರು [ಭವತಂ] ಆಗಿರಿ.

ಭಾವಾರ್ಥ:- ಯಾವಾಗ ಮನುಷ್ಯರು ಇಂತಹ ಯಾನಗಳಲ್ಲಿ ಕುಳಿತು ಅವುಗಳನ್ನು ನಡೆಯಿಸುತ್ತಾರೋ ಆಗ ಮೂರು ಹಗಲು ಮತ್ತು ಮೂರು ರಾತ್ರಿಗಳಲ್ಲಿ ಸುಖವಾಗಿ ಸಮುದ್ರವನ್ನು ದಾಟಿ ಹನ್ನೊಂದು ದಿನ ಮತ್ತು ಹನ್ನೊಂದು ರಾತ್ರಿಗಳಲ್ಲಿ ಭೂಗೋಳದ ನಾಲ್ಕೂ ದಿಕ್ಕುಗಳಲ್ಲಿ ಹೋಗಲು ಸಮರ್ಥರಾಗುತ್ತಾರೆ. ಅದೇ ರೀತಿ ಮಾಡುತ್ತಾ ವಿದ್ವಾಂಸರು ಸುಖಯುಕ್ತವಾದ ಪೂರ್ಣಆಯುಷ್ಯವನ್ನು ಹೊಂದಿ ದುಃಖಗಳಿಂದ ದೂರವಾಗಿ ಶತ್ರುಗಳನ್ನು ಜಯಿಸಿ ಚಕ್ರವರ್ತಿರಾಜ್ಯವನ್ನು ಭೋಗಿಸುವವರಾಗುತ್ತಾರೆ.

ಮತ್ತೆ ಇವರಿಂದ ಏನು ಸಿದ್ಧಿಸಲ್ಪಡಬೇಕು ಎಂಬ ವಿಷಯವನ್ನು ತಿಳಿಸಲಾಗುತ್ತದೆ.

ಆ ನೋ ಅಶ್ವಿನಾ ತ್ರಿವೃತಾ ರಥೇನಾ-ರ್ವಾಂಚಂ ರಯಿಂ ವಹತಂ ಸುವೀರಮ್ ।
ಶೃಣ್ವಂತಾ ವಾಮವಸೇ ಜೋಹವೀಮಿ ವೃಧೇ ಚ ನೋ ಭವತಂ ವಾಜಸಾತೌ ॥೧೨॥

ಪದಾರ್ಥ:- ಹೇ ಕುಶಲಕರ್ಮಿಗಳಾದ ಚತುರರೇ! [ಶೃಣ್ವಂತಾ] ಶ್ರವಣ ಮಾಡುವವರಾದ [ಅಶ್ವಿನಾ] ದೃಢವಿದ್ಯಾಬಲಯುಕ್ತರಾದ ನೀವುಗಳು ಜಲ ಮತ್ತು ಪವನದಂತೆ [ತ್ರಿವೃತಾ] ಮೂರು ಅರ್ಥಾತ್ ಸ್ಥಳ, ಜಲ ಮತ್ತು ಅಂತರಿಕ್ಷಗಳಲ್ಲಿ ಪೂರ್ಣಗತಿಯಿಂದ ಹೋಗಲಿಕ್ಕಿರುವ [ರಥೇನ] ವಿಮಾನಾದಿಯಾನದಿಂದ [ನಃ] ನಮಗೆ [ಅರ್ವಾಂಚಂ] ಮೇಲಿನಿಂದ ಕೆಳಗೆ ಅಭೀಷ್ಟಸ್ಥಾನವನ್ನು ಪ್ರಾಪ್ತಿಸುವ [ಸುವೀರಂ] ಉತ್ತಮ ವೀರಯುಕ್ತ [ರಯಿಂ] ಚಕ್ರವರ್ತಿರಾಜ್ಯದಿಂದ ಸಿದ್ಧವಾದ ಧನವನ್ನು [ಆವಹತಂ] ಉತ್ತಮರೀತಿಯಿಂದ ಪಡೆದು ತಲುಪಿಸಿರಿ. [ಚ] ಮತ್ತು [ನಃ] ನಮ್ಮ [ವಾಜಸಾತೌ] ಸಂಗ್ರಾಮದಲ್ಲಿ [ವೃಧೇ] ವೃದ್ಧಿಯನ್ನು ಅಂದರೆ ವಿಜಯವನ್ನು ಹೊಂದುವವರು [ಭವತಂ] ಆಗಿರಿ. ಯಾವ ರೀತಿ ನಾನು [ಅವಸೇ] ರಥಾದಿಗಳಿಗಾಗಿ ನಿಮ್ಮನ್ನು [ಜೋಹವೀಮಿ] ಪದೇ ಪದೇ ಗ್ರಹಣ ಮಾಡುತ್ತೇನೆಯೋ ಅದೇ ರೀತಿ ನೀವುಗಳು ನನ್ನನ್ನು ಗ್ರಹಣ ಮಾಡಿರಿ.

ಭಾವಾರ್ಥ:- ಜಲ ಅಗ್ನಿಗಳಿಂದ ಪ್ರಯುಕ್ತಗೊಳಿಸಿದ ರಥವಿಲ್ಲದೆ ಯಾವುದೇ ಮನುಷ್ಯನೂ ನೆಲ ಮತ್ತು ಜಲ ಮತ್ತು ಅಂತರಿಕ್ಷ ಮಾರ್ಗಗಳಲ್ಲಿ ಶೀಘ್ರವಾಗಿ ಹೋಗಿಬರಲು ಸಮರ್ಥನಾಗುವುದಿಲ್ಲ. ಇದರಿಂದ ರಾಜ್ಯಶ್ರೀ, ಉತ್ತಮ ಸೈನ್ಯಶಕ್ತಿ ಮತ್ತು ವೀರ ಪುರುಷರನ್ನು ಹೊಂದಿ ಇಂತಹ ವಿಮಾನಾದಿ ಯಾನಗಳಿಂದ ಯುದ್ಧದಲ್ಲಿ ವಿಜಯವನ್ನು ಪಡೆಯಲು ಶಕ್ತರಾಗುತ್ತಾರೆ. ಈ ಕಾರಣದಿಂದ ಈ ವಿದ್ಯೆಯನ್ನು ಮನುಷ್ಯರು ಸದಾ ಹೊಂದುತ್ತಿರಬೇಕು.

ಪೂರ್ವಸೂಕ್ತದಿಂದ ಈ ವಿದ್ಯೆಯ ಸಿದ್ಧಿಗಾಗಿ ಇಂದ್ರ ಶಬ್ದದ ಅರ್ಥವನ್ನು ಪ್ರತಿಪಾದನೆ ಮಾಡಲಾಗಿದೆ. ಹಾಗೂ ಈ ಸೂಕ್ತದಿಂದ ಈ ವಿದ್ಯೆಯ ಸಾಧಕರಾದ ಅಶ್ವಿಗಳು ಅರ್ಥಾತ್ ದ್ಯಾವಾ, ಪೃಥಿವೀ ಮೊದಲಾದ ಅರ್ಥಗಳು ಪ್ರತಿಪಾದಿಸಲ್ಪಟ್ಟಿದೆ. ಇದರಿಂದ ಈ ಸೂಕ್ತದ ಅರ್ಥವು ಪೂರ್ವ ಸೂಕ್ತದ ಅರ್ಥದೊಂದಿಗೆ ಸಂಗತಿಯಾಗುತ್ತದೆ ಎಂಬುದನ್ನು ತಿಳಿಯಲಾಗಿದೆ.

ಮೂವತ್ತನಾಲ್ಕನೆಯ ಸೂಕ್ತ ಸಮಾಪ್ತ

ಸೂಕ್ತ ೩೫

ಮಂತ್ರಸಂಖ್ಯೆ ೧೧ । ಋಷಿಃ - ಹಿರಣ್ಯಸ್ತೂಪ ಅಂಗಿರಸಃ । ದೇವತಾ - ಸವಿತಾ, ೧ (ಪಾದಾನಾಂ ಕ್ರಮೇಣ) ಅಗ್ನಿಃ, ಮಿತ್ರಾವರುಣೌ, ರಾತ್ರಿಃ ಸವಿತಾ ಚ । ಛಂದಃ - ೨, ೫, ೧೦, ೧೧ ವಿರಾಟ್ ತ್ರಿಷ್ಟುಪ್, ೩,೪, ೬ ತ್ರಿಷ್ಟುಪ್ ೭, ೮ ಭುರಿಕ್ಪಂಕ್ತಿಃ, ೧ ವಿರಾಡ್ ಜಗತೀ, ೯ ನಿಚೃತ್ ಜಗತೀ । ಸ್ವರಃ - ನಿಷಾದಃ, ಧೈವತಃ, ಪಂಚಮಃ.

ಈ ಸೂಕ್ತದ ಮೊದಲ ಮಂತ್ರದಲ್ಲಿ ಅಗ್ನಿ ಮೊದಲಾದವರ ಗುಣಗಳನ್ನು ತಿಳಿದು ಎಲ್ಲ ಪ್ರಯೋಜನಗಳನ್ನು ಸಿದ್ಧಿಸಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಹ್ವಯಾಮ್ಯಗ್ನಿಂ ಪ್ರಥಮಂ ಸ್ವಸ್ತಯೇ ಹ್ವಯಾಮಿ ಮಿತ್ರಾವರುಣಾವಿಹಾವಸೇ । ಹ್ವಯಾಮಿ
ರಾತ್ರೀಂ ಜಗತೋ ನಿವೇಶನೀಂ ಹ್ವಯಾಮಿ ದೇವಂ ಸವಿತಾರಮೂತಯೇ ॥೧॥

ಪದಾರ್ಥ:- ನಾನು [ಇಹ] ಈ ಶರೀರ ಧಾರಣಾದಿವಿಷಯಗಳಲ್ಲಿ **[ಸ್ವಸ್ತಯೇ]** ಉತ್ತಮ ಸುಖವನ್ನು ಹೊಂದಲು **[ಪ್ರಥಮಂ]** ಶರೀರಧಾರಣಾ ಮೊದಲಾದ ಸಾಧನಗಳಾದ **[ಅಗ್ನಿಂ]** ರೂಪಗುಣಯುಕ್ತ ಅಗ್ನಿಯನ್ನು **[ಮಿತ್ರಾವರುಣೌ]** ಪ್ರಾಣ ಮತ್ತು ಉದಾನ ವಾಯುವನ್ನು **[ಅವಸೇ]** ರಕ್ಷಣಾದಿಗಳಿಗಾಗಿ **[ಹ್ವಯಾಮಿ]** ಸ್ವೀಕರಿಸುತ್ತೇನೆ. **[ಜಗತಃ]** ಪ್ರಪಂಚವನ್ನು **[ನಿವೇಶನೀಂ]** ನಿದ್ರೆಯಲ್ಲಿ ನೆಲೆಗೊಳಿಸುವ **[ರಾತ್ರೀಂ]** ಸೂರ್ಯನ ಅಭಾವದಿಂದ ವ್ಯಾಪ್ತವಾದ ಅಂಧಕಾರರೂಪೀ ರಾತ್ರಿಯನ್ನು **[ಹ್ವಯಾಮಿ]** ಪ್ರಾಪ್ತಿಸುತ್ತೇನೆ. **[ಊತಯೇ]** ಕ್ರಿಯಾಸಿದ್ಧಿಯ ಇಚ್ಛೆಗಾಗಿ **[ದೇವಂ]** ದ್ಯೋತನಾತ್ಮಕವಾದ **[ಸವಿತಾರಂ]** ಸೂರ್ಯಲೋಕವನ್ನು **[ಹ್ವಯಾಮಿ]** ಗ್ರಹಣ ಮಾಡುತ್ತೇನೆ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಹಗಲಿರುಳು ಸುಖಪ್ರಾಪ್ತಿಗಾಗಿ ಅಗ್ನಿ, ವಾಯು ಮತ್ತು ಸೂರ್ಯನಿಂದ ಉಪಕಾರವನ್ನು ಪಡೆದು, ಉತ್ತಮ ಸುಖಗಳನ್ನು ಪ್ರಾಪ್ತಿಸುವವರಾಗಲಿ. ಏಕೆಂದರೆ ಈ ವಿದ್ಯೆಯ ವಿನಾ ಎಂದಿಗೂ ಯಾವುದೇ ವ್ಯಕ್ತಿಯು ಪೂರ್ಣಸುಖವನ್ನು ಹೊಂದಲು ಸಂಭವವಾಗುವುದಿಲ್ಲ.

ಈಗ ಸೂರ್ಯಲೋಕದ ಗುಣಗಳ ವರ್ಣನೆ ಮಾಡಲಾಗಿದೆ.

ಆ ಕೃಷ್ಣೇನ ರಜಸಾ ವರ್ತಮಾನೋ ನಿವೇಶಯನ್ನಮೃತಂ ಮರ್ತ್ಯಂ ಚ ।
ಹಿರಣ್ಯಯೇನ ಸವಿತಾ ರಥೇನಾ ಽಽದೇವೋ ಯಾತಿ ಭುವನಾನಿ ಪಶ್ಯನ್ ॥೨॥

ಪದಾರ್ಥ:- ಈ [ಸವಿತಾ] ಸಕಲ ಜಗತ್ತನ್ನು ಉತ್ಪನ್ನಗೊಳಿಸುವವನಾದ **[ದೇವಃ]** ಸರ್ವಾಧಿಕ ಪ್ರಕಾಶಯುಕ್ತನಾದ ಪರಮಾತ್ಮನು **[ಅಕೃಷ್ಣೇನ]** ತನ್ನ ಆಕರ್ಷಣ ಶಕ್ತಿಯಿಂದ **[ರಜಸಾ]** ಸೂರ್ಯಾದಿ ಸಮಸ್ತ ಲೋಕಗಳೊಂದಿಗೆ ವ್ಯಾಪಕತ್ವವನ್ನು **[ವರ್ತ್ತಮಾನಃ]** ಹೊಂದಿರುವ **[ಅಮೃತಂ]** ಅಂತರ್ಯಾಮಿರೂಪೀ ಅಥವಾ ವೇದದ ಮೂಲಕ ಮೋಕ್ಷಸಾಧಕವಾದ ಸತ್ಯಜ್ಞಾನ **[ಚ]** ಮತ್ತು **[ಮರ್ತ್ಯಂ]** ಕರ್ಮಗಳ ಮತ್ತು ಪ್ರಲಯ ವ್ಯವಸ್ಥೆಯಿಂದ ಮರಣಯುಕ್ತ ಜೀವವನ್ನು **[ನಿವೇಶಯನ್]** ಉತ್ತಮ ರೀತಿಯಲ್ಲಿ ಸ್ಥಾಪಿಸುತ್ತಾ **[ಹಿರಣ್ಯಯೇನ]** ಯಶೋಮಯವಾದ **[ರಥೇನ]** ಪ್ರಗತಿಶೀಲ ಜ್ಞಾನಸ್ವರೂಪ ರಥದಿಂದ ಯುಕ್ತವಾದ **[ಭುವನಾನಿ]** ಲೋಕಗಳನ್ನು **[ಪಶ್ಯನ್]** ನೋಡುತ್ತಾ **[ಆಯಾತಿ]** ಉತ್ತಮ ರೀತಿಯಲ್ಲಿ ಸಕಲ ಪದಾರ್ಥಗಳನ್ನು ಪ್ರಾಪ್ತಿಸುತ್ತಾನೆ.

ಅಥ ದ್ವಿತೀಯೋರ್ಥಃ- ಈ [ಸವಿತಾ] ಪ್ರಕಾಶ ವೃಷ್ಟಿ ಮತ್ತು ರಸಗಳನ್ನು ಉತ್ಪನ್ನ ಮಾಡುವ **[ಕೃಷ್ಣೇನ]** ಪ್ರಕಾಶರಹಿತವಾದ **[ರಜಸಾ]** ಪೃಥಿವೀ ಆದಿ ಲೋಕಗಳೊಂದಿಗೆ **[ಅವರ್ತ್ತಮಾನಃ]** ತನ್ನ ಆಕರ್ಷಣ ಶಕ್ತಿಯಿಂದ ಇರುವ ಈ ಜಗತ್ತಿನಲ್ಲಿ **[ಅಮೃತಂ]** ವೃಷ್ಟಿಯ ಮೂಲಕ ಅಮೃತಸ್ವರೂಪಿ ರಸವನ್ನು [ಚ] ಮತ್ತು **[ಮರ್ತ್ಯಂ]**

ಕಾಲ ವ್ಯವಸ್ಥೆಯಿಂದ ಮರಣವನ್ನು **[ನಿವೇಶಯನ್]** ತನ್ನ ತನ್ನ ಸಾಮರ್ಥ್ಯದಲ್ಲಿ ಸ್ಥಾಪನೆಗೊಳಿಸುತ್ತಾ **[ಹಿರಣ್ಯಯೇನ]** ಪ್ರಕಾಶಸ್ವರೂಪವಾದ **[ರಥೇನ]** ಗತಿಶೀಲತೆಯಿಂದ **[ಭುವನಾನಿ]** ಲೋಕಗಳನ್ನು **[ಪಶ್ಯನ್]** ನೋಡುತ್ತಾ **[ಆಯಾತಿ]** ಉತ್ತಮ ರೀತಿಯ ಮಳೆ ಮೊದಲಾದ ರೂಪಗಳನ್ನು ಬೇರೆ ಬೇರೆಯಾಗಿ ಹೊಂದುತ್ತದೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವ ರೀತಿ ಸಮಸ್ತ ಪೃಥಿವ್ಯಾದಿ ಲೋಕಗಳು ಮನುಷ್ಯಾದಿ ಪ್ರಾಣಿಗಳು ಮತ್ತು ಸೂರ್ಯಲೋಕ ತನ್ನ ಆಕರ್ಷಣದಿಂದ ಪೃಥಿವೀ ಮೊದಲಾದ ಲೋಕಗಳ ಹಾಗೂ ಈಶ್ವರನು ತನ್ನ ಇರುವಿಕೆಯಿಂದ ಸೂರ್ಯಾದಿ ಸಮಸ್ತ ಲೋಕಗಳ ಧಾರಣ ಮಾಡುತ್ತಾನೋ ಅದೇ ರೀತಿಯ ಕ್ರಮದಿಂದ ಎಲ್ಲ ಲೋಕಗಳ ಧಾರಣ ಉಂಟಾಗುತ್ತದೆ. ಇದಿಲ್ಲದೆ ಅಂತರಿಕ್ಷದಲ್ಲಿ ಯಾವುದೇ ಅತ್ಯಂತ ಭಾರಯುಕ್ತ ಲೋಕದ ತನ್ನ ಪರಿಧಿಯಲ್ಲಿ ಸ್ಥಿತವಾಗುವ ಸಂಭವ ಇರುವುದಿಲ್ಲ. ಮತ್ತು ಲೋಕಗಳ ಚಲನ ವಲನಗಳಿಲ್ಲದೆ ಕ್ಷಣ, ಮೂಹೂರ್ತ, ಪ್ರಹರ, ದಿನ, ರಾತ್ರಿ, ಪಕ್ಷ, ಋತು ಮತ್ತು ಸಂವತ್ಸರಾದಿ ಕಾಲದ ಅವಯವಗಳು ಉತ್ಪನ್ನವಾಗಲಾರವು.

ಈಗ ವಾಯು ಮತ್ತು ಸೂರ್ಯರ ದೃಷ್ಟಾಂತದೊಂದಿಗೆ ಶೂರ-ವೀರರ ಗುಣಗಳನ್ನು ವರ್ಣಿಸಲಾಗುತ್ತದೆ.

ಯಾತಿ ದೇವಃ ಪ್ರವತಾ ಯಾತ್ಯುದ್ವತಾ ಯಾತಿ ಶುಭ್ರಾಭ್ಯಾಂ ಯಜತೋ ಹರಿಭ್ಯಾಮ್।
ಆ ದೇವೋ ಯಾತಿ ಸವಿತಾ ಪರಾವತೋಽಪ ವಿಶ್ವಾ ದುರಿತಾ ಬಾಧಮಾನಃ ॥೩॥

ಪದಾರ್ಥ:- ಯಾವ ರೀತಿ **[ವಿಶ್ವಾ]** ಸಕಲ **[ದುರಿತಾ]** ಸುಖದುಃಖಗಳನ್ನು **[ಅಪಬಾಧಮಾನಃ]** ದೂರ ಮಾಡುತ್ತಾ **[ಯಜತಃ]** ಸೇರಿಸಲು ಯೋಗ್ಯವಾದ **[ದೇವಃ]** ಶ್ರವಣ ಮೊದಲಾದ ಜ್ಞಾನದ ಪ್ರಕಾಶಕವಾದ ವಾಯುವು **[ಪ್ರವತಾ]** ಕೆಳಗಿನ ಮಾರ್ಗದಿಂದ **[ಯಾತಿ]** ಹೋಗಿಬರುತ್ತದೆ. ಮತ್ತು **[ಉದ್ವತಾ]** ಊರ್ಧ್ವಮಾರ್ಗದಿಂದ **[ಯಾತಿ]** ಹೋಗಿಬರುತ್ತದೆಯೋ ಹಾಗೆಯೇ ಸರ್ವದುಃಖದಾಯಕವಾದ ಅಂಧಕಾರಾದಿಗಳನ್ನು ದೂರಗೊಳಿಸುತ್ತ **[ಯಜತಃ]** ಸಂಗತಗೊಳಿಸಲು ಯೋಗ್ಯವಾದ **[ಸವಿತಾ]** ಪ್ರಕಾಶಕವಾದ ಸೂರ್ಯಲೋಕವು **[ಶುಭ್ರಾಭ್ಯಾಂ]** ಶುದ್ಧವಾದ **[ಹರಿಭ್ಯಾಂ]** ಕೃಷ್ಣ ಅಥವಾ ಶುಕ್ಲ ಪಕ್ಷಗಳಿಂದ **[ದೇವಃ]** ಆ ಅದ್ಭುತ ಪ್ರಕಾಶಕನು **[ಪರಾವತಃ]** ದೂರಸ್ಥ ಪದಾರ್ಥಗಳನ್ನು ತನ್ನ ಕಿರಣಗಳಿಂದ ಪ್ರಾಪ್ತಿಸಿ ಪೃಥಿವ್ಯಾದಿ ಲೋಕಗಳನ್ನು **[ಆಯಾತಿ]** ಎಲ್ಲ ರೀತಿಯಲ್ಲೂ ಹೊಂದುತ್ತಾನೆ. ಅದೇ ರೀತಿ ಶೂರ ವೀರರಾದ ಜನರು ಸೇನೆ ಮೊದಲಾದ ಸಾಮಗ್ರಿಗಳೊಂದಿಗೆ ಉನ್ನತ -ನಿಮ್ನ ಮಾರ್ಗಗಳಲ್ಲಿ ಬಂದು ಶತ್ರುಗಳನ್ನು ಗೆದ್ದು ಪ್ರಜೆಗಳ ರಕ್ಷಣೆಯನ್ನು ನಿರಂತರ ಮಾಡುತ್ತಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಪರಮಾತ್ಮನಿಂದ ಉತ್ಪನ್ನವಾದ ಸೃಷ್ಟಿಯಲ್ಲಿ ವಾಯುವು ಮೇಲೆ ಕೆಳಗೆ ಸಂಚರಿಸುತ್ತಾ ಕೆಳಗಿನ ಪದಾರ್ಥಗಳನ್ನು ಮೇಲಕ್ಕೂ ಮತ್ತು ಮೇಲಿನ ಪದಾರ್ಥಗಳನ್ನೂ ಕೆಳಕ್ಕೂ ಬರುವಂತೆ ಮಾಡುತ್ತದೆಯೋ ಅದೇ ರೀತಿ ಹಗಲು, ರಾತ್ರಿ, ಹಾಗೂ ಆಕರ್ಷಣ ಧಾರಣ ಗುಣಗಳುಳ್ಳ ತಮ್ಮ ಕಿರಣ ಸಮೂಹದಿಂದ ಯುಕ್ತವಾದ ಸೂರ್ಯಲೋಕವು ಅಂಧಕಾರಾದಿಗಳನ್ನು ದೂರಗೊಳಿಸುವುದರಿಂದ ದುಃಖದ ವಿನಾಶವಾಗಿ ಸುಖವೂ ಮತ್ತು ಸುಖದ ವಿನಾಶದಿಂದ ದುಃಖವೂ ಪ್ರಕಟವಾಗುತ್ತಿರುತ್ತದೆ. ಅದೇ ರೀತಿ ಸಭಾಪತಿಯಾದವನೂ ಸಹ ಅನುಷ್ಠಾನ ಮಾಡುತ್ತಿರಬೇಕು.

ಈಗ ಆ ಎರಡು ದೃಷ್ಟಾಂತಗಳಿಂದ ರಾಜಕಾರ್ಯದ ವರ್ಣನೆ ಮಾಡಲಾಗುತ್ತದೆ.

ಅಭೀವೃತಂ ಕೃಶನೈರ್ವಿಶ್ವರೂಪಂ ಹಿರಣ್ಯಶಮ್ಯಂ ಯಜತೋ ಬೃಹಂತಮ್ ।
ಆಸ್ಥಾದ್ರಥಂ ಸವಿತಾ ಚಿತ್ರಭಾನುಃ ಕೃಷ್ಣಾ ರಜಾಂಸಿ ತವಿಷೀಂ ದಧಾನಃ ॥೪॥

ಪದಾರ್ಥ:- ಹೇ ಸಭೆಯ ಸ್ವಾಮಿಯಾದ ರಾಜನೇ! ನೀನು ಯಾವ ರೀತಿ **[ಯಜತಃ]** ಸಂಗತಿಗೊಳಿಸುವ ಅಥವಾ ಪ್ರಕಾಶವನ್ನು ನೀಡುವ **[ಚಿತ್ರಭಾನುಃ]** ಚಿತ್ರವಿಚಿತ್ರ ದೀಪ್ತಿಯುಳ್ಳ **[ಸವಿತಾ]** ಸೂರ್ಯಲೋಕ ಮತ್ತು ವಾಯು **[ಕೃಶನೈಃ]** ತೀಕ್ಷ್ಣಗೊಳಿಸುವ ಕಿರಣಗಳು ಅಥವಾ ವಿವಿಧರೂಪಗಳಿಂದ **[ಬೃಹಂತಮ್]** ಬೃಹತ್ತಾದ **[ಹಿರಣ್ಯಶಮ್ಯಂ]** ಸುವರ್ಣ ಮತ್ತು ಜ್ಯೋತಿಯನ್ನು ಶಾಂತಗೊಳಿಸಲು ಸಾಧ್ಯವಾದಂತಹ **[ಅಭೀವೃತಂ]** ನಾಲ್ಕೂ ದಿಕ್ಕುಗಳಲ್ಲಿರುವ **[ವಿಶ್ವರೂಪಂ]** ಯಾವುದರ ಪ್ರಕಾಶದಲ್ಲಿ ಮತ್ತು ನಡೆಯಲ್ಲಿ ಬಹಳ ರೂಪಗಳಿವೆಯೋ ಆ **[ರಥಂ]** ರಮಣೀಯ ರಥವೂ **[ಕೃಷ್ಣಾ]** ಆಕರ್ಷಣಾ ಮತ್ತು ಕೃಷ್ಣವರ್ಣಯುಕ್ತವಾಗಿ **[ರಜಾಂಸಿ]** ಪೃಥಿವ್ಯಾದಿ ಲೋಕಗಳನ್ನು ಮತ್ತು **[ತವಿಷೀಂ]** ಬಲಗಳನ್ನು **[ದಧಾನಃ]** ಧಾರಣ ಮಾಡುತ್ತಾ **[ಆಸ್ಥಾತ್]** ಉತ್ತಮ ರೀತಿಯಲ್ಲಿ ಸ್ಥಿತವಾಗಿರುವುದೋ ಹಾಗೆ ನಿಮ್ಮ ವರ್ತನೆಯನ್ನು ರೂಪಿಸಿಕೊಳ್ಳಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯ ಮೊದಲಾದವುಗಳ ಉತ್ಪತ್ತಿಯ ನಿಮಿತ್ತ ಸೂರ್ಯಾದಿಲೋಕಗಳನ್ನು ಧಾರಣ ಮಾಡುವವನೂ ಬಲಿಷ್ಠವಾದ ಎಲ್ಲ ಲೋಕಗಳನ್ನು ಹಾಗೂ ಆಕರ್ಷಣಾ ರೂಪೀ ಬಲಗಳನ್ನು ಧಾರಣ ಮಾಡುವ ವಾಯುವು ಗತಿಶೀಲವಾಗಿರುತ್ತದೆಯೋ ಮತ್ತು ಯಾವ ರೀತಿ ಸೂರ್ಯಲೋಕವು ತನ್ನ ಸಮೀಪದ ಸ್ಥಳಗಳನ್ನು ಧಾರಣೆ ಮಾಡಿ ಅವುಗಳ ರೂಪ ವಿಷಯಗಳನ್ನು ಪ್ರಕಟಗೊಳಿಸುತ್ತಾ ಬಲ ಹಾಗೂ ಆಕರ್ಷಣ ಶಕ್ತಿಯಿಂದ ಎಲ್ಲವನ್ನೂ ಧಾರಣೆ ಮಾಡುತ್ತದೆಯೋ ಮತ್ತು ಈ ಎರಡರ ವಿನಾ ಯಾವುದೇ ಸ್ಥೂಲ ಮತ್ತು ಸೂಕ್ಷ್ಮ ವಸ್ತುಗಳ ಧಾರಣೆ ಸಂಭವವಲ್ಲವೋ ಅದೇ ರೀತಿ ರಾಜನಾದವನು ಉತ್ತಮ ಗುಣಗಳಿಂದ ಯುಕ್ತನಾಗಿ ರಾಜ್ಯದ ಧಾರಣವನ್ನು ಮಾಡಬೇಕು.

ಪುನಃ ಅವು ಹೇಗಿರುತ್ತವೆ ಎಂಬುದನ್ನು ತಿಳಿಸಲಾಗುತ್ತದೆ.

ವಿ ಜನಾಞ್ಛ್ಯಾವಾಃ ಶಿತಿಪಾದೋ ಅಖ್ಯನ್ ರಥಂ ಹಿರಣ್ಯಪ್ರಉಗಂ ವಹಂತಃ ।
ಶಶ್ವದ್ ವಿಶಃ ಸವಿತುರ್ದೈವ್ಯಸ್ಯೋ-ಪಸ್ಥೇ ವಿಶ್ವಾ ಭುವನಾನಿ ತಸ್ಥುಃ ॥೫॥

ಪದಾರ್ಥ:- ಹೇ ಸಜ್ಜನ ಪುರುಷ! ನೀನು ಹೇಗೆ ಯಾವ **[ದೈವ್ಯಸ್ಯ]** ವಿದ್ವಾಂಸನ ಅಥವಾ ದಿವ್ಯಪದಾರ್ಥಗಳಲ್ಲಿ ಉತ್ಪನ್ನವಾಗುವ **[ಸವಿತುಃ]** ಸೂರ್ಯಲೋಕದ **[ಉಪಸ್ಥೇ]** ಮಡಿಲಲ್ಲಿ ಅರ್ಥಾತ್ ಆಕರ್ಷಣ ಶಕ್ತಿಯಲ್ಲಿ **[ವಿಶ್ವಾ]** ಸಮಸ್ತ **[ಭುವನಾನಿ]** ಪೃಥಿವೀ ಆದಿ ಲೋಕಗಳು **[ತಸ್ಥುಃ]** ಸ್ಥಿರವಾಗಿರುತ್ತವೆಯೋ ಅವುಗಳು **[ಶಿತಿಪಾದಃ]** ತನ್ನ ಶ್ವೇತ ಅವಯವಗಳಿಂದ ಯುಕ್ತವಾದ **[ಶ್ಯಾವಾಃ]** ಪ್ರಾಪ್ತವಾಗುವ ಕಿರಣಗಳು **[ಜನಾನ್]** ವಿದ್ವಾಂಸರನ್ನು **[ಹಿರಣ್ಯಪ್ರಉಗಂ]** ಯಾವುದರಲ್ಲಿ ಜ್ಯೋತಿಸ್ವರೂಪ ಅಗ್ನಿಯ ಮುಖಕ್ಕೆ ಸಮಾನವಾದ ಸ್ಥಾನವಿದೆಯೋ ಅಂತಹ **[ರಥಂ]** ವಿಮಾನ ಮೊದಲಾದ ಯಾನ ಹಾಗೂ **[ಶಶ್ವತ್]** ಅನಾದಿ ರೂಪೀ **[ವಿಶಃ]** ಪ್ರಜೆಗಳನ್ನು **[ವಹಂತಃ]** ಧಾರಣ ಮತ್ತು ವೃದ್ಧಿಗೊಳಿಸುತ್ತ **[ಅಖ್ಯನ್]** ಅನೇಕಪ್ರಕಾರದಿಂದ ಪ್ರಕಟವಾಗುತ್ತಿವೆಯೋ ಹಾಗೆಯೇ ನಿನ್ನ ಸಮೀಪ ವಿದ್ವಾಂಸರು ಇರಲಿ. ಹಾಗೂ ನೀನೂ ಸಹ ವಿದ್ಯೆ ಹಾಗೂ ಧರ್ಮದ ಪ್ರಚಾರವನ್ನು ಮಾಡು.

ಭಾವಾರ್ಥ:- ಹೇ ಸತ್ಪುರುಷರೇ! ನೀವು ಯಾವ ರೀತಿ ಸೂರ್ಯಲೋಕದ ಪ್ರಕಾಶ ಹಾಗೂ ಆಕರ್ಷಣಾದಿ ಗುಣಗಳನ್ನು ಎಲ್ಲ ಜಗತ್ತಿಗೂ ಧಾರಣಪೂರ್ವಕ ಯಥಾಯೋಗ್ಯವಾಗಿ ಪ್ರಕಟಗೊಳಿಸುತ್ತೀರೋ, ಮತ್ತು ಯಾವ ಸೂರ್ಯನ ಸಮೀಪದ ಲೋಕವಿದೆಯೋ, ಆ ಸೂರ್ಯನ ಪ್ರಕಾಶದಿಂದ ಪ್ರಕಾಶಿತರಾಗುತ್ತೀರೋ, ಯಾವ ಅನಾದಿ ರೂಪೀ ಪ್ರಜೆಗಳಿದ್ದಾರೋ ಅವರುಗಳನ್ನು ವಾಯುವು ಧಾರಣೆ ಮಾಡುತ್ತಿದೆಯೋ, ಆ ಪ್ರಕಾರ ಮಾಡುವುದರಿಂದ ಎಲ್ಲ ಲೋಕಗಳು ತಮ್ಮ ತಮ್ಮ ಪರಿಧಿಯಲ್ಲಿ ಸ್ಥಿತವಾಗಿರುತ್ತವೋ ಅದೇ ರೀತಿ ನೀವು ಸದ್ಗುಣಗಳನ್ನು ಧಾರಣೆ ಮಾಡಿ ನಿಮ್ಮ ನಿಮ್ಮ ಅಧಿಕಾರಗಳಲ್ಲಿ ಸ್ಥಿತರಾಗಿ, ಸ್ಥಿರರಾಗಿ ಇದ್ದುಕೊಂಡು ಇತರರೆಲ್ಲರನ್ನು ನ್ಯಾಯಮಾರ್ಗದಲ್ಲಿ ನೆಲೆಗೊಳಿಸಿರಿ.

ಪುನಃ ವಾಯು ಮತ್ತು ಸೂರ್ಯರ ಗುಣಗಳನ್ನು ವರ್ಣಿಸಲಾಗಿದೆ.

ತಿಸ್ರೋ ದ್ಯಾವಃ ಸವಿತುರ್ದ್ವಾ ಉಪಸ್ಥಾ ಏಕಾ ಯಮಸ್ಯ ಭುವನೇ ವಿರಾಷಾಟ್ ।
ಆಣಿಂ ನ ರಥ್ಯಮಮೃತಾಧಿ ತಸ್ಥು-ರಿಹ ಬ್ರವೀತು ಯ ಉ ತಚ್ಚಿಕೇತತ್ ॥೬॥

ಪದಾರ್ಥ:- ಹೇ ವಿದ್ವಾಂಸನೇ! ನೀನು **[ರಥ್ಯಂ]** ರಥ ಮೊದಲಾದವುಗಳನ್ನು ನಡೆಯಿಸಲು ಯೋಗ್ಯವಾದ **[ಆಣಿಂ]** ಸಂಗ್ರಾಮವನ್ನು ಗೆಲ್ಲುವವರಾದ ರಾಜನ ಭೃತ್ಯರ **[ನ]** ಸಮಾನವಾಗಿ ಈ **[ಸವಿತುಃ]** ಸೂರ್ಯಲೋಕದ ಪ್ರಕಾಶದಲ್ಲಿ ಯಾವ **[ತಿಸ್ರಃ]** ಮೂರು ಅರ್ಥಾತ್ **[ದ್ಯಾವಃ]** ಸೂರ್ಯ, ಅಗ್ನಿ ಮತ್ತು ವಿದ್ಯುತ್ ರೂಪೀ ಸಾಧನಗಳಿಂದ ಯುಕ್ತವಾಗಿ **[ಅಧಿ ತಸ್ಥುಃ]** ಸ್ಥಿತವಾಗಿರುತ್ತವೆಯೋ ಅವುಗಳಲ್ಲಿ **[ದ್ವಾ]** ಎರಡು ಪ್ರಕಾಶಗಳು ಅಥವಾ ಭೂಗೋಳ-ಸೂರ್ಯಮಂಡಲಗಳ **[ಉಪಸ್ಥಾ]** ಸಮೀಪದಲ್ಲಿರುತ್ತವೆಯೋ ಮತ್ತು **[ಏಕಾ]** ಒಬ್ಬ **[ವಿರಾಷಾಟ್]** ಶೂರವೀರ ಜ್ಞಾನವಂತನನ್ನು ಹೊಂದುವ ಸ್ವಭಾವವುಳ್ಳ ಜೀವರನ್ನು ಸಹಿಸುವ ವಿದ್ಯುತ್‌ರೂಪೀ ದೀಪ್ತಿಯು **[ಯಮಸ್ಯ]** ನಿಯಮನ ಮಾಡುವ ವಾಯುವಿನ **[ಭುವನೇ]** ಅಂತರಿಕ್ಷದಲ್ಲಿಯೇ ಇರುತ್ತದೆ. ಮತ್ತು ಯಾವ **[ಅಮೃತಾ]** ಕಾರಣರೂಪದಿಂದ ನಾಶರಹಿತವಾದ ಚಂದ್ರ, ತಾರೆ, ಮೊದಲಾದ ಲೋಕಗಳಿವೆಯೋ ಅವು ಈ ಸೂರ್ಯಲೋಕದ ಪ್ರಕಾಶದಲ್ಲಿ ಪ್ರಕಾಶಿತವಾಗಿ **[ಅಧಿತಸ್ಥುಃ]** ಸ್ಥಿತವಾಗುತ್ತವೆ. **[ಯಃ]** ಯಾವ ಮನುಷ್ಯನು **[ಉ]** ವಾದ ವಿವಾದದಿಂದ ಇವುಗಳನ್ನು **[ಚಿಕೇತತ್]** ತಿಳಿಯುತ್ತಾನೋ ಮತ್ತು ಆ ಜ್ಞಾನವನ್ನು **[ಬ್ರವೀತು]** ಉತ್ತಮ ರೀತಿಯಿಂದ ಉಪದೇಶಿಸುತ್ತಾನೋ, ಅವನಂತೆಯೇ ಆಗಿ ನಮಗೂ ಸದ್ಗುಣಗಳ ಉಪದೇಶವನ್ನು ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ಪರಮಾತ್ಮನು ಅಗ್ನಿರೂಪೀ ಕಾರಣದಿಂದ ಸೂರ್ಯ, ಅಗ್ನಿ ಮತ್ತು ವಿದ್ಯುತ್ ರೂಪೀ ಮೂರು ಪ್ರಕಾರದ ದೀಪ್ತಿಗಳನ್ನು ರಚಿಸಿದ್ದಾನೋ, ಯಾರ ಮೂಲಕ ಸಮಸ್ತ ಕಾರ್ಯಗಳು ಸಿದ್ಧವಾಗುತ್ತವೆಯೋ, ಜೀವನು ತನ್ನ ಶರೀರವನ್ನು ತ್ಯಜಿಸಿ ಯಾವ ಯಮನ ಸ್ಥಾನವನ್ನು ಹೊಂದುತ್ತಾನೆ? ಅವನಾರು ಎಂಬುದನ್ನು ಪ್ರಶ್ನಿಸಿದರೆ ಅದರ ಉತ್ತರವನ್ನು ನೀಡುವವನು ಅಂತರಿಕ್ಷದಲ್ಲಿ ನಿಲೆಸಿರುವ ವಾಯುವನ್ನು ಪ್ರಾಪ್ತಿಸುತ್ತಾನೆ ಎಂದು ಹೇಳಬೇಕು. ಯಾವ ರೀತಿ ಯುದ್ಧದಲ್ಲಿ ರಥ ಭೃತ್ಯಾದಿಗಳು ಸೇನೆಯ ಅಂಗಗಳಲ್ಲಿ ಸ್ಥಿತವಾಗುತ್ತವೆಯೋ ಅದೇ ರೀತಿ ಮರಣಿಸಿದ ಮತ್ತು ಜೀವಿಸುತ್ತಿರುವ ಜೀವರುಗಳು ವಾಯುವಿನ ಅವಲಂಬನೆಯಿಂದ ಸ್ಥಿತರಾಗಿರುತ್ತಾರೆ. ಪೃಥಿವೀ, ಚಂದ್ರಮಾ ಮತ್ತು ನಕ್ಷತ್ರಾದಿ ಲೋಕಗಳು ಸೂರ್ಯ ಪ್ರಕಾಶದ ಆಶ್ರಯದಿಂದ ಸ್ಥಿತವಾಗುತ್ತವೆ. ಯಾವನು ವಿದ್ವಾಂಸನೋ, ಅವನೇ ಪ್ರಶ್ನೆಗಳ ಉತ್ತರವನ್ನು ನೀಡಬಲ್ಲನು, ಮೂರ್ಖನಲ್ಲ. ಆದುದರಿಂದ ಮನುಷ್ಯರು ಮೂರ್ಖ ಅರ್ಥಾತ್ ಆಪ್ತರಲ್ಲದವರ ಹೇಳಿಕೆಗಳಲ್ಲಿ ವಿಶ್ವಾಸವನ್ನೂ, ವಿದ್ವಾಂಸರ ಹೇಳಿಕೆಗಳಲ್ಲಿ ಅಶ್ರದ್ಧೆಯನ್ನೂ ಎಂದಿಗೂ ಇಡಬಾರದು.

ಈಗ ಸೂರ್ಯಲೋಕದ ಗುಣಗಳ ವರ್ಣನೆ ಇಲ್ಲಿದೆ.

ವಿ ಸುಪರ್ಣೋ ಅಂತರಿಕ್ಷಾಣ್ಯಖ್ಯದ್ ಗಭೀರವೇಪಾ ಅಸುರಃ ಸುನೀಥಃ ।
ಕ್ವೇ೩ದಾನೀಂ ಸೂರ್ಯಃ ಕಶ್ಚಿಕೇತ ಕತಮಾಂ ದ್ಯಾಂ ರಶ್ಮಿರಸ್ಯಾ ತತಾನ ॥೭॥

ಪದಾರ್ಥ:- ಹೇ ವಿದ್ವಾಂಸ! ಯಾವ ರೀತಿ ಈ ಸೂರ್ಯಲೋಕವು **[ಅಸುರಃ]** ಎಲ್ಲರಿಗೂ ಪ್ರಾಣದಾತೃವೂ ಅರ್ಥಾತ್ ರಾತ್ರಿಯಲ್ಲಿ ನಿದ್ರಿಸಿದವರಿಗೆ ಪ್ರಾತಃಕಾಲದ ಸಮಯದಲ್ಲಿ ಚೈತನ್ಯವನ್ನು ನೀಡುವಂತಹುದು **[ಗಭೀರವೇಪಾಃ]** ಯಾವುದರ ಕಂಪನವು ಗಭೀರ ಅರ್ಥಾತ್ ಸೂಕ್ಷ್ಮವಾದುದರಿಂದ ಸಾಧಾರಣರ ಮನಸ್ಸಿನಲ್ಲಿ ಉಳಿಯುವುದಿಲ್ಲವೋ

[ಸುನೀಥಃ] ಉತ್ತಮ ಪ್ರಕಾರದಿಂದ ಪದಾರ್ಥಗಳನ್ನು ಪ್ರಾಪ್ತಿ ಗೊಳಿಸುವ ಮತ್ತು [ಸುಪರ್ಣಃ] ಉತ್ತಮ ಪತನ ಸ್ವಭಾವದ ಕಿರಣಯುಕ್ತ ಸೂರ್ಯನು [ಅಂತರಿಕ್ಷಾಣಿ] ಅಂತರಿಕ್ಷದಲ್ಲಿರುವ ಎಲ್ಲ ಲೋಕಗಳನ್ನು [ವ್ಯಖ್ಯತ್] ಪ್ರಕಾಶಿತಗೊಳಿಸುತ್ತಾನೋ [ಇದಾನೀಂ] ಈ ವರ್ತಮಾನ ಸಮಯದ ರಾತ್ರಿಯಲ್ಲಿ [ಕ್ವ] ಎಲ್ಲಿದ್ದಾನೆ ಎಂಬುದನ್ನು [ಕಃ] ಯಾರೂ [ಚಿಕೇತ] ತಿಳಿದಿದ್ದಾನೆ ಹಾಗೂ [ಕತಮಾಂ] ಅನೇಕರಲ್ಲಿ ಯಾವ [ದ್ಯಾಂ] ಪ್ರಕಾಶವನ್ನು [ಅಸ್ಯ] ಈ ಸೂರ್ಯನ [ರಶ್ಮಿಃ] ಕಿರಣಗಳು [ಆತತಾನ] ವ್ಯಾಪಿಸಿದೆಯೋ, ಈ ಮಾತನ್ನೂ ಯಾರು ತಿಳಿದಿದ್ದಾರೆ? ಅರ್ಥಾತ್ ಯಾರು ವಿದ್ವಾಂಸರಾಗಿದ್ದಾರೋ ಅವರೇ ತಿಳಿದಿದ್ದಾರೋ ಸಾಧಾರಣ ಪುರುಷರು ಇದನ್ನು ತಿಳಿದಿಲ್ಲವೋ ಇದರಿಂದ ಸೂರ್ಯಲೋಕದ ಸ್ವರೂಪ ಮತ್ತು ಗತಿಶೀಲತೆಯನ್ನು ಮೊದಲಾದುವನ್ನು ನೀನು ತಿಳಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವಾಗ ಈ ಭೂಗೋಳವು ತನ್ನ ಭ್ರಮಣದಿಂದ ಸೂರ್ಯನ ಬೆಳಕನ್ನು ಮುಚ್ಚಿ ಅಂಧಕಾರವನ್ನುಂಟು ಮಾಡುತ್ತದೆಯೋ ಆಗ ಸಾಧಾರಣ ಮನುಷ್ಯರು ಈಗ ಆ ಸೂರ್ಯನು ಎಲ್ಲಿದ್ದಾನೆ ಎಂದು ಪ್ರಶ್ನಿಸುತ್ತಾರೆ. ಆಗ ಸೂರ್ಯನು ಪೃಥ್ವಿಯ ಇನ್ನೊಂದು ಪೃಷ್ಠದಲ್ಲಿದ್ದಾನೆ ಅವನ ಗತಿಶೀಲತೆಯು ಅತಿಸೂಕ್ಷ್ಮವಾಗಿದೆ ಎಂದು ಉತ್ತರವನ್ನು ನೀಡಬೇಕು. ಯಾವ ರೀತಿ ಸೂರ್ಯನು ಸಾಧಾರಣ ಮನುಷ್ಯರಿಗೆ, ಮೂರ್ಖರಿಗೆ ತಿಳಿಯಲಸಾಧ್ಯನೋ ಹಾಗೆಯೇ ಸತ್ಪುರುಷರ ಆಶಯಗಳನ್ನೂ ಅವಿದ್ವಾಂಸರು ಅರ್ಥಾತ್ ಮೂರ್ಖರು ತಿಳಿಯಲಾರರು.

ಪುನಃ ಈ ಕೃತ್ಯದ ಉಪದೇಶವನ್ನು ಇಲ್ಲಿ ಮಾಡಲಾಗಿದೆ.

ಅಷ್ಟೌ ವ್ಯಖ್ಯತ್ ಕಕುಭಃ ಪೃಥಿವ್ಯಾಸ್ತ್ರೀ ಧನ್ವ ಯೋಜನಾ ಸಪ್ತ ಸಿಂಧೂನ್ ।
ಹಿರಣ್ಯಾಕ್ಷಃ ಸವಿತಾ ದೇವ ಆಗಾ-ದ್ದಧದ್ರತ್ನಾ ದಾಶುಷೇ ವಾರ್ಯಾಣಿ ॥೮॥

ಪದಾರ್ಥ:- ಹೇ ಸಭಾಧ್ಯಕ್ಷನೇ! ಯಾವುದು [ಹಿರಣ್ಯಾಕ್ಷಃ] ಸುವರ್ಣಸಮಾನವಾದ ಜ್ಯೋತಿ ಇದೆಯೋ ಅದು [ಸವಿತಾ] ವೃಷ್ಟಿಯನ್ನು ಉತ್ಪನ್ನಗೊಳಿಸುವ [ದೇವಃ] ದ್ಯೋತನಾತ್ಮಕ ಸೂರ್ಯಲೋಕದ [ಪೃಥಿವ್ಯಾಃ] ಪೃಥಿವಿಯಿಂದ ಸಂಬಂಧಿಸಲ್ಪಟ್ಟ [ಅಷ್ಟೌ ಕಕುಭಃ] ೮ ದಿಕ್ಕುಗಳು ಮತ್ತು ೮ ಉಪದಿಕ್ಕುಗಳಲ್ಲಿಯೂ [ತ್ರೀ] ಮೂರು ಭೂಮಿ ಅಂತರಿಕ್ಷ ಮತ್ತು ಪ್ರಕಾಶದ ಎಂದರೆ ಮೇಲೆ ಕೆಳಗೆ ಮತ್ತು ಮಧ್ಯದಲ್ಲಿ ನೆಲೆಸಿರುವ [ಧನ್ವ] ಪ್ರಾಪ್ತಿಸಲು ಯೋಗ್ಯವಾದ [ಯೋಜನಾ] ಎಲ್ಲ ವಸ್ತುಗಳ ಆಧಾರವಾದ ಮೂರು ಲೋಕಗಳು ಮತ್ತು [ಸಪ್ತ ಸಿಂಧೂನ್] ಏಳು ಭೂಮಿ ಅಂತರಿಕ್ಷ ಮತ್ತು ಮೇಲೆ ಸ್ಥಿತವಾಗಿರುವ ಜಲ ಸಮುದಾಯಗಳನ್ನು [ವ್ಯಖ್ಯತ್] ಪ್ರಕಾಶಿತಗೊಳಿಸುತ್ತಿದೆಯೋ ಅವು [ದಾಶುಷೇ] ಸರ್ವೋಪಕಾರಕ ವಿದ್ಯಾದಿ ಉತ್ತಮ ಪದಾರ್ಥಗಳನ್ನು ನೀಡುವ ಯಜಮಾನನಿಗಾಗಿ [ವಾರ್ಯಾಣಿ] ಸ್ವೀಕರಿಸಲು ಯೋಗ್ಯವಾದ [ರತ್ನಾ] ಪೃಥ್ವೀ ಮೊದಲಾದ ಅಥವಾ ಸುವರ್ಣ ಮೊದಲಾದ ರಮಣೀಯ ರತ್ನಗಳನ್ನು [ದಧತ್] ಧಾರಣ ಮಾಡುತ್ತಾ [ಆಗಾತ್] ಉತ್ತಮ ಪ್ರಕಾರದಿಂದ ಪ್ರಾಪ್ತವಾಗುತ್ತವೆಯೋ ಹಾಗೆಯೇ ನೀನೂ ಸಹ ವರ್ತಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಈ ಸೂರ್ಯಲೋಕವು ಎಲ್ಲ ಮೂರ್ತಿಮಾನ್ ಪದಾರ್ಥಗಳ ಪ್ರಕಾಶ-ಭೇದನಗಳನ್ನು ವಾಯುವಿನ ಮೂಲಕ ಅಂತರಿಕ್ಷದಲ್ಲಿ ಉಂಟು ಮಾಡಿ ಅಲ್ಲಿಂದ ಕೆಳಗೆ ಎಸೆದು ಸಮಸ್ತ ರಮಣೀಯ ಸುಖಗಳನ್ನು ಜೀವರಿಗಾಗಿ ಉತ್ಪನ್ನಗೊಳಿಸುತ್ತಾ ಪೃಥ್ವಿಯಲ್ಲಿ ಸ್ಥಿತವಾದ ಮತ್ತು ಪೃಥ್ವಿಯಿಂದ ಬಹು ಎತ್ತರದವರೆಗೆ ಅಂತರಿಕ್ಷದಲ್ಲಿ ಸ್ಥೂಲ-ಸೂಕ್ಷ್ಮ, ಲಘು-ಗುರು ರೂಪದಿಂದ ಸ್ಥಿತವಾಗಿಸಿ ಜಲಗಳನ್ನು ಅರ್ಥಾತ್ ಸಪ್ತಸಿಂಧು ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಜಲಗಳನ್ನು ಆಕರ್ಷಣ ಶಕ್ತಿಯಿಂದ ಧಾರಣ ಮಾಡಿರುತ್ತದೆಯೋ, ಅದೇ ರೀತಿ ವಿದ್ವಾಂಸರು ವಿದ್ಯೆ ಮತ್ತು ಧರ್ಮದಿಂದ ಪ್ರಜೆಗಳೆಲ್ಲರನ್ನೂ ಧಾರಣಮಾಡಿ ಆನಂದದಲ್ಲಿರಿಸಬೇಕು.

ಪುನಃ ಅವರು ಏನು ಮಾಡುತ್ತಾರೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಹಿರಣ್ಯಪಾಣಿಃ ಸವಿತಾ ವಿಚರ್ಷಣಿ-ರುಭೇ ದ್ಯಾವಾಪೃಥಿವೀ ಅಂತರೀಯತೇ । ಅಪಾಮೀವಾಂ
ಬಾಧತೇ ವೇತಿ ಸೂರ್ಯ-ಮಭಿ ಕೃಷ್ಣೇನ ರಜಸಾ ದ್ಯಾಮೃಣೋತಿ ॥೯॥

ಪದಾರ್ಥ:- ಹೇ ಸಭಾಧ್ಯಕ್ಷನೇ! ಯಾವ ರೀತಿ [ಹಿರಣ್ಯರೂಪಿಃ] ಯಾವ ಹಿರಣ್ಯರೂಪೀ ಜ್ಯೋತಿಯು ಹಸ್ತಗಳಂತೆ ಗ್ರಹಿಸುವಂತಹುದಾಗಿದೆಯೋ [ವಿಚರ್ಷಣಿಃ] ಪದಾರ್ಥಗಳನ್ನು ಭಿನ್ನ ಭಿನ್ನಗೊಳಿಸಿ [ಸವಿತಾ] ರಸಗಳನ್ನು ಉತ್ಪನ್ನಗೊಳಿಸುವ ಸೂರ್ಯಲೋಕವು [ಉಭೇ] ಎರಡೂ [ದ್ಯಾವಾಪೃಥಿವೀ] ದ್ಯುಲೋಕ ಮತ್ತು ಪೃಥಿವೀ ಲೋಕಗಳನ್ನು [ಅಂತಃ] ಅಂತರಿಕ್ಷದ ಮಧ್ಯದಲ್ಲಿ [ಈಯತೇ] ಹೊಂದಿ [ಅಮೀವಾಂ] ವ್ಯಾಧಿಯ ಪೀಡೆಯನ್ನು [ಅಪಬಾಧತೇ] ನಿವಾರಿಸಿ [ಸೂರ್ಯಂ] ಎಲ್ಲವನ್ನು ಪ್ರಾಪ್ತಿಸುವ ತನ್ನ ಕಿರಣಸಮೂಹವನ್ನು [ಅಭಿವೇತಿ] ಸಾಕ್ಷಾತ್ ಪ್ರಕಟಿಸಿ [ಕೃಷ್ಣೇನ] ಪೃಥಿವೀ ಮೊದಲಾದ ಪ್ರಕಾಶರಹಿತವಾದ [ರಜಸಾ] ಲೋಕಸಮೂಹದೊಂದಿಗೆ ತನ್ನ [ದ್ಯಾಂ] ಪ್ರಕಾಶವನ್ನು [ಋಣೋತಿ] ಪ್ರಾಪ್ತಿಸುತ್ತದೆಯೋ ಅದೇ ರೀತಿ ನೀವೂ ಸಹ ಮಾಡಬೇಕಾಗಿದೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಸಭಾಧ್ಯಕ್ಷನೇ! ಯಾವ ರೀತಿ ಈ ಸೂರ್ಯಲೋಕವು ಅನೇಕ ಲೋಕಗಳೊಂದಿಗೆ ಆಕರ್ಷಣ ಸಂಬಂಧದಿಂದ ಇರುವ ಸಮಸ್ತ ವಸ್ತುಗಳನ್ನು ಪ್ರಕಾಶಿತಗೊಳಿಸುತ್ತಾ ದ್ಯಾವಾ ಪೃಥಿವೀ ಲೋಕಗಳ ಮಿಲನವನ್ನುಂಟುಮಾಡುತ್ತದೆಯೋ ಅಂತಹುದೇ ಸ್ವಭಾವ ಯುಕ್ತರಾದವರು ನೀವಾಗಿರಿ.

ಈಗ ವಾಯುವಿನ ಗುಣಗಳನ್ನು ವರ್ಣಿಸಲಾಗಿದೆ.

ಹಿರಣ್ಯಹಸ್ತೋ ಅಸುರಃ ಸುನೀಥಃ ಸುಮೃಳೀಕಃ ಸ್ವವಾँ ಯಾತ್ವರ್ವಾಙ್ ।
ಅಪಸೇಧನ್ ರಕ್ಷಸೋ ಯಾತುಧಾನಾ-ನಸ್ಥಾದ್ ದೇವಃ ಪ್ರತಿದೋಷಂ ಗೃಣಾನಃ ॥೧೦॥

ಪದಾರ್ಥ:- ಹೇ ಸಭಾಪತೇ! ನೀನು ಯಾವ ರೀತಿ ಈ [ಹಿರಣ್ಯಹಸ್ತಃ] ಯಾವುದರ ಚಲನೆಯು ಕೈಗಳದರಂತೆ ಇದೆಯೋ [ಅಸುರಃ] ಪ್ರಾಣಗಳ ರಕ್ಷಣೆ ಮಾಡುವಂತಹ ಗುಣರಹಿತ [ಸುನೀಥಃ] ಸುಂದರ ರೀತಿಯಿಂದ ಎಲ್ಲವನ್ನೂ ಪ್ರಾಪ್ತಿಸುವಂತಹ [ಸುಮೃಡೀಕಃ] ಉತ್ತಮ ವ್ಯವಹಾರಗಳಿಂದ ಸುಖಯುಕ್ತರನ್ನಾಗಿ ಮಾಡುವ ಮತ್ತು [ಸ್ವವಾನ್] ಉತ್ತಮೋತ್ತಮ ಸ್ಪರ್ಶಾದಿ ಗುಣಗಳುಳ್ಳ [ಅರ್ವಾಙ್] ತನ್ನ ಕೆಳಗಿನ, ಮೇಲಿನ ಅಂಕುಡೊಂಕಾದ ವೇಗಗಳನ್ನು ಪ್ರಾಪ್ತಿಸುವ ವಾಯುವು ನಾಲ್ಕೂ ದಿಕ್ಕುಗಳಿಂದ ಹೇಗೆ ಚಲಿಸುತ್ತದೆಯೋ ಹಾಗೂ [ಪ್ರತಿದೋಷಂ] ರಾತ್ರಿಯ ಬಗೆಗೆ [ಗೃಣಾನಃ] ಗುಣಕಥನದಿಂದ ಸ್ತುತಿಸಲು ಯೋಗ್ಯವಾದ [ದೇವಃ] ಸುಖದಾಯಕವಾದ ವಾಯುವು ದುಃಖಗಳನ್ನು ನಾಶಗೊಳಿಸಿ, ಸುಖಗಳನ್ನು ಪ್ರಾಪ್ತಿಸಿ [ಅಸ್ಥಾದ್] ಸ್ಥಿರವಾಗುತ್ತದೆಯೋ ಅದೇ ರೀತಿ [ರಕ್ಷಸಃ] ದುಷ್ಟ ಕರ್ಮ ಮಾಡುವ [ಯಾತುಧಾನಾನ್] ಪೀಡನೆ ಮೊದಲಾದ ದುಃಖಗಳನ್ನುಂಟುಮಾಡುವ ದುಷ್ಟಜನರನ್ನು [ಅಪಸೇಧನ್] ನಿವಾರಣೆಗೊಳಿಸುತ್ತ ಶ್ರೇಷ್ಠರನ್ನು ಹೊಂದು.

ಭಾವಾರ್ಥ:- ಇಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಸಭಾಪತಿಯೇ! ಯಾವ ರೀತಿ ಈ ವಾಯುವು ತನ್ನ ಆಕರ್ಷಣ ಹಾಗೂ ಬಲಗಳಿಂದ ಎಲ್ಲ ಪದಾರ್ಥಗಳನ್ನು ವ್ಯವಸ್ಥಿತವಾಗಿರಿಸುತ್ತದೆಯೋ ಮತ್ತು ಯಾವ ರೀತಿ ಹಗಲಿನಲ್ಲಿ ಕಳ್ಳರು, ದುಷ್ಕರ್ಮಿಗಳು ಪ್ರಬಲರಾಗಲಾರರೋ ಅದೇ ರೀತಿ ನೀನೂ ಸಹ ದುಷ್ಟ ದಮನಕಾರಿ ಆಗು ಮತ್ತು ನಿನಗೆ ಯಾವ ಜಗದೀಶ್ವರನು ಬಹಳ ಗುಣಯುಕ್ತ ಸುಖಗಳನ್ನು ಪ್ರಾಪ್ತಿಸಲು ವಾಯು ಮೊದಲಾದ ಪದಾರ್ಥಗಳನ್ನು ರಚಿಸಿ, ಒದಗಿಸಿದ್ದಾನೋ ಅವುಗಳಿಗೆ ಎಲ್ಲರೂ ಧನ್ಯವಾದಗಳನ್ನು ಅರ್ಪಿಸಲು ಯೋಗ್ಯವಾಗಿದೆ.

ಈಗ ಇಂದ್ರ ಶಬ್ದದಿಂದ ಈಶ್ವರನ ವರ್ಣನೆ ಮಾಡಲಾಗುತ್ತದೆ.

ಯೇ ತೇ ಪಂಥಾಃ ಸವಿತಃ ಪೂರ್ವ್ಯಾಸೋಽರೇಣವಃ ಸುಕೃತಾ ಅಂತರಿಕ್ಷೇ ।
ತೇಭಿರ್ನೋ ಅದ್ಯ ಪಥಿಭಿಃ ಸುಗೇಭಿಃ ರಕ್ಷಾ ಚ ನೋ ಅಧಿ ಚ ಬ್ರೂಹಿ ದೇವ ॥೧೧॥

ಪದಾರ್ಥ:- ಹೇ **[ಸವಿತಃ]** ಸಕಲ ಜಗತ್ತನ್ನು ರಚಿಸುವ ಮತ್ತು **[ದೇವಾ]** ಸರ್ವಸುಖ ಪ್ರದಾತಾ ಜಗದೀಶ್ವರ! **[ಯೇ]** ಯಾವ **[ತೇ]** ನಿನ್ನ **[ಅರೇಣವಃ]** ಯಾವುದರಲ್ಲಿ ಸ್ವಲ್ಪವೂ ಧೂಳಿನಂತಹ ವಿಘ್ನರೂಪೀ ಮಲಗಳಿಲ್ಲವೋ ಹಾಗೂ **[ಪೂರ್ವ್ಯಾಸಃ]** ಯಾವುದನ್ನು ನಮ್ಮ ಹಿಂದಿನವರು ನಮಗಿಂತಲೂ ಹೆಚ್ಚಾಗಿ ಸೇವಿಸಿದ್ದಾರೋ **[ಸುಕೃತಾಃ]** ಉತ್ತಮ ರೀತಿಯಲ್ಲಿ ಸಿದ್ಧಗೊಳಿಸಲಾದ **[ಪಂಥಾಃ]** ಮಾರ್ಗವು **[ಅಂತರಿಕ್ಷೇ]** ತನ್ನ ವ್ಯಾಪಕವಾದ ಬ್ರಹ್ಮಾಂಡದಲ್ಲಿ ವರ್ತ್ತಮಾನವಾಗಿರುವುದೋ **[ತೇಭಿಃ]** ಆ **[ಸುಗೇಭಿಃ]** ಸುಖಪೂರ್ವಕವಾಗಿ ಸೇವಿಸಲು ಯೋಗ್ಯವಾದ **[ಪಥಿಭಿಃ]** ಮಾರ್ಗಗಳಿಂದ **[ನಃ]** ನಮ್ಮಗಳನ್ನು **[ಅದ್ಯ]** ಇಂದು **[ರಕ್ಷಾ]** ರಕ್ಷಣೆ ಮಾಡು. **[ಚ]** ಮತ್ತು **[ನಃ]** ನಮಗಾಗಿ ಎಲ್ಲ ವಿದ್ಯೆಗಳನ್ನು **[ಅಧಿಬ್ರೂಹಿ ಚ]** ಉಪದೇಶಿಸು.

ಭಾವಾರ್ಥ:- ಹೇ ಪರಮಾತ್ಮ! ನೀನು ಯಾವ ಸೂರ್ಯಾದಿ ಲೋಕಗಳನ್ನು ಭ್ರಮಣಮಾಡಲು ಮತ್ತು ಪ್ರಾಣಿಗಳಿಗೆ ಸುಖಕ್ಕಾಗಿ ಆಕಾಶ ಹಾಗೂ ನಿನ್ನ ಮಹಿಮಾರೂಪೀ ಬ್ರಹ್ಮಾಂಡದಲ್ಲಿ ಶುದ್ಧ ಮಾರ್ಗವನ್ನು ರಚಿಸಿರುವೆಯೋ, ಯಾವುದರಲ್ಲಿ ಸೂರ್ಯಾದಿ ಲೋಕಗಳು ನಿಯಮ ಪ್ರಕಾರವಾಗಿ ತಿರುಗುತ್ತಿವೆಯೋ ಮತ್ತು ಎಲ್ಲ ಪ್ರಾಣಿಗಳು ಸುಖಪೂರ್ವಕವಾಗಿ ಓಡಾಡಿಕೊಂಡು ಜೀವಿಸುತ್ತಿವೆಯೋ ಆ ಎಲ್ಲ ಪದಾರ್ಥಗಳ ಮಾರ್ಗಗಳನ್ನು ಮತ್ತು ಗುಣಗಳನ್ನು ನಮಗೆ ಉಪದೇಶಿಸು. ಇದರಿಂದ ನಾವುಗಳೂ ಸಹ ಅತ್ತಿತ್ತ ಚಲಿಸದೆ ಉತ್ತಮ ಮಾರ್ಗದಲ್ಲಿ ಸಾಗುವಂತಾಗಲಿ.

ಈ ಸೂಕ್ತದಲ್ಲಿ ಸೂರ್ಯಲೋಕ ವಾಯು ಮತ್ತು ಪರಮಾತ್ಮನ ಗುಣಗಳ ಪ್ರತಿಪಾದನೆ ಮಾಡಿರುವುದರಿಂದ ೩೪ನೆಯ ಸೂಕ್ತದೊಂದಿಗೆ ಈ ಸೂಕ್ತವು ಸಂಗತಿಕರಣ ಹೊಂದಿದೆ ಎಂಬುದನ್ನು ತಿಳಿಯಬೇಕು.

ಮೂವತ್ತೈದನೆಯ ಸೂಕ್ತ ಸಮಾಪ್ತ

ಸೂಕ್ತ ೩೬

ಮಂತ್ರಸಂಖ್ಯೆ ೨೦ । ಋಷಿಃ - ಕಣ್ವೋ ಧೀರಃ । ದೇವತಾ - ಅಗ್ನಿಃ, ೧೩-೧೪ ಯೂಪೋ ವಾ । ಛಂದಃ - ೧, ೧೨ ಭುರಿಕ್ ಅನುಷ್ಟುಪ್ । ಸ್ವರಃ - ಗಾಂಧಾರಃ । ಛಂದಃ - ೨ ನಿಚೃದ್ ಸತಃ ಪಂಕ್ತಿಃ , ೪ ನಿಚೃತ್ ಪಂಕ್ತಿಃ, ೧೦, ೧೪ ನಿಚೃದ್ವಿಷ್ಟಾರ ಪಂಕ್ತಿಃ, ೧೮ ವಿಷ್ಟಾರಪಂಕ್ತಿಃ , ೨೦ ಸತಃ ಪಂಕ್ತಿಃ । ಸ್ವರಃ - ಪಂಚಮಃ ।
ಛಂದಃ - ೩-೧೧ ನಿಚೃದ್ ಪಥ್ಯಾ ಬೃಹತೀ, ೫-೧೬ ನಿಚೃದ್ ಬೃಹತೀ, ೬ ಭುರಿಕ್ ಬೃಹತೀ, ೭ ಬೃಹತೀ, ೮ ಸ್ವರಾಡ್ ಬೃಹತೀ, ೯ ನಿಚೃದುಪರಿಷ್ಟಾದ್ ಬೃಹತೀ, ೧೨ ಉಪರಿಷ್ಟಾತ್ ಬೃಹತೀ, ೧೫ ವಿರಾಟ್ ಪಥ್ಯಾ ಬೃಹತೀ, ೧೭ ವಿರಾಡ್ ಉಪರಿಷ್ಟಾದ್ ಬೃಹತೀ, ೧೯ ಪಥ್ಯಾ ಬೃಹತೀ । ಸ್ವರಃ - ಮಧ್ಯಮಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಅಗ್ನಿ ಶಬ್ದದಿಂದ ಪರಮಾತ್ಮನ ಗುಣಗಳನ್ನು ವಿವರಿಸಲಾಗುತ್ತದೆ.

ಪ್ರ ವೋ ಯಹ್ವಂ ಪುರೂಣಾಂ ವಿಶಾಂ ದೇವಯತೀನಾಮ್ ।
ಅಗ್ನಿಂ ಸೂಕ್ತೇಭಿರ್ವಚೋಭಿರೀಮಹೇ ಯಂ ಸೀಮಿದನ್ಯ ಈಳತೇ ॥೧॥

ಪದಾರ್ಥ:- ನಾವುಗಳು ಯಾವ ರೀತಿ **[ಅನ್ಯೇ]** ಅನ್ಯ ಪರೋಪಕಾರಿ ಧರ್ಮಾತ್ಮರಾದ ವಿದ್ವಜ್ಜನರು **[ಸೂಕ್ತೇಭಿಃ]** ಯಾವುದರಲ್ಲಿ ಉತ್ತಮ ಪ್ರಕಾರದ ವಿದ್ಯೆಯನ್ನು ಹೇಳಿದ್ದಾರೋ ಆ **[ವಚೋಭಿಃ]** ವೇದದ ಅರ್ಥಜ್ಞಾನಯುಕ್ತ ವಚನಗಳಿಂದ **[ದೇವಯತೀನಾಮ್]** ತಮಗಾಗಿ ದಿವ್ಯಭೋಗ ಮತ್ತು ದಿವ್ಯ ಗುಣಗಳ ಇಚ್ಛೆಯನ್ನು ಮಾಡುವ **[ಪುರೂಣಾಂ]** ಬಹುಜನರಾದ **[ವಃ]** ನೀವು **[ವಿಶಾಂ]** ಪ್ರಜೆಗಳ ಸುಖಕ್ಕಾಗಿ **[ಯಂ]** ಯಾವ **[ಯಹ್ವಂ]** ಅನಂತಗುಣಯುಕ್ತನಾದ **[ಅಗ್ನಿಂ]** ಪರಮೇಶ್ವರನನ್ನು **[ಸೀಂ ಈಳತೇ]** ಎಲ್ಲ ಪ್ರಕಾರದಿಂದ ಸ್ತುತಿಮಾಡುತ್ತಾರೋ **[ಇತ್]** ಅವರದೇ ಆದ **[ಪ್ರೇಮಹೇ]** ಉತ್ತಮರೀತಿಯ ಯಾಚನೆ ಮತ್ತು ಗುಣಗಳ ಪ್ರಕಾಶವನ್ನು ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ಯಾವ ರೀತಿ ನೀವುಗಳು ಪೂರ್ಣವಿದ್ಯಾಯುಕ್ತ ವಿದ್ವಾಂಸರು ಪ್ರಜೆಗಳ ಸುಖಸಂಪತ್ತುಗಳಿಗಾಗಿ ಸರ್ವವ್ಯಾಪೀ ಪರಮೇಶ್ವರನನ್ನು ನಿಶ್ಚಯ ಹಾಗೂ ಉಪದೇಶಗಳನ್ನು ಮಾಡಿ ಪ್ರಯತ್ನಪೂರ್ವಕವಾಗಿ ತಿಳಿಯುತ್ತೀರೋ, ಅದೇ ರೀತಿ ನಾವೂ ಸಹ ಅವನ ಗುಣಗಳನ್ನು ಪ್ರಕಾಶಿತಗೊಳಿಸೋಣ. ಯಾವ ರೀತಿ ಈಶ್ವರನು ಅಗ್ನಿ ಮೊದಲಾದ ಪದಾರ್ಥಗಳ ರಚನೆ ಮತ್ತು ಪಾಲನೆಯಿಂದ ಜೀವರಲ್ಲಿ ಎಲ್ಲ ರೀತಿಯ ಸುಖಗಳನ್ನು ಧಾರಣ ಮಾಡುತ್ತಾನೋ ಹಾಗೆಯೇ ನಾವೂ ಸಹ ಎಲ್ಲ ಜೀವಿಗಳಿಗಾಗಿ ಸದಾ ಸುಖ ಮತ್ತು ವಿದ್ಯೆಯನ್ನು ಸಿದ್ಧಗೊಳಿಸುತ್ತಿರೋಣ.

ಪುನಃ ಅದೇ ವಿಷಯವನ್ನು ತಿಳಿಸಲಾಗುತ್ತದೆ.

ಜನಾಸೋ ಅಗ್ನಿಂ ದಧಿರೇ ಸಹೋವೃಧಂ ಹವಿಷ್ಮಂತೋ ವಿಧೇಮ ತೇ ।
ಸ ತ್ವಂ ನೋ ಅದ್ಯ ಸುಮನಾ ಇಹಾವಿತಾ ಭವಾ ವಾಜೇಷು ಸಂತ್ಯ ॥೨॥

ಪದಾರ್ಥ:- ಹೇ **[ಸಂತ್ಯ]** ಸಮಸ್ತ ವಸ್ತುಗಳನ್ನು ಪ್ರಧಾನ ಮಾಡುವ ಪರಮೇಶ್ವರ! ಯಾವ ರೀತಿ **[ಹವಿಷ್ಮಂತಃ]** ಉತ್ತಮವಾದ ಕೊಡಲು ಯೋಗ್ಯವಾದ ವಸ್ತುವನ್ನುಳ್ಳ **[ಜನಾಸಃ]** ವಿದ್ಯೆಯಿಂದ ಪ್ರಸಿದ್ಧರಾದ ವಿದ್ವಜ್ಜನರು ಯಾವ **[ತೇ]** ನಿನ್ನ ಆಶ್ರಯದ **[ದಧಿರೇ]** ಧಾರಣ ಮಾಡುತ್ತಾರೋ ಅದೇ ರೀತಿ ಆ **[ಸಹೋವೃಧಂ]** ಬಲವನ್ನು ವೃದ್ಧಿಸುವವನಾದ **[ಅಗ್ನಿಂ]** ಸರ್ವರಕ್ಷಕನಾದ ನಿನ್ನನ್ನು ನಾವುಗಳು **[ವಿಧೇಮ]** ಸೇವಿಸುವವರಾಗೋಣ. **[ಸಃ]** ಆ **[ಸುಮನಾಃ]** ಉತ್ತಮ ಜ್ಞಾನವುಳ್ಳ **[ತ್ವಂ]** ನೀವು **[ಅದ್ಯ]** ಇಂದು **[ನಃ]** ನಮಗೆ **[ಇಹ]** ಈ ಜಗತ್ತಿನಲ್ಲಿ ಮತ್ತು **[ವಾಜೇಷು]** ಯುದ್ಧಗಳಲ್ಲಿ **[ಅವಿತಾ]** ರಕ್ಷಕರೂ ಮತ್ತು ಸರ್ವವಿದ್ಯೆಗಳಲ್ಲಿ ಪ್ರವೇಶಗೊಳಿಸುವವರೂ **[ಭವ]** ಆಗಿರಿ.

ಭಾವಾರ್ಥ:- ಮನುಷ್ಯರು ಏಕಮೇವಾದ್ವಿತೀಯನಾದ ಪರಮಾತ್ಮನ ಉಪಾಸನೆಯಿಂದಲೇ ಸಂತುಷ್ಟರಾಗಿರಬೇಕು. ಏಕೆಂದರೆ ವಿದ್ವಾಂಸರು ಪರಮಾತ್ಮನ ಸ್ಥಾನದಲ್ಲಿ ಅನ್ಯವಸ್ತುವನ್ನು ಉಪಾಸನಾ ಭಾವದಿಂದ ಎಂದಿಗೂ ಸ್ವೀಕರಿಸಲಾರರು. ಇದೇ ಕಾರಣದಿಂದ ಅವರ ಯುದ್ಧ ಮತ್ತು ಈ ಪ್ರಪಂಚದಲ್ಲಿ ಎಂದಿಗೂ ಪರಾಜಯವಾಗುವುದು ಕಂಡು ಬರುವುದಿಲ್ಲ. ಏಕೆಂದರೆ ಅವರು ಧಾರ್ಮಿಕರೇ ಆಗಿರುತ್ತಾರೆ ಮತ್ತು ಇದರಿಂದಲೇ ಈಶ್ವರನ ಉಪಾಸನೆಯನ್ನು ಮಾಡದಿರುವವರು ಅವರನ್ನು ಜಯಿಸಲು ಸಮರ್ಥರಾಗಲಾರರು. ಏಕೆಂದರೆ ಪರಮೇಶ್ವರನು ಯಾರ ರಕ್ಷಣೆಯನ್ನು ಮಾಡುತ್ತಾನೋ ಅವರ ಪರಾಜಯವು ಹೇಗೆ ತಾನೇ ಆಗಲು ಸಾಧ್ಯ?

ಈಗ ಭೌತಿಕ ಅಗ್ನಿಯ ದೃಷ್ಟಾಂತದಿಂದ ರಾಜದೂತನ ಗುಣಗಳ ವರ್ಣನೆಯನ್ನು ಮಾಡಲಾಗುತ್ತದೆ.

ಪ್ರ ತ್ವಾ ದೂತಂ ವೃಣೀಮಹೇ ಹೋತಾರಂ ವಿಶ್ವವೇದಸಮ್ ।
ಮಹಸ್ತೇ ಸತೋ ವಿ ಚರಂತ್ಯರ್ಚಯೋ ದಿವಿ ಸ್ಪೃಶಂತಿ ಭಾನವಃ ॥೩॥

ಪದಾರ್ಥ:- ಹೇ ವಿದ್ವಾಂಸನಾದ ರಾಜದೂತನೇ! ಯಾವ ರೀತಿ ನಾವುಗಳು **[ವಿಶ್ವವೇದಸಮ್]** ಸಮಸ್ತ ಶಿಲ್ಪವಿದ್ಯೆಯ ಕಾರಣ **[ಹೋತಾರಂ]** ಗ್ರಹಣ ಮಾಡಲು ಮತ್ತು **[ದೂತಂ]** ಸಮಸ್ತ ಪದಾರ್ಥಗಳನ್ನು ತಲುಪಿಸುವ ಅಗ್ನಿಯನ್ನು **[ವೃಣೀಮಹೇ]** ಸ್ವೀಕಾರ ಮಾಡುತ್ತೇವೋ ಹಾಗೆಯೇ **[ತ್ವಾ]** ನಿನ್ನನ್ನೂ ಸಹ ಗ್ರಹಣ ಮಾಡುತ್ತೇವೆ. ಹಾಗೂ ಯಾವ ರೀತಿ **[ಮಹಃ]** ಮಹಾಗುಣವಿಶಿಷ್ಟರಾದ **[ಸತಃ]** ಸತ್ಕಾರಣರೂಪಿಯಾದ ನಿತ್ಯನಾದ ಅಗ್ನಿಯ **[ಭಾನವಃ]** ಕಿರಣಗಳು ಸಮಸ್ತ ಪದಾರ್ಥಗಳಿಂದ **[ಸ್ಪೃಶಂತಿ]** ಸಂಬಂಧಿಸಿರುತ್ತವೆಯೋ ಮತ್ತು **[ಅರ್ಚಯಃ]** ಪ್ರಕಾಶಸ್ವರೂಪ ಜ್ವಾಲೆಯು **[ದಿವಿ]** ದ್ಯೋತನಾತ್ಮಕ ಸೂರ್ಯನ ಪ್ರಕಾಶದಲ್ಲಿ **[ವಿಚರಂತಿ]** ವಿಶೇಷವಾಗಿ ಪ್ರಾಪ್ತವಾಗುತ್ತವೋ, ಅದೇ ರೀತಿ ನಿನ್ನ ಎಲ್ಲ ಕಾರ್ಯಗಳೂ ಆಗಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ನಿನ್ನ ಕಾರ್ಯದಲ್ಲಿ ಪ್ರವೀಣನಾದ ರಾಜದೂತನೇ! ಯಾವ ರೀತಿ ಎಲ್ಲ ಮಾನವರು ಮಹಾಪ್ರಕಾಶಾದಿ ಗುಣಯುಕ್ತ ಅಗ್ನಿಯನ್ನು ಪದಾರ್ಥಗಳ ಪ್ರಾಪ್ತಿ ಹಾಗೂ ಅಪ್ರಾಪ್ತಿಯ ಕಾರಣನಾದ ದೂತನಂತೆ ಜ್ಞಾನ ಮತ್ತು ಶಿಲ್ಪಕಾರ್ಯಗಳಲ್ಲಿ ಸಿದ್ಧಿಸಿ, ಸುಖಗಳನ್ನು ಸ್ವೀಕಾರ ಮಾಡುತ್ತಾರೋ, ಮತ್ತು ಯಾವ ರೀತಿ ವಿದ್ಯುತ್ ರೂಪೀ ಅಗ್ನಿಯ ದೀಪ್ತಿಯು ಎಲ್ಲ ಕಡೆಗಳಲ್ಲಿಯೂ ಇರುತ್ತವೆಯೋ ಮತ್ತು ಪ್ರಸಿದ್ಧ ಅಗ್ನಿಯ ದೀಪ್ತಿಯು ಚಿಕ್ಕದಾಗುವುದರಿಂದ ವಾಯುವಿನ ಹಾಗೂ ಛೇದಕವಾಗುವುದರಿಂದ ಅವಕಾಶವನ್ನುಂಟು ಮಾಡುವವನಾಗಿ ಜ್ವಾಲೆಯು ಮೇಲೇರುತ್ತದೆಯೋ ಹಾಗೆಯೇ ನೀನೂ ಸಹ ನಿನ್ನ ಕಾರ್ಯಗಳಲ್ಲಿ ಪ್ರವೃತ್ತನಾಗು.

ಪುನಃ ಆ ದೂತನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ದೇವಾಸಸ್ತ್ವಾ ವರುಣೋ ಮಿತ್ರೋ ಅರ್ಯಮಾ ಸಂ ದೂತಂ ಪ್ರತ್ನಮಿಂಧತೇ ।
ವಿಶ್ವಂ ಸೋ ಅಗ್ನೇ ಜಯತಿ ತ್ವಯಾ ಧನಂ ಯಸ್ತೇ ದದಾಶ ಮರ್ತ್ಯಃ ॥೪॥

ಪದಾರ್ಥ:- ಹೇ **[ಅಗ್ನೇ]** ಧರ್ಮ, ವಿದ್ಯೆ, ಶ್ರೇಷ್ಠ ಗುಣಗಳಿಂದ ಪ್ರಕಾಶಮಾನನಾದ ಸಭಾಪತಿಯೇ! **[ಯಃ]** ಯಾವ **[ತೇ]** ನಿನ್ನ **[ದೂತಃ]** ದೂತರು **[ಮರ್ತ್ಯಃ]** ಮರಣಧರ್ಮಿಯಾದ ನಿನಗಾಗಿ **[ಧನಂ]** ವಿದ್ಯಾ ರಾಜ್ಯ ಸುವರ್ಣಾದಿ ಶ್ರೀಯನ್ನು **[ದದಾಶ]** ನೀಡುತ್ತಾರೋ ಹಾಗೂ ಯಾವ **[ತ್ವಯಾ]** ನಿನ್ನೊಂದಿಗಿರುವ ಶತ್ರುವನ್ನು **[ಜಯತಿ]** ಜಯಿಸುತ್ತಾರೋ **[ಮಿತ್ರಃ]** ಎಲ್ಲರ ಮಿತ್ರನೂ **[ವರುಣಃ]** ಎಲ್ಲರಿಗಿಂತ ವರಣೀಯನೂ **[ಅರ್ಯಮಾ]** ನ್ಯಾಯಕಾರಿಯೂ **[ದೇವಾಸಃ]** ಈ ಎಲ್ಲ ಸಭ್ಯ ವಿದ್ವಾಂಸರು ಯಾವುದನ್ನು **[ಸಮಿಂಧತೇ]** ಉತ್ತಮರೀತಿಯಲ್ಲಿ ಪ್ರಶಂಸಿತವಾದುದೆಂದು ತಿಳಿದು ಸ್ವೀಕರಿಸುವುದಕ್ಕಾಗಿ ಶುಭಗುಣಗಳಿಂದ ಪ್ರಕಾಶಿತಗೊಳಿಸುತ್ತಾರೋ, ಯಾವ **[ತ್ವಾ]** ನಿನ್ನ ಮತ್ತು ಪ್ರಜೆಗಳೆಲ್ಲರನ್ನು ಪ್ರಸನ್ನವಾಗಿರಿಸುತ್ತಾರೋ **[ಸಃ]** ಆ ದೂತನು **[ಪ್ರತ್ನಂ]** ಕಾರಣರೂಪದಿಂದ ಅನಾದಿಯಾದ **[ವಿಶ್ವಂ]** ಎಲ್ಲ ರಾಜ್ಯವನ್ನು ಸುರಕ್ಷಿತವಾಗಿರಿಸಲು ಯೋಗ್ಯನಾಗಿರುತ್ತಾನೆ.

ಭಾವಾರ್ಥ:- ಯಾವ ಮನುಷ್ಯನು ಎಲ್ಲ ಶಾಸ್ತ್ರಗಳಲ್ಲಿಯೂ ಪ್ರಮುಖವಾದ ರಾಜಧರ್ಮವನ್ನು ಉತ್ತಮ ಪ್ರಕಾರದಿಂದ ತಿಳಿಯಲು, ಪರ-ಅಪರ ಇತಿಹಾಸಗಳ ವೇತ್ತನೂ, ಧರ್ಮಾತ್ಮನೂ, ನಿರ್ಭಯ ವಕ್ತೃವೂ, ಶೂರ ವೀರ ದೂತರೂ ಹಾಗೂ ಉತ್ತಮ ರಾಜನ ಸಹಿತವಿರುವ ಸಭಾಸದರ ವಿನಾ ರಾಜ್ಯವನ್ನು ಪಡೆಯಲು ಪಾಲಿಸಲು, ವೃದ್ಧಿಸಲು ಮತ್ತು ಪರೋಪಕಾರದಲ್ಲಿ ತೊಡಗಿಸಲು ಸಮರ್ಥನಾಗುವುದಿಲ್ಲ. ಆದುದರಿಂದ ಪೂರ್ವೋಕ್ತ ಪ್ರಕಾರವೇ ರಾಜ್ಯದ ಪ್ರಾಪ್ತಿ ಹಾಗೂ ಇನ್ನಿತರ ವಿಧಾನಗಳನ್ನು ಎಲ್ಲರೂ ಸದಾ ಮಾಡುತ್ತಿರಬೇಕು.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಮಂದ್ರೋ ಹೋತಾ ಗೃಹಪತಿ-ರಗ್ನೇ ದೂತೋ ವಿಶಾಮಸಿ ।
ತ್ವೇ ವಿಶ್ವಾ ಸಂಗತಾನಿ ವ್ರತಾ ಧ್ರುವಾ ಯಾನಿ ದೇವಾ ಅಕೃಣ್ವತ ॥೫॥

ಪದಾರ್ಥ:- ಹೇ **[ಅಗ್ನೇ]** ಶರೀರ ಮತ್ತು ಆತ್ಮಗಳ ಬಲದಿಂದ ಸುಶೋಭಿತನಾದವನೇ! ಯಾವುದರಿಂದ ನೀನು **[ಮಂದ್ರಃ]** ಪದಾರ್ಥಗಳನ್ನು ಹೊಂದುವುದರಿಂದ ಸುಖಕ್ಕೆ ಕಾರಣವಾದ **[ಹೋತಾ]** ಸುಖದಾಯಕನಾದ **[ಗೃಹಪತಿಃ]** ಗೃಹಕಾರ್ಯಗಳ ಪಾಲಕನಾದ **[ದೂತಃ]** ದುಷ್ಟಶತ್ರುಗಳನ್ನು ತಪ್ತ ಮತ್ತು ಛೇದನಗೊಳಿಸುವ **[ವಿಶಾಂ]** ಪ್ರಜೆಗಳ **[ಪತಿಃ]** ರಕ್ಷಕನೂ **[ಅಸಿ]** ಆಗಿದ್ದೀಯೋ ಇದರಿಂದ ಎಲ್ಲ ಪ್ರಜೆಗಳು **[ಯಾನಿ]** ಯಾವ **[ವಿಶ್ವಾ]** ಸಮಸ್ತ **[ಧ್ರುವಾ]** ನಿಶ್ಚಲವಾದ **[ಸಂಗತಾನಿ]** ಸಂಮ್ಯಕ್ ರೀತಿಯಿಂದ ಕೂಡಿದ ಸಮಯಾನುಕೂಲವಾಗಿ ಪ್ರಾಪ್ತವಾದ **[ವ್ರತಾ]** ಧರ್ಮಯುಕ್ತ ಕರ್ಮಗಳನ್ನು **[ದೇವಾಃ]** ಧಾರ್ಮಿಕ ವಿದ್ವಾಂಸರು **[ಅಕೃಣ್ವತ]** ಮಾಡುತ್ತಾರೋ, ಅದರ ಸೇವನೆಯನ್ನು **[ತ್ವೇ]** ನಿನ್ನ ರಕ್ಷಕರಾದುದರಿಂದ ಸದಾ ಮಾಡುತ್ತಿರುತ್ತಾರೆ.

ಭಾವಾರ್ಥ:- ಯಾರು ಪ್ರಶಸ್ತರಾದ ರಾಜ, ದೂತರು ಮತ್ತು ಸಭಾಸದರು ಆಗಿರುತ್ತಾರೋ, ಅವರೇ ರಾಜ್ಯಪಾಲನೆಯನ್ನು ಮಾಡಬಲ್ಲರು. ಇದಕ್ಕೆ ವಿರುದ್ಧವಾದ ಗುಣಗಳುಳ್ಳ ಮನುಷ್ಯರು ಮಾಡಲಾರರು.

ಈಗ ಅಗ್ನಿಯ ದೃಷ್ಟಾಂತದಿಂದ ರಾಜಪುರುಷರ ಗುಣಗಳ ವರ್ಣನೆಯನ್ನು ಮಾಡಲಾಗುತ್ತದೆ.

ತ್ವೇ ಇದಗ್ನೇ ಸುಭಗೇ ಯವಿಷ್ಠ್ಯ ವಿಶ್ವಮಾ ಹೂಯತೇ ಹವಿಃ ।
ಸ ತ್ವಂ ನೋ ಅದ್ಯ ಸುಮನಾ ಉತಾಪರಂ ಯಕ್ಷಿ ದೇವಾನ್ತ್ಸುವೀರ್ಯಾ ॥೬॥

ಪದಾರ್ಥ:- ಹೇ **[ಯವಿಷ್ಠ್ಯ]** ಪದಾರ್ಥಗಳನ್ನು ಸೇರಿಸುವುದರಲ್ಲಿ ಸಮರ್ಥನಾದ **[ಅಗ್ನೇ]** ಸುಖದಾಯಕನಾದ ರಾಜನ್! ಯಾವ ರೀತಿ ಹೋತಾರರು ಅಗ್ನಿಯಲ್ಲಿ **[ವಿಶ್ವಂ]** ಸಮಸ್ತ **[ಹವಿಃ]** ಉತ್ತಮರೀತಿಯಿಂದ ಸಂಸ್ಕರಿಸಲ್ಪಟ್ಟ ಪದಾರ್ಥವನ್ನು **[ಆಹೂಯತೇ]** ಆಹುತಿ ನೀಡುತ್ತಾರೋ ಅದೇ ರೀತಿ ಯಾವ **[ಸುಭಗೇ]** ಉತ್ತಮ ಐಶ್ವರ್ಯಯುಕ್ತನಾದ **[ತ್ವೇ]** ನಿನ್ನಲ್ಲಿ ನ್ಯಾಯವನ್ನು ಮಾಡುವ ಕಾರ್ಯವನ್ನು ಸ್ಥಾಪಿತಗೊಳಿಸುತ್ತಾರೋ ಹಾಗೆ **[ಸುಮನಾಃ]** ಒಳ್ಳೆಯ ಮನಸ್ಸಿನವನು ಆದ **[ತ್ವಂ]** ನೀನು **[ಅದ್ಯ]** ಇಂದು **[ಉತ]** ಮತ್ತು **[ಅಪರಂ]** ಎರಡನೆಯ ದಿನದಲ್ಲಿಯೂ **[ನಃ]** ನಮಗಾಗಿ **[ಸುವೀರ್ಯಾ]** ಉತ್ತಮ ವೀರ್ಯವಂತರಾದ **[ದೇವಾನ್ ಇತ್]** ವಿದ್ವಾಂಸರನ್ನಾಗಿಯೇ **[ಯಕ್ಷಿ]** ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ವಿದ್ವಾಂಸರು ಬೆಂಕಿಯಲ್ಲಿ ಪವಿತ್ರಹೋಮವನ್ನು ರಚಿಸಿ ಯೋಗ್ಯವಾದ ತುಪ್ಪ ಮೊದಲಾದ ಪದಾರ್ಥಗಳಿಂದ ಹೋಮ ಮಾಡಿ ಜಗತ್ತಿಗೆ ಸುಖವನ್ನುಂಟುಮಾಡುತ್ತಾರೋ, ಅದೇ ರೀತಿ ದುಷ್ಟರನ್ನು ಬಂಧನದಲ್ಲಿರಿಸಿ ಸಜ್ಜನರನ್ನು ಆನಂದಿತರನ್ನಾಗಿರಿಸಬೇಕು.

ಪುನಃ ಅದೇ ಅರ್ಥದ ಉಪದೇಶವನ್ನು ಮುಂದಿನ ಈ ಮಂತ್ರದಲ್ಲಿ ಮಾಡಲಾಗಿದೆ.

ತಂ ಘೇಮಿತ್ಥಾ ನಮಸ್ವಿನ ಉಪ ಸ್ವರಾಜಮಾಸತೇ ।
ಹೋತ್ರಾಭಿರಗ್ನಿಂ ಮನುಷಃ ಸಮಿಂಧತೇ ತಿತಿರ್ವಾಂಸೋ ಅತಿ ಸ್ರಿಧಃ ॥೭॥

ಪದಾರ್ಥ:- ಯಾವ **[ನಮಸ್ವಿನಃ]** ಉತ್ತಮ ರೀತಿಯಲ್ಲಿ ಸತ್ಕಾರ ಮಾಡುವ **[ಈಂ]** ಪ್ರದಾತಾರನಾದ ಯೋಗ್ಯರಾದ **[ಮನುಷಃ]** ಮನುಷ್ಯರು **[ಇತ್ಥಾ]** ಅನೇಕ ಪ್ರಕಾರದಿಂದ **[ಹೋತ್ರಾಭಿಃ]** ಹವನಯುಕ್ತ ಸತ್ಕ್ರಿಯೆಗಳಿಂದ **[ಸ್ವರಾಜಂ]** ತಮ್ಮ ರಾಜನಾದ **[ಅಗ್ನಿಂ]** ಜ್ಞಾನವಾನ್ ಸಭಾಧ್ಯಕ್ಷನನ್ನು **[ಘಾ]** ನಿಶ್ಚಯವಾಗಿ **[ಉಪಾಸತೇ]** ಉಪಾಸನೆ ಮತ್ತು **[ತಂ]** ಅವನ **[ಸಮಿಂಧತೇ]** ಪ್ರಕಾಶವನ್ನು ಉಂಟುಮಾಡುತ್ತಾರೋ ಅವರು **[ಸ್ರಿಧಃ]** ಹಿಂಸಾನಾಶವನ್ನು ಮಾಡುವ ಶತ್ರುಗಳನ್ನು **[ಅತಿ ತಿತಿರ್ವಾಂಸಃ]** ಉತ್ತಮ ಪ್ರಕಾರದಿಂದ ಜಯಿಸಿ ಪಾರಾಗುತ್ತಾರೆ.

ಭಾವಾರ್ಥ:- ಯಾವುದೇ ಮನುಷ್ಯನು ಸಭಾಧ್ಯಕ್ಷನ ಉಪಾಸನೆಯನ್ನು ಮಾಡುವ ಭೃತ್ಯರೂ ಹಾಗೂ ಸಭಾಸದರ ವಿನಾ ತಮ್ಮ ರಾಜ್ಯದ ಸಿದ್ಧಿಯನ್ನು ಪ್ರಾಪ್ತಗೊಳಿಸಿ ಶತ್ರುಗಳ ಮೇಲೆ ವಿಜಯವನ್ನು ಸಾಧಿಸಲಾರರು.

ಪುನಃ ಪೂರ್ವೋಕ್ತ ವಿಷಯವನ್ನೇ ತಿಳಿಸಲಾಗಿದೆ.

ಘ್ನಂತೋ ವೃತ್ರಮತರನ್ ರೋದಸೀ ಅಪ ಉರು ಕ್ಷಯಾಯ ಚಕ್ರಿರೇ ।

ಭುವತ್ ಕಣ್ವೇ ವೃಷಾ ದ್ಯುಮ್ನ್ಯಾಹುತಃ ಕ್ರಂದದಶ್ವೋ ಗವಿಷ್ಟಿಷು ॥೮॥

ಪದಾರ್ಥ:- ರಾಜಪುರುಷರಾದವರು ಯಾವ ರೀತಿ ವಿದ್ಯುತ್, ಸೂರ್ಯ ಮತ್ತು ಅದರ ಕಿರಣಗಳು **[ವೃತ್ರಂ]** ಮೇಘವನ್ನು ಭೇದಿಸಿ ಮಳೆಯನ್ನು ಸುರಿಸುವ ಆಕಾಶ ಮತ್ತು ಪೃಥ್ವಿಗಳ ಜಲಗಳಿಂದ ಪೂರ್ಣ ಹಾಗೂ ಈ ಕರ್ಮಗಳನ್ನು ಜೀವಿಗಳ ಪ್ರಪಂಚದಲ್ಲಿ ಅಧಿಕ ನಿವಾಸಕ್ಕಾಗಿ ಮಾಡಲಾಗುತ್ತದೆಯೋ ಹಾಗೆಯೇ ಶತ್ರುಗಳನ್ನು **[ಘ್ನಂತಃ]** ಕೊಲ್ಲುತ್ತಾ **[ರೋದಸೀ]** ಬೆಳಕು ಮತ್ತು ಕತ್ತಲೆಗಳಲ್ಲಿ **[ಅಪಃ]** ಕರ್ಮವನ್ನು ಮಾಡಲಿ ಮತ್ತು ಎಲ್ಲ ಜೀವಿಗಳನ್ನು **[ಅತರನ್]** ದುಃಖದಿಂದ ಪಾರುಮಾಡಲಿ. ಹಾಗೂ **[ಗವಿಷ್ಟಿಷು]** ಗೋವು ಮೊದಲಾದ ಪಶುಗಳ ಸಂಗಾತದಲ್ಲಿ **[ಕ್ರಂದತ್]** ಶಬ್ದವನ್ನು ಮಾಡುತ್ತಾ **[ಅಶ್ವಃ]** ಕುದುರೆಗಳಂತೆ **[ಆಹುತಃ]** ರಾಜ್ಯಾಧಿಕಾರದಲ್ಲಿ ನಿಯತಗೊಳಿಸಿದ **[ವೃಷಾ]** ಸುಖದ ವೃಷ್ಟಿಯನ್ನು ಮಾಡುವ **[ಉರುಚಕ್ಷಾಯ]** ಬಹಳವಾದ ನಿವಾಸಕ್ಕಾಗಿ **[ಕಣ್ವೇ]** ಬುದ್ಧಿವಂತನಲ್ಲಿ **[ದ್ಯುಮ್ನೀ]** ಬಹಳ ಐಶ್ವರ್ಯವನ್ನು ಧಾರಣೆ ಮಾಡುತ್ತಾ ಸುಖಿಗಳು **[ಭುವತ್]** ಆಗಲಿ.

ಭಾವಾರ್ಥ:- ಯಾವ ರೀತಿ ವಿದ್ಯುತ್, ಭೌತಿಕ ಸೂರ್ಯ ಹಾಗೂ ಅವನ ಕಿರಣ ಇವೇ ಮೂರು ಪ್ರಕಾರದ ಅಗ್ನಿಯು ಮೇಘಮಂಡಲವನ್ನು ಛಿನ್ನಭಿನ್ನಗೊಳಿಸಿ ಎಲ್ಲ ಲೋಕಗಳನ್ನು ಜಲದಿಂದ ಅಪ್ಲಾವಿತ ಗೊಳಿಸುತ್ತದೆಯೋ ಅವುಗಳ ಯುದ್ಧಕರ್ಮ ಎಲ್ಲ ಪ್ರಾಣಿಗಳ ಅಧಿಕ ನಿವಾಸಕ್ಕಾಗಿ ಉಂಟಾಗುತ್ತದೆಯೋ, ಅದೇ ರೀತಿ ಸಭಾಧ್ಯಕ್ಷನೇ ಮೊದಲಾದ ರಾಜಪುರುಷರು ಕಂಟಕರೂಪೀ ಶತ್ರುಗಳನ್ನು ಕೊಂದು ಪ್ರಜೆಗಳನ್ನು ನಿರಂತರವಾಗಿ ಸುರಕ್ಷಿತಗೊಳಿಸುತ್ತಿರಬೇಕು.

ಈಗ ಸಭಾಪತಿಯ ಗುಣಗಳನ್ನು ವಿವರಿಸಲಾಗುತ್ತದೆ.

ಸಂ ಸೀದಸ್ವ ಮಹಾँ ಅಸಿ ಶೋಚಸ್ವ ದೇವವೀತಮಃ ।

ವಿ ಧೂಮಮಗ್ನೇ ಅರುಷಂ ಮಿಯೇಧ್ಯ ಸೃಜ ಪ್ರಶಸ್ತ ದರ್ಶತಮ್ ॥೯॥

ಪದಾರ್ಥ:- ಹೇ ತೇಜಸ್ವಿಯಾದ ವಿದ್ಯಾವಿನಯಯುಕ್ತ **[ಮಿಯೇಧ್ಯ]** ಪ್ರಾಜ್ಞನಾದ **[ಅಗ್ನೇ]** ವಿದ್ವಾನ್ ಸಭಾಪತಿಯೇ! ನೀನು **[ಮಹಾನ್]** ಮಹತ್ತಾದ ಗುಣಗಳಿಂದ ಯುಕ್ತನೂ **[ಅಸಿ]** ಆಗಿರುವೆ. **[ದೇವವೀತಮಃ]** ವಿದ್ವಾಂಸರನ್ನು ವ್ಯಾಪ್ತಗೊಳಿಸುವವನಾದ ನೀನು ನ್ಯಾಯಧರ್ಮದಲ್ಲಿ ಸ್ಥಿತನಾಗಿ **[ಸಂಸೀದಸ್ವ]** ಎಲ್ಲ ದೋಷಗಳ ನಾಶವನ್ನು ಉಂಟುಮಾಡು. ಮತ್ತು **[ಶೋಚಸ್ವ]** ಪ್ರಕಾಶಮಯನಾಗು. ಹೇ **[ಪ್ರಶಸ್ತ]** ಪ್ರಶಂಸಿಸಲು ಯೋಗ್ಯನಾದ ರಾಜನೇ! ನೀನು **[ವಿಧೂಮಂ]** ಧೂಮಸದೃಶ ಮಲದಿಂದ ರಹಿತವಾದ **[ದರ್ಶತಮ್]** ನೋಡಲು ಯೋಗ್ಯವಾದ **[ಅರುಷಂ]** ಲೋಕವನ್ನು **[ಸೃಜ]** ಉತ್ಪನ್ನ ಮಾಡು.

ಭಾವಾರ್ಥ:- ಪ್ರಶಂಸಿತರಾದ ಬುದ್ಧಿಶಾಲಿ ರಾಜಪುರುಷರಿಗೆ ಯೋಗ್ಯವಾದುದೇನೆಂದರೆ, ಅಗ್ನಿಯಂತೆ ತೇಜಸ್ವಿಯೂ ಬೃಹತ್ತಾದ ಮತ್ತು ಮಹತ್ತಾದ ಗುಣಗಳಿಂದ ಕೂಡಿದವರೂ ಆಗಿ ಶ್ರೇಷ್ಠ ಗುಣಗಳನ್ನುಳ್ಳ ಪೃಥ್ವೀ ಮೊದಲಾದ ಭೂತಗಳ ತತ್ವಗಳನ್ನು ತಿಳಿದು ಪ್ರಕಾಶಮಾನರಾಗಿರುತ್ತಾ ನಿರ್ಮಲವೂ ದರ್ಶನೀಯವೂ ಆದ ಸ್ವರೂಪವುಳ್ಳ ಪದಾರ್ಥಗಳನ್ನು ಉತ್ಪನ್ನ ಮಾಡಬೇಕು.

ಮನುಷ್ಯರು ಯಾವ ಪ್ರಕಾರದ ಪುರುಷನನ್ನು ಸಭಾಧ್ಯಕ್ಷನನ್ನಾಗಿ ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಯಂ ತ್ವಾ ದೇವಾಸೋ ಮನವೇ ದಧುರಿಹ ಯಜಿಷ್ಠಂ ಹವ್ಯವಾಹನ ।

ಯಂ ಕಣ್ವೋ ಮೇಧ್ಯಾತಿಥಿರ್ಧನಸ್ಪೃತಂ ಯಂ ವೃಷಾ ಯಮುಪಸ್ತುತಃ ॥೧೦॥

ಪದಾರ್ಥ:- ಹೇ **[ಹವ್ಯವಾಹನ]** ಗ್ರಹಣ ಮಾಡಲು ಯೋಗ್ಯವಾದ ವಸ್ತುಗಳನ್ನು ಪ್ರಾಪ್ತಿಗೊಳಿಸುವವನಾದ ಸಭ್ಯನೇ! **[ಯಂ]** ಯಾವ ವಿಚಾರಶೀಲ **[ಯಜಿಷ್ಠಂ]** ಬಹುವಾಗಿ ಯಜ್ಞ ಮಾಡುವ **[ತ್ವಾ]** ನಿನ್ನನ್ನು **[ದೇವಾಸಃ]** ವಿದ್ವಜ್ಜನರು **[ಮನವೇ]** ಮನನಮಾಡಲು ಯೋಗ್ಯವಾದ ರಾಜ್ಯದ ಶಿಕ್ಷಣಕ್ಕಾಗಿ **[ಇಹ]** ಈ ಪೃಥ್ವಿಯಲ್ಲಿ **[ದಧುಃ]** ಧಾರಣ ಮಾಡುತ್ತಾರೆ. **[ಯಂ]** ಯಾವ ಶಿಕ್ಷಣವನ್ನು ಪಡೆದಿರುವ **[ಧನಸ್ಪೃತಂ]** ವಿದ್ಯೆ ಸ್ವರ್ಣ ಮೊದಲಾದ ಸಂಪತ್ತುಗಳಿಂದ ಯುಕ್ತನಾದ ನಿನ್ನನ್ನು **[ಮೇಧಾತಿಥಿಃ]** ಪವಿತ್ರ ಅತಿಥಿಗಳಿಂದ ಕೂಡಿದ ಅಧ್ಯಾಪಕನು **[ಕಣ್ವಃ]** ವಿದ್ವಾನ್ ಪುರುಷನು ಸ್ವೀಕಾರ ಮಾಡುತ್ತಾ **[ಯಂ]** ಯಾವ ಸುಖದ ವೃಷ್ಟಿಯನ್ನು ಮಾಡುವ **[ತ್ವಾ]** ನಿನ್ನನ್ನು **[ವೃಷಾ]** ಸುಖಗಳನ್ನು ಹರಡುವ, ವೃದ್ಧಿಗೊಳಿಸುವವರನ್ನು ಧಾರಣ ಮಾಡುತ್ತಾ **[ಯಂ]** ಯಾವ ಸ್ಥಿತಿಯೋಗ್ಯನಾದ ನಿನ್ನನ್ನು **[ಉಪಸ್ತುತಃ]** ಸಮೀಪಸ್ಥ ಸಜ್ಜನರ ಸ್ತುತಿಯನ್ನು ಮಾಡುವ ರಾಜಪುರುಷನು ಧಾರಣ ಮಾಡುತ್ತಾನೋ ಆ ನಿನ್ನನ್ನು ನಾವುಗಳು ಸಭಾಪತಿಯ ಅಧಿಕಾರದಲ್ಲಿ ನಿಯತಗೊಳಿಸುತ್ತೇವೆ.

ಭಾವಾರ್ಥ:- ಈ ಸೃಷ್ಟಿಯಲ್ಲಿ ಎಲ್ಲ ಮನುಷ್ಯರೂ, ಎಲ್ಲ ವಿದ್ವಾಂಸರು ಹಾಗೂ ಇತರ ಬುದ್ಧಿವಂತ ಜನರು ಸೇರಿ ಯಾವ ವಿಚಾರಶೀಲನೂ ಸ್ವೀಕರಿಸಲು ಯೋಗ್ಯವಾದ ವಸ್ತುಗಳನ್ನು ಪಡೆಯುವ ಶುಭಗುಣಗಳಿಂದ ಭೂಷಿತನೂ, ವಿದ್ಯೆ ಸುವರ್ಣಾದಿ ಧನಯುಕ್ತನೂ ಆದ ಪುರುಷನನ್ನು ರಾಜ್ಯ ಶಿಕ್ಷಣಕ್ಕಾಗಿ ನಿಯುಕ್ತಗೊಳಿಸಬೇಕು. ಅಂತಹವನೇ ತಂದೆಯಂತೆ ಪಾಲನೆ ಮಾಡಲು ಯೋಗ್ಯನಾದ ರಾಜನಾಗುತ್ತಾನೆ.

ಮತ್ತೆ ಸಭಾಧ್ಯಕ್ಷಾದಿಗಳು, ಅಗ್ನಿ ಮೊದಲಾದ ಪದಾರ್ಥಗಳಿಂದ ಉಪಕಾರವನ್ನು ಹೇಗೆ ಪಡೆದುಕೊಳ್ಳಬೇಕು ಎಂಬುದನ್ನು

ಇಲ್ಲಿ ವಿವರಿಸಲಾಗಿದೆ.

ಯಮಗ್ನಿಂ ಮೇಧ್ಯಾತಿಥಿಃ ಕಣ್ವ ಈಧ ಋತಾದಧಿ ।

ತಸ್ಯ ಪ್ರೇಷೋ ದೀದಿಯುಸ್ತಮಿಮಾ ಋಚ-ಸ್ತಮಗ್ನಿಂ ವರ್ಧಯಾಮಸಿ ॥೧೧॥

ಪದಾರ್ಥ:- **[ಮೇಧ್ಯಾತಿಥಿಃ]** ಪವಿತ್ರಸೇವಕ ಶಿಷ್ಯವರ್ಗಗಳಿಂದ ಯುಕ್ತನಾದ **[ಕಣ್ವಃ]** ವಿದ್ಯಾಸಿದ್ಧನೂ ಕರ್ಮಕಾಂಡದಲ್ಲಿ ಕುಶಲನೂ ಆದ ವಿದ್ವಾಂಸನು **[ಋತಾದಧಿ]** ಮೇಘಮಂಡಲದ ಮೇಲಿನಿಂದ ಸಾಮರ್ಥ್ಯವನ್ನು ಪಡೆಯಲಿಕ್ಕಾಗಿ **[ಯಂ]** ಯಾವ **[ಅಗ್ನಿಂ]** ದಾಹಯುಕ್ತ ಎಲ್ಲ ಪದಾರ್ಥಗಳನ್ನು ಕತ್ತರಿಸಲು ಯೋಗ್ಯನಾದ ಅಗ್ನಿಯನ್ನು **[ಈಧೇ]** ಪ್ರದೀಪ್ತಗೊಳಿಸುತ್ತಾನೋ **[ತಸ್ಯ]** ಆ ಅಗ್ನಿಯ **[ಇಷಃ]** ಘೃತಾದಿ ಪದಾರ್ಥಗಳನ್ನು ಮೇಘಮಂಡಲದಲ್ಲಿ ಪ್ರಾಪ್ತಿಸುವ ಕಿರಣಗಳು **[ಪ್ರ]** ಅತ್ಯಂತ **[ದೀದಿಯುಃ]** ಪ್ರಜ್ವಲಿತಗೊಳಿಸುತ್ತದೆ ಮತ್ತು **[ಇಮಾಃ]** ಈ **[ಋಚಃ]** ವೇದಮಂತ್ರಗಳು ಯಾವ ಅಗ್ನಿಯ ಗುಣಗಳನ್ನು ಪ್ರಕಾಶಗೊಳಿಸುತ್ತದೆಯೋ **[ತಂ]** ಅದೇ **[ಅಗ್ನಿಂ]** ಅಗ್ನಿಯನ್ನು ಸಭಾಧ್ಯಕ್ಷರಾದ ರಾಜ ಪುರುಷರಾದ ನಾವು ಶಿಲ್ಪಕ್ರಿಯಾಸಿದ್ಧಿಗಾಗಿ **[ವರ್ಧಯಾಮಾಸಿ]** ವೃದ್ಧಿಗೊಳಿಸುತ್ತೇವೆ.

ಭಾವಾರ್ಥ:- ಸಭಾಧ್ಯಕ್ಷರಾಗಿ ರಾಜಪುರುಷರಾದವರು ಹೋತೃ ಮೊದಲಾದ ವಿದ್ವಾಂಸರು ವಾಯು ವೃಷ್ಟಿಯ ಪರಿಶುದ್ಧಿಗಾಗಿ ಮಾಡುವ ಹವನಕ್ಕಾಗಿ ಯಾವ ಅಗ್ನಿಯನ್ನು ಪ್ರಜ್ವಲಿತಗೊಳಿಸುತ್ತಾರೋ, ಯಾವುದರ

ಕಿರಣಗಳು ಮೇಲ್ಮುಖವಾಗಿ ಪ್ರಕಾಶಿತಗೊಳ್ಳುತ್ತವೆಯೋ ಮತ್ತು ಯಾವುದರ ಗುಣಗಳನ್ನು ವೇದಮಂತ್ರಗಳು ಸಾರುತ್ತವೆಯೋ ಅದೇ ಅಗ್ನಿಯನ್ನು ರಾಜ್ಯ ಸಾಧಕರು ಕ್ರಿಯಾಸಿದ್ಧಿಗಾಗಿ ವೃದ್ಧಿಗೊಳಿಸಬೇಕು.

ಪುನಃ ರಾಜಪುರುಷರ ಗುಣವರ್ಣನೆ ಇಲ್ಲಿದೆ.

ರಾಯಸ್ಪೂರ್ಧಿ ಸ್ವಧಾವೋಽಸ್ತಿ ಹಿ ತೇ ಽಗ್ನೇ ದೇವೇಷ್ವಾಪ್ಯಮ್ ।
ತ್ವಂ ವಾಜಸ್ಯ ಶ್ರುತ್ಯಸ್ಯ ರಾಜಸಿ ಸ ನೋ ಮೃಳ ಮಹಾँ ಅಸಿ ॥೧೨॥

ಪದಾರ್ಥ:- ಹೇ **[ಸ್ವಧಾವಃ]** ಭೋಗಿಸಲು ಯೋಗ್ಯವಾದ ಅನ್ನಾದಿಪದಾರ್ಥಗಳಿಂದ ಯುಕ್ತನೂ **[ಅಗ್ನೇ]** ಅಗ್ನಿಯಂತೆ ತೇಜಸ್ವಿಯೂ ಆದ ಸಭಾಧ್ಯಕ್ಷನೇ! **[ಹಿ]** ಯಾವ ಕಾರಣದಿಂದ **[ತೇ]** ನಿನ್ನ **[ದೇವೇಷು]** ವಿದ್ವಾಂಸರ ಮಧ್ಯದಲ್ಲಿ **[ಆಪ್ಯಂ]** ಗ್ರಹಿಸಲು ಯೋಗ್ಯವಾದ ಮಿತ್ರತೆಯು **[ಅಸ್ತಿ]** ಇದೆಯೋ ಅದರಿಂದ ನೀನು **[ರಾಯಃ]** ವಿದ್ಯೆ ಸುವರ್ಣ ಮತ್ತು ಚಕ್ರವರ್ತಿರಾಜ್ಯಾದಿ ಧನಗಳನ್ನು **[ಸ್ಪೂರ್ಧಿ]** ಪೂರ್ಣಗೊಳಿಸು. ಯಾವ ನೀನು **[ಮಹಾನ್]** ಮಹತ್ತಾದ ಗುಣಗಳಿಂದ ಕೂಡಿದವನು **[ಅಸಿ]** ಆಗಿರುವೆಯೋ ಮತ್ತು **[ಶ್ರುತ್ಯಸ್ಯ]** ಆಲಿಸಲು ಯೋಗ್ಯವಾದ **[ವಾಜಸ್ಯ]** ಯುದ್ಧದ ನಡುವೆ ಪ್ರಕಾಶಿತನಾಗುತ್ತೀಯೋ **[ಸಃ]** ಆ **[ತ್ವಂ]** ಪುತ್ರನಂತೆ ಪ್ರಜೆಗಳ ರಕ್ಷಣೆ ಮಾಡುವ ನೀನು **[ನಃ]** ನಮಗೆ **[ಮೃಡ]** ಸುಖವನ್ನುಂಟುಮಾಡು.

ಭಾವಾರ್ಥ:- ವೇದಗಳನ್ನು ತಿಳಿದವರಾದ ಉತ್ತಮ ವಿದ್ವಾಂಸರಲ್ಲಿ ಸ್ನೇಹವನ್ನು ಇರಿಸುತ್ತಾ ಸಭಾಧ್ಯಕ್ಷರಾದಿ ರಾಜಪುರುಷರು ಅನ್ನ, ಧನ ಮೊದಲಾದ ಪದಾರ್ಥಗಳ ಭಂಡಾರವನ್ನು ನಿರಂತರವಾಗಿ ತುಂಬಿಸುತ್ತಾ ದುಷ್ಟಚೋರರೊಂದಿಗೆ ನಿರಂತರ ಯುದ್ಧಮಾಡುವುದರಲ್ಲಿ ಸಮರ್ಥರಾಗುತ್ತಾ ಪ್ರಜೆಗಳಾದವರಿಗೆ ಉತ್ತಮೋತ್ತಮ ಸುಖವನ್ನು ನೀಡುವವರಾಗಬೇಕು.

ಪುನಃ ಆ ಸಭಾಧ್ಯಕ್ಷರು ಹೇಗಿರುತ್ತಾರೆ ಎಂಬುದನ್ನು ತಿಳಿಸಲಾಗುತ್ತದೆ.

ಊರ್ಧ್ವ ಊ ಷು ಣ ಊತಯೇ ತಿಷ್ಠಾ ದೇವೋ ನ ಸವಿತಾ ।
ಊರ್ಧ್ವೋ ವಾಜಸ್ಯ ಸನಿತಾ ಯದಂಜಿಭಿ-ರ್ವಾಘದ್ಭಿರ್ವಿಹ್ವಯಾಮಹೇ ॥೧೩॥

ಪದಾರ್ಥ:- ಹೇ ಸಭಾಪತೇ! ನೀನು **[ದೇವಃ]** ಎಲ್ಲರನ್ನೂ ಪ್ರಕಾಶಿತಗೊಳಿಸುವವನೂ **[ಸವಿತಾ]** ಸೂರ್ಯಲೋಕದ **[ನ]** ಸಮಾನವಾಗಿ **[ನಃ]** ನಮ್ಮನ್ನು ರಕ್ಷಿಸಲು **[ಊರ್ಧ್ವಃ]** ಉನ್ನತ ಆಸನದ ಮೇಲೆ **[ಸುತಿಷ್ಠಾ]** ಸುಶೋಭಿತನಾಗು. **[ಉ]** ಮತ್ತು **[ಊರ್ಧ್ವಃ]** ಉನ್ನತಿಯನ್ನು ಹೊಂದುತ್ತಾ **[ವಾಜಸ್ಯ]** ಯುದ್ಧದ **[ಸವಿತಾ]** ಸೇವನೆ ಮಾಡುವವನಾಗು. ಇದರಿಂದ ನಾವು **[ಅಂಜಿಭಿಃ]** ಯಜ್ಞದ ಸಾಧನಗಳನ್ನು ಪ್ರಸಿದ್ಧಗೊಳಿಸುವ ಹಾಗೂ **[ವಾಘದ್ಭಿಃ]** ಎಲ್ಲ ಋತುಗಳಲ್ಲಿ ಯಜ್ಞ ಮಾಡುವ ವಿದ್ವಾಂಸರೊಂದಿಗೆ **[ವಿಹ್ವಯಾಮಹೇ]** ವಿವಿಧ ಪ್ರಕಾರದ ಶಬ್ದಗಳಿಂದ ನಿನ್ನ ಸ್ತುತಿಯನ್ನು ಮಾಡುತ್ತೇವೆ.

ಭಾವಾರ್ಥ:- ಸೂರ್ಯನಂತೆ ಅತಿ ತೇಜಸ್ವಿಯಾದ ಸಭಾಪತಿಯಾದವನು ಸಂಗ್ರಾಮ ಸೇವನದಿಂದ ದುಷ್ಟ ಶತ್ರುಗಳನ್ನು ತೊಲಗಿಸಿ ಎಲ್ಲ ಪ್ರಾಣಿಗಳ ರಕ್ಷಣೆಗಾಗಿ ಪ್ರಸಿದ್ಧ ವಿದ್ವಾಂಸರೊಂದಿಗೆ ಸಭೆಯ ಮಧ್ಯದಲ್ಲಿ ಉನ್ನತ ಆಸನದಲ್ಲಿ ವಿರಾಜಮಾನನಾಗಬೇಕು.

ಮತ್ತೆ ಆ ಸಭಾಪತಿಯು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ಊರ್ಧ್ವೋ ನಃ ಪಾಹ್ಯಂಹಸೋ ನಿ ಕೇತುನಾ ವಿಶ್ವಂ ಸಮತ್ರಿಣಂ ದಹ ।
ಕೃಧೀ ನ ಊರ್ಧ್ವಾಁ‍್ಚರಥಾಯ ಜೀವಸೇ ವಿದಾ ದೇವೇಷು ನೋ ದುವಃ ॥೧೪॥

ಪದಾರ್ಥ:- ಹೇ ಸಭಾಪತಿಯೇ! ನೀನು **[ಕೇತುನಾ]** ಬುದ್ಧಿಯ ದಾನದಿಂದ **[ನಃ]** ನಮ್ಮನ್ನು **[ಅಂಹಸಃ]** ಇತರರ ಪದಾರ್ಥಗಳನ್ನು ಹರಣ ಮಾಡುವ ಪಾಪದಿಂದ **[ನಿ ಪಾಹಿ]** ನಿರಂತರವಾಗಿ ರಕ್ಷಿಸು. **[ವಿಶ್ವಂ]** ಸಮಸ್ತ **[ಅತ್ರಿಣಂ]** ಅನ್ಯಾಯದಿಂದ ಇತರರ ಪದಾರ್ಥಗಳನ್ನು ತಿಂದುಹಾಕುವ ಶತ್ರುಮಾತ್ರರನ್ನು **[ಸಂ ದಹ]** ಚೆನ್ನಾಗಿ ಸುಟ್ಟುಹಾಕು. **[ಊರ್ಧ್ವಃ]** ಎಲ್ಲರಿಗಿಂತ ಉತ್ಕೃಷ್ಟನಾದ ನೀನು **[ಚರಥಾಯ]** ಜ್ಞಾನ ಮತ್ತು ಸುಖದ ಪ್ರಾಪ್ತಿಗಾಗಿ **[ನಃ]** ನಮ್ಮನ್ನು **[ಊರ್ಧ್ವಾನ್]** ದೊಡ್ಡ ದೊಡ್ಡ ಗುಣಕರ್ಮ ಮತ್ತು ಸ್ವಭಾವವುಳ್ಳವರನ್ನಾಗಿ **[ಕೃಧಿ]** ಮಾಡು. ಹಾಗೂ **[ನಃ]** ನಮ್ಮನ್ನು **[ದೇವೇಷು]** ಧಾರ್ಮಿಕ ವಿದ್ವಾಂಸರಲ್ಲಿ **[ಜೀವಸೇ]** ಸಂಪೂರ್ಣ ಆಯುಷ್ಯದವರೆಗೆ **[ದುವಃ]** ಸೇವೆಯನ್ನು **[ವಿದಾ]** ಪ್ರಾಪ್ತಿಗೊಳಿಸು.

ಭಾವಾರ್ಥ:- ಉತ್ತಮ ಗುಣಕರ್ಮ ಸ್ವಭಾವಗಳನ್ನುಳ್ಳ ಸಭಾಧ್ಯಕ್ಷನಾದ ರಾಜನು ರಾಜ್ಯದ ರಕ್ಷಾನೀತಿ ಹಾಗೂ ದಂಡದ ಭಯದಿಂದ ಪ್ರಜೆಗಳೆಲ್ಲರನ್ನು ಪಾಪದಿಂದ ದೂರವಿರಿಸಿ ಎಲ್ಲ ಶತ್ರುಗಳನ್ನು ನಿರ್ಮೂಲ ಮಾಡಿ ವಿದ್ವಾಂಸರಿಗೆ ಎಲ್ಲ ರೀತಿಯ ಸೇವೆ ಮಾಡಿ ಪ್ರಜೆಗಳಲ್ಲಿ ಜ್ಞಾನ, ಸುಖ ಮತ್ತು ದೀರ್ಘಾಯುಷ್ಯವನ್ನು ಪಡೆಯಲು ಎಲ್ಲ ಪ್ರಾಣಿಗಳನ್ನೂ ಶುಭಗುಣಯುಕ್ತರನ್ನಾಗಿ ಮಾಡಬೇಕು.

ಪುನಃ ಆ ಸಭಾಧ್ಯಕ್ಷನಾದ ರಾಜನಿಂದ ಪ್ರಜೆ ಮತ್ತು ಸೈನಿಕರು ಏನೇನು ಪ್ರಾರ್ಥನೆ ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಪಾಹಿ ನೋ ಅಗ್ನೇ ರಕ್ಷಸಃ ಪಾಹಿ ಧೂರ್ತೇರರಾವ್ಣಃ ।
ಪಾಹಿ ರೀಷತ ಉತ ವಾ ಜಿಘಾಂಸತೋ ಬೃಹದ್ಭಾನೋ ಯವಿಷ್ಠ್ಯ ॥೧೫॥

ಪದಾರ್ಥ:- ಹೇ **[ಬೃಹದ್ಭಾನೋ]** ಬೃಹತ್ತಾದ ವಿದ್ಯಾದಿ ಐಶ್ವರ್ಯದ ತೇಜಸ್ಸಿನಿಂದ ಕೂಡಿದ, **[ಯವಿಷ್ಠ್ಯ]** ಅತ್ಯಂತ ತರುಣಾವಸ್ಥೆಯಿಂದ ಕೂಡಿದ **[ಅಗ್ನೇ]** ಎಲ್ಲರಿಗಿಂತ ಮುಖ್ಯನೂ ಎಲ್ಲರ ರಕ್ಷಣೆಯನ್ನು ಮಾಡುವವನೂ ಮುಖ್ಯ ಸಭಾಧ್ಯಕ್ಷನೂ ಆದ ಮಹಾರಾಜನೇ! ನೀನು **[ಧೂರ್ತೇಃ]** ಕಪಟಿಗಳೂ, ಅಧರ್ಮಿಗಳೂ ಆದ **[ಅರಾವ್ಣಃ]** ದಾನ ಧರ್ಮ ರಹಿತ ಕೃಪಣರು **[ರಕ್ಷಸಃ]** ಮಹಾಹಿಂಸಕ ದುಷ್ಟ ಮನುಷ್ಯರಿಂದ **[ನಃ]** ನಮ್ಮನ್ನು **[ಪಾಹಿ]** ರಕ್ಷಿಸು. **[ರಿಷತಃ]** ಎಲ್ಲರಿಗೂ ದುಃಖವನ್ನು ನೀಡುವ ಸಿಂಹ ಮೊದಲಾದ ದುಷ್ಟ ಜೀವಿಗಳು ಹಾಗೂ ದುಷ್ಟಾಚಾರಿಗಳಾದ ಮನುಷ್ಯರಿಂದ ನಮ್ಮನ್ನು ದೂರವಿರಿಸು. **[ಉತ]** ಮತ್ತು **[ವ]** ಹಾಗೆಯೇ **[ಜಿಘಾಂಸತಃ]** ಕೊಲ್ಲಲಿಚ್ಛಿಸುವ ಶತ್ರುವಿನಿಂದಲೂ ನಮ್ಮನ್ನು ರಕ್ಷಿಸು.

ಭಾವಾರ್ಥ:- ಎಲ್ಲ ಮನುಷ್ಯರಿಗೂ ಯೋಗ್ಯವಾದುದೇನೆಂದರೆ, ಎಲ್ಲ ಪ್ರಕಾರದ ರಕ್ಷಣೆಗಾಗಿ ಸರ್ವರಕ್ಷಕನೂ ಧರ್ಮೋನ್ನತಿಯ ಇಚ್ಛೆಯನ್ನು ಮಾಡುವವನೂ ಆದ ಸಭಾಧ್ಯಕ್ಷನನ್ನು ಪ್ರಾರ್ಥಿಸಬೇಕು ಮತ್ತು ತಾವೂ ಸಹ ದುಷ್ಟ ಸ್ವಭಾವವುಳ್ಳ ಮನುಷ್ಯಾದಿ ಪ್ರಾಣಿಗಳ ಹಾಗೂ ಎಲ್ಲ ಪಾಪಗಳಿಂದ ಮನ, ವಚನ, ಶರೀರಗಳಿಂದ ದೂರವಿರಬೇಕು. ಏಕೆಂದರೆ ಈ ರೀತಿ ಇಲ್ಲದೆ ಮನುಷ್ಯನು ಸರ್ವದಾ ಸುಖಿಯಾಗಲಾರ.

ಪುನಃ ಅದೇ ಸಭಾಧ್ಯಕ್ಷನ ವರ್ಣನೆ ಇಲ್ಲಿದೆ.

ಘನೇವ ವಿಷ್ವಗ್ವಿ ಜಹ್ಯರಾವ್ಣ-ಸ್ತಪುರ್ಜಂಭ ಯೋ ಅಸ್ಮಧ್ರುಕ್ ।
ಯೋ ಮರ್ತ್ಯಃ ಶಿಶೀತೇ ಅತ್ಯಕ್ತುಭಿ-ರ್ಮಾ ನಃ ಸ ರಿಪುರೀಶತ ॥೧೬॥

ಪದಾರ್ಥ:- ಹೇ **[ತಪುರ್ಜಂಭ]** ಶತ್ರುಗಳನ್ನು ತಲ್ಲಣಗೊಳಿಸುವ ಮತ್ತು ನಾಶಗೊಳಿಸುವ ಶಸ್ತ್ರಯುಕ್ತನಾದ ಸೇನಾಪತಿಯೇ! **[ವಿಷ್ವಕ್]** ಸರ್ವಥಾ ಸೇನಾದಿ ಬಲಗಳಿಂದ ಯುಕ್ತನಾಗಿ ನೀನು **[ಅರಾವ್ಣಃ]** ಸುಖ-ದಾನರಹಿತ ಶತ್ರುಗಳನ್ನು **[ಘನೇವ]** ಘನವಾದ ಲೋಹ ಪಾಶಾಣಾದಿಗಳಿಗೆ ಸಮಾನವಾದ **[ವಿಜಹಿ]** ವಿಶೇಷ ರೀತಿಯಲ್ಲಿ ಜಯಿಸಲ್ಪಟ್ಟ **[ಯಃ]** ಯಾವ **[ಮರ್ತ್ಯಃ]** ಮನುಷ್ಯನು **[ಅಕ್ತುಭಿಃ]** ರಾತ್ರಿಯಲ್ಲಿ **[ಅಸ್ಮಧ್ರುಕ್]** ನಮ್ಮ ದ್ರೋಹಿಗಳಾದ **[ಅತಿ ಶಿಶೀತೇ]** ಅತಿಯಾದ ಹಿಂಸೆಯನ್ನು ಮಾಡುವ **[ಸಃ]** ಯಾವ **[ರಿಪುಃ]** ವೈರಿಗಳಿದ್ದಾರೋ ಅವರು **[ನಃ]** ನಮ್ಮನ್ನು ಪೀಡಿಸುವುದರಲ್ಲಿ **[ಮಾ ಈಶತ]** ಸಮರ್ಥರಾಗದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಸೇನಾಧ್ಯಕ್ಷಾದಿಗಳು ಯಾವ ರೀತಿ ಘನವಾದ ಲೋಹಗಳಿಂದ ಕಬ್ಬಿಣ, ಪಾಶಾಣಾದಿಗಳನ್ನು ಒಡೆಯುತ್ತಾರೋ ಅದೇರೀತಿ ಅಧರ್ಮೀ ದುಷ್ಟ ಶತ್ರುಗಳ ಅಂಗಗಳನ್ನು ಛಿನ್ನಭಿನ್ನಗೊಳಿಸಿ ಹಗಲಿರುಳು ಧರ್ಮಾತ್ಮರಾದ ಪ್ರಜೆಗಳ ಪಾಲನೆಯಲ್ಲಿ ತತ್ಪರರಾಗಿರಬೇಕು. ಇದರಿಂದ ಶತ್ರು ಜನಗಳು ಪ್ರಜೆಗಳಿಗೆ ದುಃಖವನ್ನು ನೀಡುವುದರಲ್ಲಿ ಸಮರ್ಥರಾಗಲಾರರು.

ಪುನಃ ಈ ಸಭಾಧ್ಯಾಕ್ಷಾದಿ ರಾಜರುಗಳ ಗುಣಗಳನ್ನು ಅಗ್ನಿಯ ದೃಷ್ಟಾಂತದಿಂದ ತಿಳಿಸಲಾಗಿದೆ.

ಅಗ್ನಿರ್ವವ್ನೇ ಸುವೀರ್ಯ-ಮಗ್ನಿಃ ಕಣ್ವಾಯ ಸೌಭಗಮ್ ।
ಅಗ್ನಿಃ ಪ್ರಾವನ್ ಮಿತ್ರೋತ ಮೇಧ್ಯಾತಿಥಿ-ಮಗ್ನಿಃ ಸಾತಾ ಉಪಸ್ತುತಮ್ ॥೧೭॥

ಪದಾರ್ಥ:- ಯಾವ ವಿದ್ವಾಂಸರು **[ಅಗ್ನಿಃ]** ಭೌತಿಕ ಅಗ್ನಿಯ ಸಮಾನವಾಗಿ **[ಸಾತೌ]** ಯುದ್ಧದಲ್ಲಿ **[ಉಪಸ್ತುತಮ್]** ಸ್ತುತಿಗೆ ಯೋಗ್ಯವಾದ **[ಸುವೀರ್ಯಂ]** ಉತ್ತಮ ಪ್ರಕಾರದ ಶರೀರ ಮತ್ತು ಆತ್ಮಗಳ ಬಲ-ಪರಾಕ್ರಮಗಳನ್ನು **[ಅಗ್ನಿಃ]** ವಿದ್ಯುತ್ತಿನಂತೆ **[ಕಣ್ವಾಯ]** ಅದೇ ಬುದ್ಧಿವಂತನಿಗಾಗಿ **[ಸೌಭಗಮ್]** ಉತ್ತಮ ಐಶ್ವರ್ಯವನ್ನು **[ವವ್ನೇ]** ಯಾರೋ ಯಾಚಿತಗೊಳಿಸಿದ್ದಾರೆ. **[ಅಗ್ನಿಃ]** ಪಾವಕನಂತೆ **[ಮಿತ್ರಾ]** ಮಿತ್ರರನ್ನು **[ಆವತ್]** ಪಾಲನೆ ಮಾಡುವ **[ಉತ]** ಮತ್ತು **[ಅಗ್ನಿಃ]** ಜಾಠರಗ್ನಿಯಂತೆ **[ಉಪಸ್ತುತಮ್]** ಶುಭಗುಣಗಳಿಂದ ಸ್ತುತಿಸಲು ಯೋಗ್ಯನಾದ **[ಮೇಧ್ಯಾತಿಥಿಂ]** ಕುಶಲಕರ್ಮಿಯಾದ ವಿದ್ವಾಂಸನನ್ನು ಸೇವಿಸಲಿ. ಅದೇ ಪುರುಷನು ರಾಜನಾಗಲು ಯೋಗ್ಯನಾಗುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಈ ಭೌತಿಕ ಅಗ್ನಿಯು ವಿದ್ವಾಂಸರಿಂದ ಗ್ರಹಿಸಲ್ಪಟ್ಟ ಬಲ, ಪರಾಕ್ರಮ ಮತ್ತು ಸೌಭಾಗ್ಯಗಳನ್ನು ನೀಡಿ ಶಿಲ್ಪವಿದ್ಯೆಯಲ್ಲಿ ಪ್ರವೀಣರೂ ಮತ್ತು ತನ್ನ ಮಿತ್ರರನ್ನು ಸದಾ ರಕ್ಷಿಸುವವರೂ ಆಗಿರುತ್ತಾರೋ, ಅದೇ ರೀತಿ ಪ್ರಜೆ ಮತ್ತು ಸೇನೆಯ ಭದ್ರಪುರುಷರಿಂದ ಪ್ರಾರ್ಥನೆಗೈಯಲ್ಪಟ್ಟ ಈ ಸಭಾಧ್ಯಕ್ಷ ರಾಜನು ಅವರಿಗಾಗಿ ಬಲ ಪರಾಕ್ರಮ, ಉತ್ಸಾಹ ಮತ್ತು ಐಶ್ವರ್ಯಗಳ ಸಾಮರ್ಥ್ಯವನ್ನು ದಯಪಾಲಿಸಿ ಯುದ್ಧವಿದ್ಯೆಯಲ್ಲಿ ಪ್ರವೀಣರೂ, ಅವರ ಮಿತ್ರರನ್ನು ಎಲ್ಲ ಪ್ರಕಾರದಿಂದ ಪಾಲಿಸುವವರೂ ಆಗಲಿ.

ಎಲ್ಲ ಮನುಷ್ಯರೂ ಸಭಾಧ್ಯಕ್ಷನನ್ನು ಸೇರಿ ದುಷ್ಟನನ್ನು ಹೇಗೆ ನಾಶಮಾಡಬೇಕು ಎಂಬ ವಿಷಯವನ್ನು ತಿಳಿಸಲಾಗುತ್ತದೆ.

ಅಗ್ನಿನಾ ತುರ್ವಶಂ ಯದುಂ ಪರಾವತ ಉಗ್ರಾದೇವಂ ಹವಾಮಹೇ ।
ಅಗ್ನಿರ್ನಯನ್ನವವಾಸ್ತ್ವಂ ಬೃಹದ್ರಥಂ ತುರ್ವೀತಿಂ ದಸ್ಯವೇ ಸಹಃ ॥೧೮॥

ಪದಾರ್ಥ:- ನಾವುಗಳು ಯಾವ **[ಅಗ್ನಿನಾ]** ಅಗ್ನಿಯಂತೆ ತೇಜಸ್ವಿಯಾದ ಸಭಾಧ್ಯಕ್ಷ ರಾಜನೊಂದಿಗೆ ಸೇರಿ **[ಉಗ್ರಾದೇವಂ]** ಉಗ್ರಸ್ವಭಾವವುಳ್ಳವರನ್ನು ಜಯಿಸುವ ಇಚ್ಛೆಯನ್ನು ಹೊಂದಿ **[ತುರ್ವಶಂ]** ಶೀಘ್ರವೇ ಇತರರ

ಪದಾರ್ಥಗಳನ್ನು ಗ್ರಹಿಸುವವರಾದ **[ಯದುಂ]** ಇತರರ ಧನವನ್ನು ಅಪಹರಿಸುವ ಯತ್ನ ಮಾಡುತ್ತಿರುವ ದರೋಡೆಕಾರನನ್ನು **[ಪರಾವತಃ]** ಬೇರೆ ದೇಶದಿಂದ **[ಹವಾಮಹೇ]** ಯುದ್ಧಕ್ಕಾಗಿ ಕರೆಯಿಸಲಿ. ಅವನು **[ದಸ್ಯವೇ]** ತನ್ನ ವಿಶೇಷ ಬಲದಿಂದ ಇತರರ ಪದಾರ್ಥಗಳನ್ನು ಅಪಹರಿಸುವ ದುಷ್ಟಜನರ **[ಸಹಃ]** ತಿರಸ್ಕಾರ ಮಾಡಲು ಯೋಗ್ಯವಾದ ಬಲವನ್ನು **[ಅಗ್ನಿಃ]** ಎಲ್ಲ ಮುಖ್ಯ ರಾಜರು **[ನವವಾಸ್ತ್ವಂ]** ಏಕಾಂತದಲ್ಲಿ ನವೀನಗೃಹವನ್ನು ನಿರ್ಮಿಸುವ **[ಬೃಹದ್ರಥಂ]** ದೊಡ್ಡ ದೊಡ್ಡ ಭ್ರಮಣಮಾಡಲು ಸಾಧ್ಯವಾದ ರಥಗಳುಳ್ಳ **[ತುರ್ವೀತಿಂ]** ಹಿಂಸಕ ದುಷ್ಟಕಾಪುರುಷರನ್ನು **[ನಯತ್]** ಬಂಧನದಲ್ಲಿರಿಸಲಿ.

ಭಾವಾರ್ಥ:- ಸಮಸ್ತ ಧಾರ್ಮಿಕ ಪುರುಷರಿಗೆ ಯೋಗ್ಯವಾದುದೇನೆಂದರೆ, ತೇಜಸ್ವಿಯಾದ ಸಭಾಧ್ಯಕ್ಷ ರಾಜನೊಂದಿಗೆ ಸೇರಿ ವೇಗದಿಂದ ಅನ್ಯರ ಪದಾರ್ಥಗಳನ್ನು ಅಪಹರಿಸುವ ಖೋಟಾ ಸ್ವಭಾವವುಳ್ಳ ಮತ್ತು ತನ್ನ ವಿಜಯವನ್ನು ಬಯಸುವಂತಹ ದುಷ್ಟಚೋರರನ್ನು ಕರೆದು ಅವರನ್ನು ಪರ್ವತಾದಿ ಏಕಾಂತ ಸ್ಥಾನಗಳಲ್ಲಿ ನಿರ್ಮಿಸಲಾಗಿರುವ ಮನೆಗಳಲ್ಲಿ ಹೆಡೆಮುರಿಕಟ್ಟಿ ಕೊಂಡೊಯ್ದು ಅವರನ್ನು ಸೆರೆಯಲ್ಲಿರಿಸಬೇಕು.

ಪುನಃ ರಾಜಪುರುಷರ ಸಹಾಯಕನಾದ ಜಗದೀಶ್ವರನು ಹೇಗಿದ್ದಾನೆ ಎಂಬ ವಿಷಯವನ್ನು ಇಲ್ಲಿ ತಿಳಿಸಲಾಗುತ್ತದೆ.

ನಿ ತ್ವಾಮಗ್ನೇ ಮನುರ್ದಧೇ ಜ್ಯೋತಿರ್ಜನಾಯ ಶಶ್ವತೇ ।
ದೀದೇಥ ಕಣ್ವ ಋತಜಾತ ಉಕ್ಷಿತೋ ಯಂ ನಮಸ್ಯಂತಿ ಕೃಷ್ಟಯಃ ॥೧೯॥

ಪದಾರ್ಥ:- ಹೇ **[ಅಗ್ನೇ]** ಪರಮಾತ್ಮನ್! **[ಯಂ]** ಯಾವ **[ತ್ವಾಂ]** ನಿನ್ನನ್ನು **[ಶಶ್ವತೇ]** ಅನಾದಿ ಸ್ವರೂಪವಾದ **[ಜನಾಯ]** ಜೀವಿಗಳ ರಕ್ಷಣೆಗಾಗಿ **[ಕೃಷ್ಟಯಃ]** ಸಮಸ್ತ ವಿದ್ವಾನ್ ಮನುಷ್ಯರು **[ನಮಸ್ಯಂತಿ]** ಪೂಜಿಸುತ್ತಾರೋ ಮತ್ತು ಹೇ ವಿದ್ವಾಂಸನೇ! ಯಾವ ಜನರನ್ನು ನೀನು **[ದೀದೇಥ]** ಪ್ರಕಾಶಿತಗೊಳಿಸುತ್ತೀಯೋ ಆ **[ಜ್ಯೋತಿಃ]** ಜ್ಞಾನದ ಪ್ರಕಾಶವನ್ನು ಮಾಡುವ ಪರಬ್ರಹ್ಮನನ್ನು **[ಋತಜಾತಃ]** ಸತ್ಯಾಚರಣೆಯಿಂದ ಪ್ರಸಿದ್ಧವಾದ **[ಉಕ್ಷಿತಃ]** ಆನಂದಿತನಾದ **[ಮನುಃ]** ವಿಜ್ಞಾನಯುಕ್ತ ನಾನು **[ಕಣ್ವೇ]** ಬುದ್ಧಿವಂತನಾದ ಮನುಷ್ಯನಲ್ಲಿ **[ನಿದಧೇ]** ಸ್ಥಾಪಿತಗೊಳಿಸುತ್ತೇನೆ. ಅಂತಹ ದೇವದೇವನನ್ನು ಎಲ್ಲ ಮನುಷ್ಯರೂ ಉಪಾಸಿಸಲಿ.

ಭಾವಾರ್ಥ:- ಎಲ್ಲರಿಂದಲೂ **ಪೂಜಿಸಲ್ಪಡಲು** ಯೋಗ್ಯನಾದ ಪರಮಾತ್ಮನ ಕೃಪಾಕಟಾಕ್ಷದಿಂದ ಪ್ರಜೆಗಳ ರಕ್ಷಣೆಗಾಗಿ ರಾಜ್ಯದ ಅಧಿಕಾರಿಗಳಾದ ಎಲ್ಲರೂ ಸತ್ಯವ್ಯವಹಾರಗಳಿಂದ ಪ್ರಸಿದ್ಧರಾಗಿ ಧರ್ಮಾತ್ಮರನ್ನು ಆನಂದಿತರನ್ನಾಗಿಯೂ ದುಷ್ಟರನ್ನು ಶಿಕ್ಷಿಸುವವನಾಗಿಯೂ ಆಗಲಿ.

ಈಗ ಸಭಾಪತಿಯ ಕುರಿತಾಗಿ ಏನೇನು ಉಪದೇಶ ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ತ್ವೇಷಾಸೋ ಅಗ್ನೇರಮವಂತೋ ಅರ್ಚಯೋ ಭೀಮಾಸೋ ನ ಪ್ರತೀತಯೇ ।
ರಕ್ಷಸ್ವಿನಃ ಸದಮಿದ್ ಯಾತುಮಾವತೋ ವಿಶ್ವಂ ಸಮತ್ರಿಣಂ ದಹ ॥೨೦॥

ಪದಾರ್ಥ:- ಹೇ ತೇಜಸ್ವೀ ಸಭಾಪತಿಯೇ! ನೀನು **[ಅಗ್ನೇಃ]** ಸೂರ್ಯ, ವಿದ್ಯುತ್ ಮತ್ತು ಪ್ರಸಿದ್ಧರೂಪದ ಅಗ್ನಿಯ **[ತ್ವೇಷಾಸಃ]** ಪ್ರಕಾಶ ಸ್ವರೂಪನಾದ **[ಭೀಮಾಸಃ]** ಭಯಕಾರಕನಾದ **[ಅರ್ಚಯಃ]** ಜ್ವಾಲೆಯ **[ನ]** ಸಮಾನವಾಗಿ **[ಅಮವಂತಃ]** ನಿಂದಿತವಾದ ರೋಗವನ್ನುಂಟುಮಾಡುವ **[ರಕ್ಷಸ್ವಿನಃ]** ರಾಕ್ಷಸ ಅರ್ಥಾತ್ ನಿಂದಿತ ಪುರುಷರಿದ್ದಾರೋ ಅವರು ಮತ್ತು **[ಅತ್ರಿಣಂ]** ಬಲಾತ್ಕಾರವಾಗಿ ಇತರರ ಸ್ವತ್ತುಗಳನ್ನು, ಶತ್ರುವನ್ನು **[ಇತ್]** ನಿಶ್ಚಯವಾಗಿ **[ಸಂ ದಹ]** ಚೆನ್ನಾಗಿ ಭಸ್ಮ ಮಾಡು. ಮತ್ತು **[ಪ್ರತೀತಯೇ]** ವಿಜ್ಞಾನ ಅಥವಾ ಉತ್ತಮ ಸುಖದ

ಪ್ರತೀತಿ ಉಂಟಾಗಲು **[ವಿಶ್ವಂ]** ಎಲ್ಲಾ **[ಸದಂ]** ಜಗತ್ತನ್ನು ಹಾಗೂ **[ಯಾತುಮಾವತಃ]** ನನ್ನ ಎದುರಿನಲ್ಲಿ ಇರುವವನ ರಕ್ಷಣೆಯನ್ನು ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಸಾಯಣಾಚಾರ್ಯರು ಯಾತು ಪೂರ್ವಪದ ಹಾಗೂ ಮಾವಾನ್ ಉತ್ತರ ಪದ ಎಂದು ತಿಳಿಯದೆ ಈ ಪೂರ್ವಪದದಿಂದ ಮತುಪ್ ಪ್ರತ್ಯಯವನ್ನು ಸ್ವೀಕರಿಸಿದ್ದಾರೆ. ಇದು ಪದಪಾಠಕ್ಕೆ ವಿರುದ್ಧವಾಗಿರುವುದರಿಂದ ಅಶುದ್ಧವಾಗಿದೆ. ಸಭಾಧ್ಯಕ್ಷ ಮೊದಲಾದ ರಾಜಪುರುಷರು ಹಾಗೂ ಪ್ರಜೆಗಳಿಗೆ ಯೋಗ್ಯವಾದುದೇನೆಂದರೆ ಯಾವ ರೀತಿ ಅಗ್ನಿಯು ಪದಾರ್ಥಗಳನ್ನು ವನಗಳನ್ನು ಭಸ್ಮಗೊಳಿಸುತ್ತದೆಯೋ ಅದೇ ರೀತಿ ದುಃಖವನ್ನು ನೀಡುವ ಶತ್ರುಗಳ ವಿನಾಶಕ್ಕಾಗಿ ಸರ್ವರೀತಿಯ ಪ್ರಯತ್ನವನ್ನು ಮಾಡಲಿ.

ಈ ಸೂಕ್ತದಲ್ಲಿ ಸರ್ವರಕ್ಷಕನಾದ ಪರಮಾತ್ಮ ಹಾಗೂ ದೂತರ ದೃಷ್ಟಾಂತದಿಂದ ಭೌತಿಕ ಅಗ್ನಿಯ ಗುಣಗಳ ವರ್ಣನೆ, ದೂತರ ಗುಣಗಳ ಉಪದೇಶ, ಅಗ್ನಿಯ ದೃಷ್ಟಾಂತದಿಂದ ರಾಜಪುರುಷರ ಗುಣವರ್ಣನೆ, ಸಭಾಪತಿಯ ಕೃತ್ಯ, ಸಭಾಪತಿಯಾಗಲು ಅಧಿಕಾರಿಯಾದವನ ವಿವರ, ಅಗ್ನಿ ಮೊದಲಾದ ಪದಾರ್ಥಗಳಿಂದ ಪ್ರಯೋಜನವನ್ನು ಪಡೆಯುವ ರೀತಿ, ಮನುಷ್ಯರು ಸಭಾಪತಿಯಿಂದ ಮಾಡಬೇಕಾದ ಪ್ರಾರ್ಥನೆ, ಎಲ್ಲ ಮನುಷ್ಯರನ್ನು ಸಭಾಧ್ಯಕ್ಷನೊಂದಿಗೆ ಸೇರಿಸಿ ದುಷ್ಟರನ್ನು ನಾಶಮಾಡುವ ಮತ್ತು ರಾಜಪುರುಷರ ಸಹಾಯಕನಾದ ಜಗದೀಶ್ವರನ ಉಪದೇಶದಿಂದ ಈ ಸೂಕ್ತದ ಅರ್ಥವು ಪೂರ್ವಸೂಕ್ತದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ಮೂವತ್ತಾರನೆಯ ಸೂಕ್ತ ಸಮಾಪ್ತ

ಸೂಕ್ತ ೩೭

ಮಂತ್ರಸಂಖ್ಯೆ ೧೫ । ಋಷಿಃ - ಕಣ್ವೋ ಘೌರಃ । ದೇವತಾ - ಮರುತಃ । ಛಂದಃ - ೧, ೪, ೬, ೮, ೧೨ ಗಾಯತ್ರೀ, ೩, ೯, ೧೧, ೧೪ ನಿಚೃದ್ ಗಾಯತ್ರೀ, ೫ ವಿರಾಡ್ ಗಾಯತ್ರೀ, ೧೦, ೧೫ ಪಿಪೀಲಿಕಾ ಮಧ್ಯಾ ನಿಚೃದ್ ಗಾಯತ್ರೀ, ೧೩ ಪಾದನಿಚೃದ್ ಗಾಯತ್ರೀ । ಸ್ವರಃ-ಷಡ್ಜಃ ।

ಈ ಸೂಕ್ತದಲ್ಲಿ ಮೋಕ್ಷಮೂಲರ ಮೊದಲಾದವರಿಂದ ಮಾಡಲ್ಪಟ್ಟ ವ್ಯಾಖ್ಯಾನವು ಅಸಂಗತವಾದುದು, ಅದರಲ್ಲಿ ಒಂದೊಂದು ಮಂತ್ರದಲ್ಲೂ ಆ ಅಸಂಗತಿಗಳನ್ನು ತಿಳಿಸುವ ಯತ್ನ ಮಾಡಲಾಗಿದೆ. ಈ ಸೂಕ್ತದ ಪ್ರಥಮ ಮಂತ್ರದಲ್ಲಿ ವಿದ್ವಾಂಸರು ವಾಯುವಿನ ಗುಣಗಳಿಂದ ಯಾವ ಯಾವ ಉಪಕಾರ ಸ್ವೀಕರಿಸಬೇಕಾಗಿದೆ ಎಂಬುದನ್ನು ತಿಳಿಸಲಾಗಿದೆ.

ಕ್ರೀಳಂ ವಃ ಶರ್ಧೋ ಮಾರುತ-ಮನರ್ವಾಣಂ ರಥೇಶುಭಮ್ ।
ಕಣ್ವಾ ಅಭಿ ಪ್ರ ಗಾಯತ ॥೧॥

ಪದಾರ್ಥ:- ಹೇ **[ಕಣ್ವಾಃ]** ಮೇಧಾವಿ ವಿದ್ವಜ್ಜನರೇ! ನೀವು ಯಾವ **[ವಃ]** ನಿಮ್ಮ **[ಅನರ್ವಾಣಂ]** ಕುದುರೆಗಳ ಜೋಡಿಯಿಂದ ರಹಿತವಾದ **[ರಥೇ]** ವಿಮಾನಾದಿ ಯಾನಗಳಲ್ಲಿ **[ಕ್ರೀಡಂ]** ಕ್ರೀಡೆಗಾಗಿ **[ಶುಭಂ]** ಶೋಭನೀಯವಾದ **[ಮಾರುತಂ]** ಪವನಗಳ ಸಮೂಹರೂಪದ **[ಶರ್ಧಃ]** ಬಲವಿದೆಯೋ ಅದನ್ನು **[ಅಭಿಪ್ರಗಾಯತ]** ಉತ್ತಮ ರೀತಿಯಿಂದ ಆಲಿಸಿರಿ ಮತ್ತು ಉಪದೇಶಿಸಿರಿ.

ಭಾವಾರ್ಥ:- ಸಾಯಣಾಚಾರ್ಯರು ಮಾರುತಂ ಎಂಬ ಪದವನ್ನು ಪವನಗಳ ಸಂಬಂಧಿ ತಸ್ಯೇಧಿ ಎಂಬ ಸೂತ್ರದಿಂದ ಅಣ್ ಪ್ರತ್ಯಯ ಮತ್ತು ವ್ಯತ್ಯಯದಿಂದ ಆದ್ಯುದಾತ್ತ ಸ್ವರದಲ್ಲಿ ಅಶುದ್ಧ ವ್ಯಾಖ್ಯಾನವನ್ನು ಮಾಡಿದ್ದಾರೆ. ಬುದ್ಧಿವಂತರಾದ ಪುರುಷರಿಗೆ ಯೋಗ್ಯವಾದುದೇನೆಂದರೆ ಯಾವ ಪವನವು ಪ್ರಾಣಿಗಳ ಚೇಷ್ಟೆ, ವೇಗ, ಯಾನ ಮಂಗಳ ಮೊದಲಾದ ವ್ಯವಹಾರಗಳನ್ನು ಸಿದ್ಧಗೊಳಿಸುತ್ತದೆಯೋ ಅದರಿಂದ ಈ ಗುಣಗಳ ಪರೀಕ್ಷೆಯನ್ನು ಮಾಡಿ ಈ ಪವನಗಳಿಂದ ಯಥಾಯೋಗ್ಯ ಉಪಕಾರವನ್ನು ಗ್ರಹಿಸಬೇಕು.

ಮೋಕ್ಷಮೂಲರರು ಅರ್ವ ಶಬ್ದದಿಂದ ಆಶ್ವವನ್ನು ಗ್ರಹಿಸುವುದನ್ನು ನಿಷೇಧ ಮಾಡಿದ್ದಾರೆ. ಮತ್ತು ಅದು ಭ್ರಮಮೂಲವಾದುದರಿಂದ ಅಶುದ್ಧವೇ ಸರಿ. ಈ ಮಂತ್ರದಲ್ಲಿ ಅಶ್ವರಹಿತ ವಿಮಾನಾದಿ ರಥಗಳ ವಿವಕ್ಷೆ ಉಂಟಾಗುವುದರಿಂದ ಆ ಯಾನಗಳಲ್ಲಿ ಕಲಾಯಂತ್ರಗಳಿಂದ ನಡೆಸಲ್ಪಡುವ ಪವನ ಮತ್ತು ಅಗ್ನಿಯ ಪ್ರಕಾಶ ಮತ್ತು ಜಲದ ಬಾಷ್ಪದ ವೇಗದಿಂದ ಯಾನಗಳ ಸಂಚಾರ ಸಂಭವ. ಆದುದರಿಂದಲೇ ಇಲ್ಲಿ ಪಶುರೂಪೀ ಅಶ್ವವನ್ನು ಗ್ರಹಿಸಲಾಗಿಲ್ಲ.

ಪುನಃ ಆ ವಿದ್ವಾಂಸರು ಹೇಗಿರಬೇಕು ಎಂಬುದನ್ನು ಹೇಳಲಾಗಿದೆ.

ಯೇ ಪೃಷತೀಭಿರ್‌ಋಷ್ಟಿಭಿಃ ಸಾಕಂ ವಾಶೀಭಿರಂಜಿಭಿಃ । ಅಜಾಯಂತ ಸ್ವಭಾನವಃ ॥೨॥

ಪದಾರ್ಥ:- **[ಯೇ]** ಯಾವ **[ಪೃಷತೀಭಿಃ]** ಪದಾರ್ಥಗಳನ್ನು ಸೆಳೆಯುವ **[ಋಷ್ಟಿಭಿಃ]** ವ್ಯವಹಾರಗಳನ್ನು ಪ್ರಾಪ್ತಿಸಿ **[ಅಂಜಿಭಿಃ]** ಪದಾರ್ಥಗಳನ್ನು ಪ್ರಕಟಗೊಳಿಸುವ **[ವಾಶೀಭಿಃ]** ವಾಣಿಗಳ **[ಸಾಕಂ]** ಜೊತೆಯಲ್ಲಿ ಕ್ರಿಯೆಗಳನ್ನು ಮಾಡಲು ಚಾತುರ್ಯದಿಂದ ಪ್ರಯತ್ನ ಮಾಡುತ್ತಾರೋ ಅವರು **[ಸ್ವಭಾನವಃ]** ತಮ್ಮ ಐಶ್ವರ್ಯದ ಪ್ರಕಾಶದಿಂದ ಪ್ರಕಾಶಿತರು **[ಅಜಾಯಂತ]** ಆಗುತ್ತಾರೆ.

ಭಾವಾರ್ಥ:- ಹೇ ವಿದ್ವಾಂಸರೇ! ನಿಮಗೆ ಯೋಗ್ಯವಾದುದೇನೆಂದರೆ ಈಶ್ವರನಿಂದ ರಚಿಸಲ್ಪಟ್ಟಿರುವ ಈ ಕಾರ್ಯಸೃಷ್ಟಿಯಲ್ಲಿ ಯಾವ ರೀತಿ ತಮ್ಮ ತಮ್ಮ ಸ್ವಭಾವವನ್ನು ಪ್ರಕಾಶಗೊಳಿಸುವ ವಾಯುವಿನ ಬಳಿಯಿಂದ ಜಲದ ವೃಷ್ಟಿಯ ಚೇಷ್ಟೆಯನ್ನು ಮಾಡುವ ಅಗ್ನಿ ಮೊದಲಾದವುಗಳ ಪ್ರಸಿದ್ಧಿ ಮತ್ತು ವಾಣಿಯ ವ್ಯವಹಾರ ಅರ್ಥಾತ್ ಹೇಳುವ, ಕೇಳುವ ಮತ್ತು ಮಾಡುವಂತಹುದು ಸಿದ್ಧವಾಗುತ್ತವೆಯೋ ಹಾಗೆಯೇ ವಿದ್ಯೆ ಮತ್ತು ಧರ್ಮಾಧಿ ಶುಭಗುಣಗಳ ಪ್ರಚಾರವನ್ನು ಮಾಡಿರಿ.

ಮೋಕ್ಷಮೂಲರರು ಹೇಳುವುದೇನೆಂದರೆ ಆ ಪವನವು ಚಿತ್ರ-ವಿಚಿತ್ರ ಜಿಂಕೆ, ಲೋಹಗಳ ಶಕ್ತಿ ಹಾಗೂ ಖಡ್ಗ ಮತ್ತು ಪ್ರಕಾಶಿತ ಆಭೂಷಣಗಳೊಂದಿಗೆ ಉತ್ಪನ್ನವಾಗಿವೆ. ಈ ವ್ಯಾಖ್ಯೆಯು ಅಸಂಭವ. ಏಕೆಂದರೆ ಪವನವು ನಿಶ್ಚಯವಾಗಿಯೂ ವೃಷ್ಟಿಯನ್ನುಂಟುಮಾಡಿಸುವ ಹಾಗೂ ಸ್ಪರ್ಶಾದಿ ಗುಣಗಳ ಸಂಯೋಗದಿಂದ ವಾಣಿ ಮತ್ತು ಅಗ್ನಿಯು ಪ್ರಕಟವಾಗಲು ತಮ್ಮಿಂದ ಪ್ರಕಾಶಿತಗೊಳ್ಳುತ್ತವೆ ಮತ್ತು ಅವರು ಏನನ್ನು ಹೇಳಿದ್ದಾರೋ ಸಾಯಣಾಚಾರ್ಯರು ವಾಶೀ ಶಬ್ದದ ವ್ಯಾಖ್ಯಾನವನ್ನು ಮಾಡಿರುವ ರೀತಿಯೂ ಸಹ ಅಸಂಗತವಾಗಿದೆ. ಏಕೆಂದರೆ ಆ ಮಂತ್ರವೂ ಸಹ ಪದ ಮತ್ತು ವಾಕ್ಯಾರ್ಥಕ್ಕೆ ವಿರುದ್ಧವಾಗಿದೆ. ಈ ಭಾಷ್ಯದಲ್ಲಿ ಪ್ರಕರಣ, ಪದ, ವಾಕ್ಯ ಮತ್ತು ಭಾವಾರ್ಥಕ್ಕೆ ಅನುಕೂಲವಾದ ಯಾವ ಅರ್ಥವಿದೆಯೋ ಅದನ್ನು ವಿದ್ವಾಂಸರು ಸ್ವತಃ ಆಲೋಚಿಸಿ ಸರಿಯೋ ತಪ್ಪು ಎಂಬುದನ್ನು ನಿಷ್ಕರ್ಷಿಸಲಿ.

ಪುನಃ ಆ ವಿದ್ವಾಂಸರು ಈ ಪವನಗಳಿಂದ ಏನೇನು ಉಪಕಾರ ಪಡೆದುಕೊಳ್ಳುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ಇಹೇವ ಶೃಣ್ವ ಏಷಾಂ ಕಶಾ ಹಸ್ತೇಷು ಯದ್‌ವದಾನ್ । ನಿ ಯಾಮಞ್ಚಿತ್ರಮೃಂಜತೇ ॥೩॥

ಪದಾರ್ಥ:- ನಾನು **[ಯತ್]** ಯಾವ ಕಾರಣದಿಂದ **[ಏಷಾಂ]** ಈ ಪವನಗಳ **[ಕಶಾಃ]** ಹಗ್ಗದಂತೆ ಚೇಷ್ಟಾ ಸಾಧನಗಳ ನಿಯಮಗಳನ್ನು ಪ್ರಾಪ್ತಮಾಡಿಕೊಳ್ಳುವ ಕ್ರಿಯೆ **[ಹಸ್ತೇಷು]** ಹಸ್ತಾ ಮುಂತಾದ ಅಂಗಗಳಲ್ಲಿದೆಯೋ ಇದರಿಂದ ಎಲ್ಲ ವ್ಯವಹಾರ ಮತ್ತು ವ್ಯವಹಾರ ಸಂಬಂಧೀ ವಚನಗಳನ್ನು **[ವದಾನ್]** ನುಡಿಯುತ್ತಾರೋ ಅವರನ್ನು **[ಇಹೇವ]** ಯಾವ ರೀತಿ ಈ ಸ್ಥಾನದಲ್ಲಿ ಸ್ಥಿತರಾಗಿದ್ದುಕೊಂಡು ಮಾಡುತ್ತಾರೋ ಆ ರೀತಿ **[ಶೃಣ್ವೇ]** ಶ್ರವಣ

ಮಾಡುತ್ತೇನೆ ಮತ್ತು ಅದರಿಂದ ಎಲ್ಲ ಪ್ರಾಣಿ ಮತ್ತು ಅಪ್ರಾಣಿಗಳು **[ಯಾಮನ್]** ಸುಖಕ್ಕಾಗಿ ವ್ಯವಹಾರಗಳನ್ನು ಪ್ರಾಪ್ತಗೊಳಿಸುವವರ ಮಾರ್ಗದಲ್ಲಿ **[ಚಿತ್ರಂ]** ಆಶ್ಚರ್ಯರೂಪ ಕರ್ಮವನ್ನು **[ನ್ಯೃಂಜತೇ]** ನಿರಂತರ ಸಿದ್ಧಿಗೊಳಿಸುತ್ತಾರೋ ಅವುಗಳನ್ನು ಮಾಡಲು ಸಮರ್ಥವಾದವುಗಳಿಂದಲೇ ನಾನು ಸಮರ್ಥನಾಗುತ್ತೇನೆ.

ಭಾವಾರ್ಥಃ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ವಾಯುಪದಾರ್ಥವಿದ್ಯೆಯ ಇಚ್ಛೆ ಮಾಡುವ ವಿದ್ವಾಂಸರಿಗೆ ಯೋಗ್ಯವಾದುದೇನೆಂದರೆ ಮನುಷ್ಯಾದಿ ಪ್ರಾಣಿಗಳು ಎಷ್ಟೆಲ್ಲಾ ಕರ್ಮ ಮಾಡುತ್ತಾರೋ ಅವೆಲ್ಲವುಗಳ ಮೂಲದಲ್ಲಿ ಪವನವಿದೆ. ಯಾವ ವಾಯು ಇಲ್ಲದಿದ್ದರೆ ಯಾವನೇ ಮನುಷ್ಯನು ಏನನ್ನೂ ಮಾಡಲು ಸಮರ್ಥನಾಗುವುದಿಲ್ಲವೋ ಮತ್ತು ದೂರದಲ್ಲಿನ ಮನುಷ್ಯನು ಉಚ್ಛಾರಣೆ ಮಾಡಲ್ಪಟ್ಟ ಶಬ್ದವು ಹತ್ತಿರದಲ್ಲಿರುವ ಉಚ್ಛಾರಣೆಯಂತೆ ಕೇಳಲು, ವಾಯುವಿನ ವ್ಯವಹಾರವಿಲ್ಲದೆ ಯಾರೂ ಸಹ ಮಾತನಾಡಲಾರರು, ಆಲಿಸಲಾರರು ಮತ್ತು ಮನುಷ್ಯ ಮಾರ್ಗದಲ್ಲಿ ನಡೆಯಲು ಎಷ್ಟೆಲ್ಲಾ ಪದಗಳಿವೆಯೋ ಮತ್ತು ಪರಾಕ್ರಮಯುಕ್ತ ಕರ್ಮಗಳನ್ನು ಮಾಡಲಾಗುತ್ತದೆಯೋ, ಅವೆಲ್ಲವೂ ವಾಯುವಿನ ಯೋಗದಿಂದಲೇ ಆಗುತ್ತವೆ. ವಾಯುವಿನ ವಿನಾ ಕಣ್ಣಿನ ರೆಪ್ಪೆಯನ್ನು ಆಡಿಸುವುದೂ ಸಹ ಸಾಧ್ಯವಿಲ್ಲ. ಆದುದರಿಂದ ಇದರ ಶುಭಗುಣಗಳ ಅನ್ವೇಷಣೆ ಸರ್ವದಾ ನಡೆಯುತ್ತಿರಬೇಕು.

ಮೋಕ್ಷಮೂಲರರು ಹೇಳುವುದೇನೆಂದರೆ ನಾನು ಸಾರಥಿಗಳ ಕಶಾ ಅರ್ಥಾತ್ ಚಾವಟಿಯ ಶಬ್ದವನ್ನು ಆಲಿಸುತ್ತೇನೆ ಮತ್ತು ಅತಿ ಸಮೀಪದಲ್ಲಿ ಕೈಗಳಲ್ಲಿ ಆ ಪವನಗಳನ್ನು ಪ್ರಹಾರ ಮಾಡುವವರು ತಮ್ಮ ಮಾರ್ಗದಲ್ಲಿ ಅತ್ಯಂತ ಶೋಭೆಯನ್ನು ಹೊಂದುತ್ತಾರೆ. ಮತ್ತು [ಯಾಮನ್] ಈ ಮಾರ್ಗದ ಹೆಸರಾಗಿದೆ. ಈ ಮಾರ್ಗದಿಂದ ದೇವತೆಗಳು ಸಾಗುತ್ತಾರೆ. ಮತ್ತು ಯಾವ ಮಾರ್ಗದಿಂದ ಬಲಿದಾನಗಳನ್ನು ಪ್ರಾಪ್ತಿಸುತ್ತಾರೋ ಹಾಗೆಯೇ ನಾವು ಮೇಘದ ಅವಯವಗಳ ಗ್ರಹಣವನ್ನು ಮಾಡಬೇಕಾಗಿದೆ. ಈ ಎಲ್ಲವೂ ಅಶುದ್ಧವಾಗಿದೆ ಏಕೆಂದರೆ ಈ ಮಂತ್ರದಲ್ಲಿ ಕಶಾ ಶಬ್ದದಿಂದ ಎಲ್ಲಾ ಕ್ರಿಯೆಗಳೂ ಮತ್ತು ಯಾಮನ್ ಶಬ್ದದಿಂದ ಮಾರ್ಗದಲ್ಲಿನ ಎಲ್ಲ ವ್ಯವಹಾರವನ್ನು ಪ್ರಾಪ್ತಿಸುವ ಕರ್ಮಗಳ ಗ್ರಹಿಕೆ ಇದೆ.

ಪುನಃ ವಿದ್ವಾಂಸರು ವಾಯುವಿನಿಂದ ಯಾವ ಯಾವ ಪ್ರಯೋಜನಗಳಿಗಾಗಿ ಏನೇನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಪ್ರ ವಃ ಶರ್ಧಾಯ ಘೃಷ್ವಯೇ ತ್ವೇಷದ್ಯುಮ್ನಾಯ ಶುಷ್ಮಿಣೇ ।
ದೇವತ್ತಂ ಬ್ರಹ್ಮ ಗಾಯತ ॥೪॥

ಪದಾರ್ಥಃ:- ಹೇ ವಿದ್ವಾಂಸರೇ! ಯಾವ ಈ ಪವನಗಳು [ವಃ] ನಿಮ್ಮಗಳ **[ಶರ್ಧಾಯ]** ಬಲ ಪ್ರಾಪ್ತಿಸುವ **[ಘೃಷ್ವಯೇ]** ಯಾವುದಕ್ಕಾಗಿ ಪರಸ್ಪರ ಸಂಘರ್ಷಿಸುತ್ತವೋ ಆ **[ಶುಷ್ಮಿಣೇ]** ಅತ್ಯಂತ ಪ್ರಶಂಸಿತ ಬಲಯುಕ್ತ ವ್ಯವಹಾರದವರು **[ತ್ವೇಷದ್ಯುಮ್ನಾಯ]** ಪ್ರಕಾಶಮಾನವಾದ ಯಶಸ್ಸಿಗಾಗಿ ಇದ್ದಾರೋ, ನೀವುಗಳು ಅವರ ನಿಯೋಗದಿಂದ **[ದೇವತ್ತಂ]** ಪರಮೇಶ್ವರನಿಂದ ನೀಡಲ್ಪಟ್ಟ ಅಥವಾ ವಿದ್ವಾಂಸನಿಂದ ಅಧ್ಯಾಪನ ಮಾಡಲ್ಪಟ್ಟ **[ಬ್ರಹ್ಮ]** ವೇದವನ್ನು [ಪ್ರ **ಗಾಯತ]** ಉತ್ತಮ ರೀತಿಯಲ್ಲಿ ಷಡ್ಜಾದಿ ಸ್ವರಗಳಿಂದ ಸ್ತುತಿಪೂರ್ವಕವಾಗಿ ಗಾಯನ ಮಾಡಿರಿ.

ಭಾವಾರ್ಥಃ:- ವಿದ್ವಾಂಸರು ಈಶ್ವರನು ಹೇಳಿರುವ ವೇದಗಳನ್ನು ಅಧ್ಯಯನ ಮಾಡಿ ವಾಯುವಿನ ಗುಣಗಳನ್ನು ತಿಳಿದು ಯಶಸ್ಸು ಮತ್ತು ಬಲದ ಅನುಷ್ಠಾನವನ್ನು ಮಾಡಿ ಎಲ್ಲ ಪ್ರಾಣಿಗಳಿಗೂ ಸುಖವನ್ನು ನೀಡಬೇಕು.

ಮೋಕ್ಷಮೂಲರರ ಅರ್ಥಃ:- ಯಾರ ಮನೆಗಳಲ್ಲಿ ವಾಯುದೇವತೆಯು ಬರುತ್ತದೆಯೋ ಹೇ ಬುದ್ಧಿಶಾಲಿ ಮನುಷ್ಯರೇ! ನೀವು ಅವುಗಳ ಎದುರಿನಲ್ಲಿ ಆ ದೇವತೆಗಳ ಸ್ತುತಿಯನ್ನು ಮಾಡಿರಿ. ಮತ್ತು ಆ ದೇವತೆಗಳು

ಹೇಗಿದ್ದಾರೆಂದರೆ ಉನ್ಮತ್ತ ವಿಜಯವನ್ನು ಪ್ರಾಪ್ತಿಸುವ ಹಾಗೂ ವೇಗಶಾಲಿಗಳಾದವರಿದ್ದಾರೆ. ಇದರಲ್ಲಿ ನಾಲ್ಕನೇ ಮಂಡಲದ ಹದಿನೇಳನೇ ಸೂಕ್ತದ ಎರಡನೇ ಮಂತ್ರವು ಪ್ರಮಾಣವಾಗಿದೆ.

ಮೋಕ್ಷಮೂಲರರ ಈ ಕಥನವು ಅಶುದ್ಧವಾಗಿದೆ. ಏಕೆಂದರೆ ಎಲ್ಲೆಡೆಗಳಲ್ಲೂ ಪವನಗಳ ಸ್ಥಿತಿಯು ಹೋಗಿ ಬರುವ ಕ್ರಿಯೆಯ ಹಾಗೂ ಅವುಗಳ ಸಾಮಿತ್ಯದ ವಿನಾ ವಾಯುವಿನ ಗುಣಗಳ ಸ್ತುತಿಯು ಸಂಭವವಿಲ್ಲದಿರುವುದರಿಂದ ಮತ್ತು ವಾಯುವಿನಿಂದ ಭಿನ್ನವಾದ ಬೇರೆ ದೇವತೆ ಯಾವುದೂ ಇಲ್ಲದಿರುವುದರಿಂದ ಹಾಗೂ ಯಾವ ಮಂತ್ರದ ಪ್ರಮಾಣ ನೀಡಲ್ಪಟ್ಟಿದೆಯೋ ಅಲ್ಲಿಯೂ ಸಹ ಅದರ ಅಭೀಷ್ಟ ಅರ್ಥವು ಈ ಅರ್ಥದೊಂದಿಗೆ ಹೊಂದುವುದಿಲ್ಲ.

ಪುನಃ ಇವುಗಳ ಸೇರುವಿಕೆಯಿಂದ ಏನೇನು ಆಗುತ್ತದೆ ಎಂಬುದನ್ನು ತಿಳಿಸಲಾಗಿದೆ.

ಪ್ರ ಶಂಸಾ ಗೋಷ್ವಘ್ನ್ಯಂ ಕ್ರೀಳಂ ಯಚ್ಛರ್ಧೋ ಮಾರುತಮ್ ।
ಜಮ್ಭೇ ರಸಸ್ಯ ವಾವೃಧೇ ॥೫॥

ಪದಾರ್ಥಃ:- ಹೇ ವಿದ್ವಾಂಸರೇ! ನೀವು **[ಯತ್]** ಯಾವ **[ಗೋಷು]** ಪೃಥಿವ್ಯಾದಿ ಪಂಚಭೂತ ಅಥವಾ ವಾಣಿ ಮೊದಲಾದ ಇಂದ್ರಿಯಗಳು ಮತ್ತು ಗೋವು ಮೊದಲಾದ ಪಶುಗಳಲ್ಲಿ **[ಕ್ರೀಡಂ]** ಕ್ರೀಡೆಯ ನಿಮಿತ್ತ **[ಅಘ್ನ್ಯಂ]** ಕೊಲ್ಲಲು ಯೋಗ್ಯವಲ್ಲದ ಮತ್ತು ಇಂದ್ರಿಯಗಳಿಗೆ ಹಿತಕಾರಕವಾದ **[ಮಾರುತಮ್]** ಪವನಗಳ ವಿಕಾರ ರೂಪವನ್ನು **[ರಸಸ್ಯ]** ಭೋಜನಕ್ಕಾಗಿ ಮಾಡಲ್ಪಟ್ಟ ಅನ್ನಾದಿ ಪದಾರ್ಥಗಳಿಂದ ಉತ್ಪನ್ನವಾದ **[ಜಂಭೇ]** ಯಾವುದರಲ್ಲಿ ಶರೀರದ ಅಂಗಾಂಗಗಳ ಸಂಚಲನೆ ಆಗುವುದೋ ಅಂತಹ **[ಶರ್ಧಃ]** ಬಲವು **[ವವೃಧೇ]** ವೃಷ್ಟಿಯ ಮೂಲಕ ಪ್ರಾಪ್ತವಾಗುತ್ತದೆ. ಅದಕ್ಕಾಗಿ ನಿತ್ಯವೂ ನನಗಾಗಿ **[ಪ್ರಶಂಸಾ]** ಉತ್ತಮ ರೀತಿಯಿಂದ ಶಿಕ್ಷಣವನ್ನು ನೀಡು.

ಭಾವಾರ್ಥಃ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ ಯಾವ ವಾಯು ಸಂಬಂಧೀ ಶರೀರ ಮೊದಲಾದುದರಲ್ಲಿ ಕ್ರೀಡೆ ಮತ್ತು ಬಲವನ್ನು ವೃದ್ಧಿಗೊಳಿಸಲಾಗುತ್ತದೆಯೋ ಅದನ್ನು ನಿತ್ಯವೂ ಜಾರಿಯಲ್ಲಿಡಬೇಕು. ಮತ್ತು ಎಷ್ಟೆಲ್ಲಾ ರಸಾದಿಗಳು ಪ್ರತೀತವಾಗುತ್ತವೆಯೋ ಅವೆಲ್ಲವೂ ವಾಯುವಿನ ಸಂಯೋಗದಿಂದಲೇ ಆಗುತ್ತವೆ. ಮತ್ತು ಇದರಿಂದ ಪರಸ್ಪರ ಶಿಕ್ಷಣವನ್ನು ಮಾಡಬೇಕಾಗುತ್ತದೆ. ಇದರಿಂದ ಜನರೆಲ್ಲರಿಗೂ ವಾಯುವಿನ ಗುಣಗಳ ವಿದ್ಯೆಯು ವಿದಿತವಾಗಬೇಕು.

ಮೋಕ್ಷಮೂಲರರ ಕಥನ ಹೀಗಿದೆ. ಈ ಪ್ರಸಿದ್ಧವಾಯು ಪವನಗಳ ದಳಗಳಲ್ಲಿ ಉಪಾಧಿಯಿಂದ ವೃದ್ಧಿಸಲಾದಂತೆ ಆ ಪವನವು ಮೇಘಾವಯವಗಳನ್ನು ಸ್ವಾದಯುಕ್ತಗೊಳಿಸಿದೆ. ಏಕೆಂದರೆ ಇದು ಪವನಗಳ ಆದರವನ್ನು ಮಾಡಿದೆ-ಎಂಬ ಈ ಹೇಳಿಕೆ ಅಶುದ್ಧವಾಗಿದೆ. ಯಾವ ಈ ಮಂತ್ರದಲ್ಲಿ ಇಂದ್ರಿಯಗಳ ಮಧ್ಯದಲ್ಲಿ ಪವನಗಳ ಬಲವನ್ನು ಹೇಳಲಾಗಿದೆಯೋ ಅದರ ಪ್ರಶಂಸನೆಯನ್ನು ಮಾಡುವುದು, ಯಾವ ಪ್ರಾಣಿಗಳು ಬಾಯಿಯಿಂದ [ನಾಲಿಗೆದಿಂದ] ರುಚಿಯನ್ನು ಹೊಂದುತ್ತವೆಯೋ ಅವು ಕೂಡ ಪವನದ ಬಲವೂ ಆಗಿದೆ ಮತ್ತು ಈ ಶಬ್ದದ ಅರ್ಥದಲ್ಲಿ ವಿಲ್ಸನ್ ಮತ್ತು ಮ್ಯಾಕ್ಸ್‌ಮುಲ್ಲರವಾದವು ನಿಷ್ಪ್ರಯೋಜಕ.

ಪುನಃ ಈ ಪವನಗಳಿಂದ ಮನುಷ್ಯರು ಏನೇನನ್ನು ತಿಳಿಯಬೇಕು, ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಕೋ ವೋ ವರ್ಷಿಷ್ಠ ಆ ನರೋ ದಿವಶ್ಚ ಗ್ಮಶ್ಚ ಧೂತಯಃ ।
ಯತ್ ಸೀಮಂತಂ ನ ಧೂನುಥ ॥೬॥

ಪದಾರ್ಥ:- ಹೇ ವಿದ್ವಾಂಸರೇ! **[ಧೂತಯಃ]** ಶತ್ರುಗಳನ್ನು ನಡುಗುವಂತೆ ಮಾಡುವ **[ನರಃ]** ನೀತಿಯುಕ್ತರಾದ **[ಯತ್]** ಯಾವ ನೀವು **[ದಿವಃ]** ಪ್ರಕಾಶವನ್ನುಳ್ಳ ಸೂರ್ಯಾದಿ **[ಚ]** ಮತ್ತು ಅವುಗಳ ಸಂಬಂಧಿಯಾದ **[ಗ್ಮಃ]** ಪೃಥ್ವಿ **[ಚ]** ಮತ್ತು ಅವುಗಳ ಸಂಬಂಧಿಯಾದ ಪ್ರಕಾಶರಹಿತ ಲೋಕಗಳನ್ನು **[ಸೀಂ]** ಎಲ್ಲೆಡೆಗಳಿಂದ ಅರ್ಥಾತ್ ತೃಣ, ವೃಕ್ಷ, ಮೊದಲಾದ ಅವಯವಗಳ ಸಹಿತ ಗ್ರಹಣ ಮಾಡಿ, ನಡುಗಿಸುತ್ತಾ ಇರುವ ವಾಯುವಿನ **[ನ]** ಸಮಾನವಾಗಿ ಶತ್ರುಗಳ **[ಅಂತಂ]** ನಾಶವನ್ನು ಮಾಡಿ ದುಷ್ಟರನ್ನು ಯಾವಾಗ **[ವಃ]** ನಿಮ್ಮಗಳ ನಡುವಿನಿಂದ **[ಕಃ]** ಯಾರು **[ವರ್ಷಿಷ್ಠಃ]** ಯಥಾವತ್ ಶ್ರೇಷ್ಠ ವಿದ್ವಾಂಸನೆಂದು ಪ್ರಸಿದ್ಧನಾಗಿಲ್ಲವೋ ಅವನನ್ನು **[ಆ ಧೂನುಥ]** ಉತ್ತಮ ರೀತಿಯಲ್ಲಿ ನಡುಗುವಂತೆ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ವಿದ್ವಾನ್ ರಾಜಪುರುಷರಿಗೆ ಯೋಗ್ಯವಾದುದೇನೆಂದರೆ ಯಾವ ರೀತಿ ಯಾವನೋ ಬಲಿಷ್ಠ ಮನುಷ್ಯನು ನಿರ್ಬಲನ ತಲೆಗೂದಲನ್ನು ಹಿಡಿದು ಅಲುಗಾಡಿಸುತ್ತಾನೋ ಮತ್ತು ಯಾವ ರೀತಿ ವಾಯುವು ಸಕಲ ಲೋಕಗಳನ್ನು ಗ್ರಹಣ ಮಾಡುತ್ತಾ ಹಾಗೂ ಚಲಿಸುವಂತೆ ಮಾಡುತ್ತಾ ತನ್ನ ಪರಿಧಿಯಲ್ಲಿಯೇ ನೆಲೆಗೊಳ್ಳುತ್ತದೆಯೋ ಅದೇ ರೀತಿ ಎಲ್ಲಾ ಶತ್ರುಗಳನ್ನೂ ಕಂಪಿಸುವಂತೆ ಮಾಡಿ ಮತ್ತು ಅವರ ಸ್ಥಾನಗಳಿಂದ ಅವರು ತೊಲಗುವಂತೆ ಮಾಡಿ ಪ್ರಜೆಗಳ ರಕ್ಷಣೆಯನ್ನು ಮಾಡಬೇಕು.

ಮೋಕ್ಷಮೂಲರರ ಅರ್ಥ: ಹೇ ಮನುಷ್ಯರೇ! ನಿಮ್ಮಗಳ ನಡುವೆ ದೊಡ್ಡವನು ಯಾರು? ನೀವು ಆಕಾಶ ಹಾಗೂ ಪೃಥ್ವೀ ಲೋಕಗಳನ್ನು ನಡುಗಿಸುವವರಾಗಿದ್ದೀರಿ. ನೀವು ಧರಿಸಿರುವ ವಸ್ತ್ರದ ಅಂಚು ಕಂಪಿಸುವಂತೆ ನೀವು ಅವರನ್ನು ಕಂಪಿತಗೊಳಿಸುವಿರಿ. ಸಾಯಣಾಚಾರ್ಯರು ಹೇಳಿರುವ ಅಂತ ಶಬ್ದದ ಅರ್ಥವನ್ನು ನಾನು ಸ್ವೀಕರಿಸುವುದಿಲ್ಲ. ಆದರೆ ವಿಲ್ಸನ್ ಮೊದಲಾದವರು ಹೇಳಿದುದನ್ನು ಸ್ವೀಕರಿಸುತ್ತೇನೆ. ಮೋಕ್ಷಮೂಲರರ ಈ ಕಥನ ಸರ್ವಥಾ ಅಶುದ್ಧವಾಗಿದೆ. ಹಾಗೂ ವಿರುದ್ಧಾರ್ಥಕವಾಗಿದೆ. ಏಕೆಂದರೆ ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ರಾಜಪುರುಷರು ಶತ್ರುಗಳನ್ನು ಮತ್ತು ಇತರರು ತೃಣಕಾಷ್ಠಾದಿಗಳನ್ನು ಹಿಡಿದು ಅಲುಗಿಸುತ್ತಾರೋ ಅದೇ ರೀತಿ ವಾಯುವೂ ಇದೆ. ಇದರ ಅರ್ಥವನ್ನು ವಿದ್ವಾಂಸರ ಬಳಿಯಿಂದ ನಿಶ್ಚಯಿಸಬೇಕು. ಯಾವರೀತಿ ಸಾಯಣಾಚಾರ್ಯರು ಮಾಡಿರುವ ಅರ್ಥವು ವ್ಯರ್ಥವೋ ಅದೇರೀತಿ ಮೋಕ್ಷಮೂಲರರದೂ ಅನರ್ಥಕಾರಿಯಾಗಿದೆ. ಈ ಮಾತನ್ನು ಸಜ್ಜನರಾದ ನಾವೆಲ್ಲರೂ ತಿಳಿಯಬಹುದು.

ಪುನಃ ಆ ರಾಜ ಮತ್ತು ಪ್ರಜಾಜನರು ಹೇಗಿರಬೇಕು ಎಂಬುದನ್ನು ತಿಳಿಸಲಾಗುತ್ತದೆ.

ನಿ ವೋ ಯಾಮಾಯ ಮಾನುಷೋ ದಧ್ರ ಉಗ್ರಾಯ ಮನ್ಯವೇ ।
ಜಿಹೀತ ಪರ್ವತೋ ಗಿರಿಃ ॥೭॥

ಪದಾರ್ಥ:- ಹೇ ಪ್ರಜಾಸೇನೆಯ ಮಾನವರೇ! ಯಾವ ಪ್ರಜಾಪತಿ ರಾಜನ ಭಯದಿಂದ ವಾಯುವಿನ ಬಲದಿಂದ **[ಗಿರಿಃ]** ಜಲವನ್ನು ತಡೆಯುವ, ಘರ್ಜಿಸುವ **[ಪರ್ವತಃ]** ಮೇಘ ಅಥವಾ ಶತ್ರು ಜನರು **[ಜಿಹೀತ]** ಓಡುತ್ತಾರೋ ಅವರು **[ಮಾನುಷಃ]** ಸಭಾಧ್ಯಕ್ಷನಾದ ರಾಜ **[ನಿಃ]** ನಿಶ್ಚಯಾತ್ಮಕವಾಗಿ **[ವಃ]** ನಿಮ್ಮಗಳ **[ಯಾಮಾಯ]** ಯಥಾರ್ಥ ವ್ಯವಹಾರಕ್ಕಾಗಿ ಮತ್ತು **[ಮನ್ಯವೇ]** ಕ್ರೋಧರೂಪಿ **[ಉಗ್ರಾಯ]** ತೀವ್ರದಂಡವನ್ನು ನೀಡುವುದಕ್ಕಾಗಿ ರಾಜ್ಯವ್ಯವಸ್ಥೆಯನ್ನು **[ದಧ್ರೇ]** ಧಾರಣ ಮಾಡುತ್ತಾರೋ ಹಾಗೆಯೇ ನೀವೂ ಸಹ ತಿಳಿಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಪ್ರಜಾಸೇನೆಯಲ್ಲಿರುವ ಮನುಷ್ಯರೇ! ನಿಮ್ಮಗಳ ಎಲ್ಲ ವ್ಯವಹಾರವು ವಾಯುವಿನಂತೆ ರಾಜ್ಯವ್ಯವಸ್ಥೆಯಿಂದಲೇ ಉತ್ತಮ ರೀತಿಯಲ್ಲಿ ನಡೆಯಬಲ್ಲುದಾಗಿದೆ. ಮತ್ತು ಯಾವಾಗ ನೀವು ನಿಮ್ಮ ನಿಯಮೋಪನಿಯಮಗಳ ಅನುಸಾರ ನಡೆಯುವುದಿಲ್ಲವೋ ಆಗ ನಿಮಗೆ

ಸಭಾಧ್ಯಕ್ಷನಾದ ರಾಜನು ವಾಯುವಿನಂತೆ ಶೀಘ್ರವಾಗಿ ದಂಡನೆ ನೀಡುತ್ತಾನೆ. ಮತ್ತು ಅವನ ಭಯದಿಂದ ವಾಯುವಿನಿಂದ ಮೇಘಗಳು ದೂರಸರಿಯುವಂತೆ ಶತ್ರು ಜನರು ಪಲಾಯನ ಮಾಡುತ್ತಾರೆ. ಅಂತಹ ರಾಜನನ್ನು ನೀವು ತಂದೆಯ ಸಮಾನನೆಂದು ತಿಳಿಯಿರಿ.

ಮೋಕ್ಷಮೂಲರರ ಕಥನ: ಹೇ ಪವನಗಳೇ! ನಿಮ್ಮ ಬರುವಿಕೆಯಿಂದ ಮನುಷ್ಯರ ಮಕ್ಕಳು ತಮ್ಮಷ್ಟಕ್ಕೇ ತಾವೇ ನಮ್ರರಾಗಿ ಹೋಗುತ್ತಾರೆ. ನಿಮ್ಮ ಕ್ರೋಧದಿಂದ ಹೆದರಿ ಪಲಾಯನ ಮಾಡುತ್ತಾರೆ. ಹೀಗೆ ಹೇಳುವ ಅವರ ಕಥನವು ವ್ಯರ್ಥವಾಗಿದೆ. ಏಕೆಂದರೆ ಈ ಮಂತ್ರದಲ್ಲಿ ಗಿರಿ ಮತ್ತು ಪರ್ವತ ಶಬ್ದದಿಂದ ಮೇಘಗಳ ಗ್ರಹಣ ಮಾಡಲಾಗಿದೆ. ಮಾನುಷ ಶಬ್ದದ ಅರ್ಥವನ್ನು ಧಾರಣಕ್ರಿಯೆಯ ಕರ್ತ ಎಂದು ಹೇಳಲಾಗಿದೆ. ಆದರೆ ಈ ಮಂತ್ರದಲ್ಲಿ ಬಾಲಕನ ಶಿರಸ್ಸಿನ ನಮನವು ಗ್ರಹಿಸಲ್ಪಟ್ಟಿಲ್ಲ. ಯಾವ ರೀತಿ ಸಾಯಣಾಚಾರ್ಯರ ಅರ್ಥವು ವ್ಯರ್ಥವಾಗಿದೆಯೋ ಹಾಗೆಯೇ ಮೋಕ್ಷಮುಲ್ಲರರದೂ ಆಗಿದೆ. ವೇದಗಳ ರಚನೆ ಮಾಡಿದವನೇ ಈಶ್ವರನಾಗಿದ್ದಾನೆ, ಮನುಷ್ಯನಲ್ಲ. ಇಷ್ಟು ಪರೀಕ್ಷೆಯನ್ನು ಸಹ ಮಾಡಲಾಗದ ಮೋಕ್ಷಮೂಲರರ ವೇದಾರ್ಥ ಜ್ಞಾನದ ಕುರಿತು ಏನೆಂದು ತಾನೇ ಹೇಳಲಾದೀತು?

ಪುನಃ ಆ ಪವನಗಳ ಸೇರುವಿಕೆಯಿಂದ ಏನಾಗುತ್ತದೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಯೇಷಾಮಜ್ಮೇಷು ಪೃಥಿವೀ ಜುಜುರ್ವಾ ಇವ ವಿಶ್ಪತಿಃ ।
ಭಿಯಾ ಯಾಮೇಷು ರೇಜತೇ ॥೮॥

ಪದಾರ್ಥ:- ಹೇ ವಿದ್ವಾಂಸರೇ! **[ಯೇಷಾಂ]** ಯಾವ ಪವನಗಳ **[ಅಜ್ಮೇಷು]** ತಲುಪಿಸುವ, ಕೊಂಡೊಯ್ಯುವ, ಬಿಸುಡುವ ಗುಣಗಳಲ್ಲಿ **[ಭಿಯಾ]** ಭಯದಿಂದ **[ಜುಜುರ್ವಾನ್ ಇವ]** ಯಾವ ರೀತಿ ವೃದ್ಧತ್ವವನ್ನು ಹೊಂದಿರುವ **[ವಿಶ್ಪತಿಃ]** ಪ್ರಜಾಪಾಲಕನಾದ ರಾಜನು ಶತ್ರುಗಳಿಂದ ಕಂಪಿಸಲ್ಪಡುತ್ತಾನೋ ಹಾಗೆಯೇ **[ಪೃಥಿವೀ]** ಪೃಥಿವೀಯಾದಿ ಲೋಕಗಳು **[ಯಾಮೇಷು]** ತಮ್ಮ ತಮ್ಮ ಚಲಿಸುವ ಪರಿಧಿಯಲ್ಲಿ **[ರೇಜತೇ]** ಚಲಾಯಮಾನವಾಗುತ್ತವೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ರಾಜನೊಬ್ಬನು ಜೀರ್ಣಾವಸ್ಥೆಯನ್ನು ಹೊಂದಿದ ರೋಗ ಅಥವಾ ಶತ್ರುಗಳ ಭಯದಿಂದ ಕಂಪಿಸಲ್ಪಡುತ್ತಾನೋ ಅದೇ ರೀತಿ ಪವನಗಳಿಂದ ಎಲ್ಲ ಪ್ರಕಾರದಿಂದಲೂ ಧಾರಣ ಮಾಡಲ್ಪಟ್ಟಿರುವ ಪೃಥಿವೀ ಆದಿ ಲೋಕಗಳು ತಿರುಗುತ್ತವೆ ಮತ್ತು ಸೂತ್ರದಂತೆ ಬಂಧಿಸಲ್ಪಟ್ಟ ವಾಯುವಿಲ್ಲದೆ ಯಾವುದೇ ಲೋಕದ ಸ್ಥಿತಿಯು ಅಥವಾ ಭ್ರಮಣವು ಎಂದಿಗೂ ಸಂಭವವಲ್ಲ.

ಮೋಕ್ಷಮೂಲರರ ಕಥನ: ನಿರ್ಬಲ ರಾಜನಂತೆ ಪವನಗಳ ಚಲನೆಯಿಂದ ಪೃಥಿವಿಯು ಕಂಪಿತವಾಗುತ್ತದೆ. ಸಂಸ್ಕೃತದ ರೀತಿಯಿಂದ ಬಹುದೊಡ್ಡ ದೋಷವಾಗಿದೆ. ಏಕೆಂದರೆ ಸ್ತ್ರೀಲಿಂಗ ಉಪಮೇಯದೊಂದಿಗೆ ಪುಲ್ಲಿಂಗ ವಾಚಿ ಉಪಮಾನವು ನೀಡಲ್ಪಟ್ಟಿದೆ. ಆದುದರಿಂದ ಮೋಕ್ಷಮೂಲರರ ಈ ಕಥನವು ಮಿಥ್ಯೆಯಾಗಿದೆ. ಏಕೆಂದರೆ ವಾಯುವಿನ ಸೇರುವಿಕೆಯಿಂದಲೇ ಪೃಥಿವಿಯ ಧಾರಣ ಮತ್ತು ಭ್ರಮಣಗಳು ಸಂಭವವಾಗಿ ವಾಯುವಿನ ಭೀಷಣತೆಯಿಂದಲೇ ಪೃಥಿವೀ ಆದಿ ಲೋಕಗಳ ಸ್ವರೂಪವು ಸ್ಥಿತವಾಗುತ್ತದೆ. ಆದುದರಿಂದ ಈ ಲಿಂಗ ವ್ಯತ್ಯಯದಿಂದ ಉಪಮಾಲಂಕಾರದಲ್ಲಿ ದೋಷವು ಉಂಟಾಗುವುದಿಲ್ಲ. ಯಾವ ರೀತಿ ಮನುಷ್ಯನಂತೆ ವಾಯು ಮತ್ತು ವಾಯುವಿನಂತೆ ಮನಸ್ಸು ಚಲಿಸುತ್ತವೆಯೋ ಶ್ಯೇನ[ಗಿಡುಗ] ಪಕ್ಷಿಯಂತೆ ಮೈನಾಹಕ್ಕಿ, ಸ್ತ್ರೀಯ ಸಮಾನವಾದ ಪುರುಷ, ಪುರುಷನಿಗೆ ಸಮಾನವಾದ ಸ್ತ್ರೀ, ಆಮೆಯ ಸಮಾನವಾದ ಎಮ್ಮೆ ಅಥವಾ ಚಂದ್ರನ ಸಮಾನವಾದ ಮುಖ, ಸೂರ್ಯಪ್ರಕಾಶಕ್ಕೆ ಸಮಾನವಾದ ರಾಜನೀತಿ ಈ ರೀತಿ ಉಪಮಾಲಂಕಾರದಲ್ಲಿ ಲಿಂಗಭೇದದಿಂದ ಯಾವುದೇ ದೋಷವು ಉಂಟಾಗುವುದಿಲ್ಲ.

ಪುನಃ ಆ ವಾಯು ಎಂತಹ ಗುಣವುಳ್ಳದ್ದಾಗಿದೆ ಎಂಬುದನ್ನು ತಿಳಿಸಲಾಗುತ್ತದೆ.

ಸ್ಥಿರಂ ಹಿ ಜಾನಮೇಷಾಂ ವಯೋ ಮಾತುರ್ನಿರೇತವೇ ।
ಯತ್ ಸೀಮನು ದ್ವಿತಾ ಶವಃ ॥೯॥

ಪದಾರ್ಥ:- ಹೇ ಮನುಷ್ಯರೇ! [ಏಷಾಂ] ಈ ಪವನಗಳ [**ಯತ್**] ಯಾವ [**ಸ್ಥಿರಂ**] ನಿಶ್ಚಲವಾದ [**ಜಾನಂ**] ಜನ್ಮಸ್ಥಾನವಾದ ಆಕಾಶವು [**ಶವಃ**] ಬಲ ಮತ್ತು ಯಾವುದರಲ್ಲಿ [**ದ್ವಿತಾ**] ಶಬ್ದ ಮತ್ತು ಸ್ಪರ್ಶ ಗುಣದ ಯೋಗವಿದೆಯೋ ಅದರ ಆಶ್ರಯದಲ್ಲಿ [**ವಯಃ**] ಪಕ್ಷಿಗಳು [**ಮಾತುಃ**] ಅಂತರಿಕ್ಷದ ನಡುವೆ [**ಸೀಮ್**] ಎಲ್ಲ ಪ್ರಕಾರ [**ನಿರೇತವೇ**] ನಿರಂತರವಾಗಿ ಹೋಗಿ ಬರುವುದರಲ್ಲಿ ಸಮರ್ಥವಾಗಿರುತ್ತವೆಯೋ ಆ ವಾಯುಗಳನ್ನು ನೀವು [**ಅನು**] ವಿಶೇಷರೀತಿಯಿಂದ ತಿಳಿಯಿರಿ.

ಭಾವಾರ್ಥ:- ಈ ಕಾರ್ಯ ರೂಪೀ ಪವನಗಳು ಆಕಾಶದಲ್ಲಿ ಉತ್ಪನ್ನವಾಗಿ ಅತ್ತಿತ್ತ ಹೋಗಿಬರುತ್ತಿರುತ್ತವೆ. ಎಲ್ಲೆಲ್ಲಾ ಅವಕಾಶಗಳಿರುತ್ತವೆಯೋ ಅಲ್ಲೆಲ್ಲಾ ಇವುಗಳ ಹೋಗಿಬರುವಿಕೆ ಸಂಭವವಾಗುತ್ತವೆ ಮತ್ತು ಅವುಗಳ ಅನುಕೂಲತೆಯಿಂದ ಎಲ್ಲ ಪ್ರಾಣಿಗಳು ನವಜೀವನವನ್ನು ಪಡೆದು ಬಲಶಾಲಿಗಳಾಗುತ್ತವೆ. ಅವುಗಳನ್ನು ಯುಕ್ತಿ ಪೂರ್ವಕವಾಗಿ ನೀವುಗಳು ಸೇವಿಸಿರಿ.

ಮೋಕ್ಷಮೂಲರರ ಕಥನ: ಪವನಗಳ ಉತ್ಪತ್ತಿ, ಬಲ ಹಾಗೂ ಅವುಗಳ ಸಾಮರ್ಥ್ಯ ಆಕಾಶದಿಂದ ಬರುತ್ತದೆ. ಅವುಗಳ ಸಾಮರ್ಥ್ಯ ದ್ವಿಗುಣ ಅಥವಾ ಪುಷ್ಕಳವಾಗಿದೆ ಎಂಬ ಮಾತು ಸತ್ಯವೇ ಆಗಿದೆ. ಮೋಕ್ಷಮೂಲರರ ಈ ಕಥನವು ನಿಷ್ಪ್ರಯೋಜಕ. ಏಕೆಂದರೆ ಎಲ್ಲ ದ್ರವ್ಯಗಳ ಉತ್ಪತ್ತಿ ತಮ್ಮ ತಮ್ಮ ಕಾರಣಕ್ಕೆ ಅನುಕೂಲವಾಗಿ ಬಲಶಾಲಿಯಾಗುತ್ತವೆ. ಅವುಗಳ ಕಾರ್ಯಗಳಲ್ಲಿ ಕಾರಣದ ಗುಣ ಬಂದೇ ಬರುತ್ತದೆ ಮತ್ತು [ವಯಃ] ಶಬ್ದದಿಂದ ಪಕ್ಷಿಗಳನ್ನು ಗ್ರಹಿಸಲಾಗುತ್ತದೆ.

ಪುನಃ ಅವು ಹೇಗೆ ಕೆಲಸ ಮಾಡುತ್ತದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಉದು ತ್ಯೇ ಸೂನವೋ ಗಿರಃ ಕಾಷ್ಠಾ ಅಜ್ಮೇಷ್ವತ್ನತ । ವಾಶ್ರಾ ಅಭಿಜ್ಞು ಯಾತವೇ ॥೧೦॥

ಪದಾರ್ಥ:- ಹೇ ರಾಜಾ ಪ್ರಜಾಜನರ ಮತ್ತು ಪ್ರಜೆಗಳ ಮನುಷ್ಯರೇ! ನೀವುಗಳು [**ತ್ಯೇ**] ಆ ಅಂತರಿಕ್ಷದಲ್ಲಿರುವ ಮತ್ತು [**ಸೂನವಃ**] ಪ್ರಾಣಿಗಳ ಗರ್ಭವನ್ನು ಬಿಡಿಸುವ ಪವನ [**ಅಭಿಜ್ಞು**] ಯಾರ ಸಮ್ಮುಖದಲ್ಲಿ ಜಂಘೆಗಳಿವೆಯೋ [**ವಾಶ್ರಾಃ**] ಆ ಶಬ್ದಮಾಡುವ ಮತ್ತು ಕರುಗಳನ್ನು ಎಲ್ಲ ರೀತಿಯಿಂದಲೂ ಹೊಂದುವ ಗೋವುಗಳಂತೆ [**ಗಿರಃ**] ವಾಣಿ ಮತ್ತು [**ಕಾಷ್ಠಾಃ**] ದಿಕ್ಕುಗಳಿಂದ [**ಅಜ್ಮೇಷು**] ಹೋಗುವ ಮಾರ್ಗದಲ್ಲಿ [**ಉ**] ಮತ್ತು [**ಯಾತವೇ**] ಪ್ರಾಪ್ತವಾಗುವುದನ್ನು ವಿಸ್ತಾರಗೊಳಿಸುವಂತೆ ಸಮಾನವಾಗಿ ಸುಖವನ್ನು [**ಉತ್ ಅತ್ನತ**] ಉತ್ತಮ ರೀತಿಯಲ್ಲಿ ವಿಸ್ತಾರಗೊಳಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ರಾಜಾ ಮತ್ತು ಪ್ರಜೆಗಳ ಮನುಷ್ಯರಿಗೆ ಯೋಗ್ಯವಾದುದೇನೆಂದರೆ ಯಾವ ರೀತಿ ಈ ವಾಯುವೇ ವಾಣಿ ಮತ್ತು ಜಲಗಳನ್ನು ಮುನ್ನಡೆಯಿಸಿ ವಿಸ್ತೃತಗೊಳಿಸಿ ಉತ್ತಮ ರೀತಿಯಲ್ಲಿ ಶಬ್ದಗಳನ್ನು ಕೇಳಿಸುವಂತೆ ಮಾಡಿ ಹೋಗಿ ಬರುವ, ಜನ್ಮ-ವೃದ್ಧಿ ಮತ್ತು ನಾಶದ ಕಾರಣವಾಗುತ್ತದೆಯೋ ಅದೇ ರೀತಿ ಶುಭಾಶುಭ ಕರ್ಮಗಳ ಅನುಷ್ಠಾನವು ಸುಖದುಃಖಗಳ ನಿಮಿತ್ತವಾಗಿದೆ.

ಮೋಕ್ಷಮೂಲರರ ಕಥನ: ಗಾನ ಮಾಡುತ್ತಾ ಬರುವ ಪುತ್ರನು ತನ್ನ ಚಲನೆಯಿಂದ ಗೋವುಗಳ ಸ್ಥಾನವನ್ನು ವಿಸ್ತಾರಗೊಳಿಸುತ್ತಾನೆ. ಮತ್ತು ಗೋವು ಜಂಘೆಗಳ ಬಲದಿಂದ ನಡೆದು ಬರುತ್ತದೆ. ಈ ಕಥನವೂ ವ್ಯರ್ಥವಾದುದಾಗಿದೆ. ಏಕೆಂದರೆ ಮಂತ್ರದಲ್ಲಿ ಸೂನು ಶಬ್ದದಿಂದ ಪ್ರಿಯ ವಾಣಿಯನ್ನು ಉಚ್ಚರಿಸುತ್ತಿರುವ ಬಾಲಕನನ್ನು ಗ್ರಹಿಸಲಾಗಿದೆ. ಯಾವ ರೀತಿ ಗೋವು ತನ್ನ ಕರುವನ್ನು ನೆಕ್ಕಲು ಪೃಥ್ವಿಯಲ್ಲಿ ಜಂಘೆಗಳನ್ನು ಸ್ಥಾಪಿಸಿ ಸುಖಯುಕ್ತವಾಗುತ್ತದೆಯೋ ಆ ರೀತಿ ಮಾಡುವುದರಿಂದ ವಾಯುವೂ ಸಹ ಸುಖಪೂರ್ವಕವಾಗಿ ತನ್ನ ಚಲನೆಯನ್ನು, ಪರಿಣಾಮವನ್ನು ಸ್ಥಾಪಿಸುತ್ತವೆ.

ಪುನಃ ಈ ರಾಜಪುರುಷರು ಏನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ತ್ಯಂ ಚಿದ್ ಘಾ ದೀರ್ಘಂ ಪೃಥುಂ ಮಿಹೋ ನಪಾತಮಮೃಧ್ರಮ್ ।
ಪ್ರ ಚ್ಯಾವಯಂತಿ ಯಾಮಭಿಃ ॥೧೧॥

ಪದಾರ್ಥ:- ಹೇ ರಾಜಪುರುಷರೇ! ನೀವು ಯಾವ ರೀತಿ [**ಮಿಹಃ**] ಮಳೆಯ ನೀರಿನಿಂದ ಸಿಂಚನಗೊಳಿಸುವ ಪವನವು [**ಯಾಮಭಿಃ ಘಾ**] ತಾನು ಹೋಗುವ ಮಾರ್ಗದಿಂದಲೇ [**ತ್ಯಂ**] ಆ [**ನಪಾತಮ್**] ಜಲವನ್ನು ಬೀಳಿಸದಿರುವ ಮತ್ತು [**ಅಮೃಧ್ರಮ್**] ನೆನೆಯಿಸದಿರುವ [**ಪೃಥುಂ ಚಿತ್**] ವಿಸ್ತಾರವೇ ಆದ [**ದೀರ್ಘಂ**] ಸ್ಥೂಲ ಮೇಘವನ್ನು [**ಪ್ರಚ್ಯಾವಯಂತಿ**] ಭೂಮಿಯಮೇಲೆ ಬೀಳುವಂತೆ ಮಾಡುತ್ತವೆಯೋ ಅದೇ ರೀತಿ ಶತ್ರುಗಳನ್ನು ಕೆಳಗೆ ಬೀಳಿಸಿ ಪ್ರಜೆಗಳನ್ನು ಆನಂದಿತನನ್ನಾಗಿ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ರಾಜಪುರುಷರಿಗೆ ಯೋಗ್ಯವಾದುದೇನೆಂದರೆ ಯಾವ ರೀತಿ ವಾಯು ಮೇಘದ ನಿಮಿತ್ತ ಪುಷ್ಕಳ ಜಲವನ್ನು ಮೇಲಕ್ಕೆ ತಲುಪಿಸಿ ಅವುಗಳ ಪರಸ್ಪರ ಘರ್ಷಣೆಯಿಂದ ವಿದ್ಯುತ್ತನ್ನು ಉತ್ಪನ್ನಗೊಳಿಸಿ ಆ ಮೇಲೆ ತೇಲುತ್ತಿರುವ ಹಾಗೂ ಒದ್ದೆಯನ್ನುಂಟುಮಾಡದ ವಿಸ್ತಾರವಾದ ಮೇಘವನ್ನು ಭೂಮಿಯ ಮೇಲೆ ಬೀಳುವಂತೆ ಮಾಡುತ್ತವೆಯೋ ಹಾಗೆಯೇ ಧರ್ಮವಿರೋಧಿ ವ್ಯವಹಾರಗಳನ್ನು ತ್ಯಜಿಸಬೇಕು ಮತ್ತು ತ್ಯಜಿಸುವಂತೆ ಮಾಡಬೇಕು.

ಮೋಕ್ಷಮೂಲರರ ಕಥನ: ಬಹಳ ಕಾಲ ವರ್ಷಾಧಾರೆಯನ್ನು ಸುರಿಸುವ ಅಪ್ರತಿಬದ್ಧ ಮೇಘದ ನಿಮಿತ್ತ ಮತ್ತು ಮಾರ್ಗದ ಮೇಲೆ ಬೀಳಿಸುವ ಪವನಗಳು ಎಂದು ಹೇಳಿರುವ ಮಾತು ಅಶುದ್ಧವಾಗಿದೆ. ಏಕೆಂದರೆ ಮಿಹಃ ಎಂದು ಹೇಳಿರುವ ಈ ಪದವು ಪವನಗಳ ವಿಶೇಷವಾಗಿದೆ. ಮತ್ತು ಇವರು ಇದನ್ನು ಮೇಘದ ವಿಶೇಷ ಎಂದು ಕರೆದಿದ್ದಾರೆ.

ಮತ್ತೆ ಆ ರಾಜಪ್ರಜಾಜನರು ವಾಯುವಿನಂತೆ ಕಾರ್ಯ ಮಾಡಲಿ ಎಂಬುದನ್ನು ಹೇಳಲಾಗಿದೆ.

ಮರುತೋ ಯದ್ಧ ವೋ ಬಲಂ ಜನಾँ ಅಚುಚ್ಯವೀತನ । ಗಿರೀँರಚುಚ್ಯವೀತನ ॥೧೨॥

ಪದಾರ್ಥ:- ಹೇ [**ಮರುತಃ**] ಪವನಗಳಂತೆ ಇರುವ ಸೇನಾಧ್ಯಕ್ಷಾದಿ ರಾಜಪುರುಷರೇ! ನೀವು [**ಯತ್**] ಯಾವ ಕಾರಣ [**ವಃ**] ನಿಮ್ಮ [**ಹ**] ಪ್ರಸಿದ್ಧವಾದ [**ಬಲಂ**] ಸೇನೆ ಆದಿ ದೃಢ ಬಲಗಳಿವೆಯೋ ಅದಕ್ಕಾಗಿ ಯಾವ ರೀತಿ ವಾಯುವು [**ಗಿರೀನ್**] ಮೇಘಗಳನ್ನು [**ಅಚುಚ್ಯವೀತನ**] ಅತ್ತಿತ್ತ ಭೂಮಿಯ ಮೇಲೆ ತಿರುಗಾಡಿಸುತ್ತದೆಯೋ ಹಾಗೆ [**ಜನಾನ್**] ಪ್ರಜೆಗಳನ್ನು [**ಅಚುಚ್ಯವೀತನ**] ನಿಮ್ಮ ನಿಮ್ಮ ಉತ್ತಮ ವ್ಯವಹಾರಗಳಿಂದ ಪ್ರೇರಿತರನ್ನಾಗಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಸಭಾಧ್ಯಕ್ಷಾದಿ ರಾಜಪುರುಷರು ಯಾವ ರೀತಿ ವಾಯುವು ಮೇಘಗಳನ್ನು ಅತ್ತತ್ತ ತಿರುಗಿಸಿ ಮಳೆಗೆರೆಯುವಂತೆ ಮಾಡುತ್ತದೆಯೋ ಅದೇ ರೀತಿ ಪ್ರಜೆಗಳು ನ್ಯಾಯ ವ್ಯವಸ್ಥೆಯಲ್ಲಿ ತಮ್ಮ ತಮ್ಮ ಕರ್ಮಗಳಲ್ಲಿ ಆಲಸ್ಯವನ್ನು ತ್ಯಜಿಸಿ ಸದಾ ನಿಯುಕ್ತಿಗೊಳಿಸುತ್ತಿರಬೇಕು.

ಮೋಕ್ಷಮೂಲರರ ಉಕ್ತಿ ಹೀಗಿದೆ. ಹೇ ಪವನಗಳೇ! ನೀವು ಪುರುಷ ಅಥವಾ ಪರ್ವತಗಳನ್ನು ಪತನ ಗೊಳಿಸಲೆಂದೇ ಇದ್ದೀರಿ. ಮತ್ತು ಅಂತಹ ಬಲದೊಂದಿಗೆ ಕೂಡಿದ್ದೀರಿ. ಎಂಬ ಕಥನ ಅಶುದ್ಧವಾಗಿದೆ. ಏಕೆಂದರೆ ಗಿರಿ ಶಬ್ದದಿಂದ ಮೇಘವು ಗ್ರಹಿಸಲ್ಪಡುತ್ತದೆ.ಮತ್ತು ಜನಾನ್ ಶಬ್ದದಿಂದ ಸಾಮಾನ್ಯ ಗತಿಶೀಲರಾದವರು ಎಂಬುದನ್ನು ಗ್ರಹಣ ಮಾಡಲಾಗುತ್ತದೆ.

ಪುನಃ ಆ ವಾಯುಗಳಿಂದ ಏನೇನು ಉಪಕಾರವನ್ನು ಹೊಂದಬಹುದು ಎಂಬುದನ್ನು ತಿಳಿಸಲಾಗಿದೆ.

ಯದ್ಧ ಯಾಂತಿ ಮರುತಃ ಸಂ ಹ ಬ್ರುವತೇಽ ಧ್ವನ್ನಾ । ಶೃಣೋತಿ ಕಶ್ಚಿದೇಷಾಮ್ ॥೧೩॥

ಪದಾರ್ಥ:- ಯಾವ ರೀತಿ **[ಯತ್]** ಈ ಯಾವ **[ಮರುತಃ]** ಪವನಗಳು **[ಯಾಂತಿ]** ಬಂದುಹೋಗುತ್ತವೆಯೋ ಅದೇ ರೀತಿ **[ಅಧ್ವನ್]** ವಿದ್ಯಾ ಮಾರ್ಗದಲ್ಲಿ ಕುಶಲಿಗಳಾದ ವಿದ್ವಾಂಸರು **[ಹ]** ಸ್ಪಷ್ಟವಾಗಿ **[ಸಮಾಬ್ರುವತೇ]** ಸೇರಿ ಚೆನ್ನಾಗಿ ಉಪದೇಶವನ್ನು ಮಾಡುತ್ತಾರೆ. ಮತ್ತು **[ಯೇಷಾಂ]** ಈ ವಾಯುವಿನ ವಿದ್ಯೆಯನ್ನು **[ಕಶ್ಚಿತ್]** ಯಾವನೋ ವಿದ್ವಾಂಸನು **[ಶೃಣೋತಿ]** ಆಲಿಸುತ್ತಾನೆ ಮತ್ತು ತಿಳಿಯುತ್ತಾನೆ; ಸಾಧಾರಣ ಪುರುಷರಲ್ಲ.

ಭಾವಾರ್ಥ:- ಈ ವಾಯುವಿದ್ಯೆಯನ್ನು ಯಾವನೋ ವಿದ್ವಾಂಸನೇ ಚೆನ್ನಾಗಿ ತಿಳಿಯಬಲ್ಲನು. ಜಡ ಬುದ್ಧಿಯವನು ಇದನ್ನು ತಿಳಿಯಲಾರನು.

ಮೋಕ್ಷಮೂಲರ ಉಕ್ತಿ : ಯಾವಾಗ ನಿಶ್ಚಿತವಾಗಿ ಪವನವು ಪರಸ್ಪರ ಜೊತೆಯಾಗಿ ಹೋಗುತ್ತದೆಯೋ ಮತ್ತು ತಮ್ಮ ಮಾರ್ಗಗಳ ಮೇಲೆ ಹೇಳುತ್ತವೆಯೋ ಆಗ ಯಾವನೇ ಮನುಷ್ಯನು ಏನನ್ನು ತಾನೆ ಆಲಿಸಬಲ್ಲನು? ಅರ್ಥಾತ್ ಆಲಿಸಲಾರನು. ಈ ಕಥನವು ಅಶುದ್ಧವಾಗಿದೆ. ಏಕೆಂದರೆ ಪವನಗಳು ಜಡವಾದುದರಿಂದ ವಾರ್ತಾಲಾಪವನ್ನು ಮಾಡಲಾರವು. ಆದರೆ ಮಾತನಾಡುವ ಚೇತನ ಜೀವರಿಗೆ ಮಾತನಾಡಲು ಕಾರಣವಾಗುತ್ತವೆ.

ಮನುಷ್ಯರು ವಾಯುವಿನಿಂದ ಏನೇನು ಕಾರ್ಯವನ್ನು ಮಾಡಿಸಿಕೊಳ್ಳಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಪ್ರ ಯಾತ ಶೀಭಮಾಶುಭಿಃ ಸಂತಿ ಕಣ್ವೇಷು ವೋ ದುವಃ ।
ತತ್ರೋ ಷು ಮಾದಯಾಧ್ವೈ ॥೧೪॥

ಪದಾರ್ಥ:- ಹೇ ರಾಜಪುರುಷರೇ! ನೀವು **[ಆಶುಭಿಃ]** ಶೀಘ್ರವಾಗಿ ಗಮನಾಗಮನವನ್ನು ಮಾಡುವ ಯಾನಗಳಿಂದ **[ಶೀಭಮ್]** ವೇಗಶಾಲಿಯಾದ ವಾಯುವಿನಂತೆ **[ಪ್ರಯಾತ]** ಉತ್ತಮ ರೀತಿಯಲ್ಲಿ ಅಬೀಷ್ಟ ಸ್ಥಾನಗಳನ್ನು ಹೊಂದುವವರಾಗಿರಿ. **[ಕಣ್ವೇಷು]** ಯಾವ ಬುದ್ಧಿವಂತರಾದ ವಿದ್ವಾಂಸರಲ್ಲಿ **[ವಃ]** ನಿಮ್ಮ **[ದುಹಃ]** ಸತ್ಕ್ರಿಯೆಗಳಿವೆಯೋ **[ತತ್ರ ಉ]** ಆ ವಿದ್ವಾಂಸರಲ್ಲಿ ನೀವು **[ಸು ಮಾದಯಾಧ್ವೈ]** ಸುಂದರ ರೀತಿಯಿಂದ ಪ್ರಸನ್ನರಾಗಿರಿ.

ಭಾವಾರ್ಥ:- ರಾಜ ಮತ್ತು ಪ್ರಜೆಗಳ ವಿದ್ವಾಂಸರಿಗೆ ಯೋಗ್ಯವಾದುದೇನೆಂದರೆ ವಾಯುವಿನಂತೆ ಅಭೀಷ್ಟ ಸ್ಥಾನಗಳಿಗೆ ಶೀಘ್ರವಾಗಿ ಹೋಗಿಬರಲು ವಿಮಾನಾದಿ ಯಾನಗಳನ್ನು ರಚಿಸಿ ತಮ್ಮ ಕಾರ್ಯಗಳನ್ನು ನಿರಂತರವಾಗಿ

ಸಿದ್ಧಿಗೊಳಿಸಿಕೊಳ್ಳಬೇಕು ಮತ್ತು ಧರ್ಮಾತ್ಮರ ಸೇವೆಯನ್ನು ದುಷ್ಟರ ದಂಡನೆಯನ್ನು ಮಾಡುವುದರಲ್ಲಿ ಸದಾ ಆನಂದಿತರಾಗಿರಬೇಕು.

ಮೋಕ್ಷಮೂಲರರ ಕಥನ: ನೀವು ತೀವ್ರಗತಿಯುಳ್ಳ ಕುದುರೆಗಳ ಮೇಲೆ ಕುಳಿತು ಬನ್ನಿರಿ ಮತ್ತು ನಿಮ್ಮ ಪೂಜಾರಿಯಾದ ಕಣ್ವರ ಮಧ್ಯದಲ್ಲಿ ಆನಂದಿತರಾಗಿರಿ. ಈ ಕಥನವು ಅಶುದ್ಧವಾಗಿದೆ. ಏಕೆಂದರೆ ತೀವ್ರವೇಗ ಆದಿ ಗುಣಗಳೇ ವಾಯುವಿನಲ್ಲಿ ಇವೆ. ಆ ಗುಣಗಳು ಅವುಗಳಲ್ಲಿ ಸಮವಾಯ ಸಂಬಂಧದಿಂದ ಇರುತ್ತವೆ. ಅವುಗಳ ಮೇಲೆ ಪವನಗಳ ಸವಾರಿಯು ಸಂಭವವಲ್ಲ ಮತ್ತು ಕಣ್ವ ಶಬ್ದದಿಂದ ವಿದ್ವಾಂಸ ಎಂದು ಗ್ರಹಿಸಬೇಕು. ಆ ವಿದ್ವಾಂಸರ ನಡುವೆ ವಾಸಿಸುವುದರಿಂದ ವಿದ್ಯೆ, ಜ್ಞಾನ ಪ್ರಾಪ್ತಿಯಾಗಿ ಆನಂದ ಉಂಟಾಗುತ್ತದೆ.

ಪುನಃ ಆ ಪವನಗಳು ಯಾವ ಯಾವ ಪ್ರಯೋಜನಕ್ಕಾಗಿವೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಅಸ್ತಿ ಹಿ ಷ್ಮಾ ಮದಾಯ ವಃ ಸ್ಮಸಿ ಷ್ಮಾ ವಯಮೇಷಾಮ್ । ವಿಶ್ವಂ ಚಿದಾಯುರ್ಜೀವಸೇ ॥೧೫॥

ಪದಾರ್ಥ:- ಹೇ ವಿದ್ವಾಂಸರೇ ! **[ಏಷಾಮ್]** ಯಾವ ಪವನಗಳ ಪ್ರಕಾಶದಿಂದ ವಿದ್ಯಾಪ್ರಾಪ್ತಿಯಾಗಿದೆಯೋ **[ಹಿ]** ಯಾವ ಕಾರಣದಿಂದ **[ಸ್ಮ]** ನಿಶ್ಚಯವಾಗಿಯೂ **[ವಃ]** ನಿಮ್ಮ **[ಮದಾಯ]** ಆನಂದಪೂರ್ವಕವಾಗಿ **[ಜೀವಸೇ]** ಜೀವಿಸಲಿಕ್ಕಾಗಿ **[ವಿಶ್ವಂ]** ಸಮಸ್ತ **[ಆಯುಃ]** ಆಯುಷ್ಯವು **[ಅಸ್ತಿ]** ಇದೆಯೋ ಅದೇ ರೀತಿ **[ವಯಂ]** ನಿಮ್ಮ ಉಪದೇಶವನ್ನು ಹೊಂದಿದ ನಾವು **[ಚಿತ್]** ಸಹ **[ಸ್ಮಸಿ ಸ್ಮ]** ನಿರಂತರವಾಗಿ ಇರೋಣ.

ಭಾವಾರ್ಥ:- ಯಾವ ರೀತಿ ಯೋಗಾಭ್ಯಾಸವನ್ನು ಮಾಡಿ ಪ್ರಾಣವಿದ್ಯೆಯನ್ನೂ ವಾಯುವಿನ ವಿಕಾರಗಳನ್ನು ಚೆನ್ನಾಗಿ ತಿಳಿಯುವವರೂ ಆದ ಪಥ್ಯಕಾರೀ ವಿದ್ವಾಂಸರು ಆನಂದಪೂರ್ವಕವಾಗಿ ತಮ್ಮ ಪೂರ್ಣ ಆಯುಷ್ಯವನ್ನು ಭೋಗಿಸುತ್ತಾರೋ ಹಾಗೆಯೇ ಇತರರೂ ಸಹ ಮಾಡಬೇಕು. ಆ ವಿದ್ವಾಂಸರ ಸಂಪರ್ಕದಿಂದ ಆ ವಾಯುವಿದ್ಯೆಯನ್ನು ಅರಿತು ಆಯುಷ್ಯವನ್ನು ಸುಖಪೂರ್ವಕವಾಗಿ ಕಳೆಯಬೇಕು.

ಮೋಕ್ಷಮೂಲರರ ಉಕ್ತಿ : ನಿಶ್ಚಯವಾಗಿಯೂ ನಿಮ್ಮ ಪ್ರಸನ್ನತೆಯು ಪುಷ್ಕಳವಾಗಿದೆ. ನಾವು ಸದಾಕಾಲ ನಿಮ್ಮ ಭೃತ್ಯರಾಗಿಯೇ ನಮ್ಮ ಸಂಪೂರ್ಣ ಆಯುಷ್ಯವನ್ನು ಕಳೆಯುತ್ತೇವೆ. ಎಂಬ ಕಥನವು ಅಶುದ್ಧವಾಗಿದೆ. ಏಕೆಂದರೆ ಇಲ್ಲಿ ಪ್ರಾಣರೂಪೀ ವಾಯುವಿನಿಂದ ಜೀವನ ಉಂಟಾಗುತ್ತದೆ. ನಾವುಗಳು ಇಂತಹ ವಿದ್ಯೆಯನ್ನು ತಿಳಿಯುತ್ತೇವೆ ಎಂಬುದು ಮಂತ್ರದ ಅರ್ಥವಾಗಿದೆ.

ಇದೇ ರೀತಿ ಹೇಗೆ ಮೋಕ್ಷಮೂಲರ ಮಹಾಶಯರು ತಮ್ಮ ಕಪೋಲಕಲ್ಪನೆಯಿಂದ ತಮ್ಮ ಮಂತ್ರಗಳ ಅರ್ಥಕ್ಕೆ ವಿರುದ್ಧವಾದುದನ್ನು ವರ್ಣಿಸಿದ್ದಾರೋ, ಹಾಗೆಯೇ ಮುಂದೆಯೂ ಸಹ ಅವರ ಉಕ್ತಿಗಳು ಅಶುದ್ಧತೆಯಿಂದ ಕೂಡಿವೆ ಎಂಬುದನ್ನು ಎಲ್ಲರೂ ಮನಗಾಣಬೇಕು. ನಾವು ಪಕ್ಷಪಾತವನ್ನು ತ್ಯಜಿಸಿ ಇಲ್ಲಿ ರಚಿಸಲ್ಪಟ್ಟ ಮಂತ್ರಾರ್ಥ ಭಾಷ್ಯವನ್ನು ಮೋಕ್ಷಮೂಲರರ ಭಾಷ್ಯದೊಂದಿಗೆ ತುಲನೆ, ಪರೀಕ್ಷೆ, ಮತ್ತು ವಿವೇಚನೆ ಮಾಡಬೇಕು. ಆಗಲೇ ಅವರು ಮಾಡಿರುವ ಅಶುದ್ಧ ಭಾಷ್ಯವು ತಿಳಿದುಬರುತ್ತದೆ. ಮುಂದೆಯೂ ಸಹ ಈ ವಿಚಾರದಲ್ಲಿ ಹೆಚ್ಚು ಬರೆಯಬೇಕಾದ ಅಗತ್ಯವಿಲ್ಲ. ಈ ಸೂಕ್ತದಲ್ಲಿ ಅಗ್ನಿಯ ಪ್ರಕಾಶ ಮಾಡುವ ಸಕಲ ಪ್ರಯತ್ನಗಳು ಮತ್ತು ಆಯುವಿನ ನಿಮಿತ್ತ ವಾಯು ಮತ್ತು ಆ ವಾಯುವಿದ್ಯೆಯನ್ನು ತಿಳಿಯುವ ರಾಜ-ಪ್ರಜೆಗಳ-ವಿದ್ವಾಂಸರ ಗುಣವರ್ಣನೆಯನ್ನು ಈ ಸೂಕ್ತಾರ್ಥದಲ್ಲಿ ಮಾಡಿರುವುದರಿಂದ ಪೂರ್ವಸೂಕ್ತಾರ್ಥದೊಂದಿಗೆ ಸಂಗತಿಯಾಗಿದೆ ಎಂಬುದನ್ನು ತಿಳಿಯಬೇಕು.

ಮೂವತ್ತೇಳನೆಯ ಸೂಕ್ತ ಸಮಾಪ್ತ

ಸೂಕ್ತ ೩೮

ಮಂತ್ರಸಂಖ್ಯೆ ೧೫ । ಋಷಿಃ - ಕಣ್ವೋ ಘೌರಃ । ದೇವತಾ - ಮರುತಃ । ಛಂದಃ - ೧, ೮, ೧೧, ೧೩, ೧೫ ಗಾಯತ್ರೀ, ೨, ೬, ೭, ೯, ೧೦, ನಿಚೃದ್ ಗಾಯತ್ರೀ, ೩ ಪಾದನಿಚೃದ್, ೫, ೧೨ ಪಿಪೀಲಿಕಾ ಮಧ್ಯಾ ನಿಚೃತ್, ೧೪ ಯವಮಧ್ಯಾ ವಿರಾಡ್ ಗಾಯತ್ರೀ । ಸ್ವರಃ - ಷಡ್ಜಃ ।

ಈ ಸೂಕ್ತದ ಪ್ರಾರಂಭದಲ್ಲಿ ಮನುಷ್ಯರು ವಾಯುವಿನಂತೆ ಆಗಬೇಕು.

ಕದ್ಧ ನೂನಂ ಕಧಪ್ರಿಯಃ ಪಿತಾ ಪುತ್ರಂ ನ ಹಸ್ತಯೋಃ । ದಧಿಧ್ವೇ ವೃಕ್ತಬರ್ಹಿಷಃ ॥೧॥

ಪದಾರ್ಥ:- ಹೇ **[ಕಧಪ್ರಿಯಾಃ]** ಸತ್ಯ ಕಥನಗಳನ್ನು ಪ್ರೀತಿಸುವವರಾದ **[ವೃಕ್ತಬರ್ಹಿಷಃ]** ಋತ್ವಿಜ ವಿದ್ವಾಂಸರೇ! [ನ] ಯಾವ ರೀತಿ **[ಪಿತಾ]** ಉತ್ಪನ್ನಗೊಳಿಸುವ ಜನಕನು **[ಪುತ್ರಂ]** ಪುತ್ರನನ್ನು **[ಹಸ್ತಯೋಃ]** ಕೈಗಳಿಂದ ಧಾರಣೆ ಮಾಡುತ್ತಾನೋ ಮತ್ತು ಯಾವ ರೀತಿ ವಾಯುವು ಲೋಕಗಳನ್ನು ಧಾರಣೆ ಮಾಡುತ್ತದೆಯೋ ಅದೇ ರೀತಿ **[ಕದ್ಧ]** ಯಾವಾಗ ಪ್ರಸಿದ್ಧಿಯಿಂದ **[ನೂನಂ]** ನಿಶ್ಚಯವಾಗಿ ಯಜ್ಞಕರ್ಮವನ್ನು **[ದಧಿಧ್ವೇ]** ಧಾರಣ ಮಾಡುವಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ತಂದೆಯು ತನ್ನ ಕೈಗಳಿಂದ ಪುತ್ರನನ್ನು ಎತ್ತಿಕೊಂಡು ಪ್ರೀತಿಪೂರ್ವಕವಾಗಿ ಶಿಕ್ಷಣವನ್ನು ನೀಡಿ ಪಾಲಿಸುತ್ತಾನೋ ಹಾಗೂ ಉತ್ತಮ ಕರ್ಮಗಳಲ್ಲಿ ನಿಯುಕ್ತನನ್ನಾಗಿಸಿ ಸುಖಿಯನ್ನಾಗಿ ಮಾಡುತ್ತಾನೋ ಮತ್ತು ಪವನವು ಯಾವ ರೀತಿ ಎಲ್ಲ ಲೋಕಗಳನ್ನು ಧಾರಣೆ ಮಾಡುತ್ತದೆಯೋ ಅದೇ ರೀತಿ ವಿದ್ಯೆಯಿಂದ ಯಜ್ಞದ ಗ್ರಹಣವನ್ನು ಮಾಡಿ ಯುಕ್ತಿಪೂರ್ವಕವಾಗಿ ಅದನ್ನು ಸೇವಿಸುವವರು ಸುಖಿಗಳಾಗುತ್ತಾರೆ.

ಪುನಃ ಮನುಷ್ಯರು ಪರಸ್ಪರ ಯಾವ ರೀತಿ ಪ್ರಶ್ನೋತ್ತರಗಳನ್ನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಕ್ವ ನೂನಂ ಕದ್ವೋ ಅರ್ಥಂ ಗಂತಾ ದಿವೋ ನ ಪೃಥಿವ್ಯಾಃ ।
ಕ್ವ ವೋ ಗಾವೋ ನ ರಣ್ಯಂತಿ ॥೨॥

ಪದಾರ್ಥ:- ಹೇ ಮನುಷ್ಯರೇ! ನೀವು [ನ] ಯಾವ ರೀತಿ **[ಕತ್]** ಯಾವಾಗ **[ನೂನಂ]** ನಿಶ್ಚಯವಾಗಿ **[ಪೃಥಿವ್ಯಾಃ]** ಭೂಮಿಯ ಬಾಷ್ಪ ಮತ್ತು **[ದಿವಃ]** ಪ್ರಕಾಶಕರ್ಮ ಕರ್ತನಾದ ಸೂರ್ಯನ **[ಗಾವಃ]** ಕಿರಣಗಳು [ಅರ್ಥಂ] ಪದಾರ್ಥವನ್ನು **[ಗಂತ]** ಪ್ರಾಪ್ತಿಸುತ್ತವೋ ಅದೇ ರೀತಿ **[ಕ್ವ]** ಎಲ್ಲಿ **[ವಃ]** ನಿಮ್ಮ ಅರ್ಥವನ್ನು **[ಗಂತ]** ಪ್ರಾಪ್ತಿಸುತ್ತೀರೋ **[ಗಾವಃ]** ಗೋ ಆದಿ ಪಶುಗಳು ತಮ್ಮ ಕರುಗಳ ಬಗೆಗೆ **[ರಣ್ಯಂತಿ]** ಶಬ್ದವನ್ನು ಮಾಡುತ್ತವೆಯೋ ಹಾಗೆಯೇ **[ವಃ]** ನಿಮ್ಮ ಗೋವು ಮೊದಲಾದವುಗಳು ಶಬ್ದಮಾಡುವಂತೆ ವಾಯುವು **[ಕ್ವ]** ಎಲ್ಲಿ ಶಬ್ದ ಮಾಡುತ್ತವೆ?

ಭಾವಾರ್ಥ:- ಈ ಮಂತ್ರದಲ್ಲಿ ಎರಡು ಉಪಮಾಲಂಕಾರಗಳಿವೆ. ಹೇ ಮನುಷ್ಯರೇ! ಯಾವ ರೀತಿ ಸೂರ್ಯನ ಕಿರಣಗಳು ಪೃಥ್ವಿಯಲ್ಲಿ ಸ್ಥಿತವಾದ ಪದಾರ್ಥಗಳನ್ನು ಪ್ರಕಾಶಗೊಳಿಸುತ್ತವೆಯೋ, ಅದೇ ರೀತಿ ನೀವೂ ಸಹ ವಿದ್ವಾಂಸರ ಸಮೀಪಕ್ಕೆ ಹೋಗಿ ವಾಯುವನ್ನು ಎಲ್ಲಿ ನಿಯುಕ್ತಗೊಳಿಸಬೇಕು ಎಂದು ಕೇಳಿ ಅರ್ಥಗಳನ್ನು ಪ್ರಕಾಶಪಡಿಸಿರಿ. ಮತ್ತು ಯಾವ ರೀತಿ ಗೋವು ತನ್ನ ಕರುಗಳತ್ತ ಅಂಬಾರವವನ್ನು ಮಾಡುತ್ತಾ ಓಡುತ್ತದೆಯೋ ಅದೇ ರೀತಿ ನೀವೂ ಸಹ ವಿದ್ವಾಂಸರ ಸಂಗವನ್ನು ಪ್ರಾಪ್ತಿಸಿರಿ. ಹಾಗೂ ನಾವುಗಳು ನಮ್ಮ ಇಂದ್ರಿಯಗಳು ವಾಯುವಿನಂತೆ ಎಲ್ಲಿ ಸ್ಥಿತವಾಗಿ ಅರ್ಥಗಳನ್ನು ಹೊಂದುತ್ತವೆ ಎಂದು ಪ್ರಶ್ನಿಸಿ ನಿಶ್ಚಯಪಡಿಸಿಕೊಳ್ಳಿರಿ.

ಪುನಃ ಅದೇ ವಿಷಯವನ್ನು ತಿಳಿಸಲಾಗುತ್ತದೆ.

ಕ್ವ ವಃ ಸುಮ್ನಾ ನವ್ಯಾಂಸಿ ಮರುತಃ ಕ್ವ ಸುವಿತಾ । ಕ್ವೋ೩ ವಿಶ್ವಾನಿ ಸೌಭಗಾ ॥೩॥

ಪದಾರ್ಥ:- ಹೇ **[ಮರುತಃ]** ವಾಯುವಿನಂತೆ ಶೀಘ್ರಗಮನಕಾರಿಗಳಾದ ಮನುಷ್ಯರೇ! ನೀವು ವಿದ್ವಾಂಸರ ಸಮೀಪ ಪ್ರಾಪ್ತರಾಗಿ **[ವಃ]** ನಿಮ್ಮ **[ವಿಶ್ವಾನಿ]** ಸಮಸ್ತ **[ನವ್ಯಾಂಸಿ]** ನವೀನವಾದ **[ಸುಮ್ನಾ]** ಸುಖವನ್ನು **[ಕ್ವ]** ಎಲ್ಲಿ ಎಲ್ಲರೂ **[ಸುವಿತಾ]** ಪ್ರೇರಣೆ ಮಾಡುವ ಗುಣವನ್ನು **[ಕ್ವ]** ಎಲ್ಲಿ ಮತ್ತು ನವೀನವಾದ **[ಸೌಭಗಾ]** ಸೌಭಾಗ್ಯ ಪ್ರಾಪ್ತಿ ಮಾಡುವ ಕರ್ಮಗಳು **[ಕ್ವೋ]** ಎಲ್ಲಿ ಎಂದು ಕೇಳಿರಿ.

ಭಾವಾರ್ಥ:- ಹೇ ಶುಭಕರ್ಮಗಳಲ್ಲಿ ವಾಯುವಿನಂತೆ ಶೀಘ್ರಗತಿಶೀಲರಾದ ಮಾನವರೇ! ನೀವು ವಿದ್ವಾಂಸರ ಬಗೆಗೆ ಪ್ರಶ್ನಿಸುತ್ತಾ ಯಾವ ಪ್ರಕಾರ ನವೀನಕ್ರಿಯೆಯ ಸಿದ್ಧಿಯ ನಿಮಿತ್ತ ಕರ್ಮವನ್ನು ಹೊಂದಬೇಕೋ ಆ ರೀತಿಯ ಉತ್ತಮ ಪ್ರಕಾರದ ನಿರಂತರ ಯತ್ನವನ್ನು ಮಾಡುವವರಾಗಿರಿ.

ಪುನಃ ಆ ರಾಜಪುರುಷನು ಹೇಗಿರಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಯದ್ ಯೂಯಂ ಪೃಶ್ನಿಮಾತರೋ ಮರ್ತಾಸಃ ಸ್ಯಾತನ । ಸ್ತೋತಾ ವೋ ಅಮೃತಃ ಸ್ಯಾತ್ ॥೪॥

ಪದಾರ್ಥ:- ಹೇ **[ಪೃಶ್ನಿಮಾತರಃ]** ಯಾವ ಪವನಗಳ ಮಾತೆಯಾದ ಆಕಾಶವಿದೆಯೋ ಅವುಗಳಂತಿರುವ **[ಮರ್ತಾಸಃ]** ಮರಣ ಧರ್ಮಿಗಳಾದ ರಾಜಾ ಮತ್ತು ಪ್ರಜಾ ಜನರೇ! **[ಯೂಯಂ]** ನೀವು ಪುರುಷಾರ್ಥಯುಕ್ತರಾಗಿ **[ಯತ್]** ಯಾವ ನಿಮ್ಮ ನಿಮ್ಮ ಕಾರ್ಯಗಳಲ್ಲಿ **[ಸ್ಯಾತನ]** ಇದ್ದೀರೋ **[ವಃ]** ನಿಮ್ಮ ರಕ್ಷಣೆಯನ್ನು ಮಾಡುವ **[ಸ್ತೋತಾ]** ಸ್ತುತಿಕರ್ತಾ ಸಭಾಧ್ಯಕ್ಷನಾದ ರಾಜನು **[ಅಮೃತಃ]** ಅಮೃತಸುಖಯುಕ್ತನಾಗಿ **[ಸ್ಯಾತ್]** ಆಗಲಿ.

ಭಾವಾರ್ಥ:- ರಾಜಾ ಮತ್ತು ಪ್ರಜಾಜನರಿಗೆ ಉಚಿತವಾದುದೇನೆಂದರೆ ಅವರು ಆಲಸ್ಯವನ್ನು ತ್ಯಜಿಸಿ, ವಾಯುವಿನಂತೆ ತಮ್ಮ ತಮ್ಮ ಕಾರ್ಯಗಳಲ್ಲಿ ನಿಯುಕ್ತರಾಗಲಿ. ಇದರಿಂದ ಎಲ್ಲರ ರಕ್ಷಕನಾದ ಸಭಾಧ್ಯಕ್ಷರಾಜನು ಶತ್ರುಗಳಿಂದ ಕೊಲ್ಲಲ್ಪಡುವುದಿಲ್ಲ.

ಆ ವಾಯುಗಳ ಸಂಬಂಧದಿಂದ ಜೀವನಿಗೆ ಏನಾಗುತ್ತದೆ ಎಂಬುದನ್ನು ತಿಳಿಸಲಾಗುತ್ತದೆ.

ಮಾ ವೋ ಮೃಗೋ ನ ಯವಸೇ ಜರಿತಾ ಭೂದಜೋಷ್ಯಃ ।
ಪಥಾ ಯಮಸ್ಯ ಗಾದುಪ ॥೫॥

ಪದಾರ್ಥ:- ಹೇ ರಾಜಾ ಮತ್ತು ಪ್ರಜಾಜನರೇ! ನೀವುಗಳು **[ನ]** ಯಾವ ರೀತಿ **[ಮೃಗಃ]** ಜಿಂಕೆಯು **[ಯವಸೇ]** ತಿನ್ನಲು ಯೋಗ್ಯವಾದ ಹುಲ್ಲನ್ನು ತಿನ್ನುವ ನಿಮಿತ್ತ ಪ್ರವೃತ್ತವಾಗುತ್ತದೆಯೋ ಅದೇ ರೀತಿ **[ವಃ]** ನಿಮ್ಮ **[ಜರಿತಾ]** ವಿದ್ಯೆಗಳ ದಾತನೂ **[ಅಜೋಷ್ಯಃ]** ಅಸೇವನೀಯ ಅರ್ಥಾತ್ ಬೇರೆಯಾಗಿ **[ಮಾ ಭೂತ್]** ಆಗದಿರಲಿ. ಹಾಗೂ **[ಯಮಸ್ಯ]** ನಿಗ್ರಹ ಮಾಡುವ ವಾಯುವಿನ **[ಪಥಾ]** ಮಾರ್ಗದಿಂದ **[ಮೋಪಗಾತ್]** ಎಂದಿಗೂ ಅಲ್ಪಾಯುವಾಗಿ ಮೃತ್ಯುವನ್ನು ಹೊಂದದಿರಲಿ. ಆ ರೀತಿಯ ಕಾರ್ಯವನ್ನು ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಜಿಂಕೆಯು ಯುಕ್ತಿಯಿಂದ ನಿರಂತರ ಹುಲ್ಲನ್ನು ತಿಂದು ಸುಖಿಯಾಗುತ್ತದೆಯೋ ಅದೇ ರೀತಿ ಪ್ರಾಣವಾಯುವಿನ ವಿದ್ಯೆಯನ್ನು ತಿಳಿಯುವ ಮನುಷ್ಯನು

ಯುಕ್ತಿಪೂರ್ವಕವಾಗಿ ಆಹಾರವಿಹಾರಗಳನ್ನು ಮಾಡಿ ವಾಯುವಿನ ಮಾರ್ಗದಿಂದ ಅರ್ಥಾತ್ ಮೃತ್ಯುವನ್ನು ಹೊಂದುವುದಿಲ್ಲ. ಮತ್ತು ಸಂಪೂರ್ಣ ಆಯುಷ್ಯವನ್ನು ಭೋಗಿಸಿ ಸುಖವಾಗಿ ಶರೀರವನ್ನು ತ್ಯಜಿಸುತ್ತಾನೆ. ಎಂದರೆ ಸದಾ ವಿದ್ಯೆಯನ್ನು ಓದಿರಿ ಮತ್ತು ಓದಿಸಿರಿ. ಎಂದಿಗೂ ವಿದ್ಯಾರ್ಥಿ ಮತ್ತು ಆಚಾರ್ಯರು ವಿಯುಕ್ತರಾಗದಿರಲಿ. ಮತ್ತು ಪ್ರಮಾದದಿಂದ ಅಲ್ಪಾಯುಗಳಾಗಿ ಮರಣ ಹೊಂದದಿರಲಿ.

ಮತ್ತೆ ಪೂರ್ವೋಕ್ತ ವಿಷಯವನ್ನೇ ತಿಳಿಸಲಾಗುತ್ತದೆ.

ಮೋ ಷು ಣಃ ಪರಾಪರಾ ನಿರ್ಋತಿರ್ದುರ್ಹಣಾ ವಧೀತ್ ।

ಪದೀಷ್ಟ ತೃಷ್ಣಯಾ ಸಹ ॥೬॥

ಪದಾರ್ಥ:- ಹೇ ಅಧ್ಯಾಪಕ ಜನರೇ! ನೀವು ಯಾವ ರೀತಿ **[ಪರಾಪರಾ]** ಉತ್ತಮ, ಮಧ್ಯಮ ಮತ್ತು ನಿಕೃಷ್ಟವಾದ **[ದುರ್ಹಣಾ]** ದುಃಖದಿಂದ ದೂರವಾಗಲು ಯೋಗ್ಯವಾದ **[ನಿರ್ಋತಿಃ]** ಪವನಗಳ ರೋಗಕಾರಕ ಅಥವಾ ದುಃಖದಾಯಿನೀ ಗತಿಯು **[ತೃಷ್ಣಯಾ]** ನೀರಡಿಕೆ ಅಥವಾ ಲೋಭದ ಗತಿಯ **[ಸಹ]** ಜೊತೆಯಲ್ಲಿ **[ನಃ]** ನಮಗೆ **[ಮೋಪದೀಷ್ಟ]** ಎಂದಿಗೂ ಪ್ರಾಪ್ತವಾಗದಿರಲಿ. ಮತ್ತು **[ಮಾ ವಧೀತ್]** ಮಧ್ಯದಲ್ಲಿಯೇ ಸಾಯದಿರಲಿ. ಆದರೆ ಈ ಪವನಗಳ ಸುಖದಾಯಕವಾದ ಯಾವ ಗತಿ ಇದೆಯೋ ಅದು ನಮಗೆ ನಿತ್ಯವೂ ಪ್ರಾಪ್ತವಾಗುವಂತಹ ಪ್ರಯತ್ನವನ್ನು ಮಾಡಿರಿ.

ಭಾವಾರ್ಥ:- ಪವನಗಳಿಗೆ ಎರಡು ಪ್ರಕಾರದ ಗತಿಯಿರುತ್ತವೆ. ಒಂದು ಸುಖಕಾರಕವಾದುದು. ಮತ್ತೊಂದು ದುಃಖದಾಯಕವಾದುದು. ಅದರಲ್ಲಿ ಯಾವುದು ಉತ್ತಮ ನಿಯಮಗಳಿಂದ ಸೇವಿಸಲ್ಪಟ್ಟು ರೋಗಗಳ ಹನನ ಮಾಡುತ್ತದೆಯೋ ಮತ್ತು ಶರೀರಾದಿಗಳಿಗೆ ಸುಖದ ಕಾರಣವಾಗುತ್ತದೆಯೋ ಅದು ಮೊದಲನೆಯದು. ಯಾವುದು ಖೊಟ್ಟಿ ನಿಯಮವಿದೆಯೋ ಮತ್ತು ಪ್ರಮಾದದಿಂದ ಉತ್ಪನ್ನವಾದ ಕ್ಲೇಶ, ದುಃಖ, ಮತ್ತು ರೋಗಗಳನ್ನು ನೀಡುವಂತಹುದಾಗಿದೆಯೋ ಅದು ಎರಡನೆಯದು. ಇವುಗಳ ಮಧ್ಯದಲ್ಲಿ ಮಾನವರಿಗೆ ಅತಿ ಉಚಿತವಾದುದೇನೆಂದರೆ ಪರಮೇಶ್ವರನ ಅನುಗ್ರಹ ಮತ್ತು ತನ್ನ ಪುರುಷಾರ್ಥಗಳಿಂದ ಮೊದಲನೆಯ ಗತಿಯನ್ನು ಉತ್ಪನ್ನ ಮಾಡಿ ಎರಡನೆಯದನ್ನು ನಾಶಗೊಳಿಸಿ ಸುಖವನ್ನೂ, ಉನ್ನತಿಯನ್ನೂ ಹೊಂದಬೇಕು. ಯಾವುದು ಪಿಪಾಸೆ ಮೊದಲಾದ ಧರ್ಮವಿದೆಯೋ ಅದು ವಾಯುವಿನ ನಿಮಿತ್ತದಿಂದ ಹಾಗೂ ಯಾವುದು ಲೋಭದ ವೇಗವಿದೆಯೋ ಅದು ಅಜ್ಞಾನದಿಂದಲೇ ಉತ್ಪನ್ನವಾಗುತ್ತದೆ.

ಪುನಃ ಅವರು ಹೇಗಿರುತ್ತಾರೆ ಎಂಬುದನ್ನು ತಿಳಿಸಲಾಗುತ್ತದೆ.

ಸತ್ಯಂ ತ್ವೇಷಾ ಅಮವಂತೋ ಧನ್ವಞ್ಚಿದಾ ರುದ್ರಿಯಾಸಃ । ಮಿಹಂ ಕೃಣ್ವನ್ತ್ಯವಾತಾಮ್ ॥೭॥

ಪದಾರ್ಥ:- ಹೇ ಮನುಷ್ಯರೇ! ನೀವುಗಳು ಯಾವ ರೀತಿ **[ಧನ್ವನ್]** ಅಂತರಿಕ್ಷದಲ್ಲಿ **[ತ್ವೇಷಾಃ]** ಬಾಹ್ಯ ಮತ್ತು ಆಂತರಿಕ ಘರ್ಷಣದಿಂದ ಉತ್ಪನ್ನವಾದ ವಿದ್ಯುತ್ತಿನಿಂದ ಪ್ರದೀಪ್ತವಾದ **[ಅಮವಂತಃ]** ಯಾರ ಸಂಬಂಧವು ರೋಗಗಳು ಮತ್ತು ಗಮನಾಗಮನ ರೂಪವುಳ್ಳವರೊಂದಿಗೆ ಇದೆಯೋ **[ರುದ್ರಿಯಾಸಃ]** ಪ್ರಾಣಿಗಳ ಜೀವನಕ್ಕೆ ನಿಮಿತ್ತವಾಗಿರುವ ವಾಯು **[ಅವಾತಾಮ್]** ಹಿಂಸಾರಹಿತವಾದ **[ಮಿಹಂ]** ಸೆಳೆಯಲ್ಪಡುವ ವೃಷ್ಟಿಯನ್ನು **[ಆಕೃಣ್ವನ್ತಿ]** ಉತ್ತಮ ಪ್ರಕಾರದಿಂದ ಸಂಪಾದನೆ ಮಾಡಲಾಗುತ್ತದೆಯೋ ಮತ್ತು ಇದರ **[ಸತ್ಯಂ]** ಸತ್ಯಕರ್ಮವಾಗಿದೆಯೋ **[ಚಿತ್]** ಅದೇ ರೀತಿ ಸತ್ಯಕರ್ಮಗಳ ಅನುಷ್ಠಾನವನ್ನು ಮಾಡಿರಿ.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ ಯಾವ ರೀತಿ ಅಂತರಿಕ್ಷದಲ್ಲಿರುವ ಹಾಗೂ ಸತ್ಯಗುಣ ಮತ್ತು ಸ್ವಭಾವವುಳ್ಳ ಪವನವು ವೃಷ್ಟಿಯ ಕಾರಣವಾಗುತ್ತದೆಯೋ ಅದೇ ಯುಕ್ತಿಯಿಂದ ಸೇವಿಸಲ್ಪಟ್ಟ ಅನುಕೂಲಕರವಾಗಿ ಸುಖನೀಡುವ ಮತ್ತು ಯುಕ್ತಿ ರಹಿತ ಸೇವನೆಯಿಂದ ಪ್ರತಿಕೂಲವಾಗಿ ದುಃಖದಾಯಕವಾಗುತ್ತದೆಯೋ ಹಾಗೆಯೇ ಯುಕ್ತಿಯಿಂದ ಧರ್ಮಾನುಕೂಲ ಕರ್ಮಗಳನ್ನು ಸೇವಿಸಬೇಕು.

ಈ ಮನುಷ್ಯರು ಯಾರ ಸಮಾನವಾಗಿ ಏನನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ವಾಶ್ರೇವ ವಿದ್ಯುನ್ಮಿಮಾತಿ ವತ್ಸಂ ನ ಮಾತಾ ಸಿಷಕ್ತಿ । ಯದೇಷಾಂ ವೃಷ್ಟಿರಸರ್ಜಿ ॥೮॥

ಪದಾರ್ಥ:- ಹೇ ಮನುಷ್ಯರೇ! ನೀವುಗಳು **[ಯತ್]** ಯಾವ **[ಏಷಾಂ]** ಈ ವಾಯುವಿನ ಯೋಗದಿಂದ ಉತ್ಪನ್ನವಾದ **[ವಿದ್ಯುತ್]** ವಿದ್ಯುತ್ತನ್ನು **[ವಾಶ್ರೇವ]** ಯಾವ ರೀತಿ ಗೋವು ತನ್ನ **[ವತ್ಸಂ]** ಕರುವನ್ನು ಬಯಸುತ್ತಾ ಸೇವಿಸುತ್ತದೆಯೋ ಅದೇ ರೀತಿ ವೃಷ್ಟಿಯನ್ನು **[ಮಿಮಾತಿ]** ಉತ್ಪನ್ನಗೊಳಿಸಿ ಇಚ್ಛೆಯನ್ನು ಮಾಡುತ್ತಾ **[ಮಾತಾ]** ಮಾನ್ಯಮಾಡುವವಳಾದ ತಾಯಿಯು ಪುತ್ರನನ್ನು ಹಾಲಿನಿಂದ **[ಸಿಷಕ್ತಿ ನ]** ಯಾವ ರೀತಿ ತಣಿಸುತ್ತಾಳೋ ಅದೇ ರೀತಿ ಪದಾರ್ಥಗಳನ್ನು ಸೇವಿಸುತ್ತದೆ. ಯಾವುದು **[ವೃಷ್ಟಿಃ]** ಮಳೆಯನ್ನು **[ಅಸರ್ಜಿಃ]** ಉಂಟುಮಾಡುತ್ತದೆಯೋ ಅದೇ ರೀತಿ ಶುಭಗುಣ ಕರ್ಮಗಳಿಂದ ಒಬ್ಬರು ಇನ್ನೊಬ್ಬರ ಸುಖಕಾರಕರಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಎರಡು ಉಪಮಾಲಂಕಾರವಿದೆ. ಹೇ ವಿದ್ವಾಂಸರಾದ ಮಾನವರೇ! ನಿಮಗೆ ಯೋಗ್ಯವಾದುದೇನೆಂದರೆ ಯಾವ ರೀತಿ ತಮ್ಮ ತಮ್ಮ ಕರುಗಳನ್ನು ಪಾಲಿಸಲು ಇಚ್ಛಿಸುತ್ತಾ ಗೋವು ಮತ್ತು ತನ್ನ ಪುಟ್ಟ ಮಗುವನ್ನು ಲಾಲಿಸಿ ಪಾಲಿಸುವ ತಾಯಿ ಉಚ್ಚ ಸ್ವರದಿಂದ ಶಬ್ದ ಮಾಡಿ ಅದರೆಡೆಗೆ ಧಾವಿಸುತ್ತಾಳೋ ಅದೇ ರೀತಿ ವಿದ್ಯುತ್ತು ದೊಡ್ಡ ದೊಡ್ಡ ಶಬ್ದಗಳನ್ನು ಮಾಡುತ್ತಾ ಮೇಘದ ಅವಯವಗಳ ಸೇವನೆಗಾಗಿ ಧಾವಿಸುತ್ತದೆ.

ಪುನಃ ಆ ವಾಯುಗಳು ಏನನ್ನು ಮಾಡುತ್ತವೆ ಎಂಬುದನ್ನು ತಿಳಿಸಲಾಗಿದೆ.

ದಿವಾ ಚಿತ್ತಮಃ ಕೃಣ್ವಂತಿ ಪರ್ಜನ್ಯೇನೋದವಾಹೇನ ।

ಯತ್ ಪೃಥಿವೀಂ ವ್ಯುಂದಂತಿ ॥೯॥

ಪದಾರ್ಥ:- ಹೇ ವಿದ್ವಾಂಸರೇ! ನೀವು **[ಯತ್]** ಯಾವ ಪವನವನ್ನು **[ಉದ್ ವಾಹೇನ]** ಜಲಗಳನ್ನು ಧಾರಣ ಮತ್ತು ಪ್ರಾಪ್ತಗೊಳಿಸುವ **[ಪರ್ಜನ್ಯೇನ]** ಮೇಘದಿಂದ **[ದಿವಾ]** ದಿನದಲ್ಲಿ **[ತಮಃ]** ಅಂಧಕಾರರೂಪೀ ರಾತ್ರಿಯ **[ಚಿತ್]** ಸಮಾನವಾದ ಅಂಧಕಾರವನ್ನು **[ಕೃಣ್ವಂತಿ]** ಉಂಟುಮಾಡುತ್ತವೆ. **[ಪೃಥಿವೀಂ]** ಭೂಮಿಯನ್ನು **[ವ್ಯುಂದಂತಿ]** ಮೇಘದ ಜಲದಿಂದ ಆರ್ದ್ರಗೊಳಿಸುತ್ತದೆ. ಅವುಗಳನ್ನು ಯುಕ್ತಿಯಿಂದ ಸೇವಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಪವನವೇ ಜಲರಾಶಿಗಳ ಅವಯವಗಳನ್ನು ಕಠಿಣ ಸಘನಾಕಾರ ಮೇಘವನ್ನು ಉತ್ಪನ್ನಗೊಳಿಸಿ ಆ ವಿದ್ಯುತ್ತಿನಿಂದ ಆ ಮೇಘಗಳ ಅವಯವಗಳನ್ನು ಛಿನ್ನಭಿನ್ನಗೊಳಿಸಿ ಪೃಥಿವಿಯಲ್ಲಿ ಹರಡಿ ಜಲದಿಂದ ಸ್ನಿಗ್ಧಗೊಳಿಸಿ ಅನೇಕ ಔಷಧಿ ಮೊದಲಾದ ಸಮೂಹಗಳನ್ನು ಉತ್ಪನ್ನಗೊಳಿಸುತ್ತವೆ ಅವುಗಳ ಉಪದೇಶವನ್ನು ವಿದ್ವಾಂಸರಾದವರು ಅನ್ಯರಿಗೆ ಸದಾ ಮಾಡುತ್ತಿರಬೇಕು.

ಈ ಪವನಗಳ ಯೋಗದಿಂದ ಏನಾಗುತ್ತದೆ ಎಂಬುದನ್ನು ವಿವರಿಸಲಾಗಿದೆ.

ಅಧ ಸ್ವನಾನ್ಮರುತಾಂ ವಿಶ್ವಮಾ ಸದ್ಮ ಪಾರ್ಥಿವಮ್ । ಅರೇಜಂತ ಪ್ರ ಮಾನುಷಾಃ ॥೧೦॥

ಪದಾರ್ಥ:- ಹೇ [**ಮಾನುಷಾಃ**] ಮನನಶೀಲರಾದ ಮನುಷ್ಯರೇ! ಮಾನವರೇ! ನೀವು ಯಾವ [**ಮರುತಾಂ**] ಪವನಗಳ [**ಸ್ವನಾತ್**] ಉತ್ಪನ್ನಶಬ್ದಗಳಿಂದ [**ಅಧ**] ಅನಂತರ [**ವಿಶ್ವಂ**] ಸಮಸ್ತ [**ಪಾರ್ಥಿವಮ್**] ಪೃಥ್ವಿಯಲ್ಲಿ ವಿದಿತವಾದ ವಸ್ತುಮಾತ್ರದ [**ಸದ್ಮ**] ಸ್ಥಾನವು ಕಂಪಿಸುತ್ತದೆ. ಮತ್ತು ಪ್ರಾಣಿಮಾತ್ರರನ್ನು [**ಪ್ರಾರೇಜಂತ**] ಉತ್ತಮ ರೀತಿಯಲ್ಲಿ ಕಂಪಿತಗೊಳಿಸುತ್ತದೆ ಎಂಬುದಾಗಿ ತಿಳಿಯಿರಿ.

ಭಾವಾರ್ಥ:- ಹೇ ಜ್ಯೋತಿಷ್ಯಶಾಸ್ತ್ರದ ವಿದ್ವಾಂಸರೇ! ನೀವು, ಪವನಗಳ ಯೋಗಗಳ ಮೂರ್ತಿಮಾನ್ ದ್ರವ್ಯವನ್ನು ಮತ್ತು ಅದರ ಕಾರ್ಯವನ್ನು ಪ್ರಾಪ್ತಿಸುವ ಜನರು ವಿದ್ಯುತ್ತಿನ ಭಯಂಕರ ಶಬ್ದದಿಂದ ಭಯವನ್ನು ಹೊಂದಿ ಕಂಪಿತರಾಗುತ್ತಾರೆ ಮತ್ತು ಭೂಗೋಳಾದಿಗಳು ಪ್ರತಿಕ್ಷಣವೂ ಭ್ರಮಣಮಾಡುತ್ತಿರುತ್ತವೆ ಎಂಬುದಾಗಿ ನಿಶ್ಚಿತವಾಗಿ ತಿಳಿಯಿರಿ.

ಪುನಃ ಆ ಮನುಷ್ಯರು ಪವನಗಳಿಂದ ಏನನ್ನು ಮಾಡುತ್ತಾರೆ ಎಂಬುದನ್ನು ತಿಳಿಯಲಾಗುತ್ತದೆ.

ಮರುತೋ ವೀಳುಪಾಣಿಭಿಶ್ಚಿತ್ರಾ ರೋಧಸ್ವತೀರನು । ಯಾತೇಮಖಿದ್ರಯಾಮಭಿಃ ॥೧೧॥

ಪದಾರ್ಥ:- ಹೇ [**ಮರುತಃ**] ಯೋಗಾಭ್ಯಾಸಿಗಳೂ ಯೋಗ ವ್ಯವಹಾರ ಸಿದ್ಧಿಯನ್ನು ಬಯಸುವವರೂ ಆದ ಪುರುಷರೇ! ನೀವುಗಳು [**ಅಖಿದ್ರಯಾಮಭಿಃ**] ನಿರಂತರ ಗಮನಶೀಲವಾದ [**ವೀಳುಪಾಣಿಭಿಃ**] ದೃಢ, ಬಲಸ್ವರೂಪ ಗ್ರಹಣದ ಸಾಧಕ ವ್ಯವಹಾರವನ್ನುಳ್ಳ ಪವನಗಳೊಂದಿಗೆ [**ರೋಧಸ್ವತೀಃ**] ಬಹಳ ಪ್ರಕಾರದ ಕಟ್ಟೆ ಅಥವಾ ಆವರಣವನ್ನು ಮತ್ತು [**ಚಿತ್ರಾಃ**] ಅದ್ಭುತವಾದ ಗುಣವನ್ನುಳ್ಳ ನದಿ ಅಥವಾ ನಾಡಿಗಳನ್ನು [**ಈಂ ಅನು**] ಅನುಕೂಲಕರವಾಗಿಯೇ [**ಯಾತ**] ಪ್ರಾಪ್ತರಾಗಿರಿ.

ಭಾವಾರ್ಥ:- ಪವನಗಳಲ್ಲಿ ಗತಿಶೀಲತೆ, ಬಲ ಮತ್ತು ವ್ಯವಹಾರವಿರುವುದಕ್ಕೆ ಕಾರಣ ಸ್ವಾಭಾವಿಕ ಧರ್ಮವಾಗಿದೆ. ಮತ್ತು ಇವುಗಳು ನಿಶ್ಚಯವಾಗಿ ನದಿಗಳನ್ನು ಗತಿಶೀಲವಾಗಿಸುವ ನಾಡಿಗಳ ಮಧ್ಯದಲ್ಲಿ ಗಮನಮಾಡುವ ರಕ್ತ, ರಸಾದಿಗಳನ್ನು ಶರೀರದ ಅವಯವಗಳಲ್ಲಿ ಪ್ರಾಪ್ತಿಸುತ್ತಾರೆ. ಈ ಕಾರಣದಿಂದ ಯೋಗಿಗಳು ಯೋಗಾಭ್ಯಾಸ ಮತ್ತು ಅನ್ಯ ಮನುಷ್ಯರು ಬಲವೇ ಮೊದಲಾದ ಸಾಧನರೂಪೀ ವಾಯುಗಳಿಂದ ದೊಡ್ಡ ದೊಡ್ಡ ಉಪಕಾರವನ್ನು ಹೊಂದಬೇಕು.

ಮತ್ತೆ ಅದೇ ವಿಷಯವನ್ನು ಹೇಳಲಾಗುತ್ತದೆ.

ಸ್ಥಿರಾ ವಃ ಸಂತು ನೇಮಯೋ ರಥಾ ಅಶ್ವಾಸ ಏಷಾಮ್ । ಸುಸಂಸ್ಕೃತಾ ಅಭೀಶವಃ ॥೧೨॥

ಪದಾರ್ಥ:- ಹೇ ವಿದ್ವಾಂಸರೇ! [**ವಃ**] ನಿಮ್ಮ [**ಏಷಾಮ್**] ಈ ಪವನಗಳ ಬಳಿಯಿಂದ [**ಸುಸಂಸ್ಕೃತಾಃ**] ಉತ್ತಮ ಶಿಲ್ಪವಿದ್ಯೆಯಿಂದ ಸಂಸ್ಕಾರಗೊಳಿಸಲ್ಪಟ್ಟ [**ನೇಮಯಃ**] ಕಲಾಚಕ್ರಯುಕ್ತವಾದ [**ರಥಾಃ**] ವಿಮಾನಾದಿ ರಥಗಳು [**ಅಭೀಶವಃ**] ಮಾರ್ಗಗಳನ್ನು ವ್ಯಾಪಿಸುವ [**ಅಶ್ವಾಸಃ**] ಅಗ್ನಿ ಮೊದಲಾದ ಮತ್ತು ಕುದುರೆಗಳ ಸದೃಶವಾದ [**ಸ್ಥಿರಾಃ**] ದೃಢ ಬಲಯುಕ್ತವು [**ಸಂತು**] ಆಗಲಿ.

ಭಾವಾರ್ಥ:- ಈಶ್ವರನು ಉಪದೇಶಿಸುತ್ತಾನೆ ಏನೆಂದರೆ, ಹೇ ಮಾನವರೇ! ಅನೇಕ ಪ್ರಕಾರದ ಕಲಾಚಕ್ರಯುಕ್ತ ವಿಮಾನಾದಿ ಯಾನಗಳನ್ನು ರಚಿಸಿ ಅವುಗಳಲ್ಲಿ ವೇಗವಾಗಿ ಚಲಿಸುವ ಅಗ್ನಿ ಜಲಗಳ ಸಂಪ್ರಯೋಗ ಹಾಗೂ ಪವನಗಳ ಯೋಗದಿಂದ ಸುಖಪೂರ್ವಕವಾಗಿ ಹೋಗಿಬರುವ ಮತ್ತು ಶತ್ರುಗಳನ್ನು ಜಯಿಸುವ ಎಲ್ಲ ವ್ಯವಹಾರಗಳನ್ನು ಸಿದ್ಧಗೊಳಿಸಿರಿ.

ಪುನಃ ಈ ವಿಮಾನಾದಿ ವಿದ್ಯೆಗಳ ಉಪದೇಶಕರಾದ ವಿದ್ವಾಂಸರು ಹೇಗಿರಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಅಚ್ಛಾ ವದಾ ತನಾ ಗಿರಾ ಜರಾಯೈ ಬ್ರಹ್ಮಣಸ್ಪತಿಮ್ । ಅಗ್ನಿಂ ಮಿತ್ರಂ ನದರ್ಶತಮ್ ॥೧೩॥

ಪದಾರ್ಥ:- ಹೇ ಸಮಸ್ತ ವಿದ್ಯೆಗಳನ್ನೂ ತಿಳಿದಿರುವ ವಿದ್ವಾಂಸನೇ! ನೀನು [**ನ**] ಯಾವ ರೀತಿ [**ಬ್ರಹ್ಮಣಃ**] ವೇದವನ್ನು ಓದಿಸುವ ಮತ್ತು ಉಪದೇಶದಿಂದ [**ಪತಿಂ**] ಪಾಲಿಸುವ [**ದರ್ಶತಮ್**] ನೋಡಲು ಯೋಗ್ಯವಾದ [**ಅಗ್ನಿಂ**] ತೇಜಸ್ವಿಯು [**ಮಿತ್ರಂ**] ಮಿತ್ರನು ಮಿತ್ರರಿಗಾಗಿ ಯಾವ ರೀತಿ ಉಪದೇಶಿಸುತ್ತಾನೋ ಆ ರೀತಿ [**ಜರಾಯೈ**] ಗುಣಿಜ್ಞಾನಕ್ಕಾಗಿ [**ತನಾ**] ಗುಣಗಳ ಪ್ರಕಾಶವನ್ನು ವೃದ್ಧಿಸುವ [**ಗಿರಾ**] ತನ್ನ ವೇದಯುಕ್ತ ವಾಣಿಯಿಂದ ವಿಮಾನಾದಿ ಯಾನವಿದ್ಯೆಯ [**ಅಚ್ಛಾ ವದ**] ಉತ್ತಮ ಪ್ರಕಾರದ ಉಪದೇಶವನ್ನು ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ವಿದ್ವಾಂಸರೇ! ಯಾವ ರೀತಿ ಪ್ರಿಯಮಿತ್ರನು ತನ್ನ ಪ್ರಿಯ ತೇಜಸ್ವಿ ವೇದೋಪದೇಶಕ ಮಿತ್ರನನ್ನು ಸೇವೆ ಮತ್ತು ಗುಣಗಳ ಸ್ತುತಿಯಿಂದ ತೃಪ್ತಿಗೊಳಿಸುತ್ತಾನೋ ಹಾಗೆಯೇ ಎಲ್ಲ ವಿದ್ಯೆಗಳ ವಿಸ್ತಾರಗೊಳಿಸುವ ವೇದವಾಣಿಯಿಂದ ವಿಮಾನಾದಿ ಯಾನಗಳನ್ನು ರಚಿಸುವ ವಿದ್ಯೆಯ ಆ ಗುಣಜ್ಞಾನಕ್ಕಾಗಿ ನಿರಂತರ ಉಪದೇಶವನ್ನು ಮಾಡುತ್ತಿರಿ.

ಮತ್ತೆ ಆ ವಿದ್ವಾಂಸನು ಓದಿಸುವ ಶಿಷ್ಯನು ಹೇಗಿರಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಮಿಮೀಹಿ ಶ್ಲೋಕಮಾಸ್ಯೇ ಪರ್ಜನ್ಯ ಇವ ತತನಃ । ಗಾಯ ಗಾಯತ್ರಮುಕ್ಥ್ಯಮ್ ॥೧೪॥

ಪದಾರ್ಥ:- ಹೇ ವಿದ್ವಾಂಸನೇ! ನೀನು [**ಆಸ್ಯೇ**] ನಿನ್ನ ಮುಖದಲ್ಲಿ [**ಶ್ಲೋಕಮ್**] ವೇದದ ಶಿಕ್ಷಣದಿಂದ ಯುಕ್ತವಾದ ವಾಣಿಯನ್ನು [**ಮಿಮೀಹಿ**] ನಿರ್ಮಾಣ ಮಾಡು. ಮತ್ತು ಆ ವಾಣಿಯನ್ನು [**ಪರ್ಜನ್ಯ ಇವ**] ಮೇಘವು ಮಳೆಯನ್ನು ಸುರಿಸುವಂತೆ [**ತತನಃ**] ಚೆನ್ನಾಗಿ ಹರಡು ಮತ್ತು [**ಉಕ್ಥ್ಯಮ್**] ಹೇಳಲು ಯೋಗ್ಯವಾದ [**ಗಾಯತ್ರಮ್**] ಗಾಯತ್ರೀ ಛಂದಸ್ಸಿನ ಸ್ತೋತ್ರರೂಪೀ ವೈದಿಕ ಸೂಕ್ತಿಗಳನ್ನು [**ಗಾಯ**] ಓದು ಮತ್ತು ಓದಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ವಿದ್ವಾಂಸರಿಂದ ವಿದ್ಯಾಗ್ರಹಣ ಮಾಡಿರುವ ಮನುಷ್ಯರೇ! ಎಲ್ಲ ಪ್ರಕಾರದ ಪ್ರಯತ್ನದೊಂದಿಗೆ ವೇದವಿದ್ಯೆಯಿಂದ ಶಿಕ್ಷಿತವಾಗಿರುವ ವೇದವಾಣಿಯಿಂದ ವಾಣಿಯ ವೇತ್ತರಾದವರಂತೆ ಆಗಿ ವಾಯು ಮೊದಲಾದ ಪದಾರ್ಥಗಳ ಗುಣಗಳ ಸ್ಥಿತಿ ಹಾಗೂ ಉಪದೇಶವನ್ನು ಮಾಡುತ್ತಿರಿ.

ಪುನಃ ಆ ವಿದ್ವಾಂಸರು ಏನನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ವಂದಸ್ವ ಮಾರುತಂ ಗಣಂ ತ್ವೇಷಂ ಪನಸ್ಯುಮರ್ಕಿಣಮ್ । ಅಸ್ಮೇ ವೃದ್ಧಾ ಅಸನ್ನಿಹ ॥೧೫॥

ಪದಾರ್ಥ:- ಹೇ ವಿದ್ವಾಂಸ! ನೀನು ಯಾವ ರೀತಿ [**ಇಹ**] ಈ ಎಲ್ಲ ವ್ಯವಹಾರಗಳಲ್ಲಿ [**ಅಸ್ಮೇ**] ನಮ್ಮಗಳ ಮಧ್ಯದಲ್ಲಿ [**ವೃದ್ಧಾಃ**] ಬೃಹತ್ತಾದ ವಿದ್ಯೆ ಮತ್ತು ಆಯುಸ್ಸಿನಿಂದ ಯುಕ್ತರಾದ ವೃದ್ಧಪುರುಷ ಸತ್ಯಾಚರಣ ಯುಕ್ತರು [**ಅಸನ್**] ಆಗಲಿ. ಹಾಗೆಯೇ [**ಅರ್ಕಿಣಂ**] ಪ್ರಶಂಸನೀಯವಾದ [**ತ್ವೇಷಂ**] ಅಗ್ನಿ ಮೊದಲಾದ ಪ್ರಕಾಶಯುಕ್ತ ದ್ರವ್ಯಗಳಿಂದ ಕೂಡಿದ [**ಪನಸ್ಯುಂ**] ತನ್ನ ಆತ್ಮನ ವ್ಯವಹಾರದ ಇಚ್ಛೆಗಾಗಿ [**ಮಾರುತಂ**] ವಾಯುವಿನ ಈ [**ಗಣಂ**] ಸಮೂಹದ [**ವಂದಸ್ವ**] ಕಾಮನೆಯನ್ನು ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಯಾವ ರೀತಿ ಪವನವು ಕಾರ್ಯಸಿದ್ಧಿಯ ಸಾಧನವಾಗುವುದರಿಂದ ಸುಖದಾಯಕವಾಗುತ್ತದೆಯೋ ಅದೇ ರೀತಿ ವಿದ್ಯೆ ಮತ್ತು ತನ್ನ ಪುರುಷಾರ್ಥದಿಂದ ಎಲ್ಲ ಮಾನವರೂ ಸುಖವನ್ನುಂಟು ಮಾಡಬೇಕು.

ಈ ಸೂಕ್ತದಲ್ಲಿ ವಾಯುವಿನ ದೃಷ್ಟಾಂತದಿಂದ ವಿದ್ವಾಂಸರ ಗುಣವರ್ಣನೆ ಮಾಡುವುದರಿಂದ ಪೂರ್ವಸೂಕ್ತದೊಂದಿಗೆ ಈ ಸೂಕ್ತದ ಸಂಗತಿ ಇದೆ ಎಂದು ತಿಳಿಯಬೇಕು.

ಮೂವತ್ತೆಂಟನೆಯ ಸೂಕ್ತ ಸಮಾಪ್ತ

ಸೂಕ್ತ ೩೯

ಮಂತ್ರಸಂಖ್ಯೆ ೧೦ । ಋಷಿಃ- ಕಣ್ವೋ ಘೌರಃ । ದೇವತಾ-ಮರುತಃ । ಛಂದಃ- ೧, ೫, ೯ ಪತ್ಯಾ ಬೃಹತೀ, ೭, ಉಪರಿಷ್ಟಾದ್ ವಿರಾಡ್ ಬೃಹತೀ । ಸ್ವರಃ - ಮಧ್ಯಮಃ । ಛಂದಃ - ೨, ೮, ೧೦ ವಿರಾಡ್ ಸತಃ ಪಂಕ್ತಿಃ , ೪, ೬, ನಿಚೃದ್ ಸತಃ ಪಂಕ್ತಿಃ । ಸ್ವರಃ - ಪಂಚಮಃ । ಛಂದಃ - ೩ ಅನುಷ್ಟುಪ್ । ಸ್ವರಃ - ಗಾಂಧಾರಃ ।

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ವಿದ್ವಾಂಸರು ಪರಸ್ಪರರೊಂದಿಗೆ ಯಾವ ರೀತಿಯ ಸಂವಾದವನ್ನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಪ್ರ ಯದಿತ್ಥಾ ಪರಾವತಃ ಶೋಚಿರ್ನ ಮಾನಮಸ್ಯಥ ।
ಕಸ್ಯ ಕ್ರತ್ವಾ ಮರುತಃ ಕಸ್ಯ ವರ್ಪಸಾ ಕಂ ಯಾಥ ಕಂ ಹ ಧೂತಯಃ ॥೧॥

ಪದಾರ್ಥ:- ಹೇ **[ಮರುತಃ]** ವಿದ್ವಾಂಸರೇ! ನೀವು **[ಯತ್]** ಯಾವ **[ಧೂತಯಃ]** ಎಲ್ಲರನ್ನೂ ಕಂಪಾಯಮಾನಗೊಳಿಸುವ ವಾಯುವನ್ನು **[ಶೋಚಿರ್ನ]** ಯಾವ ರೀತಿ ಸೂರ್ಯನ ಜ್ಯೋತಿ ಮತ್ತು ವಾಯುವು ಪೃಥ್ವಿಯ ಮೇಲೆ ದೂರದಿಂದ ಬೀಳುತ್ತದೆಯೋ ಹಾಗೆ **[ಪರಾವತಃ]** ದೂರದಿಂದ **[ಕಸ್ಯ]** ಯಾರ **[ಪ್ರ ಮಾನಮ್]** ಉತ್ಕೃಷ್ಟವಾದ ಪರಿಮಾಣವನ್ನು **[ಅಸ್ಯಥ]** ಬಿಟ್ಟುಬಿಡುತ್ತದೆಯೋ **[ಇತ್ಥಾ]** ಈ ಕಾರಣದಿಂದ **[ಕಸ್ಯ]** ಸುಖಸ್ವರೂಪನಾದ ಪರಮಾತ್ಮನ **[ಕಂ]** ಸುಖಮೂಲವಾದ ಪದಾರ್ಥವನ್ನು **[ಕ್ರತ್ವಾ]** ಕರ್ಮ ಮತ್ತು ಜ್ಞಾನವನ್ನು ಮತ್ತು **[ವರ್ಪಸಾ]** ರೂಪದೊಂದಿಗೆ **[ಹ]** ನಿಶ್ಚಯವಾಗಿ **[ಕಂ]** ಸುಖದಾಯಕ ಪ್ರದೇಶವನ್ನು **[ಯಾಥ]** ಪ್ರಾಪ್ತಿಸುತ್ತೀಯೆ ಎಂಬ ಪ್ರಶ್ನೆಗಳಿಗೆ ಉತ್ತರನೀಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಸುಖದ ಇಚ್ಛೆಯನ್ನು ಮಾಡುವ ವಿದ್ವಾಂಸರಿಗೆ ಯೋಗ್ಯವಾದುದೇನೆಂದರೆ, ಯಾವ ರೀತಿ ಸೂರ್ಯನ ಕಿರಣಗಳು ದೂರಪ್ರದೇಶದಿಂದ ಭೂಮಿಯನ್ನು ತಲುಪಿ ಪದಾರ್ಥಗಳನ್ನು ಪ್ರಕಾಶಿತಗೊಳಿಸುತ್ತದೆಯೋ ಹಾಗೆಯೇ ಅಹಂಕಾರವನ್ನು ದೂರಸರಿಸಿ ಸುಖದಾಯಕವಾದ ಪರಮಾತ್ಮನ ಹಾಗೂ ಭಾಗ್ಯಶಾಲೀ ಪರಮ ವಿದ್ವಾಂಸನ ಗುಣಕರ್ಮ ಸ್ವಭಾವ ಮತ್ತು ಮಾರ್ಗಗಳನ್ನು ಚೆನ್ನಾಗಿ ತಿಳಿದು ಅದರಲ್ಲಿಯೇ ರಮಿಸಬೇಕು. ಈ ವಾಯು ಕಾರಣದಿಂದ ಬರುತ್ತಾ ಕಾರಣಸ್ವರೂಪದಲ್ಲಿ ಸ್ಥಿತವಾಗಿ ಕಾರಣದಲ್ಲಿಯೇ ಲೀನವಾಗುತ್ತದೆ.

ಈಗ ಈಶ್ವರನು ಇವರಿಗೆ ಉಪದೇಶ ಮತ್ತು ಆಶೀರ್ವಾದವನ್ನು ನೀಡಿ ನಿಮಗೆ ಏನೇನನ್ನು ಸಿದ್ಧಗೊಳಿಸಬೇಕು ಎಂದು ಕೇಳುತ್ತಾನೆ

ಸ್ಥಿರಾ ವಃ ಸಂತ್ವಾಯುಧಾ ಪರಾಣುದೇ ವೀಳೂ ಉತ ಪ್ರತಿಷ್ಕಭೇ ।
ಯುಷ್ಮಾಕಮಸ್ತು ತವಿಷೀ ಪನೀಯಸೀ ಮಾ ಮರ್ತ್ಯಸ್ಯ ಮಾಯಿನಃ ॥೨॥

ಪದಾರ್ಥ:- ಹೇ ಧಾರ್ಮಿಕ ಪುರುಷರೇ! **[ವಃ]** ನಿಮ್ಮ **[ಆಯುಧಾ]** ಆಗ್ನೇಯಾದಿ ಅಸ್ತ್ರಗಳು, ಖಡ್ಗ ಧನುಸ್ಸು-ಬಾಣಗಳು, ಭುಷುಂಡೀ (ಬಂದೂಕು), ಶತಘ್ನೀ (ತೋಪು) ಮೊದಲಾದ ಅಸ್ತ್ರ-ಶಸ್ತ್ರಗಳು **[ಯುಷ್ಮಾಕಂ

ಸಂತು]** ನಿಮ್ಮದಾಗಲಿ. **[ಪರಾಣುದೇ]** ಶತ್ರುಗಳಿಗೆ ವ್ಯಥೆಯನ್ನುಂಟುಮಾಡುವ ಯುದ್ಧ **[ಉತ]** ಮತ್ತು **[ಪ್ರತಿಷ್ಕಭೇ]** ತಡೆಯುವ, ಬಂಧಿಸುವ ಮತ್ತು ಕೊಲ್ಲುವ ರೂಪಿ ಕರ್ಮಗಳಿಗಾಗಿ **[ಸ್ಥಿರಾ]** ಸ್ಥಿರ-ದೃಢ-ಚಿರಸ್ಥಾಯೀ **[ವೀಳೂ]** ಬಲವಾದ ಉತ್ತಮೋತ್ತಮವಾದ **[ತವಿಷೀ]** ಪ್ರಶಸ್ತಸೇನೆ **[ಪನೀಯಸೀ]** ಅತಿಶಯವಾಗಿ ಸ್ತುತಿಸಲು ಯೋಗ್ಯವಾದ ಮತ್ತು ವ್ಯವಹಾರದ ಸಿದ್ಧಿಯನ್ನು ಮಾಡುವಂತಹುದಾದುದು **[ಅಸ್ತು]** ಆಗಲಿ. ಮತ್ತು ಪೂರ್ವೋಕ್ತ ಪದಾರ್ಥದ **[ಮಾಯಿನಃ]** ಕಪಟಾದಿ ಅಧರ್ಮಾಚರಣೆಯುಕ್ತ **[ಮರ್ತ್ಯಸ್ಯ]** ದುಷ್ಟ ಮನುಷ್ಯನದು **[ಮಾ]** ಎಂದಿಗೂ ಆಗದಿರಲಿ.

ಭಾವಾರ್ಥ:- ಧಾರ್ಮಿಕ ಮನುಷ್ಯನೇ! ಪರಮಾತ್ಮನ ಕೃಪಾಪಾತ್ರನೇ ಸದಾ ವಿಜಯವನ್ನು ಹೊಂದುತ್ತಾನೆ, ದುಷ್ಟನಲ್ಲ. ಪರಮಾತ್ಮನೂ ಧಾರ್ಮಿಕ ಪುರುಷರಿಗೆ ಆಶೀರ್ವಾದವನ್ನು ನೀಡುತ್ತಾನೆ, ಪಾಪಿಗಳಿಗಲ್ಲ. ಪುಣ್ಯಾತ್ಮರಾದ ಮನುಷ್ಯರಿಗೆ ಉಚಿತವಾದುದೇನೆಂದರೆ, ಉತ್ತಮೋತ್ತಮವಾದ ಅಸ್ತ್ರಶಸ್ತ್ರಗಳನ್ನು ನಿರ್ಮಿಸಿ ಅವುಗಳನ್ನು ಪ್ರಯೋಗಿಸುವ ಅಭ್ಯಾಸ ಮಾಡಿ ಸೇನೆಗೆ ಉತ್ತಮ ಶಿಕ್ಷಣವನ್ನು ನೀಡಿ ಶತ್ರುಗಳ ನಿರೋಧ ಹಾಗೂ ಪರಾಜಯವನ್ನು ಉಂಟುಮಾಡಿ ನ್ಯಾಯದಿಂದ ಮಾನವರ ನಿರಂತರ ರಕ್ಷಣೆಯನ್ನು ಮಾಡುತ್ತಿರಬೇಕು.

ಈಗ ವಿದ್ವಾಂಸರ ಕಾರ್ಯವೇನೆಂಬುದನ್ನು ಇಲ್ಲಿ ತಿಳಿಸಲಾಗಿದೆ.

ಪರಾ ಹ ಯತ್ ಸ್ಥಿರಂ ಹಥ ನರೋ ವರ್ತಯಥಾ ಗುರು ।
ವಿ ಯಾಥನ ವನಿನಃ ಪೃಥಿವ್ಯಾ ವ್ಯಾಶಾಃ ಪರ್ವತಾನಾಮ್ ॥೩॥

ಪದಾರ್ಥ:- ಹೇ **[ನರಃ]** ನೀತಿಯುಕ್ತ ಮನುಷ್ಯರೇ! ನೀವು ಯಾವ ರೀತಿ **[ವನಿನಃ]** ಉತ್ತಮ ವಿಭಾಗ ಹಾಗೂ ಸೇವನೆ ಮಾಡುವ ಕಿರಣಸಂಬಂಧೀ ವಾಯುವನ್ನು ತನ್ನ ಬಲದಿಂದ **[ಯತ್]** ಯಾವ **[ಪರ್ವತಾನಾಮ್]** ಪರ್ವತ ಮತ್ತು ಮೇಘಗಳ ಹಾಗೂ **[ಪೃಥಿವ್ಯಾಃ]** ಭೂಮಿಯನ್ನು **[ವ್ಯಾಶಾಃ]** ನಾಲ್ಕೂ ದಿಕ್ಕುಗಳಲ್ಲಿ ವ್ಯಾಪ್ತವಾದ ಆ **[ಸ್ಥಿರಂ]** ದೃಢವಾದ ಮತ್ತು **[ಗುರು]** ದೊಡ್ಡ ದೊಡ್ಡ ಪದಾರ್ಥಗಳನ್ನು ಧರಿಸುವ ಮತ್ತು ವೇಗದಿಂದ ವೃಕ್ಷಾದಿಗಳನ್ನು ಬುಡಮೇಲು ಮಾಡುವ ಅಂತಹ ವಿಜಯಕ್ಕಾಗಿ ಶತ್ರುಗಳ ಸೇನೆಯನ್ನು **[ಪರಾಹತ]** ಉತ್ತಮ ರೀತಿಯಲ್ಲಿ ನಷ್ಟ ಮಾಡಿರಿ. ಮತ್ತು **[ಹ]** ನಿಶ್ಚಯದಿಂದ ಈ ಶತ್ರುಗಳನ್ನು **[ವಿವರ್ತಯಥಾ]** ಒಡೆದು, ಮುರಿದು ಮೇಲೆ ಕೆಳಗೂ ಮಾಡಿ ತನ್ನ ಕೀರ್ತಿಯಿಂದ **[ಆಶಾಃ]** ದಿಕ್ಕುಗಳನ್ನು **[ವಿಯಾಥನ]** ಅನೇಕ ಪ್ರಕಾರ ವ್ಯಾಪ್ತಗೊಳಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ವೇಗಯುಕ್ತ ವಾಯುವು ವೃಕ್ಷಾದಿಗಳನ್ನು ಕಿತ್ತೆಸೆದು ಅಡಿಮೇಲು ಮಾಡುತ್ತದೆಯೋ ಮತ್ತು ಪೃಥಿವ್ಯಾದಿಗಳನ್ನು ಧರಿಸುತ್ತದೆಯೋ ಹಾಗೆಯೇ ಧಾರ್ಮಿಕ ನ್ಯಾಯಾಧೀಶನು ಅಧರ್ಮಾಚರಣಯುಕ್ತರನ್ನು ತಡೆದು ಧರ್ಮಯುಕ್ತ ನ್ಯಾಯದಿಂದ ಪ್ರಜೆಗಳನ್ನು ಧಾರಣ ಮಾಡಲಿ ಮತ್ತು ಸೇನಾಪತಿಯು ದೃಢಬಲಯುಕ್ತನಾಗಿ ಉತ್ತಮ ಸೇನೆಯ ಧಾರಣೆಯನ್ನು ಮಾಡಿ ಶತ್ರುಗಳನ್ನು ಕೊಂದು ಪೃಥ್ವಿಯ ಮೇಲೆ ಚಕ್ರವರ್ತಿ ರಾಜ್ಯದ ಉಪಭೋಗವನ್ನು ಮಾಡಿ ಎಲ್ಲ ದಿಕ್ಕುಗಳಲ್ಲಿ ಉತ್ತಮ ರೀತಿಯ ಕೀರ್ತಿಯ ಪ್ರಚಾರ ಮಾಡಲಿ ಮತ್ತು ಯಾವ ರೀತಿ ಪ್ರಾಣವು ಎಲ್ಲರಿಗೂ ಅಧಿಕ ಪ್ರಿಯವಾಗುತ್ತದೆಯೋ ಹಾಗೆಯೇ ರಾಜಪುರುಷನು ಪ್ರಜೆಗಳಿಗೆ ಪ್ರಿಯನಾಗಲಿ.

ಪುನಃ ವಿದ್ವಾಂಸನು ಯಾವ ರೀತಿಯವನಾಗಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ನಹಿ ವಃ ಶತ್ರುರ್ವಿವಿದೇ ಅಧಿ ದ್ಯವಿ ನ ಭೂಮ್ಯಾಂ ರಿಶಾದಸಃ ।
ಯುಷ್ಮಾಕಮಸ್ತು ತವಿಷೀ ತನಾ ಯುಜಾ ರುದ್ರಾಸೋ ನೂ ಚಿದಾಧೃಷೇ ॥೪॥

ಪದಾರ್ಥ:- ಹೇ [ರಿಶಾದಸಃ] ಶತ್ರುಗಳ ನಾಶಕಾರಕನಾದ [ರುದ್ರಾಸಃ] ಅನ್ಯಾಯಕಾರೀ ಮನುಷ್ಯರನ್ನು ರೋದಿಸುವಂತೆ ಮಾಡುವ ವೀರಪುರುಷ! [ಚಿತ್] ಯಾವ [ಯುಷ್ಮಾಕಂ] ನಿಮ್ಮ [ಆಧೃಷೇ] ಪ್ರಾರಂಭವಾಗುವ ವ್ಯವಹಾರಕ್ಕಾಗಿ [ತನಾ] ವಿಸ್ತೃತವಾದ [ಯುಜಾ] ಬಲಾದಿ ಸಾಮಗ್ರಿಯುಕ್ತ [ತವಿಷೀ] ಸೇನೆಯನ್ನು [ಅಸ್ತು] ಹೊಂದಿದ್ದರೆ [ಅಧಿದ್ಯವಿ] ನ್ಯಾಯಪ್ರಕಾಶವನ್ನು ಮಾಡುವುದರಲ್ಲಿ [ವಃ] ನಿಮ್ಮ ಜನರನ್ನು [ಶತ್ರುಃ] ವಿರೋಧಿಗಳಾದ ಶತ್ರುಗಳು [ನು] ಶೀಘ್ರವಾಗಿ [ನಹಿ ವಿವಿದೇ] ಪ್ರಾಪ್ತವಾಗುವುದಿಲ್ಲ. ಮತ್ತು [ಭೂಮ್ಯಾಂ] ಪೃಥ್ವೀ ರಾಜ್ಯದಲ್ಲಿಯೂ ನಿನ್ನ ವಿರೋಧಿ ಮನುಷ್ಯನು ಉತ್ಪನ್ನನಾಗದಿರಲಿ.

ಭಾವಾರ್ಥ:- ಯಾವ ರೀತಿ ಪವನವು ಆಕಾಶದಲ್ಲಿ ಶತ್ರುರಹಿತವಾಗಿ ತಡೆಯಿಲ್ಲದೆ ವಿಹರಿಸುತ್ತದೆಯೋ ಹಾಗೆಯೇ ಮನುಷ್ಯನು ವಿದ್ಯೆ, ಧರ್ಮ, ಬಲ, ಪರಾಕ್ರಮಗಳನ್ನು ಹೊಂದಿದ ನ್ಯಾಯಾಧೀಶನಾಗಿ ಎಲ್ಲರಿಗೂ ಶಿಕ್ಷಣವನ್ನು ನೀಡಿ ದುಷ್ಟಶತ್ರುಗಳನ್ನು ದಂಡಿಸಿ ಶತ್ರುಗಳಿಂದ ರಹಿತನಾಗಿ ಧರ್ಮದಲ್ಲಿ ಅನುವರ್ತಿಸಲಿ.

ಪುನಃ ಅವರು ಎಂತಹ ಕರ್ಮ ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಪ್ರ ವೇಪಯಂತಿ ಪರ್ವತಾನ್ ವಿ ವಿಂಚಂತಿ ವನಸ್ಪತೀನ್ ।
ಪ್ರೋ ಆರತ ಮರುತೋ ದುರ್ಮದಾ ಇವ ದೇವಾಸಃ ಸರ್ವಯಾ ವಿಶಾ ॥೫॥

ಪದಾರ್ಥ:- ಹೇ [ಮರುತಃ] ವಾಯುವಿನಂತೆ, ಬಲಿಷ್ಟನೂ ಪ್ರಿಯನೂ ಆದ [ದೇವಾಸಃ] ನ್ಯಾಯಾಧೀಶ-ಸೇನಾಪತಿ - ಸಭಾಧ್ಯಕ್ಷ ವಿದ್ವಜ್ಜನರೇ! ನೀವು, ಯಾವ ರೀತಿ ವಾಯು [ವನಸ್ಪತೀನ್] ವಟ ಮತ್ತು ಪಿಪ್ಪಲಾದಿ ವನಸ್ಪತಿಗಳನ್ನು [ಪ್ರ ವೇಪಯಂತಿ] ಕಂಪಿಸುವಂತೆ ಮಾಡುತ್ತದೆಯೋ ಮತ್ತು ಯಾವ ರೀತಿ [ಪರ್ವತಾನ್] ಮೇಘಗಳನ್ನು [ವಿ ವಿಂಚಂತಿ] ಬೇರೆ ಬೇರೆ ಮಾಡಿಬಿಡುತ್ತದೆಯೋ ಅದೇ ರೀತಿ [ದುರ್ಮದಾ ಇವ] ಮದೋನ್ಮತ್ತರಂತೆ ವರ್ತಿಸುವ ಶತ್ರುಗಳನ್ನು ಯುದ್ಧದಿಂದ [ಪ್ರೋ ಆರತ] ಉತ್ತಮ ರೀತಿಯಲ್ಲಿ ಪ್ರಾಪ್ತರಾಗಿರಿ ಮತ್ತು [ಸರ್ವಯಾ] ಎಲ್ಲಾ [ವಿಶಾ] ಪ್ರಜೆಗಳೊಂದಿಗೆ ಸುಖಪೂರ್ವಕವಾಗಿ ವರ್ತಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ರಾಜಧರ್ಮದಲ್ಲಿ ವರ್ತಿಸುವ ವಿದ್ವಾಂಸರು ದಂಡದ ಬಲದಿಂದ ಅಹಂಕಾರಿಗಳಾದ ಡಾಕುಗಳನ್ನು ವಶದಲ್ಲಿರಿಸಿ ಧರ್ಮಾತ್ಮರಾದ ಪ್ರಜೆಗಳನ್ನು ಪಾಲಿಸುತ್ತಾರೋ ಅದೇ ರೀತಿ ನೀವೂ ಸಹ ನಿಮ್ಮ ಪ್ರಜೆಗಳ ಪಾಲನೆ ಮಾಡಿರಿ. ಯಾವ ರೀತಿ ಪವನವು ಭೂಗೋಳದ ನಾಲ್ಕೂ ದಿಶೆಗಳಲ್ಲಿ ವಿಹರಿಸುತ್ತದೆಯೋ ಅದೇ ರೀತಿ ನೀವೂ ಸಹ ಸರ್ವತ್ರ ಹೋಗಿ ಬನ್ನಿರಿ.

ಪುನಃ ಮನುಷ್ಯರು ಯಾರ ಜೊತೆಯಲ್ಲಿ ಇವುಗಳನ್ನು ಯುಕ್ತಗೊಳಿಸಿ ಕಾರ್ಯಗಳನ್ನು ಸಿದ್ಧಗೊಳಿಸಬೇಕು ಎಂಬುದನ್ನು ತಿಳಿಸಲಾಗಿದೆ.

ಉಪೋ ರಥೇಷು ಪೃಷತೀರಯುಗ್ಧ್ವಂ ಪೃಷ್ಟಿರ್ವಹತಿ ರೋಹಿತಃ ।
ಆ ವೋ ಯಾಮಾಯ ಪೃಥಿವೀ ಚಿದಶ್ರೋ-ದಬೀಭಯಂತ ಮಾನುಷಾಃ ॥೬॥

ಪದಾರ್ಥ:- ಹೇ [ಮಾನುಷಾಃ] ವಿದ್ವಾಂಸರೇ! ನೀವು [ವಃ] ನಿಮ್ಮ [ಯಾಮಾಯ] ಸ್ಥಾನಾಂತರದಲ್ಲಿ ಹೋಗಲು [ಪೃಷ್ಟಿಃ] ಪ್ರಶ್ನೋತ್ತರಾದಿ ವಿದ್ಯಾ ವ್ಯವಹಾರದಿಂದ ವಿದಿತವಾದ [ರೋಹಿತಃ] ರಕ್ತಗುಣಯುಕ್ತ ಅಗ್ನಿಯನ್ನು [ಪೃಥಿವೀ] ನೆಲ, ಜಲ ಅಂತರಿಕ್ಷಗಳಲ್ಲಿ ಯಾವುದನ್ನು [ಉಪವಹತಿ] ಉತ್ತಮ ರೀತಿಯಲ್ಲಿ

ನಡೆಯಿಸುತ್ತದೆಯೋ, ಯಾವುದರ ಶಬ್ದಗಳನ್ನು [ಚಿತ್ ಅಶ್ರೋತ್] ಆಲಿಸಲು ಮತ್ತು [ಅಬೀಭಯಂತ] ಭಯಭೀತವಾಗುತ್ತದೆಯೋ ಆ [ರಥೇಷು] ರಥಗಳಲ್ಲಿ [ಪೃಷತೀಃ] ವಾಯುಗಳನ್ನು [ಅಯುಗ್ಧ್ವಂ] ಯುಕ್ತಗೊಳಿಸಿರಿ.

ಭಾವಾರ್ಥ:- ಯಾವ ಮನುಷ್ಯರು ಯಾನಗಳಲ್ಲಿ ಜಲ, ಅಗ್ನಿ ಮತ್ತು ವಾಯುಗಳನ್ನು ಯುಕ್ತಗೊಳಿಸಿ ಅವುಗಳಲ್ಲಿ ಕುಳಿತು ಗಮನಾಗಮನವನ್ನು ಮಾಡುತ್ತಾರೋ ಅವರು ಸುಖದಿಂದಲೇ ಸರ್ವತ್ರ ಹೋಗಿಬರಲು ಸಮರ್ಥರಾಗುತ್ತಾರೆ.

ಪುನಃ ಅವರು ಹೇಗಿದ್ದಾರೆ ಎಂಬುದನ್ನು ತಿಳಿಸಲಾಗುತ್ತದೆ.

ಆ ವೋ ಮಕ್ಷೂ ತನಾಯ ಕಂ ರುದ್ರಾ ಅವೋ ವೃಣೀಮಹೇ ।
ಗಂತಾ ನೂನಂ ನೋಽವಸಾ ಯಥಾ ಪುರೇ-ತ್ಥಾ ಕಣ್ವಾಯ ಬಿಭ್ಯುಷೇ ॥೭॥

ಪದಾರ್ಥ:- ಹೇ [ರುದ್ರಾಃ] ದುಷ್ಟರನ್ನು ರೋದನಕ್ಕೀಡುಮಾಡುವ, ೪೪ ವರ್ಷ ಪರ್ಯಂತ ಅಖಂಡ ಬ್ರಹ್ಮಚರ್ಯವನ್ನು ಸೇವಿಸುವ ಮೂಲಕ ಸಕಲ ವಿದ್ಯೆಗಳನ್ನು ಪಡೆದ ವಿದ್ವಾಂಸರೇ! [ಯಥಾ] ಯಾವ ರೀತಿ ನಾವು [ವಃ] ನಿಮಗಾಗಿ [ಅವಸಾ] ರಕ್ಷಣೆಗಳಿಂದ [ಮಕ್ಷೂ] ಶೀಘ್ರವಾಗಿ [ನೂನಂ] ನಿಶ್ಚಿತವಾದ [ಕಂ] ಸುಖವನ್ನು [ವೃಣೀಮಹೇ] ಸಿದ್ಧಿಸುತ್ತೇವೋ [ಇತ್ಥಾ] ಅದೇ ರೀತಿ ನೀವೂ ಸಹ [ನಃ] ನಮಗಾಗಿ [ಅವಃ] ಸುಖವರ್ಧಕ ರಕ್ಷಣಾದಿ ಕರ್ಮಗಳನ್ನು [ಗಂತಾ] ಮಾಡಿರಿ. ಯಾವ ರೀತಿ ಪರಮಾತ್ಮನು [ಪುರಾ] ಹಿಂದಿನ ಕಲ್ಪದಂತೆಯೇ [ಬಿಭ್ಯುಷೇ] ದುಷ್ಟ ಪ್ರಾಣಿ ಹಾಗೂ ದುಃಖಗಳಿಂದ ಭಯಭೀತರಾದ [ತನಾಯ] ಎಲ್ಲರಿಗೂ ಸದ್ವಿದ್ಯೆ ಮತ್ತು ಧರ್ಮದ ಉಪದೇಶದಿಂದ ಸುಖಕಾರಕರಾದ [ಕಣ್ವಾಯ] ಆಪ್ತವಿದ್ವಾಂಸರನ್ನು ರಕ್ಷಣೆ ಮಾಡುತ್ತಾನೋ ಹಾಗೆಯೇ ನೀವೂ ಸಹ ನಮ್ಮೊಂದಿಗೆ ಸೇರಿ ಎಲ್ಲಾ ಪ್ರಜೆಗಳ ರಕ್ಷಣೆಯನ್ನು ಸದಾ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಮೇಧಾವಿ ವಿದ್ವಾಂಸರು ವಾಯು ಮೊದಲಾದವುಗಳ ದ್ರವ್ಯ ಮತ್ತು ಗುಣಗಳ ಯೋಗದಿಂದ ಭಯವನ್ನು ನಿವಾರಿಸಿ ಶೀಘ್ರವೇ ಸುಖಿಗಳಾಗುತ್ತಾರೋ ಅದೇ ರೀತಿ ನಾವೂ ಸಹ ಆಗಬೇಕಾಗಿದೆ.

ಪುನಃ ಅವರಿಂದ ಏನನ್ನು ಸಿದ್ಧಗೊಳಿಸಬೇಕು ಎಂಬುದನ್ನು ತಿಳಿಸಲಾಗುತ್ತದೆ

ಯುಷ್ಮೇಷಿತೋ ಮರುತೋ ಮರ್ತ್ಯೇಷಿತ ಆ ಯೋ ನೋ ಅಭ್ವ ಈಷತೇ ।
ವಿ ತಂ ಯುಯೋತ ಶವಸಾ ವ್ಯೋಜಸಾ ವಿ ಯುಷ್ಮಾಕಾಭಿರೂತಿಭಿಃ ॥೮॥

ಪದಾರ್ಥ:- ಹೇ [ಮರುತಃ] ವಿದ್ವಾಂಸರೇ! ನೀವು [ಯಃ] ಯಾವ [ಅಭ್ವಃ] ವಿರೋಧಿ ಮಿತ್ರಭಾವ ರಹಿತರಾದ [ಯುಷ್ಮೇಷಿತಃ] ನಿಮ್ಮನ್ನು ಜಯಿಸುವ ಮತ್ತು [ಮರ್ತ್ಯೇಷಿತಃ] ಮನುಷ್ಯರಿಂದ ವಿಜಯದ ಇಚ್ಛೆಯನ್ನು ಮಾಡುವ ಶತ್ರುವು [ನಃ] ನಮ್ಮನ್ನು [ಈಷತೇ] ಕೊಲ್ಲುತ್ತಾನೋ ಅವನನ್ನು [ಶವಸಾ] ಬಲಯುಕ್ತ ಸೇನೆಯ ಹಾಗೂ [ವ್ಯೋಜಸಾ] ಅನೇಕ ಪ್ರಕಾರದ ಪರಾಕ್ರಮ ಮತ್ತು [ಯುಷ್ಮಾಕಾಭಿಃ] ನಿಮ್ಮ ಕೃಪಾಪಾತ್ರರ [ಊತಿಭಿಃ] ರಕ್ಷಣೆ, ಪ್ರೀತಿ, ತೃಪ್ತಿ, ಜ್ಞಾನ ಮೊದಲಾದವುಗಳಿಂದ ಕೂಡಿದ ಸೇನೆಗಳೊಂದಿಗೆ [ಯುಯೋತ] ವಿಶೇಷವಾಗಿ ದೂರಗೊಳಿಸಿರಿ.

ಭಾವಾರ್ಥ:- ಮನುಷ್ಯನಿಗೆ ಉಚಿತವಾದುದೇನೆಂದರೆ ಯಾವ ಸ್ವಾರ್ಥಿ, ಪರೋಪಕಾರರಹಿತ, ಇತರರಿಗೆ ಪೀಡನೆಯನ್ನು ನೀಡುವುದರಲ್ಲಿ ಅತ್ಯಂತ ಪ್ರಸನ್ನರಾದ ಶತ್ರುಗಳು ಇದ್ದಾರೋ ಅವರನ್ನು ವಿದ್ಯೆ ಮತ್ತು ಶಿಕ್ಷಣದ

ಮೂಲಕ ದುಷ್ಟಕರ್ಮಗಳಿಂದ ನಿವೃತ್ತಿಗೊಳಿಸಿ ಉತ್ತಮ ಸೇನಾಬಲವನ್ನು ಸಂಪಾದಿಸಿ ಯುದ್ಧದಲ್ಲಿ ಗೆಲ್ಲುವ ಅವರನ್ನು ದೂರ ಮಾಡಿ ಎಲ್ಲರ ಹಿತದ ವಿಸ್ತಾರವನ್ನು ಮಾಡಬೇಕು.

ಪುನಃ ಅವರಿಂದ ಶೋಧಿಸಲ್ಪಟ್ಟು ಪ್ರೇರಿಸಲ್ಪಟ್ಟು ಏನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಅಸಾಮಿ ಹಿ ಪ್ರಯಜ್ಯವಃ ಕಣ್ವಂ ದದ ಪ್ರಚೇತಸಃ ।
ಅಸಾಮಿಭಿರ್ಮರುತ ಆ ನ ಊತಿಭಿ-ರ್ಗಂತಾ ವೃಷ್ಟಿಂ ನ ವಿದ್ಯುತಃ ॥೯॥

ಪದಾರ್ಥ:- ಹೇ **[ಪ್ರಯುಜ್ಯವಃ]** ಉತ್ತಮ ರೀತಿಯಲ್ಲಿ ಪರೋಪಕಾರವನ್ನು ಮಾಡುವ **[ಪ್ರಚೇತಸಃ]** ಉತ್ತಮ ಜ್ಞಾನಯುಕ್ತ **[ಮರುತಃ]** ವಿದ್ವಾಂಸರೇ! ನೀವು **[ಅಸಾಮಿಭಿಃ]** ನಾಶರಹಿತವಾದ **[ಊತಿಭಿಃ]** ರಕ್ಷಣಾಸೇನಾದಿಗಳಿಂದ **[ನ]** ಯಾವ ರೀತಿ **[ವಿದ್ಯುತಃ]** ಸೂರ್ಯ, ವಿದ್ಯುತ್ ಮೊದಲಾದವುಗಳು **[ವೃಷ್ಟಿಂ]** ಮಳೆಯನ್ನು ಸುರಿಸಿ ಸುಖಿಯನ್ನಾಗಿ ಮಾಡುತ್ತವೆಯೋ ಅದೇ ರೀತಿ **[ನಃ]** ನಮಗೆ **[ಅಸಾಮಿ]** ಅಖಂಡಿತ ಸುಖವನ್ನು **[ದದ]** ನೀಡಿರಿ. **[ಹಿ]** ನಿಶ್ಚಯವಾಗಿ ದುಷ್ಟಶತ್ರುಗಳನ್ನು ಗೆಲ್ಲಲು **[ಕಣ್ವಂ]** ಆಪ್ತ ವಿದ್ವಾಂಸರ ಸಮೀಪ **[ಆಗಂತಾ]** ಉತ್ತಮ ರೀತಿಯಿಂದ ಹೋಗುವವರಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಪವನ, ಸೂರ್ಯ, ವಿದ್ಯುತ್, ಮೊದಲಾದವುಗಳು ಮಳೆಯನ್ನುಂಟುಮಾಡಿ ಎಲ್ಲ ಪ್ರಾಣಿಗಳ ಸುಖಕ್ಕಾಗಿ ಅನೇಕ ಪ್ರಕಾರದ ಫಲ, ಪತ್ರ, ಪುಷ್ಪ, ಅನ್ನ ಮೊದಲಾದವುಗಳನ್ನು ಉತ್ಪನ್ನಮಾಡುತ್ತದೆಯೋ, ಅದೇರೀತಿ ವಿದ್ವಾಂಸರೂ ಸಹ ಪ್ರಾಣಿ ಮಾತ್ರರಿಗೆ ವೇದವಿದ್ಯೆಯನ್ನು ನೀಡಿ ಉತ್ತಮೋತ್ತಮ ಸುಖಗಳನ್ನು ನಿರಂತರವಾಗಿ ಸಂಪಾದಿಸಬೇಕು.

ಪುನಃ ಅವರು ಏನನ್ನು ಮಾಡಬೇಕು ಎಂಬುದನ್ನು ಹೇಳಲಾಗಿದೆ.

ಅಸಾಮ್ಯೋಜೋ ಬಿಭೃಥಾ ಸುದಾನವೋऽಸಾಮಿ ಧೂತಯಃ ಶವಃ ।
ಋಷಿದ್ವಿಷೇ ಮರುತಃ ಪರಿಮನ್ಯವ ಇಷುಂ ನ ಸೃಜತ ದ್ವಿಷಮ್ ॥೧೦॥

ಪದಾರ್ಥ:- ಹೇ **[ಧೂತಯಃ]** ದುಷ್ಟರನ್ನು ಕಂಪಿಸುವಂತೆ ಮಾಡುವ **[ಸುದಾನವಃ]** ಉತ್ತಮ ದಾನ ಸ್ವಭಾವದವರಾದ **[ಮರುತಃ]** ವಿದ್ವಾಂಸರೇ! ನೀವು **[ನ]** ಯಾವ ರೀತಿ **[ಪರಿಮನ್ಯವಃ]** ಎಲ್ಲ ರೀತಿಯಿಂದ ಕ್ರೋಧಾವಿಷ್ಟನಾದ ಶೂರವೀರ ಮನುಷ್ಯನು **[ದ್ವಿಷಂ]** ಶತ್ರುವಿನ ಬಗೆಗೆ **[ಇಷುಂ]** ಬಾಣವೇ ಮೊದಲಾದ ಶಸ್ತ್ರ ಸಮೂಹಗಳನ್ನು ಬಿಡುತ್ತಾನೋ ಅದೇ ರೀತಿ **[ಋಷಿದ್ವಿಷೇ]** ವೇದಗಳನ್ನು ತಿಳಿದವನ ಮತ್ತು ಈಶ್ವರನ ವಿರೋಧಿಯಾದ ದುಷ್ಟ ಮನುಷ್ಯರಿಗಾಗಿ **[ಅಸಾಮಿ]** ಅಖಿಲ **[ಓಜಃ]** ವಿದ್ಯಾಪರಾಕ್ರಮಯುಕ್ತ **[ಅಸಾಮಿ]** ಸಂಪೂರ್ಣವಾದ **[ಶವಃ]** ಬಲವನ್ನು **[ಬಿಭೃಥಾ]** ಧಾರಣೆ ಮಾಡಿರಿ. ಮತ್ತು ಆ ಶತ್ರುಗಳ ಬಗೆಗೆ ಶಸ್ತ್ರ ಅಥವಾ ಅಸ್ತ್ರಗಳನ್ನು **[ಸೃಜತ]** ಪ್ರಯೋಗಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಧಾರ್ಮಿಕ ಶೂರ ವೀರ ಪುರುಷನು ಮನ್ಯುರೂಪೀ ಕ್ರೋಧವನ್ನು ಹೊಂದಿ ಶಸ್ತ್ರಗಳ ಪ್ರಹಾರದಿಂದ ಶತ್ರುಗಳನ್ನು ಜಯಿಸಿ ನಿಷ್ಕಂಟಕ ರಾಜ್ಯವನ್ನು ಪ್ರಾಪ್ತಿಸಿ ಪ್ರಜೆಗಳನ್ನು ಸುಖಿಗಳಾಗುವಂತೆ ಮಾಡುತ್ತಾನೋ ಅದೇ ರೀತಿ ಎಲ್ಲಾ ಮನುಷ್ಯರೂ ವಿದ್ವಾಂಸನ ಹಾಗೂ ಈಶ್ವರನ ವಿರೋಧಿಗಳ ಬಗೆಗೆ ಸಂಪೂರ್ಣ ಬಲಪರಾಕ್ರಮಗಳಿಂದ ಅಸ್ತ್ರ-ಶಸ್ತ್ರಗಳನ್ನು ಪ್ರಯೋಗಿಸಿ, ಅವರನ್ನು ಜಯಿಸಿ ಪರಮಾತ್ಮ, ವೇದವಿದ್ಯೆ ಹಾಗೂ ವಿದ್ವಾಂಸರಿಂದ ಯುಕ್ತವಾದ ರಾಜ್ಯವನ್ನು ಸಂಪಾದಿಸಬೇಕು.

ಈ ಸೂಕ್ತದಲ್ಲಿ ವಾಯು ಮತ್ತು ವಿದ್ವಾಂಸರ ಗುಣವರ್ಣನೆ ಮಾಡಿರುವುದರಿಂದ ಪೂರ್ವಸೂಕ್ತಾರ್ಥದೊಂದಿಗೆ ಈ ಸೂಕ್ತದ ಅರ್ಥವು ಸಂಗತಿಯನ್ನು ಹೊಂದುತ್ತದೆ ಎಂದು ತಿಳಿಯಬೇಕು.

ಮೂವತ್ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೪೦

ಮ.ಸಂ. ೮ । ಋಷಿಃ - ಕಣ್ವೋ ಘೌರಃ । ದೇವತಾ - ಬ್ರಹ್ಮಣಸ್ಪತಿಃ । ಛಂದಃ - ೧, ೨ ನಿಚೃದುಪರಿಷ್ಟಾದ್ ಬೃಹತೀ, ೫ ಪಥ್ಯಾ ಬೃಹತೀ । ಸ್ವರಃ- ಮಧ್ಯಮಃ । ಛಂದಃ ೩, ೭ ಆರ್ಚೀ ತ್ರಿಷ್ಟುಪ್ ಛಂದಃ , ಸ್ವರಃ-ಧೈವತಃ । ಛಂದಃ ೪, ೬, ಶತಃ ಪಂಕ್ತಿನಿಚೃತ್ಪಙ್ಕ್ತಿಃ । ಸ್ವರಃ-ಪಂಚಮಃ

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ವೇದವಿದರಾದವರಿಗೆ ಯಾವ ರೀತಿ ಉಪದೇಶವನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಉತ್ತಿಷ್ಠ ಬ್ರಹ್ಮಣಸ್ಪತೇ ದೇವಯಂತಸ್ತ್ವೇಮಹೇ ।
ಉಪ ಪ್ರ ಯಂತು ಮರುತಃ ಸುದಾನವ ಇಂದ್ರ ಪ್ರಾಶೂರ್ಭವಾ ಸಚಾ ॥೧॥

ಪದಾರ್ಥ:- ಹೇ **[ಬ್ರಹ್ಮಣಸ್ಪತೇ]** ವೇದದ ರಕ್ಷಣೆಯನ್ನು ಮಾಡುವ **[ಇಂದ್ರ]** ಅಖಿಲ ವಿದ್ಯಾದಿ ಪರಮೈಶ್ವರ್ಯಯುಕ್ತ ವಿದ್ವಾಂಸನೇ! **[ಉತ್ ತಿಷ್ಠ]** ಎದ್ದು ನಿಲ್ಲು. ಯಾವ ರೀತಿ **[ಸಚಾ]** ವಿಜ್ಞಾನದಿಂದ **[ದೇವಯಂತಃ]** ಸತ್ಯವಿದ್ಯೆಗಳ ಕಾಮನೆ ಮಾಡುವ **[ಸುದಾನವಃ]** ಉತ್ತಮ ದಾನಸ್ವಭಾವದವರಾದ **[ಮರುತಃ]** ವಿದ್ಯೆಗಳ ಸಿದ್ಧಾಂತದ ಪ್ರಚಾರದ ಅಭಿಲಾಷಿಗಳಾದ ನಾವು **[ತ್ವಾ]** ನಿಮ್ಮನ್ನು **[ಈಮಹೇ]** ಪ್ರಾಪ್ತಿಸುತ್ತೇವೆ ಮತ್ತು ಯಾವ ರೀತಿ ಎಲ್ಲ ಧಾರ್ಮಿಕ ಜನರು **[ಉಪಪ್ರಯಂತು]** ಸಮೀಪಕ್ಕೆ ಬರುತ್ತಾರೋ ಹಾಗೆಯೇ ನೀವು **[ಪ್ರಾಶೂಃ]** ಎಲ್ಲ ಸುಖಗಳನ್ನು ಪ್ರಾಪ್ತಿಸುವವರು **[ಭವ]** ಆಗಿರಿ. ಮತ್ತು ಎಲ್ಲರ ಹಿತಾರ್ಥಪ್ರಯತ್ನ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಎಲ್ಲ ಮಾನವರು ಅತಿಪುರುಷಾರ್ಥದಿಂದ ವಿದ್ವಾಂಸರ ಸಂಗವನ್ನು ಮಾಡಿ ಅವರ ಸೇವೆಯಲ್ಲಿ ವಿದ್ಯೆ, ಯೋಗ, ಧರ್ಮ ಮತ್ತು ಎಲ್ಲ ರೀತಿಯ ಉಪಕಾರವನ್ನು ಮಾಡುವ ಮೂಲಕ ವಿದ್ಯೆಗಳ ಅಧ್ಯೇತರಾಗಿ ಪರಮಾತ್ಮನ ವಿಜ್ಞಾನ ಹಾಗೂ ಪ್ರಾಪ್ತಿಯಿಂದ ಎಲ್ಲ ಮನುಷ್ಯರಿಗೂ ಪ್ರಾಪ್ತರಾಗಿರಿ. ಈ ಮೂಲಕ ಇತರ ಎಲ್ಲರನ್ನೂ ಸುಖಿಗಳನ್ನಾಗಿ ಮಾಡಿರಿ.

ಪುನಃ ಇವರು ಪರಸ್ಪರರಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಲಾಗಿದೆ.

ತ್ವಾಮಿದ್ಧಿ ಸಹಸಸ್ಪುತ್ರ ಮರ್ತ್ಯ ಉಪಬ್ರೂತೇ ಧನೇ ಹಿತೇ ।
ಸುವೀರ್ಯಂ ಮರುತ ಆ ಸ್ವಶ್ವ್ಯಂ ದಧೀತ ಯೋ ವ ಆಚಕೇ ॥೨॥

ಪದಾರ್ಥ:- ಹೇ **[ಸಹಸಸ್ಪುತ್ರ]** ಬ್ರಹ್ಮಚರ್ಯ ಮತ್ತು ವಿದ್ಯಾದಿಗುಣಗಳಿಂದ ಶರೀರಾತ್ಮಗಳ ಬಲಯುಕ್ತನಾದವನ ಪುತ್ರನೇ! **[ಯಃ]** ಯಾವ **[ಮರ್ತ್ಯಃ]** ವಿದ್ವಾಂಸರು **[ತ್ವಾಂ]** ನಿನಗೆ ಎಲ್ಲ ವಿದ್ಯೆಗಳನ್ನು ಓದಿಸುತ್ತಿದ್ದಾರೋ **[ಮರುತಃ]** ಬುದ್ಧಿಶಾಲಿಗಳಾದ ಜನರೇ! ನೀವು ಯಾವ **[ವಃ]** ನಿಮ್ಮನ್ನು **[ಹಿತೇ]** ಕಲ್ಯಾಣಕಾರಕವಾದ **[ಧನೇ]** ಸತ್ಯವಿದ್ಯಾದಿ ಧನಗಳಲ್ಲಿ **[ಆಚಕೇ]** ತೃಪ್ತಗೊಳಿಸಲಿ. **[ಇತ್]** ಅದಕ್ಕಾಗಿ **[ಸ್ವಶ್ವ್ಯಂ]** ಉತ್ತಮ ವಿದ್ಯಾವಿಷಯಗಳಲ್ಲಿ ಉತ್ಪನ್ನವಾದ **[ಸುವೀರ್ಯಂ]** ಅತ್ಯುತ್ತಮ ಪರಾಕ್ರಮವನ್ನು ನೀವುಗಳು ಧಾರಣ ಮಾಡಿರಿ.

ಭಾವಾರ್ಥ:- ಮನುಷ್ಯರು, ಓದುವ, ಓದಿಸುವಂತಹ ಧರ್ಮಯುಕ್ತ ಕರ್ಮಗಳಿಂದಲೇ ಒಬ್ಬರು ಇನ್ನೊಬ್ಬರ ಉಪಕಾರವನ್ನು ಮಾಡುತ್ತಾ ಸುಖಿಗಳಾಗಬೇಕು.

ಪುನಃ ಈ ಜನರು ಅನ್ಯೋನ್ಯರಾಗಿ ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಪ್ರೈತು ಬ್ರಹ್ಮಣಸ್ಪತಿಃ ಪ್ರ ದೇವ್ಯೇತು ಸೂನೃತಾ ।

ಅಚ್ಛಾ ವೀರಂ ನರ್ಯಂ ಪಂಕ್ತಿರಾಧಸಂ ದೇವಾ ಯಜ್ಞಂ ನಯಂತು ನಃ ॥೩॥

ಪದಾರ್ಥ:- ಹೇ ವಿದ್ವಾಂಸ! [ಬ್ರಹ್ಮಣಃ] ವೇದಗಳ [ಪತಿಃ] ಪಾಲನೆ, ರಕ್ಷಣೆ ಮತ್ತು ಪ್ರಚಾರವನ್ನು ಮಾಡುವ ನೀನು ಯಾವ [ಪಂಕ್ತಿರಾಧಸಂ] ಧರ್ಮಾತ್ಮ ಹಾಗೂ ವೀರಪುರುಷರ ಸಿದ್ಧಿಕಾರಕನು [ಅಚ್ಛಾವೀರಂ] ಶುದ್ಧವೂ ಪೂರ್ಣವೂ ಶರೀರಾತ್ಮಬಲಯುಕ್ತ ವೀರರ ಪ್ರಾಪ್ತಿಗಾಗಿ [ಯಜ್ಞಂ] ಪಠನ, ಪಾಠನ, ಶ್ರವಣ, ಮನನಾದಿ ಕ್ರಿಯಾರೂಪ ಯಜ್ಞವನ್ನು [ಪ್ರೈತು] ಪ್ರಾಪ್ತಿಸುತ್ತಾರೋ ಮತ್ತು ಹೇ ವಿದ್ಯಾಯುಕ್ತ ಸ್ತ್ರೀಯೇ! [ಸೂನೃತಾ] ಆ ವೇದ ವಾಣಿಯ ಶಿಕ್ಷಣ ಸಹಿತ [ದೇವಿ] ಸಮಸ್ತ ವಿದ್ಯೆ ಮತ್ತು ಸುಶೀಲತೆಯಿಂದ ಪ್ರಕಾಶಮಾನನಾಗಿ ನೀನೂ ಸಹ ಯಾವ ಯಜ್ಞವನ್ನು ಪ್ರಾಪ್ತಿಸುವೆಯೋ ಆ ಯಜ್ಞವನ್ನು [ದೇವಾಃ] ವಿದ್ವಾಂಸರು [ನಃ] ನಮಗೆ [ಪ್ರಣಯಂತು] ಪ್ರಾಪ್ತಿಗೊಳಿಸಲಿ.

ಭಾವಾರ್ಥ:- ಎಲ್ಲ ಮನುಷ್ಯರು ವಿದ್ಯೆಯ ನಿರಂತರ ವೃದ್ಧಿಗಾಗಿ ಇಚ್ಛೆಯನ್ನು ಮಾಡುತ್ತಿರಬೇಕು.

ವಿದ್ವಾಂಸರು ಮತ್ತು ಅನ್ಯ ಮನುಷ್ಯರು ಒಬ್ಬರು ಇನ್ನೊಬ್ಬರೊಂದಿಗೆ ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಯೋ ವಾಘತೇ ದದಾತಿ ಸೂನರಂ ವಸು ಸ ಧತ್ತೇ ಅಕ್ಷಿತಿ ಶ್ರವಃ ।

ತಸ್ಮಾ ಇಳಾಂ ಸುವೀರಾಮಾ ಯಜಾಮಹೇ ಸುಪ್ರತೂರ್ತಿಮನೇಹಸಮ್ ॥೪॥

ಪದಾರ್ಥ:- [ಯಃ] ಯಾವ ಮನುಷ್ಯನು [ವಾಘತೇ] ವಿದ್ವಾಂಸರಿಗಾಗಿ [ಸೂನರಂ] ಯಾವುದರಿಂದ ಉತ್ತಮ ಮನುಷ್ಯರಾಗುತ್ತಾರೋ ಆ [ವಸು] ಧನವನ್ನು [ದದಾತಿ] ನೀಡುತ್ತಾನೋ ಮತ್ತು ಯಾವ [ಅನೇಹಸಂ] ಹಿಂಸೆಗೆ ಯೋಗ್ಯವಲ್ಲದ [ಸುಪ್ರತೂರ್ತಿಮ್] ಉತ್ತಮತೆಯೊಂದಿಗೆ ಶೀಘ್ರವಾಗಿ ಪ್ರಾಪ್ತಿಗೊಳಿಸುವ [ಸುವೀರಾಂ] ಯಾವುದರಿಂದ ಉತ್ತಮಶೂರವೀರರು ಪ್ರಾಪ್ತವಾಗುತ್ತಾರೋ, [ಇಳಾಂ] ಪೃಥಿವೀ ಹಾಗೂ ವಾಣಿಯನ್ನು ನಾವುಗಳು [ಆ ಯಜಾಮಹೇ] ಉತ್ತಮ ರೀತಿಯಲ್ಲಿ ಪ್ರಾಪ್ತಿಸುತ್ತೇವೆ. ಅದರಿಂದ [ಸಃ] ಆ ಪುರುಷನು [ಅಕ್ಷಿತಿ] ಎಂದಿಗೂ ಕ್ಷೀಣವಾಗದಂತಹ ಆ [ಶ್ರವಃ] ಧನ ಮತ್ತು ವಿದ್ಯೆಯ ಶ್ರವಣವನ್ನು [ಧತ್ತೇ] ಮಾಡುತ್ತಾರೆ.

ಭಾವಾರ್ಥ:- ಯಾವ ಮನುಷ್ಯನು ಶರೀರ, ವಾಣಿ, ಮನ ಮತ್ತು ಧನಗಳಿಂದ ವಿದ್ವಾಂಸರ ಸೇವೆಯನ್ನು ಮಾಡುತ್ತಾನೋ ಅವನೇ ಅಕ್ಷಯ ವಿದ್ಯೆಯನ್ನು ಪ್ರಾಪ್ತಿಸಿ ಪೃಥ್ವೀ ರಾಜ್ಯವನ್ನು ಹೊಂದುತ್ತಾ ಮುಕ್ತಿಯನ್ನು ಹೊಂದುತ್ತಾನೆ. ಯಾವ ಪುರುಷನು ವಾಣಿ ಮತ್ತು ವಿದ್ಯೆಯನ್ನು ಹೊಂದುತ್ತಾನೋ ಅವನು ಇತರ ಜನರನ್ನು ವಿದ್ವಾಂಸರನ್ನಾಗಿ ಮಾಡುತ್ತಾನೆ; ಆಲಸೀ, ಮೂರ್ಖರನ್ನಲ್ಲ.

ಈಗ ಈಶ್ವರನು ಹೇಗಿದ್ದಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಪ್ರ ನೂನಂ ಬ್ರಹ್ಮಣಸ್ಪತಿ-ರ್ಮಂತ್ರಂ ವದತ್ಯುಕ್ಥ್ಯಮ್ ।

ಯಸ್ಮಿನ್ನಿಂದ್ರೋ ವರುಣೋ ಮಿತ್ರೋ ಅರ್ಯಮಾ ದೇವಾ ಓಕಾಂಸಿ ಚಕ್ರಿರೇ ॥೫॥

ಪದಾರ್ಥ:- ಹೇ [ಬ್ರಹ್ಮಣಸ್ಪತಿ] ಬೃಹದ್ಬ್ರಹ್ಮಾಂಡದ ಮತ್ತು ವೇದಗಳ ರಕ್ಷಕನೂ, ಸ್ವಾಮಿಯೂ, ನ್ಯಾಯಾಧೀಶನೂ ಆದ ಪರಮಾತ್ಮನು [ನೂನಂ] ನಿಶ್ಚಯವಾಗಿ [ಉಕ್ಥ್ಯಂ] ಹೇಳಲು ಮತ್ತು ಕೇಳಲು ಯೋಗ್ಯವಾದ ವೇದವಚನಗಳಲ್ಲಿ ಇರುವ [ಮಂತ್ರಂ] ವೇದಮಂತ್ರಗಳ ಸಮೂಹದ [ಪ್ರವದತಿ] ಉಪದೇಶ ಮಾಡುತ್ತಾನೆ ಮತ್ತು [ಯಸ್ಮಿನ್] ಯಾವ ಜಗದೀಶ್ವರನಲ್ಲಿ [ಇಂದ್ರಃ] ವಿದ್ಯುತ್ [ವರುಣಃ] ಸಮುದ್ರ, ಚಂದ್ರ, ತಾರೆ ಮೊದಲಾದ ಲೋಕಾಂತರಗಳು [ಮಿತ್ರಃ] ಪ್ರಾಣ [ಅರ್ಯಮಾ] ವಾಯು ಮತ್ತು [ದೇವಾಃ] ಪೃಥಿವ್ಯಾದಿ ಲೋಕಗಳು ಮತ್ತು ವಿದ್ವಾಂಸರು [ಓಕಾಂಸಿ] ಸ್ಥಾನಗಳನ್ನು [ಚಕ್ರಿರೇ] ನಿರ್ಮಿಸಿದ್ದಾರೋ ಅದೇ ಪರಮೇಶ್ವರನನ್ನು ನಾವುಗಳು ಸತ್ಕರಿಸೋಣ.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ ಯಾವ ಪರಮಾತ್ಮನು ವೇದಗಳ ಉಪದೇಶವನ್ನು ಮಾಡಿದ್ದಾನೋ ಯಾವನು ಸಮಸ್ತ ಜಗತ್ತಿನಲ್ಲಿ ವ್ಯಾಪ್ತನಾಗಿ ಸ್ಥಿತನಾಗಿದ್ದಾನೋ, ಯಾರಲ್ಲಿ ಸಮಸ್ತ ಪೃಥಿವ್ಯಾದಿ ಲೋಕಗಳು ಇರುತ್ತವೆಯೋ ಮತ್ತು ಮುಕ್ತಿ ಸಮಯದಲ್ಲಿ ವಿದ್ವಾಂಸರು ನಿವಾಸ ಮಾಡುತ್ತಾರೋ ಅದೇ ಪರಮೇಶ್ವರನ ಉಪಾಸನೆಯನ್ನು ಮಾಡಬೇಕು. ಅವನಿಗಿಂತ ಭಿನ್ನನಾದ ಯಾರನ್ನೂ ಅಲ್ಲ.

ಎಲ್ಲ ಮಾನವರಿಗೆ ವೇದಗಳನ್ನು ಓದುವ ಅಧಿಕಾರವಿದೆ ಎಂಬುದನ್ನು ಇಲ್ಲಿ ತಿಳಿಯಪಡಿಸಲಾಗಿದೆ.

ತಮಿದ್ ವೋಚೇಮಾ ವಿದಥೇಷು ಶಂಭುವಂ ಮಂತ್ರಂ ದೇವಾ ಅನೇಹಸಮ್ ।

ಇಮಾಂ ಚ ವಾಚಂ ಪ್ರತಿಹರ್ಯಥಾ ನರೋ ವಿಶ್ವೇದ್ ವಾಮಾ ವೋ ಅಶ್ನವತ್ ॥೬॥

ಪದಾರ್ಥ:- ಹೇ [ದೇವಾಃ] ವಿದ್ವಾಂಸರೇ! [ವಃ] ನಿಮಗಾಗಿ ನಾವು [ವಿದಥೇಷು] ತಿಳಿಯಲು ಯೋಗ್ಯವಾದ, ಓದುವ-ಓದಿಸುವ ವ್ಯವಹಾರಗಳಲ್ಲಿ ಯಾವ [ಅನೇಹಸಂ] ಅಹಿಂಸನೀಯವಾದ ಸರ್ವದಾ ರಕ್ಷಣೀಯ ದೋಷರಹಿತ [ಶಂಭುವಂ] ಕಲ್ಯಾಣಕಾರಕವಾದ [ಮಂತ್ರಂ] ಪದಾರ್ಥಗಳನ್ನು ಮನನ ಮಾಡುವ ಮಂತ್ರ ಅರ್ಥಾತ್ ಶ್ರುತಿ ಸಮೂಹವನ್ನು [ವೋಚೇಮ] ಉಪದೇಶ ಮಾಡಲಿ. [ತಂ ಇತ್] ಆ ವೇದವನ್ನೇ [ನರಃ] ವಿದ್ಯಾನೇತಾರರಾದ ನೀವುಗಳು [ಪ್ರತಿಹರ್ಯಥ] ಪುನಃ ಪುನಃ ತಿಳಿಯಿರಿ, ಗ್ರಹಣ ಮಾಡಿರಿ. [ಇತ್] ಯಾವ [ಇಮಾಂ] ಈ [ವಾಚಂ] ವೇದವಾಣಿಯನ್ನು ಪದೇಪದೇ ತಿಳಿದರೆ [ವಿಶ್ವಾ] ಸಮಸ್ತ [ವಾಮಾ] ಪ್ರಶಂಸನೀಯ ವಾಣಿಯು [ವಃ] ನಿಮಗೆ [ಅಶ್ನವತ್] ಪ್ರಾಪ್ತವಾಗಲಿ.

ಭಾವಾರ್ಥ:- ವಿದ್ವಾಂಸರಿಗೆ ಯೋಗ್ಯವಾದುದೇನೆಂದರೆ ವಿದ್ಯೆಯ ಪ್ರಚಾರಕ್ಕಾಗಿ ಮನುಷ್ಯರು ನಿರಂತರವಾದ ಅರ್ಥ, ಅಂಗ, ಉಪಾಂಗರಹಸ್ಯ, ಸ್ವರ ಮತ್ತು ಕುಶಲ ಕಲೆಯ ಸಹಿತ ವೇದಗಳನ್ನು ಉಪದೇಶಿಸಬೇಕು. ಮತ್ತು ಈ ಮನುಷ್ಯ ಮಾತ್ರರು ಈ ವಿದ್ವಾಂಸರಿಂದ ಸಮಸ್ತ ವೇದವಿದ್ಯೆಯನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. ಯಾವನೇ ಪುರುಷನು ಸುಖವನ್ನು ಬಯಸುವುದಾದರೆ ಅವನು ವಿದ್ವಾಂಸರ ಸತ್ಸಂಗವನ್ನು ಮಾಡಿ ವಿದ್ಯೆಯನ್ನು ಪ್ರಾಪ್ತಿಸಬೇಕು. ಈ ವಿದ್ಯೆಯಿಲ್ಲದೆ ಯಾರಿಗೂ ನಿಜವಾದ ಸುಖವೂ ಉಂಟಾಗಲಾರದು. ಇದನ್ನು ಓದುವ ಓದಿಸುವವರ ಪ್ರಯತ್ನದಿಂದ ಸಕಲ ವಿದ್ಯೆಗಳನ್ನು ಗ್ರಹಣ ಮಾಡಲು ಮತ್ತು ಮಾಡಿಸಲು ನಿರಂತರ ಯತ್ನಶೀಲರಾಗಬೇಕು.

ಯಾವುದೇ ಮಾನವನು ವಿದ್ವಾಂಸರನ್ನು ಹೊಂದಿ ವಿದ್ಯೆಯನ್ನು ಗ್ರಹಣಮಾಡಬಲ್ಲನು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಕೋ ದೇವಯಂತಮಶ್ನವ-ಜ್ಜನಂ ಕೋ ವೃಕ್ತಬರ್ಹಿಷಮ್ ।

ಪ್ರಪ್ರ ದಾಶ್ವಾನ್ ಪಸ್ತ್ಯಾಭಿರಸ್ಥಿತಾ-ಂತರ್ವಾವತ್ ಕ್ಷಯಂ ದಧೇ ॥೭॥

ಪದಾರ್ಥ:- **[ಕಃ]** ಯಾವ ಮನುಷ್ಯನು **[ದೇವಯಂತಂ]** ವಿದ್ವಾಂಸರ ಕಾಮನೆಯನ್ನು ಮಾಡಲು ಮತ್ತು **[ಕಃ]** ಯಾವನು **[ವೃಕ್ತಬರ್ಹಿಷಮ್]** ಸಕಲ ವಿದ್ಯೆಗಳಲ್ಲಿ ಕುಶಲನೂ, ಸಮಸ್ತ ಋತುಗಳಲ್ಲಿ ಯಜ್ಞಮಾಡುವವನೂ **[ಜನಂ]** ಸಕಲ ವಿದ್ಯೆಗಳಲ್ಲಿ ಪ್ರಕಟವಾದ ಜನಗಳನ್ನು **[ಅಶ್ನವತ್]** ಪ್ರಾಪ್ತಿಸಿ ಹಾಗೂ ಯಾವನು **[ದಾಶ್ವಾನ್]** ದಾನಶೀಲ ಪುರುಷನಿದ್ದಾನೋ ಅವನು **[ಪ್ರಾಸ್ಥಿತಾ]** ಪ್ರತಿಷ್ಠೆಯನ್ನು ಹೊಂದಲಿ. ಮತ್ತು ಯಾವನು **[ಪಸ್ತ್ಯಾಭಿಃ]** ಉತ್ತಮ ಗೃಹವುಳ್ಳ ಭೂಮಿಯಲ್ಲಿ **[ಅಂತರ್ವಾವತ್]** ಎಲ್ಲರೊಳಗೆ ಸಂಚರಿಸುವ ವಾಯುವಿನಿಂದ ಯುಕ್ತನಾಗಿ **[ಕ್ಷಯಂ]** ನಿವಾಸ ಮಾಡಲು ಯೋಗ್ಯವಾದ ಮನೆಯನ್ನು **[ದಧೇ]** ಧಾರಣಮಾಡಲಿ.

ಭಾವಾರ್ಥ:- ಎಲ್ಲ ಮಾನವರು ವಿದ್ಯಾ ಪ್ರಚಾರದ ಇಚ್ಛೆಯನ್ನುಳ್ಳ ಉತ್ತಮ ವಿದ್ವಾಂಸನನ್ನು ಹೊಂದಲಾರರು ಮತ್ತು ಎಲ್ಲರೂ ದಾನಶೀಲರಾಗಿ ಸರ್ವಋತುಗಳಲ್ಲಿಯೂ ಸುಖಕರವಾದ ಮನೆಯನ್ನು ಹೊಂದಲಾರರು. ಆದರೆ ಯಾವನೋ ಭಾಗ್ಯಶಾಲೀ ವಿದ್ವಾಂಸನು ಇವೆಲ್ಲವನ್ನೂ ಹೊಂದಬಲ್ಲನು.

ಅಂತಹ ವಿದ್ವಾಂಸರ ರಾಜ್ಯವು ಎಂತಹುದಾಗಿರುತ್ತದೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಉಪ ಕ್ಷತ್ರಂ ಪೃಂಚೀತ ಹಂತಿ ರಾಜಭಿ-ರ್ಭಯೇ ಚಿತ್ ಸುಕ್ಷಿತಿಂ ದಧೇ ।
ನಾಸ್ಯ ವರ್ತಾ ನ ತರುತಾ ಮಹಾಧನೇ ನಾರ್ಭೇ ಅಸ್ತಿ ವಜ್ರಿಣಃ ॥೮॥

ಪದಾರ್ಥ:- ಯಾವ ಮನುಷ್ಯನು **[ಕ್ಷತ್ರಂ]** ರಾಜ್ಯವನ್ನು **[ಪೃಂಚೀತ]** ಸಂಬಂಧಿಸಿ ಹಾಗೂ **[ಸುಕ್ಷಿತಿಂ]** ಉತ್ತಮೋತ್ತಮ ಭೂಮಿಯನ್ನು ಪಡೆಯುವಂತಹ ವ್ಯವಹಾರವನ್ನು **[ದಧೇ]** ಧಾರಣ ಮಾಡುತ್ತಾನೋ **[ಅಸ್ಯ]** ಈ ಸರ್ವ ಸಭಾಧ್ಯಕ್ಷನಾದ **[ವಜ್ರಿಣಃ]** ಬಲಶಾಲಿಯ **[ರಾಜಭಿಃ]** ರಾಜಪುತ್ರರೊಂದಿಗೆ **[ಭಯೇ]** ಯುದ್ಧಭೀತಿಯಲ್ಲಿ ತನ್ನ ಮನುಷ್ಯರನ್ನು ಯಾವುದೇ ಶತ್ರುವು **[ನ ಹಂತಿ]** ಕೊಲ್ಲಲಾರನು, **[ನ ಮಹಾಧನೇ]** ಮಹಾಧನದ ಪ್ರಾಪ್ತಿಗಾಗಿ ಮಹಾಸಂಗ್ರಾಮದಲ್ಲಿ **[ವರ್ತಾ]** ವಿಪರೀತ ವರ್ತಿಸುವವನು **[ನ]** ಆಗುವುದಿಲ್ಲ. ಈ ವೀರ್ಯವಂತರ ಸಮೀಪದ **[ಅರ್ಭೇ]** ಸಣ್ಣ ಸಂಗ್ರಾಮಗಳಲ್ಲಿ **[ಚಿತ್]** ಸಹ **[ತರುತಾ]** ಬಲವನ್ನು ಉಲ್ಲಂಘನೆ ಮಾಡುವವನು **[ಅಸ್ತಿ]** ಆಗುತ್ತಾನೆ.

ಭಾವಾರ್ಥ:- ಯಾವ ರಾಜಪುತ್ರರು ಮಹಾಧನದ ಪ್ರಾಪ್ತಿಗಾಗಿ ಬೃಹತ್ ಸಂಗ್ರಾಮವನ್ನು ಅಥವಾ ಸಣ್ಣ ಯುದ್ಧದಲ್ಲಿ ಶತ್ರುಗಳನ್ನು ಜಯಿಸಿ, ಅವರನ್ನು ನಿವಾರಿಸಿಕೊಂಡು, ಧರ್ಮದಿಂದ ಪ್ರಜೆಗಳ ಪಾಲನೆ ಮಾಡಲು ಸಮರ್ಥರಾಗುತ್ತಾರೋ ಅವರೇ ಈ ಜಗತ್ತಿನಲ್ಲಿ ಆನಂದವನ್ನು ಅನುಭವಿಸುತ್ತಾ ಪರಲೋಕದಲ್ಲಿಯೂ ಮಹದಾನಂದವನ್ನು ಅನುಭವಿಸಲು ಸಮರ್ಥರಾಗುತ್ತಾರೆ.

೩೯ನೇ ಸೂಕ್ತದಲ್ಲಿ ಹೇಳಲಾದ ವಿದ್ವಾಂಸರ ಕಾರ್ಯರೂಪೀ ಅರ್ಥದೊಂದಿಗೆ ಬ್ರಹ್ಮಣಸ್ಪತಿ ಮೊದಲಾದ ಅರ್ಥಗಳ ಸಂಬಂಧವಿರುವುದರಿಂದ ಹಿಂದಿನ ಸೂಕ್ತದೊಂದಿಗೆ ಈ ಸೂಕ್ತದ ಸಂಗತಿ ಇದೆ ಎಂದು ತಿಳಿಯಬೇಕು.

ನಲವತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೪೧

ಮಂತ್ರಸಂಖ್ಯೆ ೯ । ಋಷಿಃ - ಕಣ್ವೋ ಘೌರಃ । ದೇವತಾ - ವರುಣಮಿತ್ರಾರ್ಯಮ್ಣಃ, ೪-೬ ಆದಿತ್ಯಾಃ । ಛಂದಃ - ೧, ೪, ೫, ೮ ಗಾಯತ್ರೀ, ೨, ೩, ೬ ವಿರಾಡ್ ಗಾಯತ್ರೀ, ೭, ೯ ನಿಚೃದ್ ಗಾಯತ್ರೀ । ಸ್ವರಃ - ಷಡ್ಜಃ ।

ಅನೇಕ ವೀರರಿಂದ ರಕ್ಷಿತನಾಗಿದ್ದರೂ ರಾಜನಾದವನು ಒಮ್ಮೊಮ್ಮೆ ಶತ್ರುವಿನಿಂದ ಪೀಡಿತನಾಗಿಯೇ ಆಗುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಯಂ ರಕ್ಷಂತಿ ಪ್ರಚೇತಸೋ ವರುಣೋ ಮಿತ್ರೋ ಅರ್ಯಮಾ ।
ನೂ ಚಿತ್ ಸ ದಭ್ಯತೇ ಜನಃ ॥೧॥

ಪದಾರ್ಥ:- **[ಪ್ರಚೇತಸಃ]** ಉತ್ತಮ ಜ್ಞಾನವಂತನಾದ **[ವರುಣಃ]** ಉತ್ತಮ ಗುಣ ಹಾಗೂ ಶ್ರೇಷ್ಠತ್ವವನ್ನುಳ್ಳದ್ದರಿಂದ ಸಭಾಧ್ಯಕ್ಷನಾಗಲು ಯೋಗ್ಯನಾದ **[ಮಿತ್ರಃ]** ಎಲ್ಲರ ಮಿತ್ರನೂ **[ಅರ್ಯಮಾ]** ಪಕ್ಷಪಾತವನ್ನು ತ್ಯಜಿಸಿ, ನ್ಯಾಯವನ್ನು ಮಾಡಲು ಸಮರ್ಥರಾದ ಈ ಎಲ್ಲರೂ **[ಯಂ]** ಯಾವ ಮನುಷ್ಯ ಅಥವಾ ರಾಜ್ಯ ಅಥವಾ ದೇಶದ **[ರಕ್ಷಂತಿ]** ರಕ್ಷಣೆಯನ್ನು ಮಾಡುತ್ತಾರೋ **[ಸಃ ಚಿತ್]** ಅವರೇ, **[ಜನಃ]** ಮನುಷ್ಯಾದಿಗಳು **[ನು]** ಬೇಗನೇ ಎಲ್ಲ ಶತ್ರುಗಳನ್ನೂ ಪ್ರಾಯಶಃ **[ದಭ್ಯತೇ]** ದಮನ ಮಾಡುತ್ತಾರೆ; ನಾಶಪಡಿಸುತ್ತಾರೆ.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, ಎಲ್ಲಕ್ಕಿಂತ ಉತ್ಕೃಷ್ಟವಾದ ಸೇನೆಯ ಸಭಾಧ್ಯಕ್ಷನೂ ಎಲ್ಲರ ಮಿತ್ರನೂ, ದೂತನೂ, ಅಧ್ಯಾಪನ ಅಥವಾ ಉಪದೇಶವನ್ನು ಮಾಡುವ ಧಾರ್ಮಿಕ ಪುರುಷನನ್ನು ನ್ಯಾಯಾಧೀಶನನ್ನಾಗಿ ಮಾಡಬೇಕು ಹಾಗೂ ಆ ವಿದ್ವಾಂಸರ ಬಳಿಯಿಂದ ರಕ್ಷಣೆ ಮೊದಲಾದವುಗಳನ್ನು ಪ್ರಾಪ್ತಿಸಿ ಎಲ್ಲ ಶತ್ರುಗಳನ್ನು ಶೀಘ್ರವಾಗಿ ನಾಶಮಾಡಿ ಚಕ್ರವರ್ತೀರಾಜ್ಯದ ಪಾಲನೆಯನ್ನು ಮಾಡಿ ಸರ್ವರ ಹಿತವನ್ನು ಸಾಧಿಸಬೇಕು. ಯಾರಿಗೂ ಮೃತ್ಯುವಿನಿಂದ ಭಯ ಉಂಟಾಗತಕ್ಕದ್ದಲ್ಲ. ಏಕೆಂದರೆ ಯಾರ ಜನ್ಮವಾಗಿದೆಯೋ ಅವರ ಮೃತ್ಯುವೂ ಅವಶ್ಯವಾಗಿ ಸಂಭವಿಸುತ್ತದೆ. ಆದುದರಿಂದ ಮೃತ್ಯುವಿಗೆ ಹೆದರುವುದು ಮೂರ್ಖತನ.

ಆ ರಕ್ಷಣೆ ಮಾಡಿದುದು ಯಾರಿಗೆ ಪ್ರಾಪ್ತವಾಗುತ್ತದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಯಂ ಬಾಹುತೇವ ಪಿಪ್ರತಿ ಪಾಂತಿ ಮರ್ತ್ಯಂ ರಿಷಃ । ಅರಿಷ್ಟಃ ಸರ್ವ ಏಧತೇ ॥೨॥

ಪದಾರ್ಥ:- ಯಾವ ವರುಣಾದಿ ಧಾರ್ಮಿಕ ವಿದ್ವಾಂಸರು **[ಬಾಹುತೇವ]** ಯಾವ ರೀತಿ ಶೂರವೀರರು ಬಾಹುಬಲದಿಂದ ಚೋರಾದಿಗಳನ್ನು ನಿವಾರಿಸಿ ದುಃಖವನ್ನು ದೂರಮಾಡುತ್ತಾರೋ ಅದೇ ರೀತಿ **[ಯಂ]** ಯಾವ **[ಮರ್ತ್ಯಂ]** ಮನುಷ್ಯರನ್ನು **[ಪಿಪ್ರತಿ]** ಸುಖದಿಂದ ಪೂರ್ಣರನ್ನಾಗಿಸುತ್ತಾರೋ ಮತ್ತು **[ರಿಷಃ]** ಹಿಂಸೆ ಮಾಡುವ ಶತ್ರುವಿನಿಂದ **[ಪಾಂತಿ]** ಪಾರು ಮಾಡುತ್ತಾರೋ **[ಸಃ]** ಅವರು **[ಸರ್ವಃ]** ಸಮಸ್ತ ಮನುಷ್ಯಮಾತ್ರರ **[ಅರಿಷ್ಟಃ]** ಸಮಸ್ತ ವಿಘ್ನಗಳಿಂದ ರಹಿತರಾಗಿ ವೇದವಿದ್ಯಾದಿ ಉತ್ತಮ ಗುಣಗಳಿಂದ ನಿತ್ಯವೂ **[ಏಧತೇ]** ವೃದ್ಧಿಯನ್ನು ಹೊಂದುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಸಭೆ ಮತ್ತು ಸಭಾಧ್ಯಕ್ಷರ ಸಹಿತ ರಾಜಪುರುಷರು ಬಾಹುಬಲ ಮತ್ತು ಅನ್ಯಉಪಾಯಗಳ ಮೂಲಕ ದುಷ್ಟ ಶತ್ರುಗಳನ್ನು ಮತ್ತು ದಾರಿದ್ರ್ಯವನ್ನು ನಿವಾರಿಸಿ ಮನುಷ್ಯರಿಗೆ ಉತ್ತಮ ಪ್ರಕಾರದ ರಕ್ಷಣೆ ನೀಡಿ ಪೂರ್ಣ ಸುಖವನ್ನು ಸಂಪಾದಿಸಿ ಸಮಸ್ತ ವಿಘ್ನಗಳನ್ನು ದೂರ ಮಾಡಿ ಪುರುಷಾರ್ಥದಿಂದ ಕೂಡಿದವರಾಗಿ ಬ್ರಹ್ಮಚರ್ಯಸೇವನೆ ಹಾಗೂ ವಿಷಯಗಳ ವಾಸನೆಯನ್ನು ತ್ಯಜಿಸುವುದರಿಂದ ಶರೀರದ ವೃದ್ಧಿ ಹಾಗೂ ವಿದ್ಯೆ ಅಥವಾ ಉತ್ತಮ ಶಿಕ್ಷಣದಿಂದ ಆತ್ಮನ ಉನ್ನತಿಯನ್ನು ಮಾಡುತ್ತಾರೆಯೋ ಅದೇ ರೀತಿ ಪ್ರಜಾಜನರೂ ಸಹ ಮಾಡಲಿ.

ಪುನಃ ರಾಜಾ ಪ್ರಜಾಪುರುಷರು ಏನನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ವಿ ದುರ್ಗಾ ವಿ ದ್ವಿಷಃ ಪುರೋ ಘ್ನಂತಿ ರಾಜಾನ ಏಷಾಮ್ । ನಯಂತಿ ದುರಿತಾ ತಿರಃ ॥೩॥

ಪದಾರ್ಥ:- ಯಾವ **[ರಾಜಾನಃ]** ಉತ್ತಮ ಕರ್ಮ ಹಾಗೂ ಗುಣಗಳಿಂದ ಶೋಭಾಯಮಾನರಾದ ರಾಜಪುರುಷರು **[ಏಷಾಂ]** ಈ ಶತ್ರುಗಳ **[ದುರ್ಗಾ]** ದುಃಖದಿಂದ ತಿಳಿಯಲು ಯೋಗ್ಯವಾದ ಮತ್ತು **[ಪುರಃ]** ನಗರಗಳನ್ನು **[ಘ್ನಂತಿ]** ಭಿನ್ನ-ಭಿನ್ನಗೊಳಿಸುತ್ತಾರೋ ಮತ್ತು **[ದ್ವಿಷಃ]** ಶತ್ರುಗಳನ್ನು **[ತಿರೋನಯಂತಿ]** ನಷ್ಟ ಭ್ರಷ್ಟಗೊಳಿಸುತ್ತಾರೋ ಅವರು ಚಕ್ರವರ್ತೀರಾಜ್ಯವನ್ನು ಹೊಂದುವುದರಲ್ಲಿ ಸಮರ್ಥರಾಗುತ್ತಾರೆ.

ಭಾವಾರ್ಥ:- ಯಾವ ಅನ್ಯಾಯಕಾರೀ ಮನುಷ್ಯರು ಧಾರ್ಮಿಕರನ್ನು ಪೀಡಿಸಿ ದುರ್ಗ[ಕೋಟೆ]ದಲ್ಲಿರುತ್ತಾರೋ ಮತ್ತು ಪುನಃ ಪುನಃ ಬಂದು ದುಃಖಿಗಳನ್ನಾಗಿ ಮಾಡುತ್ತಾರೋ ಅವರನ್ನು ನಾಶಗೊಳಿಸಿ ಶ್ರೇಷ್ಠರ ಪಾಲನೆಯನ್ನು ಮಾಡಲು ವಿದ್ವಾಂಸರಾದ ಧಾರ್ಮಿಕ ರಾಜಪುರುಷರು ಅವರ ಕೋಟೆಗಳನ್ನು ವಿನಾಶಗೊಳಿಸಿ ಶತ್ರುಗಳನ್ನು ಭಿನ್ನ-ಭಿನ್ನಗೊಳಿಸಿ ಪೂರ್ಣವಾಗಿ ಅವರನ್ನು ನಿಯಂತ್ರಿಸಿ, ಧರ್ಮದಿಂದ ರಾಜ್ಯವನ್ನು ಪಾಲಿಸಬೇಕು.

ಪುನಃ ಅವರು ಏನನ್ನು ಸಿದ್ಧಿಸುತ್ತಾರೆ ಎಂಬುದನ್ನು ವಿವರಿಸಲಾಗುತ್ತದೆ.

ಸುಗಃ ಪಂಥಾ ಅನೃಕ್ಷರ ಆದಿತ್ಯಾಸ ಋತಂ ಯತೇ । ನಾತ್ರಾವಖಾದೋ ಅಸ್ತಿ ವಃ ॥೪॥

ಪದಾರ್ಥ:- ಎಲ್ಲಿ **[ಆದಿತ್ಯಾಸಃ]** ಉತ್ತಮ ಪ್ರಕಾರದಿಂದ ಸೇವಿಸಲ್ಪಟ್ಟ ೪೮ ವರ್ಷಗಳ ಪರ್ಯಂತ ಬ್ರಹ್ಮಚರ್ಯದಿಂದ ಶರೀರ ಆತ್ಮಗಳ ಬಲಸಹಿತ ಸೂರ್ಯನಂತೆ ಬೆಳಗುವ, ಅವಿನಾಶೀ ಧರ್ಮವನ್ನು ತಿಳಿಯಬಲ್ಲ ವಿದ್ವಾಂಸರು ಯಾರಿದ್ದಾರೋ **[ಅನೃಕ್ಷರಾಃ]** ಕಂಟಕ, ಕಂದಕ, ಚೋರ, ಅವಿದ್ಯಾ ಅಧರ್ಮಾಚರಣ ರಹಿತರಾದ, ಸರಳ ಸ್ವಭಾವದ **[ಸುಗಃ]** ಸುಖವಾಗಿ ತಿಳಿಯಲು ಯೋಗ್ಯರಾದ **[ಪಂಥಾಃ]** ನೆಲ, ಜಲ ಅಂತರಿಕ್ಷಗಳಲ್ಲಿ ಹೋಗಿಬರಲು ಯೋಗ್ಯವಾದ ವಿದ್ಯೆಯನ್ನು ತಿಳಿದವರಾದ ಹಾಗೂ ಧರ್ಮ-ನ್ಯಾಯ ಪ್ರಾಪ್ತಿಯ ಮಾರ್ಗದ ಸಂಪಾದನೆಯನ್ನು ಮಾಡಿದವರಾದ ಮತ್ತು **[ಋತಂ]** ಬ್ರಹ್ಮ, ಸತ್ಯ, ಮತ್ತು ಯಜ್ಞವನ್ನು **[ಯತೇ]** ಪ್ರಾಪ್ತಿಸಲು ನಿಮಗೆ **[ಅತ್ರ]** ಈ ಮಾರ್ಗದಲ್ಲಿ **[ಅವಖಾದಃ]** ಭಯವು **[ನಾಸ್ತಿ]** ಎಂದಿಗೂ ಉಂಟಾಗುವುದಿಲ್ಲ.

ಭಾವಾರ್ಥ:- ಮಾನವರು ನೆಲ, ಜಲ ಮತ್ತು ಅಂತರಿಕ್ಷದಲ್ಲಿ ರಥ, ನೌಕೆ ಮತ್ತು ವಿಮಾನಗಳಿಗಾಗಿ ಸರಳ ದೃಢ, ಕಂಟಕ ಮತ್ತು ಚೋರ ಭಯಾದಿ ದೋಷರಹಿತ ಮಾರ್ಗಗಳನ್ನು ಸಂಪಾದಿಸಬೇಕು. ಎಲ್ಲಿ ಯಾರಿಗೂ ಸ್ವಲ್ಪವೂ ದುಃಖ ಅಥವಾ ಭಯ ಉಂಟಾಗುವುದಿಲ್ಲವೋ ಇವೆಲ್ಲವನ್ನೂ ಸಿದ್ಧಗೊಳಿಸಲು ಅಖಂಡ ಚಕ್ರವರ್ತೀರಾಜ್ಯವನ್ನು ಭೋಗಿಸುತ್ತಾ ಇರಬೇಕು.

ಪುನಃ ಇವರು ಯಾರ ರಕ್ಷಣೆ ಮಾಡಿ ಏನನ್ನು ಹೊಂದುತ್ತಾರೆ ಎಂಬುದನ್ನು ತಿಳಿಸಲಾಗುತ್ತದೆ.

ಯಂ ಯಜ್ಞಂ ನಯಥಾ ನರ ಆದಿತ್ಯಾ ಋಜುನಾ ಪಥಾ ।
ಪ್ರ ವಃ ಸ ಧೀತಯೇ ನಶತ್ ॥೫॥

ಪದಾರ್ಥ:- ಹೇ **[ಆದಿತ್ಯಾಃ]** ಸಕಲ ವಿದ್ಯೆಗಳಿಂದಲೂ ಸೂರ್ಯನಂತೆ ಪ್ರಕಾಶಮಾನರಾದ **[ನರಃ]** ನ್ಯಾಯಯುಕ್ತ ರಾಜಸಭಾಸದರೇ! ನೀವುಗಳು **[ಧೀತಯೇ]** ಸುಖವನ್ನು ಪ್ರಾಪ್ತಿಸುವ ಕ್ರಿಯೆಗಳಿಗಾಗಿ **[ಯಂ]**

ಯಾವ **[ಯಜ್ಞಂ]** ರಾಜಧರ್ಮಯುಕ್ತ ವ್ಯವಹಾರವನ್ನು **[ಋಜುನಾ]** ಶುದ್ಧ ಸರಳವಾದ **[ಪಥಾ]** ಮಾರ್ಗದಿಂದ **[ನಯಥ]** ಪ್ರಾಪ್ತಿಸುತ್ತೀರೋ **[ಸಃ]** ಅದು **[ವಃ]** ನಿಮಗೆ **[ಪ್ರ ನಶತ್]** ನಷ್ಟಮಾಡುವಂತಹುದು ಆಗುವುದಿಲ್ಲ.

ಭಾವಾರ್ಥ:- ಈ ಮಂತ್ರದಲ್ಲಿ ಪೂರ್ವಮಂತ್ರದಿಂದ ನ ಎಂಬ ಪದದ ಅನುವೃತ್ತಿ ಇದೆ. ಎಲ್ಲಿ ವಿದ್ವಾಂಸರು, ಸಭಾಸೇನಾಧ್ಯಕ್ಷರು ಸಭೆಯಲ್ಲಿ ಇರುವ ಭೃತ್ಯರಾಗಿ ವಿನಯಪೂರ್ವಕವಾಗಿ ನ್ಯಾಯವನ್ನು ಮಾಡುತ್ತಾರೋ, ಅಲ್ಲಿ ಸುಖದ ನಾಶವು ಎಂದಿಗೂ ಆಗುವುದಿಲ್ಲ.

ಪುನಃ ಅವರು ರಕ್ಷಣೆಯನ್ನು ಪಡೆದು ಏನನ್ನು ಹೊಂದುತ್ತಾರೆ ಎಂಬುದನ್ನು ತಿಳಿಸಲಾಗುತ್ತದೆ.

ಸ ರತ್ನಂ ಮರ್ತ್ಯೋ ವಸು ವಿಶ್ವಂ ತೋಕಮುತ ತ್ಮನಾ । ಅಚ್ಛಾ ಗಚ್ಛತ್ಯಸ್ತೃತಃ ॥೬॥

ಪದಾರ್ಥ:- ಯಾವ **[ಅಸ್ತೃತ]** ಹಿಂಸಾರಹಿತರಾದ **[ಮರ್ತ್ಯಃ]** ಮನುಷ್ಯರಿದ್ದಾರೋ **[ಸಃ]** ಅವರು **[ತ್ಮನಾ]** ಆತ್ಮ ಮನಸ್ಸು ಮತ್ತು ಪ್ರಾಣಗಳಿಂದ **[ವಿಶ್ವಂ]** ಸಮಸ್ತ **[ರತ್ನಂ]** ಮನುಷ್ಯರ ಮನಸ್ಸುಗಳನ್ನು ರಮಿಸುವ **[ವಸು]** ಉತ್ತಮೋತ್ತಮ ದ್ರವ್ಯವನ್ನೂ **[ಉತ]** ಮತ್ತು **[ತೋಕಂ]** ಉತ್ತಮ ಗುಣಯುಕ್ತ ಪುತ್ರರನ್ನು **[ಅಚ್ಛ ಗಚ್ಛತಿ]** ಉತ್ತಮ ಪ್ರಕಾರದಿಂದ ಪ್ರಾಪ್ತರಾಗುತ್ತಾರೆ.

ಭಾವಾರ್ಥ:- ವಿದ್ವಾನ್ ಮನುಷ್ಯರಿಂದ ಉತ್ತಮ ರೀತಿಯಲ್ಲಿ ರಕ್ಷಿಸಲ್ಪಟ್ಟ ಮನುಷ್ಯಾದಿ ಪ್ರಾಣಿಗಳು ಸಮಸ್ತ ಉತ್ತಮೋತ್ತಮ ಪದಾರ್ಥಗಳನ್ನೂ ಸಂತಾನಗಳನ್ನೂ ಹೊಂದುತ್ತಾರೆ. ಈ ರೀತಿ ರಕ್ಷಣೆ ಇಲ್ಲದೆ ಯಾವುದೇ ಪುರುಷ ಅಥವಾ ಪ್ರಾಣಿಯ ಉನ್ನತಿ ಸಾಧ್ಯವಾಗುವುದಿಲ್ಲ.

ಸರ್ವರೂ ಏನನ್ನು ಮಾಡಿ ಈ ಸುಖವನ್ನು ಹೊಂದಬೇಕು ಎಂಬುದನ್ನು ವಿವರಿಸಲಾಗಿದೆ.

ಕಥಾ ರಾಧಾಮ ಸಖಾಯಃ ಸ್ತೋಮಂ ಮಿತ್ರಸ್ಯಾರ್ಯಮ್ಣಃ । ಮಹಿ ಪ್ಸರೋ ವರುಣಸ್ಯ ॥೭॥

ಪದಾರ್ಥ:- ನಾವುಗಳು **[ಸಖಾಯಃ]** ಎಲ್ಲರ ಮಿತ್ರರಿಗಾಗಿ **[ಮಿತ್ರಸ್ಯ]** ಎಲ್ಲರ ಸಖನಾದ **[ಅರ್ಯಮ್ಣಃ]** ನ್ಯಾಯಾಧೀಶನಾದ **[ವರುಣಸ್ಯ]** ಮತ್ತು ಎಲ್ಲರಿಗಿಂತ ಉತ್ತಮ ಅಧ್ಯಕ್ಷನ **[ಮಹಿ]** ಮಹತ್ವದ **[ಸ್ತೋಮಂ]** ಗುಣಸ್ತುತಿಯ ಸಮೂಹವನ್ನು **[ಕಥಾ]** ಯಾವ ರೀತಿಯಿಂದ **[ರಾಧಾಮ]** ಸಿದ್ಧಗೊಳಿಸೋಣ ಮತ್ತು ಯಾವ ರೀತಿ ನಮಗೆ **[ಪ್ಸರಃ]** ಸುಖಗಳ ಉಪಭೋಗಗಳು ಸಿದ್ಧವಾಗುವುದು.

ಭಾವಾರ್ಥ:- ಯಾವನಾದರೂ ಮನುಷ್ಯನು ಯಾರನ್ನಾದರೂ, ನಾವು ಯಾವ ರೀತಿಯ ಮಿತ್ರತ್ವ, ನ್ಯಾಯ ಮತ್ತು ಉತ್ತಮ ವಿದ್ಯೆಗಳನ್ನು ಹೊಂದಬೇಕು ಎಂದು ಕೇಳಿದರೆ, ಪರಸ್ಪರ ಮಿತ್ರತ್ವ ವಿದ್ಯಾದಾನ ಮತ್ತು ಪರೋಪಕಾರಗಳಿಂದಲೇ ಈ ಎಲ್ಲವೂ ಪ್ರಾಪ್ತವಾಗುತ್ತವೆ; ಇದಿಲ್ಲದೆ ಯಾವುದೇ ಮನುಷ್ಯನು ಯಾವುದೇ ಸುಖವನ್ನು ಹೊಂದಲು ಸಮರ್ಥನಾಗುವುದಿಲ್ಲ - ಎಂದು ಹೇಳಬೇಕು.

ಸಭಾಧ್ಯಕ್ಷ ಮೊದಲಾದ ಜನರು ಪ್ರಜೆಗಳೊಂದಿಗೆ ಯಾವ ಪ್ರತಿಜ್ಞೆಯನ್ನು ಕೈಗೊಳ್ಳಬೇಕು ಎಂಬುದನ್ನು ಇಲ್ಲಿ ತಿಳಿಸಲ್ಲಾಗಿದೆ.

ಮಾ ವೋ ಘ್ನಂತಂ ಮಾ ಶಪಂತಂ ಪ್ರತಿ ವೋಚೇ ದೇವಯಂತಮ್ ।
ಸುಮ್ನೈರಿದ್ ವ ಆ ವಿವಾಸೇ ॥೮॥

ಪದಾರ್ಥ:- ನಾನು **[ವಃ]** ಮಿತ್ರರೂಪಿಗಳಾದ ನಿಮ್ಮನ್ನು **[ಘ್ನಂತಂ]** ಕೊಲ್ಲುವ ಅಥವಾ ನಾಶಮಾಡುವ ಜನರಿಂದ **[ಮಾ ಪ್ರತಿವೋಚೇ]** ಸಂಭಾಷಣೆಯನ್ನೂ ಮಾಡುವುದಿಲ್ಲ. **[ವಃ]** ನಿಮ್ಮನ್ನು **[ಶಪಂತಂ]** ನಿಂದಿಸುವ ಮನುಷ್ಯನಿಂದ ಪ್ರಿಯವಚನವನ್ನು **[ಮಾ]** ನಾನು ಆಡದಂತಾಗಲಿ. ಆದರೆ **[ಸುಮ್ನೈಃ ಇತ್]** ಸುಖಗಳಿಂದ ಸಹಿತವಾದ ನಿಮಗೆ ಸುಖವನ್ನು ನೀಡುವವನನ್ನೇ **[ದೇವಯಂತಮ್]** ದಿವ್ಯಗುಣಗಳ ಕಾಮನೆ ಮಾಡುವವನನ್ನು **[ಆ ವಿವಾಸೇ]** ಉತ್ತಮ ಪ್ರಕಾರದ ಸೇವೆಯನ್ನು ಸದಾ ಮಾಡುವಂತಾಗಲಿ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ ಅವನು ತನ್ನ ಶತ್ರುಗಳನ್ನಾಗಲೀ, ತನ್ನ ಮಿತ್ರನ ಶತ್ರುಗಳನ್ನಾಗಲೀ, ಪ್ರೀತಿಸಬಾರದು. ಮಿತ್ರನ ಸಂರಕ್ಷಣೆ ಹಾಗೂ ವಿದ್ವಾಂಸರ ಪ್ರಿಯವಚನಗಳು, ಭೋಜನ, ವಸ್ತ್ರ, ಪಾನ, ಆದಿಗಳಿಂದ ಸೇವೆಯನ್ನು ಮಾಡತಕ್ಕದ್ದು. ಏಕೆಂದರೆ ಮಿತ್ರರಹಿತ ಪುರುಷನು ಎಂದಿಗೂ ಸುಖದ ವೃದ್ಧಿಯನ್ನು ಮಾಡಲಾರನು. ಆದುದರಿಂದ ಬುದ್ಧಿವಂತನಾದವನು ಬಹುಮಂದಿ ಧರ್ಮಾತ್ಮರನ್ನು ಮಿತ್ರರನ್ನಾಗಿ ಮಾಡಿಕೊಳ್ಳಲಿ.

ಹೇಳಿರುವ ಮತ್ತು ಯಾರ ಬಗೆಗೆ ಮುಂದೆ ಹೇಳಲಾಗುತ್ತದೆಯೋ ಆ ನಾಲ್ಕು ದುಷ್ಟರಿಂದ ನಿತ್ಯವೂ ಭಯವನ್ನು ಇರಿಸಿಕೊಂಡು ಅವರ ವಿಶ್ವಾಸವನ್ನು ಎಂದಿಗೂ ಮಾಡಬಾರದು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಚತುರಶ್ಚಿದ್ ದದಮಾನಾದ್ ಬಿಭೀಯಾದಾ ನಿಧಾತೋಃ । ನ ದುರುಕ್ತಾಯ ಸ್ಪೃಹಯೇತ್ ॥೯॥

ಪದಾರ್ಥ:- ಮನುಷ್ಯನು **[ಚತುರಃ]** ಕೊಲ್ಲುವ, ಶಾಪನೀಡುವ ಮತ್ತು **[ದದಮಾನಾತ್]** ವಿಷಾದಿಗಳನ್ನು ನೀಡುವ ಹಾಗೂ **[ನಿಧಾತಃ]** ಅನ್ಯಾಯದಿಂದ ಇತರರ ಪದಾರ್ಥಗಳನ್ನು ಅಪಹರಿಸುವ ಈ ನಾಲ್ಕು ಪ್ರಕಾರದ ಮನುಷ್ಯರನ್ನು ನಂಬಬಾರದು. **[ಚಿತ್]** ಮತ್ತು ಇವರಿಂದ **[ಬಿಭೀಯಾತ್]** ನಿತ್ಯವೂ ಹೆದರಬೇಕು ಮತ್ತು **[ದುರುಕ್ತಾಯ]** ದುಷ್ಟವಚನವನ್ನು ನುಡಿಯುವ ಮನುಷ್ಯನಿಗಾಗಿ **[ನ ಸ್ಪೃಹಯೇತ್]** ಈ ಐವರನ್ನು ಮಿತ್ರರನ್ನಾಗಿಸುವ ಇಚ್ಛೆಯನ್ನು ಎಂದಿಗೂ ಮಾಡಬಾರದು.

ಭಾವಾರ್ಥ:- ಮನುಷ್ಯರು ದುಷ್ಟಕರ್ಮ ಮಾಡುವ ಮತ್ತು ದುಷ್ಟ ವಚನವನ್ನು ನುಡಿಯುವ ಮನುಷ್ಯರ ಸಂಗದಲ್ಲಿ ವಿಶ್ವಾಸವನ್ನೂ ಮತ್ತು ಮಿತ್ರರಿಂದ ದ್ರೋಹ, ಇತರರ ಅಪಮಾನ ಹಾಗೂ ವಿಶ್ವಾಸಘಾತವನ್ನು ಎಂದಿಗೂ ಮಾಡಬಾರದು.

ಈ ಸೂಕ್ತದಲ್ಲಿ ಪ್ರಜೆಗಳ ರಕ್ಷಣೆ, ಶತ್ರುಗಳನ್ನು ಜಯಿಸುವುದು, ಮಾರ್ಗದ ಅನ್ವೇಷಣೆ, ವಾಹನಗಳ ರಚನೆ, ಮತ್ತು ಅವುಗಳ ಚಾಲನೆ ದ್ರವ್ಯಗಳ ಉನ್ನತಿ, ಶ್ರೇಷ್ಠರೊಂದಿಗೆ ಮಿತ್ರತೆ, ದುಷ್ಟರೊಂದಿಗೆ ವಿಶ್ವಾಸವನ್ನು ಇಡದಿರುವುದು ಮತ್ತು ಅಧರ್ಮಾಚರಣದಿಂದ ಸದಾ ಹೆದರುವುದು ಈ ಪ್ರಕಾರದ ಕಥನಗಳಿಂದ ಪೂರ್ವಸೂಕ್ತಾರ್ಥದೊಂದಿಗೆ ಈ ಸೂಕ್ತಾರ್ಥದ ಅರ್ಥವು ಸಂಗತಿಯಾಗುತ್ತದೆ ಎಂಬುದನ್ನು ತಿಳಿಯಬೇಕು.

ನಲವತ್ತೊಂದನೆಯ ಸೂಕ್ತ ಸಮಾಪ್ತ

ಸೂಕ್ತ ೪೨

ಮಂತ್ರಸಂಖ್ಯೆ ೧೦ ಋಷಿಃ - ಕಣ್ವೋ ಘೌರಃ । ದೇವತಾ - ಪೂಷಾ । ಛಂದಃ - ೧, ೯ ನಿಚೃದ್ ಗಾಯತ್ರೀ, ೨, ೩ ೫-೮, ೧೦ ಗಾಯತ್ರೀ । ಸ್ವರಃ ಷಡ್ಜಃ ।

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಪ್ರವಾಸ ಮಾಡುತ್ತಾ ಮನುಷ್ಯನು ಮಾರ್ಗದಲ್ಲಿ ಯಾವ ಯಾವುದನ್ನು ಇಚ್ಛಿಸಬೇಕು ಎಂಬ ವಿಷಯನ್ನು ಇಲ್ಲಿ ತಿಳಿಸಲಾಗುತ್ತದೆ.

ಸಂ ಪೂಷನ್ನಧ್ವನಸ್ತಿರ ವ್ಯಂಹೋ ವಿಮುಚೋ ನಪಾತ್ । ಸಕ್ಷ್ವಾ ದೇವ ಪ್ರ ಣಸ್ಪುರಃ ॥೧॥

ಪದಾರ್ಥ:- ಹೇ **[ಪೂಷನ್]** ಸಕಲ ಜಗತ್ತಿನ ಪೋಷಣಕರ್ತನಾದ **[ನಪಾತ್]** ನಾಶರಹಿತ **[ದೇವ]** ದಿವ್ಯಗುಣ ಸಂಪನ್ನ ವಿದ್ವಾಂಸನೇ! ದುಃಖದ **[ಅಧ್ವನಃ]** ಮಾರ್ಗದಿಂದ **[ವಿತಿರ]** ಪಾರಾಗಿ ನಮ್ಮನ್ನೂ ಪಾರು ಮಾಡು. **[ಅಂಹಃ]** ರೋಗರೂಪೀ ದುಃಖದ ವೇಗವನ್ನು **[ವಿಮುಚಃ]** ದೂರ ಮಾಡು. **[ಪುರಃ]** ಮೊದಲೇ **[ನಃ]** ನಮ್ಮನ್ನು **[ಪ್ರ ಸಕ್ಷ್ವ]** ಉತ್ತಮೋತ್ತಮ ಗುಣಗಳಲ್ಲಿ ಪ್ರಸಕ್ತರನ್ನಾಗಿ ಮಾಡು.

ಭಾವಾರ್ಥ:- ಯಾವ ರೀತಿ ಪರಮೇಶ್ವರನ ಉಪಾಸನೆ ಹಾಗೂ ಅವನ ಆಜ್ಞೆಯ ಪಾಲನೆಯಿಂದ ಸಮಸ್ತ ದುಃಖಗಳನ್ನು ದಾಟಿ ಸಕಲ ಸುಖಗಳನ್ನು ಹೊಂದಲಾಗುತ್ತದೆಯೋ ಅದೇ ರೀತಿ ಮನುಷ್ಯನು, ಧರ್ಮಾತ್ಮರೂ ಎಲ್ಲರ ಮಿತ್ರರೂ ಪರೋಪಕಾರಿಗಳೂ ಆದ ವಿದ್ವಾಂಸರ ಬಳಿ ಅಥವಾ ಅವರ ಉಪದೇಶದಿಂದ ಅವಿದ್ಯಾಜಾಲರೂಪೀ ಮಾರ್ಗದಿಂದ ಪಾರಾಗಿ ವಿದ್ಯಾರೂಪೀ ಸೂರ್ಯನನ್ನು ಹೊಂದಬೇಕು.

ಯಾರು ಧರ್ಮ ಮತ್ತು ರಾಜ್ಯದ ಮಾರ್ಗಗಳಲ್ಲಿ ವಿಘ್ನವನ್ನುಂಟುಮಾಡುತ್ತಾರೋ ಅವರ ನಿವಾರಣೆ ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಯೋ ನಃ ಪೂಷನ್ನಘೋ ವೃಕೋ ದುಃಶೇವ ಆದಿದೇಶತಿ ।
ಅಪ ಸ್ಮ ತಂ ಪಥೋ ಜಹಿ ॥೨॥

ಪದಾರ್ಥ:- ಹೇ **[ಪೂಷನ್]** ಸಕಲ ಜಗತ್ತನ್ನು ವಿದ್ಯೆಯಿಂದ ಪುಷ್ಟಗೊಳಿಸುವ ವಿದ್ವಾಂಸನೇ! ನೀನು **[ಯಃ]** ಯಾವ **[ಅಘಃ]** ಪಾಪಮಾಡುವ **[ದುಃಶೇವಃ]** ದುಃಖದಲ್ಲಿ ಶಯನ ಮಾಡಲು ಯೋಗ್ಯನಾದ **[ವೃಕಃ]** ಸ್ತೇನ ಅಥವಾ ದುಃಖವನ್ನು ನೀಡುವವನಾದ ಚೋರನು **[ನಃ]** ನಮಗೆ **[ಆದಿದೇಶತಿ]** ಉದ್ದೇಶ್ಯಪೂರ್ವಕವಾಗಿ ಪೀಡೆಯನ್ನುಂಟು ಮಾಡುತ್ತಾನೋ **[ತಂ]** ಆ ದುಷ್ಟನನ್ನು **[ಪಥಃ]** ರಾಜಧರ್ಮ ಮತ್ತು ಪ್ರಜಾಮಾರ್ಗದಿಂದ **[ಅಪಜಹಿ]** ನಷ್ಟಗೊಳಿಸು ಅಥವಾ ದೂರ ಮಾಡು.

ಭಾವಾರ್ಥ:- ಶಿಕ್ಷಣ, ವಿದ್ಯೆ ಹಾಗೂ ಸೇನೆಯ ಬಲದಿಂದ ಇತರರ ಧನವನ್ನು ಲಪಟಾಯಿಸುವ ಶಠರು ಮತ್ತು ಚೋರರನ್ನು ಕೊಲ್ಲುವುದು, ಸರ್ವಥಾ ದೂರವಿರಿಸುವುದು, ನಿರಂತರ ಸೆರೆಯಲ್ಲಿರಿಸಿ ರಾಜಧರ್ಮದ ಮಾರ್ಗಗಳನ್ನು ಭಯರಹಿತವನ್ನಾಗಿಸುವುದನ್ನು ಮಾಡಬೇಕು. ಯಾವ ರೀತಿ ಜಗದೀಶ್ವರನು ದುಷ್ಟರಿಗೆ ಅವರ ಕರ್ಮಗಳಿಗನುಸಾರ ದಂಡವನ್ನು ವಿಧಿಸಿ ಶಿಕ್ಷಣ ನೀಡುತ್ತಾನೋ ಅದೇ ರೀತಿ ನಾವೂ ಸಹ ದುಷ್ಟರನ್ನು ದಂಡಿಸಿ ಶಿಕ್ಷಣ ನೀಡುವ ಮೂಲಕ ಶ್ರೇಷ್ಠ ಸ್ವಭಾವಯುಕ್ತರನ್ನಾಗಿಸಬೇಕು.

ಪುನಃ ಈ ಮಾರ್ಗದಿಂದ ಯಾರು ಯಾರನ್ನು ನಿವಾರಿಸಬೇಕು ಎಂಬುದನ್ನು ತಿಳಿಸಲಾಗಿದೆ.

ಅಪ ತ್ಯಂ ಪರಿಪಂಥಿನಂ ಮುಷೀವಾಣಂ ಹುರಶ್ಚಿತಮ್ । ದೂರಮಧಿ ಸ್ರುತೇರಜ ॥೩॥

ಪದಾರ್ಥ:- ಹೇ ವಿದ್ವಾಂಸನಾದ ರಾಜನೇ! ನೀನು **[ತ್ಯಂ]** ಆ **[ಪರಿಪಂಥಿನಂ]** ಪ್ರತಿಕೂಲನಾಗಿ ನಡೆಯುವ ದುಷ್ಟ **[ಮುಷೀವಾಣಂ]** ಚೋರಕರ್ಮದಿಂದ ಭಿತ್ತಿಯನ್ನೊಡೆದು ದೃಷ್ಟಿಯನ್ನು ಅಚ್ಛಾದನಗೊಳಿಸಿ ಇತರರ ಪದಾರ್ಥಗಳನ್ನು ಲಪಟಾಯಿಸುವ **[ಹುರಶ್ಚಿತಮ್]** ಉತ್ಕೋಚಕ ಅರ್ಥಾತ್ ತನ್ನ ಕೈಗಳಿಂದ ಇತರರ ಪದಾರ್ಥಗಳನ್ನು ಕಸಿಯುವ ಅನೇಕ ಪ್ರಕಾರದ ಚೋರರನ್ನು **[ಸ್ರುತೇಃ]** ರಾಜಧರ್ಮ ಮತ್ತು ಪ್ರಜಾಮಾರ್ಗದಿಂದ **[ದೂರಂ ಅಧ್ಯಪಾಜ]** ಅವರ ಮೇಲೆ ದಂಡವನ್ನು ವಿಧಿಸಿ ಅವರನ್ನು ದೂರಮಾಡು.

ಭಾವಾರ್ಥ:- ಚೋರರು ಅನೇಕ ಪ್ರಕಾರದವರಾಗಿರುತ್ತಾರೆ. ಕೆಲವರು ಡಾಕುಗಳಾದರೆ, ಕೆಲವರು ವಂಚನೆಯಿಂದ ಅಪಹರಿಸುವವರು. ಇನ್ನು ಕೆಲವರು ಮೋಸಗೊಳಿಸಿ, ಸಂಮೋಹನಗೊಳಿಸಿ ಇತರರ ಪದಾರ್ಥಗಳನ್ನು ಅಪಹರಿಸುವವರು ಮತ್ತು ಕೆಲವರು ರಾತ್ರಿಯಲ್ಲಿ ಸುರಂಗವನ್ನು ನಿರ್ಮಿಸಿ ಇತರರ ಸ್ವತ್ತನ್ನು ಲೂಟಿ ಮಾಡುವವರು ಮತ್ತೂ ಕೆಲವರು ಬಲಾತ್ಕಾರವಾಗಿ ಕೈಯಿಂದ ಕಸಿಯುವವರು ಮತ್ತೆ ಹಲವರು ನಾನಾ ಪ್ರಕಾರದ ವ್ಯಾಪಾರಗಳ ಮೂಲಕ ಅಂಗಡಿಗಳಲ್ಲಿ ಕುಳಿತೇ ಇತರರ ಕಿಸೆಗೆ ಕತ್ತರಿಹಾಕುವವರು, ಛಲದಿಂದ ಅಪಹರಿಸುವವರು ಮತ್ತಾರೋ ಛಲ ಕಪಟಗಳಿಂದ ಇತರರ ರಾಜ್ಯಗಳನ್ನು ಅಪಹರಿಸುವವರು ಮತ್ತೆ ಕೆಲವರು ಧರ್ಮೋಪದೇಶದಿಂದ ಮನುಷ್ಯನನ್ನು ಭ್ರಮೆಯ ಜಾಲಕ್ಕೆ ಸಿಲುಕಿಸಿ ಗುರುವಿನ ರೂಪ ತಾಳಿ ಶಿಷ್ಯರ ಸ್ವತ್ತುಗಳನ್ನು ಅಪಹರಿಸುವವರು; ಮತ್ತೆ ಕೆಲವರು ವಕೀಲರಂತೆ ಬಂದು ಮನುಷ್ಯರನ್ನು ವಿವಾದಗಳಲ್ಲಿ ಸಿಲುಕಿಸಿ ಅವರ ಸಂಪತ್ತನ್ನು ದೋಚುವವರು; ಇನ್ನು ಕೆಲವರು ನ್ಯಾಯಾಸನದಲ್ಲಿ ಕುಳಿತು ಪ್ರಜೆಗಳಿಂದ ಧನವನ್ನು ಪಡೆದು ಅವರಿಗೇ ಅನ್ಯಾಯ ಮಾಡುವವರು; ಈ ಎಲ್ಲರನ್ನೂ ಚೋರರೆಂದೇ ತಿಳಿಯಬೇಕು. ಇವರುಗಳನ್ನು ಎಲ್ಲ ಉಪಾಯಗಳಿಂದ ದೂರಸರಿಸಿ ಮನುಷ್ಯರು ಧರ್ಮದಿಂದ ರಾಜ್ಯಪಾಲನೆಯನ್ನು ಮಾಡಬೇಕು.

ಪುನಃ ಈ ಪೂರ್ವೋಕ್ತ ಚೋರರಿಗೆ ಯಾವ ಗತಿಯನ್ನು ತೋರಿಸಬೇಕು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

ತ್ವಂ ತಸ್ಯ ದ್ವಯಾವಿನೋಽಘಶಂಸಸ್ಯ ಕಸ್ಯ ಚಿತ್ । ಪದಾಭಿ ತಿಷ್ಠ ತಪುಷಿಮ್ ॥೪॥

ಪದಾರ್ಥ:- ಹೇ ಸೇನಾ ಸಭಾಧ್ಯಕ್ಷ! **[ತ್ವಂ]** ನೀನು **[ತಸ್ಯ]** ಆ **[ದ್ವಯಾವಿನಃ]** ಪ್ರತ್ಯಕ್ಷ-ಪರೋಕ್ಷ ರೀತಿಯಲ್ಲಿ ಇತರರ ಪದಾರ್ಥಗಳನ್ನು ಅಪಹರಿಸುವವರಾದ **[ಕಸ್ಯಚಿತ್]** ಯಾವುದೇ **[ಅಘಶಂಸಸ್ಯ ತಪುಷಿಮ್]** ಚೋರ ವೃತ್ತಿಯನ್ನು ಪ್ರಶಂಸಿಸುವವರ ದುಷ್ಟಸೇನೆಯನ್ನು **[ಪದಾಭಿ ತಿಷ್ಠ]** ಬಲದಿಂದ ವಶೀಕರಿಸಿಕೊಳ್ಳು.

ಭಾವಾರ್ಥ:- ನ್ಯಾಯವನ್ನು ಮಾಡುವ ಮನುಷ್ಯರಿಗೆ ಉಚಿತವಾದುದೇನೆಂದರೆ ಯಾವುದೇ ಅಪರಾಧೀ ಚೋರನನ್ನು ದಂಡನೀಡದೆ ಬಿಡಬಾರದು. ಇಲ್ಲವಾದರೆ ಪ್ರಜೆಗಳು ಪೀಡಾಯುಕ್ತರಾಗಿ ನಷ್ಟಭ್ರಷ್ಟರಾಗುವುದರಿಂದ ರಾಜ್ಯದ ನಾಶ ಉಂಟಾಗುತ್ತದೆ. ಆದ ಕಾರಣ ಪ್ರಜೆಗಳ ರಕ್ಷಣೆಗಾಗಿ ದುಷ್ಟಕರ್ಮದಲ್ಲಿ ನಿರತರಾದ ಅಪರಾಧೀ ಪ್ರವೃತ್ತಿಯ ಮಾತಾ-ಪಿತಾ-ಆಚಾರ್ಯ ಮತ್ತು ಮಿತ್ರರನ್ನೂ ಕೂಡ ಅವಶ್ಯವಾಗಿ ಶಿಕ್ಷಿಸಬೇಕು.

ಪುನಃ ಆ ನ್ಯಾಯಾಧೀಶನು ಹೇಗಿರಬೇಕೆಂಬುದನ್ನು ತಿಳಿಸಲಾಗುತ್ತದೆ.

ಆ ತತ್ ತೇ ದಸ್ರ ಮಂತುಮಃ ಪೂಷನ್ನವೋ ವೃಣೀಮಹೇ । ಯೇನ ಪಿತೄನಚೋದಯಃ ॥೫॥

ಪದಾರ್ಥ:- ಹೇ **[ದಸ್ರ]** ದುಷ್ಟರನ್ನು ನಾಶಮಾಡುವ **[ಮಂತುಮಃ]** ಉತ್ತಮ ಜ್ಞಾನಯುಕ್ತನಾದ **[ಪೂಷನ್]** ಸರ್ವಥಾ ಪುಷ್ಟಿಯನ್ನುಂಟುಮಾಡುವ ವಿದ್ವಾಂಸನೇ! ನೀನು **[ಯೇನ]** ಯಾವ ರಕ್ಷಣಾದಿಗಳಿಂದ **[ಪಿತೄನ್]** ಆಯುಷ್ಯದಿಂದ ಅಥವಾ ಜ್ಞಾನದಿಂದ ವೃದ್ಧರಾದವರನ್ನು **[ಅಚೋದಯಃ]** ಪ್ರೇರಿಸು. **[ತತ್]** ಆ **[ತೇ]** ನಿನ್ನ **[ಅವಃ]** ರಕ್ಷಣಾದಿಗಳನ್ನು ನಾವುಗಳು **[ಆವೃಣೀಮಹೇ]** ಸರ್ವಥಾ ಸ್ವೀಕಾರ ಮಾಡುವೆವು.

ಭಾವಾರ್ಥ:- ಯಾವ ರೀತಿ ಪ್ರೇಮ-ಪ್ರೀತಿಯ ಸಿಂಚನವನ್ನುಂಟುಮಾಡುವುದರಿಂದ ಉತ್ಪನ್ನರಾದ ಮತ್ತು ಅಧ್ಯಾಪನದ ಮೂಲಕ ಜ್ಞಾನ ಮತ್ತು ವಯಸ್ಸಿನಿಂದ ವೃದ್ಧತ್ವವನ್ನು ಪಡೆದವರನ್ನು ತೃಪ್ತಿಗೊಳಿಸುತ್ತೇವೆಯೋ ಅದೇ ರೀತಿ ಸಮಸ್ತ ಪ್ರಜೆಗಳ ಸುಖಕ್ಕಾಗಿ ದುಷ್ಟರಿಗೆ ದಂಡವನ್ನು ನೀಡಿ ಧಾರ್ಮಿಕ ಸಜ್ಜನರನ್ನು ಸದಾ ಸುಖದಲ್ಲಿರಿಸಬೇಕು.

ಪುನಃ ಆ ನ್ಯಾಯಾಧೀಶನು ಪ್ರಜೆಗಳಿಗೆ ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಅಧಾ ನೋ ವಿಶ್ವಸೌಭಗ ಹಿರಣ್ಯವಾಶೀಮತ್ತಮ । ಧನಾನಿ ಸುಷಣಾ ಕೃಧಿ ॥೬॥

ಪದಾರ್ಥ:- ಹೇ **[ವಿಶ್ವಸೌಭಗ]** ಸಂಪೂರ್ಣ ಐಶ್ವರ್ಯವನ್ನು ಹೊಂದುವುದರಿಂದ **[ಹಿರಣ್ಯವಾಶೀಮತ್ತಮ]** ಅತಿಶಯವಾದ ಸತ್ಯದ ಪ್ರಕಾಶಕ, ಉತ್ತಮ ಕೀರ್ತಿ ಮತ್ತು ಸುಶಿಕ್ಷಿತ ವಾಣಿಯಿಂದ ಕೂಡಿದ ಸಭಾಧ್ಯಕ್ಷನೇ! ನೀನು **[ನಃ]** ನಮಗಾಗಿ **[ಸುಷಣಾ]** ಸುಖದಿಂದ ಸೇವಿಸಲು ಯೋಗ್ಯವಾದ **[ಧನಾನಿ]** ವಿದ್ಯಾಧರ್ಮ ಮತ್ತು ಚಕ್ರವರ್ತೀ ರಾಜ್ಯಲಕ್ಷ್ಮಿಯಿಂದ ಸಿದ್ಧಿಸಲ್ಪಟ್ಟ ಧನವನ್ನು ಪ್ರಾಪ್ತಿಸಿ **[ಅಧಾ]** ನಂತರ ನಮ್ಮನ್ನು ಸುಖಿಗಳನ್ನಾಗಿ **[ಕೃಧಿ]** ಮಾಡು.

ಭಾವಾರ್ಥ:- ಪರಮಾತ್ಮನ ಅನಂತ ಸೌಭಾಗ್ಯ ಮತ್ತು ಸಭಾಸೇನಾಧ್ಯಕ್ಷನ ಅಥವಾ ನ್ಯಾಯಾಧೀಶನಾದ ಧಾರ್ಮಿಕ ಮನುಷ್ಯನ ಚಕ್ರವರ್ತೀ ರಾಜ್ಯ ಮೊದಲಾದ ಸೌಭಾಗ್ಯಗಳು ಉಂಟಾಗುವುದರಿಂದ ಇವೆರಡರ ಆಶ್ರಯದಿಂದ ಮನುಷ್ಯರು ಅಸಂಖ್ಯಾತ ವಿದ್ಯಾ ಸುವರ್ಣಾದಿ ಧನಗಳ ಪ್ರಾಪ್ತಿಯಿಂದ ಅತ್ಯಂತ ಸುಖಗಳ ಭೋಗವನ್ನು ಪ್ರಾಪ್ತಿಸಿಕೊಳ್ಳಬೇಕು.

ಪುನಃ ಅವರು ನಮ್ಮನ್ನು ಯಾವ ರೀತಿ ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಅತಿ ನಃ ಸಶ್ಚತೋ ನಯ ಸುಗಾ ನಃ ಸುಪಥಾ ಕೃಣು । ಪೂಷನ್ನಿಹ ಕ್ರತುಂ ವಿದಃ ॥೭॥

ಪದಾರ್ಥ:- ಹೇ **[ಪೂಷನ್]** ಎಲ್ಲರನ್ನು ಪುಷ್ಟಿಗೊಳಿಸುವ ಜಗದೀಶ್ವರ ಅಥವಾ ಪ್ರಜೆಗಳ ಪೋಷಣೆಯನ್ನು ಮಾಡುವ ಸಭಾಧ್ಯಕ್ಷ ವಿದ್ವಾಂಸನೇ! ನೀನು **[ಇಹ]** ಈ ಜಗತ್ತು ಮತ್ತು ಜನ್ಮದಲ್ಲಿ **[ಸಶ್ಚತಃ]** ವಿಜ್ಞಾನಯುಕ್ತ ವಿದ್ಯಾಧರ್ಮವನ್ನು ಪ್ರಾಪ್ತಿಸಿರುವ **[ನಃ]** ನಮ್ಮನ್ನು **[ಸುಗಾ]** ಸುಖಪೂರ್ವಕವಾಗಿ ಸಾಗಲು ಯೋಗ್ಯವಾದ **[ಸುಪಥಾ]** ಉತ್ತಮ ವಿದ್ಯಾಧರ್ಮಯುಕ್ತ ವಿದ್ವಾಂಸರ ಮಾರ್ಗದಿಂದ **[ಅತಿನಯ]** ಅತ್ಯಂತ ಪ್ರಯತ್ನದಿಂದ ನಡೆಯಿಸು. ಮತ್ತು ನಮ್ಮನ್ನು ಉತ್ತಮ ವಿದ್ಯಾದಿ ಧರ್ಮಮಾರ್ಗದಿಂದ **[ಕ್ರತುಂ]** ಉತ್ತಮ ಕರ್ಮ ಅಥವಾ ಉತ್ತಮ ಪ್ರಜ್ಞೆಯಿಂದ **[ವಿದಃ]** ತಿಳುವಳಿಕೆಯುಳ್ಳವರನ್ನಾಗಿ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಎಲ್ಲ ಮನುಷ್ಯರೂ ಈಶ್ವರ ಪ್ರಾರ್ಥನೆಯನ್ನು ಈ ರೀತಿ ಮಾಡಬೇಕು. 'ಹೇ ಜಗದೀಶ್ವರ! ನೀನು ಕೃಪೆ ಮಾಡಿ ಅಧರ್ಮ ಮಾರ್ಗದಿಂದ ನಮ್ಮನ್ನು ದೂರಗೊಳಿಸಿ ಧರ್ಮ ಮಾರ್ಗದಲ್ಲಿ ಸದಾ ನಡೆಯಿಸು.' ಹಾಗೂ ವಿದ್ವಾಂಸರನ್ನು ಈ ರೀತಿ ಕೇಳಬೇಕು - 'ಹೇ ವಿದ್ವಾಂಸರೇ! ನೀವು ನಮ್ಮನ್ನು ಶುದ್ಧ, ಸರಳ, ವಿದ್ಯೆಯಿಂದ ಸಿದ್ಧರನ್ನಾಗಿಸುವ ಮಾರ್ಗದಲ್ಲಿ ಸದಾ ಮುನ್ನಡೆಸಿರಿ.'

ಪುನಃ ಅವರು ಏನನ್ನು ಹೊಂದಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಅಭಿ ಸೂಯವಸಂ ನಯ ನ ನವಜ್ವಾರೋ ಅಧ್ವನೇ । ಪೂಷನ್ನಿಹ ಕ್ರತುಂ ವಿದಃ ॥೮॥

ಪದಾರ್ಥ:- ಹೇ **[ಪೂಷನ್]** ಸಭಾಧ್ಯಕ್ಷನೇ ! ಈ ಜಗತ್ತಿನಲ್ಲಿ ಅಥವಾ ಜನ್ಮಾಂತರದಲ್ಲಿ **[ಅಧ್ವನೇ]** ಶ್ರೇಷ್ಠ ಮಾರ್ಗಗಳಿಗಾಗಿ ನಮ್ಮನ್ನು **[ಸುಯವಸಂ]** ಉತ್ತಮ ಯವ ಮೊದಲಾದ ಓಷಧಿಗಳನ್ನು ಹೊಂದಿದ ದೇಶವನ್ನು **[ಅಭಿನಯ]** ಎಲ್ಲ ರೀತಿಯಿಂದಲೂ ಪ್ರಾಪ್ತ ಮಾಡಬೇಕು. **[ಕ್ರತುಂ]** ಉತ್ತಮ ಕರ್ಮ ಹಾಗೂ ಪ್ರಜ್ಞೆಯನ್ನು **[ವಿದಃ]** ಪ್ರಾಪ್ತಗೊಳಿಸು. ಇದರಿಂದ ಈ ಮಾರ್ಗದಲ್ಲಿ ನಡೆಯುವ ನಮ್ಮಲ್ಲಿ **[ನವಜ್ವಾರಃ]** ನವನವೀನವಾದ ಸಂತಾಪಗಳು **[ನ]** ಉಂಟಾಗದಿರಲಿ.

ಭಾವಾರ್ಥ:- ಹೇ ಸಭಾಧ್ಯಕ್ಷನೇ! ನೀನು ನಿನ್ನ ಕೃಪೆಯಿಂದ ಶ್ರೇಷ್ಠವಾದ ದೇಶವನ್ನು ಅಥವಾ ಉತ್ತಮ ಗುಣಗಳನ್ನು ನಮಗೆ ನೀಡುವವನಾಗು. ಮತ್ತು ನಮ್ಮೆಲ್ಲಾ ದುಃಖಗಳನ್ನು ನಿವಾರಿಸಿ ಸುಖವನ್ನು ಒದಗಿಸು. ಹೇ ಸಭಾಧ್ಯಕ್ಷನೇ! ವಿದ್ವಾಂಸರನ್ನು ವಿನಯಪೂರ್ವಕವಾಗಿ ಪಾಲಿಸುವ ಮೂಲಕ ಈ ರಾಜ್ಯದಲ್ಲಿ ಸುಖವನ್ನು ಉಂಟುಮಾಡು.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಶಗ್ಧಿ ಪೂರ್ಧಿ ಪ್ರ ಯಂಸಿ ಚ ಶಿಶೀಹಿ ಪ್ರಾಸ್ಯುದರಮ್ । ಪೂಷನ್ನಿಹ ಕ್ರತುಂ ವಿದಃ ॥೯॥

ಪದಾರ್ಥ:- ಹೇ [**ಪೂಷನ್**] ಸಭಾ ಸೇನಾಧಿಪತಿಯೇ! ನೀನು ನಮ್ಮನ್ನು [**ಶಗ್ಧಿ**] , ಸುಖವನ್ನು ನೀಡಲು ಸಮರ್ಥರನ್ನಾಗಿ [**ಪೂರ್ಧಿ**] ಸಮಸ್ತ ಸುಖಗಳೊಂದಿಗೆ ಪೂರ್ಣಗೊಳಿಸಿ [**ಪ್ರಯಂಸಿ**] ದುಷ್ಟಕರ್ಮಗಳಿಂದ ದೂರವಿರಿಸಿ [**ಶಿಶೀಹಿ**] ಸುಖಪೂರ್ವಕವಾಗಿ ನಿದ್ರಿಸು. ಅಥವಾ ದುಷ್ಟರ ಛೇದನವನ್ನು ಮಾಡಿ [**ಪ್ರಾಸಿ**] ಸಮಸ್ತ ಸೇನೆ ಮತ್ತು ಪ್ರಜೆಗಳನ್ನು ಪೂರ್ಣಗೊಳಿಸು ಮತ್ತು ನಮ್ಮಗಳ [**ಉದರಂ**] ಉದರವನ್ನು ಉತ್ತಮ ಅನ್ನದಿಂದಲೂ [**ಇಹ**] ಈ ಪ್ರಜೆಗಳ ಸುಖವನ್ನು [**ಕ್ರತುಂ**] ಯುದ್ಧವಿದ್ಯೆಯಿಂದಲೂ [**ವಿದಃ**] ಪ್ರಾಪ್ತಿಗೊಳಿಸು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಸಭಾಸೇನಾಧ್ಯಕ್ಷನ ವಿನಾ ಈ ಜಗತ್ತಿನಲ್ಲಿ ಯಾವುದೇ ಸಾಮರ್ಥ್ಯವನ್ನು ನೀಡುವ ಮತ್ತು ಸುಖದಿಂದ ಅಲಂಕೃತಗೊಳಿಸುವ, ಪುರುಷಾರ್ಥವನ್ನು ನೀಡುವ ಚೋರ ಡಾಕುಗಳಿಂದ ಭಯವನ್ನು ನಿವಾರಿಸುವ, ಎಲ್ಲರಿಗೂ ಉತ್ತಮ ಭೋಗವನ್ನು ಒದಗಿಸುವ ಹಾಗೂ ನ್ಯಾಯವಿದ್ಯೆಯ ಪ್ರಕಾಶವನ್ನು ಉಂಟುಮಾಡುವವರು ಬೇರಾರೂ ಇರುವುದಿಲ್ಲ. ಇದರಿಂದ ಇವರಿಬ್ಬರ ಆಶ್ರಯವನ್ನು ಮನುಷ್ಯರು ಹೊಂದಬೇಕು.

ಅವನ ಆಶ್ರಯವನ್ನು ಹೇಗೆ ಮಾಡಬೇಕು ಮತ್ತು ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ನ ಪೂಷಣಂ ಮೇಥಾಮಸಿ ಸೂಕ್ತೈರಭಿ ಗೃಣೀಮಸಿ । ವಸೂನಿ ದಸ್ಮಮೀಮಹೇ ॥೧೦॥

ಪದಾರ್ಥ:- ಹೇ ಮಾನವರೇ! ಯಾವ ರೀತಿ ನಾವು [**ಸೂಕ್ತೈಃ**] ವೇದೋಕ್ತ ಸ್ತೋತ್ರಗಳಿಂದ [**ಪೂಷಣಂ**] ಸಭಾ ಮತ್ತು ಸೇನಾಧ್ಯಕ್ಷನನ್ನು [**ಅಭಿ ಗೃಣೀಮಸಿ**] ಗುಣಜ್ಞಾನ ಪೂರ್ವಕ ಸ್ತುತಿ ಮಾಡುತ್ತೇವೋ [**ದಸ್ಮಂ**] ಶತ್ರುವನ್ನು [**ಮೇಥಾಮಸಿ**] ಕೊಲ್ಲುತ್ತೇವೋ [**ವಸೂನಿ**] ಉತ್ತಮ ವಸ್ತುಗಳನ್ನು [**ಈಮಹೇ**] ಯಾಚನ ಮಾಡುತ್ತೇವೆ ಮತ್ತು ಪರಸ್ಪರ ದ್ವೇಷವನ್ನೆಂದಿಗೂ [**ನ**] ಮಾಡುವುದಿಲ್ಲವೋ ಅದೇ ರೀತಿ ನೀವೂ ಸಹ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವುದೇ ಮನುಷ್ಯನು ನಾಸ್ತಿಕ ಅಥವಾ ಮೂರ್ಖತನದಿಂದ ಸಭಾಧ್ಯಕ್ಷನ ಆಜ್ಞೆಯನ್ನು ತ್ಯಜಿಸಿ ಶತ್ರುವಿನ ಯಾಚನೆಯನ್ನು ಮಾಡಬಾರದು. ಆದರೆ ವೇದಗಳಿಂದ ರಾಜನೀತಿಯನ್ನರಿತು ಇವರಿಬ್ಬರ ಸಹಾಯದಿಂದ ಶತ್ರುಗಳನ್ನು ದಮನ ಮಾಡಿ ವಿಜ್ಞಾನ ಹಾಗೂ ಸುವರ್ಣಾದಿ ಧನಗಳನ್ನು ಪ್ರಾಪ್ತಿಸಿ ಉತ್ತಮ ಮಾರ್ಗದಲ್ಲಿ ಸುಪಾತ್ರರಿಗೆ ದಾನನೀಡಿ ವಿದ್ಯೆಯ ವಿಸ್ತಾರವನ್ನು ಮಾಡಬೇಕು.

ಈ ಸೂಕ್ತದಲ್ಲಿ ಪೂಷನ್ ಶಬ್ದದ ವರ್ಣಿಸುವ ಶಕ್ತಿಯನ್ನು ವೃದ್ಧಿಸುವುದು, ದುಷ್ಟ ಶತ್ರುಗಳ ನಿವಾರಣೆ, ಸಂಪೂರ್ಣ ಐಶ್ವರ್ಯದ ಪ್ರಾಪ್ತಿ, ಸನ್ಮಾರ್ಗದಲ್ಲಿ ನಡೆಯುವುದು, ಬುದ್ಧಿ ಅಥವಾ ಕ್ರತು ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಇವುಗಳ ಬಗೆಗೆ ಹೇಳಲಾಗಿದೆ. ಆದುದರಿಂದ ಈ ಸೂಕ್ತದ ಅರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದುತ್ತದೆ ಎಂದು ತಿಳಿಯಬೇಕು.

ನಲವತ್ತೆರಡನೆಯ ಸೂಕ್ತ ಸಮಾಪ್ತ

ಸೂಕ್ತ ೪೩

ಮಂತ್ರಸಂಖ್ಯೆ ೯ । ಋಷಿಃ - ಕಣ್ವೋ ಘೌರಃ । ದೇವತಾ - ೧, ೨, ೪, ೫, ೬ ರುದ್ರಃ, ೩ ಮಿತ್ರಾವರುಣೌ, ೭, ೮, ೯ ಸೋಮಃ । ಛಂದಃ - ೧, ೪, ೭, ೮ ಗಾಯತ್ರೀ, ೫ ವಿರಾಡ್ ಗಾಯತ್ರೀ ೬ ಪಾದನಿಚೃದ್ ಗಾಯತ್ರೀ, ೯ ಅನುಷ್ಟುಪ್ । ಸ್ವರಃ - ಷಡ್ಜಃ, ಗಾಂಧಾರಃ ।

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ರುದ್ರ ಶಬ್ದದ ಅರ್ಥವನ್ನು ಹೇಳಲಾಗುತ್ತದೆ.

ಕದ್ ರುದ್ರಾಯ ಪ್ರಚೇತಸೇ ಮೀಳ್ಹುಷ್ಟಮಾಯ ತವ್ಯಸೇ ।
ವೋಚೇಮ ಶಂತಮಂ ಹೃದೇ ॥೧॥

ಪದಾರ್ಥ:- ನಾವುಗಳು [**ಕತ್**] ಯಾವಾಗ [**ಪ್ರಚೇತಸೇ**] ಉತ್ತಮ ಜ್ಞಾನಯುಕ್ತವೂ [**ಮೀಢುಷ್ಟಮಾಯ**] ಅತಿಶಯವಾಗಿ ಸೇವನೆ ಮಾಡುವ ಅಥವಾ [**ತವ್ಯಸೇ**] ಅತ್ಯಂತ ವೃದ್ಧರಾದ [**ಹೃದೇ**] ಹೃದಯದಲ್ಲಿ ನೆಲೆಸಿರುವ [**ರುದ್ರಾಯ**] ಪರಮೇಶ್ವರ, ಜೀವ ಮತ್ತು ಪ್ರಾಣವಾಯುಗಳಿಗಾಗಿ [**ಶಂತಮಂ**] ಅತ್ಯಂತ ಸುಖರೂಪವಾದ ವೇದದ [**ವೋಚೇಮ**] ಉತ್ತಮ ಪ್ರಕಾರದ ಉಪದೇಶವನ್ನು ಮಾಡೋಣ.

ಭಾವಾರ್ಥ:- ರುದ್ರ ಶಬ್ದದಿಂದ ಮೂರು ಅರ್ಥಗಳ ಗ್ರಹಣವಾಗುತ್ತದೆ. ಪರಮೇಶ್ವರ, ಜೀವ ಮತ್ತು ವಾಯು ಇವುಗಳಲ್ಲಿ ಪರಮೇಶ್ವರನು ತನ್ನ ಸರ್ವಜ್ಞತ್ವದಿಂದ ಯಾವನು ಯಾವರೀತಿ ಪಾಪಕರ್ಮವನ್ನು ಮಾಡಿದ್ದಾನೋ ಅದಕ್ಕನುಸಾರವೇ ಫಲ ನೀಡುವುದರಿಂದ ಅವನನ್ನು ರೋದನಕ್ಕೀಡುಮಾಡುತ್ತಾನೆ. ಜೀವನು ನಿಶ್ಚಯವಾಗಿಯೂ ಸಾಯುವ ಸಮಯದಲ್ಲಿ ಅನ್ಯ ಸಂಬಂಧಿಗಳ ಇಚ್ಛೆಯನ್ನು ಮಾಡುತ್ತಾ ಶರೀರವನ್ನು ತ್ಯಜಿಸುತ್ತಾನೆ. ಆಗ ಸ್ವತಃ ರೋದಿಸುತ್ತಾನೆ ಮತ್ತು ವಾಯುವು ತೀಕ್ಷ್ಣವಾಗಿ ಪೀಡನೆಯನ್ನುಂಟುಮಾಡುವುರಿಂದ ರೋದನ ಕರ್ಮದ ನಿಮಿತ್ತವಾಗಿದೆ. ಈ ಮೂರರ ಸಂಯೋಗದಿಂದ ಮನುಷ್ಯನು ಅತ್ಯಂತ ಸುಖಗಳನ್ನು ಪ್ರಾಪ್ತಿಸಬೇಕು.

ಪುನಃ ಅವನು ಏನು ಮಾಡುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಯಥಾ ನೋ ಅದಿತಿಃ ಕರತ್ ಪಶ್ವೇ ನೃಭ್ಯೋ ಯಥಾ ಗವೇ ।
ಯಥಾ ತೋಕಾಯ ರುದ್ರಿಯಮ್ ॥೨॥

ಪದಾರ್ಥ:- [**ಯಥಾ**] ಯಾವ ರೀತಿ [**ತೋಕಾಯ**] ಉತ್ಪನ್ನನಾದ ಬಾಲಕನಿಗಾಗಿ [**ಅದಿತಿಃ**] ಮಾತೆಯು [**ಯಥಾ**] ಹೇಗೆ [**ಪಶ್ವೇ**] ಪಶು ಸಮೂಹಕ್ಕಾಗಿ ಪಶುಗಳ ಪಾಲಕನು [**ಯಥಾ**] ಹೇಗೆ [**ನೃಭ್ಯಃ**] ಮನುಷ್ಯರಿಗಾಗಿ ರಾಜನು, [**ಯಥಾ**] ಹೇಗೆ [**ಗವೇ**] ಇಂದ್ರಿಯಗಳಿಗಾಗಿ ಜೀವನು ಅಥವಾ ಪೃಥಿವಿಗಾಗಿ ಕೃಷಿಕನು [**ಕರತ್**] ಸುಖವನ್ನುಂಟುಮಾಡುತ್ತಾನೋ ಹಾಗೆಯೇ [**ನಃ**] ನಮಗಾಗಿ [**ರುದ್ರಿಯಂ**] ಪರಮೇಶ್ವರ ಅಥವಾ ಪವನಗಳ ಕರ್ಮವು ಪ್ರಾಪ್ತವಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ತಾಯಿ ತಂದೆಯರು ಮಕ್ಕಳಿಗಾಗಿ, ಗೋಪಾಲಕನು ಪಶುಗಳಿಗಾಗಿ ಹಾಗೂ ರಾಜಪುರುಷರು ಪ್ರಜೆಗಳಿಗಾಗಿ ಸುಖಕಾರಿಗಳಾಗುತ್ತಾರೋ ಅದೇ ರೀತಿ ಸುಖಗಳನ್ನುಂಟುಮಾಡುವ ಪರಮೇಶ್ವರ ಮತ್ತು ಪವನಗಳು ಇವೆ.

ಈಗ ಎಲ್ಲರೊಂದಿಗೆ ವಿದ್ವಾಂಸರು ಯಾವ ರೀತಿ ವರ್ತಿಸಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಯಥಾ ನೋ ಮಿತ್ರೋ ವರುಣೋ ಯಥಾ ರುದ್ರಶ್ಚಿಕೇತತಿ ।

ಯಥಾ ವಿಶ್ವೇ ಸಜೋಷಸಃ ॥೩॥

ಪದಾರ್ಥ:- **[ಯಥಾ]** ಯಾವ ರೀತಿ **[ಮಿತ್ರಃ]** ಸಖ ಅಥವಾ ಪ್ರಾಣವು **[ವರುಣಃ]** ಉತ್ತಮ ಉಪದೇಷ್ಟಾ ಅಥವಾ ಉದಾನವು **[ಯಥಾ]** ಯಾವ ರೀತಿ **[ರುದ್ರಃ]** ಪರಮೇಶ್ವರನು **[ನಃ]** ನಮ್ಮನ್ನು **[ಚಿಕೇತತಿ]** ಜ್ಞಾನಯುಕ್ತಗೊಳಿಸುತ್ತಾರೋ **[ಯಥಾ]** ಯಾವ ರೀತಿ **[ವಿಶ್ವೇ]** ಸಮಸ್ತ **[ಸಜೋಷಸಃ]** ಸ್ವತಃ ನಮ್ಮಂತೆಯೇ ಪ್ರೀತಿಯ ಸೇವನೆಯನ್ನು ಮಾಡುವ ವಿದ್ವಾಂಸರು ಸಮಸ್ತ ವಿದ್ಯೆಗಳನ್ನು ತಿಳಿದವರಾಗುತ್ತಾರೋ ಅದೇ ರೀತಿ ಯಥಾರ್ಥವಕ್ತನಾದ ಪುರುಷನು ಎಲ್ಲರಿಗೂ ತಿಳಿವನ್ನುಂಟುಮಾಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ವಿದ್ವಾಂಸರು ಸಮಸ್ತ ಮಾನವರಿಗಾಗಿ ಮಿತ್ರತ್ವವನ್ನೂ, ಉತ್ತಮಶೀಲವನ್ನೂ ಧಾರಣ ಮಾಡಿ ಅವರಿಗಾಗಿ ಯಥಾರ್ಥವಿದ್ಯೆಯ ಪ್ರಾಪ್ತಿ ಹಾಗೂ ಯಾವ ರೀತಿ ಪರಮೇಶ್ವರನಿಂದ ವೇದದ ಮೂಲಕ ಸಮಸ್ತ ವಿದ್ಯೆಗಳ ಪ್ರಕಾಶವಾಗಿದೆಯೋ ಅದೇ ರೀತಿ ವಿದ್ವಾಂಸರಾದ ಅಧ್ಯಾಪಕರೂ ಸಹ ಜನಸಾಮಾನ್ಯರನ್ನು ವಿದ್ಯಾಯುಕ್ತರನ್ನಾಗಿ ಮಾಡಬೇಕು.

ಪುನಃ ಆ ರುದ್ರನು ಹೇಗಿರುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಗಾಥಪತಿಂ ಮೇಧಪತಿಂ ರುದ್ರಂ ಜಲಾಷಭೇಷಜಮ್ । ತಚ್ಛಂಯೋಃ ಸುಮ್ನಮೀಮಹೇ ॥೪॥

ಪದಾರ್ಥ:- ಹೇ ಮನುಷ್ಯರೇ! ಯಾವ ರೀತಿ ನಾವು **[ಗಾಥಪತಿಂ]** ಸ್ತುತಿಯನ್ನು ಮಾಡುವ ಪಾಲಕರು **[ಮೇಧಪತಿಂ]** ಯಜ್ಞ ಅಥವಾ ಪವಿತ್ರ ಸತ್ಪುರುಷರನ್ನು ಪಾಲನೆ ಮಾಡುವವರು **[ಜಲಾಷಭೇಷಜಮ್]** ಯಾವುದರಿಂದ ಸುಖಕ್ಕಾಗಿ ಔಷಧಿಯುಂಟೋ ಅದು **[ರುದ್ರಂ]** ಪರಮೇಶ್ವರನ ಆಶ್ರಯವನ್ನು ಹೊಂದಿ **[ತತ್]** ಆ ವಿಜ್ಞಾನದ ಅಥವಾ **[ಶಂಯೋಃ]** ವ್ಯಾವಹಾರಿಕ, ಪಾರಮಾರ್ಥಿಕ ಸುಖದಿಂದಲೂ **[ಸುಮ್ನಂ]** ಮೋಕ್ಷಸುಖದ **[ಈಮಹೇ]** ಯಾಚನೆಯನ್ನು ಮಾಡುತ್ತೇವೆಯೋ ಅದೇ ರೀತಿ ನೀವೂ ಮಾಡಿರಿ.

ಭಾವಾರ್ಥ:- ಯಾವುದೇ ಮನುಷ್ಯನು ಸ್ತುತಿಯಜ್ಞವನ್ನು ಅಥವಾ ದುಃಖಗಳನ್ನು ನಾಶಗೊಳಿಸುವ ಔಷಧಿಗಳನ್ನು ಪ್ರಾಪ್ತಿಸುವ ಪರಮೇಶ್ವರ, ವಿದ್ವಾನ್ ಹಾಗೂ ಪ್ರಾಣಾಯಾಮದ ವಿನಾ ವಿಜ್ಞಾನ ಮತ್ತು ಲೌಕಿಕ ಸುಖದ, ಮೋಕ್ಷ ಸುಖದ ಪ್ರಾಪ್ತಿಯನ್ನು ಹೊಂದಲು ಯೋಗ್ಯನಾಗುವುದಿಲ್ಲ.

ಮತ್ತೆ ಅವನು ಹೇಗಿದ್ದಾನೆ ಎಂಬ ವಿಷಯದ ವಿವರಣೆ ಇಲ್ಲಿದೆ.

ಯಃ ಶುಕ್ರ ಇವ ಸೂರ್ಯೋ ಹಿರಣ್ಯಮಿವ ರೋಚತೇ । ಶ್ರೇಷ್ಠೋ ದೇವಾನಾಂ ವಸುಃ ॥೫॥

ಪದಾರ್ಥ:- **[ಯಃ]** ಯಾವ ಮೊದಲೇ ಹೇಳಿದ ರುದ್ರ - ಸೇನಾಪತಿಯು **[ಸೂರ್ಯಃ ಶುಕ್ರ ಇವ]** ತೇಜಸ್ವೀ, ಶುದ್ಧ ಭಾಸ್ಕರ-ಸೂರ್ಯನಂತೆ **[ಹಿರಣ್ಯಮಿವ]** ಸುವರ್ಣ ತುಲ್ಯ ಪ್ರೀತಿಕಾರಕನಾಗಿ **[ದೇವಾನಾಂ]** ಸಮಸ್ತ ವಿದ್ವಾಂಸರ ಅಥವಾ ಪೃಥಿವೀ ಆದಿಗಳ ಮಧ್ಯದಲ್ಲಿ **[ಶ್ರೇಷ್ಠಃ]** ಅತ್ಯುತ್ತಮವಾದ **[ವಸುಃ]** ಸಂಪೂರ್ಣ ಪ್ರಾಣಿಮಾತ್ರರನ್ನು ನೆಲೆಗೊಳಿಸುವ **[ರೋಚತೇ]** ಪ್ರೀತಿಕಾರಕನು ಆಗಲಿ. ಅಂತಹವನಿಗೆ ಸೇನೆಯ ಪ್ರಾಧಾನ್ಯವನ್ನು ಕೊಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರಿಗೆ ಉಚಿತವಾದುದೇನೆಂದರೆ, ಯಾವ ರೀತಿ ಪರಮೇಶ್ವರನು ಸಮಸ್ತ ಜ್ಯೋತಿಗಳ ಜ್ಯೋತಿಯು ಆನಂದದಾಯಕರಿಗೆ ಆನಂದದಾಯಕನು, ಶ್ರೇಷ್ಠರಿಗೆ

ಶ್ರೇಷ್ಠನು, ವಿದ್ವಾಂಸರಿಗೂ ವಿದ್ವಾಂಸನು, ಆಧಾರಗಳಿಗೂ ಆಧಾರನು ಆಗಿದ್ದಾನೋ, ಅದೇ ರೀತಿ ಯಾವ ನ್ಯಾಯಕಾರಿಗಳಲ್ಲಿ ನ್ಯಾಯಕಾರಿಯೂ, ಆನಂದದಾಯಕರಲ್ಲಿ ಆನಂದದಾಯಕನು, ಶ್ರೇಷ್ಠ ಸ್ವಭಾವವುಳ್ಳವರಲ್ಲಿ ಶ್ರೇಷ್ಠಸ್ವಭಾವವುಳ್ಳವನು, ವಿದ್ವಾಂಸರಲ್ಲಿ ವಿದ್ವಾಂಸನು ವೀರಪುರುಷನು ಆಗಿದ್ದಾನೋ, ಅವನನ್ನೇ ಸಭಾಧ್ಯಕ್ಷನೆಂದು ತಿಳಿಯಬೇಕು.

ಇವನು ಅವರಿಗಾಗಿ ಏನನ್ನು ಮಾಡುತ್ತಾನೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಶಂ ನಃ ಕರತ್ಯರ್ವತೇ ಸುಗಂ ಮೇಷಾಯ ಮೇಷ್ಯೇ । ನೃಭ್ಯೋ ನಾರಿಭ್ಯೋ ಗವೇ ॥೬॥

ಪದಾರ್ಥ:- ಯಾವ ರುದ್ರಸ್ವಾಮಿಯು **[ನಃ]** ನಮಗಾಗಿ **[ಅರ್ವತೇ]** ಅಶ್ವಜಾತಿಯ **[ಮೇಷಾಯ]** ಮೇಷ ಜಾತಿಯ **[ಮೇಷ್ಯೇ]** ಕುರಿಗಳ **[ನೃಭ್ಯಃ]** ಮನುಷ್ಯಜಾತಿಯ **[ನಾರಿಭ್ಯಃ]** ಸ್ತ್ರೀ ಜಾತಿಯ ಮತ್ತು **[ಗವೇ]** ಗೋ ಜಾತಿಯ ಪ್ರಾಣಿಗಳಿಗಾಗಿ **[ಸುಗಂ]** ಸುಗಮವಾದ **[ಶಂ]** ಸುಖವನ್ನು **[ಕರತಿ]** ನಿರಂತರ ಉಂಟು ಮಾಡುತ್ತಾನೋ ಅವನನ್ನೇ ನ್ಯಾಯಾಧೀಶನನ್ನಾಗಿ ಮಾಡಬೇಕು.

ಭಾವಾರ್ಥ:- ಮಾನವರು ತಮ್ಮ ಹಾಗೂ ಇತರರ ಪಶು ಮತ್ತು ಮನುಷ್ಯರಿಗಾಗಿ ಪರಮೇಶ್ವರನ ಪ್ರಾರ್ಥನೆ, ವಿದ್ವಾಂಸರ ಸಹಾಯ, ಮತ್ತು ಪ್ರಾಣವಾಯುಗಳಿಂದ ಯಥಾವತ್ ಉಪಯೋಗವನ್ನು ಮತ್ತು ತಮ್ಮ ಪುರುಷಾರ್ಥವನ್ನೂ ಮಾಡಿಕೊಳ್ಳಬೇಕು.

ಈಗ ರುದ್ರನ ಗುಣಗಳ ವರ್ಣನೆ ಇಲ್ಲಿದೆ.

ಅಸ್ಮೇ ಸೋಮ ಶ್ರಿಯಮಧಿ ನಿ ಧೇಹಿ ಶತಸ್ಯ ನೃಣಾಮ್ । ಮಹಿ ಶ್ರವಸ್ತುವಿನೃಮ್ಣಮ್ ॥೭॥

ಪದಾರ್ಥ:- ಹೇ **[ಸೋಮ]** ಜಗದೀಶ್ವರಾ ಅಥವಾ ಸಭಾಧ್ಯಕ್ಷ! ನೀನು **[ಅಸ್ಮೇ]** ನಮಗಾಗಿ ಅಥವಾ ನಮ್ಮಗಳ **[ಶತಸ್ಯ]** ಬಹಳವಾದ **[ನೃಣಾಮ್]** ವೀರಪುರುಷರ **[ತುವಿನೃಮ್ಣಮ್]** ಅನೇಕ ಪ್ರಕಾರದ ಧನವನ್ನು **[ಮಹಿ]** ಪೂಜ್ಯ ಅಥವಾ ಬಹಳವಾದ **[ಶ್ರವಃ]** ವಿದ್ಯೆಯ ಶ್ರವಣವನ್ನು ಮತ್ತು **[ಶ್ರಿಯಮ್]** ರಾಜ್ಯಲಕ್ಷ್ಮಿಯನ್ನು **[ಅಧಿ ನಿಧೇಹಿ]** ಸ್ಥಾಪನೆ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವುದೇ ಪ್ರಾಣಿಯು ಪರಮೇಶ್ವರನ ಕೃಪೆ, ಸಭಾಧ್ಯಕ್ಷನ ಸಹಾಯ ಅಥವಾ ತನ್ನ ಪುರುಷಾರ್ಥವಿಲ್ಲದೆ ಪೂರ್ಣ ವಿದ್ಯೆಯನ್ನು ಪಶು, ಚಕ್ರವರ್ತೀರಾಜ್ಯ ಮತ್ತು ಲಕ್ಷ್ಮಿಯನ್ನು ಹೊಂದಲಾರನು.

ಪುನಃ ಅವನು ಯಾವುದರ ನಿವಾರಣೆಯನ್ನು ಮಾಡಬೇಕು, ಈ ವಿಷಯದ ಉಪದೇಶವನ್ನು ಇಲ್ಲಿ ಮಾಡಲಾಗಿದೆ.

ಮಾ ನಃ ಸೋಮಪರಿಬಾಧೋ ಮಾರಾತಯೋ ಜುಹುರಂತ ।

ಆ ನ ಇಂದೋ ವಾಜೇ ಭಜ ॥೮॥

ಪದಾರ್ಥ:- ಹೇ **[ಇಂದೋ]** ಸುಶಿಕ್ಷಣದಿಂದ ಆರ್ದ್ರಗೊಳಿಸುವವನಾದ ಸಭಾಧ್ಯಕ್ಷನೇ! **[ನಃ]** ನಮ್ಮನ್ನು **[ಸೋಮಪರಿಬಾಧಃ]** ಉತ್ತಮ ಪದಾರ್ಥಗಳನ್ನು ಎಲ್ಲ ಪ್ರಕಾರದಿಂದ ದೂರಗೊಳಿಸುವ ವಿರೋಧಿ ಪುರುಷನು ಯಾವನಿದ್ದಾನೋ ಅವನು ನಮ್ಮ ಮೇಲೆ **[ಮಾ ಜುಹುರಂತ]** ಪ್ರಾಬಲ್ಯವನ್ನು ಸ್ಥಾಪಿಸದಿರಲಿ ಮತ್ತು **[ಅರಾತಯಃ]** ಯಾರು ದಾನಾದಿ ಧರ್ಮರಹಿತ ಶತ್ರುಗಳು, ಹಠವಾದಿಗಳು ಇದ್ದಾರೋ ಅವರು **[ನಃ]** ನಮ್ಮನ್ನು, ಈ ಶತ್ರುಗಳನ್ನು **[ವಾಜೇ]** ಯುದ್ಧದಲ್ಲಿ ಪರಾಜಯ ಮಾಡಲು **[ಆ ಭಜ]** ಉತ್ತಮ ರೀತಿಯಲ್ಲಿ ಯುಕ್ತಗೊಳಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮನುಷ್ಯರಿಗೆ ಅತ್ಯಂತ ಉತ್ತಮ ಬಲದ ಸಾಹಿತ್ಯದಿಂದ ಪರಮೇಶ್ವರ ಅಥವಾ ಸಭಾಸೇನಾಧ್ಯಕ್ಷನ ಆಶ್ರಯ ಮತ್ತು ತಮ್ಮ ಪುರುಷಾರ್ಥ ಯುಕ್ತ ಯುದ್ಧದಲ್ಲಿ ಸಮಸ್ತ ಶತ್ರುಗಳನ್ನು ಜಯಿಸಿ ನ್ಯಾಯಯುಕ್ತರಾಗಿ ರಾಜ್ಯಪಾಲನೆ ಮಾಡಬೇಕು.

ಪುನಃ ಅವನು ಯಾರು, ಯಾವರೀತಿ ಇದ್ದಾನೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಯಾಸ್ತೇ ಪ್ರಜಾ ಅಮೃತಸ್ಯ ಪರಸ್ಮಿನ್ ಧಾಮನ್ನೃತಸ್ಯ ।
ಮೂರ್ಧಾ ನಾಭಾ ಸೋಮ ವೇನ ಆಭೂಷಂತೀಃ ಸೋಮ ವೇದಃ ॥೯॥

ಪದಾರ್ಥ:- ಹೇ **[ಸೋಮ]** ಹೇ ವಿಜ್ಞಾನದ ದಾತೃವೇ! **[ವೇನಃ]** ಕಮನೀಯ ಸ್ವರೂಪದ **[ಮೂರ್ಧಾ]** ಸರ್ವೋತ್ತಮನೇ! ನೀನು **[ಋತಸ್ಯ]** ಸತ್ಯಸ್ವರೂಪನೂ, ಸತ್ಯಪ್ರಿಯನೂ **[ಅಮೃತಸ್ಯ]** ನಾಶರಹಿತವಾದ **[ನಾಭಾ]** ಸ್ಥಿರ ಸುಖದ ಬಂಧನರೂಪನೂ **[ಧಾಮನ್]** ನ್ಯಾಯ ಮತ್ತು ಆನಂದಮಯನ ಸ್ಥಾನದಲ್ಲಿ ವರ್ತಮಾನನಾಗಿರುವ ಈಶ್ವರನಂತಹ ನ್ಯಾಯಕಾರಿಯೂ ಆದ **[ತೇ]** ನಿನ್ನ **[ಯಾಃ]** ಯಾವ **[ಪ್ರಜಾಃ]** ಪ್ರಜೆಗಳಿದ್ದಾರೋ ಅವರನ್ನು **[ಆಭೂಷಂತೀಃ]** ಎಲ್ಲ ಪ್ರಕಾರದಿಂದ ಭೂಷಣಯುಕ್ತರಾಗುವ **[ವೇನಃ]** ಇಚ್ಛೆಯನ್ನು ಮಾಡು. ಮತ್ತು ಅವರನ್ನು **[ವೇದಃ]** ಸಮಸ್ತ ವಿದ್ಯೆಗಳಿಂದ ಪ್ರಾಪ್ತಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಎಲ್ಲಿ ಮನುಷ್ಯನು ಈಶ್ವರನದೇ ಉಪಾಸನೆಯನ್ನು ಮಾಡುವ ಅತ್ಯುತ್ತಮ ಸಭಾಧ್ಯಕ್ಷನ ಆಶ್ರಯವನ್ನು ಮಾಡುತ್ತಾನೋ ಅಲ್ಲಿ ದುಃಖದ ಲೇಶಮಾತ್ರವನ್ನೂ ಹೊಂದಲಾರನು. ಯಾವ ರೀತಿ ಪರಮೇಶ್ವರನು ಮತ್ತು ಸಭಾಧ್ಯಕ್ಷನು ಶ್ರೇಷ್ಠ ಆಚರಣೆಯನ್ನು ಮಾಡುವ ಮನುಷ್ಯರ ಇಚ್ಛೆಯನ್ನು ಮಾಡುತ್ತಾರೋ ಅದೇ ರೀತಿ ಪ್ರಜೆಗಳಲ್ಲಿರುವ ಮನುಷ್ಯ, ಪರಮೇಶ್ವರ ಮತ್ತು ಸಭಾಧ್ಯಕ್ಷರನ್ನು ನಿತ್ಯವೂ ಇಚ್ಛಿಸಲಿ. ಏಕೆಂದರೆ ಇವರಿಲ್ಲದೆ ಬಹಳವಾದ ಸುಖವು ಎಂದಿಗೂ ಪ್ರಾಪ್ತವಾಗುವುದಿಲ್ಲ.

ಈ ಸೂಕ್ತದಲ್ಲಿ ರುದ್ರ ಶಬ್ದದ ಅರ್ಥದ ವರ್ಣನೆಯು ಎಲ್ಲ ಸುಖಗಳ ಪ್ರತಿಪಾದನೆ, ಮಿತ್ರತ್ವದ ಆಚರಣೆ, ಪರಮೇಶ್ವರ ಮತ್ತು ಸಭಾಧ್ಯಕ್ಷರ ಆಶ್ರಯದಿಂದ ಸುಖಗಳ ಪ್ರಾಪ್ತಿ, ಒಬ್ಬನೇ ಪರಮೇಶ್ವರನ ಉಪಾಸನೆ, ಪರಮಸುಖದ ಪ್ರಾಪ್ತಿ ಹಾಗೂ ಸಭಾಧ್ಯಕ್ಷನ ಆಶ್ರಯವನ್ನು ಮಾಡಲು ಹೇಳಲಾಗಿದೆ. ಆದ್ದರಿಂದ ಈ ಸೂಕ್ತದ ಅರ್ಥವು ಹಿಂದಿನ ಸೂಕ್ತದ ಅರ್ಥದೊಂದಿಗೆ ಸಂಗತಿಕರಣಗೊಂಡಿದೆ ಎಂದು ತಿಳಿಯಬೇಕು.

ನಲವತ್ತಮೂರನೆಯ ಸೂಕ್ತ ಸಮಾಪ್ತ

ಸೂಕ್ತ ೪೪

ಮಂತ್ರಸಂಖ್ಯೆ ೧೪ । ಋಷಿಃ - ಪ್ರಸ್ಕಣ್ವಃ ಕಾಣ್ವಃ । ದೇವತಾ - ಅಗ್ನಿಃ । ಛಂದಃ - ೧, ೫ ಉಪರಿಷ್ಟಾದ್ ವಿರಾಡ್ ಬೃಹತೀ, ೩ ನಿಚೃದ್ ಉಪರಿಷ್ಟಾದ್ ಬೃಹತೀ, ೭, ೧೧, ನಿಚೃದ್ ಪಥ್ಯಾ ಬೃಹತೀ, ೧೨ ಭುರಿಕ್ ಬೃಹತೀ, ೧೩, ಪಥ್ಯಾ ಬೃಹತೀ, ೨, ೪, ೬, ೮, ೧೪ ವಿರಾಟ್ ಸತಃ ಪಂಕ್ತಿಃ, ೧೦ ವಿರಾಡ್ ವಿಸ್ತಾರ ಪಂಕ್ತಿಃ, ೯ ಆರ್ಚೀ ತ್ರಿಷ್ಟುಪ್ ।
ಸ್ವರಃ- ಮಧ್ಯಮಃ, ಪಂಚಮಃ, ಧೈವತಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಅಗ್ನಿ ಶಬ್ದದ ಸಂಬಂಧದಿಂದ ವಿದ್ವಾಂಸರ ಕಾಮನೆಯನ್ನು ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಅಗ್ನೇ ವಿವಸ್ವದುಷಸ-ಶ್ಚಿತ್ರಂ ರಾಧೋ ಅಮರ್ತ್ಯ ।
ಆ ದಾಶುಷೇ ಜಾತವೇದೋ ವಹಾ ತ್ವ-ಮದ್ಯಾ ದೇವಾಁ ಉಷರ್ಬುಧಃ ॥೧॥

ಪದಾರ್ಥ:- ಹೇ **[ವಿವಸ್ವತ್]** ಸ್ವಪ್ರಕಾಶಸ್ವರೂಪ ಅಥವಾ ವಿದ್ಯಾಪ್ರಕಾಶಯುಕ್ತನೇ! **[ಅಮರ್ತ್ಯ]** ಮರಣ ಧರ್ಮದಿಂದ ರಹಿತನಾದ ಅಥವಾ ಸಾಧಾರಣ ಮನುಷ್ಯದಿಂದ ಸ್ವಭಾವಕ್ಕಿಂತ ವಿಲಕ್ಷಣನಾದ **[ಜಾತವೇದಃ]** ಉತ್ಪನ್ನವಾದ ಪದಾರ್ಥಗಳೆಲ್ಲವನ್ನೂ ತಿಳಿಯುವವನಾದ ಅಥವಾ ಪ್ರಾಪ್ತಿಸುವವನಾದ **[ಅಗ್ನೇ]** ಜಗದೀಶ್ವರ! ಅಥವಾ ವಿದ್ವಾಂಸ! ಯಾವುದರಿಂದ ನೀನು **[ಅದ್ಯ]** ಇಂದು **[ದಾಶುಷೇ]** ಪುರುಷಾರ್ಥೀ ಮನುಷ್ಯರಿಗಾಗಿ **[ಉಷಸಃ]** ಪ್ರಾತಃಕಾಲದಿಂದ **[ಚಿತ್ರಂ]** ಅದ್ಭುತವಾದ **[ವಿವಸ್ವತ್]** ಸೂರ್ಯಸಮಾನವಾದ ಪ್ರಕಾಶವನ್ನುಂಟುಮಾಡುವ **[ರಾಧಃ]** ಸಂಪತ್ತನ್ನು ನೀಡುವವನಾಗಿದ್ದೀಯೋ ಆ ನೀನು **[ಉಷರ್ಬುಧಃ]** ಪ್ರಾತಃಕಾಲದಲ್ಲಿ ಎಚ್ಚರಗೊಳ್ಳುವ ವಿದ್ವಾಂಸರನ್ನು **[ಆವಃ]** ಉತ್ತಮರೀತಿಯಿಂದ ಹೊಂದು.

ಭಾವಾರ್ಥ:- ಮನುಷ್ಯರು ಪರಮಾತ್ಮನ ಆಜ್ಞಾಪಾಲನೆಗಾಗಿ ತಮ್ಮ ಪುರುಷಾರ್ಥದಿಂದ ಪರಮಾತ್ಮನ ಮತ್ತು ಆಲಸ್ಯರಹಿತರಾಗಿ ಉತ್ತಮ ವಿದ್ವಾಂಸರ ಆಶ್ರಯಹೊಂದಿ ಚಕ್ರವರ್ತೀರಾಜ್ಯವನ್ನು, ವಿದ್ಯೆ ಹಾಗೂ ರಾಜ್ಯಲಕ್ಷ್ಮಿಯನ್ನು ಸ್ವೀಕರಿಸಬೇಕು. ಸಮಸ್ತ ವಿದ್ಯೆಗಳನ್ನು ತಿಳಿಯುವವರಾದ ವಿದ್ವಾಂಸರು ಯಾವ ಉತ್ತಮ ಗುಣ ಮತ್ತು ಶ್ರೇಷ್ಠ ಕರ್ಮಗಳನ್ನು ಮಾಡಲು ಯೋಗ್ಯರಾಗಿದ್ದಾರೋ, ಅದನ್ನೇ ನಿತ್ಯವೂ ಮಾಡಲಿ ಮತ್ತು ದುಷ್ಟ ಕರ್ಮವಾವುದಿದೆಯೋ ಅದನ್ನು ಎಂದಿಗೂ ಮಾಡದಿರಲಿ.

ಮತ್ತೆ ವಿದ್ವಾಂಸರ ಸಂಗದ ಗುಣವರ್ಣನೆಯನ್ನು ಇಲ್ಲಿ ಮಾಡಲಾಗಿದೆ.

ಜುಷ್ಟೋ ಹಿ ದೂತೋ ಅಸಿ ಹವ್ಯವಾಹನೋಽಗ್ನೇ ರಥೀರಧ್ವರಾಣಾಮ್ ।
ಸಜೂರಶ್ವಿಭ್ಯಾಮುಷಸಾ ಸುವೀರ್ಯ-ಮಸ್ಮೇ ಧೇಹಿ ಶ್ರವೋ ಬೃಹತ್ ॥೨॥

ಪದಾರ್ಥ:- ಹೇ **[ಅಗ್ನೇ]** ಪಾವಕಸಮಾನನಾದ ರಾಜವಿದ್ಯೆಯನ್ನು ಬಲ್ಲ ವಿದ್ವಾಂಸನೇ! **[ಹಿ]** ಯಾವ ಕಾರಣದಿಂದ ನೀನು **[ಜುಷ್ಟಃ]** ಪ್ರಸನ್ನ ಪ್ರಕೃತಿಯವನೂ ಮತ್ತು **[ದೂತಃ]** ಶತ್ರುಗಳನ್ನು ತಪಿಸುವವನೂ ಆಗಿ **[ಅಧ್ವರಾಣಾಮ್]** ಅಹಿಂಸನೀಯ ಯಜ್ಞಗಳನ್ನು ಸಿದ್ಧಗೊಳಿಸುತ್ತ **[ರಥೀಃ]** ಪ್ರಶಂಸನೀಯ ರಥಯುಕ್ತನೂ, **[ಹವ್ಯವಾಹನಃ]** ಕೊಟ್ಟು ತೆಗೆದುಕೊಳ್ಳುವ ಯೋಗ್ಯವಸ್ತುಗಳನ್ನು ಪ್ರಾಪ್ತಿಸುವ **[ಸಜೂಃ]** ತನ್ನ ಸಮಾನರಾದವರನ್ನು ಸೇವಿಸುವವನೂ **[ಅಸಿ]** ಆಗಿರುವೆ. ಇದರಿಂದ **[ಅಸ್ಮೇ]** ನಮ್ಮಲ್ಲಿ **[ಅಶ್ವಿಭ್ಯಾಂ]** ವಾಯು, ಜಲ **[ಉಷಸಃ]** ಪ್ರಾತಃಕಾಲದಿಂದ ಸಿದ್ಧವಾದ ಕ್ರಿಯೆಯಿಂದ ಸಿದ್ಧಿಗೊಳಿಸಲ್ಪಟ್ಟ **[ಬೃಹತ್]** ಹಿರಿದಾದ **[ಸುವೀರ್ಯಂ]** ಉತ್ತಮ ಪರಾಕ್ರಮಕಾರಕವಾದ **[ಶ್ರವಃ]** ಸಮಸ್ತವಿದ್ಯೆಯ ಶ್ರವಣದ ನಿಮಿತ್ತ ಅನ್ನವನ್ನು **[ಧೇಹಿ]** ಧಾರಣೆ ಮಾಡು.

ಭಾವಾರ್ಥ:- ಯಾವುದೇ ಮನುಷ್ಯನು ವಿದ್ವಾಂಸರ ಸಂಗವಿಲ್ಲದೆ ವಿದ್ಯೆಯನ್ನು ಹೊಂದಿ ಶತ್ರುಗಳನ್ನು ಜಯಿಸಿ, ಉತ್ತಮ ಪರಾಕ್ರಮ, ಚಕ್ರವರ್ತೀರಾಜ್ಯಲಕ್ಷ್ಮಿಯನ್ನು ಹೊಂದುವುದರಲ್ಲಿ, ಸಮರ್ಥನಾಗಲಾರನು. ಮತ್ತು ಅಗ್ನಿ, ಜಲ ಮೊದಲಾದವುಗಳ ಸಂಯೋಗವಿಲ್ಲದೆ ಉತ್ತಮ ವ್ಯವಹಾರದ ಸಿದ್ಧಿಯನ್ನು ಮಾಡಲಾರನು.

ಈಗ ಎಂತಹ ಮನುಷ್ಯನನ್ನು ಸ್ವೀಕರಿಸಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಅದ್ಯಾ ದೂತಂ ವೃಣೀಮಹೇ ವಸುಮಗ್ನಿಂ ಪುರುಪ್ರಿಯಮ್ ।
ಧೂಮಕೇತುಂ ಭಾಋಜೀಕಂ ವ್ಯುಷ್ಟಿಷು ಯಜ್ಞಾನಾಮಧ್ವರಶ್ರಿಯಮ್ ॥೩॥

ಪದಾರ್ಥ:- ನಾವುಗಳು **[ಅದ್ಯ]** ಇಂದು ಮನುಷ್ಯನ ಜನ್ಮ ಅಥವಾ ವಿದ್ಯಾಪ್ರಾಪ್ತಿಯ ಸಮಯವನ್ನು ಪಡೆದವರಾಗಿ **[ವ್ಯುಷ್ಟಿಷು]** ಅನೇಕ ಪ್ರಕಾರದ ಕಾಮನೆಗಳಲ್ಲಿ **[ಭಾಋಜೀಕಂ]** ಕಾಮನೆಗಳ ಪ್ರಕಾಶವನ್ನು **[ಯಜ್ಞಾನಾಂ]**

ಅಗ್ನಿಹೋತ್ರ ಆದಿ ಅಶ್ವಮೇಧ ಪರ್ಯಂತ ಅಥವಾ ಯೋಗ ಉಪಾಸನಾ ಜ್ಞಾನ ಶಿಲ್ಪವಿದ್ಯಾರೂಪಿ ಯಜ್ಞಗಳ ಮಧ್ಯೆ [ಅಧ್ವರಶ್ರಿಯಮ್] ಅಹಿಂಸನೀಯವಾದ ಯಜ್ಞಗಳಲ್ಲಿಯೂ ಶೋಭಾರೂಪಿಯಾದ [ಧೂಮಕೇತುಂ] ಯಾವುದು ಧೂಮವೇ ಧ್ವಜವೋ ಅದು [ವಸುಂ] ಸಮಸ್ತ ವಿದ್ಯೆಗಳ ಮನೆ ಮತ್ತು ಬಹುಲವಾದ ಧನವನ್ನು ಪಡೆಯಲು [ಪುರುಪ್ರಿಯಮ್] ಬಹುಜನರ ಪ್ರಿಯವಾದ [ದೂತಂ] ಪದಾರ್ಥಗಳನ್ನು ದೂರಕ್ಕೆ ತಲುಪಿಸುವವನಾದ [ಅಗ್ನಿಂ] ಭೌತಿಕ ಅಗ್ನಿಯ ಸದೃಶನಾದ ವಿದ್ವಾನ್ ದೂತನನ್ನು [ವೃಣೀಮಹೇ] ಅಂಗೀಕಾರ ಮಾಡೋಣ.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, ವಿದ್ಯೆ ಅಥವಾ ರಾಜ್ಯದ ಪ್ರಾಪ್ತಿಗಾಗಿ ಸಮಸ್ತ ವಿದ್ಯೆಗಳನ್ನು ತಿಳಿಸುವ ಅಥವಾ ಎಲ್ಲ ಮಾತುಗಳಿಗೂ ಉತ್ತರ ನೀಡುವ ವಿದ್ವಾಂಸನನ್ನು ದೂರವಿರಿಸಬೇಕು ಮತ್ತು ಬಹಳ ಗುಣಗಳ ಸಂಯೋಗದಿಂದ ಬಹಳ ಕಾರ್ಯಗಳನ್ನು ಪ್ರಾಪ್ತಗೊಳಿಸುವ ವಿದ್ಯುತ್ತನ್ನು ಸ್ವೀಕರಿಸಿ ಸಮಸ್ತ ಕಾರ್ಯಗಳನ್ನು ಸಿದ್ಧಿಸಬೇಕು.

ಮತ್ತೆ ಯಾವ ಪ್ರಕಾರದಿಂದ ವಿದ್ವಾಂಸರನ್ನು ಗ್ರಹಣ ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಶ್ರೇಷ್ಠಂ ಯವಿಷ್ಠಮತಿಥಿಂ ಸ್ವಾಹುತಂ ಜುಷ್ಟಂ ಜನಾಯ ದಾಶುಷೇ ।
ದೇವಾ ಅಚ್ಛಾ ಯಾತವೇ ಜಾತವೇದಸ-ಮಗ್ನಿಮೀಳೇ ವ್ಯುಷ್ಟಿಷು ॥೪॥

ಪದಾರ್ಥ:- ನಾನು [ವ್ಯುಷ್ಟಿಷು] ವಿಶಿಷ್ಟ ರೀತಿಯಲ್ಲಿ ಒದಲು ಯೋಗ್ಯವಾದ ಕಾಮನೆಗಳಲ್ಲಿ [ಯಾತವೇ] ಪ್ರಾಪ್ತಿಯನ್ನು ಹೊಂದಲು [ದಾಶುಷೇ] ದಾತೃವೂ [ಜನಾಯ] ಧಾರ್ಮಿಕ ವಿದ್ವಾಂಸನಾದ ಮನುಷ್ಯನ ಅರ್ಥದಲ್ಲಿ ಶ್ರೇಷ್ಠನೂ, ಅತ್ಯುತ್ತಮನೂ, [ಯವಿಷ್ಠಂ] ಪರಮ ಬಲಶಾಲಿಯೂ ಆದ [ಜುಷ್ಟಂ] ವಿದ್ವಾಂಸನಾದ ಪ್ರಸನ್ನ ಅಥವಾ ಸೇವಿತನಾದ [ಸ್ವಾಹುತಂ] ಉತ್ತಮ ರೀತಿಯಿಂದ ಕರೆಯಿಸಿ, ಸತ್ಕರಿಸಲು ಯೋಗ್ಯನಾದ [ಜಾತವೇದಸಂ] ಸಮಸ್ತ ಪದಾರ್ಥಗಳಲ್ಲಿ ಯೋಗ್ಯವಾದ [ಅತಿಥಿಂ] ಸೇವೆಮಾಡಲು ಯೋಗ್ಯನಾದ [ಅಗ್ನಿಂ] ಅಗ್ನಿಯಂತಿರುವ ಸಜ್ಜನ ಅತಿಥಿಯನ್ನು ಮತ್ತು [ದೇವಾನ್] ದಿವ್ಯಗುಣಯುಕ್ತನಾದ ವಿದ್ವಾಂಸನನ್ನು [ಅಚ್ಛಾ] ಉತ್ತಮರೀತಿಯಿಂದ ಸತ್ಕರಿಸುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಅತ್ಯಂತ ಯೋಗ್ಯವಾದುದೇನೆಂದರೆ, ಉತ್ತಮ ಧರ್ಮಬಲವನ್ನುಳ್ಳ ಪ್ರಸನ್ನ ಸ್ವಭಾವ ಸಹಿತನಾದ ಎಲ್ಲ ಉಪಕಾರೀ ವಿದ್ವಾಂಸನಾದ ಮತ್ತು ಅತಿಥಿಗಳ ಸತ್ಕಾರವನ್ನು ಮಾಡುವ ವ್ಯಕ್ತಿಯಿಂದ ಸರ್ವರಿಗೂ ಹಿತಉಂಟುಮಾಡಬೇಕು.

ಪುನಃ ಎಂತಹವರನ್ನು ಸ್ವೀಕರಿಸಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಸ್ತವಿಷ್ಯಾಮಿ ತ್ವಾಮಹಂ ವಿಶ್ವಸ್ಯಾಮೃತ ಭೋಜನ ।
ಅಗ್ನೇ ತ್ರಾತಾರಮಮೃತಂ ಮಿಯೇಧ್ಯ ಯಜಿಷ್ಠಂ ಹವ್ಯವಾಹನ ॥೫॥

ಪದಾರ್ಥ:- [ಅಮೃತ] ಅವಿನಾಶ ಸ್ವರೂಪನು [ಭೋಜನ] ಪಾಲನಕರ್ತನೂ [ಮಿಯೇಧ್ಯ] ಪ್ರಮಾಣ ಮಾಡಲು [ಹವ್ಯವಾಹನ] ಕೊಡುಕೊಳ್ಳಲು ಯೋಗ್ಯವಾದ ಪದಾರ್ಥಗಳನ್ನು ಪ್ರಾಪ್ತಿಸುವವನೂ ಆದ [ಅಗ್ನೇ] ಪರಮಾತ್ಮನೇ! [ಅಹಂ] ನಾನು [ವಿಶ್ವಸ್ಯ] ಸಮಸ್ತ ಜಗತ್ತಿನ [ತ್ರಾತಾರಂ] ರಕ್ಷಕನೂ [ಯಜಿಷ್ಠಂ] ಅತ್ಯಂತ ಪೂಜನೀಯನೂ [ಅಮೃತಮ್] ಅಮೃತ ಸ್ವರೂಪನೂ ಆದ [ತ್ವಾ] ನಿನ್ನನ್ನೇ [ಸ್ತವಿಷ್ಯಾಮಿ] ಸ್ತುತಿಸುತ್ತೇನೆ.

ಭಾವಾರ್ಥ:- ವಿದ್ವಾಂಸರಿಗೆ ಯೋಗ್ಯವಾದುದೇನೆಂದರೆ, ಈ ಎಲ್ಲ ಜಗತ್ತಿನ ರಕ್ಷಕನೂ ಮೋಕ್ಷನೀಡಲು, ವಿದ್ಯೆ-ಆನಂದವನ್ನು ನೀಡಲು ಹಾಗೂ ಉಪಾಸನೆ ಮಾಡಲು ಯೋಗ್ಯನಾದ ಪರಮಾತ್ಮನನ್ನು ಬಿಟ್ಟು ಬೇರೆ ಯಾರನ್ನೂ ಈಶ್ವರಭಾವದಿಂದ ಆಶ್ರಯಿಸಬಾರದು.

ಪುನಃ ಅವನು ಹೇಗಿರುತ್ತಾನೆ, ಯಾರಿಗೆ ಏನನ್ನು ಮಾಡುತ್ತಾನೆ ಎಂಬುದನ್ನು ವಿವರಿಸಲಾಗುತ್ತದೆ.

ಸುಶಂಸೋ ಬೋಧಿ ಗೃಣತೇ ಯವಿಷ್ಠ್ಯ ಮಧುಜಿಹ್ವಃ ಸ್ವಾಹುತಃ ।
ಪ್ರಸ್ಕಣ್ವಸ್ಯ ಪ್ರತಿರನ್ನಾಯುರ್ಜೀವಸೇ ನಮಸ್ಯಾ ದೈವ್ಯಂ ಜನಮ್ ॥೬॥

ಪದಾರ್ಥ:- ಹೇ [ಯವಿಷ್ಠ್ಯ] ಅತ್ಯಂತ ಬಲಶಾಲಿಯು [ನಮಸ್ಯ] ಪೂಜಿಸಲು ಯೋಗ್ಯನಾದ ವಿದ್ವಾಂಸನೇ! [ಮಧುಜಿಹ್ವಃ] ಮಧುರ ಜ್ಞಾನರೂಪೀಃ ಜಿಹ್ವವನ್ನುಳ್ಳ [ಸುಶಂಸಃ] ಉತ್ತಮ ಸ್ಥಿತಿಯಿಂದ ಪ್ರಶಂಸಿತನಾದ [ಸ್ವಾಹುತಃ] ಸುಖದಿಂದ ಆಹ್ವಾನಿಸಲು ಯೋಗ್ಯನಾದ [ಪ್ರಸ್ಕಣ್ವಸ್ಯ] ಉತ್ತಮ ಮೇಧಾವೀ ವಿದ್ವಾಂಸನ [ಜೀವಸೇ] ಜೀವನಕ್ಕಾಗಿ [ಆಯುಃ] ಆಯುಷ್ಯವನ್ನು [ಪ್ರತಿರನ್] ದುಃಖಗಳಿಂದ ಪಾರುಗಾಣಿಸುವ ನೀನು [ಗೃಣತೇ] ಸತ್ಯದ ಸ್ತುತಿಯನ್ನು ಮಾಡುತ್ತಾ ಮನುಷ್ಯರಿಗಾಗಿ ಶಾಸ್ತ್ರದ [ಬೋಧಿ] ಬೋಧೆಯನ್ನುಂಟುಮಾಡು ಮತ್ತು ಅದರಿಂದ [ದೈವ್ಯಂ] ವಿದ್ವಾಂಸರಲ್ಲಿ ಉತ್ತಮವಾದ [ಜನಂ] ಮಾನವರ ರಕ್ಷಣೆ ಮಾಡುತ್ತೀಯೆ; ಆದುದರಿಂದ ಸತ್ಕಾರ ಯೋಗ್ಯನಾಗಿದ್ದೀಯೆ.

ಭಾವಾರ್ಥ:- ಮನುಷ್ಯರೆಲ್ಲರಿಗೂ ಉಚಿತವಾದುದೇನೆಂದರೆ, ಯಾರು ಸರ್ವೋತ್ಕೃಷ್ಟ ವಿದ್ವಾಂಸರಿದ್ದಾರೋ ಅವರ ಸತ್ಕಾರವನ್ನೇ ಮಾಡಬೇಕು. ಅದೇ ರೀತಿ ಇವರ ಈ ಉತ್ತಮ ಆಶ್ರಯವನ್ನು ಹೊಂದಿ, ಉತ್ತಮ ಆಯುಷ್ಯವನ್ನೂ, ವಿದ್ಯೆಯನ್ನೂ ಪಡೆಯಬೇಕು.

ಪುನಃ ಅವನು ಯಾವ ಪ್ರಕಾರದವನಾಗಿದ್ದಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಹೋತಾರಂ ವಿಶ್ವವೇದಸಂ ಸಂ ಹಿ ತ್ವಾ ವಿಶ ಇಂಧತೇ ।
ಸ ಆ ವಹ ಪುರುಹೂತ ಪ್ರಚೇತಸೋಽಗ್ನೇ ದೇವಾಂ ಇಹ ದ್ರವತ್ ॥೭॥

ಪದಾರ್ಥ:- ಹೇ [ಪುರುಹೂತ] ಬಹಳ ವಿದ್ವಾಂಸರಿಂದ ಕರೆಯಲ್ಪಟ್ಟ [ಅಗ್ನೇ] ವಿಶಿಷ್ಟ ಜ್ಞಾನ ಸಂಪನ್ನ ವಿದ್ವಾಂಸನೇ! [ಪ್ರಚೇತಸಃ] ಉತ್ತಮ ಜ್ಞಾನಯುಕ್ತರಾದ [ವಿಶಃ] ಪ್ರಜೆಗಳು ಯಾವ [ಹೋತಾರಂ] ಹವನ ಮಾಡುವ [ವಿಶ್ವವೇದಸಂ] ಸಮಸ್ತ ಸುಖಗಳ ಪ್ರಾಪ್ತಿಯನ್ನು ಮಾಡುವ [ತ್ವಾ] ನಿನ್ನನ್ನು [ಹಿ] ನಿಶ್ಚಯವಾಗಿ [ಸಮಿಂಧತೇ] ಉತ್ತಮ ರೀತಿಯಲ್ಲಿ ಪ್ರಕಾಶಗೊಳಿಸುತ್ತಾರೆ. [ಸಃ] ಆ ನೀನು [ಇಹ] ಈ ಯುದ್ಧ ಮೊದಲಾದ ಕರ್ಮಗಳಲ್ಲಿ ಉತ್ತಮ ಜ್ಞಾನವನ್ನುಳ್ಳ [ದೇವಾನ್] ಶೂರವೀರ ವಿದ್ವಾಂಸರನ್ನು [ಆವಹ] ಒಳ್ಳೆಯ ರೀತಿಯಿಂದ ಪ್ರಾಪ್ತನಾಗು.

ಭಾವಾರ್ಥ:- ವಿದ್ವಾಂಸರ ಸಹಾಯವಿಲ್ಲದೆ ಪ್ರಜೆಗಳು ಸುಖವನ್ನೂ, ದಿವ್ಯಗುಣಗಳ ಪ್ರಾಪ್ತಿಯನ್ನೂ, ಶತ್ರುಗಳ ವಿಜಯವನ್ನೂ ಪ್ರಾಪ್ತಮಾಡಿಕೊಳ್ಳಲಾರರು. ಆದುದರಿಂದ ಈ ಎಲ್ಲವನ್ನೂ ಮನುಷ್ಯರು ಪ್ರಯತ್ನಪೂರ್ವಕವಾಗಿ ಸಿದ್ಧಿಗೊಳಿಸಿಕೊಳ್ಳಬೇಕು.

ಪುನಃ ಅವನು ಹೇಗಿದ್ದಾನೆ ಯಾರ ಸಹಾಯದಿಂದ ಏನನ್ನು ಹೊಂದುತ್ತಾನೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಸವಿತಾರಮುಷಸಮಶ್ವಿನಾ ಭಗ-ಮಗ್ನಿಂ ವ್ಯುಷ್ಟಿಷು ಕ್ಷಪಃ ।
ಕಣ್ವಾಸಸ್ತ್ವಾ ಸುತಸೋಮಾಸ ಇಂಧತೇ ಹವ್ಯವಾಹಂ ಸ್ವಧ್ವರ ॥೮॥

ಪದಾರ್ಥ:- ಹೇ [**ಸ್ವಧ್ವರ**] ಉತ್ತಮ ಯಜ್ಞಕರ್ತನಾದ ವಿದ್ವಾಂಸ! ಯಾವ [**ಸುತಸೋಮಾಃ**] ಉತ್ತಮ ಪದಾರ್ಥಗಳನ್ನು ಸಿದ್ಧಿಸುತ್ತಾ [**ಕಣ್ವಾಸಃ**] ಮೇಧಾವಿಗಳಾದ ವಿದ್ವಾಂಸರು [**ವೃಷ್ಟಿಷು**] ಕಾಮನೆಗಳಲ್ಲಿ [**ಸವಿತಾರಂ**] ಸೂರ್ಯಪ್ರಕಾಶವನ್ನು [**ಉಷಸಂ**] ಪ್ರಾತಃಕಾಲದ [**ಅಶ್ವಿನಾ**] ವಾಯುಜಲಗಳನ್ನು [**ಕ್ಷಪಃ**] ರಾತ್ರಿ ಮತ್ತು [**ಹವ್ಯವಾಹಂ**] ಹೋಮಿಸಲು ಯೋಗ್ಯವಾದ ದ್ರವ್ಯಗಳನ್ನು [**ತ್ವಾ**] ನಿನ್ನನ್ನು [**ಸಮಿಂಧತೇ**] ಉತ್ತಮ ಪ್ರಕಾರದಿಂದ ಪ್ರಕಾಶಿತಗೊಳಿಸುತ್ತಾರೋ, ಆ ನೀನು ಅವರನ್ನು ಪ್ರಕಾಶಿತಗೊಳಿಸು.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, ಸಮಸ್ತ ಕ್ರಿಯೆಗಳಲ್ಲಿ ಹಗಲಿರುಳು ಪ್ರಯತ್ನಪೂರ್ವಕವಾಗಿ ಸೂರ್ಯಾದಿ ಪದಾರ್ಥಗಳನ್ನು ಸಂಯೋಗಮಾಡಿ ವಾಯು ವೃಷ್ಟಿಗಳನ್ನು ಶುದ್ಧಗೊಳಿಸುವ ಶಿಲ್ಪರೂಪೀ ಯಜ್ಞವನ್ನು ಪ್ರಕಾಶಗೊಳಿಸಿ ಕಾರ್ಯಗಳನ್ನು ಸಿದ್ಧಗೊಳಿಸಬೇಕು ಮತ್ತು ವಿದ್ವಾಂಸರ ಸತ್ಸಂಗದಿಂದ ಈ ಗುಣಗಳನ್ನು ಅರಿಯಬೇಕು.

ಪುನಃ ಈ ವಿದ್ವಾಂಸರು ಹೇಗಿರುತ್ತಾರೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಪತಿರ್ಹ್ಯಧ್ವರಾಣಾ-ಮಗ್ನೇ ದೂತೋ ವಿಶಾಮಸಿ ।
ಉಷರ್ಬುಧ ಆ ವಹ ಸೋಮಪೀತಯೇ ದೇವಾಁ ಅದ್ಯ ಸ್ವರ್ದೃಶಃ ॥೯॥

ಪದಾರ್ಥ:- ಹೇ [**ಅಗ್ನೇ**] ವಿದ್ವಾಂಸನೇ! ಯಾವ ನೀನು [**ಹಿ**] ನಿಶ್ಚಯವಾಗಿ [**ಅಧ್ವರಾಣಾಂ**] ಯಜ್ಞ ಮತ್ತು [**ವಿಶಾಂ**] ಪ್ರಜೆಗಳ [**ಪತಿಃ**] ಪಾಲಕನು [**ಅಸಿ**] ಆಗಿರುವೆ. ಇದರೊಂದಿಗೆ [**ಅದ್ಯ**] ಇಂದು [**ಸೋಮಪೀತಯೇ**] ಅಮೃತರೂಪೀ ರಸಗಳ ಪಾನಮಾಡುವ ವ್ಯವಹಾರಕ್ಕಾಗಿ [**ಉಷರ್ಬುಧಃ**] ಪ್ರಾತಃಕಾಲದಲ್ಲಿ ಎಚ್ಚರವಾಗುವ [**ಸ್ವರ್ದೃಶಃ**] ವಿದ್ಯಾರೂಪೀ ಸೂರ್ಯನ ಪ್ರಕಾಶದಿಂದ ಯಥಾವತ್ತಾಗಿ ನೋಡಬಲ್ಲವನಾದ [**ದೇವಾನ್**] ವಿದ್ವತ್ತನ್ನು ಅಥವಾ ದಿವ್ಯಗುಣಗಳನ್ನು [**ಆ ವಹ**] ಪ್ರಾಪ್ತಿಸು.

ಭಾವಾರ್ಥ:- ಸಭಾಸೇನಾಧ್ಯಕ್ಷಾದಿ ವಿದ್ವಾಂಸರು ವಿದ್ಯೆಯನ್ನು ಓದಿ ಪ್ರಜಾಪಾಲನಾದಿ ಯಜ್ಞಗಳ ರಕ್ಷಣೆಗಾಗಿ ಪ್ರಜೆಗಳಲ್ಲಿ ದಿವ್ಯಗುಣಗಳ ಪ್ರಕಾಶವನ್ನು ನಿತ್ಯವೂ ಮಾಡುತ್ತಿರಬೇಕು.

ಪುನಃ ಆ ವಿದ್ವಾಂಸನು ಏನಾಗಬೇಕು ಮತ್ತು ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಅಗ್ನೇ ಪೂರ್ವಾ ಅನೂಷಸೋ ವಿಭಾವಸೋ ದೀದೇಥ ವಿಶ್ವದರ್ಶತಃ ।
ಅಸಿ ಗ್ರಾಮೇಷ್ವವಿತಾ ಪುರೋಹಿತೋಽಸಿ ಯಜ್ಞೇಷು ಮಾನುಷಃ ॥೧೦॥

ಪದಾರ್ಥ:- ಹೇ [**ವಿಭಾವಸೋ**] ವಿಶೇಷ ದೀಪ್ತಿಯನ್ನು ನೆಲೆಗೊಳಿಸುವ [**ಅಗ್ನೇ**] ವಿದ್ಯೆಯನ್ನು ಹೊಂದಿರುವ ವಿದ್ವಾಂಸನೇ! [**ವಿಶ್ವದರ್ಶತಃ**] ಸಭೆಗಳಲ್ಲಿ ನೋಡಲು ಯೋಗ್ಯನಾದ ನೀನು [**ಪೂರ್ವಾಃ**] ಮೊದಲೇ ವ್ಯತೀತವಾದ [**ಅನು**] ಮತ್ತೆ [**ಉಷಸಃ**] ಬರಲಿರುವ ಮತ್ತು ವರ್ತಮಾನ ಪ್ರಭಾತ ಹಾಗೂ ರಾತ್ರಿಹಗಲುಗಳನ್ನು [**ದೀದೇಥ**] ತಿಳಿದು ಒಂದುಕ್ಷಣವೂ ವ್ಯರ್ಥಗೊಳಿಸದೆ ನೀನೇ [**ಗ್ರಾಮೇಷು**] ಮನುಷ್ಯರ ನಿವಾಸಯೋಗ್ಯವಾದ ಗ್ರಾಮಗಳಲ್ಲಿ [**ಅವಿತಾ**] ರಕ್ಷಣೆ ಮಾಡುವವನು [**ಅಸಿ**] ಆಗಿರುವೆ. ಮತ್ತು [**ಯಜ್ಞೇಷು**] ಅಶ್ವಮೇಧಾದಿ ಶಿಲ್ಪಪರ್ಯಂತ ಕ್ರಿಯೆಗಳಲ್ಲಿ [**ಮಾನುಷಃ**] ಜನಸಾಧಾರಣರ [**ಪುರೋಹಿತಃ**] ಸಮಸ್ತ ಸಾಧನಗಳ ಮೂಲಕ ಎಲ್ಲರ ಸುಖಗಳನ್ನು ಸಿದ್ಧಿಗೊಳಿಸುವವನು [**ಅಸಿ**] ಆಗಿರುವೆ.

ಭಾವಾರ್ಥ:- ವಿದ್ವಾಂಸರು ಎಲ್ಲ ದಿನಗಳಲ್ಲೂ ಒಂದು ಕ್ಷಣವನ್ನೂ ವ್ಯರ್ಥಮಾಡದೆ ಸರ್ವದಾ ಉತ್ತಮೋತ್ತಮ ಕಾರ್ಯಗಳ ಅನುಷ್ಠಾನಗಳಲ್ಲಿಯೇ ಎಲ್ಲಾ ದಿನಗಳನ್ನೂ ವಿನಿಯೋಗಿಸುತ್ತಾ ಪ್ರಜೆಗಳ ರಕ್ಷಣೆ ಮತ್ತು ಯಜ್ಞಗಳ ಅನುಷ್ಠಾನವನ್ನು ಮಾಡುವವರು ಆಗಬೇಕು.

ಪುನಃ ಆತನು ಯಾವ ಪ್ರಕಾರದವನಾಗಿರಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ನಿ ತ್ವಾ ಯಜ್ಞಸ್ಯ ಸಾಧನ-ಮಗ್ನೇ ಹೋತಾರಮೃತ್ವಿಜಮ್ ।
ಮನುಷ್ವದ್ ದೇವ ಧೀಮಹಿ ಪ್ರಚೇತಸಂ ಜೀರಂ ದೂತಮಮರ್ತ್ಯಮ್ ॥೧೧॥

ಪದಾರ್ಥ:- ಹೇ [**ದೇವ**] ದಿವ್ಯವಿದ್ಯಾ ಸಂಪನ್ನನಾದ [**ಅಗ್ನೇ**] ಭೌತಿಕ ಅಗ್ನಿಯಂತೆ ಉತ್ತಮ ಕಾರ್ಯಗಳನ್ನು ಸಂಪಾದಿಸುವ ಮೇಧಾವಿ ವಿದ್ವಾಂಸನೇ! ನಾವು [**ಯಜ್ಞಸ್ಯ**] ಮೂರು ಪ್ರಕಾರದ ಯಜ್ಞದ [**ಸಾಧನಂ**] ಮುಖ್ಯಸಾಧಕವಾದ [**ಹೋತಾರಂ**] ಹವನ ಮಾಡುವ ಅಥವಾ ಗ್ರಹಣ ಮಾಡುವ [**ಋತ್ವಿಜಂ**] ಯಜ್ಞಸಾಧಕವಾದ [**ಪ್ರಚೇತಸಂ**] ಉತ್ತಮ ವಿಜ್ಞಾನಯುಕ್ತವಾದ [**ಜೀರಂ**] ವೇಗವಾನ್, [**ಅಮರ್ತ್ಯಂ**] ಸಾಧಾರಣ ಮನುಷ್ಯಸ್ವಭಾವದಿಂದ ರಹಿತನಾದ ಮತ್ತು ಸ್ವರೂಪದಿಂದ ನಿತ್ಯನಾದ [**ದೂತಂ**] ಪ್ರಶಂಸನೀಯ ಬುದ್ಧಿಯುಕ್ತ ಮತ್ತು ಪದಾರ್ಥಗಳನ್ನು ದೇಶ ದೇಶಾಂತರಗಳಲ್ಲಿ ಪ್ರಾಪ್ತಗೊಳಿಸುವ [**ತ್ವಾ**] ನಿನ್ನನ್ನು [**ಮನುಷ್ವತ್**] ಮನನಶೀಲನಾದವನ ಸಮಾನವಾಗಿ [**ನಿ ಧೀಮಹಿ**] ನಿರಂತರವಾಗಿ ಧಾರಣೆ ಮಾಡೋಣ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮತ್ತು ೮ನೇ ಮಂತ್ರದಿಂದ ಸುತಸೋಮಾಃ ಮತ್ತು ಕಣ್ವಾಸಃ ಈ ಎರಡು ಪದಗಳ ಅನುವೃತ್ತಿ ಇದೆ. ವಿದ್ವಾಂಸನು ಅಗ್ನಿ ಮೊದಲಾದ ಸಾಧನ ಹಾಗೂ ದ್ರವ್ಯ ಮೊದಲಾದ ಸಾಮಗ್ರಿಗಳಿಲ್ಲದೆ ಯಜ್ಞದ ಸಿದ್ಧಿಯನ್ನು ಮಾಡಲಾರನು.

ಮತ್ತೆ ಅವನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗುತ್ತದೆ.

ಯದ್ ದೇವಾನಾಂ ಮಿತ್ರಮಹಃ ಪುರೋಹಿತೋಽಂತರೋ ಯಾಸಿ ದೂತ್ಯಮ್ ।
ಸಿಂಧೋರಿವ ಪ್ರಸ್ವನಿತಾಸ ಊರ್ಮಯೋಽಗ್ನೇರ್ಭ್ರಾಜಂತೇ ಅರ್ಚಯಃ ॥೧೨॥

ಪದಾರ್ಥ:- ಹೇ [**ಮಿತ್ರಮಹಃ**] ಮಿತ್ರರಲ್ಲಿ ಹಿರಿಯನೂ, ಪೂಜನೀಯನೂ ಆದ ವಿದ್ವಾಂಸನೇ! ನೀನು ಮಧ್ಯಸ್ಥನಾಗಿ [**ದೂತ್ಯಮ್**] ದೂತಕರ್ಮವನ್ನು [**ಯಾಸಿ**] ಪ್ರಾಪ್ತಗೊಳಿಸುತ್ತೀಯೆ. ಯಾವ [**ಅಗ್ನೇಃ**] ಆತ್ಮದ [**ಸಿಂಧೋರಿವ**] ಸಮುದ್ರದಂತಹ [**ಪ್ರಸ್ವನಿತಾಸಃ**] ಶಬ್ದ ಮಾಡುತ್ತಿರುವ [**ಊರ್ಮಯಃ**] ಅಲೆಗಳು [**ಅಗ್ನೇಃ**] ಅಗ್ನಿಯ [**ಅರ್ಚಯಃ**] ದೀಪ್ತಿಗಳನ್ನು [**ಭ್ರಾಜಂತೇ**] ಪ್ರಕಾಶಿತಗೊಳಿಸುತ್ತವೆಯೋ [**ಪುರೋಹಿತಃ**] ಪುರೋಹಿತ ಹಾಗೂ [**ಅಂತರಃ**] ಮಧ್ಯಸ್ಥನಾಗಿ ಇದ್ದುಕೊಂಡು [**ದೇವಾನಾಂ**] ವಿದ್ವಾಂಸರ [**ದೂತ್ಯಮ್**] ದೂತನ ಸ್ವಭಾವವನ್ನು [**ಯಾಸಿ**] ಪ್ರಾಪ್ತಿಸುತ್ತೀಯೋ ಅದರಿಂದ ನೀನು ನಮ್ಮ ಸತ್ಕಾರಯೋಗ್ಯನು ಏಕೆ ತಾನೇ ಆಗಲಾರೆ?

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮನುಷ್ಯರೇ! ಯಾವ ರೀತಿ ಪರಮಾತ್ಮನು ಎಲ್ಲರ ಮಿತ್ರನೂ, ಪೂಜನೀಯನೂ, ಪುರೋಹಿತನೂ, ಅಂತರ್ಯಾಮಿಯೂ ಆಗಿ ದೂತನಂತೆ ಸತ್ಯಾಸತ್ಯಕರ್ಮಗಳ ಪ್ರಕಾಶವನ್ನು ಮಾಡುತ್ತಾನೋ, ಯಾವ ರೀತಿ ಈಶ್ವರನ ಅನಂತ ದೀಪ್ತಿಗಳು ವಿಹರಿಸುತ್ತವೆಯೋ, ಯಾವ ಈಶ್ವರನು ಸಮಸ್ತರ ಧಾತೃವೂ, ರಚಯಿತನೂ, ಪಾಲನಕರ್ತನೂ, ನ್ಯಾಯಕಾರಿಯೂ ಆಗಿರುವುದರಿಂದ ಉಪಾಸನಾಯೋಗ್ಯನಾಗಿದ್ದಾನೋ ಅದೇ ರೀತಿ ಉತ್ತಮ ದೂತರಾದ ರಾಜಪುರುಷರೂ ಸಹ ಮಾನನೀಯರಾಗುತ್ತಾರೆ.

ಪುನಃ ಆ ವಿದ್ವಾಂಸರು ಹೇಗಿರುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ಶ್ರುಧಿ ಶ್ರುತ್ಕರ್ಣ ವಹ್ನಿಭಿ-ರ್ದೇವೈರಗ್ನೇ ಸಯಾವಭಿಃ । ಆ ಸೀದಂತು ಬರ್ಹಿಷಿ ಮಿತ್ರೋ
ಅರ್ಯಮಾ ಪ್ರಾತರ್ಯಾವಾಣೋ ಅಧ್ವರಮ್ ॥೧೩॥

ಪದಾರ್ಥ:- ಹೇ **[ಶ್ರುತ್ಕರ್ಣ]** ಶ್ರವಣಯೋಗ್ಯನಾದ **[ಅಗ್ನೇ]** ವಿದ್ಯಾಪ್ರಕಾಶಕ ವಿದ್ವಾಂಸನೇ! ನೀನು ಪ್ರೀತಿಯೊಂದಿಗೆ **[ಸಯಾವಭಿಃ]** ಸಮಾನರೆಂದು ತಿಳಿಯುವ **[ವಹ್ನಿಭಿಃ]** ಸತ್ಯಾಚಾರದ ಭಾರವನ್ನು ಧಾರಣೆ ಮಾಡುವ ಮನುಷ್ಯ ಮೊದಲಾದ **[ದೇವೈಃ]** ವಿದ್ವಾಂಸರ ಮತ್ತು ದಿವ್ಯಗುಣಗಳ ಸಹಿತ ನಮ್ಮ ಮಾತುಕತೆಗಳನ್ನು **[ಶ್ರುಧಿ]** ಆಲಿಸು. ನೀನು ಮತ್ತು ನಾವುಗಳು **[ಮಿತ್ರಃ]** ಸಕಲಹಿತಕಾರೀ **[ಅರ್ಯಮಾ]** ನ್ಯಾಯಾಧೀಶನಾದ **[ಪ್ರಾತರ್ಯಾವಾಣಃ]** ಪ್ರತಿನಿತ್ಯವೂ ಪುರುಷಾರ್ಥದಿಂದ ಯುಕ್ತರಾದ **[ಸರ್ವೇ]** ಎಲ್ಲಾ **[ಅಧ್ವರಂ]** ಅಹಿಂಸನೀಯವಾದ ಮೊದಲೇ ಹೇಳಿದ ಯಜ್ಞವನ್ನು ಪ್ರಾಪ್ತನಾಗಿ **[ಬರ್ಹಿಷಿಃ]** ಉತ್ತಮ ವ್ಯವಹಾರದಲ್ಲಿ **[ಆಸೀದಂತು]** ಜ್ಞಾನವನ್ನು ಪ್ರಾಪ್ತಿಸೋಣ ಅಥವಾ ಸ್ಥಿತರಾಗೋಣ.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, ಸಮಸ್ತ ವಿದ್ವಾಂಸರು ಆಲಿಸಿದ ಧಾರ್ಮಿಕ ಮನುಷ್ಯರ ವ್ಯವಹಾರದಲ್ಲಿ ವಿಶೇಷ ಪ್ರೀತಿಯನ್ನಿರಿಸಿ ವಿದ್ವಾಂಸರಾದವರು ಶಿಕ್ಷಣದಿಂದ ಯುಕ್ತರಾದ ಭೃತ್ಯರಿಂದ ಸಮಸ್ತಕಾರ್ಯಗಳನ್ನು ಸಿದ್ಧಿಗೊಳಿಸುತ್ತಾ ಸರ್ವದಾ ಆಲಸ್ಯವನ್ನು ತ್ಯಜಿಸಿ ನಿರಂತರ ಪುರುಷಾರ್ಥದಲ್ಲಿ ತೊಡಗಬೇಕು. ಇದಿಲ್ಲದೆ ವ್ಯವಹಾರವಾಗಲೀ ಪರಮಾರ್ಥವಾಗಲೀ ಸಿದ್ಧಿಸುವುದಿಲ್ಲ.

ಪುನಃ ಅವರು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ಶೃಣ್ವಂತು ಸ್ತೋಮಂ ಮರುತಃ ಸುದಾನವೋಽಗ್ನಿಜಿಹ್ವಾ ಋತಾವೃಧಃ ।
ಪಿಬತು ಸೋಮಂ ವರುಣೋ ಧೃತವ್ರತೋಽಶ್ವಿಭ್ಯಾಮುಷಸಾ ಸಜೂಃ ॥೧೪॥

ಪದಾರ್ಥ:- ಹೇ ಮನುಷ್ಯರೇ! **[ಅಗ್ನಿಜಿಹ್ವಾಃ]** ಅಗ್ನಿಯಂತೆ ಶಬ್ದವಿದ್ಯೆಯಿಂದ ಪ್ರಕಾಶಿತವಾದ ಜಿಹ್ವೆಯನ್ನುಳ್ಳವರಾರೋ ಅವರು **[ಋತಾವೃಧಃ]** ಸತ್ಯವನ್ನು ವೃದ್ಧಿಸುವವರು **[ಸುದಾನವಃ]** ಉತ್ತಮ ದಾನಶೀಲರು ಆದ **[ಮರುತಃ]** ವಿದ್ವಾಂಸರೇ! ನೀವು ನಮ್ಮ **[ಸ್ತೋಮಂ]** ಸ್ತುತಿ ಅಥವಾ ನ್ಯಾಯ ಪ್ರಕಾಶವನ್ನು **[ಶೃಣ್ವಂತು]** ಆಲಿಸಿರಿ. ಅದೇ ರೀತಿ ಪ್ರತಿಯೊಬ್ಬರೂ **[ಸಜೂಃ]** ಸಮಾನವಾದ ಸೇವನೆಯೊಂದಿಗೆ **[ವರುಣಃ]** ಶ್ರೇಷ್ಠವಾದ **[ಧೃತವ್ರತಃ]** ಸತ್ಯವ್ರತದ ಧಾರಣೆ ಮಾಡುವ ಎಲ್ಲಾ ಮಾನವರು **[ಉಷಸಾ]** ಪ್ರಭಾತದಲ್ಲಿ **[ಅಶ್ವಿಭ್ಯಾಂ]** ವ್ಯಾಪ್ತಿಶೀಲ ಸಭಾ ಸೇನಾ ಶಾಲಾ ಧರ್ಮಾಧ್ಯಕ್ಷ ಅಧ್ವರ್ಯುಗಳೊಂದಿಗೆ **[ಸೋಮಂ]** ಪದಾರ್ಥವಿದ್ಯೆಯಿಂದ ಉತ್ಪನ್ನವಾದ ಆನಂದರೂಪೀ ರಸವನ್ನು **[ಪಿಬತು]** ಕುಡಿಯಿರಿ.

ಭಾವಾರ್ಥ:- ಯಾವ ವಿದ್ಯೆಯು ಧರ್ಮ ಅಥವಾ ರಾಜಸಭೆಗಳಿಂದ ಅಜ್ಞೆಯನ್ನು ಪ್ರಕಾಶಿತಗೊಳಿಸುತ್ತದೆಯೋ ಅದನ್ನು ಎಲ್ಲರೂ ಶ್ರವಣ ಮಾಡಿ ಅನುಷ್ಠಾನ ಮಾಡಬೇಕು. ಯಾರು ಸಭಾಸದರಿದ್ದಾರೋ ಅವರೂ ಸಹ ಪಕ್ಷಪಾತವನ್ನು ತ್ಯಜಿಸಿ ಪ್ರತಿದಿನವೂ ಎಲ್ಲರ ಹಿತಕ್ಕಾಗಿ ಎಲ್ಲರೂ ಸೇರಿ ಅವಿದ್ಯೆ, ಅಧರ್ಮ, ಅನ್ಯಾಯಗಳ ನಾಶವನ್ನು ಮಾಡುವ ಯತ್ನ ಮಾಡಬೇಕು.

ಈ ಸೂಕ್ತದಲ್ಲಿ ಧರ್ಮದ ಪ್ರಾಪ್ತಿ, ಸಮಸ್ತ ವಿದ್ಯೆಗಳ ಶ್ರವಣ, ಉತ್ತಮ ಶ್ರೀಯ ಪ್ರಾಪ್ತಿ, ಶ್ರೇಷ್ಠರ ಸಂಗ, ಸ್ತುತಿ ಮತ್ತು ಸತ್ಕಾರ ಪದಾರ್ಥವಿದ್ಯೆಗಳ ಸಭಾಧ್ಯಕ್ಷರ ದೂತ ಹಾಗೂ ಯಜ್ಞಾನುಷ್ಠಾನ, ಮಿತ್ರಾದಿಗಳ ಗ್ರಹಣ, ಪರಸ್ಪರ ಸೇರಿ ಮಾಡಬೇಕಾದ ಕಾರ್ಯಗಳ ಸಿದ್ಧಿ, ಉತ್ತಮ ವ್ಯವಹಾರಗಳಲ್ಲಿ ಸ್ಥಿತಿ, ಪರಸ್ಪರ ವಿದ್ಯಾಧರ್ಮ ರಾಜಸಭೆಗಳ ಆಜ್ಞಾಪಾಲನೆ ಇವುಗಳ ಬಗೆಗೆ ಹೇಳಲಾಗಿದೆ. ಆದುದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ನಲವತ್ತನಾಲ್ಕನೆಯ ಸೂಕ್ತ ಸಮಾಪ್ತ

ಸೂಕ್ತ ೪೫

ಮಂತ್ರಸಂಖ್ಯೆ ೧೦ । ಋಷಿಃ - ಪ್ರಸ್ಕಣ್ವಃ ಕಾಣ್ವಃ । ದೇವತಾ - ಅಗ್ನಿಃ, ೧೦ (ಉತ್ತರಾರ್ಧಸ್ಯ) ದೇವಾಃ । ಛಂದಃ - ೧, ಭುರಿಗುಷ್ಣಿಕ್, ೫ ಉಷ್ಣಿಕ್ ೨, ೩, ೭, ೮ ಅನುಷ್ಟುಪ್, ೪ ನಿಚೃದನುಷ್ಟುಪ್, ೬, ೯, ೧೦, ವಿರಾಡನುಷ್ಟುಪ್ ।

ಸ್ವರಃ- ವೃಷಭಃ, ಗಾಂಧಾರಃ.

ಈಸೂಕ್ತದ ಮೊದಲ ಮಂತ್ರದಲ್ಲಿ ವಿದ್ಯುತ್ತಿನ ದೃಷ್ಟಾಂತದಿಂದ ವಿದ್ವಾಂಸನ ಗುಣಗಳನ್ನು ವರ್ಣಿಸಲಾಗಿದೆ.

ತ್ವಮಗ್ನೇ ವಸೂँರಿಹ ರುದ್ರಾँ ಆದಿತ್ಯಾ ಉತ ।
ಯಜಾ ಸ್ವಧ್ವರಂ ಜನಂ ಮನುಜಾತಂ ಘೃತಪ್ರುಷಮ್ ॥೧॥

ಪದಾರ್ಥ:- ಹೇ **[ಅಗ್ನೇ]** ವಿದ್ಯುತ್ತಿನಂತಿರುವ ವಿದ್ವಾಂಸನೇ! ನೀನು **[ಇಹ]** ಈ ಪ್ರಪಂಚದಲ್ಲಿ **[ವಸೂನ್]** ೨೪ ವರ್ಷಗಳ ಕಾಲ ಬ್ರಹ್ಮಚರ್ಯೆಯಿಂದ ವಿದ್ಯೆಯನ್ನು ಪ್ರಾಪ್ತಿಸಿರುವ ಯಾವ ಪಂಡಿತರಿದ್ದಾರೋ ಅವರು, **[ರುದ್ರಾನ್]** ಯಾರು ೪೪ ವರ್ಷಗಳ ಕಾಲ ಬ್ರಹ್ಮಚರ್ಯೆಯಿಂದ ವಿದ್ಯೆಯನ್ನು ಪ್ರಾಪ್ತಿಸಿರುವ ಪಂಡಿತರಿದ್ದಾರೋ ಅವರು, **[ಆದಿತ್ಯಾನ್]** ಯಾರು ೪೮ ವರ್ಷಗಳ ಕಾಲ ಬ್ರಹ್ಮಚರ್ಯೆಯಿಂದ ವಿದ್ಯೆಯನ್ನು ಪ್ರಾಪ್ತಿಸಿದ ಮಹಾ ವಿದ್ವಾಂಸರಿದ್ದಾರೋ **[ಉತ]** ಮತ್ತು **[ಘೃತಪ್ರುಷಮ್]** ಯಜ್ಞದಿಂದ ಸಿದ್ಧಗೊಳಿಸಲ್ಪಟ್ಟ ಘೃತದಿಂದ ಸಿಂಚನ ಮಾಡಿದವರಾದ **[ಮನುಜಾತಂ]** ಮನನಶೀಲ ಮನುಷ್ಯರಿಂದ ಉತ್ಪನ್ನವಾದ **[ಸ್ವಧ್ವರಂ]** ಉತ್ತಮ ಯಜ್ಞವನ್ನು ಸಿದ್ಧಗೊಳಿಸುವ **[ಜನಂ]** ಪುರುಷಾರ್ಥಿ ಮನುಷ್ಯರನ್ನು **[ಯಜ]** ಸಮಾಗಮಗೊಳಿಸು.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ತಮ್ಮ ಪುತ್ರರನ್ನು ಕನಿಷ್ಠ ೨೪ ವರ್ಷಗಳವರೆಗೆ ಮತ್ತು ಹೆಚ್ಚೆಂದರೆ ೪೮ ವರ್ಷಗಳ ವರೆಗೆ ಮತ್ತು ಕನ್ಯೆಯರನ್ನು ಕನಿಷ್ಠ ೧೬ ವರ್ಷಗಳ ವರೆಗೆ ಮತ್ತು ಅಧಿಕಾಧಿಕ ವರ್ಷವೆಂದರೆ ೨೪ ವರ್ಷಗಳ ವರೆಗೆ ಬ್ರಹ್ಮಚರ್ಯೆ ಪಾಲಿಸುವಂತೆ ಮಾಡಬೇಕು. ಇದರಿಂದ ಅವರು ಯೋಗ್ಯ ವಿದ್ಯೆಯನ್ನು ಸುಶಿಕ್ಷಣವನ್ನು ಹೊಂದಿ ಪರಸ್ಪರರನ್ನು ಪರೀಕ್ಷಿಸಿ ಪ್ರೀತಿಪೂರ್ವಕವಾಗಿ ವಿವಾಹ ಮಾಡಿಕೊಂಡು ಸುಖಿಗಳಾಗಲಿ.

ಪುನಃ ಅವರು ಏನನ್ನು ಮಾಡಬೇಕು ಎಂಬುದನ್ನು ಕುರಿತು ಹೇಳಲಾಗುತ್ತದೆ.

ಶ್ರುಷ್ಟೀವಾನೋ ಹಿ ದಾಶುಷೇ ದೇವಾ ಅಗ್ನೇ ವಿಚೇತಸಃ ।
ತಾನ್ ರೋಹಿದಶ್ವ ಗಿರ್ವಣ-ಸ್ತ್ರಯಸ್ತ್ರಿಂಶತಮಾ ವಹ ॥೨॥

ಪದಾರ್ಥ:- ಹೇ **[ರೋಹಿದಶ್ವ]** ವೇಗಾದಿ ಗುಣಯುಕ್ತ **[ಗಿರ್ವಣಃ]** ವಾಣಿಗಳಿಂದ ಸೇವಿತನಾದ **[ಅಗ್ನೇ]** ವಿದ್ವಾಂಸನೇ! **[ತ್ವಂ]** ನೀನು ಈ ಪ್ರಪಂಚದಲ್ಲಿ ಯಾವ **[ವಿಚೇತಸಃ]** ನಾನಾಪ್ರಕಾರದ ಜ್ಞಾನಯುಕ್ತವಾದ **[ಶ್ರುಷ್ಟೀವಾನಃ]** ಯಥಾರ್ಥ ವಿದ್ಯೆಯ ಸೇವನೆ ಮಾಡುವ **[ದೇವಾಃ]** ದಿವ್ಯಗುಣಯುಕ್ತ ವಿದ್ವಾಂಸರು **[ದಾಶುಷೇ]** ದಾನಶೀಲ ಪುರುಷಾರ್ಥೀ ಮನುಷ್ಯನಿಗಾಗಿ ಸುಖವನ್ನು ನೀಡುತ್ತಾರೆ. **[ತಾನ್]** ಆ **[ಸ್ತ್ರಯಸ್ತ್ರಿಂಶತಂ]** ಭೂಮಿ ಮೊದಲಾದ ೩೩ ದಿವ್ಯಗುಣಗಳನ್ನುಳ್ಳವರನ್ನು **[ಹಿ]** ನಿಶ್ಚಯವಾಗಿ **[ಆವಹ]** ಪ್ರಾಪ್ತಿಸಿಕೊಳ್ಳಿರಿ.

ಭಾವಾರ್ಥ:- ಯಾವಾಗ ವಿದ್ವಾಂಸರಾದವರು ವಿದ್ಯಾರ್ಥಿಗಳಿಗೆ ೩೩ ದೇವತೆಗಳ ಎಂದರೆ ಪೃಥ್ವೀ ಆದಿ ೩೩ ಪದಾರ್ಥಗಳ ವಿದ್ಯೆಯನ್ನು ಉತ್ತಮ ರೀತಿಯಿಂದ ಸಾಕ್ಷಾತ್ಕಾರಗೊಳಿಸುತ್ತಾರೋ, ಆಗ ಅವರು ವಿದ್ಯುತ್ ಮೊದಲಾದ ಅನೇಕ ಪದಾರ್ಥಗಳಿಂದ ಉತ್ತಮೋತ್ತಮ ವ್ಯವಹಾರಗಳನ್ನು ಸಿದ್ಧಿಸಿಕೊಳ್ಳುತ್ತಾರೆ.

ಪುನಃ ಅವರು ಏನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಪ್ರಿಯಮೇಧವದತ್ರಿವ-ಜ್ಜಾತವೇದೋ ವಿರೂಪವತ್ ।
ಅಂಗಿರಸ್ವನ್ಮಹಿವ್ರತ ಪ್ರಸ್ಕಣ್ವಸ್ಯ ಶ್ರುಧೀ ಹವಮ್ ॥೩॥

ಪದಾರ್ಥ:- ಹೇ **[ಜಾತವೇದಃ]** ಉತ್ಪನ್ನವಾದ ಪದಾರ್ಥಗಳೆಲ್ಲವನ್ನೂ ತಿಳಿಯುವವನಾದ **[ಮಹಿವ್ರತಃ]** ಮಹಾನ್ ವ್ರತಯುಕ್ತ ವಿದ್ವಾಂಸನೇ! ನೀನು **[ಪ್ರಿಯಮೇಧವತ್]** ವಿದ್ಯಾಪ್ರಿಯವಾದ ಬುದ್ಧಿಯನ್ನುಳ್ಳವರಂತೆ **[ಅತ್ರಿವತ್]** ಮೂರು ಅರ್ಥಾತ್ ಶರೀರ, ಅನ್ನ-ಪ್ರಾಣ ಮತ್ತು ಮನಸ್ಸೇ ಮೊದಲಾದ ಇಂದ್ರಿಯಗಳ ದುಃಖಗಳಿಂದ ರಹಿತರಾದವರ ಸಮಾನವಾಗಿ **[ವಿರೂಪವತ್]** ಅನೇಕ ಪ್ರಕಾರದ ರೂಪವುಳ್ಳವರಂತೆ **[ಅಂಗಿರಸ್ವತ್]** ಅಂಗಗಳ ರಸರೂಪ ಪ್ರಾಣಗಳಂತೆ **[ಪ್ರಸ್ಕಣ್ವಸ್ಯ]** ಉತ್ತಮ ಮೇಧಾವೀ ಮನುಷ್ಯನು **[ಹವಂ]** ಕೊಡುಕೊಳ್ಳುವ, ಓದುವ-ಓದಿಸುವ ಯೋಗ್ಯ ವ್ಯವಹಾರವನ್ನು **[ಶ್ರುಧೀ]** ಶ್ರವಣ ಮಾಡುವವನಾಗು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮಾನವರೇ! ಯಾವ ರೀತಿ ಎಲ್ಲರಿಗೂ ಪ್ರಿಯವಾದುದನ್ನು ಮಾಡುವ ವಿದ್ವಾಂಸರು ಶರೀರ, ವಾಣಿ ಮತ್ತು ಮನಸ್ಸಿನ ದೋಷಗಳಿಂದ ರಹಿತವಾದ ನಾನಾ ವಿದ್ಯೆಗಳನ್ನು ಪ್ರತ್ಯಕ್ಷಗೊಳಿಸುವ ಮತ್ತು ತಮ್ಮ ಪ್ರಾಣಕ್ಕೆ ಸಮಾನವಾಗಿ ಎಲ್ಲರನ್ನೂ ತಿಳಿಯುವ ವಿದ್ವಾಂಸರು ಮನುಷ್ಯರ ಪ್ರಿಯಕಾರ್ಯಗಳನ್ನು ಸಿದ್ಧಪಡಿಸುತ್ತಾರೆ. ಮತ್ತು ಯಾವ ರೀತಿ ಓದಿಸಲ್ಪಟ್ಟ ಬುದ್ಧಿವಂತ ವಿದ್ಯಾರ್ಥಿಯೂ ಸಹ ಬಹಳ ಉತ್ತಮೋತ್ತಮ ಕಾರ್ಯವನ್ನು ಸಿದ್ಧಿಗೊಳಿಸುತ್ತಾನೋ ಹಾಗೆಯೇ ನೀವೂ ಸಹ ಮಾಡಿರಿ.

ಪುನಃ ವಿದ್ವಾಂಸರು ಅವರನ್ನು ಯಾವುದಕ್ಕಾಗಿ ಪ್ರೇರಿಸಬೇಕು ಎಂಬುದನ್ನು ತಿಳಿಸಲಾಗಿದೆ.

ಮಹಿಕೇರವ ಊತಯೇ ಪ್ರಿಯಮೇಧಾ ಅಹೂಷತ ।
ರಾಜಂತಮಧ್ವರಾಣಾ-ಮಗ್ನಿಂ ಶುಕ್ರೇಣ ಶೋಚಿಷಾ ॥೪॥

ಪದಾರ್ಥ:- ಹೇ ಮಹಾವಿದ್ವಾಂಸರೇ! **[ಮಹಿಕೇರವಃ]** ಯಾರು ದೊಡ್ಡ ದೊಡ್ಡ ಶಿಲ್ಪವಿದ್ಯೆಯನ್ನು ಸಿದ್ಧಮಾಡುವವರಾದ ಕುಶಲ ಕರ್ಮಿಗಳಿದ್ದಾರೋ ಅಂತಹ **[ಪ್ರಿಯಮೇಧಾಃ]** ಸತ್ಯವಿದ್ಯೆ ಮತ್ತು ಶಿಕ್ಷಣವನ್ನು ಪ್ರಾಪ್ತಿಗೊಳಿಸಿಕೊಳ್ಳುವ ಮೇಧಾಬುದ್ಧಿಯುಕ್ತ ನೀವುಗಳು **[ಅಧ್ವರಾಣಾಂ]** ಪಾಲನೀಯವಾದ ವ್ಯವಹಾರರೂಪೀ ಕರ್ಮಗಳ **[ಊತಯೇ]** ರಕ್ಷಣೆ ಮೊದಲಾದವುಗಳಿಗೆ **[ಶುಕ್ರೇಣ]** ಶುದ್ಧ ಶೀಘ್ರಕಾರಕವಾದ **[ಶೋಚಿಷಾ]** ತೇಜಸ್ಸಿನಿಂದ **[ರಾಜಂತಂ]** ಪ್ರಕಾಶಮಾನವಾದ **[ಅಗ್ನಿಂ]** ಪ್ರಸಿದ್ಧವಾದ ವಿದ್ಯುತ್‌ರೂಪೀ ಅಗ್ನಿಯಂತಿರುವ ಸಭಾಪತಿಯನ್ನು **[ಅಹೂಷತ]** ಉಪದೇಶ ಅಥವಾ ಅವನಿಂದ ಶ್ರವಣವನ್ನು ಮಾಡಿರಿ.

ಭಾವಾರ್ಥ:- ಯಾವುದೇ ಮನುಷ್ಯನು ಧಾರ್ಮಿಕ ಬುದ್ಧಿಶಾಲಿಗಳ ಸಂಗವಿಲ್ಲದೆ ಉತ್ತಮೋತ್ತಮ ವ್ಯವಹಾರ ಸಿದ್ಧಿಯನ್ನು ಮಾಡಲು ಸಮರ್ಥನಾಗಲಾರನು. ಇದರಿಂದ ಎಲ್ಲರಿಗೂ ಯೋಗ್ಯವಾದುದೇನೆಂದರೆ, ಇವರ ಸಂಗದಿಂದ ಈ ವಿದ್ಯೆಯನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳಬೇಕು.

ಪುನಃ ಅವರು ಯಾರಿಂದ ತಿಳಿಯಲು ಸಮರ್ಥರಾಗುತ್ತಾರೆ ಎಂಬುದನ್ನು ಹೇಳಲಾಗಿದೆ.

ಘೃತಾಹವನ ಸನ್ತ್ಯೇ-ಮಾ ಉ ಷು ಶ್ರುಧೀ ಗಿರಃ ।
ಯಾಭಿಃ ಕಣ್ವಸ್ಯ ಸೂನವೋ ಹವಂತೇಽವಸೇ ತ್ವಾ ॥೫॥

ಪದಾರ್ಥ:- ಹೇ **[ಸನ್ತ್ಯಾ]** ಸುಖದ ಕ್ರಿಯೆಗಳಲ್ಲಿ ಕುಶಲನಾದ **[ಘೃತಾಹವನ]** ತುಪ್ಪವನ್ನು ಉತ್ತಮರೀತಿಯಲ್ಲಿ ಗ್ರಹಣ ಮಾಡಬಲ್ಲ ವಿದ್ವಾನ್ ಮನುಷ್ಯನೇ! ಯಾವ ರೀತಿ **[ಕಣ್ವಸ್ಯ]** ಮೇಧಾವೀ ವಿದ್ವಾಂಸನ **[ಸೂನವಃ]** ಪುತ್ರರಂತಿರುವ ವಿದ್ಯಾರ್ಥಿಗಳು **[ಅವಸೇ]** ರಕ್ಷಣೆ ಮೊದಲಾದವುಗಳಿಗಾಗಿ **[ಯಾಭಿಃ]** ಯಾವ ವೇದವಾಣಿಗಳಿಂದ **[ತ್ವಾ]** ನಿನ್ನನ್ನು **[ಹವಂತೇ]** ಗ್ರಹಣ ಮಾಡುತ್ತಾರೋ ಆ ನೀನು **[ಉ]** ಸಹ ಅವರ **[ಇಮಾ]** ಈ ಪ್ರತ್ಯಕ್ಷ ಕಾರಕವಾದ **[ಗಿರಃ]** ವಾಣಿಗಳನ್ನು **[ಸು ಶ್ರುಧೀ]** ಉತ್ತಮ ರೀತಿಯಲ್ಲಿ ಆಲಿಸು ಮತ್ತು ಗ್ರಹಣ ಮಾಡು.

ಭಾವಾರ್ಥ:- ಯಾವ ಮನುಷ್ಯರು ಈ ಪ್ರಪಂಚದಲ್ಲಿ ವಿದುಷೀ ಮಾತೆ, ವಿದ್ವಾಂಸನಾದ ತಂದೆ, ಹಾಗೂ ಎಲ್ಲದಕ್ಕೂ ಉತ್ತರ ನೀಡಬಲ್ಲ ಆಚಾರ್ಯ ಮೊದಲಾದವರಿಂದ ಶಿಕ್ಷಣ ಹಾಗೂ ವಿದ್ಯೆಯನ್ನು ಗ್ರಹಣ ಮಾಡಿ ಪರಮಾರ್ಥ ಮತ್ತು ವ್ಯವಹಾರವನ್ನು ಸಿದ್ಧಿಸಿ ವಿಜ್ಞಾನ ಮತ್ತು ಶಿಲ್ಪಕಲೆಯನ್ನು ಮಾಡುವುದರಲ್ಲಿ ಪ್ರವೃತ್ತರಾಗುತ್ತಾರೋ ಅವರು ಎಲ್ಲ ಸುಖಗಳನ್ನು ಹೊಂದುತ್ತಾರೆ, ಆಲಸಿಗಳಲ್ಲ.

ಪುನಃ ಅದನ್ನು ಯಾವ ರೀತಿ ಗ್ರಹಿಸಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ತ್ವಾಂ ಚಿತ್ರಶ್ರವಸ್ತಮ ಹವಂತೇ ವಿಕ್ಷು ಜಂತವಃ ।
ಶೋಚಿಷ್ಕೇಶಂ ಪುರುಪ್ರಿಯಾ-ಗ್ನೇ ಹವ್ಯಾಯ ವೋಳ್ಹವೇ ॥೬॥

ಪದಾರ್ಥ:- ಹೇ **[ಚಿತ್ರಶ್ರವಸ್ತಮ]** ಅತ್ಯಂತ ಅದ್ಭುತವಾದ ಅನ್ನ ಹಾಗೂ ಶ್ರವಣಗಳಿಂದ ವ್ಯುತ್ಪನ್ನವಾದ **[ಪುರುಪ್ರಿಯಾ]** ಬಹು ಜನರನ್ನು ತೃಪ್ತಗೊಳಿಸುವವನಾದ **[ಅಗ್ನೇ]** ವಿದ್ಯುತ್ತಿನಂತೆ ವಿದ್ಯೆಗಳಲ್ಲಿ ವ್ಯಾಪಕತೆಯನ್ನು ಪಡೆದ ವಿದ್ವಾಂಸನೇ! ಯಾವ **[ಜಂತವಃ]** ಜನರು **[ವಿಕ್ಷು]** ಪ್ರಜೆಗಳಲ್ಲಿ **[ವೋಳ್ಹವೇ]** ವಿದ್ಯಾಪ್ರಾಪ್ತಿಯನ್ನು ಮಾಡುವ **[ಹವ್ಯಾಯ]** ಗ್ರಹಣಮಾಡಲು ಯೋಗ್ಯವಾದ ಪಠನಪಾಠನ ರೂಪೀ ಯಜ್ಞಕ್ಕಾಗಿ **[ಶೋಚಿಷ್ಕೇಶಂ]** ಯಾವ ಪವಿತ್ರ ಆಚರಣೆಯಿದೆಯೋ ಆ **[ತ್ವಾಂ]** ನಿನ್ನನ್ನು **[ಹವಂತೇ]** ಗ್ರಹಣ ಮಾಡುತ್ತಾರೋ ಅವರನ್ನು ವಿದ್ಯೆ ಮತ್ತು ಶಿಕ್ಷಣವನ್ನು ನೀಡಿ ವಿದ್ವಾಂಸರೂ, ಶೀಲಯುಕ್ತರೂ ಆಗುವಂತೆ ಮಾಡು.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, ಹಲವು ಗುಣಗಳಿಂದ ಕೂಡಿದ ಅಗ್ನಿಯಂತಿರುವ ವಿದ್ವಾಂಸನನ್ನು ಹೊಂದಿ ವಿದ್ಯೆಯನ್ನು ಗ್ರಹಿಸಬೇಕು.

ಪುನಃ ಅವರನ್ನು ಯಾವ ರೀತಿ ತಿಳಿದು ಧಾರಣ ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ನಿ ತ್ವಾ ಹೋತಾರಮೃತ್ವಿಜಂ ದಧಿರೇ ವಸುವಿತ್ತಮಮ್ ।
ಶ್ರುತ್ಕರ್ಣಂ ಸಪ್ರಥಸ್ತಮಂ ವಿಪ್ರಾ ಅಗ್ನೇ ದಿವಿಷ್ಟಿಷು ॥೭॥

ಪದಾರ್ಥ:- ಹೇ **[ಅಗ್ನೇ]** ಬಹುಶ್ರುತನಾದ ಸತ್ಪುರುಷನೇ! ಯಾವ **[ವಿಪ್ರಾಃ]** ಮೇಧಾವೀ ವಿದ್ವಾಂಸರು **[ದಿವಿಷ್ಟಿಷು]** ಪವಿತ್ರ ಪಠನ-ಪಾಠನ ರೂಪೀ ಕ್ರಿಯೆಗಳಲ್ಲಿ ಅಗ್ನಿ ಸಮಾನವಾದ ಯಾವ **[ಹೋತಾರಂ]** ಗ್ರಹಣಕಾರಕವಾದ **[ಋತ್ವಿಜಂ]** ಋತುಗಳನ್ನು ಸಂಯೋಜಿಸುವ **[ಶ್ರುತ್ಕರ್ಣಂ]** ಸಮಸ್ತ ವಿದ್ಯೆಗಳನ್ನು ಆಲಿಸುವ **[ಸಪ್ರಥಸ್ತಮಂ]** ಅತ್ಯಂತ ವಿಸ್ತಾರವಾಗಿ ವರ್ತಿಸುತ್ತಿರುವ **[ವಸುವಿತ್ತಮಮಂ]** ಪದಾರ್ಥಗಳನ್ನು ಉತ್ತಮ ರೀತಿಯಲ್ಲಿ ತಿಳಿಯುವ **[ತ್ವಾ]** ನಿನ್ನನ್ನು **[ನಿ ದಧಿರೇ]** ಧಾರಣ ಮಾಡುತ್ತಾರೋ ಅವುಗಳನ್ನು ನೀನೂ ಸಹ ಧಾರಣೆ ಮಾಡು.

ಭಾವಾರ್ಥ:- ಯಾವ ಮನುಷ್ಯರು ಉತ್ತಮ ಕಾರ್ಯಸಿದ್ಧಿಗಾಗಿ ಪ್ರಯತ್ನವನ್ನು ಮಾಡುತ್ತಾರೋ ಮತ್ತು ಚಕ್ರವರ್ತೀ ರಾಜ್ಯಶ್ರೀ ಹಾಗೂ ವಿದ್ಯಾಧನದ ಸಿದ್ಧಿಗಾಗಿ ಸಮರ್ಥರಾಗಬಲ್ಲರೋ ಅವರು ಶೋಕವನ್ನು ಹೊಂದುವುದಿಲ್ಲ.

ಪುನಃ ಅವನನ್ನು ಹೇಗೆ ತಿಳಿಯಬೇಕು ಎಂಬುದನ್ನು ತಿಳಿಸಲಾಗುತ್ತದೆ

ಆ ತ್ವಾ ವಿಪ್ರಾ ಅಚುಚ್ಯವುಃ ಸುತಸೋಮಾ ಅಭಿ ಪ್ರಯಃ ।

ಬೃಹದ್ ಭಾ ಬಿಭ್ರತೋ ಹವಿ-ರಗ್ನೇ ಮರ್ತಾಯ ದಾಶುಷೇ ॥೮॥

ಪದಾರ್ಥ:- ಹೇ [ಅಗ್ನೇ] ವಿದ್ಯುತ್ತಿನಂತೆ ಇರುವ ವಿದ್ವಾಂಸನೇ! ನೀನು ಯಾವ ರೀತಿ ಕ್ರಿಯಾಕುಶಲನಾದ [ದಾಶುಷೇ ಮರ್ತಾಯ] ದಾನಶೀಲ ಮನುಷ್ಯನಿಗಾಗಿ [ಪ್ರಯಃ] ಅನ್ನವನ್ನು [ಬೃಹತ್] ಹಿರಿದಾದ ಸುಖವನ್ನುಂಟುಮಾಡುವ [ಹವಿಃ] ನೀಡಲು ಯೋಗ್ಯವಾದ ಪದಾರ್ಥಗಳನ್ನು ಮತ್ತು [ಭಾಃ] ಯಾವ ಪ್ರಕಾಶಕಾರಕ ಕ್ರಿಯೆಗಳನ್ನು [ಬಿಭ್ರತಃ] ಧಾರಣ ಮಾಡುತ್ತಾ [ಸುತಸೋಮಾಃ] ಐಶ್ವರ್ಯಯುಕ್ತ [ವಿಪ್ರಾಃ] ವಿದ್ವಾಂಸನಾದ [ತ್ವಾ] ನಿನ್ನನ್ನು [ಆ] ಎಲ್ಲ ಕಡೆಗಳಿಂದ [ಅಭ್ಯಚುಚ್ಯವುಃ] ಎಲ್ಲ ರೀತಿಯಿಂದಲೂ ಪ್ರಾಪ್ತಿಸುತ್ತಾರೋ, ಹಾಗೆಯೇ ನೀನೂ ಸಹ ಇವುಗಳನ್ನು ಹೊಂದು.

ಭಾವಾರ್ಥ:- ವಿದ್ವಾಂಸರಿಗೆ ಯೋಗ್ಯವಾದುದೇನೆಂದರೆ, ಯಾವ ರೀತಿಯ ಉತ್ತಮ ಸುಖಗಳುಂಟೋ ಅವುಗಳನ್ನು ವಿದ್ಯಾ ವಿಶೇಷ ಪರೀಕ್ಷೆಯಿಂದ ಪ್ರತ್ಯಕ್ಷಗೊಳಿಸಿ ಅನುಕ್ರಮದಿಂದ ಎಲ್ಲವನ್ನೂ ಗ್ರಹಣ ಮಾಡಬೇಕು. ಅದರಿಂದ ಈ ಜನರ ಎಲ್ಲ ಕಾರ್ಯಗಳು ನಿಶ್ಚಯವಾಗಿಯೂ ಸಿದ್ಧಿಸುವವು.

ಇದರ ಅನುಷ್ಠಾನ ಮಾಡುವ ಮನುಷ್ಯನು ಯಾವುದಕ್ಕಾಗಿ ಏನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಪ್ರಾತರ್ಯಾವ್ಣಃ ಸಹಸ್ಕೃತ ಸೋಮಪೇಯಾಯ ಸನ್ತ್ಯ ।

ಇಹಾದ್ಯ ದೈವ್ಯಂ ಜನಂ ಬರ್ಹಿರಾ ಸಾದಯಾ ವಸೋ ॥೯॥

ಪದಾರ್ಥ:- ಹೇ [ಸಹಸ್ಕೃತ] ಎಲ್ಲವನ್ನೂ ಸಿದ್ಧಿಗೊಳಿಸುವ [ಸನ್ತ್ಯ] ಯಾವ ಸಂಭಜನೀಯ ಕ್ರಿಯೆಗಳಲ್ಲಿ ಕುಶಲ ವಿದ್ವಾಂಸರಲ್ಲಿ ಸಜ್ಜನನಾದ [ವಸೋ] ಶ್ರೇಷ್ಠ ಗುಣಗಳಲ್ಲಿ ನೆಲೆಸಿರುವ ವಿದ್ವಾಂಸನೇ! ನೀನು [ಇಹ] ಈ ವಿದ್ಯಾ ವ್ಯವಹಾರದಲ್ಲಿ [ಅದ್ಯ] ಇಂದು [ಸೋಮಪೇಯಾಯ] ಸೋಮರಸದ ಪಾನಕ್ಕಾಗಿ [ಪ್ರಾತರ್ಯಾವ್ಣಃ] ಪ್ರಾತಃಕಾಲ ಪುರುಷಾರ್ಥವನ್ನು ಹೊಂದುವ ವಿದ್ವಾಂಸರ [ದೈವ್ಯಂ] ವಿದ್ವಾಂಸರಲ್ಲಿ ಕುಶಲರಾದ [ಜನಂ] ಪುರುಷಾರ್ಥಯುಕ್ತ ಧಾರ್ಮಿಕ ವ್ಯಕ್ತಿಗಳ ಮತ್ತು [ಬರ್ಹಿಃ] ಉತ್ತಮ ಆಸನವನ್ನು [ಆ ಸಾದಯಾ] ಹೊಂದುವವನಾಗು.

ಭಾವಾರ್ಥ:- ಯಾವ ಮನುಷ್ಯನು ಉತ್ತಮ ಗುಣಯುಕ್ತ ಮನುಷ್ಯರಿಗೆ ಉತ್ತಮ ವಸ್ತುಗಳನ್ನು ನೀಡುತ್ತಾನೋ ಅಂತಹ ಮನುಷ್ಯರ ಸಂಗವನ್ನೇ ಎಲ್ಲರೂ ಮಾಡಬೇಕು. ಯಾವುದೇ ಮನುಷ್ಯನು ವಿದ್ಯೆ ಹಾಗೂ ಪುರುಷಾರ್ಥಯುಕ್ತ ಮನುಷ್ಯರ ಸಂಗ ಅಥವಾ ಉಪದೇಶವಿಲ್ಲದೆ ಪವಿತ್ರಗುಣವುಳ್ಳ ವಸ್ತುಗಳನ್ನು ಮತ್ತು ಸುಖಗಳನ್ನು ಹೊಂದಲಾರನು.

ಪುನಃ ಅದೇ ವಿಷಯವನ್ನು ಹೇಳಲಾಗುತ್ತದೆ.

ಅರ್ವಾಂಚಂ ದೈವ್ಯಂ ಜನ-ಮಗ್ನೇ ಯಕ್ಷ್ವ ಸಹೂತಿಭಿಃ ।

ಅಯಂ ಸೋಮಃ ಸುದಾನವ-ಸ್ತಂ ಪಾತ ತಿರೋ ಅಹ್ನ್ಯಮ್ ॥೧೦॥

ಪದಾರ್ಥ:- ಹೇ [ಸುದಾನವಃ] ಉತ್ತಮ ದಾನಶೀಲ ವಿದ್ವಾಂಸರೇ! ನೀವು [ಸಹೂತಿಭಿಃ] ಸಮಾನ ಆಹ್ವಾನಯುಕ್ತ ಕ್ರಿಯೆಗಳಿಂದ [ಅರ್ವಾಂಚಂ] ವೇಗಶಾಲಿಗಳಾದ ಕುದುರೆಗಳನ್ನು ಪ್ರಾಪ್ತಿಸಲು [ದೈವ್ಯಂ] ದಿವ್ಯಗುಣಗಳಲ್ಲಿ

ಪ್ರವೃತ್ತರಾದ [ತಿರೋಹ್ನ್ಯಮ್] ಚೋರರೇ ಮೊದಲಾದವರ ತಿರಸ್ಕಾರಕ್ಕೆ ಯೋಗ್ಯವಾದ ದಿನದಲ್ಲಿ ಪ್ರಸಿದ್ಧವಾದ [ಜನಂ] ಪುರುಷಾರ್ಥದಲ್ಲಿ ಪ್ರಕಟವಾದ ಮನುಷ್ಯರನ್ನು [ಪಾತ] ರಕ್ಷಣೆ ಮಾಡಿರಿ. ಮತ್ತು ಯಾವ ರೀತಿ [ಅಯಂ] ಈ [ಸೋಮಃ] ಪದಾರ್ಥಗಳ ಸಮೂಹವು ಎಲ್ಲರ ಸತ್ಕಾರಾರ್ಥವಾಗಿದೆಯೋ [ತಂ] ಅದನ್ನು ನೀನೂ ಸಹ [ಯಕ್ಷ್ವ] ಸತ್ಕಾರದಲ್ಲಿ ಸಂಯೋಜಿಸು.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, ಸದಾ ಸಜ್ಜನರನ್ನು ಕರೆದು ಸತ್ಕಾರ ಮಾಡಿ ಎಲ್ಲ ಪದಾರ್ಥಗಳ ವಿಜ್ಞಾನವನ್ನು ಸಂಶೋಧಿಸಿ ಅವುಗಳಿಂದ ಉಪಕಾರವನ್ನು ಪಡೆಯಬೇಕು. ಮತ್ತು ಉತ್ತರೋತ್ತರವಾಗಿ ಇವುಗಳನ್ನು ಅರಿತು ಈ ವಿದ್ಯೆಗಳ ಪ್ರಚಾರವನ್ನು ಮಾಡಬೇಕು.

ಈ ಸೂಕ್ತದಲ್ಲಿ ವಸು, ರುದ್ರ, ಆದಿತ್ಯರ ಗತಿ ಹಾಗೂ ಪ್ರಮಾಣ ಮೊದಲಾದವುಗಳನ್ನು ಹೇಳಲಾಗಿದೆ. ಇದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯಾಗುತ್ತದೆ ಎಂದು ತಿಳಿಯಬೇಕು.

ನಲವತ್ತೈದನೆಯ ಸೂಕ್ತ ಸಮಾಪ್ತ

ಸೂಕ್ತ ೪೬

ಮಂತ್ರಸಂಖ್ಯೆ ೧೫ । ಋಷಿಃ - ಪ್ರಸ್ಕಣ್ವಃ ಕಾಣ್ವಃ । ದೇವತಾ - ಅಶ್ವಿನೌ । ಛಂದಃ - ೧, ೧೦ ವಿರಾಡ್ ಗಾಯತ್ರೀ, ೩, ೧೧, ೬, ೧೨, ೧೪ ಗಾಯತ್ರೀ, ೫, ೭, ೯, ೧೩, ೧೫, ೨, ೪, ೮ ನಿಚೃದ್ ಗಾಯತ್ರೀ । ಸ್ವರಃ-ಷಡ್ಜಃ ।

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಉಷೆ ಮತ್ತು ಸೂರ್ಯ ಚಂದ್ರರ ದೃಷ್ಟಾಂತದಿಂದ ವಿದ್ವಾನ್ ಸ್ತ್ರೀಯರ ಗುಣಗಳನ್ನು ಹೇಳಲಾಗುತ್ತದೆ.

ಏಷೋ ಉಷಾ ಅಪೂರ್ವ್ಯಾ ವ್ಯುಚ್ಛತಿ ಪ್ರಿಯಾ ದಿವಃ । ಸ್ತುಷೇ ವಾಮಶ್ವಿನಾ ಬೃಹತ್ ॥೧॥

ಪದಾರ್ಥ:- ಹೇ ವಿದುಷೀ ಸ್ತ್ರೀಯೇ! ಯಾವ ನೀನು ಹೇಗೆ [ಏಷೋ] ಈ [ಅಪೂರ್ವ್ಯಾ] ಯಾರದೂ ಅಲ್ಲದ [ದಿವಃ] ಸೂರ್ಯಪ್ರಕಾಶದಿಂದ ಉತ್ಪನ್ನವಾದ [ಪ್ರಿಯಾ] ಎಲ್ಲರಿಗೂ ಪ್ರೀತಿಯನ್ನು ಹೆಚ್ಚಿಸುವ [ಉಷಾಃ] ದಾಹಶೀಲ ಉಷೆಯ ಅರ್ಥಾತ್ ಪ್ರಾತಃಕಾಲದ ವೇಳೆಯ [ಬೃಹತ್] ದೊಡ್ಡ ದಿನವನ್ನು [ಉಚ್ಛತಿ] ಪ್ರಕಾಶಿತಗೊಳಿಸುತ್ತದೆಯೋ ಹಾಗೆಯೇ ನನ್ನನ್ನು [ವ್ಯುಚ್ಛತೀ] ಆನಂದಗೊಳಿಸುತ್ತೀಯೆ. ಮತ್ತು ಯಾವ ರೀತಿ ಈ [ಅಶ್ವಿನಾ] ಸೂರ್ಯಚಂದ್ರರಂತೆ ಓದಿಸುವ ಮತ್ತು ಉಪದೇಶ ಮಾಡುವ ಸ್ತ್ರೀಯರ [ಸ್ತುಷೇ] ಗುಣಗಳ ಪ್ರಕಾಶವನ್ನು ಮಾಡುತ್ತೀಯೋ ಹಾಗೆಯೇ ನಾನೂ ಸಹ ನಿನ್ನನ್ನು ಸುಖಗಳಲ್ಲಿ ನೆಲೆಗೊಳಿಸುವಂತಾಗಲಿ ಮತ್ತು ನಿನ್ನ ಪ್ರಶಂಸೆಯನ್ನು ಮಾಡುವಂತಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ಸ್ತ್ರೀಯರು ಸೂರ್ಯ, ಚಂದ್ರ, ಮತ್ತು ಉಷೆಯರಂತೆ ಎಲ್ಲ ಜೀವಿಗಳಿಗೂ ಸುಖವನ್ನು ನೀಡುತ್ತಾರೋ ಅವರು ಆನಂದವನ್ನು ಹೊಂದುತ್ತಾರೆ; ಇವರಿಗಿಂತ ಬೇರೆಯಾದವರು ಅಲ್ಲ.

ಪುನಃ ಆ ಅಶ್ವಿನಿಗಳು ಹೇಗಿರುತ್ತಾರೆ ಎಂಬುದನ್ನು ಉಪದೇಶಿಸಲಾಗುತ್ತದೆ.

ಯಾ ದಸ್ರಾ ಸಿಂಧುಮಾತರಾ ಮನೋತರಾ ರಯೀಣಾಮ್ । ಧಿಯಾ ದೇವಾ ವಸುವಿದಾ ॥೨॥

ಪದಾರ್ಥ:- ಹೇ ಮಾನವರೇ! ನೀವು [ಯಾ] ಯಾವ [ದಸ್ರಾ] ದುಃಖಗಳನ್ನು ನಷ್ಟಗೊಳಿಸುವ [ಸಿಂಧುಮಾತರಾ] ಸಮುದ್ರ ನದಿಗಳ ಪ್ರಮಾಣಕಾರಕವಾದ [ಮನೋತರಾ] ಮನಸ್ಸಿನಂತೆ ಪಾರುಮಾಡುವವರಾದ [ಧಿಯಾ] ಕರ್ಮದಿಂದ [ರಯೀಣಾಂ] ಧನವನ್ನು [ದೇವಾಃ] ಕೊಡುವವರಾದ [ವಸುವಿದಾ] ಬಹಳ ಧನವನ್ನು ಪ್ರಾಪ್ತಗೊಳಿಸುವ ಅಗ್ನಿ ಹಾಗೂ ನೀರಿನಂತೆ ಇರುವ ಅಧ್ಯಾಪಕ ಮತ್ತು ಉಪದೇಶಕರಿದ್ದಾರೋ ಅವರ ಸೇವೆಯನ್ನು ಮಾಡಿರಿ.

ಭಾವಾರ್ಥ:- ಯಾವ ರೀತಿ ಕುಶಲಕರ್ಮಿಗಳಾದ ಜನರು ಉತ್ತಮ ರೀತಿಯಲ್ಲಿ ಯುಕ್ತವಾಗಿರುವ ಅಗ್ನಿ ಮತ್ತು ಜಲದ ಯಾನಗಳನ್ನು ಮನಸ್ಸಿನ ವೇಗಕ್ಕೆ ಸಮಾನವಾಗಿ ಬೇಗನೆ ತಲುಪಿಸುವ ಮತ್ತು ಬಹಳ ಧನವನ್ನು ಪ್ರಾಪ್ತಗೊಳಿಸುವುದಾಗಿರುತ್ತದೆಯೋ ಅದೇ ರೀತಿ ಅಧ್ಯಾಪಕ ಮತ್ತು ಉಪದೇಶಕರು ಇರಬೇಕು.

ಪುನಃ ಅವರು ಹೇಗಿರುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ವಚ್ಯಂತೇ ವಾಂ ಕಕುಹಾಸೋ ಜೂರ್ಣಾಯಾಮಧಿ ವಿಷ್ಟಪಿ ।
ಯದ್ ವಾಂ ರಥೋ ವಿಭಿಷ್ಪತಾತ್ ॥೩॥

ಪದಾರ್ಥ:- ಹೇ ಕುಶಲಕರ್ಮಿಗಳೇ! ಯಾವ [ಜೂರ್ಣಾಯಾಂ] ವೃದ್ಧಾವಸ್ಥೆಯಲ್ಲಿರುವ [ಕಕುಹಾಸಃ] ಹಿರಿಯ ವಿದ್ವಾಂಸರಾದ [ವಾಂ] ನೀವು ಶಿಲ್ಪವಿದ್ಯೆಯನ್ನು ಓದುವ ಓದಿಸುವವರಿಗೆ ವಿದ್ಯೆಗಳ [ವಚ್ಯಂತೇ] ಉಪದೇಶವನ್ನು ಮಾಡಿರಿ. [ವಾಂ] ನೀವುಗಳು ಮಾಡಿರುವ [ರಥಃ] ವಿಮಾನಾದಿ ಯಾನಗಳು [ವಿಭಿಃ] ಪಕ್ಷಿಗಳಂತೆ [ವಿಷ್ಟಪಿ] ಅಂತರಿಕ್ಷದಲ್ಲಿ [ಅಧಿ] ಮೇಲೆ [ಪತಾತ್] ಹಾರಾಡಲಿ.

ಭಾವಾರ್ಥ:- ಯಾವ ಮನುಷ್ಯರು ಬಹುದೊಡ್ಡ ಜ್ಞಾನಿಗಳ ಸಮೀಪದಿಂದ ಕುಶಲತೆಯನ್ನೂ, ಶಿಕ್ಷಣವನ್ನೂ ಪಡೆಯುತ್ತಾರೋ ಅವರು ವಿಮಾನಾದಿ ವಾಹನಗಳನ್ನು ರಚಿಸಿ ಪಕ್ಷಿಗಳಂತೆ ಆಕಾಶದಲ್ಲಿ ಹೋಗಿ ಬರುವುದರಲ್ಲಿ ಸಮರ್ಥರಾಗುತ್ತಾರೆ.

ಪುನಃ ಅವರು ಹೇಗಿರುತ್ತಾರೆ ಎಂಬುದನ್ನು ತಿಳಿಸಲಾಗುತ್ತದೆ.

ಹವಿಷಾ ಜಾರೋ ಅಪಾಂ ಪಿಪರ್ತಿ ಪಪುರಿರ್ನರಾ । ಪಿತಾ ಕುಟಸ್ಯ ಚರ್ಷಣಿಃ ॥೪॥

ಪದಾರ್ಥ:- ಹೇ [ನರಾ] ನೀತಿಯನ್ನು ಕಲಿಸುವ, ಓದಿಸುವ ಮತ್ತು ಉಪದೇಶ ಮಾಡುವ ಜನರೇ! ನೀವು ಯಾವ ರೀತಿ [ಜಾರಃ] ವಿಭಾಗಕರ್ತನು [ಪಪುರಿಃ] ಉತ್ತಮ ಪ್ರಕಾರ ಪೂರ್ತಿಯನ್ನು [ಪಿತಾ] ಪಾಲನೆ ಮಾಡಲು [ಕುಟಸ್ಯ] ಕುಟಿಲ ಮಾರ್ಗವನ್ನು [ಚರ್ಷಣಿಃ] ತೋರಿಸುವ ಸೂರ್ಯನು [ಹವಿಷಾ] ಆಹುತಿಗಳಿಂದ ವೃದ್ಧಿಯಾಗಿ [ಅಪಾಂ] ಜಲರಾಶಿಯ ಯೋಗದಿಂದ [ಪಿಪರ್ತಿ] ಪೂರ್ಣಗೊಳಿಸಿ ಪ್ರಜೆಗಳ ಪಾಲನೆ ಮಾಡುತ್ತಾನೆಯೋ ಅದೇ ರೀತಿ ಪ್ರಜೆಗಳ ಪಾಲನೆ ಮಾಡಿರಿ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ ಯಾವ ರೀತಿ ಸವಿತೃವು ಮಳೆಯ ಮೂಲಕ ನೆನೆಯಿಸಲು ಯೋಗ್ಯವಾದ ಪ್ರಾಣಿ ಹಾಗೂ ಅಪ್ರಾಣಿಗಳನ್ನು ಪುಷ್ಟಗೊಳಿಸುತ್ತಾನೋ ಅದೇ ರೀತಿ ಎಲ್ಲರನ್ನೂ ಪುಷ್ಟಗೊಳಿಸಬೇಕು.

ಪುನಃ ಅವರು ಹೇಗಿದ್ದಾರೆ ಎಂಬುದನ್ನು ತಿಳಿಸಲಾಗುತ್ತದೆ.

ಆದಾರೋ ವಾಂ ಮತೀನಾಂ ನಾಸತ್ಯಾ ಮತವಚಸಾ । ಪಾತಂ ಸೋಮಸ್ಯ ಧೃಷ್ಣುಯಾ ॥೫॥

ಪದಾರ್ಥ:- ಹೇ [ನಾಸತ್ಯಾ] ಪವಿತ್ರಗುಣಸ್ವಭಾವಯುಕ್ತ [ಮತವಚಸಾ] ಜ್ಞಾನದಿಂದ ನುಡಿಯುವವನಾದ ಸಭಾಸೇನಾಪತಿಯೇ! ನೀನು ಯಾವ [ವಾಂ] ನಿಮ್ಮ [ಆದಾರಃ] ಎಲ್ಲ ರೀತಿಯಿಂದಲೂ ಶತ್ರುಗಳನ್ನು ಭೇದಿಸುವ ಗುಣವಿದೆಯೋ ಮತ್ತು ಆ [ಧೃಷ್ಣುಯಾ] ಪ್ರಗಲ್ಭತೆಯಿಂದ [ಸೋಮಸ್ಯ] ಐಶ್ವರ್ಯ ಮತ್ತು [ಮತೀನಾಂ] ಮನುಷ್ಯರ [ಪಾತಂ] ರಕ್ಷಣೆಯನ್ನು ಮಾಡು.

ಭಾವಾರ್ಥ:- ರಾಜಪುರುಷರಾದವರಿಗೆ ಯೋಗ್ಯವಾದುದೇನೆಂದರೆ, ದೃಢಬಲಯುಕ್ತ ಸೇನೆಯಿಂದ ಶತ್ರುಗಳನ್ನು ಗೆದ್ದು ತನ್ನ ಪ್ರಜೆಗಳ ಐಶ್ವರ್ಯದ ನಿರಂತರ ವೃದ್ಧಿಯಾಗುವಂತೆ ನೋಡಿಕೊಳ್ಳಬೇಕು.

ಪುನಃ ಸೂರ್ಯ ಚಂದ್ರಮಾ ಇವರಿಗೆ ಸಮಾನರಾದ ಸಭಾಸೇನಾಪತಿಯು ಏನನ್ನು ಮಾಡಬೇಕು ಎಂಬುದನ್ನಿಲ್ಲಿ ಹೇಳಲಾಗಿದೆ.

ಯಾ ನಃ ಪೀಪರದಶ್ವಿನಾ ಜ್ಯೋತಿಷ್ಮತೀ ತಮಸ್ತಿರಃ । ತಾಮಸ್ಮೇ ರಾಸಾಥಾಮಿಷಮ್ ॥೬॥

ಪದಾರ್ಥ:- ಹೇ [ಅಶ್ವಿನಾ] ಸಭಾಸೇನಾಧ್ಯಕ್ಷರುಗಳೇ! ಯಾವ ರೀತಿ ಸೂರ್ಯ ಮತ್ತು ಚಂದ್ರರ [ಜ್ಯೋತಿಷ್ಮತೀ] ಉತ್ತಮ ಪ್ರಕಾಶಯುಕ್ತಕಾಂತಿಯು [ತಮಃ] ರಾತ್ರಿಯ ಅಂಧಕಾರವನ್ನು ನಿವಾರಿಸಿ ಪ್ರಭಾತ ಮತ್ತು ಶುಕ್ಲ ಪಕ್ಷದಿಂದ ಎಲ್ಲರ ಪೋಷಣೆಯನ್ನು ಮಾಡುತ್ತದೆಯೋ ಅದೇ ರೀತಿ [ಅಸ್ಮೇ] ನಮ್ಮ ಅವಿದ್ಯೆಯನ್ನು ಬಿಡಿಸಿ ವಿದ್ಯಾಪ್ರಕಾಶವನ್ನುಂಟು ಮಾಡಿ [ನಃ] ನಮ್ಮೆಲ್ಲರಿಗೂ [ತಾಂ] ಆ [ಇಷಮ್] ಅನ್ನಾದಿಗಳನ್ನು [ರಾಸಾಥಾಂ] ಕೊಡುವವರಾಗಿರಿ.

ಭಾವಾರ್ಥ:- ಇಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯ ಮತ್ತು ಚಂದ್ರರು ಅಂಧಕಾರವನ್ನು ದೂರಮಾಡಿ ಪ್ರಾಣಿಗಳನ್ನು ಸುಖಿಗಳನ್ನಾಗಿ ಮಾಡುತ್ತಾರೋ ಅದೇ ರೀತಿ ಸಭೆ ಮತ್ತು ಸೇನೆಯ ಅಧ್ಯಕ್ಷರುಗಳು ಅನ್ಯಾಯವನ್ನು ದೂರೀಕರಿಸಿ ಪ್ರಜೆಗಳನ್ನು ಸುಖಯುಕ್ತರನ್ನಾಗಿ ಮಾಡಬೇಕು.

ಪುನಃ ಅವರು ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಆ ನೋ ನಾವಾ ಮತೀನಾಂ ಯಾತಂ ಪಾರಾಯ ಗಂತವೇ ।
ಯುಂಜಾಥಾಮಶ್ವಿನಾ ರಥಮ್ ॥೭॥

ಪದಾರ್ಥ:- ಹೇ [ಅಶ್ವಿನಾ] ವ್ಯವಹಾರ ಕುಶಲರಾದ ಶಿಲ್ಪಿಗಳೇ! ನೀವು [ಮತೀನಾಂ] ಮನುಷ್ಯರ [ನಾವಾ] ನೌಕೆಯಿಂದ [ಪಾರಾಯ ಗಂತವೇ] ಪಾರಾಗಲಿಕ್ಕಾಗಿ [ನಃ] ನಮಗಾಗಿ [ರಥಂ] ವಿಮಾನಾದಿ ಯಾನ ಸಮೂಹಗಳನ್ನು [ಆ ಯಾತಂ] ಎಲ್ಲೆಡೆಗಳಿಂದ ಹೊಂದಲು [ಯುಂಜಾಥಾಂ] ಯುಕ್ತಗೊಳಿಸಿ ನಡೆಯಿಸಿರಿ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ರಥದಿಂದ ನೆಲದ ಮೇಲೆ, ನೌಕೆಯಿಂದ ಜಲದ ಮೇಲೆ ಹಾಗೂ ವಿಮಾನದಿಂದ ಆಕಾಶದಲ್ಲಿ ಹೋಗಿ ಬರುವವರಾಗಬೇಕು.

ಪುನಃ ಆ ಯಾನವನ್ನು ಯಾವ ರೀತಿ ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಅರಿತ್ರಂ ವಾಂ ದಿವಸ್ಪೃಥು ತೀರ್ಥೇ ಸಿಂಧೂನಾಂ ರಥಃ ।
ಧಿಯಾ ಯುಯುಜ್ರ ಇಂದವಃ ॥೮॥

ಪದಾರ್ಥ:- ಹೇ ಕುಶಲಕರ್ಮಿಗಳೇ! ಯಾವ **[ವಾಂ]** ನಿಮ್ಮ **[ಪೃಥುಃ]** ವಿಸ್ತೃತವಾದ **[ರಥಃ]** ಯಾನ ಸಮೂಹ ಅರ್ಥಾತ್ ಅನೇಕ ವಿಧವಾದ ವಾಹನಗಳಿವೆಯೋ ಅವುಗಳನ್ನು **[ಸಿಂಧೂನಾಂ]** ಸಮುದ್ರಗಳ **[ತೀರ್ಥೇ]** ದಾಟಿಸುವುದರಲ್ಲಿ **[ಅರಿತ್ರಂ]** ಯಾನವನ್ನು ನಿಯಂತ್ರಿಸುವ ಮತ್ತು ಬಹಳ ಜಲದ ಯಾನದಲ್ಲಿ ದೋಣಿಯನ್ನು ಮುನ್ನಡೆಸುವ ಕಬ್ಬಿಣದ ಸಾಧನ ಅಥವಾ ಹುಟ್ಟುಗೋಲು **[ದಿವಃ]** ಪ್ರಕಾಶಮಾನವಾದ ವಿದ್ಯುತ್ ಅಗ್ನ್ಯಾದಿಗಳು **[ಇಂದವಃ]** ಜಲಾದಿಗಳನ್ನು ನೀವು **[ಯುಯುಜ್ರೇ]** ಯುಕ್ತಗೊಳಿಸಿರಿ.

ಭಾವಾರ್ಥ:- ಯಾವನೇ ಮನುಷ್ಯನು ಅಗ್ನಿ ಮೊದಲಾದವುಗಳಿಂದ ನಡೆಯಿಸುವ ಯಾನದ ವಿನಾ ಪೃಥಿವೀ, ಸಮುದ್ರ ಹಾಗೂ ಅಂತರಿಕ್ಷಗಳಲ್ಲಿ ಸುಖಪೂರ್ವಕವಾಗಿ ಹೋಗಿಬರಲು ಸಮರ್ಥನಾಗುವುದಿಲ್ಲ.

ಪುನಃ ಅವರು ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ದಿವಸ್ಕಣ್ವಾಸ ಇಂದವೋ ವಸು ಸಿಂಧೂನಾಂ ಪದೇ । ಸ್ವಂ ವವ್ರಿಂ ಕುಹ ಧಿತ್ಸಥಃ ॥೯॥

ಪದಾರ್ಥ:- ಹೇ **[ಕಣ್ವಾಸಃ]** ಮೇಧಾವಿಗಳಾದ ವಿದ್ವಾಂಸರೇ! ನೀವು ಈ ಕುಶಲಕರ್ಮಿಗಳನ್ನು ಈ ರೀತಿ ಪ್ರಶ್ನಿಸಿರಿ - ನೀವುಗಳು **[ಸಿಂಧೂನಾಂ]** ಸಮುದ್ರದ **[ಪದೇ]** ಮಾರ್ಗದಲ್ಲಿ ಯಾವ **[ದಿವಃ]** ಪ್ರಕಾಶಮಾನವಾದ ಅಗ್ನಿ ಮತ್ತು **[ಇಂದವಃ]** ಜಲಾದಿಗಳಿವೆಯೋ ಅವುಗಳನ್ನು ಮತ್ತು **[ಸ್ವಂ]** ನಿಮ್ಮ **[ವವ್ರಿಂ]** ಸುಂದರರೂಪಯುಕ್ತವಾದ **[ವಸು]** ಧನವನ್ನು **[ಕುಹ]** ಎಲ್ಲಿ **[ಧಿತ್ಸಥಃ]** ಧಾರಣೆ ಮಾಡಲು ಇಚ್ಛಿಸುತ್ತೀರಿ.

ಭಾವಾರ್ಥ:- ಯಾವ ಮನುಷ್ಯರು ವಿದ್ವಾಂಸರ ಶಿಕ್ಷಣಕ್ಕೆ ಅನುಕೂಲವಾಗಿ ಅಗ್ನಿ, ಜಲಗಳ ಪ್ರಯೋಗದಿಂದ ಯುಕ್ತವಾದ ಯಾನಗಳ ಮೇಲೆ ಸ್ಥಿತರಾಗಿ ರಾಜ-ಪ್ರಜೆಗಳ ವ್ಯವಹಾರದ ಸಿದ್ಧಿಗಾಗಿ ಸಮುದ್ರದ ಕೊನೆಯವರೆಗೂ ಹೋಗಿಬರುತ್ತಾರೋ ಅವರು ಉತ್ತಮೋತ್ತಮ ಧನವನ್ನು ಹೊಂದುತ್ತಾರೆ.

ಈ ವಿಷಯದ ಉತ್ತರವನ್ನು ಇಲ್ಲಿ ತಿಳಿಸಲಾಗುತ್ತದೆ.

ಅಭೂದು ಭಾ ಉ ಅಂಶವೇ ಹಿರಣ್ಯಂ ಪ್ರತಿ ಸೂರ್ಯಃ । ವ್ಯಖ್ಯಜ್ಜಿಹ್ವಯಾಸಿತಃ ॥೧೦॥

ಪದಾರ್ಥ:- ಹೇ ಕುಶಲಕರ್ಮಿಗಳೇ! ನೀವುಗಳು ಯಾವ ರೀತಿ **[ಅಸಿತಃ]** ಅಬದ್ಧರಾಗಿ ಅರ್ಥಾತ್ ಯಾರಿಗೆ ಯಾವುದರೊಂದಿಗೂ ಬಂಧನವಿಲ್ಲವೋ ಅಂತಹ **[ಭಾಃ]** ಪ್ರಕಾಶಯುಕ್ತರೂ **[ಪ್ರತಿ ಸೂರ್ಯಃ]** ಪ್ರತಿ ಸೂರ್ಯನ **[ಅಂಶವೇ]** ಕಿರಣಗಳ ವಿಭಾಗಾರ್ಥ **[ಜಿಹ್ವಯಾ]** ಜಿಹ್ವೆಯ ಸಮಾನವಾದ **[ವ್ಯಖ್ಯತ್]** ಪ್ರಸಿದ್ಧತೆಯಿಂದ ಪ್ರಕಾಶಮಾನವಾಗಿ **[ಅಭೂತ್]** ಆಗುತ್ತಾರೋ **[ಉ]** ಮತ್ತು ಅದೇ ರೀತಿ ಅದರ ಮೇಲೆ ಯಾನದ ಸ್ಥಾಪನೆ ಮಾಡಿ ಅದರಲ್ಲಿ ಉಚಿತ ಸ್ಥಾನದಲ್ಲಿ **[ಹಿರಣ್ಯಂ]** ಸುವರ್ಣಾದಿ ಉತ್ತಮ ಪದಾರ್ಥಗಳನ್ನು ಧಾರಣೆ ಮಾಡಿಸಿರಿ.

ಭಾವಾರ್ಥ:- ಹೇ ವಾಹನಗಳನ್ನು ನಡೆಯಿಸುವ ಮನುಷ್ಯರೇ! ನೀವು ದಿಕ್ಕುಗಳನ್ನು ತೋರಿಸುವ ಚುಂಬಕೀಯ ಧ್ರುವ ಯಂತ್ರ ಹಾಗೂ ಸೂರ್ಯಾದಿಗಳ ಕಾರಣದಿಂದ ದಿಕ್ಕುಗಳನ್ನು ತಿಳಿಯಿರಿ. ವಾಹನಗಳನ್ನು ಚಲಾಯಿಸಿರಿ. ಮತ್ತು ಸೂಕ್ತ ಸಮಯದಲ್ಲಿ ಅವುಗಳನ್ನು ನಿಲ್ಲಿಸುವುದನ್ನೂ ಮಾಡಿರಿ. ಇದರಿಂದ ಭ್ರಾಂತಿಯಲ್ಲಿ ಬಿದ್ದು ಅನ್ಯತ್ರ ಹೋಗುವಿಕೆಯು ಉಂಟಾಗದಿರಲಿ. ಅರ್ಥಾತ್ ಎಲ್ಲಿ ಹೋಗಬಯಸುತ್ತೀರೋ ಸರಿಯಾಗಿ ಅಲ್ಲಿಗೇ ಹೋಗಿ ತಲುಪಿರಿ; ಅತ್ತಿತ್ತ ಸರಿಯದಿರಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಅಭೂದು ಪಾರಮೇತವೇ ಪಂಥಾ ಋತಸ್ಯ ಸಾಧುಯಾ । ಅದರ್ಶಿ ವಿ ಸ್ರುತಿರ್ದಿವಃ ॥೧೧॥

ಪದಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಸಮುದ್ರಾದಿಗಳ **[ಪಾರಂ ಏತವೇ]** ಪಾರುಗಾಣಿಸಲಿಕ್ಕಾಗಿ ಎಲ್ಲಿ **[ದಿವಃ]** ಪ್ರಕಾಶಮಾನವಾದ ಸೂರ್ಯ ಮತ್ತು **[ಋತಸ್ಯ]** ಜಲದ **[ವಿಸ್ರುತಿಃ]** ಅನೇಕ ಪ್ರಕಾರದ ಗಮನಾರ್ಥವಾದ **[ಪಂಥಾಃ]** ಮಾರ್ಗಗಳು **[ಅಭೂತ್]** ಉಂಟಾಗಲಿ. ಅಲ್ಲಿ ಸ್ಥಿರರಾಗಿ **[ಸಾಧುಯಾ]** ಉತ್ತಮ ವಾಹನದಿಂದ ಸುಖಪೂರ್ವಕವಾಗಿ ದೇಶದೇಶಾಂತರಗಳನ್ನು **[ಅದರ್ಶಿ]** ನೋಡುವವರಾಗಿರಿ. ಹೀಗಾದಾಗ ಶ್ರೀಮಂತರೇಕಾಗುವುದಿಲ್ಲ?

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, ಎಲ್ಲೆಡೆಯೂ ಹೋಗಿಬರಲು ನೇರವಾದ ಮತ್ತು ಶುದ್ಧವಾದ ಮಾರ್ಗಗಳನ್ನು ನಿರ್ಮಿಸಿ, ವಿಮಾನಾದಿ ಯಾನಗಳಿಂದ ಇಚ್ಛಾಪೂರ್ವಕವಾಗಿ ಯಾನವನ್ನು ಮಾಡಿ ನಾನಾ ಪ್ರಕಾರದ ಸುಖಗಳನ್ನು ಹೊಂದಬೇಕು.

ಪುನಃ ಸಭಾ ಮತ್ತು ಸೇನಾಪತಿಗಳು ಅಶ್ವಿಗಳಿಂದ ಏನನ್ನು ಹೊಂದಲು ಬಯಸುತ್ತಾರೆ ಎಂಬುದನ್ನು ಹೇಳಲಾಗಿದೆ.

ತತ್ತದಿದಶ್ವಿನೋರವೋ ಜರಿತಾ ಪ್ರತಿ ಭೂಷತಿ । ಮದೇ ಸೋಮಸ್ಯ ಪಿಪ್ರತೋಃ ॥೧೨॥

ಪದಾರ್ಥ:- ಯಾವ **[ಜರಿತಾ]** ಸ್ತುತಿಮಾಡುವವನಾದ ವಿದ್ವಾಂಸನು **[ಪಿಪ್ರತೋಃ]** ಪೂರ್ಣಗೊಳಿಸುವ **[ಅಶ್ವಿನೋಃ]** ಸಭೆ ಮತ್ತು ಸೇನಾಪತಿಗಳಿಂದ **[ಸೋಮಸ್ಯ]** ಉತ್ಪನ್ನವಾಗಿರುವ ಜಗತ್ತಿನ ನಡುವೆ **[ಮದೇ]** ಆನಂದಯುಕ್ತ ವ್ಯವಹಾರದಲ್ಲಿ **[ಅವಃ]** ರಕ್ಷಣಾದಿಗಳನ್ನು **[ಪ್ರತಿಭೂಷತಿ]** ಅಲಂಕೃತಗೊಳಿಸುತ್ತಾರೋ **[ತತ್ತತ್]** ಆಯಾ ಸುಖಗಳನ್ನು ಪ್ರಾಪ್ತಿಸುತ್ತಾರೆ.

ಭಾವಾರ್ಥ:- ಯಾವನೂ ವಿದ್ವಾಂಸರಿಂದ ಶಿಕ್ಷಣ ಹಾಗೂ ಕ್ರಿಯೆಗಳನ್ನು ಗ್ರಹಣ ಮಾಡದೆ ಸಮಸ್ತ ಸುಖಗಳನ್ನು ಪ್ರಾಪ್ತಿಸಲಾರನು. ಇದರಿಂದ ಅವರ ಅನ್ವೇಷಣೆಯನ್ನು ನಿತ್ಯವೂ ಮಾಡತಕ್ಕದ್ದು.

ಪುನಃ ಅವರು ಹೇಗಿದ್ದಾರೆ ಎಂಬುದನ್ನು ತಿಳಿಸಲಾಗಿದೆ.

ವಾವಸಾನಾ ವಿವಸ್ವತಿ ಸೋಮಸ್ಯ ಪೀತ್ಯಾ ಗಿರಾ । ಮನುಷ್ವಚ್ಛಂಭೂ ಆ ಗತಮ್ ॥೧೩॥

ಪದಾರ್ಥ:- ಹೇ **[ವಾವಸಾನಾ]** ಅತ್ಯಂತ ಸುಖದಲ್ಲಿ ನೆಲೆಸಿರುವ **[ಶಂಭೂ]** ಸುಖಗಳನ್ನು ಉತ್ಪನ್ನಗೊಳಿಸುವ, ಓದಿಸುವ ಮತ್ತು ಸತ್ಯವಿದ್ಯೆಯ ಉಪದೇಶ ಮಾಡುವವರೇ! ನೀವು **[ವಿವಸ್ವತಿ]** ಸೂರ್ಯನ ಪ್ರಕಾಶದಲ್ಲಿ **[ಸೋಮಸ್ಯ]** ಉತ್ಪನ್ನವಾದ ಜಗತ್ತಿನ ಮಧ್ಯದಲ್ಲಿ **[ಪೀತ್ಯಾ]** ರಕ್ಷಣಾರೂಪೀ ಕ್ರಿಯೆಯ ಮತ್ತು **[ಗಿರಾ]** ವಾಣಿಯಿಂದ ನಮ್ಮನ್ನು **[ಮನುಷ್ವತ್]** ರಕ್ಷಣೆ ಮಾಡುವ ಮನುಷ್ಯರಂತೆ **[ಆಗತಮ್]** ಎಲ್ಲ ರೀತಿಯಿಂದಲೂ ಪ್ರಾಪ್ತರಾಗಿರಿ.

ಭಾವಾರ್ಥ:- ಹೇ ಮನುಷ್ಯರೇ! ನೀವು, ಯಾವ ರೀತಿ ಪರೋಪಕಾರಿ ಮನುಷ್ಯನು ಪ್ರಾಣಿಗಳ ನಿವಾಸ ಹಾಗೂ ವಿದ್ಯಾಪ್ರಕಾಶದ ದಾನದಿಂದ ಸುಖಗಳನ್ನು ಪ್ರಾಪ್ತಿಸುತ್ತಾರೋ ಅದೇ ರೀತಿ ನೀವೂ ಸಹ ಅವುಗಳನ್ನು ಪ್ರಾಪ್ತಿಸಿರಿ.

ಇವರಿಬ್ಬರಿಂದಲೂ ಏನನ್ನು ಹೊಂದಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಯುವೋರುಷಾ ಅನು ಶ್ರಿಯಂ ಪರಿಜ್ಮನೋರುಪಾಚರತ್ । ಋತಾ ವನಥೋ ಅಕ್ತುಭಿಃ ॥೧೪॥

ಪದಾರ್ಥ:- ಹೇ **[ಋತಾ]** ಉಚಿತಗುಣ ಸುಂದರ ಸ್ವರೂಪನಾದ ಸಭಾಸೇನಾಪತಿಯೇ! ಯಾವ ರೀತಿ **[ಉಷಾ]** ಪ್ರಭಾತ ಸಮಯವು **[ಅಕ್ತುಭಿಃ]** ರಾತ್ರಿಗಳೊಂದಿಗೆ **[ಉಪಾಚರತ್]** ಪ್ರಾಪ್ತವಾಗುತ್ತದೆಯೋ ಹಾಗೆಯೇ

ಯಾವ **[ಪರಿಜ್ಮನೋಃ]** ಸರ್ವತ್ರಗಮನಮಾಡುವ ಪದಾರ್ಥಗಳನ್ನು ಪ್ರಕಾಶದಿಂದ ಬಿಸುಡುವ ಸೂರ್ಯ ಮತ್ತು ೧ಚಂದ್ರರಂತೆ ಇರುವ **[ಯುವೋಃ]** ನಿಮ್ಮ ನ್ಯಾಯ ಮತ್ತು ರಕ್ಷಣೆಯು ನಮ್ಮನ್ನು ಪ್ರಾಪ್ತಿಸಲಿ. ನೀವು **[ಶ್ರಿಯಂ]** ಉತ್ತಮ ಲಕ್ಷ್ಮಿಯನ್ನು [ಅರ್ಥಾತ್ ಸಂಪತ್ತನ್ನು] **[ಅನು ವನಥಃ]** ಅನುಕೂಲತೆಯೊಂದಿಗೆ ಸೇವನೆ ಮಾಡಿರಿ.

ಭಾವಾರ್ಥ:- ರಾಜಾ ಮತ್ತು ಪ್ರಜಾ ಜನಗಳು ಪರಸ್ಪರ ಪ್ರೀತಿಯಿಂದ ಹಿರಿದಾದ ಐಶ್ವರ್ಯವನ್ನು ಪಡೆದು ಸದಾ ಸರ್ವರ ಉಪಕಾರದಲ್ಲಿ ಯತ್ನಶೀಲರಾಗಬೇಕು.

ಪುನಃ ಅವರು ನಮಗಾಗಿ ಏನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಉಭಾ ಪಿಬತಮಶ್ವಿನೋ-ಭಾ ನಃ ಶರ್ಮ ಯಚ್ಛತಮ್ । ಅವಿದ್ರಿಯಾಭಿರೂತಿಭಿಃ ॥೧೫॥

ಪದಾರ್ಥ:- ಹೇ ಸಭಾ ಮತ್ತು ಸೇನೆಗಳ ಅಧ್ಯಕ್ಷರೇ! **[ಅಶ್ವಿನಾ]** ಸಂಪೂರ್ಣ ವಿದ್ಯೆ ಮತ್ತು ಸುಖದಲ್ಲಿ ವ್ಯಾಪ್ತರಾದವರೇ! ನೀವಿಬ್ಬರು ಅಮೃತರೂಪೀ ಔಷಧಿಗಳ ರಸವನ್ನು **[ಪಿಬತಂ]** ಕುಡಿಯಿರಿ. **[ಉಭಾ]** ಇಬ್ಬರೂ **[ಅವಿದ್ರಿಯಾಭಿಃ]** ಅಖಂಡಿತ ಕ್ರಿಯಾಯುಕ್ತವಾದ **[ಊತಿಭಿಃ]** ರಕ್ಷಣೆಗಳೊಂದಿಗೆ **[ನಃ]** ನಮಗೆ **[ಶರ್ಮ]** ಸುಖವನ್ನು **[ಯಚ್ಛತಮ್]** ನೀಡಿರಿ.

ಭಾವಾರ್ಥ:- ಯಾವ ಸಭಾ ಮತ್ತು ಸೇನಾಧ್ಯಕ್ಷರಾದ ರಾಜಪುರುಷರಿದ್ದಾರೋ ಅವರು ಪ್ರೀತಿ ಮತ್ತು ವಿನಯದಿಂದ ಪ್ರಜೆಗಳ ಪಾಲನೆಯನ್ನು ಮಾಡಬೇಕು. ಆಗ ಪ್ರಜೆಗಳೂ ಅವರ ರಕ್ಷಣೆಯನ್ನು ಉತ್ತಮರೀತಿಯಿಂದ ಮಾಡುತ್ತಾರೆ.

ಈ ಸೂಕ್ತದಲ್ಲಿ ಉಷಾ ಮತ್ತು ಅಶ್ವಿಗಳ ಪ್ರತ್ಯಕ್ಷಾರ್ಥ ವರ್ಣನೆ ಮಾಡಲಾಗಿದೆ. ಇದರಿಂದ ಈ ಸೂಕ್ತಾರ್ಥದೊಂದಿಗೆ ಹಿಂದಿನ ಸೂಕ್ತಾರ್ಥವು ಸಂಗತಿಯನ್ನು ಹೊಂದುತ್ತದೆ ಎಂಬುದನ್ನು ತಿಳಿಯಬೇಕು.

ನಲವತ್ತಾರನೆಯ ಸೂಕ್ತ ಸಮಾಪ್ತ

ಸೂಕ್ತ ೪೭

ಮಂ.ಸಂ. ೧೦ । ಋಷಿಃ - ಪ್ರಸ್ಕಣ್ವಃ ಕಾಣ್ವಃ । ದೇವತಾ - ಅಶ್ವಿನೌ । ಛಂದಃ - ೧, ೫ ನಿಚೃತ್ ಪಥ್ಯಾ ಬೃಹತೀ, ೩, ೭ ಪಥ್ಯಾ ಬೃಹತೀ, ೯ ವಿರಾಟ್ ಪಥ್ಯಾ ಬೃಹತೀ ೨, ೬, ೮ ನಿಚೃತ್ ಸತಃ ಪಂಕ್ತಿಃ, ೪, ೧೦ ಸತಃ ಪಂಕ್ತಿಃ।
ಸ್ವರಃ - ಮಧ್ಯಮಃ, ಪಂಚಮಃ ।

ಸೂಕ್ತದ ಪ್ರಥಮ ಮಂತ್ರದಲ್ಲಿ ಅಶ್ವಿಗಳಿಂದ ಏನನ್ನು ಸಿದ್ಧಿಸಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಅಯಂ ವಾಂ ಮಧುಮತ್ತಮಃ ಸುತಃ ಸೋಮ ಋತಾವೃಧಾ ।
ತಮಶ್ವಿನಾ ಪಿಬತಂ ತಿರೋಅಹ್ನ್ಯಂ ಧತ್ತಂ ರತ್ನಾನಿ ದಾಶುಷೇ ॥೧॥

ಪದಾರ್ಥ:- ಹೇ **[ಋತಾವೃಧಾ]** ಜಲ ಮತ್ತು ಯಥಾರ್ಥ ಶಿಲ್ಪಕ್ರಿಯೆಯನ್ನು ಮಾಡಿ ವೃದ್ಧಿಹೊಂದುವ **[ಅಶ್ವಿನಾ]** ಸೂರ್ಯ ಮತ್ತು ವಾಯುಗಳಂತೆ ಇರುವ ಸಭೆ ಮತ್ತು ಸೇನೆಗಳ ಅಧ್ಯಕ್ಷರೇ! **[ವಾಂ]** ಯಾರು **[ಅಯಂ]** ಈ **[ಮಧುಮತ್ತಮಃ]** ಅತ್ಯಂತ ಮಧುರಗುಣಯುಕ್ತವಾದ **[ಸೋಮಃ]** ಯಾನ ವ್ಯಾಪಾರ ಮತ್ತು ವೈದ್ಯಕ ಶಿಲ್ಪಕ್ರಿಯೆಯಿಂದ ನಾವುಗಳು **[ಸುತಃ]** ಸಿದ್ಧಿಗೊಳಿಸಿದ್ದೇವೆಯೋ **[ತಂ]** ಆ **[ತಿರೋಅಹ್ನ್ಯಂ]** ತಿರಸ್ಕೃತವಾದ ದಿನದಲ್ಲಿ ಉತ್ಪನ್ನವಾದ ರಸವನ್ನು ನೀವುಗಳು **[ಪಿಬತಂ]** ಪಾನಮಾಡಿರಿ. ಮತ್ತು ವಿದ್ಯಾದಾನ ಮಾಡುವ ವಿದ್ವಾಂಸರಿಗಾಗಿ **[ರತ್ನಾನಿ]** ಸುವರ್ಣಾದಿಗಳನ್ನೂ ಮತ್ತು ಯಾನಾದಿಗಳನ್ನೂ **[ಧತ್ತಂ]** ಧಾರಣ ಮಾಡಿರಿ.

ಭಾವಾರ್ಥ:- ಸಭಾಧ್ಯಕ್ಷನೇ ಮೊದಲಾದವರು ಸದಾ ಔಷಧಿಗಳ ರಸದ ಸೇವನೆಯಿಂದ ಉತ್ತಮ ಪ್ರಕಾರ ಬಲಿಷ್ಠರಾಗಿ ಪ್ರಜೆಗಳ ಶೋಭೆಯನ್ನು ಹೆಚ್ಚಿಸಲಿ.

ಅವರಿಂದ ಸಿದ್ಧಿಗೊಳಿಸಲ್ಪಟ್ಟ ಯಾನದಿಂದ ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ತ್ರಿವಂಧುರೇಣ ತ್ರಿವೃತಾ ಸುಪೇಶಸಾ ರಥೇನಾ ಯಾತಮಶ್ವಿನಾ ।
ಕಣ್ವಾಸೋ ವಾಂ ಬ್ರಹ್ಮ ಕೃಣ್ವಂತ್ಯಧ್ವರೇ ತೇಷಾಂ ಸು ಶೃಣುತಂ ಹವಮ್ ॥೨॥

ಪದಾರ್ಥ:- ಹೇ **[ಅಶ್ವಿನಾ]** ಪಾವಕ ಮತ್ತು ಜಲದ ಸಮಾನರಾದ ಸಭೆ ಮತ್ತು ಸೇನೆಗಳ ಅಧ್ಯಕ್ಷರೇ! ನೀವುಗಳು ಯಾವ ರೀತಿ **[ಕಣ್ವಾಸಃ]** ಬುದ್ಧಿವಂತರಾದವರು **[ಅಧ್ವರೇ]** ಅಗ್ನಿಹೋತ್ರಾದಿಗಳಲ್ಲಿ ಮತ್ತು ಶಿಲ್ಪಕ್ರಿಯೆಗಳಿಂದ ಸಿದ್ಧವಾದ ಯಜ್ಞಗಳಲ್ಲಿ ಯಾವ **[ತ್ರಿವಂಧುರೇಣ]** ಮೂರು ಬಂಧಯುಕ್ತವಾದ **[ತ್ರಿವೃತಾ]** ಮೂರು ಶಿಲ್ಪಕ್ರಿಯೆಗಳ ಪ್ರಕಾರಗಳಿಂದ ಪೂರಿತವಾದ **[ಸುಪೇಶಸಾ]** ಉತ್ತಮ ರೂಪದಿಂದ ಅಥವಾ ಚಿನ್ನದಿಂದ ಜಟಿತವಾದ **[ರಥೇನ]** ವಿಮಾನಾದಿ ಯಾನಗಳಿಂದ ದೇಶದೇಶಾಂತರಗಳಲ್ಲಿ ಶೀಘ್ರವಾಗಿ ಹೋಗಿಬಂದು **[ಬ್ರಹ್ಮ]** ಅನ್ನಾದಿ ಪದಾರ್ಥಗಳನ್ನು **[ಕೃಣ್ವಂತಿ]** ಉಂಟುಮಾಡುತ್ತಾರೋ ಅದೇ ರೀತಿ ಅದರಿಂದ ದೇಶದೇಶಾಂತರ ಹಾಗೂ ದ್ವೀಪದ್ವೀಪಾಂತರಗಳನ್ನು **[ಆಯಾತಂ]** ಹೋಗಿಬಂದು ಮಾಡಿರಿ. **[ತೇಷಾಂ]** ಆ ಬುದ್ಧಿವಂತರ **[ಹವಂ]** ಗ್ರಹಣಯೋಗ್ಯ ವಿದ್ಯೆಗಳ ಉಪದೇಶವನ್ನು **[ಶೃಣುತಂ]** ಆಲಿಸಿರಿ ಮತ್ತು ಅನ್ನಾದಿ ಸಮೃದ್ಧಿಗಳನ್ನು ಹೆಚ್ಚಿಸಿರಿ.

ಭಾವಾರ್ಥ:- ಇಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ವಿದ್ವಾಂಸರ ಸಂಗದಿಂದ ಪದಾರ್ಥ ವಿಜ್ಞಾನಪೂರ್ವಕವಾಗಿ ಯಜ್ಞವನ್ನು ಮತ್ತು ಶಿಲ್ಪವಿದ್ಯೆಯ ಕರಕುಶಲತೆಯನ್ನು ಸಾಕ್ಷಾತ್ಕರಿಸಿಕೊಂಡು ವ್ಯವಹಾರರೂಪೀ ಕಾರ್ಯಗಳನ್ನು ಸಿದ್ಧಿಸಬೇಕು.

ಪುನಃ ಅವರು ಹೇಗಿದ್ದಾರೆ ಎಂಬುದನ್ನು ತಿಳಿಸಲಾಗಿದೆ.

ಅಶ್ವಿನಾ ಮಧುಮತ್ತಮಂ ಪಾತಂ ಸೋಮಮೃತಾವೃಧಾ ।
ಅಥಾದ್ಯ ದಸ್ರಾ ವಸು ಬಿಭ್ರತಾ ರಥೇ ದಾಶ್ವಾಂಸಮುಪಗಚ್ಛತಮ್ ॥೩॥

ಪದಾರ್ಥ:- ಹೇ **[ಅಶ್ವಿನಾ]** ಸೂರ್ಯ ವಾಯುಗಳಂತೆ ಕರ್ಮ ಮತ್ತು **[ದಸ್ರಾ]** ದುಃಖಗಳನ್ನು ದೂರ ಮಾಡುವವರೇ! **[ವಸು]** ಸರ್ವೋತ್ಕೃಷ್ಟ ಧನವನ್ನು **[ಬಿಭ್ರತಾ]** ಧಾರಣ ಮಾಡುತ್ತಾ ಹಾಗೂ **[ಋತಾವೃಧಾ]** ಯಥಾರ್ಥಗುಣ ಸಂಯುಕ್ತವಾದ ಪ್ರಾಪ್ತಿ ಸಾಧನದಿಂದ ವೃದ್ಧಿಯನ್ನು ಹೊಂದಿದ ಸಭೆ ಮತ್ತು ಸೇನೆಯ ಪತಿಗಳಾದ ನೀವು **[ಅದ್ಯ]** ಈ ವರ್ತಮಾನ ದಿನದಲ್ಲಿ **[ಮಧುಮತ್ತಮಂ]** ಅತ್ಯಂತ ಮಧುರಾದಿಗುಣಗಳಿಂದ ಯುಕ್ತವಾದ **[ಸೋಮಂ]** ವೀರರಸದ **[ಪಾತಂ]** ರಕ್ಷಣೆಯನ್ನು ಮಾಡಿರಿ. **[ಅಥ]** ಆನಂತರ ಪೂರ್ವೋಕ್ತವಾದ **[ರಥೇ]** ವಿಮಾನಾದಿ ರಥಗಳಲ್ಲಿ ಸ್ಥಿತರಾಗಿ **[ದಾಶ್ವಾಂಸಂ]** ನೀಡುವ ಮನುಷ್ಯನ **[ಉಪಗಚ್ಛತಮ್]** ಸಮೀಪದಲ್ಲಿ ಪ್ರಾಪ್ತರಾಗಿರಿ.

ಭಾವಾರ್ಥ:- ಇಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ವಾಯುವಿನಿಂದ ಪುಷ್ಟಿಯೂ, ಸೂರ್ಯಚಂದ್ರರಿಂದ ಕತ್ತಲೆಯ ನಾಶವೂ ಆಗುತ್ತದೆಯೋ ಹಾಗೆಯೇ ಸಭೆ ಮತ್ತು ಸೇನೆಯ ಅಧ್ಯಕ್ಷರಿಂದ ಪ್ರಜೆಗಳ, ಪ್ರಾಣಿಮಾತ್ರರ ಸಂತುಷ್ಟಿ, ದುಃಖಗಳ ವಿನಾಶ ಮತ್ತು ಧನದ ವೃದ್ಧಿಯು ಉಂಟಾಗುತ್ತದೆ.

ಪುನಃ ಅವರು ಹೇಗಿದ್ದಾರೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ತ್ರಿಷಧಸ್ಥೇ ಬರ್ಹಿಷಿ ವಿಶ್ವವೇದಸಾ ಮಧ್ವಾ ಯಜ್ಞಂ ಮಿಮಿಕ್ಷತಮ್ ।

ಕಣ್ವಾಸೋ ವಾಂ ಸುತಸೋಮಾ ಅಭಿದ್ಯವೋ ಯುವಾಂ ಹವಂತೇ ಅಶ್ವಿನಾ ॥೪॥

ಪದಾರ್ಥ:- ಹೇ [**ವಿಶ್ವವೇದಸಾ**] ಸಮಸ್ತ ಧನಗಳನ್ನು ಪ್ರಾಪ್ತಿಗೊಳಿಸುವವರಾದ [**ಅಶ್ವಿನಾ**] ಕ್ಷತ್ರಿಯರ ಧರ್ಮದಲ್ಲಿ ಸ್ಥಿತರಾದವರಂತಿರುವ ಸಭಾ ಸೇನಾಧೀಶರುಗಳ ರಕ್ಷಕರೇ! ನೀವು ಯಾವ ರೀತಿ [**ಅಭಿದ್ಯವಃ**] ಸರ್ವಪ್ರಕಾರದಿಂದ ವಿದ್ಯೆಗಳ ಪ್ರಕಾಶಕನೇ ಮತ್ತು ವಿದ್ಯುತ್ತೇ ಮೊದಲಾದ ಪದಾರ್ಥಗಳ ಸಾಧಕರು [**ಸುತಸೋಮಾಃ**] ಉತ್ಪನ್ನ ಪದಾರ್ಥಗಳ ಗ್ರಾಹಕರು [**ಕಣ್ವಾಸಃ**] ಆದ ಮೇಧಾವಿ ವಿದ್ವಾಂಸರು [**ತ್ರಿ ಸಧಸ್ಥೇ**] ಯಾವುದರಲ್ಲಿ ಮೂರೂ ನೆಲ, ಜಲ, ಪವನ ಸ್ಥಿತಿಗಳಿಗಾಗಿದೆಯೋ ಆ [**ಬರ್ಹಿಷಿ**] ಅಂತರಿಕ್ಷದಲ್ಲಿ [**ಮಧ್ವಾ**] ಮಧುರ ರಸದಿಂದ [**ವಾಂ**] ನಿಮ್ಮ ಮತ್ತು [**ಯಜ್ಞಂ**] ಶಿಲ್ಪಕರ್ಮವನ್ನು [**ಹವಂತೇ**] ಗ್ರಹಣಮಾಡುತ್ತಾರೋ ಅದೇ ರೀತಿ [**ಮಿಮಿಕ್ಷತಮ್**] ಸಿದ್ಧಗೊಳಿಸಲು ಇಚ್ಛಿಸಿರಿ.

ಭಾವಾರ್ಥ:- ಯಾವ ರೀತಿ ವಿದ್ವಾಂಸರಿಂದ ವಿದ್ಯೆಯನ್ನು ಕಲಿತು ಯಾನವನ್ನು ರಚಿಸಿ ಅದರಲ್ಲಿ ಜಲ ಮೊದಲಾದವುಗಳನ್ನು ಉಕ್ತಗೊಳಿಸಿ ಶೀಘ್ರವಾಗಿ ಹೋಗಿಬರುವುದರಲ್ಲಿ ಸಮರ್ಥರಾಗುತ್ತಾರೋ ಅದೇ ರೀತಿ ಬೇರೆ ಉಪಾಯಗಳಿಂದ ಅಲ್ಲ, ಆದುದರಿಂದ ಅದರಲ್ಲಿ ಪರಿಶ್ರಮವನ್ನು ಅವಶ್ಯವಾಗಿ ಮಾಡಬೇಕು.

ಪುನಃ ಅವರು ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಯಾಭಿಃ ಕಣ್ವಮಭಿಷ್ಟಿಭಿಃ ಪ್ರಾವತಂ ಯುವಮಶ್ವಿನಾ ।

ತಾಭಿಃ ಷ್ವ೧ ಸ್ಮಾಁ ಅವತಂ ಶುಭಸ್ಪತೀ ಪಾತಂ ಸೋಮಮೃತಾವೃಧಾ ॥೫॥

ಪದಾರ್ಥ:- ಹೇ [**ಋತಾವೃಧಾ**] ಸತ್ಯಾನುಷ್ಠಾನದಿಂದ ವೃದ್ಧಿಸುವ [**ಶುಭಸ್ಪತೀ**] ಕಲ್ಯಾಣಕಾರಕ ಕರ್ಮ ಅಥವಾ ಶ್ರೇಷ್ಠಗುಣ ಸಮೂಹಗಳ ಪಾಲಕರೇ! [**ಅಶ್ವಿನಾ**] ಸೂರ್ಯ ಮತ್ತು ಚಂದ್ರರ ಗುಣಗಳನ್ನು ಹೊಂದಿದ ಸಭಾಸೇನಾಧ್ಯಕ್ಷರುಗಳೇ! [**ಯುವಂ**] ನೀವಿಬ್ಬರು [**ಯಾಭಿಃ**] ಯಾವ [**ಅಭಿಷ್ಟಿಭಿಃ**] ಇಚ್ಛೆಗಳಿಂದ [**ಸೋಮಂ**] ನಿಮ್ಮ ಐಶ್ವರ್ಯ ಮತ್ತು [**ಕಣ್ವಂ**] ಮೇಧಾವಿ ವಿದ್ವಾಂಸರ [**ಪಾತಂ**] ರಕ್ಷಣೆಯನ್ನು ಮಾಡುವಿರೋ ಅದರಿಂದಲೇ [**ಅಸ್ಮಾನ್**] ನಮಗೆ [**ಸು**] ಉತ್ತಮ ಪ್ರಕಾರದ [**ಅವತಂ**] ರಕ್ಷಣೆ ಉಂಟಾಗಲಿ. ಮತ್ತು ಯಾವುದರಿಂದ ನಮ್ಮ ರಕ್ಷಣೆ ಮಾಡಲಾಗುತ್ತದೆಯೋ ಅದರಿಂದಲೇ ಸಮಸ್ತ ಪ್ರಾಣಿಗಳ [**ಆವತಂ**] ರಕ್ಷಣೆಯನ್ನೂ ಮಾಡಿರಿ.

ಭಾವಾರ್ಥ:- ಸಭೆ ಮತ್ತು ಸೇನೆಗಳ ಪತಿಗಳಾದ ರಾಜಪುರುಷರು ಯಾವರೀತಿ ತಮ್ಮ ಐಶ್ವರ್ಯದ ರಕ್ಷಣೆಯನ್ನು ಮಾಡುತ್ತಾರೋ ಅದೇ ರೀತಿ ಪ್ರಜೆಗಳ ಮತ್ತು ಸೇನೆಗಳ ರಕ್ಷಣೆಯನ್ನು ಮಾಡಬೇಕು.

ಪುನಃ ಅವರು ಹೇಗಿರುತ್ತಾರೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಸುದಾಸೇ ದಸ್ರಾ ವಸು ಬಿಭ್ರತಾ ರಥೇ ಪೃಕ್ಷೋ ವಹತಮಶ್ವಿನಾ ।

ರಯಿಂ ಸಮುದ್ರಾದುತ ವಾ ದಿವಸ್ಪ-ರ್ಯಸ್ಮೇ ಧತ್ತಂ ಪುರುಸ್ಪೃಹಮ್ ॥೬॥

ಪದಾರ್ಥ:- ಹೇ [**ದಸ್ರಾ**] ಶತ್ರುಗಳ ನಾಶವನ್ನು ಮಾಡುವ [**ವಸು**] ವಿದ್ಯಾದಿ ಧನ ಸಮೂಹವನ್ನು [**ಬಿಭ್ರತಾ**] ಧಾರಣ ಮಾಡುತ್ತಿರುವ [**ಅಶ್ವಿನಾ**] ವಾಯು ಮತ್ತು ವಿದ್ಯುತ್ತಿನಂತೆ ಪೂರ್ಣ ಐಶ್ವರ್ಯಯುಕ್ತರೇ! ನೀವು ಯಾವ ರೀತಿ [**ಸುದಾಸೇ**] ಉತ್ತಮ ಸೇವಕರನ್ನು ಹೊಂದಿದ [**ರಥ**] ವಿಮಾನಾದಿ ಯಾನದಲ್ಲಿ [**ಸಮುದ್ರಾತ್**] ಸಾಗರ ಮತ್ತು ಸೂರ್ಯರಿಂದ [**ಉತ**] ಮತ್ತು [**ದಿವಃ**] ಪ್ರಕಾಶಯುಕ್ತವಾದ ಆಕಾಶದಿಂದ . ಮುಂದೆ [**ಪೃಕ್ಷಃ**] ಸುಖಪ್ರಾಪ್ತಿಯ ನಿಮಿತ್ತ [**ಪುರುಸ್ಪೃಹಮ್**] ಯಾರನ್ನು ಬಹುಮಂದಿ ಇಚ್ಛಿಸುತ್ತಾರೋ ಅವರು [**ರಯಿಮ್**] ರಾಜ್ಯಲಕ್ಷ್ಮಿಯನ್ನು ಧಾರಣ ಮಾಡುತ್ತಾರೋ ಆ ರೀತಿ [**ಅಸ್ಮೇ**] ನಮಗಾಗಿ [**ಪರಿಧತ್ತಂ**] ಧಾರಣ ಮಾಡಲಿ.

ಭಾವಾರ್ಥ:- ರಾಜಪುರುಷರಿಗೆ ಯೋಗ್ಯವಾದುದೇನೆಂದರೆ ಸೇನೆ ಮತ್ತು ಪ್ರಜೆಗಳ ಕಾರಣಕ್ಕಾಗಿ ನಾನಾಪ್ರಕಾರದ ಧನ ಮತ್ತು ಸಮುದ್ರಾದಿಗಳನ್ನು ದಾಟಿಹೋಗಲಿಕ್ಕಾಗಿ ವಿಮಾನಾದಿ ಯಾನಗಳನ್ನು ರಚಿಸಿ ಎಲ್ಲ ರೀತಿಯ ಸುಖಗಳನ್ನೂ, ಉನ್ನತಿಯನ್ನೂ ಹೊಂದಲಿ.

ಮತ್ತೆ ಅವರು ಏನನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಯನ್ನಾಸತ್ಯಾ ಪರಾವತಿ ಯದ್ ವಾ ಸ್ಥೋ ಅಧಿ ತುರ್ವಶೇ ।

ಅತೋ ರಥೇನ ಸುವೃತಾ ನ ಆ ಗತಂ ಸಾಕಂ ಸೂರ್ಯಸ್ಯ ರಶ್ಮಿಭಿಃ ॥೭॥

ಪದಾರ್ಥ:- ಹೇ [**ನಾಸತ್ಯಾ**] ಸತ್ಯಗುಣಕರ್ಮ ಸ್ವಭಾವಗಳುಳ್ಳವರಾದ ಸಭಾಸೇನಾಧ್ಯಕ್ಷರೇ! ನೀವು [**ಯತ್**] ಯಾವ [**ಸುವೃತಾ**] ಉತ್ತಮ ಅಂಗಗಳಿಂದ ಪರಿಪೂರ್ಣವಾದ [**ರಥೇನ**] ವಿಮಾನಾದಿ ಯಾನದಿಂದ [**ಯತ್**] ಯಾವ ಕಾರಣದಿಂದ [**ಪರಾವತಿ**] ದೂರದೇಶದಲ್ಲಿ ಗಮನ ಮಾಡುವ ಹಾಗೂ [**ತುರ್ವಶೇ**] ವೇದ ಮತ್ತು ಶಿಲ್ಪ ವಿದ್ಯೆಯನ್ನು ತಿಳಿಯುವ ವಿದ್ವಾಂಸರ [**ಅಧಿಷ್ಠಃ**] ಮೇಲೆ ಸ್ಥಿತರಾಗಿರುತ್ತಾರೋ [**ಅತಃ**] ಇದರಿಂದ [**ಸೂರ್ಯಸ್ಯ**] ಸೂರ್ಯನ [**ರಶ್ಮಿಭಿಃ**] ಕಿರಣಗಳ [**ಸಾಕಂ**] ಜೊತೆಗೆ [**ನಃ**] ನಮಗೆ [**ಆಗತಂ**] ಎಲ್ಲ ರೀತಿಯಿಂದಲೂ ಪ್ರಾಪ್ತರಾಗಿರಿ.

ಭಾವಾರ್ಥ:- ರಾಜ್ಯಸಭೆಯ ಪತಿಯಾದವನು ಯಾವ ವಾಹನದಿಂದ ಅಂತರಿಕ್ಷ ಮಾರ್ಗದಲ್ಲಿ ದೇಶದೇಶಾಂತರಗಳಿಗೆ ಹೋಗಿಬರಲು ಸಮರ್ಥರಾಗುತ್ತಾರೋ ಅಂತಹುದನ್ನು ಪ್ರಯತ್ನದಿಂದ ರೂಢಿಸಬೇಕು.

ಪುನಃ ಅವರು ಯಾವುದಕ್ಕೆ ಕಾರಣರಾಗುತ್ತಾರೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಅರ್ವಾಂಚಾ ವಾಂ ಸಪ್ತಯೋಽಧ್ವರಶ್ರಿಯೋ ವಹಂತು ಸವನೇದುಪ ।

ಇಷಂ ಪೃಂಚಂತಾ ಸುಕೃತೇ ಸುದಾನವ ಆ ಬರ್ಹಿಃ ಸೀದತಂ ನರಾ ॥೮॥

ಪದಾರ್ಥ:- ಹೇ [**ಅರ್ವಾಂಚಾ**] ಕುದುರೆಗಳಂತೆ ವೇಗವನ್ನು ಹೊಂದಿದ [**ಪೃಂಚಂತಾ**] ಸುಖಗಳನ್ನುಂಟುಮಾಡುವ [**ನರಾ**] ಸಭಾಸೇನಾಧೀಶರೇ! ನೀವು ಯಾವ [**ವಾಂ**] ನಿಮ್ಮ [**ಸಪ್ತಯಃ**] ಬಾಷ್ಪವೇ ಮೊದಲಾದ ಅಶ್ವಯುಕ್ತವಾದ [**ಸುಕೃತೇ**] ಸುಂದರಕರ್ಮ ಮಾಡುವ [**ಸುದಾನವೇ**] ಉತ್ತಮ ದಾತೃವಾದ ಮನುಷ್ಯನಿಗಾಗಿ [**ಇಷಂ**] ಧರ್ಮದ ಇಚ್ಛೆಯನ್ನು ಅಥವಾ ಉತ್ತಮ ಅನ್ನಾದಿಗಳನ್ನು [**ಬರ್ಹಿಃ**] ಆಕಾಶ ಅಥವಾ ಶ್ರೇಷ್ಠ ಪದಾರ್ಥಗಳ [**ಸವನಾ**] ಯಜ್ಞ ಸಿದ್ಧಿಯ ಕ್ರಿಯೆ ಮತ್ತು [**ಅಧ್ವರಃಶ್ರಿಯಃ**] ಪಾಲನೀಯ ಚಕ್ರವರ್ತೀ ರಾಜ್ಯಲಕ್ಷ್ಮಿಯನ್ನು [**ಆ ವಹಂತು**] ಪ್ರಾಪ್ತಿಸುತ್ತಾರೋ ಆ ಪುರುಷರ [**ಉಪಸೀದತಂ**] ಸಂಗವನ್ನು ಸದಾ ಮಾಡುವವರಾಗಿರಿ.

ಭಾವಾರ್ಥ:- ರಾಜ ಮತ್ತು ಪ್ರಜಾಜನರು ಪರಸ್ಪರರಲ್ಲಿ ಉತ್ತಮ ಪದಾರ್ಥಗಳನ್ನು ಕೊಡುವ ತೆಗೆದುಕೊಳ್ಳುವ ಮೂಲಕ ಸುಖಿಗಳಾಗಲಿ.

ಪುನಃ ಅವರು ಏನನ್ನು ಮಾಡಬೇಕು ಎಂಬುದನ್ನು ತಿಳಿಯೋಣ.

ತೇನ ನಾಸತ್ಯಾ ಗತಂ ರಥೇನ ಸೂರ್ಯತ್ವಚಾ ।
ಯೇನ ಶಶ್ವದೂಹಥುರ್ದಾಶುಷೇ ವಸು ಮಧ್ವಃ ಸೋಮಸ್ಯ ಪೀತಯೇ ॥೯॥

ಪದಾರ್ಥ:- ಹೇ [ನಾಸತ್ಯಾ] ಸತ್ಯಾಚರಣೆಯಲ್ಲಿ ನಿರತರಾದ ಸಭಾಸೇನಾಧ್ಯಕ್ಷರೇ! ನೀವುಗಳು [ಯೇನ] ಯಾವ [ಸೂರ್ಯತ್ವಚಾ] ಸೂರ್ಯಕಿರಣಗಳಂತೆ ಹೊಳೆಯುವ [ರಥೇನ] ಗತಿಶೀಲವಾದ ವಿಮಾನಾದಿ ಯಾನಗಳಿಂದ [ಆಗತಂ] ಉತ್ತಮ ರೀತಿಯ ಆಗಮನವನ್ನು ಮಾಡುತ್ತೀರೋ [ತೇನ] ಅದರಿಂದ [ದಾಶುಷೇ] ದಾನಶೀಲ ಮನುಷ್ಯನಿಗಾಗಿ [ಮಧ್ವಃ] ಮಧುರಗುಣಯುಕ್ತವಾದ [ಸೋಮಸ್ಯ] ಪದಾರ್ಥ ಸಮೂಹದ [ಪೀತಯೇ] ಪಾನ ಅಥವಾ ಭೋಗ ಮಾಡಲು [ವಸು] ಕಾರ್ಯರೂಪೀ ದ್ರವ್ಯವನ್ನು [ಊಹಥುಃ] ಪ್ರಾಪ್ತಗೊಳಿಸಿರಿ.

ಭಾವಾರ್ಥ:- ರಾಜಪುರುಷರು ಯಾವ ರೀತಿ ತಮ್ಮ ಹಿತಕ್ಕಾಗಿ ಪ್ರಯತ್ನ ಮಾಡುತ್ತಾರೋ ಅದೇ ರೀತಿ ಪ್ರಜೆಗಳ ಸುಖಕ್ಕಾಗಿಯೂ ಯತ್ನಶೀಲರಾಗಲಿ.

ಪುನಃ ಅವುಗಳ ಬಗೆಗೆ ಪ್ರಜಾಜನರು ಏನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಉಕ್ಥೇಭಿರರ್ವಾಗವಸೇ ಪುರುವಸೂ ಅರ್ಕೈಶ್ಚನಿ ಹ್ವಯಾಮಹೇ ।
ಶಶ್ವತ್ ಕಣ್ವಾನಾಂ ಸದಸಿ ಪ್ರಿಯೇ ಹಿ ಕಂ ಸೋಮಂ ಪಪಥುರಶ್ವಿನಾ ॥೧೦॥

ಪದಾರ್ಥ:- ಹೇ [ಪುರುವಸೂ] ಬಹಳ ವಿದ್ವಾಂಸರಲ್ಲಿ ನೆಲೆಸಿರುವ [ಅಶ್ವಿನಾ] ವಾಯು ಮತ್ತು ಸೂರ್ಯನಂತೆ ಇರುವ ಧರ್ಮ ಮತ್ತು ನ್ಯಾಯದ ಪ್ರಕಾಶಕರೇ! [ಅವಸೇ] ರಕ್ಷಣಾದಿಗಳಿಗಾಗಿ ನಾವುಗಳು [ಉಕ್ಥೇಭಿಃ] ವೇದೋಕ್ತ ಸ್ತೋತ್ರ ಮತ್ತು ವೇದವಿದ್ಯೆಯನ್ನು ತಿಳಿಯುವುದರಲ್ಲಿ ಕುಶಲರಾದ ವಿದ್ವಾಂಸರ ಇಷ್ಟವಚನಗಳ [ಅರ್ಕೈಃ] ವಿಚಾರಗಳಿಂದ ಎಲ್ಲಿ [ಕಣ್ವನಾಂ] ವಿದ್ವಾಂಸರ [ಪ್ರಿಯೇ] ಪ್ರೀತಿಪಾತ್ರವಾದ [ಸದಸಿ] ಸಭೆಯಲ್ಲಿ ನೀವುಗಳು [ನಿಹ್ವಯಾಮಹೇ] ಅತಿಶಯ ಶ್ರದ್ಧೆಯಿಂದ ಕರೆಯುತ್ತೀರೋ ಅಲ್ಲಿ ನೀವುಗಳು [ಅರ್ವಾಕ್] ಹಿಂದೆ [ಶಶ್ವತ್] ಸನಾತನವಾದ [ಕಂ] ಸುಖವನ್ನು ಹೊಂದಿರಿ. [ಚ] ಮತ್ತು [ಹಿ] ನಿಶ್ಚಯವಾಗಿ [ಸೋಮಂ] ಸೋಮವಲ್ಲಿಯೇ ಮೊದಲಾದ ಔಷಧಿಗಳ ರಸವನ್ನು [ಪಪಥುಃ] ಕುಡಿಯಿರಿ.

ಭಾವಾರ್ಥ:- ರಾಜಾ-ಪ್ರಜೆಗಳಾದವರು ವಿದ್ವಾಂಸರ ಸಭೆಗಳಲ್ಲಿ ಆಗಮಿಸಿ ನಿತ್ಯವೂ ಉಪದೇಶವನ್ನು ಆಲಿಸಿ ಅದರಿಂದ ಮಾಡಬೇಕಾದ ಮತ್ತು ಮಾಡಬಾರದ ಯೋಗ್ಯ ವಿಷಯಗಳ ಜ್ಞಾನವನ್ನು ಪಡೆಯಬೇಕು.

ಇಲ್ಲಿ ರಾಜಾ ಮತ್ತು ಪ್ರಜೆಗಳ ಧರ್ಮದ ವರ್ಣನೆ ಇರುವುದರಿಂದ ಈ ಸೂಕ್ತಾರ್ಥವು ಪೂರ್ವ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ನಲವತ್ತೇಳನೆಯ ಸೂಕ್ತ ಸಮಾಪ್ತ

ಸೂಕ್ತ ೪೮

ಮಂ.ಸಂ. ೧೬ । ಋಷಿಃ - ಪ್ರಸ್ಕಣ್ವಃ ಕಾಣ್ವಃ । ದೇವತಾ - ಉಷಾಃ । ಛಂದಃ - ೧, ೩, ೭, ೯ ವಿರಾಟ್ ಪಥ್ಯಾ ಬೃಹತೀ, ೫, ೧೧, ೧೩ ನಿಚೃದ್ ಪಥ್ಯಾ ಬೃಹತೀ, ೪, ೬, ೧೪ ವಿರಾಟ್ ಸತಃ ಪಂಕ್ತಿಃ, ೨, ೧೦, ೧೬ ನಿಚೃದ್ ಸತಃ ಪಂಕ್ತಿಃ, ೮ ಪಂಕ್ತಿಃ । ಸ್ವರಃ - ಮಧ್ಯಮಃ, ಪಂಚಮಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಉಷೆಯಂತೆ ಪುತ್ರಿಯರ ಗುಣಗಳು ಇರಬೇಕು ಎಂಬುದನ್ನು ಹೇಳಲಾಗಿದೆ.

ಸಹ ವಾಮೇನ ನ ಉಷೋ ವ್ಯುಚ್ಛಾ ದುಹಿತರ್ದಿವಃ ।
ಸಹ ದ್ಯುಮ್ನೇನ ಬೃಹತಾ ವಿಭಾವರಿ ರಾಯಾ ದೇವಿ ದಾಸ್ವತೀ ॥೧॥

ಪದಾರ್ಥ:- ಹೇ [ದಿವಃ] ಸೂರ್ಯಪ್ರಕಾಶದ [ದುಹಿತಃ] ಪುತ್ರಿಯ ಸಮಾನವಾದ [ಉಷಃ] ಉಷೆಯಂತೆ ಇರುವ [ವಿಭಾವರಿ] ವಿವಿಧ ದೀಪ್ತಿಯುಕ್ತ [ದೇವೀ] ವಿದ್ಯಾಸುಶಿಕ್ಷಣಗಳಿಂದ ಪ್ರಕಾಶಮಾನವಾದ ಕನ್ಯೆಯೇ, [ದಾಸ್ವತೀ] ಪ್ರಶಸ್ತದಾನಯುಕ್ತಳೇ! ನೀನು [ಬೃಹತಾ] ಹಿರಿದಾದ [ವಾಮೇನ] ಪ್ರಶಂಸಿತವಾದ ಪ್ರಕಾಶದ [ದ್ಯುಮ್ನೇನ] ನ್ಯಾಯ ಪ್ರಕಾಶದೊಂದಿಗೆ [ರಾಯಾ] ವಿದ್ಯೆ, ಚಕ್ರವರ್ತೀರಾಜ್ಯಲಕ್ಷ್ಮಿಯ [ಸಹಃ] ಸಹಿತ [ನಃ] ನಮ್ಮನ್ನು [ವ್ಯುಚ್ಛಾ] ವಿವಿಧ ಪ್ರಕಾರದಿಂದ ಪ್ರೇರಿಸು.

ಭಾವಾರ್ಥ:- ಇಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಯಾವುದೇ ಸ್ವಾಮಿಯು ಭೃತ್ಯನನ್ನು ಅಥವಾ ಭೃತ್ಯನು ಸ್ವಾಮಿಯನ್ನು ಎಚ್ಚರಗೊಳಿಸಿ ವ್ಯವಹಾರಗಳಲ್ಲಿ ಪ್ರೇರಣೆ ಮಾಡುತ್ತಾನೋ, ಅದೇ ರೀತಿ ಉಷೆ ಅರ್ಥಾತ್ ಪ್ರಾತಃಕಾಲದ ವೇಳೆಯು ಪ್ರಾಣಿಮಾತ್ರರನ್ನು ಪುರುಷಾರ್ಥಯುಕ್ತರನ್ನಾಗಿ ಮಾಡಿ ದೊಡ್ಡ ದೊಡ್ಡ ಪದಾರ್ಥ ಸಮೂಹದಿಂದ ಕೂಡಿದ ಸುಖದಿಂದ ಆನಂದಿತರನ್ನಾಗಿಸಿ ಸಾಯಂಕಾಲದಲ್ಲಿ ಎಲ್ಲ ವ್ಯವಹಾರಗಳಿಂದ ನಿವೃತ್ತಿಯನ್ನುಂಟುಮಾಡಿ ನೆಮ್ಮದಿವಂತರನ್ನಾಗಿ ಮಾಡುತ್ತದೆಯೋ, ಅದೇ ರೀತಿ ತಾಯಿ, ತಂದೆ, ಆಚಾರ್ಯರು ವಿದ್ಯೆ ಮತ್ತು ಉತ್ತಮ ಶಿಕ್ಷಣದಿಂದ ತಮ್ಮ ಕನ್ಯೆಯರನ್ನು ಪ್ರೇರಿಸುತ್ತಿರಬೇಕು.

ಪುನಃ ಆಕೆಯು ಹೇಗೆ ಮತ್ತು ಏನನ್ನು ಮಾಡುತ್ತಾಳೆ ಎಂಬುದನ್ನು ತಿಳಿಸಲಾಗುತ್ತದೆ.

ಅಶ್ವಾವತೀರ್ಗೋಮತೀರ್ವಿಶ್ವಸುವಿದೋ ಭೂರಿ ಚ್ಯವಂತ ವಸ್ತವೇ ।
ಉದೀರಯ ಪ್ರತಿ ಮಾ ಸೂನೃತಾ ಉಷ-ಶ್ಚೋದ ರಾಧೋ ಮಘೋನಾಮ್ ॥೨॥

ಪದಾರ್ಥ:- ಹೇ [ಉಷಃ] ಉಷೆಯ ಸದೃಶಳಾದ ನಾರಿಯೇ! ಯಾವ ರೀತಿ ಈ ಶುಭಗುಣಯುಕ್ತಳಾದ ಉಷೆ ಇದ್ದಾಳೋ, ನೀನು ಅದೇ ರೀತಿ [ಅಶ್ವಾವತೀಃ] ಪ್ರಶಂಸನೀಯ ವ್ಯಾಪ್ತಿಯುಕ್ತ [ಗೋಮತೀಃ] ಬಹಳವಾದ ಗೋವು ಮೊದಲಾದ ಪಶುಸಹಿತ [ವಿಶ್ವ ಸುವಿದಃ] ಎಲ್ಲ ವಸ್ತುಗಳನ್ನೂ ಉತ್ತಮ ರೀತಿಯಿಂದ ತಿಳಿದವಳಾದ [ಸೂನೃತಾಃ] ಉತ್ತಮ ರೀತಿಯ ಪ್ರಿಯ ವಾಣಿಯಿಂದ ಕೂಡಿದ [ವಸ್ತವೇ] ಸುಖದಲ್ಲಿ ನಿವಾಸ ಮಾಡಲು [ಭೂರಿ] ಬಹಳವಾದ [ಉದೀರಯ] ಪ್ರೇರಣೆ ಮಾಡು. ಯಾವ ವ್ಯವಹಾರಗಳಿಂದ [ಚ್ಯವಂತ] ನಿವೃತ್ತರಾಗುತ್ತೀರೋ ಅವುಗಳನ್ನು [ಮಘೋನಾಮ್] ಶ್ರೀಮಂತರ ಬಳಿಯಿಂದ [ರಾಯಃ] ಉತ್ತಮೋತ್ತಮ ಧನವನ್ನು [ಚೋದ] ಪ್ರೇರಣೆ ಮಾಡಿ, ಅದರಿಂದ [ಮಾ] ನನ್ನನ್ನು [ಪ್ರತಿ] ಆನಂದಿತಗೊಳಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸುಶೋಭಿತಳಾದ ಉಷೆಯು ಪ್ರಾಣಿಗಳೆಲ್ಲರಿಗೂ ಸುಖವನ್ನು ನೀಡುತ್ತಾಳೋ, ಅದೇ ರೀತಿ ಸ್ತ್ರೀಯರು ತಮ್ಮ ತಮ್ಮ ಪತಿಗಳಿಗೆ ನಿರಂತರ ಸುಖದಾಯಿನಿಯರಾಗಲಿ.

ಪುನಃ ಅವಳು ಹೇಗಿರುತ್ತಾಳೆ ಎಂಬುದನ್ನು ತಿಳಿಸಲಾಗುತ್ತದೆ.

ಉವಾಸೋಷಾ ಉಚ್ಛಾಚ್ಚ ನು ದೇವೀ ಜೀರಾ ರಥಾನಾಮ್ ।
ಯೇ ಅಸ್ಯಾ ಆಚರಣೇಷು ದಧ್ರಿರೇ ಸಮುದ್ರೇ ನ ಶ್ರವಸ್ಯವಃ ॥೩॥

ಪದಾರ್ಥ:- ಯಾವ ಸ್ತ್ರೀಯು ಉಷೆಯಂತೆ **[ಜೀರಾ]** ವೇಗಯುಕ್ತಳೂ **[ದೇವೀ]** ಸುಖದಾಯಕಳೂ **[ರಥಾನಾಂ]** ಆನಂದದಾಯಕ ಯಾನಗಳ **[ಉವಾಸ]** ನೆಲೆಯೂ ಆಗಿದ್ದಾಳೋ, **[ಯೇ]** ಯಾವ **[ಅಸ್ಯಾಃ]** ಈ ಸ್ತ್ರೀಯರ **[ಆಚರಣೇಷು]** ಧರ್ಮಯುಕ್ತ ಆಚರಣೆಗಳಲ್ಲಿ **[ಸಮುದ್ರೇ ನ]** ಸಾಗರದಲ್ಲಿನಂತೆ **[ಅವಸ್ಯವಃ]** ತಮ್ಮಿಷ್ಟಕ್ಕೇ ತಾವೇ ವಿದ್ಯೆಯನ್ನು ಆಲಿಸುವ ವಿದ್ವಾಂಸರು ಉತ್ತಮ ನೌಕೆಯಿಂದ ಹೋಗಿ ಬರುತ್ತಾರೋ, ಅದೇ ರೀತಿ **[ದಧ್ರಿರೇ]** ಪ್ರೀತಿಯನ್ನು ಧರಿಸುತ್ತಾರೆ. ಅರ್ಥಾತ್ ಆ ಪುರುಷರು ಅತ್ಯಂತ ಆನಂದವನ್ನು ಹೊಂದುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾರಿಗೆ ತಮ್ಮಂತೆಯೇ ವಿದುಷಿಯೂ, ಬುದ್ಧಿಶಾಲಿಯೂ ಹಾಗೂ ಸರ್ವಥಾ ಅನುಕೂಲಳಾದ ಪತ್ನಿಯು ಸಿಗುತ್ತಾಳೋ ಅವರು ಸುಖಸಂತೋಷಗಳನ್ನು ತಪ್ಪದೇ ಹೊಂದುತ್ತಾರೆ, ಬೇರೆಯವರಲ್ಲ.

ಯಾರು ಪ್ರಭಾತಸಮಯದಲ್ಲಿ ಯೋಗಾಭ್ಯಾಸವನ್ನು ಮಾಡುತ್ತಾರೋ ಅವರು ಏನನ್ನು ಹೊಂದುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ಉಷೋ ಯೇ ತೇ ಪ್ರ ಯಾಮೇಷು ಯುಂಜತೇ ಮನೋ ದಾನಾಯ ಸೂರಯಃ ।
ಅತ್ರಾಹ ತತ್ ಕಣ್ವ ಏಷಾಂ ಕಣ್ವತಮೋ ನಾಮ ಗೃಣಾತಿ ನೃಣಾಮ್ ॥೪॥

ಪದಾರ್ಥ:- ಹೇ ವಿದ್ವನ್ ! ಯಾವ **[ಸೂರಯಃ]** ಸ್ತುತಿಯನ್ನು ಮಾಡುವ ವಿದ್ವಾಂಸರು **[ತೇ]** ನಿನ್ನಿಂದ ಉಪದೇಶವನ್ನು ಪಡೆದು **[ಅತ್ರ]** ಇಲ್ಲಿ **[ಉಷಃ]** ಪ್ರಭಾತದ **[ಯಾಮೇಷು]** ಪ್ರಹರಗಳಲ್ಲಿ **[ದಾನಾಯ]** ವಿದ್ಯಾದಿ ದಾನಗಳಿಗಾಗಿ **[ಮನಃ]** ವಿಜ್ಞಾನಯುಕ್ತ ಚಿತ್ತವನ್ನು **[ಪ್ರಯುಂಜತೇ]** ಪ್ರಯುಕ್ತಗೊಳಿಸುತ್ತಾರೋ ಅವರು ಜೀವನ್ಮುಕ್ತರಾಗುತ್ತಾರೆ. ಮತ್ತು ಯಾರು **[ಕಣ್ವಃ]** ಮೇಧಾವಿಗಳೂ **[ಯೇಷಾಂ]** ಈ **[ನೃಣಾಮ್]** ಪ್ರಮುಖರಾದ ವಿದ್ವಾಂಸರ **[ನಾಮ]** ಹೆಸರುಗಳನ್ನು **[ಗೃಣಾತಿ]** ಪ್ರಶಂಸಿತಗೊಳಿಸುತ್ತಾರೋ, ಅವರು **[ಕಣ್ವತಮಃ]** ಅತಿಶಯ ಮೇಧಾವಿಗಳಾಗುತ್ತಾರೆ.

ಭಾವಾರ್ಥ:- ಯಾವ ಮನುಷ್ಯರು ಏಕಾಂತದಲ್ಲಿ ಪವಿತ್ರವಾದ ನಿರುಪದ್ರವಿ ಪ್ರದೇಶದಲ್ಲಿ ಸ್ಥಿರರಾಗಿ ಯಮ-ನಿಯಮಾದಿಗಳೊಂದಿಗೆ ಯೋಗಾಭ್ಯಾಸವನ್ನು ಮಾಡುತ್ತಾರೋ, ಅವರು ನಿರ್ಮಲ ಆತ್ಮರಾಗಿ ಜ್ಞಾನೀ ಶ್ರೇಷ್ಠರೆನಿಸುತ್ತಾರೆ. ಮತ್ತು ಯಾರು ಇಂಥವರ ಸಂಗ ಮತ್ತು ಸೇವೆಯನ್ನು ಮಾಡುತ್ತಾರೋ ಅವರೂ ಸಹ ಶುದ್ಧ ಅಂತಃಕರಣದವರಾಗಿ ಆತ್ಮಯೋಗವನ್ನು ತಿಳಿಯಲು ಅಧಿಕಾರಿಗಳಾಗುತ್ತಾರೆ.

ಪುನಃ ಅವರು ಏನನ್ನು ಮಾಡುತ್ತಾರೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಆ ಘಾ ಯೋಷೇವ ಸೂನ-ರ್ಯುಷಾ ಯಾತಿ ಪ್ರಭುಂಜತೀ ।
ಜರಯಂತೀ ವೃಜನಂ ಪದ್ವದೀಯತ ಉತ್ಪಾತಯತಿ ಪಕ್ಷಿಣಃ ॥೫॥

ಪದಾರ್ಥ:- ಯಾರು **[ಯೋಷೇವ]** ಸನ್ನಡತೆಯ ನಾರಿಯರಂತೆ **[ಪ್ರಭುಂಜತೀ]** ಉತ್ತಮ ರೀತಿಯ ಭೋಗವನ್ನು ಹೊಂದುತ್ತಾರೋ **[ಸೂನರೀ]** ಉತ್ತಮ ರೀತಿಯಿಂದ **[ಜರಯಂತೀ]** ಜೀರ್ಣಾವಸ್ಥೆಯನ್ನು ಹೊಂದುತ್ತಾ **[ಉಷಾಃ]** ಪ್ರಾತಃಸಮಯವು **[ಪದ್ವತ್]** ಪಕ್ಷಿಗಳಂತೆ **[ವೃಜನಂ]** ಮಾರ್ಗವನ್ನು **[ಈಯತೇ]** ಪ್ರಾಪ್ತಹೊಂದುತ್ತಾ **[ಆಯಾತಿ]** ಬರುತ್ತದೋ ಮತ್ತು **[ಪಕ್ಷಿಣಃ]** ಪಕ್ಷಿಗಳನ್ನು **[ಉತ್ಪಾತಯತಿ]** ಹಾರಾಡುವಂತೆ ಮಾಡುತ್ತದೋ, ಆ ಕಾಲದಲ್ಲಿ ಎಲ್ಲರೂ ಯೋಗಾಭ್ಯಾಸವನ್ನು **[ಘಾ]** ಮಾಡಲೇಬೇಕು.

ಭಾವಾರ್ಥ:- ಯಾವ ರೀತಿ ಪ್ರಾತಃಕಾಲದ ವೇಳೆಯಲ್ಲಿ ನಿರ್ಮಲ ಹಾಗೂ ಎಲ್ಲ ಪ್ರಕಾರದಿಂದ ಸುಖವನ್ನು ನೀಡುವವರು ಯೋಗಾಭ್ಯಾಸವನ್ನು ಮಾಡುತ್ತಾರೋ ಅದೇ ರೀತಿ ಸ್ತ್ರೀಯರೂ ಸಹ ಮಾಡಬೇಕು.

ಪುನಃ ಆಕೆಯು ಹೇಗಿರುತ್ತಾಳೆ ಎಂಬುದನ್ನು ತಿಳಿಸಲಾಗಿದೆ.

ವಿ ಯಾ ಸೃಜತಿ ಸಮನಂ ವ್ಯರ್ಥಿನಃ ಪದಂ ನ ವೇತ್ಯೋದತೀ ।
ವಯೋ ನಕಿಷ್ಟೇ ಪಪ್ತಿವಾಂಸ ಆಸತೇ ವ್ಯುಷ್ಟೌ ವಾಜಿನೀವತಿ ॥೬॥

ಪದಾರ್ಥ:- ಹೇ ಯೋಗಾಭ್ಯಾಸವನ್ನು ಮಾಡುವವಳಾದ ಸ್ತ್ರೀಯೇ! ನೀನು ಯಾವ ರೀತಿ **[ಯಾ]** ಯಾವ **[ಓದತೀ]** ಆರ್ದ್ರತೆಯನ್ನು ಹೊಂದುತ್ತಾ **[ನಕಿಃ]** ಶಬ್ದವನ್ನು ಮಾಡುವುದಿಲ್ಲವೋ **[ವಾಜಿನೀವತಿ]** ಬಹುಕ್ರಿಯೆಗಳ ನಿಮಿತ್ತ **[ಉಷಾಃ]** ಪ್ರಾತಃ ಸಮಯ **[ಅರ್ಥಿನಃ]** ಪ್ರಶಸ್ತ ಅರ್ಥವನ್ನುಳ್ಳವರು **[ಪದಂ ನ]** ಪ್ರಾಪ್ತಿಯೋಗ್ಯರಾದವರಂತೆ **[ಸಮನಂ]** ಸುಂದರ ಸಂಗ್ರಾಮವನ್ನು ಯಾವ ರೀತಿ **[ವಿವೇತಿ]** ವ್ಯಾಪ್ತಹೊಂದುತ್ತಾರೋ ಯಾವುದರ **[ವ್ಯುಷ್ಟೌ]** ದಾಹಕವಾದ ಕಾಂತಿಯಲ್ಲಿ **[ಪ್ರಾಪ್ತಿವಾಂಸಃ]** ಪತನಶೀಲವಾದ **[ವಯಃ]** ಪಕ್ಷಿಗಳು **[ಆಸತೇ]** ಸ್ಥಿರರಾಗಿರುತ್ತವೆಯೋ ಆ ವೇಳೆಯು **[ತೇ]** ನಿನ್ನ ಯೋಗಾಭ್ಯಾಸಕ್ಕಾಗಿದೆ, ಎಂಬುದನ್ನು ತಿಳಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಸ್ತ್ರೀಯರು ವ್ಯವಹಾರದಿಂದ ತಮ್ಮ ಪದಾರ್ಥಗಳನ್ನು ಹೊಂದುತ್ತಾರೋ, ಅದೇ ರೀತಿ ಉಷೆಯು ತನ್ನ ಪ್ರಕಾಶದಿಂದ ಅಧಿಕಾರವನ್ನು ಹೊಂದುತ್ತದೆ. ಯಾವ ರೀತಿ ಉಷೆಯು ದಿನವನ್ನು ಉತ್ಪನ್ನಗೊಳಿಸಿ ಎಲ್ಲ ಪ್ರಾಣಿಗಳನ್ನು ಎಚ್ಚರಿಸಿ, ತಮ್ಮ ತಮ್ಮ ವ್ಯವಹಾರಗಳಲ್ಲಿ ಪ್ರವೃತ್ತರನ್ನಾಗಿಸಿ ರಾತ್ರಿಯನ್ನು ನಿವೃತ್ತಗೊಳಿಸುತ್ತದೆಯೋ ಮತ್ತು ಹಗಲಿನಲ್ಲಿ ದಾಹವನ್ನು ಕೂಡ ಉತ್ಪನ್ನಗೊಳಿಸುತ್ತದೆಯೋ ಅದೇ ರೀತಿಯಲ್ಲಿ ಎಲ್ಲ ಸ್ತ್ರೀಯರು ಇರಬೇಕು.

ಪುನಃ ಆ ಉಷೆಯ ಸಮಾನವಾದ ಸ್ತ್ರೀ ಹೇಗಿರಬೇಕು ಎಂಬುದನ್ನು ತಿಳಿಸಲಾಗುತ್ತದೆ

ಏಷಾಯುಕ್ತ ಪರಾವತಃ ಸೂರ್ಯಸ್ಯೋದಯನಾದಧಿ ।
ಶತಂ ರಥೇಭಿಃ ಸುಭಗೋಷಾ ಇಯಂ ವಿ ಯಾತ್ಯಭಿ ಮಾನುಷಾನ್ ॥೭॥

ಪದಾರ್ಥ:- ಹೇ ಸ್ತ್ರೀಯರೇ! ಯಾವ ರೀತಿ **[ಏಷಾ]** ಈ **[ಉಷಾಃ]** ಪ್ರಾತಃಕಾಲವು **[ಸೂರ್ಯಸ್ಯ]** ಸೂರ್ಯಮಂಡಲದ **[ಉದಯನಾತ್]** ಉದಯದಿಂದ **[ಅಧಿ]** ಅದರ ನಂತರ **[ಅದ್ಯಭ್ಯಯುಕ್ತ]** ಮೇಲಿನಿಂದ ಸಮ್ಮುಖದಿಂದ ಎಲ್ಲದರಲ್ಲಿ ಯುಕ್ತವಾಗುತ್ತದೆಯೋ, ಯಾವ ರೀತಿ **[ಇಯಂ]** ಈ **[ಸುಭಗಾ]** ಉತ್ತಮ ಐಶ್ವರ್ಯಯುಕ್ತವಾದ **[ರಥೇಭಿಃ]** ರಮಣೀಯ ಯಾನಗಳಿಂದ **[ಶತಂ]** ಅಸಂಖ್ಯಾತವಾದ **[ಮಾನುಷಾನ್]** ಮನುಷ್ಯಾದಿಗಳನ್ನು **[ವಿಯಾತಿ]** ವಿವಿಧ ಪ್ರಕಾರದಿಂದ ಪ್ರಾಪ್ತವಾಗುತ್ತದೆಯೋ ಹಾಗೆಯೇ ನೀವೂ ಆಗಿರಿ.

ಭಾವಾರ್ಥ:- ಯಾವ ರೀತಿ ಪತಿವ್ರತಾ ಸ್ತ್ರೀಯರು ನಿಯಮಪೂರ್ವಕವಾಗಿ ತಮ್ಮ ಪತಿಯ ಸೇವೆಯನ್ನು ಮಾಡುತ್ತಾರೋ, ಯಾವ ರೀತಿ ಉಷೆಯು ಎಲ್ಲ ಪದಾರ್ಥಗಳನ್ನು ದೂರದಿಂದಲೇ ಸಂಯುಕ್ತಗೊಳಿಸುತ್ತದೆಯೋ ಅದೇ ರೀತಿ ದೂರಸ್ಥ ಕನ್ಯೆಯು ಪುತ್ರರ ಯುವಾವಸ್ಥೆಯಲ್ಲಿ ಸ್ವಯಂವರ ವಿವಾಹವನ್ನು ಮಾಡಿಕೊಳ್ಳಬೇಕು. ಇದರಿಂದ ದೂರ ಪ್ರದೇಶದಲ್ಲಿರುವ ಮನುಷ್ಯರೊಂದಿಗೆ ಪ್ರೀತಿಯು ವೃದ್ಧಿಯಾಗುತ್ತದೆ. ನಿಕಟಸ್ಥರೊಂದಿಗೆ ಆದ ವಿವಾಹವು ದುಃಖದಾಯಕವಾಗುವಂತೆ ದೂರಸ್ಥರ ವಿವಾಹವು ಆನಂದಪ್ರದವಾಗುತ್ತದೆ.

ಪುನಃ ಅವರು ಹೇಗಿರುತ್ತಾರೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ವಿಶ್ವಮಸ್ಯಾ ನಾನಾಮ ಚಕ್ಷಸೇ ಜಗ-ಜ್ಜ್ಯೋತಿಷ್ಕೃಣೋತಿ ಸೂನರೀ ।
ಅಪ ದ್ವೇಷೋ ಮಘೋನೀ ದುಹಿತಾ ದಿವ ಉಷಾ ಉಚ್ಛದಪ ಸ್ರಿಧಃ ॥೮॥

ಪದಾರ್ಥ:- ಹೇ ಸ್ತ್ರೀಯರೇ! ನೀವು ಯಾವ ರೀತಿ **[ಮಘೋನೀ]** ಪ್ರಶಂಸನೀಯ ಧನದ ನಿಮಿತ್ತ **[ಸೂನರೀ]** ಉತ್ತಮ ರೀತಿಯಿಂದ ಪ್ರಾಪ್ತಗೊಳಿಸುವ **[ದಿವಃ]** ಪ್ರಕಾಶಮಾನ ಸೂರ್ಯನ **[ದುಹಿತಾ]** ಪುತ್ರಿಯಂತಹ **[ಉಷಾಃ]** ಪ್ರಕಾಶವನ್ನುಳ್ಳ ಪ್ರಭಾತ ಸಮಯವನ್ನು **[ವಿಶ್ವಂ]** ಸಕಲ ಜಗತ್ತು **[ನಾನಾಮ]** ಆದರ ಮಾಡುತ್ತದೋ ಮತ್ತು ಅದನ್ನು **[ಚಕ್ಷಸೇ]** ನೋಡಲು **[ಜ್ಯೋತಿಃ]** ಪ್ರಕಾಶವನ್ನು **[ಕೃಣೋತಿ]** ಉಂಟುಮಾಡುತ್ತಾಳೋ ಮತ್ತು **[ಸ್ರಿಧಃ]** ಹಿಂಸಕರಾದ **[ದ್ವೇಷಃ]** ದ್ವೇಷವನ್ನು ಮಾಡುವ ಶತ್ರುಗಳನ್ನು **[ಅಪೋಚ್ಛತ್]** ದೂರೀಕರಿಸುತ್ತಾಳೋ ಅದೇ ರೀತಿ ಪತಿ ಮೊದಲಾದವರೊಂದಿಗೆ ವರ್ತಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸತೀಸ್ತ್ರೀಯರು ವಿಘ್ನಗಳನ್ನು ದೂರೀಕರಿಸಿ ಕರ್ತವ್ಯ ಕರ್ಮಗಳನ್ನು ಸಿದ್ಧಗೊಳಿಸುತ್ತಾರೋ, ಅದೇ ರೀತಿ ಉಷೆಯು ದರೋಡೆಕೋರ, ಚೋರ, ಶತ್ರು ಮೊದಲಾದವರನ್ನು ದೂರೀಕರಿಸಿ ಕಾರ್ಯಸಿದ್ಧಿಯನ್ನು ಮಾಡುವವಳಾಗುತ್ತಾಳೆ.

ಪುನಃ ಆಕೆಯು ಏನಾಗಿ ಏನನ್ನು ಮಾಡುತ್ತಾಳೆ ಎಂಬುದನ್ನು ತಿಳಿಸಲಾಗುತ್ತದೆ.

ಉಷ ಆ ಭಾಹಿ ಭಾನುನಾ ಚಂದ್ರೇಣ ದುಹಿತರ್ದಿವಃ ।
ಆವಹಂತೀ ಭೂರ್ಯಸ್ಮಭ್ಯಂ ಸೌಭಗಂ ವ್ಯುಚ್ಛಂತೀ ದಿವಿಷ್ಟಿಷು ॥೯॥

ಪದಾರ್ಥ:- ಹೇ **[ದಿವಃ]** ಸೂರ್ಯನ ಪ್ರಕಾಶದ **[ದುಹಿತಃ]** ಪುತ್ರಿಯ ಸದೃಶಳಾದ ಕನ್ಯೆಯೇ! ಯಾವ ರೀತಿ **[ಉಷಾಃ]** ಪ್ರಕಾಶಮಾನವಾದ ಉಷೆಯು **[ಭಾನುನಾ]** ಸೂರ್ಯನ ಮತ್ತು **[ಚಂದ್ರೇಣ]** ಚಂದ್ರನಿಂದ **[ಅಸ್ಮಭ್ಯಂ]** ಈ ಪುರುಷಾರ್ಥೀ ಜನರಿಗಾಗಿ **[ಭೂರಿ]** ಬಹಳವಾದ **[ಸೌಭಗಂ]** ಐಶ್ವರ್ಯದ ಸಮೂಹವನ್ನು **[ಆವಹಂತೀ]** ಎಲ್ಲೆಡೆಯಿಂದಲೂ ಪ್ರಾಪ್ತಗೊಳಿಸುತ್ತಾಳೋ **[ದಿವಿಷ್ಟುಷು]** ಪ್ರಕಾಶಿತವಾದ ಕಾಂತಿಗಳಲ್ಲಿ **[ವ್ಯುಚ್ಛಂತೀ]** ನಿವಾಸಮಾಡುತ್ತಾ ಜಗತ್ತನ್ನು ಪ್ರಕಾಶಿತಗೊಳಿಸುತ್ತಾಳೋ ಅಂತೆಯೇ ನೀನೂ ಸಹ ವಿದ್ಯೆ ಮತ್ತು ಸಂಯಮಾದಿಗಳಿಂದ ಸುಶೋಭಿತಳಾಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ವಿದುಷಿಯೂ ಧಾರ್ಮಿಕಳೂ ಆದ ಕನ್ಯೆಯು ತನ್ನ ತಾಯಿ ಮತ್ತು ಪತಿಯ ಕುಲಗಳೆರಡನ್ನೂ ಉಜ್ವಲಗೊಳಿಸುತ್ತಾಳೋ ಹಾಗೆಯೇ ಉಷೆಯು ಸ್ಥೂಲ, ಸೂಕ್ಷ್ಮ ವಸ್ತುಗಳೆರಡನ್ನೂ ಪ್ರಕಾಶಿತಗೊಳಿಸುತ್ತಾಳೆ.

ಪುನಃ ಅವಳು ಹೇಗಾಗಿ ಯಾರಿಂದ ಏನನ್ನು ಮಾಡುತ್ತಾಳೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ವಿಶ್ವಸ್ಯ ಹಿ ಪ್ರಾಣನಂ ಜೀವನಂ ತ್ವೇ ವಿ ಯದುಚ್ಛಸಿ ಸೂನರಿ ।
ಸಾ ನೋ ರಥೇನ ಬೃಹತಾ ವಿಭಾವರಿ ಶ್ರುಧಿ ಚಿತ್ರಾಮಘೇ ಹವಮ್ ॥೧೦॥

ಪದಾರ್ಥ:- ಹೇ **[ಸೂನರಿ]** ಉತ್ತಮ ಪ್ರಕಾರದ ವ್ಯವಹಾರಗಳನ್ನು ಹೊಂದಿದ **[ವಿಭಾವರಿ]** ವಿಭಿನ್ನ ಪ್ರಕಾರಯುಕ್ತವಾದ **[ಚಿತ್ರಾಮಘೇ]** ಚಿತ್ರವಿಚಿತ್ರವಾದ ಧನದಿಂದ ಸುಶೋಭಿತಳಾದ ಸ್ತ್ರೀಯೇ! ಯಾವ ರೀತಿ ಉಷೆಯು **[ಬೃಹತಾ]** ಹಿರಿದಾದ **[ರಥೇನ]** ರಮಣೀಯ ಸ್ವರೂಪದ ವಿಮಾನಾದಿ ಯಾನಗಳಿಂದ ವಿದ್ಯಮಾನವಾಗಿರುವುದರಲ್ಲಿ **[ವಿಶ್ವಸ್ಯ]** ಎಲ್ಲ ಪ್ರಾಣಿಗಳ **[ಪ್ರಾಣನಂ]** ಪ್ರಾಣವನ್ನು ಮತ್ತು **[ಜೀವನಂ]** ಜೀವಿಕೆಯನ್ನು ಪ್ರಾಪ್ತಿಸುವ ಸಂಭವವಿರುತ್ತದೆಯೋ ಅದೇ ರೀತಿ **[ತ್ವೇ]** ನಿನ್ನಲ್ಲಿಯೂ ಆಗುತ್ತದೆ. **[ಯತ್]** ಯಾವ ನೀನು **[ನಃ]** ನಮ್ಮನ್ನು **[ವ್ಯುಚ್ಛಸಿ]** ವಿವಿಧ ಪ್ರಕಾರದ ನೆಲೆಗೆ ಒಳಪಡಿಸುತ್ತೀಯೋ ಆ ನೀನು ನಮ್ಮ **[ಹವಂ]** ಆಲಿಸಲು ಮತ್ತು ನುಡಿಯಲು ಯೋಗ್ಯವಾದ ವಾಕ್ಯವನ್ನು **[ಶ್ರುಧಿ]** ಆಲಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಉಷೆಯಿಂದ ಸಮಸ್ತ ಪ್ರಾಣಿಜಗತ್ತು ಸುಖವನ್ನು ಹೊಂದುತ್ತದೆಯೋ, ಅದೇ ರೀತಿ ಪತಿವ್ರತಾ ಸ್ತ್ರೀಯರಿಂದ ಪ್ರಸನ್ನನಾದ ಪುರುಷನು ಎಲ್ಲ ರೀತಿಯ ಆನಂದವನ್ನು ಪಡೆಯುತ್ತಾನೆ.

ಪುನಃ ಅವರು ಎಂತಹವರಾಗಿರುತ್ತಾರೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಉಷೋ ವಾಜಂ ಹಿ ವಂಸ್ವ ಯಶ್ಚಿತ್ರೋ ಮಾನುಷೇ ಜನೇ ।
ತೇನಾ ವಹ ಸುಕೃತೋ ಅಧ್ವರಾँ ಉಪ ಯೇ ತ್ವಾ ಗೃಣಂತಿ ವಹ್ನಯಃ ॥೧೧॥

ಪದಾರ್ಥ:- ಹೇ **[ಉಷಃ]** ಪ್ರಭಾತವೇಳೆಯಂತೆ ಇರುವ ಸ್ತ್ರೀಯೇ! ನೀನು **[ಯಃ]** ಯಾವ **[ಚಿತ್ರಃ]** ಅದ್ಭುತ ಗುಣಕರ್ಮ ಸ್ವಭಾವಯುಕ್ತವಾದ **[ಸುಕೃತಃ]** ಉತ್ತಮ ಕರ್ಮವನ್ನು ಮಾಡುವ ನಿನ್ನ ಪತಿಯಿದ್ದಾನೋ **[ಮಾನುಷೇ]** ಮನುಷ್ಯರ **[ಜನೇ]** ವಿದ್ಯಾಧರ್ಮಾದಿ ಗುಣಗಳಿಂದ ಪ್ರಸಿದ್ಧವಾದುದರಲ್ಲಿ **[ವಾಜಂ]** ಜ್ಞಾನ ಅಥವಾ ಅನ್ನವನ್ನು **[ಹಿ]** ನಿಶ್ಚಯವಾಗಿ **[ವಂಸ್ವ]** ಉತ್ತಮ ಪ್ರಕಾರದಿಂದ ಸೇವನೆ ಮಾಡಿ **[ಯೇ]** ಯಾವ **[ವಹ್ನಯಃ]** ಪ್ರಾಪ್ತಿಸಲು ಯೋಗ್ಯರಾದ ವಿದ್ವಾಂಸರು ಯಾವ ಕಾರಣದಿಂದ **[ಅಧ್ವರಾನ್]** ಅಹಿಂಸನೀಯವಾದ ಯಜ್ಞಗಳಲ್ಲಿ **[ಉಪಗೃಣಂತಿ]** ಉತ್ತಮ ಪ್ರಕಾರದ ಸ್ತುತಿ ಮಾಡುತ್ತಾರೋ ಮತ್ತು ನಿನಗೆ ಉಪದೇಶವನ್ನು ಮಾಡುತ್ತಾರೋ **[ತೇನ]** ಅದರಿಂದ ಅವರಿಗೆ **[ಆವಹ]** ಸುಖಗಳನ್ನು ಪ್ರಾಪ್ತಗೊಳಿಸುತ್ತಾ ಇರು.

ಭಾವಾರ್ಥ:- ಯಾವ ಮನುಷ್ಯನು, ಯಾವ ರೀತಿ ಸೂರ್ಯನಾದವನು ಉಷೆಯನ್ನು ಹೊಂದಿ ದಿನವನ್ನು ಪ್ರಾಪ್ತಿಸಿ ಎಲ್ಲರಿಗೂ ಸುಖವನ್ನುಂಟುಮಾಡುತ್ತಾನೋ, ಅದೇ ರೀತಿ ತನ್ನ ಸ್ತ್ರೀಯರನ್ನೂ ಭೂಷಿತಗೊಳಿಸಬೇಕು. ಅವರನ್ನು ಸ್ತ್ರೀಯರೂ ಭೂಷಿತರನ್ನಾಗಿ ಮಾಡಬೇಕು. ಈ ರೀತಿ ಪರಸ್ಪರ ಪ್ರೀತಿ ಉಪಕಾರದಿಂದ ಸದಾ ಸುಖಿಗಳಾಗಿರಬೇಕು.

ಪುನಃ ಆಕೆಯು ಏನನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ವಿಶ್ವಾನ್ ದೇವಾँ ಆ ವಹ ಸೋಮಪೀತಯೇಽಂತರಿಕ್ಷಾದುಷಸ್ತ್ವಮ್ ।
ಸಾಸ್ಮಾಸು ಧಾ ಗೋಮದಶ್ವಾವದುಕ್ಥ್ಯಂ ಮುಷೋ ವಾಜಂ ಸುವೀರ್ಯಮ್ ॥೧೨॥

ಪದಾರ್ಥ:- ಹೇ **[ಉಷಃ]** ಪ್ರಭಾತದಂತಿರುವ ಸ್ತ್ರೀಯೇ! **[ಸೋಮಪೀತಯೇ]** ಸೋಮ ಮೊದಲಾದ ಪದಾರ್ಥಗಳನ್ನು ಸೇವಿಸಲು **[ಅಂತರಿಕ್ಷಾತ್]** ಮೇಲಿನಿಂದ **[ವಿಶ್ವಾನ್]** ಸಮಸ್ತ **[ದೇವಾನ್]** ದಿವ್ಯಗುಣ ಪದಾರ್ಥಗಳನ್ನು ಮತ್ತು ಯಾವುದು ನಿನಗೆ ಪ್ರಾಪ್ತವಾಗಿದೆಯೋ ಅವುಗಳನ್ನು ನೀನೂ ಸಹ **[ಆವಹ]** ಉತ್ತಮ ರೀತಿಯಿಂದ ಪ್ರಾಪ್ತಳಾಗು. ಹೇ **[ಉಷಃ]** ಉಷೆಯಂತೆ ಹಿತಕಾರಿಣಿಯೂ ಮತ್ತು **[ಸಾ]** ಆ ನೀನು ಸಮಸ್ತ ಇಷ್ಟ ಪದಾರ್ಥಗಳನ್ನು ಪ್ರಾಪ್ತಿಗೊಳಿಸುವ **[ಅಸ್ಮಾಸು]** ನಾವುಗಳು ಇಂದ್ರಿಯ, ಕಿರಣ ಮತ್ತು ಪೃಥ್ವಿ ಆದಿಗಳಲ್ಲಿ **[ಅಶ್ವಾವತ್]** ಅತ್ಯುತ್ತಮವಾದ ಕುದುರೆಗಳಿಂದ ಯುಕ್ತವಾದ **[ಸುವೀರ್ಯಮ್]** ಉತ್ತಮ ವೀರ ಪರಾಕ್ರಮವಾದ **[ವಾಜಮ್]** ವಿಜ್ಞಾನ ಅಥವಾ ಅನ್ನವನ್ನು **[ಧಾಃ]** ಧಾರಣ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಉಷೆಯು ತನ್ನ ಪ್ರಾದುರ್ಭಾವದಲ್ಲಿ ಶುದ್ಧ ವಾಯು, ಜಲ ಮೊದಲಾದ ದಿವ್ಯಗುಣಗಳನ್ನು ಹೊಂದಿ ದೋಷಗಳನ್ನು ನಾಶಪಡಿಸಿ ಸಮಸ್ತ ಉತ್ತಮ ಪದಾರ್ಥಗಳ ಸಮೂಹವನ್ನು ಪ್ರಕಟಗೊಳಿಸುತ್ತದೆಯೋ, ಹಾಗೆ ಉತ್ತಮ ಸ್ತ್ರೀಯು ಗೃಹಕಾರ್ಯಗಳಲ್ಲಿ ನಿರತಳಾಗಬೇಕು.

ಪುನಃ ಅವಳು ಏನನ್ನು ಮಾಡುತ್ತಾಳೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಯಸ್ಯಾ ರುಶಂತೋ ಅರ್ಚಯಃ ಪ್ರತಿ ಭದ್ರಾ ಅದೃಕ್ಷತ ।

ಸಾ ನೋ ರಯಿಂ ವಿಶ್ವವಾರಂ ಸುಪೇಶಸ-ಮುಷಾ ದದಾತು ಸುಗ್ಮ್ಯಮ್ ॥೧೩॥

ಪದಾರ್ಥ:- ಹೇ ಸ್ತ್ರೀಯೇ! **[ಯಸ್ಯಾಃ]** ಯಾವುದರ ಬಳಿಯಿಂದ ಈ **[ರುಶಂತಃ]** ಚೋರ, ಡಾಕು, ಅಂಧಕಾರಾದಿಗಳನ್ನು ನಾಶಗೊಳಿಸುವ ಮತ್ತು **[ಭದ್ರಾಃ]** ಕಲ್ಯಾಣಕಾರಿಯಾದ **[ಅರ್ಚಯಃ]** ದೀಪ್ತಿಯನ್ನು **[ಪ್ರತ್ಯದೃಕ್ಷತ]** ಪ್ರತ್ಯಕ್ಷಗೊಳಿಸುವುದಾಗುತ್ತದೆಯೋ **[ಸಾ]** ಅದೇ ರೀತಿ ಆಕೆಯು **[ಉಷಾ]** ಸ್ವರೂಪವನ್ನು ನೀಡುವ ಪ್ರಭಾತದ ಕಾಲದಲ್ಲಿ **[ನಃ]** ನಮಗಾಗಿ **[ವಿಶ್ವವಾರಂ]** ಸಮಸ್ತ ಆಚ್ಛಾದನಗಳನ್ನು ಮಾಡಿ ಯೋಗ್ಯವಾದ **[ಸುಪೇಶಸಂ]** ಶೋಭನರೂಪಯುಕ್ತವಾದ **[ರಯಿಂ]** ಚಕ್ರವರ್ತೀ ರಾಜ್ಯಲಕ್ಷ್ಮಿಯು **[ಸುಗ್ಮ್ಯಮ್]** ಸುಖವನ್ನು **[ದದಾತು]** ನೀಡುತ್ತಾಳೋ ಅದೇ ರೀತಿ ನೀವೂ ಸಹ ನಮಗೆ ಸುಖದಾಯಕಳಾಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ದಿನದ ನಿಮಿತ್ತದಲ್ಲಿ ಉಷೆ ಇಲ್ಲದೆ ಸುಖ ಹಾಗೂ ರಾಜ್ಯದ ಕಾರ್ಯಸಿದ್ಧಿಯು ಆಗುವುದಿಲ್ಲವೋ ಮತ್ತು ಸ್ವರೂಪದ ಪ್ರಾಪ್ತಿಯೂ ಆಗುವುದಿಲ್ಲವೋ, ಅದೇ ರೀತಿ ಯೋಗ್ಯವಾದ ಸ್ತ್ರೀಯ ವಿನಾ ಇವೆಲ್ಲವೂ ಉಂಟಾಗುವುದಿಲ್ಲ.

ಪುನಃ ಆಕೆಯು ಯಾವ ಪ್ರಯೋಜನಕ್ಕಾಗಿ ಸಮರ್ಥಳಾಗುತ್ತಾಳೆ ಎಂಬುದನ್ನು ತಿಳಿಸಿದೆ.

ಯೇ ಚಿದ್ಧಿ ತ್ವಾಮೃಷಯಃ ಪೂರ್ವ ಊತಯೇ ಜುಹೂರೇಽವಸೇ ಮಹಿ ।

ಸಾ ನಃ ಸ್ತೋಮಾँ ಅಭಿ ಗೃಣೀಹಿ ರಾಧಸೋ-ಷಃ ಶುಕ್ರೇಣ ಶೋಚಿಷಾ ॥೧೪॥

ಪದಾರ್ಥ:- ಹೇ ಉಷೆಯಂತಿರುವ **[ಮಹಿ]** ಮಹಾಗುಣವಿಶಿಷ್ಟಳಾದ ವಿದುಷೀ ಸ್ತ್ರೀಯೇ! **[ಯೇ]** ಯಾವ **[ಪೂರ್ವ]** ಅಧ್ಯಯನ ಮಾಡಲ್ಪಟ್ಟ ವೇದಾರ್ಥವನ್ನು ತಿಳಿದ ವಿದ್ವಾಂಸರು **[ಊತಯೇ]** ಅತ್ಯಂತ ಗುಣ ಪ್ರಾಪ್ತಿ ಹಾಗೂ **[ಅವಸೇ]** ರಕ್ಷಣೆ ಮೊದಲಾದ ಪ್ರಯೋಜನಗಳಿಗಾಗಿ **[ತ್ವಾಂ]** ನಿನ್ನನ್ನು **[ಜುಹುರೇ]** ಪ್ರಶಂಸಿತಗೊಳಿಸಲಿ. **[ಸಾ]** ಅಂತಹ ನೀನು **[ಶುಕ್ರೇಣ]** ಶುದ್ಧ ಕರ್ಮಗಳ ಕಾರಣ **[ಶೋಚಿಷಾ]** ಧರ್ಮಪ್ರಕಾಶದಿಂದ ಯುಕ್ತವಾದ

[ರಾಧಸಾ] ಅಪಾರ ಧನದಿಂದ **[ನಃ ಚಿತ್]** ನಮ್ಮದೇ ಆದ **[ಸ್ತೋಮಾನ್]** ಸ್ತುತಿ ಸಮೂಹಗಳನ್ನು **[ಹಿ]** ನಿಶ್ಚಯವಾಗಿಯೂ **[ಅಭಿ]** ಸಮ್ಮುಖದಲ್ಲಿ **[ಗೃಣೀಹಿ]** ಸ್ವೀಕರಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಯಾರು ವೇದಗಳನ್ನು ಅಧ್ಯಯನ ಮಾಡಿದ್ದಾರೋ ಅವರನ್ನು ಪೂರ್ವಋಷಿಗಳೆಂದೂ, ಯಾರು ವೇದಗಳನ್ನು ಓದುತ್ತಿದ್ದಾರೋ ಅವರನ್ನು ನವೀನ ಋಷಿಗಳೆಂದೂ ತಿಳಿಯಬೇಕು. ಮತ್ತು ಯಾವ ರೀತಿ ವಿದ್ವಾಂಸರು ಯಾವ ಪದಾರ್ಥಗಳನ್ನು ತಿಳಿದು ಉಪಕಾರವನ್ನು ಹೊಂದುತ್ತಾರೋ ಅದೇ ರೀತಿ ಅನ್ಯಪುರುಷರೂ ಮಾಡಲು ಯೋಗ್ಯವಾಗಿದೆ. ಯಾವ ಮನುಷ್ಯನೂ ಮೂರ್ಖರ ಮಾರ್ಗದಲ್ಲಿ ನಡೆಯಬಾರದು. ಮತ್ತು ಯಾವ ರೀತಿ ವಿದ್ವಾಂಸರು ತಮ್ಮ ವಿದ್ಯೆಯಿಂದ ಪದಾರ್ಥಗಳ ಗುಣಗಳನ್ನು ಪ್ರಕಾಶಗೊಳಿಸಿ ಉಪಕಾರ ಮಾಡುತ್ತಾರೋ, ಯಾವ ರೀತಿ ಉಷೆಯು ತನ್ನ ಪ್ರಕಾಶದಿಂದ ಸಮಸ್ತ ಪದಾರ್ಥಗಳನ್ನು ಪ್ರಕಾಶಿತಗೊಳಿಸುತ್ತದೆಯೋ ಅದೇ ರೀತಿ ವಿದುಷೀ ಸ್ತ್ರೀಯರೂ ಸಹ ವಿಶ್ವವನ್ನು ಸುಭೂಷಿತಗೊಳಿಸುತ್ತಾರೆ.

ಪುನಃ ಅವರು ಏನನ್ನು ಮಾಡುತ್ತಾರೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಉಷೋ ಯದದ್ಯ ಭಾನುನಾ ವಿ ದ್ವಾರಾವೃಣವೋ ದಿವಃ ।

ಪ್ರ ನೋ ಯಚ್ಛತಾದವೃಕಂ ಪೃಥು ಚ್ಛರ್ದಿಃ ಪ್ರ ದೇವಿ ಗೋಮತೀರಿಷಃ ॥೧೫॥

ಪದಾರ್ಥ:- ಹೇ **[ದೇವೀ]** ದಿವ್ಯಗುಣಯುಕ್ತ ಸ್ತ್ರೀಯೇ! ನೀನು ಯಾವ ರೀತಿ **[ಉಷಾಃ]** ಪ್ರಭಾತ ಸಮಯದ **[ಅದ್ಯ]** ಇಂದಿನ ದಿನದಲ್ಲಿ **[ಭಾನುನಾ]** ತನ್ನ ಪ್ರಕಾಶದಿಂದ **[ದ್ವಾರೌ]** ಗೃಹಗಳಿಂದ ಮತ್ತು ಇಂದ್ರಿಯಗಳ ಪ್ರವೇಶ ಮತ್ತು ನಿರ್ಗಮನದ ನಿಮಿತ್ತ ಯಾವ ಛಿದ್ರವು **[ಪ್ರಾವೃಣಃ]** ಉತ್ತಮ ರೀತಿಯಿಂದ ಪ್ರಾಪ್ತವಾಗುತ್ತವೆಯೋ ಮತ್ತು ಯಾವ ರೀತಿ **[ನಃ]** ನಮಗಾಗಿ **[ಯತ್ ಅವೃಕಂ]** ಹಿಂಸಕ ಪ್ರಾಣಿಗಳಿಂದ ಭಿನ್ನವಾದ **[ಪೃಥು]** ಸಮಸ್ತ ಋತುಗಳಲ್ಲಿ ಸ್ಥಾನ ಮತ್ತು ಅವಕಾಶಯೋಗ್ಯವಾದುದರಿಂದ ವಿಶಾಲವಾದ **[ಛರ್ದಿಃ]** ಶುದ್ಧ ಆಚ್ಛಾದನದಿಂದ ಪ್ರಕಾಶಮಾನವಾದ ಮನೆಯಿದೆಯೋ, ಯಾವ ರೀತಿ, **[ದಿವಃ]** ಪ್ರಕಾಶಾದಿ ಗುಣಗಳು **[ಗೋಮತಿಃ]** ಬೃಹತ್ ಕಿರಣಗಳಿಂದ ಯುಕ್ತವಾದ **[ಇಷಃ]** ಇಚ್ಛೆಗಳನ್ನು ನೀಡುತ್ತವೆಯೋ ಅದೇ ರೀತಿ **[ವಿಪ್ರಯಚ್ಛತಾತ್]** ಸಂಪೂರ್ಣವಾಗಿ ಕೊಡುವವಳಾಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಉಷೆಯು ತನ್ನ ಪ್ರಕಾಶದಿಂದ ಅತೀತವಾದ ವರ್ತಮಾನವಾದ ಮತ್ತು ಬರಲಿರುವ ದಿನಗಳಲ್ಲಿ ಎಲ್ಲಾ ಮಾರ್ಗ ಮತ್ತು ದ್ವಾರಗಳನ್ನು ಪ್ರಕಾಶಿತಗೊಳಿಸುತ್ತವೆಯೋ, ಅದೇ ರೀತಿ ಮನುಷ್ಯರು ಸರ್ವಋತುಗಳಲ್ಲಿಯೂ ಸುಖವನ್ನು ನೀಡುವ ಮನೆಗಳನ್ನು ನಿರ್ಮಿಸಿ ಅವುಗಳಲ್ಲಿ ಸಮಸ್ತ ಭೋಗ್ಯ ಪದಾರ್ಥಗಳನ್ನು ಸ್ಥಾಪಿಸಿ, ಅವೆಲ್ಲನ್ನೂ ಸ್ತ್ರೀಯರ ಆಧೀನಕ್ಕೆ ಒಪ್ಪಿಸಿ ಸುಖದಿಂದಿರಲಿ.

ಪುನಃ ಆಕೆಯು ಯಾರಿಂದ ಏನನ್ನು ನೀಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಸಂ ನೋ ರಾಯಾ ಬೃಹತಾ ವಿಶ್ವಪೇಶಸಾ ಮಿಮಿಕ್ಷ್ವಾ ಸಮಿಳಾಭಿರಾ ।

ಸಂ ದ್ಯುಮ್ನೇನ ವಿಶ್ವತುರೋಷೋ ಮಹಿ ಸಂ ವಾಜೈರ್ವಾಜಿನೀವತಿ ॥೧೬॥

ಪದಾರ್ಥ:- ಹೇ [ಉಷಃ] ಪ್ರಾತಃಸಮಯದಂತೆ ಇರುವ [ವಾಜಿನೀವತಿ] ಪ್ರಶಂಸನೀಯ ಕ್ರಿಯಾಯುಕ್ತಳಾದ [ಮಹಿ] ಮಹಿಮಾಮಂಡಿತಳಾದ ವಿದುಷೀ ಸ್ತ್ರೀಯೇ! ನೀನು ಯಾವ ರೀತಿ [ಉಷಾಃ] ಎಲ್ಲಾ ರೂಪವನ್ನು ಪ್ರಕಾಶಗೊಳಿಸುವ ಪ್ರಾತಃಕಾಲದ ವೇಳೆಯು [ವಿಶ್ವಪೇಶಸಾ] ಸಮಸ್ತ ಸುಂದರರೂಪಯುಕ್ತವಾದ [ಬೃಹತಾ] ಹಿರಿದಾದ [ವಿಶ್ವತುರಾ] ಎಲ್ಲರನ್ನೂ ಪ್ರವೃತ್ತಗೊಳಿಸುವ [ಸಂದ್ಯುಮ್ನೇನ] ವಿದ್ಯಾಧರ್ಮಾದಿ ಗುಣಪ್ರಕಾಶದಿಂದ ಕೂಡಿದ [ರಾಯಾ] ಪ್ರಶಂಸನೀಯ ಧನವನ್ನು, [ಸಮಿಡಾಭಿಃ] ಭೂಮಿ, ವಾಣಿ, ನೀತಿ ಮತ್ತು [ಸಂವಾಜೈಃ] ಉತ್ತಮ ಪ್ರಕಾರದ ಯುದ್ಧ ಅನ್ನ, ವಿಜ್ಞಾನದಿಂದ [ನಃ] ನಮಗೆ ಸುಖವನ್ನು ನೀಡುತ್ತದೆಯೋ ಅದೇ ರೀತಿ ನೀನೂ ಸಹ ನಮಗೆ ಸುಖದಾಯಕಳಾಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ವಿದ್ವಾಂಸರ ವಿದ್ಯೆ-ಶಿಕ್ಷಣದಿಂದ ಉಷೆಯ ಗುಣಗಳ ಜ್ಞಾನವುಂಟಾಗಿ ಅದರಿಂದ ಪುರುಷಾರ್ಥ ಸಿದ್ಧಿಯಾಗಿ ಅದರಿಂದ ಸಮಸ್ತ ಗುಣಗಳ ನಿಮಿತ್ತ ವಿದ್ಯಾಪ್ರಾಪ್ತಿಯುಂಟಾಗುತ್ತದೆಯೋ ಅದೇ ರೀತಿ ಮಾತೆಯ ಶಿಕ್ಷಣದಿಂದ ಪುತ್ರರು ಉತ್ತಮರಾಗುತ್ತಾರೆ, ಬೇರೆ ರೀತಿಯಿಂದಲ್ಲ.

ಈ ಸೂಕ್ತದಲ್ಲಿ ಉಷೆಯನ್ನು ದೃಷ್ಟಾಂತವನ್ನಾಗಿರಿಸಿಕೊಂಡು ಕನ್ಯೆ ಮತ್ತು ಸ್ತ್ರೀಯರ ಲಕ್ಷಣಗಳನ್ನು ಪ್ರತಿಪಾದಿಸಿರುವುದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ನಲವತ್ತೆಂಟನೆಯ ಸೂಕ್ತ ಸಮಾಪ್ತ

ಸೂಕ್ತ ೪೯

ಮಂತ್ರಸಂಖ್ಯೆ ೪ । ಋಷಿಃ - ಪ್ರಸ್ಕಣ್ವಃ ಕಾಣ್ವಃ । ದೇವತಾ - ಉಷಾಃ । ಛಂದಃ - ನಿಚೃದ್ ಅನುಷ್ಟುಪ್ । ಸ್ವರಃ - ಗಾಂಧಾರಃ ।

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಉಷೆಯ ದೃಷ್ಟಾಂತದಿಂದ ಸ್ತ್ರೀಯರ ಕರ್ತವ್ಯ ಕರ್ಮಗಳನ್ನು ವಿವರಿಸಲಾಗಿದೆ.

ಉಷೋ ಭದ್ರೇಭಿರಾ ಗಹಿ ದಿವಶ್ಚಿದ್ರೋಚನಾದಧಿ ।
ವಹಂತ್ವರುಣಪ್ಸವ ಉಪ ತ್ವಾ ಸೋಮಿನೋ ಗೃಹಮ್ ॥೧॥

ಪದಾರ್ಥ:- ಹೇ ಶುಭಗುಣಗಳಿಂದ ಪ್ರಕಾಶಮಾನ! ಯಾವ ರೀತಿ [ಉಷಾಃ] ಕಲ್ಯಾಣದ ನಿಮಿತ್ತ [ರೋಚನಾತ್] ಉತ್ತಮ ರೀತಿಯಲ್ಲಿ ಪ್ರಕಾಶಮಾನತ್ವದಿಂದ [ಅಧಿ] ಮೇಲಿನ [ಭದ್ರೇಭಿಃ] ಕಲ್ಯಾಣಕಾರಕ ಗುಣಗಳಿಂದ ಉತ್ತಮ ರೀತಿಯಲ್ಲಿ ಬರುತ್ತೀಯೋ, ಅದೇ ರೀತಿ [ಆಗಹಿ] ಪ್ರಾಪ್ತನಾಗು ಮತ್ತು ಯಾವ ರೀತಿ ಈ [ದಿವಃ] ಪ್ರಕಾಶದ ಬಳಿ ಪ್ರಾಪ್ತನಾಗುತ್ತೀಯೋ, ಅದೇ ರೀತಿ [ತ್ವಾ] ನಿನ್ನನ್ನು [ಅರುಣಪ್ಸವಃ] ರಕ್ತಗುಣ ವಿಶಿಷ್ಟಭೇದನವನ್ನು ಮಾಡಿ ಭೋಕ್ತನಾದ [ಸೋಮಿನಃ] ಉತ್ತಮ ಪದಾರ್ಥವನ್ನುಳ್ಳ ವಿದ್ವಾಂಸನ [ಗೃಹಮ್] ನಿವಾಸ ಸ್ಥಾನವನ್ನು [ಉಪವಹಂತು] ಸಮೀಪದಿಂದ ಪ್ರಾಪ್ತಗೊಳಿಸು.

ಭಾವಾರ್ಥ:- ಯಾವ ಉಷೆಯ ಭೂಮಿಯು ಸಂಯುಕ್ತವಾದ ಸೂರ್ಯನ ಪ್ರಕಾಶದಿಂದ ಉತ್ಪನ್ನವಾಗಿದೆಯೋ ಅದು ದಿನರೂಪೀ ಪರಿಣಾಮವನ್ನು ಹೊಂದಿ ಪದಾರ್ಥಗಳನ್ನು ಪ್ರಕಾಶಿತಗೊಳಿಸುತ್ತಾ ಎಲ್ಲರನ್ನೂ ಆಹ್ಲಾದಿತಗೊಳಿಸುತ್ತದೆ. ಅದೇ ರೀತಿ ಬ್ರಹ್ಮಚರ್ಯವಿದ್ಯಾಯೋಗದಿಂದ ಯುಕ್ತಳಾದ ಸ್ತ್ರೀಯು ಶ್ರೇಷ್ಠಳಾಗಲಿ.

ಪುನಃ ಅವಳು ಹೇಗಿರಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಸುಪೇಶಸಂ ಸುಖಂ ರಥಂ ಯಮಧ್ಯಸ್ಥಾ ಉಷಸ್ತ್ವಮ್ ।
ತೇನಾ ಸುಶ್ರವಸಂ ಜನಂ ಪ್ರಾವಾದ್ಯ ದುಹಿತರ್ದಿವಃ ॥೨॥

ಪದಾರ್ಥ:- ಹೇ [ದಿವಃ] ಪ್ರಕಾಶಮಾನವಾದ ಸೂರ್ಯನ [ದುಹಿತಃ] ಪುತ್ರಿಯಳದೇ ಸಮಾನಳಾದ [ಉಷಃ] ವರ್ಧಮಾನಳಾದ ಸ್ತ್ರೀಯೇ! [ಯಂ] ಯಾವ [ಸುಪೇಶಸಂ] ಸುಂದರ ರೂಪವನ್ನು [ಸುಖಂ] ಆನಂದಕಾರಕವಾದ [ರಥಂ] ಕ್ರೀಡೆಯ ಸಾಧನವಾದ ಯಾನದ [ಅಧ್ಯಸ್ಥಾಃ] ಮೇಲೆ ಕುಳಿತಿರುವ ಪ್ರಾಣಿಗಳು ಆನಂದವನ್ನು ವೃದ್ಧಿಸುತ್ತವೆಯೋ [ತೇನ] ಆ ರಥದಿಂದ [ಸುಶ್ರವಸಂ] ಉತ್ತಮ ಶ್ರವಣಯುಕ್ತವಾದ [ಜನಂ] ವಿದ್ವಾಂಸನಾದ ಮನುಷ್ಯನ [ಪ್ರಾವಾ] ಉತ್ತಮ ರೀತಿಯ ರಕ್ಷಣೆಯನ್ನು ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಯಾವರೀತಿ ಸೂರ್ಯನ ಪ್ರಕಾಶದಿಂದ ಸುರೂಪದ ಪ್ರಸಿದ್ಧಿಯನ್ನು ಹೊಂದುತ್ತಾರೋ ಅದೇ ರೀತಿ ವಿದುಷೀ ಸ್ತ್ರೀಯರಿಂದ ಗೃಹಕೃತ್ಯಗಳು ಮತ್ತು ಮಕ್ಕಳು ಮರಿಗಳ ಪಾಲನೆ ಪೋಷಣೆ ಆಗುತ್ತದೆ ಎಂದು ತಿಳಿದು ಅವರಿಂದ ಉಪಕಾರವನ್ನು ಪಡೆಯಬೇಕು.

ಪುನಃ ಅವಳು ಹೇಗಿದ್ದಾಳೆ ಎಂಬುದನ್ನು ತಿಳಿಸಲಾಗುತ್ತದೆ.

ವಯಶ್ಚಿತ್ತೇ ಪತತ್ರಿಣೋ ದ್ವಿಪಚ್ಚತುಷ್ಪದರ್ಜುನಿ ।
ಉಷಃ ಪ್ರಾರನ್ನೃತೂಁರನು ದಿವೋ ಅಂತೇಭ್ಯಸ್ಪರಿ ॥೩॥

ಪದಾರ್ಥ:- ಹೇ ಸ್ತ್ರೀಯೇ! ಯಾವ [ಅರ್ಜುನೀ] ಉತ್ತಮ ರೀತಿಯ ಪ್ರಯತ್ನದ ನಿಮಿತ್ತ [ಉಷಃ] ಉಷೆಯು [ದಿವಃ] ಸೂರ್ಯಪ್ರಕಾಶದ [ಅಂತೇಭ್ಯಃ] ಸಮೀಪದಿಂದ [ಋತೂನ್] ಋತುಗಳನ್ನು ಮತ್ತು [ದ್ವಿಪತ್] ಮನುಷ್ಯಾದಿ ಹಾಗೂ [ಚತುಷ್ಪತ್] ಪಶುಆದಿಗಳ ಬೋಧೆಯನ್ನುಂಟುಮಾಡುತ್ತಾ ಎಲ್ಲರನ್ನೂ ಪ್ರಾಪ್ತಿಸುತ್ತದೆಯೋ, ಯಾವುದರಿಂದ ಇದರ [ಪತತ್ರಿಣಃ] ಕೆಳಗೆ ಮೇಲೆ ಹಾರುವ [ವಯಃ] ಪಕ್ಷಿಗಳು [ಪ್ರಾರನ್] ಅತ್ತಿತ್ತ ಹೋಗುತ್ತವೆಯೋ [ಚಿತ್] ಹಾಗೆಯೇ [ತೇ] ನಿನ್ನ ಗುಣವಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಉಷೆಯು ಮುಹೂರ್ತ, ಪ್ರಹರ, ದಿನ, ಮಾಸ, ಋತು, ಅಯನ ಮತ್ತು ವರ್ಷಗಳ ವಿಭಾಗಗಳನ್ನು ಮಾಡುತ್ತಾ ಸಮಸ್ತ ಪ್ರಾಣಿಗಳ ವ್ಯವಹಾರ ಮತ್ತು ಚೈತನ್ಯವನ್ನುಂಟುಮಾಡುತ್ತದೆಯೋ, ಹಾಗೆಯೇ ಸ್ತ್ರೀಯು ಎಲ್ಲ ಗೃಹಕೃತ್ಯಗಳನ್ನು ಬೇರೆ ಬೇರೆಯಾಗಿ ಮಾಡಲಿ.

ಪುನಃ ಅವಳು ಹೇಗೆ ಮತ್ತು ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ವ್ಯುಚ್ಛಂತೀ ಹಿ ರಶ್ಮಿಭಿ-ರ್ವಿಶ್ವಮಾಭಾಸಿ ರೋಚನಮ್ ।
ತಾಂ ತ್ವಾಮುಷರ್ವಸೂಯವೋ ಗೀರ್ಭಿಃ ಕಣ್ವಾ ಅಹೂಷತ ॥೪॥

ಪದಾರ್ಥ:- ಹೇ [ವಸುಯವಃ] ಯಾರು ಪೃಥ್ವಿ ಮೊದಲಾದ ವಸುಗಳನ್ನು ಸಂಯುಕ್ತ ಹಾಗೂ ವಿಯುಕ್ತಗೊಳಿಸುವ [ಕಣ್ವಾಃ] ಬುದ್ಧಿವಂತ ಜನರೇ! ಯಾವ ರೀತಿ [ಉಷಃ] ಉಷೆಯು [ವ್ಯುಚ್ಛಂತೀ] ವಿವಿಧ

ಪ್ರಕಾರದಿಂದ ನೆಲೆಗೊಳಿಸುವ, [ಹಿ] ನಿಶ್ಚಯವಾಗಿ [ರಶ್ಮಿಭಿಃ] ಕಿರಣಗಳಿಂದ [ರೋಚನಂ] ರುಚಿಕಾರಕವಾದ [ವಿಶ್ವಂ] ಸಮಸ್ತ ಪ್ರಪಂಚವನ್ನು [ಆಭಾಸಿ] ಉತ್ತಮ ರೀತಿಯಿಂದ ಪ್ರಕಾಶಿತಗೊಳಿಸುತ್ತಾಳೋ, ಹಾಗೆಯೇ [ತಾಂ] ಆ [ತ್ವಾಂ] ಸ್ತ್ರೀಯಾದ ನಿನ್ನನ್ನು [ಗೀರ್ಭಿಃ] ವೇದಶಿಕ್ಷಣಯುಕ್ತವಾದ ತಮ್ಮ ವಾಣಿಗಳಿಂದ [ಅಹೂಷತ] ಪ್ರಶಂಸಿತಗೊಳಿಸಿರಿ.

ಭಾವಾರ್ಥ:- ವಿದ್ವಾಂಸರಿಗೆ ಯೋಗ್ಯವಾದುದೇನೆಂದರೆ ಉಷೆಯ ಗುಣಗಳಂತೆ ಗುಣಗಳನ್ನು ಹೊಂದಿರುವ ಸ್ತ್ರೀಯೇ ಉತ್ತಮವೆನಿಸುತ್ತಾಳೆ ಎಂಬುದನ್ನು ತಿಳಿದು ಎಲ್ಲರಿಗೂ ಉಪದೇಶವನ್ನು ಮಾಡಬೇಕು.

ಇದರಲ್ಲಿ ಉಷೆಯ ಗುಣವರ್ಣನೆ ಮಾಡುವುದರಿಂದ ಈ ಸೂಕ್ತದ ಅರ್ಥವು ಹಿಂದಿನ ಸೂಕ್ತದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ನಲವತ್ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೫೦

ಮಂತ್ರಸಂಖ್ಯೆ ೧೩ । ಋಷಿಃ - ಪ್ರಸ್ಕಣ್ವಃ ಕಾಣ್ವಃ । ದೇವತಾ - ಸೂರ್ಯಃ (೧೧-೧೩ ರೋಗಘ್ನ ಉಪನಿಷದಃ, ಅಂತ್ಯೋರ್ಧರ್ಚಃ ದ್ವಿಷದ್ ಘ್ನಶ್ಚ) । ಛಂದಃ - ೧,೬ ನಿಚೃದ್ ಗಾಯತ್ರೀ, ೨, ೪, ೮, ೯ ಪಿಪೀಲಿಕಾ ಮಧ್ಯಾ ನಿಚೃದ್ ಗಾಯತ್ರೀ, ೩, ಗಾಯತ್ರೀ, ೫ ಯವಮಧ್ಯಾ ವಿರಾಡ್ ಗಾಯತ್ರೀ, ೭ ವಿರಾಡ್ ಗಾಯತ್ರೀ, ೧೦, ೧೧ ನಿಚೃದ್ ಅನುಷ್ಟುಪ್ ೧೨, ೧೩ ಅನುಷ್ಟುಪ್ । ಸ್ವರಃ- ಷಡ್ಜಃ, ಗಾಂಧಾರಃ.

ಸೂಕ್ತದ ಪ್ರಥಮ ಮಂತ್ರದಲ್ಲಿ ಎಂತಹ ಲಕ್ಷಣವುಳ್ಳ ಸೂರ್ಯನಿದ್ದಾನೆ ಎಂಬುದನ್ನು ತಿಳಿಸಲಾಗುತ್ತದೆ.

ಉದು ತ್ಯಂ ಜಾತವೇದಸಂ ದೇವಂ ವಹಂತಿ ಕೇತವಃ । ದೃಶೇ ವಿಶ್ವಾಯ ಸೂರ್ಯಮ್ ॥೧॥

ಪದಾರ್ಥ:- ಹೇ ಮನುಷ್ಯರೇ! ನೀವು, ಯಾವ ರೀತಿ [ಕೇತವಃ] ಕಿರಣಗಳು [ವಿಶ್ವಾಯ] ಎಲ್ಲರ [ದೃಶೇ] ನೋಡಲ್ಪಡುವ [ಉ] ಮತ್ತು ನೋಡಿಸಲ್ಪಡುವ ಯೋಗ್ಯವ್ಯವಹಾರಕ್ಕಾಗಿ [ತ್ಯಂ] ಆ [ಜಾತವೇದಸಂ] ಉತ್ಪನ್ನವಾದ ಪದಾರ್ಥಗಳನ್ನೆಲ್ಲಾ ಪ್ರಾಪ್ತಿಸುವವನಾದ [ದೇವಂ] ಪ್ರಕಾಶಮಾನನಾದ [ಸೂರ್ಯಂ] ರವಿಮಂಡಲವನ್ನು [ಉದ್ವಹಂತೀ] ಮೇಲಕ್ಕೆತ್ತಿ ಹಿಡಿಯುತ್ತದೆಯೋ ಹಾಗೆಯೇ ಗೃಹಸ್ಥಾಶ್ರಮ ಸುಖವನ್ನು ನೀಡಲು ಯೋಗ್ಯರಾದ ಸ್ತ್ರೀಯರನ್ನು ವಿವಾಹವಿಧಿಯಿಂದ ಪ್ರಾಪ್ತಿಗೊಳಿಸಿಕೊಳ್ಳಿರಿ.

ಭಾವಾರ್ಥ:- ಧಾರ್ಮಿಕರಾದ ತಾಯಿ ತಂದೆ, ವಿದ್ವಾಂಸರು ಯಾವ ರೀತಿ ಕುದುರೆಯು ರಥವನ್ನು ಮತ್ತು ಕಿರಣಗಳು ಸೂರ್ಯನನ್ನು ಪ್ರಾಪ್ತಿಸುತ್ತವೆಯೋ ಹಾಗೆಯೇ ವಿದ್ಯೆ ಮತ್ತು ಧರ್ಮದ ಪ್ರಕಾಶಯುಕ್ತರಾದ ತಮ್ಮಂತಹರೇ ಆದ ಸ್ತ್ರೀಯರೊಂದಿಗೆ ಎಲ್ಲ ಪುರುಷರ ವಿವಾಹವನ್ನು ಮಾಡಿಸಬೇಕು.

ಪುನಃ ಯಾರು ಯಾರಿಗಾಗಿ ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಅಪ ತ್ಯೇ ತಾಯವೋ ಯಥಾ ನಕ್ಷತ್ರಾ ಯಂತ್ಯಕ್ತುಭಿಃ । ಸೂರಾಯ ವಿಶ್ವಚಕ್ಷಸೇ ॥೨॥

ಪದಾರ್ಥ:- ಹೇ ಸ್ತ್ರೀ ಪುರುಷರೇ! ನೀವು [ಯಥಾ] ಯಾವ ರೀತಿ [ಅಕ್ತುಭಿಃ] ರಾತ್ರಿಗಳೊಂದಿಗೆ [ನಕ್ಷತ್ರಾ] ನಕ್ಷತ್ರವೇ ಮೊದಲಾದ ಕ್ಷಯರಹಿತ ಲೋಕಗಳನ್ನು ಮತ್ತು [ತಾಯವಃ] ವಾಯುವನ್ನು [ವಿಶ್ವಚಕ್ಷಸೇ] ವಿಶ್ವದಲ್ಲಿ ಕಂಡುಬರುವ [ಸೂರಾಯ] ಸೂರ್ಯಲೋಕದ ಅರ್ಥವು [ಅಪಯಂತಿ] ಸಂಯುಕ್ತ-ವಿಯುಕ್ತವಾಗುತ್ತವೆಯೋ ಅದೇ ರೀತಿ ವಿವಾಹಿತ ಸ್ತ್ರೀಯರೊಂದಿಗೆ ಸಂಯುಕ್ತ-ವಿಯುಕ್ತರಾಗಿರಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ರಾತ್ರಿಯಲ್ಲಿ ನಕ್ಷತ್ರಲೋಕವು ಚಂದ್ರನೊಂದಿಗೂ, ಪ್ರಾಣವು ಶರೀರದೊಂದಿಗೂ ವರ್ತಿಸುತ್ತದೆಯೋ ಅದೇ ರೀತಿ ವಿವಾಹ ಮಾಡಿಕೊಂಡು ಸ್ತ್ರೀ ಪುರುಷರೂ ಪರಸ್ಪರರೊಂದಿಗೆ ವರ್ತಿಸಬೇಕು.

ಪುನಃ ಅವರು ಹೇಗಿರಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಅದೃಶ್ರಮಸ್ಯ ಕೇತವೋ ವಿ ರಶ್ಮಯೋ ಜನಾಁ ಅನು ।
ಭ್ರಾಜಂತೋ ಅಗ್ನಯೋ ಯಥಾ ॥೩॥

ಪದಾರ್ಥ:- [ಯಥಾ] ಯಾವರೀತಿ [ಅಸ್ಯ] ಈ ಸವಿತೃವಿನ [ಭ್ರಾಜಂತಃ] ಪ್ರಕಾಶಮಾನವಾದ [ಅಗ್ನಯಃ] ಪ್ರಜ್ವಲಿತವಾದ [ಕೇತವಃ] ಉತ್ಪನ್ನಗೊಳಿಸುವ [ರಶ್ಮಯಃ] ಕಿರಣಗಳು [ಜನಾನ್] ಮನುಷ್ಯಾದಿ ಪ್ರಾಣಿಗಳನ್ನು [ಅನು] ಅನುಕೂಲವಾಗಿ ಪ್ರಕಾಶಿತಗೊಳಿಸುತ್ತದೆಯೋ ಅದೇ ರೀತಿ ನಾನೂ ಸಹ ನನ್ನ ವಿವಾಹಿತ ಸ್ತ್ರೀಯನ್ನು ಮತ್ತು ನನ್ನ ವಿವಾಹಿತ ಪತಿಯನ್ನು ಮಾತ್ರವೇ ಸಮಾಗಮಕ್ಕೆ ಯೋಗ್ಯರೆಂದು ತಿಳಿಯುವೆ; ಬೇರೆಯವರನ್ನಲ್ಲ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಪ್ರಜ್ವಲಿತವಾದ ಅಗ್ನಿ ಹಾಗೂ ಸೂರ್ಯಾದಿಗಳು ಹೊರಗಿನ ಎಲ್ಲದರಲ್ಲಿ ಪ್ರಕಾಶಮಾನವಾಗಿರುತ್ತವೆಯೋ ಅದೇ ರೀತಿ ಅಂತರಾತ್ಮದಲ್ಲಿ ಈಶ್ವರನ ಪ್ರಕಾಶವನ್ನು ಇರಿಸಿಕೊಂಡು ಇದನ್ನು ತಿಳಿಯಲು ಎಲ್ಲ ಮನುಷ್ಯರೂ ಪ್ರಯತ್ನ ಮಾಡಬೇಕಾಗುತ್ತದೆ. ಆ ಪರಮಾತ್ಮನ ಆಜ್ಞೆಯಂತೆ ಪರಸ್ತ್ರೀಯೊಂದಿಗೆ ಪುರುಷನು, ಪರಪುರುಷನೊಂದಿಗೆ ಸ್ತ್ರೀಯು ವ್ಯಭಿಚಾರವನ್ನು ಎಲ್ಲ ರೀತಿಯಿಂದಲೂ ತ್ಯಜಿಸಿ ಪಾಣಿಗ್ರಹಣ ಮಾಡಲ್ಪಟ್ಟ ತಮ್ಮ ತಮ್ಮ ಸ್ತ್ರೀ, ತಮ್ಮ ತಮ್ಮ ಪುರುಷರೊಂದಿಗೆ ಋತುಗಾಮಿಗಳಾಗಲಿ.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗಿದೆ.

ತರಣಿರ್ವಿಶ್ವದರ್ಶತೋ ಜ್ಯೋತಿಷ್ಕೃದಸಿ ಸೂರ್ಯ । ವಿಶ್ವಮಾ ಭಾಸಿ ರೋಚನಮ್ ॥೪॥

ಪದಾರ್ಥ:- ಹೇ ಸೂರ್ಯ! ಚರಾಚರದ ಆತ್ಮನಾದ ಪರಮಾತ್ಮನೇ! ಯಾವುದರಿಂದ [ವಿಶ್ವದರ್ಶತಃ] ವಿಶ್ವವನ್ನು ತೋರಿಸುವ ಮತ್ತು [ತರಣಿಃ] ಶೀಘ್ರವಾಗಿ ಎಲ್ಲವನ್ನೂ ಆಕ್ರಮಣ ಮಾಡುವ [ಜ್ಯೋತಿಷ್ಕೃತ್] ಸ್ವಪ್ರಕಾಶಸ್ವರೂಪನಾದ ನೀನು [ರೋಚನಂ] ರುಚಿಕಾರಕವಾಗಿ [ವಿಶ್ವಂ] ಸಮಸ್ತ ಜಗತ್ತನ್ನು ಪ್ರಕಾಶಿತಗೊಳಿಸುತ್ತೀಯೋ ಅದರಲ್ಲಿಯೇ ನಿನ್ನ ಸ್ವಪ್ರಕಾಶಸ್ವರೂಪವಿದೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯ ಮತ್ತು ವಿದ್ಯುತ್‌ಗಳು ಹೊರಗೆ ಮತ್ತು ಒಳಗೆ ಇರುವ ಸಮಸ್ತ ಸ್ಥೂಲ ಮತ್ತು ಸೂಕ್ಷ್ಮಗಳನ್ನು ಪ್ರಕಾಶಗೊಳಿಸುತ್ತವೆಯೋ ಅದೇ ರೀತಿ ಪರಮಾತ್ಮನೂ ಸಹ ಸಮಸ್ತ ವಸ್ತುಗಳನ್ನು ಪ್ರಕಾಶಿತಗೊಳಿಸುತ್ತಾನೆ.

ಪುನಃ ಆ ಜಗದೀಶ್ವರನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗುತ್ತದೆ.

ಪ್ರತ್ಯಙ್ ದೇವಾನಾಂ ವಿಶಃ ಪ್ರತ್ಯಙ್ಙುದೇಷಿ ಮಾನುಷಾನ್ ।
ಪ್ರತ್ಯಙ್ ವಿಶ್ವಂ ಸ್ವರ್ದೃಶೇ ॥೫॥

ಪದಾರ್ಥ:- ಹೇ ಜಗದೀಶ್ವರ! ಯಾವ ನೀನು **[ದೇವಾನಾಂ]** ದಿವ್ಯ ಪದಾರ್ಥಗಳ ಹಾಗೂ ವಿದ್ವಾಂಸರ **[ವಿಶಃ]** ಪ್ರಜೆಗಳಾದ **[ಮಾನುಷಾನ್]** ಮನುಷ್ಯರನ್ನು **[ಪ್ರತ್ಯಂಙಾಸಿ]** ಉತ್ತಮರೀತಿಯಲ್ಲಿ ಪ್ರಾಪ್ತನಾಗು. ಮತ್ತು ಎಲ್ಲ ಆತ್ಮಗಳಲ್ಲಿ **[ಪ್ರತ್ಯಙ್]** ಪ್ರಾಪ್ತನಾಗುತ್ತೀಯೆ. ಇದರಿಂದ **[ವಿಶ್ವಸದೃಶೇ]** ಸಮಸ್ತ ಗುಣಗಳ ದರ್ಶನಾರ್ಥ ಎಲ್ಲರ **[ಪ್ರತ್ಯಙ್]** ಪ್ರತ್ಯಗಾತ್ಮರೂಪದಿಂದ ಉಪಾಸನೀಯನಾಗು.

ಭಾವಾರ್ಥ:- ಯಾವುದರಿಂದ ಪರಮಾತ್ಮನು ಎಲ್ಲೆಡೆಯೂ ವ್ಯಾಪಕನೂ, ಎಲ್ಲರ ಆತ್ಮನನ್ನು ತಿಳಿದವನೂ, ಮತ್ತು ಎಲ್ಲ ಕರ್ಮಗಳ ಸಾಕ್ಷೀಭೂತನೂ ಆಗಿದ್ದಾನೋ, ಅದರಿಂದ ಇದೇ ಸಮಸ್ತ ಸಜ್ಜನರಿಗೆ ನಿತ್ಯವೂ ಉಪಾಸನೆ ಮಾಡುವುದು ಯೋಗ್ಯವಾಗಿದೆ.

ಮತ್ತೆ ಆ ಪರಮಾತ್ಮನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗುತ್ತದೆ.

ಯೇನಾ ಪಾವಕ ಚಕ್ಷಸಾ ಭುರಣ್ಯಂತಂ ಜನಾँ ಅನು । ತ್ವಂ ವರುಣ ಪಶ್ಯಸಿ ॥೬॥

ಪದಾರ್ಥ:- ಹೇ **[ಪಾವಕ]** ಪವಿತ್ರಕಾರಕನಾದ **[ವರುಣ]** ಸರ್ವೋತ್ತಮನಾದ ಪರಮಾತ್ಮ! ನೀನು **[ಯೇನ]** ಯಾವುದರಿಂದ **[ಚಕ್ಷಸಾ]** ವಿಜ್ಞಾನ ಪ್ರಕಾಶದಿಂದ **[ಭುರಣ್ಯಂತಂ]** ಧಾರಣ ಮತ್ತು ಪೋಷಣ ಮಾಡುತ್ತಾ ಲೋಕಗಳನ್ನು ಅಥವಾ **[ಜನಾನ್]** ಮನುಷ್ಯಾದಿಗಳನ್ನು **[ಅನುಪಶ್ಯಸಿ]** ಉತ್ತಮ ರೀತಿಯಿಂದ ನೋಡುವೆಯೋ ಆ ಜ್ಞಾನಪ್ರಕಾಶದಿಂದ ನಮ್ಮನ್ನೂ ಸಂಯುಕ್ತಗೊಳಿಸಿ ಕೃಪಾಪೂರ್ವಕವಾಗಿ ಮಾಡು.

ಭಾವಾರ್ಥ:- ಪರಮಾತ್ಮನ ಉಪಾಸನೆಯಿಲ್ಲದೆ -ಯಾವುದೇ ಮನುಷ್ಯನ ವಿಜ್ಞಾನ ಮತ್ತು ಪವಿತ್ರತೆ ಉಂಟಾಗುವುದು ಸಂಭವವೇ ಅಲ್ಲ. ಇದರಿಂದ ಸಮಸ್ತ ಮಾನವರು ಒಬ್ಬನೇ ಪರಮಾತ್ಮನನ ಉಪಾಸನೆಯನ್ನು ಮಾಡಬೇಕು.

ಪುನಃ ಅವನು ಏನು ಮಾಡುತ್ತಾನೆ ಎಂಬುದನ್ನು ತಿಳಿಸಲಾಗಿದೆ.

ವಿ ದ್ಯಾಮೇಷಿ ರಜಸ್ಪೃಥ್ವ-ಹಾ ಮಿಮಾನೋ ಅಕ್ತುಭಿಃ । ಪಶ್ಯಞ್ಜನ್ಮಾನಿ ಸೂರ್ಯ ॥೭॥

ಪದಾರ್ಥ:- ಹೇ **[ಸೂರ್ಯ]** ಚರಾಚರಾತ್ಮನ್ ಪರಮೇಶ್ವರ! ನೀನು, ಯಾವ ರೀತಿ ಸೂರ್ಯಲೋಕವು **[ಅಕ್ತುಭಿಃ]** ಪ್ರಸಿದ್ಧರಾತ್ರಿಗಳೊಂದಿಗೆ **[ಪೃಥು]** ವಿಸ್ತಾರಯುಕ್ತವಾಗಿ **[ರಜಃ]** ಲೋಕಸಮೂಹ ಮತ್ತು **[ಅಹ]** ದಿನಗಳನ್ನು **[ಮಿಮಾನಃ]** ನಿರ್ಮಾಣ ಮಾಡುತ್ತಾ ದೊಡ್ಡ ದೊಡ್ಡ **[ರಜಃ]** ಲೋಕಗಳನ್ನು ಪ್ರಾಪ್ತಿಸುತ್ತಾ ನಿಯಮದ ವ್ಯವಸ್ಥೆಯನ್ನು ಮಾಡುತ್ತದೆಯೋ, ಅದೇ ರೀತಿ ನಮ್ಮಗಳ **[ಜನ್ಮಾನಿ]** ಹಿಂದಿನ, ಇಂದಿನ ಮತ್ತು ಮುಂದಿನ ಜನ್ಮಗಳನ್ನು **[ಪಶ್ಯನ್]** ನೋಡುತ್ತಾ **[ಏಷಿ]** ಅನೇಕ ಪ್ರಕಾರಗಳಿಂದ ತಿಳಿಯುತ್ತೀಯೆ ಮತ್ತು ಪ್ರಾಪ್ತನಾಗುತ್ತೀಯೆ.

ಭಾವಾರ್ಥ:- ಯಾವನು ಸೂರ್ಯಾದಿ ಲೋಕಗಳನ್ನು ನಿರ್ಮಿಸಿದ್ದಾನೋ ಮತ್ತು ಸಮಸ್ತ ಜೀವಿಗಳ ಪಾಪ ಪುಣ್ಯಗಳನ್ನು ನೋಡಿ ಯೋಗ್ಯರೀತಿಯಲ್ಲಿ ಅವುಗಳ ಸುಖದುಃಖರೂಪೀ ಫಲಗಳನ್ನು ಕೊಡುತ್ತಾನೋ, ಅವನೇ ಎಲ್ಲರ ಸತ್ಯ ಸ್ವರೂಪೀ ನ್ಯಾಯಕಾರೀ ರಾಜನಾಗಿದ್ದಾನೆ ಎಂಬುದನ್ನು ಎಲ್ಲರೂ ತಿಳಿಯಬೇಕು.

ಮತ್ತೆ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಸಪ್ತ ತ್ವಾ ಹರಿತೋ ರಥೇ ವಹಂತಿ ದೇವ ಸೂರ್ಯ । ಶೋಚಿಷ್ಕೇಶಂ ವಿಚಕ್ಷಣ ॥೮॥

ಪದಾರ್ಥ:- ಹೇ **[ವಿಚಕ್ಷಣ]** ಎಲ್ಲವನ್ನೂ ನೋಡುವ **[ದೇವಾ]** ಸುಖವನ್ನು ನೀಡುವ **[ಶೂರ್ಯ]** ಜ್ಞಾನಸ್ವರೂಪ ಪರಮಾತ್ಮನೇ! ಯಾವ ರೀತಿ **[ಸಪ್ತ ಹರಿತಃ]** ಏಳು ಹರಿತಾದಿ ರಸಗಳನ್ನು ಅಪಹರಿಸುವ ಕಿರಣಗಳು **[ಶೋಚಿಷ್ಕೇಶಂ]** ಪವಿತ್ರ ದೀಪ್ತಿಯ ಸೂರ್ಯಲೋಕವನ್ನು **[ರಥೇ]** ರಮಣೀಯವಾದ ಸುಂದರಸ್ವರೂಪ ರಥದಲ್ಲಿ **[ವಹಂತಿ]** ಪ್ರಾಪ್ತಿಸುತ್ತದೆಯೋ ಅದೇ ರೀತಿ **[ತ್ವಾ]** ನಿನ್ನನ್ನು ಗಾಯತ್ರ್ಯಾದಿ ವೇದಸ್ಥ ಸಪ್ತ ಛಂದಸ್ಸುಗಳು ಪ್ರಾಪ್ತಿಸುತ್ತವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ಯಾವ ರೀತಿ ರಶ್ಮಿಗಳಿಲ್ಲದೆ ಸೂರ್ಯನ ದರ್ಶನವಿಲ್ಲವೋ ಅದೇ ರೀತಿ ವೇದಗಳನ್ನು ಸರಿಯಾಗಿ ತಿಳಿದಲ್ಲದೆ ಪರಮಾತ್ಮನ ದರ್ಶನ ಉಂಟಾಗುವುದಿಲ್ಲ ಎಂಬುದನ್ನು ತಿಳಿಯಿರಿ.

ಪುನಃ ಅವನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗುತ್ತದೆ.

ಅಯುಕ್ತ ಸಪ್ತ ಶುಂಧ್ಯುವಃ ಸೂರೋ ರಥಸ್ಯ ನಪ್ತ್ಯಃ । ತಾಭಿರ್ಯಾತಿ ಸ್ವಯುಕ್ತಿಭಿಃ ॥೯॥

ಪದಾರ್ಥ:- ಹೇ ಪರಮಾತ್ಮ! ಯಾವ ರೀತಿ **[ಸೂರಃ]** ಎಲ್ಲದರ ಪ್ರಕಾಶಕನಾದ ಯಾವ **[ಸಪ್ತ]** ಹಿಂದೆ ಹೇಳಿದ ಏಳು **[ನಪ್ತ್ಯಃ]** ನಾಶರಹಿತವಾದ **[ಶುಂಧ್ಯುವಃ]** ಶುದ್ಧಿಕಾರಕವಾದ ಕಿರಣಗಳಿವೆಯೋ ಅವುಗಳನ್ನು **[ರಥಸ್ಯ]** ರಮಣೀಯ ಸ್ವರೂಪದಿಂದ **[ಅಯುಕ್ತ]** ಯುಕ್ತಗೊಳಿಸಲಾಗುತ್ತದೆಯೋ ಮತ್ತು ಅದರೊಂದಿಗೆ ಪ್ರಾಪ್ತವಾಗುತ್ತದೆಯೋ ಅದೇ ರೀತಿ ನೀನು **[ತಾಭಿಃ]** ಆ **[ಸ್ವಯುಕ್ತಿಭಿಃ]** ನಿನ್ನ ಯುಕ್ತಿಗಳಲ್ಲಿ ಸಮಸ್ತ ಜಗತ್ತನ್ನು ಸಂಯುಕ್ತಗೊಳಿಸುವೆ. ಎಂಬುದು ನಮ್ಮ ದೃಢನಿಶ್ಚಯ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ಸೂರ್ಯನಂತೆ ತನ್ನಿಂದ ತಾನೇ ಬೆಳಗುವ ಪ್ರಕಾಶರೂಪಿ ಆಕಾಶದಂತೆ ಸರ್ವತ್ರ ವ್ಯಾಪಕವಾದ ಉಪಾಸಕರನ್ನು ಪವಿತ್ರಗೊಳಿಸುವ ಪರಮಾತ್ಮನಿದ್ದಾನೋ ಅವನೇ ಎಲ್ಲಾ ಮನುಷ್ಯರಿಗೆ ಉಪಾಸ್ಯದೇವನಾಗಿದ್ದಾನೆ.

ಪುನಃ ಅವನನ್ನು ವಿದ್ವಾಂಸರು ಯಾವ ರೀತಿಯಿಂದ ತಿಳಿಯಬೇಕು ಎಂಬುದನ್ನು ತಿಳಿಸಲಾಗುತ್ತದೆ

ಉದ್ ವಯಂ ತಮಸಸ್ಪರಿ ಜ್ಯೋತಿಷ್ಪಶ್ಯಂತ ಉತ್ತರಮ್ ।
ದೇವಂ ದೇವತ್ರಾ ಸೂರ್ಯ-ಮಗನ್ಮ ಜ್ಯೋತಿರುತ್ತಮಮ್ ॥೧೦॥

ಪದಾರ್ಥ:- ಹೇ ಮನುಷ್ಯರೇ! ಯಾವ ರೀತಿ **[ಜ್ಯೋತಿಃ]** ಭಗವಂತನು ಉತ್ಪನ್ನಗೊಳಿಸಿರುವ ಪ್ರಕಾಶಮಾನ ಸೂರ್ಯನನ್ನು **[ಪಶ್ಯಂತಃ]** ನೋಡುತ್ತಾ **[ವಯಂ]** ನಾವು **[ತಮಸಃ]** ಅಂಧಕಾರದಿಂದ ಮೇಲೆದ್ದು **[ಜ್ಯೋತಿಃ]** ಪ್ರಕಾಶಸ್ವರೂಪನಾದ **[ಉತ್ತರಂ]** ಸರ್ವೋತ್ತಮನೂ ಪ್ರಲಯದಿಂದ ಊರ್ಧ್ವ, ವರ್ತಮಾನ ಹಾಗೂ ಪ್ರಲಯವನ್ನು ಮಾಡುವವನಾದ **[ದೇವತ್ರ]** ದೇವ - ಮನುಷ್ಯ - ಪೃಥಿವ್ಯಾದಿಗಳಲ್ಲಿ ವ್ಯಾಪಕನಾದ **[ದೇವಂ]** ಸುಖದಾಯಕನಾದ **[ಉತ್ತಮಂ]** ಉತ್ಕೃಷ್ಟಗುಣಕರ್ಮ ಸ್ವಭಾವಯುಕ್ತನಾದ **[ಸೂರ್ಯಂ]** ಸರ್ವಾತ್ಮಾ ಪರಮೇಶ್ವರನನ್ನು **[ಪರಿಯುದಗನ್ಮ]** ಎಲ್ಲ ರೀತಿಯಿಂದಲೂ ಪ್ರಾಪ್ತಿಸಿರಿ. ಹಾಗೂ ಅದೇರೀತಿ ನೀವುಗಳೂ ಸಹ ಅವನನ್ನು ಹೊಂದಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಪರಮಾತ್ಮನಿಗಿಂತ ಉತ್ತಮವಾದ ವಸ್ತು ಬೇರಾವುದೂ ಇಲ್ಲ. ಮತ್ತು ಇದಿಲ್ಲದೆ ಮುಕ್ತಿ ಸುಖವನ್ನು ಹೊಂದಬಲ್ಲ ಯಾವುದೇ ಮನುಷ್ಯನೂ ಇರುವುದಿಲ್ಲ ಎಂಬುದನ್ನು ನಿಶ್ಚಿತವಾಗಿ ತಿಳಿಯಬೇಕು.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಉದ್ಯನ್ನದ್ಯ ಮಿತ್ರಮಹ ಆರೋಹನ್ನುತ್ತರಾಂ ದಿವಮ್ ।
ಹೃದ್ರೋಗಂ ಮಮ ಸೂರ್ಯ ಹರಿಮಾಣಂ ಚ ನಾಶಯ ॥೧೧॥

ಪದಾರ್ಥ:- ಹೇ [**ಮಿತ್ರಮಹ**] ಮಿತ್ರರಿಂದ ಸತ್ಕಾರಯೋಗ್ಯನಾದ [**ಸೂರ್ಯ**] ಸಮಸ್ತ ಔಷಧಿ ಮತ್ತು ರೋಗನಿವಾರಕ ವಿದ್ಯೆಗಳನ್ನು ತಿಳಿಯುವ ವಿದ್ವಾಂಸ! ನೀನು ಯಾವ ರೀತಿ [**ಅದ್ಯ**] ಇಂದು [**ಉದ್ಯನ್**] ಉದಯವನ್ನು ಹೊಂದುತ್ತಿರುವ ಅಥವಾ [**ಉತ್ತರಾಂ**] ಕಾರಣರೂಪಿಯಾದ [**ದಿವಮ್**] ದೀಪ್ತಿಯನ್ನು [**ಆರೋಹನ್**] ಉತ್ತಮ ರೀತಿಯಿಂದ ಹೊಂದುತ್ತಾ ಅಂಧಕಾರದ ನಿವಾರಣೆಯನ್ನು ಮಾಡಿ ಹಗಲನ್ನು ಪ್ರಕಟಿಸುತ್ತದೆಯೋ ಅದೇ ರೀತಿ ನನ್ನ [**ಹೃದ್ರೋಗಂ**] ಹೃದಯದ ರೋಗಗಳನ್ನು ಮತ್ತು [**ಹರಿಮಾಣಂ**] ಹರಣಶೀಲರಾದ ಚೋರರೇ ಮೊದಲಾದವರನ್ನು [**ನಾಶಯ**] ನಾಶಗೊಳಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯನ ಉದಯದಲ್ಲಿ ಅಂಧಕಾರ ಮತ್ತು ಚೋರಾದಿಗಳ ನಿವೃತ್ತಿ ಆಗುತ್ತವೆಯೋ ಅದೇ ರೀತಿ ಉತ್ತಮ ವೈದ್ಯನ ಪ್ರಾಪ್ತಿಯಿಂದ ಕುಪಥ್ಯಾ ಹಾಗೂ ರೋಗಗಳ ನಿವಾರಣೆ ಆಗಿ ಬಿಡುತ್ತದೆ.

ಪುನಃ ಅವರು ಏನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಶುಕೇಷು ಮೇ ಹರಿಮಾಣಂ ರೋಪಣಾಕಾಸು ದಧ್ಮಸಿ ।
ಅಥೋ ಹಾರಿದ್ರವೇಷು ಮೇ ಹರಿಮಾಣಂ ನಿ ದಧ್ಮಸಿ ॥೧೨॥

ಪದಾರ್ಥ:- ಯಾವ ರೀತಿ ಶ್ರೇಷ್ಠ ವೈದ್ಯರು ಹೇಳುತ್ತಾರೋ ಅದೇ ರೀತಿ ನಾವುಗಳು [**ಶುಕೇಷು**] ಶುಕಗಳಂತೆ ಮಾಡಲ್ಪಟ್ಟ ಕರ್ಮಗಳ ಮತ್ತು [**ರೋಪಣಾಕಾಸು**] ಲೇಪ ಮೊದಲಾದ ಕ್ರಿಯೆಗಳಿಂದ [**ಮೇ**] ನನ್ನ [**ಹರಿಮಾಣಂ**] ಚಿತ್ತವನ್ನು ಸೆಳೆಯುವ ರೋಗನಾಶಕ ಔಷಧಿಗಳನ್ನು [**ದಧ್ಮಸಿ**] ಧಾರಣ ಮಾಡೋಣ. [**ಅಥೋ**] ಇದರ ನಂತರ [**ಹಾರಿದ್ರವೇಷು**] ಯಾವ ಸುಖನಾಶಕವಾದ ಮಲವಾಹಕವಾದ ರೋಗಗಳಿವೆಯೋ ಅವುಗಳಲ್ಲಿ [**ಮೇ**] ನನ್ನ [**ಹರಿಮಾಣಂ**] ಹರಣಶೀಲ ಚಿತ್ತವನ್ನು [**ನಿ ದಧ್ಮಸಿ**] ನಿರಂತರವಾಗಿ ಸ್ಥಿರಗೊಳಿಸೋಣ.

ಭಾವಾರ್ಥ:- ಮನುಷ್ಯರು ಲೇಪನಾದಿ ಕ್ರಿಯೆಗಳಿಂದ ರೋಗಗಳ ನಿವಾರಣೆ ಮಾಡಿ ಬಲವನ್ನು ಹೊಂದಬೇಕು.

ಪುನಃ ಮನುಷ್ಯರು ಯಾವ ರೀತಿ ಪ್ರಜೆಗಳ ಪಾಲನೆಯನ್ನು ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಉದಗಾದಯಮಾದಿತ್ಯೋ ವಿಶ್ವೇನ ಸಹಸಾ ಸಹ ।
ದ್ವಿಷಂತಂ ಮಹ್ಯಂ ರಂಧಯನ್ ಮೋ ಅಹಂ ದ್ವಿಷತೇ ರಧಮ್ ॥೧೩॥

ಪದಾರ್ಥ:- ಹೇ ವಿದ್ವಾಂಸ! ಯಾವ ರೀತಿ [**ಅಯಂ**] ಈ [**ಆದಿತ್ಯಃ**] ನಾಶರಹಿತ ಸೂರ್ಯನು [**ಉದಗಾತ್**] ಉದಯವನ್ನು ಹೊಂದುತ್ತಾನೋ ಅದೇ ರೀತಿ ನೀನು [**ವಿಶ್ವೇನ**] ಸಮಸ್ತ [**ಸಹಸಾ**] ಬಲಗಳೊಂದಿಗೆ ಉದಿತನಾಗು. ಯಾವ ರೀತಿ ನೀನು [**ಮಹ್ಯಂ**] ಧಾರ್ಮಿಕ ಮನುಷ್ಯನ [**ದ್ವಿಷಂತಂ**] ದ್ವೇಷವನ್ನು ಮಾಡುತ್ತಿರುವ

ಶತ್ರುವನ್ನು [**ರಂಧಯನ್**] ಕೊಲ್ಲುತ್ತಾ ವರ್ತಿಸುವೆಯೋ ಅದೇ ರೀತಿ [**ಅಹಂ**] ನಾನು [**ದ್ವಿಷತೇ**] ಶತ್ರುವಿಗಾಗಿ ವರ್ತಿಸುವಂತಾಗಲಿ. ಯಾವ ರೀತಿ ಈ ಶತ್ರುವು ನನ್ನನ್ನು ಕೊಲ್ಲುತ್ತಾನೋ ಅದೇ ರೀತಿ ಇವನನ್ನು ನಾನೂ ಕೊಲ್ಲುವಂತಾಗಲಿ. ಯಾರು ನನ್ನನ್ನು ಕೊಲ್ಲುವುದಿಲ್ಲವೋ, ಹಿಂಸಿಸುವುದಿಲ್ಲವೋ ಅವರನ್ನು ನಾನೂ ಸಹ [**ಮೋ ರಧಮ್**] ಕೊಲ್ಲದಿರುವಂತಾಗಲಿ.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, ಅನಂತಬಲಯುಕ್ತನಾದ ಪರಮಾತ್ಮನ ಬಲದ ನಿಮಿತ್ತ ಪ್ರಾಣ ಹಾಗೂ ವಿದ್ಯುತ್ತುಗಳ ದೃಷ್ಟಾಂತದಿಂದ ವರ್ತಿಸಿ ಸತ್ಪುರುಷರೊಂದಿಗೆ ಮಿತ್ರತೆಯನ್ನು ಹೊಂದಿ ಎಲ್ಲ ಪ್ರಜೆಗಳನ್ನೂ ಯಥಾವತ್ತಾಗಿ ಪಾಲಿಸಬೇಕು.

ಈ ಸೂಕ್ತದಲ್ಲಿ ಪರಮೇಶ್ವರ ಅಥವಾ ಅಗ್ನಿಯ ಕಾರ್ಯಕಾರಣಗಳ ದೃಷ್ಟಾಂತದಿಂದ ರಾಜನಗುಣ ವರ್ಣನೆ ಮಾಡಿರುವುದರಿಂದ ಈ ಸೂಕ್ತಾರ್ಥವು ಪೂರ್ವಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ಐವತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೫೧

ಮಂತ್ರಸಂಖ್ಯೆ ೧೫ । ಋಷಿಃ - ಸವ್ಯ ಆಂಗಿರಸಃ । ದೇವತಾ - ಇಂದ್ರಃ । ಛಂದಃ - ೧, ೯, ೧೦ ಜಗತೀ, ೨, ೫, ೮ ವಿರಾಡ್ ಜಗತೀ, ೧೧-೧೩ ನಿಚೃದ್ ಜಗತೀ, ೩, ೪ ಭುರಿಕ್ ತ್ರಿಷ್ಟುಪ್, ೬, ೭ ತ್ರಿಷ್ಟುಪ್, ೧೪-೧೫ ವಿರಾಟ್ ತ್ರಿಷ್ಟುಪ್ । ಸ್ವರಃ- ಧೈವತಃ, ನಿಷಾದಃ.

ಈ ಸೂಕ್ತದ ಪ್ರಾರಂಭದ ಮಂತ್ರದಲ್ಲಿ ಇಂದ್ರ ಶಬ್ದಾರ್ಥದಿಂದ ವಿದ್ವಾಂಸರ ಗುಣಗಳ ವರ್ಣನೆ ಮಾಡಲಾಗಿದೆ.

ಅಭಿ ತ್ಯಂ ಮೇಷಂ ಪುರುಹೂತಮೃಗ್ಮಿಯ-ಮಿಂದ್ರಂ ಗೀರ್ಭಿರ್ಮದತಾ ವಸ್ವೋ ಅರ್ಣವಮ್ ।
ಯಸ್ಯ ದ್ಯಾವೋ ನ ವಿಚರಂತಿ ಮಾನುಷಾ ಭುಜೇ ಮಂಹಿಷ್ಠಮಭಿ ವಿಪ್ರಮರ್ಚತ ॥೧॥

ಪದಾರ್ಥ:- ಹೇ ಮನುಷ್ಯರೇ! ನೀವು [**ಅರ್ಣವಂ**] ಸಮುದ್ರದಂತಿರುವ [**ತ್ಯಂ**] ಆ [**ಮೇಷಂ**] ವೃಷ್ಟಿಯ ಮೂಲಕ ಸೇಚನ ಮಾಡುವ [**ಪುರುಹೂತಂ**] ಬಹಳ ವಿದ್ವಾಂಸರಿಂದ ಸ್ತುತನಾದ [**ಋಗ್ಮಿಯಂ**] ಋಚೆಗಳಿಂದ ಮಾನ್ಯಮಾಡಲು ಯೋಗ್ಯನಾದ [**ಮಂಹಿಷ್ಟಂ**] ಗುಣಗಳಿಂದ ದೊಡ್ಡವನಾದ [**ಇಂದ್ರಂ**] ಸಮಗ್ರ ಐಶ್ವರ್ಯದಿಂದ ಕೂಡಿದ ಶತ್ರುಗಳನ್ನು ವಿಧಾರಣ ಮಾಡಬಲ್ಲ ರಾಜನನ್ನು [**ಗೀರ್ಭಿಃ**] ಸತ್ಯಪ್ರಶಂಸಿತ ವಾಣಿಗಳಿಂದ [**ಅಭಿಮದತ**] ಹರ್ಷಿತಗೊಳಿಸಿರಿ ಮತ್ತು ಸೂರ್ಯನ [**ದ್ಯಾವಃ**] ಕಿರಣಗಳ [**ನ**] ಸಮಾನವಾದ [**ಯಸ್ಯ**] ಯಾವುದನ್ನು [**ಭುಜೇ**] ಭೋಗಿಸಲು [**ಮಾನುಷಾ**] ಮನುಷ್ಯರಿಗೆ ಹಿತವನ್ನುಂಟುಮಾಡುವ ಗುಣದಲ್ಲಿ [**ವಿಚರಂತಿ**] ವಿಹರಿಸುತ್ತಾರೆಯೋ ಆ [**ವಸ್ವಃ**] ಧನದ [**ವಿಪ್ರಂ**] ದಾನಮಾಡುವ ವಿದ್ವಾಂಸನನ್ನು [**ಅಭ್ಯರ್ಚತ**] ಸದಾ ಸತ್ಕಾರ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಮಾನವರಿಗೆ ಯೋಗ್ಯವಾದುದೇನೆಂದರೆ, ಯಾವನು ಬಹುಗುಣಗಳಿಂದ ಕೂಡಿದ ಸೂರ್ಯನಂತಹ ವಿದ್ಯಾಯುಕ್ತ ರಾಜನಿದ್ದಾನೋ ಅವನನ್ನೇ ಸದಾ ಸತ್ಕರಿಸಬೇಕು.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಅಭೀಮವನ್ವನ್ತ್ಸ್ವಭಿಷ್ಟಿಮೂತಯೋಽಂತರಿಕ್ಷಪ್ರಾಂ ತವಿಷೀಭಿರಾವೃತಮ್ ।
ಇಂದ್ರಂ ದಕ್ಷಾಸ ಋಭವೋ ಮದಚ್ಯುತಂ ಶತಕ್ರತುಂ ಜವನೀ ಸೂನೃತಾರುಹತ್ ॥೨॥

ಪದಾರ್ಥ:- ಹೇ ಸೇನಾಪತೇ! ಯಾವ ನಿನ್ನ **[ಊತಯಃ]** ರಕ್ಷಣೆಗಳು, ಪ್ರಜೆಗಳ ಪಾಲನೆಯನ್ನು ಮಾಡುತ್ತಿವೆಯೋ **[ದಕ್ಷಾಸಃ]** ವಿಜ್ಞಾನವೃದ್ಧ ಶೀಘ್ರಕಾರ್ಯವನ್ನು ಸಿದ್ಧಗೊಳಿಸುವ **[ಋಭವಃ]** ಮೇಧಾವೀ ವಿದ್ವಾಂಸರು ಯಾವ **[ಸ್ವಭಿಷ್ಟಿಂ]** ಉತ್ತಮ ಇಷ್ಟಿಯುಕ್ತ **[ಅಂತರಿಕ್ಷಪ್ರಾಂ]** ತನ್ನ ತೇಜಸ್ಸಿನಿಂದ ಅಂತರಿಕ್ಷ ಅರ್ಥಾತ್ ಅವಕಾಶದಲ್ಲಿ ಎಲ್ಲರನ್ನೂ ಸುಖದಿಂದ ಪೂರ್ಣರನ್ನಾಗಿ ಮಾಡುವ **[ಮದಚ್ಯುತಂ]** ಹರ್ಷಾದಿಗಳನ್ನು ನೀಡುವ **[ಶತಕ್ರತುಂ]** ಅನೇಕ ಕರ್ಮಗಳ ಕರ್ತನಾದ **[ತವಿಷೀಭಿಃ]** ಬಲ, ಆಕರ್ಷಣೆ ಮೊದಲಾದ ಗುಣಗಳಿಂದ ಕೂಡಿದ ಸೇನೆಯಿಂದ **[ಆವೃತಮ್]** ಆವೃತವಾದ **[ಇಂದ್ರಂ]** ವಿದ್ಯುತ್ತಿನಂತೆ ಇರುವ ನಿನ್ನನ್ನು **[ಅಭ್ಯ ವನ್ವನ್]** ಕಾರ್ಯಗಳನ್ನು ಮಾಡಲು ಎಲ್ಲ ಪ್ರಕಾರದಿಂದ ವೃದ್ಧಿಯುಕ್ತಗೊಳಿಸುತ್ತೇವೆಯೋ, ಯಾವುದರಿಂದ **[ಜವನೀ]** ವೇಗಯುಕ್ತವಾದ **[ಸೂನೃತಾ]** ಅನ್ನಾದಿ ಪದಾರ್ಥಗಳನ್ನು ಸಿದ್ಧಗೊಳಿಸುವ ರಾಜನೀತಿ ಇದೆಯೋ ಅದು **[ಆರುಹತ್]** ವೃದ್ಧಿಹೊಂದಿ ಪ್ರಾಪ್ತವಾಗಲಿ. ಅಂತಹ ನಿನ್ನನ್ನು ನಾವುಗಳು ರಕ್ಷಿಸುವಂತಾಗಲಿ.

ಭಾವಾರ್ಥ:- ಧರ್ಮಾತ್ಮರೂ, ಬುದ್ಧಿವಂತರೂ ಆದ ಜನರು ಯಾರ ಆಶ್ರಯವನ್ನು ಮಾಡುತ್ತಾರೋ ಅವರ ಆಶ್ರಯವನ್ನೇ ಗ್ರಹಣ ಮಾಡಿ ಎಲ್ಲ ಮನುಷ್ಯರು ಸುಖಿಗಳಾಗಲಿ.

ಪುನಃ ಅವರು ಹೇಗಿರುತ್ತಾರೆ ಎಂಬುದನ್ನು ತಿಳಿಸಲಾಗುತ್ತದೆ.

ತ್ವಂ ಗೋತ್ರಮಂಗಿರೋಭ್ಯೋಽವೃಣೋರಪೋ-ತಾತ್ರಯೇ ಶತದುರೇಷು ಗಾತುವಿತ್ ।
ಸಸೇನ ಚಿದ್ ವಿಮದಾಯಾವಹೋ ವಸ್ವಾ-ಜಾವದ್ರಿಂ ವಾವಸಾನಸ್ಯ ನರ್ತಯನ್ ॥೩॥

ಪದಾರ್ಥ:- ಹೇ **[ಸಸೇನ]** ಸೇನೆಯೊಂದಿಗಿನ ಸೇನಾಧ್ಯಕ್ಷನೇ! ನೀನು, ಯಾವ ರೀತಿ ಸೂರ್ಯನು **[ಅಂಗಿರೋಭ್ಯಃ]** ಪ್ರಾಣಸ್ವರೂಪ ಪವನಗಳಿಂದ **[ಅದ್ರಿಂ]** ಪರ್ವತ ಹಾಗೂ ಮೇಘಗಳಿಂತಿರುವ **[ಅತ್ರಯೇ]** ಯಾವುದರಲ್ಲಿ ಮೂರು ಅರ್ಥಾತ್ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ದುಃಖಗಳಿರುವುದಿಲ್ಲವೋ ಆ **[ಆಜೌ]** ಸಂಗ್ರಾಮದಲ್ಲಿ ಶತ್ರುಗಳ ಬಲವನ್ನು **[ಅಪಾವೃಣೋಃ]** ದೂರಗೊಳಿಸುತ್ತೀಯೋ **[ವಾವಸಾನಸ್ಯ]** ಆವರಿಸಿರುವ ಶತ್ರುಪಕ್ಷದ ಸೇನೆಯನ್ನು **[ನರ್ತಯನ್]** ಕುಣಿಸುವಂತೆ ನಡುಗಿಸುತ್ತಾ **[ವಿಮದಾಯ]** ವಿವಿಧ ಆನಂದದ ನಿಮಿತ್ತ **[ವಸು]** ಧನವನ್ನು **[ಆವಯಃ]** ಉತ್ತಮ ರೀತಿಯಲ್ಲಿ ಪ್ರಾಪ್ತಿಸು. **[ಉತ]** ಮತ್ತು **[ಗಾತುವಿತ್]** ಭೂಗರ್ಭವಿದ್ಯೆಯನ್ನು ತಿಳಿದಿರುವ ನೀನು **[ಶತದುರೇಷು]** ಅಸಂಖ್ಯ ಮೇಘಗಳ ಆವಯವಗಳಲ್ಲಿ ಅವಿತಿಡಲ್ಪಟ್ಟ ಪದಾರ್ಥಗಳಂತೆ ಅವಿತಿಟ್ಟ ನಿನ್ನ ಸೇನೆಯನ್ನು ಎದುರಿಸುವೆ. ಆದುದರಿಂದ ನೀನು ಸತ್ಕಾರಯೋಗ್ಯನಾಗಿರುವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಸೇನಾಪತಿ ಮೊದಲಾದವರು ಎಲ್ಲಿಯ ತನಕ ವಾಯುವಿನ ಬಳಿ ಉತ್ಪನ್ನವಾದ ಸೂರ್ಯಸಮಾನನಾದ ಪರಾಕ್ರಮಿಯಾಗುವುದಿಲ್ಲವೋ ಅಲ್ಲಿಯ ತನಕ ಶತ್ರುಗಳನ್ನು ಜಯಿಸಲಾರರು.

ಪುನಃ ಅವನು ಯಾರ ಸಮಾನವಾಗಿದ್ದು ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ತ್ವಮಪಾಮಪಿಧಾನಾವೃಣೋರಪಾಧಾರಯಃ ಪರ್ವತೇ ದಾನುಮದ್ ವಸು । ವೃತ್ರಂ
ಯದಿಂದ್ರ ಶವಸಾವಧೀರಹಿಮಾದಿತ್ ಸೂರ್ಯಂ ದಿವ್ಯಾರೋಹಯೋ ದೃಶೇ ॥೪॥

ಪದಾರ್ಥ:- ಹೇ **[ಇಂದ್ರ]** ಜಗದೀಶ್ವರ! **[ಯಂ]** ಯಾವ ಕಾರಣದಿಂದ **[ತ್ವಂ]** ನೀನು, ಯಾವ ರೀತಿ ಸೂರ್ಯನು **[ಅಪಾಂ]** ಜಲರಾಶಿಗಳನ್ನು **[ಅಪಿಧಾನಾ]** ತನ್ನ ಆಚ್ಛಾದನಗಳಿಂದ ದೂರ ಮಾಡುತ್ತಾನೋ ಅದೇ

ರೀತಿ ಶತ್ರುಗಳ ಬಲವನ್ನು **[ಅಪಾವೃಣೋಃ]** ದೂರಗೊಳಿಸುವೆ. ಯಾವ ರೀತಿ **[ಪರ್ವತೇ]** ಮೇಘದಲ್ಲಿ **[ದಾನುಮತ್]** ಉತ್ತಮ ಶಿಖರಯುಕ್ತವಾದ **[ವಸು]** ದ್ರವ್ಯ ಅಥವಾ ಜಲವನ್ನು **[ಆ ಧಾರಯಃ]** ಧಾರಣ ಮಾಡುತ್ತಾ ಮತ್ತು **[ಶವಸಾ]** ಬಲದಿಂದ **[ಅಹಿಂ]** ವ್ಯಾಪಿಸಲು ಯೋಗ್ಯವಾದ **[ವೃತ್ರಂ]** ಮೇಘವನ್ನು **[ಅವಧೀಃ]** ಕೊಲ್ಲುತ್ತಾನೋ ಹಾಗೆಯೇ ಶತ್ರುಗಳನ್ನು ಛಿನ್ನಭಿನ್ನಗೊಳಿಸುವೆ ಮತ್ತು ಯಾವ ರೀತಿ ಕಿರಣಸಮೂಹವು **[ಸೂರ್ಯಂ]** ಸೂರ್ಯನನ್ನು **[ದಿವಿ ಅರೋಹಯಃ]** ಉತ್ತಮ ಪ್ರಕಾರದಿಂದ ಸ್ಥಾಪಿತಗೊಳಿಸುತ್ತದೆಯೋ **[ದೃಶೇ]** ಹಾಗೆಯೇ ನ್ಯಾಯದ ಪ್ರಕಾಶದಿಂದ ಯುಕ್ತವಾಗಿದೆ. ಆದುದರಿಂದ ರಾಜ್ಯವನ್ನು ನಡೆಸಲು ಯೋಗ್ಯವಾಗಿದೆ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಯಾವ ಪರಮಾತ್ಮನು ಮೇಘದ ಮೂಲಕ ಭೇದನ ಮಾಡಿ ಆಕರ್ಷಣ ಮಾಡಿ ಅಂತರಿಕ್ಷದಲ್ಲಿ ಸ್ಥಾಪಿತವಾದ ವರ್ಷವನ್ನು ಮತ್ತು ಎಲ್ಲರನ್ನೂ ಪ್ರಕಾಶಿತಗೊಳಿಸುವ ಸುಖವನ್ನು ನೀಡುತ್ತಾನೋ ಆ ಸೂರ್ಯನನ್ನು ಪರಮಾತ್ಮನು ರಚಿಸಿ ಸ್ಥಾಪಿತಗೊಳಿಸಿದ್ದಾನೆ ಎಂದು ತಿಳಿಯಬೇಕು.

ಮತ್ತೆ ಸಭಾಧ್ಯಕ್ಷಾದಿಗಳ ಗುಣಗಳನ್ನು ಉಪದೇಶಿಸಲಾಗುತ್ತದೆ.

ತ್ವಂ ಮಾಯಾಭಿರಪ ಮಾಯಿನೋಽಧಮಃ ಸ್ವಧಾಭಿರ್ಯೇ ಅಧಿ ಶುಪ್ತಾವಜುಹ್ವತ ।
ತ್ವಂ ಪಿಪ್ರೋರ್ನೃಮಣಃ ಪ್ರಾರುಜಃ ಪುರಃ ಪ್ರ ಋಜಿಶ್ವಾನಂ ದಸ್ಯುಹತ್ಯೇಷ್ವಾವಿಥ ॥೫॥

ಪದಾರ್ಥ:- ಹೇ **[ನೃಮಣಃ]** ಮನುಷ್ಯರಲ್ಲಿ ಮನಸ್ಸನ್ನಿರಿಸುವ ಸಭಾಧ್ಯಕ್ಷನೇ! **[ತ್ವಂ]** ನೀನು **[ಪುರಃ]** ಮೊದಲು **[ಸ್ವಧಾಭಿಃ]** ಅನ್ನಾದಿ ಪದಾರ್ಥಗಳಿಂದ **[ಪಿಪ್ರೋಃ]** ನ್ಯಾಯವನ್ನು ಪೂರ್ಣಗೊಳಿಸುವ ನ್ಯಾಯಾಧೀಶರ ಆಜ್ಞೆ ಮತ್ತು **[ಋಜಿಶ್ವಾನಂ]** ಜ್ಞಾನ ಮೊದಲಾದ ಸರಳಗುಣಗಳಿಂದ ಯುಕ್ತವಾದುದನ್ನು **[ಪ್ರಾವಿಥ]** ರಕ್ಷಣೆ ಮಾಡು ಮತ್ತು ಯಾವುದು **[ಮಾಯಿನಃ]** ನಿಂದಿತ ಬುದ್ಧಿಯವರ **[ಮಾಯಾಭಿಃ]** ಕಪಟ ಛಲಾದಿಗಳಿಂದ ಮತ್ತು **[ಶುಪ್ತೌ]** ಮಲಗಿದ ನಂತರ ಇತರರ ಪದಾರ್ಥಗಳನ್ನು **[ಅಜುಹ್ವತ]** ಹರಣ ಮಾಡುತ್ತಾರೋ ಆ ಡಾಕು ಮೊದಲಾದ ದುಷ್ಟರನ್ನು **[ಅಪಾಧಮಃ]** ದೂರಗೊಳಿಸು ಮತ್ತು ಅವರನ್ನು **[ದಸ್ಯುಹತ್ಯೇಷು]** ಡಾಕುಗಳ ನಾಶಮಾಡುವ ಸಂಗ್ರಾಮದಲ್ಲಿ **[ಪ್ರಾರುಜ]** ಛಿನ್ನ-ಭಿನ್ನಗೊಳಿಸು.

ಭಾವಾರ್ಥ:- ಯಾವ ಸಭಾಧ್ಯಕ್ಷನು ತನ್ನ ಸತ್ಯರೂಪೀ ನ್ಯಾಯದಿಂದ ಉತ್ತಮ ಹಾಗೂ ದುಷ್ಟ ಕರ್ಮಗಳನ್ನು ಮಾಡುವ ಮನುಷ್ಯರಿಗಾಗಿ ಫಲಗಳನ್ನು ನೀಡಿ, ಇಬ್ಬರ ಯಥಾಯೋಗ್ಯ ರಕ್ಷಣೆಯನ್ನು ಮಾಡುತ್ತಾನೋ ಅವನೇ ಈ ಜಗತ್ತಿನಲ್ಲಿ ಸತ್ಕಾರಯೋಗ್ಯನಾಗುತ್ತಾನೆ.

ಪುನಃ ಸಭಾಧ್ಯಕ್ಷನ ಗುಣಗಳನ್ನು ಉಪದೇಶಿಸಲಾಗುತ್ತದೆ.

ತ್ವಂ ಕುತ್ಸಂ ಶುಷ್ಣಹತ್ಯೇಷ್ವಾವಿಥಾ-ರಂಧಯೋಽತಿಥಿಗ್ವಾಯ ಶಂಬರಮ್ । ಮಹಾಂತಂ
ಚಿದರ್ಬುದಂ ನಿ ಕ್ರಮೀಃ ಪದಾ ಸನಾದೇವ ದಸ್ಯುಹತ್ಯಾಯ ಜಜ್ಞಿಷೇ ॥೬॥

ಪದಾರ್ಥ:- ಹೇ ವಿದ್ವನ್! ಶೂರವೀರನಾದ ಮನುಷ್ಯನು ಯಾವುದರಿಂದ **[ತ್ವಂ]** ನೀನು **[ಪದಾ]** ಪಾದದಿಂದ ಆಕ್ರಾಂತವಾದ ಶತ್ರುಸಮೂಹವನ್ನು ಕೊಲ್ಲುವವನ **[ಚಿತ್]** ಸಮಾನವಾಗಿ **[ಶುಷ್ಣಹತ್ಯೇಷು]** ಶತ್ರುಗಳ ಬಲವನ್ನು ಹನನಯೋಗ್ಯ ವ್ಯವಹಾರಗಳಲ್ಲಿ **[ಮಹಾಂತಂ]** ಮಹಾಗುಣ ವಿಶಿಷ್ಟನಾದ **[ಕುತ್ಸಂ]** ಶಸ್ತ್ರಧಾರಿಯಾಗಿ ವಜ್ರವನ್ನು ಧಾರಣೆ ಮಾಡಿ ಪ್ರಜೆಗಳ **[ಆವಿಥಾ]** ರಕ್ಷಣೆ ಮಾಡುವೆ ಮತ್ತು ದುಷ್ಟರನ್ನು **[ಅರಂಧಯಃ]** ಕೊಲ್ಲುವೆ.

[ಅತಿಥಿಗ್ವಾಯ] ಅತಿಥಿಗಳ ಹೋಗಿಬರುವ ಶುದ್ಧ ಮಾರ್ಗಕ್ಕಾಗಿ [ಅರ್ಬುದಂ] ಅಸಂಖ್ಯಾತಗುಣವಿಶಿಷ್ಟವಾದ [ಶಂಬರಂ] ಬಲವನ್ನು [ನಿ ಕ್ರಮೀಃ] ಕ್ರಮದಿಂದ ವೃದ್ಧಿಸುವೆ. [ಸನಾತ್] ಉತ್ತಮ ಪ್ರಕಾರದ ಸೇವನೆಯಿಂದ [ಪದಾ] ಪದಾಕ್ರಾಂತ ಶತ್ರುಸೇನೆಯನ್ನು ನಾಶಗೊಳಿಸುತ್ತೀಯೆ. [ದಸ್ಯುಹತ್ಯಾಯ ಏವ] ಶತ್ರುಗಳನ್ನು ಕೊಲ್ಲುವ ವ್ಯವಹಾರಕ್ಕಾಗಿಯೇ [ಜಜ್ಞಿಷೇ] ಉತ್ಪನ್ನನಾಗಿರುವೆ. ಆದುದರಿಂದ ನಾವು ನಿಮ್ಮ ಸತ್ಕಾರವನ್ನು ಮಾಡುತ್ತೇವೆ.

ಭಾವಾರ್ಥ:- ಸಭಾಧ್ಯಕ್ಷಾದಿಗಳಿಗೆ ಯೋಗ್ಯವಾದುದೇನೆಂದರೆ, ಯಾವ ರೀತಿ ಶತ್ರುಗಳನ್ನು ಕೊಂದು ಶ್ರೇಷ್ಠರ ರಕ್ಷಣೆಯ ಮಾರ್ಗಗಳನ್ನು ಶುದ್ಧಗೊಳಿಸಿ ಅಸಂಖ್ಯಾತ ಬಲವನ್ನು ಧಾರಣೆ ಮಾಡಿ ಶತ್ರುಗಳನ್ನು ಕೊಲ್ಲಲು ಬೇಕಾದ ಅತ್ಯಂತ ಪ್ರಭಾವವನ್ನು ವೃದ್ಧಿಸಬೇಕು.

ಪುನಃ ಆ ಸಭೆ ಮೊದಲಾದವುಗಳ ಅಧ್ಯಕ್ಷರು ಹೇಗಿರಬೇಕು ಎಂಬುದನ್ನು ತಿಳಿಸಲಾಗುತ್ತದೆ.

ತ್ವೇ ವಿಶ್ವಾ ತವಿಷೀ ಸಧ್ರ್ಯಗ್ಘಿತಾ ತವ ರಾಧಃ ಸೋಮಪೀಥಾಯ ಹರ್ಷತೇ ।
ತವ ವಜ್ರಶ್ಚಿಕಿತೇ ಬಾಹ್ವೋರ್ಹಿತೋ ವೃಶ್ಚಾ ಶತ್ರೋರವ ವಿಶ್ವಾನಿ ವೃಷ್ಣ್ಯಾ ॥೭॥

ಪದಾರ್ಥ:- ಹೇ ವಿದ್ವಾಂಸನೇ! [ತ್ವೇ] ನಿನ್ನಲ್ಲಿ ಯಾವ [ವಿಶ್ವಾ] ಸಮಸ್ತ [ತವಿಷೀ] ಬಲವು [ಹಿತಾ] ಸ್ಥಾಪಿತವಾಗಿದೆಯೋ [ಸಧ್ರ್ಯಕ್] ಜೊತೆಯಾಗಿ ಸೇವಿಸುವ [ರಾಧಃ] ಧನಸಂಪತ್ತುಗಳು [ಸೋಮಪೀಥಾಯ] ಸುಖವನ್ನುಂಟುಮಾಡುವ ಪದಾರ್ಥಗಳ ಭೋಗಕ್ಕಾಗಿ [ಹರ್ಷತೇ] ಹರ್ಷಯುಕ್ತಗೊಳಿಸುತ್ತದೆ. ಯಾವ [ತವ] ನಿನ್ನ [ಬಾಹ್ವೋಃ] ಬಾಹುಗಳಲ್ಲಿ [ಹಿತಃ] ಧಾರಣೆ ಮಾಡಿರುವ [ವಜ್ರಃ] ಶತ್ರುಸಮೂಹವಿದೆಯೋ ಯಾವುದರಿಂದ ನೀನು [ಚಿಕಿತೇ] ಸುಖವನ್ನು ಗುರುತಿಸುವೆಯೋ ಅದರಿಂದ ನಮ್ಮ [ವಿಶ್ವಾನಿ] ಸಮಸ್ತ [ವೃಷ್ಣ್ಯಾ] ವೀರರಿಗಾಗಿ ನಿಹಿತವಾಗಿರುವ ಬಲದ [ಅವ] ರಕ್ಷಣೆಯನ್ನು ಮತ್ತು [ಶತ್ರೋಃ] ಶತ್ರುಗಳ ಬಲವನ್ನು ನಾಶಮಾಡು.

ಭಾವಾರ್ಥ:- ಯಾವ ಶ್ರೇಷ್ಠರಲ್ಲಿ ಬಲವು ಉತ್ಪನ್ನವಾಗುವುದೋ ಅದರಿಂದ ಸಮಸ್ತ ಮಾನವರಿಗೂ ಸುಖ ಉಂಟಾಗುವುದು. ಆದರೆ ಯಾವ ದುಷ್ಟನಲ್ಲಿ ಬಲವಿದೆಯೋ ಅದರಿಂದ ಸಮಸ್ತ ಮನುಷ್ಯರಿಗೆ ದುಃಖಉಂಟಾಗಿ ಬಿಡುತ್ತದೆ. ಇದರಿಂದ ಶ್ರೇಷ್ಠರ ಸುಖದ ವೃದ್ಧಿಯನ್ನೂ, ದುಷ್ಟರ ಬಲದ ಹಾನಿಯನ್ನೂ ನಿರಂತರವಾಗಿ ಮಾಡುತ್ತಿರಬೇಕು.

ಪುನಃ ಆ ಸಭಾಧ್ಯಕ್ಷನು ಏನನ್ನು ಮಾಡಬೇಕು ಎಂಬುದನ್ನಿಲ್ಲಿ ತಿಳಿಯಪಡಿಸಲಾಗಿದೆ.

ವಿ ಜಾನೀಹ್ಯಾರ್ಯಾನ್ ಯೇ ಚ ದಸ್ಯವೋ ಬರ್ಹಿಷ್ಮತೇ ರಂಧಯಾ ಶಾಸದವ್ರತಾನ್।
ಶಾಕೀ ಭವ ಯಜಮಾನಸ್ಯ ಚೋದಿತಾ ವಿಶ್ವೇತ್ತಾ ತೇ ಸಧಮಾದೇಷು ಚಾಕನ ॥೮॥

ಪದಾರ್ಥ:- ಹೇ ಮನುಷ್ಯ! ನೀನು [ಬರ್ಹಿಷ್ಮತೇ] ಉತ್ತಮ ಸುಖಾದಿ ಗುಣಗಳ ಮೂಲಕ ಉತ್ಪನ್ನವಾದ ವ್ಯವಹಾರದ ಸಿದ್ಧಿಗಾಗಿ [ಆರ್ಯಾನ್] ಸರ್ವೋಪಕಾರಕ ಧಾರ್ಮಿಕ ವಿದ್ವಾಂಸನಾದ ಮನುಷ್ಯನನ್ನು [ವಿಜಾನೀಃ] ತಿಳಿ [ಚ] ಮತ್ತು [ಯೇ] ಯಾವ [ದಸ್ಯವಃ] ಪರಪೀಡಕರಾದ ಅಧರ್ಮೀ ದುಷ್ಟ ಮನುಷ್ಯರುಗಳು ಯಾರಿದ್ದಾರೋ ಅವರನ್ನು ತಿಳಿದು [ಬರ್ಹಿಷ್ಮತೇ] ಧರ್ಮದ ಸಿದ್ಧಿಗಾಗಿ [ರಂಧಯಾ] ಕೊಲ್ಲಿರಿ ಮತ್ತು ಆ [ಅವ್ರತಾನ್] ಸತ್ಯಧರ್ಮಗಳಿಂದ ರಹಿತವಾದ ಮನುಷ್ಯರನ್ನು [ಶಾಸತ್] ಶಾಸಿಸುತ್ತಾ [ಯಜಮಾನಸ್ಯ] ಯಜ್ಞಕರ್ತನ [ಚೋದಿತಾ] ಪ್ರೇರಣ ಕರ್ತನ ಮತ್ತು [ಶಾಕೀ] ಉತ್ತಮ ಶಕ್ತಿಯುಕ್ತ ಸಾಮರ್ಥ್ಯವನ್ನು [ಭವ] ಸಿದ್ಧಿಗೊಳಿಸು. ಇದರಿಂದ [ತೇ] ನಿನ್ನ ಉಪದೇಶ ಮತ್ತು ಸಂಗದಿಂದ [ಸಧಮಾದೇಷು] ಸುಖಗಳೊಂದಿಗೆ ಇರುವ ಸ್ಥಾನಗಳಲ್ಲಿ [ತಾ] ಆ [ವಿಶ್ವಾ] ಸಮಸ್ತ ಕರ್ಮಗಳನ್ನು ಸಿದ್ಧಗೊಳಿಸಲು [ಇತ್] ಅದರಲ್ಲಿಯೇ ನಾನು [ಚಾಕನ] ಇಚ್ಛೆಯನ್ನು ಮಾಡುತ್ತೇನೆ.

ಭಾವಾರ್ಥ:- ಮಾನವರಿಗೆ ಯೋಗ್ಯವಾದುದೇನೆಂದರೆ, ದಸ್ಯು ಅಥವಾ ದುಷ್ಟ ಸ್ವಭಾವವನ್ನು ತ್ಯಜಿಸಿ ಆರ್ಯ ಅರ್ಥಾತ್ ಶ್ರೇಷ್ಠ ಸ್ವಭಾವದ ಆಶ್ರಯವನ್ನು ಮಾಡಿಕೊಳ್ಳಬೇಕು. ಯಾರು ಉತ್ತಮ ವಿದ್ಯಾದಿಗಳ ಪ್ರಚಾರದಿಂದ ಉತ್ತಮ ಸುಖದ ಸಿದ್ಧಿಯನ್ನು ಮತ್ತು ಅಧರ್ಮಿ ದುಷ್ಟರ ನಿವಾರಣೆಗಾಗಿ ನಿರಂತರ ಯತ್ನವನ್ನು ಮಾಡುತ್ತಾರೋ, ನಿಶ್ಚಯವಾಗಿಯೂ ಯಾವುದೇ ಮನುಷ್ಯನು ಆರ್ಯರ ಸಂಗವನ್ನು ಅವರೊಂದಿಗೆ ಅಧ್ಯಯನ ಅಥವಾ ಉಪದೇಶವಿಲ್ಲದೆ ಯಥಾವತ್ತಾಗಿ ವಿದ್ವಾಂಸನೂ ಧರ್ಮಾತ್ಮನೂ, ಆರ್ಯ ಸ್ವಭಾವಯುಕ್ತನೂ ಆಗುವುದರಲ್ಲಿ ಸಮರ್ಥನಾಗಲಾರನು. ಇದರಿಂದ ನಿಶ್ಚಯವಾಗಿಯೂ ಆರ್ಯರ ಗುಣ ಮತ್ತು ಕರ್ಮಗಳನ್ನು ಸೇವಿಸುವ ಮೂಲಕ ನಿರಂತರವಾಗಿ ಸುಖಿಯಾಗಬೇಕು ಎಂಬುದು ತಿಳಿದುಬರುತ್ತದೆ.

ಪುನಃ ಅವನು ಯಾರಿಗೆ ಏನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಅನುವ್ರತಾಯ ರಂಧಯನ್ನಪವ್ರತಾ-ನಾಭೂಭಿರಿಂದ್ರಃ ಶ್ನಥಯನ್ನನಾಭುವಃ । ವೃದ್ಧಸ್ಯ ಚಿದ್
ವರ್ಧತೋ ದ್ಯಾಮಿನಕ್ಷತಃ ಸ್ತವಾನೋ ವಮ್ರೋ ವಿ ಜಘಾನ ಸಂದಿಹಃ ॥೯॥

ಪದಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, ಯಾವನು [ಇಂದ್ರಃ] ಪರಮ ವಿದ್ಯಾದಿ ಐಶ್ವರ್ಯ ಸ್ವಭಾವದವನೂ, ಸಭಾ, ಶಾಲಾ, ಸೇನಾ ಮತ್ತು ನ್ಯಾಯಗಳ ಅಧ್ಯಕ್ಷನೂ [ಆಭೂಭಿಃ] ಉತ್ತಮ ವೀರರನ್ನು ಶಿಕ್ಷಿತರನ್ನಾಗಿಸುವ ಕ್ರಿಯೆಗಳೊಂದಿಗಿರುವವನೂ [ಅನುವ್ರತಾಯ] ಅನುಕೂಲ, ಧರ್ಮಯುಕ್ತ ವ್ರತಗಳ ಧಾರಣೆ ಮಾಡಲು ಆರ್ಯ ಮನುಷ್ಯರಿಗಾಗಿ [ಅಪವ್ರತಾನ್] ಮಿಥ್ಯಾಭಾಷಣಾದಿ ದುಷ್ಟಕರ್ಮಯುಕ್ತ ಡಾಕು ಮನುಷ್ಯರನ್ನು [ರಂಧಯನ್] ಅತಿಯಾಗಿ ತಾಡನ ಮಾಡುತ್ತಾ [ಅನಾಭುವಃ] ಯಾರು ಧರ್ಮಾತ್ಮರುಗಳಿಗೆ ವಿರುದ್ಧವಾದ ವ್ಯಕ್ತಿಗಳಿದ್ದಾರೋ ಅಂತಹ ಪಾಪಿಗಳನ್ನು [ಶ್ನಥಯನ್] ಶಿಥಿಲಗೊಳಿಸುತ್ತಾ [ಇನಕ್ಷತಃ] ವ್ಯಾಧಿಯುಕ್ತ [ವರ್ಧತಃ] ಗುಣದೋಷಗಳನ್ನು ಹೆಚ್ಚಿಸುವ [ವೃದ್ಧಸ್ಯ] ಜ್ಞಾನಾದಿಗುಣಗಳಿಂದ ಯುಕ್ತ ಶ್ರೇಷ್ಠರ [ಸ್ತವಾನಃ] ಸ್ತುತಿಯ ಕರ್ತನಾದ [ವಮ್ರಃ] ಅಧರ್ಮದ ನಾಶ ಹಾಗೂ [ಸಂದಿಹಃ] ಧರ್ಮಾಧರ್ಮಗಳನ್ನು ಸಂದೇಹದಿಂದ ನಿಶ್ಚಯಗೊಳಿಸುವ [ದ್ಯಾಂ] ಸೂರ್ಯಪ್ರಕಾಶದ [ಚಿತ್] ಸಮಾನವಾದ ವಿದ್ಯಾಪ್ರಕಾಶದಿಂದ ವಿಸ್ತಾರಗೊಳಿಸುತ್ತಾ ದುಷ್ಟರನ್ನು [ವಿ ಜಘಾನ] ವಿಶೇಷವಾಗಿ ಕೊಲ್ಲುತ್ತಾರೋ, ಅದೇ ಕುಲವನ್ನು ಸುಭೂಷಿತಗೊಳಿಸುವ ಆರ್ಯಪುರುಷರನ್ನು ಸಭಾಧಿಪತಿಯ ಸ್ಥಾನದಲ್ಲಿ ಸ್ವೀಕರಿಸಿ. ರಾಜಧರ್ಮದ ಯಥಾವತ್ ಪಾಲನೆಯನ್ನು ಮಾಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಸಮಸ್ತ ಧಾರ್ಮಿಕರಿಗೆ ಉಚಿತವಾದುದೇನೆಂದರೆ, ಸಮಸ್ತ ಮನುಷ್ಯರನ್ನು ಅವಿದ್ಯೆಯಿಂದ ನಿವಾರಿಸಿ ಮತ್ತು ವಿದ್ಯೆಯನ್ನು ಓದಿಸಿ ವಿದ್ವಾಂಸರನ್ನಾಗಿಸಿ ಧರ್ಮಾಧರ್ಮದ ವಿಚಾರಪೂರ್ವಕ ನಿಶ್ಚಯವನ್ನು ಮಾಡಿ ಧರ್ಮದ ಸ್ವೀಕಾರವನ್ನೂ ಅಧರ್ಮದ ತ್ಯಾಗವನ್ನೂ ಮಾಡಬೇಕು. ಸದಾಕಾಲವೂ ದುಷ್ಟರ ಸಂಗವನ್ನು ತ್ಯಜಿಸಿ ಸಮಸ್ತ ಶ್ರೇಷ್ಠ ಪುರುಷರ ಸಂಗವನ್ನು ನಿರಂತರವಾಗಿ ಮಾಡಬೇಕು.

ಪುನಃ ಆ ಸಭಾಧ್ಯಕ್ಷನು ಹೇಗಿರಬೇಕು ಎಂಬುದನ್ನು ತಿಳಿಸಲಾಗುತ್ತದೆ.

ತಕ್ಷದ್ ಯತ್ ತ ಉಶನಾ ಸಹಸಾ ಸಹೋ ವಿ ರೋದಸೀ ಮಜ್ಮನಾ ಬಾಧತೇ ಶವಃ ।
ಆ ತ್ವಾ ವಾತಸ್ಯ ನೃಮಣೋ ಮನೋಯುಜ ಆ ಪೂರ್ಯಮಾಣಮವಹನ್ನಭಿ ಶ್ರವಃ ॥೧೦॥

ಪದಾರ್ಥ:- ಹೇ [ನೃಮಣಃ] ಮಾನವರಲ್ಲಿ ಮನಸ್ಸನ್ನು ನೀಡುವವರಾದ [ಉಶನಾ] ಕಮನೀಯನಾದ ವಿದ್ವಾಂಸನೇ! ನೀನು [ಸಹಸಾ] ನಿನ್ನ ಸಾಮರ್ಥ್ಯದಿಂದ ಶತ್ರುಗಳ [ಸಹಃ] ಬಲವನ್ನು ಹನನ ಮಾಡಿ ಯಾವ ರೀತಿ ಸೂರ್ಯನು [ರೋದಸೀ] ಭೂಮಿ ಮತ್ತು ಪ್ರಕಾಶವನ್ನುಂಟುಮಾಡುತ್ತಾನೋ ಅದೇ ರೀತಿ [ಮಜ್ಮನಾ]

ಶುದ್ಧಬಲದಿಂದ **[ಶವಃ]** ಶತ್ರುಗಳ ಬಲವನ್ನು **[ವಿಬಾಧತೇ]** ವಿಲೋಡನ ಅಥವಾ **[ಆತಕ್ಷತ್]** ಭೇದನವನ್ನು ಮಾಡುವೆ ಮತ್ತು **[ತೇ]** ನಿನ್ನ **[ಮನೋಯುಜಃ]** ಮನಸ್ಸಿನಿಂದ ಯುಕ್ತನಾಗುವ ಭೃತ್ಯನು **[ತ್ವಾ]** ನಿನ್ನ ಆಶ್ರಯವನ್ನು ಹೊಂದಿ **[ತೇ]** ನಿನ್ನ **[ವಾತಸ್ಯ]** ಬಲಯುಕ್ತವಾಯುವಿನ ಸಂಬಂಧಿಯಾದ **[ಆಪೂರ್ಯಮಾಣಂ]** ನ್ಯೂನತಾ ರಹಿತವಾದ **[ಶ್ರವಃ]** ಶ್ರವಣ ಮತ್ತು ಅನ್ನಾದಿಗಳನ್ನು **[ಅಭ್ಯಾವಹನ್]** ಪ್ರಾಪ್ತಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ವಿದ್ವಾಂಸನಾದ ಸೇನಾಧ್ಯಕ್ಷನಿಲ್ಲದೆ ಪೃಥ್ವಿಯ ರಾಜ್ಯದ ವ್ಯವಸ್ಥೆ ಶತ್ರುಗಳ ಬಲದ ಹಾನಿಯನ್ನು, ವಿದ್ಯಾದಿ ಸದ್ಗುಣಗಳ ಪ್ರಕಾಶವನ್ನು ಮತ್ತು ಉತ್ತಮ ಅನ್ನಾದಿಗಳ ಪ್ರಾಪ್ತಿಯನ್ನು ಹೊಂದುವುದಿಲ್ಲ.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಮಂದಿಷ್ಟ ಯದುಶನೇ ಕಾವ್ಯೇ ಸಚಾ ಇಂದ್ರೋ ವಂಕೂ ವಂಕುತರಾಧಿ ತಿಷ್ಠತಿ । ಉಗ್ರೋ
ಯಯಿಂ ನಿರಪಃ ಸ್ರೋತಸಾಸೃಜದ್ ವಿ ಶುಷ್ಣಸ್ಯ ದೃಂಹಿತಾ ಐರಯತ್ ಪುರಃ ॥೧೧॥

ಪದಾರ್ಥ:- ಹೇ **[ಮಂದಿಷ್ಟ]** ಅತಿಶಯವಾದ ಸ್ಥಿತಿಯನ್ನು ಮಾಡುವ ಯಾವ **[ಉಗ್ರಃ]** ದುಷ್ಟರನ್ನು ದಂಡಿಸುವ **[ಇಂದ್ರಃ]** ಸಭಾಧ್ಯಕ್ಷನೇ! ನೀನು, ಯಾವ ರೀತಿ ಸೂರ್ಯನು **[ಸ್ರೋತಸಾ]** ಸ್ರೋತಗಳಿಂದ **[ಅಪಃ]** ಜಲರಾಶಿಗಳನ್ನು ಕೊಂಡೊಯ್ಯುತ್ತಾನೋ ಆ ರೀತಿ **[ಉಶನೇ]** ಅತೀವ ಸುಂದರವಾದ **[ಯತ್]** ಯಾವ **[ಕಾವ್ಯೇ]** ಕವಿಗಳ ಕರ್ಮಗಳಲ್ಲಿ ಯಾವ **[ವಂಕೂ]** ಕುಟಿಲವಾದ **[ವಂಕುತರಾ]** ಅತಿಶಯವಾಗಿ ಕುಟಿಲ ಚಾಲನೆಯನ್ನು ಮಾಡುವ ಶತ್ರು ಹಾಗೂ ಉದಾಸೀ ಮನುಷ್ಯನ **[ಅಧಿತಿಷ್ಠತಿ]** ರಾಜ್ಯದಲ್ಲಿ ಅಧಿಷ್ಠಾತೃವಾಗುವೆಯೋ, ಯಾವ ರೀತಿ ಸವಿತಾ **[ಸಚಾ]** ತನ್ನ ಗುಣಗಳಿಂದ **[ಯಯಿಂ]** ಮೇಘವನ್ನು **[ನಿರಸೃಜತ್]** ನಿತ್ಯ ಸರ್ಜನ ಮಾಡುತ್ತಾಳೋ ಹಾಗೆಯೇ **[ಶುಷ್ಣಸ್ಯ]** ಬಲದ **[ದೃಂಹಿತಾಃ]** ವೃದ್ಧಿಗೊಳಿಸುವ ಕ್ರಿಯೆಗಳನ್ನು **[ಪುರಃ]** ಮೊದಲೇ **[ವ್ಯಯಿರಯತ್]** ಪ್ರಾಪ್ತಗೊಳಿಸುವೆ. ಅದೇ ರೀತಿ ನೀನು ಎಲ್ಲರಿಗೂ ಸತ್ಕಾರ ಮಾಡಲು ಯೋಗ್ಯನಾಗಿರುವೆ.

ಭಾವಾರ್ಥ:- ಇಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಯಾವ ಕವಿಯು ಸಕಲ ಶಾಸ್ತ್ರಗಳ ವಕ್ತೃವಾದ, ಕುಟಿಲತೆಯ ವಿನಾಶವನ್ನು ಮಾಡುವ ದುಷ್ಟರಲ್ಲಿ ಕಠೋರ, ಶ್ರೇಷ್ಠರಲ್ಲಿ ಕೋಮಲವಾದ ಸರ್ವಥಾ ಬಲವನ್ನು ವೃದ್ಧಿಸುವ ಯಾವ ಪುರುಷನಿದ್ದಾನೋ, ಅವನನ್ನೇ ಸಭೆ ಮೊದಲಾದವುಗಳ ಅಧಿಕಾರಗಳಲ್ಲಿ ಸ್ವೀಕರಿಸಬೇಕು.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ.

ಆ ಸ್ಮಾ ರಥಂ ವೃಷಪಾಣೇಷು ತಿಷ್ಠಸಿ ಶಾರ್ಯಾತಸ್ಯ ಪ್ರಭೃತಾ ಯೇಷು ಮಂದಸೇ । ಇಂದ್ರ
ಯಥಾ ಸುತಸೋಮೇಷು ಚಾಕನೋಽನರ್ವಾಣಂ ಶ್ಲೋಕಮಾ ರೋಹಸೇ ದಿವಿ ॥೧೨॥

ಪದಾರ್ಥ:- ಹೇ **[ಇಂದ್ರ]** ಉತ್ತಮ ಐಶ್ವರ್ಯವನ್ನುಳ್ಳ ಸಭಾಧ್ಯಕ್ಷನೇ! ಯಾವುದರಿಂದ ನೀನು **[ಯಥಾ]** ಯಾವ ರೀತಿ ವಿದ್ವಾಂಸರು ಪದಾರ್ಥ ವಿದ್ಯೆಯನ್ನು ಸಿದ್ಧಿಗೊಳಿಸಿ ಸುಖಗಳನ್ನು ಪ್ರಾಪ್ತಿಸುತ್ತಾರೋ, ಮತ್ತು ಯಾರು **[ಶಾರ್ಯಾತಸ್ಯ]** ವೀರ ಪುರುಷನ **[ಯೇಷು]** ಯಾವ **[ಸುತಸೋಮೇಷು]** ಉತ್ತಮ ರಸಗಳಿಂದ ಯುಕ್ತವಾದ **[ವೃಷಪಾಣೇಷು]** ಪುಷ್ಟಿಗೊಳಿಸಲು ಯೋಗ್ಯವಾದ ಸೋಮಲತಾದಿ ಪದಾರ್ಥಗಳ ಹಾಗೂ ವೈದ್ಯಕ ಶಾಸ್ತ್ರದ ರೀತಿಯಿಂದ ಅತಿಶ್ರೇಷ್ಠವೆಂದು ನಿರೂಪಿಸಲ್ಪಟ್ಟಿರುವ ಹಾಗೂ ಉತ್ತಮ ವ್ಯವಹಾರಗಳಲ್ಲಿ **[ಪ್ರಭೃತಾಃ]** ಧಾರಣ ಗೊಳಿಸಲ್ಪಟ್ಟಿದ್ದಾಗಿದೆಯೋ ಅಂತಹವುಗಳನ್ನು ಪ್ರಾಪ್ತಿಸಿಕೊಂಡು **[ಮಂದಸೇ]** ಆನಂದವಾಗುವ ಮತ್ತು **[ಅನರ್ವಾಣಂ]**

ಅಗ್ನಿ ಮೊದಲಾದ ಅಶ್ವ ಸಹಿತ ಪಶುವಾದಿಗಳನ್ನು **[ಶ್ಲೋಕಂ ಸ್ಮ]** ಸಮಸ್ತ ಅವಯವಗಳಿಂದ ಸಹಿತವಾದ ರಥದ ಮಧ್ಯೆದಲ್ಲಿಯೇ **[ಆ ತಿಷ್ಠಸಿ]** ಸ್ಥಿತವಾಗಿರುವೆ ಮತ್ತು ಅದರ **[ಚಾಕನಃ]** ಇಚ್ಛೆಯನ್ನು ಮಾಡುತ್ತಿರುವೆ. ಮತ್ತು **[ದಿವಿ]** ಪ್ರಕಾಶರೂಪಿ ಸೂರ್ಯಲೋಕದಲ್ಲಿ **[ಆರೋಹಸೇ]** ಆರೋಹಣ ಮಾಡುತ್ತೀಯೆ. **[ಸ್ಮ]** ಆದುದರಿಂದ ನೀನು ಯೋಗ್ಯನಾಗಿರುವೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ವಿಮಾನಾದಿ ಯಾನ ಹಾಗೂ ವಿದ್ವಾಂಸರ ಸಂಗವಿಲ್ಲದೆ, ಯಾವುದೇ ಮನುಷ್ಯನಿಗೆ ಸುಖವುಂಟಾಗುವುದಿಲ್ಲ. ಇದರಿಂದ ವಿದ್ವಾಂಸರಾದವರು ಸಭೆ ಹಾಗೂ ಪದಾರ್ಥಗಳ ಜ್ಞಾನದ ಉಪಯೋಗದಿಂದ ಸಮಸ್ತ ಮನುಷ್ಯರನ್ನು ಆನಂದದಿಂದಿರುವಂತೆ ಮಾಡಬೇಕು.

ಪುನಃ ಅವನು ಎಂತಹವನು ಎಂಬುದನ್ನು ತಿಳಿಸಲಾಗಿದೆ.

ಅದದಾ ಅರ್ಭಾಂ ಮಹತೇ ವಚಸ್ಯವೇ ಕಕ್ಷೀವತೇ ವೃಚಯಾಮಿಂದ್ರ ಸುನ್ವತೇ ।
ಮೇನಾಭವೋ ವೃಷಣಶ್ವಸ್ಯ ಸುಕ್ರತೋ ವಿಶ್ವೇತ್ತಾ ತೇ ಸವನೇಷು ಪ್ರವಾಚ್ಯಾ ॥೧೩॥

ಪದಾರ್ಥ:- ಹೇ **[ಸುಕ್ರತೋ]** ಶೋಭನಕರ್ಮಯುಕ್ತ ಇಂದ್ರ! ಶಿಲ್ಪವಿದ್ಯಾ ಜ್ಞಾನವನ್ನು ತಿಳಿದ ವಿದ್ವಾಂಸನೇ! ನೀನು **[ವಚಸ್ಯವೇ]** ನಿನ್ನನ್ನು ಶಾಸ್ತ್ರೋಪದೇಶದ ಇಚ್ಛೆಯನ್ನು ಮಾಡುವ ಮತ್ತು **[ಮಹತೇ]** ಮಹಾಗುಣವಿಶಿಷ್ಟವಾದ **[ಸುನ್ವತೇ]** ಶಿಲ್ಪವಿದ್ಯೆಯನ್ನು ಸಿದ್ಧಿಗೊಳಿಸುವ **[ಕಕ್ಷೀವತೇ]** ವಿದ್ಯೆಯನ್ನು ಹೊಂದಿದ ಬೆರಳುಗಳುಳ್ಳ ಮನುಷ್ಯನಿಗಾಗಿ ಯಾವ **[ವೃಚಯಾಂ]** ಛೇದನ-ಭೇದನರೂಪೀ **[ಅರ್ಭಾಂ]** ಸ್ವಲ್ಪವೇ ಆದ ಶಿಲ್ಪಕ್ರಿಯೆಯನ್ನು **[ಅದದಾಃ]** ನೀಡುತ್ತೀಯೆ. **[ಸವನೇಷು]** ಪ್ರೇರಣೆಯನ್ನುಂಟುಮಾಡುವ ಕರ್ಮಗಳಲ್ಲಿ **[ಪ್ರವಾಚ್ಯಾ]** ಉತ್ತಮರೀತಿಯಲ್ಲಿ ಕಥನ ಮಾಡಲು ಯೋಗ್ಯವಾದ **[ಮೇನಾ]** ವಾಣಿಯನ್ನು **[ವೃಷಣಶ್ವಸ್ಯ]** ಶಿಲ್ಪಕ್ರಿಯೆಯ ಇಚ್ಛೆಯನ್ನು ಮಾಡುವ **[ತೇ]** ನಿನ್ನ **[ವಿಶ್ವಾ]** ಸಮಸ್ತ ಕಾರ್ಯವಿದೆಯೋ **[ತಾ ಇತ್]** ಅವುಗಳನ್ನು ಸಿದ್ಧಗೊಳಿಸಲೆಂದೇ ಸಮರ್ಥರಾದವರು **[ಅಭವಃ]** ಆಗಿರಿ.

ಭಾವಾರ್ಥ:- ವಿದ್ವಾನ್ ಮನುಷ್ಯರು ಅಗ್ನಿ ಮೊದಲಾದ ಪದಾರ್ಥಗಳಿಂದ ವಿದ್ಯಾದಾನವನ್ನು ಹೊಂದಿ ಸಮಸ್ತ ಮನುಷ್ಯರಿಗೆ ಹಿತದ ಕಾರ್ಯವನ್ನು ಮಾಡಬೇಕು.

ಪುನಃ ಅವನು ಎಂತಹ ಗುಣವನ್ನುಳ್ಳವನಾಗಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಇಂದ್ರೋ ಅಶ್ರಾಯಿ ಸುಧ್ಯೋ ನಿರೇಕೇ ಪಜ್ರೇಷು ಸ್ತೋಮೋ ದುರ್ಯೋ ನ ಯೂಪಃ।
ಅಶ್ವಯುರ್ಗವ್ಯೂ ರಥಯುರ್ವಸೂಯು-ರಿಂದ್ರ ಇದ್ರಾಯಃ ಕ್ಷಯತಿ ಪ್ರಯಂತಾ ॥೧೪॥

ಪದಾರ್ಥ:- ಯಾರು **[ಅಶ್ವಯುಃ]** ತಮ್ಮ ಕುದುರೆಗಳ **[ಗವ್ಯುಃ]** ತಮ್ಮ ಗೋ-ಪೃಥಿವೀ-ಇಂದ್ರಿಯ-ಕಿರಣಗಳ **[ರಥಯುಃ]** ತಮ್ಮ ರಥ ಮತ್ತು **[ವಸುಯುಃ]** ತಮ್ಮ ದ್ರವ್ಯಗಳ ಇಚ್ಛೆಯನ್ನು **[ಪ್ರಯಂತಾ]** ಉತ್ತಮ ರೀತಿಯಲ್ಲಿ ನಿಯಮ ಮಾಡುವ **[ಇತ್]** ವ್ಯಕ್ತಿಗಳಂತೆ **[ಇಂದ್ರಃ]** ವಿದ್ಯಾದಿ ಐಶ್ವರ್ಯಯುಕ್ತ ವಿದ್ವಾಂಸನು **[ರಾಯಃ]** ಧನಸಂಪತ್ತುಗಳನ್ನು **[ಕ್ಷಯತಿ]** ನಿವಾಸಯುಕ್ತಗೊಳಿಸುತ್ತಾನೋ ಅವನು **[ಸುಧ್ಯಃ]** ಯಾವ ಉತ್ತಮ ಬುದ್ಧಿಯನ್ನುಳ್ಳ ವಿದ್ವಾಂಸನಿದ್ದಾನೋ ಅವನಿಂದ **[ದುರ್ಯಃ]** ಗೃಹಸಂಬಂಧಿಯಾದ **[ಯೂಪಃ]** ಯೂಪಸ್ತಂಭದ **[ನ]** ಸಮಾನವಾಗಿ **[ಇಂದ್ರಃ]** ವಿದ್ಯಾದಿ ಐಶ್ವರ್ಯವಂತನಾದ ವಿದ್ವಾಂಸನು **[ನಿರೇಕೇ]** ಶಂಕಾರಹಿತವಾದ **[ಪಜ್ರೇಷು]** ಶಿಲ್ಪಾದಿ ವ್ಯವಹಾರಗಳಲ್ಲಿ **[ಸ್ತೋಮಃ]** ಸ್ತುತಿಸಲು ಯೋಗ್ಯನಾದ **[ಅಶ್ರಾಯಿ]** ಸೇವನೆಯುಕ್ತನಾಗುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಸೂರ್ಯನಿಂದ ಬಹಳ ಉತ್ತಮೋತ್ತಮ ಕಾರ್ಯಗಳು ಸಿದ್ಧಿಸಲ್ಪಡುತ್ತದೆಯೋ ಅದೇ ರೀತಿ ವಿದ್ವಾಂಸ ಅಥವಾ ಅಗ್ನಿ ಜಲಾದಿಗಳಿಂದ ರಥದ ಸಿದ್ಧಿಯ ಮೂಲಕ ಧನಸಂಪತ್ತುಗಳು ಪ್ರಾಪ್ತವಾಗುತ್ತವೆ.

ಈಗ ಸಭಾಧ್ಯಕ್ಷನ ಗುಣಗಳನ್ನು ಹೇಳಲಾಗುತ್ತದೆ.

ಇದಂ ನಮೋ ವೃಷಭಾಯ ಸ್ವರಾಜೇ ಸತ್ಯಶುಷ್ಮಾಯ ತವಸೇಽವಾಚಿ ।
ಅಸ್ಮಿನ್ನಿಂದ್ರ ವೃಜನೇ ಸರ್ವವೀರಾಃ ಸ್ಮತ್ ಸೂರಿಭಿಸ್ತವ ಶರ್ಮನ್ತ್ಸ್ಯಾಮ ॥೧೫॥

ಪದಾರ್ಥ:- ಹೇ [ಇಂದ್ರ] ಪರಮಪೂಜನೀಯ ಸಭಾಪತೇ! ಯಾವ ರೀತಿ [ಸೂರಿಭಿಃ] ವಿದ್ವಾಂಸರು [ವೃಷಭಾಯ] ಸುಖದ ವೃಷ್ಟಿಯನ್ನು ಮಾಡುವ [ಸತ್ಯಶುಷ್ಮಾಯ] ವಿನಾಶರಹಿತವಾದ ಬಲದಿಂದ ಕೂಡಿದ [ತವಸೇ] ಅತ್ಯಂತ ಬಲದಿಂದ ಪ್ರಬುದ್ಧವಾದ [ಸ್ವರಾಜೇ] ತನ್ನಷ್ಟಕ್ಕೆ ತಾನೇ ಪ್ರಕಾಶಮಾನನಾದ ಪರಮಾತ್ಮನನ್ನು [ಇದಂ ನಮಃ] ಈ ಸತ್ಕಾರವನ್ನು [ಅವಾಚೀ] ನುಡಿಯುತ್ತಾರೋ ಹಾಗೆಯೇ ನಾವೂ ಸಹ ಮಾಡುವವರಾಗೋಣ. ಹೀಗೆ ಮಾಡಿ ನಾವುಗಳು [ತವ] ನಿನ್ನ [ಅಸ್ಮಿನ್] ಈ ಜಗತ್ತಿನ [ವೃಜನೇ] ದುಃಖಗಳನ್ನು ದೂರಗೊಳಿಸುವ ಬಲದಿಂದ ಕೂಡಿದ [ಶರ್ಮನ್] ಗೃಹದಲ್ಲಿ [ಸ್ಮತ್] ಉತ್ತಮ ರೀತಿಯಿಂದ ಸುಖಿಗಳು [ಸ್ಯಾಮ] ಆಗೋಣ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಎಲ್ಲ ಮನುಷ್ಯರೂ ವಿದ್ವಾಂಸರೊಂದಿಗೆ ಇದ್ದುಕೊಂಡು ಪರಮಾತ್ಮನ ಉಪಾಸನೆಯನ್ನೇ ಪೂರ್ಣರೀತಿಯಿಂದ ವಿದ್ವಾಂಸರ ಸಂಗವನ್ನು ಮಾಡಿ ಪರಮ ಆನಂದವನ್ನು ಪಡೆಯಬೇಕು ಮತ್ತು ಪಡೆಯುವಂತೆ ಮಾಡಬೇಕು.

ಈ ಸೂಕ್ತದಲ್ಲಿ ಸೂರ್ಯ, ಅಗ್ನಿ ಮತ್ತು ವಿದ್ಯುತ್ ಆದಿ ಪದಾರ್ಥಗಳ ವರ್ಣನೆ, ಬಲಾದಿಗಳ ಪ್ರಾಪ್ತಿ, ಅನೇಕ ಅಲಂಕಾರಗಳ ಕಥನದಿಂದ ವಿವಿಧ ಅರ್ಥಗಳ ವರ್ಣನೆ ಮತ್ತು ಸಭಾಧ್ಯಕ್ಷ ಹಾಗೂ ಪರಮಾತ್ಮನ ಗುಣಗಳ ಪ್ರತಿಪಾದನೆಯನ್ನು ಮಾಡಲಾಗಿದೆ. ಇದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿದು ಬರುತ್ತದೆ.

ಐವತ್ತೊಂದನೆಯ ಸೂಕ್ತ ಸಮಾಪ್ತ

ಸೂಕ್ತ ೫೨

ಮಂತ್ರಸಂಖ್ಯೆ ೧೫ । ಋಷಿಃ - ಸವ್ಯ ಆಂಗಿರಸಃ । ದೇವತಾ - ಇಂದ್ರಃ । ಛಂದಃ -೮ ಭುರಿಕ್ ತ್ರಿಷ್ಟುಪ್, ೭ ತ್ರಿಷ್ಟುಪ್, ೯, ೧೦, ಸ್ವರಾಟ್ ತ್ರಿಷ್ಟುಪ್ , ೧೨, ೧೩, ೧೫ ನಿಚೃದ್ ತ್ರಿಷ್ಟುಪ್, ೨-೪ ನಿಚೃದ್ ಜಗತೀ, ೫, ೧೪ ಜಗತೀ, ೬, ೧೧, ವಿರಾಟ್ ಜಗತೀ । ಸ್ವರಃ - ಧೈವತಃ, ನಿಷಾದಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಇಂದ್ರನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ತ್ಯಂ ಸು ಮೇಷಂ ಮಹಯಾ ಸ್ವರ್ವಿದಂ ಶತಂ ಯಸ್ಯ ಸುಭ್ವಃ ಸಾಕಮೀರತೇ ।
ಅತ್ಯಂ ನ ವಾಜಂ ಹವನಸ್ಯದಂ ರಥಮೇಂದ್ರಂ ವವೃತ್ಯಾಮವಸೇ ಸುವೃಕ್ತಿಭಿಃ ॥೧॥

ಪದಾರ್ಥ:- [ಯಸ್ಯ] ಯಾವ ಪರಮೈಶ್ವರ್ಯಯುಕ್ತ ಸಭಾಧ್ಯಕ್ಷನ [ಶತಂ] ಅಸಂಖ್ಯಾತವಾದ [ಸುಭ್ವಃ] ಸುಖಗಳನ್ನು ಉತ್ಪನ್ನಗೊಳಿಸುವ ಕುಶಲಕರ್ಮಿಗಳಾದ ಜನರು [ಸುವೃಕ್ತಿಭಿಃ] ದುಃಖಗಳನ್ನು ದೂರ ಮಾಡುವ

ಉತ್ತಮ ಕ್ರಿಯೆಗಳ [ಸಾಕಂ] ಜೊತೆಯಲ್ಲಿ [ಅತ್ಯಂ] ಅಶ್ವದ [ನ] ಸಮಾನವಾದ ಅಗ್ನಿ ಜಲಾದಿಗಳಿಂದ [ಅವಸೇ] ರಕ್ಷಣಾದಿಗಳಿಗಾಗಿ [ಹವನಸ್ಯದಂ] ಸುಖಪೂರ್ವಕವಾಗಿ ಆಕಾಶಮಾರ್ಗದಲ್ಲಿ ಪ್ರಾಪ್ತಗೊಳಿಸುವ [ವಾಜಂ] ವೇಗಯುಕ್ತವಾದ [ಇಂದ್ರಂ] ಪರಮೋತ್ಕೃಷ್ಟ ಐಶ್ವರ್ಯದ ದಾತನಾದ [ಸ್ವರ್ವಿದಂ] ಯಾರಿಂದ ಆಕಾಶಮಾರ್ಗದಲ್ಲಿ ಹೋಗಿಬರಬಹುದೋ ಅವನ [ರಥಂ] ವಿಮಾನ ಮೊದಲಾದ ಯಾನಗಳನ್ನು [ಈರಥೇ] ಪ್ರಾಪ್ತಿಸುತ್ತಾರೆ. ಮತ್ತು ಅದರಿಂದ ನಾನು [ವವೃತ್ಯಾಂ] ವರ್ತಿಸುತ್ತೇನೆ. [ತ್ಯಂ] ಆ [ಮೇಷಂ] ಸುಖವನ್ನು ವರ್ಷಿಸುವ ಹೇ ವಿದ್ವಾಂಸನಾದ ಮನುಷ್ಯನೇ! ನೀನು ಅವರನ್ನು [ಸಮಹಯಾ] ಉತ್ತಮ ರೀತಿಯಲ್ಲಿ ಸತ್ಕರಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಯಾವ ರೀತಿ ಅಶ್ವವನ್ನು ಯುಕ್ತಗೊಳಿಸಿ ರಥವೇ ಮೊದಲಾದ ವಾಹನಗಳನ್ನು ಚಾಲಿಸುತ್ತಾರೋ, ಅದೇ ರೀತಿ ಅಗ್ನಿ ಮೊದಲಾದವುಗಳಿಂದ ಯಾನಗಳನ್ನು ಚಾಲಿಸಿ ಕಾರ್ಯಗಳನ್ನು ಸಿದ್ಧಗೊಳಿಸಿ ಸುಖಗಳನ್ನು ಹೊಂದಬೇಕು.

ಪುನಃ ಆತನು ಹೇಗಿರುತ್ತಾನೆ ಎಂಬುದನ್ನು ತಿಳಿಸುತ್ತದೆ.

ಸ ಪರ್ವತೋ ನ ಧರುಣೇಷ್ವಚ್ಯುತಃ ಸಹಸ್ರಮೂತಿಸ್ತವಿಷೀಷು ವಾವೃಧೇ ।
ಇಂದ್ರೋ ಯದ್ ವೃತ್ರಮವಧೀನ್ನದೀವೃತಮುಬ್ಜನ್ನರ್ಣಾಂಸಿ ಜರ್ಹೃಷಾಣೋ ಅಂಧಸಾ ॥೨॥

ಪದಾರ್ಥ:- ಹೇ ರಾಜ ಪ್ರಜಾ ಜನಗಳೇ! ಯಾವ ರೀತಿ [ಧರುಣೇಷು] ಧಾರಕಗಳಲ್ಲಿ [ಅಚ್ಯುತಃ] ಸತ್ಯಸಾಮರ್ಥ್ಯಯುಕ್ತವಾದ [ಅರ್ಣಾಂಸಿ] ಜಲರಾಶಿಗಳನ್ನು [ಉಬ್ಜನ್] ವೇಗೋತ್ಕರ್ಷವನ್ನು ಹೊಂದುತ್ತಾ [ಇಂದ್ರಃ] ಸವಿತೃವು [ನದೀವೃತಂ] ನದಿಗಳನ್ನು ನಡೆಯಿಸುವ [ವೃತ್ರಂ] ಮೋಡವನ್ನು [ಅವಧೀತ್] ಕೊಲ್ಲುತ್ತದೆಯೋ [ಸಃ] ಆ [ಪರ್ವತಃ ನ] ಪರ್ವತದಂತೆ [ವಾವೃಧೇ] ವೃದ್ಧಿಸುತ್ತದೆಯೋ ಹಾಗೆಯೇ [ಯತ್] ಯಾವ ನೀನು ಶತ್ರುವನ್ನು ಕೊಂದು [ಸಹಸ್ರಮೂತಿಃ] ಅಸಂಖ್ಯಾತ ರಕ್ಷಣೆ ಮಾಡುವ [ತವಿಷೀಷು] ಬಲಗಳಲ್ಲಿ [ಜರ್ಹೃಷಾಣಃ] ಪದೇ ಪದೇ ಹರ್ಷವನ್ನು ಹೊಂದುತ್ತಾ [ಅಂಧಸಾ] ಅನ್ನಾದಿಗಳೊಂದಿಗೆ ಪದೇ ಪದೇ ವರ್ಧಿಸುತ್ತಾ ಇರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ಮನುಷ್ಯನು ಸೇನೆ ಮೊದಲಾದವುಗಳನ್ನು ಧಾರಣ ಮಾಡಿ ಮೇಘದಂತಹ ಅನ್ನಾದಿ ಸಾಮಗ್ರಿಗಳೊಂದಿಗೆ ವರ್ತಮಾನನಾಗಿ ಬಲಗಳನ್ನು ವೃದ್ಧಿಸುತ್ತಾನೋ, ಅವನು ಪರ್ವತದಂತೆ ಸ್ಥಿರಸುಖಿಯಾಗಿ ಶತ್ರುಗಳನ್ನು ಕೊಂದು ರಾಜ್ಯವರ್ಧನೆಯನ್ನು ಮಾಡಲು ಸಮರ್ಥನಾಗುತ್ತಾನೆ.

ಪುನಃ ಅವನು ಹೇಗಿದ್ದಾನೆ ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಸ ಹಿ ದ್ವರೋ ದ್ವರಿಷು ವವ್ರ ಊಧನಿ ಚಂದ್ರಬುಧ್ನೋ ಮದವೃದ್ಧೋ ಮನೀಷಿಭಿಃ ।
ಇಂದ್ರಂ ತಮಹ್ವೇ ಸ್ವಪಸ್ಯಯಾ ಧಿಯಾ ಮಂಹಿಷ್ಠರಾತಿಂ ಸ ಹಿ ಪಪ್ರಿರಂಧಸಃ ॥೩॥

ಪದಾರ್ಥ:- ಯಾವನು [ಊಧನಿ] ಪ್ರಾತಃಕಾಲದಲ್ಲಿ [ದ್ವರಿಷು] ಅಂಧಕಾರಾವೃತ ವ್ಯವಹಾರಗಳಲ್ಲಿ [ದ್ವರ] ಅಂಧಕಾರದಿಂದ ಆವೃತವಾದ ದ್ವಾರದ [ಚಂದ್ರಬುಧ್ನಃ] ಬುಧ್ನ ಅರ್ಥಾತ್ ಅಂತರಿಕ್ಷದಲ್ಲಿ ಸುವರ್ಣ ಅಥವಾ ವರ್ಣಮಯ ವರ್ಣದಿಂದ ಕೂಡಿದ [ಮದವೃದ್ಧಃ] ಹರ್ಷದಿಂದ ವೃದ್ಧಿಯಾಗಿರುವ [ಅಂಧಸಃ] ಅನ್ನಾದಿಗಳನ್ನು [ಪಪ್ರಿಃ] ಪೂರ್ಣಗೊಳಿಸುವ [ವವ್ರಃ] ಕೂಪದಂತಿರುವ ಮೇಘವು ಯಾವುದಿದೆಯೋ ಅದರಂತೆ [ಮನೀಷಿಭಿಃ] ಮೇಧಾವಿಗಳೊಂದಿಗೆ [ಹಿ] ನಿಶ್ಚಯವಾಗಿ ಇರುವ ಸಭಾಧ್ಯಕ್ಷನು ಯಾವನಿದ್ದಾನೋ [ತಂ] ಅವನನ್ನು [ಮಂಹಿಷ್ಠರಾತಿಂ]

ಅತ್ಯಂತ ಪೂಜನೀಯವಾದ ದಾನಯುಕ್ತ **[ಇಂದ್ರಂ]** ವಿದ್ವಾಂಸನನ್ನು **[ಸ್ವಪಸ್ಯಯಾ]** ಉತ್ತಮ ಕರ್ಮಯುಕ್ತ ವ್ಯವಹಾರಗಳಲ್ಲಿ ಉಂಟಾಗುವ **[ಧಿಯಾ]** ಬುದ್ಧಿಯಿಂದ ನಾನು **[ಅಹ್ವೇ]** ಆಹ್ವಾನಿಸುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವನು ಮೇಘತುಲ್ಯವಾದ ಪ್ರಜಾಪಾಲನ ಶಕ್ತಿಯನ್ನು ಹೊಂದಿದ್ದಾನೋ ಆ ಪರಮೈಶ್ವರ್ಯಯುಕ್ತ ಪುರುಷನನ್ನು ಸಭಾಧ್ಯಕ್ಷನನ್ನಾಗಿ ಆಯ್ದುಕೊಳ್ಳಬೇಕು.

ಪುನಃ ಅವನು ಹೇಗಿದ್ದಾನೆ ಎಂಬುದನ್ನು ತಿಳಿಸಿದೆ.

ಆ ಯಂ ಪೃಣಂತಿ ದಿವಿ ಸದ್ಮಬರ್ಹಿಷಃ ಸಮುದ್ರಂ ನ ಸುಭ್ವಗ್‌ಃಸ್ವಾ ಅಭಿಷ್ಟಯಃ ।
ತಂ ವೃತ್ರಹತ್ಯೇ ಅನು ತಸ್ಥುರೂತಯಃ ಶುಷ್ಮಾ ಇಂದ್ರಮವಾತಾ ಅಹ್ರುತಪ್ಸವಃ ॥೪॥

ಪದಾರ್ಥ:- **[ಸದ್ಮಬಹಿರ್ಷಃ]** ಉತ್ತಮಸ್ಥಾನ-ಆಸನಯುಕ್ತ **[ಸುಭ್ವಃ]** ಉತ್ತಮನಾಗುವ ಮನುಷ್ಯನು **[ಅವಾತಾಃ]** ವಾಯುವನ್ನು ನಡೆಸುವುದರಿಂದ ಉಂಟಾಗುವ ನದಿಗಳು **[ಸಮುದ್ರಂ ನ]** ಸಾಗರ ಅಥವಾ ಆಕಾಶವನ್ನು ಹೊಂದಿ ಸ್ಥಿತವಾಗುತ್ತದೆಯೋ ಅದೇ ರೀತಿ ಯಾವ **[ಇಂದ್ರಂ]** ಸಭಾಸದರೊಂದಿಗಿನ ಸಭಾಧ್ಯಕ್ಷನನ್ನು **[ಸ್ವಾಃ]** ತನ್ನ **[ಅಭಿಷ್ಟಯಃ]** ಶುಭೇಚ್ಛೆಗಳೊಂದಿಗೆ ಕೂಡಿದ **[ಶುಷ್ಮಾಃ]** ಬಲಸಹಿತವಾದ **[ಅಹ್ರುತಪ್ಸವಃ]** ಕುಟಿಲತಾರಹಿತರಾದ **[ಊತಯಃ]** ಸುರಕ್ಷಿತರಾಜ ಪ್ರಜೆಗಳು **[ಆಪೃಣಂತಿ]** ಸುಖಿಗಳನ್ನಾಗಿಸಲಿ. **[ತಂ]** ಆ ಪರಮೈಶ್ವರ್ಯಕಾರಕ ವೀರಪುರುಷನು **[ಅನುತಸ್ಥುಃ]** ಅನುಕೂಲವಾಗಿ ಸ್ಥಿರವಾಗಲಿ. ಅಂಥವನೇ ಚಕ್ರವರ್ತಿರಾಜ್ಯವನ್ನು ನಡೆಸಲು ಯೋಗ್ಯನಾಗುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ನದಿಗಳು ಸಮುದ್ರ ಅಥವಾ ಅಂತರಿಕ್ಷವನ್ನು ಹೊಂದಿ ಸ್ಥಿರವಾಗುತ್ತವೆಯೋ, ಅದೇ ರೀತಿ ಸಭಾಸದರೊಂದಿಗೆ ವಿದ್ವಾಂಸನನ್ನು ಹೊಂದಿ ಎಲ್ಲ ಪ್ರಜೆಗಳು ಸ್ಥಿರಸುಖದವರಾಗುತ್ತಾರೆ.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಅಭಿ ಸ್ವವೃಷ್ಟಿಂ ಮದೇ ಅಸ್ಯ ಯುಧ್ಯತೋ ರಘ್ವೀರಿವ ಪ್ರವಣೇ ಸಸ್ರುರೂತಯಃ । ಇಂದ್ರೋ
ಯದ್ ವಜ್ರೀ ಧೃಷಮಾಣೋ ಅಂಧಸಾ ಭಿನದ್ ವಲಸ್ಯ ಪರಿಧೀँರಿವ ತ್ರಿತಃ ॥೫॥

ಪದಾರ್ಥ:- **[ಯತ್]** ಯಾವ ಸೂರ್ಯನಂತಿರುವ **[ಸ್ವವೃಷ್ಟಿಂ]** ತನ್ನ ಶಸ್ತ್ರಗಳ [ವೃಷ್ಟಿಯನ್ನು ಮಾಡುತ್ತಾ] **[ಧೃಷಮಾಣಃ]** ಶತ್ರುಗಳಿಗೆ ಪ್ರಗಲ್ಭತೆಯನ್ನು ತೋರಿಸುವ ಮೂಲಕ **[ವಜ್ರೀ]** ಶತ್ರುಗಳನ್ನು ಭೇದನ ಮಾಡುವ ಶಸ್ತ್ರಸಮೂಹಯುಕ್ತ **[ಇಂದ್ರಃ]** ಸಭಾಧ್ಯಕ್ಷನು **[ಮದೇ]** ಹರ್ಷದಲ್ಲಿ **[ಅಸ್ಯ]** ಈ **[ಯುಧ್ಯತಃ]** ಯುದ್ಧವನ್ನು ಮಾಡುತ್ತಿರುವ **[ಬಲಸ್ಯ]** ಶತ್ರುವಿನ **[ತ್ರಿತಃ]** ಮೇಲಿನ, ಮಧ್ಯದ ಹಾಗೂ ಡೊಂಕಾದ ಮೂರು ರೇಖೆಗಳಿಂದ **[ಪರಿಧೀರಿವ]** ಎಲ್ಲ ಪ್ರಕಾರದ ಮೇಲಿನ ಗೋಲರೇಖೆಯಂತಿರುವ ಬಲವನ್ನು **[ಅಭಿಭಿನತ್]** ಎಲ್ಲ ರೀತಿಯಿಂದಲೂ ಭೇದನ ಮಾಡುತ್ತಾನೋ ಅವನ **[ಅಂಧಸಾ]** ಅನ್ನಾದಿಗಳಿಂದ ಅಥವಾ ಜಲಗಳಿಂದ **[ರಘ್ವೀರಿವ]** ಯಾವ ರೀತಿ ಜಲದಿಂದ ಪರಿಪ್ಲುತವಾದ ನದಿಗಳು **[ಪ್ರವಣೇ]** ಕೆಳಮುಖವಾಗಿ ಹರಿಯುತ್ತವೆಯೋ ಅದೇ ರೀತಿ **[ಊತಯಃ]** ರಕ್ಷಣೆ ಮೊದಲಾದವುಗಳಿಂದ **[ಸಸ್ರುಃ]** ಸಂಚರಿಸುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಜಲವು ಕೆಳಮುಖವಾಗಿ ಹರಿಯುತ್ತದೆಯೋ ಅದೇ ರೀತಿ ಸಭಾಧ್ಯಕ್ಷನಾದವನು ನಮ್ರನಾಗಿ ವಿನಯವನ್ನು ಹೊಂದಬೇಕು.

ಪುನಃ ಆ ಸಭಾಧ್ಯಕ್ಷನು ಯಾರ ಸಮಾನನಾಗಿ ಏನೇನನ್ನು ಮಾಡುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಪರೀಂ ಘೃಣಾ ಚರತಿ ತಿತ್ವಿಷೇ ಶವೋಽಪೋ ವೃತ್ವೀ ರಜಸೋ ಬುಧ್ನಮಾಶಯತ್ ।
ವೃತ್ರಸ್ಯ ಯತ್ ಪ್ರವಣೇ ದುರ್ಗೃಭಿಶ್ವನೋ ನಿಜಘಂಥ ಹನ್ವೋರಿಂದ್ರ ತನ್ಯತುಮ್ ॥೬॥

ಪದಾರ್ಥ:- ಹೇ **[ಇಂದ್ರ]** ಸೂರ್ಯಸಮಾನನಾದ ವರ್ತಮಾನ ಸಭಾಧ್ಯಕ್ಷನೇ! ಯಾವ ರೀತಿ **[ತಿತ್ವಿಷೇ]** ಪ್ರಕಾಶಕ್ಕಾಗಿ **[ಯತ್]** ಯಾವ ಸೂರ್ಯನ **[ಶವಃ]** ಬಲ ಅಥವಾ **[ಘೃಣಾ]** ದೀಪ್ತಿಯು **[ಈಂ]** ಜಲವನ್ನು **[ಪರಿಚರಂತಿ]** ಸೇವನೆ ಮಾಡುತ್ತದೆಯೋ, ಯಾವುದು **[ದುರ್ಗೃಭಿಶ್ವನಃ]** ಕಷ್ಟದಿಂದಲೇ ಗ್ರಹಿಸಲ್ಪಡುತ್ತದೆಯೋ **[ವೃತ್ರಸ್ಯ]** ಮೇಘದ **[ಬುಧ್ನಂ]** ಶರೀರವು **[ರಜಸಃ]** ಅಂತರಿಕ್ಷದ ಮಧ್ಯದಲ್ಲಿ **[ಅಪಃ]** ಜಲವನ್ನು **[ವೃತ್ವೀ]** ಆವರಿಸಿ **[ಅಶಯತ್]** ಮಲಗಿ ಬಿಡುತ್ತದೆಯೋ ಅದರ **[ಹನ್ವೋಃ]** ಹಿಂದೆ ಮುಂದೆ ಇರುವ ಮುಖದ ಅವಯವಗಳಲ್ಲಿ **[ತನ್ಯತುಮ್]** ವಿದ್ಯುತ್ತನ್ನು ತ್ಯಜಿಸಿ ಅದನ್ನು **[ಪ್ರವಣೇ]** ಕೆಳಗೆ **[ನಿಜಘಂಥ]** ಹೊಡೆದು ಬೀಳಿಸುತ್ತದೆಯೋ ಅದರಂತೆ ಇದ್ದು ನೀನು ನ್ಯಾಯದಲ್ಲಿ ಪ್ರವೃತ್ತನಾಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಸೂರ್ಯ ಅಥವಾ ಮೇಘದಂತೆ ವರ್ತಿಸಿ ವಿದ್ಯೆ ಮತ್ತು ನ್ಯಾಯದ ವರ್ಷಣವನ್ನು, ಪ್ರಕಾಶವನ್ನು ಬೀರಬೇಕು.

ಪುನಃ ಅವನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗುತ್ತದೆ.

ಹ್ರದಂ ನ ಹಿ ತ್ವಾ ನ್ಯೃಷಂತ್ಯೂರ್ಮಯೋ ಬ್ರಹ್ಮಾಣೀಂದ್ರ ತವ ಯಾನಿ ವರ್ಧನಾ ।
ತ್ವಷ್ಟಾ ಚಿತ್ ತೇ ಯುಜ್ಯಂ ವಾವೃಧೇ ಶವ-ಸ್ತತಕ್ಷ ವಜ್ರಮಭಿಭೂತ್ಯೋಜಸಮ್ ॥೭॥

ಪದಾರ್ಥ:- ಹೇ **[ಇಂದ್ರ]** ಪ್ರಕಾಶಯುಕ್ತನಾದ ಸೇನಾನಾಯಕನೇ! **[ತೇ]** ನಿನ್ನ **[ವರ್ಧನಾ]** ವರ್ಧಿಸುವ **[ಬ್ರಹ್ಮಾಣಿ]** ದೊಡ್ಡ ದೊಡ್ಡ ಅನ್ನರಾಶಿಯ **[ಊರ್ಮಯಃ]** ತರಂಗಾದಿಗಳು **[ಹ್ರದಂ ನ]** ನದಿಗಳು ಜಲಸ್ಥಾನಗಳನ್ನು ಪ್ರಾಪ್ತಿಸುವಂತೆ **[ಹಿ]** ನಿಶ್ಚಯವಾಗಿ ಜ್ಯೋತಿಗಳನ್ನು **[ನ್ಯೃಷಂತಿ]** ಹೊಂದುತ್ತವೆಯೋ, **[ತವ]** ಆ ನಿನ್ನ **[ಯಾನಿ]** ಯಾವ **[ತ್ವಷ್ಟಾ]** ಮೇಘಾವಯವ ಅಥವಾ ಮೂರ್ತಿಮಾನ್ ದ್ರವ್ಯಗಳ ಸೇವನೆ ಮಾಡುವ **[ಅಭಿಭೂತ್ಯೋಜಸಮ್]** ಐಶ್ವರ್ಯಯುಕ್ತ ಪರಾಕ್ರಮ ಹಾಗೂ **[ಯುಜ್ಯಂ]** ಯುಕ್ತಗೊಳಿಸಲು ಯೋಗ್ಯವಾದ **[ವಾವೃಧೇ]** ವೃದ್ಧಿಹೊಂದುವ **[ಶವಃ]** ಬಲವು **[ವಜ್ರಂ ಚಿತ್]** ಪ್ರಕಾಶಸಮೂಹವನ್ನು ಪ್ರಹಾರಮಾಡಿ ಎಲ್ಲ ಪದಾರ್ಥಗಳನ್ನೂ ಸಹ **[ತತಕ್ಷ]** ಭೇದನ ಮಾಡುತ್ತವೆಯೋ ಅದೇ ರೀತಿ ನೀನೂ ಸಹ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ನೀರು ಕೆಳಗಿನ ಸ್ಥಾನಗಳಿಗೆ ಹೋಗಿ ಸ್ಥಿರವೂ, ಸ್ವಚ್ಛವೂ ಆಗುತ್ತದೆಯೋ, ಅದೇ ರೀತಿ ರಾಜಪುರುಷರು ಉತ್ತಮೋತ್ತಮ ಗುಣಯುಕ್ತ ಹಾಗೂ ವಿನಯವಂತನಾದ ಪುರುಷನನ್ನು ಹೊಂದಿ ಸ್ಥಿರರೂ, ಶುದ್ಧಿಕಾರಕರೂ ಆಗುತ್ತಾರೆ.

ಈಗ ಪ್ರಜೆಗಳಿಗಾಗಿ ಆನಂದವನ್ನು ಹೇಗೆ ಪ್ರಕಟಗೊಳಿಸಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ

ಜಘನ್ವಾँ ಉ ಹರಿಭಿಃ ಸಂಭೃತಕ್ರತ-ವಿಂದ್ರ ವೃತ್ರಂ ಮನುಷೇ ಗಾತುಯನ್ನಪಃ ।
ಅಯಚ್ಛಥಾ ಬಾಹ್ವೋರ್ವಜ್ರಮಾಯಸ-ಮಧಾರಯೋ ದಿವ್ಯಾ ಸೂರ್ಯಂ ದೃಶೇ ॥೮॥

ಪದಾರ್ಥ:- [ಸಂಭೃತಕ್ರತೋ] ಹೇ ಕ್ರಿಯಾಪ್ರಜ್ಞೆಗಳನ್ನು ಧಾರಣ ಮಾಡಿರುವ [ಇಂದ್ರ] ಮೇಘಾವಯವಗಳನ್ನು ಭೇದನ ಮಾಡುವ ಸೂರ್ಯನಂತೆ ಶತ್ರುಗಳನ್ನು ತಾಡನ ಮಾಡುವ ಸಭಾಪತಿ! ನೀನು, ಯಾವ ರೀತಿ ಸೂರ್ಯನು ತನ್ನ ಕಿರಣಗಳಿಂದ [ವೃತ್ರಂ] ಮೇಘವನ್ನು [ಜಘನ್ವಾನ್] ಬೀಳಿಸುತ್ತಾ [ಆಪಃ] ಜಲರಾಶಿಗಳನ್ನು [ಮನುಷೇ] ಮನುಷ್ಯರಿಗೆ [ಗಾತುಯನ್] ಪೃಥ್ವಿಯ ಮೇಲೆ ಪ್ರಾಪ್ತಗೊಳಿಸುತ್ತಾ ಪ್ರಜೆಗಳನ್ನು ಧಾರಣ ಮಾಡುತ್ತಾರೋ ಅದೇ ರೀತಿ ಪ್ರಜೆಗಳ ರಕ್ಷಣೆಗಾಗಿ [ಬಾಹ್ವೋಃ] ಬಲ ಹಾಗೂ ಆಕರ್ಷಣೆಗಳ ಸಮಾನವಾದ ಬಾಹುಗಳ ಮಧ್ಯದಲ್ಲಿ [ಆಯಸಂ] ಲೋಹದ-ಕಬ್ಬಿಣದ [ವಜ್ರಂ] ಕಿರಣ ಸಮೂಹದಂತಿರುವ ಶಸ್ತ್ರಗಳನ್ನು [ಅಧಾರಯಃ] ಉತ್ತಮ ರೀತಿಯಲ್ಲಿ ಧಾರಣೆ ಮಾಡು, ವೀರರಿಂದ ಮಾಡಿಸು ಮತ್ತು ಎಲ್ಲಾ ಮನುಷ್ಯರನ್ನು ಸುಖಿಗಳಾಗುವಂತೆ [ದಿವಿ] ಶುದ್ಧ ವ್ಯವಹಾರದಲ್ಲಿ [ಸೂರ್ಯಂ] ಸೂರ್ಯ ಮಂಡಲದಂತೆ ನ್ಯಾಯ ಮತ್ತು ವಿದ್ಯೆಯ ಪ್ರಕಾಶವನ್ನು [ದೃಶೇ] ತೋರಿಸಲು [ಅಯಚ್ಛಥಾಃ] ಎಲ್ಲಾ ಪ್ರಕಾರದಿಂದ ಪ್ರದಾನ ಮಾಡು.

ಭಾವಾರ್ಥ:- ಯಾವ ರೀತಿ ಸೂರ್ಯಲೋಕವು ಬಲ ಮತ್ತು ಆಕರ್ಷಣ ಗುಣಗಳಿಂದ ಎಲ್ಲಾ ಲೋಕಗಳ ಧಾರಣೆಯಿಂದ ಜಲವನ್ನು ಆಕರ್ಷಣೆ ಮಾಡಿ, ಮಳೆಯಿಂದ ದಿವ್ಯಸುಖಗಳನ್ನು ಉತ್ಪನ್ನಗೊಳಿಸುತ್ತದೆಯೋ, ಅದೇ ರೀತಿ ಸಭೆಯ ಎಲ್ಲಾ ಗುಣಗಳನ್ನು ಧರಿಸಿ ಘನಕಾರ್ಯಗಳಿಂದ ಸುಪಾತ್ರರನ್ನು ಸುಮಾರ್ಗದಲ್ಲಿ ಪ್ರವೃತ್ತಿಗೊಳಿಸಲು ದಾನ ನೀಡಿ ಪ್ರಜೆಗಳಿಗಾಗಿ ಆನಂದವನ್ನು ಪ್ರಕಟಗೊಳಿಸಬೇಕು.

ಧಾರ್ಮಿಕ ವಿದ್ವಾಂಸರಾದವರು ಏನನ್ನು ಹೊಂದುತ್ತಾರೆ ಎಂಬುದನ್ನಿಲ್ಲಿ ತಿಳಿಸಲಾಗುತ್ತದೆ

ಬೃಹತ್ ಸ್ವಶ್ಚಂದ್ರಮಮವದ್ ಯದುಕ್ಥ್ಯಂಮಕೃಣ್ವತ ಭಿಯಸಾ ರೋಹಣಂ ದಿವಃ ।

ಯನ್ಮಾನುಷಪ್ರಧನಾ ಇಂದ್ರಮೂತಯಃ ಸ್ವರ್ನೃಷಾಚೋ ಮರುತೋಽಮದನ್ನನು ॥೯॥

ಪದಾರ್ಥ:- ಯಾವ [ಮಾನುಷಪ್ರಧನಾಃ] ಮನುಷ್ಯರಿಗೆ ಉತ್ತಮ ಧನವನ್ನು ಪ್ರಾಪ್ತಗೊಳಿಸಲು ಹಾಗೂ [ನೃಷಾಚಃ] ಮನುಷ್ಯರನ್ನು ಕರ್ಮಗಳಲ್ಲಿ ಸಂಯುಕ್ತಗೊಳಿಸುವ [ಮರುತಃ] ಪ್ರಾಣಾದಿಗಳಿವೆಯೋ ಅವು [ಇಂದ್ರಂ] ವಿದ್ಯುತ್ತನ್ನು ಹೊಂದಿ [ಯತ್] ಯಾವ [ಬೃಹತ್] ಹಿರಿದಾದ [ಸ್ವಶ್ಚಂದ್ರಂ] ತನ್ನ ಅಹ್ಲಾದಕಾರಕ ಪ್ರಕಾಶದಿಂದ ಕೂಡಿದ [ಅಮವತು] ಉತ್ತಮ ಜ್ಞಾನ ಹಾಗೂ [ಉಕ್ಥ್ಯಂ] ಪ್ರಶಂಸನೀಯವಾದ [ಸ್ವಃ] ಸುಖವನ್ನು [ಅಕೃಣ್ವತ] ಸಂಪಾದನೆ ಮಾಡುತ್ತವೆ ಮತ್ತು [ಯತ್] ಯಾವ [ಭಿಯಸಾ] ದುಃಖದ ಭಯದಿಂದ [ದಿವಃ] ಪ್ರಕಾಶಮಾನವಾದ ಮೋಕ್ಷಸುಖದ [ರೋಹಣಂ] ಆರೋಹಣ, [ಊತಯಃ] ರಕ್ಷಣೆ ಮೊದಲಾದವುಗಳಿರುತ್ತವೆಯೋ ಅವುಗಳನ್ನು ಮಾಡಿ [ಅನ್ವಮದನ್] ಅದಕ್ಕೆ ಅನುಕೂಲವಾಗಿ ಆನಂದವನ್ನು ಹೊಂದುತ್ತಾರೋ, ಆ ಮನುಷ್ಯರೇ ಸುಖವನ್ನು ಪಡೆಯುತ್ತಾರೆ.

ಭಾವಾರ್ಥ:- ವಿದ್ಯಾಧನ, ರಾಜ್ಯ, ಪರಾಕ್ರಮ, ಬಲ ಹಾಗೂ ಪುರುಷರ ಸಹಾಯದ ಆ ಎಲ್ಲವನ್ನು ಯಾವ ಧಾರ್ಮಿಕ ವಿದ್ವಾಂಸರು ಹೊಂದುತ್ತಾರೋ ಅವರು ಉತ್ತಮ ಸುಖವನ್ನು ಉತ್ಪನ್ನಗೊಳಿಸುತ್ತಾರೆ.

ಸೇನೆಯು ಸೇನಾಪತಿಯೊಂದಿಗೆ ಹೇಗೆ ಪ್ರವೃತ್ತವಾಗಬೇಕು ಎಂಬುದನ್ನು ತಿಳಿಸಲಾಗುತ್ತದೆ.

ದ್ಯೌಶ್ಚಿದಸ್ಯಾಮವಾँ ಅಹೇಃ ಸ್ವನಾ-ದಯೋಯವೀದ್ ಭಿಯಸಾ ವಜ್ರ ಇಂದ್ರ ತೇ ।

ವೃತ್ರಸ್ಯ ಯದ್ ಬದ್ಬಧಾನಸ್ಯ ರೋದಸೀ ಮದೇ ಸುತಸ್ಯ ಶವಸಾಭಿನಚ್ಛಿರಃ ॥೧೦॥

ಪದಾರ್ಥ:- [ಇಂದ್ರ] ಹೇ ಪರಮ ಐಶ್ವರ್ಯದ ಕಾರಣನಾದ ಸೇನಾಪತಿ! ಯಾವ [ಅಸ್ಯ] ಈ [ತೇ] ನಿನ್ನ ಮತ್ತು ಈ ಸೂರ್ಯನ [ದ್ಯೌಃ] ಪ್ರಕಾಶವನ್ನು [ಅಹೇಃ ಬದ್ಬಧಾನಸ್ಯ] ತಡೆಯುವ ಮೋಡವನ್ನು [ಸುತಸ್ಯ] ಉತ್ಪನ್ನಗೊಳಿಸಿದ [ವೃತ್ರಸ್ಯ] ಆವರಣಕಾರಕ ಜಲದ ಅವಯವಗಳನ್ನು [ವಜ್ರಃ] ಸಿಡಿಲಿನ [ಸ್ವನಾತ್] ಶಬ್ದದಿಂದ [ಭಿಯಸಾ] ಮತ್ತು ಭಯದಿಂದ [ಶವಸಾ] ಬಲದೊಂದಿಗೆ ಶತ್ರುಗಳು ಓಡುತ್ತಾರೆ [ರೋದಸೀ] ಆಕಾಶ ಮತ್ತು ಪೃಥ್ವಿಗಳಂತೆ [ಮದೇ] ಆನಂದಕಾರಕ ವ್ಯವಹಾರಗಳಲ್ಲಿ ಇರುವ ಶತ್ರುವಿನ [ಶಿರಃ] ತಲೆಯನ್ನು [ಅಭಿನತ್] ಕತ್ತರಿಸುತ್ತಾರೆ ಈ ರೀತಿ ನೀನು ನಮ್ಮ ಪಾಲನೆಯನ್ನು ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯನ ಕಿರಣ ಹಾಗೂ ವಿದ್ಯುತ್ತು ಮೇಘದೊಂದಿಗೆ ಪ್ರವೃತ್ತವಾಗುತ್ತದೆಯೋ, ಅದೇ ರೀತಿ ಸೇನಾಪತಿ ಮೊದಲಾದವರೊಂದಿಗೆ ಸೇನೆಯು ಇರಬೇಕಾಗುತ್ತದೆ.

ರಾಜಪುರುಷರ ಕರ್ತವ್ಯವೇನು ಎಂಬುದನ್ನು ಹೇಳಲಾಗಿದೆ

ಯದಿನ್ನ್ವಿಂದ್ರ ಪೃಥಿವೀ ದಶಭುಜಿ-ರಹಾನಿ ವಿಶ್ವಾ ತತನಂತ ಕೃಷ್ಟಯಃ ।

ಅತ್ರಾಹ ತೇ ಮಘವನ್ ವಿಶ್ರುತಂ ಸಹೋ ದ್ಯಾಮನು ಶವಸಾ ಬರ್ಹಣಾ ಭುವತ್ ॥೧೧॥

ಪದಾರ್ಥ:- ಹೇ [ಮಘವನ್] ಉತ್ಕೃಷ್ಟ ಧನ ಮತ್ತು ವಿದ್ಯೆಯ ಐಶ್ವರ್ಯದಿಂದ ಕೂಡಿದ [ಇಂದ್ರ] ಸಭಾ ಸೇನಾಧ್ಯಕ್ಷನೇ! ನೀನು [ಯತ್] ಯಾವ [ದಶಭುಜಿಃ] ದಶ ಇಂದ್ರಿಯಗಳಿಂದ [ಪೃಥಿವೀ] ಭೂಮಿಯನ್ನು ಭೋಗಿಸುತ್ತೀಯೋ [ತೇ] ಆ ನಿನ್ನ [ಬರ್ಹಣಾ] ಸಮಸ್ತ ಸುಖ ಪ್ರಾಪ್ತಿಯನ್ನುಂಟುಮಾಡುವ ಅಥವಾ [ಶವಸಾ ಅಹ] ಬಲದಿಂದಲೇ [ದ್ಯಾಂ] ರಾಜ್ಯಪಾಲನೆಯನ್ನು [ಅನುವಿಶ್ರುತಂ] ಅನುಕೂಲವಾದ ಕೀರ್ತಿಯನ್ನುಂಟುಮಾಡುವ ಯಶಸ್ಸು, [ಸಹಃ] ಬಲ [ಭುವತ್] ಉಂಟಾಗಲಿ. ಅದರಿಂದ ಯುಕ್ತನಾಗಿ ನೀನು ಪ್ರಯತ್ನ ಮಾಡು. ಅದರಿಂದ [ಅತ್ರ] ಈ ರಾಜ್ಯದಲ್ಲಿ [ಕೃಷ್ಟಯಃ] ಮನುಷ್ಯರು [ವಿಶ್ವಾ] ಎಲ್ಲಾ [ಅಹಾನಿ] ದಿನಗಳನ್ನು [ಇತ್] ಮಾತ್ರವೇ ಸುಖದಿಂದ [ನು] ಬೇಗನೆ [ತತನಂತ] ವಿಸ್ತಾರ ಮಾಡಲಿ.

ಭಾವಾರ್ಥ:- ರಾಜ ಪುರುಷರಿಗೆ ಯೋಗ್ಯವಾದುದೇನೆಂದರೆ, ಯಾವ ರೀತಿ ತಮ್ಮ ರಾಜ್ಯದಲ್ಲಿ ಸುಖಗಳ ವೃದ್ಧಿಯೂ ಅನೇಕ ಪ್ರಕಾರಗಳಿಂದ ಸದ್ಗುಣಗಳ ಪ್ರಾಪ್ತಿಯೂ ಉಂಟಾಗುವುದೋ ಅಂತಹ ವ್ಯವಹಾರವನ್ನು ಅನುಷ್ಠಾನ ಮಾಡಬೇಕು.

ನ್ಯಾಯಾಧೀಶನ ಕರ್ತವ್ಯವೇನು ಎಂಬುದನ್ನು ಇಲ್ಲಿ ವಿವರಿಸಲಾಗಿದೆ

ತ್ವಮಸ್ಯ ಪಾರೇ ರಜಸೋ ವ್ಯೋಮನಃ ಸ್ವಭೂತ್ಯೋಜಾ ಅವಸೇ ಧೃಷನ್ಮನಃ ।

ಚಕೃಷೇ ಭೂಮಿಂ ಪ್ರತಿಮಾನಮೋಜಸೋಽಪಃ ಸ್ವಃ ಪರಿಭೂರೇಷ್ಯಾ ದಿವಮ್ ॥೧೨॥

ಪದಾರ್ಥ:- [ಧೃಷನ್ಮನಃ] ಹೇ ಅನಂತ ಪ್ರಗಲ್ಭ ವಿಜ್ಞಾನಯುಕ್ತ ಜಗದೀಶ್ವರ! ಯಾವ [ಪರಿಭೂಃ] ಎಲ್ಲ ಪ್ರಕಾರದ [ಸ್ವಭೂತ್ಯೋಜಾಃ] ತನ್ನ ಐಶ್ವರ್ಯ ಮತ್ತು ಪರಾಕ್ರಮದಿಂದ [ತ್ವಂ] ನೀನು [ಅವಸೇ] ರಕ್ಷಣಾದಿಗಳಿಗೆ [ಅಸ್ಯ] ಈ ಜಗತ್ತಿನ [ರಜಸಃ] ಪೃಥ್ವಿ ಮೊದಲಾದ ಲೋಕಗಳ ಹಾಗೂ [ವ್ಯೋಮನಃ] ಆಕಾಶದ [ಪಾರೇ] ಅಪರ ಭಾಗದಲ್ಲಿಯೂ [ಏಷಿ] ಪ್ರಾಪ್ತನಾಗಿರುವೆ ಹಾಗೂ [ಓಜಸಃ] ಪರಾಕ್ರಮ ಮೊದಲಾದವುಗಳ [ಪ್ರತಿಮಾನಂ]

ಅವಧಿಯನ್ನು [**ಸ್ವಃ**] ಸುಖವನ್ನು [**ದಿವಂ**] ಶುದ್ಧ ವಿಜ್ಞಾನದ ಪ್ರಕಾಶವನ್ನು [**ಭೂಮಿಂ**] ಭೂಮಿ ಮತ್ತು [**ಅಪಃ**] ಜಲಗಳನ್ನು [**ಆಚಕೃಷೇ**] ಉತ್ತಮ ರೀತಿಯಿಂದ ಮಾಡಿರುವೆಯೋ, ಅಂತಹ ನಿನ್ನನ್ನು ನಾವೆಲ್ಲರೂ ಉಪಾಸನೆ ಮಾಡುತ್ತೇವೆ.

ಭಾವಾರ್ಥ:- ಯಾವ ರೀತಿ ಪರಮೇಶ್ವರನು ಎಲ್ಲರಿಗಿಂತ ಉತ್ತಮನೋ ಎಲ್ಲರಿಗಿಂತ ಮೇಲಿರುವವನು ಆಗಿದ್ದುಕೊಂಡು ತನ್ನ ಸಾಮರ್ಥ್ಯದಿಂದ ಲೋಕ-ಲೋಕಾಂತರಗಳನ್ನು ರಚಿಸಿ ಅವುಗಳಲ್ಲಿ ಎಲ್ಲಾ ರೀತಿಯಲ್ಲಿಯೂ ವ್ಯಾಪಿಸಿ ಧಾರಣೆ ಮಾಡಿ ಎಲ್ಲವನ್ನು ವ್ಯವಸ್ಥಿತಗೊಳಿಸುತ್ತಾ ಜೀವಿಗಳ ಪಾಪ-ಪುಣ್ಯದ ವ್ಯವಸ್ಥೆಯನ್ನು ಮಾಡುವುದರಿಂದ ನ್ಯಾಯಾಧೀಶನಾಗಿ ವರ್ತಿಸುತ್ತಾನೆಯೋ, ಅದೇ ರೀತಿ ನಾಯಾಧೀಶನೂ ಸಹ ಸಮಸ್ತ ಭೂಮಿಯ ರಾಜ್ಯವನ್ನು ಸಂಪಾದನೆ ಮಾಡುತ್ತಾ ಎಲ್ಲರಿಗೂ ಸುಖಗಳನ್ನು ಉತ್ಪನ್ನಗೊಳಿಸಲಿ.

ಈಶ್ವರನು ಹೇಗಿದ್ದಾನೆ ಎಂಬುದನ್ನು ತಿಳಿಸಲಾಗಿದೆ

ತ್ವಂ ಭುವಃ ಪ್ರತಿಮಾನಂ ಪೃಥಿವ್ಯಾ ಋಷ್ವವೀರಸ್ಯ ಬೃಹತಃ ಪತಿರ್ಭೂಃ ।
ವಿಶ್ವಮಾಪ್ರಾ ಅಂತರಿಕ್ಷಂ ಮಹಿತ್ವಾ ಸತ್ಯಮದ್ಧಾ ನಕಿರನ್ಯಸ್ತ್ವಾವಾನ್ ॥೧೩॥

ಪದಾರ್ಥ:- ಹೇ ಜಗದೀಶ್ವರ! ಯಾವ [**ತ್ವಂ**] ನೀನು [**ಪೃಥಿವ್ಯಾಃ**] ವಿಸ್ತೃತ ಆಕಾಶ ಮತ್ತು [**ಭುವಃ**] ಭೂಮಿಯ [**ಪ್ರತಿಮಾನಂ**] ಪರಿಮಾಣಕರ್ತನು ಹಾಗೂ [**ಬೃಹತಃ**] ಮಹಾ ಬಲಯುಕ್ತನು [**ಋಷ್ವವೀರಸ್ಯ**] ಮಹಾನ್ ಗುಣಯುಕ್ತ ಜಗತ್ತಿನ ಅಥವಾ ಮಹಾ ವೀರನಾದ ಮನುಷ್ಯನ [**ಪತಿಃ**] ಪಾಲನೆ ಮಾಡುವವನಾಗಿ [**ಭೂಃ**] ಇರುವೆಯೋ ಹಾಗೂ ನೀನು [**ವಿಶ್ವಂ**] ಸಮಸ್ತ ಜಗತ್ತನ್ನು [**ಅಂತರಿಕ್ಷಂ**] ಅನೇಕ ಲೋಕಗಳ ಮಧ್ಯದಲ್ಲಿ ಅವಕಾಶ ಸ್ವರೂಪವಾಗಿರುವ ಆಕಾಶದ ಮತ್ತು [**ಸತ್ಯಂ**] ಕಾರಣರೂಪದಿಂದ ಅವಿನಾಶಿಯಾಗಿ ಉತ್ತಮ ರೀತಿಯಿಂದ ಪರೀಕ್ಷಿಸಲಾಗಿರುವ ನಾಲ್ಕೂ ವೇದಗಳನ್ನು [**ಮಹಿತ್ವಾ**] ಮಹಾನ್ ವ್ಯಾಪ್ತಿಯಿಂದ ವ್ಯಾಪ್ತನಾಗಿ [**ಅದ್ಧಾಪ್ರಾಃ**] ಸಾಕ್ಷಾತ್ಕಾರಗೊಳಿಸುತ್ತೀಯೋ, ಇದರಿಂದ [**ತ್ವಾವಾನ್**] ನಿನ್ನಂತಿರುವ [**ಅನ್ಯಃ**] ಬೇರೆಯವನು [**ನಕಿಃ**] ವಿದ್ಯಮಾನನಾದವನು ಬೇರಾರೂ ಇಲ್ಲ.

ಭಾವಾರ್ಥ:- ಯಾವ ರೀತಿ ಪರಮೇಶ್ವರನೇ ಸಮಸ್ತ ಜಗತ್ತಿನ ರಚನೆ, ಪರಿಮಾಣ, ವ್ಯಾಪಕ ಹಾಗೂ ಸತ್ಯದ ಪ್ರಕಾಶವನ್ನುಂಟುಮಾಡುವವನಾಗಿದ್ದಾನೋ, ಇದರಿಂದ ಈಶ್ವರನ ಸದೃಶವಾದ ಯಾವುದೇ ಪದಾರ್ಥ ಹಿಂದೆ ಆಗಿರಲಿಲ್ಲ, ಮುಂದೆ ಆಗುವುದೂ ಇಲ್ಲ ಎಂಬುದಾಗಿ ತಿಳಿದು ನಾವು ಅವನ ಉಪಾಸನೆಯನ್ನೇ ಮಾಡಬೇಕು.

ಸಜ್ಜನರ ಕರ್ತವ್ಯ-ಕರ್ಮಗಳನ್ನು ತಿಳಿಸಲಾಗುತ್ತದೆ

ನ ಯಸ್ಯ ದ್ಯಾವಾಪೃಥಿವೀ ಅನು ವ್ಯಚೋ ನ ಸಿಂಧವೋ ರಜಸೋ ಅಂತಮಾನಶುಃ।
ನೋತ ಸ್ವವೃಷ್ಟಿಂ ಮದೇ ಅಸ್ಯ ಯುಧ್ಯತ ಏಕೋ ಅನ್ಯಚ್ಚಕೃಷೇ ವಿಶ್ವಮಾನುಷಕ್ ॥೧೪॥

ಪದಾರ್ಥ:- [**ಯಸ್ಯ**] ಯಾವ [**ರಜಸಃ**] ಐಶ್ವರ್ಯಯುಕ್ತ ಪರಮಾತ್ಮನ [**ಅನುವ್ಯಚಃ**] ಅನಂತ ವ್ಯಾಪ್ತಿಯ ಅನುಕೂಲವಾಗಿ ಇರುವ [**ದ್ಯಾವಾಪೃಥಿವಿ**] ಪ್ರಕಾಶ ಹಾಗೂ ಅಪ್ರಕಾಶಯುಕ್ತ ಲೋಕ ಮತ್ತು ಚಂದ್ರಮಾದಿಗಳೂ [**ಅಂತಂ**] ಅಂತಹ ಸೀಮೆಯನ್ನು [**ನ**] [**ಅನಶುಃ**] ಪ್ರಾಪ್ತವಾಗುವುದಿಲ್ಲ. ಹೇ ಪರಮಾತ್ಮನ್! ಯಾವ ರೀತಿ [**ಸ್ವವೃಷ್ಟಿಂ**] ತನ್ನ ಪದಾರ್ಥಗಳ ವರ್ಷಣಕ್ಕಾಗಿ [**ಮದೇ**] ಆನಂದದಲ್ಲಿ [**ಯುಧ್ಯತಃ**] ಯುದ್ಧ ಮಾಡುತ್ತಿರುವ ಮೋಡವು ಸೂರ್ಯನೆದುರು ವಿಜಯವನ್ನು ಹೊಂದುವುದಿಲ್ಲವೋ, ಅದೇ ರೀತಿ [**ಏಕಃ**] ಸಹಾಯರಹಿತ ಅದ್ವಿತೀಯ

ಜಗದೀಶ್ವರನು [**ಅನ್ಯತ್**] ತನ್ನಿಂದ ಬೇರೆಯಾದ ಎರಡನೆಯ [**ವಿಶ್ವಂ**] ಜಗತ್ತನ್ನು [**ಆನುಶಕ್**] ತನ್ನ ವ್ಯಾಪ್ತಿಯಿಂದ ಯುಕ್ತಗೊಳಿಸುತ್ತಾನೆ. ಆದುದರಿಂದ ಅವನು ಉಪಾಸನಾಯೋಗ್ಯನಾಗಿದ್ದಾನೆ.

ಭಾವಾರ್ಥ:- ಯಾವ ರೀತಿ ಪರಮೇಶ್ವರನ ಯಾವುದೇ ಗುಣವು ಮನುಷ್ಯನ ಅಥವಾ ಯಾವುದೇ ಲೋಕದ ಗಡಿಯನ್ನು ಗ್ರಹಿಸಲಾರದೋ ಮತ್ತು ಯಾವ ರೀತಿ ಜಗದೀಶ್ವರನು ಪಾಪಯುಕ್ತ ಕರ್ಮ ಮಾಡುವ ಜನರಿಗಾಗಿ ದುಃಖರೂಪಿ ಫಲದಿಂದ ಪೀಡೆಯನ್ನು ಉಂಟುಮಾಡುತ್ತಾನೋ, ವಿದ್ವಾಂಸರು ದುಷ್ಟರನ್ನು ದಂಡಿಸುವುದನ್ನು ಮತ್ತು ಸೂರ್ಯನು ಮೇಘಾವಯವಗಳನ್ನು ವಿದಾರಣಗೊಳಿಸುವುದನ್ನು ಮಾಡುತ್ತಾರೋ, ಯುದ್ಧ ಮಾಡುಯವರಂತೆ ವರ್ತಿಸುತ್ತಾರೋ, ಅದೇ ರೀತಿ ಸಮಸ್ತ ಸಜ್ಜನರು ವರ್ತಿಸಬೇಕು.

ಯಾವು ಸುಖವನ್ನು ಹೊಂದುತ್ತಾರೆ ಎಂಬುದನ್ನು ಹೇಳಲಾಗಿದೆ

ಆರ್ಚನ್ನತ್ರ ಮರುತಃ ಸಸ್ಮಿನ್ನಾಜೌ ವಿಶ್ವೇ ದೇವಾಸೋ ಅಮದನ್ನನು ತ್ವಾ ।
ವೃತ್ರಸ್ಯ ಯದ್ ಭೃಷ್ಟಿಮತಾ ವಧೇನ ನಿ ತ್ವಮಿಂದ್ರ ಪ್ರತ್ಯಾನಂ ಜಘಂಥ ॥೧೫॥

ಪದಾರ್ಥ:- [ಇಂದ್ರ] ಹೇ ಪರಮೈಶ್ವರ್ಯಯುಕ್ತ ಸಭಾ-ಸೇನಾ ನಾಯಕನೇ! [**ಯತ್**] ಯಾವ [**ತ್ವಂ**] ನೀನು [**ಭೃಷ್ಟಿಮತಾ**] ಪ್ರಶಂಸನೀಯ ನೀತಿಯ ನ್ಯಾಯವ್ಯವಹಾರದಿಂದ ಯುಕ್ತನೋ [**ವಧೇನ**] ಹನನದಿಂದ [**ವೃತ್ರಸ್ಯ**] ಅಧರ್ಮೀ ಮನುಷ್ಯನಂತೆ [**ಆನಂ**] ಪ್ರಾಣವನ್ನು [**ಜಘಂಥ**] ನಾಶಗೊಳಿಸುತ್ತೀಯೋ, ಆ [**ತ್ವಾ**] ನಿನ್ನನ್ನು [**ಸಸ್ಮಿನ್**] ಎಲ್ಲಾ [**ಆಜೌ**] ಸಂಗ್ರಾಮದ ಅಥವಾ [**ಅತ್ರ**] ಈ ನಿನ್ನನ್ನು ಶ್ರದ್ಧೆಯನ್ನಿರಿಸಿರುವ [**ವಿಶ್ವೇದೇವಾಸಃ**] ಸಮಸ್ತ ವಿದ್ವಾಂಸರು ಮತ್ತು [**ಮರುತಃ**] ಋತ್ವಿಜರು [**ನ್ಯಾರ್ಚಂ**] ನಿತ್ಯ ಸತ್ಕಾರವನ್ನು ಮಾಡುತ್ತಾರೆ. ಇದರಿಂದ ಅವರು ಪ್ರಜೆಗಳನ್ನು [**ಪ್ರತ್ಯನ್ವಮದನ್**] ಎಲ್ಲರನ್ನು ಆನಂದಿತರನ್ನಾಗಿಸಿ ತಾವು ಆನಂದಿತರಾಗುತ್ತಾರೆ.

ಭಾವಾರ್ಥ:- ಯಾರು ಒಬ್ಬನೇ ಪರಮೇಶ್ವರನ ಉಪಾಸನಾ ವಿದ್ಯೆಯನ್ನು ಗ್ರಹಿಸಿ ಶತ್ರುಗಳ ಮೇಲೆ ವಿಜಯವನ್ನು ಹೊಂದಿ ಪ್ರಜೆಗಳನ್ನು ನಿರಂತರ ಆನಂದದಲ್ಲಿ ಇರಿಸುತ್ತಾನೋ ಅಂತಹ ಧಾರ್ಮಿಕ ವಿದ್ವಾಂಸನೇ ಸುಖಿಯಾಗುತ್ತಾನೆ.

ಈ ಸೂಕ್ತದಲ್ಲಿ ವಿದ್ವಾಂಸರು, ವಿದ್ಯುತ್ತು ಮೊದಲಾದ ಅಗ್ನಿ ಹಾಗೂ ಈಶ್ವರನ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ಐವತ್ತೆರಡನೆಯ ಸೂಕ್ತ ಸಮಾಪ್ತ

ಸೂಕ್ತ ೫೩

ಮಂತ್ರಸಂಖ್ಯೆ ೧೧ । ಋಷಿಃ - ಸವ್ಯ ಆಂಗೀರಸಃ । ದೇವತಾ - ಇಂದ್ರಃ । ಛಂದಃ - ಜಗತೀ, ೧೦-೧೧ ತ್ರಿಷ್ಟುಪ್ ।
ಸ್ವರಃ - ೧, ೨, ೩, ೪, ೫, ೭ ನಿಷಾದಃ, ೬, ೮, ೯, ೧೦ ಧೈವತಃ, ೧೧ ಪಂಚಮಃ.

ಮನುಷ್ಯರ ಕರ್ತವ್ಯವೇನು ಎಂಬುದನ್ನು ಇಲ್ಲಿ ತಿಳಿಸಲಾಗಿದೆ

ನ್ಯೂ೩ ಷು ವಾಚಂ ಪ್ರ ಮಹೇ ಭರಾಮಹೇ ಗಿರ ಇಂದ್ರಾಯ ಸದನೇ ವಿವಸ್ವತಃ ।
ನೂ ಚಿದ್ಧಿ ರತ್ನಂ ಸಸತಾಮಿವಾವಿದ-ನ್ನ ದುಷ್ಟುತಿರ್ದ್ರವಿಣೋದೇಷು ಶಸ್ಯತೇ ॥೧॥

ಪದಾರ್ಥ:- ಹೇ ಮನುಷ್ಯರೇ! ಯಾವ ರೀತಿ ನಾವು **[ಮಹೇ]** ಮಹಾಸುಖಪ್ರಾಪಕವಾದ **[ಸದನೇ]** ಸ್ಥಾನದಲ್ಲಿ **[ಇಂದ್ರಾಯ]** ಪರಮೈಶ್ವರ್ಯಕ್ಕಾಗಿ **[ಸು]** ಶುಭಲಕ್ಷಣಯುಕ್ತವಾದ **[ವಾಚಂ]** ವಾಣಿಯನ್ನು **[ನಿಭರಾಮಹೇ]** ನಿಶ್ಚಿತವಾಗಿಯೂ ಧಾರಣೆ ಮಾಡುತ್ತೇವೋ, ಸ್ವಪ್ನದಲ್ಲಿ **[ಸಸತಾಮಿವ]** ನಿದ್ರಿಸುವ ಪುರುಷರಂತೆ **[ವಿವಸ್ವತಃ]** ಸೂರ್ಯಪ್ರಕಾಶದಲ್ಲಿ **[ರತ್ನಂ]** ರಮಣೀಯವಾದ ಸುವರ್ಣಾದಿಗಳಂತೆ **[ಗಿರಃ]** ಸ್ತುತಿಗಳನ್ನು ಧಾರಣೆಮಾಡುತ್ತೇವೋ, **[ದ್ರವಿಣೋದೇಷು]** ಸುವರ್ಣಾದಿ ಅಥವಾ ವಿದ್ಯೆ ಮೊದಲಾದುವುಗಳನ್ನು ನೀಡುವ ನಮ್ಮಲ್ಲಿ **[ದುಷ್ಟುತಿಃ]** ದುಷ್ಟ ಸ್ತುತಿ ಮತ್ತು ಪಾಪದ ಕೀರ್ತಿ ಅಂದರೆ ನಿಂದೆಯು **[ನ ಪ್ರಶಸ್ಯತೇ]** ಶ್ರೇಷ್ಠವೆನಿಸುವುದಿಲ್ಲವೋ, ಅದೇ ರೀತಿ ನೀವೂ ಆಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಲ್ಲಿ ಯಾವ ರೀತಿ ನಿದ್ರೆಯಲ್ಲಿ ಇರುವ ಮನುಷ್ಯರು ಆರಾಮವನ್ನು ಹೊಂದುತ್ತಾರೋ, ಅದೇ ರೀತಿ ಸದಾ ವಿದ್ಯೆ, ಉತ್ತಮ ಶಿಕ್ಷಣಗಳಿಂದ ಸಂಸ್ಕಾರಗೊಳಿಸಿದ ವಾಣಿಯನ್ನು ಸ್ವೀಕರಿಸಿ ಪ್ರಶಂಸನೀಯ ಕರ್ಮವನ್ನು ಸೇವಿಸುವ ಮತ್ತು ನಿಂದೆಯನ್ನು ದೂರಮಾಡಿ ಸ್ತುತಿಯನ್ನು ಬೆಳಗಿಸುವುದಕ್ಕಾಗಿ ಉತ್ತಮ ರೀತಿಯಲ್ಲಿ ಪ್ರಯತ್ನ ಮಾಡಬೇಕು.

ಯಾರು ಸುಖವನ್ನು ಹೊಂದುತ್ತಾರೆ ಎಂಬುದನ್ನು ತಿಳಿಸಲಾಗುತ್ತದೆ

ದುರೋ ಅಶ್ವಸ್ಯ ದುರ ಇಂದ್ರ ಗೋರಸಿ ದುರೋ ಯವಸ್ಯ ವಸುನ ಇನಸ್ಪತಿಃ ।
ಶಿಕ್ಷಾನರಃ ಪ್ರದಿವೋ ಅಕಾಮಕರ್ಶನಃ ಸಖಾ ಸಖಿಭ್ಯಸ್ತಮಿದಂ ಗೃಣೀಮಸಿ ॥೨॥

ಪದಾರ್ಥ:- [ಇಂದ್ರ] ಹೇ ವಿದ್ವಾಂಸನೇ! ಯಾರು **[ಅಕಾಮಕರ್ಶನಃ]** ಆಲಸ್ಯಯುಕ್ತ ಮನುಷ್ಯರನ್ನು ಕೃಶರನ್ನಾಗಿಯೂ **[ಶಿಕ್ಷಾನರಃ]** ಶಿಕ್ಷಣವನ್ನು ಪ್ರಾಪ್ತಗೊಳಿಸುವುದಕ್ಕಾಗಿಯೂ **[ಸಖಿಭ್ಯಃ]** ಮಿತ್ರರ **[ಸಖಾ]** ಮಿತ್ರರನ್ನು **[ಪತಿಃ]** ಪಾಲನ ಮಾಡುವ **[ಇನಃ]** ಈಶ್ವರನಂತೆ ಸಾಮರ್ಥ್ಯಯುಕ್ತನಾದ ನೀನು **[ಅಶ್ವಸ್ಯ]** ವ್ಯಾಪ್ತಿಕಾರಕ ಅಗ್ನಿ ಮೊದಲಾದ ಹಾಗೂ ತುರಂಗ ಮೊದಲಾದವುಗಳ ದ್ವಾರಗಳನ್ನು ಪ್ರಾಪ್ತಿಸಿ ಸುಖ ನೀಡುವ **[ಗೋಃ]** ವಾಣಿ ಅಥವಾ ಹಾಲನ್ನು ಕೊಡುವ ಹಸುವಿನ ಮೂಲಕ **[ದುರಃ]** ಸುಖದಾಯಕವಾದ ದ್ವಾರಗಳನ್ನು ತಿಳಿದು **[ಯವಸ್ಯ]** ಜವೆ ಮೊದಲಾದ ಉತ್ತಮ ಅನ್ನದ **[ಪ್ರತಿವಃ]** ಉತ್ತಮ ವಿಜ್ಞಾನ ಪ್ರಕಾಶವನ್ನು ಮತ್ತು **[ವಸುನಃ]** ಉತ್ತಮ ಧನವನ್ನು ನೀಡುವವನು ಆಗಿದ್ದೀಯೆ. **[ತಂ]** ಆ ನಿನ್ನನ್ನು **[ಇದಂ]** ಪೂಜೆ ಅಥವಾ ಸತ್ಕಾರ ಪೂರ್ವಕವಾಗಿ **[ಗೃಣೀಮಸಿ]** ಸ್ತುತಿಯನ್ನು ಮಾಡುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪರಮೇಶ್ವರನಂತೆ ಧಾರ್ಮಿಕ ವಿದ್ವಾಂಸನಲ್ಲದೆ ಬೇರೆ ಯಾರಿಗೂ ಎಲ್ಲಾ ಪದಾರ್ಥಗಳನ್ನು ಹಾಗೂ ಸರ್ವ ಸುಖಗಳನ್ನು ನೀಡುವವನು ಬೇರೆ ಯಾರೂ ಇಲ್ಲ. ಆದರೆ ಯಾರು ನಿಶ್ಚಯವಾಗಿ ಎಲ್ಲರ ಮಿತ್ರನೂ ಶಿಕ್ಷಣವನ್ನು ಹೊಂದಿ ಆಲಸ್ಯವನ್ನು ತ್ಯಜಿಸಿ ಉದ್ಯೋಗ, ಈಶ್ವರನ ಉಪಾಸನೆ, ವಿದ್ಯೆ ಹಾಗೂ ವಿದ್ವಾಂಸರ ಸಂಗವನ್ನು ಪ್ರೀತಿಯಿಂದ ಸೇವನೆ ಮಾಡುವ ಯಾವ ಮನುಷ್ಯರಿದ್ದಾರೋ ಅವರೇ ಈ ಎಲ್ಲಾ ಸುಖಗಳನ್ನು ಹೊಂದುತ್ತಾರೆ, ಆಲಸೀ ಪುರುಷರಲ್ಲ.

ಮನುಷ್ಯನ ಇಷ್ಟಾರ್ಥ ಸಿದ್ಧಿಯು ಹೇಗಾಗುತ್ತದೆ ಎಂಬುದನ್ನು ತಿಳಿಸಲಾಗುತ್ತಿದೆ

ಶಚೀವ ಇಂದ್ರ ಪುರುಕೃದ್ ದ್ಯುಮತ್ತಮ ತವೇದಿದಮಭಿತಶ್ಚೇಕಿತೇ ವಸು ।
ಅತಃ ಸಂಗೃಭ್ಯಾಭಿಭೂತ ಆ ಭರ ಮಾ ತ್ವಾಯತೋ ಜರಿತುಃ ಕಾಮಮೂನಯೀಃ ॥೩॥

ಪದಾರ್ಥ:- **[ಶಚೀವಃ]** ಹೇ ಪ್ರಶಂಸನೀಯ ಪ್ರಜ್ಞಾ ವಾಣಿ ಹಾಗೂ ಕರ್ಮಯುಕ್ತನಾದ **[ದ್ಯುಮತ್ತಮ]** ಅತಿಶಯವಾಗಿ ಸರ್ವಜ್ಞತಾವಿದ್ಯಾಪ್ರಕಾಶಯುಕ್ತ **[ಪುರುಕೃತ್]** ಬಹುಸುಖಗಳ ದಾತಾ **[ಇಂದ್ರ]** ಪರಮೈಶ್ವರ್ಯಯುಕ್ತ ಜಗದೀಶ್ವರ ಅಥವಾ ಐಶ್ವರ್ಯಪ್ರಾಪಕ ಸಭಾಪತಿ ವಿದ್ವಾಂಸ! ನಿನ್ನ ಕೃಪೆ ಅಥವಾ ನಿನ್ನ ಸಹಾಯದಿಂದ ಮನುಷ್ಯರು **[ಅಭಿತಃ]** ಎಲ್ಲೆಡೆಗಳಿಂದ **[ಇದಂ]** ಈ **[ವಸು]** ಉತ್ತಮ ಧನವನ್ನು **[ಚೇಕಿತೇ]** ತಿಳಿಯುತ್ತಾರೆ. **[ಅಭಿಭೂತೇ]** ಹೇ ಶತ್ರುಗಳನ್ನು ಪರಾಜಯ ಮಾಡುವವನೇ! ಯಾವ ಕಾರಣದಿಂದ ನೀನು **[ತ್ವಾಯತಃ]** ನಿನ್ನ ಅಥವಾ ಅವರ ಆತ್ಮದ ಇಚ್ಛೆಯನ್ನು ಮಾಡುತ್ತಾ **[ಜರಿತುಃ]** ಸ್ತುತಿ ಮಾಡುವ ಧಾರ್ಮಿಕ ಭಕ್ತ ಜನರ **[ಕಾಮಂ]** ಇಷ್ಟ ಸಿದ್ಧಿಯನ್ನು **[ಆಭರ]** ಪೂರ್ಣಗೊಳಿಸುವಂತಾಗಲಿ. **[ಅತಃ]** ಈ ಪುರುಷಾರ್ಥದಿಂದ ನಿನ್ನನ್ನು **[ಸಂಗೃಭ್ಯ]** ಗ್ರಹಿಸಿ ನಾನು ವರ್ತಿಸುತ್ತೇನೆ ಮತ್ತು ನೀನು ನನ್ನ ಎಲ್ಲ ಕಾಮನೆಗಳನ್ನು ಪೂರ್ಣಗೊಳಿಸು. ನಿನ್ನನ್ನು ಬಯಸುತ್ತಾ ಸ್ತುತಿ ಮಾಡುವ ನನ್ನ ಇಷ್ಟಸಿದ್ಧಿಯನ್ನು **[ಮೂನಯೀಃ]** ಎಂದಿಗೂ ಕ್ಷೀಣಗೊಳಿಸದಿರು.

ಭಾವಾರ್ಥ:- ಮನುಷ್ಯರು ನಿಶ್ಚಯವಾಗಿಯೂ ಪರಮೇಶ್ವರ ಅಥವಾ ವಿದ್ವಾನ್ ಮನುಷ್ಯನ ಸಂಸರ್ಗವಿಲ್ಲದೆ ಯಾವುದೇ ಮನುಷ್ಯನು ಇಷ್ಟಸಿದ್ಧಿಯನ್ನು ಪೂರ್ಣಗೊಳಿಸಲು ಯೋಗ್ಯನಾಗುವುದಿಲ್ಲ. ಇದರಿಂದ ಇವನನ್ನೇ ಉಪಾಸನೆ ಅಥವಾ ವಿದ್ವಾಂಸನಾದವನ ಸತ್ಸಂಗವನ್ನು ಮಾಡಿ ಇಷ್ಟಸಿದ್ಧಿಯನ್ನು ಸಂಪಾದಿಸಿಕೊಳ್ಳಬೇಕು.

ಮನುಷ್ಯನು ವ್ಯಾವಹಾರಿಕ ಮತ್ತು ಪಾರಮಾರ್ಥಿಕ ಆನಂದವನ್ನು ಹೇಗೆ ಪಡೆಯುತ್ತಾನೆ ಎಂಬುದನ್ನು ತಿಳಿಸಲಾಗಿದೆ.

ಏಭಿರ್ದ್ಯುಭಿಃ ಸುಮನಾ ಏಭಿರಿಂದುಭಿ-ರ್ನಿರುಂಧಾನೋ ಅಮತಿಂ ಗೋಭಿರಶ್ವಿನಾ ।
ಇಂದ್ರೇಣ ದಸ್ಯುಂ ದರಯಂತ ಇಂದುಭಿ-ರ್ಯುತದ್ವೇಷಸಃ ಸಮಿಷಾ ರಭೇಮಹಿ॥೪॥

ಪದಾರ್ಥ:- ನಾವುಗಳು ಯಾವ **[ಅಮತಿಂ]** ವಿಜ್ಞಾನ ಅಥವಾ ಸುಖದಿಂದ ಅವಿದ್ಯೆ, ದಾರಿದ್ಯ ಹಾಗೂ ಸುಂದರರೂಪವನ್ನು **[ನಿರುಂಧಾನಃ]** ನಿರೋಧಿಸಿ ಅಥವಾ ಗ್ರಹಣ ಮಾಡುತ್ತಾ **[ಸುಮನಾಃ]** ಉತ್ತಮ ವಿಜ್ಞಾನಯುಕ್ತ ಸಭಾಧ್ಯಕ್ಷನ ಪ್ರಾಪ್ತಿಯನ್ನು ಮಾಡಿ ಅವನ ಸಹಾಯದಿಂದ ಅಥವಾ **[ಏಭಿಃ]** ಈ **[ದ್ಯುಭಿಃ]** ಪ್ರಕಾಶಯುಕ್ತ ದ್ರವ್ಯದ [ಏಭಿಃ] ಈ **[ಇಂದುಭಿಃ]** ಅಹ್ಲಾದಕಾರಕ ಗುಣವನ್ನು ಅಥವಾ ಪದಾರ್ಥವನ್ನು ಈ **[ಗೋಭಿಃ]** ಪ್ರಶಂಸನೀಯ ಗೋವು, ಪೃಥಿವಿಗಳಿಂದ **[ಅಶ್ವಿನಾ]** ಅಗ್ನಿ, ಜಲ, ಸೂರ್ಯ, ಚಂದ್ರ ಮೊದಲಾದ **[ಇಷಾ]** ಇಚ್ಛೆಗಳ ಅಥವಾ ಅನ್ನಾದಿ **[ಇಂದುಭಿಃ]** ಬಲಕಾರಕವಾದ ಸೋಮರಸಾದಿ ಪೇಯಗಳ **[ಇಂದ್ರೇಣ]** ವಿದ್ಯುತ್ತು ಅಥವಾ ಅವನಿಂದ ರಚಿಸಲ್ಪಟ್ಟ ವಿದಾರಣಗೊಳಿಸುವ ಶಸ್ತ್ರದಿಂದ **[ದಸ್ಯುಂ]** ಬಲಾತ್ಕಾರವಾಗಿ ಇತರರ ಧನವನ್ನು ಕಸಿದುಕೊಳ್ಳುವ ದುಷ್ಟನನ್ನು **[ದರಯಂತಃ]** ವಿದಾರಣಗೊಳಿಸುತ್ತ **[ಯುತದ್ವೇಷಸಃ]** ದ್ವೇಷದಿಂದ ಬೇರೆಯಾಗುವ ಶತ್ರುಗಳೊಂದಿಗೆ ಯುದ್ಧವನ್ನು ಸುಖವಾಗಿ **[ಸಮಾರಭೇಮಹಿ]** ಆರಂಭ ಮಾಡೋಣ.

ಭಾವಾರ್ಥ:- ಯಾವ ಸಭಾಧ್ಯಕ್ಷನು ಸಮಸ್ತ ವಿದ್ಯೆಗಳ ಶಿಕ್ಷಣವನ್ನು ಹೊಂದಿ ನಮ್ಮನ್ನು ಸುಖಿಗಳನ್ನಾಗಿಸುತ್ತಾನೋ ಅವನನ್ನು ಎಲ್ಲಾ ಮನುಷ್ಯರು ಸೇವೆಯ ಮೂಲಕ ಸತ್ಕರಿಸಬೇಕು. ಇವನ ಸಹಾಯವಿಲ್ಲದೆ ಯಾವುದೇ ಮನುಷ್ಯನು ವ್ಯಾವಹಾರಿಕ ಅಥವಾ ಪಾರಮಾರ್ಥಿಕವಾದ ಆನಂದವನ್ನು ಹೊಂದಲು ಸಮರ್ಥನಾಗಲಾರನು. ಇದರಿಂದ, ಇವನ ಸಹಾಯದಿಂದ ಎಲ್ಲರೂ ಧರ್ಮಯುಕ್ತ ಕಾರ್ಯಗಳನ್ನು ಆರಂಭಿಸಿ ಸುಖಿಗಳಾಗಬೇಕು.

ಯಾರ ಸಹಾಯದಿಂದ ಮನುಷ್ಯರು ಉನ್ನತಿಯನ್ನು ಸಾಧಿಸಬೇಕು ಎಂಬುದ್ದನ್ನು ತಿಳಿಸಲಾಗಿದೆ

ಸಮಿಂದ್ರ ರಾಯಾ ಸಮಿಷಾ ರಭೇಮಹಿ ಸಂ ವಾಜೇಭಿಃ ಪುರುಶ್ಚಂದ್ರೈರಭಿದ್ಯುಭಿಃ ।
ಸಂ ದೇವ್ಯಾ ಪ್ರಮತ್ಯಾ ವೀರಶುಷ್ಮಯಾ ಗೋಅಗ್ರಯಾಽಶ್ವಾವತ್ಯಾ ರಭೇಮಹಿ ॥೫॥

ಪದಾರ್ಥ:- [ಇಂದ್ರ] ಹೇ ಸಭಾಧ್ಯಕ್ಷನೇ! ಯಾವ ರೀತಿ ನಾವು ನಿನ್ನ ಸಹಾಯದಿಂದ **[ಸಂ ರಾಯಾ]** ಉತ್ತಮ ರಾಜ್ಯಲಕ್ಷ್ಮಿಯನ್ನು **[ಸಮಿಷಾ]** ಧರ್ಮದ ಇಚ್ಛೆಯನ್ನು ಅಥವಾ ಅನ್ನಾದಿಗಳನ್ನು **[ಅಭಿದ್ಯುಭಿಃ]** ವಿದ್ಯೆ, ವ್ಯವಹಾರ ಮತ್ತು ಪ್ರಕಾಶಯುಕ್ತವಾದ **[ಪುರುಶ್ಚಂದ್ರೈಃ]** ಬಹಳ ಅಹ್ಲಾದಕಾರಕ ಸುವರ್ಣ ಮತ್ತು ಉತ್ತಮವಾದ ಬೆಳ್ಳಿ ಮೊದಲಾದ ಧಾತುಗಳ **[ಸಂವಾಜೇಭಿಃ]** ವಿಜ್ಞಾನಾದಿ ಗುಣ ಅಥವಾ ಸಂಗ್ರಾಮ ಹಾಗೂ **[ಪ್ರಮತ್ಯಾ]** ಉತ್ತಮ ಮತಿಯುಕ್ತ **[ದೇವ್ಯಾ]** ದಿವ್ಯಗುಣಯುಕ್ತ ವಿದ್ಯೆಯಿಂದ ಕೂಡಿದ ಸೇನೆಯಿಂದ **[ಗೋಅಗ್ರಯಾ]** ಶ್ರೇಷ್ಠ ಇಂದ್ರಿಯ, ಗೋವು ಮತ್ತು ಪೃಥಿವಿಯಿಂದ ಕೂಡಿದ **[ವೀರಶುಷ್ಮಯಾ]** ಶೂರ-ವೀರ ಯೋಧರ ಬಲದಿಂದ ಕೂಡಿದ **[ಅಶ್ವಾವತ್ಯಾ]** ಪ್ರಶಂಸನೀಯವಾದ ವೇಗ-ಬಲಯುಕ್ತವಾದ ಕುದುರೆಗಳನ್ನುಳ್ಳ ಸೇನೆಯೊಂದಿಗೆ ಇರುತ್ತಾ ಶತ್ರುಗಳೊಂದಿಗೆ **[ಸಂರಭೇಮಹಿ]** ಉತ್ತಮ ರೀತಿಯಲ್ಲಿ ಸಂಗ್ರಾಮವನ್ನು ಮಾಡೋಣ. ಈ ಎಲ್ಲ ಕಾರ್ಯಗಳನ್ನು ಮಾಡಿ ಲೌಕಿಕ ಮತ್ತು ಪಾರಮಾರ್ಥಿಕ ಸುಖಗಳನ್ನು **[ರಭೇಮಹಿ]** ಸಿದ್ಧಗೊಳಿಸೋಣ.

ಭಾವಾರ್ಥ:- ಯಾವನೇ ಮನುಷ್ಯನು ವಿದ್ವಾಂಸನ ಸಹಾಯವಿಲ್ಲದೆ ಉತ್ತಮ ರೀತಿಯ ಪುರುಷಾರ್ಥದ ಸಿದ್ಧಿಯನ್ನು ಹೊಂದಲಾರನು. ನಿಶ್ಚಯವಾಗಿಯೂ ಬಲ, ಆರೋಗ್ಯಪೂರ್ಣವಾದ ಸಾಮಗ್ರಿಗಳನ್ನು ಮತ್ತು ಉತ್ತಮ ಶಿಕ್ಷಣದಿಂದ ಕೂಡಿದ ಧಾರ್ಮಿಕ ಶೂರ-ವೀರರಿಂದ ಕೂಡಿದ ಚತುರಂಗಿಣಿ ಅಂದರೆ ಚತುರಂಗಬಲದ ಸೇನೆ ಇಲ್ಲದೆ ಶತ್ರುಗಳ ಪರಾಜಯವನ್ನು ಸಾಧಿಸಿ ವಿಜಯವನ್ನು ಹೊಂದಲು ಸಮರ್ಥನಾಗಲಾರನು. ಆದುದರಿಂದ ಮನುಷ್ಯರು ಈ ಕಾರ್ಯಗಳಲ್ಲಿ ಉನ್ನತಿಯನ್ನು ಸಾಧಿಸಬೇಕು.

ಮನುಷ್ಯರ ಕರ್ತವ್ಯವೇನೆಂಬುದನ್ನು ಇಲ್ಲಿ ತಿಳಿಸಲಾಗಿದೆ

ತೇ ತ್ವಾ ಮದಾ ಅಮದನ್ ತಾನಿ ವೃಷ್ಣ್ಯಾ ತೇ ಸೋಮಾಸೋ ವೃತ್ರಹತ್ಯೇಷು ಸತ್‌ಪತೇ ।
ಯತ್ ಕಾರವೇ ದಶ ವೃತ್ರಾಣ್ಯಪ್ರತಿ ಬರ್ಹಿಷ್ಮತೇ ನಿ ಸಹಸ್ರಾಣಿ ಬರ್ಹಯಃ ॥೬॥

ಪದಾರ್ಥ:- [ಸತ್ಪತೇ] ಹೇ ಸತ್ಪುರುಷರನ್ನು ಪಾಲನೆಮಾಡುವ ಸಭಾಧ್ಯಕ್ಷನೇ! **[ಯತ್]** ಯಾವ ನೀನು **[ಬರ್ಹಿಷ್ಮತೇ]** ವಿಜ್ಞಾನಯುಕ್ತವಾದ **[ಕಾರವೇ]** ಕರ್ಮವನ್ನು ಮಾಡುವ ಮನುಷ್ಯನಿಗಾಗಿ **[ವೃತ್ರಾಣಿ]** ಶತ್ರುಗಳನ್ನು ತಡೆಯುವ ಕರ್ಮವು **[ದಶಸಹಸ್ರಾಣಿ]** ಹತ್ತು ಸಾವಿರ ಅರ್ಥಾತ್ ಅಸಂಖ್ಯಾತ ಸೇನೆಗಳ **[ಅಪ್ರತಿ]** ಹೇಗಿದೆಯೋ ಅದಕ್ಕೆ ಪ್ರತಿಕೂಲವಾದ ಕರ್ಮಗಳನ್ನು **[ನಿಬರ್ಹಯಃ]** ನಿರಂತರ ವೃದ್ಧಿಪಡಿಸಿರಿ. ಆ ನಿಮ್ಮ ಆಶ್ರಿತರಾಗಿ **[ತೇ]** ಅವರು **[ಸೋಮಾಸಃ]** ಉತ್ತಮೋತ್ತಮ ಪದಾರ್ಥಗಳನ್ನು ಉತ್ಪನ್ನ ಮಾಡುವ **[ಮದಾಃ]** ಆನಂದಿತಗೊಳಿಸುವ ಶೂರ-ವೀರ ಧಾರ್ಮಿಕ ವಿದ್ವಾಂಸರು **[ತ್ವಾ]** ನಿನ್ನನ್ನು **[ವೃತ್ರಹತ್ಯೇಷು]** ಶತ್ರುಗಳನ್ನು ಕೊಲ್ಲಲು ಯೋಗ್ಯವಾದ ಸಂಗ್ರಾಮಗಳಲ್ಲಿ **[ತಾನಿ ವೃಷ್ಣ್ಯಾ]** ಆ ಸುಖವರ್ಷಕವಾದ ಉತ್ತಮಮೋತ್ತಮ ಕರ್ಮಗಳನ್ನು ಆಚರಿಸುತ್ತಾ **[ಅಮದನ್]** ಪ್ರಸನ್ನರಾಗುತ್ತಾರೆ.

ಭಾವಾರ್ಥ:- ಸತ್ಪುರುಷರ ಸಂಗವನ್ನು ಮಾಡುತ್ತ ಅನೇಕ ಸಾಧನಗಳನ್ನು ಹೊಂದಿ ಆನಂದವನ್ನನುಭವಿಸುವುದು ಎಲ್ಲ ಮನುಷ್ಯರ ಕರ್ತವ್ಯವಾಗಬೇಕು.

ದುಷ್ಟದಮನವನ್ನು ಹೇಗೆ ಸಾಧಿಸಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಯುಧಾ ಯುಧಮುಪ ಘೇದೇಷಿ ಧೃಷ್ಣುಯಾ ಪುರಾ ಪುರಂ ಸಮಿದಂ ಹಂಸ್ಯೋಜಸಾ ।
ನಮ್ಯಾ ಯದಿಂದ್ರ ಸಖ್ಯಾ ಪರಾವತಿ ನಿಬರ್ಹಯೋ ನಮುಚಿಂ ನಾಮ ಮಾಯಿನಮ್ ॥೭॥

ಪದಾರ್ಥ:- [ಇಂದ್ರ] ಹೇ ಸಭಾ-ಸೇನಾಧ್ಯಕ್ಷನೇ! **[ಯತ್]** ಯಾವ ಕಾರಣದಿಂದ ನೀನು **[ಧೃಷ್ಣುಯಾ]** ದೃಢತೆ ಮೊದಲಾದ ಗುಣಗಳಿಂದ ಕೂಡಿದ **[ಸಖ್ಯಾ]** ಮಿತ್ರಸಮೂಹವನ್ನು **[ಯುಧಾ]** ಯುದ್ಧ ಮಾಡುವ [ಓಜಸಾ] ಬಲದೊಂದಿಗೆ [ಪುರಾ] ಮೊದಲು [ಇದಂ] ಈ [ಪುರಂ] ಶತ್ರುಗಳ ನಗರವನ್ನು [ಸಂಷಿ] ನಷ್ಟಗೊಳಿಸುವೆಯೋ ಹಾಗೂ **[ಯುದ್ಧಂ]** ಯುದ್ಧ ಮಾಡುತ್ತಿರುವ ಶತ್ರುವನ್ನು [ಇತ್] ಕೂಡ **[ಘಾ]** ನಿಶ್ಚಯವಾಗಿಯೂ [ಏಷಿ] ಪ್ರಾಪ್ತಿಸುವೆ ಮತ್ತು **[ನಭ್ಯಾ]** ಯಾವ ರೀತಿ ರಾತ್ರಿಯು ಅಂಧಕಾರದಿಂದ ಕೂಡಿ ಸಮಸ್ತ ಪದಾರ್ಥಗಳನ್ನು ಆವರಿಸಿಕೊಳ್ಳುತ್ತದೆಯೋ, ಹಾಗೆಯೇ ಅನ್ಯಾಯದಿಂದ ಅಂಧಕಾರವನ್ನುಂಟುಮಾಡುವ **[ನಾಮ]** ಪ್ರಸಿದ್ಧವಾದ **[ನಮುಚಿಂ]** ಬಿಡುಗಡೆಯಿಲ್ಲದ **[ಮಾಯಿನಂ]** ಛಲ ಕಪಟಯುಕ್ತವಾದ ದುಷ್ಟಕರ್ಮಗಳನ್ನು ಮಾಡುವ ಮನುಷ್ಯ ಅಥವಾ ಪಶು ಆದಿಗಳನ್ನು **[ಪರಾವತಿ]** ದೂರ ದೇಶದಲ್ಲಿ **[ನಿಬರ್ಹಯಾ]** ನಿಃಸಾರಣಗೊಳಿಸುತ್ತೀಯೆ. ಇದರಿಂದ ನಿನ್ನನ್ನು ಮೂರ್ಧಾಭಿಷಿಕ್ತಗೊಳಿಸಿ ನಾವುಗಳು ಸಭಾಧ್ಯಕ್ಷನ ಅಧಿಕಾರದಲ್ಲಿ ಸ್ವೀಕಾರವನ್ನು ಮಾಡಿ ರಾಜಪದವಿಯಿಂದ ಮಾನ್ಯ ಮಾಡುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾದುದೇನೆಂದರೆ ಉತ್ತಮೋತ್ತಮ ಮಿತ್ರರನ್ನು ಪಡೆದು ದುಷ್ಟಶತ್ರುಗಳನ್ನು ನಿವಾರಿಸಿ ದುಷ್ಟಶತ್ರುಗಳ ಸ್ಥಾನಗಳನ್ನು, ನೆಲೆಗಳನ್ನು ವಿದಾರಣ ಮಾಡಿ ಸಮಸ್ತ ಅನ್ಯಾಯಕಾರಿ ಮನುಷ್ಯರನ್ನು ನಿರಂತರ ಸೆರೆಯಲ್ಲಿಟ್ಟು ಶಿಕ್ಷಿಸಬೇಕು ಮತ್ತು ಧರ್ಮಯುಕ್ತವಾದ ಚಕ್ರವರ್ತಿರಾಜ್ಯವನ್ನು ಪಾಲಿಸುತ್ತಾ ಉತ್ತಮ ಐಶ್ವರ್ಯವನ್ನು ಸಿದ್ಧಗೊಳಿಸಬೇಕು.

ಯಾವುದರ ರಕ್ಷಣೆಯನ್ನು ಹೇಗೆ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ತ್ವಂ ಕರಂಜಮುತ ಪರ್ಣಯಂ ವಧೀ-ಸ್ತೇಜಿಷ್ಠಯಾತಿಥಿಗ್ವಸ್ಯ ವರ್ತನೀ ।
ತ್ವಂ ಶತಾ ವಂಗೃದಸ್ಯಾಭಿನತ್ ಪುರೋಽನಾನುದಃ ಪರಿಷೂತಾ ಋಜಿಶ್ವನಾ ॥೮॥

ಪದಾರ್ಥ:- ಹೇ ಸಭಾಧ್ಯಕ್ಷನೇ! ಯಾವ ಕಾರಣದಿಂದ **[ತ್ವಂ]** ನೀನು ಈ ಯುದ್ಧ ವ್ಯವಹಾರದಲ್ಲಿ **[ತೇಯಿಷ್ಠಯಾ]** ಅತ್ಯಂತ ತೀಕ್ಷ್ಣ ಸೇನೆಯ ಅಥವಾ ನೀತಿಯುಕ್ತ ಬಲದಿಂದ **[ಕರಂಜಂ]** ಧಾರ್ಮಿಕರಿಗೆ ದುಃಖವನ್ನು ನೀಡುವ **[ಪರ್ಣಯಂ]** ಇತರರ ವಸ್ತುವನ್ನು ದೋಚುವ ಕಳ್ಳನನ್ನು **[ಉತ]** ಕೂಡ **[ವಧೀಃ]** ಕೊಲ್ಲುವೆ ಮತ್ತು ಯಾವ **[ಅತಿಥಿಗ್ವಸ್ಯ]** ಅತಿಥಿಗಳು ಬಂದು ಹೋಗಲು **[ವರ್ತನೀ]** ಮಾಡುವ ಸತ್ಕಾರದ ಕ್ರಿಯೆಯಿದೆಯೋ, ಅದರ ರಕ್ಷಣೆ ಮಾಡು. **[ಅನಾನುದಃ]** ಅನುಕೂಲವಾಗಿ ವರ್ತಿಸದಿರುವ **[ವಗೃದಸ್ಯ]** ವಿಷ ಮೊದಲಾದ ಪದಾರ್ಥಗಳನ್ನು ನೀಡುವಂತೆ ಉಪದೇಶಿಸುವ ದುಷ್ಟಮನುಷ್ಯನ **[ಶತಾ]** ಅಸಂಖ್ಯಾತವಾದ **[ಪುರಃ]** ನಗರಗಳನ್ನು **[ಅಭಿನತ್]** ಭೇದನ ಮಾಡುತ್ತೀಯೆ ಮತ್ತು ಯಾವ **[ಪರಿಸುತಾಃ]** ಎಲ್ಲಾ ಪ್ರಕಾರದಿಂದ ಉತ್ಪನ್ನವಾದ ಪದಾರ್ಥದ **[ಋಜಿಶ್ವನ]** ಕೋಮಲ ಗುಣಯುಕ್ತವಾದ ಪ್ರಾಣಿಗಳನ್ನು ತರಬೇತಿಗೊಳಿಸುವವನಂತೆ ವ್ಯವಹರಿಸುವ ಮೂಲಕ ರಕ್ಷಿಸುತ್ತೀಯೆ. ಇದರಿಂದ ನೀನೇ ಸಭೆ ಮೊದಲಾದುವುಗಳ ಅಧ್ಯಕ್ಷನಾಗಲು ಯೋಗ್ಯನಾಗಿರುವೆ ಎಂಬುದಾಗಿ ನಾವು ನಿಶ್ಚಯಮಾಡುತ್ತೇವೆ.

ಭಾವಾರ್ಥ:- ರಾಜಪುರುಷರು ದುಷ್ಟಶತ್ರುಗಳ ಭೇದನದಿಂದ ಪೂರ್ಣ ವಿದ್ಯಾಯುಕ್ತ ಪರೋಪಕಾರಿ ಧಾರ್ಮಿಕ ಅತಿಥಿಗಳ ಸತ್ಕಾರಕ್ಕಾಗಿ ಎಲ್ಲಾ ಪದಾರ್ಥಗಳನ್ನು ರಕ್ಷಿಸಿ ಧರ್ಮಯುಕ್ತ ರಾಜ್ಯವನ್ನು ಅನುಭವಿಸಬೇಕು. ಯಾವ ರೀತಿ ನಾಯಿಯೇ ಮೊದಲಾದ ಪ್ರಾಣಿಗಳು ತಮ್ಮ ಸ್ವಾಮಿಯನ್ನು ನಿಷ್ಠೆಯಿಂದ ರಕ್ಷಿಸುತ್ತವೆಯೋ, ಆ ರೀತಿ ಬೇರಾವ ಪ್ರಾಣಿಯೂ ಮಾಡಲಾರದೋ ಅದೇ ರೀತಿ ಈ ನಾಯಿ ಮೊದಲಾದ ಪ್ರಾಣಿಗಳನ್ನು ತರಬೇತಿಗೊಳಿಸಿ ಅವುಗಳನ್ನು ರಕ್ಷಿಸುವಂತೆ ಇವೆಲ್ಲದರ ರಕ್ಷಣೆಯನ್ನು ಮಾಡಬೇಕು.

ರಾಜಪುರುಷರ ಕರ್ತವ್ಯವೇನು ಎಂಬುದನ್ನು ತಿಳಿಸಲಾಗಿದೆ.

ತ್ವಮೇತಾಞ್ಜನರಾಜ್ಞೋ ದ್ವಿರ್ದಶಾಬಂಧುನಾ ಸುಶ್ರವಸೋಪಜಗ್ಮುಷಃ ।
ಷಷ್ಟಿಂ ಸಹಸ್ರಾ ನವತಿಂ ನವ ಶ್ರುತೋ ನಿ ಚಕ್ರೇಣ ರಥ್ಯಾ ದುಷ್ಪದಾವೃಣಕ್ ॥೯॥

ಪದಾರ್ಥ:- ಹೇ ಸಭೆ ಮತ್ತು ಸೇನೆಯ ಅಧ್ಯಕ್ಷನೇ! ಯಾವ ರೀತಿ **[ಶ್ರುತಃ]** ಶ್ರವಣ ಮಾಡುವ **[ತ್ವಂ]** ನೀನು **[ಏತಾನ್]** ಈ **[ಅಬಂಧುನಾ]** ಮಿತ್ರರಹಿತರಾದ ಅನಾಥರ ಅಥವಾ **[ಸುಶ್ರವಸಾ]** ಉತ್ತಮ ಶ್ರವಣ-ಅನ್ನಯುಕ್ತ ಮಿತ್ರರೊಂದಿಗಿರುವ **[ಉಪಜಗ್ಮುಷಃ]** ಹತ್ತಿರವಿರುವ **[ಷಷ್ಟಿಂ]** ಅರವತ್ತು **[ನವತಿಂ]** ತೊಂಬತ್ತು **[ನವಾ]** ಒಂಬತ್ತು **[ದಶ ಸಹಸ್ರಾಣಿ]** ಹತ್ತು ಸಾವಿರ **[ಜನರಾಜ್ಞಃ]** ಧಾರ್ಮಿಕ ರಾಜಪುರುಷರಾದ ಮನುಷ್ಯರನ್ನು **[ದುಷ್ಪದಾ]** ಕಷ್ಟಪಟ್ಟು ಸಂಪಾದಿಸಲು ಯೋಗ್ಯವಾದ **[ರಥ್ಯಾ]** ರಥವನ್ನು ಪ್ರಾಪ್ತಗೊಳಿಸುವ **[ಚಕ್ರೇಣ]** ಶತ್ರು ವಿಶೇಷ ಅಥವಾ ಚಕ್ರಾದಿ ಅಂಗಯುಕ್ತ ವಾಹನಸಮೂಹದಿಂದ **[ದ್ವಿಃ]** ಎರಡು ಬಾರಿ **[ನ್ಯವೃಣಕ್]** ನಿತ್ಯ ದುಃಖದಿಂದ ಬೇರೆ ಮಾಡುವೆ ಮತ್ತು ದುಷ್ಟರನ್ನು ದೂರಮಾಡುವೆಯೋ ಅದೇ ರೀತಿ ನೀನೂ ಸಹ ಪಾಪಾಚರಣೆಯಿಂದ ದೂರವಿರು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಚಕ್ರವರ್ತಿ ರಾಜನು ಮಾಂಡಲಿಕ ಅಥವಾ ಮಹಾಮಾಂಡಲಿಕ ರಾಜರನ್ನು, ಭೃತ್ಯ ಗೃಹಸ್ಥರನ್ನು ಮತ್ತು ವಿರಾಗಿಗಳನ್ನು ಪ್ರಸನ್ನಗೊಳಿಸಿ ಶರಣಾಗತರಾಗಿ ಬಂದವರನ್ನು ರಕ್ಷಿಸಿ ಧರ್ಮಯುಕ್ತವಾದ ಸಾರ್ವಭೌಮರಾಜ್ಯವನ್ನು ಯಥಾವತ್ತಾಗಿ ಪಾಲನೆ ಮಾಡಬೇಕು. ಇಲ್ಲಿ ಬಂದಿರುವ ಹತ್ತರಿಂದ ಪ್ರಾರಂಭಿಸಿ ಎಲ್ಲಾ ಸಂಖ್ಯಾವಾಚಿ ಶಬ್ಧಗಳು ಉಪಲಕ್ಷಣಗಳಾಗಿವೆ. ಇದರಿಂದ ರಾಜಪುರುಷರಾದವರು ಎಲ್ಲರನ್ನು ಯಥಾವತ್ತಾಗಿ ರಕ್ಷಣೆ ಹಾಗೂ ದುಷ್ಟರಿಗೆ ದಂಡನೆಯನ್ನು ನೀಡಬೇಕು.

ರಾಜಪುರುಷರು ಏನು ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ

ತ್ವಮಾವಿಥ ಸುಶ್ರವಸಂ ತವೋತಿಭಿ-ಸ್ತವ ತ್ರಾಮಭಿರಿಂದ್ರ ತೂರ್ವಯಾಣಮ್ ।
ತ್ವಮಸ್ಮೈ ॢ ಕುತ್ಸಮತಿಥಿಗ್ವಮಾಯುಂ ಮಹೇ ರಾಜ್ಞೇ ಯೂನೇ ಅರಂಧನಾಯಃ ॥೧೦॥

ಪದಾರ್ಥ:- [ಇಂದ್ರ] ಹೇ ಸಭಾಸೇನಾಧ್ಯಕ್ಷ! **[ತ್ವಂ]** ನೀನು **[ಅಸ್ಮೈ ॢ]** ಈ **[ಮಹೇ]** ಮಹಾ ಉತ್ತಮೋತ್ತಮ ಗುಣಯುಕ್ತವಾದ **[ಯೂನೇ]** ಯುವಾವಸ್ಥೆಯಲ್ಲಿ ಇರುವ **[ರಾಜ್ಞೇ]** ನ್ಯಾಯ, ವಿನಯ ಮತ್ತು ವಿದ್ಯಾದಿ ಗುಣಗಳಿಂದ ದೇದೀಪ್ಯಮಾನನಾದ ರಾಜನಿಗಾಗಿ **[ತವಾ]** ನಿನ್ನ **[ಊತಿಭಿಃ]** ರಕ್ಷಣಾದಿ ಕರ್ಮಗಳಿಂದ ಸೇನೆ ಮೊದಲಾದವುಗಳ ಸಹಿತ ಮತ್ತು **[ತವಾ]** ನಿನ್ನ **[ತ್ರಾಮಭಿಃ]** ರಕ್ಷಣೆ ಮಾಡುವ ಧಾರ್ಮಿಕ ವಿದ್ವಾಂಸರಿಂದ ರಕ್ಷಿಸಲ್ಪಟ್ಟ ಯಾವ **[ಅತಿಥಿಗ್ವಂ]** ಅತಿಥಿಗಳನ್ನು ಹೊಂದುವ, ಹೊಂದುವಂತೆ ಮಾಡುವ **[ತೂರ್ವಯಾಣಂ]** ಶತ್ರು ಬಲವನ್ನು ಹಿಂಸಿಸುವ ಯಾನಗಳ ಸಹಿತ **[ಆಯುಂ]** ಜೀವನಯುಕ್ತವಾದ **[ಸುಶ್ರವಸಂ]** ಉತ್ತಮ ಶ್ರವಣ ಹಾಗೂ ಅನ್ನಾದಿಗಳಿಂದ ಕೂಡಿದ ಮನುಷ್ಯರನ್ನು **[ಅರಂಧನಾಯಃ]** ಪೂರ್ಣ ಧನಯುಕ್ತ ಮನುಷ್ಯನಂತೆ ಆಚರಿಸುವೆ ಮತ್ತು **[ತ್ವಂ]** ನೀನು ಯಾವ **[ಕುತ್ಸಂ]** ವಜ್ರದಂತಿರುವ ವೀರಪುರುಷನ **[ಆವಿಥ]** ರಕ್ಷಣೆ ಮಾಡುತ್ತೀಯೋ, ಅವನಿಗೆ ಸ್ವಲ್ಪವೂ ದುಃಖವಾಗುವುದಿಲ್ಲ.

ಭಾವಾರ್ಥ:- ರಾಜಪುರುಷರಿಗೆ ಯೋಗ್ಯವಾದುದೇನೆಂದರೆ, ಶತ್ರುಗಳನ್ನು ನಿವಾರಿಸಿ ಎಲ್ಲರ ರಕ್ಷಣೆಯನ್ನು ಮಾಡಿ ಅವರನ್ನು ಸರ್ವಥಾ ಸುಖಯುಕ್ತರನ್ನಾಗಿಸಬೇಕು ಹಾಗೂ ನಿಶ್ಚಿತವಾಗಿಯೂ ರಾಜ್ಯೋನ್ನತಿ ಎಲ್ಲ ಲಕ್ಷ್ಮಿ ॢಯೊಂದಿಗೆ ಸದಾ ಕೂಡಿರಬೇಕು. ಅಲ್ಲದೆ ಉತ್ತಮ ಶಿಕ್ಷಣದಿಂದ ಸಮಸ್ತ ಶಸ್ತ್ರಾಸ್ತ್ರ ವಿದ್ಯೆಗಳಿಂದ ಕೂಡಿದ ಕುಶಲರೂ, ನಿಪುಣರೂ ಆದ ವಿದ್ವಾಂಸರುಗಳನ್ನು ಹೊಂದಿ ಇವರಿಂದ ಪ್ರಜೆಗಳ ನಿರಂತರ ರಕ್ಷಣೆಯನ್ನು ಮಾಡಬೇಕು.

ಸಜ್ಜನರ ಕರ್ತವ್ಯ-ಕರ್ಮಗಳನ್ನು ತಿಳಿಸಲಾಗುತ್ತದೆ

ಯ ಉದೃಚೀಂದ್ರ ದೇವಗೋಪಾಃ ಸಖಾಯಸ್ತೇ ಶಿವತಮಾ ಅಸಾಮ ।
ತ್ವಾಂ ಸ್ತೋಷಾಮ ತ್ವಯಾ ಸುವೀರಾ ದ್ರಾಘೀಯ ಆಯುಃ ಪ್ರತರಂ ದಧಾನಾಃ ॥೧೧॥

ಪದಾರ್ಥ:- [ಇಂದ್ರ] ಹೇ ಸಭಾಸೇನಾಧ್ಯಕ್ಷನೇ! **[ತೇ]** ನಿನ್ನ **[ದೇವಗೋಪಾಃ]** ರಕ್ಷಕ ವಿದ್ವಾಂಸರ ಅಥವಾ ದಿವ್ಯ ಗುಣ ಕರ್ಮಗಳ ರಕ್ಷಣೆ ಮಾಡುವ **[ಶಿವತಮಾಃ]** ಅತಿಶಯವಾಗಿ ಕಲ್ಯಾಣ ಗುಣಗಳಿಂದ ಕೂಡಿದ **[ಸಖಾಯಃ]** ಪರಸ್ಪರ ಮಿತ್ರರಾಗಿ ನಾವು **[ಅಸಾಮ]** ಆಗೋಣ. **[ತ್ವಯಾ]** ನಿನ್ನ ಜೊತೆಯಲ್ಲಿ ರಕ್ಷಣೆ ಹಾಗೂ ಶಿಕ್ಷಣವನ್ನು ಪಡೆದಿರುವ **[ಸುವೀರಾಃ]** ಉತ್ತಮ ವೀರಯುಕ್ತರು **[ಪ್ರತರಂ]** ದುಃಖವನ್ನು ದೂರಮಾಡುತ್ತಾರೆ. **[ದ್ರಾಘೀಯಃ]** ಅತ್ಯಂತ ವಿಸ್ತಾರಯುಕ್ತವಾದ ನೂರು ವರ್ಷಗಳಿಗಿಂತ ಹೆಚ್ಚಿನ **[ಆಯುಃ]** ಆಯಸ್ಸನ್ನು **[ದಧಾನಾಃ]** ಧಾರಣೆ ಮಾಡುತ್ತಾ **[ಉದೃಚಿ]** ಉತ್ತಮ ಋಚಾಯುಕ್ತ ಅಧ್ಯಯನ ವ್ಯವಹಾರದಲ್ಲಿ **[ತ್ವಾಂ]** ಶುಭ ಲಕ್ಷಣಯುಕ್ತನಾದ ನಿನ್ನನ್ನು **[ಸ್ತೋಷಾಮ]** ಸ್ತುತಿಸೋಣ.

ಭಾವಾರ್ಥ:- ಸಮಸ್ತ ಮಾನವರು ಪರಸ್ಪರ ನಿಶ್ಚಿತವಾದ ಮೈತ್ರಿಯನ್ನು ಸಮಸ್ತ ಸ್ತ್ರೀ ಪುರುಷರು ಉತ್ತಮ ವಿದ್ಯಾಯುಕ್ತವಾದ ಜಿತೇಂದ್ರಿಯತ್ವ ಮೊದಲಾದ ಗುಣಗಳನ್ನು ಧಾರಣ ಮಾಡಿ ಮತ್ತು ಮಾಡಿಸಿ ಪೂರ್ಣ ಆಯುಷ್ಯವನ್ನು ಅನುಭವಿಸಬೇಕು.

ಈ ಸೂಕ್ತದಲ್ಲಿ ವಿದ್ವಾನ್ ಸಭಾಧ್ಯಕ್ಷ ಹಾಗೂ ಪ್ರಜೆಗಳು ಪರಸ್ಪರ ಪ್ರೀತಿಯಿಂದ ವ್ಯವಹರಿಸಿ ಸುಖವನ್ನು ಹೊಂದಬೇಕು ಎಂಬುದನ್ನು ತಿಳಿಸಲಾಗಿದೆ. ಇದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂಬುದನ್ನು ತಿಳಿಯಬೇಕು.

ಐವತ್ತಮೂರನೆಯ ಸೂಕ್ತ ಸಮಾಪ್ತ

ಸೂಕ್ತ ೫೪

ಮಂತ್ರಸಂಖ್ಯೆ ೧೧ । ಋಷಿಃ - ಸವ್ಯ ಆಂಗೀರಸಃ । ದೇವತಾ - ಇಂದ್ರಃ । ಛಂದಃ - ಜಗತೀ, ೬, ೮-೯, ೧೧ ತ್ರಿಷ್ಟುಪ್ । ಸ್ವರಃ - ೧-೫, ೭, ೧೦ ನಿಷಾದಃ, ೬, ೮, ೯, ೧೧ ಧೈವತಃ.

ಈಶ್ವರನ ಉಪಾಸನೆಯಿಂದ ದುಃಖ ನಿವೃತ್ತಿಯ ವಿವರವನ್ನು ನೀಡಲಾಗಿದೆ

ಮಾ ನೋ ಅಸ್ಮಿನ್ ಮಘವನ್ ಪೃತ್ಸ್ವಂಹಸಿ ನಹಿ ತೇ ಅಂತಃ ಶವಸಃ ಪರೀಣಶೇ ।
ಅಕ್ರಂದಯೋ ನದ್ಯೋ೩ ರೋರುವದ್ ವನಾ ಕಥಾ ನ ಕ್ಷೋಣೀರ್ಭಿಯಸಾ ಸಮಾರತ ॥೧॥

ಪದಾರ್ಥ:- **[ಮಘವನ್]** ಹೇ ಉತ್ತಮ ಐಶ್ವರ್ಯಯುಕ್ತ ಜಗದೀಶ್ವರ! ನೀನು **[ಪೃತ್ಸು]** ಸೇನೆಗಳನ್ನು **[ಅಸ್ಮಿನ್]** ಈ ಜಗತ್ತಿನ ಹಾಗೂ **[ಪರೀಣಶೇ]** ಎಲ್ಲ ರೀತಿಯಿಂದ ನಾಶಗೊಳಿಸುವ **[ಅಂಹಸಿ]** ಪಾಪದಲ್ಲಿ ನಮ್ಮನ್ನು **[ಮಾ ಕ್ರಂದಯಃ]** ಸಿಲುಕಿಸಬೇಡ. ಯಾವ **[ತೇ]** ನಿನ್ನ **[ಶವಸಃ]** ಬಲದ **[ಅಂತಃ]** ಕೊನೆಯನ್ನು ಯಾವನೂ ಸಹ **[ನ ಹಿ]** ಹೊಂದಲಾರನೋ. ಆ ನೀನು **[ನದ್ಯಃ]** ನದಿಗಳಂತೆ ನಮ್ಮನ್ನು ಭ್ರಮೆಗೊಳಿಸಬೇಡ. **[ಭಿಯಸಾ]** ಭಯದಿಂದ **[ಮಾರೋರುವತ್]** ಪದೇಪದೇ ರೋದನಕ್ರೀಡು ಮಾಡಬೇಡ. ಯಾವ ನೀನು **[ಕ್ಷೋಣೀಃ]** ಬಹು ಗುಣಯುಕ್ತ ಪೃಥಿವಿಯ ನಿರ್ಮಾಣ ಮತ್ತು ಧಾರಣೆಯನ್ನು ಮಾಡಲು ಸಮರ್ಥನಾಗಿರುವೆ. ಆದುದರಿಂದ ಮನುಷ್ಯರಾದವರು ನಿನ್ನನ್ನು **[ಕಥಾ]** **[ನ]** ಏಕೆ ತಾನೆ **[ಸಮಾರತ]** ಪ್ರಾಪ್ತರಾಗರು?

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಯಾವ ಪರಮೇಶ್ವರನು ಅನಂತನಾದುದರಿಂದ ಸತ್ಯ ಪ್ರೇಮದೊಂದಿಗೆ ಅವನ ಉಪಾಸನೆಯನ್ನು ಮಾಡಿ, ದುಃಖದ ಉತ್ಪತ್ತಿಯನ್ನು ಮಾಡುವ ಅಧರ್ಮಮಾರ್ಗದಿಂದ ನಿವೃತ್ತರನ್ನಾಗಿಸಿ ಮನುಷ್ಯರನ್ನು ಸುಖಿಗಳನ್ನಾಗಿ ಮಾಡುತ್ತಾನೋ, ಅವನ ಅನಂತ ಸ್ವರೂಪ ಗುಣಗಣಗಳನ್ನು ಹೊಂದಿರುವುದರಿಂದ ಅವನ ಕೊನೆಯನ್ನು ಯಾರು ಗ್ರಹಿಸಲಾರರು. ಇದರಿಂದ ಆ ಈಶ್ವರನ ಉಪಾಸನೆಯನ್ನು ತ್ಯಜಿಸಿ ಯಾವ ಅಭಾಗ್ಯರು ತಾನೆ ಇತರರ ಉಪಾಸನೆಯನ್ನು ಮಾಡಿಯಾರು?

ಮನುಷ್ಯರಿಂದ ಸೇವನೀಯವಾದ ಗುಣಗಳು ಯಾವುವು?

ಅರ್ಚಾ ಶಕ್ರಾಯ ಶಾಕಿನೇ ಶಚೀವತೇ ಶೃಣ್ವಂತಮಿಂದ್ರಂ ಮಹಯನ್ನಭಿ ಷ್ಟುಹಿ ।
ಯೋ ಧೃಷ್ಣುನಾ ಶವಸಾ ರೋದಸೀ ಉಭೇ ವೃಷಾ ವೃಷತ್ವಾ ವೃಷಭೋ ನ್ಯೃಂಜತೇ ॥೨॥

ಪದಾರ್ಥ:- ಹೇ ಮನುಷ್ಯರೇ! ನೀವು, ಯಾವ ರೀತಿ [**ವೃಷಾ**] ಜಲವನ್ನು ವರ್ಷಿಸುವ ಮತ್ತು [**ವೃಷಭಃ**] ಮಳೆಯ ಕಾರಣದಿಂದ ಮೋಡಗಳನ್ನು ಕರಗಿಸುವ ಸೂರ್ಯನು [**ವೃಷತ್ವಾ**] ಸುಖಿಗಳ ವರ್ಷಣೆಗಾಗಿ ಮತ್ತು [**ಧೃಷ್ಣುನಾ**] ದೃಢತೆ ಮೊದಲಾದ ಗುಣಗಳಿಂದ ಕೂಡಿದ [**ಶವಸಾ**] ಆಕರ್ಷಕ ಬಲದಿಂದ [**ಉಭೇ**] ಎರಡೂ [**ರೋದಸೀ**] ದ್ಯಾವಾ ಪೃಥಿವಿಗಳನ್ನು [**ನ್ಯೃಂಜತೇ**] ನಿರಂತರವಾಗಿ ಪ್ರಸಿದ್ಧಿಗೊಳಿಸುತ್ತಾನೋ, ಹಾಗೆಯೇ [**ಯಃ**] ಯಾವ ನೀನು ರಾಜ್ಯದ ಯಥಾಯೋಗ್ಯ ವ್ಯವಸ್ಥೆಯನ್ನು ಮಾಡುತ್ತೀಯೋ ಆ [**ಶಾಕಿನೇ**] ಪ್ರಶಂಸನೀಯವಾದ ಶಕ್ತಿ ಮೊದಲಾದ ಗುಣಗಳಿಂದ ಕೂಡಿದ [**ಶಚೀವತೇ**] ಪ್ರಶಂಸನೀಯ ಬುದ್ಧಿವಂತನು [**ಶಕ್ರಾಯ**] ಸಮರ್ಥನೆಗಾಗಿ [**ಅರ್ಚ**] ಸತ್ಕಾರ ಮಾಡಿ ಆ ಎಲ್ಲದರ ನ್ಯಾಯವನ್ನು [**ಶೃಣ್ವಂತಂ**] ಶ್ರವಣಮಾಡುವ [**ಇಂದ್ರಂ**] ಪ್ರಶಂಸನೀಯ ಐಶ್ವರ್ಯಯುಕ್ತ ಸಭಾಧ್ಯಕ್ಷನ [**ಮಹಯನ್**] ಸತ್ಕಾರವನ್ನು ಮಾಡುತ್ತಾ [**ಅಭಿಷ್ಟುಹಿ**] ಗುಣಗಳ ಪ್ರಶಂಸೆಯನ್ನು ಮಾಡುವವರಾಗಿರಿ.

ಭಾವಾರ್ಥ:- ಯಾವ ಗುಣಗಳ ಅಧಿಕತೆ ಉಂಟಾಗುವುದರಿಂದ ಸಾರ್ವಭೌಮ ಸಭಾಧ್ಯಕ್ಷನು ಎಲ್ಲರಿಗೂ ಧರ್ಮದಿಂದ ಶಿಕ್ಷಣವನ್ನು ನೀಡಿ ಧರ್ಮದ ನಿಯಮಗಳನ್ನು ಸ್ಥಾಪಿಸುತ್ತಾನೋ, ಆ ಗುಣಗಳನ್ನೇ ಎಲ್ಲ ಮನುಷ್ಯರೂ ಸೇವಿಸಬೇಕು ಅಥವಾ ಆಶ್ರಯಿಸಬೇಕು.

ಪ್ರಜೆಗಳು ಎಂತಹ ರಾಜ್ಯವನ್ನು ಸಂಪಾದಿಸಬೇಕು?

ಅರ್ಚಾ ದಿವೇ ಬೃಹತೇ ಶೂಷ್ಯಗ್ಂ ವಚಃ ಸ್ವಕ್ಷತ್ರಂ ಯಸ್ಯ ಧೃಷತೋ ಧೃಷನ್ಮನಃ ।
ಬೃಹಚ್ಛ್ರವಾ ಅಸುರೋ ಬರ್ಹಣಾ ಕೃತಃ ಪುರೋ ಹರಿಭ್ಯಾಂ ವೃಷಭೋ ರಥೋ ಹಿ ಷಃ ॥೩॥

ಪದಾರ್ಥ:- ಹೇ ವಿದ್ವಾನ್ ಪುರುಷ! ನೀನು [ಯಸ್ಯ] ಯಾವ [ಧೃಷತಃ] ಅಧಾರ್ಮಿಕ ದುಷ್ಟರನ್ನು ಕರ್ಮಗಳಿಗನುಸಾರ ಫಲವನ್ನು ಪ್ರಾಪ್ತಿಗೊಳಿಸುವ ಸಭಾಧ್ಯಕ್ಷನ [ಧೃಷತ್] ದೃಢಕರ್ಮವನ್ನು ಮಾಡುವ [ಮನಃ] ಕ್ರಿಯಾಸಾಧಕವಾದ ವಿಜ್ಞಾನವನ್ನು [ಹಿ] ನಿಶ್ಚಯಗೊಳಿಸಿರುವೆಯೋ ಅಂತಹ [ಬೃಹಚ್ಛ್ರವಾಃ] ಮಹಾ ಶ್ರವಣಯುಕ್ತವಾದ [ಅಸುರಃ] ಪ್ರಜ್ಞೆಯನ್ನು ನೀಡುವ [ಪುರಃ] ಮೊದಲಿನ [ಹರಿಭ್ಯಾಂ] ಹರಣ-ಆಹರಣ ಮಾಡುವ ಅಥವಾ ಅಗ್ನಿ, ಜಲ ಅಥವಾ ಕುದುರೆಗಳಿಂದ ಕೂಡಿದ ಮೇಘವು [ದಿವೇ] ಸೂರ್ಯನ ಅರ್ಥದಲ್ಲಿ ವರ್ತಿಸುತ್ತದೆಯೋ ಹಾಗೆಯೇ [ವೃಷಭಃ] ಮೇಲೆ ಹೇಳಿದಂತೆ ವರ್ಷಿಸುವವರ ಪ್ರಕಾಶವನ್ನುಂಟುಮಾಡುವ [ರಥಃ] ಯಾನ ಸಮೂಹವನ್ನು

[ಬರ್ಹಣಾ] ವೃದ್ಧಿಯಿಂದ [ಕೃತಃ] ನಿರ್ಮಿತಗೊಳಿಸಿರುವೆಯೋ ಆ [ಬೃಹತೇ] ವಿದ್ಯಾದಿ ಗುಣಗಳಿಂದ ಬೆಳೆದಿರುವ [ದಿವೇ] ಶುಭಗುಣಗಳ ಪ್ರಕಾಶವನ್ನುಂಟುಮಾಡುವುದಕ್ಕಾಗಿ [ಸ್ವಕ್ಷತ್ರಂ] ತನ್ನ ರಾಜ್ಯದ ಹಿರಿದಾದ ಮತ್ತು [ಶೂಷ್ಯಂ] ಬಲಾ ಹಾಗೂ ನಿಪುಣತಾಯುಕ್ತವಾದ [ವಚಃ] ವಿದ್ಯೆ, ಶಿಕ್ಷಣವನ್ನು ಪ್ರಾಪ್ತಗೊಳಿಸುವ ವಚನದ [ಅರ್ಚ] ಪೂಜೆ ಅರ್ಥಾತ್ ಅದರ ಸಹಾಯಯುಕ್ತ ಶಿಕ್ಷಣವನ್ನು ಮಾಡು.

ಭಾವಾರ್ಥ:- ಮನುಷ್ಯರು ತಮ್ಮ ರಾಜ್ಯವು ಈಶ್ವರ ಪ್ರೀತಿಯನ್ನುಳ್ಳ ಸಭಾಧ್ಯಕ್ಷನ ಶಿಕ್ಷಣವನ್ನು ಹೊಂದಿರುವವನನ್ನು ಸಂಪಾದಿಸಿ ಒಬ್ಬ ಮನುಷ್ಯ ರಾಜನ ಪ್ರಶಾಸನದಿಂದ ಬೇರೆಯಾದ ರಾಜ್ಯವನ್ನು ಸಂಪಾದಿಸಬೇಕು. ಇದರಿಂದ ಎಂದಿಗೂ ದುಃಖ, ಅನ್ಯಾಯ, ಆಲಸ್ಯ, ಅಜ್ಞಾನ ಮತ್ತು ಶತ್ರುಗಳ ಪರಸ್ಪರ ವಿರೋಧದಿಂದ ಪ್ರಜೆಗಳು ಪೀಡಿತರಾಗುವುದಿಲ್ಲ.

ಸಭಾಧ್ಯಕ್ಷನು ಎಂತಹ ಸೇನೆಯನ್ನು ಸಿದ್ಧಪಡಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ತ್ವಂ ದಿವೋ ಬೃಹತಃ ಸಾನು ಕೋಪಯೋಽವ ತ್ಮನಾ ಧೃಷತಾ ಶಂಬರಂ ಭಿನತ್ ।
ಯನ್ಮಾಯಿನೋ ವ್ರಂದಿನೋ ಮಂದಿನಾ ಧೃಷ-ಚ್ಛಿತಾಂ ಗಭಸ್ತಿಮಶನಿಂ ಪೃತನ್ಯಸಿ ॥೪॥

ಪದಾರ್ಥ:- ಹೇ ಸಭಾಧ್ಯಕ್ಷನೇ! ಯಾವ [**ಧೃಷತ್**] ಶತ್ರುಗಳ ಮರ್ದನವನ್ನು ಮಾಡುತ್ತಾ [**ತ್ವಂ**] ನೀನು, ಯಾವ ರೀತಿ ಸೂರ್ಯನು [**ಬೃಹತಃ**] ಮಹಾ ಸತ್ಯ ಶುಭಗುಣಯುಕ್ತವಾದ [**ದಿವಃ**] ಪ್ರಕಾಶದಿಂದ [**ಸಾನು**] ಸವನಯೋಗ್ಯ ಮೇಘಗಳ ಶಿಖರಗಳ ಮೇಲೆ [**ಶಿತಾಂ**] ಅತ್ಯಂತ ತೀಕ್ಷ್ಣವಾದ [**ಅಶನಿಂ**] ಛೇದನ ಭೇದನ ಮಾಡುವುದರಿಂದ ವಜ್ರಸ್ವರೂಪವಾಗಿರುವ ವಿದ್ಯುತ್ತು ಮತ್ತು [**ಗಭಸ್ತಿಂ**] ವಜ್ರರೂಪಿ ಕಿರಣಗಳ ಪ್ರಹಾರವನ್ನು ಮಾಡಿ [**ಶಂಬರಂ**] ಮೇಘವನ್ನು [**ಭಿನತ್**] ಕತ್ತರಿಸಿ ಭೂಮಿಯ ಮೇಲೆ ಚೆಲ್ಲುತ್ತಾನೋ ಹಾಗೆಯೇ ಶಸ್ತ್ರ ಮತ್ತು ಅಸ್ತ್ರಗಳನ್ನು ಬಳಸಿ ತನ್ನ [**ತ್ಮನಾ**] ಆತ್ಮನಿಂದ ದುಷ್ಟ ಮನುಷ್ಯರನ್ನು [**ಅವಕೋಪಯಃ**] ಕುಪಿತರನ್ನಾಗಿಸುತ್ತಾ [**ವ್ರಂದಿನಃ**] ನಿಂದಿತ ಮನುಷ್ಯಾದಿ ಸಮೂಹಗಳ [**ಮಾಯಿನಃ**] ಕಪಟವೇ ಮೊದಲಾದ ದೋಷಯುಕ್ತ ಶತ್ರುಗಳನ್ನು ನಾಶಗೊಳಿಸುತ್ತಾ ಮತ್ತು ಅವರನ್ನು ನಿವಾರಿಸಲು [**ಪೃತನ್ಯಸಿ**] ತನ್ನ ನ್ಯಾಯಾದಿ ಗುಣಗಳ ಪ್ರಕಾಶವನ್ನು ಮಾಡುವ ವಿದ್ಯೆ ಮತ್ತು ವೀರಪುರುಷರಿಂದ ಕೂಡಿದ ಸೇನೆಯ ಇಚ್ಛೆಯನ್ನು ಮಾಡುತ್ತೀಯೋ, ಅಂತಹ ನೀನು ರಾಜ್ಯಕ್ಕೆ ಯೋಗ್ಯನೆನಿಸುತ್ತೀಯೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಜಗದೀಶ್ವರನು ಪಾಪಕರ್ಮವನ್ನು ಮಾಡುವ ಮನುಷ್ಯರಿಗಾಗಿ ತಮ್ಮ ತಮ್ಮ ಪಾಪಗಳಿಗನುಸಾರ ದುಃಖದ ಫಲಗಳನ್ನು ನೀಡಿ ಯಥಾಯೋಗ್ಯವಾಗಿ ಶಿಕ್ಷಿಸುತ್ತಾನೋ, ಅದೇ ರೀತಿ ಸಭಾಧ್ಯಕ್ಷನು ಶಸ್ತ್ರ ಮತ್ತು ಅಸ್ತ್ರಗಳ ಶಿಕ್ಷಣದಿಂದ ಕೂಡಿದ ಧಾರ್ಮಿಕ ಶೂರ-ವೀರ ಪುರುಷರ ಸೇನೆಯನ್ನು ಸಿದ್ಧಗೊಳಿಸಿ ದುಷ್ಟ ಕರ್ಮ ಮಾಡುವ ಮನುಷ್ಯರ ನಿರಾಕರಣವನ್ನು ಮಾಡಿ ಧರ್ಮಯುಕ್ತ ಪ್ರಜೆಗಳ ನಿರಂತರ ಪಾಲನೆಯನ್ನು ಮಾಡಬೇಕು.

ಸಭಾಪತಿಯು ಧರ್ಮದಿಂದ ಎಲ್ಲರಿಗೂ ಶಿಕ್ಷಣವನ್ನು ನೀಡಬೇಕು ಎಂಬುದನ್ನು ತಿಳಿಸಲಾಗಿದೆ

ನಿ ಯದ್ ವೃಣಕ್ಷಿ ಶ್ವಸನಸ್ಯ ಮೂರ್ಧನಿ ಶುಷ್ಣಸ್ಯ ಚಿದ್ ವ್ರಂದಿನೋ ರೋರುವದ್ ವನಾ ।
ಪ್ರಾಚೀನೇನ ಮನಸಾ ಬರ್ಹಣಾವತಾ ಯದದ್ಯಾ ಚಿತ್ ಕೃಣವಃ ಕಸ್ತ್ವಾ ಪರಿ ॥೫॥

ಪದಾರ್ಥ:- ಹೇ ಸಭಾಧ್ಯಕ್ಷನಾದ ವಿದ್ವಾಂಸನೇ! [ಯತ್] ಯಾವ ನೀನು, ಯಾವ ರೀತಿ ಸೂರ್ಯನು [ವನಾ] ರಶ್ಮಿಯುಕ್ತ ಮೇಘದ ನಿವಾರಣೆಯನ್ನು ಮಾಡುತ್ತಾನೋ, ಅದೇ ರೀತಿ [ಪ್ರಾಚೀನೇನ] ಸನಾತನವಾದ

[ಬರ್ಹಣಾವತಾ] ಅನೇಕ ಪ್ರಕಾರದ ಬುದ್ಧಿಯುಕ್ತವಾದ [ಮನಸಾ] ವಿಜ್ಞಾನದಿಂದ [ಶ್ವಸನಸ್ಯ] ಪ್ರಾಣದಂತೆ ಬಲಿಷ್ಠವಾದ [ಶುಷ್ಣಸ್ಯ] ಶೋಷಣಕರ್ತನ [ಮೂರ್ಧನಿ] ಉತ್ತಮಾಂಗದಲ್ಲಿ ಪ್ರಹಾರದ [ಚಿತ್] ಸಮಾನವಾಗಿ [ವೃಂದಿನಃ] ನಿಂದಿತ ಕರ್ಮವನ್ನು ಮಾಡುವ ದುಷ್ಟಮನುಷ್ಯರನ್ನು [ರೋರುವತ್] ರೋದನ ಮಾಡಿಸುತ್ತಾ [ಯತ್] ಯಾವ ಕಾರಣದಿಂದ [ಅದ್ಯ] ಇಂದು [ನಿವೃಣಕ್ಷಿ] ನಿರಂತರವಾಗಿ ಆ ದುಷ್ಟರನ್ನು ಬೇರೆ ಮಾಡುತ್ತೀಯೋ, ಇದರಿಂದ [ಚಿತ್] ಸಹ [ತ್ವಾ] ನಿನ್ನನ್ನು [ಕೃಣವಃ] ಕೊಲ್ಲಲು [ಕಃ] ಯಾವನೂ ಸಮರ್ಥನು [ಪರಿ] ಆಗುವುದಿಲ್ಲ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಪರಮೇಶ್ವರನು ತನ್ನ ಅನಾದಿ ವಿಜ್ಞಾನಯುಕ್ತ ನ್ಯಾಯದಿಂದ ಎಲ್ಲರಿಗೂ ಶಿಕ್ಷಣವನ್ನು ನೀಡುತ್ತಾನೋ ಮತ್ತು ಸೂರ್ಯನು ಮೋಡವನ್ನು ಕತ್ತರಿಸಿ ಕತ್ತರಿಸಿ ಕೆಳಗೆ ಚೆಲ್ಲುತ್ತಾನೋ, ಅದೇ ರೀತಿ ಸಭಾಪತಿ ಮೊದಲಾದವರು ಧರ್ಮದಿಂದ ಎಲ್ಲರನ್ನೂ ಶಿಕ್ಷಿತರನ್ನಾಗಿ ಮಾಡಬೇಕು ಮತ್ತು ಶತ್ರುಗಳನ್ನು ನಷ್ಟ-ಭ್ರಷ್ಟಗೊಳಿಸಬೇಕು.

ಎಂತಹವರು ರಾಜರಾಗಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ತ್ವಮಾವಿಥ ನರ್ಯಂ ತುರ್ವಶಂ ಯದುಂ ತ್ವಂ ತುರ್ವೀತಿಂ ವಯ್ಯಂ ಶತಕ್ರತೋ ।
ತ್ವಂ ರಥಮೇತಶಂ ಕೃತ್ವ್ಯೇ ಧನೇ ತ್ವಂ ಪುರೋ ನವತಿಂ ದಂಭಯೋ ನವ ॥೬॥

ಪದಾರ್ಥ:- **[ಶತಕ್ರತೋ]** ಹೇ ಬಹುವಾಗಿ ಬುದ್ಧಿಯುಕ್ತನಾದ ವಿದ್ವಾನ್ ಸಭಾಧ್ಯಕ್ಷನೇ! ಯಾವ ಕಾರಣದಿಂದ **[ತ್ವಂ]** ನೀನು **[ನರ್ಯ್ಯಂ]** ಮನುಷ್ಯರಲ್ಲಿ ಕುಶಲರಾದ **[ತುರ್ವಶಂ]** ಉತ್ತಮವಾದ **[ಯದುಂ]** ಯತ್ನ ಮಾಡುವ ಮನುಷ್ಯರ ರಕ್ಷಣೆಯನ್ನು **[ತ್ವಂ]** ನೀನು **[ತುರ್ವೀತಿಂ]** ದೋಷ ಅಥವಾ ದುಷ್ಟ ಪ್ರಾಣಿಗಳನ್ನು ನಾಶ ಮಾಡುವ **[ವಯ್ಯಂ]** ಜ್ಞಾನವಂತನಾದ ಮನುಷ್ಯನ ರಕ್ಷಣೆ ಮತ್ತು **[ತ್ವಂ]** ನೀನು **[ಕೃತ್ವ್ಯೇ]** ಸಿದ್ಧಗೊಳಿಸಲು ಯೋಗ್ಯವಾದ **[ಧನೇ]** ವಿದ್ಯೆ, ಚಕ್ರವರ್ತಿ ರಾಜ್ಯದಿಂದ ಸಿದ್ಧಗೊಳಿಸಲ್ಪಟ್ಟ ದ್ರವ್ಯದ ವಿಷಯವನ್ನು **[ಯೇತಶಂ]** ವೇಗಾದಿ ಗುಣವನ್ನುಳ್ಳ ಅಶ್ವಗಳಿಂದ ಕೂಡಿದ **[ರಥಂ]** ಸುಂದರ ರಥದ **[ಆವಿಥ]** ರಕ್ಷಣೆಯನ್ನು ಮಾಡುತ್ತೀಯೆ ಮತ್ತು **[ತ್ವಂ]** ನೀನು ದುಷ್ಟರಿಂದ **[ನವ]** ಒಂಬತ್ತು ಸಂಖ್ಯಾಯುಕ್ತವಾದ **[ನವತಿಂ]** ತೊಂಬತ್ತು ಸಂಖ್ಯಾಯುಕ್ತವಾದ **[ಪುರಃ]** ನಗರಗಳನ್ನು **[ದಮ್ಭಯಃ]** ನಾಶಗೊಳಿಸುತ್ತೀಯೆ. ಈ ಕಾರಣದಿಂದ ಈ ರಾಜ್ಯದಲ್ಲಿ ನಿನ್ನ ಆಶ್ರಯವನ್ನೇ ನಾವುಗಳು ಮಾಡಬೇಕಾಗುತ್ತದೆ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಯಾರು ರಾಜ್ಯದ ರಕ್ಷಣೆಯನ್ನು ಮಾಡಲು ಸಮರ್ಥರಲ್ಲವೋ ಅಂತವರನ್ನು ಎಂದಿಗೂ ರಾಜನನ್ನಾಗಿ ಮಾಡಬಾರದು.

ಸಭಾಧ್ಯಕ್ಷನಾದವನು ಏನನ್ನು ಮಾಡಬೇಕು ಎಂಬುದನ್ನು ತಿಳಿಸಲಾಗುತ್ತದೆ.

ಸ ಘಾ ರಾಜಾ ಸತ್ಪತಿಃ ಶೂಶುವಜ್ಜನೋ ರಾತಹವ್ಯಃ ಪ್ರತಿ ಯಃ ಶಾಸಮಿನ್ವತಿ ।
ಉಕ್ಥಾ ವಾ ಯೋ ಅಭಿಗೃಣಾತಿ ರಾಧಸಾ ದಾನುರಸ್ಮಾ ಉಪರಾ ಪಿನ್ವತೇ ದಿವಃ ॥೭॥

ಪದಾರ್ಥ:- [ಯಃ] ಯಾವ [ರಾತಹವ್ಯಃ] ಹವ್ಯ ಪದಾರ್ಥಗಳನ್ನು ಕೊಡುವ [ಸತ್ಪತಿಃ] ಸತ್ಪುರುಷರ ಪಾಲನೆಯನ್ನು ಮಾಡುವ [ಜನಃ] ಉತ್ತಮ ಗುಣ -ಕರ್ಮಗಳಿಂದ ಕೂಡಿದ [ರಾಜಾ] ನ್ಯಾಯ-ವಿನಯಾದಿ ಗುಣಗಳಿಂದ ಪ್ರಕಾಶಮಾನನಾದ ಸಭಾಧ್ಯಕ್ಷನು [ಪ್ರತಿಶಾಶಂ] ಶಾಸ್ತ್ರ-ಶಾಸ್ತ್ರಗಳ ಬಗೆಗೆ ಪ್ರಜೆಗಳನ್ನು [ಇನ್ವತಿ] ನ್ಯಾಯದಲ್ಲಿ

ವ್ಯಾಪ್ತಿಗೊಳಿಸುತ್ತಾ [ವಾ] ಅಥವಾ [ಶೂಶುವತ್] ರಾಜ್ಯವನ್ನಾಳಲು ತಿಳಿಯುತ್ತಾನೋ ಮತ್ತು ಯಾರು [ರಾಧಸಾ] ನ್ಯಾಯದಿಂದ ಪ್ರಾಪ್ತವಾದ ಧನದಿಂದ [ದಾನುಃ] ದಾನಶೀಲನೆಂದು [ಉಕ್ಥಾ] ಹೇಳಲು ಯೋಗ್ಯವಾದ ವೇದ ಸ್ತೋತ್ರ ಅಥವಾ ವಚನಗಳನ್ನು [ಅಭಿಗೃಣಾತಿ] ಎಲ್ಲ ಮನುಷ್ಯರಿಗಾಗಿ ಉಪದೇಶಿಸುತ್ತಾನೆ. [ಅಸ್ಮೈ] ಈ ಸಭಾಧ್ಯಕ್ಷನಿಗಾಗಿ [ದಿವಃ ಉಪರಾ] ಯಾವ ರೀತಿ ಸೂರ್ಯನ ಪ್ರಕಾಶದಿಂದ ಮೇಘವು ಉತ್ಪನ್ನವಾಗಿ ಭೂಮಿಯನ್ನು [ಪಿನ್ವತೇ] ಸಿಂಚಿಸುತ್ತದೆಯೋ, ಅದೇ ರೀತಿ ಎಲ್ಲ ಸುಖಗಳನ್ನು [ಪಿನ್ವತೇ] ಅನುಭವಿಸುತ್ತಾನೋ, [ಸಃ] ಅವನೇ ರಾಜ್ಯವನ್ನು ಆಳುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವುದೇ ಮನುಷ್ಯನು ಉತ್ತಮ ವಿದ್ಯೆ, ವಿನಯ, ನ್ಯಾಯ ಮತ್ತು ವೀರ ಪುರುಷರ ಸೇನೆಯನ್ನು ಹೊಂದಿ ಅನುಷ್ಠಾನ ಮಾಡದೆ ರಾಜ್ಯಕ್ಕಾಗಿ ಶಿಕ್ಷಣವನ್ನು ನೀಡುವ, ಶತ್ರುಗಳನ್ನು ಜಯಿಸುವ ಮತ್ತು ಸಮಸ್ತ ಸುಖಗಳನ್ನು ಪ್ರಾಪ್ತಿಸುವುದಕ್ಕೆ ಸಮರ್ಥನಾಗಲಾರನು. ಆದುದರಿಂದ ಸಭಾಧ್ಯಕ್ಷನಾದವನು ಅವಶ್ಯವಾಗಿಯೂ ಈ ಸಂಗತಿಗಳನ್ನು ಅನುಷ್ಠಾನ ಮಾಡಬೇಕು.

ರಾಜಪುರುಷರ ಕರ್ತವ್ಯವೇನು ಎಂಬುದನ್ನು ಇಲ್ಲಿ ತಿಳಿಸಲಾಗಿದೆ

ಅಸಮಂ ಕ್ಷತ್ರಮಸಮಾ ಮನೀಷಾ ಪ್ರ ಸೋಮಪಾ ಅಪಸಾ ಸಂತು ನೇಮೇ ।
ಯೇ ತ ಇಂದ್ರ ದದುಷೋ ವರ್ಧಯಂತಿ ಮಹಿ ಕ್ಷತ್ರಂ ಸ್ಥವಿರಂ ವೃಷ್ಣ್ಯಂ ಚ ॥೮॥

ಪದಾರ್ಥ:- [ಇಂದ್ರ] ಹೇ ಸಭಾಧ್ಯಕ್ಷನೇ! ಯಾವನು **[ದದುಷಃ]** ದಾನಮಾಡುತ್ತಾ **[ತೇ]** ನಿನ್ನ **[ಅಸಮಂ]** ಸಮತಾರಹಿತ ಕರ್ಮವನ್ನು **[ಕ್ಷತ್ರಂ]** ರಾಜ್ಯವನ್ನು ಹಾಗೂ **[ಅಸಮಾ]** ಉಪಮಾರಹಿತವಾದ **[ಮನೀಷಾ]** ಬುದ್ಧಿಯನ್ನು ಹೊಂದಿರುತ್ತಾನೋ, **[ಯೇ]** ಯಾವ **[ನೇಮೇ]** ಸಮಸ್ತ **[ಸೋಮಪಾಃ]** ಸೋಮ ಮೊದಲಾದ ಓಷಧೀ ರಸಗಳನ್ನು ಸೇವಿಸುವ ಧಾರ್ಮಿಕ ವಿದ್ವಾನ್ ಪುರುಷನು **[ಅಪಸಾ]** ಕರ್ಮದಿಂದ **[ಸ್ಥವಿರಂ]** ವೃದ್ಧರಾದ **[ವೃಷ್ಣ್ಯಂ]** ಶತ್ರುಗಳ ಬಲನಾಶಕ ಸುಖವರ್ಷಣಕ್ಕಾಗಿ ಕಲ್ಯಾಣಕಾರಕವಾದ **[ಮಹಿ]** ಮಹಾ ಗುಣಯುಕ್ತವಾದ **[ಕ್ಷತ್ರಂ]** ರಾಜ್ಯವನ್ನು **[ಪ್ರವರ್ಧಯಂತಿ]** ವೃದ್ಧಿಸುತ್ತಾರೋ, ಅವರೆಲ್ಲರೂ ನಿನ್ನ ಸಭೆಯಲ್ಲಿ ಕುಳಿತುಕೊಳ್ಳಲು ಯೋಗ್ಯವಾದ ಸಭಾಸದರು **[ಚ]** ಮತ್ತು ಭೃತ್ಯರೂ **[ಸಂತು]** ಆಗಲಿ.

ಭಾವಾರ್ಥ:- ರಾಜಪುರುಷರು ಪ್ರಜೆಗಳೊಂದಿಗೆ, ಪ್ರಜೆಗಳು ರಾಜಪುರುಷರೊಂದಿಗೆ ವಿರೋಧವನ್ನು ಎಂದಿಗೂ ಮಾಡತಕ್ಕದ್ದಲ್ಲ. ಆದರೆ ಪರಸ್ಪರ ಪ್ರೀತಿ ಹಾಗೂ ಉಪಕಾರವೃದ್ಧಿಯೊಂದಿಗೆ ಸಮಸ್ತ ರಾಜ್ಯವನ್ನು ಸುಖಗಳಿಂದ ವೃದ್ಧಿಸಬೇಕು. ಏಕೆಂದರೆ ಈ ರೀತಿ ಮಾಡದೆ ರಾಜ್ಯಪಾಲನೆಯ ವ್ಯವಸ್ಥೆಯು ನಿಶ್ಚಯವಾಗಿ ಆಗುವುದಿಲ್ಲ.

ಸಭಾಧ್ಯಕ್ಷ ಹಾಗೂ ಪ್ರಜೆಗಳ ಕರ್ತವ್ಯವೇನು ಎಂಬುದನ್ನು ತಿಳಿಸಲಾಗಿದೆ

ತುಭ್ಯೇದೇತೇ ಬಹುಲಾ ಅದ್ರಿದುಗ್ಧಾ-ಶ್ಚಮೂಷದಶ್ಚಮಸಾ ಇಂದ್ರಪಾನಾಃ ।
ವ್ಯಶ್ನುಹಿ ತರ್ಪಯಾ ಕಾಮಮೇಷಾ-ಮಥಾ ಮನೋ ವಸುದೇಯಾಯ ಕೃಷ್ವ ॥೯॥

ಪದಾರ್ಥ:- [ಇಂದ್ರ] ಹೇ ಸಭಾಧ್ಯಕ್ಷ! ಯಾವ ರೀತಿ [ಏತೇ] ಈ ಎಲ್ಲಾ [ಬಹುಲಾಃ] ಬಹಳ ಸುಖ ಅಥವಾ ಕರ್ಮಗಳನ್ನು ನೀಡುವ [ಇಂದ್ರಪಾನಾಃ] ಪರಮೈಶ್ವರ್ಯಕ್ಕಾಗಿ ಸೂರ್ಯನನ್ನು ಹೊಂದುವ [ಚಮಸಾಃ] ಮೇಘವು ಎಲ್ಲ ಕೆಲಸಗಳನ್ನು ಪೂರ್ಣಗೊಳಿಸುತ್ತದೆಯೋ ಅದೇ ರೀತಿ [ಅದ್ರಿದುಗ್ಧಾಃ] ಮೇಘ ಅಥವಾ ಪರ್ವತಗಳಿಂದ ಪ್ರಾಪ್ತವಾದ ವಿದ್ಯೆಯು [ಚಮೂಷದಃ] ಸೇನೆಗಳಲ್ಲಿ ಸ್ಥಿತರಾದ ಶೂರ-ವೀರ ಪುರುಷರಾದ [ತುಭ್ಯಂ] ನಿಮ್ಮನ್ನು

ತೃಪ್ತಗೊಳಿಸಲಿ ಅಥವಾ ನೀನು ಇವರುಗಳನ್ನು [**ವಸುದೇಯಾಯ**] ಸುಂದರ ಧನವನ್ನು ನೀಡಲು [**ಮನಃ ಕೃಷ್ವ**] ಮನಸ್ಸು ಮಾಡು. ಇದರಿಂದ ನೀನು ಇವರನ್ನು [**ತರ್ಪಯಾ**] ತೃಪ್ತಗೊಳಿಸು. [**ಏಷಾಂ**] ಇವರ [**ಕಾಮಾನ್**] ಕಾಮನೆಗಳನ್ನು ಪೂರ್ಣಗೊಳಿಸು. [**ಅಥಾ**] ಇದರ ನಂತರ [**ಇತ್**] ಕೂಡಾ ಸಮಸ್ತ ಕಾಮನೆಗಳನ್ನು [**ವೃಶ್ಚುಹಿ**] ಹೊಂದು.

ಭಾವಾರ್ಥ:- ಸಭೆ ಮೊದಲಾದವುಗಳ ಅಧ್ಯಕ್ಷನಾದವನು ಉತ್ತಮ ಶಿಕ್ಷಣ ಮತ್ತು ಪಾಲನೆಯಿಂದ ಉತ್ಪನ್ನರಾದ ಶೂರ-ವೀರ ಪ್ರಜೆಗಳನ್ನು ನಿರಂತರವಾಗಿ ಪಾಲಿಸುತ್ತಾ ಇವರಿಗೆ ಸಮಸ್ತ ಸುಖಗಳನ್ನು ಕೊಡಬೇಕು. ಆ ಪ್ರಜೆಗಳು ಸಭಾಧ್ಯಕ್ಷ ಮೊದಲಾದವರನ್ನು ನಿರಂತರವಾಗಿ ಸಂತುಷ್ಟರನ್ನಾಗಿ ಇರಿಸಿ ಎಲ್ಲ ಕಾಮನೆಗಳನ್ನು ಪೂರ್ಣಗೊಳಿಸಬೇಕು.

ಸಭಾಧ್ಯಕ್ಷರು ಹೇಗಿರಬೇಕು?

ಅಪಾಮತಿಷ್ಠದ್ಧರುಣಹ್ವರಂ ತಮೋಽನ್ತರ್ವೃತ್ರಸ್ಯ ಜಠರೇಷು ಪರ್ವತಃ ।
ಅಭೀಮಿಂದ್ರೋ ನದ್ಯೋ ವವ್ರಿಣಾ ಹಿತಾ ವಿಶ್ವಾ ಅನುಷ್ಠಾಃ ಪ್ರವಣೇಷು ಜಿಘ್ನತೇ ॥೧೦॥

ಪದಾರ್ಥ:- ಹೇ ಸಭೇಶ! [ಇಂದ್ರ] ಪರಮೈಶ್ವರ್ಯಯುಕ್ತನೇ! ನೀನು, ಯಾವ ರೀತಿ ಸೂರ್ಯನು [**ವೃತ್ರಸ್ಯ**] ಮೇಘ ಸಂಬಂಧಿಯಾದ [**ಅಪಾಂ**] ಜಲರಾಶಿಗಳ [**ಅಂತಃ**] ಮಧ್ಯದಲ್ಲಿರುವ [**ಜಠರೇಷು**] ಎಲ್ಲಿಂದ ವರ್ಷ ಉಂಟಾಗುತ್ತದೆಯೋ ಅವುಗಳಲ್ಲಿ [**ಧರುಣಹ್ವರಂ**] ಧಾರಣೆ ಮಾಡುವ ಕುಟಿಲ ಕರ್ಮಗಳ ಕಾರಣದಿಂದ [**ತಮಃ**] ಅಂಧಕಾರವು [**ಅತಿಷ್ಠತ್**] ಸ್ಥಿತವಾಗಿದೆ. ಅದರ ನಿವಾರಣೆಯನ್ನು ಮಾಡಿ [**ವವ್ರಿಣಾ**] ರೂಪದಿಂದ ಕೂಡಿರುವ ಯಾವ [**ಪರ್ವತಃ**] ಪಕ್ಷಿಯಂತೆ ಆಕಾಶದಲ್ಲಿ ಹಾರುವ ಮೇಘವು [**ಈಂ**] ಜಲವನ್ನು [**ಅಭಿ**] ಸಮ್ಮುಖದಲ್ಲಿ ಬೀಳಿಸುತ್ತದೆಯೋ ಅದರಿಂದ [**ಪ್ರವಣೇಷು**] ಕೆಳಗಿನ ಸ್ಥಾನಗಳಲ್ಲಿ [**ಅನುಷ್ಠಾಃ**] ಅನುಕೂಲತೆಯಿಂದ ಹರಿಯುವ [**ವಿಶ್ವಾ**] ಸಮಸ್ತ [**ಹಿತಾಃ**] ಪ್ರತಿಕ್ಷಣವೂ ಚಲಿಸುವ [**ನದ್ಯಃ**] ನದಿಗಳು [**ಜಿಘ್ನತೇ**] ಸಮುದ್ರ ಪರ್ಯಂತ ಸಾಗುತ್ತವೆಯೋ ಹಾಗೆಯೇ ನೀನು ಆಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯನು ಯಾವ ಜಲವನ್ನು ಆಕರ್ಷಿಸಿ ಅಂತರಿಕ್ಷದಲ್ಲಿ ತಲುಪಿಸುತ್ತಾನೋ ಮತ್ತು ಅದನ್ನು ವಾಯು ಧಾರಣೆ ಮಾಡುತ್ತದೆಯೋ, ಆಗ ಆ ಜಲವು ಸೇರಿ ಪರ್ವತಾಕಾರವಾಗಿ ಸೂರ್ಯನ ಪ್ರಕಾಶವನ್ನು ಆವರಿಸಿ ಬಿಡುತ್ತದೆ. ಅದನ್ನು ವಿದ್ಯುತ್ತು ಛೇದಿಸಿ ಭೂಮಿಯ ಮೇಲೆ ಬೀಳಿಸುತ್ತದೆ. ಅದರಿಂದ ಉತ್ಪನ್ನವಾದ ನಾನಾ ರೂಪಯುಕ್ತ ನದಿಗಳು ಪೃಥಿವೀ, ಪರ್ವತ ಮತ್ತು ವೃಕ್ಷಾದಿಗಳನ್ನು ಛಿನ್ನ ಭಿನ್ನ ಮಾಡಿ ಆ ಜಲವು ಸಮುದ್ರ ಅಥವಾ ಅಂತರಿಕ್ಷವನ್ನು ಹೊಂದಿ ಪದೇ ಪದೇ ಆ ರೀತಿ ವರ್ಷಿಸಲ್ಪಡುತ್ತವೆಯೋ, ಹಾಗೆಯೇ ಸಭಾಧ್ಯಕ್ಷಾದಿಗಳು ಇರಬೇಕು.

ಸಭಾಧ್ಯಕ್ಷನ ಕರ್ತವ್ಯವೇನೆಂಬುದನ್ನು ಇಲ್ಲಿ ಹೇಳಲಾಗಿದೆ

ಸ ಶೇವೃಧಮಧಿ ಧಾ ದ್ಯುಮ್ನಮಸ್ಮೇ ಮಹಿ ಕ್ಷತ್ರಂ ಜನಾಷಾಳಿಂದ್ರ ತವ್ಯಮ್ ।
ರಕ್ಷಾ ಚ ನೋ ಮಘೋನಃ ಪಾಹಿ ಸೂರೀನ್ ರಾಯೇ ಚ ನಃ ಸ್ವಪತ್ಯಾ ಇಷೇ ಧಾಃ ॥೧೧॥

ಪದಾರ್ಥ:- [ಇಂದ್ರ] ಹೇ ಪರಮೈಶ್ವರ್ಯ ಸಂಪಾದಕನಾದ ಸಭಾಧ್ಯಕ್ಷನೇ! ಯಾವ [**ಜನಾಷಾಟ್**] ಜನರನ್ನು ಸಹಿಸಿಕೊಳ್ಳುವವನಾದ ನೀನು [**ಅಸ್ಮೇ**] ನಮಗಾಗಿ [**ಶೇವೃಧಮ್**] ಸುಖವನ್ನು [**ತವ್ಯಂ**] ಬಲಯುಕ್ತವಾದ

[**ಮಹಿ**] ಮಹಾ ಸುಖದಾಯಕವೂ, ಪೂಜನೀಯವೂ ಆದ [**ಕ್ಷತ್ರಂ**] ರಾಜ್ಯವನ್ನು [**ಅಧಿ**] [**ಧಾ**] ಉತ್ತಮ ರೀತಿಯಲ್ಲಿ ಸರ್ವೋತ್ತಮವಾಗಿ ಧಾರಣೆ ಮಾಡಿ [**ಮಘೋನಃ**] ಪ್ರಶಂಸನೀಯವಾದ ಧನವನ್ನು [**ನಃ**] ನಮಗಾಗಿ [**ರಕ್ಷಾ**] ರಕ್ಷಿಸು [**ಚ**] ಮತ್ತು [**ಸೂರೀನ್**] ಬುದ್ಧಿಶಾಲಿಗಳಾದ ವಿದ್ವಾಂಸರನ್ನು [**ಪಾಹಿ**] ರಕ್ಷಣೆ ಮಾಡು. [**ಚ**] ಮತ್ತು [**ನಃ**] ನಮ್ಮ [**ರಾಯೇ**] ಧನ [**ಚ**] ಮತ್ತು [**ಸ್ವಪತ್ಯೈ**] ಉತ್ತಮ ಸಂತಾನಯುಕ್ತವಾದ [**ಇಷೇ**] ಇಷ್ಟರೂಪಿ ರಾಜ್ಯಲಕ್ಷ್ಮಿಗಾಗಿ [**ದ್ಯುಮ್ನಮ್**] ಕೀರ್ತಿಕಾರಕವಾದ ಧನವನ್ನು [**ಧಾಃ**] ಧಾರಣ ಮಾಡುತ್ತೀಯೋ [**ಸಃ**] ಆ ನೀನು ನಮ್ಮಿಂದ ಸತ್ಕಾರಯೋಗ್ಯನು ಏಕಾಗುವುದಿಲ್ಲ?

ಭಾವಾರ್ಥ:- ಸಭಾಧ್ಯಕ್ಷನಾದವನು ಎಲ್ಲ ಪ್ರಜೆಗಳನ್ನು ಉತ್ತಮ ರೀತಿಯಲ್ಲಿ ರಕ್ಷಿಸಿ ಅವರನ್ನು ಶಿಕ್ಷಣದಿಂದ ಯುಕ್ತರನ್ನಾಗಿ, ವಿದ್ವಾಂಸರನ್ನಾಗಿ ಮಾಡಿ ರಾಜ್ಯ ಮತ್ತು ಧನದ ಉನ್ನತಿಯನ್ನು ಮಾಡಬೇಕು.

ಈ ಸೂಕ್ತದಲ್ಲಿ ಸೂರ್ಯ, ವಿದ್ಯುತ್ತು, ಸಭಾಧ್ಯಕ್ಷ, ಶೂರ-ವೀರ ಮತ್ತು ರಾಜ್ಯದ ಪಾಲನೆ ಮೊದಲಾದವುಗಳ ವರ್ಣನೆ ಮಾಡಲಾಗಿದೆ. ಇದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ಐವತ್ತನಾಲ್ಕನೆಯ ಸೂಕ್ತ ಸಮಾಪ್ತ

ಸೂಕ್ತ ೫೫

ಮಂತ್ರಸಂಖ್ಯೆ ೮ । ಋಷಿಃ - ಸವ್ಯ ಆಂಗಿರಸಃ । ದೇವತಾ - ಇಂದ್ರಃ । ಛಂದಃ - ಜಗತೀ ೧, ೪ । ನಿಚೃಜ್ಜಗತೀ ೫-೭ । ವಿರಾಡ್ ಜಗತೀ ೨, ೮ । ಸ್ವರಃ - ನಿಷಾದಃ.

ಸಭಾಧ್ಯಕ್ಷನು ದುಷ್ಟ ಶಿಕ್ಷಕ, ಶಿಷ್ಟ ಪಾಲಕನಾಗಬೇಕು ಎಂಬುದನ್ನು ಹೇಳಲಾಗಿದೆ

ದಿವಶ್ಚಿದಸ್ಯ ವರಿಮಾ ವಿ ಪಪ್ರಥ ಇಂದ್ರಂ ನ ಮಹ್ನಾ ಪೃಥಿವೀ ಚನ ಪ್ರತಿ ।
ಭೀಮಸ್ತುವಿಷ್ಮಾಞ್ಚರ್ಷಣಿಭ್ಯ ಆತಪಃ ಶಿಶೀತೇ ವಜ್ರಂ ತೇಜಸೇ ನ ವಂಸಗಃ ॥೧॥

ಪದಾರ್ಥ:- ಹೇ ಮನುಷ್ಯರೇ! ಯಾವ ರೀತಿ [**ಅಸ್ಯ**] ಈ ಸೂರ್ಯನ [**ದಿವಃ**] ಪ್ರಕಾಶದಿಂದ [**ವರಿಮಾ**] ಉತ್ತಮತೆಯ ಭಾವದ [**ಮಹ್ನಾ**] ಹಿರಿಮೆಯಿಂದ [**ವಿಪಪ್ರಥೇ**] ವಿಶೇಷವಾಗಿ ಪ್ರಸಿದ್ಧಿಯನ್ನು ಮಾಡುತ್ತದೆಯೋ, [**ಪೃಥಿವೀ ಚನ**] ಯಾವುದರ ಸಮಾನವು ಭೂಮಿಯೂ ಸಹ [**ನ**] ಅಲ್ಲವೋ ಮತ್ತು [**ಆತಪಃ**] ಎಲ್ಲ ರೀತಿಯ ಪ್ರತಾಪಯುಕ್ತವಾದ [**ವಂಸಗಃ**] ಬಲವಾದ ವಿಭಾಗಕರ್ತನ ಸಮಾನವಾದ [**ಪೃಥಿವೀ**] ಭೂಮಿಯ [**ಪ್ರತಿ**] ಮಧ್ಯದಲ್ಲಿ [**ತೇಜಸೇ**] ಪ್ರಕಾಶಾರ್ಥವಾಗಿ [**ವಜ್ರಂ**] ಕಿರಣಗಳನ್ನು [**ಶಿಶೀತೇ**] ಅತಿಶೀತಲ ನೀರಿನಲ್ಲಿ ಪ್ರಕ್ಷೇಪ ಮಾಡುತ್ತದೆಯೋ, ಹಾಗೆಯೇ [**ಭೀಮಃ**] ದುಷ್ಟರಿಗಾಗಿ ಭಯಂಕರನೂ [**ತುವಿಷ್ಮಾನ್**] ಧರ್ಮಾತ್ಮರಿಗೆ ಸುಖದಾತನೂ ಆಗಿ ಪ್ರಜೆಗಳ ಪಾಲನೆಯನ್ನು ಮಾಡಬೇಕು. ಹಾಗೆ ಮಾಡುವವನು ಎಲ್ಲರ ಸತ್ಕಾರಕ್ಕೆ ಯೋಗ್ಯನಾಗುತ್ತಾನೆ, ಬೇರೆಯವರಲ್ಲ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯಮಂಡಲವು ಎಲ್ಲ ಲೋಕಗಳಿಗಿಂತಲೂ ಉತ್ಕೃಷ್ಟವೂ, ಗುಣಯುಕ್ತವೂ, ಹಿರಿದಾದುದೂ ಆಗಿದೆಯೋ, ಯಾವ ರೀತಿ ಎತ್ತು, ಗೋಸಮೂಹದಲ್ಲಿ ಉತ್ತಮ ಮತ್ತು ಮಹಾಬಲಶಾಲಿಯಾಗಿದೆಯೋ ಅದೇ ರೀತಿ ಉತ್ಕೃಷ್ಟ ಗುಣಯುಕ್ತನೂ, ಎಲ್ಲರಿಗಿಂತ ಹಿರಿಯನೂ ಆದ ಮನುಷ್ಯನನ್ನು ಮನುಷ್ಯರೆಲ್ಲರ ಸಭೆಗಳಿಗೆ ಪತಿಯನ್ನಾಗಿ ಮಾಡಬೇಕು. ಈ

ಸಭಾಧ್ಯಕ್ಷಾದಿಗಳು ದುಷ್ಟರಾದವರಿಗೆ ಭಯವನ್ನುಂಟುಮಾಡುವವರೂ ಹಾಗೂ ಧಾರ್ಮಿಕರಿಗೆ ಸುಖ ನೀಡುವವರೂ ಆಗಬೇಕು.

ಸಭಾಧ್ಯಕ್ಷನು ಹಿರಿಮೆಯನ್ನು ಹೇಗೆ ಪಡೆಯಬೇಕು ಎಂಬುದನ್ನು ತಿಳಿಸಲಾಗಿದೆ.

ಸೋ ಅರ್ಣವೋ ನ ನದ್ಯಃ ಸಮುದ್ರಿಯಃ ಪ್ರತಿ ಗೃಭ್ಣಾತಿ ವಿಶ್ರಿತಾ ವರೀಮಭಿಃ ।
ಇಂದ್ರಃ ಸೋಮಸ್ಯ ಪೀತಯೇ ವೃಷಾಯತೇ ಸನಾತ್ ಸ ಯುಧ್ಮ ಓಜಸಾ ಪನಸ್ಯತೇ ॥೨॥

ಪದಾರ್ಥ:- ಯಾವ [ಇಂದ್ರಃ] ಸಭಾಧ್ಯಕ್ಷನು ಸೂರ್ಯನಂತೆ [ಸೋಮಸ್ಯ] ವೈದ್ಯಕ ವಿದ್ಯೆಯಿಂದ ಸಂಪಾದಿತವೂ ಸ್ವಭಾವದಿಂದ ಉತ್ಪನ್ನವೂ ಆದ ರಸದ [ಪೀತಯೇ] ಪಾನಕ್ಕಾಗಿ [ವೃಷಾಯತೇ] ಎತ್ತಿನಂತೆ ಆಚರಣೆಯನ್ನು ಮಾಡುತ್ತಾನೋ [ಸಃ] ಅವನು [ಯುಧ್ಮಃ] ಯುದ್ಧ ಮಾಡುವ ಪುರುಷನು [ನ] ಯಾವ ರೀತಿ [ವಿಶ್ರಿತಾಃ] ನಾನಾ ಪ್ರಕಾರದ ದೇಶಗಳ ಸೇವನೆ ಮಾಡುವ [ನದ್ಯಃ] ನದಿಗಳು [ಅರ್ಣವಃ] ಸಮುದ್ರವನ್ನು ಹೊಂದಿ ಸ್ಥಿರವಾಗುತ್ತವೆಯೋ ಮತ್ತು ಯಾವ ರೀತಿ [ಸಮುದ್ರಿಯಃ] ಸಾಗರಗಳಲ್ಲಿ ಸಂಚರಿಸುವ ನೌಕಾದಿ ಯಾನ ಸಮೂಹವನ್ನು ಪಾರುಗಾಣಿಸುತ್ತವೆಯೋ, ಯಾವ ರೀತಿ [ಸನಾತ್] ನಿರಂತರವಾದ [ಓಜಸಾ] ಬಲದಿಂದ [ವರೀಮಭಿಃ] ಧರ್ಮ ಅಥವಾ ಶಿಲ್ಪ ವಿದ್ಯೆಯಿಂದ [ಪನಸ್ಯತೇ] ವ್ಯವಹಾರ ಕುಶಲನಂತೆ ಆಚರಣೆಯನ್ನು ಮತ್ತು ಪೃಥಿವೀ ಮೊದಲಾದವುಗಳ ರಾಜ್ಯವನ್ನು [ಪ್ರತಿಗೃಭ್ಣಾತಿ] ಗ್ರಹಣ ಮಾಡುತ್ತಾನೋ, ಅವನು ರಾಜ್ಯವನ್ನು ನಡೆಸಲು ಮತ್ತು ಸತ್ಕಾರ ಮಾಡಲು ಯೋಗ್ಯನಾಗಿದ್ದಾನೆ. ಅಂತಹವನನ್ನು ಎಲ್ಲ ಮನುಷ್ಯರು ಸ್ವೀಕರಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸಮುದ್ರವು ನಾನಾ ಪ್ರಕಾರದ ರತ್ನಗಳನ್ನು, ನಾನಾ ಪ್ರಕಾರದ ನದಿಗಳನ್ನು ತನ್ನ ಮಹಿಮೆಯಿಂದ ತನ್ನಲ್ಲಿ ರಕ್ಷಿಸುತ್ತದೆಯೋ, ಅದೇ ರೀತಿ ಸಭಾಧ್ಯಕ್ಷ ಮೊದಲಾದವರು ಸಹ ಅನೇಕ ಪ್ರಕಾರದ ಪದಾರ್ಥಗಳನ್ನು ಹಾಗೂ ಅನೇಕ ಪ್ರಕಾರದ ಸೇನೆಗಳನ್ನು ಸ್ವೀಕಾರ ಮಾಡಿ ದುಷ್ಟರನ್ನು ಜಯಿಸಿ ಶ್ರೇಷ್ಠರ ರಕ್ಷಣೆಯನ್ನು ಮಾಡಿ ತಮ್ಮ ಹಿರಿಮೆಯನ್ನು ಮೆರೆಯಬೇಕು.

ಎಲ್ಲರಿಗೂ ಹಿತಕಾರಿಗಳು ಯಾರಾಗುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ತ್ವಂ ತಮಿಂದ್ರ ಪರ್ವತಂ ನ ಭೋಜಸೇ ಮಹೋ ನೃಮ್ಣಸ್ಯ ಧರ್ಮಣಾಮಿರಜ್ಯಸಿ ।
ಪ್ರ ವೀರ್ಯೇಣ ದೇವತಾತಿ ಚೇಕಿತೇ ವಿಶ್ವಸ್ಮಾ ಉಗ್ರಃ ಕರ್ಮಣೇ ಪುರೋಹಿತಃ ॥೩॥

ಪದಾರ್ಥ:- [ಇಂದ್ರ] ಹೇ ಸಭಾಧ್ಯಕ್ಷ! ಯಾವ [ದೇವತಾ] ವಿದ್ವಾಂಸನು [ಉಗ್ರಃ] ತೀವ್ರಕಾರಿಯಾದ [ಪುರೋಹಿತಃ] ಪುರೋಹಿತನಂತೆ ಉಪಕಾರ ಮಾಡುವ [ತ್ವಂ] ನೀನು, ಯಾವ ರೀತಿ ವಿದ್ಯುತ್ತು [ಪರ್ವತಂ ನ] ಮೇಘದ ಆಶ್ರಯವನ್ನು ಹೊಂದುವ ಮೋಡಗಳಂತೆ [ವೀರ್ಯೇಣ] ಪರಾಕ್ರಮದಿಂದ [ಭೋಜಸೇ] ಪಾಲನೆ ಅಥವಾ ಭೋಗಕ್ಕಾಗಿ [ತಂ] ಆ ಶತ್ರುವನ್ನು ಹನನ ಮಾಡಿ [ಮಹಃ] ಹಿರಿದಾದ [ನೃಮ್ಣಸ್ಯ] ಧನದ ಮತ್ತು [ಧರ್ಮಣಾಂ] ಧರ್ಮಗಳ ಯೋಗದಿಂದ [ಅತಿರಜ್ಯಸಿ] ಅತಿಶಯ ಐಶ್ವರ್ಯವನ್ನುಂಟುಮಾಡುವೆ. ಆ ನೀನು [ವಿಶ್ವಸ್ಮೈ] ಎಲ್ಲಾ [ಕರ್ಮಣೇ] ಕರ್ಮಗಳಿಗಾಗಿ [ಪ್ರಚೇಕಿತೇ] ತಿಳಿಯಲ್ಪಡುತ್ತೀಯೆ. ಅಂತಹ ನೀನು ನಮ್ಮಲ್ಲಿ ರಾಜನಾಗಿ ವಿರಾಜಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾರು ಮನುಷ್ಯ ಪ್ರವೃತ್ತಿಯ ಆಸರೆಯನ್ನು ಮತ್ತು ಧನವನ್ನು ಸಂಪಾದಿಸಿ ಭೋಗಗಳನ್ನು ಹೊಂದಿರುತ್ತಾರೋ, ಅವರು ಸಭಾಧ್ಯಕ್ಷನ ಸಹಿತ ವಿದ್ಯೆ, ಬುದ್ಧಿ, ವಿನಯ ಮತ್ತು ಧರ್ಮಯುಕ್ತ ವೀರಪುರುಷರ ಸೇನೆಯನ್ನು ಹೊಂದಿ ದುಷ್ಟರ ವಿಷಯದಲ್ಲಿ ತೀಕ್ಷ್ಣರೂ ಧರ್ಮಾತ್ಮರ ವಿಷಯದಲ್ಲಿ ಕ್ಷಮಾಯುಕ್ತರೂ ಆಗುತ್ತಾರೋ ಅವರೇ ಎಲ್ಲರ ಹಿತಕಾರಿಗಳಾಗುತ್ತಾರೆ.

ಎಲ್ಲರನ್ನು ಸುಖಿಗಳನ್ನಾಗಿ ಹೇಗೆ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಸ ಇದ್ ವನೇ ನಮಸ್ಯುಭಿರ್ವಚಸ್ಯತೇ ಚಾರು ಜನೇಷು ಪ್ರಬ್ರುವಾಣ ಇಂದ್ರಿಯಮ್ ।
ವೃಷಾ ಛಂದುರ್ಭವತಿ ಹರ್ಯತೋ ವೃಷಾ ಕ್ಷೇಮೇಣ ಧೇನಾಂ ಮಘವಾ ಯದಿನ್ವತಿ ॥೪॥

ಪದಾರ್ಥ:- [ಯತ್] ಯಾವ ಅಧ್ಯಾಪಕ ಅಥವಾ ಉಪದೇಶಕರ್ತನು [ವನೇ] ಏಕಾಂತದಲ್ಲಿ ಏಕಾಗ್ರಚಿತ್ತದಿಂದ [ಜನೇಷು] ಪ್ರಸಿದ್ಧ ಮನುಷ್ಯರಲ್ಲಿ [ಚಾರು] ಸುಂದರವಾದ [ಇಂದ್ರಿಯಂ] ಮನಸ್ಸನ್ನು [ಬ್ರುವಾಣಃ] ಉತ್ತಮ ರೀತಿಯಲ್ಲಿ ಹೇಳುತ್ತಾ [ಹರ್ಯತಃ] ಎಲ್ಲರಿಗೂ ಉತ್ತಮಬೋಧೆಯ ಕಾಮನೆಯನ್ನು ಮಾಡುತ್ತಾ [ಪ್ರಭವತಿ] ಸಮರ್ಥನಾಗುತ್ತಾನೋ, [ವೃಷಾ] ದೃಢನೂ [ಮಘವಾ] ಪ್ರಶಂಸಿತ ವಿದ್ಯೆ ಹಾಗೂ ಧನವನ್ನುಳ್ಳವನೂ [ಛಂದುಃ] ಸ್ವಚ್ಛಂದ [ವೃಷಾ] ಸುಖ ವರ್ಷಕನೂ [ಕ್ಷೇಮೇಣ] ರಕ್ಷಣೆಯೊಂದಿಗೆ [ಧೇನಾಂ] ವಿದ್ಯೆ, ಶಿಕ್ಷಣ ಯುಕ್ತ ವಾಣಿಯನ್ನು [ಇನ್ವತಿ] ವ್ಯಾಪ್ತಗೊಳಿಸುತ್ತಾನೋ [ಸಃಇತ್] ಅವನೇ [ನಮಸ್ಯುಭಿಃ] ನಮ್ರ ವಿದ್ವಾಂಸರಿಂದ [ವಚಸ್ಯತೇ] ಪ್ರಶಂಸೆಗೆ ಪಾತ್ರನಾಗುತ್ತಾನೆ.

ಭಾವಾರ್ಥ:- ಉತ್ತಮ ವಿದ್ವಾಂಸನಾದ ಸಭಾಧ್ಯಕ್ಷನು ಸಮಸ್ತ ಮಾನವರಿಗಾಗಿ ಎಲ್ಲ ವಿದ್ಯೆಗಳನ್ನು ಪಡೆದು ಎಲ್ಲರನ್ನು ವಿದ್ಯಾಯುಕ್ತರನ್ನಾಗಿಯೂ ಬಹುಶ್ರುತರನ್ನಾಗಿಯೂ, ರಕ್ಷಣೆಯೊಂದಿಗಿರುವವರನ್ನಾಗಿಯೂ ಸ್ವಾತಂತ್ರ್ಯಯುಕ್ತರನ್ನಾಗಿಯೂ ಮಾಡಲಿ. ಇದರಿಂದ ಅವರೆಲ್ಲರೂ ನಿಸ್ಸಂದೇಹರಾಗಿ ಸದಾ ಸುಖಿಗಳಾಗುತ್ತಾರೆ.

ಅಧ್ಯಾಪಕ-ಉಪದೇಶಕರ ಕರ್ತವ್ಯವೇನು ಎಂಬುದನ್ನು ಹೇಳಲಾಗಿದೆ.

ಸ ಇನ್ಮಹಾನಿ ಸಮಿಥಾನಿ ಮಜ್ಮನಾ ಕೃಣೋತಿ ಯುಧ್ಮ ಓಜಸಾ ಜನೇಭ್ಯಃ।
ಅಧಾ ಚನ ಶ್ರದ್ ದಧತಿ ತ್ವಿಷೀಮತ ಇಂದ್ರಾಯ ವಜ್ರಂ ನಿಘನಿಘ್ನತೇ ವಧಮ್ ॥೫॥

ಪದಾರ್ಥ:- [ಸಃ] ಯಾವ ಆ [ಯುಧ್ಮಃ] ಯುದ್ಧ ಮಾಡುವ ಉಪದೇಶಕನು [ಮಜ್ಮನಾ] ಬಲ ಅಥವಾ [ಓಜಸಾ] ಪರಾಕ್ರಮಿಯೂ ಆಗಿ [ಜನೇಭ್ಯಃ] ಮನುಷ್ಯಾದಿಗಳ ಸುಖಕ್ಕಾಗಿ ಉಪದೇಶದಿಂದ [ಮಹಾನಿ] ಮಹಾನ್ ಪೂಜನೀಯನು [ಸಮಿಥಾನಿ] ಸಂಗ್ರಾಮಗಳನ್ನು ಜಯಿಸುವವನಂತೆ ಅವಿದ್ಯೆಯ ವಿಜಯವನ್ನು [ಕೃಣೋತಿ] ಮಾಡುತ್ತಾನೋ, [ವಜ್ರಂ] ವಜ್ರ ಪ್ರಹಾರದಿಂದ ಶತ್ರುಗಳ [ವಧಂ] ವಧೆಯನ್ನುಂಟುಮಾಡುವವನು [ನಿಘನಿಘ್ನತೇ] ಕೊಲ್ಲುವವನಂತೆ ಆಚರಣೆಯನ್ನು ಮಾಡುತ್ತಾನೋ [ಅಧಾ] ಇದರ ಅನಂತರ [ಇತ್] ಸಹ [ಅಸ್ಮೈ] ಈ [ತ್ವಿಷೀಮತೇ] ಪ್ರಶಂಸನೀಯವಾದ ಪ್ರಕಾಶಯುಕ್ತ [ಇಂದ್ರಾಯ] ಪರಮೈಶ್ವರ್ಯದ ಪ್ರಾಪ್ತಿಯನ್ನು ಮಾಡುವವನಿಗಾಗಿ ಸಮಸ್ತ ಮಾನವರು [ಚನ] ಸಹ [ಶ್ರತ್ ದಧತಿ] ಪ್ರೀತಿಯಿಂದ ಸತ್ಯದ ಧಾರಣೆಮಾಡುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯನು ಮೇಘಗಳನ್ನು ಉತ್ಪನ್ನಗೊಳಿಸಿ, ಕತ್ತರಿಸಿ ಮಳೆ ಸುರಿಸಿ ತನ್ನ ಪ್ರಕಾಶದಿಂದ ಎಲ್ಲರಿಗೂ ಅನಂತವನ್ನುಂಟು ಮಾಡುತ್ತಾನೋ ಅದೇ

ರೀತಿ ಅಧ್ಯಾಪಕ ಮತ್ತು ಉಪದೇಶಕರು ವಿದ್ಯೆಯನ್ನು ಪಡೆದು ಅವಿದ್ಯೆಯನ್ನು ಗೆದ್ದು ಅಂಥ ಪರಂಪರೆಯನ್ನು ನಿವಾರಿಸಿ ವಿದ್ಯೆ, ನ್ಯಾಯಾದಿಗಳ ಪ್ರಕಾಶವನ್ನುಂಟು ಮಾಡಿ ಎಲ್ಲ ಪ್ರಜೆಗಳನ್ನು ಸುಖಿಗಳನ್ನಾಗಿಸಬೇಕು.

ಮನುಷ್ಯಾದಿಗಳ ಕಲ್ಯಾಣಕಾರಿಗಳಾರು ಎಂಬುದನ್ನು ತಿಳಿಸಲಾಗಿದೆ.

ಸ ಹಿ ಶ್ರವಸ್ಯುಃ ಸದನಾನಿ ಕೃತ್ರಿಮಾ ಕ್ಷ್ಮಯಾ ವೃಧಾನ ಓಜಸಾ ವಿನಾಶಯನ್ ।

ಜ್ಯೋತೀಂಷಿ ಕೃಣ್ವನ್ನವೃಕಾಣಿ ಯಜ್ಯವೇಽವ ಸುಕ್ರತುಃ ಸರ್ತವಾ ಅಪಃ ಸೃಜತ್ ॥೬॥

ಪದಾರ್ಥ:- ಯಾರು [ಸುಕ್ರತುಃ] ಶ್ರೇಷ್ಠ ಬುದ್ಧಿ ಹಾಗೂ ಕರ್ಮಯುಕ್ತವಾದ [ಓಜಸಾ] ಪರಾಕ್ರಮದಿಂದ [ಕ್ಷ್ಮಯಾ] ಪೃಥಿವಿಯೊಂದಿಗೆ [ವೃಧಾನಃ] ವರ್ಧಿಸುತ್ತಾ [ಶ್ರವಸ್ಯುಃ] ತಮ್ಮ ಆತ್ಮಕ್ಕಾಗಿ ಅನ್ನದ ಇಚ್ಛೆಯಿಂದ ಸಮಸ್ತ ಶಾಸ್ತ್ರಗಳ ಶ್ರವಣವನ್ನು ಮಾಡುತ್ತಾ [ಯಜ್ಯವೇ] ರಾಜ್ಯದ ಅನುಷ್ಠಾನಕ್ಕಾಗಿ [ಸರ್ತವೈ] ಹೋಗಿ ಬರಲು [ಕೃತ್ರಿಮಾಣಿ] ಮಾಡಲ್ಪಟ್ಟ [ಅವೃಕಾಣಿ] ಚೋರಾದಿಗಳಿಂದ ಕೂಡಿದ [ಸದನಾನಿ] ಮಾರ್ಗಗಳನ್ನು ಮತ್ತು ಸುಂದರ ಮನೆಗಳನ್ನು ಸುಶೋಭಿತವನ್ನಾಗಿ [ಕೃಣ್ವನ್] ಮಾಡುತ್ತಾ [ಅಪಃ] ಜಲವನ್ನು ಸುರಿಸುವ [ಜ್ಯೋತೀಂಷಿ] ಚಂದ್ರಾದಿ ನಕ್ಷತ್ರಗಳನ್ನು ಪ್ರಕಾಶಿತಗೊಳಿಸುವ ಸೂರ್ಯನಂತೆ [ವಿನಾಶಯತ್] ಅವಿದ್ಯೆಯ ನಾಶವನ್ನು ಮಾಡುತ್ತಾ [ಅವಸೃಜತ್] ರಾಜ್ಯವನ್ನು ನಿರ್ಮಿಸುತ್ತಾನೋ, ಅವನೇ ಸಮಸ್ತ ಮನುಷ್ಯರ ತಾಯಿ, ತಂದೆ, ಮಿತ್ರ ಹಾಗೂ ರಕ್ಷಕನೆಂದು ತಿಳಿಯತಕ್ಕದ್ದು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಎಲ್ಲ ಮನುಷ್ಯರು ಸೂರ್ಯನಂತೆ ವಿದ್ಯಾ ಧರ್ಮ ರಾಜನೀತಿಗಳ ಪ್ರಚಾರಕರ್ತರಾಗಿ ಎಲ್ಲರಿಗೂ ಉತ್ತಮ ಬೋಧೆಯನ್ನು ನೀಡುತ್ತಾರೋ ಅವರು ಮನುಷ್ಯಾದಿ ಪ್ರಾಣಿಗಳ ಕಲ್ಯಾಣಕಾರಿಗಳಾಗುತ್ತಾರೆ ಎಂಬುದನ್ನು ನಿಶ್ಚಿತವಾಗಿ ತಿಳಿಯಬೇಕು.

ಮನುಷ್ಯರನ್ನು ಧರ್ಮಾತ್ಮರನ್ನಾಗಿಸುವುದು ಹೇಗೆ ಎಂಬುದನ್ನು ತಿಳಿಸಲಾಗಿದೆ.

ದಾನಾಯ ಮನಃ ಸೋಮಪಾವನ್ನಸ್ತು ತೇಽರ್ವಾಂಚಾ ಹರೀ ವಂದನಶ್ರುದಾ ಕೃಧಿ ।

ಯಮಿಷ್ಠಾಸಃ ಸಾರಥಯೋ ಯ ಇಂದ್ರ ತೇ ನ ತ್ವಾ ಕೇತಾ ಆ ದಭ್ನುವಂತಿ ಭೂರ್ಣಯಃ ॥೭॥

ಪದಾರ್ಥ:- [ವಂದನಶ್ರುತ್] ಸ್ತುತಿ ಹಾಗೂ ಭಾಷಣವನ್ನು ಕೇಳುವ, ಕೇಳಿಸುವ ಮತ್ತು [ಸೋಮಪಾವನ್] ಶ್ರೇಷ್ಠವಾದ ಸಾರವತ್ತಾದ ರಸಗಳನ್ನು ಕುಡಿಯುವವನಾದ [ಇಂದ್ರ] ಪರಮೈಶ್ವರ್ಯಯುಕ್ತ ಸಭಾಧ್ಯಕ್ಷನೇ! [ತೇ] ನಿನ್ನ [ಮನಃ] ಮನಸ್ಸು [ದಾನಾಯ] ಪುತ್ರರಿಗೆ ವಿದ್ಯಾದಿ ದಾನಕ್ಕಾಗಿ [ಅಸ್ತು] ಉತ್ತಮ ರೀತಿಯಲ್ಲಿರಲಿ. ಯಾವ ರೀತಿ ವಾಯು ಅಥವಾ ಸೂರ್ಯನ [ಅರ್ವಾಂಚಾ] ವೇಗಾದಿ ಗುಣಗಳನ್ನು ಹೊಂದುವ [ಹರೀ] ಧಾರಣಾಕರ್ಷಣ ಗುಣಗಳು ಮತ್ತು ಯಾವ ರೀತಿ [ಭೂರ್ಣಯಃ] ಪೋಷಕವೂ [ಯಮಿಷ್ಠಾಸಃ] ಅತಿಶಯವಾಗಿ ನಿಯಂತ್ರಿಸುತ್ತಾ [ಸಾರಥಯಃ] ರಥಗಳನ್ನು ನಡೆಸುವ ಸಾರಥಿಯು ಕುದುರೆ ಮೊದಲಾದವುಗಳನ್ನು ಉತ್ತಮ ಶಿಕ್ಷಣದಿಂದ ನಿಯಮನ ಗೊಳಿಸುತ್ತಾನೋ, ಹಾಗೆ ನೀನು ಸಹ ಮನುಷ್ಯಾದಿಗಳನ್ನು ಧರ್ಮದಲ್ಲಿ ನಡೆಯಿಸು ಮತ್ತು ಎಲ್ಲರಲ್ಲಿ [ಕೇತಾಃ] ಶಾಸ್ತ್ರೀಯ ಪ್ರಜ್ಞೆಗಳನ್ನು [ಆಕೃಧಿ] ಉತ್ತಮ ರೀತಿಯಿಂದ ಪ್ರಾಪ್ತಿಗೊಳಿಸು. ಈ ರೀತಿ ಮಾಡುವುದರಿಂದ [ಯೇ] ಯಾವ ನಿನ್ನ ಶತ್ರುಗಳಿದ್ದಾರೋ ಅವರು [ತೇ] ನಿನ್ನ ವಶವರ್ತಿಗಳಾಗುವರು. ಇದರಿಂದ [ತ್ವಾ] ನಿನ್ನನ್ನು [ನ ದಭ್ನುವಂತಿ] ತುಳಿಯಲಾರರು, ದುಃಖಿತರನ್ನಾಗಿ ಮಾಡಲಾರರು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಉತ್ತಮ ಸಾರಥಿಯು ಕುದುರೆಗಳನ್ನು ಚೆನ್ನಾಗಿ ಶಿಕ್ಷಣ ನೀಡಿ ನಿಯಮಪೂರ್ವಕವಾಗಿ ನಡೆಯಿಸುತ್ತಾನೋ ಮತ್ತು ಯಾವ ರೀತಿ ಸುತ್ತಿ

ಸುಳಿಯುವ ವಾಯುವು ನಿಯಂತ್ರವಾಗಿದೆಯೋ ಹಾಗೆಯೇ ಓದಿಸುವ ಮತ್ತು ಉಪದೇಶ ಮಾಡುವ ಧಾರ್ಮಿಕ ವಿದ್ವಾಂಸರು ಸತ್ಯ ವಿದ್ಯೆ ಮತ್ತು ಸತ್ಯ ಉಪದೇಶಗಳಿಂದ ಎಲ್ಲರನ್ನು ಸತ್ಯಾಚರಣಶೀಲರನ್ನಾಗಿ ಮಾಡುತ್ತಾರೆ. ಇವರುಗಳಲ್ಲದೆ ಮನುಷ್ಯರನ್ನು ಧರ್ಮಾತ್ಮರನ್ನಾಗಿಸುವ ಸಾಮರ್ಥ್ಯ ಬೇರಾರಿಗೂ ಇರುವುದಿಲ್ಲ.

ಉತ್ತಮ ಕರ್ಮಗಳ ಧಾರಣೆಯನ್ನು ಹೇಗೆ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಅಪ್ರಕ್ಷಿತಂ ವಸು ಬಿಭರ್ಷಿ ಹಸ್ತಯೋ-ರಷಾಳ್ಹಂ ಸಹಸ್ತನ್ವಿ ಶ್ರುತೋ ದಧೇ ।

ಆವೃತಾಸೋಽವತಾಸೋ ನ ಕರ್ತೃಭಿ-ಸ್ತನೂಷು ತೇ ಕ್ರತವ ಇಂದ್ರ ಭೂರಯಃ ॥೮॥

ಪದಾರ್ಥ:- [ಇಂದ್ರ] ಹೇ ಸಭಾಧ್ಯಕ್ಷ! [ಶ್ರುತಃ] ಪ್ರಶಂಸಾಯುಕ್ತನಾದ ನೀನು ಯಾವ [ಅಪ್ರಕ್ಷಿತಂ] ಕ್ಷಯ ರಹಿತವಾದ [ವಸು] ಧನ ಮತ್ತು [ಅಷಾಳ್ಹಂ] ಶತ್ರುಗಳೊಂದಿಗೆ ಅಸಹ್ಯ [ಸಹಃ] ಬಲವನ್ನು [ತನ್ವಿ] ಶರೀರದಲ್ಲಿ [ಹಸ್ತಯೋಃ] ಕೈನಲ್ಲಿರುವ ನೆಲ್ಲಿಕಾಯಿಯಂತೆ [ಬಿಭರ್ಷಿ] ಧಾರಣೆ ಮಾಡುತ್ತೀಯೆ. ಯಾರು [ಆವೃತಾಸಃ] ಸುಖದಿಂದ ಯುಕ್ತರಾಗಿ [ಅವತಾಸಃ] ಉತ್ತಮ ರೀತಿಯಲ್ಲಿ ರಕ್ಷಿತರಾದ ಮನುಷ್ಯರ [ನ] ಸಮಾನವಾಗಿ [ತೇ] ನಿನ್ನ [ಭೂರಯಃ] ಬಹುಶಾಸ್ತ್ರವಿದರಾಗಿ [ಕ್ರತವಃ] ಬುದ್ಧಿ ಮತ್ತು ಕರ್ಮಗಳನ್ನು [ಕರ್ತೃಭಿಃ] ಪುರುಷಾರ್ಥಿ ಮನುಷ್ಯರ [ತನೂಷು] ಶರೀರಗಳಲ್ಲಿ ಧಾರಣೆ ಮಾಡುತ್ತಾರೋ ಅವುಗಳನ್ನು ನಾನೂ [ದಧೇ] ಧಾರಣ ಮಾಡುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಸಭಾಧ್ಯಕ್ಷ ಅಥವಾ ಸಭಾಸದರಾದ ವಿದ್ವಾಂಸರು ಕ್ಷಯರಹಿತವಾದ ವಿಜ್ಞಾನ, ಬಲ, ಧನ, ಶ್ರವಣ ಮತ್ತು ಉತ್ತಮ ಕರ್ಮಗಳನ್ನು ಧಾರಣೆ ಮಾಡುತ್ತಾರೋ, ಅದೇ ರೀತಿ ಈ ಎಲ್ಲ ಕರ್ಮಗಳನ್ನು ಸಮಸ್ತ ಪ್ರಜೆಗಳು ಧಾರಣ ಮಾಡಬೇಕು.

ಈ ಸೂಕ್ತದಲ್ಲಿ ಸೂರ್ಯ, ಪ್ರಜೆ ಮತ್ತು ಸಭಾಧ್ಯಕ್ಷರ ಕೃತ್ಯಗಳ ವರ್ಣನೆ ಇದೆ. ಇದರಿಂದ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ಐವತ್ತೈದನೆಯ ಸೂಕ್ತ ಸಮಾಪ್ತ

ಸೂಕ್ತ ೫೬

ಮಂತ್ರಸಂಖ್ಯೆ ೬ । ಋಷಿಃ - ಸವ್ಯ ಆಂಗಿರಸಃ । ದೇವತಾ - ಇಂದ್ರಃ । ಛಂದಃ - ೧, ೪ ಜಗತೀ. ೨, ೫ -೬ ನಿಚೃದ್ ಗಾಯತ್ರಿ । ೩, ೮ ವಿರಾಡ್ ಗಾಯತ್ರಿ । ಸ್ವರಃ - ನಿಷಾದಃ, ೫,೬ ಧೈವತಃ.

ವಿದ್ವಾನ್ ಸ್ತ್ರೀ-ಪುರುಷರಿಂದ ಉಪದೇಶದ ಮೂಲಕ ಅವಿದ್ಯಾ ನಿವಾರಣೆಯನ್ನು ಮಾಡುವ ಬಗ್ಗೆ ವಿವರಣೆ ಇದೆ

ಏಷ ಪ್ರ ಪೂರ್ವೀರವ ತಸ್ಯ ಚಮ್ರಿಷೋಽತ್ಯೋ ನ ಯೋಷಾಮುದಯಂಸ್ತ ಭುರ್ವಣಿಃ ।

ದಕ್ಷಂ ಮಹೇ ಪಾಯಯತೇ ಹಿರಣ್ಯಯಂ ರಥಮಾವೃತ್ಯಾ ಹರಿಯೋಗಮೃಭ್ವಸಮ್ ॥೧॥

ಪದಾರ್ಥ:- ಯಾವ [ಏಷಃ] ಈ [ಭುರ್ವಣಿಃ] ಧಾರಣ ಮತ್ತು ಪೋಷಣೆ ಮಾಡುವ ಸಭೆಯ ಅಧ್ಯಕ್ಷ ಅಥವಾ ಸೂರ್ಯನು, [ನ] ಯಾವ ರೀತಿ [ಅತ್ಯಃ] ಗಂಡು ಕುದುರೆಯು ಹೆಣ್ಣು ಕುದುರೆಯೊಂದಿಗೆ ಸಂಯೋಗವನ್ನು ಮಾಡುತ್ತದೆಯೋ ಹಾಗೆ [ಯೋಷಾಂ] ವಿದುಷಿ ಸ್ತ್ರೀಯೊಂದಿಗೆ ಯುಕ್ತನಾಗಿ [ತಸ್ಯ] ಆ ಪರಮೈಶ್ವರ್ಯದ ಪ್ರಾಪ್ತಿಗಾಗಿ

[ಚಮಿಷಃ] ಭೋಗಗಳನ್ನು ಹೊಂದುವ [ಪೂರ್ವೀಃ] ಸನಾತನ ಪ್ರಜೆಗಳನ್ನು [ಪ್ರಯೋ ದಯಂಸ್ತ] ಉತ್ತಮ ರೀತಿಯ ಆಚಾರವನ್ನು ಅಧರ್ಮದ ಅಥವಾ ನಿಕೃಷ್ಟತೆಯಿಂದ ನಿವೃತ್ತಗೊಳಿಸಿ ಆ ಪ್ರಜೆಗಳಿಗಾಗಿ [ಮಹೇ] ಪೂಜನೀಯ ಮಾರ್ಗದಲ್ಲಿ ಕಿವಿ ಮೊದಲಾದ ಇಂದ್ರಿಯಗಳನ್ನು [ಆವೃತ್ಯ] ಹೊಂದಿ [ಹಿರಣ್ಯಯಂ] ಬಹಳವಾದ ತೇಜಸ್ಸನ್ನು ಅಥವಾ ಸುವರ್ಣವನ್ನು [**ಋಭ್ವಸಮ್**] ಮನುಷ್ಯಾದಿಗಳನ್ನು ಪ್ರಕ್ಷೇಪಣೆ ಮಾಡುವ [**ಹರಿಯೋಗಂ**] ಅಗ್ನಿಯುಕ್ತವಾದ ಅಥವಾ ಅಶ್ವಾದಿಗಳಿಂದ ಯುಕ್ತವಾದ [**ದಕ್ಷಂ**] ಬಲ ಚತುರ ಶಿಲ್ಪಿ ಮನುಷ್ಯರಿಂದ ಕೂಡಿದ [**ರಥಂ**] ಯಾನ ಸಮೂಹವನ್ನು [**ಆವೃತ್ಯ**] ಸಾಮಗ್ರಿಗಳಿಂದ ಆಚ್ಛಾದನಗೊಳಿಸಿ ಸುಖರೂಪಿ ರಸಗಳನ್ನು [**ಪಾಯಯತೇ**] ಪಾನ ಮಾಡುತ್ತಾನೆಯೋ ಅವನು ಎಲ್ಲರಿಂದಲೂ ಮಾನ್ಯನೆನಿಸಲ್ಪಡುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರವಿದೆ. ಉಪದೇಶಕನು ತನ್ನಂತೆಯೇ ಇರುವ ವಿದುಷಿ ಸ್ತ್ರೀಯೊಂದಿಗೆ ವಿವಾಹವನ್ನು ಮಾಡಿಕೊಂಡು ಎಲ್ಲ ಪುರುಷರಿಗೂ ಉಪದೇಶವನ್ನು ಮತ್ತು ಬಾಲಕರಿಗೆ ವಿದ್ಯಾದಾನವನ್ನು ಮಾಡುತ್ತಾನೋ, ಅದೇ ರೀತಿ ಆ ವಿದುಷಿ ಸ್ತ್ರೀಯೂ ಸಹ ಸ್ತ್ರೀಯರಿಗೆ ಉಪದೇಶವನ್ನು ಕನ್ಯೆಯರಿಗೆ ವಿದ್ಯಾದಾನವನ್ನೂ ಮಾಡಲಿ. ಹೀಗೆ ಮಾಡುವುದರಿಂದ ಎಲ್ಲಿಯೂ, ಯಾವೆಡೆಯಲ್ಲಿಯೂ ಅವಿದ್ಯೆ ಮತ್ತು ಭಯದಿಂದ ಉಂಟಾಗುವ ದುಃಖವು ಇರುವುದಿಲ್ಲ.

ವಿದ್ವಾನ್ ಪುರುಷ ಮತ್ತು ವಿದುಷೀ ಸ್ತ್ರೀಯರ ಕರ್ತವ್ಯವೇನು ಎಂಬುದನ್ನು ಇಲ್ಲಿ ತಿಳಿಸಲಾಗಿದೆ

ತಂ ಗೂರ್ತಯೋ ನೇಮನ್ನಿಷಃ ಪರೀಣಸಃ ಸಮುದ್ರಂ ನ ಸಂಚರಣೇ ಸನಿಷ್ಯವಃ ।
ಪತಿಂ ದಕ್ಷಸ್ಯ ವಿದಥಸ್ಯ ನೂ ಸಹೋ ಗಿರಿಂ ನ ವೇನಾ ಅಧಿ ರೋಹ ತೇಜಸಾ ॥೨॥

ಪದಾರ್ಥ:- [**ತಂ**] ಮೇಲೆ ಹೇಳಿದ ಪುರುಷನ [**ಗೂರ್ತಯಃ**] ಉದ್ಯಮಶೀಲೆಯರು [**ನೇಮನ್ನಿಷಃ**] ಮುಂದರಿದ ಇಚ್ಛೆಯುಳ್ಳವರು. [**ಪರೀಣಸಃ**] ಉತ್ತಮ ನಡೆಯುಳ್ಳವರು. [**ಸಮುದ್ರಂ**] ಸಮುದ್ರವನ್ನು ನದಿಗಳು ಸೇರುವಂತೆ (ಲುಪ್ತೋಪಮಾಲಂಕಾರ) [**ಸಂಚರಣೇ**] ಒಟ್ಟಿಗೆ ನಡೆಯುವುದರಲ್ಲಿ [**ಸನಿಷ್ಯವಃ**] ಹಂಚಿಕೊಂಡು ನಡೆಯುವವರೂ ಆದ (ನಾರಿಯರು) [**ದಕ್ಷಸ್ಯ**] ಬಲದ [**ವಿದಥಸ್ಯ**] ಜ್ಞಾನದ [**ಸಹಃ**] ಸಹನಶೀಲತೆಯ [**ಪತಿಂ**] ಪಾಲಕನಾದ ಪುರುಷನನ್ನು [**ವೇನಾ ಗಿರಿಂ ನ**] ಮೇದಾವಿಗಳು ಉತ್ತಮ ವಾಣಿಯನ್ನು ಗ್ರಹಿಸುವಂತೆ [**ತೇಜಸಾ**] ತೇಜಸ್ಸಿನಿಂದ [**ಅಧಿರೋಹ**] ಮೇಲಕ್ಕೇರುವಂತಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಹಿಂದಿನ ಮಂತ್ರದಲ್ಲಿ ಹೇಳಲಾದ ಪುರುಷರನ್ನು ಉದ್ಯಮಶೀಲೆಯರಾದ ನಿರಂತರ ಪ್ರಗತಿಯತ್ತ ಸಾಗುವ ಇಚ್ಛೆಯನ್ನುಳ್ಳವರಾದ, ಉತ್ತಮವಾದ ಸದಾಚಾರ ಸಂಪನ್ನೆಯರಾದ ಹಾಗೂ ಜೊತೆ ಜೊತೆಯಾಗಿ ನಡೆಯುವುದರಲ್ಲಿಯೇ ಆಸಕ್ತರಾದ ನಾರಿಯರು ಜವಾಬ್ದಾರಿಗಳನ್ನು ಹಂಚಿಕೊಂಡು ಮುಂದೆ ಸಾಗುತ್ತಾರೆ. ಇಂತಹ ಉದಾತ್ತ ವ್ಯಕ್ತಿತ್ವದ ಮಹಿಳೆಯರು ದಕ್ಷತೆ, ಬಲ, ಜ್ಞಾನ ಹಾಗೂ ಸಹನಶೀಲತೆ-ಕಷ್ಟಸಹಿಷ್ಣುತೆಗಳನ್ನು ತಮ್ಮ ಬಾಳಿನಲ್ಲಿ ರಕ್ಷಿಸಿಕೊಂಡು ಬರುವ ಪುರುಷನನ್ನು, ಮೇಧಾವಿಗಳು ಉತ್ತಮವಾದ ವಾಣಿಯನ್ನು ಗ್ರಹಿಸುವಂತೆ ತೇಜಸ್ಸು ಮತ್ತು ವರ್ಚಸ್ಸಿನಿಂದ ಅಭಿವೃದ್ಧಿಯನ್ನು, ಉನ್ನತಿಯನ್ನು ಹೊಂದುವಂತಾಗಲಿ.

ಉತ್ತಮವಾದ ವಿವಾಹ ಸಂಬಂಧ ಹೇಗೆ ಎಂಬುದನ್ನು ತಿಳಿಸಲಾಗುತ್ತದೆ.

ಸ ತುರ್ವಣಿರ್ಮಹಾ ಅರೇಣು ಪೌಂಸ್ಯೇ ಗಿರೇರ್ಭೃಷ್ಟಿರ್ನ ಭ್ರಾಜತೇ ತುಜಾ ಶವಃ ।
ಯೇನ ಶುಷ್ಣಂ ಮಾಯಿನಮಾಯಸೋ ಮದೇ ದುಧ್ರ ಆಭೂಷು ರಾಮಯನ್ನಿ ದಾಮನಿ ॥೩॥

ಪದಾರ್ಥ:- ಹೇ ಉತ್ತಮ ವರನ ಇಚ್ಛೆಯನ್ನು ಮಾಡುವ ಕನ್ಯೆಯೇ! ಯಾವ ರೀತಿ ನೀನು ಯಾವ [ತುರ್ವಣಿಃ] ಶೀಘ್ರ ಸುಖಕಾರಿಯಾದ [ದುಧ್ರಃ] ಬಲದಿಂದ ಪೂರ್ಣರಾದ [ಆಯಸಃ] ವಿಜ್ಞಾನದಿಂದ ಯುಕ್ತರಾದ [ಮಹಾನ್] ಸರ್ವೋತ್ಕೃಷ್ಟ [ಪೌಂಸ್ಯೇ] ಪುರುಷಾರ್ಥಯುಕ್ತ ವ್ಯವಹಾರದಲ್ಲಿ ಪ್ರವೀಣನಾದ [ತುಜಾ] ದುಃಖಗಳ ನಾಶಕನಾದ [ಆಭೂಷು] ಎಲ್ಲ ಪ್ರಕಾರದಿಂದ ಎಲ್ಲರನ್ನು ಸುಭೂಷಿತಗೊಳಿಸುವ [ಅರೇಣು] ಕ್ಷಯರಹಿತ ಕರ್ಮವನ್ನು [ಮದೇ] ಹರ್ಷಿತನಾಗುವುದರಲ್ಲಿ [ರಾಮಯತ್] ಕ್ರೀಡೆಗಾಗಿ [ಶವಃ] ಉತ್ತಮ ಬಲವನ್ನು ಹೊಂದಿದವನಾಗಿ [ನ] ಯಾವ ರೀತಿ [ಗಿರೇಃ] ಮೇಘದ [ಭೃಷ್ಟಿಃ] ಉತ್ತಮ ಶಿಖರಗಳು [ಭ್ರಾಜತೇ] ಪ್ರಕಾಶಿತವಾಗುತ್ತವೆಯೋ ಹಾಗೆ [ತಂ] ಆ [ಶುಷ್ಣಂ] ಬಲಯುಕ್ತವಾದ [ಮಾಯಿನಂ] ಅತ್ಯುತ್ತಮ ಬುದ್ಧಿಶಾಲಿಯಾದ ವರನನ್ನು [ಯೇನ] ಯಾವ ಬಲದಿಂದ [ದಾಮನಿ] ಸುಖದಾಯಕವಾದ ಗೃಹಸ್ಥಾಶ್ರಮದಲ್ಲಿ ಸ್ವೀಕಾರ ಮಾಡುತ್ತೀಯೋ, ಅದೇ ರೀತಿ [ಸಃ] ಆ ವರನೂ ಸಹ ನಿನ್ನನ್ನು ಅದೇ ಬಲದಿಂದ ಪ್ರೇಮಬದ್ಧಗೊಳಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವುದರಲ್ಲಿ ಸಮಾನ ಸ್ವಭಾವಯುಕ್ತರಾದ ಕನ್ಯೆ ಮತ್ತು ವರರ ಸಂಬಂಧ ಉಂಟಾಗುವುದೋ, ಅಲ್ಲದೆ ಕನ್ಯೆಯಿಂದ ವರನ ಬಲ ಮತ್ತು ಆಯುಷ್ಯವು ಎರಡರಷ್ಟು ಅಥವಾ ಮೂರರಷ್ಟು ಹೆಚ್ಚುವುದೋ, ಅದನ್ನೇ ಅತಿ ಉತ್ತಮ ವಿವಾಹ ಎಂದು ಹೇಳಲಾಗುತ್ತದೆ.

ಗೃಹಸ್ಥಾಶ್ರಮದಲ್ಲಿ ನಿರಂತರ ಆನಂದಕ್ಕಾಗಿ ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ

ದೇವೀ ಯದಿ ತವಿಷೀ ತ್ವಾವೃಧೋತಯ ಇಂದ್ರಂ ಸಿಷಕ್ತ್ಯುಷಸಂ ನ ಸೂರ್ಯಃ ।
ಯೋ ಧೃಷ್ಣುನಾ ಶವಸಾ ಬಾಧತೇ ತಮ ಇಯರ್ತಿ ರೇಣುಂ ಬೃಹದರ್ಹರಿಷ್ವಣಿಃ ॥೪॥

ಪದಾರ್ಥ:- ಹೇ ಸ್ತ್ರೀ! [**ಯಃ**] ಯಾವ [**ಅರ್ಹರಿಷ್ವಣಿಃ**] ಅಹಿಂಸಕ ಧಾರ್ಮಿಕರು ಮತ್ತು ಪಾಪಿಗಳ ವಿವೇಕೋದಯವನ್ನು ಉಂಟುಮಾಡುವ ಪುರುಷನು [**ಧೃಷ್ಣುನಾ**] ದೃಢವಾದ [**ಶವಸಾ**] ಬಲದಿಂದ [**ನ**] ಯಾವ ರೀತಿ [**ಸೂರ್ಯಃ**] ಸೂರ್ಯನು [**ಉಷಂ**] ಉಷೆಯನ್ನು ಹೊಂದಿ [**ಬೃಹತ್‌ತಮಃ**] ಹಿರಿದಾದ ಅಂಧಕಾರವನ್ನು ದೂರಮಾಡುತ್ತಾನೋ, ಹಾಗೆಯೇ ನಿನ್ನ ದುಃಖವನ್ನು ದೂರ ಮಾಡುತ್ತಾನೆ. ಹೇ ಪುರುಷನೇ! [**ಯದಿ**] ಒಂದು ವೇಳೆ [**ತ್ವಾವೃಧಾ**] ನಿನ್ನನ್ನು ಸುಖದಿಂದ ವರ್ಧಿಸುವಂತೆ ಮಾಡುವ [**ತವಿಷೀಂ**] ಪೂರ್ಣ ಬಲಯುಕ್ತರಾದ [**ದೇವೀ**] ವಿದುಷಿಯೂ ಅತೀವ ಪ್ರಿಯಳಾದ ಸ್ತ್ರೀಯೂ [**ರೇಣುಂ**] ರಮಣೀಯವಾದ ನಿನ್ನ ಸ್ವರೂಪವನ್ನು [**ಇಯರ್ತಿ**] ಹೊಂದುತ್ತಾಳೆಯೋ ಮತ್ತು [**ಊತಯೇ**] ರಕ್ಷಣಾದಿಗಳಿಂದಾಗಿ [**ಇಂದ್ರಂ**] ಪರಮ ಸುಖಪ್ರದನಾದ ನಿನ್ನನ್ನು [**ಸಿಷಕ್ತಿ**] ಉತ್ತಮ ಸುಖದಿಂದ ಯುಕ್ತಗೊಳಿಸುತ್ತಾಳೋ, ಹಾಗೆಯೇ ನೀನೂ ಸಹ ಆ ಸ್ತ್ರೀಯನ್ನು ಪರಸ್ಪರರ ಆನಂದಕ್ಕಾಗಿ ಸದಾ ಸುಖಯುಕ್ತಳನ್ನಾಗಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವಾಗ ಸ್ತ್ರೀಗೆ ಪ್ರಸನ್ನನಾದ ಪುರುಷನು, ಪುರುಷನಿಗೆ ಪ್ರಸನ್ನಳಾದ ಸ್ತ್ರೀಯು ಲಭ್ಯರಾಗುತ್ತಾರೋ ಆಗಲೇ ಗೃಹಸ್ಥಾಶ್ರಮದಲ್ಲಿ ನಿರಂತರ ಆನಂದವಿರುತ್ತದೆ.

ಸ್ತ್ರೀ ಪುರುಷರ ಕರ್ತವ್ಯವೇನು ಎಂಬುದನ್ನಿಲ್ಲಿ ತಿಳಿಸಲಾಗಿದೆ

ವಿ ಯತ್ ತಿರೋ ಧರುಣಮಚ್ಯುತಂ ರಜೋಽತಿಷ್ಠಿಪೋ ದಿವ ಆತಾಸು ಬರ್ಹಣಾ ।
ಸ್ವರ್ಮೀಳ್ಹೇ ಯನ್ಮದ ಇಂದ್ರ ಹರ್ಷ್ಯಾಹನ್ ವೃತ್ರಂ ನಿರಪಾಮೌಬ್ಜೋ ಅರ್ಣವಮ್ ॥೫॥

ಪದಾರ್ಥ:- ಹೇ ಪರಮೈಶ್ವರ್ಯಯುಕ್ತನಾದ [ಇಂದ್ರ] ಸಭಾಧ್ಯಕ್ಷನೇ! ಯಾವ ರೀತಿ [ಬಿಬ್ದಃ] ಕೋಮಲವಾಗಿಸುವವನಿಂದ ಸಿದ್ಧವಾದ [ಯತ್] ಯಾವ ಸೂರ್ಯನ [ದಿವಃ] ಪ್ರಕಾಶ ಅಥವಾ ಆಕರ್ಷಣದಿಂದ [ಆತಾಸು] ದಿಕ್ಕುಗಳಲ್ಲಿ [ತಿರಃ] ತಿರುಗಿಸಲ್ಪಟ್ಟಿರುವ [ಬರ್ಹಣಾ] ಬುದ್ಧಿಯುಕ್ತವಾದ [ಅಚ್ಯುತಂ] ಕಾರಣರೂಪ ಅಥವಾ ಪ್ರವಾಹರೂಪದಿಂದ ಅವಿನಾಶಿಯಾದ [ಧರುಣಂ] ಧಾರಣ ಕರ್ತನಾದ [ರಜಃ] ಪೃಥಿವೀ ಮೊದಲಾದ ಲೋಕಗಳನ್ನು [ವ್ಯತಿಷ್ಕಿಪಃ] ವಿಶೇಷವಾಗಿ ಸ್ಥಾಪನೆ ಮಾಡುತ್ತಾ ಮತ್ತು [ಮದೇ] ಆನಂದಯುಕ್ತವಾಗಿ [ಸ್ವರ್ಮೀಳ್ಹೇ] ಅಂತರಿಕ್ಷದಲ್ಲಿರುವ [ಹರ್ಷ್ಯಾ] ಹರ್ಷವನ್ನು ಉತ್ಪನ್ನಗೊಳಿಸಲು ಯೋಗ್ಯವಾದ ಕರ್ಮಗಳನ್ನು ಮಾಡುತ್ತಾ [ಯತ್] ಯಾವ [ವೃತ್ರಂ] ಮೇಘವನ್ನು [ಅಹನ್] ನಾಶಮಾಡಿ [ಆತಾಶು] ದಿಶೆಗಳಲ್ಲಿ [ಅಪಾಂ] ಜಲರಾಶಿಗಳೊಂದಿಗೆ [ಅರ್ಣವಂ] ಸಮುದ್ರವನ್ನು ಸಿದ್ಧಮಾಡುತ್ತದೆಯೋ, ಅದೇ ರೀತಿ ರಾಜ್ಯ ಮತ್ತು ನ್ಯಾಯವನ್ನು ಧಾರಣ ಮಾಡಿ ಶತ್ರುಗಳನ್ನು ಕೊಂದು ತಮ್ಮ ಸ್ತ್ರೀಯರಿಗೆ ಆನಂದವನ್ನು ಕೊಡುವವನಾಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯಲೋಕವು ತನ್ನ ಪ್ರಕಾಶ ಮತ್ತು ಆಕರ್ಷಣಾದಿ ಗುಣಗಳಿಂದ ಎಲ್ಲ ಲೋಕಗಳನ್ನು ತಮ್ಮ ತಮ್ಮ ಕಕ್ಷೆಯಲ್ಲಿಯೇ ಭ್ರಮಣ ಮಾಡಿಸುತ್ತಾ ಎಲ್ಲ ದಿಕ್ಕುಗಳಲ್ಲಿ ತಮ್ಮ ತೇಜಸ್ಸನ್ನು ಮತ್ತು ರಸವನ್ನು ವಿಸ್ತಾರಗೊಳಿಸುತ್ತ ಮಳೆಯನ್ನು ಉತ್ಪನ್ನಮಾಡುವ ಮೂಲಕ ಪ್ರಜೆಗಳ ಪಾಲನೆಯನ್ನು ಮಾಡುತ್ತದೆಯೋ, ಅದೇ ರೀತಿ ಸ್ತ್ರೀ ಪುರುಷರೂ ಸಹ ಮಾಡಬೇಕು.

ವಿದ್ವಾಂಸರ ಕರ್ತವ್ಯವೇನೆಂಬುದನ್ನು ಇಲ್ಲಿ ತಿಳಿಸಲಾಗಿದೆ.

ತ್ವಂ ದಿವೋ ಧರುಣಂ ಧಿಷ ಓಜಸಾ ಪೃಥಿವ್ಯಾ ಇಂದ್ರ ಸದನೇಷು ಮಾಹಿನಃ ।
ತ್ವಂ ಸುತಸ್ಯ ಮದೇ ಅರಿಣಾ ಅಪೋ ವಿ ವೃತ್ರಸ್ಯ ಸಮಯಾ ಪಾಷ್ಯಾರುಜಃ ॥೬॥

ಪದಾರ್ಥ:- [ಇಂದ್ರ] ಹೇ ಪರಮೈಶ್ವರ್ಯ ಸಂಪಾದಕನಾದ ಸಭಾಧ್ಯಕ್ಷನೇ! [ಮಾಹಿನಃ] ಪೂಜನೀಯವಾದ ಮಹತ್ವ ಪೂರ್ಣ ಗುಣವನ್ನುಳ್ಳ [ತ್ವಂ] ನೀನು [ಓಜಸಾ] ಬಲದಿಂದ ಯಾವ ರೀತಿ ಸೂರ್ಯನು [ದಿವಃ] ದಿವ್ಯ ಗುಣಯುಕ್ತ ಪ್ರಕಾಶದಿಂದ [ಪೃಥಿವ್ಯಾಃ] ಪೃಥಿವಿಯ ಮತ್ತು ಪದಾರ್ಥಗಳ [ಧರುಣಂ] ಆಧಾರವಾಗಿದೆಯೋ [ಸದನೇಷು] ಗೃಹಾದಿಗಳಲ್ಲಿ [ಧಿಷೇ] ಧಾರಣ ಮಾಡುತ್ತೀಯೋ, ಅದೇ ರೀತಿ ವಿದ್ಯುತ್ತು [ವೃತ್ರಸ್ಯ] ಮೇಘವನ್ನು ನಾಶಮಾಡಿ [ಅಪಃ] ಜಲರಾಶಿಗಳನ್ನು ವರ್ಷಿಸುತ್ತದೆಯೋ ಅದೇ ರೀತಿ [ಪಾಷ್ಯಾ] ಚೂರ್ಣಕಾರಕವಾದ ಕ್ರಿಯೆಗಳಿಂದ ಶತ್ರುಗಳನ್ನು [ವ್ಯರುಜಃ] ಮರಣಪ್ರಾಯವನ್ನಾಗಿ ಮಾಡಿ [ಅರಿಣಾಃ] ಸುಖವನ್ನು ಪ್ರಾಪ್ತಗೊಳಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ವಿದ್ವಾಂಸನು ಸೂರ್ಯನಂತೆ ರಾಜ್ಯವನ್ನು ಸುಪ್ರಕಾಶಿತಗೊಳಿಸಿ ಶತ್ರುಗಳನ್ನು ನಿವಾರಿಸಿ ಪ್ರಜೆಗಳ ಪಾಲನೆಯನ್ನು ಮಾಡುತ್ತಾನೋ, ಹಾಗೆಯೇ ನಾವೂ ಸಹ ಅನುಷ್ಠಾನ ಮಾಡಬೇಕು.

ಈ ಸೂಕ್ತದಲ್ಲಿ ಸೂರ್ಯ ಮತ್ತು ವಿದ್ವಾಂಸರ ಗುಣ-ವರ್ಣನೆ ಇರುವುದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂಬುದನ್ನು ತಿಳಿಯಬೇಕು.

ಐವತ್ತಾರನೆಯ ಸೂಕ್ತ ಸಮಾಪ್ತ

ಸೂಕ್ತ ೫೭

ಮಂತ್ರಸಂಖ್ಯೆ ೬ । ಋಷಿಃ - ಸವ್ಯ ಆಂಗಿರಸಃ । ದೇವತಾ - ಇಂದ್ರಃ । ಛಂದಃ - ೧, ೨, ೪ ಜಗತೀ । ೩ ವಿರಾಟ್ । ೬ ನಿಚೃಜ್ಜಗತೀ । ಸ್ವರಃ - ನಿಷಾದಃ, ಮಧ್ಯಮಃ.

ಎಂತಹ ಸೇನಾಪತಿಯನ್ನು ಆರಿಸಬೇಕು ಎಂಬುದನ್ನು ತಿಳಿಸಲಾಗಿದೆ.

ಪ್ರ ಮಂಹಿಷ್ಠಾಯ ಬೃಹತೇ ಬೃಹದ್ರಯೇ ಸತ್ಯಶುಷ್ಮಾಯ ತವಸೇ ಮತಿಂ ಭರೇ ।
ಅಪಾಮಿವ ಪ್ರವಣೇ ಯಸ್ಯ ದುರ್ಧರಂ ರಾಧೋ ವಿಶ್ವಾಯು ಶವಸೇ ಅಪಾವೃತಮ್ ॥೧॥

ಪದಾರ್ಥ:- ಯಾವ ರೀತಿ ನಾನು [ಯಸ್ಯ] ಯಾವ ಸಭೆ ಮೊದಲಾದವುಗಳ ಅಧ್ಯಕ್ಷನ [ಶವಸೇ] ಬಲಕ್ಕಾಗಿ [ಪ್ರವಣೇ] ಕೆಳಗಿನ ಸ್ಥಾನದಲ್ಲಿ [ಅಪಾಮಿವ] ಜಲಗಳ ಸಮಾನವಾಗಿ [ಅಪಾವೃತಂ] ದಾನ ಅಥವಾ ಭೋಗಕ್ಕಾಗಿ ಪ್ರಸಿದ್ಧವಾದ [ವಿಶ್ವಾಯು] ಪೂರ್ಣ ಆಯುಷ್ಯಯುಕ್ತ [ದುರ್ಧರಂ] ದುಷ್ಟಜನರನ್ನು ದುಃಖದಿಂದ ಧಾರಣೆ ಮಾಡಲು ಯೋಗ್ಯವಾದ [ರಾಧಃ] ವಿದ್ಯೆ ಅಥವಾ ರಾಜ್ಯದಿಂದ ಸಿದ್ಧಿಸಲ್ಪಟ್ಟ ಯಾವ ಧನವಿದೆಯೋ ಆ [ಸತ್ಯಶುಷ್ಮಾಯ] ಸತ್ಯವಾದ ಬಲಗಳ ನಿಮಿತ್ತ [ತವಸೇ] ಬಲಿಷ್ಠವೂ [ಬೃಹದ್ರಯೇ] ಉತ್ತಮೋತ್ತಮ ಧನದಿಂದ ಯುಕ್ತವೂ [ಬೃಹತೇ] ಗುಣಗಳಿಂದ ಹಿರಿದಾದುದು [ಮಂಹಿಷ್ಠಾಯ] ಅತ್ಯಂತ ದಾನಗಳನ್ನು ಮಾಡುವ ಸಭಾಧ್ಯಕ್ಷನಿಗಾಗಿ [ಮತಿಂ] ವಿಜ್ಞಾನವನ್ನು [ಪ್ರಭರೇ] ಉತ್ತಮ ರೀತಿಯಿಂದ ಧಾರಣ ಮಾಡುತ್ತೇನೋ, ಹಾಗೆಯೇ ನೀನೂ ಸಹ ಧಾರಣ ಮಾಡಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ನೀರು ಉನ್ನತ ಸ್ಥಾನದಿಂದ ಬಂದು ಕೆಳಗಿನ ಸ್ಥಾನದಲ್ಲಿರುವ ಜಲಾಶಯವನ್ನು ಹೊಂದಿ ಸ್ವಚ್ಛವೂ, ಸ್ಥಿರವೂ ಆಗುತ್ತದೆಯೋ, ಅದೇ ರೀತಿ ನಮ್ರನೂ, ಬಲಶಾಲಿಯೂ, ಪುರುಷಾರ್ಥಿಯೂ, ಧಾರ್ಮಿಕನೂ ಆದ ವಿದ್ವಾಂಸನನ್ನು ಹೊಂದುತ್ತಾ ವಿದ್ಯೆ ಎಂಬ ಧನವು ನಿಶ್ಚಲವಾಗುತ್ತದೆ. ಯಾವುದು ರಾಜ್ಯಲಕ್ಷ್ಮಿಯನ್ನು ಪಡೆದು ಎಲ್ಲರ ಹಿತದಲ್ಲಿ ನ್ಯಾಯ ಹಾಗೂ ವಿದ್ಯೆಯ ವೃದ್ಧಿಯನ್ನು ಶರೀರಾತ್ಮ ಬಲದ ಉನ್ನತಿಯನ್ನು ಮಾಡಲು ನೀಡಲ್ಪಡುತ್ತದೆಯೋ, ಅದೇ ಶೂರ ವೀರ ವಿದ್ಯಾದಿಗಳನ್ನು ನೀಡುವ ಸಭಾಸೇನಾಧ್ಯಕ್ಷನ ಅಭಿಷೇಕವನ್ನು ನಾವು ಮಾಡೋಣ.

ಸಭಾಧ್ಯಕ್ಷನ ಆಶ್ರಯದಿಂದ ಪ್ರಜೆಗಳು ಸುಖಿಗಳಾಗಬೇಕೆಂಬುದನ್ನು ಇಲ್ಲಿ ವಿವರಿಸಲಾಗಿದೆ

ಅಧ ತೇ ವಿಶ್ವಮನು ಹಾಸದಿಷ್ಟಯ ಆಪೋ ನಿಮ್ನೇವ ಸವನಾ ಹವಿಷ್ಮತಃ ।
ಯತ್ ಪರ್ವತೇ ನ ಸಮಶೀತ ಹರ್ಯತ ಇಂದ್ರಸ್ಯ ವಜ್ರಃ ಶ್ನಥಿತಾ ಹಿರಣ್ಯಯಃ ॥೨॥

ಪದಾರ್ಥ:- [ಯತ್] ಯಾವ [ಹವಿಷ್ಮತಃ] ಉತ್ತಮ ದಾನಗ್ರಹಣ ಕರ್ತನಾದ [ಇಂದ್ರಸ್ಯ] ಐಶ್ವರ್ಯಶಾಲೀ ಸಭಾಧ್ಯಕ್ಷನ [ಹಿರಣ್ಯಯಃ] ಜ್ಯೋತಿಃಸ್ವರೂಪಿಯಾದ [ವಜ್ರಃ] ಶಸ್ತ್ರರೂಪೀ ಕಿರಣಗಳು [ಪರ್ವತೇ] ಮೇಘದಲ್ಲಿ [ನ] ಯಾವ ರೀತಿ [ಶ್ನಥಿತಾ] ಹಿಂಸೆ ಮಾಡುವಂತಾಗಿರುತ್ತದೆಯೋ, ಅದೇ ರೀತಿ [ಹರ್ಯತಃ] ಉತ್ತಮ ವ್ಯವಹಾರದಿಂದ [ಸಮಶೀತ] ಪ್ರಸಿದ್ಧವಾದ [ಅಧಾ] ಇದರ ಅನಂತರ [ತೇ] ನಿನ್ನ ಸಮಾಶ್ರಯದಿಂದ [ವಿಶ್ವಂ] ಸಕಲ ಜಗತ್ತಿನ [ಸವನಾ] ಐಶ್ವರ್ಯವನ್ನು [ಆಪಃ] ಜಲವು [ನಿಮ್ನೇವ] ಯಾವ ರೀತಿ ಕೆಳಗಿನ ಸ್ಥಾನವನ್ನು ಹೋಗಿ ಸೇರುತ್ತದೆಯೋ, ಆ ರೀತಿ [ಇಷ್ಟಯೇ] ಅಭೀಷ್ಟಸಿದ್ಧಿಗಾಗಿ [ಹ] ನಿಶ್ಚಯವಾಗಿಯೂ [ಅನ್ವಸತ್] ಆಗಲಿ. ಅದೇ ಸಭಾಧ್ಯಕ್ಷ ಅಥವಾ ವಿದ್ಯುತ್ತನ್ನು ನಾವು ಎಲ್ಲರೂ ಉಪಯೋಗ ಮಾಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಪರ್ವತ ಅಥವಾ ಮೇಘವನ್ನು ಆಶ್ರಯಿಸಿ, ಸಿಂಹ ಮೊದಲಾದ ಪ್ರಾಣಿಗಳು ಅಥವಾ ಜಲವು ರಕ್ಷಣೆಯನ್ನು ಹೊಂದಿ ಸ್ಥಿರವಾಗುತ್ತವೆಯೋ, ಯಾವ ರೀತಿ ಕೆಳಗಿನ ಸ್ಥಾನಗಳಲ್ಲಿ ಇರುವ ಜಲಸಮೂಹವು ಸುಖದಾಯಕವಾಗುತ್ತವೆಯೋ ಹಾಗೆಯೇ ಸಭಾಧ್ಯಕ್ಷನ ಆಶ್ರಯದಿಂದ ಪ್ರಜೆಗಳ ರಕ್ಷಣೆ ಹಾಗೂ ವಿದ್ಯುತ್ತನ್ನು ವಿದ್ಯೆಯಿಂದ ಶಿಲ್ಪವಿದ್ಯೆಯ ಸಿದ್ಧಿಯನ್ನು ಹೊಂದಿ ಎಲ್ಲ ಪ್ರಾಣಿಗಳು ಸುಖಿಗಳಾಗಲಿ.

ಸಭೆಯ ಅಧಿಕಾರಿ ಯಾರಾಗಬೇಕು ಎಂಬುದನ್ನಿಲ್ಲಿ ತಿಳಿಸಲ್ಪಾಗುತ್ತದೆ.

ಅಸ್ಮೈ ಭೀಮಾಯ ನಮಸಾ ಸಮಧ್ವರ ಉಷೋ ನ ಶುಭ್ರ ಆ ಭರಾ ಪನೀಯಸೇ ।
ಯಸ್ಯ ಧಾಮ ಶ್ರವಸೇ ನಾಮೇಂದ್ರಿಯಂ ಜ್ಯೋತಿರಕಾರಿ ಹರಿತೋ ನಾಯಸೇ ॥೩॥

ಪದಾರ್ಥ:- ಹೇ ವಿದ್ವಾನ್ ಮನುಷ್ಯ! ನೀನು [**ಯಸ್ಯ**] ಯಾವ ಸಭಾಧ್ಯಕ್ಷನ [**ಧಾಮ**] ವಿದ್ಯಾದಿ ಸುಖಗಳ ಧಾರಣೆ ಮಾಡುವವನು [**ಶ್ರವಸೇ**] ಶ್ರವಣ ಅಥವಾ ಅನ್ನಕ್ಕಾಗಿ ಇದ್ದಾನೋ, ಯಾವನು [**ಅಯಸೇ**] ವಿಜ್ಞಾನಕ್ಕಾಗಿ [**ಹರಿತಃ**] ದಿಕ್ಕುಗಳ [**ನ**] ಸಮಾನವಾಗಿ [**ನಾಮ**] ಪ್ರಸಿದ್ಧಿಯನ್ನು [**ಇಂದ್ರಿಯಂ**] ಪ್ರಶಂಸನೀಯ ಬುದ್ಧಿವಂತನು ಅಥವಾ ಕಣ್ಣು ಮೊದಲಾದವುಗಳನ್ನು [**ಅಕಾರಿ**] ಮಾಡಿದ್ದಾನೋ [**ಅಸ್ಮೈ**] ಈ [**ಭೀಮಾಯ**] ದುಷ್ಟ ಅಥವಾ ಪಾಪಿಗಳಿಗೆ ಭಯವನ್ನು ನೀಡುವ [**ಪನೀಯಸೇ**] ಯಥಾಯೋಗ್ಯ ವ್ಯವಹಾರ, ಸ್ತುತಿ ಮಾಡಲು ಯೋಗ್ಯನಾದ ಸಭಾಧ್ಯಕ್ಷನಿಗಾಗಿ [**ಶುಭ್ರೇ**] ಶೋಭಾಯಮಾನವೂ, ಶುದ್ಧಿಕಾರಕವೂ ಆದ ಅಹಿಂಸನೀಯ ಧರ್ಮಯುಕ್ತ ಯಜ್ಞವನ್ನು [**ಉಷಃ**] ಪ್ರಾತಃಕಾಲದ [**ನ**] ಸಮಾನವಾಗಿ [**ನಮಸಾ**] ವಿನಮ್ರತೆಯೊಂದಿಗೆ [**ಸಮಧ್ವರ**] ಉತ್ತಮ ರೀತಿಯಿಂದ ಧಾರಣೆ-ಪೋಷಣೆಯನ್ನು ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯನಿಗೆ ಯೋಗ್ಯವಾದುದೇನೆಂದರೆ, ಯಾವ ರೀತಿ ಪ್ರಾತಃಕಾಲವು ಸಮಸ್ತ ಅಂಧಕಾರವನ್ನು ನಿವಾರಿಸಿ ಎಲ್ಲರನ್ನು ಪ್ರಕಾಶದಿಂದ ಆನಂದಿತರನ್ನಾಗಿ ಮಾಡುತ್ತದೆಯೋ, ಅದೇ ರೀತಿ ಶತ್ರುಗಳಿಗೆ ಭಯವನ್ನುಂಟು ಮಾಡುವ ಮನುಷ್ಯನನ್ನು ಗುಣಗಳ ಅಧಿಕತೆಯಿಂದ ಸ್ತುತಿ, ಸತ್ಕಾರ ಮತ್ತು ಸಂಗ್ರಾಮಾದಿ ವ್ಯವಹಾರಗಳಲ್ಲಿ ಸ್ಥಾಪನೆ ಮಾಡಲಿ. ಯಾವ ರೀತಿ ದಿಕ್ಕುಗಳು ವ್ಯವಹಾರವನ್ನು ತಿಳಿಸುವುದಾಗಿರುತ್ತದೆಯೋ, ಅದೇ ರೀತಿ ಯಾರು ವಿದ್ಯೆ, ಉತ್ತಮ ಶಿಕ್ಷಣ, ಸೇನಾ, ವಿನಯ, ನ್ಯಾಯಾದಿಗಳಿಂದ ಎಲ್ಲರನ್ನು ಸುಭೂಷಿತ ಧನ, ಅನ್ನಾದಿಗಳಿಂದ ಸಂಯುಕ್ತರನ್ನಾಗಿಸಿ ಸುಖಿಗಳನ್ನಾಗಿ ಮಾಡುತ್ತಾನೋ, ಅವನನ್ನೇ ಸಭೆ ಮೊದಲಾದ ಅಧಿಕಾರ ಸ್ಥಾನಗಳಲ್ಲಿ ಅಧಿಕಾರಿಯನ್ನಾಗಿ ಮಾಡಬೇಕು.

ನಾವು ಸುಖಿಗಳು ಹೇಗಾಗುತ್ತೇವೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ಇಮೇ ತ ಇಂದ್ರ ತೇ ವಯಂ ಪುರುಷ್ಟುತ ಯೇ ತ್ವಾರಭ್ಯ ಚರಾಮಸಿ ಪ್ರಭೂವಸೋ ।
ನಹಿ ತ್ವದನ್ಯೋ ಗಿರ್ವಣೋ ಗಿರಃ ಸಘತ್ ಕ್ಷೋಣೀರಿವ ಪ್ರತಿ ನೋ ಹರ್ಯ ತದ್ ವಚಃ ॥೪॥

ಪದಾರ್ಥ:- [ಪ್ರಭೂವಸೋ] ಹೇ ಸಮಸ್ತ ಅಥವಾ ಸುಖಗಳಲ್ಲಿ ವಾಸಿಸುವ [ಗಿರ್ವಣಃ] ವೇದ ವಿದ್ಯೆಯಿಂದ ಸಂಸ್ಕಾರಗೊಳಿಸಲ್ಪಟ್ಟ ವಾಣಿಗಳಿಂದ ಸೇವನೀಯನಾದ [ಪುರುಷ್ಟುತ] ಬಹು ಜನರಿಂದ ಸ್ತುತಿಸಲ್ಪಡುವ [ಹರ್ಯ] ಗಮನೀಯ ಅಥವಾ ಸರ್ವಸುಖ ಪ್ರಾಪಕನಾದ [ಇಂದ್ರ] ಜಗದೀಶ್ವರನೇ! [ತೇ] ನಿನ್ನ ಕೃಪೆಯ ಸಹಾಯದಿಂದ

ನಾವುಗಳು [ಸಘತ್, ಕ್ಷೋಣೀರಿವ] ಯಾವ ರೀತಿ ಶೂರ-ವೀರರು ಶತ್ರುಗಳನ್ನು ಕೊಲ್ಲುತ್ತ ಪೃಥಿವೀ ರಾಜ್ಯವನ್ನು ಹೊಂದುತ್ತಾರೋ, ಆ ರೀತಿ [ನಃ] ನಮಗಾಗಿ [ಗಿರಃ] ವೇದವಿದ್ಯೆಯಿಂದ ಅಧಿಷ್ಠಿತವಾದ ವಾಣಿಗಳನ್ನು ಹೊಂದುವ ಇಚ್ಛೆಯನ್ನುಳ್ಳ [ತ್ವತ್] ನಿನ್ನಿಂದ [ಅನ್ಯಃ] ಬೇರೆಯಾದ [ನಹಿ] ಬೇರಾರೂ ಇಲ್ಲ. [ತತ್] ಆ [ವಚಃ] ವಚನಗಳನ್ನು ಕೇಳಿ ಅಥವಾ ಪ್ರಾಪ್ತಿಸಿಕೊಂಡು ಯಾವ [ಇಮೇ] ಈ ಮನುಷ್ಯರ ಅಥವಾ [ಯೇ] ಯಾವ [ತೇ] ದೂರವಿರುವ ಮನುಷ್ಯರ ಮತ್ತು [ವಯಂ] ನಮ್ಮ ಪರಸ್ಪರ ಸೇರುವಿಕೆಯಿಂದ [ತೇ] ನಿನ್ನ ಶರಣು ಹೋಗಿ [ತ್ವಾರಭ್ಯ] ನಿನ್ನ ಸಾಮರ್ಥ್ಯದ ಆಶ್ರಯದಿಂದ ನಿರ್ಭಯರಾಗಿ [ಪ್ರತಿಚರಾಮಸಿ] ಪರಸ್ಪರ ಸದಾ ಸುಖಯುಕ್ತರಾಗಿ ವ್ಯವಹರಿಸುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರವಿದೆ. ಯಾವ ರೀತಿ ಶೂರ-ವೀರರು ಶತ್ರುಗಳ ಬಲವನ್ನು ನಿವಾರಿಸಿ, ರಾಜ್ಯನ್ನು ಹೊಂದಿ ಸುಖ ಸಂತೋಷಗಳನ್ನು ಹೊಂದುತ್ತಾರೋ, ಅದೇ ರೀತಿ ಹೇ ಜಗದೀಶ್ವರ! ನಾವು ಅದ್ವಿತೀಯನಾದ ನಿನ್ನ ಆಶ್ರಯವನ್ನು ಹೊಂದಿ ಎಲ್ಲ ರೀತಿಯ ವಿಜಯವನ್ನು ಪಡೆದು ವಿದ್ಯೆಯ ವೃದ್ಧಿಯನ್ನು ಹೊಂದುತ್ತಾ ಸುಖಿಗಳಾಗುತ್ತೇವೆ.

ಮನುಷ್ಯರ ಕರ್ತವ್ಯವೇನೆಂಬುದನ್ನು ಇಲ್ಲಿ ತಿಳಿಸಲಾಗಿದೆ.

ಭೂರಿ ತ ಇಂದ್ರ ವೀರ್ಯ೧ಂ ತವ ಸ್ಮ-ಸ್ಯಸ್ಯ ಸ್ತೋತುರ್ಮಘವನ್ ಕಾಮಮಾ ಪೃಣ ।
ಅನು ತೇ ದ್ಯೌರ್ಬೃಹತೀ ವೀರ್ಯಂ ಮಮ ಇಯಂ ಚ ತೇ ಪೃಥಿವೀ ನೇಮ ಓಜಸೇ ॥೫॥

ಪದಾರ್ಥ:- [**ಮಘವನ್**] ಹೇ ಉತ್ತಮ ಧನಯುಕ್ತನಾದ [**ಇಂದ್ರ**] ಸೇನಾದಿ ಬಲಗಳನ್ನುಳ್ಳ ಸಭಾಧ್ಯಕ್ಷನೇ! ಯಾವ [**ತೇ**] ನಿನ್ನ [**ಭೂರಿ**] ಬಹಳವಾದ [**ವೀರ್ಯಂ**] ಪರಾಕ್ರಮವಿದೆಯೋ, ಯಾವುದನ್ನು ನಾವು [**ಸ್ಮಸಿ**] ಆಶ್ರಯಿಸಿದ್ದೇವೋ ಮತ್ತು ಯಾವ [**ತವ**] ನಿನ್ನ [**ಇಯಂ**] ಈ [**ಬೃಹತೀ**] ಬೃಹತ್ತಾದ [**ದ್ಯೌಃ**] ವಿದ್ಯಾ ವಿನಯಯುಕ್ತ ನ್ಯಾಯಪ್ರಕಾಶ ಹಾಗೂ ರಾಜ್ಯಕ್ಕಾಗಿ [**ಪೃಥಿವೀ**] ಭೂಮಿಯನ್ನು [**ಓಜಸೇ**] ಭೋಗಿಸಲಿಕ್ಕಾಗಿ [**ನೇಮೆ**] ನಮ್ರನಾಗಿದ್ದೇವೋ, ಆ ನೀನು [**ಅಸ್ಯ**] ಈ [**ಸ್ತೋತುಃ**] ಸ್ತುತಿಕರ್ತನ [**ಕಾಮಂ**] ಕಾಮನೆಯನ್ನು [**ಆಪೃಣ**] ಪರಿಪೂರ್ಣಗೊಳಿಸು.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಪರಮೇಶ್ವರನ ಆಶ್ರಯವನ್ನು ಹೊಂದಿ ಎಲ್ಲ ಕಾಮನೆಗಳ ಸಿದ್ಧಿಯನ್ನು ಮಾಡಿಕೊಂಡು ಪೃಥಿವಿಯ ರಾಜ್ಯವನ್ನು ಪಡೆದು ನಿರಂತರ ಸುಖಿಗಳಾಗಿರಬೇಕು.

ಯಾರನ್ನು ಸಭಾಧ್ಯಕ್ಷನನ್ನಾಗಿ ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತ್ವಂ ತಮಿಂದ್ರ ಪರ್ವತಂ ಮಹಾಮುರುಂ ವಜ್ರೇಣ ವಜ್ರಿನ್ ಪರ್ವಶಶ್ಚಕರ್ತಿಥ ।
ಅವಾಸೃಜೋ ನಿವೃತಾಃ ಸರ್ತವಾ ಅಪಃ ಸತ್ರಾ ವಿಶ್ವಂ ದಧಿಷೇ ಕೇವಲಂ ಸಹಃ ॥೬॥

ಪದಾರ್ಥ:- [ವಜ್ರಿನ್] ಹೇ ಪ್ರಶಸ್ತ ಶಸ್ತ್ರವಿದ್ಯಾವಿದನಾದ [ಇಂದ್ರ] ದುಷ್ಟರನ್ನು ನಾಶಗೊಳಿಸಬಲ್ಲ ಸಭಾಧ್ಯಕ್ಷನೇ! [ತ್ವಂ] ಯಾವ ನೀನು [ಮಹಾಂ] ಶ್ರೇಷ್ಠವಾದ ಉತ್ತಮ ವೀರಪುರುಷರ ಸತ್ಕಾರಕ್ಕೆ ಯೋಗ್ಯವಾದ ಉತ್ತಮ ಸೇನೆಯನ್ನು [ಅವಾಸೃಜಃ] ರೂಪಿಸು ಮತ್ತು [ವಜ್ರೇಣ] ವಜ್ರದಿಂದ ಸೂರ್ಯನು [ಪರ್ವತಂ] ಮೇಘವನ್ನು ಛಿನ್ನ ಭಿನ್ನ ಮಾಡಿ [ನಿವೃತಾಃ] ನಿವೃತ್ತವಾದ [ಅಪಃ] ಜಲವನ್ನು ಧಾರಣ ಮಾಡುತ್ತಾನೋ ಮತ್ತು ಪೃಥಿವಿಯ ಮೇಲೆ ಬೀಳಿಸುತ್ತಾನೋ, ಅದೇ ರೀತಿ ಶತ್ರುದಳವನ್ನು [ಪರ್ವಶಃ] ಅಂಗ ಅಂಗದಿಂದ [ಚಕರ್ತಿಥ] ಛಿನ್ನ ಭಿನ್ನಗೊಳಿಸಿ ಶತ್ರುಗಳ ನಿವಾರಣೆಯನ್ನು ಮಾಡುತ್ತೀಯೋ [ಸತ್ರಾ] ಕಾರಣ ರೂಪದಿಂದ ಸತ್ಯ ಸ್ವರೂಪವಾದ [ವಿಶ್ವಂ] ಜಗತ್ತನ್ನು

ಅರ್ಥಾತ್ ರಾಜ್ಯವನ್ನು ಧಾರಣ ಮಾಡಿ [ಕೇವಲಂ] ಅಸಹಾಯವಾದ [ಸಹಃ] ಬಲವನ್ನು [ಸರ್ತವೈ] ಎಲ್ಲರನ್ನು ಸುಖದಿಂದ ನ್ಯಾಯ ಮಾರ್ಗದಲ್ಲಿ ನಡೆಸಲು [ದಧಿಷೇ] ಧರಿಸುತ್ತೀಯೆ. [ತಂ] ಆ ನಿನ್ನನ್ನು ಸಭೆ ಮೊದಲಾದವುಗಳಿಗೆ ಪತಿಯನ್ನಾಗಿ ನಾವು ಸ್ವೀಕರಿಸುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಯಾವನು ಶತ್ರುಗಳ ಭೇದನವನ್ನು ಮಾಡಿ ಪ್ರಜೆಗಳ ಪಾಲನೆಯಲ್ಲಿ ತತ್ಪರನೂ, ಬಲ ಮತ್ತು ವಿದ್ಯೆಗಳಿಂದ ಕೂಡಿದವನೂ ಆಗಿರುತ್ತಾನೋ, ಅವನನ್ನೇ ಸಭೆ ಮೊದಲಾದವುಗಳ ರಕ್ಷಕನನ್ನಾಗಿಯೂ, ಅಧಿಷ್ಠಾತೃವನ್ನಾಗಿಯೂ, ಸ್ವಾಮಿಯನ್ನಾಗಿಯೂ ಮಾಡಬೇಕು.

ಈ ಸೂಕ್ತದಲ್ಲಿ ಅಗ್ನಿ ಮತ್ತು ಸಭಾಧ್ಯಕ್ಷರೇ ಮೊದಲಾದವರ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ಐವತ್ತೇಳನೆಯ ಸೂಕ್ತ ಸಮಾಪ್ತ

ಏಕಾದಶೋऽನುವಾಕಃ (ಸೂಕ್ತ ೫೮ -೬೪)

ಸೂಕ್ತ ೫೮

ಮಂತ್ರಸಂಖ್ಯೆ ೯ । ಋಷಿಃ - ನೋಧಾ ಗೌತಮಃ । ದೇವತಾ - ಅಗ್ನಿಃ । ಛಂದಃ - ೧, ೫ ಜಗತೀ, ೨ ವಿರಾಡ್ ಜಗತೀ, ೪ ನಿಚೃಜ್ಜಗತೀ । ೩ ತ್ರಿಷ್ಟುಪ್, ೬, ೭, ೯ ನಿಚೃದ್ ತ್ರಿಷ್ಟುಪ್, ೮ ವಿರಾಡ್ ತ್ರಿಷ್ಟುಪ್ । ಸ್ವರಃ - ೧, ೨, ೪, ೫ ನಿಷಾದಃ, ೩, ೬-೯ ಧೈವತಃ.

ಪರಮೇಶ್ವರ ಮತ್ತು ಜೀವಾತ್ಮರ ಗುಣ ಲಕ್ಷಣಗಳನ್ನು ವಿವರಿಸಲಾಗಿದೆ

ನೂ ಚಿತ್ ಸಹೋಜಾ ಅಮೃತೋ ನಿ ತುಂದತೇ ಹೋತಾ ಯದ್ ದೂತೋ ಅಭವದ್ ವಿವಸ್ವತಃ।
ವಿ ಸಾಧಿಷ್ಠೇಭಿಃ ಪಥಿಭೀ ರಜೋ ಮಮ ಆ ದೇವತಾತಾ ಹವಿಷಾ ವಿವಾಸತಿ ॥೧॥

ಪದಾರ್ಥ:- ಹೇ ಮಾನವರೇ! [ಯತ್] ಯಾವುದು ವಿದ್ಯುತ್ತಿನ ಸಮಾನವಾದ ಸ್ವಪ್ರಕಾಶವೋ [ಅಮೃತಃ] ಸ್ವಸ್ವರೂಪದ ನಾಶರಹಿತವಾದ [ಸಹೋಜಾಃ] ಬಲವನ್ನು ಉತ್ಪಾದನೆ ಮಾಡುವ [ಹೋತಾ] ಕರ್ಮ ಫಲದ ಭೋಕ್ತನೂ, ಎಲ್ಲ ಮನ ಮತ್ತು ಶರೀರಾದಿಗಳ ಧರ್ತನೂ [ದೂತಃ] ಎಲ್ಲವನ್ನು ನಡೆಸುವವನೂ [ಅಭವತ್] ಆಗುತ್ತಾನೆ. [ದೇವತಾತಾ] ದಿವ್ಯ ಪದಾರ್ಥಗಳ ಮಧ್ಯದಲ್ಲಿ ದಿವ್ಯಸ್ವರೂಪನೂ [ಸಾಧಿಷ್ಠೇಭಿಃ] ಅಧಿಷ್ಠಾನಗಳಿಂದ ಕೂಡಿರುವ [ಪಥಿಭಿಃ] ಮಾರ್ಗಗಳಿಂದ [ರಜಃ] ಪೃಥಿವೀ ಮೊದಲಾದ ಲೋಕಗಳನ್ನು [ನು] ಶೀಘ್ರವಾಗಿ ರೂಪಿಸುವ [ವಿವಸ್ವತಃ] ಸ್ವಪ್ರಕಾಶ ಸ್ವರೂಪನಾದ ಪರಮೇಶ್ವರನ ಮಧ್ಯದಲ್ಲಿ ಇದ್ದು [ಹವಿಷಾ] ಗ್ರಹಿಸಲ್ಪಟ್ಟ ಶರೀರದಿಂದ ಕೂಡಿ [ನಿ ತುಂದತೇ] ನಿರಂತರ ಜನ್ಮ ಮರಣಾದಿಗಳಲ್ಲಿ ಪೀಡಿತನಾಗುತ್ತಾ ಮತ್ತು ತನ್ನ ಕರ್ಮಗಳ ಫಲಗಳನ್ನು [ವಿವಾಸತಿ] ಸೇವನೆ ಮತ್ತು ತನ್ನ ಕರ್ಮಗಳಲ್ಲಿ [ವ್ಯಾಮಮೇ] ಎಲ್ಲ ಪ್ರಕಾರದಿಂದ ವರ್ತಿಸುತ್ತಾನೋ ಅಂತಹ ಜೀವಾತ್ಮನು ಇದ್ದಾನೆ ಎಂಬುದಾಗಿ ನೀವು ತಿಳಿಯಿರಿ.

ಭಾವಾರ್ಥ:- ಹೇ ಮಾನವರೇ! ನೀವು ಅನಾದಿಯಾದ ಅಂದರೆ ಉತ್ಪತ್ತಿ ರಹಿತನೂ, ಸತ್ಯಸ್ವರೂಪನೂ, ಜ್ಞಾನಮಯನೂ, ಆನಂದಸ್ವರೂಪನೂ, ಸರ್ವಶಕ್ತಿವಂತನೂ, ಸ್ವಪ್ರಕಾಶನೂ, ಎಲ್ಲವನ್ನೂ ಧಾರಣೆ ಮಾಡಿದವನೂ

ಮತ್ತು ಸಕಲ ವಿಶ್ವದ ಉತ್ಪಾದಕನೂ, ದೇಶ, ಕಾಲ ಮತ್ತು ವಸ್ತುಗಳ ಪರಿಚ್ಛೇದದಿಂದ ರಹಿತನೂ, ಸರ್ವತ್ರ ವ್ಯಾಪಕ ಪರಮೇಶ್ವರನಲ್ಲಿ ನಿತ್ಯ ವ್ಯಾಪ್ಯ-ವ್ಯಾಪಕ ಸಂಬಂಧದಿಂದ ಯಾವ ಅನಾದಿ ನಿತ್ಯ ಚೇತನ, ಅಲ್ಪ ಏಕ ದೇಶಸ್ಥ ಮತ್ತು ಅಲ್ಪಜ್ಞನಿದ್ದಾನೋ ಅವನೇ ಜೀವನಾಗಿದ್ದಾನೆ ಎಂಬುದನ್ನು ನಿಶ್ಚಿತವಾಗಿ ತಿಳಿಯಿರಿ.

ಈಶ್ವರ ಜೀವರ ಗುಣಕರ್ಮ ಲಕ್ಷಣಗಳನ್ನು ಇಲ್ಲಿ ವಿವರಿಸಲಾಗಿದೆ.

ಆ ಸ್ವಮದ್ಮ ಯುವಮಾನೋ ಅಜರ-ಸ್ತೃಷ್ವವಿಷ್ಯನ್ನತಸೇಷು ತಿಷ್ಠತಿ ।
ಅತ್ಯೋ ನ ಪೃಷ್ಠಂ ಪ್ರುಷಿತಸ್ಯ ರೋಚತೇ ದಿವೋ ನ ಸಾನು ಸ್ತನಯನ್ನಚಿಕ್ರದತ್ ॥೨॥

ಪದಾರ್ಥ:- ಹೇ ಮಾನವರೇ! ನೀವು ಯಾವ [ಯುವಮಾನಃ] ಸಂಯೋಗ ಮತ್ತು ವಿಭಾಗಕರ್ತನಾದ [ಅಜರಃ] ಜರಾದಿ ರೋಗರಹಿತ ದೇಹಗಳ [ಅವಿಷ್ಯನ್] ರಕ್ಷಣೆ ಮಾಡುವವನಾಗಿರುತ್ತ [ಅತಸೇಷು] ಆಕಾಶಾದಿ ಪದಾರ್ಥಗಳಲ್ಲಿ [ತಿಷ್ಠತಿ] ಸ್ಥಿತನಾಗಿರುವ [ಪ್ರುಷಿತಸ್ಯ] ಪೂರ್ಣ ಪರಮಾತ್ಮನಲ್ಲಿ ಕಾರ್ಯದ ಸೇವನೆಯನ್ನು ಮಾಡುತ್ತಾ [ನ] ಯಾವ ರೀತಿ [ಅತ್ಯಃ] ಕುದುರೆಯು [ಪೃಷ್ಠಂ] ತನ್ನ ಬೆನ್ನಿನ ಮೇಲೆ ಭಾರವನ್ನು ಹರಡುತ್ತದೆಯೋ, ಅದೇ ರೀತಿ ದೇಹಾದಿಗಳನ್ನು ವಿಸ್ತರಿಸುತ್ತಾನೆ. [ನ] ಯಾವ ರೀತಿ [ದಿವಃ] ಪ್ರಕಾಶದಿಂದ [ಸಾನು] ಪರ್ವತದ ಶಿಖರ ಅಥವಾ ಮೇಘದ ಅಂಚು ಪ್ರಕಾಶಿತವಾಗುತ್ತದೆಯೋ, ಹಾಗೆಯೇ [ರೋಚತೇ] ಪ್ರಕಾಶಮಾನವಾಗುತ್ತದೆ. ಯಾವ ರೀತಿ [ಸ್ತನಯನ್] ವಿದ್ಯುತ್ತು ಶಬ್ದವನ್ನು ಮಾಡುತ್ತದೆಯೋ, ಹಾಗೆಯೇ [ಅಚಿಕ್ರದತ್] ಸರ್ವಥಾ ಶಬ್ದವನ್ನು ಮಾಡುತ್ತವೆ. ಯಾವುದು [ಸ್ವಂ] ತನ್ನಿಂದ ಮಾಡಲ್ಪಟ್ಟ [ಅದ್ಮ] ಭೋಕ್ತವ್ಯ ಕರ್ಮವನ್ನು [ತೃಷು] ಶೀಘ್ರವಾಗಿ [ಆ] ಎಲ್ಲ ಪ್ರಕಾರದಿಂದ ಭೋಗಿಸುವ ಆ ದೇಹದ ಧಾರಣಮಾಡುವವನು ಜೀವಾತ್ಮನಾಗಿದ್ದಾನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವನು ಪೂರ್ಣ ಈಶ್ವರನಿಂದ ಧಾರಣ ಮಾಡಲ್ಪಟ್ಟ ಆಕಾಶಾದಿ ತತ್ವಗಳಲ್ಲಿ ಪ್ರಯತ್ನಕರ್ತನೂ, ಸಮಸ್ತ ಬುದ್ಧಿ ಮೊದಲಾದವುಗಳ ಪ್ರಕಾಶಕನೂ, ಈಶ್ವರನ ನ್ಯಾಯ ನಿಯಮದಿಂದ ತನ್ನಿಂದ ಮಾಡಲ್ಪಟ್ಟ ಶುಭಾಶುಭ ಕರ್ಮಗಳ ಸುಖ-ದುಃಖ ಸ್ವರೂಪಿ ಫಲವನ್ನು ಭೋಗಿಸುತ್ತಾನೋ, ಅಂತಹ ಸ್ವತಂತ್ರ ಕರ್ತೃ ಭೋಕ್ತೃ ಜೀವನಾಗಿದ್ದಾನೆ ಎಂಬುದಾಗಿ ಎಲ್ಲ ಮಾನವರು ತಿಳಿಯಬೇಕು.

ಮುಂದಿನ ಮಂತ್ರದಲ್ಲಿ ಈಶ್ವರ ಮತ್ತು ವಿದ್ವಾಂಸನ ಗುಣಗಳ ಉಪದೇಶ ಮಾಡಿದೆ.

ಕ್ರಾಣಾ ರುದ್ರೇಭಿರ್ವಸುಭಿಃ ಪುರೋಹಿತೋ ಹೋತಾ ನಿಷತ್ತೋ ರಯಿಷಾಳಮರ್ತ್ಯಃ ।
ರಥೋ ನ ವಿಕ್ಷ್ವೃಂಜಸಾನ ಆಯುಷು ವ್ಯಾನುಷಗ್ವಾರ್ಯಾ ದೇವ ಋಣ್ವತಿ ॥೩॥

ಪದಾರ್ಥ:- ಹೇ ಮಾನವರೇ! ನೀವು ಯಾವ [ರುದ್ರೇಭಿಃ] ಪ್ರಾಣಗಳನ್ನು ಮತ್ತು [ವಸುಭಿಃ] ವಾಸಿಸಲು ಯೋಗ್ಯವಾದ ಪೃಥಿವೀ ಮೊದಲಾದ ಪದಾರ್ಥಗಳೊಂದಿಗೆ [ನಿಸತ್ತಃ] ಸ್ಥಿತವಾಗಿ ನಡೆದಾಡುತ್ತಾ [ಹೋತಾ] ದೇಹಾದಿಗಳ ಧಾರಣೆ ಮಾಡುವ [ಪುರೋಹಿತಃ] ಮೊದಲಾಗಿ ಗ್ರಹಿಸಲು ಯೋಗ್ಯನಾದ [ರಯಿಷಾಟ್] ಧನದ ಸಂಗ್ರಹ ಕರ್ತನು [ಅಮರ್ತ್ಯಃ] ಮರಣ ಧರ್ಮ ರಹಿತನೂ [ಕ್ರಾಣಾ] ಕರ್ಮಗಳ ಕರ್ತನು [ಋಂಜಸಾನಃ] ಯಾವ ಮಾಡಲ್ಪಟ್ಟ ಕರ್ಮಗಳನ್ನು ಪ್ರಾಪ್ತಿಸುವ [ವಿಕ್ಷು] ಪ್ರಜೆಗಳಲ್ಲಿ [ರಥೋನ] ರಥಕ್ಕೆ ಸಮಾನವಾದ ಶರೀರದೊಂದಿಗೆ ಕೂಡಿದವನಾಗಿ [ಆಯುಷು] ಬಾಲ್ಯಾದಿ ಜೀವನಾವಸ್ಥೆಗಳಲ್ಲಿ [ಆನುಷಕ್] ಅನುಕೂಲತೆಯಿಂದ ಇರುವ [ವಾರ್ಯಾ] ಉತ್ತಮ ಪದಾರ್ಥ ಮತ್ತು ಸುಖವನ್ನು [ವ್ಯೃಣ್ವತಿ] ವಿವಿಧ ಪ್ರಕಾರದಿಂದ ಸಿದ್ಧಗೊಳಿಸುತ್ತಾನೋ ಅವನೇ [ದೇವಃ] ಶುದ್ಧ ಪ್ರಕಾಶಸ್ವರೂಪನಾದ ಜೀವಾತ್ಮನೆಂದು ತಿಳಿಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವುದು ಪೃಥಿವಿಯಲ್ಲಿ ಪ್ರಾಣಗಳೊಂದಿಗೆ ಚೇಷ್ಟೆಯನ್ನೂ, ಮನಸ್ಸಿಗೆ ಅನುಕೂಲವಾದ ರಥದ ಸಮಾನವಾಗಿರುವ ಶರೀರದೊಂದಿಗೆ ಕ್ರೀಡೆ, ಶ್ರೇಷ್ಠ ವಸ್ತು ಮತ್ತು ಸುಖದ ಇಚ್ಛೆಯನ್ನು ಮಾಡುತ್ತಾರೋ, ಅದೇ ರೀತಿ ಎಲ್ಲರೂ ತಿಳಿಯಬೇಕು.

ಮನುಷ್ಯರಿಗೆ ಈಶ್ವರನ ಉಪದೇಶವೇನೆಂಬುದನ್ನು ಇಲ್ಲಿ ತಿಳಿಸಲಾಗಿದೆ.

ವಿ ವಾತಜೂತೋ ಅತಸೇಷು ತಿಷ್ಠತೇ ವೃಥಾ ಜುಹೂಭಿಃ ಸೃಣ್ಯಾ ತುವಿಷ್ವಣಿಃ ।
ತೃಷು ಯದಗ್ನೇ ವನಿನೋ ವೃಷಾಯಸೇ ಕೃಷ್ಣಂ ತ ಏಮ ರುಶದೂರ್ಮೇ ಅಜರ ॥೪॥

ಪದಾರ್ಥ:- [**ರುಶದೂರ್ಮೇ**] ಹೇ ತನ್ನ ಸ್ವಭಾವದ ಲಹರಿಗಳಿಂದ ಯುಕ್ತನೂ [**ಅಜರಾ**] ವೃದ್ಧಾವಸ್ಥೆಯಿಂದ ರಹಿತನು [**ಅಗ್ನೇ**] ವಿದ್ಯುತ್ತಿನಂತೆ ಇರುವ ಜೀವನೇ! ಯಾವ ನೀನು [**ಅತಸೇಷು**] ಆಕಾಶಾದಿ ವ್ಯಾಪಕ ಪದಾರ್ಥಗಳಲ್ಲಿ [**ವಿತಿಷ್ಠತೇ**] ನೆಲೆಸುವೆಯೋ [**ಯತ್**] ಯಾವ [**ವಾತಜೂತಃ**] ವಾಯುವಿನ ಪ್ರೇರಕ ಮತ್ತು ವಾಯುವಿನಂತೆ ವೇಗಶಾಲಿಯಾದ [**ತುವಿಷ್ವಣಿಃ**] ಬಹಳ ಪದಾರ್ಥಗಳ ಸೇವಕನಾದ [**ಜುಹೂಭಿಃ**] ಗ್ರಹಣ ಮಾಡುವ ಸಾಧನ ರೂಪಿ ಕ್ರಿಯೆಗಳ ಮತ್ತು [**ಸೃಣ್ಯಾ**] ಧಾರಣ ಹಾಗೂ ಹನನ ರೂಪಿಕರ್ಮದಿಂದ ಕೂಡಿರುವ [**ವನಿನಃ**] ವಿದ್ಯುತ್ ಯುಕ್ತ ಪ್ರಾಣಗಳನ್ನು ಹೊಂದಿ, ನೀನು [**ತೃಷು**] ಶೀಘ್ರವಾಗಿ [**ವೃಷಾಯಸೇ**] ಬಲಶಾಲಿಯಾಗುತ್ತೀಯೆ. ಯಾವ [**ತೇ**] ನಿನ್ನ [**ಕೃಷ್ಣಂ**] ಕರ್ಷಣರೂಪಿ ಗುಣವನ್ನು ನಾವುಗಳು [**ಏಮ**] ಹೊಂದುತ್ತೇವೆ. ಅದೇ ರೀತಿ ನೀನು [**ವೃಥಾ**] ವ್ಯರ್ಥ ಅಭಿಮಾನವನ್ನು ಬಿಟ್ಟು ನಿನ್ನ ಸ್ವರೂಪವನ್ನು ತಿಳಿ.

ಭಾವಾರ್ಥ:- ಸಮಸ್ಥ ಮಾನವರಿಗೆ ಈಶ್ವರನು ಉಪದೇಶ ಮಾಡುತ್ತಾನೆ ಏನೆಂದರೆ, ಯಾವ ರೀತಿ ನಾನು ಜೀವನ ಸ್ವಭಾವದ ಉಪದೇಶವನ್ನು ಮಾಡಿದ್ದೇನೋ ಅದೇ ನಿನ್ನ ಸ್ವರೂಪವಾಗಿದೆ, ಇದನ್ನು ನಿಶ್ಚಿತವಾಗಿ ತಿಳಿ.

ಜೀವಾತ್ಮನ ಲಕ್ಷಣಗಳನ್ನು ಇಲ್ಲಿ ತಿಳಿಸಲಾಗಿದೆ

ತಪುರ್ಜಂಭೋ ವನ ಆ ವಾತಚೋದಿತೋ ಯೂಥೇ ನ ಸಾಹ್ವಾ ಅವ ವಾತಿ ವಂಸಗಃ ।
ಅಭಿವ್ರಜನ್ನಕ್ಷಿತಂ ಪಾಜಸಾ ರಜಃ ಸ್ಥಾತುಶ್ಚರಥಂ ಭಯತೇ ಪತತ್ರಿಣಃ ॥೫॥

ಪದಾರ್ಥ:- ಹೇ ಮಾನವರೇ! ಯಾವ [**ವಂಸಗಃ**] ವಿಭಿನ್ನ ಪದಾರ್ಥಗಳನ್ನು ಹೊಂದುತ್ತಾ [**ವಾತಚೋದಿತಃ**] ಪ್ರಾಣಗಳಿಂದ ಪ್ರೇರಿತನಾಗಿ [**ತಪುರ್ಜಂಭಃ**] ಯಾರದು ಮುಖದ ಸಮಾನವಾದ ಪ್ರತಾಪವೋ, ಆ ಜೀವನು ಅಗ್ನಿಯ ಸದೃಶನಾಗಿ, ಯಾವ ರೀತಿ [**ಯೂಥೇ**] ಸೇನೆಯಲ್ಲಿ [**ಸಾಹ್ವಾನ್**] ಹನನಶೀಲ ಜೀವನು [**ಅವವಾತಿ**] ಸಮಸ್ತ ಶರೀರವನ್ನು ಚೇಷ್ಟಿಸುತ್ತಾನೋ, ಯಾವನು ವಿಸ್ತೃತವಾಗಿ ದುಃಖಗಳ ಹನನವನ್ನು ಮಾಡುತ್ತಾನೋ, ಯಾವನು [**ಅಭಿವ್ರಜನ್**] ಹೋಗುತ್ತಾ ಬರುತ್ತಾ ಇರುವ [**ಚರಥಂ**] ಚಲಿಸುವಂತಹ [**ಅಕ್ಷಿತಂ**] ಕ್ಷಯರಹಿತವಾದ [**ರಜಃ**] ಕಾರಣದ ಸಹಿತ ಲೋಕ ಸಮೂಹವನ್ನು [**ಪಾಜಸಾ**] ಬಲದಿಂದ ಧರಿಸುತ್ತಾನೋ, ಯಾವನು [**ಸ್ಥಾತುಃ**] ಸ್ಥಿರ ವೃಕ್ಷದಲ್ಲಿ ಕುಳಿತಿರುವ [**ಪತತ್ರಿಣಃ**] ಪಕ್ಷಿಯಂತೆ [**ಭಯತೇ**] ಭಯಭೀತನಾಗುತ್ತಾನೋ, ಅಂತಹ ನಿಮ್ಮ ಆತ್ಮ ಸ್ವರೂಪವನ್ನು ನೀವುಗಳು ತಿಳಿಸಿರಿ.

ಭಾವಾರ್ಥ:- ಮಾನವರಿಗೆ ಯೋಗ್ಯವಾದುದೇನೆಂದರೆ, ಯಾರು ಅಂತಃಕರಣ ಅರ್ಥಾತ್ ಮನ, ಬುದ್ಧಿ, ಚಿತ್ತ, ಅಹಂಕಾರ, ಪ್ರಾಣ ಅರ್ಥಾತ್ ಪ್ರಾಣವೇ ಮೊದಲಾದ ಹತ್ತು ಬಗೆಯ ವಾಯುಗಳು, ಇಂದ್ರಿಯ

ಅರ್ಥಾತ್ ಕಣ್ಣು ಮೊದಲಾದ ಹತ್ತು ಇಂದ್ರಿಯಗಳ ಪ್ರೇರಕನೋ, ಇವುಗಳ ಧಾರಣೆ ಮತ್ತು ನಿಯಂತ್ರ್ಯವಾದ ಸ್ವಾಮಿಯೋ, ಇಚ್ಛೆ, ದ್ವೇಷ, ಪ್ರಯತ್ನ, ಸುಖ-ದುಃಖ ಮತ್ತು ಜ್ಞಾನ ಮೊದಲಾದ ಗುಣಗಳುಳ್ಳವನೋ ಅವನೇ ಈ ದೇಹದಲ್ಲಿ ಜೀವನಾಗಿದ್ದಾನೆ ಎಂಬುದನ್ನು ನಿಶ್ಚಿತವಾಗಿ ತಿಳಿಸಿರಿ.

ಜೀವಾತ್ಮನ ಸ್ವರೂಪವನ್ನು ತಿಳಿದವರು ಸುಖಿಗಳಾಗುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ದಧುಷ್ಟ್ವಾ ಭೃಗವೋ ಮಾನುಷೇಷ್ವಾ ರಯಿಂ ನ ಚಾರುಂ ಸುಹವಂ ಜನೇಭ್ಯಃ ।
ಹೋತಾರಮಗ್ನೇ ಅತಿಥಿಂ ವರೇಣ್ಯಂ ಮಿತ್ರಂ ನ ಶೇವಂ ದಿವ್ಯಾಯ ಜನ್ಮನೇ ॥೬॥

ಪದಾರ್ಥ:- [**ಅಗ್ನೇ**] ಹೇ ಅಗ್ನಿಸದೃಶನಾದ ಸ್ವಪ್ರಕಾಶಸ್ವರೂಪಿ ಜೀವನೇ! ನೀನು ಯಾವ [**ತ್ವಾ**] ನಿನ್ನನ್ನು [**ಭೃಗವಃ**] ಪರಿಪಕ್ವ ಜ್ಞಾನವುಳ್ಳ ವಿದ್ವಾಂಸರು [**ಮಾನುಷೇಷು**] ಮನುಷ್ಯರಲ್ಲಿ [**ಜನೇಭ್ಯಃ**] ವಿದ್ವಾಂಸರಿಂದ ವಿದ್ಯೆಯನ್ನು ಹೊಂದಿ [**ಚಾರುಂ**] ಸುಂದರ ಸ್ವರೂಪದ [**ಸುಹವಂ**] ಸುಖಗಳನ್ನು ನೀಡುವ [**ರಯಿಂ**] ಸಂಪತ್ತಿನ [**ನ**] ಸಮಾನವಾಗಿ [**ಹೋತಾರಂ**] ದಾನಶೀಲನಾದ [**ಅತಿಥಿಂ**] ಅನಿಯತ ಸ್ಥಿತಿ ಅರ್ಥಾತ್ ಅತಿಥಿಯ ಸದೃಶವಾದ ದೇಹ ದೇಹಾಂತರ ಮತ್ತು ಸ್ಥಾನ ಸ್ಥಾನಂತರಗಳಲ್ಲಿ ಹೋಗಿ ಬರುವವನು [**ವರೇಣ್ಯಂ**] ಗ್ರಹಿಸಲು ಯೋಗ್ಯನೂ [**ಶೇವಂ**] ಆದ ಸುಖರೂಪಿ ಜೀವನನ್ನು ಹೊಂದಿ [**ದಿವ್ಯಾಯ**] ಶುದ್ಧವಾದ [**ಜನ್ಮನೇ**] ಜನ್ಮಕ್ಕಾಗಿ [**ಮಿತ್ರನ್ನ**] ಮಿತ್ರರ ಸದೃಶನಾದ ನಿನ್ನನ್ನು [**ಆದಧುಃ**] ಎಲ್ಲ ರೀತಿಯಿಂದಲೂ ಧಾರಣೆ ಮಾಡುತ್ತಾರೋ ಅವನನ್ನೇ ಜೀವನೆಂದು ತಿಳಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಮನುಷ್ಯನು ವಿದ್ಯೆ ಅಥವಾ ಐಶ್ವರ್ಯವನ್ನು ಇಲ್ಲವೇ ಮಿತ್ರರನ್ನು ಹೊಂದಿ ಸುಖವನ್ನು ಪ್ರಾಪ್ತಿಸುತ್ತಾನೋ, ಹಾಗೆಯೇ ಜೀವನ ಸ್ವರೂಪವನ್ನು ತಿಳಿದಿರುವ ವಿದ್ವಾಂಸರು ಅತ್ಯಂತ ಸುಖವನ್ನು ಹೊಂದುತ್ತಾರೆ.

ಮೋಕ್ಷ ಪ್ರಾಪ್ತಿಯ ಮಾರ್ಗವನ್ನು ಇಲ್ಲಿ ತಿಳಿಸಲಾಗಿದೆ.

ಹೋತಾರಂ ಸಪ್ತ ಜುಹ್ವೋ೩ ಯಜಿಷ್ಠಂ ಯಂ ವಾಘತೋ ವೃಣತೇ ಅಧ್ವರೇಷು ।
ಅಗ್ನಿಂ ವಿಶ್ವೇಷಾಮರತಿಂ ವಸೂನಾಂ ಸಪರ್ಯಾಮಿ ಪ್ರಯಸಾ ಯಾಮಿ ರತ್ನಮ್ ॥೭॥

ಪದಾರ್ಥ:- ಹೇ ಮಾನವರೇ! ಯಾರೊಂದಿಗೆ [**ಸಪ್ತಜುಹ್ವಃ**] ಏಳು ಸುಖಗಳ ಇಚ್ಛೆಯ ಸಾಧನವಿದೆಯೋ ಆ [**ಹೋತಾರಂ**] ಸುಖಗಳ ದಾತೃವಾದ [**ಯಜಿಷ್ಠಂ**] ಅತಿಶಯ ಸಂಗತಿಯಲ್ಲಿ ನಿಪುಣರಾದ [**ವಿಶ್ವೇಷಾಂ**] ಎಲ್ಲ [**ವಸೂನಾಂ**] ಪೃಥಿವ್ಯಾದಿ ಲೋಕಗಳನ್ನು [**ಅರತಿಂ**] ಹೊಂದುವ [**ಯಂ**] ಯಾರನ್ನು [**ವಾಘತಃ**] ಬುದ್ಧಿಶಾಲಿಗಳಾದ ಜನರು [**ಪ್ರಯಸಾ**] ಪ್ರೀತಿಯಿಂದ [**ಅಧ್ವರೇಷು**] ಅಹಿಂಸನೀಯ ಗುಣಗಳಲ್ಲಿ [**ಅಗ್ನಿಂ**] ಅಗ್ನಿಯ ಸದೃಶವಾಗಿ [**ವೃಣತೇ**] ಸ್ವೀಕಾರ ಮಾಡುತ್ತಾರೋ ಆ [**ರತ್ನಮ್**] ರಮಣೀಯಾನಂದ ಸ್ವರೂಪವನ್ನುಳ್ಳ ಜೀವನನ್ನು ನಾನು [**ಯಾಮಿ**] ಪ್ರಾಪ್ತಿಸುತ್ತೇನೆ ಮತ್ತು [**ಸಪರ್ಯಾಮಿ**] ಸೇವೆಯನ್ನು ಮಾಡುತ್ತೇನೆ.

ಭಾವಾರ್ಥ:- ಯಾವ ಮಾನವರು ತಮ್ಮ ಆತ್ಮನನ್ನು ತಿಳಿದು ಪರಬ್ರಹ್ಮವನ್ನು ತಿಳಿಯುತ್ತಾರೋ, ಅವರೇ ಮೋಕ್ಷವನ್ನು ಹೊಂದುತ್ತಾರೆ.

ಯೋಗಿ ಜನರ ಕರ್ತವ್ಯವೇನೆಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಚ್ಛಿದ್ರಾ ಸೂನೋ ಸಹಸೋ ನೋ ಅದ್ಯ ಸ್ತೋತೃಭ್ಯೋ ಮಿತ್ರಮಹಃ ಶರ್ಮ ಯಚ್ಛ।
ಅಗ್ನೇ ಗೃಣಂತಮಂಹಸ ಉರುಷ್ಯೋ-ರ್ಜೋ ನಪಾತ್ ಪೂರ್ಭಿರಾಯಸೀಭಿಃ ॥೮॥

ಪದಾರ್ಥ:- [ಸಹಸಃ] ಪೂರ್ಣ ಬ್ರಹ್ಮಚರ್ಯದಿಂದ ಶರೀರ ಮತ್ತು ವಿದ್ಯೆಯಿಂದ ಆತ್ಮನ ಬಲವನ್ನು ಹೊಂದಿದ ಜನರ [ಸೂನೋ] ಪುತ್ರನಾದ [ಮಿತ್ರಮಹಃ] ಎಲ್ಲರ ಮಿತ್ರನೂ ಪೂಜನೀಯನು ಆದ [ಅಗ್ನೇ] ಅಗ್ನಿಯಂತೆ ಪ್ರಕಾಶಮಾನನಾದ ವಿದ್ವಾಂಸನೇ! [ನಪಾತ್] ನೀಚ ಶ್ರೇಣಿಯಲ್ಲಿ ಬೀಳದಿರುವವನಾದ ನೀನು [ಅದ್ಯ] ಇಂದು ನಿನ್ನ ಆತ್ಮ ಸ್ವರೂಪದ ಉಪದೇಶದಿಂದ [ನಃ] ನಮ್ಮನ್ನು [ಅಂಹಸಃ] ಪಾಪಾಚರಣದಿಂದ [ಪಾಹಿ] ಬೇರೆ ಮಾಡಿ ರಕ್ಷಿಸು. [ಅಚ್ಛಿದ್ರಾ] ಭೇದ-ಭೇದ ರಹಿತವಾದ [ಶರ್ಮ] ಸುಖಗಳನ್ನು [ಯಚ್ಛ] ಪ್ರಾಪ್ತಿಸಿ [ಸ್ತೋತೃಭ್ಯಃ] ವಿದ್ವಾಂಸರಿಂದ ವಿದ್ಯೆಯ ಪ್ರಾಪ್ತಿಯನ್ನು ನಮಗೆ ಮಾಡಿಸು. ಹೇ ವಿದ್ವಾಂಸನೇ! ನೀನು ಆತ್ಮನ [ಗೃಣಂತಂ] ಸ್ತುತಿ ಕರ್ತನನ್ನು [ಆಯಸೀಭಿಃ] ಸುವರ್ಣ ಮೊದಲಾದ ಆಭೂಷಣಗಳ ಈಶ್ವರನ ರಚನಾ ರೂಪಿ [ಪೂರ್ಭಿಃ] ರಕ್ಷಣೆಯಲ್ಲಿ ಸಮರ್ಥವಾದ ಅನ್ನಾದಿ ಕ್ರಿಯೆಗಳೊಂದಿಗೆ [ಊರ್ಜಃ] ಪರಾಕ್ರಮದ ಬಲದಿಂದ [ಉರೂಷ್ಯ] ದುಃಖದಿಂದ ಬೇರೆ ಮಾಡು.

ಭಾವಾರ್ಥ:- ಹೇ ಆತ್ಮ ಮತ್ತು ಪರಮಾತ್ಮರನ್ನು ತಿಳಿಯಬಲ್ಲ ಯೋಗಿಜನರೇ! ನೀವು ಆತ್ಮ ಮತ್ತು ಪರಮಾತ್ಮನ ಉಪದೇಶದಿಂದ ಎಲ್ಲ ಮಾನವರನ್ನು ದುಃಖದಿಂದ ದೂರ ಮಾಡಿ ನಿರಂತರ ಸುಖಿಗಳನ್ನಾಗಿ ಮಾಡಿರಿ.

ಎಂತಹವನನ್ನು ಸಭಾಧ್ಯಕ್ಷನನ್ನಾಗಿ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಭವಾ ವರೂಥಂ ಗೃಣತೇ ವಿಭಾವೋ ಭವಾ ಮಘವನ್ ಮಘವದ್ಭ್ಯಃ ಶರ್ಮ ।
ಉರುಷ್ಯಾಗ್ನೇ ಅಂಹಸೋ ಗೃಣಂತಂ ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್ ॥೯॥

ಪದಾರ್ಥ:- [ಮಘವನ್] ಹೇ ಉತ್ತಮ ಧನಯುಕ್ತನಾದ [ಅಗ್ನೇ] ವಿಜ್ಞಾನ ಮೊದಲಾದವುಗಳಿಂದ ಗುಣಯುಕ್ತನಾದ ಸಭಾಧ್ಯಕ್ಷ ವಿದ್ವಾಂಸನೇ! ನೀನು [ಗೃಣತೇ] ಗುಣಗಳ ಕೀರ್ತನೆ ಮಾಡುವ ಮತ್ತು [ಮಘವದ್ಭ್ಯಃ] ವಿದ್ಯಾದಿ ಧನಯುಕ್ತ ವಿದ್ವಾಂಸರಿಗಾಗಿ [ವರೂಥಂ] ಮನೆಯನ್ನು ಮತ್ತು [ಶರ್ಮ] ಸುಖವನ್ನು [ವಿಭಾವಃ] ಹೊಂದು ಹಾಗೂ ನೀನೂ ಸಹ ಮನೆ ಮತ್ತು ಸುಖವನ್ನು [ಭವಾ] ಪ್ರಾಪ್ತಿಸು. [ಗೃಣಂತಂ] ಸ್ತುತಿ ಮಾಡುತ್ತಿರುವ ಮನುಷ್ಯನನ್ನು [ಅಂಹಸಃ] ಪಾಪದಿಂದ [ಮಕ್ಷು] ಶೀಘ್ರವಾಗಿ [ಉರುಷ್ಯ] ರಕ್ಷಿಸು. ನೀನೂ ಸಹ ಪಾಪದಿಂದ ಬೇರೆ [ಭವಾ] ಆಗು. ಇಂತಹ ಯಾವ [ಧಿಯಾವಸುಃ] ಪ್ರಜೆ ಹಾಗೂ ಕರ್ಮಗಳಿಂದ ವಾಸಿಸಲ್ಪಡಲು ಯೋಗ್ಯರಾದ [ಪ್ರಾತಃ] ಪ್ರತಿನಿತ್ಯವೂ ಪ್ರಜೆಗಳ ರಕ್ಷಣೆಯನ್ನು ಮಾಡುತ್ತದೆಯೋ ಅಂತಹ ಸುಖಗಳನ್ನು [ಜಗಮ್ಯಾತ್] ಅತಿಶಯವಾಗಿ ಪ್ರಾಪ್ತಿಸುವವನಾಗು.

ಭಾವಾರ್ಥ:- ಮಾನವರಿಗೆ ಯೋಗ್ಯವಾದುದೇನೆಂದರೆ, ಯಾವ ವಿದ್ವಾಂಸನು ಧರ್ಮ ಮತ್ತು ವಿನಯದಿಂದ ಎಲ್ಲ ಪ್ರಜೆಗಳನ್ನು ಶಿಕ್ಷಣ ನೀಡಿ ಪಾಲಿಸುತ್ತಾನೋ ಅವನನ್ನೇ ಸಭೆ ಮೊದಲಾದವುಗಳ ಅಧ್ಯಕ್ಷನನ್ನಾಗಿ ಮಾಡಬೇಕು.

ಈ ಸೂಕ್ತದಲ್ಲಿ ಅಗ್ನಿ ಮತ್ತು ವಿದ್ವಾಂಸರ ಗುಣವರ್ಣನೆ ಮಾಡಿರುವುದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ಐವತ್ತೆಂಟನೆಯ ಸೂಕ್ತ ಸಮಾಪ್ತ

ಸೂಕ್ತ ೫೯

ಮಂತ್ರಸಂಖ್ಯೆ - ೭ । ಋಷಿಃ - ನೋಧಾ ಗೌತಮಃ । ದೇವತಾ - ಅಗ್ನಿರ್ವೈಶ್ವಾನರಃ । ಛಂದಃ - ೧ ನಿಚೃದ್ ತ್ರಿಷ್ಟುಪ್। ೨, ೪ ವಿರಾಟ್ ತ್ರಿಷ್ಟುಪ್, ೫ -೭ ತ್ರಿಷ್ಟುಪ್, ೩ ಪಂಕ್ತಿಃ । ಸ್ವರಃ - ಧೈವತಃ, ೩ ಪಂಚಮಃ ।

ಈಶನ ಆನಂದ ಹೇಗೆ ಲಭ್ಯವಾಗುತ್ತದೆ ಎಂಬುದನ್ನಿಲ್ಲಿ ತಿಳಿಸಲಾಗಿದೆ.

ವಯಾ ಇದಗ್ನೇ ಅಗ್ನಯಸ್ತೇ ಅನ್ಯೇ ತ್ವೇ ವಿಶ್ವೇ ಅಮೃತಾ ಮಾದಯಂತೇ ।
ವೈಶ್ವಾನರ ನಾಭಿರಸಿ ಕ್ಷಿತೀನಾಂ ಸ್ಥೂಣೇವ ಜನಾँ ಉಪಮಿದ್ ಯಯಂಥ ॥೧॥

ಪದಾರ್ಥ:- [ವೈಶ್ವಾನರ] ಹೇ ಸಮಸ್ತವನ್ನು ನಿಯಮದಲ್ಲಿ ಇರಿಸುವ [ಅಗ್ನೇ] ಜಗದೀಶ್ವರನೇ! ಯಾವ [ತೇ] ನಿನಗಿಂತ [ಅನ್ಯೇ] ಭಿನ್ನವಾದ [ವಿಶ್ವೇ] ಸಮಸ್ತ [ಅಮೃತಾಃ] ಅವಿನಾಶಿಯಾದ [ಅಗ್ನಯಃ] ಸೂರ್ಯನೇ ಮೊದಲಾದ ಜ್ಞಾನ ಪ್ರಕಾಶಕ ಪದಾರ್ಥಗಳ ಸಮಾನನಾದ ಜೀವನು [ತ್ವೇ] ನಿನ್ನಲ್ಲಿ [ವಯಾ] ಶಾಖೆಯ [ಇತ್] ಸಮಾನವಾಗಿ ವೃದ್ಧಿಸಿ [ಮಾದಯಂತೇ] ಆನಂದಿತನಾಗುತ್ತಾನೋ, ಯಾವ ನೀನು [ಕ್ಷಿತೀನಾಂ] ಮನುಷ್ಯಾದಿಗಳ [ನಾಭಿಃ] ಮಧ್ಯವರ್ತಿಯು [ಅಸಿ] ಆಗಿರುವೆಯೋ, [ಜನಾನ್] ಮನುಷ್ಯಾದಿಗಳನ್ನು [ಉಪಮಿತ್] ಧರ್ಮವಿದ್ಯೆಯನ್ನು ಸ್ಥಾಪಿತಗೊಳಿಸುತ್ತ [ಸ್ಥೂಣೇವ] ಧಾರಣ ಮಾಡುವ ಕಂಭದಂತೆ [ಯಯಂಥ] ಎಲ್ಲರನ್ನು ನಿಯಮದಲ್ಲಿ ಇರಿಸುತ್ತೀಯೋ, ಅದೇ ನೀನು ನಮ್ಮ ಉಪಾಸ್ಯದೇವನಾಗಿರುವೆ.

ಭಾವಾರ್ಥ:- ಯಾವ ರೀತಿ ವೃಕ್ಷವು ತನ್ನ ಶಾಖೆಯನ್ನು ಮತ್ತು ಕಂಭವು ಗೃಹವನ್ನು ಧಾರಣ ಮಾಡಿ ಆನಂದಿತಗೊಳಿಸುತ್ತದೆಯೋ, ಅದೇ ರೀತಿ ಪರಮೇಶ್ವರನು ಎಲ್ಲರನ್ನೂ ಧಾರಣ ಮಾಡಿ ಆನಂದವನ್ನು ನೀಡುತ್ತಾನೆ.

ಎಂತಹವನನ್ನು ಉಪಾಸಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಮೂರ್ಧಾ ದಿವೋ ನಾಭಿರಗ್ನಿಃ ಪೃಥಿವ್ಯಾ ಅಥಾಭವದರತೀ ರೋದಸ್ಯೋಃ ।
ತಂ ತ್ವಾ ದೇವಾಸೋಽಜನಯಂತ ದೇವಂ ವೈಶ್ವಾನರ ಜ್ಯೋತಿರಿದಾರ್ಯಾಯ ॥೨॥

ಪದಾರ್ಥ:- [ವೈಶ್ವಾನರ] ಹೇ ಸಕಲ ಜಗತ್ತಿನ ನಾಯಕನೇ! ಯಾವ ನೀನು [ಅಗ್ನಿಃ] ವಿದ್ಯುತ್ತಿನಂತೆ [ದಿವಃ] ಪ್ರಕಾಶವನ್ನು ಮತ್ತು [ಪೃಥಿವ್ಯಾಃ] ಭೂಮಿಯ ಮಧ್ಯದಲ್ಲಿಯಂತೆ [ಮೂರ್ಧಾ] ಉತ್ಕೃಷ್ಟನೂ [ನಾಭಿಃ] ಮಧ್ಯವರ್ತಿಯಾದ ವ್ಯಾಪಕನೂ [ಅಭವತ್] ಆಗಿರುತ್ತೀಯೆ. [ಅಥ] ಈ ಎಲ್ಲ ಲೋಕಗಳ ರಚನೆಯ ಅನಂತರ ಯಾವ [ರೋದಸ್ಯೋಃ] ಪ್ರಕಾಶ ಮತ್ತು ಅಪ್ರಕಾಶ ರೂಪಿ ಸೂರ್ಯಾದಿ ಹಾಗೂ ಭೂಮಿ ಮೊದಲಾದ ಲೋಕಗಳ [ಅರತಿಃ] ವ್ಯಾಪಕನಾಗಿ ನೀನು ಅಧ್ಯಕ್ಷನಾಗಿ [ಅಭವತ್] ಆಗುತ್ತೀಯೆ. ಯಾವ [ಆರ್ಯಾಯ] ಉತ್ತಮ ಗುಣಕರ್ಮ ಸ್ವಭಾವದ ಮನುಷ್ಯನಿಗಾಗಿ [ಜ್ಯೋತಿಃ ಇತ್] ಜ್ಞಾನಪ್ರಕಾಶ ಅಥವಾ ಮೂರ್ತ ದ್ರವ್ಯದ ಪ್ರಕಾಶವನ್ನೇ ಮಾಡುತ್ತೀಯೆ. ಯಾವ [ದೇವಂ] ಪ್ರಕಾಶಮಾನವಾದ [ತ್ವಾ] ನಿನ್ನನ್ನು [ದೇವಾಸಃ] ವಿದ್ವಾಂಸರು [ಅಜನಯಂತ] ಪ್ರಕಟಗೊಳಿಸುತ್ತಾರೆ ಅಥವಾ ಯಾವ ವಿದ್ಯುತ್ ರೂಪಿ ಅಗ್ನಿಯನ್ನು ವಿದ್ವಾಂಸರು 'ಅಜನಯಂತ'- ಪ್ರಕಟಗೊಳಿಸುತ್ತಾರೆ. [ತಂ] ಅಂತಹ ನಿನ್ನನ್ನೇ ನಾವುಗಳು ಉಪಾಸಿಸೋಣ.

ಭಾವಾರ್ಥ:- ಯಾವ ಜಗದೀಶ್ವರನು ಆರ್ಯ ಅರ್ಥಾತ್ ಉತ್ತಮ ಮನುಷ್ಯರ ವಿಜ್ಞಾನಕ್ಕಾಗಿ ಸಮಸ್ತ ವಿದ್ಯೆಗಳ ಪ್ರಕಾಶವನ್ನು ಬೀರುವ ವೇದಗಳನ್ನು ಪ್ರಕಟಿಸಿದ್ದಾನೋ ಹಾಗೂ ಯಾವ ಉತ್ತಮೋತ್ತಮನ ಆಧಾರ ಜಗದೀಶ್ವರನಾಗಿದ್ದಾನೋ ಅವನನ್ನು ತಿಳಿದು ಮನುಷ್ಯರು ಅವನ ಉಪಾಸನೆಯನ್ನೇ ಮಾಡತಕ್ಕದ್ದು.

ಮನುಷ್ಯರು ಸುಖದ ಲಾಭವನ್ನೂ ದುಃಖದ ನಾಶವನ್ನೂ ಹೇಗೆ ಸಾಧಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಆ ಸೂರ್ಯೇ ನ ರಶ್ಮಯೋ ಧ್ರುವಾಸೋ ವೈಶ್ವಾನರೇ ದಧಿರೇಽಗ್ನಾ ವಸೂನಿ ।

ಯಾ ಪರ್ವತೇಷ್ವೋಷಧೀಷ್ವಪ್ಸು ಯಾ ಮಾನುಷೇಷ್ವಸಿ ತಸ್ಯ ರಾಜಾ ॥೩॥

ಪದಾರ್ಥ:- ಹೇ ಜಗದೀಶ್ವರ! ಯಾವ ಈ ದ್ರವ್ಯಸಮೂಹ ಜಗತ್ತಿಗೆ ನೀನು **[ರಾಜಾ ಅಸಿ]** ಪ್ರಕಾಶಕನಾಗಿದ್ದೀಯೋ, **[ತಸ್ಯ]** ಅದರ ಮಧ್ಯದಲ್ಲಿ **[ಯಾ]** ಯಾವ **[ಪರ್ವತೇಷು]** ಪರ್ವತಗಳಲ್ಲಿ **[ಯಾ]** ಯಾವ **[ಓಷಧೀಷು]** ಓಷಧಿಗಳಲ್ಲಿ ಯಾವ **[ಅಪ್ಸು]** ಜಲಗಳಲ್ಲಿ ಮತ್ತು **[ಮಾನುಷೇಷು]** ಯಾವ ಮನುಷ್ಯರಲ್ಲಿ **[ವಸೂನಿ]** ದ್ರವ್ಯಗಳಿವೆಯೋ, ಅವೆಲ್ಲವನ್ನು **[ಸೂರ್ಯೇ]** ಸವಿತೃ ಲೋಕದಲ್ಲಿ **[ರಶ್ಮಯಃ]** ಕಿರಣಗಳ **[ನ]** ಸಮಾನವಾಗಿ **[ಅಗ್ನಾ ವೈಶ್ವಾನರೇ]** ನಿನ್ನಲ್ಲಿ **[ಧ್ರುವಾಸಃ]** ನಿಶ್ಚಲ ಪ್ರಜೆಗಳನ್ನು, ವಿದ್ವಾಂಸರು **[ಆ ದಧಿರೇ]** ಧಾರಣ ಮಾಡುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಅಲ್ಲದೆ ಪೂರ್ವ ಮಂತ್ರದಿಂದ (ದೇವಾಸಃ) ಈ ಪದದ ಅನುವೃತ್ತಿ ಬರುತ್ತದೆ. ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಯಾವ ರೀತಿ ಜನರು ಮತ್ತು ಪ್ರಾಣಿಗಳು ಪ್ರಕಾಶಮಾನ ಸೂರ್ಯನ ಉದಯದೊಂದಿಗೆ ಎಲ್ಲ ಕಾರ್ಯಗಳನ್ನು ಸಿದ್ಧಿಸುತ್ತಾರೋ, ಅದೇ ರೀತಿ ಮನುಷ್ಯರು ಉಪಾಸನೆ ಮಾಡಲ್ಪಟ್ಟ ಜಗದೀಶ್ವರನಲ್ಲಿ ಎಲ್ಲ ಕಾರ್ಯಗಳನ್ನು ಸಿದ್ಧಿಗೊಳಿಸಬೇಕು. ಇದೇ ರೀತಿ ಮಾಡುತ್ತಾ ಮನುಷ್ಯರಿಗೆ ಎಂದಿಗೂ ಸುಖ ಮತ್ತು ಧನದ ನಾಶವೂ, ದುಃಖ ಮತ್ತು ದಾರಿದ್ರ್ಯವೂ ಉತ್ಪನ್ನವಾಗಲಾರದು.

ಸಭಾಪತಿಯು ಪ್ರಜೆಗಳೊಂದಿಗೆ ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಲಾಗಿದೆ.

ಬೃಹತೀ ಇವ ಸೂನವೇ ರೋದಸೀ ಗಿರೋ ಹೋತಾ ಮನುಷ್ಯೋ೩ ನ ದಕ್ಷಃ ।

ಸ್ವರ್ವತೇ ಸತ್ಯಶುಷ್ಮಾಯ ಪೂರ್ವೀ-ರ್ವೈಶ್ವಾನರಾಯ ನೃತಮಾಯ ಯಹ್ವೀಃ ॥೪॥

ಪದಾರ್ಥ:- ಯಾವ ರೀತಿ **[ಸೂನವೇ]** ಪುತ್ರನಿಗಾಗಿ **[ಬೃಹತೀ ಇವ]** ಮಹಾ ಗುಣಯುಕ್ತಳಾದ ಮಾತೆಯು ವರ್ತಿಸುತ್ತಾಳೋ, ಯಾವ ರೀತಿ **[ರೋದಸೀ]** ಪ್ರಕಾಶಮಯ ಭೂಮಿ ಮತ್ತು **[ದಕ್ಷಃ]** ಚತುರನಾದ **[ಮನುಷ್ಯಃ]** ಓದಿರುವ ವಿದ್ವಾಂಸನು ಸಾಮಾನ್ಯ ಮನುಷ್ಯನ ತಂದೆಯ **[ನ]** ಸಮಾನವಾಗಿ **[ಹೋತಾ]** ನೀಡುವ ವಿದ್ವಾಂಸ, ಈಶ್ವರ ಮತ್ತು ಸಭಾಪತಿ ವಿದ್ವಾಂಸರಲ್ಲಿ ಪ್ರಸನ್ನರಾಗುತ್ತಾರೋ, ಯಾವ ರೀತಿ ವಿದ್ವಾಂಸರು ಈ **[ಸ್ವರ್ವತೇ]** ಪ್ರಶಂಸನೀಯವಾದ ಸುಖವಿರುವ **[ಸತ್ಯಶುಷ್ಮಾಯ]** ಸತ್ಯದ ಬಲವನ್ನು ಹೊಂದಿದ **[ನೃತಮಾಯ]** ಪುರುಷರಲ್ಲಿ ಉತ್ತಮನಾದ **[ವೈಶ್ವಾನರಾಯ]** ಪರಮೇಶ್ವರನಿಗಾಗಿ **[ಪೂರ್ವೀ]** ಸನಾತನವಾದ **[ಯಹ್ವೀಃ]** ಮಹಾ ಗುಣಲಕ್ಷಣಯುಕ್ತವಾದ **[ಗಿರಃ]** ವೇದವಾಣಿಗಳನ್ನು **[ದಧಿರೇ]** ಧಾರಣ ಮಾಡುತ್ತಾರೋ, ಅದೇ ರೀತಿ ಆ ಪರಮೇಶ್ವರನ ಉಪಾಸಕನಾದ ಸಭಾಧ್ಯಕ್ಷನೊಂದಿಗೆ ಸರ್ವರೂ ವರ್ತಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಭೂಮಿ ಮತ್ತು ಸೂರ್ಯ ಪ್ರಕಾಶವು ಎಲ್ಲರನ್ನು ಧಾರಣ ಮಾಡಿ ಸುಖಿಗಳನ್ನಾಗಿಸುತ್ತದೆಯೋ, ಯಾವ ರೀತಿ ತಂದೆ ಅಥವಾ ಅಧ್ಯಾಪಕನು ಪುತ್ರ ಅಥವಾ ಶಿಷ್ಯನ ಹಿತಕ್ಕಾಗಿ ಪ್ರವೃತ್ತರಾಗುತ್ತಾರೋ, ಯಾವ ರೀತಿ ಪರಮೇಶ್ವರನು ಪ್ರಜಾಸುಖಕ್ಕಾಗಿಯೇ ವರ್ತಿಸುತ್ತಾನೋ, ಅದೇ ರೀತಿ ಸಭಾಪತಿಯಾದವನು ಪ್ರಜೆಗಳಿಗಾಗಿ ವರ್ತಿಸಲಿ ಎಂಬುದಾಗಿ ಎಲ್ಲ ವೇದವಾಣಿಗಳು ಪ್ರತಿಪಾದಿಸುತ್ತವೆ.

ಮಾನವರ ಉಪಾಸನಾಯೋಗ್ಯರು ಯಾರು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ದಿವಶ್ಚಿತ್ ತೇ ಬೃಹತೋ ಜಾತವೇದೋ ವೈಶ್ವಾನರ ಪ್ರ ರಿರಿಚೇ ಮಹಿತ್ವಮ್ ।

ರಾಜಾ ಕೃಷ್ಟೀನಾಮಸಿ ಮಾನುಷೀಣಾಂ ಯುಧಾ ದೇವೇಭ್ಯೋ ವರಿವಶ್ಚಕರ್ಥ ॥೫॥

ಪದಾರ್ಥ:- **[ಜಾತವೇದಃ]** ಯಾವನಲ್ಲಿ ವೇದಗಳು ಉತ್ಪನ್ನವಾಗಿವೆಯೋ, ವೇದಗಳನ್ನು ತಿಳಿಯುವ ಮತ್ತು ಅವುಗಳನ್ನು ಪ್ರಾಪ್ತಿಸಿಕೊಳ್ಳುವ ಹಾಗೂ ಉತ್ಪನ್ನವಾದ ಎಲ್ಲ ಪದಾರ್ಥಗಳಲ್ಲಿಯೂ ವಿದ್ಯಮಾನನಾಗಿರುವ **[ವೈಶ್ವಾನರ]** ಎಲ್ಲರಿಗೂ ಪ್ರಾಪ್ತನಾಗುವ **[ಪ್ರಜಾಪತೇ]** ಜಗದೀಶ್ವರ! ಯಾವ **[ತೇ]** ನಿನ್ನ **[ಮಹಿತ್ವಮ್]** ಮಹಾ ಗುಣಯುಕ್ತ ಪ್ರಭಾವವು **[ಬೃಹತಃ]** ಹಿರಿದಾದ **[ದಿವಃ]** ಸೂರ್ಯಾದಿ ಪ್ರಕಾಶಗಳಲ್ಲಿ **[ಚಿತ್]** ಕೂಡ **[ಪ್ರರಿರಿಚೇ]** ಅಧಿಕವಾಗಿದೆಯೋ, ಯಾವ ನೀನು **[ಕೃಷ್ಟೀನಾಮ್]** ಮನುಷ್ಯಾದಿ **[ಮಾನುಷೀಣಾಂ]** ಮನುಷ್ಯ ಸಂಬಂಧಿ ಪ್ರಜೆಗಳ **[ರಾಜಾ]** ಪ್ರಕಾಶ ಮಾನನಾದ ಅಧೀಶನೂ **[ಅಸಿ]** ಆಗಿರುವೆಯೋ ಮತ್ತು ಯಾವ ನೀನು **[ದೇವೇಭ್ಯಃ]** ವಿದ್ವಾಂಸರಿಗಾಗಿ **[ಯುಧಾ]** ಸಂಗ್ರಾಮದಲ್ಲಿ **[ವರಿವಃ]** ಸೇವೆಯನ್ನು **[ಚಕರ್ಥ]** ಪ್ರಾಪ್ತಿಸುತ್ತೀಯೋ ಆ ನೀನೇ ನಮ್ಮಗಳ ನ್ಯಾಯಾಧೀಶನಾಗು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಸಭೆಯಲ್ಲಿ ಇರುವ ಮನುಷ್ಯರು ಅನಂತ ಸಾಮರ್ಥ್ಯವಂತನಾದ ಪರಮೇಶ್ವರನ ಸರ್ವಾಧಿಷ್ಠಾತಾ ಆಗಿರುವುದರಿಂದ ಉಪಾಸನೀಯನಾದ, ಮಹಾ ಶುಭಗುಣಯುಕ್ತನಾದುದರಿಂದ ಸಭೆ ಮೊದಲಾದವುಗಳ ಅಧೀಶನೂ ಆದವನ ಸೇವೆಯನ್ನು ಮತ್ತು ಯುದ್ಧದಲ್ಲಿ ದುಷ್ಟರನ್ನು ಗೆದ್ದು ಪ್ರಜೆಗಳ ಪಾಲನೆಯನ್ನು ಮಾಡಿ ವಿದ್ವಾಂಸರ ಸೇವೆ ಹಾಗೂ ಸತ್ಸಂಗವನ್ನು ಸದಾ ಮಾಡುವವರಾಗಬೇಕು.

ವಿದ್ವಾಂಸರು ಯಾರನ್ನು ಉಪಾಸಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಪ್ರ ನೂ ಮಹಿತ್ವಂ ವೃಷಭಸ್ಯ ವೋಚಂ ಯಂ ಪೂರವೋ ವೃತ್ರಹಣಂ ಸಚಂತೇ ।

ವೈಶ್ವಾನರೋ ದಸ್ಯುಮಗ್ನಿರ್ಜಘನ್ವಾँ ಅಧೂನೋತ್ ಕಾಷ್ಠಾ ಅವ ಶಂಬರಂ ಭೇತ್ ॥೬॥

ಪದಾರ್ಥ:- **[ತಂ]** ಯಾವ ಪರಮೇಶ್ವರನನ್ನು **[ಪೂರವಃ]** ವಿದ್ವಾಂಸರು ತಮ್ಮ ಆತ್ಮನೊಂದಿಗೆ **[ಸಚಂತೇ]** ಯುಕ್ತಗೊಳಿಸುತ್ತಾರೋ, ಯಾವ ರೀತಿ **[ಅಗ್ನಿಃ]** ಸರ್ವವ್ಯಾಪಕವಾದ ವಿದ್ಯುತ್ತು **[ವೃತ್ರಹಣಂ]** ಸಂಪೂರ್ಣ ಪ್ರಜೆಗಳನ್ನು ಮೇಘದ ನಾಶಕರ್ತನಾದ ಸೂರ್ಯನನ್ನು ತೋರಿಸುತ್ತದೆಯೋ, ಯಾವ ರೀತಿ **[ವೈಶ್ವಾನರಃ]** ಸಂಪೂರ್ಣ ಪ್ರಜೆಗಳನ್ನು ನಿಯಮದಲ್ಲಿರಿಸುವ ಸೂರ್ಯನು **[ದಸ್ಯುಂ]** ಚೋರನಂತೆ **[ಶಂಬರಂ]** ಮೇಘವನ್ನು **[ಜಘನ್ವಾನ್]** ನಾಶಗೊಳಿಸಿ **[ಅಧೂನೋತ್]** ಕಂಪಿಸುವಂತೆ ಮಾಡಿ **[ಅವ ಭೇತ್]** ಛಿದ್ರಗೊಳಿಸುತ್ತಾನೋ, ಯಾವುದರ ಮಧ್ಯದಲ್ಲಿ **[ಕಾಷ್ಠಾಃ]** ದಿಶೆಗಳು ವ್ಯಾಪ್ತವಾಗಿವೆಯೋ ಆ **[ವೃಷಭಸ್ಯ]** ಸರ್ವೋತ್ತಮನಾದ ಸೂರ್ಯನ **[ಮಹಿತ್ವಂ]** ಮಹಿಮೆಯನ್ನು ನಾನು **[ನು]** ಶೀಘ್ರವಾಗಿ **[ಪ್ರವೋಚಂ]** ಪ್ರಕಾಶಗೊಳಿಸುವಂತೆ ಎಲ್ಲ ವಿದ್ವಾಂಸರೂ ಮಾಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾರ ಮಹಿಮೆಯನ್ನು ಸಮಸ್ತ ಪ್ರಪಂಚವು ಪ್ರಕಾಶಿತಗೊಳಿಸುತ್ತದೆಯೋ ಅದೇ ಅನಂತ ಶಕ್ತಿಮಾನ್ ಪರಮೇಶ್ವರನು ಎಲ್ಲರಿಗೂ ಉಪಾಸನಾಯೋಗ್ಯನಾಗಿದ್ದಾನೆ.

ಮಾನವನು ಮಹಿಮಾಯೋಗ್ಯನು ಹೇಗಾಗುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ

ವೈಶ್ವಾನರೋ ಮಹಿಮ್ನಾ ವಿಶ್ವಕೃಷ್ಟಿ-ರ್ಭರದ್ವಾಜೇಷು ಯಜತೋ ವಿಭಾವಾ ।

ಶಾತವನೇಯೇ ಶತಿನೀಭಿರಗ್ನಿಃ ಪುರುಣೀಥೇ ಜರತೇ ಸೂನೃತಾವಾನ್ ॥೭॥

ಪದಾರ್ಥ:- ಯಾವ [ವಿಶ್ವಕೃಷ್ಟಿಃ] ಎಲ್ಲವನ್ನು ಉತ್ಪನ್ನಗೊಳಿಸುವವನು [ಯಜತಃ] ಪೂಜಾಯೋಗ್ಯನು [ವಿಭಾವಾ] ವಿಶೇಷವಾಗಿ ಪ್ರಕಾಶಮಾನನು [ಸೂನೃತಾವಾನ್] ಪ್ರಶಂಸನೀಯ ಅನಾಧಿ ತತ್ವದ ಆಧಾರನೂ [ವೈಶ್ವಾನರಃ] ಎಲ್ಲವನ್ನು ಪ್ರಾಪ್ತಗೊಳಿಸುವವನು [ಅಗ್ನಿಃ] ಸೂರ್ಯನಂತೆ ಇರುವ ಜಗದೀಶ್ವರನು ತನ್ನ ಜಗದ್ರೂಪಿ [ಮಹಿಮ್ನಾ] ಮಹಿಮೆಯೊಂದಿಗೆ [ಭರದ್ವಾಜೇಷು] ಧಾರಣೆ ಮಾಡುವ ಅಥವಾ ತಿಳಿಯಲು ಯೋಗ್ಯವಾದ ಪೃಥಿವೀ ಮೊದಲಾದ ಪದಾರ್ಥಗಳಲ್ಲಿ [ಶತಿನೀಭಿಃ] ಅಸಂಖ್ಯಾತ ಗತಿಯುಕ್ತ ಕ್ರಿಯೆಗಳಿಂದ ಕೂಡಿ [ಪುರುಮೀಳ್ಹೇ] ಬಹಳ ಪ್ರಾಣಿಗಳಲ್ಲಿ ಪ್ರಾಪ್ತವಾದ [ಶಾತವನೇಯೇ] ಅಸಂಖ್ಯಾತ ವಿಭಾಗಯುಕ್ತ ಕ್ರಿಯೆಗಳಿಂದ ಸಿದ್ಧವಾದ ಜಗತ್ತಿನಲ್ಲಿ ವರ್ತಿಸುತ್ತಾನೋ ಅವನನ್ನು ಯಾವ ಮಾನವರು [ಜರತೇ] ಅರ್ಚನ-ಪೂಜನವನ್ನು ಮಾಡುತ್ತಾರೋ ಅವರು ನಿರಂತರ ಸತ್ಕಾರವನ್ನು ಹೊಂದುತ್ತಾರೆ.

ಭಾವಾರ್ಥ:- ಯಾವ ಅಸಂಖ್ಯಾತ ಪದಾರ್ಥಗಳಲ್ಲಿ ಅಸಂಖ್ಯಾತ ಕ್ರಿಯೆಗಳ ಕಾರಣವಾದ ವಿದ್ಯುದ್ರೂಪೀ ಅಗ್ನಿಯ ಸಮಾನನಾದ ಈಶ್ವರನಿದ್ದಾನೋ, ಅವನೇ ಸಮಸ್ತ ಜಗತ್ತನ್ನು ಧಾರಣ ಮಾಡುತ್ತಾನೆ. ಅವನ ಪೂಜನವನ್ನು ಯಾವ ಮಾನವನು ಮಾಡುತ್ತಾನೋ ಅವನು ಸದಾ ಮಹಿಮೆಯನ್ನು ಹೊಂದುತ್ತಾನೆ.

ಈ ಸೂಕ್ತದಲ್ಲಿ ವೈಶ್ವಾನರ ಶಬ್ದಾರ್ಥದ ವರ್ಣನೆ ಇರುವುದರಿಂದ ಇದರ ಅರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ.

ಐವತ್ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೬೦

ಮಂತ್ರಸಂಖ್ಯೆ ೫ । ಋಷಿಃ - ನೋಧಾ ಗೌತಮಃ । ದೇವತಾ - ಅಗ್ನಿಃ । ಛಂದಃ - ೧ ವಿರಾಟ್ ತ್ರಿಷ್ಟುಪ್ ।

೩, ೫ ತ್ರಿಷ್ಟುಪ್ । ಸ್ವರಃ - ಧೈವತಃ । ೨, ೪ ಭುರಿಕ್ ಪಂಕ್ತಿಃ । ಸ್ವರಃ - ೨, ೪ ಪಂಚಮಃ.

ರಾಜಪುರುಷರ ಕರ್ತವ್ಯವೇನು ಎಂಬುದನ್ನು ತಿಳಿಸಲಾಗಿದೆ

ವಹ್ನಿಂ ಯಶಸಂ ವಿದಥಸ್ಯ ಕೇತುಂ ಸುಪ್ರಾವ್ಯಂ ದೂತಂ ಸದ್ಯೋಅರ್ಥಮ್ ।
ದ್ವಿಜನ್ಮಾನಂ ರಯಿಮಿವ ಪ್ರಶಸ್ತಂ ರಾತಿಂ ಭರದ್ ಭೃಗವೇ ಮಾತರಿಶ್ವಾ ॥೧॥

ಪದಾರ್ಥ:- ಹೇ ಮಾನವರೇ! ಯಾವ ರೀತಿ [ಮಾತರಿಶ್ವಾ] ಅಂತರಿಕ್ಷದಲ್ಲಿ ಶಯನ ಮಾಡುವ ವಾಯುವು [ಭೃಗವೇ] ಪಕ್ವಗೊಳಿಸಲು [ವಿದಥಸ್ಯ] ಯುದ್ಧದ [ಕೇತುಂ] ಧ್ವಜದಂತೆ [ಯಶಸಂ] ಕೀರ್ತಿಕಾರಕವಾದ [ಸುಪ್ರಾವ್ಯಂ] ಉತ್ತಮತೆಯಿಂದ ನಡೆಸಲು ಯೋಗ್ಯವಾದ [ದೂತಂ] ದೇಶಾಂತರವನ್ನು ಪ್ರಾಪ್ತಗೊಳಿಸುವ [ರಾತಿಂ] ದಾನದ ನಿಮಿತ್ತ [ಪ್ರಶಸ್ತಂ] ಅತ್ಯಂತ ಶ್ರೇಷ್ಠವಾದ [ದ್ವಿಜನ್ಮಾನಂ] ವಾಯು ಅಥವಾ ಕಾರಣದಿಂದ ಜನ್ಮಸಹಿತವಾದ [ವಹ್ನಿಂ] ಎಲ್ಲವನ್ನು ವಹಿಸಬಲ್ಲ ಅಗ್ನಿಯನ್ನು [ರಯಿಮಿವ] ಉತ್ತಮ ಲಕ್ಷ್ಮಿಯ ಸಮಾನವಾಗಿ [ಸದ್ಯೋಅರ್ಥಮ್] ಶೀಘ್ರಗಾಮಿಯಾದ ಪೃಥಿವ್ಯಾದಿ ದ್ರವ್ಯಗಳನ್ನು [ಭರತ್] ಭರಿಸುತ್ತದೆಯೋ, ಹಾಗೆಯೇ ನೀವೂ ಸಹ ಕೆಲಸ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ವಾಯು, ವಿದ್ಯುತ್ ಮೊದಲಾದ ವಸ್ತುಗಳ ಧಾರಣ ಮಾಡಿ ಸಮಸ್ತ ಚರಾಚರ ಲೋಕಗಳ ಧಾರಣೆಯನ್ನು ಮಾಡುತ್ತದೆಯೋ, ಅದೇ ರೀತಿ ರಾಜಪುರುಷರು ವಿದ್ಯೆ, ಧರ್ಮ, ಧಾರಣ ಪೂರ್ವಕವಾಗಿ ನ್ಯಾಯದಲ್ಲಿ ಪ್ರಜೆಗಳನ್ನು ಇರಿಸಬೇಕು.

ಮಾನವರ ಕರ್ತವ್ಯವೇನೆಂಬುದು ಇಲ್ಲಿ ತಿಳಿಸಲಾಗಿದೆ

ಅಸ್ಯ ಶಾಸುರುಭಯಾಸಃ ಸಚಂತೇ ಹವಿಷ್ಮಂತ ಉಶಿಜೋ ಯೇ ಚ ಮರ್ತಾಃ ।
ದಿವಶ್ಚಿತ್ ಪೂರ್ವೋ ನ್ಯಸಾದಿ ಹೋತಾಽಽಪೃಚ್ಛ್ಯೋ ವಿಶ್ಪತಿರ್ವಿಕ್ಷು ವೇಧಾಃ ॥೨॥

ಪದಾರ್ಥ:- [ಯೇ] ಯಾರು [ಹವಿಷ್ಮಂತಃ] ಉತ್ತಮ ಸಾಮಗ್ರಿಯುಕ್ತವಾದ [ಉಶಿಜಃ] ಶುಭಗುಣ ಕರ್ಮಗಳನ್ನು ಕಾಮನೆ ಮಾಡುವ [ಉಭಯಾಸಃ] ರಾಜಾ ಮತ್ತು ಪ್ರಜೆಗಳ [ಮರ್ತಾಃ] ಮನುಷ್ಯರು ಯಾವ [ಅಸ್ಯ] ಈ [ಶಾಸುಃ] ಸತ್ಯ-ನ್ಯಾಯದ ಶಾಸನ ಮಾಡುವ [ವಿಕ್ಷು] ಪ್ರಜೆಗಳಲ್ಲಿ [ಸಚಂತೇ] ಸಂಯುಕ್ತವಾಗುತ್ತಾರೋ, ಯಾವ [ಹೋತಾ] ಶುಭ ಕರ್ಮಗಳನ್ನು ಗ್ರಹಣ ಮಾಡುವವರು [ಆಪೃಚ್ಛ್ಯಃ] ಸಮಸ್ತ ಪ್ರಕಾರದ ಪ್ರಶ್ನೆಗಳನ್ನು ಕೇಳಲು ಯೋಗ್ಯವಾದ [ವೇಧಾಃ] ವಿವಿಧ ವಿದ್ಯೆಗಳ ಧಾರಣೆ ಮಾಡುವ [ವಿಶ್ಪತಿಃ] ಪ್ರಜೆಗಳ ಸ್ವಾಮಿಯು [ದಿವಃ] ಪ್ರಕಾಶದ [ಪೂರ್ವಃ] ಪೂರ್ವದಲ್ಲಿ ಸ್ಥಿತವಾದ ಸೂರ್ಯನ [ಚಿತ್] ಸಮಾನವಾಗಿ ಧಾರ್ಮಿಕ ಜನರು ಯಾವ ರಾಜ್ಯಪಾಲನೆಗಾಗಿ ನಿಯುಕ್ತರಾಗಿದ್ದಾರೋ [ಚ] ಅವರೇ ಎಲ್ಲ ಮನುಷ್ಯರಿಗೂ ಆಶ್ರಯಿಸಲು ಯೋಗ್ಯರಾಗುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾಗುದೇನೆಂದರೆ, ಯಾರು ವಿದ್ವಾಂಸರಿಂದಲೂ ಧರ್ಮಾತ್ಮರಿಂದಲೂ ನ್ಯಾಯಾಧೀಶರಿಂದಲೂ ಪ್ರಶಂಸೆಗೆ ಪ್ರಾಪ್ತರಾಗಿದ್ದಾರೋ, ಯಾರ ಶೀಲದಿಂದ ಸಮಸ್ತ ಪ್ರಜೆಗಳು ಸಂತುಷ್ಟರಾಗಿದ್ದಾರೋ, ಅವರುಗಳ ಸೇವೆಯನ್ನು ತಂದೆಯ ಸಮಾನವಾಗಿ ಎಲ್ಲರೂ ಮಾಡಬೇಕು.

ಆದರಯೋಗ್ಯರು ಯಾರು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತಂ ನವ್ಯಸೀ ಹೃದ ಆ ಜಾಯಮಾನ-ಮಸ್ಮತ್ ಸುಕೀರ್ತಿರ್ಮಧುಜಿಹ್ವಮಶ್ಯಾಃ ।
ಯಮೃತ್ವಿಜೋ ವೃಜನೇ ಮಾನುಷಾಸಃ ಪ್ರಯಸ್ವಂತ ಆಯವೋ ಜೀಜನಂತ ॥೩॥

ಪದಾರ್ಥ:- ಹೇ ಮನುಷ್ಯನೇ! ಯಾವ ರೀತಿ [ಋತ್ವಿಜಃ] ಋತುಗಳಿಗೆ ಯೋಗ್ಯವಾದ ಕರ್ಮಗಳನ್ನು ಮಾಡುವ [ಪ್ರಯಸ್ವಂತಃ] ಉತ್ತಮ ವಿಜ್ಞಾನಯುಕ್ತವಾದ [ಆಯವಃ] ಸತ್ಯಾಸತ್ಯದ ವಿವೇಚನೆ ಮಾಡುವ [ಹೃದಃ] ಎಲ್ಲರ ಮಿತ್ರರಾದ [ಮಾನುಷಾಸಃ] ವಿದ್ವಾನ್ ಮನುಷ್ಯರು ಇಚ್ಛಿಸುವಂತಹ [ವೃಜನೇ] ಅಧರ್ಮರಹಿತ ಧರ್ಮ ಮಾರ್ಗದಲ್ಲಿ [ಜೀಜನಂತ] ವಿದ್ಯೆಯಿಂದ ಪ್ರಕಟರಾಗುತ್ತಾರೋ, ಯಾವ [ಜಾಯಮಾನಂ] ಪ್ರಸಿದ್ಧವಾಗಿರುವ [ಮಧುಜಿಹ್ವಂ] ಸ್ವಾದಿಷ್ಟ ಭೋಗವನ್ನು [ನವ್ಯಸೀ] ಅತಿನೂತನವಾದ ಪ್ರಜೆಗಳು ಸೇವನೆ ಮಾಡುತ್ತಾರೋ [ತಂ] ಅವರನ್ನು [ಅಸ್ಮತ್] ನಮ್ಮಿಂದ ಪ್ರಾಪ್ತವಾದ ಶಿಕ್ಷಣದಿಂದ ಕೂಡಿದ [ಸುಕೀರ್ತಿಃ] ಅತಿಯಾದ ಪ್ರಶಂಸೆಗೆ ಯೋಗ್ಯನಾದ ನೀನು [ಅಶ್ಯಾಃ] ಉತ್ತಮ ರೀತಿಯಲ್ಲಿ ಸೇವಿಸು; ಆದರಿಸು.

ಭಾವಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, ಯಾರು ಅಧರ್ಮವನ್ನು ತ್ಯಜಿಸಿ ಧರ್ಮದ ಸ್ವೀಕಾರವನ್ನು ಮಾಡುತ್ತಾರೋ ಅವರನ್ನು ಎಲ್ಲ ರೀತಿಯಿಂದಲೂ ಆದರಿಸಬೇಕು.

ರಾಜ್ಯ ರಕ್ಷಣೆಯ ಅಧಿಕಾರವನ್ನು ಯಾರಿಗೆ ಕೊಡಬೇಕು ಎಂಬುದನ್ನು ತಿಳಿಸಲಾಗಿದೆ.

ಉಶಿಕ್ ಪಾವಕೋ ವಸುರ್ಮಾನುಷೇಷು ವರೇಣ್ಯೋ ಹೋತಾಧಾಯಿ ವಿಕ್ಷು ।
ದಮೂನಾ ಗೃಹಪತಿರ್ದಮ ಆँ ಅಗ್ನಿರ್ಭುವದ್ ರಯಿಪತೀ ರಯೀಣಾಮ್ ॥೪॥

ಪದಾರ್ಥ:- ಮನುಷ್ಯರಿಗೆ ಉಚಿತವಾದುದೇನೆಂದರೆ, **[ಉಶಿಕ್]** ಸತ್ಯದ ಕಾಮನೆಯುಳ್ಳವರು **[ಪಾವಕಃ]** ಅಗ್ನಿ ಸಮಾನವಾಗಿ ಪವಿತ್ರಗೊಳಿಸುವ **[ವಸುಃ]** ವಾಸಮಾಡಲು **[ವರೇಣ್ಯಃ]** ಸ್ವೀಕರಿಸಲು ಯೋಗ್ಯರೂ **[ದಮೂನಾಃ]** ದಮ ಅಥವಾ ಶಾಂತಿಯುಕ್ತವಾದ **[ಗೃಹಪತಿಃ]** ಗೃಹದ ಪಾಲನೆ ಮಾಡುವವರು ಹಾಗೂ **[ರಯಿಪತಿಃ]** ಧನವನ್ನು ಪಾಲನೆ ಮಾಡುವವರು **[ಅಗ್ನಿಃ]** ಅಗ್ನಿ ಸಮಾನರಾಗಿ **[ಮಾನುಷೇಷು]** ಯುಕ್ತಿಪೂರ್ವಕವಾದ ಆಹಾರ ವಿಹಾರಗಳನ್ನು ಮಾಡುವ ಮನುಷ್ಯರು **[ವಿಕ್ಷು]** ಪ್ರಜೆ ಮತ್ತು **[ದಮೇ]** ಗೃಹದಲ್ಲಿ **[ರಯೀಣಾಂ]** ರಾಜ್ಯವೇ ಮೊದಲಾದ ಧನವನ್ನು ಮತ್ತು **[ಹೋತಾ]** ಸುಖವನ್ನು ನೀಡುವವರು **[ಭುವತ್]** ಆಗುತ್ತಾರೋ, ಅವರೇ ಪ್ರಜೆಗಳಲ್ಲಿ ರಾಜ್ಯವನ್ನು **[ಅಧಾಯಿ]** ಧಾರಣ ಮಾಡಲು ಯೋಗ್ಯರಾಗಿದ್ದಾರೆ.

ಭಾವಾರ್ಥ:- ಅಧರ್ಮಿಗಳೂ, ಮೂರ್ಖರೂ ಆದವರನ್ನು ರಾಜ್ಯದ ರಕ್ಷಣೆಯ ಅಧಿಕಾರದಲ್ಲಿ ಎಂದಿಗೂ ಇರಿಸಬಾರದು. ಇದು ಮಾನವರಿಗೆ ಉಚಿತವಾದ ಕಾರ್ಯವಾಗಿದೆ.

ವಿದ್ವಾಂಸರ ಸಂಗದಿಂದ ವಿದ್ಯೆಯನ್ನು ಹೊಂದಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತಂ ತ್ವಾ ವಯಂ ಪತಿಮಗ್ನೇ ರಯೀಣಾಂ ಪ್ರ ಶಂಸಾಮೋ ಮತಿಭಿರ್ಗೋತಮಾಸಃ ।
ಆಶುಂ ನ ವಾಜಂಭರಂ ಮರ್ಜಯಂತಃ ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್ ॥೫॥

ಪದಾರ್ಥ:- **[ಅಗ್ನೇ]** ಹೇ ಪಾವಕದಂತೆ ಪವಿತ್ರ ಸ್ವರೂಪಿ ವಿದ್ವಾಂಸನೇ! ಯಾವ ರೀತಿ **[ಧಿಯಾವಸುಃ]** ಬುದ್ಧಿಗಳಲ್ಲಿ ನೆಲೆಸಿದ **[ಮತಿಭಿಃ]** ಬುದ್ಧಿವಂತರೊಂದಿಗೆ **[ವಾಜಂಭರಂ]** ವೇಗವನ್ನು ಧಾರಣೆ ಮಾಡುವವರು **[ಪ್ರಾತಃ]** ಪ್ರತಿದಿನವೂ **[ಆಶುಮಶ್ವಂ ನ]** ಯಾವ ರೀತಿ ಶೀಘ್ರವಾಗಿ ನಡೆಯುವ ಕುದುರೆಯನ್ನು ಕಟ್ಟಿ ಸ್ಥಾನಾಂತರಗಳಿಗೆ ತ್ವರಿತವಾಗಿ ಹೋಗುತ್ತಾರೋ ಅದೇ ರೀತಿ **[ಮಕ್ಷೂ]** ಶೀಘ್ರವಾಗಿ **[ರಯೀಣಾಂ]** ಚಕ್ರವರ್ತಿ ರಾಜ್ಯಲಕ್ಷ್ಮೀ ಮೊದಲಾದ ಐಶ್ವರ್ಯದ **[ಪತಿಂ]** ಪಾಲನೆ ಮಾಡುವವನನ್ನು **[ಜಗಮ್ಯಾತ್]** ಉತ್ತಮ ರೀತಿಯಿಂದ ಹೊಂದಬೇಕು. ಅದೇ ರೀತಿ **[ತಂ]** ಆ **[ತ್ವಾ]** ನಿನ್ನನ್ನು **[ಮರ್ಜಯಂತಃ]** ಯುದ್ಧ ಮಾಡಿಸುತ್ತಾ ಇರುವ **[ಗೋತಮಾಸಃ]** ಅತಿಶಯವಾಗಿ ಸ್ತುತಿ ಮಾಡುವ **[ವಯಂ]** ನಾವುಗಳು **[ಪ್ರಶಂಸಾನಃ]** ಸ್ತುತಿಯಿಂದ ಪ್ರಶಂಸಿಸುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಮನುಷ್ಯರು ಉತ್ತಮ ಯಾನ ಅಥವಾ ಸವಾರಿಗಳಲ್ಲಿ ಕುದುರೆಗಳನ್ನು ಕಟ್ಟಿ ಶೀಘ್ರವಾಗಿ ದೇಶ ದೇಶಾಂತರವನ್ನು ತಲುಪುತ್ತಾರೋ ಹಾಗೆಯೇ ವಿದ್ವಾಂಸರ ಸಂಗದಿಂದ ವಿದ್ಯೆಯ ಪಾರಮ್ಯವನ್ನು ಹೊಂದುತ್ತಾರೆ.

ಈ ಸೂಕ್ತದಲ್ಲಿ ಶರೀರ ಮತ್ತು ಯಾನಾದಿಗಳಲ್ಲಿ ಸಂಯುಕ್ತಗೊಳಿಸಲು ಯೋಗ್ಯವಾದ ಅಗ್ನಿಯ ದೃಷ್ಟಾಂತದಿಂದ ವಿದ್ವಾಂಸರ ಗುಣವರ್ಣನೆ ಇರುವುದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ಅರವತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೬೧

ಮಂತ್ರಸಂಖ್ಯೆ ೧೬ । ಋಷಿಃ - ನೋಧಾ ಗೌತಮಃ । ದೇವತಾ - ಇಂದ್ರಃ । ಛಂದಃ - ೧, ೧೪, ೧೬ ವಿರಾಟ್ ತ್ರಿಷ್ಟುಪ್ । ೨, ೭, ೯ ನಿಚೃತ್ ತ್ರಿಷ್ಟುಪ್ । ಸ್ವರಃ - ೧, ೨, ೭, ೯, ೧೪, ೧೬ ಧೈವತಃ । ೩,೪,೮,೧೦,೧೨ ಪಂಕ್ತಿಃ ೫, ೧೫ ವಿರಾಟ್ ಪಂಕ್ತಿಃ ೧೧ ಭುರಿಕ್ ಪಂಕ್ತಿಃ, ೧೩ ನಿಚೃತ್ ಪಂಕ್ತಿಃ । ಸ್ವರಃ - ೩-೬, ೮, ೧೦, ೧೨, ೧೩, ೧೫ ಪಂಚಮಃ.

ಯೋಗ್ಯ ಪುರುಷರಿಗೆ ರಾಜ್ಯಾಧಿಕಾರವನ್ನು ನೀಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗುತ್ತದೆ.

ಅಸ್ಮಾ ಇದು ಪ್ರ ತವಸೇ ತುರಾಯ ಪ್ರಯೋ ನ ಹರ್ಮಿ ಸ್ತೋಮಂ ಮಾಹಿನಾಯ ।
ಋಚೀಷಮಾಯಾಧ್ರಿಗವ ಓಹ-ಮಿಂದ್ರಾಯ ಬ್ರಹ್ಮಾಣಿ ರಾತತಮಾ ॥೧॥

ಪದಾರ್ಥ:- ಹೇ ವಿದ್ವಾಂಸರೇ! ಯಾವ ರೀತಿ ನಾನು **[ಉ]** ವಿತರ್ಕಪೂರ್ವಕವಾಗಿ **[ಪ್ರಯಃ]** ತೃಪ್ತಿಯನ್ನುಂಟು ಮಾಡುವ ಕರ್ಮದ **[ನ]** ಸಮಾನವಾಗಿ **[ತವಸೇ]** ಬಲವಂತನೂ, **[ತುರಾಯ]** ಕಾರ್ಯಸಿದ್ಧಿಗಾಗಿ ಶೀಘ್ರಕಾರಿಯೂ **[ಋಚೀಷಮಾಯ]** ಸ್ತುತಿಯನ್ನು ಮಾಡಲು ಲಭ್ಯವಾಗುವವರು ಹಾಗೂ **[ಅಧ್ರಿಗವೇ]** ಶತ್ರುಗಳಿಂದ ಅದಮ್ಯರಾದ ವೀರರನ್ನು ಪ್ರಾಪ್ತಿಸುವವನೂ, **[ಮಾಹಿನಾಯ]** ಉತ್ತಮೋತ್ತಮ ಗುಣಗಳಿಂದ ವೃದ್ಧಿಯಾಗುವವನು **[ಅಸ್ಮೈ]** ಈ **[ಇಂದ್ರಾಯ, ಇತ್]** ಸಭಾಧ್ಯಕ್ಷನಿಗಾಗಿಯೇ **[ಓಹಂ]** ಪ್ರಾಪ್ತನಾಗುವವನು **[ಸ್ತೋಮಂ]** ಸ್ತುತಿಯನ್ನು **[ರಾತತಮಾ]** ಅತಿಶಯವಾಗಿ ಮಾಡಲು ಯೋಗ್ಯನೂ **[ಬ್ರಹ್ಮಾಣಿ]** ಸಂಸ್ಕರಿಸಲ್ಪಟ್ಟ ಅನ್ನ ಅಥವಾ ಸಂಪತ್ತನ್ನು **[ಪ್ರ ಹರ್ಮಿ]** ಉತ್ತಮ ರೀತಿಯಲ್ಲಿ ಕೊಡುತ್ತಾನೋ ಹಾಗೆಯೇ ನೀವೂ ಸಹ ಮಾಡಿರಿ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಸ್ತುತಿ ಯೋಗ್ಯರಾದ ಪುರುಷರಿಗೆ ರಾಜ್ಯದ ಅಧಿಕಾರವನ್ನು ನೀಡಿ ಅವರಿಗಾಗಿ ಯಥಾಯೋಗ್ಯ ಕೈಗಳಿಂದ ಪ್ರಯುಕ್ತಗೊಳಿಸಿದ ಧನವನ್ನು ನೀಡಿ ಉತ್ತಮೋತ್ತಮ ಅನ್ನಾದಿಗಳಿಂದ ಸದಾ ಸತ್ಕರಿಸಬೇಕು. ರಾಜಪುರುಷರೂ ಸಹ ಪ್ರಜೆಗಳೊಂದಿಗೆ ಅದೇ ರೀತಿ ಗೌರವಿಸಿ ನಡೆದುಕೊಳ್ಳಬೇಕು.

ಯಾರನ್ನು ಸಭೆಯ ಅಧಿಪತಿಯನ್ನಾಗಿ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಅಸ್ಮಾ ಇದು ಪ್ರಯ ಇವ ಪ್ರ ಯಂಸಿ ಭರಾಮ್ಯಾಂಗೂಷಂ ಬಾಧೇ ಸುವೃಕ್ತಿ ।
ಇಂದ್ರಾಯ ಹೃದಾ ಮನಸಾ ಮನೀಷಾ ಪ್ರತ್ನಾಯ ಪತ್ಯೇ ಧಿಯೋ ಮರ್ಜಯಂತ ॥೨॥

ಪದಾರ್ಥ:- ಹೇ ವಿದ್ವಾಂಸನೇ! ನೀನು **[ಅಸ್ಮೈ]** ಈ **[ಪ್ರತ್ನಾಯ]** ಪ್ರಾಚೀನವಾದ ಸರ್ವರ ಮಿತ್ರನೂ **[ಪತ್ಯೇ]** ಸ್ವಾಮಿಯೂ **[ಇಂದ್ರಾಯ]** ಶತ್ರುಗಳನ್ನು ಸೀಳಿ ಹಾಕುವನು ಆದವನಿಗಾಗಿ **[ಪ್ರಯ ಇವ]** ಯಾವರೀತಿ ಪ್ರೀತಿಕಾರಕವಾದ ಅನ್ನ ಮತ್ತು ಧನಗಳಂತೆ **[ಪ್ರಯಂಸಿ]** ಸುಖನೀಡುತ್ತೀಯೆ. ಯಾವ ಪರಮೈಶ್ವಯುಕ್ತ ಧಾರ್ಮಿಕನಿಗಾಗಿ ಸಮಸ್ತ ಸಾಮಗ್ರಿಗಳನ್ನು ಅಂದರೆ **[ಹೃದಾ]** ಹೃದಯದಿಂದ, **[ಮನಸಾ]** ಮನಸ್ಸಿನಿಂದ, **[ಮನೀಷಾ]** ಜ್ಞಾನಪೂರ್ವಕವಾದ ಇಚ್ಛೆಯಿಂದ **[ಸುವೃಕ್ತಿ]** ಉಚ್ಚತಮ ವಾಣಿಯಿಂದ ಕೂಡಿದ ನಾಯಕನನ್ನು **[ಅಂಗೂಷಂ]** ಯುದ್ಧದಲ್ಲಿ ಪ್ರಾಪ್ತನಾದ ಶತ್ರುವನ್ನು **[ಬಾಧೇ]** ಬಾಧಿಸುವಂತಹುದನ್ನು **[ಭರಾಮಿ]** ಧಾರಣ ಮಾಡುತ್ತೇನೆ; ಪುಷ್ಟಿಗೊಳಿಸುತ್ತೇನೆ. ಯಾವ ವೀರನ ಸಲುವಾಗಿ ಸಮಸ್ತ ಪ್ರಜೆಗಳ **[ಧಿಯಃ]** ಬುದ್ಧಿ ಅಥವಾ ಕರ್ಮವನ್ನು **[ಮರ್ಜಯಂತ]** ಶುದ್ಧಗೊಳಿಸುತ್ತಾರೋ ಆ ಪುರುಷನಿಗಾಗಿ **[ಇತ್]** ಕೂಡ **[ಉ]** ತರ್ಕದೊಂದಿಗೆ ನಾನೂ ಸಹ ಬುದ್ಧಿಯನ್ನು ಶುದ್ಧಗೊಳಿಸುವಂತಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರಿಗೆ ಉಚಿತವಾದುದೇನೆಂದರೆ, ಮೊದಲು ಚೆನ್ನಾಗಿ ಪರೀಕ್ಷಿಸಲ್ಪಟ್ಟ ಪೂರ್ಣ ವಿದ್ಯಾಯುಕ್ತ ಧಾರ್ಮಿಕನೂ ಸಮಸ್ತರ ಉಪಕಾರವನ್ನು ಮಾಡುವ ಹಿರಿಯ

ಪುರುಷನನ್ನು ಸಭೆಯ ಅಧಿಪತಿಯನ್ನಾಗಿ ಮಾಡಬೇಕು ಹಾಗೂ ಇದರಿಂದ ವಿರುದ್ಧವಾದ ಮನುಷ್ಯನನ್ನು ಯಾರೂ ಸ್ವೀಕರಿಸದಿರಲಿ ಮತ್ತು ಎಲ್ಲರೂ ಅವನಿಗೆ ಪ್ರಿಯವಾದ ಆಚರಣೆಯನ್ನು ಮಾಡಲಿ.

ಎಲ್ಲ ಮಾನವರು ಯಾವುದಕ್ಕಾಗಿ ಪ್ರಯತ್ನವನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಸ್ಮಾ ಇದು ತ್ಯಮುಪಮಂ ಸ್ವರ್ಷಾಂ ಭರಾಮ್ಯಾಂಗೂಷಮಾಸ್ಯೇನ ।
ಮಂಹಿಷ್ಠಮಚ್ಛೋಕ್ತಿಭಿರ್ಮತೀನಾಂ ಸುವೃಕ್ತಿಭಿಃ ಸೂರಿಂ ವಾವೃಧಧ್ಯೈ ॥೩॥

ಪದಾರ್ಥ:- ಹೇ ಮನುಷ್ಯರೇ! ಯಾವ ರೀತಿ ನಾನು [**ಅಸ್ಮೈ**] ಈ ಸಭಾಧ್ಯಕ್ಷನಿಗಾಗಿ [**ಮತೀನಾಂ**] ಮನುಷ್ಯರ [**ವಾವೃಧಧ್ಯೈ**] ಅತ್ಯಂತ ಹಿರಿಮೆಯನ್ನು [**ಆಸ್ಯೇನ**] ಮುಖದಿಂದ [**ಸುವೃಕ್ತಿಭಿಃ**] ಯಾವುದರಲ್ಲಿ ಉತ್ತಮ ಪ್ರಕಾರವಾಗಿ ಅಧರ್ಮ ಮತ್ತು ಅವಿದ್ಯೆಯನ್ನು ತ್ಯಜಿಸಲು ಶಕ್ಯವೋ [**ಅಚ್ಛೋಕ್ತಿಭಿಃ**] ಶ್ರೇಷ್ಠ ವಚನ ಸ್ತುತಿಗಳಿಂದ [**ಇತ್**] ಕೂಡ [**ಉ ತ್ಯಂ**] ಅದನ್ನೇ [**ಉಪಮಾ**] ಮಾಡಲು ಯೋಗ್ಯವಾದ [**ಸ್ವರ್ಷಾಂ**] ಸುಖಗಳನ್ನು ಪ್ರಾಪ್ತಿಗೊಳಿಸುವ [**ಅಂಗೂಷಂ**] ಸ್ತುತಿಯನ್ನು ಹೊಂದಿರುವ [**ಮಂಹಿಷ್ಠಂ**] ಅತಿಶಯವಾಗಿ ವಿದ್ಯೆಯಿಂದ ವೃದ್ಧಿಯನ್ನು ಪಡೆದ [**ಸೂರಿಂ**] ಶಾಸ್ತ್ರವನ್ನು ತಿಳಿದ ವಿದ್ವಾಂಸನನ್ನು [**ಭರಾಮಿ**] ಧಾರಣ ಮಾಡುತ್ತೇನೋ, ಹಾಗೆಯೇ ನೀವೂ ಸಹ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ವಿದ್ವಾಂಸರಿಂದ ಮಾನವರಿಗಾಗಿ ಸರ್ವೋತ್ತಮವಾದ ಉಪಮಾರಹಿತ ಯತ್ನವನ್ನು ಮಾಡಲಾಗುತ್ತದೆಯೋ, ಅದೇ ರೀತಿ ಇವರುಗಳ ಸತ್ಕಾರಕ್ಕಾಗಿ ಎಲ್ಲ ಮಾನವರು ಪ್ರಯತ್ನ ಮಾಡಬೇಕು.

ಮಾನವರ ಪುರುಷಾರ್ಥ ಸಿದ್ಧಿ ಹೇಗಾದೀತು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಸ್ಮಾ ಇದು ಸ್ತೋಮಂ ಸಂ ಹಿನೋಮಿ ರಥಂ ನ ತಷ್ಟೇವ ತತ್ಸಿನಾಯ ।
ಗಿರಶ್ಚ ಗಿರ್ವಾಹಸೇ ಸುವೃಕ್ತೀಂದ್ರಾಯ ವಿಶ್ವಮಿನ್ವಂ ಮೇಧಿರಾಯ ॥೪॥

ಪದಾರ್ಥ:- ಹೇ ಮಾನವರೇ! ಯಾವ ರೀತಿ ನಾನು [**ಮೇಧಿರಾಯ**] ಉತ್ತಮ ರೀತಿಯಲ್ಲಿ ತಿಳಿಯಲು [**ಗಿರ್ವಾಹಸೇ**] ವಿದ್ಯಾಯುಕ್ತ ವಾಣಿಗಳನ್ನು ಹೊಂದುವವನಾದ [**ಅಸ್ಮೈ**] ಈ [**ಇಂದ್ರಾಯ ಈ ಉ**] ವಿದ್ಯೆಯ ವೃಷ್ಟಿಯನ್ನು ಮಾಡುವ ವಿದ್ವಾಂಸನಿಗಾಗಿಯೇ ತರ್ಕಪೂರ್ವಕವಾಗಿ [**ರಥಂ**] ಯಾನ ಸಮೂಹದ [**ನ**] ಸಮಾನವಾಗಿ [**ತತ್ಸಿನಾಯ**] ಯಾನ ಸಮೂಹದ ಬಂಧನಕ್ಕಾಗಿ [**ತಷ್ಟೇವ**] ತೀಕ್ಷ್ಣಗೊಳಿಸುವ ಕುಶಲಕರ್ಮಿಯಂತೆ [**ವಿಶ್ವಮಿನ್ವಂ**] ಸಮಸ್ತ ವಿಜ್ಞಾನವನ್ನು ಪ್ರಾಪ್ತಿಗೊಳಿಸುವ [**ಸುವೃಕ್ತಿ**] ಯಾವುದರಿಂದ ಸಮಸ್ತ ದೋಷಗಳನ್ನು ತ್ಯಜಿಸಲಾಗುತ್ತದೆಯೋ ಆ [**ಸ್ತೋಮಂ**] ಶಾಸ್ತ್ರಗಳ ಅಭ್ಯಾಸಯುಕ್ತ ಸ್ತುತಿ [**ಚ**] ಹಾಗೂ [**ಗಿರಃ**] ವೇದವಾಣಿಗಳನ್ನು [**ಸಂಹಿನೋಮಿ**] ಉತ್ತಮ ರೀತಿಯಲ್ಲಿ ವೃದ್ಧಿಸುತ್ತೇನೋ ಹಾಗೆಯೇ ನೀವೂ ಸಹ ಪ್ರಯತ್ನಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ರಥನಿರ್ಮಾಪಕನು ದೃಢ ರಥವನ್ನು ನಿರ್ಮಿಸಲು ಉತ್ತಮವಾದ ಬಂಧನಸಹಿತವಾದ ಯಂತ್ರಕಲೆಗಳನ್ನು ಉತ್ತಮ ರೀತಿಯಲ್ಲಿ ರಚಿಸಿ ತನ್ನ ಪ್ರಯೋಜನವನ್ನು ಸಿದ್ಧಪಡಿಸುತ್ತಾನೋ ಮತ್ತು ಸುಖಪೂರ್ವಕವಾಗಿ ಹೋಗಿ ಬರುವ ಮೂಲಕ ಆನಂದಿತನಾಗುತ್ತಾನೋ, ಹಾಗೆಯೇ ಮನುಷ್ಯರು ವಿದ್ವಾಂಸರ ಆಶ್ರಯವನ್ನು ಪಡೆದು ಅವರಿಂದ ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಸಿದ್ಧಿಸಿಕೊಂಡು ಸದಾ ಆನಂದದಲ್ಲಿರಬೇಕು.

ಮಾನವರು ಕಾರ್ಯಸಿದ್ಧಿಯನ್ನು ಹೊಂದುವ ಬಗೆಯನ್ನು ತಿಳಿಸಲಾಗಿದೆ.

ಅಸ್ಮಾ ಇದು ಸಪ್ತಿಮಿವ ಶ್ರವಸ್ಯೇಂದ್ರಾಯಾರ್ಕಂ ಜುಹ್ವಾ ಸಮಂಜೇ ।
ವೀರಂ ದಾನೌಕಸಂ ವಂದಧ್ಯೈ ಪುರಾಂ ಗೂರ್ತಶ್ರವಸಂ ದರ್ಮಾಣಮ್ ॥೫॥

ಪದಾರ್ಥ:- ಹೇ ಮಾನವರೇ! ಯಾವ ರೀತಿ ನಾನು [**ಶ್ರವಸ್ಯಾ**] ತನ್ನ ಮಾಡುವ ಇಚ್ಛೆಯ [**ಜುಹ್ವಾ**] ವಿದ್ಯೆಗಳ ಕೊಳ್ಳುವ, ಕೊಡುವ ಕ್ರಿಯೆಗಳಿಂದ [**ಅಸ್ಮೈ**] ಈ [**ಇಂದ್ರಾಯ**] ಪರಮೈಶ್ವರ್ಯವನ್ನು ಪ್ರಾಪ್ತಿಸುವವನಾದ [**ಇತ್**] ಸಭಾಧ್ಯಕ್ಷನೇ [**ಉ**] ವಿಶೇಷ ತರ್ಕದೊಂದಿಗೆ [**ವಂದಧ್ಯೈ**] ಸ್ತುತಿಯನ್ನು ಮಾಡಿಸಲು [**ಸಪ್ತಿಮಿವ**] ವೇಗವುಳ್ಳ ಕುದುರೆಗಳಂತೆ [**ಗೂರ್ತಶ್ರವಸಂ**] ಯಾವನು ಸಮಸ್ತ ಶಾಸ್ತ್ರಗಳ ಶ್ರವಣವನ್ನು ಗ್ರಹಿಸಿದ್ದಾನೋ [**ಪುರಾಂ**] ಶತ್ರುಗಳ ನಗರಗಳ [**ದರ್ಮಾಣಮ್**] ವಿದಾರಣ ಮಾಡುವ ಅಥವಾ [**ದಾನೌಕಸಂ**] ದಾನ ಅಥವಾ ಸ್ಥಾನಯುಕ್ತ [**ಅರ್ಕಂ**] ಸತ್ಕಾರಕ್ಕಾಗಿ [**ವೀರಂ ಇತ್**] ವಿದ್ಯಾ ಶೌರ್ಯಾದಿ ಗುಣಯುಕ್ತ ವೀರನನ್ನು [**ಸಮಂಜೇ**] ಉತ್ತಮ ರೀತಿಯಿಂದ ಕಾಮನೆ ಮಾಡುತ್ತೇನೋ, ಹಾಗೆಯೇ ನೀವು ಸಹ ಕಾಮನೆ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ರೀತಿ ಮಾನವರು ರಥದಲ್ಲಿ ಕುದುರೆಗಳನ್ನು ಜೋಡಿಸಿ ಅದರ ಮೇಲೆ ಸ್ಥಿತರಾಗಿ ಹೋಗಿ ಬರುವ ಕಾರ್ಯಗಳನ್ನು ಸಿದ್ಧಿಸುತ್ತಾರೋ, ಅದೇ ರೀತಿ ವಿದ್ವಾಂಸರು ಹಾಗೂ ವೀರಪುರುಷರ ಸಂಗದಿಂದ ಸಮಸ್ತ ಕಾರ್ಯಗಳನ್ನು ಮಾನವರು ಸಿದ್ಧಿಗೊಳಿಸಿಕೊಳ್ಳಬೇಕು.

ಸಭಾಧ್ಯಕ್ಷನು ಎಲ್ಲರನ್ನು ಹೇಗೆ ಆನಂದಿತರನ್ನಾಗಿ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಅಸ್ಮಾ ಇದು ತ್ವಷ್ಟಾ ತಕ್ಷದ್ ವಜ್ರಂ ಸ್ವಪಸ್ತಮಂ ಸ್ವರ್ಯಂ೧ ರಣಾಯ ।
ವೃತ್ರಸ್ಯ ಚಿದ್ ವಿದದ್ ಯೇನ ಮರ್ಮ ತುಜನ್ನೀಶಾನಸ್ತುಜತಾ ಕಿಯೇಧಾಃ ॥೬॥

ಪದಾರ್ಥ:- ಮಾನವರಿಗೆ ಉಚಿತವಾದುದೇನೆಂದರೆ, ಯಾರು [**ತ್ವಷ್ಟಾ**] ಪ್ರಕಾಶವನ್ನು ಬೀರುವ [**ಈಶಾನಃ**] ಸಮರ್ಥವಾದ [**ಕಿಯೇಧಾಃ**] ಅದೆಷ್ಟೋ ಜನರನ್ನು ಧಾರಣೆ ಮಾಡುವ ಶತ್ರುಗಳನ್ನು [**ತುಜನ್**] ಕೊಲ್ಲುತ್ತಾ [**ವೃತ್ರಸ್ಯ**] ಮೇಘದ ಮೇಲೆ ತನ್ನ ಕಿರಣಗಳನ್ನು ಬೀಳುತ್ತಾ [**ವಿದತ್**] ಪ್ರಾಪ್ತನಾಗುವ ಸೂರ್ಯನಂತೆ [**ಸ್ವರ್ಯಂ**] ಸುಖಕ್ಕಾಗಿ [**ಸ್ವಪಸ್ತಮಂ**] ಅತಿಶಯವಾಗಿ ಉತ್ತಮ ಕರ್ಮಗಳನ್ನು ಉತ್ಪನ್ನಗೊಳಿಸುವ [**ವಜ್ರಂ**] ಕಿರಣ ಸಮೂಹವನ್ನು [**ತಕ್ಷತ್**] ಛೇದನಗೊಳಿಸುತ್ತ ಸೂರ್ಯನ [**ಚಿತ್**] ಸಮಾನವಾಗಿ [**ಅಸ್ಮೈ**] ಈ [**ರಣಾಯ**] ಸಂಗ್ರಾಮದ ಸಲುವಾಗಿ ಯಾವ [**ಮರ್ಮ**] ಜೀವನ ನಿಮಿತ್ತ ಸ್ಥಾನವನ್ನು [**ತುಜತಾ**] ಕತ್ತರಿಸುತ್ತಾ [**ಯೇನ**] ಯಾವ ವಜ್ರದಿಂದ ಶತ್ರುಗಳನ್ನು ಗೆಲ್ಲುತ್ತಾನೋ [**ಇದು**] ಅವನನ್ನೇ ಸಭೆ ಮೊದಲಾದವುಗಳ ಅಧ್ಯಕ್ಷನನ್ನಾಗಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವರೀತಿ ಸೂರ್ಯನು ತನ್ನ ಪ್ರತಾಪದಿಂದ ಮೇಘವನ್ನು ಛಿನ್ನ ಭಿನ್ನಗೊಳಿಸಿ ಭೂಮಿಯ ಮೇಲೆ ಜಲವನ್ನು ಬೀಳಿಸಿ, ಎಲ್ಲರನ್ನು ಸುಖಿಗಳನ್ನಾಗಿ ಮಾಡುತ್ತಾನೋ, ಅದೇ ರೀತಿ ಸಭೆ ಮೊದಲಾದವುಗಳ ಅಧ್ಯಕ್ಷನು ವಿದ್ಯೆ, ವಿನಯ ಮತ್ತು ಶಸ್ತ್ರಾಸ್ತ್ರಗಳ ಕಲಿಯುವ ಮತ್ತು ಕಲಿಸುವ ಕ್ರಿಯೆಯ ಮೂಲಕ ಯುದ್ಧಗಳಲ್ಲಿ ಕುಶಲಸೇನೆಯನ್ನು ಸಿದ್ಧಗೊಳಿಸಿ ಶತ್ರುಗಳನ್ನು ಗೆದ್ದು ಎಲ್ಲ ಜೀವಿಗಳನ್ನು ಆನಂದಿತರನ್ನಾಗಿ ಮಾಡಬೇಕು.

ಸಭಾಧ್ಯಕ್ಷನ ಕರ್ತವ್ಯ ಕರ್ಮಗಳೇನು ಎಂಬುದನ್ನು ತಿಳಿಸಲಾಗಿದೆ.

ಅಸ್ಯೇದು ಮಾತುಃ ಸವನೇಷು ಸದ್ಯೋ ಮಹಃ ಪಿತುಂ ಪಪಿವಾಂಚಾರ್ವನ್ನಾ ।
ಮುಷಾಯದ್ ವಿಷ್ಣುಃ ಪಚತಂ ಸಹೀಯಾನ್ ವಿಧ್ಯದ್ ವರಾಹಂ ತಿರೋ ಅದ್ರಿಮಸ್ತಾ ॥೭॥

ಪದಾರ್ಥ:- ಯಾರು **[ಅಸ್ಯಾ]** ಈ **[ಮಾತುಃ]** ಶತ್ರು ಅಥವಾ ತನ್ನ ಬಲದ ಪರಿಮಾಣವನ್ನು ಉಂಟುಮಾಡುವ ಸಭಾಧ್ಯಕ್ಷನ **[ಸವನೇಷು]** ಐಶ್ವರ್ಯಗಳಲ್ಲಿ **[ಮಹಃ]** ದೊಡ್ಡದಾದ **[ಪಚತಂ]** ಪರಿಪಕ್ವವಾದ **[ಚಾರು]** ಸುಂದರವಾದ **[ಪಿತುಂ]** ಸಂಸ್ಕರಿಸಲ್ಪಟ್ಟ ಅನ್ನವನ್ನು **[ಪಪಿವಾನ್]** ತಿನ್ನಲು ಹಾಗೂ ಕುಡಿಯಲು **[ಸಹೀಯಾನ್]** ಅತಿಶಯವಾಗಿ ಸಹಿಸುವ ವೀರ ಪುರುಷನು **[ಅನ್ನಾ]** ಅನ್ನಾದಿಗಳನ್ನು **[ಅಸ್ತಾ]** ಮುಂದೊಡ್ಡುವ **[ಮುಷಾಯತ್]** ತನ್ನನ್ನು ಕಳವು ಮಾಡುವ ಇಚ್ಛೆಯನ್ನು ಮಾಡುತ್ತಾ ಇರುವವನಂತೆ **[ವಿಷ್ಣುಃ]** ಸಮಸ್ತ ವಿದ್ಯೆಗಳ ಅಂಗಗಳಲ್ಲಿ ವ್ಯಾಪಕನಾದ **[ಅದ್ರಿಂ]** ಪರ್ವತಾಕಾರದ **[ವರಾಹಂ]** ಮೇಘವನ್ನು **[ತಿರಃ]** ಕೆಳಗೆ **[ವಿಧ್ಯತ್]** ಬೀಳಿಸುತ್ತಿರುವ ಸೂರ್ಯನಂತೆ ಶತ್ರುಗಳನ್ನು **[ಸಧ್ಯಃ]** ಶೀಘ್ರವಾಗಿ ನಾಶಮಾಡಲಿ. **[ಇದು]** ಅವನೇ ಸೇನಾಧ್ಯಕ್ಷನಾಗಲು ಯೋಗ್ಯನಾಗುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವರೀತಿ ಸೂರ್ಯನು ಅನ್ನ, ಜಲಗಳ ರಸವನ್ನು ಕಳ್ಳನಂತೆ ಅಪಹರಿಸುತ್ತಾ ಅಥವಾ ರಕ್ಷಣೆ ಮಾಡುತ್ತಾ ತನ್ನ ಕಿರಣಗಳಿಂದ ಮೇಘಗಳ ಹನನವನ್ನು ಮಾಡಿ ಪ್ರಕಟಗೊಳಿಸುತ್ತಾ ಭಿನ್ನ ಭಿನ್ನಗೊಳಿಸಿ ತನ್ನ ವಿಜಯವನ್ನು ಪ್ರಾಪ್ತಿಸುತ್ತಾನೋ, ಅದೇ ರೀತಿ ಸೇನೆ ಮೊದಲಾದವುಗಳ ಅಧ್ಯಕ್ಷನು ಸೇನೆ ಮೊದಲಾದ ಐಶ್ವರ್ಯಗಳಲ್ಲಿ ಸ್ಥಿತನಾಗಿ ಶೂರ-ವೀರರಾದ ಶತ್ರುಗಳನ್ನು ಪರಾಜಯಗೊಳಿಸಲಿ.

ಪೂರ್ಣ ವಿದ್ವಾಂಸರ ಮಹಿಮೆಯ ವರ್ಣನೆಯನ್ನು ತಿಳಿಸಲಾಗಿದೆ.

ಅಸ್ಮಾ ಇದು ಗ್ನಾಶ್ಚಿದ್ ದೇವಪತ್ನೀ-ರಿಂದ್ರಾಯಾರ್ಕಮಹಿಹತ್ಯ ಊವುಃ ।
ಪರಿ ದ್ಯಾವಾಪೃಥಿವೀ ಜಭ್ರ ಉರ್ವೀ ನಾಸ್ಯ ತೇ ಮಹಿಮಾನಂ ಪರಿ ಷ್ಟಃ ॥೮॥

ಪದಾರ್ಥ:- ಹೇ ಸಭಾಪತಿ! ಯಾವ ರೀತಿ ಈ ಸೂರ್ಯನು **[ದ್ಯಾವಾಪೃಥಿವೀ]** ದ್ಯುಲೋಕ ಮತ್ತು ಭೂಮಿಗಳನ್ನು **[ಜಭ್ರೇ]** ಧಾರಣ ಮಾಡುತ್ತಾ ಮತ್ತು ಯಾವುದರ ವಿಷಯದಲ್ಲಿ **[ಉರ್ವೀ]** ಬಹಳವಾಗಿ ರೂಪಪ್ರಕಾಶಯುಕ್ತ ಪೃಥಿವಿ ಇದೆಯೋ **[ಅಸ್ಯಾ]** ಯಾವ ಈ ಸಭಾಧ್ಯಕ್ಷನ **[ಅಹಿಹತ್ಯೇ]** ಮೇಘಗಳ ಹನನದ ವ್ಯವಹಾರದಲ್ಲಿ **[ಚಿತ್]** ಪ್ರಕಾಶ-ಭೂಮಿಯ **[ಮಹಿಮಾನಂ]** ಮಹಿಮೆಯ **[ನ]** ಸಮಾನವಾಗಿ **[ಪರಿಸ್ಥನ]** ಎಲ್ಲ ಪ್ರಕಾರದ ಭೇದನವನ್ನು ಸಮರ್ಥಿಸಲಾಗುವುದಿಲ್ಲವೋ, ಅದೇ ರೀತಿ **[ಅಸ್ಮೈ]** ಈ **[ಇಂದ್ರಾಯ]** ಐಶ್ವರ್ಯ ಪ್ರಾಪ್ತಿಯ ಸಭಾಧ್ಯಕ್ಷನಿಗಾಗಿ **[ಇದು]** ಕೂಡ **[ದೇವಪತ್ನೀಃ]** ವಿದ್ವಾಂಸರಿಂದ ಪಾಲನೀಯರಾದ ಪತಿವ್ರತಾ ಸ್ತ್ರೀಯರ ಸದೃಶವಾದ **[ಪರ್ಯೂವುಃ]** ಎಲ್ಲ ಪ್ರಕಾರದ ತಂತುಗಳಂತೆ ವಿಸ್ತೃತಗೊಳಿಸುತ್ತಾನೆಯೋ, ಅವನೇ ರಾಜ್ಯಾಡಳಿತ ಮಾಡಲು ಯೋಗ್ಯನಾಗುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯನ ಪ್ರತಾಪ ಹಾಗೂ ಮಹತ್ವದ ಎದುರು ಪೃಥಿವಿ ಆದಿ ಲೋಕಗಳ ಗಣನೆಯೂ ಅಲ್ಪವಾಗಿದೆಯೋ, ಅದೇ ರೀತಿ ಪೂರ್ಣ ವಿದ್ಯಾಯುಕ್ತ ಪುರುಷನ ಮಹಿಮೆಯ ಎದುರು ಮೂರ್ಖರ ಗಣನೆಯೂ ತುಚ್ಛವಾಗಿದೆ.

ರಾಜನ ಕಾರ್ಯಸಿದ್ಧಿ ಹೇಗಾದೀತು ಎಂಬುದನ್ನು ತಿಳಿಸಲಾಗಿದೆ

ಅಸ್ಯೇದೇವ ಪ್ರ ರಿರಿಚೇ ಮಹಿತ್ವಂ ದಿವಸ್ಪೃಥಿವ್ಯಾಃ ಪರ್ಯಂತರಿಕ್ಷಾತ್ ।
ಸ್ವರಾಳಿಂದ್ರೋ ದಮ ಆ ವಿಶ್ವಗೂರ್ತಃ ಸ್ವರಿರಮತ್ರೋ ವವಕ್ಷೇ ರಣಾಯ ॥೯॥

ಪದಾರ್ಥ:- ಯಾರು **[ವಿಶ್ವಗೂರ್ತಃ]** ಸಮಸ್ತ ಭೋಜ್ಯ ಪದಾರ್ಥಗಳನ್ನು ಸೇವಿಸುವ **[ಸ್ವರಿಃ]** ಉತ್ತಮ ಗತಿಶೀಲನಾದ **[ಅವತ್ರಃ]** ಜ್ಞಾನವಂತನ ಅಥವಾ ಜ್ಞಾನದ ಹೇತುವಾದ **[ಸ್ವರಾಟ್]** ಸ್ವಯಂ ಪ್ರಕಾಶಮಾನನಾದ **[ಇಂದ್ರ]** ಪರಮೈಶ್ವರ್ಯಯುಕ್ತ ಸೂರ್ಯ ಅಥವಾ ಸಭಾಧ್ಯಕ್ಷನು **[ದಮೇ]** ಉತ್ತಮ ಮನೆ ಅಥವಾ ಜಗತ್ತಿನಲ್ಲಿ **[ರಣಾಯ]** ಸಂಗ್ರಾಮಕ್ಕಾಗಿ **[ಆವವಕ್ಷೇ]** ರೋಷ ಅಥವಾ ಉತ್ತಮ ರೀತಿಯಲ್ಲಿ ಘಾತವನ್ನುಂಟುಮಾಡುತ್ತಾನೋ ಮತ್ತು ಯಾರ **[ದಿವಃ]** ಪ್ರಕಾಶವು **[ಪೃಥಿವ್ಯಾಃ]** ಭೂಮಿಯ ಮತ್ತು **[ಅಂತರಿಕ್ಷಾತ್]** ಅಂತರಿಕ್ಷದಿಂದ **[ಇತ್]** ಕೂಡ **[ಪರಿ]** ಎಲ್ಲ ರೀತಿಯಿಂದ **[ಮಹಿತ್ವಂ]** ಪೂಜ್ಯ ಅಥವಾ ಮಹಾಗುಣ ವಿಶಿಷ್ಟ ಮಹಿಮೆಯ **[ಪ್ರ ರಿರಿಚೇ]** ವಿಶೇಷ ಪ್ರಕಾಶವಿದೆಯೋ, ಅದನ್ನು **[ಅಸ್ಯಾ]** ಈ ಸೂರ್ಯನ ಅಥವಾ ಸಭಾಧ್ಯಕ್ಷನ **[ಏವ]** ಕಾರ್ಯಗಳಲ್ಲಿಯೇ ಉಪಯೋಗವನ್ನು ಮತ್ತು ಸಭಾ ಆದಿಗಳನ್ನು ಅಧಿಕಾರವನ್ನು ನೀಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವರೀತಿ ಸೂರ್ಯನು ಪೃಥಿವ್ಯಾದಿಗಳಿಗಿಂತ ಮತ್ತು ಪರಿಣಾಮದಿಂದ ಅಧಿಕನೋ ಹಾಗೆಯೇ ಮಾನವರು ಉತ್ತಮ ಗುಣಯುಕ್ತ ಸಭಾಪತಿಯಾದ ರಾಜನಿಗೆ ಅಧಿಕಾರವನ್ನು ನೀಡಿ ಎಲ್ಲ ಕಾರ್ಯಗಳ ಸಿದ್ಧಿಯನ್ನು ಉಂಟುಮಾಡಬೇಕು.

ಸಭಾಧ್ಯಕ್ಷನು ಧಾರ್ಮಿಕರಿಗೆ ಸುಖ ನೀಡಲಿ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಸ್ಯೇದೇವ ಶವಸಾ ಶುಷಂತಂ ವಿ ವೃಶ್ಚದ್ ವಜ್ರೇಣ ವೃತ್ರಮಿಂದ್ರಃ ।
ಗಾ ನ ವ್ರಾಣಾ ಅವನೀರಮುಂಚ-ದಭಿ ಶ್ರವೋ ದಾವನೇ ಸಚೇತಾಃ ॥೧೦॥

ಪದಾರ್ಥ:- ಯಾರು **[ಸಚೇತಾಃ]** ಸಮಾನವಾದ ಜ್ಞಾನವಂತನು **[ಇಂದ್ರಃ]** ಸೇನಾಧಿಪತಿಯು **[ಅಸ್ಯ ಇತ್ ಏವ]** ಈ ಸಭಾಧ್ಯಕ್ಷನದೇ ಆದ **[ಶವಸಾ]** ಬಲ ಹಾಗೂ **[ವಜ್ರೇಣ]** ತೇಜಸ್ಸಿನಿಂದ **[ಶುಷಂತಂ]** ದ್ವೇಷದಿಂದ ಕ್ಷೀಣವಾಗುತ್ತಾ ಇರುವ **[ವೃತ್ರಂ]** ಪ್ರಕಾಶದ ಆವರಣವನ್ನುಂಟುಮಾಡುವ ಮೇಘದಂತೆ ಆವರಿಸುವ ಶತ್ರುವನ್ನು **[ವಿ ವೃಶ್ಚತ್]** ಭೇದನ ಮಾಡುತ್ತಾನೋ, ಆ **[ಗಾಃ]** ಪಶುಗಳನ್ನು, ಪಶುಗಳನ್ನು ಪಾಲಿಸುವ ಬಂಧನದಿಂದ ಬಿಡಿಸುವವನನ್ನು ಪ್ರಾಪ್ತಿಸುವವನ **[ನ]** ಸಮಾನವಾಗಿ **[ಅವನೀಃ]** ಪೃಥಿವಿಯನ್ನು **[ವ್ರಾಣಾಃ]** ಆವರಿಸಲ್ಪಟ್ಟಿರುವ ಜಲದಂತೆ **[ದಾವನೇ]** ಕೊಡುವವನಿಗಾಗಿ **[ಶ್ರವಃ]** ಅನ್ನವನ್ನು **[ಇತ್]** ಕೂಡ **[ಅಭ್ಯಮುಂಚತ್]** ಎಲ್ಲ ರೀತಿಯಿಂದಲೂ ತ್ಯಜಿಸುತ್ತಾನೋ, ಅವನು ರಾಜ್ಯವನ್ನಾಳಲು ಸಮರ್ಥನಾಗುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರವಿದೆ. ಯಾವ ರೀತಿ ವಿದ್ಯುತ್ತಿನ ಸಹಾಯದಿಂದ ಅಥವಾ ಸೂರ್ಯನ ಸಹಾಯದಿಂದ ವಿದ್ಯುತ್ತು ವರ್ಧಿಸಿ ವಿಶ್ವವನ್ನು ಪ್ರಕಾಶಿತಗೊಳಿಸಿ ಮೇಘವನ್ನು ಭಿನ್ನ-ಭಿನ್ನಗೊಳಿಸಿ ಭೂಮಿಯ ಮೇಲೆ ಚೆಲ್ಲುತ್ತದೆಯೋ, ಯಾವ ರೀತಿ ಗೋವುಗಳ ಪಾಲನೆ ಮಾಡುವವನು ಗೋವುಗಳನ್ನು ಬಂಧನದಿಂದ ಬಿಡಿಸಿ ಅವುಗಳನ್ನು ಸುಖಿಗಳನ್ನಾಗಿ ಮಾಡುತ್ತಾನೋ, ಅದೇ ರೀತಿ ಸಭಾಸೇನಾಧ್ಯಕ್ಷನು ನ್ಯಾಯದ ರಕ್ಷಣೆಯನ್ನು ಶತ್ರುಗಳನ್ನು ಭಿನ್ನ-ಭಿನ್ನಗೊಳಿಸಿ ಧಾರ್ಮಿಕರನ್ನು ದುಃಖರೂಪಿ ಬಂಧನದಿಂದ ಬಿಡಿಸಿ ಸುಖಿಗಳನ್ನಾಗಿಸಲಿ.

ಶತ್ರುನಾಶನ ಮಾಡಲು ಯಾರು ಯೋಗ್ಯರಾಗುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ಅಸ್ಯೇದು ತ್ವೇಷಸಾ ರಂತ ಸಿಂಧವಃ ಪರಿ ಯದ್ ವಜ್ರೇಣ ಸೀಮಯಚ್ಛತ್ ।
ಈಶಾನಕೃದ್ ದಾಶುಷೇ ದಶಸ್ಯನ್ ತುರ್ವೀತಯೇ ಗಾಧಂ ತುರ್ವಣಿಃ ಕಃ ॥೧೧॥

ಪದಾರ್ಥ:- [**ಅಸ್ಯಾ**] ಈ ಸಭಾಧ್ಯಕ್ಷನ [**ತ್ವೇಷಸಾ**] ವಿದ್ಯೆ, ನ್ಯಾಯ, ಬಲದ ಪ್ರಕಾಶದೊಂದಿಗೆ ಇರುವ ಯಾವ ಶೂರ-ವೀರರು ವಿದ್ಯುತ್ತಿನಂತೆ [**ರಂತ**] ರಮಣ ಮಾಡುತ್ತಾರೋ [**ಸಿಂಧವಃ**] ಸಮುದ್ರದಂತೆ [**ವಜ್ರೇಣ**] ಶಸ್ತ್ರದಿಂದ [**ಸೀಮ್**] ಎಲ್ಲ ಪ್ರಕಾರದ ಸೇನೆಗಳನ್ನು [**ಪರಿ ಅಯಚ್ಛತ್**] ನಿಗ್ರಹ ಮಾಡುತ್ತಾನೋ, ಆ [**ದಾಶುಷೇ**] ದಾನಶೀಲನಾದ ಮನುಷ್ಯನು [**ಈಶಾನಕೃತ್**] ಐಶ್ವರ್ಯಯುಕ್ತಗೊಳಿಸುವ [**ತುರ್ವೀತಯೇ**] ಶೀಘ್ರಗೊಳಿಸುವ ಸಲುವಾಗಿ [**ದಶಸ್ಯನ್**] ದಾನಮಾಡುತ್ತ [**ತುರ್ವಣಿಃ**] ಶೀಘ್ರಗೊಳಿಸುವವರನ್ನು ಸೇವಿಸುವ ಮಾನವನು [**ಗಾಧಂ**] ಶತ್ರುಗಳ ತಲ್ಲಣವನ್ನು [**ಕಃ**] ಮಾಡುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವ ಮಾನವರು ಸಭಾಧ್ಯಕ್ಷ ಅಥವಾ ಸೂರ್ಯನ ಸಹಾಯದಿಂದ ಶತ್ರುಗಳನ್ನು ಅಥವಾ ಮೇಘಾದಿಗಳನ್ನು ಗೆದ್ದು ಪೃಥಿವೀ ರಾಜ್ಯವನ್ನು ಅನುಭವಿಸುತ್ತ ಸುಖಿಗಳೂ, ಪ್ರತಾಪಿಗಳೂ ಆಗುತ್ತಾರೋ, ಅವರೆಲ್ಲರೂ ಶತ್ರುಗಳಲ್ಲಿ ತಲ್ಲಣವನ್ನುಂಟುಮಾಡಲು ಯೋಗ್ಯರಾಗಿರುತ್ತಾರೆ.

ಪ್ರಾಣ ವಾಯುವಿನಿಂದ ಅಕ್ಷರೋತ್ಪತ್ತಿ ಹಾಗೂ ಶತ್ರು ಬಲದ ವಿಭಜನೆಯಿಂದ ಶತ್ರು ವಿಜಯ ಹೇಗೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಸ್ಮಾ ಇದು ಪ್ರ ಭರಾ ತೂತುಜಾನೋ ವೃತ್ರಾಯ ವಜ್ರಮೀಶಾನಃ ಕಿಯೇಧಾಃ ।
ಗೋರ್ನ ಪರ್ವ ವಿ ರದಾ ತಿರಶ್ಚೇ-ಷ್ಯನ್ನರ್ಣಾಂಸ್ಯಪಾಂ ಚರಧ್ಯೈ ॥೧೨॥

ಪದಾರ್ಥ:- ಹೇ ಸಭಾಧ್ಯಕ್ಷನೇ! [**ಕಿಯೇಧಾಃ**] ಅದೆಷ್ಟೋ ಗುಣಗಳನ್ನು ಧಾರಣ ಮಾಡುವವನಾದ [**ಈಶಾನಃ**] ಐಶ್ವರ್ಯಯುಕ್ತ [**ತೂತುಜಾನಃ**] ಶೀಘ್ರಕಾರಿಯಾದ ನೀನು, ಯಾವರೀತಿ ಸೂರ್ಯನು [**ಅಪಾಂ**] ಜಲಗಳ ಸಂಬಂಧದಲ್ಲಿ [**ಅರ್ಣಾಂಸಿ**] ಜಲಗಳ ಪ್ರವಾಹಗಳನ್ನು [**ಚರಧ್ಯೈ**] ಹರಿಯಿಸುವ ಅರ್ಥದಲ್ಲಿ [**ವೃತ್ರಾಯ**] ಮೇಘದ ಸಲುವಾಗಿ ವರ್ತಿಸುತ್ತಾನೋ, ಹಾಗೆ [**ಅಸ್ಮೈ**] ಈ ಶತ್ರುವಿನ ಸಲುವಾಗಿ ಶತ್ರುವನ್ನು [**ಪ್ರ**] ಉತ್ತಮ ರೀತಿಯಿಂದ [**ಭರ**] ಧಾರಣ ಮಾಡು. [**ತಿರಶ್ಚಾ**] ಡೊಂಕುಗತಿಯ ಶಸ್ತ್ರದಿಂದ [**ಗೋರ್ನ**] ವಾಣಿಗಳ ವಿಭಾಗದಂತೆ [**ಪರ್ವ**] ಅದರ ಅಂಗ ಅಂಗವನ್ನು ಕತ್ತರಿಸಲು [**ಇಷ್ಯನ್**] ಇಚ್ಛೆಯನ್ನು ಮಾಡುತ್ತಾ [**ಇದು**] ಅದೇ ರೀತಿ [**ವಿರದಾ**] ಅನೇಕ ಪ್ರಕಾರದಿಂದ ಹನನ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಸೇನಾಪತಿಯೇ! ನೀನು, ಯಾವ ರೀತಿ ಪ್ರಾಣವಾಯುವು ತಾಲುವೇ ಮೊದಲಾದ ಸ್ಥಾನಗಳಲ್ಲಿ ನಾಲಿಗೆಯ ಹೊಡೆತದಿಂದ ಭಿನ್ನ ಭಿನ್ನ ಅಕ್ಷರಗಳ ಅಥವಾ ಪದಗಳ ವಿಭಾಗಗಳು ಪ್ರಸಿದ್ಧವಾಗುತ್ತವೆಯೋ, ಅದೇ ರೀತಿ ಸಭಾಧ್ಯಕ್ಷನಾದವನು ಶತ್ರುಬಲವನ್ನು ಭಿನ್ನ-ಭಿನ್ನಗೊಳಿಸಿ ಅವುಗಳ ಅಂಗವನ್ನು ವಿಭಜಿಸಿ ಇದೇ ರೀತಿ ಶತ್ರುವನ್ನು ಗೆಲ್ಲಬೇಕು.

ಪ್ರಜೆಗಳ ಸಂರಕ್ಷಣೆ ಹೇಗೆ ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಸ್ಯೇದು ಪ್ರ ಬ್ರೂಹಿ ಪೂರ್ವ್ಯಾಣಿ ತುರಸ್ಯ ಕರ್ಮಾಣಿ ನವ್ಯ ಉಕ್ಥೈಃ ।
ಯುಧೇ ಯದಿಷ್ಣಾನ ಆಯುಧಾ-ನ್ಯೃಘಾಯಮಾಣೋ ನಿರಿಣಾತಿ ಶತ್ರೂನ್ ॥೧೩॥

ಪದಾರ್ಥ:- ಹೇ ವಿದ್ವಾಂಸನೇ! [**ಯುತ್**] ಯಾವ ಸಭೆ ಮೊದಲಾದ ಅಧ್ಯಕ್ಷರು ಯಾವ ರೀತಿ [**ಋಘಾಯಮಾಣಃ**] ಸತ್ತವರಂತೆ ಆಚರಣೆ ಮಾಡುವ [**ಆಯುಧಾನಿ**] ತೋಪು, ಬಂದೂಕು, ಖಡ್ಗ ಮೊದಲಾದ ಶಸ್ತ್ರ ಅಸ್ತ್ರಗಳನ್ನು [**ಇಷ್ಣಾನಃ**] ಪ್ರತಿನಿತ್ಯವೂ ಸಂಭಾಳಿಸುತ್ತಾ ಮತ್ತು ಪರಿಷ್ಕರಿಸುತ್ತಾ [**ನವ್ಯಃ**] ನವೀನ ಶಸ್ತ್ರಾಸ್ತ್ರ ವಿದ್ಯೆಯನ್ನು ಓದುತ್ತಾ ನೀನು [**ಯುಧೇ**] ಸಂಗ್ರಾಮದಲ್ಲಿ [**ಶತ್ರೂನ್**] ದುಷ್ಟಶತ್ರುಗಳನ್ನು [**ನಿರಿಣಾತಿ**] ಕೊಲ್ಲುತ್ತೀಯೋ ಆ [**ತುರಸ್ಯ**] ಶೀಘ್ರತಾಯುಕ್ತವಾದ [**ಅಸ್ಯಾ**] ಸಭಾಪತಿ ಮೊದಲಾದವರ [**ಇತ್**] ಅವರದೇ ಆದ [**ಉಕ್ಥೈಃ**] ಹೇಳಲು ಯೋಗ್ಯವಾದ ವಚನಗಳಿಂದ [**ಪೂರ್ವ್ಯಾಣಿ**] ಪ್ರಾಚೀನ ಸತ್ಪುರುಷರಿಂದ ಮಾಡಲ್ಪಟ್ಟ [**ಕರ್ಮಾಣಿ**] ಮಾಡಲು ಯೋಗ್ಯವಾದ ಮತ್ತು ಮಾಡುವವನಿಗೆ ಅತ್ಯಂತ ಇಷ್ಟವಾದ ಕರ್ಮಗಳನ್ನು ಮಾಡುತ್ತಾರೋ, ಹಾಗೆಯೇ [**ಪ್ರಬ್ರೂಹಿ**] ಉತ್ತಮ ರೀತಿಯಲ್ಲಿ ಹೇಳುವವನಾಗು.

ಭಾವಾರ್ಥ:- ಮಾನವರಿಗೆ ಯೋಗ್ಯವಾದುದೇನೆಂದರೆ, ಸಭಾಧ್ಯಕ್ಷ ಮೊದಲಾದವರ ವಿದ್ಯೆ, ವಿನಯ, ನ್ಯಾಯ ಹಾಗೂ ಶತ್ರುವಿಜಯ ಮೊದಲಾದ ಕರ್ಮಗಳ ಪ್ರಶಂಸೆ ಮಾಡಿ ಉತ್ಸಾಹವನ್ನು ತುಂಬಿಸಿ ಇವರ ಸತ್ಕಾರವನ್ನು ಸದಾ ಮಾಡಬೇಕು. ಹಾಗೆಯೇ ಈ ಸಭಾಧ್ಯಕ್ಷ ಮೊದಲಾದ ರಾಜಪುರುಷರಿಂದ ಶಸ್ತ್ರಾಸ್ತ್ರಗಳನ್ನು ಬಳಸುವ ಶಿಕ್ಷಣ ಹಾಗೂ ಶಿಲ್ಪವಿದ್ಯೆಯಿಂದ ಚಾತುರ್ಯವನ್ನು ಹೊಂದಿ ಸೇನೆಯಲ್ಲಿರುವ ವೀರಪುರುಷರೊಂದಿಗೆ ಶತ್ರುಗಳನ್ನು ಗೆದ್ದು ಪ್ರಜೆಗಳ ನಿರಂತರ ಸಂರಕ್ಷಣೆ ಮಾಡಬೇಕು.

ವಿದ್ಯೆ ಹಾಗೂ ಪರಮೇಶ್ವರನ ಪ್ರಶಂಸೆ-ಸ್ತುತಿಯನ್ನು ವರ್ಣಿಸಲಾಗಿದೆ.

ಅಸ್ಯೇದು ಭಿಯಾ ಗಿರಯಶ್ಚ ದೃಳ್ಹಾ ದ್ಯಾವಾ ಚ ಭೂಮಾ ಜನುಷಸ್ತುಜೇತೇ ।
ಉಪೋ ವೇನಸ್ಯ ಜೋಗುವಾನ ಓಣಿಂ ಸದ್ಯೋ ಭುವದ್ ವೀರ್ಯಾಯ ನೋಧಾಃ ॥೧೪॥

ಪದಾರ್ಥ:- ಯಾರು [**ಜೋಗುವಾನಃ**] ಅವ್ಯಕ್ತಶಬ್ದವನ್ನುಂಟು ಮಾಡುವ [**ನೋಧಾಃ**] ಸೇನೆಯ ಅಥವಾ ಸಭೆಯ ಅಧ್ಯಕ್ಷನು [**ಸದ್ಯಃ**] ಶೀಘ್ರವೇ [**ವೀರ್ಯಾಯ**] ಪರಾಕ್ರಮವನ್ನು ಸಿದ್ಧಗೊಳಿಸಲು [**ಭುವತ್**] ಯೋಗ್ಯನಾಗಲಿ. ಯಾವ ರೀತಿ ಸೂರ್ಯನಿಂದ [**ದೃಢಾಃ**] ಪುಷ್ಟವಾದ [**ಗಿರಯಃ**] ಮೇಘದಂತೆ [**ಅಸ್ಯಾ**] ಈ [**ವೇನಸ್ಯ**] ಮೇಧಾವಿಯ [**ಇತ್ ಉ**] ಅದೇ [**ಭಿಯಾ**] ಭಯದಿಂದ [**ಚ**] ಶತ್ರುಜನರು ಕಂಪಾಯಮಾನರಾಗುತ್ತಾರೋ, ಯಾವ ರೀತಿ [**ದ್ಯಾವಾ**] ಪ್ರಕಾಶ [**ಚ**] ಮತ್ತು [**ಭೂಮಾ**] ಭೂಮಿಗಳು [**ತುಜೇತೇ**] ಕಂಪಿಸುತ್ತವೆಯೋ, ಹಾಗೆ [**ಜನುಷಃ**] ಮಾನವರು ಭಯವನ್ನು ಹೊಂದುತ್ತಾರೆ. ಅದೇ ರೀತಿ ನಾವೂ ಸಹ ಆ ಸಭಾಧ್ಯಕ್ಷನ [**ಉಪೋ**] ನಿಕಟ ಭಯವನ್ನು ಹೊಂದಿದವರಂತೆ [**ಭೂಮ**] ಆಗೋಣ ಮತ್ತು ಆ ಸಭಾಧ್ಯಕ್ಷನೇ [**ಓಣಿಂ**] ದುಃಖಗಳನ್ನು ದೂರಗೊಳಿಸಿ ಸುಖವನ್ನು ಪ್ರಾಪ್ತಿಸುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಎಲ್ಲರೂ ನಿಶ್ಚಯವಾಗಿ ತಿಳಿಯಬೇಕಾದುದೇನೆಂದರೆ, ವಿದ್ಯೆ ಮೊದಲಾದ ಉತ್ತಮ ಗುಣಗಳನ್ನು, ಈಶ್ವರನಿಂದ ಜಗತ್ತಿನ ಉತ್ಪತ್ತಿಯಾಗದೆ ಸಭಾಧ್ಯಕ್ಷ ಮೊದಲಾದವರು ಪ್ರಜೆಗಳ ಪಾಲನೆಯನ್ನು ಮಾಡಲು ಹಾಗೂ ಸೂರ್ಯನು ಎಲ್ಲ ಲೋಕಗಳನ್ನು ಪ್ರಕಾಶಿತಗೊಳಿಸಿ ಧಾರಣೆ ಮಾಡಲು ಸಮರ್ಥರಾಗಲಾರರು. ಆದುದರಿಂದ ವಿದ್ಯೆ ಮೊದಲಾದ ಶ್ರೇಷ್ಠಗುಣಗಳ ಮತ್ತು ಪರಮೇಶ್ವರನದೇ ಪ್ರಶಂಸೆ ಹಾಗೂ ಸ್ತುತಿಯನ್ನು ಮಾಡುವುದು ಯೋಗ್ಯವಾಗಿದೆ.

ಪ್ರಜೆಗಳ ರಕ್ಷಣೆಗಾಗಿ ಯಾರನ್ನು ನಿಯುಕ್ತಗೊಳಿಸಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಸ್ಮಾ ಇದು ತ್ಯದನು ದಾಯ್ಯೇಷಾ-ಮೇಕೋ ಯದ್ ವವ್ನೇ ಭೂರೇರೀಶಾನಃ ।
ಪ್ರೈತಶಂ ಸೂರ್ಯೇ ಪಸ್ಪೃಧಾನಂ ಸೌವಶ್ವ್ಯೇ ಸುಷ್ವಿಮಾವದಿಂದ್ರಃ ॥೧೫॥

ಪದಾರ್ಥಃ:- ಯಾವ ರೀತಿ ವಿದ್ವಾಂಸರು [ಯೇಷಾಂ] ಈ ಮನುಷ್ಯಾದಿ ಪ್ರಾಣಿಗಳಿಗೆ ಸುಖವನ್ನು [ದಾಯಿ] ನೀಡಿದ್ದಾರೋ, ಹಾಗೆಯೇ ಯಾರು [ಏಕಃ] ಉತ್ತಮೋತ್ತಮವಾದ ಸಹಾಯ ರಹಿತವಾದ [ಭೂರೇಃ] ಅನೇಕ ಪ್ರಕಾರದ ಐಶ್ವರ್ಯದ [ಈಶಾನಃ] ಸ್ವಾಮಿಯೂ ಆದ [ಇಂದ್ರಃ] ಸಭಾಪತಿಯು [ಸೂರ್ಯೇ] ಸೂರ್ಯ ಮಂಡಲದಲ್ಲಿ ಇದ್ದಾರೋ, ಅಂತಹ [ಸೌವಶ್ವ್ಯೇ] ಉತ್ತಮೋತ್ತಮ ಕುದುರೆಗಳಿಂದ ಕೂಡಿದ ಸೇನೆಗಳಲ್ಲಿ [ಯತ್] ಯಾವ [ಪಸ್ಪೃಧಾನಂ] ಪರಸ್ಪರ ಸ್ಪರ್ಧೆಯನ್ನು ಮಾಡುತ್ತಾ [ಸುಷ್ವಿನ್] ಉತ್ತಮ ಐಶ್ವರ್ಯವನ್ನು ನೀಡುವ [ಏತಶಂ] ಕುದುರೆಯ [ಅವಷ್ನೇ] ಯಥಾಯೋಗ್ಯ ಯಾಚನೆಯನ್ನು ಮಾಡುತ್ತಾರೋ [ತ್ಯತ್] ಅವರಿಗೆ [ಅಸ್ಮೈ] ಈ [ಇದು] ಸಭಾಧ್ಯಕ್ಷನಿಗಾಗಿಯೇ [ಪ್ರಾವತ್] ಉತ್ತಮ ರೀತಿಯಿಂದ ರಕ್ಷಿಸುತ್ತಾನೋ ಅವನು ಸಭೆಗೆ ಯೋಗ್ಯನೆನಿಸುತ್ತಾನೆ.

ಭಾವಾರ್ಥಃ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮಾನವರಿಗೆ ಉಚಿತವಾದುದೇನೆಂದರೆ, ಯಾರು ಬಹಳ ಸುಖವನ್ನು ನೀಡುವವರು, ಅಶ್ವವಿದ್ಯೆಯನ್ನು ಅರಿತವರು ಮತ್ತು ಉಪಮಾರಹಿತ ಪುರುಷಾರ್ಥಿಗಳು ಆದ ವಿದ್ವಾಂಸರಿದ್ದಾರೋ ಅವರನ್ನೇ ಪ್ರಜೆಗಳ ರಕ್ಷಣೆಗಾಗಿ ನಿಯುಕ್ತಿಗೊಳಿಸಬೇಕು ಮತ್ತು ವಿದ್ಯುತ್ ಮೊದಲಾದ ವಿದ್ಯೆಗಳ ಗ್ರಹಣವನ್ನು ಅವಶ್ಯವಾಗಿ ಮಾಡಬೇಕು.

ಮಾನವರು ಸದಾಕಾಲವೂ ಪರಸ್ಪರ ಪ್ರೀತಿಪೂರ್ವಕವಾಗಿ ವಿದ್ಯೆಯ ಅಭಿವೃದ್ಧಿಯನ್ನು ಸಾಧಿಸಬೇಕು ಎಂಬುದನ್ನಿಲ್ಲಿ ಹೇಳಲಾಗಿದೆ.

ಏವಾ ತೇ ಹಾರಿಯೋಜನಾ ಸುವೃಕ್ತೀ-ಂದ್ರ ಬ್ರಹ್ಮಾಣಿ ಗೋತಮಾಸೋ ಅಕ್ರನ್ ।
ಐಷು ವಿಶ್ವಪೇಶಸಂ ಧಿಯಂ ಧಾಃ ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್ ॥೧೬॥

ಪದಾರ್ಥಃ:- ಹೇ [ಹಾರಿಯೋಜನಾ] ಯಾನಗಳಲ್ಲಿ ಕುದುರೆ ಅಥವಾ ಅಗ್ನಿ ಮೊದಲಾದ ಪದಾರ್ಥಗಳ ಬಗೆಗೆ ತಿಳಿದವನು [ಇಂದ್ರ] ಪರಮೈಶ್ವರ್ಯದ ಪ್ರಾಪ್ತಿಯನ್ನು ಮಾಡುವವನು [ಧಿಯಾವಸುಃ] ಬುದ್ಧಿ ಮತ್ತು ಕರ್ಮದ ನೆಲೆಯನ್ನುಳ್ಳ ಯಾವ ನೀನು [ಐಷು] ಈ ಸ್ತುತಿ ಹಾಗೂ ವಿದ್ಯೆಯನ್ನೋದುವ ಮನುಷ್ಯನಲ್ಲಿ [ವಿಶ್ವಪೇಶಸಂ] ಸಮಸ್ತ ವಿದ್ಯಾರೂಪಿ ಗುಣಯುಕ್ತವಾದ [ಧಿಯಂ] ಧಾರಣಾವತಿ ಬುದ್ಧಿಯನ್ನು [ಪ್ರಾತಃ] ಪ್ರತಿನಿತ್ಯವೂ [ಮಕ್ಷೂ] ಶೀಘ್ರವಾಗಿ [ಆಧಾಃ] ಉತ್ತಮ ರೀತಿಯಲ್ಲಿ ಧಾರಣೆಮಾಡುತ್ತೀಯೋ, ಆ ನಿನಗೆ ಈ ಎಲ್ಲಾ ವಿದ್ಯೆಗಳು [ಜಗಮ್ಯಾತ್] ಪದೇ ಪದೇ ಸಿದ್ಧಿಸಲಿ. [ಗೋತಮಾಸಃ] ಸಮಸ್ತ ವಿದ್ಯೆಗಳ ಸ್ತುತಿಯನ್ನು ಮಾಡುವವನಾದ [ತೇ ಏವ] ನಿನಗಾಗಿಯೇ [ಸುವೃಕ್ತಿ] ಉತ್ತಮ ಪ್ರಕಾರದ ದೋಷಗಳನ್ನು ಬೇರೆ ಮಾಡುವ ಶುದ್ಧಿಗೊಳಿಸಿರುವ [ಬ್ರಹ್ಮಾಣಿ] ಹಿರಿದಾದ ಸುಖವನ್ನುಂಟುಮಾಡುವ ಅನ್ನಾದಿಗಳನ್ನು ನೀಡಲು [ಅಕ್ರನ್] ಸಂಪಾದನೆ ಮಾಡುತ್ತಾರೋ ಅವರನ್ನು ಉತ್ತಮ ರೀತಿಯಿಂದ ಸೇವೆಯನ್ನು ಮಾಡುವವನಾಗು.

ಭಾವಾರ್ಥಃ:- ಪರೋಪಕಾರಿಗಳಾದ ವಿದ್ವಾಂಸರಿಗೆ ಉಚಿತವಾದುದೇನೆಂದರೆ, ನಿತ್ಯವೂ ಪ್ರಯತ್ನಪೂರ್ವಕವಾಗಿ ಉತ್ತಮ ಶಿಕ್ಷಣ ಹಾಗೂ ವಿದ್ಯೆಯ ದಾನದಿಂದ ಎಲ್ಲ ಮಾನವರನ್ನು ಉತ್ತಮ ಶಿಕ್ಷಣದಿಂದ ಯುಕ್ತರಾದ ವಿದ್ವಾಂಸರನ್ನಾಗಿ ಮಾಡಬೇಕು. ಇತರ ಮಾನವರೂ ಸಹ ಓದಿಸುವ ವಿದ್ವಾಂಸರಿಗೆ ವಂಚನೆ ಇಲ್ಲದೆ ಮನಸ್ಸು, ಮಾತು ಹಾಗೂ ಕರ್ಮಗಳಿಂದ ಅವರನ್ನು ಪ್ರಸನ್ನರಾಗಿರಿಸಿ ಉತ್ತಮೋತ್ತಮವಾದ ಅನ್ನಾದಿ ಪದಾರ್ಥಗಳನ್ನು ನೀಡಿ ಸತ್ಕರಿಸಬೇಕು. ಏಕೆಂದರೆ ಓದುವ ಮತ್ತು ಓದಿಸುವ ಕಾರ್ಯಕ್ಕಿಂತ ಉತ್ತಮವಾದ ಕರ್ಮ ಬೇರಾವುದೂ ಇಲ್ಲ. ಆದುದರಿಂದ ಎಲ್ಲ ಮಾನವರು ಪರಸ್ಪರ ಪ್ರೀತಿಪೂರ್ವಕವಾಗಿ ವಿದ್ಯೆಯ ವೃದ್ಧಿಯನ್ನು ಸಾಧಿಸಬೇಕು.

ಈ ಸೂಕ್ತದಲ್ಲಿ ಸಭಾಧ್ಯಕ್ಷ ಮೊದಲಾದವರ ವರ್ಣನೆ ಹಾಗೂ ಅಗ್ನಿ ವಿದ್ಯೆಯ ಪ್ರಚಾರ ಮಾಡುವುದು ಮೊದಲಾದುವನ್ನು ಹೇಳಲಾಗಿದೆ. ಆದುದರಿಂದ ಈ ಸೂಕ್ತಾರ್ಥದೊಂದಿಗೆ ಹಿಂದಿನ ಸೂಕ್ತಾರ್ಥವು ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ಅರವತ್ತೊಂದನೆಯ ಸೂಕ್ತ ಸಮಾಪ್ತ

॥ ಇತಿ ಚತುರ್ಥೋಽಧ್ಯಾಯ ॥

ಸೂಕ್ತ ೬೨

ಮಂತ್ರಸಂಖ್ಯೆ ೧೩ । ಋಷಿಃ - ನೋಧಾ ಗೌತಮಃ । ದೇವತಾ - ಇಂದ್ರಃ । ಛಂದಃ - ತ್ರಿಷ್ಟುಪ್ ।
ಸ್ವರಃ - ಧೈವತಃ, ೩, ೭, ೮ ಪಂಚಮಃ.

ಈಗ ೫ನೇ ಅಧ್ಯಾಯದ ಆರಂಭಮಾಡಲಾಗುತ್ತದೆ. ಇದರ ಪ್ರಥಮ ಸೂಕ್ತದ ಮೊದಲ ಮಂತ್ರದಲ್ಲಿ ಈಶ್ವರ ಮತ್ತು ಸಭಾಧ್ಯಕ್ಷರ ಗುಣಗಳ ವರ್ಣನೆ ಮಾಡಿದೆ.

ಪ್ರ ಮನ್ಮಹೇ ಶವಸಾನಾಯ ಶೂಷ-ಮಾಂಗೂಷಂ ಗಿರ್ವಣಸೇ ಅಂಗಿರಸ್ವತ್ ।
ಸುವೃಕ್ತಿಭಿಃ ಸ್ತುವತ ಋಗ್ಮಿಯಾಯಾ-ರ್ಚಾಮಾರ್ಕಂ ನರೇ ವಿಶ್ರುತಾಯ ॥೧॥

ಪದಾರ್ಥಃ:- ಹೇ ವಿದ್ವಾಂಸರೇ! ಹೇಗೆ ನಾವು [ಸುವೃಕ್ತಿಭಿಃ] ದೋಷಗಳನ್ನು ದೂರ ಮಾಡುವ ಕ್ರಿಯೆಗಳಿಂದ [ಶವಸಾನಾಯ] ಜ್ಞಾನ ಬಲದಿಂದ ಕೂಡಿದ [ಗಿರ್ವಣಸೇ] ವಾಣಿಗಳಿಂದ ಸ್ತುತಿಗೆ ಯೋಗ್ಯವಾದ [ಋಗ್ಮಿಯಾಯ] ಋಚೆಗಳಿಂದ ಪ್ರಸಿದ್ಧವಾದ [ನರೇ] ನ್ಯಾಯ ಮಾಡಲು [ವಿಶ್ರುತಾಯ] ಅನೇಕ ಗುಣಗಳಿಂದ ಕೂಡಿರುವುದರಿಂದ ಶ್ರವಣ ಮಾಡಲು ಯೋಗ್ಯವಾದ [ಸ್ತುವತೇ] ಸತ್ಯದ ಪ್ರಶಂಸೆಯುಳ್ಳ ಸಭಾಧ್ಯಕ್ಷನಿಗಾಗಿ [ಅಂಗಿರಸ್ವತ್] ಪ್ರಾಣಗಳ ಬಲಕ್ಕೆ ಸಮಾನವಾದ [ಶೂಷಮ್] ಬಲ ಮತ್ತು [ಅರ್ಕಮ್] ಪೂಜಿಸಲು ಯೋಗ್ಯವಾದ [ಆಯೂಷಮ್] ಯಾವ ವಿಜ್ಞಾನ ಮತ್ತು ಸ್ತುತಿಸಮೂಹವನ್ನು [ಅರ್ಚಾಮ] ಪೂಜಿಸುತ್ತೇವೋ ಮತ್ತು [ಪ್ರಮನ್ಮಹೇ] ಸ್ವೀಕರಿಸಿ ಪ್ರಾರ್ಥಿಸುತ್ತೇವೋ ಹಾಗೆ ನೀವು ಕೂಡ ಮಾಡಿರಿ.

ಭಾವಾರ್ಥಃ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಪರಮೇಶ್ವರನ ಸ್ತುತಿ, ಪ್ರಾರ್ಥನೆ ಮತ್ತು ಉಪಾಸನೆಯಿಂದ ಮನುಷ್ಯನು ಸುಖವನ್ನು ಪಡೆಯುತ್ತಾನೋ, ಹಾಗೆ ಮನುಷ್ಯರು ಸಭಾಧ್ಯಕ್ಷನ ಆಶ್ರಯದಿಂದ ವ್ಯವಹಾರ ಮತ್ತು ಪರಮಾರ್ಥದ ಸುಖಗಳನ್ನು ಸಿದ್ಧಪಡಿಸಬೇಕು.

ಮನುಷ್ಯನು ಮತ್ತೆ ಈ ವಿನಯದಲ್ಲಿ ಏನು ಮಾಡಬೇಕು?

ಪ್ರ ವೋ ಮಹೇ ಮಹಿ ನಮೋ ಭರಧ್ವ-ಮಾಂಗೂಷ್ಯಂ ಶವಸಾನಾಯ ಸಾಮ ।
ಯೇನಾ ನಃ ಪೂರ್ವೇ ಪಿತರಃ ಪದಜ್ಞಾ ಅರ್ಚಂತೋ ಅಂಗಿರಸೋ ಗಾ ಅವಿಂದನ್ ॥೨॥

ಪದಾರ್ಥಃ:- ಹೇ ಮನುಷ್ಯರೇ! [ವಃ] ನೀವು ಅಥವಾ [ನಃ] ನಾವು [ಅಂಗಿರಸಃ] ಪ್ರಾಣಾದಿ ವಿದ್ಯೆ ಮತ್ತು [ಪದಜ್ಞಾಃ] ಧರ್ಮಾರ್ಥ ಕಾಮ ಮತ್ತು ಮೋಕ್ಷವನ್ನು ತಿಳಿದ [ಮಹೇ] ಮಹತ್ತಾದ [ಶವಸಾನಾಯ] ಜ್ಞಾನ ಬಲದಿಂದ ಕೂಡಿದ ಸಭಾಧ್ಯಕ್ಷನಿಗಾಗಿ [ಮಹಿ] ಬಹಳ [ಸಾಮ] ದುಃಖನಾಶ ಮಾಡುವ [ಅಂಗುಷ್ಯಮ್] ವಿಜ್ಞಾನಯುಕ್ತ [ನಮಃ] ನಮಸ್ಕಾರ ಅಥವಾ ಅನ್ನದ [ಅರ್ಚಂತಃ] ಸತ್ಕಾರ ಮಾಡುತ್ತಾ [ಪೂರ್ವೇ] ಮೊದಲು ಎಲ್ಲ ವಿದ್ಯೆಗಳನ್ನು ಓದಿರುವ [ಪಿತರಃ] ವಿದ್ಯಾದಿ ಸದ್ಗುಣಗಳಿಂದ ರಕ್ಷಿಸುವ ವಿದ್ವಾಂಸರು [ಯೇನ] ಯಾವ ವಿಜ್ಞಾನ ಅಥವಾ ಕರ್ಮದಿಂದ [ಗಾಃ] ವಿದ್ಯಾಪ್ರಕಾಶದಿಂದ ಕೂಡಿದ ವಾಣಿಯನ್ನು [ಅವಿಂದನ್] ಪಡೆದರೋ, ಅವರನ್ನು ನೀವು [ಪ್ರಭರಧ್ವಮ್] ಭರಣ-ಪೋಷಣೆಗಳನ್ನು ಸದಾ ಮಾಡಿರಿ.

ಭಾವಾರ್ಥಃ:- ಹೇ ಮನುಷ್ಯರೇ! ಹೇಗೆ ವಿದ್ವಾಂಸರು ವೇದ, ಸೃಷ್ಟಿಕ್ರಮ ಮತ್ತು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಹೇಳಿರುವ ಧರ್ಮಯುಕ್ತ ಮಾರ್ಗಗಳಲ್ಲಿ ನಡೆಯುತ್ತಾ ಎಲ್ಲರೀತಿಯಿಂದ ಪರಮೇಶ್ವರನ ಪೂಜೆ ಮಾಡಿ ಎಲ್ಲರ ಹಿತದ ಧಾರಣೆ ಮಾಡುತ್ತಾರೋ, ಹಾಗೆ ನೀವು ಕೂಡ ಮಾಡಿರಿ.

ಮತ್ತೆ ಮನುಷ್ಯರು ಪೂರ್ವೋಕ್ತ ಕೃತ್ಯವನ್ನು ಏತಕ್ಕಾಗಿ ಮಾಡಬೇಕು?

ಇಂದ್ರಸ್ಯಾಂಗಿರಸಾಂ ಚೇಷ್ಟೌ ವಿದತ್ ಸರಮಾ ತನಯಾಯ ಧಾಸಿಮ್ ।
ಬೃಹಸ್ಪತಿರ್ಭಿನದದ್ರಿಂ ವಿದದ್ ಗಾಃ ಸಮುಸ್ರಿಯಾಭಿರ್ವಾವಶಂತ ನರಃ ॥೩॥

ಪದಾರ್ಥ:- ಹೇ [**ನರಃ**] ಸುಖಗಳನ್ನು ಪ್ರಾಪ್ತಿ ಪಡಿಸುವ ಮನುಷ್ಯರೇ! ಹೇಗೆ [**ಸರಮಾ**] ವಿದ್ಯೆ, ಧರ್ಮ ಮೊದಲಾದ ಬೋಧೆಗಳನ್ನುಂಟುಮಾಡುವ ತಾಯಿಯು [**ತನಯಾಯ**] ಪುತ್ರನಿಗಾಗಿ [**ಧಾಸಿಮ್**] ಅನ್ನಾದಿ ಉತ್ತಮ ಪದಾರ್ಥಗಳನ್ನು [**ವಿದತ್**] ಪ್ರಾಪ್ತಿ ಪಡಿಸುತ್ತಾಳೋ, ಹೇಗೆ [**ಬೃಹಸ್ಪತಿಃ**] ದೊಡ್ಡ-ದೊಡ್ಡ ಪದಾರ್ಥಗಳನ್ನು ರಕ್ಷಿಸುವ ಸಭಾಧ್ಯಕ್ಷನು ಹೇಗೆ ಸೂರ್ಯನು [**ಉಸ್ರಿಯಾಭಿಃ**] ಕಿರಣಗಳಿಂದ [**ಅದ್ರಿಮ್**] ಮೇಘವನ್ನು [**ಭಿನತ್**] ಸೀಳಿ/ಹರಿದು ಮತ್ತು ಹೇಗೆ [**ಗಾಃ**] ಸುಶಿಕ್ಷಿತ ವಾಣಿಯನ್ನು [**ವಿದತ್**] ಪಡೆಯುತ್ತಾನೋ ಹಾಗೆ ನೀವು ಕೂಡ [**ಇಂದ್ರಸ್ಯ**] ಪರಮೈಶ್ವರ್ಯವಂತನಾದ ಪರಮೇಶ್ವರನು, ಸಭಾಧ್ಯಕ್ಷನು ಅಥವಾ ಸೂರ್ಯನು [**ಚ**] ಮತ್ತು [**ಅಂಗಿರಸಾಮ್**] ವಿದ್ಯೆ, ಧರ್ಮ ಮತ್ತು ರಾಜ್ಯವುಳ್ಳ ವಿದ್ವಾಂಸನ [**ಇಷ್ಟಾ**] ಇಷ್ಟವನ್ನು ಸಿದ್ಧಪಡಿಸುವ ನೀತಿಯಲ್ಲಿ ವಿದ್ಯಾದಿ ಉತ್ತಮ ಗುಣಗಳನ್ನು [**ಸಂವಾವಶಂತ**] ಉತ್ತಮವಾಗಿ ಮತ್ತೆ ಮತ್ತೆ ಪ್ರಕಾಶ ಪಡಿಸಿರಿ. ಅದರಿಂದ ಜಗತ್ತಿನಲ್ಲೆಲ್ಲ ಅವಿದ್ಯಾದಿ ದುಷ್ಟಗುಣಗಳು ನಷ್ಟವಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಉಚಿತವಾದುದೇನೆಂದರೆ, ಮಾತೆಯಂತೆ ಪ್ರಜೆಗಳೊಡನೆ ವರ್ತಿಸಿ ಸೂರ್ಯನಂತೆ ವಿದ್ಯೆ ಮೊದಲಾದ ಉತ್ತಮ ಗುಣಗಳನ್ನು ಪ್ರಕಾಶಪಡಿಸಿ, ಈಶ್ವರನು ಹೇಳಿದ ಅಥವಾ ವಿದ್ವಾಂಸರಿಂದ ಅನುಷ್ಠಾನ ಮಾಡಿದ ನೀತಿಯಲ್ಲಿ ಸ್ಥಿತರಾಗಿ ಮತ್ತು ಎಲ್ಲರಿಗೂ ಉಪಕಾರ ಮಾಡುತ್ತಾ, ವಿದ್ಯಾದಿ ಸದ್ಗುಣಗಳ ಆನಂದದಲ್ಲಿ ಸದಾ ಮಗ್ನರಾಗಲಿ.

ಮತ್ತೆ ಮನುಷ್ಯನು ಹೇಗೆ ವರ್ತಿಸಬೇಕು?

ಸ ಸುಷ್ಟುಭಾ ಸ ಸ್ತುಭಾ ಸಪ್ತ ವಿಪ್ರೈಃ ಸ್ವರೇಣಾದ್ರಿಂ ಸ್ವರ್ಯೋ೩ ನವಗ್ವೈಃ ।
ಸರಣ್ಯುಭಿಃ ಫಲಿಗಮಿಂದ್ರ ಶಕ್ರ ವಲಂ ರವೇಣ ದರಯೋ ದಶಗ್ವೈಃ ॥೪॥

ಪದಾರ್ಥ:- ಹೇ [**ಸಃ**] ಆ [**ಇಂದ್ರ**] ಪರಮೈಶ್ವರ್ಯಯುಕ್ತನಾದ [**ಶಕ್ರ**] ಶಕ್ತಿಯನ್ನು ಪ್ರಾಪ್ತಿಪಡಿಸುವ ಸಭಾಧ್ಯಕ್ಷನೇ! ತಾವು [**ನವಗ್ವೈಃ**] ಒಂಬತ್ತರಿಂದ ಪ್ರಾಪ್ತವಾದ ಗತಿ ಅಥವಾ [**ದಶಗ್ವೈಃ**] ಹತ್ತು ದಿಕ್ಕುಗಳಿಂದ ತಿಳಿದ [**ಸರಣ್ಯುಭಿಃ**] ಎಲ್ಲ ಶಾಸ್ತ್ರಗಳಲ್ಲಿ ವಿಜ್ಞಾನವುಂಟುಮಾಡುವ ಗತಿಗಳಿಂದ ಕೂಡಿದ [**ವಿಪ್ರೈಃ**] ಬುದ್ಧಿವಂತರಾದ ವಿದ್ವಾಂಸರೊಂದಿಗೆ, ಹೇಗೆ ಸೂರ್ಯನು [**ಸುಷ್ಟುಭಾ**] ಉತ್ತಮ ದ್ರವ್ಯ, ಗುಣ ಮತ್ತು ಕ್ರಿಯೆಗಳಿಂದ ಸ್ಥಿರಪಡಿಸಲು ಅಥವಾ [**ಸ್ತುಭಾ**] ಧಾರಣ ಮಾಡುವ [**ರವೇಣ**] ಶಾಸ್ತ್ರಗಳಲ್ಲಿ ಶಬ್ದಗಳಿಂದ ಹೇಗೆ ಸೂರ್ಯನು [**ಸಪ್ತ**] ಏಳು ಸ್ವರಗಳ ಮಧ್ಯದಲ್ಲಿ ವರ್ತಿಸುತ್ತಾ [**ಸ್ವರೇಣ**] ಉದಾತ್ತಾದಿ ಅಥವಾ ಷಡ್ಜಾದಿ ಸ್ವರಗಳಿಂದ [**ಅದ್ರಿಮ್**] ಬಲಯುಕ್ತವಾದ [**ಫಲಿಗಮ್**] ಮೇಘದ ಹನನ ಮಾಡುವ ಹಾಗೆ ಶತ್ರುಗಳನ್ನು [**ದರಯಃ**] ಹರಿದು ಹಾಕುತ್ತಾನೋ [**ನಃ**] ಅವನು ನಮ್ಮಿಂದ [**ಸ್ವರ್ಯಃ**] ಹೊಗಳಿಕೆಗೆ ಯೋಗ್ಯನಾಗಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ವಿದ್ಯುತ್ತು ತನ್ನ ಉತ್ತಮೋತ್ತಮ ಗುಣಗಳಿಂದ ವರ್ತಿಸುತ್ತಾ ಜೀವನಕ್ಕೆ ಹೇತುವಾದ ಮೇಘವನ್ನು ಉತ್ಪನ್ನಮಾಡುವುದೇ ಮೊದಲಾದ ಕಾರ್ಯಗಳನ್ನು ಸಿದ್ಧಪಡಿಸುತ್ತದೋ ಹಾಗೆಯೇ ಸಭಾಧ್ಯಕ್ಷ ಮೊದಲಾದವರು ಅತ್ಯಂತ ಉತ್ತಮೋತ್ತಮ ವಿದ್ಯಾಬಲದಿಂದ

ಕೂಡಿದವರೊಂದಿಗೆ ವರ್ತಿಸಿ ವಿದ್ಯಾರೂಪದ, ನ್ಯಾಯದ ಪ್ರಕಾಶದಿಂದ ಅನ್ಯಾಯ ಅಥವಾ ದುಷ್ಟರನ್ನು ನಿವಾರಿಸಿ ಚಕ್ರವರ್ತಿರಾಜ್ಯವನ್ನು ಪಾಲಿಸಬೇಕು.

ಮತ್ತೆ ಆ ಸಭಾಧ್ಯಕ್ಷನು ಹೇಗಿರಬೇಕು?

ಗೃಣಾನೋ ಅಂಗಿರೋಭಿರ್ದಸ್ಮ ವಿ ವ-ರುಷಸಾ ಸೂರ್ಯೇಣ ಗೋಭಿರಂಧಃ ।
ವಿ ಭೂಮ್ಯಾ ಅಪ್ರಥಯ ಇಂದ್ರ ಸಾನು ದಿವೋ ರಜ ಉಪರಮಸ್ತಭಾಯಃ ॥೫॥

ಪದಾರ್ಥ:- ಹೇ [**ಇಂದ್ರ ದಸ್ಮ**] ಶತ್ರುಗಳ ನಾಶಮಾಡುವ ಸಭಾಧ್ಯಕ್ಷನೇ! [**ಗೃಣಾನಃ**] ಉಪದೇಶ ಮಾಡುವ ನೀನು, ಯಾವರೀತಿ ವಿದ್ಯುತ್ತು [**ಅಂಗಿರೋಭಿಃ**] ಪ್ರಾಣವು [**ಉಷಸಾ**] ಪ್ರಾತಃಕಾಲದ [**ಸೂರ್ಯೇಣ**] ಸೂರ್ಯನ ಪ್ರಕಾಶ ಹಾಗೂ [**ಗೋಭಿಃ**] ಕಿರಣಗಳಿಂದ [**ಅಂಧಃ**] ಅನ್ನವನ್ನು ಪ್ರಕಟಪಡಿಸುವಂತೆ, ಧರ್ಮರಾಜ್ಯ ಮತ್ತು ಸೇನೆಯನ್ನು [**ವಿವಃ**] ಪ್ರಕಟಿಸುವಂತೆ ಪ್ರಕಟಿಸು. ಅದೇ ರೀತಿ ವಿದ್ಯುತ್ತನ್ನು [**ವ್ಯಪ್ರಥಯಃ**] ವಿವಿಧ ಪ್ರಕಾರಗಳಿಂದ ವಿಸ್ತೃತಗೊಳಿಸು. ಹೇಗೆ ಸೂರ್ಯನು [**ಭೂಮ್ಯಾಃ**] ಪೃಥಿವಿಯಲ್ಲಿ ಶ್ರೇಷ್ಠವಾದ [**ದಿವಃ**] ಪ್ರಕಾಶದ [**ಸಾನು**] ಮೇಲ್ಭಾಗವು [**ರಜಃ**] ಎಲ್ಲ ಲೋಕಗಳನ್ನು ಮತ್ತು [**ಉಪರಮ್**] ಮೇಘವನ್ನು [**ಅಸ್ತಭಾಯಃ**] ಸಂಯುಕ್ತಪಡಿಸುತ್ತಾನೋ ಹಾಗೆ ಧರ್ಮಯುಕ್ತ ರಾಜ್ಯದ ಸೇನೆಯನ್ನು ವಿಸ್ತಾರಗೊಳಿಸು ಮತ್ತು ಶತ್ರುಗಳನ್ನು ಬಂಧಿಸುತ್ತಾ ತಾವು ನಮ್ಮೆಲ್ಲರಿಂದ ಸ್ತುತಿಸಲು ಯೋಗ್ಯನಾಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರನ್ನು ಪ್ರಾತಃಕಾಲದ ಸೂರ್ಯಕಿರಣಗಳು ಮತ್ತು ಪ್ರಾಣಗಳಿಗೆ ಸಮವಾದ ಉಕ್ತಗುಣಗಳನ್ನು ಪ್ರಕಾಶಪಡಿಸಿ ದುಷ್ಟರನ್ನು ನಿವಾರಿಸಬೇಕು. ಹೇಗೆ ಸೂರ್ಯನು ಪ್ರಕಾಶವನ್ನು ಹರಡಿ ಮತ್ತು ಮೇಘವನ್ನು ಉತ್ಪನ್ನಮಾಡಿ ವರ್ಷಿಸುವನೋ, ಹಾಗೆಯೇ ಸಭಾಧ್ಯಕ್ಷ ಮೊದಲಾದವರು ಪ್ರಜೆಗಳಲ್ಲಿ ಉತ್ತಮ ವಿದ್ಯೆಯ ಉತ್ಪನ್ನಮಾಡಿ ಸುಖಗಳನ್ನು ವರ್ಷಿಸಬೇಕು.

ಮತ್ತೆ ಸಭಾಧ್ಯಕ್ಷನ ಕಾರ್ಯಗಳು ಹೇಗಿರಬೇಕು?

ತದು ಪ್ರಯಕ್ಷತಮಮಸ್ಯ ಕರ್ಮ ದಸ್ಮಸ್ಯ ಚಾರುತಮಮಸ್ತಿ ದಂಸಃ ।
ಉಪಹ್ವರೇ ಯದುಪರಾ ಅಪಿನ್ವನ್ ಮಧ್ವರ್ಣಸೋ ನದ್ಯ೧ ಶ್ಚತಸ್ರಃ ॥೬॥

ಪದಾರ್ಥ:- ಹೇ ಮನುಷ್ಯರೇ! ನಿಮಗೆ ಉಚಿತವಾಗಿರುವುದೇನೆಂದರೆ, [**ಅಸ್ಯ**] ಈ [**ದಸ್ಮಸ್ಯ**] ದುಃಖವನ್ನು ನಷ್ಟಗೊಳಿಸುವ ಸಭಾಧ್ಯಕ್ಷನು ಅಥವಾ ವಿದ್ಯುತ್ತಿನ [**ಉಪಹ್ವರೇ**] ಕುಟಿಲತಾಯುಕ್ತ ವ್ಯವಹಾರಗಳಲ್ಲಿ [**ಯತ್**] ಯಾವ [**ಪ್ರತ್ಯಕ್ಷತಮಮ್**] ಅತ್ಯಂತ ಪೂಜಿಸಲು ಯೋಗ್ಯನು [**ಚಾರುತಮಮ್**] ಅತಿ ಸುಂದರನು [**ದಂಸಃ**] ವಿದ್ಯೆ ಅಥವಾ ಸುಖಗಳನ್ನು ತಿಳಿಯುವ ಹೇತು [**ಕರ್ಮ**] ಕಾರ್ಯಗಳು [**ಅಸ್ತಿ**] ಇವೆಯೋ [**ತದು**] ಅವುಗಳನ್ನು ತಿಳಿದು ಆಚರಿಸಿ ಅಥವಾ ಯಾವನ ಈ ತರಹ ಕರ್ಮಗಳಿಂದ [**ಮಧ್ವರ್ಣಸಃ**] ಮಧುರ ಜಲವುಳ್ಳ [**ನದ್ಯಃ**] ನದಿ ಮತ್ತು [**ಚತಸ್ರಃ**] ನಾಲ್ಕು [**ಉಪರಾಃ**] ದಿಕ್ಕುಗಳು [**ಅಪಿನ್ವತ್**] ಸೇವನೆ ಅಥವಾ ಸೇಚನೆ ಮಾಡುತ್ತವೆ. ಅವರಿಬ್ಬರನ್ನೂ ವಿದ್ಯೆಯಿಂದ ಚೆನ್ನಾಗಿ ಸೇವಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮಾನವನು ಅತಿ ಉತ್ತಮೋತ್ತಮ ಕರ್ಮಗಳ ಸೇವೆ, ಯಜ್ಞದ ಅನುಷ್ಠಾನ ಮತ್ತು ರಾಜ್ಯದ ಪಾಲನೆ ಮಾಡಿ ಎಲ್ಲ ದಿಕ್ಕುಗಳಲ್ಲಿ ಕೀರ್ತಿಯನ್ನು ವರ್ಷಿಸಬೇಕು.

ಮತ್ತೆ ಸಭಾಧ್ಯಕ್ಷನು ಹೇಗಿರುತ್ತಾನೆ?

ದ್ವಿತಾ ವಿ ವವ್ರೇ ಸನಜಾ ಸನೀಳೇ ಅಯಾಸ್ಯಃ ಸ್ತವಮಾನೇಭಿರರ್ಕೈಃ ।
ಭಗೋ ನ ಮೇನೇ ಪರಮೇ ವ್ಯೋಮ-ನ್ನಧಾರಯದ್ ರೋದಸೀ ಸುದಂಸಾಃ ॥೭॥

ಪದಾರ್ಥ:- ಹೇಗೆ ವಿದ್ವಾಂಸರಿಂದ **[ಸನೀಡೇ]** ಸಮೀಪದಲ್ಲಿ **[ಸ್ತವಮಾನೋಭಿಃ]** ಸ್ತುತಿಗಳಿಂದ ಕೂಡಿದ **[ಅರ್ಕೈಃ]** ಸ್ತೋತ್ರಗಳಿಂದ **[ಸನಜಾ]** ಸನಾತನ ಕಾರಣದಿಂದ ಉತ್ಪನ್ನವಾದ **[ದ್ವಿತಾ]** ಎರಡು ಅಂದರೆ ಪ್ರಜೆ ಮತ್ತು ಸಭಾಧ್ಯಕ್ಷರನ್ನು **[ವಿವವ್ರೇ]** ಉತ್ತಮ ಕರ್ಮಗಳಿಂದ ಕೂಡಿದ ನಾನು ಹೇಗೆ **[ಪರಮೇ]** **[ವ್ಯೋಮನ್]** ಉತ್ತಮ ಅಂತರಿಕ್ಷದಲ್ಲಿ **[ರೋದಸೀ]** ಪ್ರಕಾಶ ಮತ್ತು (ಭೂಮಿಯನ್ನು) **[ಭಗೋ ನ]** ಸೂರ್ಯನಂತಿರುವ ವಿದ್ವಾಂಸನು **[ಮೇನೇ]** ಸ್ವೀಕರಿಸುತ್ತಾ ಮತ್ತು **[ಅಧಾರಯತ್]** ಧಾರಣ ಮಾಡುತ್ತಾನೆ. ಹಾಗೆ ಇದನ್ನು ಧಾರಣ ಮಾಡುತ್ತಾ ಸ್ವೀಕರಿಸುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಸಭೆ ಮೊದಲಾದವುಗಳ ಅಧ್ಯಕ್ಷರು ಐಶ್ವರ್ಯವನ್ನು ಮತ್ತು ಹೇಗೆ ಸೂರ್ಯನು ಪ್ರಕಾಶವನ್ನು ಹಾಗೂ ಪೃಥಿವಿಯನ್ನು ಧಾರಣ ಮಾಡುತ್ತಾನೋ, ಹಾಗೆಯೇ ನ್ಯಾಯ ಮತ್ತು ವಿದ್ಯೆಯ ಧಾರಣೆಯನ್ನು ಮಾಡಬೇಕು.

ಈಗ ರಾತ್ರಿ ಮತ್ತು ಹಗಲಿನ ದೃಷ್ಟಾಂತದಿಂದ ಸ್ತ್ರೀ ಮತ್ತು ಪುರುಷರು ಯಾವ ಯಾವ ಪ್ರಕಾರ ವರ್ತಿಸಬೇಕು?

ಸನಾದ್ ದಿವಂ ಪರಿ ಭೂಮಾ ವಿರೂಪೇ ಪುನರ್ಭುವಾ ಯುವತೀ ಸ್ವೇಭಿರೇವೈಃ ।
ಕೃಷ್ಣೇಭಿರಕ್ತೋಷಾ ರುಶದ್ಭಿ-ರ್ವಪುರ್ಭಿರಾ ಚರತೋ ಅನ್ಯಾನ್ಯಾ ॥೮॥

ಪದಾರ್ಥ:- ಹೇ ಸ್ತ್ರೀ ಪುರುಷರೇ! ನೀವು ಹೇಗೆ **[ಸನಾತ್]** ಸನಾತನ ಕಾರಣದಿಂದ **[ದಿವಮ್]** ಸೂರ್ಯ ಪ್ರಕಾಶ ಮತ್ತು **[ಭೂಮಾ]** ಭೂಮಿಯನ್ನು ಪಡೆದು **[ಪುನರ್ಭುವಾ]** ಮತ್ತೆ-ಮತ್ತೆ ಪರ್ಯಾಯದಿಂದ ಉತ್ಪನ್ನವಾಗಿ **[ಯುವತೀ]** ಯುವಾವಸ್ಥೆಯನ್ನು ಪಡೆದ ಸ್ತ್ರೀ - ಪುರುಷರಂತೆ **[ವಿರೂಪೇ]** ವಿವಿಧ ರೂಪಗಳಿಂದ ಕೂಡಿ **[ಅಕ್ತಾ]** ರಾತ್ರಿ **[ಉಷಾಃ]** ಹಗಲು **[ಸ್ವೇಭಿಃ]** ಕ್ಷಣ ಮೊದಲಾದ ಅವಯವಗಳು **[ರುಶದ್ಭಿಃ]** ಪ್ರಾಪ್ತಿಗೆ ಹೇತುವಾದ ರೂಪಾದಿ ಗುಣಗಳೊಡನೆ **[ವಪುರ್ಭಿಃ]** ತನ್ನ ಆಕೃತಿ ಮೊದಲಾದ ಶರೀರ ಅಥವಾ **[ಕೃಷ್ಣೇಭಿಃ]** ಪರಸ್ಪರ ಆಕರ್ಷಣಾದಿಗಳನ್ನು **[ಏವೈಃ]** ಪ್ರಾಪ್ತಿಪಡಿಸುವ ಗುಣಗಳೊಡನೆ **[ಅನ್ಯಾನ್ಯಾ]** ಭಿನ್ನ-ಭಿನ್ನವು ಪರಸ್ಪರ ಸೇರಿ **[ಪರ್ಯಾಚರತಃ]** ಹೋಗಿ ಬರುತ್ತಾರೋ ಹಾಗೆ ಸ್ವಯಂವರ ಅಂದರೆ ಪರಸ್ಪರ ಪ್ರಸನ್ನತೆಯಿಂದ ಕೂಡಿದ ವಿವಾಹವನ್ನು ಮಾಡಿಕೊಂಡು ಒಬ್ಬರು ಇನ್ನೊಬ್ಬರೊಂದಿಗೆ ಪ್ರೀತಿಯಿಂದ ಕೂಡಿ ಸದಾ ಆನಂದದಿಂದಿರಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾಗಿರುವುದೇನೆಂದರೆ, ಹೇಗೆ ಚಕ್ರದಂತೆ ಯಾವಾಗಲೂ ಇರುವ ಹಗಲು-ರಾತ್ರಿಗಳು ಪರಸ್ಪರ ಸೇರಿವರ್ತಿಸುತ್ತವೋ ಹಾಗೆ ವಿವಾಹಿತ ಸ್ತ್ರೀ-ಪುರುಷರು ಅತ್ಯಂತ ಪ್ರೇಮದಿಂದ ವರ್ತಿಸಬೇಕು.

ಮತ್ತೆ ಅವರು ಹೇಗಿರುತ್ತಾರೆ?

ಸನೇಮಿ ಸಖ್ಯಂ ಸ್ವಪಸ್ಯಮಾನಃ ಸೂನುರ್ದಾಧಾರ ಶವಸಾ ಸುದಂಸಾಃ ।
ಆಮಾಸು ಚಿದ್ ದಧಿಷೇ ಪಕ್ವಮಂತಃ ಪಯಃ ಕೃಷ್ಣಾಸು ರುಶದ್ ರೋಹಿಣೀಷು ॥೯॥

ಪದಾರ್ಥ:- ಯಾವ **[ಸ್ವಪಶ್ಯಮಾನಃ]** ಉತ್ತಮ ಕರ್ಮಗಳನ್ನು ಮಾಡುವವನಿಗೆ ಸಮಾನವಾಗಿ **[ಸುದಂಸಾಃ]** ಉತ್ತಮ ಕರ್ಮಗಳಿಂದ ಕೂಡಿ **[ರುಶತ್]** ಶುಭಗುಣಗಳನ್ನು ಪಡೆಯುತ್ತಿರುವ ನೀನು ಹೇಗೆ **[ಸೂನುಃ]** ಸುಪುತ್ರನು ತನ್ನ ಮಾತಾ-ಪಿತರ ಪೋಷಣೆ ಮಾಡುವವನಿಗೆ ಸಮಾನವಾಗಿ ದಿನ-ರಾತ್ರಿಗಳು **[ಸನೇಮಿ]** ಪ್ರಾಚೀನ **[ಸಖ್ಯಮ್]** ಮಿತ್ರತ್ವದಿಂದ ಕಾಲಾವಯವಗಳನ್ನು **[ದಾಧಾರ]** ಧಾರಣ ಮಾಡುತ್ತಾ ಮತ್ತು **[ರೋಹಿಣೀಷು]** ಉತ್ಪನ್ನ ಶೀಲ **[ಕೃಷ್ಣಾಸು]** ಎಲ್ಲರೀತಿಯಿಂದ ಪಕ್ವವಾದ **[ಚಿತ್]** ಮತ್ತು **[ಆಮಾಸು]** ಕಚ್ಚಾ ಔಷಧಿಗಳ **[ಅಂತಃ]** ಮಧ್ಯದಲ್ಲಿ [**[ಪಕ್ವಮ್]** ಪಕ್ವ] **[ಪಯಃ]** ರಸವನ್ನು ಧಾರಣಮಾಡುತ್ತಾನೋ ಹಾಗೆ **[ಶವಸಾ]** ಬಲದೊಂದಿಗೆ ಗೃಹಾಶ್ರಮವನ್ನು **[ದಧಿಷೇ]** ಧಾರಣಮಾಡು.

ಭಾವಾರ್ಥ:- ವಿದ್ವಾಂಸರನ್ನು ಹೇಗೆ ಹಗಲು ರಾತ್ರಿಗಳು ಕಹಿ-ಪಕ್ವರಸಗಳಿಂದ ಉತ್ಪನ್ನ ಮಾಡಲು ಮತ್ತು ಉತ್ಪನ್ನವಾದ ಪದಾರ್ಥಗಳ ವೃದ್ಧಿ ಅಥವಾ ನಾಶ ಮಾಡುವ ಎಲ್ಲರ ಮಿತ್ರನಂತೆ ವರ್ತಿಸುತ್ತಾನೋ, ಹಾಗೆ ಎಲ್ಲ ಮನುಷ್ಯರೊಂದಿಗೂ ವರ್ತಿಸುವುದು ಯೋಗ್ಯವಾಗಿದೆ.

ಮತ್ತೆ ಅವರು ಹೇಗಿರುತ್ತಾರೆ?

ಸನಾತ್ ಸನೀಳಾ ಅವನೀರವಾತಾ ವ್ರತಾ ರಕ್ಷಂತೇ ಅಮೃತಾಃ ಸಹೋಭಿಃ ।
ಪುರೂ ಸಹಸ್ರಾ ಜನಯೋ ನ ಪತ್ನೀ-ರ್ದುವಸ್ಯಂತಿ ಸ್ವಸಾರೋ ಅಹ್ರಯಾಣಮ್ ॥೧೦॥

ಪದಾರ್ಥ:- ಹೇಗೆ **[ಅವಾತಾಃ]** ಹಿಂಸಾರಹಿತ **[ಅವನೀಃ]** ಭೂಮಿಯು ಎಲ್ಲರ ರಕ್ಷಣೆಯನ್ನು ಮಾಡುತ್ತದೆಯೋ **[ಪುರುಸಹಸ್ರಾ]** ಬಹುವಾಗಿ **[ಜನಯಃ]** ಉತ್ಪನ್ನ ಮಾಡುವ ಪತಿಯು **[ಪತ್ನೀ, ನ]** ಹೇಗೆ ತನ್ನ ಸ್ತ್ರೀಯ ರಕ್ಷಣೆಯನ್ನು ಮಾಡುತ್ತಾನೋ, ಹಾಗೆ **[ಸನೀಡಾಃ]** ಸಮೀಪದಲ್ಲಿರುವ **[ಅಮೃತಾಃ]** ನಾಶರಹಿತ ವಿದ್ವಾಂಸರು **[ಸಹೋಭಿಃ]** ವಿದ್ಯಾಯೋಗ ಧರ್ಮವುಳ್ಳವರಿಂದ **[ಸನಾತ್]** ಸನಾತನ **[ವ್ರತಾ]** ಸತ್ಯಧರ್ಮದ ಆಚರಣೆಗಳನ್ನು **[ರಕ್ಷಂತೇ]** ರಕ್ಷಿಸುತ್ತಾರೆ. ಮತ್ತು ಹೇಗೆ **[ಸ್ವಸಾರಃ]** ಸಹೋದರಿಯು **[ಅಹ್ರಯಾಣಮ್]** ಲಜ್ಜೆಯಿಲ್ಲದೆ ತನ್ನ ಸಹೋದರನ **[ದುವಸ್ಯಂತಿ]** ಸೇವೆ ಮಾಡುವಳೋ, ಹಾಗೆ ವಿದ್ಯೆ ಮತ್ತು ಧರ್ಮವನ್ನೇ ಸೇವಿಸುವವರು ಮುಕ್ತಿಯನ್ನು ಪಡೆಯುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಪತಿಯೊಂದಿಗಿರುವ ಸ್ತ್ರೀಯರು, ಸಹೋದರಿಯರು ಮತ್ತು ಸಹೋದರರು ಹಾಗೂ ವಿದ್ಯಾರ್ಥಿಗಳು ಆಚಾರ್ಯರ ಸೇವೆಯಿಂದ ಸುಖ ಮತ್ತು ವಿದ್ಯೆಗಳನ್ನು ಪಡೆಯುವರೋ, ಹಾಗೆ ಧರ್ಮಾತ್ಮರಾದ ವಿದ್ವಾಂಸರು ತಮ್ಮ ನೆಲೆಯಿಂದಲೇ ಮುಕ್ತಿಯನ್ನು ಪಡೆಯುತ್ತಾರೆ.

ಮತ್ತೆ ದಿನ-ರಾತ್ರಿಗಳು ಹೇಗೆ ಹಾಗೂ ಇವುಗಳನ್ನು ತಿಳಿದ ವಿದ್ವಾಂಸರು ಹೇಗಿರುವರು?

ಸನಾಯುವೋ ನಮಸಾ ನವ್ಯೋ ಅರ್ಕೈ-ರ್ವಸೂಯವೋ ಮತಯೋ ದಸ್ಮ ದದ್ರುಃ ।
ಪತಿಂ ನ ಪತ್ನೀರುಶತೀರುಶಂತಂ ಸ್ಪೃಶಂತಿ ತ್ವಾ ಶವಸಾವನ್ ಮನೀಷಾಃ ॥೧೧॥

ಪದಾರ್ಥ:- ಹೇ **[ಶವಸಾವನ್]** ಬಲಯುಕ್ತನು **[ದಸ್ಮ]** ಅವಿದ್ಯಾಂಧಕಾರನಾಶಕ ಸಭಾಪತಿಯೇ! ನೀನು ಹೇಗೆ **[ಸನಾಯುವಃ]** ಸನಾತನ ಕರ್ಮಗಳನ್ನು ಮಾಡುವವರಂತೆ ಆಚರಣೆ ಮಾಡುತ್ತಾ **[ನಮಸಾ]** ಅನ್ನ ಅಥವಾ

ನಮಸ್ಕಾರ ಹಾಗೂ [**ಅರ್ಕೈಃ**] ಮಂತ್ರ ಅಂದರೆ ಆಲೋಚನೆಯಿಂದ ಕೂಡಿರುವ [**ವಸೂಯವಃ**] ತನಗಾಗಿ ವಿದ್ಯೆ, ಧನ ಮತ್ತು [**ಮನೀಷಾಃ**] ವಿಜ್ಞಾನವನ್ನು ಬಯಸುವ [**ಮತಯಃ**] ಎಲ್ಲವನ್ನೂ ತಿಳಿದ ವಿದ್ವಾಂಸರು [**ನ**] ಹೇಗೆ [**ನವ್ಯಃ**] ನವೀನ [**ಉಶತೀಃ**] ಕಾಮನೆಗಳಿಂದ ಕೂಡಿದ [**ಪತ್ನೀಃ**] ಸ್ತ್ರೀಯು [**ಊಶಂತಮ್**] ಕಾಮನಾ ಪೂರ್ಣನಾದ [**ಪತಿಮ್**] ಪತಿಯನ್ನು [**ಸ್ಪೃಶಂತಿ**] ಆಲಿಂಗನ ಮಾಡುತ್ತಾಳೋ ಮತ್ತು ಹೇಗೆ [**ದದ್ರುಃ**] ಕುಟಿಲಗತಿಯ ನಡೆಯುಳ್ಳವರನ್ನು ತಿಳಿಯುತ್ತಾಳೋ ಹಾಗೆ [**ತ್ವಾ**] ನಿನ್ನನ್ನು ಪ್ರಜೆಗಳು ಸೇವಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಮನುಷ್ಯರು ತಿಳಿಯಬೇಕಾದುದೇನೆಂದರೆ, ಹೇಗೆ ಸ್ತ್ರೀ-ಪುರುಷರೊಂದಿಗೆ ವರ್ತಿಸುವುದರಿಂದ ಸಂತಾನೋತ್ಪತ್ತಿಯಾಗುತ್ತದೋ ಹಾಗೆಯೇ ಹಗಲು-ರಾತ್ರಿಗಳು ಒಟ್ಟಿಗೆ ವರ್ತಿಸುವುದರಿಂದ ಎಲ್ಲ ವ್ಯವಹಾರಗಳು ಸಿದ್ಧವಾಗುತ್ತವೆ. ಹೇಗೆ ಸೂರ್ಯನ ಪ್ರಕಾಶವು ಮತ್ತು ಪೃಥಿವಿಯ ನೆರಳುಗಳ ಹೊರತು ಹಗಲು ರಾತ್ರಿಗಳು ಸಂಭವವಲ್ಲವೋ ಹಾಗೆಯೇ ಸ್ತ್ರೀ-ಪುರುಷರ ಹೊರತು ಮೈಥುನೀ ಸೃಷ್ಟಿಯಾಗುವುದಿಲ್ಲ.

ಈಗ ಮುಂದಿನ ಮಂತ್ರದಲ್ಲಿ ಸೂರ್ಯ ಮತ್ತು ಸಭಾಪತಿ ಮೊದಲಾದವರ ಗುಣಗಳ ಉಪದೇಶ ಮಾಡಿದೆ.

ಸನಾದೇವ ತವ ರಾಯೋ ಗಭಸ್ತೌ ನ ಕ್ಷೀಯಂತೇ ನೋಪ ದಸ್ಯಂತಿ ದಸ್ಮ ।
ದ್ಯುಮಾँ ಅಸಿ ಕ್ರತುಮಾँ ಇಂದ್ರ ಧೀರಃ ಶಿಕ್ಷಾ ಶಚೀವಸ್ತವ ನಃ ಶಚೀಭಿಃ ॥೧೨॥

ಪದಾರ್ಥ:- ಹೇ [**ದಸ್ಮ**] ಶತ್ರುಗಳನ್ನು ನಾಶ ಮಾಡುವ [**ಶಚೀವಃ**] ಉತ್ತಮ ವೃದ್ಧಿ ಅಥವಾ ವಾಣಿಯಿಂದ ಕೂಡಿರುವ [**ಇಂದ್ರ**] ಉತ್ತಮ ಧನವುಳ್ಳ ಸಭಾಧ್ಯಕ್ಷನೇ! ಯಾವ ನೀನು [**ದ್ಯುಮಾನ್**] ವಿದ್ಯಾದಿ ಶ್ರೇಷ್ಠಗುಣಗಳ ಪ್ರಕಾಶದಿಂದ ಕೂಡಿರುವ [**ಕ್ರತುಮಾನ್**] ಬುದ್ಧಿಯಿಂದ ಆಲೋಚಿಸಿ ಕರ್ಮಮಾಡುವ [**ಧೀರಃ**] ಧ್ಯಾನಿಯು [**ಅಸಿ**] ಆಗಿರುವೆಯೋ, ಆ [**ತವ**] ನಿನ್ನ [**ಗಭಸ್ತೌ**] ರಾಜನೀತಿಯ ಪ್ರಕಾಶದಲ್ಲಿ [**ಸನಾತ್**] ಸನಾತನದ [**ರಾಯಃ**] ಧನವು [**ನೈವ**] [**ಕ್ಷೀಯಂತೇ**] ಎಂದಿಗೂ ಕ್ಷೀಣಿಸುವುದಿಲ್ಲ. ಹಾಗೂ [**ತವ**] ನಿನ್ನ ಪ್ರಬಂಧದಲ್ಲಿ [**ನ, ಉಪದಸ್ಯಂತಿ**] ನಷ್ಟವಾಗುವುದಿಲ್ಲ, ಆದುದರಿಂದ ನೀನು ನಿನ್ನ [**ಶಚೀಭಿಃ**] ಬುದ್ಧಿ, ವಾಣಿ ಮತ್ತು ಕರ್ಮಗಳಿಂದ [**ನಃ**] ನಮಗೆ [**ಶಿಕ್ಷಾ**] ಉಪದೇಶಿಸು.

ಭಾವಾರ್ಥ:- ಯಾವ ಸನಾತನ ವೇದದ ಜ್ಞಾನದಿಂದ ಶಿಕ್ಷಣವನ್ನು ಮತ್ತು ಸಭಾಪತಿ ಮೊದಲಾದವರ ಅಧಿಕಾರವನ್ನು ಪಡೆದು ಪ್ರಜೆಗಳನ್ನು ಪಾಲಿಸುತ್ತಾನೋ, ಅವನನ್ನೇ ಧರ್ಮಾತ್ಮನೆಂದು ಮನುಷ್ಯರು ತಿಳಿಯಬೇಕು.

ಮತ್ತೆ ಸಭಾಧ್ಯಕ್ಷನ ಗುಣಗಳ ಉಪದೇಶ ಮಾಡಿದೆ.

ಸನಾಯತೇ ಗೋತಮ ಇಂದ್ರ ನವ್ಯ-ಮತಕ್ಷದ್ ಬ್ರಹ್ಮ ಹರಿಯೋಜನಾಯ ।
ಸುನೀಥಾಯ ನಃ ಶವಸಾನ ನೋಧಾಃ ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್ ॥೧೩॥

ಪದಾರ್ಥ:- ಹೇ [**ಶವಸಾನ**] ಬಲಯುಕ್ತ [**ಇಂದ್ರ**] ಉತ್ತಮ ಧನವುಳ್ಳ ಸಭಾಧ್ಯಕ್ಷನೇ! [**ಧಿಯಾವಸುಃ**] ಬುದ್ಧಿ ಮತ್ತು ಕರ್ಮದಿಂದಿರುವವನು [**ಗೋತಮಃ**] ಅತ್ಯಂತ ಸ್ತುತಿಗೆ ಯೋಗ್ಯನು ಹಾಗೂ [**ನೋಧಾಃ**] ಸ್ತುತಿ ಮಾಡುವ ನೀನು [**ಹರಿಯೋಜನಾಯ**] ಮನುಷ್ಯರಿಂದ ಸಮಾಧಾನಕ್ಕಾಗಿ [**ನವ್ಯಮ್**] ನವೀನ [**ಬ್ರಹ್ಮ**] ಬಹಳ ಧನವನ್ನು [**ಅತಕ್ಷತ್**] ನಾಶಮಾಡುತ್ತೀಯೆ. [**ನಃ**] ನಮ್ಮನ್ನು [**ಸುನೀಥಾಯ**] ಸುಖಗಳ ಪ್ರಾಪ್ತಿಗಾಗಿ [**ಪ್ರಾತಃ**]

ಪ್ರತಿದಿನ [**ಮಕ್ಷು**] ಶೀಘ್ರವಾಗಿ [**ಸನಾಯತೇ**] ಸನಾತನಕ್ಕೆ ಸಮಾನವಾಗಿ ಆಚರಣೆ ಮಾಡುತ್ತಾ ಹಾಗೂ [**ನಃ**] ನಮ್ಮ ಸುಖಗಳಿಗಾಗಿ ಶೀಘ್ರವಾಗಿ [**ಜಗಮ್ಯಾತ್**] ಪ್ರಾಪ್ತನಾಗು.

ಭಾವಾರ್ಥ:- ಸಭಾಪತಿ ಮೊದಲಾದವರು, ಮನುಷ್ಯರ ಹಿತಕ್ಕಾಗಿ ಪ್ರತಿದಿನ ಹೊಸ ಹೊಸ ಧನ ಮತ್ತು ಅನ್ನವನ್ನು ಉತ್ಪಾದಿಸಲಿ. ಹೇಗೆ ಪ್ರಾಣವಾಯುವಿನಿಂದ ಮನುಷ್ಯರಿಗೆ ಸುಖ ದೊರೆಯುವುದೋ, ಹಾಗೆಯೇ ಸಭಾಧ್ಯಕ್ಷನು ಎಲ್ಲರಿಗೂ ಸುಖವನ್ನುಂಟು ಮಾಡಲಿ.

ಈ ಸೂಕ್ತದಲ್ಲಿ ಈಶ್ವರ, ಸಭಾಧ್ಯಕ್ಷ, ದಿನ, ರಾತ್ರಿ, ವಿದ್ವಾಂಸ, ಸೂರ್ಯ ಮತ್ತು ವಾಯುವಿನ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಅರವತ್ತೆರಡನೆಯ ಸೂಕ್ತ ಸಮಾಪ್ತ

ಸೂಕ್ತ ೬೩

ಮಂತ್ರಸಂಖ್ಯೆ ೯ । ಋಷಿಃ - ನೋಧಾ ಗೌತಮಃ । ದೇವತಾ - ಇಂದ್ರಃ । ಛಂದಃ -ತ್ರಿಷ್ಟುಪ್ । ಸ್ವರಃ - ೧, ೩, ೬, ೯ ಪಂಚಮಃ, ೨, ೪ ಧೈವತಃ, ೫, ೬ ಮಧ್ಯಮಃ.

ಈಗ ೬೩ನೇ ಸೂಕ್ತದ ಮೊದಲ ಮಂತ್ರದಲ್ಲಿ ಈಶ್ವರನ ಗುಣಗಳ ಉಪದೇಶ ಮಾಡಿದೆ.

ತ್ವಂ ಮಹಾँ ಇಂದ್ರ ಯೋ ಹ ಶುಷ್ಮೈ-ರ್ದ್ಯಾವಾ ಜಜ್ಞಾನಃ ಪೃಥಿವೀ ಅಮೇ ಧಾಃ ।
ಯದ್ಧ ತೇ ವಿಶ್ವಾ ಗಿರಯಶ್ಚಿದಭ್ವಾ ಭಿಯಾ ದೃಳ್ಹಾಸಃ ಕಿರಣಾ ನೈಜನ್ ॥೧॥

ಪದಾರ್ಥ:- ಹೇ [**ಇಂದ್ರ**] ಉತ್ತಮ ಸಂಪತ್ತನ್ನು ಕೊಡುವ ಪರಮಾತ್ಮನೇ! ಯಾವ [**ತ್ವಮ್**] ನೀನು [**ಮಹಾನ್**] ಗುಣಗಳಿಂದ ಅನಂತವೂ [**ಜಜ್ಞಾನಃ**] ಪ್ರಸಿದ್ಧವೂ ಆದ [**ಶುಷ್ಮೈಃ**] ಬಲಾದಿಗಳ [**ಅಮೇ**] ಪ್ರಕಾಶದಲ್ಲಿ [**ಹ**] ನಿಶ್ಚಯವಾಗಿ [**ದ್ಯಾವಾಪೃಥಿವೀ**] ಪ್ರಕಾಶ ಮತ್ತು ಪೃಥಿವಿಯನ್ನು [**ಧಾಃ**] ಧಾರಣ ಮಾಡುತ್ತಾ [**ತೇ**] ನಿನ್ನ [**ಅಂಬಾ**] ಉತ್ಪನ್ನರಹಿತ ಸಾಮರ್ಥ್ಯದ [**ಭಿಯಾ**] [**ಹ**] ಭಯದಿಂದಲೇ [**ಯತ್**] ಯಾವ [**ವಿಶ್ವಾ**] ಎಲ್ಲ [**ಗಿರಯಃ**] ಪರ್ವತ ಅಥವಾ ಮೇಘವು [**ದೃಢಾನಃ**] ದೃಢವಾಗಿ [**ಚಿತ್**] ಮತ್ತು [**ಕಿರಣಾಃ**] ಕಾಂತಿಯು ಇದೆಯೋ ಅದು [**ನೈಜತ್**] ಎಂದಿಗೂ ಕಂಪಿಸುವುದಿಲ್ಲ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಹೇಗೆ ತಿಳಿಯಬೇಕೆಂದರೆ, ಯಾವ ಪರಮೇಶ್ವರನು ತನ್ನ ಸಾಮರ್ಥ್ಯ ಮತ್ತು ಬಲಾದಿಗಳಿಂದ ಎಲ್ಲ ಜಗತ್ತನ್ನೂ ರಚಿಸಿ ದೃಢತೆಯಿಂದ ಧಾರಣ ಮಾಡುತ್ತಾನೋ, ಅವನನ್ನೇ ಎಲ್ಲ ಕಾಲದಲ್ಲಿ ಉಪಾಸಿಸಬೇಕು. ಹಾಗೂ ಯಾವ ಸೂರ್ಯಲೋಕವು ತನ್ನ ಆಕರ್ಷಣಾದಿ ಗುಣಗಳಿಂದ ಪೃಥಿವೀ ಮೊದಲಾದ ಲೋಕಗಳ ಧಾರಣ ಮಾಡುತ್ತದೆಯೋ, ಅದನ್ನೂ ಕೂಡ ಪರಮೇಶ್ವರನು ರಚಿಸಿ ಧಾರಣ ಮಾಡಿರುವನೆಂದು ತಿಳಿಯಿರಿ.

ಈಗ ಮುಂದಿನ ಮಂತ್ರದಲ್ಲಿ ಸಭಾಪತಿ ಮೊದಲಾದರವರ ಗುಣಗಳ ಉಪದೇಶ ಮಾಡಿದೆ.

ಆ ಯದ್ಧರೀ ಇಂದ್ರ ವಿವ್ರತಾ ವೇ-ರಾ ತೇ ವಜ್ರಂ ಜರಿತಾ ಬಾಹ್ವೋರ್ಧಾತ್ ।
ಯೇನಾವಿಹರ್ಯತಕ್ರತೋ ಅಮಿತ್ರಾನ್ ಪುರ ಇಷ್ಣಾಸಿ ಪುರುಹೂತ ಪೂರ್ವೀಃ ॥೨॥

ಪದಾರ್ಥ:- ಹೇ [**ಅವಿಹರ್ಯತಕ್ರತೋ**] ದುಷ್ಟಬುದ್ಧಿ ಮತ್ತು ಪಾಪಕರ್ಮರಹಿತ [**ಪುರುಹೂತ**] ಬಹಳ ವಿದ್ವಾಂಸರಿಂದ ಸತ್ಕರಿಸಲ್ಪಡುವ ಸಭಾಧ್ಯಕ್ಷನೇ! ನೀನು [**ಯತ್**] ಯಾವ ಕಾರಣದಿಂದ [**ವಿವ್ರತಾ**] ನಾನಾ ಪ್ರಕಾರದ ನಿಯಮಗಳನ್ನುಂಟು ಮಾಡುವ [**ಹರೀ**] ಸೇನೆ ಮತ್ತು ನ್ಯಾಯ ಪ್ರಕಾಶವನ್ನು [**ಆವೇಃ**] ಉತ್ತಮವಾಗಿ ತಿಳಿಯುವೆ. [**ಯೇನ**] ಯಾವ ಶಸ್ತ್ರದಿಂದ [**ಅಮಿತ್ರಾನ್**] ಶತ್ರುಗಳನ್ನು ಕೊಲ್ಲುತ್ತಾ ಹಾಗೂ ಯಾವುದರಿಂದ ಅವರ [**ಪೂರ್ವೀಃ**] ಪೂರ್ವ ಸಂಬಂಧದ [**ಪುರಃ**] ನಗರಗಳನ್ನು [**ಇಷ್ಣಾಸಿ**] ಗೆಲ್ಲಲು ಬಯಸುತ್ತಾ ಮತ್ತು ಶತ್ರುಗಳ ಪರಾಜಯ ಮತ್ತು ತನ್ನ ವಿಜಯಕ್ಕಾಗಿ ಪ್ರತಿಕ್ಷಣವೂ ಹೋರುವನೋ, ಅದರಿಂದ [**ಜರಿತಾ**] ಎಲ್ಲ ವಿದ್ಯೆಗಳ ಸ್ತುತಿ ಮಾಡುವ ಮನುಷ್ಯನು [**ತೇ**] ತಮ್ಮ [**ಬಾಹ್ವೋಃ**] ಭುಜಬಲದ ಆಶ್ರಯದಿಂದ [**ವಜ್ರಮ್**] ಶಸ್ತ್ರವನ್ನು [**ಆಧಾತ್**] ಧಾರಣ ಮಾಡುತ್ತಾನೆ.

ಭಾವಾರ್ಥ:- ಸಭಾಪತಿ ಮೊದಲಾದವರಿಗೆ ಉಚಿತವಾದುದೇನೆಂದರೆ, ಈ ಪ್ರಕಾರ ಉತ್ತಮ ಸ್ವಭಾವ, ಗುಣ ಮತ್ತು ಕರ್ಮಗಳನ್ನು ಸ್ವೀಕರಿಸಲಿ. ಅದರಿಂದ ಎಲ್ಲ ಮನುಷ್ಯರೂ ಈ ಕರ್ಮಗಳನ್ನು ನೋಡಿ, ಶಿಷ್ಟರಾಗಿ ನಿಷ್ಕಂಟಕ ರಾಜ್ಯದ ಸುಖವನ್ನು ಸದಾ ಭೋಗಿಸಲಿ.

ಮತ್ತೆ ಆ ಸಭಾಧ್ಯಕ್ಷನು ಹೇಗಿರುತ್ತಾನೆ?

ತ್ವಂ ಸತ್ಯ ಇಂದ್ರ ಧೃಷ್ಣುರೇತಾನ್ ತ್ವಮೃಭುಕ್ಷಾ ನರ್ಯಸ್ತ್ವಂ ಷಾಟ್ ।
ತ್ವಂ ಶುಷ್ಣಂ ವೃಜನೇ ಪೃಕ್ಷ ಆಣೌ ಯೂನೇ ಕುತ್ಸಾಯ ದ್ಯುಮತೇ ಸಚಾಹನ್ ॥೩॥

ಪದಾರ್ಥ:- ಹೇ [**ಇಂದ್ರ**] ಉತ್ತಮ ಸಂಪತ್ತನ್ನು ಕೊಡುವ ಸಭಾಧ್ಯಕ್ಷನೇ! [**ತ್ವಮ್**] ನೀನು ಯಾವ ಕಾರಣದಿಂದ [**ಸತ್ಯಃ**] ಜೀವಸ್ವರೂಪದಿಂದ ಅನಾದಿಯೂ, ಯಾವ ಕಾರಣದಿಂದ [**ತ್ವಮ್**] ನೀನು [**ಧೃಷ್ಣುಃ**] ದೃಢನೂ ಹಾಗೂ ಯಾವ ಕಾರಣದಿಂದ [**ತ್ವಮ್**] ನೀನು [**ಋಭುಕ್ಷಾಃ**] ಗುಣಗಳಿಂದ ಹಿರಿಯನೂ, [**ನರ್ಯಃ**] ಮನುಷ್ಯರ ಮಧ್ಯೆ ಚತುರನೂ ಮತ್ತು [**ಷಾಟ್**] ಸಹನಶೀಲನೂ ಆಗಿರುವೆ, ಅದರಿಂದ [**ವೃಜನೇ**] ಯಾವುದರಲ್ಲಿ ಶತ್ರುಗಳು ದೊರೆಯುವರೋ, [**ಪೃಕ್ಷೇ**] ಒಗ್ಗೂಡುವರೋ, ಯಾವುದರಿಂದ ಆ [**ಆಣೌ**] ಸಂಗ್ರಾಮದಲ್ಲಿ [**ಸಚಾ**] ಶಿಷ್ಟರ ಬಗ್ಗೆ [**ಕುತ್ಸಾಯ**] ಶಸ್ತ್ರಗಳನ್ನು ಧಾರಣ ಮಾಡಿದ [**ದ್ಯುಮತೇ**] ಉತ್ತಮ ಪ್ರಕಾಶಯುಕ್ತ [**ಯೂನೇ**] ಶರೀರ ಮತ್ತು ಆತ್ಮಬಲವನ್ನು ಪಡೆದ ಮನುಷ್ಯನಿಗಾಗಿ [**ಶುಷ್ಣಮ್**] ಪೂರ್ಣಬಲವನ್ನು ಕೊಡುತ್ತೀಯೆ. ಯಾವ ಕಾರಣದಿಂದ ನೀನು ಶತ್ರುಗಳನ್ನು [**ಅಹನ್**] ಕೊಲ್ಲುತ್ತಾ ಹಾಗೂ [**ಏತಾನ್**] ಈ ಧರ್ಮಾತ್ಮರಾದ ಶ್ರೇಷ್ಠರ ಪಾಲನೆ ಮಾಡುತ್ತೀಯೋ, ಆದುದರಿಂದ ಪೂಜಿಸಲು ಯೋಗ್ಯನಾಗು.

ಭಾವಾರ್ಥ:- ಸಭೆ ಮತ್ತು ಸಭಾಪತಿಯ ಹೊರತು ಶತ್ರುಗಳ ಪರಾಜಯ ಮತ್ತು ರಾಜ್ಯದ ಪಾಲನೆಯು ಯಾವನಿಂದಲೂ ಸಾಧ್ಯವಾಗುವುದಿಲ್ಲ. ಆದುದರಿಂದ ಶ್ರೇಷ್ಠಗುಣವಂತರ ಸಭೆ ಮತ್ತು ಸಭಾಪತಿಯಿಂದ ಈ ಎಲ್ಲ ಕಾರ್ಯಗಳನ್ನು ಸಿದ್ಧಪಡಿಸುವುದು ಮನುಷ್ಯರ ಮುಖ್ಯ ಕೆಲಸವಾಗಿದೆ.

ಮತ್ತೆ ಆ ಸಭಾಧ್ಯಕ್ಷನು ಹೇಗಿರುತ್ತಾನೆ?

ತ್ವಂ ಹ ತ್ಯದಿಂದ್ರ ಚೋದೀಃ ಸಖಾ ವೃತ್ರಂ ಯದ್ ವಜ್ರಿನ್ ವೃಷಕರ್ಮನ್ನುಭ್ನಾಃ।
ಯದ್ಧ ಶೂರ ವೃಷಮಣಃ ಪರಾಚೈರ್ವಿ ದಸ್ಯೂಂರ್ಯೋನಾವಕೃತೋ ವೃಥಾಷಾಟ್ ॥೪॥

ಪದಾರ್ಥ:- ಹೇ [**ವಜ್ರಿನ್**] ಉತ್ತಮ ಮಂತ್ರಗಳ ಧಾರಣಮಾಡುವ ಹಾಗೂ [**ಇಂದ್ರ**] ಉತ್ತಮಗುಣಗಳನ್ನು ತಿಳಿಯುವ ಸಭಾಧ್ಯಕ್ಷನೇ! ಯಾವ ಕಾರಣದಿಂದ [**ತ್ವಮ್**] ನೀನು [**ಹ**] ನಿಶ್ಚಯವಾಗಿ [**ತ್ಯತ್**] ಆ [**ವೃತ್ರಮ್**] ಶತ್ರುವನ್ನು [**ಪರಾಚೈಃ**] ದೂರ [**ಚೋದೀಃ**] ಮಾಡುತ್ತೀಯೋ, ಅದೇ ಕಾರಣದಿಂದ ಶ್ರೇಷ್ಠ ಪುರುಷರ ಧಾರಣ ಮತ್ತು ಪಾಲನೆ ಮಾಡಲು ಸಮರ್ಥನಾಗು. ಹೇ [**ವೃಷಕರ್ಮನ್**] ಶ್ರೇಷ್ಠರಂತೆ ಉತ್ತಮ ಕಾರ್ಯಗಳನ್ನು ಮಾಡುವ ಸಭಾಧ್ಯಕ್ಷನೇ! [**ಯತ್**] ಯಾವ ಕಾರಣದಿಂದ ನೀನು [**ಸಖಾ**] ಎಲ್ಲರ ಮಿತ್ರನೂ ಆಗಿರುವೆ. ಅದರಿಂದ ಮಿತ್ರರ ರಕ್ಷಣೆ ಮಾಡುವೆ. ಹೇ [**ಶೂರ**] ನಿರ್ಭಯ ಸೇನಾಧ್ಯಕ್ಷನೇ! [**ಯತ್**] ಯಾವ ನೀನು [**ಹ**] ನಿಶ್ಚಯವಾಗಿ [**ದಸ್ಯೂನ್**] ಇತರರ ಪದಾರ್ಥಗಳನ್ನು ಅಪಹರಿಸುವ ದುಷ್ಟರನ್ನು [**ಅಕೃತಃ**] [**ವಿ**] ದೂರದಿಂದ ವಿಶೇಷವಾಗಿ ಛೇದನ ಮಾಡುತ್ತೀಯೋ, ಅದರಿಂದಲೇ ಪ್ರಜೆಗಳನ್ನು ರಕ್ಷಿಸಲು ಯೋಗ್ಯನಾಗುವೆ. ಹೇ [**ವೃಷಮಣಃ**] ಶೂರ ವೀರರಲ್ಲಿ ವಿಚಾರಶೀಲನಾದ ಸಭಾಧ್ಯಕ್ಷನೇ! ಯಾವ ಕಾರಣದಿಂದ ನೀನು ಸುಖಗಳನ್ನು [**ಉಭ್ನಾಃ**] ಪೂರ್ಣ ಮಾಡುತ್ತೀಯೋ, ಅದರಿಂದ ಸತ್ಕಾರಕ್ಕೆ ಯೋಗ್ಯನಾಗುವೆ. ಅದರಿಂದ [**ಯೋನೌ**] ಮನೆಗಳಲ್ಲಿರುವ ಎಲ್ಲ ಮನುಷ್ಯರ ಸುಖಗಳನ್ನು ಪೂರ್ಣಗೊಳಿಸುವೆ.

ಭಾವಾರ್ಥ:- ಹೇಗೆ ಸೂರ್ಯನು ತನ್ನ ಪ್ರಕಾಶದಿಂದ ಎಲ್ಲರನ್ನು ಆನಂದಪಡಿಸಿ ಮೇಘವನ್ನು ಉತ್ಪನ್ನ ಮಾಡಿ ವರ್ಷಿಸುತ್ತಾನೋ, ಮತ್ತು ಅಂಧಕಾರವನ್ನು ನಿವಾರಿಸಿ ತನ್ನ ಪ್ರಕಾಶವನ್ನು ಹರಡುವನೋ ಹಾಗೆಯೇ ಸಭಾಧ್ಯಕ್ಷನು ವಿದ್ಯಾದಿ ಉತ್ತಮಗುಣಗಳಿಂದ ಎಲ್ಲರನ್ನೂ ಸುಖಪಡಿಸಿ, ಶರೀರ ಮತ್ತು ಆತ್ಮ ಬಲವನ್ನು ಸಿದ್ಧಪಡಿಸಿ, ಧರ್ಮ, ಶಿಕ್ಷಣ, ಅಭಯ ಮೊದಲಾದವುಗಳನ್ನು ವರ್ಷಿಸಿ ಅಧರ್ಮ ರೂಪೀ ಅಂಧಕಾರ ಮತ್ತು ಶತ್ರುಗಳನ್ನು ನಿವಾರಿಸಿ ರಾಜ್ಯದಲ್ಲಿ ಪ್ರಕಾಶಿತನಾಗಲಿ.

ಮತ್ತೆ ಆ ಸಭಾಧ್ಯಕ್ಷನು ಹೇಗಿರುತ್ತಾನೆ?

ತ್ವಂ ಹ ತ್ಯದಿಂದ್ರಾರಿಷಣ್ಯನ್ ದೃಳ್ಹಸ್ಯ ಚಿನ್ಮರ್ತಾನಾಮಜುಷ್ಟೌ ।
ವ್ಯ೧ಸ್ಮದಾ ಕಾಷ್ಠಾ ಅರ್ವತೇ ವರ್ಘನೇವ ವಜ್ರಿಞ್ಛ್ನಥಿಹ್ಯಮಿತ್ರಾನ್ ॥೫॥

ಪದಾರ್ಥ:- ಹೇ [**ಅರಿಷಣ್ಯನ್**] ತನ್ನ ಶರೀರದಿಂದ ಹಿಂಸೆ, ಅಧರ್ಮವನ್ನು ಬಯಸದವನೂ, [**ವಜ್ರಿನ್**] ಉತ್ತಮ ಆಯುಧಗಳಿಂದ ಕೂಡಿರುವವನೂ ಆದ [**ಇಂದ್ರ**] ಸಭಾಪತಿಯೇ! [**ತ್ವಮ್**] [**ಹ**] ನೀನು ಪ್ರಸಿದ್ಧನೂ [**ಅಸ್ಮತ್**] ನಮಗಿಂತಲೂ [**ಅರ್ವತೇ**] ಕುದುರೆ ಮೊದಲಾದ ಧನದಿಂದ ಕೂಡಿರುವ ಸೇನೆಗಾಗಿ [**ವ್ಯಾವಃ**] ಅನೇಕ ಪ್ರಕಾರ ಸ್ವೀಕಾರ ಮಾಡುವ [**ತ್ಯತ್**] ಆ [**ದೃಢಸ್ಯ**] ಸ್ಥಿರ ರಾಜ್ಯದ [**ಚಿತ್**] ಮತ್ತು [**ಮರ್ತಾನಾಮ್**] ಪ್ರಜೆಗಳ ಶತ್ರುಗಳನ್ನು [**ಅಜುಷ್ಟೌ**] ಅಪ್ರೀತಿ ಮಾಡುವುದರಲ್ಲಿ [**ಘನೇವ**] ಹೇಗೆ ಸೂರ್ಯನು ಮೇಘಗಳನ್ನು ಕತ್ತರಿಸುವನೋ, ಹಾಗೆ [**ಅಮಿತ್ರಾನ್**] ಧರ್ಮವಿರೋಧಿ ಶತ್ರುಗಳನ್ನು [**ಕಾಷ್ಠಾಃ**] ದಿಕ್ಕು ದಿಕ್ಕುಗಳಲ್ಲಿ [**ಶ್ನಥಿಹಿ**] ಕೊಂದು ಹಾಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಸಭೆ, ಸಭಾಪತಿ ಮೊದಲಾದವರಿಗೆ ಉಚಿತವಾದುದೇನೆಂದರೆ, ರಾಜ್ಯ ಹಾಗೂ ಸೇನೆಯಲ್ಲಿ ಪ್ರೀತಿಯುಂಟುಮಾಡಿ ಮತ್ತು ಶತ್ರುಗಳನ್ನು ದ್ವೇಷಿಸಿ ಹೇಗೆ ಸೂರ್ಯನು ಮೇಘಗಳನ್ನು ನಿತ್ಯವೂ ಛೇದಿಸುತ್ತಾನೋ ಹಾಗೆ ದುಷ್ಟಶತ್ರುಗಳನ್ನು ಯಾವಾಗಲೂ ಛೇದನ ಮಾಡಲಿ.

ಮತ್ತೆ ಮನುಷ್ಯನು ಈಶ್ವರ ಮತ್ತು ಸಭಾಪತಿ ಮೊದಲಾದವರ ಸಹಾಯದ ಇಚ್ಛೆಯನ್ನು ಎಲ್ಲೆಲ್ಲಿ ಮಾಡಬೇಕು?

ತ್ವಾಂ ಹ ತ್ಯದಿಂದ್ರಾರ್ಣಸಾತೌ ಸ್ವರ್ಮೀಳ್ಹೇ ನರ ಆಜಾ ಹವಂತೇ ।
ತವ ಸ್ವಧಾವ ಇಯಾಮಾ ಸಮರ್ಯ ಊತಿರ್ವಾಜೇಷ್ವತಸಾಯ್ಯಾ ಭೂತ್ ॥೬॥

ಪದಾರ್ಥ:- ಹೇ **[ಸ್ವಧಾವಃ]** ಉತ್ತಮ ಅನ್ನ ಮತ್ತು **[ಇಂದ್ರ]** ಶ್ರೇಷ್ಠ ಐಶ್ವರ್ಯವನ್ನು ಪ್ರಾಪ್ತಿಪಡಿಸುವ ಜಗದೀಶ್ವರನೇ! ಅಥವಾ ಸಭಾಧ್ಯಕ್ಷನೇ! **[ನರಃ]** ರಾಜನೀತಿಯನ್ನು ತಿಳಿದ ಮನುಷ್ಯನು **[ತ್ವತ್]** ಆ **[ಅರ್ಣಸಾತೌ]** ವಿಜಯವನ್ನುಂಟು ಮಾಡುವ ವೀರ ಯೋಧನು, ಮನುಷ್ಯರನ್ನು ಸೇವಿಸಲಿ, **[ಸ್ವರ್ಮೀಢೇ]** ಸುಖವನ್ನು ಸಿಂಪಡಿಸುವ **[ಆಜೌ]** ಸಂಗ್ರಾಮದಲ್ಲಿ **[ತ್ವಾಮ್]** ನಿನ್ನನ್ನು **[ಹ]** ನಿಶ್ಚಯವಾಗಿ **[ಆಹವಂತೇ]** ಕರೆಯುತ್ತೇನೆ. ಯಾವ ಕಾರಣದಿಂದ **[ತವ]** ನಿನ್ನ **[ಇಯಮ್]** ಈ **[ಸಮರ್ಯೇ]** ಸಂಗ್ರಾಮ ಅಥವಾ **[ವಾಜೇಷು]** ವಿಜ್ಞಾನ, ಅನ್ನ ಮತ್ತು ಸೇನಾದಿಗಳಲ್ಲಿ **[ಅತಸಾಯ್ಯಾ]** ನಿರಂತರ ಸುಖವನ್ನುಂಟು ಮಾಡುವ **[ಊತಿಃ]** ರಕ್ಷಣಾದಿಕ್ರಿಯೆಗಳಿವೆಯೋ, ಅವು ನಮಗೆ **[ಭೂತ್]** ಪ್ರಾಪ್ತವಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಎಲ್ಲ ಧರ್ಮಸಂಬಂಧೀ ಕಾರ್ಯಗಳಲ್ಲಿ ಮನುಷ್ಯರು ಈಶ್ವರ ಅಥವಾ ಸಭಾಧ್ಯಕ್ಷನ ಸಹಾಯ ಪಡೆದು ಕಾರ್ಯಗಳನ್ನು ಸಂಪೂರ್ಣ ಪಡಿಸಬೇಕು.

ಮತ್ತೆ ಮುಂದಿನ ಮಂತ್ರದಲ್ಲಿ ಸಭಾಪತಿ ಮೊದಲಾದವರ ಗುಣಗಳ ಉಪದೇಶ ಮಾಡಿದೆ

ತ್ವಂ ಹ ತ್ಯದಿಂದ್ರ ಸಪ್ತ ಯುಧ್ಯನ್ ಪುರೋ ವಜ್ರಿನ್ ಪುರುಕುತ್ಸಾಯ ದರ್ದಃ ।
ಬರ್ಹಿರ್ನ ಯತ್ ಸುದಾಸೇ ವೃಥಾ ವ-ರ್ಗಂಹೋ ರಾಜನ್ ವರಿವಃ ಪೂರವೇ ಕಃ ॥೭॥

ಪದಾರ್ಥ:- ಹೇ **[ವಜ್ರಿನ್]** ಉತ್ತಮ ಶಾಸ್ತ್ರಗಳಿಂದ ಕೂಡಿದ **[ರಾಜನ್]** ಪ್ರಕಾಶ ಪಡಿಸುವ ಹಾಗೂ **[ಇಂದ್ರ]** ವಿಜಯವುಂಟು ಮಾಡುವ ಸಭೆಯ ಅಧಿಪತಿಯೇ! ತಮ್ಮ **[ಸಪ್ತ]** ಸಭೆ, ಸಭಾಸದರು, ಸಭಾಪತಿ, ಸೇನೆ, ಸೇನಾಪತಿ, ಭೃತ್ಯರು, ಪ್ರಜೆಗಳು ಎಂಬ ಏಳು ಬಗೆ ಇದ್ದಾರೋ, ಅವರೊಡನೆ ಪ್ರೇಮದಿಂದ ವರ್ತಿಸಿ, ಶತ್ರುಗಳೊಡನೆ **[ಯುಧ್ಯನ್]** ಯುದ್ಧ ಮಾಡುತ್ತಾ, ನೀನು ಶತ್ರುಗಳ **[ಪುರಃ]** ನಗರಗಳನ್ನು **[ದರ್ದಃ]** ನಷ್ಟಗೊಳಿಸುವೆಯೋ, ಆ ನೀನು **[ಅಂಹೋಃ]** ಪಡೆಯಲು ಯೋಗ್ಯವಾದ ರಾಜ್ಯದ **[ಪುರುಕುತ್ಸಾಯ]** ಬಹಳ ಜನರು ಗ್ರಹಿಸಲು ಯೋಗ್ಯವಾದ **[ಪೂರವೇ]** ಪೂರ್ಣ ಸುಖಕ್ಕಾಗಿ **[ಯತ್]** ಯಾವ **[ವರಿವಃ]** ಸೇವನೆಗೆ ಯೋಗ್ಯವಾದ ಪದಾರ್ಥಗಳನ್ನು **[ಸುದಾಸೇ]** ಉತ್ತಮ ದಾನ ಮಾಡುವ ಜನರಿಂದ ಕೂಡಿದ ದೇಶದಲ್ಲಿ **[ಬರ್ಹಿಃ]** ಅಂತರಿಕ್ಷದ **[ನ]** ಸಮಾನ **[ಕಃ]** ಮಾಡುತ್ತೀಯೆ. **[ಯತ್]** ಯಾವ **[ವೃಥಾ]** ವ್ಯರ್ಥ ಕೆಲಸಗಳನ್ನು ಮಾಡುವ ಜನರಿರುವರೋ, **[ತ್ವತ್]** ಅವರನ್ನು **[ವರ್ಕ್]** ವರ್ಜಿತ ಮಾಡು, ಈ ಕಾರಣದಿಂದ ನಾವು ಎಲ್ಲರನ್ನೂ ಸತ್ಕರಿಸಲು ಯೋಗ್ಯರಾಗುವೆವು.

ಭಾವಾರ್ಥ:- ಹೇಗೆ ಸೂರ್ಯನು ಎಲ್ಲ ಜಗತ್ತಿನ ಹಿತಕ್ಕಾಗಿ ಮೇಘವನ್ನು ವರ್ಷಿಸುವನೋ, ಹಾಗೆಯೇ ಎಲ್ಲರ ಸ್ವಾಮಿಯಾದ ಸಭಾಪತಿಯು ಸಭೆಗಳ ಹಿತವನ್ನು ಸಿದ್ಧಪಡಿಸಬೇಕು.

ಈಗ ಸಭಾಧ್ಯಕ್ಷಾದಿಗಳು ಮತ್ತು ವಿದ್ಯುದಗ್ನಿಯ ಗುಣಗಳ ಉಪದೇಶ ಮಾಡಿದೆ.

ತ್ವಂ ತ್ಯಾಂ ನ ಇಂದ್ರ ದೇವ ಚಿತ್ರಾ ಮಿಷಮಾಪೋ ನ ಪೀಪಯಃ ಪರಿಜ್ಮನ್ ।
ಯಯಾ ಶೂರ ಪ್ರತ್ಯಸ್ಮಭ್ಯಂ ಯಂಸಿ ತ್ಮನಮೂರ್ಜಂ ನ ವಿಶ್ವಧ ಕ್ಷರಧ್ಯೈ ॥೮॥

ಪದಾರ್ಥ:- ಹೇ ವಿದ್ಯುತ್ತಿನಂತಿರುವ **[ಪರಿಜ್ಮನ್]** ಎಲ್ಲ ಕಡೆಗಳಿಂದ ದುಷ್ಟರನ್ನು ನಷ್ಟಪಡಿಸುವ **[ವಿಶ್ವಧ]** ವಿಶ್ವವನ್ನು ಧಾರಣ ಮಾಡುವ **[ಶೂರ]** ನಿರ್ಭಯ **[ದೇವ]** ವಿದ್ಯೆ ಮತ್ತು ಶಿಕ್ಷಣವನ್ನು ಪ್ರಕಾಶಪಡಿಸುವ ಮತ್ತು

[ಇಂದ್ರ] ಸುಖಗಳನ್ನು ಕೊಡುವ ಸಭಾಧ್ಯಕ್ಷನೇ! ಹೇಗೆ **[ತ್ವಮ್]** ನೀನು **[ಯಯಾ]** ಯಾವುದರಿಂದ **[ನಃ]** ನಮ್ಮ **[ತ್ಮನಮ್]** ಆತ್ಮವನ್ನು **[ಕ್ಷರಧ್ಯೈ]** ಜಲಾಯಮಾನವಾಗಲು **[ಊರ್ಜಮ್]** ಅನ್ನ ಅಥವಾ ಪರಾಕ್ರಮದ **[ನ]** ಸಮಾನವಾಗಿ **[ಯಂಸಿ]** ಕೆಟ್ಟಕೆಲಸಗಳನ್ನು ತಡೆಯುತ್ತೀಯೋ **[ತ್ಯಮ್]** ಆ **[ಚಿತ್ರಾಮ್]** ಅದ್ಭುತ ಸುಖಗಳನ್ನು ಕೊಡುವ **[ಇಷಮ್]** ಇಚ್ಛೆ ಅಥವಾ ಅನ್ನವನ್ನು **[ಅಸ್ಮಭ್ಯಮ್]** ನಮಗೆ **[ಆಪೋನ]** ಜಲಗಳಂತೆ **[ಪ್ರತಿಪೀಪಯಃ]** ಮತ್ತೆ ಮತ್ತೆ ಪಾನ ಮಾಡಿಸುವೆ, ಹಾಗೆಯೇ ನಾವು ಕೂಡ ನಿನ್ನನ್ನು ಉತ್ತಮರೀತಿಯಿಂದ ಪ್ರಸನ್ನ ಪಡಿಸುವಂತಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಅನ್ನವು ಹಸಿವನ್ನು ಮತ್ತು ನೀರು ದಾಹವನ್ನು ನಿವಾರಿಸಿ ಎಲ್ಲ ಪ್ರಾಣಿಗಳನ್ನೂ ಸುಖಪಡಿಸುತ್ತದೆಯೋ, ಹಾಗೆ ಸಭಾಪತಿ ಮೊದಲಾದವರು ಎಲ್ಲರನ್ನೂ ಸುಖಪಡಿಸಬೇಕು.

ಮತ್ತೆ ಆ ಸಭಾಧ್ಯಕ್ಷನು ಹೇಗಿರುತ್ತಾನೆ?

ಅಕಾರಿ ತ ಇಂದ್ರ ಗೋತಮೇಭಿ-ರ್ಬ್ರಹ್ಮಾಣ್ಯೋಕ್ತಾ ನಮಸಾ ಹರಿಭ್ಯಾಮ್ ।
ಸುಪೇಶಸಂ ವಾಜಮಾ ಭರಾ ನಃ ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್ ॥೯॥

ಪದಾರ್ಥ:- ಹೇ **[ಇಂದ್ರ]** ಸಭೆ ಮೊದಲಾದುವುಗಳ ಪತಿಯೇ! **[ತೇ]** ನಿನ್ನ **[ಗೋತಮೇಭಿಃ]** ವಿದ್ಯೆಯಿಂದ ಉತ್ತಮ ಶಿಕ್ಷಣವನ್ನು ಪಡೆದ ಶಿಕ್ಷಿತ ಪುರುಷರಿಂದ **[ನಮಸಾ]** ಅನ್ನ ಮತ್ತು ಧನ **[ಹರಿಭ್ಯಾಮ್]** ಬಲ ಮತ್ತು ಪರಾಕ್ರಮದಿಂದ **[ಓಕ್ತಾ]** ಉತ್ತಮವಾಗಿ ಪ್ರಶಂಸಿದ **[ಬ್ರಹ್ಮಾಣಿ]** ದೊಡ್ಡ ದೊಡ್ಡ ಅನ್ನದ ರಾಶಿ ಮತ್ತು ಧನವನ್ನು **[ಅಕಾರಿ]** ಮಾಡಿಸುವೆ, ಅವರೊಡನೆ **[ನಃ]** ನಮ್ಮನ್ನು ಅವರಂತೆ **[ಧಿಯಾವಸುಃ]** ಕರ್ಮ ಮತ್ತು ಬುದ್ಧಿಯಿಂದ ಸುಖಗಳನ್ನು ಸ್ಥಾಪಿಸುವ ವಿದ್ವಾಂಸರು **[ಸುಪೇಶಸಮ್]** ಉತ್ತಮರೂಪಯುಕ್ತ **[ವಾಜಮ್]** ವಿಜ್ಞಾನ ಸಮೂಹವನ್ನು **[ಪ್ರಾತಃ]** ಪ್ರತಿದಿನ **[ಜಗಮ್ಯಾತ್]** ಮತ್ತೆ ಮತ್ತೆ ಪಡೆದು ಧಾರಣ ಮಾಡೋಣ, ಹಾಗೆ ನೀನು ಪೂರ್ವೋಕ್ತ ಎಲ್ಲವನ್ನೂ **[ಮಕ್ಷು]** ಶೀಘ್ರವಾಗಿ **[ಅಭರ]** ಎಲ್ಲ ಕಡೆಗಳಿಂದ ಧಾರಣ ಮಾಡಿಸು.

ಭಾವಾರ್ಥ:- ಹೇಗೆ ವಿದ್ಯುತ್ತು, ಸೂರ್ಯ ಮೊದಲಾದ ರೂಪಗಳಿಂದ ಎಲ್ಲ ಜಗತ್ತನ್ನೂ ಆನಂದಗಳಿಂದ ಪುಷ್ಟಗೊಳಿಸುತ್ತದೆಯೋ, ಹಾಗೆ ಸಭಾಧ್ಯಕ್ಷ ಮೊದಲಾದವರು ಕೂಡ ಉತ್ತಮ ಧನ ಮತ್ತು ಶ್ರೇಷ್ಠ ಗುಣಗಳಿಂದ ಪ್ರಜೆಗಳನ್ನು ಪುಷ್ಟಗೊಳಿಸಬೇಕು.

ಈ ಸೂಕ್ತದಲ್ಲಿ ಈಶ್ವರ-ಸಭಾಧ್ಯಕ್ಷ ಮತ್ತು ಅಗ್ನಿಯ ಗುಣಗಳ ವರ್ಣನೆ ಮಾಡಿರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯುತ್ತದೆ.

ಅವರತ್ತಮೂರನೆಯ ಸೂಕ್ತ ಸಮಾಪ್ತ

ಸೂಕ್ತ ೬೪

ಮಂತ್ರಸಂಖ್ಯೆ ೧೫ । ಋಷಿಃ- ನೋಧಾ ಗೌತಮಃ । ದೇವತಾ - ಮರುತಃ । ಛಂದಃ -ಜಗತೀ, ೧೫ ತ್ರಿಷ್ಟುಪ್ ।
ಸ್ವರಃ - ನಿಷಾದಃ, ೧೫ ಧೈವತಃ.

ಈಗ ೬೪ನೇ ಸೂಕ್ತದ ಮೊದಲ ಮಂತ್ರದಲ್ಲಿ ವಾಯುವಿನ ಗುಣಗಳ ದೃಷ್ಟಾಂತದಿಂದ ವಿದ್ವಾಂಸನ ಗುಣಗಳ ಉಪದೇಶ ಮಾಡಿದೆ.

ವೃಷ್ಣೇ ಶರ್ಧಾಯ ಸುಮಖಾಯ ವೇಧಸೇ ನೋಧಃ ಸುವೃಕ್ತಿಂ ಪ್ರ ಭರಾ ಮರುದ್ಭ್ಯಃ ।
ಅಪೋ ನ ಧೀರೋ ಮನಸಾ ಸುಹಸ್ತ್ಯೋ ಗಿರಃ ಸಮಂಜೇ ವಿದಥೇಷ್ವಾಭುವಃ ॥೧॥

ಪದಾರ್ಥ:- ಹೇ **[ನೋಧಃ]** ಸ್ತುತಿ ಮಾಡುವ ಮನುಷ್ಯನೇ! **[ಆಭುವಃ]** ಉತ್ತಮವಾಗಿ ಉತ್ಪನ್ನವಾಗುವ **[ಅಪಃ]** ಕರ್ಮ ಅಥವಾ ಪ್ರಾಣಗಳಂತೆ **[ಧೀರಃ]** ಸಂಯಮದಿಂದಿರುವ ವಿದ್ವಾಂಸನು **[ಸುಹಸ್ತ್ಯಃ]** ಉತ್ತಮ ಕರಕುಶಲನಾದ ನಾನು **[ಮನಸಾ]** ವಿಜ್ಞಾನ ಮತ್ತು **[ಮರುದ್ಭ್ಯಃ]** ಪವನಗಳ ಹತ್ತಿರದಲ್ಲಿ **[ವಿದಥೇಷು]** ಯುದ್ಧಾದಿ ಚೇಷ್ಟಾಮಯ ಯಜ್ಞಗಳಲ್ಲಿ **[ಗಿರಃ]** ವಾಣಿಯು **[ಸುವೃಕ್ತಿಮ್]** ಉತ್ತಮವಾಗಿ ದುಷ್ಟರನ್ನು ತಡೆಯುವ ಕ್ರಿಯೆಗಳನ್ನು **[ಸಮಂಜೇ]** ತಮ್ಮ ಇಚ್ಛೆಯಿಂದ ಗ್ರಹಣ ಮಾಡುವವನು. ಹಾಗೆಯೇ ನೀನು **[ಪ್ರಭರ]** ಧಾರಣ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಎಷ್ಟು ಪ್ರಯತ್ನ, ಭಾವನೆ, ಬಲ, ವಿಜ್ಞಾನ, ಪುರುಷಾರ್ಥಧಾರಣ, ಬಿಡುವಿಕೆ, ಹೇಳುವಿಕೆ, ಕೇಳುವಿಕೆ, ವೃದ್ಧಿ, ನಷ್ಟ, ಹಸಿವು, ಬಾಯಾರಿಕೆ ಮೊದಲಾದವುಗಳಿವೆಯೋ, ಅವೆಲ್ಲವೂ ವಾಯುವಿನ ನಿಮಿತ್ತದಿಂದಲೇ ಆಗುತ್ತವೆ. ಯಾವ ಪ್ರಕಾರ ಈ ವಿದ್ಯೆಯನ್ನು ನಾನು ತಿಳಿದಿರುವೆನೋ ಹಾಗೆ ನೀವು ಕೂಡ ಗ್ರಹಿಸಿರಿ, ಹಾಗೆ ಎಲ್ಲರಿಗೂ ಉಪದೇಶಿಸಿರಿ.

ಮತ್ತೆ ಅದೇ ವಿಷಯ

ತೇ ಜಜ್ಞಿರೇ ದಿವ ಋಷ್ವಾಸ ಉಕ್ಷಣೋ ರುದ್ರಸ್ಯ ಮರ್ಯಾ ಅಸುರಾ ಅರೇಪಸಃ ।
ಪಾವಕಾಸಃ ಶುಚಯಃ ಸೂರ್ಯಾ ಇವ ಸತ್ವಾನೋ ನ ದ್ರಪ್ಸಿನೋ ಘೋರವರ್ಪಸಃ ॥೨॥

ಪದಾರ್ಥ:- ಹೇ ಮನುಷ್ಯರೇ! ನಿಮಗೆ ಉಚಿತವಾಗಿರುವುದೇನೆಂದರೆ, **[ರುದ್ರಸ್ಯ]** ಜೀವನ ಅಥವಾ ಪ್ರಾಣಕ್ಕೆ ಸಂಬಂಧಿಸಿದ ವಾಯುವು **[ದಿವಃ]** ಪ್ರಕಾಶದಿಂದ **[ಜಜ್ಞಿರೇ]** ಉತ್ಪನ್ನವಾಗುವುದೋ, **[ಸೂರ್ಯ ಇವ]** ಸೂರ್ಯನ ಕಿರಣಗಳಂತೆ **[ಋಷ್ವಾಸಃ]** ಜ್ಞಾನಕ್ಕೆ ಹೇತುವು **[ಉಕ್ಷಣಃ]** ಸೇಚನೆ ಮತ್ತು **[ಪಾವಕಾಸಃ]** ಪವಿತ್ರ ಮಾಡುವ **[ಶುಚಯಃ]** ಶುದ್ಧವೂ **[ಸತ್ವಾನಃ]** ಬಲ ಪರಾಕ್ರಮವುಳ್ಳ ಪ್ರಾಣಿಗಳ **[ನ]** ಸಮಾನ **[ಮರ್ಯಾಃ]** ಮರಣ ಧರ್ಮಯುಕ್ತವೂ **[ಅಸುರಾಃ]** ಪ್ರಕಾಶರಹಿತ **[ಅರೇಪಸಃ]** ಪಾಪಗಳಿಂದ ಬೇರೆಯಾಗಿ **[ದ್ರಪ್ಸಿನಃ]** ನಾನಾ ಪ್ರಕಾರದ ಮೋಹಗಳಿಂದ ಕೂಡಿದ **[ಘೋರವರ್ಪಸಃ]** ಭಯಂಕರ ವಾಯುವಿನಿಂದಾಗಿದೆ. **[ತೇ]** ಅವುಗಳ ಸಂಗದಿಂದ ವಿದ್ಯಾದಿ ಉತ್ತಮಗುಣಗಳ ಗ್ರಹಣ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಎರಡು ಉಪಮಾಲಂಕಾರಗಳಿವೆ. ಹೇಗೆ ಈಶ್ವರನ ಸೃಷ್ಟಿಯಲ್ಲಿ ಸಿಂಹ, ಆನೆ ಮತ್ತು ಮನುಷ್ಯ ಮೊದಲಾದ ಪ್ರಾಣಿಗಳು ಬಲವಾಗಿವೆಯೋ, ಹಾಗೆಯೇ ವಾಯುವು ಕೂಡ ಇದೆ. ಹೇಗೆ ಸೂರ್ಯನ ಕಿರಣಗಳು ಪವಿತ್ರ ಮಾಡುವವೋ ಹಾಗೆಯೇ ವಾಯುವು ಕೂಡ. ಇವೆರಡರ ಹೊರತು ರೋಗ, ರೋಗದ ನಾಶ, ಮರಣ ಮತ್ತು ಜನ್ಮ ಮೊದಲಾದ ವ್ಯವಹಾರಗಳು ನಡೆಯಲಾರವು. ಆದುದರಿಂದ ಮನುಷ್ಯರು ಇವುಗಳ ಗುಣಗಳನ್ನು ತಿಳಿದು ಎಲ್ಲ ಕಾರ್ಯಗಳಲ್ಲಿ ಯಥಾ ರೀತಿ ಸಂಪ್ರಯೋಗ ಮಾಡಬೇಕು.

ಮತ್ತೆ ಅದೇ ವಿಷಯ

ಯುವಾನೋ ರುದ್ರಾ ಅಜರಾ ಅಭೋಗ್ಘನೋ ವವಕ್ಷುರಧ್ರಿಗಾವಃ ಪರ್ವತಾ ಇವ ।
ದೃಳ್ಹಾ ಚಿದ್ ವಿಶ್ವಾ ಭುವನಾನಿ ಪಾರ್ಥಿವಾ ಪ್ರ ಚ್ಯಾವಯಂತಿ ದಿವ್ಯಾನಿ ಮಜ್ಮನಾ ॥೩॥

ಪದಾರ್ಥ:- ಹೇ ಮನುಷ್ಯರೇ! ನೀವು ಈ **[ಪರ್ವತಾ ಇವ]** ಪರ್ವತ ಅಥವಾ ಮೇಘದಂತೆ ಧಾರಣ ಮಾಡುವ **[ಯುವಾನಃ]** ಪದಾರ್ಥಗಳನ್ನು ಬೆರೆಸುವ ಅಥವಾ ಬೇರ್ಪಡಿಸುವುದರಲ್ಲಿ ಅತಿ ಬಲವಂತವೂ **[ಅಭೋಗ್ಘನಃ]** ಭೋಜನ ಮಾಡುವ ಹಾಗೂ ಸಾಯುವುದರಿಂದ ಬೇರೆ **[ಅಧ್ರಿಗಾವಃ]** ಕಿರಣಗಳನ್ನು ಧಾರಣ ಮಾಡದಿರುವ

ಅಂದರೆ ಪ್ರಕಾಶರಹಿತವಾದ **[ಅಜರಾಃ]** ಜನ್ಮ ಪಡೆದು ವೃದ್ಧರಾಗುವ ಮತ್ತೆ ಮರಣ ಇತ್ಯಾದಿ ಕರ್ಮರಹಿತ ಹಾಗೂ ಕಾರಣರೂಪದಿಂದ ನಿತ್ಯವೂ **[ರುದ್ರಾಃ]** ಜ್ವರ ಮೊದಲಾದ ಪೀಡೆಗಳಿಂದ ರೋದನಕ್ಕೀಡುಮಾಡುವ ವಾಯುವು ಜೀವಿಗಳನ್ನು **[ವವಕ್ಷುಃ]** ರೊಚ್ಚಿಗೇಳಿಸುತ್ತದೆ. **[ಮಜ್ಮನಾ]** ಬಲದಿಂದ **[ಪಾರ್ಥಿವಾ]** ಭೂಗೋಳ ಮೊದಲಾದ **[ದಿವ್ಯಾನಿ]** ಪ್ರಕಾಶಗಳಲ್ಲಿರುವ ಸೂರ್ಯ ಮೊದಲಾದ ಲೋಕಗಳು **[ಚಿತ್]** ಮತ್ತು **[ವಿಶ್ವಾ]** ಎಲ್ಲ **[ಭುವನಾನಿ]** ಲೋಕಗಳು **[ದೃಢಾ]** ದೃಢವೂ ಸ್ಥಿರವೂ ಆದವುಗಳನ್ನು ಕೂಡ **[ಪ್ರಚ್ಯಾವಯಂತಿ]** ಚಲಾಯಮಾನ ಮಾಡುತ್ತವೆ. ಅವುಗಳನ್ನು ವಿದ್ಯೆಯಿಂದ ಯಥಾವತ್ತಾಗಿ ತಿಳಿದು ಕಾರ್ಯಗಳಲ್ಲಿ ತೊಡಗಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರಿಗೆ ಹೇಗೆ ಮೇಘವು ಜಲಕ್ಕೆ ಆಧಾರವೂ ಮತ್ತು ಪರ್ವತ ಓಷಧಿಗಳಿಗೂ ಆಧಾರವಾಗಿದೆಯೋ, ಹಾಗೆಯೇ ಈ ಸಂಯೋಗ-ವಿಯೋಗ ಮಾಡುವ ಎಲ್ಲಕ್ಕೂ ಆಧಾರ. ಸುಖದುಃಖಗಳಿಗೆ ಹೇತುವೂ ನಿತ್ಯರೂಪ ಗುಣಗಳಿಂದ ಬೇರೆಯೇ ಸ್ಪರ್ಶಗುಣವುಳ್ಳ ಪವನವು ಇದೆ. ಹಾಗೆಂದು ತಿಳಿಯಬೇಕು. ಮತ್ತು ಇವುಗಳ ಹೊರತು ಜಲ, ಅಗ್ನಿ ಮತ್ತು ಭೂಗೋಳ ಹಾಗೂ ಇವುಗಳ ಪರಮಾಣುಗಳು ಕೂಡ ಹೋಗುವ - ಬರುವು (ಹಾಗೂ ನಿಲ್ಲುವು)ದನ್ನು ತಿಳಿಯಲು ಸಮರ್ಥರಾಗುವುದಿಲ್ಲ.

ಮತ್ತೆ ಅವು ಹೇಗಿವೆ?

ಚಿತ್ರೈರಂಜಿಭಿರ್ವಪುಷೇ ವ್ಯಂಜತೇ ವಕ್ಷಃಸು ರುಕ್ಮಾ ಅಧಿ ಯೇತಿರೇ ಶುಭೇ ।
ಅಂಸೇಷ್ವೇಷಾಂ ನಿ ಮಿಮೃಕ್ಷುರ್ ಋಷ್ಟಯಃ ಸಾಕಂ ಜಜ್ಞಿರೇ ಸ್ವಧಯಾ ದಿವೋ ನರಃ ॥೪॥

ಪದಾರ್ಥ:- ಹೇ ಮನುಷ್ಯರೇ! ನೀವು ಈ **[ಋಷ್ಟಯಃ]** ಅತ್ತಿತ್ತ ಚಲಿಸುವ ಹಾಗೂ **[ನರಃ]** ಪದಾರ್ಥಗಳನ್ನು ಪ್ರಾಪ್ತಿಪಡಿಸುವ ಪವನವು **[ಚಿತ್ರೈಃ]** ಆಶ್ಚರ್ಯ ರೂಪ ಕ್ರಿಯೆ, ಗುಣ ಮತ್ತು ಸ್ವಭಾವ ಹಾಗೂ **[ಅಂಜಿಭಿಃ]** ಪ್ರಕಟಮಾಡುವುದೇ ಮೊದಲಾದ ಧರ್ಮಗಳಿಂದ **[ಶುಭೇ]** ಸುಂದರ **[ವಪುಷೇ]** ಶರೀರದ ಧಾರಣ ಅಥವಾ ಪೋಷಣೆಗಾಗಿ **[ವ್ಯಂಜತೇ]** ವಿಶೇಷವಾಗಿ ಪ್ರಾಪ್ತವಾಗುತ್ತೀಯೆ. **[ವಕ್ಷಃಸು]** ಹೃದಯಗಳಲ್ಲಿ **[ರುಕ್ಮಾನ್]** ವಿದ್ಯುತ್ತು ಹಾಗೂ ಜಠರಾಗ್ನಿಯ ಪ್ರಕಾಶಗಳನ್ನು **[ಅಧಿಯೇತಿರೇ]** ಯತ್ನಪೂರ್ವಕ ಸಿದ್ಧಪಡಿಸುತ್ತಾ **[ಸ್ವಧಯಾ]** ಪೃಥಿವೀ ಆಕಾಶ ಹಾಗೂ ಅನ್ನದ **[ಸಾಕಮ್]** ಜೊತೆಗೆ **[ಜಾಯಂತೇ]** ಉತ್ಪನ್ನವಾಗುತ್ತದೆ ಮತ್ತು **[ದಿವಃ]** ಸೂರ್ಯ ಮೊದಲಾದ ಪ್ರಕಾಶಗಳನ್ನು ಉತ್ಪನ್ನ ಮಾಡುತ್ತದೆ. **[ಏಷಾಮ್]** ಈ ಪವನಗಳ ಯೋಗದಿಂದ **[ಅಂಸೇಷು]** ಬಲ ಪರಾಕ್ರಮಗಳ ಮೂಲ ರೂಪದಲ್ಲಿ **[ನಿಮಿಮೃಕ್ಷುಃ]** ಎಲ್ಲ ಪದಾರ್ಥಗಳನ್ನು ಪಡೆಯುತ್ತಾನೆ. ಅದನ್ನು ಯಥಾವತ್ ತಿಳಿದು ತಮ್ಮ ಕಾರ್ಯಗಳಲ್ಲಿ ಸಂಪ್ರಯುಕ್ತಗೊಳಿಸಿರಿ.

ಭಾವಾರ್ಥ:- ವಿದ್ವಾಂಸರಿಗೆ ಉಚಿತವಾದುದೇನೆಂದರೆ, ಅಂತಂತಹ ವಿಲಕ್ಷಣ ಗುಣವುಳ್ಳ ವಾಯುಗಳನ್ನು ತಿಳಿದು ಶುದ್ಧ-ಸಿದ್ಧ ಸುಖಗಳನ್ನು ಭೋಗಿಸಲಿ.

ಮತ್ತೆ ಆ ವಾಯುವು ಹೇಗಿದೆ?

ಈಶಾನಕೃತೋ ಧುನಯೋ ರಿಶಾದಸೋ ವಾತಾನ್ ವಿದ್ಯುತಸ್ತವಿಷೀಭಿರಕ್ರತ ।
ದುಹಂತ್ಯೂಧರ್ದಿವ್ಯಾನಿ ಧೂತಯೋ ಭೂಮಿಂ ಪಿನ್ವಂತಿ ಪಯಸಾ ಪರಿಜ್ರಯಃ ॥೫॥

ಪದಾರ್ಥ:- ಹೇ ಮನುಷ್ಯರೇ! ನೀವು ಈ **[ಈಶಾನಕೃತಃ]** ಜೀವಿಗಳನ್ನು ಐಶ್ವರ್ಯಯುಕ್ತರನ್ನಾಗಿಸಲು **[ಧುನಯಃ]** ಧೂಳನ್ನು ವರ್ಷಿಸುವ ವೃಕ್ಷ ಮೊದಲಾದವುಗಳನ್ನು ಅಲುಗಾಡಿಸಲು **[ರಿಶಾದಸಃ]** ಜೀವಿಗಳಿಗೆ ದುಃಖ

ಕೊಡುವ ರೋಗಗಳನ್ನು ಮಾಡಲು [ಧೂತಯಃ] ಎಲ್ಲ ಪದಾರ್ಥಗಳನ್ನು ಅಲುಗಾಡಿಸುವ ಮತ್ತು [ಪರಿಜ್ರಯಃ] ಎಲ್ಲ ಕಡೆಗಳಿಂದ ಪದಾರ್ಥಗಳನ್ನು ಜೀರ್ಣ ಮಾಡುವ ವಾಯುವು. [ತವಿಷೀಭಿಃ] ತನ್ನ ಬಲದಿಂದ [ವಿದ್ಯುತಃ] ವಿದ್ಯುತ್ತು ಮೊದಲಾದವುಗಳನ್ನು [ಅಕೃತ] ಉತ್ಪನ್ನ ಮಾಡುತ್ತದೆ ಹಾಗೂ [ಪಯಸಾ] ಜಲ ಅಥವಾ ರಸದಿಂದ [ಊಧಃ] ಉಷೆಯನ್ನು [ದುಹಂತಿ] ಪೂರ್ಣ ಮಾಡುತ್ತದೆ. [ಭೂಮಿಮ್] ಪೃಥಿವೀ [ದಿವ್ಯಾನಿ] ಶುದ್ಧ ಜಲ ಮೊದಲಾದ ವಸ್ತುಗಳು ಹಾಗೂ ಉತ್ತಮ ಕಾರ್ಯಗಳ [ಪಿನ್ವಂತಿ] ಸೇವನೆ ಅಥವಾ ಸೇಚನೆ ಮಾಡುತ್ತದೆ. [ವಾತಾನ್] ಆ ಪವನಗಳನ್ನು ತಿಳಿಯಿರಿ.

ಭಾವಾರ್ಥ:- ಹೇ ಮನುಷ್ಯರೇ! ನಿಮಗಾಗಿ ಪರಮೇಶ್ವರನು ವಾಯುವಿನ ಗುಣಗಳ ಉಪದೇಶ ಮಾಡಿರುವುದೇಕೆಂದರೆ ಅಥವಾ ಹೇಳದಿರುವ ಗುಣಗಳುಳ್ಳ ವಾಯುವು ವಿದ್ಯುತ್ತನ್ನು ಉತ್ಪನ್ನಮಾಡಿ ಮಳೆಯ ಮುಖಾಂತರ ಭೂಮಿಯ ಮೇಲೆ ಓಷಧಿ ಮೊದಲಾದವುಗಳ ಸೇಚನೆಯಿಂದ ಎಲ್ಲ ಪ್ರಾಣಿಗಳಿಗೂ ಸುಖಕೊಡುವವನಾಗಿರುವನು. ಹಾಗೆ ನೀವು ಎಲ್ಲರೂ ತಿಳಿಯಿರಿ.

ಮತ್ತೆ ಆ ವಾಯುವು ಯಾವ ರೀತಿಯ ಗುಣವುಳ್ಳದ್ದಾಗಿದೆ?

ಪಿನ್ವಂತ್ಯಪೋ ಮರುತಃ ಸುದಾನವಃ ಪಯೋ ಘೃತವದ್ ವಿದಥೇಷ್ವಾಭುವಃ ।
ಅತ್ಯಂ ನ ಮಿಹೇ ವಿ ನಯಂತಿ ವಾಜಿನ-ಮುತ್ಸಂ ದುಹಂತಿ ಸ್ತನಯಂತಮಕ್ಷಿತಮ್ ॥೬॥

ಪದಾರ್ಥ:- ಹೇ ಮನುಷ್ಯರೇ! ನೀವು ಹೇಗೆ **[ಆಭುವಃ]** ಉತ್ತಮವಾಗಿ ಉತ್ಪನ್ನವಾಗಲು ಹಾಗೂ **[ಸುದಾನವಃ]** ಉತ್ತಮದಾನ ಕೊಡುವುದಕ್ಕಾಗಿ **[ಮರುತಃ]** ಪವನವು **[ವಿದಥೇಷು]** ಯಜ್ಞಗಳಲ್ಲಿ **[ಘೃತವತ್]** ಆಜ್ಯದಂತೆ **[ಪಯಃ]** ಜಲ ಅಥವಾ ರಸವನ್ನು **[ಪಿನ್ವಂತಿ]** ಸೇವನೆ ಅಥವಾ ಸೇಚನೆ ಮಾಡುತ್ತದೆಯೋ, **[ಮಿಹೇ]** ವೀರ್ಯವೃಷ್ಟಿಗಾಗಿ **[ಅತ್ಯಮ್]** ಕುದುರೆಯ **[ನ]** ಸಮಾನ **[ಅಪಃ]** ಪ್ರಾಣ, ಜಲ ಅಥವಾ ಅಂತರಿಕ್ಷದ ಅವಯವಗಳನ್ನು **[ವಿನಯಂತಿ]** ನಾನಾ ಪ್ರಕಾರದಿಂದ ಪ್ರಾಪ್ತಪಡಿಸುತ್ತೀರೋ, **[ಉತ್ಸಮ್]** ಮತ್ತು ಕೂಪದಂತೆ **[ಅಕ್ಷಿತಮ್]** ನಾಶರಹಿತ **[ಸ್ತನಯಂತಮ್]** ಶಬ್ದ ಮಾಡುತ್ತಾ **[ವಾಜಿನಮ್]** ಉತ್ತಮ ವೇಗವುಳ್ಳ ಪುರುಷನನ್ನು **[ದುಹಂತಿ]** ಪೂರ್ಣ ಮಾಡುತ್ತೀರೋ, ಹಾಗೆ ಮತ್ತು ಅವುಗಳನ್ನು ಕಾರ್ಯಗಳಲ್ಲಿಯೂ, ತೊಡಗಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಹೇಗೆ ಯಜ್ಞದಲ್ಲಿ ಘೃತವು ಮೊದಲಾದವುಗಳು ಕ್ಷೇತ್ರ, ಪಶು, ಮೊದಲಾದವುಗಳ ತೃಪ್ತಿಗಾಗಿ ರೂಪ ಹಾಗೂ ಕುದುರೆಯ ತೃಪ್ತಿಗಾಗಿ ಕುದುರೆ ಇದೆಯೋ ಹಾಗೆ ವಿದ್ಯೆಯಿಂದ ಸಂಪ್ರಯೋಗಿಸಿದ ಪವನವು ಎಲ್ಲ ಕಾರ್ಯಗಳನ್ನು ಸಿದ್ಧಪಡಿಸುತ್ತದೆ.

ಮತ್ತೆ ಆ ವಾಯುವು ಹೇಗಿದೆ?

ಮಹಿಷಾಸೋ ಮಾಯಿನಶ್ಚಿತ್ರಭಾನವೋ ಗಿರಯೋ ನ ಸ್ವತವಸೋ ರಘುಷ್ಯದಃ ।
ಮೃಗಾ ಇವ ಹಸ್ತಿನಃ ಖಾದಥಾ ವನಾ ಯದಾರುಣೀಷು ತವಿಷೀರಯುಗ್ಧ್ವಮ್ ॥೭॥

ಪದಾರ್ಥ:- ಹೇ ಮನುಷ್ಯರೇ! ನೀವು [ಯತ್] ಹೇಗೆ [ಮಹಿಷಾಸಃ] ಹೆಚ್ಚು- ಹೆಚ್ಚು ಸೇವನೆಗೆ ಯೋಗ್ಯವಾದ ಗುಣಗಳಿಂದ ಕೂಡಿದ [ಚಿತ್ರಭಾನವಃ] ಚಿತ್ರ-ವಿಚಿತ್ರ ದೀಪ್ತಿಯುಳ್ಳ [ಮಾಯಿನಃ] ಉತ್ತಮ ವೃದ್ಧಿಗೆ ಹೇತುವಾದ [ಸ್ವತವಸಃ] ತನ್ನ ಬಲದಿಂದ ಬಲವಾನ್ [ರಘುಷ್ಯದಃ] ಉತ್ತಮ ರುಚಿಗೆ ಕಾರಣವಾದ ಅಥವಾ

ಉತ್ತಮ ಚಲನ ಕ್ರಿಯೆಯಿಂದ ಕೂಡಿದ [ಗಿರಯೋ ನ] ಮೇಘಗಳಂತೆ ಜಲವನ್ನು ಹಾಗೂ [ಹಸ್ತಿನಃ] ಆನೆ ಮತ್ತು [ಮೃಗಾ ಇವ] ಬಲವುಳ್ಳ ಹರಿಣಗಳಂತೆ ವೇಗಯುಕ್ತ ವಾಯುವು [ವನಾ] ಜಲ ಅಥವಾ ವನಗಳನ್ನು [ಖಾದಥ] ಭಕ್ಷಿಸುತ್ತದೋ ಹಾಗೆ ಈ [ತವಿಷೀಃ] ಬಲಗಳನ್ನು [ಅರುಣೀಷು] ಪಡೆಯುತ್ತವೆ. ಸುಖವು ಯಾವವುಗಳಲ್ಲಿವೆಯೋ, ಆ ಸೇನೆ ಮತ್ತು ಯಾವವುಗಳಲ್ಲಿ ಕ್ರಿಯೆಗಳಲ್ಲಿ [ಅಯುಗ್ಧ್ವಮ್] ಸರಿಯಾಗಿ ವಿಚಾರಪೂರ್ವಕವಾಗಿ ಸಂಯುಕ್ತಗೊಳಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಎರಡು ಉಪಮಾಲಂಕಾಲಗಳಿವೆ. ಪವನಗಳ ಹೊರತು ನಾವು ನಡೆಯುವುದು, ತಿನ್ನುವುದು, ಯಾನವನ್ನು ನಡೆಸುವುದು ಮೊದಲಾದ ಕಾರ್ಯಗಳು ಸಿದ್ಧವಾಗುವುದಿಲ್ಲ. ಆದುದರಿಂದ ಈ ವಾಯುಗಳನ್ನು ಸೇನೆ, ವಿಮಾನ, ಮತ್ತು ನೌಕೆ ಮೊದಲಾದವುಗಳಲ್ಲಿ ಸಂಯುಕ್ತಗೊಳಿಸಿ ಅಗ್ನಿ ಜಲಗಳ ಸಂಯೋಗದಿಂದ ಯಾನಗಳನ್ನು ಶೀಘ್ರವಾಗಿ ಚಲಿಸುವಂತೆ ಮಾಡಬೇಕು.

ಮತ್ತೆ ಆ ವಾಯುವು ಹೇಗಿದೆ?

ಸಿಂಹಾ ಇವ ನಾನದತಿ ಪ್ರಚೇತಸಃ ಪಿಶಾ ಇವ ಸುಪಿಶೋ ವಿಶ್ವವೇದಸಃ ।
ಕ್ಷಪೋ ಜಿನ್ವಂತಃ ಪೃಷತೀಭಿರ್‌ಋಷ್ಟಿಭಿಃ ಸಮಿತ್ ಸಬಾಧಃ ಶವಸಾಹಿಮನ್ಯವಃ ॥೮॥

ಪದಾರ್ಥ:- ಹೇ ಮನುಷ್ಯರೇ! ನೀವು ಈ **[ಪ್ರಚೇತಸಃ]** ಉತ್ತಮ ವಿಜ್ಞಾನ ಪಡೆಯಲು **[ಸುಪಿಶಃ]** ಸುಂದರ ಅವಯವಗಳನ್ನು ಮಾಡುವ **[ಸಭಾಧಃ]** ಪದಾರ್ಥಗಳನ್ನು ತನ್ನ ನಿಯಮದಲ್ಲಿಡುವ **[ಅಹಿಮನ್ಯವಃ]** ಮೇಘದ ಮಳೆಯ ಜ್ಞಾನ ಮಾಡಿಸುವ ವಾಯುವು **[ಇತ್]** ನಿಶ್ಚಯವಾಗಿ **[ಋಷ್ಟಿಭಿಃ]** ವ್ಯವಹಾರಗಳನ್ನು ಪ್ರಾಪ್ತಿಪಡಿಸುವ ಮತ್ತು **[ಪೃಷತೀಭಿಃ]** ತನ್ನ ಗಮನಾಗಮನ ವೇಗಾದಿಗುಣಗಳಿಂದ **[ಕ್ಷಪಃ]** ರಾತ್ರಿಯನ್ನು **[ಸಂಜಿನ್ವಂತಃ]** ತೃಪ್ತಿ ಪಡಿಸುತ್ತಾ **[ವಿಶ್ವವೇದಸಃ]** ಎಲ್ಲ ಕಾರ್ಯಗಳನ್ನು ಪ್ರಾಪ್ತಿಪಡಿಸುವ ಪವನವು **[ಶವಸಾ]** ತನ್ನ ಬಲದಿಂದ **[ಸಿಂಹಾಇವ]** ಸಿಂಹದಂತೆ ಹಾಗೂ **[ಪಿಶಾ ಇವ]** ಬಹಳ ಬಲವುಳ್ಳ ಆನೆಯಂತೆ **[ನಾನದತಿ]** ಅತಿಯಾಗಿ ಶಬ್ದ ಮಾಡುತ್ತದೆ. ಅದನ್ನು ಕಾರ್ಯಗಳನ್ನು ಸಿದ್ಧಪಡಿಸಲು ಯಥಾವತ್ ಸಂಯುಕ್ತಗೊಳಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮನುಷ್ಯರೇ! ಎಷ್ಟು ಬಲ, ಪರಾಕ್ರಮ, ಜೀವನ, ಕೇಳುವುದು, ಆಲೋಚಿಸುವುದು ಮೊದಲಾದ ಕ್ರಿಯೆಗಳಿವೆಯೋ, ಅವೆಲ್ಲವೂ ವಾಯುವಿನ ಸಮೀಪದಿಂದಲೇ ಆಗುತ್ತವೆ, ಎಂದು ತಿಳಿಯಿರಿ.

ಮತ್ತೆ ಆ ವಾಯುವು ಹೇಗಿದೆ?

ರೋದಸೀ ಆ ವದತಾ ಗಣಶ್ರಿಯೋ ನೃಷಾಚಃ ಶೂರಾಃ ಶವಸಾಹಿಮನ್ಯವಃ ।
ಆ ವಂಧುರೇಷ್ವಮತಿರ್ನ ದರ್ಶತಾ ವಿದ್ಯುನ್ನ ತಸ್ಥೌ ಮರುತೋ ರಥೇಷು ವಃ ॥೯॥

ಪದಾರ್ಥ:- ಹೇ [ಗಣಶ್ರಿಯಃ] ಒಟ್ಟಾಗಿ ಶೋಭೆಯನ್ನು ಪಡೆಯುವ [ನೃಷಾಚಃ] ಮನುಷ್ಯರ ಕಾರ್ಯಗಳಲ್ಲಿ ಸಂಯುಕ್ತವಾಗುವ ಮತ್ತು [ಅಹಿಮನ್ಯವಃ] ತನ್ನ ವ್ಯಾಪ್ತಿಯನ್ನು ತಿಳಿದ [ಶೂರಾಃ] ಶೂರರಂತೆ [ಮರುತಃ] ಶಿಲ್ಪವಿದ್ಯೆಯನ್ನು ತಿಳಿದ ಋತ್ವಿಜ ವಿದ್ವಾಂಸರು [ಅಮತಿಮ್] ಹೇಗೆ ರೂಪ ಹಾಗೂ [ದರ್ಶತಾ] ನೋಡಲು ಯೋಗ್ಯವಾದ [ವಿದ್ಯುತ್] ವಿದ್ಯುತ್ತು [ತಸ್ಥೌ] ವರ್ತಿಸುವುದೋ ಹಾಗೆ ವರ್ತಿಸಿ ವಾಯುವು [ಬಂಧುರೇಷು]

ಯಾವ ಯಂತ್ರಗಳ ಬಂಧನಗಳಲ್ಲಿ [ಶವಸಾ] ಬಲದಿಂದ [ರೋದಸೀ] ಪ್ರಕಾಶ ಮತ್ತು ಭೂಮಿಯನ್ನು ಧಾರಣ ಮಾಡುತ್ತದೆ ಹಾಗೂ [ವಃ] ನೀವು [ರಥೇಷು] ರಥಗಳಿಗೆ ಜೋಡಿಸಿದ ಕಾರ್ಯಗಳನ್ನು ಸಿದ್ಧ ಮಾಡುತ್ತದೆ. ಅದನ್ನು ನಮಗಾಗಿ [ಅವದತ] ಉಪದೇಶಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಎರಡು ಉಪಮಾಲಂಕಾರಗಳಿವೆ. ಮನುಷ್ಯರು ತಿಳಿಯಲು ಯೋಗ್ಯವಾದುದೇನೆಂದರೆ, ಎಲ್ಲ ಮೂರ್ತಿವಂತವಾದ ದ್ರವ್ಯಗಳು ಆಧಾರ, ಶೂರ-ವೀರರಂತೆ ಹಾಗೂ ಶಿಲ್ಪ ವಿದ್ಯೆ ಮತ್ತು ಅನ್ಯಕಾರ್ಯಗಳಿಗೆ ಹೇತುವು ಮುಖ್ಯವಾಗಿ ಪವನವೇ ಆಗಿದೆ, ಬೇರೆಯದಲ್ಲ.

ಮತ್ತೆ ಆ ಪವನವು ಯಾವ ಗುಣವುಳ್ಳದ್ದಾಗಿದೆ?

ವಿಶ್ವವೇದಸೋ ರಯಿಭಿಃ ಸಮೋಕಸಃ ಸಂಮಿಶ್ಲಾಸಸ್ತವಿಷೀಭಿರ್ವಿರಪ್ಶಿನಃ ।
ಅಸ್ತಾರ ಇಷುಂ ದಧಿರೇ ಗಭಸ್ತ್ಯೋ-ರನಂತಶುಷ್ಮಾ ವೃಷಖಾದಯೋ ನರಃ ॥೧೦॥

ಪದಾರ್ಥ:- ಹೇ [ನರಃ] ವಿದ್ಯೆಯನ್ನು ಪಡೆಯುವ ಮನುಷ್ಯರೇ! ನೀವು [ಸಮೋಕಸಃ] ಯಾವುದರಿಂದ ಉತ್ತಮವಾಗಿ ನಿವಸಿಸುವಿರೋ [ಸಂಮಿಶ್ಲಾಸಃ] ಅಗ್ನಿ ಮೊದಲಾದ ನಾಲ್ಕು ತತ್ವಗಳೊಡನೆ ಅತ್ಯಂತವಾಗಿ ಬೆರೆಯುತ್ತಾ [ಇಷುಮ್] ಬಾಣ ಅಥವಾ ಇಚ್ಛಾ ವಿಶೇಷವನ್ನು ಬಿಡುತ್ತಾ [ವೃಷಖಾದಯಃ] ರಸಗಳನ್ನು ವರ್ಷಿಸುವ ಪದಾರ್ಥಗಳನ್ನು ತಿನ್ನುವ [ಅನಂತ ಶುಷ್ಮಾಃ] ಅನಂತ ಬಲವುಳ್ಳ [ವಿರಪ್ಶಿನಃ] ದೊಡ್ಡ [ವಿಶ್ವವೇದಸಃ] ಎಲ್ಲ ಪದಾರ್ಥಗಳ ಪ್ರಾಪ್ತಿಗೆ ಹೇತುವಾದುದು, ಎಲ್ಲ ಪದಾರ್ಥಗಳನ್ನು ಅತ್ತಿತ್ತ ಚಲಿಸುವಂತೆ ಮಾಡುವ ವಾಯುವು [ರಯಿಭಿಃ] ಚಕ್ರವರ್ತೀ ರಾಜ್ಯದ ಶೋಭೆ ಮೊದಲಾದವು ಹಾಗೂ [ತವಿಷೀಭಿಃ] ಬಲ ಪರಾಕ್ರಮ ಸೇನೆ ಮೊದಲಾದ ಪ್ರಜೆ ಮತ್ತು [ಗಭಸ್ತ್ಯೋಃ] ಕಿರಣಯುಕ್ತ ಸೂರ್ಯನು ಅಥವಾ ಪ್ರಸಿದ್ಧವಾದ ಅಗ್ನಿಯಂತೆ ಭುಜಗಳಲ್ಲಿ ಬಲವನ್ನು [ದಧಿರೇ] ಧಾರಣ ಮಾಡುತ್ತದೆ. ಅದರ ಗುಣಗಳನ್ನು ಸರಿ-ಸರಿಯಾಗಿ ತಿಳಿದು ಅದರಿಂದ ವಿದ್ಯೆ, ಶಿಕ್ಷಣ ಮತ್ತು ಯಾನಗಳನ್ನು ಚಲಿಸುವ ಕ್ರಿಯೆಗಳಲ್ಲಿ ಗ್ರಹಿಸಿರಿ.

ಭಾವಾರ್ಥ:- ಮನುಷ್ಯರು, ವಿದ್ವಾಂಸರು ಹಾಗೂ ವಾಯು ಮೊದಲಾದ ಪದಾರ್ಥ ವಿದ್ಯೆಗಳ ಹೊರತು ಪರಲೋಕ ಮತ್ತು ಈ ಲೋಕದ ಸುಖಗಳ ಸಿದ್ಧಿಯನ್ನು ಎಂದಿಗೂ ಪಡೆಯಲಾರರು.

ಮತ್ತೆ ಆ ವಾಯುವು ಹೇಗಿದೆ?

ಹಿರಣ್ಯಯೇಭಿಃ ಪವಿಭಿಃ ಪಯೋವೃಧ ಉಜ್ಜಿಘ್ನಂತ ಆಪಥ್ಯೋ೩ ನ ಪರ್ವತಾನ್ ।
ಮಖಾ ಅಯಾಸಃ ಸ್ವಸೃತೋ ಧ್ರುವಚ್ಯುತೋ ದುಧ್ರಕೃತೋ ಮರುತೋ ಭ್ರಾಜದೃಷ್ಟಯಃ ॥೧೧॥

ಪದಾರ್ಥ:- ಹೇ ವಿದ್ವಾಂಸರೇ! ನೀವು [ಆ ಪಥ್ಯೋ ನ] ಉತ್ತಮವಾಗಿ [ಹಿರಣ್ಯಯೇಭಿಃ] ಸುವರ್ಣ ಮೊದಲಾದವುಗಳ ಯೋಗದಿಂದ ಪ್ರಕಾಶ ರೂಪ [ಪವಿಭಿಃ] ಪವಿತ್ರ ಚಕ್ರಗಳುಳ್ಳ ರಥದಿಂದ ಮಾರ್ಗದಲ್ಲಿ ಚಲಿಸುವಂತೆ [ಭ್ರಾಜದೃಷ್ಟಯಃ] ಯಾವುದರಿಂದ ವ್ಯವಹಾರಗಳನ್ನು ಪ್ರಾಪ್ತಿಪಡಿಸುವ ಕಾಂತಿಯು ಪ್ರಸಿದ್ಧವಾಗಿದೆಯೋ, [ದುಧ್ರಕೃತಃ] ಧಾರಣ ಮಾಡುವ ಬಲಗಳನ್ನು ಉತ್ಪನ್ನ ಮಾಡುವ [ಧ್ರುವಚ್ಯುತಃ] ನಿಶ್ಚಲ ಆಕಾಶದಲ್ಲಿ ಚಲಿಸುವ [ಸ್ವಸೃತಃ] ತನ್ನ ಗುಣಗಳನ್ನು ಪಡೆದು ಚಲಿಸುವ [ಪಯೋವೃಧಃ] ಜಲ ಅಥವಾ ರಾತ್ರಿಯನ್ನು ವೃದ್ಧಿಸುವ [ಮಖಾಃ] ಯಜ್ಞಕ್ಕೆ ಯೋಗ್ಯವಾಗಿ [ಅಯಾಸಃ] ಪ್ರಾಪ್ತವಾಗುವ ಸ್ವಭಾವದಿಂದ ಕೂಡಿದ [ಮರುತಃ] ಪವನವು [ಪರ್ವತಾನ್]

ಮೇಘ ಅಥವಾ ಪರ್ವತಗಳನ್ನು [ಉಜ್ಜಿಘ್ನಂತೇ] ನಷ್ಟಗೊಳಿಸುತ್ತದೆ. ಆ ಪವನಗಳ ಗುಣಗಳನ್ನು ತಿಳಿದು ತನ್ನ ಕಾರ್ಯಗಳಲ್ಲಿ ಸಂಯುಕ್ತಗೊಳಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ವಾಯುವಿನಿಂದ ವೃಷ್ಟಿ ಮೊದಲಾದವುಗಳು ಉತ್ಪತ್ತಿಯಾಗುತ್ತವೆ. ಅದನ್ನು ಯುಕ್ತಿಯಿಂದ ಮನುಷ್ಯರು ಸೇವಿಸಬೇಕು.

ಮತ್ತೆ ವಾಯುವಿನ ಸಮುದಾಯಗಳು ಹೇಗಿವೆ?

ಘೃಷುಂ ಪಾವಕಂ ವನಿನಂ ವಿಚರ್ಷಣಿಂ ರುದ್ರಸ್ಯ ಸೂನುಂ ಹವಸಾ ಗೃಣೀಮಸಿ ।
ರಜಸ್ತುರಂ ತವಸಂ ಮಾರುತಂ ಗಣ-ಮೃಜೀಷಿಣಂ ವೃಷಣಂ ಸಶ್ಚತ ಶ್ರಿಯೇ ॥೧೨॥

ಪದಾರ್ಥ:- ಹೇ ಮನುಷ್ಯರೇ! ಹೇಗೆ ನಾವು [ಹವಸಾ] ದಾನ ಮತ್ತು ಗ್ರಹಣದಿಂದ [ಶ್ರಿಯೇ] ವಿದ್ಯೆ, ಶಿಕ್ಷಣ ಮತ್ತು ಚಕ್ರವರ್ತೀ ರಾಜ್ಯದ ಪ್ರಾಪ್ತಿಗಾಗಿ [ರುದ್ರಸ್ಯ] ಮುಖ್ಯ ವಾಯುವಿನ [ಸೂನುಮ್] ಪುತ್ರನಂತೆ ವರ್ತಿಸಿ [ವಿಚರ್ಷಿಣಿಮ್] ಬೇಧ ಮಾಡುವ ಹಾಗೂ [ವನಿನಮ್] ಸಂಗ್ರಾಮ ಮಾಡುವ [ಘೃಷುಮ್] ತಿಕ್ಕುವ ಸ್ವಭಾವದಿಂದ ಕೂಡಿದ [ಪಾವಕಮ್] ಪವಿತ್ರಗೊಳಿಸುವ [ತವಸಮ್] ಮಹಾ ಬಲವುಳ್ಳ [ರಜಸ್ತುರಮ್] ಲೋಕಗಳನ್ನು ಶೀಘ್ರವಾಗಿ ಚಲಿಸಲು [ಋಜೀಷಿಣಮ್] ಉತ್ತಮವಾಗಿ ಶುದ್ಧಿಯಾಗಲು ಕಾರಣ ಮತ್ತು [ವೃಷಣಮ್] ವೃಷ್ಟಿ ಪಡಿಸುವ [ಮಾರುತಮ್] ಪವನಗಳ [ಗಣಮ್] ಸಮೂಹದ [ಗೃಣೀಮಸಿ] ಉಪದೇಶ ಮಾಡುತ್ತಾನೆ. ಅವನನ್ನು ನೀವು ಕೂಡ [ಸಶ್ಚತ] ತಿಳಿಯಿರಿ.

ಭಾವಾರ್ಥ:- ವಾಯು ಸಮುದಾಯದ ಹೊರತು ನಮ್ಮ ಯಾವುದೇ ಕಾರ್ಯಗಳು ಸಿದ್ಧವಾಗುವುದಿಲ್ಲ. ಹಾಗೆ ನಿಶ್ಚಯದಿಂದ ವಾಯು ವಿದ್ಯೆಯನ್ನು ಸ್ವೀಕರಿಸಿ ತನ್ನ ಕಾರ್ಯಗಳನ್ನು ಅವಶ್ಯವಾಗಿ ಸಿದ್ಧಪಡಿಸಬೇಕೆಂದು ಮನುಷ್ಯರು ತಿಳಿಯಬೇಕು.

ಮತ್ತೆ ಉಕ್ತ ವಾಯುವು ಯಾವ ಗುಣವುಳ್ಳದ್ದಾಗಿದೆ?

ಪ್ರ ನೂ ಸ ಮರ್ತಃ ಶವಸಾ ಜನಾ ಅತಿ ತಸ್ಥೌ ವ ಊತೀ ಮರುತೋ ಯಮಾವತ।
ಅರ್ವದ್ಭಿರ್ವಾಜಂ ಭರತೇ ಧನಾ ನೃಭಿ-ರಾಪೃಚ್ಛ್ಯಂ ಕ್ರತುಮಾ ಕ್ಷೇತಿ ಪುಷ್ಯತಿ ॥೧೩॥

ಪದಾರ್ಥ:- ಹೇ [ಮರುತಃ] ಯುಕ್ತಿಯಿಂದ ಸೇವಿಸಿದ ವಾಯುವಿನಂತೆ ನೀವು [ಯಮ್] ಯಾವನ [ಅವತ] ರಕ್ಷಣಾದಿಗಳನ್ನು ಮಾಡುವಿರೋ [ಸಃ] ಅವನು [ಮರ್ತಃ] ಮನುಷ್ಯನ [ಊತೀ] ರಕ್ಷಣಾದಿಗಳೊಂದಿಗೆ [ಶವಸಾ] ವಿದ್ಯಾಕ್ರಿಯೆಯುಕ್ತ ಬಲದಿಂದ [ಅರ್ವದ್ಭಿಃ] ಕುದುರೆಗಳು ಮತ್ತು [ನೃಭಿಃ] ಮನುಷ್ಯರೊಡನೆ [ವಾಜಮ್] ವೇಗ, ಅನ್ನ [ವಃ] ನೀವು [ಜನಾನ್] ಮನುಷ್ಯಾದಿ ಪ್ರಾಣಿಗಳು ಮತ್ತು [ಧನಾ, ಆ, ಪೃಚ್ಛ್ಯಮ್] ಧನವನ್ನು ಕೇಳಲು ಯೋಗ್ಯನು ಉತ್ತಮ [ಕ್ರತುಮ್] ಬುದ್ಧಿ ಅಥವಾ ಕರ್ಮಗಳನ್ನು [ನು] ಶೀಘ್ರವಾಗಿ [ಪ್ರಭರತೇ] ಉತ್ತಮವಾಗಿ ಧಾರಣ ಮಾಡುತ್ತಾ [ಆಕ್ಷೇತಿ] ನಿವಾಸಯುಕ್ತರಾಗಿ, ಶರೀರ ಮತ್ತು ಆತ್ಮ ಅಂತಃಕರಣದಿಂದ [ಪುಷ್ಯತಿ] ಬಲವನ್ನು ಪುಷ್ಟಗೊಳಿಸುತ್ತಾ [ತಸ್ಥೌ] ಸ್ಥಿತರಾಗುವರು.

ಭಾವಾರ್ಥ:- ಯಾರು ಪ್ರಾಣ ವಾಯುವಿನ ವಿದ್ಯೆಯನ್ನು ತಿಳಿದು ಉಪಯೋಗದಲ್ಲಿ ತರುತ್ತಾರೋ, ಅವರು ಬಲಶಾಲಿಗಳಾಗಿ ಪ್ರತಿಷ್ಠೆಯನ್ನು ಪಡೆಯುವವರು ಮತ್ತು ದುಃಖ ಹಾಗೂ ಶತ್ರುಗಳನ್ನು ಜಯಿಸಿ ಉತ್ತಮ ಆನೆ, ಕುದುರೆ, ಪ್ರಜೆಗಳು (ಸಂತಾನ), ಸಂಪತ್ತು ಮತ್ತು ಬುದ್ಧಿಯಿಂದ ಕೂಡಿದ ಸದಾ ಎಲ್ಲರನ್ನು ಪುಷ್ಟಗೊಳಿಸುತ್ತಾರೆ.

ಮತ್ತೆ ಆ ವಾಯುವಿನಲ್ಲಿ ಯಾವ ಗುಣಗಳಿವೆ?

ಚರ್ಕೃತ್ಯಂ ಮರುತಃ ಪೃತ್ಸು ದೃಷ್ಟರಂ ದ್ಯುಮಂತಂ ಶುಷ್ಮಂ ಮಘವತ್ಸು ಧತ್ತನ ।
ಧನಸ್ಪೃತಮುಕ್ಥ್ಯಂ ವಿಶ್ವಚರ್ಷಣಿಂ ತೋಕಂ ಪುಷ್ಯೇಮ ತನಯಂ ಶತಂ ಹಿಮಾಃ ॥೧೪॥

ಪದಾರ್ಥಃ- ಹೇ [**ಮರುತಃ**] ಪವನದಂತಿರುವ ಮನುಷ್ಯರೇ! ಹೇಗೆ ನಾವು [**ಪೃತ್ಸು**] ಸೇನೆಗಳಲ್ಲಿ [**ಚರ್ಕೃತ್ಯಮ್**] ಮತ್ತೆ ಮತ್ತೆ ಮಾಡಬೇಕಾದ ಯೋಗ್ಯ ಕಾರ್ಯಗಳಲ್ಲಿ ಕುಶಲರು [**ದುಷ್ಟರಮ್**] ದುಃಖದಿಂದ ಪಾರಾಗಲು ಯೋಗ್ಯವು [**ದ್ಯುಮಂತಮ್**] ಅತಿ ಪ್ರಕಾಶಯುಕ್ತವು [**ಶುಷ್ಮಮ್**] ಒಣಗಿಸುವಂತಹ ಬಲವನ್ನು [**ಮಘವತ್ಸು**] ಪ್ರಶಂಸಯುಕ್ತ ಧನದಿಂದ ಕೂಡಿದ ರಾಜಕಾರ್ಯಗಳಲ್ಲಿ [**ಧನ ಸ್ಪೃತಮ್**] ಧನದಿಂದ ಪ್ರಸನ್ನವೂ ಅಥವಾ ಸೇವೆಯಿಂದ ಪ್ರಾಪ್ತವಾದ [**ಉಕ್ಥ್ಯಮ್**] ಹೇಳಲು ಕೇಳಲು ಯೋಗ್ಯವಾದ [**ವಿಶ್ವಚರ್ಷಣಿಮ್**] ಎಲ್ಲರಿಗೂ ನೋಡಲು ಯೋಗ್ಯವಾದ [**ತೋಕಮ್**] ಪುತ್ರನು ಹಾಗೂ [**ತನಯಮ್**] ವಿದ್ವಾಂಸನಾದ ಪೌತ್ರನನ್ನು ಪಡೆದು [**ಶತಂ ಹಿಮಾಃ**] ನೂರು ಹೇಮಂತ ಋತುಗಳ ಪರ್ಯಂತ [**ಪುಷ್ಯೇಮ**] ಬಲ ಪರಾಕ್ರಮಗಳೊಂದಿಗೆ ಪುಷ್ಟರಾಗೋಣ. ಹಾಗೆಯೇ ಕರ್ಮಗಳನ್ನು ಮಾಡಿ ನೀವು ಕೂಡ ಸುಖವನ್ನು [**ಧತ್ತನ**] ಧಾರಣ ಮಾಡಿರಿ.

ಭಾವಾರ್ಥಃ- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ವಿದ್ವಾಂಸರು ಪವನಗಳ ಯೋಗದಿಂದ ನಮ್ಮ ವಿದ್ಯುತ್‌ಯಂತ್ರ, ಎತ್ತುಗಳು, ನೂರು ವರ್ಷಗಳ ಜೀವನ ಮತ್ತು ಶರೀರಾದಿಗಳಲ್ಲಿ ಪುಷ್ಟಿ ಈ ಎಲ್ಲ ಕೆಲಸಗಳಾಗುತ್ತವೆ. ಆದುದರಿಂದ ವಾಯುವಿದ್ಯೆಯನ್ನು ಯುಕ್ತಿಯಿಂದ ತಿಳಿದು ಉಪಯೋಗದಲ್ಲಿ ತರುತ್ತೇವೋ, ಹಾಗೆ ಬೇರೆಯವರು ಕೂಡ ಆಚರಣೆ ಮಾಡಲಿ.

ಮತ್ತೆ ಆ ವಾಯುವು ಹೇಗಿದೆ?

ನೂ ಷ್ಠಿರಂ ಮರುತೋ ವೀರವಂತ-ಮೃತೀಷಾಹಂ ರಯಿಮಸ್ಮಾಸು ಧತ್ತ ।
ಸಹಸ್ರಿಣಂ ಶತಿನಂ ಶೂಶುವಾಸಂ ಪ್ರಾತರ್ಮಕ್ಷೂ ಧಿಯಾವಸುರ್ಜಗಮ್ಯಾತ್ ॥೧೫॥

ಪದಾರ್ಥಃ- ಹೇ [**ಮರುತಃ**] ಪವನದಂತಿರುವವನೇ! ಹೇಗೆ ವಿದ್ವಾಂಸರು [**ಅಸ್ಮಾಸು**] ನಮ್ಮಲ್ಲಿ [**ಸ್ಥಿರಮ್**] ನಿಶ್ಚಲವಾದ [**ವೀರವಂತಮ್**] ಪ್ರಶಂಸೆಗೆ ಯೋಗ್ಯವಾದ [**ರಯಿಮ್**] ವಿದ್ಯಾರಾಜ್ಯ ಮತ್ತು ಸುವರ್ಣ ಮೊದಲಾದ ಧನವನ್ನು ಧಾರಣ ಮಾಡಲಿ. ಮತ್ತು [**ಧಿಯಾವಸುಃ**] ಬುದ್ಧಿ ಮತ್ತು ಕರ್ಮಗಳಿಂದ ಕೂಡಿದ ವಿದ್ವಾಂಸರು [**ಜಗಮ್ಯಾತ್**] ಶೀಘ್ರಪ್ರಾಪ್ತರಾಗಲಿ. ಹಾಗೆ ಅವರನ್ನು ನೀವು [**ಪ್ರಾತಃ**] ಪ್ರತಿದಿನ [**ಮಕ್ಷು**] ಶೀಘ್ರವಾಗಿ [**ಧತ್ತ**] ಧಾರಣ ಮಾಡಿರಿ.

ಭಾವಾರ್ಥಃ- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಈ ಮನುಷ್ಯರೇ! ನೀವು ಹೇಗೆ ಅತಿ ಪ್ರಶಂಸೆಗೆ ಯೋಗ್ಯ ವಿದ್ಯೆಯುಳ್ಳ ವಿದ್ಯಾ ಪುರುಷಾರ್ಥದಿಂದ ಕೂಡಿದ ವಿದ್ವಾಂಸರು ವಾಯು ಮೊದಲಾದ ಪದಾರ್ಥಗಳನ್ನು ಹತ್ತಿರದಿಂದ ದೃಢನಿಶ್ಚಲರಾಗಿ ಬಹಳ ಸುಖಗಳನ್ನು ಸಿದ್ಧಪಡಿಸಿ ಆನಂದವನ್ನು ಪಡೆಯುವಂತೆ ನೀವು ಕೂಡ ಈ ವಿದ್ಯೆಯನ್ನು ಪಡೆದು ಆನಂದವನ್ನು ಭೋಗಿಸಿರಿ.

ಈ ಸೂಕ್ತದಲ್ಲಿ ವಾಯುವಿನ ಗುಣಗಳ ವರ್ಣನೆಯಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಅರವತ್ತನಾಲ್ಕನೆಯ ಸೂಕ್ತ ಸಮಾಪ್ತ

ದ್ವಾದಶೋಽನುವಾಕಃ (ಸೂಕ್ತ ೬೫-೭೩)

ಸೂಕ್ತ ೬೫

ಮಂತ್ರಸಂಖ್ಯೆ ೫ । ಋಷಿಃ - ಪರಾಶರಃ ಶಾಕ್ತ್ಯಃ । ದೇವತಾ- ಅಗ್ನಿಃ । ಛಂದಃ - ದ್ವಿಪದಾ ವಿರಾಟ್ । ಸ್ವರಃ - ಪಂಚಮಃ

೬೫ನೇ ಸೂಕ್ತದ ಮೊದಲ ಮಂತ್ರದಲ್ಲಿ ಸರ್ವತ್ರವ್ಯಾಪಕವಾದ ಅಗ್ನಿ ಶಬ್ದದ ವಾಚ್ಯವಾದ ಯಾವ ಪದಾರ್ಥವಿರುವುದೋ ಅದರ ಉಪದೇಶ ಮಾಡಿದೆ.

ಪಶ್ವಾ ನ ತಾಯುಂ, ಗೃಹಾ ಚತಂತಂ ನಮೋ ಯುಜಾನಂ, ನಮೋ ವಹಂತಮ್ ।
ಸಜೋಷಾ ಧೀರಾಃ, ಪದೈರನು ಗ್ಮ-ನ್ನುಪತ್ವಾ ಸೀದನ್, ವಿಶ್ವೇ ಯಜತ್ರಾಃ ॥೧॥

ಪದಾರ್ಥಃ- ಹೇ ಸರ್ವವಿದ್ಯಾಯುಕ್ತ ಸಭೇಶನೇ! [**ವಿಶ್ವೇ**] ಎಲ್ಲ [**ಯಜತ್ರಾಃ**] ಸಂಗತಿಪ್ರಿಯ [**ಸಜೋಷಾಃ**] ಎಲ್ಲರಂತೆ ಪ್ರೀತಿಯನ್ನು ಮಾಡುವ [**ಧೀರಾಃ**] ಬುದ್ಧಿವಂತರು [**ಪದೈಃ**] ಪ್ರತ್ಯಕ್ಷವಾದ ಗುಣ ನಿಯಮಗಳಿಂದ [**ನ**] ಹೇಗೆ [**ಪಶ್ವಾ**] ಪಶುವನ್ನು ತೆಗೆದುಕೊಂಡು ಹೋಗುವ [**ತಾಯುಮ್**] ಚೋರನನ್ನು ಹಿಡಿದು ಆನಂದಿಸುವಂತೆ [**ಗುಹಾ**] ಗುಹೆಯಲ್ಲಿ [**ಚತಂತಮ್**] ವ್ಯಾಪ್ತವಾದ [**ನಮಃ**] ವಜ್ರದಂತೆ ಆಜ್ಞೆಯ [**ಯುಜಾನಮ್**] ಸಮಾಧಾನ ಮಾಡಲು [**ನಮಃ**] ಸತ್ಕಾರವನ್ನು [**ವಹಂತಮ್**] ಪಡೆಯುತ್ತಾ [**ತ್ವಾ**] ತಮ್ಮನ್ನು [**ಅನುಗ್ಮನ್**] ಅನುಕೂಲವಾಗಿ ಪಡೆದು ಹಾಗೂ [**ಉಪಸೀದನ್**] ಹತ್ತಿರ ಸ್ಥಿತವಾಗುತ್ತಾರೆ. ಆ ತಮ್ಮನ್ನು ನಾವು ಕೂಡ ಈ ಪ್ರಕಾರ ಪಡೆದು ತಮ್ಮ ಸಮೀಪ ಸ್ಥಿತರಾಗುತ್ತೇವೆ.

ಭಾವಾರ್ಥಃ- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮನುಷ್ಯರೇ! ನೀವು ಹೇಗೆ ವಸ್ತುವನ್ನು ಕದ್ದ ಕಳ್ಳನನ್ನು ಹಿಡಿದು ಆನಂದ ಪಡೆಯುತ್ತೀರೋ, ಹಾಗೆಯೇ ಅಂತಃಕರಣದಲ್ಲಿ ಉಪದೇಶ ಮಾಡುವ ಎಲ್ಲರ ಆಧಾರವೂ ವಿಜ್ಞಾನದಿಂದ ತಿಳಿಯಲು ಯೋಗ್ಯನಾದ ಪರಮೇಶ್ವರನ ಹಾಗೂ ವಿದ್ಯುತ್ ರೂಪ ಅಗ್ನಿಯನ್ನು ತಿಳಿದು ಮತ್ತು ಪಡೆದು ಎಲ್ಲ ಆನಂದವನ್ನೂ ಸ್ವೀಕರಿಸಿರಿ.

ಮತ್ತೆ ಅದನ್ನು ನಾವು ಹೇಗೆ ತಿಳಿಯಬೇಕು?

ಋತಸ್ಯ ದೇವಾ, ಅನು ವ್ರತಾ ಗು-ರ್ಭುವತ್ ಪರಿಷ್ಟಿರ್ದ್ಯೌರ್ನ ಭೂಮ ।
ವರ್ಧಂತೀಮಾಪಃ, ಪನ್ವಾ ಸುಶಿಶ್ವಿ-ಮೃತಸ್ಯ ಯೋನಾ, ಗರ್ಭೇ ಸುಜಾತಮ್ ॥೨॥

ಪದಾರ್ಥಃ- ಹೇ ಮನುಷ್ಯರೇ! [**ನ**] ಹೇಗೆ ವಿದ್ವಾಂಸರು [**ಪರಿಷ್ಟಿಃ**] ಎಲ್ಲ ಪ್ರಕಾರ ಹುಡುಕಲು ಯೋಗ್ಯವಾದ [**ದ್ಯೌಃ**] ಸೂರ್ಯ ಪ್ರಕಾಶದಂತೆ [**ಭುವತ್**] ಆಗಿ, ಎಲ್ಲ ಪದಾರ್ಥಗಳನ್ನು ದೃಷ್ಟಿಗೋಚರ ಮಾಡುವರೋ, ಹಾಗೆ [**ಋತಸ್ಯ**] ಸತ್ಯಧರ್ಮಸ್ವರೂಪ ಆಜ್ಞೆ ವಿಜ್ಞಾನಗಳಿಂದ [**ವ್ರತಾ**] ಸತ್ಯ ಭಾಷಣಾದಿ ನಿಯಮಗಳನ್ನು [**ಅನುಗುಃ**] ಪಡೆದು ಆಚರಣೆ ಮಾಡುವರು ಹಾಗೂ ಹೇಗೆ ಇವರು [**ಋತಸ್ಯ**] ಕಾರಣರೂಪೀ ಸತ್ಯದ [**ಯೋನಾ**] ಯೋನಿ ಅಂದರೆ ನಿಮಿತ್ತದಲ್ಲಿ ಸ್ಥಿತವಾದ [**ಸುಜಾತಮ್**] ಉತ್ತಮರೀತಿ ಪ್ರಸಿದ್ಧವಾದ [**ಸುಶಿಶ್ವಿಮ್**] ಉತ್ತಮವಾಗಿ ಓದಿಸುವ ಸಭಾಪತಿಯ [**ಪನ್ವಾ**] ಸ್ತುತಿ ಮಾಡಲು ಯೋಗ್ಯವಾದ ಕರ್ಮಗಳಿಂದ [**ಈಮ್**] ಪೃಥಿವಿಯನ್ನು [**ಆಪಃ**] ಜಲ ಅಥವಾ ಪ್ರಾಣವನ್ನು [**ವರ್ಧಂತಿ**] ವೃದ್ಧಿಸಿ ಜ್ಞಾನಯುಕ್ತರನ್ನಾಗಿ ಮಾಡುತ್ತಾರೆ. ಹಾಗೆಯೇ ನಾವು [**ಭೂಮ**] ಆಗೋಣ ಮತ್ತು ನೀವು ಕೂಡ ಆಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ಹೇಗೆ ಸೂರ್ಯನ ಪ್ರಕಾಶದಿಂದ ಎಲ್ಲ ಪದಾರ್ಥಗಳು ದೃಷ್ಟಿಗೋಚರವಾಗುತ್ತವೋ, ಹಾಗೆಯೇ ವಿದ್ವಾಂಸರ ಸಂಗದಿಂದ ವೇದ ವಿದ್ಯೆಯು ಉತ್ಪನ್ನವಾಗಿ ಮತ್ತು ಧರ್ಮಾಚರಣೆಯ ಪ್ರವೃತ್ತಿಯಲ್ಲಿ ಪರಮೇಶ್ವರ ಮತ್ತು ವಿದ್ಯುತ್ತು ಮೊದಲಾದ ಪದಾರ್ಥಗಳು ತಮ್ಮ ತಮ್ಮ ಗುಣ, ಕರ್ಮ, ಸ್ವಭಾವಗಳಿಂದ ಉತ್ತಮವಾಗಿ ನೋಡಲ್ಪಡುತ್ತವೆ. ಹಾಗೆ ನೀವೂ ತಿಳಿದು ತಮ್ಮ ವಿಚಾರಗಳಿಂದ ನಿಶ್ಚಿತರಾಗಿರಿ.

ಮತ್ತೆ ಆ ಪರಮಾತ್ಮನು ಹೇಗಿರುವನು?

ಪುಷ್ಟಿರ್ನ ರಣ್ವಾ, ಕ್ಷಿತಿರ್ನ ಪೃಥ್ವೀ ಗಿರಿರ್ನ ಭುಜ್ಮ, ಕ್ಷೋದೋ ನ ಶಂಭು ।

ಅತ್ಯೋ ನಾಜ್ಮನ್, ತ್ಸರ್ಗಪ್ರತಕ್ತಃ ಸಿಂಧುರ್ನ ಕ್ಷೋದಃ, ಕ ಈಂ ವರಾತೇ ॥೩॥

ಪದಾರ್ಥ:- ಯಾವನು ಆ ಪರಮೇಶ್ವರನನ್ನು [**ರಣ್ವಾ**] ಸುಖವುಂಟುಮಾಡುವ [**ಪುಷ್ಟಿಃ**] ಶರೀರ, ಆತ್ಮ ಮತ್ತು ಇಂದ್ರಿಯಗಳ ಪುಷ್ಟಿಯ [**ನ**] ಸಮಾನ [**ಕ್ಷೋದಃ**] ಜಲ [**ಶಂಭು**] ಸುಖಸಂಪನ್ನ ಪಡಿಸುವ [**ನ**] ಸಮಾನ ಹಾಗೂ [**ಅಜ್ಮನ್**] ಮಾರ್ಗದಲ್ಲಿ [**ಅತ್ಯಃ**] ಕುದುರೆಯಂತೆ [**ಸರ್ಗಪ್ರತಕ್ತಃ**] ಜಲವನ್ನು ಸಂಕೋಚ ಪಡಿಸುವ [**ಸಿಂಧುಃ**] ಸಮುದ್ರವು [**ಕ್ಷೋದಃ**] ಜಲದ [**ನ**] ಸಮಾನ [**ಈಮ್**] ತಿಳಿಯಲು ಮತ್ತು ಪಡೆಯಲು ಯೋಗ್ಯ ಪರಮೇಶ್ವರನ ಅಥವಾ ವಿದ್ಯುತ್ ರೂಪ ಅಗ್ನಿಯನ್ನು [**ಕಃ**] ಯಾವ ವಿದ್ವಾಂಸನು [**ವರಾತೇ**] ಸ್ವೀಕರಿಸುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಯಾವನೇ ವಿದ್ವಾಂಸನು ಪರಮೇಶ್ವರನನ್ನು ಪಡೆದು ಮತ್ತು ವಿದ್ಯುದ್ರೂಪ ಅಗ್ನಿಯನ್ನು ತಿಳಿದು ಅದರಿಂದ ಉಪಕಾರ ಪಡೆಯಲು ಸಮರ್ಥನಾಗುವನೋ ಹಾಗೆ ಉತ್ತಮ ಪುಷ್ಟಿ, ಪೃಥಿವಿಯ ರಾಜ್ಯ, ಮೇಘದ ವೃಷ್ಟಿ, ಉತ್ತಮ ಜಲ, ಉತ್ತಮ ಕುದುರೆ ಮತ್ತು ಸಮುದ್ರವು ಬಹಳ ಸುಖಗಳನ್ನು ಪ್ರಾಪ್ತಪಡಿಸುತ್ತದೆ ಹಾಗೆಯೇ ಪರಮೇಶ್ವರ ಮತ್ತು ವಿದ್ಯುತ್ತು ಕೂಡ ಎಲ್ಲ ಆನಂದವನ್ನುಂಟು ಮಾಡುತ್ತವೆ. ಆದರೆ ಇವೆರಡನ್ನೂ ತಿಳಿದ ವಿದ್ವಾಂಸನು ದುರ್ಲಭವು.

ಈಗ ಭೌತಿಕ ಅಗ್ನಿಯು ಹೇಗಿದೆ?

ಜಾಮಿಃ ಸಿಂಧೂನಾಂ, ಭ್ರಾತೇವ ಸ್ವಸ್ರಾ-ಮಿಭ್ಯಾನ್ನ ರಾಜಾ, ವನಾನ್ಯತ್ತಿ ।

ಯದ್ ವಾತಜೂತೋ, ವನಾ ವ್ಯಸ್ಥಾ-ದಗ್ನಿರ್ಹ ದಾತಿ, ರೋಮಾ ಪೃಥಿವ್ಯಾಃ ॥೪॥

ಪದಾರ್ಥ:- [**ಯತ್**] ಯಾವ [**ವಾತಜೂತಃ**] ವಾಯುವಿನಿಂದ ವೇಗವನ್ನು ಪಡೆದ [**ಅಗ್ನಿಃ**] ಅಗ್ನಿಯು [**ವನಾ**] ವನಗಳನ್ನು [**ದಾತಿ**] ಛೇದನ ಮಾಡುತ್ತಾ ಹಾಗೂ [**ಪೃಥಿವ್ಯಾಃ**] ಪೃಥಿವಿಯನ್ನು [**ಹ**] ನಿಶ್ಚಯವಾಗಿ [**ರೋಮಾ**] ರೋಮಗಳಂತೆ ಛೇದನ ಮಾಡುತ್ತದೋ ಅದು [**ಸಿಂಧೂನಾಮ್**] ಸಮುದ್ರ ಮತ್ತು ನದಿಗಳ [**ಜಾಮಿಃ**] ಸುಖಪಡಿಸುವ ಬಂಧುವು [**ಸ್ವಸ್ರಾಮ್**] ಸಹೋದರಿಯರ [**ಭ್ರಾತೇನ**] ಸಹೋದರರಂತೆ ಹಾಗೂ [**ಇಭ್ಯಾನ್**] ಆನೆಗಳನ್ನು ರಕ್ಷಿಸುವ ಮಾವಟಿಗರನ್ನು [**ರಾಜೇವ**] ರಾಜನಂತೆ [**ವ್ಯಸ್ಥಾತ್**] ಸ್ಥಿತನಾಗುತ್ತಾ ಮತ್ತು [**ವನಾನಿ**] ವನಗಳನ್ನು [**ವೃತ್ತಿ**] ಅನೇಕ ಪ್ರಕಾರ ಭಕ್ಷಿಸುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ಎರಡು ಉಪಮಾಲಂಕಾರಗಳಿವೆ. ಯಾವಾಗ ಮನುಷ್ಯರು ಯಾವ ಚಾಲನೆ ಮೊದಲಾದ ಕಾರ್ಯಗಳಲ್ಲಿ ವಾಯುವಿನಿಂದ ಸಂಯುಕ್ತವಾದ ಅಗ್ನಿಯನ್ನು ಚಲಿಸುತ್ತಾರೆ. ಆಗ ಅದು ಬಹಳ ಕಾರ್ಯಗಳನ್ನು ಸಿದ್ಧಮಾಡುತ್ತದೆ. ಹಾಗೆ ಎಲ್ಲ ಮನುಷ್ಯರೂ ತಿಳಿಯಬೇಕು.

ಮತ್ತೆ ಆ ಸಭೇಶನು ಹೇಗಿರಬೇಕು?

ಶ್ವಸಿತ್ಯಪ್ಸು ಹಂಸೋ ನ ಸೀದನ್ ಕ್ರತ್ವಾ ಚೇತಿಷ್ಠೋ, ವಿಶಾಮುಷರ್ಭುತ್ ।

ಸೋಮೋ ನ ವೇಧಾ, ಋತಪ್ರಜಾತಃ ಪಶುರ್ನ ಶಿಶ್ವಾ, ವಿಭುರ್ದೂರೇಭಾಃ ॥೫॥

ಪದಾರ್ಥ:- ಹೇ ಮನುಷ್ಯರೇ! ನೀವು [**ಅಪ್ಸು**] ಜಲಗಳಲ್ಲಿ [**ಹಂಸಃ**] [**ನ**] ಹಂಸ ಪಕ್ಷಿಯಂತೆ [**ಸೀದನ್**] ಹೋಗಿ ಬರುತ್ತಾ, ಮುಳುಗುತ್ತಾ ತೇಲುತ್ತಾ [**ವಿಶಾಮ್**] ಪ್ರಜೆಗಳನ್ನು [**ಉಷರ್ಭುತ್**] ಪ್ರಾತಃಕಾಲದಲ್ಲಿ ಬೋಧಿಸುವ ಅಥವಾ [**ಕ್ರತ್ವಾ**] ತನ್ನ ಬುದ್ಧಿ ಅಥವಾ ಕರ್ಮಗಳಿಂದ [**ಚೇತಿಷ್ಠಃ**] ಅತ್ಯಂತ ಜ್ಞಾನವನ್ನುಂಟುಮಾಡುವ [**ಸೋಮಃ**] ಓಷಧಿ ಸಮೂಹದಂತೆ [**ಋತಪ್ರಜಾತಃ**] ಕಾರಣದಿಂದ ಉತ್ಪನ್ನವಾಗಿ ವಾಯುವು ಜಲದಲ್ಲಿ ಪ್ರಸಿದ್ಧವಾದ [**ವೇಧಾಃ**] ಪುಷ್ಟಗೊಳಿಸುವ [**ಶಿಶುನಾ**] ಕರು ಮೊದಲಾದವುಗಳಿಂದ [**ಪಶುಃ ನ**] ಗೋವು ಮೊದಲಾದವುಗಳಂತೆ [**ವಿಭುಃ**] ವ್ಯಾಪಕವಾದ [**ದೂರೇಭಾಃ**] ದೂರದೇಶದಲ್ಲಿ ದೀಪ್ತಿಯುಕ್ತ ವಿದ್ಯುತ್ತು ಮೊದಲಾದ ಅಗ್ನಿಯಂತೆ [**ಶ್ವಸಿತಿ**] ಪ್ರಾಣ ಅಪಾನ, ಮೊದಲಾದವುಗಳನ್ನು ಮಾಡುತ್ತದೆ. ಅದನ್ನು ಶಿಲ್ಪಾದಿ ಕಾರ್ಯಗಳಲ್ಲಿ ಸಂಪ್ರಯುಕ್ತಗೊಳಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ವಿದ್ಯುತ್ತಿನ ಹೊರತು ಮನುಷ್ಯನ ವ್ಯವಹಾರಗಳ ಸಿದ್ಧಿಯಾಗುವುದಿಲ್ಲ, ಈ ಅಗ್ನಿವಿದ್ಯೆಯಿಂದ ಪರೀಕ್ಷೆ ಮಾಡಿ ಕಾರ್ಯಗಳಲ್ಲಿ ಸಂಯುಕ್ತಗೊಳಿಸಿರುವ ಅಗ್ನಿಯು ಬಹಳ ಸುಖಗಳನ್ನು ಸಿದ್ಧಮಾಡುತ್ತದೆ.

ಈ ಸೂಕ್ತದಲ್ಲಿ ಈಶ್ವರ, ಅಗ್ನಿರೂಪ ವಿದ್ಯುತ್ತಿನ ವರ್ಣನೆಯಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಅರವತ್ತೈದನೆಯ ಸೂಕ್ತ ಸಮಾಪ್ತ

ಸೂಕ್ತ ೬೬

ಮಂತ್ರಸಂಖ್ಯೆ ೫ । ಋಷಿಃ - ಪರಾಶರಃ ಶಾಕ್ತ್ಯಃ । ದೇವತಾ - ಅಗ್ನಿಃ । ಛಂದಃ -ದ್ವಿಪದಾ ವಿರಾಟ್ । ಸ್ವರಃ - ಪಂಚಮಃ

೬೬ನೇ ಸೂಕ್ತದ ಮೊದಲ ಮಂತ್ರದಲ್ಲಿ ಪೂರ್ವೋಕ್ತ ಅಗ್ನಿಯ ಗುಣಗಳ ಉಪದೇಶ ಮಾಡಿದೆ.

ರಯಿರ್ನ ಚಿತ್ರಾ, ಸೂರೋ ನ ಸಂದೃ-ಗಾಯುರ್ನ ಪ್ರಾಣೋ, ನಿತ್ಯೋ ನ ಸೂನುಃ ।

ತಕ್ವಾ ನ ಭೂರ್ಣಿರ್ವನಾ ಸಿಷಕ್ತಿ ಪಯೋ ನ ಧೇನುಃ, ಶುಚಿರ್ವಿಭಾವಾ ॥೧॥

ಪದಾರ್ಥ:- ಹೇ ಮನುಷ್ಯರೇ! ತಾವೆಲ್ಲರೂ [**ರಯಿರ್ನ**] ದ್ರವ್ಯ ಸಮೂಹದಂತೆ [**ಚಿತ್ರಾ**] ಆಶ್ಚರ್ಯಗುಣವುಳ್ಳ [**ಸೂರಃ**] [**ನ**] ಸೂರ್ಯನಂತೆ [**ಸಂದೃಕ್**] ಉತ್ತಮವಾಗಿ ತೋರಿಸುವ [**ಆಯುಃ**] [**ನ**] ಜೀವನದಂತೆ [**ಸೂನುಃ**] ಕಾರ್ಯರೂಪದಿಂದ ವಾಯುವಿನ ಪುತ್ರನಂತಿರುವ [**ಪಯಃ ನ**] ಹಾಲಿನಂತೆ [**ಧೇನುಃ**] ಹಾಲು ಕೊಡುವ ಹಸುವು [**ತಕ್ವ ನ**] ಕಳ್ಳನಂತೆ [**ಭೂರ್ಣಿಃ**] ಧಾರಣ ಮಾಡಲು [**ವಿಭಾವಾ**] ಅನೇಕ ಪದಾರ್ಥಗಳನ್ನು ಪ್ರಕಾಶ ಪಡಿಸುವ [**ಶುಚಿಃ**] ಪವಿತ್ರಾಗ್ನಿಯು [**ವನಾ**] ವನ ಅಥವಾ ಕಿರಣಗಳನ್ನು [**ಸಿಸಕ್ತಿ**] ಸಂಯುಕ್ತವಾಗುತ್ತಾ ಅಥವಾ ಸಂಯೋಗ ಪಡಿಸುತ್ತದೆ. ಅದನ್ನು ಯಥಾವತ್ತಾಗಿ ತಿಳಿದು ಕಾರ್ಯಗಳಲ್ಲಿ ಉಪಯೋಗಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರಿಗೆ ಉಚಿತವಾಗಿರುವುದೇನೆಂದರೆ, ಈಶ್ವರನು ಪ್ರಜೆಗಳ ಹಿತಕ್ಕಾಗಿ ಬಹಳ ಗುಣವುಳ್ಳ ಅನೇಕ ಕಾರ್ಯಗಳಿಗೆ ಉಪಯೋಗವಾಗುವ ಸತ್ಯ ಸ್ವಭಾವವುಳ್ಳ ಈ ಅಗ್ನಿಯನ್ನು ಸೃಷ್ಟಿಸಿರುವನು. ಅವನ ಉಪಾಸನೆಯನ್ನೇ ಸದಾ ಮಾಡಿರಿ.

ಮತ್ತೆ ಆ ಮನುಷ್ಯನು ಹೇಗಿರಬೇಕು?

ದಾಧಾರ ಕ್ಷೇಮಮೋಕೋ ನ ರಣ್ವೋ ಯವೋ ನ ಪಕ್ವೋ, ಜೇತಾ ಜನಾನಾಮ್ ।
ಋಷಿರ್ನ ಸ್ತುಭ್ವಾ, ವಿಕ್ಷು ಪ್ರಶಸ್ತೋ ವಾಜೀ ನ ಪ್ರೀತೋ, ವಯೋ ದಧಾತಿ ॥೨॥

ಪದಾರ್ಥ:- ಯಾವನು **[ಓಕಃ]** **[ನ]** ಮನೆಯಂತೆ **[ರಣ್ವಃ]** ರಮಣೀಯವಾಗಿ **[ಪಕ್ವಃ]** ಪಕ್ವವಾದ **[ಯವಃ]** **[ನ]** ಸುಖವನ್ನು ಕೊಡುವ ಗೋಧಿಯಂತೆ **[ಸ್ತುಭ್ವಾ]** ಸತ್ಕಾರಕ್ಕೆ ಯೋಗ್ಯವಾದ **[ವಾಜೀ]** ವೇಗವಂತ ಕುದುರೆಯಂತೆ **[ಪ್ರೀತಃ]** ಕಮನೀಯ **[ವಿಕ್ಷು]** ಪ್ರಜೆಗಳಲ್ಲಿ **[ಪ್ರಶಸ್ತಃ]** ಶ್ರೇಷ್ಠನಾದ **[ಜನಾನಾಮ್]** ಮನುಷ್ಯ ಮೊದಲಾದ ಪ್ರಾಣಿಗಳನ್ನು **[ಜೇತಾ]** ಸುಖಪಡಿಸುವ **[ವಯಃ]** ಜೀವನವನ್ನು **[ದಧಾತಿ]** ಧಾರಣಮಾಡುತ್ತಾನೋ ಅವನು **[ಕ್ಷೇಮಮ್]** ರಕ್ಷಣೆಯನ್ನು **[ದಾಧಾರ]** ಧಾರಣಮಾಡುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾರು ಜೀವನದ ನಿಮಿತ್ತ ಬ್ರಹ್ಮಚರ್ಯಾದಿ ಕರ್ಮಗಳನ್ನು ಕಾಮನೆಗಳ ಸಿದ್ಧಿಗಾಗಿ ಉತ್ತಮವಾಗಿ ತಿಳಿದು ಯುಕ್ತಿ ಪೂರ್ವಕವಾಗಿ ಆಹಾರ ಮತ್ತು ವಿಹಾರಾರ್ಥ ಯಥಾಯೋಗ್ಯ ಪದಾರ್ಥಗಳನ್ನು ಧಾರಣಮಾಡುತ್ತಾರ್ರೋ, ಅವರೇ ಬಹಳ ಕಾಲದವರೆಗೂ ಬಾಳಿ ಸದಾ ಸುಖಿಗಳಾಗುವರು.

ಮತ್ತೆ ಅವನು ಹೇಗಿರುವನು?

ದುರೋಕಶೋಚಿಃ, ಕ್ರತುರ್ನ ನಿತ್ಯೋ ಜಾಯೇವ ಯೋನಾವರಂ ವಿಶ್ವಸ್ಮೈ ।
ಚಿತ್ರೋ ಯದಭ್ರಾಟ್, ಛ್ವೇತೋ ನ ವಿಕ್ಷು ರಥೋ ನ ರುಕ್ಮೀ, ತ್ವೇಷಃ ಸಮತ್ಸು ॥೩॥

ಪದಾರ್ಥ:- **[ಯತ್]** ಯಾವ ಮನುಷ್ಯನು **[ಕ್ರತುಃ]** ಬುದ್ಧಿ ಅಥವಾ ಕರ್ಮದ **[ನ]** ಸಮಾನವಾಗಿ **[ನಿತ್ಯಃ]** ಅವಿನಾಶಿ ಸ್ವಭಾವದ **[ಜಾಯೇವ]** ಪತ್ನಿಯಂತೆ **[ಯೋನೌ]** ಕಾರಣ ರೂಪದಲ್ಲಿ **[ಅರಮ್]** ಅಲಂಕರ್ತನು **[ಶ್ವೇತಃ]** **[ನ]** ಶುದ್ಧ ವರ್ಣದಂತೆ **[ವಿಕ್ಷು]** ಪ್ರಜೆಗಳನ್ನು ಶುದ್ಧ ಮಾಡಲು **[ರಥಃ]** **[ನ]** ಸುವರ್ಣಾದಿಗಳಿಂದ ನಿರ್ಮಿಸಿದ ವಿಮಾನಾದಿ ಯಾನಗಳಂತೆ **[ರುಕ್ಮೀ]** ರುಚಿಯುಂಟು ಮಾಡುವ ಕರ್ಮಗಳು ಅಥವಾ ಗುಣಯುಕ್ತ **[ದುರೋಕಶೋಚಿಃ]** ದೂರಸ್ಥಾನಗಳಲ್ಲಿ ದೀಪ್ತಿಯುಕ್ತ **[ವಿಶ್ವಸ್ಮೈ]** ಎಲ್ಲ ಜಗತ್ತಿಗೆ ಸುಖವನ್ನುಂಟುಮಾಡುವ **[ಸಮತ್ಸು]** ಸಂಗ್ರಾಮಗಳಲ್ಲಿ **[ಚಿತ್ರಃ]** ಅದ್ಭುತ ಸ್ವಭಾವಯುಕ್ತ **[ಅಭ್ರಾಟ್]** ತಾವೇ ಪ್ರಕಾಶಮಾನವಾಗುವುದರಿಂದ ಶುದ್ಧ **[ತ್ವೇಷಃ]** ಪ್ರದೀಪ್ತ ಸ್ವಭಾವವುಳ್ಳವನಾಗಿರುವನೋ, ಅವನೇ ಚಕ್ರವರ್ತಿಯಾಗಲು ಯೋಗ್ಯನಾಗುವನು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವನು ಜ್ಞಾನಿಯು ಕರ್ಮಕಾಂಡದಂತೆ ಸದಾ ವರ್ತಮಾನನು, ಅನುಕೂಲ ಸ್ತ್ರೀಯಂತೆ ಸುಖಗಳ ನಿಮಿತ್ತ, ಸೂರ್ಯನಂತೆ ಶುಭ ಗುಣಗಳನ್ನು ಪ್ರಕಾಶ ಪಡಿಸುವನು, ಆಶ್ಚರ್ಯಗುಣವುಳ್ಳ ಪ್ರಗತಿಮಾರ್ಗದಂತೆ ಮೋಕ್ಷವನ್ನು ಪ್ರಾಪ್ತಿ ಪಡಿಸಲು, ವೀರನಂತೆ ಯುದ್ಧದಲ್ಲಿ ವಿಜಯ ಉಂಟುಮಾಡುತ್ತಾನೋ, ಅವನೇ ರಾಜ್ಯ ಲಕ್ಷ್ಮಿಯನ್ನು ಪಡೆಯುತ್ತಾನೆ.

ಮತ್ತೆ ಅವನು ಹೇಗಿರುವನು?

ಸೇನೇವ ಸೃಷ್ಟಾಮಂ ದಧಾತ್ಯ-ಸ್ತುರ್ನ ದಿದ್ಯುತ್, ತ್ವೇಷಪ್ರತೀಕಾ ।
ಯಮೋ ಹ ಜಾತೋ, ಯಮೋ ಜನಿತ್ವಂ ಜಾರಃ ಕನೀನಾಂ, ಪತಿರ್ಜನೀನಾಮ್ ॥೪॥

ಪದಾರ್ಥ:- ಹೇ ಮನುಷ್ಯರೇ! ನೀವು ಸೇನಾಪತಿಯು **[ಯಮಃ]** ನಿಯಮ ಮಾಡುವವನು **[ಜಾತಃ]** ಪ್ರಕಟನು **[ಯಮಃ]** ಸರ್ವಥಾ ನಿಯಮ ಕರ್ತನು **[ಜನಿತ್ವಮ್]** ಜನ್ಮಾದಿಕಾರಣಯುಕ್ತ **[ಕನೀನಾಮ್]** ಕನ್ಯೆಯಂತಿರುವ ರಾತ್ರಿಗಳ **[ಜಾರಃ]** ಆಯುವನ್ನು ಹರಣಮಾಡುವ ಸೂರ್ಯನಂತೆ **[ಜನೀನಾಮ್]** ಉತ್ಪನ್ನರಾದ ಪ್ರಜೆಗಳ **[ಪತಿಃ]** ಪಾಲನಕರ್ತನು **[ಸೃಷ್ಟಾ]** ಪ್ರೇರಕನು **[ಸೇನೇವ]** ಉತ್ತಮ ಶಿಕ್ಷಣವನ್ನು ಪಡೆದ ವೀರ ಪುರುಷರ, ವಿಜಯ ಪಡೆಯುವ ಸೇನೆಯಂತೆ **[ಅಸ್ತುಃ]** ಶತ್ರುಗಳ ಮೇಲೆ ಅಸ್ತ್ರ-ಶಸ್ತ್ರಗಳನ್ನು ಬಿಡುವ **[ತ್ವೇಷಪ್ರತೀಕಾ]** ದೀಪ್ತಿಗಳ ಪ್ರತೀತಿ ಮಾಡುವ **[ವಿದ್ಯುನ್ನ]** ವಿದ್ಯುತ್ತಿನಂತೆ **[ಅಮಮ್]** ಅಪರಿಪಕ್ವ ವಿಜ್ಞಾನಯುಕ್ತ ಜನರನ್ನು **[ದಧಾತಿ]** ಧಾರಣ ಮಾಡುತ್ತಾನೋ, ಅವನನ್ನು ಸೇವಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ವಿದ್ಯೆಯಿಂದ, ಉತ್ತಮ ಪ್ರಯತ್ನದಿಂದ ಹೇಗೆ ಉತ್ತಮ ಶಿಕ್ಷಣದಿಂದ ಸಿದ್ಧವಾದ ಸೇನೆಯು ಶತ್ರುಗಳನ್ನು ಜಯಿಸಿ ವಿಜಯ ಪಡೆಯುತ್ತದೋ, ಹಾಗೆ ಧನುರ್ವೇದವನ್ನು ತಿಳಿದ ವಿದ್ವಾಂಸರು ಶತ್ರುಗಳ ಮೇಲೆ ಶಸ್ತ್ರಾಸ್ತ್ರಗಳನ್ನು ಬಿಟ್ಟು ಅವರನ್ನು ಛೇದಿಸಿ ಓಡಿಸುತ್ತಾರೋ, ಹಾಗೆ ಉತ್ತಮ ಸೇನಾಪತಿಯು ಎಲ್ಲ ದುಃಖಗಳನ್ನು ನಾಶ ಮಾಡುತ್ತಾನೆ ಎಂಬುದಾಗಿ ತಿಳಿಯಿರಿ.

ಮತ್ತೆ ಅವನು ಹೇಗಿರುವನು?

ತಂ ವಶ್ಚರಾಥಾ, ವಯಂ ವಸತ್ಯಾ-ಸ್ತಂ ನ ಗಾವೋ, ನಕ್ಷಂತ ಇದ್ಧಮ್ ।
ಸಿಂಧುರ್ನ ಕ್ಷೋದಃ, ಪ್ರ ನೀಚೈರೈನೋ-ನ್ನವಂತ ಗಾವಃ, ಸ್ವರ್ದೃಶೀಕೇ ॥೫॥

ಪದಾರ್ಥ:- **[ಚರಾಥಾ]** ಚರರೂಪ **[ವಸತ್ಯಾ]** ವಾಸ ಮಾಡಲು ಯೋಗ್ಯವಾದ ಪೃಥಿವಿಯಂತಿರುವ **[ಗಾವಃ]** ಗೋವು **[ನ]** ಹೇಗೆ **[ಅಸ್ತಮ್]** ಮನೆಯನ್ನು **[ನಕ್ಷಂತೇ]** ಸೇರುವುದೋ **[ನ]** ಹೇಗೆ **[ಸಿಂಧುಃ]** ಸಮುದ್ರವು **[ನೀಚೈಃ]** ಕೆಳಗಿನ **[ಕ್ಷೋದಃ]** ಜಲವನ್ನು ಪಡೆಯುತ್ತದೋ ಹಾಗೆ **[ವಃ]** ನಿಮ್ಮನ್ನು **[ಪ್ರೈನೋತ್]** ಪಡೆಯುತ್ತಾನೋ, ಅವನ ಸೇವೆಯನ್ನು ನಾವು ಮಾಡೋಣ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಸಭಾಪತಿ ಮೊದಲಾದವರು ಹೀಗೆ ಪರಮೇಶ್ವರನ ಸೇವನೆ ಮತ್ತು ವಿದ್ಯುದಗ್ನಿಯನ್ನು ಸಿದ್ಧಪಡಿಸುವರೋ, ಅದರಂತೆ ಗೋವು, ಮನೆ ಮತ್ತು ಕಿರಣಗಳು ಸೂರ್ಯನನ್ನು ಪಡೆಯುತ್ತವೆ. ಮತ್ತು ಹೇಗೆ ಮನುಷ್ಯರು ಸಮುದ್ರವನ್ನು ಪಡೆದು ನಾನಾ ಪ್ರಕಾರದ ಕಾರ್ಯಗಳನ್ನು ಸುಶೋಭಿತ ಮಾಡುತ್ತಾರೋ ಹಾಗೆಯೇ ಸಜ್ಜನರಿಗೆ ಉಚಿತವಾದುದೇನೆಂದರೆ, ಅಂತರ್ಯಾಮಿ ಪರಮೇಶ್ವರನ ಉಪಾಸನೆ ಹಾಗೂ ವಿದ್ಯುತ್ ವಿದ್ಯೆಯನ್ನು ಯಥಾವತ್ ಸಿದ್ಧ ಮಾಡಿ ತನ್ನ ಎಲ್ಲ ಕಾಮನೆಗಳನ್ನು ಪೂರ್ಣಮಾಡಬೇಕು.

ಈ ಸೂಕ್ತದಲ್ಲಿ ಈಶ್ವರ ಮತ್ತು ಅಗ್ನಿಯ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಅರವತ್ತಾರನೆಯ ಸೂಕ್ತ ಸಮಾಪ್ತ

ಸೂಕ್ತ ೬೭

ಮಂತ್ರಸಂಖ್ಯೆ ೫ । ಋಷಿಃ - ಪರಾಶರಃ ಶಾಕ್ತ್ಯಃ । ದೇವತಾ- ಅಗ್ನಿಃ । ಛಂದಃ - ದ್ವಿಪದಾ ವಿರಾಟ್ । ಸ್ವರಃ - ಪಂಚಮಃ.

೬೭ನೇ ಸೂಕ್ತದ ಮೊದಲ ಮಂತ್ರದಲ್ಲಿ ವಿದ್ವಾಂಸನು ಹೇಗಿರಬೇಕು, ಈ ವಿಷಯವನ್ನು ಹೇಳಿದೆ.

ವನೇಷು ಜಾಯುರ್ಮರ್ತೇಷು ಮಿತ್ರೋ ವೃಣೀತೇ ಶ್ರುಷ್ಟಿಂ ರಾಜೇವಾಜುರ್ಯಮ್ ।
ಕ್ಷೇಮೋ ನ ಸಾಧುಃ, ಕ್ರತುರ್ನ ಭದ್ರೋ ಭುವತ್ ಸ್ವಾಧೀ, ಹೋತಾ ಹವ್ಯವಾಟ್ ॥೧॥

ಪದಾರ್ಥ:- ಹೇ ಮನುಷ್ಯರೇ! ನೀವು ವಿದ್ವಾಂಸನನ್ನು [**ವನೇಷು**] ಸರಿಯಾಗಿ ಸೇವನೆ ಮಾಡಲು ಯೋಗ್ಯವಾದ ಪದಾರ್ಥಗಳನ್ನು [**ಜಾಯುಃ**] ಗೆಲ್ಲುವುದಕ್ಕಾಗಿ ಸೂರ್ಯನಂತೆ [**ಅಜುರ್ಯಮ್**] ಯುದ್ಧ ವಿದ್ಯೆಯಿಂದ ಸಂಗತವಾದ ಸೇನೆಯಂತೆ ಯೋಗ್ಯವಾದ [**ಶ್ರುಷ್ಟಿಮ್**] ಶೀಘ್ರತೆ ಮಾಡುವವನನ್ನು [**ರಾಜೇವ**] ರಾಜನಂತೆ [**ಕ್ಷೇಮಃ**] ರಕ್ಷಕನೂ [**ಸಾಧು**] ಸತ್ಪುರುಷನಂತೆ [**ಭದ್ರಃ**] ಕಲ್ಯಾಣಕಾರಿಯೂ [**ಕ್ರತುರ್ನ**] ಉತ್ತಮ ಬುದ್ಧಿ ಮತ್ತು ಕರ್ಮಕರ್ತನಂತೆ [**ಸ್ವಾಧೀಃ**] ಉತ್ತಮವಾಗಿ ಧಾರಣ ಮಾಡಲು [**ಹೋತಾ**] ಕೊಡಲು ಮತ್ತು ಅನುಗ್ರಹ ಮಾಡಲು ಮತ್ತು [**ಹವ್ಯವಾಟ್**] ಕೊಡು-ತೆಗೆದುಕೊಳ್ಳಲು ಯೋಗ್ಯವಾದ ಪದಾರ್ಥಗಳನ್ನು ಪ್ರಾಪ್ತಪಡಿಸುವವನು [**ಭುವತ್**] ಆಗು. ಹಾಗೂ ಧರ್ಮಾತ್ಮರನ್ನು [**ವೃಣೀತೇ**] ಸ್ವೀಕರಿಸು, ಅವರನ್ನು ಸದಾ ಸೇವಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಮನುಷ್ಯರಿಗೆ ಉಚಿತವಾದುದೇನೆಂದರೆ, ವಿದ್ವಾಂಸರ ಸಂಗ ಮಾಡಿ ಯಾವಾಗಲೂ ಆನಂದವನ್ನು ಭೋಗಿಸಬೇಕು.

ಮತ್ತೆ ಆ ವಿದ್ವಾಂಸನು ಹೇಗಿರಬೇಕು?

ಹಸ್ತೇ ದಧಾನೋ, ನೃಮ್ಣಾ ವಿಶ್ವಾ-ನ್ಯಮೇ ದೇವಾನ್ ಧಾದ್, ಗುಹಾ ನಿಷೀದನ್ ।
ವಿದಂತೀಮತ್ರ, ನರೋ ಧಿಯಂಧಾ ಹೃದಾ ಯತ್ ತಷ್ಟಾನ್, ಮಂತ್ರಾ ಅಶಂಸನ್ ॥೨॥

ಪದಾರ್ಥ:- [**ಯತ್**] ಯಾವ [**ನರಃ**] ಪ್ರಾಪ್ತಿ ಪಡಿಸುವ ಮನುಷ್ಯನು ಹೇಗೆ [**ಧಿಯಂಧಾಃ**] ಪ್ರಜ್ಞೆ, ಕರ್ಮಗಳನ್ನು ಧಾರಣಮಾಡುವ ವಿದ್ವಾಂಸರು [**ತಷ್ಟಾನ್**] ವಿದ್ಯೆಗಳನ್ನು ತೀಕ್ಷ್ಣ ಮಾಡುವವನು [**ಮಂತ್ರಾನ್**] ವೇದಗಳ ಅವಯವಗಳನ್ನು ಅಥವಾ ವಿಚಾರರೂಪೀ ಮಂತ್ರಗಳನ್ನು [**ವಿದಂತಿ**] ತಿಳಿಯುತ್ತಾ [**ಅಶಂಸನ್**] ಸ್ತುತಿ ಮಾಡುತ್ತಾನೋ, ಹೇಗೆ ದಾನಮಾಡುವ ಉದಾರಿಯು [**ಹಸ್ತೇ**] ಕೈಗಳಲ್ಲಿ [**ವಿಶ್ವಾನಿ**] ಎಲ್ಲ [**ನೃಮ್ಣಾ**] ಧನವನ್ನು [**ದಧಾನಃ**] ಸುಪಾತ್ರಿಗೆ ದಾನ ಮಾಡುತ್ತಾನೋ, ಹೇಗೆ [**ಗೃಹಾ**] ಎಲ್ಲ ವಿದ್ಯೆಯಿಂದ ಕೂಡಿದ ಬುದ್ಧಿಯಲ್ಲಿ [**ನಿಷೀದನ್**] ಸ್ಥಿತವಾಗಿರುವ ಈಶ್ವರನು ಅಥವಾ ಯೋಗಿ ವಿದ್ವಾಂಸನು [**ಅತ್ರ**] ಈ [**ಅಮೇ**] ವಿಜ್ಞಾನ ಮೊದಲಾದವುಗಳಲ್ಲಿ [**ದೇವಾನ್**] ವಿದ್ವಾಂಸರನ್ನು ಅಥವಾ ಗುಣಗಳನ್ನು [**ಧಾತ್**] ಧಾರಣ ಮಾಡುತ್ತಾರೋ ಹಾಗೆ ಅವರು ಅತ್ಯಂತ ಆನಂದವನ್ನು ಪಡೆಯುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ನೀವು ಬಯಸಬೇಕಾದುದೇನೆಂದರೆ, ಯಾರು ಅಂತರ್ಯಾಮಿ ಆತ್ಮನಲ್ಲಿ ಸತ್ಯಾಸತ್ಯಗಳ ಉಪದೇಶ ಮಾಡುತ್ತಾನೋ ಮತ್ತು ಬಾಹ್ಯ ಅಧ್ಯಯನ ಮಾಡುವ ವಿದ್ವಾಂಸನಿರುವನೋ, ಅವನನ್ನು ಬಿಟ್ಟು ಬೇರೆಯವನ ಉಪಾಸನೆ ಅಥವಾ ಸಂಗವನ್ನು ಎಂದಿಗೂ ಮಾಡದಿರಿ.

ಮುಂದಿನ ಮಂತ್ರದಲ್ಲಿ ಈಶ್ವರ ಮತ್ತು ವಿದ್ವಾಂಸನ ಗುಣಗಳ ಉಪದೇಶ ಮಾಡಿದೆ.

ಅಜೋ ನ ಕ್ಷಾಂ, ದಾಧಾರ ಪೃಥಿವೀಂ ತಸ್ತಂಭ ದ್ಯಾಂ, ಮಂತ್ರೇಭಿಃ ಸತ್ಯೈಃ ।
ಪ್ರಿಯಾ ಪದಾನಿ, ಪಶ್ವೋ ನಿ ಪಾಹಿ ವಿಶ್ವಾಯುರಗ್ನೇ, ಗುಹಾ ಗುಹಂ ಗಾಃ ॥೩॥

ಪದಾರ್ಥ:- ಹೇ [**ಅಗ್ನೇ**] ಪೂರ್ಣವಿದ್ಯಾಯುಕ್ತ ವಿದ್ವಾಂಸನೇ! ನೀನು ಹೇಗೆ ಪರಮಾತ್ಮನ [**ಸತ್ಯೈಃ**] ಸತ್ಯ ಲಕ್ಷಣಗಳಿಂದ ಪ್ರಕಾಶಿತ ಜ್ಞಾನದಿಂದಯುಕ್ತನಾಗಿ [**ಮಂತ್ರೇಭಿಃ**] ವಿಚಾರಗಳಿಂದ [**ಕ್ಷಾಮ್**] ಭೂಮಿಯನ್ನು [**ದಾಧಾರ**] ತನ್ನ ಬಲದಿಂದ ಧಾರಣ ಮಾಡುತ್ತಾ [**ಪೃಥಿವೀಮ್**] ಅಂತರಿಕ್ಷದಲ್ಲಿರುವ ಅನ್ಯಲೋಕಗಳು [**ದ್ಯಾಮ್**] ಹಾಗೂ ಪ್ರಕಾಶಮಯ ಸೂರ್ಯಾದಿ ಲೋಕಗಳನ್ನು [**ತಸ್ತಂಭ**] ಪ್ರತಿಬಂಧಯುಕ್ತ ಮಾಡುತ್ತಾ ಮತ್ತು [**ಪ್ರಿಯಾ**] ಪ್ರೀತಿಕಾರಕವಾದ [**ಪದಾನಿ**] ಪಡೆಯಲು ಯೋಗ್ಯವಾದ ಜ್ಞಾನಗಳನ್ನು ಪ್ರಾಪ್ತಿಪಡಿಸುತ್ತಾನೆ. [**ಗುಹಾ**] ಬುದ್ಧಿಯಲ್ಲಿ ಸ್ಥಿತವಾದ [**ಗುಹಮ್**] ಗೂಢ ವಿಜ್ಞಾನದೊಳಗಿರುವ ಸ್ಥಾನವನ್ನು [**ಗಾಃ**] ಪಡೆಯಿರಿ ಅಥವಾ ಪಡೆಯುತ್ತಾನೆ. [**ಪಶ್ವಃ**] ಬಂಧನದಿಂದ ನಮ್ಮ ರಕ್ಷಣೆ ಮಾಡುವಂತೆ ಧರ್ಮದಿಂದ ಪ್ರಜೆಗಳ [**ನಿಪಾಹಿ**] ರಕ್ಷಣೆಯನ್ನು ನಿರಂತರ ಮಾಡು ಮತ್ತು [**ಅಜೋ ನ**] ನ್ಯಾಯಕಾರಿ ಈಶ್ವರನ ಸಮಾನನಾಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಪರಮೇಶ್ವರನು ಅಥವಾ ಜೀವನು ಎಂದಿಗೂ ಉತ್ಪನ್ನ ಮತ್ತು ನಷ್ಟವಾಗುವುದಿಲ್ಲವೋ, ಹಾಗೆಯೇ ಕಾರಣವೂ ಕೂಡ ವಿನಾಶವಾಗುವುದಿಲ್ಲ, ಹೇಗೆ ಪರಮೇಶ್ವರನು ತನ್ನ ವಿಜ್ಞಾನ ಆದಿ ಬಲಗುಣಗಳಿಂದ ಪೃಥಿವೀ ಆದಿ ಜಗತ್ತನ್ನು ರಚಿಸಿ ಧಾರಣ ಮಾಡುತ್ತಾನೋ ಹಾಗೆ ಸತ್ಯ ವಿಚಾರಗಳಿಂದ ಸಭಾಧ್ಯಕ್ಷನು ರಾಜ್ಯದ ಧಾರಣ ಮಾಡಲಿ. ಹೇಗೆ ಪ್ರಿಯಮಿತ್ರನು ತನ್ನ ಮಿತ್ರನನ್ನು ದುಃಖದ ಬಂಧನಗಳಿಂದ ಬೇರೆ ಮಾಡಿ ಉತ್ತಮೋತ್ತಮ ಸುಖವುಂಟುಮಾಡುವನೋ ಹಾಗೆ ಈಶ್ವರ ಮತ್ತು ಸೂರ್ಯನು ಕೂಡ ಸುಖಗಳನ್ನು ಪ್ರಾಪ್ತಿಪಡಿಸುತ್ತಾರೆ. ಹೇಗೆ ಅಂತರ್ಯಾಮಿ ರೂಪದಿಂದ ಈಶ್ವರನು ಜೀವಾದಿಗಳನ್ನು ಧಾರಣ ಮಾಡಿ ಪ್ರಕಾಶಪಡಿಸುವನೋ, ಹಾಗೆ ಸಭಾಧ್ಯಕ್ಷನು ಸತ್ಯ ನ್ಯಾಯಗಳಿಂದ ರಾಜ್ಯವನ್ನು ಮತ್ತು ಸೂರ್ಯನು ತನ್ನ ಆಕರ್ಷಣಾದಿಗುಣಗಳಿಂದ ಜಗತ್ತನ್ನು ಧಾರಣ ಮಾಡುತ್ತಾನೆ.

ಮತ್ತೆ ಈಶ್ವರನ ಮತ್ತು ವಿದ್ವಾಂಸರ ಗುಣಗಳ ಉಪದೇಶ ಮಾಡಿದೆ.

ಯ ಈಂ ಚಿಕೇತ, ಗುಹಾ ಭವಂತ-ಮಾ ಯಃ ಸಸಾದ, ಧಾರಾಮೃತಸ್ಯ ।
ವಿ ಯೇ ಚೃತಂತ್ಯೃತಾ ಸಪಂತ ಆದಿದ್ ವಸೂನಿ, ಪ್ರ ವವಾಚಾಸ್ಮೈ ॥೪॥

ಪದಾರ್ಥ:- [**ಯಃ**] ಯಾವ ಮನುಷ್ಯನು [**ಗುಹಾ**] ಬುದ್ಧಿ ಹಾಗೂ ವಿಜ್ಞಾನದಲ್ಲಿ [**ಈಮ್**] ವಿಜ್ಞಾನ ಸ್ವರೂಪನು [**ಭವಂತಮ್**] ವಿಜ್ಞಾನ ಸ್ವರೂಪ ಜಗದೀಶ್ವರನು ಅಥವಾ ಸಭಾಧ್ಯಕ್ಷನನ್ನು [**ಚಿಕೇತ**] ತಿಳಿಯುತ್ತಾನೋ [**ಯಃ**] ಯಾವ [**ಋತಸ್ಯ**] ಸತ್ಯ ವಿದ್ಯಾರೂಪ ನಾಲ್ಕು ವೇದ ಅಥವಾ ಜಲದ [**ಧಾರಾಮ್**] ವಾಣಿಯ ಅಥವಾ ಪ್ರವಾಹವನ್ನು [**ಆಸಸಾದ**] ಪ್ರಾಪ್ತಪಡಿಸುತ್ತಾನೆ. [**ಯೇ**] ಯಾವನು [**ಋತಾ**] ಸತ್ಯವನ್ನು [**ಸಪಂತಃ**] ಸಂಯುಕ್ತ ಮಾಡುತ್ತಾ [**ವಸೂನಿ**] ವಿದ್ಯೆ ಸುವರ್ಣ ಮೊದಲಾದ ಧನವನ್ನು [**ವಿಚೃತಂತಿ**] ಗ್ರಂಥಿಯುಕ್ತ ಮಾಡುತ್ತಾನೆ. ಆದುದರಿಂದ ಪರಮೇಶ್ವರನು [**ಪ್ರವವಾಚ**] ಹೇಳುತ್ತಾನೆ [**ಆತ್**] ಇದರ ಹಿಂದೆ [**ಇತ್**] ಅದಕ್ಕಾಗಿ ಎಲ್ಲ ಸುಖಗಳೂ ಪ್ರಾಪ್ತವಾಗುತ್ತವೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವನೇ ಮನುಷ್ಯನಿಗೆ ಪರಮೇಶ್ವರನ ಉಪಾಸನೆ ಅಥವಾ ವಿಜ್ಞಾನ, ಸತ್ಯವಿದ್ಯೆ ಮತ್ತು ಉತ್ತಮ ಆಚರಣೆಯ ಹೊರತು ಸುಖವು ಪ್ರಾಪ್ತವಾಗುವುದಿಲ್ಲ.

ಈಗ ಮುಂದಿನ ಮಂತ್ರದಲ್ಲಿ ಈಶ್ವರ ಮತ್ತು ವಿದ್ಯುದಗ್ನಿಯ ಗುಣಗಳ ವರ್ಣನೆ ಮಾಡಿದೆ.

ವಿ ಯೋ ವೀರುತ್ಸು, ರೋಧನ್ಮಹಿತ್ವೋ-ತ ಪ್ರಜಾ, ಉತ ಪ್ರಸೂಷ್ವಂತಃ ।
ಚಿತ್ತಿರಪಾಂ, ದಮೇ ವಿಶ್ವಾಯುಃ ಸದ್ಮೇವ ಧೀರಾಃ, ಸಂಮಾಯ ಚಕ್ರುಃ ॥೫॥

ಪದಾರ್ಥ:- ಹೇ [ಧೀರಾಃ] ಜ್ಞಾನಿಗಳಾದ ವಿದ್ವಾಂಸರೇ! [ಸಂಮಾಯ] ಉತ್ತಮವಾಗಿ ಸ್ವೀಕರಿಸಿ [ಸದ್ಮೆ ೃವ] ಹೇಗೆ ಮನೆ ಅಥವಾ ಸಂಗ್ರಾಮಕ್ಕಾಗಿ ಲಾಭವನ್ನು [ಚಕ್ರುಃ] ಮಾಡುತ್ತೇವೋ ಹಾಗೆ [ಯಃ] ಯಾವ ಜಗದೀಶ್ವರನು ಅಥವಾ ವಿದ್ಯುತ್ತು [ಮಹಿತ್ವಾ] ಸತ್ಕರಿಸಿ [ವೀರುತ್ಸು] ರಚನಾ ವಿಶೇಷದಿಂದ ನಿರೋಧವನ್ನು ಪಡೆಯುತ್ತಾ ಕಾರಣ ಕಾರ್ಯ ದ್ರವ್ಯಗಳಲ್ಲಿ [ಪ್ರಜಾಃ] ಪ್ರಜೆಗಳು [ವಿರೋಧತ್] ವಿಶೇಷವಾಗಿ ಆವರಣ ಮಾಡುತ್ತಾರೆ. [ಉತ್] [ಪ್ರಸೂಷು] ಉತ್ಪನ್ನವಾಗುವವುಗಳಲ್ಲಿಯೂ ಕೂಡ [ಅಂತಃ] ಮಧ್ಯದಲ್ಲಿರುತ್ತಾನೆ. [ಉತ] ಮತ್ತು [ವಿಶ್ವಾಯುಃ] ಪೂರ್ಣಾಯು ಯುಕ್ತನೂ ಕೂಡ [ಚಿತ್ತಿಃ] ಉತ್ತಮವಾಗಿ ತಿಳಿಯುವ [ದಮೇ] ಶಾಂತಿಯುಕ್ತ ಮನೆ ಹಾಗೂ [ಅಪಾಮ್] ಪ್ರಾಣ ಅಥವಾ ಜಲಗಳ ಮಧ್ಯೆ ಪ್ರಜೆಗಳನ್ನು ಧಾರಣ ಮಾಡುತ್ತಾನೆ. ಅವನ ಸೇವೆಯನ್ನು ಉತ್ತಮವಾಗಿ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರಗಳಿವೆ. ಮನುಷ್ಯರು ಬಯಸಬೇಕಾದುದೇನೆಂದರೆ, ಯಾವ ಅಂತರ್ಯಾಮಿ ರೂಪನು ಹಾಗೂ ರೂಪ ವೇಗಾದಿ ಗುಣಗಳಿಂದ ಪ್ರಜೆಗಳಲ್ಲಿ ಸಂಯಮನ ಮಾಡುತ್ತಾನೋ ಆ ಜಗದೀಶ್ವರನ ಉಪಾಸನೆ ಮತ್ತು ವಿದ್ಯುದಗ್ನಿಯನ್ನು ತನ್ನ ಕಾರ್ಯಗಳಲ್ಲಿ ಸಂಯುಕ್ತಗೊಳಿಸಿ ಹೇಗೆ ವಿದ್ವಾಂಸರು ತಮ್ಮ ನೆಲೆಯಲ್ಲಿದ್ದುಕೊಂಡೇ ಸಂಗ್ರಾಮದಲ್ಲಿ ಶತ್ರುಗಳನ್ನು ಜಯಿಸಿ ಸುಖಿಗಳಾಗುವರೋ ಹಾಗೆ ಸುಖಿಗಳಾಗಿರಿ.

ಈ ಸೂಕ್ತದಲ್ಲಿ ಈಶ್ವರ ಸಭಾಧ್ಯಕ್ಷ ಮತ್ತು ವಿದ್ಯುದಗ್ನಿಯ ಗುಣಗಳ ವರ್ಣನೆ ಇರುವುದರಿಂದ ಪೂರ್ವ ಸೂಕ್ತಾರ್ಥದೊಂದಿಗೆ ಈ ಸೂಕ್ತಾರ್ಥದ ಸಂಬಂಧವಿದೆ ಎಂದು ತಿಳಿಯಬೇಕು.

ಅರವತ್ತೇಳನೆಯ ಸೂಕ್ತ ಸಮಾಪ್ತ

ಸೂಕ್ತ ೬೮

ಮಂತ್ರಸಂಖ್ಯೆ ೫ । ಋಷಿಃ-ಪರಾಶರಃ ಶಾಕ್ತ್ಯಃ । ದೇವತಾ - ಅಗ್ನಿಃ । ಛಂದಃ - ದ್ವಿಪದಾ ವಿರಾಟ್ । ಸ್ವರಃ - ಪಂಚಮಃ.

ಮತ್ತೆ ಆ ಈಶ್ವರ ಮತ್ತು ವಿದ್ಯುದಗ್ನಿಯು ಎಂತಹ ಗುಣವುಳ್ಳವಾಗಿವೆ?

ಶ್ರೀಣನ್ನುಪ ಸ್ಥಾದ್, ದಿವಂ ಭುರಣ್ಯುಃ ಸ್ಥಾತುಶ್ಚರಥಮಕ್ತೂನ್ ವ್ಯೂರ್ಣೋತ್ ।
ಪರಿ ಯದೇಷಾಮೇಕೋ ವಿಶ್ವೇಷಾಂ ಭುವದ್ ದೇವೋ, ದೇವಾನಾಂ ಮಹಿತ್ವಾ ॥೧॥

ಪದಾರ್ಥ:- [ಯತ್] ಯಾವ [ಭುರಣ್ಯುಃ] ಧಾರಣ ಅಥವಾ ಪೋಷಣೆ ಮಾಡುವ [ಶ್ರೀಣನ್] ಪರಿಪಕ್ವ ಮಾಡುತ್ತಿರುವ ಮನುಷ್ಯನು [ದಿವಮ್] ಪ್ರಕಾಶ ಪಡಿಸುವ ಪರಮೇಶ್ವರನು ಅಥವಾ ವಿದ್ಯುದಗ್ನಿಯ [ಉಪಸ್ಥಾತ್] ಉಪಸ್ಥಿತವಾಗಿ ಮತ್ತು [ಸ್ಥಾತುಃ] ಸ್ಥಾವರ [ಚರಥಮ್] ಜಂಗಮ ಹಾಗೂ [ಅಕ್ತೂನ್] ಪ್ರಕಟವೂ ಪ್ರಾಪ್ತವಾಗಲು ಯೋಗ್ಯವಾದ ಪದಾರ್ಥಗಳನ್ನು [ಪರ್ಯೂರ್ಣೋತ್] ಆಚ್ಛಾದನ ಅಥವಾ ಸ್ವೀಕಾರ ಮಾಡುತ್ತಾನೆ. ಅವನು [ಏಷಾಮ್] ಈ [ವಿಶ್ವೇಷಾಮ್] ಎಲ್ಲ [ದೇವಾನಾಮ್] ವಿದ್ವಾಂಸರ ಮಧ್ಯೆ [ಏಕಃ] ಸಹಾಯರಹಿತನು [ದೇವಃ] ದಿವ್ಯಗುಣಯುಕ್ತನು [ಮಹಿತ್ವಾ] ಮಹಿಮೆಯನ್ನು ಪಡೆದು [ವಿಭುವತ್] ವಿಭವ ಅಂದರೆ ಐಶ್ವರ್ಯವನ್ನು ಪಡೆಯಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವನಾದರೂ ಪರಮೇಶ್ವರನ ಉಪಾಸನೆ ಅಥವಾ ವಿದ್ಯುದಗ್ನಿಯ ಆಶ್ರಯವನ್ನು ಬಿಟ್ಟು ಎಲ್ಲ ಪರಮಾರ್ಥ ಮತ್ತು ವ್ಯವಹಾರಿಕ ಸುಖಗಳನ್ನು ಪಡೆಯಲು ಯೋಗ್ಯನಾಗುವುದಿಲ್ಲ.

ಮತ್ತೆ ಜಗದೀಶ್ವರನು ಹೇಗಿರುವನು?

ಆದಿತ್ ತೇ ವಿಶ್ವೇ ಕ್ರತುಂ ಜುಷಂತ ಶುಷ್ಕಾದ್ ಯದ್ ದೇವ, ಜೀವೋ ಜನಿಷ್ಠಾಃ ।
ಭಜಂತ ವಿಶ್ವೇ, ದೇವತ್ವಂ ನಾಮ ಋತಂ ಸಪಂತೋ, ಅಮೃತಮೇವೈಃ ॥೨॥

ಪದಾರ್ಥ:- ಹೇ [ದೇವ] ಜಗದೀಶ್ವರನೇ! ತಮ್ಮ ಆಶ್ರಯ ಮಾಡಿ [ಯತ್] ಯಾವ [ವಿಶ್ವೇ] ಎಲ್ಲ [ಜನಿಷ್ಠಾಃ] ಅತಿಜ್ಞಾನವುಳ್ಳ [ಸಪನ್ತಃ] ಒಂದೇ ಸಮ್ಮತವುಳ್ಳ ವಿದ್ವಾಂಸರು [ಏವೈಃ] ಪ್ರಾಪ್ತಿಕಾರಕ ಗುಣಗಳು ಮತ್ತು [ಶುಷ್ಕಾತ್] ಧರ್ಮಾನುಷ್ಠಾನದ ತಪಸ್ಸಿನಿಂದ (ಅಥವಾ ನೀರಸ ಕಾಷ್ಠಾದಿಗಳಿಂದ) [ತೇ] ತಮ್ಮ [ದೇವತ್ವಮ್] ದಿವ್ಯಗುಣಗಳನ್ನು ಪ್ರಾಪ್ತಿಪಡಿಸುವ [ಕ್ರತುಮ್] ಬುದ್ಧಿ ಮತ್ತು ಕರ್ಮ [ನಾಮ] ಪ್ರಸಿದ್ಧ ಅರ್ಥವುಳ್ಳ ಸಂಜ್ಞೆಯನ್ನು ಸಿದ್ಧಪಡಿಸಿ [ಜುಷನ್ತ] ಪ್ರೀತಿಯಿಂದ ಸೇವಿಸಿರಿ. ಅವರು [ಋತಮ್] ಸತ್ಯರೂಪವನ್ನು [ಭಜನ್ತ] ಸೇವಿಸುತ್ತಾರೋ ಹಾಗೆ [ಅಮೃತಮ್] ಮೋಕ್ಷವನ್ನು [ಜೀವಃ] ಇಚ್ಛಾದಿಗುಣವುಳ್ಳ ಚೇತನನಾದ ಪುರುಷನು [ಆತ್ ಇತ್] ಇದರ ನಂತರವೇ ಇವೆಲ್ಲವನ್ನೂ ಪಡೆಯುತ್ತಾನೆ.

ಭಾವಾರ್ಥ:- ಮಾನವನು ಪರಮೇಶ್ವರನ ಉಪಾಸನೆ ಅಥವಾ ಆಜ್ಞಾನುಷ್ಠಾನದ ಹೊರತು ವ್ಯವಹಾರ ಮತ್ತು ಪರಮಾರ್ಥದ ಸುಖವನ್ನು ಪಡೆಯುವುದಿಲ್ಲ.

ಮತ್ತೆ ಆ ಈಶ್ವರ ಮತ್ತು ವಿದ್ವಾಂಸರು ಹೇಗಿರುವರು?

ಋತಸ್ಯ ಪ್ರೇಷಾ ಋತಸ್ಯ ಧೀತಿ-ರ್ವಿಶ್ವಾಯುರ್ವಿಶ್ವೇ, ಅಪಾಂಸಿ ಚಕ್ರುಃ ।
ಯಸ್ತುಭ್ಯಂ ದಾಶಾದ್, ಯೋ ವಾ ತೇ ಶಿಕ್ಷಾತ್ ತಸ್ಮೈ ೃ ಚಿಕಿತ್ವಾನ್, ರಯಿಂ ದಯಸ್ವ ॥೩॥

ಪದಾರ್ಥ:- ಯಾವ ಈಶ್ವರ ಅಥವಾ ವಿದ್ಯುದಗ್ನಿಯಿಂದ [ವಿಶ್ವೇ] ಎಲ್ಲ [ಪ್ರೇಷಾಃ] ಉತ್ತಮ ರೀತಿಯಿಂದ ಯಾವ ಇಚ್ಛೆ ಮಾಡಲಾಗುತ್ತದೋ ಅವರು ಬೋಧ ಸಮೂಹವನ್ನು ಪಡೆಯುವರು [ಋತಸ್ಯ] ಸತ್ಯ ವಿಜ್ಞಾನ ಹಾಗೂ ಕಾರಣದ [ಧೀತಿಃ] ಧಾರಣ ಮತ್ತು [ವಿಶ್ವಾಯುಃ] ಎಲ್ಲ ಆಯುವನ್ನು ಪಡೆಯುವರು, ಅವನ ಆಶ್ರಯವನ್ನು ಮಾಡಿ [ಋತಸ್ಯ] ಸ್ವರೂಪ ಪ್ರವಾಹದಿಂದ ಸತ್ವದಲ್ಲಿ ಸ್ಥಿತರಾಗಿರುವ ವಿದ್ವಾಂಸರು [ಅಪಾಂಸಿ] ನ್ಯಾಯಯುಕ್ತ ಕಾರ್ಯಗಳನ್ನು [ಚಕ್ರುಃ] ಮಾಡುತ್ತಾರೆ. [ಯಃ] ಅಥವಾ ಮನುಷ್ಯನು ಈ ವಿದ್ಯೆಯನ್ನು [ತುಭ್ಯಮ್] ಈಶ್ವರೋಪಾಸನೆ, ಧರ್ಮ ಪುರುಷಾರ್ಥಯುಕ್ತ ಮನುಷ್ಯನಿಗಾಗಿ [ದಾಶಾತ್] ಕೊಡಲಿ ಅಥವಾ ಅವನಿಂದ ಗ್ರಹಣ ಮಾಡಲಿ. [ಯಃ] ಯಾವ [ಚಿಕಿತ್ವಾನ್] ಜ್ಞಾನಿಯು [ತೇ] ನಿನಗಾಗಿ [ಶಿಕ್ಷಾತ್] ಶಿಕ್ಷಣ ಕೊಡಲಿ ಅಥವಾ ನಿನ್ನಿಂದ ಶಿಕ್ಷಣ ಪಡೆಯಲಿ. [ತಸ್ಮೈ ೃ] ಅವನಿಗಾಗಿ ತಾವು [ರಯಿಮ್] ಸುವರ್ಣಾದಿ ಧನವನ್ನು [ದಯಸ್ವ] ಕೊಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮನುಷ್ಯರು ಹೇಗೆ ತಿಳಿಯಬೇಕೆಂದರೆ, ಈಶ್ವರನ ರಚನೆಯ ಹೊರತು ಜಡಕಾರಣದಿಂದ ಯಾವುದೇ ಕಾರ್ಯವು ಉಂಟಾಗುವುದಿಲ್ಲ ಅಥವಾ ನಷ್ಟವಾಗುವುದಿಲ್ಲ ಹಾಗೂ ಆಧಾರದ ಹೊರತು ಆಧೇಯವೂ ಸ್ಥಿತವಾಗಲು ಸಮರ್ಥವಾಗುವುದಿಲ್ಲ ಮತ್ತು ಯಾವನೂ ಕರ್ಮದ ಹೊರತು ಕ್ಷಣವೂ ಕೂಡ ಸ್ಥಿತನಾಗುವುದಿಲ್ಲ, ಯಾವ ವಿದ್ವಾಂಸರು ವಿದ್ಯೆ ಮೊದಲಾದ ಉತ್ತಮ ಗುಣಗಳನ್ನು ಅನ್ಯ ಸಜ್ಜನರಿಗೆ ಕೊಡುತ್ತಾರೋ ಹಾಗೂ ಅವರಿಂದ ಪಡೆಯುತ್ತಾರೋ ಆ ಇಬ್ಬರನ್ನೇ ಸತ್ಕರಿಸಲಿ, ಬೇರೆಯವರನ್ನಲ್ಲ.

ಮತ್ತೆ ಅಧ್ಯಾಪಕ ಮತ್ತು ಶಿಷ್ಯರು ಹೇಗಿರಬೇಕು?

ಹೋತಾ ನಿಷತ್ತೋ, ಮನೋರಪತ್ಯೇ ಸ ಚಿನ್ನ್ವಾಸಾಂ ಪತೀ ರಯೀಣಾಮ್ ।
ಇಚ್ಛಂತ ರೇತೋ, ಮಿಥಸ್ತನೂಷು ಸಂ ಜಾನತ ಸ್ವೈರ್ದಕ್ಷೈರಮೂರಾಃ ॥೪॥

ಪದಾರ್ಥ:- ಯಾವ [ನಿಷತ್ತಃ] ಸರ್ವತ್ರಸ್ಥಿತನಾದ [ಮನೋಃ] ಮನುಷ್ಯನ [ಅಪತ್ಯೇ] ಸಂತಾನದಲ್ಲಿ [ರಯಿಣಾಮ್] ರಾಜ್ಯಶ್ರೀ ಮೊದಲಾದ ಧನವನ್ನು [ಹೋತಾ] ಕೊಡುವವನು ಇರುವನೋ [ಸಃ] ಆ ಈಶ್ವರನು, ವಿದ್ಯುದಗ್ನಿಯು [ಆಸಾಮ್] ಈ ಪ್ರಜೆಗಳ [ಪತಿಃ] ಪಾಲನೆ ಮಾಡುವವರಾಗಿರುವರು. ಹೇ [ಅಮೂರಾಃ] 'ಅಮೂರ ಇತಿ ಪದನಾಮ' ಮೂಢತ್ವ ಮೊದಲಾದ ಗುಣಗಳಿಂದ ರಹಿತವಾದ ಜ್ಞಾನವುಳ್ಳ [ಸ್ವೈಃ] ತನ್ನ [ದಕ್ಷೈಃ] ಶಿಕ್ಷಣದ ಜೊತೆಗೆ ಚತುರತೆ ಮೊದಲಾದ ಗುಣಗಳಿಂದ ಕೂಡಿ [ತನೂಷು] ಶರೀರಗಳಲ್ಲಿ ವರ್ತಮಾನವಾಗುತ್ತಿರುವ [ಮಿಥಃ] ಪರಸ್ಪರ [ರೇತಃ] ವಿದ್ಯೆ ಶಿಕ್ಷಾ ರೂಪಿ ವೀರ್ಯದ ವಿಸ್ತಾರ ಮಾಡುತ್ತಾ ನೀವು ಇವನನ್ನು [ಸಮಿಚ್ಛಂತ] ಉತ್ತಮವಾಗಿ ಶಿಕ್ಷಣ ಕೊಡಿರಿ. [ಚಿತ್] ಮತ್ತು ನೀವು ಎಲ್ಲ ವಿದ್ಯೆಗಳನ್ನು [ನು] ಶೀಘ್ರವಾಗಿ [ಜಾನತ] ಉತ್ತಮವಾಗಿ ತಿಳಿಯಿರಿ.

ಭಾವಾರ್ಥ:- ಪರಸ್ಪರ ಮಿತ್ರರಾಗುವುದು ಮತ್ತು ಸಮಸ್ತ ವಿದ್ಯೆಗಳನ್ನು ಶೀಘ್ರವಾಗಿ ತಿಳಿದು ನಿರಂತರ ಆನಂದ ಪಡೆಯುವುದು ಮನುಷ್ಯರಿಗೆ ಉಚಿತವಾಗಿದೆ.

ಮತ್ತೆ ಓದುವವರು ಮತ್ತು ಓದಿಸುವವರು ಹೇಗಿರಬೇಕು?

ಪಿತುರ್ನ ಪುತ್ರಾಃ, ಕ್ರತುಂ ಜುಷಂತ ಶ್ರೋಷನ್ ಯೇ ಅಸ್ಯ, ಶಾಸಂ ತುರಾಸಃ ।
ವಿ ರಾಯ ಔರ್ಣೋದ್, ದುರಃ ಪುರುಕ್ಷುಃ ಪಿಪೇಶ ನಾಕಂ, ಸ್ತೃಭಿರ್ದಮೂನಾಃ ॥೫॥

ಪದಾರ್ಥ:- [ಯೇ] ಯಾವ [ತುರಾಸಃ] ಉತ್ತಮ ಕರ್ಮಗಳನ್ನು ಶೀಘ್ರವಾಗಿ ಮಾಡುವ ಮನುಷ್ಯರು [ಪಿತುಃ] ತಂದೆಯ [ಪುತ್ರಾಃ] [ನ] ಪುತ್ರರಂತೆ [ಅಸ್ಯ] ಜಗದೀಶ್ವರನ ಅಥವಾ ಸತ್ಪುರುಷರ [ಶಾಸಮ್] ಶಿಕ್ಷಣವನ್ನು [ಶ್ರೋಷನ್] ಕೇಳುತ್ತಾರೆ ಅಥವಾ ಸುಖಿಗಳಾಗುತ್ತಾರೆ. ಯಾವ [ದಮೂನಾಃ] ಶಾಂತಿಯುಳ್ಳವನು [ಪುರುಕ್ಷುಃ] ಬಹಳ ಅನ್ನಾದಿ ಪದಾರ್ಥಗಳಿಂದ ಕೂಡಿದವನು [ಸ್ತೃಭಿಃ] ಪಡೆಯಲು ಯೋಗ್ಯವಾದ ಗುಣಗಳಿಂದ [ರಾಯಃ] ಸಂಪತ್ತಿನ [ವ್ಯೌರ್ಣೋತ್] ಸ್ವೀಕಾರಕರ್ತನು ಹಾಗೂ [ನಾಕಮ್] ಸುಖವನ್ನು ಸ್ವೀಕಾರ ಮಾಡಿ ಮತ್ತು [ದುರಃ] ಹಿಂಸೆ ಮಾಡುವ ಶತ್ರುಗಳ [ಪಿಪೇಶ] ಅವಯವಗಳನ್ನು ಬೇರೆ-ಬೇರೆ ಮಾಡುತ್ತಾನೋ ಅವನ ಸೇವೆಯನ್ನು ಎಲ್ಲರೂ ಮಾಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರವಿದೆ. ಮನುಷ್ಯರು ಬಯಸಬೇಕಾದುದೇನೆಂದರೆ, ಈಶ್ವರನ ಆಜ್ಞಾಪಾಲನೆಯ ಹೊರತು ಯಾವನೇ ಮನುಷ್ಯನಿಗೆ ಸ್ವಲ್ಪವೂ ಕೂಡ ಸುಖವು ಸಂಭವಿಸುವುದಿಲ್ಲ. ಹಾಗೂ ಜಿತೇಂದ್ರಿಯತ್ವ ಮೊದಲಾದ ಗುಣಗಳ ಹೊರತು ಯಾವನಿಗೂ ಸುಖವುಂಟಾಗುವುದಿಲ್ಲ. ಆದುದರಿಂದ ಈಶ್ವರನ ಆಜ್ಞಾಪಾಲನೆ ಮತ್ತು ಜಿತೇಂದ್ರಿಯತ್ವ ಮೊದಲಾದವುಗಳ ಸೇವನೆಯನ್ನು ಅವಶ್ಯವಾಗಿ ಮಾಡಬೇಕು.

ಈ ಸೂಕ್ತದಲ್ಲಿ ಈಶ್ವರ ಮತ್ತು ಅಗ್ನಿಯ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಅವರತ್ತೆಂಟನೆಯ ಸೂಕ್ತ ಸಮಾಪ್ತ

ಸೂಕ್ತ ೬೯

ಮಂತ್ರಸಂಖ್ಯೆ ೫ । ಋಷಿಃ - ಪರಾಶರಃ ಶಾಕ್ತ್ಯಃ । ದೇವತಾ - ಅಗ್ನಿಃ । ಛಂದಃ- ದ್ವಿಪದಾ ವಿರಾಟ್ । ಸ್ವರಃ - ಪಂಚಮಃ.

೬೯ನೇ ಸೂಕ್ತದ ಮೊದಲ ಮಂತ್ರದಲ್ಲಿ ವಿದ್ವಾಂಸರ ಗುಣಗಳ ಉಪದೇಶ ಮಾಡಿದೆ.

ಶುಕ್ರಃ ಶುಶುಕ್ವಾ, ಉಷೋ ನ ಜಾರಃ ಪಪ್ರಾ ಸಮೀಚೀ, ದಿವೋ ನ ಜ್ಯೋತಿಃ ।
ಪರಿ ಪ್ರಜಾತಃ, ಕ್ರತ್ವಾ ಬಭೂಥ ಭುವೋ ದೇವಾನಾಂ, ಪಿತಾ ಪುತ್ರಃ ಸನ್ ॥೧॥

ಪದಾರ್ಥ:- ಯಾವನು [ಉಷಃ] ಪ್ರಾತಃಕಾಲದಲ್ಲಿ [ಜಾರಃ] ಆಯು ಹಂತಕನಾದ ಸೂರ್ಯನ [ನ] ಹಾಗೆ [ಶುಕ್ರಃ] ವೀರ್ಯವಂತನಾದ ಶುದ್ಧನು [ಶುಶುಕ್ವಾನ್] ಶುದ್ಧ ಮಾಡಿಸುವವನು [ಪಪ್ರಾಃ] ತನ್ನ ವಿದ್ಯೆಯಿಂದ ಪೂರ್ಣನು [ಯುವಃ] ಭೂಮಿಯ ಮಧ್ಯೆ [ದಿವಃ] ಪ್ರಕಾಶದಿಂದ [ಸಮೀಚೀ] ಪೃಥಿವಿಯನ್ನು ಪಡೆದು [ಜ್ಯೋತಿಃ, ನ] ದೀಪ್ತಿಯಂತೆ [ಪರಿ] ಎಲ್ಲ ಪ್ರಕಾರ [ಪ್ರಜಾತಃ] ಪ್ರಸಿದ್ಧವಾಗಿ ಉತ್ಪನ್ನವಾದ [ಕ್ರತ್ವಾ] ಉತ್ತಮ ಬುದ್ಧಿ ಅಥವಾ ಕರ್ಮಗಳೊಂದಿಗೆ ಇರುವ [ದೇವಾನಾಮ್] ವಿದ್ವಾಂಸರ [ಪುತ್ರಃ] ಪುತ್ರರಂತೆ ಓದುವ ಎಲ್ಲ ವಿದ್ಯೆಗಳನ್ನು ಓದಿ [ಪಿತಾ] ಓದಿಸುವವನು [ಬಭೂವ] ಆಗುತ್ತಾನೆ. ಅವನ ಸೇವನೆಯನ್ನು ಎಲ್ಲ ಮನುಷ್ಯರೂ ಮಾಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರಗಳಿವೆ. ವಿದ್ಯಾರ್ಥಿಯಾಗದೆ ಯಾವನೂ ವಿದ್ವಾಂಸನಾಗಲಾರನು ಮತ್ತು ಯಾವನೂ ವಿದ್ಯುತ್ ಮೊದಲಾದ ವಿದ್ಯೆ ಹಾಗೂ ಅವುಗಳ ಸಂಪ್ರಯೋಗದ ಹೊರತು ದೊಡ್ಡವನೂ, ಭಾರಿ ಸುಖವುಳ್ಳವನೂ ಕೂಡ ಆಗಲಾರನು.

ಮತ್ತೆ ಆ ವಿದ್ವಾಂಸನು ಹೇಗಿರಬೇಕು?

ವೇಧಾ ಅದೃಪ್ತೋ, ಅಗ್ನಿರ್ವಿಜಾನ-ನ್ನೂಧರ್ನ ಗೋನಾಂ, ಸ್ವಾದ್ಮಾ ಪಿತೂನಾಮ್ ।
ಜನೇ ನ ಶೇವ, ಆಹೂರ್ಯಃ ಸನ್ ಮಧ್ಯೇ ನಿಷತ್ತೋ, ರಣ್ವೋ ದುರೋಣೇ ॥೨॥

ಪದಾರ್ಥ:- ಎಲ್ಲರೂ ಬಯಸಬೇಕಾದುದೇನೆಂದರೆ, [ಗೋನಾಮ್] ಗೋವುಗಳ [ಊಧಃ] [ನ] ಹಾಲಿನ ಸ್ಥಾನವಾದ ಕೆಚ್ಚಲಿನಂತೆ [ಜನೇ] ಗುಣಗಳಿಂದ ಉತ್ತಮ ಸೇವನೆಗೆ ಯೋಗ್ಯನಾದ ಮನುಷ್ಯನ [ಶೇವಃ] [ನ] ಸುಖಪಡಿಸುವಂತೆ [ವೇಧಾಃ] ಪೂರ್ಣ ಜ್ಞಾನಯುಕ್ತ [ಅದೃಪ್ತಃ] ಮೋಹರಹಿತ [ಸ್ವಾದ್ಮಃ] ಸ್ವಾದಿಷ್ಠ [ಪಿತೂನಾಮ್] ಅನ್ನಗಳ ಭೋಕ್ತನು [ದುರೋಣೇ] ಮನೆಯಲ್ಲಿ [ರಣ್ವಃ] ರಮಣ ಮಾಡುವ [ಆಹೂರ್ಯಃ] ಆಹ್ವಾನಿಸಲು ಯೋಗ್ಯವಾದ ಸಭೆಯಲ್ಲಿ [ನಿಷತ್ತಃ] ಸ್ಥಿತನಾಗಿ [ವಿಜಾನನ್] ಎಲ್ಲ ವಿದ್ಯೆಗಳ ಅನುಭವ ಪಡೆಯುತ್ತಾ [ಅಗ್ನಿಃ] ಅಗ್ನಿಯಂತೆ ಜ್ಞಾನಪ್ರಕಾಶಕನಾದ ಸಭಾಧ್ಯಕ್ಷನಿರುವನೋ, ಅವನನ್ನು ಸದಾ ಸೇವಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮನುಷ್ಯರೇ! ನೀವು ಬಯಸಬೇಕಾದುದೇನೆಂದರೆ, ಗೋವುಗಳ ಉತ್ಕೃಷ್ಟವಾದ ಹಾಲು ಮೊದಲಾದವುಗಳು ಎಲ್ಲರಿಗೂ ಸುಖಕೊಡುತ್ತವೆ. ಹಾಗೆ ವಿದ್ವಾಂಸನು ಎಲ್ಲರಿಗೂ ಉಪಕಾರಿಯಾಗುತ್ತಾನೆ. ಹಾಗೆಯೇ ಎಲ್ಲರಲ್ಲಿ ಅಭಿವ್ಯಾಪ್ತರಾದ ಜೀವರಲ್ಲಿ ಅಂತರ್ಯಾಮಿಯಾಗಿ ವ್ಯಾಪ್ತನಾದ ಈಶ್ವರನು ಪಕ್ಷಪಾತವನ್ನು ಬಿಟ್ಟು ನ್ಯಾಯ ಮಾಡುತ್ತಾನೆ. ಹಾಗೆಯೇ ಸಭೆ ಮೊದಲಾದವುಗಳಲ್ಲಿರುವ ಸಭಾಪತಿಯು ನಿಮಗೆಲ್ಲರಿಗೂ ಸುಖ ನೀಡುವವನಾಗಲಿ.

ಮತ್ತೆ ವಿದ್ವಾಂಸನು ಹೇಗಿರುವನು?

ಪುತ್ರೋ ನ ಜಾತೋ, ರಣ್ವೋ ದುರೋಣೇ ವಾಜೀ ನ ಪ್ರೀತೋ, ವಿಶೋ ವಿ ತಾರೀತ್।
ವಿಶೋ ಯದಹ್ವೇ, ನೃಭಿಃ ಸನೀಳಾ ಅಗ್ನಿರ್ದೇವತ್ವಾ, ವಿಶ್ವಾನ್ಯಶ್ಯಾಃ ॥೩॥

ಪದಾರ್ಥ:- ಹೇ ಮನುಷ್ಯನೇ! [ಯತ್] ಯಾವ [ಅಗ್ನಿಃ] ಅಗ್ನಿಯಂತಿರುವ ಸಭಾಧ್ಯಕ್ಷನು [ದುರೋಣೇ] ಗೃಹದಲ್ಲಿ [ಜಾತಃ] ಹುಟ್ಟಿದ [ಪುತ್ರಃ] [ನ] ಮಗನಂತೆ [ರಣ್ವಃ] ರಮಣೀಯ [ವಾಜೀ, ನ] ಕುದುರೆಯಂತೆ [ಪ್ರೀತಃ] ಆನಂದದಾಯಕ [ವಿಶಃ] ಪ್ರಜೆಗಳನ್ನು [ವಿತಾರೀತ್] ದುಃಖದಿಂದ ಬಿಡಿಸುತ್ತಾನೆ. [ಅಹ್ವೇ] ವ್ಯಾಪ್ತವಾಗುವ ವ್ಯವಹಾರಗಳಲ್ಲಿ [ಸನೀಡಾಃ] ಸಮಾನ ಸ್ಥಾನದ [ವಿಶಃ] ಪ್ರಜೆಗಳನ್ನು [ವಿಶ್ವಾನಿ] ಎಲ್ಲ [ದೇವತ್ವಾ] ವಿದ್ವಾಂಸರ ಗುಣಕರ್ಮಗಳನ್ನು ಪಡೆಯುತ್ತಾನೆ. ಅವನಿಗೆ ನೀನು [ಅಶ್ಯಾಃ] ಪ್ರಾಪ್ತನಾಗು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಮನುಷ್ಯರು ವಿಜ್ಞಾನ ಮತ್ತು ವಿದ್ವಾಂಸರ ಸಂಗದ ಹೊರತು ಎಲ್ಲ ಸುಖಗಳನ್ನೂ ಪಡೆಯಲಾರರು ಎಂದು ತಿಳಿಯಬೇಕು.

ಮತ್ತೆ ಆ ವಿದ್ವಾಂಸನು ಹೇಗಿರುವನು?

ನಕಿಷ್ಟ ಏತಾ, ವ್ರತಾ ಮಿನಂತಿ ನೃಭ್ಯೋ ಯದೇಭ್ಯಃ, ಶ್ರುಷ್ಟಿಂ ಚಕರ್ಥ ।
ತತ್ ತು ತೇ ದಂಸೋ, ಯದಹನ್ತ್ಸಮಾನೈ-ರ್ನೃಭಿರ್ಯದ್ ಯುಕ್ತೋ, ವಿವೇ ರಪಾಂಸಿ ॥೪॥

ಪದಾರ್ಥ:- ಹೇ ವಿದ್ವಾಂಸನೇ! ನಿನ್ನ [ಏತಾಃ] ಯಾವ [**ವ್ರತಾ**] ವ್ರತವಿದೆಯೋ, ಅವು ಯಾವುವೂ ಕೂಡ [ನಕಿಃ] [ಮಿನಂತಿ] ಹಿಂಸೆ ಮಾಡುವುದಿಲ್ಲ. [**ಯತ್**] ಯಾವ ನೀನು [ಏಭ್ಯಃ] ಈ [ನೃಭ್ಯಃ] ಮನುಷ್ಯರಿಗಾಗಿ [**ಯತ್**] ಯಾವ [**ಶ್ರುಷ್ಟಿಮ್**] ಶೀಘ್ರ ಸತ್ಯವಿದ್ಯೆಗಳನ್ನು [**ಚಕರ್ಥ**] ಮಾಡುವೆಯೋ ಅಥವಾ [**ಅಪಾಂಸಿ**] [=ರಂಪಾಸಿ] ಸತ್ಕರ್ಮ ಮತ್ತು ವ್ಯಕ್ತ ಉಪದೇಶಗಳನ್ನು [**ವಿವೇಃ**] ಪಡೆಯುವೆಯೋ, ಹಾಗೂ [**ಯತ್**] ಯಾವ [**ತೇ**] ನಿನ್ನ [**ಇದಮ್**] ಈ [**ಸಮಾನೈಃ**] ವಿದ್ಯಾದಿ ಗುಣಗಳಂತೆ [**ನೃಭಿಃ**] ಮನುಷ್ಯರೊಂದಿಗೆ [**ದಂಸಃ**] ಕರ್ಮವಿದೆಯೋ [**ತತ್**] ಅದನ್ನು [**ಅಹನ್**] ಹನನ ಮಾಡಲು [**ತು, ನಕಿಃ**] ಯಾವನೂ ಇಲ್ಲ, ಯಾವನು [**ಯುಕ್ತಃ**] ಯುಕ್ತನಾಗಿ ಆಗಲು ನೀನು ಮಾಡುವೆಯೋ ಅವನನ್ನು ನಾವು ಕೂಡ ಸತ್ಯವಾಗಿ ತಿಳಿಯುತ್ತೇವೆ.

ಭಾವಾರ್ಥ:- ಹೇಗೆ ಪರಮೇಶ್ವರನು ಅಥವಾ ಪೂರ್ಣ ವಿದ್ಯಾಯುಕ್ತ ವಿದ್ವಾಂಸನು ಪಕ್ಷಪಾತರಹಿತನಾಗಿ ಮನುಷ್ಯಾದಿ ಪ್ರಾಣಿಗಳಲ್ಲಿ ಸತ್ಯ, ಉಪಕಾರ ಮಾಡುವ ಕರ್ಮಗಳಿಂದ ಕೂಡಿರುವನೋ, ಹಾಗೆ ಸದಾ ಮನುಷ್ಯರು ವರ್ತಿಸಬೇಕು.

ಮತ್ತೆ ಅದೇ ವಿಷಯ

ಉಷೋ ನ ಜಾರೋ, ವಿಭಾವೋಸ್ರಃ ಸಂಜ್ಞಾತರೂಪಶ್ಚಿಕೇತದಸ್ಮೈ ।
ತ್ಮನಾ ವಹಂತೋ, ದುರೋ ವ್ಯೃಣ್ವನ್ ನವಂತ ವಿಶ್ವೇ, ಸ್ವರ್ದೃಶೀಕೇ ॥೫॥

ಪದಾರ್ಥ:- [ಉಷಃ] [ನ] ಪ್ರಾತಃಕಾಲದಂತೆ [ಜಾರಃ] ದುಃಖನಾಶಪಡಿಸುವ [ಉಸ್ರಃ] ಕಿರಣಗಳಂತೆ [ಸಂಜ್ಞಾತರೂಪ] ಉತ್ತಮವಾಗಿ ರೂಪವನ್ನು ತಿಳಿಯುವ [ವಿಭಾವಾ] ಎಲ್ಲ ಪ್ರಕಾಶವನ್ನುಂಟುಮಾಡುವನೋ, ಅವನನ್ನು ಮನುಷ್ಯನು ಎಂದು [ಚಿಕೇತತ್] ತಿಳಿಯಲಿ. [ಅಸ್ಮೈ] ಆ ಈಶ್ವರ ಅಥವಾ ವಿದ್ವಾಂಸನಿಗಾಗಿ ಎಲ್ಲ

ಉತ್ತಮ ಪದಾರ್ಥಗಳನ್ನು ಸಮರ್ಪಣ ಮಾಡಲಿ. ಹೇ ಮನುಷ್ಯರೇ! ಈ ಪ್ರಕಾರ ಮಾಡುತ್ತಿರುವ [ವಿಶ್ವೇ] ಎಲ್ಲ ವಿದ್ವಾಂಸರು [ತ್ಮನಾ] ಆತ್ಮದಿಂದ [ಸ್ವಃ] ಸುಖಪಡಿಸುವ ವಿದ್ಯೆಗಳನ್ನು [ವಹಂತಃ] ಪಡೆಯುತ್ತಾ [ದೃಶೀಕೇ] ನೋಡಲು ಯೋಗ್ಯವಾದ ವ್ಯವಹಾರಗಳಲ್ಲಿ [ದುರಃ] ಶತ್ರುಗಳನ್ನು [ವ್ಯೃಣ್ವನ್] ಕೊಲ್ಲುತ್ತಾರೋ ಹಾಗೂ ಸಜ್ಜನರನ್ನು ಪ್ರಶಂಸಿಸುತ್ತಾರೋ ಹಾಗೆ ನೀವು ಕೂಡ ಶತ್ರುಗಳನ್ನು ಕೊಂದು [ನವನ್ತ] ಸಜ್ಜನರನ್ನು ಸ್ತುತಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ, ಉಪಮ ಮತ್ತು ಲುಪ್ತೋಪಮಾಲಂಕಾರಗಳಿವೆ. ಮನುಷ್ಯರು ಸೂರ್ಯನಂತೆ ವಿದ್ಯೆಯ ಪ್ರಕಾಶಕನೂ, ಅಗ್ನಿಯಂತೆ ಎಲ್ಲ ದುಃಖಗಳನ್ನೂ ಭಸ್ಮ ಮಾಡುವ ಪರಮೇಶ್ವರನು ಅಥವಾ ವಿದ್ವಾಂಸನಿರುವನು. ಅವರಿಗೆ ತಮ್ಮ ಹೃದಯಗಳಲ್ಲಿ ಆಶ್ರಯವಿತ್ತು ದುಷ್ಟ ವ್ಯವಹಾರಗಳನ್ನು ತ್ಯಜಿಸಿ ಮತ್ತು ಸತ್ಯ ವ್ಯವಹಾರಗಳಲ್ಲಿ ಸ್ಥಿತರಾಗಿ ಸದಾ ಸುಖವನ್ನು ಪಡೆಯಲಿ.

ಈ ಸೂಕ್ತದಲ್ಲಿ ವಿದ್ವಾಂಸ, ವಿದ್ಯುತ್ತು ಮತ್ತು ಈಶ್ವರನ ಗುಣಗಳ ವರ್ಣನೆ ಮಾಡಿರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಅರವತ್ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೭೦

ಮಂತ್ರ ಸಂಖ್ಯೆ ೬ । ಋಷಿಃ - ಪರಾಶರಃ ಶಾಕ್ತ್ಯಃ । ದೇವತಾ - ಅಗ್ನಿಃ । ಛಂದಃ - ದ್ವಿಪದಾ ವಿರಾಟ್ । ಸ್ವರಃ - ಪಂಚಮಃ.

೭೦ನೇ ಸೂಕ್ತದ ಮೊದಲ ಮಂತ್ರದಲ್ಲಿ ಮನುಷ್ಯರ ಗುಣಗಳ ಉಪದೇಶ ಮಾಡಿದೆ.

ವನೇಮ ಪೂರ್ವೀರರ್ಯೋ ಮನೀಷಾ ಅಗ್ನಿಃ ಸುಶೋಕೋ, ವಿಶ್ವಾನ್ಯಶ್ಯಾಃ ।
ಆ ದೈವ್ಯಾನಿ ವ್ರತಾ ಚಿಕಿತ್ವಾ-ನಾ ಮಾನುಷಸ್ಯ, ಜನಸ್ಯ ಜನ್ಮ ॥೧॥

ಪದಾರ್ಥ:- ನಾವು ಯಾವ [**ಸುಶೋಕಃ**] ಉತ್ತಮ ದೀಪ್ತಿಯುಕ್ತ [**ಚಿಕಿತ್ವಾನ್**] ಜ್ಞಾನಿಯಾದ [**ಅಗ್ನಿಃ**] ಜ್ಞಾನಾದಿ ಗುಣವುಳ್ಳ [**ಅರ್ಯಃ**] ಈಶ್ವರ ಅಥವಾ ಮನುಷ್ಯನು [**ಮನೀಷಾ**] ಬುದ್ಧಿ ಹಾಗೂ ವಿಜ್ಞಾನದಿಂದ [**ಪೂರ್ವೀಃ**] ಮೊದಲು ಇದ್ದ ಪ್ರಜೆಗಳು ಮತ್ತು [**ವಿಶ್ವಾನಿ**] ಸಮಸ್ತ [**ದೈವ್ಯಾನಿ**] ದಿವ್ಯಗುಣ ಅಥವಾ ಕರ್ಮಗಳಿಂದ ಸಿದ್ಧವಾದ [**ವ್ರತಾ**] ವಿದ್ಯಾಧರ್ಮಾನುಷ್ಠಾನ ಮತ್ತು [**ಮಾನುಷಸ್ಯ**] ಮನುಷ್ಯಜಾತಿಯಲ್ಲಿರುವ [**ಜನಸ್ಯ**] ಶ್ರೇಷ್ಠ ವಿದ್ವಾಂಸನ [**ಜನ್ಮ**] ಶರೀರಧಾರಣದಿಂದ ಉತ್ಪತ್ತಿಯನ್ನು [**ಅಶ್ಯಾಃ**] ಉತ್ತಮ ರೀತಿಯಲ್ಲಿ ಪಡೆಯುತ್ತಾನೋ, ಅವನನ್ನು [**ಆವನೇಮ**] ಉತ್ತಮವಾದ ವಿಭಾಗದಿಂದ ಸೇವಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮನುಷ್ಯರನ್ನು ಯಾವ ಜಗದೀಶ್ವರನ ಅಥವಾ ಮನುಷ್ಯನ ಕಾರ್ಯಕಾರಣ ಮತ್ತು ಜೀವರ ಶುದ್ಧ ಗುಣ ಮತ್ತು ಕರ್ಮಗಳನ್ನು ವ್ಯಾಪ್ತಗೊಳಿಸಿರಿ. ಅವನ ಉಪಾಸನೆಯನ್ನೇ ಅಥವಾ ಸತ್ಕಾರವನ್ನೇ ಮಾಡಬೇಕು. ಏಕೆಂದರೆ, ಇದರ ಹೊರತು ಮನುಷ್ಯ ಜನ್ಮವೇ ವ್ಯರ್ಥವಾಗುತ್ತದೆ.

ಮತ್ತೆ ಅವನು ಹೇಗಿರುವನು?

ಗರ್ಭೋ ಯೋ ಅಪಾಂ, ಗರ್ಭೋ ವನಾನಾಂ ಗರ್ಭಶ್ಚ ಸ್ಥಾತಾಂ, ಗರ್ಭಶ್ಚರಥಾಮ್ ।
ಅದ್ರೌ ಚಿದಸ್ಮಾ, ಅಂತರ್ದುರೋಣೇ ವಿಶಾಂ ನ ವಿಶ್ವೋ, ಅಮೃತಃ ಸ್ವಾಧೀಃ ॥೨॥

ಪದಾರ್ಥ:- ನಾವು ಯಾವ ಜಗದೀಶ್ವರನ ಅಥವಾ ಜೀವನ [ಅಪಾಮ್] ಪ್ರಾಣ ಅಥವಾ ಜಲಗಳ [ಅಂತಃ] ಮಧ್ಯೆ [ಗರ್ಭಃ] ಸ್ತುತಿ ಯೋಗ್ಯ ಅಥವಾ ಒಳಗಿರುವ [ವನಾನಾಮ್] ಸರಿಯಾಗಿ ಸೇವಿಸಲು ಯೋಗ್ಯ ಪದಾರ್ಥಗಳು ಅಥವಾ ಕಿರಣಗಳಲ್ಲಿ [ಗರ್ಭಃ] ಗರ್ಭದಂತೆ ಆಚ್ಛಾದಿತವಾದ [ಅದ್ರೌ] ಪರ್ವತ ಮೊದಲಾದ ದೊಡ್ಡ ದೊಡ್ಡ ಪದಾರ್ಥಗಳಲ್ಲಿ [ಚಿತ್] ಕೂಡ [ಗರ್ಭಃ] ಗರ್ಭದಂತೆ [ದುರೋಣೇ] ಮನೆಯಲ್ಲಿ [ಗರ್ಭಃ] ಗರ್ಭದಂತೆ [ವಿಶ್ವಃ] ಎಲ್ಲ ಚೇತನ ತತ್ವ ಸ್ವರೂಪ [ಅಮೃತಃ] ನಾಶರಹಿತ [ಸ್ವಾಧೀಃ] ಉತ್ತಮ ರೀತಿ ಪದಾರ್ಥಗಳ ಚಿಂತನೆ ಮಾಡುವ [ವಿಶಾಮ್] [ನ] ಪ್ರಜೆಗಳ ಮಧ್ಯೆ ಆಕಾಶ ವಾಯುಗಳಂತೆ ಬಾಹ್ಯ ದೇಶಗಳಲ್ಲಿಯೂ ಕೂಡ ಎಲ್ಲ ದಿವ್ಯ ಗುಣ ಕರ್ಮಯುಕ್ತ ವ್ರತಗಳನ್ನು [ಅಶ್ಯಾಃ] ಪಡೆಯಿರಿ. [ಅಸ್ಮೈ] ಅವನಿಗಾಗಿ ಎಲ್ಲ ಪದಾರ್ಥಗಳು ಇವೆ. ಅವುಗಳ [ಆವನೇಮ] ಸೇವನೆ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರಗಳಿವೆ. ಪೂರ್ವ ಮಂತ್ರದಿಂದ (ಅಶ್ಯಾಃ) (ವನೇಮ) (ವಿಶ್ವಾನಿ) (ದೈವ್ಯಾನಿ) (ವ್ರತ) ಈ ಐದು ಪದಗಳ ಅನು ವೃತ್ತಿಯು ಬಂದಿದೆ. ಮನುಷ್ಯರು ಜ್ಞಾನ ಸ್ವರೂಪ ಪರಮೇಶ್ವರನ ಹೊರತು ಯಾವುದೇ ವಸ್ತುವು ಅವ್ಯಾಪ್ತವಿಲ್ಲ. ಮತ್ತು ಚೇತನ ಸ್ವರೂಪ ಜೀವನು ತನ್ನ ಕರ್ಮ ಫಲದ ಭೋಗದಿಂದ ಒಂದು ಕ್ಷಣವು ಕೂಡ ಬೇರೆಯಾಗಿರಲಾರನು. ಆದುದರಿಂದ ಆ ಎಲ್ಲವುಗಳಲ್ಲಿ ಅಭಿವ್ಯಾಪ್ತನಾದ ಅಂತರ್ಯಾಮಿ ಈಶ್ವರನನ್ನು ತಿಳಿದು ಯಾವಾಗಲೂ ಪಾಪಗಳನ್ನು ಬಿಟ್ಟು ಧರ್ಮ ಕಾರ್ಯಗಳಲ್ಲಿ ಪ್ರವೃತ್ತರಾಗಬೇಕು. ಹೇಗೆ ಪೃಥಿವಿ ಮೊದಲಾದವುಗಳು ಕಾರ್ಯ ರೂಪ ಪ್ರಜೆಗಳು ಅನೇಕ ತತ್ವಗಳ ಸಂಯೋಗದಿಂದ ಉತ್ಪನ್ನರೂ ಮತ್ತು ವಿಯೋಗದಿಂದ ನಷ್ಟವಾಗುವರೋ, ಹಾಗೆ ಈ ಈಶ್ವರ, ಜೀವ, ಕಾರಣರೂಪ ಮೊದಲಾದವುಗಳು ಅಥವಾ ಸಂಯೋಗ-ವಿಯೋಗಗಳಿಂದ ಬೇರೆಯಾಗಿರುವುದರಿಂದ ಅನಾದಿಯಾಗಿರುವನು, ಎಂದು ತಿಳಿಯಬೇಕು.

ಮತ್ತೆ ಆ ಮನುಷ್ಯನು ಹೇಗಿರುವನು?

ಸ ಹಿ ಕ್ಷಪಾವಾಁ, ಅಗ್ನೀ ರಯೀಣಾಂ ದಾಶದ್ ಯೋ ಅಸ್ಮಾ, ಅರಂ ಸೂಕ್ತೈಃ ।
ಏತಾ ಚಿಕಿತ್ವೋ, ಭೂಮಾ ನಿ ಪಾಹಿ ದೇವಾನಾಂ ಜನ್ಮ, ಮರ್ತಾಂಶ್ಚ ವಿದ್ವಾನ್ ॥೩॥

ಪದಾರ್ಥ:- ಹೇ [ಚಿಕಿತ್ವಃ] ಜ್ಞಾನಿಯಾದ ಜಗದೀಶ್ವರನೇ ಅಥವಾ [ವಿದ್ವಾನ್] ತಿಳಿದವನೇ! [ಯಃ] ಯಾವ [ಕ್ಷಪಾವಾನ್] ಯಾವುದರಲ್ಲಿ ಉತ್ತಮವಾದ ದೀರ್ಘ ರಾತ್ರಿ ಇದೆಯೋ [ಅಗ್ನಿಃ] ಎಲ್ಲ ಸುಖಗಳನ್ನು ಕೊಡುವ ವಿದ್ಯುತ್ತಿನಂತೆ [ಅಸ್ಮೈ] ಈ [ರಯಿಣಾಮ್] ವಿದ್ಯೆ, ರತ್ನ, ರಾಜ್ಯ ಮೊದಲಾದ ಪದಾರ್ಥಗಳ [ಅರಮ್] ಪೂರ್ಣ ಪ್ರಾಪ್ತಿಗಾಗಿ [ಏತಾ] ಈ [ಅರಮ್] ಪೂರ್ಣ [ಸೂಕ್ತೈಃ] ಉತ್ತಮ ವಚನಗಳಿಂದ [ಭೂಮ] ಬಹಳವಾದ [ದೇವಾನಾಮ್] ದಿವ್ಯಗುಣಗಳ ಅಥವಾ ವಿದ್ವಾಂಸರ [ಜನ್ಮ] ಜನ್ಮವು [ಮರ್ತಾನ್] ಮನುಷ್ಯನು [ಚ] ಮನುಷ್ಯನಿಗೆ ಭಿನ್ನವಾದವುಗಳನ್ನು [ದಾಶತ್] ಕೊಡುತ್ತೀಯೆ. [ಸಃ] ಆ ನೀನು [ಹಿ] ನಿಶ್ಚಯವಾಗಿ ಇವರನ್ನು [ನಿ ಪಾಹಿ] ನಿರಂತರ ರಕ್ಷಿಸು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರನ್ನು ಯಾವ ಪರಮೇಶ್ವರ ಅಥವಾ ವಿದ್ವಾಂಸರು ವೇದ ಅಥವಾ ಅಂತರ್ಯಾಮಿಯ ಮುಖಾಂತರ ಹಾಗೂ ಉಪದೇಶಗಳಿಂದ ಎಲ್ಲ ಮನುಷ್ಯರಿಗಾಗಿ ಎಲ್ಲ ವಿದ್ಯೆಗಳನ್ನು ಕೊಡುತ್ತಾನೋ, ಅವನ ಉಪಾಸನೆ ಹಾಗೂ ಸತ್ಸಂಗ ಮಾಡಬೇಕು.

ಮತ್ತೆ ಅದೇ ವಿಷಯ

ವರ್ಧಾನ್ಯಂ ಪೂರ್ವೀಃ, ಕ್ಷಪೋ ವಿರೂಪಾಃ ಸ್ಥಾತುಶ್ಚ ರಥಮೃತಪ್ರವೀತಮ್ ।
ಅರಾಧಿ ಹೋತಾ, ಸ್ವರ್ನಿಷತ್ತಃ ಕೃಣ್ವನ್ ವಿಶ್ವಾನ್ಯಪಾಂಸಿ ಸತ್ಯಾ ॥೪॥

ಪದಾರ್ಥ:- ಮನುಷ್ಯರಿಗೆ ಬೇಕಾದುದೇನೆಂದರೆ, ಯಾವ [ಅರಾಧಿ] ಸಿದ್ಧವಾದ ಅಥವಾ [ಯಮ್] ಯಾವ ಪರಮೇಶ್ವರ ಅಥವಾ ಜೀವನನ್ನು [ಪೂರ್ವೀಃ] ಸನಾತನವಾದ [ಕ್ಷಪಃ] ಶಾಂತಿಯುಕ್ತ ರಾತ್ರಿಯು [ವಿರೂಪಾಃ] ನಾನಾ ಪ್ರಕಾರದ ರೂಪಗಳಿಂದ ಕೂಡಿರುವ ಪ್ರಜೆಗಳನ್ನು [ವರ್ಧಾನ್] ವೃದ್ಧಿಸುತ್ತದೆ. ಯಾವನು [ಸ್ಥಾತುಃ] ಸ್ಥಿತ ಜಗತ್ತಿನ [ಋತಪ್ರವೀತಮ್] ಸತ್ಯಕಾರಣದಿಂದ ಉತ್ಪನ್ನವು ಅಥವಾ ಜಲದಿಂದ ಚಲಿಸುವ [ರಥಮ್] ರಮಣ ಮಾಡಲು ಯೋಗ್ಯ ಸಂಸಾರ ಅಥವಾ ಯಾನವನ್ನು ಮಾಡಿದ ಯಾವ [ಸ್ವಃ] ಸುಖಸ್ವರೂಪ ಅಥವಾ ಸುಖಪಡಿಸುವವನು [ನಿಷತ್ತಃ] ನಿರಂತರ ಸ್ಥಿತನು [ಹೋತಾ] ಗ್ರಹಿಸುವ ಅಥವಾ ಕೊಡುವ [ವಿಶ್ವಾನಿ] ಎಲ್ಲ [ಸತ್ಯಾ] ಸತ್ಯಧರ್ಮದಿಂದ ಶುದ್ಧವಾದ [ಅಪಾಂಸಿ] ಕರ್ಮಗಳನ್ನು [ಕೃಣ್ವನ್] ಮಾಡುತ್ತಾ ವರ್ತಿಸುತ್ತಾನೋ, ಅವನನ್ನು ತಿಳಿಯಿರಿ ಅಥವಾ ಸತ್ಸಂಗ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮನುಷ್ಯರಿಗೆ ಉಚಿತವಾದುದೇನೆಂದರೆ, ಯಾವ ಪರಮೇಶ್ವರನ ಜ್ಞಾನವುಂಟುಮಾಡುವ ಈ ಎಲ್ಲ ಪ್ರಜೆಗಳಿರುವರೋ ಅಥವಾ ಯಾವನನ್ನು ತಿಳಿಯಬೇಕೋ, ಯಾವನು ಉತ್ಪನ್ನ ಮಾಡದಿದ್ದಲ್ಲಿ ಯಾವನ ಉತ್ಪತ್ತಿಯೂ ಸಾಧ್ಯವಿಲ್ಲವೋ, ಯಾವನ ಪುರುಷಾರ್ಥದ ಹೊರತು ಸ್ವಲ್ಪವೂ ಸುಖವು ಸಿಗುವುದಿಲ್ಲವೋ, ಮತ್ತು ಯಾವನು ಸತ್ಯ ಸ್ವೀಕಾರಿ, ಸತ್ಯಕಾರಿ, ಸತ್ಯವಾದಿಯೋ, ಅವನನ್ನೇ ಸದಾ ಸೇವಿಸಿರಿ.

ಮತ್ತೆ ಈಶ್ವರನ ಗುಣಗಳ ಉಪದೇಶ ಮಾಡಿದೆ.

ಗೋಷು ಪ್ರಶಸ್ತಿಂ, ವನೇಷು ಧಿಷೇ ಭರಂತ ವಿಶ್ವೇ, ಬಲಿಂ ಸ್ವರ್ಣಃ ।
ವಿ ತ್ವಾ ನರಃ, ಪುರುತ್ರಾ ಸಪರ್ಯನ್ ಪಿತುರ್ನ ಜಿವ್ರೇರ್ವಿ ವೇದೋ ಭರಂತ ॥೫॥

ಪದಾರ್ಥ:- ಹೇ [ಭರಂತ] ಎಲ್ಲ ವಿಶ್ವ ಅಥವಾ ಎಲ್ಲ ಗುಣಗಳನ್ನು ಧಾರಣ ಮಾಡುವ ಜಗದೀಶ್ವರ! ಯಾವ ಕಾರಣದಿಂದ [ಪುರುತ್ರಾ] ಬಹಳ ದಾನ ಮಾಡಲು ಯೋಗ್ಯನಾದ ನೀನು [ಗೋಷು] ಪೃಥಿವ್ಯಾದಿ ಪದಾರ್ಥಗಳಲ್ಲಿ [ಬಲಿಮ್] ಸಂವರಣ [ಸ್ವ] ಆದಿತ್ಯ [ವನೇಷು] ಕಿರಣಗಳಲ್ಲಿ [ಪ್ರಶಸ್ತಿಮ್] ಉತ್ತಮ ವ್ಯವಹಾರ ಮತ್ತು [ನಃ] ನಮಗೆ [ವಿಧಿಷೇ] ವಿಶೇಷ ಧಾರಣ ಮಾಡಿಸುತ್ತೀಯೋ [ವಿಶ್ವೇ] ಎಲ್ಲ [ನರಃ] ಇದರಿಂದ ವಿದ್ವಾಂಸರು ಹೇಗೆ [ಪುತ್ರಾಃ] ಪುತ್ರರು [ಜಿವ್ರೇಃ] ವೃದ್ಧಾವಸ್ಥೆಯಲ್ಲಿ [ಪಿತುಃ] ತಂದೆಯ ಹತ್ತಿರದಿಂದ [ವೇದಃ] ವಿದ್ಯಾಧನವನ್ನು [ಭರಂತ] ಧಾರಣ ಮಾಡುತ್ತಾರೋ, [ನ] ಹಾಗೆ [ತ್ವಾ] ನಿನ್ನ [ವಿಪರ್ಯನ್] ಸೇವೆ ಮಾಡುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮನುಷ್ಯರೇ! ನೀವೆಲ್ಲರೂ ಯಾವ ಜಗದೀಶ್ವರನ ಸನಾತನ ಕಾರಣದಿಂದ ಎಲ್ಲ ಕಾರ್ಯಗಳು ಅಂದರೆ ಸ್ಥೂಲ ರೂಪ ವಸ್ತುಗಳನ್ನು ಉತ್ಪಾದಿಸಿ ಸ್ಪರ್ಶ ಮೊದಲಾದ ಗುಣಗಳನ್ನು ಪ್ರಕಾಶಿತ ಮಾಡಿವೆಯೋ, ಯಾವನ ಸೃಷ್ಟಿಯಲ್ಲಿ ಉತ್ಪನ್ನವಾದ ಎಲ್ಲ ಪದಾರ್ಥಗಳನ್ನು ಪಿತಾ-ಪುತ್ರರಂತೆ ಎಲ್ಲ ಜೀವಿಗಳೂ ದಾಯಭಾಗಿಗಳೋ, ಯಾವನು ಎಲ್ಲ ಪ್ರಾಣಿಗಳಿಗಾಗಿ ಎಲ್ಲ ಸುಖಗಳನ್ನು ಕೊಡುತ್ತಾನೋ, ಅವನನ್ನು ಆತ್ಮ, ಮನಸ್ಸು, ವಾಣಿ, ಶರೀರ ಮತ್ತು ಧನದಿಂದ ಸೇವೆ ಮಾಡಿರಿ.

ಮತ್ತೆ ಆ ಸಭಾಧ್ಯಕ್ಷನು ಹೇಗಿರಬೇಕು?

ಸಾಧುರ್ನ ಗೃಧ್ನುರಸ್ತೇವ ಶೂರೋ ಯಾತೇವ ಭೀಮಸ್ತ್ವೇಷಃ ಸಮತ್ಸು ॥೬॥

ಪದಾರ್ಥ:- ಹೇ ಮನುಷ್ಯರೇ! ನೀವು ಯಾವ [ಗೃಧ್ನುಃ] ಬೇರೆಯವರ ಉತ್ಕರ್ಷವನ್ನು ಇಚ್ಛಿಸುವ [ಸಾಧುಃ] ಪರೋಪಕಾರಿಯ [ನ] ಸಮಾನ [ಅಸ್ತಾ ಇವ] ಶತ್ರುಗಳ ಮೇಲೆ ಶಸ್ತ್ರವನ್ನೆತ್ತುವ [ಶೂರಃ] ಶೂರವೀರನಂತೆ [ಭೀಮಃ] ಭಯಂಕರನೂ [ಯಾತೇವ] ಹಾಗೂ ದಂಡವನ್ನು ಪ್ರಾಪ್ತಿಸುವವನಂತೆ [ಸಮತ್ಸು] ಸಂಗ್ರಾಮಗಳಲ್ಲಿ [ತ್ವೇಷಃ] ಪ್ರಕಾಶಮಾನ ಪರಮೇಶ್ವರನು ಅಥವಾ ಸಭಾಧ್ಯಕ್ಷನು ಇರುವನೋ, ಅವನ ಸೇವೆಯನ್ನು ನಿತ್ಯ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರಗಳಿವೆ. ಹೇ ಮನುಷ್ಯರೇ! ನೀವು ಪರಮೇಶ್ವರ ಅಥವಾ ಧರ್ಮಾತ್ಮನಾದ ವಿದ್ವಾಂಸನನ್ನು ಬಿಟ್ಟು ಶತ್ರುಗಳನ್ನು ಗೆಲ್ಲಲು ಮತ್ತು ದಂಡಿಸಲು ಹಾಗೂ ಸುಖವನ್ನು ಹೆಚ್ಚಿಸುವ ಬೇರೆ ಯಾವನೂ ನಿಮ್ಮ ರಾಜನಾಗದಿರಲಿ, ಹಾಗೆ ನಿಶ್ಚಯಿಸಿ ಎಲ್ಲರೂ ಪರೋಪಕಾರಿಗಳಾಗಿ ಸುಖಗಳನ್ನು ವೃದ್ಧಿಸಿರಿ.

ಈ ಸೂಕ್ತದಲ್ಲಿ ಈಶ್ವರ, ಮನುಷ್ಯ ಮತ್ತು ಸಭೆ ಮೊದಲಾದ ಅಧ್ಯಕ್ಷರ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಪ್ಪತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೭೧

ಮ. ಸಂ. ೧೦ । ಋಷಿಃ - ಪರಾಶರಃ ಶಾಕ್ತ್ಯಃ । ದೇವತಾ - ಅಗ್ನಿಃ । ಛಂದಃ - ತ್ರಿಷ್ಟುಪ್ । ಸ್ವರಃ - ಧೈವತಃ, ೯ ಪಂಚಮಃ.

೭೧ನೇ ಸೂಕ್ತದ ಮೊದಲ ಮಂತ್ರದಲ್ಲಿ ಸಭಾಧ್ಯಕ್ಷರು ಮೊದಲಾದವರ ಗುಣಗಳ ಉಪದೇಶ ಮಾಡಿದೆ.

ಉಪ ಪ್ರ ಜಿನ್ವನ್ನುಶತೀರುಶಂತಂ ಪತಿಂ ನ ನಿತ್ಯಂ ಜನಯಃ ಸನೀಳಾಃ ।
ಸ್ವಸಾರಃ ಶ್ಯಾವೀಮರುಷೀಮಜುಷ್ರಞ್ ಚಿತ್ರಮುಚ್ಛಂತೀಮುಷಸಂ ನ ಗಾವಃ ॥೧॥

ಪದಾರ್ಥ:- ಹೇ ಮನುಷ್ಯರೇ! ನೀವು ವಿದ್ವಾಂಸರು ಯಾವ [ನಿತ್ಯಮ್] ವ್ಯಭಿಚಾರರಹಿತ ಸ್ವರೂಪದಿಂದ ನಿತ್ಯನೂ ಅವಿನಾಶಿಯೂ [ಚಿತ್ರಮ್] ಅದ್ಭುತ ಗುಣ, ಕರ್ಮ ಮತ್ತು ಸ್ವಭಾವಗಳಿಂದ ಪರಮೇಶ್ವರನ ಅಥವಾ ಸಭಾಧ್ಯಕ್ಷನ [ಸನಿಡಾಃ] ಒಬ್ಬ ಈಶ್ವರನಲ್ಲಿರುವುದರಿಂದ ಸಮಾನ ಸ್ಥಾನವುಳ್ಳ [ಜನಯಃ] ಪ್ರಜೆಗಳು ಅಥವಾ [ಉಶಂತೀಃ] ಶೋಭಾಯಮಾನ [ಸ್ವಸಾರಃ] ಯುವತಿ ಭಗಿನಿಯು [ಉಶಂತಮ್] ಶೋಭಾಯಮಾನವಾದ ತಮ್ಮ-ತಮ್ಮ [ಪತಿಮ್] [ನ] ಪಾಲಿಸುವ ಪತಿಯಂತೆ ಹಾಗೂ [ಗಾವಃ] ಕಿರಣಗಳು ಅಥವಾ ಧೇನುಗಳು [ಶ್ಯಾವೀಮ್] ಧೂಮ್ರ ವರ್ಣದಿಂದ ಕೂಡಿದ ಅಥವಾ [ಅರುಷೀಮ್] ಅತ್ಯಂತ ಕೆಂಪು ಬಣ್ಣವುಳ್ಳ [ಉಚ್ಛಂತೀಮ್] ವಿಶೇಷವಾಗಿ ವಾಸಿಸುವಂತೆ ಮಾಡುವ [ಉಶಸಮ್ ನ] ಪ್ರಾತಃಕಾಲದಂತೆ [ಉಪಾಜುಷನ್] ಸೇವಿಸಿ [ಪ್ರಜಿನ್ವನ್] ಅತ್ಯಂತ ತೃಪ್ತರಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರಗಳಿವೆ. ಹೇಗೆ ಧರ್ಮಾತ್ಮಳಾದ ವಿದುಷೀ ಸ್ತ್ರೀಯು ವಿವಾಹಿತ ಪತಿಯ ಮತ್ತು ಧರ್ಮಾತ್ಮನಾದ ವಿದ್ವಾಂಸನು ವಿವಾಹಿತ ಸ್ತ್ರೀಯ ಸೇವನೆ ಮಾಡುತ್ತಾರೋ,

ಹೇಗೆ ಪ್ರಾತಃಕಾಲವಾಗುತ್ತಲೇ ಕಿರಣಗಳು ಅಥವಾ ಗೋವು ಮೊದಲಾದ ಪಶುಗಳು ಪೃಥಿವೀ ಮೊದಲಾದ ಪದಾರ್ಥಗಳ ಸೇವನೆ ಮಾಡುತ್ತವೋ, ಹಾಗೆಯೇ ಪರಮೇಶ್ವರನ ಅಥವಾ ಸಭಾಧ್ಯಕ್ಷನ ಸೇವೆಯನ್ನು ಮಾಡಬೇಕು.

ಮತ್ತೆ ಯಾವನನ್ನು ಯಾರು ಸೇವಿಸಬೇಕು?

ವೀಳು ಚಿದ್ ದೃಳ್ಹಾ ಪಿತರೋ ನ ಉಕ್ಥೈ-ರದ್ರಿಂ ರುಜನ್ನಂಗಿರಸೋ ರವೇಣ ।
ಚಕ್ರುರ್ದಿವೋ ಬೃಹತೋ ಗಾತುಮಸ್ಮೇ ಅಹಃ ಸ್ವರ್ವಿವಿದುಃ ಕೇತುಮುಸ್ರಾಃ ॥೨॥

ಪದಾರ್ಥ:- ನಾವು ಯಾವ [ಪಿತರಃ] ಜ್ಞಾನಿಗಳು [ಉಕ್ಥೈಃ] ಹೇಳಿರುವ ಉಪದೇಶಗಳಿಂದ [ನಃ] ನಮ್ಮ [ದೃಢಾ] ದೃಢ [ಕೇತುಮ್] ಪ್ರಜೆಗಳು [ವೀಳು] ಬಲ [ಸ್ವಃ, ಚಿತ್] ಸುಖವನ್ನು ಮತ್ತು [ಉಸ್ರಾಃ] ಕಿರಣಗಳು ಅಥವಾ [ಗಾತುಮ್] ಪೃಥಿವಿಯಂತೆ [ಅಹಃ] ದಿನ ಮತ್ತು [ಬೃಹತಃ] ದೊಡ್ಡ [ದಿವಃ] ದ್ಯೋತಮಾನ ಪದಾರ್ಥಗಳಂತೆ [ವಿವಿದುಃ] ತಿಳಿಯುತ್ತಾರೆ. ಅಥವಾ [ಅಂಗಿರಸಃ] ವಾಯುವು [ರವೇಣ] ಸ್ತುತಿಗಳಿಂದ [ಅದ್ರಿಮ್] ಮೇಘವನ್ನು [ರುಜನ್] ಪೃಥಿವಿಯ ಮೇಲೆ ಬೀಳಿಸುವಂತೆ [ಅಸ್ಮೇ] ನಮ್ಮ ದುಃಖಗಳನ್ನು [ಚಕ್ರುಃ] ನಷ್ಟ ಮಾಡುವನೋ, ಅವನನ್ನು ಸೇವಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಪೂರ್ಣ ವಿದ್ಯಾಯುಕ್ತ ವಿದ್ವಾಂಸನ ಸೇವೆ ಹಾಗೂ ವಿದ್ಯಾ ಬುದ್ಧಿಗಳನ್ನು ಉಂಟುಮಾಡಿ ಧರ್ಮ-ಅರ್ಥ-ಕಾಮ-ಮೋಕ್ಷ ಫಲಗಳನ್ನು ಸೇವನೆ ಮಾಡಲಿ.

ಹೇಗೆ ಬ್ರಹ್ಮಚರ್ಯದಿಂದ ಪುರುಷರು ವಿದ್ವಾಂಸರಾಗುವರೋ, ಹಾಗೆ ಸ್ತ್ರೀಯರೂ ಕೂಡ ಆಗುವುದು ಯೋಗ್ಯವು

ದಧನ್ನೃತಂ ಧನಯನ್ನಸ್ಯ ಧೀತಿ-ಮಾದಿದರ್ಯೋ ದಿಧಿಷ್ವೋ೩ ವಿಭೃತ್ರಾಃ ।
ಅತೃಷ್ಯಂತೀರಪಸೋ ಯನ್ತ್ಯಚ್ಛಾ ದೇವಾಞ್ಜನ್ಮ ಪ್ರಯಸಾ ವರ್ಧಯಂತೀಃ ॥೩॥

ಪದಾರ್ಥ:- ಯಾವ [ವಿಭೃತ್ರಾಃ] ವಿಶೇಷ ಧಾರಣ ಮಾಡುವ [ದಿಧಿಷ್ವಃ] ಭೂಷಣಾದಿಗಳಿಂದ ಕೂಡಿದ [ಅ ತೃಷ್ಯಂತೀಃ] ಬಾಯಾರಿಕೆ ಮೊದಲಾದ ದೋಷಗಳಿಂದ ಬೇರೆಯಾಗಿ [ವರ್ಧಯಂತೀ] ಉನ್ನತಿ ಪಡೆಯುವ ಕನ್ಯೆಯು [ದೇವಾನ್] ದಿವ್ಯಗುಣಗಳನ್ನು ಪಡೆದು [ಅರ್ಯಃ] ವೈಶ್ಯನ [ಇತ್] ಸಮಾನ [ಋತಮ್] ಸತ್ಯವಿಜ್ಞಾನವನ್ನು [ಧನಯನ್] ವಿದ್ಯಾಧನ ಯುಕ್ತನನ್ನಾಗಿ ಮಾಡಿ [ಅತ್] ನಂತರ [ಅಸ್ಯ] ಬ್ರಹ್ಮಚರ್ಯದ [ಧೀತಿಮ್] ಧಾರಣವನ್ನು [ದಧನ್] ಧರಿಸಿ [ಪ್ರಯಸಾ] ಅನ್ನದಂತೆ ಇರುವ [ಅಪಸಃ] ಕರ್ಮಗಳು [ದೇವಾನ್] ವಿದ್ವಾಂಸರ [ಜನ್ಮ] ಮತ್ತು ವಿದ್ಯೆಯ ಜನನವನ್ನು [ಅಚ್ಛ] ಉತ್ತಮವಾಗಿ [ಯನ್ತಿ] ಪಡೆಯುವರು, ವೇದಾದಿ ಶಾಸ್ತ್ರಗಳಲ್ಲಿ ವಿದ್ವಾಂಸರಾಗಿ ಎಲ್ಲ ಸುಖಗಳನ್ನು ಪಡೆಯುವರು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ವೈಶ್ಯರು ಧರ್ಮಾನುಸಾರವಾಗಿ ಧನವನ್ನು ಸಂಪಾದಿಸುತ್ತಾರೋ ಹಾಗೆಯೇ ಕನ್ಯೆಯು ವಿವಾಹಕ್ಕೆ ಮೊದಲು ಬ್ರಹ್ಮಚರ್ಯೆಯಿಂದ ಪೂರ್ಣ ವಿದುಷಿಯರಿಂದ ಪೂರ್ಣ ಶಿಕ್ಷಣ ಮತ್ತು ವಿದ್ಯೆಯನ್ನು ಪಡೆದು ನಂತರ ವಿವಾಹವಾಗಿ ಪ್ರಜಾ ಸುಖ (ಸಂತಾನ)ವನ್ನು ಸಂಪಾದಿಸಲಿ. ವಿವಾಹದ ನಂತರ ವಿದ್ಯಾಧ್ಯಯನದ ಸಮಯವಲ್ಲವೆಂದು ತಿಳಿಯಬಾರದು. ಯಾರೇ ಸ್ತ್ರೀ-ಪುರುಷರಿಗೆ ವಿದ್ಯೆಯನ್ನು ಓದುವ ಅಧಿಕಾರವಿಲ್ಲವೆಂದು ಯಾರಿಗೂ ತಿಳಿಸಬೇಕಿಲ್ಲ, ಆದರೆ ಎಲ್ಲರಿಗೂ ಓದುವ ಅಧಿಕಾರವಿದೆ.

ಮತ್ತೆ ಆ ಸ್ತ್ರೀಯರು ಹೇಗಿರಬೇಕು?

ಮಥೀದ್ ಯದೀಂ ವಿಭೃತೋ ಮಾತರಿಶ್ವಾ ಗೃಹೇಗೃಹೇ ಶ್ಯೇತೋ ಜೇನ್ಯೋ ಭೂತ್ ।
ಆದೀಂ ರಾಜ್ಞೇ ನ ಸಹೀಯಸೇ ಸಚಾ ಸ-ನ್ನಾ ದೂತ್ಯಂ೧ ಭೃಗವಾಣೋ ವಿವಾಯ ॥೪॥

ಪದಾರ್ಥ:- [**ಭೃಗವಾಣಃ**] ಅನೇಕ ವಿಧದ ಪದಾರ್ಥ ವಿದ್ಯೆಗಳಿಂದ ಪದಾರ್ಥಗಳನ್ನು ವ್ಯವಹಾರದಲ್ಲಿ ತರುವಂತೆ ವಿದ್ಯಾಗ್ರಹಣ ಮಾಡಿದ ಕನ್ಯೆಯರೇ! ಹೇಗೆ ಈ [**ವಿಭೃತಃ**] ಅನೇಕ ಪ್ರಕಾರದ ಪದಾರ್ಥಗಳನ್ನು ಧಾರಣ ಮಾಡುವ [**ಶ್ಯೇತಃ**] ಪ್ರಾಪ್ತವಾಗುವ [**ಜೇನ್ಯಃ**] ಮತ್ತು ವಿಜಯದ ಹೇತುವು ಹಾಗೂ [**ಮಾತರಿಶ್ವಾ**] ಅಂತರಿಕ್ಷದಲ್ಲಿ ಶಯನ ಮೊದಲಾದ ವಿಹಾರಗಳನ್ನು ಮಾಡುವ ವಾಯುವು [**ಯತ್**] ಯಾವ [**ದೂತ್ಯಮ್**] ದೂತ ಕರ್ಮವಿದೆಯೋ ಅದನ್ನು [**ಆವಿವಾಯ**] ಉತ್ತಮವಾಗಿ ಸ್ವೀಕರಿಸುತ್ತಾ ಮತ್ತು [**ಗೃಹೇ-ಗೃಹೇ**] ಮನೆ-ಮನೆ ಅಥವಾ ಕಲಾಯಂತ್ರಗಳ ಗರ್ಭಾಶಯಗಳಲ್ಲಿ [**ಈಮ್**] ಪ್ರಾಪ್ತವಾದ ಅಗ್ನಿಯನ್ನು [**ಮಥೀತ್**] ಮಥಿಸುತ್ತದೆ. [**ಅತ್**] ಅಥವಾ [**ಸಹೀಯಸೇ**] ಯಶಸ್ಸಿನಿಂದಿರುವ [**ರಾಜ್ಞೇ**] [**ನ**] ರಾಜರಿಗಾಗಿರುವಂತೆ [**ಈಮ್**] ವಿಜಯಸುಖವನ್ನು ಪ್ರಾಪ್ತಿಪಡಿಸುವ ಸೇನೆ [**ಸಚಾ**] ಯೊಂದಿಗೆ [**ಸನ್**] ಇರುವವನು [**ಭೂತ್**] ಪಡೆಯುವನೋ ಹಾಗೆ ವಿದ್ಯೆಯ ಯೋಗದಿಂದ ಸುಖವುಂಟುಮಾಡುವವಳು ಆಗು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ವಿದ್ಯಾಗ್ರಹಣದ ಹೊರತು ಸ್ತ್ರೀಯರಿಗೆ ಸ್ವಲ್ಪವೂ ಸುಖವುಂಟಾಗುವುದಿಲ್ಲ. ಹೇಗೆ ಅವಿದ್ಯೆಯಿಂದ ಕೂಡಿರುವ ಮೂಢರು, ಉತ್ತಮ ಲಕ್ಷಣಗಳಿಂದಿರುವ ವಿದುಷೀ ಸ್ತ್ರೀಯರಿಗೆ ಪೀಡೆಯನ್ನು ಕೊಡುತ್ತಾರೋ, ಹಾಗೆ ವಿದ್ಯಾರಹಿತಳಾದ ಸ್ತ್ರೀಯೂ ತನ್ನ ವಿದ್ವಾಂಸನಾದ ಪತಿಗೆ ದುಃಖವನ್ನು ಕೊಡುತ್ತಾಳೆ. ಆದುದರಿಂದ ವಿದ್ಯಾಗ್ರಹಣದ ನಂತರವೇ ಪರಸ್ಪರ ಪ್ರೀತಿಯಿಂದ ಸ್ವಯಂವರ ವಿಧಾನದಿಂದ ವಿವಾಹ ಮಾಡಿಕೊಂಡು ನಿರಂತರ ಸುಖಯುಕ್ತರಾಗಬೇಕು.

ಮತ್ತೆ ಸೂರ್ಯನಂತಹ ಅಧ್ಯಾಪಕನ ಗುಣಗಳ ಉಪದೇಶ ಮಾಡಿದೆ.

ಮಹೇ ಯತ್ ಪಿತ್ರ ಈಂ ರಸಂ ದಿವೇ ಕ-ರವ ತ್ಸರತ್ ಪೃಶನ್ಯಶ್ಚಿಕಿತ್ವಾನ್ ।
ಸೃಜದಸ್ತಾ ಧೃಷತಾ ದಿದ್ಯುಮಸ್ಮೈ ಸ್ವಾಯಾಂ ದೇವೋ ದುಹಿತರಿ ತ್ವಿಷಿಂ ಧಾತ್ ॥೫॥

ಪದಾರ್ಥ:- ಹೇ ಮನುಷ್ಯರೇ! ನೀವು ಹೇಗೆ [**ಯತ್**] ಯಾವ [**ಕಃ**] ಸುಖದಾತನು [**ಪೃಶನ್ಯಃ**] ಸ್ಪರ್ಶ ಮಾಡಲು [**ಅಸ್ತಾ**] ಎಸೆಯಲು [**ಚಿಕಿತ್ವಾನ್**] ತಿಳಿಯಲು [**ದೇವಃ**] ವಿದ್ಯಾ ಪ್ರಕಾಶವನ್ನು ಕೊಡುವ ಸೂರ್ಯನು [**ಮಹೇ**] ದೊಡ್ಡ [**ಪಿತ್ರೇ**] ಪ್ರಕಾಶವನ್ನು ಕೊಡುವುದರಿಂದ ಪಾಲನೆ ಮಾಡುವ [**ದಿವೇ**] ಪ್ರಕಾಶಕ್ಕಾಗಿ [**ಈಮ್**] ಪ್ರಾಪ್ತಿಪಡಿಸಲು ಯೋಗ್ಯವಾದ [**ರಸಮ್**] ಓಷಧಿಗಳ ಫಲಗಳನ್ನು [**ಅವಸೃಜತ್**] ರಚಿಸುವನು. [**ಈಮ್, ತ್ಸರತ್**] ಅಂಧಕಾರವನ್ನು ದೂರ ಮಾಡುತ್ತಾ [**ಸ್ವಾಯಾಮ್**] ತನ್ನ [**ದುಹಿತರಿ**] ಕನ್ಯೆಯಂತಿರುವ ಉಷೆಯಲ್ಲಿ [**ತ್ವಿಷಿಮ್**] ಪ್ರಕಾಶ ಅಥವಾ ತೇಜಸ್ಸನ್ನು [**ಧಾತ್**] ಧಾರಣ ಮಾಡುತ್ತಾನೆ. ನಂತರ [**ವಿದ್ಯುಮ್**] ದೀಪ್ತಿಯನ್ನು [**ಧೃಷತಾ**] ದೃಢತೆಯಿಂದ ಸುಖವನ್ನು ಕೊಡುತ್ತಾರೋ ಹಾಗೆಯೇ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಎಲ್ಲ ಮಾತಾಪಿತೃಗಳು ಮೊದಲಾದವರು ತಮ್ಮ ತಮ್ಮ ಸಂತಾನಗಳಲ್ಲಿ ವಿದ್ಯೆಯನ್ನು ಸ್ಥಾಪಿಸಬೇಕು. ವಿದ್ಯೆಯಿಂದ ಕೂಡಿದ ಪುತ್ರ-ಪುತ್ರಿಯರೇ ಎಲ್ಲರಿಗೂ ಸುಖವನ್ನು ಕೊಡುತ್ತಾರೆ.

ಮತ್ತೆಯೂ ಅಧ್ಯಾಪಕನ ಗುಣಗಳ ಉಪದೇಶವನ್ನು ಮಾಡಲಾಗಿದೆ.

ಸ್ವ ಆ ಯಸ್ತುಭ್ಯಂ ದಮ ಆ ವಿಭಾತಿ ನಮೋ ವಾ ದಾಶಾದುಶತೋ ಅನು ದ್ಯೂನ್ ।
ವರ್ಧೋ ಅಗ್ನೇ ವಯೋ ಅಸ್ಯ ದ್ವಿಬರ್ಹಾ ಯಾಸದ್ ರಾಯಾ ಸರಥಂ ಯಂ ಜುನಾಸಿ ॥೬॥

ಪದಾರ್ಥ:- ಹೇ [**ಅಗ್ನೇ**] ವಿಜ್ಞಾನ ಪ್ರದನೇ! [**ವರ್ಧೋ, ದ್ವಿಬರ್ಹಾಃ**] ವಿದ್ಯೆ ಮತ್ತು ಶಿಕ್ಷಣದಿಂದ ಮತ್ತೆ - ಮತ್ತೆ ವೃದ್ಧಿಸುವ ತಮ್ಮಂತಹ ಸವಿತನು [**ಸ್ವೇ**] ತನ್ನ [**ದಮೇ**] ಮನೆಯಲ್ಲಿ [**ತುಭ್ಯಮ್**] ನಿಮಗೆ [**ನಮಃ**] ಅನ್ನವನ್ನು [**ಆದಾಶಾತ್**] ಉತ್ತಮವಾಗಿ ಕೊಡುತ್ತಾನೆ. [**ಅವಿಭಾತಿ**] ಮತ್ತು ಅತ್ಯಂತ ಪ್ರಕಾಶವನ್ನು ಮಾಡುತ್ತಾ [**ವಾ**] ಅಥವಾ [**ಅಸ್ಯ**] ಈ ಜಗತ್ತಿನ [**ವಯಃ**] ಅವಸ್ಥೆಯನ್ನು [**ಯಾಸತ್**] ತಲುಪಿಸುತ್ತಾನೋ, ಹಾಗೆ [**ಯಃ**] ಯಾವ ಶಿಷ್ಯನು ತನ್ನ ಮನೆಯಲ್ಲಿ ನಿಮಗಾಗಿ ಅನ್ನ ಕೊಡುತ್ತಾನೆ ಅಂದರೆ ಯಥಾಯೋಗ್ಯ ಸತ್ಕಾರ ಮಾಡುತ್ತಾನೆ ಮತ್ತು ತಮ್ಮಿಂದ ಗುಣಗಳನ್ನು ಪಡೆದು ಪ್ರಕಾಶಿತನಾಗುತ್ತಾನೆ ಅಥವಾ ಈ ತಮ್ಮ ಪುತ್ರ ಮೊದಲಾದವರು ಅವಸ್ಥೆಗೆ ತಲುಪಿಸುತ್ತಾನೆ ಅಂದರೆ ಔಷಧಿ ಮೊದಲಾದ ಪದಾರ್ಥಗಳಿಂದ ನಿರೋಗಿಯನ್ನಾಗಿ ಮಾಡುತ್ತಾನೆ. ಮತ್ತು [**ರಾಯಾ**] ವಿದ್ಯಾದಿ ಧನ [**ಸರಥಮ್**] ಮನೋಹರ [**ಯಾನ**] ಕರ್ಮ ಅಥವಾ ಗುಣಗಳಿಂದ ಕೂಡಿದ [**ಯಮ್**] ಯಾವ ಮನುಷ್ಯನನ್ನು [**ಜುನಾಸಿ**] ವ್ಯವಹಾರಗಳಲ್ಲಿ ನಡೆಸುತ್ತಾನೋ, ಅವರೆಲ್ಲರನ್ನು [**ಅನುದ್ಯೂನ್**] ಪ್ರತಿದಿನ [**ಉಶತಃ**] ಅತಿ ಉತ್ತಮವಾಗಿ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ಯಾರು ನಿಮ್ಮ ಪಿತಾ ಅಂದರೆ ಉತ್ಪನ್ನ ಮಾಡುವ ಮತ್ತು ಓದಿಸುವ ಆಚಾರ್ಯನು ನಿಮಗಾಗಿ ಉತ್ತಮ ಶಿಕ್ಷಣದಿಂದ ಸೂರ್ಯನಂತೆ ವಿದ್ಯಾಪ್ರಕಾಶ ಅಥವಾ ಅನ್ನಾದಿಗಳನ್ನು ಕೊಟ್ಟು ಸುಖಪಡಿಸುತ್ತಾನೋ, ಅವನನ್ನು ನಿರಂತರ ಸೇವಿಸಿರಿ.

ಮತ್ತೆ ಅವನು ಹೇಗಿರುವನು?

ಅಗ್ನಿಂ ವಿಶ್ವಾ ಅಭಿ ಪೃಕ್ಷಃ ಸಚಂತೇ ಸಮುದ್ರಂ ನ ಸ್ರವತಃ ಸಪ್ತ ಯಹ್ವೀಃ ।
ನ ಜಾಮಿಭಿರ್ವಿ ಚಿಕಿತೇ ವಯೋ ನೋ ವಿದಾ ದೇವೇಷು ಪ್ರಮತಿಂ ಚಿಕಿತ್ವಾನ್ ॥೭॥

ಪದಾರ್ಥ:- ಯಾವ [**ಚಿಕಿತ್ವಾನ್**] ಜ್ಞಾನಿಯ ಜ್ಞಾನಕ್ಕೆ ಹೇತುವು [**ನಃ**] ನಮ್ಮನ್ನು [**ದೇವೇಷು**] ವಿದ್ವಾಂಸರ ಅಥವಾ ದಿವ್ಯಗುಣಗಳಲ್ಲಿ [**ಪ್ರಮತಿಮ್**] ಉತ್ತಮ ಜ್ಞಾನವನ್ನು [**ವಿದಾಃ**] ಪ್ರಾಪ್ತ ಮಾಡುತ್ತಾ [**ವಯಃ**] ಜೀವನದ [**ವಿಚಿಕಿತೇ**] ವಿಶೇಷ ಜ್ಞಾನ ಮಾಡಿಸುತ್ತಾನೋ, ಆ [**ಅಗ್ನಿಮ್**] ಅಗ್ನಿಯಂತಿರುವ ವಿದ್ವಾಂಸನು [**ವಿಶ್ವಾಃ**] ಎಲ್ಲ [**ಪೃಕ್ಷಃ**] ವಿದ್ಯಾ ಸಂಪರ್ಕ ಮಾಡುವ ಪುತ್ರನು ಅಥವಾ ದೀಪ್ತಿಯು [**ಸಮುದ್ರಮ್**] ಸಮುದ್ರ ಅಥವಾ [**ಸ್ರವತಃ**] ನದಿಯಂತೆ ಶರೀರವನ್ನು ಗಮನ ಮಾಡಿಸುವ [**ಸಪ್ತ**] ಏಳು ಅಂದರೆ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಇವು ಐದು ಮತ್ತು ಸೂತ್ರರೂಪ ಆತ್ಮನಂತೆ [= **ಸೂತ್ರಾತ್ಮ ಕಾರಣಸ್ಯ**] ಹಾಗೂ [**ಯಹ್ವೀಃ**] ರುಧಿರ ಅಥವಾ ವಿದ್ಯುತ್ತು ಮೊದಲಾದವುಗಳ ಗತಿ [**ನ**] ಯಂತೆ [**ಅಭಿ ಸಚಂತೇ**] ಸಂಬಂಧ ಮಾಡುತ್ತದೆ. ಆದರಿಂದ ನಾವು ಮೂರ್ಖ ಅಥವಾ ದುಃಖ ಕೊಡುವ [**ಜಾಮಿಭಿಃ**] ಸ್ತ್ರೀಯರೊಡನೆ [**ನ**] ಇರದಿರೋಣ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಹೇಗೆ ಸಮುದ್ರವನ್ನು ನದಿಗಳು ಪ್ರಾಣಗಳನ್ನು ವಿದ್ಯುತ್ತು ಮೊದಲಾದವುಗಳು ಗತಿಯುಕ್ತ ಮಾಡುತ್ತವೋ, ಹಾಗೆಯೇ ಮನುಷ್ಯನ ಎಲ್ಲ

ಪುತ್ರರೂ ಅಥವಾ ಕನ್ಯೆಯರು ಬ್ರಹ್ಮಚರ್ಯೆಯಿಂದ ವಿದ್ಯೆ ಅಥವಾ ವ್ರತಗಳನ್ನು ಸಮಾಪ್ತಿ ಮಾಡಿ ಯುವಾವಸ್ಥೆಯನ್ನು ಪಡೆದು ವಿವಾಹದಿಂದ ಸಂತಾನವುಂಟುಮಾಡಿ ಅವರನ್ನೂ ಇದೇ ಪ್ರಕಾರ ವಿದ್ಯೆಯ ಶಿಕ್ಷಣವನ್ನು ಸದಾ ಗ್ರಹಿಸುವಂತೆ ಮಾಡಬೇಕು. ಮಕ್ಕಳಿಗೆ ವಿದ್ಯೆಯ ಉತ್ತಮ ಶಿಕ್ಷಣವನ್ನು ಕೊಡುವುದಕ್ಕೆ ಸಮಾನವಾಗಿ ಯಾವುದೇ ದೊಡ್ಡ ಉಪಕಾರವಿಲ್ಲ.

ಮತ್ತೆ ಆ ಅಧ್ಯಾಪಕನು ಹೇಗಿರುವನು?

ಆ ಯದಿಷೇ ನೃಪತಿಂ ತೇಜ ಆನಟ್ ಛುಚಿ ರೇತೋ ನಿಷಿಕ್ತಂ ದ್ಯೌರಭೀಕೇ ।
ಅಗ್ನಿಃ ಶರ್ಧಮನವದ್ಯಂ ಯುವಾನಂ ಸ್ವಾಧ್ಯಂ ಜನಯತ್ ಸೂದಯಚ್ಚ ॥೮॥

ಪದಾರ್ಥಃ- ಹೇ ಯುವಕರೇ! ಹೇಗೆ [**ದ್ಯೌಃ**] ಪ್ರಕಾಶ ರೂಪ [**ಅಗ್ನಿಃ**] ವಿದ್ಯುತ್ತು [**ಅಭೀಕೇ**] ಸಂಗ್ರಾಮದಲ್ಲಿ [**ಇಷೇ**] ಇಚ್ಛೆಯ ಪೂರ್ಣತೆಗಾಗಿ [**ಯತ್**] ಯಾವ [**ನಿಷಿಕ್ತಮ್**] ಸ್ಥಾಪನೆ ಮಾಡಿರುವ [**ಶುಚಿ**] ಪವಿತ್ರವಾದ [**ರೇತಃ**] ವೀರ್ಯ ಮತ್ತು [**ತೇಜಃ**] ಪ್ರಗಲ್ಭತೆಯನ್ನು [**ಆನಟ್**] ಪ್ರಾಪ್ತಿಪಡಿಸುತ್ತದೆ. ಅದರಿಂದ ಕೂಡಿದ ನೀನು ಹೇಗೆ [**ಶರ್ಧಮ್**] ಬಲವೂ [**ಅನವದ್ಯಮ್**] ನಿಂದಾರಹಿತವೂ [**ಯುವಾನಮ್**] ಯುವಾವಸ್ಥೆಯುಳ್ಳ [**ಸ್ವಾಧ್ಯಮ್**] ಉತ್ತಮ ವಿದ್ಯಾಯುಕ್ತ ವಿದ್ವಾಂಸನು [**ನೃಪತಿಮ್**] ಮನುಷ್ಯರಲ್ಲಿ ವಿರಾಜಮಾನನಾದ ಪತಿಯನ್ನು ಸ್ವೇಚ್ಛೆಯಿಂದ ಪ್ರಸನ್ನತೆಯಿಂದ ಪಡೆದು [**ಆಜನಯತ್**] ಸಂತತಿಯ ಉತ್ಪನ್ನ ಮಾಡಿ [**ಚ**] ಮತ್ತು ಅವಿದ್ಯಾದುಃಖವನ್ನು [**ಸೂದಯತ್**] ದೂರ ಮಾಡಿರಿ.

ಭಾವಾರ್ಥಃ- ಎಲ್ಲರೂ ತಿಳಿಯಬೇಕಾದುದೇನೆಂದರೆ, ಎಂದಿಗೂ ವಿದ್ಯೆ ಅಥವಾ ಪ್ರದೀಪ್ತ ಅಗ್ನಿಯಂತಿರುವ ವಿದ್ವಾಂಸನ ಸಂಗದ ಹೊರತು ವ್ಯವಹಾರ ಮತ್ತು ಪರಮಾರ್ಥದ ಸುಖವನ್ನು ಪಡೆಯಲಾರನು ಮತ್ತು ತನ್ನ ಸಂತತಿಗೆ ವಿದ್ಯೆಯನ್ನು ಕೊಡದ ಹೊರತು ಮಾತಾಪಿತೃಗಳು ಕೃತಕೃತ್ಯರಾಗುವುದಿಲ್ಲ.

ವಿದ್ಯೆಯಿಂದ ಏನು ಪ್ರಾಪ್ತವಾಗುತ್ತದೆ?

ಮನೋ ನ ಯೋಽಧ್ವನಃ ಸದ್ಯ ಏತ್ಯೇ- ಕಃ ಸತ್ರಾ ಸೂರೋ ವಸ್ವ ಈಶೇ ।
ರಾಜಾನಾ ಮಿತ್ರಾವರುಣಾ ಸುಪಾಣೀ ಗೋಷು ಪ್ರಿಯಮಮೃತಂ ರಕ್ಷಮಾಣಾ ॥೯॥

ಪದಾರ್ಥಃ- ಹೇ ಸ್ತ್ರೀ-ಪುರುಷರೇ! ನೀವು ವಿದ್ವಾಂಸರಂತೆ [**ಮನಃ**] ಸಂಕಲ್ಪವಿಕಲ್ಪರೂಪ ಅಂತಃಕರಣದ ವೃತ್ತಿಗಳ [**ನ**] ಸಮಾನವಾಗಿ ಅಥವಾ [**ಸೂರಃ**] ಪ್ರಾಣಿಗಳ ಗರ್ಭವನ್ನು ಹೊರಹಾಕುವ ಪ್ರಾಣಸ್ಥ ವಿದ್ಯುತ್ತಿನಂತಿರುವ ವಿಮಾನ ಮೊದಲಾದ ಯಾನಗಳಿಂದ [**ಅಧ್ವನಃ**] ಮಾರ್ಗಗಳನ್ನು [**ಸದ್ಯಃ**] ಶೀಘ್ರ [**ಏತಿ**] ಹೋಗುತ್ತಾ ಮತ್ತೂ [**ಯಃ**] ಯಾವ [**ಏಕಃ**] ಸಹಾಯರಹಿತ ಏಕಾಕಿಯು [**ಸತ್ರಾ**] ಸತ್ಯಗುಣ, ಕರ್ಮ ಮತ್ತು ಸ್ವಭಾವವುಳ್ಳ [**ವಸ್ವಃ**] ದ್ರವ್ಯವನ್ನು ಶೀಘ್ರವಾಗಿ [**ಈಶೇ**] ಪ್ರಾಪ್ತಪಡಿಸುತ್ತಾನೋ, ಹಾಗೆ [**ಗೋಷು**] ಪೃಥಿವಿಯಲ್ಲಿ [**ಪ್ರಿಯಮ್**] ಪ್ರೀತಿಕಾರಕ [**ಅಮೃತಮ್**] ಎಲ್ಲ ಸುಖದುಃಖಗಳನ್ನು ನಾಶ ಮಾಡುವ ಅಮೃತದ [**ರಕ್ಷಮಾಣಾ**] ರಕ್ಷಣೆ ಮಾಡುವ [**ಸುಪಾಣೀ**] ಉತ್ತಮ ವ್ಯವಹಾರಗಳಿಂದ ಕೂಡಿ [**ಮಿತ್ರಾ ವರುಣೌ**] ಎಲ್ಲರ ಮಿತ್ರನೂ ಎಲ್ಲರಿಗಿಂತ ಉತ್ತಮನೂ ಆದ [**ರಾಜಾನಾ**] ಸಭೆ ಅಥವಾ ವಿದ್ಯೆಯ ಅಧ್ಯಕ್ಷನ ಸದೃಶನಾಗಿ ಧರ್ಮ-ಅರ್ಥ-ಕಾಮ ಮತ್ತು ಮೋಕ್ಷವನ್ನು ಸಿದ್ಧಪಡಿಸಿರಿ.

ಭಾವಾರ್ಥಃ- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಹೇಗೆ ಮನುಷ್ಯನು ವಿದ್ಯೆ ಮತ್ತು ವಿದ್ವಾಂಸರ ಸಂಗದ ಹೊರತು ವಿಮಾನಾದಿ ಯಾನಗಳನ್ನು ರಚಿಸಿ ಮತ್ತು ಅವುಗಳಲ್ಲಿ ಕುಳಿತು

ದೇಶ-ದೇಶಾಂತರಗಳಿಗೆ ಶೀಘ್ರವಾಗಿ ಹೋಗಿ ಬರುವುದು, ಸತ್ಯ ವಿಜ್ಞಾನ, ಉತ್ತಮ ದ್ರವ್ಯ ಪ್ರಾಪ್ತಿ ಮತ್ತು ಧರ್ಮಾತ್ಮ ರಾಜನು ರಾಜ್ಯವನ್ನು ಸಂಪಾದಿಸಲು ಸಮರ್ಥನಾಗಲಾರನೋ, ಹಾಗೆ, ಸ್ತ್ರೀ-ಪುರುಷರು ನಿರಂತರ ವಿದ್ಯೆ ಮತ್ತು ಶರೀರಬಲದ ಉನ್ನತಿ ಮಾಡದ ಹೊರತು ಸುಖವು ಎಂದಿಗೂ ವೃದ್ಧಿಸುವುದಿಲ್ಲ.

ಮತ್ತೆ ಅವನು ಹೇಗಿರುವನು?

ಮಾ ನೋ ಅಗ್ನೇ ಸಖ್ಯಾ ಪಿತ್ರ್ಯಾಣಿ ಪ್ರ ಮರ್ಷಿಷ್ಠಾ ಅಭಿ ವಿದುಷ್ಕವಿಃ ಸನ್ ।
ನಭೋ ನ ರೂಪಂ ಜರಿಮಾ ಮಿನಾತಿ ಪುರಾ ತಸ್ಯಾ ಅಭಿಶಸ್ತೇರಧೀಹಿ ॥೧೦॥

ಪದಾರ್ಥಃ- ಹೇ [**ಅಗ್ನೇ**] ಎಲ್ಲ ವಿದ್ಯೆಗಳನ್ನುಳ್ಳ ವಿದ್ವಾಂಸನೇ! [**ಜರಿಮಾ**] ಸ್ತುತಿಗೆ ಯೋಗ್ಯವಾದ [**ಕವಿಃ**] ಪೂರ್ಣವಿದ್ಯೆಯನ್ನು [**ವಿದುಃ**] ತಿಳಿದವನು [**ಸನ್**] ಆಗಿ ನೀನು [**ನಭೋರೂಪಂ ನ**] ಹೇಗೆ ಆಕಾಶವು ಎಲ್ಲ ರೂಪವುಳ್ಳ ಪದಾರ್ಥಗಳನ್ನು ನಾಶವಾಗುವ ಸಮಯದಲ್ಲಿ ತನ್ನಲ್ಲಿ ಬಚ್ಚಿಟ್ಟುಕೊಳ್ಳುತ್ತದೋ, ಹಾಗೆ [**ನಃ**] ನಮ್ಮ [**ಪುರಾ**] ಪ್ರಾಚೀನ [**ಪಿತ್ರ್ಯಾಣಿ**] ಪಿತಾ ಮೊದಲಾದವರಿಂದ ಬಂದ [**ಸಖ್ಯಾ**] ಮಿತ್ರತ್ವ ಮೊದಲಾದ ಕರ್ಮಗಳನ್ನು [**ಮಾಭಿಪ್ರ ಮರ್ಷಿಷ್ಠಾ**] ನಷ್ಟಗೊಳಿಸದಿರಿ ಮತ್ತು [**ತಸ್ಯಾಃ**] ಆ [**ಅಭಿಶಸ್ತೇಃ**] ನಾಶವನ್ನು [**ಅಧೀಹಿ**] ಉತ್ತಮವಾಗಿ ಸ್ಮರಣೆಯಲ್ಲಿ ಇಡಿರಿ. ಇದೇ ರೀತಿಯಾಗಿದು ಯಾವುದು ಸುಖವನ್ನು [**ಮಿನಾತಿ**] ನಷ್ಟಗೊಳಿಸುವುದೋ ಅದನ್ನು ದೂರ ಮಾಡಿರಿ.

ಭಾವಾರ್ಥಃ- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಹೇಗೆ ರೂಪವುಳ್ಳ ಪದಾರ್ಥಗಳು ಸೂಕ್ಷ್ಮಾವಸ್ಥೆಯನ್ನು ಪಡೆದು ಅಂತರಿಕ್ಷದಲ್ಲಿ ಕಾಣದಂತಾಗುವುವೋ, ಹಾಗೆ ನಮ್ಮ ಮಿತ್ರತ್ವ ವ್ಯವಹಾರಗಳು ನಷ್ಟವಾಗದಿರಲಿ. ಆದರೆ ನಾವೆಲ್ಲರೂ ಸರ್ವಥಾ ವಿರೋಧವನ್ನು ಬಿಟ್ಟು ಪರಸ್ಪರ ಮಿತ್ರರಾಗಿ ಎಲ್ಲ ಕಾಲದಲ್ಲೂ ಸುಖಿಗಳಾಗೋಣ.

ಈ ಸೂಕ್ತದಲ್ಲಿ ಈಶ್ವರ, ಸಭಾಧ್ಯಕ್ಷ, ಸ್ತ್ರೀ, ಪುರುಷ, ವಿದ್ಯುತ್ತು ಮತ್ತು ವಿದ್ವಾಂಸರ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಪ್ಪತ್ತೊಂದನೆಯ ಸೂಕ್ತ ಸಮಾಪ್ತ

ಸೂಕ್ತ ೭೨

ಮ.ಸಂ. ೧೦ । ಋಷಿಃ- ಪರಾಶರಃ ಶಾಕ್ತ್ಯಃ । ದೇವತಾ - ಅಗ್ನಿಃ । ಛಂದಃ - ತ್ರಿಷ್ಟುಪ್ । ಸ್ವರಃ - ಧೈವತಃ, ೬,೮ ಪಂಚಮಃ.

೭೨ನೇ ಸೂಕ್ತದ ಮೊದಲ ಮಂತ್ರದಲ್ಲಿ ಮನುಷ್ಯರಿಗೆ ವೇದಗಳನ್ನು ಓದುವುದು - ಓದಿಸುವುದರಿಂದ ಏನೇನು ಫಲ ಉಂಟಾಗುತ್ತವೆ. ಈ ವಿಷಯವನ್ನು ಹೇಳಿದೆ.

ನಿ ಕಾವ್ಯಾ ವೇಧಸಃ ಶಶ್ವತಸ್ಕ-ರ್ಹಸ್ತೇ ದಧಾನೋ ನರ್ಯಾ ಪುರೂಣಿ ।
ಅಗ್ನಿರ್ಭುವದ್ ರಯಿಪತೀ ರಯೀಣಾಂ ಸತ್ರಾ ಚಕ್ರಾಣೋ ಅಮೃತಾನಿ ವಿಶ್ವಾ ॥೧॥

ಪದಾರ್ಥ:- ಯಾವ **[ಅಗ್ನಿಃ]** ಅಗ್ನಿಯಂತಿರುವ ವಿದ್ವಾಂಸನು **[ವೇಧಸಃ]** ಎಲ್ಲ ವಿದ್ಯೆಗಳ ಧಾರಣ ಮತ್ತು ವಿಧಾನ ಮಾಡುವ **[ಶಶ್ವತಃ]** ಅನಾದಿ ಸ್ವರೂಪ ಪರಮೇಶ್ವರನ ಸಂಬಂಧದಿಂದ ಪ್ರಕಾಶಿತವಾಗುವ **[ಪುರೂಣಿ]** ಬಹಳ **[ಸತ್ರಾ]** ಸತ್ಯದ ಅರ್ಥವನ್ನು ಪ್ರಕಾಶ ಮಾಡುವ ಹಾಗೂ **[ಅಮೃತಾನಿ]** ಮೋಕ್ಷ ಪರ್ಯಂತ ಅರ್ಥಗಳನ್ನು ಪ್ರಾಪ್ತಿ ಪಡಿಸುವ **[ವಿಶ್ವಾ]** ಎಲ್ಲ **[ನರ್ಯಾ]** ಮನುಷ್ಯರನ್ನು ಸುಖಪಡಿಸುವ ಹೇತುವು **[ಕಾವ್ಯಾ]** ಸರ್ವಜ್ಞ ನಿರ್ಮಿತ ವೇದಗಳ ಸ್ತೋತ್ರಗಳಾಗಿವೆ. ಅವುಗಳನ್ನು **[ಹಸ್ತೇ]** ಕೈಯಲ್ಲಿ ಪ್ರತ್ಯಕ್ಷ ಪದಾರ್ಥದಂತೆ **[ದಧಾನಃ]** ಧಾರಣ ಮಾಡಿ ಹಾಗೂ ವಿದ್ಯಾ ಪ್ರಕಾಶವನ್ನು **[ಚಕ್ರಾಣಃ]** ಮಾಡುತ್ತಿರುವ ಧರ್ಮಾಚರಣೆಯನ್ನು **[ನಿಕಃ]** ನಿಶ್ಚಯವಾಗಿ ಸಿದ್ಧ ಮಾಡುತ್ತವೆ. ಅವನು **[ರಯಿಣಾಮ್]** ವಿದ್ಯೆ, ಚಕ್ರವರ್ತೀ ರಾಜ್ಯ ಮೊದಲಾದ ಸಂಪತ್ತಿನ **[ರಯಿಪತಿಃ]** ಪಾಲನೆ ಮಾಡುವ ಶ್ರೀಪತಿಯು **[ಭುವತ್]** ಆಗುವನು.

ಭಾವಾರ್ಥ:- ಹೇ ಮನುಷ್ಯರೇ! ಅನಂತ ಸತ್ಯವಿದ್ಯಾಯುಕ್ತ, ಅನಾದಿ ಸರ್ವಜ್ಞ ಪರಮೇಶ್ವರನು ನಿಮ್ಮ ಹಿತಕ್ಕಾಗಿ ಯಾವ ತನ್ನ ವಿದ್ಯಾಮಯ ಅನಾದಿರೂಪೀ ವೇದಗಳನ್ನು ಪ್ರಕಾಶ ಪಡಿಸಿರುವನು.

ಯಾರು ಈ ವೇದಗಳನ್ನು ಓದುತ್ತಾರೋ ಅವರೇ ಸದಾ ಆನಂದದಲ್ಲಿರುತ್ತಾರೆ ಮತ್ತು ಯಾರು ಓದುವುದಿಲ್ಲವೋ ಅವರ

ಪರಿಶ್ರಮವು ವ್ಯರ್ಥವಾಗುತ್ತದೆ.

ಅಸ್ಮೇ ವತ್ಸಂ ಪರಿ ಷಂತಂ ನ ವಿಂದ-ನ್ನಿಚ್ಛಂತೋ ವಿಶ್ವೇ ಅಮೃತಾ ಅಮೂರಾಃ ।
ಶ್ರಮಯುವಃ ಪದವ್ಯೋ ಧಿಯಂಧಾ-ಸ್ತಸ್ಥುಃ ಪದೇ ಪರಮೇ ಚಾರ್ವಗ್ನೇಃ ॥೨॥

ಪದಾರ್ಥ:- ಯಾವ **[ವಿಶ್ವೇ]** ಎಲ್ಲ **[ಅಮೃತಾಃ]** ಉತ್ಪತ್ತಿನಾಶರಹಿತ ಅನಾದಿ **[ಅಮೂರಾಃ]** ಮೂಢತ್ವ ಮೊದಲಾದ ದೋಷರಹಿತ **[ಶ್ರಮಯುವಃ]** ಶ್ರಮದಿಂದ ಕೂಡಿದ **[ಪದವ್ಯಃ]** ಸುಖಗಳನ್ನು ಪಡೆದ **[ಧಿಯಂಧಾಃ]** ಬುದ್ಧಿ ಅಥವಾ ಕರ್ಮಗಳನ್ನು ಧಾರಣ ಮಾಡುವ **[ಇಚ್ಛಂತಃ]** ಶ್ರದ್ಧಾಳುವಾಗಿ ಮನುಷ್ಯನು **[ಅಸ್ಮೇ]** ನಮ್ಮನ್ನು **[ವತ್ಸಮ್]** ಪುತ್ರನಂತೆ ಸುಖಗಳಲ್ಲಿ ನಿವಸಿಸುವಂತೆ ಮಾಡುವ ಪ್ರಸಿದ್ಧ ನಾಲ್ಕು ವೇದಗಳಿಂದ ಕೂಡಿದ ವಾಣಿಯ **[ಷಂತಮ್]** ವರ್ತಮಾನವನ್ನು **[ಪರಿವಿಂದನ್]** ಪ್ರಾಪ್ತ ಮಾಡುತ್ತಾರೋ, ಅವರು **[ಅಗ್ನೇಃ ಚಾರು]** ಶ್ರೇಷ್ಠರು ಹೇಗೋ ಹಾಗೆ ಪರಮಾತ್ಮನ **[ಪರಮೇ]** ಎಲ್ಲಕ್ಕಿಂತ ಉತ್ತಮ **[ಪದೇ]** ಪಡೆಯಲು ಯೋಗ್ಯವಾದ ಸುಖರೂಪೀ ಮೋಕ್ಷ ಪದವಿಯಲ್ಲಿ **[ತಸ್ಥುಃ]** ಸ್ಥಿರವಾಗುತ್ತಾರೆ ಮತ್ತು ಅವರು ಆ ಬ್ರಹ್ಮ ಪದವಿಯನ್ನು ಪಡೆಯಲಾರರು.

ಭಾವಾರ್ಥ:- ಎಲ್ಲ ಜೀವರೂ ಅನಾದಿಗಳು. ಯಾರು ಇವರಲ್ಲಿ ಮನುಷ್ಯದೇಹಧಾರಿಗಳೋ ಅವರ ಬಗ್ಗೆ ಈಶ್ವರನು ಉಪದೇಶ ಮಾಡುತ್ತಾನೆ. ಹೇ ಮನುಷ್ಯರೇ! ನೀವೆಲ್ಲರೂ ವೇದಗಳನ್ನು ಓದಿ-ಓದಿಸಿ ಅಜ್ಞಾನದಿಂದ ಜ್ಞಾನವುಳ್ಳ ಪುರುಷಾರ್ಥಿಯಾಗಿ ಸುಖಗಳನ್ನು ಭೋಗಿಸಿರಿ. ಏತಕ್ಕೆಂದರೆ, ವೇದಾರ್ಥ ಜ್ಞಾನದ ಹೊರತು ಯಾವನೇ ಮನುಷ್ಯನು ಎಲ್ಲ ವಿದ್ಯೆಗಳನ್ನು ಪಡೆಯಲಾರನು. ಆದುದರಿಂದ ನೀವು ವೇದವಿದ್ಯೆಯ ವೃದ್ಧಿಯನ್ನು ನಿರಂತರ ಮಾಡುವುದು ಉಚಿತವಾಗಿದೆ.

ಮತ್ತೆ ಅವರು ಆ ವೇದಗಳನ್ನು ಏತಕ್ಕಾಗಿ ಓದಬೇಕು?

ತ್ರಿಸ್ರೋ ಯದಗ್ನೇ ಶರದಸ್ತ್ವಾಮಿ-ಚ್ಛುಚಿಂ ಘೃತೇನ ಶುಚಯಃ ಸಪರ್ಯಾನ್ ।
ನಾಮಾನಿ ಚಿದ್ ದಧಿರೇ ಯಜ್ಞಿಯಾ-ನ್ಯಸೂದಯಂತ ತನ್ವ೧ಃ ಸುಜಾತಾಃ ॥೩॥

ಪದಾರ್ಥ:- ಹೇ **[ಅಗ್ನೇ]** ವಿದ್ವಾಂಸನೇ! **[ಯತ್]** ಯಾವ **[ಶುಚಯಃ]** ಪವಿತ್ರ **[ಸುಜಾತಾಃ]** ವಿದ್ಯಾಕ್ರಿಯೆಗಳಲ್ಲಿ ಉತ್ತಮ ಕುಶಲತೆಯಿಂದ ಪ್ರಸಿದ್ಧರಾದ ಮನುಷ್ಯರು **[ಶುಚಿಮ್]** ಪವಿತ್ರರಾದ **[ತ್ವಾಮ್]** ನಿಮ್ಮನ್ನು **[ತ್ರಿಸ್ರಃ]** ಮೂರು **[ಶರದಃ]** ಶರದ್ ಋತುಗಳುಳ್ಳ ಸಂವತ್ಸರಗಳನ್ನು **[ಸಪರ್ಯಾನ್]** ಸೇವನೆ ಮಾಡಲಿ. ಅವರು **[ಇತ್]** ನಿಶ್ಚಯವಾಗಿ **[ಯಜ್ಞಿಯಾನಿ]** ಕರ್ಮ, ಉಪಾಸನೆ ಮತ್ತು ಜ್ಞಾನವನ್ನು ಸಿದ್ಧ ಮಾಡಲು ಯೋಗ್ಯವಾದ ವ್ಯವಹಾರಗಳನ್ನು **[ನಾಮಾನಿ]** ಅರ್ಥ ಜ್ಞಾನ ಸಹಿತ ಸಂಜ್ಞೆಗಳನ್ನು **[ದಧಿರೇ]** ಧಾರಣ ಮಾಡಲಿ. **[ಚಿತ್]** ಮತ್ತು **[ಘೃತೇನ]** ಘೃತ ಅಥವಾ ಜಲಗಳೊಂದಿಗೆ **[ತನ್ವಃ]** ಶರೀರಗಳನ್ನು ಕೂಡ **[ಅಸೂದಯಂತ]** ಜಲಿಸುವಂತೆ ಮಾಡಲಿ.

ಭಾವಾರ್ಥ:- ಯಾವನು ಕೂಡ ವೇದವಿದ್ಯೆಯನ್ನು ಅಧ್ಯಯನ ಮಾಡದ ಹೊರತು ವಿದ್ವಾಂಸನಾಗುವುದಿಲ್ಲ ಮತ್ತು ವಿದ್ಯೆಗಳ ಹೊರತು ನಿಶ್ಚಯವಾಗಿ ಮನುಷ್ಯ ಜನ್ಮದ ಸಫಲತೆ ಹಾಗೂ ಪವಿತ್ರತೆಯಾಗುವುದಿಲ್ಲ. ಆದುದರಿಂದ ಎಲ್ಲ ಮನುಷ್ಯರಿಗೂ ಉಚಿತವಾದುದೇನೆಂದರೆ, ಧರ್ಮದ ಸೇವನೆಯನ್ನು ನಿತ್ಯ ಮಾಡಲಿ.

ವೇದಾಧ್ಯಯನ ಮಾಡುವವನು ಯಾವ ರೀತಿ ಇರುತ್ತಾನೆ?

ಆ ರೋದಸೀ ಬೃಹತೀ ವೇವಿದಾನಾಃ ಪ್ರ ರುದ್ರಿಯಾ ಜಭ್ರಿರೇ ಯಜ್ಞಿಯಾಸಃ ।
ವಿದನ್ಮರ್ತೋ ನೇಮಧಿತಾ ಚಿಕಿತ್ವಾ-ನಗ್ನಿಂ ಪದೇ ಪರಮೇ ತಸ್ಥಿವಾಂಸಮ್ ॥೪॥

ಪದಾರ್ಥ:- ಯಾವ **[ರುದ್ರಿಯಾ]** ದುಷ್ಟಶತ್ರುಗಳನ್ನು ರೋದಿಸುವಂತೆ ಮಾಡುವವನ ಸಂಬಂಧವು **[ವೇವಿದಾನಾಃ]** ಅತ್ಯಂತ ಜ್ಞಾನಯುಕ್ತ **[ಯಜ್ಞಿಯಾಸಃ]** ಯಜ್ಞದ ಸಿದ್ಧಿ ಮಾಡುವ ವಿದ್ವಾಂಸರು **[ಬೃಹತೀ]** ದೊಡ್ಡ **[ರೋದಸೀ]** ಭೂಮಿರಾಜ್ಯ ಅಥವಾ ವಿದ್ಯಾ ಪ್ರಕಾಶವನ್ನು **[ಅಜಭ್ರಿರೇ]** ಧಾರಣ ಪೋಷಣೆ ಮಾಡುತ್ತಾ ಮತ್ತು ಸಮಗ್ರ ವಿದ್ಯೆಗಳನ್ನು ತಿಳಿಯುತ್ತಾರೆ. ಅವರಿಂದ ವಿಜ್ಞಾನವನ್ನು ಪಡೆದು **[ಚಿಕಿತ್ವಾನ್]** ಜ್ಞಾನಿಯು **[ನೇಮಧಿತಾ]** ಪಡೆದ ಪದಾರ್ಥಗಳನ್ನು ಧಾರಣ ಮಾಡುವ **[ಮರ್ತಃ]** ಮನುಷ್ಯನು **[ಪರಮೇ]** ಎಲ್ಲಕ್ಕಿಂತ ಉತ್ತಮವಾದ **[ಪದೇ]** ಪಡೆಯಲು ಯೋಗ್ಯವಾದ ಮೋಕ್ಷಪದದಲ್ಲಿ **[ತಸ್ಥಿವಾಂಸಮ್]** ಸ್ಥಿರನಾಗಿ **[ಅಗ್ನಿಮ್]** ಪರಮೇಶ್ವರನನ್ನು **[ಪ್ರವಿದತ್]** ತಿಳಿಯುತ್ತಾನೋ ಅವನೇ ಸುಖಭೋಗಿಸುವನು.

ಭಾವಾರ್ಥ:- ಮನುಷ್ಯರಿಗೆ ಬೇಕಾದುದೇನೆಂದರೆ, ವೇದವನ್ನು ತಿಳಿದ ವಿದ್ವಾಂಸನಿಂದ ಉತ್ತಮ ನಿಯಮಗಳ ಮುಖಾಂತರ ವೇದ ವಿದ್ಯೆಯನ್ನು ಪಡೆದ ವಿದ್ವಾಂಸನಾಗಿ ಪರಮೇಶ್ವರ ಹಾಗೂ ಅವನು ರಚಿಸಿರುವ ಜಗತ್ತನ್ನು ತಿಳಿದು ಅನ್ಯ ಮನುಷ್ಯರಿಗೆ ನಿರಂತರ ವಿದ್ಯೆಯನ್ನು ಕೊಡಬೇಕು.

ಮತ್ತೆ ಆ ವಿದ್ವಾಂಸನು ಹೇಗಿರುವನು?

ಸಂಜಾನಾನಾ ಉಪ ಸೀದನ್ನಭಿಜ್ಞು ಪತ್ನೀವಂತೋ ನಮಸ್ಯಂ ನಮಸ್ಯನ್ ।
ರಿರಿಕ್ವಾಂಸಸ್ತನ್ವಃ ಕೃಣ್ವತ ಸ್ವಾಃ ಸಖಾ ಸಖ್ಯುರ್ನಿಮಿಷಿ ರಕ್ಷಮಾಣಾಃ ॥೫॥

ಪದಾರ್ಥ:- ಯಾವ **[ಸಂಜಾನಾನಾಃ]** ಚೆನ್ನಾಗಿ ತಿಳಿದಿರುವ **[ಪತ್ನೀವಂತಃ]** ಪ್ರಶಂಸಾಯೋಗ್ಯ ವಿದ್ಯಾಯುಕ್ತ ಯಜ್ಞವನ್ನು ತಿಳಿದಿರುವ ಸ್ತ್ರೀಯರ ಸಹಿತ **[ರಕ್ಷಮಾಣಾಃ]** ಧರ್ಮ ಮತ್ತು ವಿದ್ಯೆಯ ರಕ್ಷಣೆ ಮಾಡುತ್ತಾ ಇರುವ ವಿದ್ವಾಂಸರು **[ರಿರಿಕ್ವಾಂಸಃ]** ವಿಶೇಷವಾಗಿ ಪಾಪಗಳಿಂದ ಬೇರೆಯಾಗಿ **[ಅಭಿಜ್ಞು]** ತೊಡೆಗಳಿಂದ **[ಉಪಸೀದನ್]** ಸನ್ಮುಖವಾಗಿ ಹತ್ತಿರ ಕುಳಿತು ತಿಳಿಯುತ್ತಾನೆ ಹಾಗೂ **[ನಮಸ್ಯಮ್]** ನಮಸ್ಕರಿಸಲು ಯೋಗ್ಯನಾದ ಪರಮೇಶ್ವರನು ಮತ್ತು ಓದಿಸುವ ವಿದ್ವಾಂಸನ ಸತ್ಕಾರ ಮಾಡುತ್ತಾ ಮತ್ತು **[ನಿಮಿಷ]** ಅಧಿಕ ವಿದ್ಯೆಯನ್ನು ಪಡೆಯುವುದಕ್ಕಾಗಿ

ಸ್ಪರ್ಧೆಯಿಂದ ಕೂಡಿದ ವ್ಯವಹಾರಗಳಲ್ಲಿ ಕ್ಷಣ-ಕ್ಷಣವೂ [ಸಖ್ಯುಃ] ಮಿತ್ರನ [ಸಖಾ] ಮಿತ್ರನಂತೆ [ಸ್ವಾಃ] ತನ್ನ [ತನ್ವಃ] ಶರೀರವನ್ನು [ಕೃಣ್ವತ] ಬಲಯುಕ್ತ ಮತ್ತು ರೋಗರಹಿತವಾಗಿ ಮಾಡುತ್ತಾರೆ. ಅವರೇ ಭಾಗ್ಯಶಾಲಿಗಳಾಗುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಈಶ್ವರ ಮತ್ತು ವಿದ್ವಾಂಸರ ಸತ್ಕಾರ ಮಾಡದ ಹೊರತು ಯಾರಿಗೂ ವಿದ್ಯೆಯ ಪೂರ್ಣ ಸುಖವುಂಟಾಗುವುದಿಲ್ಲ. ಆದುದರಿಂದ ಮನುಷ್ಯರು, ಸತ್ಕಾರಯೋಗ್ಯರಾದವರಿಗೆ ಸತ್ಕಾರ ಮತ್ತು ಅಯೋಗ್ಯರಿಗೆ ಅಸತ್ಕಾರವನ್ನೂ ಮಾಡಬೇಕು.

ಈ ವಿದ್ವಾಂಸರ ವಿದ್ಯೆಯಿಂದ ಯಾರನ್ನು ತಿಳಿದು ವರ್ತಿಸಬೇಕು

ತ್ರಿಃ ಸಪ್ತ ಯದ್ ಗುಹ್ಯಾನಿ ತ್ವೇ ಇತ್ ಪದಾವಿದನ್ನಿಹಿತಾ ಯಜ್ಞಿಯಾಸಃ ।
ತೇಭೀ ರಕ್ಷಂತೇ ಅಮೃತಂ ಸಜೋಷಾಃ ಪಶೂಞ್ಚ ಸ್ಥಾತೄಞ್ಚರಥಂ ಚ ಪಾಹಿ ॥೬॥

ಪದಾರ್ಥ:- ಹೇ ವಿದ್ವಾಂಸರೇ! ಹೇಗೆ [ತ್ವೇ] ಯಾವನು [ಯಜ್ಞಿಯಾಸಃ] ಯಜ್ಞವನ್ನು ಸಿದ್ಧ ಮಾಡುವ ವಿದ್ವಾಂಸನು [ಯತ್] ಯಾರ [ನಿಹಿತಾ] ಸ್ಥಾಪಿತ ವಿದ್ಯಾದಿ ಧನರೂಪ [ಗುಹ್ಯಾನಿ] ಗುಪ್ತ ಅಥವಾ ಎಲ್ಲ ರೀತಿ ಸ್ವೀಕಾರ ಮಾಡಲು [ಪದಾ] ಪಡೆಯಲು ಯೋಗ್ಯವಾದ [ಸಪ್ತ] ಏಳು ಅಂದರೆ, ನಾಲ್ಕು ವೇದಗಳು ಮತ್ತು ಮೂರು ಕ್ರಿಯಾಕೌಶಲಗಳು, ವಿಜ್ಞಾನ ಮತ್ತು ಪುರುಷಾರ್ಥವನ್ನು [ತ್ರಿಃ] ಶ್ರವಣ, ಮನನ ಮತ್ತು ಆಲೋಚನೆ ಮಾಡುವುದರಿಂದ [ಅವಿಂದನ್] ಪಡೆಯುತ್ತಾನೋ, ಹಾಗೆ ನೀವು ಕೂಡ ಇವುಗಳನ್ನು ಪಡೆಯಿರಿ. ಹೇ ತಿಳಿಯಲಿಚ್ಛಿಸುವ ಸಜ್ಜನರೇ! ಹೇಗೆ [ಸಜೋಷಾಃ] ಸಮಾನ ಪ್ರೀತಿ ಮಾಡುವವನು [ತೇಭಿಃ] ಅವರಿಂದ [ಅಮೃತಮ್] ಧರ್ಮ, ಅರ್ಥ, ಕಾಮ ಮತ್ತು ಮೋಕ್ಷರೂಪಿ ಸುಖವನ್ನು [ಪಶೂನ್] ಪಶುಗಳಂತೆ ಮೂರ್ಖತ್ವದಿಂದಿರುವ ಮನುಷ್ಯನು ಅಥವಾ ಪಶು ಮೊದಲಾದವು [ಚ] ಸೇವಕರು ಮೊದಲಾದವರು [ಸ್ಥಾತೄನ್] ಭೂಮಿ ಮೊದಲಾದ ಸ್ಥಾವರ [ಚ] ಮತ್ತು ರಾಜ್ಯ ರತ್ನಾದಿ ಸಂಪತ್ತು [ಜರಥಮ್] ಮನುಷ್ಯ ಮೊದಲಾದ ಜಂಗಮ [ಚ] ಮತ್ತು ಸ್ತ್ರೀ ಪುತ್ರಾದಿಗಳನ್ನು [ರಕ್ಷಂತೇ] ರಕ್ಷಿಸುತ್ತಾನೋ, ಹಾಗೆ ಅವನನ್ನು ನೀವೂ [ಇತ್] ಕೂಡ [ಪಾಹಿ] ರಕ್ಷಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಮಾಡಬೇಕಾದುದೇನೆಂದರೆ, ವಿದ್ವಾಂಸರನ್ನು ಅನುಕರಣ ಮಾಡಬೇಕು, ಮೂರ್ಖರನ್ನಲ್ಲ. ಹೇಗೆ ಸಜ್ಜನನು ಉತ್ತಮ ಕಾರ್ಯಗಳಲ್ಲಿ ಪ್ರವೃತ್ತನಾಗುತ್ತಾ ಮತ್ತು ದುಷ್ಟಕರ್ಮಗಳ ತ್ಯಾಗ ಮಾಡುತ್ತಾನೋ ಹಾಗೆಯೇ ಎಲ್ಲರೂ ಮಾಡಬೇಕು.

ಮತ್ತೆ ಈಶ್ವರನ ಗುಣಗಳ ಉಪದೇಶ

ವಿದ್ವಾँ ಅಗ್ನೇ ವಯುನಾನಿ ಕ್ಷಿತೀನಾಂ ವ್ಯಾನುಷಕ್ ಛುರುಧೋ ಜೀವಸೇ ಧಾಃ ।
ಅಂತರ್ವಿದ್ವಾँ ಅಧ್ವನೋ ದೇವಯಾನಾನತಂದ್ರೋ ದೂತೋ ಅಭವೋ ಹವಿರ್ವಾಟ್ ॥೭॥

ಪದಾರ್ಥ:- ಹೇ [ಅಗ್ನೇ] ಎಲ್ಲ ಸುಖಗಳನ್ನು ಪ್ರಾಪ್ತಪಡಿಸುವ ಜಗದೀಶ್ವರನೇ! ಯಾವ ಕಾರಣದಿಂದ [ಅಂತರ್ವಿದ್ವಾನ್] ಅಂತಃಕರಣದ ಎಲ್ಲ ವ್ಯವಹಾರಗಳನ್ನು ಹಾಗೂ ಹೊರಗಿನ ಕಾರ್ಯಗಳನ್ನು ತಿಳಿಯುವ [ಅತಂದ್ರಃ] ಆಲಸ್ಯರಹಿತ [ಹವಿರ್ವಾಟ್] ವಿಜ್ಞಾನ ಮೊದಲಾದವುಗಳನ್ನು ಪ್ರಾಪ್ತಿಪಡಿಸುವ ನೀನು [ಕ್ಷಿತೀನಾಮ್] ಮನುಷ್ಯರ [ವಯುನಾನಿ] ವಿಜ್ಞಾನಗಳನ್ನು [ಜೀವನೇ] ಜೀವನಕ್ಕಾಗಿ [ಶುರುಧಃ] ಪಡೆಯಲು ಯೋಗ್ಯವಾದ ಸುಖಗಳನ್ನು [ಆನುಷಕ್] ಅನುಕೂಲತಾಪೂರ್ವಕವಾಗಿ [ವಿಧಾಃ] ವಿವಿಧ ಪ್ರಕಾರಗಳಿಂದ ಧಾರಣ ಮಾಡುತ್ತೀಯೋ, ವೇದದ್ವಾರಾ

[ದೇವಯಾನಾನ್] ವಿದ್ವಾಂಸರು ಹೋಗಿಬರುವ [ಅಧ್ವನಃ] ಮಾರ್ಗಗಳ [ದೂತಃ] ವಿಜ್ಞಾನವುಂಟುಮಾಡುವವನು [ಅಭವಃ] ಆಗು, ಅದರಿಂದ ನಿನ್ನ ಸತ್ಕಾರವನ್ನು ನಾವು ಅವಶ್ಯ ಮಾಡುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಪ್ರಾರ್ಥನೆ ಅಥವಾ ಸೇವಿಸಲ್ಪಟ್ಟ ಈಶ್ವರನು ಧರ್ಮಮಾರ್ಗ ಅಥವಾ ವಿಜ್ಞಾನವನ್ನು ತೋರಿಸಿ ಮನುಷ್ಯರಿಗೆ ಸುಖಕೊಡುತ್ತಾನೆ. ಅವನ ಸೇವನೆಯನ್ನು, ಉಪಾಸನೆಯನ್ನು ಅವಶ್ಯವಾಗಿ ಮಾಡಬೇಕು.

ಮತ್ತೆ ವಿದ್ವಾಂಸರು ಹೇಗಿರುತ್ತಾರೆ?

ಸ್ವಾಧ್ಯೋ ದಿವ ಆ ಸಪ್ತ ಯಹ್ವೀ ರಾಯೋ ದುರೋ ವ್ಯೃತಜ್ಞಾ ಅಜಾನನ್ ।
ವಿದದ್ ಗವ್ಯಂ ಸರಮಾ ದೃಳ್ಹಮೂರ್ವಂ ಯೇನಾ ನು ಕಂ ಮಾನುಷೀ ಭೋಜತೇ ವಿಟ್ ॥೮॥

ಪದಾರ್ಥ:- ಹೇ ಮನುಷ್ಯರೇ! ಹೇಗೆ [ಸ್ವಾಧ್ಯಃ] ಎಲ್ಲರ ಕಲ್ಯಾಣವನ್ನು ಯಥಾವತ್ ವಿಚಾರಿಸುವ [ಋತಜ್ಞಾಃ] ಸತ್ಯವನ್ನು ತಿಳಿದ [ಯೇನ] ಯಾವ ಪುರುಷಾರ್ಥದಿಂದ [ಯಹ್ವೀ] ದೊಡ್ಡ [ಸಪ್ತ] ಏಳು ಸಂಖ್ಯೆಯ [ದಿವಃ] ಸೂರ್ಯನಂತೆ (ಮಂತ್ರ ೬ರಲ್ಲಿ ಹೇಳಿದ) ವಿದ್ಯೆಯು [ರಾಯಃ] ಅತ್ಯುತ್ತಮ ಧನದ [ದುರಃ] ಪ್ರವೇಶದ ಸ್ಥಾನಗಳನ್ನು [ವ್ಯಜಾನನ್] ತಿಳಿಯುತ್ತಾ ಹಾಗೂ [ಸರಮಾ] ಬೋಧೆಯಂತೆ ಮಾಡುವ [ಮಾನುಷೀ] ಮನುಷ್ಯರ [ವಿಟ್] ಪ್ರಜೆಗಳ [ದೃಢಮ್] ದೃಢ ನಿಶ್ಚಲ [ಊರ್ವಮ್] ದೋಷಗಳ ನಾಶವು [ಗವ್ಯಮ್] ಪಶು ಮತ್ತು ಇಂದ್ರಿಯಗಳ ಹಿತಕಾರಕ ಸುಖವನ್ನು [ನು] ಶೀಘ್ರವಾಗಿ [ವಿದತ್] ಪಡೆಯುತ್ತಾನೋ ಹಾಗೆ ಈ ಕರ್ಮವನ್ನು ಸದಾ ಸೇವಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾದುದೇನೆಂದರೆ, ಹೇಗೆ ವಿದ್ಯೆಯನ್ನು ಓದುತ್ತಾರೋ, ಹಾಗೆಯೇ ಛಲ ಕಪಟಗಳನ್ನು ಬಿಟ್ಟು ಎಲ್ಲ ಮನುಷ್ಯರಿಗೂ ಓದಿಸಿ ಮತ್ತು ಉಪದೇಶ ಮಾಡಲಿ, ಅದರಿಂದ ಮನುಷ್ಯರು ಎಲ್ಲ ಸುಖಗಳನ್ನೂ ಪಡೆಯುವರು.

ಮತ್ತೆ ಅವರು ಹೇಗಿರುವರು?

ಆ ಯೇ ವಿಶ್ವಾ ಸ್ವಪತ್ಯಾನಿ ತಸ್ಥುಃ ಕೃಣ್ವಾನಾಸೋ ಅಮೃತತ್ವಾಯ ಗಾತುಮ್ ।
ಮಹ್ನಾ ಮಹದ್ಭಿಃ ಪೃಥಿವೀ ವಿ ತಸ್ಥೇ ಮಾತಾ ಪುತ್ರೈರದಿತಿರ್ಧಾಯಸೇ ವೇಃ ॥೯॥

ಪದಾರ್ಥ:- ಹೇಗೆ ಯಾವ [ಅಮೃತತ್ವಾಯ] ಮೋಕ್ಷಾದಿ ಸುಖಗಳಿಗಾಗಿ [ಗಾತುಮ್] ಭೂಮಿಯಂತಿರುವ ಬೋಧೆಯ ಕೋಶವನ್ನು [ಕೃಣ್ವಾನಾಸಃ] ಸಿದ್ಧ ಮಾಡುತ್ತಿರುವ ವಿದ್ವಾಂಸರು [ಮಹದ್ಭಿಃ] ಅತಿ ಸುಖವನ್ನುಂಟುಮಾಡುವ ಗುಣಗಳೊಂದಿಗೆ [ವಿಶ್ವಾ] ಎಲ್ಲ [ಸ್ವಪತ್ಯಾನಿ] ಉತ್ತಮ ಶಿಕ್ಷಣದಿಂದ ಕೂಡಿರುವ ಪುತ್ರಾದಿಗಳನ್ನು [ಮಹ್ನಾ] ದೊಡ್ಡ-ದೊಡ್ಡ ಗುಣಗಳಿಂದ [ಧಾಯಸೇ] ಧಾರಣಕ್ಕಾಗಿ [ಪೃಥಿವೀ] ಭೂಮಿಯಂತೆ [ಪುತ್ರೈಃ] ಪುತ್ರರೊಡನೆ [ಮಾತಾ] ಮಾತೆಯಂತೆ [ಅದಿತಿಃ] ಪ್ರಕಾಶ ಸ್ವರೂಪನಾದ ಸೂರ್ಯನು ಸ್ಥೂಲ ಪದಾರ್ಥಗಳಲ್ಲಿ [ವೇಃ] ವ್ಯಾಪ್ತಿಪಡಿಸುವ ಪಕ್ಷಿಯಂತೆ [ಆತಸ್ಥುಃ] ಸ್ಥಿತನಾಗುತ್ತಾನೋ ಹಾಗೆ ನಾನು ಈ ಕರ್ಮವನ್ನು [ವಿತಸ್ಥೇ] ವಿಶೇಷವಾಗಿ ಗ್ರಹಣ ಮಾಡುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರನ್ನು ವಿದ್ವಾಂಸರಂತೆ ತನ್ನ ಸಂತಾನವನ್ನು ವಿದ್ಯಾಶಿಕ್ಷಣದಿಂದ ಕೂಡಿರುವಂತೆ ಮಾಡಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷರೂಪೀ ಸುಖವನ್ನು ಪಡೆಯಬೇಕು.

ಮತ್ತೆ ಆ ವಿದ್ವಾಂಸರು ಯಾವುದರ ಧಾರಣ ಮಾಡಬೇಕು?

ಅಧಿ ಶ್ರಿಯಂ ನಿ ದಧುಶ್ಚಾರುಮಸ್ಮಿನ್ ದಿವೋ ಯದಕ್ಷೀ ಅಮೃತಾ ಅಕೃಣ್ವನ್ ।
ಅಧ ಕ್ಷರಂತಿ ಸಿಂಧವೋ ನ ಸೃಷ್ಟಾಃ ಪ್ರ ನೀಚೀರಗ್ನೇ ಅರುಷೀರಜಾನನ್ ॥೧೦॥

ಪದಾರ್ಥ:- ಹೇಗೆ **[ಯತ್]** ಯಾವ **[ಅಮೃತಾಃ]** ಮರಣ ಜನ್ಮರಹಿತ ಮೋಕ್ಷವನ್ನು ಪಡೆದ ವಿದ್ವಾಂಸರು **[ಅಸ್ಮಿನ್]** ಈ ಲೋಕದಲ್ಲಿ **[ಶ್ರಿಯಮ್]** ವಿದ್ಯೆ ಹಾಗೂ ರಾಜ್ಯದ ಐಶ್ವರ್ಯದ ಶೋಭೆಯನ್ನು **[ಅಧಿನಿದಧುಃ]** ಅಧಿಕ ಕಾರಣ **[ಚಾರುಮ್]** ಶ್ರೇಷ್ಠ ವ್ಯವಹಾರ **[ದಿವಃ]** ಪ್ರಕಾಶ ಮತ್ತು ವಿಜ್ಞಾನದಿಂದ **[ಅಕ್ಷೀ]** ಒಳ ಹೊರಗಿನಿಂದ ನೋಡುವ ವಿದ್ಯೆಗಳನ್ನು **[ಅ ಕೃಣ್ವನ್]** ಸಿದ್ಧಗೊಳಿಸಲು **[ಸೃಷ್ಟಾಃ]** ಉತ್ಪನ್ನವಾದ **[ಸಿಂಧವಃ]** **[ನ]** ನದಿಗಳಂತೆ **[ಅಧ]** ಅನಂತರ ಸುಖಗಳನ್ನು **[ಕ್ಷರಂತಿ]** ಕೊಡುತ್ತದೆ. **[ನೀಚೀಃ]** ನಿರಂತರ ಸೇವಿಸುವುದು ಹಾಗೂ **[ಅರುಷೀ]** ಪ್ರಭಾತದಂತೆ ಎಲ್ಲಸುಖವನ್ನು ಪ್ರಾಪ್ತಿ ಪಡಿಸುವ ವಿದ್ಯೆ ಮತ್ತು ಕ್ರಿಯೆಗಳನ್ನು **[ಪ್ರಜಾನನ್]** ಚೆನ್ನಾಗಿ ತಿಳಿಯುತ್ತಾನೆ. ಹಾಗೆ ಹೇ **[ಅಗ್ನೇ]** ವಿದ್ವಾಂಸನಾದ ನೀನು ಕೂಡ ಯಥಾ ಶಕ್ತಿ ಎಲ್ಲ ಕಾರ್ಯಗಳನ್ನು ಸಿದ್ಧ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಹೇ ಮನುಷ್ಯರೇ! ನೀವು ಯಥಾಯೋಗ್ಯ ವಿದ್ವಾಂಸರ ಆಚರಣೆಯನ್ನು ಸ್ವೀಕರಿಸಿರಿ; ಅವಿದ್ವಾಂಸರದಲ್ಲ. ಹಾಗೂ ಹೇಗೆ ನದಿಯು ಸುಖ ಪಡೆಯಲು ಹೇತುವಾಗಿದೆಯೋ ಹಾಗೆ ಎಲ್ಲರಿಗಾಗಿ ಸುಖಗಳನ್ನು ಉತ್ಪನ್ನ ಮಾಡಿರಿ.

ಈ ಸೂಕ್ತದಲ್ಲಿ ಈಶ್ವರ ಮತ್ತು ವಿದ್ವಾಂಸರ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಪ್ಪತ್ತೆರಡನೆಯ ಸೂಕ್ತ ಸಮಾಪ್ತ

ಸೂಕ್ತ ೭೩

ಮಂತ್ರಸಂಖ್ಯೆ - ೧೦ । ಋಷಿಃ - ಪರಾಶರ ಶಾಕ್ತ್ಯಃ । ದೇವತಾ - ಅಗ್ನಿಃ । ಛಂದಃ - ತ್ರಿಷ್ಟುಪ್ । ಸ್ವರಃ - ಧೈವತಃ.

೭೩ನೇ ಸೂಕ್ತದ ಮೊದಲ ಮಂತ್ರದಲ್ಲಿ ವಿದ್ವಾಂಸರ ಗುಣಗಳ ಉಪದೇಶ ಮಾಡಿದೆ.

ರಯಿರ್ನ ಯಃ ಪಿತೃವಿತ್ತೋ ವಯೋಧಾಃ ಸುಪ್ರಣೀತಿಶ್ಚಿಕಿತುಷೋ ನ ಶಾಸುಃ ।
ಸ್ಯೋನಶೀರತಿಥಿರ್ನ ಪ್ರೀಣಾನೋ ಹೋತೇವ ಸದ್ಮ ವಿಧತೋ ವಿ ತಾರೀತ್ ॥೧॥

ಪದಾರ್ಥ:- ಹೇ ಮನುಷ್ಯರೇ! ನೀವು **[ಯಃ]** ಯಾವ **[ವಿದ್ವಾನ್]** **[ಪಿತೃವಿತ್ತಃ]** ಪಿತಾ, ಪಿತಾಮಹಾದಿ ಅಧ್ಯಾಪಕರಿಂದ ಪ್ರತೀತವಾದ ವಿದ್ಯೆಯಿಂದ ಕೂಡಿ **[ರಯಿಃ]** **[ನ]** ಧನ ಸಮೂಹದಂತೆ **[ವಯೋಧಾಃ]** ಜೀವನ ವನ್ನು ಧಾರಣ ಮಾಡಲು **[ಸುಪ್ರಣೀತಿಃ]** ಉತ್ತಮ ನೀತಿಯುಕ್ತ ಹಾಗೂ **[ಚಿಕಿತುಷಃ]** ಉತ್ತಮ ವಿದ್ಯಾವಂತ **[ಶಾಸುಃ]** **[ನ]** ಉಪದೇಶಕನಂತೆ **[ಸ್ಯೋನಶೀಃ]** ವಿದ್ಯೆ, ಧರ್ಮ ಮತ್ತು ಪುರುಷಾರ್ಥಯುಕ್ತ ಸುಖದಲ್ಲಿ ಮಲಗಲು **[ಪ್ರೀಣಾನಃ]** ಪ್ರಸನ್ನನು ಹಾಗೂ **[ಅತಿಥಿಃ]** ಮಹಾವಿದ್ವಾಂಸನು ಭ್ರಮಣ ಮತ್ತು ಉಪದೇಶ ಮಾಡುವ ಮನುಷ್ಯನ **[ನ]** ಸಮಾನ **[ವಿಧತಃ]** ಅಥವಾ ಎಲ್ಲ ವ್ಯವಹಾರಗಳನ್ನು ವಿಧಾನ ಮಾಡುತ್ತಾನೋ, ಅವನ **[ಹೋತೇವ]** ಕೊಡು ತೆಗೆದುಕೊಳ್ಳುವ **[ಸದ್ಮ]** ಮನೆಯಂತೆ ವರ್ತಿಸುವ ಶರೀರದ **[ವಿತಾರೀತ್]** ಸೇವನೆ ಮತ್ತು ಆದರಿಂದ ಉಪಕಾರ ಪಡೆದು ಎಲ್ಲರಿಗೂ ಸುಖ ಕೊಡುತ್ತಾನೆ. ಅವನ ನಿತ್ಯ ಸೇವೆ ಮತ್ತು ಅವನಿಂದ ಪರೋಪಕಾರ ಮಾಡಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ವಿದ್ಯಾ ಧರ್ಮಾನುಷ್ಠಾನ, ವಿದ್ವಾಂಸರ ಸಂಗ ಹಾಗೂ ಉತ್ತಮ ಆಲೋಚನೆಗಳ ಹೊರತು ಯಾರಿಗೂ ವಿದ್ಯೆ ಮತ್ತು ಸುಶಿಕ್ಷಣದ ಸಾಕ್ಷಾತ್ಕಾರ, ಪದಾರ್ಥಗಳ ಜ್ಞಾನವು ಉಂಟಾಗುವುದಿಲ್ಲ. ಮತ್ತು ನಿರಂತರ ಭ್ರಮಣ ಮಾಡುವ ಅತಿಥಿ ವಿದ್ವಾಂಸರ ಉಪದೇಶದ ಹೊರತು ಯಾವನೇ ಮನುಷ್ಯನು ಸಂದೇಹರಹಿತನಾಗುವುದಿಲ್ಲ. ಆದುದರಿಂದ ಎಲ್ಲ ಮನುಷ್ಯರನ್ನು ಉತ್ತಮ ಆಚರಣೆಯಲ್ಲಿಡಬೇಕು.

ಮತ್ತೆ ಆ ವಿದ್ವಾಂಸನು ಹೇಗಿರಬೇಕು?

ದೇವೋ ನ ಯಃ ಸವಿತಾ ಸತ್ಯಮನ್ಮಾ ಕ್ರತ್ವಾ ನಿಪಾತಿ ವೃಜನಾನಿ ವಿಶ್ವಾ ।
ಪುರುಪ್ರಶಸ್ತೋ ಅಮತಿರ್ನ ಸತ್ಯ ಆತ್ಮೇವ ಶೇವೋ ದಿಧಿಷಾಯ್ಯೋ ಭೂತ್ ॥೨॥

ಪದಾರ್ಥ:- ಹೇ ಮನುಷ್ಯರೇ! ನೀವು **[ಯಃ]** ಯಾವ **[ಸವಿತಾ]** ಸೂರ್ಯನ **[ದೇವಃ]** **[ನ]** ದಿವ್ಯ ಗುಣಗಳಂತೆ **[ಸತ್ಯಮನ್ಮಾ]** ಸತ್ಯವನ್ನು ತಿಳಿಯುವ, ಅಥವಾ ತಿಳಿಸುವ ವಿದ್ವಾಂಸನು **[ಕ್ರತ್ವಾ]** ಬುದ್ಧಿ ಅಥವಾ ಕರ್ಮದಿಂದ **[ವಿಶ್ವಾ]** ಎಲ್ಲ **[ವೃಜನಾನಿ]** ಬಲಗಳ **[ನಿಪಾತಿ]** ರಕ್ಷಣೆ ಮಾಡುತ್ತಾನೋ, **[ಪುರು ಪ್ರಶಸ್ತಃ]** ಬಹಳರಲ್ಲಿ ಅತಿಶ್ರೇಷ್ಠರು **[ಅಮತಿಃ]** **[ನ]** ಉತ್ತಮ ಸ್ವರೂಪದಂತೆ **[ಸತ್ಯಃ]** ಅವಿನಾಶಿ ಸ್ವರೂಪವು **[ದಿಧಿಷಾಯ್ಯಃ]** ಧಾರಣ ಅಥವಾ ಪೋಷಣೆ ಮಾಡುವ **[ಆತ್ಮೇವ]** ಆತ್ಮದಂತೆ **[ಶೇವಃ]** ಸುಖ ಸ್ವರೂಪ ಅಧ್ಯಾಪಕ ಅಥವಾ ಉಪದೇಷ್ಟನು **[ಭೂತ್]** ಆಗಿರುವನು. ಅವನ ಸೇವೆ ಮಾಡಿ ವಿದ್ಯೆಯ ಉನ್ನತಿ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರು ವಿದ್ವಾಂಸರ ಸತ್ಸಂಗದಿಂದ ಸತ್ಯ ವಿದ್ಯೆ, ಬಲ, ಸುಖ ಮತ್ತು ಸೌಂದರ್ಯ ಮೊದಲಾದವುಗಳನ್ನು ಪಡೆಯಲು ಸಮರ್ಥರಾಗುವರು. ಆದುದರಿಂದ ಇವರಿಬ್ಬರ ಸೇವೆಯನ್ನು ನಿರಂತರವೂ ಮಾಡಿರಿ.

ಮತ್ತೆ ಅದೇ ವಿಷಯ

ದೇವೋ ನ ಯಃ ಪೃಥಿವೀಂ ವಿಶ್ವಧಾಯಾ ಉಪಕ್ಷೇತಿ ಹಿತಮಿತ್ರೋ ನ ರಾಜಾ ।
ಪುರಃಸದಃ ಶರ್ಮಸದೋ ನ ವೀರಾ ಅನವದ್ಯಾ ಪತಿಜುಷ್ಟೇವ ನಾರೀ ॥೩॥

ಪದಾರ್ಥ:- ಹೇ ಮನುಷ್ಯರೇ! ನೀವು **[ಯಃ]** ಯಾವ **[ದೇವಃ]** ಉತ್ತಮ ಸುಖಗಳನ್ನು ಕೊಡುವ ಪರಮೇಶ್ವರನು ಅಥವಾ ವಿದ್ವಾಂಸನು **[ಪೃಥಿವೀಮ್]** ಭೂಮಿಯಂತೆ **[ವಿಶ್ವಧಾಯಾಃ]** ವಿಶ್ವವನ್ನು ಧಾರಣ ಮಾಡುವ **[ಹಿತಮಿತ್ರಃ]** ಮಿತ್ರರನ್ನು ಧಾರಣ ಮಾಡಿದ **[ರಾಜಾ]** **[ನ]** ಸಭೆ ಮೊದಲಾದವುಗಳ ಅಧ್ಯಕ್ಷನಂತೆ, **[ಉಪಕ್ಷೇತಿ]** ತಿಳಿಯುತ್ತಾನೆ ಅಥವಾ ನಿವಾಸ ಮಾಡುತ್ತಾನೆ. ಹಾಗೂ **[ಪುರಃ ಸದಃ]** ಮೊದಲ ಶತ್ರುವನ್ನು ಕೊಲ್ಲಲು ಅಥವಾ ಯುದ್ಧವನ್ನು ತಿಳಿಯಲು **[ಶರ್ಮಸದಃ]** ಸುಖದಲ್ಲಿ ಸ್ಥಿರವಾಗಲೂ ಮತ್ತು **[ವೀರಾಃ]** **[ನ]** ಯುದ್ಧದಲ್ಲಿ ಶತ್ರುಗಳನ್ನು ಎಸೆಯುವವನಂತೆ ಹಾಗೂ **[ಅನವದ್ಯಾ]** ವಿದ್ಯಾ ಸೌಂದರ್ಯಾದಿ ಶುದ್ಧ ಗುಣಯುಕ್ತಳಾದ **[ನಾರೀ]** ನಾರಿಯು **[ಪತಿಜುಷ್ಟೇವ]** ಪತಿಯ ಸೇವೆ ಮಾಡುವಳೋ, ಅವಳಂತೆ ಸುಖದಲ್ಲಿ ನಿವಾಸ ಮಾಡುತ್ತಾನೋ ಅವನನ್ನು ಸದಾ ಸೇವಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರು ಪರಮೇಶ್ವರನ ಅಥವಾ ವಿದ್ವಾಂಸರೊಡನೆ ಪ್ರೇಮ, ಪ್ರೀತಿಯಿಂದ ವರ್ತಿಸದ ಹೊರತು ಎಲ್ಲ ಬಲ ಅಥವಾ ಸುಖಗಳನ್ನು ಪಡೆಯಲಾರರು. ಆದುದರಿಂದ ಅವರೊಡನೆ ಸದಾ ಪ್ರೀತಿಯಿಂದ ವರ್ತಿಸಿರಿ.

ಮತ್ತೆ ಆ ವಿದ್ವಾಂಸನು ಹೇಗಿರುವನು?

ತಂತ್ವಾ ನರೋ ದಮ ಆ ನಿತ್ಯಮಿದ್ಧ-ಮಗ್ನೇ ಸಚಂತ ಕ್ಷಿತಿಷು ಧ್ರುವಾಸು ।

ಅಧಿ ದ್ಯುಮ್ನಂ ನಿ ದಧುರ್ಭೂರ್ಯಸ್ಮಿನ್ ಭವಾ ವಿಶ್ವಾಯುರ್ಧರುಣೋ ರಯೀಣಾಮ್ ॥೪॥

ಪದಾರ್ಥ:- ಹೇ [**ಅಗ್ನೇ**] ವಿಜ್ಞಾನವುಂಟು ಮಾಡುವ ವಿದ್ವಾಂಸನೇ! [**ರಯೀಣಾಮ್**] ವಿದ್ಯೆ ಮತ್ತು ಎಲ್ಲ ಪೃಥಿವಿಯ ರಾಜ್ಯದಿಂದ ಸಿದ್ಧವಾಗುವ ಸಂಪತ್ತಿನ [**ಧರುಣಃ**] ಧಾರಣ ಮಾಡುವ [**ವಿಶ್ವಾಯುಃ**] ಸಂಪೂರ್ಣ ಜೀವನಯುಕ್ತನಾದ ನೀನು [**ಅಸ್ಮಿನ್**] ಈ ಮಾನವ ಜನ್ಮ ಅಥವಾ ಜಗತ್ತಿನಲ್ಲಿ ಸಹಾಯಕಾರಿಯು [**ಭವ**] ಆಗು, ಯಾವ [**ಭೂರಿ**] ಬಹಳ [**ದ್ಯುಮ್ನಮ್**] ವಿದ್ಯಾಪ್ರಕಾಶರೂಪೀ ಧನ ಮತ್ತು ಕೀರ್ತಿಯನ್ನು ಧಾರಣ ಮಾಡುವರೋ, [**ತಮ್**] ಅವರು [**ನಿತ್ಯಮ್**] ನಿರಂತರ [**ಇದ್ಧಮ್**] ಪ್ರದೀಪ್ತರಾದ [**ತ್ವಾ**] ನಿನ್ನನ್ನು [**ಧ್ರುವಾಸು**] ದೃಢವಾದ [**ಕ್ಷಿತಿಮ್**] ಭೂಮಿಯಲ್ಲಿ ಯಾವ [**ನರಃ**] ವಿದ್ಯೆಯನ್ನು ನಯನ ಮಾಡುವ ಎಲ್ಲ ಮನುಷ್ಯರು [**ಅಧಿನಿದಧುಃ**] ಧಾರಣ ಮಾಡಲಿ ಮತ್ತು [**ದಮೇ**] ಶಾಂತಿಯುಕ್ತ ಮನೆಯಲ್ಲಿ [**ಆ ಸಚಂತ**] ಸೇವಿಸಲಿ, ಅವನ ಸೇವೆಯನ್ನು ನಿತ್ಯವೂ ಮಾಡಿರಿ.

ಭಾವಾರ್ಥ:- ಹೇ ಮನುಷ್ಯರೇ! ನೀವು ಜಗದೀಶ್ವರನು ಅನೇಕ ಪದಾರ್ಥಗಳನ್ನು ರಚಿಸಿ ಧಾರಣ ಮಾಡಿರುವವನು ಮತ್ತು ವಿದ್ವಾಂಸನು ಅದನ್ನು ತಿಳಿದಿರುವವನು. ಅವನ ಉಪಾಸನೆ ಅಥವಾ ಸತ್ಸಂಗದ ಹೊರತು ಯಾವನಿಗೂ ಸುಖವುಂಟಾಗುವುದಿಲ್ಲವೆಂದು ತಿಳಿಯಿರಿ.

ಪರಮೇಶ್ವರನ ಮತ್ತು ವಿದ್ವಾಂಸರ ಸಂಗದಿಂದ ಮನುಷ್ಯರಿಗೆ ಯಾವ-ಯಾವವು ದೊರೆಯುತ್ತವೆ, ಈ ವಿಷಯ ಹೇಳಿದೆ.

ವಿ ಪೃಕ್ಷೋ ಅಗ್ನೇ ಮಘವಾನೋ ಅಶ್ಯು-ರ್ವಿ ಸೂರಯೋ ದದತೋ ವಿಶ್ವಮಾಯುಃ ।

ಸನೇಮ ವಾಜಂ ಸಮಿಥೇಷ್ವರ್ಯೋ ಭಾಗಂ ದೇವೇಷು ಶ್ರವಸೇ ದಧಾನಾಃ ॥೫॥

ಪದಾರ್ಥ:- ಹೇ [**ಅಗ್ನೇ**] ಸುಖ ಸ್ವರೂಪ ವಿದ್ವಾಂಸರೇ! ತಮ್ಮ ಉಪದೇಶದಿಂದ ಹೇಗೆ [**ಅರ್ಯಃ**] ಸ್ವಾಮಿ ಅಥವಾ ವೈಶ್ಯನು [**ಭಾಗಮ್**] ಸೇವನೀಯ ಪದಾರ್ಥಗಳಂತೆ [**ಮಘವಾನಃ**] ಸತ್ಕಾರಯುಕ್ತ ಧನವುಳ್ಳ [**ದದತಃ**] ದಾನಶೀಲರು [**ಸೂರಯಃ**] ಮೇಧಾವಿಗಳು [**ಸಮಿಥೇಷು**] ಸಂಗ್ರಾಮಗಳಲ್ಲಿ ಹಾಗೂ [**ದೇವೇಷು**] ವಿದ್ವಾಂಸರಲ್ಲಿ ಅಥವಾ ದಿವ್ಯಗುಣಗಳಲ್ಲಿ [**ವಾಜಮ್**] ವಿಜ್ಞಾನವನ್ನು [**ದಧಾನಾಃ**] ಧಾರಣ ಮಾಡುತ್ತಾ [**ಶ್ರವಸೇ**] ಶ್ರವಣ ಮಾಡಲು ಯೋಗ್ಯವಾದ ಕೀರ್ತಿಗಾಗಿ [**ಪೃಕ್ಷಃ**] ಅತ್ಯುತ್ತಮ ಅನ್ನ ಮತ್ತು [**ವಿಶ್ವಮ್**] ಎಲ್ಲ [**ಆಯುಃ**] ಜೀವನವನ್ನು [**ವ್ಯಶ್ಯುಃ**] ವಿಶೇಷವಾಗಿ ಭೋಗಗಳನ್ನು ಅಥವಾ [**ವಿಸನೇಮ**] ವಿಶೇಷವಾಗಿ ಸೇವಿಸಿರುವ ಹಾಗೆ ನಾವು ಕೂಡ ಮಾಡೋಣ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯನು, ಈಶ್ವರ ಮತ್ತು ವಿದ್ವಾಂಸರ ಸಹಾಯ ಮತ್ತು ತನ್ನ ಪುರುಷಾರ್ಥದಿಂದ ಎಲ್ಲ ಸುಖಗಳನ್ನು ಪಡೆಯುತ್ತಾನೆ. ಅನ್ಯಥಾ ಅಲ್ಲ.

ಈಗ ವಿದ್ವಾಂಸರ ಗುಣಗಳ ಉಪದೇಶವನ್ನು ಮಾಡಲಾಗಿದೆ.

ಋತಸ್ಯ ಹಿ ಧೇನವೋ ವಾವಶಾನಾಃ ಸ್ಮದೂಧ್ನೀಃ ಪೀಪಯಂತ ದ್ಯುಭಕ್ತಾಃ ।

ಪರಾವತಃ ಸುಮತಿಂ ಭಿಕ್ಷಮಾಣಾ ವಿ ಸಿಂಧವಃ ಸಮಯಾ ಸಸ್ರುರದ್ರಿಮ್ ॥೬॥

ಪದಾರ್ಥ:- ಹೇ ಮನುಷ್ಯರೇ! ನೀವು ಹೇಗೆ [**ವಾವಶಾನಾಃ**] ಅತ್ಯಂತ ಶೋಭಾಯಮಾನ [**ಸ್ಮದೂಧ್ನೀಃ**] ಬಹಳ ಹಾಲನ್ನು ಕೊಡುವ [**ಧೇನವಃ**] ಹಸುಗಳು [**ಪೀಪಯಂತ**] ಹಾಲು ಮುಂತಾದವುಗಳಿಂದ ವೃದ್ಧಿಯಾಗುತ್ತವೋ, ಹೇಗೆ [**ದ್ಯುಭಕ್ತಾಃ**] ಪ್ರಕಾಶದಿಂದ ಭಿನ್ನ ಭಿನ್ನ ಕಿರಣಗಳು [**ಪರಾವತಃ**] ದೂರದೇಶದಿಂದ [**ಅದ್ರಿಮ್**] ಮೇಘವನ್ನು [**ಸಮಯಾ**] ಸಮಯಕ್ಕೆ ಸರಿಯಾಗಿ ವರ್ಷಿಸುತ್ತವೋ, [**ಸಿಂಧವಃ**] ನದಿಗಳು [**ಸಸ್ರುಃ**] ಹರಿಯುತ್ತವೋ, ಹಾಗೆ ನೀವು [**ಸುಮತಿಮ್**] ಉತ್ತಮ ವಿಜ್ಞಾನವನ್ನು [**ಭಿಕ್ಷಮಾಣಾಃ**] ಜಿಜ್ಞಾಸೆಯಿಂದ [**ವಿ**] ವಿಶೇಷವಾಗಿ ತಿಳಿದು ಅನ್ಯರಿಗಾಗಿ ವಿದ್ಯೆ ಮತ್ತು ಸುಶಿಕ್ಷಾ ಪೂರ್ವಕ [**ಋತಸ್ಯ ಹಿ**] ಮೇಘದಿಂದ ಉತ್ಪನ್ನವಾದ ಜಲದಂತೆ ಸತ್ಯವನ್ನೇ ವರ್ಷಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಯಜ್ಞದಿಂದ ಸರಿಯಾದ ರೀತಿಯಲ್ಲಿ ಶೋಧಿಸಲ್ಪಟ್ಟ ಜಲಶಕ್ತಿಯನ್ನು ವಿಜ್ಞಾನವು ವೃದ್ಧಿಸುವುದೋ, ಹಾಗೆಯೇ ಧರ್ಮಾತ್ಮರಾದ ವಿದ್ವಾಂಸರು ಆಗಬೇಕು.

ಆ ಮನುಷ್ಯರು ಹೇಗಿರುವರು?

ತ್ವೇ ಅಗ್ನೇ ಸುಮತಿಂ ಭಿಕ್ಷಮಾಣಾ ದಿವಿ ಶ್ರವೋ ದಧಿರೇ ಯಜ್ಞಿಯಾಸಃ ।

ನಕ್ತಾ ಚ ಚಕ್ರುರುಷಸಾ ವಿರೂಪೇ ಕೃಷ್ಣಂ ಚ ವರ್ಣಮರುಣಂ ಚ ಸಂ ಧುಃ ॥೭॥

ಪದಾರ್ಥ:- ಹೇ [**ಅಗ್ನೇ**] ಬೋಧಿಸುವಂತಹ ವಿದ್ವಾಂಸರೇ! ಯಾವ [**ದಿವಿ**] ಪ್ರಕಾಶ ಸ್ವರೂಪ [**ತ್ವೇ**] ತಮ್ಮ ಸಮೀಪ ಇರುವ [**ಭಿಕ್ಷಮಾಣಾಃ**] ವಿದ್ಯೆಗಳನ್ನೇ ಭಿಕ್ಷೆ ಪಡೆಯುವ [**ಯಜ್ಞಿಯಾಸಃ**] ಅಧ್ಯಯನರೂಪ ಕರ್ಮ ಚತುರರಾದ ವಿದ್ವಾಂಸರು [**ಸುಮತಿಮ್**] ಉತ್ತಮ ಬುದ್ಧಿಯನ್ನು [**ದಧಿರೇ**] ಧಾರಣಮಾಡುತ್ತಾರೆ ಹಾಗೂ [**ಶ್ರವಃ**] ಶ್ರವಣ ಅಥವಾ ಅನ್ನವನ್ನು [**ಸಂಧುಃ**] ಧಾರಣ ಮಾಡುತ್ತಾರೆ. [**ನಕ್ತಾ**] ರಾತ್ರಿ [**ಚ**] ಮತ್ತು [**ಉಷಸಾ**] ದಿನದೊಂದಿಗೆ [**ಕೃಷ್ಣಮ್**] ಶ್ಯಾಮಲ [**ಅರುಣಮ್**] ಕೆಂಪು [**ವರ್ಣಮ್**] ವರ್ಣವನ್ನು [**ಚ**] ಹಾಗೂ ಇವುಗಳಿಂದ ಭಿನ್ನ ವರ್ಣಗಳಿಂದ ಕೂಡಿದ ಪದಾರ್ಥಗಳನ್ನು ಧಾರಣ ಮಾಡುತ್ತಾರೆ. [**ಚ**] ಮತ್ತು [**ವಿರೂಪೇ**] ವಿರುದ್ಧ ರೂಪಗಳ ವಿಜ್ಞಾನ(ದಲ್ಲಿ) [**ಚಕ್ರುಃ**] ಮಾಡುತ್ತಾರೋ ಅವರು ಸುಖಿಗಳಾಗುವರು.

ಭಾವಾರ್ಥ:- ಪರಮೇಶ್ವರನ ಸೃಷ್ಟಿಯ ವಿಜ್ಞಾನದ ಹೊರತು ಯಾವನೇ ಮನುಷ್ಯನು ಪೂರ್ಣ ವಿದ್ವಾಂಸನಾಗಲು ಸಮರ್ಥನಾಗಲಾರ. ಹೇಗೆ ಹಗಲು-ರಾತ್ರಿಗಳು ಭಿನ್ನ ಭಿನ್ನ ರೂಪವಾಗಿರುವುವೋ ಹಾಗೆಯೇ ಅನುಕೂಲ ಮತ್ತು ವಿರುದ್ಧ ಧರ್ಮಾದಿಗಳ ವಿಜ್ಞಾನದಿಂದ ಎಲ್ಲ ಪದಾರ್ಥಗಳನ್ನು ಉಪಯೋಗದಲ್ಲಿ ತರಬೇಕು.

ಮತ್ತೆ ಸೃಷ್ಟಿಕರ್ತ ಈಶ್ವರನು ಹೇಗಿರುವನು?

ಯಾನ್ ರಾಯೇ ಮರ್ತಾನ್‌ತ್ಸುಷೂದೋ ಅಗ್ನೇ ತೇ ಸ್ಯಾಮ ಮಘವಾನೋ ವಯಂ ಚ ।

ಛಾಯೇವ ವಿಶ್ವಂ ಭುವನಂ ಸಿಸಕ್ಷ್ಯಾ-ಪಪ್ರಿವಾನ್ ರೋದಸೀ ಅಂತರಿಕ್ಷಮ್ ॥೮॥

ಪದಾರ್ಥ:- ಹೇ [**ಅಗ್ನೇ**] ಜಗದೀಶ್ವರ! ನೀನು [**ಯಾನ್**] ಯಾವ [**ಸುಸೂದಃ**] ಕ್ಷಯವೃದ್ಧಿ ಧರ್ಮಗಳಿಂದ ಕೂಡಿದ [**ಮರ್ತಾನ್**] ಮನುಷ್ಯರನ್ನು [**ರಾಯೇ**] ವಿದ್ಯಾದಿ ಧನಕ್ಕಾಗಿ [**ಸಿಸಕ್ಷಿ**] ಸಂಯುಕ್ತ ಮಾಡುತ್ತಾರೋ [**ತೇ**] ಅವರು [**ವಯಮ್**] ನಾವು [**ಮಘವಾನಃ**] ಪ್ರಶಂಸಾಯೋಗ್ಯ ಧನವುಳ್ಳವರು [**ಸ್ಯಾಮ**] ಆಗೋಣ. [**ಚ**] ಮತ್ತು ನೀನು [**ಛಾಯೇವ**] ಶರೀರದ ಛಾಯೆಯಂತೆ [**ವಿಶ್ವಮ್**] ಎಲ್ಲ [**ಭುವನಮ್**] ಜಗತ್ತು ಮತ್ತು [**ರೋದಸೀ**] ಆಕಾಶ, ಪೃಥಿವೀ ಮತ್ತು [**ಅಂತರಿಕ್ಷಮ್**] ಅಂತರಿಕ್ಷವನ್ನು [**ಆಪಪ್ರಿವಾನ್**] ಪೂರ್ಣ ಮಾಡುವವನು ಆಗು. ಆ ನಿನ್ನನ್ನು ಎಲ್ಲರೂ ಉಪಾಸಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರು ಈಶ್ವರನ ಉಪಾಸನೆ ಮತ್ತು ತಮ್ಮ ಪುರುಷಾರ್ಥದಿಂದ ವಿದ್ಯಾದಿ ಧನವುಳ್ಳವರು ಆಗಿ ಎಲ್ಲರಿಗೂ ಸುಖವನ್ನುಂಟು ಮಾಡಬೇಕು.

ಮತ್ತೆ ಅವರು ಹೇಗಿರುವರು?

ಅರ್ವದ್ಭಿರಗ್ನೇ ಅರ್ವತೋ ನೃಭಿರ್ನೄನ್ ವೀರೈರ್ವೀರಾನ್ ವನುಯಾಮಾ ತ್ವೋತಾಃ ।
ಈಶಾನಾಸಃ ಪಿತೃವಿತ್ತಸ್ಯ ರಾಯೋ ವಿ ಸೂರಯಃ ಶತಹಿಮಾ ನೋ ಅಶ್ಯುಃ ॥೯॥

ಪದಾರ್ಥ:- ಹೇ [ಅಗ್ನೇ] ಎಲ್ಲ ಸುಖಗಳನ್ನು ಪ್ರಾಪ್ತಿಪಡಿಸುವ ಪರಮೇಶ್ವರ! ತಮ್ಮಿಂದ [**ತ್ವೋತಾಃ**] ರಕ್ಷಿತರಾದ ನಾವು [**ಅರ್ವದ್ಭಿಃ**] ಪ್ರಶಂಸಾಯೋಗ್ಯ ಕುದುರೆಗಳಿಂದ [**ಅರ್ವತಃ**] ಕುದುರೆಗಳನ್ನು [**ನೃಭಿಃ**] ವಿದ್ಯಾದಿಶ್ರೇಷ್ಠ ಗುಣಯುಕ್ತ ಮನುಷ್ಯರಿಂದ [**ನೄನ್**] ಶಿಕ್ಷಾಧರ್ಮವುಳ್ಳ ಮನುಷ್ಯರು ಮತ್ತು [**ವೀರೈಃ**] ಶೌರ್ಯಾದಿಗಳನ್ನು ಹೊಂದಿರುವ ಶೂರವೀರರಿಂದ [**ವೀರಾನ್**] ಶೂರತ್ವಾದಿ ಗುಣವುಳ್ಳ ಶೂರವೀರರ ಪ್ರಾಪ್ತಿ [**ವನುಯಾಮ**] ಪಡೆಯಿರಿ ಮತ್ತು ಯಾಚಿಸಿರಿ. ತಮ್ಮ ಕೃಪೆಯಿಂದ [**ಪಿತೃವಿತ್ತಸ್ಯ**] ಪಿತನು ಭೋಗಿಸಿದ [**ರಾಯಃ**] ಸಂಪತ್ತಿನ [**ಈಶಾನಾಸಃ**] ಸಮರ್ಥ ಸ್ವಾಮಿಗಳು ನಾವು ಆಗೋಣ ಮತ್ತು [**ಸೂರಯಃ**] ಮೇಧಾವೀ ವಿದ್ವಾಂಸನು [**ನಃ**] ನಮಗೆ [**ಶತಹಿಮಾ**] ನೂರು ಹೇಮಂತ ಋತುಗಳವರೆಗೆ [**ವ್ಯಶ್ಯುಃ**] ಪ್ರಾಪ್ತನಾಗುತ್ತಿರಲಿ.

ಭಾವಾರ್ಥ:- ಮನುಷ್ಯರು ಈಶ್ವರನ ಗುಣ, ಕರ್ಮ ಸ್ವಭಾವಕ್ಕೆ ಅನುಕೂಲವಾಗಿ ವರ್ತಿಸಲು ಮತ್ತು ತನ್ನ ಪುರುಷಾರ್ಥದ ಹೊರತು ಉತ್ತಮ ವಿದ್ಯೆ ಮತ್ತು ಪದಾರ್ಥಗಳನ್ನು ಪಡೆಯಲು ಸಮರ್ಥರಾಗುವುದಿಲ್ಲ. ಆದುದರಿಂದ ಅದನ್ನು ಸದಾ ಅನುಷ್ಠಾನ ಮಾಡುವುದು ಉಚಿತವಾಗಿದೆ.

ಮತ್ತು ಅವನ ಸಹಾಯದಿಂದ ಏನು ಪ್ರಾಪ್ತವಾಗುತ್ತದೆ?

ಏತಾ ತೇ ಅಗ್ನ ಉಚಥಾನಿ ವೇಧೋ ಜುಷ್ಟಾನಿ ಸಂತು ಮನಸೇ ಹೃದೇ ಚ ।
ಶಕೇಮ ರಾಯಃ ಸುಧುರೋ ಯಮಂ ತೇಽಧಿ ಶ್ರವೋ ದೇವಭಕ್ತಂ ದಧಾನಾಃ ॥೧೦॥

ಪದಾರ್ಥ:- ಹೇ [**ವೇಧಃ**] ಎಲ್ಲರ ಅಂತಃಕರಣದಲ್ಲಿ ಇರುವುದರಿಂದ ಎಲ್ಲರಿಗೂ ಬುದ್ಧಿಪ್ರದ ಧರ್ತನಾದ [**ಅಗ್ನೇ**] ವಿಜ್ಞಾನವನ್ನು ಕೊಡುವ ಜಗದೀಶ್ವರ! [**ತೇ**] ನಿನ್ನ ಕೃಪೆಯಿಂದ [**ಏತಾ**] [**ಉಚಥಾನಿ**] ವೇದ ವಚನಗಳು ನಮಗೆ [**ಮನಸೇ**] ಮನಸ್ಸು [**ಚ**] ಮತ್ತು [**ಹೃದೇ**] ಆತ್ಮಕ್ಕಾಗಿ [**ಜುಷ್ಟಾನಿ**] ಸೇವನೆ ಮಾಡಿದ ಪ್ರೀತಿಕಾರಕವು [**ಸಂತು**] ಆಗಲಿ. ಅವು [**ತೇ**] ತಮ್ಮ ಸಂಬಂಧದಿಂದ [**ಯಮಮ್**] ನಿಯಮ ಮಾಡಲು [**ದೇವ ಭಕ್ತಮ್**] ವಿದ್ವಾಂಸರ ಸೇವನೆ ಮಾಡಿದ [**ಶ್ರವಃ**] ಶ್ರವಣವನ್ನು [**ದಧಾನಾಃ**] ಧಾರಣ ಮಾಡುತ್ತಾ [**ಸುಧುರಃ**] ಉತ್ತಮ ಪದಾರ್ಥಗಳನ್ನು ಧಾರಣ ಮಾಡುವ ನಾವು [**ರಾಯಃ**] ಧನವನ್ನು ಪಡೆಯಲು [**ಅಧಿಶಕೇಮ**] ಸಮರ್ಥರಾಗೋಣ.

ಭಾವಾರ್ಥ:- ಮನುಷ್ಯರು ಬಯಸಬೇಕಾದುದೇನೆಂದರೆ, ಎಲ್ಲ ಸುಖಗಳನ್ನು ಪಡೆದು ಸಭೆಗಳಿಗಾಗಿ ಅವುಗಳನ್ನು ಪ್ರಾಪ್ತಿಮಾಡಿಸಲಿ.

ಈ ಸೂಕ್ತದಲ್ಲಿ ಈಶ್ವರ, ಅಗ್ನಿ, ವಿದ್ವಾಂಸ ಮತ್ತು ಸೂರ್ಯನ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಪ್ಪತ್ತಮೂರನೆಯ ಸೂಕ್ತ ಸಮಾಪ್ತ

ತ್ರಯೋದಶೋಽನುವಾಕಃ (ಸೂಕ್ತ ೭೪-೮೪)

ಸೂಕ್ತ ೭೪

ಮಂತ್ರಸಂಖ್ಯೆ ೯ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಅಗ್ನಿಃ । ಛಂದಃ - ಗಾಯತ್ರೀ । ಸ್ವರಃ - ಷಡ್ಜಃ

೭೪ನೇ ಸೂಕ್ತದ ಮೊದಲ ಮಂತ್ರದಲ್ಲಿ ಈಶ್ವರನ ಗುಣಗಳ ಉಪದೇಶ ಮಾಡಿದೆ.

ಉಪಪ್ರಯಂತೋ ಅಧ್ವರಂ ಮಂತ್ರಂ ವೋಚೇಮಾಗ್ನಯೇ । ಆರೇ ಅಸ್ಮೇ ಚ ಶೃಣ್ವತೇ ॥೧॥

ಪದಾರ್ಥ:- ಹೇ ಮನುಷ್ಯರೇ! ಹೇಗೆ [**ಉಪ ಪ್ರಯಂತಃ**] ಹತ್ತಿರದಲ್ಲಿ ಪ್ರಾಪ್ತವಾಗುವ ನಾವು ಈ [**ಅಸ್ಮೇ**] ನಮ್ಮ [**ಆರೇ**] ದೂರ [**ಚ**] ಮತ್ತು ಸಮೀಪದಲ್ಲಿ [**ಶೃಣ್ವತೇ**] ಶ್ರವಣ ಮಾಡುತ್ತಾ [**ಅಗ್ನಯೇ**] ಪರಮೇಶ್ವರನಿಗಾಗಿ [**ಅಧ್ವರಮ್**] ಹಿಂಸಾರಹಿತವಾದ [**ಮಂತ್ರಮ್**] ವಿಚಾರಗಳನ್ನು ನಿರಂತರ [**ವೋಚೇಮ**] ಉಪದೇಶ ಮಾಡುತ್ತಿರುವೆವೋ, ಹಾಗೆ ನೀವು ಕೂಡ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಬಯಸಬೇಕಾದುದೇನೆಂದರೆ, ಹೊರಗೂ-ಒಳಗೂ ವ್ಯಾಪ್ತವಾಗಿರುವ ನಮ್ಮ ದೂರ-ಸಮೀಪ ವ್ಯವಹಾರದ ಕರ್ಮಗಳನ್ನು ತಿಳಿಯುತ್ತಾ ಇರುವ ಪರಮಾತ್ಮನನ್ನು ತಿಳಿದು ಅಧರ್ಮದಿಂದ ಬೇರೆಯಾಗಿ ಸತ್ಯಧರ್ಮದ ಸೇವೆ ಮಾಡಿ ಆನಂದಯುಕ್ತರಾಗಿರಬೇಕು.

ಮತ್ತೆ ಆ ಪರಮೇಶ್ವರನು ಹೇಗಿರುವನು?

ಯಃ ಸ್ನೀಹಿತೀಷು ಪೂರ್ವ್ಯಃ ಸಂಜಗ್ಮಾನಾಸು ಕೃಷ್ಟಿಷು । ಅರಕ್ಷದ್ ದಾಶುಷೇ ಗಯಮ್ ॥೨॥

ಪದಾರ್ಥ:- ಹೇ ಮನುಷ್ಯರೇ! [**ಪೂರ್ವ್ಯಃ**] ಹಿಂದಿನ ವಿದ್ವಾಂಸರು ಸಾಕ್ಷಾತ್ಕರಿಸಿಕೊಂಡ ಜಗದೀಶ್ವರನು [**ಸಂಜಗ್ಮಾನಾಸು**] ಒಬ್ಬರು ಇನ್ನೊಬ್ಬರ ಸಂಗದಲ್ಲಿ ನಡೆಯುತ್ತಿರುವ [**ಸ್ನೀಹಿತೀಷು**] ಸ್ನೇಹ ಮಾಡುವವರಲ್ಲಿ [**ಕೃಷ್ಟಿಷು**] ಮನುಷ್ಯ ಮೊದಲಾದವರಲ್ಲಿ [**ದಾಶುಷೀ**] ವಿದ್ಯಾದಿ ಶುಭ ಗುಣ ಕೊಡುವವನಿಗಾಗಿ [**ಗಯಮ್**] ಧನದ [**ಅರಕ್ಷತ್**] ರಕ್ಷಣೆ ಮಾಡುತ್ತಾನೆ. ಆ [**ಅಗ್ನಯೇ**] ಈಶ್ವರನಿಗಾಗಿ [**ಅಧ್ವರಮ್**] ಹಿಂಸಾರಹಿತ [**ಮಂತ್ರಮ್**] ವಿಚಾರವನ್ನು ನಾವು [**ವೋಚೇಮ**] ಹೇಳುತ್ತೇವೋ ಹಾಗೆ ನೀವು ಕೂಡ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪೂರ್ವ ಮಂತ್ರದಲ್ಲಿನ (ಅಗ್ನಯೇ, ಅಧ್ವರಮ್, ಮಂತ್ರಮ್, ವೋಚೇಮ) ಈ ನಾಲ್ಕು ಪದಗಳ ಅನುವೃತ್ತಿಯು ಬಂದಿದೆ. ಪ್ರಜೆಗಳಲ್ಲಿರುವ ಯಾವನೇ ಜೀವನು ಪರಮೇಶ್ವರನ ಹೊರತು ರಕ್ಷಣೆ ಮತ್ತು ಸುಖವನ್ನು ಹೊಂದುವುದಿಲ್ಲ. ಆದುದರಿಂದ ಎಲ್ಲ ಮನುಷ್ಯರಿಗೂ ಉಚಿತವಾದುದೇನೆಂದರೆ ಇವನ ಸೇವೆಯನ್ನು ಸರ್ವದಾ ಮಾಡಲಿ.

ಮತ್ತೆ ಅವನು ಹೇಗಿರುವನು?

ಉತ ಬ್ರುವಂತು ಜಂತವ ಉದಗ್ನಿರ್ವೃತ್ರಹಾಜನಿ । ಧನಂಜಯೋ ರಣೇರಣೇ ॥೩॥

ಪದಾರ್ಥ:- [ರಣೇರಣೇ] ಯುದ್ಧ-ಯುದ್ಧಗಳಲ್ಲಿ [ಧನಂಜಯಃ] ಧನವನ್ನು ಗೆಲ್ಲುವ [ವೃತ್ರಹಾ] ಮೇಘವನ್ನು ನಷ್ಟಗೊಳಿಸುವ ಸೂರ್ಯನಂತೆ [ಅಗ್ನಿಃ] ಪರಮೇಶ್ವರನು [ದಾಶುಷೇ] ವಿದ್ಯೆ, ಶುಭ ಗುಣಗಳನ್ನು ದಾನ ಮಾಡುವ ಮನುಷ್ಯನಿಗಾಗಿ [ಗಯಮ್] ಧನವನ್ನು [ಉದಜನಿ] ಉತ್ಪನ್ನಮಾಡುತ್ತಾನೆ. [ಉತ್] ಮತ್ತು ಕೂಡ ಅವನಿಗೆ

ವಿದ್ವಾಂಸರು ಉಪದೇಶ ಮಾಡುತ್ತಾರೆ. **[ಜಂತವಃ]** ಎಲ್ಲ ಮನುಷ್ಯರು **[ಅಧ್ವರಮ್]** ಹಿಂಸಾರಹಿತ **[ಮಂತ್ರಮ್]** ಅವನ ವಿಚಾರವನ್ನು **[ಉತಬ್ರುವಂತು]** ಪರಸ್ಪರ ಉಪದೇಶ ಮಾಡಲಿ.

ಭಾವಾರ್ಥ:- ಹೇ ಮನುಷ್ಯರೇ! ನೀವು ಯಾವ ಆಶ್ರಯದಿಂದ ಶತ್ರುಗಳ ಪರಾಜಯದ ಮುಖಾಂತರ ತಮ್ಮ ವಿಜಯದಿಂದ ರಾಜ್ಯದ ಧನದ ಪ್ರಾಪ್ತಿಯನ್ನು ಪಡೆಯುವಿರೋ, ಆ ಪರಮೇಶ್ವರನನ್ನು ನಿತ್ಯವೂ ಸೇವನೆ, ಉಪಾಸನೆ ಮಾಡಿರಿ.

ಮತ್ತೆ ಅವನು ಹೇಗಿರುವನು?

ಯಸ್ಯ ದೂತೋ ಅಸಿ ಕ್ಷಯೇ ವೇಷಿ ಹವ್ಯಾನಿ ವೀತಯೇ । ದಸ್ಮತ್ ಕೃಣೋಷ್ಯಧ್ವರಮ್ ॥೪॥

ಪದಾರ್ಥ:- ಹೇ ವಿದ್ವಾಂಸರೇ! ತಾವು **[ಯಸ್ಯ]** ಯಾವನ **[ವೀತಯೇ]** ವಿಜ್ಞಾನಕ್ಕಾಗಿ ಅಗ್ನಿಯಂತಿರುವ **[ದೂತಃ]** **[ಅಸಿ]** ದುಃಖ ನಾಶಮಾಡುವವರು ಆಗಿರುವಿರಿ. **[ಕ್ಷಯೇ]** ಗೃಹದಲ್ಲಿ **[ಹವ್ಯಾನಿ]** ಹವನ ಮಾಡಲು ಯೋಗ್ಯವಾದ ದ್ರವ್ಯಗುಣ ಕರ್ಮಗಳನ್ನು **[ವೇಷಿ]** ಪಡೆದು ಅಥವಾ ಉತ್ಪನ್ನ ಮಾಡುವಿರಿ. **[ದಸ್ಮತ್]** ದುಃಖ ನಾಶ ಮಾಡುವ **[ಅಧ್ವರಮ್]** ಅಗ್ನಿಹೋತ್ರಾದಿ ಯಜ್ಞಗಳಿಗೆ ಸಮಾನವಾಗಿ ವಿದ್ಯಾವಿಜ್ಞಾನಗಳನ್ನು ಹೆಚ್ಚಿಸುವ ಯಜ್ಞವನ್ನು **[ಕೃಣೋಷಿ]** ಸಿದ್ಧಮಾಡುವಿರಿ. ಅವನನ್ನು ಎಲ್ಲ ಮನುಷ್ಯರೂ ಸೇವಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ಮನುಷ್ಯನು ಪರಮೇಶ್ವರನಂತೆ ವಿದ್ವಾಂಸನು ಓದಿಸುವುದು ಮತ್ತು ಉಪದೇಶ ಮಾಡುವವನನ್ನು ಬಯಸುತ್ತನೋ, ಅವನಿಗೆ ಎಂದಿಗೂ ದುಃಖವಾಗುವುದಿಲ್ಲ.

ಮತ್ತೆ ಆ ವಿದ್ವಾಂಸನು ಹೇಗಿರುವನು?

ತಮಿತ್ ಸುಹವ್ಯಮಂಗಿರಃ ಸುದೇವಂ ಸಹಸೋ ಯಹೋ । ಜನಾ ಆಹುಃ ಸುಬರ್ಹಿಷಮ್ ॥೫॥

ಪದಾರ್ಥ:- ಹೇ **[ಅಂಗಿರಃ]** ಅಂಗಗಳ ರಸರೂಪ **[ಸಹಸಃ]** ಬಲದ **[ಯಹೋ]** ಪುತ್ರರೂಪ ವಿದ್ವಾಂಸನು ನಿನಗೆ ವಿದ್ಯುತ್ತಿನಂತೆ **[ಸುದೇವಮ್]** ದಿವ್ಯಗುಣಗಳನ್ನು ಕೊಡಲು **[ಸುಬರ್ಹಿಷಮ್]** ವಿಜ್ಞಾನಯುಕ್ತ **[ಸುಹವ್ಯಮ್]** ಉತ್ತಮ ಗ್ರಹಣ ಮಾಡುವ ತಮ್ಮನ್ನು **[ಜನಾಃ]** ವಿದ್ವಾಂಸರು **[ಆಹುಃ]** ಹೇಳುತ್ತಾರೆ. **[ತಮ್]** ಅವನನ್ನು **[ಇತ್]** ನಿಶ್ಚಯವಾಗಿ ನಾವು ಸೇವನೆ ಮಾಡುವಂತಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಬಯಸಬೇಕಾದುದೇನೆಂದರೆ, ವಿದ್ವಾಂಸರ ಸಂಗದಿಂದ ಪದಾರ್ಥ ವಿದ್ಯೆಯಿಂದ ತಿಳಿದು ಸರಿಯಾಗಿ ಪರೀಕ್ಷಿಸಿ ಅನ್ಯರಿಗೂ ತಿಳಿಸಬೇಕು.

ಮತ್ತೆ ಅವನು ಹೇಗಿರುವನು?

ಆ ಚ ವಹಾಸಿ ತಾ ಇಹ ದೇವಾ ಉಪ ಪ್ರಶಸ್ತಯೇ । ಹವ್ಯಾ ಸುಶ್ಚಂದ್ರ ವೀತಯೇ ॥೬॥

ಪದಾರ್ಥ:- ಹೇ **[ಸುಶ್ಚಂದ್ರ]** ಉತ್ತಮ ಆನಂದವನ್ನು ಕೊಡುವ ವಿದ್ವಾಂಸರೇ! ತಾವು **[ಇಹ]** ಈ ಜಗತ್ತಿನಲ್ಲಿ **[ಪ್ರಶಸ್ತಯೇ]** ಪ್ರಶಂಸೆ **[ಚ]** ಮತ್ತು **[ವೀತಯೇ]** ಸುಖಗಳ ಪ್ರಾಪ್ತಿಗಾಗಿ **[ಹವ್ಯಾ]** ಗ್ರಹಿಸಲು ಯೋಗ್ಯವಾದ **[ದೇವಾನ್]** ದಿವ್ಯಗುಣಗಳು ಅಥವಾ ವಿದ್ವಾಂಸರನ್ನು **[ಉಪವಹಾಸಿ]** ಸಮೀಪದಲ್ಲಿ ಎಲ್ಲ ರೀತಿ ಪ್ರಾಪ್ತರಾಗಿರಿ. **[ತಾನ್]** ಆ ತಮ್ಮನ್ನು ನಾವು ಪಡೆಯುವಂತಾಗಲಿ.

ಭಾವಾರ್ಥ:- ಎಲ್ಲಿಯವರೆಗೂ ಮಾನವನು ಪರಮೇಶ್ವರನನ್ನು ತಿಳಿಯುವುದಕ್ಕಾಗಿ ಧರ್ಮಾತ್ಮರಾದ ವಿದ್ವಾಂಸರಿಂದ ಶಿಕ್ಷಣ ಮತ್ತು ಅಗ್ನಿ ಮೊದಲಾದ ಪದಾರ್ಥಗಳಿಂದ ಉಪಕಾರ ಪಡೆಯುವುದರಲ್ಲಿ ಸರಿಯಾಗಿ ಪುರುಷಾರ್ಥವನ್ನು ಮಾಡುವುದಿಲ್ಲವೋ, ಅಲ್ಲಿಯವರೆಗೂ ಪೂರ್ಣವಿದ್ಯೆಯನ್ನು ಪಡೆಯಲು ಎಂದಿಗೂ ಸಾಧ್ಯವಾಗುವುದಿಲ್ಲ.

ಮತ್ತೆ ಅವನು ಹೇಗಿರುವನು?

ನ ಯೋರುಪಬ್ದಿರಶ್ವ್ಯಃ ಶೃಣ್ವೇ ರಥಸ್ಯ ಕಚ್ಚನ । ಯದಗ್ನೇ ಯಾಸಿ ದೂತ್ಯಮ್ ॥೭॥

ಪದಾರ್ಥ:- ಹೇ **[ಅಗ್ನೇ]** ಅಗ್ನಿಯಂತಿರುವ ವಿದ್ಯೆಯಿಂದ ಪ್ರಕಾಶಿತರಾದ ವಿದ್ವಾಂಸರಾದ ತಾವು ಹೇಗೆ **[ಉಪಬ್ಧಿ]** ಅತ್ಯಂತ ಶಬ್ದ ಮಾಡಲು **[ಅಶ್ವ್ಯಃ]** ಶೀಘ್ರನಾಗಿ ಚಲಿಸುವ ಯಾನಗಳಲ್ಲಿ ಅತ್ಯಂತ ವೇಗಕಾರಕ **[ಯತ್]** ಯಾವ ಅಗ್ನಿಯುಕ್ತ ಮತ್ತು **[ಯೋಃ]** ಚಲಿಸುವ - ಚಲಿಸುವಂತೆ ಮಾಡುವ **[ರಥಸ್ಯ]** ವಿಮಾನಾದಿ ಯಾನಗಳ ಮಧ್ಯೆ ಸ್ಥಿರವಾಗಿ **[ದೂತ್ಯಮ್]** ದೂತನಂತೆ ತನ್ನ ಕರ್ಮವನ್ನು **[ಯಾಸಿ]** ಪಡೆಯುವ, ನಾನು ಆ ಅಗ್ನಿಯ ಸಮೀಪ ಮತ್ತು ಶಬ್ದಗಳನ್ನು **[ಕಚ್ಚನ]** ಎಂದಿಗೂ **[ನ, ಶೃಣ್ವೇ]** ಆಲಿಸುವುದಿಲ್ಲ (ಆದರೆ) ಪಡೆಯುತ್ತೇನೆ. ನೀನೂ ಕೂಡ ಆಲಿಸುವುದಿಲ್ಲ ಆದರೆ ಪಡೆಯುತ್ತೀಯೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಶಿಲ್ಪವಿದ್ಯೆಯಿಂದ ಸಿದ್ಧಪಡಿಸಿದ ಯಾವ ಮತ್ತು ಯಂತ್ರಾದಿಗಳಿಂದ ಕೂಡಿದ ಅತ್ಯಂತ ವೇಗವಾಗಿ ಗಮನ ಮಾಡುವ ಅಗ್ನಿಯ ಸಮೀಪದಲ್ಲಿರುವ ಶಬ್ದದ ಹತ್ತಿರ ಅನ್ಯ ಶಬ್ದಗಳನ್ನು ಕೇಳಲಾರರು.

ಮತ್ತೆ ಅವನು ಹೇಗಿರುವನು?

ತ್ವೋತೋ ವಾಜ್ಯಹ್ರಯೋಽಭಿ ಪೂರ್ವಸ್ಮಾದಪರಃ । ಪ್ರ ದಾಶ್ವಾ ಅಗ್ನೇ ಅಸ್ಥಾತ್ ॥೮॥

ಪದಾರ್ಥ:- ಹೇ **[ಅಗ್ನೇ]** ವಿದ್ಯಾಯುಕ್ತನು ಹೇಗೆ **[ಅಹ್ರಯಃ]** ಶೀಘ್ರ ಯಾನ ಮಾರ್ಗಗಳನ್ನು ಪ್ರಾಪ್ತಿ ಪಡಿಸುವ ಅಗ್ನಿ ಮೊದಲಾದ **[ಅಪರಃ]** ಮತ್ತು ಭಿನ್ನ ದೇಶ ಅಥವಾ ಭಿನ್ನ ಕಾರ್ಯಾಗಾರವು **[ತ್ವೋತಃ]** ತಮ್ಮೊಡನೆ ಸಂಗಮವನ್ನು ಪಡೆಯುತ್ತಾ **[ವಾಜೀ]** ಪ್ರಶಂಸಾಯೋಗ್ಯವಾದ ವೇಗವುಳ್ಳ **[ದಶ್ವಾನ್]** ದಾತನು **[ಪೂರ್ವಸ್ಮಾತ್]** ಮೊದಲ ಸ್ಥಾನದಲ್ಲಿ **[ಅಭಿ]** ಸನ್ಮುಖನು **[ಪ್ರಾಸ್ಥಾತ್]** ದೇಶಾಂತರದಲ್ಲಿ ಚಲಿಸುವವನು ಆಗುವನು. ಹಾಗೆ ಅನ್ಯ ಮನಸ್ಸು ಮೊದಲಾದ ಪದಾರ್ಥಗಳು ಕೂಡಾ ಇವೆ. ಹಾಗೆ ನೀವು ತಿಳಿಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಇದನ್ನು ತಿಳಿಯಬೇಕು. ಶಿಲ್ಪವಿದ್ಯೆಯಿಂದ ಸಿದ್ಧವಾದ ಯಂತ್ರಗಳ ಹೊರತು ಅಗ್ನಿಯಾನಗಳನ್ನು ಚಲಿಸುವಂತೆ ಮಾಡಲು ಸಾಧ್ಯವಾಗುವುದಿಲ್ಲ.

ಮತ್ತೆ ಅವನು ಹೇಗಿರುವನು?

ಉತ ದ್ಯುಮತ್ ಸುವೀರ್ಯಂ ಬೃಹದಗ್ನೇ ವಿವಾಸಸಿ । ದೇವೇಭ್ಯೋ ದೇವ ದಾಶುಷೇ ॥೯॥

ಪದಾರ್ಥ:- ಹೇ **[ದೇವ]** ದಿವ್ಯಗುಣ, ಕರ್ಮ ಮತ್ತು ಸ್ವಭಾವವುಳ್ಳ **[ಅಗ್ನೇ]** ಅಗ್ನಿಯಂತೆ ಪ್ರಜ್ಞೆಯಿಂದ ಪ್ರಕಾಶಿತ ವಿದ್ವಾಂಸನಾದ ನೀನು **[ದಾಶುಷೇ]** ಕೊಡುವ ಸ್ವಭಾವವುಳ್ಳ ಕಾರ್ಯಗಳ ಅಧ್ಯಕ್ಷನು **[ಉತ]** ಅಥವಾ **[ದೇವೇಭ್ಯಃ]** ವಿದ್ವಾಂಸರಿಗಾಗಿ **[ದ್ಯುಮತ್]** ಉತ್ತಮ ಪ್ರಕಾಶವುಳ್ಳ **[ಬೃಹತ್]** ದೊಡ್ಡ **[ಸುವೀರ್ಯಮ್]** ಉತ್ತಮ ಪರಾಕ್ರಮವನ್ನು **[ವಿವಾಸತಿ]** ಸೇವನೆ ಮಾಡುತ್ತಾನೋ ಹಾಗೆ ನಾವು ಕೂಡ ಅವನ ಸೇವನೆ ಮಾಡೋಣ.

ಭಾವಾರ್ಥ:- ಯಾರು ಕಾರ್ಯಗಳ ಸ್ವಾಮಿಯಾಗುವರೋ, ಆ ವಿದ್ವಾಂಸರ ಹತ್ತಿರದಿಂದ ವಿದ್ಯೆ ಮತ್ತು ಪುರುಷಾರ್ಥ ಮಾಡಿ ಹಾಗೂ ಭೃತ್ಯರಿಂದ ದೊಡ್ಡ ದೊಡ್ಡ ಉಪಕಾರಗಳನ್ನು ಗ್ರಹಣ ಮಾಡಬೇಕು.

ಈ ಸೂಕ್ತದಲ್ಲಿ ಈಶ್ವರ, ವಿದ್ವಾಂಸ ಮತ್ತು ವಿದ್ಯುದಗ್ನಿಯ ಗುಣಗಳ ವರ್ಣನೆ ಇರುವುದರಿಂದ ಪೂರ್ವಸೂಕ್ತಾರ್ಥಕ್ಕೂ ಈ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಪ್ಪತ್ತನಾಲ್ಕನೆಯ ಸೂಪ್ತ ಸಮಾಪ್ತ

ಸೂಕ್ತ ೭೫

ಮಂತ್ರಸಂಖ್ಯೆ ೫ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಅಗ್ನಿಃ । ಛಂದಃ - ಗಾಯತ್ರೀ. । ಸ್ವರಃ - ಷಡ್ಜಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ವಿದ್ವಾಂಸರು ಹೇಗಿರಬೇಕೆಂದು ತಿಳಿಸಲಾಗಿದೆ.

ಜುಷಸ್ವ ಸಪ್ರಥಸ್ತಮಂ ವಚೋ ದೇವಪ್ಸರಸ್ತಮಮ್ । ಹವ್ಯಾ ಜುಹ್ವಾನ ಆಸನಿ ॥೧॥

ಪದಾರ್ಥ:- ಹೇ ವಿದ್ವಾಂಸನೇ! **[ಆಸನಿ]** ತಮ್ಮ ಸುಖದಲ್ಲಿ **[ಹವ್ಯಾ]** ಭೋಜನ ಮಾಡಲು ಯೋಗ್ಯವಾದ ಪದಾರ್ಥಗಳನ್ನು **[ಜುಹ್ವಾನಃ]** ತಿನ್ನುವ ತಾವು ವಿದ್ವಾಂಸರ **[ಸಪ್ರಥಸ್ತಮಮ್]** ಅತಿ ವಿಸ್ತಾರವಾದ **[ದೇವ್ಯಪ್ಸರಸ್ತಮಮ್]** ವಿದ್ವಾಂಸರನ್ನು ಅತ್ಯಂತ ಗ್ರಹಣ ಮಾಡುವ ಯೋಗ್ಯ ವ್ಯವಹಾರಗಳು ಅಥವಾ **[ವಚಃ]** ವಚನವಿದೆ. **[ತಮ್]** ಅದನ್ನು **[ಜುಷಸ್ವ]** ಸೇವಿಸಿರಿ.

ಭಾವಾರ್ಥ:- ಯಾರು ಯುಕ್ತವಾದ ಭೋಜನ, ಪಾನ ಮತ್ತು ಕ್ರಿಯೆಗಳಿಂದ ಕೂಡಿದವರಾದ ಬ್ರಹ್ಮಚಾರಿಗಳೋ ಅವರು ಶರೀರ ಮತ್ತು ಆತ್ಮದ ಸುಖವನ್ನು ಪಡೆಯುವರು.

ಮತ್ತೆ ಆ ವಿದ್ವಾಂಸನು ಏನು ಹೇಳಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಅಥಾ ತೇ ಅಂಗಿರಸ್ತಮಾ-ಗ್ನೇ ವೇಧಸ್ತಮ ಪ್ರಿಯಮ್ । ವೋಚೇಮ ಬ್ರಹ್ಮ ಸಾನಸಿ ॥೨॥

ಪದಾರ್ಥ:- ಹೇ **[ಅಂಗಿರಸ್ತಮ]** ಎಲ್ಲ ವಿದ್ಯೆಗಳನ್ನು ತಿಳಿದ ಮತ್ತು **[ವೇಧಸ್ತಮ]** ಅತ್ಯಂತ ಧಾರಣ ಮಾಡುವ **[ಅಗ್ನೇ]** ವಿದ್ವಾಂಸರಂತೆ ನಾವು ವೇದಗಳನ್ನು ಓದಿ **[ಅಥ]** ನಂತರ **[ತೇ]** ನಿನ್ನ **[ಸಾನಸಿ]** ಸದಾ ಇರುವ **[ಪ್ರಿಯಮ್]** ಪ್ರೀತಿಕಾರಕವಾದ **[ಬ್ರಹ್ಮ]** ನಾಲ್ಕು ವೇದಗಳನ್ನು **[ವೋಚೇಮ]** ಉಪದೇಶ ಮಾಡಲಿ. ಹಾಗೆಯೇ ನೀನು ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ವೇದಾದಿ ಸತ್ಯಶಾಸ್ತ್ರಗಳ ಉಪದೇಶದ ಹೊರತು ಯಾವನೇ ಮನುಷ್ಯನಿಗೆ ಪರಮೇಶ್ವರ ಮತ್ತು ವಿದ್ಯುತ್ ಅಗ್ನಿ, ಮೊದಲಾದ ಪದಾರ್ಥಗಳ ವಿಷಯದ ಜ್ಞಾನವು ಆಗುವುದಿಲ್ಲ.

ಮತ್ತೆ ಅವನು ಹೇಗಿರಬೇಕು ಎಂಬುದನ್ನು ತಿಳಿಸಿದೆ.

ಕಸ್ತೇ ಜಾಮಿರ್ಜನಾನಾ-ಮಗ್ನೇ ಕೋ ದಾಶ್ವಧ್ವರಃ । ಕೋ ಹ ಕಸ್ಮಿನ್ನಸಿ ಶ್ರಿತಃ ॥೩॥

ಪದಾರ್ಥ:- ಹೇ **[ಅಗ್ನೇ]** ವಿದ್ವಾಂಸನೇ! **[ಜನಾನಾಮ್]** ಮನುಷ್ಯರ ಮಧ್ಯೆ **[ತೇ]** ನಿನ್ನನ್ನು **[ಕಃ]** ಯಾವ ಮನುಷ್ಯನು **[ಹ]** ನಿಶ್ಚಯವಾಗಿ **[ಜಾಮೇಃ]** ತಿಳಿಯುತ್ತಾನೆ. **[ಕಃ]** ಯಾವನು **[ದಾಶ್ವಧ್ವರಃ]** ದಾನ. ಕೊಡುತ್ತಾನೆ ಮತ್ತು ರಕ್ಷಣೆ ಮಾಡುತ್ತಾನೆ. ನೀನು **[ಕಃ]** ಯಾರು ಮತ್ತು **[ಕಸ್ಮಿನ್]** ಯಾವುದರಲ್ಲಿ **[ಶ್ರಿತಃ ಅಸಿ]** ಆಶ್ರಿತನಾಗಿದ್ದೀಯೆ. ಈ ಎಲ್ಲಕ್ಕೂ ಉತ್ತರವನ್ನು ಕೊಡು.

ಭಾವಾರ್ಥ:- ಬಹಳ ಮನುಷ್ಯರಲ್ಲಿ ಯಾವನು ಪರಮೇಶ್ವರ ಮತ್ತು ಅಗ್ನಿ ಮೊದಲಾದ ಪದಾರ್ಥಗಳನ್ನು ಯಥಾವತ್ತಾಗಿ ತಿಳಿದು ಮತ್ತು ತಿಳಿಸುತ್ತಾನೋ, ಏಕೆಂದರೆ ಅವರು ಅತ್ಯಂತ ಆಶ್ಚರ್ಯಕರ ಗುಣ ಕರ್ಮ ಮತ್ತು ಸ್ವಭಾವವುಳ್ಳವರಾಗಿದ್ದಾರೆ.

ಮತ್ತೆ ಆ ವಿದ್ವಾಂಸರು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ತ್ವಂ ಜಾಮಿರ್ಜನಾನಾ-ಮಗ್ನೇ ಮಿತ್ರೋ ಅಸಿ ಪ್ರಿಯಃ । ಸಖಾ ಸಖಿಭ್ಯ ಈಡ್ಯಃ ॥೪॥

ಪದಾರ್ಥ:- ಹೇ **[ಅಗ್ನೇ]** ಪಂಡಿತನು ಯಾವ ಕಾರಣದಿಂದ **[ಜನಾನಾಮ್]** ಮನುಷ್ಯರನ್ನು **[ಜಾಮಿಃ]** ಜಲದಂತೆ ಸುಖವನ್ನು ಕೊಡುವ **[ಮಿತ್ರಃ]** ಎಲ್ಲರ ಮಿತ್ರನು **[ಪ್ರಿಯಃ]** ಕಾಮನೆಗಳನ್ನು ಪೂರ್ಣ ಮಾಡುವ ಯೋಗ್ಯ ವಿದ್ವಾಂಸರಾದ **[ತ್ವಮ್]** ತಾವು **[ಸಖಿಭ್ಯಃ]** ಎಲ್ಲರ ಮಿತ್ರ ಮನುಷ್ಯರನ್ನು **[ಈಡ್ಯಃ]** ಸ್ತುತಿಸಲು ಯೋಗ್ಯರು **[ಸಖಾ]** ಮಿತ್ರರೂ ಆಗಿರಿ. ಇದರಿಂದ ಎಲ್ಲರಿಗೂ ಸೇವನೆಯೋಗ್ಯ ವಿದ್ವಾಂಸರು **[ಅಸಿ]** ಆಗಿರಿ.

ಭಾವಾರ್ಥ:- ಯಾವನು ಜಗತ್ತಿನಲ್ಲಿ ವಿದ್ಯೆ ಮೊದಲಾದ ಶುಭಗುಣಗಳಿಂದ ಕೂಡಿ ಎಲ್ಲರಿಗೂ ಉಪಕಾರ ಮಾಡುವನೋ ಆ ಪರಮೇಶ್ವರನ ಮತ್ತು ವಿದ್ವಾಂಸನ ಸೇವೆಯನ್ನು ಮನುಷ್ಯರು ಏತಕ್ಕೆ ಮಾಡಬಾರದು?

ಮತ್ತೆ ಅವನು ಹೇಗಿರುವನು ಎಂಬುದನ್ನು ತಿಳಿಸಲಾಗಿದೆ.

ಯಜಾ ನೋ ಮಿತ್ರಾವರುಣಾ ಯಜಾ ದೇವಾ ಋತಂ ಬೃಹತ್ ।
ಅಗ್ನೇ ಯಕ್ಷಿ ಸ್ವಂ ದಮಮ್ ॥ ೫ ॥

ಪದಾರ್ಥ:- ಹೇ **[ಅಗ್ನೇ]** ಪೂರ್ಣ ವಿದ್ಯೆಯುಳ್ಳ ವಿದ್ವಾಂಸನು ಯಾವ ಕಾರಣದಿಂದ **[ಸ್ವಮ್]** ತನ್ನನ್ನು ತಾನೇ **[ದಮಮ್]** ಉತ್ತಮ ಸ್ವಭಾವರೂಪೀ ಮನೆಯನ್ನು **[ಯಕ್ಷಿ]** ಪಡೆಯುತ್ತಾನೋ, ಅದರಿಂದ **[ನಃ]** ನಮಗೆ **[ಮಿತ್ರಾವರುಣ]** ಬಲ ಮತ್ತು ಪರಾಕ್ರಮವನ್ನುಂಟು ಮಾಡುವ ಪ್ರಾಣ ಮತ್ತು ಉದಾನಗಳನ್ನು **[ಯಜ]** ನಿರೋಗವನ್ನಾಗಿ ಮಾಡಿ **[ಬೃಹತ್]** ದೊಡ್ಡ ದೊಡ್ಡ ವಿದ್ಯೆ ಮೊದಲಾದ ಗುಣಗಳಿಂದ ಕೂಡಿರುವ **[ಋತಮ್]** ಸತ್ಯವಿಜ್ಞಾನವನ್ನು **[ಯಜ]** ಪ್ರಕಾಶ ಪಡಿಸಿರಿ.

ಭಾವಾರ್ಥ:- ಹೇಗೆ ಪರಮೇಶ್ವರನು ಪರೋಪಕಾರಕ್ಕಾಗಿ ನ್ಯಾಯ ಮೊದಲಾದ ಶುಭಗುಣಗಳನ್ನು ಕೊಡುವುದು ಸ್ವಭಾವವೋ, ಹಾಗೆಯೇ ವಿದ್ವಾಂಸರು ಕೂಡ ತಮ್ಮ ಸ್ವಭಾವವನ್ನಿಟ್ಟುಕೊಳ್ಳಬೇಕು.

ಈ ಸೂಕ್ತದಲ್ಲಿ ಈಶ್ವರ, ಅಗ್ನಿ ಮತ್ತು ವಿದ್ವಾಂಸರ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಪ್ಪತ್ತೈದನೆಯ ಸೂಕ್ತ ಸಮಾಪ್ತ

ಸೂಕ್ತ ೭೬

ಮಂತ್ರಸಂಖ್ಯೆ ೫ । ಋಷಿಃ- ಗೋತಮೋ ರಾಹೂಗಣಃ । ದೇವತಾ - ಅಗ್ನಿಃ । ಛಂದಃ - ತ್ರಿಷ್ಟುಪ್ । ಸ್ವರಃ - ಧೈವತಃ.

ಇದರ ಮೊದಲ ಮಂತ್ರದಲ್ಲಿ ವಿದ್ವಾಂಸರ ಗುಣಗಳ ಉಪದೇಶ ಮಾಡಿದೆ.

ಕಾ ತ ಉಪೇತಿರ್ಮನಸೋ ವರಾಯ ಭುವದಗ್ನೇ ಶಂತಮಾ ಕಾ ಮನೀಷಾ ।
ಕೋ ವಾ ಯಜ್ಞೈಃ ಪರಿ ದಕ್ಷಂ ತ ಆಪ ಕೇನ ವಾ ತೇ ಮನಸಾ ದಾಶೇಮ ॥೧॥

ಪದಾರ್ಥಃ- ಹೇ [**ಅಗ್ನೇ**] ಶಾಂತಿಯನ್ನು ಕೊಡುವ ವಿದ್ವಾಂಸನೇ! [**ತೇ**] ಅತಿ ಶ್ರೇಷ್ಠ ವಿದ್ವಾಂಸನಾದ ನಿನ್ನನಂತೆ [**ಕಾ**] ಯಾವನು [**ಉಪೇತಿ**] ಸುಖಗಳನ್ನು [**ಕಾ**] ಯಾವನು [**ಉಪೇತಿ**] ಸುಖಗಳನ್ನು ಪ್ರಾಪ್ತಿಪಡಿಸುವ [**ಮನಸಃ**] ಚಿತ್ರದ [**ವರಾಯ**] ಶ್ರೇಷ್ಠತೆಗಾಗಿ [**ಭುವತ್**] ಆಗುವನು. [**ಕಾ**] ಯಾವನು [**ಶಂತಮಾ**] ಸುಖವನ್ನುಂಟುಮಾಡುವ [**ಮನೀಷಾ**] ಬುದ್ಧಿ ಇದೆ. [**ಕಃ**] ಯಾವನು [**ವಾ**] ನಿಶ್ಚಯವಾಗಿ [**ತೇ**] ನಿನ್ನ [**ದಕ್ಷಮ್**] ಬಲವನ್ನು [**ಯಜ್ಞೈಃ**] ಓದುವ ಓದಿಸುವ ಮೊದಲಾದ ಯಜ್ಞಗಳನ್ನು ಮಾಡಿ [**ಪರಿ**] ಎಲ್ಲ ಕಡೆಗಳಿಂದ [**ಆಪ**] ಪ್ರಾಪ್ತನಾಗುವೆ. [**ವಾ**] ಅಥವಾ ನಾವು [**ಕೇನ**] ಯಾವ ರೀತಿಯಿಂದ [**ಮನಸಾ**] ಮನಸ್ಸಿನಿಂದ [**ತೇ**] ನಿನಗಾಗಿ ಏನನ್ನು [**ದಾಶೇಮ**] ಕೊಡಬಲ್ಲೆವು?

ಭಾವಾರ್ಥಃ- ಮನುಷ್ಯರು, ಪರಮೇಶ್ವರ ಮತ್ತು ವಿದ್ವಾಂಸರಲ್ಲಿ ಎಂತಹ ಪ್ರಾರ್ಥನೆ ಮಾಡಬೇಕೆಂದರೆ, ಹೇ ಪರಮಾತ್ಮ ಅಥವಾ ವಿದ್ವಾಂಸರೇ! ತಾವು ಕೃಪೆಯಿಟ್ಟು ನಮ್ಮ ಶುದ್ಧಿಗಾಗಿ ಶ್ರೇಷ್ಠ ಬುದ್ಧಿ ಮತ್ತು ಶ್ರೇಷ್ಠ ಬಲವನ್ನು ಕೊಡಿರಿ. ನಾವು ತಮ್ಮನ್ನು ತಿಳಿದು ಹೆಚ್ಚಿನ ಸುಖಪಡೆಯುವಂತಹವರಾಗಲಿ.

ಮತ್ತೆ ಆ ವಿದ್ವಾಂಸನಲ್ಲಿ ಪ್ರಾರ್ಥನೆ ಯಾವುದಕ್ಕಾಗಿ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಏಹ್ಯಗ್ನ ಇಹ ಹೋತಾ ನಿ ಷೀದಾ-ದಬ್ಧಃ ಸು ಪುರಏತಾ ಭವಾ ನಃ ।
ಅವತಾಂ ತ್ವಾ ರೋದಸೀ ವಿಶ್ವಮಿನ್ವೇ ಯಜಾ ಮಹೇ ಸೌಮನಸಾಯ ದೇವಾನ್ ॥೨॥

ಪದಾರ್ಥಃ- ಹೇ [**ಅಗ್ನೇ**] ಎಲ್ಲರಿಗೂ ಉಪಕಾರ ಮಾಡುವ ವಿದ್ವಾಂಸನೇ! [**ಅದಬ್ಧಃ**] ಅಹಿಂಸಕರಾದ ನಮ್ಮಿಂದ ಸೇವೆ ಮಾಡಿಸಿಕೊಳ್ಳಲು ಯೋಗ್ಯನಾದ ನೀನು [**ಇಹ**] ಈ ಪ್ರಪಂಚದಲ್ಲಿ [**ಹೋತಾ**] ಕೊಡುವವನು [**ನಃ**] ನಮಗೆ [**ಆ ಇಹಿ**] ಪ್ರಾಪ್ತನಾಗು. [**ಸು**] ಒಳ್ಳೆಯ ರೀತಿಯಲ್ಲಿ [**ನಿ**] ನಿತ್ಯವೂ [**ಸೀದ**] ಜ್ಞಾನವನ್ನು ಕೊಡು. [**ಪುರ ಏತಾ**] ಮೊದಲು ಪ್ರಾಪ್ತವಾಗುವವನು [**ಭವ**] ಆಗು. [**ತ್ವಾ**] ನಿನ್ನನ್ನು [**ವಿಶ್ವಮಿನ್ವೇ**] ಎಲ್ಲ ಜಗತ್ತನ್ನು ತೃಪ್ತಿಪಡಿಸುವ [**ರೋದಸೀ**] ವಿದ್ಯಾಪ್ರಕಾಶ ಮತ್ತು ಭೂಗೋಳದ ರಾಜ್ಯ ಅಥವಾ ಆಕಾಶ ಮತ್ತು ಪೃಥಿವಿಯು [**ಅವತಾಮ್**] ಪ್ರಾಪ್ತವಾಗಲಿ. ಆದುದರಿಂದ ನೀನು [**ಮಹೇ**] ದೊಡ್ಡವರು [**ಸೌಮನಸಾಯ**] ಮನದಲ್ಲಿನ ವೈರಭಾವವನ್ನು ತ್ಯಜಿಸಲು [**ದೇವಾನ್**] ವಿದ್ವಾಂಸರ ದಿವ್ಯಗುಣಗಳನ್ನು ನಮ್ಮ ಆತ್ಮದಲ್ಲಿ [**ಯಜ**] ಸಂಗತಗೊಳಿಸು.

ಭಾವಾರ್ಥಃ- ಈ ಪ್ರಕಾರ ಸತ್ಯಭಾವದಿಂದ ಪ್ರಾರ್ಥನೆ ಮಾಡಲ್ಪಟ್ಟ ಪರಮೇಶ್ವರನು ಮತ್ತು ಸೇವೆ ಮಾಡಿದ ಧರ್ಮಾತ್ಮರಾದ ವಿದ್ವಾಂಸರು ಎಲ್ಲ ಸುಖಗಳನ್ನೂ ಮನುಷ್ಯರಿಗೆ ಕೊಡುತ್ತಾರೆ.

ಮತ್ತೆ ಆ ವಿದ್ವಾಂಸನು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ಪ್ರ ಸು ವಿಶ್ವಾನ್ ರಕ್ಷಸೋ ಧಕ್ಷ್ಯಗ್ನೇ ಭವಾ ಯಜ್ಞಾನಾಮಭಿಶಸ್ತಿಪಾವಾ ।
ಅಥಾ ವಹ ಸೋಮಪತಿಂ ಹರಿಭ್ಯಾಮಾತಿಥ್ಯಮಸ್ಮೈ ಚಕೃಮಾ ಸುದಾವ್ನೇ ॥೩॥

ಪದಾರ್ಥಃ- ಹೇ [**ಅಗ್ನೇ**] ದುಷ್ಟರನ್ನು ಶಿಕ್ಷಿಸುವ ಸಭಾಧ್ಯಕ್ಷನೇ! ಯಾವ ರೀತಿ ನೀನು [**ವಿಶ್ವಾನ್**] ಎಲ್ಲ [**ರಕ್ಷಸಃ**] ದುಷ್ಟರ ಅಥವಾ ದೋಷಗಳನ್ನು [**ಪ್ರ**] ಉತ್ತಮವಾಗಿ [**ಧಕ್ಷಿ**] ನಾಶ ಮಾಡುತ್ತೀಯೆ. ಇದೇ ಕಾರಣ [**ಯಜ್ಞಾನಾಮ್**] ತಿಳಿಯಲು ಯೋಗ್ಯವಾದ ಯಾವ ಕಾರ್ಯಾಗಾರವಿದೆಯೋ, ಅದರ ಸಾಧಕರನ್ನು [**ಅಭಿಶಸ್ತಿಪಾವಾ**] ಹಿಂಸೆಯಿಂದ ರಕ್ಷಣೆ ಮಾಡುವವನು [**ಸು ಭವ**] ಉತ್ತಮವಾಗಿ ಆಗು. ಹೇಗೆ ಸೂರ್ಯನು [**ಹರಿಭ್ಯಾಂ**] ಧಾರಣ ಮತ್ತು ಆಕರ್ಷಣೆಯಿಂದ ಎಲ್ಲ ಸುಖಗಳನ್ನು ಪ್ರಾಪ್ತ ಪಡಿಸುವನೋ, ಹಾಗೆ [**ಸೋಮಪತಿಮ್**] ಐಶ್ವರ್ಯದ ಸ್ವಾಮಿಯನ್ನು [**ಆವಹ**] ಪ್ರಾಪ್ತಿಗೊಳಿಸು. [**ಅಥ**] ನಂತರ [**ಅಸ್ಮೈ**] ಈ [**ಸುದಾವ್ನೇ**] ವಿದ್ಯಾ ವಿಜ್ಞಾನ ಉತ್ತಮ ಶಿಕ್ಷಣ ರಾಜ್ಯಾದಿ ಧನವನ್ನು ಕೊಡುವ ತಮಗಾಗಿ ನಾವು [**ಆತಿಥ್ಯಮ್**] ಸತ್ಕಾರವನ್ನು [**ಚಕೃಮಾ**] ಮಾಡುತ್ತೇವೆ.

ಭಾವಾರ್ಥಃ- ಇಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಈಶ್ವರನು ಜಗತ್ತಿನಲ್ಲಿ ಪ್ರಾಣಿಗಳಿಗಾಗಿ ಎಲ್ಲ ಪದಾರ್ಥಗಳನ್ನು ಕೊಟ್ಟಿರುವನೋ, ಹಾಗೆ ಮನುಷ್ಯನು ಉತ್ತಮ ವಿದ್ಯೆ ಮತ್ತು ಶಿಕ್ಷಣವನ್ನು ಕೊಡಲಿ, ಅವರ ಸತ್ಕಾರ ಮಾಡಲಿ, ಅನ್ಯರಿಗಲ್ಲ.

ಮತ್ತೆ ವಿದ್ವಾಂಸನು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ಪ್ರಜಾವತಾ ವಚಸಾ ವಹ್ನಿರಾಸಾऽऽಚ ಹುವೇ ನಿ ಚ ಸತ್ಸೀಹ ದೇವೈಃ ।
ವೇಷಿ ಹೋತ್ರಮುತ ಪೋತ್ರಂ ಯಜತ್ರ ಬೋಧಿ ಪ್ರಯಂತರ್ಜನಿತರ್ವಸೂನಾಮ್ ॥೪॥

ಪದಾರ್ಥಃ- ಹೇ [**ಯಜತ್ರ**] ದಾತನೇ! [**ವಹ್ನಿಃ**] ಸುಖಗಳನ್ನು ಪ್ರಾಪ್ತಿ ಪಡಿಸುವ ನೀನು [**ಇಹ**] ಈ ಜಗತ್ತಿನಲ್ಲಿ [**ದೇವೈಃ**] ವಿದ್ವಾಂಸರೊಡನೆ [**ಸಸ್ತಿ**] ಸಭೆಯಲ್ಲಿ [**ಪ್ರಜಾವತಾ**] ಪ್ರಜೆಗಳ ಸಂಮತಿಗೆ ಅನುಕೂಲವಾಗಿ [**ವಚಸಾ**] ವಚನಗಳಿಂದ [**ಬೋಧಿ**] ಬೋಧಿಸು. [**ಹೋತ್ರಮ್**] ಹವನ ಮಾಡಲು ಯೋಗ್ಯವಾದ [**ಚ**] ಮತ್ತು [**ಪೋತ್ರಮ್**] ಪವಿತ್ರ ಮಾಡುವ ವಸ್ತುಗಳನ್ನು [**ಉತ**] ಕೂಡ [**ನಿ**] ನಿರಂತರ [**ವೇಷಿ**] ಪಡೆಯುತ್ತಾನೆ. [**ಜನಿತಃ**] ಸುಖೋತ್ಪನ್ನ ಮಾಡುವ [**ಪ್ರಯತ್ನಃ**] ಪ್ರಯತ್ನದಿಂದ ನೀನು ಹೇಗೆ [**ವಸೂನಾಮ್**] ಪೃಥಿವ್ಯಾದಿ ಪದಾರ್ಥಗಳನ್ನು ತಿಳಿಯುವವನಾಗಿರುವೆಯೋ, ಹಾಗೆ ನಾನು [**ಆಸಾ**] ಸುಖದಿಂದ ನಿನ್ನ [**ಚ**] ಬೇರೆ ವಿದ್ವಾಂಸರಿಗೂ ಕೂಡ [**ಆಹುವೇ**] ಸ್ತುತಿ ಮಾಡುತ್ತೇನೆ.

ಭಾವಾರ್ಥಃ- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯನು ಪರಮೇಶ್ವರ ಮತ್ತು ಧಾರ್ಮಿಕ ವಿದ್ವಾಂಸರ ಸಹಾಯ ಮತ್ತು ಸಂಗದಿಂದ ಶುದ್ಧನಾಗಿ ಎಲ್ಲ ಶ್ರೇಷ್ಠವಸ್ತುಗಳನ್ನು ಪಡೆಯಲಿ.

ಮತ್ತೆ ಅದೇ ವಿಷಯವನ್ನು ತಿಳಿಸಲಾಗಿದೆ.

ಯಥಾ ವಿಪ್ರಸ್ಯ ಮನುಷೋ ಹವಿರ್ಭಿ-ರ್ದೇವಾँ ಅಯಜಃ ಕವಿಭಿಃ ಕವಿಃ ಸನ್ ।
ಏವಾ ಹೋತಃ ಸತ್ಯತರ ತ್ವಮದ್ಯಾ-ಗ್ನೇ ಮಂದ್ರಯಾ ಜುಹ್ವಾ ಯಜಸ್ವ ॥೫॥

ಪದಾರ್ಥಃ- ಹೇ [**ಸತ್ಯತರ**] ಅತಿಶಯ ಸತ್ಯಾಚರಣ ನಿಷ್ಠನು [**ಹೋತಃ**] ಸತ್ಯಗ್ರಹಣ ಮಾಡುವ ದಾತನು, [**ಅಗ್ನೇ**] ವಿದ್ವಾಂಸನು [**ಯಥಾ**] ಹೇಗೆ ಯಾವನೇ ಧಾರ್ಮಿಕ ವಿದ್ವಾಂಸನು ಅಥವಾ ವಿದ್ಯಾರ್ಥಿಯು [**ವಿಪ್ರಸ್ಯ**]

ಬುದ್ಧಿವಂತನಾದ ಅಧ್ಯಾಪಕ ವಿದ್ವಾಂಸನು [ಮನುಷಃ] ಮನುಷ್ಯರಿಗೆ ಅನುಕೂಲವಾಗಿ ಎಲ್ಲರಿಗೂ ಸುಖದಾಯಕನಾಗುತ್ತಾನೋ ಹಾಗೆ [ಏನ] ಕೂಡ [ತ್ವಮ್] ನೀನು [ಅದ್ಯ] ಈಗ [ಕವಿಭಿಃ] ಪೂರ್ಣವಿದ್ವಾಂಸರೂ ಬಹುದರ್ಶಿಗಳೂ ಆದ ವಿದ್ವಾಂಸರೊಡನೆ [ಕವಿಃ] ವಿದ್ವಾನ್ ಬಹುದರ್ಶಿಯು [ಸನ್] ಆಗಿ [ಹವಿಭಿಃ] ಗ್ರಹಣ ಮಾಡಲು ಯೋಗ್ಯವಾದ ಗುಣ-ಕರ್ಮ-ಸ್ವಭಾವಗಳೊಂದಿಗೆ [ದೇವಾನ್] ವಿದ್ವಾಂಸರು ಅಥವಾ ದಿವ್ಯಗುಣಗಳ [ಅಯಜಃ] ಪಡೆಯುವೆ. ಆ [ಮಂದ್ರಯಾ] ಆನಂದ ಪಡಿಸುವ [ಜುಹ್ವಾ] ದಾನಕ್ರಿಯೆಯಿಂದ ನಮಗೆ [ಯಜಸ್ವ] ಪ್ರಾಪ್ತವಾಗಲಿ.

ಭಾವಾರ್ಥ:- ಹೇಗೆ ಯಾವನೇ ವಿದ್ವಾಂಸನು ಎಲ್ಲ ವಿದ್ಯೆಗಳನ್ನು ಪಡೆದು ಎಲ್ಲರಿಗೂ ಉಪಕಾರಕನಾಗುವನೋ, ಎಲ್ಲ ಪ್ರಾಣಿಗಳಿಗೂ ಸುಖ ಕೊಡುವನೋ, ಎಲ್ಲರನ್ನೂ ವಿದ್ವಾಂಸರನ್ನಾಗಿ ಮಾಡಿ ಆನಂದಪಡುವನೋ ಹಾಗೆಯೇ ತಾವು ಅಂದರೆ ಪೂರ್ಣವಿದ್ವಾಂಸರೂ ಧಾರ್ಮಿಕರೂ ಆಗಿರಿ.

ಈ ಸೂಕ್ತದಲ್ಲಿ ಈಶ್ವರ ಮತ್ತು ವಿದ್ವಾಂಸರ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಪ್ಪತ್ತಾರನೆಯ ಸೂಕ್ತ ಸಮಾಪ್ತ

ಸೂಕ್ತ ೭೭

ಮಂತ್ರಸಂಖ್ಯೆ ೫ । ಋಷಿಃ-ಗೋತಮೋ ರಾಹೂಗಣಃ । ದೇವತಾ-ಅಗ್ನಿಃ । ಛಂದಃ-ತ್ರಿಷ್ಟುಪ್ । ಸ್ವರಃ-೧ ಪಂಚಮಃ, ಧೈವತಃ.

ವಿದ್ವಾಂಸನು ಹೇಗಿರಬೇಕು ಎಂಬುದನ್ನು ಹೇಳಿದೆ.

ಕಥಾ ದಾಶೇಮಾಗ್ನಯೇ ಕಾಸ್ಮೈ ದೇವಜುಷ್ಟೋಚ್ಯತೇ ಭಾಮಿನೇ ಗೀಃ ।
ಯೋ ಮರ್ತ್ಯೇಷ್ವಮೃತ ಋತಾವಾ ಹೋತಾ ಯಜಿಷ್ಠ ಇತ್ ಕೃಣೋತಿ ದೇವಾನ್ ॥೧॥

ಪದಾರ್ಥ:- ಹೇ ಮನುಷ್ಯರೇ! ಹೇಗೆ ನಾವು ವಿದ್ವಾಂಸರೊಡನೆ ಇರುತ್ತೇವೋ, ಹಾಗೆ [ಯಃ] ಯಾವ [ಮರ್ತ್ಯೇಷು] ಮರಣಧರ್ಮದಿಂದ ಕೂಡಿದ ಶರೀರಾದಿಗಳಲ್ಲಿ [ಅಮೃತಃ] ಮೃತ್ಯುರಹಿತ [ಋತಾವಾ] ಸತ್ಯಗುಣ, ಕರ್ಮ, ಸ್ವಭಾವಗಳಿಂದ [ಹೋತಾ] ದಾತನು ಮತ್ತು ಗ್ರಹಣ ಮಾಡುವವನು [ಯಜಿಷ್ಠಃ] ಅತ್ಯಂತ ಸತ್ಸಂಗವುಳ್ಳವನೂ [ದೇವಾನ್] ದಿವ್ಯಗುಣಗಳು ಅಥವಾ ದಿವ್ಯ ಪದಾರ್ಥಗಳು ಅಥವಾ ವಿದ್ವಾಂಸರನ್ನು [ಕೃಣೋತಿ] ಮಾಡುತ್ತಾನೇ, ರೂಪಿಸುತ್ತಾನೆ. [ಅಸ್ಮೈ] ಈ ಉಪದೇಶಕನು [ಭಾಮಿನೇ] ದುಷ್ಟರ ಮೇಲೆ ಕ್ರೋಧಕಾರಕನು [ಅಗ್ನಯೇ] ಸತ್ಯಾಸತ್ಯಗಳನ್ನು ತಿಳಿಯುವುದಕ್ಕಾಗಿ [ಕಾ] ಯಾವನು [ಕಥಾ] ಯಾವ ಹೇತುವಿನಿಂದ [ದೇವಜುಷ್ಟಾ] ವಿದ್ವಾಂಸರಿಂದ ಸೇವಿಸಲ್ಪಟ್ಟ [ಗೀಃ] ವಾಣಿ ಎಂದು [ಉಚ್ಯತೇ] ಹೇಳಲ್ಪಟ್ಟಿದೆಯೋ ಅದು [ಇತ್] ಕೂಡ [ದಾಶೇಮ] ವಿದ್ಯೆಯನ್ನು ಕೂಡುತ್ತದೋ, ಹಾಗೆ ನೀವೂ ಕೂಡ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ವಿದ್ವಾಂಸನು ಈಶ್ವರನ ಸ್ತುತಿ ಮತ್ತು ವಿದ್ವಾಂಸರ ಸೇವೆ ಮಾಡಿ ದಿವ್ಯಗುಣಗಳನ್ನು ಪಡೆದು ಸುಖಗಳನ್ನು ಪಡೆಯುವನೋ ಹಾಗೆಯೇ ನಾವೂ ಕೂಡ ಸೇವೆಯನ್ನು ಮಾಡಬೇಕು.

ಮತ್ತೆ ಆ ವಿದ್ವಾಂಸನು ಹೇಗಿರಬೇಕು ಎಂಬುದನ್ನು ಇಲ್ಲಿ ಹೇಳಿದೆ.

ಯೋ ಅಧ್ವರೇಷು ಶಂತಮ ಋತಾವಾ ಹೋತಾ ತಮೂ ನಮೋಭಿರಾ ಕೃಣುಧ್ವಮ್ ।
ಅಗ್ನಿರ್ಯದ್ ವೇರ್ಮರ್ತಾಯ ದೇವಾನ್ ತ್ಸಚಾ ಬೋಧಾತಿ ಮನಸಾ ಯಜಾತಿ ॥೨॥

ಪದಾರ್ಥ:- ಹೇ ಮನುಷ್ಯರೇ! ನೀವು [ಯಃ] ಯಾವ [ಅಗ್ನಿಃ] ವಿಜ್ಞಾನ ಸ್ವರೂಪವಾದ ಪರಮೇಶ್ವರನು ಅಥವಾ ವಿದ್ವಾಂಸನು [ಅಧ್ವರೇಷು] ಯಾವಾಗಲೂ ಗ್ರಹಣ ಮಾಡಬೇಕಾದ ಯಜ್ಞಗಳಲ್ಲಿ [ಶಂತಮಃ] ಅತ್ಯಂತ ಆನಂದವನ್ನು ಕೊಡುವ ಹಾಗೂ [ಋತಾವಾ] ಶುಭಗುಣಕರ್ಮ ಸ್ವಭಾವಗಳಿಂದ ಸತ್ಯವಾಗಿದೆಯೋ, [ಹೋತಾ] ಎಲ್ಲ ಜಗತ್ತು ಮತ್ತು ವಿಜ್ಞಾನವನ್ನು ಕೊಡುವವನು ಹಾಗೂ [ಯತ್] ಯಾವ [ಮರ್ತಾಯ] ಮನುಷ್ಯನಿಗಾಗಿ [ದೇವಾನ್] ವಿಜ್ಞಾನ ಮತ್ತು ಶ್ರೇಷ್ಠಗುಣಗಳನ್ನು [ಬೋಧಾತಿ] ಉತ್ತಮವಾಗಿ ತಿಳಿದು [ಚ] ಮತ್ತು [ಯಜಾತಿ] ಸಂಗತಗೊಳಿಸುತ್ತಾನೆ. ಅದರಿಂದ [ತಮ್, ಉ] ಆ ಪರಮೇಶ್ವರನು ಅಥವಾ ವಿದ್ವಾಂಸನನ್ನು [ನಮೋಭಿಃ] ನಮಸ್ಕಾರ ಅಥವಾ ಅನ್ನದಿಂದ ಪ್ರಸನ್ನ [ಆ ಕೃಣುಧ್ವಮ್] ಗೊಳಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಪರಮೇಶ್ವರ ಮತ್ತು ಧರ್ಮಾತ್ಮರ ಹೊರತು ಮನುಷ್ಯರಿಗೆ ವಿದ್ಯೆಯನ್ನು ಕೊಡುವ ಯಾವನೇ ಬೇರೆಯವನಿಲ್ಲ. ಹಾಗೂ ಅವರಿಬ್ಬರನ್ನು ಬಿಟ್ಟು ಅನ್ಯರ ಉಪಾಸನೆ ಮತ್ತು ಸತ್ಕಾರವನ್ನೂ ಕೂಡ ಮಾಡಬಾರದು.

ಮತ್ತೆ ಆ ವಿದ್ವಾಂಸನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಸ ಹಿ ಕ್ರತುಃ ಸ ಮರ್ಯಃ ಸ ಸಾಧು-ರ್ಮಿತ್ರೋ ನ ಭೂದದ್ಭುತಸ್ಯ ರಥೀಃ ।
ತಂ ಮೇಧೇಷು ಪ್ರಥಮಂ ದೇವಯಂತೀ-ರ್ವಿಶ ಉಪ ಬ್ರುವತೇ ದಸ್ಮಮಾರೀಃ ॥೩॥

ಪದಾರ್ಥ:- [ದೇವಯಂತೀಃ] ಕಾಮನೆಗಳುಳ್ಳ [ಆರೀಃ] ಜ್ಞಾನವುಳ್ಳ [ವಿಶಃ] ಪ್ರಜೆಗಳು [ಮೇಧೇಷು] ಓದುವ-ಓದಿಸುವ ಮತ್ತು ಸಂಗ್ರಾಮ ಮೊದಲಾದ ಯಜ್ಞಗಳಲ್ಲಿ [ತಮ್] ಆ [ದಸ್ಮಮ್] ದುಃಖನಾಶ ಮಾಡುವವನನ್ನು ಸಭಾಧ್ಯಕ್ಷನೆಂದು ಸ್ವೀಕರಿಸಿ [ಪ್ರಥಮಮ್] ಎಲ್ಲಕ್ಕೂ ಉತ್ತಮನೆಂದು [ಉಪಬ್ರುವತೇ] ಹೇಳುತ್ತಾರೆ. ಏತಕ್ಕೆಂದರೆ ಯಾವುದು [ಮಿತ್ರಃ] ಎಲ್ಲರ ಮಿತ್ರನು [ನ] ಹೇಗೆ [ಭೂತ್] ಆಗುವನೋ [ಸಹಿ] ಅವನೇ ಎಲ್ಲ ರೀತಿಯ [ಕ್ರತುಃ] ಬುದ್ಧಿ ಮತ್ತು ಸುಕರ್ಮಗಳಿಂದ ಕೂಡಿರುವನೋ [ಸಃ] ಅವನೇ [ಮರ್ಯಃ] ಮನುಷ್ಯತ್ವವನ್ನಿಟ್ಟುಕೊಳ್ಳುವವನು ಮತ್ತು [ಸಃ] ಅವನೇ [ಸಾಧುಃ] ಎಲ್ಲರ ಉಪಕಾರ ಮಾಡುವವನು ಹಾಗೂ ಶ್ರೇಷ್ಠ ಮಾರ್ಗದಲ್ಲಿ ನಡೆಯುವ ವಿದ್ವಾಂಸನು [ಅದ್ಭುತಸ್ಯ] ಆಶ್ಚರ್ಯಕರ ಕರ್ಮಗಳಿಂದ ಕೂಡಿರುವ ಸೇನೆಯ [ರಥೀಃ] ಉತ್ತಮ ರಥವುಳ್ಳವನೂ ಆಗಲಿ.

ಭಾವಾರ್ಥ:- ಎಲ್ಲರಿಗಿಂತ ಅಧಿಕ ಗುಣ, ಕರ್ಮ ಮತ್ತು ಸ್ವಭಾವ ಹಾಗೂ ಎಲ್ಲರ ಉಪಕಾರ ಮಾಡುವ ಸಜ್ಜನನಿರುವನೋ ಅವನನ್ನು ಸಭಾಧ್ಯಕ್ಷನ ಅಧಿಕಾರ ಕೊಟ್ಟು ರಾಜನನ್ನಾಗಿ ಸ್ವೀಕರಿಸಿ ಅಂದರೆ ಯಾವನೇ ಒಬ್ಬ ಮನುಷ್ಯನಿಗೆ ಸ್ವತಂತ್ರವಾಗಿ ರಾಜ್ಯದ ಅಧಿಕಾರವನ್ನು ಕೊಡಬಾರದು. ಆದರೆ ಶಿಷ್ಟಪುರುಷರ ಯಾವ ಸಭೆ ಇದೆಯೋ ಅದರ ಅಧೀನದಲ್ಲಿ ರಾಜ್ಯದ ಎಲ್ಲ ಕಾರ್ಯಗಳೂ ನಡೆಯಬೇಕು.

ಪುನಃ ಆ ವಿದ್ವಾಂಸನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಸ ನೋ ನೃಣಾಂ ನೃತಮೋ ರಿಶಾದಾ ಅಗ್ನಿರ್ಗಿರೋಽವಸಾ ವೇತು ಧೀತಿಮ್ ।
ತನಾ ಚ ಯೇ ಮಘವಾನಃ ಶವಿಷ್ಠಾ ವಾಜಪ್ರಸೂತಾ ಇಷಯಂತ ಮನ್ಮ ॥೪॥

ಪದಾರ್ಥ:- [ನಃ] ನಮ್ಮ [ನೃಣಾಮ್] ಮನುಷ್ಯರ ಮಧ್ಯೆ [ನೃತಮಃ] ಅತ್ಯಂತ ಉತ್ತಮ ಮನುಷ್ಯ [ಅಗ್ನಿಃ] ಪಾವಕನಂತೆ ಅಧಿಕ ಜ್ಞಾನ ಪ್ರಕಾಶವುಳ್ಳ [ಅವಸಾ] ರಕ್ಷಣಾದಿಗಳಿಂದ [ಗಿರಃ] ವಾಣಿ ಮತ್ತು [ಧೀತಿಮ್] ಧಾರಣವನ್ನು ಬಯಸುತ್ತಾನೆ. [ಸಃ] ಅವನು ನಮ್ಮ ಮಧ್ಯೆ ಸಭಾಧ್ಯಕ್ಷನ ಅಧಿಕಾರವನ್ನು [ವೇತು] ಪಡೆಯಲಿ.

[ನೃಣಾಮ್] ಮನುಷ್ಯರಲ್ಲಿ [ರಿಶಾದಾಃ] ಶತ್ರುಗಳನ್ನು ನಷ್ಟಗೊಳಿಸುವ [ವಾಜಪ್ರಸೂತಾಃ] ವಿಜ್ಞಾನ ಮೊದಲಾದ ಗುಣಗಳಿಂದ ಶೋಭಾಯಮಾನನು [ಶವಿಷ್ಠಾಃ] ಅತ್ಯಂತ ಬಲಶಾಲಿಯು [ಮಘವಾಸಃ] ಪ್ರಶಂಸಿತ ಧನವುಳ್ಳವನು [ತನಾ] ವಿಸ್ತೃತ ಧನದ ಮತ್ತು [ಮನ್ಮ] ವಿಜ್ಞಾನ [ಚ] ವಿದ್ಯೆ ಮೊದಲಾದ ಉತ್ತಮೋತ್ತಮ ಗುಣಗಳ [ಇಷಯಂತ] ಇಚ್ಛೆ ಮಾಡುತ್ತಾನೆ. ಆದುದರಿಂದ ನಮ್ಮ ಸಭೆಯಲ್ಲಿ ಅವರು ಸಭಾಸದರಾಗಲಿ.

ಭಾವಾರ್ಥ:- ಮನುಷ್ಯರು ಬಯಸಬೇಕಾದುದೇನೆಂದರೆ, ಅತ್ಯುತ್ತಮ ಸಭಾಧ್ಯಕ್ಷನು ಮನುಷ್ಯರ ಸಹಿತ ಸಭೆಯನ್ನು ಮಾಡಿ ರಾಜ್ಯವ್ಯವಹಾರದ ರಕ್ಷಣೆಯಿಂದ ಚಕ್ರವರ್ತೀ ರಾಜ್ಯದ ಶಿಕ್ಷಣವನ್ನು ಕೊಡಬೇಕು. ಇದರ ಹೊರತು ಎಂದಿಗೂ ಸ್ಥಿರರಾಜ್ಯವು ಉಂಟಾಗುವುದಿಲ್ಲ. ಆದುದರಿಂದ ಪೂರ್ವೋಕ್ತ ಕರ್ಮಗಳ ಅನುಷ್ಠಾನ ಮಾಡಿ ಒಬ್ಬನನ್ನು ರಾಜನೆಂದು ಸ್ವೀಕರಿಸಬಾರದು.

ಮತ್ತೆ ಅವನು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಏವಾಗ್ನಿರ್ಗೋತಮೇಭಿರ್ಋತಾವಾ ವಿಪ್ರೇಭಿರಸ್ತೋಷ್ಟ ಜಾತವೇದಾಃ ।

ಸ ಏಷು ದ್ಯುಮ್ನಂ ಪೀಪಯತ್ ಸ ವಾಜಂ ಸ ಪುಷ್ಟಿಂ ಯಾತಿ ಜೋಷಮಾ ಚಿಕಿತ್ವಾನ್ ॥೫॥

ಪದಾರ್ಥ:- [ಗೋತಮೇಭಿಃ] ಅತ್ಯಂತ ಸ್ತುತಿ ಮಾಡುವ [ವಿಪ್ರೇಭಿಃ] ಬುದ್ಧಿವಂತರಲ್ಲಿ ಯಾವ [ಜಾತವೇದಾಃ] ಜ್ಞಾನ ಮತ್ತು ಪ್ರಾಪ್ತವಾಗುವ [ಋತಾವಾ] ಯಾವನಲ್ಲಿ ಸತ್ಯ ಗುಣ, ಕರ್ಮ, ಮತ್ತು ಸ್ವಭಾವಗಳಿವೆಯೋ, [ಅಗ್ನಿಃ] ಅವನು ಈಶ್ವರನ ಸ್ತುತಿ ಮಾಡುತ್ತಾನೆ. ಮತ್ತು [ಅಸ್ತೋಷ್ಟ] ಯಾವನನ್ನು ವಿದ್ವಾಂಸನು ಸ್ತುತಿಸುತ್ತಾನೋ, [ಏವ] ಅವನೇ [ಏಷು] ಈ ಧಾರ್ಮಿಕ ವಿದ್ವಾಂಸರಲ್ಲಿ [ಚಿಕಿತ್ವಾನ್] ಜ್ಞಾನವುಳ್ಳ [ದ್ಯುಮ್ನಮ್] ವಿದ್ಯೆಯ ಪ್ರಕಾಶವನ್ನು ಪಡೆಯುತ್ತಾನೆ. [ಸಃ] ಅವನು [ವಾಜಮ್] ಉತ್ತಮ ಅನ್ನಾದಿ ಪದಾರ್ಥಗಳನ್ನು [ಪೀಪಯತ್] ಪ್ರಾಪ್ತಪಡಿಸುತ್ತಾನೆ. ಮತ್ತು [ಸಃ] ಅವನೇ [ಜೋಷಮ್] ಪ್ರಸನ್ನತೆ ಮತ್ತು [ಪುಷ್ಟಿಮ್] ಧಾತುಗಳ ಸಮತ್ವವನ್ನು [ಆ ಯಾತಿ] ಪಡೆಯುತ್ತಾನೆ.

ಭಾವಾರ್ಥ:- ಶ್ರೇಷ್ಠ ಧರ್ಮಾತ್ಮರಾದ ವಿದ್ವಾಂಸರ ಜೊತೆ ಅವರ ಸಭೆಯಲ್ಲಿ ಇದ್ದು ಅವರಿಂದ ವಿದ್ಯೆ ಮತ್ತು ಶಿಕ್ಷಣವನ್ನು ಪಡೆದು ಸುಖಗಳನ್ನು ಮನುಷ್ಯರು ಪಡೆಯಬೇಕು.

ಈ ಸೂಕ್ತದಲ್ಲಿ ಈಶ್ವರ, ವಿದ್ವಾಂಸ ಮತ್ತು ಅಗ್ನಿಯ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತದ ಅರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಪ್ಪತ್ತೇಳನೆಯ ಸೂಕ್ತ ಸಮಾಪ್ತ

ಸೂಕ್ತ ೭೮

ಮಂತ್ರಸಂಖ್ಯೆ ೫ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಅಗ್ನಿಃ । ಛಂದಃ - ಗಾಯತ್ರೀ । ಸ್ವರಃ - ಷಡ್ಜಃ.

ಮೊದಲ ಮಂತ್ರದಲ್ಲಿ ಅದೇ ವಿದ್ವಾಂಸನ ಗುಣಗಳ ಉಪದೇಶ ಮಾಡಿದೆ.

ಅಭಿ ತ್ವಾ ಗೋತಮಾ ಗಿರಾ ಜಾತವೇದೋ ವಿಚರ್ಷಣೇ ।

ದ್ಯುಮ್ನೈರಭಿ ಪ್ರ ಣೋ- ನುಮಃ ॥೧॥

ಪದಾರ್ಥ:- ಹೇ [ಜಾತವೇದಃ] ಪದಾರ್ಥಗಳನ್ನು ತಿಳಿಯುವವನೇ! [ವಿಚರ್ಷಣೇ] ಎಲ್ಲರಿಗೂ ಮೊದಲು ನೋಡಲು ಯೋಗ್ಯವಾದ ಪರಮೇಶ್ವರನು ಯಾವ ನಿನ್ನಂತೆ [ಗೋತಮಾಃ] ಅತ್ಯಂತ ಸ್ತುತಿಮಾಡುವ [ದ್ಯುಮ್ನೈಃ] ಧನ ಮತ್ತು ವಿಜ್ಞಾನ ಮೊದಲಾದ ಗುಣಗಳು ಹಾಗೂ [ಗಿರಾ] ಉತ್ತಮ ವಾಣಿಯ ಜೊತೆಗೆ [ಅಭಿ] ನಾಲ್ಕೂ

ಕಡೆಗಳಿಂದ ಸ್ತುತಿ ಮಾಡುತ್ತಾರೆ ಮತ್ತು ಹೇಗೆ ನಾವು [ಅಭಿಪ್ರಣೋ ನುಮಃ] ಅತ್ಯಂತ ನಮ್ರರಾಗಿ [ತ್ವಾ] ತಮ್ಮ ಪ್ರಶಂಸೆ ಮಾಡುತ್ತೇವೋ ಹಾಗೆ ಎಲ್ಲ ಮನುಷ್ಯರೂ ಮಾಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಎಲ್ಲ ಮಾನವರೂ ಪರಮೇಶ್ವರನ ಉಪಾಸನೆ ಮತ್ತು ವಿದ್ವಾಂಸರ ಸಾಂಗತ್ಯ ಮಾಡಿ ವಿದ್ಯೆಯ ವಿಚಾರ ಮಾಡಬೇಕು.

ಮತ್ತೆ ಆ ವಿದ್ವಾಂಸನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಲಾಗಿದೆ.

ತಮು ತ್ವಾ ಗೋತಮೋ ಗಿರಾ ರಾಯಸ್ಕಾಮೋ ದುವಸ್ಯತಿ ।

ದ್ಯುಮ್ನೈರಭಿ ಪ್ರ ಣೋ- ನುಮಃ ॥೨॥

ಪದಾರ್ಥ:- ಹೇ ಧನಪತೇ! [ರಾಯಸ್ಕಾಮಃ] ಧನದ ಇಚ್ಛೆ ಮಾಡುವ [ಗೋತಮಃ] ವಿದ್ವಾಂಸನು [ಗಿರಾ] ವಾಣಿಯಿಂದ [ತ್ವಾ] ನಿನ್ನ [ದುವಸ್ಯತಿ] ಸೇವೆ ಮಾಡುತ್ತಾನೆ. ಹಾಗೆ [ತಮ್, ಉ] ಆ ನಿನ್ನ [ದ್ಯುಮ್ನೈಃ] ಶ್ರೇಷ್ಠಕೀರ್ತಿಯಿಂದ ಕೂಡಿರುವ ನಾವು [ಅಭಿ] ಎಲ್ಲಾ ಕಡೆಗಳಿಂದ [ಪ್ರಣೋನುಮಃ] ಅತಿ ಪ್ರಶಂಸೆ ಮಾಡುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಎಂತಹ ವಿಚಾರವನ್ನು ಸದಾ ತಮ್ಮ ಮನದಲ್ಲಿ ಇಟ್ಟುಕೊಳ್ಳಬೇಕೆಂದರೆ, ಪರಮೇಶ್ವರನ ಉಪಾಸನೆ ಮತ್ತು ವಿದ್ವಾಂಸರ ಸಂಗದ ಹೊರತು ನಮ್ಮ ಧನದ ಕಾಮನೆಗಳು ಎಂದಿಗೂ ಪೂರ್ಣವಾಗುವುದಿಲ್ಲ.

ಮತ್ತೆ ಅದೇ ವಿಷಯವನ್ನು ತಿಳಿಸಲಾಗಿದೆ.

ತಮು ತ್ವಾ ವಾಜಸಾತಮ-ಮಂಗಿರಸ್ವದ್ಧವಾಮಹೇ । ದ್ಯುಮ್ನೈರಭಿ ಪ್ರ ಣೋನುಮಃ ॥೩॥

ಪದಾರ್ಥ:- ಹೇ ವಿದ್ವಾಂಸನೇ! [ದ್ಯುಮ್ನೈಃ] ಪುಣ್ಯರೂಪೀ ಕೀರ್ತಿಯೊಡನೆ ಯಾವ [ವಾಜಸಾತಮಮ್] ಅತಿ ಪ್ರಶಂಸಿತ ಬೋಧನೆಗಳಿಂದ ವಿದ್ವಾಂಸನ ಮತ್ತು [ತ್ವಾ] ನಿನ್ನನ್ನು ನಾವು [ಹವಾಮಹೇ] ಸ್ತುತಿ ಮಾಡುತ್ತೇವೆ. [ಉ] ಉತ್ತಮವಾಗಿ [ಅಂಗಿರಸ್ವತ್] ಪ್ರಶಂಸಿತ ಪ್ರಾಣದಂತೆ [ಅಭಿ] ಎಲ್ಲ ಕಡೆಗಳಿಂದ [ಪ್ರಣೋನುಮಃ] ಸತ್ಕಾರ ಮಾಡುತ್ತೇವೆ. ಆದುದರಿಂದ ನೀನು [ತಮ್] ಅವನ ಸ್ತುತಿ ಮತ್ತು ಪ್ರಣಾಮವನ್ನು ಮಾಡು.

ಭಾವಾರ್ಥ:- ಹೇ ಮನುಷ್ಯರೇ! ನೀವು ವಿದ್ವಾಂಸರನ್ನು ಉಕ್ತ ಪ್ರಕಾರದ ಸತ್ಕಾರದಿಂದ ಸಂತುಷ್ಟಗೊಳಿಸಿ, ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವನ್ನು ಸಿದ್ಧಪಡಿಸಿರಿ.

ಮತ್ತೆ ಅದೇ ವಿಷಯ.

ತಮು ತ್ವಾ ವೃತ್ರಹಂತಮಂ ಯೋ ದಸ್ಯೂँರವಧೂನುಷೇ ।

ದ್ಯುಮ್ನೈರಭಿ ಪ್ರ ಣೋ-ನುಮಃ ॥೪॥

ಪದಾರ್ಥ:- ಹೇ ವಿದ್ವನ್! [ಯಃ] ಯಾವ [ತ್ವಮ್] ನೀನು [ದಸ್ಯೂನ್] ಮಹಾದುಷ್ಟರು ದರೋಡೆಕಾರರನ್ನು [ಅವಧೂನುಷೇ] ಜಗ್ಗಿಸಿ ನಾಶಗೊಳಿಸುತ್ತೀಯೆ. [ತಮ್] ಆ [ವೃತ್ರಹಂತಮಮ್] ಮೇಘವನ್ನು ವರ್ಷಿಸುವಂತಹ

ಸೂರ್ಯನಂತೆ [ತ್ವಾ] ನಿನ್ನ [ದ್ಯುಮ್ನೈಃ] ಕೀರ್ತಿಕಾರೀ ಶಸ್ತ್ರಗಳಿಂದ ನಾವು [ಅಭಿ] ಎದುರಾಗಿ [ಪ್ರಣೋನುಮಃ] ಎಲ್ಲ ರೀತಿ ಸ್ತುತಿ ಮಾಡುತ್ತೇವೆ.

ಭಾವಾರ್ಥ:- ಹೇ ಮನುಷ್ಯರೇ! ನೀವು ಯಾವನಿಗೆ ಯಾವನೇ ಶತ್ರು ಇಲ್ಲವೋ ಅಂತಹ ವಿದ್ವಾಂಸ, ಸಭಾಧ್ಯಕ್ಷನು ದುಷ್ಟಶತ್ರುಗಳನ್ನು ಸೋಲಿಸಬಲ್ಲನು. ಅವನ ಸೇವೆಯನ್ನು ಸದಾ ಮಾಡಿರಿ.

ಮತ್ತೆ ಆ ವಿದ್ವಾಂಸನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಅವೋಚಾಮ ರಹೂಗಣಾ ಅಗ್ನಯೇ ಮಧುಮದ್ ವಚಃ ।
ದ್ಯುಮ್ನೈರಭಿ ಪ್ರ ಣೋ-ನುಮಃ ॥೫॥

ಪದಾರ್ಥ:- ಹೇ ವಿದ್ವಾಂಸರೇ! [ರಹೂಗಣಾಃ] ಧರ್ಮಯುಕ್ತನು ಪಾಪಿಗಳ ಗುಂಪನ್ನು ವರ್ಜಿಸುವ ತಮ್ಮಂತಹ [ದ್ಯುಮ್ನೈಃ] ಉತ್ತಮ ಕೀರ್ತಿ ಪಡೆದಿರುವ [ಅಗ್ನಯೇ] ವಿದ್ವಾಂಸರಿಗಾಗಿ [ಮಧುಮತ್] ಮಧುರ [ವಚಃ] ಮಾತುಗಳನ್ನಾಡುವನೋ, ಹಾಗೆ ನಾವು ಕೂಡ [ಅವೋಚಾಮ] ಮಾತನಾಡೋಣ. ಹೇಗೆ ನಾವು ಅವನನ್ನು [ಅಭಿ ಪ್ರಣೋನುಮಃ] ನಮಸ್ಕಾರಾದಿಗಳಿಂದ ಪ್ರಸನ್ನ ಪಡಿಸುತ್ತೇವೋ, ಹಾಗೆಯೇ ನೀವು ಕೂಡ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಅತ್ಯಾವಶ್ಯಕವಾದುದೇನೆಂದರೆ, ಧರ್ಮಾತ್ಮರೂ ಕೀರ್ತಿಯುಳ್ಳವರಾದ ಮನುಷ್ಯರನ್ನೇ ಪ್ರಶಂಸಿಸಬೇಕು, ಅನ್ಯರನ್ನಲ್ಲ.

ಈ ಸೂಕ್ತದಲ್ಲಿ ಈಶ್ವರ ಮತ್ತು ವಿದ್ವಾಂಸರ ಗುಣಗಳ ಕಥನವಿರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಪ್ಪತ್ತೆಂಟನೆಯ ಸೂಕ್ತ ಸಮಾಪ್ತ

ಸೂಕ್ತ ೭೯

ಮಂತ್ರಸಂಖ್ಯೆ ೧೨ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಅಗ್ನಿಃ ೧-೩ ಅಗ್ನಿಃ ಮಧ್ಯಮೋಽಗ್ನಿರ್ವಾ
ಛಂದಃ - ಗಾಯತ್ರೀ ೧-೩ ತ್ರಿಷ್ಟುಪ್ , ೪-೬ ಉಷ್ಣಿಕ್ । ಸ್ವರಃ - ೧-೩ ಧೈವತಃ, ೪-೬ ಋಷಭಃ, ೭-೧೨ ಷಡ್ಜಃ.

ಮತ್ತೆ ಆ ವಿದ್ವಾಂಸನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಹಿರಣ್ಯಕೇಶೋ ರಜಸೋ ವಿಸಾರೇಽಹಿರ್ಧುನಿರ್ವಾತ ಇವ ಧ್ರಜೀಮಾನ್ ।
ಶುಚಿಭ್ರಾಜಾ ಉಷಸೋ ನವೇದಾ ಯಶಸ್ವತೀರಪಸ್ಯುವೋ ನ ಸತ್ಯಾಃ ॥೧॥

ಪದಾರ್ಥ:- ಹೇ ಬ್ರಹ್ಮಚಾರಿಣಿಯರಾದ ಕನ್ಯೆಯರೇ! [ರಜಸಃ] ಐಶ್ವರ್ಯದ [ವಿಸಾರೇ] ಸ್ಥಿರತೆಯಲ್ಲಿ [ಹಿರಣ್ಯಕೇಶಃ] ಹಿರಣ್ಯದ ನಾಣ್ಯದಂತೆ ಅಥವಾ ಪ್ರಕಾಶದಂತಿರುವ ನ್ಯಾಯದ ಪ್ರಚಾರ ಮಾಡುವ [ಧುನಿಃ] ಶತ್ರುಗಳನ್ನು ಕಂಪಿಸುವಂತೆ ಮಾಡುವವನು [ಅಹಿಃ] ಮೇಘದಂತೆ [ಧ್ರಜೀಮಾನ್] ಶೀಘ್ರ ಚಲಿಸುವ [ವಾತಾ ಇವ] ವಾಯುವಿನಂತೆ [ಉಷಸಃ] ಉಷಃಕಾಲದಂತೆ [ಶುಚಿಭ್ರಾಜಾಃ] ಪವಿತ್ರ ವಿದ್ಯಾ ವಿಜ್ಞಾನದಿಂದ ಕೂಡಿದ [ನವೇದಾಃ] ಅವಿದ್ಯೆಯ ನಿಷೇಧ ಮಾಡುವ ವಿದ್ಯೆಯಿಂದಿರುವ [ಯಶಸ್ವತೀಃ] ಉತ್ತಮ ಕೀರ್ತಿವಂತಳು [ಅಪಸ್ಯುವಃ ನ] ಪ್ರಶಸ್ತ ಕರ್ಮ ಮಾಡುವವಳಂತೆ ನೀವು [ಸತ್ಯಾಃ] ಸತ್ಯಗುಣ, ಕರ್ಮ, ಸ್ವಭಾವವುಳ್ಳವರಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವ ಕನ್ಯೆಯರು ೨೪ ವರ್ಷಕಾಲ ಬ್ರಹ್ಮಚರ್ಯ ಪಾಲನೆಮಾಡಿ, ಜಿತೇಂದ್ರಿಯರಾಗಿ, ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದಸ್ಸು, ಕಲ್ಪ, ಜ್ಯೋತಿಷ ಈ ಷಡಂಗಗಳ ಸಹಿತ ಉಪಾಂಗಗಳಾದ ಮೀಮಾಂಸಾ, ವೈಶೇಷಿಕ, ನ್ಯಾಯ, ಯೋಗ, ಸಾಂಖ್ಯ ಮತ್ತು ವೇದಾಂತ ಹಾಗೂ ಆಯುರ್ವೇದ ಅಂದರೆ ವೈದ್ಯಶಾಸ್ತ್ರ ಮೊದಲಾದವುಗಳನ್ನು ಓದುತ್ತಾರೋ, ಅವರೇ ಎಲ್ಲ ಮನುಷ್ಯರಿಗೆ ಶೋಭೆಯನ್ನು ತರುವವರಾಗುತ್ತಾರೆ.

ಮತ್ತೆ ಆ ವಿದ್ವಾಂಸನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಆ ತೇ ಸುಪರ್ಣಾ ಅಮಿನಂತ ಏವೈಃ ಕೃಷ್ಣೋ ನೋನಾವ ವೃಷಭೋ ಯದೀದಮ್ ।
ಶಿವಾಭಿರ್ನ ಸ್ಮಯಮಾನಾಭಿರಾಗಾತ್ ಪತಂತಿ ಮಿಹಃ ಸ್ತನಯಂತ್ಯಭ್ರಾ ॥೨॥

ಪದಾರ್ಥ:- ಹೇ ವಿದ್ವಾನ್! ತಮ್ಮಂತೆ [ಸುಪರ್ಣಾಃ] ಕಿರಣಗಳು [ಆಅಮಿವಂತ] ಎಲ್ಲ ಕಡೆಗಳಿಂದ ವರ್ಷಿಸಲು ಪ್ರೇರಣೆ ಮಾಡುತ್ತವೆ. [ಏವೈಃ] ಪ್ರಾಪ್ತ ಪಡಿಸುವ ಗುಣಗಳಿಂದ ಕೂಡಿದ [ಕೃಷ್ಣಃ] ಆಕರ್ಷಣೆ ಮಾಡುತ್ತಾ [ವೃಷಭಃ] ವರ್ಷಿಸುವ ಸೂರ್ಯನು [ಇದಮ್] ಜಲವನ್ನು ವರ್ಷಿಸುತ್ತಾನೆಯೋ, ಹಾಗೆ ವಿದ್ಯೆಯ [ನೋನಾವ] ಪ್ರಶಂಸಿತ ವೃಷ್ಟಿಯನ್ನು ಸುರಿಸಲಿ ಹಾಗೂ [ಸ್ಮಯಮಾನಾಭಿಃ] ಸದಾ ಪ್ರಸನ್ನವದನನೂ [ಶಿವಾಭಿಃ] ಶುಭಗುಣ ಕರ್ಮಯುಕ್ತ ಕನ್ಯೆಯರೊಡನೆ, ಅವರಿಗೆ ಸಮಾನರಾದ ಬ್ರಹ್ಮಚಾರಿಗಳೊಡನೆ ವಿವಾಹವಾಗಿ [ನ] ಸಮಾನ ಸುಖವನ್ನು [ಯದಿ] ಯಾವನು [ಅಗಾತ್] ಪಡೆದು ಮತ್ತು ಹೇಗೆ [ಅಭ್ರಾ] ಮೇಘವು [ಸ್ತನಯಂತಿ] ಗರ್ಜಿಸುತ್ತದೋ ಹಾಗೂ [ಮಿಹಃ] ಮಳೆಯನ್ನು [ಅಪತಂತಿ] ಸುರಿಸುತ್ತದೋ ಹಾಗೆ ವಿದ್ಯೆಯನ್ನು ವರ್ಷಿಸಲಿ. ಆಗ [ತೇ] ನಿನಗೆ ಯಾವುದು ತಾನೆ ದೊರೆಯುವುದಿಲ್ಲ, ಅಂದರೆ ಎಲ್ಲ ಸುಖಗಳೂ ಪ್ರಾಪ್ತವಾಗುತ್ತವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರ ಮತ್ತು ಉಪಮಾಲಂಕಾರವಿದೆ. ಯಾವ ಪುರುಷನು ವಿದ್ವಾನ್ ಬ್ರಹ್ಮಚಾರಿಯೂ ಮತ್ತು ಸ್ತ್ರೀಯಾದವಳು ವಿದುಷೀ ಬ್ರಹ್ಮಚಾರಿಣಿಯು ಆಗುತ್ತಾರೋ, ಅವರು ಪೂರ್ಣಸುಖವನ್ನು ಏತಕ್ಕೆ ಪಡೆಯುವುದಿಲ್ಲ?

ಮತ್ತೆ ಅವನು ಹೇಗಿರಬೇಕು ಎಂಬುದನ್ನು ಇಲ್ಲಿ ತಿಳಿಸಿದೆ.

ಯದೀಮೃತಸ್ಯ ಪಯಸಾ ಪಿಯಾನೋ ನಯನ್ನೃತಸ್ಯ ಪಥಿಭೀ ರಜಿಷ್ಠೈಃ ।
ಅರ್ಯಮಾ ಮಿತ್ರೋ ವರುಣಃ ಪರಿಜ್ಮಾ ತ್ವಚಂ ಪೃಂಚಂತ್ಯುಪರಸ್ಯ ಯೋನೌ ॥೩॥

ಪದಾರ್ಥ:- [ಯತ್] ಯಾವಾಗ [ಋತಸ್ಯ] ಉದಕದ [ಪಯಸಾ] ರಸವನ್ನು [ಪಿಯಾನಃ] ಕುಡಿಯುವವನು [ರಜಿಷ್ಠೈಃ] ಅತ್ಯಂತ ಧೂಳಿನಿಂದ ಕೂಡಿದ [ಪಥಿಭಿಃ] ಮಾರ್ಗಗಳಿಂದ [ಉಪರಸ್ಯ] ಮೇಘದ [ಯೋನೌ] ಕಾರಣರೂಪ ಮಂಡಲದಲ್ಲಿ [ಈಮ್] ಜಲವನ್ನು [ನಯನ್] ಪ್ರಾಪ್ತ ಪಡಿಸುತ್ತಾ [ಅರ್ಯಮಾ] ನಿಯಂತ್ರವಾದ ಸೂರ್ಯನು, [ಮಿತ್ರಃ] ಪ್ರಾಣವು, [ವರುಣಃ] ಉದಾನ ಮತ್ತು [ಪರಿಜ್ಮಾ] ಎಲ್ಲ ಕಡೆಗಳಿಂದ ಸಂಬಂಧ ಮಾಡುತ್ತಾನೋ, ಆಗ ಎಲ್ಲರ ಜೀವನ ಸಂಭವವಾಗುತ್ತದೆ.

ಭಾವಾರ್ಥ:- ಯಾವಾಗ ಕಾರ್ಯ ಮತ್ತು ಕಾರಣದಲ್ಲಿರುವ ಪ್ರಾಣ ಮತ್ತು ಜಲಾದಿ ಪದಾರ್ಥಗಳೊಡನೆ ಜೀವ ಸಂಬಂಧವನ್ನು ಪಡೆಯುತ್ತವೋ, ಆಗ ಶರೀರದ ಧಾರಣ ಮಾಡಲು ಸಮರ್ಥವಾಗುತ್ತವೆ.

ಮತ್ತೆ ಅವನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಅಗ್ನೇ ವಾಜಸ್ಯ ಗೋಮತ ಈಶಾನಃ ಸಹಸೋ ಯಹೋ ।
ಅಸ್ಮೇ ಧೇಹಿ ಜಾತವೇದೋ ಮಹಿಃ ಶ್ರವಃ ॥೪॥

ಪದಾರ್ಥಃ- ಹೇ [ಜಾತವೇದಃ] ಪಡೆದ ವಿಜ್ಞಾನವು [ಅಗ್ನೇ] ವಿದ್ಯುತ್ತಿನಂತೆ ವಿದ್ಯಾಪ್ರಕಾಶದಿಂದಿರುವ ವಿದ್ವಾಂಸನೇ! [ಸಹಸಃ] ಬಲಶಾಲಿಯ [ಯಹೋ] ಪುತ್ರನು [ಗೋತಮಃ] ಧನದಿಂದ ಕೂಡಿ [ವಾಜಸ್ಯ] ಅನ್ನದ [ಈಶಾನಃ] ಸ್ವಾಮಿಯಾದ ನಿನ್ನನ್ನು [ಅಸ್ಮೇ] ನಮ್ಮಲ್ಲಿ [ಮಹಿ] ಮಹತ್ತಾದ [ಶ್ರವಃ] ವಿದ್ಯಾಶ್ರವಣವನ್ನು [ಧೇಹಿ] ಧಾರಣ ಮಾಡಿಸು.

ಭಾವಾರ್ಥಃ- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವನು ವಿದ್ವಾಂಸರಾದ ತಾಯಿ ಮತ್ತು ತಂದೆಯ ಸಂತಾನವಾಗಿ ಮಾತಾ, ಪಿತಾ, ಆಚಾರ್ಯರಿಂದ ವಿದ್ಯೆಯ ಶಿಕ್ಷಣವನ್ನು ಪಡೆದು ಬಹಳ ಅನ್ನಾದಿ ಐಶ್ವರ್ಯ ಮತ್ತು ವಿದ್ಯೆಯನ್ನು ಪಡೆಯುವನೋ, ಅವನೇ ಅನ್ಯ ಪುರುಷರಲ್ಲಿಯೂ ಕೂಡ ಇವೆಲ್ಲವನ್ನೂ ಹೆಚ್ಚಿಸಬೇಕು.

ಮತ್ತೆ ಅವನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಸ ಇಧಾನೋ ವಸುಷ್ಕವಿ-ರಗ್ನಿರೀಳೇನ್ಯೋ ಗಿರಾ । ರೇವದಸ್ಮಭ್ಯಂ ಪುರ್ವಣೀಕ ದೀದಿಹಿ ॥೫॥

ಪದಾರ್ಥಃ- [ಪುರ್ವಣೀಕ] ಬಹಳ ಸೈನ್ಯದಿಂದ ಕೂಡಿರುವವನೇ! ನೀನು ಹೇಗೆ ಇಂಧನದಿಂದ [ಅಗ್ನಿಃ] ಅಗ್ನಿಯ ಪ್ರಕಾಶಮಾನವಾಗುತ್ತದೋ ಹಾಗೆ [ಇಂಧಾನಃ] ಪ್ರಕಾಶಮಾನವಾದ [ಗಿರಾ] ವಾಣಿಯಿಂದ [ಈಳೇನ್ಯಃ] ಸ್ತುತಿಸಲು ಯೋಗ್ಯವಾದ [ವಸುಃ] ಸುಖವನ್ನು ವರ್ಷಿಸುವ ಮತ್ತು [ಕವಿಃ] ಸರ್ವಶಾಸ್ತ್ರವೇತ್ತನು ಆಗುತ್ತೀಯೆ. [ಸಃ] ಆ ನೀನು [ಅಸ್ಮಭ್ಯಮ್] ನಮಗಾಗಿ [ರೇವತ್] ಬಹಳ ಧನಕೊಡುವ ಎಲ್ಲ ವಿದ್ಯೆಗಳ ಶ್ರವಣವನ್ನು [ದೀದಿಹಿ] ಪ್ರಕಾಶಪಡಿಸು.

ಭಾವಾರ್ಥಃ- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪೂರ್ವಮಂತ್ರದಿಂದ [ಶ್ರವಃ] ಪದದ ಅನುವೃತ್ತಿಯು ಬಂದಿದೆ. ಹೇಗೆ ವಿದ್ಯುತ್ತು ಪ್ರಸಿದ್ಧವಾದ ಸೂರ್ಯನ, ಅಗ್ನಿಯ ಎಲ್ಲ ಮೂರ್ತರೂಪಗಳನ್ನು ಪ್ರಕಾಶಪಡಿಸುತ್ತದೋ, ಹಾಗೆ ಸರ್ವವಿದ್ಯೆಯಿಂದ ಕೂಡಿದ ಸತ್ಪುರುಷರು ಎಲ್ಲ ವಿದ್ಯೆಗಳ ಪ್ರಕಾಶ ಮಾಡುತ್ತಾರೆ.

ಮತ್ತೆ ಅವನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಕ್ಷಪೋ ರಾಜನ್ನುತ ತ್ಮನಾ-ಗ್ನೇ ವಸ್ತೋರುತೋಷಸಃ । ಸ ತಿಗ್ಮಜಂಭ ರಕ್ಷಸೋ ದಹ ಪ್ರತಿ ॥೬॥

ಪದಾರ್ಥಃ- ಹೇ [ತಿಗ್ಮಜಂಭ] ತೀವ್ರವಾಗಿ ಮಾತನಾಡುವ [ಅಗ್ನೇ] ವಿದ್ವಾಂಸನೇ! [ರಾಜನ್] ನ್ಯಾಯವಿನಯಗಳಿಂದ ಪ್ರಕಾಶಿತನಾದ ರಾಜನೇ! [ತ್ಮನಾ] ತನ್ನ ಆತ್ಮದಿಂದ ಹೇಗೆ ಸೂರ್ಯನು [ಕ್ಷಪಃ] ರಾತ್ರಿಯನ್ನು ನಿವಾರಿಸಿ [ಸಃ] ಅವನು [ವಸ್ತೋಃ] ದಿನ [ಉತ] ಮತ್ತು [ಉಷಸಃ] ಪ್ರಭಾತಗಳನ್ನು ವಿದ್ಯಮಾನ ಮಾಡುತ್ತಾನೋ, ಹಾಗೆ ಧಾರ್ಮಿಕ ಸಜ್ಜನರಲ್ಲಿ ವಿದ್ಯೆ ಮತ್ತು ವಿನಯಗಳನ್ನು ಪ್ರಕಾಶಪಡಿಸಿ [ಉತ] ಮತ್ತು [ರಕ್ಷಸಃ] ದುಷ್ಟಾಚರಣೆಯುಳ್ಳವರನ್ನು [ಪ್ರತಿದಹ] ಪ್ರತ್ಯಕ್ಷವಾಗಿ ದಹಿಸು.

ಭಾವಾರ್ಥಃ- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನು ಹತ್ತಿರದಲ್ಲಿರುವ ಜಗತ್ತನ್ನು ಪ್ರಕಾಶಪಡಿಸಿ ವೃಷ್ಟಿಮಾಡಿ ಎಲ್ಲ ಜಗತ್ತಿನ ರಕ್ಷಣೆ ಮತ್ತು ಅಂಧಕಾರವನ್ನು ನಿವಾರಣೆ ಮಾಡುತ್ತಾನೋ, ಹಾಗೆ ಸಜ್ಜನ ರಾಜಪುರುಷರು ಧಾರ್ಮಿಕರ ರಕ್ಷಣೆ ಮಾಡಿ ದುಷ್ಟರನ್ನು ದಂಡಿಸಿ ರಾಜ್ಯದ ರಕ್ಷಣೆ ಮಾಡಲಿ.

ಮತ್ತೆ ಆ ಸಭಾಧ್ಯಕ್ಷನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಅವಾ ನೋ ಅಗ್ನ ಊತಿಭಿ-ರ್ಗಾಯತ್ರಸ್ಯ ಪ್ರಭರ್ಮಣಿ । ವಿಶ್ವಾಸು ಧೀಷು ವಂದ್ಯ ॥೭॥

ಪದಾರ್ಥಃ- ಹೇ [ವಂದ್ಯ] ಅಭಿವಾದನೆ ಮತ್ತು ಪ್ರಶಂಸೆಗೆ ಯೋಗ್ಯನೇ! [ಅಗ್ನೇ] ವಿಜ್ಞಾನ ಸ್ವರೂಪ ಸಭಾಧ್ಯಕ್ಷನೇ! ನೀನು [ಊತಿಭಿಃ] ರಕ್ಷಣಾದಿಗಳಿಂದ [ಗಾಯತ್ರಸ್ಯ] ಗಾಯತ್ರಿಯ ಪ್ರಗಾಥನು ಅಥವಾ ಆನಂದಕಾರಕ ವ್ಯವಹಾರಗಳ [ಪ್ರಭರ್ಮಣಿ] ಯಾವುದರಲ್ಲಿ ಉತ್ತಮವಾಗಿ ರಾಜ್ಯಾದಿಗಳ ಧಾರಣವಿದೆಯೋ ಅದು ಹಾಗೂ [ವಿಶ್ವಾಸು] ಎಲ್ಲರ [ಪ್ರಜ್ಞಾಸು] ಬುದ್ಧಿಗಳಿಂದ [ನಃ] ನಮ್ಮನ್ನು [ಅವ] ರಕ್ಷಿಸು.

ಭಾವಾರ್ಥಃ- ಎಲ್ಲ ಮನುಷ್ಯರೂ ಬಯಸಬೇಕುದೇನೆಂದರೆ, ಯಾವ ಸಭಾಧ್ಯಕ್ಷನಾದ ವಿದ್ವಾಂಸನು ನಮ್ಮ ಬುದ್ಧಿಗಳನ್ನು ಶುದ್ಧಗೊಳಿಸುತ್ತಾನೋ ಅವನ ಸತ್ಕಾರ ಮಾಡಬೇಕು.

ಮತ್ತೆ ಆ ಸಭಾಧ್ಯಕ್ಷನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಆ ನೋ ಅಗ್ನೇ ರಯಿಂ ಭರ ಸತ್ರಾಸಾಹಂ ವರೇಣ್ಯಮ್ । ವಿಶ್ವಾಸು ಪೃತ್ಸು ದುಷ್ಟರಮ್ ॥೮॥

ಪದಾರ್ಥಃ- ಹೇ [ಅಗ್ನೇ] ದಾನಕೊಡುವ ಅಥವಾ ಕೊಡಿಸುವ ಸಭಾಧ್ಯಕ್ಷನಾದ ನೀನು [ನಃ] ನಮಗಾಗಿ [ವಿಶ್ವಾಸು] ಎಲ್ಲ [ಪೃತ್ಸು] ಸೇನೆಗಳಲ್ಲಿ [**ಸತ್ರಾಸಾಹಮ್**] ಸತ್ಯವನ್ನು ಉದ್ಧರಿಸುವ ಆ [**ವರೇಣ್ಯಮ್**] ಉತ್ತಮ ಗುಣ ಮತ್ತು ಸ್ವಭಾವದಿಂದ [**ದುಷ್ಟರಮ್**] ಶತ್ರುಗಳ ದುಃಖದಿಂದ ಪಾರಾಗಲು ಯೋಗ್ಯವಾದ [**ರಯಿಮ್**] ಉತ್ತಮ ದ್ರವ್ಯಾದಿಗಳನ್ನು [ಆಭರ] ಉತ್ತಮವಾಗಿ ಧಾರಣಮಾಡಿಸು.

ಭಾವಾರ್ಥಃ- ಸಭಾಧ್ಯಕ್ಷ ಮೊದಲಾದವರ ಆಶ್ರಯ ಮತ್ತು ಅಗ್ನ್ಯಾದಿ ಪದಾರ್ಥಗಳ ವಿಜ್ಞಾನದ ಹೊರತು ಸಂಪೂರ್ಣ ಸುಖವು ಮನುಷ್ಯರಿಗೆ ಎಂದಿಗೂ ಪ್ರಾಪ್ತಿಯಾಗುವುದಿಲ್ಲ.

ಮತ್ತೆ ಅವನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಆ ನೋ ಅಗ್ನೇ ಸುಚೇತುನಾ ರಯಿಂ ವಿಶ್ವಾಯುಪೋಷಸಮ್ ।
ಮಾರ್ಡೀಕಂ ಧೇಹಿ ಜೀವಸೇ ॥೯॥

ಪದಾರ್ಥಃ- ಹೇ [ಅಗ್ನೇ] ವಿಜ್ಞಾನ ಮತ್ತು ಸುಖವನ್ನು ಕೊಡುವ ವಿದ್ವಾಂಸನೇ! ನೀನು [ನಃ] ನಮ್ಮ [ಜೀವಸೇ] ಜೀವನಕ್ಕಾಗಿ [ಸುಚೇತುನಾ] ಉತ್ತಮ ವಿಜ್ಞಾನದಿಂದ ಕೂಡಿದ [ವಿಶ್ವಾಯು ಪೋಷಸಮ್] ಸಂಪೂರ್ಣ ಅವಸ್ಥೆಯಲ್ಲಿ ಪುಷ್ಟಿ ಮಾಡಲು [ಮರ್ಡೀಕಮ್] ಸುಖಗಳನ್ನು ಸಿದ್ಧಪಡಿಸುವ [ರಯಿಮ್] ಧನವನ್ನು [ಆಧೇಹಿ] ಎಲ್ಲ ಪ್ರಕಾರ ಧಾರಣ ಮಾಡಿಸು.

ಭಾವಾರ್ಥಃ- ಮನುಷ್ಯರನ್ನು ಉತ್ತಮವಾಗಿ ಸೇವಿಸಿದ ವಿದ್ವಾಂಸನು ವಿಜ್ಞಾನ ಮತ್ತು ಧನವನ್ನು ಕೊಟ್ಟು ಪೂರ್ಣಾಯುವನ್ನು ಭೋಗಿಸಲು ವಿದ್ಯೆ ಮತ್ತು ಧನವನ್ನು ಕೊಡುತ್ತಾನೆ.

ಮತ್ತೆ ವಿದ್ವಾಂಸನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಪ್ರ ಪೂತಾಸ್ತಿಗ್ಮಶೋಚಿಷೇ ವಾಚೋ ಗೋತಮಾಗ್ನಯೇ । ಭರಸ್ವ ಸುಮ್ನಯುರ್ಗಿರಃ॥೧೦॥

ಪದಾರ್ಥ:- ಹೇ [ಗೋತಮ] ಅತ್ಯಂತ ಸ್ತುತಿ ಮತ್ತು [ಸುಮ್ನಯುಃ] ಸುಖದ ಇಚ್ಛೆ ಮಾಡುವ ವಿದ್ವಾಂಸನೇ! ನೀನು [ತಿಗ್ಮಶೋಚಿಷೇ] ತೀಕ್ಷ್ಣ ಬುದ್ಧಿಯ ಪ್ರಕಾಶವುಳ್ಳ [ಅಗ್ನಯೇ] ವಿಜ್ಞಾನರೂಪ ಮತ್ತು ವಿಜ್ಞಾನಿಯಾದ ವಿದ್ವಾಂಸನಿಗಾಗಿ [ಪೂತಾಃ] ಪವಿತ್ರಮಾಡುವ [ಗಿರಃ] ವಿದ್ಯೆಯ ಶಿಕ್ಷಣ ಮತ್ತು ಉಪದೇಶದಿಂದ ಕೂಡಿದ ವಾಣಿಯನ್ನು ಧಾರಣ ಮಾಡಿಸುವೆ. ಆ [ವಾಚಃ] ವಾಣಿಯನ್ನು [ಪ್ರಭರಸ್ವ] ಎಲ್ಲ ಪ್ರಕಾರದಿಂದ ಧಾರಣೆಮಾಡಿಸು.

ಭಾವಾರ್ಥ:- ಯಾವ ಕಾರಣದಿಂದ ಪರಮೇಶ್ವರ ಮತ್ತು ಪರಮ ವಿದ್ವಾಂಸನ ಹೊರತು ಯಾವನೇ ಬೇರೆಯವನು ಸತ್ಯವಿದ್ಯೆಯ ಪ್ರಕಾಶ ಮಾಡಲು ಸಮರ್ಥನಾಗುವುದಿಲ್ಲ. ಆದುದರಿಂದ ಈಶ್ವರ ಮತ್ತು ವಿದ್ವಾಂಸನು ಸದಾ ಸೇವಿಸಬೇಕು.

ಮತ್ತೆ ಅವನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಯೋ ನೋ ಅಗ್ನೇಭಿದಾಸತ್ಯ-ಂತಿ ದೂರೇ ಪದೀಷ್ಟ ಸಃ । ಅಸ್ಮಾಕಮಿದ್ ವೃಧೇ ಭವ ॥೧೧॥

ಪದಾರ್ಥ:- ಹೇ [ಅಗ್ನೇ] ವಿಜ್ಞಾನವನ್ನು ಕೊಡುವವನೇ! [ಯಃ] ವಿದ್ವಾಂಸನಾದ ನಿನ್ನ [ಅಂತಿ] ಸಮೀಪದಲ್ಲಿ ಮತ್ತು [ದೂರೇ] ದೂರದಲ್ಲಿ [ನಃ] ನಮಗಾಗಿ [ಅಭಿದಾಸತಿ] ಅಭೀಷ್ಟವಸ್ತುಗಳನ್ನು ಕೊಡುತ್ತೀಯೋ ಮತ್ತು [ಪದೀಷ್ಟ] ಪಡೆಯುತ್ತೀಯೋ [ಸಃ] ಆ ನೀನು [ಅಸ್ಮಾಕಮ್] ನಮ್ಮ [ಇತ್] ನಮಗಾಗಿಯೇ [ವೃಧೇ] ವೃದ್ಧಿಯನ್ನುಂಟು ಮಾಡುವವನು [ಭವ] ಆಗು.

ಭಾವಾರ್ಥ:- ಮನುಷ್ಯರು ಈಶ್ವರನ ಸೇವೆಯನ್ನು ಅವಶ್ಯವಾಗಿ ಏತಕ್ಕೆ ಮಾಡಬೇಕೆಂದರೆ, ಅವನು ಒಳಗೂ-ಹೊರಗೂ ಸರ್ವತ್ರ ವ್ಯಾಪಕನಾಗಿ ಜ್ಞಾನವನ್ನು ಕೊಡುತ್ತಾನೆ. ಹಾಗೂ ವಿದ್ವಾಂಸನಾಗಿ ದೂರ ಹಾಗೂ ಹತ್ತಿರದಲ್ಲಿದ್ದು ಸತ್ಯದ ಉಪದೇಶ ಮಾಡುತ್ತಾನೆ.

ಮತ್ತೆ ಅವನು ಹೇಗಿರಬೇಕು ಎಂಬುದನ್ನಿಲ್ಲಿ ತಿಳಿಸಿದೆ.

ಸಹಸ್ರಾಕ್ಷೋ ವಿಚರ್ಷಣಿ-ರಗ್ನೀ ರಕ್ಷಾಂಸಿ ಸೇಧತಿ । ಹೋತಾ ಗೃಣೀತ ಉಕ್ಥ್ಯಃ ॥೧೨॥

ಪದಾರ್ಥ:- ಹೇ ವಿದ್ವಾಂಸನೇ! ಹೇಗೆ [ಉಕ್ಥ್ಯಃ] ಸ್ತುತಿಸಲು ಯೋಗ್ಯವು [ಸಹಸ್ರಾಕ್ಷಃ] ಅಸಂಖ್ಯ ನೇತ್ರಗಳ ಸಾಮರ್ಥ್ಯದಿಂದ ಕೂಡಿರುವ [ವಿಚರ್ಷಣಿಃ] ಸಾಕ್ಷಾತ್ ನೋಡುವ [ಹೋತಾ] ಉತ್ತಮೋತ್ತಮ ವಿದ್ಯೆ ಮೊದಲಾದ ಪದಾರ್ಥಗಳನ್ನು ಕೊಡುವ [ಅಗ್ನಿಃ] ಪರಮೇಶ್ವರನು [ರಕ್ಷಾಂಸಿ] ದುಷ್ಟ ಕರ್ಮ ಅಥವಾ ದುಷ್ಟ ಕರ್ಮವುಳ್ಳ ಪ್ರಾಣಿಗಳನ್ನು [ಸೇಧತಿ] ದೂರೀಕರಿಸಿ ಮತ್ತು ವೇದಗಳ [ಗೃಣೀತೇ] ಉಪದೇಶ ಮಾಡುತ್ತಾನೋ, ಹಾಗೆ ನೀವೂ ಮಾಡಿರಿ.

ಭಾವಾರ್ಥ:- ಯಾವ ರೀತಿ ಪರಮಾತ್ಮನು ದುಷ್ಟಕರ್ಮಗಳಿಂದ ದೂರೀಕರಿಸಿ ಸತ್ಯಜ್ಞಾನವನ್ನು ಉಪದೇಶಿಸುತ್ತಾನೋ, ಹಾಗೆಯೇ ವಿದ್ವಾಂಸರೂ ಮಾಡಬೇಕು.

ಈ ಸೂಕ್ತದಲ್ಲಿ ಅಗ್ನಿ, ಈಶ್ವರ ಮತ್ತು ವಿದ್ವಾಂಸರ ಗುಣಗಳ ವರ್ಣನೆ ಇರುವುದರಿಂದ ಇದರ ಅರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಪ್ಪತ್ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೮೦

ಮಂತ್ರಸಂಖ್ಯೆ ೧೬ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಇಂದ್ರಃ , ೧೬ ಇಂದ್ರಃ (ಅಥರ್ವಾ, ಮನುಃ ದಧ್ಯಙ್ ಚ) । ಛಂದಃ - ಪಂಕ್ತಿಃ । ಸ್ವರಃ - ೧, ೫, ೬, ೯, ೧೦, ೧೩, ೧೪ ಪಂಚಮಃ, ೨-೪, ೭, ೮, ೧೨, ೧೫, ೧೬ ಮಧ್ಯಮಃ

ಮೊದಲ ಮಂತ್ರದಲ್ಲಿ ಸಭಾಪತಿ ಮೊದಲಾದವರ ವರ್ಣನೆ ಇದೆ.

ಇತ್ಥಾ ಹಿ ಸೋಮ ಇನ್ಮದೇ ಬ್ರಹ್ಮಾ ಚಕಾರ ವರ್ಧನಮ್ ।
ಶವಿಷ್ಠ ವಜ್ರಿನ್ನೋಜಸಾ ಪೃಥಿವ್ಯಾ ನಿಃ ಶಶಾ ಅಹಿ-ಮರ್ಚನ್ನನು ಸ್ವರಾಜ್ಯಮ್ ॥೧॥

ಪದಾರ್ಥ:- ಹೇ [ಶವಿಷ್ಠ] ಬಲಯುಕ್ತನೇ! [ವಜ್ರಿನ್] ಶಸ್ತ್ರಾಸ್ತ್ರ ವಿದ್ಯೆಗಳಿಂದ ಸಂಪನ್ನನಾದ ಸಭಾಧ್ಯಕ್ಷನು ಹೇಗೆ ಸೂರ್ಯನು [ಅಹಿಮ್] ಮೇಘವನ್ನು, ಹೇಗೆ [ಬ್ರಹ್ಮಾ] ನಾಲ್ಕು ವೇದಗಳನ್ನು ತಿಳಿದವನು [ಓಜಸಾ] ತನ್ನ ಪರಾಕ್ರಮದಿಂದ [ಪೃಥಿವ್ಯಾಃ] ವಿಶಾಲವಾದ ಭೂಮಿಯ ಮಧ್ಯೆ [ಮದೇ] ಆನಂದ ಮತ್ತು [ಸೋಮೇ] ಐಶ್ವರ್ಯವನ್ನು ಪಡೆದವರಲ್ಲಿ [ಸ್ವರಾಜ್ಯಮ್] ತನ್ನ ರಾಜ್ಯದ [ಅನ್ವರ್ಚನ್] ಅನುಕೂಲತೆಯಿಂದ ಸತ್ಕಾರ ಮಾಡುತ್ತಾ [ಇತ್ಥಾ] ಈ ಹೇತುವಿನಿಂದ [ವರ್ಧನಮ್] ವೃದ್ಧಿಯನ್ನು [ಚಕಾರ] ಮಾಡುತ್ತಾನೋ, ಹಾಗೆಯೇ ನೀವು ಎಲ್ಲ ಅನ್ಯಾಯಾಚರಣೆಗಳನ್ನು [ಇತ್ ಹಿ] ನಿಶ್ಚಯವಾಗಿ [ನಿಶಶಾಃ] ದೂರ ಮಾಡಿರಿ.

ಭಾವಾರ್ಥ:- ಮನುಷ್ಯರು ಬಯಸಬೇಕಾದುದೇನೆಂದರೆ, ಚಕ್ರವರ್ತಿರಾಜ್ಯದ ಸಾಮಗ್ರಿಯನ್ನು ಒಗ್ಗೂಡಿಸಿ ಮತ್ತು ಅದರ ರಕ್ಷಣೆ ಮಾಡಿ ವಿದ್ಯೆ ಮತ್ತು ಸುಖವನ್ನು ನಿರಂತರ ವೃದ್ಧಿಸಬೇಕು.

ಮತ್ತೆ ಆ ಸಭಾಧ್ಯಕ್ಷ ಮೊದಲಾದವರು ಹೇಗಿರುವರು, ಈ ವಿಷಯದ ಉಪದೇಶವನ್ನು ತಿಳಿಸಿದೆ.

ಸ ತ್ವಾಮದದ್ ವೃಷಾ ಮದಃ ಸೋಮಃ ಶ್ಯೇನಾಭೃತಃ ಸುತಃ ।
ಯೇನಾ ವೃತ್ರಂ ನಿರದ್ಭ್ಯೋ ಜಘಂಥ ವಜ್ರಿನ್ನೋಜಸಾ-ರ್ಚನ್ನನು ಸ್ವರಾಜ್ಯಮ್ ॥೨॥

ಪದಾರ್ಥ:- ಹೇ [ವಜ್ರಿನ್] ಶಸ್ತ್ರ ಮತ್ತು ಅಸ್ತ್ರಗಳ ವಿದ್ಯೆಯನ್ನು ಧಾರಣ ಮಾಡುವ ಸಭಾಧ್ಯಕ್ಷನೇ! [ಯೇನ] ನ್ಯಾಯವನ್ನು ವರ್ಷಿಸುವುದು ಮತ್ತು ಆನಂದವನ್ನುಂಟು ಮಾಡುವುದು, ಗಿಡುಗ ಹಕ್ಕಿಯಂತೆ ಧಾರಣ ಮಾಡುವುದು, ಉತ್ಪಾದನೆ ಮಾಡಿದ ಪದಾರ್ಥಗಳನ್ನು ನೀನು [ಓಜಸಃ] ಪರಾಕ್ರಮದಿಂದ [ಸ್ವರಾಜ್ಯಮ್] ತನ್ನ ರಾಜ್ಯವನ್ನು [ಅನ್ವರ್ಚನ್] ಶಿಕ್ಷಾನುಕೂಲದಂತೆ ಮಾಡಿರುವ, ಹೇಗೆ ಸೂರ್ಯನು [ಅದ್ಭ್ಯಃ] ನೀರಿನಿಂದ ಬೇರೆ ಮಾಡಿ [ವೃತ್ರಮ್] ಜಲವನ್ನು ಸ್ವೀಕರಿಸಿ ಅಂದರೆ ಕಲ್ಲಿನಂತೆ ಕಠಿಣವಾಗುತ್ತಾ ಮೇಘವನ್ನು ನಿರಂತರ ಭಿನ್ನ-ಭಿನ್ನ ಮಾಡುತ್ತಾನೋ ಹಾಗೆ ಪ್ರಜೆಗಳಿಂದ ಬೇರೆಯಾಗಿ ಪ್ರಜೆಗಳ ಸುಖವನ್ನು ಸ್ವೀಕಾರ ಮಾಡುತ್ತಾ ಶತ್ರುಗಳನ್ನು [ನಿರ್ಜಘನ್ಥ] ಭಿನ್ನ-ಭಿನ್ನ ಮಾಡುತ್ತಾನೋ [ಸಃ] ಅವನು [ವೃಷಾ ಮದಃ ಶ್ಯೇನಾಭೃತಃ ಸುತಃ] ಉಕ್ತ ಗುಣಗಳುಳ್ಳ [ಸೋಮಃ] ಪದಾರ್ಥಗಳನ್ನಿತ್ತು [ತ್ವಾ] ನಿನ್ನನ್ನು [ಅಮದತ್] ಆನಂದ ಪಡಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಮನುಷ್ಯರು ಬಯಸಬೇಕಾದುದೇನೆಂದರೆ, ಯಾವ ಪದಾರ್ಥಗಳು ಮತ್ತು ಕಾರ್ಯಗಳಿಂದ ಪ್ರಜೆಗಳು ಪ್ರಸನ್ನರಾಗುವರೋ, ಅವುಗಳಿಂದ ಪ್ರಜೆಗಳ ಉನ್ನತಿ ಮಾಡಬೇಕು ಮತ್ತು ಶತ್ರುಗಳ ನಿವೃತ್ತಿ ಮಾಡಿ, ಧರ್ಮದಿಂದ ರಾಜ್ಯವನ್ನು ನಿತ್ಯವೂ ಪ್ರಶಂಸಿಸುವಂತೆ ಮಾಡಬೇಕು.

ಮತ್ತೆ ಅವರು ಹೇಗಿರುವರು ಎಂಬುದನ್ನಿಲ್ಲಿ ತಿಳಿಸಿದೆ.

ಪ್ರೇಹ್ಯಭೀಹಿ ಧೃಷ್ಣುಹಿ ನ ತೇ ವಜ್ರೋ ನಿ ಯಂಸತೇ । ಇಂದ್ರ ನೃಮ್ಣಂ ಹಿ ತೇ ಶವೋ
ಹನೋ ವೃತ್ರಂ ಜಯಾ ಅಪೋಽರ್ಚನ್ನನು ಸ್ವರಾಜ್ಯಮ್ ॥೩॥

ಪದಾರ್ಥ:- ಹೇ [ಇಂದ್ರ] ಪರಮಸುಖಕಾರಕ! ಹೇಗೆ ಸೂರ್ಯನ [ವಜ್ರಃ] ಕಿರಣಗಳು [ವೃತ್ರಮ್] ಮೇಘವನ್ನು [ಹನಃ] ಕೊಲ್ಲುತ್ತವೋ ಮತ್ತು [ಅಪಃ] ಜಲವನ್ನು [ನಿಯಂಸತೇ] ನಿಯಮದಿಂದ ಇಡುತ್ತದೋ, ಹಾಗೆ [ತೇ] ನಿನ್ನ ಶತ್ರುಗಳನ್ನು ಹನನ ಮಾಡಿ [ಸ್ವರಾಜ್ಯಮ್] ತಮ್ಮ ರಾಜ್ಯದ [ಅನ್ವರ್ಚನ್] ಸತ್ಕಾರ ಮಾಡುತ್ತಾ [ಹಿ] ನಿಶ್ಚಯವಾಗಿ [ನೃಮ್ಣಮ್] ಧನವನ್ನು [ಪ್ರೇಹಿ] ಪಡೆ. [ಶವಃ] ಬಲವನ್ನು [ಅಭೀಹಿ] ನಾಲ್ಕು ಕಡೆಗಳಿಂದ ವೃದ್ಧಿಸು, ಶರೀರ ಮತ್ತು ಆತ್ಮ ಬಲದಿಂದ [ಧೃಷ್ಣುಹಿ] ದಿಟ್ಟನಾಗು ಹಾಗೂ [ಜಯಾಃ] ಜಯವನ್ನು ಪಡೆದುಕೋ. ಈ ರೀತಿ ಮಾಡುತ್ತಾ [ತೇ] ನಿನ್ನ ಪರಾಜಯವು [ನ] ಆಗುವುದಿಲ್ಲ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರಾಜಪುರುಷರು ಸೂರ್ಯ ಪ್ರಕಾಶದಂತೆ ಪ್ರಸಿದ್ಧ ಕೀರ್ತಿಯುಳ್ಳವರೋ, ಅವರು ರಾಜ್ಯದ ಐಶ್ವರ್ಯವನ್ನು ಭೋಗಿಸುವವರಾಗುತ್ತಾರೆ.

ಮತ್ತೆ ಅವನು ಹೇಗಿರುತ್ತಾನೆ ಎಂಬುದನ್ನಿಲ್ಲಿ ತಿಳಿಸಿದೆ.

ನಿರಿಂದ್ರ ಭೂಮ್ಯಾ ಅಧಿ ವೃತ್ರಂ ಜಘಂಥ ನಿರ್ದಿವಃ ।
ಸೃಜಾ ಮರುತ್ವತೀರವ ಜೀವಧನ್ಯಾ ಇಮಾ ಅಪೋಽರ್ಚನ್ನನು ಸ್ವರಾಜ್ಯಮ್ ॥೪॥

ಪದಾರ್ಥ:- ಹೇ [ಇಂದ್ರ] ಪರಮೈಶ್ವರ್ಯಶಾಲಿಯೇ! ಪರಮೈಶ್ವರ್ಯವನ್ನು ಕೊಡುವ ನೀನು ಹೇಗೆ ಸೂರ್ಯನು [ವೃತ್ರಮ್] ಮೇಘವನ್ನು ತಾಡನ ಮಾಡಿ [ಭೂಮ್ಯಾಃ] ಪೃಥಿವಿಯ [ಅಧಿ] ಮೇಲೆ [ಇಮಾಃ] ಯಾವ [ಜೀವಧನ್ಯಾಃ] ಜೀವರುಗಳಲ್ಲಿ ಧನಾದಿಗಳ ಸಿದ್ಧಿಯಲ್ಲಿ ಹಿತಕಾರಕವು [ಮರುತ್ವತೀಃ] ಮನುಷ್ಯ ಮೊದಲಾದವರ ವ್ಯವಹಾರಗಳನ್ನು ಸಿದ್ಧಪಡಿಸುವ [ಅಪಃ] ಜಲವನ್ನು [ನಿರ್ಜಘನ್ಥ] ನಿತ್ಯವೂ ಪೃಥಿವಿಗೆ ತಲುಪಿಸುವನೋ ಮತ್ತು [ದಿವಃ] ಪ್ರಕಾಶವನ್ನು ಪ್ರಕಟಗೊಳಿಸುತ್ತಾನೆಯೋ ಹಾಗೆ ಅಧರ್ಮಿಗಳಿಗೆ ದಂಡವನ್ನಿತ್ತು ಧರ್ಮಾಚಾರದ ಪ್ರಕಾಶಪಡಿಸಿ [ಸ್ವರಾಜ್ಯಮ್] ತನ್ನ ರಾಜ್ಯದ [ಅನ್ವರ್ಚನ್] ಯಥಾಯೋಗ್ಯ ಸತ್ಕಾರ ಮಾಡುತ್ತಾ, ಪ್ರಜಾಶಾಸನ ಮಾಡುತ್ತಾ ಮತ್ತು ನಾನಾ ರೀತಿಯ ಸುಖವನ್ನು [ನಿರವಸೃಜತ] ನಿರಂತರ ಸಿದ್ಧಪಡಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವನು ರಾಜ್ಯಭಾರ ಮಾಡಲು ಇಚ್ಛಿಸುವನೋ, ಅವನು ವಿದ್ಯೆ, ಧರ್ಮ ಮತ್ತು ವಿಶೇಷ ನೀತಿಯ ಪ್ರಚಾರ ಮಾಡಿ ತಾನೂ ಧರ್ಮಾತ್ಮನಾಗಿ ಎಲ್ಲ ಪ್ರಜೆಗಳನ್ನು ತಂದೆಯಂತೆ ನೋಡಿಕೊಳ್ಳಬೇಕು.

ಮತ್ತೆ ಆ ಸಭಾಧ್ಯಕ್ಷನ ಕರ್ತವ್ಯಕರ್ಮಗಳ ಉಪದೇಶವನ್ನು ಹೇಳಲಾಗಿದೆ.

ಇಂದ್ರೋ ವೃತ್ರಸ್ಯ ದೋಧತಃ ಸಾನುಂ ವಜ್ರೇಣ ಹೀಳಿತಃ ।
ಅಭಿಕ್ರಮ್ಯಾವ ಜಿಘ್ನತೇಽಪಃ ಸರ್ಮಾಯ ಚೋದಯ-ನ್ನರ್ಚನ್ನನು ಸ್ವರಾಜ್ಯಮ್ ॥೫॥

ಪದಾರ್ಥ:- ಹೇ ವಿದ್ವಾಂಸನೇ! ಹೇಗೆ [ಇಂದ್ರಃ] ಸೂರ್ಯನು [ವಜ್ರೇಣ] ಕಿರಣಗಳಿಂದ [ವೃತ್ರಸ್ಯ] ಮೇಘದ [ಅಪಃ] ಜಲವನ್ನು [ಅಭಿಕ್ರಮ್ಯ] ಆಕ್ರಮಣ ಮಾಡಿ [ಸಾನುಮ್] ಮೇಘದ ಶಿಖರಗಳನ್ನು ಛೇದನ ಮಾಡುತ್ತಾನೋ ಹಾಗೆ [ಸ್ವರಾಜ್ಯಮ್] ತನ್ನ ರಾಜ್ಯದ [ಅನ್ವರ್ಚನ್] ಸತ್ಕಾರ ಮಾಡುತ್ತಾ ರಾಜನು [ಜಿಘ್ನತೇ] ಹನನ ಮಾಡುವ [ಸರ್ಮಾಯ] ಎದುರಾದ ಶತ್ರುವಿನ ಪರಾಜಯಕ್ಕಾಗಿ ತನ್ನ ಸೇನೆಯನ್ನು [ಚೋದಯನ್] ಪ್ರೇರಣೆ ಪಡಿಸುತ್ತಾ [ದೋಧತಃ] ಕೃದ್ಧನಾದ ಶತ್ರುವಿನ ಬಲದ ಆಕ್ರಮಣದಿಂದ ಸೇನೆಯನ್ನು ಛಿನ್ನ-ಭಿನ್ನಮಾಡಿ [ಹೀಳಿತಃ] ಪ್ರಜೆಗಳಿಂದ ಅನಾದರವನ್ನು ಪಡೆದ ಶತ್ರುವಿನ ಮೇಲೆ ಕ್ರೋಧವನ್ನು [ಅವ] ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವನು ಸೂರ್ಯನಂತೆ ಅವಿದ್ಯಾಂಧಕಾರವನ್ನು ಬಿಡಿಸಿ ವಿದ್ಯೆಯ ಪ್ರಕಾಶ ಮಾಡಿ, ದುಷ್ಟರನ್ನು ದಂಡಿಸಿ ಮತ್ತು ಧರ್ಮಾತ್ಮರ ಸತ್ಕಾರ ಮಾಡುತ್ತಾನೋ, ಅವನೇ ವಿದ್ವಾಂಸರಲ್ಲಿ ಸತ್ಕಾರಕ್ಕೆ ಪಾತ್ರನಾಗುವನು.

ಮತ್ತೆ ಅವನು ಮಾಡಲು ಯೋಗ್ಯವಾದ ಕರ್ಮಗಳ ಉಪದೇಶವನ್ನು ಹೇಳಲಾಗಿದೆ.

ಅಧಿ ಸಾನೌ ನಿ ಜಿಘ್ನತೇ ವಜ್ರೇಣ ಶತಪರ್ವಣಾ ।
ಮಂದಾನ ಇಂದ್ರೋ ಅಂಧಸಃ ಸಖಿಭ್ಯೋ ಗಾತುಮಿಚ್ಛ-ತ್ಯರ್ಚನ್ನನು ಸ್ವರಾಜ್ಯಮ್ ॥೬॥

ಪದಾರ್ಥ:- ಹೇ ರಾಜನ್! ಹೇಗೆ [ಇಂದ್ರಃ] ವಿದ್ಯುದಗ್ನಿಯು [ಶತಪರ್ವಣಾ] ಅಸಂಖ್ಯಾತ ಉತ್ತಮೋತ್ತಮ ಕರ್ಮಗಳಿಂದ ಕೂಡಿರುವ [ವಜ್ರೇಣ] ತನ್ನ ಕಿರಣಗಳಿಂದ ಮೇಘದ [ಸಾನಾವಧಿ] ಅವಯವಗಳ ಮೇಲೆ ಪ್ರಹಾರ ಮಾಡುತ್ತಾ [ನಿಜಿಘ್ನತೇ] ಪ್ರಕಾಶವನ್ನು ತಡೆಯುವ ಮೇಘಕ್ಕೆ ಯಾವಾಗಲೂ ಪ್ರತಿಕೂಲವನ್ನು ಮಾಡುತ್ತಯೋ ಹಾಗೆಯೇ ಯಾವ ನಿನ್ನ [ಗಾತುಮ್] ಉತ್ತಮ ರೀತಿಯಿಂದ ಶಿಕ್ಷಣದಿಂದ ಕೂಡಿದ ವಾಣಿಯ [ಇಚ್ಛತಿ] ಇಚ್ಛೆ ಮಾಡುತ್ತೇವೋ ಅದರ [ಸಖಿಭ್ಯಃ] ಸತ್ಕಾರ ಮಾಡುತ್ತಾ [ಅಂಧಸಃ] ಅನ್ನದ ದಾತನಾಗು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಲುಪ್ತೋಪಮಾಲಂಕಾರಗಳಿವೆ. ಹೇಗೆ ಎಲ್ಲ ಜಗತ್ತಿಗೆ ಉಪಕಾರ ಮಾಡುವ ಸೂರ್ಯನಿರುವನೋ ಹಾಗೆಯೇ ಸಭಾಧ್ಯಕ್ಷ ಮೊದಲಾದವರು ಕೂಡ ಆಗಬೇಕು.

ಮತ್ತೆ ಅವನು ಹೇಗಿರುತ್ತಾನೆ ಎಂಬುದನ್ನಿಲ್ಲಿ ತಿಳಿಸಿದೆ.

ಇಂದ್ರ ತುಭ್ಯಮಿದದ್ರಿವೋಽನುತ್ತಂ ವಜ್ರಿನ್ ವೀರ್ಯಮ್ । ಯದ್ಧ ತ್ಯಂ ಮಾಯಿನಂ
ಮೃಗಂ ತಮು ತ್ವಂ ಮಾಯಯಾವಧೀ-ರರ್ಚನ್ನನು ಸ್ವರಾಜ್ಯಮ್ ॥೭॥

ಪದಾರ್ಥ:- ಹೇ [ಅದ್ರಿವಃ] ಮೇಘದ ಶಿಖರದಂತೆ ಪರ್ವತಾದಿಗಳಿಂದ ಕೂಡಿದ ಸ್ವರಾಜ್ಯದಿಂದ ಸುಭೂಷಿತನೂ [ವಜ್ರಿನ್] ಅತ್ಯುತ್ತಮ ಶಸ್ತ್ರಾಸ್ತ್ರಗಳಿಂದ ಕೂಡಿದವನೂ ಆದ [ಇಂದ್ರಃ] ಸಭೇಶನೇ! [ಯತ್] ಯಾವುದರಿಂದ [ತ್ಯಮ್] ಆ [ಮಾಯಿನಮ್] ಕಪಟಿಯು [ಮೃಗಮ್] ಮೃಗದಂತೆ ಪದಾರ್ಥಗಳನ್ನು ಭೋಗಿಸುವವನನ್ನು [ಮಾಯಯಾ] ಬುದ್ಧಿಯಿಂದ [ಹ] ನಿಶ್ಚಯವಾಗಿ [ಅವಧೀಃ] ಹನನ ಮಾಡುತ್ತಾನೆ. [ದಿವಃ] ಸೂರ್ಯನಂತೆ [ಅನುತ್ತಮ್] ಸ್ವಾಧೀನ ಪುರುಷಾರ್ಥದಿಂದ ಗ್ರಹಣ ಮಾಡಿದ [ವೀರ್ಯಮ್] ಪರಾಕ್ರಮ ಮತ್ತು [ತೇ] ನಿನ್ನ ಭುಜಗಳಲ್ಲಿ [ಬಲಮ್] ಬಲವು [ಹಿತಮ್] ಸ್ಥಿತವಾಗಿದೆ. ಅದರಿಂದ [ಸ್ವರಾಜ್ಯಮ್] ತನ್ನ ರಾಜ್ಯದ [ಅನ್ವರ್ಚನ್] ಸತ್ಕಾರ ಮಾಡುತ್ತಾ [ತಮು] ಆ ದುಷ್ಟನನ್ನು ದಂಡಿಸುತ್ತಾನೆ. ಆ [ತುಭ್ಯಮಿತ್] ನಿನಗಾಗಿಯೇ ನಾವು ಉತ್ತಮೋತ್ತಮ ಧನವನ್ನು ಕೊಡುತ್ತೇವೆ.

ಭಾವಾರ್ಥ:- ಯಾರು ಪ್ರಜೆಗಳ ರಕ್ಷಣೆಗಾಗಿ ಸೂರ್ಯನಂತೆ ಶರೀರ ಮತ್ತು ಆತ್ಮ ಹಾಗೂ ನ್ಯಾಯ ವಿದ್ಯೆಗಳನ್ನು ಪ್ರಕಾಶ ಪಡಿಸುತ್ತಾ ಕಪಟಿಗಳನ್ನು ದಂಡಿಸುತ್ತಾರೋ, ಅವರೇ ರಾಜ್ಯವನ್ನು ವೃದ್ಧಿಸಲು ಮತ್ತು ವೃದ್ಧಿಸುವವರನ್ನು ಪಡೆಯಲು ಸಮರ್ಥರಾಗುವರು.

ಮತ್ತೆ ಮುಂದಿನ ಮಂತ್ರದಲ್ಲಿಯೂ ಕೂಡ ಪೂರ್ವೋಕ್ತ ಸಭಾಧ್ಯಕ್ಷ ಮತ್ತು ಸೂರ್ಯನ ಗುಣಗಳ ವರ್ಣನೆ ಮಾಡಿದೆ.

ವಿ ತೇ ವಜ್ರಾಸೋ ಅಸ್ಥಿರ-ನ್ನವತಿಂ ನಾವ್ಯಾ೩ ಅನು । ಮಹತ್ ತ ಇಂದ್ರ ವೀರ್ಯಂ

ಬಾಹ್ವೋಸ್ತೇ ಬಲಂ ಹಿತ-ಮರ್ಚನ್ನನು ಸ್ವರಾಜ್ಯಮ್ ॥೮॥

ಪದಾರ್ಥ:- ಹೇ [ಇಂದ್ರ] ಸುಖದಾತನೇ! [ತೇ] ನಿನ್ನ [ವಜ್ರಾಸಃ] ಶಸ್ತ್ರಾಸ್ತ್ರಗಳಿಂದ ಕೂಡಿರುವ ದೃಢತರವಾದ ಸೇನೆಯು [ನವತಿಂ] ತೊಂಬತ್ತು [ನಾವ್ಯಾಃ] ಪಯಣಿಸುವಂತಹ ನೌಕೆಗಳನ್ನು [ಅನುವ್ಯಸ್ಥಿರನ್] ಅನುಕೂಲತೆಯಿಂದ ವ್ಯವಸ್ಥೆಗೊಳಿಸುತ್ತಾನೆ. ಮತ್ತು [ತೇ] ನಿನ್ನ [ಬಾಹ್ವೋಃ] ಭುಜಗಳಲ್ಲಿ [ಮಹತ್] ದೊಡ್ಡ [ವೀರ್ಯಮ್] ಪರಾಕ್ರಮ ಮತ್ತು [ತೇ] ನಿನ್ನ ಭುಜಗಳಲ್ಲಿ [ಬಲಮ್] ಬಲವು [ಹಿತಮ್] ಸ್ಥಿತವಾಗಿದೆ. ಅದರಿಂದ [ಸ್ವರಾಜ್ಯಮ್] ತನ್ನ ರಾಜ್ಯದ [ಅನ್ವರ್ಚನ್] ಯಥಾ ರೀತಿ ಸತ್ಕಾರ ಮಾಡುತ್ತಾ ರಾಜ್ಯಲಕ್ಷ್ಮಿಯನ್ನು ನೀನು ಪಡೆದುಕೋ.

ಭಾವಾರ್ಥ:- ಯಾವ ವಿದ್ವಾಂಸರು ರಾಜ್ಯದ ವೃದ್ಧಿಗಾಗಿ ಇಚ್ಛಿಸುತ್ತಾರೋ, ಅವರು ದೊಡ್ಡ ಅಗ್ನಿಯಂತ್ರದಿಂದ ಚಲಿಸುವಂತಹ ನೌಕೆಗಳನ್ನು ನಿರ್ಮಾಣ ಮಾಡಿ, ದ್ವೀಪ ದೀಪಾಂತರಗಳಿಗೆ ಹೋಗಿಬರುವ ವ್ಯವಹಾರಗಳಿಂದ ಧನ ಮೊದಲಾದ ಲಾಭಗಳನ್ನು ಹೆಚ್ಚಿಸಿ ತಮ್ಮ ರಾಜ್ಯವನ್ನು ಧನ-ಧಾನ್ಯಗಳಿಂದ ಸುಭೂಷಿತಗೊಳಿಸಲಿ.

ಮತ್ತೆ ರಾಜಪುರುಷರು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ಸಹಸ್ರಂ ಸಾಕಮರ್ಚತ ಪರಿಷ್ಟೋಭತ ವಿಂಶತಿಃ ।

ಶತೈನಮನ್ವನೋನವು-ರಿಂದ್ರಾಯ ಬ್ರಹ್ಮೋದ್ಯತ-ಮರ್ಚನ್ನನು ಸ್ವರಾಜ್ಯಮ್ ॥೯॥

ಪದಾರ್ಥ:- ಹೇ ಮನುಷ್ಯರೇ! ನೀವು ಯಾವ ಸಭಾಧ್ಯಕ್ಷನು [ಸ್ವರಾಜ್ಯಮ್] ತನ್ನ ರಾಜ್ಯದ [ಅನ್ವರ್ಚನ್] ಸತ್ಕಾರ ಮಾಡುತ್ತಾ ವರ್ತಿಸುತ್ತಾನೋ, [ಏನಮ್] ಅವನ ಆಶ್ರಯ ಮಾಡಿ ಅವನು ತನ್ನ ರಾಜ್ಯವನ್ನು ಎಲ್ಲ ರೀತಿಯ ಅಧರ್ಮಾಚರಣೆಗಳನ್ನು [ಪರಿಷ್ಟೋಭತ] ನಿಲ್ಲಿಸಿ [ಸಾಕಮ್] ಪರಸ್ಪರ ಕೂಡಿ [ಸಹಸ್ರಮ್] ಅಸಂಖ್ಯಾತ ಗುಣಗಳಿಂದ ಕೂಡಿದ ಪುರುಷರೊಂದಿಗೆ [ಅರ್ಚತ] ಸತ್ಕರಿಸಿರಿ. [ಉದ್ಯತಮ್] ಪ್ರಸಿದ್ಧವಾದ [ಬ್ರಹ್ಮ] ವೇದ ಅಥವಾ ಅನ್ನವನ್ನು [ಅರ್ಚನ್] ಸತ್ಕಾರ ಮಾಡುತ್ತಾ ವರ್ತಿಸುವರು. ಆ [ಇಂದ್ರಾಯ] ಅಧಿಕ ಸಂಪತ್ತುಳ್ಳ ಸಭಾಧ್ಯಕ್ಷನಿಗಾಗಿ ಅನುಕೂಲವಾಗಿ ಸ್ತುತಿಸಿರಿ.

ಭಾವಾರ್ಥ:- ಮನುಷ್ಯರು ವಿರೋಧವನ್ನು ಬಿಡದಿದ್ದಲ್ಲಿ ಎಂದಿಗೂ ಪರಸ್ಪರ ಸುಖವುಂಟಾಗುದಿಲ್ಲ. ಮನುಷ್ಯರಿಗೆ ಉಚಿತವಾಗಿರುವುದೇನೆಂದರೆ, ವಿದ್ಯೆ ಹಾಗೂ ಉತ್ತಮ ಸುಖರಹಿತವಾದ ಮತ್ತು ನಿಂದಿತ ಮನುಷ್ಯನಿಗೆ ಸಭಾಧ್ಯಕ್ಷ ಮೊದಲಾದ ಅಧಿಕಾರಗಳನ್ನು ಎಂದಿಗೂ ಕೊಡಬಾರದು.

ಮತ್ತೆ ಸಭಾಧ್ಯಕ್ಷನ ಗುಣಗಳ ಉಪದೇಶವನ್ನು ತಿಳಿಸಲಾಗಿದೆ.

ಇಂದ್ರೋ ವೃತ್ರಸ್ಯ ತವಿಷೀಂ ನಿರಹನ್ತ್ಸಹಸಾ ಸಹಃ ।

ಮಹತ್ ತದಸ್ಯ ಪೌಂಸ್ಯಂ ವೃತ್ರಂ ಜಘನ್ವಾ ಅಸೃಜ-ದರ್ಚನ್ನನು ಸ್ವರಾಜ್ಯಮ್ ॥೧೦॥

ಪದಾರ್ಥ:- [ಇಂದ್ರಃ] ಸಭಾಧ್ಯಕ್ಷನು, ವಿದ್ಯುತ್ ರೂಪ ಸೂರ್ಯನು [ವೃತ್ರಮ್] ಮೇಘವನ್ನು ನಷ್ಟಗೊಳಿಸುವಂತೆ ಶತ್ರುವನ್ನು [ಜಘನ್ವಾನ್] ಕೊಲ್ಲುತ್ತಾ ನಿರಂತರ ಹನನ ಮಾಡುತ್ತಾನೆ. ಹಾಗೂ [ಸಹಸಾ] ಬಲದಿಂದ ಸೂರ್ಯನಂತೆ ಶತ್ರುವಿನ [ತವಿಷೀಮ್] ಬಲವನ್ನು [ನಿರಹನ್] ನಿರಂತರ ಹನನ ಮಾಡುತ್ತಾ ಮತ್ತು [ಸ್ವರಾಜ್ಯಮ್] ತನ್ನ ರಾಜ್ಯದ [ಅನ್ವರ್ಚನ್] ಸತ್ಕಾರ ಮಾಡುತ್ತಾ ಸುಖವನ್ನು [ಅಸೃಜತ್] ಉತ್ಪನ್ನ ಮಾಡುವನು. [ತತ್] ಅವನೇ [ಅಸ್ಯ] ಇದರ [ಮಹತ್] ದೊಡ್ಡ [ಪೌಂಸ್ಯಮ್] ಪುರುಷಾರ್ಥರೂಪವಾದ ಒಂದು [ಸಹಃ] ಸಹನೆಗೆ ಹೇತುವಾಗಿದ್ದಾನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನು ಅತ್ಯಂತ ಬಲ ಮತ್ತು ತೇಜಸ್ಸಿನಿಂದ ಎಲ್ಲದರ ಆಕರ್ಷಣೆ ಮತ್ತು ಪ್ರಕಾಶಪಡಿಸುವನೋ, ಹಾಗೆ ಸಭಾಧ್ಯಕ್ಷ ಮೊದಲಾದವರಿಗೆ ಉಚಿತವಾಗಿರುವುದೇನೆಂದರೆ, ತನ್ನ ಅತ್ಯಂತ ಬಲದಿಂದ ಶುಭಗುಣಗಳ ಆಕರ್ಷಣೆ ಮತ್ತು ನ್ಯಾಯದ ಪ್ರಕಾಶದಿಂದ ರಾಜ್ಯದ ಅನುಶಾಸನ ಮಾಡಬೇಕು.

ಮತ್ತೆ ಅವನು ಹೇಗಿದ್ದಾನೆ ಎಂಬುದನ್ನಿಲ್ಲಿ ತಿಳಿಸಿದೆ.

ಇಮೇ ಚಿತ್ ತವ ಮನ್ಯವೇ ವೇಪೇತೇ ಭಿಯಸಾ ಮಹೀ ।

ಯದಿಂದ್ರ ವಜ್ರಿನ್ನೋಜಸಾ ವೃತ್ರಂ ಮರುತ್ವಾ ಅವಧೀ-ರರ್ಚನ್ನನು ಸ್ವರಾಜ್ಯಮ್ ॥೧೧॥

ಪದಾರ್ಥ:- ಹೇ [ವಜ್ರಿನ್] ಶಸ್ತ್ರ ವಿದ್ಯೆಯನ್ನು ಸರಿಯಾಗಿ ತಿಳಿದ [ಇಂದ್ರ] ಸಭಾಧ್ಯಕ್ಷ ರಾಜನೇ! [ಯತ್] ಯಾವ [ತವ] ನಿನ್ನ [ಓಜಸಾ] ಸೇನೆಯ ಬಲದಿಂದ, ಹೇಗೆ ಸೂರ್ಯನ ಆಕರ್ಷಣೆ ಮತ್ತು ತಾಡನದಿಂದ [ಇಮೇ] ಈ [ಮಹೀ] ಲೋಕವು [ವೇಪೇತೇ] ಕಂಪಿಸುತ್ತದೋ, ಅದರಂತೆ, ನೀನು [ಭಿಯಸಾ] ಭಯಬಲದಿಂದ [ಮನ್ಯವೇ] ಕ್ರೋಧದ ಶಾಂತಿಗಾಗಿ, ಶತ್ರುಗಳು [ಅನು] ಅನುಕೂಲರಾಗಿ ಕಂಪಿಸುತ್ತಿರುತ್ತಾರೆ. ಹೇಗೆ [ಮರುತ್ವಾನ್] ಬಹಳ ವಾಯುವಿನಿಂದ ಕೂಡಿದ ಸೂರ್ಯನು [ವೃತ್ರಮ್] ಮೇಘವನ್ನು ಕೊಲ್ಲುತ್ತಾನೋ ಹಾಗೆಯೇ [ಸ್ವರಾಜ್ಯಮ್] ತನ್ನ ರಾಜ್ಯದ [ಅರ್ಚನ್] ಸತ್ಕಾರ ಮಾಡುತ್ತಾ [ಚಿತ್] ಮತ್ತು ಶತ್ರುವನ್ನು [ಅವಧೀಃ] ಕೊಲ್ಲು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸಭಾಪ್ರಬಂಧವಾಗುವುದರಿಂದ ಸುಖಪೂರ್ವಕವಾಗಿ ಜನರು ಉತ್ತಮ ಮಾರ್ಗದಲ್ಲಿ ನಡೆದು-ನಡೆಸುತ್ತಾರೋ, ಹಾಗೆಯೇ ಸೂರ್ಯನು ಆಕರ್ಷಣಾ ಶಕ್ತಿಯಿಂದ ಭೂಗೋಳವನ್ನು ಇತ್ತ-ಅತ್ತ ತಿರುಗಿಸುತ್ತಿರುತ್ತಾನೆ. ಹೇಗೆ ಸೂರ್ಯನು ಮೇಘವನ್ನು ವರ್ಷಿಸಿ ಎಲ್ಲರ ಪಾಲನೆ ಮಾಡುತ್ತಾನೋ, ಹಾಗೆ ಸಭೆ ಮತ್ತು ಸಭಾಪತಿ ಮೊದಲಾದವರೂ ಕೂಡ ಶತ್ರುಗಳನ್ನು ಮತ್ತು ಅನ್ಯಾಯವನ್ನು ನಾಶಮಾಡಿ, ವಿದ್ಯೆ ಮತ್ತು ನ್ಯಾಯದ ಪ್ರಚಾರದಿಂದ ಪ್ರಜೆಗಳನ್ನು ಪಾಲಿಸಬೇಕು.

ಮತ್ತೆ ಕೂಡ ಸಭಾಧ್ಯಕ್ಷನು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ನ ವೇಪಸಾ ನ ತನ್ಯತೇ-ಂದ್ರಂ ವೃತ್ರೋ ವಿ ಬೀಭಯತ್ ।

ಅಭ್ಯೇನಂ ವಜ್ರ ಆಯಸಃ ಸಹಸ್ರಭೃಷ್ಟಿರಾಯತಾ-ರ್ಚನ್ನನು ಸ್ವರಾಜ್ಯಮ್ ॥೧೨॥

ಪದಾರ್ಥ:- ಹೇ ಸಭಾಪತಿ! [ಸ್ವರಾಜ್ಯಮನ್ವರ್ಚನ್] ತನ್ನ ರಾಜ್ಯದ ಸತ್ಕಾರವನ್ನು ಮಾಡುತ್ತಿರುವ ನೀನು, ಹೇಗೆ [ವೃತ್ರಃ] ಮೇಘವು [ವೇಪಸಾ] ವೇಗದಿಂದ [ಇಂದ್ರಮ್] ಸೂರ್ಯನಿಗೆ [ನವಿಭೀಭಯತ್] ಭಯವನ್ನುಂಟು ಮಾಡುವುದಿಲ್ಲವೋ, ಮತ್ತು ಆ ಮೇಘದ ಗರ್ಜನೆಯು ಪ್ರಕಾಶಿಸಿ [ತನ್ಯತಾ] ಸಿಡಿಲಿನಿಂದಲೂ ಭಯವನ್ನು [ನ]

ಭಯವನ್ನುಂಟು ಮಾಡುವುದಿಲ್ಲವೋ, [**ಏನಮ್**] ಈ ಮೇಘದ ಮೇಲೆ ಸೂರ್ಯಪ್ರೇರಿತ [**ಸಹಸ್ರಭೃಷ್ಟಿಃ**] ಸಹಸ್ರ ಪ್ರಕಾರದ ದಾಹದಿಂದ ಕೂಡಿದ [**ಆಯಸಃ**] ಲೋಹದ ಶತ್ರು ಅಥವಾ ಆಗ್ನೇಯಾಸ್ತ್ರದಂತಿರುವ [**ವಜ್ರಃ**] ವಜ್ರರೂಪ ಕಿರಣಗಳು [**ಅಭ್ಯಾಯತ**] ನಾಲ್ಕೂ ಕಡೆಗಳಿಂದ ಪ್ರಾಪ್ತವಾಗುತ್ತವೋ, ಹಾಗೆ ಶತ್ರುಗಳ ಮೇಲೆ ನೀನು ಎರಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಮೇಘ ಮೊದಲಾದವುಗಳು ಸೂರ್ಯನನ್ನು ಗೆಲ್ಲಲಾರವೋ, ಹಾಗೆಯೇ ಶತ್ರುಗಳು ಕೂಡ ಧರ್ಮಾತ್ಮರಾದ ಸಭೆ ಮತ್ತು ಸಭಾಧಿಪತಿಗಳನ್ನು ತಿರಸ್ಕಾರ ಮಾಡಲಾರರು; ಗೆಲ್ಲಲಾರರು.

ಮತ್ತೆ ಮುಂದಿನ ಮಂತ್ರದಲ್ಲಿಯೂ ಕೂಡ ಸಭಾಧ್ಯಕ್ಷನ ಗುಣಗಳ ಉಪದೇಶ ಮಾಡಿದೆ.

ಯದ್ ವೃತ್ರಂ ತವ ಚಾಶನಿಂ ವಜ್ರೇಣ ಸಮಯೋಧಯಃ ।
ಅಹಿಮಿಂದ್ರ ಜಿಘಾಂಸತೋ ದಿವಿ ತೇ ಬದ್ಬಧೇ ಶವೋಽರ್ಚನ್ನನು ಸ್ವರಾಜ್ಯಮ್ ॥೧೩॥

ಪದಾರ್ಥ:- [ಇಂದ್ರ] ಹೇ ಪರಮೈಶ್ವರ್ಯಯುಕ್ತನಾದ ಸಭಾಧ್ಯಕ್ಷನೇ! [**ಸ್ವರಾಜ್ಯಮ್**] ನಿನ್ನ ರಾಜ್ಯದ [**ಅನ್ವರ್ಚನ್**] ಸತ್ಕಾರವನ್ನು ಮಾಡುತ್ತಾ ನೀನು [**ಯತ್**] ಯಾವ ರೀತಿ [**ದಿವಿ**] ಆಕಾಶದಲ್ಲಿ ಸೂರ್ಯನು ಯಾವ ರೀತಿ [**ಅಶನಿಂ**] ವಿದ್ಯುತ್ತಿನ ಪ್ರಹಾರವನ್ನು ಮಾಡಿ [**ವೃತ್ರಂ**] ಕುಟಿಲವಾದ [**ಅಹಿಂ**] ಮೇಘದ [**ಬದ್ಬಧೇ**] ಹನನ ಮಾಡುತ್ತಾನೋ ಅದೇ ರೀತಿ [**ವಜ್ರೇಣ**] ಶಸ್ತ್ರಾಸ್ತ್ರಗಳಿಂದ ಕೂಡಿದ ತನ್ನ ಸೇನೆಯನ್ನು ಶತ್ರುಗಳೊಂದಿಗೆ [**ಸಮಯೋಧಯಃ**] ಉತ್ತಮ ರೀತಿಯಲ್ಲಿ ಯುದ್ಧ ಮಾಡಿಸಿ ಶತ್ರುಗಳನ್ನು [**ಜಿಘಾಂಸತಃ**] ಕೊಲ್ಲುವವನಾದ [**ತವಾ**] ನಿನ್ನ [**ಶವಃ**] ಬಲ ಅರ್ಥಾತ್ ಸೇನೆಯ ವಿಜಯವು ಉಂಟಾಗುವಂತೆ ಈ ರೀತಿ ಮಾಡುವ [**ತೇ**] ನಿನ್ನ [**ಚ**] ಯಶಸ್ಸು ವೃದ್ಧಿಸುವುದು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ರೀತಿ ಸೂರ್ಯನು ತನ್ನ ಅಸಂಖ್ಯವಾದ ಕಿರಣಗಳಿಂದ ವಿದ್ಯುತ್ ಆಗು ಮೇಘಗಳ ಪರಸ್ಪರ ಯುದ್ಧವನ್ನು ಮಾಡಿಸುತ್ತಾನೋ ಅದೇ ರೀತಿ ಸೇನಾಪತಿಯು ಆಗ್ನೇಯ ಮೊದಲಾದ ಅಸ್ತ್ರಯುಕ್ತ ಸೇನೆಯನ್ನು ಶತ್ರು ಸೇನೆಯೊಂದಿಗೆ ಯುದ್ಧಕ್ಕೆ ತೊಡಗಿಸಬೇಕು. ಈ ರೀತಿಯ ಸೇನಾಪತಿಯು ಎಂದಿಗೂ ಪರಾಜಯವನ್ನು ಹೊಂದಲಾರನು.

ಮತ್ತೆ ಮುಂದಿನ ಮಂತ್ರದಲ್ಲಿಯೂ ಕೂಡ ಸಭಾಧ್ಯಕ್ಷನ ಗುಣಗಳ ಉಪದೇಶ ಮಾಡಿದೆ.

ಅಭಿಷ್ಟನೇ ತೇ ಅದ್ರಿವೋ ಯತ್ ಸ್ಥಾ ಜಗಚ್ಚ ರೇಜತೇ ।
ತ್ವಷ್ಟಾ ಚಿತ್ ತವ ಮನ್ಯವ ಇಂದ್ರ ವೇವಿಜ್ಯತೇ ಭಿಯಾ-ರ್ಚನ್ನನು ಸ್ವರಾಜ್ಯಮ್ ॥೧೪॥

ಪದಾರ್ಥ:- ಹೇ [ಅದ್ರಿವಃ] ಬಹುಮೇಧಾಯುಕ್ತ ಸೂರ್ಯನಂತಿರುವ [ಇಂದ್ರ] ಪರಮೈಶ್ವರ್ಯಯುಕ್ತ ಸಭಾಧ್ಯಕ್ಷನೇ! [**ಯತ್**] ಯಾವಾಗ [**ತೇ**] ನಿನ್ನ [**ಅಭೀಷ್ಟನೇ**] ಸರ್ವಥಾ ಉತ್ತಮ ನ್ಯಾಯಯುಕ್ತ ವ್ಯವಹಾರಗಳಲ್ಲಿ [**ಸ್ಥಾಃ**] ಸ್ಥಾವರ [**ಜಗಚ್ಚ**] ಜಂಗಮವು [**ರೇಜತೇ**] ಕಂಪಾಯಮಾನವಾಗುತ್ತದೋ ಹಾಗೂ [**ತ್ವಷ್ಟಾ**] ಶತ್ರುಭೇದಕ ಸೇನಾಪತಿ ಇರುವನೋ, [**ತವ**] ಅವನ [**ಮನ್ಯವೇ**] ಕ್ರೋಧ [**ಭಿಯಾಚಿತ್**] ಭಯದಿಂದಲೂ ಕೂಡ [**ವೇವಿಜ್ಯತೇ**] ಉದ್ವಿಗ್ನನಾಗುವನೋ, ಆಗ ತಾವು [**ಸ್ವರಾಜ್ಯಮ್**] ತಮ್ಮ ರಾಜ್ಯದ [**ಅನ್ವರ್ಚನ್**] ಸತ್ಕಾರ ಮಾಡುತ್ತಾ ಸುಖಿಗಳು ಆಗುವಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು, ಹೇಗೆ ಸೂರ್ಯನ ಯೋಗದಿಂದ ಪ್ರಾಣಧಾರಿಗಳು ತಮ್ಮ ತಮ್ಮ ಕರ್ಮಗಳಲ್ಲಿ ವರ್ತಿಸುವರೋ, ಮತ್ತು ಎಲ್ಲ ಭೂಗೋಳಗಳು ತಮ್ಮ ತಮ್ಮ ಕಕ್ಷೆಗಳಲ್ಲಿ ಯಥಾರೀತಿ ಭ್ರಮಣ ಮಾಡುತ್ತವೋ, ಹಾಗೆಯೇ ಸಭೆಯಲ್ಲಿ ಪ್ರಶಾಸನ ಮಾಡಿದ ರಾಜ್ಯದ ಸಂಯೋಗದಿಂದ ಎಲ್ಲ ಮನುಷ್ಯ ಮೊದಲಾದವರು ಪ್ರಾಣಿಧರ್ಮದೊಂದಿಗೆ ತಮ್ಮ. ತಮ್ಮ ವ್ಯವಹಾರಗಳಲ್ಲಿ ವರ್ತಿಸಿ ಸನ್ಮಾರ್ಗದಲ್ಲಿ ಅನುಕೂಲತೆಯಂತೆ ಗಮನಾಗಮನಗಳನ್ನು ಮಾಡಬೇಕು.

ಈಗ ಈಶ್ವರ ಮತ್ತು ಪರಮ ವಿದ್ವಾಂಸನನ್ನು ಪಡೆದು ವಿದ್ವಾಂಸರು ಏನೇನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ನಹಿ ನು ಯಾದಧೀಮಸೀ-ಂದ್ರಂ ಕೋ ವೀರ್ಯಾ ಪರಃ । ತಸ್ಮಿನ್ನೃಮ್ಣಮುತ ಕ್ರತುಂ
ದೇವಾ ಓಜಾಂಸಿ ಸಂ ದಧು-ರರ್ಚನ್ನನು ಸ್ವರಾಜ್ಯಮ್ ॥೧೫॥

ಪದಾರ್ಥ:- [ಪರಃ] ಉತ್ತಮ ಗುಣಯುಕ್ತರಾಜನು [ಸ್ವರಾಜ್ಯಮ್] ತನ್ನ ರಾಜ್ಯದ [ಅನ್ವರ್ಚನ್] ಅನುಕೂಲತೆಯಿಂದ ಸತ್ಕಾರ ಮಾಡುತ್ತಾ ವರ್ತಿಸುತ್ತಾನೆ. ಯಾವ ರಾಜ್ಯದಲ್ಲಿ [**ದೇವಾಃ**] ದಿವ್ಯಗುಣಯುಕ್ತ ವಿದ್ವಾಂಸರು [**ನೃಮ್ಣಮ್**] ಧನವನ್ನು [**ಕ್ರತುಮ್**] ಮತ್ತು ಬುದ್ಧಿ ಅಥವಾ ಪುರುಷಾರ್ಥವನ್ನು [**ಉತ**] ಮತ್ತು ಕೂಡ [ಓಜಾಂಸಿ] ಶರೀರ, ಆತ್ಮ ಮತ್ತು ಮನಸ್ಸಿನ ಪರಾಕ್ರಮವನ್ನು [**ಸಂದಧುಃ**] ಧಾರಣ ಮಾಡುತ್ತಾರೆ. ಹಾಗೂ ಪರಮೇಶ್ವರನನ್ನು ಪಡೆದು ನಾವು [**ವೀರ್ಯಾ**] ವಿದ್ಯೆ ಮೊದಲಾದ ವೀರ್ಯವನ್ನು [**ಅಧೀಮಸಿ**] ಪಡೆಯಲಿ. ಆ [**ಇಂದ್ರಮ್**] ಅನಂತ ಪರಾಕ್ರಮಿ ಜಗದೀಶ್ವರನನ್ನು ಅಥವಾ ಪೂರ್ಣ ಪರಾಕ್ರಮವುಳ್ಳ ರಾಜನನ್ನು ಪಡೆದು [**ಕಃ**] ಯಾವ ಮನುಷ್ಯನು ಧನವನ್ನು [**ನು**] ಶೀಘ್ರವಾಗಿ [**ನಹಿ ಯಾತ್**] ಪಡೆಯುವುದಿಲ್ಲವೋ, ಆ ರಾಜ್ಯದಲ್ಲಿ ಯಾವನು ಧನವನ್ನು ಹಾಗೂ ಬುದ್ಧಿ ಅಥವಾ ಪುರುಷಾರ್ಥ ಅಥವಾ ಬಲವನ್ನು ಶೀಘ್ರ ಧಾರಣಮಾಡುವುದಿಲ್ಲ.

ಭಾವಾರ್ಥ:- ಯಾವನೇ ಮನುಷ್ಯನು ಪರಮೇಶ್ವರ ಅಥವಾ ಪರಮವಿದ್ವಾಂಸನ ಪ್ರಾಪ್ತಿಯ ಹೊರತು ಉತ್ತಮ ವಿದ್ಯೆ ಮತ್ತು ಶ್ರೇಷ್ಠ ಸಾಮರ್ಥ್ಯವನ್ನು ಪಡೆಯಲಾರನು. ಈ ಹೇತುವಿನಿಂದ ಸದಾ ಅವರ ಆಶ್ರಯವನ್ನು ಮಾಡಬೇಕು.

ಮತ್ತೆ ಮನುಷ್ಯನು ಅವರನ್ನು ಪಡೆದು ಏನನ್ನು ಹೊಂದುವನು ಎಂಬುದನ್ನು ತಿಳಿಸಿದೆ.

ಯಾಮಥರ್ವಾ ಮನುಷ್ಪಿತಾ ದಧ್ಯಙ್ ಧಿಯಮತ್ನತ ।
ತಸ್ಮಿನ್ ಬ್ರಹ್ಮಾಣಿ ಪೂರ್ವಥೇ-ಂದ್ರ ಉಕ್ಥಾ ಸಮಗ್ಮತಾ-ರ್ಚನ್ನನು ಸ್ವರಾಜ್ಯಮ್ ॥೧೬॥

ಪದಾರ್ಥ:- ಹೇ ಮನುಷ್ಯರೇ! ನೀವು ಹೇಗೆ [**ಸ್ವರಾಜ್ಯಮ್**] ತಮ್ಮ ರಾಜ್ಯದ ಉನ್ನತಿಯಿಂದ ಎಲ್ಲರ [**ಅನ್ವರ್ಚನ್**] ಸತ್ಕಾರ ಮಾಡುತ್ತಾ [**ದಧ್ಯಙ್**] ಉತ್ತಮ ಗುಣಗಳನ್ನು ಪಡೆಯುವ [**ಅಥವಾ**] ಹಿಂಸೆ ಮೊದಲಾದ ದೋಷ ರಹಿತ [**ಪಿತಾ**] ವೇದದ ಪ್ರವಚನಕರ್ತನಾದ ಅಧ್ಯಾಪಕನು ಅಥವಾ [**ಮನುಃ**] ವಿಜ್ಞಾನವುಳ್ಳ ಮನುಷ್ಯರು [**ಯಾಮ್**] ಯಾವ [**ಧಿಯಮ್**] ಶುಭ ವಿದ್ಯೆ ಮೊದಲಾದ ಗುಣಕ್ರಿಯೆಗಳನ್ನು ಧಾರಣ ಮಾಡುತ್ತಾ ಬುದ್ಧಿಯನ್ನು ಪಡೆದು ವ್ಯವಹಾರಗಳಲ್ಲಿ ಸುಖಗಳನ್ನು [**ಅತ್ನತ**] ವಿಸ್ತಾರ ಮಾಡುತ್ತಾರೋ, ಹಾಗೆ ಇವುಗಳನ್ನು ಪಡೆದು [**ತಸ್ಮಿನ್**] ಆ ವ್ಯವಹಾರಗಳಲ್ಲಿ ವಿಸ್ತಾರ ಮಾಡಿರಿ ಮತ್ತು [ಇಂದ್ರೇ] ಉತ್ತಮವಾಗಿ ಸೇವಿಸಿದ ಪರಮೇಶ್ವರನಲ್ಲಿ [**ಪೂರ್ವಥಾ**] ಪೂರ್ವಪುರುಷರಂತೆ [**ಬ್ರಹ್ಮಾಣಿ**] ಉತ್ತಮ ಅನ್ನ ಧನ [**ಉಕ್ಥಾ**] ಹೇಳಲು ಯೋಗ್ಯವಾದ ವಚನಗಳನ್ನು ಪಡೆಯುತ್ತಾನೆ. [**ತಸ್ಮಿನ್**] ಅವನನ್ನು ಸೇವಿಸಿ ನೀವೂ ಕೂಡ ಅವುಗಳನ್ನು [**ಸಮಗ್ಮತ**] ಪಡೆಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯನು ಪರಮೇಶ್ವರನ ಉಪಾಸನೆ ಮಾಡುವ ವಿದ್ವಾಂಸರ ಸಂಗವನ್ನೂ, ಪ್ರೀತಿಯಿಂದ ಕರ್ಮಗಳನ್ನು ಮಾಡಿ ಸುಂದರ ಬುದ್ಧಿ, ಉತ್ತಮ ಅನ್ನ, ಧನ ಮತ್ತು ವೇದವಿದ್ಯೆಯಿಂದ ಸುಶಿಕ್ಷಿತ ಸಂಭಾಷಣಾವಾಣಿಯನ್ನೂ ಪಡೆದು, ಅವುಗಳನ್ನು ಎಲ್ಲ ಮನುಷ್ಯರಿಗಾಗಿ ಕೊಡಬೇಕು.

ಈ ಸೂಕ್ತದಲ್ಲಿ ಸಭೆ ಮೊದಲಾದವುಗಳ ಅಧ್ಯಕ್ಷ, ಸೂರ್ಯ, ವಿದ್ವಾಂಸ ಮತ್ತು ಈಶ್ವರ ಶಬ್ದಾರ್ಥಗಳ ವರ್ಣನೆ ಇರುವುದರಿಂದ ಪೂರ್ವ ಸೂಕ್ತದೊಂದಿಗೆ ಈ ಸೂಕ್ತಾರ್ಥವು ಸಂಬಂಧಪಟ್ಟಿದೆ ಎಂದು ತಿಳಿಯಬೇಕು.

ಈ ಅಧ್ಯಾಯದಲ್ಲಿ ಇಂದ್ರ, ಮರುತ್, ಅಗ್ನಿ, ಸಭೆ ಮೊದಲಾದವುಗಳ ಅಧ್ಯಕ್ಷ ಮತ್ತು ತನ್ನ ರಾಜ್ಯದ ಪಾಲನೆ ಮೊದಲಾದವುಗಳ ವರ್ಣನೆ ಮಾಡುವುದರಿಂದ ಚತುರ್ಥ ಅಧ್ಯಾಯದ ಅರ್ಥಕ್ಕೂ ಪಂಚಮ ಅಧ್ಯಾಯದ ಅರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಂಬತ್ತನೆಯ ಸೂಕ್ತ ಸಮಾಪ್ತವಾಯಿತು

॥ ಇತಿ ಪಂಚಮೋಽಧ್ಯಾಯಃ ॥

ಸೂಕ್ತ ೮೧

ಮಂತ್ರಸಂಖ್ಯೆ ೯ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಇಂದ್ರಃ । ಛಂದಃ - ಪಂಕ್ತಿಃ ।
ಸ್ವರಃ - ಪಂಚಮಃ, ೨ ಮಧ್ಯಮಃ.

ಈಗ ಮುಂದಿನ ಮಂತ್ರದಲ್ಲಿ ಸಭಾಧ್ಯಕ್ಷನ ಗುಣಗಳ ಉಪದೇಶ ಮಾಡಿದೆ.

ಇಂದ್ರೋ ಮದಾಯ ವಾವೃಧೇ ಶವಸೇ ವೃತ್ರಹಾ ನೃಭಿಃ ।
ತಮಿನ್ಮಹತ್ಸ್ವಾಜಿಷೂ-ತೇಮರ್ಭೇ ಹವಾಮಹೇ ಸ ವಾಜೇಷು ಪ್ರ ನೋಽವಿಷತ್ ॥೧॥

ಪದಾರ್ಥ:- ನಾವು ಯಾವ **[ವೃತ್ರಹಾ]** ಸೂರ್ಯನಂತೆ **[ಇಂದ್ರಃ]** ಸೇನಾಪತಿ **[ನೃಭಿಃ]** ಶೂರವೀರ ನಾಯಕರೊಂದಿಗೆ **[ಶವಸೇ]** ಬಲ ಮತ್ತು **[ಮದಾಯ]** ಆನಂದಕ್ಕಾಗಿ **[ವಾವೃಧೇ]** ಹೆಚ್ಚಿಸುತ್ತೇವೆ. ಯಾವ **[ಮಹತ್ಸು]** ದೊಡ್ಡ **[ಆಜಿಷು]** ಸಂಗ್ರಾಮಗಳು **[ಉತಾಪಿ]** ಮತ್ತು ಕೂಡ **[ಅಭೇಕ]** ಚಿಕ್ಕ ಸಂಗ್ರಾಮಗಳಲ್ಲಿ **[ಹವಾಮಹೇ]** ಕರೆಯುತ್ತೇವೆ ಮತ್ತು **[ತಮಿತ್]** ಅವನನ್ನು **[ಈಮ್]** ಎಲ್ಲ ಪ್ರಕಾರಗಳಿಂದ ಸೇನಾಧ್ಯಕ್ಷನು ಹೇಳುತ್ತಾನೆ. **[ಸಃ]** ಅವನು **[ವಾಜೇಷು]** ಸಂಗ್ರಾಮಗಳಲ್ಲಿ **[ನಃ]** ನಮ್ಮನ್ನು **[ಪ್ರಾವಿಷತ್]** ಉತ್ತಮವಾಗಿ ರಕ್ಷಿಸಲಿ.

ಭಾವಾರ್ಥ:- ಪೂರ್ಣವಿದ್ವಾಂಸನೂ, ಅತಿಬಲಿಷ್ಠನೂ, ಧಾರ್ಮಿಕನೂ, ಎಲ್ಲರ ಹಿತವನ್ನು ಬಯಸುವವನೂ, ಶಸ್ತ್ರಾಸ್ತ್ರ ಕ್ರಿಯೆ ಮತ್ತು ಶಿಕ್ಷಣಗಳಲ್ಲಿ ಅತಿ ಚತುರನೂ, ಭೃತ್ಯರಾದ ವೀರ ಪುರುಷರು ಮತ್ತು ಯೋಧರನ್ನು ತಂದೆಯಂತೆ ದೇಶ ಕಾಲಾನುಸಾರವಾಗಿ ಯುದ್ಧ ಮಾಡುವುದರಲ್ಲಿ ಸಮಯಾನುಕೂಲವಾಗಿ ವ್ಯವಹಾರಗಳನ್ನು ತಿಳಿದಿರುವವನೂ ಆದವನನ್ನೇ ಮನುಷ್ಯರು ಸೇನಾಪತಿಯನ್ನಾಗಿ ಮಾಡುವುದು ಉಚಿತವಾಗಿದೆ, ಬೇರೆಯವನನ್ನಲ್ಲ.

ಮತ್ತೆ ಅವನು ಹೇಗಿರಬೇಕು ಈ ವಿಷಯವನ್ನು ತಿಳಿಸಲಾಗಿದೆ.

ಅಸಿ ಹಿ ವೀರ ಸೇನ್ಯೋಽಸಿ ಭೂರಿ ಪರಾದದಿಃ ।
ಅಸಿ ದಭ್ರಸ್ಯ ಚಿದ್ ವೃಧೋ ಯಜಮಾನಾಯ ಶಿಕ್ಷಸಿ ಸುನ್ವತೇ ಭೂರಿ ತೇ ವಸು ॥೨॥

ಪದಾರ್ಥ:- ಹೇ ವೀರಸೇನಾಪತಿ! ನೀನು **[ಹಿ]** ನಿಶ್ಚಯವಾಗಿ **[ಭೂರಿ]** ಸೈನ್ಯಃ **[ಅಸಿ]** ದೊಡ್ಡ ಸೇನೆಗಳಿಂದ ಕೂಡಿರುವೆ. **[ಭೂರಿ ಪರಾದದಿಃ]** ಬಹಳ ಪ್ರಕಾರಗಳಿಂದ ಶತ್ರುಗಳ ಬಲವನ್ನು ನಷ್ಟಗೊಳಿಸಿ ಗ್ರಹಣ ಮಾಡುವವನಾಗಿರುವೆ. **[ದಭ್ರಸ್ಯ]** ಚಿಕ್ಕ **[ಚಿತ್]** ಮತ್ತು **[ಮಹತಃ]** ದೊಡ್ಡ ಯುದ್ಧಗಳನ್ನು ಗೆಲ್ಲುವವನು **[ಅಸಿ]** ಆಗಿರುವೆ. **[ವೃಧಃ]** ಬಲದಿಂದ ವೃದ್ಧಿಸುವಂತಹ ವೀರರನ್ನು **[ಶಿಕ್ಷಸಿ]** ಶಿಕ್ಷಿಸುತ್ತೀಯೆ. ಆ **[ಸುನ್ವತೇ]** ವಿಜಯವನ್ನು ಪ್ರಾಪ್ತಿಪಡಿಸುವ **[ಯಜಮಾನಾಯ]** ಸುಖಕೊಡುವ **[ತೇ]** ನಿನಗಾಗಿ **[ಭೂರಿ]** ಬಹಳ **[ವಸು]** ಧನವು ಪ್ರಾಪ್ತವಾಗಲಿ.

ಭಾವಾರ್ಥ:- ಭೃತ್ಯರನ್ನು ಹೇಗೆ ಸೇನಾಪತಿಯು ಸೇನಾಶಿಕ್ಷಣದಿಂದ ಪಾಲನೆ ಮಾಡಿ ಸುಖಪಡಿಸುವನೋ, ಹಾಗೆಯೇ ಸೇನೆಯಲ್ಲಿರುವ ಭೃತ್ಯರಿಂದ ಸೇವಾಪತಿಯ ಪಾಲನೆ ಮತ್ತು ಅವನನ್ನು ಆನಂದ ಪಡಿಸುವುದು ಯೋಗ್ಯವಾಗಿದೆ.

ಮತ್ತೆ ಇವರು ಪರಸ್ಪರ ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಿದೆ.

ಯದುದೀರತ ಆಜಯೋ ಧೃಷ್ಣವೇ ಧೀಯತೇ ಧನಾ । ಯುಕ್ಷ್ವಾ ಮದಚ್ಯುತಾ ಹರೀ
ಕಂ ಹನಃ ಕಂ ವಸೌ ದಧೋಽಸ್ಮಾँ ಇಂದ್ರ ವಸೌ ದಧಃ ॥೩॥

ಪದಾರ್ಥ:- ಹೇ **[ಇಂದ್ರ]** ಸೇನೆಯ ಸ್ವಾಮಿಯೇ! **[ಯತ್]** ಯಾವಾಗ **[ಆಜಯಃ]** ಸಂಗ್ರಾಮವು **[ಉದೀರತೇ]** ಉತ್ಕೃಷ್ಟತೆಯಿಂದ ಪ್ರಾಪ್ತವಾಗುವುದೋ, ಆಗ **[ಧೃಷ್ಣವೇ]** ಧೃಢತೆಗಾಗಿ **[ಧನಾ]** ಧನವನ್ನು **[ಧೀಯತೇ]** ಧಾರಣ ಮಾಡುತ್ತೀಯೋ, ಆ ನೀನು **[ಮದಚ್ಯುತಾ]** ಮಹಾಬಲಿಷ್ಠನು **[ಹರೀ]** ಕುದುರೆಗಳನ್ನು ರಥಾದಿಗಳಲ್ಲಿ **[ಯುಕ್ಷ್ವ]** ಹೂಡಿ **[ಕಂ]** ಯಾವನೇ ಶತ್ರುವನ್ನು **[ಹನಃ]** ಕೊಂದು **[ಕಂ]** ಯಾವನೇ ಮಿತ್ರನನ್ನು **[ವನೌ]** ಧನಾಗಾರದಲ್ಲಿ **[ದಧಃ]** ಸ್ಥಾಪಿಸಿ ಮತ್ತು **[ಅಸ್ಮಾನ್]** ನಮ್ಮನ್ನು **[ವಸೌ]** ಸಂಪತ್ತಿನಲ್ಲಿ **[ದಧಃ]** ಅಧಿಕಾರಿಗಳನ್ನಾಗಿಸಲಿ.

ಭಾವಾರ್ಥ:- ಯಾವಾಗ ಯುದ್ಧ ಮಾಡಬೇಕಾಗುತ್ತದೋ ಆಗ ಸೇನೆಯ ಮೆರವಣಿಗೆಯು ಶತಘ್ನೀ, ಭುಶುಂಡೀ ಮೊದಲಾದ ಶಸ್ತ್ರಗಳು ಆಗ್ನೇಯ ಮೊದಲಾದ ಅಸ್ತ್ರಗಳು ಮತ್ತು ಭೋಜನ, ಹೊದಿಕೆ ಮೊದಲಾದ ಸಾಮಗ್ರಿಗಳಿಂದ ಪೂರ್ಣವಾಗಿ, ಯಾವನೇ ಶತ್ರುವನ್ನು ಕೊಂದು ಯಾವನೇ ಮಿತ್ರನನ್ನು ಸತ್ಕರಿಸಿ ಯುದ್ಧಾದಿ ಕರ್ಮಗಳಿಂದ ಧರ್ಮಾತ್ಮರನ್ನು ಒಗ್ಗೂಡಿಸಿ ಯುಕ್ತಿಯಿಂದ ಯುದ್ಧಮಾಡಿಸಿ ಸದಾ ವಿಜಯವಂತರಾಗಬೇಕು.

ಮತ್ತೆ ಸೇನಾಪತಿ ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಕ್ರತ್ವಾ ಮಹಾँ ಅನುಷ್ವಧಂ ಭೀಮ ಆ ವಾವೃಧೇ ಶವಃ । ಶ್ರಿಯ ಋಷ್ವ ಉಪಾಕಯೋ-ರ್ನಿ
ಶಿಪ್ರೀ ಹರಿವಾನ್ ದಧೇ ಹಸ್ತಯೋರ್ವಜ್ರಮಾಯಸಮ್ ॥೪॥

ಪದಾರ್ಥ:- **[ಹರಿವಾನ್]** ಬಹಳ ಉತ್ತಮ ಅಶ್ವಗಳಿಂದ ಕೂಡಿರುವ **[ಶಿಪ್ರೀ]** ಶತ್ರುಗಳನ್ನು ಗೋಳು ಹುಯ್ದುಕೊಳ್ಳಲು **[ಭೀಮಃ]** ಮತ್ತು ಭಯಪಡಿಸುವ **[ಮಹಾನ್]** ದೊಡ್ಡ **[ಋಷ್ವಃ]** ಪ್ರಾಪ್ತವಿದ್ಯಾ ಸೇನಾಪತಿಯು **[ಶವಃ]** ಬಲ **[ಕ್ರತ್ವಾ]** ಪ್ರಜ್ಞೆ ಅಥವಾ ಕರ್ಮಗಳಿಂದ **[ಅನುಷ್ವಧಮ್]** ಅನುಕೂಲಕರ ಅನ್ನವನ್ನು **[ನಿ ವವೃಧೇ]** ಅತ್ಯಂತವಾಗಿ ಹೆಚ್ಚಿಸುವನು. **[ಶ್ರಿಯೇ]** ಶೋಭೆ ಮತ್ತು ಲಕ್ಷ್ಮಿಯ ಅರ್ಥದಲ್ಲಿ **[ಉಪಾಕಯೋಃ]** ಸಮೀಪದಲ್ಲಿಯೇ ಪ್ರಾಪ್ತವಾಗುವ ತನ್ನ ಮತ್ತು ಶತ್ರುಗಳ ಸೇನೆಯ ಸಮೀಪ **[ಹಸ್ತಯೋಃ]** ಹಸ್ತಗಳಲ್ಲಿ **[ಆಯಸಮ್]** ಲೋಹ ಮೊದಲಾದವುಗಳಿಂದ ಮಾಡಿದ **[ವಜ್ರಮ್]** ಶಸ್ತ್ರಸಮೂಹವನ್ನು **[ಆದಧೇ]** ಧಾರಣ ಮಾಡಿ ಶತ್ರುಗಳನ್ನು ಗೆಲ್ಲುತ್ತಾನೆ. ಅವನೇ ರಾಜ್ಯಾಧಿಕಾರಿಯಾಗುವನು.

ಭಾವಾರ್ಥ:- ಬುದ್ಧಿವಂತನೂ, ದೊಡ್ಡ ದೊಡ್ಡ ಉತ್ತಮ ಗುಣಗಳಿಂದ ಕೂಡಿದವನೂ, ಶತ್ರುಗಳನ್ನು ಭಯಪಡಿಸುವವನೂ, ಸೇನೆಯ ಶಿಕ್ಷಕನೂ, ಅತಿಯಾಗಿ ಯುದ್ಧಮಾಡುವ ಯಾವ ಪುರುಷನಿರುವನೋ, ಅವನನ್ನೇ ಸೇನಾಪತಿಯನ್ನಾಗಿ ಮಾಡಿ, ಧರ್ಮದಿಂದ ರಾಜ್ಯಪಾಲನೆಯ ನ್ಯಾಯವ್ಯವಸ್ಥೆಯನ್ನು ಮನುಷ್ಯರು ಮಾಡಿಸುವುದು ಯೋಗ್ಯವಾಗಿದೆ.

ಈಗ ಈಶ್ವರನ ಗುಣಗಳ ವಿಷಯದ ಉಪದೇಶ ಮಾಡಲಾಗಿದೆ.

ಆ ಪಪ್ರೌ ಪಾರ್ಥಿವಂ ರಜೋ ಬದ್ಬಧೇ ರೋಚನಾ ದಿವಿ ।
ನ ತ್ವಾವಾँ ಇಂದ್ರ ಕಶ್ಚನ ನ ಜಾತೋ ನ ಜನಿಷ್ಯತೇಽತಿ ವಿಶ್ವಂ ವವಕ್ಷಿಥ ॥೫॥

ಪದಾರ್ಥ:- ಹೇ [ಇಂದ್ರ] ಪರಮೈಶ್ವರ್ಯದಿಂದ ಕೂಡಿರುವ ಈಶ್ವರನೇ! [**ಕಶ್ಚನ**] ಯಾವನೂ ಕೂಡ [**ತ್ವಾವಾನ್**] ನಿನ್ನಂತೆ [**ನಜಾತಃ**] ಹುಟ್ಟಿಲ್ಲ, [ನ ಜನಿಷ್ಯತೇ] ಹುಟ್ಟುವುದೂ ಇಲ್ಲ. ಮತ್ತು ನೀನು [**ವಿಶ್ವಮ್**] ಜಗತ್ತನ್ನು [**ವವಕ್ಷಿಥ**] ಯಥಾಯೋಗ್ಯ ನಿಯಮದಲ್ಲಿ ಇಡುತ್ತೀಯೆ. ಮತ್ತು [**ಪಾರ್ಥಿವಮ್**] ಪೃಥಿವೀ ಮತ್ತು ಆಕಾಶದಲ್ಲಿರುವ [**ರಜಃ**] ಪರಮಾಣುಗಳು ಮತ್ತು ಲೋಕದಲ್ಲಿ [**ಆ ಪಪ್ರೌ**] ಎಲ್ಲ ಕಡೆಗಳಿಂದ ವ್ಯಾಪ್ತನಾಗುತ್ತಾ ಇರುತ್ತೀಯೆ. [**ದಿವಿ**] ಪ್ರಕಾಶರೂಪ ಸೂರ್ಯಾದಿ ಜಗತ್ತಿನಲ್ಲಿ [**ರೋಚನಾ**] ಪ್ರಕಾಶಮಾನ ಭೂಗೋಳವನ್ನು [**ಅತಿಬದ್ಧಧೇ**] ಒಂದು ಇನ್ನೊಂದು ವಸ್ತುವಿನ ಘರ್ಷಣೆಯಿಂದ ಬದ್ಧವಾಗುವುದು. ಆ ನೀನು ಎಲ್ಲರಿಗೂ ಉಪಾಸ್ಯನಾದ ದೇವನಾಗಿರುವೆ.

ಭಾವಾರ್ಥ:- ಹೇ ಮನುಷ್ಯರೇ! ತಾವು ಯಾವನು ಈ ಜಗತ್ತೆಲ್ಲವನ್ನು ರಚಿಸಿ, ವ್ಯಾಪ್ತನಾಗಿ ರಕ್ಷಿಸಿರುವನೋ, ಯಾವನು ಜನ್ಮ ಮತ್ತು ಉಪಮಾರಹಿತನೋ, ಅವನಂತೆ ಯಾವುದೇ ವಸ್ತುವಿಲ್ಲದಿರುವಾಗ ಆ ಪರಮೇಶ್ವರನಿಗಿಂತಲೂ ಅಧಿಕನು ಯಾವನು ಹೇಗೆ ಆಗಬಲ್ಲನು? ಅವನ ಉಪಾಸನೆಯನ್ನು ಬಿಟ್ಟು ಅನ್ಯನನ್ನೂ ಬೇರೆ ವಸ್ತುವಿನ ಗ್ರಹಣ ಅಥವಾ ಗಣನೆಯನ್ನೂ ಮಾಡಬೇಡಿ.

ಮತ್ತೆ ಆ ಪರಮಾತ್ಮನು ಹೇಗಿರುವನು ಎಂಬುದನ್ನು ತಿಳಿಸಿದೆ.

ಯೋ ಅರ್ಯೋ ಮರ್ತಭೋಜನಂ ಪರಾದದಾತಿ ದಾಶುಷೇ । ಇಂದ್ರೋ ಅಸ್ಮಭ್ಯಂ
ಶಿಕ್ಷತು ವಿ ಭಜಾ ಭೂರಿ ತೇ ವಸು ಭಕ್ಷೀಯ ತವ ರಾಧಸಃ ॥೬॥

ಪದಾರ್ಥ:- ಹೇ ವಿದ್ವನ್! [ಯಃ] ಯಾವ [ಇಂದ್ರ] ಪರಮೈಶ್ವರ್ಯವನ್ನು ಕೊಡುವ [**ಅರ್ಯಃ**] ಈಶ್ವರನು [**ತೇ**] ನಿನ್ನ [**ದಾಶುಷೇ**] ದಾತನು ಮತ್ತು [**ಅಸ್ಮಭ್ಯಮ್**] ನಮಗಾಗಿ [**ಭೂರಿ**] ಬಹಳವಾಗಿ [**ವಸು**] ಧನವನ್ನು [**ಮರ್ತಭೋಜನಮ್**] ಮನುಷ್ಯರ ಭೋಜನಾದಿ ಪದಾರ್ಥಗಳನ್ನು [**ಪರಾದದಾತಿ**] ಕೊಡುವವನೋ, ಆ ಈಶ್ವರ ನಿರ್ಮಿತ ಪದಾರ್ಥಗಳನ್ನು ನೀನು ನಮಗೆ ಯಾವಾಗಲೂ [**ಶಿಕ್ಷತು**] ತಿಳಿಸಿ ಕೊಡು. ಮತ್ತು [**ತವ**] ನಿನ್ನ [**ರಾಧಸಃ**] ಶಿಕ್ಷಣ ಕಾರ್ಯರೂಪಧನವನ್ನು ನಾನು [**ಭಕ್ಷೀಯ**] ಸೇವಿಸುತ್ತೇನೆ.

ಭಾವಾರ್ಥ:- ಈಶ್ವರನು ಈ ಜಗತ್ತನ್ನು ರಚಿಸಿ ಧಾರಣ ಮಾಡಿ ಜೀವರುಗಳಿಗೆ ಕೊಡದಿದ್ದಲ್ಲಿ ಯಾವನಿಗೂ ಯಾವುದೇ ಭೋಗ ಸಾಮಗ್ರಿಗಳು ದೊರೆಯುತ್ತಿರಲಿಲ್ಲ. ಆದುದರಿಂದ ವಿದ್ವಾಂಸರು ಎಲ್ಲರ ಸುಖಕ್ಕಾಗಿ ವಿದ್ಯೆಯ ವಿಸ್ತಾರ ಮಾಡುವುದು ಯೋಗ್ಯವಾಗಿದೆ.

ಮತ್ತೆ ಆ ಈಶ್ವರನ ಉಪಾಸಕನು ಹೇಗಿರಬೇಕು ಎಂಬುದನ್ನು ತಿಳಿಸಿದೆ.

ಮದೇಮದೇ ಹಿ ನೋ ದದಿ-ರ್ಯೂಥಾ ಗವಾಮೃಜುಕ್ರತುಃ ।
ಸಂ ಗೃಭಾಯ ಪುರೂ ಶತೋ-ಭಯಾಹಸ್ತ್ಯಾ ವಸು ಶಿಶೀಹಿ ರಾಯ ಆ ಭರ ॥೭॥

ಪದಾರ್ಥ:- ಹೇ ವಿದ್ವಾನ್! [**ಋಜುಕ್ರತುಃ**] ಸರಳ ಜ್ಞಾನ ಮತ್ತು ಕರ್ಮಯುಕ್ತ [**ದದಿಃ**] ದಾತರಾದ ತಾವು ಈಶ್ವರನ ಆಜ್ಞಾಪಾಲನೆ ಮತ್ತು ಉಪಾಸನೆಯಿಂದ [**ಮದೇ ಮದೇ**] ಆನಂದ ಆನಂದಗಳಲ್ಲಿ [**ಹಿ**] ನಿಶ್ಚಯದಿಂದ [**ನಃ**] ನಮಗಾಗಿ [**ಉಭಯಾಹಸ್ತ್ಯಾ**] ಎರಡೂ ಕೈಗಳ ಕ್ರಿಯೆಗಳಲ್ಲಿ ಉತ್ತಮವೂ [**ಪುರು**] ಬಹಳವೂ [**ಶತ**] ನೂರಾರು [**ವಸು**] ದ್ರವ್ಯಗಳ [**ಶಿಶೀಹಿ**] ವ್ಯವಸ್ಥೆ ಮಾಡಿರಿ. [**ಗವಾಮ್**] ಕಿರಣ, ಇಂದ್ರಿಯಗಳು ಮತ್ತು ಪಶುಗಳ [**ಯೂಥಾ**] ಸಮೂಹಗಳನ್ನು [**ಆಭರ**] ನಾಲ್ಕೂ ಕಡೆಗಳಿಂದ ಧಾರಣ ಮಾಡಿಸಿರಿ. [**ರಾಯಃ**] ಧನವನ್ನು [**ಸಂಗೃಭಾಯ**] ಸಮ್ಯಕ್ ಗ್ರಹಣ ಮಾಡಿಸಿರಿ.

ಭಾವಾರ್ಥ:- ಹೇ ಮನುಷ್ಯರೇ! ಎಲ್ಲ ಆನಂದಗಳನ್ನು ಕೊಡುವವನು, ಎಲ್ಲ ಸಾಧನ-ಸಾಧ್ಯರೂಪ ಪದಾರ್ಥಗಳ ಉತ್ಪಾದಕನು, ಎಲ್ಲ ಸಂಪತ್ತನ್ನು ಕೊಡುತ್ತಾನೋ, ಅವನೇ ನಮ್ಮ ಉಪಾಸ್ಯನು, ಅನ್ಯರಲ್ಲ.

ಮತ್ತೆ ಆ ಸಭಾಪತಿ ಹೇಗಿರಬೇಕು ಎಂಬುದನ್ನು ತಿಳಿಸಿದೆ.

ಮಾದಯಸ್ವ ಸುತೇ ಸಚಾ ಶವಸೇ ಶೂರ ರಾಧಸೇ ।
ವಿದ್ಮಾ ಹಿ ತ್ವಾ ಪುರುವಸು-ಮುಪ ಕಾಮಾಂತ್ಸಸೃಜ್ಮಹೇಽಥಾ ನೋಽವಿತಾ ಭವ ॥೮॥

ಪದಾರ್ಥ:- [**ಶೂರ**] ದುಷ್ಟರು, ದೋಷಿಗಳು ಮತ್ತು ಶತ್ರುಗಳನ್ನು ನಿವಾರಣೆ ಮಾಡುವ ನಾವು [**ಸುತೇ**] ಈ ಉತ್ಪನ್ನವಾಗಿರುವ ಜಗತ್ತಿನಲ್ಲಿ [**ಪುರುವಸುಮ್**] ಬಹಳ ಜನರು ನಿವಸಿಸುವಂತಹ [**ತ್ವಾ**] ನಿನ್ನ [**ಉಪ**] ಆಶ್ರಯ ಮಾಡಿ [**ವಿದ್ಮ**] ತಿಳಿದೂ ಕೂಡ ನೀನು [**ನಃ**] ನಮ್ಮ [**ಅವಿತಾ**] ರಕ್ಷಕನು [**ಭವ**] ಆಗು ಮತ್ತು ಈ ಜಗತ್ತಿನಲ್ಲಿ [**ಸಚಾ**] ಸಂಯುಕ್ತ [**ಶವಸೇ**] ಬಲಕಾರಕ [**ರಾಧಸೇ**] ಧನಕ್ಕಾಗಿ [**ಮಾದಯಸ್ವ**] ಆನಂದಪಡಿಸು.

ಭಾವಾರ್ಥ:- ಮನುಷ್ಯರು ಸೇನಾಪತಿಯ ಆಶ್ರಯದ ಹೊರತು ಶತ್ರುವಿನ ಜಯ, ಕಾರ್ಯಗಳ ಸಿದ್ಧಿ, ತಮ್ಮ ರಕ್ಷಣೆ, ಉತ್ತಮ ಧನ ಮತ್ತು ಪರಮಸುಖವನ್ನು ಪಡೆಯಲಾರರು.

ಈಗ ಈಶ್ವರನು ಹೇಗಿರುವನು ಎಂಬುದನ್ನು ತಿಳಿಸಿದೆ.

ಏತೇ ತ ಇಂದ್ರ ಜಂತವೋ ವಿಶ್ವಂ ಪುಷ್ಯಂತಿ ವಾರ್ಯಮ್ । ಅಂತರ್ಹಿ ಖ್ಯೋ
ಜನಾನಾಮರ್ಯೋ ವೇದೋ ಅದಾಶುಷಾಂ ತೇಷಾಂ ನೋ ವೇದ ಆ ಭರ ॥೯॥

ಪದಾರ್ಥ:- ಹೇ [ಇಂದ್ರ] ಪರಮೇಶ್ವರ! [**ತೇ**] ನಿನ್ನ ಸೃಷ್ಟಿಯಲ್ಲಿ [**ಏತೇ**] ಯಾವ [**ಜಂತವಃ**] ಜೀವಿಗಳು [**ವಾರ್ಯಮ್**] ಸ್ವೀಕರಿಸಲು ಯೋಗ್ಯವು [**ವಿಶ್ವಮ್**] ಜಗತ್ತನ್ನು [**ಪುಷ್ಯಂತಿ**] ಪುಷ್ಟ ಮಾಡುತ್ತವೋ [**ತೇಷಾಮ್**] ಅವು [**ಜನಾನಾಮ್**] ಮನುಷ್ಯ ಮೊದಲಾದ ಪ್ರಾಣಿಗಳ [**ಅಂತಃ**] ಮಧ್ಯದಲ್ಲಿರುವ [**ಅದಾಶುಷಮ್**] ದಾನಾದಿ ಕರ್ಮರಹಿತ ಮನುಷ್ಯರ [**ಅರ್ಯಃ**] ಈಶ್ವರನಾದ ನೀನು [**ವೇದಃ**] ಯಾವುದರಿಂದ ಸುಖವುಂಟಾಗುವುದೋ ಅದನ್ನು [**ಹಿ**] ನಿಶ್ಚಯಮಾಡಿ [**ಖ್ಯಃ**] ಉಪದೇಶ ಮಾಡುತ್ತೀಯೆ. ಆ ನೀನು [**ನಃ**] ನಮಗಾಗಿ [**ವೇದಃ**] ವಿಜ್ಞಾನರೂಪ ಧನದ [**ಆಭರ**] ದಾನಮಾಡು.

ಭಾವಾರ್ಥ:- ಹೇ ಮನುಷ್ಯರೇ! ಯಾವ ಈಶ್ವರನು ಒಳಗೂ-ಹೊರಗೆ ಎಲ್ಲೆಡೆಯೂ ವ್ಯಾಪ್ತನಾಗಿ ಎಲ್ಲ ಒಳ-ಹೊರಗಿನ ವ್ಯವಹಾರಗಳನ್ನೂ ತಿಳಿಯುತ್ತಾ ಸತ್ಯದ ಉಪದೇಶ ಮತ್ತು ಎಲ್ಲ ಜೀವಿಗಳ ಹಿತವನ್ನು ಬಯಸುವನೋ ಅವನ ಆಶ್ರಯಪಡೆದು ಪರಮಾರ್ಥ ಮತ್ತು ವ್ಯವಹಾರಗಳನ್ನು ಸಿದ್ಧಪಡಿಸಿ ಸುಖಗಳನ್ನು ನೀವು ಪಡೆದುಕೊಳ್ಳಿರಿ.

ಈ ಸೂಕ್ತದಲ್ಲಿ ಸೇನಾಪತಿ, ಈಶ್ವರ ಮತ್ತು ಸಭಾಧ್ಯಕ್ಷನ ಗುಣಗಳ ವರ್ಣನೆ ಮಾಡುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಂಭತ್ತೊಂದನೆಯ ಸೂಕ್ತ ಸಮಾಪ್ತ

ಸೂಕ್ತ ೮೨

ಮಂತ್ರಸಂಖ್ಯೆ ೬ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಇಂದ್ರಃ । ಛಂದಃ - ಪಂಕ್ತಿಃ, ೬ ಜಗತೀ ।
ಸ್ವರಃ - ಪಂಚಮಃ, ೬ ನಿಷಾಧಃ.

ಮತ್ತೆ ಮನುಷ್ಯನು ಅವರನ್ನು ಪಡೆದು ಏನನ್ನು ಹೊಂದುವನು ಎಂಬುದನ್ನು ತಿಳಿಸಿದೆ.

ಉಪೋ ಷು ಶೃಣುಹೀ ಗಿರೋ ಮಘವನ್ ಮಾತಥಾ ಇವ । ಯದಾ ನಃ ಸೂನೃತಾವತಃ
ಕರ ಆದರ್ಥಯಾಸ ಇದ್ ಯೋಜಾ ನ್ವಿಂದ್ರ ತೇ ಹರೀ ॥೧॥

ಪದಾರ್ಥ:- ಹೇ [**ಇಂದ್ರ**] ಸೇನಾಪತಿ! [**ತೇ**] ನಿನ್ನ [**ಹರೀ**] ಧಾರಣ ಆವರ್ಷಣಾಗಳಿಗಾಗಿ ಕುದುರೆ ಅಥವಾ ಅಗ್ನಿ ಮೊದಲಾದ ಪದಾರ್ಥಗಳಿವೆಯೋ, ಅವುಗಳನ್ನು [**ನು**] ಶೀಘ್ರವಾಗಿ [**ಯೋಜ**] ಯುಕ್ತಗೊಳಿಸು. ಪ್ರಿಯವಾದ ಮಾತುಗಳನ್ನಾಡುವ ವಿದ್ವಾಂಸನಿಂದ [**ಅರ್ಥಯಾಸೀ**] ಯಾಚನೆ ಮಾಡು. [**ಮಘವನ್**] ಉತ್ತಮ ಗುಣಗಳನ್ನು ಪ್ರಾಪ್ತಿಮಾಡಿಸುವ [**ನಃ**] ನಮ್ಮನ್ನು [**ಸೂನೃತಾವತಃ**] ಸತ್ಯವಾಣಿಯಿಂದ ಕೂಡಿರುವಂತೆ [**ಕರ**] ಮಾಡು.

ಭಾವಾರ್ಥ:- ಹೇಗೆ ರಾಜನು ಈಶ್ವರನ ಸೇವೆಯನ್ನು ಅಥವಾ ಸೇನಾಪತಿಯಿಂದ ಅಥವಾ ಸೇನಾಪತಿಯು ಪಾಲಿಸುವ ಸೇನೆಯು ಸುಖವನ್ನು ಪಡೆಯುತ್ತದೆಯೋ, ಹಾಗೆ ಸಭಾಧ್ಯಕ್ಷನು ಪ್ರಜೆಗಳ ಮತ್ತು ಸೇನೆಗೆ ಅನುಕೂಲವಾಗಿ ವರ್ತಿಸಲಿ. ಹಾಗೆಯೇ ಅವನಿಗೆ ಅನುಕೂಲವಾಗಿ ಪ್ರಜೆಗಳು ಮತ್ತು ಸೈನ್ಯವು ಆಚರಣೆ ಮಾಡಲಿ.

ಮತ್ತೆ ಅವನು ಹೇಗಿರಬೇಕು ಎಂಬುದನ್ನು ತಿಳಿಸಿದೆ.

ಅಕ್ಷನ್ನಮೀಮದಂತ-ಹ್ಯವ ಪ್ರಿಯಾ ಅಧೂಷತ । ಅಸ್ತೋಷತ ಸ್ವಭಾನವೋ ವಿಪ್ರಾ ನವಿಷ್ಠಯಾ
ಮತೀ ಯೋಜಾ ನ್ವಿಂದ್ರ ತೇ ಹರೀ ॥೨॥

ಪದಾರ್ಥ:- ಹೇ [**ಇಂದ್ರ**] ಸಭಾಪತಿ! [**ತೇ**] ನಿನ್ನ [**ಹರೀ**] ಧಾರಣ ಆಕರ್ಷಣಾ ಮಾಡುವ ವಾಹನಗಳು ಅಥವಾ ಕುದುರೆಗಳು ಇದೆಯೋ ಅವುಗಳನ್ನು ನಮಗಾಗಿ [**ನು ಯೋಜ**] ಶೀಘ್ರವಾಗಿ ಯುಕ್ತಗೊಳಿಸು. ಹೇ [**ಸ್ವಭಾನವಃ**] ಸ್ವಪ್ರಕಾಶಕಗಳಾದ ಸೂರ್ಯಾದಿಗಳಂತೆ ಇರುವ [**ವಿಪ್ರಾಃ**] ವಿಶೇಷ ಪ್ರಜ್ಞಾವಂತರೇ! ತಾವು [**ನವಿಷ್ಠಯಾ**] ಅತಿಶಯವಾದ ನವೀನ [**ಮತೀ**] ಬುದ್ಧಿಯಿಂದ ಕೂಡಿದವರಾಗಿ [**ಪ್ರಿಯಾಃ**] ಪ್ರಿಯರಾಗಿರಿ. ಎಲ್ಲರಿಗಾಗಿ ಎಲ್ಲ ಶಾಸ್ತ್ರಗಳನ್ನು [**ಹಿ**] ನಿಶ್ಚಯದಿಂದ [**ಅಸ್ತೋಷತ**] ಪ್ರಶಂಸೆಯನ್ನು ತಾವು ಮಾಡಿರಿ. ಶತ್ರು ಮತ್ತು ದುಃಖಗಳನ್ನು [**ಅವಾಧೂಷತ**] ಬಿಡಿಸಿರಿ. [**ಅಕ್ಷನ್**] ವಿದ್ಯೆ ಮೊದಲಾದ ಶುಭಗುಣಗಳಲ್ಲಿ ವ್ಯಾಪ್ತರಾಗಿರಿ. [**ಅಮೀಮದಂತ**] ಅತಿಶಯವಾಗಿ ಆನಂದಪಡಿರಿ ಮತ್ತು ನಮ್ಮನ್ನು ಕೂಡ ಹಾಗೆಯೇ ಮಾಡಿರಿ.

ಭಾವಾರ್ಥ:- ಶ್ರೇಷ್ಠಗುಣ ಕರ್ಮ ಸ್ವಭಾವಗಳಿಂದ ಕೂಡಿದ ಎಲ್ಲ ರೀತಿಯ ಉತ್ತಮ ಆಚರಣೆ ಮಾಡುವ ಸೇನೆ ಮತ್ತು ಸಭಾಪತಿ ಹಾಗೂ ಸತ್ಯೋಪದೇಶಕ ಮೊದಲಾದವರ ಗುಣಗಳ ಪ್ರಶಂಸೆ ಮತ್ತು ಕಾರ್ಯಗಳಿಂದ ಹೊಸ- ಹೊಸ ವಿಜ್ಞಾನ ಮತ್ತು ಪುರುಷಾರ್ಥ ಹೆಚ್ಚಿಸುತ್ತಾ ಸದಾ ಪ್ರಸನ್ನರಾಗಿ ಆನಂದವನ್ನು ಭೋಗಿಸಬೇಕು.

ಮತ್ತೆ ಮನುಷ್ಯನು ಅವರನ್ನು ಪಡೆದು ಏನನ್ನು ಹೊಂದುವನು ಎಂಬುದನ್ನು ತಿಳಿಸಿದೆ.

ಸುಸಂದೃಶಂ ತ್ವಾ ವಯಂ ಮಘವನ್ ವಂದಿಷೀಮಹಿ । ಪ್ರ ನೂನಂ ಪೂರ್ಣಬಂಧುರಃ
ಸ್ತುತೋ ಯಾಹಿ ವಶಾ ಅನು ಯೋಜಾ ನ್ವಿಂದ್ರ ತೇ ಹರೀ ॥೩॥

ಪದಾರ್ಥ:- ಹೇ [**ಮಘವನ್**] ಪರಮ ಪೂಜಿತ ಧನಯುಕ್ತ [**ಇಂದ್ರ**] ಸುಖಪ್ರದ! ಹೇಗೆ [**ವಯಮ್**] ನಾವು [**ಸುಸಂದೃಶಮ್**] ಕಲ್ಯಾಣ ದೃಷ್ಟಿಯಿಂದ ಕೂಡಿ [**ತ್ವಾ**] ತಮ್ಮನ್ನು [**ವಂದಿಷೀಮಹಿ**] ಪ್ರಶಂಸೆ ಮಾಡುತ್ತೇವೋ ಹಾಗೆ ನಮ್ಮಿಂದಲೂ ಆಗಿ [**ಪೂರ್ಣಬಂಧುರಃ**] ಸಮಸ್ತ ಸತ್ಯದ ಪ್ರಬಂಧ ಮತ್ತು ಪ್ರೇಮಯುಕ್ತ [**ಸ್ತುತಃ**] ಪ್ರಶಂಸೆಯನ್ನು ಪಡೆದು ತಾವು ಯಾರು ಪ್ರಜೆಗಳ ಶತ್ರುಗಳೋ ಅವರನ್ನು [**ನು**] ಶೀಘ್ರವಾಗಿ [**ವಶಾನ್**] ವಶಕ್ಕೆ ಪಡೆಯಿರಿ. [**ತೇ**] ತಮ್ಮ [**ಹರೀ**] ಸೂರ್ಯಧಾರಣಾಕರ್ಷಣಾದಿ ಗುಣಗಳಂತೆ ಸುಶಿಕ್ಷಿತ ಅಶ್ವವಿದೆಯೋ, ಅವುಗಳನ್ನು [**ಅನುಯೋಜ**] ಯುಕ್ತಗೊಳಿಸಿರಿ. ವಿಜಯಕ್ಕಾಗಿ [**ನೂನಮ್**] ನಿಶ್ಚಯಮಾಡಿ [**ಪ್ರಯಾಹಿ**] ಉತ್ತಮವಾಗಿ ನಡೆಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವಾಗ ಮನುಷ್ಯನು ಎಲ್ಲರ ದ್ರಷ್ಟನಾದ ಪರಮೇಶ್ವರನ ಸ್ತುತಿ ಮಾಡುವ ಸಭಾಪತಿಯ ಆಶ್ರಯ ಪಡೆಯುತ್ತಾನೋ, ಆಗ ಈ ಶತ್ರುಗಳನ್ನು ಶೀಘ್ರವಾಗಿ ನಿಗ್ರಹ ಮಾಡುತ್ತಾನೆ.

ಮತ್ತೆ ಅವನು ಹೇಗಿರಬೇಕು ಎಂಬುದನ್ನು ತಿಳಿಸಿದೆ.

ಸ ಘಾ ತಂ ವೃಷಣಂ ರಥ-ಮಧಿ ತಿಷ್ಠಾತಿ ಗೋವಿದಮ್ । ಯಃ ಪಾತ್ರಂ ಹಾರಿಯೋಜನಂ
ಪೂರ್ಣಮಿಂದ್ರ ಚಿಕೇತತಿ ಯೋಜಾ ನ್ವಿಂದ್ರ ತೇ ಹರೀ ॥೪॥

ಪದಾರ್ಥ:- ಹೇ [**ಇಂದ್ರ**] ಪರಮ ವಿದ್ಯಾ ಧನಯುಕ್ತನೇ! [**ಯಃ**] ಯಾವ ನೀನು [**ಹಾರಿ ಯೋಜನಮ್**] ಅಗ್ನಿ ಅಥವಾ ಕುದುರೆಗಳಿಂದ ಕೂಡಿರುವ ಈ [**ಪೂರ್ಣಮ್**] ಎಲ್ಲ ಸಾಮಗ್ರಿಗಳಿಂದ ಕೂಡಿರುವ [**ಪಾತ್ರಮ್**] ರಕ್ಷಣೆಯ ನಿಮಿತ್ತ [**ರಥಮ್**] ರಥವನ್ನು ಮಾಡುವುದು [**ಚಿಕೇತತಿ**] ತಿಳಿಯುತ್ತಾನೋ [**ಸಃ**] ಅವನು ಆ ರಥದಲ್ಲಿ [**ಹರೀ**] ವೇಗಾದಿ ಗುಣಗಳಿಂದ ಕೂಡಿದ ಅಶ್ವಗಳನ್ನು [**ಸುಯೋಜ**] ಶೀಘ್ರವಾಗಿ ಜೋಡಿಸಿ ಹೇ [**ಇಂದ್ರ**] ಸೇನಾಪತಿಯೇ! [**ತೇ**] ನಿನ್ನ [**ವೃಷಣಮ್**] ಶತ್ರುವಿನ ಸಾಮರ್ಥ್ಯದ ನಾಶವು [**ಗೋವಿದಮ್**] ಯಾವುದರಿಂದ ಭೂಮಿಯ ರಾಜ್ಯದ ಪ್ರಾಪ್ತಿಯಾಗುವುದೋ [**ತಮ್**] ಆ ರಥವನ್ನು ಮಾಡಿ [**ಅಧಿತಿಷ್ಠಾತಿ**] ಕುಳಿತುಕೊಳ್ಳಲಿ. [**ಘ**] ಅದೇ ವಿಜಯವನ್ನು ಪ್ರಾಪ್ತಿಪಡಿಸುವುದಿಲ್ಲವೇಕೆ?

ಭಾವಾರ್ಥ:- ಶಿಕ್ಷಣದಿಂದ ಬಲದಿಂದ ಹೃಷ್ಟ-ಪುಷ್ಟವಾದ ಆನೆ, ಕುದುರೆ, ರಥ, ಶಸ್ತ್ರ-ಅಸ್ತ್ರ ಮೊದಲಾದ ಸಾಮಗ್ರಿಗಳಿಂದ ಪೂರ್ಣವಾಗಿರುವ ಸೇನೆಯನ್ನು ಪಡೆದು ಶತ್ರುಗಳನ್ನು ಜಯಿಸುವುದು ಸೇನಾಪತಿಗೆ ಯೋಗ್ಯವಾಗಿದೆ.

ಮತ್ತೆ ಅವನು ಹೇಗೆ ಮಾಡಬೇಕು ಎಂಬುದನ್ನು ತಿಳಿಸಿದೆ.

ಯುಕ್ತಸ್ತೇ ಅಸ್ತು ದಕ್ಷಿಣ ಉತ ಸವ್ಯಃ ಶತಕ್ರತೋ । ತೇನ ಜಾಯಾಮುಪ ಪ್ರಿಯಾಂ
ಮಂದಾನೋ ಯಾಹ್ಯಂಧಸೋ ಯೋಜಾ ನ್ವಿಂದ್ರ ತೇ ಹರೀ ॥೫॥

ಪದಾರ್ಥ:- ಹೇ [ಇಂದ್ರ] ಎಲ್ಲರಿಗೂ ಸುಖವನ್ನು ಕೊಡುವ [ಶತಕ್ರತೋ] ಅಸಂಖ್ಯ ಉದ್ಯಮವೃದ್ಧಿ ಮತ್ತು ಕ್ರಿಯೆಗಳಿಂದ ಕೂಡಿದವನೇ! [ತೇ] ತಮ್ಮ ಸುಶಿಕ್ಷಿತ [ಹರೀ] ಕುದುರೆಗಳಿವೆಯೋ ಅವುಗಳನ್ನು ರಥಗಳಲ್ಲಿ ನೀವು [ಸುಯೋಜ] ಶೀಘ್ರವಾಗಿ ಹೂಡಿರಿ. [ತೇ] ನಿನ್ನ ರಥದ [ಹರೀ] ಒಂದು ಕುದುರೆಯು [ದಕ್ಷಿಣಃ] ಬಲಗಡೆ [ಉತ] ಮತ್ತು [ಸವ್ಯಃ] ಎಡಗಡೆ [ಅಸ್ತು] ಇರಲಿ. [ತೇನ] ಆ ರಥದ ಮೇಲೆ ಕುಳಿತು ಶತ್ರುಗಳನ್ನು ಗೆದ್ದು [ಪ್ರಿಯಾಮ್] ಅತಿಪ್ರಿಯವಾದ [ಜಾಯಾಮ್] ಪತ್ನಿಯೊಂದಿಗೆ ಕುಳಿತು [ಮಂದಾನಃ] ನೀನು ಪ್ರಸನ್ನನಾಗಿ ಮತ್ತು ಅವಳನ್ನು ಪ್ರಸನ್ನಗೊಳಿಸುತ್ತಾ [ಅಂಧಸಃ] ಅನ್ನ ಮೊದಲಾದ ಸಾಮಗ್ರಿಗಳ [ಉಪಯಾಹಿ] ಸಮೀಪಕ್ಕೆ ಹೋಗಿ ನೀವಿಬ್ಬರೂ ಶತ್ರುಗಳನ್ನು ಗೆಲ್ಲುವುದಕ್ಕಾಗಿ ಹೋಗುತ್ತಿರಿ.

ಭಾವಾರ್ಥ:- ರಾಜನು ತನ್ನ ರಾಣಿಯೊಂದಿಗೆ ಉತ್ತಮ ಶಿಕ್ಷಣದಿಂದ ಕೂಡಿದ ಕುದುರೆಗಳನ್ನು ಹೂಡಿದ ರಥದಲ್ಲಿ ಕುಳಿತು ಯುದ್ಧದಲ್ಲಿ ವಿಜಯ ಮತ್ತು ವ್ಯವಹಾರಗಳಲ್ಲಿ ಆನಂದವನ್ನು ಪಡೆಯುವುದು ಯೋಗ್ಯವಾಗಿದೆ. ಎಲ್ಲೆಲ್ಲಿ ಯುದ್ಧದಲ್ಲಿ ಅಥವಾ ಭ್ರಮಣಕ್ಕಾಗಿ ಹೋಗುತ್ತಾರೋ ಅಲ್ಲಲ್ಲಿ ಉತ್ತಮ ಶಿಲ್ಪಿಗಳಿಂದ ಸಿದ್ಧಪಡಿಸಿದ ಸುಂದರ ರಥದಲ್ಲಿ ಪತ್ನೀ ಸಹಿತವಾಗಿಯೇ ಹೋಗಲಿ.

ಮತ್ತೆ ಅವನ ಭೃತ್ಯರು ಏನು ಮಾಡಬೇಕು ಮತ್ತು ಆ ರಥದಿಂದ ಅವನು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ಯುನಜ್ಮಿ ತೇ ಬ್ರಹ್ಮಣಾ ಕೇಶಿನಾ ಹರೀ ಉಪ ಪ್ರ ಯಾಹಿ ದಧಿಷೇ ಗಭಸ್ತ್ಯೋಃ । ಉತ್
ತ್ವಾ ಸುತಾಸೋ ರಭಸಾ ಅಮಂದಿಷುಃ ಪೂಷಣ್ವಾನ್ ವಜ್ರಿನ್ತ್ಸಮು ಪತ್ನ್ಯಾಮದಃ ॥೬॥

ಪದಾರ್ಥ:- ಹೇ [ವಜ್ರಿನ್] ಉತ್ತಮಶಸ್ತ್ರಗಳಿಂದ ಕೂಡಿರುವ ಸೇನಾಪತಿಯೇ! ಹೇಗೆ ನಾನು [ತೇ] ನಿನ್ನ [ಬ್ರಹ್ಮಣಾ] ಅನ್ನಾದಿಗಳಿಂದ ಕೂಡಿದ ನೌಕಾರಥದಲ್ಲಿ [ಕೇಶಿನಾ] ಸೂರ್ಯನ ಕಿರಣಗಳಂತೆ ಪ್ರಕಾಶಮಾನವಾದ [ಹರೀ] ಕುದುರೆಗಳನ್ನು [ಯುನಜ್ಮಿ] ಹೂಡಿರುವೆನೋ, ಅದರಲ್ಲಿ ಕುಳಿತು ನೀನು [ಗಭಸ್ತ್ಯೋಃ] ಕೈಗಳಲ್ಲಿ ಕುದುರೆಗಳ ಹಗ್ಗದ [ಲಗಾಮ]ನ್ನು [ದಧಿಷೇ] ಧಾರಣ ಮಾಡುತ್ತೀಯೋ, ಆ ರಥದಿಂದ [ಉಪಪ್ರಯಾಹಿ] ಅಭೀಷ್ಟಸ್ಥಾನಗಳಿಗೆ ಹೋಗು. ಹೇಗೆ ಬಲವೇಗಗಳಿಂದ ಕೂಡಿದ [ಸುತಾಸಃ] ಸುಶಿಕ್ಷಿತ [ಭೃತ್ಯಾಃ] ನೌಕರರು [ತ್ವಾ] ನಿನ್ನನ್ನು [ಉತ್] ಉತ್ತಮವಾಗಿ [ಉದಮಂದಿಷು] ಆನಂದಪಡಿಸುವರೋ ಹಾಗೆ ಇವರನ್ನು ನೀನು ಕೂಡ ಆನಂದ ಪಡಿಸು. ಮತ್ತು [ಪೂಷಣ್ವಾನ್] ಶತ್ರುಗಳ ಶಕ್ತಿಯನ್ನು ತಡೆಯುವ ನೀನು ನಿನ್ನ [ಪತ್ನ್ಯಾ] ಪತ್ನಿಯೊಂದಿಗೆ [ಸಮುಮದಃ] ಉತ್ತಮ ಆನಂದವನ್ನು ಪಡೆಯುವವನಾಗು.

ಭಾವಾರ್ಥ:- ಅಶ್ವಾದಿಗಳ ಶಿಕ್ಷಣ, ಸೇವೆ ಮಾಡುವ ಮತ್ತು ಅವುಗಳ ಸವಾರಿ ಮಾಡುವ ಭೃತ್ಯರಿರುವರೋ, ಅವರು ಉತ್ತಮ ಶಿಕ್ಷಣಯುಕ್ತರಾಗಲಿ ಮತ್ತು ತಮ್ಮ ಪತ್ನಿ ಮೊದಲಾದವರನ್ನೂ ಕೂಡ ಅವರು ಪ್ರಸನ್ನಗೊಳಿಸಲಿ. ನೀವು ಕೂಡ ಅವರನ್ನು ಯಥಾ ರೀತಿ ಪ್ರೀತಿಸಿರಿ. ಯಾವಾಗಲೂ ಜೊತೆಯಾಗಿರುವ ಸುಪರೀಕ್ಷಿತ ಪತ್ನಿ ಮೊದಲಾದವರಲ್ಲಿ ಧರ್ಮಕಾರ್ಯಗಳನ್ನು ಸಾಧಿಸಲಿ.

ಈ ಸೂಕ್ತದಲ್ಲಿ ಸೇನಾಪತಿ ಮತ್ತು ಈಶ್ವರನ ಗುಣಗಳ ವರ್ಣನೆ ಮಾಡಿರುವುದರಿಂದ ಈ ಸೂಕ್ತದ ಅರ್ಥಕ್ಕೂ ಪೂರ್ವ ಸೂಕ್ತದ ಅರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಂಬತ್ತೆರಡನೆಯ ಸೂಕ್ತ ಸಮಾಪ್ತ

ಸೂಕ್ತ ೮೩

ಮಂತ್ರಸಂಖ್ಯೆ ೬ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಇಂದ್ರಃ । ಛಂದಃ - ಜಗತೀ ।

ಸ್ವರಃ - ನಿಷಾಧಃ, ೬ ಧೈವತಃ.

ಮತ್ತೆ ಅವನು ಹೇಗೆ ರಥದ ಮೇಲೆ ಕುಳಿತು ಕಾರ್ಯಗಳನ್ನು ಸಿದ್ಧಪಡಿಸಬೇಕು ಈ ವಿಷಯವನ್ನು ತಿಳಿಸಿದೆ.

ಅಶ್ವಾವತಿ ಪ್ರಥಮೋ ಗೋಷು ಗಚ್ಛತಿ ಸುಪ್ರಾವೀರಿಂದ್ರ ಮರ್ತ್ಯಸ್ತವೋತಿಭಿಃ । ತಮಿತ್
ಪೃಣಕ್ಷಿ ವಸುನಾ ಭವೀಯಸಾ ಸಿಂಧುಮಾಪೋ ಯಥಾಭಿತೋ ವಿಚೇತಸಃ ॥೧॥

ಪದಾರ್ಥ:- ಹೇ [ಇಂದ್ರ] ಎಲ್ಲರ ರಕ್ಷಣೆ ಮಾಡುವ ರಾಜನೇ! [ಮರ್ತ್ಯಃ] ಉತ್ತಮ ಶಿಕ್ಷಣದಿಂದ ಕೂಡಿದ ಧಾರ್ಮಿಕ ಮನುಷ್ಯನು [ತವ] ನಿನ್ನ [ಊತಿಭಿಃ] ರಕ್ಷಣೆ ಮೊದಲಾದವುಗಳಿಂದ ರಕ್ಷಿತನಾದ ಭೃತ್ಯನು [ಅಶ್ವಾವತಿ] ಉತ್ತಮ ಅಶ್ವಗಳಿಂದ ಕೂಡಿದ ರಥದಲ್ಲಿ ಕುಳಿತು [ಗೋಷು] ಪೃಥಿವಿಯ ವಿಭಾಗಗಳಲ್ಲಿ ಯುದ್ಧಮಾಡುವುದಕ್ಕಾಗಿ [ಪ್ರಥಮಃ] ಮೊದಲು [ಗಚ್ಛತಿ] ಹೋಗುವನು ಅವನಿಂದ ನೀನು ಪ್ರಜೆಗಳನ್ನು [ಸುಪ್ರಾವೀಃ] ಉತ್ತಮ ರೀತಿಯಲ್ಲಿ ರಕ್ಷಿಸು. [ತಮಿತ್] ಅವನನ್ನು [ಯಥಾ] ಹೇಗೆ [ವಿಚೇತಸಃ] ಚೇತನರಹಿತ ಜಡ [ಆಪಃ] ಜಲ ಅಥವಾ ವಾಯುವು [ಅಭಿತಃ] ನಾಲ್ಕು ಕಡೆಗಳಿಂದ [ಸಿಂಧುಮ್] ನದಿಯನ್ನು ಪ್ರಾಪ್ತವಾಗುತ್ತದೋ ಹಾಗೆ [ಭವೀಯಸಾ] ಅತ್ಯಂತ ಉತ್ತಮ [ವಸುನಾ] ಧನದಿಂದ ನೀನು ಪ್ರಜೆಗಳನ್ನು [ಪೃಣಕ್ಷಿ] ಯುಕ್ತ ಮಾಡುತ್ತೀಯೋ, ಹಾಗೆಯೇ ಎಲ್ಲ ಪ್ರಜೆಗಳು ಮತ್ತು ರಾಜಪುರುಷರು ಪುರುಷಾರ್ಥಮಾಡಿ ಐಶ್ವರ್ಯದಿಂದ ಕೂಡಿದವರಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಸೇನಾಪತಿ ಮೊದಲಾದ ರಾಜಪುರುಷರ ಭೃತ್ಯರು ತಮ್ಮ ತಮ್ಮ ಅಧಿಕಾರದ ಕೆಲಸಗಳಲ್ಲಿ ಯಥಾಯೋಗ್ಯವಾಗಿ ವರ್ತಿಸುತ್ತಾ ಅವರವರಿಗೆ ಉಚಿತವಾದ ದಂಡ ಮತ್ತು ಯಾರು ನ್ಯಾಯಕ್ಕೆ ಅನುಸಾರವಾಗಿ ವರ್ತಿಸುವರೋ ಅವರ ಸತ್ಕಾರ ಮಾಡಿ ಶತ್ರುಗಳನ್ನು ಜಯಿಸಿ ಪ್ರಜೆಗಳ ರಕ್ಷಣೆ ಮಾಡಿ ಪುರುಷರನ್ನು ಪ್ರಸನ್ನರಾಗಿಟ್ಟು ರಾಜಕಾರ್ಯಗಳನ್ನು ಸಿದ್ಧಪಡಿಸಬೇಕು. ಯಾವನೇ ಪುರುಷನು ಕೂಡ ಅಪರಾಧಿಗೆ ಯೋಗ್ಯ ದಂಡವನ್ನು ಮತ್ತು ಉತ್ತಮ ಕಾರ್ಯಕರ್ತನ ಯೋಗ್ಯ ಪ್ರತಿಷ್ಠೆ ಮಾಡದ ಹೊರತು ಯಥಾವತ್ತಾಗಿ ರಾಜ್ಯದ ವ್ಯವಸ್ಥೆಯನ್ನು ಸ್ಥಿರಪಡಿಸಲು ಸಮರ್ಥನಾಗಲಾರನು. ಆದುದರಿಂದ ಈ ಕರ್ಮದ ಅನುಷ್ಠಾನವನ್ನು ಸದಾ ಮಾಡಬೇಕು.

ಮತ್ತೆ ವಿದ್ವಾಂಸರು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ಆಪೋ ನ ದೇವೀರುಪ ಯಂತಿ ಹೋತ್ರಿಯ-ಮವಃ ಪಶ್ಯಂತಿ ವಿತತಂ ಯಥಾ ರಜಃ ।
ಪ್ರಾಚೈರ್ದೇವಾಸಃ ಪ್ರ ಣಯಂತಿ ದೇವಯುಂ ಬ್ರಹ್ಮಪ್ರಿಯಂ ಜೋಷಯಂತೇ ವರಾ ಇವ ॥೨॥

ಪದಾರ್ಥ:- [ದೇವಾಸಃ] ವಿದ್ವಾಂಸರು ಮೇಘದಿಂದ [ಆಪೋ ನ] ಜಲವನ್ನು ಹೇಗೆ ಪಡೆಯುತ್ತಾರೋ ಹಾಗೆ [ದೇವೀಃ] ವಿದುಷೀ ಸ್ತ್ರೀಯರನ್ನು [ಉಪಯನ್ತಿ] ಪಡೆಯುತ್ತಾರೆ. ಮತ್ತು [ಯಥಾ] ಹೇಗೆ [ಪ್ರಾಚೈಃ] ಪ್ರಾಚೀನ ವಿದ್ವಾಂಸರೊಡನೆ [ವಿತತಮ್] ವಿಶಾಲವು ಮತ್ತು ಹೇಗೆ [ರಜಃ] ಪರಮಾಣು ಮೊದಲಾದವುಗಳು ಜಗತ್ತಿನ ಕಾರಣವು [ಹೋತ್ರಿಯಮ್] ಕೊಟ್ಟು ತೆಗೆದುಕೊಳ್ಳಲು ಯೋಗ್ಯವು [ಅವಃ] ರಕ್ಷಣೆಯನ್ನು [ಪಶ್ಯಂತಿ] ನೋಡುತ್ತವೆ. [ವರಾ ಇವ] ಉತ್ತಮ ಪತಿವ್ರತಾ ಋಷೀ ಸ್ತ್ರೀಯಂತೆ [ಬ್ರಹ್ಮಪ್ರಿಯಮ್] ವೇದ ಮತ್ತು ಈಶ್ವರನ ಆಜ್ಞೆಯಲ್ಲಿ ಪ್ರಸನ್ನತೆ [ದೇವಯುಮ್] ತನ್ನ ಆತ್ಮವನ್ನು ವಿದ್ವಾಂಸನಾಗಲು ಬಯಸುತ್ತಾ [ಪ್ರಣಯಂತಿ] ನೀತಿಪೂರ್ವಕವಾಗಿ

ಮಾಡುತ್ತಾ ಮತ್ತು [ಜೋಷಯಂತೇ] ಇದರ ಸೇವನೆ ಮಾಡುತ್ತಾ ಇತರರಿಗೂ ಹಾಗೆ ಮಾಡಿಸುತ್ತಾರೋ, ಅವರು ಏಕೆ ನಿರಂತರ ಸುಖಿಗಳಾಗುವುದಿಲ್ಲ?

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ಹೇತುವಿನಿಂದ ವಿದ್ವಾಂಸ ಮತ್ತು ಅವಿದ್ವಾಂಸರನ್ನು ಬೇರೆ ಬೇರೆಯಾಗಿ ಹೇಳುತ್ತಾರೋ ಇದಕ್ಕೆ ಉತ್ತರ ಯಾವನು ಧರ್ಮಯುಕ್ತ ಶುದ್ಧಕ್ರಿಯೆಗಳನ್ನು ಮಾಡುತ್ತಾನೋ, ಎಲ್ಲರ ಶರೀರ ಮತ್ತು ಆತ್ಮದ ಯಥಾವತ್ ರಕ್ಷಣೆ ಮಾಡುವುದನ್ನು ತಿಳಿದಿರುವನೋ ಮತ್ತು ಭೂಗರ್ಭಾದಿ ವಿದ್ಯೆಗಳಿಂದ ಪ್ರಾಚೀನ ಆಪ್ತ ವಿದ್ವಾಂಸರಂತೆ ವೇದದ್ವಾರಾ ಈಶ್ವರ ಪ್ರಣೀತ ಸತ್ಯಧರ್ಮ ಮಾರ್ಗದ ಪ್ರಚಾರ ಮಾಡುವನೋ ಅವನೇ ವಿದ್ವಾಂಸನು ಮತ್ತು ಯಾರು ಇವುಗಳಿಗೆ ವಿಪರೀತವಾಗಿ ಮಾಡುತ್ತಾರೋ ಅವರು ಅವಿದ್ವಾಂಸರು. ಈ ಪ್ರಕಾರ ನಿಶ್ಚಯದಿಂದ ತಿಳಿಯಿರಿ.

ಮತ್ತೆ ಅವರು ಹೇಗಿರುವರು ಎಂಬುದನ್ನು ತಿಳಿಸಲಾಗಿದೆ.

ಅಧಿ ದ್ವಯೋರದಧಾ ಉಕ್ಥ್ಯ೧ಂ ವಚೋ ಯತಸ್ರುಚಾ ಮಿಥುನಾ ಯಾ ಸಪರ್ಯತಃ ।
ಅಸಂಯತ್ತೋ ವ್ರತೇ ತೇ ಕ್ಷೇತಿ ಪುಷ್ಯತಿ ಭದ್ರಾ ಶಕ್ತಿರ್ಯಜಮಾನಾಯ ಸುನ್ವತೇ ॥೩॥

ಪದಾರ್ಥ:- ಹೇ ಮನುಷ್ಯ! ಹೇಗೆ [ಯಾ] ಯಾವ [ಯತಸ್ರುಚಾ] ಸಾಧನೋಪಸಾಧನಗಳಿಂದ ಕೂಡಿ ಓದಿಸುವ ಮತ್ತು ಉಪದೇಶ ಮಾಡುವ [ಮಿಥುನಾ] ಇಬ್ಬರೂ ಸೇರಿ [ದ್ವಯೋಃ] ತಮ್ಮ ಮತ್ತು ಇತರರ ಕಲ್ಯಾಣ ಮಾಡಿ [ಉಕ್ಥ್ಯಮ್] ಪ್ರಶಂಸೆಗೆ ಯೋಗ್ಯವಾದ [ವಚಃ] ವಚನವನ್ನು [ಸಪರ್ಯತಃ] ಸೇವಿಸುವಂತೆ ಇದನ್ನು ನೀನು [ಅದಧಾಃ] ಧಾರಣ ಮಾಡು. [ಅಸಂಯತಃ] ಅಜಿತೇಂದ್ರಿಯನು ಕೂಡ [ತೇ] ನಿನ್ನ [ವ್ರತೇ] ಸತ್ಯಭಾಷಣ ಮೊದಲಾದ ನಿಯಮಗಳ ಪಾಲನೆಯಲ್ಲಿ [ಕ್ಷೇತಿ] ನಿವಾಸ ಮಾಡುತ್ತಾನೋ ಅವನಲ್ಲಿ [ಭದ್ರಾ] ಕಲ್ಯಾಣ ಮಾಡುವಂತಹ [ಶಕ್ತಿಃ] ಸಾಮರ್ಥ್ಯವು [ಕ್ಷೇತಿ] ಇರುತ್ತದೆ ಮತ್ತು ಅವನು [ಪುಷ್ಯತಿ] ಪುಷ್ಟನಾಗುತ್ತಾನೆ. ಆಗ [ಸುನ್ವತೇ] ಐಶ್ವರ್ಯ ಪ್ರಾಪ್ತಿಯಾಗುವ [ಯಜಮಾನಾಯ] ಎಲ್ಲರ ಸುಖದಾತನಿಗಾಗಿ ನಿರಂತರ ಸುಖವು ಏಕೆ ಹೆಚ್ಚುವುದಿಲ್ಲ?

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ಮನುಷ್ಯರು ಪರೋಪಕಾರ ಬುದ್ಧಿಯಿಂದ ಎಲ್ಲರ ಶರೀರ ಮತ್ತು ಆತ್ಮಗಳ ಮಧ್ಯೆ ಪುಷ್ಟಿ ಮತ್ತು ವಿದ್ಯಾಬಲವನ್ನು ಉತ್ಪನ್ನ ಮಾಡಿ, ವಿರೋಧವನ್ನು ಬಿಟ್ಟು ಧರ್ಮಯುಕ್ತ ವ್ಯವಹಾರಗಳನ್ನು ಮಾಡಿ ನಿರಂತರ ಎಲ್ಲ ಮನುಷ್ಯರನ್ನು ಸತ್ಯ ವ್ಯವಹಾರಗಳಲ್ಲಿ ಪ್ರವೃತ್ತರನ್ನಾಗಿ ಮಾಡುತ್ತಾರೋ, ಅವರೇ ಮೋಕ್ಷವನ್ನು ಪಡೆಯುತ್ತಾರೆ.

ಮತ್ತೆ ಅವರು ಹೇಗಿರುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ಆದಂಗಿರಾಃ ಪ್ರಥಮಂ ದಧಿರೇ ವಯ ಇದ್ಧಾಗ್ನಯಃ ಶಮ್ಯಾ ಯೇ ಸುಕೃತ್ಯಯಾ । ಸರ್ವಂ
ಪಣೇಃ ಸಮವಿಂದಂತ ಭೋಜನ-ಮಶ್ವಾವಂತಂ ಗೋಮಂತಮಾ ಪಶುಂ ನರಃ ॥೪॥

ಪದಾರ್ಥ:- ಹೇ [ಇದ್ಧಾಗ್ನಯಃ] ಅಗ್ನಿವಿದ್ಯೆಯನ್ನು ಪ್ರದೀಪ್ತ ಮಾಡುವ [ಯೇ ನರಃ] ನಾಯಕರೇ! ತಾವು ಹೇಗೆ [ಸುಕೃತ್ಯಯಾ] ಸುಕೃತದಿಂದ [ಶಮ್ಯಾ] ಕರ್ಮ ಮತ್ತು [ಪಣೇಃ] ಪ್ರಶಂಸನೀಯ ವ್ಯವಹಾರ ಮಾಡುವ ಉಪದೇಶದಿಂದ [ಪ್ರಥಮಮ್] ಮೊದಲು [ವಯಃ] ಆಯಸ್ಸನ್ನು ಬ್ರಹ್ಮಚರ್ಯಕ್ಕಾಗಿ [ಆದಧರೇ] ಎಲ್ಲ ಪ್ರಕಾರಗಳಿಂದ ಧಾರಣ ಮಾಡುತ್ತಾರೋ ಅವರು [ಸರ್ವಮ್] ಎಲ್ಲ [ಭೋಜನಮ್] ಆನಂದವನ್ನು ಭೋಗಿಸಲು ಮತ್ತು

ಪಾಲನೆಯನ್ನು [ಸಮವಿದಂತ] ಉತ್ತಮವಾಗಿ ಪಡೆಯುತ್ತಾರೆ. [ಆತ್] ಇದರ ನಂತರ ಹೇಗೆ [ಅಂಗಿರಾಃ] ಪ್ರಾಣದಂತೆ ಪ್ರಿಯವಾದ ಕರುವು [ಪಶುಮ್] ತನ್ನ ತಾಯಿಯನ್ನು ಪಡೆದು ಆನಂದ ಪಡುತ್ತದೋ ಹಾಗೆ ತಾವು [ಅಶ್ವಾವಂತಮ್] ಉತ್ತಮ ಕುದುರೆಗಳಿಂದ ಕೂಡಿದ [ಗೋಮಂತಮ್] ಶ್ರೇಷ್ಠ ಹಸು ಮತ್ತು ಭೂಮಿ ಮೊದಲಾದವುಗಳಿಂದ ಕೂಡಿದ ರಾಜ್ಯವನ್ನು ಪಡೆದು ಆನಂದಿತರಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವನೇ ಮನುಷ್ಯನು ಬ್ರಹ್ಮಚರ್ಯೆಯಿಂದ ವಿದ್ಯೆಯನ್ನು ಓದದ ಹೊರತು ಸಾಂಗೋಪಾಂಗ ವಿದ್ಯೆಗಳನ್ನು ಪಡೆಯಲು ಸಮರ್ಥನಾಗುವುದಿಲ್ಲ ಮತ್ತು ವಿದ್ಯೆ ಸತ್ಕರ್ಮಗಳ ಹೊರತು ರಾಜ್ಯಾಧಿಕಾರವನ್ನು ಪಡೆಯಲು ಯೋಗ್ಯನಾಗಲಾರನು. ಉಕ್ತ ಪ್ರಕಾರದ ಹೊರತು ಮನುಷ್ಯನು ಸತ್ಯಸುಖವನ್ನು ಪಡೆಯಲಾರನು.

ಮತ್ತೆ ಅವರು ಯಾರಿಂದ ಏನನ್ನು ಪಡೆಯುತ್ತಾರೆ ಎಂಬುದನ್ನು ತಿಳಿಸಲಾಗಿದೆ.

ಯಜ್ಞೈರಥರ್ವಾ ಪ್ರಥಮಃ ಪಥಸ್ತತೇ ತತಃ ಸೂರ್ಯೋ ವ್ರತಪಾ ವೇನ ಆಜನಿ ।
ಆ ಗಾ ಆಜದುಶನಾ ಕಾವ್ಯಃ ಸಚಾ ಯಮಸ್ಯ ಜಾತಮಮೃತಂ ಯಜಾಮಹೇ ॥೫॥

ಪದಾರ್ಥ:- ಹೇಗೆ [ಪ್ರಥಮಃ] ಪ್ರಸಿದ್ಧ ವಿದ್ವಾಂಸನು [ಅಥರ್ವಾ] ಹಿಂಸಾರಹಿತ [ಪಥಃ] ಸನ್ಮಾರ್ಗವನ್ನು [ತತೇ] ವಿಸ್ತೃತ ಮಾಡುತ್ತಾನೋ, ಹೇಗೆ [ತತಃ] ವಿಸ್ತೃತ [ಸೂರ್ಯಃ] ಸೂರ್ಯಲೋಕವು [ಗಾಃ] ಪೃಥಿವಿಯಲ್ಲಿ ದೇಶಗಳನ್ನು [ಆಜತ್] ಧಾರಣ ಮಾಡಿ ಸುತ್ತಿಸುವನೋ ಹೇಗೆ [ಕಾವ್ಯಃ] ಕವಿಗಳಲ್ಲಿ ಶಿಕ್ಷಣವನ್ನು ಪಡೆದ [ಉಶನಾ] ವಿದ್ಯೆಯನ್ನು ಇಚ್ಛಿಸುವ ವಿದ್ವಾಂಸನು ವಿದ್ಯೆಯನ್ನು ಪಡೆಯುವಂತೆ ನಾವು ಕೂಡ [ಯಜ್ಞೈಃ] ವಿದ್ಯೆಯನ್ನು ಓದುವ ಮತ್ತು ಓದಿಸುವ ಸತ್ಸಂಯೋಗಾದಿ ಕ್ರಿಯೆಗಳಿಂದ [ಯಮಸ್ಯ] ಎಲ್ಲ ಜಗತ್ತಿನ ನಿಯಂತನಾದ ಪರಮೇಶ್ವರನ [ಸಚಾ] ಸಾಮೀಪ್ಯವನ್ನು [ಜಾತಮ್] ಪಡೆಯುತ್ತಾ [ಅಮೃತಮ್] ಮೋಕ್ಷವನ್ನು [ಆಯಜಾಮಹೇ] ಪಡೆಯುವಂತಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಸತ್ಯಮಾರ್ಗದಲ್ಲಿ ಸ್ಥಿತರಾಗಿ ಸತ್ಕ್ರಿಯೆ ಮತ್ತು ವಿಜ್ಞಾನದಿಂದ ಪರಮೇಶ್ವರನನ್ನು ತಿಳಿದು ಮೋಕ್ಷವನ್ನು ಇಚ್ಛಿಸಬೇಕು. ಆ ವಿದ್ವಾಂಸರು ಮುಕ್ತಿಯನ್ನು ಪಡೆಯುವರು.

ಮತ್ತೆ ಅವರು ಯಾವ ರೀತಿಯಿಂದ ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಬರ್ಹಿರ್ವಾ ಯತ್ ಸ್ವಪತ್ಯಾಯ ವೃಜ್ಯತೇಽರ್ಕೋ ವಾ ಶ್ಲೋಕಮಾಘೋಷತೇ ದಿವಿ ।
ಗ್ರಾವಾ ಯತ್ರ ವದತಿ ಕಾರುರುಕ್ಥ್ಯ೧ಸ್ತಸ್ಯೇದಿಂದ್ರೋ ಅಭಿಪಿತ್ವೇಷು ರಣ್ಯತಿ ॥೬॥

ಪದಾರ್ಥ:- [ಯತ್ರ] ಯಾವ [ದಿವಿ] ಪ್ರಕಾಶಯುಕ್ತ ವ್ಯವಹಾರಗಳಲ್ಲಿ [ಉಕ್ಥ್ಯಃ] ಕಥನೀಯ ವ್ಯವಹಾರಗಳಲ್ಲಿ ನಿಪುಣನು ಪ್ರಶಂಸನೀಯವಾದ ಶಿಲ್ಪ ಕಾರ್ಯಗಳ ಕರ್ತನು [ಇಂದ್ರಃ] ಪರಮೈಶ್ವರ್ಯವನ್ನು ಪ್ರಾಪ್ತಿ ಪಡಿಸುವ ವಿದ್ವಾಂಸನು [ಅಭಿಪಿತ್ವೇಷು] ಪ್ರಾಪ್ತವಾಗುವ ಯೋಗ್ಯ ವ್ಯವಹಾರಗಳಲ್ಲಿ [ಯತ್] ಯಾವ [ಸ್ವಪತ್ಯಾಯ] ಸುಂದರ ಸಂತಾನಕ್ಕಾಗಿ [ಬರ್ಹಿಃ] ವಿಜ್ಞಾನವನ್ನು [ವೃಜ್ಯತೇ] ತ್ಯಜಿಸುತ್ತಾನೆ. [ಅರ್ಕಃ] ಪೂಜನೀಯ ವಿದ್ವಾಂಸನು [ಶ್ಲೋಕಮ್] ಸತ್ಯವಾಣಿಯನ್ನು [ವಾ] ವಿಚಾರ ಪೂರ್ವಕವಾಗಿ [ಆಘೋಷತೇ] ಎಲ್ಲ ಪ್ರಕಾರ ಕೇಳಿಸುತ್ತಾನೆ. [ಗ್ರಾವಾ] ಮೇಘದಂತೆ ಗಂಭೀರವಾಗಿ [ವದತಿ] ಹೇಳುತ್ತಾನೆ. [ವಾ] ಅಥವಾ [ರಣ್ಯತಿ] ಉತ್ತಮ ಉಪದೇಶವನ್ನು ಮಾಡುತ್ತಾನೆ. ಅಲ್ಲಿ [ತಸ್ಯೇತ್] ಅದೇ ಸಂತಾನಕ್ಕೆ ವಿದ್ಯೆಯು ಪ್ರಾಪ್ತವಾಗುತ್ತದೆ.

ಭಾವಾರ್ಥ:- ಹೇಗೆ ಜಲವು ಭಿನ್ನ-ಭಿನ್ನವಾಗಿ ಆಕಾಶಕ್ಕೆ ಹೋಗಿ ಅಲ್ಲಿಂದ ಮಳೆಯನ್ನು ಸುರಿಸುತ್ತದೋ ಹಾಗೆ ಕೆಟ್ಟ ವ್ಯಸನಗಳನ್ನು ಭಿನ್ನ-ಭಿನ್ನ ಮಾಡಿ, ವಿದ್ಯೆಯನ್ನು ಗ್ರಹಿಸಿ ಎಲ್ಲ ಮನುಷ್ಯರನ್ನು ಸುಖಪಡಿಸಬೇಕು. ಹೇಗೆ ಸೂರ್ಯನು ಅಂಧಕಾರದ ವಿನಾಶಮಾಡಿ ಪ್ರಕಾಶಪಡಿಸಿ ಎಲ್ಲ ಪ್ರಾಣಿಗಳಿಗೂ ಸುಖ ಮತ್ತು ದುಷ್ಟ ಚೋರರಿಗೆ ದುಃಖ ಕೊಡುತ್ತಾನೋ ಹಾಗೆ ಮನುಷ್ಯರ ಅಜ್ಞಾನದ ನಾಶ, ವಿಜ್ಞಾನದ ಪ್ರಾಪ್ತಿ ಮಾಡಿಸಿ ಎಲ್ಲರನ್ನು ಸುಖಿಗಳನ್ನಾಗಿ ಮಾಡಬೇಕು. ಹೇಗೆ ಮೇಘವು ಗರ್ಜಿಸಿ ಮತ್ತು ಮಳೆಯಿಂದ ದುರ್ಭಿಕ್ಷವನ್ನು ಹೋಗಲಾಡಿಸುತ್ತದೋ ಹಾಗೆಯೇ ಸತ್ಯೋಪದೇಶದ ವೃಷ್ಟಿಯಿಂದ ಅಧರ್ಮದ ನಾಶ, ಧರ್ಮದ ಪ್ರಕಾಶದಿಂದ ಎಲ್ಲ ಮನುಷ್ಯರನ್ನು ಆನಂದಿತರನ್ನಾಗಿ ಮಾಡಬೇಕು.

ಈ ಸೂಕ್ತದಲ್ಲಿ ಸೇನಾಧಿಪತಿ ಮತ್ತು ಉಪದೇಶಕನ ಗುಣಗಳ ವರ್ಣನೆ ಮಾಡಿರುವುದರಿಂದ ಈ ಸೂಕ್ತಾರ್ಥಕ್ಕೂ ಹಿಂದಿನ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಂಬತ್ತಮೂರನೆಯ ಸೂಕ್ತ ಸಮಾಪ್ತ

ಸೂಕ್ತ ೮೪

ಮಂತ್ರಸಂಖ್ಯೆ ೨೦ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಇಂದ್ರಃ । ಛಂದಃ - ೧-೬ ಅನುಷ್ಟುಪ್, ೭-೯ ಉಷ್ಣಿಕ್, ೧೦-೧೨ ಪಂಕ್ತಿಃ, ೧೩-೧೫ ಗಾಯತ್ರೀ, ೧೬-೧೮ ತ್ರಿಷ್ಟುಪ್, ೧೯ ಬೃಹತೀ, ೨೦ ಸತೋಬೃಹತೀ । ಸ್ವರಃ - ೧-೫ ಗಾಂದಾರಃ, ೬-೯ ಋಷಭಃ, ೧೦, ೧೧, ೧೨, ೨೦ ಪಂಚಮಃ, ೧೩-೧೫ ಷಡ್ಜಃ, ೧೬-೧೯ ಧೈವತಃ.

ಇದರ ಮೊದಲ ಮಂತ್ರದಲ್ಲಿ ಸೇನಾಪತಿಯ ಗುಣಗಳ ಉಪದೇಶ ಮಾಡಿದೆ.

ಅಸಾವಿ ಸೋಮ ಇಂದ್ರ ತೇ ಶವಿಷ್ಠ ಧೃಷ್ಣವಾ ಗಹಿ ।
ಆ ತ್ವಾ ಪೃಣಕ್ತ್ವಿಂದ್ರಿಯಂ ರಜಃ ಸೂರ್ಯೋ ನ ರಶ್ಮಿಭಿಃ ॥೧॥

ಪದಾರ್ಥ:- ಹೇ [ಧೃಷ್ಣೋ] ಪ್ರಗಲ್ಭನೂ [ಶವಿಷ್ಠ] ಪ್ರಶಂಸಿತ ಬಲಯುಕ್ತನೂ [ಇಂದ್ರ] ಪರಮೈಶ್ವರ್ಯವನ್ನು ಕೊಡುವ ಸತ್ಪುರುಷನೇ! [ತೇ] ನಿನಗಾಗಿ [ಸೋಮಃ] ಅನೇಕ ಪ್ರಕಾರದ ರೋಗಗಳನ್ನು ವಿನಾಶ ಮಾಡುವ ಓಷಧಿಗಳ ನಾಶವನ್ನು ನಾವು [ಅಸಾವಿ] ಸಿದ್ಧಪಡಿಸಿದ್ದೇವೆ. ನಿನ್ನ [ಇಂದ್ರಿಯಮ್] ಇಂದ್ರಿಯಗಳನ್ನು [ಸೂರ್ಯಃ] ಸವಿತನು [ರಶ್ಮಿಭಿಃ] ಕಿರಣಗಳಿಂದ [ರಜಃ] ಲೋಕಗಳನ್ನು ಪ್ರಕಾಶ ಪಡಿಸಲು [ನ] ಪ್ರಕಾಶಪಡಿಸುವಂತೆ ಅದನ್ನು ನೀನು [ಆಗಾಹಿ] ಪ್ರಾಪ್ತನಾಗು. ಅದು [ತ್ವಾ] ನಿನ್ನನ್ನು [ಆಪೃಣಕ್ತು] ಬಲ ಮತ್ತು ಆರೋಗ್ಯದಿಂದಿರುವಂತೆ ಮಾಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಪ್ರಜೆಗಳ, ಸೇನೆಯ ಮತ್ತು ಪಾಠಶಾಲೆಗಳ ಸಭೆಗಳಲ್ಲಿ ಸ್ಥಿತರಾಗಿರುವ ಪುರುಷರಿಗೆ ಯೋಗ್ಯವಾದುದೇನೆಂದರೆ, ಉತ್ತಮವಾಗಿ ಸೂರ್ಯನಂತೆ ತೇಜಸ್ವೀ ಪುರುಷನನ್ನು ಪ್ರಜೆ, ಸೇನೆ ಮತ್ತು ಪಾಠಶಾಲೆಗಳ ಅಧ್ಯಕ್ಷನನ್ನಾಗಿ ಮಾಡಿ ಎಲ್ಲ ರೀತಿಯಿಂದ ಅವನ ಸತ್ಕಾರ ಮಾಡಬೇಕು. ಹಾಗೆಯೇ ಸಭ್ಯಜನರನ್ನೂ ಕೂಡ ಪ್ರತಿಷ್ಠೆಯನ್ನುಂಟುಮಾಡಬೇಕು.

ಮತ್ತೆ ಅವರ ಸತ್ಕಾರವನ್ನು ಯಾವ ರೀತಿ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಇಂದ್ರಮಿದ್ಧರೀ ವಹತೋಽಪ್ರತಿಧೃಷ್ಟಶವಸಮ್ ।
ಋಷೀಣಾಂ ಚ ಸ್ತುತೀರುಪ ಯಜ್ಞಂ ಚ ಮಾನುಷಾಣಾಮ್ ॥೨॥

ಪದಾರ್ಥ:- ಹೇ ಮನುಷ್ಯರೇ! ನೀವು ಯಾವ [ಅಪ್ರತಿಧೃಷ್ಟ ಶವಸಮ್] ಅಹಿಂಸಿತ ಅತ್ಯಂತ ಬಲಯುಕ್ತ [ಋಷೀಣಾಮ್] ವೇದಗಳ ಅರ್ಥವನ್ನು ತಿಳಿಯುವವನ [ಸ್ತುತೀಃ] ಪ್ರಶಂಸೆಯನ್ನು ಪಡೆದ [ಚ] ಮಹಾಗುಣ ಸಂಪನ್ನ [ಮಾನುಷಾಣಾಮ್] ಮನುಷ್ಯರ [ಚ] ಮತ್ತು ಪ್ರಾಣಿಗಳಿಗೆ ವಿದ್ಯಾದಾನ ಸಂರಕ್ಷಣಾನಾಮ [ಯಜ್ಞಮ್] ಯಜ್ಞವನ್ನು ಪಾಲಿಸುವ [ಇಂದ್ರಮ್] ಪ್ರಜೆ, ಸೇನೆ, ಮತ್ತು ಸಭೆ ಮೊದಲಾದವುಗಳ ಐಶ್ವರ್ಯವನ್ನು ಪ್ರಾಪ್ತಿಪಡಿಸುವವನನ್ನು [ಹರೀ] ದುಃಖಹರಣ ಸ್ವಭಾವ, ಶ್ರೀ, ಬಲ, ವೀರ್ಯ, ನಾಮ, ಗುಣ, ರೂಪ ಅಶ್ವಗಳನ್ನು [ಉಪವಹತಃ] ಪ್ರಾಪ್ತಪಡಿಸುವನೋ ಅವನನ್ನು [ಇತ್] ನಿಶ್ಚಯವಾಗಿ ಸದಾ ಪ್ರಾಪ್ತರಾಗಿರಿ.

ಭಾವಾರ್ಥ:- ಯಾವನು ಪ್ರಶಂಸೆ, ಸತ್ಕಾರ, ಅಧಿಕಾರವನ್ನು ಪಡೆಯುವನೋ ಅವನ ಹೊರತು ಪ್ರಾಣಿಗಳಿಗೆ ಸುಖವುಂಟಾಗುವುದಿಲ್ಲ. ಹಾಗೂ ಸತ್ಕ್ರಿಯೆಯ ಹೊರತು ಚಕ್ರವರ್ತಿರಾಜ್ಯ ಮೊದಲಾದವುಗಳ ಪ್ರಾಪ್ತಿ ಮತ್ತು ರಕ್ಷಣೆಯಾಗುವುದಿಲ್ಲ. ಈ ಹೇತುವಿನಿಂದ ಎಲ್ಲರೂ ಈ ಅನುಷ್ಠಾನವನ್ನು ಮಾಡುವುದು ಉಚಿತವಾಗಿದೆ.

ಮತ್ತೆ ಸೇನಾಪತಿಯು ತನ್ನ ಸೇನೆಯ ಭೃತ್ಯರಿಗೆ ಯಾವ ಯಾವ ಆಜ್ಞೆಯನ್ನು ಕೊಡಬೇಕು ಎಂಬುದನ್ನು ತಿಳಿಸಲಾಗಿದೆ.

ಆ ತಿಷ್ಠ ವೃತ್ರಹನ್ ರಥಂ ಯುಕ್ತಾ ತೇ ಬ್ರಹ್ಮಣಾ ಹರೀ ।
ಅರ್ವಾಚೀನಂ ಸು ತೇ ಮನೋ ಗ್ರಾವಾ ಕೃಣೋತು ವಗ್ನುನಾ ॥೩॥

ಪದಾರ್ಥ:- ಹೇ [ವೃತ್ರಹನ್] ಮೇಘವನ್ನು ಕೊಲ್ಲುವ ಸೂರ್ಯನಂತೆ ಶತ್ರುಗಳನ್ನು ಕೊಲ್ಲುವ ಶೂರವೀರನೇ! [ತೇ] ನಿನ್ನ [ಬ್ರಹ್ಮಣಾ] ಅನ್ನಾದಿ ಸಾಮಗ್ರಿಗಳಿಂದ ಕೂಡಿರುವ ಶಿಲ್ಪಿಗಳು ಅಥವಾ ಸಾರಥಿಯು ಚಲಿಸುವ [ಹರಿ] ಪದಾರ್ಥಗಳನ್ನು ಕಳುಹಿಸುವ ಜಲಾಗ್ನಿ ಅಥವಾ ಕುದುರೆಗಳಿಂದ [ಯುಕ್ತಾ] ಕೂಡಿದೆ. ಆ [ಅರ್ವಾಚೀನಮ್] ಭೂಮಿ ಜಲದ ಕೆಳಗೆ- ಮೇಲೆ ಮೊದಲಾದವುಗಳನ್ನು ತಿಳಿದ [ರಥಮ್] ರಥದ ಮೇಲೆ ನೀನು ಕುಳಿತುಕೋ. [ಗ್ರಾವಾ] ಮೇಘದಂತೆ [ವಸುನಾ] ಸುಂದರ ಮಧುರ ವಾಣಿಯಿಂದ ವಕ್ತೃತ್ವವನ್ನು [ಸುಕೃಣೋತು] ಉತ್ತಮವಾಗಿ ಮಾಡು. ಅದರಿಂದ [ತೇ] ನಿನ್ನ [ಮನಃ] ವಿಜ್ಞಾನವು ವೀರರಿಗೆ ಉತ್ತಮ ರೀತಿಯ ಉತ್ಸಾಹವನ್ನು ನೀಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಸಭಾಪತಿಗಳಿಗೆ ಯೋಗ್ಯವಾಗಿರುವುದೇನೆಂದರೆ, ಸೇನೆಯಲ್ಲಿ ಎರಡು ರೀತಿಯ ಅಧಿಕಾರಿಗಳನ್ನಿಡಲಿ. ಅವುಗಳಲ್ಲಿ ಒಬ್ಬರು ಸೇನೆಯಿಂದ ಯುದ್ಧ ಮಾಡಲಿ ಮತ್ತು ಇನ್ನೊಬ್ಬ ಉತ್ತಮ ಭಾಷಣಗಳಿಂದ ಯೋಧರನ್ನು ಉತ್ಸಾಹಿತರನ್ನಾಗಿ ಮಾಡಲಿ. ಯಾವಾಗ ಯುದ್ಧ ವಿರಾಮವಾಗುವುದೋ ಉಪದೇಶಕನು ಯೋಧರೂ ಮತ್ತು ಎಲ್ಲ ಸೇವಕರಿಗೆ ಧರ್ಮಯುಕ್ತ ಕರ್ಮಗಳ ಉಪದೇಶದಿಂದ ಉತ್ತಮವಾಗಿ ಉತ್ಸಾಹಿತರನ್ನಾಗಿ ಮಾಡಬೇಕು. ಹಾಗೆ ಮಾಡುವ ಮನುಷ್ಯರಿಗೆ ಎಂದಿಗೂ ಪರಾಜಯವುಂಟಾಗುವುದಿಲ್ಲ.

ಮತ್ತೆ ಅವನು ಏನು ಆಜ್ಞೆ ಕೊಡಬೇಕು ಎಂಬುದನ್ನು ತಿಳಿಸಲಾಗುವುದು.

ಇಮಮಿಂದ್ರ ಸುತಂ ಪಿಬ ಜ್ಯೇಷ್ಠಮಮರ್ತ್ಯಂ ಮದಮ್ ।
ಶುಕ್ರಸ್ಯ ತ್ವಾಭ್ಯಕ್ಷರನ್ ಧಾರಾ ಋತಸ್ಯ ಸಾದನೇ ॥೪॥

ಪದಾರ್ಥ:- ಹೇ [ಇಂದ್ರ] ಶತ್ರುಗಳನ್ನು ಸೀಳಿ ಹಾಕುವಂತಹ ವೀರನೇ! [ತ್ವಾ] ನಿನ್ನನ್ನು [ಧಾರಾಃ] ವಾಣಿಯು [ಋತಸ್ಯ] ಸತ್ಯದ [ಶುಕ್ರಸ್ಯ] ಪರಾಕ್ರಮದ [ಸದನೇ] ಸ್ಥಾನದಲ್ಲಿ [ಅಭ್ಯಕ್ಷರನ್] ಪ್ರಾಪ್ತ ಪಡಿಸುವನೋ ಅವನಿಗೆ ಪ್ರಾಪ್ತನಾಗಿ [ಇಮಮ್] ಈ [ಸುತಮ್] ಉತ್ತಮ ರೀತಿಯಿಂದ ಸಿದ್ಧ ಮಾಡಿದ ಉತ್ತಮ ಔಷಧಿಯ ರಸವನ್ನು [ಪಿಬ] ಕುಡಿ, ಅದರಿಂದ [ಜ್ಯೇಷ್ಠಮ್] ಪ್ರಶಂಸಿತ [ಅಮರ್ತ್ಯಮ್] ಸಾಧಾರಣ ಮನುಷ್ಯನನ್ನು ಅಪ್ರಾಪ್ತ ದಿವ್ಯ ಸ್ವರೂಪವಾದ [ಮದಮ್] ಆನಂದವನ್ನು ಪಡೆದು ಶತ್ರುಗಳನ್ನು ಗೆಲ್ಲು.

ಭಾವಾರ್ಥ:- ಯಾವನೇ ಮನುಷ್ಯನು ವಿದ್ಯೆ ಮತ್ತು ಉತ್ತಮ ಪಾನೀಯ-ಭೋಜನಗಳ ಹೊರತು ಪರಾಕ್ರಮವನ್ನು ಹೊಂದಲು ಸಮರ್ಥನಾಗುವುದಿಲ್ಲ ಮತ್ತು ಇದರ ಹೊರತು ಸತ್ಯ ಅಥವಾ ವಿಜ್ಞಾನ ಮತ್ತು ವಿಜಯವು ದೊರೆಯುವುದಿಲ್ಲ.

ಮತ್ತೆ ಯಾವ ರೀತಿ ಸಭಾಧ್ಯಕ್ಷನ ಸತ್ಕಾರ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಇಂದ್ರಾಯ ನೂನಮರ್ಚತೋ-ಕ್ಥಾನಿ ಚ ಬ್ರವೀತನ ।
ಸುತಾ ಅಮತ್ಸುರಿಂದವೋ ಜ್ಯೇಷ್ಠಂ ನಮಸ್ಯತಾ ಸಹಃ ॥೫॥

ಪದಾರ್ಥ:- ಹೇ ಮನುಷ್ಯರೇ! ನೀವು, ಯಾವನನ್ನು **[ಸುತಾಃ]** ಸಿದ್ಧ **[ಇಂದವಃ]** ಉತ್ತಮ ರಸವುಳ್ಳ ಪದಾರ್ಥವು **[ಅಮತ್ಸುಃ]** ಆನಂದಪಡಿಸುತ್ತದೋ, ಯಾವನನ್ನು **[ಜ್ಯೇಷ್ಠಮ್]** ಉತ್ತಮ **[ಸಹಃ]** ಬಲಪಡೆದು ಆ **[ಇಂದ್ರಾಯ]** ಸಭಾಧ್ಯಕ್ಷನನ್ನು **[ನಮಸ್ಯತ]** ನಮಸ್ಕರಿಸಿರಿ ಮತ್ತು ಅವನನ್ನು ಮುಖ್ಯ ಕಾರ್ಯಗಳಲ್ಲಿ ಯುಕ್ತಗೊಳಿಸಿರಿ. **[ನೂನಮ್]** ನಿಶ್ಚಯದಿಂದ **[ಅರ್ಚತ]** ಸತ್ಕಾರ ಮಾಡಿರಿ. **[ಉಕ್ಥಾನಿ]** ಉತ್ತಮೋತ್ತಮ ವಚನಗಳಿಂದ **[ಬ್ರವೀತನ]** ಉಪದೇಶ ಮಾಡಿರಿ. ಅದರಿಂದ ಸತ್ಕಾರಗಳನ್ನು **[ಚ]** ಕೂಡ ಪಡೆದುಕೊಳ್ಳಿರಿ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾಗಿರುವುದೇನೆಂದರೆ, ಯಾವನು ಎಲ್ಲರ್ರೂ ಸತ್ಕರಿಸುವನೋ, ಶರೀರ ಮತ್ತು ಆತ್ಮದ ಬಲವನ್ನು ಪಡೆದು ಪರೋಪಕಾರಿಯಾಗುವನೋ, ಅವನನ್ನು ಬಿಟ್ಟು ಅನ್ಯರನ್ನು ಸೇನಾಪತಿ ಮೊದಲಾದ ಅಧಿಕಾರಗಳಲ್ಲಿ ಎಂದಿಗೂ ಸ್ಥಾಪಿಸಬಾರದು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ನಕಿಷ್ಟ್ವದ್ ರಥೀತರೋ ಹರೀ ಯದಿಂದ್ರ ಯಚ್ಛಸೇ ।
ನಕಿಷ್ಟ್ವಾನು ಮಜ್ಮನಾ ನಕಿಃ ಸ್ವಶ್ವ ಆನಶೇ ॥೬॥

ಪದಾರ್ಥ:- ಹೇ **[ಇಂದ್ರ]** ಸೇನೆಯನ್ನು ಧಾರಣ ಮಾಡುವ ಸೇನಾಪತಿಯೇ! **[ಯತ್]** ಯಾವ ನೀನು **[ರಥೀತರಃ]** ಅತಿಶಯನಾಗಿ ರಥದಿಂದ ಕೂಡಿರುವ ಯೋಧನಾಗಿರುವೆಯೋ, ಆ ನೀನು **[ಹರೀ]** ಅಗ್ನ್ಯಾದಿ ಅಥವಾ ಕುದುರೆಗಳನ್ನು **[ನಕಿಃ ಯಚ್ಛಸೇ]** ರಥದೊಂದಿಗೆ ಸೇರಿಸುವುದಿಲ್ಲವೇನು? **[ತ್ವಾ]** ನಿನ್ನನ್ನು **[ಮಜ್ಮನಾ]** ಬಲದಿಂದ ಯಾವನು ಕೂಡ **[ನಕಿಃ ಅನ್ವಾವಶೇ]** ವ್ಯಾಪ್ತನಾಗುವುದಿಲ್ಲವೇನು? **[ತ್ವತ್]** ನಿನಗಿಂತ ಅಧಿಕವಾಗಿ ಯಾವನು ಕೂಡ **[ಸ್ವಶ್ವಃ]** ಉತ್ತಮ ಕುದುರೆಗಳುಳ್ಳವನು **[ನಕಿಃ]** ಇಲ್ಲವೇನು? ಇದರಿಂದ ನೀನು ಎಲ್ಲ ಅಂಗಗಳಿಂದ ಕೂಡಿರುವವನಾಗು.

ಭಾವಾರ್ಥ:- ಹೇ ಮನುಷ್ಯರೇ! ನೀವು ಸೇನಾಪತಿಗೆ ಈ ರೀತಿ ಉಪದೇಶ ಮಾಡಿರಿ. ಏನೆಂದರೆ, ನೀನು ಎಲ್ಲರಿಗಿಂತ ದೊಡ್ಡವನಾಗಿರುವೆ. ನಿನ್ನಂತೆ ಯಾವನು ಕೂಡ ಇಲ್ಲವೇನು? ನಿನ್ನನ್ನು ಗೆಲ್ಲುವ ಯಾವನೇ ಸಮರ್ಥನು ಕೂಡ ಇಲ್ಲವೇನು? ಇದರಿಂದ ನೀನು ನಿರಭಿಮಾನತೆಯಿಂದ ಸಾವಧಾನವಾಗಿ ವರ್ತಿಸು.

ಮತ್ತೆ ಅವನು ಹೇಗಿರುವನು ಈ ವಿಷಯವನ್ನು ತಿಳಿಸಲಾಗಿದೆ.

ಯ ಏಕ ಇದ್ ವಿದಯತೇ ವಸು ಮರ್ತಾಯ ದಾಶುಷೇ ।
ಈಶಾನೋ ಅಪ್ರತಿಷ್ಕುತ ಇಂದ್ರೋ ಅಂಗ ॥೭॥

ಪದಾರ್ಥ:- ಹೇ **[ಅಂಗ]** ಮಿತ್ರನೇ! **[ಯಃ]** ಯಾವ **[ಇಂದ್ರಃ]** ಸಭೆ ಮೊದಲಾದವುಗಳ ಅಧ್ಯಕ್ಷನು **[ಏಕಃ]** ಸಹಾಯರಹಿತನೂ **[ಇತ್]** ಕೂಡ **[ದಾಶುಷೇ]** ದಾತನು **[ಮರ್ತಾಯ]** ಮನುಷ್ಯನಿಗಾಗಿ **[ವಸು]** ದ್ರವ್ಯವನ್ನು **[ವಿದಯತೇ]** ಬಹಳ ಪ್ರಕಾರವಾಗಿ ಕೊಡುತ್ತಾನೋ ಮತ್ತು **[ಈಶಾನಃ]** ಸಮರ್ಥನೂ **[ಅಪ್ರತಿಷ್ಕುತಃ]** ನಿಶ್ಚಲನೂ ಆದ ಅವನನ್ನು ಸೇನೆ ಮೊದಲಾದವುಗಳಲ್ಲಿ ಅಧ್ಯಕ್ಷನನ್ನಾಗಿ ಮಾಡಿರಿ.

ಭಾವಾರ್ಥ:- ಹೇ ಮನುಷ್ಯರೇ! ನೀವು ಸಹಾಯ ರಹಿತರಾಗಿದ್ದರೂ ಕೂಡ ನಿರ್ಭಯರಾಗಿ ಯುದ್ಧದಿಂದ ಹಿಂದೆಗೆಯಬೇಡಿರಿ ಹಾಗೂ ಅತ್ಯಂತ ಶೂರನಾದವನನ್ನೇ ಸೇನೆಯ ಸ್ವಾಮಿಯನ್ನಾಗಿ ಮಾಡಿರಿ.

ಮತ್ತೆ ಅವನು ಹೇಗಿರುವನು ಎಂಬುದನ್ನು ತಿಳಿಸಿದೆ.

ಕದಾ ಮರ್ತಮರಾಧಸಂ ಪದಾ ಕ್ಷುಂಪಮಿವ ಸ್ಫುರತ್ ।
ಕದಾ ನಃ ಶುಶ್ರವದ್ ಗಿರ ಇಂದ್ರೋ ಅಂಗ ॥೮॥

ಪದಾರ್ಥ:- **[ಅಂಗ]** ಶೀಘ್ರಕರ್ತನೇ! **[ಇಂದ್ರಃ]** ಸಭೆ ಮೊದಲಾದವುಗಳ ಅಧ್ಯಕ್ಷನು **[ಪದಾ]** ವಿಜ್ಞಾನ ಅಥವಾ ಧನದ ಪ್ರಾಪ್ತಿಯಿಂದ **[ಕ್ಷುಂಪಮಿವ]** ಹೇಗೆ ಸರ್ಪವು ಹೆಡೆಯನ್ನು **[ಸ್ಫುರತ್]** ಚಲಿಸುವುದೋ ಹಾಗೆ **[ಅರಾಧಸಮ್]** ಧನರಹಿತ **[ಮರ್ತಮ್]** ಮನುಷ್ಯನು **[ಕದಾ]** ಯಾವ ಕಾಲದಲ್ಲಿ ಚಲಿಸುವನು **[ಕದಾ]** ಯಾವ ಕಾಲದಲ್ಲಿ **[ನಃ]** ನಮ್ಮನ್ನು ಉಕ್ತ ಪ್ರಕಾರದಿಂದ ಅಂದರೆ ವಿಜ್ಞಾನ ಅಥವಾ ಧನದ ಪ್ರಾಪ್ತಿಯಿಂದ ಹೇಗೆ ಸರ್ಪವು ಹೆಡೆಯನ್ನು ಚಲಿಸುವಂತೆ **[ಗಿರಃ]** ವಾಣಿಯನ್ನು **[ಶುಶ್ರವತ್]** ಕೇಳಿ ಕೇಳಿಸಿರಿ.

ಭಾವಾರ್ಥ:- ಹೇ ಮನುಷ್ಯರೇ! ನೀವು ದರಿದ್ರನನ್ನು ಕೂಡ ಧನಯುಕ್ತವನ್ನಾಗಿಯೂ, ಆಲಸಿಯನ್ನು ಪುರುಷಾರ್ಥಿಯನ್ನಾಗಿಯೂ ಮತ್ತು ಶ್ರವಣ ರಹಿತನನ್ನು ಶ್ರವಣಯುಕ್ತನನ್ನಾಗಿಯೂ ಮಾಡಿರಿ. ಆ ಪುರುಷನನ್ನೇ ಸಭೆ ಮೊದಲಾದವುಗಳ ಅಧ್ಯಕ್ಷನನ್ನಾಗಿ ಮಾಡಿರಿ. ಯಾವಾಗ ಎಲ್ಲಿ ನಮ್ಮ ಮಾತನ್ನು ಕೇಳುವರೋ ಮತ್ತು ನಾವು ಯಾವಾಗ ತಮ್ಮ ಮಾತನ್ನು ಕೇಳವರೋ ಆ ಆಶೆಯನ್ನು ನಾವು ಮಾಡುತ್ತೇವೆ.

ಮತ್ತೆ ಅವನು ಹೇಗಿರುವನು, ಈ ವಿಷಯದ ಬಗ್ಗೆ ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಯಶ್ಚಿದ್ಧಿ ತ್ವಾ ಬಹುಭ್ಯ ಆ ಸುತಾವಾँ ಆವಿವಾಸತಿ ।
ಉಗ್ರಂ ತತ್ ಪತ್ಯತೇ ಶವ ಇಂದ್ರೋ ಅಂಗ ॥೯॥

ಪದಾರ್ಥ:- ಹೇ **[ಅಂಗ]** ಮಿತ್ರನೇ! ನೀನು **[ಸುತಾವಾನ್]** ಅನ್ನಾದಿ ಪದಾರ್ಥಗಳಿಂದ ಕೂಡಿದ **[ಇಂದ್ರಃ]** ಪರಮೈಶ್ವರ್ಯದ ಪ್ರಾಪಕನು **[ಬಹುಭ್ಯಃ]** ಬಹಳ ಮಂದಿಗಾಗಿ **[ತ್ವಾ]** ನಿನ್ನನ್ನು **[ಆವಿವಾಸತಿ]** ಸೇವಿಸುತ್ತಾನೆ. ಯಾವನು ಶತ್ರುಗಳ **[ಉಗ್ರಮ್]** ಅತ್ಯಂತ **[ಶವಃ]** ಬಲವಿದೆಯೋ **[ತತ್]** ಅದನ್ನು **[ಚಿತ್]** ಕೂಡ **[ಆಪತ್ಯತೇ]** ಪಡೆಯುತ್ತಾನೋ **[ತಮ್ ಹಿ]** ಅವನನ್ನೇ ರಾಜನೆಂದು ಒಪ್ಪಿರಿ.

ಭಾವಾರ್ಥ:- ಹೇ ಮನುಷ್ಯರೇ! ನೀವು, ಯಾರು ಶತ್ರುಗಳ ಬಲವನ್ನು ಹನನ ಮಾಡಿ ನಿಮ್ಮನ್ನು ದುಃಖಗಳಿಂದ ಬಿಡಿಸಿ ಸುಖಯುಕ್ತರನ್ನಾಗಿ ಮಾಡಲು ಸಮರ್ಥನೋ ಹಾಗೂ ಯಾವನ ಭಯ ಮತ್ತು ಪರಾಕ್ರಮಗಳಿಂದ ಶತ್ರುಗಳು ನಷ್ಟವಾಗುವರೋ ಅವನನ್ನು ಸೇನಾಪತಿಯನ್ನಾಗಿ ಮಾಡಿ ಆನಂದವನ್ನು ಪಡೆಯಿರಿ.

ಮತ್ತೆ ಅವನು ಹೇಗಿರುವನು ಎಂಬುದನ್ನು ತಿಳಿಸಿದೆ.

ಸ್ವಾದೋರಿತ್ಥಾ ವಿಷೂವತೋ ಮಧ್ವಃಪಿಬಂತಿ ಗೌರ್ಯಃ । ಯಾ ಇಂದ್ರೇಣ ಸಯಾವರೀ-ರ್ವೃಷ್ಣಾ
ಮದಂತಿ ಶೋಭಸೇ ವಸ್ವೀರನು ಸ್ವರಾಜ್ಯಮ್ ॥೧೦॥

ಪದಾರ್ಥಃ- ಹೇಗೆ **[ವೃಷ್ಣಾ]** ಸುಖವನ್ನು ವರ್ಷಿಸಲು **[ಇಂದ್ರೇಣ]** ಸೂರ್ಯನೊಂದಿಗೆ **[ಸಯಾವರೀಃ]** ಸಮಾನವಾಗಿ ಗಮನ ಮಾಡುವ **[ವಸ್ವೀಃ]** ಪೃಥಿವೀ **[ಮೊದಲಾದವುಗಳೊಂದಿಗೆ ಸಂಬಂಧ ಮಾಡುವ]** **[ಗೌರ್ಯಃ]** ಕಿರಣಗಳಿಂದ **[ಸ್ವರಾಜ್ಯಮ್]** ತನ್ನ ಪ್ರಕಾಶರೂಪ ರಾಜ್ಯದ **[ಶೋಭಸೀ]** ಶೋಭೆಗಾಗಿ **[ಅನುಮಂದತಿ]** ಹರ್ಷಕ್ಕೆ ಹೇತುವಾಗುತ್ತದೆ. ಅವರು **[ಇತ್ಥಾ]** ಈ ಪ್ರಕಾರದಿಂದ **[ಸ್ವಾದೌ]** ಸ್ವಾದಯುಕ್ತ **[ವಿಷುವತಃ]** ವ್ಯಾಪ್ತಿಯುಳ್ಳ **[ಮಧ್ವಃ]** ಮಧುರ ಮೊದಲಾದ ಗುಣಗಳನ್ನು **[ಪಿಬಂತಿ]** ಕುಡಿಯುತ್ತಾರೆ. ಹಾಗೆ ನೀವು ಕೂಡ ವರ್ತಿಸಿರಿ.

ಭಾವಾರ್ಥಃ- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ತನ್ನ ಸೇನೆಯ ಪತಿ ಮತ್ತು ವೀರ ಪುರುಷರ ಸೇನೆಯ ಹೊರತು ನಿಜೀ ರಾಜ್ಯದ ಶೋಭೆ ಹಾಗೂ ರಕ್ಷಣೆಯಾಗುವುದಿಲ್ಲ. ಹೇಗೆ ಸೂರ್ಯನ ಕಿರಣಗಳು ಸೂರ್ಯನ ಹೊರತು ಸ್ಥಿತವೂ ಮತ್ತು ವಾಯುವಿನ ಹೊರತು ಜಲದ ಆಕರ್ಷಣೆ ಮಾಡಿ ವರ್ಷಿಸುವುದಕ್ಕಾಗಿ ಸಮರ್ಥವಾಗುವುದಿಲ್ಲವೋ, ಹಾಗೆ ಸೇನಾಧ್ಯಕ್ಷನ ಹೊರತು ಮತ್ತು ರಾಜನ ಹೊರತು ಪ್ರಜೆಗಳು ಆನಂದ ಪಡಲು ಸಮರ್ಥರಾಗುವುದಿಲ್ಲ.

ಮತ್ತೆ ಅವನು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ತಾ ಅಸ್ಯ ಪೃಶನಾಯುವಃ ಸೋಮಂ ಶ್ರೀಣಂತಿ ಪೃಶ್ನಯಃ । ಪ್ರಿಯಾ ಇಂದ್ರಸ್ಯ ಧೇನವೋ
ವಜ್ರಂ ಹಿನ್ವಂತಿ ಸಾಯಕಂ ವಸ್ವೀರನು ಸ್ವರಾಜ್ಯಮ್ ॥೧೧॥

ಪದಾರ್ಥಃ- ಹೇ ಮನುಷ್ಯರೇ! ನೀವು **[ಅಸ್ಯ]** ಈ ಸೂರ್ಯನ ಅಥವಾ ಸೇನೆಯ ಅಧ್ಯಕ್ಷನ **[ಪೃಶನಾಯುವಃ]** ತನ್ನನ್ನು ಸ್ಪರ್ಶಿಸುವ ಅಂದರೆ ತಲೆಬುಡವಿಲ್ಲದೆ ತನ್ನನ್ನು ಸ್ಪರ್ಶಿಸಲು ಬಯಸುವ **[ಪೃಶ್ನಯಃ]** ಸ್ಪರ್ಶಮಾಡುತ್ತಾ ಮತ್ತು **[ಪ್ರಿಯಾಃ]** ಪ್ರಸನ್ನಗೊಳಿಸುವ **[ಧೇನವಃ]** ಕಿರಣಗಳು ಅಥವಾ ಗೋವುಗಳು ಅಥವಾ ವಾಣಿಯು **[ಸೋಮಮ್]** ಓಷಧಿರಸ ಅಥವಾ ಐಶ್ವರ್ಯವನ್ನು **[ಶ್ರೀಣನ್ತಿ]** ಸಿದ್ಧಗೊಳಿಸುತ್ತಾ ಮತ್ತು **[ವಸ್ವೀಃ]** ಅವರು ಪೃಥಿವಿಯೊಂದಿಗೆ ಸಂಬಂಧ ಮಾಡುವ **[ಸ್ವರಾಜ್ಯಮ್]** ತನ್ನ ರಾಜ್ಯದ **[ಅನು]** ಅನುಕೂಲನಾಗುತ್ತದೆ. ಅವನನ್ನು ಪಡೆಯಿರಿ.

ಭಾವಾರ್ಥಃ- ಹೇಗೆ ಗೋಪಾಲಕನು ಗೋವಿನ ಜಲದ ರಸವನ್ನು ಕುಡಿದು ನಿಜಸುಖವನ್ನು ಹೆಚ್ಚಿಸಿಕೊಂಡು ಆನಂದವನ್ನು ವೃದ್ಧಿಸುವನೋ ಹಾಗೆಯೇ ಸೇನಾಧ್ಯಕ್ಷನ ಸೇನೆಯು ಮತ್ತು ಸೂರ್ಯನ ಕಿರಣಗಳು ಓಷಧಿಗಳಿಂದ ವೈದ್ಯಶಾಸ್ತ್ರಕ್ಕೆ ಅನುಸಾರವಾಗಿ ಅಥವಾ ಉತ್ಪನ್ನವಾಗಲಿ. ಪರಿಪಕ್ವ ರಸವನ್ನು ಕುಡಿದು ವಿಜಯ ಮತ್ತು ಪ್ರಕಾಶವನ್ನು ಮಾಡಿ ಆನಂದಪಡಿಸುತ್ತವೆ.

ಮತ್ತೆ ಅವನು ಏನು ಮಾಡುವನು ಎಂಬುದನ್ನು ತಿಳಿಸಲಾಗಿದೆ.

ತಾ ಅಸ್ಯ ನಮಸಾ ಸಹಃ ಸಪರ್ಯಂತಿ ಪ್ರಚೇತಸಃ ।
ವ್ರತಾನ್ಯಸ್ಯ ಸಶ್ಚಿರೇ ಪುರೂಣಿ ಪೂರ್ವಚಿತ್ತಯೇ ವಸ್ವೀರನು ಸ್ವರಾಜ್ಯಮ್ ॥೧೨॥

ಪದಾರ್ಥಃ- ಹೇ ಮನುಷ್ಯರೇ! ನೀವು, ಯಾವ ರೀತಿ **[ಸ್ವರಾಜ್ಯಂ]** ತನ್ನ ರಾಜ್ಯದ ಅರ್ಚನೆಯನ್ನು ಮಾಡುತ್ತ ನ್ಯಾಯಾಧೀಶನಾದವನು ಎಲ್ಲರ ಪಾಲನೆಯನ್ನು ಮಾಡುತ್ತನೋ, ಅದೇ ರೀತಿ **[ಅಸ್ಯ]** ಈ ಅಧ್ಯಕ್ಷನ **[ನಮಸಾ]** ಅನ್ನ ಅಥವಾ ವಜ್ರದೊಂದಿಗಿರುವ **[ಪ್ರಚೇತಸಃ]** ಉತ್ತಮ ಜ್ಞಾನಯುಕ್ತ ಸೇನೆಯು **[ಸಹಃ]** ಬಲವನ್ನು **[ಸಪರ್ಯಂತಿ]** ಸೇವನೆ ಮಾಡುತ್ತದೆ. **[ಯಾಃ]** ಯಾವ **[ಅಸ್ಯ]** ಸೇನಾಧ್ಯಕ್ಷನ **[ಪೂರ್ವಚಿತ್ತಯೇ]** ಪೂರ್ವಜ್ಞಾನಕ್ಕಾಗಿ **[ಪುರೂಣಿ]** ಬಹಳವಾದ **[ವ್ರತಾನಿ]** ಸತ್ಯ ಭಾಷಣನಾದಿ ವ್ರತಗಳನ್ನು **[ಸಶ್ಚಿರೇ]** ಪ್ರಾಪ್ತಿಸುತ್ತದೆ. **[ತಾಃ]** ಅವುಗಳನ್ನು **[ವಸ್ವೀಃ]** ಪೃಥಿವಿ ಸಂಬಂಧಿಯಾದ ಪ್ರದೇಶಗಳ ಆನಂದವನ್ನು ಭೋಗಿಸಲು ಸೇವಿಸಿರಿ.

ಭಾವಾರ್ಥಃ- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾಗಿರುವುದೇನೆಂದರೆ, ಸಾಮಗ್ರಿ ಬಲ ಮತ್ತು ಉತ್ತಮ ನಿಯಮಗಳ ಹೊರತು ಬಹಳ ರಾಜ್ಯ ಮೊದಲಾದವುಗಳ ಸುಖವು ಪ್ರಾಪ್ತಿಯಾಗುವುದಿಲ್ಲ. ಈ ಹೇತುವಿನಿಂದ ಯಮನಿಯಮಗಳ ಅನುಕೂಲವು ಹೇಗೆ ಬೇಕೋ ಹಾಗೆ ಇದರ ವಿಚಾರ ಮಾಡಿ ವಿಜಯ ಮೊದಲಾದ ಧರ್ಮಯುಕ್ತ ಕಾರ್ಯಗಳನ್ನು ಸಿದ್ಧಮಾಡಲಿ.

ಮತ್ತೆ ಆ ರಾಜನ ಕೃತ್ಯದ ಉಪದೇಶವನ್ನು ಮಾಡಲಾಗಿದೆ.

ಇಂದ್ರೋ ದಧೀಚೋ ಅಸ್ಥಭಿ-ರ್ವೃತ್ರಾಣ್ಯಪ್ರತಿಷ್ಕುತಃ । ಜಘಾನ ನವತೀರ್ನವ ॥೧೩॥

ಪದಾರ್ಥಃ- ಹೇ ಸೇನಾಪತೀ! ಹೇಗೆ **[ಅಪ್ರತಿಷ್ಕುತಃ]** ಎಲ್ಲ ಕಡೆಯಿಂದ ಸ್ಥಿರವಾಗಿರುವ **[ಇಂದ್ರ]** ಸೂರ್ಯಲೋಕವು **[ಅಸ್ಥಭಿಃ]** ಅಸ್ಥಿರ ಕಿರಣಗಳಿಂದ **[ನವನವತೀಃ]** ೯೯ ಪ್ರಕಾರದ ದಿಕ್ಕುಗಳ ಅವಯವಗಳನ್ನು ಪಡೆದ **[ದಧೀಚಃ]** ಧಾರಣ ಮಾಡುವಂತಹ ವಾಯು ಮೊದಲಾದವುಗಳನ್ನು ಪಡೆಯುತ್ತದೆಯೋ, ಅವು **[ವೃತ್ರಾಣಿ]** ಮೇಘದ ಸೂಕ್ಷ್ಮ ಅವಯವ ರೂಪದಲ್ಲಿರುವ ಜಲಗಳನ್ನು **[ಜಘಾನ]** ಹನನ ಮಾಡುತ್ತವೋ, ಹಾಗೆ ನೀನು ಅನೇಕ ಅಧರ್ಮಿ ಮನುಷ್ಯರನ್ನು ಹನನ ಮಾಡು.

ಭಾವಾರ್ಥಃ- ಇಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವನು ಸೂರ್ಯನಂತೆ ದುಷ್ಟ ಶತ್ರುಗಳನ್ನು ಕೊಂದು ಸೇನೆಯ ರಕ್ಷಕನಾಗುವನೋ ಅವನೇ ಸೇನಾಪತಿಯಾಗಲು ಯೋಗ್ಯನಾಗುವನು.

ಮತ್ತೆ ಅವನು ಹೇಗಿರುವನು ಎಂಬುದನ್ನು ತಿಳಿಸಲಾಗಿದೆ.

ಇಚ್ಛನ್ನಶ್ವಸ್ಯ ಯಚ್ಛಿರಃ ಪರ್ವತೇಷ್ವಪಶ್ರಿತಮ್ । ತದ್ ವಿದಚ್ಛರ್ಯಣಾವತಿ ॥೧೪॥

ಪದಾರ್ಥಃ- ಹೇಗೆ **[ಇಂದ್ರ]** ಸೂರ್ಯನು **[ಅಶ್ವಸ್ಯ]** ಶೀಘ್ರಗಾಮಿಯಾದ ಮೇಘದ **[ಯತ್]** ಯಾವ **[ಶರ್ಯಣಾವತಿ]** ಆಕಾಶದಲ್ಲಿ **[ಪರ್ವತೇಷು]** ಬೆಟ್ಟ ಅಥವಾ ಮೇಘಗಳಲ್ಲಿ **[ಅಪಶ್ರಿತಮ್]** ಆಶ್ರಿತವು **[ಶಿರಃ]** ಉತ್ತಮಾಂಗದಂತೆ ಅವಯವವಿದೆಯೋ, ಅದನ್ನು ಭೇದನ ಮಾಡುತ್ತಾನೆ. ಹಾಗೆಯೇ ಶತ್ರುಸೇನೆಯ ಉತ್ತಮಾಂಗದ ನಾಶದ **[ಇಚ್ಛನ್]** ಇಚ್ಛೆ ಮಾಡುತ್ತಾ ಸುಖಗಳನ್ನು ಸೇನಾಪತಿಯು **[ವಿದತ್]** ಪಡೆಯಲಿ.

ಭಾವಾರ್ಥಃ- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನು ಆಕಾಶದಲ್ಲಿರುವ ಮೇಘಗಳನ್ನು ಭೇದಿಸಿ ಭೂಮಿಯ ಮೇಲೆ ಬೀಳಿಸುತ್ತಾನೋ, ಹಾಗೆಯೇ ಪರ್ವತ ಮತ್ತು ಸೇನೆಗಳಲ್ಲಿಯೂ ಇರುವ ದುಷ್ಟಶತ್ರುಗಳ ಹನನ ಮಾಡಿ ಭೂಮಿಯ ಮೇಲೆ ಬೀಳಿಸಬೇಕು. ಈ ಪ್ರಕಾರ ಮಾಡದ ಹೊರತು ರಾಜ್ಯದ ವ್ಯವಸ್ಥೆಯು ಸ್ಥಿರಪಡುವುದಿಲ್ಲ.

ಈಗ ರಾಜನು ಸೂರ್ಯನಂತೆ ಯೋಗ ಕರ್ಮಗಳ ಉಪದೇಶವನ್ನು ತಿಳಿಸಲಾಗಿದೆ.

ಅತ್ರಾಹ ಗೋರಮನ್ವತ ನಾಮ ತ್ವಷ್ಟುರಪೀಚ್ಯಮ್ । ಇತ್ಥಾ ಚಂದ್ರಮಸೋ ಗೃಹೇ॥೧೫॥

ಪದಾರ್ಥ:- ಹೇ ಮನುಷ್ಯರೇ! ನೀವು ಹೇಗೆ **[ಅತ್ರ]** ಈ ಜಗತ್ತಿನಲ್ಲಿ **[ನಾಮ]** ಪ್ರಸಿದ್ಧವಾದ **[ಗೌಃ]** ಪೃಥಿವೀ ಮತ್ತು **[ಚಂದ್ರಮಸಃ]** ಚಂದ್ರಲೋಕದ ಮಧ್ಯದಲ್ಲಿ **[ತ್ವಷ್ಟುಃ]** ಛೇದನ ಮಾಡುವಂತಹ ಸೂರ್ಯನ **[ಅಪೀಚ್ಯಮ್]** ಪ್ರಾಪ್ತವಾಗುವವರಲ್ಲಿ ಯೋಗ್ಯ ಪ್ರಕಾಶರೂಪ ವ್ಯವಹಾರಗಳಿವೆ. **[ಇತ್ಥಾ]** ಈ ಪ್ರಕಾರ **[ಅಮನ್ವತ]** ಒಪ್ಪುತ್ತಾರೆ ಹಾಗೆ **[ಅಹ]** ನಿಶ್ಚಯದಿಂದ ಹೋಗಿ **[ಗೃಹೇ]** ಮನೆಗಳಲ್ಲಿ ನ್ಯಾಯಪ್ರಕಾಶಾರ್ಥವಾಗಿ ವರ್ತಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ತಿಳಿಯಬೇಕಾದುದೇನೆಂದರೆ, ಈಶ್ವರನ ವಿದ್ಯಾವೃದ್ಧಿಯ ಹಾನಿ ಮತ್ತು ವಿಪರೀತವಾಗಿ ಆಗುವುದಿಲ್ಲ. ಎಲ್ಲ ಕಾಲದಲ್ಲಿಯೂ ಎಲ್ಲ ಕ್ರಿಯೆಗಳಲ್ಲಿಯೂ ಏಕರಸವು ಸೃಷ್ಟಿಯ ನಿಯಮದಂತೆ ಆಗುತ್ತದೆ. ಹೇಗೆ ಸೂರ್ಯನ ಪೃಥಿವಿಯೊಂದಿಗಿನ ಆಕರ್ಷಣೆಯು ಮತ್ತು ಪ್ರಕಾಶ ಮೊದಲಾದವುಗಳ ಸಂಬಂಧವಿದೆಯೋ, ಹಾಗೆಯೇ ಅನ್ಯ ಭೂಗೋಳಗಳ ಜೊತೆ ಇದೆ. ಏಕೆಂದರೆ, ಈಶ್ವರನಿಂದ ಸ್ಥಿರಗೊಳಿಸಿದ ನಿಯಮದ ವ್ಯಭಿಚಾರ ಅಂದರೆ ತಪ್ಪು ಎಂದಿಗೂ ಆಗುವುದಿಲ್ಲ.

ಮತ್ತೆ ಸೇನಾಪತಿಗೆ ಯೋಗ್ಯವಾದ ಕರ್ಮಗಳನ್ನು ತಿಳಿಸಲಾಗಿದೆ.

ಕೋ ಅದ್ಯ ಯುಙ್ಕ್ತೇ ಧುರಿ ಗಾ ಋತಸ್ಯ ಶಿಮೀವತೋ ಭಾಮಿನೋ ದುರ್ಹೃಣಾಯೂನ್ ।
ಆಸನ್ನಿಷೂನ್ ಹೃತ್ಸ್ವಸೋ ಮಯೋಭೂನ್ ಯ ಏಷಾಂ ಭೃತ್ಯಾಮೃಣಧತ್ ಸ ಜೀವಾತ್॥೧೬॥

ಪದಾರ್ಥ:- **[ಕಃ]** ಯಾರು **[ಅದ್ಯ]** ಈಗ **[ಋತಸ್ಯ]** ಸತ್ಯದ ಆಚರಣೆಗೆ ಸಂಬಂಧಿಸಿದ **[ಶಿಮೀವತಃ]** ಉತ್ತಮ ಕ್ರಿಯಾಯುಕ್ತ **[ಭಾಮಿನಃ]** ಶತ್ರುಗಳ ಮೇಲೆ ಕ್ರೋಧ ಮಾಡಲು **[ದುರ್ಹೃಣಾಯೂನ್]** ಶತ್ರುಗಳನ್ನು ದುರ್ಲಭ ಸಾಹಸಕರ್ಮಗಳಂತೆ ಆಚರಣೆ ಮಾಡಲು **[ಅಸನ್ನಿಷೂನ್]** ಉತ್ತಮ ಸ್ಥಾನದಲ್ಲಿ ಬಾಣವನ್ನು ಕಳುಹಿಸಲು **[ಹೃತ್ಸ್ವಸಃ]** ಶತ್ರುಗಳ ಹೃದಯದಲ್ಲಿ ಶಸ್ತ್ರಪ್ರಹಾರ ಮಾಡಲು ಮತ್ತು **[ಮಯೋಭೂನ್]** ಸ್ವರಾಜ್ಯಕ್ಕಾಗಿ ಸುಖಕೊಡುವ ಶ್ರೇಷ್ಠ ವೀರರನ್ನು **[ಧುರಿ]** ಸಂಗ್ರಾಮದಲ್ಲಿ **[ಯುಂಕ್ತೇ]** ಯುಕ್ತ ಮಾಡುತ್ತಾನೆ. ಅಥವಾ **[ಯಃ]** ಯಾವ **[ಏಷಾಮ್]** ಇವುಗಳ ಜೀವನದ ನಿಮಿತ್ತ **[ಗಾಃ]** ಭೂಮಿಯನ್ನು **[ಋಣಧತ್]** ಸಮೃದ್ಧಿಯುಕ್ತರನ್ನಾಗಿ ಮಾಡಿ **[ಸಃ]** ಅವನು **[ಜೀವಾತ್]** ಬಹಳ ಕಾಲದವರೆಗೂ ಜೀವಿಸಲಿ.

ಭಾವಾರ್ಥ:- ಎಲ್ಲರ ಅಧ್ಯಕ್ಷನಾದ ರಾಜನು ಎಲ್ಲರಿಗೂ ಪ್ರಕಟ ಆಜ್ಞೆಯನ್ನು ಕೊಡಲಿ. ಎಲ್ಲ ಸೇನೆ ಮತ್ತು ಮತ್ತು ಪ್ರಜೆಗಳನ್ನು ಸತ್ಯಾಚರಣೆಯಲ್ಲಿ ನಿಯುಕ್ತಗೊಳಿಸಲಿ. ಯಾವಾಗಲೂ ಅವರ ಜೀವಿತಕಾಲವನ್ನು ವೃದ್ಧಿಸಿ ತಾವೂ ಬಹಳ ಕಾಲ ಜೀವಿಸಿರಿ.

ಈಗ ರಾಜಧರ್ಮದ ಪ್ರಶ್ನೋತ್ತರ ವಿಷಯವನ್ನು ತಿಳಿಸಲಾಗಿದೆ.

ಕ ಈಷತೇ ತುಜ್ಯತೇ ಕೋ ಬಿಭಾಯ ಕೋ ಮಂಸತೇ ಸಂತಮಿಂದ್ರಂ ಕೋ ಅಂತಿ।
ಕಸ್ತೋಕಾಯ ಕ ಇಭಾಯೋತ ರಾಯೇಽಧಿ ಬ್ರವತ್ ತನ್ವೇ೩ ಕೋ ಜನಾಯ ॥೧೭॥

ಪದಾರ್ಥ:- ಹೇ ಸೇನಾಪತಿ! ಸೇನೆಯಲ್ಲಿರುವ ಭೃತ್ಯರಲ್ಲಿ **[ಕಃ]** ಯಾವನು ಶತ್ರುಗಳನ್ನು **[ಈಷತೇ]** ಕೊಲ್ಲುತ್ತಾನೆ. **[ಕಃ]** ಯಾವನು ಶತ್ರುಗಳಿಂದ **[ತುಜ್ಯತೇ]** ಕೊಲ್ಲಲ್ಪಡುತ್ತಾನೆ. **[ಕಃ]** ಯಾವನು ಯುದ್ಧದಲ್ಲಿ

[ಬಿಭಾಯ] ಭಯಕ್ಕೆ ಒಳಗಾಗುತ್ತಾನೆ. **[ಕಃ]** ಯಾವನು **[ಸಂತಮ್]** ರಾಜಧರ್ಮದಲ್ಲಿರುತ್ತಾ **[ಇಂದ್ರಮ್]** ಉತ್ತಮ ಐಶ್ವರ್ಯದ ದಾತನನ್ನು **[ಮಂಸತೇ]** ತಿಳಿಯುತ್ತಾನೆ. **[ಕಃ]** ಯಾವನು **[ತೋಕಾಯ]** ಸಂತಾನದ **[ಅಂತಿ]** ಸಮೀಪದಲ್ಲಿರುತ್ತಾನೆ. **[ಕಃ]** ಯಾವನು **[ಇಭಾಯ]** ಆನೆಯು ಉತ್ತಮವಾಗುವುದಕ್ಕಾಗಿ ಶಿಕ್ಷಣ ಕೊಡುತ್ತಾನೆ. **[ಉತ]** ಮತ್ತು **[ಕಃ]** ಯಾವನು **[ರಾಯೇ]** ಬಹಳ ಸಂಪತ್ತಿಗಾಗಿ ವರ್ತಿಸುತ್ತಾನೆ ಮತ್ತು **[ತನ್ವೇ]** ಶರೀರ ಮತ್ತು **[ಜನಾಯ]** ಮನುಷ್ಯರಿಗಾಗಿ **[ಅಧಿಬ್ರವತ್]** ಆಜ್ಞೆ ಕೊಡುತ್ತಾನೆ, ಇದರ ಉತ್ತರವನ್ನು ತಾವು ಹೇಳಿರಿ.

ಭಾವಾರ್ಥ:- ಯಾವನು ೪೮ ವರ್ಷಗಳ ಪರ್ಯಂತ ಬ್ರಹ್ಮಚರ್ಯ, ಉತ್ತಮ ಶಿಕ್ಷಣ ಮತ್ತು ಅನ್ಯ ಶುಭ ಗುಣಗಳಿಂದ ಕೂಡಿದವನಾಗಿರುವನೋ, ಅವನೇ ವಿಜಯ ಶಾಲಿಯಾಗಿ ಕರ್ಮಗಳನ್ನು ಮಾಡುತ್ತಾನೆ. ಹೇಗೆ ರಾಜನು ಸೇನಾಪತಿಯನ್ನು ತನ್ನ ಎಲ್ಲ ಸೇನಾ ನೌಕರರ ವ್ಯವಸ್ಥೆಯನ್ನು ಕೇಳುವನೋ ಹಾಗೆಯೇ ಸೇನಾಪತಿಯೂ ಕೂಡ ತನ್ನ ಅಧೀನದಲ್ಲಿರುವ ಚಿಕ್ಕ ಸೇನಾಧಿಪತಿಗಳಿಂದ ಸ್ವತಃ ವಾರ್ತೆಗಳನ್ನು ಕೇಳಲಿ. ಹೇಗೆ ಸೇನಾಪತಿಗೆ ಆಜ್ಞೆ ಕೊಡುತ್ತಾನೋ, ಹಾಗೆ ಸೇನಾಪತಿಯು ಸ್ವತಃ ಸೇನೆಯ ಪ್ರಧಾನ ಪುರುಷರಿಗೆ ಮಾಡಲು ಯೋಗ್ಯವಾದ ಕಾರ್ಯಗಳ ಆಜ್ಞೆಯನ್ನು ಕೊಡಲಿ.

ಮತ್ತೆ ಅದೇ ವಿಷಯ.

ಕೋ ಅಗ್ನಿಮೀಟ್ಟೇ ಹವಿಷಾ ಘೃತೇನ ಸ್ರುಚಾ ಯಜಾತಾ ಋತುಭಿರ್ಧ್ರುವೇಭಿಃ । ಕಸ್ಮೈ ೮
ದೇವಾ ಆ ವಹಾನಾಶು ಹೋಮ ಕೋ ಮಂಸತೇ ವೀತಿಹೋತ್ರಃ ಸುದೇವಃ ॥೧೮॥

ಪದಾರ್ಥ:- ಹೇ ವಿದ್ವಾಂಸನೇ! **[ಕಃ]** ಯಾವನು **[ವೀತಿಹೋತ್ರಃ]** ವಿಜ್ಞಾನ ಮತ್ತು ಶ್ರೇಷ್ಠಕ್ರಿಯೆಗಳಿಂದ ಕೂಡಿರುವ ಪುರುಷನು **[ಹವಿಷಾ]** ವಿಚಾರ ಮತ್ತು **[ಘೃತೇನ]** ತುಪ್ಪದಿಂದ **[ಅಗ್ನಿಮ್]** ಅಗ್ನಿಯನ್ನು **[ಈಟ್ಟೇ]** ಐಶ್ವರ್ಯದ ಪ್ರಾಪ್ತಿಗೆ ಹೇತುವಾಗುತ್ತದೆ. **[ಕಃ]** ಯಾವನು **[ಸ್ರುಜಾ]** ಕರ್ಮದಿಂದ **[ಧ್ರುವೇಭಿಃ]** ನಿಶ್ಚಲ **[ಋತುಭಿಃ]** ವಸಂತಾದಿ ಋತುಗಳಲ್ಲಿ **[ಯಜಾತೈಃ]** ಜ್ಞಾನ ಮತ್ತು ಕ್ರಿಯಾ ಯಜ್ಞವನ್ನು ಮಾಡಲಿ. **[ದೇವಾಃ]** ವಿದ್ವಾಂಸರು **[ಕಸ್ಮೈ ೮]** ಯಾವುದಕ್ಕಾಗಿ **[ಹೋಮ]** ಗ್ರಹಣ ಅಥವಾ ದಾನವನ್ನು **[ಆಶು]** ಶೀಘ್ರವಾಗಿ **[ಆವಹಾನ್]** ಪ್ರಾಪ್ತ ಮಾಡಿಸುತ್ತಾನೆ. ಯಾವ **[ಸುದೇವಃ]** ಉತ್ತಮ ವಿದ್ವಾಂಸನು ಇವೆಲ್ಲವನ್ನು **[ಮಂಸತೇ]** ತಿಳಿಯುತ್ತಾನೆ. ಇದರ ಉತ್ತರವನ್ನು ಕೊಡಿರಿ.

ಭಾವಾರ್ಥ:- ಹೇ ವಿದ್ವಾಂಸನೇ! ಯಾವ ಸಾಧನೆ ಅಥವಾ ಕರ್ಮಗಳಿಂದ ಅಗ್ನಿವಿದ್ಯೆಯನ್ನು ಪಡೆದು ಮತ್ತು ಯಾವುದರಿಂದ ಮತ್ತು ಕ್ರಿಯಾರೂಪ ಯಜ್ಞವು ಸಿದ್ಧವಾಗಲಿ, ಯಾವ ಪ್ರಯೋಜನಕ್ಕಾಗಿ ವಿದ್ವಾಂಸರು ಯಜ್ಞದ ವಿಸ್ತಾರ ಮಾಡುತ್ತಾರೆ?

ಮತ್ತೆ ಈಶ್ವರ ಮತ್ತು ಸಭೆ ಮೊದಲಾದವುಗಳ ಅಧ್ಯಕ್ಷನನ್ನು ಹೇಗೆ ತಿಳಿಯಬೇಕು?

ತ್ವಮಙ್ಗ ಪ್ರ ಶಂಸಿಷೋ ದೇವಃ ಶವಿಷ್ಠ ಮರ್ತ್ಯಮ್ ।
ನ ತ್ವದನ್ಯೋ ಮಘವನ್ನಸ್ತಿ ಮರ್ಡಿತೇ-ಂದ್ರ ಬ್ರವೀಮಿ ತೇ ವಚಃ ॥೧೯॥

ಪದಾರ್ಥ:- ಹೇ **[ಅಂಗ]** ಮಿತ್ರನೇ! **[ಶವಿಷ್ಠ]** ಪರಮ ಬಲಯುಕ್ತನೇ! ಯಾವುದರಿಂದ ನೀನು **[ದೇವಃ]** ವಿದ್ವಾಂಸನಾಗುತ್ತೀಯೋ ಅದರಿಂದ **[ಮರ್ತ್ಯಮ್]** ಮನುಷ್ಯನನ್ನು **[ಪ್ರಶಂಸಿಷಃ]** ಪ್ರಶಂಸಿತಗೊಳಿಸು. ಹೇ **[ಮಘವನ್]**

ಉತ್ತಮ ಧನದ ದಾತನೇ! [ಇಂದ್ರ] ದುಃಖಗಳ ನಾಶಕನೇ! ಯಾವುದು [ತ್ವಮ್] ನಿನ್ನಿಂದ [ಅನ್ಯಃ] ಭಿನ್ನವಾದ ಯಾವುದೇ ಆದರೂ ಕೂಡ [ಮರ್ಡಿತಾ] ಸುಖದಾಯಕವು [ನಾಸ್ತಿ] ಅಲ್ಲ. ಅದರಿಂದ [ತೇ] ನಿನಗೆ [ವಚಃ] ಧರ್ಮಯುಕ್ತ ವಚನಗಳನ್ನು [ಬ್ರವೀಮಿ] ಉಪದೇಶ ಮಾಡುತ್ತೇನೆ.

ಭಾವಾರ್ಥ:- ಮನುಷ್ಯರಿಗೆ ಯೋಗ್ಯವಾಗಿರುವುದೇನೆಂದರೆ, ಉತ್ತಮ ಕರ್ಮ ಮಾಡಲು ಅಸಾಧಾರಣವೂ ಸದಾ ಸುಖಕೊಡುವ ಧಾರ್ಮಿಕ ಮನುಷ್ಯರೊಂದಿಗೇ ಮಿತ್ರತ್ವವನ್ನು ಮಾಡಿ ಒಬ್ಬರು ಇನ್ನೊಬ್ಬರಿಗೆ ಸುಖ ಕೊಡುವ ಉಪದೇಶ ಮಾಡಲಿ.

ಮತ್ತೆ ಆ ಸಭಾಧ್ಯಕ್ಷನು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ಮಾ ತೇ ರಾಧಾಂಸಿ ಮಾ ತ ಊತಯೋ ವಸೋಽಸ್ಮಾನ್ ಕದಾ ಚನಾ ದಭನ್ ।
ವಿಶ್ವಾ ಚ ನ ಉಪಮಿಮೀಹಿ ಮಾನುಷ ವಸೂನಿ ಚರ್ಷಣಿಭ್ಯ ಆ ॥೨೦॥

ಪದಾರ್ಥ:- ಹೇ [ವಸೋ] ಸುಖದಲ್ಲಿ ವಾಸಿಸುವವನೇ! [ತೇ] ನಿನ್ನ [ರಾಧಾಂಸಿ] ಧನವು [ಅಸ್ಮಾನ್] ನಮ್ಮನ್ನು [ಕದಾಚನ] ಎಂದಿಗೂ [ಮಾದಭನ್] ದುಃಖಕ್ಕೀಡುಮಾಡದಿರಲಿ. [ತೇ] ನಿನ್ನ [ಊತಯಃ] ರಕ್ಷಣೆ [ಅಸ್ಮಾನ್] ನಮಗೆ [ಮಾ] ದುಃಖದಾಯಕವಾಗದಿರಲಿ. ಹೇ [ಮಾನುಷ] ಹೇಗೆ ನೀನು [ಚರ್ಷಣಿಭ್ಯಃ] ಉತ್ತಮ ಮನುಷ್ಯರಿಗೆ [ವಿಶ್ವಾ] ವಿಜ್ಞಾನ ಮೊದಲಾದ ಎಲ್ಲ ಪ್ರಕಾರದ [ವಸೂನಿ] ಸಂಪತ್ತನ್ನು ಕೊಡುತ್ತೀಯೋ, ಹಾಗೆ ನಮಗೂ ಕೂಡ ಕೊಡು. [ಚ] ಮತ್ತು [ನಃ] ವಿದ್ವಾನ್ ಧಾರ್ಮಿಕರಾದ ನಮಗೆ [ಆ] ಎಲ್ಲ ಕಡೆಗಳಿಂದ [ಉಪಮಿಮೀಹಿ] ಉಪಮಾನವನ್ನು ಪ್ರಾಪ್ತಿಪಡಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾರ ಶರೀರ, ಮನ ಮತ್ತು ಸಂಪತ್ತು ಎಲ್ಲರನ್ನೂ ಸುಖಪಡಿಸುತ್ತದೋ ಅವರೇ ಧಾರ್ಮಿಕ ಮನುಷ್ಯರು. ಯಾರು ಜಗತ್ತಿನ ಉಪಕಾರಕ್ಕಾಗಿ ಪ್ರಯತ್ನ ಪಡುವರೋ ಅವರೇ ಪ್ರಶಂಸೆಗೆ ಯೋಗ್ಯರು.

ಈ ಸೂಕ್ತದಲ್ಲಿ ಸೇನಾಪತಿಯ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಂಬತ್ತನಾಲ್ಕನೆಯ ಸೂಕ್ತ ಸಮಾಪ್ತ

ಸೂತ್ರ ೮೫

ಮಂತ್ರಸಂಖ್ಯೆ ೧೨ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಮರುತಃ । ಛಂದಃ - ಜಗತೀ, ೫, ೧೨ ತ್ರಿಷ್ಟುಪ್ । ಸ್ವರಃ - ನಿಷಾದಃ, ೫, ೧೨ ಧೈವತಃ.

ಮತ್ತೆ ಸಭಾಧ್ಯಕ್ಷ ಮೊದಲಾದವರು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ಪ್ರ ಯೇ ಶುಮ್ಭಂತೇ ಜನಯೋ ನ ಸಪ್ತಯೋ ಯಾಮನ್ ರುದ್ರಸ್ಯ ಸೂನವಃ ಸುದಂಸಸಃ ।
ರೋದಸೀ ಹಿ ಮರುತಶ್ಚಕ್ರಿರೇ ವೃಧೇ ಮದಂತಿ ವೀರಾ ವಿದಥೇಷು ಘೃಷ್ವಯಃ ॥೧॥

ಪದಾರ್ಥ:- [ಯೇ] ಯಾವ [ರುದ್ರಸ್ಯ] ದುಷ್ಟರನ್ನು ಅಳಿಸುವವನ [ಸೂನವಃ] ಪುತ್ರನು [ಸುದಂಸಸಃ] ಉತ್ತಮ ಕರ್ಮ ಮಾಡುವವನು [ಘೃಷ್ವಯಃ] ಆನಂದಯುಕ್ತನು [ವೀರಾಃ] ವೀರಪುರುಷರು [ಹಿ] ನಿಶ್ಚಯವಾಗಿ [ಯಾಮನ್] ಮಾರ್ಗದಲ್ಲಿ ಹೇಗೆ ಅಲಂಕಾರದಿಂದ ಸುಶೋಭಿತನಾದ [ಜನಯಃ] ಸುಶೀಲ ಸ್ತ್ರೀಯರ [ನ] ಸಮಾನ ಮತ್ತು [ಸಪ್ತಯಃ] ಅಶ್ವದಂತೆ ಶೀಘ್ರವಾಗಿ ಹೋಗಿ ಬರುವ [ಮರುತಃ] ವಾಯುವು [ರೋದಸೀ] ಪ್ರಕಾಶ ಮತ್ತು ಪೃಥಿವಿಯ ಧಾರಣದಂತೆ [ವೃಧೇ] ವೃದ್ಧಿಸುವಂತೆ ರಾಜ್ಯದ ಧಾರಣ ಮಾಡುತ್ತಾ [ವಿದಥೇಷು] ಸಂಗ್ರಾಮಗಳಲ್ಲಿ ವಿಜಯವನ್ನು [ಚಕ್ರಿರೇ] ಪಡೆಯುತ್ತಾರೋ, ಅವರು [ಪ್ರಶುಂಭಂತೇ] ಉತ್ತಮವಾಗಿ ಶೋಭಾಯುಕ್ತರಾಗಿ ಮತ್ತು [ಮದಂತಿ] ಆನಂದವನ್ನು ಪಡೆಯುತ್ತಾರೆ. ಅವನಿಂದ ನೀವು ಪ್ರಜಾಪಾಲನೆಯನ್ನು ಮಾಡಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಹೇಗೆ ಉತ್ತಮ ಶಿಕ್ಷಣ ಮತ್ತು ವಿದ್ಯೆಯನ್ನು ಪಡೆದ ಪತಿವ್ರತಾ ಸ್ತ್ರೀಯರು ತಮ್ಮ ಪತಿಯರ ಅಥವಾ ಪತ್ನೀವ್ರತರು ಸದಾ ತಮ್ಮ ಸ್ತ್ರೀಯರಿಂದಲೇ ಪ್ರಸನ್ನರಾಗಿ ಋತುಗಾಮಿಗಳಾಗಿ ಸುಖಿಗಳಾಗುವರೋ ಮತ್ತು ಹೇಗೆ ಸುಂದರವೂ ಬಲವುಳ್ಳದ್ದೂ ಆದ ಕುದುರೆಗಳು ಮಾರ್ಗವನ್ನು ಶೀಘ್ರ ತಲುಪಿ ಆನಂದಗೊಳಿಸುತ್ತವೋ, ಹಾಗೆ ಧಾರ್ಮಿಕ ರಾಜಪುರುಷರು ಎಲ್ಲ ಪ್ರಜೆಗಳನ್ನು ಆನಂದಿತರನ್ನಾಗಿ ಮಾಡಬೇಕು.

ಮತ್ತೆ ಅವರು ಹೇಗಿರುವರು ಎಂಬುದನ್ನು ತಿಳಿಸಲಾಗಿದೆ.

ತ ಉಕ್ಷಿತಾಸೋ ಮಹಿಮಾನಮಾಶತ ದಿವಿ ರುದ್ರಾಸೋ ಅಧಿ ಚಕ್ರಿರೇ ಸದಃ । ಅರ್ಚಂತೋ
ಅರ್ಕಂ ಜನಯಂತ ಇಂದ್ರಿಯ-ಮಧಿ ಶ್ರಿಯೋ ದಧಿರೇ ಪೃಶ್ನಿಮಾತರಃ ॥೨॥

ಪದಾರ್ಥ:- ಹೇ ಮನುಷ್ಯರೇ! ಹೇಗೆ [ಉಕ್ಷಿತಾಸಃ] ವೃಷ್ಟಿಯಿಂದ ಪೃಥಿವಿಯನ್ನು ತೋಯಿಸುವ [ಪೃಶ್ನಿಮಾತರಃ] ಯಾವನಿಗೆ ಆಕಾಶವು ಮಾತೆಯೋ, [ತೇ] ಅವರು [ರುದ್ರಾಸಃ] ವಾಯುವು [ದಿವಿ] ಆಕಾಶದಲ್ಲಿ [ಸದಃ] ಸ್ಥಿರವಾಗಿ [ಮಹಿಮಾನಮ್] ಪ್ರತಿಷ್ಠೆಯನ್ನು [ಅಧ್ಯಾಶತ] ಅಧಿಕವಾಗಿ ಪಡೆಯುತ್ತಾ ಮತ್ತು ಅದನ್ನು [ಅಧಿಚಕ್ರಿರೇ] ಅಧಿಕ ಮಾಡುತ್ತಾ ಮತ್ತು [ಇಂದ್ರಿಯಮ್] ಧನವನ್ನು [ದಧಿರೇ] ಧಾರಣ ಮಾಡುತ್ತದೋ, ಹಾಗೆ [ಅರ್ಕಮ್] ಪೂಜನೀಯನನ್ನು [ಅರ್ಚಂತ] ಪೂಜಿಸುತ್ತಾ ತಾವು [ಶ್ರಿಯಃ] ಲಕ್ಷ್ಮಿಯನ್ನು [ಜನಯಂತಃ] ವೃದ್ಧಿಸಿ ಆನಂದಿತರಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ವಾಯುವು ವೃಷ್ಟಿಯ ನಿಮಿತ್ತವಾಗಿ ಉತ್ತಮ ಸುಖಗಳನ್ನುಂಟು ಮಾಡುವುದೋ, ಹಾಗೆ ಸಭಾಧ್ಯಕ್ಷರು ವಿದ್ಯೆಯಿಂದ ಸುಶಿಕ್ಷಿತರಾಗಿ ಪರಸ್ಪರ ಉಪಕಾರಿಗಳು ಮತ್ತು ಪ್ರೀತಿಯುಕ್ತರೂ ಆಗಬೇಕು.

ಮತ್ತೆ ಅವರು ಹೇಗಿರುವರು ಎಂಬುದನ್ನು ತಿಳಿಸಲಾಗಿದೆ.

ಗೋಮಾತರೋ ಯಚ್ಛುಭಯಂತೇ ಅಂಜಿಭಿ-ಸ್ತನೂಷು ಶುಭ್ರಾ ದಧಿರೇ ವಿರುಕ್ಮತಃ ।
ಬಾಧಂತೇ ವಿಶ್ವಮಭಿಮಾತಿನಮಪ ವರ್ತ್ಮಾನ್ಯೇಷಾಮನು ರೀಯತೇ ಘೃತಮ್ ॥೩॥

ಪದಾರ್ಥ:- ಹೇ ಮನುಷ್ಯರೇ! [ಯತ್] ಯಾವ [ಗೋಮಾತರಃ] ಪೃಥಿವೀ ಸಮಾನವಾದ ಮಾತೆಯರನ್ನುಳ್ಳ [ವಿರುಕ್ಮತಃ] ವಿಶೇಷ ಅಲಂಕೃತ [ಶುಭ್ರಾಃ] ಶುದ್ಧ ಸ್ವಭಾವವುಳ್ಳ ಶೂರವೀರರು ಹೇಗೆ ಪ್ರಾಣ [ತನೂಷು] ಶರೀರಗಳಲ್ಲಿ [ಅಂಜಿಭಿಃ] ಪ್ರಸಿದ್ಧ ವಿಜ್ಞಾನ ಮೊದಲಾದ ಗುಣನಿಮಿತ್ತಗಳಿಂದ [ಶುಭಯಂತೇ] ಶುಭಕರ್ಮಗಳ ಆಚರಣೆ ಮಾಡಿಸಿ ಶೋಭಾಯಮಾನ ಮಾಡುತ್ತಾರೆ. [ವಿಶ್ವಮ್] ಜಗತ್ತಿನ ಎಲ್ಲ ಪದಾರ್ಥಗಳನ್ನು [ಅನುದಧಿರೇ]

ಅನುಕೂಲತೆಯಿಂದ ಧಾರಣೆ ಮಾಡುತ್ತಾರೆ. **[ಏಷಾಮ್]** ಇವರ ಸಂಬಂಧದಿಂದ **[ಘೃತಮ್]** ಜಲವು **[ರೀಯತೇ]** ಪ್ರಾಪ್ತವು ಮತ್ತು **[ವರ್ತ್ಮಾನಿ]** ಮಾರ್ಗಗಳನ್ನು ಪಡೆಯುತ್ತದೋ, ಹಾಗೆ **[ಅಭಿಮಾತಿನಮ್]** ಅಭಿಮಾನಯುಕ್ತ ಶತ್ರುಗಣದ **[ಅಪಬಾಧಂತೇ]** ಬಾಧೆಯಾಗುತ್ತದೋ, ಅವರೊಡನೆ ನೀವು ವಿಜಯವನ್ನು ಪಡೆಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ವಾಯುಗಳಿಂದ ಅನೇಕ ಸುಖ ಮತ್ತು ಪ್ರಾಣಗಳ ಬಲದಿಂದ ಪುಷ್ಟಿಯಾಗುತ್ತದೋ, ಹಾಗೆಯೇ ಶುಭಗುಣಯುಕ್ತ ವಿದ್ಯೆ, ಶರೀರ ಮತ್ತು ಆತ್ಮಗಳಿಂದ ಬಲಯುಕ್ತರಾದ ಸಭಾಧ್ಯಕ್ಷರಿಂದ ಪ್ರಜೆಗಳು ಅನೇಕ ಪ್ರಕಾರದ ರಕ್ಷಣೆಗಳನ್ನು ಪಡೆಯುತ್ತಾರೆ.

ಮತ್ತೆ ಅವರು ಏನೇನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ವಿ ಯೇ ಭ್ರಾಜಂತೇ ಸುಮಖಾಸ ಋಷ್ಟಿಭಿಃ ಪ್ರಚ್ಯಾವಯಂತೋ ಅಚ್ಯುತಾ ಚಿದೋಜಸಾ ।
ಮನೋಜುವೋ ಯನ್ಮರುತೋ ರಥೇಷ್ವಾ ವೃಷವ್ರಾತಾಸಃ ಪೃಷತೀರಯುಗ್ಧ್ವಮ್ ॥೪॥

ಪದಾರ್ಥ:- ಹೇ ಪ್ರಜೆಗಳೇ! ಮತ್ತು ಸಭಾಸದರೇ! **[ಯೇ]** ಯಾವ **[ಮನೋಜುವಃ]** ಮನದಂತೆ ವೇಗವುಳ್ಳ **[ಮರುತಃ]** ವಾಯುಗಳ **[ಚಿತ್]** ಸಮಾನ **[ವೃಷವ್ರಾತಾಸಃ]** ಶಸ್ತ್ರ ಮತ್ತು ಅಸ್ತ್ರಗಳನ್ನು ಶತ್ರುಗಳ ಮೇಲೆ ವರ್ಷಿಸುವ ಮನುಷ್ಯರಿಂದ ಕೂಡಿ **[ಸುಮಖಾಸಃ]** ಉತ್ತಮ ಶಿಲ್ಪವಿದ್ಯೆಯ ಸಂಬಂಧೀ ಅಥವಾ ಸಂಗ್ರಾಮ ರೂಪ ಕ್ರಿಯೆಗಳನ್ನು ಮಾಡುವ **[ಋಷ್ಟಿಭಿಃ]** ಯಂತ್ರ ಕಲೆಗಳನ್ನು ಚಲಿಸುವವರ ದಂಡಗಳು ಮತ್ತು **[ಅಚ್ಯುತಾ]** ಅಕ್ಷಯವಾದ **[ಓಜಸಾ]** ಬಲ ಪರಾಕ್ರಮಗಳಿಂದ ಕೂಡಿದ ಸೇನೆಯಿಂದ ಶತ್ರುವಿನ ಸೇನೆಯನ್ನು **[ಪ್ರಚ್ಯಾವಯಂತಃ]** ನಷ್ಟ-ಭ್ರಷ್ಟಗೊಳಿಸುತ್ತಾ **[ವ್ಯಾಭ್ರಾಜಂತೇ]** ಉತ್ತಮವಾಗಿ ಶೋಭಾಯಮಾನನಾಗುತ್ತಾನೆ. ಅವನೊಡನೆ **[ಯತ್]** ಯಾರು **[ರಥೇಷು]** ರಥಗಳಲ್ಲಿ **[ಪೃಷತೀಃ]** ವಾಯುವಿನಿಂದ ಕೂಡಿದ ಜಲವನ್ನು **[ಅಯುಗ್ಧ್ವಮ್]** ಸಂಯುಕ್ತಗೊಳಿಸಿರಿ. ಅದರಿಂದ ಶತ್ರುಗಳನ್ನು ಗೆಲ್ಲಿರಿ.

ಭಾವಾರ್ಥ:- ಮನುಷ್ಯರಿಗೆ ಉಚಿತವಾಗಿರುವುದೇನೆಂದರೆ, ಮನಸ್ಸಿನಂತೆ ವೇಗವಾದ ವಿಮಾನಾದಿ ಯಾನಗಳಲ್ಲಿ ಜಲ, ಅಗ್ನಿ ಮತ್ತು ವಾಯುವನ್ನು ಸಂಯುಕ್ತಗೊಳಿಸಿ, ಅದರಲ್ಲಿ ಕುಳಿತು ಸರ್ವತ್ರ ಭೂಗೋಳದಲ್ಲಿ ಹೋಗಿ ಬಂದು ಶತ್ರುಗಳನ್ನು ಜಯಿಸಿ, ಪ್ರಜೆಗಳಿಗೆ ಉತ್ತಮ ರೀತಿಯಿಂದ ಪಾಲಿಸಿ, ಶಿಲ್ಪವಿದ್ಯಾಕರ್ಮಗಳನ್ನು ವೃದ್ಧಿಸಿ ಎಲ್ಲರ ಉಪಕಾರ ಮಾಡಬೇಕು.

ಮತ್ತೆ ಅವರು ಹೇಗೆ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಪ್ರ ಯದ್ ರಥೇಷು ಪೃಷತೀರಯುಗ್ಧ್ವಂ ವಾಜೇ ಅದ್ರಿಂ ಮರುತೋ ರಂಹಯಂತಃ।
ಉತಾರುಷಸ್ಯ ವಿ ಷ್ಯಂತಿ ಧಾರಾ-ಶ್ಚರ್ಮೇವೋದಭಿರ್ವ್ಯುಂದಂತಿ ಭೂಮ ॥೫॥

ಪದಾರ್ಥ:- ಹೇ ಮನುಷ್ಯರೇ! ನೀವು ಹೇಗೆ ವಿದ್ವಾಂಸರಾದ ಶಿಲ್ಪಿಗಳು **[ಯತ್]** ಯಾವ **[ರಥೇಷು]** ವಿಮಾನಾದಿ ಯಾನಗಳಲ್ಲಿ **[ಪೃಷತೀಃ]** ಅಗ್ನಿ ಮತ್ತು ಪವನಯುಕ್ತ ಜಲಗಳನ್ನು **[ಪ್ರಯುಗ್ಧ್ವಂ]** ಸಂಯುಕ್ತಗೊಳಿಸಿ **[ಉತ]** ಮತ್ತು **[ಅದ್ರಿಮ್]** ಮೇಘವನ್ನು **[ರಂಹಯಂತಃ]** ತನ್ನ ವೇಗದಿಂದ ಚಲನೆ ಮಾಡುತ್ತಾ **[ಮರುತಃ]** ಪವನದಂತೆ **[ಅರುಷಸ್ಯ]** ಕುದುರೆಯಂತೆ **[ವಾಜೇ]** ಯುದ್ಧದಲ್ಲಿ **[ಚರ್ಮೇವ]** ಚರ್ಮದಂತಿರುವ ಕಾಷ್ಠ ಧಾತು (ತೊಗಟೆ) ಮತ್ತು ಚರ್ಮದಿಂದಲೂ ಕೂಡ ಸಭಾದಿ ಸೇರಿಸುವ ಕಾರ್ಯಗಾರಗಳಲ್ಲಿ **[ಉದ್ಭಿಃ]** ಜಲಗಳಿಂದ **[ಧಾರಾಃ]** ಅವುಗಳ ಪ್ರವಾಹಗಳನ್ನು **[ವಿಷ್ಯಂತಿ]** ಕೆಲಸದ ಸಮಾಪ್ತಿಮಾಡುವುದಕ್ಕಾಗಿ ಸಮರ್ಥವಾಗುವ ಮತ್ತು **[ಭೂಮ]** ಭೂಮಿಯನ್ನು **[ವ್ಯುಂದಂತಿ]** ಒದ್ದೆ ಮಾಡುತ್ತಾ ಅಂದರೆ ರಥವನ್ನು ಓಡಿಸುವಾಗ ನೀರು ಹನಿಹನಿಯಾಗಿ

ಬೀಳುತ್ತದೆ. ಹಾಗೆ ಆ ಯಾನಗಳಿಂದ ಅಂತರಿಕ್ಷ ಮಾರ್ಗದಲ್ಲಿ ದೇಶ-ದೇಶಾಂತರ ಮತ್ತು ದ್ವೀಪ-ದ್ವೀಪಾಂತರಗಳಿಗೆ ಹೋಗಿ-ಬಂದು ಲಕ್ಷ್ಮಿಯನ್ನು ಹೆಚ್ಚಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕ ಲುಪ್ತೋಪಮಾಲಂಕಾರಗಳಿವೆ. ಹೇ ಮನುಷ್ಯರೇ! ಹೇಗೆ ವಾಯುವು ಮೋಡಗಳನ್ನು ಸಂಯುಕ್ತಗೊಳಿಸಿ ಚಲಿಸುವಂತೆ ಮಾಡುತ್ತದೋ, ಹಾಗೆ ಶಿಲ್ಪಿಗಳು ಉತ್ತಮ ಶಿಕ್ಷಣ ಮತ್ತು ಕರಕುಶಲತೆ, ಅಗ್ನಿ ಮೊದಲಾದವುಗಳಿಂದ ಉತ್ತಮವಾಗಿ ತಿಳಿದು ವೇಗವನ್ನುಂಟುಮಾಡುವ ಪದಾರ್ಥಗಳ ಸಂಯೋಗದಿಂದ ಸ್ಥಾನಾಂತರಗಳನ್ನು ಪಡೆದು ಕಾರ್ಯಗಳನ್ನು ಸಿದ್ಧಿಗೊಳಿಸಬೇಕು.

ಮತ್ತೆ ಅವರು ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಆ ವೋ ವಹಂತು ಸಪ್ತಯೋ ರಘುಷ್ಯದೋ ರಘುಪತ್ವಾನಃ ಪ್ರ ಜಿಗಾತ ಬಾಹುಭಿಃ।
ಸೀದತಾ ಬರ್ಹಿರುರು ವಃ ಸದಸ್ಕೃತಂ ಮಾದಯಧ್ವಂ ಮರುತೋ ಮಧ್ವೋ ಅಂಧಸಃ॥೬॥

ಪದಾರ್ಥ:- ಹೇ ಮನುಷ್ಯರೇ! ಯಾವ **[ರಘುಷ್ಯದಃ]** ಗಮನ ಮಾಡುವ - ಮಾಡಿಸುವ **[ರಘುಪತ್ವಾನಃ]** ಸ್ವಲ್ಪ ಅಥವಾ ಬಹಳವಾಗಿ ಗಮನ ಮಾಡುವ **[ಮರುತಃ]** ವಾಯುವಿನಂತೆ, **[ಸಪ್ತಯಃ]** ಶೀಘ್ರವಾಗಿ ಚಲಿಸುವ ಅಶ್ವಗಳು **[ವಃ]** ನಿಮ್ಮನ್ನು **[ವಹಂತು]** ದೇಶ-ದೇಶಾಂತರಗಳಿಗೆ ತಲುಪಿಸಲಿ. ಅವನ್ನು **[ಬಾಹುಭಿಃ]** ಬಲಪರಾಕ್ರಮಯುಕ್ತ ಕೈಗಳಿಂದ **[ಪ್ರಜಿಗಾತ]** ಉತ್ತಮ ಗತಿಯುಳ್ಳವನ್ನಾಗಿ ಮಾಡಿರಿ. ಅವುಗಳಿಂದ **[ಉರು]** ಬಹಳ **[ಬರ್ಹಿಃ]** ಉತ್ತಮಾಸನದ ಮೇಲೆ **[ಆಸೀದತ]** ಕುಳಿತು ಆಕಾಶಾದಿಗಳಲ್ಲಿ ಗಮನಾಗಮನಗಳನ್ನು ಮಾಡಿರಿ. ಯಾರಿಂದ ನಿಮ್ಮ **[ಸದಃ]** ಸ್ಥಾನವು **[ಕೃತಮ್ ಭವೇತ್]** ಸಿದ್ಧವಾಗುವುದೋ, ಅವರಿಂದ **[ಮಧ್ವಃ]** ಮಧುರ **[ಅಂಧಸಃ]** ಅನ್ನವನ್ನು ಪಡೆದು ನಮ್ಮನ್ನು **[ಮಾದಯಧ್ವಮ್]** ಆನಂದಿತರನ್ನಾಗಿ ಮಾಡಿರಿ.

ಭಾವಾರ್ಥ:- ಸಭಾಧ್ಯಕ್ಷರು ಮೊದಲಾದವರು ಕ್ರಿಯಾಕೌಶಲಗಳಿಂದ, ಶಿಲ್ಪವಿದ್ಯೆಯಿಂದ ಸಿದ್ಧಪಡಿಸಲು ಯೋಗ್ಯವಾದ ಕಾರ್ಯಗಳನ್ನು ಮಾಡಿ ಉತ್ತಮ ಭೋಗಗಳನ್ನು ಪಡೆಯಲಿ. ಯಾವನೇ ಮನುಷ್ಯನು ಈ ಜಗತ್ತಿನಲ್ಲಿ ಪದಾರ್ಥವಿಜ್ಞಾನ ಕ್ರಿಯೆಯ ಹೊರತು ಉತ್ತಮ ಭೋಗಗಳನ್ನು ಪಡೆಯುವುದರಲ್ಲಿ ಸಮರ್ಥನಾಗಲಾರನು. ಆದುದರಿಂದ ಈ ಕೆಲಸವನ್ನು ನಿತ್ಯವೂ ಅನುಷ್ಠಾನ ಮಾಡಬೇಕು.

ಮತ್ತೆ ಅವರು ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ತೇಽವರ್ಧಂತ ಸ್ವತವಸೋ ಮಹಿತ್ವನಾ ನಾಕಂ ತಸ್ಥುರುರು ಚಕ್ರಿರೇ ಸದಃ । ವಿಷ್ಣುರ್ಯದ್ಧಾವದ್
ವೃಷಣಂ ಮದಚ್ಯುತಂ ವಯೋ ನ ಸೀದನ್ನಧಿ ಬರ್ಹಿಷಿ ಪ್ರಿಯೇ ॥೭॥

ಪದಾರ್ಥ:- ಹೇ ಮನುಷ್ಯರೇ! ಹೇಗೆ **[ವಿಷ್ಣುಃ]** ಸೂರ್ಯನಂತೆ ಶಿಲ್ಪವಿದ್ಯಾನಿಪುಣನು **[ಪ್ರಿಯೇ]** ಅತ್ಯಂತ ಸುಂದರ **[ಬರ್ಹಿಷಿ]** ಆಕಾಶದಲ್ಲಿ **[ವೃಷಣಮ್]** ಅಗ್ನಿ ಜಲಗಳ ಮಳೆಯಿಂದ ಕೂಡಿರುವ ವಿಮಾನದ **[ಅಧಿಸೀದನ್]** ಮೇಲೆ ಕುಳಿತು **[ವಯೋ ನ]** ಹೇಗೆ ಪಕ್ಷಿಯ ಆಕಾಶದಲ್ಲಿ ಹಾರುವುದೋ, ಮತ್ತು ಭೂಮಿಗೆ ಬರುವುದೋ, ಹಾಗೆ, **[ಯತ್]** ಯಾವ **[ಮದಚ್ಯುತಮ್]** ಹರ್ಷವನ್ನು ಪಡೆದು ದುಷ್ಟರನ್ನು ತಡೆಯುವ ಮನುಷ್ಯರ **[ಅವತ್]** ರಕ್ಷಣೆ ಮಾಡುತ್ತಾನೆ. ಅವನನ್ನು **[ಸ್ವತವಸಃ]** ಸ್ವಕೀಯ ಬಲಯುಕ್ತನಾದ ಮನುಷ್ಯನು ಪಡೆಯುತ್ತಾನೆ. **[ತೇ ಹ]** ಅವರೇ **[ಮಹಿತ್ವನಾ]** ಮಹಿಮೆಯಿಂದ **[ಅವರ್ಧಂತ]** ವರ್ಧಿಸುತ್ತಾರೆ ಮತ್ತು ವಿಮಾನಾದಿಯಾನಗಳಲ್ಲಿ **[ಆತಸ್ಥುಃ]** ಕುಳಿತು **[ಉರು]** ಬಹಳ ಸುಖದಾಯಕ **[ಸದಃ]** ಸ್ಥಾನಕ್ಕೆ ಹೋಗಿ - ಬರುತ್ತಾರೆ. ಅವರು **[ನಾಕಮ್]** ವಿಶೇಷ ಸುಖವನ್ನು **[ಚಕ್ರಿರೇ]** ಪಡೆಯುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಪಕ್ಷಿಯು ಆಕಾಶದಲ್ಲಿ ಸುಖವಾಗಿ ಹಾರುತ್ತಾ ಹೋಗಿ ಬರುತ್ತದೋ, ಹಾಗೆಯೇ ಸಾಂಗೋಪಾಂಗ ಶಿಲ್ಪವಿದ್ಯೆಯನ್ನು ಸಾಕ್ಷಾತ್ಕಾರ ಮಾಡಿಕೊಂಡು ಅದರಿಂದ ಉತ್ತಮ ಯಾನಾದಿಗಳನ್ನು ಸಿದ್ಧಪಡಿಸಿ ಉತ್ತಮಸಾಮಗ್ರಿಗಳನ್ನಿಟ್ಟು ವೃದ್ಧಿಸುತ್ತಾರೋ, ಅವರೇ ಉತ್ತಮ ಪ್ರತಿಷ್ಠೆ ಮತ್ತು ಧನವನ್ನು ಪಡೆದು ನಿತ್ಯವೂ ವರ್ಧಿಸುತ್ತಾರೆ.

ಮತ್ತೆ ಅವರು ವಾಯುವು ಹೇಗಿದೆ ಎಂಬುದನ್ನು ತಿಳಿಸಲಾಗಿದೆ.

ಶೂರಾ ಇವೇದ್ ಯುಯುಧಯೋ ನ ಜಗ್ಮಯಃ ಶ್ರವಸ್ಯವೋ ನ ಪೃತನಾಸು ಯೇತಿರೇ ।
ಭಯಂತೇ ವಿಶ್ವಾ ಭುವನಾ ಮರುದ್ಭ್ಯೋ ರಾಜಾನ ಇವ ತ್ವೇಷಸಂದೃಶೋ ನರಃ ॥೮॥

ಪದಾರ್ಥ:- ಹೇ ಮನುಷ್ಯರೇ! ನೀವು ವಾಯುವು [**ಶೂರಾ ಇವ**] ಶೂರ ವೀರರಂತೆ [**ಇತ್**] ನಿಶ್ಚಯವಾಗಿ ಮೇಘಗಳೊಡನೆ, [**ಯುಯುಧಯೋ ನ**] ಯುದ್ಧ ಮಾಡುವವರಿಗೆ ಸಮಾನವಾಗಿ [**ಜಗ್ಮಯಃ**] ಹೋಗಿಬರುವ [**ಪೃತನಾಸು**] ಸೇನೆಗಳಲ್ಲಿ [**ಶ್ರವಸ್ಯವಃ**] ಅನ್ನಾದಿ ಪದಾರ್ಥಗಳನ್ನು ತಮಗಾಗಿ ವೃದ್ಧಿಸುವವರಿಗೆ ಸಮಾನವಾಗಿ [**ಯೇತಿರೇ**] ಯತ್ನ ಮಾಡುತ್ತಾರೆ. [**ರಾಜಾನ ಇವ**] ರಾಜರಿಗೆ ಸಮಾನವಾಗಿ [**ತ್ವೇಷಸಂದೃಶಃ**] ಪ್ರಕಾಶವನ್ನು ತೋರಿಸುವ [**ನರಃ**] ನಾಯಕನಿಗೆ ಸಮಾನವಾಗಿ ಇರುತ್ತಾರೆ. [**ಮರುದ್ಭ್ಯಃ**] ವಾಯುಗಳಿಂದ [**ವಿಶ್ವಾ**] ಎಲ್ಲಾ [**ಭುವನಾ**] ಜಗತ್ತಿನ ಪ್ರಾಣಿಗಳು [**ಭಯಂತೇ**] ಹೆದರುತ್ತವೆ. ಆ ವಾಯುಗಳನ್ನು ಉತ್ತಮ ಯುಕ್ತಿಯಿಂದ ಉಪಯೋಗ ಪಡೆದುಕೊಳ್ಳಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಭಯರಹಿತ ಪುರುಷನು ಯುದ್ಧದಿಂದ ನಿರ್ಗಮಿಸುವುದಿಲ್ಲವೋ, ಹೇಗೆ ಯುದ್ಧ ಮಾಡುವವನು ಯುದ್ಧ ಮಾಡಲು ಶೀಘ್ರವಾಗಿ ಹೋಗುತ್ತಾನೋ, ಹೇಗೆ ಹಸಿದವನು ಅನ್ನ ಇಚ್ಛೆಯಿಂದಲೂ ಮತ್ತು ಹೇಗೆ ಸೇನೆಯಲ್ಲಿ ಯುದ್ಧದ ಇಚ್ಛೆ ಮಾಡುತ್ತಾರೋ, ಹೇಗೆ ದಂಡಿಸುವ ನ್ಯಾಯಾಧೀಶರಿಂದ ಅನ್ಯಾಯಕಾರಿಯು ಉದ್ವಿಗ್ನನಾಗುತ್ತಾನೋ, ಹಾಗೆಯೇ, ಕುಪಥ್ಯಕಾರಿಯು [ವಾಯುಗಳನ್ನು] ಉತ್ತಮವಾಗಿ ಉಪಯೋಗಕ್ಕೆ ತರದವನು ವಾಯುಗಳ ಭಯ ಪಡೆಯುತ್ತಾನೆ ಮತ್ತು ತನ್ನ ಮಿತಿಯಲ್ಲಿಯೇ ಇರುತ್ತಾನೆ.

ಮತ್ತೆ ಆ ಸಭಾಧ್ಯಕ್ಷ ಮೊದಲಾದವರು ಹೇಗಿರುತ್ತಾರೆ ಎಂಬುದನ್ನು ತಿಳಿಸಿದೆ.

ತ್ವಷ್ಟಾ ಯದ್ ವಜ್ರಂ ಸುಕೃತಂ ಹಿರಣ್ಯಯಂ ಸಹಸ್ರಭೃಷ್ಟಿಂ ಸ್ವಪಾ ಅವರ್ತಯತ್ ।
ಧತ್ತ ಇಂದ್ರೋ ನರ್ಯಪಾಂಸಿ ಕರ್ತವೇಽಹನ್ ವೃತ್ರಂ ನಿರಪಾಮೌಬ್ಜದರ್ಣವಮ್ ॥೯॥

ಪದಾರ್ಥ:- ಪ್ರಜೆಗಳು ಮತ್ತು ಸೇನೆಯಲ್ಲಿರುವವರು ಹೇಗೆ [**ಸ್ವಪಾಃ**] ಉತ್ತಮ ಕರ್ಮ ಮಾಡುತ್ತಾ [**ತ್ವಷ್ಟಾ**] ಛೇದನ ಮಾಡುವ ಉತ್ತಮವಾಗಿ ಸಿದ್ಧಪಡಿಸಿದ [**ಹಿರಣ್ಯಯಮ್**] ಪ್ರಕಾಶಯುಕ್ತವೂ [**ಸಹಸ್ರಭೃಷ್ಟಿಮ್**] ಸಾವಿರಾರು ಪದಾರ್ಥಗಳನ್ನು ಬೇಯಿಸುವಂತಹುದೂ ಆದ [**ವಜ್ರಮ್**] ವಜ್ರದ ಪ್ರಹಾರ ಮಾಡಿ [**ವೃತ್ರಮ್**] ಮೇಘದ [**ಅಹನ್**] ಹನನ ಮಾಡುತ್ತವೋ, [**ಅಪಾಮ್**] ಜಲಗಳ [**ಅರ್ಣವಮ್**] ಸಮುದ್ರವನ್ನು [**ನಿರೌಬ್ಜತ್**] ನಿರಂತರ ಸರಳ ಮಾಡುತ್ತವೋ, ಹಾಗೆ ದುಷ್ಟರನ್ನು [**ಪರ್ಯವರ್ತಯತ್**] ಛಿನ್ನ-ಭಿನ್ನ ಮಾಡುತ್ತಾ ಶತ್ರುಗಳನ್ನು ಹನನ ಮಾಡಿ [**ನರಿ**] ಮನುಷ್ಯರಲ್ಲಿ ಶ್ರೇಷ್ಠರನ್ನು [**ಆಧತ್ತೇ**] ಧಾರಣ ಮಾಡುತ್ತಾನೋ, ಅವನು ರಾಜನಾಗಲು ಯೋಗ್ಯನಾಗುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನು ಮೇಘಗಳನ್ನು ಧಾರಣ ಮಾಡಿ ಮತ್ತು ಹನನ ಮಾಡಿ ಮಳೆ ಸುರಿಸಿ ಸಮುದ್ರವನ್ನು ತುಂಬಿಸುವನೋ, ಹಾಗೆಯೇ ಸಭಾಪತಿಯು ವಿದ್ಯೆ, ನ್ಯಾಯದಿಂದ ಪ್ರಜೆಗಳ ಪಾಲನೆಯನ್ನು ಧಾರಣ ಮಾಡಿ ಅವಿದ್ಯೆ, ಅನ್ಯಾಯಗಳಿಂದ ಕೂಡಿದ ದುಷ್ಟರನ್ನು ತಾಡನೆ ಮಾಡಿ ಎಲ್ಲರ ಹಿತಕ್ಕಾಗಿ ಸುಖಸಾಗರದಲ್ಲಿ ಪೂರ್ಣವಾಗಿ ತೇಲಿಸಲಿ.

ಮತ್ತೆ ಅವರು ಹೇಗಿರುವರು ಎಂಬುದನ್ನು ತಿಳಿಸಲಾಗಿದೆ.

ಊರ್ಧ್ವಂ ನುನುದ್ರೇಽವತಂ ತ ಓಜಸಾ ದಾದೃಹಾಣಂ ಚಿದ್ ಬಿಭಿದುರ್ವಿ ಪರ್ವತಮ್ ।
ಧಮಂತೋ ವಾಣಂ ಮರುತಃ ಸುದಾನವೋ ಮದೇ ಸೋಮಸ್ಯ ರಣ್ಯಾನಿ ಚಕ್ರಿರೇ ॥೧೦॥

ಪದಾರ್ಥ:- ಹೇಗೆ [**ಮರುತಃ**] ವಾಯುವು [**ಓಜಸಾ**] ಬಲದಿಂದ [**ಅವತಮ್**] ರಕ್ಷಣಾದಿಗಳ ನಿಮಿತ್ತ [**ದಾದೃಹಾಣಮ್**] ವೃದ್ಧಿಸಲು ಯೋಗ್ಯವಾದ [**ಪರ್ವತಮ್**] ಮೇಘವನ್ನು [**ಬಿಭಿದುಃ**] ಹರಿದು ಹಾಕುತ್ತಾ ಮತ್ತು [**ಊರ್ಧ್ವಮ್**] ಮೇಲಕ್ಕೆ ತೆಗೆದುಕೊಂಡು ಹೋಗುತ್ತಾನೋ, ಹಾಗೆ [**ವಾಣಮ್**] ಬಾಣದಿಂದ ಮೊದಲ್ಗೊಂಡು ಶಸ್ತ್ರಾಸ್ತ್ರ ಸಮೂಹವನ್ನು [**ಧಮಂತಃ**] ಕಂಪಿಸುತ್ತಾ [**ಸುದಾನವಃ**] ಉತ್ತಮ ಪದಾರ್ಥಗಳನ್ನು ದಾನ ಮಾಡುವ [**ಸೋಮಸ್ಯ**] ಉತ್ಪನ್ನವಾಗಿರುವ ಪ್ರಪಂಚದ ಮಧ್ಯದಲ್ಲಿ [**ಮದೇ**] ಹರ್ಷದಲ್ಲಿ [**ರಣ್ಯಾನಿ**] ಸಂಗ್ರಾಮಗಳಲ್ಲಿ ಉತ್ತಮ ಸಾಧನಗಳನ್ನು [**ವಿಚಕ್ರಿರೇ**] ಮಾಡುತ್ತಾರೆ. [**ತೇ**] ಅವರು ರಾಜರುಗಳ [**ಚಿತ್**] ಸಮಾನರಾಗುತ್ತಾರೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಈ ಜಗತ್ತಿನಲ್ಲಿ ಜನಿಸಿ, ವಿದ್ಯೆ, ಶಿಕ್ಷಣಗಳನ್ನು ಗ್ರಹಿಸಿ ಮತ್ತು ವಾಯುವಿನಂತೆ ಕರ್ಮ ಮಾಡಿ ಸುಖಗಳನ್ನು ಭೋಗಿಸಲಿ.

ಮತ್ತೆ ಅವರು ಯಾರಿಗಾಗಿ ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಜಿಹ್ಮಂ ನುನುದ್ರೇಽವತಂ ತಯಾ ದಿಶಾ-ಸಿಂಚನ್ನುತ್ಸಂ ಗೋತಮಾಯ ತೃಷ್ಣಜೇ ।
ಆ ಗಚ್ಛಂತೀಮವಸಾ ಚಿತ್ರಭಾನವಃ ಕಾಮಂ ವಿಪ್ರಸ್ಯ ತರ್ಪಯಂತ ಧಾಮಭಿಃ ॥೧೧॥

ಪದಾರ್ಥ:- ಹೇಗೆ ದಾನಿಗಳು [**ಅವತಮ್**] ಕೆಳಗಿರುವ [**ಜಿಹ್ಮಮ್**] ಕುಟಿಲ [**ಕುತ್ಸಮ್**] ಬಾವಿಯನ್ನು ತೋಡಿ [**ತೃಷ್ಣಜೇ**] ಬಾಯಾರಿಕೆಯಿಂದಿರುವ [**ಗೋತಮಾಯ**] ಬುದ್ಧಿವಂತನನ್ನು [**ಈಮ್**] ಜಲದಿಂದ [**ಅಸಿಂಚನ್**] ತೃಪ್ತಿಪಡಿಸುವಂತೆ [**ತಯಾ ದಿಶಾ**] ಆ ಅಭೀಷ್ಟ ದಿಕ್ಕಿನಿಂದ [**ನುನುದ್ರೇ**] ಅವನ ಬಾಯಾರಿಕೆಯನ್ನು ದೂರ ಮಾಡುತ್ತಾರೆ. ಹೇಗೆ [**ಚಿತ್ರಭಾನವಃ**] ವಿವಿಧ ಪ್ರಕಾಶಗಳಿಗೆ ಆಧಾರವಾದ ಪ್ರಾಣಗಳಂತೆ [**ಧಾಮಭಿಃ**] ಜನ್ಮ, ನಾಮ, ಸ್ಥಾನಗಳಿಂದ [**ವಿಪ್ರಸ್ಯ**] ವಿದ್ವಾಂಸನ [**ಅವಸಾ**] ರಕ್ಷಣೆಯಿಂದ [**ಕಾಮಮ್**] ಕಾಮನೆಗಳನ್ನು [**ತರ್ಪಯಂತ**] ಪೂರ್ಣಗೊಳಿಸುತ್ತಾರೆ ಮತ್ತು ಎಲ್ಲ ಕಡೆಯಿಂದ ಸುಖವನ್ನು [**ಆಗಚ್ಛಂತಿ**] ಪಡೆಯುತ್ತಾರೋ, ಹಾಗೆ ಉತ್ತಮ ಮನುಷ್ಯರು ಆಗಬೇಕು.

ಭಾವಾರ್ಥ:- ಹೇಗೆ ಮನುಷ್ಯನು ಬಾವಿಯನ್ನು ತೋಡಿ ಹೊಲ, ಗದ್ದೆ, ಮೊದಲಾದವುಗಳನ್ನು ತೋಯಿಸಿ, ಅವುಗಳಿಂದ ಉತ್ಪನ್ನವಾದ ಅನ್ನ ಮತ್ತು ಫಲಾದಿಗಳಿಂದ ಪ್ರಾಣಿಗಳನ್ನು ತೃಪ್ತಿಪಡಿಸಿ ಸುಖಪಡಿಸುತ್ತಾನೋ, ಹಾಗೆಯೇ ಸಭಾಧ್ಯಕ್ಷ ಮೊದಲಾದವರು ವೇದಶಾಸ್ತ್ರಗಳ ವಿಶಾರದರಾದ ವಿದ್ವಾಂಸರ ಕಾರ್ಯಗಳಿಂದ ಪೂರ್ಣರಾಗಿ ಅವರಿಂದ ವಿದ್ಯೆ, ಉತ್ತಮ ಶಿಕ್ಷಣ ಮತ್ತು ಧರ್ಮದ ಪ್ರಚಾರ ಮಾಡಿಸಿ, ಎಲ್ಲ ಪ್ರಾಣಿಗಳನ್ನು ಆನಂದಿತರನ್ನಾಗಿ ಮಾಡಬೇಕು.

ಮತ್ತೆ ಅವರಿಂದ ಮನುಷ್ಯರು ಏನೇನು ಬಯಸಬೇಕು ಎಂಬುದನ್ನು ತಿಳಿಸಲಾಗಿದೆ.

ಯಾ ವಃ ಶರ್ಮ ಶಶಮಾನಾಯ ಸಂತಿ ತ್ರಿಧಾತೂನಿ ದಾಶುಷೇ ಯಚ್ಛತಾಧಿ । ಅಸ್ಮಭ್ಯಂ
ತಾನಿ ಮರುತೋ ವಿ ಯಂತ ರಯಿಂ ನೋ ಧತ್ತ ವೃಷಣಃ ಸುವೀರಮ್ ॥೧೨॥

ಪದಾರ್ಥ:- ಹೇ ಸಭಾಧ್ಯಕ್ಷ ಮೊದಲಾದ ಮನುಷ್ಯರೇ! ನೀವು **[ಮರುತಃ]** ವಾಯುವಿನಂತೆ **[ವಃ]** ನಿಮ್ಮ **[ಯಾ]** ಯಾವ **[ತ್ರಿಧಾತೂನಿ]** ವಾತ, ಪಿತ್ತ, ಕಫದಿಂದ ಕೂಡಿದ ಶರೀರ ಅಥವಾ ಚಿನ್ನ, ಬೆಳ್ಳಿ, ಮತ್ತು ಕಬ್ಬಿಣ ಮೊದಲಾದ ಧಾತುಗಳಿಂದ ಕೂಡಿದ **[ಶರ್ಮ]** ಮನೆಗಳು **[ಸಂತಿ]** ಇವೆಯೋ, **[ತಾನಿ]** ಅವುಗಳನ್ನು **[ಶಶಮಾನಾಯ]** ವಿಜ್ಞಾನಯುಕ್ತ **[ದಾಶುಷೇ]** ದಾನಕ್ಕಾಗಿ **[ಯಚ್ಛತ]** ಕೊಡಿರಿ. ಮತ್ತು **[ಅಸ್ಮಭ್ಯಮ್]** ನಮಗೂ ಕೂಡ ಹಾಗೆಯೇ ಮನೆಗಳನ್ನು **[ವಿ ಯತ್]** ಪ್ರಾಪ್ತಮಾಡಿಸಿರಿ. ಹೇ **[ವೃಷಣಃ]** ಸುಖದ ವೃಷ್ಟಿ ಮಾಡುವ **[ನಃ]** ನಮಗಾಗಿ **[ಸುವೀರಮ್]** ಉತ್ತಮ ವೀರತ್ವದ ಪ್ರಾಪ್ತಿಗೊಳಿಸುವ **[ರಯಿಮ್]** ಧನವನ್ನು **[ಅಧಿಧತ್ತ]** ಧಾರಣ ಮಾಡಿರಿ.

ಭಾವಾರ್ಥ:- ಸಭಾಧ್ಯಕ್ಷರು ಮೊದಲಾದವರಿಗೆ ಯೋಗ್ಯವಾಗಿರುವುದೇನೆಂದರೆ, ಸುಖ-ದುಃಖಗಳ ಅವಸ್ಥೆಯಲ್ಲಿ ಎಲ್ಲ ಪ್ರಾಣಿಗಳನ್ನು ತನ್ನ ಆತ್ಮದಂತೆ ತಿಳಿದು ಸುಖ, ಧನಾದಿಗಳಿಂದ ಕೂಡಿರುವಂತೆ ಮಾಡಿ ಪುತ್ರರಂತೆ ಪಾಲಿಸಲಿ ಮತ್ತು ಪ್ರಜೆಗಳಿಗೆ ಮತ್ತು ಸೇನೆಗೆ ಯೋಗ್ಯವಾಗಿರುವುದೇನೆಂದರೆ, ಅವರ ಸತ್ಕಾರವನ್ನು ತಂದೆಯಂತೆ ಮಾಡಲಿ.

ಈ ಸೂಕ್ತದಲ್ಲಿ ವಾಯುವಿನಂತೆ ಸಭಾಧ್ಯಕ್ಷನಾದ ರಾಜನ ಮತ್ತು ಪ್ರಜೆಗಳ ಗುಣಗಳ ವರ್ಣನೆ ಮಾಡಿರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಂಬತ್ತೈದನೆಯ ಸೂಕ್ತ ಸಮಾಪ್ತ

ಸೂಕ್ತ ೮೬

ಮಂತ್ರಸಂಖ್ಯೆ ೧೦ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಮರುತಃ । ಛಂದಃ - ಗಾಯತ್ರೀ । ಸ್ವರಃ-ಷಡ್ಜಃ.

ಮತ್ತೆ ಆ ಗೃಹಸ್ಥನು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ಮರುತೋ ಯಸ್ಯ ಹಿ ಕ್ಷಯೇ ಪಾಥಾ ದಿವೋ ವಿಮಹಸಃ । ಸ ಸುಗೋಪಾತಮೋ ಜನಃ ॥೧॥

ಪದಾರ್ಥ:- ಹೇ **[ವಿಮಹಸಃ]** ನಾನಾಪ್ರಕಾರದ ಪೂಜನೀಯ ಕರ್ಮಗಳ ಕರ್ತರೇ! **[ದಿವಃ]** ವಿದ್ಯಾ ನ್ಯಾಯಪ್ರಕಾಶಕರಾದ ನೀವು **[ಮರುತಃ]** ವಾಯುವಿನಂತೆ ವಿದ್ವಾಂಸರು **[ಯಸ್ಯ]** ಯಾವನ **[ಕ್ಷಯೇ]** ಮನೆಗೆ **[ಪಾಥ]** ರಕ್ಷಕರೋ, **[ಸ, ಹಿ]** ಅದೇ **[ಸುಗೋಪಾತಮಃ]** ಉತ್ತಮವಾಗಿ **[ಜನಃ]** ಮನುಷ್ಯರು ಆಗಲಿ.

ಭಾವಾರ್ಥ:- ಹೇಗೆ ಪ್ರಾಣದ ಹೊರತು ಶರೀರಾದಿಗಳ ರಕ್ಷಣೆಯಾಗುವುದಿಲ್ಲವೋ, ಹಾಗೆಯೇ ಸತ್ಯೋಪದೇಶಕರ ಹೊರತು ಪ್ರಜೆಗಳ ರಕ್ಷಣೆಯಾಗುವುದಿಲ್ಲ.

ಮತ್ತೆ ಅವರು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ಯಜ್ಞೈರ್ವಾ ಯಜ್ಞವಾಹಸೋ ವಿಪ್ರಸ್ಯ ವಾ ಮತೀನಾಮ್ । ಮರುತಃ ಶೃಣುತಾ ಹವಮ್ ॥೨॥

ಪದಾರ್ಥ:- ಹೇ **[ಯಜ್ಞವಾಹಸಃ]** ಸತ್ಸಂಗ ರೂಪ ಪ್ರಿಯ ಯಜ್ಞಗಳನ್ನು ಪ್ರಾಪ್ತಿಪಡಿಸುವ ವಿದ್ವಾಂಸರೇ! ನೀವು **[ಮರುತಃ]** ವಾಯುವಿನಂತೆ **[ಯಜ್ಞೈಃ]** ತಮ್ಮ ಅಧ್ಯಯನ, ಅಧ್ಯಾಪನ ಉಪದೇಶ ಮೊದಲಾದವುಗಳ

[ವಾ] ಅಥವಾ ಬೇರೆಯವರನ್ನು ಓದುವ-ಓದಿಸುವ ಮತ್ತು ಉಪದೇಶರೂಪ ಯಜ್ಞಗಳಿಂದ **[ವಿಪ್ರಸ್ಯ]** ವಿದ್ವಾಂಸರ **[ವಾ]** ಅಥವಾ **[ಮತೀನಾಮ್]** ಬುದ್ಧಿವಂತರ **[ಹವಮ್]** ಪರೀಕ್ಷೆಗೆ ಯೋಗ್ಯವಾದ ಪಠನ-ಪಾಠನ ರೂಪ ವ್ಯವಹಾರಗಳನ್ನು **[ಶೃಣುತ]** ಕೇಳುವಂತೆ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಯೋಗ್ಯವಾಗಿರುವುದೇನೆಂದರೆ, ತಿಳಿಯಲು-ತಿಳಿಸಲು ಅಥವಾ ಕ್ರಿಯೆಗಳಿಂದ ಸಿದ್ಧವಾದ ಯಜ್ಞಗಳಿಂದ ಕೂಡಿದವರಾಗಿ, ಅನ್ಯರನ್ನು ಸೇರಿಸಿಕೊಂಡು, ಯಥಾ ರೀತಿ ಪರೀಕ್ಷೆ ಮಾಡಿ ವಿದ್ವಾಂಸರನ್ನಾಗಿ ಮಾಡಬೇಕು.

ಮತ್ತೆ ಅವನು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ಉತ ವಾ ಯಸ್ಯ ವಾಜಿನೋಽನು ವಿಪ್ರಮತಕ್ಷತ । ಸ ಗಂತಾ ಗೋಮತಿ ವ್ರಜೇ ॥೩॥

ಪದಾರ್ಥ:- **[ವಾಜಿನಃ]** ಉತ್ತಮ ವಿಜ್ಞಾನದಿಂದ ಕೂಡಿರುವ ವಿದ್ವಾಂಸರೇ! ನೀವು **[ಯಸ್ಯ]** ಕ್ರಿಯಾ ಕುಶಲ ವಿದ್ವಾಂಸನ **[ವಾ]** ಓದಿಸುವಂತಹವನ ಸಮೀಪದಲ್ಲಿ ವಿದ್ಯೆಯನ್ನು ಪಡೆದ **[ವಿಪ್ರಮ್]** ವಿದ್ವಾಂಸನನ್ನು **[ಅನ್ವತಕ್ಷತ]** ಸೂಕ್ಷ್ಮಪ್ರಜ್ಞೆಯುಳ್ಳವನನ್ನಾಗಿ ಮಾಡುತ್ತೀರಿ. **[ಸಃ]** ಅವನು **[ಗೋಮತಿ]** ಉತ್ತಮ ಇಂದ್ರಿಯ ವಿದ್ಯೆಯ ಪ್ರಕಾಶದಿಂದ ಕೂಡಿದವನಾಗಿ **[ವ್ರಜೇ]** ಪಡೆಯಲು ಯೋಗ್ಯವಾದ ಮಾರ್ಗಗಳಲ್ಲಿಯೂ **[ಉತ]** ಕೂಡ **[ಗಂತಾ]** ಪಡೆಯುತ್ತಾನೆ.

ಭಾವಾರ್ಥ:- ತೀವ್ರ ಬುದ್ಧಿ ಮತ್ತು ಶಿಲ್ಪವಿದ್ಯೆಯಿಂದ ಸಿದ್ಧಪಡಿಸಿದ ವಿಮಾನ ಮೊದಲಾದ ಯಾನಗಳಲ್ಲಿ ಹೊರತು ಮನುಷ್ಯನು ದೇಶ-ದೇಶಾಂತರಗಳಲ್ಲಿ ಸುಖವಾಗಿ ಹೋಗಿ ಬರಲು ಸಮರ್ಥನಾಗುವುದಿಲ್ಲ. ಆ ಕಾರಣ ಅತಿಯಾದ ಪುರುಷಾರ್ಥದಿಂದ ವಿಮಾನಾದಿ ಯಾನಗಳನ್ನು ಯಥಾವತ್ತಾಗಿ ಸಿದ್ಧಪಡಿಸಬೇಕು.

ಮತ್ತೆ ಆ ಶಿಕ್ಷಿತ ಮನುಷ್ಯರಿಂದ ಏನಾಗುತ್ತದೆ ಎಂದು ಹೇಳಿದೆ.

ಅಸ್ಯ ವೀರಸ್ಯ ಬರ್ಹಿಷಿ ಸುತಃ ಸೋಮೋ ದಿವಿಷ್ಟಿಷು । ಉಕ್ಥಂ ಮದಶ್ಚ ಶಸ್ಯತೇ ॥೪॥

ಪದಾರ್ಥ:- ಹೇ ವಿದ್ವಾಂಸರೇ! ತಮ್ಮ ಸುಶಿಕ್ಷಿತರಾದ **[ಅಸ್ಯ]** ಈ **[ವೀರಸ್ಯ]** ವೀರರು **[ಸುತಃ]** ಸಿದ್ಧಗೊಳಿಸಿದ **[ಸೋಮಃ]** ಐಶ್ವರ್ಯವು **[ದಿವಿಷ್ಟಿಷು]** ಉತ್ತಮ ಇಷ್ಟಿರೂಪ ಕರ್ಮಗಳಿಂದ ಸುಖಯುಕ್ತ ವ್ಯವಹಾರಗಳಲ್ಲಿ **[ಉಕ್ಥಮ್]** ಪ್ರಶಂಸನೀಯ ವಚನಗಳು **[ಬರ್ಹಿಷಿ]** ಉತ್ತಮ ವ್ಯವಹಾರಗಳನ್ನು ಮಾಡುವುದರಲ್ಲಿ **[ಮದಃ]** ಆನಂದವು **[ಚ]** ಮತ್ತು ಸದ್ವಿದ್ಯಾದಿ ಗುಣಗಳ ಸಮೂಹವು **[ಶಸ್ಯತೇ]** ಪ್ರಶಂಸಿತವಾಗುತ್ತದೆ, ಅನ್ಯರದಲ್ಲ.

ಭಾವಾರ್ಥ:- ವಿದ್ವಾಂಸರ ಶಿಕ್ಷಣದ ಹೊರತು ಮನುಷ್ಯರಲ್ಲಿ ಉತ್ತಮ ಗುಣವು ಉತ್ಪನ್ನವಾಗುವುದಿಲ್ಲ. ಆದುದರಿಂದ ಇದರ ಅನುಷ್ಠಾನವನ್ನು ನಿತ್ಯವೂ ಮಾಡಬೇಕು.

ಮತ್ತೆ ಅವರು ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಅಸ್ಯ ಶ್ರೋಷನ್ತ್ವಾ ಭುವೋ ವಿಶ್ವಾ ಯಶ್ಚರ್ಷಣೀರಭಿ । ಸೂರಂ ಚಿತ್ ಸಸ್ರುಷೀರಿಷಃ ॥೫॥

ಪದಾರ್ಥ:- ಹೇ ಮನುಷ್ಯರೇ! ತಾವು **[ಅಸ್ಯ]** ಈ ಸುಶಿಕ್ಷಿತ ವಿದ್ವಾಂಸರ **[ಇಷಃ ಚಿತ್]** ಸಮಾನ **[ವಿಶ್ವಾಃ]** ಎಲ್ಲ **[ಸಸ್ರುಷೀಃ]** ಪಡೆಯಲು ಯೋಗ್ಯವಾದ **[ಆಭುವಃ]** ಎಲ್ಲ ಕಡೆಯಿಂದ ಸುಖಗಳಿಂದ ಕೂಡಿರುವ **[ಚರ್ಷಣೀಃ]** ಮನುಷ್ಯರೂಪ ಪ್ರಜೆಗಳನ್ನು ಹೇಗೆ ಕಿರಣಗಳು **[ಸೂರಮ್]** ಸೂರ್ಯನನ್ನು ಪಡೆಯುತ್ತವೋ, ಹಾಗೆ **[ಅಭಿಶ್ರೋಷಂತು]** ಎಲ್ಲ ಕಡೆಗಳಿಂದ ಕೇಳಿರಿ.

ಭಾವಾರ್ಥ:- ಯಾವ ಮನುಷ್ಯನು ಉತ್ತಮ ಶಿಕ್ಷಣದಿಂದ ಕೂಡಿ, ಉತ್ತಮವಾಗಿ ಪರೀಕ್ಷಿಸಿದ, ಶುಭಲಕ್ಷಣಗಳಿಂದ ಕೂಡಿದ ಸಂಪೂರ್ಣ ವಿದ್ಯಾವೇತ್ತನು, ದೃಢಾಂಗನು, ಅತಿಬಲಶಾಲಿಯೂ, ಓದಿಸಲು ಯೋಗ್ಯನೂ, ಶ್ರೇಷ್ಠರ ಸಹಾಯದಿಂದ ಕೂಡಿರುವವನೂ, ಪುರುಷಾರ್ಥಿಯೂ, ಧಾರ್ಮಿಕ ವಿದ್ವಾಂಸನೂ ಆಗಿರುವನೋ, ಅವನೇ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷವನ್ನು ಪಡೆದು ಪ್ರಜೆಗಳ ದುಃಖ ನಿವಾರಣೆ ಮಾಡಿ ಪರಾವಿದ್ಯೆಯನ್ನೂ ಆಲಿಸಿ ಪಡೆಯುತ್ತಾನೆ. ಇದಕ್ಕೆ ವಿರುದ್ಧವಾದ ಮನುಷ್ಯನಲ್ಲ.

ನಾವೆಲ್ಲಾ ಸೇರಿ ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಪೂರ್ವೀಭಿರ್ಹಿ ದದಾಶಿಮ ಶರದ್ಭಿರ್ಮರುತೋ ವಯಮ್ । ಅವೋಭಿಶ್ಚರ್ಷಣೀನಾಮ್ ॥೬॥

ಪದಾರ್ಥ:- ಹೇ [**ಮರುತಃ**] ಸಭಾಧ್ಯಕ್ಷ ಮೊದಲಾದ ಸಜ್ಜನರೇ! ಹೇಗೆ ನೀವು [**ಪೂರ್ವೀಭಿಃ**] ಪ್ರಾಚೀನ ಸನಾತನ [**ಶರದ್ಭಿಃ**] ಎಲ್ಲ ಋತುಗಳು ಅಥವಾ [**ಅವೋಭಿಃ**] ರಕ್ಷಣೆ ಮೊದಲಾದ ಉತ್ತಮೋತ್ತಮ ವ್ಯವಹಾರಗಳಲ್ಲಿ [**ಚರ್ಷಣೀನಾಮ್**] ಎಲ್ಲ ಮನುಷ್ಯರ ಸುಖಕ್ಕಾಗಿ ಉತ್ತಮವಾಗಿ ತನ್ನ ವರ್ತನೆಯನ್ನು ಇಟ್ಟುಕೊಳ್ಳಬೇಕೋ, ಹಾಗೆ [**ಹಿ**] ನಿಶ್ಚಯವಾಗಿ [**ವಯಮ್**] ನಾವು ಪ್ರಜೆ, ಸಭೆ ಮತ್ತು ಪಾಠಶಾಲೆ ಮೊದಲಾದ ಪ್ರತಿಯೊಂದು ಶಾಲೆಯಲ್ಲಿರುವ ತಾವು ಮನುಷ್ಯರಿಗೆ ಸುಖವನ್ನು [**ದದಾಶಿಮ**] ಕೊಡುವಂತಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಎಲ್ಲ ಋತುಗಳಲ್ಲಿರುವ ವಾಯುವು ಪ್ರಾಣಿಗಳಿಗೆ ರಕ್ಷಣೆ ಮಾಡಿ ಅವರಿಗೆ ಸುಖವನ್ನು ಕೊಡುತ್ತದೆಯೋ, ಹಾಗೆಯೇ ವಿದ್ವಾಂಸರು ಎಲ್ಲರ ಸುಖಕ್ಕಾಗಿ ಪ್ರವೃತ್ತರಾಗಲಿ. ಯಾರಿಗೂ ದುಃಖವನ್ನುಂಟುಮಾಡದಿರಲಿ.

ಅವರ ರಕ್ಷಣೆ ಮತ್ತು ಶಿಕ್ಷಣವನ್ನು ಪಡೆದ ಮನುಷ್ಯನು ಹೇಗಿರುತ್ತಾನೆ ಎಂಬುದನ್ನು ತಿಳಿಸಲಾಗಿದೆ.

ಸುಭಗಃ ಸ ಪ್ರಯಜ್ಯವೋ ಮರುತೋ ಅಸ್ತು ಮರ್ತ್ಯಃ । ಯಸ್ಯ ಪ್ರಯಾಂಸಿ ಪರ್ಷಥ ॥೭॥

ಪದಾರ್ಥ:- ಹೇ [**ಪ್ರಯಜ್ಯವಃ**] ಉತ್ತಮೋತ್ತಮ ಯಜ್ಞಾದಿ ಕರ್ಮಗಳನ್ನು ಮಾಡುವ [**ಮರುತಃ**] ಸಭಾಧ್ಯಕ್ಷ ಮೊದಲಾದ ವಿದ್ವಾಂಸರೇ! ನೀವು [**ಯಸ್ಯ**] ಯಾರಿಗಾಗಿ [**ಪ್ರಯಾಂಸಿ**] ಅತ್ಯಂತ ಪ್ರೀತಿ ಮಾಡಲು ಯೋಗ್ಯವೂ, ಮನೋಹರವೂ ಆದ ಪದಾರ್ಥಗಳನ್ನು [**ಪರ್ಷಥ**] ಕೊಡುತ್ತೀರಿ. [**ಸಃ**] ಆ [**ಮರ್ತ್ಯಃ**] ಮನುಷ್ಯರು [**ಸುಭಗಃ**] ಶ್ರೇಷ್ಠಧನ ಮತ್ತು ಐಶ್ವರ್ಯಯುಕ್ತರು [**ಅಸ್ತು**] ಆಗಲಿ.

ಭಾವಾರ್ಥ:- ಯಾರಿಗೆ ಸಭಾಧ್ಯಕ್ಷ ಮೊದಲಾದ ವಿದ್ವಾಂಸರಿಂದ ರಕ್ಷಣೆ ಕೊಡುವವರಿರುವರೋ, ಅವರು ಏತಕ್ಕೆ ಸುಖಿಗಳೂ ಮತ್ತು ಐಶ್ವರ್ಯವಂತರಾಗುವುದಿಲ್ಲ?

ಅವರ ಸಂಗದಿಂದ ಮನುಷ್ಯರು ಏನನ್ನು .ತಿಳಿಯಬೇಕು ಎಂಬುದನ್ನು ತಿಳಿಸಲಾಗಿದೆ.

ಶಶಮಾನಸ್ಯ ವಾ ನರಃ ಸ್ವೇದಸ್ಯ ಸತ್ಯಶವಸಃ । ವಿದಾ ಕಾಮಸ್ಯ ವೇನತಃ ॥೮॥

ಪದಾರ್ಥ:- ಹೇ [**ನರಃ**] ಮನುಷ್ಯರೇ! ನೀವು ಸಭಾಧ್ಯಕ್ಷರು ಮೊದಲಾದವರ ಸಂಗವನ್ನು [**ವಾ**] ಪುರುಷಾರ್ಥದಿಂದ [**ಶಶಮಾನಸ್ಯ**] ತಿಳಿಯಲು ಯೋಗ್ಯವಾದ [**ಸತ್ಯಶವಸಃ**] ಯಾವುದರಲ್ಲಿ ನಿತ್ಯವೂ ಪುರುಷಾರ್ಥ ಮಾಡಬೇಕಿದೆಯೋ, [**ವೇನತಃ**] ಎಲ್ಲ ಶಾಸ್ತ್ರಗಳಿಂದ ಕೇಳಲ್ಪಡುವ ಹಾಗೂ ಕಾಮನೆಗೆ ಯೋಗ್ಯ ಮತ್ತು [**ಸ್ವೇದಸ್ಯ**] ಪುರುಷಾರ್ಥದಿಂದ ಸಿದ್ಧವಾಗುತ್ತದೋ, ಆ [**ಕಾಮಸ್ಯ**] ಕೆಲಸವನ್ನು [**ವಿದ**] ತಿಳಿಯಿರಿ. ಅಂದರೆ ಅದನ್ನು ಸ್ಮರಣೆಯಿಂದ ಸಿದ್ಧಪಡಿಸಿರಿ.

ಭಾವಾರ್ಥ:- ಯಾವನೇ ಮನುಷ್ಯನು ವಿದ್ವಾಂಸರ ಸಂಗದ ಹೊರತು ಸತ್ಯಕಾರ್ಯ ಮತ್ತು ಒಳಿತು-ಕೆಡುಕುಗಳನ್ನು ತಿಳಿಯಲಾರನು. ಆದುದರಿಂದ ಎಲ್ಲರೂ ವಿದ್ವಾಂಸರ ಸಂಗಮಾಡಬೇಕು.

ಈಗ ಇತರೆ ಮನುಷ್ಯರು ಆ ಸಭಾಧ್ಯಕ್ಷ ಮೊದಲಾದವರಿಂದ ಹೇಗೆ ಪ್ರಾರ್ಥನೆ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಯೂಯಂ ತತ್ ಸತ್ಯಶವಸ ಆವಿಷ್ಕರ್ತ ಮಹಿತ್ವನಾ । ವಿಧ್ಯತಾ ವಿದ್ಯುತಾ ರಕ್ಷಃ ॥೯॥

ಪದಾರ್ಥ:- ಹೇ [**ಸತ್ಯಶವಸಃ**] ನಿತ್ಯಬಲದಿಂದ ಕೂಡಿರುವ ಸಭಾಧ್ಯಕ್ಷ ಮೊದಲಾದ ಸಜ್ಜನರೇ! [**ಯೂಯಮ್**] ನೀವು [**ಮಹಿತ್ವನಾ**] ಉತ್ತಮ ಯಶಸ್ಸಿನಿಂದ [**ತತ್**] ಆ ಕಾರ್ಯವನ್ನು [**ಆವಿಃ**] ಪ್ರಕಟಿಸಿ [**ಕರ್ತ**] ಮಾಡಿರಿ. ಏಕೆಂದರೆ ಅದರಿಂದ [**ವಿದ್ಯುತಾ**] ವಿದ್ಯುತ್ತಿಗೆ ಲೋಹದಿಂದ ಮಾಡಲ್ಪಟ್ಟ ಶಸ್ತ್ರ ಅಥವಾ ಆಗ್ನೇಯಾದಿ ಅಸ್ತ್ರಗಳ ಸಮೂಹದಿಂದ [**ರಕ್ಷಃ**] ಕೆಟ್ಟ ಕೆಲಸವನ್ನು ಮಾಡುವ ದುಷ್ಟರನ್ನು [**ವಿಧ್ಯತಾ**] ದಂಡಿಸುತ್ತಾ ನಮ್ಮ ಎಲ್ಲ ಕಾಮನೆಗಳನ್ನೂ ಸಿದ್ಧಗೊಳಿಸಲಿ.

ಭಾವಾರ್ಥ:- ಮನುಷ್ಯರು ಬಯಸಬೇಕಿರುವುದೇನೆಂದರೆ, ಪರಸ್ಪರ ಪ್ರೀತಿ ಮತ್ತು ಪುರುಷಾರ್ಥದೊಂದಿಗೆ ವಿದ್ಯುತ್ ಮೊದಲಾದ ಪದಾರ್ಥ ವಿದ್ಯೆ ಮತ್ತು ಉತ್ತಮೋತ್ತಮ ಗುಣಗಳನ್ನು ಪಡೆದು ದುಷ್ಟ ಸ್ವಭಾವಗಳು ಮತ್ತು ದುರ್ಗುಣಗಳನ್ನು ದೂರ ಮಾಡಿ ನಿರಂತರ ತಮ್ಮ ಕಾಮನೆಗಳನ್ನು ಸಿದ್ಧ ಪಡಿಸಲಿ.

ಮತ್ತೆ ಅವರು ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಗೂಹತಾ ಗುಹ್ಯಂ ತಮೋ ವಿ ಯಾತ ವಿಶ್ವಮತ್ರಿಣಮ್ । ಜ್ಯೋತಿಷ್ಕರ್ತಾ ಯದುಶ್ಮಸಿ ॥೧೦॥

ಪದಾರ್ಥ:- ಹೇ [**ಸತ್ಯಶವಸಃ**] ನಿತ್ಯ ಬಲದಿಂದ ಕೂಡಿರುವ ಸಭಾಧ್ಯಕ್ಷರು ಮೊದಲಾದ ಸಜ್ಜನರೇ! ಹೇಗೆ ನೀವು [**ಮಹಿತ್ವನಾ**] ತಮ್ಮ ಉತ್ತಮ ಯಶಸ್ಸಿನಿಂದ [**ಗುಹ್ಯಮ್**] ಗುಪ್ತವಾಗಿಡಬೇಕಾದ ವ್ಯವಹಾರಗಳನ್ನು [**ಗೂಹತಾ**] ಮುಚ್ಚಿಡಿ. ಮತ್ತು [**ವಿಶ್ವಮ್**] ಸಮಸ್ತ [**ತಮಃ**] ಅವಿದ್ಯಾರೂಪೀ ಅಂಧಕಾರವನ್ನು [**ಅತ್ರಿಣಮ್**] ಉತ್ತಮ ಸುಖದ ವಿನಾಶ ಮಾಡುವುದಾಗಿದೆಯೋ ಅದನ್ನು [**ವಿ ಯಾತ**] ದೂರ ಕಳುಹಿಸಿರಿ. ಹಾಗೂ ನಾವು [**ಯತ್**] ಯಾವ [**ಜ್ಯೋತಿಃ**] ವಿದ್ಯೆಯ ಪ್ರಕಾಶವನ್ನು [**ಉಶ್ಮಸಿ**] ಬಯಸುತ್ತೇವೋ, ಅದನ್ನು [**ಕರ್ತ**] ಪ್ರಕಟಪಡಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಮರುತಃ, ಸತ್ಯಶವಸಃ, ಮಹಿತ್ವನಾ ಇವು ೩ ಪದಗಳ ಅನುವೃತ್ತಿಯು ಇದೆ. ಸಭಾಧ್ಯಕ್ಷರು ಮೊದಲಾದವರು ಪರಮ ಪುರುಷಾರ್ಥದಿಂದ ನಿರಂತರ ರಾಜ್ಯದರಕ್ಷಣೆ ಮಾಡಲು ಹಾಗೂ ಅವಿದ್ಯಾರೂಪೀ ಅಂಧಕಾರ ಮತ್ತು ಶತ್ರುಗಳನ್ನು ದೂರೀಕರಿಸಬೇಕು. ಹಾಗೂ ವಿದ್ಯೆ, ಧರ್ಮ ಮತ್ತು ಸಜ್ಜನರ ಸುಖಗಳ ಪ್ರಚಾರ ಮಾಡಬೇಕು.

ಈ ಸೂಕ್ತದಲ್ಲಿ ಹೇಗೆ ಶರೀರದಲ್ಲಿರುವ ಪ್ರಾಣ ಮೊದಲಾದ ವಾಯುಗಳು ಬಯಸಿದಲ್ಲಿ ಸುಖಗಳನ್ನು ಸಿದ್ಧಗೊಳಿಸಿ ಎಲ್ಲರ ರಕ್ಷಣೆ ಮಾಡುತ್ತವೋ, ಹಾಗೆಯೇ ಸಭಾಧ್ಯಕ್ಷರೂ ಕೂಡ ಸಮಸ್ತ ರಾಜ್ಯವನ್ನು ಯಥಾರೀತಿ ರಕ್ಷಿಸಲು ಬಯಸಬೇಕು.

ಈ ಅರ್ಥದ ವರ್ಣನೆಯಿಂದ ಈ ಸೂಕ್ತದಲ್ಲಿ ಹೇಳಿರುವ ಅರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಂಬತ್ತಾರನೆಯ ಸೂಕ್ತ ಸಮಾಪ್ತ

ಸೂಕ್ತ ೮೭

ಮಂತ್ರಸಂಖ್ಯೆ ೬ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಮರುತಃ । ಛಂದಃ - ಜಗತೀ ।

ಸ್ವರಃ - ನಿಷಾಧಃ, ೪ ಧೈವತಃ.

ಸಭಾಧ್ಯಕ್ಷನು ಹೇಗಿರುತ್ತಾನೆ. ಇದರ ಉಪದೇಶವನ್ನು ಮಾಡಲಾಗಿದೆ.

ಪ್ರತ್ವಕ್ಷಸಃ ಪ್ರತವಸೋ ವಿರಪ್ಶಿನೋ ಽನಾನತಾ ಅವಿಥುರಾ ಋಜೀಷಿಣಃ ।
ಜುಷ್ಟತಮಾಸೋ ನೃತಮಾಸೋ ಅಂಜಿಭಿ-ರ್ವ್ಯಾನಜ್ರೇ ಕೇ ಚಿದುಸ್ರಾ ಇವ ಸ್ತೃಭಿಃ ॥೧॥

ಪದಾರ್ಥ:- ಹೇ ಸಭಾಧ್ಯಕ್ಷ ಮೊದಲಾದ ಸಜ್ಜನರೇ! ನೀವು **[ಕೇ ಚಿತ್]** ನಿಮ್ಮ ಸೇನೆಯನ್ನು ಸದಾ ರಕ್ಷಿಸುತ್ತಿರಬೇಕು. **[ಸ್ತೃಭಿಃ]** ನಿಮ್ಮ ಸೇನೆಯಲ್ಲಿ ಶತ್ರುಗಳನ್ನು ಲಜ್ಜೆಗೊಳಿಸುವ ಗುಣಗಳಿಂದ **[ಅಂಜಿಭಿಃ]** ಪ್ರಕಟ ರಕ್ಷಣೆ ಮತ್ತು ಉತ್ತಮ ಜ್ಞಾನ ಮೊದಲಾದ ವ್ಯವಹಾರಗಳಿಂದ ಸಂಬಂಧವನ್ನಿಟ್ಟುಕೊಂಡಿರುವರೋ **[ಉಸ್ರಾ ಇವ]** ಸೂರ್ಯನ ಕಿರಣಗಳು ಜಲವನ್ನು ಹೇಗೆ ಛಿನ್ನ ಭಿನ್ನಗೊಳಿಸುವುವೋ ಹಾಗೆ **[ಪ್ರತ್ವಕ್ಷಸಃ]** ಶತ್ರುಗಳನ್ನು ಸಂಪೂರ್ಣವಾಗಿ ಛಿನ್ನ ಭಿನ್ನಗೊಳಿಸುವರು ಹಾಗೂ **[ಪ್ರತವಸಃ]** ಪ್ರಬಲವಾಗಿರುವ ಸೇನೆಯು **[ವಿರಪ್ಶಿನಃ]** ಸಕಲ ಪದಾರ್ಥಗಳ ವಿಜ್ಞಾನವುಳ್ಳ ಮಹಾನುಭಾವರು **[ಅನಾನತಃ]** ಶತ್ರುಗಳ ಎದುರಿಗೆ ಎಂದಿಗೂ ದೀನರಾಗದಂತಹವರು ಮತ್ತು **[ಅವಿಥುರಾಃ]** ಕಂಪಿಸದವರು **[ಋಜೀಷಿಣಃ]** ಸಮಸ್ತ ವಿದ್ಯೆಗಳನ್ನು ತಿಳಿದು ಶ್ರೇಷ್ಠವಾದ ಸೇನಾಂಗಗಳನ್ನು ಒಟ್ಟುಗೂಡಿಸಿ **[ಜುಷ್ಟತಮಾಸಃ]** ರಾಜ ಪರಿವಾರವು ಮತ್ತೆ ಮತ್ತೆ ಬಯಸುವಂತಹ **[ನೃತಮಾಸಃ]** ಎಲ್ಲ ಕೆಲಸಗಳನ್ನು ಯಥಾಯೋಗ್ಯವಾಗಿ ವ್ಯವಹಾರದಲ್ಲಿಟ್ಟುಕೊಂಡಿರುವವರು **[ವ್ಯಾನಜ್ರೇ]** ಶತ್ರುಗಳ ಬಲಗಳನ್ನು ಬೇರೆ ಮಾಡುವವರನ್ನು ಸತ್ಕರಿಸಬೇಕು.

ಭಾವಾರ್ಥ:- ಸೂರ್ಯಕಿರಣಗಳು ಹೇಗೆ ಪ್ರತಾಪಶಾಲಿಗಳಾಗಿವೆಯೋ, ಹಾಗೆ ಪ್ರಬಲ ಪ್ರತಾಪವುಳ್ಳ ಮನುಷ್ಯರು ಯಾರ ಹತ್ತಿರ ಇರುತ್ತಾರೋ, ಅವರಿಗೆ ಸೋಲಿರುವುದಿಲ್ಲ. ಆದುದರಿಂದ ಸಭಾಧ್ಯಕ್ಷ ಮೊದಲಾದವರು ಉಕ್ತ ಲಕ್ಷಣಗಳುಳ್ಳವರನ್ನು ಒಳ್ಳೆಯ ಶಿಕ್ಷಣ, ಸತ್ಕಾರ ಮತ್ತು ಉತ್ಸಾಹವನ್ನಿತ್ತು ಇಟ್ಟುಕೊಳ್ಳಬೇಕು. ಹೀಗೆ ಆಚರಿಸದಿದ್ದವರ ರಾಜ್ಯಗಳು ಶಕ್ತವಾಗಿರುವುದಿಲ್ಲ.

ಸಭಾಧ್ಯಕ್ಷನ ಭೃತ್ಯರು ಏನು ಮಾಡಬೇಕು? ಈ ವಿಷಯ ಮುಂದಿನ ಮಂತ್ರದಲ್ಲಿದೆ.

ಉಪಹ್ವರೇಷು ಯದಚಿಧ್ವಂ ಯಯಿಂ ವಯ ಇವ ಮರುತಃ ಕೇನ ಚಿತ್ ಪಥಾ ।
ಶ್ಚೋತಂತಿ ಕೋಶಾ ಉಪ ವೋ ರಥೇಷ್ವಾ ಘೃತಮುಕ್ಷತಾ ಮಧುವರ್ಣಮರ್ಚತೇ ॥೨॥

ಪದಾರ್ಥ:- **[ಮರುತಃ]** ಸಭೆ ಮೊದಲಾದ ಕರ್ಮಗಳಲ್ಲಿ ನಿರತರಾಗಿರುವ ಮನುಷ್ಯರೇ! ನೀವು **[ಉಪಹ್ವರೇಷು]** ಪ್ರಾಪ್ತವಾದಂತಹ ಬಾಗಿದ ಕಿರಣಗಳು, ಆಕಾಶಾದಿ ಮಾರ್ಗಗಳಲ್ಲಿ **[ರಥೇಷು]** ವಿಮಾನ ಮೊದಲಾದ ರಥಗಳ ಮೇಲೆ ಕುಳಿತುಕೊಂಡು **[ವಯ ಇವ]** ಪಕ್ಷಿಗಳಂತೆ **[ಕೇನ ಚಿತ್]** ಎಂತಹ **[ಪಥಾ]** ಮಾರ್ಗದಲ್ಲಿ **[ಯತ]** ಯಾವ **[ಯಯಿಮ್]** ಪ್ರಾಪ್ತವಾಗುವಂತಹ ವಿಜಯವನ್ನು **[ಅಭಿಧ್ವಮ್]** ಸಂಪಾದಿಸಿ ಹೋಗಿ ಬರುವಿಕೆಯನ್ನು **[ಅರ್ಚತೇ]** ನೀನು ಸತ್ಕರಿಸುವವರಿಗೆ, ಸಭಾಧ್ಯಕ್ಷನು ಪ್ರೇಮಿಸುವವರಿಗೆ ಕೊಡು. **[ವಃ]** ನಿಮ್ಮ ರಥಗಳು **[ಕೋಶಾಃ]** ಮೇಘಗಳಿಗೆ

ಸಮಾನವಾಗಿ ಆಕಾಶದಲ್ಲಿ (ಕೋಶ ಇತಿ ಮೇಘನಾಮ ನಿ.೧.೧೦) **[ಶ್ಚೋತಂತಿ]** ಚಲಿಸುತ್ತವೆ. ಅವುಗಳಲ್ಲಿ **[ಮಧುವರ್ಣಮ್]** ಮಧುರ ಮತ್ತು ನಿರ್ಮಲ **[ಘೃತಮ್]** ಜಲವನ್ನು **[ಉದ ಆ ಉಕ್ಷತ]** ಒಳ್ಳೆಯ ರೀತಿಯಲ್ಲಿ ಉಪಸಿಕ್ತಗೊಳಿಸು ಅಂದರೆ ಆ ರಥಗಳ ಅಗ್ನಿಯು ಮತ್ತು ಪವನಗಳ ಪ್ರಕಾಶಗಳ ಸಮೀಪದಲ್ಲಿ ಚೆನ್ನಾಗಿ ಚಿಮುಕಿಸಲ್ಪಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಮನುಷ್ಯರು ವಿಮಾನ ಮುಂತಾದ ಯಾನಗಳನ್ನು ಸಿದ್ಧಪಡಿಸಿಕೊಂಡು ಅವುಗಳಲ್ಲಿ ಅಗ್ನಿ, ವಾಯು ಮತ್ತು ಜಲಗಳನ್ನು ಅವುಗಳ ಕೋಶಗಳಲ್ಲಿ ಈ ಅಗ್ನಿ ವಾಯು ಜಲಗಳಿಂದ ಯಂತ್ರಪರಿಕರಗಳಿಂದ ಅವುಗಳನ್ನು ನಡೆಸುತ್ತಾ ಅವುಗಳ ಆವಿಯನ್ನು ಬಂಧಿಸಿ ಪಕ್ಷಿಗಳು ಮತ್ತು ಮೇಘಗಳಂತೆ ಮೇಲಕ್ಕೆ ತೆಗೆದುಕೊಂಡು ಹೋಗಿ ಆಕಾಶಮಾರ್ಗದಲ್ಲಿ ಅಭೀಷ್ಟಸ್ಥಾನಕ್ಕೆ ಹೋಗಿ ಬರುವಿಕೆಯನ್ನು ವ್ಯವಹಾರದಿಂದ ಧನ ಮತ್ತು ಯುದ್ಧವನ್ನು ಸರ್ವಥಾ ಜಯಿಸಿ ಅಥವಾ ರಾಜ್ಯ ಧನವನ್ನು ಪ್ರಾಪ್ತಿ ಮಾಡಿಕೊಂಡು ಆ ಧನ ಮೊದಲಾದ ಪದಾರ್ಥಗಳಿಂದ ಪರೋಪಕಾರವನ್ನು ಮಾಡಿ ನಿರಭಿಮಾನಿಗಳಾಗಿ ಎಲ್ಲ ರೀತಿಯ ಆನಂದವನ್ನು ಪಡೆಯಿರಿ. ಮತ್ತು ಆ ಆನಂದವನ್ನು ಎಲ್ಲರಿಗೂ ತಲುಪಿಸಿರಿ.

ಮತ್ತೆ ಏನು ಮಾಡಬೇಕು ಎಂಬುದು ಮುಂದಿನ ಮಂತ್ರದಲ್ಲಿದೆ.

ಪ್ರೈಷಾಮಜ್ಮೇಷು ವಿಥುರೇವ ರೇಜತೇ ಭೂಮಿರ್ಯಾಮೇಷು ಯದ್ಧ ಯುಂಜತೇ ಶುಭೇ।
ತೇ ಕ್ರೀಳಯೋ ಧುನಯೋ ಭ್ರಾಜದೃಷ್ಟಯಃ ಸ್ವಯಂ ಮಹಿತ್ವಂ ಪನಯಂತ ಧೂತಯಃ ॥೩॥

ಪದಾರ್ಥ:- **[ಯತ್]** ಯಾವ **[ಕ್ರೀಡಯಃ]** ತನ್ನ ಸತ್ಯದ ನಡವಳಿಕೆಯಿಂದ **[ಧುನಯಃ]** ಶತ್ರುಗಳನ್ನು ಕಂಪಿಸುವಂತೆ ಮಾಡುವ **[ಭ್ರಾಜದೃಷ್ಟಯಃ]** ತೀವ್ರ ಶಸ್ತ್ರಗಳನ್ನುಳ್ಳ **[ಧೂತಯಃ]** ಯುದ್ಧ ಕ್ರಿಯೆಗಳನ್ನು ಕುರಿತು ಆಲೋಚನಾಪರನಾದ ವೀರನು **[ಶುಭೇ]** ಉತ್ತಮ ವಿಜಯಕ್ಕಾಗಿ **[ಅಜ್ಮೇಷು]** ಸಂಗ್ರಾಮಗಳಲ್ಲಿ (ಅಜ್ಮ ಇತಿ ಸಂಗ್ರಾಮನಾಮ ನಿಘಂ.೨.೧೭) **[ಪ್ರ ಯುಂಜತೇ]** ಪ್ರಯುಕ್ತನು ಅಂದರೆ ಪ್ರೇರಣೆಯನ್ನು ಪಡೆಯುವವನು **[ಮಹಿತ್ವಮ್]** ಮಹಾವೀರನಂತೆ **[ಸ್ವಯಂ ಹ]** ನೀನು ಮಾತ್ರವೇ **[ಪನಯಂತ]** ವ್ಯವಹಾರಗಳನ್ನು ಮಾಡುತ್ತೀಯೆ. **[ಏಷಾಮ್]** ಇವುಗಳ **[ಯಾಮೇಷು]** ಮನುಷ್ಯರು ಮುಂತಾದ ಪ್ರಾಣಿಗಳು ಸಂಚರಿಸುವ ಮಾರ್ಗಗಳಲ್ಲಿ ರಥಗಳಲ್ಲಿ ಚಲಿಸುತ್ತಾ **[ಭೂಮಿಃ]** ಪೃಥಿವಿ **[ವಿಥುರಾ ಇವ ಏಜತೇ]** ಶೀತಜ್ವರ ಬಂದವರು ಕಂಪಿಸುವಂತೆ ಶತ್ರುಗಳನ್ನು ಕಂಪಿಸುವಂತೆ ಮಾಡುವರು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ತೀವ್ರವಾಗಿ ಬೀಸುವ ಗಾಳಿಯು, ಮರಗಳನ್ನು ಹುಲ್ಲು ಕಡ್ಡಿಗಳನ್ನು, ಓಷಧಿಗಳು ಮತ್ತು ಧೂಳನ್ನು ಚೆಲ್ಲಿ ಕಂಪನಗೊಳಿಸುವಂತೆ, ವೀರರ ರಥಗಳು ಚಕ್ರಗಳ ತುಳಿತದಿಂದ ಭೂಮಿ ಮತ್ತು ಶಸ್ತ್ರಗಳ ತಾಡನದಿಂದ ಮನುಷ್ಯರು ಕಂಪಿಸುವಂತೆ ಮತ್ತು ವ್ಯಾವಹಾರಿಕ ಮನುಷ್ಯರು ತಮ್ಮ ವ್ಯಾಪಾರಾದಿಗಳಿಂದ ಧನವನ್ನು ಗಳಿಸಿ ಧನಾಢ್ಯರಾಗುವರೋ ಅದೇ ರೀತಿ ಸಭಾಧ್ಯಕ್ಷನಾದ ರಾಜನು ಶತ್ರುಗಳನ್ನು ಜಯಿಸಿ ತನ್ನ ಹೆಚ್ಚುಗಾರಿಕೆಯನ್ನು ಮತ್ತು ಪ್ರತಿಷ್ಠೆಯನ್ನು ವಿಖ್ಯಾತಗೊಳಿಸಿಕೊಳ್ಳುವನು.

ಮತ್ತೆ ಸೇನೆಯುಳ್ಳ ವೀರಸೇನಾಧೀಶನು ಹೇಗೆ ಇರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಸ ಹಿ ಸ್ವಸೃತ್ ಪೃಷದಶ್ವೋ ಯುವಾ ಗಣೋ೩ ಽಯಾ ಈಶಾನಸ್ತವಿಷೀಭಿರಾವೃತಃ ।
ಅಸಿ ಸತ್ಯ ಋಣಯಾವಾನೇದ್ಯೋ ಽಸ್ಯಾ ಧಿಯಃ ಪ್ರಾವಿತಾಥಾ ವೃಷಾ ಗಣಃ ॥೪॥

ಪದಾರ್ಥ:- ಹೇ ಸೇನಾಪತಿ! **[ಸಃ ಹಿ]** ಅಂತಹ ನೀನು **[ಅಯಾ]** ಮಾನವರೆಲ್ಲರೂ ಯಾವುದರಿಂದ ವಿದ್ಯೆಗಳನ್ನು ಪಡೆಯುವರೋ ಅಂತಹ ಬುದ್ಧಿಯಿಂದ **[ವೃಷಾ]** ಶೀತಲ ಮಂದ ಸುಗಂಧದಿಂದ ಸುಖಸ್ವರೂಪವಾಗಿ ವರ್ಷಿಸಲು ಸಮರ್ಥತೆಯುಳ್ಳ **[ಗಣಃ]** ವಾಯುವಿಗೆ ಸಮಾನವಾಗಿ ವೇಗವುಳ್ಳ ಬಲಾಢ್ಯರು, **[ಸ್ವಸೃತ್]** ತನ್ನವರನ್ನು ಪ್ರಾಪ್ತಿ ಮಾಡಿಕೊಳ್ಳುವವನು **[ಪೃಷದಶ್ವಃ]** ಅಥವಾ ಮೇಘಗಳ ವೇಗಕ್ಕೆ ಸಮಾನವಾದ ಕುದುರೆಗಳುಳ್ಳವನು **[ಯುವಾ]** ಹಾಗೂ ಯೌವ್ವನವನ್ನು ಪ್ರವೇಶಿಸಿದ **[ಗಣಃ]** ಉತ್ತಮರಾದ ಸಜ್ಜನರಲ್ಲಿ ಗಣನೆಗೆ ಬರುವಂತಹ ಯೋಗ್ಯನು **[ಈಶಾನಃ]** ಪರಿಪೂರ್ಣ ಸಾಮರ್ಥ್ಯಯುಕ್ತನು **[ಸತ್ಯಃ]** ಸಜ್ಜನರಲ್ಲಿ ನೇರ ಸ್ವಭಾವವುಳ್ಳವನು ಅಥವಾ **[ಋಣಯಾವಾ]** ಇತರರ ಋಣವನ್ನು ತೀರಿಸುವಂತಹವನು **[ಅನೇದ್ಯಃ]** (ಅನೇದ್ಯ ಇತಿ ಪ್ರಶಸ್ಯನಾಮ ನಿಘ.೩.೮) ಪ್ರಶಂಸನೀಯನೂ ಮತ್ತು **[ಅಸ್ಯಾಃ]** ಈ **[ಧಿಯಃ]** ಬುದ್ಧಿ ಅಥವಾ ಕರ್ಮವನ್ನು **[ಪ್ರಾವಿತಾ]** ರಕ್ಷಿಸುವ **[ತವಿಷೀಭಿಃ]** ಪರಿಪೂರ್ಣ ಬಲಯುಕ್ತ ಸೇನೆಗಳಿಂದ **[ಅಮೃತಃ ಅಸಿ]** ಯುಕ್ತನಾಗಿರು. **[ಅಥ]** ಇದರ ನಂತರ ನಮ್ಮನ್ನು ಸತ್ಕರಿಸಲು ಯೋಗ್ಯನಾಗಿರು.

ಭಾವಾರ್ಥ:- ಬಹ್ಮಚರ್ಯ ಮತ್ತು ವಿದ್ಯೆಯಿಂದ ಪರಿಪೂರ್ಣ ಶಾರೀರಿಕ, ಮತ್ತು ಆತ್ಮಿಕ ಬಲಯುಕ್ತನಾಗಿ ತನ್ನ ಸೇನೆಯಿಂದ ರಕ್ಷಿತನಾದ ಸೇನಾಪತಿಯು ನಿರಂತರವೂ ಸೇನೆಯುನ್ನು ರಕ್ಷಿಸುತ್ತಾ ಶತ್ರುಗಳನ್ನು ಜಯಿಸುತ್ತಾ ಪ್ರಜೆಗಳನ್ನು ಪಾಲಿಸಬೇಕು.

ಮತ್ತೆ ಏನು ಮಾಡಬೇಕು ಎಂಬುದು ಮುಂದಿನ ಮಂತ್ರದಲ್ಲಿದೆ.

ಪಿತುಃ ಪ್ರತ್ನಸ್ಯ ಜನ್ಮನಾ ವದಾಮಸಿ ಸೋಮಸ್ಯ ಜಿಹ್ವಾ ಪ್ರ ಜಿಗಾತಿ ಚಕ್ಷಸಾ ।

ಯದೀಮಿಂದ್ರಂ ಶಮ್ಯೃಕ್ವಾಣ ಆಶತಾ-ದಿನ್ನಾಮಾನಿ ಯಜ್ಞಿಯಾನಿ ದಧಿರೇ ॥೫॥

ಪದಾರ್ಥ:- **[ಋಕ್ವಾಣಃ]** ಪ್ರಶಂಸನೀಯ ಸ್ತುತಿಯನ್ನು ಮಾಡುವ ನಾವು **[ಪ್ರತ್ನಸ್ಯ]** ಪುರಾತನವೂ ಅನಾದಿಯೂ **[ಪಿತುಃ]** ಪಾಲಿಸುವಂತಹ ಪರಮೇಶ್ವರನ ವ್ಯವಸ್ಥೆಯಲ್ಲಿ ತಮ್ಮ ಕರ್ಮಾನುಸಾರ ಪಡೆದ ಮಾನವ ಶರೀರವು **[ಜನ್ಮನಾ]** ಜನ್ಮದಿಂದ **[ಸೋಮಸ್ಯ]** ಪ್ರತ್ಯಕ್ಷ ಪ್ರಪಂಚದ **[ಚಕ್ಷಸಾ]** ದರ್ಶನದಿಂದ ಎಂತಹ **[ಯಜ್ಞಿಯಾನಿ]** ಶಿಲ್ಪ ಮೊದಲಾದ ಕರ್ಮಗಳಿಗೆ ಯೋಗ್ಯವಾದ **[ನಾಮಾನಿ]** ಜಲಗಳನ್ನು **[ವದಾಮಸಿ]** ನಿಮ್ಮೊಡನೆ ಉಪದೇಶ ಮಾಡಿದ ಅಥವಾ **[ಯತ್]** ಯಾವ **[ಈಮ್]** ಪಡೆಯಬೇಕಾದಂತಹ **[ಇಂದ್ರಮ್]** ವಿದ್ಯುದಗ್ನಿಯ ಪ್ರಕಾಶದಲ್ಲಿ **[ಶಮಿ]** (ಶಮಿತಿ ಕರ್ಮನಾಮ ನಿಘ. ೨.೧) ಕರ್ಮಗಳ ನಿಮಿತ್ತ **[ಜಿಹ್ವಾ]** ನಾಲಿಗೆ ಅಥವಾ ವಾಣಿಯಿಂದ **[ಪ್ರಜಿಗಾತಿ]** ಸ್ತುತಿಸುವವರೆಲ್ಲರನ್ನೂ ನೀವು **[ಆಶತ]** ಪ್ರಾಪ್ತಿ ಮಾಡಿಕೊಳ್ಳಿರಿ. ಮತ್ತು **[ಆತ್ ಇತ್]** ಆ ಸಮಯದಲ್ಲಿ ಇವನನ್ನು **[ದಧಿರೇ]** ಸರ್ವರೂ ಧರಿಸಬೇಕು.

ಭಾವಾರ್ಥ:- ಈ ಮಾನವ ದೇಹವನ್ನು ಪಡೆದು ಪಿತೃಭಾವದಿಂದ ಈಶ್ವರಾಜ್ಞೆಯನ್ನು ಪಾಲಿಸುವ ರೂಪದಲ್ಲಿ ಸ್ತುತಿ ಪ್ರಾರ್ಥನೋಪಾಸನೆಗಳು ಮತ್ತು ಪರಮೇಶ್ವರನ ಉಪದೇಶ, ಪ್ರಾಪಂಚಿಕ ಪದಾರ್ಥಗಳು, ಮತ್ತು ಅವುಗಳ ವಿಶೇಷ ಜ್ಞಾನದಿಂದ ಉಪಕಾರವನ್ನು ಪಡೆದು ಜನ್ಮವನ್ನು ಸಫಲಗೊಳಿಸಿಕೊಳ್ಳಬೇಕು.

ಮತ್ತೆ ಏನು ಮಾಡಬೇಕು ಎಂಬುದು ಮುಂದಿನ ಮಂತ್ರದಲ್ಲಿದೆ.

ಶ್ರಿಯಸೇ ಕಂ ಭಾನುಭಿಃ ಸಂ ಮಿಮಿಕ್ಷಿರೇ ತೇ ರಶ್ಮಿಭಿಸ್ತ ಋಕ್ವಭಿಃ ಸುಖಾದಯಃ ।

ತೇ ವಾಶೀಮಂತ ಇಷ್ಮಿಣೋ ಅಭೀರವೋ ವಿದ್ರೇ ಪ್ರಿಯಸ್ಯ ಮಾರುತಸ್ಯ ಧಾಮ್ನಃ ॥೬॥

ಪದಾರ್ಥ:- **[ಭಾನುಭಿಃ]** ಪ್ರತಿದಿನವೂ **[ಕಮ್]** ಸುಖವನ್ನು **[ಶ್ರಿಯಸೇ]** ಅನುಭವಿಸುವುದಕ್ಕಾಗಿ **[ತೇ]** ಅಂತಹ **[ಪ್ರಿಯಸ್ಯ]** ಪ್ರೇಮವನ್ನು ಉತ್ಪನ್ನ ಮಾಡುವ **[ಮಾರುತಸ್ಯ]** ಕಳಾಯುಕ್ತವಾದ ಪವನವು ಅಥವಾ ಪ್ರಾಣವಾಯುವನ್ನು **[ಧಾಮ್ನಃ]** ಗೃಹದಿಂದ ವಿದ್ಯೆ ಅಥವಾ ಜಲವನ್ನು **[ಸಂ ಮಿಮಿಕ್ಷಿರೇ]** ಉತ್ತಮವಾಗಿ ಸೇಚನ ಮಾಡುವರು **[ತೇ]** ಆ ಶಿಲ್ಪವಿದ್ಯೆಯನ್ನು ತಿಳಿದವರು ಹಾಗೂ **[ರಶ್ಮಿಭಿಃ]** ಅಗ್ನಿ ಕಿರಣಗಳಿಂದ ಸುಖದ ಸೇವನೆಗಾಗಿ ಕಲೆಗಳಿಂದ ಯಾನಗಳನ್ನು ನಡೆಸುವವರು ಶೀಘ್ರವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳದ **[ವಿದ್ರೇ]** ಲಾಭವನ್ನು ಪಡೆಯುವರು. **[ಋಕ್ವಭಿಃ]** ಯಾವುದರಲ್ಲಿ ಪ್ರಶಂಸನೀಯವಾದ ಸ್ತುತಿಯು ವಿದ್ಯಮಾನವಾಗಿದೆಯೋ ಅದರಿಂದ ಸುಖದ ಸೇವನೆ ಮಾಡಲು **[ಸುಖಾದಯಃ]** ಉತ್ತಮೋತ್ತಮ ಪದಾರ್ಥಗಳನ್ನು ಭುಜಿಸುವವರಾಗುವರು. **[ತೇ]** ಅವರು ಆರೋಗ್ಯವನ್ನು ಪಡೆಯುವರು. **[ವಶೀಮಂತಃ]** ಉತ್ತಮವಾದ ವಾಣಿಯುಳ್ಳವರ **[ಇಷ್ಮಿಣಃ]** ವಿಶೇಷ ಜ್ಞಾನವಿದೆಯೋ ಅದು **[ಅಭೀರವಃ]** ನಿರ್ಭಯವಾದ ಪುರುಷ ಪ್ರೇಮವನ್ನು ಉತ್ಪನ್ನ ಮಾಡುವ ಪ್ರಾಣವಾಯುವು ಅಥವಾ ಕಲೆಗಳ ವಾಯುವು ಗೃಹಗಳಿಂದ ಯುದ್ಧಗಳಲ್ಲಿ ಪ್ರವೃತ್ತರಾಗುವವರು ವಿಜಯವನ್ನು ಪಡೆಯುವರು.

ಭಾವಾರ್ಥ:- ಯಾವ ಮನುಷ್ಯರು ಪ್ರತಿನಿತ್ಯ ಸೃಷ್ಟಿ ಪದಾರ್ಥ ವಿದ್ಯೆಯನ್ನು ಪಡೆದು ಅನೇಕ ಉಪಕಾರಗಳನ್ನು ಗ್ರಹಿಸಿ ಆ ವಿದ್ಯೆಯನ್ನು ಓದುವ ಮತ್ತು ಓದಿಸುವುದರಿಂದ ವಾಚಾಳಿಗಳು ಅರ್ಥಾತ್ ಮಾತುಕತೆಯಲ್ಲಿ ಕುಶಲರು ಆಗುತ್ತಾರೋ, ಮತ್ತು ಶತ್ರುಗಳನ್ನು ಜಯಿಸಿ ಉತ್ತಮ ಆಚರಣೆಯಲ್ಲಿ ಇರುತ್ತಾರೋ ಅವರೇ ಎಲ್ಲೆಡೆಯಿಂದಲೂ ಸುಖವನ್ನು ಹೊಂದುತ್ತಾರೆ.

ಈ ಸೂಕ್ತದಲ್ಲಿ ರಾಜಾ ಪ್ರಜೆಗಳ ಕರ್ತವ್ಯವನ್ನು ಹೇಳಿದೆ. ಆದುದರಿಂದ ಈ ಸೂಕ್ತದ ಅರ್ಥಕ್ಕೂ ಹಿಂದಿನ ಸೂಕ್ತದ ಅರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಂಬತ್ತೇಳನೆಯ ಸೂಕ್ತ ಸಮಾಪ್ತ

ಸೂಕ್ತ ೮೮

ಮಂತ್ರಸಂಖ್ಯೆ ೬ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಮರುತಃ । ಛಂದಃ - ತ್ರಿಷ್ಟುಪ್ ,
೧, ೬ ಪ್ರಸ್ತಾರಪಂಕ್ತಿಃ ೫ ವಿರಾಡ್‌ರೂಪಾ । ಸ್ವರಃ - ೧, ೨, ೫ ಪಂಚಮಃ, ಮಧ್ಯಮಃ.

ಮತ್ತೆ ಸಭಾಧ್ಯಕ್ಷ ಮೊದಲಾದವರಿಗೆ ಉಪದೇಶ.

ಆ ವಿದ್ಯುನ್ಮದ್ಭಿರ್ಮರುತಃ ಸ್ವರ್ಕೈ ರಥೇಭಿರ್ಯಾತ ಋಷ್ಟಿಮದ್ಭಿರಶ್ವಪರ್ಣೈಃ ।

ಆ ವರ್ಷಿಷ್ಠಯಾ ನ ಇಷಾ ವಯೋ ನ ಪಪ್ತತಾ ಸುಮಾಯಾಃ ॥೧॥

ಪದಾರ್ಥ:- **[ಸುಮಾಯಾಃ]** ಉತ್ತಮ ಬುದ್ಧಿಯುಳ್ಳ **[ಮರುತಃ]** ಸಭಾಧ್ಯಕ್ಷ ಅಥವಾ ರಾಜಪುರುಷರೇ! ನೀವು **[ನಃ]** ನಮ್ಮ **[ವರ್ಷಿಷ್ಠ್ಯ]** ಅತ್ಯಂತ ವಾರ್ಧಿಕ್ಯದಿಂದ **[ಇಷಾ]** ಉತ್ತಮ ಅನ್ನ ಮೊದಲಾದ ಪದಾರ್ಥಗಳು **[ಸ್ವರ್ಕೈಃ]** ಉತ್ತಮ ವಿಚಾರಗಳುಳ್ಳ ವಿದ್ವಾಂಸರು **[ಋಷ್ಟಿಮದ್ಭಿಃ]** ತಾರವಿದ್ಯೆಯಲ್ಲಿ ಚಲಾಯಮಾನವಾದ ಅರ್ಥದಂಡ ಹಾಗೂ ಶಸ್ತ್ರಾಸ್ತ್ರಗಳು **[ಅಶ್ವಪರ್ಣೈಃ]** ಅಗ್ನಿ ಮೊದಲಾದ ಪದಾರ್ಥರೂಪೀ ಅಶ್ವವೇಗದಂತಹವು **[ವಿದ್ಯುನ್ ಮದ್ಭಿಃ]** ತಂತಿ ಯಂತ್ರಾದಿಗಳಿಗೆ ಸಂಬಂಧಿಸಿದ ವಿದ್ಯುತ್ತಿನಿಂದ ಕೂಡಿರುವುವು. **[ರಥೇಭಿಃ]** ವಿಮಾನಗಳೂ ಮುಂತಾದವುಗಳಿಂದ **[ವಯಃ]** ಪಕ್ಷಿಗಳ **[ನ]** ಸಮಾನವಾಗಿ **[ಪಪ್ತತ]** ಹಾರಿ ಹೋಗಿರಿ. **[ಆ]** ಹಾರಿ ಬನ್ನಿರಿ **[ಯಾತ]** ಹೊರಡಿರಿ. **[ಆ]** ತಿರುಗಿ ಬನ್ನಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಪಕ್ಷಿಗಳು ಹೇಗೆ ಮೇಲಕ್ಕೆ, ಕೆಳಕ್ಕೆ ಬಂದು ಹೋಗುವುವೋ, ಬಯಸಿದ ಸ್ಥಳಕ್ಕೆ ಸುಖವಾಗಿ ಹೋಗಿ ಬರುವಂತೆ, ಅದೇ ರೀತಿ ಚೆನ್ನಾಗಿ ಸಿದ್ಧಗೊಳಿಸಿದ

ವಿದ್ಯೆಯುಕ್ತ ಪ್ರಯೋಗಗಳಿಂದ ಚಲಿಸುವ ವಿಮಾನ ಮೊದಲಾದ ಯಾನಗಳಿಂದ ಆಕಾಶ, ಭೂಮಿ ಮತ್ತು ನೀರಿನಲ್ಲಿ ಉತ್ತಮವಾಗಿ ಹೋಗಿ ಬರುತ್ತಾ, ಅಭೀಷ್ಟ ಸ್ಥಳಕ್ಕೆ ಸುಖವಾಗಿ ಹೋಗಿ ಬರುತ್ತಾ ಕಾರ್ಯಸಿದ್ಧಿಯನ್ನು ಪಡೆಯುತ್ತಾ ಜನರೆಲ್ಲರೂ ಆನಂದವನ್ನು ಪಡಬೇಕು.

ಉಕ್ತಕಾರ್ಯಗಳಿಂದ ಅವರು ಏನನ್ನು ಪಡೆಯುತ್ತಾರೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ತೇऽರುಣೇಭಿರ್ವರಮಾ ಪಿಶಂಗೈಃ ಶುಭೇ ಕಂ ಯಾಂತಿ ರಥತೂರ್ಭಿರಶ್ವೈಃ ।

ರುಕ್ಮೋ ನ ಚಿತ್ರಃ ಸ್ವಧಿತೀವಾನ್ ಪವ್ಯಾ ರಥಸ್ಯ ಜಂಘನಂತ ಭೂಮ ॥೨॥

ಪದಾರ್ಥ:- ನೈಪುಣ್ಯತೆಯನ್ನು ಪಡೆದ ವಿದ್ವಾಂಸರು [ಶುಭೇ] ಉತ್ತಮ ವ್ಯವಹಾರಕ್ಕಾಗಿ [ಅರುಣೇಭಿಃ] ಉತ್ತಮವಾದ ಅಗ್ನಿಯ ತಾಪದಿಂದ ಕೆಂಪಗೆ [ಪಿಶಂಗೈಃ] ಅಥವಾ ಅಗ್ನಿ ಮತ್ತು ಜಲದ ಸಂಯೋಗದಿಂದ ಉಂಟಾದ ಆವಿಯಿಂದ ಸ್ವಲ್ಪ ಬಿಳುಪು [ರಥತೂಭಿಃ] ವಿಮಾನಾದಿಗಳು ವೇಗವಾಗಿ ಚಲಿಸಲು ಕಾರಣವಾದ ಅಗ್ನಿ ಜಲಗಳ ಸಂಯೋಗದಿಂದ ಉಂಟಾದ ಆವಿರೂಪ [ಅಶ್ವೈಃ] ಅಶ್ವ ಶಕ್ತಿಯಿಂದ [ರಥಸ್ಯ] ವಿಮಾನ ಮುಂತಾದ ವಾಹನಗಳನ್ನು [ಪವ್ಯಾ] ವಜ್ರಕ್ಕೆ ಸಮಾನವಾದ ಚಕ್ರಗಳನ್ನು ಹೊಂದಿರುವ [ಸ್ವಧಿತೀವಾನ್] ಪ್ರಶಂಸನೀಯವಾದ ವಜ್ರದಿಂದ ಅಂತರಿಕ್ಷ ವಾಯುವನ್ನು ಸೀಳಿ [ರುಕ್ಮಃ] ಮತ್ತು ಉತ್ತೇಜಪಡಿಸುವ [ಚಿತ್ರಃ] ಶೂರತ್ವ, ಧೀರತ್ವ, ಬುದ್ಧಿಮತ್ತೆ ಮೊದಲಾದ ಗುಣಗಳುಳ್ಳ ಅದ್ಭುತ ಮನುಷ್ಯರು [ನ] ಸಮಾನ ಮಾರ್ಗವನ್ನು [ಜಂಘನಂತ] ದಾಟುತ್ತಾ ದೇಶ ದೇಶಾಂತರಗಳಿಗೆ ಹೋಗಿ ಬರುವ [ತೇ] ಅವರು [ವರಮ್] ಉತ್ತಮ [ಕಮ್] ಸುಖಗಳನ್ನು [ಆಯಾಂತಿ] ನಾಲ್ಕೂ ಕಡೆಗಳಿಂದ ಪಡೆಯುವಂತೆ ನಾವು ಕೂಡ [ಭೂಮ] ಹಾಗೆಯೇ ಆಚರಿಸಿ ಸುಖವನ್ನನುಭವಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರಗಳಿವೆ. ಹೇಗೆ ಶೂರವೀರರು ಉತ್ತಮ ಶಸ್ತ್ರಗಳನ್ನಿಟ್ಟು ಕೊಳ್ಳುವ ಪುರುಷರು ವೇಗವಾಗಿ ಹೋಗಿ ಶತ್ರುಗಳನ್ನು ಕೊಲ್ಲುವರೋ ಹಾಗೆ ವೀರರು ರಥಗಳ ಮೇಲೆ ಕುಳಿತು ದೇಶ ದೇಶಾಂತರಗಳಿಗೆ ಹೋಗಿ ಬರುತ್ತಾ ಶತ್ರುಗಳನ್ನು ಜಯಿಸುವರು.

ಈಗ ಸಭಾಧ್ಯಕ್ಷ ಮೊದಲಾದವರಿಗೆ ಉಪದೇಶ.

ಶ್ರಿಯೇ ಕಂ ವೋ ಅಧಿ ತನೂಷು ವಾಶೀ-ರ್ಮೇಧಾ ವನಾ ನ ಕೃಣವಂತ ಊರ್ಧ್ವಾ ।

ಯುಷ್ಮಭ್ಯಂ ಕಂ ಮರುತಃ ಸುಜಾತಾ-ಸ್ತುವಿದ್ಯುಮ್ನಾಸೋ ಧನಯಂತೇ ಅದ್ರಿಮ್ ॥೩॥

ಪದಾರ್ಥ:- [ಮರುತಃ] ಸಭಾಧ್ಯಕ್ಷ ಮೊದಲಾದ ಸಜ್ಜನರೇ! [ವಃ] ನಿಮ್ಮ [ತನೂಷು] ಶರೀರಗಳಲ್ಲಿನ [ಶ್ರಿಯೇ] ಲಕ್ಷ್ಮಿಗಾಗಿ [ಕಮ್] ಸುಖವು [ಊರ್ಧ್ವಾ] ಚೆನ್ನಾಗಿ ಪ್ರಾಪ್ತಿ ಪಡಿಸುವ [ವಾಶೀಃ] ವೇದವಾಣಿಯು [ಮೇಧಾ] ಶುದ್ಧಬುದ್ಧಿಯುಳ್ಳವರಿಗೆ [ವನಾ] ಅತಿ ಎತ್ತರವಾದ ವನವೃಕ್ಷಗಳ [ನ] ಅಂತೆ [ಅಧಿ ಕೃಷ್ಣವಂತೇ] ಆಚರಣೆಗಾಗಿ ಅಧಿಕಾರವನ್ನು ಕೊಡುವರು. [ಸುಜಾತಾಃ] ವಿದ್ಯೆ ಮೊದಲಾದ ಶ್ರೇಷ್ಠ ಗುಣಗಳಿಂದ ಪ್ರಸಿದ್ಧರಾದ ವಿದ್ವಾಂಸರೇ! [ತುವಿದ್ಯುಮ್ನಾಸಃ] ಉತ್ತಮ ವಿದ್ಯೆಯನ್ನು ಪ್ರಕಾಶಪಡಿಸುವ ಮಹಾತ್ಮರು [ಯುಷ್ಮಭ್ಯಮ್] ನಿಮಗಾಗಿ [ಕಮ್] ಅತ್ಯಂತ ಸುಖವೀಯುವ [ಅದ್ರಿಮ್] ಪರ್ವತದಂತೆ [ಧನಯಂತೇ] ನೀವು ಸದಾ ಸೇವನೆ ಮಾಡಲು ಯೋಗ್ಯವಾದ ಅತ್ಯಂತ ಧನವನ್ನು ಪ್ರಕಾಶ ಪಡಿಸುವರು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಮೇಘ ಅಥವಾ ಕೂಪ ಜಲದಿಂದ ತೋಯಿಸಲ್ಪಟ್ಟವನ ಮತ್ತು ಉಪವನಗಳು ತೋಟಗಳು, ಹೊಲಗದ್ದೆಗಳು ತಮ್ಮ ಫಲ, ಧಾನ್ಯಾದಿಗಳಿಂದ ಪ್ರಾಣಿಗಳಿಗೆ

ಸುಖವನ್ನೀಯುವಂತೆ ವಿದ್ವಾಂಸರು ತಮ್ಮ ವಿದ್ಯೆ ಮತ್ತು ಉತ್ತಮವಾದ ಶಿಕ್ಷಣ ಹಾಗೂ ಪರಿಶ್ರಮದ ಫಲದಿಂದ ಸರ್ವಮಾನವರೂ ಸುಖಪಡಿಸುವಂತೆ ಮಾಡುವರು.

ಮತ್ತೆ ಅದೇ ವಿಷಯ.

ಅಹಾನಿ ಗೃಧ್ರಾಃ ಪರ್ಯಾ ವ ಆಗು-ರಿಮಾಂ ಧಿಯಂ ವಾರ್ಕಾರ್ಯಾಂ ಚ ದೇವೀಮ್ ।

ಬ್ರಹ್ಮ ಕೃಣ್ವಂತೋ ಗೋತಮಾಸೋ ಅರ್ಕೈ-ರೂರ್ಧ್ವಂ ನುನುದ್ರ ಉತ್ಸಧಿಂ ಪಿಬಧ್ಯೈ ॥೪॥

ಪದಾರ್ಥ:- ಹೇ ಮನುಷ್ಯರೇ! [ಗೃಧ್ರಾಃ] ಎಲ್ಲ ವಿಧವಾದ ಪವಿತ್ರ ಕೋರಿಕೆಯನ್ನುಳ್ಳವರು [ಗೋತಮಾಸಃ] ಅತ್ಯಂತ ಜ್ಞಾನಿಗಳಾದ ಸಜ್ಜನರು [ಬ್ರಹ್ಮ] ಧನ, ಅನ್ನ ಮತ್ತು ವೇದಪಠಣವನ್ನು [ಕೃಣ್ವಂತಃ] ಮಾಡುತ್ತಾ [ಅರ್ಕೈಃ] ವೇದಮಂತ್ರಗಳಿಂದ [ಅಹಾನಿ] ಪ್ರತಿದಿನವೂ [ಊರ್ಧ್ವಮ್] ಉತ್ಕರ್ಷತೆಯಿಂದ [ಪಿಬಧ್ಯೈ] ಪಾನ ಮಾಡುವುದಕ್ಕಾಗಿ [ಉತ್ಸಧಿಮ್] ಬಾವಿಯನ್ನು ತೋಡಿರುವ ಭೂಮಿಗೆ ಸಮಾನವಾಗಿ [ಆ ನುನುದ್ರೇ] ಸರ್ವಥಾ ವೃದ್ಧಿಯಾಗುವುದಕ್ಕಾಗಿ [ವಃ] ನಿಮ್ಮ ಎದುರಿಗಿದ್ದು ಪ್ರೇರಣೆ ನೀಡುವವರು [ವಾರ್ಕಾರ್ಯಾಮ್] ಜಲದಂತೆ ನಿರ್ಮಲವಾಗಲು ಯೋಗ್ಯರು [ದೇವೀಮ್] ಪ್ರಕಾಶವನ್ನು ಪಡೆಯುವರು. [ಇಮಾಮ್] ಇಂತಹ [ಧಿಯಮ್] ಧಾರಣೆಗೆ ಯೋಗ್ಯವಾದ ಬುದ್ಧಿಯು [ಚ] ಮತ್ತು ಧನವನ್ನು [ಪರಿ ಆ ಅಗುಃ] ಉತ್ತಮ ರೀತಿಯಲ್ಲಿ ಪ್ರಾಪ್ತಿ ಮಾಡಿಕೊಂಡು ಇತರರಿಗೂ ಪ್ರಾಪ್ತಿಸುವಂತೆ ಮಾಡಿ, ಅವರು ಸದಾ ಸೇವೆಗೆ ಯೋಗ್ಯರಾಗುವರು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಜ್ಞಾನ, ಗೌರವಗಳನ್ನು ಬಯಸುವವರೇ! ಹೇಗೆ ಮಾನವನು ದಾಹವನ್ನು ತೃಪ್ತಿಪಡಿಸುವ ಪ್ರಯೋಜನಕ್ಕಾಗಿ ಪರಿಶ್ರಮದಿಂದ ಬಾವಿ, ಕೆರೆ, ಕಟ್ಟೆಗಳನ್ನು ತೋಡಿ ತನ್ನ ಕಾಮನೆಗಳನ್ನು ಪೂರ್ಣಗೊಳಿಸಿಕೊಳ್ಳುವನೋ, ಹಾಗೆಯೇ ನೀವೆಲ್ಲರೂ ಅತ್ಯಂತ ಪುರುಷಾರ್ಥದಿಂದ ಮತ್ತು ವಿದ್ವಾಂಸರ ಸಂಗದಿಂದ ವಿದ್ಯಾಭ್ಯಾಸ ಮಾಡಿ ಸಮಸ್ತ ವಿದ್ಯೆಗಳನ್ನು ಪ್ರಕಾಶನಗೊಳಿಸಿ ಉತ್ತಮ ಬುದ್ಧಿಯನ್ನು ಪಡೆದು ಅದಕ್ಕನುಕೂಲಕರವಾಗಿ ಕ್ರಿಯೆಗಳನ್ನು ಸಿದ್ಧಗೊಳಿಸಿರಿ.

ವಿದ್ವಾಂಸನು ಮನುಷ್ಯರಿಗೆ ಯಾವ ಯಾವ ಶಿಕ್ಷಣವನ್ನು ಕೊಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಏತತ್ ತ್ಯನ್ನ ಯೋಜನಮಚೇತಿ ಸಸ್ವರ್ಹ ಯನ್ಮರುತೋ ಗೋತಮೋ ವಃ ।

ಪಶ್ಯನ್ ಹಿರಣ್ಯಚಕ್ರಾನಯೋದಂಷ್ಟ್ರಾನ್ ವಿಧಾವತೋ ವರಾಹೂನ್ ॥೫॥

ಪದಾರ್ಥ:- [ಮರುತಃ] ಹೇ ಮಾನವರೇ! ನೀವು [ಗೋತಮಃ] ವಿದ್ವಾಂಸನ [ನ] ಅಂತೆ [ವಃ] ವಿದ್ಯೆಯ ಜ್ಞಾನವನ್ನು ಇಚ್ಛಿಸುವ ನಿಮ್ಮೆಲ್ಲರಿಗೂ [ಯತ್] ಯಾವ [ಯೋಜನಮ್] ಜೋಡಿಸಲು ಯೋಗ್ಯವಾದ ವಿಮಾನ ಮುಂತಾದ ಯಾನಗಳನ್ನು [ಹಿರಣ್ಯಚಕ್ರಾನ್] ಸುವರ್ಣಘಟಿತ ಚಕ್ರಗಳು ತಳತಳನೆ ಹೊಳೆಯುವಂತೆ [ಅಯೋದಂಷ್ಟ್ರಾನ್] ಲೋಹದ ಕೀಲುಗಳಿಂದ ಬಂಧಿಸಿದ [ವರಾಹೂನ್] ಉತ್ತಮ ಶಬ್ದವನ್ನು ಮಾಡುವ [ವಿಧಾವತಃ] ವಿಚಿತ್ರ ಮಾರ್ಗಗಳಲ್ಲಿ ಚಲಿಸುವಂತಹ ವಿಮಾನಗಳು ಮುಂತಾದ ರಥಗಳನ್ನು [ಏತತ್] ಪ್ರತ್ಯಕ್ಷವಾಗಿ [ಪಶ್ಯನ್] ನೋಡಿದ [ಹ] ಕೂಡಲೇ [ಸಸ್ವಃ] ಉಪದೇಶಿಸುವನು. [ತ್ಯತ್] ಅಂತಹ ಉಪದೇಶವನ್ನು ಮಾಡಿದ ನಿಮಗೆ [ಅಚೇತಿ] ಚೈತನ್ಯಪಡಿಸುವನೆಂದು ತಿಳಿಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮಾನವರೇ! ಹಿಂದಾದ-ಮುಂದಾಗುವ ವಿಷಯಗಳನ್ನು ತಿಳಿದ ವಿದ್ವಾಂಸನು ಒಳ್ಳೊಳ್ಳೆಯ ಕಾರ್ಯಗಳನ್ನು ಮಾಡಿ ಆನಂದವನ್ನು ಪಡೆಯುವಂತೆ ಮನುಷ್ಯರೆಲ್ಲರೂ ವಿದ್ಯೆಯಿಂದ ಸಿದ್ಧಿಸಿದ ಕಾರ್ಯಗಳನ್ನು ಸಫಲಗೊಳಿಸಿಕೊಂಡು ಸುಖಗಳನ್ನು ಅನುಭವಿಸಬೇಕು.

ಈಗ ವಿದ್ಯೆಯ ಜ್ಞಾನವನ್ನು ಬಯಸುವ ಪುರುಷನು ಅವುಗಳಲ್ಲಿ ಹೇಗೆ ಪ್ರವರ್ತಿಸಿ, ಏನನ್ನು ಗ್ರಹಿಸಬೇಕು.

ಏಷಾ ಸ್ಯಾ ವೋ ಮರುತೋಽನುಭರ್ತ್ರೀ ಪ್ರತಿ ಷ್ಟೋಭತಿ ವಾಘತೋ ನ ವಾಣೀ ।

ಅಸ್ತೋಭಯದ್ ವೃಥಾಸಾ-ಮನು ಸ್ವಧಾಂ ಗಭಸ್ತ್ಯೋಃ ॥೬॥

ಪದಾರ್ಥ:- **[ಮರುತಃ]** ಹೇ ಮನುಷ್ಯರೇ! ನಿಮ್ಮ **[ಏಷಾ]** ಈ ಹೇಳಲ್ಪಟ್ಟ **[ಸ್ಯಾ]** ಅಥವಾ ಹೇಳುತ್ತಿರುವಂತಹ **[ಅನುಭರ್ತ್ರೀ]** ಇಷ್ಟ ಸುಖಗಳನ್ನು ಧಾರಣ ಮಾಡಿಸುವಂತಹ **[ವಾಣೀ]** ವಾಕ್ಕು **[ವಾಘತಃ]** ಋತು-ಋತುವಿನಲ್ಲಿಯೂ ಯಜ್ಞವನ್ನು ಮಾಡುವ ಮತ್ತು ಮಾಡಿಸುವ ವಿದ್ವಾಂಸನ **[ನ]** ಅಂತೆ ವಿದ್ಯೆಗಳನ್ನು **[ಪ್ರತಿ ಸ್ತೋಭತಿ]** ಪ್ರತಿಬಂಧಿಸುವುದು ಅಂದರೆ ಪ್ರತಿಯೊಂದು ವಿದ್ಯೆಯನ್ನು ಸ್ಥಿರಪಡಿಸುವ **[ಆಸಾಮ್]** ವಿದ್ಯಾಕಾಮನೆಗಳನ್ನು **[ಗಭಸ್ತ್ಯೋಃ]** ಭುಜಗಳಲ್ಲಿ **[ಅನುಸ್ವಧಾಮ್]** ತನ್ನ ಸಾಧಾರಣ ಸಾಮರ್ಥ್ಯಕ್ಕೆ ಅನುಕೂಲವಾಗಿ ನಿರ್ಣಯಗಳನ್ನು ಮಾಡುತ್ತಾ ಹಾಗೂ **[ವೃಥಾ]** ಅನೃತ ವ್ಯವಹಾರಗಳನ್ನು **[ಅಸ್ತೋ ಭಯತ್]** ನಿಲ್ಲಿಸುವನು, ಇಂತಹ ವಾಣಿಯನ್ನು ನಿಮ್ಮಿಂದ ನಾವು ಕೇಳುವಂತಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಪ್ರತಿ ಋತುವಿನಲ್ಲಿಯೂ ಯಜ್ಞ ಮಾಡುವವನ ವಾಣಿಯು ಯಜ್ಞಕಾಮನೆಗಳನ್ನು ಪ್ರಕಾಶಗೊಳಿಸಿ ಆ ವಿದ್ಯೆಯನ್ನು ನಿವೃತ್ತಗೊಳಿಸುತ್ತದೆ. ಇದರಿಂದ ಎಲ್ಲ ಮಾನವರೂ ವಿದ್ವಾಂಸರ ಸಂಗವನ್ನು ನಿರಂತರವೂ ಮಾಡುತ್ತಿರಬೇಕು.

ಈ ಸೂಕ್ತದಲ್ಲಿ ಮನುಷ್ಯರ ವಿದ್ಯಾವೃದ್ಧಿಗಾಗಿ ಓದುವ-ಓದಿಸುವ ರೀತಿಯನ್ನು ಪ್ರಕಾಶಗೊಳಿಸಿದೆ. ಆದುದರಿಂದ ಇದರ ಅರ್ಥವು ಹಿಂದಿನ ಸೂಕ್ತದ ಜೊತೆಗೆ ಸಂಬಂಧಿಸಿರುವುದೆಂದು ತಿಳಿಯಬೇಕು.

ಎಂಬತ್ತೆಂಟನೆಯ ಸೂಕ್ತ ಸಮಾಪ್ತ

ಸೂಕ್ತ ೮೯

ಮಂತ್ರಸಂಖ್ಯೆ ೧೦ । ಋಷಿಃ - ಗೋತಮೋ ರಾಹೂಗಣಃ । ದೇವತಾ - ವಿಶ್ವೇದೇವಾಃ (೧, ೨, ೮, ೯ ದೇವಾಃ ೧೦ ಅದಿತಿಃ) । ಛಂದಃ - ಜಗತೀ, ೬ ವಿರಾಟ್-ಸ್ಥಾನಾಃ ೮-೧೦ ತ್ರಿಷ್ಟುಪ್ । ಸ್ವರಃ - ೧, ೨, ೩, ೫, ೭ ನಿಷಾಧಃ, ೪, ೮-೧೦ ಧೈವತಃ, ೬ ಮಧ್ಯಮಃ.

ಎಲ್ಲಾ ವಿದ್ವಾಂಸರು ಹೇಗಿರಬೇಕು ಮತ್ತು ಸಾಂಸಾರಿಕರ ಜೊತೆ ಹೇಗೆ ವರ್ತಿಸಬೇಕು, ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತೋಽದಬ್ಧಾಸೋ ಅಪರೀತಾಸ ಉದ್ಭಿದಃ ।

ದೇವಾ ನೋ ಯಥಾ ಸದಮಿದ್ ವೃಧೇ ಅಸನ್ನಪ್ರಾಯುವೋ ರಕ್ಷಿತಾರೋ ದಿವೇದಿವೇ ॥೧॥

ಪದಾರ್ಥ:- **[ಯಥಾ]** ಹೇಗೆ **[ವಿಶ್ವತಃ]** ಎಲ್ಲ ಕಡೆಗಳಿಂದ **[ಭದ್ರಾಃ]** ಸುಖವನ್ನೀಯುವ ಮತ್ತು **[ಕ್ರತವಃ]** ಉತ್ತಮ ಕ್ರಿಯೆಗಳು, ಅಥವಾ ಶಿಲ್ಪಯಜ್ಞದಲ್ಲಿ ಬುದ್ಧಿಯನ್ನು ನಿಲ್ಲಿಸುವವರು **[ಅದಬ್ಧಾಸಃ]** ಅಹಿಂಸಕವು **[ಅಪರೀತಾಸಃ]** ಪೂಜಿಸಲು ಯೋಗ್ಯವಾದುದು **[ಉದ್ಭಿದಃ]** ತಮ್ಮ ಉತ್ಕರ್ಷತೆಯಿಂದ ದುಃಖಗಳನ್ನು ನಾಶಗೊಳಿಸುವವರು **[ಅಪ್ರಾಯುವಃ]** ತಮ್ಮ ಆಯುಸ್ಸನ್ನು ವೃಥಾ ಕಾಲಹರಣ ಪಡಿಸಿಕೊಳ್ಳದವರು ಆಗಲಿ. **[ದೇವಾ]** ಅಂತಹ ದಿವ್ಯಗುಣಯುಕ್ತ ವಿದ್ವಾಂಸರು ಹೇಗೆ **[ನಃ]** ನಮ್ಮನ್ನು **[ಸದಮ್]** ವಿಜ್ಞಾನ ಅಥವಾ ಮನೆಯನ್ನು **[ಆ ಯಂತು]** ಉತ್ತಮ ರೀತಿಯಿಂದ

ತಲುಪಿಸಲಿ. ಹಾಗೆ **[ದಿವೇ ದಿವೇ]** ಪ್ರತಿದಿನವೂ **[ನಃ]** ನಮ್ಮ **[ವೃಧೇ]** ಸುಖವನ್ನು ಹೆಚ್ಚಿಸಲು **[ರಕ್ಷಿತಾರಃ]** ರಕ್ಷಣೆ ಮಾಡುವವರು **[ಇತ್]** ಮಾತ್ರವೇ **[ಅಸನ್]** ಆಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಎಲ್ಲ ಋತುಗಳಲ್ಲೂ ಎಲ್ಲ ಶ್ರೇಷ್ಠ ಸುಖವನ್ನೀಯುವ ಮನೆಯು, ಸಕಲ ಸುಖಗಳನ್ನು ಕೊಡುವಂತೆ, ವಿದ್ವಾಂಸರು ವಿದ್ಯೆ ಮತ್ತು ಶಿಲ್ಪ ಯಜ್ಞಗಳಿಂದ ಸುಖವನ್ನು ಮಾಡುವವರಾಗಲಿ ಎಂದು ತಿಳಿಯಬೇಕು.

ಎಲ್ಲ ಮನುಷ್ಯರು ವಿದ್ವಾಂಸರಿಂದ ಏನೇನನ್ನು ಪಡೆಯಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ದೇವಾನಾಂ ಭದ್ರಾ ಸುಮತಿರ್ಋಜೂಯತಾಂ ದೇವಾನಾಂ ರಾತಿರಭಿ ನೋ ನಿ ವರ್ತತಾಮ್ ।

ದೇವಾನಾಂ ಸಖ್ಯಮುಪ ಸೇದಿಮಾ ವಯಂ ದೇವಾ ನ ಆಯುಃ ಪ್ರ ತಿರಂತು ಜೀವಸೇ ॥೨॥

ಪದಾರ್ಥ:- **[ವಯಮ್]** ನಾವು **[ಋಜೂಯತಾಮ್]** ನಮ್ಮ ಕೋಮಲತ್ವವನ್ನು ಬಯಸುತ್ತಾ **[ದೇವಾನಾಮ್]** ವಿದ್ವಾಂಸರ **[ಭದ್ರಾ]** ಸುಖವನ್ನೀಯುವ **[ಸುಮತಿಃ]** ಶ್ರೇಷ್ಠ ಬುದ್ಧಿ ಅಥವಾ ತಮ್ಮ ನಿರಭಿಮಾನತ್ವವನ್ನು ಬಯಸುವವರು **[ದೇವಾನಾಮ್]** **[ದೇವಾನಾಮ್]** ದಿವ್ಯಗುಣಗಳ **[ರಾತಿಃ]** ವಿದ್ಯೆಯ ದಾನ ಮತ್ತು ತಮ್ಮ ಸರಳತೆಯನ್ನು ಬಯಸುವವರು **[ದೇವಾನಾಮ್]** ದಯೆಯಿಂದ ವಿದ್ಯೆಯನ್ನು ವೃದ್ಧಿಸಲು ಇಚ್ಛಿಸುವವರು, ಆ ವಿದ್ವಾಂಸರಿಗೆ ಸುಖವನ್ನು ಕೊಡುವವರು **[ಸಖ್ಯಮ್]** ಮಿತ್ರತ್ವವು ಈ ಎಲ್ಲವನ್ನು **[ನಃ]** ನಮಗಾಗಿ **[ಅಭಿ ನಿ ವರ್ತತಾಮ್]** ಸದಾ ಸಮ್ಮುಖವಾಗಿರಲಿ ಮತ್ತು ಉಕ್ತ ಸಮಸ್ತ ವ್ಯವಹಾರಗಳನ್ನು **[ಉಪ ಸೇದಿಮ]** ಪ್ರಾಪ್ತಿಯಾಗುವಂತೆ ಮಾಡುವರು. ಮತ್ತು ಮೇಲೆ ಹೇಳಿದ ಯಾವ **[ದೇವಾಃ]** ವಿದ್ವಾಂಸರು **[ನಃ]** ನಮಗೆ **[ಜೀವಸೇ]** ಜೀವನಕ್ಕಾಗಿ **[ಆಯುಃ]** ಆಯಸ್ಸನ್ನು **[ಪ್ರ ತಿರಂತು]** ಉತ್ತಮ ಶಿಕ್ಷಣದಿಂದ ಹೆಚ್ಚಿಸಲಿ.

ಭಾವಾರ್ಥ:- ಉತ್ತಮ ವಿದ್ವಾಂಸರ ಸಂಗ ಮತ್ತು ಬ್ರಹ್ಮಚರ್ಯ ಮೊದಲಾದ ನಿಯಮಗಳ ಹೊರತು ಯಾರದೇ ಶರೀರ ಮತ್ತು ಆತ್ಮದ ಬಲವು ವೃದ್ಧಿಯಾಗುವುದಿಲ್ಲ. ಇದರಿಂದ ಎಲ್ಲರೂ ಇಂತಹ ವಿದ್ವಾಂಸರ ಸಂಗವನ್ನು ಮಾಡಬೇಕು ಮತ್ತು ಜಿತೇಂದ್ರಿಯರಾಗಬೇಕು.

ಮನುಷ್ಯನು ಯಾರಿಂದ ಏನನ್ನು ಪಡೆದು ಯಾವ ಪದಾರ್ಥಗಳಲ್ಲಿ ವಿಶ್ವಾಸವಿಡಬೇಕು ಎಂಬ ಉಪದೇಶವನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ತಾನ್ ಪೂರ್ವಯಾ ನಿವಿದಾ ಹೂಮಹೇ ವಯಂ ಭಗಂ ಮಿತ್ರಮದಿತಿಂ ದಕ್ಷಮಸ್ರಿಧಮ್।

ಅರ್ಯಮಣಂ ವರುಣಂ ಸೋಮಮಶ್ವಿನಾ ಸರಸ್ವತೀ ನಃ ಸುಭಗಾ ಮಯಸ್ಕರತ್ ॥೩॥

ಪದಾರ್ಥ:- ಹೇ ಮನುಷ್ಯರೇ! ಹೇಗೆ **[ವಯಮ್]** ನಾವು **[ಪೂರ್ವಯಾ]** ಸನಾತನ **[ನಿವಿದಾ]** ನಿವಿದಿತಿ ವಾಙ್ನಾಮ (ನಿಘ.೧.೧೧) ವೇದವಾಣಿಯಿಂದ ಎಲ್ಲ ಪ್ರಕಾರರ ಪದಾರ್ಥಗಳನ್ನು ನಿಶ್ಚಿತಗೊಳಿಸಿ ಪ್ರಾಪ್ತಿಮಾಡಿಸುವುದೋ ಅದರಲ್ಲಿ ಹೇಳಿರುವುದೋ ಅಥವಾ ಹೇಳುತ್ತಾರೋ **[ತಾತ್]** ಆ ಎಲ್ಲ ವಿದ್ವಾಂಸರ ಅಥವಾ **[ಅಸ್ರಿಧಮ್]** ಅಹಿಂಸಕವು ಅಂದರೆ ಯಾವುದು ಹಿಂಸೆಯನ್ನು ಮಾಡುವುದಿಲ್ಲವೋ ಅದು **[ಭಗಮ್]** ಐಶ್ವರ್ಯಯುಕ್ತವು **[ಮಿತ್ರಮ್]** ಎಲ್ಲರ ಮಿತ್ರ **[ಅದಿತಿಮ್]** ಸಮಸ್ತ ವಿದ್ಯೆಯ ಪ್ರಕಾಶ **[ದಕ್ಷಮ್]** ಮತ್ತು ಅವುಗಳ ಚತುರತೆಯಿಂದ ಕೂಡಿದ ವಿದ್ವಾಂಸನು **[ಅರ್ಯಮಣಂ]** ನ್ಯಾಯಕಾರಿಯು **[ವರುಣಮ್]** ಉತ್ತಮ ಗುಣಯುಕ್ತ ದುಷ್ಟರನ್ನು ಬಂಧಿಸುವ **[ಸೋಮಮ್]** ಸೃಷ್ಟಿಕ್ರಮದಲ್ಲಿನ ಸಮಸ್ತ ಪದಾರ್ಥಗಳ ಸಾರವನ್ನು ತೆಗೆಯುವವನು

ಮತ್ತು ಶಾಂತಚಿತ್ತನು **[ಅಶ್ವಿನಾ]** ವಿದ್ಯೆಯ ಅಧ್ಯಯನ, ಅಧ್ಯಾಪನ ಮಾಡುವವನು ಅಥವಾ ಜಲ ಮತ್ತು ಅಗ್ನಿಯ ಎರಡೆರಡು ಪದಾರ್ಥಗಳನ್ನು **[ಹೂಮಹೇ]** ಸ್ತುತಿಸುವವನು ಮತ್ತು ಯಾವುದು ಸಂಯೋಜನೆಯಿಂದ ಉತ್ಪನ್ನವಾದ **[ಸರಸ್ವತೀ]** ವಿದ್ಯೆ ಮತ್ತು **[ಸುಭಗಾ]** ಶ್ರೇಷ್ಠ ಶಿಕ್ಷಣದಿಂದ ಯುಕ್ತವಾದ ವಾಣಿಯು **[ನಃ]** ನಮ್ಮನ್ನು **[ಮಯಃ ಕರನ್]** ಸುಖಯುಕ್ತಗೊಳಿಸಲಿ. ಹಾಗೆಯೇ ನೀವು ಕೂಡ ಮಾಡಿರಿ ಮತ್ತು ವಾಣಿಯು ನಿಮಗಾಗಿ ಹಾಗೆಯೇ ಮಾಡಲಿ.

ಭಾವಾರ್ಥ:- ವೇದೋಕ್ತ ಲಕ್ಷಣಗಳನ್ನು ವಿದ್ವಾಂಸನಲ್ಲದೆ ಯಾರಿಗೂ ಮತ್ತು ಮೂರ್ಖರ ಲಕ್ಷಣಗಳನ್ನು ತಿಳಿಯಲಾಗದು. ಮತ್ತು ಅವನ ಹೊರತು ವಿದ್ಯೆ ಮತ್ತು ಶ್ರೇಷ್ಠ ಶಿಕ್ಷಣದಿಂದ ಸಿದ್ಧಿಯಾದ ವಾಣಿಯು ಸುಖವನ್ನೀಯಲಾರದು. ಆದುದರಿಂದ ಎಲ್ಲ ಮನುಷ್ಯರೂ ವೇದಾರ್ಥದ ವಿಶೇಷ ಜ್ಞಾನದಿಂದ ವಿದ್ವಾಂಸ ಮತ್ತು ಮೂರ್ಖನ ಲಕ್ಷಣವನ್ನು ತಿಳಿದು ವಿದ್ವಾಂಸರ ಸಂಗ ಮಾಡಬೇಕು. ಮತ್ತು ಮೂರ್ಖರ ಸಂಗವನ್ನು ಬಿಟ್ಟು ಎಲ್ಲರೂ ವಿದ್ಯಾವಂತರಾಗಬೇಕು.

ಮತ್ತೆ ಅವರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ತನ್ನೋ ವಾತೋ ಮಯೋಭು ವಾತು ಭೇಷಜಂ ತನ್ಮಾತಾ ಪೃಥಿವೀ ತತ್ ಪಿತಾ ದ್ಯೌಃ ।
ತದ್ ಗ್ರಾವಾಣಃ ಸೋಮಸುತೋ ಮಯೋಭುವ-ಸ್ತದಶ್ವಿನಾ ಶೃಣುತಂ ಧಿಷ್ಣ್ಯಾ ಯುವಮ್ ॥೪॥

ಪದಾರ್ಥ:- ಹೇ **[ಧಿಷ್ಣ್ಯಾ]** ಶಿಲ್ಪವಿದ್ಯೆಯ ಉಪದೇಶಕನೇ! ಮತ್ತು **[ಅಶ್ವಿನಾ]** ಓದುವ -ಓದಿಸುವವನೇ! **[ಯುವಮ್]** ನೀವೀರ್ವರೂ **[ಶೃಣುತಂ]** ಕೇಳಿರಿ. **[ತತ್]** ಆ **[ಮಯೋಭು]** ಉತ್ತಮ ಸುಖದಾಯಕವು **[ಭೇಷಜಮ್]** ಎಲ್ಲ ದುಃಖಗಳನ್ನು ನಿವಾರಿಸುವ ಓಷಧಿಯು **[ನಃ]** ನಮಗಾಗಿ **[ವಾತಃ]** ಪವಿತ್ರಗೊಳಿಸುವ ವೈದ್ಯನು **[ವಾತುಃ]** ಪ್ರಾಪ್ತವಾಗಲಿ. ಅಥವಾ **[ಪೃಥಿವೀ]** ವಿಸ್ತಾರಯುಕ್ತ ಭೂಮಿಯು **[ಮಾತಾ]** ಮಾತೆಯ ಸಮಾನ ಮಾನ- ಸಮ್ಮಾನಗಳನ್ನು ಕೊಡುವುದಕ್ಕೆ ಕಾರಣವಾಗಿರುವುದೋ ಅದು **[ತತ್]** ಆ ಮಾನನೀಯವಾದುದು, ಅತ್ಯಂತ ಸುಖವನ್ನೀಯುವುದು ಮತ್ತು ಸಮಸ್ತ ದುಃಖಗಳನ್ನು ನಿವಾರಿಸುವುದೂ ಆದ ಓಷಧಿಯನ್ನು ಪ್ರಾಪ್ತಿಗೊಳಿಸುತ್ತಾ **[ದ್ಯೌಃ]** ಪ್ರಕಾಶಮಯ ಸೂರ್ಯನು **[ಪಿತಾ]** ಪಿತನಂತೆ ರಕ್ಷಣೆಗೆ ಕಾರಣವಾಗಿರುವ ಅವನು **[ತತ್]** ಆ ರಕ್ಷಣೆಯನ್ನು ಮಾಡಲಿ. ಅದರಿಂದ ಸಮಸ್ತ ದುಃಖಗಳ ನಿವೃತ್ತಿ ಮಾಡುವಂತಹ ಓಷಧಿಯನ್ನು ಪ್ರಾಪ್ತಿಗೊಳಿಸಲಿ ಮತ್ತು **[ಸೋಮಸುತಃ]** ಓಷಧಿಗಳ ರಸಗಳನ್ನು ಹಿಂಡಿ ತೆಗೆಯುವುದೂ ಆದ **[ತತ್]** ಆ ಕರ್ಮವೂ ಹಾಗೂ **[ಗ್ರಾವಾಣಃ]** ಮೇಘ ಮೊದಲಾದ ಪದಾರ್ಥಗಳು **[ತತ್]** ಯಾವವುಗಳಿಂದ ರಸವನ್ನು ತೆಗೆಯಲಾಗುವುದೋ ಅವು **[ಮಯೋಭುವಃ]** ಸುಖವನ್ನೀಯುವ ಯಾವ ಪದಾರ್ಥಗಳಿವೆಯೋ ಅವು **[ತತ್]** ಆ ಕ್ರಿಯಾ ಕುಶಲತೆ ಮತ್ತು ಅತ್ಯಂತ ದುಃಖ ನಿವೃತ್ತಿ ಮಾಡುವ ಓಷಧಿಯನ್ನು ಪ್ರಾಪ್ತಿಗೊಳಿಸಲಿ.

ಭಾವಾರ್ಥ:- ಶಿಲ್ಪವಿದ್ಯೆಯನ್ನು ಉನ್ನತಿಗೊಳಿಸುವ ಯಾವ ಓದುವ-ಓದಿಸುವ ವಿದ್ವಾಂಸರಿರುವರೋ, ಅವರು ಎಷ್ಟು ಓದಿ ತಿಳಿದಿದ್ದಾರೋ ಅಷ್ಟನ್ನೂ ಯಥಾರ್ಥವಾಗಿ ಎಲ್ಲರ ಸುಖಕ್ಕಾಗಿ ಪ್ರಕಾಶಗೊಳಿಸಲಿ. ಅದರಿಂದ ನಾವು ಈಶ್ವರನ ಸೃಷ್ಟಿಯ ಪವನ ಮೊದಲಾದ ಪದಾರ್ಥಗಳಿಂದ ಅನೇಕ ಉಪಕಾರಗಳನ್ನು ಪಡೆದು ಸುಖಿಗಳಾಗೋಣ.

ಮನುಷ್ಯರು ಸರ್ವವಿದ್ಯೆಗಳನ್ನು ಪ್ರಕಾಶಪಡಿಸುವ ಜಗದೀಶ್ವರನ ಆಶ್ರಯ, ಸ್ತುತಿ, ಪ್ರಾರ್ಥನೆ ಮತ್ತು ಉಪಾಸನೆ ಮಾಡಿ ಎಲ್ಲ ವಿದ್ಯೆಗಳ ಸಿದ್ಧಿಗಾಗಿ ಅತ್ಯಂತ ಪುರುಷಾರ್ಥ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ತಮೀಶಾನಂ ಜಗತಸ್ತಸ್ಥುಷಸ್ಪತಿಂ ಧಿಯಂಜಿನ್ವಮವಸೇ ಹೂಮಹೇ ವಯಮ್ ।
ಪೂಷಾ ನೋ ಯಥಾ ವೇದಸಾಮಸದ್ ವೃಧೇ ರಕ್ಷಿತಾ ಪಾಯುರದಬ್ಧಃ ಸ್ವಸ್ತಯೇ ॥೫॥

ಪದಾರ್ಥ:- ಹೇ ವಿದ್ವಾಂಸನೇ! **[ಯಥಾ]** ಹೇಗೆ **[ಪೂಷಾ]** ಪುಷ್ಟಿಗೊಳಿಸುವ ಪರಮಾತ್ಮನು **[ನಃ]** ನಮಗೆ **[ವೇದಸಾಮ್]** (ವೇದ ಇತಿ ಧನನಾಮ ನಿಘ.೨.೧೦) ವಿದ್ಯೆ ಮೊದಲಾದ ಧನದ **[ವೃಧೇ]** ವೃದ್ಧಿಗಾಗಿ **[ರಕ್ಷಿತಾ]** ರಕ್ಷಿಸುವವನು **[ಸ್ವಸ್ತಯೇ]** ಸುಖಕ್ಕಾಗಿ **[ಅದಬ್ಧಃ]** ಅಹಿಂಸಕ ಅಂದರೆ ಯಾವುದು ಹಿಂಸೆಯಿಂದ ಪ್ರಾಪ್ತವಾಗುವುದಿಲ್ಲವೋ ಅದು **[ಪೂಷಾ]** ಎಲ್ಲ ಪ್ರಕಾರದ ಪುಷ್ಟಿಗೆ ದಾತನು ಮತ್ತು **[ಪಾಯುಃ]** ಎಲ್ಲ ಪ್ರಕಾರದ್ಧ ಪಾಲನೆ ಮಾಡುವವನು **[ಅಸತ್]** ಆಗಲಿ, ಹಾಗೆಯೇ ನೀನೂ ಆಗು. ಹೇಗೆಂದರೆ **[ವಯಮ್]** ನಾವು **[ಅವಸೇ]** ರಕ್ಷಣೆಗಾಗಿ **[ತಮ್]** ಆ ಸೃಷ್ಟಿಯನ್ನು ಪ್ರಕಾಶ ಪಡಿಸಲು **[ಜಗತಃ]** ಜಂಗಮ ಮತ್ತು **[ತಸ್ಥುಷಃ]** ಸ್ಥಾವರಾತ್ಮಕ ಜಗತ್ತಿನ **[ಈಶಾನಂ]** ಸಮಸ್ತ ಸೃಷ್ಟಿಯ ವಿದ್ಯೆಯ ವಿಧಾನ ಮಾಡುವ ಈಶ್ವರನನ್ನು **[ಹೂಮಹೇ]** ಆಹ್ವಾನಿಸುತ್ತೇವೆ, ಹಾಗೆಯೇ ನೀನೂ ಕೂಡ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಈಶ್ವರನ ಉಪದೇಶಕ್ಕೆ ಅನುಸಾರವಾಗಿ ಮಾನವರು ತಮ್ಮ ವ್ಯವಹಾರವನ್ನು ಮಾಡಬೇಕು. ಮತ್ತು ಈಶ್ವರನು ಹೇಗೆ ಎಲ್ಲರ ಅಧಿಪತಿಯಾಗಿರುವನೋ, ಹಾಗೆಯೇ ಮನುಷ್ಯರೂ ಕೂಡ ಯಾವಾಗಲೂ ಉತ್ತಮ ವಿದ್ಯೆ, ಶುಭಗುಣಗಳ ಪ್ರಾಪ್ತಿ ಮತ್ತು ಉತ್ತಮ ಪುರುಷಾರ್ಥದಿಂದ ಎಲ್ಲರ ಮೇಲೆ ಸ್ವಾಮಿತ್ವವನ್ನು ಸಾಧಿಸಬೇಕು. ಮತ್ತು ಈಶ್ವರನು ವಿಜ್ಞಾನದಿಂದ ಪುರುಷಾರ್ಥಯುಕ್ತ ಎಲ್ಲ ಸುಖಗಳನ್ನು ಕೊಡುವ ಜಗತ್ತಿನ ಉನ್ನತಿ ಮತ್ತು ಎಲ್ಲರ ರಕ್ಷಣೆ ಮಾಡುವ ಎಲ್ಲ ಸುಖಗಳಿಗಾಗಿ ಪ್ರವೃತ್ತನಾಗುವನೋ, ಹಾಗೆಯೇ ಮನುಷ್ಯರಾದ ನೀವೂ ಕೂಡ ಮಾಡಬೇಕು.

ಮತ್ತೆ ಮನುಷ್ಯರು ಯಾವ ರೀತಿ ಈಶ್ವರನ ಪ್ರಾರ್ಥನೆ ಮಾಡಿ ಯಾವುದರ ಇಚ್ಛೆ ಮಾಡಬೇಕು?

ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ ಸ್ವಸ್ತಿ ನಃ ಪೂಷಾ ವಿಶ್ವವೇದಾಃ ।
ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿ ನೋ ಬೃಹಸ್ಪತಿರ್ದಧಾತು ॥೬॥

ಪದಾರ್ಥ:- [ವೃದ್ಧಶ್ರವಾಃ] ಜಗತ್ತಿನಲ್ಲಿ ಯಾವನ ಕೀರ್ತಿ ಅಥವಾ ಅನ್ನ ಮುಂತಾದ ಸಾಮಗ್ರಿಯು ಅತ್ಯುನ್ನತಿಯನ್ನು ಪಡೆಯಿತೋ, ಅಂತಹ **[ಇಂದ್ರಃ]** ಪರಮೇಶ್ವರ್ಯವಂತನಾದ ಪರಮೇಶ್ವರನು [ನಃ] ನಮಗಾಗಿ [ಸ್ವಸ್ತಿ] ಶರೀರದ ಸುಖವನ್ನು **[ದಧಾತು]** ಧಾರಣಗೊಳಿಸಲಿ. **[ವಿಶ್ವವೇದಾಃ]** ಯಾರಿಗೆ ಜಗತ್ತಿನ ವಿಜ್ಞಾನ ಮತ್ತು ಯಾವ ಎಲ್ಲ ಪದಾರ್ಥಗಳ ಸ್ಮರಣೆ ಇದೆಯೋ ಅವನು **[ಪೂಷಾ]** ಪುಷ್ಟಿಗೊಳಿಸುವ ಪರಮೇಶ್ವರನು [ನಃ] ನಮಗಾಗಿ [ಸ್ವಸ್ತಿ] ಧಾತುಗಳ ಸಮತ್ವದ ಸುಖವನ್ನು ಧಾರಣಗೊಳಿಸಲಿ, ಯಾವ **[ಅರಿಷ್ಟನೇಮಿಃ]** ವಜ್ರದಂತೆ ದುಃಖಗಳನ್ನು ನಾಶ ಮಾಡುವವನು ಮತ್ತು **[ತಾರ್ಕ್ಷ್ಯಃ]** ತಿಳಿಯಲು ಯೋಗ್ಯನಾದ ಪರಮೇಶ್ವರನಿರುವನೋ, ಅವನು [ನಃ] ನಮಗಾಗಿ [ಸ್ವಸ್ತಿ] ಇಂದ್ರಿಯಗಳಿಗೆ ಶಾಂತಿ ರೂಪದ ಸುಖವನ್ನು ಧಾರಣಗೊಳಿಸಲಿ ಮತ್ತು ಯಾವ [ಬೃಹಸ್ಪತಿಃ] ವೇದವಾಣಿಯ ಪ್ರಭುವಾದ ಪರಮೇಶ್ವರನಿರುವನೋ, ಅವನು [ನಃ] ನಮಗೆ [ಸ್ವಸ್ತಿ] ವಿದ್ಯೆಯಿಂದ ಆತ್ಮಸುಖವನ್ನು ಧಾರಣ ಮಾಡಿಸಲಿ.

ಭಾವಾರ್ಥ:- ಈಶ್ವರನ ಪ್ರಾರ್ಥನೆ ಮತ್ತು ತನ್ನ ಪುರುಷಾರ್ಥದ ವಿನಾ ಯಾರಿಗೂ ಶರೀರ, ಇಂದ್ರಿಯ ಮತ್ತು ಆತ್ಮದ ಪರಿಪೂರ್ಣ ಸುಖವುಂಟಾಗುವುದಿಲ್ಲ. ಆದುದರಿಂದ ಅದರ ಅನುಷ್ಠಾನವನ್ನು ಅವಶ್ಯವಾಗಿ ಮಾಡಬೇಕು.

ಮತ್ತೆ ಈಶ್ವರನ ಉಪಾಸನೆ ಮಾಡುವ ಮನುಷ್ಯರು ಹೇಗಿರಬೇಕು ಎಂಬುದನ್ನು ಹೇಳಲಾಗಿದೆ.

ಪೃಷದಶ್ವಾ ಮರುತಃ ಪೃಶ್ನಿಮಾತರಃ ಶುಭಂಯಾವಾನೋ ವಿದಥೇಷು ಜಗ್ಮಯಃ ।
ಅಗ್ನಿಜಿಹ್ವಾ ಮನವಃ ಸೂರಚಕ್ಷಸೋ ವಿಶ್ವೇ ನೋ ದೇವಾ ಅವಸಾ ಗಮನ್ನಿಹ ॥೭॥

ಪದಾರ್ಥ:- ಹೇ **[ಶುಭಂಯಾವಾನಃ]** ಶ್ರೇಷ್ಠ ವ್ಯವಹಾರಗಳನ್ನು ಪ್ರಾಪ್ತಿಗೊಳಿಸುವ ಮತ್ತು **[ಅಗ್ನಿಜಿಹ್ವಾಃ]** ಅಗ್ನಿಯನ್ನು ಹವನಯುಕ್ತ ಪಡಿಸುವ **[ಮನವಃ]** ವಿಚಾರಶೀಲ **[ಸೂರಚಕ್ಷಸಃ]** ಯಾರ ಪ್ರಾಣ ಮತ್ತು ಸೂರ್ಯನಲ್ಲಿ ಪ್ರಸಿದ್ಧವಾದ ವಚನ ಮತ್ತು ದರ್ಶನವಿದೆಯೋ **[ಪೃಷದಶ್ವಾಃ]** ಸೇನೆಯಲ್ಲಿ ರಂಗು-ರಂಗಿನಿಂದ ಕೂಡಿದ ಕುದುರೆಗಳುಳ್ಳ ಪುರುಷರು **[ವಿದಥೇಷು]** ಸಂಗ್ರಾಮ ಅಥವಾ ಯಜ್ಞಗಳಲ್ಲಿ **[ಜಗ್ಮಯಃ]** ಭಾಗವಹಿಸುತ್ತಾರೋ, ಅವರು **[ವಿಶ್ವೇ]** ಸಮಸ್ತ **[ದೇವಾಃ]** ವಿದ್ವಾಂಸರು **[ಇಹ]** ಈ ಜಗತ್ತಿನಲ್ಲಿ **[ನಃ]** ನಮಗೆ **[ಅವಸಾ]** ರಕ್ಷಣೆ ಮೊದಲಾದ ವ್ಯವಹಾರಗಳ ಜೊತೆಗೆ **[ಪೃಶ್ನಿಮಾತರಃ]** ಆಕಾಶದಿಂದ ಉತ್ಪನ್ನವಾಗುವ **[ಮರುತಃ]** ಪವನಕ್ಕೆ ಸಮಾನವಾಗಿ **[ಆ ಅಗಮನ್]** ಬಂದು ಪ್ರಾಪ್ತವಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಒಳಗೆ ಮತ್ತು ಹೊರಗೆ ಗಾಳಿಯು ಎಲ್ಲ ಪ್ರಾಣಿಗಳಿಗೂ ಸುಖಕ್ಕಾಗಿ ಪ್ರಾಪ್ತವಾಗುವುದೋ, ಹಾಗೇ ವಿದ್ವಾಂಸರು ಎಲ್ಲರ ಸುಖಕ್ಕಾಗಿ ಪ್ರವೃತ್ತರಾಗಲಿ.

ಮನುಷ್ಯರು ಹಾಗೆ ಮಾಡಿ ಏನೇನನ್ನು ಸಾಧಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಭದ್ರಂ ಕರ್ಣೇಭಿಃ ಶೃಣುಯಾಮ ದೇವಾ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿ-ರ್ವ್ಯಶೇಮ ದೇವಹಿತಂ ಯದಾಯುಃ ॥೮॥

ಪದಾರ್ಥ:- ಹೇ **[ಯಜತ್ರಾ]** ಸಂಗ ಮಾಡಬೇಕಾದಂತಹ **[ದೇವಾಃ]** ವಿದ್ವಾಂಸರೇ! ತಾವು ಜನರ ಸಂಗದಿಂದ **[ತನೂಭಿಃ]** ಹೆಚ್ಚು ಬಲವುಳ್ಳ ಶರೀರ **[ಸ್ಥಿರೈಃ]** ದೃಢವಾದ **[ಅಂಗೈಃ]** ಪುಷ್ಟ, ಶಿರ ಮೊದಲಾದ ಅಂಗಗಳು ಅಥವಾ ಬ್ರಹ್ಮಚರ್ಯೆ ಮೊದಲಾದ ನಿಯಮದಿಂದ **[ತುಷ್ಟುವಾಂಸಃ]** ಪದಾರ್ಥಗಳ ಗುಣಗಳನ್ನು ಸ್ತುತಿಸುವ ನಾವು **[ಕರ್ಣೇಭಿಃ]** ಕಿವಿಗಳಿಂದ **[ಯತ್]** ಯಾವ **[ಭದ್ರಮ್]** ಕಲ್ಯಾಣಕಾರಕವಾದ ಓದುವುದು-ಓದಿಸುವುದಿದೆಯೋ, ಅದನ್ನು **[ಶೃಣುಯಾಮ]** ಕೇಳಿರಿ-ಕೇಳಿಸುವಂತಾಗಲಿ. **[ಅಕ್ಷಭಿಃ]** ಹೊರಗಿನ -ಒಳಗಿನ ಕಣ್ಣುಗಳಿಂದ ಯಾವ **[ಭದ್ರಮ್]** ಶರೀರ ಮತ್ತು ಆತ್ಮದ ಸುಖವಿದೆಯೋ ಅದನ್ನು **[ಪಶ್ಯೇಮ]** ನೋಡುವಂತಾಗಲಿ. ಈ ರೀತಿ ಉಕ್ತ ಶರೀರ ಮತ್ತು ಅಂಗಗಳಿಂದ ಯಾವ **[ದೇವಹಿತಮ್]** ವಿದ್ವಾಂಸರ ಹಿತವನ್ನು ಮಾಡುವ **[ಆಯುಃ]** ಆಯುಷ್ಯ ಇದೆಯೋ ಅದು **[ವಿ ಅಶೇಮ]** ಮತ್ತೆ ಮತ್ತೆ ಪ್ರಾಪ್ತವಾಗಲಿ.

ಭಾವಾರ್ಥ:- ವಿದ್ವಾಂಸರು ಆಪ್ತರು ಮತ್ತು ಸಜ್ಜನರ ಸಂಗದ ಹೊರತು ಯಾವನೂ ಸತ್ಯವಿದ್ಯೆಯ ವಚನ ಸತ್ಯದರ್ಶನ ಮತ್ತು ಸತ್ಯ ವ್ಯವಹಾರಮಯ ಅವಸ್ಥೆಯನ್ನು ಪಡೆಯಲಾರನು. ಮತ್ತು ಇವುಗಳ ಹೊರತು ಶರೀರ ಮತ್ತು ಆತ್ಮವು ದೃಢವಾಗುವುದಿಲ್ಲ. ಆದುದರಿಂದ ಎಲ್ಲ ಮಾನವರೂ ಈ ಉಕ್ತ ವ್ಯವಹಾರದಲ್ಲಿ ವರ್ತಿಸಲು ಯೋಗ್ಯವಾಗಿದೆ.

ಮತ್ತೆ ವಿದ್ವಾಂಸರು ವಿದ್ಯಾರ್ಥಿಗಳ ಜೊತೆಗೆ ಹೇಗೆ ವರ್ತಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಶತಮಿನ್ನು ಶರದೋ ಅಂತಿ ದೇವಾ ಯತ್ರಾ ನಶ್ಚಕ್ರಾ ಜರಸಂ ತನೂನಾಮ್ ।
ಪುತ್ರಾಸೋ ಯತ್ರ ಪಿತರೋ ಭವಂತಿ ಮಾ ನೋ ಮಧ್ಯಾ ರೀರಿಷತಾಯುರ್ಗಂತೋಃ ॥೯॥

ಪದಾರ್ಥ:- ಹೇ **[ಅಂತಿ]** ವಿದ್ಯೆ ಮೊದಲಾದ ಸುಖಸಾಧನಗಳಿಂದ ಜೀವಿಸುವ **[ದೇವಾಃ]** ವಿದ್ವಾಂಸರೇ! ನೀವು **[ಯತ್ರ]** ಯಾವ ಸತ್ಯ ವ್ಯವಹಾರಗಳಲ್ಲಿ **[ತನೂನಾಮ್]** ತಮ್ಮ ಶರೀರಗಳನ್ನು **[ಶತಮ್]** ನೂರು **[ಶರದಃ]** ವರ್ಷ **[ಜರಸಂ]** ವೃದ್ಧಾವಸ್ಥೆಯ **[ಚಕ್ರ]** ವ್ಯತೀತಗೊಳಿಸಲು **[ಯತ್ರ]** ಎಲ್ಲಿ **[ನಃ]** ನಮ್ಮ **[ಮಧ್ಯಾ]** ಮಧ್ಯದಲ್ಲಿ **[ಪುತ್ರಾಸಃ]** ಪುತ್ರರು **[ಇತ್]** ಮಾತ್ರವೇ **[ಪಿತರಃ]** ಆಯುಸ್ಸು ಮತ್ತು ವಿದ್ಯೆಯಿಂದ ಯುಕ್ತರಾದ ವೃದ್ಧರು **[ನು]** ನಮ್ಮನ್ನು ಶೀಘ್ರವಾಗಿ **[ಮಾ ರೀರಿಷತ]** ನಷ್ಟಗೊಳಿಸಬೇಡಿ.

ಭಾವಾರ್ಥ:- ಯಾವ ವಿದ್ಯೆಯಿಂದ ಬಾಲಕನು ವೃದ್ಧನಾಗುವನೋ ಅಥವಾ ಯಾವ ಶುಭ ಆಚರಣೆಯಿಂದ ವೃದ್ಧಾವಸ್ಥೆಯುಂಟಾಗುತ್ತದೋ, ಆ ಎಲ್ಲ ವ್ಯವಹಾರಗಳು ವಿದ್ವಾಂಸರ ಸಂಗದಿಂದಲೇ ಉಂಟಾಗುತ್ತದೆ. ಮತ್ತು ವಿದ್ವಾಂಸರು ಈ ಉಕ್ತ ವ್ಯವಹಾರವು ಎಲ್ಲರಿಗೂ ಪ್ರಾಪ್ತವಾಗುವಂತೆ ಮಾಡಬೇಕು.

ಈಗ ವಿದ್ವಾಂಸರ ಸಂಗದಿಂದ ಏನೇನನ್ನು ಸೇವಿಸಬೇಕು ಮತ್ತು ತಿಳಿಯಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಅದಿತಿರ್ದ್ಯೌರದಿತಿರಂತರಿಕ್ಷ-ಮದಿತಿರ್ಮಾತಾ ಸ ಪಿತಾ ಸ ಪುತ್ರಃ ।
ವಿಶ್ವೇ ದೇವಾ ಅದಿತಿಃ ಪಂಚ ಜನಾ ಅದಿತಿರ್ಜಾತಮದಿತಿರ್ಜನಿತ್ವಮ್ ॥೧೦॥

ಪದಾರ್ಥ:- ಮಾನವರೇ! **[ದ್ಯೌಃ]** ಪ್ರಕಾಶಯುಕ್ತ ಪರಮೇಶ್ವರನು ಅಥವಾ ಸೂರ್ಯ ಮೊದಲಾದ ಪ್ರಕಾಶಯುಕ್ತ ಪದಾರ್ಥಗಳು **[ಅದಿತಿಃ]** ಅವಿನಾಶಿಯು, **[ಅಂತರಿಕ್ಷ]** ಆಕಾಶವು **[ಅದಿತಿಃ]** ಅವಿನಾಶಿಯು, **[ಮಾತಾ]** ಮಾತೆ ಅಥವಾ ವಿದ್ಯೆಯು **[ಅದಿತಿಃ]** ಅವಿನಾಶಿಯು, **[ಸಃ]** ಆ **[ಪಿತಾ]** ಉತ್ಪನ್ನ ಮಾಡುವ ಅಥವಾ ಪಾಲಿಸುವ ಪಿತನು **[ಸಃ]** ಆ **[ಪುತ್ರಃ]** ಔರಸನು ಅಂದರೆ ನಿಜವಿವಾಹಿತ ಪುರುಷನಿಂದ ಉತ್ಪನ್ನನಾದವನು ಅಥವಾ ಕ್ಷೇತ್ರಜನು ಅಂದರೆ ನಿಯೋಗದಿಂದ ಎರಡನೆಯವರಿಂದ ಕ್ಷೇತ್ರದಲ್ಲಿ ಉತ್ಪನ್ನನಾದವನು, ವಿದ್ಯೆಯಿಂದ ಉತ್ಪನ್ನನಾದ ಪುತ್ರನು **[ಅದಿತಿಃ]** ಅವಿನಾಶಿಯು. ಹಾಗೆಯೇ **[ವಿಶ್ವೇ]** ಸಮಸ್ತ **[ದೇವಾಃ]** ವಿದ್ವಾಂಸರು ಅಥವಾ ದಿವ್ಯಗುಣವುಳ್ಳ ಪದಾರ್ಥಗಳು **[ಅದಿತಿಃ]** ಅವಿನಾಶಿಯಾಗಿವೆ. **[ಪಂಚ]** ಪಂಚ ಜ್ಞಾನೇಂದ್ರಿಯಗಳು ಮತ್ತು **[ಜನಾಃ]** ಜೀವರೂ ಕೂಡ **[ಅದಿತಿಃ]** ಅವಿನಾಶಿಯಾಗಿರುವರು. ಈ ರೀತಿಯಾದ **[ಜಾತಮ್]** ಉತ್ಪನ್ನವಾಗಿರುವ ಮತ್ತು **[ಜನಿತ್ವಮ್]** ಉತ್ಪನ್ನವಾಗುವ ಆ ಎಲ್ಲವೂ **[ಅದಿತಿಃ]** ಅವಿನಾಶಿಗಳು ಅಂದರೆ ನಿತ್ಯವಾಗಿವೆ.

ಭಾವಾರ್ಥ:- ಈ ಮಂತ್ರದಲ್ಲಿ ಪರಮಾಣು ರೂಪ ಅಥವಾ ಪ್ರವಾಹರೂಪದಿಂದ ಎಲ್ಲ ಪದಾರ್ಥಗಳೂ ನಿತ್ಯವೆಂದು ಒಪ್ಪಿ 'ದಿವ' ಮೊದಲಾದ ಪದಾರ್ಥಗಳಿಗೆ ಅದಿತಿ ಸಂಜ್ಞೆ ಮಾಡಿದೆ. ಎಲ್ಲೆಲ್ಲಿ ವೇದಗಳಲ್ಲಿ ಅದಿತಿ ಶಬ್ದವು ಬಂದಿರುವುದೋ ಅಲ್ಲಲ್ಲಿ ಪ್ರಕರಣ ಅನುಸಾರ 'ದಿವ್' ಮೊದಲಾದ ಪದಾರ್ಥಗಳಲ್ಲಿ ಯಾವು ಯಾವುದಕ್ಕೆ ಯೋಗ್ಯತೆಯಿದೆಯೋ ಅವವುಗಳನ್ನು ಗ್ರಹಣ ಮಾಡಬೇಕು. ಈಶ್ವರ, ಜೀವ, ಮತ್ತು ಪ್ರಕೃತಿ ಅಂದರೆ ಜಗತ್ತಿನ ಕಾರಣವು. ಇವುಗಳು ಅವಿನಾಶಿಯಾಗಿರುವುದರಿಂದ ಅವುಗಳಿಗೂ ಕೂಡ ಅದಿತಿ ಸಂಜ್ಞೆಯು ಇದೆ.

ಈ ಸೂಕ್ತದಲ್ಲಿ ವಿದ್ವಾಂಸರು, ವಿದ್ಯಾರ್ಥಿಗಳು ಮತ್ತು ಪ್ರಕಾಶಮಯವಾದ ಪದಾರ್ಥಗಳ ವಿಶ್ವೇದೇವ ಪದದ ಅಂತರ್ಗತವಾಗುವುದರಿಂದ ವರ್ಣನೆ ಮಾಡಿದೆ. ಈ ಸೂಕ್ತದ ಅರ್ಥಕ್ಕೂ ಹಿಂದಿನ ಸೂಕ್ತದ ಅರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಎಂಬತ್ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೯೦

ಮಂತ್ರಸಂಖ್ಯೆ ೯ । ಋಷಿಃ - ಗೋತಮೋ ರಾಹೂಗಣಃ । ದೇವತಾ - ವಿಶ್ವೇದೇವಾಃ । ಛಂದಃ - ಗಾಯತ್ರೀಃ
೯ ಅನುಷ್ಟುಪ್ । ಸ್ವರಃ - ೯ ಗಾಂಧಾರಃ, ಷಡ್ಜಃ.

ಮತ್ತೆ ವಿದ್ವಾಂಸರು ಮನುಷ್ಯರೊಂದಿಗೆ ಹೇಗೆ ವರ್ತಿಸಬೇಕು ಎಂಬ ಉಪದೇಶ ಮಾಡಿದೆ.

ಋಜುನೀತೀ ನೋ ವರುಣೋ ಮಿತ್ರೋ ನಯತು ವಿದ್ವಾನ್ ।
ಅರ್ಯಮಾ ದೇವೈಃ ಸಜೋಷಾಃ ॥೧॥

ಪದಾರ್ಥ:- ಪರಮೇಶ್ವರನು ಧಾರ್ಮಿಕರಾದ ಮನುಷ್ಯರಿಗೆ ಧರ್ಮವನ್ನು ಪ್ರಾಪ್ತಿಗೊಳಿಸುವಂತೆ **[ದೇವೈಃ]** ದಿವ್ಯಗುಣ-ಕರ್ಮ-ಸ್ವಭಾವವುಳ್ಳ ವಿದ್ವಾಂಸರಿಂದ **[ಸಜೋಷಾಃ]** ಸಮಾನ ಪ್ರೀತಿ ಇರುವ **[ವರುಣಃ]** ಶ್ರೇಷ್ಠ ಗುಣಗಳಲ್ಲಿ ವರ್ತಿಸುವ **[ಮಿತ್ರಃ]** ಎಲ್ಲರ ಉಪಕಾರಿ ಮತ್ತು **[ಅರ್ಯಮಾ]** ನ್ಯಾಯಕಾರಿಯು **[ವಿದ್ವಾನ್]** ಧರ್ಮಾತ್ಮನಾದ ಸಜ್ಜನ ವಿದ್ವಾಂಸನು **[ಋಜುನೀತೀ]** ಸತ್ಯನೀತಿಯಿಂದ **[ನಃ]** ನಮಗೆ ಧರ್ಮವಿದ್ಯಾಮಾರ್ಗಗಳನ್ನು **[ನಯತು]** ಪ್ರಾಪ್ತಗೊಳಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪರಮೇಶ್ವರ ಅಥವಾ ಆಪ್ತ ಪುರುಷನು ಸತ್ಯವಿದ್ಯೆಯ ಗ್ರಾಹಕ ಸ್ವಭಾವವುಳ್ಳ ಪುರುಷಾರ್ಥಿಗಳಾದ ಮನುಷ್ಯರಿಗೆ ಉತ್ತಮ ಧರ್ಮ ಮತ್ತು ಉತ್ತಮ ಕ್ರಿಯೆಗಳನ್ನು ಪ್ರಾಪ್ತಗೊಳಿಸುತ್ತಾನೆ, ಇತರೆಯವರಿಗಲ್ಲ.

ಮತ್ತೆ ವಿದ್ವಾಂಸರು ಹೇಗಿದ್ದು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ತೇ ಹಿ ವಸ್ವೋ ವಸವಾನಾಸ್ತೇ ಅಪ್ರಮೂರಾ ಮಹೋಭಿಃ । ವ್ರತಾ ರಕ್ಷಂತೇ ವಿಶ್ವಾಹಾ ॥೨॥

ಪದಾರ್ಥ:- **[ತೇ]** ಆ ಪೂರ್ವೋಕ್ತ ವಿದ್ವಾಂಸರು **[ವಸವಾನಾ]** ತಮ್ಮ ಗುಣಗಳಿಂದ ಇತರರನ್ನೇ ಆಚ್ಛಾದಿಸುತ್ತಾ **[ಹಿ]** ನಿಶ್ಚಯವಾಗಿ **[ಮಹೋಭಿಃ]** ಪ್ರಶಂಸನೀಯ ಗುಣ ಮತ್ತು ಕರ್ಮಗಳಿಂದ **[ವಿಶ್ವಾಹಾ]** ಎಲ್ಲ ದಿನಗಳಲ್ಲೂ **[ವಸ್ವಃ]** ಧನ ಮೊದಲಾದ ಪದಾರ್ಥಗಳ **[ರಕ್ಷಂತೇ]** ರಕ್ಷಣೆ ಮಾಡುತ್ತಾರೆ. ಹಾಗೂ ಯಾವ **[ಅಪ್ರಮೂರಾಃ]** ಮೂಢತ್ವ ರಹಿತ ಧಾರ್ಮಿಕ ವಿದ್ವಾಂಸರಿರುವರೋ, **[ತೇ]** ಅವರು ಆ ಪ್ರಶಂಸನೀಯ ಗುಣಕರ್ಮಗಳಿಂದ ಎಲ್ಲ ದಿನಗಳಲ್ಲೂ **[ವ್ರತಾ]** ಸತ್ಯಪಾಲನೆ ಮೊದಲಾದ ನಿಯಮಗಳನ್ನು ಪಾಲಿಸುವರು.

ಭಾವಾರ್ಥ:- ವಿದ್ವಾಂಸರಲ್ಲದ ಇತರರು ಯಾರೂ ಧನ ಮತ್ತು ಧರ್ಮಯುಕ್ತ ಆಚಾರವನ್ನಿಟ್ಟುಕೊಳ್ಳಲಾರರು. ಆದುದರಿಂದ ಎಲ್ಲ ಮನುಷ್ಯರೂ ನಿತ್ಯವೂ ವಿದ್ಯೆಯನ್ನು ಪ್ರಕಾಶಗೊಳಿಸಬೇಕು. ಅದರಿಂದ ಎಲ್ಲ ಮನುಷ್ಯರೂ ವಿದ್ವಾಂಸರಾಗಿ ಧಾರ್ಮಿಕರಾಗುವರು.

ಮತ್ತೆ ಅವರು ಹೇಗಿರಬೇಕು ಮತ್ತು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ತೇ ಅಸ್ಮಭ್ಯಂ ಶರ್ಮ ಯಂಸ-ನ್ನಮೃತಾ ಮರ್ತ್ಯೇಭ್ಯಃ । ಬಾಧಮಾನಾ ಅಪ ದ್ವಿಷಃ ॥೩॥

ಪದಾರ್ಥ:- ಯಾವ **[ದ್ವಿಷಃ]** ದುಷ್ಟರನ್ನು **[ಅಪ ಬಾಧಮಾನಾಃ]** ದುರ್ಗತಿಯ ಜೊತೆಗೆ ನಿವಾರಣೆ ಮಾಡುತ್ತಾ **[ಅಮೃತಾಃ]** ಜೀವನ್ಮುಕ್ತ ವಿದ್ವಾಂಸರು **[ತೇ]** ಅವರು **[ಮರ್ತ್ಯೇಭ್ಯಃ ಅಸ್ಮಭ್ಯಮ್]** ಅಸ್ಮದಾದಿ ಮನುಷ್ಯರಿಗಾಗಿ **[ಶರ್ಮ]** ಸುಖವನ್ನು **[ಯಂಸನ್]** ಕೊಡಲಿ.

ಭಾವಾರ್ಥ:- ಮಾನವರೆಲ್ಲರೂ ವಿದ್ವಾಂಸರಿಂದ ಶಿಕ್ಷಣವನ್ನು ಪಡೆದು, ಸ್ವಾರ್ಥಿಗಳು ಮತ್ತು ಕಪಟ ಸ್ವಭಾವವುಳ್ಳವರನ್ನು ದೂರೀಕರಿಸಿ, ನಿತ್ಯ ಆನಂದಿತರಾಗಬೇಕು.

ಮತ್ತೆ ವಿದ್ವಾಂಸರು ಮನುಷ್ಯರಲ್ಲಿ ಹೇಗೆ ವರ್ತಿಸಬೇಕು ಎಂಬ ಉಪದೇಶ ಮಾಡಿದೆ.

ವಿ ನಃ ಪಥಃ ಸುವಿತಾಯ ಚಿಯಂತ್ವಿಂದ್ರೋ ಮರುತಃ । ಪೂಷಾ ಭಗೋ ವಂದ್ಯಾಸಃ ॥೪॥

ಪದಾರ್ಥ:- **[ಇಂದ್ರಃ]** ವಿದ್ಯೆ ಮತ್ತು ಐಶ್ವರ್ಯದಿಂದ ಕೂಡಿದ, ಅಥವಾ **[ಪೂಷಾ]** ಇತರರನ್ನು ಪೋಷಣೆ ಮಾಡುವ **[ಭಗಃ]** ಮತ್ತು ಉತ್ತಮ ಭಾಗ್ಯಶಾಲಿಯು **[ವಂಧ್ಯಾಸಃ]** ಸ್ತುತಿ ಮತ್ತು ಸತ್ಕಾರ ಮಾಡಲು ಯೋಗ್ಯ **[ಮರುತಃ]** ಮನುಷ್ಯರು, ಅವರು **[ನಃ]** ನಮಗೆ **[ಸುವಿತಾಯ]** ಐಶ್ವರ್ಯದ ಪ್ರಾಪ್ತಿಗಾಗಿ **[ಪಥಃ]** ಉತ್ತಮಮಾರ್ಗಗಳನ್ನು **[ವಿ ಚಿಯಂತು]** ನಿಯತಗೊಳಿಸಲಿ.

ಭಾವಾರ್ಥ:- ಮನುಷ್ಯರು ವಿದ್ವಾಂಸರಿಂದ ಐಶ್ವರ್ಯ ಪುಷ್ಟಿ ಮತ್ತು ಸೌಭಾಗ್ಯವನ್ನು ಪಡೆದು ಆ ಸೌಭಾಗ್ಯದ ಯೋಗ್ಯತೆಯನ್ನು ಇತರರಿಗೂ ಪ್ರಾಪ್ತಿ ಮಾಡಿಸಬೇಕು.

ಮತ್ತೆ ಅವರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಉತ ನೋ ಧಿಯೋ ಗೋಅಗ್ರಾಃ ಪೂಷನ್ ವಿಷ್ಣವೇವಯಾವಃ । ಕರ್ತಾ ನಃ ಸ್ವಸ್ತಿಮತಃ ॥೫॥

ಪದಾರ್ಥ:- ಹೇ **[ಪೂಷನ್]** ವಿದ್ಯೆ ಮತ್ತು ಉತ್ತಮ ಶಿಕ್ಷಣದಿಂದ ಪೋಷಣೆ ಮಾಡುವ ಅಥವಾ **[ವಿಷ್ಣೋ]** ಸಮಸ್ತ ವಿದ್ಯೆಗಳಲ್ಲಿ ವ್ಯಾಪಕವಾಗಿರುವ **[ಏವ ಯಾವಃ]** ಅಥವಾ ಯಾವುದರಿಂದ ಸರ್ವ ವ್ಯವಹಾರಗಳನ್ನು ಆ ಅಗಾಧ ಬೋಧೆಗಳನ್ನು ಪ್ರಾಪ್ತಿ ಮಾಡಿಕೊಳ್ಳುವ ವಿದ್ವಾಂಸರೇ! ನೀವು **[ನಃ]** ನಮಗಾಗಿ **[ಗೋ ಅಗ್ರಾಃ]** ಯಾವನಲ್ಲಿ ಇಂದ್ರಿಯಗಳು ಅಗ್ರಗಾಮಿಯಾಗಿವೆಯೋ, ಅವನ **[ಧಿಯಃ]** ಉತ್ತಮ ಬುದ್ಧಿ ಮತ್ತು ಕರ್ಮಗಳಿಂದ **[ಕರ್ತ]** ಪ್ರಸಿದ್ಧಿಗೊಳಿಸಿರಿ. **[ಉತ]** ನಂತರ **[ನಃ]** ನಮ್ಮನ್ನು **[ಸ್ವಸ್ತಿಮತಃ]** ಸುಖಯುಕ್ತರನ್ನಾಗಿ ಮಾಡಿರಿ.

ಭಾವಾರ್ಥ:- ವಿದ್ವಾಂಸರು ಹೇಗೆ ಶಿಕ್ಷಣವನ್ನೀಯುವರೋ, ಹಾಗೆ ವಿದ್ಯಾರ್ಥಿಗಳೂ ಯಥಾವಿಧಿಯಾಗಿ ಗ್ರಹಿಸಿ, ಉತ್ತಮ ವಿಚಾರಗಳಿಂದ ನಿತ್ಯವೂ ಅವುಗಳ ಉನ್ನತಿಯನ್ನು ಸಾಧಿಸಬೇಕು.

ವಿದ್ಯೆಯಿಂದ ಏನು ಉತ್ಪನ್ನವಾಗುವುದು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಮಧು ವಾತಾ ಋತಾಯತೇ ಮಧು ಕ್ಷರಂತಿ ಸಿಂಧವಃ । ಮಾಧ್ವೀರ್ನಃ ಸಂತ್ವೋಷಧೀಃ ॥೬॥

ಪದಾರ್ಥ:- ಹೇ ಪೂರ್ಣವಿದ್ಯಾವಂತರಾದ ವಿದ್ವಾಂಸರೇ! ಹೇಗೆ ನಿಮಗಾಗಿ ಮತ್ತು **[ಋತಾಯತೇ]** ನಮಗೂ ಸತ್ಯದ ವ್ಯವಹಾರವನ್ನು ಬಯಸುವ ಪುರುಷರಿಗೂ **[ವಾತಾಃ]** ವಾಯುವು **[ಮಧು]** ಮಧುರತೆ ಮತ್ತು **[ಸಿಂಧವಃ]** ಸಮುದ್ರ ಅಥವಾ ನದಿಗಳು **[ಮಧು]** ಮಧುರ ಗುಣಗಳನ್ನು **[ಕ್ಷರಂತಿ]** ವರ್ಷಿಸುತ್ತವೆಯೋ, ಹಾಗೆ **[ನಃ]** ನಮಗಾಗಿ **[ಓಷಧೀಃ]** ಸೋಮಲತೆ ಮೊದಲಾದ ಓಷಧಿಗಳು **[ಮಧ್ವೀಃ]** ಮಧುರ ಗುಣಗಳ ವಿಶೇಷ ಜ್ಞಾನವನ್ನುಂಟು ಮಾಡುವವು **[ಸಂತು]** ಆಗಲಿ.

ಭಾವಾರ್ಥ:- ಹೇ ವಿದ್ವಾಂಸರೇ! ನೀವು ಮತ್ತು ನಾವು ಯಾವುದರಿಂದ ಸೃಷ್ಟಿಯಲ್ಲಿನ ಸಮಸ್ತ ಪದಾರ್ಥಗಳ ಸಮಗ್ರ ಆನಂದಕ್ಕಾಗಿ ವಿದ್ಯೆಯನ್ನು ಆರ್ಜಿಸಿ ಉಪಕಾರಗಳನ್ನು ಪಡೆಯಬಹುದೋ, ಅಂತಹ ಉತ್ತಮ ಪ್ರಯತ್ನವನ್ನು ಮಾಡೋಣ.

ಮತ್ತೆ ನಾವು ಯಾವುದಕ್ಕಾಗಿ ಯಾವ ಪುರುಷಾರ್ಥವನ್ನು ಮಾಡಬೇಕು ಎಂಬುದನ್ನು ಹೇಳಲಾಗಿದೆ.

ಮಧು ನಕ್ತಮುತೋಷಸೋ ಮಧುಮತ್ ಪಾರ್ಥಿವಂ ರಜಃ ।
ಮಧು ದ್ಯೌರಸ್ತು ನಃ ಪಿತಾ ॥೭॥

ಪದಾರ್ಥ:- ಹೇ ವಿದ್ವಾಂಸರೇ! ಹೇಗೆ **[ನಃ]** ನಮಗಾಗಿ **[ನಕ್ತಮ್]** ರಾತ್ರಿಯು **[ಮಧು]** ಮಧುರವು **[ಉಷಸಃ]** ಮಧುರ ಗುಣವುಳ್ಳ ದಿನವು **[ಪಾರ್ಥಿವಮ್]** ಪೃಥಿವಿಯಲ್ಲಿ **[ರಜಃ]** ಅಣು ಮತ್ತು ತ್ರಸರೇಣು ಮೊದಲಾದ ಸಣ್ಣ ಸಣ್ಣ ಭೂಮಿಯ ಕಣಗಳ **[ಮಧುಮತ್]** ಮಧುರ ಗುಣದಿಂದ ಕೂಡಿ ಸುಖಪಡಿಸುವವು **[ಉತ]** ಮತ್ತು **[ಪಿತಾ]** ಪಾಲಿಸುವಂತಹ **[ದ್ಯೌಃ]** ಸೂರ್ಯನ ಕಾಂತಿಯು **[ಮಧು]** ಮಧುರ ಗುಣವುಳ್ಳವು **[ಅಸ್ತು]** ಆಗಲಿ. ಹಾಗೆಯೇ ನೀವೂ ಕೂಡ ಆಗಿರಿ.

ಭಾವಾರ್ಥ:- ಓದಿಸುವವರಿಂದ, ಪೃಥಿವಿಯಲ್ಲಿನ ಪದಾರ್ಥಗಳು ಮಾನವರಿಗೆ ಹೇಗೆ ಆನಂದದಾಯಕವಾಗುವುವೋ, ಹಾಗೆ ಎಲ್ಲ ಮನುಷ್ಯರು ಗುಣ, ಜ್ಞಾನ ಮತ್ತು ಕರಕುಶಲತೆಗಳಿಂದ ವಿದ್ಯೆಯ ಉಪಯೋಗವನ್ನು ಮಾಡಿಕೊಳ್ಳಬೇಕು.

ಮತ್ತೆ ನಾವು ಯಾವುದಕ್ಕಾಗಿ ವಿದ್ಯೆಯ ಅನುಷ್ಠಾನವನ್ನು ಮಾಡಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಮಧುಮಾನ್ನೋ ವನಸ್ಪತಿ-ರ್ಮಧುಮಾँ ಅಸ್ತು ಸೂರ್ಯಃ । ಮಾಧ್ವೀರ್ಗಾವೋ ಭವಂತು ನಃ ॥೮॥

ಪದಾರ್ಥ:- ಹೇ ವಿದ್ವಾಂಸರೇ! ಹೇಗೆ **[ನಃ]** ನಮಗಾಗಿ **[ಮಧುಮಾನ್]** ಯಾವುದಲ್ಲಿ ಮಧುರ ಸುಖವಿದೆಯೋ ಹಾಗೆ **[ವನಸ್ಪತಿ]** ವನಗಳಲ್ಲಿ ರಕ್ಷಣೆಗೆ ಯೋಗ್ಯವಾದ ವಟ ಮೊದಲಾದ ವೃಕ್ಷಗಳ ಸಮೂಹವು ಅಥವಾ ಮೇಘ ಮತ್ತು **[ಸೂರ್ಯಃ]** ಬ್ರಹ್ಮಾಂಡದಲ್ಲಿ ಸ್ಥಿರವಾಗುವ ಸೂರ್ಯನು ಅಥವಾ ಶರೀರದಲ್ಲಿರುವ ಪ್ರಾಣವು **[ಮಧುಮಾನ್]** ಯಾವುಗಳಲ್ಲಿ ಮಧುರ ಗುಣದ ಪ್ರಕಾಶವಿದೆಯೋ ಅಂತಹವು **[ಅಸ್ತು]** ಆಗಲಿ ಹಾಗೂ **[ನಃ]** ನಮ್ಮ ಮನುಷ್ಯರ ಹಿತಕ್ಕಾಗಿ **[ಗಾವಃ]** ಸೂರ್ಯ ಕಿರಣಗಳು **[ಮಾಧ್ವೀಃ]** ಮಧುರ ಗುಣವುಳ್ಳವು **[ಭವಂತು]** ಆಗಲಿ. ಹಾಗೆಯೇ ನೀವು ನಮಗೆ ಶಿಕ್ಷಣವನ್ನು ಕೊಡಿರಿ.

ಭಾವಾರ್ಥ:- ಹೇ ವಿದ್ವಾಂಸರೇ! ಬನ್ನಿರಿ ನೀವು ಮತ್ತು ನಾವು ಸೇರಿ ಉತ್ತಮ ಪುರುಷಾರ್ಥ ಮಾಡೋಣ. ಅದರಿಂದ ನಮಗೆ ಎಲ್ಲ ಕಾಮನೆಗಳೂ ಸಿದ್ಧಿಸಲಿ.

ಮತ್ತೆ ಈಶ್ವರನು ಮತ್ತು ವಿದ್ವಾಂಸರು ಮನುಷ್ಯರಿಗಾಗಿ ಏನೇನು ಮಾಡುತ್ತಾರೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಶಂ ನೋ ಮಿತ್ರಃ ಶಂ ವರುಣಃ ಶಂ ನೋ ಭವತ್ವರ್ಯಮಾ ।
ಶಂ ನ ಇಂದ್ರೋ ಬೃಹಸ್ಪತಿಃ ಶಂ ನೋ ವಿಷ್ಣುರುರುಕ್ರಮಃ ॥೯॥

ಪದಾರ್ಥ:- ಹೇ ಮನುಷ್ಯರೇ! ಹೇಗೆ ನಮಗಾಗಿ **[ಉರುಕ್ರಮಃ]** ಯಾವನಲ್ಲಿ ಬಹಳ ಪರಾಕ್ರಮವಿದೆಯೋ ಅವನು **[ಮಿತ್ರಃ]** ಎಲ್ಲರನ್ನು ಸುಖಪಡಿಸುವವನು **[ನಃ]** ನಮಗಾಗಿ **[ಶಮ್]** ಸುಖಕಾರೀ ಅಥವಾ ಪರಾಕ್ರಮವಿದೆಯೋ ಅವನು (ಶಾಂತಿಪ್ರದನು) **[ವರುಣಃ]** ಎಲ್ಲರಲ್ಲಿ ಅತಿ ಉನ್ನತಿಯುಳ್ಳವನು, ನಮಗಾಗಿ **[ಶಮ್]** ಶಾಂತಿಸುಖವನ್ನು ಕೊಡುವವನು ಅಥವಾ ಯಾವನಲ್ಲಿ ಬಹಳ ಪರಾಕ್ರಮವಿದೆಯೋ ಅವನು **[ಅರ್ಯ್ಯಮಾ]** ನ್ಯಾಯ ಮಾಡುವವನು **[ನಃ]** ನಮಗೆ **[ಶಮ್]** ಆರೋಗ್ಯ ಸುಖವನ್ನು ಕೊಡುವವನು, ಯಾವನಲ್ಲಿ ಬಹಳ ಪರಾಕ್ರಮವಿದೆಯೋ ಅವನು, **[ಬೃಹಸ್ಪತಿಃ]** ಮಹತ್ತಾದ ವೇದವಿದ್ಯೆಯನ್ನು ಪಾಲಿಸುವವನು, ಅಥವಾ ಯಾವನಲ್ಲಿ ಬಹಳ ಪರಾಕ್ರಮವಿದೆಯೋ ಅವನು **[ಇಂದ್ರಃ]** ಪರಮೈಶ್ವರ್ಯವನ್ನು ಕೊಡುವವನು **[ನಃ]** ನಮಗಾಗಿ **[ಶಮ್]** ಐಶ್ವರ್ಯದ ಸುಖಕಾರಿಯು, ಅಥವಾ ಯಾವನಲ್ಲಿ ಬಹಳ ಪರಾಕ್ರಮವಿದೆಯೋ ಅವನು **[ವಿಷ್ಣುಃ]** ಎಲ್ಲ ಗುಣಗಳಲ್ಲಿ ವ್ಯಾಪ್ತನಾಗುವ ಪರಮೇಶ್ವರನು ಹಾಗೂ ಉಕ್ತಗುಣಗಳುಳ್ಳ ವಿದ್ವಾಂಸನಾದ ಸಜ್ಜನ ಪುರುಷನು **[ನಃ]** ನಮಗಾಗಿ ಪೂರ್ವೋಕ್ತ ಸುಖ ಮತ್ತು **[ಶಮ್]** ವಿದ್ಯಾ ಸುಖವನ್ನೀಯುವವನು **[ಭವತು]** ಆಗಲಿ.

ಭಾವಾರ್ಥ:- ಪರಮೇಶ್ವರನಿಗೆ ಸಮಾನನಾದ ಮಿತ್ರನು, ಉತ್ತಮ ನ್ಯಾಯವನ್ನು ಮಾಡುವವನು, ಐಶ್ವರ್ಯವಂತನು ದೊಡ್ಡ ದೊಡ್ಡ ಪದಾರ್ಥಗಳ ಸ್ವಾಮಿಯು ಹಾಗೂ ವ್ಯಾಪಕವಾದ ಸುಖವನ್ನು ಕೊಡುವವನು ಮತ್ತು ವಿದ್ವಾಂಸನಿಗೆ ಸಮಾನವಾಗಿ ಪ್ರೇಮವನ್ನುಂಟುಮಾಡುವವನು, ಧಾರ್ಮಿಕನು, ಸತ್ಯ ವ್ಯವಹಾರಗಳಲ್ಲಿ ತೊಡಗಿರುವವನು, ವಿದ್ಯೆ ಮೊದಲಾದ ಧನಗಳನ್ನು ಕೊಡುವವನು ಮತ್ತು ವಿದ್ಯೆಯನ್ನು ಪಾಲಿಸುವವನು, ಶುಭಗುಣ ಮತ್ತು ಸತ್ಕರ್ಮಗಳಲ್ಲಿ ವ್ಯಾಪ್ತನಾದ ಮಹಾಪರಾಕ್ರಮಿಯು ಮತ್ಯಾರೂ ಆಗಲಾರರು. ಆದುದರಿಂದ ಎಲ್ಲ ಮನುಷ್ಯರೂ ಪರಮಾತ್ಮನ ಸ್ತುತಿ, ಪ್ರಾರ್ಥನೆ, ಉಪಾಸನೆಯನ್ನು ನಿರಂತರವೂ ವಿದ್ವಾಂಸರ ಸೇವೆಯನ್ನು ಮತ್ತು ಸಂಗವನ್ನು ಮಾಡಿ ನಿತ್ಯ ಆನಂದಿತರಾಗಬೇಕು.

ಈ ಸೂಕ್ತದಲ್ಲಿ ಓದುವ ಮತ್ತು ಓದಿಸುವ ಮತ್ತು ಈಶ್ವರನ ಕರ್ತವ್ಯಗಳು ಹಾಗೂ ಅವುಗಳ ಫಲವನ್ನು ಹೇಳಿದೆ. ಆದುದರಿಂದ ಈ ಸೂಕ್ತದ ಅರ್ಥಕ್ಕೂ ಹಿಂದಿನ ಸೂಕ್ತದ ಅರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೯೧

ಮಂತ್ರ ಸಂಖ್ಯೆ ೨೩ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಸೋಮಃ । ಛಂದಃ - ತ್ರಿಷ್ಟುಪ್,
೫-೧೬ ಗಾಯತ್ರೀ, ೧೬ ಉಷ್ಣಿಕ್ । ಸ್ವರಃ - ೧೭ ಋಷಭಃ, ೧೯, ೨೧, ೨೩ ಧೈವತಃ, ಷಡ್ಜಃ.

ಈ ಮಂತ್ರದಲ್ಲಿ ಸೋಮಶಬ್ದದ ಅರ್ಥದ ಉಪದೇಶ ಮಾಡಿದೆ.

ತ್ವಂ ಸೋಮ ಪ್ರ ಚಿಕಿತೋ ಮನೀಷಾ ತ್ವಂ ರಜಿಷ್ಠಮನು ನೇಷಿ ಪಂಥಾಮ್ ।
ತವ ಪ್ರಣೀತೀ ಪಿತರೋ ನ ಇಂದೋ ದೇವೇಷು ರತ್ನಮಭಜಂತ ಧೀರಾಃ ॥೧॥

ಪದಾರ್ಥ:- ಹೇ **[ಇಂದೋ]** ಸೋಮನಿಗೆ ಸಮಾನನೇ! **[ಸೋಮ]** ಸಮಸ್ತ ಐಶ್ವರ್ಯಯುಕ್ತನೇ! **[ತ್ವಮ್]** ಪರಮೇಶ್ವರನು ಅಥವಾ ಅತ್ಯುತ್ತಮ ವಿದ್ವಾಂಸನು ಆದ ನೀನು ಯಾವ **[ಮನೀಷಾ]** ಮನಸ್ಸನ್ನು ವಶದಲ್ಲಿಟ್ಟುಕೊಳ್ಳುವ ಬುದ್ಧಿಯಿಂದ **[ಚಿಕಿತಃ]** ತಿಳಿಯುವ ಅಥವಾ **[ತವ]** ತಮ್ಮ **[ಪ್ರಣೀತಿ]** ಉತ್ತಮ ನೀತಿಯಿಂದ **[ಧೀರಾಃ]** ಧ್ಯಾನ ಮತ್ತು ಧರ್ಮಯುಕ್ತ **[ಪಿತರಃ]** ಜ್ಞಾನಿಗಳಾದ ಜನರು **[ದೇವೇಷು]** ವಿದ್ವಾಂಸರ ಅಥವಾ ದಿವ್ಯ ಗುಣ, ಕರ್ಮ ಮತ್ತು ಸ್ವಭಾವಗಳಲ್ಲಿ **[ರತ್ನಮ್]** ಅತ್ಯುತ್ತಮ ಧನವನ್ನು **[ಪ್ರ ಅಭಜಂತ]** ಸೇವಿಸುವರು. ಅದರಿಂದ ಶಾಂತಿ ಗುಣಯುಕ್ತನಾದ ನೀನು **[ನಃ]** ನಮಗೆ **[ರಜಿಷ್ಠಮ್]** ಅತ್ಯಂತ ನೇರವಾದ **[ಪಂಥಾಮ್]** ಮಾರ್ಗವನ್ನು **[ಅನು]** ಅನುಕೂಲತೆಯಿಂದ **[ನೇಷಿ]** ಸೇರಿಸುತ್ತೀಯೆ. ಅದರಿಂದ **[ತ್ವಮ್]** ನೀನು ನಮ್ಮ ಸತ್ಕಾರಕ್ಕೆ ಯೋಗ್ಯನಾಗು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಹೇಗೆ ಪರಮೇಶ್ವರನು ಅತ್ಯಂತ ಉತ್ತಮ ವಿದ್ವಾಂಸರ ಅವಿದ್ಯೆಯನ್ನು ನಾಶಮಾಡಿ ವಿದ್ಯೆ ಮತ್ತು ಧರ್ಮಮಾರ್ಗಕ್ಕೆ ಕಳುಹಿಸುತ್ತಾನೋ, ಹಾಗೆಯೇ ವೈದ್ಯಶಾಸ್ತ್ರವನ್ನನುಸರಿಸಿ ಸೇವನೆ ಮಾಡಿದ ಸೋಮ ಮೊದಲಾದ ಓಷಧಿಗಳ ಸಮೂಹವು ಎಲ್ಲ ರೋಗಗಳನ್ನು ನಾಶಮಾಡಿ ಸುಖವನ್ನೀಯುತ್ತವೆ.

ಮತ್ತೆ ಅವರು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ತ್ವಂ ಸೋಮ ಕ್ರತುಭಿಃ ಸುಕ್ರತುರ್ಭೂ-ಸ್ತ್ವಂ ದಕ್ಷೈಃ ಸುದಕ್ಷೋ ವಿಶ್ವವೇದಾಃ ।
ತ್ವಂ ವೃಷಾ ವೃಷತ್ವೇಭಿರ್ಮಹಿತ್ವಾ ದ್ಯುಮ್ನೇಭಿರ್ದ್ಯುಮ್ನ್ಯಭವೋ ನೃಚಕ್ಷಾಃ ॥೨॥

ಪದಾರ್ಥ:- ಹೇ **[ಸೋಮ]** ಶಾಂತಿಗುಣಯುಕ್ತ ಪರಮೇಶ್ವರ ಅಥವಾ ವಿದ್ವಾಂಸನೇ! ಯಾವ ಕಾರಣದಿಂದ **[ತ್ವಮ್]** ನೀನು **[ಋತುಭಿಃ]** ಉತ್ತಮ ಬುದ್ಧಿಯ ಕರ್ಮಗಳಿಂದ **[ಸುಕ್ರತುಃ]** ಶ್ರೇಷ್ಠ ಬುದ್ಧಿಶಾಲೀ ಅಥವಾ ಶ್ರೇಷ್ಠ ಕರ್ಮಗಳನ್ನು ಮಾಡುವವನು ಹಾಗೂ **[ದಕ್ಷೈಃ]** ವಿಜ್ಞಾನ ಮೊದಲಾದ ಗುಣಗಳಿಂದ **[ಸುದಕ್ಷಃ]** ಅತಿಶ್ರೇಷ್ಠ ಜ್ಞಾನಿಯು **[ವಿಶ್ವವೇದಾಃ]** ಮತ್ತು ಎಲ್ಲ ವಿದ್ಯೆಗಳನ್ನು ಪಡೆದವನು **[ಭೂಃ]** ಆಗುವನು ಅಥವಾ ಯಾವ ಕಾರಣದಿಂದ **[ತ್ವಮ್]** ನೀನು **[ಮಹಿತ್ವಾ]** ದೊಡ್ಡ ದೊಡ್ಡ ಗುಣಗಳುಳ್ಳವರಾಗುವುದರಿಂದ **[ವೃಷತ್ವೇಭಿಃ]** ವಿದ್ಯಾರೂಪವಾದ ಸುಖಗಳ **[ವೃಷಾ]** ವರ್ಷಣೆ ಮತ್ತು **[ದ್ಯುಮ್ನೇಭಿಃ]** ಕೀರ್ತಿ ಮತ್ತು ಚಕ್ರವರ್ತಿ ಮೊದಲಾದ ರಾಜ್ಯ ಧರ್ಮಗಳಿಂದ **[ದ್ಯುಮ್ನೀ]** ಪ್ರಶಂಸಿತನಾದ ಧನಿಕನು **[ನೃಚಕ್ಷಾಃ]** ಮನುಷ್ಯರಲ್ಲಿ ದರ್ಶನೀಯನೂ **[ಅಭವಃ]** ಆಗುವನು. ಇದರಿಂದ **[ತ್ವಮ್]** ನೀನು ಎಲ್ಲರಲ್ಲಿ ಉತ್ತಮ ಉತ್ಕರ್ಷಯುಕ್ತನಾಗು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವ ರೀತಿ ಉತ್ತಮ ರೀತಿಯಿಂದ ಸೇವಿಸಲ್ಪಟ್ಟ ಸೋಮ ಮೊದಲಾದ ಓಷಧಿಗಳ ಸಮೂಹವು ಬುದ್ಧಿಯ ಚಾತುರ್ಯವನ್ನೂ ವೀರ್ಯಶಕ್ತಿಯನ್ನು ಮತ್ತು ಸಂಪತ್ತನ್ನು ಉತ್ಪನ್ನ ಮಾಡಿಸುತ್ತದೆಯೋ, ಹಾಗೆಯೇ ಉತ್ತಮ ಉಪಾಸನೆಯನ್ನು ಹೊಂದಿದ ಈಶ್ವರ ಅಥವಾ ಉತ್ತಮ ಸೇವಾಪ್ರಾಪ್ತ ವಿದ್ವಾಂಸರು ಉಕ್ತ ಕಾರ್ಯಗಳನ್ನು ಸಿದ್ಧಿಗೊಳಿಸುತ್ತಾರೆ.

ಮತ್ತೆ ಅವರು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ರಾಜ್ಞೋ ನು ತೇ ವರುಣಸ್ಯ ವ್ರತಾನಿ ಬೃಹದ್ ಗಭೀರಂ ತವ ಸೋಮ ಧಾಮ ।
ಶುಚಿಷ್ಟ್ವಮಸಿ ಪ್ರಿಯೋ ನ ಮಿತ್ರೋ ದಕ್ಷಾಯ್ಯೋ ಅರ್ಯಮೇವಾಸಿ ಸೋಮ ॥೩॥

ಪದಾರ್ಥ:- ಹೇ **[ಸೋಮ]** ಮಹಾಐಶ್ವರ್ಯಯುಕ್ತ ಪರಮೇಶ್ವರ ಅಥವಾ ವಿದ್ವಾಂಸನೇ! ಯಾವುದರಿಂದ **[ತ್ವಮ್]** ನೀನು **[ಪ್ರಿಯಃ]** ಪ್ರಸನ್ನನೂ **[ಮಿತ್ರಃ]** ಮಿತ್ರರಂತೆ **[ನ]** ಸಮಾನನೂ **[ಶುಚಿಃ]** ಪವಿತ್ರನೂ, ಪವಿತ್ರಗೊಳಿಸುವವನೂ **[ಅಸಿ]** ಆಗಿರುವೆ. ಹೇ **[ಸೋಮ]** ಶುಭ ಕರ್ಮ ಮತ್ತು ಗುಣಗಳಲ್ಲಿ ಪ್ರೇರಣೆಯನ್ನೀಯುವ **[ವರುಣಸ್ಯ]** ಶ್ರೇಷ್ಠನಾದ **[ರಾಜ್ಞಃ]** ಎಲ್ಲ ಜಗತ್ತಿನ ಸ್ವಾಮಿಯು ಅಥವಾ ವಿದ್ಯಾಪ್ರಕಾಶಯುಕ್ತನೇ! **[ತೇ]** ನಿನ್ನ **[ವ್ರತಾನಿ]** ಸತ್ಯವನ್ನು ಪ್ರಕಾಶಗೊಳಿಸುವ ಯಾವ ಕರ್ಮಗಳಿವೆಯೋ, ಅವುಗಳಿಂದ **[ತವ]** ನಿನ್ನ **[ಬೃಹತ್]** ಮಹತ್ತಾದ **[ಗಭೀರಮ್]** ಅತ್ಯಂತ ಉತ್ತಮ ಗುಣಗಳ ಮಹತ್ವವನ್ನು ತಿಳಿಯುವ **[ಧಾಮ]** ಯಾವುದರಲ್ಲಿ ಪದಾರ್ಥಗಳನ್ನು ಇಡುವರೋ ಆ ಸ್ಥಾನವು, ಅದರಲ್ಲಿ ನೀನು **[ನು]** ಶೀಘ್ರವಾಗಿಯೂ ಮತ್ತು ಸದಾ ಉಪಾಸನೆ ಮತ್ತು ಸೇವೆಯನ್ನು ಮಾಡಲು ಯೋಗ್ಯವಾಗಿರುವುದು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರಗಳಿವೆ. ಮನುಷ್ಯನು ಹೇಗೆ ಹೇಗೆ ಈ ಸೃಷ್ಟಿಯಲ್ಲಿ ಸೃಷ್ಟಿರಚನೆಯ ನಿಯಮಗಳಿಂದ ಈಶ್ವರನ ಗುಣ, ಕರ್ಮ ಮತ್ತು ಸ್ವಭಾವಗಳನ್ನು ನೋಡಿ ಉತ್ತಮ ಯತ್ನವನ್ನು ಮಾಡಿ ಹಾಗೆ ಹಾಗೆಯೇ ವಿದ್ಯೆ ಮತ್ತು ಸುಖವನ್ನು ಉತ್ಪನ್ನಮಾಡಬೇಕು.

ಮತ್ತೆ ಅವರಿಗೆ ಏನು ಕಾರ್ಯಗಳಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಯಾ ತೇ ಧಾಮಾನಿ ದಿವಿ ಯಾ ಪೃಥಿವ್ಯಾಂ ಯಾ ಪರ್ವತೇಷ್ವೋಷಧೀಷ್ವಪ್ಸು ।
ತೇಭಿರ್ನೋ ವಿಶ್ವೈಃ ಸುಮನಾ ಅಹೇಳನ್ ರಾಜನ್ತ್ಸೋಮ ಪ್ರತಿ ಹವ್ಯಾ ಗೃಭಾಯ ॥೪॥

ಪದಾರ್ಥ:- ಹೇ **[ಸೋಮ]** ಎಲ್ಲರನ್ನೂ ಉತ್ಪನ್ನ ಮಾಡುವ **[ರಾಜಾ]** ರಾಜನೇ! **[ತೇ]** ನಿನ್ನ **[ಯಾ]** ಯಾವ **[ಧಾಮಾನಿ]** ನಾಮ, ಜನ್ಮ ಮತ್ತು ಸ್ಥಾನಗಳು, **[ದಿವಿ]** ಪ್ರಕಾಶಮಯವಾದ ಸೂರ್ಯ ಮೊದಲಾದ ಪದಾರ್ಥಗಳು ಅಥವಾ ದಿವ್ಯವ್ಯವಹಾರಗಳಲ್ಲಿ ಅಥವಾ **[ಯಾ]** ಯಾವ **[ಪೃಥಿವ್ಯಾಮ್]** ಪೃಥಿವಿಯಲ್ಲಿ ಅಥವಾ **[ಯಾ]** ಯಾವ **[ಪರ್ವತೇಷು]** ಪರ್ವತಗಳಲ್ಲಿ ಅಥವಾ **[ಓಷಧೀಷು]** ಓಷಧಿಗಳಲ್ಲಿ ಅಥವಾ **[ಅಪ್ಸು]** ಜಲಗಳಲ್ಲಿ ಇವೆಯೋ, **[ತೇಭಿಃ]** ಆ **[ವಿಶ್ವೈಃ]** ಎಲ್ಲವುಗಳಲ್ಲಿ **[ಅಹೇಡನ್]** ಅನಾದರ ಮಾಡದಿರುವ **[ಸುಮನಾಃ]** ಉತ್ತಮ ಜ್ಞಾನವುಳ್ಳ ನೀನು **[ಹವ್ಯಾಃ]** ಕೊಡು-ತೆಗೆದುಕೊಳ್ಳುವ ವ್ಯವಹಾರಗಳಲ್ಲಿ **[ನಃ]** ನಮ್ಮನ್ನು **[ಪ್ರತಿ ಗೃಭಾಯ]** ಪ್ರತ್ಯಕ್ಷವಾಗಿ ಪ್ರಾಪ್ತಿಗೊಳಿಸು.

ಭಾವಾರ್ಥ:- ಹೇಗೆ ಜಗದೀಶ್ವರನು ತಾನು ರಚಿಸಿದ ಈ ಸೃಷ್ಟಿಯಲ್ಲಿ ವೇದದ ಮುಖಾಂತರ ಈ ಸೃಷ್ಟಿಕಾರ್ಯಗಳನ್ನು, ಎಲ್ಲ ವಿದ್ಯೆಗಳನ್ನೂ ಪ್ರಕಾಶಪಡಿಸುವನೋ, ಹಾಗೆಯೇ ವಿದ್ವಾಂಸರು ಅಂಗ ಉಪಾಂಗಗಳ ಸಹಿತ ಓದಿದ ವೇದಗಳಲ್ಲಿನ ಕರಕುಶಲತೆಯ ಜೊತೆಗೆ ಕಲೆಗಳ ಚತುರತೆಯನ್ನು ತೋರಿಸಿ ಎಲ್ಲರಿಗೂ ಸಮಸ್ತ ವಿದ್ಯೆಯನ್ನು ಗ್ರಹಿಸುವಂತೆ ಮಾಡಬೇಕು.

ಮತ್ತೆ ಆ ಸೋಮನು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ತ್ವಂ ಸೋಮಾಸಿ ಸತ್ಪತಿ-ಸ್ತ್ವಂ ರಾಜೋತ ವೃತ್ರಹಾ । ತ್ವಂ ಭದ್ರೋ ಅಸಿ ಕ್ರತುಃ ॥೫॥

ಪದಾರ್ಥ:- ಹೇ **[ಸೋಮ]** ಸಮಸ್ತ ಜಗತ್ತನ್ನು ಉತ್ಪನ್ನ ಮಾಡುವ ಅಥವಾ ಎಲ್ಲ ವಿದ್ಯೆಗಳನ್ನು ಕೊಡುವವನೇ! **[ತ್ವಮ್]** ಪರಮೇಶ್ವರ ಅಥವಾ ಪಾಠಶಾಲೆ ಮೊದಲಾದ ವ್ಯವಹಾರಗಳ ಸ್ವಾಮಿಯು ವಿದ್ವಾಂಸನೂ ಆದ ನೀನು **[ಸತ್ಪತಿಃ]** ಅವಿನಾಶಿಯಾದ ಜಗತ್ತಿನ ಕಾರಣವು ಅಥವಾ ವಿದ್ಯಮಾನವಾದ ಕಾರ್ಯಜಗತ್ತು ಇದೆಯೋ ಅದನ್ನು ಪಾಲಿಸುವವನು **[ಅಸಿ]** ಆಗಿರುವೆ. **[ಉತ]** ಮತ್ತು **[ತ್ವಮ್]** ನೀನು **[ವೃತ್ರಹಾ]** ದುಃಖವನ್ನು ಕೊಡುವ ದುಷ್ಟರನ್ನು ನಾಶ ಮಾಡುವವನು **[ರಾಜಾ]** ಎಲ್ಲರಿಗಿಂತ ಸ್ವಾಮಿಯೂ ವಿದ್ಯೆಯ ಅಧ್ಯಕ್ಷನೂ ಆಗಿರುವೆ. ಅಥವಾ ಯಾವ ಕಾರಣದಿಂದ **[ತ್ವಂ]** ನೀನು **[ಭದ್ರಃ]** ಅತ್ಯಂತ ಸುಖವನ್ನು ಕೊಡುವವನು ಅಥವಾ **[ಋತುಃ]** ಸಮಸ್ತ ಬುದ್ಧಿಯುಕ್ತನು ಅಥವಾ ಬುದ್ಧಿಯನ್ನು ಕೊಡುವವನು **[ಅಸಿ]** ಆಗಿರುವೆ. ಅದರಿಂದ ನೀನು ಎಲ್ಲ ವಿದ್ವಾಂಸರುಗಳಿಂದ ಸೇವನೆ ಮಾಡಲು ಯೋಗ್ಯನಾಗಿರುವೆ.

ಎರಡನೆಯ ಅರ್ಥ:- **[ಸೋಮ]** ಎಲ್ಲ ಓಷಧಿಗಳ ಗುಣದಾತನಾದ ಸೋಮ ಓಷಧಿಯು **[ತ್ವಮ್]** ಈ ಓಷಧಿಗಳಲ್ಲಿ ಉತ್ತಮವು **[ಸತ್ಪತಿಃ]** ಸರಿಯಾದ ಪಥ್ಯವನ್ನು ಮಾಡುವ ಜನರನ್ನು ಪಾಲಿಸುವುದು ಆಗಿದೆ. **[ಉತ]** ಮತ್ತು **[ತ್ವಮ್]** ಈ ಸೋಮವು **[ವೃತ್ರಹಾ]** ಮೇಘಕ್ಕೆ ಸಮಾನವಾಗಿ ದೋಷಗಳನ್ನು ನಾಶಪಡಿಸುವುದು **[ರಾಜಾ]** ರೋಗಗಳನ್ನು ನಾಶಪಡಿಸುವ ಗುಣಗಳನ್ನು ಪ್ರಕಾಶಿಸುವುದು ಆಗಿದೆ. ಅಥವಾ ಯಾವ ಕಾರಣದಿಂದ **[ತ್ವಮ್]** ಈ **[ಭದ್ರಃ]** ಸೇವನೆಗೆ ಯೋಗ್ಯವಾದ ಅಥವಾ **[ಕ್ರತುಃ]** ಉತ್ತಮ ಬುದ್ಧಿಗೆ ಹೇತುವಾಗಿದೆ. ಆದುದರಿಂದ ಎಲ್ಲ ವಿದ್ವಾಂಸರಿಂದಲೂ ಸೇವನೆಗೆ ಯೋಗ್ಯವಾಗಿದೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಪರಮೇಶ್ವರ, ವಿದ್ವಾಂಸ, ಸೋಮಲತೆ ಮೊದಲಾದ ಓಷಧಿಗಳ ಸಮೂಹ, ಈ ಸಮಸ್ತ ಐಶ್ವರ್ಯದ ಪ್ರಕಾಶಪಡಿಸಲು, ಶ್ರೇಷ್ಠರನ್ನು ರಕ್ಷಿಸಲು ಮತ್ತು ಅವುಗಳ ಸ್ವಾಮಿಯು, ದುಃಖವನ್ನು ನಾಶಗೊಳಿಸಲು ಮತ್ತು ವಿಜ್ಞಾನವನ್ನು ಕೊಡಲು ಮತ್ತು ಕಲ್ಯಾಣಕಾರಿಯೂ ಆಗಿದೆ. ಹಾಗೆಂದು ಚೆನ್ನಾಗಿ ತಿಳಿದು ಎಲ್ಲರೂ ಇವುಗಳ ಸೇವನೆ ಮಾಡುವುದು ಯೋಗ್ಯವಾಗಿದೆ.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತ್ವಂ ಚ ಸೋಮ ನೋ ವಶೋ ಜೀವಾತುಂ ನ ಮರಾಮಹೇ ।
ಪ್ರಿಯಸ್ತೋತ್ರೋ ವನಸ್ಪತಿಃ ॥೬॥

ಪದಾರ್ಥ:- [ಸದಾ] ಹೇ [ಸೋಮ] ಶ್ರೇಷ್ಠ ಕರ್ಮಗಳಿಗೆ ಪ್ರೇರಣೆ ನೀಡುವ ಪರಮೇಶ್ವರ! ಅಥವಾ ಶ್ರೇಷ್ಠ ಕರ್ಮಗಳಿಗೆ ಪ್ರೇರಣೆ ನೀಡುವಂತಹವು **[ತ್ವಮ್]** ಆ ಇವು **[ಚ]** ಮತ್ತು ನೀನು **[ನಃ]** ನಮಗೆ **[ಜೀವಾತುಮ್]** ಜೀವನವನ್ನು **[ವಶ]** ವಶವಾಗುವ ಗುಣಗಳನ್ನು ಪ್ರಕಾಶಪಡಿಸುವ ಅಥವಾ **[ಪ್ರಿಯಸ್ತೋತ್ರಃ]** ಯಾವುದರ ಗುಣಗಳ ಕಥನ ಮಾಡಿಸುವೆ -ಮಾಡುವೆ ಅಥವಾ **[ವನಸ್ಪತಿಃ]** ಸೇವನೀಯ ಪದಾರ್ಥಗಳ ಪಾಲನೆ ಮಾಡುವವನು ಅಥವಾ ಈ ಸೋಮವು ಕಾಡಿನ ಓಷಧಿಗಳಲ್ಲಿ ಅತ್ಯಂತ ಶ್ರೇಷ್ಠವಾದುದಾಗಿದೆ. ಈ ವ್ಯವಸ್ಥೆಯಿಂದ ಇವೆರಡನ್ನೂ ತಿಳಿದು ನಾವು ಶೀಘ್ರವಾಗಿ **[ನ ಮರಾಮಹೇ]** ಅಕಾಲಮೃತ್ಯು ಮತ್ತು ಅನಾಯಾಸ ಮೃತ್ಯುವನ್ನು ಪಡೆಯದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವ ಮನುಷ್ಯರು ಈಶ್ವರನ ಆಜ್ಞೆಯನ್ನು ಪಾಲಿಸುವ ವಿದ್ವಾಂಸರ ಮತ್ತು ಓಷಧಿಗಳ ಸೇವನೆಯನ್ನು ಅಥವಾ ಸತ್ಕಾರವನ್ನು ಮಾಡುತ್ತಾರೋ ಅವರು ಪೂರ್ಣ ಆಯುರ್ದಾಯವನ್ನು ಪಡೆಯುವರು.

ಮತ್ತೆ ಅದು ಹೇಗಿದೆ ಎಂಬುದನ್ನು ಹೇಳಲಾಗಿದೆ.

ತ್ವಂ ಸೋಮ ಮಹೇ ಭಗಂ ತ್ವಂ ಯೂನ ಋತಾಯತೇ । ದಕ್ಷಂ ದಧಾಸಿ ಜೀವಸೇ ॥೭॥

ಪದಾರ್ಥ:- ಹೇ **[ಸೋಮ]** ಪರಮೇಶ್ವರ ಅಥವಾ ಸೋಮ ಅಂದರೆ ಓಷಧಿಗಳ ಸಮೂಹವು **[ತ್ವಮ್]** ವಿದ್ಯೆ ಮತ್ತು ಸೌಭಾಗ್ಯವನ್ನು ಕೊಡುವ ತಾವು ಅಥವಾ ಈ ಸೋಮವು **[ಋತಾಯತೇ]** ನಮಗೆ ವಿಶೇಷ ಜ್ಞಾನದ ಇಚ್ಛೆಯನ್ನುಂಟು ಮಾಡುವುದು **[ಮಹೇ]** ಅತಿ ಉತ್ತಮ ಗುಣಯುಕ್ತವಾದುದೂ **[ಯೂನೇ]** ಬ್ರಹ್ಮಚರ್ಯ ಮತ್ತು ವಿದ್ಯೆಯಿಂದ ಶರೀರ ಮತ್ತು ಆತ್ಮದ ತರುಣಾವಸ್ಥೆಯನ್ನು ಪಡೆದ ಬ್ರಹ್ಮಚಾರಿಗಾಗಿ **[ಭಗಮ್]** ವಿದ್ಯೆ ಮತ್ತು ಧನರಾಶಿ ಹಾಗೂ **[ತ್ವಮ್]** ನೀನು **[ಜೀವಸೇ]** ಜೀವಿಸುವ ಅರ್ಥವಾದ **[ದಕ್ಷಮ್]** ಬಲವನ್ನು **[ದಧಾಸಿ]** ಧಾರಣ ಮಾಡಿಸಲು ಎಲ್ಲರೂ ಇಚ್ಛಿಸಲು ಯೋಗ್ಯವಾಗಿದೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮನುಷ್ಯರು ಪರಸ್ಪರ ವಿದ್ವಾಂಸರ ಮತ್ತು ಓಷಧಿಗಳ ಸೇವನೆಯ ಹೊರತು ಸುಖಪಡಲು ಯೋಗ್ಯರಾಗುವುದಿಲ್ಲ. ಆದುದರಿಂದ ಈ ಆಚರಣೆಯು ಎಲ್ಲರಿಗೂ ನಿತ್ಯ ಮಾಡಲು ಯೋಗ್ಯವಾಗಿದೆ.

ಮತ್ತೆ ಅದು ಹೇಗಿದೆ ಎಂಬುದನ್ನು ತಿಳಿಸಲಾಗಿದೆ.

ತ್ವಂ ನಃ ಸೋಮ ವಿಶ್ವತೋ ರಕ್ಷಾ ರಾಜನ್ನಘಾಯತಃ । ನ ರಿಷ್ಯೇತ್ ತ್ವಾವತಃ ಸಖಾ ॥೮॥

ಪದಾರ್ಥ:- ಹೇ **[ಸೋಮ]** ಎಲ್ಲರ ಮಿತ್ರ ಅಥವಾ ಮಿತ್ರತೆಯನ್ನು ಕೊಡುವವನು **[ತ್ವಮ್]** ತಾವು ಅಥವಾ ಈ ಓಷಧಿ ಸಮೂಹವು **[ವಿಶ್ವತಃ]** ಸಮಸ್ತ **[ಅಘಾಯತಃ]** ನನ್ನ ದೋಷವನ್ನು ಇಚ್ಛಿಸುತ್ತಾ ಅಥವಾ ದೋಷಕಾರಿಯಿಂದ **[ನಃ]** ನಮ್ಮ **[ರಕ್ಷ]** ರಕ್ಷಣೆ ಮಾಡು ಅಥವಾ ಈ ಓಷಧಿರಾಜನು ರಕ್ಷಿಸುವನು. ಹೇ

[ರಾಜನ್] ಎಲ್ಲರ ರಕ್ಷಣೆಯನ್ನು ಪ್ರಕಾಶ ಪಡಿಸುವವನೇ! **[ತ್ವಾವತಃ]** ನಿಮ್ಮ ಸಮಾನ ಪುರುಷನ **[ಸಮೀ]** ಯಾವ ಮಿತ್ರನೂ **[ನ]** ಇಲ್ಲ. **[ರಿಷ್ಯೇತ್]** ವಿನಾಶವಾಗುವ ಅಥವಾ ಎಲ್ಲರ ರಕ್ಷಕವಾದ ಓಷಧಿಗಣವು ಇದಕ್ಕೆ ಸಮಾನವಾದ ಓಷಧಿಯನ್ನು ಸೇವಿಸುವ ಪುರುಷನು ವಿನಾಶವನ್ನು ಪಡೆಯುವುದಿಲ್ಲ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮನುಷ್ಯರು ಈ ರೀತಿ ಈಶ್ವರನ ಪ್ರಾರ್ಥನೆಯನ್ನು ಮಾಡಿ ಉತ್ತಮ ಯತ್ನವನ್ನು ಮಾಡಬೇಕು. ಇದರಿಂದ ಧರ್ಮವನ್ನು ಬಿಡುವ ಮತ್ತು ಅಧರ್ಮವನ್ನು ಗ್ರಹಿಸುವ ಇಚ್ಛೆಯೇ ಉಂಟಾಗುವುದಿಲ್ಲ. ಧರ್ಮ ಮತ್ತು ಅಧರ್ಮದ ಪ್ರವೃತ್ತಿಯಲ್ಲಿ ಮನಸ್ಸಿನ ಇಚ್ಛೆಯೇ ಕಾರಣವಾಗಿದೆ. ಆ ಪ್ರವೃತ್ತಿ ಮತ್ತು ಅದನ್ನು ತಡೆಯುವುದರಿಂದ ಎಂದಿಗೂ ಧರ್ಮದ ತ್ಯಾಗ ಮತ್ತು ಅಧರ್ಮದ ಸ್ವೀಕರಣವು ಆಗುವುದಿಲ್ಲ.

ಅದು ಯಾವುದರಿಂದ ರಕ್ಷಣೆಯಾಗುತ್ತದೆ ಎಂಬುದನ್ನು ತಿಳಿಸಲಾಗಿದೆ.

ಸೋಮ ಯಾಸ್ತೇ ಮಯೋಭುವ ಊತಯಃ ಸಂತಿ ದಾಶುಷೇ । ತಾಭಿರ್ನೋಽವಿತಾ ಭವ ॥೯॥

ಪದಾರ್ಥ:- ಹೇ **[ಸೋಮ]** ಪರಮೇಶ್ವರ! **[ಯಾಃ]** ಯಾವ **[ತೇ]** ನಿನ್ನ ಅಥವಾ ಸೋಮ ಮೊದಲಾದ ಓಷಧಿಗಳು **[ಮಯೋಭುವಃ]** ಸುಖವನ್ನು ಮಾಡುವುವು **[ಊತಯಃ]** ರಕ್ಷಣೆ ಮೊದಲಾದ ಕ್ರಿಯೆಗಳು **[ದಾಶುಷೇ]** ದಾನೀ ಮನುಷ್ಯನಿಗಾಗಿ **[ಸಂತಿ]** ಇರುತ್ತವೆ. **[ತಾಭಿಃ]** ಅವುಗಳಿಂದ **[ನಃ]** ನಮ್ಮ **[ಅವಿತಾಃ]** ರಕ್ಷಣೆ ಮೊದಲಾದವನ್ನು ಮಾಡುವವನು **[ಭವ]** ಆಗು ಅಥವಾ ಈ ಓಷಧಿಗಳು ಆಗುತ್ತವೆ. ಇವುಗಳ ಉಪಯೋಗವನ್ನು ನಾವು ಸದಾ ಮಾಡೋಣ.

ಭಾವಾರ್ಥ:- ಯಾವ ಪ್ರಾಣಿಗಳನ್ನು ಪರಮೇಶ್ವರನು ವಿದ್ವಾಂಸರು, ಮತ್ತು ಚೆನ್ನಾಗಿ ಸಿದ್ಧಪಡಿಸಿದ ಔಷಧಿಯು ರಕ್ಷಿಸುತ್ತವೋ, ಅವು ಎಲ್ಲಿ ತಾನೇ ದುಃಖವನ್ನು ಕಾಣಬಲ್ಲವು?

ಮತ್ತೆ ಅದು ಏನು ಮಾಡುತ್ತದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಇಮಂ ಯಜ್ಞಮಿದಂ ವಚೋ ಜುಜುಷಾಣ ಉಪಾಗಹಿ ।
ಸೋಮ ತ್ವಂ ನೋ ವೃಧೇ ಭವ ॥೧೦॥

ಪದಾರ್ಥ:- ಹೇ **[ಸೋಮ]** ಪರಮೇಶ್ವರ ಅಥವಾ ವಿದ್ವಾಂಸನೇ! ಯಾವುದರಿಂದ **[ಇಮಮ್]** ಈ **[ಯಜ್ಞಮ್]** ವಿದ್ಯೆಯ ರಕ್ಷಣೆಯನ್ನು ಮಾಡುವ ಶಿಲ್ಪ ಕರ್ಮಗಳಿಂದ ಸಿದ್ಧವಾದ ಯಜ್ಞವು ಹಾಗೂ **[ಇಮಮ್]** ಈ ವಿದ್ಯೆ ಮತ್ತು ಧರ್ಮಸಂಯುಕ್ತವಾದ **[ವಚಃ]** ವಚನವನ್ನು **[ಜುಜುಷಾಣ]** ಪ್ರೀತಿಯಿಂದ ಸೇವಿಸುತ್ತಾ **[ತ್ವಮ್]** ನೀನು **[ಉಪಾಗಹಿ]** ಸಮೀಪವಾಗುತ್ತೀಯೆ. ಅಥವಾ ಈ ಸೋಮ ಮೊದಲಾದ ಓಷಧಿಗಳು ಸಮೀಪದಲ್ಲಿ ಪ್ರಾಪ್ತವಾಗುತ್ತವೆ. **[ನಃ]** ನಮ್ಮ **[ವೃಧೇ]** ವೃದ್ಧಿಗಾಗಿ **[ಭವ]** ಆಗಿರಿ ಅಥವಾ ಉಕ್ತ ಓಷಧಿಗಣಗಳಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವಾಗ ವಿಜ್ಞಾನದಿಂದ ಈಶ್ವರ ಮತ್ತು ಸೇವೆ ಹಾಗೂ ಕೃತಜ್ಞತೆಯಿಂದ ವಿದ್ವಾಂಸನು ವೈದ್ಯವಿದ್ಯೆ ಅಥವಾ ಉತ್ತಮ ಕ್ರಿಯೆಯಿಂದ ಓಷಧಿಗಳು ದೊರೆಯುತ್ತವೆಯೋ ಆಗ ಮನುಷ್ಯರ ಎಲ್ಲ ಸುಖಗಳೂ ಉತ್ಪನ್ನವಾಗುತ್ತವೆ; ವೃದ್ಧಿಯಾಗುತ್ತವೆ.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಸೋಮ ಗೀರ್ಭಿಷ್ಟ್ವಾ ವಯಂ ವರ್ಧಯಾಮೋ ವಚೋವಿದಃ ।
ಸುಮೃಳೀಕೋ ನ ಆ ವಿಶ ॥೧೧॥

ಪದಾರ್ಥಃ- ಹೇ **[ಸೋಮ]** ತಿಳಿಯಲು ಯೋಗ್ಯವಾದ ಗುಣ, ಕರ್ಮ, ಸ್ವಭಾವಯುಕ್ತನಾದ ಪರಮೇಶ್ವರ! ಯಾವ ಕಾರಣವು **[ಸುಮೃಡೀಕಃ]** ಒಳ್ಳೆಯ ಸುಖವನ್ನು ಮಾಡುವ ವೈದ್ಯನಾದ ನೀನು ಮತ್ತು ಸೋಮ ಮೊದಲಾದ ಓಷಧಿಗಳು **[ನಃ]** ನಮಗೆ **[ಆ ವಿಶ]** ಪ್ರಾಪ್ತವಾಗಲಿ. ಇದರಿಂದ **[ತ್ವಾ]** ನಿನ್ನ ಮತ್ತು ಆ ಓಷಧಿಗಳನ್ನು **[ವಚೋವಿದಃ]** ತಿಳಿಯಲು ಯೋಗ್ಯವಾದ ಪದಾರ್ಥಗಳನ್ನು ತಿಳಿಯುತ್ತಾ **[ವಯಮ್]** ನಾವು **[ಗೀರ್ಭಿಃ]** ವಿದ್ಯೆಯಿಂದ ಶುದ್ಧವಾದ ವಾಣಿಯಿಂದ ನಿತ್ಯವೂ **[ವರ್ಧಯಾಮ]** ವರ್ಧಿಸುತ್ತೇವೆ.

ಭಾವಾರ್ಥಃ- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಈಶ್ವರ, ವಿದ್ವಾಂಸ ಮತ್ತು ಓಷಧಿಗಳಿಗೆ ಸಮಾನವಾಗಿ ಪ್ರಾಣಿಗಳಿಗೆ ಸುಖವನ್ನುಂಟು ಮಾಡುವವನು ಯಾರೂ ಇಲ್ಲ. ಇದರಿಂದ ಉತ್ತಮ ಶಿಕ್ಷಣ ಮತ್ತು ವಿದ್ಯಾಧ್ಯಯನದಿಂದ ಉತ್ತಮ ಪದಾರ್ಥಗಳ ಬೋಧೆಯು ವೃದ್ಧಿಯಾಗಿ ಮನುಷ್ಯರಿಗೆ ನಿತ್ಯವೂ ಆಚರಣೆ ಮಾಡಲು ಯೋಗ್ಯವಾಗಿದೆ.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಗಯಸ್ಫಾನೋ ಅಮೀವಹಾ ವಸುವಿತ್ ಪುಷ್ಟಿವರ್ಧನಃ । ಸುಮಿತ್ರಃ ಸೋಮ ನೋ ಭವ ॥೧೨॥

ಪದಾರ್ಥಃ- ಹೇ **[ಸೋಮ]** ಪರಮೇಶ್ವರ ಅಥವಾ ವಿದ್ವಾಂಸನೇ! ಯಾವ ಕಾರಣದಿಂದ ನೀನು ಅಥವಾ ಈ ಉತ್ತಮ ಓಷಧಿಯು **[ನಃ]** ನಮಗೆ **[ಗಯಸ್ಫಾನಃ]** ಪ್ರಾಣಗಳನ್ನು ಹೆಚ್ಚಿಸುವುದು ಅಥವಾ **[ಅಮೀವಹಾ]** ಅವಿದ್ಯೆ ಮೊದಲಾದ ದೋಷಗಳು ಹಾಗೂ ಜ್ವರ ಮೊದಲಾದ ದುಃಖಗಳನ್ನು ನಾಶ ಮಾಡುವ **[ವಸುವಿತ್]** ದ್ರವ್ಯಾದಿ ಪದಾರ್ಥಗಳ ಜ್ಞಾನ ಮಾಡಿಸುವುದು ಅಥವಾ **[ಸುಮಿತ್ರಃ]** ಯಾವುದರಿಂದ ಉತ್ತಮ ಕರ್ಮಗಳನ್ನು ಮಾಡುವವನ ಮಿತ್ರತೆಯುಂಟಾಗುವುದೋ ಹಾಗೆಯೇ **[ಪುಷ್ಟಿವರ್ಧನಃ]** ಶರೀರ ಮತ್ತು ಆತ್ಮದ ಪುಷ್ಟಿಯನ್ನು ಹೆಚ್ಚಿಸುವುದು **[ಭವ]** ಆಗು ಅಥವಾ ಈ ಓಷಧಿ ಸಮೂಹವು ನಮಗೆ ಯಥಾಯೋಗ್ಯವಾದ ಉಕ್ತ ಗುಣಗಳನ್ನು ಕೊಡುವುವು ಆಗಲಿ. ಇದರಿಂದ ಅವು ಸೇವನೆಗೆ ಯೋಗ್ಯವಾಗಲಿ.

ಭಾವಾರ್ಥಃ- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಪ್ರಾಣಿಗಳಿಗೆ ಈಶ್ವರ ಮತ್ತು ಓಷಧಿಗಳ ಸೇವನೆ ಮತ್ತು ವಿದ್ವಾಂಸರ ಸಂಗದ ಹೊರತಾಗಿ ರೋಗನಾಶ, ಬಲವೃದ್ಧಿ, ಪದಾರ್ಥಗಳ ಜ್ಞಾನ, ಧನದ ಪ್ರಾಪ್ತಿ ಹಾಗೂ ಮಿತ್ರರ ಸಂಗ ಉಂಟಾಗುವುದಿಲ್ಲ. ಇದರಿಂದ ಉಕ್ತ ಪದಾರ್ಥಗಳ ಯಥಾಯೋಗ್ಯ ಆಶ್ರಯ ಮತ್ತು ಸೇವೆಯನ್ನು ಎಲ್ಲರೂ ಮಾಡಬೇಕಾಗಿದೆ.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಸೋಮ ರಾರಂಧಿ ನೋ ಹೃದಿ ಗಾವೋ ನ ಯವಸೇಷ್ವಾ । ಮರ್ಯ ಇವ ಸ್ವ ಓಕ್ಯೇ ॥೧೩॥

ಪದಾರ್ಥಃ- ಹೇ **[ಸೋಮ]** ಪರಮೇಶ್ವರ! ಯಾವ ಕಾರಣದಿಂದ ನೀನು **[ನಃ]** ನಮ್ಮ **[ಹೃದಿ]** ಹೃದಯಗಳಲ್ಲಿ **[ನ]** ಹೇಗೆ **[ಯವಸೇಷು]** ತಿನ್ನಲು ಯೋಗ್ಯವಾದ ಹುಲ್ಲು ಮೊದಲಾದ ಪದಾರ್ಥಗಳಲ್ಲಿ **[ಗಾವಃ]** ಹಸು ರಮಿಸುತ್ತದೆಯೋ ಹಾಗೆ ಅಥವಾ **[ಸ್ವೇ]** ನಮ್ಮ **[ಓಕ್ಯೇ]** ಮನೆಗಳಲ್ಲಿ **[ಮರ್ಯ ಇವ]** ಮನುಷ್ಯನು

ವಿರಮಿಸುವವನೋ ಹಾಗೆ **[ಆ]** ಒಳ್ಳೆಯ ರೀತಿಯಲ್ಲಿ **[ರಾರಂಧಿ]** ರಮಿಸಿ ಅಥವಾ ಓಷಧಿ ಸಮೂಹವು ಉಕ್ತ ಪ್ರಕಾರ ರಮಿಸಲಿ. ಇದರಿಂದ ಎಲ್ಲರ ಸೇವನೆಗೆ ಯೋಗ್ಯವಾಗಿ ನೀನು ಅಥವಾ ಇದು ಆಗಲಿ.

ಭಾವಾರ್ಥಃ- ಈ ಮಂತ್ರದಲ್ಲಿ ಶ್ಲೇಷ ಮತ್ತು ಎರಡು ಉಪಮಾಲಂಕಾರಗಳಿವೆ. ಹೇ ಜಗದೀಶ್ವರ! ಹೇಗೆ ಪ್ರತ್ಯಕ್ಷತೆಯಿಂದ ಗೋವು ಮತ್ತು ಮನುಷ್ಯನು ತನ್ನ ಭೋಜನಕ್ಕೆ ಯೋಗ್ಯವಾದ ಪದಾರ್ಥ ಅಥವಾ ಸ್ಥಾನದಲ್ಲಿ ಉತ್ಸಾಹಪೂರ್ವಕವಾಗಿ ವರ್ತಿಸುವುವೋ ಹಾಗೆ ನಮ್ಮ ಆತ್ಮದಲ್ಲಿಯೂ ಪ್ರಕಾಶಗೊಳಿಸು. ಹೇಗೆ ಪೃಥಿವಿ ಮೊದಲಾದ ಕಾರ್ಯ ಪದಾರ್ಥಗಳಲ್ಲಿ ಪ್ರತ್ಯಕ್ಷ ಸೂರ್ಯನ ಕಿರಣಗಳು ಪ್ರಕಾಶಮಾನವಾಗುತ್ತವೋ, ಹಾಗೆಯೇ ನಮ್ಮ ಆತ್ಮಗಳಲ್ಲಿಯೂ ಪ್ರಕಾಶಮಾನನಾಗು. ಈ ಮಂತ್ರದಲ್ಲಿ ಅಸಂಭವವಾಗಿರುವುದರಿಂದ ವಿದ್ವಾಂಸನ ಗ್ರಹಣವನ್ನು ಮಾಡಿರುವುದಿಲ್ಲ.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಯಃ ಸೋಮ ಸಖ್ಯೇ ತವ ರಾರಣದ್ ದೇವ ಮರ್ತ್ಯಃ । ತಂ ದಕ್ಷಃ ಸಚತೇ ಕವಿಃ ॥೧೪॥

ಪದಾರ್ಥಃ- ಹೇ **[ದೇವ]** ದಿವ್ಯಗುಣಗಳನ್ನು ಪ್ರಾಪ್ತಗೊಳಿಸುವವರು ಅಥವಾ ಒಳ್ಳೆಯ ಗುಣಗಳ ಹೇತುವೂ ಆದ **[ಸೋಮ]** ವೈದ್ಯರಾಜ ವಿದ್ವಾಂಸನೇ! ಅಥವಾ ಉತ್ತಮ ಓಷಧಿಯೇ! **[ಯಃ]** ಯಾವ **[ತವ]** ನಿನ್ನ ಅಥವಾ ಇದರ **[ಸಖ್ಯೇ]** ಮಿತ್ರತೆ ಅಥವಾ ಮಿತ್ರನ ಕೆಲಸಗಳಲ್ಲಿ **[ದಕ್ಷಃ]** ಶರೀರ ಮತ್ತು ಆತ್ಮಬಲಯುಕ್ತನು **[ಕವಿಃ]** ದರ್ಶನೀಯನು ಅಥವಾ ಅವ್ಯಾಹತ ಪ್ರಜ್ಞಾಯುಕ್ತ **[ಮರ್ತ್ಯಃ]** ಮನುಷ್ಯನು **[ರಾರಣತ್]** ಸಂವಾದ ಮಾಡುತ್ತಾ ಮತ್ತು **[ಸಚತೇ]** ಸಂಬಂಧವನ್ನಿಡುತ್ತಾನೆ. **[ತಮ್]** ಆ ಮನುಷ್ಯನಿಗೆ ಸುಖವು ಏಕೆ ಪ್ರಾಪ್ತವಾಗುವುದಿಲ್ಲ?

ಭಾವಾರ್ಥಃ- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವ ಮನುಷ್ಯನು ಪರಮೇಶ್ವರ, ವಿದ್ವಾಂಸ ಅಥವಾ ಉತ್ತಮ ಓಷಧಿಯ ಜೊತೆಗೆ ಮಿತ್ರತ್ವ ಮಾಡುತ್ತಾನೋ, ಅವನು ವಿದ್ಯೆಯನ್ನು ಪ್ರಾಪ್ತ ಮಾಡಿಕೊಂಡು ಎಂದಿಗೂ ದುಃಖಭಾಜನನಾಗುವುದಿಲ್ಲ.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಉರುಷ್ಯಾ ಣೋ ಅಭಿಶಸ್ತೇಃ ಸೋಮ ನಿ ಪಾಹ್ಯಂಹಸಃ । ಸಖಾ ಸುಶೇವ ಏಧಿ ನಃ ॥೧೫॥

ಪದಾರ್ಥಃ- ಹೇ **[ಸೋಮ]** ರಕ್ಷಣೆ ಮಾಡುವ ಮತ್ತು **[ಸುಶೇವಃ]** ಉತ್ತಮ ಸುಖವನ್ನು ಕೊಡುವ **[ಸಖಾ]** ಮಿತ್ರನೇ! ಯಾವ ನೀನು **[ಅಭಿಶಸ್ತೇಃ]** ಸುಖವಿನಾಶ ಮಾಡುವವನ ಕೆಲಸದಿಂದ **[ನಃ]** ನಮಗೆ **[ಉರುಷ್ಯ]** ರಕ್ಷಣೆ ಕೊಡು ಅಥವಾ **[ಅಂಹಸಃ]** ಅವಿದ್ಯೆ ಹಾಗೂ ಜ್ವರಾದಿ ರೋಗಗಳಿಂದ ನಮ್ಮನ್ನು **[ನಿ]** ನಿರಂತರವಾಗಿ **[ಪಾಹಿ]** ಪಾಲಿಸು ಮತ್ತು **[ನಃ]** ನಮಗೆ ಸುಖವನ್ನುಂಟುಮಾಡುವವನು **[ಏಧಿ]** ಆಗು. ಆ ನೀನು ನಮಗೆ ಸತ್ಕಾರ ಮಾಡಲು ಯೋಗ್ಯನು ಏಕಾಗುವುದಿಲ್ಲ?

ಭಾವಾರ್ಥಃ- ಮನುಷ್ಯರಿಗೆ ಚೆನ್ನಾಗಿ ಸೇವೆ ಮಾಡಿದ ವೈದ್ಯ, ಉತ್ತಮ ವಿದ್ವಾಂಸರು, ಸಮಸ್ತ ಅವಿದ್ಯೆ ಮೊದಲಾದ ರಾಜರೋಗಗಳಿಂದ ಬೇರೆ ಮಾಡಿ ಅವರನ್ನು ಆನಂದಪಡಿಸುತ್ತಾರೆ. ಇದರಿಂದ ಇವರು ಯಾವಾಗಲೂ ಸಂಗಮಾಡಲು ಯೋಗ್ಯರಾಗಿರುವರು.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಆ ಪ್ಯಾಯಸ್ವ ಸಮೇತು ತೇ ವಿಶ್ವತಃ ಸೋಮ ವೃಷ್ಣ್ಯಮ್ । ಭವಾ ವಾಜಸ್ಯ ಸಂಗಥೇ ॥೧೬॥

ಪದಾರ್ಥ:- ಹೇ [ಸೋಮ] ಅತ್ಯಂತ ಪರಾಕ್ರಮಯುಕ್ತವಾದ ವೈದ್ಯ ಶಾಸ್ತ್ರವನ್ನು ತಿಳಿದ ವಿದ್ವಾಂಸನೇ! [ತೇ] ನಿನ್ನ [ವಿಶ್ವತಃ] ಸಂಪೂರ್ಣ ದೃಷ್ಟಿಯಿಂದ [ವೃಷ್ಣ್ಯಮ್] ವೀರ್ಯವಂತರಲ್ಲಿ ಉತ್ಪನ್ನವಾದ ಯಾವ ಪರಾಕ್ರಮವಿದೆಯೋ, ಅದು ನಮಗೆ [ಸಮ್ ಏತು] ಒಳ್ಳೆಯ ರೀತಿಯಲ್ಲಿ ಪ್ರಾಪ್ತವಾಗಲಿ. ಹಾಗೂ ನೀನು [ಆ ಪ್ಯಾಯಸ್ವ] ಉನ್ನತಿಯ ಪ್ರಾಪ್ತಿ ಮತ್ತು [ವಾಜಸ್ಯ] ವೇಗವಂತನಾದ ಸೇವೆಗೆ [ಸಂಗಥೇ] ಸಂಗ್ರಾಮದಲ್ಲಿ ರೋಗನಾಶಕನು [ಭವ] ಆಗು.

ಭಾವಾರ್ಥ:- ಮನುಷ್ಯರು ವಿದ್ವಾಂಸರು ಮತ್ತು ಓಷಧಿಗಳ ಸೇವನೆಯನ್ನು ಮಾಡಿ ಬಲ ಮತ್ತು ವಿದ್ಯೆಯನ್ನು ಪ್ರಾಪ್ತ ಮಾಡಿಕೊಳ್ಳಬೇಕು. ಸಮಸ್ತ ಸೃಷ್ಟಿಯ ಅತ್ಯುತ್ತಮ ವಿದ್ಯೆಗಳ ಉನ್ನತಿಯನ್ನು ಮಾಡಿ, ಶತ್ರುಗಳನ್ನು ಜಯಿಸಿ, ಮತ್ತು ಸಜ್ಜನರನ್ನು ರಕ್ಷಿಸಿ, ಶರೀರ ಮತ್ತು ಆತ್ಮದ ಪುಷ್ಟಿಯನ್ನು ನಿರಂತರವೂ ಹೆಚ್ಚಿಸಬೇಕು.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಆ ಪ್ಯಾಯಸ್ವ ಮದಿಂತಮ ಸೋಮ ವಿಶ್ವೇಭಿರಂಶುಭಿಃ ।
ಭವಾ ನಃ ಸುಶ್ರವಸ್ತಮಃ ಸಖಾ ವೃಧೇ ॥೧೭॥

ಪದಾರ್ಥ:- ಹೇ [ಮದಿಂತಮ] ಅತ್ಯಂತ ಪ್ರಶಂಸಿತವೂ ಆನಂದಯುಕ್ತವೂ ಆದ [ಸೋಮ] ವಿದ್ಯೆ ಮತ್ತು ಐಶ್ವರ್ಯವನ್ನು ಕೊಡುವವನೇ! ಯಾವ [ಸುಶ್ರವಸ್ತಮಃ] ಬಹುಶ್ರುತವು ಅಥವಾ ಉತ್ತಮ ಅನ್ನಾದಿ ಪದಾರ್ಥಗಳಿಂದ ಕೂಡಿದ [ಸಖಾ] ಮಿತ್ರನಾಗಿರುವೆ. ಆದುದರಿಂದ [ನಃ] ನಮ್ಮ [ವೃಧೇ] ಉನ್ನತಿಗಾಗಿ [ಭವ] ಆಗು. ಮತ್ತು [ವಿಶ್ವೇಭಿಃ] ಸಮಸ್ತ [ಅಂಶುಭಿಃ] ಸೃಷ್ಟಿಯ ಸಿದ್ಧಾಂತ ಭಾಗಗಳಿಂದ (ತತ್ವಾವಯವಗಳಿಂದ) [ಆ] ಒಳ್ಳೆಯ ರೀತಿಯಲ್ಲಿ [ಪ್ಯಾಯಸ್ವ] ವೃದ್ಧಿಯನ್ನು ಪ್ರಾಪ್ತಗೊಳಿಸು.

ಭಾವಾರ್ಥ:- ಯಾವ ಉತ್ತಮ ವಿದ್ವಾಂಸನು ಉತ್ತಮ ಓಷಧಿಗಳಿಂದ ಸೃಷ್ಟಿಕ್ರಮದ ವಿದ್ಯೆಗಳಲ್ಲಿ ಮನುಷ್ಯರಿಗೆ ಉನ್ನತಿಯನ್ನು ಮಾಡುತ್ತಾನೋ, ಅವನಿಗೆ ಅನುಕೂಲವಾಗಿ ಎಲ್ಲರೂ ನಡೆಯಬೇಕು.

ಮತ್ತೆ ಅವನು ಹೇಗಿರುವನು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಸಂ ತೇ ಪಯಾಂಸಿ ಸಮು ಯಂತು ವಾಜಾಃ ಸಂ ವೃಷ್ಣ್ಯಾನ್ಯಭಿಮಾತಿಷಾಹಃ ।
ಆಪ್ಯಾಯಮಾನೋ ಅಮೃತಾಯ ಸೋಮ ದಿವಿ ಶ್ರವಾಂಸ್ಯುತ್ತಮಾನಿ ಧಿಷ್ವ ॥೧೮॥

ಪದಾರ್ಥ:- ಹೇ [ಸೋಮ] ಐಶ್ವರ್ಯವನ್ನು ತಲುಪಿಸುವ ವಿದ್ವಾಂಸನೇ! [ತೇ] ನಿನ್ನ ಯಾವ [ವೃಷ್ಣ್ಯಾನಿ] ಪರಾಕ್ರಮವುಳ್ಳ [ಪಯಾಂಸಿ] ಜಲ ಅಥವಾ ಅನ್ನವು ನಮಗೆ [ಸಂಯಂತು] ಉತ್ತಮವಾಗಿ ಪ್ರಾಪ್ತವಾಗಲಿ. ಮತ್ತು [ಅಭಿಮಾತಿಷಾಹಃ] ಯಾರಿಂದ ಶತ್ರುಗಳಿಗೆ ಸಹಿಸುವಂತೆ ಮಾಡಬಹುದೋ ಅವರು [ವಾಜಾಃ] ಸಂಗ್ರಾಮದಲ್ಲಿ [ಸಮ್] ಪ್ರಾಪ್ತವಾಗಲಿ. ಅವರಿಂದ [ದಿವಿ] ವಿದ್ಯಾಪ್ರಕಾಶದಲ್ಲಿ [ಅಮೃತಾಯ] ಮೋಕ್ಷಕ್ಕಾಗಿ [ಅಪ್ಯಾಯಮಾನಃ] ದೃಢವಾದ ಬಲವುಳ್ಳ ನೀನು ಅಥವಾ ಉತ್ತಮ ರಸಕ್ಕಾಗಿ ದೃಢ ಬಲಕಾರಕ ಓಷಧಿಗಳನ್ನು [ಉತ್ತಮಾನಿ] ಅತ್ಯಂತ ಶ್ರೇಷ್ಠ [ಶ್ರವಾಂಸಿ] ವಚನಗಳು ಅಥವಾ ಅನ್ನಗಳಿಂದ [ಸಂಧಿಷ್ವ] ಧಾರಣ ಮಾಡು ಅಥವಾ ಮಾಡುತ್ತದೆ.

ಭಾವಾರ್ಥ:- ಮನುಷ್ಯರು ವಿದ್ಯೆ ಮತ್ತು ಪುರುಷಾರ್ಥದಿಂದ ವಿದ್ವಾಂಸರ ಸಂಗ, ಓಷಧಿಗಳ ಸೇವನೆ ಮತ್ತು ಪ್ರಯೋಜನಗಳಿಂದ ಯಾವ ಯಾವ ಪ್ರಶಂಸಿತ ಕರ್ಮ, ಪ್ರಶಂಸಿತ ಗುಣ ಮತ್ತು ಶ್ರೇಷ್ಠ ಪದಾರ್ಥಗಳನ್ನು ಪಡೆಯುತ್ತಾರೆ. ಅವುಗಳ ಧಾರಣೆ ಮತ್ತು ಅವುಗಳ ರಕ್ಷಣೆ ಹಾಗೂ ಧರ್ಮ, ಅರ್ಥ ಕಾಮಗಳನ್ನು ಸಿದ್ಧಿಸಿಕೊಂಡು ಮೋಕ್ಷಸಿದ್ಧಿಯನ್ನು ಪಡೆಯಬೇಕು.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಯಾ ತೇ ಧಾಮಾನಿ ಹವಿಷಾ ಯಜಂತಿ ತಾ ತೇ ವಿಶ್ವಾ ಪರಿಭೂರಸ್ತು ಯಜ್ಞಮ್ ।
ಗಯಸ್ಫಾನಃ ಪ್ರತರಣಃ ಸುವೀರೋಽವೀರಹಾ ಪ್ರ ಚರಾ ಸೋಮ ದುರ್ಯಾನ್ ॥೧೯॥

ಪದಾರ್ಥ:- ಹೇ [ಸೋಮ] ಪರಮೇಶ್ವರ ಅಥವಾ ವಿದ್ವಾಂಸನೇ! [ತೇ] ನಿನ್ನ ಅಥವಾ ಈ ಓಷಧಿ ಸಮೂಹದ [ಯಾ] ಯಾವ [ವಿಶ್ವ] ಸಮಸ್ತ [ಧಾಮಾನಿ] ಸ್ಥಾನ ಅಥವಾ ಪದಾರ್ಥಗಳು [ಹವಿಷಾ] ವಿದ್ಯಾ ದಾನ ಅಥವಾ ಗ್ರಹಣ ಮಾಡುವ ಕ್ರಿಯೆಗಳಿಂದ [ಯಜ್ಞಮ್] ಕ್ರಿಯಾಮಯವಾದ ಯಜ್ಞವನ್ನು [ಯಜಂತಿ] ಸಂಗತ ಗೊಳಿಸುತ್ತಾರೋ, [ತಾ] ಅವರೆಲ್ಲರೂ [ತೇ] ನಿನ್ನ ಅಥವಾ ಈ ಓಷಧಿ ಸಮೂಹವು ನಮಗೆ ಪ್ರಾಪ್ತವಾಗಲಿ. ಅದರಿಂದ ನೀನು [ಪರಿಭೂಃ] ಎಲ್ಲರ ಮೇಲೂ ವಿರಾಜಮಾನನಾಗಲು [ಗಯಸ್ಫಾನಃ] ಧನವನ್ನು ಹೆಚ್ಚಿಸುವ ಮತ್ತು [ಪ್ರತರಣಃ] ದುಃಖವನ್ನು ಪ್ರತ್ಯಕ್ಷವಾಗಿ ತಪ್ಪಿಸುವವರು [ಸುವೀರಃ] ಉತ್ತಮೋತ್ತಮ ವೀರರಿಂದ ಯುಕ್ತರೂ [ಅವೀರಹಾ] ಒಳ್ಳೆಯ ಶಿಕ್ಷಣ ಮತ್ತು ವಿದ್ಯೆಯಿಂದ ರಹಿತವಾದವರಿಗೂ ಸುಖವನ್ನುಂಟು ಮಾಡುವವರೂ [ಅಸ್ತು] ಆಗಲಿ. ಇದರಿಂದ ನಮಗೆ [ದುರ್ಯ್ಯಾನ್] ಉತ್ತಮ ಸ್ಥಾನಗಳು [ಚರ] ಪ್ರಾಪ್ತವಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವನಾದರೂ ಸೃಷ್ಟಿಯಲ್ಲಿ ಪದಾರ್ಥಗಳನ್ನು ತಿಳಿಯದಿದ್ದಲ್ಲಿ ಅವನಿಂದ ಉಪಕಾರವನ್ನು ತೆಗೆದುಕೊಳ್ಳಲಾಗುವುದಿಲ್ಲ. ಆದುದರಿಂದ ವಿದ್ವಾಂಸರ ಸಾಂಗತ್ಯದಿಂದ ಪೃಥಿವಿಯಿಂದ ಮೊದಲ್ಗೊಂಡು ಪರಮೇಶ್ವರಪರ್ಯಂತ ಯಥಾಯೋಗ್ಯವಾಗಿ ಎಲ್ಲ ಪದಾರ್ಥಗಳನ್ನೂ ತಿಳಿದು ಮನುಷ್ಯರು ಇವುಗಳ ಕ್ರಿಯಾಸಿದ್ಧಿಯನ್ನು ಸದಾ ಮಾಡುತ್ತಿರಬೇಕು.

ಪುನಃ ಅವನು ಏನು ಮಾಡುತ್ತಾನೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಸೋಮೋ ಧೇನುಂ ಸೋಮೋ ಅರ್ವಂತಮಾಶುಂ ಸೋಮೋ ವೀರಂ ಕರ್ಮಣ್ಯಂ
ದದಾತಿ । ಸಾದನ್ಯಂ ವಿದಥ್ಯಂ ಸಭೇಯಂ ಪಿತೃಶ್ರವಣಂ ಯೋ ದದಾಶದಸ್ಮೈ ॥೨೦॥

ಪದಾರ್ಥ:- [ಯಃ] ಯಾವ ಸಭಾಧ್ಯಕ್ಷ ಮೊದಲಾದವರು [ಅಸ್ಮೈ] ಈ ಧರ್ಮಾತ್ಮ ಪುರುಷನಿಗೆ [ಸಾದನ್ಯಂ] ಗೃಹನಿರ್ಮಾಣಕ್ಕೆ ಯೋಗ್ಯವಾದ ಸಾಮಗ್ರಿಯು [ವಿದಥ್ಯಂ] ಯಜ್ಞ ಅಥವಾ ಯುದ್ಧದಲ್ಲಿ ಪ್ರಶಂಸನೀಯವೂ ಹಾಗೂ [ಸಭೇಯಮ್] ಸಭೆಯಲ್ಲಿ ಪ್ರಶಂಸನೀಯವಾದ ಸಾಮಗ್ರಿ ಮತ್ತು ಸಾಮಗ್ರಿಯು ಮತ್ತು [ಪಿತೃಶ್ರವಣಮ್] ಜ್ಞಾನಿಗಳು ಯಾವುದನ್ನು ಶ್ರವಣ ಮಾಡುತ್ತಾರೋ ಅಂತಹ ವ್ಯವಹಾರವನ್ನು [ದದಾಶತ್] ಕೊಡುವರು. ಅವನು [ಸೋಮಃ] ಸೋಮ ಅಂದರೆ ಸಭಾಧ್ಯಕ್ಷ ಮೊದಲಾದವರಿಗೆ ಸೋಮಲತಾದಿ ಓಷಧಿಗಳಿಗಾಗಿ [ಧೇನುಮ್] ವಾಣಿಯನ್ನು [ಆಶುಮ್] ಶೀಘ್ರಗಮನ ಮಾಡುವ [ಅರ್ವಂತಮ್] ಅಶ್ವವನ್ನು ಅಥವಾ [ಸೋಮಃ] ಉತ್ತಮ ಕಾರ್ಯಕರ್ತನಾದ ಸೋಮನು [ಕರ್ಮಣ್ಯಮ್] ಉತ್ತಮೋತ್ತಮ ಕರ್ಮಗಳಿಂದ ಸಿದ್ಧಗೊಳಿಸಿದ [ವೀರಮ್] ವಿದ್ಯೆ ಮತ್ತು ಶೂರತ್ವ ಮೊದಲಾದ ಗುಣಗಳಿಂದ ಕೂಡಿದ ಮನುಷ್ಯನಿಗೆ [ದದಾತಿ] ಕೊಡುತ್ತಾನೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಹೇಗೆ ವಿದ್ವಾಂಸನು ಉತ್ತಮ ಶಿಕ್ಷಣದಿಂದ ಪ್ರಾಪ್ತವಾದ ವಾಣಿಯಿಂದ ಉಪದೇಶ ಮಾಡಿ ಉತ್ತಮ ಪುರುಷಾರ್ಥವನ್ನು ಪಡೆದು ಕಾರ್ಯಸಿದ್ಧಿಯನ್ನು ಪಡೆಯುತ್ತಾನೋ, ಹಾಗೆಯೇ ಸೋಮ ಓಷಧಿಗಳ ಸಮೂಹವು ಶ್ರೇಷ್ಠ ಬಲ ಮತ್ತು ಪುಷ್ಟಿಯನ್ನು ಮಾಡುತ್ತವೆ.

ಮತ್ತೆ ಅವನು ಹೇಗಿರಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಷಾಳ್ಹಂ ಯುತ್ಸು ಪೃತನಾಸು ಪಪ್ರಿಂ ಸ್ವರ್ಷಾಮಪ್ಸಾಂ ವೃಜನಸ್ಯ ಗೋಪಾಮ್ ।
ಭರೇಷುಜಾಂ ಸುಕ್ಷಿತಿಂ ಸುಶ್ರವಸಂ ಜಯಂತಂ ತ್ವಾಮನು ಮದೇಮ ಸೋಮ ॥೨೦॥

ಪದಾರ್ಥ:- ಹೇ **[ಸೋಮ]** ಸೇವೆ ಮೊದಲಾದ ಕಾರ್ಯಗಳ ಅಧಿಪತಿಯೇ! ಹೇಗೆ ಸೋಮಲತಾದಿ ಓಷಧಿಗಳು **[ಯುತ್ಸು]** ಸಂಗ್ರಾಮಗಳಲ್ಲಿ **[ಆಷಾಳ್ಹಂ]** ಶತ್ರುಗಳಿಂದ ತಿರಸ್ಕಾರಕ್ಕೆ ಪ್ರಾಪ್ತವಾಗದಿರುವ ಯೋಗ್ಯನು **[ಪೃತನಾಸು]** ಸೇನೆಗಳಲ್ಲಿ **[ಪಪ್ರಿಮ್]** ಎಲ್ಲ ಪ್ರಕಾರದ ರಕ್ಷಣೆ ಮಾಡುವವನ **[ವೃಜನಸ್ಯ]** ಪರಾಕ್ರಮದ **[ಗೋಪಾಮ್]** ರಕ್ಷಕನು **[ಭರೇಷುಜಾಮ್]** ರಾಜ್ಯ ಸಾಮಗ್ರಿಗೆ ಸಾಧಕವಾದ ಬಾಣಗಳನ್ನು ಮಾಡುವವನು **[ಸುಕ್ಷಿತಿಮ್]** ಯಾವನ ರಾಜ್ಯದಲ್ಲಿ ಉತ್ತಮೋತ್ತಮ ಭೂಮಿ ಇದೆಯೋ **[ಸ್ವರ್ಷಾಮ್]** ಎಲ್ಲರ ಸುಖದಾತನು **[ಅಪ್ಸಾಮ್]** ಜಲವನ್ನು ಕೊಡುವ **[ಸುಶ್ರವಸಮ್]** ಯಾವನ ಉತ್ತಮ ಯಶಸ್ಸು ಅಥವಾ ವಚನವನ್ನು ಕೇಳಲಾಗುತ್ತದೋ **[ಜಯಂತಮ್]** ವಿಜಯ ಪಡೆಯುವವನು **[ತ್ವಾಮ್]** ತಮ್ಮನ್ನು ರೋಗರಹಿತರನ್ನಾಗಿ ಮಾಡಿ ಆನಂದಗೊಳಿಸುವನು. ಹಾಗೆಯೇ ಅವನನ್ನು ಪ್ರಾಪ್ತಿ ಮಾಡಿಕೊಂಡ ನಾವು **[ಅನುಮದೇಮ]** ಹೆಚ್ಚಿನ ಸಂತೋಷವನ್ನು ಪಡೆಯುವಂತಹವರಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರಿಗೆ ಎಲ್ಲ ಗುಣಗಳಿಂದ ಯುಕ್ತನಾದ ಸೇನಾಧ್ಯಕ್ಷ ಮತ್ತು ಸಮಸ್ತ ಗುಣಗಳನ್ನುಂಟುಮಾಡುವ ಸೋಮಲತಾದಿ ಓಷಧಿಗಳ ವಿಜ್ಞಾನ ಮತ್ತು ಸೇವನೆಯ ಹೊರತು ಎಂದಿಗೂ ಉತ್ತಮ ರಾಜ್ಯ ಮತ್ತು ಆರೋಗ್ಯವು ಪ್ರಾಪ್ತವಾಗುವುದಿಲ್ಲ. ಇದಕ್ಕಾಗಿ ಉಕ್ತ ಪ್ರಬಂಧದ ಆಶ್ರಯವನ್ನು ಎಲ್ಲರೂ ಪಡೆಯಬೇಕು.

ಮತ್ತೆ ಅವನು ಹೇಗಿರಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ತ್ವಮಿಮಾ ಓಷಧೀಃ ಸೋಮ ವಿಶ್ವಾ-ಸ್ತ್ವಮಪೋ ಅಜನಯಸ್ತ್ವಂ ಗಾಃ ।
ತ್ವಮಾ ತತಂಥೋರ್ವ೨ಂತರಿಕ್ಷಂ ತ್ವಂ ಜ್ಯೋತಿಷಾ ವಿ ತಮೋ ವವರ್ಥ ॥೨೨॥

ಪದಾರ್ಥ:- ಹೇ **[ಸೋಮ]** ಸಮಸ್ತ ಗುಣಯುಕ್ತ ಆರೋಗ್ಯ ಮತ್ತು ಬಲವನ್ನೀಯುವ ಈಶ್ವರ! ಯಾವ ಕಾರಣದಿಂದ **[ತ್ವಮ್]** ನೀನು **[ಇಮಾಃ]** ಪ್ರತ್ಯಕ್ಷನಾಗಿರುವ **[ವಿಶ್ವಾಃ]** ಸಮಸ್ತ **[ಓಷಧೀಃ]** ರೋಗಗಳನ್ನು ನಾಶಗೊಳಿಸುವ ಸೋಮಲತೆ ಮೊದಲಾದ ಓಷಧಿಗಳನ್ನು **[ಅಜನಯಃ]** ಉತ್ಪನ್ನಮಾಡುವ **[ತ್ವಮ್]** ನೀನು **[ಅಪಃ]** ಜಲಗಳು **[ತ್ವಮ್]** ನೀನು **[ಗಾಃ]** ಇಂದ್ರಿಯಗಳು ಮತ್ತು ಕಿರಣಗಳನ್ನು ಪ್ರಕಾಶಗೊಳಿಸುವೆ. **[ತ್ವಮ್]** ನೀನು **[ಜ್ಯೋತಿಷಾ]** ವಿದ್ಯೆ ಮತ್ತು ಶ್ರೇಷ್ಠ ಶಿಕ್ಷಣದ ಪ್ರಕಾಶದಿಂದ **[ಅಂತರಿಕ್ಷಮ್]** ಆಕಾಶವನ್ನು **[ಉರು]** ಬಹಳ **[ಆ]** ಒಳ್ಳೆಯ ರೀತಿಯಿಂದ **[ತತಂಥ]** ವಿಸ್ತೃತಗೊಳಿಸುತ್ತೀಯೆ. ಮತ್ತು **[ತ್ವಮ್]** ನೀನು ಉಕ್ತ ವಿದ್ಯೆ ಮೊದಲಾದ ಗುಣಗಳಿಂದ **[ತಮಃ]** ಅವಿದ್ಯೆ, ನಿಂದಿತ ಶಿಕ್ಷಣ ಅಥವಾ ಅಂಧಕಾರವನ್ನು **[ವಿವವರ್ಥ]** ಸ್ವೀಕರಿಸುವುದಿಲ್ಲ. ಇದರಿಂದ ನೀನು ಎಲ್ಲ ಜನರಿಂದ ಸೇವೆ ಮಾಡಿಸಿಕೊಳ್ಳಲು ಯೋಗ್ಯನಾಗಿರುವೆ.

ಭಾವಾರ್ಥ:- ಯಾವ ಈಶ್ವರನು ನಾನಾ ಪ್ರಕಾರದ ಸೃಷ್ಟಿ ಮಾಡಿರುವನೋ, ಅವನೇ ಎಲ್ಲ ಮನುಷ್ಯರಿಗೂ ಉಪಾಸನೆ ಮಾಡಲು ಯೋಗ್ಯನಾಗಿರುವನು.

ಅವನು ಮತ್ತೆ ಹೇಗಿರಬೇಕು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ದೇವೇನ ನೋ ಮನಸಾ ದೇವ ಸೋಮ ರಾಯೋ ಭಾಗಂ ಸಹಸಾವನ್ನಭಿ ಯುಧ್ಯ ।
ಮಾ ತ್ವಾ ತನದೀಶಿಷೇ ವೀರ್ಯಸ್ಯೋ-ಭಯೇಭ್ಯಃ ಪ್ರ ಚಿಕಿತ್ಸಾ ಗವಿಷ್ಟೌ ॥೨೩॥

ಪದಾರ್ಥ:- ಹೇ **[ಸಹಸಾವನ್]** ಅತ್ಯಂತ ಬಲಶಾಲಿ **[ದೇವ]** ದಿವ್ಯಗುಣ ಸಂಪನ್ನ **[ಸೋಮ]** ಸರ್ವವಿದ್ಯೆ ಮತ್ತು ಸೇನಾಧ್ಯಕ್ಷನೇ! ನೀನು **[ದೇವೇನ]** ದಿವ್ಯಗುಣಯುಕ್ತ **[ಮನಸಾ]** ವಿಚಾರದಿಂದ **[ರಾಯಃ]** ರಾಜ್ಯಧನದ ಲಾಭವನ್ನು **[ಅಭಿ]** ಶತ್ರುಗಳ ಎದುರು **[ಯುಧ್ಯ]** ಯುದ್ಧ ಮಾಡಿ ಯಾವ ನೀನು **[ನಃ]** ನಮಗೆ ಧನದ **[ಭಾಗಮ್]** ಭಾಗದ **[ಈಶಿಷೇ]** ಸ್ವಾಮಿಯೋ ಆ **[ತ್ವಾ]** ನಿನ್ನನ್ನು **[ಗವಿಷ್ಟೌ]** ಇಂದ್ರಿಯ ಮತ್ತು ಭೂಮಿಯ ರಾಜ್ಯದ ಪ್ರಕಾಶದ ಸಂಗತಿಗಳಲ್ಲಿ ಶತ್ರುಗಳು **[ಮಾತನತ್]** ಪೀಡಿಸದಿರಲಿ. ನೀನು **[ವೀರ್ಯಸ್ಯ]** ಪರಾಕ್ರಮವನ್ನು **[ಉಭಯೋಭ್ಯಃ]** ನಿನ್ನ ಮತ್ತು ಪರಯೋಧರಿಂದ **[ಮಾ ಪ್ರಚಿಕಿತ್ಸ]** ಸಂಶಯಯುಕ್ತರಾಗದಿರಲಿ.

ಭಾವಾರ್ಥ:- ಮನುಷ್ಯರು ಪರಮ ಉತ್ತಮ ಸೇನಾಧ್ಯಕ್ಷ ಮತ್ತು ಓಷಧಿಗಳ ಆಶ್ರಯ ಮತ್ತು ಯುದ್ಧದಲ್ಲಿ ಪ್ರವೃತ್ತರಾಗಿ ಉತ್ಸಾಹದೊಂದಿಗೆ ತಮ್ಮ ಸೇನೆಯ ಜಯ ಮತ್ತು ಶತ್ರುಗಳ ಸೇನೆಯ ಪರಾಜಯಗೊಳಿಸಿ ಚಕ್ರವರ್ತಿ ರಾಜ್ಯದ ಸಂಪತ್ತನ್ನು ಪ್ರಾಪ್ತ ಮಾಡಿಕೊಳ್ಳಬೇಕು.

ಈ ಸೂಕ್ತವನ್ನು ಓದುವ-ಓದಿಸುವ ಮೊದಲಾದ ವಿದ್ಯೆಯನ್ನು, ಓದುವ ಮೊದಲಾದ ಕರ್ಮಗಳ ಸಿದ್ಧಿ ಪಡಿಸುವ [ಸೋಮ] ಶಬ್ದದ ಅರ್ಥದ ಕಥನದಿಂದ ಈ ಸೂಕ್ತದ ಅರ್ಥವು ಪೂರ್ವಸೂಕ್ತದ ಅರ್ಥದೊಂದಿಗೆ ಸಂಬಂಧಪಟ್ಟಿದೆ ಎಂದು ತಿಳಿಯಬೇಕು.

ತೊಂಬತ್ತೊಂದನೆಯ ಸೂಕ್ತ ಸಮಾಪ್ತ

ಸೂಕ್ತ ೯೨

ಮಂತ್ರಸಂಖ್ಯೆ ೧೮ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಉಷಾಃ, ೧೬-೧೮ ಅಶ್ವಿನೌ । ಛಂದಃ - ತ್ರಿಷ್ಟುಪ್ ೧-೪ ಜಗತೀಃ, ೧೩-೧೮ ಉಷ್ಣಿಕ್ । ಸ್ವರಃ-೧-೪ ನಿಷಾಧಃ, ೫-೧೦ ಧೈವತಃ, ೧೧ ಪಂಚಮಃ, ೧೩-೧೮ ಋಷಭಃ.

ಪ್ರಥಮ ಮಂತ್ರದಿಂದ ಉಷಸ ಶಬ್ದದ ಅರ್ಥಕ್ಕೆ ಸಂಬಂಧಿಸಿದ ಕಾರ್ಯಗಳ ಉಪದೇಶವಾಗಿದೆ.

ಏತಾ ಉ ತ್ಯಾ ಉಷಸಃ ಕೇತುಮಕ್ರತ ಪೂರ್ವೇ ಅರ್ಧೇ ರಜಸೋ ಭಾನುಮಂಜತೇ ।
ನಿಷ್ಕೃಣ್ವಾನಾ ಆಯುಧಾನೀವ ಧೃಷ್ಣವಃ ಪ್ರತಿ ಗಾವೋಽರುಷೀರ್ಯಂತಿ ಮಾತರಃ ॥೧॥

ಪದಾರ್ಥ:- ಹೇ ಮನುಷ್ಯರೇ! ನೀವು ಯಾವ **[ಏತಾಃ]** ನೋಡುತ್ತಿರುವ **[ಉ]** ಮತ್ತು ಯಾವ **[ತ್ಯಾಃ]** ನೋಡಲಾಗದಿರುವ ಅಂದರೆ ದೂರದೇಶಗಳಲ್ಲಿರುವ ಅವುಗಳನ್ನು **[ಉಷಸಃ]** ಪ್ರಾತಃಕಾಲದ ಸೂರ್ಯನ ಪ್ರಕಾಶವು **[ಕೇತುಮ್]** ಎಲ್ಲ ಪದಾರ್ಥಗಳ ಜ್ಞಾನವನ್ನು **[ಅಕ್ರತಃ]** ಮಾಡಿಸುತ್ತವೆ. ಯಾವ **[ರಜಸಃ]** ಭೂಗೋಳದ **[ಪೂರ್ವಃ]** ಅರ್ಧಭಾಗದಲ್ಲಿ **[ಭಾನುಮ್]** ಸೂರ್ಯಪ್ರಕಾಶವನ್ನು **[ಅಂಜತೇ]** ಕಳುಹಿಸುತ್ತದೆ. ಮತ್ತು **[ನಿಷ್ಕೃಣ್ವಾನಃ]** ಹಗಲು ರಾತ್ರಿಗಳನ್ನು ಸಿದ್ಧ ಪಡಿಸುತ್ತದೆ. ಅವು **[ಆಯುಧಾನೀವ]** ಹೇಗೆ ವೀರರ ಯುದ್ಧ ವಿದ್ಯೆಯಿಂದ ಪ್ರಯೋಗಿಸಿದ ಬಾಣ ಮೊದಲಾದ ಶಸ್ತ್ರಗಳು ನೇರ ಹಾಗೂ ವಕ್ರವಾಗಿ ಹೋಗಿ ಬರುವಂತೆ **[ಧೃಷ್ಣವಃ]** ಪ್ರಗಲ್ಭತೆಯ ಗುಣವನ್ನೀಯುವ **[ಅರುಷೀಃ]** ರಕ್ತಗುಣ ವಿಶಿಷ್ಟವಾದ ಮತ್ತು **[ಮಾತರಃ]** ತಾಯಿಯಂತೆ ಎಲ್ಲ ಪ್ರಾಣಿಗಳನ್ನು ಮಾನ್ಯ ಮಾಡುವ

[ಪ್ರತಿಗಾವಃ] ಆ ಸೂರ್ಯನ ಪ್ರಕಾಶದ ಪ್ರತ್ಯಾಗಮನ ಅಂದರೆ ಕ್ರಮವಾಗಿ ಏರಿಳಿಯುತ್ತಿರುವುದರಿಂದ ಪ್ರತಿಸ್ಥಳಗಳಿಗೂ [ಯಂತಿ] ಏರಿಳಿತಗಳಿಂದ ತಲುಪುತ್ತದೆ. ಅದನ್ನು ನೀವು ತಿಳಿಯಿರಿ.

ಭಾವಾರ್ಥ:- ಈ ಸೃಷ್ಟಿಯಲ್ಲಿ ಯಾವಾಗಲೂ ಸೂರ್ಯನ ಪ್ರಕಾಶವು ಭೂಗೋಳದ ಅರ್ಧ ಭಾಗವನ್ನು ಪ್ರಕಾಶಪಡಿಸುತ್ತದೆ. ಮತ್ತು ಅರ್ಧಭಾಗದಲ್ಲಿ ಅಂಧಕಾರವಿರುತ್ತದೆ. ಸೂರ್ಯನ ಪ್ರಕಾಶದ ಹೊರತು ಯಾವುದೇ ಪದಾರ್ಥದ ವಿಶೇಷ ಜ್ಞಾನವಾಗುವುದಿಲ್ಲ. ಸೂರ್ಯನ ಕಿರಣಗಳು ಕ್ಷಣ ಕ್ಷಣವೂ ಭೂಗೋಳ ಮೊದಲಾದ ಲೋಕಗಳಲ್ಲಿ ಚಲಿಸುವುದರಿಂದ ಗಮನ ಮಾಡುತ್ತಿರುವಂತೆ ಕಾಣುತ್ತವೆ. ಪ್ರಾತಃಪ್ರಕಾಶಗಳು ಭೂಲೋಕ ಮೊದಲಾದ ಲೋಕಗಳಲ್ಲಿ ನೇರ ಮತ್ತು ವಕ್ರಗತಿಗಳನ್ನು ಪಡೆದಿರುತ್ತವೆ. ಈ ವಿಷಯವನ್ನು ಎಲ್ಲ ಮನುಷ್ಯರೂ ತಿಳಿಯಬೇಕು.

ಮತ್ತೆ ಆ ಪ್ರಾತಃಕಾಲದ ವೇಳೆಯು ಹೇಗಿರುತ್ತದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಉದಪಪ್ತನ್ನರುಣಾ ಭಾನವೋ ವೃಥಾ ಸ್ವಾಯುಜೋ ಅರುಷೀರ್ಗಾ ಅಯುಕ್ಷತ ।
ಅಕ್ರನ್ನುಷಾಸೋ ವಯುನಾನಿ ಪೂರ್ವಥಾ ರುಶಂತಂ ಭಾನುಮರುಷೀರಶಿಶ್ರಯುಃ ॥೨॥

ಪದಾರ್ಥ:- ಹೇ ವಿದ್ವಾಂಸರೇ! ಯಾವ [ಅರುಣಾಃ] ರಕ್ತಗುಣವುಳ್ಳ [ಸ್ವಾಯುಜಃ] ಮತ್ತು ಒಳ್ಳೆಯ ರೀತಿಯ ಎಲ್ಲ ಪದಾರ್ಥಗಳಲ್ಲಿ ಯುಕ್ತವಾಗುವ ಆ [ಉಷಸಃ] ಪ್ರಾತಃಕಾಲೀನ ಸೂರ್ಯನ [ಭಾನವಃ] ಕಿರಣಗಳು [ವೃಥಾ] ಮಿಥ್ಯೆಯಂತೆ [ಉತ್] ಮೇಲೆ [ಅಪಪತ್ತನ್] ಬೀಳುವುವು ಅಂದರೆ ಅವುಗಳಲ್ಲಿ ತಾಪವು ಕಡಿಮೆ ಇರುತ್ತದೆ. ಇದರಿಂದ ಶೀತವೂ ಆಗುತ್ತದೆ ಮತ್ತು ಅವುಗಳಿಂದ **[ಗಾಃ]** ಪೃಥಿವೀ ಮೊದಲಾದ ಲೋಕಗಳು **[ಅರುಷೀಃ]** ರಕ್ತಗುಣದಿಂದ **[ಅಯುಕ್ಷತ]** ಯುಕ್ತವಾಗುತ್ತವೆ. ಯಾವ **[ಅರುಷೀಃ]** ರಕ್ತಗುಣವುಳ್ಳ ಸೂರ್ಯನ ಕಿರಣಗಳು **[ವಯುನಾನಿ]** ಎಲ್ಲ ಪದಾರ್ಥಗಳ ವಿಶೇಷ ಜ್ಞಾನ ಅಥವಾ ಎಲ್ಲ ಕರ್ಮಗಳನ್ನು **[ಅಕ್ರನ್]** ಮಾಡಿಸುತ್ತವೋ ಅವು **[ಪೂರ್ವಥಾ]** ಹಿಂದೆ-ಹಿಂದಕ್ಕೆ **[ರುಶಂತಮ್]** ಅಂಧಕಾರದ ಭೇದಕ **[ಭಾನುಮ್]** ಸೂರ್ಯನ ಸಮಾನನಾಗಿ ಬೇರೆ ಬೇರೆ ದಿನಗಳನ್ನುಂಟುಮಾಡುವ ಸೂರ್ಯನನ್ನು **[ಅಶಿಶ್ರಯುಃ]** ಆಶ್ರಯಿಸುವಂತೆ, ಅವುಗಳ ಸೇವನೆಯನ್ನು ಯುಕ್ತಿಯಿಂದ ಮಾಡಬೇಕು.

ಭಾವಾರ್ಥ:- ಯಾವ ಸೂರ್ಯನ ಕಿರಣಗಳು ಭೂಗೋಳ ಮೊದಲಾದ ಲೋಕಗಳ ಸೇವನೆ ಅಂದರೆ ಅವುಗಳ ಮೇಲೆ ಬೀಳುತ್ತಾ ಕ್ರಮ-ಕ್ರಮವಾಗಿ ಚಲಿಸುತ್ತವೆಯೋ, ಅವು ಪ್ರಾತಃ ಮತ್ತು ಸಾಯಂಕಾಲದ ಸಮಯದಲ್ಲಿ ಭೂಮಿಯ ಸಂಯೋಗದಿಂದ ಕೆಂಪಾಗಿ ಮೋಡಗಳನ್ನೂ ಕೆಂಪಾಗಿಸುತ್ತವೆ. ಮತ್ತು ಯಾವಾಗ ಈ ಪ್ರಾತಃಕಾಲ ಲೋಕಗಳಲ್ಲಿ ಪ್ರವೃತ್ತವಾಗುವ ಅಂದರೆ ಉದಯವಾಗುತ್ತದೋ, ಆಗ ಪ್ರಾಣಿಗಳಿಗೆ ಎಲ್ಲ ಪದಾರ್ಥಗಳ ವಿಶೇಷ ಜ್ಞಾನವುಂಟಾಗುತ್ತದೆ. ಭೂಮಿಯ ಮೇಲೆ ಬಿದ್ದ ಕೆಂಪು ವರ್ಣದ ಸೂರ್ಯನ ಆಶ್ರಯದಿಂದ ಮತ್ತು ಅವುಗಳನ್ನು ಕೆಂಪಾಗಿಸಿ ಓಷಧಿಗಳ ಸೇವನೆ ಮಾಡುತ್ತದೆ. ಅವುಗಳ ಸೇವನೆಯನ್ನು ಜಾಗ್ರದವಸ್ಥೆಯಲ್ಲಿ ಮನುಷ್ಯರು ಮಾಡಬೇಕು.

ಮತ್ತೆ ಅವು ಏನು ಮಾಡುತ್ತವೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅರ್ಚಂತಿ ನಾರೀರಪಸೋ ನ ವಿಷ್ಟಿಭಿಃ ಸಮಾನೇನ ಯೋಜನೇನಾ ಪರಾವತಃ ।
ಇಷಂ ವಹಂತೀಃ ಸುಕೃತೇ ಸುದಾನವೇ ವಿಶ್ವೇದಹ ಯಜಮಾನಾಯ ಸುನ್ವತೇ ॥೩॥

ಪದಾರ್ಥ:- ಸೂರ್ಯನ ಕಿರಣಗಳು [ವಿಷ್ಟಿಭಿಃ] ತಮ್ಮ ವ್ಯಾಪ್ತಿಯಿಂದ [ಸಮಾನೇನ] ಸಮಾನವಾದ [ಯೋಜನೇನ] ಯೋಗದಿಂದ ಅಂದರೆ, ಎಲ್ಲ ಪದಾರ್ಥಗಳಲ್ಲಿ ಒಂದೇ ರೀತಿಯಾಗಿ ವ್ಯಾಪಿಸಿ [ಪರಾವತಃ] ದೂರ

ದೇಶದಿಂದ [ನ] ಹೇಗೆ [ನಾರೀಃ] ಪುರುಷರಿಗೆ ಅನುಕೂಲರಾದ ಸ್ತ್ರೀಯರು [ಸುಕೃತೇ] ಧರ್ಮಿಷ್ಠರು [ಸುದಾನವೇ] ಉತ್ತಮದಾತರೂ [ಸುನ್ವತೇ] ಓಷಧೀ ಮೊದಲಾದ ಪದಾರ್ಥಗಳ ರಸವನ್ನು ಹಿಂಡಿ ಸೇವನೆ ಮಾಡುವವರು ಮತ್ತು [ಯಜಮಾನಾಯ] ಪುರುಷಾರ್ಥಿ ಪುರುಷನಿಗಾಗಿ [ವಿಶ್ವಾ] ಸಮಸ್ತ ಉತ್ತಮೋತ್ತಮ [ಅಪಸಃ] ಕರ್ಮಗಳು ಮತ್ತು [ಇಷಮ್] ಅನ್ನಾದಿ ಪದಾರ್ಥಗಳನ್ನು [ಆವಹಂತಿ] ಚೆನ್ನಾಗಿ ಪ್ರಾಪ್ತಗೊಳಿಸಿ ಅವರ [ಅಹ] ದುಃಖಗಳ ನಾಶದಿಂದ [ಅರ್ಚಂತಿ] ಸತ್ಕಾರ ಮಾಡುತ್ತಾರೋ ಹಾಗೆಯೇ ಉಷೆಯೂ ಇದ್ದಾಳೆ. ಅದರ ಸೇವನೆಯನ್ನು ಯಥಾಯೋಗ್ಯವಾಗಿ ಎಲ್ಲರೂ ಮಾಡಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಪ್ರತಿವ್ರತಾ ಸ್ತ್ರೀಯರು ತಮ್ಮ ತಮ್ಮ ಪತಿಗಳ ಸೇವೆ ಮಾಡಿ ಅವರ ಸತ್ಕಾರವನ್ನು ಮಾಡುತ್ತಾರೋ, ಹಾಗೆಯೇ ಸೂರ್ಯನ ಕಿರಣಗಳು ಭೂಮಿಯ ಮೇಲೆ ಬಿದ್ದು ನಿವೃತ್ತವಾಗಲಿ. ಮತ್ತು ಅಂತರಿಕ್ಷದಲ್ಲಿ ಪ್ರಕಾಶವನ್ನು ಪ್ರಕಟಗೊಳಿಸಿ ಸಮಸ್ತವಸ್ತುಗಳನ್ನು ಪುಷ್ಟಗೊಳಿಸಿ ಎಲ್ಲ ಪ್ರಾಣಿಗಳಿಗೂ ಸುಖವನ್ನು ಕೊಡುತ್ತವೆ.

ಅವು ಮತ್ತೆ ಹೇಗಿರುತ್ತವೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಧಿ ಪೇಶಾಂಸಿ ವಪತೇ ನೃತೂರಿವಾ-ಪೋರ್ಣುತೇ ವಕ್ಷ ಉಸ್ರೇವ ಬರ್ಜಹಮ್ ।
ಜ್ಯೋತಿರ್ವಿಶ್ವಸ್ಮೈ ಭುವನಾಯ ಕೃಣ್ವತೀ ಗಾವೋ ನ ವ್ರಜಂ ವ್ಯು೧ಷಾ ಆವರ್ತಮಃ ॥೪॥

ಪದಾರ್ಥ:- ಹೇ ಮನುಷ್ಯರೇ! ಯಾವ [ಉಷಾಃ] ಸೂರ್ಯನ ಕಿರಣಗಳು [ನೃತೂರಿವ] ಹೇಗೆ ನಾಟಕ ಮಾಡುವವನು ಅಥವಾ ನಟನು ಅಥವಾ ನರ್ತಿಸುವವನು ಅಥವಾ ಬಹುರೂಪಿಯಾಗಿ ಅನೇಕ ರೂಪಗಳನ್ನು ಧರಿಸುತ್ತಾನೋ ಹಾಗೆ **[ಪೇಶಾಂಸಿ]** ನಾನಾ ಪ್ರಕಾರದ ರೂಪಗಳನ್ನು **[ಅಧಿವಪತೇ]** ಹಾಕಿಸುವವನು ಅಥವಾ **[ವಕ್ಷಃ ಉಸ್ರೇವ]** ಹೇಗೆ ಗೋವು ತನ್ನ ಕೆಚ್ಚಲನ್ನು ಹೇಗೆ **[ಬರ್ಜಹಮ್]** ಕತ್ತಲನ್ನು ತೊಲಗಿಸುವ ಪ್ರಕಾಶವನ್ನು ನಾಶಗೊಳಿಸುವ ಅಂಧಕಾರವನ್ನು **[ಅಪ ಊರ್ಣುತೇ]** ಆಚ್ಛಾದಿಸುವುದು ಅಥವಾ [ವಿಶ್ವಸ್ಮೈ] ಸಮಸ್ತ **[ಭುವನಾಯ]** ಉತ್ಪನ್ನವಾಗಿರುವ ಲೋಕಗಳಿಗಾಗಿ **[ಜ್ಯೋತಿಃ]** ಪ್ರಕಾಶವನ್ನು **[ಕೃಣ್ವತೀ]** ಮಾಡುತ್ತದೆ. **[ವ್ರಜಂ ಗಾವೋ ನ]** ಹೇಗೆ ನಿವಾಸ ಸ್ಥಾನಕ್ಕೆ ಗೋವು ತಲುಪುತ್ತದೋ ಹೇಗೆ ಸ್ಥಾನಾಂತರಗಳಿಗೆ ಹೋಗುತ್ತದೆಯೋ ಮತ್ತು **[ತಮಃ]** ಅಂಧಕಾರವನ್ನು **[ವ್ಯಾವಃ]** ತನ್ನ ಪ್ರಕಾಶದಿಂದ ಹೂಡಿಸುತ್ತದೆಯೋ, ಹಾಗೆ ಉತ್ತಮ ಸ್ತ್ರೀಯು ತನ್ನ ಪತಿಯನ್ನು ಪ್ರಸನ್ನಗೊಳಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ಸೂರ್ಯನ ಕೇವಲ ಪ್ರಕಾಶವಿದೆಯೋ ಅದು ದಿನ [ಹಗಲು] ಎನಿಸುತ್ತದೆ. ಮತ್ತು ಸೂರ್ಯನ ಕಿರಣಗಳು ಭೂಮಿಯ ಮೇಲೆ ಬೀಳುತ್ತವೋ ಅದು [ಉಷಾ] ಉಷಃಕಾಲವೆಂದು ಹೇಳಲ್ಪಡುವುದು.

ಮತ್ತೆ ಅವು ಹೇಗಿರುತ್ತವೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಪ್ರತ್ಯರ್ಚೀ ರುಶದಸ್ಯಾ ಅದರ್ಶಿ ವಿ ತಿಷ್ಠತೇ ಬಾಧತೇ ಕೃಷ್ಣಮಭ್ವಮ್ । ಸ್ವರುಂ ನ
ಪೇಶೋ ವಿದಥೇಷ್ವಂಜಞ್-ಚಿತ್ರಂ ದಿವೋ ದುಹಿತಾ ಭಾನುಮಶ್ರೇತ್ ॥೫॥

ಪದಾರ್ಥ:- ಯಾವ [ಅಸ್ಯಾಃ] ಈ ಪ್ರಾತಃಕಾಲದ ಅಂಧಕಾರವನ್ನು ನಾಶಗೊಳಿಸುವ ಉಷೆಯು [ರುಶತ] ಅಂಧಕಾರವನ್ನು ನಾಶಮಾಡುವ [ಅರ್ಚಿಃ] ಪ್ರಕಾಶವು [ಅಂಭ್ವಮ್] ದೊಡ್ಡ [ಕೃಷ್ಣಮ್] ಕಪ್ಪು ಬಣ್ಣದ ಅಂಧಕಾರವನ್ನು

[ಬಾಧತೇ] ಬೇರೆ ಮಾಡುತ್ತದೋ ಅದು ಯಾವ [ದಿವಃ] ಪ್ರಕಾಶರೂಪ ಸೂರ್ಯನ [ದುಹಿತಾ] ಪುತ್ರಿಯ ಸಮಾನಳು [ಸ್ವರುಮ್] ತಪಿಸುವಂತಹ ಸೂರ್ಯನ [ನ] ಸಮಾನ [ಚಿತ್ರಮ್] ಅದ್ಭುತವಾದ [ಭಾನುಮ್] ಕಾಂತಿ [ಪೇಶಃ] ರೂಪವನ್ನು [ಅಶ್ರೇತ್] ಆಶ್ರಯಿಸುತ್ತದೆ. ಅಥವಾ ಹೀಗೆ ಋತ್ವಿಜರು [ವಿದಥೇಷು] ಯಜ್ಞದ ಕ್ರಿಯೆಗಳಲ್ಲಿ [ಅಂಜನ್] ಪ್ರಾಪ್ತರಾಗುವರೋ ಹಾಗೆ [ವಿತಿಷ್ಠತೇ] ವಿವಿಧ ಪ್ರಕಾರಗಳಿಂದ ಸ್ಥಿರರಾಗುತ್ತಾರೋ ಆ ಪ್ರಾತಃಕಾಲದ ವೇಳೆಯು ನಮಗೆ [ಪ್ರತ್ಯದರ್ಶಿ] ಪ್ರತೀತವಾಗುವುದು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನ ಪ್ರಕಾಶವೂ ಸ್ವಯಂ ಪ್ರಕಾಶವಾಗುವುದರಿಂದ ಎಲ್ಲವನ್ನೂ ಪ್ರಕಾಶಗೊಳಿಸಿ ಚೆನ್ನಾಗಿ ಅಂಕುಡೊಂಕಾಗಿ ಕಾಣಿಸುವುದು. ಆ ಪ್ರಾತಃಕಾಲ ವೇಳೆಯು ಸೂರ್ಯನ ಪುತ್ರಿಗೆ ಸಮಾನವಾಗಿದೆ ಎಂದು ತಿಳಿಯಬೇಕು.

ಮತ್ತೆ ಅದು ಹೇಗಿದೆ ಮತ್ತು ಆದರಿಂದ ಜೀವನು ಏನು ಮಾಡುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅತಾರಿಷ್ಮ ತಮಸಸ್ಪಾರಮಸ್ಯೋ-ಷಾ ಉಚ್ಛಂತೀ ವಯುನಾ ಕೃಣೋತಿ ।
ಶ್ರಿಯೇ ಛಂದೋ ನ ಸ್ಮಯತೇ ವಿಭಾತೀ ಸುಪ್ರತೀಕಾ ಸೌಮನಸಾಯಾಜೀಗಃ ॥೬॥

ಪದಾರ್ಥ:- ಯಾವ [ಶ್ರಿಯೇ] ವಿದ್ಯೆ ಮತ್ತು ರಾಜ್ಯದ ಪ್ರಾಪ್ತಿಗಾಗಿ [ಛಂದಃ] ವೇದಗಳ [ನ] ಸಮಾನವಾಗಿ [**ಉಚ್ಛಂತೀ**] ಅಂಧಕಾರವನ್ನು ದೂರಗೊಳಿಸುವುದೋ ಮತ್ತು [ವಿಭಾತೀ] ವಿವಿಧ ಪ್ರಕಾರದ ಮೂರ್ತರೂಪವಾದ ಪದಾರ್ಥಗಳನ್ನು ಪ್ರಕಾಶಗೊಳಿಸುವುದು ಮತ್ತು [**ಸುಪ್ರತೀಕಾ**] ಪದಾರ್ಥಗಳನ್ನು ಪ್ರಾಪ್ತಿ ಮಾಡಿಸುವುದು ಆ [**ಉಷಾಃ**] ಪ್ರಾತಃಕಾಲದ ವೇಳೆಯು ಎಲ್ಲರಿಗೂ [**ಸೌಮನಸಾಯ**] ಧಾರ್ಮಿಕ ಜನರ ಮನೋರಂಜನೆಗಾಗಿ [**ವಯುನಾನಿ**] ಪ್ರಶಂಸನೀಯ ಅಥವಾ ಮನೋಹರವಾದ ಕಾರ್ಯಗಳನ್ನು [**ಕೃಣೋತಿ**] ಮಾಡಿಸುವುದು [**ಅಜೀಗಃ**] ಅಂಧಕಾರವನ್ನು ನುಂಗುವುದು ಮತ್ತು [**ಸ್ಮಯತೇ**] ಆನಂದವನ್ನೀಯುವುದು. ಅದರಿಂದ [**ಅಸ್ಯ**] ಈ [**ತಮಸಃ**] ಅಂಧಕಾರವನ್ನು [**ಪಾರಮ್**] ದೂರವಾಗುವುದು ಮತ್ತು ಹಾಗೆ ದುಃಖಗಳನ್ನು ದಾಟಿ ಆನಂದವನ್ನು ನಾವು [**ಅತಾರಿಷ್ಮ**] ಪ್ರಾಪ್ತವಾಗುವುದು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮಾನವರು ಈ ಉಷಾ, ಪ್ರಾತಃಕಾಲದ ವೇಳೆಯಲ್ಲಿ ಕರ್ಮ, ಜ್ಞಾನ, ಆನಂದ, ಪುರುಷಾರ್ಥ ಧನಪ್ರಾಪ್ತಿಗಳಿಂದ ದುಃಖರೂಪೀ ಅಂಧಕಾರವನ್ನು ನಿವಾರಣೆ ಗೊಳಿಸುವುದಾಗಿದೆಯೋ ಹಾಗೆ ಈ ವೇಳೆಯಲ್ಲಿ ಉತ್ತಮ ಪುರುಷಾರ್ಥದಿಂದ ಪ್ರಯತ್ನದಲ್ಲಿ ಸ್ಥಿತರಾಗಿ ಸುಖವನ್ನು ಹೆಚ್ಚಿಸುತ್ತಾ ಮತ್ತು ದುಃಖವನ್ನು ನಾಶಗೊಳಿಸಬೇಕು.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಭಾಸ್ವತೀ ನೇತ್ರೀ ಸೂನೃತಾನಾಂ ದಿವಃ ಸ್ತವೇ ದುಹಿತಾ ಗೋತಮೇಭಿಃ । ಪ್ರಜಾವತೋ
ನೃವತೋ ಅಶ್ವಬುಧ್ಯಾ-ನುಷೋ ಗೋಅಗ್ರಾ ಉಪ ಮಾಸಿ ವಾಜಾನ್ ॥೭॥

ಪದಾರ್ಥ:- ಹೇಗೆ [ಸೂನೃತಾನಾಮ್] ಒಳ್ಳೊಳ್ಳೆಯ ಕೆಲಸಗಳು ಅಥವಾ ಅನ್ನ ಮೊದಲಾದ ಪದಾರ್ಥಗಳನ್ನು [ಭಾಸ್ವತೀ] ಪ್ರಕಾಶಿಸುವ [ನೇತ್ರೀ] ಮತ್ತು ಮನುಷ್ಯರ ವ್ಯವಹಾರಗಳನ್ನು ಪ್ರಾಪ್ತಿ ಮಾಡಿಸುವ ಅಥವಾ [ದಿವಃ] ಪ್ರಕಾಶಮಾನ ಸೂರ್ಯನ [ದುಹಿತಾ] ಕನ್ಯೆಯ ಸಮಾನವಾದ [ಉಷಃ] ಪ್ರಾತಃಕಾಲದ ವೇಳೆಯು [ಗೋತಮೇಭಿಃ] ಸಮಸ್ತ ವಿದ್ಯೆಗಳನ್ನು ಒಳ್ಳೆಯ ರೀತಿಯಲ್ಲಿ ಹೇಳುವ-ಆಲಿಸುವ ವಿದ್ವಾಂಸರ ಸ್ತುತಿ ಮಾಡಲಾಗುತ್ತದೆ. ಹಾಗೆ

ಇದರಲ್ಲಿ ನಾನು [ಸ್ತವೇ] ಪ್ರಶಂಸೆಯನ್ನು ಮಾಡುವಂತಾಗಲಿ. ಹೇ ಸ್ತ್ರೀ ಹೇಗೆ ಈ ಉಷೆಯ [ಪ್ರಜಾವತಃ] ಪ್ರಶಂಸನೀಯ ಪ್ರಜೆಗಳಿಂದ ಕೂಡಿ [ನೃವತಃ] ಮತ್ತು ಸೇನೆ ಮೊದಲಾದ ಕೆಲಸಗಳಲ್ಲಿ ಬಹಳ ನಾಯಕರಿಂದ ಕೂಡಿದ [ಅಶ್ವಬುಧ್ಯಾನ್] ಯಾವ ವೇಗವಂತ ಕುದುರೆಗಳನ್ನು ಮತ್ತೆ ಮತ್ತೆ ಉತ್ತೇಜನಗೊಳಿಸುತ್ತಾ [ಗೋ ಅಗ್ರಾನ್] ಯಾವ ರಾಜ್ಯ, ಭೂಮಿ ಮೊದಲಾದ ಪದಾರ್ಥಗಳು ದೊರೆತು, ಆ [ವಾಜಾನ್] ಸಂಗ್ರಾಮಗಳಲ್ಲಿ [ಉಪಮಾಸಿ] ಸಮೀಪವಾಗುತ್ತದೆ. ಅಂದರೆ ಹೇಗೆ ಪ್ರಾತಃಕಾಲದ ವೇಳೆಯಿಂದ ಅಂಧಕಾರವು ನಾಶವಾಗಿ ಎಲ್ಲ ಪ್ರಕಾರದ ಪದಾರ್ಥಗಳು ಪ್ರಕಾಶಿತವಾಗುವುವೋ ಹಾಗೆಯೇ ನೀನು ಕೂಡ ಆಗು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಹೇಗೆ ಎಲ್ಲ ಉತ್ತಮ ಗುಣಲಕ್ಷಣಗಳಿಂದ ಕೂಡಿದ ಕನ್ಯೆಯಿಂದ ಪಿತಾ, ಮಾತಾ, ಬಂಧುಗಳು ಮೊದಲಾದವರು ಸುಖಿಗಳಾಗುವರೋ, ಹಾಗೆ ಪ್ರಾತಃಕಾಲದ ಗುಣಾವಗುಣಗಳನ್ನು ಪ್ರಕಾಶಪಡಿಸುವ ವಿದ್ಯೆಯಿಂದ ವಿದ್ವಾಂಸರು ಸುಖಿಗಳಾಗುವರು.

ಮತ್ತೆ ಅದರಿಂದ ಏನು ದೊರೆಯುತ್ತದೆ ಮತ್ತು ಅದು ಏನು ಮಾಡುತ್ತದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಉಷಸ್ತಮಶ್ಯಾಂ ಯಶಸಂ ಸುವೀರಂ ದಾಸಪ್ರವರ್ಗಂ ರಯಿಮಶ್ವಬುಧ್ಯಮ್ ।
ಸುದಂಸಸಾ ಶ್ರವಸಾ ಯಾ ವಿಭಾಸಿ ವಾಜಪ್ರಸೂತಾ ಸುಭಗೇ ಬೃಹಂತಮ್ ॥೮॥

ಪದಾರ್ಥ:- ಯಾವ [ವಾಜಪ್ರಸೂತಾ] ಸೂರ್ಯನ ಗತಿಯಿಂದ ಉತ್ಪನ್ನವಾದ [ಸುಭಗಾ] ಯಾರೊಡನೆ ಉತ್ತಮೋತ್ತಮ ಐಶ್ವರ್ಯದ ಪದಾರ್ಥಗಳು ಸಂಯುಕ್ತವಾಗಿರುತ್ತದೋ ಅದು [**ಉಷಃ**] ಪ್ರಾತಃಕಾಲದ ಸಮಯವಾಗಿದೆ. ಅದು ಯಾವ [**ಸುದಂಸಸಾ**] ಉತ್ತಮ ಕರ್ಮವುಳ್ಳ [**ಶ್ರವಸಾ**] ಪೃಥಿವೀ ಮೊದಲಾದ ಅನ್ನದ ಜೊತೆಗೆ ವರ್ತಮಾನವಾದ ಅಥವಾ [**ಅಶ್ವಬುಧ್ಯಮ್**] ಯಾವ ಸಹಾಯತೆಯಿಂದ ಕುದುರೆಗಳಿಗೆ ಶಿಕ್ಷಣವನ್ನೀಯುವ [**ದಾಸಪ್ರವರ್ಗಮ್**] ಅದರಿಂದ ಸೇವಕರು ಅಂದರೆ ದಾಸೀ ಕೆಲಸಗಳನ್ನು ಮಾಡುವವರು ಇರುವ [**ಸುವೀರಮ್**] ಅದರಿಂದ ಚೆನ್ನಾಗಿ ಶಿಕ್ಷಣವನ್ನು ಪಡೆದ ವೀರಜನರು ಇರುವರೋ, ಆ [**ಬೃಹಂತಮ್**] ಯಾವಾಗಲೂ ಅತಿಯಾಗಿ ಬೆಳೆಯುತ್ತಾ ಮತ್ತು [**ಯಶಸಮ್**] ಎಲ್ಲ ರೀತಿಯ ಪ್ರಶಂಸೆಗಳಿಂದ ಕೂಡಿದ [**ರಯಿಮ್**] ವಿದ್ಯೆ ಮತ್ತು ರಾಜ್ಯಧನಗಳನ್ನು [**ವಿಭಾಸಿ**] ಒಳ್ಳೆಯ ರೀತಿಯಲ್ಲಿ ಪ್ರಕಾಶಮಾಡುತ್ತವೋ, [**ತಮ್**] ಅವುಗಳನ್ನು ನಾನು [**ಅಶ್ಯಾಮ್**] ಪಡೆಯುವಂತಾಗಲಿ.

ಭಾವಾರ್ಥ:- ಯಾವ ಜನರು ಪ್ರಾತಃಕಾಲದಲ್ಲಿ ಗುಣ ಅವಗುಣಗಳನ್ನು ತಿಳಿಸುವ ವಿದ್ಯೆಯಿಂದ ಉತ್ತಮ ಪ್ರಯತ್ನಗಳನ್ನು ಮಾಡುವವರು ಈ ಎಲ್ಲ ವಸ್ತುಗಳನ್ನು ಪಡೆದು ಸುಖದಿಂದ ಪರಿಪೂರ್ಣರಾಗುವರು. ಆದರೆ ಬೇರೆಯವರಲ್ಲ.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ವಿಶ್ವಾನಿ ದೇವೀ ಭುವನಾಭಿಚಕ್ಷ್ಯಾ ಪ್ರತೀಚೀ ಚಕ್ಷುರುರ್ವಿಯಾ ವಿ ಭಾತಿ ।
ವಿಶ್ವಂ ಜೀವಂ ಚರಸೇ ಬೋಧಯಂತೀ ವಿಶ್ವಸ್ಯ ವಾಚಮವಿದನ್ಮನಾಯೋಃ ॥೯॥

ಪದಾರ್ಥ:- ಹೇ ಸ್ತ್ರೀ! ಹೇಗೆ [ಪ್ರತೀಚೀ] ಸೂರ್ಯನ ಚಲನೆಯಿಂದ ಆಚೆಯ ದಿಕ್ಕಿಗೆ ನಡೆಯುವ ಮತ್ತು [ಚರಸೇ] ವ್ಯವಹಾರ ಮಾಡುವ ಅಥವಾ ಸುಖ ಮತ್ತು ದುಃಖಗಳನ್ನು ಭೋಗಿಸಲು [ವಿಶ್ವಮ್] ಎಲ್ಲ [ಜೀವಮ್] ಜೀವರುಗಳಿಗೆ [ಬೋಧಯಂತೀ] ಎಚ್ಚರಿಸುತ್ತಾ [ದೇವೀ] ಪ್ರಕಾಶವನ್ನು ಪಡೆದ [ಉಷಾಃ] ಪ್ರಾತಃಕಾಲದ ವೇಳೆ

[ಮನಾಯೋಃ] ಮರ್ಯಾದೆಯಿಂದ ಆಚರಿಸುವ [ವಿಶ್ವಸ್ಯ] ಪ್ರಾಣಿಮಾತ್ರರ [ವಾಜಮ್] ವಾಣಿಯು [ಅವಿದತ್] ಪ್ರಾಪ್ತಿಯಾಗುವುದು [ಚಕ್ಷು] ಮತ್ತು ಕಣ್ಣುಗಳಂತೆ ಎಲ್ಲ ವಸ್ತುಗಳನ್ನು ನೋಡುವುದಕ್ಕೆ ಆಧಾರವಾದ [ವಿಶ್ವಾನಿ] ಎಲ್ಲ [ಭುವನಾ] ಲೋಕಗಳನ್ನು [ಅಭಿಚಕ್ಷ್ಯ] ಎಲ್ಲ ರೀತಿಯಿಂದ ಪ್ರಕಾಶಪಡಿಸುತ್ತಾ [ಉರ್ವಿಯಾ] ಪೃಥಿವಿಯ ಜೊತೆ [ವಿಭಾತಿ] ಪ್ರಕಾಶಪಡಿಸುವಂತೆ ನೀನು ಕೂಡ ಆಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಉತ್ತಮ ಸ್ತ್ರೀಯು ಎಲ್ಲ ರೀತಿಯಿಂದ ತನ್ನ ಪತಿಯನ್ನು ಆನಂದಪಡಿಸುವಳೋ ಹಾಗೆ ಪ್ರಾತಃಕಾಲದ ವೇಳೆಯು ಸಮಸ್ತ ಜಗತ್ತಿಗೆ ಆನಂದವನ್ನು ಕೊಡುವುದು.

ಮತ್ತೆ ಅದು ಹೇಗಿದೆ ಮತ್ತು ಏನು ಮಾಡುತ್ತದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಪುನಃಪುನರ್ಜಾಯಮಾನಾ ಪುರಾಣೀ ಸಮಾನಂ ವರ್ಣಮಭಿ ಶುಮ್ಭಮಾನಾ ।
ಶ್ವಘ್ನೀವ ಕೃತ್ನುರ್ವಿಜ ಆಮಿನಾನಾ ಮರ್ತಸ್ಯ ದೇವೀ ಜರಯಂತ್ಯಾಯುಃ ॥೧೦॥

ಪದಾರ್ಥ:- ಯಾವ [ಶ್ವಘ್ನೀವ] ನಾಯಿಗಳನ್ನು ಮತ್ತು ಜಿಂಕೆಗಳನ್ನು ಕೊಲ್ಲುವ ತೋಳದಂತೆ ಅಥವಾ [ಕೃತ್ನುಃ] ಛೇದಿಸುವಂತಹ ಶ್ವೇನಿಯು (ಡೇಗೆಯು) [ವಿಜಃ] ಅತ್ತಿತ್ತ ಚಲಿಸುವ ಪಕ್ಷಿಗಳನ್ನು ಛೇದಿಸುತ್ತದೆ. ಹಾಗೆ [ಅಮಿನಾನಾ] ಹಿಂಸೆಯಿಂದ [ಮರ್ತಸ್ಯ] ಸಾಯುತ್ತಾ ಜೀವಿಸುತ್ತಾ ಇರುವ ಪ್ರಾಣಿಗಳ [ಆಯುಃ] ಆಯುಸ್ಸನ್ನು [ಜರಯಂತೀ] ಹೀನಗೊಳಿಸುತ್ತಾ [ಪುನಃ ಪುನಃ] ಮತ್ತೆ ಮತ್ತೆ [ಜಾಯಮಾನಾ] ಉತ್ಪನ್ನವಾಗುವ [ಸಮಾನಮ್] ರೀತಿಯಿಂದ [ವರ್ಣಮ್] ರೂಪವನ್ನು [ಅಭಿ ಶುಂಭಮಾನಾ] ಎಲ್ಲ ಕಡೆಗಳಿಂದ ಪ್ರಕಾಶಗೊಳಿಸುತ್ತಾ ಅಥವಾ [ಪುರಾಣೀ] ಸದಾ ವರ್ತಮಾನವಾಗಿರುವ [ದೇವೀ] ಪ್ರಕಾಶಮಾನನಾದ ಪ್ರಾತಃಕಾಲವು ಮನುಷ್ಯರಿಗೆ ಸದಾ ಸೇವನೆಗೆ ಯೋಗ್ಯವಾಗಿದೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ತೋಳವು ಹೇಗೆ ಹೊಂಚುಹಾಕಿ ಅಥವಾ ನೇರವಾಗಿ ಕಾಡುಪ್ರಾಣಿಗಳನ್ನು ಕೊಲ್ಲುತ್ತದೋ ಮತ್ತು ಡೇಗೆಯು ಹಾರುತ್ತಾ ಹಕ್ಕಿಗಳನ್ನು ಕೊಲ್ಲುವುದೋ, ಅದೇ ರೀತಿ ಈ ಪ್ರಾತಃಕಾಲದಲ್ಲಿ ಮಲಗಿರುವ ನಮ್ಮ ಆಯುಸ್ಸನ್ನು ಕೊಂಚ ಕೊಂಚವಾಗಿ ಅಂದರೆ ಪ್ರತಿದಿನವೂ ಕತ್ತರಿಸುತ್ತದೆ. ಹಾಗೆ ತಿಳಿದು ಮತ್ತು ಆಲಸ್ಯವನ್ನು ಬಿಟ್ಟು ನಾವು ರಾತ್ರಿಯ ನಾಲ್ಕನೆಯ ಜಾವದಲ್ಲಿ ಎದ್ದು ವಿದ್ಯೆ, ಧರ್ಮ ಮತ್ತು ಪರೋಪಕಾರ ಮೊದಲಾದ ವ್ಯವಹಾರಗಳಲ್ಲಿ ನಿತ್ಯವೂ ಉಚಿತ ರೀತಿಯಲ್ಲಿ ವರ್ತಿಸಬೇಕು. ಯಾರಿಗೆ ಈ ರೀತಿಯ ಬುದ್ಧಿ ಇದೆಯೋ ಅವರು ಆಲಸ್ಯ ಮತ್ತು ಅಧರ್ಮದ ಮಧ್ಯದಲ್ಲಿ ಹೇಗೆ ಪ್ರವೃತ್ತರಾಗುವರು!

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ವ್ಯೂರ್ಣ್ವತೀ ದಿವೋ ಅಂತಾँ ಅಬೋ-ಧ್ಯಪ ಸ್ವಸಾರಂ ಸನುತರ್ಯುಯೋತಿ ।
ಪ್ರಮಿನತೀ ಮನುಷ್ಯಾ ಯುಗಾನಿ ಯೋಷಾ ಜಾರಸ್ಯ ಚಕ್ಷಸಾ ವಿ ಭಾತಿ ॥೧೧॥

ಪದಾರ್ಥ:- ಹೇ ಮನುಷ್ಯರೇ! ಪ್ರಾತಃಕಾಲದ ವೇಳೆಯು ಹೇಗೆ [ಯೋಷಾ] ಕಾಮಿನಿ ಸ್ತ್ರೀಯು [ಜಾರಸ್ಯ] ವ್ಯಭಿಚಾರಿ ಲಂಪಟ ಕುಮಾರ್ಗೀ ಪುರುಷನ ಯೌವನವನ್ನು ನಾಶ ಮಾಡುತ್ತಾಳೋ ಹಾಗೆಯೇ ಎಲ್ಲ ಆಯುಸ್ಸನ್ನು [ಸುಮತಃ] ನಿರಂತರ [ಪ್ರಮಿನತೀ] ನಾಶ ಮಾಡುತ್ತಾ ಮತ್ತು [ಸ್ವಸಾರಂ] ತನ್ನ ತಂಗಿಯ ಸಮಾನ ಯಾವ ರಾತ್ರಿ ಇದೆಯೋ ಅದನ್ನು [ವ್ಯೂರ್ಣ್ವತೀ] ಹೊದಿಸುತ್ತಾ [ಅಪ ಯುಯೋತಿ] ಅದನ್ನು ದೂರ ಮಾಡುತ್ತದೆ. ಅಂದರೆ

ದಿನವನ್ನು ದೂರ, ಬೇರೆ ಮಾಡುತ್ತದೆ. ಮತ್ತು ನೀವು [ವಿ] ಒಳ್ಳೆಯ ರೀತಿಯಲ್ಲಿ [ಭಾತಿ] ಪ್ರಕಾಶಿತರಾಗುತ್ತೀರಿ. [ಚಕ್ಷಸಾ] ಆ ಪ್ರಾತಃಕಾಲದ ವೇಳೆಯ ನಿಮಿತ್ತ ಅದರ ದರ್ಶನ [ದಿವಃ] ಪ್ರಕಾಶವಂತನಾದ ಸೂರ್ಯನ [ಅಂತಾನ್] ಸಮೀಪದ ಪದಾರ್ಥಗಳನ್ನು ಮತ್ತು [ಮನುಷ್ಯಾ] ಮನುಷ್ಯ ಸಂಬಂಧದ [ಯುಗಾನಿ] ವರ್ಷಗಳನ್ನು [ಅಬೋಧಿ] ಹುಟ್ಟಿಸುತ್ತೀರಿ ಅದರ ಸೇವನೆಯನ್ನು ನೀವು ಯುಕ್ತಿಯಿಂದ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ವ್ಯಭಿಚಾರಿಣಿಯಾದ ಸ್ತ್ರೀಯು ಜಾರ ಕರ್ಮ ಮಾಡುವ ಪುರುಷನ ಆಯುಸ್ಸನ್ನು ನಾಶಗೊಳಿಸುವಳೋ, ಹಾಗೆ ಸೂರ್ಯನಿಗೆ ಸಂಬಂಧಿಸಿದ ಅಂಧಕಾರದ ನಿವೃತ್ತಿಯಿಂದ ಹಗಲನ್ನು ಪ್ರಸಿದ್ಧಗೊಳಿಸುವ ಪ್ರಾತಃಕಾಲದ ವೇಳೆಯೆಂದು ತಿಳಿದು ರಾತ್ರಿ ಮತ್ತು ಹಗಲಿನ ಮಧ್ಯೆ ಯುಕ್ತಿಯಿಂದ ವರ್ತಿಸಿ ಪೂರ್ಣ ಆಯುರ್ದಾಯವನ್ನು ಭೋಗಿಸಬೇಕು.

ಮತ್ತೆ ಅದು ಹೇಗಿದೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಪಶೂನ್ನ ಚಿತ್ರಾ ಸುಭಗಾ ಪ್ರಥಾನಾ ಸಿಂಧುರ್ನ ಕ್ಷೋದ ಉರ್ವಿಯಾ ವ್ಯಶ್ವೈತ್ ।
ಅಮಿನತೀ ದೈವ್ಯಾನಿ ವ್ರತಾನಿ ಸೂರ್ಯಸ್ಯ ಚೇತಿ ರಶ್ಮಿಭಿರ್ದೃಶಾನಾ ॥೧೨॥

ಪದಾರ್ಥ:- ಮನುಷ್ಯರು [ನ] ಯಾವ ರೀತಿ [ಪಶೂನ್] ಹಸು ಮೊದಲಾದ ಪಶುಗಳನ್ನು ಪಾಲಿಸಿ ವೈಶ್ಯರು ವೃದ್ಧಿಸುವರೋ, [ನ] ಹೇಗೆ [ಸುಭಗಾ] ಸುಂದರ ಐಶ್ವರ್ಯವನ್ನುಂಟು ಮಾಡುವ [ಪ್ರಥಾನ] ತರಂಗಗಳಿಂದ ಶಬ್ದ ಮಾಡುತ್ತಾ [ಸಿಂಧುಃ] ಅತಿ ವೇಗವಂತವಾದ ನದಿ [ಕ್ಷೋದಃ] ಜಲವನ್ನು ಪಡೆದು ವೃದ್ಧಿಸುವುದೋ ಹಾಗೆಯೇ ಸುಂದರ ಐಶ್ವರ್ಯವನ್ನುಂಟುಮಾಡುವ ಪ್ರಾತಃ ಸಮಯವು ಪಕ್ಷಿಗಳ ಕಲರವ ಮಾಡುವ ಶಬ್ದವನ್ನು ಅತಿ ದೂರದವರೆಗೂ ಹರಡುತ್ತಾ [ಚಿತ್ರಾ] ಚಿತ್ರ ವಿಚಿತ್ರವಾದ ಪ್ರಾತಃ ಸಮಯವು [ಉರ್ವಿಯಾ] ಪೃಥಿವಿಯ ಜೊತೆಗೆ [ಸೂರ್ಯಸ್ಯ] ಮಾರ್ತಾಂಡ ಮಂಡಲದ [ರಶ್ಮಿಭಿಃ] ಕಿರಣಗಳಿಂದ [ದೃಶಾನಾ] ಯಾವುದನ್ನು ನೋಡಲ್ಪಡುತ್ತದೋ ಅದು [ಅಮಿನತೀ] ಎಲ್ಲ ರೀತಿಯಿಂದ ರಕ್ಷಣೆ ಮಾಡುತ್ತಾ [ದೈವ್ಯಾನಿ] ವಿದ್ವಾಂಸರಲ್ಲಿ ಪ್ರಸಿದ್ಧವಾದ [ವ್ರತಾನಿ] ಸತ್ಯಪಾಲನೆ ಮೊದಲಾದ ಕೆಲಸಗಳಲ್ಲಿ [ವ್ಯಶ್ವೈತ್] ವ್ಯಾಪ್ತವಾಗಲಿ. ಅಂದರೆ ಯಾವುದರಲ್ಲಿ ವಿದ್ವಾಂಸರು ನಿಯಮಗಳನ್ನು ಪಾಲಿಸುತ್ತಾರೋ, ಹಾಗೆ ಪ್ರತಿದಿನವೂ ತಮ್ಮ ನಿಯಮಗಳನ್ನು ಪಾಲಿಸುತ್ತಾ [ಚೇತಿ] ತಿಳಿಯಲ್ಪಡುವಂತಹ ಪ್ರಾತಃಕಾಲ ಸಮಯದ ವಿದ್ಯೆಯನ್ನನುಸರಿಸಿ ವರ್ತಿಸುತ್ತಾ ನಿರಂತರವೂ ಸುಖಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಪಶುಗಳಿಲ್ಲದ ವೈಶ್ಯನು ಅಥವಾ ಜಲವಿಲ್ಲದ ನದಿಗಳು ಉತ್ತಮ ಸುಖವನ್ನು ನೀಡಲಾಗುವುದಿಲ್ಲ. ಹಾಗೆ ಪ್ರಾತಃಸಮಯದ ಗುಣಗಳನ್ನು ಬೋಧಿಸುವ ವಿದ್ಯೆ ಮತ್ತು ಪುರುಷಾರ್ಥವಿಲ್ಲದ ಮನುಷ್ಯನು ಪ್ರಶಂಸಿತವಾದ ಐಶ್ವರ್ಯವನ್ನು ಪಡೆಯಲಾರನು ಎಂದು ತಿಳಿಯಬೇಕು.

ಮನುಷ್ಯರು ಇದರಿಂದ ಏನನ್ನು ತಿಳಿಯಬೇಕು?

ಉಷಸ್ತಚ್ಚಿತ್ರಮಾ ಭರಾ-ಸ್ಮಭ್ಯಂ ವಾಜಿನೀವತಿ ।
ಯೇನ ತೋಕಂ ಚ ತನಯಂ ಚ ಧಾಮಹೇ ॥೧೩॥

ಪದಾರ್ಥ:- ಹೇ ಸೌಭಾಗ್ಯಕಾರಿಣೀ ಸ್ತ್ರೀ! [ವಾಜಿನೀವತೀ] ಉತ್ತಮ ಕ್ರಿಯೆ ಮತ್ತು ಅನ್ನಾದಿ ಐಶ್ವರ್ಯಯುಕ್ತಳಾದ ನೀನು [ಉಷಃ] ಪ್ರಭಾತದಂತೆ [ಅಸ್ಮಭ್ಯಮ್] ನಮಗಾಗಿ [ಚಿತ್ರಮ್] ಅದ್ಭುತ ಸುಖಕಾರಿ ಧನವನ್ನು [ಆಭರ] ಧಾರಣಗೊಳಿಸು. [ಯೇನ] ಯಾವುದರಿಂದ ನಾವು [ತೋಕಮ್] ಪುತ್ರ [ಚ] ಮತ್ತು ಅವನ

ಪಾಲನೆಗಾಗಿ ಐಶ್ವರ್ಯವನ್ನು **[ತನಯಮ್]** ಮೊಮ್ಮಕ್ಕಳು ಮೊದಲಾದ **[ಚ]** ಸ್ತ್ರೀ, ಭೃತ್ಯರು ಮತ್ತು ಭೂಮಿ ಮತ್ತು ರಾಜ್ಯಾದಿಗಳನ್ನು **[ಧಾಮಹೇ]** ಧಾರಣಗೊಳಿಸು.

ಭಾವಾರ್ಥ:- ಮನುಷ್ಯರು ಪ್ರಾತಃಕಾಲದಿಂದ ಸಮಯವನ್ನು ಹಂಚಿಕೊಂಡು ಯೋಗ್ಯವಾಗಿ ಅಂದರೆ ಸಮಯಕ್ಕನುಸಾರವಾಗಿ ವ್ಯವಹಾರಗಳನ್ನು ಮಾಡಿಯೇ ಎಲ್ಲ ಸುಖದ ಸಾಧನಗಳು ಮತ್ತು ಸುಖವನ್ನು ಹೊಂದುತ್ತಾರೆ. ಆದುದರಿಂದ, ಅವರು ನಿತ್ಯವೂ ಈ ಅನುಷ್ಠಾನವನ್ನು ಮಾಡಬೇಕು.

ಮತ್ತೆ ಅವಳು ಏನು ಮಾಡುತ್ತಾಳೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಉಷೋ ಅದ್ಯೇಹ ಗೋಮ-ತ್ಯಶ್ವಾವತಿ ವಿಭಾವರಿ । ರೇವದಸ್ಮೇ ವ್ಯುಚ್ಛ ಸೂನೃತಾವತಿ ॥೧೪॥

ಪದಾರ್ಥ:- ಹೇ ಸ್ತ್ರೀ! **[ಗೋಮತಿ]** ಹೇಗೆ ಗೋವುಗಳನ್ನು ಪಡೆದಿರುವ **[ಅಶ್ವಾವತೀ]** ಅಶ್ವಗಳನ್ನು ಪಡೆದಿರುವ ಹಾಗೂ **[ಸೂನೃತಾವತಿ]** ಪ್ರಶಂಸನೀಯವಾದ ಕರ್ಮವುಳ್ಳವರು, ಆ **[ವಿಭಾವರಿ]** ಕ್ಷಣ ಕ್ಷಣವೂ ವೃದ್ಧಿಯಾಗುವ ಪ್ರಕಾಶವುಳ್ಳ **[ಉಷಃ]** ಪ್ರಾತಃಸಮಯವು **[ಅಸ್ಮೇ]** ನಮಗಾಗಿ **[ರೇವತ್]** ಪ್ರಶಂಸನೀಯವಾದ ಧನವುಳ್ಳ ಸುಖಗಳನ್ನು **[ವಿ ಉಚ್ಛ]** ಪ್ರಾಪ್ತಗೊಳಿಸುತ್ತವೆ. ಅವುಗಳಿಂದ ನಾವು **[ಅದ್ಯ]** ಇಂದು **[ಇಹ]** ಈ ಲೋಕದಲ್ಲಿ ಸುಖಗಳನ್ನು **[ಧಾಮಹೇ]** ಧಾರಣ ಮಾಡೋಣ.

ಭಾವಾರ್ಥ:- ಈ ಮಂತ್ರದಲ್ಲಿ ಧಾಮಹೇ ಅನುವೃತ್ತಿಯು ಬರುತ್ತದೆ. ಮನುಷ್ಯರು ಪ್ರತಿದಿನವೂ ಪ್ರಾತಃಕಾಲವೇ ನಿದ್ರೆಯಿಂದ ಎದ್ದು ಮತ್ತೆ ಎಲ್ಲಿಯವರೆಗೂ ನಿದ್ರಿಸುವುದಿಲ್ಲವೋ ಅಲ್ಲಿಯವರೆಗೆ ಅಂದರೆ ಹಗಲುಪೂರ್ತಿ ಆಲಸ್ಯ ರಹಿತರಾಗಿ ಉತ್ತಮ ಯತ್ನದಿಂದ ವಿದ್ಯೆ, ಧನ ಮತ್ತು ರಾಜ್ಯ ಹಾಗೂ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಈ ಎಲ್ಲ ಉತ್ತಮೋತ್ತಮ ಪದಾರ್ಥಗಳನ್ನು ಸಿದ್ಧಪಡಿಸಬೇಕು.

ಮತ್ತೆ ಅವಳು ಏನನ್ನು ಮಾಡುತ್ತಾಳೆ ಎಂದು ಮುಂದಿನ ಮಂತ್ರದಲ್ಲಿ ಹೇಳಿದೆ.

ಯುಕ್ಷ್ವಾ ಹಿ ವಾಜಿನೀವ-ತ್ಯಶ್ವಾ ಅದ್ಯಾರುಣಾ ಉಷಃ । ಅಥಾ ನೋ ವಿಶ್ವಾ ಸೌಭಗಾನ್ಯಾ ವಹ ॥೧೫॥

ಪದಾರ್ಥ:- ಹೇ ಸ್ತ್ರೀ! **[ವಾಜಿನೀವತಿ]** ಯಾವುದರಲ್ಲಿ ಜ್ಞಾನ ಅಥವಾ ಗಮನ ಮಾಡುವ ಕ್ರಿಯೆಯಿದೆಯೋ, ಆ **[ಉಷಃ]** ಪ್ರಾತಃಸಮಯವು **[ಅರುಣಾನ್]** ಕೆಂಪಾದ **[ಅಶ್ವಾನ್]** ಚಕಚಕ ಹೊಳೆಯುತ್ತಾ ಹರಡುತ್ತಿರುವ ಕಿರಣಗಳು **[ಯುಕ್ಷ್ವ]** ಸಂಯೋಗ ಮಾಡುತ್ತವೆ. **[ಅಥ]** ಹಿಂದೆ **[ನಃ]** ನಮಗಾಗಿ **[ವಿಶ್ವಾ]** ಎಲ್ಲಾ **[ಸೌಭಗಾನಿ]** ಸೌಭಾಗ್ಯಕರ ಕಾರ್ಯಗಳನ್ನು ಚೆನ್ನಾಗಿ ಪ್ರಾಪ್ತಿಗೊಳಸುತ್ತ **[ಹಿ]** ಇರುತ್ತವೆ. ಅಂತಹ **[ಅದ್ಯ]** ಇಂದು ನೀನು ಶುಭಗುಣಗಳಿಂದ ಯುಕ್ತವಾಗು ಮತ್ತು **[ಆವಹ]** ಎಲ್ಲ ಕಡೆಗಳಿಂದ ಪ್ರಾಪ್ತವಾಗು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪ್ರತಿದಿನವೂ ನಿರಂತರವಾಗಿ ಪುರುಷಾರ್ಥ ರಹಿತವಾಗಿ ಮನುಷ್ಯರು ಐಶ್ವರ್ಯವನ್ನು ಪಡೆಯಲಾರರು. ಆದುದರಿಂದ ಅವರು ಅಂತಹ ಪುರುಷಾರ್ಥವನ್ನು ನಿತ್ಯವೂ ಮಾಡಬೇಕು. ಅದರಿಂದ ಐಶ್ವರ್ಯ ವೃದ್ಧಿಸುವುದು.

ಮತ್ತೆ ಅದರಿಂದ ಏನನ್ನು ಪಡೆಯಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಅಶ್ವಿನಾ ವರ್ತಿರಸ್ಮದಾ ಗೋಮದ್ ದಸ್ರಾ ಹಿರಣ್ಯವತ್ ।
ಅರ್ವಾಗ್ರಥಂ ಸಮನಸಾ ನಿ ಯಚ್ಛತಮ್ ॥೧೬॥

ಪದಾರ್ಥ:- ಹೇ ಮನುಷ್ಯರೇ! ಹೇಗೆ ನಾವು **[ದಸ್ರಾ]** ಕಲೆಕೌಶಲಾದಿಗಳ ನಿಮಿತ್ತದಿಂದ ದುಃಖ ಮೊದಲಾದವುಗಳನ್ನು ನಿವೃತ್ತಿ ಮಾಡುವ **[ಸಮನಸಾ]** ಒಂದೇ ಮನಸ್ಸುಳ್ಳವರಾಗಿ **[ಅಶ್ವಿನಾ]** ಅಗ್ನಿ -ಜಲಗಳು **[ಅಸ್ಮತ್]** ನಮ್ಮ **[ಗೋಮತ್]** ಇಂದ್ರಿಯಗಳು ಯಾವುದರಲ್ಲಿ ಪ್ರಶಂಸಿತವಾಗುತ್ತವೋ ಅಥವಾ **[ಹಿರಣ್ಯವತ್]** ಪ್ರಶಂಸನೀಯವಾದ ಸುವರ್ಣ ಮೊದಲಾದ ಪದಾರ್ಥಗಳು ಅಥವಾ ವಿದ್ಯೆ ಮೊದಲಾದ ಗುಣಗಳನ್ನು ಪ್ರಕಾಶ ಪಡಿಸುವುವು ಅಥವಾ **[ವರ್ತಿಃ]** ಹೋಗಿ ಬರುವ ಕೆಲಸಗಳಲ್ಲಿ ವರ್ತಿಸುವ ಆ **[ಅರ್ವಾಕ್]** ಕೆಳಗೆ ಅಂದರೆ ಜಲ, ಸ್ಥಳಗಳಲ್ಲಿ ಹಾಗೂ ಅಂತರಿಕ್ಷದಲ್ಲಿ **[ರಥಮ್]** ರಮಣ ಮಾಡುವಂತಹ ವಿಮಾನ ಮೊದಲಾದ ರಥ ಸಮೂಹವನ್ನು **[ನ್ಯಾಯಚ್ಛತಮ್]** ಉತ್ತಮ ರೀತಿಯ ನಿಯಮಗಳಲ್ಲಿ ಇಡುತ್ತವೆ. ಆ ಉಷಃಕಾಲದ ಅಗ್ನಿಯು ಜಲ ಹಾಗೂ ಅವುಗಳಿಂದ ಕೂಡಿದ ರಥಸಮೂಹವನ್ನು ಪ್ರತಿದಿನವೂ ಸಿದ್ಧಗೊಳಿಸುತ್ತವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಪ್ರತಿದಿನವೂ, ಕ್ರಿಯೆ ಮತ್ತು ಚಾತುರ್ಯದಿಂದ ಹಾಗೂ ಅಗ್ನಿ ಮತ್ತು ಜಲ ಮೊದಲಾದವುಗಳ ಉತ್ತೇಜನದಿಂದ ವಿಮಾನ ಮೊದಲಾದ ಯಾನಗಳನ್ನು ಸಿದ್ಧಗೊಳಿಸಿ ನಿತ್ಯವೂ ಉನ್ನತಿಯನ್ನುಂಟುಮಾಡುವ ಧನವನ್ನು ಪ್ರಾಪ್ತಿಗೊಳಿಸಿಕೊಂಡು ಸುಖಯುಕ್ತರಾಗಬೇಕು.

ಮತ್ತೆ ಅವರು ಹೇಗಿರುತ್ತಾರೆ ಎಂದು ಮುಂದಿನ ಮಂತ್ರದಲ್ಲಿ ಹೇಳಿದೆ.

ಯಾವಿತ್ಥಾ ಶ್ಲೋಕಮಾ ದಿವೋ ಜ್ಯೋತಿರ್ಜನಾಯ ಚಕ್ರಥುಃ ।
ಆ ನ ಊರ್ಜಂ ವಹತಮಶ್ವಿನಾ ಯುವಮ್ ॥೧೭॥

ಪದಾರ್ಥ:- ಹೇ ಶಿಲ್ಪವಿದ್ಯೆಯನ್ನು ಓದಿಸುವ ಮತ್ತು ಉಪದೇಶ ಮಾಡುವ ವಿದ್ವಾಂಸರೇ! **[ಯುವಮ್]** ನೀವು ಯಾವ **[ಅಶ್ವಿನಾ]** ಅಗ್ನಿ ಮತ್ತು ವಾಯುವು **[ಜನಾಯ]** ಮನುಷ್ಯರಿಗೆ **[ದಿವಃ]** ಸೂರ್ಯನ **[ಜ್ಯೋತಿಃ]** ಪ್ರಕಾಶವನ್ನು **[ಆ ಚಕ್ರಥುಃ]** ಒಳ್ಳೆಯ ರೀತಿಯಿಂದ ಸಿದ್ಧ ಮಾಡುತ್ತವೆ. **[ಇತ್ಥಾ]** ಆದುದರಿಂದ **[ನಃ]** ನಮಗಾಗಿ **[ಶ್ಲೋಕಮ್]** ಉತ್ತಮವಾಣಿ ಮತ್ತು **[ಊರ್ಜಮ್]** ಪರಾಕ್ರಮ ಅಥವಾ ಅನ್ನಾದಿ ಪದಾರ್ಥಗಳನ್ನು **[ಆ ವಹತಮ್]** ಎಲ್ಲ ಪ್ರಕಾರಗಳಿಂದ ಪ್ರಾಪ್ತಗೊಳಿಸಿರಿ.

ಭಾವಾರ್ಥ:- ಮನುಷ್ಯರು ವಾಯು ಮತ್ತು ವಿದ್ಯುತ್ತಿನ ಹೊರತು ಸೂರ್ಯನ ಪ್ರಕಾಶವಾಗುವುದಿಲ್ಲ. ಮತ್ತು ಅವೆರಡರಿಂದಲೇ ವಿದ್ಯೆ ಮತ್ತು ಉಪಕಾರದ ಹೊರತು ಯಾರಿಗೂ ವಿದ್ಯೆಯ ಸಿದ್ಧಿಯಾಗದು ಎಂದು ತಿಳಿಯಲಿ.

ಮತ್ತೆ ಅಗ್ನಿ ಮತ್ತು ವಾಯುಗಳು ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಏಹ ದೇವಾ ಮಯೋಭುವಾ ದಸ್ರಾ ಹಿರಣ್ಯವರ್ತನೀ ।
ಉಷರ್ಬುಧೋ ವಹಂತು ಸೋಮಪೀತಯೇ ॥೧೮॥

ಪದಾರ್ಥ:- ಹೇ ಮನುಷ್ಯರೇ! ಯಾವು ಯಾವ **[ದೇವಾ]** ದಿವ್ಯ ಗುಣಗಳಿಂದ ಕೂಡಿದ **[ಮಯೋಭುವಾ]** ಸುಖದ ಭಾವನೆ ಮಾಡುವವರು **[ಹಿರಣ್ಯವರ್ತನೀ]** ಪ್ರಕಾಶದಂತಹ ನಡವಳಿಕೆ ಇರುವ ಮತ್ತು **[ದಸ್ರಾ]** ವಿದ್ಯೆಯ ಉಪಯೋಗವನ್ನು ಪ್ರಾಪ್ತಿ ಮಾಡಿಕೊಂಡು ಸಮಸ್ತ ದುಃಖಗಳನ್ನು ನಾಶಗೊಳಿಸುವ ಅಗ್ನಿ, ವಾಯುಗಳು **[ಉಷರ್ಬುಧಃ]** ಪ್ರಾತಃಕಾಲದ ವೇಳೆಯನ್ನು ತಿಳಿಸುವ ಸೂರ್ಯನ ಕಿರಣಗಳನ್ನು ಪ್ರಕಟಗೊಳಿಸುತ್ತವೆ. ಅವುಗಳಿಂದ **[ಸೋಮಪೀತಯೇ]** ಯಾವ ವ್ಯವಹಾರದಲ್ಲಿ ಪುಷ್ಟಿ, ಶಾಂತಿ ಮೊದಲಾದವು ಹಾಗೂ ಗುಣವುಳ್ಳ ಪದಾರ್ಥಗಳ ಪಾನ ಮಾಡಲಾಗುತ್ತದೋ,

ಅವುಗಳಿಗಾಗಿ ಎಲ್ಲ ಮನುಷ್ಯರಿಗೆ ಸಾಮರ್ಥ್ಯವು [ಇಹ] ಈ ಲೋಕದಲ್ಲಿ [ಆವಹಂತು] ಉತ್ತಮ ರೀತಿಯಲ್ಲಿ ಪ್ರಾಪ್ತವಾಗಲಿ.

ಭಾವಾರ್ಥ:- ಮನುಷ್ಯರು ಉತ್ಪನ್ನವಾದ ದಿನಗಳಲ್ಲಿ ಅಗ್ನಿ ಮತ್ತು ವಾಯುರಹಿತರಾಗಿ ಪದಾರ್ಥಗಳು ಭೋಗಿಸಲಾಗುವುದಿಲ್ಲ. ಆದುದರಿಂದ ಅಗ್ನಿ ಮತ್ತು ವಾಯುಗಳ ಉಪಯೋಗವನ್ನು ಪಡೆಯುವ ಪುರುಷಾರ್ಥವನ್ನು ನಿತ್ಯವೂ ಮಾಡಬೇಕು.

ಈ ಸೂಕ್ತದಲ್ಲಿ ಉಷಾ ಮತ್ತು ಅಶ್ವಿನಿ ಪದಾರ್ಥಗಳ ಗುಣಗಳ ವರ್ಣನೆಯಿಂದ ಪೂರ್ವ ಸೂಕ್ತದ ಅರ್ಥದೊಂದಿಗೆ ಈ ಸೂಕ್ತಾರ್ಥದ ಸಂಗತಿಯನ್ನು ತಿಳಿಯಬೇಕು.

ತೊಂಬತ್ತೆರಡನೆಯ ಸೂಕ್ತ ಸಮಾಪ್ತ

ಸೂಕ್ತ ೯೩

ಮಂತ್ರಸಂಖ್ಯೆ ೧೨ । ಋಷಿಃ - ಗೋತಮೋ ರಾಹೂಗಣಃ । ದೇವತಾ - ಅಗ್ನೀಷೋಮೌ । ಛಂದಃ - ೧-೩
ಅನುಷ್ಟುಪ್, ೪-೭, ೧೨ ತ್ರಿಷ್ಟುಪ್, ೮ ಜಗತೀ ತ್ರಿಷ್ಟುಪ್ ವಾ, ೯-೧೧ ಗಾಯತ್ರೀ । ಸ್ವರಃ - ೧,೩ ಗಾಂಧಾರಃ,
೨ ಋಷಭಃ, ೪ ಪಂಚಮಃ, ೯-೧೧ ಷಡ್ಜಃ, ೫-೮, ೧೨ ಧೈವತಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಓದಿಸುವ ಮತ್ತು ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳು ಏನೇನು ಹೇಳಬೇಕು ಎನ್ನುವ ವಿಷಯ ಹೇಳಿದೆ.

ಅಗ್ನೀಷೋಮಾವಿಮಂ ಸು ಮೇ ಶೃಣುತಂ ವೃಷಣಾ ಹವಮ್ ।
ಪ್ರತಿ ಸೂಕ್ತಾನಿ ಹರ್ಯತಂ ಭವತಂ ದಾಶುಷೇ ಮಯಃ ॥೧॥

ಪದಾರ್ಥ:- ಹೇ [ವೃಷಣಾ] ವಿದ್ಯೆ ಮತ್ತು ಉತ್ತಮ ಶಿಕ್ಷಣವನ್ನು ಕೊಡುವ [ಅಗ್ನಿಷೋಮಾ] ಅಗ್ನಿ ಮತ್ತು ಚಂದ್ರನಿಗೆ ಸಮಾನವಾದ ವಿಶೇಷ ಜ್ಞಾನ ಮತ್ತು ಶಾಂತಿಗುಣದಿಂದ ಕೂಡಿ ಓದಿಸುವ ಮತ್ತು ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ವಾಂಸರೇ! ನೀವೀರ್ವರೂ [ಮೇ] ನನ್ನ [ಪ್ರತಿಸೂಕ್ತಾನಿ] ಯಾವುದರಲ್ಲಿ ಒಳ್ಳೆಯ ಒಳ್ಳೆಯ ಅರ್ಥವನ್ನು ಉಚ್ಚಾರಣೆ ಮಾಡಲಾಗುತ್ತದೋ ಆ ಗಾಯತ್ರೀ ಮೊದಲಾದ ಛಂದಸ್ಸುಗಳಿಂದ ಯುಕ್ತವಾದ ವೇದ ಸೂಕ್ತಗಳು ಮತ್ತು [ಇಮಮ್] ಈ [ಹವಮ್] ಗ್ರಹಣ ಮಾಡಲು- ಮಾಡಿಸಲು ಯೋಗ್ಯವಾದ ವಿದ್ಯೆಯ ಶಬ್ದದ ಅರ್ಥ ಮತ್ತು ಸಂಬಂಧಯುಕ್ತ ವಚನಗಳನ್ನು [ಸುಶ್ರುಣುತಮ್] ಉತ್ತಮ ರೀತಿಯಿಂದ ಕೇಳಿರಿ. [ದಾಶುಷೇ] ಮತ್ತು ಓದುವುದರಲ್ಲಿ ಚಿತ್ತವನ್ನಿಡುವ ವಿದ್ಯಾರ್ಥಿಯಾದ ನನಗೆ [ಮಯಃ] ಸುಖದ [ಹರ್ಯತಮ್] ಕಾಮನೆ ಮಾಡಿ, ಈ ರೀತಿ ವಿದ್ಯೆಯ ಪ್ರಕಾಶಕರು [ಭವತಮ್] ಆಗಿರಿ.

ಭಾವಾರ್ಥ:- ಯಾವ ಮನುಷ್ಯನಿಗಾದರೂ ಓದಿಸದೆ ಮತ್ತು ಪರೀಕ್ಷಿಸದೆ ವಿದ್ಯೆಯ ಸಿದ್ಧಿಯಾಗುವುದಿಲ್ಲ. ಮತ್ತು ಯಾವನೇ ಮನುಷ್ಯನು ಪೂರ್ಣ ವಿದ್ಯೆಯ ಹೊರತು ಇತರೆಯವನಿಗೆ ಓದಿಸಲು ಮತ್ತು ಪರೀಕ್ಷಿಸಲಾಗುವುದಿಲ್ಲ ಮತ್ತು ಈ ವಿದ್ಯೆಯ ಹೊರತು ಸಮಸ್ತ ಸುಖವು ಉಂಟಾಗುವುದಿಲ್ಲ. ಆದುದರಿಂದ ಇದರ ಸಂಪಾದನೆಯನ್ನು ನಿತ್ಯವೂ ಮಾಡಬೇಕು.

ಮತ್ತೆ ಅವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಅಗ್ನೀಷೋಮಾ ಯೋ ಅದ್ಯ ವಾ-ಮಿದಂ ವಚಃ ಸಪರ್ಯತಿ ।
ತಸ್ಮೈ ೃ ಧತ್ತಂ ಸುವೀರ್ಯಂ ಗವಾಂ ಪೋಷಂ ಸ್ವಶ್ವ್ಯಮ್ ॥೨॥

ಪದಾರ್ಥ:- ಹೇ [ಅಗ್ನಿಷೋಮಾ] ಓದಿಸುವ ಮತ್ತು ಪರೀಕ್ಷಿಸುವ ವಿದ್ವಾಂಸರೇ! [ಯಃ] ಯಾವ ಓದುವ [ಅದ್ಯ] ಇಂದು [ವಾಮ್] ನಿಮ್ಮ [ಇದಮ್] ಈ [ವಚಃ] ವಿದ್ಯೆಯ ವಚನವನ್ನು [ಸಪರ್ಯತಿ] ಸೇವಿಸಬೇಕು. [ತಸ್ಮೈ ೃ] ಅದಕ್ಕಾಗಿ [ಸ್ವಶ್ವ್ಯಮ್] ಯಾವ ಉತ್ತಮೋತ್ತಮ ಕುದುರೆಗಳಿಂದ ಕೂಡಿದ [ಸುವೀರ್ಯಮ್] ಉತ್ತಮೋತ್ತಮ ಬಲವು ಯಾವ ವಿದ್ಯಾಭ್ಯಾಸದಿಂದ ಉಂಟಾಗುತ್ತದೋ, ಆ [ಗವಾಮ್] ಇಂದ್ರಿಯ ಮತ್ತು ಹಸು ಮೊದಲಾದ ಪಶುಗಳ [ಪೋಷಮ್] ಸರ್ವಥಾ ಶರೀರ ಮತ್ತು ಆತ್ಮವನ್ನು ಪುಷ್ಟಿಗೊಳಿಸುವ ಸುಖವನ್ನು [ಧತ್ತಮ್] ಕೊಡಿರಿ.

ಭಾವಾರ್ಥ:- ಯಾವ ಬ್ರಹ್ಮಚಾರಿಯು ವಿದ್ಯೆಗಾಗಿ ಓದಿಸುವ ಮತ್ತು ಪರೀಕ್ಷಿಸುವವರ ಬಗ್ಗೆ ಉತ್ತಮ ಪ್ರೀತಿಯಿಂದ ಮತ್ತು ಅವರನ್ನು ನಿತ್ಯವೂ ಸೇವಿಸುವನೋ, ಅವನು ಉತ್ತಮ ವಿದ್ವಾಂಸನಾಗಿ ಎಲ್ಲ ಸುಖಗಳನ್ನು ಪಡೆಯುವನು.

ಈಗ ಉಕ್ತ ಅಗ್ನಿ, ಸೋಮ ಶಬ್ದಗಳಿಂದ ಭೌತಿಕವಾದ ಕಾರ್ಯಗಳ ಉಪದೇಶವನ್ನು ಮಾಡಲಾಗಿದೆ.

ಅಗ್ನೀಷೋಮಾ ಯ ಆಹುತಿಂ ಯೋ ವಾಂ ದಾಶಾದ್ಧವಿಷ್ಕೃತಿಮ್ ।
ಸ ಪ್ರಜಯಾ ಸುವೀರ್ಯಂ ವಿಶ್ವಮಾಯುರ್ವ್ಯಶ್ನವತ್ ॥೩॥

ಪದಾರ್ಥ:- [ಯಃ] ಎಲ್ಲರ ಹಿತವನ್ನು ಬಯಸುವ ಮತ್ತು [ಯಃ] ಯಾವ ಯಜ್ಞದ ಅನುಷ್ಠಾನವನ್ನು ಮಾಡುವ ಮನುಷ್ಯನು, [ಅಗ್ನಿಷೋಮಾ] ಭೌತಿಕಾಗ್ನಿ ಮತ್ತು ವಾಯುಗಳು [ವಾಮಾ] ಇವರೀರ್ವರ ಮಧ್ಯೆ [ಹವಿಷ್ಕೃತಿಮ್] ಹೋಮ ಮಾಡಲು ಯೋಗ್ಯವಾದ ಪದಾರ್ಥಗಳ ಕಾರಣ ರೂಪವಾದ [ಆಹುತಿಮ್] ತುಪ್ಪ ಮೊದಲಾದ ಉತ್ತಮೋತ್ತಮ ಸುಗಂಧ ಪದಾರ್ಥಗಳಿಂದ ಕೂಡಿದ ಆಹುತಿಯನ್ನು [ದಾಶಾತ್] ಕೊಡಲಿ. [ಸಃ] ಅದು [ಪ್ರಜಯಾ] ಉತ್ತಮೋತ್ತಮ ಸಂತಾನಗಳಿಂದ ಕೂಡಿದ ಪ್ರಜೆಗಳಲ್ಲಿ [ಸುವೀರ್ಯಮ್] ಶ್ರೇಷ್ಠ ಪರಾಕ್ರಮ ಯುಕ್ತ [ವಿಶ್ವಮ್] ಸಮಗ್ರ [ಆಯುಃ] ಆಯುರ್ದಾಯವನ್ನು [ವ್ಯಶ್ನವತ್] ಪ್ರಾಪ್ತಿಸಲಿ.

ಭಾವಾರ್ಥ:- ಯಾವ ವಿದ್ವಾಂಸರು ವಾಯು, ವೃಷ್ಟಿ, ಜಲ ಮತ್ತು ಓಷಧಿಗಳ ಶುದ್ಧಿಗಾಗಿ ಉತ್ತಮವಾಗಿ ಸಂಸ್ಕರಿಸಿದ ಹವಿಸ್ಸನ್ನು ಅಗ್ನಿಯ ಮಧ್ಯೆ ಹೋಮ ಮಾಡಿ ಶ್ರೇಷ್ಠ ಸೋಮಲತೆ ಮೊದಲಾದ ಓಷಧಿಗಳನ್ನು ಪ್ರಾಪ್ತಿ ಮಾಡಿಕೊಂಡು ಅವುಗಳಿಂದ ಪ್ರಾಣಿಗಳಿಗೆ ಉಪಕಾರವನ್ನು ಮಾಡುವರೋ, ಅವರ ಶರೀರ ಮತ್ತು ಆತ್ಮ ಬಲದಿಂದ ಯುಕ್ತರಾಗಿ ಪೂರ್ಣಸುಖವನ್ನೀಯುವ ಆಯುಸ್ಸನ್ನು ಪಡೆಯುತ್ತಾರೆ. ಅನ್ಯರು ಅಲ್ಲ.

ಮತ್ತೆ ಅವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಅಗ್ನೀಷೋಮಾ ಚೇತಿ ತದ್ ವೀರ್ಯಂ ವಾಂ ಯದಮುಷ್ಣೀತಮವಸಂ ಪಣಿಂ ಗಾಃ ।
ಅವಾತಿರತಂ ಬೃಸಯಸ್ಯ ಶೇಷೋಽವಿಂದತಂ ಜ್ಯೋತಿರೇಕಂ ಬಹುಭ್ಯಃ ॥೪॥

ಪದಾರ್ಥ:- ಯಾವ [**ಅಗ್ನಿಷೋಮಾ**] ವಾಯು ಮತ್ತು ವಿದ್ಯುತ್ [**ಯತ್**] ಯಾವ [**ಅವಸಮ್**] ರಕ್ಷಣೆ ಮೊದಲಾದ [**ಪಣಿಂ**] ವ್ಯವಹಾರವನ್ನು [**ಅಮುಷ್ಣೀತಮ್**] ಕಳ್ಳನಂತೆ ಪ್ರಸಿದ್ಧ - ಅಪ್ರಸಿದ್ಧವಾಗಿ ಗ್ರಹಣ ಮಾಡುತ್ತಾ [**ಗಾಃ**] ಸೂರ್ಯನ ಕಿರಣಗಳನ್ನು ವಿಸ್ತಾರಗೊಳಿಸಿ [**ಅವಾತಿರತಮ್**] (ಅವತಿರತಿರಿತಿ ವಧಕರ್ಮಾ ನಿಘ. ೨.೧೯) ಅಂಧಕಾರದ ನಾಶವನ್ನು ಮಾಡುತ್ತಾ [**ಬಹುಭ್ಯಃ**] ಅನೇಕ ಪದಾರ್ಥಗಳಿಂದ [**ಏಕಮ್**] ಒಬ್ಬನೇ [**ಜ್ಯೋತಿಃ**] ಸೂರ್ಯನ ಪ್ರಕಾಶವನ್ನು [**ಅವಿಂದತಮ್**] ಪ್ರಾಪ್ತಗೊಳಿಸುತ್ತವೋ, ಅವನ್ನು [**ಬೃಸಯಸ್ಯ**] ಹೊದಿಸುವ ಸೂರ್ಯನ [**ಶೇಷಃ**] ಅವಶೇಷ ಭಾಗವು ಲೋಕಗಳಿಗೆ ಪ್ರಾಪ್ತವಾಗುತ್ತದೆ. [**ವಾಮ್**] ಇವುಗಳ [**ತತ್**] ಆ [**ವೀರ್ಯ್ಯಮ್**] ಪರಾಕ್ರಮವು [**ಚೇತಿ**] ವಿದಿತವಾಗಿದೆ ಎಂದು ಎಲ್ಲರೂ ತಿಳಿಯುತ್ತಾರೆ.

ಭಾವಾರ್ಥ:- ಎಂತಹ ಪ್ರಸಿದ್ಧವಾದ ಅಂಧಕಾರವನ್ನು ಮುಚ್ಚುವ ಮತ್ತು ಎಲ್ಲ ಲೋಕಗಳನ್ನೂ ಪ್ರಕಾಶ ಪಡಿಸುವ ತೇಜಸ್ಸು ಇದೆಯೋ, ಅವೆಲ್ಲಕ್ಕೂ ಕಾರಣರೂಪವಾದ ವಾಯು ಮತ್ತು ಅಗ್ನಿಗಳ ಉತ್ತೇಜನದಿಂದ ಆಗುವುದೆಂದು ಮನುಷ್ಯರು ತಿಳಿಯಬೇಕು.

ಮತ್ತೆ ಅವು ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಯುವಮೇತಾನಿ ದಿವಿ ರೋಚನಾ-ನ್ಯಗ್ನಿಶ್ಚ ಸೋಮ ಸಕ್ರತೂ ಅಧತ್ತಮ್ ।
ಯುವಂ ಸಿಂಧೂಁರಭಿಶಸ್ತೇರವದ್ಯಾ-ದಗ್ನಿಷೋಮಾವಮುಂಚತಂ ಗೃಭೀತಾನ್ ॥೫॥

ಪದಾರ್ಥ:- [**ಯುವಮ್**] ಈ [**ಸಕ್ರತೂ**] ಒಂದೇ ಕೆಲಸವನ್ನು ಮಾಡುವ ಎರಡು ಅಂದರೆ [**ಅಗ್ನಿ**] ವಿದ್ಯುತ್ತು [**ಚ**] ಮತ್ತು [**ಸೋಮ**] ಬಹಳ ಸುಖವನ್ನುಂಟುಮಾಡುವ ವಾಯುವು [**ದಿವಿ**] ನಕ್ಷತ್ರಮಂಡಲದಲ್ಲಿ ಯಾವ [**ರೋಚನಾನಿ**] ಪ್ರಕಾಶವಿದೆಯೋ [**ಏತಾನಿ**] ಇವನ್ನು [**ಅಧತ್ತಮ್**] ಧಾರಣ ಮಾಡುತ್ತದೆ. [**ಯುವಮ್**] ಈ ಎರಡು [**ಸಿಂಧೂನ್**] ಸಮುದ್ರಗಳನ್ನು ಧಾರಣ ಮಾಡುತ್ತವೆ ಅಂದರೆ ಅವುಗಳ ಜಲವನ್ನು ಶೋಷಿಸುತ್ತವೆ, ಆ [**ಗೃಭೀತಾನ್**] ಒಣಗಿದ ನದಿ, ಸಮುದ್ರಗಳನ್ನು ಆ [**ಅಗ್ನಿಷೋಮಾ**] ವಿದ್ಯುತ್ತು ಮತ್ತು ವಾಯುಗಳು [**ಅವದ್ಯಾತ್**] ನಿಂದಿತವಾದ [**ಅಭಿಶಸ್ತೇಃ**] ಅವುಗಳ ಪ್ರವಾಹರೂಪ ರಮಣವನ್ನು ತಡೆಯುವ ಹೇತುವಿನಿಂದ [**ಅಮುಂಚತಮ್**] ಬಿಡಿಸುತ್ತವೆ. ಅಂದರೆ ಮಳೆಯ ನಿಮಿತ್ತದಿಂದ ಅವುಗಳಿಗೆ ಜಲವನ್ನು ಭೂಮಿಯ ಮೇಲೆ ಬಿಡುತ್ತವೆ.

ಭಾವಾರ್ಥ:- ಪವನ ಮತ್ತು ವಿದ್ಯುತ್ ಇವೆರಡೂ ಎಲ್ಲ ಲೋಕಗಳಿಗೂ ಸುಖದ ಧಾರಣ ಮೊದಲಾದ ವ್ಯವಹಾರಗಳಿಗೆ ಕಾರಣವಾಗಿದೆ ಎಂದು ತಿಳಿಯಬೇಕು.

ಮತ್ತೆ ಅವು ಏನು ಮಾಡುತ್ತವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಆನ್ಯಂ ದಿವೋ ಮಾತರಿಶ್ವಾ ಜಭಾರಾ-ಮಥ್ನಾದನ್ಯಂ ಪರಿ ಶ್ಯೇನೋ ಅದ್ರೇಃ ।
ಅಗ್ನಿಷೋಮಾ ಬ್ರಹ್ಮಣಾ ವಾವೃಧಾನೋ-ರುಂ ಯಜ್ಞಾಯ ಚಕ್ರಥುರು ಲೋಕಮ್ ॥೬॥

ಪದಾರ್ಥ:- ಹೇ ಮನುಷ್ಯರೇ! ನೀವು [**ಬ್ರಹ್ಮಣಾ**] ಪರಮೇಶ್ವರನಿಂದ [**ವಾವೃಧಾನಾ**] ಉನ್ನತಿಯನ್ನು ಪಡೆದು [**ಅಗ್ನಿಷೋಮಾ**] ಅಗ್ನಿ ಮತ್ತು ವಾಯುಗಳನ್ನು [**ಯಜ್ಞಾಯ**] ಜ್ಞಾನ ಮತ್ತು ಕ್ರಿಯಾಮಯವಾದ ಯಜ್ಞಗಳಿಗಾಗಿ [**ಉರುಮ್**] ಬಹಳ ಪ್ರಕಾರ [**ಲೋಕಮ್**] ನೋಡಲ್ಪಡುತ್ತದೋ, ಆ ಲೋಕಗಳನ್ನು [**ಚಕ್ರಥುಃ**]

ಪ್ರಕಟಮಾಡುತ್ತವೆ. ಅವುಗಳಿಂದ [**ಮಾತರಿಶ್ವಾ**] ಆಕಾಶದಲ್ಲಿ ಪವಡಿಸುವ ವಾಯುವು, [**ದಿವಃ**] ಸೂರ್ಯ ಮೊದಲಾದ ಲೋಕಗಳಿಂದ [**ಅನ್ಯಮ್**] ಮತ್ತು ಬೇರೆಯಾದ ಅಪ್ರಸಿದ್ಧವಾದ ಯಾವ ಕಾರಣ ಲೋಕಗಳನ್ನು [**ಆ ಜಭಾರ**] ಧಾರಣ ಮಾಡುತ್ತವೆ ಹಾಗೂ [**ಶ್ಯೇನಃ**] (ಶ್ಯೇನಾಸ ಇತ್ಯಶ್ವನಾಮ ನಿಘ. ೧.೧೪) ವೇಗವಂತವಾದ ಕುದುರೆಗಳ ಸಮಾನ ವರ್ತಿಸುವ ಅಗ್ನಿಯು [**ಅದ್ರೇಃ**] ಮೇಘದಿಂದ [**ಅಮಥ್ನಾತ್**] ಮಂಥನ ಮಾಡುವುದು, ಅವುಗಳನ್ನು ತಿಳಿದು ಉಪಯೋಗಕ್ಕೆ ತನ್ನಿರಿ.

ಭಾವಾರ್ಥ:- ಹೇ ಮನುಷ್ಯರೇ! ನೀವು, ವಾಯು ಮತ್ತು ವಿದ್ಯುತ್ತಿನ ಯಾವ ಎರಡು ರೂಪಗಳಿವೆ. ಒಂದು ಕಾರಣ ಮತ್ತೊಂದು ಕಾರ್ಯ. ಅವುಗಳಲ್ಲಿ ಮೊದಲನೆಯದು ವಿಶೇಷ ಜ್ಞಾನದಿಂದ ತಿಳಿಯಲು ಯೋಗ್ಯವಾದುದು ಮತ್ತು ಎರಡನೆಯದು ಇಂದ್ರಿಯಗಳಿಗೆ ಪ್ರತ್ಯಕ್ಷವಾಗಿ ಗ್ರಹಣಮಾಡಲು ಯೋಗ್ಯವಾಗಿದೆ. ಇವುಗಳ ಗುಣ ಮತ್ತು ಉಪಕಾರಗಳನ್ನು ತಿಳಿದವರು ಆ ವಾಯು ಮತ್ತು ಅಗ್ನಿಗಳ ಕಾರಣ ರೂಪದಲ್ಲಿ ಉತ್ತಮವಾದ ಅಗ್ನಿ ಮತ್ತು ವಾಯುವು ಪ್ರವೇಶವಾಗುತ್ತದೆ. ಇದೇ ಸುಗಮ ಮಾರ್ಗವಾಗಿದೆ. ಯಾವ ಕಾರ್ಯದಿಂದ ಕಾರಣದಲ್ಲಿ ಪ್ರವೇಶವಾಗುತ್ತದೆ, ಎಂದು ತಿಳಿಯಿರಿ.

ಮತ್ತೆ ಅವು ಏನು ಮಾಡುತ್ತವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಯಿರಿ.

ಅಗ್ನಿಷೋಮಾ ಹವಿಷಃ ಪ್ರಸ್ಥಿತಸ್ಯ ವೀತಂ ಹರ್ಯತಂ ವೃಷಣಾ ಜುಷೇಥಾಮ್ ।
ಸುಶರ್ಮಾಣಾ ಸ್ವವಸಾ ಹಿ ಭೂತ-ಮಥಾ ಧತ್ತಂ ಯಜಮಾನಾಯ ಶಂ ಯೋಃ ॥೭॥

ಪದಾರ್ಥ:- ಹೇ ಮನುಷ್ಯರೇ! ನೀವು [**ವೃಷಣಾ**] ಮಳೆಯಾಗುವುದಕ್ಕೆ ನಿಮಿತ್ತವು [**ಸುಶರ್ಮಣಾ**] ಸುಖವನ್ನೀಯುವುದು [**ಅಗ್ನಿಷೋಮಾ**] ಪ್ರಸಿದ್ಧವಾದ ವಾಯು ಮತ್ತು ಅಗ್ನಿಯು [**ಪ್ರಸ್ಥಿತಸ್ಯ**] ದೇಶಾಂತರದಲ್ಲಿ ಪ್ರವಹಿಸುವಂತೆ ಮಾಡುವ [**ಹವಿಷಃ**] ಹೋಮಿಸಲ್ಪಟ್ಟ ತುಪ್ಪ ಮೊದಲಾದವುಗಳನ್ನು [**ವೀತಮ್**] ವ್ಯಾಪ್ತಗೊಳಿಸುತ್ತಾ [**ಹರ್ಯ್ಯತಮ್**] ಪಡೆಯುವುದು. [**ಜುಷೇತಾಮ್**] ಸೇವನೆ ಮಾಡಲು ಮತ್ತು [**ಸ್ವವಸಾ**] ಉತ್ತಮ ರಕ್ಷಣೆ ಮಾಡುವುದು [**ಭೂತಮ್**] ಆಗುತ್ತದೆ. [**ಅಥ**] ಅನಂತರ [**ಹಿ**] ಇದೇ ಕಾರಣದಿಂದ [**ಯಜಮಾನಾಯ**] ಜೀವನಿಗಾಗಿ ಅನಂತ [**ಶಮ್**] ಸುಖವನ್ನು [**ಧತ್ತಮ್**] ಧಾರಣ ಮಾಡುತ್ತದೆ ಹಾಗೂ [**ಯೋಃ**] ಪದಾರ್ಥಗಳನ್ನು ಬೇರೆ ಬೇರೆ ಮಾಡುತ್ತದೆ, ಅವುಗಳನ್ನು ಉತ್ತಮ ರೀತಿಯಲ್ಲಿ ಉಪಯೋಗಕ್ಕೆ ತನ್ನಿರಿ.

ಭಾವಾರ್ಥ:- ಅಗ್ನಿಯಲ್ಲಿ ಎಷ್ಟು ಸುಗಂಧಯಕ್ತ ಪದಾರ್ಥಗಳನ್ನು ಹೋಮ ಮಾಡಲಾಗುತ್ತದೋ ಅವು ವಾಯುವಿನ ಜೊತೆಗೆ ಆಕಾಶವನ್ನು ಸೇರಿ ಮೇಘಮಂಡಲದಲ್ಲಿನ ಜಲವನ್ನು ಶೋಧಿಸಿ ಮತ್ತು ಎಲ್ಲ ಜೀವಿಗಳಿಗೂ ಸುಖಕ್ಕೆ ಹೇತುವಾಗಿ, ಅನಂತರ ಧರ್ಮಾರ್ಥಕಾಮ ಮತ್ತು ಮೋಕ್ಷದ ಸಿದ್ಧಿ ಮಾಡುವುವೆಂದು ಮನುಷ್ಯರು ತಿಳಿಯಬೇಕು.

ಅಂತಹ ಉತ್ತಮವಾದ ಕಾರ್ಯಗಳಲ್ಲಿ ಬರುವಂತಹ ಇವೆರಡೂ ಏನು ಮಾಡುತ್ತವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಯಿರಿ.

ಯೋ ಅಗ್ನೀಷೋಮಾ ಹವಿಷಾ ಸಪರ್ಯಾದ್ ದೇವದ್ರೀಚಾ ಮನಸಾ ಯೋ ಘೃತೇನ।
ತಸ್ಯ ವ್ರತಂ ರಕ್ಷತಂ ಪಾತಮಂಹಸೋ ವಿಶೇ ಜನಾಯ ಮಹಿ ಶರ್ಮ ಯಚ್ಛತಮ್ ॥೮॥

ಪದಾರ್ಥ:- [**ಯಃ**] ಯಾವ ವಿದ್ವಾಂಸನಾದ ಮನುಷ್ಯನು [**ದೇವದ್ರೀಚಾ**] ಉತ್ತಮ ವಿದ್ವಾಂಸರ ಸತ್ಕಾರ ಮಾಡುತ್ತಾ [**ಮನಸಾ**] ಮನಸ್ಸಿನಿಂದ ಅಥವಾ [**ಘೃತೇನ**] ತುಪ್ಪ ಮತ್ತು ಜಲ ಹಾಗೂ [**ಹವಿಷಾ**] ಉತ್ತಮವಾಗಿ

ಸಂಸ್ಕರಿಸಿದ ಹವಿಸ್ಸಿನಿಂದ [ಅಗ್ನಿಷೋಮಾ] ವಾಯು ಮತ್ತು ಅಗ್ನಿಗಳನ್ನು [ಸಪರ್ಯಾತ್] ಸೇವಿಸಲಿ ಮತ್ತು [ಯಃ] ಯಾವ ಕ್ರಿಯೆಯನ್ನು ಮಾಡುವ ಮನುಷ್ಯನು ಇವುಗಳ ಗುಣಗಳನ್ನು ತಿಳಿಯಲಿ. [ತಸ್ಯ] ಅವೆರಡರ [ವ್ರತಮ್] ಸತ್ಯಭಾಷಣ ಮೊದಲಾದ ಶೀಲದ ಇವೆರಡು [ರಕ್ಷತಮ್] ರಕ್ಷಣೆ ಮಾಡುತ್ತಾ [ಅಂಹಸಃ] ಹಸಿವು ಮತ್ತು ಜ್ವರ ಮೊದಲಾದ ರೋಗಗಳಿಂದ [ಪಾತಮ್] ನಷ್ಟವಾಗುವುದನ್ನು ರಕ್ಷಿಸುತ್ತದೆ. [ವಿಶೇ] ಪ್ರಜೆ ಮತ್ತು [ಜನಾಯ] ಸೇವಕರಿಗಾಗಿ [ಮಹೀ] ಅತ್ಯಂತ ಪ್ರಶಂಸೆಮಾಡಲು ಯೋಗ್ಯವಾದ [ಶರ್ಮ್ಮ] ಸುಖ ಅಥವಾ ಮನೆಯನ್ನು [ಯಚ್ಛತಮ್] ಕೊಡುತ್ತದೆ.

ಭಾವಾರ್ಥಃ:- ಯಾವ ಮನುಷ್ಯನು ಅಗ್ನಿಹೋತ್ರ ಮೊದಲಾದ ಕ್ರಿಯೆಗಳಿಂದ ವಾಯು ಮತ್ತು ಮಳೆಯ ಶುದ್ಧಿಯ ಮುಖಾಂತರ ಎಲ್ಲ ವಸ್ತುಗಳನ್ನು ಪವಿತ್ರಗೊಳಿಸುವನೋ, ಅವನು ಎಲ್ಲ ಪ್ರಾಣಿಗಳಿಗೂ ಸುಖವನ್ನೀಯುವನು.

ಮತ್ತೆ ಅವು ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಅಗ್ನಿಷೋಮಾ ಸವೇದಸಾ ಸಹೂತೀ ವನತಂ ಗಿರಃ । ಸಂ ದೇವತ್ರಾ ಬಭೂವಥುಃ ॥೯॥

ಪದಾರ್ಥಃ:- ಯಾವ [ಸಹೂತೀ] ಒಂದೇ ವಾಣಿಯುಳ್ಳ [ಸವೇದಸಾ] ಸರಿಯಾಗಿ ಹೋಮಿಸಲ್ಪಟ್ಟ ಪದಾರ್ಥಗಳಿಂದ ಯುಕ್ತವಾದ [ಅಗ್ನಿಷೋಮಾ] ಯಜ್ಞಫಲವನ್ನು ಸಿದ್ಧಪಡಿಸುವ ಅಗ್ನಿ ಮತ್ತು ವಾಯುಗಳು [**ದೇವತ್ರಾ**] ವಿದ್ವಾಂಸ ಅಥವಾ ದಿವ್ಯಗುಣಗಳಲ್ಲಿ [ಸಂಬಭೂವಥಃ] ಸಂಭಾವಿತವಾಗುತ್ತದೆ. ಅವು [**ಗಿರಃ**] ವಾಣಿಗಳಲ್ಲಿ [**ವನತಂ**] ಉತ್ತಮವಾಗಿ ಸೇವಿಸುತ್ತವೆ.

ಭಾವಾರ್ಥಃ:- ಮನುಷ್ಯರು ಯಜ್ಞ ಮೊದಲಾದ ಉತ್ತಮ ಕರ್ಮಗಳಿಂದ ವಾಯುವನ್ನು ಶೋಧಿಸದಿದ್ದಲ್ಲಿ ಪ್ರಾಣಿಗಳಿಗೆ ಸುಖವಾಗುವುದಿಲ್ಲ, ಆದುದರಿಂದ ಇದರ ಅನುಷ್ಠಾನವನ್ನು ನಿತ್ಯವೂ ಮಾಡಬೇಕು.

ಇದರ ಅನುಷ್ಠಾನ ಮಾಡುವವರಿಗೆ ಏನಾಗುತ್ತದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಅಗ್ನೀಷೋಮಾವನೇನ ವಾಂ ಯೋ ವಾಂ ಘೃತೇನ ದಾಶತಿ ।
ತಸ್ಮೈ ದೀದಯತಂ ಬೃಹತ್ ॥೧೦॥

ಪದಾರ್ಥಃ:- [ಯಃ] ಯಾವ ಮನುಷ್ಯನು [ವಾಂ] ಇವುಗಳ ಮಧ್ಯೆ [ಅನೇನ] ಈ [**ಘೃತೇನ**] ತುಪ್ಪ ಅಥವಾ ಜಲದಿಂದ ಆಹುತಿಗಳನ್ನು ಕೊಡುತ್ತಾನೋ ಅಥವಾ [ವಾಮ್] ಇವುಗಳ ಉತ್ತೇಜನದಿಂದ ಉಪಕಾರಗಳನ್ನು ಗ್ರಹಣ ಮಾಡುತ್ತಾನೋ, ಅವನಿಗಾಗಿ [ಅಗ್ನಿಷೋಮಾ] ವಿದ್ಯುತ್ತು ಮತ್ತು ವಾಯುವು [ಬೃಹತ್] ಹೆಚ್ಚಿನ ವಿಜ್ಞಾನ ಮತ್ತು ಸುಖವನ್ನು [ದೀದಯತಮ್] ಪ್ರಕಾಶಿತಗೊಳಿಸುತ್ತದೆ.

ಭಾವಾರ್ಥಃ:- ಯಾವ ಮನುಷ್ಯರು ಕ್ರಿಯಾರೂಪವಾದ ಯಜ್ಞಗಳ ಅನುಷ್ಠಾನ ಮಾಡುವರೋ, ಅವರು ಈ ಲೋಕದಲ್ಲಿ ಅತ್ಯಂತ ಸೌಭಾಗ್ಯವನ್ನು ಪಡೆಯುವರು.

ಮತ್ತೆ ಅವು ಏನು ಮಾಡುತ್ತವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಅಗ್ನೀಷೋಮಾವಿಮಾನಿ ನೋ ಯುವಂ ಹವ್ಯಾ ಜುಜೋಷತಮ್ ।
ಆ ಯಾತಮುಪ ನಃ ಸಚಾ ॥೧೧॥

ಪದಾರ್ಥಃ:- [ಯುವಮ್] ಯಾವ [ಅಗ್ನಿಷೋಮಾ] ಸಮಸ್ತ ಮೂರ್ತಿವಂತವಾದ ಪದಾರ್ಥಗಳ ಸಂಯೋಗವನ್ನು ಮಾಡುವ ಅಗ್ನಿ ಮತ್ತು ವಾಯುಗಳು [ನಃ] ನಮಗೆ [ಇಮಾನಿ] ಈ [ಹವ್ಯಾ] ಕೊಡು-ತೆಗೆದುಕೊಳ್ಳುವ ಪದಾರ್ಥಗಳನ್ನು [ಜುಜೋಷತಮ್] ಮತ್ತೆ ಮತ್ತೆ ಸೇವನೆ ಮಾಡುತ್ತವೆ. ಅವು [ಸಚಾ] ಯಜ್ಞದ ವಿಶೇಷ ವಿಚಾರವನ್ನು ಮಾಡುವ [ನಃ] ನಮಗೆ [ಉಪ ಆ ಯಾತಮ್] ಉತ್ತಮ ರೀತಿಯಲ್ಲಿ ಸಿಗುತ್ತವೆ.

ಭಾವಾರ್ಥಃ:- ಯಾವಾಗ ಯಜ್ಞದಿಂದ ಸುಗಂಧಿತ ಮೊದಲಾದ ದ್ರವ್ಯದಿಂದ ಕೂಡಿದ ಅಗ್ನಿ ವಾಯುಗಳು ಎಲ್ಲ ಪದಾರ್ಥಗಳ ಹತ್ತಿರವೂ ಬಂದು ಅವುಗಳಲ್ಲಿ ಸೇರಿಕೊಳ್ಳುತ್ತವೋ, ಆಗ ಎಲ್ಲಕ್ಕೂ ಪುಷ್ಟಿ ಲಭಿಸುತ್ತದೆ.

ಮತ್ತೆ ಅವು ಏನು ಮಾಡುತ್ತವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಅಗ್ನೀಷೋಮಾ ಪಿಪೃತಮರ್ವತೋ ನ ಆ ಪ್ಯಾಯಂತಾಮುಸ್ರಿಯಾ ಹವ್ಯಸೂದಃ ।
ಅಸ್ಮೇ ಬಲಾನಿ ಮಘವತ್ಸು ಧತ್ತಂ ಕೃಣುತಂ ನೋ ಅಧ್ವರಂ ಶ್ರುಷ್ಟಿಮಂತಮ್ ॥೧೨॥

ಪದಾರ್ಥಃ:- ಹೇ ರಾಜ ಮತ್ತು ಪ್ರಜೆಗಳೇ! ನೀವು [ಅಗ್ನಿಷೋಮಾ] ಪಾಲನೆಗಾಗಿ ಅಗ್ನಿ ಮತ್ತು ವಾಯುಗಳಂತೆ [ನಃ] ನಮ್ಮ [ಅರ್ವತಃ] ಕುದುರೆಗಳನ್ನು [ಪಿಪೃತಮ್] ಪಾಲಿಸಿ, ಹೇಗೆ [ಹವ್ಯಸೂದಃ] ಹಾಲು ಮೊಸರು ಮೊದಲಾದ ಪದಾರ್ಥಗಳನ್ನು ಕೊಡುವ [ಉಸ್ರಿಯಾಃ] ಹಸು [ಆ ಪ್ಯಾಯಂತಾಮ್] ಪುಷ್ಟವಾಗಲಿ! ಹಾಗೆಯೇ [ನಃ] ನಮಗೆ [ಶ್ರುಷ್ಟಿಮಂತಮ್] ಶೀಘ್ರವಾಗಿ ಬಹಳ ಸುಖಗಳಿಗೆ ಹೇತುವಾದ [ಅಧ್ವರಮ್] ವ್ಯವಹಾರರೂಪೀ ಯಜ್ಞವನ್ನು [**ಮಘವತ್ಸು**] ಪ್ರಶಂಸಿತವೂ, ಧನಯುಕ್ತಸ್ಥಾನ, ವ್ಯವಹಾರ ಅಥವಾ ವಿದ್ವಾಂಸರಲ್ಲಿ [**ಕೃಣುತಮ್**] ಪ್ರಕಟಗೊಳಿಸು. [**ಅಸ್ಮೆ**] ನಮಗೆ [**ಬಲಾನಿ**] ಬಲವನ್ನು [**ಧತ್ತಮ್**] ಧಾರಣಮಾಡಿಸು.

ಭಾವಾರ್ಥಃ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪವನ ಮತ್ತು ವಿದ್ಯುತ್ತಿನ ಹೊರತು ಯಾವುದಕ್ಕೂ / ಯಾರಿಗೂ ಬಲ ಮತ್ತು ಪುಷ್ಟಿಯಾಗುವುದಿಲ್ಲ. ಆದುದರಿಂದ ಇವುಗಳನ್ನು ಉತ್ತಮ ವಿಚಾರದಿಂದ ಕಾರ್ಯಗಳಲ್ಲಿ ತರಬೇಕು.

ಈ ಸೂಕ್ತದಲ್ಲಿ ಪವನ ಮತ್ತು ವಿದ್ಯುತ್ತಿನ ಗುಣವರ್ಣನೆ ಮಾಡಿರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ತೊಂಬತ್ತಮೂರನೆಯ ಸೂಕ್ತ ಸಮಾಪ್ತ

ಪಂಚದಶೋನುವಾಕಃ (ಸೂಕ್ತ ೯೪-೧೦೫)

ಸೂಕ್ತ ೯೪

ಮಂತ್ರಸಂಖ್ಯೆ ೧೬ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಅಗ್ನಿಃ (ಜಾತವೇದಾಃ), ೮ (ತ್ರಯಃ ಪಾದಾಃ) ದೇವಾಃ ೧೬ (ಉತ್ತರಾರ್ಧ) ಅಗ್ನಿಃ, ಮಿತ್ರವರುಣಾದಿತಿಸಿಂಧುಪೃಥಿವೀದ್ಯಾವೋ ವಾ । ಛಂದಃ - ಜಗತೀ, ೧೫-೧೬ ತ್ರಿಷ್ಟುಪ್ । ಸ್ವರಃ - ೧,೪,೫,೭,೯,೧೦,೧೨-೧೪ ನಿಷಾಧಃ, ೨, ೩, ೬, ೮, ೧೧, ೧೬ ಧೈವತಃ, ೧೫ ಪಂಚಮಃ.

ಈ ಸೂಕ್ತದ ಮೊದಲ ಮಂತ್ರದಲ್ಲಿ ಅಗ್ನಿ ಶಬ್ದದಿಂದ ವಿದ್ವಾಂಸ ಮತ್ತು ಭೌತಿಕ ಅರ್ಥಗಳ ಉಪದೇಶವನ್ನು ಮಾಡಿದೆ.

ಇಮಂ ಸ್ತೋಮಮರ್ಹತೇ ಜಾತವೇದಸೇ ರಥಮಿವ ಸಂ ಮಹೇಮಾ ಮನೀಷಯಾ ।
ಭದ್ರಾ ಹಿ ನಃ ಪ್ರಮತಿರಸ್ಯ ಸಂಸ-ದ್ಯಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೧॥

ಪದಾರ್ಥ:- ಹೇ **[ಅಗ್ನೇ]** ವಿದ್ಯೆ ಮೊದಲಾದ ಗುಣಗಳಿಂದ ಕೂಡಿದ ವಿದ್ವಾಂಸನೇ! ಹೇಗೆ, **[ವಯಮ್]** ನಾವು **[ಮನೀಷಯಾ]** ವಿದ್ಯೆ, ಕ್ರಿಯೆ ಮತ್ತು ಉತ್ತಮ ಶಿಕ್ಷಣದಿಂದ ಉಂಟಾದ ಬುದ್ಧಿಯಿಂದ **[ಅರ್ಹತೇ]** ಯೋಗ್ಯನು **[ಜಾತವೇದಸೇ]** ಉತ್ಪನ್ನವಾದ ಜಗತ್ತಿನ ಪದಾರ್ಥಗಳನ್ನು ತಿಳಿಯುತ್ತಾನೆ ಅಥವಾ ಉತ್ಪನ್ನವಾದ ಕಾರ್ಯರೂಪ ದ್ರವ್ಯಗಳಲ್ಲಿ ವಿದ್ಯಮಾನವಾದ ಆ ವಿದ್ವಾಂಸನಿಗಾಗಿ **[ರಥಮಿವ]** ಹೇಗೆ ವಿಹರಿಸಲು ವಿಮಾನ ಮೊದಲಾದ ಯಾನಗಳಿವೆಯೋ ಹಾಗೆ **[ಇಮಮ್]** ಕಾರ್ಯಗಳಲ್ಲಿ ಪ್ರವೃತ್ತವಾದ **[ಸ್ತೋಮಮ್]** ಗುಣಕೀರ್ತನವನ್ನು **[ಸಂಮಹೇಮ]** ಪ್ರಶಂಸೆ ಮಾಡಲಿ ಅಥವಾ **[ಅಸ್ಯ]** ಈ **[ತವ]** ತಮ್ಮ **[ಸಖ್ಯೇ]** ಮಿತ್ರತೆಯ ನಿಮಿತ್ತ **[ಸಂಸದಿ]** ಯಾವುದರಲ್ಲಿ ವಿದ್ವಾಂಸರು ಸ್ಥಿತವಾಗುವರೋ, ಆ ಸಭೆಯಲ್ಲಿ **[ನಃ]** ನಮಗೆ **[ಭದ್ರಾ]** ಕಲ್ಯಾಣವನ್ನು ಮಾಡುವ **[ಪ್ರಮತಿಃ]** ಪ್ರಬಲ ಬುದ್ಧಿ ಇದೆಯೋ, ಅದನ್ನು **[ಹಿ]** ನಿಶ್ಚಯವಾಗಿ **[ಮಾ ರಿಷಾಮಾ]** ನಷ್ಟಗೊಳಿಸದಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಹೇಗೆ ವಿದ್ಯೆಯಿಂದ ಸಿದ್ಧರಾಗುತ್ತಾ ವಿಮಾನಗಳನ್ನು ಸಿದ್ಧಗೊಳಿಸಿ ಮಿತ್ರರನ್ನು ಸತ್ಕರಿಸುವರೋ, ಹಾಗೆಯೇ ಪುರುಷಾರ್ಥದಿಂದ ವಿದ್ವಾಂಸರನ್ನೂ ಸತ್ಕರಿಸಲಿ. ಯಾವ ಯಾವಾಗ ಸಭಾಸದರು ಸಭೆಯಲ್ಲಿ ಆಸೀನರಾಗುವರೋ, ಆಗಾಗ ಹಠ ಮತ್ತು ದುರಾಗ್ರಹವನ್ನು ಬಿಟ್ಟು ಎಲ್ಲರಿಗೂ ಸುಖವನ್ನು ಪಡಿಸಲು ಯೋಗ್ಯವಾದ ಕಾರ್ಯಗಳನ್ನು ತ್ಯಜಿಸದಿರಲಿ. ಯಾವ ಯಾವ ಅಗ್ನಿ ಮೊದಲಾದ ಪದಾರ್ಥಗಳಲ್ಲಿ ವಿಜ್ಞಾನವಿದೆಯೋ, ಆಯಾಯವುಗಳನ್ನು ಎಲ್ಲರೊಡನೆ ಮಿತ್ರತೆಯ ಆಶ್ರಯವನ್ನು ಬಯಸಿ ಮತ್ತು ಎಲ್ಲರಿಗೂ ಕೊಡಲಿ. ಏಕೆಂದರೆ ಇದರ ಹೊರತು ಮನುಷ್ಯರಿಗೆ ಹಿತವನ್ನು ಮಾಡುವುದು ಸಂಭವವಲ್ಲ.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಯಸ್ಮೈ ತ್ವಮಾಯಜಸೇ ಸ ಸಾಧ-ತ್ಯನರ್ವಾ ಕ್ಷೇತಿ ದಧತೇ ಸುವೀರ್ಯಮ್ ।
ಸ ತೂತಾವ ನೈನಮಶ್ನೋತ್ಯಂಹತಿ-ರಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೨॥

ಪದಾರ್ಥ:- ಹೇ **[ಅಗ್ನೇ]** ಎಲ್ಲ ವಿದ್ಯೆಗಳ ವಿಶೇಷ ಜ್ಞಾನವುಳ್ಳ ವಿದ್ವಾಂಸನೇ! **[ಅನರ್ವಾ]** ಕುದುರೆಗಳಿಲ್ಲದೆ ಅಗ್ನ್ಯಾದಿಗಳಿಂದ ಚಲಿಸುವ ವಿಮಾನ ಮೊದಲಾದ ಯಾನಗಳಿಗೆ ಸಮಾನವಾಗಿ **[ತ್ವಮ್]** ನೀನು **[ಯಸ್ಮೈ]** ಯಾವ **[ಆಯಜಸೇ]** ಸರ್ವಥಾ ಸುಖವನ್ನೀಯುವ ಜೀವನಿಗೆ ರಕ್ಷಣೆಯನ್ನು **[ಸಾಧತಿ]** ಸಿದ್ಧಗೊಳಿಸುತ್ತೀಯೆ. **[ಸಃ]** ಅವನು **[ಸುವೀರ್ಯಮ್]** ಯಾವ ಮಿತ್ರರ ಕಾರ್ಯಗಳಲ್ಲಿ ಉತ್ತಮೋತ್ತಮ ಪರಾಕ್ರಮಗಳಿವೆಯೋ, ಅವುಗಳನ್ನು **[ದಧತೇ]** ಧಾರಣ ಮಾಡುತ್ತಾನೆ ಮತ್ತು ಅವನು **[ತೂತಾವ]** ಅವುಗಳನ್ನು ವೃದ್ಧಿಸುತ್ತಾನೆ. **[ಏನಮ್]** ಈ ಉತ್ತಮ ಗುಣಯುಕ್ತ ಪುರುಷನಿಗೆ **[ಅಂಹತಿಃ]** ದರಿದ್ರವು **[ನ ಅಶ್ನೋತಿ]** ಪ್ರಾಪ್ತವಾಗುವುದಿಲ್ಲ. **[ಸಃ]** ಅವನು **[ಕ್ಷೇತಿ]** ಸುಖದಲ್ಲಿರುತ್ತಾನೆ. ಹಾಗೆಯೇ **[ತವ]** ನಿನ್ನ **[ಸಖ್ಯೇ]** ಮಿತ್ರತೆಯಲ್ಲಿ **[ವಯಮ್]** ನಾವು **[ಮಾ ರಿಷಾಮ]** ದುಃಖಿಗಳಾಗದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ವಿದ್ವಾಂಸರು ಸಭೆ ಅಥವಾ ಅಗ್ನಿವಿದ್ಯೆಯಲ್ಲಿ ಮಿತ್ರತೆಯನ್ನು ಪ್ರಸಿದ್ಧಪಡಿಸುತ್ತಾರೋ, ಅವರು ಪೂರ್ಣ ಶರೀರ ಮತ್ತು ಆತ್ಮಬಲದಿಂದ ಸುಖಯುಕ್ತರಾಗಿರುತ್ತಾರೆ, ಅನ್ಯರಲ್ಲ.

ಮತ್ತೆ ಅವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಶಕೇಮ ತ್ವಾ ಸಮಿಧಂ ಸಾಧಯಾ ಧಿಯ-ಸ್ತ್ವೇ ದೇವಾ ಹವಿರದಂತ್ಯಾಹುತಮ್ ।
ತ್ವಮಾದಿತ್ಯಾ ಆ ವಹ ತಾನ್ ಹ್ಯು ೧ ಶ್ಮ-ಸ್ಯಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೩॥

ಪದಾರ್ಥ:- ಹೇ **[ಅಗ್ನೇ]** ಎಲ್ಲ ವಿದ್ಯೆಗಳಲ್ಲಿ ಪ್ರವೀಣನಾದ ಸಭಾಧ್ಯಕ್ಷನೇ! **[ವಯಮ್]** ನಾವು **[ತ್ವಾ]** ತಮ್ಮ ಆಶ್ರಯವನ್ನು ಪಡೆದು **[ಸಮಿಧಮ್]** ಯಾವುದರಿಂದ ಉತ್ತಮ ಪ್ರಕಾಶವಾಗುವುದೋ ಆ ಕ್ರಿಯೆಯನ್ನು ಮಾಡು **[ಶಕೇಮ]** ವಂತಾಗಲಿ. **[ತ್ವಮ್]** ನೀನು ನಮ್ಮ **[ಧಿಯಃ]** ಬುದ್ಧಿ ಅಥವಾ ಕರ್ಮಗಳನ್ನು **[ಸಾಧಯ]** ಸಿದ್ಧಗೊಳಿಸು. **[ತ್ವೇ]** ತಮ್ಮ ಇರುವಿಕೆಯಿಂದ **[ದೇವಾಃ]** ವಿದ್ವಾಂಸರು **[ಆಹುತಮ್]** ಚೆನ್ನಾಗಿ ಸ್ವೀಕರಿಸಲ್ಪಟ್ಟ **[ಹವಿಃ]** ತಿನ್ನಲು ಯೋಗ್ಯವಾದ ಅನ್ನವನ್ನು **[ಅದಂತಿ]** ಭುಜಿಸುತ್ತಾರೆ. ಆದುದರಿಂದ ನೀನು **[ಆದಿತ್ಯಾನ್]** ೪೮ ವರ್ಷ ಬ್ರಹ್ಮಚರ್ಯ ಪಾಲಿಸಿದ ಬ್ರಹ್ಮಚಾರಿಗಳನ್ನು **[ಆ ವಹ]** ಪ್ರಾಪ್ತಮಾಡಿಕೋ. **[ತಾನ್]** ಅವರನ್ನು **[ಹಿ]** ನಿಶ್ಚಯವಾಗಿ ನಾವು **[ಉಶ್ಮಸಿ]** ಇಚ್ಛಿಸುತ್ತೇವೆ. ಹಾಗೆಯೇ **[ತವ]** ತಮ್ಮ **[ಸಖ್ಯೇ]** ಮಿತ್ರತೆಯಲ್ಲಿ ನಾವು **[ಮಾ ರಿಷಾಮ]** ದುಃಖಿಗಳಾಗದಿರಲಿ.

ಭಾವಾರ್ಥ:- ಯಾವ ಮನುಷ್ಯನು ವಿದ್ವಾಂಸರ ಆಶ್ರಯವನ್ನು ಪಡೆದು ವಿದ್ಯೆ ಮತ್ತು ಅಗ್ನಿಕಾರ್ಯಗಳನ್ನು ಸಿದ್ಧಗೊಳಿಸಲು ಸಹನಶೀಲತೆಯನ್ನು ಧಾರಣ ಮಾಡುವನೋ, ಅವನು ಪ್ರಬಲ ವಿಜ್ಞಾನ ಮತ್ತು ಅನೇಕ ಕ್ರಿಯೆಗಳಲ್ಲಿ ಯುಕ್ತನಾಗಿ ಸುಖಿಯಾಗುವನು.

ಮತ್ತೆ ಅವರು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಭರಾಮೇಧ್ಮಂ ಕೃಣವಾಮಾ ಹವೀಂಷಿ ತೇ ಚಿತಯಂತಃ ಪರ್ವಣಾಪರ್ವಣಾ ವಯಮ್ ।
ಜೀವಾತವೇ ಪ್ರತರಂ ಸಾಧಯಾ ಧಿಯೋಽಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೪॥

ಪದಾರ್ಥ:- ಹೇ **[ಅಗ್ನೇ]** ವಿದ್ವಾಂಸನೇ! **[ಪರ್ವಣಾ ಪರ್ವಣಾ]** ಪೂರ್ಣ ಸಾಧನಗಳಿಂದ **[ಚಿತಯಂತಃ]** ಗುಣಗಳನ್ನು ಆರಿಸುತ್ತಾ **[ವಯಮ್]** ನಾವು **[ತೇ]** ನಿನಗಾಗಿ ಅಥವಾ ಈ ಅಗ್ನಿಗಾಗಿ **[ಹವೀಂಷಿ]** ಯಜ್ಞಕ್ಕೆ ಯೋಗ್ಯವಾದ ಪದಾರ್ಥಗಳನ್ನು ಉತ್ತಮ ರೀತಿಯಲ್ಲಿ **[ಕೃಣವಾಮ]** ಮಾಡೋಣ ಮತ್ತು **[ಇಧ್ಮಮ್]** ಸಮಿತ್ತುಗಳನ್ನು **[ಭರಾಮ]** ತರೋಣ, ನೀನು **[ಜೀವಾತಯೇ]** ನಮ್ಮ ಜೀವನಕ್ಕಾಗಿ **[ಧಿಯಃ]** ಉತ್ತಮ ಬುದ್ಧಿ ಅಥವಾ ಕರ್ಮಗಳನ್ನು **[ಪ್ರತಿರಮ್]** ಅತಿ ಉತ್ತಮವಾಗಿ **[ಸಾಧಯ]** ಸಿದ್ಧಗೊಳಿಸು. ಹಾಗೆಯೇ **[ತವ]** ನಿನ್ನ ಅಥವಾ ಈ ಭೌತಿಕಾಗ್ನಿಯ **[ಸಖ್ಯೇ]** ಮಿತ್ರತೆಯಲ್ಲಿ **[ವಯಮ್]** ನಾವು **[ಮಾ ರಿಷಾಮ]** ದುಃಖಿಗಳಾಗದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಸೇನೆ, ಸಭೆ ಮತ್ತು ಪ್ರಜೆಗಳಲ್ಲಿರುವ ಮನುಷ್ಯರು ಸಜ್ಜನರ ಬುದ್ಧಿ ಅಥವಾ ಪುರುಷಾರ್ಥದಿಂದ ವೃದ್ಧಿಸಿ, ಅವರಿಗಾಗಿ ಎಲ್ಲ ಸಾಮಗ್ರಿಗಳನ್ನು ಉತ್ತಮವಾಗಿ ಸಿದ್ಧಗೊಳಿಸಲಿ. ಮತ್ತು ಆ ಪುರುಷನ ಮಿತ್ರತೆಯನ್ನು ಯಾರೂ ಕೂಡ ಬಿಡದಿರಲಿ.

ಈಗ ಈಶ್ವರ ಮತ್ತು ಸಭಾಧ್ಯಕ್ಷನ ಗುಣಗಳ ಉಪದೇಶವನ್ನು ಹೇಳಲಾಗಿದೆ.

ವಿಶಾಂ ಗೋಪಾ ಅಸ್ಯ ಚರಂತಿ ಜಂತವೋ ದ್ವಿಪಚ್ಚ ಯದುತ ಚತುಷ್ಪದಕ್ತುಭಿಃ ।
ಚಿತ್ರಃ ಪ್ರಕೇತ ಉಷಸೋ ಮಹಾ ಅ-ಸ್ಯಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೫॥

ಪದಾರ್ಥ:- ಹೇ **[ಅಗ್ನೇ]** ಉತ್ತಮ ಸುಖಗಳನ್ನು ತಿಳಿಸುವ ಸಭೆ ಮೊದಲಾದವುಗಳ ಅಧ್ಯಕ್ಷನೇ! ತಮ್ಮ ರಾಜ್ಯದಲ್ಲಿ ಅಥವಾ ಉತ್ತಮ ಸುಖಗಳ ವಿಜ್ಞಾನವನ್ನು ಮಾಡಿಸುವಂತಹ **[ಅಸ್ಯ]** ಈ ಜಗದೀಶ್ವರನ ಸೃಷ್ಟಿಯ **[ವಿಶಾಮ್]** ಪ್ರಜೆಗಳಿಗೆ **[ಯತ್]** ಯಾವ **[ಗೋಪಾಃ]** ಪಾಲಿಸುವ ಗುಣ ಅಥವಾ **[ಜಂತವಃ]** ಮನುಷ್ಯರು

[ಚರಂತಿ] ತಿರುಗುತ್ತಿರುವರೋ, ಅಥವಾ **[ಅಕ್ತುಭಿಃ]** ಪ್ರಸಿದ್ಧ ಕರ್ಮ, ಪ್ರಸಿದ್ಧ ಮಾರ್ಗ ಮತ್ತು ಪ್ರಸಿದ್ಧ ರಾತ್ರಿಗಳಲ್ಲಿಯೂ **[ಉಷಸಃ]** ದಿನಗಳು ಪ್ರಾಪ್ತವಾಗುತ್ತವೆ. ಅಥವಾ ಯಾವ **[ದ್ವಿಪತ್]** ಎರಡು ಕಾಲಿನ ಪ್ರಾಣಿಗಳು **[ಚ]** ಅಥವಾ ಕಾಲುಗಳಿಲ್ಲದ ಸರ್ಪ ಮೊದಲಾದವುಗಳು **[ಉತ]** ಮತ್ತು **[ಚತುಷ್ಪಾತ್]** ನಾಲ್ಕು ಕಾಲಿನ ಪಶು ಮೊದಲಾದವುಗಳು ಚಲಿಸುತ್ತವೆ. ಹಾಗೂ ಯಾವ **[ಚಿತ್ರಃ]** ಅದ್ಭುತ ಗುಣಕರ್ಮ ಸ್ವಭಾವವುಳ್ಳ **[ಪ್ರಕೇತಃ]** ಎಲ್ಲ ವಸ್ತುಗಳನ್ನು ತಿಳಿಸುವ ಜಗದೀಶ್ವರನು ಅಥವಾ ಸಭಾಧ್ಯಕ್ಷನಾದ ನೀನು **[ಮಹಾನ್]** ಉತ್ತಮೋತ್ತಮರು **[ಅಸಿ]** ಆಗಿರುವೆ. ಆ **[ತವ]** ನಿನ್ನ **[ಸಖ್ಯೇ]** ಮಿತ್ರತೆಯಲ್ಲಿ **[ವಯಮ್]** ನಾವು **[ಮಾ ರಿಷಾಮ]** ವಿಮನಸ್ಕರಾಗಿ ಎಂದಿಗೂ ಆಗದಿರೋಣ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮನುಷ್ಯರು, ಜಗದೀಶ್ವರನ ಅಥವಾ ಸಭಾಧ್ಯಕ್ಷನಾದ ವಿದ್ವಾಂಸನ ಮಹತ್ತಿನಿಂದ ಜಗತ್ತಿನ ಉತ್ಪತ್ತಿ, ಪಾಲನೆ ಮತ್ತು ಭಂಗವಾಗುವುದೆಂದು ಅವನ ಮಿತ್ರತೆ ಅಥವಾ ಮಿತ್ರನ ಕೆಲಸಗಳಲ್ಲಿ ಎಂದಿಗೂ ವಿಘ್ನವನ್ನು ಮಾಡಬಾರದು.

ಮತ್ತೆ ಈಶ್ವರ ಮತ್ತು ಸಭಾಧ್ಯಕ್ಷರು ಹೇಗಿರುವರು ಎಂಬುದನ್ನು ಹೇಳಲಾಗಿದೆ.

ತ್ವಮಧ್ವರ್ಯುರುತ ಹೋತಾಸಿ ಪೂರ್ವ್ಯಃ ಪ್ರಶಾಸ್ತಾ ಪೋತಾ ಜನುಷಾ ಪುರೋಹಿತಃ ।
ವಿಶ್ವಾ ವಿದ್ವಾ ಆರ್ತ್ವಿಜ್ಯಾ ಧೀರ ಪುಷ್ಯ-ಸ್ಯಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೬॥

ಪದಾರ್ಥ:- ಹೇ **[ಧೀರ]** ಧಾರಣ ಮೊದಲಾದ ಗುಣಯುಕ್ತನೇ! **[ಅಗ್ನೇ]** ಉತ್ತಮ ಜ್ಞಾನಕೊಡುವ ಪರಮೇಶ್ವರ ಅಥವಾ ಸಭಾಧ್ಯಕ್ಷನೇ! ಯಾವ ಕಾರಣದಿಂದ **[ಪೂರ್ವ್ಯಃ]** ಹಿಂದಿನ ಮಹಾಶಯರಿಗಾಗಿ ಮಾಡಿದ ಮತ್ತು ಬಯಸುತ್ತಿರುವ **[ಅಧ್ವರ್ಯುಃ]** ಯಜ್ಞದ ಯಥೋಕ್ತ ವ್ಯವಹಾರದಲ್ಲಿ ಯುಕ್ತವಾಗಲು, ವರ್ತಿಸಲು ಮತ್ತು ಬಯಸಲು **[ಹೋತಾ]** ಕೊಡು-ಕೊಳ್ಳುವ **[ಪ್ರಶಾಸ್ತಾ]** ಧರ್ಮ, ಉತ್ತಮ ಶಿಕ್ಷಣ ಮತ್ತು ಉಪದೇಶದ ಪ್ರಚಾರ ಮಾಡಲು, **[ಪೋತಾ]** ಪವಿತ್ರವೂ ಮತ್ತು ಇತರರನ್ನು ಪವಿತ್ರ ಮಾಡಲು **[ಪುರೋಹಿತಃ]** ಹಿತವನ್ನು ಪ್ರಸಿದ್ಧ ಮಾಡಲು ಮತ್ತು **[ವಿದ್ವಾನ್]** ಯಥಾವತ್ತಾಗಿ ತಿಳಿದವರು **[ತ್ವಮ್]** ನೀನು **[ಅಸಿ]** ಆಗಿರುವೆ. **[ಉತ]** ಮತ್ತು **[ಜನುಷಾ]** ಉತ್ಪನ್ನವಾಗಿರುವ ಜಗತ್ತಿನೊಡನೆ **[ವಿಶ್ವಾ]** ಸಮಗ್ರ **[ಆರ್ತ್ವಿಜ್ಯಾ]** ಋತ್ವಿಜರ ಗುಣಪ್ರಕಾಶಕ ಕೆಲಸಗಳನ್ನು **[ಪುಷ್ಯಸಿ]** ದೃಢಗೊಳಿಸುವಿರಿ- ದೃಢಗೊಳಿಸುವಂತೆ ಮಾಡುವಿರಿ. ಆದುದರಿಂದ **[ತವ]** ನಿನ್ನ **[ಸಖ್ಯೇ]** ಮಿತ್ರತ್ವದಿಂದ **[ವಯಮ್]** ನಾವು **[ಮಾ ರಿಷಾಮ]** ಎಂದಿಗೂ ದುಃಖಿಗಳಾಗದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಎಲ್ಲರ ಅಧಿಷ್ಠಾತನಾದ ಜಗದೀಶ್ವರನು ಅಥವಾ ವಿದ್ವಾಂಸನ ಹೊರತು ಜಗತ್ತಿನ ಪಾಲನೆ ಮೊದಲಾದ ವ್ಯವಹಾರಗಳು ನಡೆಯಲಾರವು. ಆದುದರಿಂದ ಮನುಷ್ಯರು ಹಗಲು-ರಾತ್ರಿ ಈಶ್ವರನ ಉಪಾಸನೆ ಮತ್ತು ಈ ವಿದ್ವಾಂಸರ ಸಂಗ ಮಾಡಿ ಸುಖಿಗಳಾಗಲಿ.

ಮತ್ತೆ ಸಭಾಧ್ಯಕ್ಷ ಮತ್ತು ಭೌತಿಕಾಗ್ನಿಗಳು ಹೇಗಿವೆ ಎಂಬುದನ್ನು ಹೇಳಲಾಗಿದೆ.

ಯೋ ವಿಶ್ವತಃ ಸುಪ್ರತೀಕಃ ಸದೃಙ್ಙಸಿ ದೂರೇ ಚಿತ್ ಸನ್ತಳಿದಿವಾತಿ ರೋಚಸೇ ।
ರಾತ್ರ್ಯಾಶ್ಚಿದಂಧೋ ಅತಿ ದೇವ ಪಶ್ಯ-ಸ್ಯಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೭॥

ಪದಾರ್ಥ:- ಹೇ **[ದೇವ]** ಸತ್ಯದ ಪ್ರಕಾಶ ಮಾಡುವ ಮತ್ತು **[ಅಗ್ನೇ]** ಸಮಸ್ತ ಜ್ಞಾನವನ್ನು ಕೊಡುವ ಸಭಾಧ್ಯಕ್ಷನೇ! ಹೇಗೆ **[ಯಃ]** ಯಾವ **[ಸದೃಙ್]** ಸಮಾನವಾಗಿ ನೋಡುವ **[ತ್ವಮ್]** ನೀನು **[ಸುಪ್ರತೀಕಃ]** ಉತ್ತಮ ಪ್ರತೀತಿಯನ್ನು ಮಾಡುವವನು **[ಅಸಿ]** ಆಗಿರುವೆ ಅಥವಾ ಮೂರ್ತಿವಂತ ಪದಾರ್ಥಗಳನ್ನು ಪ್ರಕಾಶಪಡಿಸುವ

[ದೂರೇ ಚಿತ್] ದೂರದಿಂದಲೇ **[ಸನ್]** ಪ್ರಕಟವಾಗುತ್ತಾ ಸೂರ್ಯನಂತೆ **[ತಡಿದಿವ]** ವಿದ್ಯುತ್ತಿನ ಪ್ರಕಾಶದಂತೆ **[ವಿಶ್ವತಃ]** ಎಲ್ಲ ಕಡೆಗಳಿಂದ **[ಅತಿ]** ಅತ್ಯಂತ **[ರೋಚಸೇ]** ಪ್ರಿಯವಾಗುವಂತೆ ಹಾಗೂ ಭೌತಿಕಾಗ್ನಿಯು ಸೂರ್ಯ ರೂಪದಿಂದ ದೂರದಿಂದಲೇ ಪ್ರಕಟವಾಗುತ್ತಾ ಅತ್ಯಂತವಾಗಿ ಪ್ರಿಯವಾಗುವುದು. ಏಕೆಂದರೆ ಇದರ ಹೊರತು **[ರಾತ್ರ್ಯಾಃ]** ರಾತ್ರಿಯ ಮಧ್ಯೆ **[ಅಂಧಃ ಚಿತ್]** ಕುರುಡನಂತೆ **[ಅತಿ ಪಶ್ಯಸಿ]** ಚೆನ್ನಾಗಿ ನೋಡುವ- ನೋಡುವಂತೆ ಮಾಡುತ್ತದೆ. ಆ ಅಗ್ನಿಯ ಅಥವಾ **[ತವ]** ನಿನ್ನ **[ಸಖ್ಯೇ]** ಮಿತ್ರತೆಯಿಂದ **[ವಯಮ್]** ನಾವು **[ಮಾ ರಿಷಾಮ]** ಎಂದಿಗೂ ಪ್ರೀತಿರಹಿತರಾಗದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರವಿದೆ. ದೂರದಲ್ಲಿದ್ದರೂ ಸಭಾಧ್ಯಕ್ಷನು ನ್ಯಾಯವ್ಯವಸ್ಥೆಯಿಂದ, ವಿದ್ಯುತ್ತು ಮತ್ತು ಸೂರ್ಯನು ಮೂರ್ತಿಮಂತವಾದ ಪದಾರ್ಥಗಳನ್ನು ಹೇಗೆ ಪ್ರಕಾಶಿತಗೊಳಿಸುವನೋ, ಹಾಗೆಯೇ ಗುಣಹೀನ ಪ್ರಾಣಿಗಳನ್ನು ತನ್ನ ಪ್ರಕಾಶದಿಂದ ಪ್ರಕಾಶಗೊಳಿಸುವನು. ಅವನೊಡನೆ ಅಥವಾ ಅವುಗಳಲ್ಲಿ ಯಾವ ವಿದ್ವಾಂಸನು ಮಿತ್ರತೆಯನ್ನು ಮಾಡಬಾರದು? ಅಂದರೆ ಎಲ್ಲರೂ ಮಾಡಬೇಕು.

ಈಗ ಶಿಲ್ಪಿ ಮತ್ತು ಭೌತಿಕಾಗ್ನಿಗಳ ಕೆಲಸಗಳ ಉಪದೇಶಮಾಡಿದೆ.

ಪೂರ್ವೋ ದೇವಾ ಭವತು ಸುನ್ವತೋ ರಥೋಽಸ್ಮಾಕಂ ಶಂಸೋ ಅಭ್ಯಸ್ತು ದೂಢ್ಯಃ ।
ತದಾ ಜಾನೀತೋತ ಪುಷ್ಯತಾ ವಚೋಽಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೮॥

ಪದಾರ್ಥ:- ಹೇ **[ದೇವಾಃ]** ವಿದ್ವಾಂಸರೇ! ನೀವು, ಯಾರಿಂದ **[ಅಸ್ಮಾಕಂ]** ನಾವು ಶಿಲ್ಪವಿದ್ಯೆಯನ್ನು ತಿಳಿಯಲು ಇಚ್ಛಿಸುತ್ತೇವೋ ಅವರ **[ಪೂರ್ವಃ]** ಮೊದಲು ಸುಖಪಡಿಸುವ **[ರಥಃ]** ವಿಮಾನಾದಿ ಯಾನಗಳು **[ದೂಢ್ಯಃ]** ಯಾರಿಗೆ ಅಧಿಕಾರವಿಲ್ಲವೋ, ಅವರ ದುಃಖಪೂರ್ವಕವಾಗಿ ಆಲೋಚಿಸಬೇಕಾದವರು **[ಭವತು]** ಆಗಲಿ. ಹಾಗೂ ಉಕ್ತ ಗುಣವುಳ್ಳ ರಥವು **[ಶಂಸಃ]** ಪ್ರಶಂಸನೀಯವಾಗಿ **[ಅಭಿ]** ಮುಂದೆ **[ಅಸ್ತು]** ಆಗಲಿ. **[ತತ್]** ಆ ವಿದ್ಯೆ ಮತ್ತು ಉತ್ತಮ ಶಿಕ್ಷಣದಿಂದ ಕೂಡಿದ **[ವಚಃ]** ವಾಣಿಯ **[ಆ ಜಾನೀತ]** ಆಜ್ಞೆ ಕೊಡಿ. **[ಉತ]** ಮತ್ತು ಅದರಿಂದ ತಾವು **[ಪುಷ್ಯತ]** ಪುಷ್ಟರಾಗಿರಿ ಹಾಗೂ ನಮ್ಮನ್ನು ಪುಷ್ಟಗೊಳಿಸಿರಿ. ಹೇ **[ಅಗ್ನೇ]** ಉತ್ತಮವಾಗಿ ಶಿಲ್ಪವಿದ್ಯೆಯನ್ನು ತಿಳಿದ ಪರಮ ಪ್ರವೀಣನೇ! **[ಸುನ್ವತಃ]** ಸುಖದ ಸಾರವನ್ನು ತೆಗೆಯುತ್ತಾ **[ತವ]** ತಮ್ಮ ಅಥವಾ ಈ ಭೌತಿಕಾಗ್ನಿಯ **[ಸಖ್ಯೇ]** ಮಿತ್ರತೆಯಿಂದ **[ವಯಮ್]** ನಾವು **[ಮಾ ರಿಷಾಮ]** ಎಂದಿಗೂ ದುಃಖಿಗಳಾಗದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಹೇ ವಿದ್ವಾಂಸರೇ! ಯಾವ ರೀತಿಯಿಂದ ಮನುಷ್ಯರಲ್ಲಿ ಆತ್ಮಜ್ಞಾನ ಮತ್ತು ಶಿಲ್ಪ ವ್ಯವಹಾರದ ವಿದ್ಯೆಯು ಪ್ರಕಾಶಿತವಾಗಿ ಸುಖದ ಉನ್ನತಿಯಾಗುವುದೋ, ಹಾಗೆ ಯತ್ನ ಮಾಡಿರಿ.

ಈಗ ಸಭೆ, ಸೇನೆ ಮತ್ತು ಶಾಲಾದಿಗಳ ಅಧ್ಯಕ್ಷರ ಗುಣಗಳ ಉಪದೇಶ ಮಾಡಿದೆ.

ವಧೈರ್ದುಃಶಂಸಾ ಅಪ ದೂಢ್ಯೋ ಜಹಿ ದೂರೇ ವಾ ಯೇ ಅಂತಿ ವಾ ಕೇ ಚಿದತ್ರಿಣಃ।
ಅಥಾ ಯಜ್ಞಾಯ ಗೃಣತೇ ಸುಗಂ ಕೃ-ಧ್ಯಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೯॥

ಪದಾರ್ಥ:- ಹೇ ಸಭೆ ಸೇನೆ ಮತ್ತು ಶಾಲಾದಿಗಳ ಅಧ್ಯಕ್ಷರಾದ ವಿದ್ವಾಂಸರೇ! ತಾವು ಹೇಗೆ **[ದೂಢ್ಯಃ]** ದುಷ್ಟ ಬುದ್ಧಿಯವರು ಮತ್ತು **[ದುಃಶಂಸಾನ್]** ದುಃಖ ಕಾರಣಗಳಾದ ದುರ್ಬೋಧೆ ಮಾಡುವ ದರೋಡೆಕಾರರು ಮೊದಲಾದವರು **[ಅತ್ರಿಣಃ]** ಶತ್ರುಗಳನ್ನು **[ವಧೈಃ]** ತಾಡನದಿಂದ **[ಅಪ ಜಹಿ]** ಅಪಘಾತ ಅಂದರೆ ದುರ್ಗತಿಯಿಂದ

ದುಃಖ ಕೊಡುತ್ತಾ ಮತ್ತು ಶರೀರ [ವಾ] ಆತ್ಮ ಭಾವದಿಂದ [ದೂರೇ] ದೂರ [ವಾ] ಅಥವಾ [ಅಂತಿ] ಸಮೀಪದಲ್ಲಿ [ಯೇ] ಯಾವ [ಕೇಚಿತ್] ಅಧರ್ಮಿ ಶತ್ರು ಇರುವನೋ ಅವನನ್ನು [ಅಪಿ] ಕೂಡ ಉತ್ತಮ ಶಿಕ್ಷಣ ಅಥವಾ ಪ್ರಬಲ ತಾಡನಗಳಿಂದ ಸರಿಯಾಗಿ ಮಾಡಿರಿ. ಹಾಗೆ ಮಾಡಿ [ಅಥ] ನಂತರ [ಯಜ್ಞಾಯ] ಕ್ರಿಯಾ ಯಜ್ಞಕ್ಕಾಗಿ [ಗೃಣತೇ] ವಿದ್ಯೆಯ ಪ್ರಶಂಸೆ ಮಾಡುತ್ತಾ ಪುರುಷನಿಗೆ ಯೋಗ್ಯವಾದ [ಸುಗಮ್] ಯಾವ ಕಾರ್ಯಗಳಲ್ಲಿ ವಿದ್ಯೆಯು ತಲುಪುವುದೋ, ಅವುಗಳನ್ನು [ಕೃಧಿ] ಮಾಡಿರಿ. ಈ ಕಾರಣದಿಂದ ಹಾಗೆ ಸಮರ್ಥರಾದ [ತವ] ತಮ್ಮ [ಸಖ್ಯೇ] ಮಿತ್ರತೆಯಿಂದ [ವಯಮ್] ನಾವು [ಮಾ ರಿಷಾಮ] ದುಃಖವನ್ನು ಪಡೆಯದಿರಲಿ.

ಭಾವಾರ್ಥ:- ಸಭಾಧ್ಯಕ್ಷ ಮುಂತಾದವರು ಉತ್ತಮ ಪ್ರಯತ್ನದಿಂದ ಯೋಗ್ಯರಹಿತವಾದುದನ್ನು ಓದುವ-ಓದಿಸುವ ಅಂದರೆ ಹೀನ ವಿದ್ಯೆಯುಳ್ಳವನನ್ನು ನಿವಾರಿಸಿ ದೂರದಲ್ಲಿರುವ ಮನುಷ್ಯರಿಗೆ ಮಿತ್ರರಂತೆ, ಎಲ್ಲಾ ರೀತಿಯ ಪ್ರೇಮಭಾವವನ್ನು ಉತ್ಪನ್ನಗೊಳಿಸಲಿ. ಅದರಿಂದ ಪರಸ್ಪರ ನಿಶ್ಚಲವಾದ ಆನಂದವು ವೃದ್ಧಿಸುವುದು.

ಈಗ ಶಿಲ್ಪಿ ಮತ್ತು ಭೌತಿಕಾಗ್ನಿಗಳ ಗುಣಗಳ ಉಪದೇಶಮಾಡಿದೆ.

ಯದಯುಕ್ಥಾ ಅರುಷಾ ರೋಹಿತಾ ರಥೇ ವಾತಜೂತಾ ವೃಷಭಸ್ಯೇವ ತೇ ರವಃ ।
ಆದಿನ್ವಸಿ ವನಿನೋ ಧೂಮಕೇತುನಾ-ಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೧೦॥

ಪದಾರ್ಥ:- [ಅಗ್ನೇ] ಸಮಸ್ತ ಶಿಲ್ಪ ವ್ಯವಹಾರದ ಜ್ಞಾನವನ್ನು ಕೊಡುವ ಕ್ರಿಯಾಚತುರ ವಿದ್ವಾಂಸನೇ! ಯಾವ ಕಾರಣದಿಂದ ನೀನು **[ಯತ್]** ಯಾವ **[ತೇ]** ನಿನ್ನ ಅಥವಾ ಈ ಅಗ್ನಿಯ **[ವೃಷಭಸ್ಯೇವ]** ಪದಾರ್ಥಗಳನ್ನು ಸಾಗಿಸುವ ಬಲಶಾಲಿ ಎತ್ತಿಗೆ ಸಮಾನವೂ ಅಥವಾ **[ವಾತಜೂತಾ]** ವಾಯುವೇಗದಂತಿರುವ **[ಅರುಷಾ]** ನೇರ ಸ್ವಭಾವದ **[ರೋಹಿತಾ]** ದೃಢವಾದ ಬಲ ಮೊದಲಾದವುಗಳುಳ್ಳ ಕುದುರೆಗಳು **[ರಥೇ]** ವಿಮಾನ ಮೊದಲಾದ ಯಾನಗಳಿಗೆ ಹೂಡಲು ಯೋಗ್ಯವಾಗಿವೆಯೋ, ಅವುಗಳನ್ನು **[ಅಯುಕ್ಥಾಃ]** ಹೂಡುತ್ತಾರೆ. ಅಥವಾ ಈ ಭೌತಿಕಾಗ್ನಿಯನ್ನು ಜೋಡಿಸುತ್ತಾರೆ. ಆ ರಥದಿಂದ ಹೊರಟ ಯಾವ **[ರವಃ]** ಶಬ್ದವು ಅದರ ಜೊತೆಗೂಡಿ **[ಧೂಮಕೇತುನಾ]** ಯಾವುದಕ್ಕೆ ಧೂಮವೇ ಪತಾಕೆಯಾಗಿದೆಯೋ, ಆ ರಥದಿಂದ ಎಲ್ಲ ವ್ಯವಹಾರಗಳನ್ನು **[ಇನ್ವಸಿ]** ವ್ಯಾಪ್ತಗೊಳಿಸುವುವೋ ಅಥವಾ ಈ ಭೌತಿಕಾಗ್ನಿಯು ಉಕ್ತರೀತಿಯಿಂದ ವ್ಯವಹಾರಗಳಲ್ಲಿ ವ್ಯಾಪ್ತವಾಗುವುದೋ, ಅದರಿಂದ **[ಆತ್]** ನಂತರ [ವನಿನಃ] ಯಾವುದಕ್ಕೆ ಒಳ್ಳೆಯ ವಿಭಾಗ ಅಥವಾ ಸೂರ್ಯಕಿರಣಗಳ ಸಂಬಂಧವಿದೆಯೋ, **[ತವ]** ಅವೆಲ್ಲವುಗಳನ್ನು ಅಥವಾ ಯಾವ ಭೌತಿಕಾಗ್ನಿಗೆ ಕಿರಣಗಳ ಸಂಬಂಧವಿದೆಯೋ, ಅವುಗಳ **[ಸಖ್ಯೇ]** ಮಿತ್ರತ್ವದಲ್ಲಿ **[ವಯಮ್]** ನಾವು **[ಮಾ ರಿಷಾಮ]** ಪೀಡಿತರಾಗದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರಗಳಿವೆ. ಯಾವುದರಿಂದ ಶಿಲ್ಪಿ ಮತ್ತು ಭೌತಿಕಾಗ್ನಿಯು ಸರ್ವರ ಹಿತವನ್ನು ಬಯಸುವ ಕಾರ್ಯಗಳಲ್ಲಿ ಸಿದ್ಧಗೊಳಿಸುವುವೋ, ಅವುಗಳಿಂದ ವಿಮಾನ ಮೊದಲಾದ ಯಾನಗಳ ಸಂಭಾವನೆ ಮಾಡಲು ಯೋಗ್ಯವಾಗಿದೆ.

ಮತ್ತೆ ಇವುಗಳಿಗೆ ಯಾವ ಗುಣವಿದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಅಧ ಸ್ವನಾದುತ ಬಿಭ್ಯುಃ ಪತತ್ರಿಣೋ ದ್ರಪ್ಸಾ ಯತ್ ತೇ ಯವಸಾದೋ ವ್ಯಸ್ಥಿರನ್ ।
ಸುಗಂ ತತ್ ತೇ ತಾವಕೇಭ್ಯೋ ರಥೇಭ್ಯೋಽಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೧೧॥

ಪದಾರ್ಥ:- ಹೇ [ಅಗ್ನೇ] ಸಮಸ್ತ ವಿಜ್ಞಾನವನ್ನು ಕೊಡುವ ಶಿಲ್ಪಿಗಳೇ! [ಯತ್] ಯಾವಾಗ [ತೇ] ನಿಮ್ಮ [ಯವಸಾದಃ] ಅನ್ನಾದಿ ಪದಾರ್ಥಗಳನ್ನು ತಿನ್ನುವ [ದ್ರಪ್ಸಾಃ] ಹರ್ಷಿತ ಭೃತ್ಯನು ಅಥವಾ ಅಗ್ನಿ ಜ್ವಾಲೆಯಂತಹ ಗುಣಗಳು [ಸುಗಂ] ಸುಖವಾಗಿ ಸಂಚರಿಸುವ ಮಾರ್ಗಗಳು, [ವಿ] ಅನೇಕ ಪ್ರಕಾರಗಳಿಂದ [ಅಸ್ಥಿರನ್] ಸ್ಥಿರಗೊಳಿಸಲಿ. [ತತ್] ಆಗ [ತೇ] ತಮ್ಮ ಅಥವಾ ಈ ಭೌತಿಕಾಗ್ನಿಯ [ತಾವಕೇಭ್ಯಃ] ತಮ್ಮ ಅಥವಾ ಈ ಅಗ್ನಿಯಿಂದ ಸಿದ್ಧಗೊಳಿಸಿದ ರಥವು [ರಥೇಭ್ಯಃ] ವಿಮಾನ ಮೊದಲಾದ ರಥಗಳಿಂದ [ಪತತ್ರಿಣಃ] ಪಕ್ಷಿಗಳಂತೆ ಇರುವ ಶತ್ರುಗಳು [ಬಿಭ್ಯುಃ] ಹೆದರಲಿ. [ಅಧ] ನಂತರ [ಉತ] ಒಂದೇ ನಿಶ್ಚಯದಿಂದ ಆ ರಥಗಳ [ಸ್ವನಾತ್] ಶಬ್ದದಿಂದ ಪಕ್ಷಿಗಳಂತೆ ಹೆದರುವ ಶತ್ರುಗಳು ಪಲಾಯನ ಮಾಡುವರು. ಹಾಗೆ [ತವ] ತಮ್ಮ ಅಥವಾ ಈ ಅಗ್ನಿಯ [ಸಖ್ಯೇ] ಮಿತ್ರತೆಯಿಂದ [ವಯಮ್] ನಾವು [ಮಾ ರಿಷಾಮ] ಅಪ್ರಸನ್ನರಾಗದಿರಲಿ.

ಭಾವಾರ್ಥ:- ಯಾವಾಗ ಅಗ್ನೇಯಾಸ್ತ್ರ - ಶಸ್ತ್ರ ಮೊದಲಾದವುಗಳು ಮತ್ತು ವಿಮಾನಾದಿ ಯಾನಗಳಿಂದ ಕೂಡಿದ ಸೇನೆಯು ಒಗ್ಗೂಡಿಸಿ ಶತ್ರುಗಳನ್ನು ಗೆಲ್ಲಲು ವೇಗವಾಗಿ ನುಗ್ಗಿ ಶತ್ರುಗಳನ್ನು ಪ್ರಹರಿಸಿ ಅಥವಾ ಒಳ್ಳೆಯ ಆನಂದದಿಂದ ಕೂಡಿದ ಶಬ್ದಗಳಿಂದ ಶತ್ರುಗಳೊಂದಿಗೆ ಮನುಷ್ಯರು ಯುದ್ಧ ಮಾಡಬೇಕು. ಆಗ ದೃಢವಾಗಿ ವಿಜಯವಾಗುವುದು. ಇದನ್ನು ತಿಳಿಯಬೇಕು. ಈ ಸ್ಥಿರವೂ, ದೃಢವೂ ಆದ ವಿಜಯವು ನಿಶ್ಚಯವಾಗಿ ವಿದ್ವಾಂಸರ ವಿರೋಧಿಗಳಿಗೂ, ಅಗ್ನಿ ಮೊದಲಾದ ವಿದ್ಯಾರಹಿತ ಪುರುಷರಿಗೂ ಎಂದಿಗೂ ಸಾಧ್ಯವಾಗುವುದಿಲ್ಲ. ಆದುದರಿಂದ ಪ್ರತಿದಿನವೂ ಇದರ ಅನುಷ್ಠಾನ ಮಾಡಬೇಕು.

ಈಗ ಸಭೆ ಮೊದಲಾದವುಗಳ ಅಧಿಪತಿಯ ಗುಣಗಳ ಉಪದೇಶ ಮಾಡುವಿಕೆ.

ಅಯಂ ಮಿತ್ರಸ್ಯ ವರುಣಸ್ಯ ಧಾಯಸೇಽವಯಾತಾಂ ಮರುತಾಂ ಹೇಳೋ ಅದ್ಭುತಃ ।
ಮೃಳಾ ಸು ನೋ ಭೂತ್ವೇಷಾಂ ಮನಃ ಪುನ-ರಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೧೨॥

ಪದಾರ್ಥ:- ಹೇ [ಅಗ್ನೇ] ಸಮಸ್ತ ಜ್ಞಾನವನ್ನು ಕೊಡುವ ಸಭೆ ಮೊದಲಾದವುಗಳ ಅಧಿಪತಿಯೇ! ಯಾವ ಕಾರಣದಿಂದ ನಿನ್ನ **[ಮಿತ್ರಸ್ಯ]** ಮಿತ್ರರ ಅಥವಾ **[ವರುಣಸ್ಯ]** ಶ್ರೇಷ್ಠರ **[ಧಾಯಸೇ]** ಧಾರಣ ಅಥವಾ ಸಂತೋಷಕ್ಕಾಗಿ ಯಾವ **[ಅಯಮ್]** ಈ ಪ್ರತ್ಯಕ್ಷವೂ **[ಅವಯಾತಾಮ್]** ಧರ್ಮ ವಿರೋಧಿಯೂ **[ಮರುತಾಮ್]** ಸಾಯುವ - ಜೀವಿಸುವ ಮನುಷ್ಯರ **[ಅದ್ಭುತಃ]** ಅದ್ಭುತವು **[ಹೇಳಃ]** ಅನಾದರ ಮಾಡಿದೆ. ಅದರಿಂದ **[ಏಷಾಮ್]** ಈ **[ನಃ]** ನಮ್ಮ **[ಮನಃ]** ಮನಸ್ಸನ್ನು **[ಪುನಃ]** ಮತ್ತೆ ಮತ್ತೆ **[ಸುಮೃಳ]** ಉತ್ತಮವಾಗಿ ಆನಂದ ಪಡಿಸು, ಹಾಗೆಯೇ **[ಭೂತು]** ಆಗು. ಅದರಿಂದ **[ತವ]** ನಿನ್ನ **[ಸಖ್ಯೇ]** ಮಿತ್ರತೆಯು **[ವಯಮ್]** ನಮಗೆ **[ಮಾ ರಿಷಾಮ]** ವಿಮನಸ್ಕವಾಗದಿರಲಿ.

ಭಾವಾರ್ಥ:- ಸಭಾಧ್ಯಕ್ಷರು ಶ್ರೇಷ್ಠರ ಪಾಲನೆ ಮತ್ತು ದುಷ್ಟರಿಗೆ ತಾಡನವನ್ನು ಮಾಡಬೇಕು. ಮನುಷ್ಯರು ಇದನ್ನು ತಿಳಿದು ಸದಾ ಆಚರಣೆಯಲ್ಲಿ ತರಬೇಕು.

ಮತ್ತೆ ಈಶ್ವರ ಮತ್ತು ಸಭೆ ಮೊದಲಾದವುಗಳ ಅಧಿಪತಿಯರೊಂದಿಗೆ ಮಿತ್ರತ್ವವನ್ನು ಏತಕ್ಕೆ ಮಾಡಬೇಕು?

ದೇವೋ ದೇವಾನಾಮಸಿ ಮಿತ್ರೋ ಅದ್ಭುತೋ ವಸುರ್ವಸೂನಾಮಸಿ ಚಾರುರಧ್ವರೇ ।
ಶರ್ಮನ್ತ್ಸ್ಯಾಮ ತವ ಸಪ್ರಥಸ್ತಮೇಽಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೧೩॥

ಪದಾರ್ಥ:- ಹೇ [ಅಗ್ನೇ] ಜಗದೀಶ್ವರ ಅಥವಾ ವಿದ್ವಾಂಸನೇ! ಯಾವ ಕಾರಣದಿಂದ ನೀನು [ಅಧ್ವರೇ] ತ್ಯಜಿಸಲು ಯೋಗ್ಯವಲ್ಲದ ಉಪಾಸನಾರೂಪವಾದ ಯಜ್ಞ ಅಥವಾ ಸಂಗ್ರಾಮಗಳಲ್ಲಿ [ದೇವಾನಾಮ್] ದಿವ್ಯಗುಣಗಳಿಂದ ಪರಿಪೂರ್ಣನಾದ ವಿದ್ವಾಂಸನು ಅಥವಾ ದಿವ್ಯಗುಣಯುಕ್ತ ಪದಾರ್ಥಗಳಲ್ಲಿ [ದೇವಃ] ದಿವ್ಯಗುಣ ಸಂಪನ್ನನು [ಅದ್ಭುತಃ] ಆಶ್ಚರ್ಯರೂಪ ಗುಣ, ಕರ್ಮ ಮತ್ತು ಸ್ವಭಾವದಿಂದ ಕೂಡಿರುವ [ಚಾರು] ಅತ್ಯಂತ ಶ್ರೇಷ್ಠವಾದ [ಮಿತ್ರಃ] ಬಹಳ ಸುಖವನ್ನು ಕೊಡುವ ಮತ್ತು ಎಲ್ಲ ದುಃಖಗಳನ್ನು ನಿವಾರಿಸುವವನು [ಅಸಿ] ಆಗಿರುವೆ. ಹಾಗೂ [ವಸೂನಾಮ್] ವಾಸಿಸಲು ಮತ್ತು ವಾಸಿಸುವಂತೆ ಮಾಡುತ್ತಿರುವ ಮನುಷ್ಯರ ಮಧ್ಯೆ [ವಸುಃ] ವಾಸಿಸಲು ಮತ್ತು ವಾಸಿಸುವಂತೆ ಮಾಡುವವನು [ಅಸಿ] ಆಗಿರುವೆ. ಆದುದರಿಂದ [ತವ] ನಿನ್ನ [ಸಪ್ರಥಸ್ತಮೇ] ಉತ್ತಮವಾಗಿ ಅತಿಯಾಗಿ ಹರಡಿರುವ ಗುಣ, ಕರ್ಮ, ಸ್ವಭಾವಗಳೊಂದಿಗೆ ಕೂಡಿರುವ [ಶರ್ಮನ್] ಸುಖದಲ್ಲಿ [ವಯಮ್] ನಾವು ಉತ್ತಮ ರೀತಿಯಿಂದ, ನಿಶ್ಚಯವಾಗಿ [ಸ್ಯಾಮ] ಆಗಲಿ ಮತ್ತು [ತವ] ನಿನ್ನ [ಸಖ್ಯೇ] ಮಿತ್ರತೆಯಿಂದ ಎಂದಿಗೂ [ಮಾ ರಿಷಾಮ] ವಿಮುಖವಾಗದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವನೇ ಮನುಷ್ಯನಿಗೂ ವಿದ್ವಾಂಸರ ಮತ್ತು ಪರಮೇಶ್ವನ ಸುಖವನ್ನು ಪ್ರಕಟಮಾಡುವ ಮಿತ್ರತೆಯು ಉತ್ತಮವಾಗಿ ಸ್ಥಿರವಾಗಿರುವುದಿಲ್ಲ. ಆದುದರಿಂದ ನಾವು ಮನುಷ್ಯರು ಸ್ಥಿರಬುದ್ಧಿಯಿಂದ ಪ್ರವೃತ್ತರಾಗಬೇಕು.

ಮತ್ತೆ ಯಾರೊಂದಿಗೆ ಎಲ್ಲರೂ ಪ್ರೇಮಭಾವವನ್ನಿಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ತತ್ ತೇ ಭದ್ರಂ ಯತ್ ಸಮಿದ್ಧಃ ಸ್ವೇ ದಮೇ ಸೋಮಾಹುತೋ ಜರಸೇ ಮೃಳಯತ್ತಮಃ ।
ದಧಾಸಿ ರತ್ನಂ ದ್ರವಿಣಂ ಚ ದಾಶುಷೇಽಗ್ನೇ ಸಖ್ಯೇ ಮಾ ರಿಷಾಮಾ ವಯಂ ತವ ॥೧೪॥

ಪದಾರ್ಥ:- ಹೇ [ಅಗ್ನೇ] ಸಮಸ್ತ ವಿಜ್ಞಾನವನ್ನು ಕೊಡುವ ಈಶ್ವರ ಅಥವಾ ವಿದ್ವಾಂಸನೇ! [ಯತ್] ಯಾವ ಕಾರಣವು [ಸ್ವೇ] ನಮ್ಮ [ದಮೇ] ದಮನ ಮಾಡಿದ ಜಗತ್ತಿನಲ್ಲಿ [ಸಮಿದ್ಧಃ] ಚೆನ್ನಾಗಿ ಪ್ರಕಾಶಿತವೂ [ಸೋಮಾಹುತಃ] ಮತ್ತು ಐಶ್ವರ್ಯವನ್ನು ಕೊಡುವ ಗುಣ ಮತ್ತು ಪದಾರ್ಥಗಳಿಂದ ವೃದ್ಧಿಯನ್ನು ಪ್ರಾಪ್ತ ಮಾಡಿದ ಅಗ್ನಿಗೆ ಸಮಾನವಾಗಿ [ಮೃಡಯತ್ತಮಃ] ಅತ್ಯಂತ ಸುಖವನ್ನು ಕೊಡುವ ನೀನು ಎಲ್ಲ ವಿದ್ವಾಂಸರಿಂದ [ಜರಸೇ] ಅರ್ಚನೆಗೂ, ಪೂಜೆಗೂ ಪ್ರಾಪ್ತನಾಗುವೆ ಅಥವಾ [ದಾಶುಷೇ] ಉತ್ತಮ ಶೀಲಕ್ಕೆ ನಿಮಿತ್ತವಾದ ನಮ್ಮ ನಡೆವಳಿಕೆಯನ್ನು ಉತ್ತಮಪಡಿಸಿಕೊಳ್ಳುವ ಮನುಷ್ಯರಿಗೆ [ರತ್ನಮ್] ಅತಿ ರಮಣೀಯವಾದ [ದ್ರವಿಣಮ್] ಚಕ್ರವರ್ತಿ ರಾಜ್ಯ ಮೊದಲಾದ ಕೆಲಸಗಳಲ್ಲಿ ಸಿದ್ಧಿಸಿದ ಧನವನ್ನು [ಚ] ಮತ್ತು ವಿದ್ಯೆ ಮೊದಲಾದ ಉತ್ತಮ ಗುಣಗಳನ್ನು [ದಧಾಸಿ] ಧಾರಣ ಮಾಡುತ್ತೀಯೆ. [ತತ್] ಈ ಕಾರಣದಂತೆ [ತೇ] ನಿನ್ನ [ಭದ್ರಮ್] ಸುಖಕೊಡುವ ಸ್ವಭಾವವನ್ನು [ವಯಮ್] ನಾವು ಎಂದಿಗೂ [ಮಾ ರಿಷಾಮ] ಮರೆಯದಿರಲಿ. ಆದರೆ [ತವ] ನಿನ್ನ [ಸಖ್ಯೇ] ಮಿತ್ರತೆಯಲ್ಲಿ ಉತ್ತಮವಾಗಿ ಸ್ಥಿರರಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ವೇದಪ್ರಮಾಣ ಮತ್ತು ಲೋಕದಲ್ಲಿ ಮತ್ತೆ ಮತ್ತೆ ಉಂಟಾಗುವ ಮತ್ತು ಉಂಟಾಗದಿರುವ ಮೊದಲಾದ ವ್ಯವಹಾರದ ಪ್ರಮಾಣಗಳು ಹಾಗೂ ಸತ್ಪುರುಷರ ವಾಕ್ಯಗಳಿಂದ ಅಥವಾ ಈಶ್ವರ ಮತ್ತು ವಿದ್ವಾಂಸರ ಕಾರ್ಯ ಅಥವಾ ಸ್ವಭಾವಗಳನ್ನು ಚೆನ್ನಾಗಿ ಗ್ರಹಿಸಿ ಎಲ್ಲ ಪ್ರಾಣಿಗಳೊಡನೆ ಮಿತ್ರತೆಯಿಂದ ವರ್ತಿಸಿ ಪ್ರತಿದಿನವೂ ವಿದ್ಯೆ, ಧರ್ಮದ ಶಿಕ್ಷಣಗಳನ್ನು ಉನ್ನತಿಗೊಳಿಸಬೇಕು.

ಮತ್ತೆ ಅವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರವು ಹೇಳುತ್ತದೆ.

ಯಸ್ಮೈ ತ್ವಂ ಸುದ್ರವಿಣೋ ದದಾಶೋಽನಾಗಾಸ್ತ್ವಮದಿತೇ ಸರ್ವತಾತಾ ।
ಯಂ ಭದ್ರೇಣ ಶವಸಾ ಚೋದಯಾಸಿ ಪ್ರಜಾವತಾ ರಾಧಸಾ ತೇ ಸ್ಯಾಮ ॥೧೫॥

ಪದಾರ್ಥ:- ಹೇ [ಸದ್ರವಿಣಃ] ಉತ್ತಮೋತ್ತಮ ಧನವನ್ನು ಕೊಡುವ ಮತ್ತು [ಅದಿತೇ] ವಿನಾಶವಾಗದ ಜಗದೀಶ್ವರ ಅಥವಾ ವಿದ್ವಾಂಸನೇ! ಯಾವ ಕಾರಣದಿಂದ [ತ್ವಂ] ನೀನು [ಸರ್ವತಾತಾ] ಸಮಸ್ತ ವ್ಯವಹಾರಗಳಲ್ಲಿ [ಅಸ್ಮೈ] ಯಾವ ಮನುಷ್ಯನಿಗಾಗಿ [ಅನಾಗಾಸ್ತ್ವಮ್] ನಿರಪರಾಧತೆಯನ್ನು [ದದಾಶಃ] ಕೊಡುತ್ತೀಯೆ. ಹಾಗೂ [ಯಮ್] ಯಾವ ಮನುಷ್ಯನಿಗೆ [ಭದ್ರೇಣ] ಸುಖ ಕೊಡುವ [ಶವಸಾ] ಶಾರೀರಿಕ, ಆತ್ಮಿಕ ಬಲ ಮತ್ತು [ಪ್ರಜಾವತಾ] ಪ್ರಶಂಸಿತರಾದ ಪುತ್ರ ಮೊದಲಾದವರು ಇರುವರೋ, ಆ [ರಾಧಸಾ] ವಿದ್ಯೆ, ಸುವರ್ಣ ಮೊದಲಾದ ಧನದಿಂದ ಕೂಡಿ ಉತ್ತಮ ವ್ಯವಹಾರಗಳಲ್ಲಿ [ಚೋದಯಾಸಿ] ತೊಡಗುವರು. ಆದುದರಿಂದ ತಮ್ಮ ಅಥವಾ ವಿದ್ವಾಂಸರ ಶಿಕ್ಷಣದಂತೆ ನಡೆಯುವ ಮನುಷ್ಯರಾದ ನಾವು ಅನೇಕ ಪ್ರಕಾರಗಳಿಂದ ಯತ್ನ ಮಾಡುತ್ತೇವೆ. [ತೇ] ಅವರು ನಮ್ಮ ಕಾಲದಲ್ಲಿ ಸ್ಥಿರರು [ಸ್ಯಾಮ] ಆಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಯಾವ ಮನುಷ್ಯನಲ್ಲಿ ಅಂತರ್ಯಾಮಿಯಾದ ಈಶ್ವರನು ಧರ್ಮಶೀಲತೆಯನ್ನು ಪ್ರಕಾಶಗೊಳಿಸುವನೋ, ಆ ಮನುಷ್ಯನು ವಿದ್ವಾಂಸರ ಸಂಗದ ಇಚ್ಛುಕನಾಗಿ ಎಲ್ಲ ರೀತಿಯ ಧನ ಮತ್ತು ಉತ್ತಮೋತ್ತಮ ಗುಣಗಳನ್ನು ಪಡೆದು ಪ್ರತಿದಿನವೂ ಸುಖಿಯಾಗುವನು. ಆದುದರಿಂದ, ಈ ಕೆಲಸವನ್ನು ನಾವು ಮನುಷ್ಯರೂ ಕೂಡ ನಿತ್ಯವೂ ಮಾಡಬೇಕು.

ಮತ್ತೆ ಅವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಸ ತ್ವಮಗ್ನೇ ಸೌಭಗತ್ವಸ್ಯ ವಿದ್ವಾ-ನಸ್ಮಾಕಮಾಯುಃ ಪ್ರ ತಿರೇಹ ದೇವ । ತನ್ನೋ ಮಿತ್ರೋ
ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೧೬॥

ಪದಾರ್ಥ:- ಹೇ [ದೇವ] ಸಭೆಗಳ ಕಾಮನೆಗೆ ಯೋಗ್ಯವಾದ [ಅಗ್ನೇ] ಜೀವನ ಮತ್ತು ಐಶ್ವರ್ಯವನ್ನು ಕೊಡುವ ಜಗದೀಶ್ವರ! ಯಾವ [ತ್ವಮ್] ನೀನು ಉತ್ಪನ್ನಗೊಳಿಸಿದ ಅಥವಾ ನೀನು ತಿಳಿಸಿದ ರೋಗವನ್ನು ಗುಣಪಡಿಸುವ ಔಷಧಿಯನ್ನು ಕೊಡುವ ವಿದ್ವಾಂಸನು [ಮಿತ್ರಃ] ಪ್ರಾಣವು [ವರುಣಃ] ಉದಾನವಾಯುವು [ಅದಿತಿಃ] ಉತ್ಪನ್ನವಾದ ಸಮಸ್ತ ಪದಾರ್ಥಗಳು [ಸಾಧುಃ] ಸಮುದ್ರವು [ಪೃಥಿವೀ] ಭೂಮಿಯು [ಉತ] ಮತ್ತು [ದ್ಯೌಃ] ವಿದ್ಯುತ್ತಿನ ಪ್ರಕಾಶವು, ಅವು [ನಃ] ನಮ್ಮ [ಮಾಮಹಂತಾಮ್] ಉನ್ನತಿಗೆ ನಿಮಿತ್ತವಾಗಲಿ. [ತತ್] ಮತ್ತು ಆ ಎಲ್ಲ ವೃತ್ತಾಂತವು [ಅಸ್ಮಾಕಮ್] ನಮಗೆ [ಸೌಭಗತ್ವಸ್ಯ] ಉತ್ತಮೋತ್ತಮ ಐಶ್ವರ್ಯಗಳುಂಟಾಗಲು [ಆಯುಃ] ಜೀವನ ಅಥವಾ ಜ್ಞಾನವು ಇದೆ. [ಇಹ] ಈ ಕಾರ್ಯರೂಪ ಜಗತ್ತಿನಲ್ಲಿ [ಸಃ] ಆ [ವಿದ್ವಾನ್] ಸಮಸ್ತ ವಿದ್ಯೆಯನ್ನು ಪ್ರಾಪ್ತಿಗೊಳಿಸುವ ಜಗದೀಶ್ವರನಾದ ನೀನು, ಪ್ರಮಾಣಪೂರ್ವಕವಾಗಿ ವಿದ್ಯೆಗಳನ್ನು ಕೊಡುವ ವಿದ್ವಾಂಸರಾದ ನೀವೆಲ್ಲರೂ [ಪ್ರತಿರ] ಉತ್ತಮ ರೀತಿಯಲ್ಲಿ ದುಃಖಗಳಿಂದ ಪಾರುಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮನುಷ್ಯರು ಪರಮೇಶ್ವರ ಮತ್ತು ವಿದ್ವಾಂಸರ ಆಶ್ರಯದಿಂದ ಪದಾರ್ಥವಿದ್ಯೆಯನ್ನು ತಿಳಿದು ಈ ಲೋಕದಲ್ಲಿ ಸೌಭಾಗ್ಯ ಮತ್ತು ಆಯುರ್ದಾಯವನ್ನು ಹೆಚ್ಚಿಸಿಕೊಳ್ಳಬೇಕು.

ಈ ಅಧ್ಯಾಯದಲ್ಲಿ ಸೇನಾಪತಿಗೆ ಉಪದೇಶ ಮತ್ತು ಅವನ ಕೆಲಸ ಮೊದಲಾದವುಗಳ ವರ್ಣನೆ ಇದೆ. ಆದುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥದೊಂದಿಗೆ ಸಂಬಂಧವಿದೆಯೆಂದು ತಿಳಿಯಬೇಕು.

ಈ ಅಧ್ಯಾಯದಲ್ಲಿ ಸೇನಾಪತಿಗೆ ಉಪದೇಶ ಮತ್ತು ಅವನ ಕೆಲಸ ಮೊದಲಾದವುಗಳ ವರ್ಣನೆ ಇದೆ ಆದುದರಿಂದ ಈ ೬ನೇ ಅಧ್ಯಾಯದಲ್ಲಿ ಅರ್ಥಕ್ಕೂ ೫ನೇ ಅಧ್ಯಾಯದ ಅರ್ಥಕ್ಕೂ ಏಕತೆ ಇದೆ ಎಂದು ತಿಳಿಯಬೇಕು.

ತೊಂಬತ್ತನಾಲ್ಕನೆಯ ಸೂಕ್ತ ಸಮಾಪ್ತ

॥ ಇತಿ ಷಷ್ಠೋಽಧ್ಯಾಯಃ ॥

ಸಪ್ತಮೋಽಧ್ಯಾಯಃ

ಸೂಕ್ತ ೯೫

ಮಂತ್ರಸಂಖ್ಯೆ ೧೧ । ಋಷಿಃ - ಕುತ್ಸ ಆಂಗಿರಸಃ। ದೇವತಾ - ಅಗ್ನಿಃ ಔಷಸೋಽಗ್ನಿರ್ವಾ । ಛಂದಃ - ತ್ರಿಷ್ಟುಪ್ ।

ಸ್ವರಃ - ೯ ಪಂಚಮಃ, ಧೈವತಃ.

ಈಗ ರಾತ್ರಿ ಮತ್ತು ಹಗಲು ಹೇಗಿವೆ ಈ ವಿಷಯದ ಉಪದೇಶವನ್ನು ಮುಂದಿನ ಮಂತ್ರದಲ್ಲಿ ಮಾಡಿದೆ.

ದ್ವೇ ವಿರೂಪೇ ಚರತಃ ಸ್ವರ್ಥೇ ಅನ್ಯಾನ್ಯಾ ವತ್ಸಮುಪ ಧಾಪಯೇತೇ ।
ಹರಿರನ್ಯಸ್ಯಾಂ ಭವತಿ ಸ್ವಧಾವಾಞ್ಛುಕ್ರೋ ಅನ್ಯಸ್ಯಾಂ ದದೃಶೇ ಸುವರ್ಚಾಃ ॥೧॥

ಪದಾರ್ಥ:— ಹೇ ಮನುಷ್ಯರೇ! ಯಾವ [**ವಿರೂಪೇ**] ಬೆಳಕು ಮತ್ತು ಕತ್ತಲೆಗಳಿಂದ ಬೇರೆ ಬೇರೆ ರೂಪವೂ ಮತ್ತು [**ಸ್ವರ್ಥೇ**] ಉತ್ತಮ ಪ್ರಯೋಜನಕಾರಿಯು [**ದ್ವೇ**] ಎರಡು ಅಂದರೆ ರಾತ್ರಿ ಮತ್ತು ಹಗಲುಗಳು ಪರಸ್ಪರ [**ಚರತಃ**] ವರ್ತಿಸುತ್ತವೆ. ಮತ್ತು [**ಅನ್ಯಾನ್ಯಾ**] ಪರಸ್ಪರ [**ವತ್ಸಮ್**] ಉತ್ಪನ್ನವಾಗಿರುವ ಜಗತ್ತಿಗೆ [**ಉಪಧಾಪಯೇತೇ**] ಆಹಾರ ಪಾನೀಯಗಳನ್ನು ಕೊಡುತ್ತದೆ. [**ಅನ್ಯಸ್ಯಾಮ್**] ಹಗಲಿಗೆ ಭಿನ್ನವಾದ ರಾತ್ರಿಯಲ್ಲಿ [**ಸ್ವಧಾವಾನ್**] ಯಾವುದು ತನ್ನ ಗುಣದಿಂದ ಧಾರಣ ಮಾಡಲ್ಪಡುತ್ತದೋ, ಆ ಓಷಧಿ ಮೊದಲಾದ ಪದಾರ್ಥಗಳ ರಸವು ಯಾವವುಗಳಲ್ಲಿ ವಿದ್ಯಮಾನವಾಗಿದೆಯೋ, ಅಂತಹ [**ಹರಿಃ**] ಉಷ್ಣತೆ ಮೊದಲಾದ ಪದಾರ್ಥಗಳ ನಿವಾರಣೆ ಮಾಡುವ ಚಂದ್ರನು [**ಭವತಿ**] ಪ್ರಕಟವಾಗುವನು. ಅಥವಾ [**ಅನ್ಯಸ್ಯಾಮ್**] ರಾತ್ರಿಗಿಂತ ಬೇರೆಯಾದ ಹಗಲಿನ ವೇಳೆಯಲ್ಲಿ [**ಶುಕ್ರಃ**] ತಾಪವನ್ನುಂಟುಮಾಡುವ [**ಸುವರ್ಚಾಃ**] ಉತ್ತಮವಾದ ಪ್ರಕಾಶವನ್ನು ಕೊಡುವ ಸೂರ್ಯನನ್ನು [**ದದೃಶೇ**] ನೋಡುತ್ತೇವೆ. ಆ ರಾತ್ರಿ-ಹಗಲುಗಳು ಸದಾಕಾಲ ಇರುತ್ತವೆ. ಇವುಗಳನ್ನು ರೇಖಾಗಣಿತ ಮೊದಲಾದ ಗಣಿತ ವಿದ್ಯೆಯಿಂದ ತಿಳಿದು ಅವುಗಳ ಮಧ್ಯೆ ಉಪಯೋಗ ಪಡೆಯಿರಿ.

ಭಾವಾರ್ಥ:— ಹಗಲು ರಾತ್ರಿಗಳು ಎಂದಿಗೂ ನಿವೃತ್ತಿಯಾಗುವುದಿಲ್ಲ, ಆದರೆ ಯಾವಾಗಲೂ ಇರುತ್ತವೆ. ಅಂದರೆ ಒಂದು ದೇಶದಲ್ಲಿಲ್ಲದಿದ್ದರೆ ಮತ್ತೊಂದು ದೇಶದಲ್ಲಿರುತ್ತವೆ ಎಂದು ಮನುಷ್ಯರು ತಿಳಿಯಬೇಕು. ಯಾವ ಕೆಲಸಗಳನ್ನು ರಾತ್ರಿ ಮತ್ತು ಹಗಲುಗಳಲ್ಲಿ ಮಾಡಲು ಯೋಗ್ಯವೋ, ಅವುಗಳನ್ನು ಆಲಸ್ಯರಹಿತರಾಗಿ ಮಾಡಿ ಎಲ್ಲ ಕಾರ್ಯಗಳನ್ನು ಸಿದ್ಧಿಸಿಕೊಳ್ಳಬೇಕು.

ಈಗ ಹಗಲು ರಾತ್ರಿಗಳ ವ್ಯವಹಾರವನ್ನು ದಿಕ್ಕುಗಳ ನೆಪದಿಂದ ಹೇಳಲಾಗಿದೆ.

ದಶೇಮಂ ತ್ವಷ್ಟುರ್ಜನಯಂತ ಗರ್ಭ-ಮತಂದ್ರಾಸೋ ಯುವತಯೋ ವಿಭೃತ್ರಮ್ ।
ತಿಗ್ಮಾನೀಕಂ ಸ್ವಯಶಸಂ ಜನೇಷು ವಿರೋಚಮಾನಂ ಪರಿ ಷೀಂ ನಯಂತಿ ॥೨॥

ಪದಾರ್ಥ:— ಹೇ ಮನುಷ್ಯರೇ! ನೀವು [**ಅತಂದ್ರಾಸಃ**] ಒಂದು ನಿಯಮದ ಜೊತೆಯಲ್ಲಿ ಇರುವುದರಿಂದ ಆಲಸ್ಯರಹಿತ ಮೊದಲಾದ ಗುಣಗಳಿಂದ ಕೂಡಿ [**ಯುವತಯಃ**] ಯುವಾ ಸ್ತ್ರೀಯರಂತೆ ಒಬ್ಬರು ಇನ್ನೊಬ್ಬರೊಡನೆ ಬೆರೆಯುವುದರಿಂದ ಅಥವಾ ಬೆರೆಯದಿರುವುದರಿಂದ ಎಲ್ಲರೂ ಎಂದಿಗೂ ಅಜರರೂ ಅಮರರೂ ಆಗಿರುವ [**ದಶ**] ಹತ್ತು ದಿಕ್ಕು [**ತ್ವಷ್ಟುಃ**] ವಿದ್ಯುತ್ತು ಅಥವಾ ವಾಯುವಿನ [**ಇಮಮ್**] ಈ ಪ್ರತ್ಯಕ್ಷವಾದ ಅಹೋ-ರಾತ್ರಿಗಳಿಂದ ಪ್ರಸಿದ್ಧವೂ [**ಗರ್ಭಮ್**] ಸಮಸ್ತ ವ್ಯವಹಾರದ ಕಾರಣರೂಪವು [**ವಿಭೃತ್ರಮ್**] ಅನೇಕ ಪ್ರಕಾರದ ಕ್ರಿಯೆಗಳನ್ನು ಧಾರಣ ಮಾಡಿರುವ [**ತಿಗ್ಮಾನೀಕಮ್**] ಯಾವನಲ್ಲಿ ಅತ್ಯಂತ ತೀಕ್ಷ್ಣವಾಗಿರುವ ಸೇನಾ ಜನರು ವಿದ್ಯಮಾನ-ರಾಗಿರುವರೋ ಯಾವ [**ಜನೇಷು**] ಗಣಿತವಿದ್ಯೆಯನ್ನು ತಿಳಿದ ಮನುಷ್ಯರಲ್ಲಿ [**ವಿರೋಚಮಾನಮ್**] ಅನೇಕ ರೀತಿಯಿಂದ ಪ್ರಕಟಮಾನವಾದ [**ಸ್ವಯಶಸಮ್**] ಅನೇಕ ಗುಣ, ಕರ್ಮ, ಸ್ವಭಾವ ಮತ್ತು ಪ್ರಶಂಸೆಗಳಿಂದ ಕೂಡಿರುವ [**ಸೀಮ್**] ಪ್ರಾಪ್ತವಾಗಲು ಯೋಗ್ಯವಾದ ಆ ಹಗಲು-ರಾತ್ರಿಗಳ ವ್ಯವಹಾರಗಳಲ್ಲಿ [**ಜನಯಂತ**] ಉತ್ಪನ್ನ ಮಾಡುತ್ತಾ ಮತ್ತು [**ಪರಿ**] ಎಲ್ಲ ಕಡೆಗಳಿಂದ [**ನಯಂತಿ**] ಸ್ವೀಕಾರ ಮಾಡುತ್ತದೆ. ಅವುಗಳನ್ನು ನೀವು ತಿಳಿಯಿರಿ.

ಭಾವಾರ್ಥ:— ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವನ ದೇಶಕಾಲದ ನಿಯಮಗಳು ಅನುಮಾನದಲ್ಲಿ ಬರುವುದಿಲ್ಲವೋ, ಅಂತಹ ಅನಂತರೂಪವಾದ ಪೂರ್ವ ಮೊದಲಾದ ಕ್ರಮವಾಗಿ ಪ್ರಸಿದ್ಧವಾಗಿ ಎಲ್ಲ ವ್ಯವಹಾರಗಳನ್ನು ಸಿದ್ಧಗೊಳಿಸುವ ೧೦ ದಿಕ್ಕುಗಳಿವೆ. ಅವುಗಳಲ್ಲಿ ನಿಯಮಯುಕ್ತವಾದ ವ್ಯವಹಾರಗಳನ್ನು ಸಿದ್ಧ ಪಡಿಸಿರಿ. ಅವುಗಳಲ್ಲಿ ಯಾವುದಕ್ಕೂ ವಿರುದ್ಧವಾಗಿ ವ್ಯವಹಾರ ಮಾಡದಿರಿ.

ಆ ಹಗಲು ರಾತ್ರಿಗಳು ಏನು ಮಾಡುತ್ತವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ತ್ರೀಣಿ ಜಾನಾ ಪರಿ ಭೂಷಂತ್ಯಸ್ಯ ಸಮುದ್ರ ಏಕಂ ದಿವ್ಯೇಕಮಪ್ಸು ।
ಪೂರ್ವಾಮನು ಪ್ರ ದಿಶಂ ಪಾರ್ಥಿವಾನಾ-ಮೃತೂನ್ ಪ್ರಶಾಸದ್ ವಿ ದಧಾವನುಷ್ಠು ॥೩॥

ಪದಾರ್ಥ:— ಹೇ ಗಣಿತ ವಿದ್ಯೆಯನ್ನು ತಿಳಿಸುವ ಮನುಷ್ಯರೇ! ಯಾವ ಹಗಲು- ರಾತ್ರಿಗಳು [**ಪೂರ್ವಾಮ್**] ಪೂರ್ವ [**ಪ್ರದಿಶಮ್**] ಮನುಷ್ಯರು ಉಪದೇಶ ಮಾಡುವ ಪ್ರದೇಶವಿದೆಯೋ, ಅದನ್ನು [**ಅನುಷ್ಠು**] ಹಾಗೂ ಅದಕ್ಕೆ ಅನುಕೂಲವಾದ [**ಪಾರ್ಥಿವಾನಾಮ್**] ಪೃಥಿವೀ ಮತ್ತು ಅಂತರಿಕ್ಷದಲ್ಲಿ ವಿದಿತವಾಗಿರುವ ಪದಾರ್ಥಗಳ ಮಧ್ಯೆ [**ಋತೂನ್**] ವಸಂತ ಮೊದಲಾದ ಋತುಗಳಿಗೆ [**ಪ್ರಶಾಸತ್**] ಪ್ರೇರಣೆ ನೀಡುತ್ತಾ [**ಅನು**] ಅನಂತರ ಅದರ [**ವಿ ದಧೌ**] ವಿಧಾನ ಮಾಡುತ್ತದೆ. [**ಅಸ್ಯ**] ಈ ಹಗಲು -ರಾತ್ರಿಗಳ [**ಏಕಮ್**] ಒಂದು ಪಾದವು [**ದಿವಿ**] ಸೂರ್ಯನಲ್ಲಿ ಒಂದು [**ಸಮುದ್ರೇ**] ಸಮುದ್ರದಲ್ಲಿ ಮತ್ತು [**ಏಕಮ್**] ಒಂದು [**ಅಪ್ಸು**] ಪ್ರಾಣ ಮೊದಲಾದ ವಾಯುಗಳಲ್ಲಿ ಇದೆ ಹಾಗೂ ಈ ಅಹೋರಾತ್ರಿಗಳ ಅಂಗವು [**ತ್ರೀಣಿ**] ಅಂದರೆ ಭೂತ, ಭವಿಷ್ಯತ್ ಮತ್ತು ವರ್ತಮಾನಗಳಲ್ಲಿ ಪೃಥಗ್ಭಾವದಿಂದ ಉತ್ಪನ್ನವಾಗಿ [**ಜಾನಾ**] ಮನುಷ್ಯರಲ್ಲಿರುವ ವ್ಯವಹಾರಗಳ [**ಪರಿ ಭೂಷನ್ತಿ**] ಶೋಭಿತಗೊಳಿಸುತ್ತದೆ. ಇದನ್ನು ಎಲ್ಲರೂ ತಿಳಿಯಿರಿ.

ಭಾವಾರ್ಥ:— ಹಗಲು ರಾತ್ರಿ ಮುಂತಾದ ಸಮಯದ ಅಂಗಗಳು ಪ್ರವರ್ತಿಸದಿದ್ದಲ್ಲಿ ಭೂತ, ಭವಿಷ್ಯತ್ ಮತ್ತು ವರ್ತಮಾನಗಳೆನ್ನುವ ಕಾಲಗಳ ಸಂಭವಿಸುವಿಕೆ ಎಂದಿಗೂ ಉಂಟಾಗುವುದಿಲ್ಲ. ಮತ್ತು ಇವುಗಳ ಹೊರತು

ಯಾವುದೇ ಋತು ಆಗುವ ಸಂಭವವಿಲ್ಲ. ಯಾವ ಸೂರ್ಯ ಮತ್ತು ಅಂತರಿಕ್ಷಗಳಲ್ಲಿ ಇರುವ ವಾಯುವಿನ ಗತಿಯಿಂದ ಸಮಯದ ಅವಯವವು ಅಂದರೆ ಹಗಲು ರಾತ್ರಿ ಮೊದಲಾದವುಗಳು ಪ್ರಸಿದ್ಧವಾಗಿವೆ. ಅವೆಲ್ಲವುಗಳನ್ನು ತಿಳಿದು ಎಲ್ಲ ಮನುಷ್ಯರೂ ವ್ಯವಹಾರಗಳನ್ನು ಸಿದ್ಧಿಗೊಳಿಸಬೇಕು.

ಮತ್ತೆ ಆ ಹಗಲು ರಾತ್ರಿಗಳ ಸಮಯದ ಸಮೂಹವು ಹೇಗಿದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಕ ಇಮಂ ವೋ ನಿಣ್ಯಮಾ ಚಿಕೇತ ವತ್ಸೋ ಮಾತೄರ್ಜನಯತ ಸ್ವಧಾಭಿಃ ।

ಬಹ್ವೀನಾಂ ಗರ್ಭೋ ಅಪಸಾಮುಪಸ್ಥಾ-ನ್ಮಹಾನ್ ಕವಿರ್ನಿಶ್ಚರತಿ ಸ್ವಧಾವಾನ್ ॥೪॥

ಪದಾರ್ಥ:- ಯಾವ [ಬಹ್ವೀನಾಮ್] ಅನೇಕವಾದ ಅಂತರಿಕ್ಷ ಮತ್ತು ಭೂಮಿ ಹಾಗೂ ದಿಕ್ಕುಗಳಲ್ಲಿ ಅಥವಾ [ಅಪಸಾಮ್] ಜಲಗಳಲ್ಲಿ [ಉಪಸ್ಥಾತ್] ಸಮೀಪದ ವ್ಯವಹಾರಗಳಿಂದ [ಗರ್ಭಃ] ಚೆನ್ನಾಗಿ ಹೊದಿಸುವ [ಸ್ವಧಾವಾನ್] ತನ್ನ ಪ್ರಸಿದ್ಧ ಅಂಗಗಳುಳ್ಳ [ಮಹಾನ್] ವ್ಯಾಪ್ತಿ ಮೊದಲಾದ ಗುಣಗಳಿಂದ ಕೂಡಿದ [ವತ್ಸಃ] ಆದರೆ ತನ್ನ ವ್ಯಾಪ್ತಿಯಿಂದ ಎಲ್ಲಕ್ಕೂ ಹೆಚ್ಚಾಗಿ ಎಲ್ಲವನ್ನೂ ಹೊದಿಸುವ ಅಥವಾ [ಕವಿಃ] ಕ್ರಮ-ಕ್ರಮವಾಗಿ ದೃಷ್ಟಿಗತವಾಗುವ ಸಮಯವು [ನಿಃ ಚರತಿ] ನಿರಂತರ ಅಂದರೆ ಒಂದೇ ರೀತಿಯಾಗಿ ಚಲಿಸುತ್ತಿರುತ್ತದೆ. ಮತ್ತು [ಸ್ವಧಾಭಿಃ] ಸೂರ್ಯ ಅಥವಾ ಭೂಮಿಯೊಡನೆ [ಮಾತೄಃ] ಮಾತೆಯಂತೆ ಪಾಲಿಸುವ ರಾತ್ರಿಗಳನ್ನು [ಜನಯತ್] ಪ್ರಕಟಗೊಳಿಸುತ್ತದೆ. [ಇಮಮ್] ಈ [ನಿಣ್ಯಮ್] ನಿಶ್ಚಯವಾಗಿ ಒಂದೇ ಆಗಿರುವ ಸಮಯವನ್ನು [ಕಃ] ಯಾವ ಮನುಷ್ಯನು [ಆ ಚಿಕೇತ] ಉತ್ತಮ ರೀತಿಯಲ್ಲಿ ತಿಳಿಯುವನು. [ವಃ] ಈ ಸಮಯದ ಅವಯವಗಳನ್ನು ಅಂದರೆ ಕ್ಷಣ, ಘಳಿಗೆ, ಪ್ರಹರ, ದಿನ, ರಾತ್ರಿ, ಮಾಸ, ವರ್ಷ ಮೊದಲಾದ ಸ್ವರೂಪಗಳನ್ನು ಕೂಡ ಯಾರು ತಿಳಿಯುವರು?

ಭಾವಾರ್ಥ:- ಮನುಷ್ಯರು ಯಾವುದರ ಸೂಕ್ಷ್ಮದಿಂದ ಸೂಕ್ಷ್ಮವು ಬೋಧೆಯಾಗುವುದೋ, ಯಾವ ಸಮಸ್ತವೂ ತನ್ನ ಅವಯವಗಳನ್ನು ಪ್ರಕಟಪಡಿಸುತ್ತಾ, ಎಲ್ಲ ಕಾರ್ಯಗಳಲ್ಲಿ ವ್ಯಾಪ್ತವಾಗಿದೆಯೋ, ಯಾವುದರಲ್ಲಿ ಎಲ್ಲ ಜಗತ್ತು ಏಕರಸವಾಗಿದೆಯೋ, ಆ ಸಮಯವನ್ನು ಯಾವನಾದರೂ ವಿದ್ವಾಂಸನು ತಿಳಿಯುವನು.

ಮತ್ತೆ ಅವು ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಆವಿಷ್ಟ್ಯೋ ವರ್ಧತೇ ಚಾರುರಾಸು ಜಿಹ್ಮಾನಾಮೂರ್ಧ್ವಃ ಸ್ವಯಶಾ ಉಪಸ್ಥೇ ।

ಉಭೇ ತ್ವಷ್ಟುರ್ಬಿಭ್ಯತುರ್ಜಾಯಮಾನಾತ್ ಪ್ರತೀಚೀ ಸಿಂಹಂ ಪ್ರತಿ ಜೋಷಯೇತೇ ॥೫॥

ಪದಾರ್ಥ:- ಹೇ ಮನುಷ್ಯರೇ! ನೀವು ಯಾವ [ಜಾಯಮಾನಾತ್] ಪ್ರಸಿದ್ಧವು [ತ್ವಷ್ಟುಃ] ಭೇದನ ಮಾಡಲು ಅಂದರೆ ಎಲ್ಲರ ಅವಧಿಯನ್ನೂ ಪೂರ್ಣಮಾಡುವ ಸಮಯದಿಂದ [ಉಭೇ] ಎರಡೂ ರಾತ್ರಿ ಮತ್ತು ಹಗಲುಗಳು [ಬಿಭ್ಯತುಃ] ಎಲ್ಲರನ್ನೂ ಹೆದರಿಸುತ್ತದೆ ಅಥವಾ ಯಾವುದರಿಂದ [ಪ್ರತೀಚೀ] ಪಶ್ಚಿಮದಲ್ಲಿ ಪ್ರಕಟವಾಗುವುದೋ, ಅಥವಾ ಉಕ್ತ ರಾತ್ರಿ-ಹಗಲುಗಳು ಎಲ್ಲ ವ್ಯವಹಾರಗಳ [ಪ್ರತಿ ಜೋಷಯೇತೇ] ಸೇವನೆ ಹಾಗೂ ಯಾವ ಸಮಯವು [ಉಪಸ್ಥೇ] ಕೆಲಸ ಮಾಡುವವರ ಹತ್ತಿರ [ಸ್ವಯಶಃ] ತನ್ನ ಕೀರ್ತಿ ಅಂದರೆ ಪ್ರಶಂಸೆಗೆ ಪ್ರಾಪ್ತವಾಗುತ್ತಾ ಅಥವಾ [ಜಿಹ್ಮಾನಾಮ್] ಕುಟಿಲತೆಗಳಿಂದ [ಊರ್ಧ್ವಃ] ಮೇಲೆ ಮೇಲಕ್ಕೆ ಅಂದರೆ ಅವರ ಶುಭಕರ್ಮಗಳಲ್ಲಿ ವ್ಯತೀತವಾಗದೆ [ಆಸು] ಈ ದಿಕ್ಕುಗಳು ಅಥವಾ ಪ್ರಜೆಗಳಲ್ಲಿ [ಚಾರುಃ] ಸುಂದರವೂ [ಆವಿಷ್ಟ್ಯಃ] ಪ್ರಕಟವಾಗುತ್ತಾ ವ್ಯವಹಾರಗಳಲ್ಲಿ ಪ್ರಸಿದ್ಧವಾಗಿ [ವರ್ಧತೇ] ಉನ್ನತಿಯನ್ನು ಪಡೆಯುತ್ತದೆ. ಆ [ಸಿಂಹಮ್] ನಮಗೂ ನಿಮಗೂ ಎಲ್ಲರಿಗೂ ಕಡಿತವನ್ನು ಮಾಡುವ ಸಮಯವನ್ನು ನೀವೆಲ್ಲರೂ ಯಥಾವತ್ತಾಗಿ ತಿಳಿಯಿರಿ.

ಭಾವಾರ್ಥ:- ಸೃಷ್ಟಿಯ ಉತ್ಪತ್ತಿಯ ಸಮಯದಲ್ಲಿ ಉತ್ಪನ್ನವಾದ ಅಗ್ನಿಯು ತನ್ನ ಭೇದನ ಗುಣದಿಂದ ಊರ್ಧ್ವಗಾಮಿ ಅಂದರೆ ಯಾವುದರ ಜ್ವಾಲೆಯು ಮೇಲಕ್ಕೆ ಹೋಗುವುದೋ, ಅದು ಕಾಷ್ಠ ಮೊದಲಾದ ಪದಾರ್ಥಗಳಲ್ಲಿ ತನ್ನ ವ್ಯಾಪ್ತಿಯಿಂದ ವೃದ್ಧಿಸುತ್ತಾ ಸೂರ್ಯರೂಪದಿಂದ ದಿಕ್ಕುಗಳನ್ನು ಬೇರ್ಪಡಿಸುವುದಾಗಿದೆ. ಅದು ಕೂಡ ಎಲ್ಲ ಸಮಯಗಳಲ್ಲಿ ಉತ್ಪನ್ನವಾಗಿ ಸಮಯವನ್ನು ಪಡೆದೇ ನಾಶವಾಗುವುದು.

ಮತ್ತೆ ಆ ಸಮಯವು ಹೇಗಿದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಉಭೇ ಭದ್ರೇ ಜೋಷಯೇತೇ ನ ಮೇನೇ ಗಾವೋ ನ ವಾಶ್ರಾ ಉಪ ತಸ್ಥುರೇವೈಃ ।

ಸ ದಕ್ಷಾಣಾಂ ದಕ್ಷಪತಿರ್ಬಭೂವಾ-ಂಜಂತಿ ಯಂ ದಕ್ಷಿಣತೋ ಹವಿರ್ಭಿಃ ॥೬॥

ಪದಾರ್ಥ:- [ಭದ್ರೇ] ಸುಖವನ್ನು ಕೊಡುವವನೇ! [ಉಭೇ] ಹಗಲು ರಾತ್ರಿಗಳೆರಡೂ [ಮೇನೇ] ಪ್ರೀತಿ ಮಾಡುತ್ತಾ ಸ್ತ್ರೀಯರ [ನ] ಸಮಾನವಾಗಿ [ಯಮ್] ಯಾವ ಸಮಯವನ್ನು [ಜೋಷಯೇತೇ] ಸೇವಿಸುವರೋ [ವಾಶ್ರಾಃ] ಕರುಗಳನ್ನು ಬಯಸುವ [ಗಾವಃ] ಹಸುಗಳ [ನ] ಸಮಾನ ಸಮಯಕ್ಕೆ ಮತ್ತು ಅಂಗ ಅಂದರೆ ಮಾಸ, ವರ್ಷ ಮೊದಲಾದ [ಏವೈಃ] ಎಲ್ಲ ವ್ಯವಹಾರಗಳನ್ನೂ ಪ್ರಾಪ್ತಿ ಪಡಿಸುವ ಗುಣಗಳ ಜೊತೆಗೆ [ಉಪತಸ್ಥುಃ] ಸಮೀಪವಾಗುತ್ತಾರೆ ಅಥವಾ [ದಕ್ಷಿಣತಃ] ದಕ್ಷಿಣಾಯನ ಕಾಲದ ವಿಭಾಗದಿಂದ [ಹವಿರ್ಭಿಃ] ಯಜ್ಞ ಸಾಮಗ್ರಿಗಳನ್ನು ಮಾಡಿ ಆ ಸಮಯದಲ್ಲಿ ವಿದ್ವಾಂಸರು [ಅಂಜಂತಿ] ಇಚ್ಛಿಸುತ್ತಾರೆ. [ಸಃ] ಅವನು [ದಕ್ಷಾಣಾಮ್] ವಿದ್ಯೆ ಮತ್ತು ಕ್ರಿಯಾಕೌಶಲಗಳಲ್ಲಿ ಚತುರರಾದ ವಿದ್ವಾಂಸರು ಅತ್ಯುತ್ತಮ ಪದಾರ್ಥಗಳಲ್ಲಿ [ದಕ್ಷಪತಿಃ] ವಿದ್ಯೆ ಹಾಗೂ ಚತುರತೆಯನ್ನು ಪಾಲಿಸುವವರು [ಬಭೂವ] ಆಗುವರು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರು ಹಗಲು, ರಾತ್ರಿ ಮೊದಲಾದ ಸಮಯದ ಅವಯವಗಳನ್ನು ಉತ್ತಮ ರೀತಿಯಲ್ಲಿ ಸೇವಿಸಬೇಕು. ಧರ್ಮದಿಂದ ಅವುಗಳಲ್ಲಿ ಯಜ್ಞದ ಅನುಷ್ಠಾನ ಮೊದಲಾದ ಶ್ರೇಷ್ಠ ವ್ಯವಹಾರಗಳನ್ನೇ ಆಚರಿಸಬೇಕು. ಮತ್ತು ಅಧರ್ಮದ ವ್ಯವಹಾರ ಅಥವಾ ಅಯೋಗ್ಯ ಕೆಲಸಗಳನ್ನು ಎಂದಿಗೂ ಮಾಡಬಾರದು.

ಮತ್ತೆ ಆ ಸಮಯವು ಹೇಗಿದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಉದ್ ಯಂಯಮೀತಿ ಸವಿತೇವ ಬಾಹೂ ಉಭೇ ಸಿಚೌ ಯತತೇ ಭೀಮ ಋಂಜನ್ ।

ಉಚ್ಛುಕ್ರಮತ್ಕಮಜತೇ ಸಿಮಸ್ಮಾ-ನ್ನವಾ ಮಾತೃಭ್ಯೋ ವಸನಾ ಜಹಾತಿ ॥೭॥

ಪದಾರ್ಥ:- ಹೇ ಮನುಷ್ಯರೇ! ಯಾವ [ಭೀಮಃ] ಭಯಂಕರವು [ಋಂಜನ್] ಎಲ್ಲರಿಗೂ ಪ್ರಾಪ್ತವಾಗುತ್ತಾ [ಮಾತೃಭ್ಯಃ] ಕಾಲವನ್ನು ಅಳೆಯುವ ಕ್ಷಣ, ಮೊದಲಾದ ತನ್ನ ಅವಯವಗಳಿಂದ [ಸವಿತೇವ] ಹೇಗೆ ಸೂರ್ಯ ಲೋಕವು ತನ್ನ ಆಕರ್ಷಣಾಶಕ್ತಿಯಿಂದ ಭೂಗೋಳ ಮೊದಲಾದ ಲೋಕಗಳನ್ನು ಧಾರಣ ಮಾಡುತ್ತದೋ, ಹಾಗೆ [ಉದ್ಯಂಯಮೀತಿ] ಮತ್ತೆ ಮತ್ತೆ ನಿಯಮವನ್ನಿಡುವುದೋ [ಬಾಹೂ] ಬಲ ಮತ್ತು ಪರಾಕ್ರಮ ಅಥವಾ [ಉಭೇ] ಸೂರ್ಯ ಮತ್ತು ಪೃಥಿವೀ [ಸಿಚೌ] ಅಥವಾ ಮಳೆಯಿಂದ ತೋಯಿಸುವ ವಾಯು ಮತ್ತು ಅಗ್ನಿಯನ್ನು [ಯತತೇ] ವ್ಯವಹಾರದಲ್ಲಿ ತರುತ್ತದೆ. ಆ ಕಾಲವು [ಅತ್ಕಮ್] ನಿರಂತರವೂ [ಶುಕ್ರಮ್] ಪರಾಕ್ರಮವನ್ನು [ಸಿಮಸ್ಮಾತ್] ಎಲ್ಲ ಲೋಕಗಳಿಂದ [ಉದ್] ಮೇಲಿನ ಶ್ರೇಣಿಗೆ [ಅಜತೇ] ಕಳುಹಿಸುತ್ತದೆ ಮತ್ತು [ನವಾ] ನವೀನವಾದ [ಪ್ರಸವಾ] ಹೊದಿಕೆಗಳನ್ನು [ಜಹಾತಿ] ಬಿಡುತ್ತದೆ. ಇದನ್ನು ತಿಳಿಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ: ಹೇ ಮನುಷ್ಯರೇ! ನೀವು ಯಾವ ಕಾಲದಿಂದ ಸೂರ್ಯ ಮತ್ತು ಜಗತ್ತು ಪ್ರಕಟವಾಗುವುದೋ, ಮತ್ತು ಯಾವ ಕ್ಷಣ ಮೊದಲಾದ ಅಂಗಗಳಿಂದ ಎಲ್ಲವನ್ನೂ ಹೊದಿಸುತ್ತದೋ, ಎಲ್ಲರ ನಿಯಮಕ್ಕೂ ಹೇತುವಾದ ಅಥವಾ ಎಲ್ಲರ ಪ್ರವೃತ್ತಿಯ ಅಧಿಕರಣವಾಗಿದೆಯೋ, ಅದನ್ನು ತಿಳಿದು ಕಾಲ ಕಾಲಕ್ಕೆ ಕೆಲಸಗಳನ್ನು ಮಾಡಬೇಕು.

ಮತ್ತೆ ಆ ಕಾಲವು ಏನು ಮಾಡುತ್ತದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ತ್ವೇಷಂ ರೂಪಂ ಕೃಣುತ ಉತ್ತರಂ ಯತ್ ಸಂಪೃಂಚಾನಃ ಸದನೇ ಗೋಭಿರದ್ಭಿಃ ।

ಕವಿರ್ಬುಧ್ನಂ ಪರಿ ಮರ್ಮೃಜ್ಯತೇ ಧೀಃ ಸಾ ದೇವತಾತಾ ಸಮಿತಿರ್ಬಭೂವ ॥೮॥

ಪದಾರ್ಥ:- **[ಯತ್]** ಯಾವ **[ಸಂಪೃಂಚಾನಃ]** ಚೆನ್ನಾಗಿ ಪರಿಚಯ ಮಾಡುವ, ಮಾಡಿಸುವ **[ಕವಿಃ]** ಯಾವುದರ ಕ್ರಮದಿಂದ ದರ್ಶನವಾಗುವುದೋ, ಆ ಸಮಯವು **[ಸದನೇ]** ಭುವನದಲ್ಲಿ **[ಗೋಭಿಃ]** ಸೂರ್ಯನ ಕಿರಣಗಳು ಅಥವಾ **[ಅದ್ಭಿಃ]** ಪ್ರಾಣ ಮೊದಲಾದ ವಾಯುಗಳಿಂದ **[ಉತ್ತರಮ್]** ಉತ್ಪನ್ನವಾಗುವ **[ತ್ವೇಷಮ್]** ಮನೋಹರವಾದ **[ಬುಧ್ನಮ್]** ಪ್ರಾಣ ಮತ್ತು ಬಲಕ್ಕೆ ಸಂಬಂಧಿಸಿದ ವಿಜ್ಞಾನ ಮತ್ತು **[ರೂಪಮ್]** ಸ್ವರೂಪವನ್ನು **[ಕೃಣುತೇ]** ಮಾಡುವುದು ಹಾಗೂ ಯಾವ **[ಧೀಃ]** ಉತ್ತಮ ಬುದ್ಧಿ ಅಥವಾ ಕ್ರಿಯೆಯು **[ಪರಿ ಮರ್ಮೃಜ್ಯತೇ]** ಎಲ್ಲ ರೀತಿಯಿಂದ ಶುದ್ಧವಾಗುವುದೋ, **[ಸಾ]** ಆ **[ದೇವತಾತಾ]** ಈಶ್ವರ ಮತ್ತು ವಿದ್ವಾಂಸರ ಜೊತೆಗೆ **[ಸಮಿತಿಃ]** ವಿಶೇಷ ಜ್ಞಾನದ ಮರ್ಯಾದೆಯು **[ಬಭೂವ]** ಉಂಟಾಗುವುದು. ಈ ಎಲ್ಲ ತಿಳಿಸಿದ ವ್ಯವಹಾರಗಳನ್ನು ತಿಳಿದು ಬುದ್ಧಿಯನ್ನು ಮೊದಲು ಬೆಳೆಸಿಕೊಳ್ಳಬೇಕು.

ಭಾವಾರ್ಥ:- ಮನುಷ್ಯರು ಕಾಲರಹಿತವಾದ ಕಾರ್ಯವು ಉತ್ಪನ್ನವೂ ಮತ್ತು ನಷ್ಟವೂ ಆಗುವುದಿಲ್ಲ. ಮತ್ತು ಬ್ರಹ್ಮಚರ್ಯೆ ಮೊದಲಾದ ಉತ್ತಮ, ಸಮಯದ ಸೇವನೆ ಮಾಡಿದಿದ್ದಲ್ಲಿ ಶಾಸ್ತ್ರ ಬೋಧನೆ ಮಾಡುವ ಬುದ್ಧಿಯು ಆಗುವುದಿಲ್ಲ. ಆದುದರಿಂದ ಕಾಲದ ಪರಮ ಸೂಕ್ಷ್ಮ ಸ್ವರೂಪವನ್ನು ತಿಳಿದು, ಸ್ವಲ್ಪ ಸಮಯವನ್ನು ಕೂಡ ವ್ಯರ್ಥ ಮಾಡಬಾರದು. ಆದರೆ ಆಲಸ್ಯವನ್ನು ಬಿಟ್ಟು ಸಮಯಾನುಕೂಲವಾಗಿ ವ್ಯವಹಾರ ಮತ್ತು ಪಾರಮಾರ್ಥಿಕ ಕೆಲಸಗಳನ್ನು ಸದಾ ಅನುಷ್ಠಾನ ಮಾಡಬೇಕು.

ಮತ್ತೆ ಆ ಸಮಯದ ಸೇವನೆ ಮಾಡುವುದರಿಂದ ಏನು ಆಗುತ್ತದೆ ಎಂಬುದನ್ನು ಈ ಮಂತ್ರದಲ್ಲಿ ಹೇಳಿದೆ.

ಉರು ತೇ ಜ್ರಯಃ ಪರ್ಯೇತಿ ಬುಧ್ನಂ ವಿರೋಚಮಾನಂ ಮಹಿಷಸ್ಯ ಧಾಮ ।

ವಿಶ್ವೇಭಿರಗ್ನೇ ಸ್ವಯಶೋಭಿರಿದ್ಧೋಽದಬ್ಧೇಭಿಃ ಪಾಯುಭಿಃ ಪಾಹ್ಯಸ್ಮಾನ್ ॥೯॥

ಪದಾರ್ಥ:- ಹೇ **[ಅಗ್ನೇ]** ವಿದ್ವಾಂಸನೇ! **[ತೇ]** ನಿನ್ನ ಸಂಬಂಧದಿಂದ ಸೂರ್ಯನಂತೆ **[ಇದ್ಧಃ]** ಪ್ರಕಾಶವಾದ ಸಮಯವು **[ವಿಶ್ವೇಭಿಃ]** ಸಮಸ್ತ **[ಸ್ವಯಶೋಭಿಃ]** ತನ್ನ ಪ್ರಶಂಸಿತ ಗುಣ ಕರ್ಮ ಮತ್ತು ಸ್ವಭಾವಗಳಿಂದ **[ಅದಬ್ಧೇಭಿಃ]** ಯಾರಿಂದಲೂ ನಷ್ಟವಾಗದಂತಹ **[ಪಾಯುಭಿಃ]** ಅನೇಕ ರೀತಿಯ ರಕ್ಷಣೆ ಮುಂತಾದ ವ್ಯವಹಾರಗಳಿಂದ ಕೂಡಿ **[ವಿರೋಚಮಾನಂ]** ವಿವಿಧ ಪ್ರಕಾರಗಳಿಂದ ಪ್ರಕಾಶಮಾನವಾದ **[ಬುಧ್ನಮ್]** ಮೊದಲು ಹೇಳಿದ ಅಂತರಿಕ್ಷವನ್ನು **[ಉರು]** ಅಥವಾ ಬಹಳನಾಗಿ **[ಜ್ರಯಃ]** ಯಾವುದರಿಂದ ಆಯುರ್ದಾಯವು ವ್ಯತೀತವಾಗುವುದೋ ಆ ವೃತ್ತವನ್ನು ಅಥವಾ **[ಅಸ್ಮಾನ್]** ನಮ್ಮನ್ನು ಮತ್ತು **[ಮಹಿಷಸ್ಯ]** (ಮಹಿಷ ಇತಿ ಮಹನ್ನಾಮ ನಿಘ.೩.೩) ಮಹತ್ತಾದ ಲೋಕದ **[ಧಾಮ]** ಸ್ಥಾನಾಂತರಗಳು **[ಪರ್ಯೇತಿ]** ಪರ್ಯಾಯದಿಂದ ಪ್ರಾಪ್ತವಾಗುತ್ತದೆ. ಹಾಗೆ ನಮ್ಮನ್ನು **[ಪಾಹಿ]** ರಕ್ಷಿಸು ಮತ್ತು ಅದರ ಸೇವನೆ ಮಾಡು.

ಭಾವಾರ್ಥ:- ಸಮಯದ ಹೊರತು ಸೂರ್ಯ ಮೊದಲಾದ ಕಾರ್ಯ ಜಗತ್ತಿನ ಕಾರ್ಯಗಳು ಮತ್ತೆ ಮತ್ತೆ ವರ್ತಿಸುವುದಿಲ್ಲ. ಮತ್ತು ಅದರಿಂದ ಬೇರೆಯಾಗಿ ನಮ್ಮ ಯಾವುದೇ ಕಾರ್ಯವು ಉತ್ತಮವಾಗಿ ಆಗುವುದಿಲ್ಲ ಎಂದು ಮನುಷ್ಯರು ತಿಳಿಯಬೇಕು.

ಈಗ ಸಮಯ ಮತ್ತು ಅಗ್ನಿಯು ಯಾವ ರೀತಿಯಾಗಿದೆ ಎಂದು ಹೇಳಲಾಗಿದೆ.

ಧನ್ವನ್ತ್ಸ್ರೋತಃ ಕೃಣುತೇ ಗಾತುಮೂರ್ಮಿಂ ಶುಕ್ರೈರೂರ್ಮಿಭಿರಭಿ ನಕ್ಷತಿ ಕ್ಷಾಮ್ ।

ವಿಶ್ವಾ ಸನಾನಿ ಜಠರೇಷು ಧತ್ತೇಽಂತರ್ನವಾಸು ಚರತಿ ಪ್ರಸೂಷು ॥೧೦॥

ಪದಾರ್ಥ:- ಹೇ ಮನುಷ್ಯರೇ! ಯಾವ ಸಮಯವು ಅಥವಾ ವಿದ್ಯುತ್ ರೂಪದ ಅಗ್ನಿಯು **[ಧನ್ವನ್]** ಅಂತರಿಕ್ಷದಲ್ಲಿ **[ಸ್ರೋತಃ]** ಯಾವುದರಲ್ಲಿ ಮತ್ತೆ ಮತ್ತೆ ವಸ್ತು ಅಥವಾ ಜಲವು ಪ್ರಾಪ್ತವಾಗುವುದೋ, ಆ **[ಗಾತುಮ್]** ಪ್ರಾಪ್ತವಾಗಲು ಯೋಗ್ಯವಾದ **[ಊರ್ಮಿಮ್]** ಪ್ರಾತಃ ಸಮಯವು ಅಥವಾ ಜಲದ ತರಂಗಗಳನ್ನು **[ಕೃಣುತೇ]** ಪ್ರಕಟಪಡಿಸುವುದೋ ಅಥವಾ **[ಶುಕ್ರೈಃ]** ಶುದ್ಧಕ್ರಮ ಅಥವಾ ಕಿರಣಗಳು ಮತ್ತು **[ಊರ್ಮಿಭಿಃ]** ಪದಾರ್ಥಗಳನ್ನು ಪ್ರಾಪ್ತಪಡಿಸುವ ತರಂಗಗಳಿಂದ **[ಕ್ಷಾಮ್]** ಭೂಮಿಯನ್ನು ಕೂಡ **[ಅಭಿ ನಕ್ಷತಿ]** ಎಲ್ಲ ಕಡೆಗಳಿಂದ ವ್ಯಾಪ್ತವು ಮತ್ತು ಪ್ರಾಪ್ತವಾಗುತ್ತದೆ. ಅಥವಾ ಯಾವ **[ಜಠರೇಷು]** ಅಂತರಂಗ ವ್ಯವಹಾರಗಳು ಮತ್ತು ಹೊಟ್ಟೆಯ ಒಳಗಿನ ಅನ್ನ ಮೊದಲಾದವು ಜೀರ್ಣಿಸುವ ಸ್ಥಾನಗಳಲ್ಲಿ **[ವಿಶ್ವಾ]** ಸಮಸ್ತ **[ಸನಾನಿ]** ಬೇರೆ ಬೇರೆ ಪದಾರ್ಥಗಳನ್ನು **[ಧತ್ತೇ]** ಸ್ಥಾಪಿಸುವುದು ಮತ್ತು ಯಾವ **[ಪ್ರಸೂಷು]** ಪದಾರ್ಥಗಳು ಉತ್ಪನ್ನವಾಗುತ್ತವೋ, ಅವುಗಳಲ್ಲಿ ಅಥವಾ **[ನವಾಸು]** ನವೀನ ಪ್ರಜೆಗಳಲ್ಲಿ **[ಅಂತಃ]** ಒಳಗೆ **[ಚರತಿ]** ವಿಚರಿಸುತ್ತದೆ. ಅದನ್ನು ಯಥಾ ರೀತಿಯಾಗಿ ತಿಳಿಯಿರಿ.

ಭಾವಾರ್ಥ:- ಆಪ್ತರಾದ ವಿದ್ವಾಂಸರು ವ್ಯಾಪನಶೀಲವಾದ ಕಾಲ ಮತ್ತು ವಿದ್ಯುತ್ ರೂಪೀ ಅಗ್ನಿಯನ್ನು ತಿಳಿದು, ಅವುಗಳ ನಿಮಿತ್ತದಿಂದ ಅನೇಕ ಕಾರ್ಯಗಳನ್ನು ಯಥಾರೀತಿಯಾಗಿ ಸಿದ್ಧಪಡಿಸಬೇಕು.

ಮತ್ತೆ ಕಾಲ ಮತ್ತು ಭೌತಿಕಾಗ್ನಿಯು ಹೇಗಿದೆ ಎಂಬುದನ್ನು ಹೇಳಿದೆ.

ಏವಾ ನೋ ಅಗ್ನೇ ಸಮಿಧಾ ವೃಧಾನೋ ರೇವತ್ ಪಾವಕ ಶ್ರವಸೇ ವಿ ಭಾಹಿ । ತನ್ನೋ

ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೧೧॥

ಪದಾರ್ಥ:- ಹೇ **[ಪಾವಕ]** ಪವಿತ್ರನಾದ **[ಅಗ್ನೇ]** ವಿದ್ವಾಂಸನೇ! ಸಮಯ ಮತ್ತು ವಿದ್ಯುತ್ ರೂಪದ ಭೌತಿಕಾಗ್ನಿಯನ್ನು **[ನಃ]** ನಮಗೆ **[ಸಮಿಧಾ]** ಉತ್ತಮ ಪ್ರಕಾಶವನ್ನು ಪ್ರಾಪ್ತ ಪಡಿಸುವ ತನ್ನ ಸ್ವಭಾವದಿಂದ ಅಥವಾ ಇಂಧನ ಮೊದಲಾದವನ್ನು **[ವೃಧಾನಃ]** ವೃದ್ಧಿಸುತ್ತಾ ಅಥವಾ ಯಾವ **[ರೇವತ್]** ಪರಮ ಉತ್ತಮ ಧನವಂತನು **[ಶ್ರವಸೇ]** ಕೇಳಲು ಹಾಗೂ ಅನ್ನಕ್ಕಾಗಿ **[ಏವ]** ಮಾತ್ರವೇ ಅನೇಕ ರೀತಿಯಿಂದ ಪ್ರಕಾಶಿತವಾಗುತ್ತದೆ. **[ಉತ]** ಮತ್ತು **[ತತ್]** ಅದರಿಂದ **[ಮಿತ್ರಃ]** ಪ್ರಾಣವು **[ವರುಣಃ]** ಉದಾನವು **[ಅದಿತಿಃ]** ಅಂತರಿಕ್ಷ ಮೊದಲಾದವು **[ಸಿಂಧುಃ]** ಸಮುದ್ರವು **[ಪೃಥಿವೀ]** ಭೂಮಿ ಅಥವಾ **[ದ್ಯೌಃ]** ವಿದ್ಯುತ್ತಿನ ಪ್ರಕಾಶವು **[ನಃ]** ನಮಗೆ **[ಮಾಮಹಂತಾಮ್]** ವೃದ್ಧಿಯನ್ನು ಕೊಡುವುವೋ, ಹಾಗೆಯೇ ತಾವು ನಮ್ಮನ್ನು **[ವಿ ಭಾಹಿ]** ಪ್ರಕಾಶಿತಗೊಳಿಸಿರಿ ಅಥವಾ ಕಾಲ ಅಥವಾ ಭೌತಿಕಾಗ್ನಿಯು ಪ್ರಕಾಶಿತವಾಗುವುವು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಕಾಲ ಮತ್ತು ಭೌತಿಕಾಗ್ನಿಯ ವಿದ್ಯೆಯ ಹೊರತು ಯಾರಿಗೂ ವಿದ್ಯಾಯುಕ್ತವಾದ ಧನವು ಉಂಟಾಗುವುದಿಲ್ಲ. ಮತ್ತು ಯಾರು ಸಮಯಾನುಕೂಲವಾಗಿ ವರ್ತಿಸುವುದಕ್ಕೆ ಹೊರತಾಗಿ ಪ್ರಾಣಾದಿಗಳಿಂದ ಉಪಕಾರವನ್ನು ಯಥಾವತ್ತಾಗಿ ಪಡೆಯಲಾಗುವುದಿಲ್ಲ. ಆದುದರಿಂದ ಈ ಎಲ್ಲ ಮೇಲೆ ಹೇಳಿದ ವ್ಯವಹಾರಗಳನ್ನು ತಿಳಿದು ಎಲ್ಲ ಕಾರ್ಯಗಳನ್ನು ಸಿದ್ಧಿಸಿಕೊಂಡು ಸದಾ ಆನಂದ ಪಡಿಸಬೇಕು.

ಈ ಸೂಕ್ತದಲ್ಲಿ ಕಾಲ ಮತ್ತು ಅಗ್ನಿಯ ಗುಣಗಳ ವರ್ಣನೆಯಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ತೊಂಬತ್ತೈದನೆಯ ಸೂಕ್ತ ಸಮಾಪ್ತ

ಸೂಕ್ತ ೯೬

ಮಂತ್ರಸಂಖ್ಯೆ ೯ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಅಗ್ನಿಃ, ದ್ರವಿಣೋದಾ ಅಗ್ನಿರ್ವಾ। ಛಂದಃ - ತ್ರಿಷ್ಟುಪ್ ।

ಸ್ವರಃ - ಗಾಂಧಾರಃ.

ಈಗ ೯೬ನೇ ಸೂಕ್ತದ ಪ್ರಥಮ ಮಂತ್ರದಲ್ಲಿ ಅಗ್ನಿ ಶಬ್ದದಿಂದ ವಿದ್ವಾಂಸರ ಗುಣಗಳ ಉಪದೇಶ ಮಾಡಿದೆ.

ಸ ಪ್ರತ್ನಥಾ ಸಹಸಾ ಜಾಯಮಾನಃ ಸದ್ಯಃ ಕಾವ್ಯಾನಿ ಬಳಧತ್ತ ವಿಶ್ವಾ । ಆಪಶ್ಚ ಮಿತ್ರಂ
ಧಿಷಣಾ ಚ ಸಾಧನ್ ದೇವಾ ಅಗ್ನಿಂ ಧಾರಯನ್ ದ್ರವಿಣೋದಾಮ್ ॥೧॥

ಪದಾರ್ಥ:- ಯಾವ **[ದೇವಾಃ]** ವಿದ್ವಾಂಸರು **[ದ್ರವಿಣೋದಾಮ್]** ದ್ರವ್ಯವನ್ನು ಕೊಡುವ **[ಅಗ್ನಿಮ್]** ಪರಮೇಶ್ವರ ಅಥವಾ ಭೌತಿಕಾಗ್ನಿಯನ್ನು **[ಧಾರಯನ್]** ಧಾರಣ ಮಾಡುತ್ತಾ - ಮಾಡಿಸುತ್ತಾರೆ. ಅವರು ಎಲ್ಲ ಕೆಲಸಗಳನ್ನು **[ಸಾಧನ್]** ಸಿದ್ಧಪಡಿಸುತ್ತಾರೆ ಅಥವಾ ಸಿದ್ಧ ಮಾಡುತ್ತಾರೆ. ಅವರ **[ಆಪಃ]** ಪ್ರಾಣವು **[ಚ]** ಮತ್ತು ವಿದ್ಯೆಯನ್ನು ಓದಿಸುವುದು ಮುಂತಾದ ಕಾರ್ಯಗಳು **[ಮಿತ್ರಮ್]** ಮಿತ್ರನು **[ಧಿಷಣಾ ಚ]** ಮತ್ತು ಬುದ್ಧಿ ಕುಶಲತೆಯಿಂದ ಸಿದ್ಧವಾಗುತ್ತದೆ. ಯಾವ ಮನುಷ್ಯನು **[ಸಹಸಾ]** ಬಲದಿಂದ **[ಪ್ರತ್ನಥಾ]** ಪ್ರಾಚೀನರಂತೆ, **[ಜಾಯಮಾನಃ]** ಪ್ರಕಟವಾಗುತ್ತಾ **[ವಿಶ್ವಾ]** ಸಮಸ್ತ **[ಕಾವ್ಯಾನಿ]** ವಿದ್ವಾಂಸರಿಗಾಗಿ ಕಾವ್ಯಗಳನ್ನು **[ಸದ್ಯಃ]** ಶೀಘ್ರವಾಗಿ **[ಬಟ್]** ಯಥಾವತ್ತಾಗಿ **[ಅಧತ್ತ]** ಧಾರಣ ಮಾಡುತ್ತಾನೋ, **[ಸಃ]** ಆ ವಿದ್ವಾಂಸನು ಮತ್ತೂ ಸುಖಿಯಾಗುತ್ತಾನೆ.

ಭಾವಾರ್ಥ:- ಮನುಷ್ಯನು ಬ್ರಹ್ಮಚರ್ಯದಿಂದ ವಿದ್ಯೆಯನ್ನು ಪ್ರಾಪ್ತಿ ಮಾಡಿಕೊಳ್ಳದಿದ್ದರೆ ಕವಿಯಾಗುವುದಿಲ್ಲ. ಮತ್ತು ಕವಿತೆಗಳಿಲ್ಲದಿದ್ದರೆ ಪರಮೇಶ್ವರನ ಮತ್ತು ವಿದ್ಯುತ್ತನ್ನು ತಿಳಿದು ಕಾರ್ಯಗಳನ್ನು ಮಾಡಲಾರನು. ಆದುದರಿಂದ ಉಕ್ತ ಬ್ರಹ್ಮಚರ್ಯೆ ಮೊದಲಾದ ನಿಯಮಗಳ ಅನುಷ್ಠಾನವನ್ನು ನಿತ್ಯವೂ ಮಾಡಬೇಕು.

ಮತ್ತೆ ಆ ಪರಮೇಶ್ವರನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸ ಪೂರ್ವಯಾ ನಿವಿದಾ ಕವ್ಯತಾಯೋ-ರಿಮಾಃ ಪ್ರಜಾ ಅಜನಯನ್ಮನೂನಾಮ್ ।
ವಿವಸ್ವತಾ ಚಕ್ಷಸಾ ದ್ಯಾಮಪಶ್ಚ ದೇವಾ ಅಗ್ನಿಂ ಧಾರಯನ್ ದ್ರವಿಣೋದಾಮ್ ॥೨॥

ಪದಾರ್ಥ:- ಮನುಷ್ಯರಿಗೆ ಯಾವ **[ಪೂರ್ವಯಾ]** ಪ್ರಾಚೀನವಾದ **[ನಿವಿದಾ]** ವೇದವಾಣಿಯು **[ಕವ್ಯತಾ]** ಯಾವುದರಿಂದ ಕವಿತೆಗಳು ಮೊದಲಾದ ಕಾರ್ಯಗಳ ವಿಸ್ತಾರ ಮಾಡಲಿ, ಅದರಿಂದ **[ಮನೂನಾಮ್]** ವಿಚಾರಶೀಲ ಪುರುಷರ ಹತ್ತಿರ **[ಆಯೋಃ]** ಸನಾತನ ಕಾರಣದಿಂದ **[ಇಮಾಃ]** ಈ ಪ್ರತ್ಯಕ್ಷವಾಗಿ **[ಪ್ರಜಾಃ]** ಉತ್ಪನ್ನವಾಗುವ ಪ್ರಜೆಗಳನ್ನು **[ಅಜನಯನ್]** ಉತ್ಪನ್ನ ಮಾಡುತ್ತಾನೆ. ಅಥವಾ **[ವಿವಸ್ವತಾ ಚಕ್ಷಸಾ]** ಎಲ್ಲ ವಸ್ತುಗಳನ್ನೂ ಪ್ರದರ್ಶಿಸುವ ಸೂರ್ಯನಿಂದ **[ದ್ಯಾಮ್]** ಪ್ರಕಾಶವು **[ಆಪಃ]** ಜಲವು **[ಚ]** ಪೃಥಿವೀ ಅಥವಾ ಔಷಧಿ ಮೊದಲಾದ ಪದಾರ್ಥಗಳು ಹಾಗೂ ಯಾವ **[ದ್ರವಿಣೋದಾಮ್]** ಧನವನ್ನು ಕೊಡುವ **[ಅಗ್ನಿದಮ್]** ಪರಮೇಶ್ವರನನ್ನು **[ದೇವಾಃ]** ಆಪ್ತರಾದ ವಿದ್ವಾಂಸರು **[ಧಾರಯನ್]** ಧಾರಣ ಮಾಡುತ್ತಾರೆ. **[ಸಃ]** ಅವನು ನಿತ್ಯ ಉಪಾಸನೆಗೆ ಯೋಗ್ಯನಾಗಿರುವನು.

ಭಾವಾರ್ಥ:- ಜ್ಞಾನವಂತನು ಅಂದರೆ ಯಾವ ಚೇತನವಿದೆಯೋ ಅದರ ಹೊರತಾಗಿ ಉತ್ಪನ್ನವಾದ ಕೆಲವು ಜಡ ಪದಾರ್ಥಗಳ ಕಾರ್ಯವನ್ನು ಮಾಡುವವು ಸ್ವತಃ ಉತ್ಪನ್ನವಾಗಲಾರವು. ಆದುದರಿಂದ ಸಮಸ್ತ ಜಗತ್ತನ್ನು ಉತ್ಪನ್ನ ಮಾಡುವ ಸರ್ವಶಕ್ತಿವಂತನಾದ ಜಗದೀಶ್ವರನನ್ನು ಎಲ್ಲ ಮನುಷ್ಯರೂ ಒಪ್ಪಬೇಕು. ಅಂದರೆ ತೃಣ ಮಾತ್ರನಾದ ನಿನ್ನಿಂದ ಉತ್ಪನ್ನವಾಗಲಾರದು. ಆದರೆ ಈ ಕಾರ್ಯ ಜಗತ್ತು ಹೇಗೆ ಉತ್ಪನ್ನವಾಯಿತು, ಆದುದರಿಂದ ಇದನ್ನು ಉತ್ಪನ್ನ ಮಾಡಿದ ಯಾವ ಚೇತನ ಸ್ವರೂಪವಿದೆಯೋ, ಆ ಚೇತನವೇ ಪರಮೇಶ್ವರನು.

ಮತ್ತೆ ಅದು ಹೇಗಿದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ತಮೀಳತ ಪ್ರಥಮಂ ಯಜ್ಞಸಾಧಂ ವಿಶ ಆರೀರಾಹುತಮೃಂಜಸಾನಮ್ । ಊರ್ಜಃ ಪುತ್ರಂ
ಭರತಂ ಸೃಪ್ರದಾನುಂ ದೇವಾ ಅಗ್ನಿಂ ಧಾರಯನ್ ದ್ರವಿಣೋದಾಮ್ ॥ ೩॥

ಪದಾರ್ಥ:- ಹೇ ಮನುಷ್ಯರೇ! ಯಾವ **[ಪ್ರಥಮಂ]** ಸಮಸ್ತವನ್ನೂ ಉತ್ಪನ್ನ ಮಾಡುವ ಜಗತ್ತಿಗೂ ಮೊದಲು ವರ್ತಮಾನವಾಗಿರುವ **[ಯಜ್ಞಸಾಧಂ]** ವಿಜ್ಞಾನ ಯೋಗಾಭ್ಯಾಸ ಮೊದಲಾದ ಯಜ್ಞಗಳಿಂದ ತಿಳಿಯಲ್ಪಡುವ **[ಋಂಜಸಾನಮ್]** ವಿವೇಕ ಮೊದಲಾದ ಸಾಧನಗಳಿಂದ ಉತ್ತಮ ರೀತಿಯಿಂದ ಸಿದ್ಧ ಪಡಿಸಿದ **[ಆಹುತಮ್]** ವಿದ್ವಾಂಸರಿಂದ ಸತ್ಕಾರಕ್ಕೆ ಪಾತ್ರವಾದ **[ಆರೀಃ]** ಪಾತ್ರವಾಗುವುದಕ್ಕೆ ಯೋಗ್ಯವಾದ **[ವಿಶಃ]** ಪ್ರಜೆಗಳು ಮತ್ತು **[ಭರತಮ್]** ಧಾರಣ ಅಥವಾ ಪುಷ್ಟಿಯನ್ನುಂಟುಮಾಡುವ **[ಸುಪ್ರದಾನುಮ್]** ಜ್ಞಾನವನ್ನು ಕೊಡುವಂತಹ ಆ **[ಊರ್ಜಃ]** ಕಾರಣರೂಪದ ವಾಯುವಿನಿಂದ **[ಪುತ್ರಮ್]** ಪ್ರಸಿದ್ಧವಾದ ಪ್ರಾಣಗಳನ್ನು ಉತ್ಪನ್ನ ಮಾಡುವ ಮತ್ತು **[ದ್ರವಿಣೋದಾಮ್]** ಧನ ಮೊದಲಾದ ಪದಾರ್ಥಗಳನ್ನು ಕೊಡುವ **[ಅಗ್ನಿಮ್]** ಜಗದೀಶ್ವರನನ್ನು **[ದೇವಾಃ]** ವಿದ್ವಾಂಸರು **[ಧಾರಯನ್]** ಧಾರಣ ಮಾಡುತ್ತಾ **[ತಮ್]** ಆ ಪರಮೇಶ್ವರನನ್ನು ನೀವು ನಿತ್ಯವೂ **[ಈಳತ]** ಸ್ತುತಿ ಮಾಡಿರಿ.

ಭಾವಾರ್ಥ:- ಹೇ ಜಿಜ್ಞಾಸುಗಳೇ! ಅಂದರೆ ಪರಮೇಶ್ವರನ ವಿಜ್ಞಾನವನ್ನು ಇಚ್ಛಿಸುವ ಮನುಷ್ಯರೇ! ನೀವು ಯಾವ ಈಶ್ವರನು ಎಲ್ಲ ಜೀವರುಗಳಿಗಾಗಿ ಎಲ್ಲ ಸೃಷ್ಟಿಗಳನ್ನು ಉತ್ಪನ್ನ ಮಾಡಿ ಪ್ರಾಪ್ತಮಾಡಿಸಿರುವನೋ ಅಥವಾ ಯಾವ ಸೃಷ್ಟಿಯನ್ನು ಧಾರಣ ಮಾಡಿಸುವ ವಾಯು ಮತ್ತು ಸೂರ್ಯರನ್ನು ರಚಿಸಿರುವನೋ, ಅವನನ್ನು ಬಿಟ್ಟು ಯಾವುದನ್ನು / ಯಾರನ್ನೂ ಎಂದಿಗೂ ಈಶ್ವರ ಭಾವದಿಂದ ಉಪಾಸನೆ ಮಾಡಬೇಡಿ.

ಮತ್ತೆ ಅದು ಹೇಗಿದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸ ಮಾತರಿಶ್ವಾ ಪುರುವಾರಪುಷ್ಟಿ-ರ್ವಿದದ್ ಗಾತುಂ ತನಯಾಯ ಸ್ವರ್ವಿತ್ । ವಿಶಾಂ
ಗೋಪಾ ಜನಿತಾ ರೋದಸ್ಯೋ-ರ್ದೇವಾ ಅಗ್ನಿಂ ಧಾರಯನ್ ದ್ರವಿಣೋದಾಮ್ ॥೪॥

ಪದಾರ್ಥ:- ಪರಮೇಶ್ವರನು **[ತನಯಾಯ]** ತನ್ನ ಪುತ್ರರಂತೆ ಜೀವರಿಗಾಗಿ **[ಸ್ವರ್ವಿಮ್]** ಸುಖವನ್ನು ಕೊಡುವ **[ಗಾತುಮ್]** ವಾಣಿಯನ್ನು **[ವಿದತ್]** ಪ್ರಸಾದಿಸಿರುವನು. **[ಪುರುವಾರ ಪುಷ್ಟಿಃ]** ಯಾವನಿಂದ ಅತ್ಯಂತವಾಗಿ ಸಮಸ್ತ ವ್ಯವಹಾರವನ್ನು ಸ್ವೀಕರಿಸುವ ಪುಷ್ಟಿಯನ್ನು ಆ **[ಮಾತರಿಶ್ವಾ]** ಅಂತರಿಕ್ಷದಲ್ಲಿ ಮಲಗಲು ಮತ್ತು ಒಳಗೂ ಹೊರಗೂ ಇರುವ ವಾಯುವನ್ನು ಪುಷ್ಟಿಸಿರುವನು. **[ವಿಶಾಮ್]** ಪ್ರಜೆಗಳನ್ನು **[ಗೋಪಾಃ]** ಪಾಲಿಸಲು ಮತ್ತು **[ರೋದಸ್ಯೋಃ]** ಕತ್ತಲೆ-ಬೆಳಕನ್ನು ವರ್ತಿಸುವಂತಹ ಲೋಕ ಸಮೂಹಗಳನ್ನು **[ಜನಿತಾ]** ಉತ್ಪನ್ನ ಮಾಡುವವನಾಗಿರುವನು. **[ದ್ರವಿಣೋದಾಮ್]** ಧನವನ್ನು ದಾನಮಾಡುವವನಂತೆ **[ಅಗ್ನಿಮ್]** ಜಗದೀಶ್ವರನಿಗೆ **[ದೇವಾಃ]** ಉಕ್ತ ವಿದ್ವಾಂಸರು **[ಧಾರಯನ್]** ಧಾರಣೆ ಮಾಡುತ್ತಾರೆ ಅಥವಾ ಮಾಡಿಸುತ್ತಾರೆ. **[ಸಃ]** ಅವನು ಪ್ರತಿದಿನವೂ ಇಷ್ಟದೈವವನ್ನಾಗಿ ಒಪ್ಪಲು ಯೋಗ್ಯನು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪವನವಿಲ್ಲದಿದ್ದಲ್ಲಿ ಯಾರ ವಾಣಿಯೂ ಪ್ರವೃತ್ತವಾಗಲಾರದು. ಮತ್ತು ಯಾರಿಗೂ ಪುಷ್ಟಿಯೂ ಉಂಟಾಗದು ಮತ್ತು ಈಶ್ವರನ ಹೊರತು, ಈ ಜಗದೀಶ್ವರನ ಹೊರತು ಈ ಜಗತ್ತಿನ ಉತ್ಪತ್ತಿ ಮತ್ತು ರಕ್ಷಣೆಯೂ ಸಂಭವವಾಗುವುದಿಲ್ಲ.

ಮತ್ತೆ ಅದು ಹೇಗಿದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ನಕ್ತೋಷಾಸಾ ವರ್ಣಮಾಮೇಮ್ಯಾನೇ ಧಾಪಯೇತೇ ಶಿಶುಮೇಕಂ ಸಮೀಚೀ । ದ್ಯಾವಾಕ್ಷಾಮಾ
ರುಕ್ಮೋ ಅಂತರ್ವಿಭಾತಿ ದೇವಾ ಅಗ್ನಿಂ ಧಾರಯನ್ ದ್ರವಿಣೋದಾಮ್ ॥೫॥

ಪದಾರ್ಥ:- ಹೇ ಮನುಷ್ಯರೇ! ಯಾವನ ಸೃಷ್ಟಿಯಲ್ಲಿ **[ವರ್ಣಮ್]** ಸ್ವರೂಪ ಅಂದರೆ ಉತ್ಪನ್ನ ಮಾತ್ರದಿಂದ **[ಆಮೇಮ್ಯಾನೇ]** ಮತ್ತೆ ಮತ್ತೆ ವಿನಾಶವಾಗದೆ **[ಸಮೀಚೀ]** ಸಂಗವನ್ನುಂಟುಮಾಡುವ **[ನಕ್ತೋಷಾಸಾ]** ಹಗಲು-ರಾತ್ರಿಗಳು ಅಥವಾ **[ದ್ಯಾವಾಕ್ಷಾಮಾ]** ಸೂರ್ಯ ಮತ್ತು ಭೂಲೋಕವು **[ಶಿಶುಮ್]** ಬಾಲಕನಿಗೆ **[ಧಾಪಯೇತೇ]** ಹಾಲನ್ನುಣಿಸುವ ಮಾತಾ-ಪಿತರಂತೆ, ರಸ ಮೊದಲಾದವುಗಳನ್ನು ಪಾನ ಮಾಡಿಸುತ್ತವೆಯೋ, ಯಾವುದರಲ್ಲಿ ಉತ್ಪನ್ನವಾಗಿ, ವಿದ್ಯುತ್ತಿನಿಂದ ಕೂಡಿರುವ **[ರುಕ್ಮಃ]** ತಾವೇ ಪ್ರಕಾಶಸ್ವರೂಪ ಪ್ರಾಣವು **[ಅಂತಃ]** ಎಲ್ಲರ ಒಳಗೂ **[ವಿಭಾತಿ]** ವಿಶೇಷ ಪ್ರಕಾಶವನ್ನು ಪಡೆಯುವುದು. ಯಾವ **[ದ್ರವಿಣೋದಾಮ್]** ಧನ ಮೊದಲಾದ ಪದಾರ್ಥಗಳನ್ನು ಕೊಡುವವನಂತೆ, **[ಏಕಮ್]** ಅದ್ವಿತೀಯ ಸ್ವರೂಪನಾದ **[ಅಗ್ನಿಮ್]** ಪರಮೇಶ್ವರನನ್ನು **[ದೇವಾಃ]** ಆಪ್ತ ವಿದ್ವಾಂಸರು **[ಧಾರಯನ್]** ಧಾರಣ ಮಾಡುತ್ತಾರೆ. ಅಥವಾ ಮಾಡಿಸುತ್ತಾರೆ. ಅವನೇ ಎಲ್ಲರಿಗೂ ತಂದೆಯಾಗಿರುವನು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಹಾಲು ಕುಡಿಯುವ ಮಗುವಿನ ಹತ್ತಿರವಿರುವ ಈರ್ವರು ಸ್ತ್ರೀಯರು ಆ ಬಾಲಕನಿಗೆ ಹೇಗೆ ಹಾಲನ್ನುಣಿಸುವರೋ, ಅದೇ ರೀತಿ ಹಗಲು ಮತ್ತು ರಾತ್ರಿಗಳು ಹಾಗೂ ಸೂರ್ಯ ಮತ್ತು ಭೂಮಿಯು ಇದೆ. ಯಾವನ ನಿಯಮದಿಂದ ಹೀಗೆ ಆಗುವುದೋ ಆ ಎಲ್ಲರನ್ನೂ ಉತ್ಪನ್ನ ಮಾಡುವವನು ಹೇಗೆ ಇರುವುದಿಲ್ಲ?

ಮತ್ತೆ ಆ ಪರಮೇಶ್ವರನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ರಾಯೋ ಬುಧ್ನಃ ಸಂಗಮನೋ ವಸೂನಾಂ ಯಜ್ಞಸ್ಯ ಕೇತುರ್ಮನ್ಮಸಾಧನೋ ವೇಃ ।
ಅಮೃತತ್ವಂ ರಕ್ಷಮಾಣಾಸ ಏನಂ ದೇವಾ ಅಗ್ನಿಂ ಧಾರಯನ್ ದ್ರವಿಣೋದಾಮ್ ॥೬॥

ಪದಾರ್ಥ:- ಹೇ ಮನುಷ್ಯರೇ! **[ವೇಃ]** ಮನೋಹರನೂ **[ಯಜ್ಞಸ್ಯ]** ಉತ್ತಮ ರೀತಿಯಲ್ಲಿ ತಿಳಿಸಲು ಯೋಗ್ಯವಾದ ವಿದ್ಯಾಬೋಧೆಯನ್ನು **[ಬುಧ್ನಃ]** ತಿಳಿಸಲು ಮತ್ತು **[ಕೇತುಃ]** ಎಲ್ಲ ವ್ಯವಹಾರಗಳನ್ನು ಅನೇಕ ರೀತಿಯಲ್ಲಿ ತಿಳಿಸುವವನೂ **[ಮನ್ಮಸಾಧನಃ]** ಅಥವಾ ವಿಚಾರಯುಕ್ತ ಕೆಲಸಗಳನ್ನು ಸಿದ್ಧಗೊಳಿಸುವವನು ಹಾಗೂ **[ರಾಯಃ]** ವಿದ್ಯೆ, ಚಕ್ರವರ್ತಿರಾಜ್ಯ, ಧನ ಮತ್ತು **[ವಸೂನಾಮ್]** ೩೩ ದೇವತೆಗಳಲ್ಲಿ ಅಗ್ನಿ, ಪೃಥಿವೀ, ಮೊದಲಾದ ದೇವತೆಗಳ **[ಸಂಗಮನಃ]** ಉತ್ತಮ ರೀತಿಯಲ್ಲಿ ಪ್ರಾಪ್ತಿ ಪಡಿಸುವವನು ಅಥವಾ **[ಅಮೃತತ್ವಮ್]** ಮೋಕ್ಷ ಮಾರ್ಗವನ್ನು **[ರಕ್ಷಮಾಣಾಸಃ]** ರಕ್ಷಿಸುತ್ತಾ **[ದೇವಾಃ]** ಆಪ್ತ ವಿದ್ವಾಂಸರು ಯಾವ **[ದ್ರವಿಣೋದಾಮ್]** ಧನ ಮೊದಲಾದ ಪದಾರ್ಥಗಳನ್ನು ಕೊಡುವ **[ಅಗ್ನಿಮ್]** ಜಗದೀಶ್ವರನನ್ನು **[ಧಾರಯನ್]** ಧಾರಣ ಮಾಡುತ್ತಾ ಅಥವಾ ಮಾಡಿಸುತ್ತಾನೆ. ಆ ಒಬ್ಬನು ಸರ್ವಶಕ್ತಿವಂತನಾದ ಜಗದೀಶ್ವರನನ್ನು ಧಾರಣ ಮಾಡಿರಿ. ಅಥವಾ ಮಾಡಿಸಿರಿ.

ಭಾವಾರ್ಥ:- ಜೀವನ್ಮುಕ್ತನು ಅಂದರೆ, ದೇಹಾಭಿಮಾನ ಮೊದಲಾದವುಗಳನ್ನು ಬಿಟ್ಟಿರುವವನು ಅಥವಾ ಶರೀರ ತ್ಯಾಗ ಮಾಡಿದ ಮುಕ್ತ ವಿದ್ವಾಂಸನು ಯಾವನನ್ನು ಆಶ್ರಯಿಸಿ ಆನಂದವನ್ನು ಹೊಂದುವನೋ ಆ ಈಶ್ವರನೇ ಎಲ್ಲರಿಗೂ ಉಪಾಸನೆ ಮಾಡಲು ಯೋಗ್ಯನಾಗಿರುವನು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ನೂ ಚ ಪುರಾ ಚ ಸದನಂ ರಯೀಣಾಂ ಜಾತಸ್ಯ ಚ ಜಾಯಮಾನಸ್ಯ ಚ ಕ್ಷಾಮ್ ।
ಸತಶ್ಚ ಗೋಪಾಂ ಭವತಶ್ಚ ಭೂರೇ-ರ್ದೇವಾ ಅಗ್ನಿಂ ಧಾರಯನ್ ದ್ರವಿಣೋದಾಮ್ ॥೭॥

ಪದಾರ್ಥ:- ಹೇ ಮನುಷ್ಯರೇ! ಯಾವನನ್ನು **[ದೇವಾಃ]** ವಿದ್ವಾಂಸರು **[ನು]** ಶೀಘ್ರವಾಗಿ ಮತ್ತು ವಿಲಂಬವಾಗಿ ಅಥವಾ **[ಪುರಾ]** ಕಾರ್ಯಕ್ಕೆ ಮೊದಲು **[ಚ]** ಮತ್ತು ಮಧ್ಯೆ **[ರಯೀಣಾಂ]** ವರ್ತಮಾನವಾಗಿರುವ ಪೃಥಿವೀ ಮೊದಲಾದ ಕಾರ್ಯದ್ರವ್ಯಗಳ **[ಸದಸಮ್]** ಉತ್ಪತ್ತಿ, ಸ್ಥಿತಿ ಮತ್ತು ವಿನಾಶದ ನಿಮಿತ್ತ ಅಥವಾ **[ಜಾತಸ್ಯ]** ಉತ್ಪನ್ನವಾದ ಕಾರ್ಯಜಗತ್ತಿನ **[ಚ]** ನಾಶವಾಗುವ ಹಾಗೂ **[ಜಾಯಮಾನಸ್ಯ]** ಕಲ್ಪಾನಂತರ ಮತ್ತೆ ಉತ್ಪನ್ನವಾಗುವ ಕಾರ್ಯ ರೂಪ ಜಗತ್ತಿನ **[ಚ]** ಇದೇ ರೀತಿ ಜಗತ್ತಿನ ಉತ್ಪತ್ತಿ ಮತ್ತು ನಾಶಗಳಲ್ಲಿ **[ಕ್ಷಾಮ್]** ತನ್ನ ವ್ಯಾಪ್ತಿಯಿಂದ ನಿವಾಸಕ್ಕೆ ಹೇತುವು ಅಥವಾ **[ಭೂರೇಃ]** ವ್ಯಾಪಕವೂ **[ಸತಃ]** ಅನಾದಿಯಿಂದ ವರ್ತಮಾನವೂ ವಿನಾಶ ರಹಿತಕಾರಣ ರೂಪವೂ ಹಾಗೂ **[ಚ]** ಕಾರ್ಯರೂಪವು **[ಭವತಃ]** ವರ್ತಮಾನವೂ **[ಚ]** ಭೂತ ಮತ್ತು ಭವಿಷ್ಯತ್ತಾಗುವ ಉಕ್ತ ಜಗತ್ತಿನ **[ಗೋಪಾಮ್]** ರಕ್ಷಕನು ಮತ್ತು **[ದ್ರವಿಣೋದಾಮ್]** ಧನ ಮೊದಲಾದ ಪದಾರ್ಥಗಳನ್ನು ಕೊಡುವ **[ಅಗ್ನಿಮ್]** ಜಗದೀಶ್ವರನನ್ನು **[ಧಾರಯನ್]** ಧಾರಣ ಮಾಡುತ್ತಾ ಅಥವಾ ಮಾಡಿಸುತ್ತಾನೆ ಆ ಒಬ್ಬನೇ ಸರ್ವ ಶಕ್ತಿವಂತನಾದ ಜಗದೀಶ್ವರನನ್ನು ಧಾರಣ ಮಾಡಿರಿ ಅಥವಾ ಮಾಡಿಸಿರಿ.

ಭಾವಾರ್ಥ:- ಭೂತ, ಭವಿಷ್ಯತ್ ಮತ್ತು ವರ್ತಮಾನ ಈ ಮೂರೂ ಕಾಲಗಳಲ್ಲಿ ಈಶ್ವರನ ಹೊರತು ತಿಳಿಯುವ ಪ್ರಭು, ಕಾರ್ಯಕಾರಣ ಅಥವಾ ಪಾಪಿ ಮತ್ತು ಪುಣ್ಯಾತ್ಮರ ಕಾರ್ಯಗಳ ವ್ಯವಸ್ಥೆಯನ್ನು ಮಾಡುವವನು ಬೇರೆ ಯಾರೂ ಇಲ್ಲ. ಇದನ್ನು ಎಲ್ಲರೂ ತಿಳಿಯಬೇಕು.

ಮತ್ತೆ ಆ ಜಗದೀಶ್ವರನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ದ್ರವಿಣೋದಾ ದ್ರವಿಣಸಸ್ತುರಸ್ಯ ದ್ರವಿಣೋದಾಃ ಸನರಸ್ಯ ಪ್ರ ಯಂಸತ್ ।
ದ್ರವಿಣೋದಾ ವೀರವತೀಮಿಷಂ ನೋ ದ್ರವಿಣೋದಾ ರಾಸತೇ ದೀರ್ಘಮಾಯುಃ ॥೮॥

ಪದಾರ್ಥ:- ಹೇ ಮನುಷ್ಯರೇ! ಯಾವ [ದ್ರವಿಣೋದಾಃ] ಧನ ಮೊದಲಾದ ಪದಾರ್ಥಗಳನ್ನು ಕೊಡುವವನು [ತುರಸ್ಯ] ಶೀಘ್ರಸುಖವನ್ನುಂಟುಮಾಡುವ [ದ್ರವಿಣಸಃ] ದ್ರವ್ಯ ಸಮೂಹದ ವಿಜ್ಞಾನವನ್ನು [ಪ್ರ ಯಂಸತ್] ನಿಯಮದಲ್ಲಿಡುವ ಅಥವಾ ಯಾವ [ದ್ರವಿಣೋದಾಃ] ಪದಾರ್ಥಗಳ ವಿಭಾಗ ಮಾಡುವವನು [ಸನರಸ್ಯ] ಒಂದು ಇನ್ನೊಂದರಿಂದ ಯಾವುದು ಬೇರೆ ಮಾಡುತ್ತದೋ, ಆ ಪದಾರ್ಥ ಅಥವಾ ವ್ಯವಹಾರದ ವಿಜ್ಞಾನವನ್ನು ನಿಯಮದಲ್ಲಿಡುವ ಅಥವಾ ಯಾವ [ದ್ರವಿಣೋದಾಃ] ಶೂರತ್ವ ಮೊದಲಾದ ಗುಣಗಳನ್ನು ಕೊಡುವವನು [ವೀರವತೀಂ] ಯಾವುದರಿಂದ ಪ್ರಶಂಸಿತರಾದ ವೀರರಾಗುವರೋ, ಆ [ಇಷಮ್] ಅನ್ನಾದಿ ಪದಾರ್ಥಗಳನ್ನು ನಿಯಮದಲ್ಲಿಡಲು ಅಥವಾ ಯಾವ [ದ್ರವಿಣೋದಾಃ] ಆಯುರ್ವೇದ ಅಂದರೆ ವೈದ್ಯಕಶಾಸ್ತ್ರವನ್ನು ಕೊಡುವವನು [ನಃ] ನಮಗೆ [ದೀರ್ಘಮ್] ಬಹಳ ಸಮಯದ ವರೆಗೆ [ಆಯುಃ] ಜೀವನವನ್ನು [ರಾಸತೇ] ಕೊಡಲಿ. ಆ ಈಶ್ವರನನ್ನೇ ಎಲ್ಲರೂ ಉಪಾಸನೆ ಮಾಡಲಿ.

ಭಾವಾರ್ಥ:- ಹೇ ಮನುಷ್ಯರೇ! ನೀವು ಯಾವ ಪರಮಗುರು ಪರಮೇಶ್ವರನು ವೇದದ ಮುಖಾಂತರ ಎಲ್ಲ ಪದಾರ್ಥಗಳ ವಿಶೇಷ ಜ್ಞಾನವನ್ನು ಮಾಡಿಸಿರುವನೋ, ಅವನ ಆಶ್ರಯದಿಂದ ಯಥಾ ಯೋಗ್ಯ ವ್ಯವಹಾರಗಳ ಅನುಷ್ಠಾನವನ್ನು ಮಾಡಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಸಿದ್ಧಿಗಾಗಿ ಬಹಳ ಕಾಲದವರೆಗೂ ಜೀವನ ರಕ್ಷಣೆಯನ್ನು ಮಾಡಿರಿ.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಏವಾ ನೋ ಅಗ್ನೇ ಸಮಿಧಾ ವೃಧಾನೋ ರೇವತ್ ಪಾವಕ ಶ್ರವಸೇ ವಿ ಭಾಹಿ ।
ತನ್ನೋ ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೯॥

ಪದಾರ್ಥ:- ಹೇ **[ಪಾವಕ]** ಪವಿತ್ರನೂ ಮತ್ತು ಜಗತ್ತನ್ನು ಪವಿತ್ರಗೊಳಿಸುವವನೂ ಹಾಗೂ **[ಅಗ್ನೇ]** ಸಮಸ್ತ ಮಂಗಳವನ್ನೂ ಪ್ರಕಟಿಸುವ ಪರಮೇಶ್ವರನೇ! **[ಸಮಿಧಾ]** ಯಾವುದರಿಂದ ಸಮಸ್ತ ವ್ಯವಹಾರವು ಪ್ರಕಾಶವಾಗುತ್ತದೋ, ಆ ವೇದವಿದ್ಯೆಯಿಂದ **[ವೃಧಾನಃ]** ನಿತ್ಯ ವೃದ್ಧಿಯಿಂದ ಕೂಡಿದ ನೀನು **[ನಃ]** ನಮಗೆ **[ರೇವತ್]** ರಾಜ್ಯ ಮೊದಲಾದ ಶ್ರೀಮಂತಿಕೆಗಾಗಿ ಅಥವಾ **[ಶ್ರವಸೇ]** ಸಮಸ್ತ ವಿದ್ಯೆಯನ್ನೂ ಆಲಿಸುತ್ತಾ ಮತ್ತು ಅನ್ನಗಳ ಪ್ರಾಪ್ತಿಗಾಗಿ **[ಏವ]** ಮಾತ್ರವೇ **[ವಿ ಭಾಹಿ]** ಅನೇಕ ಪ್ರಕಾರಗಳಿಂದ ಪ್ರಕಾಶಮಾನ ಮಾಡುತ್ತೀಯೆ. **[ತತ್]** ನಿನ್ನಿಂದ ಮಾಡಲ್ಪಟ್ಟ ಅವುಗಳನ್ನು **[ಮಿತ್ರಃ]** ಬ್ರಹ್ಮಚರ್ಯದಿಂದ ಬಲ ಪಡೆದು ಪ್ರಾಪ್ತವಾದ ಪ್ರಾಣವು **[ವರುಣಃ]** ಮೇಲಕ್ಕೆತ್ತುವ ಉದಾನ ವಾಯುವು **[ಅದಿತಿಃ]** ಅಂತರಿಕ್ಷ **[ಸಿಂಧುಃ]** ಸಮುದ್ರ **[ಪೃಥಿವೀ]** ಭೂಮಿ [ಉತ] ಮತ್ತು [ದ್ಯೌಃ] ಪ್ರಕಾಶಮಾನವಾದ ಸೂರ್ಯ ಮೊದಲಾದ ಲೋಕಗಳು [ನಃ] ನಮಗೆ [ಮಾಮಹಂತಾಮ್] ಸತ್ಕಾರಕ್ಕೆ ಹೇತುವಾಗಲಿ.

ಭಾವಾರ್ಥ:- ಹೇ ಮನುಷ್ಯರೇ! ಯಾವ ವಿದ್ಯೆಯ ಹೊರತು ಯಥಾರ್ಥ ವಿಜ್ಞಾನವು ಉಂಟಾಗುವುದಿಲ್ಲವೋ, ಅಥವಾ ಯಾವನು ಭೂಮಿಯಿಂದ ಮೊದಲ್ಗೊಂಡು ಆಕಾಶದ ಪರ್ಯಂತ ಸೃಷ್ಟಿಯನ್ನು ಮಾಡಿರುವನೋ ಮತ್ತು ನಾವು ಯಾವನ ಉಪಾಸನೆ ಮಾಡುತ್ತೇವೋ, ನೀವು ಕೂಡ ಅವನ ಉಪಾಸನೆಯನ್ನೇ ಮಾಡಿರಿ.

ಈ ಸೂಕ್ತದಲ್ಲಿ ಅಗ್ನಿ ಶಬ್ದದ ಗುಣಗಳ ವರ್ಣನೆಯಿಂದಾಗಿ ಇದರ ಅರ್ಥವು ಪೂರ್ವ ಸೂಕ್ತದೊಂದಿಗೆ ಸಂಗತಿಯನ್ನು ಹೊಂದಿದೆ ಎಂದು ತಿಳಿಯಬೇಕು.

ತೊಂಬತ್ತಾರನೆಯ ಸೂಕ್ತ ಸಮಾಪ್ತ

ಸೂಕ್ತ ೯೭

ಮಂತ್ರಸಂಖ್ಯೆ ೮ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಅಗ್ನಿಃ, ಶುಚಿರಗ್ನಿರ್ವಾ । ಛಂದಃ - ಗಾಯತ್ರೀ । ಸ್ವರಃ - ಷಡ್ಜಃ.

ಪ್ರಥಮ ಮಂತ್ರದಲ್ಲಿ ಸಭಾಧ್ಯಕ್ಷನು ಹೇಗಿರಬೇಕು, ಈ ಉಪದೇಶವನ್ನು ಮಾಡಿದೆ.

ಅಪ ನಃ ಶೋಶುಚದಘ-ಮಗ್ನೇ ಶುಶುಗ್ಧ್ಯಾ ರಯಿಮ್ । ಅಪ ನಃ ಶೋಶುಚದಘಮ್ ॥೧॥

ಪದಾರ್ಥ:- ಹೇ [ಅಗ್ನೇ] ಸಭಾಪತಿಯೇ! ನೀನು [ನಃ] ನಮಗೆ [ಅಘಮ್] ರೋಗ ಮತ್ತು ಆಲಸ್ಯ ರೂಪದ ಪಾಪವನ್ನು [ಅಪ, ಶೋಶುಚತ್] ಮತ್ತೆ ಮತ್ತೆ ನಿವಾರಣೆ ಮಾಡು. [ರಯಿಮ್] ಧನವನ್ನು [ಆ] ಉತ್ತಮ ರೀತಿಯಿಂದ [ಶುಶುಗ್ಧಿ] ಶುದ್ಧವಾಗಿ ಪ್ರಕಾಶಗೊಳಿಸು ಹಾಗೂ [ನಃ] ನಮಗೆ [ಅಘಮ್] ಮನಸ್ಸು, ವಚನ ಮತ್ತು ಶರೀರಗಳಿಂದ ಉಂಟಾದ ಪಾಪವನ್ನು [ಅಪ ಶೋಶುಚತ್] ಶುದ್ಧಿಗಾಗಿ ದಂಡಿಸು.

ಭಾವಾರ್ಥ:- ಸಭಾಧ್ಯಕ್ಷನು, ಎಲ್ಲ ಮಾನವರಿಗಾಗಿ ಯಾವ ಯಾವ ಅಹಿತಕಾರಕ ಕರ್ಮ ಮತ್ತು ಪ್ರಮಾದಗಳಿವೆಯೋ, ಅವುಗಳನ್ನು ಆಲಸ್ಯರಹಿತನಾಗಿ ನಿವಾರಿಸಿ ಧನದ ಪ್ರಾಪ್ತಿಯನ್ನು ಮಾಡಿಸಬೇಕು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸುಕ್ಷೇತ್ರಿಯಾ ಸುಗಾತುಯಾ ವಸೂಯಾ ಚ ಯಜಾಮಹೇ । ಅಪ ನಃ ಶೋಶುಚದಘಮ್ ॥೨॥

ಪದಾರ್ಥ:- ಹೇ [ಅಗ್ನೇ] ಸಭಾಧ್ಯಕ್ಷನೇ! ಯಾವ ನಿನ್ನ **[ವಸೂಯಾ]** ಯಾವುದರಿಂದ ತನಗಾಗಿ ಧನವನ್ನು ಬಯಸುವರೋ, **[ಸುಗಾತುಯಾ]** ಯಾವುದರಿಂದ ಉತ್ತಮ ಪೃಥಿವಿಯಾಗುವುದೋ, ಮತ್ತು **[ಸುಕ್ಷೇತ್ರಿಯಾ]** ಬೀಜವನ್ನು ಬಿತ್ತಲು ಯಾವ ಉತ್ತಮ ಹೊಲಗಳು ಇರುವುವೋ, ಆ ಯಾವ ನೀತಿಯಿದೆಯೋ ಅದರಿಂದ **[ಚ]** ಹಾಗೂ ಶಸ್ತ್ರ ಮತ್ತು ಅಸ್ತ್ರಗಳನ್ನು ಬಂಧಿಸುವ ಸೇನೆಯಿಂದ ನಾವು **[ಯಜಾಮಹೇ]** ಸಂಗಮಿಸುವಂತೆ ಮಾಡುವ ಆ ನೀನು [ನಃ] ನಮಗೆ **[ಅಘಮ್]** ದುಷ್ಟವ್ಯಸನಗಳನ್ನು **[ಅಪಶೋಶುಚತ್]** ದೂರಮಾಡು.

ಭಾವಾರ್ಥ:- ಹಿಂದಿನ ಮಂತ್ರದಿಂದ ಅಗ್ನೇ ಈ ಪದದ ಅನುವೃತ್ತಿಯು ಬಂದಿದೆ. ಸಭಾಧ್ಯಕ್ಷನು ಶಾಂತವಚನಗಳನ್ನು ಹೇಳುತ್ತಾ, ದುಷ್ಟರನ್ನು ದಂಡಿಸುತ್ತಾ ಮತ್ತು ಶತ್ರುಗಳಲ್ಲಿ ಪರಸ್ಪರ ದ್ವೇಷವನ್ನುಂಟುಮಾಡುವ ಕ್ರಿಯೆಗಳಿಂದ ನೀತಿಯನ್ನು ಉತ್ತಮವಾಗಿ ಪಡೆದು ಪ್ರಜೆಗಳ ದುಃಖವನ್ನು ನಿತ್ಯವೂ ದೂರ ಮಾಡುವುದಕ್ಕಾಗಿ ಉದ್ಯಮ ಮಾಡಬೇಕು. ಪ್ರಜೆಗಳು ಕೂಡ ಅಂತಹ ವ್ಯಕ್ತಿಯನ್ನೇ ಸಭಾಧ್ಯಕ್ಷನನ್ನಾಗಿ ಮಾಡಬೇಕು.

ಆ ಸಭಾಧ್ಯಕ್ಷನು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಪ್ರ ಯದ್ ಭಂದಿಷ್ಠ ಏಷಾಂ ಪ್ರಾಸ್ಮಾಕಾಸಶ್ಚ ಸೂರಯಃ । ಅಪ ನಃ ಶೋಶುಚದಘಮ್ ॥೩॥

ಪದಾರ್ಥ:- ಹೇ [ಅಗ್ನೇ] ಸಭಾಪತಿಯೇ! [ಯತ್] ಯಾವ ನಿನ್ನ ಸಭೆಯಲ್ಲಿ [ಏಷಾಮ್] ಈ ಮನುಷ್ಯರು ಮೊದಲಾದ ಪ್ರಜೆಗಳ ಮಧ್ಯೆ [ಅಸ್ಮಾಕಾಸಃ] ನಮ್ಮಿಂದ [ಪ್ರ ಸೂರಯಃ] ಅತ್ಯಂತ ಬುದ್ಧಿವಂತನಾದ ವಿದ್ವಾಂಸನು [ಚ] ವೀರಪುರುಷನಿರುವನೋ ಅವನು ಸಭಾಧ್ಯಕ್ಷನಾಗಲಿ. [ಭಂದಿಷ್ಠಃ] ಅತಿಯಾಗಿ ಕಲ್ಯಾಣವನ್ನುಂಟು ಮಾಡುವ ನೀನು [ನಃ] ನಮ್ಮ [ಅಘಮ್] ಶತ್ರು ಜನ್ಯ ದುಃಖ ರೂಪದ ಪಾಪವನ್ನು [ಪ್ರ ಅಪ ಶೋಶುಚತ್] ಉತ್ತಮ ರೀತಿಯಲ್ಲಿ ದೂರಗೊಳಿಸು.

ಭಾವಾರ್ಥ:- ಈ ಮಂತ್ರದಲ್ಲಿಯೂ ಅಗ್ನೇ ಶಬ್ದದ ಅನುವೃತ್ತಿಯು ಬರುತ್ತದೆ. ಯಾವಾಗ ವಿದ್ವಾಂಸರ ಸಭೆ ಮೊದಲಾದವುಗಳ ಆಪ್ತ ಅಧೀಶನು ಅಂದರೆ ಪ್ರಾಮಾಣಿಕನು, ಸತ್ಯವಚನವನ್ನು ಹೇಳುವ ಸಭಾಸದರು ಮತ್ತು ಆತ್ಮಿಕ, ಶಾರೀರಿಕ ಬಲದಿಂದ ಪರಿಪೂರ್ಣ ಸೇವಕನಾಗುವನೋ, ಆಗ ರಾಜ್ಯಪಾಲನೆ ಮತ್ತು ವಿಜಯವು ಉತ್ತಮ ರೀತಿಯಲ್ಲಿ ಆಗುವುದು. ಇದಕ್ಕೆ ವಿರುದ್ಧವಾದಲ್ಲಿ ಫಲವೂ ವಿಪರೀತವಾಗುವುದು.

ಮತ್ತೆ ಅವನ ಯಾವುದಕ್ಕೆ ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಪ್ರ ಯತ್ ತೇ ಅಗ್ನೇ ಸೂರಯೋ ಜಾಯೇಮಹಿ ಪ್ರ ತೇ ವಯಮ್ । ಅಪ ನಃ ಶೋಶುಚದಘಮ್॥೪॥

ಪದಾರ್ಥ:- ಹೇ [ಅಗ್ನೇ] ನೀನು ಉತ್ತರ- ಪ್ರತ್ಯುತ್ತರವನ್ನು ಹೇಳುವ [ಯತ್] ಯಾವ [ತೇ] ನಿನ್ನ ಯಾವ [ಸೂರಯಃ] ಪೂರ್ಣವಿದ್ಯೆ ಪಡೆದ ವಿದ್ವಾಂಸರಾದ ಸಭಾಸದರು ಇರುವರೋ, ಅವರು [ತೇ] ನಿನ್ನಂತೆಯೇ [ನಯಮ್] ನಮಗೂ ಕೂಡ [ಪ್ರ ಜಾಯೇಮಹಿ] ಪ್ರಜೆಗಳಾಗಲಿ ಮತ್ತು ಹಾಗಿರುವ ನೀನು [ನಃ] ನಮಗೆ [ಅಘಮ್] ವಿರೋಧಿಯಾದ ಪಾಪವನ್ನು [ಪ್ರ ಅಪ ಶೋಶುಚತ್] ಉತ್ತಮ ರೀತಿಯಲ್ಲಿ ದೂರ ಮಾಡಿರಿ.

ಭಾವಾರ್ಥ:- ಈ ಜಗತ್ತಿನಲ್ಲಿ ಸಭೆ ಮತ್ತು ಸಭಾಧ್ಯಕ್ಷರು ಹೇಗೆ ಧರ್ಮಿಷ್ಠರಾಗಿರುವರೋ, ಹಾಗೆಯೇ ಪ್ರಜೆಗಳೂ ಕೂಡ ಆಗಬೇಕು.

ಈಗ ಭೌತಿಕ ಅಗ್ನಿಯು ಹೇಗಿದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಪ್ರ ಯದಗ್ನೇಃ ಸಹಸ್ವತೋ ವಿಶ್ವತೋ ಯಂತಿ ಭಾನವಃ । ಅಪ ನಃ ಶೋಶುಚದಘಮ್ ॥೫॥

ಪದಾರ್ಥ:- ಹೇ ವಿದ್ವಾಂಸರೇ! ನೀವು [ಯತ್] ಯಾವ [ಸಹಸ್ವತಃ] ಪ್ರಶಂಸಿತವಾದ ಬಲವುಳ್ಳ [ಅಗ್ನೇಃ] ಭೌತಿಕಾಗ್ನಿಯ [ಭಾನವಃ] ಪ್ರಕಾಶವನ್ನು ಮಾಡುವ ಕಿರಣಗಳು [ವಿಶ್ವತಃ] ಎಲ್ಲ ಸ್ಥಳಗಳಿಂದ [ಪ್ರಯಂತಿ] ಹರಡುತ್ತವೆಯೋ ಅಥವಾ ಯಾವ [ನಃ] ನಮ್ಮ [ಅಘಮ್] ದಾರಿದ್ರ್ಯವನ್ನು [ಪ್ರ, ಅಪ ಶೋಶುಚತ್] ದೂರ ಮಾಡುತ್ತವೆಯೋ, ಅದನ್ನು ಕಾರ್ಯಗಳಲ್ಲಿ ಉತ್ತಮ ರೀತಿಯಲ್ಲಿ ಸೇರಿಸಿ.

ಭಾವಾರ್ಥ:- ಈ ವಿದ್ಯುತ್ತಿನಿಂದ ಬೇರೆಯಾಗಿರುವ ಯಾವುದೇ ಮೂರ್ತಿವಂತವಾದ ಪದಾರ್ಥವು ಇಲ್ಲ. ಅಂದರೆ ಎಲ್ಲದರಲ್ಲಿ ವಿದ್ಯುತ್ ವ್ಯಾಪ್ತವಾಗಿದೆ ಮತ್ತು ಯಾವ ಭೌತಿಕ ಅಗ್ನಿಯ ಶಿಲ್ಪ ವಿದ್ಯೆಯಿಂದ ಕಾರ್ಯಗಳಲ್ಲಿ ತೊಡಗಿರುವ ಅದು ಧನವನ್ನು ಒಟ್ಟುಗೂಡಿಸುವುದಾಗಿರುವುದು. ಅದನ್ನು ಮನುಷ್ಯನು ಚೆನ್ನಾಗಿ ತಿಳಿಯಬೇಕು.

ಈಶ್ವರನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ತ್ವಂ ಹಿ ವಿಶ್ವತೋಮುಖ ವಿಶ್ವತಃ ಪರಿಭೂರಸಿ । ಅಪ ನಃ ಶೋಶುಚದಘಮ್ ॥೬॥

ಪದಾರ್ಥ:- ಹೇ [ವಿಶ್ವತೋಮುಖ] ಎಲ್ಲದರಲ್ಲಿ ವ್ಯಾಪ್ತವಾಗುವ ಮತ್ತು ಅಂತರ್ಯಾಮಿ ರೂಪದಿಂದ ಎಲ್ಲರಿಗೂ ಶಿಕ್ಷಣವನ್ನು ಕೊಡುವ ಜಗದೀಶ್ವರ! ಯಾವ ಕಾರಣವು [ತ್ವಂ ಹಿ] ನಿನ್ನನ್ನೇ [ವಿಶ್ವತಃ] ಎಲ್ಲ ಕಡೆಗಳಿಂದ [ಪರಿಭೂಃ] ಎಲ್ಲಕ್ಕೂ ಮೇಲೆ ವಿರಾಜಮಾನವಾಗಿ [ಅಸಿ] ಇದೆಯೋ, ಅದರಿಂದ [ನಃ] ನಮ್ಮ [ಅಘಮ್] ದುಷ್ಟ ಸ್ವಭಾವವುಳ್ಳವರ ಸಂಗ ಮಾಡುವ ಪಾಪವನ್ನು [ಅಪ ಶೋಶುಚತ್] ದೂರ ಮಾಡು.

ಭಾವಾರ್ಥ:- ಸತ್ಯಾಸತ್ಯದಿಂದ ಕೂಡಿದ ಪ್ರೇಮಭಾವದ ಪ್ರಾರ್ಥನೆಯಿಂದ ಪ್ರಾಪ್ತವಾದ ಅಂತರ್ಯಾಮಿ ಜಗದೀಶ್ವರನು ಮನುಷ್ಯರ ಆತ್ಮಗಳಲ್ಲಿ ಯಾವ ಸತ್ಯ-ಸತ್ಯೋಪದೇಶಗಳಿಂದ ಆ ಮನುಷ್ಯರನ್ನು ಪಾಪಗಳಿಂದ ದೂರ ಮಾಡಿ ಶುಭ ಗುಣ, ಕರ್ಮ ಮತ್ತು ಸ್ವಭಾವಗಳಲ್ಲಿ ಪ್ರವೃತ್ತ ಮಾಡುತ್ತಾನೋ, ಆದುದರಿಂದಲೇ ಅವನು ನಿತ್ಯ ಉಪಾಸನೆಗೆ ಯೋಗ್ಯನು.

ಮತ್ತೆ ಆ ಪರಮೇಶ್ವರನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ದ್ವಿಷೋ ನೋ ವಿಶ್ವತೋಮುಖಾ-ತಿ ನಾವೇವ ಪಾರಯ । ಅಪ ನಃ ಶೋಶುಚದಘಮ್ ॥೭॥

ಪದಾರ್ಥ:- ಹೇ [ವಿಶ್ವತೋಮುಖಾ] ಎಲ್ಲಕ್ಕಿಂತ ಉತ್ತಮವಾದ ಐಶ್ವರ್ಯದಿಂದ ಕೂಡಿದ ಪರಮಾತ್ಮನೇ! ನೀನು [ನಾವೇವ] ಹೇಗೆ ನಾವೆಯು ಸಮುದ್ರದಿಂದ ಪಾರು ಮಾಡುವುದೋ ಹಾಗೆ [ನಃ] ನಮ್ಮನ್ನು [ದ್ವಿಷಃ] ಯಾರು ಧರ್ಮವನ್ನು ದ್ವೇಷಿಸುವರೋ, ಅಂದರೆ ಅದಕ್ಕೆ ವಿರುದ್ಧವಾಗಿ ನಡೆಯುವರೋ, ಅವರಿಂದ [ಅತಿ ಪಾರಯ] ಪಾರು ಮಾಡು. ಮತ್ತು [ನಃ] ನಮ್ಮನ್ನು [ಅಘಮ್] ಶತ್ರುಗಳಿಂದ ಉಂಟಾಗುವ ದುಃಖಗಳನ್ನು [ಅಪ ಶೋಶುಚತ್] ದೂರ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ನ್ಯಾಯಾಧೀಶನು ನಾವೆಯಲ್ಲಿ ಕುಳಿತು ಸಮುದ್ರದಿಂದ ಪಾರಾಗಿ ಅಥವಾ ನಿರ್ಜನ ಕಾಡಿನಲ್ಲಿ ದರೋಡೆಕಾರರನ್ನು ತಡೆದು ಪ್ರಜೆಗಳ ಪಾಲನೆ ಮಾಡುತ್ತಾನೋ, ಹಾಗೆಯೇ ಉತ್ತಮವಾಗಿ ಉಪಾಸನೆ ಪಡೆದ ಈಶ್ವರನು ತನ್ನ ಉಪಾಸನೆ ಮಾಡುವವರನ್ನು ಕಾಮ, ಕ್ರೋಧ ಲೋಭ ಮೋಹ, ಭಯ, ಶೋಕ ರೂಪದ ಶತ್ರುಗಳನ್ನು ಶೀಘ್ರ ನಿವೃತ್ತಿಗೊಳಿಸಿ, ಜಿತೇಂದ್ರಿಯತ್ವ ಮೊದಲಾದ ಗುಣಗಳನ್ನು ಕೊಡುವನು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸ ನಃ ಸಿಂಧುಮಿವ ನಾವಯಾ-ತಿ ಪರ್ಷಾ ಸ್ವಸ್ತಯೇ । ಅಪ ನಃ ಶೋಶುಚದಘಮ್ ॥೮॥

ಪದಾರ್ಥ:- ಹೇ ಜಗದೀಶ್ವರ! [ಸಃ] ಆ ನೀನು ಕೃಪೆ ಮಾಡಿ [ನಃ] ನಮ್ಮ [ಸ್ವಸ್ತಯೇ] ಸುಖಕ್ಕಾಗಿ [ನಾವಯಾ] ನಾವೆಯಿಂದ [ಸಿಂಧುಮಿವ] ಹೇಗೆ ಸಮುದ್ರವನ್ನು ದಾಟುವೆವೋ, ಹಾಗೆ ದುಃಖಗಳಿಂದ [ಅತಿ ಪರ್ಷಿ] ಅತ್ಯಂತವಾಗಿ ಪಾರು ಮಾಡು. [ನಃ] ನಮ್ಮ [ಅಘಮ್] ಅಶಾಂತಿ ಮತ್ತು ಆಲಸ್ಯವನ್ನು [ಅಪ ಶೋಶುಚತ್] ನಿರಂತರವಾಗಿ ದೂರಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಅಂಬಿಗನು ಸುಖವಾಗಿ ಮನುಷ್ಯರನ್ನು ನಾವೆಯಿಂದ ಸಮುದ್ರದ ಆಚೆಗೆ ತಲುಪಿಸುವನೋ, ಹಾಗೆ ಉದ್ಧಾರ ಮಾಡುವ ಪರಮೇಶ್ವರನ ವಿಶೇಷ ಜ್ಞಾನದಿಂದ ದುಃಖಸಾಗರದಿಂದ ಪಾರು ಮಾಡುತ್ತಾನೆ ಮತ್ತು ಅವನು ಶೀಘ್ರವಾಗಿ ಸುಖವನ್ನುಂಟುಮಾಡುತ್ತಾನೆ.

ಈ ಸೂಕ್ತದಲ್ಲಿ ಸಭಾಧ್ಯಕ್ಷ ಅಗ್ನಿ ಮತ್ತು ಈಶ್ವರನ ಗುಣಗಳ ವರ್ಣನೆಯಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ತೊಂಬತ್ತೇಳನೆಯ ಸೂಕ್ತ ಸಮಾಪ್ತ

ಸೂಕ್ತ ೯೮

ಮಂತ್ರಸಂಖ್ಯೆ ೩ । ಋಷಿಃ- ಕುತ್ಸ ಆಂಗಿರಸಃ । ದೇವತಾ - ಅಗ್ನಿಃ, ವೈಶ್ವಾನರೋಽಗ್ನಿರ್ವಾ । ಛಂದಃ - ತ್ರಿಷ್ಟುಪ್ । ಸ್ವರಃ - ಧೈವತಃ.

ಈ ಪ್ರಥಮ ಮಂತ್ರದಲ್ಲಿ ಈಶ್ವರ ಮತ್ತು ಭೌತಿಕಾಗ್ನಿಯು ಹೇಗಿದೆ ಈ ವಿಷಯವನ್ನು ಹೇಳಿದೆ.

ವೈಶ್ವಾನರಸ್ಯ ಸುಮತೌ ಸ್ಯಾಮ ರಾಜಾ ಹಿ ಕಂ ಭುವನಾನಾಮಭಿಶ್ರೀಃ ।
ಇತೋ ಜಾತೋ ವಿಶ್ವಮಿದಂ ವಿ ಚಷ್ಟೇ ವೈಶ್ವಾನರೋ ಯತತೇ ಸೂರ್ಯೇಣ ॥೧॥

ಪದಾರ್ಥ:- ಯಾವ [ವೈಶ್ವಾನರಃ] ಸಮಸ್ತ ಜೀವರುಗಳ ಯಥಾಯೋಗ್ಯ ವ್ಯವಹಾರಗಳಲ್ಲಿ ವರ್ತಿಸುವಂತಹ ಈಶ್ವರ! ಅಥವಾ ಜಠರಾಗ್ನಿಯೇ! [ಇತಃ] ಕಾರಣದಿಂದ [ಜಾತಃ] ಪ್ರಸಿದ್ಧವಾದ [ಇದಮ್] ಈ ಪ್ರತ್ಯಕ್ಷವಾದ [ಕಮ್] ಸುಖವನ್ನು [ವಿಶ್ವಮ್] ಅಥವಾ ಸಮಸ್ತ ಜಗತ್ತಿಗೆ [ವಿಚಷ್ಟೇ] ವಿಶೇಷ ಭಾವದಿಂದ ತೋರಿಸುತ್ತದೆ ಮತ್ತು ಯಾವ [ಸೂರ್ಯೇಣ] ಪ್ರಾಣ ಅಥವಾ ಸೂರ್ಯಲೋಕದೊಡನೆ [ಯತತೇ] ಯತ್ನ ಮಾಡುವವನಾಗುತ್ತಾನೆ. ಅಥವಾ ಯಾವ [ಭುವನಾನಾಮ್] ಲೋಕಗಳ [ಅಭಿಶ್ರೀಃ] ಎಲ್ಲ ರೀತಿಯ ಧನವಿದೆಯೋ ಹಾಗೆ ಯಾವ ಭೌತಿಕಾಗ್ನಿಯಿಂದ ಎಲ್ಲ ರೀತಿಯ ಧನವುಂಟಾಗುವುದು ಅಥವಾ [ರಾಜಾ] ಯಾವ ನ್ಯಾಯಾಧೀಶನು ಎಲ್ಲರ ಅಧಿಪತಿಯೋ ಹಾಗೆ ಪ್ರಕಾಶಮಾನವಾದ ವಿದ್ಯುತ್ ರೂಪಾಗ್ನಿಯು ಇದೆ. ಆ [ವೈಶ್ವಾನರಸ್ಯ] ಸಮಸ್ತ ಪದಾರ್ಥಗಳನ್ನು ಕೊಡುವ ಈಶ್ವರನ ಭೌತಿಕಾಗ್ನಿಯ [ಸುಮತೌ] ಶ್ರೇಷ್ಠಮತಿಯಿಂದ ಅಂದರೆ ಯಾವ ಅತ್ಯಂತ ಉತ್ತಮವೂ ಅನುಪವೂ ಆದ ಈಶ್ವರನನ್ನು ಪ್ರಸಿದ್ಧಗೊಳಿಸುವ ಮತಿಯು ಅಥವಾ ಭೌತಿಕಾಗ್ನಿಯಿಂದ ಅತ್ಯಂತ ಪ್ರಸಿದ್ಧವಾಗುವ ಮತಿಯು ಇದೆಯೋ ಅದರಲ್ಲಿಯೇ [ಹಿ] ನಿಶ್ಚಯವಾಗಿಯೂ [ವಯಮ್] ನಾವು [ಸ್ಯಾಮ] ಸ್ಥಿರರಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಹೇ ಮನುಷ್ಯರೇ! ಯಾವುದು ಎಲ್ಲಕ್ಕಿಂತ ಹೆಚ್ಚಾಗಿ ವ್ಯಾಪ್ತವಾಗಿ ಎಲ್ಲ ಜಗತ್ತನ್ನೂ ಪ್ರಕಾಶಪಡಿಸುವುದೋ, ಅವನ ಉತ್ತಮ ಗುಣಗಳಿಂದ ಪ್ರಸಿದ್ಧವಾದ ಅವನ ಆಜ್ಞೆಯಲ್ಲಿ ನಿತ್ಯವೂ ಪ್ರವೃತ್ತವಾಗಿ ಹಾಗೂ ಯಾವ ಸೂರ್ಯ ಮೊದಲಾದವುಗಳನ್ನು ಪ್ರಕಾಶಗೊಳಿಸುವ ಅಗ್ನಿಯು ಇದೆಯೋ, ಆ ವಿದ್ಯೆಯ ಸಿದ್ಧಿಯಲ್ಲಿಯೂ ಪ್ರವೃತ್ತರಾಗಿರಿ. ಇದರ ಹೊರತು ಯಾವನೇ ಮನುಷ್ಯನಿಗೂ ಪೂರ್ಣಧನವು ಪ್ರಾಪ್ತವಾಗುವುದಿಲ್ಲ.

ಮತ್ತೆ ಅವೆರಡೂ ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಪೃಷ್ಟೋ ದಿವಿ ಪೃಷ್ಟೋ ಅಗ್ನಿಃ ಪೃಥಿವ್ಯಾಂ ಪೃಷ್ಟೋ ವಿಶ್ವಾ ಓಷಧೀರಾ ವಿವೇಶ ।
ವೈಶ್ವಾನರಃ ಸಹಸಾ ಪೃಷ್ಟೋ ಅಗ್ನಿಃ ಸ ನೋ ದಿವಾ ಸ ರಿಷಃ ಪಾತು ನಕ್ತಮ್ ॥೨॥

ಪದಾರ್ಥ:- ಯಾವ [ಅಗ್ನಿಃ] ಈಶ್ವರ ಅಥವಾ ಭೌತಿಕಾಗ್ನಿಯು [ದಿವಿ] ದಿವ್ಯಗುಣ ಸಂಪನ್ನವಾದ ಜಗತ್ತಿನಲ್ಲಿ [ಪೃಷ್ಟಃ] ವಿದ್ವಾಂಸರಲ್ಲಿ ಪ್ರಶ್ನಿಸಲಾಗುತ್ತದೋ, ಅಥವಾ ಯಾವ [ಪೃಥಿವ್ಯಾಮ್] ಅಂತರಿಕ್ಷ ಅಥವಾ ಭೂಮಿಯಲ್ಲಿ [ಪೃಷ್ಟಃ] ಪ್ರಶ್ನಿಸಲು ಯೋಗ್ಯವಾಗುವುದೋ, ಅದು [ನಃ] [ಸಃ] ನಮ್ಮ ಜನರಿಗೆ [ದಿವಾ] ಹಗಲಿನಲ್ಲಿ [ರಿಷಃ] ಕೊಲ್ಲುವವನಿಂದ ಮತ್ತು [ನಕ್ತಮ್] ರಾತ್ರಿಯಲ್ಲಿ ಕೊಲ್ಲುವವನಿಂದ [ಪಾತು] ರಕ್ಷಿಸಲಿ ಅಥವಾ ಭೌತಿಕಾಗ್ನಿಯು ರಕ್ಷಿಸುವುದು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮನುಷ್ಯರು ವಿದ್ವಾಂಸರ ಸಮೀಪಕ್ಕೆ ಹೋಗಿ ಈಶ್ವರ ಮತ್ತು ವಿದ್ಯುತ್ತು ಮುಂತಾದವುಗಳ ಗುಣಗಳನ್ನು ಪ್ರಶ್ನಿಸಿ ಈಶ್ವರನ ಉಪಾಸನೆ ಮತ್ತು ಅಗ್ನಿಯ ಗುಣಗಳಿಂದಾಗುವ ಉಪಕಾರಗಳ ಆಶ್ರಯ ಪಡೆದು ಹಿಂಸಾರಹಿತರಾಗಬೇಕು.

ಈಗ ಈಶ್ವರ ಮತ್ತು ವಿದ್ವಾಂಸರು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ವೈಶ್ವಾನರ ತವ ತತ್ ಸತ್ಯಮ-ಸ್ತ್ವಸ್ಮಾನ್ ರಾಯೋ ಮಘವಾನಃ ಸಚಂತಾಮ್ ।
ತನ್ನೋ ಮಿತ್ರೋ ವರುಣೋ ಮಾಮಹಂತಾಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೩॥

ಪದಾರ್ಥ:- ಹೇ [ವೈಶ್ವಾನರ] ಎಲ್ಲ ಮಾನವರಲ್ಲಿ ವಿದ್ಯೆಯ ಪ್ರಕಾಶ ಮಾಡುವ ಈಶ್ವರ ಅಥವಾ ವಿದ್ವಾಂಸನೇ! ಯಾವ [ತವ] ನಿನ್ನ [ಸತ್ಯಮ್] ಸತ್ಯಶೀಲತೆ ಇದೆಯೋ, [ತತ್] ಅದು [ಅಸ್ಮಾನ್] ನಮಗೆ ಪ್ರಾಪ್ತವು [ಅಸ್ತು] ಆಗಲಿ. ಯಾವ [ಮಿತ್ರಃ] ಮಿತ್ರನು [ವರುಣಃ] ಉತ್ತಮ ಗುಣಯುಕ್ತ ಸ್ವಭಾವವುಳ್ಳ ಮನುಷ್ಯರು [ಅದಿತಿಃ] ಸಮಸ್ತ ವಿದ್ವಾಂಸರ [ಸಿಂಧುಃ] ಅಂತರಿಕ್ಷದಲ್ಲಿ ಸ್ಥಿತವಾಗಿರುವ ಜಲವು [ಪೃಥಿವೀ] ಭೂಮಿ ಮತ್ತು [ದ್ಯೌಃ] ವಿದ್ಯುತ್ತಿನ ಪ್ರಕಾಶವು [ಮಾಮಹಸ್ತಾಮ್] ಉನ್ನತಿಯನ್ನು ಕೊಡಲಿ. [ತತ್] ಆ ಐಶ್ವರ್ಯವು [ನಃ] ನಮಗೆ ಪ್ರಾಪ್ತವಾಗಲಿ. ಅಥವಾ [ಮಘವಾನಃ] ಯಾರಲ್ಲಿ ಪರಮ ಸತ್ಕಾರವನ್ನು ಮಾಡುವ ಯೋಗ್ಯ ವಿದ್ಯಾಧನವಿದೆಯೋ ಅಥವಾ ಅವರು ವಿದ್ವಾಂಸರು ಅಥವಾ ರಾಜರು ಯಾವ [ರಾಯಃ] ವಿದ್ಯೆ ಮತ್ತು ರಾಜ್ಯಶ್ರೀಯನ್ನು [ಸಚನ್ತಾಮ್] ನಿಸ್ಸಂದೇಹವಾಗಿ ಯುಕ್ತಗೊಳಿಸಿ, ಅವರನ್ನು ನಾವು [ಉತ] ಮತ್ತು ಕೂಡ ಪ್ರಾಪ್ತರಾಗೋಣ.

ಭಾವಾರ್ಥ:- ಈಶ್ವರ ಮತ್ತು ವಿದ್ವಾಂಸರ ಉತ್ತೇಜನದಿಂದ ಸತ್ಯಶೀಲವೂ, ಧರ್ಮಯುಕ್ತವೂ ಆದ ಧನವು ಧಾರ್ಮಿಕ ಮನುಷ್ಯರು ಮತ್ತು ಕ್ರಿಯಾಕೌಶಲದಿಂದ ಕೂಡಿದ ಪದಾರ್ಥ ವಿದ್ಯೆಗಳನ್ನು ಪುರುಷಾರ್ಥದಿಂದ ಪಡೆದು ಸಮಸ್ತ ಸುಖಕ್ಕಾಗಿ ಉತ್ತಮ ರೀತಿಯಿಂದ ಯತ್ನ ಮಾಡಿರಿ.

ಈ ಸೂಕ್ತದಲ್ಲಿ ಅಗ್ನಿ ಮತ್ತು ವಿದ್ವಾಂಸರಲ್ಲಿ ಸಂಬಂಧವನ್ನಿಡುವ ಕರ್ಮಗಳ ವರ್ಣನೆಯಿಂದ, ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ತೊಂಬತ್ತೆಂಟನೆಯ ಸೂಕ್ತ ಸಮಾಪ್ತ

ಸೂಕ್ತ ೯೯

ಮಂತ್ರಸಂಖ್ಯೆ ೧ । ಋಷಿಃ - ಕಶ್ಯಪೋ ಮಾರೀಚಃ । ದೇವತಾ - ಅಗ್ನಿಃ, ಜಾತವೇದಾ ಅಗ್ನಿರ್ವಾ । ಛಂದಃ - ತ್ರಿಷ್ಟುಪ್ । ಸ್ವರಃ - ಧೈವತಃ.

ಈಶ್ವರನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಜಾತವೇದಸೇ ಸುನವಾಮ ಸೋಮ-ಮರಾತೀಯತೋ ನಿ ದಹಾತಿ ವೇದಃ ।
ಸ ನಃ ಪರ್ಷದತಿ ದುರ್ಗಾಣಿ ವಿಶ್ವಾ ನಾವೇವ ಸಿಂಧುಂ ದುರಿತಾತ್ಯಗ್ನಿಃ ॥೧॥

ಪದಾರ್ಥ:- ಯಾವ [ಜಾತವೇದಸೇ] ಉತ್ಪನ್ನವಾಗಿರುವ ಚರಾಚರಜಗತ್ತನ್ನು ತಿಳಿಯಲು ಮತ್ತು ಪ್ರಾಪ್ತ ಮಾಡಿಕೊಳ್ಳಲು ಅಥವಾ ಉತ್ಪನ್ನವಾದ ಸರ್ವ ಪದಾರ್ಥಗಳಲ್ಲಿಯೂ ವಿದ್ಯಮಾನವಾಗಿರುವ ಜಗದೀಶ್ವರನಿಗಾಗಿ,

ನಾವು [ಸೋಮಮ್] ಸಮಸ್ತ ಐಶ್ವರ್ಯಯುಕ್ತ ಜಗತ್ತಿನ ಪದಾರ್ಥಗಳನ್ನು [ಸುನವಾಮ] ಹಿಂಡುತ್ತೇವೆ. ಅಂದರೆ ಯಥಾಯೋಗ್ಯವಾಗಿ ಎಲ್ಲವುಗಳಲ್ಲಿಯೂ ವರ್ತಿಸುತ್ತೇವೆ. ಮತ್ತು ಯಾವ [ಅರಾತೀಯತಃ] ಅಧರ್ಮೀಯರಂತೆ ವರ್ತಿಸುವ ದುಷ್ಟ ಜನರ [ವೇದಃ] ಧನವನ್ನು [ನಿ ದಹಾತಿ] ನಿರಂತರವಾಗಿ ನಷ್ಟಗೊಳಿಸುತ್ತೇವೆ. [ಸಃ] ಅವನು [ಅಗ್ನಿಃ] ವಿಜ್ಞಾನ ಸ್ವರೂಪ ಜಗದೀಶ್ವರನು ಹೇಗೆ ಅಂಬಿಗನು [ನಾವೇವ] ನೌಕೆಯಿಂದ [ಸಿಂಧುಮ್] ನದಿ ಅಥವಾ ಸಮುದ್ರವನ್ನು ದಾಟಿಸುವನೋ, ಹಾಗೆ [ನಃ] ನಮ್ಮನ್ನು [ಅತಿ] ಅತ್ಯಂತ [ದುರ್ಗಾಣಿ] ದುರ್ಗತಿ ಮತ್ತು [ಅತಿದುರಿತಾ] ಅತ್ಯಂತ ದುಃಖವನ್ನೀಯುವ [ವಿಶ್ವಾ] ಸಮಸ್ತ ಪಾಪಾಚರಣೆಗಳಿಂದ [ಪರ್ಷತ್] ದಾಟಿಸುವನು. ಅದೇ ಈ ಜಗತ್ತಿನಲ್ಲಿ ಹುಡುಕಲು ಯೋಗ್ಯವಾಗಿದೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ನಾವಿಕನು ಕಠಿಣವೂ ದೊಡ್ಡದೂ ಆದ ಸಮುದ್ರಗಳಲ್ಲಿ ಅತ್ಯಂತ ವಿಸ್ತಾರವಾದ ನಾವೆಗಳಿಂದ ಮನುಷ್ಯ ಮೊದಲಾದವರನ್ನು ಸುಖವಾಗಿ ಪಾರು ಮಾಡುವಂತೆ, ಉತ್ತಮ ರೀತಿಯಲ್ಲಿ ಉಪಾಸನೆ ಮಾಡಿದಾಗ ಜಗದೀಶ್ವರನು ಅತ್ಯಂತ ದುಃಖರೂಪವಾದ ಸಂಸಾರ ಸಾಗರದಲ್ಲಿ ಸ್ಥಿತರಾದ ಮನುಷ್ಯರಿಗೆ ವಿಜ್ಞಾನಾದಿ ದಾನಗಳಿಂದ ಅವರನ್ನು ಪಾರುಗಾಣಿಸುವನು. ಆದುದರಿಂದ ಅವನ ಉಪಾಸನೆ ಮಾಡುವ ಮನುಷ್ಯನು ಶತ್ರುಗಳನ್ನು ಸೋಲಿಸಿ ಉತ್ತಮ ವೀರತ್ವ ಮತ್ತು ಆನಂದವನ್ನು ಪಡೆಯುವನು. ಮತ್ತು ಬೇರೆಯವರಿಗೆ ಯಾವ ಸಾಮರ್ಥ್ಯವಿದೆ. ಈ ಮಂತ್ರವು ಯಾಸ್ಕಾಚಾರ್ಯರ ನಿರುಕ್ತ ೧೪.೩೩ರಲ್ಲಿ ಬಂದಿದೆ.

ಈ ಸೂಕ್ತದಲ್ಲಿ ಈಶ್ವರನ ಗುಣಗಳ ವರ್ಣನೆಯಿಂದ ಈ ಸೂಕ್ತಾರ್ಥಕ್ಕೂ ಹಿಂದಿನ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ತೊಂಬತ್ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೧೦೦

ಮಂತ್ರಸಂಖ್ಯೆ ೧೯ । ಋಷಿಃ- ವಾರ್ಷಾಗಿರಾಃ (ಋಜ್ರಾಶ್ವಾಮ್ಬರೀಷ-ಸಹದೇವ-ಭಯಮಾನ-ಸುರಾಧಸಃ) ।

ದೇವತಾ - ಇಂದ್ರಃ । ಛಂದಃ - ತ್ರಿಷ್ಟುಪ್ । ಸ್ವರಃ - ೧, ೨, ೫, ೬, ೧೦, ೧೬, ೧೭ ಪಂಚಮಃ, ಧೈವತಃ.

ಸೂರ್ಯಲೋಕವು ಹೇಗಿದೆ ಈ ವಿಷಯವನ್ನು ಹೇಳಿದೆ.

ಸ ಯೋ ವೃಷಾ ವೃಷ್ಣ್ಯೇಭಿಃ ಸಮೋಕಾ ಮಹೋ ದಿವಃ ಪೃಥಿವ್ಯಾಶ್ಚ ಸಮ್ರಾಟ್ ।
ಸತೀನಸತ್ವಾ ಹವ್ಯೋ ಭರೇಷು ಮರುತ್ವಾನ್ ನೋ ಭವತ್ವಿಂದ್ರ ಊತೀ ॥೧॥

ಪದಾರ್ಥ:- ಹೇ ಮನುಷ್ಯರೇ! ನೀವು [ಯಃ] ಯಾವ [ವೃಷಾ] ಮಳೆ ಬೀಳುವುದಕ್ಕೆ ಹೇತುವು [ಸಮೋಕಾಃ] ಯಾವುದರಲ್ಲಿ ಸಮೀಚೀನವಾಗಿ ನಿವಾಸ ಮಾಡಲು ಯೋಗ್ಯಸ್ಥಾನವಾಗಿದೆಯೋ, [ಸತೀನ ಸತ್ವಾ] (ಸತೀನಮಿತಿ ಉದಕ ನಾಮ ನಿಘ. ೧.೧೨) ಅದರಲ್ಲಿ ಯಾವ ಜಲವನ್ನು ಒಟ್ಟು ಗೂಡಿಸುವುದೋ [ಹವ್ಯಃ] ಮತ್ತು ಗ್ರಹಿಸಲು ಯೋಗ್ಯವೋ, [ಮರುತ್ವಾನ್] ಯಾವುದಕ್ಕೆ ಪ್ರಶಂಸಿತವಾದ ವಾಯುವು ಇದೆಯೋ, ಯಾವ [**ಮಹಃ**] ಅತ್ಯಂತ [**ದಿವಃ**] ಪ್ರಕಾಶ ಹಾಗೂ [**ಪೃಥಿವ್ಯಾಃ**] ಭೂಲೋಕ [**ಚ**] ಮತ್ತು ಸಮಸ್ತ ಮೂರ್ತಿವಂತ ಲೋಕಗಳು ಅಥವಾ ಪದಾರ್ಥಗಳ ಮಧ್ಯೆ [ಸಮ್ರಾಟ್] ಉತ್ತಮ ಪ್ರಕಾಶಮಾನವಾದ [ಇಂದ್ರಃ] ಸೂರ್ಯಲೋಕ ಪದಾರ್ಥಗಳಲ್ಲಿ [ನಃ] ನಮ್ಮ [ಊತೀ] ರಕ್ಷಣೆ ಮೊದಲಾದ ವ್ಯವಹಾರಗಳಿಗೆ [ಭವತು] ಆಗುತ್ತದೆ. ಹೀಗೆ ಉತ್ತಮೋತ್ತಮ ಯತ್ನಗಳನ್ನು ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಮನುಷ್ಯರು ಇದನ್ನು ತಿಳಿಯಬೇಕು. ಯಾವ ಪರಿಣಾಮದಿಂದ ದೊಡ್ಡದೂ, ವಾಯುರೂಪ ಕಾರಣದಿಂದ ಪ್ರಕಟವಾಗುವುದೂ ಮತ್ತು ಪ್ರಕಾಶ ಸ್ವರೂಪ ಸೂರ್ಯಲೋಕವಿದೆಯೋ, ಅದರಿಂದ ವಿದ್ಯೆಯ ಮೂಲಕ ಅನೇಕ ಉಪಕಾರಗಳನ್ನು ಪಡೆಯಬೇಕು.

ಈಗ ಈಶ್ವರ ಮತ್ತು ವಿದ್ವಾಂಸನು ಎಂತಹ ಕರ್ಮಶೀಲರು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಯಸ್ಯಾನಾಪ್ತಃ ಸೂರ್ಯಸ್ಯೇವ ಯಾಮೋ ಭರೇಭರೇ ವೃತ್ರಹಾ ಶುಷ್ಮೋ ಅಸ್ತಿ ।
ವೃಷಂತಮಃ ಸಖಿಭಿಃ ಸ್ವೇಭಿರೇವೈ-ರ್ಮರುತ್ವಾನ್ ನೋ ಭವತ್ವಿಂದ್ರ ಊತೀ ॥೨॥

ಪದಾರ್ಥ:- [ಯಸ್ಯ] ಯಾವ ಪರಮೇಶ್ವರನ ಅಥವಾ ವಿದ್ವಾಂಸನಾದ ಸಭಾಧ್ಯಕ್ಷನ [**ಭರೇ ಭರೇ**] ಧಾರಣ ಮಾಡಲು ಯೋಗ್ಯವಾದ ಪದಾರ್ಥಗಳು ಅಥವಾ ಯುದ್ಧಗಳಲ್ಲಿಯೂ [**ಸೂರ್ಯಸ್ಯೇವ**] ಪ್ರತ್ಯಕ್ಷ ಸೂರ್ಯನಂತೆ, [ವೃತ್ರಹಾ] ಪಾಪಿಗಳಿಗೆ ಯಥಾಯೋಗ್ಯ ಪಾಪದ ಫಲವನ್ನು ಕೊಡುವುದರಿಂದ ಧರ್ಮವನ್ನು ಮುಚ್ಚಿಡುವವರನ್ನು ನಾಶ ಮಾಡುತ್ತಾ ಮತ್ತು [ಶುಷ್ಮ] ಯಾವುದರಲ್ಲಿ ಪ್ರಶಂಸನೀಯ ಬಲವಿದೆಯೋ ಅದು [ಯಾಮಃ] ಮರ್ಯಾದೆಯಿಂದ [ಅನಾಪ್ತಃ] ಮೂರ್ಖರು ಮತ್ತು ಶತ್ರುಗಳು ಪಡೆಯದವರಾಗಿ [ಅಸ್ತಿ] ಇರುವುದು. [ಸಃ] ಅಂತಹ [**ವೃಷಂತಮಃ**] ಅತ್ಯಂತ ಸುಖವನ್ನು ಹೆಚ್ಚಿಸುವ ಹಾಗೂ [**ಮರುತ್ವಾನ್**] ಪ್ರಶಂಸಿತವಾದ ಸೇನೆಯಿಂದ ಕೂಡಿದ ಅಥವಾ ಯಾವನ ಸೃಷ್ಟಿಯಲ್ಲಿ ಪ್ರಶಂಸಿತವಾದ ಪವನವಿದೆಯೋ, ಅದು [ಇಂದ್ರಃ] ಪರಮೈಶ್ವರ್ಯವಂತನಾದ ಈಶ್ವರನು ಅಥವಾ ಸಭಾಧ್ಯಕ್ಷನು ಸಜ್ಜನರು [ಸ್ವೇಭಿಃ] ತಮ್ಮ ಸೇವಕರನ್ನು [ಏವೈಃ] ಪಡೆದು ಪ್ರಶಂಸಿತ ಜ್ಞಾನ ಮತ್ತು [ಸಖಿಭಿಃ] ಧರ್ಮಾನುಕೂಲವಾಗಿ ಆಜ್ಞಾಪಾಲನೆ ಮಾಡುವ ಮಿತ್ರರಿಂದ ಉಪಾಸನೆ ಮತ್ತು ಪ್ರಶಂಸೆಗೆ ಪ್ರಾಪ್ತರಾಗುತ್ತಾ [ನಃ] ನಮಗೆ [ಊತೀ] ರಕ್ಷಣೆ ಮೊದಲಾದ ವ್ಯವಹಾರಗಳನ್ನು ಸಿದ್ಧಪಡಿಸುವವರು [**ಭವತು**] ಆಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರವಿದೆ. ಒಂದು ವೇಳೆ ಸೂರ್ಯಲೋಕವು ಹಾಗೂ ಆಪ್ತ ವಿದ್ವಾಂಸರ ಸ್ವಭಾವಗಳಿಂದ ದುಃಖಗಳಿಂದ ಪಾರಾಗುವುದನ್ನು ಮನುಷ್ಯರು ತಿಳಿಯಲು ಯೋಗ್ಯವಾಗಿದೆ. ಹೀಗಿರುವಾಗ ಪರಮೇಶ್ವರನ ಕುರಿತು ಏನು ಹೇಳಲಾಗುತ್ತದೆ? ಇವರೀರ್ವರ ಆಶ್ರಯದ ಹೊರತು ಯಾವನಿಗೂ ಪೂರ್ಣ ರಕ್ಷಣೆಯು ದೊರೆಯುವುದಿಲ್ಲ. ಆದುದರಿಂದ ಇವರೊಡನೆ ಸದಾ ಮಿತ್ರತೆಯಿಂದ ಇರಬೇಕು.

ಮತ್ತೆ ಅವರೀರ್ವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ದಿವೋ ನ ಯಸ್ಯ ರೇತಸೋ ದುಘಾನಾಃ ಪಂಥಾಸೋ ಯಂತಿ ಶವಸಾಪರೀತಾಃ ।
ತರದ್ದ್ವೇಷಾಃ ಸಾಸಹಿಃ ಪೌಂಸ್ಯೇ-ಭಿರ್ಮರುತ್ವಾನ್ ನೋ ಭವತ್ವಿಂದ್ರ ಊತೀ ॥೩॥

ಪದಾರ್ಥ:- [ಯಸ್ಯ] ಯಾವ ಈಶ್ವರನ ಅಥವಾ ಸಭಾಧ್ಯಕ್ಷನ ಅಥವಾ ಉಪದೇಶ ಮಾಡುವ ವಿದ್ವಾಂಸನ [ದಿವಃ ನ] ಸೂರ್ಯಲೋಕದಂತೆ [ರೇತಸಃ] ಪರಾಕ್ರಮದ [ಶವಸಾ] ಪ್ರಬಲತೆಯಿಂದ [ಅಪರೀತಾಃ] ಬಿಡಲಾಗದ [ದುಘಾನಾಃ] ವ್ಯವಹಾರಗಳನ್ನು ಪೂರ್ಣಗೊಳಿಸುವ [ತರದ್ ದ್ವೇಷಾಃ] ಯಾವುದರಲ್ಲಿ ವಿರೋಧವನ್ನು ಪಾರು ಮಾಡುವುವೋ ಆ [ಪಂಥಾಸಃ] ಮಾರ್ಗಗಳು [ಯಂತಿ] ಪ್ರಾಪ್ತವಾಗುವುವು ಅಥವಾ ಯಾವ [ಪೌಂಸ್ಯೇಭಿಃ] (ಪೌಂಸ್ಯಾನಿ ಇತಿ ಬಲನಾಮ ನಿಘ.೨.೯) ಬಲದೊಂದಿಗೆ ಕೂಡಿರುವ [ಸಾಸಹಿಃ] ಅತ್ಯಂತ ಸಹನೆ ಇರುವ [ಮರುತ್ವಾನ್] ಯಾವನ ಸೃಷ್ಟಿಯಲ್ಲಿ ಪ್ರಶಂಸಿತ ಪ್ರಜೆಗಳಿರುವರೋ, ಆ [ಇಂದ್ರಃ] ಪರಮೈಶ್ವರ್ಯವಂತನಾದ ಪರಮೇಶ್ವರನು ಅಥವಾ ಸಭಾಧ್ಯಕ್ಷನು [ನಃ] ನಮ್ಮನ್ನು [ಊತಿಃ] ರಕ್ಷಣೆ ಮೊದಲಾದ ವ್ಯವಹಾರಗಳಿಗಾಗಿ [ಭವತು] ಆಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರಗಳಿವೆ. ಹೇಗೆ ಸೂರ್ಯನ ಪ್ರಕಾಶದಿಂದ ಸಮಸ್ತ ಮಾರ್ಗಗಳೂ ಚೆನ್ನಾಗಿ ನೋಡಲೂ ಮತ್ತು ಗಮನ ಮಾಡಲು ಯೋಗ್ಯವೂ ಅಥವಾ ಕಳ್ಳ, ದರೋಡೆಕಾರ ಮೊದಲಾದ ಕಂಟಕರಿಂದ ಯಥಾಯೋಗ್ಯ ಅಪ್ರತೀತಿಯು ಉಂಟಾಗುವುದೋ, ಹಾಗೆ ವೇದಗಳಿಂದ ಪರಮೇಶ್ವರನ ಅಥವಾ ವಿದ್ವಾಂಸರ ಮಾರ್ಗವು ಉತ್ತಮವಾಗಿ ಪ್ರಕಾಶಿತವಾಗುವುದು. ಅವುಗಳಲ್ಲಿ ನಡೆಯದ ಹೊರತು ಯಾವನೇ ಮನುಷ್ಯನು ವೈರತ್ವ ಮೊದಲಾದ ದೋಷಗಳಿಂದ ನಿವೃತ್ತನಾಗುವುದಿಲ್ಲ ಎಂಬುದು ನಿಶ್ಚಯವಾಗಿದೆ. ಆದುದರಿಂದ ಈ ಮಾರ್ಗಗಳಲ್ಲಿ ನಿತ್ಯವೂ ನಡೆಯಬೇಕು.

ಮತ್ತೆ ಅವು ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸೋ ಅಂಗಿರೋಭಿರಂಗಿರಸ್ತಮೋ ಭೂದ್ ವೃಷಾ ವೃಷಭಿಃ ಸಖಿಭಿಃ ಸಖಾ ಸನ್ ।
ಋಗ್ಮಿಭಿರ್‌ಋಗ್ಮೀ ಗಾತುಭಿರ್ಜ್ಯೇಷ್ಠೋ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೪॥

ಪದಾರ್ಥ:- ಯಾವ [**ಅಂಗಿರೋಭಿಃ**] ಅಂಗಗಳಲ್ಲಿ ರಸರೂಪವಾಗಿ ಪ್ರಾಣಗಳ ಜೊತೆಗೆ [**ಅಂಗಿರಸ್ತಮಃ**] ಅತ್ಯಂತ ಪ್ರಾಣದಂತೆ ಅಥವಾ [**ವೃಷಭಿಃ**] ಸುಖವನ್ನು ವರ್ಷಿಸುವ ಕಾರಣಗಳಿಂದ [**ವೃಷಾ**] ಸುಖದಿಂದ ತೋಯಿಸುವ ಅಥವಾ [**ಸಖೀಭಿಃ**] ಮಿತ್ರರೊಡನೆ, [**ಸಖಾ**] ಮಿತ್ರನು ಅಥವಾ [**ಋಗ್ಮಿಭಿಃ**] ಋಗ್ವೇದವನ್ನು ಅಧ್ಯಯನ ಮಾಡಿರುವವರ ಜೊತೆ [**ಋಗ್ಮೀ**] ಋಗ್ವೇದವು ಅಥವಾ [**ಗಾತುಭಿಃ**] ವಿದ್ಯೆಯಿಂದ ಉತ್ತಮ ಶಿಕ್ಷಣವನ್ನು ಪಡೆದ ವಾಣಿಯಿಂದ [**ಜ್ಯೇಷ್ಠಃ**] ಪ್ರಶಂಸಿಸಲು ಯೋಗ್ಯವಾಗಿ [**ಸನ್**] ಆಗಿ [**ಭೂತ್**] ಇರುವನು. [**ಸಃ**] ಅವನು [**ಮರುತ್ವಾನ್**] ತನ್ನ ಸೃಷ್ಟಿಯಲ್ಲಿ ಪ್ರಜೆಗಳನ್ನು ಸೃಷ್ಟಿ ಮಾಡುವವನು ಅಥವಾ ತನ್ನ ಸೇನೆಯಲ್ಲಿ ಪ್ರಶಂಸಿತರಾದ ವೀರಪುರುಷರನ್ನು ಇಟ್ಟುಕೊಳ್ಳುವವನು [**ಇಂದ್ರಃ**] ಈಶ್ವರ ಅಥವಾ ಸಭಾಪತಿಯು [**ನಃ**] ನಮಗೆ [**ಊತೀ**] ರಕ್ಷಣೆ ಮೊದಲಾದ ವ್ಯವಹಾರಗಳಿಗಾಗಿ [**ಭವತು**] ಆಗಲಿ.

ಭಾವಾರ್ಥ:- ಹೇ ಮನುಷ್ಯರೇ! ಯಾವನು ಯಥಾವತ್ತಾಗಿ ಉಪಕಾರ ಮಾಡುವವನು ಎಲ್ಲರಿಗಿಂತ ಅತ್ಯುತ್ತಮ ಪರಮೇಶ್ವರನು ಅಥವಾ ಸಭೆ ಮೊದಲಾದವುಗಳ ಅಧ್ಯಕ್ಷ ವಿದ್ವಾಂಸನು ಇರುವನೋ, ಅವನನ್ನು ನಿತ್ಯವೂ ಸೇವಿಸಿರಿ.

ಮತ್ತ ಸೇನೆ ಮೊದಲಾದವುಗಳ ಅಧಿಪತಿಯು ಹೇಗಿರುವನು ಎಂಬುದನ್ನು ತಿಳಿಸಿದೆ.

ಸ ಸೂನುಭಿರ್ನ ರುದ್ರೇಭಿರ್‌ಋಭ್ವಾ ನೃಷಾಹ್ಯೇ ಸಾಸಹ್ವಾ ಅಮಿತ್ರಾನ್ ।
ಸನೀಳೇಭಿಃ ಶ್ರವಸ್ಯಾನಿ ತೂರ್ವನ್ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೫॥

ಪದಾರ್ಥ:- [ಮರುತ್ವಾನ್] ಯಾವ ಸೇನೆಯಲ್ಲಿ ಪ್ರಶಂಸಿತರಾದ ವೀರಪುರುಷರಿರುವರೋ ಅಥವಾ [ಸಾಸಹ್ವಾನ್] ಯಾವನು ಶತ್ರುಗಳನ್ನು ತಿರಸ್ಕರಿಸಿ ಅವನು [ಇಂದ್ರಃ] ಪರಮೈಶ್ವರ್ಯವಂತನಾದ ಸಭಾಪತಿಯು [ಸೂನುಭಿಃ ನ] ಪುತ್ರ ಅಥವಾ ಪುತ್ರರಂತೆ, ಸೇವಕರಂತೆ [ಸನೀಡೇಭಿಃ] ತನ್ನ ಸಮೀಪದಲ್ಲಿರುವ [ರುದ್ರೇಭಿಃ] ಯಾವನು ಶತ್ರುಗಳನ್ನು ಅಳಿಸುವನೋ ಅವನ ಮತ್ತು [ಋಭ್ವಾ] ಹೆಚ್ಚು ಬುದ್ಧಿಯುಳ್ಳ ಮಂತ್ರಿಯೊಂದಿಗೆ ವರ್ತಮಾನವಾದ [ಶ್ರವಸ್ಯಾನಿ] ಧನ ಮೊದಲಾದ ಪದಾರ್ಥಗಳಲ್ಲಿ ಉತ್ತಮರಾದ ವೀರರನ್ನು ಒಗ್ಗೂಡಿಸಿ [ವೃಷಾಹ್ಯೇ] ಯಾವ ಶೂರವೀರರನ್ನು ಸಹಿಸಲು ಯೋಗ್ಯವೋ, ಆ ಸಂಗ್ರಾಮದಲ್ಲಿ [ಅಮಿತ್ರಾನ್] ಶತ್ರುಗಳನ್ನು [ತೂರ್ವನ್] ಕೊಲ್ಲುತ್ತಾ ಉತ್ತಮ ಯತ್ನವನ್ನು ಮಾಡುತ್ತಾನೆ. [ಸಃ] ಅವನು [ನಃ] ನಮಗೆ [ಊತೀ] ರಕ್ಷಣೆ ಮೊದಲಾದ ವ್ಯವಹಾರಗಳಿಗಾಗಿ [ಭವತು] ಇರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಯಾವ ಸೇನೆ ಮೊದಲಾದವುಗಳ ಅಧಿಪತಿಯು ಪುತ್ರನಂತೆ ಸತ್ಕರಿಸಿ ಮತ್ತು ಶಸ್ತ್ರಾಸ್ತ್ರಗಳಿಂದ ಸಿದ್ಧವಾಗುವ ಯುದ್ಧವಿದ್ಯೆಯ ಶಿಕ್ಷಣ ಕೊಡಲ್ಪಟ್ಟ ಸೇವಕರೊಡನೆ ಇರುವವನು, ಬಲವುಳ್ಳ ಸೇನೆಯನ್ನು ಉತ್ತಮವಾಗಿ ಪ್ರದರ್ಶಿಸುತ್ತಾ ಬರುವ ಸೇನೆಯನ್ನು ಅತಿ ಕಠಿಣವಾಗಿದ್ದರೂ ಸಂಗ್ರಾಮದಲ್ಲಿ ದುಷ್ಟಶತ್ರುಗಳಿಗೆ ಅಪಜಯವನ್ನುಂಟುಮಾಡುತ್ತಾನೆ ಮತ್ತು ಧಾರ್ಮಿಕರ ಪಾಲನೆಯನ್ನು ಮಾಡುತ್ತಾನೆ. ಚಕ್ರವರ್ತಿ ರಾಜ್ಯವನ್ನಾಗಿ ಮಾಡುತ್ತಾನೆ. ಅವನೇ ಸೇನೆ ಎಲ್ಲಕ್ಕೂ ಮತ್ತು ಪ್ರಜೆಗಳಿಗೂ ಸದಾ ಸತ್ಕಾರ ಮಾಡಲು ಯೋಗ್ಯನು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸ ಮನ್ಯುಮೀಃ ಸಮದನಸ್ಯ ಕರ್ತಾ-ಸ್ಮಾಕೇಭಿರ್ನೃಭಿಃ ಸೂರ್ಯಂ ಸನತ್ ।
ಅಸ್ಮಿನ್ನಹನ್ತ್ಸತ್ಪತಿಃ ಪುರುಹೂತೋ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೬॥

ಪದಾರ್ಥ:- ಯಾವ [**ಮನ್ಯುಮೀಃ**] ಕ್ರೋಧವನ್ನು ಕೊಲ್ಲುವ ಅಥವಾ [**ಸಮದನಸ್ಯ**] ಯಾವುದರಲ್ಲಿ ಆನಂದವಿದೆಯೋ ಅದರ [**ಕರ್ತಾ**] ಮಾಡಲು ಮತ್ತು [**ಸತ್ಪತಿಃ**] ಸಜ್ಜನನು ಹಾಗೂ ಉತ್ತಮ ಕರ್ಮಗಳನ್ನು ಪಾಲಿಸುವವನು [**ಪುರೂಹೂತಃ**] ಅಥವಾ ಬಹಳ ವಿದ್ವಾಂಸನು ಅಥವಾ ಶೂರವೀರರು ಯಾರನ್ನು ಸ್ತುತಿ ಮತ್ತು ಪ್ರಶಂಸೆ ಮಾಡುತ್ತಾರೋ, [**ಮರುತ್ವಾನ್**] ಯಾರ ಸೇನೆಯಲ್ಲಿ ಉತ್ತಮ ಉತ್ತಮ ವೀರರು ಇರುವರೋ, [**ಇಂದ್ರಃ**] ಆ ಪರಮೈಶ್ವರ್ಯವಂತನಾದ ಸೇನಾಪತಿ [**ಅಸ್ಮಾಕೇಭಿಃ**] ನಮ್ಮ ಶರೀರ ಆತ್ಮ ಮತ್ತು ಬಲದಂತೆ ಬಲದಿಂದ ಕೂಡಿರುವ ವೀರ [**ನೃಭಿಃ**] ಮನುಷ್ಯರನ್ನು ಹೊಂದಿದ್ದು ಪ್ರಕಟನಾಗುತ್ತಾ [**ಸೂರ್ಯಮ್**] ಸೂರ್ಯನ ಪ್ರಕಾಶದಂತೆ ಯುದ್ಧ ನ್ಯಾಯವನ್ನು [**ಸನತ್**] ಉತ್ತಮವಾಗಿ ಸೇವಿಸಲಿ. [**ಸಃ**] ಅವನು [**ಅಸ್ಮಿನ್**] ಇಂದು [**ನಃ**] ನಮ್ಮ [**ಊತೀ**] ರಕ್ಷಣೆ ಮೊದಲಾದ ವ್ಯವಹಾರಗಳಲ್ಲಿ ನಿರಂತರವೂ [**ಭವತು**] ಇರಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನನ್ನು ಪಡೆದು ಎಲ್ಲ ಪದಾರ್ಥಗಳು ಬೇರೆ ಬೇರೆಯಾಗಿ ಪ್ರಕಾಶಿತವಾಗಿ ಆನಂದವನ್ನುಂಟುಮಾಡುತ್ತವೋ, ಹಾಗೆಯೇ ಧಾರ್ಮಿಕ ನ್ಯಾಯಾಧೀಶನನ್ನು ಪಡೆದು ಪುತ್ರ, ಪೌತ್ರ, ಸ್ತ್ರೀಯರು ಹಾಗೂ ಸೇವಕರೊಡನೆ ಇದ್ದು ಧರ್ಮ ಮತ್ತು ನ್ಯಾಯದಲ್ಲಿ ಪ್ರಸಿದ್ಧ ಆಚರಣೆಯುಳ್ಳವನಾಗಿ ಮನುಷ್ಯನು ತನ್ನ ಮತ್ತು ಪರರ ಕಲ್ಯಾಣವನ್ನುಂಟುಮಾಡುವವನು ಆಗುತ್ತಾನೆ. ಯಾವ ಎಲ್ಲರೂ ಯಾವಾಗ ಕ್ರೋಧವನ್ನು ತನ್ನ ವಶದಲ್ಲಿ ಇಟ್ಟುಕೊಳ್ಳಲು ಮತ್ತು ಎಲ್ಲ ರೀತಿಯಿಂದ ನಿತ್ಯವೂ ಪ್ರಸನ್ನತೆಯಿಂದ ಆನಂದವನ್ನುಂಟುಮಾಡುವವನು ಆಗುವನೋ, ಅವನೇ ಸೇನಾಧೀಶನಾಗಿ ನಿಯಮಿಸಲು ಯೋಗ್ಯನಾಗುವನು. ಯಾವನು ಕಳೆದುಹೋದ ವ್ಯವಹಾರಗಳಲ್ಲಿ ಉಳಿದಿರುವವುಗಳನ್ನು ತಿಳಿದು, ನಡೆಯುತ್ತಿರುವ ಶೀಘ್ರಕರ್ತವ್ಯದ ಕೆಲಸಗಳಲ್ಲಿ ತತ್ಪರನೋ, ಅವನೇ ಯಾವಾಗಲೂ ವಿಜಯವನ್ನು ಪಡೆಯುತ್ತಾನೆ, ಬೇರೆಯವನಲ್ಲ.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ತಮೂತಯೋ ರಣಯಞ್ಛೂರಸಾತೌ ತಂ ಕ್ಷೇಮಸ್ಯ ಕ್ಷಿತಯಃ ಕೃಣ್ವತ ತ್ರಾಮ್ ।
ಸ ವಿಶ್ವಸ್ಯ ಕರುಣಸ್ಯೇಶ ಏಕೋ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೭॥

ಪದಾರ್ಥ:- ಯಾವನಿಗೆ [ಊತಯಃ] ರಕ್ಷಣೆ ಮೊದಲಾದುವನ್ನು ಮಾಡುವನೋ [ತಮ್] ಆ ಸೇನೆ ಮೊದಲಾದವುಗಳ ಅಧಿಪತಿಯು [ಶೂರಸಾತೌ] ಯಾವುದರಲ್ಲಿ ಶೂರನ ಸೇವೆ ಇದೆಯೋ, ಆ ಸಂಗ್ರಾಮದಲ್ಲಿ

[ಕ್ಷಿತಯಃ] ಮನುಷ್ಯನು (ಕ್ಷಿತಯ ಇತಿ ಮನುಷ್ಯ ನಾಮ ನಿಘ. ೨.೩.) [ತ್ರಾಮ್] ತನ್ನನ್ನು ರಕ್ಷಿಸುವವನನ್ನು [ಕೃಣ್ವತ] ಮಾಡಲಿ. ಯಾವ [ಕ್ಷೇಮಸ್ಯ] ಅತ್ಯಂತ ಕುಶಲತೆ ಉಂಟುಮಾಡುವವನಿರುವನೋ [ತಮ್] ಅವನನ್ನು ತನ್ನನ್ನು ಪಾಲಿಸುವುದಕ್ಕಾಗಿ ಉಕ್ತ ಸಂಗ್ರಾಮದಲ್ಲಿ [ರಣಯನ್] ಮತ್ತೆ ಮತ್ತೆ ಅವನನ್ನು ವಿನಂತಿಸಬೇಕು. ಯಾವ [ಏಕಃ] ಒಬ್ಬನೇ ಸಭಾಧ್ಯಕ್ಷನು [ವಿಶ್ವಸ್ಯ] ಸಮಸ್ತ [ಕರುಣಸ್ಯ] ಕರುಣರೂಪಿ ಕಾರ್ಯಗಳಲ್ಲಿ [ಈಶೇ] ಸಮರ್ಥನೋ, [ಸಃ] ಅವನು [ಮರುತ್ವಾನ್] ತನ್ನ ಸೇನೆಯಲ್ಲಿ ಪ್ರಶಂಸಿತರಾದ ವೀರರನ್ನು ಇಟ್ಟುಕೊಳ್ಳಲು ಅಥವಾ [ಇಂದ್ರಃ] ಸೇನೆ ಮೊದಲಾದ ರಕ್ಷಣೆ ಮಾಡಲು [ನಃ] ನಮಗೆ [ಊತೀ] ರಕ್ಷಣೆ ಮೊದಲಾದ ವ್ಯವಹಾರಗಳಿಗಾಗಿ [ಭವತು] ಇರಲಿ.

ಭಾವಾರ್ಥ:- ಮನುಷ್ಯನು, ಒಂಟಿಯಾಗಿಯೇ ಅನೇಕ ಯೋಧರನ್ನು ಜಯಿಸುವವನು, ಅವನ ಉತ್ಸಾಹ, ಸಂಗ್ರಾಮ ಮತ್ತು ವ್ಯವಹಾರಗಳಲ್ಲಿ ಉತ್ತಮ ರೀತಿಯಲ್ಲಿ ವೃದ್ಧಿಸಲಿ. ಉತ್ತಮ ಉತ್ಸಾಹದಿಂದ ವೀರರಲ್ಲಿ ಎಂತಹ ಶೂರತ್ವವುಂಟಾಗುತ್ತದೋ, ಬೇರೆ ಪ್ರಕಾರದಿಂದ ಉಂಟಾಗುವುದಿಲ್ಲ ಎಂಬುದು ನಿಶ್ಚಯವಾಗಿದೆ.

ಮತ್ತೆ ಅವನು ಯಾವ ರೀತಿ ಇರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ತಮಪ್ಸಂತ ಶವಸ ಉತ್ಸವೇಷು ನರೋ ನರಮವಸೇ ತಂ ಧನಾಯ । ಸೋ ಅಂಧೇ

ಚಿತ್ ತಮಸಿ ಜ್ಯೋತಿರ್ವಿದನ್ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೮॥

ಪದಾರ್ಥ:- ಹೇ ಮನುಷ್ಯರೇ! [**ನರಮ್**] ಎಲ್ಲ ಕೆಲಸಗಳನ್ನು ಯಥಾಯೋಗ್ಯವಾಗಿ ಆಚರಿಸುವ ಯಾವ ಮನುಷ್ಯನಿಗೆ [**ಶವಸಾ**] ವಿದ್ಯೆ, ಬಲ ಹಾಗೂ ಧನ ಮೊದಲಾದ ಅನೇಕ ಬಲಗಳು [**ಅಪ್ಸಂತ**] ಪ್ರಾಪ್ತವಾಗಲಿ. [**ತಮ್**] ಆ ಅತ್ಯಂತ ಪ್ರಬಲ ಯುದ್ಧ ಮಾಡುವುದರಿಂದಲೂ ಕೂಡ ಯುದ್ಧ ಮಾಡುವ ಸೇನೆ ಮುಂತಾದವುಗಳಲ್ಲಿ ಅಧಿಪತಿಗೆ [**ಉತ್ಸವೇಷು**] ಉತ್ಸವ ಅಂದರೆ ಆನಂದದ ಕಾರ್ಯಗಳಲ್ಲಿ ಸತ್ಕಾರ ಮಾಡುವುದು ಹಾಗೂ [**ತಮ್**] ಅವನಿಗೆ [**ನರಃ**] ಶ್ರೇಷ್ಠಾಧಿಕಾರವನ್ನು ಪಡೆಯುವ ಮನುಷ್ಯ [**ಅವಸೇ**] ರಕ್ಷಣೆ ಮೊದಲಾದ ವ್ಯವಹಾರಗಳಲ್ಲಿ ಮತ್ತು [**ಧನಾಯ**] ಉತ್ತಮ ಧನವನ್ನು ಪಡೆಯುವುದಕ್ಕಾಗಿ ಪ್ರಾಪ್ತನಾಗಲಿ. ಯಾವ [**ಅಂಧೇ**] ಕುರುಡನಂತೆ ಕೆಲಸ ಮಾಡುವವನಿಗೆ [**ಜ್ಯೋತಿಃ**] ಸೂರ್ಯ ಮೊದಲಾದ ಹೊಳೆಯುವ ಪ್ರಕಾಶದಲ್ಲಿ [**ಚಿತ್**] ಕೂಡಾ [**ತಮಸಿ**] ಕತ್ತಲೆಯ [**ದಿದತ್**] ಪ್ರಾಪ್ತವಾಗುವುದು. [**ಸಃ**] ಅವನು [**ಮರುತ್ವಾನ್**] ತನ್ನ ಸೇನೆಯಲ್ಲಿ ಉತ್ತಮ ವೀರರನ್ನು ಪಡೆದವನು [**ಇಂದ್ರಃ**] ಪರಮೈಶ್ವರ್ಯವಂತನಾದ ಸೇನಾಪತಿ ಅಥವಾ ಸಭಾಪತಿಯು [**ನಃ**] ನಮಗೆ [**ಊತೀ**] ಉತ್ತಮ ಆನಂದಕ್ಕಾಗಿ [**ಭವತು**] ಇರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮನುಷ್ಯರೇ! ಯಾವನು ಶತ್ರುಗಳನ್ನು ಜಯಿಸಿ ಮತ್ತು ಧಾರ್ಮಿಕರನ್ನು ಪಾಲಿಸಿ ವಿದ್ಯೆ ಮತ್ತು ಧನದ ಉನ್ನತಿಯನ್ನು ಮಾಡುವನೋ, ಯಾವುದನ್ನು ಪಡೆದು ಹೇಗೆ ಸೂರ್ಯಲೋಕವು ಪ್ರಕಾಶಿಸುವುದೋ ಹಾಗೆ ವಿದ್ಯೆಯ ಪ್ರಕಾಶವನ್ನು ಪಡೆಯುತ್ತಾನೆ. ಆ ಮನುಷ್ಯನಿಗೆ ಆನಂದ ಮಂಗಳ ದಿನಗಳಲ್ಲಿ ಆದರ ಸತ್ಕಾರಗಳನ್ನು ಮಾಡಿ. ಏಕೆಂದರೆ, ಹಾಗೆ ಮಾಡದ ಹೊರತು ಯಾರಿಗೂ ಅಂತಹ ಕೆಲಸಗಳಲ್ಲಿ ಉತ್ಸಾಹವುಂಟಾಗುವುದಿಲ್ಲ.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸ ಸವ್ಯೇನ ಯಮತಿ ವ್ರಾಧತಶ್ಚಿತ್ ಸ ದಕ್ಷಿಣೇ ಸಂಗೃಭೀತಾ ಕೃತಾನಿ ।

ಸ ಕೀರಿಣಾ ಚಿತ್ ಸನಿತಾ ಧನಾನಿ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೯॥

ಪದಾರ್ಥ:- ಯಾವ [ಸವ್ಯೇನ] ಸೇನೆಯ ಎಡಗಡೆ ನಿಂತಿರುವ ತನ್ನ ಸೇನೆಯಿಂದ [ವ್ರಾಧತಃ] ಅತ್ಯಂತ ಬಲಶಾಲಿಯಾದ ಶತ್ರುಸೇನೆಯನ್ನು [ಚಿತ್] ಕೂಡ [ಯಮತಿ] ಉಪಾಯದಿಂದ ನಡೆಸಿ, ಅವನು ಆ ಶತ್ರುಗಳನ್ನು ಜಯಿಸುತ್ತಾನೆ. ಯಾವ [ದಕ್ಷಿಣೇ] ದಕ್ಷಿಣದ ಕಡೆ ಸಿದ್ಧವಾಗಿರುವ ಸೇನೆಯಿಂದ [ಸಂಗೃಭೀತಾ] ಗ್ರಹಣ ಮಾಡಲ್ಪಟ್ಟ ಸೇನೆಯ ಅಂಗಗಳಿಂದ ಹಾಗೂ [ಕೃತಾನಿ] ಮಾಡಿದ ಕ್ರಿಯೆಗಳಿಂದ ಯಥೋಚಿತವಾಗಿ ನಿಯಮದಲ್ಲಿಡುತ್ತಾನೆ. [ಸಃ] ಅವನು ತನ್ನ ಸೇನೆಯನ್ನು ರಕ್ಷಿಸುತ್ತಾನೆ. ಯಾವ [ಕೀರಿಣ] ಶತ್ರುಗಳನ್ನು ಬೀಳಿಸುವ ಪ್ರಬಂಧದಲ್ಲಿ [ಚಿತ್] ಕೂಡ ಅವರ [ಸನಿತಾ] ಉತ್ತಮ ರೀತಿಯಲ್ಲಿ ಒಗ್ಗೂಡಿಸಿದ [ಧನಾನಿ] ಧನವನ್ನು ತೆಗೆದುಕೊಳ್ಳುತ್ತಾನೆ. [ಸಃ] ಅವನು [ಮರುತ್ವಾನ್] ತನ್ನ ಸೇನೆಯಲ್ಲಿ ಉತ್ತಮ ವೀರಪುರುಷರನ್ನು ಪಡೆದಿರುವ [ಇಂದ್ರಃ] ಪರಮೈಶ್ವರ್ಯವಂತನಾದ ಸೇನಾಪತಿಯು [ನಃ] ನಮಗೆ [ಊತೀ] ರಕ್ಷಣೆ ಮೊದಲಾದ ವ್ಯವಹಾರಗಳಲ್ಲಿ [ಭವತು] ಇರಲಿ/ ಉಂಟಾಗಲಿ.

ಭಾವಾರ್ಥ:- ಯಾವ ಸೇನೆಯ ರಚನೆಗಳು ಮತ್ತು ಅಂಗಗಳಲ್ಲಿ ಶಿಕ್ಷಣ ಮತ್ತು ರಕ್ಷಣೆಯ ವಿಶೇಷ ಜ್ಞಾನವನ್ನು ಮತ್ತು ಪೂರ್ಣಯುದ್ಧದ ಸಾಮಗ್ರಿಯನ್ನು ಒಟ್ಟುಗೂಡಿಸಿ ಅವನೇ ಶತ್ರುಗಳನ್ನು ಗೆಲ್ಲುವುದರಿಂದ ತನ್ನ ಮತ್ತು ಪ್ರಜೆಗಳ ರಕ್ಷಣೆ ಮಾಡಲು ಯೋಗ್ಯನು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸ ಗ್ರಾಮೇಭಿಃ ಸನಿತಾ ಸ ರಥೇಭಿ-ರ್ವಿದೇ ವಿಶ್ವಾಭಿಃ ಕೃಷ್ಟಿಭಿರ್ನ್ವ ೧ ದ್ಯ ।

ಸ ಪೌಂಸ್ಯೇಭಿರಭಿಭೂರಶಸ್ತೀ-ರ್ಮರುತ್ವಾನ್ ನೋ ಭವತ್ವಿಂದ್ರ ಊತೀ ॥೧೦॥

ಪದಾರ್ಥ:- ಯಾವನು [**ಮರುತ್ವಾನ್**] ತನ್ನ ಸೇನೆಯಲ್ಲಿ ಉತ್ತಮ ವೀರರನ್ನು ಪಡೆದವನು [**ಇಂದ್ರಃ**] ಪರಮೈಶ್ವರ್ಯವಂತವಾದ ಸೇನೆ ಮೊದಲಾದವುಗಳಿಗೆ ಅಧಿಪತಿಯು [**ಗ್ರಾಮೇಭಿಃ**] ಗ್ರಾಮಗಳಲ್ಲಿರುವ ಪ್ರಜೆಗಳೊಡನೆ [**ಸನಿತಾ**] ಉತ್ತಮವಾಗಿ ಬೇರೆ ಬೇರೆ ಮಾಡಲ್ಪಟ್ಟ ಧನವನ್ನು ಅನುಭವಿಸುವನೋ, [**ಸಃ**] ಅವನು ಆನಂದಿತನಾಗುವನು. ಯಾವನು [**ವಿದೇ**] ಯುದ್ಧವಿದ್ಯೆ ಹಾಗೂ ವಿಜಯಗಳನ್ನು ಯಾವುದರಿಂದ ತಿಳಿದು ಆ ಕ್ರಿಯೆಗಳಿಗಾಗಿ [**ರಥೇಭಿಃ**] ಸೇನೆಯ ವಿಮಾನ ಮೊದಲಾದ ಅಂಗಗಳು ಮತ್ತು [**ವಿಶ್ವಾಭಿಃ**] ಸಮಸ್ತ [**ಕೃಷ್ಟಿಭಿಃ**] ಶಿಲ್ಪ ಕಾರ್ಯಗಳಲ್ಲಿ ಅತಿ ಕುಶಲತೆಯಿಂದ ಪ್ರಕಾಶಮಾನನಾಗುವನೋ, [**ಸಃ**] ಅವನು ಮತ್ತು ಯಾವ [**ಅಶಸ್ತೀಃ**] ಶತ್ರುಗಳು ಅಭಿವೃದ್ಧಿಯಾಗುವ ಕ್ರಿಯೆಗಳನ್ನು ತಿಳಿದು ಅವುಗಳನ್ನು [**ಅಭಿಭೂಃ**] ತಿರಸ್ಕರಿಸುವ [**ಸಃ**] ಅವನು ಮತ್ತು ಯಾವ [**ಪೌಂಸ್ಯೇಭಿಃ**] ಉತ್ತಮ ಶರೀರ ಹಾಗೂ ಆತ್ಮ ಬಲದೊಂದಿಗೆ ವರ್ತಿಸುತ್ತಾ [**ನು**] ಶೀಘ್ರವಾಗಿ [**ಅದ್ಯ**] ಇಂದೇ [**ನಃ**] ನಮಗೆ [**ಊತೀ**] ರಕ್ಷಣೆ ಮೊದಲಾದ ವ್ಯವಹಾರಗಳಿಗೆ [**ಭವತು**] ಉಂಟಾಗಲಿ.

ಭಾವಾರ್ಥ:- ಮನುಷ್ಯರು, ಪುರ, ನಗರ ಮತ್ತು ಗ್ರಾಮಗಳನ್ನು ಉತ್ತಮವಾಗಿ ರಕ್ಷಿಸುವ ಅಥವಾ ಪೂರ್ಣ ಸೇನಾಂಗಗಳನ್ನು ಸಾಮಗ್ರಿ ಸಹಿತವಾಗಿ ಕಲಾಕೌಶಲ ಹಾಗೂ ಶಸ್ತ್ರಾಸ್ತ್ರಗಳಿಂದ ಯುದ್ಧ ಕ್ರಿಯೆಗಳನ್ನು ತಿಳಿಸಿರುವವನು ಮತ್ತು ಪರಿಪೂರ್ಣ ವಿದ್ಯೆ ಹಾಗೂ ಬಲದಿಂದ ಪುಷ್ಟರಾದ ಶತ್ರುಗಳನ್ನು ಪರಾಜಯಗೊಳಿಸಿ ಪ್ರಜೆಗಳ ಪಾಲನೆಯಲ್ಲಿ ಪ್ರಸನ್ನನಾಗುವನೋ, ಅವನೇ ಸೇನೆ ಮೊದಲಾದವುಗಳಿಗೆ ಅಧಿಪತಿಯಾಗಲು ಯೋಗ್ಯನು, ಅನ್ಯರಲ್ಲ.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸ ಜಾಮಿಭಿರ್ಯತ್ ಸಮಜಾತಿ ಮೀಳ್ಹೇಽಜಾಮಿಭಿರ್ವಾ ಪುರುಹೂತ ಏವೈಃ ।

ಅಪಾಂ ತೋಕಸ್ಯ ತನಯಸ್ಯ ಜೇಷೇ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೧೧॥

ಪದಾರ್ಥ:- [ಅಪಾಮ್] ಪ್ರಾಪ್ತರಾದ ಮಿತ್ರರು, ಶತ್ರುಗಳು ಮತ್ತು ಉದಾಸೀನರು ಅಥವಾ [ತೋಕಸ್ಯ] ಬಾಲಕರು ಅಥವಾ [ತನಯಸ್ಯ] ಪೌತ್ರರು ಮೊದಲಾದವರ ಮಧ್ಯೆವರ್ತಿಸುವವನು [ಯತ್] ಯಾವಾಗ [ಮೀಳ್ಹೇ] (ಮೀಳ್ಹೇ ಇತಿ ಸಂಗ್ರಾಮನಾಮ ನಿಘ. ೨.೧೭) ಸಂಗ್ರಾಮಗಳಲ್ಲಿ [ಏಷ್ಯೈಃ] ಪ್ರಾಪ್ತರಾದ [ಜಾಮಿಭಿಃ] ಶತ್ರುಗಳ ಸಹಿತ [ಅಜಾಮಿಭಿಃ] ಬಂಧುವರ್ಗಕ್ಕಿಂತ ಬೇರೆಯಾದ ಶತ್ರುಗಳನ್ನು ಸಹಿತ [ವಾ] ಅಥವಾ ಉದಾಸೀನರೊಂದಿಗೆ ವಿರೋಧ ಭಾವವನ್ನು ಪ್ರಕಟಪಡಿಸುತ್ತಾ [ಪುರೂಹೂತಃ] ಎಲ್ಲರ ಪ್ರಶಂಸೆಗೆ ಪ್ರಾಪ್ತವಾಗುವ ಅಥವಾ ಯುದ್ಧಕ್ಕೆ ಆಹ್ವಾನಿಸಲ್ಪಟ್ಟ [ಮರುತ್ವಾನ್] ತನ್ನ ಸೇನೆಯಲ್ಲಿ ಉತ್ತಮವೀರರನ್ನು ಪಡೆದಿರುವ [ಇಂದ್ರಃ] ಪರಮೈಶ್ವರ್ಯವಂತನಾದ ಸೇನೆ ಮೊದಲಾದವುಗಳಿಗೆ ಅಧಿಪತಿಯು [ಜೇಷೇ] ಮೇಲೆ ಹೇಳಿದ ತನ್ನ ಬಂಧುಗಳಿಗೆ, ಸಹೋದರರಿಗೆ ಉತ್ಸಾಹ ಮತ್ತು ಉತ್ಕರ್ಷವನ್ನು ಕೊಡುತ್ತಾ ಅಥವಾ ಶತ್ರುಗಳನ್ನು ಗೆಲ್ಲಲು [ಸಮಜಾತಿ] ಉತ್ತಮ ಉಪಾಯದಿಂದ ತಿಳಿಯುತ್ತಾನೋ, [ಸಃ] ಅವನು [ನಃ] ನಮಗೆ [ಊತೀ] ಉತ್ತಮ ರಕ್ಷಣೆಯನ್ನು ಕೊಡಲು ಸಮರ್ಥನು [ಭವತು] ಆಗಲಿ.

ಭಾವಾರ್ಥ:- ಈ ರಾಜ್ಯವ್ಯವಹಾರದಲ್ಲಿ ಯಾವನೇ ಗೃಹಸ್ಥನನ್ನು ಬಿಟ್ಟು ಬ್ರಹ್ಮಚಾರಿ, ವಾನಪ್ರಸ್ಥಿಯು ಅಥವಾ ಯತಿಯು ಪ್ರವೃತ್ತಿಯಾಗಲು ಯೋಗ್ಯರಲ್ಲ ಮತ್ತು ಉತ್ತಮ ಬಂಧುಮಿತ್ರರು ಹೊರತು ಯುದ್ಧದಲ್ಲಿ ಶತ್ರುಗಳನ್ನು ಸೋಲಿಸಲು ಶಕ್ತರಾಗುವುದಿಲ್ಲ. ಹಾಗೆ ಧಾರ್ಮಿಕ ವಿದ್ವಾಂಸರ ಹೊರತು ಯಾರೂ ಸೇನೆ ಮೊದಲಾದವುಗಳಿಗೆ ಅಧಿಪತಿಯಾಗಲು ಯೋಗ್ಯರಲ್ಲ. ಇದನ್ನು ತಿಳಿಯಬೇಕು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸ ವಜ್ರಭೃದ್ ದಸ್ಯುಹಾ ಭೀಮ ಉಗ್ರಃ ಸಹಸ್ರಚೇತಾಃ ಶತನೀಥ ಋಭ್ವಾ ।
ಚಮ್ರೀಷೋ ನ ಶವಸಾ ಪಾಂಚಜನ್ಯೋ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೧೨॥

ಪದಾರ್ಥ:- [ಚಮ್ರೀಷಃ] ಯಾವನು ತನ್ನ ಸೇನೆಯಲ್ಲಿ ಶತ್ರುಗಳ ಸೇನೆಯನ್ನು ಕೊಲ್ಲುವಂತಹವರಿಗೆ [ನ] ಸಮಾನವಾಗಿ [ವಜ್ರಭೃತ್] ಅತಿ ಕರಾಳವಾದ ಶಸ್ತ್ರಗಳನ್ನು ಧರಿಸಿರುವವನು [ದಸ್ಯುಹಾ] ದರೋಡೆಕಾರರು, ಕಳ್ಳರು, ಲಂಪಟರು, ವ್ಯಭಿಚಾರಿಗಳು ಮೊದಲಾದ ದುಷ್ಟರನ್ನು ಕೊಲ್ಲುವುದು [ಭೀಮಃ] ಅವರಿಗೆ ಭಯ ಮತ್ತು [ಉಗ್ರಃ] ಕಠಿಣವಾಗಿ ದಂಡಿಸುವವನು [ಸಹಸ್ರಚೇತಾಃ] ಸಾವಿರಾರು ಉತ್ತಮ ಪ್ರಕಾರಗಳ ಜ್ಞಾನವನ್ನು ಪ್ರಕಟ ಮಾಡುವವನು [ಶತವೀಥಃ] ಯಾವನ ನೂರಾರು ಯಥಾಯೋಗ್ಯ ವ್ಯವಹಾರಗಳಲ್ಲಿ ವರ್ತಿಸುವವನೇ [ಪಾಂಚಜನ್ಯಃ] ಎಲ್ಲ ರೀತಿಯ ವಿದ್ಯೆಗಳಿಂದ ಕೂಡಿ ಓದಿಸುವ, ಉಪದೇಶ ಮಾಡುವ, ರಾಜ್ಯ ಸಂಬಂಧವಾದ ಸಭೆ, ಸೇನೆ ಮತ್ತು ಅಧಿಕಾರಿಗಳ ಅಧಿಷ್ಠಾತದಲ್ಲಿ ಉತ್ತಮತೆಯಿಂದ ಇದ್ದು [ಮರುತ್ವಾನ್] ಮತ್ತು ತನ್ನ ಸೇನೆಯಲ್ಲಿ ಉತ್ತಮ ವೀರರನ್ನು ಪಡೆದು [ಇಂದ್ರಃ] ಪರಮೈಶ್ವರ್ಯವಂತನಾದ ಸೇನೆ ಮೊದಲಾದ ವ್ಯವಹಾರಗಳಿಗೆ ಅಧಿಪತಿಯು [ಋಭ್ವಾ] ಹೆಚ್ಚಿನ [ಶವಸಾ] ಬಲದಿಂದ ಕೂಡಿದ ಸೇನೆಯಿಂದ ಶತ್ರುಗಳಿಗೆ ಉತ್ತಮವಾಗಿ ಪ್ರಾಪ್ತವಾಗುತ್ತಾನೆ. [ಸಃ] ಅವನು [ನಃ] ನಮಗೆ [ಊತೀ] ರಕ್ಷಣೆ ಮೊದಲಾದ ವ್ಯವಹಾರಗಳಿಗೆ ಸಮರ್ಥನು [ಭವತು] ಆಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯರು ಇದನ್ನು ತಿಳಿಯಬೇಕು. ಯಾವ ಮನುಷ್ಯನು ಧನುರ್ವೇದದ ವಿಶೇಷ ಜ್ಞಾನ ಮತ್ತು ಅದನ್ನು ಯಥಾಯೋಗ್ಯ ವ್ಯವಹಾರಗಳಲ್ಲಿ ವರ್ತಿಸುವಂತೆ ಮಾಡುವುದು ಮತ್ತು ಶತ್ರುಗಳನ್ನು ಕೊಲ್ಲುವ ಭಯವನ್ನುಂಟುಮಾಡುವವನು ಅಥವಾ ತೀವ್ರವೂ ಅಗಾಧವೂ ಆದ ಸಾಮರ್ಥ್ಯ ಮತ್ತು ಪ್ರಬಲವಾಗಿ ಬೆಳೆದ ಸೇನೆಯ ಹೊರತು ಸೇನಾಪತಿಯಾಗಲಾರನು. ಮತ್ತು ಹಾಗಾಗದ ಹೊರತು ಶತ್ರುಗಳಿಗೆ ಪರಾಜಯ ಮತ್ತು ಪ್ರಜೆಗಳ ಪಾಲನೆ ಮಾಡಲಾರನು. ಹಾಗೆಂದು ತಿಳಿಯಬೇಕು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ತಸ್ಯ ವಜ್ರಃ ಕ್ರಂದತಿ ಸ್ಮತ್ ಸ್ವರ್ಷಾ ದಿವೋ ನ ತ್ವೇಷೋ ರವಥಃ ಶಿಮೀವಾನ್ ।
ತಂ ಸಚಂತೇ ಸನಯಸ್ತಂ ಧನಾನಿ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೧೩॥

ಪದಾರ್ಥ:- ಯಾವ ಸಭಾಧ್ಯಕ್ಷನ [ಸ್ಮತ್] ಕೆಲಸದಲ್ಲಿ ತೊಡಗುವ ಅನುಕೂಲತೆಗಾಗಿ [ಸ್ವರ್ಷಾಃ] ಸುಖದ ಸೇವನೆ ಮತ್ತು [ರವಥಃ] ಭಾರೀಕೋಲಾಹಲ ಶಬ್ದವನ್ನುಂಟುಮಾಡಿಸುವ [ಶೀಮೀವಾನ್] ಯಾವನಿಂದ ಪ್ರಶಂಸಿತವಾದ ಕೆಲಸವಾಗುವುದೋ ಅವನು [ವಜ್ರಃ] ಶಸ್ತ್ರ ಮತ್ತು ಅಸ್ತ್ರಗಳ ಸಮೂಹವು [ಕ್ರಂದತಿ] ಉತ್ತಮರನ್ನು ಸ್ವಾಗತಿಸುತ್ತಾ ಮತ್ತು ದುಷ್ಟರನ್ನು ಅಳಿಸುತ್ತಾನೆ. [ತಸ್ಯ] ಅವನ [ದಿವಃ] ಸೂರ್ಯನ [ತ್ವೇಷಃ] ಪ್ರಕಾಶದ [ನ] ಸಮಾನ ಗುಣ, ಕರ್ಮ ಮತ್ತು ಸ್ವಭಾವವು ಪ್ರಕಾಶಿತವಾಗುತ್ತದೆ. ಯಾವನು ಹಾಗಿರುವನೋ, [ತಮ್] ಅವನನ್ನು [ಸನಯಃ] ಉತ್ತಮ ಸೇವೆ ಅಂದರೆ ಸಜ್ಜನರಿಗೆ ಮಾಡಿದ ಉತ್ಸಾಹ, [ಸಚಂತೇ] ಸೇವನೆ ಮಾಡುತ್ತಾನೆ ಮತ್ತು [ತಮ್] ಅವನನ್ನು [ಧನಾನಿ] ಸಮಸ್ತ ಧನವೂ ಸೇವಿಸುತ್ತದೆ. ಈ ರೀತಿ [ಮರುತ್ವಾನ್] ಯಾವ ಸಭಾಧ್ಯಕ್ಷನು ತನ್ನ ಸೇನೆಯಲ್ಲಿ ಉತ್ತಮ ವೀರರನ್ನು ಪಡೆದಿರುವವನೋ, [ಇಂದ್ರಃ] ಪರಮೈಶ್ವರ್ಯವಂತನೋ, ವಂಶದಲ್ಲಿ ಹಾಗೂ [ನಃ] ನಮಗೆ [ಊತೀ] ರಕ್ಷಣೆ ಮೊದಲಾದ ವ್ಯವಹಾರಗಳಲ್ಲಿ ಯತ್ನ ಮಾಡುತ್ತಾನೋ, ಅವನು ನಮಗೆ ರಾಜನು [ಭವತು] ಆಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಸಭಾಸದರು, ಭೃತ್ಯರು, ಸೇನಾಪುರುಷ ಮತ್ತು ಪ್ರಜೆಗಳು, ಉತ್ತಮ ಕೆಲಸಗಳನ್ನು ಮಾಡಿ ಯಾವುದರಿಂದ ವಿದ್ಯೆ, ನ್ಯಾಯ, ಧರ್ಮ ಅಥವಾ ಪುರುಷಾರ್ಥವನ್ನು ಹೆಚ್ಚಿಸಿಕೊಳ್ಳುತ್ತಾ ಸೂರ್ಯನಂತೆ ಪ್ರಕಾಶಿತನಾಗಬೇಕು. ಏಕೆಂದರೆ, ಅಂತಹ ಕೆಲಸಗಳ ಹೊರತು ಉತ್ತಮ ಸುಖ, ಧನ ಮತ್ತು ರಕ್ಷಣೆ ಉಂಟಾಗುವುದಿಲ್ಲ. ಆದುದರಿಂದ ಅಂತಹ ಕೆಲಸವನ್ನು ಸಭಾಧ್ಯಕ್ಷ ಮೊದಲಾದವರು ಮಾಡಲು ಯೋಗ್ಯರು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಯಸ್ಯಾಜಸ್ರಂ ಶವಸಾ ಮಾನಮುಕ್ಥಂ ಪರಿಭುಜದ್ ರೋದಸೀ ವಿಶ್ವತಃ ಸೀಮ್ ।
ಸ ಪಾರಿಷತ್ ಕ್ರತುಭಿರ್ಮಂದಸಾನೋ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೧೪॥

ಪದಾರ್ಥ:- [ಯಸ್ಯ] ಯಾವ ಸಭೆ ಮೊದಲಾದವುಗಳ ಅಧ್ಯಕ್ಷನು [ಶವಸಾ] ಶಾರೀರಿಕ, ಹಾಗೂ ಆತ್ಮಿಕ ಬಲದಿಂದ ಕೂಡಿದ ಜನರು [ಮಾನಮ್] ಸತ್ಕಾರ [ಉಕ್ಥಮ್] ವೇದ ವಿದ್ಯೆ ಹಾಗೂ [ಸೀಮ್] ಧರ್ಮ ನ್ಯಾಯಗಳ ಮರ್ಯಾದೆಯನ್ನು [ವಿಶ್ವತಃ] ಎಲ್ಲ ಕಡೆಗಳಿಂದ [ಅಜಸ್ರಮ್] ನಿರಂತರ ಪಾಲಿಸುತ್ತಾ ಮತ್ತು ಯಾವ [ರೋದಸೀ] ವಿದ್ಯೆಯ ಪ್ರಕಾಶ ಮತ್ತು ಪೃಥ್ವಿಯ ರಾಜ್ಯವನ್ನು ಕೂಡ [ಪರಿಭುಜತ್] ಉತ್ತಮವಾಗಿ ಪಾಲಿಸಬೇಕು. ಯಾವ [ಕ್ರತುಭಿಃ] ಉತ್ತಮ ಬುದ್ಧಿವಂತರ ಕಾರ್ಯಗಳ ಜೊತೆಗೆ [ಮಂದಸಾನಃ] ಪ್ರಶಂಸೆ ಮೊದಲಾದವುಗಳಿಂದ ಪರಿಪೂರ್ಣವಾಗಿ ಸುಖಗಳಿಂದ ಪ್ರಜೆಗಳನ್ನು [ಪಾರಿಷತ್] ಪಾಲಿಸುತ್ತಾನೋ, [ಸಃ] ಅವನು [ಮರುತ್ವಾನ್] ತನ್ನ ಸೇನೆಯಲ್ಲಿ ಉತ್ತಮ ವೀರಪುರುಷರನ್ನು ಪಡೆದಿರುವ [ಇಂದ್ರಃ] ಪರಮೈಶ್ವರ್ಯವಂತನಾದ ಸಭಾಪತಿಯು [ನಃ] ನಮಗೆ [ಊತೀ] ರಕ್ಷಣೆ ಮೊದಲಾದ ವ್ಯವಹಾರಗಳಲ್ಲಿ ನಿರಂತರವೂ ಸಿದ್ಧಪಡಿಸುವವನು [ಭವತು] ಆಗಲಿ.

ಭಾವಾರ್ಥ:- ಯಾವ ಸತ್ಪುರುಷರ ಮಾನ, ದುಷ್ಟರ ತಿರಸ್ಕಾರ, ಪೂರ್ಣವಿದ್ಯೆ ಧರ್ಮದ ಮರ್ಯಾದೆ ಪುರುಷಾರ್ಥ ಮತ್ತು ಆನಂದಪಡಿಸುವನೋ, ಅವನೇ ಸಭಾಧ್ಯಕ್ಷನಾಗಲು ಯೋಗ್ಯನು.

ಈ ಎಲ್ಲಾ ಪ್ರಜೆಗಳನ್ನು ಸೃಷ್ಟಿಸುವ ಈಶ್ವರನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ನ ಯಸ್ಯ ದೇವಾ ದೇವತಾ ನ ಮರ್ತಾ ಆಪಶ್ಚನ ಶವಸೋ ಅಂತಮಾಪುಃ ।
ಸ ಪ್ರರಿಕ್ವಾ ತ್ವಕ್ಷಸಾ ಕ್ಷ್ಮೋ ದಿವಶ್ಚ ಮರುತ್ವಾನ್ ನೋ ಭವತ್ವಿಂದ್ರ ಊತೀ ॥೧೫॥

ಪದಾರ್ಥ:- [ಯಸ್ಯ] ಯಾವ ಪರಮೈಶ್ವರ್ಯವಂತನಾದ ಜಗದೀಶ್ವರನ [ಶವಸಃ] ಬಲದ [ಅಂತಮ್] ಅವಧಿಯು [ದೇವತಾ] ದಿವ್ಯರಾದ ಉತ್ತಮ ಜನರಲ್ಲಿ [ದೇವಾಃ] ವಿದ್ವಾಂಸರು [ನಃ] ಇಲ್ಲ. [ಮರ್ತಾಃ] ಸಾಧಾರಣ ಜನರು [ನ] ಇಲ್ಲ. [ಚ ನ] ಹಾಗೂ [ಅಪಃ] ಅಂತರಿಕ್ಷ ಅಥವಾ ಪ್ರಾಣವು ಕೂಡ [ಆಪುಃ] ಪಡೆಯಲಾರವು. ಯಾವನು [ತ್ವಕ್ಷಸಾ] ತನ್ನ ಬಲದ ಸಾಮರ್ಥ್ಯದಿಂದ [ಕ್ಷಮಃ] ಪೃಥಿವಿ [ದಿವಃ] ಸೂರ್ಯಲೋಕ [ಚ] ಮತ್ತು ಇತರ ಲೋಕಗಳನ್ನು [ಪ್ರರಿಕ್ವಾ] ರಚಿಸಿ ವ್ಯಾಪ್ತನಾಗುವನೋ [ಸಃ] ಅವನು [ಮರುತ್ವಾನ್] ತನ್ನ ಪ್ರಜೆಗಳನ್ನು ಪ್ರಶಂಸಿಸುವಂತೆ ಮಾಡುವವನು [ಇಂದ್ರಃ] ಪರಮೈಶ್ವರ್ಯವಂತನಾದ ಪರಮೇಶ್ವರನು [ನಃ] ನಮಗೆ [ಊತೀ] ರಕ್ಷಣೆ ಮೊದಲಾದ ವ್ಯವಹಾರಗಳಲ್ಲಿ ನಿರಂತರವೂ ಉದ್ಯತನಾಗಿ [ಭವತು] ಆಗಲಿ.

ಭಾವಾರ್ಥ:- ಅನಂತಗುಣ- ಕರ್ಮ-ಸ್ವಭಾವಗಳುಳ್ಳ ಆ ಪರಮೇಶ್ವರನ ಪಾರವನ್ನು ಯಾವನಾದರೂ ಪಡೆಯಬಲ್ಲನೇನು? ಏಕೆಂದರೆ, ಯಾವನು ತನ್ನ ಸಾಮರ್ಥ್ಯದಿಂದಲೇ ಪ್ರಕೃತಿರೂಪವೂ, ಅತಿಸೂಕ್ಷ್ಮವೂ, ಸನಾತನವೂ ಆದ ಕಾರಣದಿಂದ ಎಲ್ಲ ಪದಾರ್ಥಗಳಿಗೂ ಸ್ಥೂಲರೂಪಕೊಟ್ಟು ಅವುಗಳ ಪಾಲನೆ ಮತ್ತು ಪ್ರಳಯ ಕಾಲದಲ್ಲಿ ಎಲ್ಲವನ್ನೂ ನಾಶಮಾಡುತ್ತಾನೆ. ಅವನು ಎಲ್ಲರಿಗೂ ಉಪಾಸನೆ ಮಾಡಲು ಯೋಗ್ಯನು ಏತಕ್ಕಾಗಲಾರನು?

ಈ ಶಿಲ್ಪ ಜನರು ಸೇನೆ ಮೊದಲಾದವುಗಳಲ್ಲಿ ಉತ್ತಮವಾಗಿ ಸೇರಿಸಲ್ಪಟ್ಟ ಅಗ್ನಿಯು ಹೇಗಿರುತ್ತದೆ ಮತ್ತು ಏನು ಮಾಡುತ್ತದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ರೋಹಿಚ್ಛ್ಯಾವಾ ಸುಮಂದಶುರ್ಲಲಾಮೀ-ರ್ದ್ಯುಕ್ಷಾ ರಾಯ ಋಜ್ರಾಶ್ವಸ್ಯ ।
ವೃಷಣ್ವಂತಂ ಬಿಭ್ರತೀ ಧೂರ್ಷು ರಥಂ ಮಂದ್ರಾ ಚಿಕೇತ ನಾಹುಷೀಷು ವಿಕ್ಷು ॥೧೬॥

ಪದಾರ್ಥ:- ಯಾವ [ಋಜ್ರಾಶ್ವಸ್ಯ] ನೇರ ನಡೆಯಲ್ಲಿ ನಡೆಯುವ ಯಾವನ ಕುದುರೆಯು ವೇಗವಂತವಾಗಿರುವುದೋ, ಆ ಸಭೆ ಮೊದಲಾದವುಗಳ ಅಧ್ಯಕ್ಷನ ಸಂಬಂಧ ಮಾಡುವ ಶಿಲ್ಪಿಗಳಿಗೆ [ಸುಮದಂಶುಃ] ಉತ್ತಮವಾಗಿ ಸುಡುವ [ಲಲಾಮೀಃ] ಪ್ರಶಂಸಿತವಾದ ಸೌಂದರ್ಯವು ಮತ್ತು [ದ್ಯುಕ್ಷಾ] ಯಾವನ ಪ್ರಕಾಶವೇ ನಿವಾಸವಾಗಿದೆಯೋ, ಆ [ರೋಹಿತ್] ಕೆಳಗಿನಿಂದ ಕೆಂಪು ಮತ್ತು [ಶ್ಯಾವಾ] ಮೇಲಿನಿಂದ ಕಾಳೀ ಅಗ್ನಿಯ ಜ್ವಾಲೆಯು [ಧೂರ್ಷು] ಲೋಹದಿಂದ ಉತ್ತಮೋತ್ತಮವಾಗಿ ಮಾಡಲ್ಪಟ್ಟ ಕಲೆಗಳಲ್ಲಿ ಪ್ರಯುಕ್ತವಾದ [ವೃಷಣ್ವಂತಮ್] ವೇಗವಂತವಾದ [ರಥಮ್] ವಿಮಾನ ಮೊದಲಾದ ಯಾನ ಸಮೂಹಗಳನ್ನು [ಬಿಭ್ರತೀ] ಧಾರಣ ಮಾಡುತ್ತದೆಯೋ, [ಮಂದ್ರಾ] ಆನಂದವನ್ನು ಕೊಡುವ [ನಾಹುಷಾಷು] ಮನುಷ್ಯರಿಗೆ ಈ [ವಿಕ್ಷು] ಸಂತಾನಗಳ ನಿಮಿತ್ತ [ರಾಯೇ] ಧನದ ಪ್ರಾಪ್ತಿಗಾಗಿ ಇದೆ. ಅದನ್ನು ಯಾವನು [ಚಿಕೇತ] ಉತ್ತಮವಾಗಿ ತಿಳಿದವನೇ ಧನವಂತನಾಗುತ್ತಾನೆ.

ಭಾವಾರ್ಥ:- ಯಾವಾಗ ವಿಮಾನ ಮೊದಲಾದವುಗಳನ್ನು ಚಲಿಸುವಿಕೆ ಮೊದಲಾದ ಕಾರ್ಯಗಳಲ್ಲಿ ಉತ್ತಮವಾಗಿ ಯುಕ್ತಗೊಳಿಸಿದ ಅಗ್ನಿಯು ಉರಿಯುತ್ತದೋ, ಆಗ ಅದರ ಎರಡು ತರಹ ರೂಪವನ್ನು ನೋಡಲಾಗುತ್ತದೆ. ಒಂದು ಪ್ರಕಾಶರೂಪ, ಎರಡನೆಯದು ಕಪ್ಪು. ಇದರಿಂದ ಅಗ್ನಿಯು ಶ್ಯಾಮ ವರ್ಣವೆಂದು ಹೇಳಲ್ಪಡುತ್ತದೆ. ಹೇಗೆ ಕುದುರೆಯ ಶಿರದ ಮೇಲೆ ಕಿವಿಯು ಕಾಣಿಸುತ್ತದೋ, ಹಾಗೆಯೇ ಅಗ್ನಿಯ ಶಿರದ ಮೇಲೆ ಕಪ್ಪು ಕಾಡಿಗೆಯು ಜುಟ್ಟು ಆಗುವುದು. ಈ ಅಗ್ನಿಯ ಕೆಲಸಗಳಲ್ಲಿ ಉತ್ತಮವಾಗಿ ಜೋಡಿಸಿದಾಗ ಬಹಳ ಪ್ರಕಾರದ ಧನವು ಪ್ರಾಪ್ತವಾಗಿ ಪ್ರಜೆಗಳಿಗೆ ಆನಂದವನ್ನುಂಟುಮಾಡುವುದು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಏತತ್ ತ್ಯತ್ ತ ಇಂದ್ರ ವೃಷ್ಣ ಉಕ್ಥಂ ವಾರ್ಷಾಗಿರಾ ಅಭಿ ಗೃಣಂತಿ ರಾಧಃ ।
ಋಜ್ರಾಶ್ವಃ ಪ್ರಷ್ಟಿಭಿರಮ್ಬರೀಷಃ ಸಹದೇವೋ ಭಯಮಾನಃ ಸುರಾಧಾಃ ॥೧೭॥

ಪದಾರ್ಥ:- ಹೇ [ಇಂದ್ರ] ಪರಮವಿದ್ಯೆ ಐಶ್ವರ್ಯದಿಂದ ಕೂಡಿದ ಸಭಾಧ್ಯಕ್ಷನೇ! ಯಾವ [ವರ್ಷಾಗಿರಃ] ಉತ್ತಮ ಪ್ರಶಂಸೆಯುಳ್ಳ ವಿದ್ವಾಂಸನ ವಾಣಿಯಿಂದ ಪ್ರಶಂಸಿತನಾದ ಪುರುಷನು [ಏತತ್] ಈ [ತೇ] ನಿನ್ನ [ಉಕ್ಥಮ್] ಪ್ರಶಂಸೆ ಮಾಡುವ ಯೋಗ್ಯವಾಣಿ ಅಥವಾ ಕೆಲಸವನ್ನು ಎಲ್ಲರೂ [ಅಭಿಗೃಣಂತಿ] ನಿಮ್ಮ ಮುಖದ ಮೇಲೆ ಹೇಳುತ್ತಾರೆ. ಅದು ಮತ್ತು [ತ್ವತ್] ಎದುರಿಗೆ ಅಥವಾ ಊಹೆಯಿಂದ ನಿಮ್ಮ [ರಾಧಃ] ಧನವು [ವೃಷ್ಣೇ] ಶರೀರ ಮತ್ತು ಆತ್ಮದ ಪ್ರಸನ್ನತೆಗಾಗಿ ಆಗುತ್ತದೆ. ಹಾಗೂ ಯಾವ [ಅಂಬರೀಷಃ] ಶಬ್ದಶಾಸ್ತ್ರವನ್ನು ತಿಳಿದ [ಸಹದೇವಃ] ವಿದ್ವಾಂಸರೊಂದಿಗಿರುವ [ಭಯಮಾನಃ] ಅಧರ್ಮಾಚರಣೆಯಿಂದ ಹೆದರಿ ಅದಕ್ಕಿಂತ ಬೇರೆಯಾಗಿ ವರ್ತಿಸುವ ಮತ್ತು ದುಷ್ಟರನ್ನು ಭಯಪಡಿಸುವ [ಸುರಾಧಾಃ] ಉತ್ತಮೋತ್ತಮ ಧನದಿಂದ ಕೂಡಿದ [ಋಜ್ರಾಶ್ವಃ] (ಅಶ್ವ ಇತಿ ಮಹನ್ನಾಮ ನಿಘ. ೩.೩.) ಯಾವನ ಸರಳ ಉತ್ತಮೋತ್ತಮ ರಾಜನೀತಿಯಿದೆಯೋ ಮತ್ತು [ಪ್ರಷ್ಟಿಭಿಃ] ಪ್ರಶ್ನೆಗಳಿಗೆ ಸಮಾಧಾನಗಳನ್ನು ಹೇಳುತ್ತಾನೋ, ಅವರು ನಮ್ಮನ್ನು ಸೇವಿಸಲು ಏಕೆ ಯೋಗ್ಯರಲ್ಲ?

ಭಾವಾರ್ಥ:- ಯಾವಾಗ ವಿದ್ವಾಂಸರು ಉತ್ತಮ ಪ್ರೀತಿಯಿಂದ ಉಪದೇಶ ಮಾಡುವರೋ, ಆಗ ಅಜ್ಞಾನಿಗಳು ವಿಶ್ವಾಸದಿಂದ ಆತನ ಉಪದೇಶ ಕೇಳಿ ಉತ್ತಮ ವಿದ್ಯೆಗಳನ್ನು ಧಾರಣ ಮಾಡಿ ಧನಾಢ್ಯರಾಗಿ ಆನಂದಿತರಾಗುವರು.

ಮತ್ತೆ ಅವರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ದಸ್ಯೂಂಛಿಮ್ಯೂಂಶ್ಚ ಪುರುಹೂತ ಏವೈ-ರ್ಹತ್ವಾ ಪೃಥಿವ್ಯಾಂ ಶರ್ವಾ ನಿ ಬರ್ಹೀತ್ ।
ಸನತ್ ಕ್ಷೇತ್ರಂ ಸಖಿಭಿಃ ಶ್ವಿತ್ನ್ಯೇಭಿಃ ಸನತ್ ಸೂರ್ಯಂ ಸನದಪಃ ಸುವಜ್ರಃ ॥೧೮॥

ಪದಾರ್ಥ:- [ಸುವಜ್ರಃ] ಯಾವನ ಶ್ರೇಷ್ಠ ಅಸ್ತ್ರ ಮತ್ತು ಶಸ್ತ್ರಗಳ ಸಮೂಹ ಮತ್ತು [ಪುರುಹೂತಃ] ಬಹಳ ಜನರಿಂದ ಸತ್ಕರಿಸಲ್ಪಟ್ಟವನು [ಶರ್ವಾ] ಸಮಸ್ತ ದುಃಖಗಳ ವಿನಾಶ ಮಾಡುವವನು ಸಭೆ ಮೊದಲಾದವುಗಳ ಅಧ್ಯಕ್ಷನು [ಶ್ವಿತ್ನ್ಯೇಭಿಃ] ಶ್ವೇತ ಅಂದರೆ ಸ್ವಚ್ಛನೂ ತೇಜಸ್ವಿಯೂ [ಸಖಿಭಿಃ] ಮಿತ್ರರೊಡನೆ ಮತ್ತು [ಏವೈಃ]

ಪ್ರಶಂಸಿತ ಜ್ಞಾನ ಅಥವಾ ಕರ್ಮಗಳೊಡನೆ [ದಸ್ಯೂನ್] ದರೋಡೆಕಾರರನ್ನು [ಹತ್ವಾ] ಉತ್ತಮ ರೀತಿಯಲ್ಲಿ ಕೊಂದು [ಶಿಮ್ಯೂನ್] ಶಾಂತರೂ ಧಾರ್ಮಿಕರೂ ಆದ ಸಜ್ಜನರನ್ನು [ಚ] ಮತ್ತು ಸೇವಕರು ಮೊದಲಾದವರನ್ನು [ಸನತ್] ಪಾಲಿಸಲಿ; ದುಃಖಗಳನ್ನು [ನಿ ಬರ್ಹೀತ್] ದೂರ ಮಾಡಲಿ. ಯಾವ [ಪೃಥಿವ್ಯಾಮ್] ತನ್ನ ರಾಜ್ಯದಲ್ಲುಳ್ಳ ಭೂಮಿಯಲ್ಲಿ [ಕ್ಷೇತ್ರಮ್] ತನ್ನ ನಿವಾಸ ಸ್ಥಾನವು [ಸೂರ್ಯಮ್] ಸೂರ್ಯಲೋಕ, ಪ್ರಾಣ [ಅಪಃ] ಮತ್ತು ನೀರನ್ನು [ಸನತ್] ಸೇವಿಸಲಿ. ಅವನು ಎಲ್ಲರಿಗೂ [ಸನತ್] ಸದಾ ಸೇವಿಸಲು ಯೋಗ್ಯನಾಗಲಿ.

ಭಾವಾರ್ಥ:- ಯಾವನು ಸಜ್ಜನರಿಂದ ಕೂಡಿದ ಸಭಾಪತಿಯು ಅಧರ್ಮಯುಕ್ತ ವ್ಯವಹಾರಗಳಿಂದ ನಿವೃತ್ತನಾಗಿ ಮತ್ತು ಧರ್ಮವ್ಯವಹಾರಗಳ ಪ್ರಚಾರವನ್ನು ಮಾಡಿ ವಿದ್ಯೆಯ ಯುಕ್ತಿಯಿಂದ ಸಿದ್ಧವಾದ ವ್ಯವಹಾರಗಳನ್ನು ಮಾಡಿ ಪ್ರಜೆಗಳ ದುಃಖವನ್ನು ನಷ್ಟಗೊಳಿಸಲಿ. ಅವನು ಸಭೆ ಮುಂತಾದವುಗಳ ಅಧ್ಯಕ್ಷನು ಎಲ್ಲರೂ ಒಪ್ಪಲು ಯೋಗ್ಯನಾಗಲಿ, ಬೇರೆಯವನಲ್ಲ.

ಮತ್ತೆ ಅವನು ಹೇಗಿರುವನು ಮತ್ತು ಅವನ ಸಹಾಯದಿಂದ ನಾವು ಏನನ್ನು ಪಡೆಯಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ವಿಶ್ವಾಹೇಂದ್ರೋ ಅಧಿವಕ್ತಾ ನೋ ಅ-ಸ್ತ್ವಪರಿಹ್ವೃತಾಃ ಸನುಯಾಮ ವಾಜಮ್ । ತನ್ನೋ
ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೧೯॥

ಪದಾರ್ಥ:- ಯಾವ [ಇಂದ್ರಃ] ಪ್ರಶಂಸಿತವಾದ ವಿದ್ಯೆ ಮತ್ತು ಐಶ್ವರ್ಯಗಳಿಂದ ಕೂಡಿದ ವಿದ್ವಾಂಸನೇ! [ನಃ] ನಮಗೆ [ವಿಶ್ವಾಹಾ] ಎಲ್ಲ ದಿನಗಳಲ್ಲೂ [**ಅಧಿವಕ್ತಾ**] ಅಧಿಕಾಧಿಕವಾಗಿ ಉಪದೇಶ ಮಾಡುವವನು [**ಅಸ್ತು**] ಆಗಲಿ. ಅವನಿಂದ [**ಅಪರಿಹ್ವೃತಾಃ**] ಎಲ್ಲ ರೀತಿಯ ಕುಟಿಲತೆಗಳನ್ನು ಬಿಟ್ಟ ನಾವು ಯಾವ [**ವಾಜಮ್**] ವಿಶೇಷಜ್ಞಾನವನ್ನು [**ಸನುಯಾಮ**] ಇತರರಿಗೆ ಕೊಡುವಂತಾಗಲಿ ಮತ್ತು ತಾವು ಸೇವಿಸಿರಿ [ನಃ] ನಮ್ಮ [**ತತ್**] ಆ ವಿಜ್ಞಾನವನ್ನು [**ಮಿತ್ರಃ**] ಮಿತ್ರನು [**ವರುಣಃ**] ಶ್ರೇಷ್ಠ ಸಜ್ಜನರು [**ಅದಿತಿಃ**] ಅಂತರಿಕ್ಷವು [**ಸಿಂಧುಃ**] ಸಮುದ್ರ, ನದಿ [**ಪೃಥಿವೀ**] ಭೂಮಿ [**ಉತ**] ಮತ್ತು [**ದ್ಯೌಃ**] ಸೂರ್ಯ-ಮೊದಲಾದ ಪ್ರಕಾಶಯುಕ್ತ ಲೋಕಗಳ ಪ್ರಕಾಶವು [**ಮಾಮಹಸ್ತಮ್**] ಮಾನದಿಂದ ಹೆಚ್ಚಿಸಲಿ.

ಭಾವಾರ್ಥ:- ಮನುಷ್ಯರಿಗೆ ಉಚಿತವಾಗಿರುವುದೇನೆಂದರೆ, ಯಾವನು ನಿತ್ಯವೂ ವಿದ್ಯೆಯನ್ನು ಕೊಡುವವನಾಗಿರುವನೋ, ಅವನ ನೇರ ನಡೆಯಿಂದ ಸೇವೆ ಮಾಡಿ ವಿದ್ಯೆಯನ್ನು ಪಡೆದು ಮಿತ್ರ, ಶ್ರೇಷ್ಠನು, ಆಕಾಶ, ನದಿಗಳು, ಭೂಮಿ ಮತ್ತು ಸೂರ್ಯಾದಿ ಲೋಕಗಳಿಂದ ಉಪಕಾರಗಳನ್ನು ಪಡೆದು ಎಲ್ಲ ಮನುಷ್ಯರಲ್ಲಿ ಸತ್ಕಾರದೊಂದಿಗಿರಬೇಕು, ಎಂದಿಗೂ ವಿದ್ಯೆಯನ್ನು ಮುಚ್ಚಿಡಬಾರದು. ಆದರೆ ಎಲ್ಲರೂ ಇದನ್ನು ಪ್ರಕಟ ಮಾಡಬೇಕು.

ಈ ಸೂಕ್ತದಲ್ಲಿ ಸಭೆ ಮೊದಲಾದವುಗಳ ಅಧಿಪತಿ, ಈಶ್ವರ ಮತ್ತು ವಿದ್ಯೆಯನ್ನು ಬೋಧಿಸುವ ಗುರುಗಳ ವರ್ಣನೆಯಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆಯೆಂದು ತಿಳಿಯಬೇಕು.

ನೂರನೆಯ ಸೂಕ್ತ ಸಮಾಪ್ತ

ಸೂಕ್ತ ೧೦೧

ಮಂತ್ರಸಂಖ್ಯೆ ೧೧ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಇಂದ್ರಃ (೧ ಗರ್ಭಸ್ರಾವಿಣ್ಯುಪನಿಷತ್)

ಛಂದಃ - ಜಗತೀಃ, ೮-೧೧ ತ್ರಿಷ್ಟುಪ್ । ಸ್ವರಃ - ೧-೫, ೭ ನಿಷಾಧಃ, ಧೈವತಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಶಾಲೆಯ ಅಧಿಪತಿಯು ಹೇಗಿರಬೇಕು ಎನ್ನುವ ವಿಷಯವನ್ನು ತಿಳಿಸಿದೆ.

ಪ್ರ ಮಂದಿನೇ ಪಿತುಮದರ್ಚತಾ ವಚೋ ಯಃ ಕೃಷ್ಣಗರ್ಭಾ ನಿರಹನ್ನೃಜಿಶ್ವನಾ ।
ಅವಸ್ಯವೋ ವೃಷಣಂ ವಜ್ರದಕ್ಷಿಣಂ ಮರುತ್ವಂತಂ ಸಖ್ಯಾಯ ಹವಾಮಹೇ ॥೧॥

ಪದಾರ್ಥ:- ನೀವು [ಯಃ] ಯಾವ ಉಪದೇಶ ಮಾಡಲು ಮತ್ತು ಓದಿಸುವವರು [**ಋಜಿಶ್ವನಾ**] ಅಂತಹ ಪಾಠದಿಂದ ಯಾವನಲ್ಲಿ ಉತ್ತಮ ವಾಣಿಗಳ ಧಾರಣಶಕ್ತಿಯು ಅನೇಕ ರೀತಿಗಳಿಂದ ವೃದ್ಧಿಯಾಗಲಿ. ಅದರಿಂದ ಮೂರ್ಖತನವು [ನಿಃ ಅಹನ್] ನಿರಂತರ ನಾಶವಾಗಲಿ. ಆ [**ಮಂದಿನೇ**] ಆನಂದ ಪುರುಷ ಮತ್ತು ಆನಂದ ಕೊಡುವವನಿಗಾಗಿ [**ಪಿತೃಮತ್**] ಚೆನ್ನಾಗಿ ಮಾಡಲ್ಪಟ್ಟ ಅನ್ನ ಅಂದರೆ ಪೂರಿ, ಕಚೌರಿ, ಲಡ್ಡು, ಬಾಲೂ ಶಾಹೀ, ಜಿಲೇಬಿ ಮೊದಲಾದ ಒಳ್ಳೊಳ್ಳೆಯ ಪದಾರ್ಥಗಳ ಭೋಜನ ಮತ್ತು [**ವಚಃ**] ಪ್ರಿಯವಾದ ವಾಣಿಯನ್ನು [**ಪ್ರಾರ್ಚತ**] ಉತ್ತಮವಾಗಿ ನಿವೇದನ ಮಾಡಿ ಅವನ ಸತ್ಕಾರ ಮಾಡಿರಿ ಮತ್ತು [**ಅವಸ್ಯವಃ**] ತನಗೆ ರಕ್ಷಣೆ ಕೊಡುವ ಮೊದಲಾದ ವ್ಯವಹಾರಗಳನ್ನು ಇಚ್ಛಿಸುತ್ತಾ [**ಕೃಷ್ಣಗರ್ಭಾಃ**] ಯಾವ ರೇಖಾಗಣಿತ ಮೊದಲಾದ ವಿದ್ಯೆಗಳ ಮರ್ಮವನ್ನು ಪ್ರಕಾಶಿಸಿದರೋ ಅವರು ನಮಗೆ [**ಸಖ್ಯಾಯ**] ಮಿತ್ರನ ಕೆಲಸ ಅಥವಾ ಮಿತ್ರತೆಗಾಗಿ [**ವೃಷಣಮ್**] ವಿದ್ಯೆಯ ವೃದ್ಧಿ ಮಾಡುವವರು [**ವಜ್ರದಕ್ಷಿಣಮ್**] ಯಾವುದರಿಂದ ಅವಿದ್ಯೆಯ ನಾಶ ಮಾಡುವ ವಿದ್ಯೆ ಮೊದಲಾದ ಧನವನ್ನು ಕೊಡುವ ದಕ್ಷಿಣೆಯು ಸಿಗಲಿ. [**ಮರುತ್ವಂತಮ್**] ಯಾರ ಸಮೀಪದಲ್ಲಿ ಪ್ರಶಂಸಿತವಾದ ವಿದ್ಯೆಯುಳ್ಳ ಋತ್ವಿಜನು ಅಂದರೆ ತಾವು ಯಜ್ಞ ಮಾಡಿರಿ, ಇತರೆಯವರಿಂದ ಮಾಡಿಸಿರಿ. ಹಾಗೆ ಓದಿಸುವವನು ಆಗಲಿ. ಆ ಅಧ್ಯಾಪಕನು ಅಂದರೆ ಉತ್ತಮವಾಗಿ ಓದಿಸುವವನನ್ನು [**ಹವಾಮಹೇ**] ಸ್ವೀಕರಿಸುತ್ತೇವೆ. ಅವನನ್ನು ನೀವೂ ಕೂಡ ಉತ್ತಮವಾಗಿ ಸತ್ಕಾರದೊಂದಿಗೆ ಸ್ವೀಕರಿಸಿರಿ.

ಭಾವಾರ್ಥ:- ಮನುಷ್ಯನು ಯಾವನಿಂದ ವಿದ್ಯೆಯನ್ನು ಪಡೆಯಬೇಕೋ, ಅವನ ಸತ್ಕಾರವನ್ನು ಮನ, ವಚನ, ಕಾಯಗಳಿಂದ ಮತ್ತು ಧನದಿಂದ ಯಾವಾಗಲೂ ಮಾಡಬೇಕು. ಮತ್ತು ಓದಿಸುವವರು ಯಾವನು ಓದಲು ಯೋಗ್ಯನೋ, ಅವನನ್ನು ಉತ್ತಮ ಯತ್ನದಿಂದ ಉತ್ತಮೋತ್ತಮ ಶಿಕ್ಷಣವನ್ನು ಕೊಟ್ಟು ವಿದ್ವಾಂಸನನ್ನಾಗಿ ಮಾಡಬೇಕು. ಮತ್ತು ಪ್ರತಿದಿನವೂ ಎಲ್ಲ ಶ್ರೇಷ್ಠರೊಂದಿಗೆ ಮಿತ್ರಭಾವವನ್ನಿಟ್ಟು ಉತ್ತಮೋತ್ತಮ ಕಾರ್ಯಗಳಲ್ಲಿ ಚಿತ್ತವೃತ್ತಿಯ ಸ್ಥಿರತೆಯನ್ನು ಇಟ್ಟುಕೊಳ್ಳಬೇಕು.

ಈಗ ಸಭೆ ಮತ್ತು ಸೇನೆಯ ಅಧ್ಯಕ್ಷನು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಯೋ ವ್ಯಂಸಂ ಜಾಹೃಷಾಣೇನ ಮನ್ಯುನಾ ಯಃ ಶಂಬರಂ ಯೋ ಅಹನ್ ಪಿಪ್ರುಮವ್ರತಮ್ ।
ಇಂದ್ರೋ ಯಃ ಶುಷ್ಣಮಶುಷಂ ನ್ಯಾವೃಣಙ್ ಮರುತ್ವಂತಂ ಸಖ್ಯಾಯ ಹವಾಮಹೇ ॥೨॥

ಪದಾರ್ಥ:- [ಯಃ] ಯಾವ ಸಭೆ ಸೇನೆ ಮೊದಲಾದವುಗಳ ಅಧಿಪತಿಯು [ಇಂದ್ರಃ] ಸಮಸ್ತ ಐಶ್ವರ್ಯವನ್ನು ಕೊಡುವವನು [ಜಾಹೃಷಾಣೇನ] ಸಜ್ಜನರಿಗೆ ಸಂತೋಷಕೊಡುವವನು, [ಮನ್ಯುನಾ] ತನ್ನ ಕ್ರೋಧದಿಂದ ದುಷ್ಟರು

ಮತ್ತು ಶತ್ರುಗಳನ್ನು [ವ್ಯಂಸಂ ನಿ ಅಹನ್] ಹೇಗೆ ಹೊಡೆಯಬೇಕೆಂದರೆ, ಅವರ ಭುಜಗಳು ಬೇರೆಯಾಗಬೇಕು ಅಥವಾ [ಯಃ] ಶೂರತ್ವ ಮೊದಲಾದ ಗುಣಗಳಿಂದ ಕೂಡಿದ ವೀರರು [ಶಂಬರಮ್] ಅಧರ್ಮದೊಡನೆ ಸಂಬಂಧವಿಡುವವನನ್ನು ಅತಿಯಾಗಿ ದಂಡಿಸಬೇಕು ಅಥವಾ [ಯಃ] ಯಾವ ಧರ್ಮಾತ್ಮರಾದ ಸಜ್ಜನರು [ಪಿಪ್ರುಮ್] ಅಧರ್ಮಿಯು ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳುವನೋ, ಅವನಿಗೆ ನಿರಂತರವೂ ಹೊಡೆಯಬೇಕು ಮತ್ತು [ಯಃ] ಯಾವ ಅತಿಬಲಾಢ್ಯನು [ಅವ್ರತಮ್] ಯಾವನಿಗೆ ಯಾವುದೇ ನಿಯಮವಿಲ್ಲವೋ ಅಂದರೆ ಬ್ರಹ್ಮಚರ್ಯೆ, ಸತ್ಯಪಾಲನೆ ಮೊದಲಾದ ವ್ರತಗಳನ್ನು ಪಾಲಿಸುವುದಿಲ್ಲವೋ, ಅವನನ್ನು [ಅವೃಣಕ್] ತನ್ನಿಂದ ಬೇರೆ ಮಾಡಿ, ಆ [ಶುಷ್ಣಮ್] ಬಲವಂತನು [ಅಶುಷಮ್] ಶೋಕರಹಿತನು, ಹರ್ಷಯುಕ್ತನು [ಮರುತ್ವಂತಮ್] ಒಳ್ಳೆಯ ಪ್ರಶಂಸಿತನಾಗಿ ಓದುವವರನ್ನು ಇಟ್ಟುಕೊಳ್ಳುವ ಸಕಲೈಶ್ವರ್ಯಯುಕ್ತ ಸಭಾಪತಿಗೆ [ಸಖ್ಯಾಯ] ಮಿತ್ರರ ಕೆಲಸ ಅಥವಾ ಮಿತ್ರತೆಗೆ ನಾವು [ಹವಾಮಹೇ] ಸ್ವೀಕರಿಸುತ್ತೇವೆ.

ಭಾವಾರ್ಥ:- ಮನುಷ್ಯರು ಯಾವ ಪ್ರಜ್ವಲಿಸುತ್ತಿರುವ ಕ್ರೋಧದಿಂದ ದುಷ್ಟರನ್ನು ಕೊಂದು ವಿದ್ಯೆಯ ಉನ್ನತಿಗಾಗಿ ಬ್ರಹ್ಮಚರ್ಯೆ ಮೊದಲಾದ ನಿಯಮಗಳನ್ನು ಪ್ರಚಾರ ಮಾಡುವುದು ಮತ್ತು ಮೂರ್ಖತ್ವ ಮತ್ತು ಅಸತ್ಯದ ಕಲಿಸುವಿಕೆಗಳನ್ನು ತಡೆದು ಎಲ್ಲರ ಸುಖಕ್ಕಾಗಿ ನಿರಂತರವೂ ಉತ್ತಮ ಯತ್ನ ಮಾಡಬೇಕು. ಅವನೇ ಮಿತ್ರನಾಗಲು ಯೋಗ್ಯನು.

ಈಗ ಈಶ್ವರ ಮತ್ತು ಸಭಾಧ್ಯಕ್ಷರು ಎಂತೆಂತಹ ಗುಣವುಳ್ಳವರು ಆಗುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಯಸ್ಯ ದ್ಯಾವಾಪೃಥಿವೀ ಪೌಂಸ್ಯಂ ಮಹದ್ ಯಸ್ಯ ವ್ರತೇ ವರುಣೋ ಯಸ್ಯ ಸೂರ್ಯಃ ।
ಯಸ್ಯೇಂದ್ರಸ್ಯ ಸಿಂಧವಃ ಸಶ್ಚತಿ ವ್ರತಂ ಮರುತ್ವಂತಂ ಸಖ್ಯಾಯ ಹವಾಮಹೇ ॥೩॥

ಪದಾರ್ಥ:- ನಾವು [ಯಸ್ಯ] ಯಾವ [ಇಂದ್ರಸ್ಯ] ಪರಮೈಶ್ವರ್ಯವಂತನಾದ ಜಗದೀಶ್ವರನು ಅಥವಾ ಸಭಾಧ್ಯಕ್ಷನಾದ ರಾಜನ [ವ್ರತೇ] ಸಾಮರ್ಥ್ಯ ಅಥವಾ ಶೀಲದಲ್ಲಿ [ಮಹತ್] ಅತ್ಯಂತ ಉತ್ತಮ ಗುಣ ಮತ್ತು [ಪೌಂಸ್ಯಮ್] ಪುರುಷಾರ್ಥದಿಂದ ಕೂಡಿದ ಬಲವಿದೆಯೋ, [ಯಸ್ಯ] ಯಾವನ [ದ್ಯಾವಾಪೃಥಿವೀ] ಸೂರ್ಯ ಮತ್ತು ಭೂಮಿಗೆ ಸದೃಶವಾದ ಸಹನೆ ಮತ್ತು ನೀತಿಯ ಪ್ರಕಾಶವಿದೆಯೋ, [ಯಸ್ಯ] ಯಾವನ [ವ್ರತಮ್] ಸಾಮರ್ಥ್ಯ ಮತ್ತು ಶೀಲಕ್ಕೆ [ಸೂರ್ಯಃ] ಸೂರ್ಯಮಂಡಲ ಅಥವಾ ಅದರ ಗುಣವು [ಸಶ್ಚತಿ] ಪ್ರಾಪ್ತವಾಗುವುದೋ ಮತ್ತು [ಸಿಂಧವಃ] ಸಮುದ್ರವು ಪ್ರಾಪ್ತವಾಗುವುದೋ ಆ [ಮರುತ್ವಂತಮ್] ಸಮಸ್ತ ಪ್ರಾಣಿಗಳಿಂದ ಮತ್ತು ಕಾಲ ಕಾಲಕ್ಕೆ ಯಜ್ಞಾದಿಗಳನ್ನು ಮಾಡುವವರಿಂದ ಕೂಡಿದ ಸಭಾಧ್ಯಕ್ಷನಿಗೆ [ಸದ್ಯಾಯ] ಮಿತ್ರನ ಕೆಲಸ ಅಥವಾ ಮಿತ್ರತ್ವಕ್ಕಾಗಿ [ಹವಾಮಹೇ] ಸ್ವೀಕರಿಸುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಮನುಷ್ಯರು, ಪರಮೇಶ್ವರನ ಸಾಮರ್ಥ್ಯದ ಹೊರತು ಪೃಥಿವೀ ಮೊದಲಾದ ಲೋಕಗಳ ಸ್ಥಿತಿಯು ಉತ್ತಮ ಪ್ರಕಾಶವಾಗಿರುವುದಿಲ್ಲ ಹಾಗೂ ಯಾವ ಸಭಾಧ್ಯಕ್ಷನ ಸ್ವಭಾವವು ಮತ್ತು ನಡತೆಯ ಪ್ರಕಾಶಕ್ಕೆ ಸಮಾನವಾಗಿ ವಿದ್ಯೆ, ಪೃಥಿವಿಗೆ ಸಮಾನವಾದ ಸಹನ ಶೀಲತೆ, ಚಂದ್ರನಂತೆ ಶಾಂತಿ, ಸೂರ್ಯನಂತೆ ನೀತಿಯ ಪ್ರಕಾಶ ಮತ್ತು ಸಮುದ್ರದಂತೆ ಗಾಂಭೀರ್ಯವಿದೆಯೋ, ಅವನನ್ನು ಬಿಟ್ಟು, ಇತರರರನ್ನು ತನ್ನ ಮಿತ್ರರನ್ನಾಗಿ ಸ್ವೀಕರಿಸಬಾರದು.

ಈಗ ಸಭಾಪತಿಯು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಯೋ ಅಶ್ವಾನಾಂ ಯೋ ಗವಾಂ ಗೋಪತಿರ್ವಶೀ ಯ ಆರಿತಃ ಕರ್ಮಣಿಕರ್ಮಣಿ ಸ್ಥಿರಃ ।
ವೀಳೋಶ್ಚಿದಿಂದ್ರೋ ಯೋ ಅಸುನ್ವತೋ ವಧೋ ಮರುತ್ವಂತಂ ಸಖ್ಯಾಯ ಹವಾಮಹೇ ॥೪॥

ಪದಾರ್ಥ:- [ಯಃ] ಯಾವ [ಇಂದ್ರಃ] ದುಷ್ಟರನ್ನು ನಾಶ ಮಾಡುವ ಸಭೆ ಮೊದಲಾದವುಗಳ ಅಧಿಪತಿಯು [ಅಶ್ವಾನಾಮ್] ಕುದುರೆಗಳ ಅಧ್ಯಕ್ಷರು [ಯಃ] ಯಾವ [ಗವಾಮ್] ಹಸು ಮೊದಲಾದ ಪಶುಗಳು ಅಥವಾ ಪೃಥಿವೀ ಮೊದಲಾದವುಗಳ ರಕ್ಷಣೆ ಮಾಡುವವನು [ಯಃ] ಯಾವ [ಗೋಪತಿಃ] ತನ್ನ ಇಂದ್ರಿಯಗಳಿಗೆ ಸ್ವಾಮಿ ಅಂದರೆ ಜಿತೇಂದ್ರಿಯನಾಗಿ ತನ್ನ ಇಚ್ಛೆಗನುಸಾರವಾಗಿ ಇಂದ್ರಿಯಗಳನ್ನು ನಡೆಸುವ [ವಶೀ] ಮತ್ತು ಮನಸ್ಸು, ಬುದ್ಧಿ, ಚಿತ್ತ, ಅಹಂಕಾರಗಳನ್ನು ಯಥಾಯೋಗ್ಯವಾಗಿ ವಶದಲ್ಲಿಟ್ಟುಕೊಳ್ಳುವವನು [ಅರಿತಃ] ಸಭೆಯಿಂದ ಅಜ್ಞೆ ಪಡೆದು [ಕರ್ಮಣಿ ಕರ್ಮಣಿ] ಕರ್ಮ-ಕರ್ಮಗಳಲ್ಲಿ [ಸ್ಥಿರಃ] ನಿಶ್ಚಿತವಾದ [ಯಃ] ಯಾವ [ಅಸುನ್ವತಃ] ಯಜ್ಞಕರ್ತರೊಂದಿಗೆ ವಿರೋಧ ಮಾಡುವ [ವೀಳೋಃ] ಬಲಾಢ್ಯನೋ [ವಧಃ ಚಿತ್] ವಜ್ರದಂತೆ ಕತ್ತರಿಸುವವನಾಗಲೀ ಅವನು [ಮರುತ್ವಂತಮ್] ಉತ್ತಮವಾಗಿ ಪ್ರಶಂಸಾಪೂರ್ವಕವಾಗಿ ಓದಿಸುವವರನ್ನು ಇಟ್ಟುಕೊಳ್ಳುವ ಸಭಾಪತಿಗೆ [ಸಖ್ಯಾಯ] ಮಿತ್ರತೆ ಅಥವಾ ಮಿತ್ರತ್ವ ಕೆಲಸಗಳಿಗಾಗಿ [ಹವಾಮಹೇ] ನಾವು ಸ್ವೀಕರಿಸುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವನು ಎಲ್ಲರ ಪಾಲನೆ ಮಾಡುವ ಜಿತೇಂದ್ರಿಯನೂ, ಶಾಂತನೂ ಮತ್ತು ಯಾವ ಯಾವ ಕರ್ಮಗಳಲ್ಲಿ ಸಭೆಯ ಆಜ್ಞೆಯನ್ನು ಪಡೆದು ಆಯಾಯ ಕರ್ಮಗಳಲ್ಲಿ ಸ್ಥಿರಬುದ್ಧಿಯಿಂದ ಪ್ರವರ್ತನಾಗಿ ಬಲಾಢ್ಯರಾದ ದುಷ್ಟ ಶತ್ರುಗಳನ್ನು ಗೆಲ್ಲುವವನಾಗುನೋ, ಅವನೊಂದಿಗೆ ನಿರಂತರವೂ ಮಿತ್ರತೆಯೊಂದಿಗೆ ಸುಖಗಳನ್ನು ಮನುಷ್ಯರು ಸದಾ ಪಡೆಯಬೇಕು.

ಈಗ ಸೇನಾಧ್ಯಕ್ಷನು ಹೇಗಿರುತ್ತಾನೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಯೋ ವಿಶ್ವಸ್ಯ ಜಗತಃ ಪ್ರಾಣತಸ್ಪತಿ-ರ್ಯೋ ಬ್ರಹ್ಮಣೇ ಪ್ರಥಮೋ ಗಾ ಅವಿಂದತ್ ।
ಇಂದ್ರೋ ಯೋ ದಸ್ಯೂರಧರಾ ಅವಾತಿರ-ನ್ಮರುತ್ವಂತಂ ಸಖ್ಯಾಯ ಹವಾಮಹೇ ॥೫॥

ಪದಾರ್ಥ:- [ಯಃ] ಯಾವ ಉತ್ತಮದಾನಶೀಲನು [ಪ್ರಥಮಃ] ಎಲ್ಲರನ್ನೂ ವಿಖ್ಯಾತಿಗೊಳಿಸುವ [ಇಂದ್ರಃ] ಇಂದ್ರಿಯಗಳಿಂದ ಕೂಡಿದ ಜೀವಾತ್ಮನು [ಬ್ರಹ್ಮಣೇ] ನಾಲ್ಕೂ ವೇದಗಳನ್ನು ತಿಳಿಯುವುದಕ್ಕಾಗಿ [ಗಾಃ] ಪೃಥಿವೀ, ಇಂದ್ರಿಯ ಮತ್ತು ಪ್ರಕಾಶಯುಕ್ತ ಲೋಕಗಳನ್ನು [ಅವಿಂದತ] ಪಡೆಯುವವನು ಅಥವಾ [ಯಃ] ಯಾವ ಶೂರತ್ವ ಮೊದಲಾದ ಗುಣಗಳುಳ್ಳ ವೀರನು [ದಸ್ಯೂನ್] ಹಠದಿಂದ ಇತರರ ಹಣ ದೋಚುವವನನ್ನು [ಅಧರಾನ್] ನೀಚತೆಯನ್ನು ಪಡೆಯುತ್ತಿರುವವನು [ಅವಾತಿರತ್] ಅಧೋಗತಿಗೆ ಕಳುಹಿಸುತ್ತಾ ಅಥವಾ [ಯಃ] ಯಾವ ಸೇನಾಧಿಪತಿಯು [ವಿಶ್ವಸ್ಯ] ಸಮಗ್ರ [ಜಗತಃ] ಜಂಗಮರೂಪದಲ್ಲಿ [ಪ್ರಾಣತಃ] ಜೀವಿಸುತ್ತಿರುವ ಜೀವಿಗಳಿಗೆ [ಪತಿಃ] ಅಧಿಪತಿ ಅಂದರೆ ಸ್ವಾಮಿಯೋ ಅವನು [ಮರುತ್ವಂತಂ] ತನ್ನ ಸಮೀಪದಲ್ಲಿ ಓದುತ್ತಿರುವವರನ್ನು ಇಟ್ಟುಕೊಳ್ಳುವ ಸಭಾಧ್ಯಕ್ಷನಿಗೆ ನಾವು [ಸಖ್ಯಾಯ] ಮಿತ್ರತೆಗಾಗಿ [ಹವಾಮಹೇ] ಸ್ವೀಕರಿಸುತ್ತೇವೆ.

ಭಾವಾರ್ಥ:- ಪುರುಷಾರ್ಥದ ಹೊರತು ವಿದ್ಯೆ, ಅನ್ನ ಮತ್ತು ಧನದ ಪ್ರಾಪ್ತಿಯಾಗುವುದಿಲ್ಲ ಹಾಗೂ ಶತ್ರುಗಳಿಗೆ ಪರಾಜಯವಾಗುವುದಿಲ್ಲ. ಯಾವ ಧಾರ್ಮಿಕ ಸೇನಾಧ್ಯಕ್ಷನ ಸುಹೃದ್ಭಾವದಿಂದ ತನ್ನ ಪ್ರಾಣಕ್ಕೆ ಸಮಾನವಾಗಿ

ಎಲ್ಲರನ್ನೂ ಪ್ರಸನ್ನಗೊಳಿಸುವನೋ, ಆ ಪುರುಷನಿಗೆ ನಿಶ್ಚಯವಾಗಿ ಎಂದಿಗೂ ದುಃಖವುಂಟಾಗುವುದಿಲ್ಲ. ಆದುದರಿಂದ ಉಕ್ತ ಆಚರಣೆಯನ್ನು ಸದಾ ಮಾಡಬೇಕು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಯಃ ಶೂರೇಭಿರ್ಹವ್ಯೋ ಯಶ್ಚ ಭೀರುಭಿ-ರ್ಯೋ ಧಾವದ್ಭಿರ್ಹೂಯತೇ ಯಶ್ಚ ಜಿಗ್ಯುಭಿಃ ।

ಇಂದ್ರಂ ಯಂ ವಿಶ್ವಾ ಭುವನಾಭಿ ಸಂದಧು-ರ್ಮರುತ್ವಂತಂ ಸಖ್ಯಾಯ ಹವಾಮಹೇ ॥೬॥

ಪದಾರ್ಥ:- [ಯಃ] ಯಾವ ಪರಮೈಶ್ವರ್ಯವಂತನು, ಸೇನೆ ಮೊದಲಾದವುಗಳ ಅಧಿಪತಿಯು [ಶೂರೇಭಿಃ] ಶೂರ ವೀರರಿಂದ [ಹವ್ಯಃ] ಆಹ್ವಾನಿಸಲು ಅಂದರೆ ಇಚ್ಛಿಸಲು ಯೋಗ್ಯರು [ಯಃ] ಯಾವ [ಭೀರುಭಿಃ] ಹೆದರುವವರು [ಚ] ಮತ್ತು ನಿರ್ಭಯದಿಂದ ಹಾಗೂ [ಯಃ] ಯಾವ [ಧಾವದ್ಭಿಃ] ಓಡುತ್ತಿರುವವರಿಂದ ಅಥವಾ [ಯಃ] ಯಾವ [ಚ] ಕುಳಿತಿರುವವರು ಮತ್ತು ನಡೆಯುತ್ತಿರುವವರು, ಅವರಿಂದ [ಜಿಗ್ಯುಭಿಃ] ಅಥವಾ ಗೆಲ್ಲುವವರಿಂದ [ಹೂಯತೇ] ಕರೆಯಲ್ಪಡುತ್ತದೋ, ಅಥವಾ [ಯಮ್] ಯಾವ [ಇಂದ್ರಮ್] ಉಕ್ತ ಸೇನಾಧ್ಯಕ್ಷನಿಗೆ [ವಿಶ್ವಾ] ಸಮಸ್ತ [ಭುವನಾ] ಲೋಕದಲ್ಲಿರುವ ಪ್ರಾಣಿಗಳ [ಅಭಿ] ಸಮ್ಮುಖದಿಂದ [ಸಂದಧುಃ] ಉತ್ತಮವಾಗಿ ಧಾರಣ ಮಾಡುತ್ತಾನೆ. ಆ [ಮರುತ್ವಂತಮ್] ಉತ್ತಮವಾಗಿ ಓದಿಸುವವರನ್ನು ಪಡೆದಿರುವ ಸೇನಾಧೀಶನಿಗೆ [ಸಖ್ಯಾಯ] ಮಿತ್ರತ್ವಕ್ಕಾಗಿ ನಾವು [ಹವಾಮಹೇ] ಸ್ವೀಕರಿಸುತ್ತೇವೆ. ಅವನನ್ನು ನೀವು ಕೂಡ ಸ್ವೀಕರಿಸಿರಿ.

ಭಾವಾರ್ಥ:- ಯಾವ ಪರಮಾತ್ಮ ಮತ್ತು ಸೇನಾಧೀಶನು ಎಲ್ಲ ಲೋಕಗಳ ಎಲ್ಲ ರೀತಿಗಳಿಂದ ಸಂಬಂಧ ಪಡಿಸುವನೋ ಅವನೇ ಎಲ್ಲರಿಗೂ ಸೇವಿಸಲು ಮತ್ತು ಮಿತ್ರತೆಯಿಂದಿರಲು ಯೋಗ್ಯನು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ರುದ್ರಾಣಾಮೇತಿ ಪ್ರದಿಶಾ ವಿಚಕ್ಷಣೋ ರುದ್ರೇಭಿರ್ಯೋಷಾ ತನುತೇ ಪೃಥು ಜ್ರಯಃ ।

ಇಂದ್ರಂ ಮನೀಷಾ ಅಭ್ಯರ್ಚತಿ ಶ್ರುತಂ ಮರುತ್ವಂತಂ ಸಖ್ಯಾಯ ಹವಾಮಹೇ ॥೭॥

ಪದಾರ್ಥ:- [ವಿಚಕ್ಷಣಃ] ಪ್ರಶಂಸೆ, ಚತುರತೆ ಮೊದಲಾದ ಗುಣಗಳಿಂದ ಕೂಡಿರುವ ವಿದ್ವಾಂಸನು [ರುದ್ರಾಣಾಮ್] ಪ್ರಾಣಗಳಂತೆ ಒಳ್ಳೆಯವರನ್ನೂ, ಕೆಟ್ಟವರನ್ನೂ ಅಳುವಂತೆ ಮಾಡುತ್ತಾ ವಿದ್ವಾಂಸರ [ಪ್ರದಿಶಾ] ಜ್ಞಾನಮಾರ್ಗದಲ್ಲಿ [ಪೃಥು] ವಿಸ್ತೃತ [ಜ್ರಯಃ] ·ಪ್ರತಾಪವನ್ನು [ಏತಿ] ಪಡೆಯುವವನೇ ಮತ್ತು [ರುದ್ರೇಭಿಃ] ಪ್ರಾಣಗಳು ಅಥವಾ ಸಣ್ಣ-ಸಣ್ಣ ವಿದ್ಯಾರ್ಥಿಗಳೊಡನೆ [ಯೋಷಾ] ವಿದ್ಯೆಯಿಂದ ಕೂಡಿದ ಮತ್ತು ಮೂರ್ಖತನದಿಂದ ಬೇರೆಯಾದ ಸ್ತ್ರೀಯು ಅದನ್ನು [ತನುತೇ] ವಿಸ್ತರಿಸುತ್ತಾಳೆ. ಅದರಿಂದ ಯಾವ ವಿಚಕ್ಷಣ ವಿದ್ವಾಂಸನು [ಮನೀಷಾ] ಪ್ರಶಂಸಿತ ಬುದ್ಧಿಯಿಂದ [ಶ್ರುತಮ್] ಪ್ರಖ್ಯಾತ [ಇಂದ್ರಮ್] ಶಾಲೆ ಮೊದಲಾದವುಗಳ ಅಧ್ಯಕ್ಷನನ್ನು [ಅಭ್ಯರ್ಚತಿ] ಎಲ್ಲ ಕಡೆಗಳಿಂದ ಸತ್ಕರಿಸುತ್ತಾ ಆ [ಮರುತ್ವಂತಮ್] ತನ್ನ ಸಮೀಪದಲ್ಲಿ ಓದಿಸುವವರನ್ನು ಪಡೆದಿರುವವನ [ಸಖ್ಯಾಯ] ಮಿತ್ರತೆಗಾಗಿ ನಾವು [ಹವಾಮಹೇ] ಸ್ವೀಕಾರಮಾಡುತ್ತೇವೆ.

ಭಾವಾರ್ಥ:- ಯಾವ ಮನುಷ್ಯರಿಂದ ಪ್ರಾಣಾಯಾಮಗಳಿಂದ ಪ್ರಾಣವನ್ನು, ಸತ್ಕಾರಗಳಿಂದ ಶ್ರೇಷ್ಠರನ್ನು ಮತ್ತು ತಿರಸ್ಕಾರದಿಂದ ದುಷ್ಟರನ್ನು ವಶದಲ್ಲಿಟ್ಟುಕೊಂಡು ಸಮಸ್ತ ವಿದ್ಯೆಗಳನ್ನು ಹರಡಿ ಪರಮೇಶ್ವರ ಅಥವಾ

ಅಧ್ಯಾಪಕನನ್ನು ಉತ್ತಮವಾಗಿ ಸತ್ಕರಿಸಿ ಉಪಕಾರದ ಜೊತೆಗೆ ಎಲ್ಲ ಪ್ರಾಣಿಗಳಿಗೂ ಸತ್ಕಾರಯುಕ್ತರನ್ನಾಗಿ ಮಾಡುತ್ತಾನೋ ಅವನೇ ಸುಖಿಯಾಗುವನು.

ಈಗ ಎಲ್ಲಾ ಶಾಲಾ ಮೊದಲಾದವುಗಳ ಅಧಿಪತಿಯು ಹೇಗಿರುತ್ತಾನೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಯದ್ ವಾ ಮರುತ್ವಃ ಪರಮೇ ಸಧಸ್ಥೇ ಯದ್ ವಾವಮೇ ವೃಜನೇ ಮಾದಯಾಸೇ ।

ಅತ ಆ ಯಾಹ್ಯಧ್ವರಂ ನೋ ಅಚ್ಛಾ ತ್ವಾಯಾ ಹವಿಶ್ಚಕೃಮಾ ಸತ್ಯರಾಧಃ ॥೮॥

ಪದಾರ್ಥ:- ಹೇ [ಮರುತಃ] ಪ್ರಶಂಸಿತ ವಿದ್ಯಾಯುಕ್ತನೂ [ಸತ್ಯರಾಧಃ] ವಿದ್ಯೆ ಮೊದಲಾದ ಸತ್ಯ ಧನವುಳ್ಳ ವಿದ್ವಾಂಸನೇ! [ಯತ್] ಯಾವ ಕಾರಣದಿಂದ ನೀನು [ಪರಮೇ] ಅತ್ಯಂತ ಉತ್ಕೃಷ್ಟ [ಸಧಸ್ಥೇ] ಸ್ಥಾನದಲ್ಲಿ ಮತ್ತು [ಯತ್] ಯಾವ ಕಾರಣವು [ವಾ] ಉತ್ತಮ [ಅವಮೇ] ಅಧಮ [ವಾ] ಅಥವಾ ಮಧ್ಯಮ ವ್ಯವಹಾರಗಳಲ್ಲಿ [ವೃಜನೇ] ಅಂದರೆ ಯಾವುದರಲ್ಲಿ ಮನುಷ್ಯನು ದುಃಖಗಳನ್ನು ಬಿಡುವನೋ [ಮಾದಯಾಸೇ] ಆನಂದವನ್ನು ಕೊಡುತ್ತಾನೋ [ಅತಃ] ಈ ಕಾರಣ [ನಃ] ನಮ್ಮ [ಅಧ್ವರಮ್] ಓದಲು ಮತ್ತು ಓದಿಸಲು ಅಹಿಂಸನೀಯವಾದ ಅಂದರೆ ಬಿಡಲು ಯೋಗ್ಯವಲ್ಲದ ಯಜ್ಞವನ್ನು [ಅಚ್ಛ] ಉತ್ತಮವಾಗಿ [ಆ ಯಾಹಿ] ಬನ್ನಿರಿ, ಬಂದು ಪ್ರಾಪ್ತವಾಗಿರಿ. [ತ್ವಾಯ] ನಿಮ್ಮೊಡನೆ ನಾವು [ಹವಿಃ] ಗ್ರಹಿಸಲು ಯೋಗ್ಯವಾದ ವಿಶೇಷ ಜ್ಞಾನವನ್ನು [ಚಕೃಮ] ಪಡೆಯೋಣ ಅಂದರೆ ಆ ವಿದ್ಯೆಯನ್ನು ಪಡೆಯುವಂತಾಗಲಿ.

ಭಾವಾರ್ಥ:- ವಿದ್ವಾಂಸನು ಸರ್ವತ್ರ ಆನಂದವನ್ನುಂಟುಮಾಡಲು ಮತ್ತು ವಿದ್ಯೆಯನ್ನು ಕೊಡುವಂತಹ ಸತ್ಯಗುಣ ಮತ್ತು ಸ್ವಭಾವಯುಕ್ತನಾಗಿರುತ್ತಾನೋ ಅವನ ಸಂಗದಿಂದ ನಿರಂತರವೂ ಸಮಸ್ತ ವಿದ್ಯೆ ಮತ್ತು ಉತ್ತಮ ಶಿಕ್ಷಣವನ್ನು ಪಡೆದು ಮನುಷ್ಯರು ಯಾವಾಗಲೂ ಆನಂದಿತರಾಗಬೇಕು.

ಮತ್ತೆ ಅವರ ಸಂಗದಿಂದ ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ತ್ವಾಯೇಂದ್ರ ಸೋಮಂ ಸುಷುಮಾ ಸುದಕ್ಷ ತ್ವಾಯಾ ಹವಿಶ್ಚಕೃಮಾ ಬ್ರಹ್ಮವಾಹಃ ।

ಅಧಾ ನಿಯುತ್ವಃ ಸಗಣೋ ಮರುದ್ಭಿ-ರಸ್ಮಿನ್ ಯಜ್ಞೇ ಬರ್ಹಿಷಿ ಮಾದಯಸ್ವ ॥೯॥

ಪದಾರ್ಥ:- ಹೇ [ಇಂದ್ರ] ಪರಮವಿದ್ಯಾರೂಪೀ ಐಶ್ವರ್ಯದಿಂದ ಕೂಡಿದ ವಿದ್ವಾಂಸನೇ! [ತ್ವಾಯಾ] ನಿಮ್ಮೊಡನಿರುತ್ತಾ ನಾವು [ಸೋಮಮ್] ಐಶ್ವರ್ಯವನ್ನುಂಟುಮಾಡುವ ವೇದಶಾಸ್ತ್ರಗಳ ಬೋಧೆಯು [ಸುಸುಮ] ಪ್ರಾಪ್ತವಾಗಲಿ. ಹೇ [ಸುದಕ್ಷ] ಉತ್ತಮ ಚತುರತೆಯಿಂದ ಕೂಡಿದ ಬಲ ಮತ್ತು [ಬ್ರಹ್ಮವಾಹಃ] ಆನಂದಧನ ಹಾಗೂ ವೇದವಿದ್ಯೆಯನ್ನು ಪ್ರಾಪ್ತಿ ಮಾಡಿಸುವ ವಿದ್ವಾಂಸನೇ! ಹೇ [ನಿಯುತ್ವ] ಸಮರ್ಥನೇ! [ಅಧಾ] ಇದರ ನಂತರ [ಮರುದ್ಭಿಃ] ಋತ್ವಿಜರು ಅಂದರೆ ಓದಿಸುವವರು ಮತ್ತು [ಸಗಣಃ] ತನ್ನ ವಿದ್ಯಾರ್ಥಿಗಳೊಂದಿಗೆ ಕೂಡಿರುವ ನೀವು [ಅಸ್ಮಿನ್] ಈ [ಬರ್ಹಿಷಿ] ಅತ್ಯಂತ ಉತ್ತಮ [ಯಜ್ಞೇ] ಓದುವ-ಓದಿಸುವ ಸತ್ಕಾರದಿಂದ ಪಡೆದ ವ್ಯವಹಾರಗಳಲ್ಲಿ [ಮಾದಯಸ್ವ] ಆನಂದಿತರಾಗಿರಿ. ಮತ್ತು ನಮ್ಮನ್ನು ಆನಂದಿತಗೊಳಿಸಿರಿ.

ಭಾವಾರ್ಥ:- ವಿದ್ವಾಂಸರ ಸಂಗದ ಹೊರತು ನಿಶ್ಚಯವಾಗಿ ಯಾವನೂ ಐಶ್ವರ್ಯ ಮತ್ತು ಆನಂದವನ್ನು ಪಡೆಯಲಾರನು. ಆದುದರಿಂದ ಎಲ್ಲ ಮನುಷ್ಯರೂ ವಿದ್ವಾಂಸರನ್ನು ಸದಾ ಸತ್ಕರಿಸಿ ಅವರಿಂದ ವಿದ್ಯೆ ಮತ್ತು ಉತ್ತಮೋತ್ತಮ ಶಿಕ್ಷಣಗಳನ್ನು ಪಡೆದು ಎಲ್ಲ ರೀತಿಯಿಂದ ಸತ್ಕಾರ ಯುಕ್ತರಾಗಬೇಕು.

ಮತ್ತೆ ಸೇನಾ ಮೊದಲಾದ ಅಧ್ಯಕ್ಷನು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಮಾದಯಸ್ವ ಹರಿಭಿರ್ಯೇ ತ ಇಂದ್ರ ವಿ ಷ್ಯಸ್ವ ಶಿಪ್ರೇ ವಿ ಸೃಜಸ್ವ ಧೇನೇ ।

ಆ ತ್ವಾ ಸುಶಿಪ್ರ ಹರಯೋ ವಹಂತೂ-ಶನ್ ಹವ್ಯಾನಿ ಪ್ರತಿ ನೋ ಜುಷಸ್ವ ॥೧೦॥

ಪದಾರ್ಥ:- ಹೇ [ಸುಶಿಪ್ರ] ಉತ್ತಮ ಸುಖವನ್ನು ದೊರೆಯುವಂತೆ ಮಾಡುವ [ಇಂದ್ರ] ಪರಮೈಶ್ವರ್ಯ ಯುಕ್ತಸೇನೆಯ ಅಧಿಪತಿಯೇ! [ಯೇ] ಯಾವ [ತೇ] ನಿನ್ನ ಪ್ರಶಂಸಿತ ಯುದ್ಧದಲ್ಲಿ ಅತಿ ಪ್ರವೀಣನೂ ಮತ್ತು ಉತ್ತಮವಾಗಿ ಶಿಕ್ಷಣವನ್ನು ಪಡೆದ ಕುದುರೆಗಳಿವೆಯೋ ಆ [ಹರಿಭಿಃ] ಕುದುರೆಗಳಿಂದ [ನಃ] ನಮಗೆ [ಮಾದಯಸ್ವ] ಆನಂದಗೊಳಿಸಿರಿ. [ಶಿಪ್ರೇ] ಮತ್ತು ಸರ್ವಸುಖವುಂಟುಮಾಡಲು ಹಾಗೂ [ಧೇನೇ] ವಾಣಿಯಂತೆ ಸಮಸ್ತ ಆನಂದ ರಸವನ್ನು ಕೊಡುವ ಅವಕಾಶ ಮತ್ತು ಭೂಲೋಕವನ್ನು [ವಿಷ್ಯಸ್ವ] ತನ್ನ ರಾಜ್ಯದಿಂದ ನಿರಂತರವೂ ಪ್ರಾಪ್ತವಾಗುತ್ತಾ ಮತ್ತು [ವಿಸೃಜಸ್ವ] ಬಿಟ್ಟು ಅಂದರೆ, ವೃದ್ಧಾವಸ್ಥೆಯಲ್ಲಿ ತಪಸ್ಸು ಮಾಡಲು ಆ ರಾಜ್ಯವನ್ನು ಬಿಟ್ಟು, ಯಾವ [ಹರಯಃ] ಕುದುರೆಗಳು [ತ್ವಾಮ್] ನಿನ್ನನ್ನು [ಆ ವಹಂತು] ತೆಗೆದುಕೊಂಡು ಹೋಗುತ್ತವೋ ಅಥವಾ [ಉಶನ್] ನೀನು ಅನೇಕ ರೀತಿಯ ಕಾಮನೆಗಳನ್ನು ಮಾಡುತ್ತಾ [ಹವ್ಯಾನಿ] ಗ್ರಹಿಸಲು ಯೋಗ್ಯವಾದ ಯುದ್ಧ ಮೊದಲಾದ ಕೆಲಸಗಳನ್ನು ಮಾಡುತ್ತೀಯೋ, ಆ ಕೆಲಸಗಳ ಬಗ್ಗೆ [ನಃ] ನಮಗೆ [ಜುಷಸ್ವ] ಪ್ರಸನ್ನಗೊಳಿಸು.

ಭಾವಾರ್ಥ:- ಸೇನಾಪತಿಯ, ಸೇನೆಯ ಸಮಸ್ತ ಅಂಗಗಳನ್ನು ಪೂರ್ಣಬಲಯುಕ್ತವನ್ನಾಗಿ ಮಾಡಿ ಮತ್ತು ಉತ್ತಮೋತ್ತಮ ಶಿಕ್ಷಣವನ್ನಿತ್ತು ಅವುಗಳನ್ನು ಯುದ್ಧಕ್ಕೆ ಯೋಗ್ಯವನ್ನಾಗಿ ಮಾಡಿ ಸಮಸ್ತ ವಿಘ್ನಗಳ ನಿವೃತ್ತಿ ಮಾಡಿ ಮತ್ತು ತನ್ನ ರಾಜ್ಯದ ಉತ್ತಮ ರಕ್ಷಣೆ ಮಾಡಿ, ಎಲ್ಲ ಪ್ರಜೆಗಳನ್ನೂ ನಿರಂತರ ಆನಂದಿತರನ್ನಾಗಿ ಮಾಡಬೇಕು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಮರುತ್‌ಸ್ತೋತ್ರಸ್ಯ ವೃಜನಸ್ಯ ಗೋಪಾ ವಯಮಿಂದ್ರೇಣ ಸನುಯಾಮ ವಾಜಮ್ ।

ತನ್ನೋ ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೧೧॥

ಪದಾರ್ಥ:- ಯಾವ [ಮರುತ್ಸ್ತೋತ್ರಸ್ಯ] ಪವನ ಮೊದಲಾದ ವೇಗಾದಿ ಗುಣಗಳಿಂದ ಪ್ರಶಂಸೆಗೆ ಪಾತ್ರವಾದ [ವೃಜನಸ್ಯ] ಮತ್ತು ದುಃಖವರ್ಜಿತ ಅಂದರೆ ಯಾವುದರಿಂದ ದುಃಖವುಂಟಾಗುವುದಿಲ್ಲವೋ, ಆ ವ್ಯವಹಾರಗಳನ್ನು [ಗೋಪಾಃ] ಇಟ್ಟುಕೊಳ್ಳುವ ಸೇನಾಧಿಪತಿ ಇರುವನೋ, ಆ [ಇಂದ್ರೇಣ] ಐಶ್ವರ್ಯವನ್ನು ಕೊಡುವ ಸೇನಾಪತಿಯೊಂದಿಗೆ ಕೂಡಿರುವ [ವಯಮ್] ನಾವು ಯಾವ ಕಾರಣದಿಂದ [ವಾಜಮ್] ಸಂಗ್ರಾಮದ [ಸನುಯಾಮ] ಸೇವನೆ ಮಾಡುವಂತಾಗಲಿ. [ತತ್] ಈ ಕಾರಣದಿಂದ [ಮಿತ್ರಃ] ಮಿತ್ರನು [ವರುಣಃ] ಉತ್ತಮ ಗುಣಯುಕ್ತ ಜನರು [ಅದಿತಿಃ] ಸಮಸ್ತ ವಿದ್ವಾಂಸರ ಮಂಡಲಿ [ಸಿಂಧುಃ] ಸಮುದ್ರ [ಪೃಥಿವೀ] ಪೃಥಿವಿಯು [ಉತ] ಮತ್ತು [ದ್ಯೌಃ] ಸೂರ್ಯಲೋಕವು [ನಃ] ನಮಗೆ [ಮಾಮಹಂತಮ್] ಸತ್ಕಾರಮಾಡಲು ಹೇತುವಾಗಲಿ.

ಭಾವಾರ್ಥ:- ಸಂಗ್ರಾಮದಲ್ಲಿ ಪೂರ್ಣಬಲವಿಲ್ಲದ ಸೇನಾಪತಿಯ ಹೊರತು ಶತ್ರುಗಳನ್ನು ಪರಾಜಯಗೊಳಿಸಲು ಸಾಧ್ಯವಿಲ್ಲವೆನ್ನುವುದು ನಿಶ್ಚಿತ. ಮತ್ತು ಯಾವನೇ ಸೇನಾಪತಿಯು ಉತ್ತಮ ಶಿಕ್ಷಣ ಪಡೆದ ಪೂರ್ಣಬಲ, ಅಂಗ ಮತ್ತು ಉಪಾಂಗ ಸಹಿತವಾದ ಆನಂದವನ್ನು ಮತ್ತು ಪುಷ್ಟ ಸೇನೆಯ ಹೊರತು ಶತ್ರುಗಳನ್ನು ಗೆಲ್ಲಲು ಅಥವಾ

ರಾಜ್ಯದ ಪಾಲನೆಮಾಡಲು ಸಮರ್ಥನಾಗುವುದಿಲ್ಲ. ಉಕ್ತ ವ್ಯವಹಾರಗಳಲ್ಲಿ ಹೊರತು ಮಿತ್ರ ಮೊದಲಾದ ಸುಖವನ್ನುಂಟುಮಾಡುವುದರಲ್ಲಿ ಯೋಗ್ಯರಾಗುವುದಿಲ್ಲ. ಆದುದರಿಂದ ಉಕ್ತ ಸಮಸ್ತ ವ್ಯವಹಾರವನ್ನು ಎಲ್ಲ ಮನುಷ್ಯರೂ ಯಥಾವತ್ತಾಗಿ ಮಾಡುವುದು ಯುಕ್ತವೆಂದು ತಿಳಿಯಬೇಕು.

ಈ ಸೂಕ್ತದಲ್ಲಿ ಈಶ್ವರ, ಸಭೆ, ಸೇನೆ ಮತ್ತು ಶಾಲೆ ಮೊದಲಾದವುಗಳ ಅಧಿಪತಿಗಳ ಗುಣಗಳ ವರ್ಣನೆ ಮಾಡಿದೆ. ಆದುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಒಂದನೆಯ ಸೂಕ್ತ ಸಮಾಪ್ತ

ಸೂಕ್ತ ೧೦೨

ಮಂತ್ರಸಂಖ್ಯೆ ೧೧ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಇಂದ್ರಃ । ಛಂದಃ - ಜಗತೀ, ೧೧ ತ್ರಿಷ್ಟುಪ್ ।
ಸ್ವರಃ - ೧, ೩, ೫-೮ ನಿಷಾಧಃ, ಧೈವತಃ.

ಈಗ ಶಾಲೆ ಮೊದಲಾದವುಗಳ ಅಧ್ಯಕ್ಷನು ಏನೇನು ಸ್ವೀಕರಿಸಬೇಕು ಮತ್ತು ಹೇಗಿರಬೇಕು ಈ ವಿಷಯವನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಇಮಾಂ ತೇ ಧಿಯಂ ಪ್ರ ಭರೇ ಮಹೋ ಮಹೀ-ಮಸ್ಯ ಸ್ತೋತ್ರೇ ಧಿಷಣಾ ಯತ್ ತ ಆನಜೇ।

ತಮುತ್ಸವೇ ಚ ಪ್ರಸವೇ ಚ ಸಾಸಹಿ-ಮಿಂದ್ರಂ ದೇವಾಸಃ ಶವಸಾಮದನ್ನನು ॥೧॥

ಪದಾರ್ಥ:- ಹೇ ಸರ್ವವಿದ್ಯೆಯನ್ನು ಕೊಡುವ ಶಾಲೆ ಮೊದಲಾದವುಗಳ ಅಧಿಪತಿಯೇ! [ಯತ್] ಯಾವ [ತೇ ಅಸ್ಯ] ಈ ನಿನ್ನ [ಧಿಷಣಾ] ವಿದ್ಯೆ ಮತ್ತು ಉತ್ತಮ ಶಿಕ್ಷಣಕ್ಕೊಳಗಾದ ವಾಣಿಯನ್ನು [ಆನಜೇ] ಎಲ್ಲ ಪ್ರಜೆಗಳೂ ಇಚ್ಛಿಸುತ್ತಾರೆ, ಪ್ರಕಟಿಸುತ್ತಾರೆ ಮತ್ತು ತಿಳಿಯುತ್ತಾರೆ. ಯಾವ [ತೇ] ನಿಮ್ಮ [ಇಮಾಮ್] ಈ [ಮಹಃ] ದೊಡ್ಡ [ಮಹೀಮ್] ಸತ್ಕಾರ ಮಾಡಲು ಯೋಗ್ಯವಾದ [ಧಿಯಮ್] ಬುದ್ಧಿಯನ್ನು [ಸ್ತೋತ್ರೇ] ಪ್ರಶಂಸಿತ ವ್ಯವಹಾರಗಳಲ್ಲಿ [ಪ್ರಭರೇ] ಹೆಚ್ಚಾಗಿ ಧರಿಸಿರಿ ಅಂದರೆ ಸ್ವೀಕಾರ ಮಾಡಿರಿ ಅಥವಾ [ಉತ್ಸವೇ] ಉತ್ಸವಗಳಲ್ಲಿ [ಚ] ಮತ್ತು ಸಾಧಾರಣ ಕೆಲಸಗಳಲ್ಲಿ ಅಥವಾ [ಪ್ರಸವೇ] ಪುತ್ರ ಮೊದಲಾದವರು ಉತ್ಪನ್ನವಾಗುವ [ಚ] ಮತ್ತು ಮೃತ್ಯುಕಾಲದಲ್ಲಿ ಯಾವ [ಸಾಸಹಿಮ್] ಅತಿಯಾಗಿ ಕ್ಷಮಿಸುವ [ಇಂದ್ರಮ್] ವಿದ್ಯೆ ಮತ್ತು ಐಶ್ವರ್ಯಪ್ರಾಪ್ತಿ ಮಾಡಿಸುವ ನಿಮ್ಮ [ದೇವಾಸಃ] ವಿದ್ವಾಂಸರು [ಶವಸಾ] ಬಲದಿಂದ [ಅನು, ಅಮದನ್] ಆನಂದವನ್ನೀಯುತ್ತಾ ಅಥವಾ ಆನಂದಿತರಾಗುತ್ತಾರೋ, [ತಮ್] ಆ ನಿಮ್ಮನ್ನು ನಾನು ಕೂಡ ಅಂಗೀಕರಿಸುವೆನು.

ಭಾವಾರ್ಥ:- ಎಲ್ಲ ಮನುಷ್ಯರೂ, ಎಲ್ಲ ಧಾರ್ಮಿಕ ವಿದ್ವಾಂಸರ ವಿದ್ಯೆ ಬುದ್ಧಿಗಳನ್ನು ಮತ್ತು ಕಾರ್ಯಗಳನ್ನು ಧಾರಣ ಮತ್ತು ಅವುಗಳ ಸ್ತುತಿಯನ್ನು ಮಾಡಿ ಉತ್ತಮೋತ್ತಮ ವ್ಯವಹಾರಗಳ ಸೇವನೆ ಮಾಡಬೇಕು. ಅವುಗಳಲ್ಲಿ ವಿದ್ಯೆ ಮತ್ತು ಸುಖವು ದೊರೆಯುವುದು. ಆ ವಿದ್ವಾಂಸರು ಎಲ್ಲರಿಗೂ ಸುಖ ಮತ್ತು ದುಃಖದ ವ್ಯವಹಾರಗಳಲ್ಲಿ ಸತ್ಕಾರಯುಕ್ತರಾಗಿಯೇ ಸದಾ ಆನಂದಿತರಾಗಬೇಕು.

ಈಗ ಈಶ್ವರ ಮತ್ತು ಅಧ್ಯಾಪಕರ ಕಾರ್ಯದಿಂದ ಏನಾಗುತ್ತದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಅಸ್ಯ ಶ್ರವೋ ನದ್ಯಃ ಸಪ್ತ ಬಿಭ್ರತಿ ದ್ಯಾವಾಕ್ಷಮಾ ಪೃಥಿವೀ ದರ್ಶತಂ ವಪುಃ ।

ಅಸ್ಮೇ ಸೂರ್ಯಾಚಂದ್ರಮಸಾಭಿಚಕ್ಷೇ ಶ್ರದ್ಧೇ ಕಮಿಂದ್ರ ಚರತೋ ವಿತರ್ತುರಮ್ ॥೨॥

ಪದಾರ್ಥ:- ಹೇ **[ಇಂದ್ರ]** ವಿದ್ಯೆ ಮತ್ತು ಐಶ್ವರ್ಯವನ್ನು ಕೊಡುವವನೇ! **[ಅಸ್ಯ]** ನಿಃಶೇಷವಿದ್ಯಾಯುಕ್ತ ಜಗದೀಶ್ವರನ ಅಥವಾ ಸಮಸ್ತ ವಿದ್ಯೆಗಳನ್ನು ಓದಿಸುವ ನೀನು ಜನರ **[ಶ್ರವಃ]** ಸಾಮರ್ಥ್ಯ ಅಥವಾ ಅನ್ನ ಮತ್ತು **[ಸಪ್ತ]** ಏಳು ಪ್ರಕಾರದ ಸ್ವಾದಯುಕ್ತ ಜಲವುಳ್ಳ **[ನದ್ಯಃ]** ನದಿಯನ್ನು **[ದರ್ಶತಮ್]** ನೋಡುವ ಮತ್ತು **[ವಿತರ್ತುರಮ್]** ಅನೇಕ ಪ್ರಕಾರದ ನೌಕೆ ಮೊದಲಾದ ಪದಾರ್ಥಗಳಿಂದ ಪಾರಾಗಲು ಯೋಗ್ಯವಾದ ಮಹಾನದಿಗಳಲ್ಲಿ ದಾಟುವುದಕ್ಕಾಗಿ **[ಕಮ್]** ಸುಖವುಂಟುಮಾಡುವ **[ವಪುಃ]** ರೂಪವನ್ನು **[ಬಿಭ್ರತಿ]** ಧಾರಣಮಾಡುತ್ತಾ ಅಥವಾ ಪೋಷಣೆ ಮಾಡಿಸುತ್ತಾ ಹಾಗೂ **[ದ್ಯಾವಾಕ್ಷಾಮಾ]** ಪ್ರಕಾಶ ಮತ್ತು ಭೂಮಿಯು ಸೇರಿ ಅಥವಾ **[ಪೃಥಿವೀ]** ಅಂತರಿಕ್ಷ **[ಸೂರ್ಯಚಂದ್ರಮಸಾ]** ಸೂರ್ಯ ಮತ್ತು ಚಂದ್ರ ಮೊದಲಾದ ಲೋಕಗಳನ್ನು ಧಾರಣ ಮಾಡುತ್ತಾ ಪುಷ್ಟಗೊಳಿಸುತ್ತೀಯೆ. ಈ ಎಲ್ಲವೂ **[ಅಸ್ಮೆ]** ನಮಗೆ **[ಅಭಿಚಕ್ಷೇ]** ಸುಖದ ಎದುರಿಗೆ ನೋಡಲು **[ಶ್ರದ್ಧೇ]** ಮತ್ತು ಶ್ರದ್ಧೆಯನ್ನುಂಟುಮಾಡುವುದಕ್ಕಾಗಿ ಪ್ರಕಾಶ ಮತ್ತು ಭೂಮಿ ಅಥವಾ ಸೂರ್ಯಚಂದ್ರರು ಎರಡೆರಡು **[ಚರತಃ]** ಪ್ರಾಪ್ತವಾಗುವುದು ಹಾಗೂ ಅಂತರಿಕ್ಷವು ಪ್ರಾಪ್ತವಾಗುವುದು ಮತ್ತು ಉಕ್ತ ಪದಾರ್ಥಗಳು ಪ್ರಾಪ್ತವಾಗುತ್ತವೆ.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಪರಮೇಶ್ವರನ ರಚನೆಯಲ್ಲಿ ಪೃಥಿವೀ ಮೊದಲಾದ ಲೋಕಗಳು ಮತ್ತು ಅವುಗಳಲ್ಲಿರುವ ಪದಾರ್ಥಗಳು ತಮ್ಮ ತಮ್ಮ ರೂಪವನ್ನು ಧರಿಸುತ್ತಾ, ಎಲ್ಲ ಪ್ರಾಣಿಗಳೂ ನೋಡಲು ಮತ್ತು ಶ್ರದ್ಧೆಗಾಗಿ ಇರಲಿ. ಮತ್ತು ಸುಖವನ್ನು ಉತ್ಪನ್ನ ಮಾಡಿ ನಡತೆಯ ನಿಮಿತ್ತ ಇರಲಿ. ಆದರೆ ಯಾವುದೇ ಪ್ರಕಾರದ ವಿದ್ಯೆಯ ಹೊರತು ಈ ಸಾಂಸಾರಿಕ ಪದಾರ್ಥಗಳಲ್ಲಿ ಸುಖವುಂಟಾಗುವುದಿಲ್ಲ. ಆದುದರಿಂದ ಎಲ್ಲರೂ ಈಶ್ವರನ ಉಪಾಸನೆ ಮತ್ತು ವಿದ್ವಾಂಸರ ಸಂಗದಿಂದ ಲೋಕಸಂಬಂಧ ವಿದ್ಯೆಯನ್ನು ಪಡೆದು ಸದಾ ಸುಖಿಗಳಾಗಬೇಕು.

ಮತ್ತೆ ಸೇನೆಯ ಅಧಿಪತಿಯು ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ತಂ ಸ್ಮಾ ರಥಂ ಮಘವನ್ ಪ್ರಾವ ಸಾತಯೇ ಜೈತ್ರಂ ಯಂ ತೇ ಅನುಮದಾಮ ಸಂಗಮೇ ।

ಆಜಾ ನ ಇಂದ್ರ ಮನಸಾ ಪುರುಷ್ಟುತ ತ್ವಾಯದ್ಭ್ಯೋ ಮಘವಞ್ಛರ್ಮ ಯಚ್ಛ ನಃ ॥೩॥

ಪದಾರ್ಥ:- ಹೇ **[ಮಘವನ್]** ಪ್ರಶಂಸಿತ ಮತ್ತು ಮರ್ಯಾದೆ ಮಾಡಲು ಯೋಗ್ಯವಾದ ಧನವುಳ್ಳ **[ಇಂದ್ರ]** ಪರಮೈಶ್ವರ್ಯವನ್ನು ಕೊಡುವ ಸೇನಾಧಿಪತಿಯೇ! ನೀನು **[ನಃ]** ನಮ್ಮ **[ಸಾತಯೇ]** ಹೆಚ್ಚು ಧನಪ್ರಾಪ್ತಿಗಾಗಿ **[ಜೈತ್ರಂ]** ಸಂಗ್ರಾಮಗಳಲ್ಲಿ ಗೆದ್ದು **[ತಮ್]** ಆ **[ಸ್ಮ]** ಅದ್ಭುತ-ಅದ್ಭುತ ಗುಣಗಳನ್ನು ಪ್ರಕಾಶಗೊಳಿಸುವ **[ರಥಮ್]** ವಿಮಾನ ಮೊದಲಾದ ರಥಸಮೂಹಗಳನ್ನು ಜೋಡಿಸಿ **[ಆಜಾ]** ಶತ್ರುಗಳನ್ನು ಎದಿರ್ಗೊಳ್ಳುವ ಸ್ಥಳಗಳಲ್ಲಿ ವೀರರು ಸೇರಿ. ಆ **[ಸಂಗಮೇ]** (ಸಂಗಮ ಇತಿ ಸಂಗ್ರಾಮನಾಮ ನಿಘ. ೨.೧೭) ಸಂಗ್ರಾಮಗಳಲ್ಲಿ **[ಪ್ರ ಅವ]** ಸೇರಿಸಿರಿ. ಅಂದರೆ, ನಿಮ್ಮ ರಥಗಳನ್ನು ಅಲ್ಲಿಗೆ ತೆಗೆದುಕೊಂಡು ಹೋಗಲಿ. ಯಾವ ರಥವನ್ನು? **[ಯಮ್]** ಯಾವ **[ತೇ]** ನಿಮ್ಮ ರಥವನ್ನು ನಾವು **[ಅನು ಮದಾಮ]** ಹಿಂದಿನಿಂದ ಪ್ರಶಂಸಿಸುವೆ. ಹೇ **[ಪುರುಷ್ಟುತ]** ಬಹಳ ಜನ ಶೂರವೀರರಿಂದ ಪ್ರಶಂಸೆಗೆ ಪ್ರಾಪ್ತವಾದ **[ಮಘವನ್]** ಪ್ರಶಂಸಿತ ಧನವುಳ್ಳವನೇ! ನೀನು **[ಮನಸಾ]** ವಿಶೇಷ ಜ್ಞಾನದಿಂದ **[ತ್ವಾಯದ್‌ಭ್ಯಃ]** ನಾವು ನಿಮ್ಮನ್ನು ಬಯಸುತ್ತಾ **[ನಃ]** ನಮಗೆ ಅದ್ಭುತವಾದ **[ಶರ್ಮ]** ಸುಖವನ್ನು **[ಯಚ್ಛ]** ಕೊಡು.

ಭಾವಾರ್ಥ:- ಯಾವ ಶೂರವೀರ ಸೈನಿಕರೊಡನೆ ಸೇನಾಪತಿಯು ಸಂಗ್ರಾಮ ಮಾಡಲು ಹೋಗಬೇಕಾಗುತ್ತದೋ, ಆಗ ಪರಸ್ಪರ ಅಂದರೆ ಒಬ್ಬರು ಇನ್ನೊಬ್ಬರ ಉತ್ಸಾಹವನ್ನು ಹೆಚ್ಚಿಸುತ್ತಾ ಉತ್ತಮ ರಕ್ಷಣೆ ಮಾಡುತ್ತಾ, ಶತ್ರುಗಳೊಡನೆ

ಉತ್ತಮಯುದ್ಧ, ಅವರ ಸೋಲು ಮತ್ತು ತನ್ನ ಜನರಿಗೆ ಆನಂದವನ್ನು ಕೊಡುತ್ತಾ ಶತ್ರುಗಳಿಗೂ ಕೂಡ ಯಾವುದೇ ಪ್ರಕಾರದ ಸಂತೋಷವನ್ನು ಕೊಟ್ಟು ಸದಾ ತನ್ನ ವರ್ತನೆಯಲ್ಲಿಟ್ಟುಕೊಳ್ಳಬೇಕು.

ಮತ್ತೆ ಅವನ ಜೊತೆ ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ವಯಂ ಜಯೇಮ ತ್ವಯಾ ಯುಜಾ ವೃತ-ಮಸ್ಮಾಕಮಂಶಮುದವಾ ಭರೇಭರೇ ।

ಅಸ್ಮಭ್ಯಮಿಂದ್ರ ವರಿವಃ ಸುಗಂ ಕೃಧಿ ಪ್ರ ಶತ್ರೂಣಾಂ ಮಘವನ್ ವೃಷ್ಣ್ಯಾ ರುಜ ॥೪॥

ಪದಾರ್ಥ:- ಹೇ **[ಇಂದ್ರ]** ಶತ್ರು ಸೈನ್ಯವನ್ನು ಹರಿದು ಹಾಕುವ ಸೇನೆ ಮೊದಲಾದವುಗಳ ಅಧಿಪತಿಯೇ! ನೀನು **[ಭರೇ ಭರೇ]** ಪ್ರತಿಯೊಂದು ಸಂಗ್ರಾಮದಲ್ಲಿಯೂ **[ಅಸ್ಮಾಕಮ್]** ನಮ್ಮ **[ವೃತಮ್]** ಸ್ವೀಕರಿಸಲು ಯೋಗ್ಯವಾದ **[ಅಂಶಮ್]** ಸೇವಾ ವಿಭಾಗಗಳನ್ನು **[ಅವ]** ಇಡು, ಬಯಸು, ತಿಳಿ, ಪ್ರಾಪ್ತ ಮಾಡಿಕೊಳ್ಳು. ನಮ್ಮಲ್ಲಿ ರಮಿಸು, ಪಡೆ, ಪ್ರಕಾಶಪಡಿಸು. ಆದರಿಂದ ಆನಂದಪಡುವುದೇ ಮುಂತಾದ ಕ್ರಿಯೆಗಳಲ್ಲಿ ಸ್ವೀಕರಿಸು ಅಥವಾ ಭೋಜನ, ವಸ್ತ್ರ, ಧನ, ಯಾವ ಕೋಶವನ್ನು ಹಂಚಿ ತೆಗೆದುಕೊಂಡು ಹೋಗಿ ಹಾಗೂ **[ಅಸ್ಮಭ್ಯಮ್]** ನಮಗೆ **[ವರಿವಃ]** ನಿನ್ನ ಸೇವೆಯು **[ಸುಗಮ್]** ಸುಖವಾಗಿ ಗಮನ ಮಾಡುವಂತೆ **[ಕೃಧಿ]** ಮಾಡು. ಹೇ **[ಮಘವನ್]** ಪ್ರಶಂಸಿತ ಬಲವುಳ್ಳವನೇ! ನೀನು **[ವೃಷ್ಣ್ಯಾ]** ಶತ್ರುಗಳನ್ನು ಮಳೆಗರೆಸುವ ಶಸ್ತ್ರವೃಷ್ಟಿಗಾಗಿ ಹತರೂಪವಾದ ತಮ್ಮ ಸೇನೆಯಿಂದ **[ಶತ್ರೂಣಾಮ್]** ಶತ್ರುಗಳ ಸೇನೆಗಳನ್ನು **[ಪ್ರ ರುಜ]** ಚೆನ್ನಾಗಿ ಕತ್ತರಿಸು ಮತ್ತು ಅಂತಹ ಜೊತೆಗಾರರು **[ತ್ವಯಾ, ಯುಜಾ]** ಯಾವ ನಿನ್ನೊಡನೆ **[ವಯಮ್]** ಯುದ್ಧಮಾಡುವ ನಾವು ಶತ್ರುಗಳ ಬಲವನ್ನು **[ಉತ್ ಜಯೇಮ]** ಉತ್ತಮ ರೀತಿಯಲ್ಲಿ ಗೆಲ್ಲುವಂತಾಗಲಿ.

ಭಾವಾರ್ಥ:- ರಾಜಪುರುಷರು ಯಾವಾಗ ಯಾವಾಗ ಯುದ್ಧ ಮಾಡಲು ಪ್ರವೃತ್ತರಾಗುವರೋ, ಆಗಾಗ ಧನ, ಶಸ್ತ್ರ, ಯಾನ, ಕೋಶ, ಸೇನೆ ಮೊದಲಾದ ಸಾಮಗ್ರಿಗಳನ್ನು ಪೂರ್ಣಗೊಳಿಸಿ ಮತ್ತೆ ಪ್ರಶಂಸಿತ ಸೇನೆಯ ಅಧೀಶನಿಂದ ರಕ್ಷಣೆಯನ್ನು ಪಡೆದು ಪ್ರಶಂಸಿತ ವಿಚಾರ ಮತ್ತು ಯುಕ್ತಿಗಳಿಂದ ಶತ್ರುಗಳೊಡನೆ ಯುದ್ಧ ಮಾಡಿ ಸೇನೆಯು ಸದಾ ಗೆಲ್ಲಲಿ. ಹಾಗೆ ಪುರುಷಾರ್ಥದ ಹೊರತು ಮಾಡಿದ ಕ್ರಿಯೆಯು ಗೆಲ್ಲಲು ಸಾಧ್ಯವಾಗುವುದಿಲ್ಲ. ಆದುದರಿಂದ ಈ ರೀತಿ ಸದಾ ವರ್ತಿಸಬೇಕು.

ಮತ್ತೆ ಅವರಿಗೆ ಪರಸ್ಪರ ಯುದ್ಧದಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ನಾನಾ ಹಿ ತ್ವಾ ಹವಮಾನಾ ಜನಾ ಇಮೇ ಧನಾನಾಂ ಧರ್ತರವಸಾ ವಿಪನ್ಯವಃ ।

ಅಸ್ಮಾಕಂ ಸ್ಮಾ ರಥಮಾ ತಿಷ್ಠ ಸಾತಯೇ ಜೈತ್ರಂ ಹೀಂದ್ರ ನಿಭೃತಂ ಮನಸ್ತವ ॥೫॥

ಪದಾರ್ಥ:- ಹೇ **[ಇಂದ್ರ]** ಯಥಾ ಯೋಗ್ಯವೀರರನ್ನು ಪಡೆದವನೇ! ನೀನು **[ಧನಾನಾಂ]** ರಾಜ್ಯದ ವಿಭೂತಿಗಳನ್ನು **[ಸಾತಯೇ]** ಬೇರೆ ಬೇರೆ ಹಂಚುವುದಕ್ಕಾಗಿ **[ಸ್ಮಾ]** ಆನಂದದೊಂದಿಗೆಯೇ ಯಾವುದರಲ್ಲಿ **[ತವ]** ನಿನ್ನ **[ಮನಃ]** ವಿಚಾರ ಮಾಡುವ ಮನದ ವೃತ್ತಿಯು **[ನಿಭೃತಮ್]** ನಿರಂತರವಾಗಿ ಧರಿಸಿರುವುದೋ, ಆ **[ಅಸ್ಮಾಕಮ್]** ನಮ್ಮ **[ಜೈತ್ರಮ್]** ಯಾವ ದೊಡ್ಡದಾದ ದೃಢವಾದುದರಿಂದ ಶತ್ರುಗಳನ್ನು ಗೆಲ್ಲಲು **[ರಥಮ್]** ಅಂತಹ ವಿಜಯವನ್ನುಂಟುಮಾಡುವ ವಿಮಾನಾದಿ ಯಾನಗಳು **[ಹಿ]** ನಿಶ್ಚಯವಾಗಿ **[ಆತಿಷ್ಠ]** ಉತ್ತಮವಾಗಿ ಸ್ವೀಕರಿಸಿ ಸಿದ್ಧರಾಗಿರಲಿ. ಹೇ **[ಧರ್ತಃ]** ಧಾರಣ ಮಾಡುವವರೇ! ನಿಮ್ಮ ಆಜ್ಞೆಯಲ್ಲಿ ತಮ್ಮ ವರ್ತನೆಯನ್ನಿಟ್ಟು

ಕೊಳ್ಳುತ್ತಾ **[ಅವಸಾ]** ರಕ್ಷಣೆ ಮೊದಲಾದ ನಿನ್ನ ಗುಣಗಳೊಡನೆ ಇರುವ **[ನಾನಾ]** ಅನೇಕ ರೀತಿಯ **[ಹವಮಾನಾಃ]** ಬಯಸುತ್ತಾ **[ವಿಪನ್ಯವಃ]** ವಿವಿಧ ವ್ಯವಹಾರಗಳಲ್ಲಿ ಚತುರರಾದ ಬುದ್ಧಿವಂತರಾದ **[ಜನಾಃ]** ಜನರು **[ಇಮೇ]** ಪ್ರತ್ಯಕ್ಷವಾಗಿ ಪರೀಕ್ಷಿಸಿದ ನಾವು **[ತ್ವಾಮ್]** ನಿನಗೆ ಅನುಕೂಲಕರವಾಗಿ **[ಹಿ]** ನಿಶ್ಚಯವಾಗಿ ಪಡೆಯುತ್ತೇವೆ.

ಭಾವಾರ್ಥ:- ಯಾವಾಗ ಮನುಷ್ಯನು ಯುದ್ಧ ಮೊದಲಾದ ವ್ಯವಹಾರಗಳಲ್ಲಿ ಪ್ರವೃತ್ತನಾಗುತ್ತಾನೋ ಆಗ ವಿರೋಧ, ಈರ್ಷ್ಯೆ, ಭಯ ಮತ್ತು ಆಲಸ್ಯರಹಿತರಾಗಿ ಒಬ್ಬರು ಇನ್ನೊಬ್ಬರ ರಕ್ಷಣೆಯಲ್ಲಿ ತತ್ಪರರಾಗಿ, ಶತ್ರುಗಳನ್ನು ಗೆಲ್ಲುತ್ತಾ ಮತ್ತು ಗೆದ್ದ ಹಣವನ್ನು ಹಂಚಿಕೊಂಡು ಸೇನಾಪತಿ ಮೊದಲಾದ ಯುದ್ಧಮಾಡುವವರಿಗೆ ಯಥಾಯೋಗ್ಯವಾಗಿ ಆದರ ಸತ್ಕಾರ ಮಾಡಿಕೊಡಿ. ಅದರಿಂದ ಯುದ್ಧ ಮಾಡಲು ಉತ್ಸಾಹವು ವೃದ್ಧಿಯಾಗುವುದು. ಎಲ್ಲ ರೀತಿಯಿಂದ ತಾನೇ ತೆಗೆದುಕೊಳ್ಳುವುದು ಪ್ರೀತಿಕರವಾದುದಲ್ಲ. ಮತ್ತು ಕೊಡುವುದು ಪ್ರಸನ್ನಗೊಳಿಸುವುದಾಗಿದೆ. ಇದನ್ನು ಆಲೋಚಿಸಿ ಸದಾ ಉಕ್ತವ್ಯವಹಾರವನ್ನು ಮಾಡಬೇಕು.

ಮತ್ತೆ ಸೇನಾಪತಿಯು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಗೋಜಿತಾ ಬಾಹೂ ಅಮಿತಕ್ರತುಃ ಸಿಮಃ ಕರ್ಮನ್ಕರ್ಮಞ್ಛತಮೂತಿಃ ಖಜಂಕರಃ ।
ಅಕಲ್ಪ ಇಂದ್ರಃ ಪ್ರತಿಮಾನಮೋಜಸಾ-ಥಾ ಜನಾ ವಿ ಹ್ವಯಂತೇ ಸಿಷಾಸವಃ ॥೬॥

ಪದಾರ್ಥ:- ಹೇ ಸಭಾಪತಿ! ಯಾವ ನಿನ್ನ **[ಗೋಜಿತಾ]** ಪೃಥಿವಿಯನ್ನು ಗೆಲ್ಲುವ **[ಬಾಹೂ]** ಅತ್ಯಂತ ಬಲಪರಾಕ್ರಮಗಳಿಂದ ಕೂಡಿದ ಭುಜಗಳು **[ಅಥ]** ಆನಂತರ ನೀನು **[ಇಂದ್ರಃ]** ಅನೇಕ ಐಶ್ವರ್ಯದಿಂದ ಕೂಡಿ **[ಓಜಸಾ]** ಬಲದಿಂದ **[ಕರ್ಮನ್ ಕರ್ಮನ್]** ಪ್ರತ್ಯೇಕ ಕಾರ್ಯಗಳಲ್ಲಿ **[ಅಮಿತಕ್ರತುಃ]** ಅತಿ ಬುದ್ಧಿಯುಳ್ಳ **[ಅಕಲ್ಪಃ]** ಮತ್ತು ದೊಡ್ಡ ದೊಡ್ಡ ಸಾಮರ್ಥ್ಯವುಳ್ಳ ಜನರಿಗಿಂತ ಅಧಿಕವಾಗಿದೆ. **[ಸಿಮಃ]** ವ್ಯವಸ್ಥೆಯಿಂದ ಶತ್ರುಗಳನ್ನು ಬಂಧಿಸಲು ಮತ್ತು **[ಖಜಂಕರಃ]** ಸಂಗ್ರಾಮ ಮಾಡುವ **[ಶತಮೂತಿಃ]** ನೂರಾರು ಕ್ರಿಯೆಗಳಿವೆ. **[ಪ್ರತಿಮಾನಮ್]** ಯಾರನ್ನು ಅತ್ಯಂತ ಸಾಮರ್ಥ್ಯವುಳ್ಳವರೆಂದು ಉಪಮಾನ ಕೊಡಲಾಗುತ್ತದೋ, ಅಂತಹ ನಿನ್ನನ್ನು **[ಸಿಷಾಸವಃ]** ಸೇವಿಸಲು ಇಚ್ಛಿಸುವ **[ಜನಾಃ]** ವಿದ್ವಾಂಸರು **[ವಿ ಹ್ವಯಂತೇ]** ವಿಶೇಷವಾಗಿ ಇಚ್ಛಿಸುತ್ತಾರೆ.

ಭಾವಾರ್ಥ:- ಯಾವನು ಸರ್ವಥಾ ಸಮರ್ಥನೂ, ಪ್ರತಿಯೊಂದು ಕಾರ್ಯವನ್ನು ಮಾಡಲು ತಿಳಿದಿರುವವನೂ, ಬೇರೆಯವರಿಂದ ಗೆಲ್ಲಲಾಗದವನೂ, ಆದ ನೀನು ಎಲ್ಲರನ್ನು ಗೆಲ್ಲುವವನೂ, ಎಲ್ಲರೂ ಇಚ್ಛಿಸುವಂತೆ ಯೋಗ್ಯನೂ ಮತ್ತು ಅನುಪಮ ವ್ಯಕ್ತಿತ್ವದವನೂ ಆಗಿರುವೆ. ಮನುಷ್ಯರು ಆ ನಿನ್ನನ್ನೇ ಸೇನಾಧಿಪತಿಯನ್ನಾಗಿ ಮಾಡಿ ವಿಜಯ ಮೊದಲಾದವುಗಳನ್ನು ಸಾಧಿಸಬೇಕು.

ಮತ್ತೆ ಅವನು ಹೇಗೆ ಮತ್ತು ಏನು ಮಾಡುತ್ತಾನೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಉತ್ ತೇ ಶತಾನ್ಮಘವನ್ನುಚ್ಚ ಭೂಯಸ ಉತ್ ಸಹಸ್ರಾದ್ ರಿರಿಚೇ ಕೃಷ್ಟಿಷು ಶ್ರವಃ ।
ಅಮಾತ್ರಂ ತ್ವಾ ಧಿಷಣಾ ತಿತ್ವಿಷೇ ಮಹ್ಯ-ಧಾ ವೃತ್ರಾಣಿ ಜಿಘ್ನಸೇ ಪುರಂದರ ॥೭॥

ಪದಾರ್ಥ:- ಹೇ **[ಮಘವನ್]** ಅಸಂಖ್ಯಾತ ಐಶ್ವರ್ಯದಿಂದ ಕೂಡಿದ ಸೇನಾಪತಿ! **[ತೇ]** ನಿನ್ನ **[ಕೃಷ್ಟಿಷು]** ಮನುಷ್ಯರಲ್ಲಿ **[ಶ್ರವಃ]** ಕೀರ್ತನ, ಶ್ರವಣ, ಅಥವಾ ಧನಗಳಿಂದ ನೂರಕ್ಕಿಂತಲೂ **[ಉತ್]** ಮೇಲೆ **[ರಿರಿಚೇ]**

ತಲುಪಿರುವ **[ಸಹಸ್ರಾತ್]** ಸಾವಿರಕ್ಕಿಂತಲೂ **[ಉತ್]** ಮೇಲೆ **[ಚ]** ಮತ್ತು **[ಭೂಯಃ]** ಅಧಿಕವಾಗಿಯೂ **[ಉತ್]** ಮೇಲೆ ಅಂದರೆ ಅಧಿಕವಾಗಿ ಹೋಗಿರುವೆ. **[ಅಧ]** ಇದರ ನಂತರ **[ಅಮಾತ್ರಮ್]** ಪರಿಮಾಣ ರಹಿತವಾದ **[ತ್ವಾ]** ನಿನ್ನ **[ಮಹೀ]** ಮಹಾಗುಣಯುಕ್ತವಾದ **[ಧಿಷಣಾ]** ವಿದ್ಯೆ ಮತ್ತು ಉತ್ತಮ ಶಿಕ್ಷಣವನ್ನು ಪಡೆದ ವಾಣಿ ಅಥವಾ ಬುದ್ಧಿಯನ್ನು **[ತಿತ್ವಿಷೇ]** ಪ್ರಕಾಶಿತಗೊಳಿಸುತ್ತೀಯೆ. ಹೇ **[ಪುರಂದರ]** ಶತ್ರುಗಳ ಪುರಗಳನ್ನು ಸೀಳುವಂತಹ ವೀರನೇ! **[ವೃತ್ರಾಣಿ]** ಹೇಗೆ ಮೇಘದ ಅಂಗಗಳು ಅಂದರೆ ಮೋಡಗಳನ್ನು ಸೂರ್ಯನು ಹನನ ಮಾಡುವನೋ ಹಾಗೆ ನೀನು ಶತ್ರುಗಳನ್ನು **[ಜಿಘ್ನಸೇ]** ಕೊಲ್ಲುವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನು ಅಂಧಕಾರ ಮತ್ತು ಮೇಘ ಮೊದಲಾದವುಗಳನ್ನು ಹನನ ಮಾಡಿ ಅಪರಿಮಿತ ಅಂದರೆ ಯಾವನಿಗೆ ಪರಿಮಾಣವಿಲ್ಲವೋ, ಆ ನಿನ್ನ ತೇಜಸ್ಸನ್ನು ಪ್ರಕಾಶಗೊಳಿಸಿ, ಎಲ್ಲ ತೇಜಸ್ಸುಳ್ಳ ಪದಾರ್ಥಗಳನ್ನು ವೃದ್ಧಿಸಿ ವರ್ತಮಾನನಾಗಿ ಇರುವನೋ, ಹಾಗೆ ವಿದ್ವಾಂಸನನ್ನು ಸಭೆಯು ಅಧ್ಯಕ್ಷನೆಂದು ಒಪ್ಪಿ ಶತ್ರುಗಳನ್ನು ಗೆಲ್ಲಲೇಬೇಕೆಂದು ಮನುಷ್ಯರು ತಿಳಿಯಬೇಕು.

ಈಗ ಈಶ್ವರ ಮತ್ತು ಸಭಾಪತಿ ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ತ್ರಿವಿಷ್ಟಿಧಾತು ಪ್ರತಿಮಾನಮೋಜಸ-ಸ್ತಿಸ್ರೋ ಭೂಮೀರ್ನೃಪತೇ ತ್ರೀಣಿ ರೋಚನಾ ।
ಅತೀದಂ ವಿಶ್ವಂ ಭುವನಂ ವವಕ್ಷಿಥಾ-ಶತ್ರುರಿಂದ್ರ ಜನುಷಾ ಸನಾದಸಿ ॥೮॥

ಪದಾರ್ಥ:- ಹೇ **[ನೃಪತೇ]** ಮನುಷ್ಯರ ಸ್ವಾಮಿಯಾದ ಈಶ್ವರ ಅಥವಾ ರಾಜನೇ! **[ಇಂದ್ರ]** ಬಹಳ ಐಶ್ವರ್ಯದಿಂದ ಕೂಡಿದ **[ಅಶತ್ರುಃ]** ಶತ್ರುರಹಿತನಾದ ನೀನು **[ತ್ರಿವಿಷ್ಟಿಧಾತು]** ಯಾವುದರಲ್ಲಿ ೩ ಪ್ರಕಾರದ ಪೃಥಿವಿ, ಜಲ, ತೇಜಸ್ಸು, ಪವನ, ಆಕಾಶದ ವ್ಯಾಪ್ತಿ ಅಂದರೆ ಪರಿಪೂರ್ಣತೆ ಇದೆಯೋ, ಆ ಸಂಸಾರದಲ್ಲಿ **[ಪ್ರತಿಮಾನಮ್]** ಪರಿಮಾಣ ಅಥವಾ ಉಪಮಾನವು ಹೇಗೋ ಹಾಗೆ **[ಸನಾತ್]** ಸನಾತನ ಕಾರಣವು ಅಥವಾ **[ಓಜಸಃ]** ಬಲ ಅಥವಾ **[ಜನುಷಾ]** ಉತ್ಪನ್ನವಾದ ಕಾರ್ಯದಿಂದ **[ತಿಸ್ರಃ]** ೩ ಪ್ರಕಾರದ **[ಭೂಮಿಃ]** ಅಂದರೆ ಕೆಳಗಿನ, ಮೇಲಿನ ಮತ್ತು ಮಧ್ಯದ ಮತ್ತು ಉತ್ತಮ, ಅಧಮ ಮತ್ತು ಮಧ್ಯಮ ಭೂಮಿ ಹಾಗೂ **[ತ್ರೀಣಿ]** ಮೂರು ಪ್ರಕಾರದ **[ರೋಚನಾ]** ಪ್ರಕಾಶಯುಕ್ತ ವಿದ್ಯೆ, ಶಬ್ದ ಮತ್ತು ಸೂರ್ಯ ಮತ್ತು ನ್ಯಾಯ ಮಾಡಲು ಬಲ ಮತ್ತು ರಾಜ್ಯಪಾಲನೆ ಮೊದಲಾದ ಕೆಲಸಗಳಿಗೆ ನೀವೀರ್ವರೂ ಯಥಾಯೋಗ್ಯವಾಗಿ ನಿರ್ವಹಿಸುವವರು **[ಅಸಿ]** ಆಗಿರಿ ಮತ್ತು ಉಕ್ತ ಪಂಚಭೂತಮಯ **[ಇದಮ್]** ಈ **[ವಿಶ್ವಮ್]** ಸಮಸ್ತ **[ಭುವನಮ್]** ಯಾವುದರಲ್ಲಿ ಪ್ರಾಣಿಗಳಿವೆಯೋ ಆ ಜಗತ್ತನ್ನು **[ಅತಿ ವವಕ್ಷಿಥ]** ಉತ್ತಮವಾಗಿ ನಿರ್ವಹಿಸಲು ಇಚ್ಛಿಸುವಿರಿ. ಆದುದರಿಂದ ಈಶ್ವರನು ಉಪಾಸನೆ ಮಾಡಲು ಯೋಗ್ಯನು ಮತ್ತು ವಿದ್ವಾಂಸರಾದ ತಾವು ಸತ್ಕಾರ ಮಾಡಲು ಯೋಗ್ಯರು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವನಿಗೆ ಉಪಮಾನವೇ ಇಲ್ಲವೋ, ಆ ಈಶ್ವರನು ಕಾರಣದಿಂದ ಕಾರ್ಯರೂಪ ಜಗತ್ತನ್ನು ರಚಿಸಿ ಮತ್ತು ಅದನ್ನು ರಕ್ಷಿಸಿ ಅದರ ಸಂಹಾರವನ್ನು ಮಾಡುವನು. ಅವನೇ ಇಷ್ಟದೇವನೆಂದು ಒಪ್ಪಲು ಯೋಗ್ಯನು ಹಾಗೂ ಯಾವ ಅತಿ ಸಾಮರ್ಥ್ಯಯುಕ್ತ ಸಭಾಪತಿಯು ಪ್ರಸಿದ್ಧ ನ್ಯಾಯ ಮೊದಲಾದ ಗುಣಗಳಿಂದ ಸಮಸ್ತ ರಾಜ್ಯವನ್ನು ಸಂತೋಷಪಡಿಸುವನೋ, ಅವನೂ ಕೂಡ ಸದಾ ಸತ್ಕಾರ ಮಾಡಲು ಯೋಗ್ಯನು.

ಈಗ ಸೇನೆಯ ಅಧ್ಯಕ್ಷನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ತ್ವಾಂ ದೇವೇಷು ಪ್ರಥಮಂ ಹವಾಮಹೇ ತ್ವಂ ಬಭೂಥ ಪೃತನಾಸು ಸಾಸಹಿಃ ।
ಸೇಮಂ ನಃ ಕಾರುಮುಪಮನ್ಯುಮುದ್ಭಿದ-ಮಿಂದ್ರಃ ಕೃಣೋತು ಪ್ರಸವೇ ರಥಂ ಪುರಃ ॥೯॥

ಪದಾರ್ಥ:- ಹೇ ಸೇನಾಪತಿಯೇ! ಯಾವ ಕಾರಣದಿಂದ **[ತ್ವಮ್]** ನೀನು **[ಪೃತನಾಸು]** ನಿನ್ನ ಅಥವಾ ಶತ್ರುಗಳ ಸೇನೆಗಳಲ್ಲಿ **[ಸಾಸಹಿಃ]** ಅತಿಯಾದ ಸಹನಶೀಲತೆ, **[ಬಭೂತ]** ಇದೆಯೋ, ಅದರಿಂದ **[ದೇವೇಷು]** ವಿದ್ವಾಂಸರಲ್ಲಿ **[ಪ್ರಥಮಮ್]** ಮೊದಲು **[ತ್ವಾಮ್]** ಸಮಗ್ರ ಸೇನೆಯ ಅಧಿಪತಿಯಾದ ನಿನ್ನನ್ನು **[ಹವಾಮಹೇ]** ನಾವು ಸ್ವೀಕರಿಸುತ್ತೇವೆ. ಯಾವ **[ಇಂದ್ರಃ]** ಸಮಸ್ತ ಐಶ್ವರ್ಯವನ್ನು ಪ್ರಕಟಮಾಡುವ ನೀನು **[ಪ್ರಸವೇ]** ಯಾವುದರಲ್ಲಿ ವೀರರ ಚಿತೆಗಳು ಹೋಗುವವೋ ಆ ರಾಜ್ಯದಲ್ಲಿ **[ಉದ್ಭಿಮ್]** ಪೃಥಿವಿಯನ್ನು ಸೀಳಿಕೊಂಡು ಉತ್ಪನ್ನವಾಗುವ ಕಾಷ್ಟ ವಿಶೇಷದಿಂದ ಮಾಡಲ್ಪಟ್ಟ **[ರಥಮ್]** ವಿಮಾನ ಮೊದಲಾದ ರಥಗಳನ್ನು **[ಪುರಃ]** ಮುಂದೆ ಇಡುತ್ತೇವೆ. **[ಸಃ]** ಅವುಗಳನ್ನು ನೀನು **[ನಃ]** ನಮಗಾಗಿ **[ಇಮಮ್]** ಈ **[ಉಪಮನ್ಯುಮ್]** ಸಮೀಪದಲ್ಲಿ ಒಪ್ಪಲು ಯೋಗ್ಯವಾದ **[ಕಾರುಮ್]** ಕ್ರಿಯಾಕೌಶಲದ ಕೆಲಸಗಳನ್ನು ಮಾಡುವ ಜನರನ್ನು **[ಕೃಣೋತು]** ಪ್ರಸಿದ್ಧಗೊಳಿಸು.

ಭಾವಾರ್ಥ:- ಉತ್ತಮ ವಿದ್ವಾಂಸನು, ತನ್ನ ಸೇನೆಯ ಪಾಲನೆ ಮತ್ತು ಶತ್ರುಗಳ ಬಲವನ್ನು ಹರಿಯುವುದರಲ್ಲಿ ಚತುರನೂ, ಶಿಲ್ಪಕಾರ್ಯಗಳನ್ನು ತಿಳಿದವನೂ, ಪ್ರೇಮಿಯೂ, ಯುದ್ಧದಲ್ಲಿ ಮುಂದಾಗಿ ಹೋಗಿ ಉತ್ಕೃಷ್ಟವಾಗಿ ಯುದ್ಧ ಮಾಡುವನು. ಮನುಷ್ಯರು ಅವನನ್ನೇ ಸೇನಾಪತಿಯನ್ನಾಗಿ ಮಾಡಬೇಕು.

ಮತ್ತೆ ಅವನು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ತ್ವಂ ಜಿಗೇಥ ನ ಧನಾ ರುರೋಧಿಥಾ-ರ್ಭೇಷ್ವಾಜಾ ಮಘವನ್ ಮಹತ್ಸು ಚ ।
ತ್ವಾಮುಗ್ರಮವಸೇ ಸಂ ಶಿಶೀಮ-ಸ್ಯಥಾ ನ ಇಂದ್ರ ಹವನೇಷು ಚೋದಯ ॥೧೦॥

ಪದಾರ್ಥ:- ಹೇ **[ಮಘವನ್]** ಪರಮ ಪ್ರಶಂಸಾ ಯೋಗ್ಯ ಧನ ಮೊದಲಾದ ಸಾಮಗ್ರಿಗಳನ್ನಿಡುವ, **[ಇಂದ್ರ]** ಶತ್ರುಗಳನ್ನು ಸೀಳಿ ಚೆಂಡಾಡುವ ಸೇನಾಪತಿಯೇ! ಯಾವ **[ತ್ವಮ್]** ನೀನು ಚತುರಂಗ ಅಂದರೆ ರಥ, ಗಜ, ತುರಗ, ಪದಾತಿಗಳಿಂದ ಮುತ್ತಿಗೆ ಹಾಕುವ ಸೇನಾಸಹಿತನು **[ಅರ್ಭೇಷು]** ಅಲ್ಪ **[ಮಹತ್ಸು]** ಹೆಚ್ಚು **[ಚ]** ಮತ್ತು ಮಧ್ಯಮ **[ಅಜಾ]** ಸಂಗ್ರಾಮಗಳಲ್ಲಿ ಶತ್ರುಗಳನ್ನು **[ಜಿಗೇಥ]** ಗೆಲ್ಲುತ್ತಾ ಮತ್ತು ಆ ಸಂಗ್ರಾಮಗಳಲ್ಲಿ **[ಧನಾ]** ಧನ ಮೊದಲಾದ ಪದಾರ್ಥಗಳನ್ನು **[ನ ದುರೋಧಿಥ]** ತಡೆಯುವುದಿಲ್ಲವೋ, ಆ **[ಉಗ್ರಮ್]** ಶತ್ರುವಿನ ಬಲವನ್ನು ಸೀಳುವುದರಲ್ಲಿ ಅತ್ಯಂತ ಬಲಿಷ್ಠನೂ ಆದ **[ತ್ವಾಮ್]** ನಿನ್ನನ್ನು **[ಅವಸೇ]** ರಕ್ಷಣೆ ಮೊದಲಾದವುಗಳಿಗಾಗಿ ಸ್ವೀಕರಿಸಿ, ನಾವು ಶತ್ರುಗಳನ್ನು **[ಸಂಶಿಶೀಮಹಿ]** ಉತ್ತಮವಾಗಿ ನಷ್ಟಗೊಳಿಸುತ್ತೇವೆ. **[ಅಥ]** ನಂತರ ನೀನು ಕೂಡ ಹಾಗೆ ಮಾಡು. **[ಹವನೇಷು]** ಗ್ರಹಣ ಮಾಡಲು ಯೋಗ್ಯವಾದ ಕೆಲಸಗಳಲ್ಲಿ **[ನಃ]** ನಮ್ಮನ್ನು **[ಚೋದಯ]** ಪ್ರವೃತ್ತಗೊಳಿಸು.

ಭಾವಾರ್ಥ:- ಯಾವ ಮನುಷ್ಯನು ಶತ್ರುಗಳನ್ನು ಮತ್ತು ಸಮಯವನ್ನು ನೋಡಿ ಧನವನ್ನು ಗೆಲ್ಲಲು, ಶ್ರೇಷ್ಠ ಕೆಲಸಗಳಲ್ಲಿ ಎಲ್ಲರನ್ನೂ ಪ್ರವೃತ್ತಿಸಲು ಮತ್ತು ದುಷ್ಟರನ್ನು ಛಿನ್ನ-ಭಿನ್ನ ಮಾಡಲು ಸಮರ್ಥನೋ, ಅವನನ್ನೇ ಎಲ್ಲರೂ ಸೇನೆಯ ಅಧ್ಯಕ್ಷನೆಂದು ಒಪ್ಪಬೇಕು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ವಿಶ್ವಾಹೇಂದ್ರೋ ಅಧಿವಕ್ತಾ ನೋ ಅಸ್ತ್ವ-ಪರಿಹ್ವೃತಾಃ ಸನುಯಾಮ ವಾಜಮ್ । ತನ್ನೋ
ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೧೧॥

ಪದಾರ್ಥ:- **[ಅಪರಿಹ್ವೃತಾಃ]** ಆಜ್ಞೆಯನ್ನು ಪಡೆದ ನಾವು ಯಾವ **[ವಿಶ್ವಾಹಾ]** ಎಲ್ಲ ಶತ್ರುಗಳನ್ನು ಕೊಲ್ಲುವವನು **[ಇಂದ್ರಃ]** ಪರಮೈಶ್ವರ್ಯಯುಕ್ತ ಸಭಾಧ್ಯಕ್ಷನು **[ನಃ]** ನಮ್ಮನ್ನು **[ಅಧಿವಕ್ತಾ]** ಯಥಾರೀತಿ ಶಿಕ್ಷಣವನ್ನು ಕೊಡುವವನು **[ಅಸ್ತು]** ಆಗಲಿ. ಅವನಿಗಾಗಿ **[ವಾಜಮ್]** ಉತ್ತಮವಾಗಿ ಸಂಸ್ಕರಿಸಿದ ಅನ್ನವನ್ನು **[ಸನುಯಾಮ]** ಕೊಡಲಿ. ಯಾವುದರಿಂದ **[ತತ್]** ಅದನ್ನು **[ನಃ]** ನಮಗೆ **[ಮಿತ್ರಃ]** ಮಿತ್ರರು **[ವರುಣಃ]** ಉತ್ತಮ ಗುಣಯುಕ್ತರು **[ಅದಿತಿಃ]** ಸಮಸ್ತ ವಿದ್ವಾಂಸರು, ಅಂತರಿಕ್ಷವು **[ಸಿಂಧುಃ]** ಸಮುದ್ರ, **[ಪೃಥಿವೀ]** ಪೃಥಿವಿಯು **[ಉತ]** ಮತ್ತು **[ದ್ಯೌಃ]** ಸೂರ್ಯಲೋಕವನ್ನು **[ಮಾಮಹಂತಮ್]** ಹೆಚ್ಚಿಸಲಿ.

ಭಾವಾರ್ಥ:- ಎಲ್ಲ ಸೇವಕರೂ ಹೀಗಿರಲಿ ಅಂದರೆ ಯಾವಾಗ ತನ್ನ ಸ್ವಾಮಿಯು ಹೇಗೆ ಆಜ್ಞೆ ಕೊಡುವನೋ ಆ ಸಮಯದಲ್ಲಿ ಅವನಿಗೆ ಹಾಗೆಯೇ ಮಾಡಬೇಕು ಮತ್ತು ಯಾವನು ಸಮಸ್ತ ವಿದ್ಯೆ ಓದಿರುವನೋ, ಅವನಿಂದಲೇ ಉಪದೇಶವನ್ನು ಕೇಳಬೇಕು.

ಈ ಸೂಕ್ತದಲ್ಲಿ ಶಾಲೆ ಮೊದಲಾದವುಗಳ ಅಧಿಪತಿಯು ಈಶ್ವರನು, ಓದಿಸುವವನು ಮತ್ತು ಸೇನಾಪತಿಯ ಗುಣಗಳ ವರ್ಣನೆಯಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಏಕತೆ ಇದೆ ಎಂದು ತಿಳಿಯಬೇಕು.

ನೂರ ಎರಡನೆಯ ಸೂಕ್ತ ಸಮಾಪ್ತ

ಸೂಕ್ತ ೧೦೩

ಮಂತ್ರಸಂಖ್ಯೆ ೮ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಇಂದ್ರಃ । ಛಂದಃ - ತ್ರಿಷ್ಟುಪ್ । ಸ್ವರಃ - ಧೈವತಃ.

ಇದರ ಪ್ರಥಮ ಮಂತ್ರದಲ್ಲಿ ಈಶ್ವರನ ಕಾರ್ಯವು ಜಗತ್ತಿನಲ್ಲಿ ಹೇಗೆ ಪ್ರಸಿದ್ಧ ಚಿಹ್ನೆಯಾಗಿದೆ ಎಂಬ ಉಪದೇಶವಿದೆ.

ತತ್ ತ ಇಂದ್ರಿಯಂ ಪರಮಂ ಪರಾಚೈ-ರಧಾರಯಂತ ಕವಯಃ ಪುರೇದಮ್ ।
ಕ್ಷಮೇದಮನ್ಯದ್ ದಿವ್ಯಗನ್ಯದಸ್ಯ ಸಮೀ ಪೃಚ್ಯತೇ ಸಮನೇವ ಕೇತುಃ ॥೧॥

ಪದಾರ್ಥ:- ಹೇ ಜಗದೀಶ್ವರ! ಯಾವ **[ತೇ]** ನಿನ್ನ ಅಥವಾ ಜೀವ ಸೃಷ್ಟಿಯಲ್ಲಿ **[ಇದಮ್]** ಈ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಸಾಮರ್ಥ್ಯವು **[ಪರಮಮ್]** ಪ್ರಬಲವೂ ಅತಿ ಉತ್ತಮವೂ **[ಇಂದ್ರಿಯಮ್]** ಪರಮೈಶ್ವರ್ಯ ಯುಕ್ತನಾದ ನೀನು ಮತ್ತು ಜೀವನದ ಒಂದು ಚಿಹ್ನೆ ಅದನ್ನು **[ಕವಯಃ]** ಬುದ್ಧಿವಂತರಾದ ವಿದ್ವಾಂಸರು **[ಪರಾಚೈಃ]** ಮೇಲಿನ ಚಿಹ್ನೆಯನ್ನು ಧಾರಣ ಮಾಡುತ್ತಾ ಯಾವ **[ದಿವಿ]** ಪ್ರಕಾಶಮಾನವಾದ ಸೂರ್ಯ ಮೊದಲಾದ ಲೋಕಗಳಲ್ಲಿ ವರ್ತಮಾನವಾಗಿ ಅಥವಾ ಯಾವ **[ಅನ್ಯದ್]** ಅದಕ್ಕಿಂತ ಭಿನ್ನವಾದ ಕಾರಣದಲ್ಲಿ ಅಥವಾ **[ಅಸ್ಯ]** ಈ ಸಂಸಾರದ ಮಧ್ಯೆ ಇದೆಯೋ, ಅದನ್ನು **[ಈ]** ಜಲಧಾರಣ ಮಾಡುವ ಅಥವಾ ಯಾವ **[ಅನ್ಯತ್]** ಮತ್ತು

ವಿಲಕ್ಷಣವನ್ನು ನೋಡದಂತಹ ಕಾರ್ಯಗಳಲ್ಲಿ [ತತ್] ಆ ಎಲ್ಲವನ್ನು [ಸಮನೇವ] ಯುದ್ಧದಲ್ಲಿ ಸೇನೆಯು ಒಗ್ಗೂಡುವಂತೆ [ಕೇತುಃ] ವಿಜ್ಞಾನವನ್ನು ಕೊಡುವವನಾಗುತ್ತಾ ನೀನು ಅಥವಾ ಜೀವನು ಪ್ರಕಾಶಪಡಿಸುವಂತಹ ಇವೆಲ್ಲವನ್ನೂ ಈ ಜಗತ್ತಿನಲ್ಲಿ [ಸಂಪೃಜ್ಯತೇ] ಸಂಬದ್ಧವಾಗುವುದು.

ಭಾವಾರ್ಥ:- ಹೇ ಮನುಷ್ಯರೇ! ಈ ಜಗತ್ತಿನಲ್ಲಿ ಯಾವ ಯಾವ ರಚನೆಗಳು ವಿಶೇಷ ಚತುರತೆಯ ಜೊತೆಗೆ ಉತ್ತಮೋತ್ತಮ ವಸ್ತುಗಳಿವೆಯೋ, ಅವೆಲ್ಲವೂ ಪರಮೇಶ್ವರನ ರಚನೆಯಿಂದಲೇ ಪ್ರಸಿದ್ಧವಾಗಿವೆ. ಇದನ್ನು ನೀವು ತಿಳಿಯಿರಿ. ಏಕೆಂದರೆ ಅಂತಹ ವಿಚಿತ್ರ ಜಗತ್ತಿನ ರಚನೆಯು ವಿಧಾತನಿಗಲ್ಲದೆ ಬೇರೆ ಯಾರಿಗೂ ಸಾಧ್ಯವಲ್ಲ. ಇದರಿಂದ ನಿಶ್ಚಯವಾಗುವುದೇನೆಂದರೆ, ಈ ಜಗತ್ತನ್ನು ರಚಿಸಿದವನು ಪರಮೇಶ್ವರನು, ಜೀವಸೃಷ್ಟಿಗೆ ಸಂಬಂಧಿಸಿದುದನ್ನು ರಚಿಸಿದವನು ಜೀವನು.

ಈಗ ಈ ಜಗತ್ತಿನಲ್ಲಿ ಪರಮೇಶ್ವರನಿಂದ ರಚಿಸಲ್ಪಟ್ಟ ಈ ಸೂರ್ಯನು ಏನು ಕೆಲಸ ಮಾಡುತ್ತಾನೆ ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಸ ಧಾರಯತ್ ಪೃಥಿವೀಂ ಪಪ್ರಥಚ್ಚ ವಜ್ರೇಣ ಹತ್ವಾ ನಿರಪಃ ಸಸರ್ಜ ।
ಅಹನ್ನಹಿಮಭಿನದ್ರೌಹಿಣಂ ವ್ಯಹನ್ ವ್ಯಂಸಂ ಮಘವಾ ಶಚೀಭಿಃ ॥೨॥

ಪದಾರ್ಥ:- ಹೇ ಮನುಷ್ಯರೇ! ಯಾವ **[ಮಘವಾ]** ಸೂರ್ಯಲೋಕವು **[ಶಚೀಭಿಃ]** ಕೆಲಸಗಳಿಂದ **[ಪೃಥಿವೀಮ್]** ಪೃಥಿವಿಯನ್ನು **[ಧಾರಯತ್]** ಧಾರಣ ಮಾಡುತ್ತಾ ತನ್ನ ತೇಜಸ್ಸಿನಿಂದ **[ಚ]** ಮತ್ತು ವಿದ್ಯುತ್ತು ಮೊದಲಾದವುಗಳನ್ನು **[ಪಪ್ರಥತ್]** ಹರಡುತ್ತದೆ. ಅದು ತನ್ನ ತೇಜಸ್ಸಿನಿಂದ ಎಲ್ಲ ಜಗತ್ತನ್ನು ಪ್ರಕಾಶಗೊಳಿಸಿ **[ವಜ್ರೇಣ]** ತನ್ನ ಕಿರಣ ಸಮೂಹದಿಂದ ಮೇಘವನ್ನು **[ಹತ್ವಾ]** ನಷ್ಟಗೊಳಿಸಿ **[ಅಪಃ]** ಜಲವನ್ನು **[ನಿಃ ಸಸರ್ಜ]** ನಿರಂತರ ಉತ್ಪನ್ನ ಮಾಡುತ್ತಾ ಮತ್ತು **[ಅಹಿಮ್]** ಮೇಘವನ್ನು **[ಅಹನ್]** ನಷ್ಟಗೊಳಿಸುತ್ತಾ **[ರೌಹಿಣಮ್]** ರೋಹಿಣಿ ನಕ್ಷತ್ರದಲ್ಲಿ ಉತ್ಪನ್ನವಾದ ಮೇಘವನ್ನು **[ಅಭಿನತ್]** ನಷ್ಟಗೊಳಿಸುತ್ತಾ **[ವ್ಯಂಸಮ್ ವಿ ಅಹನ್]** ಕೇವಲ ಸಾಧಾರಣವಾಗಿ ಸೀಳುವುದೇ ಅಲ್ಲದೆ, ನಡು, ಭುಜ ಮೊದಲಾದವುಗಳನ್ನು ರುಂಡ, ಮುಂಡ, ಮುಚಂಡಗಳನ್ನು ಕಡಿಯುವ ಉದ್ದಂಡ ವೀರರಂತೆ ವಿಶೇಷವಾಗಿ ಮೇಘಗಳನ್ನು ನಷ್ಟಗೊಳಿಸುತ್ತಾನೆ. [ಸಃ] ಆ ಸೂರ್ಯಲೋಕವನ್ನು ಈಶ್ವರನು ರಚಿಸಿರುವನು ಎಂಬುದನ್ನು ತಿಳಿಯಿರಿ.

ಭಾವಾರ್ಥ:- ಮನುಷ್ಯರು ಇದನ್ನು ನೋಡಬೇಕು ಯಾವುದೆಂದರೆ ಯಾವ ಪ್ರಸಿದ್ಧ ಸೂರ್ಯಲೋಕವು ಆ ಮೇಘಗಳನ್ನು ಸೀಳಿ, ಲೋಕಗಳನ್ನು ಆಕರ್ಷಿಸಿ ಮತ್ತು ಪ್ರಕಾಶ ಮೊದಲಾದ ಕಾರ್ಯಗಳಲ್ಲಿ ಜಲ, ಮಳೆ, ಪೃಥಿವಿಯ ಧಾರಣ ಮತ್ತು ಅಪ್ರಕಟ ಅಂದರೆ ಅಂಧಕಾರದಿಂದ ಹೊದೆಯಲ್ಪಟ್ಟ ಯಾವ ಪದಾರ್ಥಗಳಿವೆಯೋ, ಅವುಗಳನ್ನು ಪ್ರಕಾಶಗೊಳಿಸಿ ಎಲ್ಲ ಪ್ರಾಣಿಗಳ ವ್ಯವಹಾರಗಳನ್ನು ನಡೆಸುವನು. ಇವೆಲ್ಲವೂ ಪರಮಾತ್ಮನಲ್ಲದೆ ಬೇರೆ ಯಾರಿಂದಲೂ ಉತ್ಪನ್ನವಾಗಲಾರವು.

ಈಗ ಸೇನೆ ಮೊದಲಾದವುಗಳ ಅಧ್ಯಕ್ಷರು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಸ ಜಾತೂಭರ್ಮಾ ಶ್ರದ್ದಧಾನ ಓಜಃ ಪುರೋ ವಿಭಿಂದನ್ನಚರದ್ ವಿ ದಾಸೀಃ ।
ವಿದ್ವಾನ್ ವಜ್ರಿನ್ ದಸ್ಯವೇ ಹೇತಿಮಸ್ಯಾಽಽರ್ಯಂ ಸಹೋ ವರ್ಧಯಾ ದ್ಯುಮ್ನಮಿಂದ್ರ ॥೩॥

ಪದಾರ್ಥ:- ಹೇ [ವಜ್ರಿನ್] ಪ್ರಶಂಸಿತವಾದ ಶಸ್ತ್ರಗಳಿಂದ ಕೂಡಿದ [ಇಂದ್ರ] ಉತ್ತಮೋತ್ತಮ ಪದಾರ್ಥಗಳನ್ನು ಕೊಡುವ ಸೇನೆ ಮೊದಲಾದವುಗಳ ಸ್ವಾಮಿಯೇ! [ಜಾತೂಭರ್ಮಾ] ಉತ್ಪನ್ನವಾದ ಜಗತ್ತಿನ ಪದಾರ್ಥಗಳ ಧಾರಣ ಮತ್ತು [ಶ್ರದ್ಧಧಾನಃ] ಉತ್ತಮ ಕರ್ಮಗಳಲ್ಲಿ ಪ್ರೀತಿಯುಳ್ಳ [ವಿದ್ವಾನ್] ವಿದ್ವಾಂಸನಾದ ನೀನು [ಅಸ್ಯ] ಈ ದುಷ್ಟ ಜನರನ್ನು [ದಾಸೀಃ] ನಷ್ಟಗೊಳಿಸುವ ದಾಸೀ ಪ್ರಧಾನವಾದ [ಪುರಃ] ನಗರವನ್ನು [ದಸ್ಯವೇ] ಕಷ್ಟ ಕೆಲಸವನ್ನು ಮಾಡುತ್ತಿರುವ ಜನರಿಗೆ [ವಿಭಿಂದನ್] ವಿನಾಶ ಮಾಡುತ್ತಾ [ವ್ಯಚರತ್] ವಿಚರಿಸುವ [ಸಃ] ಆ ನೀನು ಶ್ರೇಷ್ಠ ಸಜ್ಜನರಿಗಾಗಿ [ಹೇತಿಮ್] ಸುಖವನ್ನು ಹೆಚ್ಚಿಸುವ ವಜ್ರವನ್ನು [ಆರ್ಯ್ಯಮ್] ಶ್ರೇಷ್ಠಕರ ಅಥವಾ ಅತಿ ಶ್ರೇಷ್ಠರಾದ ಈ [ಸಹಃ] ಬಲ [ದ್ಯುಮ್ನ] ಧನ ಅಥವಾ [ಓಜಃ] ಮತ್ತು ಪರಾಕ್ರಮವನ್ನು [ವರ್ಧಯ] ಹೆಚ್ಚಿಸು.

ಭಾವಾರ್ಥ:- ಯಾವ ಮನುಷ್ಯನು ಸಮಸ್ತ ದರೋಡೆಕಾರರು, ಕಳ್ಳರು, ಲಂಪಟರು, ವ್ಯಭಿಚಾರಿಗಳು, ಯುದ್ಧಮಾಡುವವರನ್ನು ನಾಶಗೊಳಿಸುವನೋ ಮತ್ತು ಶ್ರೇಷ್ಠರನ್ನು ಆನಂದಪಡಿಸಿ, ಶಾರೀರಿಕ ಮತ್ತು ಆತ್ಮಿಕ ಬಲದ ಸಂಪಾದನೆಯನ್ನು ಮಾಡಿ, ಧನ ಮೊದಲಾದ ಪದಾರ್ಥಗಳಿಂದ ಸುಖವನ್ನು ವೃದ್ಧಿಸುವನೋ, ಅವನೇ ಎಲ್ಲರಿಗೂ ಶ್ರದ್ಧೆಯುಂಟುಮಾಡಲು ಯೋಗ್ಯನು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ತದೂಚುಷೇ ಮಾನುಷೇಮಾ ಯುಗಾನಿ ಕೀರ್ತೇನ್ಯಂ ಮಘವಾ ನಾಮ ಬಿಭ್ರತ್ ।
ಉಪಪ್ರಯನ್ ದಸ್ಯುಹತ್ಯಾಯ ವಜ್ರೀ ಯದ್ಧ ಸೂನುಃ ಶ್ರವಸೇ ನಾಮ ದಧೇ ॥೪॥

ಪದಾರ್ಥ:- **[ಮಘವಾ]** ಬಹಳ ಧನವುಳ್ಳವನು **[ಸೂನುಃ]** ವೀರರ ಪುತ್ರ **[ವಜ್ರೀ]** ಪ್ರಶಂಸಿತ ಶಸ್ತ್ರಾಸ್ತ್ರಗಳಿಂದ ಕೂಡಿರುವ ಸೇನಾಪತಿಯು, ಹೇಗೆ ಸೂರ್ಯನು ಪ್ರಕಾಶದಿಂದ ಕೂಡಿರುವನೋ ಹಾಗೆ ಪ್ರಕಾಶಿತನಾಗಿ **[ಊಚಿಷೇ]** ಹೇಳಿಕೊಳ್ಳಲು ಯೋಗ್ಯನಾಗಿ ಅಥವಾ **[ದಸ್ಯುಹತ್ಯಾಯ]** ದರೋಡೆಕಾರರನ್ನು ನಷ್ಟಗೊಳಿಸಿ ಆ **[ಶ್ರವಸೇ]** ಧನಕ್ಕಾಗಿ **[ಇಮಾ]** ಈ **[ಮಾನುಷಾ]** ಮನುಷ್ಯರಲ್ಲಿ ನಡೆಯುವಂತಹ **[ಯುಗಾನಿ]** ವರ್ಷಗಳನ್ನು ಹಾಗೂ **[ಕೀರ್ತೇನ್ಯಮ್]** ಕೀರ್ತನೀಯ **[ನಾಮ]** ಪ್ರಸಿದ್ಧಿ ಮತ್ತು ಜಲವನ್ನು **[ಬಿಭ್ರತ್]** ಧಾರಣ ಮಾಡುತ್ತಾ **[ಉಪಪ್ರಯನ್]** ಉತ್ತಮ ಮಹಾತ್ಮನ ಸಮೀಪಕ್ಕೆ ಹೋಗುವ **[ಯತ್]** ಯಾವ **[ನಾಮ]** ಪ್ರಸಿದ್ಧ ಕಾರ್ಯವನ್ನು **[ದಧೇ]** ಧಾರಣ ಮಾಡುವನೋ, **[ತತ್]** ಆ ಉತ್ತಮ ಕಾರ್ಯವನ್ನು **[ಹ]** ನಿಶ್ಚಯವಾಗಿ ನಾವು ಕೂಡ ಧಾರಣ ಮಾಡುವಂತಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನು ಕಾಲದ ಅವಯವಗಳು ಅಂದರೆ ಸಂವತ್ಸರ, ತಿಂಗಳು, ದಿನ, ಗಂಟೆ ಮೊದಲಾದವು ಮತ್ತು ಜಲವನ್ನು ಧಾರಣ ಮಾಡಿ ಎಲ್ಲ ಪ್ರಾಣಿಗಳಿಗೂ ಸುಖವನ್ನು ಕೊಡುವನೋ, ಹಾಗೆಯೇ ಸೇನಾಪತಿಯು ಸುಖಪೂರ್ವಕವಾಗಿ ಸಂವತ್ಸರ ಮತ್ತು ಕೀರ್ತಿಯನ್ನು ಧರಿಸಿ ಶತ್ರುಗಳನ್ನು ಕೊಂದು ಎಲ್ಲರ ಸುಖಕ್ಕಾಗಿ ಧನವನ್ನು ಉತ್ಪನ್ನ ಮಾಡಬೇಕು.

ಮನುಷ್ಯರು ಅವನಿಂದ ಏನೇನು ಕಾರ್ಯಗಳನ್ನು ಮಾಡಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ತದಸ್ಯೇದಂ ಪಶ್ಯತಾ ಭೂರಿ ಪುಷ್ಟಂ ಶ್ರದಿಂದ್ರಸ್ಯ ಧತ್ತನ ವೀರ್ಯಾಯ ।
ಸ ಗಾ ಅವಿಂದತ್ ಸೋ ಅವಿಂದದಶ್ವಾನ್ ತ್ಸ ಓಷಧೀಃ ಸೋ ಅಪಃ ಸ ವನಾನಿ ॥೫॥

ಪದಾರ್ಥ:- ಹೇ ಮನುಷ್ಯರೇ! [ಸಃ] ಆ ಸೇನಾಪತಿಯ ಸೂರ್ಯನಂತೆ [ಗಾಃ] ಭೂಮಿಗಳನ್ನು [ಅವಿಂದತ್] ಪಡೆಯುತ್ತಾ [ಸಃ] ಆ [ಅಶ್ವಾನ್] ದೊಡ್ಡ ಪದಾರ್ಥಗಳನ್ನು [ಅವಿಂದತ್] ಪಡೆಯುತ್ತಾ [ಸಃ] ಆ [ಓಷಧೀಃ]

ಓಷಧಿಗಳು ಅಂದರೆ ಗೋಧಿ, ಉದ್ದು, ಹೆಸರು, ಕಡಲೆ ಮೊದಲಾದವುಗಳನ್ನು ಪಡೆಯುತ್ತಾ [ಸಃ] ಆ [ಅಪಃ] ಸೂರ್ಯ ಜಲವನ್ನು ಹೇಗೆ ಬೇಕೋ ಹಾಗೆ ಕಾರ್ಯಗಳಲ್ಲಿ ಪಡೆಯುತ್ತಾ [ಸಃ] ಹಾಗೂ ಆ ಸೂರ್ಯ [ವನಾನಿ] ಕಿರಣಗಳಂತೆ ಅರಣ್ಯಗಳಿಗೆ ಪ್ರಾಪ್ತವಾಗುತ್ತಾ [ಅಸ್ಯ] ಈ [ಇಂದ್ರಸ್ಯ] ಸೇನೆಯಿಂದ ಕೂಡಿದ ಸೇನಾಪತಿಯು [ತತ್] ಆ ಕಾರ್ಯಗಳನ್ನು ಅಥವಾ [ಇದಮ್] ಈ [ಭೂರಿ] ಬಹಳ [ಪುಷ್ಟಮ್] ದೃಢವೂ [ಶ್ರತ್] ಸತ್ಯದ ಆಚರಣೆಯನ್ನು ನೀವು [ಪಶ್ಯತ] ನೋಡಿರಿ ಮತ್ತು [ವೀರ್ಯಾಯ] ಬಲ ಪಡೆಯಲು [ಧತ್ತನ] ಧಾರಣ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವುದರಿಂದ ಶ್ರೇಷ್ಠ ಜನರ ಸತ್ಯದ ಆಚರಣೆಯು ಪ್ರಾಪ್ತಿಯಾಗುವುದೋ, ಅದನ್ನೇ ಮನುಷ್ಯರು ಧಾರಣ ಮಾಡಬೇಕು. ಅದರ ಹೊರತು ಸತ್ಯ ಪರಾಕ್ರಮ ಮತ್ತು ಎಲ್ಲ ಪದಾರ್ಥಗಳ ಲಾಭವು ಉಂಟಾಗುವುದಿಲ್ಲ.

ಮತ್ತೆ ಅವನು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಭೂರಿಕರ್ಮಣೇ ವೃಷಭಾಯ ವೃಷ್ಣೇ ಸತ್ಯಶುಷ್ಮಾಯ ಸುನವಾಮ ಸೋಮಮ್ ।
ಯ ಆದೃತ್ಯಾ ಪರಿಪಂಥೀವ ಶೂರೋಽಯಜ್ವನೋ ವಿಭಜನ್ನೇತಿ ವೇದಃ ॥೬॥

ಪದಾರ್ಥ:- ನಾವು [ಯಃ] ಯಾವ [ಶೂರಃ] ನಿರ್ಭಯ ಶೂರವೀರನ [ಆದೃತ್ಯಾ] ಆದರ ಸತ್ಕಾರ ಮಾಡಿ [ಪರಿಪಂಥೀಯ] ಹೇಗೆ ಎಲ್ಲ ರೀತಿಯ ಮಾರ್ಗಗಳಲ್ಲಿ ಸಂಚರಿಸುವ ದರೋಡೆಕಾರರು ಇತರರ ಧನ ಮೊದಲಾದ ಸರ್ವಸ್ವವನ್ನೂ ಹರಣಮಾಡುವರೋ, ಹಾಗೆ ಕಳ್ಳರ ಪ್ರಾಣ ಮತ್ತು ಅವರ ವಸ್ತುಗಳನ್ನು ಕಸಿದುಕೊಳ್ಳಬೇಕು. ಅವನು [**ವಿಭಜನ್**] ವಿಭಾಗ ಅಂದರೆ ಶ್ರೇಷ್ಠ ಮತ್ತು ದುಷ್ಟರನ್ನು ಬೇರೆ ಬೇರೆ ಮಾಡುತ್ತಾ ಅವರಲ್ಲಿ [**ಅಯಜ್ವನಃ**] ಯಾವನು ಯಜ್ಞವನ್ನು ಮಾಡುವುದಿಲ್ಲವೋ ಅವನ [**ವೇದಃ**] ಧನವನ್ನು [**ಏತಿ**] ಕಸಿಯುತ್ತಾನೆ. ಆ [**ಭೂರಿಕರ್ಮಣೇ**] ಭಾರಿ ಕಾರ್ಯಗಳನ್ನು ಮಾಡುವ [**ವೃಷಭಾಯ**] ಶ್ರೇಷ್ಠ [**ವೃಷ್ಣೇ**] ಸುಖವನ್ನುಂಟುಮಾಡುವ [**ಸತ್ಯಶುಷ್ಮಾಯ**] ನಿತ್ಯ ಬಲಿಷ್ಠನಾದ ಸೇನಾಪತಿಗಾಗಿ ಹೇಗೆ [**ಸೋಮಮ್**] ಐಶ್ವರ್ಯವನ್ನು [**ಸುನವಾಮ**] ಉತ್ಪನ್ನ ಮಾಡುವನೋ, ಹಾಗೆ ನೀವು ಕೂಡ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಸಾಹಸಿಗಳು, ದರೋಡೆ ಮಾಡುವ ಕಳ್ಳರು ಮುಂತಾದವರನ್ನು ಬಂಧಿಸಿ ಅವರಲ್ಲಿರುವ ಧನ ಮುಂತಾದವನ್ನು ಕಸಿದುಕೊಂಡು ಸಜ್ಜನರನ್ನು ಆದರಿಸಿ ಪುರುಷಾರ್ಥಿಯಾದ ಬಲವಂತನು ಉತ್ತಮೋತ್ತಮನಾಗಬೇಕು. ಮನುಷ್ಯರು ಅವನನ್ನೇ ಸೇನಾಪತಿಯನ್ನಾಗಿ ಮಾಡಬೇಕು.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ತದಿಂದ್ರ ಪ್ರೇವ ವೀರ್ಯಂ ಚಕರ್ಥ ಯತ್ ಸಸಂತಂ ವಜ್ರೇಣಾಬೋಧಯೋಽಹಿಮ್ ।
ಅನು ತ್ವಾ ಪತ್ನೀರ್ಹೃಷಿತಂ ವಯಶ್ಚ ವಿಶ್ವೇ ದೇವಾಸೋ ಅಮದನ್ನನು ತ್ವಾ ॥೭॥

ಪದಾರ್ಥ:- ಹೇ [ಇಂದ್ರ] ಸೇನಾಧ್ಯಕ್ಷನೇ! ನೀನು [ಸಸಂತಮ್] ನಿದ್ರಿಸುತ್ತಿರುವ ಅಥವಾ ಚಿಂತಾರಹಿತವಾದ [ಅಹಿಮ್] ಸರ್ಪ ಅಥವಾ ಶತ್ರುವನ್ನು [ಯತ್] ಯಾವ [ವಜ್ರೇಣ] ತೀಕ್ಷ್ಣ ಶಸ್ತ್ರದಿಂದ [ಅಬೋಧಯಃ] ಸಚೇತಗೊಳಿಸುವೆಯೋ [ತತ್] ಅದನ್ನು [ವೀರ್ಯಮ್] ತನ್ನ ಬಲವನ್ನು [ಪ್ರೇವ] ಪ್ರಕಟ [ಚಕರ್ಥ] ಪಡಿಸುತ್ತೀಯೆ. [ಅನು] ನಂತರ [ಹೃಷಿತಮ್] ಉತ್ಪನ್ನವಾಗುವ ಆನಂದವು [ತ್ವಾ] ನಿನಗೆ [ಪತ್ನೀಃ] ತಮ್ಮ ಸ್ತ್ರೀ ಜನರು ಮತ್ತು [ವಯಃ] ಜ್ಞಾನಿಗಳಾದ [ವಿಶ್ವೇ] ಸಮಸ್ತ [ದೇವಾಸಶ್ಚ] ವಿದ್ವಾಂಸರೂ ಕೂಡ [ತ್ವಾ] ನಿನ್ನನ್ನು [ಅನ್ವಮದತ್] ಅನುಕೂಲತೆಯಿಂದ ಪ್ರಸನ್ನಗೊಳಿಸುವರು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಬಲವಂತನಾದ ಸೇನಾಪತಿಯು ದುಷ್ಟಜನರ ಮತ್ತು ದುಷ್ಟಶತ್ರುಗಳನ್ನು ಕೊಲ್ಲುತ್ತಾನೆ.

ಮತ್ತೆ ಅವನು ಹೇಗಿರುವನು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಶುಷ್ಣಂ ಪಿಪ್ರುಂ ಕುಯವಂ ವೃತ್ರಮಿಂದ್ರ ಯದಾವಧೀರ್ವಿ ಪುರಃ ಶಂಬರಸ್ಯ । ತನ್ನೋ
ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೮॥

ಪದಾರ್ಥ:- ಹೇ [ಇಂದ್ರ] ಸೇನಾಪತಿ! [ಯದಾ] ಯಾವಾಗ ಸೂರ್ಯನು [ಶುಷ್ಣಮ್] ಬಲವಾದ [ಕುಯವಂ] ಯಾವುದರಿಂದ ಗೋಧಿ ಮುಂತಾದ ಧಾನ್ಯಗಳು ಉಂಟಾಗುವವೋ ಮತ್ತು [ಪಿಪ್ರುಮ್] ಜಲ ಮೊದಲಾದ ವಸ್ತುಗಳನ್ನು ಪರಿಪೂರ್ಣಗೊಳಿಸುವನೋ ಆ [ವೃತ್ರಮ್] ಮೇಘ ಅಥವಾ [ಶಂಬರಸ್ಯ] ಅತ್ಯಂತ ಜೋರಾಗಿ ವರ್ಷಿಸುವ ಬಲವಾದ ಮೇಘದ [ಪುರಃ] ಪರಿಪೂರ್ಣವಾಗಿ ಹಚ್ಚಿರುವ ಕಾರ್ಮೋಡಗಳನ್ನು ನಷ್ಟಗೊಳಿಸುವನೋ ಹಾಗೆ ಶತ್ರುಗಳ ಪುರಗಳನ್ನು [ವಿ ಅವಧೀಃ] ನಾಶಗೊಳಿಸುವನೋ, [ತತ್] ಆಗ [ಮಿತ್ರಃ] ಮಿತ್ರನು, [ವರುಣಃ] ಉತ್ತಮ ಗುಣಯುಕ್ತನು [ಅದಿತಿಃ] ಅಂತರಿಕ್ಷ [ಸಿಂಧುಃ] ಸಮುದ್ರ [ಪೃಥಿವೀ] ಪೃಥಿವೀ [ಉತ] ಮತ್ತು [ದ್ಯೌಃ] ಸೂರ್ಯಲೋಕವು [ನಃ] ನಮಗೆ [ಮಾಮಹಂತಾಮ್] ಸತ್ಕಾರ ಮಾಡಲು ಹೇತುವಾಗುವುವು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನ ಗುಣವಿದೆಯೋ ಹಾಗೆ ಅವನ ಉಪಮೆ ಅಂದರೆ ಅನುಸಾರವಾಗಿ ತನ್ನ ಗುಣಗಳನ್ನು ಸೇವಕ ಮುಂತಾದವರಿಂದ ಮತ್ತು ಪೃಥಿವೀ ಮೊದಲಾದ ಲೋಕಗಳಿಂದ ಉಪಕಾರವನ್ನು ಪಡೆದು ಮತ್ತು ಶತ್ರುಗಳನ್ನು ಕೊಂದು ಮನುಷ್ಯರು ನಿತ್ಯವೂ ಸುಖಿಗಳಾಗಬೇಕು.

ಈ ಸೂಕ್ತದಲ್ಲಿ ಈಶ್ವರನು ಮತ್ತು ಸೇನಾಪತಿಯ ಗುಣಗಳ ವರ್ಣನೆಯಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಮೂರನೆಯ ಸೂಕ್ತ ಸಮಾಪ್ತ

ಸೂಕ್ತ ೧೦೪

ಮಂತ್ರಸಂಖ್ಯೆ ೯ । ಋಷಿಃ-ಕುತ್ಸ ಆಂಗಿರಸಃ । ದೇವತಾ-ಇಂದ್ರಃ । ಛಂದಃ-ತ್ರಿಷ್ಟುಪ್ । ಸ್ವರಃ-೨, ೪-೬ ಪಂಚಮಃ, ಧೈವತಃ.

ಪ್ರಥಮ ಮಂತ್ರದಲ್ಲಿ ಮತ್ತೆ ಸಭಾಪತಿಯು ಏನು ಮಾಡಬೇಕು ಎಂಬುದನ್ನು ಹೇಳಲಾಗಿದೆ.

ಯೋನಿಷ್ಟ ಇಂದ್ರ ನಿಷದೇ ಅಕಾರಿ ತಮಾ ನಿ ಷೀದ ಸ್ವಾನೋ ನಾರ್ವಾ ।
ವಿಮುಚ್ಯಾ ವಯೋಽವಸಾಯಾಶ್ವಾನ್ ದೋಷಾ ವಸ್ತೋರ್ವಹೀಯಸಃ ಪ್ರಪಿತ್ವೇ ॥೧॥

ಪದಾರ್ಥ:- ಹೇ [ಇಂದ್ರ] ನ್ಯಾಯಾಧೀಶ! [ತೇ] ನಿನಗೆ [ನಿಷದೇ] ಕುಳಿತುಕೊಳ್ಳುವುದಕ್ಕಾಗಿ [ಯೋನಿಃ] ಯಾವ ರಾಜ್ಯ ಸಿಂಹಾಸನವನ್ನು ನಾವು [ಅಕಾರಿ] ಮಾಡಿರುವೆವೋ, [ತಮ್] ಅದರ ಮೇಲೆ ನೀನು [ಆ ನಿಷೀದ] ಆಸೀನನಾಗು ಮತ್ತು [ಸ್ವಾನಃ] ಕೆನೆಯುತ್ತಿರುವ [ಅರ್ವಾ ನ] ಕುದುರೆಯಂತೆ [ಪ್ರಪಿತ್ವೇ] ಕಳುಹಿಸಲು ಯೋಗ್ಯವಾದ ಸ್ಥಳಗಳಿಗೆ ಯಾವುದೇ ಸಮಯದಲ್ಲಿ ಹೋಗಲು ಇಚ್ಛಿಸುವ ನೀನು [ವಯಃ] ಪಕ್ಷಿ ಅಥವಾ

ಅವಸ್ಥೆಯ **[ಅವಸಾಯ]** ರಕ್ಷಣೆ ಮೊದಲಾದ ವ್ಯವಹಾರಗಳಿಗಾಗಿ **[ಅಶ್ವಾನ್]** ಓಡುತ್ತಿರುವ ಕುದುರೆಗಳನ್ನು **[ವಿಮುಚ್ಯ]** ಬಿಟ್ಟು **[ದೋಷಾ]** ರಾತ್ರಿ ಅಥವಾ **[ವಸ್ತೋಃ]** ದಿನದಲ್ಲಿ **[ವಹೀಯಸಃ]** ಆಕಾಶ ಮಾರ್ಗದಲ್ಲಿ ಬಹಳ ಶೀಘ್ರವಾಗಿ ಸೇರಿಸುವಂತಹ ಅಗ್ನಿ ಮೊದಲಾದ ಪದಾರ್ಥಗಳನ್ನು ಜೋಡಿಸಿ ಅಂದರೆ, ವಿಮಾನಾದಿ ರಥಗಳನ್ನು ಅಗ್ನಿ, ಜಲ ಮೊದಲಾದವುಗಳ ಕಲೆಯಿಂದ ಯುಕ್ತಗೊಳಿಸಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ನ್ಯಾಯಾಧೀಶನು ನ್ಯಾಯಾಸನದ ಮೇಲೆ ಕುಳಿತು ಚಲಿಸುತ್ತಾ ಪ್ರಸಿದ್ಧ ಶಬ್ದಗಳಿಂದ ಅರ್ಥಿ-ಪ್ರತ್ಯರ್ಥಿ ಅಂದರೆ ವಾದಿಸಲು ಮತ್ತು ಇತರೆಡೆಯಿಂದ ವಾದಿಸುವವನಿಗೆ ಉತ್ತಮವಾಗಿ ತಿಳಿಸುತ್ತಾ ಪ್ರತಿದಿನವೂ ಯಥೋಚಿತವಾಗಿ ನ್ಯಾಯವನ್ನು ಮಾಡುತ್ತಾ ಅವರೆಲ್ಲರನ್ನೂ ಪ್ರಸನ್ನಗೊಳಿಸುತ್ತಾ ಸುಖಪಡಿಸಬೇಕು. ಮತ್ತು ಅತ್ಯಂತ ಪರಿಶ್ರಮದಿಂದ ವ್ಯವಸ್ಥೆಗಳಲ್ಲಿ ಅವಶ್ಯವಾಗಿ ಹಾನಿಯುಂಟಾಗುವುದು. ಹೇಗೆಂದರೆ ಅಂಚೆ ಮುಂತಾದವುಗಳಲ್ಲಿ ಅತಿಯಾಗಿ ಓಡುವುದರಿಂದ ಕುದುರೆಗಳು ಬಹಳವಾಗಿ ಸಾಯುತ್ತವೆ. ಇದನ್ನು ಆಲೋಚಿಸಿ ಬಹಳ ಬೇಗ ಹೋಗಿಬರಲು ಕ್ರಿಯಾಕೌಶಲದಿಂದ ಕೂಡಿದ ವಿಮಾನ ಮೊದಲಾದ ಯಾನಗಳನ್ನು ಅವಶ್ಯವಾಗಿ ರಚಿಸಬೇಕು.

ಮತ್ತೆ ಅವನು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಓ ತ್ಯೇ ನರ ಇಂದ್ರಮೂತಯೇ ಗುರ್ನೂ ಚಿತ್ ತಾನ್ ತ್ಸದ್ಯೋ ಅಧ್ವನೋ ಜಗಮ್ಯಾತ್ ।
ದೇವಾಸೋ ಮನ್ಯುಂ ದಾಸಸ್ಯ ಶ್ಚಮ್ನನ್ ತೇ ನ ಆ ವಕ್ಷನ್ ತ್ಸುವಿತಾಯ ವರ್ಣಮ್ ॥೨॥

ಪದಾರ್ಥ:- **[ತ್ಯೇ]** ಯಾವ **[ನರಃ]** ಸಜ್ಜನರ **[ಊತಯೇ]** ರಕ್ಷಣೆಗಾಗಿ **[ಇಂದ್ರಮ್]** ಸಭೆ-ಸೇನೆ ಮೊದಲಾದವುಗಳ ಅಧ್ಯಕ್ಷನ **[ಸದ್ಯಃ]** ಶೀಘ್ರವಾದ **[ಸ ಗುಃ]** ಎದುರಿಗೆ ಸೇರುವರೋ **[ತಾನ್]** ಅವರಿಗೆ **[ಚಿತ್]** ಕೂಡ ಈ ಸಭಾಪತಿಯು **[ಅಧ್ವನಃ]** ಶ್ರೇಷ್ಠಮಾರ್ಗಗಳಲ್ಲಿ **[ಜಗಮ್ಯಾತ್]** ನಿರಂತರವೂ ಕಳುಹಿಸುವನು. ಹಾಗೆಯೇ ಯಾವ **[ದೇವಾಸಃ]** ವಿದ್ವಾಂಸರು **[ದಾಸಸ್ಯ]** ತನ್ನ ಸೇವಕರ **[ಮನ್ಯುಮ್]** ಕ್ರೋಧವನ್ನು **[ಶ್ಚಮ್ನನ್]** ನಿವೃತ್ತಗೊಳಿಸಲಿ. **[ತೇ]** ಅವರು **[ನಃ]** ನಮ್ಮ ಜನರಿಗೆ **[ಸುವಿತಾಯ]** ಪ್ರೇರಣೆಗೆ ಪ್ರಾಪ್ತರಾದ ಸೇವಕರಿಗಾಗಿ **[ವರ್ಣಮ್]** ಆಜ್ಞಾಪಾಲನೆ ಮಾಡಲು **[ನು]** ಶೀಘ್ರವಾಗಿ **[ಆ ವಕ್ಷನ್]** ಕಳುಹಿಸಲಿ.

ಭಾವಾರ್ಥ:- ಪ್ರಜೆಗಳು ಅಥವಾ ಸೇನೆಯು, ಜನರು ಸತ್ಯದಿಂದಿರಲು ಸಭೆ ಮೊದಲಾದವರ ಅಧ್ಯಕ್ಷರ ಶರಣಾಗಬೇಕು. ಅವರನ್ನು ಆತನು ಯಥಾರೀತಿಯಾಗಿ ರಕ್ಷಿಸಬೇಕು. ಯಾವ ವಿದ್ವಾಂಸನು ವೇದ ಮತ್ತು ಉತ್ತಮ ಶಿಕ್ಷಣದಿಂದ ಮನುಷ್ಯರ ಕ್ರೋಧ ಮೊದಲಾದ ದೋಷಗಳನ್ನು ನಿವೃತ್ತಗೊಳಿಸಿ, ಶಾಂತಿ ಮೊದಲಾದ ಗುಣಗಳ ಸೇವನೆಯನ್ನು ಮಾಡುವನೋ, ಅವನೇ ಎಲ್ಲರಿಂದ ಸೇವೆಯನ್ನು ಪಡೆಯಲು ಯೋಗ್ಯನು.

ಈಗ ರಾಜ ಮತ್ತು ಪ್ರಜೆಗಳು ಪರಸ್ಪರ ಹೇಗೆ ವರ್ತಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಅವ ತ್ಮನಾ ಭರತೇ ಕೇತವೇದಾ ಅವ ತ್ಮನಾ ಭರತೇ ಫೇನಮುದನ್ ।
ಕ್ಷೀರೇಣ ಸ್ನಾತಃ ಕುಯವಸ್ಯ ಯೋಷೇ ಹತೇ ತೇ ಸ್ಯಾತಾಂ ಪ್ರವಣೇ ಶಿಫಾಯಾಃ ॥೩॥

ಪದಾರ್ಥ:- **[ಕೇತವೇದಾಃ]** ಯಾವನು ಧನ, ಪ್ರಾಣಗಳನ್ನು ಪಡೆದಿರುವನೋ ಆ ರಾಜಪುರುಷನು **[ತ್ಮನಾ]** ತನ್ನಿಂದ ಪ್ರಜೆಗಳ ಧನವನ್ನು **[ಅವ ಭರತೇ]** ತನ್ನದೆಂದು ತೆಗೆದುಕೊಳ್ಳುವನೋ ಅಂದರೆ ಅನ್ಯಾಯದಿಂದ

ಹಣವನ್ನು ತೆಗೆದುಕೊಳ್ಳುವನೋ, ಮತ್ತು ಯಾವ ಪ್ರಜೆಗಳು **[ತ್ಮನಾ]** ತಮ್ಮಿಂದ **[ಫೇನಮ್]** ಬಡ್ಡಿಯ ಮೇಲೆ ಬಡ್ಡಿ ತೆಗೆದುಕೊಂಡು ವರ್ತಿಸುವರೋ ಅಥವಾ ಬೇರೆ ರೀತಿ ಅನ್ಯಾಯದಿಂದ ವೃದ್ಧಿಸುತ್ತಾ ರಾಜಧನವನ್ನು **[ಅವ ಭರತೇ]** ಅನ್ಯಾಯದಿಂದ ತೆಗೆದುಕೊಳ್ಳುವರೋ, ಅವರೀರ್ವರೂ **[ಕ್ಷೀರೇಣ]** ನೀರಿನಿಂದ ತುಂಬಿದ **[ಉದನ್]** ಜಲಾಶಯ ಅಥವಾ ನದ-ನದಿಗಳ **[ಸ್ನಾತಃ]** ಸ್ನಾನ ಮಾಡುವರು. ಅದರಿಂದ, ಮೇಲಿನಿಂದ ಶುದ್ಧ ನೀರು ದೊರೆತರೂ ಕೂಡ ಹೇಗೆ **[ಕುವಯಸ್ಯ]** ಧರ್ಮ ಮತ್ತು ಅಧರ್ಮದಿಂದ ಸೇರಿದ ಯಾವ ವ್ಯವಹಾರವಿದೆಯೋ, ಆ ಪುರುಷನ **[ಯೋಷೇ]** ಹಿಂದು ಮುಂದಿನ ವ್ಯವಹಾರಗಳಲ್ಲಿ ಪರಸ್ಪರ ವಿರೋಧವನ್ನು ಮಾಡುತ್ತಿರುವ ಸ್ತ್ರೀಯರು, **[ಶಿಫಾಯಾಃ]** ಅತಿಯಾಗಿ ಕೊಚ್ಚುವಂತಿರುವ ನದಿಯ **[ಪ್ರವಣೇ]** ಪ್ರಬಲ ಪ್ರವಾಹದಲ್ಲಿ ಬಿದ್ದು **[ಹತೇ]** ನಷ್ಟವಾಗುವರೋ ಹಾಗೆ **[ಸ್ಯಾತಾಮ್]** ನಷ್ಟವಾಗುವರು.

ಭಾವಾರ್ಥ:- ಪ್ರಜಾವಿರೋಧಿಯಾದ ರಾಜನು ಅಥವಾ ರಾಜವಿರೋಧಿಗಳಾದ ಪ್ರಜೆಗಳು ಇರುತ್ತಾರೆ. ಇವರೀರ್ವರು ನಿಜವಾಗಿ ಸುಖೋನ್ನತಿಯನ್ನು ಪಡೆಯುವುದಿಲ್ಲ. ಮತ್ತು ರಾಜಪುರುಷರು ಪಕ್ಷಪಾತದಿಂದ ತಮ್ಮ ಪ್ರಯೋಜನಕ್ಕಾಗಿ ಪ್ರಜೆಗಳಿಗೆ ಪೀಡೆಯುಂಟುಮಾಡಿ ಧನ ಸಂಗ್ರಹಿಸುವರೋ ಹಾಗೂ ಪ್ರಜೆಗಳು ಕಳ್ಳತನ ಅಥವಾ ಕಪಟತ್ವ ಮೊದಲಾದವುಗಳಿಂದ ರಾಜಧನವನ್ನು ನಾಶ ಮಾಡುವರೋ, ಅವರೀರ್ವರೂ ಏಕಪುರುಷನ ಈರ್ವರು ಪತ್ನಿಯರು ಪರಸ್ಪರ ಅಂದರೆ ಒಬ್ಬಳು ಇನ್ನೊಬ್ಬಳೊಡನೆ ಕಲಹ ಮಾಡಿ ಕ್ರೋಧದಿಂದ ನದಿಯ ಮಧ್ಯೆ ಬಿದ್ದು ಸಾಯುವರೋ, ಹಾಗೆ ಶೀಘ್ರವಾಗಿ ನಾಶವಾಗುವರು. ಆದುದರಿಂದ ರಾಜನು ಪ್ರಜೆಗಳ ಜೊತೆಗೆ ಮತ್ತು ಪ್ರಜೆಗಳು ರಾಜನೊಂದಿಗೆ ವಿರೋಧವನ್ನು ಬಿಟ್ಟು ಪರಸ್ಪರ ಸಹಾಯಕರಾಗಿರುವಂತೆ ಸದಾ ತಮ್ಮ ವರ್ತನೆಯನ್ನಿಟ್ಟುಕೊಳ್ಳಬೇಕು.

ಮತ್ತೆ ಅವರು ಹೇಗೆ ವರ್ತಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಯುಯೋಪ ನಾಭಿರುಪರಸ್ಯಾಯೋಃ ಪ್ರ ಪೂರ್ವಾಭಿಸ್ತಿರತೇ ರಾಷ್ಟಿ ಶೂರಃ ।
ಅಂಜಸೀ ಕುಲಿಶೀ ವೀರಪತ್ನೀ ಪಯೋ ಹಿನ್ವಾನಾ ಉದಭಿರ್ಭರಂತೇ ॥೪॥

ಪದಾರ್ಥ:- ಯಾವಾಗ **[ಶೂರಃ]** ಹೆದರಿಕೆಯಿಲ್ಲದೆ ಶತ್ರುಗಳನ್ನು ಕೊಲ್ಲುವ ಶೂರವೀರನು **[ಪ್ರ ಪೂರ್ವಾಭಿಃ]** ಪ್ರಜೆಗಳೊಡನೆ **[ತಿರತೇ]** ರಾಜ್ಯವನ್ನು ಯಥಾರೀತಿ ನ್ಯಾಯದಿಂದ ಪಾಲಿಸುತ್ತಾ ಮತ್ತು **[ರಾಷ್ಟಿ]** ಆ ರಾಜ್ಯದಲ್ಲಿ ಪ್ರಕಾಶಿತನಾಗುವನೋ, ಆಗ **[ಆಯೋಃ]** ಪಡೆಯಲು ಯೋಗ್ಯನಾದ **[ಉಪರಸ್ಯ]** ಮೇಘದ **[ನಾಭಿಃ]** ನಾಲ್ಕು ದಿಕ್ಕುಗಳಿಂದಲೂ ಮುಚ್ಚಿಕೊಂಡಿರುವ ಮೇಘಗಳ ಸಮೂಹದ ಬಂಧನವು **[ಯುಯೋಪ]** ಎಲ್ಲರನ್ನು ಮೋಹಗೊಳಿಸುವುದು ಅಂದರೆ ರಾಜಧರ್ಮದಿಂದ ಪ್ರಜೆಗಳ ಸುಖಕ್ಕಾಗಿ ಜಲವರ್ಷವೂ ಉಂಟಾಗುವುದು. ಅದು ಸ್ವಲ್ಪವೂ ಅಲ್ಲ. ಆದರೆ, **[ಅಂಜಸೀ]** ಪ್ರಸಿದ್ಧ **[ಕುಲಿಶೀ]** ಸೂರ್ಯನ ವಜ್ರರೂಪದ ಕಿರಣಗಳಿಂದ ಎಲ್ಲ ರೀತಿಯಿಂದಲೂ ಇರುವ ಅಂದರೆ ಸೂರ್ಯನ ವಿಕಟರೂಪದ ಸುಡುತ್ತಿರುವುದರಿಂದ, ಒಣಗುವುದರಿಂದ ತಪ್ಪಿಸಿಕೊಂಡ **[ವೀರಪತ್ನೀ]** ದೊಡ್ಡ ದೊಡ್ಡ ನದಿಗಳು ಅವುಗಳಿಂದ ದೊಡ್ಡ ವೀರ ಸಮುದ್ರಗಳೇ ಆಗಿವೆಯೋ **[ಪಯಃ]** ಜಲವನ್ನು **[ಹಿನ್ವಾನಾಃ]** ಪ್ರೀತಿಕಾರಕವಾಗಿ **[ಉದಭಿಃ]** ಜಲಗಳಿಂದ **[ಭರಂತೇ]** ತುಂಬಿಸುವುವು.

ಭಾವಾರ್ಥ:- ಉತ್ತಮ ರಾಜ್ಯದಿಂದ ಎಲ್ಲ ಸುಖವೂ ಪ್ರಜೆಗಳಿಗೆ ದೊರೆಯುತ್ತದೆ. ಮತ್ತು ಸುಖವಿಲ್ಲದ ರಾಜ್ಯದಲ್ಲಿ ದುಃಖ ಮತ್ತು ದುರ್ಭಿಕ್ಷ ಮೊದಲಾದ ಉಪದ್ರವಗಳು ಉಂಟಾಗುವುವು. ಆದುದರಿಂದ ವೀರ ಪುರುಷರು ಉತ್ತಮ ರೀತಿಯಿಂದ ರಾಜ್ಯಪಾಲನೆ ಮಾಡಬೇಕು.

ಮತ್ತೆ ಅವರು ಹೇಗೆ ವರ್ತಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಪ್ರತಿ ಯತ್ ಸ್ಯಾ ನೀಥಾದರ್ಶಿ ದಸ್ಯೋ-ರೋಕೋ ನಾಚ್ಛಾ ಸದನಂ ಜಾನತೀ ಗಾತ್ ।
ಅಧ ಸ್ಮಾ ನೋ ಮಘವಞ್ಚರ್ಕೃತಾದಿ-ನ್ಮಾ ನೋ ಮಘೇವ ನಿಷ್ಷಪೀ ಪರಾ ದಾಃ ॥೫॥

ಪದಾರ್ಥ:- ಸಭೆ ಮೊದಲಾದವುಗಳ ಸ್ವಾಮಿಯು **[ಯತ್]** ಯಾವ **[ನೀಥಾ]** ನ್ಯಾಯ ರಕ್ಷಣೆಯನ್ನು ಪಡೆದ ಪ್ರಜೆಗಳು **[ದಸ್ಯೋಃ]** ಪರರ ಹಣವನ್ನು ದೋಚುವ ದರೋಡೆಕೋರರು **[ಸಕಃ]** ಮನೆ **[ನ]** ಯಂತೆ ರಕ್ಷಿಸಿದಂತೆ **[ಅದರ್ಶಿ]** ಕಾಣುವುದು **[ಸ್ಯಾ]** ಅದನ್ನು **[ಅಚ್ಛ]** ಉತ್ತಮವಾಗಿ **[ಜಾನತೀ]** ತಿಳಿಯುತ್ತಾ **[ಸದನಮ್]** ಮನೆಯ **[ಪ್ರತಿಗಾತ್]** ಪ್ರಾಪ್ತಿಯಾಗುವುದು. ಅಂದರೆ ಮನೆಗೆ ಹಿಂತಿರುಗುವುದು. ಹೇ **[ಮಘವನ್]** ಸಭೆ ಮೊದಲಾದವುಗಳ ಸ್ವಾಮಿಯೇ! **[ನಿಷ್ಷಪೀ]** ಸ್ತ್ರೀಯೊಡನೆ ನಿರಂತರವಾಗಿರುವ ನೀನು **[ನಃ]** ನಮ್ಮನ್ನು **[ಮಘೇವ]** ಧನದಂತೆ **[ಮಾ ಪರಾ ದಾಃ]** ನಷ್ಟಗೊಳಿಸಬೇಡ. **[ಅಧ]** ನಂತರ **[ನಃ]** ನಮ್ಮನ್ನು **[ಚಕೃತಾತ್]** ನಿರಂತರವೂ ಮಾಡಬೇಕಾದ ಕೆಲಸಗಳಲ್ಲಿ **[ಇತ್]** ವಿರುದ್ಧವಾಗಿ ಮಾಡಿಸಬೇಡ, **[ಸ್ಮ]** ತೋರಿಸು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ದೃಢವಾಗಿಯೂ, ಉತ್ತಮವಾಗಿ ರಕ್ಷಣೆಯನ್ನು ಕೊಡುವ ಮನೆಯು ಕಳ್ಳರು ಮತ್ತು ಸೆಕೆ-ಚಳಿ-ಮಳೆಗಳಿಂದ ಮನುಷ್ಯರನ್ನೂ, ಧನವನ್ನು ರಕ್ಷಿಸುವಂತೆ ಸಭಾಪತಿಯಾದ ರಾಜನಿಂದ ಉತ್ತಮವಾಗಿ ಪಾಲಿಸಲ್ಪಟ್ಟ ಪ್ರಜೆಗಳು ಅವನನ್ನು ಸಹ ಪಾಲಿಸುವರು. ಹೇಗೆ ಕಾಮುಕರು ತಮ್ಮ ಶರೀರ, ಧರ್ಮ, ವಿದ್ಯೆ ಮತ್ತು ಉತ್ತಮ ಆಚರಣೆಯನ್ನು ಹಾಳು ಮಾಡಿಕೊಳ್ಳುವರೋ ಮತ್ತು ಉತ್ತಮವಾಗಿ ಪಡೆದ ಧನವನ್ನು ಮನುಷ್ಯರು ಈರ್ಷ್ಯೆ ಮತ್ತು ಅಭಿಮಾನದಿಂದ ಅನ್ಯಾಯಗಳಲ್ಲಿ ಸಿಲುಕಿ ಹಾಳು ಮಾಡಿಕೊಳ್ಳುವರೋ, ಹಾಗೆ ರಾಜಪುರುಷರು ಪ್ರಜೆಗಳನ್ನು ನಾಶಗೊಳಿಸದಿರಲಿ. ಆದರೆ ಪ್ರಜೆಗಳಿಗೆ ಮಾಡಿದ ನಿರಂತರ ಉಪಕಾರಗಳನ್ನು ತಿಳಿದು ಅಭಿಮಾನವನ್ನು ಬಿಟ್ಟು ಮತ್ತು ಪ್ರೇಮವನ್ನು ಹೆಚ್ಚಿಸಿ ಅವರನ್ನು ಪ್ರತಿದಿನವೂ ಪಾಲಿಸಬೇಕು ಮತ್ತು ದುಷ್ಟ ಶತ್ರುಗಳಿಗೆ ಹೆದರಿ ಪಲಾಯನ ಮಾಡಬಾರದು.

ಮತ್ತೆ ಅವರು ಹೇಗೆ ತಮ್ಮ ವರ್ತನೆಯನ್ನಿಟ್ಟುಕೊಳ್ಳಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಸ ತ್ವಂ ನ ಇಂದ್ರ ಸೂರ್ಯೇ ಸೋ ಅಪ್ಸ್ವ-ನಾಗಾಸ್ತ್ವ ಆ ಭಜ ಜೀವಶಂಸೇ ।
ಮಾಂತರಾಂ ಭುಜಮಾ ರೀರಿಷೋ ನಃ ಶ್ರದ್ಧಿತಂ ತೇ ಮಹತ ಇಂದ್ರಿಯಾಯ ॥೬॥

ಪದಾರ್ಥ:- ಹೇ [ಇಂದ್ರ] ಸಭೆಯ ಸ್ವಾಮಿಯೇ! ಯಾವ **[ತೇ]** ನಿನ್ನ **[ಮಹತೇ]** ಮಹತ್ತು ಮತ್ತು ಪ್ರಶಂಸೆಗೆ ಯೋಗ್ಯವಾದುದು **[ಇಂದ್ರಿಯಾಯ]** ಧನಕ್ಕಾಗಿ **[ನಃ]** ನಮ್ಮ **[ಶ್ರದ್ಧಿತಮ್]** ಶ್ರದ್ಧಾಭಾವವಿದೆಯೋ, **[ಸಃ]** ಆ **[ತ್ವಮ್]** ನೀನು **[ನಃ]** ನಮಗೆ **[ಭುಜಮ್]** ಭೋಗಿಸಲು ಯೋಗ್ಯವಾದ ಪ್ರಜೆಗಳ **[ಅಂತರಮ್]** ಮಧ್ಯದಲ್ಲಿ **[ಮಾ ಅರೀರಿಷಃ]** ಕೊಲ್ಲಬೇಡ ಮತ್ತು **[ಸಃ]** ಆ ನೀನು **[ಸೂರ್ಯೇ]** ಸೂರ್ಯ, ಪ್ರಾಣ **[ಅಪ್ಸು]** ಜಲಗಳನ್ನು **[ಅನಾಗಾಸ್ತ್ವೇ]** ಉತ್ತಮವಾಗಿ ಭಜಿಸು, ಸೇವಿಸು.

ಭಾವಾರ್ಥ:- ಸಭಾಪತಿಗಳಿಗೆ ಪ್ರಜೆಗಳು ಶ್ರದ್ಧೆಯಿಂದ ರಾಜ್ಯ ವ್ಯವಹಾರದ ಸಿದ್ಧಿಗಾಗಿ ಬಹಳ ಧನ [ತೆರಿಗೆ] ಕೊಡಲಿ. ಅವರು ಎಂದಿಗೂ ಕೊಲ್ಲಲು ಯೋಗ್ಯರಲ್ಲ. ಮತ್ತು ಪ್ರಜೆಗಳಲ್ಲಿ ಯಾವ ಕಳ್ಳರು ಮತ್ತು ದರೋಡೆಕಾರರು ಇರುವರೋ ಅವರು ತಾಡನೆಗೆ ಯೋಗ್ಯರು. ಸೇನಾಪತಿಯ ಅಧಿಕಾರವನ್ನು ಪಡೆದು ಸೂರ್ಯನಂತೆ ನ್ಯಾಯವಿದ್ಯೆಯನ್ನು

ಪ್ರಕಾಶಪಡಿಸುವಿಕೆ, ಜಲದಂತೆ ಶಾಂತಿ ಮತ್ತು ತೃಪ್ತಿಗೊಳಿಸಿ ಅನ್ಯಾಯ ಮತ್ತು ಅಪರಾಧಗಳನ್ನು ತ್ಯಜಿಸಿ ಮತ್ತು ಪ್ರಜೆಗಳ ಪ್ರಶಂಸೆಗೆ ಯೋಗ್ಯವಾದ ವ್ಯವಹಾರಗಳನ್ನು ಮಾಡಿ ರಾಜ್ಯವನ್ನು ಪ್ರಸನ್ನಗೊಳಿಸಬೇಕು.

ಮತ್ತೆ ಇವರೀರ್ವರೂ ಪರಸ್ಪರ ಎಂತಹ ಪ್ರತಿಜ್ಞೆಯನ್ನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಅಧಾ ಮನ್ಯೇ ಶ್ರತ್ ತೇ ಅಸ್ಮಾ ಅಧಾಯಿ ವೃಷಾ ಚೋದಸ್ವ ಮಹತೇ ಧನಾಯ । ಮಾ
ನೋ ಅಕೃತೇ ಪುರುಹೂತ ಯೋನಾ-ವಿಂದ್ರ ಕ್ಷುಧ್ಯದ್ಭ್ಯೋ ವಯ ಆಸುತಿಂ ದಾಃ ॥೭॥

ಪದಾರ್ಥ:- ಹೇ **[ಪುರುಹೂತ]** ಅನೇಕರಿಂದ ಸತ್ಕಾರವನ್ನು ಪಡೆಯುತ್ತಾ [ಇಂದ್ರ] ಪರಮೈಶ್ವರ್ಯವನ್ನು ಕೊಡುವ ಮತ್ತು ಶತ್ರುಗಳನ್ನು ನಾಶಮಾಡುವ ಸಭಾಪತಿಯೇ! **[ವೃಷಾ]** ಅತಿಯಾದ ಸುಖವನ್ನು ಕೊಡುವ ನೀನು **[ಅಕೃತೇ]** ಆಲೋಚಿಸದೆಯೇ **[ಯೋನೌ]** ನಿಮಿತ್ತದಲ್ಲಿ **[ನಃ]** ನಮ್ಮನ್ನು **[ವಯಃ]** ಅಭೀಷ್ಟ ಅನ್ನ ಮತ್ತು **[ಆಸುತಿಮ್]** ಸಂತಾನವನ್ನು **[ಮಾ ದಾಃ]** ಭಿನ್ನ ಭಿನ್ನಗೊಳಿಸಬೇಡ ಮತ್ತು **[ಕ್ಷುಧ್ಯದ್ಭ್ಯಃ]** ಹಸಿವು - ನೀರಡಿಕೆಗಳಿಗಾಗಿ ಅನ್ನ, ನೀರು ಮೊದಲಾದ **[ಅಧಾಯೀ]** ಮನೆಗಳನ್ನು ನಮಗೆ **[ಮಹತೇ]** ಬಹಳವಾಗಿ **[ಧನಾಯ]** ಧನಕ್ಕಾಗಿ **[ಚೋದಸ್ವ]** ಪ್ರೇರಣೆ ನೀಡು. **[ಅಧ]** ಇದರ ನಂತರ **[ಅಸ್ಮೈ]** ಈ ಕೆಲಸಗಳಲ್ಲಿ **[ತೇ]** ನಿನ್ನ **[ಶ್ರತ್]** ಶ್ರದ್ಧೆ ಅಥವಾ ಸತ್ಯದ ಆಚರಣೆಯನ್ನು **[ಮನ್ಯೇ]** ಸ್ವೀಕರಿಸುತ್ತೇನೆ.

ಭಾವಾರ್ಥ:- ನ್ಯಾಯಾಧೀಶ ಮೊದಲಾದ ರಾಜಪುರುಷರು, ಯಾವನು ಅಪರಾಧವನ್ನು ಮಾಡಿಲ್ಲವೋ ಅವರನ್ನು ಎಂದಿಗೂ ಶಿಕ್ಷಿಸಬಾರದು. ಪ್ರತಿದಿನವೂ ಅವರಿಂದ ರಾಜ್ಯದ ತೆರಿಗೆ ಹಣವನ್ನು ಪಡೆಯಬೇಕು ಹಾಗೂ ಅವರನ್ನು ಉತ್ತಮವಾಗಿ ಪಾಲಿಸಿ, ಉನ್ನತಿಯನ್ನಿತ್ತು ವಿದ್ಯೆ ಮತ್ತು ಪುರುಷಾರ್ಥದಲ್ಲಿ ಪ್ರವೃತ್ತಗೊಳಿಸಿ ಆನಂದಿತರನ್ನಾಗಿ ಮಾಡಬೇಕು. ಸಭಾಪತಿ ಮೊದಲಾದವರ ಈ ಸತ್ಯಕೆಲಸಗಳನ್ನು ಪ್ರಜೆಗಳು ಯಾವಾಗಲೂ ಒಪ್ಪಬೇಕು.

ಮತ್ತೆ ಇವರು ಎಂತಹ ಪ್ರತಿಜ್ಞೆ ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಲಾಗಿದೆ.

ಮಾ ನೋ ವಧೀರಿಂದ್ರ ಮಾ ಪರಾ ದಾ ಮಾ ನಃ ಪ್ರಿಯಾ ಭೋಜನಾನಿ ಪ್ರ ಮೋಷೀಃ ।
ಆಂಡಾ ಮಾ ನೋ ಮಘವಞ್ಛಕ್ರ ನಿರ್ಭೇ-ನ್ಮಾ ನಃ ಪಾತ್ರಾ ಭೇತ್ ಸಹಜಾನುಷಾಣಿ ॥೮॥

ಪದಾರ್ಥ:- ಹೇ **[ಮಘವನ್]** ಪ್ರಶಂಸಿತ ಧನವುಳ್ಳವನೇ! **[ಶಕ್ರ]** ಎಲ್ಲ ಕೆಲಸಗಳನ್ನು ಮಾಡುವುದರಲ್ಲಿ ಸಮರ್ಥನೂ, [ಇಂದ್ರ] ಶತ್ರುಗಳನ್ನು ನಾಶಮಾಡುವ ಸಭೆಯ ಸ್ವಾಮಿಯಾದ ನೀನು **[ನಃ]** ಪ್ರಜೆಗಳಾದ ನಮ್ಮನ್ನು **[ಮಾ ವಧೀಃ]** ಕೊಲ್ಲಬೇಡ. **[ಮಾ ಪರಾ ದಾಃ]** ಅನ್ಯಾಯವಾಗಿ ದಂಡಿಸಬೇಡ, ಸ್ವಾಭಾವಿಕ ಕೆಲಸ ಮತ್ತು **[ನಃ]** ನಮ್ಮ **[ಸಹಜಾನುಷಾಣಿ]** ಜನ್ಮದಿಂದಲೇ ಸಿದ್ಧವಾಗಿರುವುದನ್ನು ಈಗ **[ಪ್ರಿಯಾ]** ಪ್ರಿಯವಾದ **[ಭೋಜನಾನಿ]** ಭೋಜನ ಪದಾರ್ಥಗಳನ್ನು **[ಮಾ ಪ್ರ ಮೋಷೀಃ]** ಕಳ್ಳತನ ಮಾಡಿಸಬೇಡ. **[ನಃ]** ನಮ್ಮ **[ಅಂಡಾ]** ಅಂಡದಂತೆ ಗರ್ಭದಲ್ಲಿರುವ ಆ ಪ್ರಾಣಿಗಳನ್ನು **[ಮಾ ನಿರ್ಭೇತ್]** ಸೀಳಬೇಡ. **[ನಃ]** ನಮ್ಮ **[ಪಾತ್ರಾ]** ಚಿನ್ನ ಬೆಳ್ಳಿಯ ಪಾತ್ರೆಗಳನ್ನು **[ಮಾ ಭೇತ್]** ಹಾಳು ಮಾಡಬೇಡ.

ಭಾವಾರ್ಥ:- ಹೇ ಸಭಾಪತಿ! ನೀನು ಅನ್ಯಾಯವಾಗಿ ಯಾರನ್ನೂ ದಂಡಿಸದೆ, ಯಾವ ಸಜ್ಜನರಾದ ಧಾರ್ಮಿಕರಿಂದ ವಿಮುಖನಾಗದೆ, ಕಳ್ಳತನ ಮೊದಲಾದ ದೋಷರಹಿತನಿಗೆ ಪರಮೇಶ್ವರನು ದಯೆತೋರಿಸುವಂತೆ ನೀನು ರಾಜ್ಯದ ಕೆಲಸಗಳಲ್ಲಿ ಪ್ರವೃತ್ತನಾಗು ಹಾಗೆ ಮಾಡದಿದ್ದಲ್ಲಿ ರಾಜನಿಂದ ಪ್ರಜೆಗಳು ಸಂತೋಷವನ್ನು ಪಡೆಯಲಾರರು.

ಪ್ರಜೆಗಳು ಈ ಸಭಾಪತಿಯೊಂದಿಗೆ ಏನು ಪ್ರತಿಜ್ಞೆಯನ್ನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ

ಅರ್ವಾಙ್ಙೇಹಿ ಸೋಮಕಾಮಂ ತ್ವಾಹು-ರಯಂ ಸುತಸ್ತಸ್ಯ ಪಿಬಾ ಮದಾಯ ।

ಉರುವ್ಯಚಾ ಜಠರ ಆ ವೃಷಸ್ವ ಪಿತೇವ ನಃ ಶೃಣುಹಿ ಹೂಯಮಾನಃ ॥೯॥

ಪದಾರ್ಥ:- ಹೇ ಸಭಾಧ್ಯಕ್ಷನೇ! ಯಾವುದರಿಂದ [ತ್ವಾ] ನಿನ್ನನ್ನು [ಸೋಮಕಾಮಮ್] ಕುಟ್ಟಿ ತೆಗೆದ ಪದಾರ್ಥಗಳ ರಸವನ್ನು ಬಯಸುವವರು [ಆಹುಃ] ತಿಳಿಸುವರೋ, ಅದರಿಂದ ನೀನು [ಅರ್ವಾಙ್] ಅಂತರಂಗ ವ್ಯವಹಾರಗಳಲ್ಲಿ [ಆ ಇಹಿ] ಬನ್ನಿರಿ, [ಅಯಮ್] ಈ ಯಾವ [ಸುತಃ] ಹಿಂಡಿ ತೆಗೆದ ಪದಾರ್ಥಗಳ ರಸವಿದೆಯೋ, [ತಸ್ಯ] ಅದನ್ನು [ಮದಾಯ] ಹರ್ಷಕ್ಕಾಗಿ [ಪಿಬ] ಕುಡಿಯಿರಿ. [ಉರುವ್ಯಚಾಃ] ಅದಕ್ಕೆ ಬಹುವಾಗಿ ಮತ್ತು ಅನೇಕ ಪ್ರಕಾರದ ಪೂಜೆ ಮತ್ತು ಸತ್ಕಾರವಿದೆ. ಅದು ನಿನ್ನ [ಜಠರೇ] ಯಾವುದರಿಂದ ಎಲ್ಲ ವ್ಯವಹಾರಗಳು ನಡೆಯುತ್ತವೋ, ಆ ಹೊಟ್ಟೆಯಲ್ಲಿ [ಆ ವೃಷಸ್ವ] ಆಸೇಚನ ಮಾಡು ಅಂದರೆ ಆ ಪದಾರ್ಥಗಳನ್ನು ಉತ್ತಮವಾಗಿ ಕುಡಿ ಹಾಗೂ ನಮ್ಮಿಂದ [ಹೂಯಮಾನಃ] ಪ್ರಾರ್ಥನೆಗೆ ಒಳಗಾಗುತ್ತಾ ನೀನು [ಪಿತೇವ] ಹೇಗೆ ಪ್ರೇಮಿಸುವ ತಂದೆಯು ಪುತ್ರನ ಮಾತನ್ನು ಕೇಳುವನೋ, ಹಾಗೆಯೇ [ನಃ] ನಮ್ಮ ಪ್ರಾರ್ಥನೆಯನ್ನು [ಶೃಣುಹಿ] ಕೇಳು.

ಭಾವಾರ್ಥ:- ಪ್ರಜೆಗಳು ಸಭಾಪತಿ ಮೊದಲಾದ ರಾಜಪುರುಷರನ್ನು ಭೋಜನ, ವಸ್ತ್ರ, ಧನ, ಯಾನ ಮತ್ತು ಮಧುರವಾದ ವಚನಗಳಿಂದ ಯಾವಾಗಲೂ ಆನಂದಿತರನ್ನಾಗಿ ಮಾಡುತ್ತಿರಬೇಕು. ಮತ್ತು ರಾಜಪುರುಷರು ಕೂಡ ಪ್ರಜೆಗಳನ್ನು ಪುತ್ರರಂತೆ ನಿರಂತರವೂ ಪಾಲಿಸಬೇಕು.

ಈ ಸೂಕ್ತದಲ್ಲಿ ಸಭಾಪತಿಯಾದ ರಾಜನು ಮತ್ತು ಪ್ರಜೆಗಳು ಮಾಡಲು ಯೋಗ್ಯವಾದ ವ್ಯವಹಾರಗಳ ವರ್ಣನೆಯಿಂದ ಈ ಸೂಕ್ತಾರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ನಾಲ್ಕನೆಯ ಸೂಕ್ತ ಸಮಾಪ್ತ

ಸೂಕ್ತ ೧೦೫

ಮಂತ್ರಸಂಖ್ಯೆ ೧೯ । ಋಷಿಃ - ತ್ರಿತ ಆಪ್ತ್ಯಃ, ಕುತ್ಸ ಆಂಗಿರಸೋ ವಾ । ದೇವತಾ - ವಿಶ್ವೇ ದೇವಾಃ ।
ಛಂದಃ - ಪಂಕ್ತಿಃ, ೮ ಯವಮಧ್ಯಾ ಮಹಾಬೃಹತೀ, ೧೯ ತ್ರಿಷ್ಟುಪ್ । ಸ್ವರಃ - ೧, ೨, ೧೨, ೧೬, ೧೭, ೩, ೪, ೬, ೯, ೧೫, ೧೮ ೮, ೧೦, ೧೧, ೧೪ ಪಂಚಮಃ, ೫, ೭, ೧೩ ಮಧ್ಯಮಃ, ೧೯ ಧೈವತಃ.

ಈ ಸೂಕ್ತದ ಮೊದಲ ಮಂತ್ರದಲ್ಲಿ ಚಂದ್ರಲೋಕವು ಹೇಗಿದೆ ಈ ವಿಷಯವನ್ನು ಹೇಳಿದೆ.

ಚಂದ್ರಮಾ ಅಪ್ಸ್ವಂ೧ತರಾ ಸುಪರ್ಣೋ ಧಾವತೇ ದಿವಿ । ನ ವೋ ಹಿರಣ್ಯನೇಮಯಃ

ಪದಂ ವಿಂದಂತಿ ವಿದ್ಯುತೋ ವಿತ್ತಂ ಮೇ ಅಸ್ಯ ರೋದಸೀ ॥೧॥

ಪದಾರ್ಥ:- ಹೇ [ರೋದಸೀ] ಸೂರ್ಯಪ್ರಕಾಶ ಅಥವಾ ಭೂಮಿಯಂತಿರುವ ರಾಜ ಮತ್ತು ಪ್ರಜೆಗಳು [ಮೇ] ಪದಾರ್ಥವಿದ್ಯೆಯನ್ನು ತಿಳಿದ ನನ್ನಂತಹವನ ಉತ್ತೇಜನದಿಂದ [ಅಪ್ಸು] ಪ್ರಾಣರೂಪ ವಾಯುವಿನ [ಅಂತಃ] ಮಧ್ಯೆ [ಸುಪರ್ಣಃ] ಉತ್ತಮವಾಗಿ ಚಲಿಸುತ್ತಾ [ಚಂದ್ರ] ಆನಂದವನ್ನು ಕೊಡುವ ಚಂದ್ರಲೋಕವು [ದಿವಿ] ಸೂರ್ಯನ ಪ್ರಕಾಶದಲ್ಲಿ [ಆ ಧಾವತೇ] ಅತಿಶೀಘ್ರವಾಗಿ ತಿರುಗುತ್ತಿರುವುದು ಮತ್ತು [ಹಿರಣ್ಯನೇಮಯಃ] ಅದರ ಚಿನ್ನದ ರೂಪದಂತಿರುವ ಹೊಳಪು ಇದೆಯೋ [ವಿದ್ಯುತಃ] ವಿದ್ಯುತ್ತಿನಂತೆ ಓಡುತ್ತಿರುವುದು [ವಃ] ನಿಮಗೆ

[ಪದಮ್] ಆಲೋಚಿಸಬೇಕಾದ ಶಿಲ್ಪ ನೈಪುಣ್ಯತೆಯನ್ನು [ನ ವಿಂದಂತಿ] ಕೂಡಲಾರದು ಅಂದರೆ, ನೀವು ಅದನ್ನು ಯಥೋಚಿತವಾದ ಕಾರ್ಯಗಳಲ್ಲಿ ತರಲಾರಿರಿ. [ಅಸ್ಯ] ಈ ಪೂರ್ವೋಕ್ತ ವಿಷಯವನ್ನು ನೀವು [ವಿತ್ತಮ್] ತಿಳಿಯಿರಿ.

ಭಾವಾರ್ಥ:- ಹೇ ರಾಜಾ ಮತ್ತು ಪ್ರಜೆಗಳೇ! ಚಂದ್ರನ ಬೆಳಕು ಮತ್ತು ಅಂತರಿಕ್ಷದ ಜಲದ ಸಂಯೋಗದಿಂದ ಶೀತಲತ್ವದ ಪ್ರಕಾಶವಾಗುವುದೆಂದು ತಿಳಿದು ಹಾಗೂ ವಿದ್ಯುತ್ತಿನಲ್ಲಿ ಯಾವ ಥಳುಕು ಬಳುಕುಗಳಿವೆಯೋ ಅವುಗಳನ್ನು ಕಣ್ಣುಗಳಿಂದ ನೋಡಲು ಯೋಗ್ಯವಾಗಿವೆ ಮತ್ತು ಅವುಗಳಿಂದ ಹೊರಡುವ ಚಿಹ್ನೆಯನ್ನು ಕೂಡ ಕಣ್ಣುಗಳಿಂದ ನೋಡಲಾಗುವುದಿಲ್ಲ. ಇವೆಲ್ಲವನ್ನೂ ತಿಳಿದು ಸುಖವನ್ನು ಉತ್ಪನ್ನಮಾಡಿರಿ.

ಮತ್ತೆ ಆ ರಾಜಪ್ರಜೆಗಳು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಅರ್ಥಮಿದ್ ವಾ ಉ ಅರ್ಥಿನ ಆ ಜಾಯಾ ಯುವತೇ ಪತಿಮ್ । ತುಂಜಾತೇ ವೃಷ್ಣ್ಯಂ

ಪಯಃ ಪರಿದಾಯ ರಸಂ ದುಹೇ ವಿತ್ತಂ ಮೇ ಅಸ್ಯ ರೋದಸೀ ॥೨॥

ಪದಾರ್ಥ:- ಹೇಗೆ [ಅರ್ಥಿನಃ] ಪ್ರಶಂಸಿತ ಪ್ರಯೋಜನವುಳ್ಳ ಜನರು [**ಅರ್ಥಮ್**] ಯಾವುದನ್ನು ಪಡೆಯುತ್ತಾರೋ, ಅದನ್ನು [ವೈ] ನಿಶ್ಚಯವಾಗಿ [**ಪತಿಮ್**] ಪತಿಯ [**ಜಾಯಾ**] ಸಂಬಂಧವಿರುವ ಸ್ತ್ರೀಯಂತೆ, [ಆ **ಯುವತೇ**] ಉತ್ತಮವಾಗಿ ಸಂಬಂಧವಿಟ್ಟುಕೊಳ್ಳುತ್ತಾರೆ. [ಉ] ಅಥವಾ ಹೇಗೆ ರಾಜಾ-ಪ್ರಜೆಗಳು ಯಾವ [**ವೃಷ್ಣ್ಯಮ್**] ಶ್ರೇಷ್ಠರಲ್ಲಿ ಉತ್ತಮರು [**ಪಯಃ**] ಅನ್ನ [ಇತ್] ಮತ್ತು [**ರಸಮ್**] ಸ್ವಾದಿಷ್ಠ ಓಷಧಿಯಿಂದ ತೆಗೆದ ರಸವನ್ನು [**ಪರಿದಾಯ**] ಎಲ್ಲ ಕಡೆಗಳಿಂದ ನೋಡಿ ದುಃಖಗಳನ್ನು [**ತುಂಜಾತೇ**] ದೂರಮಾಡುವರೋ ಹಾಗೆಯೇ ಅವುಗಳನ್ನು ಕೂಡ ನಾನು [**ದುಹೇ**] ಹೆಚ್ಚಿಸುತ್ತೇನೆ. ಉಳಿದ ಅರ್ಥವನ್ನು ಮೊದಲ ಮಂತ್ರದಂತೆ ತಿಳಿಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸ್ತ್ರೀಯು ತನ್ನ ಇಚ್ಛೆಗೆ ಅನುಕೂಲವಂತನಾದ ಪತಿ, ಅಥವಾ ಪತಿಯು ತನ್ನ ಇಚ್ಛೆಗೆ ಅನುಕೂಲವಾದ ಪತ್ನಿಯನ್ನು ಪಡೆದು ಪರಸ್ಪರ ಆನಂದಿತರಾಗುವರೋ, ಹಾಗೆಯೇ ಪ್ರಯೋಜನವನ್ನು ಸಿದ್ಧಪಡಿಸುವುದರಲ್ಲಿ ತತ್ಪರರು ವಿದ್ಯುತ್, ಪೃಥಿವೀ ಮತ್ತು ಸೂರ್ಯಪ್ರಕಾಶದ ವಿದ್ಯೆಯ ಗ್ರಹಣದಿಂದ ಪದಾರ್ಥಗಳನ್ನು ಪ್ರಾಪ್ತಿಮಾಡಿಕೊಂಡು ಸದಾ ಸುಖವನ್ನು ಕೊಡುವರು. ಈ ವಿದ್ಯೆಯನ್ನು ತಿಳಿದವರ ಸಂಗದ ಹೊರತು ಈ ವಿದ್ಯೆಯನ್ನು ಪಡೆಯುವುದು ಬಹಳ ಕಠಿಣವು ಮತ್ತು ದುಃಖದ ನಾಶವು ಕೂಡ ಉತ್ತಮ ರೀತಿಯಲ್ಲಿ ಆಗುವುದಿಲ್ಲ. ಆದುದರಿಂದ ಎಲ್ಲರೂ ಈ ವಿದ್ಯೆಯನ್ನು ಪ್ರಯತ್ನ ಪಟ್ಟು ಪಡೆಯಬೇಕು.

ಈ ಜಗತ್ತಿನಲ್ಲಿ ವಿದ್ವಾಂಸರು ಕೇಳಲು ಹೇಗೆ ಯೋಗ್ಯರಾಗುವರು ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಮೋ ಷು ದೇವಾ ಅದಃ ಸ್ವ೧ರವ ಪಾದಿ ದಿವಸ್ಪರಿ । ಮಾ ಸೋಮ್ಯಸ್ಯ ಶಂಭುವಃ ಶೂನೇ

ಭೂಮ ಕದಾ ಚನ ವಿತ್ತಂ ಮೇ ಅಸ್ಯ ರೋದಸೀ ॥೩॥

ಪದಾರ್ಥ:- ಹೇ [ದೇವಾಃ] ವಿದ್ವಾಂಸರೇ! ನಿಮ್ಮಿಂದ [ದಿವಃ] ಸೂರ್ಯನ ಪ್ರಕಾಶದಿಂದ [ಪರಿ] ಮೇಲೆ [ಅದಃ] ಅದನ್ನು ಪ್ರಾಪ್ತಿ ಮಾಡಿಕೊಳ್ಳಲು [ಸ್ವಃ] ಸುಖ [ಕದಾ ಚನ] ಎಂದಿಗೂ [ಮೋ ಅವ ಪಾದಿ] ವಿರುದ್ಧವಾಗಿ ಉತ್ಪನ್ನವಾಗಿಲ್ಲ. ನಾವು [ಸೋಮ್ಯಸ್ಯ] ಐಶ್ವರ್ಯಕ್ಕೆ ಯೋಗ್ಯವಾದ [ಶಂಭುವಃ] ಸುಖವು ಯಾವುದರಲ್ಲಿ

ಇದೆಯೋ, ಆ ವ್ಯವಹಾರವನ್ನು [ಸುಶೂನೆ] ಸುಂದರ ಉನ್ನತಿಯಲ್ಲಿ ವಿರುದ್ಧಭಾವದಿಂದ ಎಂದಿಗೂ ನಡೆಯುವಂತೆ [ಮಾ ಭೂಮ] ಆಗದಿರಲಿ. ಮತ್ತು ಶೇಷ.......

ಭಾವಾರ್ಥ:- ಮನುಷ್ಯರು ಈ ಜಗತ್ತಿನಲ್ಲಿ ಧರ್ಮ ಮತ್ತು ಸುಖಕ್ಕೆ ವಿರುದ್ಧವಾದ ಕರ್ಮಗಳನ್ನು ಮಾಡಬಾರದು ಮತ್ತು ಪುರುಷಾರ್ಥದಿಂದ ನಿರಂತರವೂ ಸುಖದ ಉನ್ನತಿ ಮಾಡಬೇಕು.

ಮತ್ತೆ ಕೇಳುವ ಮತ್ತು ಉತ್ತರವನ್ನು ಕೊಡುವವರು ಪರಸ್ಪರ ಹೇಗೆ ವರ್ತಿಸಿ ಹೇಗೆ ವಿದ್ಯೆಯ ಉನ್ನತಿಯನ್ನು ಮಾಡಬೇಕು.

ಯಜ್ಞಂ ಪೃಚ್ಛಾಮ್ಯವಮಂ ಸ ತದ್ ದೂತೋ ವಿ ವೋಚತಿ । ಕ್ವ ಋತಂ ಪೂರ್ವ್ಯಂ ಗತಂ
ಕಸ್ತದ್ ಬಿಭರ್ತಿ ನೂತನೋ ವಿತ್ತಂ ಮೇ ಅಸ್ಯ ರೋದಸೀ ॥೪॥

ಪದಾರ್ಥ:- ಹೇ ವಿದ್ವಾಂಸರೇ! ನಾನು ನಿಮ್ಮ ಬಗ್ಗೆ ಯಾವ **[ಅವಮಮ್]** ರಕ್ಷಣೆ ಮೊದಲಾದವನ್ನು ಮಾಡುವ ಉತ್ತಮ ಅಥವಾ ನಿಕೃಷ್ಟ **[ಯಜ್ಞಮ್]** ಸಮಸ್ತ ವಿದ್ಯೆಯಿಂದ ಪರಿಪೂರ್ಣ **[ಪೂರ್ವ್ಯಮ್]** ಪೂರ್ವಜರು ಸಿದ್ಧ ಮಾಡಿದ **[ಋತಮ್]** ಸತ್ಯಮಾರ್ಗ ಅಥವಾ ಉತ್ತಮ ಜಲಸ್ಥಾನವು **[ಕ್ವ]** ಎಲ್ಲಿ **[ಗತಮ್]** ಹೋಯಿತು ಮತ್ತು ಯಾರು **[ನೂತನಃ]** ನವೀನರು **[ತತ್]** ಅದನ್ನು **[ಬಿಭರ್ತಿ]** ಧಾರಣ ಮಾಡುವರು. ಅದನ್ನು **[ಪೃಚ್ಛಾಮಿ]** ಕೇಳುತ್ತೇನೆ. **[ಸಃ]** ಆ **[ದೂತಃ]** ಅತ್ತಿತ್ತ ಮಾತುಕತೆ ಅಥವಾ ಪದಾರ್ಥಗಳನ್ನು ತಿಳಿದಿರುವ ತಾವು **[ತತ್]** ಆ ಎಲ್ಲ ವಿಷಯಗಳನ್ನು **[ವಿವೋಚತಿ]** ವಿವೇಕದಿಂದ ಹೇಳಿರಿ. ಶೇಷಾರ್ಥ:......

ಭಾವಾರ್ಥ:- ವಿದ್ಯೆಯನ್ನು ಬಯಸುವ ಬ್ರಹ್ಮಚಾರಿಗಳು ವಿದ್ವಾಂಸರ ಹತ್ತಿರ ಹೋಗಿ ಅನೇಕ ಪ್ರಕಾರದ ಪ್ರಶ್ನೆಗಳನ್ನು ಮಾಡಿ ಮತ್ತು ಉತ್ತರವನ್ನು ಪಡೆದು ವಿದ್ಯೆಯನ್ನು ಹೆಚ್ಚಿಸಿಕೊಳ್ಳಬೇಕು. ಮತ್ತು ಅಧ್ಯಾಪನ ಮಾಡುವ ವಿದ್ವಾಂಸರೇ! ನೀವು ಉತ್ತಮ ನಡಿಗೆ ಹೇಗಿದೆಯೋ ಹಾಗೇ ಬನ್ನಿರಿ. ಮತ್ತು ನಮ್ಮಿಂದ ಈ ಜಗತ್ತಿನಲ್ಲಿನ ಪದಾರ್ಥಗಳ ವಿದ್ಯೆಯನ್ನು ಎಲ್ಲ ರೀತಿಯಿಂದ ತಿಳಿದು ಬೇರೆಯವರಿಗೂ ತಿಳಿಸಿ ಸತ್ಯ ಮತ್ತು ಅಸತ್ಯದ ಯಥಾರ್ಥ ಭಾವವನ್ನು ತಿಳಿಸಿರಿ.

ಮತ್ತೆ ಅವರು ಪರಸ್ಪರ ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಅಮೀ ಯೇ ದೇವಾಃ ಸ್ಥನ ತ್ರಿಷ್ವಾ ರೋಚನೇ ದಿವಃ । ಕದ್ ವ ಋತಂ ಕದನೃತಂ ಕ್ವ
ಪ್ರತ್ನಾ ವ ಆಹುತಿ -ರ್ವಿತ್ತಂ ಮೇ ಅಸ್ಯ ರೋದಸೀ ॥೫॥

ಪದಾರ್ಥ:- ಹೇ ವಿದ್ವಾಂಸರೇ! ನೀವು **[ದಿವಃ]** ಪ್ರಕಾಶಗೊಳಿಸುವ ಸೂರ್ಯನ **[ರೋಚನೇ]** ಪ್ರಕಾಶದಲ್ಲಿ **[ತ್ರಿಷು:]** ಮೂರು ಅಂದರೆ ನಾಮ, ಸ್ಥಾನ ಮತ್ತು ಜನ್ಮದಲ್ಲಿ **[ಅಮೀ]** ಪ್ರಕಟ ಮತ್ತು ಅಪ್ರಕಟಿತವಾದ **[ಯೇ]** ಯಾವ **[ದೇವಾಃ]** ದಿವ್ಯಗುಣವುಳ್ಳ ಪೃಥಿವೀ ಮೊದಲಾದ ಲೋಕಗಳ **[ಅ]** ಉತ್ತಮ **[ಸ್ಥನ]** ಸ್ಥಿತಿ ಮಾಡುವಿರಿ. **[ನಃ]** ಅವುಗಳ ಮಧ್ಯೆ **[ಋತಮ್]** ಸತ್ಯಕಾರಣವು **[ಕತ್]** ಎಲ್ಲಿ ಮತ್ತು **[ಅನೃತಮ್]** ಸುಳ್ಳಿನ ಕಾರ್ಯರೂಪವು **[ಕತ್]** ಎಲ್ಲಿ ಮತ್ತು **[ವಃ]** ಅವುಗಳ **[ಪ್ರತ್ನಾ]** ಹಿಂದಿನ ಪದಾರ್ಥ ಹಾಗೂ ಅವುಗಳ **[ಆಹುತಿಃ]** ಹೋಮ ಅಂದರೆ ವಿನಾಶವು **[ಕ್ವ]** ಎಲ್ಲಿ ಆಗುತ್ತದೆ. ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಕೊಡಿರಿ. ಶೇಷ ....

ಭಾವಾರ್ಥ:- ಪ್ರಶ್ನೆ - ಯಾವಾಗ ಎಲ್ಲ ಲೋಕಗಳ ಆಹುತಿ ಅಂದರೆ ಪ್ರಳಯವಾಗುವುದೂ, ಆಗ ಕಾರ್ಯಕಾರಣ ಮತ್ತು ಜೀವರು ಎಲ್ಲಿರುತ್ತಾರೆ? ಇದರ ಉತ್ತರ ಜೀವರಿರುತ್ತಾರೆ. ಒಂದೊಂದು ಸೂರ್ಯನ

ಪ್ರಕಾಶ ಮತ್ತು ಆಕರ್ಷಣೆಯ ವಿಷಯದಲ್ಲಿ ಎಷ್ಟೆಷ್ಟು ಲೋಕಗಳು ಇವೆಯೋ, ಅವೆಲ್ಲವನ್ನು ಈಶ್ವರನು ಮಾಡಿ/ರಚಿಸಿ ಧಾರಣ ಮಾಡಿದನು ಹಾಗೂ ಅವುಗಳ ವ್ಯವಸ್ಥೆಯನ್ನೂ ಮಾಡಿರುವನು. ಇದನ್ನು ತಿಳಿಯಬೇಕು.

ಮತ್ತೆ ಅವರು ಪರಸ್ಪರ ಏನನ್ನು ಕೇಳಬೇಕು ಉತ್ತರವೀಯಬೇಕು ಎಂಬುದನ್ನಿಲ್ಲಿ ಹೇಳಿದೆ.

ಕದ್ ವ ಋತಸ್ಯ ಧರ್ಣಸಿ ಕದ್ ವರುಣಸ್ಯ ಚಕ್ಷಣಮ್ । ಕದರ್ಯಮ್ಣೋ ಮಹಸ್ಪಥಾ-ತಿ
ಕ್ರಾಮೇಮ ದೂಢ್ಯೋ ವಿತ್ತಂ ಮೇ ಅಸ್ಯ ರೋದಸೀ ॥೬॥

ಪದಾರ್ಥ:- ಹೇ ವಿದ್ವಾಂಸರೇ! **[ವಃ]** ಈ ಸ್ಥೂಲ ಪದಾರ್ಥಗಳ **[ಋತಸ್ಯ]** ಸತ್ಯಕಾರಣವನ್ನು **[ಧರ್ಣಸಿ]** ಧಾರಣ ಮಾಡುವವನು **[ಕತ್]** ಎಲ್ಲಿರುವನು **[ವರುಣಸ್ಯ]** ಜಲ ಮೊದಲಾದ ಕಾರ್ಯರೂಪ ಪದಾರ್ಥಗಳನ್ನು **[ಚಕ್ಷಣಮ್]** ನೋಡುವುದು **[ಕತ್]** ಎಲ್ಲಿ ಹಾಗೂ **[ಮಹಃ]** ಮಹಾನ್ **[ಅರ್ಯಮ್ಣಃ]** ಸೂರ್ಯಲೋಕವು ಯಾವ **[ದೂಢ್ಯಃ]** ಅತಿಗಂಭೀರ ದುಃಖದಿಂದ ಧ್ಯಾನದಲ್ಲಿ ಬರುವ ಯೋಗ್ಯ ವ್ಯವಹಾರವಿದೆಯೋ, ಅದನ್ನು **[ಕತ್]** ಯಾವ **[ಪಥಾ]** ಮಾರ್ಗದಿಂದ ನಾವು **[ಅತಿ ಕ್ರಾಮೇಮ]** ಪಾರಾಗುವೆವು. ಅಂದರೆ ವಿದ್ಯೆಯಿಂದ ಪರಿಪೂರ್ಣರಾಗುವೆವು. ಮತ್ತು ಶೇಷ.......

ಭಾವಾರ್ಥ:- ವಿದ್ಯಾಪ್ರಾಪ್ತಿಯ ಇಚ್ಛೆಯುಳ್ಳ ಮನುಷ್ಯರು ವಿದ್ವಾಂಸರ ಸಮೀಪಕ್ಕೆ ಹೋಗಿ ಕಾರ್ಯ ಮತ್ತು ಕಾರಣದ ವಿದ್ಯೆಯನ್ನು ತಿಳಿಸುವ ವಿಷಯಗಳ ಪ್ರಶ್ನೆಗಳನ್ನು ಮಾಡಿ, ಉತ್ತರವನ್ನು ಪಡೆದು ಕ್ರಿಯಾಕೌಶಲದಿಂದ ಕಾರ್ಯಗಳನ್ನು ಸಿದ್ಧಮಾಡಿ ದುಃಖದ ನಾಶ ಮಾಡಿ ಸುಖ ಪಡೆಯಬೇಕು.

ಈಗ ವಿದ್ವಾಂಸರು ಇದರ ಉತ್ತರ ಹೇಗೆ ಕೊಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಅಹಂ ಸೋ ಅಸ್ಮಿ ಯಃ ಪುರಾ ಸುತೇ ವದಾಮಿ ಕಾನಿ ಚಿತ್ । ತಂ ಮಾ ವ್ಯನ್ತ್ಯಾಧ್ಯೋ
ವೃಕೋ ನ ತೃಷ್ಣಜಂ ಮೃಗಂ ವಿತ್ತಂ ಮೇ ಅಸ್ಯ ರೋದಸೀ ॥೭॥

ಪದಾರ್ಥ:- ಹೇ ಮನುಷ್ಯರೇ! **[ಯಃ]** ಯಾವ **[ಅಹಮ್]** ಜಗತ್ತನ್ನು ಸೃಷ್ಟಿಸುವ **[ಸುತೇ]** ಉತ್ಪನ್ನವಾದ ಈ ಜಗತ್ತಿನಲ್ಲಿ **[ಕಾನಿ ಚಿತ್]** ಯಾವ ವ್ಯವಹಾರಗಳನ್ನು **[ಪುರಾ]** ಸೃಷ್ಟಿಗೆ ಮೊದಲು ಅಥವಾ ವಿದ್ವಾಂಸರಲ್ಲಿ, ಉತ್ಪನ್ನವಾದ ಜಗತ್ತಿನಲ್ಲಿ ಯಾವ ವ್ಯವಹಾರದಿಂದ ವಿದ್ಯೆಯ ಉತ್ಪತ್ತಿಗೆ ಮೊದಲು **[ವದಾಮಿ]** ಹೇಳುತ್ತೇನೆ. **[ಸಃ]** ಅವುಗಳಲ್ಲಿ ಸೇವಿಸಲು ಯೋಗ್ಯನಾದವನು **[ಅಸ್ಮಿ]** ಆಗಿರುವೆನು. **[ತಮ್]** ಆ **[ಮಾ]** ನನಗೆ **[ಅಧ್ಯಃ]** ಉತ್ತಮವಾಗಿ ಆಲೋಚನೆ ಮಾಡುವ ತಾವು ಹೇಗೆ **[ವೃಕಃ]** ಕಳ್ಳ ಅಥವಾ ಹುಲಿಯು **[ತೃಷ್ಣಜಮ್]** ಬಾಯಾರಿದ **[ಮೃಗಮ್]** ಜಿಂಕೆಯನ್ನು **[ನ]** ಹೇಗೆ **[ವ್ಯಂತಿ]** ಬಯಸುವುದೋ ಮತ್ತು ಶೇಷಾರ್ಥ.........

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷ ಮತ್ತು ಉಪಮಾಲಂಕಾರವಿದೆ. ಎಲ್ಲ ಮನುಷ್ಯರ ಬಗ್ಗೆ ಈಶ್ವರನು ಉಪದೇಶ ಮಾಡುತ್ತಾನೆ, ಏನೆಂದರೆ ಹೇ ಮನುಷ್ಯರೇ! ನೀವು ಹೇಗೆ ನಾನು ಸೃಷ್ಟಿಯನ್ನು ರಚಿಸಿ ವೇದದ ಮುಖಾಂತರ ಹೇಗೆ-ಹೇಗೆ ಉಪದೇಶ ಮಾಡಿರುವೆನೋ, ಅವರಿಗೆ ಹಾಗೆಯೇ ಗ್ರಹಣ ಮಾಡಿಸಿ. ಮತ್ತು ಉಪಾಸನೆ ಮಾಡಲು ಯೋಗ್ಯನಾದ ನನ್ನನ್ನು ಬಿಟ್ಟು ಬೇರೆ ಯಾರನ್ನೂ ಎಂದಿಗೂ ಉಪಾಸಿಸದಿರಿ. ಹೇಗೆ ಯಾವುದೋ ಸಿಂಹವು ಅಥವಾ ರಸಿಕನಾದ ಕಳ್ಳನು ಅಥವಾ ಬಾಯಾರಿದ ಹರಿಣವನ್ನು ಪ್ರಾಪ್ತ ಮಾಡಿಕೊಳ್ಳಲು ಬಯಸುತ್ತಾನೋ, ಹಾಗೆಯೇ ಎಲ್ಲ ದೋಷಗಳನ್ನೂ ಬಿಟ್ಟು ನನ್ನನ್ನು ಇಚ್ಛೆಸಿರಿ ಮತ್ತು ಅಂತಹ ವಿದ್ವಾಂಸನನ್ನೂ ಕೂಡ ಇಚ್ಛೆಸಿರಿ.

ಈಗ ನ್ಯಾಯಾಧೀಶನ ಸಮೀಪದಲ್ಲಿ ವಾದ ವಿವಾದವನ್ನು ಮಾಡುವ ವಾದಿ-ಪ್ರತಿವಾದಿಗಳು ತಮ್ಮ ಕೆಲವು ಕ್ಲೇಶಗಳ ನಿವೇದನೆಯನ್ನು ಮಾಡಿ ಮತ್ತು ಅವನು ಅವರಿಗೆ ಯಥಾರೀತಿ ನ್ಯಾಯ ಮಾಡಲಿ.

ಸಂ ಮಾ ತಪನ್ತ್ಯಭಿತಃ ಸಪತ್ನೀರಿವ ಪರ್ಶವಃ । ಮೂಷೋ ನ ಶಿಶ್ನಾ ವ್ಯದಂತಿ ಮಾಧ್ಯಃ
ಸ್ತೋತಾರಂ ತೇ ಶತಕೃತೋ ವಿತ್ತಂ ಮೇ ಅಸ್ಯ ರೋದಸೀ ॥೮॥

ಪದಾರ್ಥ:- ಹೇ **[ಶತಕೃತೋ]** ಅಸಂಖ್ಯ ಉತ್ತಮ ವಿಚಾರಯುಕ್ತನು ಅಥವಾ ಅನೇಕ ಉತ್ತಮೋತ್ತಮ ಕರ್ಮ ಮಾಡುವ ನ್ಯಾಯಾಧೀಶನೇ! **[ತೇ]** ನಿನ್ನ ಪ್ರಜೆಗಳು ಅಥವಾ ಸೇನೆಯಲ್ಲಿ ಇರುವ ಮತ್ತು **[ಸ್ತೋತಾರಮ್]** ಧರ್ಮವನ್ನು ಕೀರ್ತಿಸುವವನು ನಾನಾಗಿರುವೆನು. **[ಮಾ]** ಅವನಿಗೆ ಯಾವ **[ಪರ್ಶವಃ]** ಬೇರೆಯವರನ್ನು ಕೊಲ್ಲಲು ಮತ್ತು ಬಾಣಗಳಿಂದ ಕೊಲ್ಲುವ ಮನುಷ್ಯ ಮೊದಲಾದವರಿಂದ ಪ್ರಾಣಿಗಳು **[ಸಪತ್ನೀರಿವ ಅಭಿತಃ ಸಮ್ ತಪನ್ತಿ]** ಹೇಗೆ ಒಬ್ಬ ಪತಿಯ ಅನೇಕ ಸ್ತ್ರೀಯರು ದುಃಖವನ್ನುಂಟು ಮಾಡುವರೋ ಹಾಗೆ ದುಃಖವನ್ನು ಕೊಡುವರು ಯಾವ **[ಆಧ್ಯಃ]** ಇತರರ ಮನಸ್ಸಿನಲ್ಲಿ ವ್ಯಥೆಯನ್ನು ಮಾಡುವ **[ಮೂಷಃ]** ಇಲಿಗಳಂತೆ **[ಶಿಶ್ನಾ]** ಅಶುದ್ಧ ದಾರಗಳನ್ನು **[ವಿ ಅದನ್ತಿ]** ಕಚ್ಚಿ ಕಚ್ಚಿ ಕತ್ತರಿಸಿ ತಿನ್ನುತ್ತವೆಯೋ, **[ನ]** ಹಾಗೆ **[ಮಾ]** ನಮಗೆ ಸಂತಾಪವನ್ನುಂಟು ಮಾಡುತ್ತವೆ, ಆ ಅನ್ಯಾಯ ಮಾಡುವ ಜನರಿಗೆ, ನೀನು ಯಥಾ ರೀತಿ ಶಿಕ್ಷಿಸು. ಮತ್ತು ಶೇಷ ಮಂತ್ರಾರ್ಥ....

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ನ್ಯಾಯ ಮಾಡುವ ಅಧ್ಯಕ್ಷ ಮೊದಲಾದ ಮನುಷ್ಯರೇ! ನೀವು, ಹೇಗೆ ಸವತಿಯರಾದ ಸ್ತ್ರೀಯರು ತಮ್ಮ ಪತಿಗೆ ಕಷ್ಟ ಕೊಡುವರೋ, ಅಥವಾ ಹೇಗೆ ತನ್ನ ಪ್ರಯೋಜನಕ್ಕಾಗಿ ಮಾತ್ರವೇ ಇತರರ ಖಾದ್ಯ ಪದಾರ್ಥಗಳನ್ನು ನಷ್ಟಗೊಳಿಸುವ ಇಲಿಗಳಂತೆ ಮತ್ತು ವ್ಯಭಿಚಾರಿಣಿಯರಾದ ವೇಶ್ಯೆ ಮೊದಲಾದವರು ಅನೇಕ ರೀತಿ ಸಿಂಗರಿಸಿಕೊಂಡು ತಮ್ಮ ದುಷ್ಕೃತ್ಯಗಳಿಂದ ಅತಿ ಕಠಿಣವೂ ಅಸಹ್ಯವೂ ಆದ ರೋಗಗಳನ್ನು ಪಡೆದು ತಮ್ಮ ಕರ್ಮಗಳ ಮುಖಾಂತರ ಅವರ ಧರ್ಮಾರ್ಥಕಾಮಮೋಕ್ಷಗಳಿಗೆ ಅಡ್ಡಿಯಾಗಿ ಆ ಕಾಮಿಗಳು ಪೀಡೆಯನ್ನು ಕೊಡುತ್ತಾರೋ, ಹಾಗೆ ಯಾವ ದರೋಡೆಕೋರರು, ಕಳ್ಳರು, ಆತಂಕವಾದಿಗಳು, ಹೊಡೆದಾಟ ಮಾಡುವವರು, ಕಪಟಿಗಳು, ಸುಳ್ಳು ಹೇಳುವವರು ಮತ್ತು ಆ ಮಾತುಗಳಿಂದ ನಮಗೆ ಕ್ಲೇಶವನ್ನುಂಟು ಮಾಡುತ್ತಾರೆ. ಅವರನ್ನು ಉತ್ತಮ ದಂಡನೆಯನ್ನು ಕೊಟ್ಟು ನಮ್ಮನ್ನು ಹಾಗೂ ಅವರನ್ನು ಕೂಡ ನಿರಂತ್ತರವಾಗಿ ಪಾಲಿಸು. ಹಾಗೆ ಮಾಡದ ಹೊರತು ರಾಜ್ಯದ ಐಶ್ವರ್ಯವನ್ನು ವೃದ್ಧಿಸಲಾಗುವುದಿಲ್ಲ.

ಈಗ ನ್ಯಾಯಾಧೀಶನ ಜೊತೆ ಪ್ರಜೆಗಳು ಹೇಗೆ ವರ್ತಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಅಮೀ ಯೇ ಸಪ್ತ ರಶ್ಮಯ-ಸ್ತತ್ರಾ ಮೇ ನಾಭಿರಾತತಾ । ತ್ರಿತಸ್ತದ್ ವೇದಾಪ್ತ್ಯಃ ಸ
ಜಾಮಿತ್ವಾಯ ರೇಭತಿ ವಿತ್ತಂ ಮೇ ಅಸ್ಯ ರೋದಸೀ ॥೯॥

ಪದಾರ್ಥ:- ಎಲ್ಲಿ **[ಅಮೀ ಯೇ]** ಯಾವ **[ಸಪ್ತ]** ಏಳು **[ರಶ್ಮಯಃ]** ಕಿರಣಗಳಂತೆ ನೀತಿಯನ್ನು ಪ್ರಕಾಶ ಪಡಿಸುತ್ತಿಯೆ **[ತತ್ರ]** ಅಲ್ಲಿ **[ಮೇ]** ನನ್ನ **[ನಾಭಿಃ]** ಎಲ್ಲ ನರಗಳನ್ನು ಬಂಧಿಸುವ ನಾಭಿಯು **[ಆತತಾ]** ಹರಡಿದೆ. ಯಾವುದರಲ್ಲಿ ನಿರಂತರವೂ ನನ್ನ ಸ್ಥಿತಿ ಇದೆ. **[ತತ್]** ಅದನ್ನು ಯಾವ **[ಆಪ್ತ್ಯಃ]** ಸಜ್ಜನರಲ್ಲಿ ಉತ್ತಮ **[ತ್ರಿತಃ]** ಮೂರು ಅಂದರೆ ಭೂತ, ಭವಿಷ್ಯತ್ ಮತ್ತು ವರ್ತಮಾನ ಕಾಲದಿಂದ **[ವೇದ]** ತಿಳಿದು ಅಂದರೆ ಹಗಲು-ರಾತ್ರಿ ವಿಚಾರಿಸಿ **[ಸಃ]** ಆ ಪುರುಷನು **[ಜಾಮಿತ್ವಾಯ]** ರಾಜ್ಯವನ್ನು ಭೋಗಿಸಲು ಕನ್ಯೆಯಂತೆ **[ರೇಭತಿ]** ಪ್ರಜೆಗಳ ರಕ್ಷಣೆ ಹಾಗೂ ಪ್ರಶಂಸೆಯನ್ನು ಬಯಸುವರು ಮತ್ತು ಉಳಿದ ....

ಭಾವಾರ್ಥ:- ಹೇಗೆ ಸೂರ್ಯನೊಡನೆ ಕಿರಣಗಳ ಶೋಭೆ ಮತ್ತು ಸಾಂಗತ್ಯವಿದೆಯೋ ಹಾಗೆಯೇ ರಾಜಪುರುಷರೊಂದಿಗೆ ಪ್ರಜೆಗಳ ಶೋಭೆಯು ಮತ್ತು ಸಾಂಗತ್ಯವಿರಲಿ. ಹಾಗೂ ಯಾವ ಮನುಷ್ಯನ ಕರ್ಮ, ಉಪಾಸನೆ ಮತ್ತು ಜ್ಞಾನವನ್ನು ಯಥಾ ರೀತಿ ತಿಳಿಯುತ್ತಾನೆ. ಅವನು ಪ್ರಜಾಪಾಲನೆಯಲ್ಲಿ ಪಿತೃವಿನಂತೆ ಇದ್ದು ಸಮಸ್ತ ಪ್ರಜೆಗಳ ಮನೋರಂಜನೆಯನ್ನು ಮಾಡುತ್ತಾನೆ, ಇತರರಲ್ಲ.

ಮತ್ತೆ ಇವರು ಪರಸ್ಪರ ಹೇಗೆ ವರ್ತಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಅಮೀ ಯೇ ಪಂಚೋಕ್ಷಣೋ ಮಧ್ಯೇ ತಸ್ಥುರ್ಮಹೋ ದಿವಃ । ದೇವತ್ರಾ ನು ಪ್ರವಾಚ್ಯಂ
ಸಧ್ರೀಚೀನಾ ನಿ ವಾವೃತು-ರ್ವಿತ್ತಂ ಮೇ ಅಸ್ಯ ರೋದಸೀ ॥೧೦॥

ಪದಾರ್ಥ:- ಹೇ ಸಭಾಧ್ಯಕ್ಷ ಮೊದಲಾದ ಸಜ್ಜನರೇ! ನಿಮಗೆ ಪ್ರತ್ಯಕ್ಷಾಪ್ರತ್ಯಕ್ಷ **[ಉಕ್ಷಣಃ]** ಜಲಸೇಚನೆಯನ್ನು ಅಥವಾ ಸುಖವನ್ನೀಯುವ ಮಹತ್ತಾದ **[ಪಂಚ]** ಅಗ್ನಿ, ಪವನ, ವಿದ್ಯುತ್, ಮೇಘ ಮತ್ತು ಸೂರ್ಯ ಮಂಡಲದ ಪ್ರಕಾಶವು **[ಮಹಃ]** ಅಪಾರವಾದ **[ದಿವಃ]** ದಿವ್ಯಗುಣ ಮತ್ತು ಪದಾರ್ಥಯುಕ್ತ ಆಹಾರ **[ಮಧ್ಯೇ]** ಮಧ್ಯದಲ್ಲಿ **[ತಸ್ಥುಃ]** ಸ್ಥಿರವಾಗಿದೆ. ಮತ್ತು ಹೇಗೆ **[ಸಧ್ರೀಚೀನಾಃ]** ಒಟ್ಟಾಗಿರುವ ಗುಣವು **[ದೇವತ್ರಾ]** ವಿದ್ವಾಂಸರಲ್ಲಿ **[ವಿ ವಾವೃತುಃ]** ನಿರಂತರ ವರ್ತಮಾನವಾಗಿದೆಯೋ, ಹಾಗೆ **[ಯೇ]** ಯಾವ ನಿರಂತರವಿರುವ ಆ ಪ್ರಜೆಗಳೊಂದಿಗೆ ಹಾಗೂ ರಾಜಪುರುಷರ ಸಾಂಗತ್ಯದಲ್ಲಿ ವಿದ್ಯೆ ಮತ್ತು ನ್ಯಾಯವನ್ನು ಪ್ರಕಾಶಪಡಿಸುವ ಮಾತುಗಳನ್ನು **[ನು]** ಶೀಘ್ರವಾಗಿ **[ಪ್ರವಾಚ್ಯಮ್]** ಹೇಳಬೇಕು ಮತ್ತು ಉಳಿದ...

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯ ಮೊದಲಾದ ಘಟಪಟಾದಿ ಪದಾರ್ಥಗಳಲ್ಲಿ ಸಂಯುಕ್ತವಾಗಿ ವೃಷ್ಟಿ ಮೊದಲಾದವುಗಳಿಂದ ಅತ್ಯಂತ ಸುಖವನ್ನು ಉತ್ಪನ್ನ ಮಾಡುವುವೋ, ಮತ್ತು ಸಮಸ್ತ ಪೃಥಿವೀ ಮೊದಲಾದ ಪದಾರ್ಥಗಳಲ್ಲಿ ಆಕರ್ಷಣ ಶಕ್ತಿಯಿಂದ ವರ್ತಮಾನವಾಗಿವೆಯೋ, ಹಾಗೆಯೇ ಸಭಾಧ್ಯಕ್ಷ ಮೊದಲಾದ ಮಹಾತ್ಮರ ಗುಣ ಅಥವಾ ಉತ್ತಮೋತ್ತಮ ಗುಣಗಳಿಂದ ಕೂಡಿದ ಮನುಷ್ಯರನ್ನು ಸಿದ್ಧ ಮಾಡಿ ಇವರಿಂದ ನ್ಯಾಯ ಮತ್ತು ನೀತಿಯಿಂದ ವರ್ತಿಸಿ ನಿರಂತರವೂ ಸುಖವನ್ನುಂಟುಮಾಡಬೇಕು.

ಮತ್ತೆ ರಾಜಪುರುಷರ ಜೊತೆ ಪ್ರಜೆಗಳು ಹೇಗೆ ವರ್ತಿಸಬೇಕು? ಎಂಬುದನ್ನು ಮುಂದಿನ ಮಂತ್ರದಲ್ಲಿ ಹೇಳಿದೆ.

ಸುಪರ್ಣಾ ಏತ ಆಸತೇ ಮಧ್ಯ ಆರೋಧನೇ ದಿವಃ । ತೇ ಸೇಧಂತಿ ಪಥೋ ವೃಕಂ
ತರಂತಂ ಯಹ್ವತೀರಪೋ ವಿತ್ತಂ ಮೇ ಅಸ್ಯ ರೋದಸೀ ॥೧೧॥

ಪದಾರ್ಥ:- ಹೇ ಪ್ರಜೆಗಳೇ! ತಾವು ಹೇಗೆ **[ಏತೇ]** ಈ **[ಸುಪರ್ಣಾಃ]** ಸೂರ್ಯನ ಕಿರಣಗಳನ್ನು **[ದಿವಃ]** ಸೂರ್ಯನ ಪ್ರಕಾಶದಿಂದ ಕೂಡಿರುವ ಆಕಾಶದ **[ಮಧ್ಯೇ]** ಮಧ್ಯದಲ್ಲಿ **[ಆರೋಧನೇ]** ತಡೆಯುವಲ್ಲಿ **[ಆಸತೇ]** ಸ್ಥಿರವಾಗಿವೆ ಮತ್ತು ಹೇಗೆ **[ತೇ]** ಅವು **[ತರಂತಮ್]** ಪಾರಾಗುವಂತೆ ಮಾಡುವ **[ವೃಕಂ]** ಸಿಡಿಲನ್ನು ಬೀಳಿಸಿ **[ಯಹ್ವತೀಃ]** ಹಿರಿಯರಂತೆ ವರ್ತಿಸುತ್ತಾ **[ಅಪಃ]** ಜಲ ಮತ್ತು **[ಪಥಃ]** ಮಾರ್ಗಗಳನ್ನು **[ಸೇಧಂತಿ]** ಸಿದ್ಧಮಾಡುತ್ತವೋ ಹಾಗೆಯೇ ತಾವು ರಾಜನ ಕಾರ್ಯಗಳನ್ನು ಸಿದ್ಧಮಾಡಿರಿ. ಮತ್ತು ಉಳಿದ ....

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಈಶ್ವರನ ನಿಯಮದಲ್ಲಿ ಸೂರ್ಯನ ಕಿರಣ ಮೊದಲಾದ ಪದಾರ್ಥಗಳು ಹೇಗೆ ವರ್ತಮಾನವಾಗಿವೆಯೋ, ಹಾಗೆ ನೀವು ಪ್ರಜೆಗಳು ಕೂಡ ರಾಜನೀತಿಯ

ನಿಯಮಗಳಲ್ಲಿ ವರ್ತಿಸಬೇಕು. ಹೇಗೆ ಸಭಾಧ್ಯಕ್ಷ ಮೊದಲಾದವರು ದುಷ್ಟರನ್ನು ನಿವೃತ್ತಿಗೊಳಿಸಿ ಪ್ರಜೆಗಳ ರಕ್ಷಣೆ ಮಾಡುತ್ತಾರೋ, ಹಾಗೆಯೇ ನೀವು ಕೂಡ ಈರ್ಷ್ಯೆ, ಅಭಿಮಾನ ಮೊದಲಾದ ದೋಷಗಳನ್ನು ನಿವೃತ್ತಿಗೊಳಿಸಿ ರಕ್ಷಿಸಲು ಯೋಗ್ಯರಾಗಿರಿ.

ಮತ್ತೆ ವಿದ್ವಾಂಸರು ಇವರಿಗೆ ಏನೇನು ಉಪದೇಶ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ನವ್ಯಂ ತದುಕ್ಥ್ಯಂ ಹಿತಂ ದೇವಾಸಃ ಸುಪ್ರವಾಚನಮ್ । ಋತಮರ್ಷಂತಿ ಸಿಂಧವಃ ಸತ್ಯಂ
ತಾತಾನ ಸೂರ್ಯೋ ವಿತ್ತಂ ಮೇ ಅಸ್ಯ ರೋದಸೀ ॥೧೨॥

ಪದಾರ್ಥ:- ಹೇ **[ದೇವಾಸಃ]** ವಿದ್ವಾಂಸರೇ! ತಾವು ಹೇಗೆ **[ಸಿಂಧವಃ]** ಸಮುದ್ರವು **[ಸತ್ಯಮ್]** ಜಲವನ್ನು **[ಅರ್ಷಂತಿ]** ಪ್ರಾಪ್ತಿ ಮಾಡಿಕೊಳ್ಳುವುದೋ ಮತ್ತು **[ಸೂರ್ಯಃ]** ಸೂರ್ಯ ಮಂಡಲವು **[ತಾತಾನ]** ಅದರ ವಿಸ್ತಾರ ಮಾಡುತ್ತದೆ. ಅಂದರೆ ಮಳೆಯನ್ನು ಸುರಿಸುತ್ತದೋ ಹಾಗೆ ಯಾವ **[ಋತಮ್]** ವೇದವು ಸೃಷ್ಟಿಕ್ರಮ, ಪ್ರತ್ಯಕ್ಷಾದಿ ಪ್ರಮಾಣ ವಿದ್ವಾಂಸರ ಆಚರಣೆ, ಅನುಭವ ಅಂದರೆ ತಾವೇ ಸ್ವತಃ ಯಾವುದಾದರೂ ವಿಷಯವು ಮನದಲ್ಲಿ ಉತ್ಪನ್ನವಾಗುವುದು ಮತ್ತು ಆತ್ಮದ ಶುದ್ಧಿಗೆ ಅನುಕೂಲವಾಗಿ **[ನವ್ಯಮ್]** ಉತ್ತಮ ಹೊಸ ಹೊಸ ವ್ಯವಹಾರಗಳಲ್ಲಿ ಮತ್ತು **[ಉಕ್ಥ್ಯಮ್]** ಪ್ರಶಂಸನೀಯ ವಚನಗಳಲ್ಲಿ ಉಂಟಾಗುವ **[ಹಿತಮ್]** ಎಲ್ಲರಿಗೂ ಹಿತವಾಗುವ ಪದಾರ್ಥಗಳನ್ನು **[ತತ್]** ಅವುಗಳನ್ನು **[ಸುಪ್ರವಾಚನಮ್]** ಉತ್ತಮವಾಗಿ ಓದಿಸುವುದು, ಉಪದೇಶ ಮಾಡುವುದು ಹೇಗೆ ಆಗುವುದೋ ಹಾಗೆ ಪ್ರಾಪ್ತಮಾಡಿರಿ. ಉಳಿದ...

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸಮುದ್ರಜಲವು ಸೂರ್ಯನ ತಾಪದಿಂದ ಆವಿಯಾಗಿ ಮೇಲಕ್ಕೆ ಹೋಗಿ ಹರಡಿಕೊಂಡು ಮಳೆಯನ್ನು ಸುರಿಸಿ ಎಲ್ಲ ಪ್ರಜೆಗಳಿಗೂ ಸುಖವನ್ನೀಯುವುದೋ, ಹಾಗೆ ವಿದ್ವಾಂಸರು ನಿತ್ಯವೂ ಹೊಸ ಹೊಸ ವಿಚಾರಗಳಿಂದ ಗೂಢವಾದ ವಿದ್ಯೆಯನ್ನು ತಿಳಿದು ಮತ್ತು ಅವುಗಳನ್ನು ಪ್ರಕಾಶಗೊಳಿಸಿ ಎಲ್ಲರ ಹಿತದ ಸಂಪಾದನೆ ಮತ್ತು ಸತ್ಯಧರ್ಮಗಳ ಪ್ರಚಾರದಿಂದ ನಿರಂತರವೂ ಸುಖವನ್ನು ಉಂಟುಮಾಡಬೇಕು.

ಮತ್ತೆ ವಿದ್ವಾಂಸರು ಪ್ರಜೆಗಳಲ್ಲಿ ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಅಗ್ನೇ ತವ ತ್ಯದುಕ್ಥ್ಯಂ ದೇವೇಷ್ವಸ್ತ್ಯಾಪ್ಯಮ್ । ಸ ನಃ ಸತ್ತೋ ಮನುಷ್ವದಾ ದೇವಾನ್
ಯಕ್ಷಿ ವಿದುಷ್ಟರೋ ವಿತ್ತಂ ಮೇ ಅಸ್ಯ ರೋದಸೀ ॥೧೩॥

ಪದಾರ್ಥ:- ಹೇ **[ಅಗ್ನೇ]** ಸಮಸ್ತ ವಿದ್ಯೆಗಳನ್ನು ತಿಳಿದಿರುವ ವಿದ್ವಾಂಸರೇ! **[ತವ]** ತಮ್ಮ **[ತ್ಯತ್]** ಆ ಯಾವ **[ಆಪ್ಯಮ್]** ಪಡೆಯಲು ಯೋಗ್ಯವಾದುದು **[ಮನುಷ್ವತ್]** ಮನುಷ್ಯರಲ್ಲಿ ಹೇಗಿದೆಯೋ ಹಾಗೆ **[ಉಕ್ಥ್ಯಮ್]** ಅತ್ಯುತ್ತಮ ವಿದ್ಯಾವಚನಗಳು **[ದೇವೇಷು]** ವಿದ್ವಾಂಸರಲ್ಲಿ **[ಅಸ್ತಿ]** ಇವೆ. **[ಸಃ]** ಅವು **[ಸತ್ತಃ]** ಅವಿದ್ಯೆ ಮೊದಲಾದ ದೋಷಗಳನ್ನು ನಾಶ ಮಾಡುವ **[ವಿದುಷ್ಟರಃ]** ಅತಿಯಾಗಿ ವಿದ್ಯೆಯನ್ನು ಓದಿರುವ ತಾವು **[ನಃ]** ನಮಗೆ **[ದೇವಾನ್]** ವಿದ್ವಾಂಸರಾಗಿ ಅವರ **[ಆಯಕ್ಷಿ]** ಸಾಂಗತ್ಯವನ್ನು ಉಂಟುಮಾಡಿರಿ ಅಂದರೆ ವಿದ್ವಾಂಸರ ಪದವಿಗೆ ಏರಿಸಿರಿ. ಮತ್ತು ಉಳಿದುದು........

ಭಾವಾರ್ಥ:- ಯಾವ ವಿದ್ವಾಂಸನು ಸಮಸ್ತ ವಿದ್ಯೆಯನ್ನು ಅಭ್ಯಸಿಸಿ ವಿದ್ವಾಂಸತ್ವವನ್ನು ಉತ್ಪನ್ನ ಮಾಡಲು ಕುಶಲನೋ ಅವನಿಂದ ವಿದ್ಯೆ ಮತ್ತು ಧರ್ಮೋಪದೇಶವನ್ನು ಮಾನವರೆಲ್ಲರೂ ಗ್ರಹಣ ಮಾಡಬೇಕು, ಮತ್ತೊಬ್ಬನಿಂದಲ್ಲ.

ಮತ್ತೆ ವಿದ್ವಾಂಸನು ಏನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಸತ್ತೋ ಹೋತಾ ಮನುಷ್ವದಾ ದೇವಾँ ಅಚ್ಛಾ ವಿದುಷ್ಟರಃ । ಅಗ್ನಿರ್ಹವ್ಯಾ ಸುಷೂದತಿ
ದೇವೋ ದೇವೇಷು ಮೇಧಿರೋ ವಿತ್ತಂ ಮೇ ಅಸ್ಯ ರೋದಸೀ ॥೧೪॥

ಪದಾರ್ಥ:- ಹೇ ಮನುಷ್ಯರೇ! ಯಾವ **[ಸತ್ತಃ]** ದುಃಖವನ್ನು ಪರಿಹರಿಸುವ ವಿಜ್ಞಾನವಂತನು **[ದೇವಾನ್]** ವಿದ್ವಾಂಸನು ಅಥವಾ ದಿವ್ಯ-ದಿವ್ಯ ಕ್ರಿಯಾಯೋಗಗಳನ್ನು **[ಹೋತಾ]** ಗ್ರಹಣ ಮಾಡುವವನು **[ವಿದುಷ್ಟರಃ]** ಅತ್ಯಂತ ಜ್ಞಾನಿಯು **[ಅಗ್ನಿಃ]** ಶ್ರೇಷ್ಠವಿದ್ಯೆಯನ್ನು ತಿಳಿದವನು ಅಥವಾ ತಿಳಿಸುವಂತೆ ಮಾಡುವವನು **[ಮೇಧಿರಃ]** ಬುದ್ಧಿವಂತನು **[ದೇವೇಷು]** ವಿದ್ವಾಂಸರಲ್ಲಿ **[ದೇವಃ]** ಪ್ರಶಂಸನೀಯನಾದ ವಿದ್ವಾಂಸನು **[ಮನುಷ್ವತ್]** ಹೇಗೆ ಉತ್ತಮ ಮನುಷ್ಯರು ಶ್ರೇಷ್ಠಕರ್ಮಗಳ ಅನುಷ್ಠಾನ ಮಾಡಿ ಪಾಪಗಳನ್ನು ಬಿಟ್ಟು ಸುಖಿಯಾಗುವಂತೆ **[ಹವ್ಯಾ]** ಕೊಡು-ತೆಗೆದುಕೊಳ್ಳಲು ಯೋಗ್ಯವಾದ ಪದಾರ್ಥಗಳನ್ನು **[ಅಚ್ಛ ಆ ಸುಷೂದತಿ]** ಉತ್ತಮ ರೀತಿಯಿಂದ ಅತಿಯಾಗಿ ಕೊಡುತ್ತಾನೆ. ಆ ಉತ್ತಮ ವಿದ್ವಾಂಸನಿಂದ ವಿದ್ಯೆ ಮತ್ತು ಶಿಕ್ಷಣವನ್ನು ಗ್ರಹಣ ಮಾಡಬೇಕು. ಉಳಿದ......

ಭಾವಾರ್ಥ:- ಉತ್ತಮ ವಿದ್ವಾಂಸರಿಂದ ವಿದ್ಯೆ ಮತ್ತು ಶಿಕ್ಷಣವನ್ನು ಗ್ರಹಿಸದೆ ಮತ್ತು ಅವರನ್ನು ವಿರೋಧಿಸುವಂತಹ ಭಾಗ್ಯಹೀನರಾದ ಜನರು ಯಾರಿರುವರು?

ಮತ್ತೆ ಹೇಗೆ ಇದನ್ನು ಪಡೆಯುವುದು ಎಂಬುದು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಬ್ರಹ್ಮಾ ಕೃಣೋತಿ ವರುಣೋ ಗಾತುವಿದಂ ತಮೀಮಹೇ । ವ್ಯೂರ್ಣೋತಿ ಹೃದಾ ಮತಿಂ
ನವ್ಯೋ ಜಾಯತಾಮೃತಂ ವಿತ್ತಂ ಮೇ ಅಸ್ಯ ರೋದಸೀ ॥೧೫॥

ಪದಾರ್ಥ:- ನಾವು ಯಾವ **[ಋತಮ್]** ಸತ್ಯಸ್ವರೂಪ **[ಬ್ರಹ್ಮ]** ಪರಮೇಶ್ವರ ಅಥವಾ **[ವರುಣಃ]** ಎಲ್ಲರಿಗಿಂತ ಉತ್ತಮ ವಿದ್ವಾಂಸನು **[ಗಾತುವಿದಂ]** ವೇದವಾಣಿಯನ್ನು ತಿಳಿದವನನ್ನು **[ಕೃಣೋತಿ]** ಮಾಡುತ್ತೇವೋ **[ತಮ್]** ಅವನನ್ನು **[ಈಮಹೇ]** ಯಾಚಿಸುತ್ತೇವೆ. ಅಂದರೆ ಅವನಿಂದ ಪಡೆಯುತ್ತೇವೆ ಅಂದರೆ ಅವನ ಕೃಪೆಯಿಂದ ಯಾವ **[ನವ್ಯಃ]** ನವೀನ ವಿದ್ವಾಂಸನು **[ಹೃದಾ]** ಹೃದಯದಿಂದ **[ಮತಿಮ್]** ವಿಶೇಷ ಜ್ಞಾನವನ್ನು **[ವ್ಯೂರ್ಣೋತಿ]** ಉತ್ಪನ್ನ ಮಾಡುತ್ತೇವೆ. ಅಂದರೆ ಉತ್ತಮೋತ್ತಮ ರೀತಿಯಿಂದ ಆಲೋಚಿಸುತ್ತೇವೆ. ಅದು ನಮ್ಮ ಮಧ್ಯೇ **[ಜಾಯತಾಮ್]** ಉತ್ಪನ್ನವಾಗಲಿ. ಉಳಿದ ಅರ್ಥವು.........

ಭಾವಾರ್ಥ:- ಯಾವುದೇ ಮನುಷ್ಯನ ಹಿಂದೆ ಪುಣ್ಯವು ಒಟ್ಟಾಗಿ ಮತ್ತು ವಿಶೇಷ ಶುದ್ಧ ಕ್ರಿಯಾಮಾಣ ಕರ್ಮವನ್ನು ಮಾಡದ ಹೊರತು ಪರಮೇಶ್ವರನ ದಯೆ ಉಂಟಾಗುವುದಿಲ್ಲ. ಮತ್ತು ಉಕ್ತ ವ್ಯವಹಾರದ ಹೊರತು ಯಾವನೂ ಪೂರ್ಣವಿದ್ಯೆಯನ್ನು ಪಡೆಯುವುದಿಲ್ಲ. ಆದುದರಿಂದ ಎಲ್ಲ ಮನುಷ್ಯರೂ ಎಂತಹ ಪ್ರಾರ್ಥನೆ ಮಾಡಬೇಕೆಂದರೆ, ನಮ್ಮಲ್ಲಿ ಪರಿಪೂರ್ಣ ವಿದ್ಯಾವಂತ ಉತ್ತಮೋತ್ತಮ ಗುಣ, ಕರ್ಮ, ಸ್ವಭಾವವುಳ್ಳ ಮನುಷ್ಯರು ಸದಾ ಇರಲಿ. ಅಂತಹ ಪ್ರಾರ್ಥನೆಯನ್ನು ನಿತ್ಯವೂ ಪಡೆದ ಪರಮಾತ್ಮನು ಸರ್ವವ್ಯಾಪಕತೆಯಿಂದ ಅವರ ಆತ್ಮವನ್ನು ಪ್ರಕಾಶಪಡಿಸುತ್ತಾನೆ. ಇದು ನಿಶ್ಚಯ.

ಈಗ ಈ ಮಾರ್ಗವು ಹೇಗಿದೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಅಸೌ ಯಃ ಪಂಥಾ ಆದಿತ್ಯೋ ದಿವಿ ಪ್ರವಾಚ್ಯಂ ಕೃತಃ । ನ ಸ ದೇವಾ ಅತಿಕ್ರಮೇ ತಂ
ಮರ್ತಾಸೋ ನ ಪಶ್ಯಥ ವಿತ್ತಂ ಮೇ ಅಸ್ಯ ರೋದಸೀ ॥೧೬॥

ಪದಾರ್ಥ:- ಹೇ [ದೇವಾಃ] ವಿದ್ವಾಂಸರೇ! [ಅಸೌ] ಈ [ಆದಿತ್ಯಃ] ಅವಿನಾಶಿಯಾದ ಸೂರ್ಯನಂತೆ ಪ್ರಕಾಶ ಕೊಡುವವನು [ಯಃ] ಯಾವ [ಪಂಥಾಃ] ವೇದ ಪ್ರತಿಪಾದಿತ ಮಾರ್ಗಗಳು [ದಿವಿ] ಸಮಸ್ತ ವಿದ್ಯೆಗಳ ಪ್ರಕಾಶದಲ್ಲಿ [ಪ್ರವಾಚ್ಯಮ್] ಉತ್ತಮ ರೀತಿಯಿಂದ ಹೇಳಲು ಯೋಗ್ಯವಾಗಿವೆಯೋ ಹಾಗೆ [ಕೃತಃ] ಈಶ್ವರನು ಸ್ಥಾಪಿಸಿರುವನು. [ಸಃ] ಅವನು ನಿಮಗೆ [ಅತಿಕ್ರಮೇ] ಉಲ್ಲಂಘನೆ ಮಾಡಲು ಯೋಗ್ಯನು [ನ] ಅಲ್ಲ. ಹೇ [ಮರ್ತಾಸಃ] ಕೇವಲ ಹುಟ್ಟಿ ಸಾಯುವ ವಿಚಾರರಹಿತ ಮನುಷ್ಯರೇ! [ತಮ್] ಆ ಪೂರ್ವೋಕ್ತ ಮಾರ್ಗಗಳನ್ನು ನೀವು [ನ ಪಶ್ಯಥ] ನೋಡಲಾರಿರಿ. ಉಳಿದ..........

ಭಾವಾರ್ಥ:- ಯಾವ ವೇದೋಕ್ತ ಮಾರ್ಗಗಳಿವೆಯೋ ಅವೇ ಸತ್ಯವು. ಹಾಗೆಂದು ತಿಳಿದು ಮತ್ತು ಸಮಸ್ತ ಸತ್ಯವಿದ್ಯೆಗಳನ್ನು ಪ್ರಾಪ್ತ ಮಾಡಿಕೊಂಡು ಸದಾ ಆನಂದಿತರಾಗಬೇಕು. ಆ ಈ ವೇದೋಕ್ತ ಮಾರ್ಗಗಳು ವಿದ್ವಾಂಸರಿಗೆ ಎಂದಿಗೂ ಖಂಡನೆ ಮಾಡಲು ಯೋಗ್ಯವಲ್ಲ. ಮತ್ತು ಈ ವಿದ್ಯಾಮಾರ್ಗಗಳ ಹೊರತು ವಿಶೇಷ ಜ್ಞಾನವೂ ಬರುವುದಿಲ್ಲ.

ಮತ್ತೆ ಅವು ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ತ್ರಿತಃ ಕೂಪೇಽವಹಿತೋ ದೇವಾನ್ ಹವತ ಊತಯೇ । ತಚ್ಛುಶ್ರಾವ ಬೃಹಸ್ಪತಿಃ
ಕೃಣ್ವನ್ನಂಹೂರಣಾದುರು ವಿತ್ತಂ ಮೇ ಅಸ್ಯ ರೋದಸೀ ॥೧೭॥

ಪದಾರ್ಥ:- ಯಾವ [ಉರು] ಬಹಳ [ತತ್] ಆ ವಿದ್ಯೆಯ ಪಾಠವನ್ನು [ಶುಶ್ರಾವ] ಕೇಳುತ್ತೇವೋ, ಆ ವಿಜ್ಞಾನವನ್ನು [ಕೃಣ್ವಾನ್] ಪ್ರಕಟಗೊಳಿಸುತ್ತಿರುವ [ತ್ರಿತಃ] ವಿದ್ಯೆ, ಶಿಕ್ಷಣ ಮತ್ತು ಬ್ರಹ್ಮಚರ್ಯ ಇವು ಮೂರು ವಿಷಯಗಳ ವಿಸ್ತಾರ ಮಾಡಲು ಅಂದರೆ, ಇವುಗಳನ್ನು ಹೆಚ್ಚಿಸಲು [ಕೂಪೇ] ಬಾವಿಯಲ್ಲಿ ಬಂದು ತನ್ನ ಹೃದಯದಲ್ಲಿ [ಅವಹಿತಃ] ಸ್ಥಿರತೆಯನ್ನಿಡಲು ಮತ್ತು [ಬೃಹಸ್ಪತಿಃ] ಬೃಹತ್ತಾದ ವೇದವಾಣಿಯನ್ನು ಪಾಲಿಸುವಂತಹ [ಅಂಹೂರಣಾನ್] ಯಾವ ವ್ಯವಹಾರಗಳಲ್ಲಿ ಅಧರ್ಮವಿದೆಯೋ ಅವುಗಳಿಂದ ಬೇರೆಯಾಗಿ [ಊತಯೇ] ರಕ್ಷಣೆ, ಆನಂದ, ಕಾಂತಿ, ಪ್ರೇಮ, ತೃಪ್ತಿ ಮೊದಲಾದ ಅನೇಕ ಸುಖಗಳಿಗಾಗಿ [ದೇವಾನ್] ದಿವ್ಯಗುಣಯುಕ್ತ ವಿದ್ವಾಂಸರ ಅಥವಾ ದಿವ್ಯ ಗುಣಗಳನ್ನು [ಹವತೇ] ಗ್ರಹಣ ಮಾಡುತ್ತೇವೆ. ಮತ್ತು ಉಳಿದ.........

ಭಾವಾರ್ಥ:- ಯಾವ ಮನುಷ್ಯನು ಅಥವಾ ದೇಹಧಾರಿಯಾದ ಜೀವನು ಅಂದರೆ, ಸ್ತ್ರೀ ಮೊದಲಾದವರೂ ಕೂಡ ನಮ್ಮ ಬುದ್ಧಿಯಿಂದ ಪ್ರಯತ್ನಪಟ್ಟು ಪಂಡಿತರ ಉತ್ತೇಜನದಿಂದ ಸಮಸ್ತ ವಿದ್ಯೆಗಳನ್ನು ಕೇಳಿ, ಒಪ್ಪಿ, ಆಲೋಚಿಸಿ ಮತ್ತು ಪ್ರಕಟಪಡಿಸಿ ಕುಟಿಲ ಗುಣ ಸ್ವಭಾವ ಅಥವಾ ಕುಟಿಲ ಕರ್ಮಗಳನ್ನು ಬಿಟ್ಟು ವಿದ್ವಾಂಸನಾಗುತ್ತಾನೆ. ಆ ಆತ್ಮವು ಮತ್ತು ಶರೀರದ ರಕ್ಷಣೆ ಮೊದಲಾದವುಗಳನ್ನು ಪಡೆದು ಬಹಳ ಸುಖವನ್ನು ಪಡೆಯುತ್ತಾನೆ.

ಮತ್ತೆ ಅವನು ಹೇಗಿರುತ್ತಾನೆ ಎಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅರುಣೋ ಮಾ ಸಕೃದ್ ವೃಕಃ ಪಥಾ ಯಂತಂ ದದರ್ಶ ಹಿ । ಉಜ್ಜಿಹೀತೇ ನಿಚಾಯ್ಯಾ
ತಷ್ಟೇವ ಪೃಷ್ಟ್ಯಾಮಯೀ ವಿತ್ತಂ ಮೇ ಅಸ್ಯ ರೋದಸೀ ॥೧೮॥

ಪದಾರ್ಥ:- ಯಾವ [ಅರುಣಃ] ಸಮಸ್ತ ವಿದ್ಯೆಗಳನ್ನು ಪಡೆಯುತ್ತಾ ಅಥವಾ ಪ್ರಕಾಶನಗೊಳಿಸುತ್ತಾ [ವೃಕಃ] ಶಾಂತಿ ಮೊದಲಾದ ಗುಣಗಳಿಂದ ಕೂಡಿದ ಚಂದ್ರನಂತೆ ವಿದ್ವಾಂಸನು [ಮಾ ಸಕೃತ್] ನನ್ನನ್ನು ಒಂದು ಸಲ [ಪಥಾ ಯನ್ತಮ್] ಉತ್ತಮ ಮಾರ್ಗದಲ್ಲಿ ಚಲಿಸುವಂತಹುದನ್ನು [ದದರ್ಶ] ನೋಡುತ್ತಾ ಅಥವಾ ಮೇಲಿನ ಗುಣಗಳಿಂದ ಕೂಡಿದ ಮಾಸ ಮೊದಲಾದ ಕಾಲ ವಿಭಾಗಗಳನ್ನು ಮಾಡುವ ಚಂದ್ರನಂತೆ, ವಿದ್ವಾಂಸನು ಉತ್ತಮ ಮಾರ್ಗಗಳಲ್ಲಿ ನಡೆಯುವವನನ್ನು ನೋಡುತ್ತಾನೆ. ಅವನು [ನಿಚಾಯ್ಯ] ಯಥಾ ಯೋಗ್ಯ ಸಮಾಧಾನವನ್ನು ಕೊಟ್ಟು [ಪೃಷ್ಟ್ಯಾಮಯೀ] ಬೆನ್ನಿನಲ್ಲಿ ಕ್ಲೇಶರೂಪ ರೋಗವುಳ್ಳವನನ್ನು [ಬೆನ್ನಿನಲ್ಲಿ ಹುಣ್ಣು] [ತಷ್ಟೇವ] ಶಿಲ್ಪಿಯಾದ ವಿದ್ವಾಂಸನು ಹೇಗೆ ಶಿಲ್ಪ ವ್ಯವಹಾರಗಳನ್ನು ತಿಳಿಸುತ್ತಾನೋ, ಹಾಗೆ [ಉಜ್ಜಿಹೀತೇ] ಉತ್ತಮತೆಯಿಂದ [ಹಿ] ನಿಶ್ಚಯವಾಗಿಯೂ ತಿಳಿಸುತ್ತಾನೆ. ಉಳಿದ ಮಂತ್ರಾರ್ಥ..........

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರವಿದೆ. ಯಾವ ವಿದ್ವಾಂಸನು ಚಂದ್ರನಂತೆ, ಶಾಂತಸ್ವರೂಪನೂ ಮತ್ತು ಸೂರ್ಯನಂತೆ ವಿದ್ಯೆಯನ್ನು ಪ್ರಕಾಶಪಡಿಸುವುದನ್ನು ಸ್ವೀಕರಿಸಿ ಜಗತ್ತಿನಲ್ಲಿ ಸಮಸ್ತ ವಿದ್ಯೆಗಳನ್ನು ಹರಡುವನೋ, ಅವನೇ ಆಪ್ತನು ಅಂದರೆ, ಅತಿ ಉತ್ತಮ ವಿದ್ವಾಂಸನು.

ಮತ್ತೆ ಅವನೊಂದಿಗಿರುವ ನಾವು ಹೇಗಿರಬೇಕು ಎಂಬುದನ್ನು ಹೇಳಲಾಗಿದೆ.

ಏನಾಂಗೂಷೇಣ ವಯಮಿಂದ್ರವಂತೋಽಭಿ ಷ್ಯಾಮ ವೃಜನೇ ಸರ್ವವೀರಾಃ । ತನ್ನೋ
ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೧೯॥

ಪದಾರ್ಥ:- ಯಾವ [ಏನಾ] ಈ [ಆಂಗೂಷೇಣ] ಪರಮವಿದ್ವಾಂಸನಿಂದ [ಸರ್ವವೀರಾಃ] ಸಮಸ್ತ ವೀರರು [ಇಂದ್ರವಂತಃ] ಯಾರಿಗೆ ಪರಮೈಶ್ವರ್ಯಯುಕ್ತ ಸಭಾಪತಿ ಇರುವನೋ, ಅವರು [ವಯಮ್] ನಮ್ಮನ್ನು [ವೃಜತೀ] ವಿದ್ಯಾ ಧರ್ಮಯುಕ್ತ ಬಲದಲ್ಲಿ [ಅಭಿ ಸ್ಯಾಮ] ಅಭಿಮುಖಗೊಳಿಸಲಿ. ಅಂದರೆ ಎಲ್ಲ ರೀತಿಯಿಂದ ಅದರಲ್ಲಿ ಪ್ರವೃತ್ತಗೊಳಿಸಲಿ. [ನಃ] ನಮಗೆ [ತತ್] ಆ ವಿಜ್ಞಾನವನ್ನು [ಮಿತ್ರಃ] ಪ್ರಾಣವು [ವರುಣಃ] ಉದಾನವು [ಅದಿತಿಃ] ಅಂತರಿಕ್ಷವು [ಸಿಂಧುಃ] ಸಮುದ್ರವು [ಪೃಥಿವೀ] ಪೃಥಿವಿಯು [ಉತ] ಮತ್ತು [ದ್ಯೌಃ] ಸೂರ್ಯನ ಪ್ರಕಾಶ ಅಥವಾ ವಿದ್ಯೆಯ ಪ್ರಕಾಶ ಇವೆಲ್ಲವೂ [ಮಾಮಹಂತಾಮ್] ಹೆಚ್ಚಿಸಲಿ.

ಭಾವಾರ್ಥ:- ಯಾವುದನ್ನು ಓದುವುದರಿಂದ ವಿದ್ಯೆ ಮತ್ತು ಉತ್ತಮ ಶಿಕ್ಷಣವು ಹೆಚ್ಚುವುದೋ, ಅದರ ಸಂಗದಿಂದ ಸಮಸ್ತ ವಿದ್ಯೆಗಳನ್ನು ಮಾನವರು ಸರ್ವಥಾ ನಿಶ್ಚಯವಾಗಿ ಮಾಡಬೇಕು.

ಈ ಸೂಕ್ತದಲ್ಲಿ ಸಮಸ್ತ ವಿದ್ವಾಂಸರ ಗುಣ ಮತ್ತು ಕೆಲಸಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಐದನೆಯ ಸೂಕ್ತ ಸಮಾಪ್ತ

ಸೂಕ್ತ ೧೦೬

ಮಂತ್ರಸಂಖ್ಯೆ ೭ । ಋಷಿಃ - ಕುತ್ಸ ಆಂಗಿರಸಃ । ದೇವತಾ - ವಿಶ್ವೇ ದೇವಾಃ । ಛಂದಃ - ಜಗತೀ, ೭ ತ್ರಿಷ್ಟುಪ್ ।

ಸ್ವರಃ - ೭ ಧೈವತಃ, ನಿಷಾಧಃ.

ಮೊದಲ ಮಂತ್ರದಲ್ಲಿ ಜಗತ್ತಿನಲ್ಲಿರುವ ವಿದ್ವಾಂಸರ ಗುಣ ಮತ್ತು ಕರ್ಮಗಳ ವರ್ಣನೆ ಮಾಡಿದೆ.

ಇಂದ್ರಂ ಮಿತ್ರಂ ವರುಣಮಗ್ನಿಮೂತಯೇ ಮಾರುತಂ ಶರ್ಧೋ ಅದಿತಿಂ ಹವಾಮಹೇ ।
ರಥಂ ನ ದುರ್ಗಾದ್ ವಸವಃ ಸುದಾನವೋ ವಿಶ್ವಸ್ಮಾನ್ನೋ ಅಂಹಸೋ ನಿಷ್ಪಿಪರ್ತನ ॥೧॥

ಪದಾರ್ಥ:- [ಸುದಾನವಃ] ಯಾರ ಉತ್ತಮೋತ್ತಮ ದಾನ ಮೊದಲಾದ ಕಾರ್ಯಗಳು ಅಥವಾ [ವಸವಃ] ಯಾವ ವಿದ್ಯೆ ಮೊದಲಾದ ಶುಭಗುಣಗಳಲ್ಲಿ ವಿವರಿಸಿರುವ ವಿದ್ವಾಂಸರೇ! ನೀವು [**ರಥಮ್**] ವಿಮಾನ ಮೊದಲಾದ ಯಾನಗಳನ್ನು [ನ] ಹೇಗೆ [**ದುರ್ಗಾತ್**] ಭೂಮಿ, ಜಲ ಅಥವಾ ಅಂತರಿಕ್ಷದ ಕಠಿಣ ಮಾರ್ಗಗಳಿಂದ ತಪ್ಪಿಸುವಂತೆ [ನಃ] ನಮ್ಮನ್ನು [ವಿಶ್ವಸ್ಮಾತ್] ಸಮಸ್ತ [ಅಂಹಸಃ] ಪಾಪಾಚರಣೆಯಿಂದ [ನಿಷ್ಪಿಪರ್ತನ] ತಪ್ಪಿಸಿರಿ. ನಾವು [**ಊತಯೇ**] ರಕ್ಷಣೆ ಮೊದಲಾದ ಪ್ರಯೋಜನಗಳಿಗಾಗಿ [**ಇಂದ್ರಮ್**] ವಿದ್ಯುತ್ತು ಅಥವಾ ಪರಮೈಶ್ವರ್ಯಶಾಲಿಯಾದ ಸಭಾಧ್ಯಕ್ಷನು [**ಮಿತ್ರಮ್**] ಎಲ್ಲರ ಪ್ರಾಣರೂಪವಾದ ಪವನವು ಅಥವಾ ಸರ್ವಮಿತ್ರನು [**ವರುಣಮ್**] ಕಾರ್ಯ ಮಾಡಿಸುವಂತಹ ಉದಾನ ವಾಯುವು ಅಥವಾ ಶ್ರೇಷ್ಠಗುಣಯುಕ್ತ ವಿದ್ವಾಂಸನು [**ಅಗ್ನಿಮ್**] ಸೂರ್ಯ ಮೊದಲಾದ ರೂಪದ ಅಗ್ನಿ ಅಥವಾ ಜ್ಞಾನಿಗಳಾದ ಜನರು [**ಅದಿತಿಮ್**] ತಾಯಿ, ತಂದೆ, ಪುತ್ರರು ಉತ್ಪನ್ನವಾಗುವಂತೆ ಸಮಸ್ತ ಜಗತ್ತಿನ ಕಾರಣವು ಅಥವಾ ಜಗತ್ತಿನ ಉತ್ಪತ್ತಿಯು [**ಮಾರುತಮ್**] ಪವನಗಳು ಅಥವಾ ಮನುಷ್ಯರ ಸಮೂಹವು ಮತ್ತು [ಶರ್ಧಃ] ಬಲವನ್ನು [**ಹವಾಮಹೇ**] ತಮ್ಮ ಕಾರ್ಯದ ಸಿದ್ಧಿಗಾಗಿ ಸ್ವೀಕರಿಸುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಮನುಷ್ಯನು ಉತ್ತಮ ರೀತಿಯಿಂದ ಸಿದ್ಧಗೊಳಿಸುತ್ತಾ ವಿಮಾನ ಮೊದಲಾದ ಯಾನಗಳಲ್ಲಿ ಅತಿ ಕಠಿಣ ಮಾರ್ಗಗಳಲ್ಲಿಯೂ ಕೂಡ ಸುಖವಾಗಿ ಹೋಗಿ ಬಂದು ಕಾರ್ಯಗಳನ್ನು ಸಿದ್ಧಪಡಿಸಿ ಸಮಸ್ತ ದರಿದ್ರತೆ ಮೊದಲಾದ ದುಃಖಗಳಿಂದ ಬಿಡುಗಡೆ ಪಡೆಯುವನೋ, ಹಾಗೆಯೇ ಈಶ್ವರನ ಸೃಷ್ಟಿಯಲ್ಲಿ ಪೃಥಿವೀ ಮೊದಲಾದ ಪದಾರ್ಥಗಳು ಅಥವಾ ವಿದ್ವಾಂಸರನ್ನು ತಿಳಿದು ಉಪಕಾರವನ್ನು ಪಡೆದು ಅವರನ್ನು ಉತ್ತಮವಾಗಿ ಸೇವಿಸಿ ಬಹಳ ಸುಖವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

ಮತ್ತೆ ಅವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ತ ಆದಿತ್ಯಾ ಆ ಗತಾ ಸರ್ವತಾತಯೇ ಭೂತ ದೇವಾ ವೃತ್ರತೂರ್ಯೇಷು ಶಂಭುವಃ ।
ರಥಂ ನ ದುರ್ಗಾದ್ ವಸವಃ ಸುದಾನವೋ ವಿಶ್ವಸ್ಮಾನ್ನೋ ಅಂಹಸೋ ನಿಷ್ಪಿಪರ್ತನ ॥೨॥

ಪದಾರ್ಥ:- ಹೇ [ದೇವಾಃ] ದಿವ್ಯಗುಣವುಳ್ಳ ವಿದ್ವಾಂಸರೇ! ಹೇಗೆ [ಆದಿತ್ಯಾಃ] ಕಾರಣರೂಪದಿಂದ ನಿತ್ಯದಿವ್ಯ ಗುಣವುಳ್ಳ ಯಾವ ಸೂರ್ಯ ಮೊದಲಾದ ಪದಾರ್ಥಗಳಿವೆಯೋ [ತೇ] ಅವು [ವೃತ್ರತೂರ್ಯೇಷು] ಮೇಘಾವಯನಗಳು ಅಂದರೆ, ಮೋಡಗಳ ಹಿಂಸೆ ನಾಶ ಮಾಡುವುದು ಯಾವುದರಿಂದ ಆಗುವುದೋ ಆ

ಸಂಗ್ರಾಮಗಳಲ್ಲಿ [ಶಂಭುವಃ] ಸುಖದ ಭಾವನೆಯನ್ನು ಮಾಡಿಸುವಂತಹವನಾಗುತ್ತಾನೋ ಹಾಗೆಯೇ ತಾವು ನಮ್ಮ ಸಮೀಪಕ್ಕೆ [ಆ **ಗತ**] ಬನ್ನಿರಿ ಮತ್ತು ಬಂದು ಶತ್ರುಗಳ ಹಿಂಸೆಯು ಯಾವುದರಿಂದ ಆಗುವುದೋ, ಆ ಸಂಗ್ರಾಮಗಳಲ್ಲಿ [**ಸರ್ವತಾತಯೇ**] ಎಲ್ಲರ ಸುಖಕ್ಕಾಗಿ [**ಶಂಭುವಃ**] ಸುಖದ ಭಾವನೆಯನ್ನುಂಟುಮಾಡುವವರು [**ಭೂತ**] ಆಗಿರಿ. ಉಳಿದ ಮಂತ್ರಾರ್ಥವು ಮೊದಲ ಮಂತ್ರದಂತೆ ತಿಳಿಯಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಈಶ್ವರನಿಂದ ರಚಿಸಲ್ಪಟ್ಟ ಪೃಥಿವೀ ಮೊದಲಾದ ಪದಾರ್ಥಗಳು ಪ್ರಾಣಿಗಳಿಗೆ ಉಪಕಾರ ಮಾಡಲು ಇವೆಯೋ, ಹಾಗೆಯೇ ಎಲ್ಲರ ಉಪಕಾರಕ್ಕಾಗಿ ವಿದ್ವಾಂಸರು ನಿತ್ಯವೂ ತಮ್ಮ ವರ್ತನೆಯನ್ನಿಟ್ಟುಕೊಳ್ಳಬೇಕು. ಹೇಗೆ ಉತ್ತಮವೂ, ದೃಢವೂ ಆದ ವಿಮಾನ ಮೊದಲಾದ ಯಾನಗಳಲ್ಲಿ ಕುಳಿತು ದೇಶ-ದೇಶಾಂತರಗಳಿಗೆ ಹೋಗಿ ಬಂದು, ವ್ಯಾಪಾರ ಅಥವಾ ವಿಜಯದಿಂದ ಧನ ಮತ್ತು ಪ್ರತಿಷ್ಠೆಯನ್ನು ಪಡೆದು ದರಿದ್ರತೆ ಮತ್ತು ಅಪಕೀರ್ತಿಯಿಂದ ಚ್ಯುತರಾಗಿ ಸುಖಿಯಾಗುವರೋ, ಹಾಗೆಯೇ ವಿದ್ವಾಂಸರು ತಮ್ಮ ಉಪದೇಶಗಳಿಂದ ವಿದ್ಯೆಯನ್ನು ಪಡೆಯುವಂತೆ ಮಾಡಿ ಎಲ್ಲರನ್ನೂ ಸುಖಿಗಳಾಗಿ ಮಾಡಬೇಕು.

ಮತ್ತೆ ಅವರು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಅವಂತು ನಃ ಪಿತರಃ ಸುಪ್ರವಾಚನಾ ಉತ ದೇವೀ ದೇವಪುತ್ರೇ ಋತಾವೃಧಾ ।
ರಥಂ ನ ದುರ್ಗಾದ್ ವಸವಃ ಸುದಾನವೋ ವಿಶ್ವಸ್ಮಾನ್ನೋ ಅಂಹಸೋ ನಿಷ್ಪಿಪರ್ತನ ॥೩॥

ಪದಾರ್ಥ:- [ದೇವಪುತ್ರೇ] ಯಾವನ ದಿವ್ಯಗುಣ ಅಂದರೆ ಉತ್ತಮೋತ್ತಮ ವಿದ್ವಾಂಸರು ಅಥವಾ ಉತ್ತಮ ರತ್ನಗಳಿಂದ ಕೂಡಿರುವ ಪರ್ವತ ಮೊದಲಾದ ಪದಾರ್ಥಗಳನ್ನು ಪಾಲಿಸುವವನು ಅಥವಾ ಯಾವ [**ಋತಾವೃಧಾ**] ಸತ್ಯಕಾರಣದಿಂದ ವೃದ್ಧಿಸುವರೋ ಅವರು [**ದೇವೀ**] ಉತ್ತಮ ಗುಣವುಳ್ಳ ಭೂಮಿ ಮತ್ತು ಸೂರ್ಯನ ಪ್ರಕಾಶವು ಹೇಗೆ [ನಃ] ನಮ್ಮನ್ನು ರಕ್ಷಿಸುತ್ತದೋ ಹಾಗೆಯೇ [**ಸುಪ್ರವಾಚನಾಃ**] ಯಾರನ್ನು ಚೆನ್ನಾಗಿ ಓದಿಸುವುದು ಮತ್ತು ಉಪದೇಶವನ್ನು ಮಾಡುತ್ತಾರೋ ಅವರು [**ಪಿತರಃ**] ವಿಶೇಷ ಜ್ಞಾನಿಗಳಾದ ಅವರು ನಮ್ಮನ್ನು [**ಉತ್**] ನಿಶ್ಚಯವಾಗಿಯೂ [**ಅವಂತು**] ರಕ್ಷಣೆ ಮೊದಲಾದ ವ್ಯವಹಾರಗಳಿಂದ ಪಾಲಿಸಲಿ. ಉಳಿದ ಮಂತ್ರಾರ್ಥವು ಮೊದಲ ಮಂತ್ರದಂತೆಯೇ...........

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ದಿವ್ಯ ಓಷಧಿಗಳು ಮತ್ತು ಪ್ರಕಾಶ ಮೊದಲಾದ ಗುಣಗಳಿಂದ ಕೂಡಿದ ಭೂಮಿ ಮತ್ತು ಸೂರ್ಯನ ಮಂಡಲವು ಎಲ್ಲರನ್ನೂ ಸುಖದೊಂದಿಗೆ ವೃದ್ಧಿಸುವುದೋ, ಹಾಗೆಯೇ ಆಪ್ತರಾದ ವಿದ್ವಾಂಸರು ಎಲ್ಲ ಮಾನವರಿಗೂ ಉತ್ತಮ ಶಿಕ್ಷಣ ಮತ್ತು ಓದಿಸುವುದರಿಂದ ವಿದ್ಯೆ ಮೊದಲಾದ ಉತ್ತಮ ಗುಣಗಳಲ್ಲಿ ಉನ್ನತಿಯನ್ನಿತ್ತು ಸುಖಪಡಿಸುವರು ಮತ್ತು ಹೇಗೆ ಉತ್ತಮ ರಥ ಮೊದಲಾದವುಗಳಲ್ಲಿ ಕುಳಿತು ದುಃಖದಿಂದ ಕೂಡಿದ ಮಾರ್ಗಗಳಲ್ಲಿ ಸುಖಪೂರ್ವಕವಾಗಿ ಪ್ರಯಾಣಿಸಿ ಸಮಗ್ರಕ್ಲೇಶದಿಂದ ಚ್ಯುತರಾಗಿ ಸುಖಿಯಾಗುವರೋ, ಹಾಗೆಯೇ ಆ ವಿದ್ವಾಂಸರು ದ್ರಷ್ಟ ಗುಣ, ಕರ್ಮ ಮತ್ತು ಸ್ವಭಾವಗಳಿಂದ ಬೇರೆಯಾಗಿ ಮಾಡಿದ ನಮಗೆ ಧರ್ಮದ ಆಚರಣೆಯಲ್ಲಿ ಉನ್ನತಿಯನ್ನು ಕೊಡಲಿ.

ಮತ್ತೆ ಅವರನ್ನು ಹೇಗೆ ಉಪಯೋಗದಲ್ಲಿ ತರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ನರಾಶಂಸಂ ವಾಜಿನಂ ವಾಜಯನ್ನಿಹ ಕ್ಷಯದ್ವೀರಂ ಪೂಷಣಂ ಸುಮ್ನೈರೀಮಹೇ ।
ರಥಂ ನ ದುರ್ಗಾದ್ ವಸವಃ ಸುದಾನವೋ ವಿಶ್ವಸ್ಮಾನ್ನೋ ಅಂಹಸೋ ನಿಷ್ಪಿಪರ್ತನ ॥೪॥

ಪದಾರ್ಥ:- ಹೇ ವಿದ್ವಾಂಸನೇ! ಹೇಗೆ [ವಾಜಯನ್] ಉತ್ತಮೋತ್ತಮ ಪದಾರ್ಥಗಳ ವಿಶೇಷ ಜ್ಞಾನವನ್ನುಂಟು ಮಾಡುವ ಅಥವಾ ಯುದ್ಧವನ್ನುಂಟುಮಾಡುವ ನಾವು [ಇಹ] ಈ ಪೃಥ್ವಿಯಲ್ಲಿ [ಸುಮ್ನೈಃ] ಸುಖಗಳಿಂದ ಕೂಡಿದ [ನರಾಶಂಸಮ್] ಮನುಷ್ಯರಿಂದ ಪ್ರಾರ್ಥನೆಗೆ ಯೋಗ್ಯವಾದ ವಿದ್ವಾಂಸನನ್ನು ಹಾಗೆಯೇ [ವಾಜಿನಮ್] ವಿಶೇಷ ಜ್ಞಾನ ಮತ್ತು ಯುದ್ಧವಿದ್ಯೆಯಲ್ಲಿ ಕುಶಲನು [ಕ್ಷಯದ್ವೀರಮ್] ಶತ್ರುಗಳನ್ನು ಕತ್ತರಿಸಿ ಹಾಕುವಂತಹ ವೀರನು ಮತ್ತು [ಪೂಷಣಮ್] ಶರೀರ ಅಥವಾ ಆತ್ಮದ ಪೃಥ್ವಿಯನ್ನುಂಟು ಮಾಡುವವನು ಆದ ಆ ಸಭಾಧ್ಯಕ್ಷನನ್ನು [ಈಮಹೇ] ಪ್ರಾರ್ಥಿಸುತ್ತೇವೆ. ಹಾಗೆ ನೀನು ಶುಭಗುಣಗಳನ್ನು ಯಾಚಿಸು. ಉಳಿದ ಮಂತ್ರಾರ್ಥ............

ಭಾವಾರ್ಥ:- ನಾವು ಶುಭಗುಣಗಳಿಂದ ಕೂಡಿರುವ ಮನುಷ್ಯರ ಮಿತ್ರತೆಯನ್ನು ಪಡೆದು ಶ್ರೇಷ್ಠ ಯಾನ ಯುಕ್ತರಾಗಿ ಶಿಲ್ಪಿಗಳಂತೆ ದುಃಖದಿಂದ ಪಾರಾಗುವಂತಾಗಲಿ.

ಮತ್ತೆ ಅವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಬೃಹಸ್ಪತೇ ಸದಮಿನ್ನಃ ಸುಗಂ ಕೃಧಿ ಶಂ ಯೋರ್ಯತ್ ತೇ ಮನುರ್ಹಿತಂ ತದೀಮಹೇ ।
ರಥಂ ನ ದುರ್ಗಾದ್ ವಸವಃ ಸುದಾನವೋ ವಿಶ್ವಸ್ಮಾನ್ನೋ ಅಂಹಸೋ ನಿಷ್ಪಿಪರ್ತನ ॥೫॥

ಪದಾರ್ಥ:- ಹೇ [ಬೃಹಸ್ಪತೇ] ಪರಮ ಅಧ್ಯಾಪಕ ಅಂದರೆ ಉತ್ತಮ ರೀತಿಯಿಂದ ಓದಿಸುವವನೇ! [ತೇ] ನಿನ್ನ ಯಾವ [**ಮನುರ್ಹಿತಮ್**] ಮನಕ್ಕೆ ಹಿತವನ್ನುಂಟುಮಾಡುವ [**ಶಮ್**] ಸುಖ ಅಥವಾ [**ಯೋಃ**] ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಪ್ರಾಪ್ತಿ ಮಾಡಿಸುವುದು ಹಾಗೂ [**ಯತ್**] ಯಾವ [**ಸದಮ್ ಇತ್**] ಯಾವಾಗಲೂ ನಾವು [**ನಃ**] ನಮಗೆ [**ಸುಗಮ್**] ಸುಖವನ್ನು [**ಕೃಧಿ**] ಮಾಡಿರಿ ಎಂದರೆ ಸಿದ್ಧಗೊಳಿಸಿರಿ. [**ತತ್**] ಆ ಎಲ್ಲವನ್ನೂ ನಾವು [**ಈಮಹೇ**] ತೆಗೆದುಕೊಳ್ಳುತ್ತೇವೆ. ಉಳಿದ ಮಂತ್ರಾರ್ಥ...........

ಭಾವಾರ್ಥ:- ಮಾನವನು ಹೇಗೆ ಗುರುಗಳಿಂದ ವಿದ್ಯೆ ಪಡೆಯುವನೋ, ಹಾಗೆಯೇ ಎಲ್ಲ ವಿದ್ವಾಂಸರಿಂದಲೂ ವಿದ್ಯೆಯನ್ನು ಪಡೆದು ದುಃಖದ ವಿನಾಶ ಮಾಡಬೇಕು.

ಮತ್ತೆ ಓದಿಸುವವರು ಮತ್ತು ಓದುವವರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಇಂದ್ರಂ ಕುತ್ಸೋ ವೃತ್ರಹಣಂ ಶಚೀಪತಿಂ ಕಾಟೇ ನಿಬಾಳ್ಹ ಋಷಿರಹ್ವದೂತಯೇ ।
ರಥಂ ನ ದುರ್ಗಾದ್ ವಸವಃ ಸುದಾನವೋ ವಿಶ್ವಸ್ಮಾನ್ನೋ ಅಂಹಸೋ ನಿಷ್ಪಿಪರ್ತನ ॥೬॥

ಪದಾರ್ಥ:- [ಕುತ್ಸಃ] (ಕುತ್ಸ ಇತಿ ವಜ್ರನಾಮ ನಿಘ.೨.೨೦) ವಿದ್ಯಾರೂಪೀ ವಜ್ರ ತೆಗೆದುಕೊಂಡು ಅಥವಾ ಪದಾರ್ಥಗಳನ್ನು ಭಿನ್ನ ಭಿನ್ನಗೊಳಿಸುವ [ನಿವಾಢಃ] ನಿರಂತರ ಸುಖವನ್ನುಂಟುಮಾಡುವ [ಋಷಿಃ] ಗುರು ಮತ್ತು ವಿದ್ಯಾರ್ಥಿಗಳು [ಕಾಟೇ] ಯಾವುದರಲ್ಲಿ ಸಮಸ್ತ ವಿದ್ಯೆಗಳ ವೃಷ್ಟಿಯಾಗುವುದೋ, ಆ ಅಧ್ಯಾಪನ ವ್ಯವಹಾರದಲ್ಲಿ [ಊತಯೇ] ರಕ್ಷಣೆ ಮೊದಲಾದವುಗಳಿಗಾಗಿ ಯಾವ [ವೃತ್ರಹಣಮ್] ಶತ್ರುಗಳನ್ನು ನಾಶ ಮಾಡುವ ಅಥವಾ [ಶಚೀಪತಿಮ್] ವೇದವಾಣಿಯನ್ನು ಪಾಲಿಸುವಂತಹ [ಇಂದ್ರಮ್] ಪರಮೈಶ್ವರ್ಯವಂತನಾದ ಶಾಲೆ ಮೊದಲಾದವುಗಳ ಅಧ್ಯಕ್ಷನನ್ನು [ಅಹ್ವತ್] ಆಹ್ವಾನಿಸುವಂತೆ ನಾವು ಕೂಡ ಆಹ್ವಾನಿಸೋಣ. ಉಳಿದ ಮಂತ್ರಾರ್ಥ...........

ಭಾವಾರ್ಥ:- ವಿದ್ಯಾರ್ಥಿಯು ಕಪಟ ವಿದ್ಯೆಯನ್ನು ಹೇಳಿಕೊಡುವವನ ಹತ್ತಿರ ನಿಲ್ಲಬಾರದು. ಆದರೆ ಆಪ್ತ ವಿದ್ವಾಂಸರ ಹತ್ತಿರ ಕುಳಿತು ವಿದ್ವಾಂಸನಾಗಿ ಋಷಿ ಜನರ ಸ್ವಭಾವಗಳಿಂದ ಯುಕ್ತನಾಗಿರಬೇಕು. ಮತ್ತು ತನ್ನ ಆತ್ಮದ ರಕ್ಷಣೆಗಾಗಿ ಅಧರ್ಮಕ್ಕೆ ಹೆದರಿ ಧರ್ಮದಲ್ಲಿ ಸದಾ ನಿರತನಾಗಬೇಕು.

ಮತ್ತೆ ಅವರು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ದೇವೈರ್ನೋ ದೇವ್ಯದಿತಿರ್ನಿ ಪಾತು ದೇವಸ್ತ್ರಾತಾ ತ್ರಾಯತಾಮಪ್ರಯುಚ್ಛನ್ । ತನ್ನೋ
ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೭॥

ಪದಾರ್ಥ:- ಯಾವ [ದೇವೈಃ] ವಿದ್ವಾಂಸರ ಅಥವಾ ದಿವ್ಯಗುಣಗಳಿಂದ ಕೂಡಿರುವ [ಅಪ್ರಯುಚ್ಛನ್] ಪ್ರಮಾದವುಂಟು ಮಾಡದ [ತ್ರಾತಾ] ಎಲ್ಲರನ್ನೂ ರಕ್ಷಿಸುವ [ದೇವಃ] ವಿದ್ವಾಂಸನಿರುವನೋ, ಅವನು [ನಃ] ನಮ್ಮನ್ನು [ನಿ ಪಾತು] ನಿರಂತರವೂ ರಕ್ಷಿಸಲಿ. ಹಾಗೂ [ದೇವೀ] ದಿವ್ಯಗುಣಗಳಿಂದ ತುಂಬಿರುವ ಎಲ್ಲ ಗುಣಗಳ ಆಗರವೂ [ಅದಿತಿಃ] ಪ್ರಕಾಶಯುಕ್ತ ವಿದ್ಯೆಯು ಎಲ್ಲರನ್ನೂ [ತ್ರಾತಾಮ್] ರಕ್ಷಿಸಲಿ. [ತತ್] ಆ ಪೂರ್ವೋಕ್ತ ಸಮಸ್ತ ಕರ್ಮಗಳನ್ನು [ನಃ] ಮತ್ತು ನಮ್ಮನ್ನು [ಮಿತ್ರಃ] ಮಿತ್ರರು [ವರುಣಃ] ಶ್ರೇಷ್ಠ ವಿದ್ವಾಂಸರು [ಅದಿತಿಃ] ಅಖಂಡಿತ ನೀತಿಯು [ಸಿಂಧುಃ] ಸಮುದ್ರ [ಪೃಥಿವೀ] ಭೂಮಿಯು [ಉತ] ಮತ್ತು [ದ್ಯೌಃ] ಸೂರ್ಯನ ಪ್ರಕಾಶವು [ಮಾಮಹಂತಾಮ್] ಹೆಚ್ಚಿಸಲಿ ಅಂದರೆ ಉನ್ನತಿಗೊಳಿಸಲಿ.

ಭಾವಾರ್ಥ:- ಯಾವ ಅಪ್ರಮಾದನು ವಿದ್ವಾಂಸರಲ್ಲಿ ವಿದ್ವಾಂಸನು ವಿದ್ಯೆಯ ರಕ್ಷಣೆಯನ್ನು ಮಾಡುವವನು, ವಿದ್ಯಾದಾನದಿಂದ ಎಲ್ಲರ ಸುಖವನ್ನು ಹೆಚ್ಚಿಸುತ್ತಾನೋ, ಮಾನವರು ಅವನನ್ನು ಸತ್ಕರಿಸಿ ವಿದ್ಯೆ ಮತ್ತು ಧರ್ಮದ ಪ್ರಚಾರವನ್ನು ಜಗತ್ತಿನಲ್ಲಿ ಮಾಡಬೇಕು.

ಈ ಮಂತ್ರದಲ್ಲಿ ಸಮಸ್ತ ವಿದ್ವಾಂಸರ ಗುಣಗಳ ವರ್ಣನೆ ಇದೆ. ಆದುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಆರನೆಯ ಸೂಕ್ತ ಸಮಾಪ್ತ

ಸೂಕ್ತ ೧೦೭

ಮಂತ್ರಸಂಖ್ಯೆ ೩ । ಋಷಿಃ - ಕುತ್ಸ ಆಂಗಿರಸಃ । ದೇವತಾ - ವಿಶ್ವೇ ದೇವಾಃ । ಛಂದಃ - ತ್ರಿಷ್ಟುಪ್ । ಸ್ವರಃ - ಧೈವತಃ.

ಇದರ ಪ್ರಥಮ ಮಂತ್ರದಲ್ಲಿ ಸಮಸ್ತ ವಿದ್ವಾಂಸರು ಹೇಗಿರಬೇಕು, ಈ ಉಪದೇಶವಿದೆ.

ಯಜ್ಞೋ ದೇವಾನಾಂ ಪ್ರತ್ಯೇತಿ ಸುಮ್ನ-ಮಾದಿತ್ಯಾಸೋ ಭವತಾ ಮೃಳಯಂತಃ ।
ಆ ವೋऽರ್ವಾಚೀ ಸುಮತಿರ್ವವೃತ್ಯಾ-ದಂಹೋಶ್ಚಿದ್ಯಾ ವರಿವೋವಿತ್ತರಾಸತ್ ॥೧॥

ಪದಾರ್ಥ:- [ಮೃಡಯಂತಃ] ಹೇ ಆನಂದ ಪಡಿಸುತ್ತಿರುವ [ಆದಿತ್ಯಾಸಃ] ಸೂರ್ಯನಂತೆ ವಿದ್ಯಾಯೋಗದಿಂದ ಪ್ರಕಾಶಿತರಾಗುತ್ತಿರುವ ವಿದ್ವಾಂಸರೇ! ನೀವು ಯಾವ [ದೇವಾನಾಮ್] ವಿದ್ವಾಂಸರ [ಯಜ್ಞಃ] ಸಂಗಮದಿಂದ ಸಿದ್ಧವಾಗುವ ಶಿಲ್ಪಕಾರ್ಯಗಳು [ಸುಮ್ನಮ್] ಸುಖದ [ಪ್ರತಿ ಏತಿ] ಪ್ರತೀತಿ ಪಡಿಸುತ್ತವೆಯೋ, ಅದನ್ನು ಪ್ರಕಟ ಮಾಡುವಂತಹವರು [ಭವತ] ಆಗಿರಿ. [ಯಾ] ಯಾವ [ವಃ] ನಿಮ್ಮನ್ನು [ಅಂಹೋಃ] ವಿಶೇಷಜ್ಞಾನವು ಹೇಗಿರುವುದೋ, ಹಾಗೆ [ಅರ್ವಾಚೀ] ಈ ಸಮಯದ [ಸುಮತಿಃ] ಉತ್ತಮ ಬುದ್ಧಿಯು [ವವೃತ್ಯಾತ್] ವರ್ತಿಸುತ್ತಿರುವುದು. ಅದು [ಚಿತ್] ಕೂಡ ನಮಗಾಗಿ [ಪರಿವೋಚಿತ್ತರಾ] ಹಾಗೇ ಆಗಲಿ. ಏಕೆಂದರೆ, ಅದರಿಂದ ಉತ್ತಮ ಜನರಿಗೆ ಒಳ್ಳೆಯ ಶುಶ್ರೂಷೆಯು [ಆ ಅಪತ್] ಎಲ್ಲ ಕಡೆಗಳಿಂದಲೂ ಆಗಲಿ.

ಭಾವಾರ್ಥ:- ಈ ಜಗತ್ತಿನಲ್ಲಿ ಯಾವ ವಿದ್ವಾಂಸರು, ತಮ್ಮ ಪುರುಷಾರ್ಥದಿಂದ ಶಿಲ್ಪಕ್ರಿಯೆಗಳನ್ನು ಪ್ರತ್ಯಕ್ಷ ಮಾಡಿಸಿರುವರೋ ಅವರು ಮನುಷ್ಯರೆಲ್ಲರಿಗೂ ಚೆನ್ನಾಗಿ ಕಲಿಸಬೇಕು ಮತ್ತು ಅವರನ್ನು ಸುಖಿಗಳನ್ನಾಗಿ ಮಾಡಬೇಕು.

ಮತ್ತೆ ಅವರು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಉಪ ನೋ ದೇವಾ ಅವಸಾ ಗಮಂ-ತ್ವಂಗಿರಸಾಂ ಸಾಮಭಿಃ ಸ್ತೂಯಮಾನಾಃ । ಇಂದ್ರ
ಇಂದ್ರಿಯೈರ್ಮರುತೋ ಮರುದ್ಭಿ-ರಾದಿತ್ಯೈರ್ನೋ ಅದಿತಿಃ ಶರ್ಮ ಯಂಸತ್ ॥೨॥

ಪದಾರ್ಥ:- [ಸಾಮಭಿಃ] ಸಾಮವೇದದ ಗಾನಗಳಿಂದ [ಸ್ತೂಯಮಾನಾಃ] ಸ್ತುತಿಗೆ ಪ್ರಾಪ್ತವಾಗುತ್ತಿರುವ [ಆದಿತ್ಯೈಃ] ಪೂರ್ಣವಿದ್ಯೆಯಿಂದ ಕೂಡಿದ ಮನುಷ್ಯ ಅಥವಾ ೧೨ ಮಾಸಗಳು [ಮರುದ್ಭಿಃ] ವಿದ್ವಾಂಸರು ಅಥವಾ ಪವನಗಳು ಮತ್ತು [ಇಂದ್ರಿಯೈಃ] ಧನಸಹಿತವಾಗಿ [ಇಂದ್ರಃ] ಸಭಾಧ್ಯಕ್ಷನು [ಮರುತಃ] ಅಥವಾ ಪವನವು [ಅದಿತಿಃ] ವಿದ್ವಾಂಸರ ಪಿತನು ಅಥವಾ ಸೂರ್ಯಪ್ರಕಾಶವು ಮತ್ತು [ದೇವಾಃ] ವಿದ್ವಾಂಸರು, [ಅಂಗಿರಸಾಮ್] ಪ್ರಾಣವಿದ್ಯೆಯನ್ನು ತಿಳಿದವರು [ನಃ] ನಮ್ಮನ್ನು [ಅವಸಾ] ರಕ್ಷಣೆ ಮೊದಲಾದ ವ್ಯವಹಾರಗಳ [ಉಪ, ಆ ಗಮಂತು] ಸಮೀಪದಲ್ಲಿ ಎಲ್ಲ ರೀತಿಯಿಂದ ಬರಲಿ ಮತ್ತು [ನಃ] ನಮಗೆ [ಶರ್ಮ] ಸುಖವನ್ನು [ಯಂಸತ್] ಕೊಡಲಿ.

ಭಾವಾರ್ಥ:- ಜ್ಞಾನ ಪ್ರಚಾರವನ್ನು ಕಲಿಯುವ ಜನರು ವಿದ್ವಾಂಸರ ಸಮೀಪದಲ್ಲಿ ಅಥವಾ ವಿದ್ವಾಂಸರು ವಿದ್ಯಾರ್ಥಿಗಳ ಸಮೀಪಕ್ಕೆ ಹೋಗಿ, ಅವರು ವಿದ್ಯೆ, ಧರ್ಮ ಮತ್ತು ಉತ್ತಮ ಶಿಕ್ಷಣದ ವ್ಯವಹಾರಗಳನ್ನು ಬಿಟ್ಟು ಬೇರೆ ಕಾರ್ಯಗಳನ್ನು ಮಾಡಕೂಡದು. ಅದರಿಂದ ದುಃಖದ ನಾಶವು ಮತ್ತು ನಿರಂತರ ಸುಖವು ಸಿದ್ಧಿಸುವುದು.

ಮತ್ತೆ ಅವರು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ತನ್ನ ಇಂದ್ರಸ್ತದ್ ವರುಣಸ್ತದಗ್ನಿ-ಸ್ತದರ್ಯಮಾ ತತ್ ಸವಿತಾ ಚನೋ ಧಾತ್ । ತನ್ನೋ
ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೩॥

ಪದಾರ್ಥ:- ಹೇಗೆ [ಮಿತ್ರಃ] ಮಿತ್ರರು [ವರುಣಃ] ಶ್ರೇಷ್ಠ ವಿದ್ವಾಂಸರು [ಅದಿತಿಃ] ಅಖಂಡಿತ ಆಕಾಶವು [ಸಿಂಧುಃ] ಸಮುದ್ರವು [ಪೃಥಿವೀ] ಭೂಮಿಯು [ಉತ] ಮತ್ತು [ದ್ಯೌಃ] ಸೂರ್ಯ ಮೊದಲಾದ ಪ್ರಕಾಶವು [ನಃ] ನಮಗೆ [ಮಾಮಹಸ್ತಾಮ್] ಆನಂದಪಡಿಸುವುವೋ [ತತ್] ಹಾಗೆ [ಇಂದ್ರಃ] ವಿದ್ಯುತ್ತು ಅಥವಾ ಧನಿಕರು [ನಃ] ನಮಗೆ [ತತ್] ಆ ಧನ ಅಥವಾ ಅನ್ನವನ್ನು ಅಂದರೆ, ಅವನಿಗೆ ಕೊಟ್ಟ ಧನಾದಿ ಪದಾರ್ಥಗಳನ್ನು [ವರುಣಃ] ಜಲ ಅಥವಾ ಗುಣಗಳಿಂದ ಉತ್ಕೃಷ್ಟವಾದ [ತತ್] ಆ ಶರೀರ ಸುಖವನ್ನು [ಅಗ್ನಿಃ] ಪಾವಕ ಅಗ್ನಿಯು ಅಥವಾ ನ್ಯಾಯಕರ್ತನಾದ ಸಭಾಧ್ಯಕ್ಷನು [ತತ್] ಇಂದ್ರಿಯಸುಖಗಳನ್ನು [ಸವಿತಾ] ಸೂರ್ಯ ಅಥವಾ ಧರ್ಮ ಕಾರ್ಯಗಳಲ್ಲಿ ಪ್ರೇರಣೆಯನ್ನುಂಟುಮಾಡುವ ಧರ್ಮಜ್ಞರು [ತತ್] ಆ ಸಾಮಾಜಿಕ ಸುಖ ಮತ್ತು [ಚನಃ] ಅನ್ನವನ್ನು [ಧಾತ್] ಧಾರಣ ಮಾಡುತ್ತಾರೆ ಅಥವಾ ಧಾರಣ ಮಾಡಿಸುತ್ತಾರೆ.

ಭಾವಾರ್ಥ:- ಹೇಗೆ ಪ್ರಾಪಂಚಿಕ ಪೃಥಿವೀ ಮುಂತಾದ ಪದಾರ್ಥಗಳು ಸುಖವನ್ನು ಕೊಡುತ್ತವೋ, ಹಾಗೆಯೇ ವಿದ್ವಾಂಸರು ಸುಖವನ್ನೀಯುವವರು ಆಗಬೇಕು.

ಈ ಸೂಕ್ತದಲ್ಲಿ ವಿದ್ವಾಂಸರ ಗುಣಗಳ ವರ್ಣನೆ ಇದೆ. ಆದುದರಿಂದ ಈ ಸೂಕ್ತಾರ್ಥಕ್ಕೂ ಹಿಂದಿನ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಏಳನೇಯ ಸೂಕ್ತ ಸಮಾಪ್ತ

ಸೂಕ್ತ ೧೦೮

ಮಂತ್ರಸಂಖ್ಯೆ ೧೩ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಇಂದ್ರಾಗ್ನೀ । ಛಂದಃ - ತ್ರಿಷ್ಟುಪ್ ।
ಸ್ವರಃ - ೪, ೫, ಪಂಚಮಃ, ಧೈವತಃ.

ಈ ಸೂಕ್ತದ ಪ್ರಥಮ ಮಂತ್ರದಲ್ಲಿ ಎರಡೆರಡು ಸೇರಿದ ಪದಾರ್ಥಗಳ ಗುಣಗಳ ಉಪದೇಶ ಮಾಡಿದೆ.

ಯ ಇಂದ್ರಾಗ್ನೀ ಚಿತ್ರತಮೋ ರಥೋ ವಾ-ಮಭಿ ವಿಶ್ವಾನಿ ಭುವನಾನಿ ಚಷ್ಟೇ ।
ತೇನಾ ಯಾತಂ ಸರಥಂ ತಸ್ಥಿವಾಂಸಾ-ಥಾ ಸೋಮಸ್ಯ ಪಿಬತಂ ಸುತಸ್ಯ ॥೧॥

ಪದಾರ್ಥ:- [ಯಃ] ಯಾವ [ಚಿತ್ರತಮಃ] ಒಂದೇ ಒಂದು ಅದ್ಭುತ ಗುಣ ಮತ್ತು ಕ್ರಿಯೆಗಾಗಿ ಮಾಡಿದ [ರಥಃ] ವಿಮಾನ ಮೊದಲಾದ ಯಾನಸಮೂಹವು [ವಾಮ್] ಈ [ತಸ್ಥಿವಾಂಸಾ] ನಿಂತಿರುವ [ಇಂದ್ರಾಗ್ನೀ] ಪವನ ಮತ್ತು ಅಗ್ನಿಯನ್ನು ಪಡೆದು [ವಿಶ್ವಾನಿ] ಎಲ್ಲ [ಭುವನಾನಿ] ಭೂಗೋಳದ ಸ್ಥಾನಗಳನ್ನು [ಅಭಿಚಷ್ಟೇ] ಎಲ್ಲ ಪ್ರಕಾರಗಳಿಂದ ತೋರಿಸುತ್ತದೆ. [ಅಥ] ಇದರ ನಂತರ ಈ ಎರಡೂ ಅಂದರೆ ಪವನ ಮತ್ತು ಅಗ್ನಿಯು [ಸರಥಮ್] ರಥ ಮೊದಲಾದ ಸಾಮಗ್ರಿ ಸಹಿತ ಸೇನೆ ಅಥವಾ ಉತ್ತಮ ಸಾಮಗ್ರಿಗಳನ್ನು [ಆ ಯಾತಮ್] ಪ್ರಾಪ್ತರಾಗಿ ಉತ್ತಮವಾಗಿ ಅಭೀಷ್ಟಸ್ಥಾನವನ್ನು ತಲುಪುತ್ತಾರೆ ಹಾಗೂ [ಸುತಸ್ಯ] ಈಶ್ವರನಿಂದ ಉತ್ಪನ್ನವಾದ [ಸೋಮಸ್ಯ] ಸೋಮ ಮೊದಲಾದ ರಸವನ್ನು [ಪಿಬತಮ್] ಕುಡಿಯುತ್ತಾರೆ. [ತೇನ] ಅದರಿಂದ ಸಮಸ್ತ ಶಿಲ್ಪಿಗಳು ಎಲ್ಲ ಸ್ಥಳಗಳಿಗೂ ಹೋಗಿ ಬರಬೇಕು.

ಭಾವಾರ್ಥ:- ಕಲೆಗಳಲ್ಲಿ ಚೆನ್ನಾಗಿ ಜೋಡಿಸಿ ನಡೆಸುವಂತಹ ವಾಯು ಮತ್ತು ಅಗ್ನಿ ಮೊದಲಾದ ಪದಾರ್ಥಗಳಿಂದ ಕೂಡಿದ ವಿಮಾನ ಮೊದಲಾದ ಯಾನಗಳಲ್ಲಿ ಆಕಾಶ, ಸಮುದ್ರ ಮತ್ತು ಭೂಮಾರ್ಗಗಳಲ್ಲಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗಿ ಬಂದು ಯಾವಾಗಲೂ ತನ್ನ ಅಭಿಪ್ರಾಯದ ಸಿದ್ಧಿಯಿಂದ ಆನಂದರಸವನ್ನು ಭೋಗಿಸಬೇಕು.

ಮತ್ತೆ ಅವು ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಯಾವದಿದಂ ಭುವನಂ ವಿಶ್ವಮ-ಸ್ತ್ಯುರುವ್ಯಚಾ ವರಿಮತಾ ಗಭೀರಮ್ । ತಾವಾँ ಅಯಂ
ಪಾತವೇ ಸೋಮೋ ಅಸ್ತ್ವ-ರಮಿಂದ್ರಾಗ್ನೀ ಮನಸೇ ಯುವಭ್ಯಾಮ್ ॥೨॥

ಪದಾರ್ಥ:- ಹೇ ಮನುಷ್ಯರೇ! ನೀವು [ಯಾವತ್] ಎಷ್ಟು [ಉರುವ್ಯಚಾ] ಬಹಳ ವ್ಯಾಪ್ತಿ ಅಂದರೆ ಸಂಪೂರ್ಣ ಮತ್ತು [ವರಿಮತಾ] ಬಹಳ ಸ್ಥೂಲತೆಯೊಂದಿಗೆ ಇರುವ [ಗಭೀರಮ್] ಅಗಾಧದ [ಭುವನಮ್] ಎಲ್ಲ ವಸ್ತುಗಳ ಸ್ಥಿರತೆಯ ಸ್ಥಾನವು [ಇದಮ್] ಈ ಪ್ರಕಟಾಪ್ರಕಟ [ವಿಶ್ವಮ್] ಜಗತ್ತು [ಅಸ್ತಿ] ಇದೆ. [ತಾವಾನ್] ಅಷ್ಟು [ಅಯಮ್] ಈ [ಸೋಮಃ] ಉತ್ಪನ್ನವಾದ ಪದಾರ್ಥಗಳು ಇವೆ, ಅವುಗಳ [ಮನಸೇ] ವಿಶೇಷ ಜ್ಞಾನ ಮಾಡಿಸುವುದಕ್ಕೆ [ಇಂದ್ರಾಗ್ನೀ] ವಾಯು ಮತ್ತು ಅಗ್ನಿಯು [ಅರಮ್] ಪರಿಪೂರ್ಣವಾಗಿದೆ. [ಆದುದರಿಂದ] [ಯುವಭ್ಯಾಮ್] ಅವೆರಡರಿಂದ [ಪಾತವೇ] ರಕ್ಷಣೆ ಮೊದಲಾದವುಗಳಿಗಾಗಿ ಅಷ್ಟು ಬೋಧೆ ಮತ್ತು ಪದಾರ್ಥಗಳನ್ನು ಸ್ವೀಕರಿಸಿರಿ.

ಭಾವಾರ್ಥ:- ವಿಚಾರಶೀಲ ಪುರುಷರು ಇದನ್ನು ಅವಶ್ಯವಾಗಿ ತಿಳಿಯಬೇಕು, ಏನೆಂದರೆ ಎಲ್ಲೆಲ್ಲಿ ಮೂರ್ತಿಮಂತವಾದ ಲೋಕಗಳಿವೆಯೋ ಅಲ್ಲಲ್ಲಿ ಪವನ ಮತ್ತು ವಿದ್ಯುತ್‌ಗಳು ತಮ್ಮ ವ್ಯಾಪ್ತಿಯಿಂದ ವರ್ತಿಸುತ್ತಿವೆ.

ಮನುಷ್ಯರು ಸಾಮರ್ಥ್ಯವಿದ್ದಷ್ಟೂ ಇವುಗಳ ಗುಣಗಳನ್ನು ತಿಳಿದು ಮತ್ತು ಪುರುಷಾರ್ಥದಿಂದ ಉಪಯೋಗ ಪಡೆದು ಪರಿಪೂರ್ಣ ಸುಖಿಗಳಾಗಬೇಕು.

ಮತ್ತೆ ಅವು ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಚಕ್ರಾಥೇ ಹಿ ಸಧ್ರ್ಯ೧ ಙ್ನಾಮ ಭದ್ರಂ ಸಧ್ರೀಚೀನಾ ವೃತ್ರಹಣಾ ಉತ ಸ್ಥಃ ।
ತಾವಿಂದ್ರಾಗ್ನೀ ಸಧ್ರ್ಯಂಚಾ ನಿಷದ್ಯಾ ವೃಷ್ಣಃ ಸೋಮಸ್ಯ ವೃಷಣಾ ವೃಷೇಥಾಮ್ ॥೩॥

ಪದಾರ್ಥ:- ಹೇ ಮನುಷ್ಯರೇ! [**ಸಧ್ರೀಚೀನಾ**] ಒಟ್ಟಿಗೆ ಸೇರುವ ಮತ್ತು [**ವೃತ್ರಹಣೌ**] ಮೇಘವನ್ನು ಹನನ ಮಾಡುವ [**ಸಧ್ರ್ಯಂಚಾ**] ಮತ್ತು ಒಟ್ಟಿಗೆ ವೃದ್ಧಿಸಲು ಯೋಗ್ಯವಾದ [**ನಿಷದ್ಯ**] ನಿತ್ಯವೂ ಸ್ಥಿರವಾಗಿ [**ವೃಷ್ಣಃ**] ಪುಷ್ಟಿಯಾಗುತ್ತಾ [**ಸೋಮಸ್ಯ**] ರಸಯುಕ್ತ ಪದಾರ್ಥಗಳನ್ನು [**ವೃಷಣಾ**] ಪುಷ್ಟಿ ಮಾಡುವಂತಹ [**ಇಂದ್ರಾಗ್ನೀ**] ಮೊದಲು ಹೇಳಿದ ಅಂದರೆ ಪವನ ಮತ್ತು ಸೂರ್ಯ ಮಂಡಲವು [**ಭದ್ರಮ್**] ವೃಷ್ಟಿ ಮೊದಲಾದ ಕಾರ್ಯಗಳಿಂದ ಪರಮ ಸುಖವನ್ನುಂಟುಮಾಡುವ [**ಸಧ್ರ್ಯಕ್**] ಒಟ್ಟಾಗಿ ಪ್ರಕಟವಾಗುತ್ತಾ [**ನಾಮ**] ಜಲವನ್ನು [**ಚಕ್ರಾಥೇ**] ಸುರಿಸುತ್ತವೆ. [**ಉತ**] ಮತ್ತು ಕಾರ್ಯಸಿದ್ಧಿ ಮಾಡುವುದಾಗಿ [**ಸ್ಥಃ**] ಆಗುತ್ತವೆ. [**ವೃಷೇಥಾಮ್**] ಮತ್ತು ಸುಖರೂಪಿ ಮಳೆಯನ್ನು ಉಂಟುಮಾಡುತ್ತವೆ. [**ತೌ**] ಅವುಗಳನ್ನು [**ಹಿ**] ನಿಶ್ಚಯವಾಗಿ [**ಆ**] ಚೆನ್ನಾಗಿ ತಿಳಿಯಿರಿ.

ಭಾವಾರ್ಥ:- ಮನುಷ್ಯರಿಗೆ ಅತ್ಯಂತ ಉಪಯೋಗವನ್ನುಂಟುಮಾಡುವ ವಾಯು ಮತ್ತು ಸೂರ್ಯಮಂಡಲವನ್ನು ತಿಳಿದು ಹೇಗೆ ಉಪಯೋಗಕ್ಕೆ ತರಬೇಕೆಂದು ತಿಳಿಯಬೇಕು.

ಮತ್ತೆ ಅವು ಹೇಗಿವೆ ಎಂಬುದನ್ನು ಹೇಳಿದೆ

ಸಮಿದ್ಧೇಷ್ವಗ್ನಿಷ್ವಾನಜಾನಾ ಯತಸ್ರುಚಾ ಬರ್ಹಿರು ತಿಸ್ತಿರಾಣಾ ।
ತೀವ್ರೈಃ ಸೋಮ್ಯೈಃ ಪರಿಷಿಕ್ತೇಭಿರರ್ವಾ-ಗೇಂದ್ರಾಗ್ನೀ ಸೌಮನಸಾಯ ಯಾತಮ್ ॥೪॥

ಪದಾರ್ಥ:- ಹೇ ಮಾನವರೇ! ನೀವು [**ಯತಸ್ರುಚಾ**] ಯಾವುದರಲ್ಲಿ ಸ್ರುವ ಅಂದರೆ ಹೋಮ ಮಾಡುವ ಕಾರ್ಯಗಳಲ್ಲಿ ಯಾವ ಸ್ರುವವಿದೆಯೋ, ಅದರಂತೆ ಕಲೆಗಳಿಂದ ವಿದ್ಯಮಾನನಾದ [**ತಿಸ್ತಿರಾಣಾ**] ಅಥವಾ ಯಾಂತ್ರಿಕ ಕಲೆಗಳಿಂದ ಮುಚ್ಚಲ್ಪಟ್ಟ [**ಆನಜಾನಾ**] ಪ್ರಸಿದ್ಧನಾದ ನೀನು ಪ್ರಸಿದ್ಧಿ ಪಡಿಸುವಂತಹ [**ಇಂದ್ರಾಗ್ನೀ**] ವಾಯು ಮತ್ತು ವಿದ್ಯುತ್ ಅಂದರೆ, ಪವನ ಮತ್ತು ವಿದ್ಯುತ್ [**ತೀವ್ರೈಃ**] ತೀಕ್ಷ್ಣ ಮತ್ತು ವೇಗಾದಿ ಗುಣಯುಕ್ತ [**ಸೋಮ್ಯೈಃ**] ರಸರೂಪ ಜಲಗಳಿಂದ [**ಪರಿಷಿಕ್ತೇಭಿಃ**] ಎಲ್ಲ ಪ್ರಕಾರಗಳಿಂದ ಮಾಡಲ್ಪಟ್ಟ ಸಿಂಚನೆಗಳ ಸಹಿತ [**ಸಮಿದ್ಧೇಷು**] ಉತ್ತಮವಾಗಿ ಉರಿಯುತ್ತಿರುವ [**ಅಗ್ನಿಷು**] ಕಲಾಗೃಹ [ಕಾರ್ಖಾನೆ]ಗಳಲ್ಲಿ ಅಗ್ನಿಯು [**ಅರ್ವಾಕ್**] ನಂತರ [**ಬರ್ಹಿಃ**] ಅಂತರಿಕ್ಷಕ್ಕೆ [**ಯಾತಮ್**] ಕಳುಹಿಸುವುದು [**ಉ**] ಮತ್ತು [**ಸೌಮನಸಾಯ**] ಉತ್ತಮದಲ್ಲಿ ಉತ್ತಮಸುಖಕ್ಕಾಗಿ [**ಆ**] ಉತ್ತಮ ರೀತಿಯಲ್ಲಿ ಬಂದೇ ಬರುತ್ತವೆ. ಅವುಗಳ ಉತ್ತಮ ಶಿಕ್ಷಣವನ್ನು ಪಡೆದು ಕಾರ್ಯಸಿದ್ಧಿಗಾಗಿ ಕಲೆಗಳಲ್ಲಿ ಉಪಯೋಗಕ್ಕೆ ತರಬೇಕು.

ಭಾವಾರ್ಥ:- ಯಾವಾಗ ಶಿಲ್ಪಿಗಳಿಂದ ಪವನ ಮತ್ತು ವಿದ್ಯುತ್ತನ್ನು ಕಾರ್ಯಸಿದ್ಧಿಗಾಗಿ ಕಲಾಯಂತ್ರಗಳ ಕ್ರಿಯೆಗಳಲ್ಲಿ ತೊಡಗಿಸುವರೋ, ಆಗ ಈ ಎಲ್ಲ ಸುಖಗಳ ಲಾಭಗಳಿಗೆ ಸಮರ್ಥರಾಗುತ್ತಾರೆ.

ಈಗ ಐಶ್ವರ್ಯಯುಕ್ತ ಸ್ವಾಮಿ ಮತ್ತು ಶಿಲ್ಪವಿದ್ಯೆಯ ಕ್ರಿಯೆಗಳಲ್ಲಿ ಕುಶಲಶಿಲ್ಪಿಗಳ ಕಾರ್ಯಗಳನ್ನು ತಿಳಿಸಲಾಗಿದೆ.

ಯಾನೀಂದ್ರಾಗ್ನೀ ಚಕ್ರಥುರ್ವೀರ್ಯಾಣಿ ಯಾನಿ ರೂಪಾಣ್ಯುತ ವೃಷ್ಣ್ಯಾನಿ ।
ಯಾ ವಾಂ ಪ್ರತ್ನಾನಿ ಸಖ್ಯಾ ಶಿವಾನಿ ತೇಭಿಃ ಸೋಮಸ್ಯ ಪಿಬತಂ ಸುತಸ್ಯ ॥೫॥

ಪದಾರ್ಥ:- ಹೇ [ಇಂದ್ರಾಗ್ನೀ] ಸ್ವಾಮಿ ಮತ್ತು ಸೇವಕರೇ! [**ವಾಮ್**] ನಿಮ್ಮ [**ಯಾನಿ**] ಯಾವ [**ವೀರ್ಯಾಣಿ**] ಪರಾಕ್ರಮಯುಕ್ತ ಕೆಲಸವು [**ಯಾನಿ**] ಯಾವ [**ರೂಪಾಣಿ**] ಶಿಲ್ಪವಿದ್ಯೆಯಿಂದ ಸಿದ್ಧವಾದ ಚಿತ್ರ-ವಿಚಿತ್ರ, ಅದ್ಭುತವು ಯಾವುದರ ರೂಪದಲ್ಲಿ ಅವರು ವಿಮಾನ ಮೊದಲಾದ ಯಾನಗಳು ಮತ್ತು [**ವೃಷ್ಣ್ಯಾನಿ**] ಪುರುಷಾರ್ಥಯುಕ್ತ ಕಾರ್ಯಗಳು [**ಯಾ**] ಅಥವಾ ಯಾವ ನಿರ್ಮ್ಮಿರ್ವರ [**ಪ್ರತ್ನಾನಿ**] ಪ್ರಾಚೀನ [**ಶಿವಾನಿ**] ಮಂಗಳಯುಕ್ತ [**ಸಖ್ಯಾ**] ಮಿತ್ರರ ಕೆಲಸಗಳು ಇವೆಯೋ, [**ತೇಭಿಃ**] ಅವುಗಳಿಂದ [**ಸುತಸ್ಯ**] ತೆಗೆಯಲ್ಪಟ್ಟ [**ಸೋಮಸ್ಯ**] ಸಾಂಸಾರಿಕ ವಸ್ತುಗಳ ರಸವನ್ನು [**ಪಿಬತಮ್**] ಕುಡಿಯಿರಿ. [**ಉತ**] ಮತ್ತು ನಮ್ಮನ್ನು [**ಚಕ್ರಥುಃ**] ಅವುಗಳಿಂದ ಸುಖಕರವಾಗಿ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಇಂದ್ರ ಶಬ್ದದಿಂದ ಧನಾಢ್ಯ ಮತ್ತು ಅಗ್ನಿ ಶಬ್ದದಿಂದ ವಿದ್ವಾಂಸನಾದ ಶಿಲ್ಪಿಯ ಗ್ರಹಣವನ್ನು ಮಾಡಿದೆ. ವಿದ್ಯೆ ಪುರುಷಾರ್ಥದ ಹೊರತು ಕಾರ್ಯಗಳ ಸಿದ್ಧಿಯು ಎಂದಿಗೂ ಆಗುವುದಿಲ್ಲ ಮತ್ತು ಮಿತ್ರಭಾವದ ಹೊರತು ಎಂದಿಗೂ ವ್ಯವಹಾರವು ಸಿದ್ಧಿಸುವುದಿಲ್ಲ. ಇದರೊಂದಿಗೆ ಕೂಡಿದ ಕಾರ್ಯವು ಯಾವಾಗಲೂ ಮಾಡಲು ಯೋಗ್ಯವಾಗಿದೆ.

ಮತ್ತೆ ಅವರಿಬ್ಬರೂ ಹೇಗಿರುತ್ತಾರೆ?

ಯದಬ್ರವಂ ಪ್ರಥಮಂ ವಾಂ ವೃಣಾನೋ೩ ಯಂ ಸೋಮೋ ಅಸುರೈರ್ನೋ ವಿಹವ್ಯಃ ।
ತಾಂ ಸತ್ಯಾಂ ಶ್ರದ್ಧಾಮಭ್ಯಾ ಹಿ ಯಾತ-ಮಥಾ ಸೋಮಸ್ಯ ಪಿಬತಂ ಸುತಸ್ಯ ॥೬॥

ಪದಾರ್ಥ:- ಹೇ ಸ್ವಾಮಿ ಮತ್ತು ಶಿಲ್ಪಿ ಜನರೇ! [**ವಾಮ್**] ನಿಮಗಾಗಿ [**ಪ್ರಥಮಮ್**] ಮೊದಲು [**ಯತ್**] ಯಾವ ನಾನು [**ಅಬ್ರವಮ್**] ಹೇಳಿದೆನೋ ಅಥವಾ [**ಅಸುರೈಃ**] ವಿದ್ಯಾಹೀನ ಮನುಷ್ಯರಿಂದ [**ವೃಣಾನಃ**] ಹೊಗಳಲ್ಪಟ್ಟ [**ವಿಹವ್ಯಃ**] ಅನೇಕ ಪ್ರಕಾರಗಳಿಂದ ಗ್ರಹಣ ಮಾಡಲು ಯೋಗ್ಯವಾದ [**ಅಯಮ್**] ಈ ಪ್ರತ್ಯಕ್ಷವಾದ [**ಸೋಮಃ**] ಉತ್ಪನ್ನವಾಗಿರುವ ಪದಾರ್ಥಗಳ ಸಮೂಹವು [ನಿಮ್ಮದಾಗಿ] ಇದೆ. ಅದರಿಂದ [**ನಃ**] ನಮ್ಮನ್ನು [**ತಾಮ್**] ಆ [**ಸತ್ಯಾಮ್**] ಸತ್ಯವನ್ನು [**ಶ್ರದ್ಧಾಮ್**] ಪ್ರೀತಿಯನ್ನು [**ಅಭಿ ಆ ಯಾತಮ್**] ಉತ್ತಮವಾಗಿ ಪ್ರಾಪ್ತವಾಗುವಂತೆ ಮಾಡಿರಿ. [**ಅಥ**] ಇದರ ನಂತರ [**ಹಿ**] ಒಂದೇ ನಿಶ್ಚಯದಿಂದ [**ಸುತಸ್ಯ**] ತೆಗೆಯಲ್ಪಟ್ಟ [**ಸೋಮಸ್ಯ**] ಸಾಂಸಾರಿಕ ವಸ್ತುಗಳ ರಸವನ್ನು [**ಪಿಬತಮ್**] ಕುಡಿಯಿರಿ.

ಭಾವಾರ್ಥ:- ಹುಟ್ಟಿದಾಗ ಎಲ್ಲರೂ ಮೂರ್ಖರಾಗಿರುತ್ತಾರೆ. ಮತ್ತು ನಂತರ ವಿದ್ಯಾಭ್ಯಾಸ ಮಾಡಿ ವಿದ್ವಾಂಸರೂ ಆಗುತ್ತಾರೆ. ಆದುದರಿಂದ ವಿದ್ಯಾಹೀನರಾದ ಮೂರ್ಖರು ಜ್ಯೇಷ್ಠರೂ ಮತ್ತು ವಿದ್ವಾಂಸರೂ ಕನಿಷ್ಠರೆಂದು ಗಣಿಸಲ್ಪಡುತ್ತಾರೆ. [ಇದು ಸರಿಯೇ] ಯಾವನು ಏನೇ ಹೇಳಲಿ ಎಲ್ಲರೂ ಇದನ್ನು ತಿಳಿಯಬೇಕು. ಅವನ ಬಗ್ಗೆ ಏನೇ ಹೇಳಲಿ, ಆದರೆ ಯಾರ ಬಗ್ಗೆಯೂ ಅಸತ್ಯವನ್ನು ಹೇಳಬಾರದು.

ಮತ್ತೆ ಅವು ಹೇಗಿರುತ್ತಾರೆ?

ಯದಿಂದ್ರಾಗ್ನೀ ಮದಥಃ ಸ್ವೇ ದುರೋಣೇ ಯದ್ ಬ್ರಹ್ಮಣಿ ರಾಜನಿ ವಾ ಯಜತ್ರಾ ।
ಅತಃ ಪರಿ ವೃಷಣಾವಾ ಹಿ ಯಾತ-ಮಥಾ ಸೋಮಸ್ಯ ಪಿಬತಂ ಸುತಸ್ಯ ॥೭॥

ಪದಾರ್ಥ:- ಹೇ [ವೃಷಣೌ] ಸುಖರೂಪವಾದ ಮಳೆಯನ್ನು ಸುರಿಸುವ [ಯಜತ್ರಾ] ಉತ್ತಮವಾಗಿ ಸೇರಿ ಸತ್ಕರಿಸಲು ಯೋಗ್ಯರಾದ [ಇಂದ್ರಾಗ್ನೀ] ಸ್ವಾಮಿ ಸೇವಕರೇ! ನೀವೀರ್ವರೂ [ಯತ್] ಯಾವ ಕಾರಣದಿಂದ [ಸ್ವೇ] ನಮ್ಮ [ದುರೋಣೇ] ಗೃಹಗಳಲ್ಲಿ ಅಥವಾ [ಯತ್] ಯಾವ ಕಾರಣದಿಂದ [ಬ್ರಹ್ಮಣಿ] ಬ್ರಾಹ್ಮಣರ ಸಭೆ ಮತ್ತು [ರಾಜನಿ] ರಾಜಪುರುಷರ ಸಭೆ [ವಾ] ಅಥವಾ ಮತ್ತು ಸಭೆಗಳಲ್ಲಿ [ಮದಥಃ] ಆನಂದಿತರಾಗುತ್ತೀರೋ, [ಅತಃ] ಈ ಕಾರಣದಿಂದ [ಪರಿ ಆ ಯಾತಮ್] ಎಲ್ಲ ಪ್ರಕಾರಗಳಿಂದ ಬನ್ನಿರಿ. [ಅಥ ಹಿ] ಇದರ ನಂತರ ಒಂದೇ ನಿಶ್ಚಯದೊಂದಿಗೆ [ಸುತಸ್ಯ] ಉತ್ಪನ್ನವಾದ [ಸೋಮಸ್ಯ] ಸಾಂಸಾರಿಕ ಪದಾರ್ಥಗಳ ರಸವನ್ನು [ಪಿಬತಮ್] ಕುಡಿಯಿರಿ.

ಭಾವಾರ್ಥ:- ಎಲ್ಲೆಲ್ಲಿ ಸ್ವಾಮಿ ಮತ್ತು ಶಿಲ್ಪಿಗಳು ಅಥವಾ ಓದುವವರು - ಓದಿಸುವವರು ಅಥವಾ ರಾಜಾ ಮತ್ತು ಪ್ರಜೆಗಳು ಹೋಗಲಿ ಅಥವಾ ಬರಲಿ ಅಲ್ಲಲ್ಲಿನ ಸಭ್ಯತೆಯಲ್ಲಿ ಸ್ಥಿರರಾಗಲಿ, ವಿದ್ಯೆ ಮತ್ತು ಶಾಂತಿಯುಕ್ತ ವಚನಗಳಿಂದ ಹೇಳಿ ಮತ್ತು ಉತ್ತಮ ಶೀಲದ ಗ್ರಹಣಮಾಡಿ ಸತ್ಯವನ್ನು ಹೇಳಿರಿ ಮತ್ತು ಕೇಳಿರಿ.

ಮತ್ತೆ ಅವರು ಹೇಗಿರುವರು ಎಂಬುದನ್ನು ಇಲ್ಲಿ ತಿಳಿಸಿದೆ

ಯದಿಂದ್ರಾಗ್ನೀ ಯದುಷು ತುರ್ವಶೇಷು ಯದ್ ದ್ರುಹ್ಯುಷ್ವನುಷು ಪೂರುಷು ಸ್ಥಃ ।
ಅತಃ ಪರಿ ವೃಷಣಾವಾ ಹಿ ಯಾತ-ಮಥಾ ಸೋಮಸ್ಯ ಪಿಬತಂ ಸುತಸ್ಯ ॥೮॥

ಪದಾರ್ಥ:- ಹೇ [ಇಂದ್ರಾಗ್ನೀ] ಸ್ವಾಮಿ ಶಿಲ್ಪಿ ಜನರೇ! ನೀವೀರ್ವರೂ [ಯತ್] ಯಾವ ಕಾರಣದಿಂದ [ಯದುಷು] ಉತ್ತಮ ಯತ್ನ ಮಾಡುವ ಮನುಷ್ಯರಲ್ಲಿ ಅಥವಾ [ತುರ್ವಷು] ಯಾವ ಹಿಂಸಕ ಮನುಷ್ಯರನ್ನು ವಶಕ್ಕೆ ತೆಗೆದು ಅವರಲ್ಲಿ ಅಥವಾ [ಯತ್] ಯಾವ ಕಾರಣದಿಂದ [ದ್ರುಹ್ಯುಷು] ದ್ರೋಹಿ ಜನರಲ್ಲಿ ಅಥವಾ [ಅನುಷು] ಪ್ರಾಣ ಅಂದರೆ ಜೀವನವನ್ನು ಕೊಡುವವರಲ್ಲಿ ಹಾಗೂ [ಪೂರುಷು] ಉತ್ತಮ ಗುಣ ವಿದ್ಯೆ ಅಥವಾ ಕಾರ್ಯಗಳಲ್ಲಿ ಪರಿಪೂರ್ಣರೋ, ಅವರಲ್ಲಿ ಯಥೋಚಿತ ಅಂದರೆ ಯಾವುದರಿಂದ ಏನನ್ನು ಮಾಡಬೇಕೋ ಹಾಗೆ ವರ್ತಿಸುವವರು [ಸ್ಥಃ] ಇರಲಿ. [ಅತಃ] ಈ ಕಾರಣದಿಂದ ಎಲ್ಲ ಮನುಷ್ಯರಲ್ಲಿ [ವೃಷಣೌ] ಸುಖವಾಗಿ ಮಳೆಯನ್ನು ಸುರಿಸುತ್ತಾ [ಆ ಯಾತಮ್] ಉತ್ತಮ ಪ್ರಕಾರದಿಂದ ಬನ್ನಿರಿ. [ಹಿ] ಒಂದೇ ನಿಶ್ಚಯದಿಂದ [ಅಥ] ಇದರ ನಂತರ [ಸುತಸ್ಯ] ಹೊರಹಾಕಿದ [ಸೋಮಸ್ಯ] ಸಾಂಸಾರಿಕ ಪದಾರ್ಥಗಳ ರಸವನ್ನು [ಪಿಬತಮ್] ಕುಡಿಯಿರಿ.

ಭಾವಾರ್ಥ:- ನ್ಯಾಯ ಮತ್ತು ಸೇನೆಯ ಅಧಿಕಾರವನ್ನು ಪಡೆದ ಮನುಷ್ಯರಲ್ಲಿ ಯಥಾಯೋಗ್ಯವಾಗಿ ವರ್ತಿಸಬೇಕು. ಎಲ್ಲ ಮನುಷ್ಯರು ಅವನನ್ನೇ ಆಯಾ ಕಾರ್ಯಗಳಲ್ಲಿ ಸ್ಥಾಪಿಸಿ ಅಂದರೆ ಒಪ್ಪಿಸಿ ಕಾರ್ಯಗಳನ್ನು ಸಿದ್ಧಗೊಳಿಸಬೇಕು.

ಮತ್ತೆ ಅವರು ಮತ್ತು ಭೌತಿಕ ಇಂದ್ರ ಮತ್ತು ಅಗ್ನಿ ಹೇಗಿವೆ ಎಂಬುದನ್ನು ಇಲ್ಲಿ ತಿಳಿಸಿದೆ.

ಯದಿಂದ್ರಾಗ್ನೀ ಅವಮಸ್ಯಾಂ ಪೃಥಿವ್ಯಾಂ ಮಧ್ಯಮಸ್ಯಾಂ ಪರಮಸ್ಯಾಮುತ ಸ್ಥಃ ।
ಅತಃ ಪರಿ ವೃಷಣಾವಾ ಹಿ ಯಾತ-ಮಥಾ ಸೋಮಸ್ಯ ಪಿಬತಂ ಸುತಸ್ಯ ॥೯॥

ಪದಾರ್ಥ:- ಹೇ [ಇಂದ್ರಾಗ್ನೀ] ನ್ಯಾಯಧೀಶ ಮತ್ತು ಸೇನಾಧೀಶರೇ! [ಯತ್] ಯಾವ ನೀವೀರ್ವರೂ [ಅವಮಸ್ಯಾಮ್] ನಿಕೃಷ್ಟರು [ಮಧ್ಯಮಸ್ಯಾಮ್] ಮಧ್ಯಮರು [ಉತ] ಮತ್ತು [ಪರಮಸ್ಯಾಮ್] ಉತ್ತಮ ಗುಣವಂತರು [ಪೃಥಿವ್ಯಾಮ್] ತಮ್ಮ ರಾಜ್ಯ ಭೂಮಿಯಲ್ಲಿ ಅಧಿಕಾರವನ್ನು ಪಡೆದವರು [ಸ್ಥಃ] ಇರಲಿ. ಅವರೆಲ್ಲರೂ ಯಾವಾಗಲೂ ಎಲ್ಲರ ರಕ್ಷಣೆ ಮಾಡಲು ಯೋಗ್ಯರಾಗಿರಲಿ. [ಅತಃ] ಈ ಕಾರಣದಿಂದ ಈ ಉಕ್ತರಾಜ್ಯ [ಪರಿ ವೃಷಣೌ] ಎಲ್ಲ ಪ್ರಕಾರದ ಸುಖರೂಪದ ವೃಷ್ಟಿಯನ್ನು ಸುರಿಸುವವರಾಗಿ [ಆ ಯಾತಮ್] ಬನ್ನಿರಿ. [ಹಿ] ಒಂದೇ ನಿಶ್ಚಯದಿಂದ [ಅಥ] ನಂತರ ಆ ರಾಜ್ಯಭೂಮಿಯಲ್ಲಿ [ಸುತಸ್ಯ] ಉತ್ಪನ್ನವಾಗುವ [ಸೋಮಸ್ಯ] ಸಾಂಸಾರಿಕ ಪದಾರ್ಥಗಳ ರಸವನ್ನು [ಪಿಬತಮ್] ಕುಡಿಯಿರಿ. ಇದು ಅರ್ಥವು.

[ಯತ್] ಯಾವ ಇವರು [ಇಂದ್ರಾಗ್ನೀ] ಪವನ ಮತ್ತು ವಿದ್ಯುತ್ತು [ಅವಮಸ್ಯಾಮ್] ನಿಕೃಷ್ಟವು [ಮಧ್ಯಮಸ್ಯಾಮ್] ಮಧ್ಯಮವು [ಉತ] ಅಥವಾ [ಪರಮಸ್ಯಾಮ್] ಉತ್ತಮ ಗುಣವುಳ್ಳವು [ಪೃಥಿವ್ಯಾಮ್] ಪೃಥಿವಿಯಲ್ಲಿ [ಸ್ಥಃ] ಇವೆ. [ಅತಃ] ಇದರಿಂದ ಇಲ್ಲಿ [ಪರಿವೃಷಣೌ] ಎಲ್ಲ ಪ್ರಕಾರಗಳಿಂದ ಸುಖರೂಪದ ವೃಷ್ಟಿಯನ್ನು ಮಾಡುವುದಾಗಿ [ಆ ಯಾತಮ್] ಬರುತ್ತವೆ ಮತ್ತು [ಅಥ] ಇದರ ನಂತರ [ಹಿ] ಒಂದೇ ನಿಶ್ಚಯದೊಂದಿಗೆ ಯಾವ [ಸುತಸ್ಯ] ತೆಗೆಯಲ್ಪಟ್ಟ [ಸೋಮಸ್ಯ] ಪದಾರ್ಥಗಳ ರಸವನ್ನು [ಪಿಬತಮ್] ಕುಡಿಯುತ್ತವೆ. ಅವುಗಳನ್ನು ಕಾರ್ಯದ ಸಿದ್ಧಿಗಾಗಿ ಕಲೆಗಳಲ್ಲಿ ಸಂಯುಕ್ತಗೊಳಿಸಿ ಮಹತ್ತರ ಲಾಭಕ್ಕಾಗಿ ಸಿದ್ಧಪಡಿಸಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಶ್ಲೇಷಾಲಂಕಾರವಿದೆ. ಉತ್ತಮ, ಮಧ್ಯಮ ಮತ್ತು ನಿಕೃಷ್ಟ ಗುಣ ಕರ್ಮ ಮತ್ತು ಸ್ವಭಾವದ ಜೀವಗಳಿಂದ ಯಾವ ಯಾವ ರಾಜ್ಯಗಳಿವೆಯೋ ಅಲ್ಲಲ್ಲಿ ಹಾಗೆಯೇ ಉತ್ತಮ, ಮಧ್ಯಮ, ನಿಕೃಷ್ಟ ಗುಣ ಕರ್ಮ ಮತ್ತು ಸ್ವಭಾವದ ಮನುಷ್ಯರನ್ನು ಸ್ಥಾಪಿಸಿ ಮತ್ತು ಚಕ್ರವರ್ತಿ ರಾಜ್ಯಭಾರ ಮಾಡಿ ಎಲ್ಲರಿಗೂ ಆನಂದವನ್ನು ಭೋಗಿಸುವುದು - ಭೋಗಿಸುವಂತೆ ಮಾಡಬೇಕು. ಇದೇ ರೀತಿ ಸೃಷ್ಟಿಯಲ್ಲಿ ಇರಬೇಕು. ಎಲ್ಲ ಲೋಕಗಳನ್ನೂ ಪ್ರಾಪ್ತರಾಗುತ್ತಾ ಪವನ ಮತ್ತು ವಿದ್ಯುತ್ತನ್ನು ತಿಳಿದು ಮತ್ತು ಅದನ್ನು ಉತ್ತಮವಾಗಿ ಪ್ರಯೋಗಿಸಿ ಹಾಗೂ ಕಾರ್ಯಗಳನ್ನು ಸಿದ್ಧಿಗೊಳಿಸಿ ದಾರಿದ್ರ್ಯದೋಷಗಳಿಲ್ಲವನ್ನೂ ನಾಶಗೊಳಿಸಬೇಕು.

ಮತ್ತೆ ಅವರು ಹೇಗಿರುವರು ಎಂಬುದನ್ನು ಈ ಮಂತ್ರದಲ್ಲಿ ತಿಳಿಸಲಾಗಿದೆ.

ಯದಿಂದ್ರಾಗ್ನೀ ಪರಮಸ್ಯಾಂ ಪೃಥಿವ್ಯಾಂ ಮಧ್ಯಮಸ್ಯಾಮವಮಸ್ಯಾಮುತ ಸ್ಥಃ ।
ಅತಃ ಪರಿ ವೃಷಣಾವಾ ಹಿ ಯಾತ-ಮಥಾ ಸೋಮಸ್ಯ ಪಿಬತಂ ಸುತಸ್ಯ ॥೧೦॥

ಪದಾರ್ಥ:- ಈ ಮಂತ್ರದ ಅರ್ಥವನ್ನು ಹಿಂದಿನ ಮಂತ್ರದಂತೆ ತಿಳಿಯಬೇಕು.

ಭಾವಾರ್ಥ:- ಇಂದ್ರ ಮತ್ತು ಅಗ್ನಿ ಎರಡು ಪ್ರಕಾರವಾಗಿರುತ್ತವೆ. ಒಂದು ಯಾವುವು ಉತ್ತಮ ಗುಣ, ಕರ್ಮ ಸ್ವಭಾವಗಳಿಂದ ಸ್ಥಿರವೂ ಅಥವಾ ಪವಿತ್ರಭೂಮಿಯಲ್ಲಿ ಮೊದಲಾದ ಪದಾರ್ಥಗಳಲ್ಲಿ ಸ್ಥಿರವಾಗಿವೆಯೋ,

ಅವು ಉತ್ತಮ ಮತ್ತು ಯಾವುವು ಅಪವಿತ್ರ ಗುಣ, ಕರ್ಮ ಸ್ವಭಾವಗಳಲ್ಲಿ ಅಥವಾ ಅಪವಿತ್ರಭೂಮಿ ಮೊದಲಾದ ಪದಾರ್ಥಗಳಲ್ಲಿ ಸ್ಥಿರವಾಗಿರುವುವೋ ಅವು ನಿಕೃಷ್ಟವು. ಈ ಎರಡೂ ಪ್ರಕಾರದ ಪವನ ಮತ್ತು ಅಗ್ನಿಗಳು ಮೇಲೆ ಕೆಳಗೆ ಎಲ್ಲ ಕಡೆಯೂ ಚಲಿಸುತ್ತವೆ. ಆದುದರಿಂದ ಎರಡೂ ಮಂತ್ರಗಳಲ್ಲಿ [ಅವಮ] ಮತ್ತು [ಪರಮ] ಶಬ್ದಗಳನ್ನು ಮೊದಲೇ ಪ್ರಯೋಗಿಸಿದೆ. ಅವುಗಳಲ್ಲಿ ಎರಡು ಪ್ರಕಾರದ [ಇಂದ್ರ] ಮತ್ತು ಅಗ್ನಿಗಳ ಅರ್ಥವನ್ನು ತಿಳಿಸಲಾಗಿದೆ ಎಂದು ತಿಳಿಯಬೇಕು.

ಈಗ ಭೌತಿಕ ಇಂದ್ರ ಮತ್ತು ಅಗ್ನಿಗಳು ಎಲ್ಲೆಲ್ಲಿ ಇರುತ್ತವೆ?

ಯದಿಂದ್ರಾಗ್ನೀ ದಿವಿ ಷ್ಠೋ ಯತ್ ಪೃಥಿವ್ಯಾಂ ಯತ್ ಪರ್ವತೇಷ್ವೋಷಧೀಷ್ವಪ್ಸು ।
ಅತಃ ಪರಿ ವೃಷಣಾವಾ ಹಿ ಯಾತ ಮಥಾ ಸೋಮಸ್ಯ ಪಿಬತಂ ಸುತಸ್ಯ ॥೧೧॥

ಪದಾರ್ಥ:- [ಯತ್] ಯಾವ ಕಾರಣವಾದ [ಇಂದ್ರಾಗ್ನಿ] ಪವನ ಮತ್ತು ವಿದ್ಯುತ್ತು [ದಿವಿ] ಪ್ರಕಾಶಮಾನವಾದ ಆಕಾಶದಲ್ಲಿ [ಯತ್] ಯಾವ ಕಾರಣದಿಂದ [ಪೃಥಿವೀ] ಪೃಥಿವಿಯಲ್ಲಿ [ಯತ್] ಯಾವ ಕಾರಣದಿಂದ [ಪರ್ವತೇಷು] ಪರ್ವತಗಳಲ್ಲಿ [ಅಪ್ಸು] ಜಲಗಳಲ್ಲಿ ಮತ್ತು [ಓಷಧೀಷು] ಓಷಧಿಗಳಲ್ಲಿ [ಸ್ಥಃ] ವರ್ತಮಾನವಾಗಿಯೋ, [ಅತಃ] ಈ ಕಾರಣದಿಂದ [ಪರಿ ವೃಷಣೌ] ಎಲ್ಲ ಪ್ರಕಾರದ ಸುಖಗಳನ್ನು ವರ್ಷಿಸುವಂತಹ ಅವು [ಹಿ] ನಿಶ್ಚಯದಿಂದ [ಆ ಯಾತಮ್] ಪ್ರಾಪ್ತವಾಗುತ್ತವೆ. [ಅಥ] ಇದರ ನಂತರ, [ಸುತಸ್ಯ] ತೆಗೆಯಲ್ಪಟ್ಟ [ಸೋಮಸ್ಯ] ಜಗತ್ತಿನ ಪದಾರ್ಥಗಳ ರಸವನ್ನು [ಪಿಬತಮ್] ಕುಡಿಯುತ್ತಾರೆ.

ಭಾವಾರ್ಥ:- ಧನಂಜಯ ಪವನ ಮತ್ತು ಕಾರಣರೂಪ ಅಗ್ನಿಯು ಎಲ್ಲ ಪದಾರ್ಥಗಳಲ್ಲಿಯೂ ವಿದ್ಯಮಾನವಾಗಿರುತ್ತವೆ. ಅವು ಹೇಗಿವೆಯೋ ಹಾಗೆಯೇ ತಿಳಿಯಬೇಕು. ಮತ್ತು ಕ್ರಿಯೆಗಳಲ್ಲಿ ಜೋಡಿಸುತ್ತಾ ಅನೇಕ ಕಾರ್ಯಗಳನ್ನು ಸಿದ್ಧಪಡಿಸಬೇಕು.

ಮತ್ತೆ ಅವು ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಯದಿಂದ್ರಾಗ್ನೀ ಉದಿತಾ ಸೂರ್ಯಸ್ಯ ಮಧ್ಯೇ ದಿವಃ ಸ್ವಧಯಾ ಮಾದಯೇಥೇ ।
ಅತಃ ಪರಿ ವೃಷಣಾವಾ ಹಿ ಯಾತ-ಮಥಾ ಸೋಮಸ್ಯ ಪಿಬತಂ ಸುತಸ್ಯ ॥೧೨॥

ಪದಾರ್ಥ:- [ಯತ್] ಯಾವ ಕಾರಣವು [ಇಂದ್ರಾಗ್ನೀ] ಪವನ ಮತ್ತು ವಿದ್ಯುತ್ತು [ಉದಿತಾ] ಉದಯವಾಗುತ್ತಿರುವ [ಸೂರ್ಯಸ್ಯ] ಸೂರ್ಯ ಮಂಡಲದ ಅಥವಾ [ದಿವಃ] ಅಂತರಿಕ್ಷದ [ಮಧ್ಯೇ] ಮಧ್ಯದಲ್ಲಿ [ಸ್ವಧಯಾ] ಅನ್ನ ಮತ್ತು ಜಲದಿಂದ ಎಲ್ಲರಿಗೂ [ಮಾದಯೇಥೇ] ಹರ್ಷ ಕೊಡುತ್ತವೆ. [ಅತಃ] ಅದರಿಂದ [ವೃಷಣಾ] ಸುಖವನ್ನು ವರ್ಷಿಸುವಂತಹವರು [ಪರಿ] ಎಲ್ಲ ರೀತಿಯಿಂದ [ಆ ಯಾತಮ್] ಬರುತ್ತದೆ ಅಂದರೆ ಹೊರಗೆ ಮತ್ತು ಒಳಗೆ ಪ್ರಾಪ್ತವಾಗುತ್ತಾ ಮತ್ತು [ಹಿ] ನಿಶ್ಚಯವಾಗಿ [ಅಥ] ಇದರ ನಂತರ [ಸುತಸ್ಯ] ತೆಗೆಯಲ್ಪಟ್ಟ [ಸೋಮಸ್ಯ] ಜಗತ್ತಿನ ಪದಾರ್ಥಗಳ ರಸವನ್ನು [ಪಿಬತಮ್] ಕುಡಿಯುತ್ತಾರೆ.

ಭಾವಾರ್ಥ:- ಪವನ ಮತ್ತು ವಿದ್ಯುತ್ತಿನ ವಿನಾ ಯಾವುದೇ ಲೋಕದಲ್ಲಿ ಅಥವಾ ಪ್ರಾಣಿಗಳ ರಕ್ಷಣೆ ಮತ್ತು ಜೀವನ ಇರುವುದಿಲ್ಲ. ಆದುದರಿಂದ ಜಗತ್ತಿನ ಪಾಲನೆಯಲ್ಲಿ ಇವೇ ಮುಖ್ಯವಾಗಿವೆ.

ಈಗ ಧನಾಧಿಪತಿ ಮತ್ತು ಸೇನಾಪತಿ ಹೇಗಿರುವರು ಎಂಬುದನ್ನು ತಿಳಿಸಿದೆ.

ಏವೇಂದ್ರಾಗ್ನೀ ಪಪಿವಾಂಸಾ ಸುತಸ್ಯ ವಿಶ್ವಾಸ್ಮಭ್ಯಂ ಸಂ ಜಯತಂ ಧನಾನಿ । ತನ್ನೋ
ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೧೩॥

ಪದಾರ್ಥ:- [ಮಿತ್ರಃ] ಮಿತ್ರನು [ವರುಣಃ] ಶ್ರೇಷ್ಠಗುಣಯುಕ್ತನು [ಅದಿತಿಃ] ಉತ್ತಮ ವಿದ್ವಾಂಸನು [ಸಿಂಧುಃ] ಸಮುದ್ರವು [ಪೃಥಿವೀ] ಪೃಥಿವಿಯು ಮತ್ತು [ದ್ಯೌಃ] ಸೂರ್ಯನ ಪ್ರಕಾಶವು ಇವುಗಳನ್ನು [ನಃ] ನಮಗಾಗಿ [ಮಾಮಹಂತಾಮ್] ಹೆಚ್ಚಿಸಲಿ. [ತತ್ ಏವ] ಅವುಗಳನ್ನೇ [ವಿಶ್ವಾ] ಸಮಸ್ತ [ಧನಾನಿ] ಧನಗಳನ್ನು [ಸುತಸ್ಯ] ಪದಾರ್ಥಗಳಿಂದ ತೆಗೆದ ರಸವನ್ನು [ಪಪಿವಾಂಸಾ] ಕುಡಿಯುತ್ತಾ [ಇಂದ್ರಾಗ್ನೀ] ಅತ್ಯಂತ ಧನವುಳ್ಳವನು ಅಥವಾ ಯುದ್ಧ ವಿದ್ಯೆಯಲ್ಲಿ ಕುಶಲರಾದ ವೀರರು [ಅಸ್ಮಭ್ಯಮ್] ನಮಗಾಗಿ [ಸಂಜಯತಮ್] ಉತ್ತಮವಾಗಿ ಗೆಲ್ಲಲಿ ಅಂದರೆ ಸಿದ್ಧಗೊಳಿಸಲಿ.

ಭಾವಾರ್ಥ:- ವಿದ್ವಾಂಸನು, ಬಲಿಷ್ಠನು, ಧಾರ್ಮಿಕನು, ಕೋಶಾಧಿಕಾರಿಯು ಮತ್ತು ಸೇನಾಧ್ಯಕ್ಷನು ಉತ್ತಮ ಪುರುಷಾರ್ಥದ ವಿನಾ ವಿದ್ಯೆ ಮೊದಲಾದ ಧನವನ್ನು ವೃದ್ಧಿಸಲಾರನು. ಹೇಗೆ ಮಿತ್ರರಿಗಾಗಿ ಸುಖ ಕೊಡುವರೋ, ಹಾಗೆಯೇ ಕೋಶಾಧಿಕಾರಿ ಮತ್ತು ಸೇನಾಧ್ಯಕ್ಷ ಮೊದಲಾದವರು ಪ್ರಜೆಗಳಿಗಾಗಿ ಸುಖವನ್ನು ಕೊಡುವರು. ಆದುದರಿಂದ ಎಲ್ಲರೂ ಯಾವಾಗಲೂ ಇದರ ಪಾಲನೆಯನ್ನು ಮಾಡಬೇಕು.

ಈ ಸೂಕ್ತದಲ್ಲಿ ಪವನ ಮತ್ತು ವಿದ್ಯುತ್ತು ಮೊದಲಾದವುಗಳ ಗುಣಗಳ ವರ್ಣನೆಯನ್ನು ಮಾಡಿರುವುದರಿಂದ ಇದರ ಅರ್ಥಕ್ಕೂ ಹಿಂದಿನ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಎಂಟನೆಯ ಸೂಕ್ತ ಸಮಾಪ್ತ

ಸೂಕ್ತ ೧೦೯

ಮಂತ್ರಸಂಖ್ಯೆ ೮ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಇಂದ್ರಾಗ್ನೀ । ಛಂದಃ - ತ್ರಿಷ್ಟುಪ್ । ಸ್ವರಃ - ಧೈವತಃ.

ಇದರ ಪ್ರಥಮ ಮಂತ್ರದಲ್ಲಿ ಮತ್ತೆ ಆ ಭೌತಿಕ ಅಗ್ನಿ ಮತ್ತು ವಿದ್ಯುತ್ತು ಹೇಗಿವೆ ಈ ಉಪದೇಶ ಮಾಡಿದೆ.

ವಿ ಹ್ಯಖ್ಯಂ ಮನಸಾ ವಸ್ಯ ಇಚ್ಛ-ನ್ನಿಂದ್ರಾಗ್ನೀ ಜ್ಞಾಸ ಉತ ವಾ ಸಜಾತಾನ್ ।
ನಾನ್ಯಾ ಯುವತ್ ಪ್ರಮತಿರಸ್ತಿ ಮಹ್ಯಂ ಸ ವಾಂ ಧಿಯಂ ವಾಜಯಂತೀಮತಕ್ಷಮ್ ॥೧॥

ಪದಾರ್ಥ:- ಹೇಗೆ [ಇಂದ್ರಾಗ್ನೀ] ವಿದ್ಯುತ್ತು ಮತ್ತು ದೃಷ್ಟಿ ಗೋಚರವಾಗುವ ಅಗ್ನಿ ಇದೆಯೋ ಅವುಗಳನ್ನು [ಇಚ್ಛನ್] ಬಯಸುತ್ತಾ [ವಸ್ಯಂ] ಯಾವನು ೨೪ ವರ್ಷಗಳ ಪರ್ಯಂತ ಬ್ರಹ್ಮಚರ್ಯೆ ಮಾಡಿರುವರೋ, ಅವರಲ್ಲಿ ಪ್ರಶಂಸನೀಯನಾದ ನಾನು ಹಾಗೂ [ಜ್ಞಾಸಃ] ಯಾವ ತಿಳಿದಿರುವಂತಹವರು ಇರುವರೋ ಅವರಲ್ಲಿ ಮತ್ತು ತಿಳಿಯಲು ಯೋಗ್ಯವಾದ ಪದಾರ್ಥಗಳನ್ನು [ಸಜಾತಾನ್] ಅಥವಾ ಒಗ್ಗೂಡುತ್ತಿರುವ [ಯುವತ್] ಎಲ್ಲ ವಸ್ತುಗಳನ್ನು ಯಥಾಯೋಗ್ಯವಾದ ವ್ಯವಹಾರಗಳಲ್ಲಿ ತೊಡಗಿಸುವಂತಹ ನಾನು ಇವುಗಳನ್ನು [ಹಿ] ನಿಶ್ಚಯವಾಗಿ [ವಿ ಅಖ್ಯಮ್] ಇತರರಿಗೆ ಉತ್ತಮವಾಗಿ ಹೇಳುವಂತೆ ನೀವು ಕೂಡಾ ಹೇಳಿರಿ, ನನ್ನ [ಪ್ರಮತಿಃ] ಪ್ರಬಲ ಮತಿಯು [ಅಸ್ತಿ] ಇದೆ. ಅದು ನಿಮಗೂ ಆಗಲಿ. [ನ ಅನ್ಯಾ] ಬೇರೆಯಾವರಿಗಲ್ಲ. ಹೇಗೆ ನಾನು [ವಾಮ್] ನೀವೀರ್ವರೂ ಓದಿಸುವವರು - ಓದುವವರು ಇದನ್ನು [ಮಹ್ಯಮ್] ನನಗಾಗಿ ಸೂಕ್ಷ್ಮಗೊಳಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ಎರಡು ಲುಪ್ತೋಪಮಾಲಂಕಾರಗಳಿವೆ. ಮನುಷ್ಯರಿಗೆ ಈ ಯೋಗ್ಯತೆ ಇರಬೇಕು ಯಾವುದೆಂದರೆ ಉತ್ತಮ ಪ್ರೀತಿ ಮತ್ತು ಪುರುಷಾರ್ಥದಿಂದ ಶ್ರೇಷ್ಠವಿದ್ಯೆ ಮೊದಲಾದವುಗಳ ಬೋಧೆ ಮಾಡುತ್ತಾ ಅತ್ಯುತ್ತಮವಾದ ಬುದ್ಧಿಯನ್ನು ಉತ್ಪನ್ನ ಮಾಡಿ ವ್ಯವಹಾರ ಮತ್ತು ಪರಮಾರ್ಥದಲ್ಲಿ ಮಾಡಬೇಕಾದ ಕಾರ್ಯಗಳನ್ನು ಅವಶ್ಯವಾಗಿ ಸಿದ್ಧಗೊಳಿಸಬೇಕು.

ಮತ್ತೆ ಅವರು ಹೇಗಿರಬೇಕು ಎಂಬುದನ್ನು ತಿಳಿಸಿದೆ.

ಅಶ್ರವಂ ಹಿ ಭೂರಿದಾವತ್ತರಾ ವಾಂ ವಿಜಾಮಾತುರುತ ವಾ ಘಾ ಸ್ಯಾಲಾತ್ । ಅಥಾ
ಸೋಮಸ್ಯ ಪ್ರಯತೀ ಯುವಭ್ಯಾ-ಮಿಂದ್ರಾಗ್ನೀ ಸ್ತೋಮಂ ಜನಯಾಮಿ ನವ್ಯಮ್ ॥೨॥

ಪದಾರ್ಥ:- [ವಾಮ್] ಯಾರು [ಭೂರಿದಾ ವತ್ತರಾ] ಅತ್ಯಧಿಕ ಧನದ ಪ್ರಾಪ್ತಿಯನ್ನುಂಟುಮಾಡುವ [ಇಂದ್ರಾಗ್ನಿ] ವಿದ್ಯುತ್ತು ಮತ್ತು ಭೌತಿಕಾಗ್ನಿ ಇದೆಯೋ ಅಥವಾ ಉಕ್ತ ಇಂದ್ರಾಗ್ನಿಯು [ವಿಜಾಮಾತುಃ] ವಿರೋಧಿಗಳಾದ ಅಳಿಯಂದಿರು [ಸ್ಯಾಲಾತ್] ಭಾವ ಮೈದುನರಿಂದ [ಉತ್ ವಾ] ಅಥವಾ ಮತ್ತು [ಘ] ಅನ್ಯರಿಂದ ಧನವನ್ನು ಕೊಡಿಸುವಂತಹ ನಾನು [ಅಶ್ರವಮ್] ಕೇಳಿರುವೆನು. [ಅಥ ಹಿ] ಇನ್ನೂ [ಯುವಭ್ಯಾಮ್] ಇವರಿಂದ [ಸೋಮಸ್ಯ] ಐಶ್ವರ್ಯ ಅಂದರೆ ಧನಾದಿ ಪದಾರ್ಥಗಳನ್ನು ಪ್ರಾಪ್ತಿಗೊಳಿಸುವ ವ್ಯವಹಾರಗಳನ್ನು [ಪ್ರಯತು] ಉತ್ತಮರೀತಿಯಿಂದ ಕೊಡುವುದಕ್ಕಾಗಿ [ನವ್ಯಮ್] ನವೀನವಾದ [ಸ್ತೋಮಮ್] ಗುಣಗಳ ಪ್ರಕಾಶವನ್ನು ನಾನು [ಜನಯಾಮಿ] ಪ್ರಕಟಿಸುತ್ತೇನೆ.

ಭಾವಾರ್ಥ:- ಎಲ್ಲ ಮನುಷ್ಯರೂ ವಿದ್ಯುತ್ತು ಮೊದಲಾದ ಪದಾರ್ಥಗಳ ಗುಣಗಳ ಜ್ಞಾನವನ್ನು ಮತ್ತು ಅವುಗಳ ಉತ್ತಮ ಪ್ರಕಾರದ ಕಾರ್ಯಗಳಲ್ಲಿ ತೊಡಗಿಸುವುದರಿಂದ ಹೊಸ-ಹೊಸ ಕಾರ್ಯಗಳನ್ನು ಸಿದ್ಧಿ ಮಾಡುವ ಕಲಾಯಂತ್ರ ಮೊದಲಾದ ವಿಧಾನ ಮಾಡಿ ಅನೇಕ ಕಾರ್ಯಗಳನ್ನು ಮಾಡಿ ಧರ್ಮ, ಅರ್ಥ ಮತ್ತು ತಮ್ಮ ಕಾಮನೆಗಳ ಸಿದ್ಧಿಗೊಳಿಸಬೇಕು.

ಮತ್ತೆ ಅವರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಮಾ ಚ್ಛೇದ್ಮ ರಶ್ಮೀರಿತಿ ನಾಧಮಾನಾಃ ಪಿತೃಣಾಂ ಶಕ್ತೀರನುಯಚ್ಛಮಾನಾಃ ।
ಇಂದ್ರಾಗ್ನಿಭ್ಯಾಂ ಕಂ ವೃಷಣೋ ಮದಂತಿ ತಾ ಹ್ಯದ್ರೀ ಧಿಷಣಾಯಾ ಉಪಸ್ಥೇ ॥೩॥

ಪದಾರ್ಥ:- ಹೇಗೆ [ವೃಷಣಃ] ಬಲವಂತರು ಯಾವ [ಅದ್ರೀ] ಎಂದಿಗೂ ವಿನಾಶವಾಗುವುದಿಲ್ಲವೋ, [ತಾ] ಆ ಇಂದ್ರ ಮತ್ತು ಅಗ್ನಿಗಳನ್ನು ಚೆನ್ನಾಗಿ ತಿಳಿದು [ಇಂದ್ರಾಗ್ನೀಭ್ಯಾಮ್] ಅವುಗಳಿಂದ [ಧಿಷಣಾಯಾಃ] ಅತಿ ವಿಚಾರಯುಕ್ತ ಬುದ್ಧಿಯ [ಉಪಸ್ಥೇ] ಹತ್ತಿರದಲ್ಲಿರಲು ಯೋಗ್ಯವು ಅಂದರೆ ಆ ಬುದ್ಧಿಯೊಡನೆ ತರುವ ಯೋಗ್ಯ ವ್ಯವಹಾರಗಳಲ್ಲಿ [ಕಮ್] ಸುಖವನ್ನು ಪಡೆದು [ಮದಂತಿ] ಆನಂದಿತರಾಗುವರು. ಅಥವಾ ಆ ಸುಖವನ್ನು ಬಯಸುತ್ತಿರುವರೋ ಹಾಗೆ [ಪಿತೃಣಾಮ್] ರಕ್ಷಣೆ ಮಾಡುವ ಜ್ಞಾನಿಗಳಾದ ವಿದ್ವಾಂಸರು ಅಥವಾ ರಕ್ಷಣೆಯಿಂದ ಅನುಯೋಗವನ್ನು ಪ್ರಾಪ್ತಿಸುವಂತೆ ಮಾಡುವ ವಸಂತ ಮೊದಲಾದ ಋತುಗಳು [ರಶ್ಮೀನ್] ವಿದ್ಯಾಯುಕ್ತ ಜ್ಞಾನಪ್ರಕಾಶವನ್ನು [ನಾಧಮಾನಾಃ] ಐಶ್ವರ್ಯದೊಂದಿಗೆ ಬಯಸುತ್ತಾ [ಶಕ್ತೀಃ] ಅಥವಾ ಸಾಮರ್ಥ್ಯವನ್ನು [ಅನುಯಚ್ಛಮಾನಾಃ] ಅನುಕೂಲತೆಯೊಂದಿಗೆ ನಿಯಮದಲ್ಲಿ ತರುತ್ತಾ ನಾವು ಆನಂದಿತರಾಗುತ್ತ [ಹಿ] ಇರುತ್ತೇವೆ. ಮತ್ತು [ಇತಿ] ಹಾಗೆಂದು ತಿಳಿದು ಈ ವಿದ್ಯಾರ್ಥಿಗಳ ಮೂಲವನ್ನು ನಾವು [ಮಾಛೇದ] ಕಡಿಯದಿರೋಣ.

ಭಾವಾರ್ಥ:- ಐಶ್ವರ್ಯದ ಕಾಮನೆ ಮಾಡುವ ನಾವು ಎಂದಿಗೂ ವಿದ್ವಾಂಸರ ಸಂಗ ಮತ್ತು ಅವರ ಸೇವೆಯನ್ನು ಬಿಡುವುದಿಲ್ಲ. ವಸಂತ ಮೊದಲಾದ ಋತುಗಳನ್ನು ಯಥಾಯೋಗ್ಯವಾಗಿ ಉತ್ತಮ ರೀತಿಯಿಂದ ಜ್ಞಾನ ಮತ್ತು ಸೇವೆಯನ್ನು ಬಿಡದೆ ನಮ್ಮ ವರ್ತನೆಯನ್ನಿಟ್ಟುಕೊಳ್ಳಬೇಕು. ಮತ್ತು ವಿದ್ಯೆ ಹಾಗೂ ಬುದ್ಧಿಯ ಉನ್ನತಿ ಮತ್ತು ವ್ಯವಹಾರಸಿದ್ಧಿಗಾಗಿ ಉತ್ತಮ ಪ್ರಯತ್ನ ಮಾಡಬೇಕು.

ಮತ್ತೆ ಅವರು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಯುವಾಭ್ಯಾಂ ದೇವೀ ಧಿಷಣಾ ಮದಾಯೇ-ಂದ್ರಾಗ್ನೀ ಸೋಮಮುಶತೀ ಸುನೋತಿ ।
ತಾವಶ್ವಿನಾ ಭದ್ರಹಸ್ತಾ ಸುಪಾಣೀ ಆ ಧಾವತಂ ಮಧುನಾ ಪೃಙ್ಕ್ತಮಪ್ಸು ॥೪॥

ಪದಾರ್ಥ:- ಯಾವ [ಸೋಮಮ್] ಐಶ್ವರ್ಯದ [ಉಶತೀ] ಕಾಂತಿಯನ್ನುಂಟುಮಾಡುವ [ದೇವೀ] ಉತ್ತಮೋತ್ತಮ ಶಿಕ್ಷಣ ಮತ್ತು ಶಾಸ್ತ್ರವಿದ್ಯೆ ಮೊದಲಾದವುಗಳಿಂದ ಪ್ರಕಾಶಿತವಾದ [ಧಿಷಣಾ] ಬುದ್ಧಿಯು [ಮದಾಯ] ಆನಂದಕ್ಕಾಗಿ [ಯುವಾಭ್ಯಾಮ್] ಯಾರಿಂದ ಕಾರ್ಯಗಳನ್ನು [ಸುನೋತಿ] ಸಿದ್ಧಪಡಿಸುವುದೋ, ಆ ಬುದ್ಧಿಯಿಂದ ಯಾವ [ಇಂದ್ರಾಗ್ನೀ] ವಿದ್ಯುತ್ತು ಮತ್ತು ಭೌತಿಕಾಗ್ನಿಯು [ಅಪ್ಸು] ಗೃಹಕಾರ್ಖಾನೆಗಳ ಜಲದ ಸ್ಥಾನಗಳಲ್ಲಿ [ಮಧುನಾ] ಜಲದಿಂದ [ಪೃಂಕ್ತಮ್] ಸಂಪರ್ಕ ಅಂದರೆ ಸಂಬಂಧ ಮಾಡುತ್ತವೆ. ಅಥವಾ [ಭದ್ರಹಸ್ತಾ] ಉತ್ತಮ ಸುಖವನ್ನುಂಟುಮಾಡುವವರ ಕೈಗಳಂತೆ ಗುಣವುಳ್ಳ [ಸುಪಾಣೀ] ಮತ್ತು ಉತ್ತಮೋತ್ತಮ ವ್ಯವಹಾರಗಳು ಅಥವಾ [ಅಶ್ವಿನಾ] ಎಲ್ಲದರಲ್ಲಿಯೂ ವ್ಯಾಪ್ತವಾಗುವವರು ಇರುವರೋ [ತೌ] ಅವರು ವಿದ್ಯುತ್ತು ಮತ್ತು ಭೌತಿಕಾಗ್ನಿಯ ರಥಗಳಲ್ಲಿ ಉತ್ತಮವಾಗಿ ಜೋಡಿಸಿ ಅವುಗಳನ್ನು [ಆ ಧಾವತಮ್] ಚಲಿಸುತ್ತಾರೆ.

ಭಾವಾರ್ಥ:- ಮನುಷ್ಯನು ಎಲ್ಲಿಯವರೆಗೆ ಉತ್ತಮ ಶಿಕ್ಷಣ, ಉತ್ತಮ ವಿದ್ಯೆ ಮತ್ತು ಕ್ರಿಯಾಕೌಶಲಯುಕ್ತ ಬುದ್ಧಿಯನ್ನು ಪಡೆಯುವುದಿಲ್ಲವೋ, ಅಲ್ಲಿಯವರೆಗೂ ವಿದ್ಯುತ್ತು ಮೊದಲಾದ ಪದಾರ್ಥಗಳ ಉಪಕಾರವನ್ನು ಪಡೆಯಲಾಗುವುದಿಲ್ಲ. ಆದುದರಿಂದ ಈ ಕೆಲಸವನ್ನು ಉತ್ತಮ ಪ್ರಯತ್ನದಿಂದ ಸಿದ್ಧಿಗೊಳಿಸಬೇಕು.

ಮತ್ತೆ ಅವೆರಡೂ ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಯುವಾಮಿಂದ್ರಾಗ್ನೀ ವಸುನೋ ವಿಭಾಗೇ ತವಸ್ತಮಾ ಶುಶ್ರವ ವೃತ್ರಹತ್ಯೇ ।
ತಾವಾಸದ್ಯಾ ಬರ್ಹಿಷಿ ಯಜ್ಞೇ ಅಸ್ಮಿನ್ ಪ್ರ ಚರ್ಷಣೀ ಮಾದಯೇಥಾಂ ಸುತಸ್ಯ ॥೫॥

ಪದಾರ್ಥ:- ನಾನು [ವಸುನಃ] ಧನದ [ವಿಭಾಗೇ] ಸೇವನ ವ್ಯವಹಾರಗಳಲ್ಲಿ [ವೃತ್ರಹತ್ಯೇ] ಅಥವಾ ಯಾವುದರಲ್ಲಿ ಶತ್ರುಗಳು ಮತ್ತು ಮೇಘಗಳ ಹನನ ಮಾಡಲ್ಪಡುವುದೋ, ಆ ಸಂಗ್ರಾಮದಲ್ಲಿ [ಯುವಾಮ್] ಇವೆರಡೂ [ಇಂದ್ರಾಗ್ನೀ] ವಿದ್ಯುತ್ತು ಮತ್ತು ಸಾಧಾರಣ ಅಗ್ನಿಯು [ತವಸ್ತಮಾ] ಅತ್ಯಂತ ಬಲಿಷ್ಠನು ಮತ್ತು ಬಲವನ್ನು ಕೊಡುವನು ಈ [ಶುಶ್ರವ] ಕೇಳುವವನು. ಅದರಿಂದ [ತೌ] ಅವರಿಬ್ಬರೂ [ಪ್ರಚರ್ಷಣೀ] ಉತ್ತಮ ಸುಖವನ್ನುಂಟುಮಾಡುವ [ಅಸ್ಮಿನ್] ಈ [ಬರ್ಹಿಷಿ] ಸಮೀಪದಲ್ಲಿ ವೃದ್ಧಿಯಾಗುವ [ಯಜ್ಞೇ] ಶಿಲ್ಪ ವ್ಯವಹಾರಗಳ ನಿಮಿತ್ತ [ಸುತಸ್ಯ] ಉತ್ಪನ್ನವಾದ ವಿಮಾನ ಮೊದಲಾದ ರಥಗಳನ್ನು [ಆಸದ್ಯ] ಪ್ರಾಪ್ತರಾಗಿ [ಮಾದಯೇಥಾಮ್] ಆನಂದ ಕೊಡುತ್ತಾರೆ.

ಭಾವಾರ್ಥ:- ಮನುಷ್ಯನು ಯಾವುದರಿಂದ ಧನದ ವಿಭಾಗ ಮಾಡುತ್ತಾನೆ. ಅಥವಾ ಶತ್ರುಗಳನ್ನು ಜಯಿಸಿ ಸಮಸ್ತ ಪೃಥಿವಿಯ ಮೇಲೆ ರಾಜ್ಯಭಾರ ಮಾಡುತ್ತಾನೆ, ಅವುಗಳನ್ನು ಕಾರ್ಯಗಳ ಸಿದ್ಧಿಗಾಗಿ ಹೇಗೆ ಯುಕ್ತಗೊಳಿಸಬೇಕೋ ಹಾಗೆ ಕಾರ್ಯಗಳಲ್ಲಿ ಯುಕ್ತಗೊಳಿಸಲಿ.

ಈಗ ಪವನ ಮತ್ತು ವಿದ್ಯುತ್ತು ಹೇಗಿವೆ ಎಂಬುದನ್ನು ತಿಳಿಸಿದೆ.

ಪ್ರ ಚರ್ಷಣಿಭ್ಯಃ ಪೃತನಾಹವೇಷು ಪ್ರ ಪೃಥಿವ್ಯಾ ರಿರಿಚಾಥೇ ದಿವಶ್ಚ ।
ಪ್ರ ಸಿಂಧುಭ್ಯಃ ಪ್ರ ಗಿರಿಭ್ಯೋ ಮಹಿತ್ವಾ ಪ್ರೇಂದ್ರಾಗ್ನೀ ವಿಶ್ವಾ ಭುವನಾತ್ಯನ್ಯಾ ॥೭॥

ಪದಾರ್ಥ:- [ಇಂದ್ರಾಗ್ನೀ] ವಾಯು ಮತ್ತು ವಿದ್ಯುತ್ತು [ಅನ್ಯಾ ವಿಶ್ವಾ ಭುವನಾ] ಮತ್ತು ಸಮಸ್ತ ಲೋಕಗಳನ್ನು [ಮಹಿತ್ವಾ] ಪ್ರಶಂಸೆಗೊಳಪಡಿಸಿ [ಪೃತನಾಹವೇಷು] ಸೇನೆಗಳಲ್ಲಿ ಪ್ರವೃತ್ತರಾಗುತ್ತಾ ಯುದ್ಧಗಳಲ್ಲಿ [ಚರ್ಷಣೀಭ್ಯಃ] ಮನುಷ್ಯರಿಂದ [ಪ್ರ ಪೃಥಿವ್ಯಾಃ] ಉತ್ತಮವಾದ ಪೃಥಿವೀ ಅಥವಾ [ಪ್ರ ಸಿಂಧುಭ್ಯಃ] ಉತ್ತಮವಾದ ಸಮುದ್ರಗಳು ಅಥವಾ [ಪ್ರ ಗಿರಿಭ್ಯಃ] ಉತ್ತಮವಾದ ಪರ್ವತಗಳು ಅಥವಾ [ಪ್ರ ದಿವಶ್ಚ] ಮತ್ತು ಉತ್ತಮವಾದ ಸೂರ್ಯನಿಂದ [ಪ್ರ ಅತಿ ರಿರಿಚಾಥೇ] ಅತ್ಯಂತವಾಗಿ ವೃದ್ಧಿಸಿ ಪ್ರತೀತವಾಗುವಂತೆ ಅಂದರೆ ಕಲಾಯಂತ್ರಗಳ ಸಹಾಯದಿಂದ ವೃದ್ಧಿಸಿ ಕಾರ್ಯಗಳನ್ನು ಕೊಡುತ್ತವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪವನ ಮತ್ತು ವಿದ್ಯುತ್ತುಗಳಂತೆ ವೃದ್ಧಿಸುವ ಯಾವುದೇ ಲೋಕವಿಲ್ಲ, ಏಕೆಂದರೆ ಇವೆರಡೂ ಎಲ್ಲ ಲೋಕಗಳನ್ನೂ ವ್ಯಾಪಿಸಿ ಸ್ಥಿತವಾಗಿವೆ.

ಈಗ ಓದುವವರು ಮತ್ತು ಓದಿಸುವವರು ಹೇಗಿರುತ್ತಾರೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಆ ಭರತಂ ಶಿಕ್ಷತಂ ವಜ್ರಬಾಹೂ ಅಸ್ಮಾँ ಇಂದ್ರಾಗ್ನೀ ಅವತಂ ಶಚೀಭಿಃ ।
ಇಮೇ ನು ತೇ ರಶ್ಮಯಃ ಸೂರ್ಯಸ್ಯ ಯೇಭಿಃ ಸಪಿತ್ವಂ ಪಿತರೋ ನ ಆಸನ್ ॥೮॥

ಪದಾರ್ಥ:- [ವಜ್ರಬಾಹೂ] ಯಾವನಿಗೆ ವಜ್ರದಂತೆ ಬಲ ಮತ್ತು ವೀರ್ಯವಿದೆಯೋ ಅವನು [ಇಂದ್ರಾಗ್ನೀ] ಹೇ ಓದುವ ಮತ್ತು ಓದಿಸುವವರೇ! ನೀವೀರ್ವರೂ ಹೇಗೆ [ಇಮೇ] ಈ [ಸೂರ್ಯಸ್ಯ] ಸೂರ್ಯನ [ರಶ್ಮಯಃ] ಕಿರಣಗಳು ಇವೆ. ಮತ್ತು [ತೇ] ರಕ್ಷಣೆ ಮೊದಲಾದುವನ್ನು ಮಾಡುತ್ತವೆ ಮತ್ತು ಹೇಗೆ [ಪಿತರಃ] ಪಿತೃಜನರು [ಯೇಭಿಃ] ಯಾವ ಕೆಲಸಗಳಿಂದ [ನಃ] ನಮಗಾಗಿ [ಸಪಿತ್ವಮ್] ಸಮಾನ ವ್ಯವಹಾರಗಳನ್ನು ಪ್ರಾಪ್ತಿ ಮಾಡಿಕೊಳ್ಳಲು ಅಥವಾ ವಿಜ್ಞಾನವನ್ನು ನೋಡಿ ಉಪಕಾರವನ್ನು ಮಾಡುವವರು [ಆಸನ್] ಇರುತ್ತಾರೋ ಹಾಗೆಯೇ [ಶಚೀಭಿಃ] ಒಳ್ಳೆಯ ಕೆಲಸ ಅಥವಾ ಉತ್ತಮ ಬುದ್ಧಿಯಿಂದ [ಅಸ್ಮಾನ್] ನಮ್ಮನ್ನು [ಆ ಭರತಮ್] ಸ್ವೀಕರಿಸಿ, [ಶಿಕ್ಷತಮ್] ಶಿಕ್ಷಣವನ್ನು ಕೊಡಿರಿ ಮತ್ತು [ನು] ಶೀಘ್ರವಾಗಿ [ಅವತಮ್] ಪಾಲಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ಒಳ್ಳೆಯ ಶಿಕ್ಷಣದಿಂದ ಮನುಷ್ಯರಲ್ಲಿ ಸೂರ್ಯನಂತೆ ವಿದ್ಯೆಯ ಪ್ರಕಾಶಕರ್ತನು ಮತ್ತು ಮಾತಾ ಪಿತರಂತೆ ಕೃಪೆಯಿಂದ ರಕ್ಷಿಸುವವನು ಅಥವಾ ಓದಿಸುವವನು ಹಾಗೂ ಸೂರ್ಯನಂತೆ ಪ್ರಕಾಶಿತವಾದ ಬುದ್ಧಿಯನ್ನು ಪಡೆದು ಮತ್ತು ಎರಡನೆಯವನಾದ ಓದುವವನು ಅವರೀರ್ವರಿಗೂ ನಿತ್ಯವೂ ಸತ್ಕರಿಸಿರಿ. ಈ ಕಾರ್ಯದ ಹೊರತು ಎಂದಿಗೂ ವಿದ್ಯೆಯ ಉನ್ನತಿಯಾಗುವುದು ಅಸಂಭವವು.

ಮತ್ತೆ ಅವರೀರ್ವರೂ ಹೇಗಿರುತ್ತಾರೆ ಎಂಬುದನ್ನು ತಿಳಿಸಿದೆ.

ಪುರಂದರಾ ಶಿಕ್ಷತಂ ವಜ್ರಹಸ್ತಾ-ಸ್ಮಾँ ಇಂದ್ರಾಗ್ನೀ ಅವತಂ ಭರೇಷು । ತನ್ನೋ ಮಿತ್ರೋ
ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೯॥

ಪದಾರ್ಥ:- [ಪುರಂದರಾ] ಶತ್ರುಗಳ ಪುರಗಳನ್ನು ವಿಧ್ವಂಸ ಮಾಡುವವನು ಅಥವಾ [ವಜ್ರಹಸ್ತಾ] ಯಾವನ ವಿದ್ಯಾರೂಪೀ ವಜ್ರವು ಹಸ್ತಕ್ಕೆ ಸಮಾನವಾಗಿದೆಯೋ ಅವರ [ಇಂದ್ರಾಗ್ನೀ] ಉಪದೇಶವನ್ನು ಕೇಳುವ ಅಥವಾ ಮಾಡುವ ನೀವು ಹೇಗೆ [ಮಿತ್ರ] ಸುಹೃಜ್ಜನರು [ವರುಣಃ] ಉತ್ತಮಗುಣಯುಕ್ತರು [ಅದಿತಿಃ] ಅಂತರಿಕ್ಷವು [ಸಿಂಧುಃ] ಸಮುದ್ರವು [ಪೃಥಿವೀ] ಪೃಥಿವಿಯು [ಉತ] ಮತ್ತು [ದ್ಯೌಃ] ಸೂರ್ಯನ ಪ್ರಕಾಶವು [ನಃ] ನಮಗೆ [ಮಾಮಹಂತಾಮ್] ಉನ್ನತಿಯನ್ನು ಕೊಡುವುದೋ ಹಾಗೆಯೇ [ಅಸ್ಮಾನ್] ನಮ್ಮನ್ನು [ತತ್] ಆ ಉಕ್ತ ಪದಾರ್ಥಗಳ ವಿಶೇಷ ಜ್ಞಾನದ [ಶಿಕ್ಷತಮ್] ಶಿಕ್ಷಣ ಕೊಡಿರಿ ಮತ್ತು [ಭರೇಷು] ಸಂಗ್ರಾಮ ಮೊದಲಾದ ವ್ಯವಹಾರಗಳಲ್ಲಿ [ಅವತಮ್] ರಕ್ಷಣೆ ಮೊದಲಾದವನ್ನು ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಮಿತ್ರರು ಮೊದಲಾದವರು ತಮ್ಮ ಮಿತ್ರಾದಿಗಳ ರಕ್ಷಣೆಯನ್ನು ಮಾಡಿ ಮತ್ತು ಉನ್ನತಿ ಮಾಡುವರೋ ಅಥವಾ ಒಬ್ಬನು ಇನ್ನೊಬ್ಬನ ಅನುಕೂಲತೆಯಲ್ಲಿರುತ್ತಾನೋ, ಹಾಗೆ ಉಪದೇಶವನ್ನು ಕೇಳುವವರು ಮತ್ತು ಹೇಳುವವರು ಪರಸ್ಪರ ವಿದ್ಯೆಯನ್ನು ವೃದ್ಧಿಸಿ ಪ್ರೀತಿಯೆಂಬ ಮಿತ್ರತೆಯಿಂದ ವರ್ತಿಸಬೇಕು.

ಈ ಸೂಕ್ತದಲ್ಲಿ ಇಂದ್ರ ಮತ್ತು ಅಗ್ನಿ ಶಬ್ದದ ಅರ್ಥದ ವರ್ಣನೆ ಇದೆ. ಆದುದರಿಂದ ಈ ಸೂಕ್ತಾರ್ಥಕ್ಕೂ ಹಿಂದಿನ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಒಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೧೧೦

ಮಂತ್ರಸಂಖ್ಯೆ ೯ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಋಭವಃ । ಛಂದಃ - ಜಗತೀ। ೫, ೯ ತ್ರಿಷ್ಟುಪ್ ।
ಸ್ವರಃ - ೫, ೯ ಧೈವತಃ, ನಿಷಾಧಃ.

ಇದರ ಪ್ರಥಮ ಮಂತ್ರದಲ್ಲಿ ವಿದ್ವಾಂಸನು ಹೇಗೆ ತನ್ನ ವರ್ತನೆಯನ್ನಿಟ್ಟುಕೊಳ್ಳಬೇಕು, ಈ ಉಪದೇಶ ಮಾಡಿದೆ.

ತತಂ ಮೇ ಅಪಸ್ತದು ತಾಯತೇ ಪುನಃ ಸ್ವಾದಿಷ್ಠಾ ಧೀತಿರುಚಥಾಯ ಶಸ್ಯತೇ ।
ಅಯಂ ಸಮುದ್ರ ಇಹ ವಿಶ್ವದೇವ್ಯಃ ಸ್ವಾಹಾಕೃತಸ್ಯ ಸಮು ತೃಪ್ಣುತ ಋಭವಃ ॥೧॥

ಪದಾರ್ಥ:- ಹೇ [ಋಭವಃ] (ಋಭುರಿತಿ ಮೇಧಾವಿನಾಮ) - ಬುದ್ಧಿವಂತರಾದ ವಿದ್ವಾಂಸರೇ! ನೀವು ಹೇಗೆ [ಇಹ] ಈ ಲೋಕದಲ್ಲಿ [ಅಯಮ್] ಈ [ವಿಶ್ವದೇವ್ಯಃ] ಸಮಸ್ತ ಉತ್ತಮ ಗುಣಗಳಿಗೆ ಯೋಗ್ಯನು [ಸಮುದ್ರಃ] ಸಮುದ್ರವಾಗಿದೆ. ಮತ್ತು ಹೇಗೆ ನಿಮ್ಮಲ್ಲಿ [ಸ್ವಾಹಾಕೃತಸ್ಯ] ಸತ್ಯವಾಣಿಯಿಂದ ಉತ್ಪನ್ನವಾದ ಧರ್ಮದ [ಉಚಥಾಯ] ಹೇಳುವಿಕೆಗೆ [ಸ್ವಾದಿಷ್ಠಾ] ಅತ್ಯಂತ ಮಧುರ ಗುಣವುಳ್ಳ [ಧೀತಿಃ] ಬುದ್ಧಿಯು [ಶಸ್ಯತೇ] ಪ್ರಶಂಸನೀಯವಾಗಿರುತ್ತದೆ. [ಉ] ಅಥವಾ ಹೇಗೆ [ಮೇ] ನನ್ನ [ತತಮ್] ಬಹಳವಾಗಿ ಹರಡಿರುವ ಅಂದರೆ ಎಲ್ಲರಿಗೂ ತಿಳಿಸಿರುವ [ಅಪಃ] ಕಾರ್ಯವು [ತಾಯತೇ] ಪಾಲನೆ ಮಾಡುತ್ತದೆ [ತತ್ ಉ ಪುನಃ] ಹಾಗೆಯೇ ನಮಗೂ [ಸಮ್ ತೃಪ್ಣುತ] ಚೆನ್ನಾಗಿ ತೃಪ್ತಿಪಡಿಸು.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಹೇಗೆ ಸಮಸ್ತ ರತ್ನಗಳಿಂದ ತುಂಬಿರುವ ಸಮುದ್ರವು ದಿವ್ಯಗುಣಯುಕ್ತವಾಗಿದೆಯೋ, ಹಾಗೆಯೇ ಧಾರ್ಮಿಕರಿಂದ ವಿದ್ವಾಂಸರು ಮನುಷ್ಯನಿಗೆ ಸತ್ಯಕಾರ್ಯಗಳು ಮತ್ತು ಉತ್ತಮ ಬುದ್ಧಿಯ ಪ್ರಚಾರ ಮಾಡಿ ದಿವ್ಯಗುಣಗಳನ್ನು ಪ್ರಸಿದ್ಧಿಪಡಿಸಬೇಕು.

ಮತ್ತೆ ಅವರು ಹೇಗಿರುವರು ಎಂಬುದನ್ನು ತಿಳಿಸಿದೆ.

ಆಭೋಗಯಂ ಪ್ರ ಯದಿಚ್ಛಂತ ಐತನಾ-ಪಾಕಾಃ ಪ್ರಾಂಚೋ ಮಮ ಕೇ ಚಿದಾಪಯಃ ।
ಸೌಧನ್ವನಾಸಶ್ಚರಿತಸ್ಯ ಭೂಮನಾ-ಗಚ್ಛತ ಸವಿತುರ್ದಾಶುಷೋ ಗೃಹಮ್ ॥೨॥

ಪದಾರ್ಥ:- ಹೇ [ಪ್ರಾಂಚಃ] ಪ್ರಾಚೀನ [ಅಪಾಕಾಃ] ರೊಟ್ಟಿ ಮೊದಲಾದ ಸ್ವಯಂಪಾಕ ಹಾಗೂ ಯಜ್ಞಾದಿ ಕರ್ಮಗಳನ್ನು ಮಾಡದಿರುವ ಸಂನ್ಯಾಸಿಗಳೇ! ತಾವು ಯಾವ [ತೇ ಚಿತ್] ಯಾರೇ ಜನರು [ಮಮ] ನನ್ನ [ಆಪಯಃ] ವಿದ್ಯೆಯಲ್ಲಿ ಉತ್ತಮವಾಗಿ ವ್ಯಾಪ್ತವಾಗುವ ಕಾಮನೆಗಾಗಿ [ಯತ್] ಯಾವ [ಆ ಭೋಗಯಮ್] ಉತ್ತಮವಾಗಿ ಭೋಗಿಸಲ್ಪಡುವ ಪದಾರ್ಥಗಳಲ್ಲಿ ಪ್ರಶಂಸಿತ ಭೋಗಗಳ [ಇಚ್ಛಂತಃ] ಇಚ್ಛಿಸುವವರಾಗಿರಿ. ಅವರಿಗೆ ಆ ಭೋಗಗಳನ್ನು [ಪ್ರ ಐತನ] ಪ್ರಾಪ್ತ ಮಾಡಿರಿ. ಹೇ [ಸೌಧನ್ವನಾಸಃ] ಬಿಲ್ಲು ಬಾಣಗಳನ್ನು ಬಂಧಿಸುವವರಲ್ಲಿ ಅತ್ಯಂತ ಚತುರರೇ! ಯಾವಾಗ ನೀವು [ಭೂಮನಾ] ಬಹಳವಾಗಿ [ಚರಿತಸ್ಯ] ಮಾಡಲ್ಪಟ್ಟ ಕಾರ್ಯಗಳ [ಸವಿತುಃ] ಐಶ್ವರ್ಯದಿಂದ ಕೂಡಿದ [ದಾಶುಷಃ] ದಾನ ಮಾಡುವವರ [ಗೃಹಮ್] ಗೃಹಕ್ಕೆ [ಆಗಚ್ಛತ] ಬನ್ನಿರಿ. ಆಗ ಜಿಜ್ಞಾಸುಗಳು ಅಂದರೆ ಉಪದೇಶಗಳನ್ನು ಆಲಿಸುವವರ ಬಗ್ಗೆ ಸತ್ಯಧರ್ಮಗಳ ಗ್ರಹಣ ಮಾಡುವ ಉಪದೇಶ ಮಾಡಿರಿ.

ಭಾವಾರ್ಥ:- ಹೇ ಗೃಹಸ್ಥರೇ ಮೊದಲಾದ ಮನುಷ್ಯರೇ! ನೀವು ಸಂನ್ಯಾಸಿಗಳಿಂದ ವಿದ್ಯೆಯನ್ನು ಪಡೆದು, ದಾನಿಗಳ ಸಭೆಗಳನ್ನು ಪ್ರವೇಶಿಸಿ. ಅಲ್ಲಿ ಯುಕ್ತಿಯಿಂದ ಕುಳಿತು ನಿರಭಿಮಾನಿಗಳಾಗಿ ವರ್ತಿಸಿ ವಿದ್ಯೆ ಮತ್ತು ವಿನಯದ ಪ್ರಚಾರವನ್ನು ಮಾಡಿರಿ.

ಮತ್ತೆ ಅವರು ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಿದೆ.

ತತ್ ಸವಿತಾ ವೋಽ ಮೃತತ್ವಮಾಸುವ-ದಗೋಹ್ಯಂ ಯಚ್ಛ್ರವಯಂತ ಐತನ ।
ತ್ಯಂ ಚಿಚ್ಚಮಸಮಸುರಸ್ಯ ಭಕ್ಷಣ-ಮೇಕಂ ಸಂತಮಕೃಣುತಾ ಚತುರ್ವಯಮ್ ॥೩॥

ಪದಾರ್ಥ:- ಹೇ ಬುದ್ಧಿವಂತರೇ! ನೀವು ಯಾವ [ಸವಿತಾ] ಐಶ್ವರ್ಯವನ್ನು ಕೊಡುವ ವಿದ್ವಾಂಸನು [ವಃ] ನಿಮಗಾಗಿ [ಯತ್] ಯಾವ [ಅಮೃತತ್ವಮ್] ಮೋಕ್ಷಭಾವದ [ಆ ಅಸುವತ್] ಉತ್ತಮ ರೀತಿಯ ಐಶ್ವರ್ಯವನ್ನು ಪಡೆಯುವನೋ, [ತತ್] ಅವನನ್ನು [ಅಗೋಹ್ಯಮ್] ಪ್ರತ್ಯಕ್ಷವಾಗಿ [ಶ್ರವಯಂತಃ] ಸಮಸ್ತ ವಿದ್ಯೆಗಳನ್ನು ಆಲಿಸುವಂತೆ ಮಾಡುವಂತೆ [ಐತನ] ತಿಳಿಸಿರಿ. [ಅಸುರಸ್ಯ] ಯಾವುದು ಪ್ರಾಣಗಳಲ್ಲಿ ರಮಿಸುತ್ತಿದೆಯೋ ಆ ಮೇಘಗಳನ್ನು [ಚಮಸಮ್] ಯಾವುದರಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಿವೆಯೋ ಅಂತಹ [ಏಕಮ್] ಒಂದು [ಸಪ್ರಮ್] ವರ್ತನೆಯನ್ನು [ಅಕೃಣುತ] ಮಾಡಿಕೊಳ್ಳಿರಿ.

ಭಾವಾರ್ಥ:- ಹೇ ವಿದ್ವಾಂಸರೇ! ಹೇಗೆ ಮೇಘವು ಪ್ರಾಣವನ್ನು ಪುಷ್ಟಿಗೊಳಿಸುವ ಅನ್ನ ಮೊದಲಾದ ಪದಾರ್ಥಗಳನ್ನು ಕೊಡುವುದಾಗಿ ಸುಖವನ್ನುಂಟುಮಾಡುತ್ತದೋ, ಹಾಗೆಯೇ ನೀವು ವಿದ್ಯೆಯನ್ನು ದಾನ ಮಾಡುವವರಾಗಿ ವಿದ್ಯಾರ್ಥಿಗಳನ್ನು ವಿದ್ವಾಂಸರನ್ನಾಗಿ ಮಾಡುವ ಸುಂದರ ಉಪಕಾರವನ್ನು ಮಾಡಿರಿ.

ಮತ್ತೆ ಅವರು ಹೇಗಿರುವರು ಎಂಬುದನ್ನು ತಿಳಿಸಿದೆ.

ವಿಷ್ಟ್ವೀ ಶಮೀ ತರಣಿತ್ವೇನ ವಾಘತೋ ಮರ್ತಾಸಃ ಸಂತೋ ಅಮೃತತ್ವಮಾನಶುಃ ।
ಸೌಧನ್ವನಾ ಋಭವಃ ಸೂರಚಕ್ಷಸಃ ಸಂವತ್ಸರೇ ಸಮಪೃಚ್ಯಂತ ಧೀತಿಭಿಃ ॥೪॥

ಪದಾರ್ಥ:- ಯಾವ [ಸೌಧನ್ವನಾಃ] ಉತ್ತಮ ಜ್ಞಾನವುಳ್ಳ [ಸೂರಚಕ್ಷಸಃ] ಅಂದರೆ ಯಾವನ ಜ್ಞಾನವು ಪ್ರಬಲವಾಗಿದೆಯೋ, [ವಾಘತಃ] ಬುದ್ಧಿವಂತರಾದ ಜನರು [ಸಂವತ್ಸರೇ] ವರ್ಷದಲ್ಲಿ [ಧೀತಿಭಿಃ] ನಿರಂತರ ಪುರುಷಾರ್ಥ ಯುಕ್ತವಾದ ಕಾರ್ಯಗಳಲ್ಲಿ ಕಾರ್ಯಸಿದ್ಧಿಯ [ಸಮಪೃಚ್ಯಂತ] ಸಂಬಂಧವನ್ನಿಡುವ ಅಂದರೆ ಕಾರ್ಯದ ಪದ್ಧತಿ ತಿಳಿದಿರುವರೋ ಅವರು [ತರಣಿತ್ವೇನ] ಶೀಘ್ರವಾಗಿ [ವಿಷ್ಟ್ವೀ] ವ್ಯಾಪ್ತವಾಗುವ [ಶಮೀ] ಕೆಲಸಗಳನ್ನು [ಸಂತಃ] ಮಾಡುತ್ತಾ [ಅಮೃತತ್ವಮ್] ಮೋಕ್ಷಭಾವವನ್ನು [ಆನಶುಃ] ಪಡೆಯುವರು.

ಭಾವಾರ್ಥ:- ಯಾವ ಮನುಷ್ಯರು ಪ್ರತಿಯೊಂದು ಕ್ಷಣವೂ ಉತ್ತಮೋತ್ತಮ ಪುರುಷಾರ್ಥವನ್ನು ಮಾಡುವರೋ ಅವರು ಸಂಸಾರದಿಂದ ಮೊದಲ್ಗೊಂಡು ಮೋಕ್ಷ ಪರ್ಯಂತ ಪದಾರ್ಥಗಳನ್ನು ಪಡೆದು ಸುಖಿಗಳಾಗುವರು; ಆದರೆ ಆಲಸಿಗಳು ಎಂದಿಗೂ ಸುಖವನ್ನು ಪಡೆಯಲಾರರು.

ಮತ್ತೆ ಅವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಕ್ಷೇತ್ರಮಿವ ವಿ ಮಮುಸ್ತೇಜನೇನ ಏಕಂ ಪಾತ್ರಮೃಭವೋ ಜೇಹಮಾನಮ್ ।
ಉಪಸ್ತುತಾ ಉಪಮಂ ನಾಧಮಾನಾ ಅಮರ್ತ್ಯೇಷು ಶ್ರವ ಇಚ್ಛಮಾನಾಃ ॥೫॥

ಪದಾರ್ಥ:- ಯಾವ [ಉಪಸ್ತುತಾಃ] ತೀರವನ್ನು ತಲುಪಿದವರು ಪ್ರಶಂಸಿಸುವಂತೆ [ನಾಧಮಾನಾಃ] ಮತ್ತು ತನ್ನ ಪ್ರಯೋಜನಕ್ಕಾಗಿ ಇತರರನ್ನು ಯಾಚಿಸುವಂತೆ, [ಅಮರ್ತ್ಯೇಷು] ಅವಿನಾಶಿಯಾದ ಪದಾರ್ಥಗಳಲ್ಲಿ [ಶ್ರವಃ] ಅನ್ನವನ್ನು [ಇಚ್ಛಮಾನಾಃ] ಬಯಸುತ್ತಾ [ಋಭವಃ] ಬುದ್ಧಿವಂತರಾದ ಜನರು [ತೇಜನೇನ] ತಮ್ಮ ಉತ್ತೇಜನದಿಂದ [ಕ್ಷೇತ್ರಮಿವ] ಹೊಲಗಳಂತೆ [ಜೇಹಮಾನಮ್] ಪ್ರಯತ್ನದಿಂದ ಸಿದ್ಧ ಮಾಡುವ [ಏಕಮ್] ಒಬ್ಬನೇ [ಉಪಮಮ್] ಉಪಮಾ ರೂಪ ಅಂದರೆ ಅತಿ ಶ್ರೇಷ್ಠನಾಗಿ [ಪಾತ್ರಮ್] ಜ್ಞಾನಿಗಳ ಸಮೂಹಕ್ಕೆ [ವಿ, ಮಮುಃ] ವಿಶೇಷ ಮಾನ್ಯತೆಯನ್ನು ಕೊಡುತ್ತಾ ಅವರು ಸುಖವನ್ನು ಪಡೆಯುವರು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಮನುಷ್ಯನು ಹೊಲವನ್ನು ಉತ್ತು ಬಿತ್ತು ಮತ್ತು ಸರಿಯಾಗಿ ರಕ್ಷಿಸಿ ಅದರಿಂದ ಅನ್ನ ಮೊದಲಾದ ಪದಾರ್ಥಗಳನ್ನು ಪಡೆದು ಅದರ ಊಟವನ್ನು ಮಾಡಿ ಆನಂದಿಸುವನೋ, ಹಾಗೆ ವೇದಗಳಲ್ಲಿ ಹೇಳಿರುವ ಕಲಾಕೌಶಲ್ಯಗಳಿಂದ ಕೂಡಿದ ಯಾನಗಳನ್ನು ರಚಿಸಿ, ಅವುಗಳಲ್ಲಿ ಕುಳಿತು ಚಲಿಸಬೇಕು ಮತ್ತು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗಿ ವ್ಯವಹಾರ ಅಥವಾ ರಾಜ್ಯಗಳಿಂದ ಧನವನ್ನು ಪಡೆದು ಸುಖಿಗಳಾಗಬೇಕು.

ಈಗ ಸೂರ್ಯನ ಕಿರಣಗಳು ಹೇಗಿವೆ ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಆ ಮನೀಷಾಮಂತರಿಕ್ಷಸ್ಯ ನೃಭ್ಯಃ ಸ್ರುಚೇವ ಘೃತಂ ಜುಹವಾಮ ವಿದ್ಮನಾ ।
ತರಣಿತ್ವಾ ಯೇ ಪಿತುರಸ್ಯ ಸಶ್ಚಿರ ಋಭವೋ ವಾಜಮರುಹನ್ ದಿವೋ ರಜಃ ॥೬॥

ಪದಾರ್ಥ:- [ಯೇ] ಯಾವ [ಋಭವಃ] ಸೂರ್ಯನ ಕಿರಣಗಳು [ನಿರು.೧೧.೧೬] [ತರಣಿತ್ವಾ] ಶೀಘ್ರರಾಗಿ [ವಾಜಮ್] ಪೃಥಿವೀ ಮೊದಲಾದ ಅನ್ನದ ಮೇಲೆ [ಅರುಹನ್] ಆರೋಹಿಸುವುವೋ ಮತ್ತು [ದಿವಃ] ಪ್ರಕಾಶಯುಕ್ತ ಆಕಾಶದ ಮಧ್ಯೆ [ರಜಃ] ಲೋಕ ಸಮೂಹವನ್ನು [ಸಶ್ಚಿರೇ] ಪಡೆಯುವುವು. ಮತ್ತು [ಅಸ್ಯ] ಈ [ಅಂತರಿಕ್ಷಸ್ಯ] ಆಕಾಶದ ಮಧ್ಯೆ ಇರುವ [ನೃಭ್ಯಃ] ಮನುಷ್ಯರಿಗಾಗಿ [ಸ್ರುಚೇವ] ಹೋಮ ಮಾಡುವ ಪಾತ್ರೆ (ಸ್ರುವ)

ಯಿಂದ ತುಪ್ಪವನ್ನು ಹಾಕುವಂತೆ [ಘೃತಮ್] ಜಲ ಹಾಗೂ [ಪಿತುಃ] ಅನ್ನವನ್ನು ಪ್ರಾಪ್ತಗೊಳಿಸುತ್ತವೆ. ಅವುಗಳ ಹತ್ತಿರದಿಂದ ನಾವು [ವಿದ್ಮನಾ] ಯಾವುದರಿಂದ ವಿದ್ವಾಂಸರು ಸತ್-ಅಸತ್‌ಗಳ ವಿಚಾರ ಮಾಡುವರೋ, ಅಜ್ಞಾನದಿಂದ [ಮನೀಷಾಮ್] ವಿಚಾರವಂತವಾದ ಬುದ್ಧಿಯನ್ನು [ಆ ಜುಹವಾಮ] ಗ್ರಹಣ ಮಾಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಸೂರ್ಯನ ಕಿರಣಗಳು ಲೋಕ-ಲೋಕಾಂತರಗಳನ್ನು ಆರೋಹಿಸಿ ಶೀಘ್ರವಾಗಿ ಜಲವರ್ಷಣೆ ಮಾಡಿ ಮತ್ತು ಅದರಿಂದ ಓಷಧಿಗಳ ಉತ್ಪನ್ನ ಮಾಡಿ ಎಲ್ಲ ಪ್ರಾಣಿಗಳಿಗೂ ಸುಖವನ್ನುಂಟುಮಾಡುವುವೋ, ಹಾಗೆಯೇ ರಾಜಾದಿ ಜನರು ಪ್ರಜೆಗಳಿಗೆ ಸುಖವನ್ನುಂಟು ಮಾಡಬೇಕು.

ಮತ್ತೆ ಶ್ರೇಷ್ಠ ವಿದ್ವಾಂಸನು ನಮಗಾಗಿ ಯಾರಿಂದ ಏನನ್ನು ಮಾಡಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಋಭುರ್ನ ಇಂದ್ರಃ ಶವಸಾ ನವೀಯಾ- ನೃಭುರ್ವಾಜೇಭಿರ್ವಸುಭಿರ್ವಸುರ್ದದಿಃ ।
ಯುಷ್ಮಾಕಂ ದೇವಾ ಅವಸಾಹನಿ ಪ್ರಿಯೇ೭ಭಿ ತಿಷ್ಠೇಮ ಪೃತ್ಸುತೀರಸುನ್ವತಾಮ್ ॥೭॥

ಪದಾರ್ಥ:- [ನವೀಯಾನ್] ಅತಿ ನವೀನ [ಋಭುಃ] ಬಹಳ ವಿದ್ಯೆಗಳ ಪ್ರಕಾಶ ಮಾಡುವ ವಿದ್ವಾಂಸನು ಹೇಗೆ [ಇಂದ್ರಃ] ಸೂರ್ಯನು ತನ್ನ ಪ್ರಕಾಶ ಮತ್ತು ಆಕರ್ಷಣೆಯಿಂದ ಎಲ್ಲರಿಗೂ ಆನಂದವನ್ನೀಯುವನೋ, ಹಾಗೆ [ಶವಸಾ] ವಿದ್ಯೆ ಮತ್ತು ಉತ್ತಮ ಶಿಕ್ಷಣದ ಬಲದಿಂದ [ನಃ] ನಮಗೆ ಸುಖಕೊಡಲಿ. ಅಥವಾ ಯಾವ [ಋಭುಃ] ಧೀರಬುದ್ಧಿ, ಆಯಸ್ಸು ಮತ್ತು ಸಭ್ಯತೆಯನ್ನು ಪ್ರಕಾಶ ಪಡಿಸುವ [ವಾಜೇಭಿಃ] ವಿಜ್ಞಾನ, ಅನ್ನ ಮತ್ತು ಸಂಗ್ರಾಮಗಳಿಂದ ಅಥವಾ [ವಸುಭಿಃ] ಚಕ್ರವರ್ತೀರಾಜ್ಯ ಮೊದಲಾದ ಸಂಪತ್ತಿನಿಂದ [ವಸುಃ] ತಾವು ಸುಖದಿಂದಿರಲು ಮತ್ತು [ದದಿಃ] ಇತರರಿಗೆ ಸುಖವನ್ನು ಕೊಡುವವರು ಆಗುವರು. ಅದರಿಂದ ತಮ್ಮ ರಾಜ್ಯಕ್ಕೆ ಮತ್ತು ಸೇನೆಗೆ [ಅವಸಾ] ರಕ್ಷಣೆ ಮೊದಲಾದ ವ್ಯವಹಾರಗಳ ಜೊತೆಗೆ ವರ್ತಿಸುತ್ತಾ [ದೇವಾಃ] ವಿದ್ಯೆ ಮತ್ತು ಉತ್ತಮ ಶಿಕ್ಷಣವನ್ನು ಬಯಸುವ ವಿದ್ವಾಂಸರಾದ ನಾವು [ಪ್ರಿಯೇ] ಪ್ರೀತಿಯನ್ನುಂಟುಮಾಡುವ [ಅಹನಿ] ದಿನಗಳಲ್ಲಿ [ಅಸುನ್ವತಾಮ್] ಉತ್ತಮ ಐಶ್ವರ್ಯಕ್ಕೆ ವಿರೋಧಿಗಳಾದ [ಯುಷ್ಮಾಕಮ್] ಶತ್ರುಗಳಾದ ನಿಮ್ಮ [ಪೃತ್ಸುತೀಃ] ಸಂಬಂಧವನ್ನಿಟ್ಟುಕೊಳ್ಳುವವರಿಗೆ ಐಶ್ವರ್ಯವನ್ನು ಕಳುಹಿಸುವರೋ [ಅಭಿ] ಅವರ ಎದುರಿಗೆ [ತಿಷ್ಠೇಮ] ಸ್ಥಿತರಾಗುತ್ತೇವೆ ಅಂದರೆ ಅವರ ತಿರಸ್ಕಾರ ಮಾಡುತ್ತೇವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನು ತನ್ನ ಪ್ರಕಾಶದಿಂದ ತೇಜಸ್ವಿಯಾಗಿ ಸಮಸ್ತ ಚರಾಚರ ಜೀವಿಗಳು ಮತ್ತು ಸಮಸ್ತ ಪದಾರ್ಥಗಳ ಜೀವನವನ್ನು ಮಾಡಿಸುವುದರಿಂದ ಆನಂದ ಪಡಿಸುವನೋ ಹಾಗೆ ವಿದ್ವಾಂಸರು ಶೂರವೀರರು ಮತ್ತು ವಿದ್ವಾಂಸರಲ್ಲಿ ಉತ್ತಮ ವಿದ್ವಾಂಸರ ಸಹಾಯದಿಂದ ಕೂಡಿದ ನಾವು ಉತ್ತಮವಾಗಿ ಶಿಕ್ಷಣವನ್ನಿತ್ತು, ಪ್ರಸನ್ನವೂ, ಪುಷ್ಟವೂ ಆದ ತಮ್ಮ ಸೇನೆಯಿಂದ ಶತ್ರುಗಳ ತಿರಸ್ಕಾರ ಮಾಡಿ, ಧಾರ್ಮಿಕರನ್ನು ಪಾಲಿಸಿ ಚಕ್ರವರ್ತೀ ರಾಜ್ಯವನ್ನು ನಿರಂತರವಾಗಿ ಸೇವಿಸಬೇಕು.

ಮತ್ತೆ ಆ ವಿದ್ವಾಂಸರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ನಿಶ್ಚರ್ಮಣ ಋಭವೋ ಗಾಮಪಿಂಶತ ಸಂ ವತ್ಸೇನಾಸೃಜತಾ ಮಾತರಂ ಪುನಃ ।
ಸೌಧನ್ವನಾಸಃ ಸ್ವಪಸ್ಯಯಾ ನರೋ ಜಿವ್ರೀ ಯುವಾನಾ ಪಿತರಾಕೃಣೋತನ ॥೮॥

ಪದಾರ್ಥ:- ಹೇ [ಋಭವಃ] ಬುದ್ಧಿವಂತರಾದ ಮನುಷ್ಯರೇ! ನೀವು [ಚರ್ಮಣಃ] ಚರ್ಮದಿಂದ [ಗಾಮ್] ಗೋವನ್ನು [ನಿರಪಿಂಶತ] ನಿರಂತರ ಅವಯವಿಯನ್ನಾಗಿ ಮಾಡಿ ಅಂದರೆ ಅದರ ಚರ್ಮ ಮೊದಲಾದವುಗಳನ್ನು ಬಾಧಿಸದೆ ನಿರಂತರವೂ ಪುಷ್ಟಿಗೊಳಿಸಿ [ಪುನಃ] ಮತ್ತೆ [ವತ್ಸೇವ] ಅದರ ಕರುವಿನೊಂದಿಗೆ [ಮಾತರಮ್] ತಾಯಿಯಾದ ಹಸುವನ್ನು [ಸಮಸೃಜತ] ಯುಕ್ತಗೊಳಿಸಿ ಹೇ [ಸೌಧನ್ವನಾಸಃ] ಧನುರ್ವೇದ ವಿದ್ಯಾ ಕುಶಲರೂ [ನರಃ] ಮತ್ತು ವ್ಯವಹಾರಗಳಲ್ಲಿ ಯಥಾಯೋಗ್ಯನಾಗಿ ವರ್ತಿಸುವ ವಿದ್ವಾಂಸರೇ! ನೀವು [ಸ್ವಪಶ್ಯಯಾ] ಯಾವುದರಿಂದ ಸುಂದರ ಕೆಲಸಗಳಾಗುವುವೋ ಆ ಚತುರತೆಯಿಂದ [ಜಿವ್ರೀ] ಉತ್ತಮ ಜೀವನದಿಂದ ಕೂಡಿದ ವೃದ್ಧನು [ಪಿತರಾ] ತನ್ನ ತಾಯಿತಂದೆಯರನ್ನು [ಯುವಾನಾ] ಯುವಕರಂತೆ [ಅಕೃಣೋತನ] ನಿರಂತರ ಮಾಡಲಿ.

ಭಾವಾರ್ಥ:- ಹಿಂದೆ ಹೇಳಿದ ಕಾರ್ಯಗಳ ಹೊರತು ಯಾವನೂ ರಾಜ್ಯಭಾರ ಮಾಡಲಾರನು. ಆದುದರಿಂದ ಮನುಷ್ಯರು ಸದಾ ಆ ಕಾರ್ಯಗಳನ್ನು ಅನುಷ್ಠಾನ ಮಾಡಲು ಇಚ್ಛಿಸಬೇಕು.

ಈಗ ಸೇನಾಧ್ಯಕ್ಷನು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ವಾಜೇಭಿರ್ನೋ ವಾಜಸಾತಾವವಿಡ್ಢ್ಯೃಭುಮಾಁ ಇಂದ್ರ ಚಿತ್ರಮಾ ದರ್ಷಿ ರಾಧಃ । ತನ್ನೋ
ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೯॥

ಪದಾರ್ಥ:- ಹೇ [ಇಂದ್ರ] ಪರಮೈಶ್ವರ್ಯದಿಂದ ಕೂಡಿದ ಸೇನಾಧ್ಯಕ್ಷನೇ! **[ಋಭುಮಾನ್]** ಯಾವನಲ್ಲಿ ಪ್ರಶಂಸಿತರಾದ ಬುದ್ಧಿವಂತರಿರುವರೋ, ಆ ನೀವು [ನಃ] ನಮಗಾಗಿ ಯಾವ [ರಾಧಃ] ಸಂಪತ್ತನ್ನು [ಮಿತ್ರಃ] ಸುಹೃತರು [ವರುಣಃ] ಶ್ರೇಷ್ಠಗುಣಯುಕ್ತರು, [ಅದಿತಿಃ] ಅಂತರಿಕ್ಷ [ಸಿಂಧುಃ] ಸಮುದ್ರವು [ಪೃಥಿವೀ] ಪೃಥಿವಿಯು [ಉತ] ಮತ್ತು [ದ್ಯೌಃ] ಸೂರ್ಯಪ್ರಕಾಶವು [ಮಾಮಹಂತಾಮ್] ಹೆಚ್ಚಲಿ. [ತತ್] ಆ [ಚಿತ್ರಮ್] ಅದ್ಭುತ ಧನವು [ಅವಿಡ್ಢಿ] ವ್ಯಾಪ್ತವಾಗಲಿ ಅಂದರೆ ಎಲ್ಲ ರೀತಿ ತಿಳಿಯಲಿ ಮತ್ತು [ನಃ] ನಮಗೆ [ವಾಜೇಭಿಃ] ಅನ್ನಾದಿ ಸಾಮಗ್ರಿಗಳಿಂದ [ವಾಜಸಾತೌ] ಸಂಗ್ರಾಮಗಳಲ್ಲಿ [ಆದರ್ಷಿ] ಆದರಯುಕ್ತಗಳಾಗಲಿ.

ಭಾವಾರ್ಥ:- ಯಾವನೇ ಸೇನಾಧ್ಯಕ್ಷನು ಬುದ್ಧಿವಂತರ ಸಹಾಯದ ಹೊರತು ಶತ್ರುಗಳನ್ನು ಗೆಲ್ಲಲಾರನು.

ಈ ಸೂಕ್ತದಲ್ಲಿ ಬುದ್ಧಿವಂತರ ಕೆಲಸ ಮತ್ತು ಗುಣಗಳ ವರ್ಣನೆ ಇದೆ. ಆದರಿಂದ ಈ ಸೂಕ್ತಾರ್ಥಕ್ಕೂ ಹಿಂದಿನ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಹತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೧೧೧

ಮಂತ್ರಸಂಖ್ಯೆ ೫ । ಋಷಿಃ-ಕುತ್ಸ ಆಂಗಿರಸಃ । ದೇವತಾ-ಋಭವಃ । ಛಂದಃ-ಜಗತೀ, ೫ ತ್ರಿಷ್ಟುಪ್ । ಸ್ವರಃ-ಧೈವತಃ.

ಇದರ ಮೊದಲ ಮಂತ್ರದಲ್ಲಿ ಶಿಲ್ಪ ವಿದ್ಯೆಯಲ್ಲಿ ಚತುರರಾದ ಬುದ್ಧಿವಂತರು ಏನು ಮಾಡಬೇಕು ಎಂಬ ಉಪದೇಶವನ್ನು ಮಾಡಿದೆ.

ತಕ್ಷನ್ ರಥಂ ಸುವೃತಂ ವಿದ್ಮನಾಪಸ-ಸ್ತಕ್ಷನ್ ಹರೀ ಇಂದ್ರವಾಹಾ ವೃಷಣ್ವಸೂ । ತಕ್ಷನ್
ಪಿತೃಭ್ಯಾಮೃಭವೋ ಯುವದ್ ವಯ-ಸ್ತಕ್ಷನ್ ವತ್ಸಾಯ ಮಾತರಂ ಸಚಾಭುವಮ್ ॥೧॥

ಪದಾರ್ಥ:- ಈಗ [ಪಿತೃಭ್ಯಾಮ್] ಸ್ವಾಮಿ ಮತ್ತು ಶಿಕ್ಷಣ ಮಾಡುವವನಿಂದ ಕೂಡಿದವರು [ವಿದ್ಮನಾಪಸಃ] ಯಾರಲ್ಲಿ ಅತಿವಿಚಾರಯುಕ್ತ ಕಾರ್ಯಗಳಿವೆಯೋ, ಅವರು [ಋಭವಃ] ಕ್ರಿಯೆಗಳಿಂದ ಕೂಡಿದ ಮೇಧಾವೀ ಜನರು [ವೃಷಣ್ವಸೂ] ಯಾರಲ್ಲಿ ವಿದ್ಯೆ ಮತ್ತು ಶಿಲ್ಪಕ್ರಿಯೆಗಳ ಬಲದಿಂದ ಕೂಡಿದ ಮನುಷ್ಯರು ನಿವಾಸ ಮಾಡುವರೋ - ಮಾಡಿಸುವರೋ, [ಹರೀ] ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಶೀಘ್ರವಾಗಿ ಕಳುಹಿಸುವಂತಹ ಹಾಗೂ [ಇಂದ್ರವಾಹಾ] ಪರಮೈಶ್ವರ್ಯವನ್ನು ಪ್ರಾಪ್ತ ಮಾಡಿಸುವ ಜಲ ಮತ್ತು ಅಗ್ನಿಗಳನ್ನು [ತಕ್ಷನ್] ಅತಿ ಸೂಕ್ಷ್ಮ ಕ್ರಿಯೆಗಳಿಂದ ಮಾಡಿರಿ ಅಥವಾ [ವಯಃ] ಆಯಸ್ಸನ್ನು [ತಕ್ಷನ್] ಹೆಚ್ಚಿಸಿರಿ. [ವತ್ಸಾಯ] ಸಂತಾನಕ್ಕಾಗಿ [ಸಚಾಭುವಮ್] ವಿಶೇಷ ಜ್ಞಾನದ ಭಾವನೆಯನ್ನು ಮಾಡಿಸುತ್ತಾ [ಮಾತರಮ್] ತಾಯಿಯ [ಯುವತ್] ಜೊತೆ ಹೇಗಾಗುವುದೋ ಹಾಗೆ [ತಕ್ಷನ್] ಅದಕ್ಕೆ ಉನ್ನತಿ ಸಿಗಲಿ, ಅವರು ಅಧಿಕ ಐಶ್ವರ್ಯವನ್ನು ಪಡೆಯಲಿ.

ಭಾವಾರ್ಥ:- ವಿದ್ವಾಂಸರು ಎಲ್ಲಿಯವರೆಗೂ ಈ ಪ್ರಪಂಚದಲ್ಲಿನ ಕಾರ್ಯಗಳನ್ನು ದರ್ಶಿಸಿ, ಅವುಗಳ ಗುಣಗಳನ್ನು ಪರೀಕ್ಷಿಸಿ, ತಿಳಿದುಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಶಿಲ್ಪವಿದ್ಯೆಗಳನ್ನು ಸಿದ್ಧಗೊಳಿಸಲಾರರು.

ಮತ್ತೆ ಅವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಆ ನೋ ಯಜ್ಞಾಯ ತಕ್ಷತ ಋಭುಮದ್ವಯಃ ಕ್ರತ್ವೇ ದಕ್ಷಾಯ ಸುಪ್ರಜಾವತೀಮಿಷಮ್ ।
ಯಥಾ ಕ್ಷಯಾಮ ಸರ್ವವೀರಯಾ ವಿಶಾ ತನ್ನಃ ಶರ್ಧಾಯ ಧಾಸಥಾ ಸ್ವಿಂದ್ರಿಯಮ್ ॥೨॥

ಪದಾರ್ಥ:- ಹೇ ಬುದ್ಧಿವಂತರೇ! ನೀವು [ನಃ] ನಮ್ಮ [ಯಜ್ಞಾಯ] ಯಾವುದರಿಂದ ಒಂದು ಇನ್ನೊಂದರೊಳಗೆ ಬೆರೆಸಲ್ಪಡುತ್ತದೋ, ಆ ಶಿಲ್ಪಕ್ರಿಯೆಯ ಸಿದ್ಧಿಗಾಗಿ ಅಥವಾ [ಕ್ರತ್ವೇ] ಉತ್ತಮ ಜ್ಞಾನ ಮತ್ತು ನ್ಯಾಯದ ಕಾರ್ಯ ಮತ್ತು [ದಕ್ಷಾಯ] ಬಲಕ್ಕಾಗಿ [ಋಭುಮತ್] ಯಾವನಲ್ಲಿ ಪ್ರಶಂಸಿತವಾದ ಮೇಧಾವಿತನ ಅಂದರೆ ಬುದ್ಧಿವಂತರು ಇರುವರೋ ಆ [ವಯಃ] ಜೀವನ ಹಾಗೂ [ಸುಪ್ರಜಾವತೀಮ್] ಯಾವುದರಲ್ಲಿ ಉತ್ತಮ ಜನರಿರುವರೋ, ಅಂದರೆ ಪ್ರಜೆಗಳು ಪ್ರಸನ್ನರಾಗುವರೋ, [ಇಷಮ್] ಆ ಬಯಸುತ್ತಿರುವ ಅನ್ನವನ್ನು [ಆತಕ್ಷತ] ಉತ್ತಮವಾಗಿ ಉತ್ಪಾದಿಸಲಿ. [ಯಥಾ] ಹೇಗೆ ನಾವು [ಸರ್ವವೀರಯಾ] ಸಮಸ್ತ ವೀರರಿಂದ ಕೂಡಿದ [ವಿಶಾ] ಪ್ರಜೆಗಳೊಂದಿಗೆ [ಕ್ಷಯಾಮ] ನಿವಾಸ ಮಾಡಲಿ. ನೀವು ಕೂಡ ಪ್ರಜೆಗಳೊಂದಿಗೆ ನಿವಾಸ ಮಾಡಿರಿ. ಅಥವಾ ಹೇಗೆ ನಾವು [ಶರ್ಧಾಯ] ಬಲಕ್ಕಾಗಿ [ತತ್] ಆ [ಸು, ಇಂದ್ರಿಯಮ್] ಉತ್ತಮ ವಿಜ್ಞಾನ ಮತ್ತು ಧನದ ಧಾರಣ ಮಾಡಲಿ. ಹಾಗೆ ನೀವು ಕೂಡ [ನಃ] ನಮ್ಮ ಬಲಕ್ಕಾಗಿ ಉತ್ತಮ ಜ್ಞಾನ ಮತ್ತು ಧನವನ್ನು [ಧಾಸಥ] ಧಾರಣ ಮಾಡಿರಿ.

ಭಾವಾರ್ಥ:- ಈ ಪ್ರಪಂಚದಲ್ಲಿ ವಿದ್ವಾಂಸರೊಡನೆ ಅವಿದ್ವಾಂಸರೂ ಮತ್ತು ಅವಿದ್ವಾಂಸರೊಡನೆ ವಿದ್ವಾಂಸರೂ ಪ್ರೀತಿಯಿಂದ ಯಾವಾಗಲೂ ಇರಬೇಕು. ಹೀಗೆ ನಡೆಯದಿದ್ದಲ್ಲಿ ಶಿಲ್ಪವಿದ್ಯೆಯ ಸಿದ್ಧಿ, ಉತ್ತಮ ಬುದ್ಧಿ, ಬಲ ಮತ್ತು ಶ್ರೇಷ್ಠ ಪ್ರಜೆಗಳು ಎಂದಿಗೂ ಆಗುವುದಿಲ್ಲ.

ಮತ್ತೆ ಅವರು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ಆ ತಕ್ಷತ ಸಾತಿಮಸ್ಮಭ್ಯಮೃಭವಃ ಸಾತಿಂ ರಥಾಯ ಸಾತಿಮರ್ವತೇ ನರಃ । ಸಾತಿಂ ನೋ
ಜೈತ್ರೀಂ ಸಂ ಮಹೇತ ವಿಶ್ವಹಾ ಜಾಮಿಮಜಾಮಿಂ ಪೃತನಾಸು ಸಕ್ಷಣಿಮ್ ॥೩॥

ಪದಾರ್ಥ:- ಹೇ [ಋಭವಃ] ಶಿಲ್ಪಕ್ರಿಯೆಗಳಲ್ಲಿ ಅತಿ ಚತುರರಾದ [ನರಃ] ಮಾನವರೇ! ನೀವು [ಅಸ್ಮಭ್ಯಮ್] ನಮಗಾಗಿ [ವಿಶ್ವಹಾ] ಪ್ರತಿದಿನ [ರಥಾಯ] ವಿಮಾನ ಮೊದಲಾದ ಯಾವ ಸಮೂಹಗಳ ಸಿದ್ಧಿಗಾಗಿ [ಸಾತಿಮ್] ಬೇರೆ ವಿಭಾಗ ಮಾಡಬೇಕು ಮತ್ತು [ಅವತೇ] ಉತ್ತಮ ಅಶ್ವಗಳಿಗಾಗಿ [ಸಾತಿಮ್] ಬೇರೆ ಬೇರೆ ಕುದುರೆಗಳ ಶಿಕ್ಷಣವನ್ನು [ಆ ತಕ್ಷತ] ಎಲ್ಲ ಪ್ರಕಾರಗಳಿಂದ ಸಿದ್ಧಗೊಳಿಸಿರಿ. ಮತ್ತು [ಪೃತನಾಸು] ಸೇನೆಗಳಲ್ಲಿ [ಸಾತಿಮ್] ವಿದ್ಯೆ ಮೊದಲಾದ ಉತ್ತಮೋತ್ತಮ ಪದಾರ್ಥಗಳನ್ನು ಅಥವಾ [ಜಾಮಿಮ್] ಪ್ರಸಿದ್ಧವಾದ ಮತ್ತು [ಅಜಾಮಿಮ್] ಅಪ್ರಸಿದ್ಧವಾದ [ಸಕ್ಷಣಿಮ್] ಸಹನೆಯಿಂದ ಶತ್ರುಗಳನ್ನು ಗೆಲ್ಲುವ [ನಃ] ನಮಗಾಗಿ [ಜೈತ್ರೀಮ್] ಗೆಲುವನ್ನು ಕೊಡುವ [ಸಾತಿಮ್] ಉತ್ತಮ ಭಕ್ತಿಯನ್ನು [ಸಮ್ ಮಹೇತ] ಉತ್ತಮವಾಗಿ ಪ್ರಶಂಸಿತಪಡಿಸಿರಿ.

ಭಾವಾರ್ಥ:- ಯಾವ ವಿದ್ವಾಂಸರು ನಮ್ಮ ರಕ್ಷಣೆ ಮಾಡುವರೋ ಮತ್ತು ಶತ್ರುಗಳನ್ನು ಗೆಲ್ಲುವರೋ, ಅವರ ಸತ್ಕಾರವನ್ನು ನಾವು ನಿರಂತರ ಮಾಡುವಂತಹವರಾಗಲಿ.

ಇವರನ್ನು ಯಾವುದಕ್ಕಾಗಿ ನಾವು ಸತ್ಕರಿಸಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಋಭುಕ್ಷಣಮಿಂದ್ರಮಾ ಹುವ ಉತಯ ಋಭೂನ್ ವಾಜಾನ್ ಮರುತಃ ಸೋಮಪೀತಯೇ ।
ಉಭಾ ಮಿತ್ರಾವರುಣಾ ನೂನಮಶ್ವಿನಾ ತೇ ನೋ ಹಿನ್ವಂತು ಸಾತಯೇ ಧಿಯೇ ಜಿಷೇ ॥೪॥

ಪದಾರ್ಥ:- ನಾನು [ಊತಯೇ] ರಕ್ಷಣೆ ಮೊದಲಾದ ವ್ಯವಹಾರಗಳಿಗಾಗಿ [ಋಭುಕ್ಷಣಮ್] ಯಾವನು ಬುದ್ಧಿವಂತರನ್ನುಪಾಸಿಸುವನೋ, ಅಥವಾ ವಾಸಿಸುವಂತೆ ಮಾಡುವನೋ, ಆ [ಇಂದ್ರಮ್] ಪರಮೈಶ್ವರ್ಯಯುಕ್ತ ಉತ್ತಮ ಬುದ್ಧಿವಂತನನ್ನು [ಆಹುವೇ] ಉತ್ತಮ ರೀತಿಯಿಂದ ಸ್ವೀಕರಿಸುತ್ತೇನೆ. ನಾನು [ಸೋಮಪೀತಯೇ] ಪದಾರ್ಥಗಳಿಂದ ತೆಗೆದ ರಸವನ್ನು ಕುಡಿಯುವ ಯಜ್ಞಕ್ಕಾಗಿ [ವಾಜಾನ್] ಯಾವನು ಅತಿ ಜ್ಞಾನವಂತನೋ, [ಮರುತಃ] ಮತ್ತು ಋತು-ಋತುಗಳಲ್ಲಿ ಅಂದರೆ ಸಮಯ-ಸಮಯಗಳಲ್ಲಿ ಯಜ್ಞ ಮಾಡುವ ಅಥವಾ ಮಾಡಿಸುವ [ಋಭೂನ್] ಋತ್ವಿಜನಿರುವನೋ, ಆ ಬುದ್ಧಿವಂತರನ್ನು ಸ್ವೀಕರಿಸುತ್ತೇನೆ. ನಾನು [ಉಭಾ] ಇಬ್ಬರನ್ನೂ [ಮಿತ್ರಾವರುಣ] ಎಲ್ಲರ ಮಿತ್ರ, ಎಲ್ಲರಿಗಿಂತ ಶ್ರೇಷ್ಠರಾದ [ಅಶ್ವಿನಾ] ಸಮಸ್ತ ಉತ್ತಮೋತ್ತಮ ಗುಣಗಳಲ್ಲಿರುವವರು, ಓದಿಸುವ ಮತ್ತು ಓದುವವರನ್ನು ಸ್ವೀಕರಿಸುತ್ತೇನೆ. ಯಾವ [ಧಿಯೇ] ಉತ್ತಮ ಬುದ್ಧಿಯನ್ನು ಪಡೆಯುವುದಕ್ಕಾಗಿ [ಸಾತಯೇ] ಅಥವಾ ಹಂಚುವಿಕೆ ಮೊದಲಾದವುಗಳಿಗಾಗಿ ಅಥವಾ [ಜಿಷೇ] ಶತ್ರುಗಳನ್ನು ಗೆಲ್ಲಲು [ನಃ] ನಮ್ಮ ಜನರಿಗೆ ತಿಳಿಸಲು ಅಥವಾ ವೃದ್ಧಿಸಲು ಸಮರ್ಥರೋ [ತೇ] ಆ ವಿದ್ವಾಂಸರು ನಮಗೆ [ನೂನಮ್] ಒಂದೇ ನಿಶ್ಚಯದಿಂದ [ಹಿನ್ವನ್ತು] ವೃದ್ಧಿಸಲಿ ಮತ್ತು ತಿಳಿಸಲಿ.

ಭಾವಾರ್ಥ:- ಯಾರು ಶಾಸ್ತ್ರಗಳಲ್ಲಿ ದಕ್ಷರೂ, ಸತ್ಯವಾದಿಯೂ, ಕ್ರಿಯೆಗಳಲ್ಲಿ ಅತಿಚತುರರೂ ಮತ್ತು ವಿದ್ವಾಂಸರ ಸೇವೆ ಮಾಡುತ್ತಾರೋ, ಅವರು ಉತ್ತಮ ಬುದ್ಧಿಯನ್ನು ಪಡೆಯುವರು ಮತ್ತು ಶತ್ರುಗಳನ್ನು ಜಯಿಸಿದಾಗ ಉನ್ನತಿಯನ್ನು ಹೇಗೆ ತಾನೆ ಪಡೆಯಲಾರರು?

ಮತ್ತೆ ಆ ಮೇಧಾವಿಗಳಾದ ಶ್ರೇಷ್ಠರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಋಭುರ್ಭರಾಯ ಸಂ ಶಿಶಾತು ಸಾತಿಂ ಸಮರ್ಯಜಿದ್ವಾಜೋ ಅಸ್ಮಾ ಅವಿಷ್ಟು । ತನ್ನೋ
ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೫॥

ಪದಾರ್ಥ:- ಹೇ ಮೇಧಾವಿ! **[ಸಮರ್ಯಜಿತ್]** ಸಂಗ್ರಾಮಗಳನ್ನು ಗೆಲ್ಲುವವನೇ! **[ಋಭುಃ]** ಪ್ರಶಂಸೆಯುಳ್ಳ ವಿದ್ವಾಂಸನೇ! **[ವಾಜಃ]** ವೇಗಾದಿ ಗುಣಯುಕ್ತನಾದ ನೀನು **[ಭರಾಯ]** ಸಂಗ್ರಾಮಕ್ಕಾಗಿ ಬಂದ ಶತ್ರುಗಳನ್ನು **[ಸಂಶಿಶಾತು]** ಉತ್ತಮವಾಗಿ ನಾಶಗೊಳಿಸು. **[ಅಸ್ಮಾನ್]** ನಮ್ಮನ್ನು **[ಅವಿಷ್ಟು]** ರಕ್ಷಿಸು. ಹೇಗೆಂದರೆ **[ನಃ]** ನಮಗಾಗಿ ಯಾವ **[ಮಿತ್ರಃ]** ಮಿತ್ರನು **[ವರುಣಃ]** ಉತ್ತಮಗುಣವುಳ್ಳವನು **[ಅದಿತಿಃ]** ವಿದ್ವಾಂಸನು **[ಸಿಂಧುಃ]** ಸಮುದ್ರವು **[ಪೃಥಿವೀ]** ಪೃಥಿವಿಯು **[ಉತ]** ಮತ್ತು **[ದ್ಯೌಃ]** ಸೂರ್ಯನ ಪ್ರಕಾಶವು **[ಮಾಮಹನ್ತಾಮ್]** ಸಿದ್ಧಗೊಳಿಸಲಿ, ಉನ್ನತಿಯನ್ನು ಕೊಡಲಿ. ಹಾಗೆಯೇ ನೀನೂ **[ತತ್]** ಆ **[ಸಾತಿಮ್]** ಪದಾರ್ಥಗಳನ್ನು ಬೇರೆ ಬೇರೆ ಮಾಡಲು ನಮಗಾಗಿ ಸಿದ್ಧಗೊಳಿಸು.

ಭಾವಾರ್ಥ:- ವಿದ್ವಾಂಸರಿಗೆ ಇದೇ ಮುಖ್ಯಕಾರ್ಯವಾಗಿದೆ. ಯಾವುದೆಂದರೆ ಯಾವ ಜಿಜ್ಞಾಸುಗಳು ಅಂದರೆ ಜ್ಞಾನವನ್ನು ಬಯಸುವವರು, ವಿದ್ಯೆಯನ್ನು ಓದದಿದ್ದರೂ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಮತ್ತು ವಿದ್ಯಾ ದಾನವನ್ನು ಹೆಚ್ಚಿಸಲಿ. ಹೇಗೆ ಮಿತ್ರ ಮೊದಲಾದ ಸಜ್ಜನರು ಅಥವಾ ಪ್ರಾಣ ಮಾಡಲಾದ ಪವನವು ಎಲ್ಲರ ವೃದ್ಧಿಯನ್ನು ಮಾಡಿ ಅವರನ್ನು ಸುಖಪಡಿಸುವಂತೆ ವಿದ್ವಾಂಸರು ಕೂಡ ತಮ್ಮ ವರ್ತನೆಯನ್ನಿಟ್ಟುಕೊಳ್ಳಬೇಕು.

ಈ ಸೂಕ್ತದಲ್ಲಿ ಬುದ್ಧಿವಂತರ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆಯೆಂದು ತಿಳಿಯಬೇಕು.

ನೂರ ಹನ್ನೊಂದನೆಯ ಸೂಕ್ತ ಸಮಾಪ್ತ

ಸೂಕ್ತ ೧೧೨

ಮಂತ್ರಸಂಖ್ಯೆ ೨೫ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಅಶ್ವಿನೌ, ೧ ಆದ್ಯಪಾದಸ್ಯ ದ್ಯಾವಾಪೃಥಿವ್ಯೌ, ದ್ವಿತೀಯಪಾದಸ್ಯ ಅಗ್ನಿಃ, । ಛಂದಃ - ಜಗತೀ । ೨೪-೨೫ ತ್ರಿಷ್ಟುಪ್ । ಸ್ವರಃ - ೩, ೫, ೨೪, ೧೭, ೨೫ ಧೈವತಃ, ನಿಷಾಧಃ.

ಮೊದಲ ಮಂತ್ರದಲ್ಲಿ ಸೂರ್ಯ ಮತ್ತು ಭೂಮಿಯ ವರ್ಣನೆ ಮಾಡಿದೆ.

ಈಳೇ ದ್ಯಾವಾಪೃಥಿವೀ ಪೂರ್ವಚಿತ್ತಯೇಽಗ್ನಿಂ ಘರ್ಮಂ ಸುರುಚಂ ಯಾಮನ್ನಿಷ್ಟಯೇ ।
ಯಾಭಿರ್ಭರೇ ಕಾರಮಂಶಾಯ ಜಿನ್ವಥ-ಸ್ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧॥

ಪದಾರ್ಥ:- ಹೇ **[ಅಶ್ವಿನಾ]** ವಿದ್ಯೆಗಳಲ್ಲಿ ವ್ಯಾಪ್ತರಾಗುವ ಅಧ್ಯಾಪಕೋಪದೇಶಕರೇ! ತಾವು ಹೇಗೆ **[ಯಾಮನ್]** ಮಾರ್ಗದಲ್ಲಿ **[ಪೂರ್ವ ಚಿತ್ತಯೇ]** ಪೂರ್ವವಿದ್ವಾಂಸರು ವಂಚಿತಗೊಳಿಸಿದ **[ಇಷ್ಟಯೇ]** ಅಭೀಷ್ಟ ಸುಖಕ್ಕಾಗಿ **[ದ್ಯಾವಾ ಪೃಥಿವೀ]** ಸೂರ್ಯನ ಪ್ರಕಾಶ ಮತ್ತು ಭೂಮಿ **[ಯಾಭಿಃ]** ಯಾವ **[ಊತಿಭಿಃ]** ರಕ್ಷಣೆಗಳಿಂದ ಕೂಡಿದ **[ಭರೇ]** ಸಂಗ್ರಾಮದಲ್ಲಿ **[ಘರ್ಮಮ್]** ಪ್ರತಾಪಯುಕ್ತ **[ಸುರುಚಮ್]** ಚೆನ್ನಾಗಿ ಪ್ರದೀಪ್ತವಾದ ಮತ್ತು ರುಚಿಕಾರಕವಾದ **[ಅಗ್ನಿಮ್]** ವಿದ್ಯುತ್ ರೂಪ ಅಗ್ನಿಯನ್ನು ಪಡೆಯುತ್ತವೋ, ಹಾಗೆ **[ತಾಭಿಃ]** ಆ ರಕ್ಷಣೆಗಳಿಂದ **[ಅಂಶಾಯ]** ಭಾಗಕ್ಕಾಗಿ **[ಕಾರಮ್]** ಯಾವುದರಲ್ಲಿ ಕ್ರಿಯೆಯನ್ನು ಮಾಡುವುದೋ, ಆ ವಿಷಯವನ್ನು **[ಸು ಜಿನ್ವಥಃ]** ಉತ್ತಮತೆಯಿಂದ ಪಡೆಯುತ್ತವೆ. **[ಉ]** ಆಗ ಕಾರ್ಯಸಿದ್ಧಿಗಾಗಿ **[ಆ ಗತಮ್]** ಸದಾ ಬರಲಿ, ಈ ಹೇತುವಿನಿಂದ ನಾನು **[ಈಳೇ]** ತಮ್ಮ ಸ್ತುತಿಯನ್ನು ಮಾಡುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ಹೇಗೆ ಪ್ರಕಾಶಯುಕ್ತವಾದ ಸೂರ್ಯಾದಿಗಳು ಮತ್ತು ಅಂಧಕಾರಯುಕ್ತವಾದ ಭೂಮಿ ಮೊದಲಾದ ಲೋಕಗಳು ಎಲ್ಲ ಮನೆಗಳು ಮುಂತಾದವುಗಳ ನಿರ್ಮಾಣ ಮತ್ತು ಆಧಾರಗಳಿಗಾಗಿರುತ್ತವೋ ಮತ್ತು ವಿದ್ಯುತ್ತಿನೊಂದಿಗೆ ಸಂಬಂಧ ಹೊಂದಿ ಧಾರಣೆ ಮಾಡುವವು ಆಗಿರುತ್ತವೋ, ಹಾಗೆಯೇ ನೀವೂ ಕೂಡ ಪ್ರಜೆಗಳಲ್ಲಿ ವರ್ತಿಸಿ.

ಈಗ ಓದುವವರ ಮತ್ತು ಉಪದೇಶ ಮಾಡುವವರ ವಿಷಯವನ್ನು ಹೇಳಲಾಗಿದೆ.

ಯುವೋರ್ದಾನಾಯ ಸುಭರಾ ಅಸಶ್ಚತೋ ರಥಮಾ ತಸ್ಥುರ್ವಚಸಂ ನ ಮಂತವೇ ।
ಯಾಭಿರ್ಧಿಯೋಽವಥಃ ಕರ್ಮನ್ನಿಷ್ಟಯೇ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೨॥

ಪದಾರ್ಥ:- ಹೇ **[ಅಶ್ವಿನಾ]** ಓದಿಸುವ ಮತ್ತು ಉಪದೇಶ ಮಾಡುವ ವಿದ್ವಾಂಸರೇ! **[ಸುಭರಾಃ]** ಯಾವವು ಧಾರಣ ಪೋಷಣೆಗಳನ್ನು ಮಾಡುತ್ತಾ ಅತ್ಯಾನಂದವನ್ನು ಸಿದ್ಧಗೊಳಿಸುವ ಅಥವಾ **[ಅಸಶ್ಚತಃ]** ಕೆಟ್ಟ ಕೆಲಸಗಳಿಗೆ ಮತ್ತು ಕುಸಂಗಗಳಿಗೆ ಹೋಗದ ಸಜ್ಜನರು **[ಮನ್ತವೇ]** ವಿಶೇಷವಾಗಿ ತಿಳಿಯಲು **[ವಚಸಂ ನ]** ಎಲ್ಲರಿಂದ ಹೊಗಳಲ್ಪಡುವ ವಿದ್ವಾಂಸನನ್ನು ಪಡೆಯುವಂತೆ **[ಯುವೋಃ]** ನಿಮ್ಮ **[ರಥಮ್]** ವಿಮಾನ ಮೊದಲಾದ ಯಾನಗಳನ್ನು **[ಆ ತಸ್ಥುಃ]** ಉತ್ತಮ ರೀತಿಯಿಂದ ಪಡೆದು ಸ್ಥಿರವಾಗುವಂತೆ ಅವರೊಡನೆ **[ಉ]** ಮತ್ತು **[ಯಾಭಿಃ]** ಯಾರಿಂದ **[ಧಿಯಃ]** ಉತ್ತಮ ಬುದ್ಧಿಗಳನ್ನು **[ಕರ್ಮನ್]** ಕಾರ್ಯಗಳ ಮಧ್ಯೆ **[ಇಷ್ಟಯೇ]** ಬಯಸುತ್ತಾ ಸುಖಕ್ಕಾಗಿ **[ಅವಥಃ]** ರಕ್ಷಿಸುವರೋ **[ತಾಭಿಃ]** ಅವುಗಳನ್ನು **[ಊತಿಭಿಃ]** ರಕ್ಷಣೆಗಳೊಂದಿಗೆ ನೀವು **[ದಾನಾಯ]** ಸುಖವನ್ನು ಕೊಡುವುದಕ್ಕಾಗಿ ನಮ್ಮ ಕಡೆ **[ಸು ಆ ಗತಮ್]** ಉತ್ತಮ ರೀತಿಯಿಂದ ಬನ್ನಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮನುಷ್ಯರೇ! ಯಾರು ನಿಮಗೆ ಉತ್ತಮ ಬುದ್ಧಿಯನ್ನುಂಟುಮಾಡುವರೋ ಅವರನ್ನು ಎಲ್ಲ ರೀತಿಯಿಂದ ರಕ್ಷಿಸಿರಿ. ಹೇಗೆ ತಾವು ಅವರ ಸೇವೆಯನ್ನು ಮಾಡಿರುವಿರೋ, ಹಾಗೆಯೇ ಅವರೂ ಕೂಡ ನಿಮಗೆ ಶುಭವಿದ್ಯೆಗಳ ಬೋಧೆಯನ್ನು ಮಾಡಲಿ.

ಮತ್ತೆ ಅದೇ ವಿಷಯ.

ಯುವಂ ತಾಸಾಂ ದಿವ್ಯಸ್ಯ ಪ್ರಶಾಸನೇ ವಿಶಾಂ ಕ್ಷಯಥೋ ಅಮೃತಸ್ಯ ಮಜ್ಮನಾ ।
ಯಾಭಿರ್ಧೇನುಮಸ್ವಂ ಪಿನ್ವಥೋ ನರಾ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೩॥

ಪದಾರ್ಥ:- ಹೇ **[ನರಾ]** ವಿದ್ಯಾವ್ಯವಹಾರಗಳಲ್ಲಿ ಪ್ರಧಾನರಾದ **[ಅಶ್ವಿನಾ]** ಅಧ್ಯಾಪಕೋಪದೇಶಕರೇ! **[ಯುವಮ್]** ನೀವಿರ್ವರೂ **[ದಿವ್ಯಸ್ಯ]** ಅತ್ಯಂತ ಶುದ್ಧವೂ **[ಅಮೃತಸ್ಯ]** ನಾಶರಹಿತವೂ ಆದ ಪರಮಾತ್ಮನ **[ಮಜ್ಮನಾ]** ಅನಂತ ಬಲದೊಂದಿಗೆ ಪರಮಾತ್ಮನ ಸಂಬಂಧದಲ್ಲಿರುವ ಪ್ರಜೆಗಳು **[ತಾಸಾಮ್]** ಆ **[ವಿಶಾಮ್]** ಪ್ರಜೆಗಳಿಗೆ **[ಪ್ರಶಾಸನೇ]** ಶಿಕ್ಷಣ ಕೊಡಲು **[ಕ್ಷಯಥಃ]** ನಿವಾಸ ಮಾಡುವಿರಿ. **[ಉ]** ಮತ್ತು **[ಯಾಭಿಃ]** ಯಾವ **[ಊತಿಭಿಃ]** ರಕ್ಷಣೆಗಳಿಂದ **[ಅಸ್ವಮ್]** ಯಾವುವು ದುಷ್ಟ ಕಾರ್ಯಗಳನ್ನು ಉತ್ಪನ್ನಮಾಡುವುದಿಲ್ಲವೋ, ಅವು **[ಧೇನುಮ್]** ಎಲ್ಲ ಸುಖಗಳನ್ನು ವರ್ಷಿಸುವ ವಾಣಿಯ **[ಪಿನ್ವಥಃ]** ಸೇವನೆ ಮಾಡುತ್ತೀರೋ **[ತಾಭಿಃ]** ಆ ರಕ್ಷಣೆಗಳೊಂದಿಗೆ **[ಸು ಆ ಗತಮ್]** ಉತ್ತಮ ರೀತಿಯಿಂದ ನಮ್ಮ ಕಡೆಗೆ ಬನ್ನಿರಿ.

ಭಾವಾರ್ಥ:- ಯಾರು ಪ್ರಜೆಗಳಿಗೆ ವಿದ್ಯೆ, ಉತ್ತಮ ಶಿಕ್ಷಣ ಮತ್ತು ಸುಖದ ವೃದ್ಧಿಗಾಗಿ ಪ್ರಸನ್ನರಾಗುವರೋ ಮತ್ತು ಅವರ ಶರೀರ ಮತ್ತು ಆತ್ಮಗಳ ಬಲವನ್ನು ನಿತ್ಯವೂ ವೃದ್ಧಿಯಾಗುವಂತೆ ಮಾಡುವರೋ ಅವರೇ ಧನ್ಯ ವಿದ್ವಾಂಸರು.

ಮತ್ತೆ ಅವರೀರ್ವರು ಹೇಗಿರುವರು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಯಾಭಿಃ ಪರಿಜ್ಮಾ ತನಯಸ್ಯ ಮಜ್ಮನಾ ದ್ವಿಮಾತಾ ತೂರ್ಷು ತರಣಿರ್ವಿಭೂಷತಿ ।
ಯಾಭಿಸ್ತ್ರಿಮಂತುರಭವದ್ ವಿಚಕ್ಷಣ-ಸ್ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೪॥

ಪದಾರ್ಥ:- ಹೇ [**ಅಶ್ವಿನಾ**] ವಿದ್ಯೆ ಮತ್ತು ಉಪದೇಶವನ್ನು ಮಾಡುವ ವಿದ್ವಾಂಸರೇ! [**ಯಾಭಿಃ**] ಯಾರಿಂದ [**ದ್ವಿಮಾತಾ**] ಎರಡೂ ಅಗ್ನಿ ಮತ್ತು ಜಲಗಳನ್ನು ಪ್ರಮಾಣ ಪಡಿಸುವವರ [**ತೂರ್ಷು**] ಶೀಘ್ರವಾಗಿ ಮಾಡುವುದರಲ್ಲಿ ನಾನು [**ತರಣಿಃ**] ಧುಮುಕುತ್ತಿರುವಂತೆ ಅತ್ಯಂತ ವೇಗವುಳ್ಳ [**ಪರಿಜ್ಮಾ**] ಸರ್ವತ್ರ ಗಮನ ಮಾಡುವ ವಾಯುವು [**ತನಯಸ್ಯ**] ತನ್ನಲ್ಲಿ ಉತ್ಪನ್ನವಾದ ಅಗ್ನಿಯ [**ಮಜ್ಮನಾ**] ಬಲದಿಂದ [**ಸು ವಿಭೂಷತಿ**] ಉತ್ತಮವಾಗಿ ಶೋಭಿಸುತ್ತಾ [**ಉ**] ಮತ್ತು [**ಯಾಭಿಃ**] ಯಾವುದರಿಂದ [**ತ್ರಿಮಂತುಃ**] ಕರ್ಮ, ಉಪಾಸನೆ ಮತ್ತು ಜ್ಞಾನವಿದ್ಯೆಯನ್ನು ಒಪ್ಪುವವರು [**ವಿಚಕ್ಷಣಃ**] ವಿವಿಧ ಪ್ರಕಾರಗಳಿಂದ ಎಲ್ಲ ವಿದ್ಯೆಗಳನ್ನು ಪ್ರತ್ಯಕ್ಷಗೊಳಿಸುವವರು [**ಅಭವತ್**] ಆಗಲಿ. [**ತಾಭಿಃ**] ಅವರು [**ಊತಿಭಿಃ**] ರಕ್ಷಣಾದಿಗಳ ಸಹಿತ ನಮ್ಮೆಲ್ಲರಿಗೂ ವಿದ್ಯೆಯನ್ನು ಕೊಡಲು [**ಆ ಗತಮ್**] ಪ್ರಾಪ್ತರಾಗಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪ್ರಾಣಕ್ಕೆ ಸಮನಾದ ಪ್ರೀತಿ ಮತ್ತು ಸಂನ್ಯಾಸಿಗಳಂತೆ ಉಪಕಾರ ಮಾಡುವುದರಿಂದ ಎಲ್ಲರಿಗೂ ವಿದ್ಯೆಯ ಉನ್ನತಿ ಮಾಡುವುದು ಮನುಷ್ಯರಿಗೆ ಯೋಗ್ಯವಾಗಿದೆ.

ಮತ್ತೆ ಅವರೀರ್ವರು ಹೇಗಿರುವರು ಎಂಬುದನ್ನು ಇಲ್ಲಿ ತಿಳಿಸಿದೆ.

ಯಾಭೀ ರೇಭಂ ನಿವೃತಂ ಸಿತಮದ್ಭ್ಯ ಉದ್ ವಂದನಮೈರಯತಂ ಸ್ವರ್ದೃಶೇ ।
ಯಾಭಿಃ ಕಣ್ವಂ ಪ್ರ ಸಿಷಾಸಂತಮಾವತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೫॥

ಪದಾರ್ಥ:- [**ಅಶ್ವಿನಾ**] ಹೇ ಅಧ್ಯಾಪಕೋಪದೇಶಕರೇ! ನೀವು [**ಯಾಭಿಃ**] ಯಾವ [**ಊತಿಭಿಃ**] ರಕ್ಷಣಾದಿಗಳಿಂದ [**ಸಿತಮ್**] ಶುದ್ಧಧರ್ಮಯುಕ್ತ [**ನಿವೃತಂ**] ನಿರಂತರ ಸ್ವೀಕರಿಸಲ್ಪಡುವ ಶಾಸ್ತ್ರಬೋಧೆಗಳನ್ನು [**ರೇಭಮ್**] ಸ್ತುತಿ ಮತ್ತು [**ವಂದನಮ್**] ಗುಣಗಳ ಪ್ರಶಂಸೆ ಮಾಡುವವರನ್ನು [**ಸ್ವಃ**] ಸುಖಕ್ಕಾಗಿ [**ದೃಶೇ**] ನೋಡುವ ಅರ್ಥದಲ್ಲಿ [**ಅದ್ಭ್ಯಃ**] ಜಲಗಳಿಂದ [**ಉತ್ ಐರಯತಮ್**] ಪ್ರೇರಣೆ ಮಾಡಿ ಮತ್ತು [**ಯಾಭಿಃ**] ಯಾರಿಂದ [**ಸಿಷಾಂತಮ್**] ವಿಭಾಗ ಮಾಡುವುದನ್ನು ಇಚ್ಛಿಸುವ [**ಕಣ್ವಮ್**] ಬುದ್ಧಿವಂತನಾದ ವಿದ್ವಾಂಸನನ್ನು [**ಪ್ರ ಆವತಮ್**] ರಕ್ಷಿಸಿರಿ. [**ತಾಭಿಃ ಉ**] ಅವೇ ರಕ್ಷಣಾದಿಗಳಿಂದ ನಮ್ಮ ಕಡೆಗೂ [**ಸು ಆ ಗತಮ್**] ಉತ್ತಮವಾಗಿ ಬನ್ನಿರಿ.

ಭಾವಾರ್ಥ:- ಯಾವ ಮನುಷ್ಯರು ವಿದ್ವಾಂಸರನ್ನು ಉತ್ತಮವಾಗಿ ರಕ್ಷಿಸಿ, ಅವರಿಂದ ವಿದ್ಯೆಯನ್ನು ಪಡೆದು, ಜಲಾದಿ ಪದಾರ್ಥಗಳಿಂದ ಶಿಲ್ಪವಿದ್ಯೆಯನ್ನು ಸಿದ್ಧಗೊಳಿಸಿ ವೃದ್ಧಿಸುವರೋ, ಅವರೇ ಎಲ್ಲ ಸುಖಗಳನ್ನು ಪಡೆಯುವರು.

ಮತ್ತೆ ಅವರೀರ್ವರು ಹೇಗಿರುವರು ಎಂಬುದನ್ನು ತಿಳಿಸಿದೆ.

ಯಾಭಿರಂತಕಂ ಜಸಮಾನಮಾರಣೇ ಭುಜ್ಯುಂ ಯಾಭಿರವ್ಯಥಿಭಿರ್ಜಿಜಿನ್ವಥುಃ । ಯಾಭಿಃ
ಕರ್ಕಂಧುಂ ವಯ್ಯಂ ಚ ಜಿನ್ವಥ-ಸ್ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೬॥

ಪದಾರ್ಥ:- ಹೇ [**ಅಶ್ವಿನಾ**] ಸೇನೆ, ಸೇನೆಗಳ ಸ್ವಾಮಿಯಾದ ವಿದ್ವಾಂಸರೇ! ತಾವು [**ಯಾಭಿಃ**] ಯಾವ [**ಊತಿಭಿಃ**] ರಕ್ಷಣಾದಿಗಳಿಂದ [**ಆರಣೇ**] ಎಲ್ಲ ಕಡೆಗಳಿಂದ ಯುದ್ಧವಾಗುವುದರಲ್ಲಿ [**ಅಂತಕಮ್**] ದುಃಖಗಳ ನಾಶ ಮತ್ತು [**ಜಸಮಾನಮ್**] ಶತ್ರುಗಳನ್ನು ಕೊಲ್ಲುತ್ತಿರುವ ಪುರುಷನನ್ನು [**ಯಾಭಿಃ**] ಯಾವ [**ಅವ್ಯಥಿಭಿಃ**] ಪೀಡಾರಹಿತ ಆನಂದಕಾರಕ ರಕ್ಷಣಾದಿಗಳಲ್ಲಿ [**ಭುಜ್ಯುಮ್**] ಪಾಲಿಸುವಂತಹ ಪುರುಷನ [**ಜಿಜಿನ್ವಥುಃ**] ಪ್ರಸನ್ನಗೊಳಿಸುತ್ತಾ [**ತಾಭಿಃ ಉ**] ಅದೇ ರಕ್ಷಣಾದಿಗೊಂದಿಗೆ ನಮ್ಮ ಕಡೆ [**ಸು ಆ ಗತಮ್**] ಉತ್ತಮವಾಗಿ ಬನ್ನಿರಿ.

ಭಾವಾರ್ಥ:- ರಕ್ಷಿಸುವವರ ಮತ್ತು ಅಧಿಷ್ಠಾತೃಗಳ ಹೊರತು ಯೋಧರು ಶತ್ರುಗಳೊಡನೆ ಸಂಗ್ರಾಮದಲ್ಲಿ ಯುದ್ಧಮಾಡಲು ಮತ್ತು ಪ್ರಜೆಗಳನ್ನು ಪಾಲಿಸಲು ಸಮರ್ಥರಾಗುವುದಿಲ್ಲ. ಯಾರು ವ್ಯವಸ್ಥೆಯಿಂದ ವಿದ್ವಾಂಸರ ರಕ್ಷಣೆ ಮಾಡುವುದಿಲ್ಲವೋ, ಅವರು ಪರಾಜಯದ ಪಾಲಾಗುವರು ಹಾಗೂ ರಾಜ್ಯಭಾರ ಮಾಡಲು ಸಮರ್ಥರಾಗಲಾರರು.

ಮತ್ತೆ ಅವರೀರ್ವರೂ ಹೇಗಿರುವರು ಎಂಬುದನ್ನು ತಿಳಿಸಿದೆ.

ಯಾಭಿಃ ಶುಚಂತಿಂ ಧನಸಾಂ ಸುಷಂಸದಂ ತಪ್ತಂ ಘರ್ಮಮೋಮ್ಯಾವಂತಮತ್ರಯೇ ।
ಯಾಭಿಃ ಪೃಶ್ನಿಗುಂ ಪುರುಕುತ್ಸಮಾವತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೭॥

ಪದಾರ್ಥ:- ಹೇ [**ಅಶ್ವಿನಾ**] ಉಪದೇಶ ಮಾಡುವ ಮತ್ತು ಓದಿಸುವವರೇ! ನೀವೀರ್ವರೂ [**ಯಾಭಿಃ**] ಯಾವ [**ಊತಿಭಿಃ**] ರಕ್ಷಣಾದಿಗಳಿಂದ [**ಅತ್ರಯೇ**] ಯಾವುದರಲ್ಲಿ ಆಧ್ಯಾತ್ಮಿಕ, ಆಧಿಭೌತಿಕ, ಮತ್ತು ಆಧಿದೈವಿಕ ದುಃಖವಿಲ್ಲವೋ, ಆ ವ್ಯವಹಾರಗಳಿಗಾಗಿ [**ಶುಚನ್ತಿಮ್**] ಪವಿತ್ರಕಾರಕ [**ಘನಸಾಮ್**] ಧನದ ವಿಭಾಗಕರ್ತನು [**ಸುಷಂಸದಮ್**] ಉತ್ತಮ ಸಭೆಯುಳ್ಳವನು [**ತಪ್ತಮ್**] ಐಶ್ವರ್ಯಯುಕ್ತನು [**ಘರ್ಮಮ್**] ಉತ್ತಮ ಯಜ್ಞವಂತನು [**ಓಮ್ಯಾವನ್ತಮ್**] ರಕ್ಷಕರನ್ನು ಪ್ರಾಪ್ತಿಪಡಿಸುವ ಪ್ರಶಂಸಿತ ಪುರುಷನು ಯಾವನಲ್ಲಿರುವನೋ ಅವನ ಮತ್ತು [**ಯಾಭಿಃ**] ಯಾವ ರಕ್ಷಣಾದಿಗಳಿಂದ [**ಪೃಶ್ನಿಗುಮ್**] ವಿಮಾನಾದಿಗಳಿಂದ ಅಂತರಿಕ್ಷದಲ್ಲಿ ಚಲಿಸುವ [**ಪುರುಕುತ್ಸಮ್**] ಬಹಳ ಶಸ್ತ್ರಾಸ್ತ್ರಯುಕ್ತ ಪುರುಷನನ್ನು [**ಆವತಮ್**] ರಕ್ಷಿಸಿರಿ. [**ತಾಭಿಃ ಉ**] ಅದೇ ರಕ್ಷಣಾದಿಗಳಿಂದ ನಮ್ಮನ್ನು [**ಸು ಆ ಗತಮ್**] ಉತ್ತಮರಾಗಿ ಪ್ರಾಪ್ತರಾಗಿರಿ.

ಭಾವಾರ್ಥ:- ಧರ್ಮಾತ್ಮರ ರಕ್ಷಣೆ ಮತ್ತು ದುಷ್ಟರ ಶಿಕ್ಷೆಗಳಿಂದ ಸತ್ಯವಿದ್ಯೆಗಳನ್ನು ಪ್ರಕಾಶಪಡಿಸುವುದು ವಿದ್ವಾಂಸರಿಗೆ ಯೋಗ್ಯವಾಗಿದೆ.

ಈಗ ಸಭೆ ಮತ್ತು ಸೇನಾಧ್ಯಕ್ಷನು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ಯಾಭಿಃ ಶಚೀಭಿರ್ವೃಷಣಾ ಪರಾವೃಜಂ ಪ್ರಾಂಧಂ ಶ್ರೋಣಂ ಚಕ್ಷಸ ಏತವೇ ಕೃಥಃ ।
ಯಾಭಿರ್ವರ್ತಿಕಾಂ ಗ್ರಸಿತಾಮಮುಂಚತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೮॥

ಪದಾರ್ಥ:- ಹೇ [**ವೃಷಣಾ**] ಸುಖವನ್ನು ವರ್ಷಿಸುವ [**ಅಶ್ವಿನಾ**] ಸಭೆ ಮತ್ತು ಸೇನೆಯ ಅಧ್ಯಕ್ಷರೇ! ನೀವು [**ಯಾಭಿಃ**] ಯಾವ [**ಶಚೀಭಿಃ**] ರಕ್ಷಣಾ ಸಂಬಂಧ ಕಾರ್ಯಗಳು ಮತ್ತು ಪ್ರಜೆಗಳಿಂದ [**ಪರಾವೃಜಮ್**] ವಿರೋಧ ಮಾಡುವ [**ಅಂಧಮ್**] ಅವಿದ್ಯಾಂಧಕಾರಯುಕ್ತ [**ಶ್ರೋಣಮ್**] ಕಿವುಡನಂತಿರುವ ಪುರುಷನನ್ನು [**ಚಕ್ಷಸೇ**] ವಿದ್ಯೆಯಿಂದ ಕೂಡಿದ ವಾಣಿಯ ಪ್ರಕಾಶಕ್ಕಾಗಿ [**ಏತವೇ**] ಶುಭ ವಿದ್ಯೆಗಳನ್ನು ಪಡೆಯಲು [**ಪ್ರ ಕೃಥಃ**] ಉತ್ತಮ ಯೋಗ್ಯರನ್ನಾಗಿ ಮಾಡಿ ಮತ್ತು [**ಯಾಭಿಃ**] ಯಾವ ರಕ್ಷಣಾದಿಗಳಿಂದ [**ಗ್ರಸಿತಾಮ್**] ತೆಗೆಯಲ್ಪಟ್ಟ [**ವರ್ತಿಕಾಮ್**] ಗುಬ್ಬಚ್ಚಿಯಂತೆ ಪ್ರಜೆಗಳನ್ನು ದುಃಖಗಳಿಂದ [**ಅಮುಂಚತಮ್**] ಬಿಡಿಸಿರಿ. [**ತಾಭಿಃ ಉ**] ಅವೇ ರಕ್ಷಣಾದಿಗಳಿಂದ ನಮ್ಮನ್ನು [**ಸು ಆ ಗತಮ್**] ಉತ್ತಮವಾಗಿ ಪ್ರಾಪ್ತರಾಗಿರಿ.

ಭಾವಾರ್ಥ:- ತನ್ನ ವಿದ್ಯೆ ಮತ್ತು ಧರ್ಮದ ಆಶ್ರಯದಿಂದ ಪ್ರಜೆಗಳ ವಿದ್ಯೆ ಮತ್ತು ವಿನಯಗಳನ್ನು ಪ್ರಚಾರ ಮಾಡಿ ಅವಿದ್ಯೆ ಮತ್ತು ಅಧರ್ಮದ ನಿವಾರಣೆ ಮಾಡಿ ಎಲ್ಲ ಪ್ರಾಣಿಗಳಿಗೂ ಅಭಯದಾನವನ್ನು ನಿರಂತರ ಮಾಡುವುದು ಸಭೆ ಮತ್ತು ಸೇನೆಗಳ ಅಧಿಪತಿಗಳಿಗೆ ಯೋಗ್ಯವಾಗಿದೆ.

ಮತ್ತೆ ಅವರೀರ್ವರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಯಾಭಿಃ ಸಿಂಧುಂ ಮಧುಮಂತಮಸಶ್ಚತಂ ವಸಿಷ್ಠಂ ಯಾಭಿರಜರಾವಜಿನ್ವತಮ್ । ಯಾಭಿಃ
ಕುತ್ಸಂ ಶ್ರುತರ್ಯಂ ನರ್ಯಮಾವತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೯॥

ಪದಾರ್ಥ:- ಹೇ [ಅಶ್ವಿನಾ] ವಿದ್ಯೆಯನ್ನು ಕಲಿಸುವ ಮತ್ತು ಉಪದೇಶ ಮಾಡುವವರೇ! [ಅಜರೌ] ಜರಾವಸ್ಥೆ ರಹಿತರಾದ ವಿದ್ವಾಂಸರೇ! ನೀವು [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿಗಳಿಂದ [ಮಧುಮನ್ತಮ್] ಮಧುರಗುಣಯುಕ್ತ [ಸಿಂಧುಮ್] ಸಮುದ್ರವನ್ನು [ಅಸಶ್ಚಿತಮ್] ತಿಳಿಯಿರಿ ಅಥವಾ [ಯಾಭಿಃ] ಯಾವ ರಕ್ಷಣಾದಿಗಳಿಂದ [ವಸಿಷ್ಠಮ್] ಯಾವನು ಅತ್ಯಂತ ಧರ್ಮಾದಿ ಕರ್ಮಗಳಲ್ಲಿ ವಾಸಿಸುವನೋ ಅವನು [ಅಜಿನ್ವತಮ್] ಪ್ರಸನ್ನಗೊಳಿಸಿರಿ. ಅಥವಾ [ಯಾಭಿಃ] ಯಾರಿಂದ [ಕುತ್ಸಮ್] ವಜ್ರವು ತೆಗೆದುಕೊಳ್ಳಲ್ಪಟ್ಟಿತೋ [ಶ್ರುತರ್ಯಮ್] ಶ್ರವಣದಿಂದ ಅತಿಶ್ರೇಷ್ಠನನ್ನು [ನರ್ಯಮ್] ಮನುಷ್ಯರಲ್ಲಿ ಅತ್ಯುತ್ತಮನನ್ನು [ಆವತಮ್] ರಕ್ಷಿಸಿರಿ. [ತಾಭಿಃ ಉ] ಅವೇ ರಕ್ಷಣಾದಿಗಳೊಂದಿಗೆ ನಮ್ಮ ರಕ್ಷಣೆಗಾಗಿ [ಸ್ವಾಗತಮ್] ಉತ್ತಮವಾಗಿ ಬನ್ನಿರಿ.

ಭಾವಾರ್ಥ:- ಯಜ್ಞವಿಧಿಯಿಂದ ಎಲ್ಲ ಪದಾರ್ಥಗಳನ್ನು ಉತ್ತಮವಾಗಿ ಶೋಧಿಸಿ, ಎಲ್ಲರ ಸೇವೆ ಮತ್ತು ರೋಗಗಳ ನಿವಾರಣೆ ಮಾಡಿ ಯಾವಾಗಲೂ ಸುಖವಾಗಿರುವುದು ಮನುಷ್ಯರಿಗೆ ಯೋಗ್ಯವಾಗಿದೆ.

ಮತ್ತೆ ಅವರೀರ್ವರು ಹೇಗಿರಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಯಾಭಿರ್ವಿಶ್ಪಲಾಂ ಧನಸಾಮಥರ್ವ್ಯಂ ಸಹಸ್ರಮೀಳ್ಹ ಆಜಾವಜಿನ್ವತಮ್ ।
ಯಾಭಿರ್ವಶಮಶ್ವ್ಯಂ ಪ್ರೇಣಿಮಾವತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧೦॥

ಪದಾರ್ಥ:- ಹೇ [ಅಶ್ವಿನಾ] ಸೇನೆಯ ಮತ್ತು ಯುದ್ಧದ ಅಧಿಕಾರಿಗಳೇ! [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿಗಳಿಂದ [ಸಹಸ್ರಮೀಳ್ಹೇ] ಅಸಂಖ್ಯವಾದ ಪರಾಕ್ರಮ ಮೊದಲಾದ ಧನ ಯಾವುದರಲ್ಲಿ ಇದೆಯೋ ಆ [ಆಜೌ] ಸಂಗ್ರಾಮದಲ್ಲಿ [ವಿಶ್ಪಲಾಮ್] ಪ್ರಜೆಗಳನ್ನು ಪಾಲಿಸುವವರನ್ನು ಗ್ರಹಣ ಮಾಡಲು, [ಧನಸಾಮ್] ಮತ್ತು ಪುಷ್ಕಳವಾಗಿ ಧನವನ್ನು ಕೊಡುವ [ಅಥರ್ವ್ಯಂ] ನಷ್ಟವಾಗದಿರುವ ತನ್ನ ಸೇನೆಯನ್ನು [ಅಜಿನ್ವತಮ್] ಪ್ರಸನ್ನಗೊಳಿಸಿರಿ. ಅಥವಾ [ಯಾಭಿಃ] ಯಾವ ರಕ್ಷಣಾದಿಗಳಿಂದ [ವಶಮ್] ಮನೋಹರವೂ [ಪ್ರೇಣಿಮ್] ಮತ್ತು ಶತ್ರುಗಳನ್ನು ನಾಶ ಮಾಡುವುದಕ್ಕಾಗಿ ಪ್ರೇರಣೆಯನ್ನು ಕೊಡಲು ಯೋಗ್ಯವಾದುದು [ಅಶ್ವ್ಯಮ್] ಕುದುರೆಗಳು ಅಥವಾ ಅಗ್ನ್ಯಾದಿ ಪದಾರ್ಥಗಳ ವೇಗಗಳಲ್ಲಿ ಉತ್ತಮ ಪಡಿಸಿದವುಗಳಿಂದ [ಆವತಮ್] ರಕ್ಷಿಸಿರಿ. [ತಾಭಿಃ ಉ] ಅವೇ ರಕ್ಷಣಾದಿಗಳಿಂದ ಪ್ರಜೆಗಳ ಪಾಲನೆಗಾಗಿ [ಸ್ವಾಗತಮ್] ಉತ್ತಮವಾಗಿ ಬನ್ನಿರಿ.

ಭಾವಾರ್ಥ:- ಶರೀರ, ಆತ್ಮದ ಪುಷ್ಟಿ ಮತ್ತು ಉತ್ತಮ ರೀತಿಯ ಶಿಕ್ಷಣಕ್ಕೊಳಪಟ್ಟ ಸೇನೆಯ ಹೊರತು, ಯುದ್ಧದಲ್ಲಿ ವಿಜಯ ಮತ್ತು ವಿಜಯದ ಹೊರತು ಪ್ರಜಾಪಾಲನೆ, ಧನದ ಸಂಚಯ ಮತ್ತು ರಾಜ್ಯದ ವೃದ್ಧಿಯಾಗುವುದು ಸಾಧ್ಯವಿಲ್ಲ ಎಂದು ಮನುಷ್ಯರು ಅವಶ್ಯವಾಗಿ ತಿಳಿಯಬೇಕು.

ಈಗ ಸಭೆ ಮತ್ತು ಸೇನಾಧ್ಯಕ್ಷನು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ಯಾಭಿಃ ಸುದಾನೂ ಔಶಿಜಾಯ ವಣಿಜೇ ದೀರ್ಘಶ್ರವಸೇ ಮಧು ಕೋಶೋ ಅಕ್ಷರತ್ ।
ಕಕ್ಷೀವಂತಂ ಸ್ತೋತಾರಂ ಯಾಭಿರಾವತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧೧॥

ಪದಾರ್ಥ:- ಹೇ [ಸುದಾನೂ] ಉತ್ತಮವಾಗಿ ದಾನ ಮಾಡುವ [ಅಶ್ವಿನಾ] ಅಧ್ಯಾಪಕೋಪದೇಶಕರಾದ ವಿದ್ವಾಂಸರೇ! [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿಗಳಿಂದ [ದೀರ್ಘಶ್ರವಸಾ] ಯಾರಲ್ಲಿ ದೊಡ್ಡ ದೊಡ್ಡ ವಿದ್ಯಾದಿ ಪದಾರ್ಥಗಳು, ಅನ್ನ ಮತ್ತು ಧನವಿರುವುದೋ ಅವರ [ವಣಿಜೇ] ವ್ಯವಹಾರ ಮಾಡುವ [ಓಶಿಜಾಯ] ಉತ್ತಮ ಬುದ್ಧಿವಂತ ಪುತ್ರನಿಗಾಗಿ [ಕೋಶಃ] ಮೇಘವು [ಮಧು] ಮಧುರಗುಣ ಯುಕ್ತಜಲವನ್ನು [ಅಕ್ಷರತ್] ವರ್ಷಿಸುವುದೋ ಅಥವಾ ನೀವು [ಯಾಭಿಃ] ಯಾವ ರಕ್ಷಣಾದಿಗಳಿಂದ [ಕಕ್ಷಿವಂತಮ್] ಉತ್ತಮ ಸಹಾಯದಿಂದ ಕೂಡಿರುವ [ಸ್ತೋತಾರಮ್] ವಿದ್ಯೆಯ ಗುಣಗಳನ್ನು ಪ್ರಶಂಸಿಸುವವರನ್ನು [ಅವತಮ್] ರಕ್ಷಿಸಿರಿ. [ತಾಭಿಃ ಉ] ಅವೇ ರಕ್ಷಣಾದಿಗಳಿಂದ ನಮ್ಮನ್ನು ರಕ್ಷಿಸಲು [ಸ್ವಾಗತಮ್] ಉತ್ತಮವಾಗಿ ಹಾಗೂ ಶೀಘ್ರವಾಗಿ ಬನ್ನಿರಿ.

ಭಾವಾರ್ಥ:- ಯಾರು ದ್ವೀಪ-ದ್ವೀಪಾಂತರಗಳಿಗೆ ಮತ್ತು ದೇಶ-ದೇಶಾಂತರಗಳಿಗೆ ಹೋಗಿಬರುವರೋ, ಅವರ ರಕ್ಷಣೆಯ ಪ್ರಯತ್ನವನ್ನು ಮಾಡುವುದು ರಾಜಪುರುಷರಿಗೆ ಯೋಗ್ಯವಾಗಿದೆ.

ಈಗ ಶಿಲ್ಪದೃಷ್ಟಾಂತದಿಂದ ಸಭಾಪತಿ ಮತ್ತು ಸೇನಾಪತಿಗಳ ಕೆಲಸದ ವಿಷಯವನ್ನು ತಿಳಿಸಲಾಗಿದೆ.

ಯಾಭೀ ರಸಾಂ ಕ್ಷೋದಸೋದ್ನಃ ಪಿಪಿನ್ವಥು-ರನಶ್ವಂ ಯಾಭೀ ರಥಮಾವತಂ ಜಿಷೇ ।
ಯಾಭಿಸ್ತ್ರಿಶೋಕ ಉಸ್ರಿಯಾ ಉದಾಜತ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧೨॥

ಪದಾರ್ಥ:- ಹೇ [ಅಶ್ವಿನಾ] ಅಧ್ಯಾಪಕೋಪದೇಶಕರೇ! ನೀವೀರ್ವರೂ [ಯಾಭಿಃ] ಯಾವ ಶಿಲ್ಪ ಕ್ರಿಯೆಗಳಿಂದ [ಉದ್ನಃ] ಜಲದ [ಕ್ಷೋದಸಾ] ಪ್ರವಾಹದೊಂದಿಗೆ [ರಸಾಮ್] ಯಾವುದರಲ್ಲಿ ಪ್ರಶಂಸಿತವಾದ ಜಲವಿದೆಯೋ ಆ ನದಿಯನ್ನು [ಪಿಪಿನ್ವಥುಃ] ಪೂರ್ಣಗೊಳಿಸಿರಿ. ಅಂದರೆ ಕಾಲುವೆಗಳ ಮುಖಾಂತರ ನೀರನ್ನು ಹರಿಸಿರಿ. ಅಥವಾ [ಯಾಭಿಃ] ಬಂದುಹೋಗುವಿಕೆಗಳಿಂದ [ಜಿಷೀ] ಶತ್ರುಗಳನ್ನು ಜಯಿಸುವುದಕ್ಕಾಗಿ [ಅನಶ್ವಮ್] ಅಶ್ವಗಳಿಲ್ಲದವನು [ರಥಮ್] ವಿಮಾನ ಮೊದಲಾದ ರಥ ಸಮೂಹವನ್ನು [ಆವತಮ್] ಇಟ್ಟುಕೊಳ್ಳಲಿ. [ಯಾಭಿಃ] ಯಾವ ಸೇನೆಯಿಂದ [ತ್ರಿಶೋಕಃ] ಯಾರಿಗೆ ದುಷ್ಟಗುಣ, ಕರ್ಮ, ಸ್ವಭಾವಗಳ ಶೋಕವಿದೆಯೋ ಆ ವಿದ್ವಾಂಸನು [ಉಸ್ರಿಯಾಃ] ಕಿರಣಗಳಲ್ಲಿರುವ ವಿದ್ಯುತಾಗ್ನಿಯ ಕಾಂತಿಯನ್ನೂ [ಉದಾಜತ] ಮೇಲಕ್ಕೆ ಕಳುಹಿಸಲಿ. [ತಾಭಿಃ ಉ] ಅವುಗಳಿಂದಲೇ [ಊತಿಭಿಃ] ಎಲ್ಲ ರಕ್ಷಣಾರೂಪದ ಉಕ್ತ ವಸ್ತುಗಳಿಂದ [ಸ್ವಾಗತಮ್] ನಮ್ಮ ಕಡೆಗೆ ಉತ್ತಮವಾಗಿ ಬನ್ನಿರಿ.

ಭಾವಾರ್ಥ:- ಹೇಗೆ ಎಲ್ಲ ಶಿಲ್ಪಶಾಸ್ತ್ರಗಳಲ್ಲಿ ಚತುರನಾದ ವಿದ್ವಾಂಸನು ವಿಮಾನಾದಿ ಯಾನಗಳಲ್ಲಿ ಕಲಾಯಂತ್ರಗಳನ್ನು ರಚಿಸಿ ಅವುಗಳಲ್ಲಿ ಜಲ, ವಿದ್ಯುತ್ ಮೊದಲಾದವುಗಳ ಪ್ರಯೋಗ ಮಾಡಿ, ಯಂತ್ರದಿಂದ ಕಲೆಗಳಿಂದ ಚಲಿಸಿ, ತನ್ನ ಅಭೀಷ್ಟ ಸ್ಥಾನಕ್ಕೆ ಹೋಗಿ ಬರುತ್ತಾನೋ, ಹಾಗೆಯೇ ಸಭೆಯ ಸೇನೆಯ ಅಧಿಪತಿಯೂ ಮಾಡಲಿ.

ಮತ್ತೆ ಅವರು ಯಾರಂತೆ ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಯಾಭಿಃ ಸೂರ್ಯಂ ಪರಿಯಾಥಃ ಪರಾವತಿ ಮಂಧಾತಾರಂ ಕ್ಷೈತ್ರಪತ್ಯೇಷ್ವಾವತಮ್ ।
ಯಾಭಿರ್ವಿಪ್ರಂ ಪ್ರ ಭರದ್ವಾಜಮಾವತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧೩॥

ಪದಾರ್ಥ:- ಹೇ [ಅಶ್ವಿನಾ] ಶಿಲ್ಪವಿದ್ಯೆಯ ಸ್ವಾಮಿ ಮತ್ತು ಭೃತ್ಯರೇ! ನೀವೀರ್ವರೂ [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿಗಳಿಂದ [ಪರಾವತಿ] ದೂರದೇಶದಲ್ಲಿ [ಸೂರ್ಯ್ಯಮ್] ಪ್ರಕಾಶಮಾನನಾದ ಸೂರ್ಯನಂತೆ [ಮನ್ಧಾತಾರಮ್] ವಿಮಾನಾದಿ ಯಾನಗಳಿಂದ ಶೀಘ್ರವಾಗಿ ದೂರದೇಶಕ್ಕೆ ಕಳುಹಿಸುವ ಬುದ್ಧಿವಂತನನ್ನು [ಪರ್ಯಾಥಃ]

ಎಲ್ಲ ಕಡೆಗಳಿಂದ ಪ್ರಾಪ್ತರಾಗಿರಿ. [ಯಾಭಿಃ] ಯಾವ ರಕ್ಷಣಾದಿಗಳಿಂದ [ಕ್ಷೇತ್ರಪತ್ಯೇಷು] ಮಾಂಡಲಿಕ ರಾಜರ ಕಾರ್ಯಗಳಲ್ಲಿ ಅವನು [ಆವತಮ್] ರಕ್ಷಿಸಿರಿ ಮತ್ತು [ಭರದ್ವಾಜಮ್] ವಿದ್ಯೆಯ ಸದ್ಗುಣಗಳನ್ನು ಧಾರಣ ಮಾಡುವವರಿಗೆ ತಿಳಿಸುವ [ವಿಪ್ರಮ್] ಮೇಧಾವೀ ಪುರುಷನನ್ನು [ಪ್ರಾವತಮ್] ಉತ್ತಮವಾಗಿ ರಕ್ಷಿಸಿರಿ. [ತಾಭಿಃ ಉ] ಅವೇ ರಕ್ಷಣಾದಿಗಳಿಂದ ನಮ್ಮನ್ನು ರಕ್ಷಿಸಲು [ಸು ಆ ಗತಮ್] ಪ್ರಾಪ್ತರಾಗಿರಿ.

ಭಾವಾರ್ಥ:- ವ್ಯವಹಾರಾದಿಗಳನ್ನು ಮಾಡುವ ಮನುಷ್ಯರಿಗೆ ವಿಮಾನಾದಿ ಯಾನಗಳ ಹೊರತು ದೂರದೇಶಗಳಿಗೆ ಹೋಗಿ ಬರುವುದು ಸಾಧ್ಯವಿಲ್ಲ, ಇದರಿಂದ ಹೆಚ್ಚಿನ ಲಾಭವು ದೊರೆಯುವುದಿಲ್ಲ. ಈ ಕಾರಣ ನಾವೆ-ವಿಮಾನಾದಿಗಳ ರಚನೆಯನ್ನು ಅವಶ್ಯವಾಗಿ ಮಾಡಬೇಕು.

ಈಗ ಪ್ರಜೆಗಳು, ಸೇನೆ ಮತ್ತು ಸಭಾಧ್ಯಕ್ಷರು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ಯಾಭಿರ್ಮಹಾಮತಿಥಿಗ್ವಂ ಕಶೋಜುವಂ ದಿವೋದಾಸಂ ಶಂಬರಹತ್ಯ ಆವತಮ್ ।
ಯಾಭಿಃ ಪೂರ್ಭಿದ್ಯೇ ತ್ರಸದಸ್ಯುಮಾವತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧೪॥

ಪದಾರ್ಥ:- ಹೇ [ಅಶ್ವಿನಾ] ರಾಜಾ ಮತ್ತು ಪ್ರಜೆಗಳಲ್ಲಿನ ಶೂರವೀರ ಪುರುಷರೇ! ನೀವೀರ್ವರೂ [ಶಂಬರಹತ್ಯೇ] ಸೇನೆ ಅಥವಾ ಎರಡನೆಯ ಬಲ ಪರಾಕ್ರಮಗಳಿಂದ ಕೊಲ್ಲುವುದು ಯಾವುದರಲ್ಲಿದೆಯೋ ಆ ಯುದ್ಧಾದಿ ವ್ಯವಹಾರಗಳಲ್ಲಿ [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿಗಳಿಂದ [ಮಹಾಮ್] ಮಹತ್ತರ ಪ್ರಶಂಸನೀಯವಾದ [ಅತಿಥಿಗ್ವಮ್] ಅತಿಥಿಗಳನ್ನು ಪಡೆಯುವ [ಕಶೋಜುವಮ್] ನೀರನ್ನು ಹಾಯಿಸುವ ಮತ್ತು [ದಿವೋದಾಸಮ್] ದಿವ್ಯವಿದ್ಯಾರೂಪ ಕ್ರಿಯೆಗಳನ್ನು ಕೊಡುವ ಸೇನಾಪತಿಯ [ಆವತಮ್] ರಕ್ಷಣೆ ಮಾಡಿರಿ. ಅಥವಾ ಯಾವ ರಕ್ಷಣಾದಿಗಳಿಂದ [ಪೂರ್ಭಿದ್ಯೇ] ಶತ್ರುಗಳ ನಗರಗಳು ನಾಶಗೊಳ್ಳುವವೋ, ಯಾವುದರಿಂದ ಆ ಸಂಗ್ರಾಮದಲ್ಲಿ [ತ್ರಿಸದಸ್ಯುಮ್] ದರೋಡೆಕಾರರಿಂದ ಹೆದರುವ ಶ್ರೇಷ್ಠ ಜನರನ್ನು [ಆವತಮ್] ರಕ್ಷಿಸಿರಿ. [ತಾಭಿಃ] ಅವೇ ರಕ್ಷಣಾದಿಗಳಿಂದ ನಮ್ಮ ರಕ್ಷಣೆಗಾಗಿ [ಸು, ಆಗತಮ್] ಉತ್ತಮವಾಗಿ ಬನ್ನಿರಿ.

ಭಾವಾರ್ಥ:- ಎಲ್ಲ ವಿದ್ಯೆಗಳ ನಿಪುಣರು ಧಾರ್ಮಿಕರಾದ ಪುರುಷರನ್ನು ಸಭಾಪತಿಯನ್ನಾಗಿ ಮಾಡಿ, ಅವನನ್ನು ಎಲ್ಲ ಪ್ರಕಾರಗಳಿಂದ ರಕ್ಷಿಸಿ ಎಲ್ಲರನ್ನು ಭಯಪಡಿಸುವ ದುಷ್ಟರು ದರೋಡೆಕಾರರನ್ನು ಕೊಂದು ತಾವು ಸುಖವನ್ನು ಪಡೆಯಲಿ ಮತ್ತು ಎಲ್ಲರನ್ನು ಸುಖಿಗಳನ್ನಾಗಿ ಮಾಡುವುದು ಪ್ರಜೆಗಳ ಮತ್ತು ಸೇನೆಯ ಮನುಷ್ಯರಿಗೆ ಯೋಗ್ಯವಾಗಿದೆ.

ವೈದ್ಯ ಮತ್ತು ಶಿಲ್ಪವಿದ್ಯೆಯಲ್ಲಿ ಪುರುಷಾರ್ಥವನ್ನು ಮಾಡುವವರನ್ನು ಯಾವುದಕ್ಕಾಗಿ ಮನುಷ್ಯರು ಸೇವೆ ಮಾಡಬೇಕು?

ಯಾಭಿರ್ವಮ್ರಂ ವಿಪಿಪಾನಮುಪಸ್ತುತಂ ಕಲಿಂ ಯಾಭಿರ್ವಿತ್ತಜಾನಿಂ ದುವಸ್ಯಥಃ ।
ಯಾಭಿರ್ವ್ಯಶ್ವಮುತ ಪೃಥಿಮಾವತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧೫॥

ಪದಾರ್ಥ:- ಹೇ [ಅಶ್ವಿನಾ] ರಾಜ ಪ್ರಜೆಗಳೇ! ನೀವು [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿಗಳಿಂದ [ವಿಪಿಪಾನಮ್] ವಿಶೇಷವಾಗಿ ಓಷಧಿಗಳ ರಸಗಳನ್ನು ಕುಡಿಯುವ ಸ್ವಭಾವವುಳ್ಳ [ಉಪಸ್ತುತಮ್] ಮುಂದೆ ಕಾಣಿಸುವ ಗುಣಗಳ ಪ್ರಶಂಸೆಗೆ ಪಾತ್ರವಾದ [ಕಲಿಮ್] ಎಲ್ಲ ದುಃಖಗಳನ್ನು ದೂರ ಮಾಡುವ ಅಥವಾ ಜ್ಯೋತಿಷಿ ಶಾಸ್ತ್ರೋಕ್ತ ಗಣಿತ ವಿದ್ಯೆಯನ್ನು ತಿಳಿದ [ವಿತ್ತಜಾನಿಮ್] ಮತ್ತು ಯಾವನು ಹೃದಯವನ್ನಾಕರ್ಷಿಸಿದ

ಸುಂದರ ಸ್ತ್ರೀಯನ್ನು ಪಡೆದ ಆ [ವಮ್ರಮ್] ರೋಗ ನಿವೃತ್ತಿಗಾಗಿ ವಮನ ಮಾಡುತ್ತಿರುವ ಮನುಷ್ಯನ [ದುವಸ್ಯಥಃ] ಸೇವೆ ಮಾಡಿರಿ. [ಯಾಭಿಃ] ಯಾವ ರಕ್ಷಣಾದಿಗಳಿಂದ [ವ್ಯಶ್ವಮ್] ವಿವಿಧ ಕುದುರೆಗಳಿಂದ ಅಥವಾ ಅಗ್ನ್ಯಾದಿ ಪದಾರ್ಥಗಳಿಂದ ಕೂಡಿದ ಸೇನೆ ಅಥವಾ ಯಾನಗಳ ಸೇವೆಯನ್ನು ಮಾಡಿ [ಉತ] ಮತ್ತು [ಯಾಭಿಃ] ಯಾವ ರಕ್ಷಣಾದಿಗಳಿಂದ [ಪೃಥಿಮ್] ವಿಶಾಲ ಬುದ್ಧಿಯುಳ್ಳ ಪುರುಷನ [ಆವತಮ್] ರಕ್ಷಣೆ ಮಾಡಿರಿ. [ತಾಭಿಃ ಉ] ಅವುಗಳಿಂದಲೇ ಆರೋಗ್ಯವನ್ನು [ಸು ಆ ಗತಮ್] ಉತ್ತಮವಾಗಿ ಎಲ್ಲ ಕಡೆಗಳಿಂದ ಪ್ರಾಪ್ತ ಮಾಡಿರಿ.

ಭಾವಾರ್ಥ:- ಸದ್ವೈದ್ಯರ ದ್ವಾರಾ ಉತ್ತಮ ಓಷಧಿಗಳನ್ನು ಸೇವಿಸಿ ರೋಗಗಳ ನಿವಾರಣೆ, ಬಲ ಮತ್ತು ಬುದ್ಧಿಯ ವೃದ್ಧಿ, ಸೇನೆಯ ಅಧ್ಯಕ್ಷ ಮತ್ತು ವಿಸ್ತೃತ ಪುರುಷಾರ್ಥಯುಕ್ತ ಶಿಲ್ಪಿ ಜನರ ಸಮ್ಯಕ್ ಸೇವೆ ಮಾಡಿ ಶರೀರ ಮತ್ತು ಆತ್ಮದ ಸುಖವನ್ನು ಪಡೆಯುವುದು ಮನುಷ್ಯರಿಗೆ ಉಚಿತವಾಗಿದೆ.

ಈಗ ಅಧ್ಯಾಪಕೋಪದೇಶಕರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಯಾಭಿರ್ನರಾ ಶಯವೇ ಯಾಭಿರತ್ರಯೇ ಯಾಭಿಃ ಪುರಾ ಮನವೇ ಗಾತುಮೀಷಥುಃ ।
ಯಾಭಿಃ ಶಾರೀರಾಜತಂ ಸ್ಯೂಮರಶ್ಮಯೇ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧೬॥

ಪದಾರ್ಥ:- ಹೇ [ನರಾ] ಉತ್ತಮ ಕಾರ್ಯದಲ್ಲಿ ಪ್ರವೃತ್ತಿಯುಳ್ಳವರೇ! [ಅಶ್ವಿನಾ] ಎಲ್ಲ ವಿದ್ಯೆಗಳನ್ನು ಓದಿಸುವ ಮತ್ತು ಉಪದೇಶ ಮಾಡುವ ವಿದ್ವಾಂಸರೇ! ನೀವೀರ್ವರೂ [ಪುರಾ] ಮೊದಲು [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿಗಳಿಂದ [ಶಯವೇ] ಸುಖದಿಂದ ಶಯನ ಮಾಡುವವನಿಗೆ ಶಾಂತಿ ಅಥವಾ [ಯಾಭಿಃ] ಯಾವ ರಕ್ಷಣಾದಿಗಳಿಂದ [ಅತ್ರಯೇ] ಶರೀರ, ಮನಸ್ಸು, ವಾಣಿಯ ದೋಷಗಳಿಂದ ರಹಿತ ಪುರುಷನಿಗಾಗಿ ಎಲ್ಲ ಸುಖ ಮತ್ತು [ಯಾಭಿಃ] ಯಾವ ರಕ್ಷಣಾದಿಗಳಿಂದ [ಮನವೇ] ಮನನಶೀಲ ಪುರುಷನಿಗಾಗಿ [ಗಾತುಮ್] ಪೃಥಿವೀ ಅಥವಾ ಉತ್ತಮವಾಣಿಯನ್ನು [ಈಷಥುಃ] ಪ್ರಾಪ್ತಿ ಮಾಡಿಸುವ ಇಚ್ಛೆಯನ್ನು ಮಾಡಿರಿ. ಅಥವಾ ಯಾವುದರಿಂದ ಶತ್ರುಗಳಿಗೆ [ಶಾರೀಃ] ಬಾಣಗಳ ಗತಿಗಳನ್ನು [ಆಜತಮ್] ಪ್ರಾಪ್ತ ಮಾಡಿಸಿರಿ. [ತಾಭಿರು] ಅವೇ ರಕ್ಷಣಾದಿಗಳಿಂದ ತಮ್ಮ ಸೇನೆಯ ರಕ್ಷಣೆಗಾಗಿ [ಸು ಆ ಗತಮ್] ಉತ್ತಮರೀತಿಯಿಂದ ಉತ್ಸಾಹ ಪೂರ್ವಕವಾಗಿ ಪ್ರಾಪ್ತರಾಗಿರಿ.

ಭಾವಾರ್ಥ:- ವಿದ್ಯೆ ಮತ್ತು ಧರ್ಮದ ಉಪದೇಶಗಳಿಂದ ಎಲ್ಲರನ್ನೂ ವಿದ್ವಾಂಸರು, ಧಾರ್ಮಿಕರನ್ನಾಗಿ ಮಾಡಿ ಪುರುಷಾರ್ಥದಿಂದ ಕೂಡಿರುವಂತೆ ನಿರಂತರವೂ ಮಾಡುವುದು ಅಧ್ಯಾಪಕೋಪದೇಶಕರಿಗೆ ಯೋಗ್ಯವಾಗಿದೆ.

ಈಗ ಸಭಾಪತಿ ಮತ್ತು ಸೇನಾಪತಿಗಳು ಹೇಗೆ ಅನುಷ್ಠಾನ ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಯಾಭಿಃ ಪಠರ್ವಾ ಜಠರಸ್ಯ ಮಜ್ಮನಾಗ್ನಿರ್ನಾದೀದೇಚ್ಚಿತ ಇದ್ಧೋ ಅಜ್ಮನ್ನಾ । ಯಾಭಿಃ
ಶರ್ಯಾತಮವಥೋ ಮಹಾಧನೇ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧೭॥

ಪದಾರ್ಥ:- ಹೇ [ಅಶ್ವಿನಾ] ಸಭೆ ಮತ್ತು ಸೇನೆಯ ಅಧೀಶನೇ! ನೀವೀರ್ವರೂ [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿಗಳಿಂದ [ಪಠರ್ವಾ] ಯಾವನು ಓದುವ ವಿದ್ಯಾರ್ಥಿಗಳನ್ನು ಪಡೆಯುವನೋ, ಅಥವಾ [ಮಜ್ಮನಾ] ಬಲದಿಂದ [ಜಠರಸ್ಯ] ಉದರದ ಮಧ್ಯೆ [ಚಿತಃ] ಸಂಚಿತಗೊಳಿಸಿದ [ಇದ್ಧಃ] ಪ್ರದೀಪ್ತವಾದ [ಅಗ್ನಿಃ] ಅಗ್ನಿಯ [ನ] ಸಮಾನ [ಅಜ್ಮನ್] ಶತ್ರುಗಳನ್ನು ಬೀಳಿಸಿ ಹೆಚ್ಚು- ಹೆಚ್ಚು ಧನವನ್ನು ಪ್ರಾಪ್ತಿಗೊಳಿಸುವ ಯುದ್ಧಗಳಲ್ಲಿ [ಆ ಅದೀದೇತ್] ಚೆನ್ನಾಗಿ ಪ್ರದೀಪ್ತವಾಗಲಿ ಅಥವಾ [ಯಾಭಿಃ] ಯಾವ ರಕ್ಷಣಾದಿಗಳಿಂದ [ಶರ್ಯಾತಮ್]

ಹಿಂಸೆ ಮಾಡುವವನಿಗೆ ಪ್ರಾಪ್ತವಾದ ಪುರುಷನನ್ನು ರಕ್ಷಿಸಿರಿ. [ತಾಭಿರು] ಇವೇ ರಕ್ಷಣಾದಿಗಳಿಂದ ಪ್ರಜೆಗಳ ರಕ್ಷಣೆಗಾಗಿ [ಸು ಆಗತಮ್] ಬಂದು ಹೋಗುತ್ತಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಶೌರ್ಯಾದಿ ಗುಣಗಳಿಂದ ಶೋಭಾಯಮಾನನಾದ ರಾಜನು ರಕ್ಷಿಸಬೇಕಾದವರನ್ನು ರಕ್ಷಿಸುತ್ತಾ ಮತ್ತು ಕೊಲ್ಲಲು ಯೋಗ್ಯರಾದವರನ್ನು ಕೊಲ್ಲುತ್ತಾ ಮತ್ತು ಹೇಗೆ ಅಗ್ನಿಯ ವನವನ್ನು ಸುಡುವುದೋ ಹಾಗೆ ಶತ್ರುಗಳ ಸೇನೆಯನ್ನು ಭಸ್ಮ ಮಾಡಿ ಮತ್ತು ಶತ್ರುಗಳ ಹೆಚ್ಚು-ಹೆಚ್ಚು ಧನವನ್ನು ಪ್ರಾಪ್ತಿ ಮಾಡಿಕೊಂಡು ಆನಂದಿತರಾಗುವರೋ, ಹಾಗೆಯೇ ಸಭೆ ಮತ್ತು ಸೇನೆಯ ಪತಿಯು ಕೆಲಸ ಮಾಡಬೇಕು.

ಈ ಎಲ್ಲ ರಾಜಪುರುಷರು ಯಾರಂತೆ ಸುಖವನ್ನು ಭೋಗಿಸಬೇಕು ಎಂಬುದನ್ನು ತಿಳಿಸಲಾಗಿದೆ.

ಯಾಭಿರಂಗಿರೋ ಮನಸಾ ನಿರಣ್ಯಥೋಽಗ್ರಂ ಗಚ್ಛಥೋ ವಿವರೇ ಗೋಅರ್ಣಸಃ ।
ಯಾಭಿರ್ಮನುಂ ಶೂರಮಿಷಾ ಸಮಾವತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧೮॥

ಪದಾರ್ಥ:- ಹೇ [ಅಂಗಿರಃ] ತಿಳಿಯಲು ಯೋಗ್ಯನಾದ ವಿದ್ವಾಂಸನೇ! ನೀನು [ಮನಸಾ] ವಿಜ್ಞಾನದಿಂದ ವಿದ್ಯೆ ಮತ್ತು ಧರ್ಮವನ್ನು ಎಲ್ಲರಿಗೂ ಬೋಧೆ ಮಾಡು. ಹೇ [ಅಶ್ವಿನಾ] ಸೇನೆಯ ಪಾಲನೆ ಮತ್ತು ಯುದ್ಧ ಮಾಡುವಂತಹ ಜನರೇ! ನೀವು [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿಗಳಿಂದ [ಗೋ ಅರ್ಣಸಃ] ಪೃಥಿವೀ ಜಲದ [ವಿವರೇ] ಅವಕಾಶದಲ್ಲಿ [ನಿರಣ್ಯಥಃ] ಸಂಗ್ರಾಮ ಮಾಡುತ್ತಾ ಮತ್ತು [ಅಗ್ರಮ್] ಉತ್ತಮ ವಿಜಯಕ್ಕಾಗಿ [ಗಚ್ಛಥಃ] ಪ್ರಾಪ್ತವಾಗುವ ಅಥವಾ [ಯಾಭಿಃ] ಯಾವ ರಕ್ಷಣಾದಿಗಳಿಂದ [ಶೂರಮ್] ಶೂರವೀರ [ಮನುಮ್] ಮನನಶೀಲ ಮನುಷ್ಯನನ್ನು [ಸಮಾವತಮ್] ಸರಿಯಾಗಿ ರಕ್ಷಿಸಿರಿ. [ತಾಭಿರು] ಅವೇ ರಕ್ಷಣಾದಿಗಳಿಂದ ಮತ್ತು [ಇಷಾ] ಇಚ್ಛೆಯಿಂದ ನಮ್ಮ ರಕ್ಷಣೆಗಾಗಿ [ಸು ಆ ಗತಮ್] ಉಚಿತ ಸಮಯದಲ್ಲಿ ಬನ್ನಿರಿ.

ಭಾವಾರ್ಥ:- ಹೇಗೆ ವಿದ್ವಾಂಸನು ವಿಜ್ಞಾನದಿಂದ ಎಲ್ಲ ಸುಖಗಳನ್ನು ಸಿದ್ಧಪಡಿಸುವನೋ, ಹಾಗೆಯೇ ಎಲ್ಲ ರಾಜಪುರುಷರನ್ನು ಅನೇಕ ಸಾಧನಗಳಿಂದ ಪೃಥಿವೀ, ನದಿ ಮತ್ತು ಸಮುದ್ರದಿಂದ ಆಕಾಶದ ಮಧ್ಯದಲ್ಲಿ ಶತ್ರುಗಳನ್ನು ಜಯಿಸಿ ಸುಖಗಳನ್ನು ಉತ್ತಮವಾಗಿ ಪ್ರಾಪ್ತಗೊಳಿಸಬೇಕು.

ಈಗ ಸ್ತ್ರೀ ಪುರುಷರು ಹೇಗೆ ಮತ್ತು ಯಾವಾಗ ವಿವಾಹ ಮಾಡಿಕೊಳ್ಳಬೇಕು ಎಂಬುದನ್ನು ತಿಳಿಸಲಾಗಿದೆ.

ಯಾಭಿಃ ಪತ್ನೀರ್ವಿಮದಾಯ ನ್ಯೂಹಥು-ರಾ ಘ ವಾ ಯಾಭಿರರುಣೀರಶಿಕ್ಷತಮ್ ।
ಯಾಭಿಃ ಸುದಾಸ ಊಹಥುಃ ಸುದೇವ್ಯ೧ ಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೧೯॥

ಪದಾರ್ಥ:- ಹೇ [ಅಶ್ವಿನಾ] ಓದುವ-ಓದಿಸುವ ಬ್ರಹ್ಮಚಾರಿಗಳೇ! ನೀವು [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿಗಳಿಂದ [ವಿಮದಾಯ] ವಿವಿಧ ಆನಂದಕ್ಕಾಗಿ [ಪತ್ನೀಃ] ಪತಿಯೊಡನೆ ಯಥಾರೀತಿ ಸಂಬಂಧವನ್ನಿಟ್ಟುಕೊಳ್ಳುವ ವಿದುಷೀ ಸ್ತ್ರೀಯರನ್ನು [ನ್ಯೂಹಥುಃ] ನಿಶ್ಚಯದಿಂದ ಗ್ರಹಣ ಮಾಡಿರಿ. [ವಾ] ಅಥವಾ [ಯಾಭಿಃ] ಯಾವ ರಕ್ಷಣಾದಿಗಳಿಂದ [ಅರುಣೀಃ] ಬ್ರಹ್ಮಚಾರಿಣಿ ಕನ್ಯೆಯರನ್ನು [ಘ] ನಿಶ್ಚಯವಾಗಿ [ಆ ಅಶಿಕ್ಷತಮ್] ಉತ್ತಮವಾಗಿ ಶಿಕ್ಷಣಗೊಳಿಸಿರಿ. ಮತ್ತು [ಯಾಭಿಃ] ಯಾವ ರಕ್ಷಣಾದಿ ಕ್ರಿಯೆಗಳಿಂದ [ಸುದಾಸೇ] ಉತ್ತಮವಾಗಿ ದಾನ ಮಾಡುವುದರಲ್ಲಿ [ಸುದೇವ್ಯಮ್] ಉತ್ತಮ ವಿದ್ವಾಂಸರಲ್ಲಿ ಉತ್ಪನ್ನವಾಗುವ ವಿಜ್ಞಾನವನ್ನು [ಊಹಥುಃ] ಪಡೆದುಕೊಳ್ಳಿರಿ. [ತಾಭಿಃ] ಆ ರಕ್ಷಣಾದಿಗಳಾದ ವಿದ್ಯೆ [ಉ] ಮತ್ತು ವಿನಯವನ್ನು [ಸು ಆ ಗತಮ್] ಉತ್ತಮವಾಗಿ ಪಡೆದುಕೊಳ್ಳಿರಿ.

ಭಾವಾರ್ಥ:- ಸುಖವನ್ನು ಪಡೆಯಬೇಕೆನ್ನುವ ಪುರುಷ ಮತ್ತು ಸ್ತ್ರೀಯರು ಧರ್ಮದಿಂದ ಸೇವಿಸಿದ ಬ್ರಹ್ಮಚರ್ಯದಿಂದ ಪೂರ್ಣವಿದ್ಯೆ ಮತ್ತು ಯುವಾವಸ್ಥೆಯನ್ನು ಪಡೆದು ತನ್ನ ಯೋಗ್ಯತೆಗೆ ತಕ್ಕಂತೆಯೇ ವಿವಾಹವನ್ನು ಮಾಡಿಕೊಳ್ಳುವುದು ಯೋಗ್ಯವಾಗಿದೆ. ಅಥವಾ ಬ್ರಹ್ಮಚರ್ಯೆಯಲ್ಲಿಯೇ ಇದ್ದು ಯಾವಾಗಲೂ ಸ್ತ್ರೀ-ಪುರುಷರಿಗೆ ಉತ್ತಮ ಶಿಕ್ಷಣವನ್ನು ಕೊಡುವುದು ಯೋಗ್ಯವಾಗಿದೆ. ಏಕೆಂದರೆ ತನಗೆ ಸಮನಾದ ಗುಣ ಕರ್ಮ ಸ್ವಭಾವವುಳ್ಳ ಸ್ತ್ರೀ ಪುರುಷರ ಹೊರತು ಗೃಹಸ್ಥಾಶ್ರಮವನ್ನು ಪ್ರವೇಶಿಸಿ ಯಾವನೂ ಕಿಂಚಿತ್ತೂ ಸುಖವನ್ನು ಅಥವಾ ಉತ್ತಮ ಸಂತಾನವನ್ನು ಪಡೆಯುವುದರಲ್ಲಿ ಸಮರ್ಥರಾಗುವುದಿಲ್ಲ. ಆದುದರಿಂದ ಹೀಗೆಯೇ ವಿವಾಹ ಮಾಡಿಕೊಳ್ಳಬೇಕು.

ಈಗ ಸಭಾಧ್ಯಕ್ಷ ಮೊದಲಾದ ರಾಜಪುರುಷರು ಹೇಗಿರಬೇಕು ಎಂಬುದನ್ನು ತಿಳಿಸಲಾಗಿದೆ.

ಯಾಭಿಃ ಶಂತಾತೀ ಭವಥೋ ದದಾಶುಷೇ ಭುಜ್ಯುಂ ಯಾಭಿರವಥೋ ಯಾಭಿರಧ್ರಿಗುಮ್ ।
ಓಮ್ಯಾವತೀಂ ಸುಭರಾಮೃತಸ್ತುಭಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೨೦॥

ಪದಾರ್ಥ:- ಹೇ [ಅಶ್ವಿನಾ] ಸಭೆ ಮತ್ತು ಸೇನೆಯ ಅಧ್ಯಕ್ಷರೇ! ನೀವೀರ್ವರೂ [ದದಾಶುಷೇ] ವಿದ್ಯೆ ಮತ್ತು ಸುಖವನ್ನು ಕೊಡುವುದಕ್ಕಾಗಿ [ಯಾಭಿಃ] ಯಾವ [ಊತಿಭಿಃ] ರಕ್ಷಣೆ ಮೊದಲಾದ ಕ್ರಿಯೆಗಳಿಂದ [ಶಂತಾತಿ] ಸುಖದ ಕರ್ತವ್ಯ [ಭವತಃ] ಆಗುವ ಅಥವಾ [ಯಾಭಿಃ] ಯಾವ ರಕ್ಷಣಾದಿಗಳಿಂದ [ಭುಜ್ಯಮ್] ಸುಖದ ಭೋಕ್ತಾ ಅಥವಾ ಪಾಲನೆ ಮಾಡುವುದಕ್ಕಾಗಿ [ಅವಥಃ] ರಕ್ಷಣೆ ಮಾಡುತ್ತಾ ಅಥವಾ [ಯಾಭಿಃ] ಯಾವ ರಕ್ಷಣಾದಿಗಳಿಂದ [ಅಧ್ರಿಗುವಮ್] ಪರಮೈಶ್ವರ್ಯವಂತ ಇಂದ್ರನ ಮತ್ತು [ಓಮ್ಯಾವತೀಮ್] ರಕ್ಷಣೆ ಮಾಡುವಂತಹ ವಿದ್ವಾಂಸರಲ್ಲಿ ಉತ್ಪನ್ನವಾದ ಯಾವ ಉತ್ತಮವಿದ್ಯೆಯಿಂದ ಕೂಡಿದ [ಸುಭರಾಮ್] ಯಾವುದರಿಂದ ಉತ್ತಮ ರೀತಿಯ ಸುಖಗಳ [ಋತಸ್ತುಭಮ್] ಮತ್ತು ಸತ್ಯದ ಧಾರಣವಾಗುವುದೋ, ಆ ನೀತಿಯ ರಕ್ಷಣೆ ಮಾಡುತ್ತಾ [ತಾಭಿರು] ಅವೇ ರಕ್ಷಣಾದಿಗಳಿಂದ ಸತ್ಯವನ್ನು [ಸು ಆ ಗತಮ್] ಉತ್ತಮವಾಗಿ ಪಡೆದುಕೊಳ್ಳಿರಿ.

ಭಾವಾರ್ಥ:- ಎಲ್ಲರಿಗೂ ಸುಖವನ್ನು ಕೊಡುವುದು ಮತ್ತು ಆಪ್ತ ಪುರುಷರಿಗೆ ವಿದ್ಯೆ ಮತ್ತು ನೀತಿಯನ್ನು ಧಾರಣಗೊಳಿಸಿ ಕಲ್ಯಾಣವನ್ನುಂಟುಮಾಡುವುದು ರಾಜಾದಿ ರಾಜಪುರುಷರಿಗೆ ಯೋಗ್ಯವಾಗಿದೆ.

ಮತ್ತೆ ಆ ಜನರು ಏನೇನು ಮಾಡಬೇಕು ಎಂಬುದನ್ನು ತಿಳಿಸಲಾಗಿದೆ.

ಯಾಭಿಃ ಕೃಶಾನುಮಸನೇ ದುವಸ್ಯಥೋ ಜವೇ ಯಾಭಿರ್ಯೂನೋ ಅರ್ವಂತಮಾವತಮ್ ।
ಮಧು ಪ್ರಿಯಂ ಭರಥೋ ಯತ್ ಸರಡ್ಭ್ಯಸ್ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೨೧॥

ಪದಾರ್ಥ:- ಹೇ [ಅಶ್ವಿನಾ] ಸಭೆ ಮತ್ತು ಸೇನೆಯ ಅಧ್ಯಕ್ಷರೇ! ನೀವೀರ್ವರೂ [ಯಾಭಿಃ] ಯಾವ [ಊತಿಭಿಃ] ರಕ್ಷಣಾದಿ ಕ್ರಿಯೆಗಳಿಂದ [ಅಸನೇ] ಎಸೆಯುವುದರಲ್ಲಿ [ಕೃಶಾನಮ್] ದುರ್ಬಲನ [ದುವಸ್ಯಥಃ] ಸೇವೆ ಮಾಡಿರಿ. ಅಥವಾ [ಯಾಭಿಃ] ಯಾವ ರಕ್ಷಣಾದಿಗಳಿಂದ [ಜವೇ] ವೇಗದಲ್ಲಿ [ಯೂನಃ] ಯುವಾವಸ್ಥೆಯಿಂದ ಕೂಡಿದ ವೀರರು [ಅರ್ವನ್ತಮ್] ಮತ್ತು ಕುದುರೆಗಳನ್ನು [ಆವತಮ್] ರಕ್ಷಿಸಲಿ [ಉ] ಮತ್ತು [ಸರಡ್ಭ್ಯಃ] ಯುದ್ಧದಲ್ಲಿ ವಿಜಯವನ್ನು ಪಡೆಯುವ ಸೇನಾದಿ ಜನರಿಂದ [ಯತ್] ಯಾವ [ಪ್ರಿಯಮ್] ಕಾಮನೆಗೆ ಯೋಗ್ಯವಾದ ಆ ಮಧು ಮಿಷ್ಟಾನ್ನ ಮೊದಲಾದ ಪದಾರ್ಥಗಳನ್ನು [ಭರಥಃ] ಧಾರಣ ಮಾಡಿರಿ. [ತಾಭಿಃ] ಆ ರಕ್ಷಣಾದಿಗಳಿಂದ ಕೂಡಿದವರಾಗಿ ರಾಜ್ಯಪಾಲನೆಗಾಗಿ [ಸು ಆ ಗತಮ್] ಉತ್ತಮವಾಗಿ ಬನ್ನಿರಿ.

ಭಾವಾರ್ಥ:- ದುಃಖದಿಂದ ಪೀಡಿತರಾದ ಪ್ರಾಣಿಗಳ ಮತ್ತು ಯುವಾವಸ್ಥೆಯುಳ್ಳ ಸ್ತ್ರೀ, ಪುರುಷರನ್ನು ವ್ಯಭಿಚಾರದಿಂದ ರಕ್ಷಿಸಿರಿ ಮತ್ತು ಕುದುರೆ ಮೊದಲಾದ ಸೇನೆಯ ಅಂಗಗಳ ರಕ್ಷಣೆಗಾಗಿ ಎಲ್ಲ ಪ್ರಿಯ ವಸ್ತುಗಳನ್ನು ಧಾರಣ ಮಾಡಿರಿ, ಪ್ರತಿಕ್ಷಣವನ್ನು ಸಂಭಾಳಿಸುತ್ತಾ ಎಲ್ಲರ ವೃದ್ಧಿಮಾಡಬೇಕು.

ಮತ್ತೆ ಅವರು ಯುದ್ಧದಲ್ಲಿ ಎಂತಹ ಆಚರಣೆಯನ್ನಿಡಬೇಕು?

ಯಾಭಿರ್ನರಂ ಗೋಷುಯುಧಂ ನೃಷಾಹ್ಯೇ ಕ್ಷೇತ್ರಸ್ಯ ಸಾತಾ ತನಯಸ್ಯ ಜಿನ್ವಥಃ । ಯಾಭೀ
ರಥಾಁ ಅವಥೋ ಯಾಭಿರರ್ವತ-ಸ್ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೨೨॥

ಪದಾರ್ಥ:- ಹೇ **[ಅಶ್ವಿನಾ]** ಸಭೆ ಮತ್ತು ಸೇನೆಯ ಅಧ್ಯಕ್ಷರಾದ ನೀವೀರ್ವರೂ **[ನೃಷಾಹ್ಯೇ]** ವೀರರನ್ನು ಸಹಿಸುವ ಮತ್ತು **[ಸಾತಾ]** ಸೇವನೆ ಮಾಡಲು ಯೋಗ್ಯವಾದ ಸಂಗ್ರಾಮದಲ್ಲಿ **[ಯಾಭಿಃ]** ಯಾವ **[ಊತಿಭಿಃ]** ರಕ್ಷಣಾದಿಗಳಿಂದ **[ಗೋಷು ಯುಧಮ್]** ಪೃಥಿವೀ ಮೇಲೆ ಯುದ್ಧ ಮಾಡುವ **[ನರಮ್]** ನಾಯಕನನ್ನು **[ಜಿನ್ವಥಃ]** ಪ್ರಸನ್ನಗೊಳಿಸಿರಿ. **[ಯಾಭಿಃ]** ಅಥವಾ ಯಾವ ರಕ್ಷಣಾದಿಗಳಿಂದ **[ಕ್ಷೇತ್ರಸ್ಯ]** ಸ್ತ್ರೀ ಮತ್ತು **[ತನಯಸ್ಯ]** ಸಂತಾನವನ್ನು ಪ್ರಸನ್ನಗೊಳಿಸಿರಿ. **[ಉ]** ಮತ್ತು **[ಯಾಭಿಃ]** ಯಾವ ರಕ್ಷಣಾದಿಗಳಿಂದ **[ರಥಾನ್]** ರಥಗಳನ್ನು **[ಅರ್ವತಃ]** ಮತ್ತು ಕುದುರೆಗಳ **[ಅವತಃ]** ರಕ್ಷಣೆ ಮಾಡಿರಿ. **[ತಾಭಿಃ]** ಆ ರಕ್ಷಣಾದಿಗಳಿಂದ ಎಲ್ಲ ಪ್ರಜೆಗಳನ್ನು ರಕ್ಷಿಸಲು **[ಸು ಆ ಗತಮ್]** ಉತ್ತಮ ರೀತಿಯಲ್ಲಿ ಪ್ರವೃತ್ತರಾಗಿರಿ.

ಭಾವಾರ್ಥ:- ಯುದ್ಧದಲ್ಲಿ ಶತ್ರುಗಳನ್ನು ಕೊಂದು ತನ್ನ ಭೃತ್ಯರು ಮೊದಲಾದವರನ್ನು ರಕ್ಷಿಸಿ ಸೇನೆಯ ಅಂಗಗಳನ್ನು ಹೆಚ್ಚಿಸಿ ಮತ್ತು ಸ್ತ್ರೀಯರು, ಬಾಲಕರನ್ನು, ಯುದ್ಧವನ್ನು ನೋಡುವವರನ್ನು ಮತ್ತು ದೂತರನ್ನು ಎಂದಿಗೂ ಶಿಕ್ಷಿಸಬಾರದೆನ್ನುವುದು ಮನುಷ್ಯರಿಗೆ ಯೋಗ್ಯವಾಗಿದೆ.

ಈಗ ರಾಜಪುರುಷರು ದುಷ್ಟರ ನಿವೃತ್ತಿ ಮತ್ತು ಶ್ರೇಷ್ಠರ ರಕ್ಷಣೆ ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಯಾಭಿಃ ಕುತ್ಸಮಾರ್ಜುನೇಯಂ ಶತಕ್ರತೂ ಪ್ರ ತುರ್ವೀತಿಂ ಪ್ರ ಚ ದಭೀತಿಮಾವತಮ್ ।
ಯಾಭಿರ್ಧ್ವಸಂತಿಂ ಪುರುಷಂತಿಮಾವತಂ ತಾಭಿರೂ ಷು ಊತಿಭಿರಶ್ವಿನಾ ಗತಮ್ ॥೨೩॥

ಪದಾರ್ಥ:- ಹೇ **[ಶತಕ್ರತು]** ಅಸಂಖ್ಯೋತ್ತಮ ಬುದ್ಧಿಕರ್ಮಯುಕ್ತ **[ಅಶ್ವಿನಾ]** ಸಭೆ ಸೇನೆಗಳ ಅಧಿಪತಿಗಳೇ! ತಾವೀರ್ವರೂ **[ಯಾಭಿಃ]** ಯಾವ **[ಊತಿಭಿಃ]** ರಕ್ಷಣಾದಿಗಳಿಂದ ಸೂರ್ಯ-ಚಂದ್ರರಂತೆ ಪ್ರಕಾಶಮಾನರಾಗಿ **[ಆರ್ಜುನೇಯಮ್]** ಸುಂದರ ರೂಪದೊಂದಿಗೆ ಸಿದ್ಧಗೊಳಿಸಿದ **[ಕುತ್ಸಮ್]** ವಜ್ರವನ್ನು ಗ್ರಹಿಸಿ **[ತುರ್ವೀತಿಮ್]** ಹಿಂಸಕ **[ದಭೀತಿಮ್]** ದಂಭಕ **[ಧ್ವಸಂತಿಮ್]** ನೀಚಗತಿಯನ್ನು ಪಡೆಯುವ ಪಾಪಿಯನ್ನು **[ಪ್ರ ಅವತಮ್]** ಚೆನ್ನಾಗಿ ಥಳಿಸಿರಿ. **[ಚ]** ಮತ್ತು **[ಯಾಭಿಃ]** ಯಾವ ರಕ್ಷಣಾದಿಗಳಿಂದ **[ಪುರುಷಂತಿಮ್]** ಬಹಳ ಜನರನ್ನು ಬೇರೆ ಮಾಡುವುದಕ್ಕಾಗಿ **[ಪ್ರ ಅವತಮ್]** ರಕ್ಷಿಸಿರಿ. **[ತಾಭಿಃ ಉ]** ಅವೇ ರಕ್ಷಣಾದಿಗಳಿಂದ ಧರ್ಮದ ರಕ್ಷಣೆ ಮಾಡಲು **[ಸು ಆ ಗತಮ್]** ಉತ್ತಮ ರೀತಿಯಲ್ಲಿ ತತ್ಪರರಾಗಿರಿ.

ಭಾವಾರ್ಥ:- ಶಸ್ತ್ರಾಸ್ತ್ರಗಳ ಪ್ರಯೋಗಗಳನ್ನು ತಿಳಿದು, ದುಷ್ಟಶತ್ರುಗಳನ್ನು ನಿವಾರಣೆ ಮಾಡಿ, ಎಷ್ಟು ಈ ಪ್ರಪಂಚದಲ್ಲಿ ಅಧರ್ಮದ ಕಾರ್ಯಗಳಿವೆಯೋ, ಅವುಗಳನ್ನು ಧರ್ಮೋಪದೇಶದಿಂದ ನಿವಾರಿಸಿ, ನಾನಾ ಪ್ರಕಾರದ ರಕ್ಷಣೆಯ ವಿಧಾನಗಳನ್ನು ಮಾಡಿ ಪ್ರಜೆಗಳನ್ನು ಉತ್ತಮವಾಗಿ ಪಾಲಿಸಿ ಪರಮಾನಂದದ ಭೋಗವನ್ನು ಪಡೆಯಿರಿ.

ಅಧ್ಯಾಪಕೋಪದೇಶಕರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಅಪ್ನಸ್ವತೀಮಶ್ವಿನಾ ವಾಚಮಸ್ಮೇ ಕೃತಂ ನೋ ದಸ್ರಾ ವೃಷಣಾ ಮನೀಷಾಮ್ ।
ಅದ್ಯೂತ್ಯೇಽವಸೇ ನಿ ಹ್ವಯೇ ವಾಂ ವೃಧೇ ಚ ನೋ ಭವತಂ ವಾಜಸಾತೌ ॥೨೪॥

ಪದಾರ್ಥ:- ಹೇ **[ದಸ್ರಾ]** ಎಲ್ಲರ ದುಃಖನಿವಾರಕರೂ **[ವೃಷಣಾ]** ಸುಖವನ್ನು ವರ್ಷಿಸುವವರೂ ಆದ **[ಅಶ್ವಿನಾ]** ಅಧ್ಯಾಪಕೋಪದೇಶಕರೇ! ನೀವೀರ್ವರೂ **[ಅಸ್ಮೈ]** ನಮ್ಮಲ್ಲಿ **[ಅಪ್ನಸ್ವತೀಮ್]** ಬಹಳ ಪುತ್ರ - ಪೌತ್ರರನ್ನು ಮಾಡುವ **[ವಾಚಮ್]** ವಾಣಿಯನ್ನು **[ಕೃತಮ್]** ಮಾಡಿರಿ. **[ಅದ್ಯೂತ್ಯೇ]** ಛಲ ಮೊದಲಾದ ದೋಷರಹಿತ ವ್ಯವಹಾರಗಳಲ್ಲಿ **[ನಃ]** ನಮ್ಮ **[ಅವಸೇ]** ರಕ್ಷಣಾದಿಗಳಿಗಾಗಿ **[ಮನೀಷಾಮ್]** ಯೋಗ ವಿಜ್ಞಾನವುಳ್ಳ ಬುದ್ಧಿಯನ್ನು ಕೊಡಿರಿ. **[ವಾಜಸಾತೌ]** ಯುದ್ಧಾದಿ ವ್ಯವಹಾರಗಳಲ್ಲಿ **[ನಃ]** ನಮ್ಮ **[ಚ]** ಮತ್ತು ಅನ್ಯರ **[ವೃಧೇ]** ವೃದ್ಧಿಗಾಗಿ ನಿರಂತರ **[ಭವತಮ್]** ಉದ್ಯತರಾಗಿರಿ. ಇದಕ್ಕಾಗಿ **[ವಾಮ್]** ನಿಮ್ಮೀರ್ವರನ್ನೂ ನಾನು **[ನಿಹ್ವಯೇ]** ನಿತ್ಯವೂ ಕರೆಯುತ್ತೇನೆ.

ಭಾವಾರ್ಥ:- ಯಾವನೇ ಪುರುಷನು ಆಪ್ತ ವಿದ್ವಾಂಸರ ಸಮಾಗಮವಿಲ್ಲದೆ ಪೂರ್ಣ ವಿದ್ಯಾಯುಕ್ತವಾಣಿ ಮತ್ತು ಬುದ್ಧಿಯನ್ನು ಪಡೆಯಲಾರನು. ಮತ್ತು ಇವರಿಬ್ಬರ ವಿನಾ ಶತ್ರುಗಳನ್ನು ಜಯಿಸಲು ಮತ್ತು ಎಲ್ಲ ಕಡೆಗಳಿಂದ ವೃದ್ಧಿಯನ್ನು ಹೊಂದಲು ಸಾಧ್ಯವಾಗುವುದಿಲ್ಲ.

ಮತ್ತೆ ಅದೇ ವಿಷಯ

ದ್ಯುಭಿರಕ್ತುಭಿಃ ಪರಿ ಪಾತಮಸ್ಮಾ-ನರಿಷ್ಟೇಭಿರಶ್ವಿನಾ ಸೌಭಗೇಭಿಃ । ತನ್ನೋ ಮಿತ್ರೋ
ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೨೫॥

ಪದಾರ್ಥ:- ಹೇ **[ಅಶ್ವಿನಾ]** ಪೂರ್ವೋಕ್ತ ಅಧ್ಯಾಪಕೋಪದೇಶಕರೇ! ನೀವೀರ್ವರೂ **[ದ್ಯುಭಿಃ]** ದಿನ ಮತ್ತು **[ಅಕ್ತುಭಿಃ]** ರಾತ್ರಿಗಳಲ್ಲಿ **[ಅರಿಷ್ಟೇಭಿಃ]** ಹಿಂಸೆಗೆ ಯೋಗ್ಯವಲ್ಲದ **[ಸೌಭಗೇಭಿಃ]** ಸುಂದರ ಐಶ್ವರ್ಯದೊಂದಿಗೆ ಇದ್ದು **[ಅಸ್ಮಾನ್]** ನಮ್ಮನ್ನು ಸರ್ವದಾ **[ಪರಿ ಪಾತಮ್]** ಎಲ್ಲ ಪ್ರಕಾರಗಳಿಂದ ರಕ್ಷಿಸಿರಿ. **[ತತ್]** ನಿಮ್ಮ ಆ ಕಾರ್ಯಗಳನ್ನು **[ಮಿತ್ರಃ]** ಎಲ್ಲರ ಸುಹೃತ್ **[ವರುಣಃ]** ಧರ್ಮಾದಿ ಕಾರ್ಯಗಳಲ್ಲಿ ಉತ್ತಮನು **[ಅದಿತಿಃ]** ಮಾತೆಯು **[ಸಿಂಧುಃ]** ಸಮುದ್ರ ಅಥವಾ ನದಿಯು **[ಪೃಥಿವೀ]** ಭೂಮಿ ಅಥವಾ ಆಕಾಶದಲ್ಲಿನ ವಾಯುವು **[ಉತ]** ಮತ್ತು **[ದ್ಯೌಃ]** ವಿದ್ಯುತ್ ಅಥವಾ ಸೂರ್ಯನ ಪ್ರಕಾಶವು **[ನಃ]** ನಮಗಾಗಿ **[ಮಾಮಹನ್ತಾಮ್]** ಮತ್ತೆ ಮತ್ತೆ ವೃದ್ಧಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ತಾಯಿ ತಂದೆಯರು ತಮ್ಮ ತಮ್ಮ ಸಂತಾನ, ಸಖರು, ಮಿತ್ರರು ಮತ್ತು ಪ್ರಾಣ ಶರೀರಗಳನ್ನು ಪ್ರಸನ್ನಗೊಳಿಸುವರೋ, ಮತ್ತು ಸಮುದ್ರದ ಗಂಭೀರತಾದಿಗಳು, ಪೃಥಿವಿಯ ವೃಕ್ಷಾದಿಗಳು ಮತ್ತು ಸೂರ್ಯನ ಪ್ರಕಾಶವನ್ನು ಧಾರಣ ಮಾಡಿ ಮತ್ತು ಎಲ್ಲ ಪ್ರಾಣಿಗಳಿಗೂ ಸುಖವನ್ನುಂಟುಮಾಡಿ ಉಪಕಾರಗಳನ್ನು ಮಾಡುತ್ತವೋ, ಹಾಗೆಯೇ ಓದಿಸುವುದು ಮತ್ತು ಉಪದೇಶ ಮಾಡುವಂತಹ ಎಲ್ಲ ಸತ್ಯ ವಿದ್ಯೆಗಳು ಮತ್ತು ಉತ್ತಮ ಶಿಕ್ಷಣವನ್ನು ಪಡೆದುಕೊಂಡು ಎಲ್ಲರಿಗೂ ಇಷ್ಟ ಸುಖದಿಂದಿರುವಂತೆ ಮಾಡಿರಿ.

ಈ ಸೂಕ್ತದಲ್ಲಿ ಸೂರ್ಯ, ಪೃಥಿವೀ, ಮೊದಲಾದವುಗಳ ಗುಣಗಳು ಮತ್ತು ಸಭೆ ಸೇನಾಧ್ಯಕ್ಷರ ಕರ್ತವ್ಯಗಳು ಹಾಗೂ ಅವರಿಗೆ ಮಾಡಿದ ಪರೋಪಕಾರಾದಿ ಕರ್ಮಗಳ ವರ್ಣನೆ ಮಾಡಿದೆ. ಆದುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ಈ ಅಧ್ಯಾಯದಲ್ಲಿ ದಿನ, ರಾತ್ರಿ, ಅಗ್ನಿ ಮತ್ತು ವಿದ್ವಾಂಸ ಮೊದಲಾದವರ ಗುಣಗಳ ವರ್ಣನೆಯಿಂದ ಈ ಸಪ್ತಮಾಧ್ಯಾಯದಲ್ಲಿ ಹೇಳಿದ ಅರ್ಥಕ್ಕೂ ಷಷ್ಠಾಧ್ಯಾಯದಲ್ಲಿ ಹೇಳಿದ ಅರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಹನ್ನೆರಡನೆಯ ಸೂಕ್ತ ಸಮಾಪ್ತ

ಸೂಕ್ತ ೧೧೩

ಮಂ.ಸಂ. ೨೦ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಉಷಾಃ, ೧ (ಉತ್ತರಾರ್ಧ) ರಾತ್ರಿಶ್ಚ, । ಛಂದಃ - ತ್ರಿಷ್ಟುಪ್ ।

ಸ್ವರಃ - ೧, ೩, ೬, ೭, ೯, ೧೨, ೧೭, ೧೮-೨೦ ಧೈವತಃ, ಪಂಚಮಃ.

ಇದರ ಪ್ರಥಮ ಮಂತ್ರದಲ್ಲಿ ವಿದ್ವಾಂಸರ ಗುಣಗಳ ಉಪದೇಶ ಮಾಡಿದೆ.

ಇದಂ ಶ್ರೇಷ್ಠಂ ಜ್ಯೋತಿಷಾಂ ಜ್ಯೋತಿರಾಗಾ-ಚ್ಚಿತ್ರಃ ಪ್ರಕೇತೋ ಅಜನಿಷ್ಟ ವಿಭ್ವಾ ।
ಯಥಾ ಪ್ರಸೂತಾ ಸವಿತುಃ ಸವಾಯಁ ಏವಾ ರಾತ್ರ್ಯುಷಸೇ ಯೋನಿಮಾರೈಕ್ ॥೧॥

ಪದಾರ್ಥ:- [ಯಥಾ] ಹೇಗೆ [ಪ್ರಸೂತಾ] ಉತ್ಪನ್ನವಾದ [ರಾತ್ರೀ] ರಾತ್ರಿಯು [ಸವಿತುಃ] ಸೂರ್ಯನ ಸಂಬಂಧದಿಂದ [ಸವಾಯ] ಐಶ್ವರ್ಯದ ಹೇತು [ಉಷಸೇ] ಪ್ರಾತಃಕಾಲಕ್ಕಾಗಿ [ಯೋನಿಮ್] ಮನೆ-ಮನೆಗಳಲ್ಲಿ [ಆರೈಕ್] ಬೇರೆ ಬೇರೆಯಾಗಿ ಪ್ರಾಪ್ತವಾಗುವುದೋ, ಹಾಗೆಯೇ [ಚಿತ್ರಃ] ಅದ್ಭುತ ಗುಣ ಕರ್ಮ ಸ್ವಭಾವವುಳ್ಳ [ಪ್ರಕೇತಃ] ಬುದ್ಧಿವಂತನಾದ ವಿದ್ವಾಂಸನು ಯಾವ [ಇದಮ್] ಈ [ಜ್ಯೋತಿಷಾಮ್] ಪ್ರಕಾಶಗಳ ಮಧ್ಯೆ [ಶ್ರೇಷ್ಠಮ್] ಅತ್ಯಂತ ಉತ್ತಮ [ಜ್ಯೋತಿಃ] ಪ್ರಕಾಶ ಸ್ವರೂಪ ಬ್ರಹ್ಮನನ್ನು [ಆ ಅಗಾತ್] ಪಡೆಯುತ್ತದೆ. [ಏವ] ಅದೇ [ವಿಭ್ವಾ] ವ್ಯಾಪಕ ಪರಮಾತ್ಮನೊಡನೆ ಸುಖೈಶ್ವರ್ಯಗಳಿಗಾಗಿ [ಅಜನಿಷ್ಟ] ಉತ್ಪನ್ನವಾಗುತ್ತಾ ಮತ್ತು ದುಃಖಸ್ಥಾನಗಳಿಂದ ಬೇರೆಯಾಗುತ್ತದೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಸೂರ್ಯೋದಯವಾದೊಡನೆ ಅಂಧಕಾರವು ನಾಶವಾಗುತ್ತದೋ, ಹಾಗೆಯೇ ಬ್ರಹ್ಮಜ್ಞಾನವಾದೊಡನೆ ದುಃಖವೂ ದೂರವಾಗುತ್ತದೆ. ಆದುದರಿಂದ ಎಲ್ಲ ಮಾನವರೂ ಪರಮೇಶ್ವರನನ್ನು ತಿಳಿಯಲು ಪ್ರಯತ್ನಪಡುವುದು ಯೋಗ್ಯವಾಗಿದೆ.

ಈಗ ರಾತ್ರಿ ಮತ್ತು ಪ್ರಭಾತ ವೇಳೆಯ ವ್ಯವಹಾರವನ್ನು ತಿಳಿಸಲಾಗಿದೆ.

ರುಶದ್ವತ್ಸಾ ರುಶತೀ ಶ್ವೇತ್ಯಾಗಾ-ದಾರೈಗು ಕೃಷ್ಣಾ ಸದನಾನ್ಯಸ್ಯಾಃ ।
ಸಮಾನಬಂಧೂ ಅಮೃತೇ ಅನೂಚೀ ದ್ಯಾವಾ ವರ್ಣಂ ಚರತ ಆಮಿನಾನೇ ॥೨॥

ಪದಾರ್ಥ:- ಹೇ ಮನುಷ್ಯರೇ! ಯಾವ ಈ [ರುಶದ್ವತ್ಸಾ] ಪ್ರಕಾಶಿತ ಸೂರ್ಯರೂಪದ ಎಳೆಗರುವನ್ನು ಕಾಮನೆ ಮಾಡುವ ಅಥವಾ [ರುಶತೀ] ಕೆಂಪು ಕೆಂಪಾದ [ಶ್ವೇತ್ಯಾ] ಶುಕ್ಲ ವರ್ಣದಿಂದ ಕೂಡಿದ ಅಂದರೆ ಗುಲಾಬಿ ಬಣ್ಣದ ಪ್ರಭಾತ ವೇಳೆಯು [ಆ ಅಗಾತ್] ಪ್ರಾಪ್ತವಾಗುವುದು. [ಅಸ್ಯಾಃ ಉ] ಈ ಅದ್ಭುತ ಉಷೆಯ [ಸದನಾನಿ] ಸ್ಥಾನಗಳನ್ನು ಪಡೆದ [ಕೃಷ್ಣಾ] ಕಪ್ಪುವರ್ಣದ ರಾತ್ರಿಯು [ಆರೈಕ್] ಉತ್ತಮವಾಗಿ ಬೇರೆ ಬೇರೆ ವರ್ತಿಸುತ್ತದೆ. ಅವೆರಡೂ [ಅಮೃತೇ] ಪ್ರವಾಹ ರೂಪದಿಂದ ನಿತ್ಯವೂ [ಆಮಿನಾವೇ] ಪರಸ್ಪರ ಒಂದು ಇನ್ನೊಂದನ್ನು ಎಸೆಯುತ್ತಿರುವಂತೆ [ಅನೂಚೀ] ವರ್ತಿಸುತ್ತಾ [ದ್ಯಾವಾ] ತಮ್ಮ ತಮ್ಮ ಪ್ರಕಾಶದಿಂದ ಪ್ರಕಾಶಮಾನವಾಗಿ

[ಸಮಾನಬಂಧೂ] ಈರ್ವರು ಸಹೋದರರು ಅಥವಾ ಈರ್ವರು ಮಿತ್ರರಂತೆ [ವರ್ಣಮ್] ತಮ್ಮ ತಮ್ಮ ರೂಪಗಳನ್ನು [ಚರತಃ] ಪಡೆಯುತ್ತವೆ. ಅವೆರಡನ್ನು ಯುಕ್ತಿಯಿಂದ ಸೇವಿಸಿರಿ. [ಈ ಮಂತ್ರಕ್ಕೆ ಯಾಸ್ಕರು ನಿರು. ೨.೨೦ರಲ್ಲಿ ವ್ಯಾಖ್ಯಾನ ಮಾಡಿರುತ್ತಾರೆ.]

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ಯಾವ ಸ್ಥಾನದಲ್ಲಿ ರಾತ್ರಿಯು ವಾಸಿಸುವುದೋ ಅದೇ ಸ್ಥಾನದಲ್ಲಿ ಕಾಲಾಂತರದಲ್ಲಿ ಉಷೆಯು ವಾಸಿಸುವುದು. ಇವೆರಡರಿಂದ ಉತ್ಪನ್ನವಾದ ಸೂರ್ಯನು ಇಬ್ಬರು ಮಾತೆಯರಿಂದ ಉತ್ಪನ್ನವಾದ ಹುಡುಗರಂತೆ ಮತ್ತು ಇವೆರಡೂ ಸದಾ ಬಂಧುಗಳಂತೆ ಬಂದು ಹೋಗುವ ಉಷೆ ಮತ್ತು ರಾತ್ರಿಗಳಾಗಿವೆ. ಹಾಗೆಂದು ನೀವು ತಿಳಿಯಿರಿ.

ಮತ್ತೆ ಅದೇ ವಿಷಯ

ಸಮಾನೋ ಅಧ್ವಾ ಸ್ವಸ್ರೋರನಂತ-ಸ್ತಮನ್ಯಾನ್ಯಾ ಚರತೋ ದೇವಶಿಷ್ಟೇ ।
ನ ಮೇಥೇತೇ ನ ತಸ್ಥತುಃ ಸುಮೇಕೇ ನಕ್ತೋಷಾಸಾ ಸಮನಸಾ ವಿರೂಪೇ ॥೩॥

ಪದಾರ್ಥ:- ಹೇ ಮನುಷ್ಯರೇ! ಯಾವ [ಸ್ವಸ್ರೋಃ] ಸಹೋದರಿಯಂತೆ ವರ್ತಿಸುವ ರಾತ್ರಿ ಮತ್ತು ಪ್ರಭಾತ ವೇಳೆಗಳು [ಅನಂತಃ] ಅಂದರೆ ಸೀಮಾರಹಿತ ರೂಪವು [ಸಮನಸಾ] ಹಾಗೂ ಸಮಾನ ಚಿತ್ತವುಳ್ಳ ಮಿತ್ರರಂತೆ ವರ್ತಿಸುವ [ಸುಮೇಕೇ] ಮತ್ತು ನಿಯಮದಲ್ಲಿ ಬಿಟ್ಟ [ನಕ್ತೋಷಸಾ] ರಾತ್ರಿ ಮತ್ತು ಪ್ರಭಾತ ವೇಳೆಗಳು [ತಮ್] ಅವು ತಮ್ಮ ನಿಯಮಗಳನ್ನು [ಅನ್ಯಾನ್ಯಾ] ಬೇರೆ-ಬೇರೆ [ಚರತಿ] ಪಡೆಯುತ್ತವೆ. ಮತ್ತು ಅವು ಎಂದಿಗೂ [ನ ಮೇಥೇತೇ] ನಷ್ಟವಾಗುವುದಿಲ್ಲ ಮತ್ತು [ನ ತಸ್ಥತುಃ] ನಿಲ್ಲುವುದಿಲ್ಲ. ಅವುಗಳನ್ನು ನೀವು ಯಥಾವತ್ತಾಗಿ ತಿಳಿಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ವಿರುದ್ಧ ಸ್ವರೂಪವುಳ್ಳ ಮಿತ್ರರು ಈ ಎಲ್ಲೆಯಿಲ್ಲದ ಅನಂತ ಆಕಾಶದಲ್ಲಿ ನ್ಯಾಯಾಧೀಶನ ನಿಯಮದಂತೆ ವರ್ತಿಸುತ್ತವೋ, ಹಾಗೆಯೇ ಹಗಲು-ರಾತ್ರಿಗಳು ಪರಮೇಶ್ವರನ ನಿಯಮದಿಂದ ನಿಯತವಾಗಿ ವರ್ತಿಸುತ್ತವೆ.

ಮತ್ತೆ ಉಷೆಯ ವಿಷಯ

ಭಾಸ್ವತೀ ನೇತ್ರೀ ಸೂನೃತಾನಾ-ಮಚೇತಿ ಚಿತ್ರಾ ವಿ ದುರೋ ನ ಆವಃ ।
ಪ್ರಾರ್ಪ್ಯಾ ಜಗದ್ವ್ಯು ನೋ ರಾಯೋ ಅಖ್ಯ-ದುಷಾ ಅಜೀಗರ್ಭುವನಾನಿ ವಿಶ್ವಾ ॥೪॥

ಪದಾರ್ಥ:- ಹೇ ವಿದ್ವಾಂಸರೇ! ನಿಮಗೆ ಯಾವ [ಭಾಸ್ವತೀ] ಅತ್ಯುತ್ತಮ ಪ್ರಕಾಶವುಳ್ಳ [ಸೂನೃತಾನಾಮ್] ವಾಣಿ ಮತ್ತು ಎಚ್ಚರದ ವ್ಯವಹಾರಗಳಲ್ಲಿ [ನೇತ್ರೀ] ಪ್ರಾಪ್ತವಾಗುವ ಮತ್ತು [ಚಿತ್ರಾ] ಅದ್ಭುತ ಗುಣ ಕರ್ಮ ಸ್ವಭಾವವುಳ್ಳ [ಉಷಾಃ] ಪ್ರಭಾತ ವೇಳೆಯು [ನಃ] ನಮಗಾಗಿ [ದುರಃ] ದ್ವಾರಗಳು [ವಿ ಆವಃ] ಪ್ರಕಟ ಮಾಡುವಂತೆ [ನಃ] ನಮಗಾಗಿ [ಜಗತ್] ಜಗತ್ತನ್ನು [ಪ್ರಾರ್ಪ್ಯಾ] ಉತ್ತಮವಾಗಿ ಅರ್ಪಿಸಿ [ರಾಯಃ] ಸಂಪತ್ತನ್ನು [ನಿ ಅಖ್ಯತ್] ಪ್ರಸಿದ್ಧ ಪಡಿಸುತ್ತವೆ. [ಉ] ಮತ್ತು [ವಿಶ್ವಾ] ಎಲ್ಲ [ಭುವನಾನಿ] ಲೋಕಗಳನ್ನು [ಅಜೀಗಃ] ತನ್ನ ವ್ಯಾಪ್ತಿಯಿಂದ ನುಂಗುತ್ತವೆ, ಅದನ್ನು [ಅಜೀತಿ] ಅವಶ್ಯವಾಗಿ ತಿಳಿಯಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ಉಷೆಯು ಎಲ್ಲ ಜಗತ್ತನ್ನು ಪ್ರಕಾಶಪಡಿಸಿ, ಎಲ್ಲ ಪ್ರಾಣಿಗಳನ್ನು ಎಚ್ಚರಿಸಿ, ಎಲ್ಲ ಜಗತ್ತಿನಲ್ಲಿ ವ್ಯಾಪ್ತವಾಗಿ, ಎಲ್ಲ ಪದಾರ್ಥಗಳನ್ನು ವೃಷ್ಟಿಯ

ಮುಖಾಂತರ ಸಮರ್ಥಗೊಳಿಸಿ, ಪುರುಷಾರ್ಥದಲ್ಲಿ ಪ್ರವೃತ್ತಗೊಳಿಸಿ, ಧನಾದಿಗಳನ್ನು ಪ್ರಾಪ್ತಿಗೊಳಿಸಿ, ತಾಯಿಯಂತೆ ಎಲ್ಲ ಪ್ರಾಣಿಗಳನ್ನೂ ಪಾಲಿಸುತ್ತದೆ. ಆದುದರಿಂದ ಉತ್ತಮ ಪ್ರಾತಃಕಾಲದ ವೇಳೆಯನ್ನು ಆಲಸ್ಯದಿಂದ ವ್ಯರ್ಥವಾಗಿ ಕಳೆಯಬಾರದು.

ಮತ್ತೆ ಅದೇ ವಿಷಯ.

ಜಿಹ್ಮಶ್ಯೇ೩ ಚರಿತವೇ ಮಘೋನ್ಯಾಭೋಗಯ ಇಷ್ಟಯೇ ರಾಯ ಉ ತ್ವಮ್ ।
ದಭ್ರಂ ಪಶ್ಯದ್ಭ್ಯ ಉರ್ವಿಯಾ ವಿಚಕ್ಷ ಉಷಾ ಅಜೀಗರ್ಭುವನಾನಿ ವಿಶ್ವಾ ॥೫॥

ಪದಾರ್ಥ:- ಹೇ ವಿದ್ವಾಂಸನೇ! [ತ್ವಮ್] ನೀನು ಯಾವ [ಉರ್ವಿಯಾ] ಅನೇಕ ರೂಪಗಳಿಂದ ಕೂಡಿದ [ಮಘೋನಿ] ಅಧಿಕ ಧನವನ್ನುಂಟುಮಾಡುವ [ಉಷಾ] ಪ್ರಭಾತ ವೇಳೆಯು [ವಿಶ್ವಾ] ಎಲ್ಲ [ಭುವನಾನಿ] ಲೋಕಗಳನ್ನು [ಅಜೀಗಃ] ನುಂಗುವ [ಜಿಹ್ಮಶ್ಯೇ] ಯಾವ ಮುದುರಿಕೊಂಡು ಮಲಗುವ ಅಂದರೆ ಸೋಮಾರಿತನದಿಂದ ನಿದ್ರಿಸುವವರಿಗಾಗಿ ಅಥವಾ [ಚರಿತವೇ] ಚಲಿಸುವಂತೆ ಮಾಡಲು [ವಿಚಕ್ಷೇ] ವಿವಿಧವಾಗಿ ಪ್ರಕಟಿಸಲು [ಆಭೋಗಯೇ] ಎಲ್ಲ ಕಡೆಗಳಿಂದ ಸುಖಭೋಗವು ಯಾವುದರಲ್ಲಿ ಇದೆಯೋ, ಆ ಪುರುಷಾರ್ಥಯುಕ್ತ ಕ್ರಿಯೆಗಳಿಗಾಗಿ [ಇಷ್ಟಯೇ] ಅಥವಾ ಯಾವುದರಲ್ಲಿ ಸಿಗುತ್ತದೋ ಆ ಯಜ್ಞಕ್ಕಾಗಿ ಅಥವಾ [ರಾಯೇ] ಸಂಪತ್ತಿಗಾಗಿ ಅಥವಾ [ಪಶ್ಯದ್ಭ್ಯಃ] ನೋಡುತ್ತಿರುವ ಮನುಷ್ಯರಿಗಾಗಿ [ದಭ್ರಮ್] [ಉ] ಚಿಕ್ಕವಸ್ತುವನ್ನು ಕೂಡ ಪ್ರಕಾಶಪಡಿಸುವ ಆ ಉಷಃಕಾಲವನ್ನು ತಿಳಿಯಿರಿ.

ಭಾವಾರ್ಥ:- ಯಾವ ಮನುಷ್ಯನು ರಾತ್ರಿಯ ನಾಲ್ಕನೇ ಪ್ರಹರದಲ್ಲಿ ಎದ್ದು ಮತ್ತೆ ನಿದ್ರಿಸುವವರೆಗೆ ಸಮಯವನ್ನು ವ್ಯರ್ಥ ಮಾಡುವುದಿಲ್ಲವೋ ಅವರೇ ಸುಖಿಯಾಗುವರು, ಅನ್ಯರಲ್ಲ.

ಈಗ ಉಷೆಯ ದೃಷ್ಟಾಂತದಿಂದ ವಿದುಷೀ ಸ್ತ್ರೀಯ ವ್ಯವಹಾರವನ್ನು ತಿಳಿಸಲಾಗಿದೆ.

ಕ್ಷತ್ರಾಯ ತ್ವಂ ಶ್ರವಸೇ ತ್ವಂ ಮಹೀಯಾ ಇಷ್ಟಯೇ ತ್ವಮರ್ಥಮಿವ ತ್ವಮಿತ್ಯೈ ।
ವಿಸದೃಶಾ ಜೀವಿತಾಭಿಪ್ರಚಕ್ಷ ಉಷಾ ಅಜೀಗರ್ಭುವನಾನಿ ವಿಶ್ವಾ ॥೬॥

ಪದಾರ್ಥ:- ಹೇ ವಿದ್ವಾಂಸನಾದ ಸಭಾಧ್ಯಕ್ಷ ರಾಜನೇ! ಹೇಗೆ [ಉಷಾಃ] ಪ್ರಾತಃಕಾಲವು ತನ್ನ ಪ್ರಕಾಶದಿಂದ [ವಿಶ್ವಾ] ಎಲ್ಲ [ಭುವನಾನಿ] ಲೋಕಗಳನ್ನು [ಅಜೀಗಃ] ಪ್ರಕಾಶ ಪಡಿಸುವುದೋ ಹಾಗೆ [ತ್ವಮ್] ನೀನು [ಅಭಿಪ್ರಚಕ್ಷೇ] ಉತ್ತಮವಾಗಿ ಶಾಸ್ತ್ರ-ಬೋಧೆಯಿಂದ ಸಿದ್ಧವಾದ ವಾಣಿ ಮೊದಲಾದ ವ್ಯವಹಾರಗಳನ್ನು [ಕ್ಷತ್ರಾಯ] ರಾಜ್ಯಕ್ಕಾಗಿ ಮತ್ತು [ತ್ವಮ್] ನೀನು [ಶ್ರವಸೀ] ಶ್ರವಣ ಮತ್ತು ಅನ್ನಕ್ಕಾಗಿ [ತ್ವಮ್] ನೀನು [ಇಷ್ಟಯೇ] ಇಷ್ಟಸುಖ ಮತ್ತು [ಮಹೀಯ್ಯೈ] ಸತ್ಕಾರಕ್ಕಾಗಿ ಮತ್ತು [ತ್ವಮ್] ನೀನು [ಇತ್ಯೈ] ಸಂಗತಿಪ್ರಾಪ್ತಿಗಾಗಿ [ವಿಸದೃಶಾ] ವಿವಿಧ ಧರ್ಮಯುಕ್ತ ವ್ಯವಹಾರಗಳಿಗೆ ಅನುಕೂಲಕರ [ಅರ್ಥಮಿವ] ದ್ರವ್ಯದಂತೆ [ಜೀವಿತಾ] ಜೀವನಾದಿಗಳನ್ನು ಸದಾ ಸಿದ್ಧಗೊಳಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ವಿದ್ಯಾವಿನಯಗಳಿಂದ ಪ್ರಕಾಶಮಾನನಾದ ಸತ್ಪುರುಷನು ಎಲ್ಲಾ ಹತ್ತಿರದ ಪದಾರ್ಥಗಳಲ್ಲಿ ವ್ಯಾಪ್ತನಾಗಿ ಅವುಗಳ ಗುಣಗಳ ಪ್ರಕಾಶದಿಂದ ಸಮಸ್ತ ಅರ್ಥಗಳನ್ನು ಸಿದ್ಧಪಡಿಸುವವನಾಗುವನೋ, ಹಾಗೆ ರಾಜಾದಿ ಪುರುಷರು ವಿದ್ಯೆ, ನ್ಯಾಯ, ಮತ್ತು

ಧರ್ಮಾದಿಗಳಿಂದ ಎಲ್ಲ ಕಡೆಗಳಿಂದ ವ್ಯಾಪ್ತರಾಗಿ ಚಕ್ರವರ್ತೀ ರಾಜ್ಯವನ್ನು ಯಥಾವತ್ತಾಗಿ ರಕ್ಷಿಸಿ ಎಲ್ಲರಿಗೂ ಆನಂದವನ್ನುಂಟುಮಾಡಬೇಕು.

ಈಗ ಉಷೆಯ ದೃಷ್ಟಾಂತದಿಂದ ವಿದುಷೀ ಸ್ತ್ರೀಯ ವ್ಯವಹಾರವನ್ನು ತಿಳಿಸಲಾಗಿದೆ.

ಏಷಾ ದಿವೋ ದುಹಿತಾ ಪ್ರತ್ಯದರ್ಶಿ ವ್ಯುಚ್ಛಂತೀ ಯುವತಿಃ ಶುಕ್ರವಾಸಾಃ ।
ವಿಶ್ವಸ್ಯೇಶಾನಾ ಪಾರ್ಥಿವಸ್ಯ ವಸ್ವ ಉಷೋ ಅದ್ಯೇಹ ಸುಭಗೇ ವ್ಯುಚ್ಛ ॥೭॥

ಪದಾರ್ಥ:- ಹೇಗೆ [ಶುಕ್ರವಾಸಾಃ] ಶುದ್ಧ ಪರಾಕ್ರಮಯುಕ್ತನು [ವಿಶ್ವಸ್ಯ] ಸಮಸ್ತ [ಪಾರ್ಥಿವಸ್ಯ] ಪೃಥಿವಿಯಲ್ಲಿ ಪ್ರಸಿದ್ಧವಾದ [ವಸ್ವಃ] ಧನವನ್ನು [ಈಶಾನಾ] ಉತ್ತಮವಾಗಿ ಸಿದ್ಧಪಡಿಸುವ [ವ್ಯುಚ್ಛಂತೀ] ಮತ್ತು ನಾನಾ ಪ್ರಕಾರದ ಅಂಧಕಾರಗಳನ್ನು ದೂರ ಮಾಡುತ್ತಾ [ಏಷಾ] ಈ [ದಿವಃ] ಸೂರ್ಯನ [ಯುವತೀಃ] ಯೌವ್ವನಿ ಅಂದರೆ ಅತಿ ಪರಾಕ್ರಮವತಿ [ದುಹಿತಾ] ಮಗಳು ಪ್ರಭಾತ ವೇಳೆಯನ್ನು [ಪ್ರತ್ಯದರ್ಶಿ] ಮತ್ತೆ ಮತ್ತೆ ನೋಡುತ್ತಾಳೋ ಹಾಗೆ [ಸುಭಗೇ] ಹೇ ಉತ್ತಮ ಭಾಗ್ಯವತೀ [ಉಷಃ] ಸುಖದಲ್ಲಿ ವಾಸಮಾಡುವ ವಿದುಷೀ! [ಅದ್ಯ] ಇಂದು ನೀನು [ಇಹ] ಇಲ್ಲಿ [ವ್ಯುಚ್ಛ] ದುಃಖಗಳನ್ನು ದೂರಮಾಡು.

ಭಾವಾರ್ಥ:- ಈ ವಾಚಕಲುಪ್ತೋಪಮಾಲಂಕಾರವಿದೆ. ಯಾವಾಗ ಬ್ರಹ್ಮಚರ್ಯೆಯನ್ನು ಪಾಲನೆ ಮಾಡಿದ ಸನ್ಮಾರ್ಗಸ್ಥನಾದ ಯೌವ್ವನದಿಂದಿರುವ ವಿದ್ವಾಂಸನು ತನಗೆ ಸಮಾನಳಾದ, ತನ್ನಂತೆ ವಿದ್ಯೆಯಿಂದ ಕೂಡಿದ, ಬ್ರಹ್ಮಚಾರಿಣಿಯಾದ ಸುಂದರಿಯೂ, ಬಲಪರಾಕ್ರಮಿಯೂ ಸಾಧ್ವಿಯೂ ಆದ ಉತ್ತಮ ಸ್ವಭಾವವುಳ್ಳ ಸುಖಗಳನ್ನು ಕೊಡುವ ಯುವತಿ ಅಂದರೆ ೨೦ನೇ ವರ್ಷದಿಂದ ೨೪ನೇ ವರ್ಷದವರೆಗೆ ಕೂಡಿದ ಕನ್ಯೆಯ ವಿವಾಹ ಮಾಡಿ ಕೊಳ್ಳಬೇಕು. ಆಗಲೇ ವಿವಾಹಿತ ಸ್ತ್ರೀ-ಪುರುಷರು ಉಷೆಯಂತೆ ಸುಪ್ರಕಾಶಿತರಾಗಿ ಎಲ್ಲ ಸುಖಗಳನ್ನೂ ಪಡೆಯುವರು.

ಮತ್ತೆ ಅದೇ ವಿಷಯ.

ಪರಾಯತೀನಾಮನ್ವೇತಿ ಪಾಥ ಆಯತೀನಾಂ ಪ್ರಥಮಾ ಶಶ್ವತೀನಾಮ್ ।
ವ್ಯುಚ್ಛಂತೀ ಜೀವಮುದೀರಯಂತ್ಯುಷಾ ಮೃತಂ ಕಂ ಚನ ಬೋಧಯಂತೀ ॥೮॥

ಪದಾರ್ಥ:- ಹೇ ಉತ್ತಮ ಸೌಭಾಗ್ಯವನ್ನು ಹೆಚ್ಚಿಸುವಂತಹ ಸ್ತ್ರೀಯರೇ! ಹೇಗೆ ಈ [ಉಷಾಃ] ಪ್ರಭಾತ ವೇಳೆಯು [ಶಶ್ವತೀನಾಮ್] ಪ್ರವಾಹ ರೂಪದಿಂದ ಅನಾದಿ ಸ್ವರೂಪವಾದ [ಪರಾಯತೀನಾಮ್] ಪೂರ್ವ ವ್ಯತೀತವಾದ ಪ್ರಭಾತ ವೇಳೆಗಳ ಹಿಂದೆ [ಆಯತೀನಾಮ್] ಮುಂಬರುವ ವೇಳೆಗಳಲ್ಲಿ [ಪ್ರಥಮಾ] ಮೊದಲು [ವ್ಯುಚ್ಛಂತೀ] ಅಂಧಕಾರವನ್ನು ವಿನಾಶ ಮಾಡುತ್ತಾ ಮತ್ತು [ಜೀವಮ್] ಜೀವನನ್ನು [ಉದೀರಯನ್ತೀ] ಕಾರ್ಯಗಳಲ್ಲಿ ಪ್ರವೃತ್ತಗೊಳಿಸುತ್ತಾ [ಕಮ್] ಯಾವ [ಚನ ಮೃತಮ್] ಮೃತನಂತೆ ಮಲಗಿರುವ ಜನರನ್ನು [ಬೋಧಯನ್ತೀ] ಎಚ್ಚರಿಸುತ್ತಾ [ಪಾಥಃ] ಆಕಾಶಮಾರ್ಗವನ್ನು [ಅನ್ವೇತಿ] ಅನುಕೂಲತೆಯಿಂದ ಹೋಗಿ ಬರುತ್ತದೆಯೋ, ಹಾಗೆಯೇ ನೀವು ಪತಿವ್ರತೆಯರಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಸೌಭಾಗ್ಯವನ್ನು ಇಚ್ಛಿಸುವ ಸ್ತ್ರೀಯರು ಉಷೆಯಂತೆ ಭೂತ, ಭವಿಷ್ಯತ್, ವರ್ತಮಾನ ಸಮಯಗಳಲ್ಲಿ ಮಾಡಿದ ಉತ್ತಮಶೀಲ ಪತಿವ್ರತಾ ಸ್ತ್ರೀಯರ

ಸನಾತನ ವೇದೋಕ್ತ ಧರ್ಮದ ಆಶ್ರಯದಿಂದ ತಮ್ಮ ತಮ್ಮ ಪತಿಯರನ್ನು ಸುಖಪಡಿಸುತ್ತಾ ಮತ್ತು ಉತ್ತಮ ಶಿಕ್ಷಣಗಳನ್ನೀಯುತ್ತಾ ಯಾವಾಗಲೂ ಆನಂದವನ್ನು ಪಡೆಯಬೇಕು.

ಮತ್ತೆ ಅದೇ ವಿಷಯ

ಉಷೋ ಯದಗ್ನಿಂ ಸಮಿಧೇ ಚಕರ್ಥ ವಿ ಯದಾವಶ್ಚಕ್ಷಸಾ ಸೂರ್ಯಸ್ಯ ।
ಯನ್ಮಾನುಷಾನ್ ಯಕ್ಷ್ಯಮಾಣಾ ಅಜೀಗ-ಸ್ತದ್ದೇವೇಷು ಚಕೃಷೇ ಭದ್ರಮಪ್ನಃ ॥೯॥

ಪದಾರ್ಥ:– ಹೇ [ಉಷಃ] ಪ್ರಭಾತವೇಳೆಗೆ ಸಮಾನಳಾದ ವಿದುಷೀ ಸ್ತ್ರೀ! [ಯತ್] ಯಾವ ನೀನು [ಸೂರ್ಯಸ್ಯ] ಸೂರ್ಯನ [ಚಕ್ಷಸಾ] ಪ್ರಕಾಶದಿಂದ [ಸಮಿಧೇ] ಉತ್ತಮರೀತಿಯ ಪ್ರಕಾಶಕ್ಕಾಗಿ [ಅಗ್ನಿಮ್] ವಿದ್ಯುದಾಗ್ನಿಯನ್ನು ಪ್ರದೀಪ್ತ [ಚಕರ್ಥ] ಮಾಡುತ್ತೀಯೆ ಅಥವಾ [ಯತ್] ಯಾವ ನೀನು ದುಃಖಿಗಳನ್ನು [ವಿ ಆವಃ] ದೂರ ಮಾಡುತ್ತಾ ಅಥವಾ [ಯತ್] ಯಾವ ನೀನು [ಯಕ್ಷ್ಯಮಾಣಾನ್] ಯಜ್ಞವನ್ನು ಮಾಡುವ [ಮಾನುಷಾನ್] ಮನುಷ್ಯರನ್ನು [ಅಜೀಗಃ] ಪಡೆದು ಪ್ರಸನ್ನಗೊಳಿಸುತ್ತೀಯೆ. [ತತ್] ಆ ನೀನು [ದೇವೇಷು] ವಿದ್ವಾಂಸರಾದ ಪತಿಗಳಲ್ಲಿ ವಾಸಿಸಿ [ಭದ್ರಮ್] ಕಲ್ಯಾಣಮಾಡುವ [ಅಪ್ನಃ] ಸಂತಾನವನ್ನು ಉತ್ಪನ್ನ [ಚಕೃಷೀ] ಮಾಡು.

ಭಾವಾರ್ಥ:– ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನಿಗೆ ಸಂಬಂಧಿಸಿದ ಪ್ರಾತಃಕಾಲದ ವೇಳೆಯು ಎಲ್ಲ ಪ್ರಾಣಿಗಳೊಂದಿಗೆ ಸೇರಿ ಎಲ್ಲ ಜೀವಿಗಳನ್ನು ಸುಖಪಡಿಸುತ್ತದೋ, ಹಾಗೆ ಸುಶೀಲೆಯಾದ ವಿದುಷಿ ಸ್ತ್ರೀಯರು ತಮ್ಮ ಪತಿಯಂದಿರನ್ನು ಪ್ರಸನ್ನಗೊಳಿಸುತ್ತಾ ಉತ್ತಮ ಸಂತಾನವನ್ನು ಹೊಂದುವುದರಲ್ಲಿ ಸಮರ್ಥರಾಗುತ್ತಾರೆ. ಇತರ ದುಷ್ಟ ಭಾರ್ಯೆಯರು ಅಂತಹ ಕಾರ್ಯ ಮಾಡಲಾರರು.

ಮತ್ತೆ ಅದೇ ವಿಷಯ

ಕಿಯಾತ್ಯಾ ಯತ್ ಸಮಯಾ ಭವಾತಿ ಯಾ ವ್ಯೂಷುರ್ಯಾಶ್ಚ ನೂನಂ ವ್ಯುಚ್ಛಾನ್ ।
ಅನು ಪೂರ್ವಾಃ ಕೃಪತೇ ವಾವಶಾನಾ ಪ್ರದೀಧ್ಯಾನಾ ಜೋಷಮನ್ಯಾಭಿರೇತಿ ॥೧೦॥

ಪದಾರ್ಥ:– ಹೇ ಸ್ತ್ರೀ! [ಯತ್] ಹೇಗೆ [ಯಾಃ] ಯಾವ [ಪೂರ್ವಾಃ] ಮೊದಲು ಗತಿಸಿದ ಪ್ರಭಾತ ವೇಳೆಯ ಎಲ್ಲ ಪದಾರ್ಥಗಳನ್ನು [ಕಿಯತಿ] ಎಷ್ಟು [ಸಮಯಾ] ಸಮಯ [ವ್ಯೂಷುಃ] ಪ್ರಕಾಶ ಮಾಡುತ್ತಿತ್ತೋ [ಯಾಃ ಚಃ] ಮತ್ತು ಯಾವ [ವ್ಯುಚ್ಛಾನ್] ಸ್ಥಿರ ಪದಾರ್ಥಗಳ [ವಾವಶಾನಾ] ಇಚ್ಛೆ ಮಾಡುವಳೋ [ಪ್ರದೀಧ್ಯಾಯ] ಮತ್ತು ಪ್ರಕಾಶ ಪಡಿಸುತ್ತಾ [ಕೃಪತೇ] ಅನುಗ್ರಹ ಮಾಡುತ್ತಾ [ನೂನಮ್] ನಿಶ್ಚಯವಾಗಿ [ಆ ಭವತಿ] ಉತ್ತಮವಾಗುತ್ತದೆ ಅಂದರೆ ಪ್ರಕಾಶಪಡಿಸುತ್ತಾ ಅವಳಂತೆ ಎರಡನೇ ವಿದ್ಯಾವತಿಯಾದ ವಿದುಷೀ [ಅನ್ಯಾಭಿಃ] ಇತರ ಸ್ತ್ರೀಯರೊಂದಿಗೆ [ಜೋಷಮನ್ವೇತಿ] ಪ್ರೀತಿಯನ್ನು ಅನುಕೂಲತೆಯಿಂದ ಪಡೆಯುವಳೋ, ಹಾಗೆ ನೀನು ಪತಿಯಾದ ನನ್ನೊಡನೆ ಸದಾ ವರ್ತಿಸು.

ಭಾವಾರ್ಥ:– ಈ ಸಮಯದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಪ್ರಶ್ನೆ : ಎಷ್ಟು ಸಮಯದವರೆಗೆ ಉಷಃಕಾಲವಿರುತ್ತದೆ? ಉತ್ತರ : ಸೂರ್ಯೋದಯಕ್ಕೆ ಪೂರ್ವದಲ್ಲಿ ಐದು ಘಡಿಗಳು ಉಷಃಕಾಲವಿರುತ್ತದೆ [ಎರಡು

ಗಂಟೆ] ಪ್ರಶ್ನೆ: ಯಾವ ಸ್ತ್ರೀ ಸುಖವನ್ನು ಪಡೆಯುತ್ತಾಳೆ? ಉತ್ತರ: ಯಾವ ಅನ್ಯ ವಿದುಷೀ ಸ್ತ್ರೀಯರು ಮತ್ತು ತನ್ನ ಪತಿಯರೊಂದಿಗೆ ಸದಾ ಅನುಕೂಲಕರಳಾಗಿರುತ್ತಾಳೋ ಮತ್ತು ಆ ಸ್ತ್ರೀಯರು ಪ್ರಶಂಸೆಯನ್ನು ಪಡೆಯುತ್ತಾರೆ. ಯಾರು ಕೃಪಾಳುವಾಗಿರುತ್ತಾರೋ, ಆ ಸ್ತ್ರೀಯರೇ ಪತಿಯಂದಿರನ್ನು ಪ್ರಸನ್ನಗೊಳಿಸುವರು. ಯಾರು ಪತಿಯರೊಂದಿಗೆ ಅನುಕೂಲಕರವಾಗಿ ವರ್ತಿಸುವರೋ ಅವರೇ ಸದಾ ಸುಖಿಗಳಾಗುವರು.

ಮತ್ತೆ ಪ್ರಭಾತ ವಿಷಯ

ಈಯುಷ್ಟೇ ಯೇ ಪೂರ್ವತರಾಮಪಶ್ಯನ್ ವ್ಯುಚ್ಛಂತೀಮುಷಸಂ ಮರ್ತ್ಯಾಸಃ ।
ಅಸ್ಮಾಭಿರೂ ನು ಪ್ರತಿಚಕ್ಷ್ಯಾಭೂ-ದೋ ತೇ ಯಂತಿ ಯೇ ಅಪರೀಷು ಪಶ್ಯಾನ್ ॥೧೧॥

ಪದಾರ್ಥ:– [ಯೇ] ಯಾವ [ಮರ್ತ್ಯಾಸಃ] ಮನುಷ್ಯರು [ವ್ಯುಚ್ಛಂತೀಮ್] ಎಚ್ಚರಿಸುತ್ತಾ [ಪೂರ್ವತರಾಮ್] ಅತಿಪ್ರಾಚೀನ [ಉಷಸಮ್] ಪ್ರಭಾತ ವೇಳೆಯನ್ನು [ಈಯುಃ] ಪಡೆಯಲಿ. [ತೇ] ಅವರು [ಅಸ್ಮಾಭಿಃ] ನಮ್ಮೊಡನೆ ಸುಖವನ್ನು [ಅಪಶ್ಯನ್] ನೋಡುವರು. ಪ್ರಭಾತವೇಳೆಯು ನಮ್ಮೊಡನೆ [ಪ್ರತಿಚಕ್ಷ್ಯಾ] ಪ್ರತ್ಯಕ್ಷವಾಗಿ ನೋಡಲು ಯೋಗ್ಯ [ಅಭೂತ್] ಆಗುವುದು. ಅದು [ನು] ಶೀಘ್ರ ಸುಖ ಕೊಡುವುದಾಗುವುದು. [ಉ] ಮತ್ತು [ಯೇ] ಯಾವ [ಅಪರೀಷು] ಬರುವ ಉಷೆಗಳಲ್ಲಿ ವ್ಯತೀತವಾಗುವ ಉಷೆಯನ್ನು [ಪಶ್ಯಾನ್] ನೋಡಲಿ [ತೇ] ಅವರು [ಓ] ಸುಖವನ್ನೇ [ಯಂತಿ] ಪಡೆಯುವರು.

ಭಾವಾರ್ಥ:– ಯಾರು ಉಷಃಕಾಲಕ್ಕೆ ಮೊದಲೇ ಹಾಸಿಗೆಯಿಂದೆದ್ದು ಆವಶ್ಯವಾದ ಕರ್ಮಗಳನ್ನು ಮಾಡಿ ಪರಮೇಶ್ವರನ ಧ್ಯಾನ ಮಾಡುವರೋ, ಅವರೇ ಬುದ್ಧಿವಂತರೂ ಮತ್ತು ಧಾರ್ಮಿಕರೂ ಆಗುವರು. ಯಾವ ಸ್ತ್ರೀ-ಪುರುಷರು ಪರಮೇಶ್ವರನನ್ನು ಧ್ಯಾನಿಸಿ ಪ್ರೀತಿಯಿಂದ ಪರಸ್ಪರ ಮಾತು-ಕಥೆ ನಡೆಸುವರೋ ಅವರೇ ಅನೇಕ ವಿಧದ ಸುಖಗಳನ್ನು ಪಡೆಯುತ್ತಾರೆ.

ಮತ್ತೆ ಉಷೆಯ ಪ್ರಸಂಗದಿಂದ ಸ್ತ್ರೀ ವಿಷಯವನ್ನು ಹೇಳಲಾಗಿದೆ.

ಯಾವಯದ್ ದ್ವೇಷಾ ಋತಪಾ ಋತೇಜಾಃ ಸುಮ್ನಾವರೀ ಸೂನೃತಾ ಈರಯಂತೀ ।
ಸುಮಂಗಲೀರ್ಬಿಭ್ರತೀ ದೇವವೀತಿ-ಮಿಹಾದ್ಯೋಷಃ ಶ್ರೇಷ್ಠತಮಾ ವ್ಯುಚ್ಛ ॥೧೨॥

ಪದಾರ್ಥ:– ಹೇ [ಉಷಃ] ಉಷೆಯಂತೆ ವರ್ತಿಸುವ ವಿದುಷೀ ಸ್ತ್ರೀ! [ಯಾವಯದ್ ದ್ವೇಷಾ] ಯಾವನು ದ್ವೇಷಯುಕ್ತ ಕರ್ಮವನ್ನು ದೂರಮಾಡಿ [ಋತಪಾಃ] ಸತ್ಯದ ರಕ್ಷಕನು [ಋತೇಜಾಃ] ಸತ್ಯ ವ್ಯವಹಾರಗಳಲ್ಲಿ ಪ್ರಸಿದ್ಧನು [ಸುಮ್ನಾ ವರೀ] ಯಾವುದರಲ್ಲಿ ಪ್ರಶಂಸಿತ ಸುಖವು ವಿದ್ಯಮಾನವಾಗಿದೆಯೋ [ಸುಮಂಗಲೀ] ಯಾವುದರಲ್ಲಿ ಸುಂದರವೂ ಮಂಗಳವೂ ಇದೆಯೋ ಆ [ಸೂನೃತಾಃ] ವೇದಾದಿ ಸತ್ಯ ಶಾಸ್ತ್ರಗಳ ಸಿದ್ಧಾಂತವಾಣಿಗಳನ್ನು [ಈರಯಂತೀ] ಶೀಘ್ರ ಪ್ರೇರಣೆ ಮಾಡುತ್ತಾ [ಶ್ರೇಷ್ಠತಮಾ] ಅತಿಶಯವಾದ ಉತ್ತಮ ಗುಣ ಕರ್ಮ, ಸ್ವಭಾವದಿಂದ ಕೂಡಿದ [ದೇವವೀತಿಮ್] ವಿದ್ವಾಂಸರ ವಿಶೇಷ ನೀತಿಯನ್ನು [ಬಿಭ್ರತೀ] ಧಾರಣ ಮಾಡುತ್ತಿರುವ ನೀನು [ಇಹ] ಇಲ್ಲಿ [ಅದ್ಯ] ಇಂದು [ವ್ಯುಚ್ಛ] ದುಃಖವನ್ನು ದೂರಮಾಡು.

ಭಾವಾರ್ಥ:– ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಪ್ರಭಾತ ವೇಳೆಯು ಅಂಧಕಾರವನ್ನು ನಿವಾರಿಸಿ, ಪ್ರಕಾಶದ ಪ್ರಾದುರ್ಭಾವ ಮಾಡಿ, ಧಾರ್ಮಿಕರನ್ನು ಸುಖಿಗಳನ್ನಾಗಿಯೂ ಚೋರಾದಿಗಳನ್ನು ಪೀಡಿಸಿ

ಎಲ್ಲ ಪ್ರಾಣಿಗಳಿಗೂ ಆನಂದವನ್ನುಂಟುಮಾಡುವುದೋ, ಹಾಗೆಯೇ ವಿದ್ಯೆ, ಧರ್ಮ ಪ್ರಕಾಶವಾದ ಶಮಾದಿ ಗುಣಗಳಿಂದ ಕೂಡಿದ ವಿದುಷೀ, ಉತ್ತಮ ಸ್ತ್ರೀಯರು, ತಮ್ಮ ಪತಿಯರಿಂದ ಸಂತಾನವನ್ನು ಪಡೆದು, ಉತ್ತಮ ಶಿಕ್ಷಣದಿಂದ ಅವಿದ್ಯಾಂಧಕಾರವನ್ನು ಹೋಗಲಾಡಿಸಿ ವಿದ್ಯಾರೂಪ ಸೂರ್ಯನನ್ನು ಪಡೆದು ಕುಲವನ್ನು ಸುಭೂಷಿತಗೊಳಿಸಬೇಕು.

ಮತ್ತೆ ಅದೇ ವಿಷಯ.

ಶಶ್ವತ್ ಪುರೋಷಾ ವ್ಯುವಾಸ ದೇವ್ಯ-ಥೋ ಅದ್ಯೇದಂ ವ್ಯಾವೋ ಮಘೋನೀ ।
ಅಥೋ ವ್ಯುಚ್ಛಾದುತ್ತರಾ ಅನು ದ್ಯೂ-ನಜರಾಮೃತಾ ಚರತಿ ಸ್ವಧಾಭಿಃ ॥೧೩॥

ಪದಾರ್ಥ:– ಹೇ ಸ್ತ್ರೀಯರೇ! [ಪುರಾ] ಮೊದಲು [ದೇವೀ] ಅತ್ಯಂತ ಪ್ರಕಾಶಮಾನ [ಮಘೋನೀ] ಪ್ರಶಂಸಿತ ಧನವನ್ನು ಪ್ರಾಪ್ತಿ ಪಡಿಸುವ [ಅಜರಾ] ಪೂರ್ಣ ಯುವಾವಸ್ಥೆಯಿಂದಿರುವ [ಅಮೃತಾ] ರೋಗರಹಿತ [ಉಷಾಃ] ಪ್ರಭಾತವೇಳೆಯಂತೆ [ಉವಾಸ] ವಾಸಿಸಿರಿ. [ಅಥೋ] ನಂತರ ಹೇಗೆ ಪ್ರಭಾತ ವೇಳೆಯು [ಉತ್ತರಾನ್] ಮುಂದೆ ಬರುವ [ಅನು, ದ್ಯೂನ್] ಎರಡಕ್ಕೂ ಅನುಕೂಲವು [ಸ್ವಧಾಭಿಃ] ತನಗೆ ತಾನೇ ಧಾರಣ ಮಾಡಿಕೊಂಡ ಪದಾರ್ಥಗಳೊಂದಿಗೆ [ಶಶ್ವತ್] ನಿರಂತರ [ವಿ ಚರತಿ] ವಿಹರಿಸುವುದೋ ಮತ್ತು ಅಂಧಕಾರವನ್ನು [ವಿ ಉಚ್ಛಾತ್] ದೂರ ಮಾಡುತ್ತದೋ ಮತ್ತು [ಅದ್ಯ] ಈ ದಿನದಲ್ಲಿ [ಇದಮ್] ಈ ಜಗತ್ತಿನ [ವ್ಯಾವಃ] ವಿವಿಧ ಪ್ರಕಾರಗಳಿಂದ ರಕ್ಷಣೆ ಮಾಡುತ್ತದೋ ಹಾಗೆ ನೀನೂ ಮಾಡು.

ಭಾವಾರ್ಥ:– ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಸ್ತ್ರೀ ! ಹೇಗೆ ಪ್ರಭಾತವೇಳೆಯ ಕಾರಣದಿಂದ ಮತ್ತು ಪ್ರವಾಹ ರೂಪದಿಂದ ನಿತ್ಯವಾಗಿರುವ ಮೂರೂ ಕಾಲಗಳನ್ನು ಪ್ರಕಾಶಪಡಿಸಲು ಯೋಗ್ಯವಾದ ಪದಾರ್ಥಗಳನ್ನು ಪ್ರಕಾಶಗೊಳಿಸುತ್ತಿರುವುದೋ, ಹಾಗೆ ಆತ್ಮತತ್ವದಿಂದ ನೀನು ಮೂರೂ ಕಾಲಗಳಲ್ಲಿ ಸ್ಥಿತಳಾಗಿ ಸತ್ಯ ವ್ಯವಹಾರಗಳ ವಿದ್ಯೆ ಮತ್ತು ಸುಶಿಕ್ಷಣದಿಂದ ಪ್ರಕಾಶಪಡಿಸಿ ಪುತ್ರ, ಪೌತ್ರ, ಐಶ್ವರ್ಯಾದಿ ಸೌಭಾಗ್ಯಗಳಿಂದ ಕೂಡಿ ಸದಾ ಸುಖಿಯಾಗಿರು.

ಮತ್ತೆ ಅದೇ ವಿಷಯ.

ವ್ಯ ೧ ಂಜಿಭಿರ್ದಿವ ಆತಾಸ್ವದ್ಯೌ-ದಪ ಕೃಷ್ಣಾಂ ನಿರ್ಣಿಜಂ ದೇವ್ಯಾವಃ ।
ಪ್ರಬೋಧಯಂತ್ಯರುಣೇಭಿರಶ್ವೈ-ರೋಷಾ ಯಾತಿ ಸುಯುಜಾ ರಥೇನ ॥೧೪॥

ಪದಾರ್ಥ:– ಹೇ ಸ್ತ್ರೀ ಜನರೇ! ನೀವು ಹೇಗೆ [ಪ್ರಬೋಧಯನ್ತೀ] ಮಲಗಿರುವವರನ್ನು ಎಬ್ಬಿಸುತ್ತಾ [ದೇವೀ] ದಿವ್ಯಗುಣಯುಕ್ತ [ಉಷಾಃ] ಪ್ರಾತಃ ಸಮಯದ ವೇಳೆಯನ್ನು [ಅಂಜಿಭಿಃ] ಪ್ರಕಟ ಮಾಡುವ ಗುಣಗಳೊಂದಿಗೆ [ದಿವಃ] ಆಕಾಶದಿಂದ [ಆತಾಸು] ಸರ್ವತ್ರ ವ್ಯಾಪ್ತ ದಿಕ್ಕುಗಳಲ್ಲಿ ಎಲ್ಲ ಪದಾರ್ಥಗಳನ್ನು [ವ್ಯದ್ಯೌತ್] ವಿಶೇಷವಾಗಿ ಪ್ರಕಾಶಪಡಿಸುತ್ತಾ [ನಿರ್ಣಿಜಮ್] ಅಥವಾ ನಿಶ್ಚಿತ ರೂಪ [ಕೃಷ್ಣಾಮ್] ಕೃಷ್ಣವರ್ಣದ ರಾತ್ರಿಯನ್ನು [ಅಪಾವಃ] ದೂರ ಮಾಡುತ್ತಾ ಅಥವಾ [ಅರುಣೇಭಿಃ] ರಕ್ತಾದಿ ಗುಣಯುಕ್ತ [ಅಶ್ವೈಃ] ವ್ಯಾಪನಶೀಲ ಕಿರಣಗಳೊಂದಿಗಿರುವ [ಸುಯುಜಾ] ಚೆನ್ನಾಗಿರುವ [ರಥೇವ] ರಮಣೀಯ ಸ್ವರೂಪದಿಂದ [ಆ ಯಾತಿ] ಬರುತ್ತೀಯೆ. ಅದರಂತೆ ನೀವೂ ವರ್ತಿಸಿರಿ.

ಭಾವಾರ್ಥ:– ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಪ್ರಾತಃ ಸಮಯದ ವೇಳೆಯು ದಿಕ್ಕುಗಳಲ್ಲಿ ವ್ಯಾಪಿಸುವುದೋ, ಹಾಗೆ ಕನ್ಯೆಯರು ವಿದ್ಯೆಗಳಲ್ಲಿ ವ್ಯಾಪ್ತರಾಗಲಿ. ಅಥವಾ ಹೇಗೆ ಈ ಉಷೆಯು ತನ್ನ ಕಾಂತಿಯಿಂದ ಶೋಭಾಯಮಾನವಾಗಿ ರಮಣೀಯ ಸ್ವರೂಪದಿಂದ ಪ್ರಕಾಶಮಾನವಾಗಿರುತ್ತದೋ, ಹಾಗೆ ಈ ಕನ್ಯೆಯರು ತಮ್ಮ ಶೀಲ ಮೊದಲಾದ ಗುಣ ಮತ್ತು ಸುಂದರ ರೂಪದಿಂದ ಪ್ರಕಾಶಮಾನರಾಗಲಿ. ಹೇಗೆ ಈ ಉಷೆಯು ಅಂಧಕಾರವನ್ನು ನಿವಾರಿಸಿ ಪ್ರಕಾಶವನ್ನು ಉತ್ಪನ್ನ ಮಾಡುವುದೋ, ಹಾಗೆ ಈ ಕನ್ಯೆಯರು ಮೂರ್ಖತೆ ಮೊದಲಾದವುಗಳನ್ನು ನಿವಾರಿಸಿ ಸುಸಭ್ಯತಾದಿ ಶುಭಗುಣಗಳಿಂದ ಸದಾ ಪ್ರಕಾಶಿತರಾಗಿರಲಿ.

ಮತ್ತೆ ಅದೇ ವಿಷಯ.

ಆವಹಂತೀ ಪೋಷ್ಯಾ ವಾರ್ಯಾಣಿ ಚಿತ್ರಂ ಕೇತುಂ ಕೃಣುತೇ ಚೇಕಿತಾನಾ ।
ಈಯುಷೀಣಾಮುಪಮಾ ಶಶ್ವತೀನಾಂ ವಿಭಾತೀನಾಂ ಪ್ರಥಮೋಷಾ ವ್ಯಶ್ವೈತ್ ॥೧೫॥

ಪದಾರ್ಥ:– ಹೇ ಸ್ತ್ರೀ ಜನರೇ! ನೀವು ಹೇಗೆ [ಉಷಾಃ] ಪ್ರಾತಃ ವೇಳೆಯು [ಪೋಷ್ಯಾ] ಪುಷ್ಟಿಗೊಳಿಸಲು ಮತ್ತು [ವಾರ್ಯಾಣಿ] ಸ್ವೀಕರಿಸಲು ಯೋಗ್ಯವಾದ ಧನಾದಿ ಪದಾರ್ಥಗಳನ್ನು [ಆವಹನ್ತೀ] ಪ್ರಾಪ್ತ ಮಾಡಿಸುತ್ತಾ ಮತ್ತು [ಚೇಕಿತಾನಿ] ಅತ್ಯಂತ ಚೈತನ್ಯವನ್ನೀಯುತ್ತಾ [ಚಿತ್ರಮ್] ಅದ್ಭುತ [ಕೇತುಮ್] ಕಿರಣವನ್ನು [ಕೃಣುತೇ] ಉಂಟುಮಾಡುತ್ತದೆಯೋ ಅಂದರೆ ಪ್ರಕಾಶಗೊಳಿಸುತ್ತದೆಯೋ, [ವಿಭಾತೀನಾಮ್] ವಿಶೇಷವಾಗಿ ಪ್ರಕಾಶ ಪಡಿಸುತ್ತಿರುವ ಸೂರ್ಯಕಾಂತಿಗಳು ಮತ್ತು [ಈಯುಷೀಣಾಮ್] ಚಲಿಸುತ್ತಿರುವ [ಶಶ್ವತೀನಾಮ್] ಅನ್ನಾದಿ ರೂಪ ಘಡಿಗಳನ್ನು [ಪ್ರಥಮಾ] ಮೊದಲು [ಉಪಮಾ] ದೃಷ್ಟಾಂತದಂತೆ [ವ್ಯಶ್ವೈ ತ್] ವ್ಯಾಪ್ತವಾಗುತ್ತದೋ, ಹಾಗೆಯೇ ಶುಭಗುಣಕರ್ಮಗಳಲ್ಲಿ [ಚರತ] ವಿಹರಿಸಿರಿ.

ಭಾವಾರ್ಥ:– ಹೇ ಮನುಷ್ಯರೇ! ಹೇಗೆ ಪ್ರಾತಃಕಾಲದಿಂದ ಆರಂಭವಾಗಿ ಕರ್ಮಗಳು ಉತ್ಪನ್ನವಾಗುತ್ತವೋ, ಹಾಗೆಯೇ ಸ್ತ್ರೀಯರ ಆರಂಭವು ಗೃಹಕೃತ್ಯಗಳಿಂದಲೇ ಆಗುತ್ತದೆಂದು ನಿಶ್ಚಿತವಾಗಿ ತಿಳಿಯಿರಿ.

ಮತ್ತೆ ಅದೇ ವಿಷಯ.

ಉದೀರ್ಧ್ವಂ ಜೀವೋ ಅಸುರ್ನ ಆಗಾ-ದಪ ಪ್ರಾಗಾತ್ತಮ ಆ ಜ್ಯೋತಿರೇತಿ ।
ಆರೈಕ್ ಪಂಥಾಂ ಯಾತವೇ ಸೂರ್ಯಾಯಾ-ಗನ್ಮ ಯತ್ರ ಪ್ರತಿರಂತ ಆಯುಃ ॥೧೬॥

ಪದಾರ್ಥ:– ಹೇ ಮನುಷ್ಯರೇ ! ಯಾವ ಉಷೆಯ ಉತ್ತೇಜನದಿಂದ [ನಃ] ನಮ್ಮ [ಜೀವಃ] ಜೀವನದ ಧರ್ತನು ಇಚ್ಛಾದಿ ಗುಣಯುಕ್ತನು [ಅಸುಃ] ಪ್ರಾಣವು [ಆ ಅಗಾತ್] ಎಲ್ಲ ಕಡೆಗಳಿಂದ ಪ್ರಾಪ್ತವಾಗುತ್ತಾ [ಜ್ಯೋತಿಃ] ಪ್ರಕಾಶವು [ಪ್ರ ಅಗಾತ್] ಪ್ರಾಪ್ತವಾಗುತ್ತದೆ. [ತಮಃ] ರಾತ್ರಿಯು [ಅಪ ಏತಿ] ದೂರವಾಗುತ್ತದೆ. ಮತ್ತು [ಯಾತವೇ] ಹೋಗಿ ಬರುವ [ಪಂಥಾಮ್] ಮಾರ್ಗವು [ಅರೈಕ್] ಬೇರೆಯಾಗಿ ಪ್ರಕಟವಾಗುತ್ತದೆ. ಅದರಿಂದ ನಾವು [ಸೂರ್ಯಾಯ] ಸೂರ್ಯನನ್ನು [ಆ ಅಗನ್] ಉತ್ತಮವಾಗಿ ಪ್ರಾಪ್ತವಾಗುತ್ತಾ ಹಾಗೂ [ಯತ್ರ] ಯಾವುದರಲ್ಲಿ ಪ್ರಾಣಿಗಳು [ಆಯುಃ] ಜೀವನವನ್ನು [ಪ್ರತಿರಂತೇ] ಪಡೆದು ಆನಂದದಿಂದ ಇರುತ್ತಾರೋ, ಅವರನ್ನು ನೋಡಿ [ಉದೀರ್ಧ್ವಮ್] ಪುರುಷಾರ್ಥ ಮಾಡುವುದರಲ್ಲಿ ಪ್ರಯತ್ನ ಪಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಈ ಪ್ರಾತಃಕಾಲದಲ್ಲಿ ಉಷೆಯು ಎಲ್ಲ ಪ್ರಾಣಿಗಳನ್ನೂ ಜಾಗೃತಗೊಳಿಸುತ್ತಾ ಅಂಧಕಾರವನ್ನು ನಿವಾರಿಸುತ್ತದೆ. ಮತ್ತು ಸಾಯಂಕಾಲದ ಉಷೆಯು ಎಲ್ಲರನ್ನೂ ಕಾರ್ಯದಿಂದ ನಿವೃತ್ತಗೊಳಿಸಿ ನಿದ್ರಿಸುವಂತೆ ಮಾಡುತ್ತದೆ. ಅಂದರೆ ತಾಯಿಯಂತೆ ಎಲ್ಲ ಜೀವರನ್ನು ಉತ್ತಮವಾಗಿ ಪಾಲಿಸಿ ವ್ಯವಹಾರಗಳಲ್ಲಿ ನಿಯುಕ್ತಗೊಳಿಸುತ್ತದೆಯೋ, ಹಾಗೆಯೇ ಸಜ್ಜನವಿದುಷೀ ಸ್ತ್ರೀ ಇರುತ್ತಾಳೆ.

ಮತ್ತೆ ಅದೇ ವಿಷಯ.

ಸ್ಯೂಮನಾ ವಾಚ ಉದಿಯರ್ತಿ ವಹ್ನಿಃ ಸ್ತವಾನೋ ರೇಭ ಉಷಸೋ ವಿಭಾತೀಃ ।
ಅದ್ಯಾ ತದುಚ್ಛ ಗೃಣತೇ ಮಘೋ-ನ್ಯಸ್ಮೇ ಆಯುರ್ನಿ ದಿದೀಹಿ ಪ್ರಜಾವತ್ ॥೧೭॥

ಪದಾರ್ಥ:- ಹೇ [ಮಘೋನೀ] ಪ್ರಶಂಸಿತ ಧನವುಳ್ಳ ಸ್ತ್ರೀ! ನೀನು [ಅಸ್ಮೇ] ನಮ್ಮ ಮತ್ತು [ಗೃಣತೇ] ಪ್ರಶಂಸೆ ಮಾಡುತ್ತಿರುವ [ಪತ್ಯೇ] ಪತಿಯ ಅರ್ಥದಲ್ಲಿ ಯಾವ [ಪ್ರಜಾವತ್] ಬಹಳ ಪ್ರಜೆಗಳಿಂದ ಕೂಡಿದ [ಆಯುಃ] ಜೀವನ ಹೇತುವಾದ ಅನ್ನವು [ತತ್] ಅದನ್ನು [ಅದ್ಯ] ಇಂದು [ನಿ ದಿದೋಹಿ] ನಿರಂತರ ಪ್ರಕಾಶ ಪಡಿಸು. ಯಾವ ನಿನ್ನ [ರೇಭಃ] ಬಹುಶ್ರುತ [ಸ್ತವಾನಃ] ಗುಣಪ್ರಶಂಸೆಯ ಕರ್ತನಾದ [ವಹ್ನಿಃ] ಅಗ್ನಿಯಂತೆ ನಿರ್ವಾಹಮಾಡುವ ಪತಿಯು ನಿನಗಾಗಿ [ವಿಭಾತೀಃ] ಪ್ರಕಾಶವತಿ [ಉಷಸಃ] ಪ್ರಭಾತವೇಳೆಯ ಸೂರ್ಯನು ಹೇಗೋ ಹಾಗೆ [ಸ್ಯೂಮನಾ] ಸಕಲ ವಿದ್ಯೆಗಳಿಂದ ಕೂಡಿದ ಪ್ರಿಯ [ವಾಚಃ] ವೇದವಾಣಿಯನ್ನು [ಉತ್ ಇಯರ್ತಿ] ಉತ್ತಮತೆಯಿಂದ ತಿಳಿಯುತ್ತಾನೆ. ಅದನ್ನು ನೀನು [ಉಚ್ಛ] ಚೆನ್ನಾಗಿ ನಿವಸಿಸುವಂತೆ ಮಾಡು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವಾಗ ಸ್ತ್ರೀ ಪುರುಷರು ಸುಹೃದ್ಭಾವದಿಂದ ಪರಸ್ಪರ ವಿದ್ಯೆ ಮತ್ತು ಉತ್ತಮ ಶಿಕ್ಷಣವನ್ನು ಗ್ರಹಣ ಮಾಡಿ ಉತ್ತಮ ಅನ್ನ, ಧನಾದಿ ವಸ್ತುಗಳನ್ನು ಸಂಚಯ ಮಾಡಿ ಸೂರ್ಯನಂತೆ ಧರ್ಮನ್ಯಾಯಗಳನ್ನು ಪ್ರಕಾಶಗೊಳಿಸಿ ಸುಖವಾಗಿ ನಿವಾಸ ಮಾಡುತ್ತಾರೋ, ಆಗ ಎಲ್ಲರೂ ಗೃಹಾಶ್ರಮದ ಪೂರ್ಣಸುಖವನ್ನು ಪಡೆಯುತ್ತಾರೆ.

ಮತ್ತೆ ಉಷಾಕಾಲದ ಪ್ರಸಂಗದಿಂದ ಸ್ತ್ರೀ ಪುರುಷರ ವಿಷಯವನ್ನು ಹೇಳಲಾಗಿದೆ.

ಯಾ ಗೋಮತೀರುಷಸಃ ಸರ್ವವೀರಾ ವ್ಯುಚ್ಛಂತಿ ದಾಶುಷೇ ಮರ್ತ್ಯಾಯ ।
ವಾಯೋರಿವ ಸೂನೃತಾನಾಮುದರ್ಕೇ ತಾ ಅಶ್ವದಾ ಅಶ್ನವತ್ ಸೋಮಸುತ್ವಾ ॥೧೮॥

ಪದಾರ್ಥ:- ಹೇ ಮನುಷ್ಯರೇ! ನೀವು [ಯಾಃ] ಯಾವ [ಸೂನೃತಾನಾಮ್] ಶ್ರೇಷ್ಠವಾಣಿ ಮತ್ತು ಅನ್ನಾದಿಗಳ [ಉದರ್ಕೇ] ಉತ್ಕೃಷ್ಟತೆಯಿಂದ ಪಡೆಯುವುದರಲ್ಲಿ [ವಾಯೋರಿವ] ವಾಯುವಿನಿಂದ [ಗೋಮತೀಃ] ಅನೇಕ ಗೋವುಗಳು ಅಥವಾ ಕಿರಣಗಳುಳ್ಳ [ಉಷಸಃ] ಪ್ರಭಾತವೇಳೆಯು ವರ್ತಮಾನವಾಗಿದೆಯೋ, ಹಾಗೆಯೇ ವಿದುಷೀ ಸ್ತ್ರೀಯು [ದಾಶುಷೇ] ಸುಖವನ್ನು ಕೊಡುವ [ಮರ್ತ್ಯಾಯ] ಮನುಷ್ಯರಿಗಾಗಿ [ವ್ಯುಚ್ಛಂತಿ] ದುಃಖವನ್ನು ದೂರ ಮಾಡುವುದು ಮತ್ತು [ಅಶ್ವದಾಃ] ಅಶ್ವ ಮೊದಲಾದ ಪಶುಗಳನ್ನು ಕೊಡುವ [ಸರ್ವವೀರಾಃ] ಯಾವನಲ್ಲಿ ವೀರಜನರಿರುವರೋ, [ತಾಃ] ಆ ವಿದುಷೀ ಸ್ತ್ರೀಯರನ್ನು [ಸೋಮಸುತ್ವಾ] ಐಶ್ವರ್ಯವನ್ನು ಸಿದ್ಧಪಡಿಸುವ ಜನರು [ಅಶ್ನವತ್] ಪ್ರಾಪ್ತರಾಗುತ್ತಾರೋ ಹಾಗೆಯೇ ನೀವು ಪ್ರಾಪ್ತರಾಗಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಕಾರಗಳಿವೆ. ಸಮಾವರ್ತನದ ನಂತರ ತನಗೆ ಸಮಾನವಾದ ವಿದ್ಯೆ, ಉತ್ತಮಶೀಲತೆ, ರೂಪ ಮತ್ತು ಸೌಂದರ್ಯದಿಂದ ಸಂಪನ್ನಳೂ ಹೃದಯಕ್ಕೆ ಪ್ರಿಯಳೂ, ಪ್ರಭಾತವೇಳೆಗೆ ಸಮಾನಳೂ, ಪ್ರಶಂಸೆಯುಳ್ಳವಳೂ, ಆದ ಬ್ರಹ್ಮಚಾರಿಣಿಯಾದ ಕನ್ಯೆಯೊಡನೆ ವಿವಾಹ ಮಾಡಿಕೊಂಡು ಗೃಹಾಶ್ರಮದ ಪೂರ್ಣಸುಖವನ್ನು ಪಡೆಯುವುದು ಬ್ರಹ್ಮಚಾರಿಗಳಿಗೆ ಯೋಗ್ಯವಾಗಿದೆ.

ಮತ್ತೆ ಅದೇ ವಿಷಯ.

ಮಾತಾ ದೇವಾನಾಮದಿತೇರನೀಕಂ ಯಜ್ಞಸ್ಯ ಕೇತುರ್ಬೃಹತೀ ವಿ ಭಾಹಿ ।
ಪ್ರಶಸ್ತಿಕೃದ್ ಬ್ರಹ್ಮಣೇ ನೋ ವ್ಯು೧ ಚ್ಛಾ ನೋ ಜನೇ ಜನಯ ವಿಶ್ವವಾರೇ ॥೧೯॥

ಪದಾರ್ಥ:- ಹೇ [ವಿಶ್ವವಾರೇ] ಸಮಸ್ತ ಕಲ್ಯಾಣವನ್ನು ಸ್ವೀಕಾರ ಮಾಡುವ ಕುಮಾರೀ! [ಯಜ್ಞಸ್ಯ] ಗೃಹಾಶ್ರಮ ವ್ಯವಹಾರಗಳಲ್ಲಿ ವಿದ್ವಾಂಸರ ಸತ್ಕಾರ ಮೊದಲಾದ ಕಾರ್ಯಗಳನ್ನು [ಕೇತುಃ] ಸೂಚಿಸುವ ಪತಾಕೆಯಂತೆ ಪ್ರಸಿದ್ಧವಾದ [ಅದಿತೇಃ] ಉತ್ಪನ್ನವಾದ ಸಂತಾನದ ರಕ್ಷಣೆಗಾಗಿ [ಅನೀಕಮ್] ಸೇನೆಯಂತೆ [ಪ್ರಶಸ್ತಿಕೃತ್] ಪ್ರಶಂಸೆ ಮಾಡಲು ಮತ್ತು [ಬೃಹತೀ] ಅತ್ಯಂತ ಸುಖವನ್ನು ಹೆಚ್ಚಿಸುವವಳೂ [ದೇವಾನಾಮ್] ವಿದ್ವಾಂಸರ [ಮಾತಾ] ಜನನಿಯಾಗುತ್ತಾ [ಬ್ರಹ್ಮಣೇ] ವೇದವಿದ್ಯೆ ಅಥವಾ ಪರಮೇಶ್ವರನ ಜ್ಞಾನಕ್ಕಾಗಿ ಪ್ರಭಾತವೇಳೆಗೆ ಸಮಾನಳಾಗಿ [ವಿಭಾಹಿ] ವಿಶೇಷವಾಗಿ ಪ್ರಕಾಶಿತಳಾಗು. [ನಃ] ನಮ್ಮ [ಜನೇ] ಕುಟುಂಬದ ಜನರಲ್ಲಿ ಪ್ರೀತಿಯನ್ನು [ಆ ಜನಯ] ಉತ್ತಮವಾಗಿ ಉತ್ಪನ್ನಮಾಡು ಮತ್ತು [ನಃ] ನಮ್ಮನ್ನು ಸುಖದಲ್ಲಿ [ವ್ಯುಚ್ಛ] ಸ್ಥಿರಗೊಳಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಸತ್ಪುರುಷರು ಉತ್ತಮ ವಿದುಷೀ ಸ್ತ್ರೀಯೊಡನೆ ವಿವಾಹ ಮಾಡಿಕೊಂಡು ಉತ್ತಮ ಸಂತಾನವನ್ನು ಪಡೆದು ಮತ್ತು ಐಶ್ವರ್ಯವನ್ನು ನಿತ್ಯವೂ ವೃದ್ಧಿಸಬೇಕು. ಏಕೆಂದರೆ ಸ್ತ್ರೀ ಸಂಬಂಧದಿಂದ ಉತ್ಪನ್ನವಾಗುವ ದುಃಖಕ್ಕಿಂತಲೂ ಹೆಚ್ಚಿನದು ಈ ಜಗತ್ತಿನಲ್ಲಿ ಯಾವುದೂ ಇಲ್ಲ. ಆದುದರಿಂದ ಪುರುಷನು ಸುಲಕ್ಷಣವಾದ ಸ್ತ್ರೀಯನ್ನು ಪರೀಕ್ಷಿಸಿ ಪಾಣಿಗ್ರಹಣ ಮಾಡಬೇಕು. ಸ್ತ್ರೀಯು ಕೂಡ ತನ್ನ ಹೃದಯಕ್ಕೆ ಅತ್ಯಂತ ಪ್ರಿಯವಾದ ಪ್ರಶಂಸಿತ ಗುಣಗಳುಳ್ಳ ಪುರುಷನನ್ನೇ ಪಾಣಿಗ್ರಹಣ ಮಾಡಕೊಳ್ಳಬೇಕು.

ಮತ್ತೆ ಅದೇ ವಿಷಯ.

ಯಚ್ಚಿತ್ರಮಪ್ನ ಉಷಸೋ ವಹಂತೀ- ಜಾನಾಯ ಶಶಮಾನಾಯ ಭದ್ರಮ್ । ತನ್ನೋ
ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೨೦॥

ಪದಾರ್ಥ:- ಹೇ ಮನುಷ್ಯರೇ! [ಉಷಸಃ] ಉಷೆಯಂತಿರುವ ಸ್ತ್ರೀಯು [ಶಶಮಾನಾಯ] ಪ್ರಶಂಸಿತಗುಣಗಳುಳ್ಳ [ಈಜಾನಾಯ] ಸಂಗವುಳ್ಳ ಶೀಲ ಪುರುಷನಿಗಾಗಿ ಮತ್ತು [ನಃ] ನಮಗಾಗಿ [ಯತ್] ಯಾವ [ಚಿತ್ರಮ್] ಅದ್ಭುತವೂ [ಭದ್ರಮ್] ಕಲ್ಯಾಣಕಾರಿಯೂ [ಅಪ್ನಃ] ಆದ ಸಂತಾನದ [ವಹನ್ತಿ] ಪ್ರಾಪ್ತಿ ಮಾಡಿಸುತ್ತಾ ಅಥವಾ ಯಾವ ಸ್ತ್ರೀಯರಿಂದ [ಮಿತ್ರಃ] ಸ್ನೇಹಿತನು [ವರುಣಃ] ಉತ್ತಮ ತಂದೆಯು [ಅದಿತಿಃ] ಶ್ರೇಷ್ಠ ಮಾತೆಯು [ಸಿಂಧುಃ] ಸಮುದ್ರ ಅಥವಾ ನದಿಯೂ [ಪೃಥಿವೀ] ಭೂಮಿಯು [ಉತ] ಮತ್ತು [ದ್ಯೌಃ] ವಿದ್ಯುತ್ ಅಥವಾ ಸೂರ್ಯಾದಿ ಪ್ರಕಾಶಮಾನ ಪದಾರ್ಥಗಳನ್ನು ಪಾಲಿಸಲು ಯೋಗ್ಯವೋ, ಆ ಸ್ತ್ರೀಯರು ಅಥವಾ [ತತ್] ಆ ಸಂತಾನವನ್ನು ನಿರಂತರವೂ [ಮಾಮಹನ್ತಾಮ್] ಉಪಕಾರಗಳಲ್ಲಿ ತನ್ನಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಶ್ರೇಷ್ಠ ವಿದ್ವಾಂಸರೇ ಸಂತಾನವನ್ನು ಉತ್ಪನ್ನ ಮಾಡಿ ಉತ್ತಮವಾಗಿ ರಕ್ಷಿಸಿ ಮತ್ತು ಅವರಿಗೆ ಉತ್ತಮ ಶಿಕ್ಷಣವನ್ನಿತ್ತು ಅವರನ್ನು ವೃದ್ಧಿಸಲು ಸಮರ್ಥರಾಗುವರು. ಯಾವ ಪುರುಷ ಸ್ತ್ರೀಯರು ಮತ್ತು ಯಾವ ಸ್ತ್ರೀ ಪುರುಷರ ಸತ್ಕಾರ ಮಾಡುವರೋ ಅವರ ಕುಲದಲ್ಲಿ ಎಲ್ಲ ಸುಖಗಳೂ ನಿವಾಸ ಮಾಡುತ್ತವೆ ಮತ್ತು ದುಃಖಗಳು ಪಲಾಯನ ಮಾಡುತ್ತವೆ.

ಈ ಸೂಕ್ತದಲ್ಲಿ ಉಷೆಯ ಉಪಮೆಯನ್ನು ನೀಡುತ್ತ ಸ್ತ್ರೀಯರನ್ನು ಹಾಗೂ ಅವರೊಂದಿಗೆ ಪುರುಷರು ಮಾಡಬೇಕಾದ ಸತ್ಕಾರಾದಿ ವ್ಯವಹಾರಗಳನ್ನು ವಿವರಿಸಿರುವುದರಿಂದ ಈ ಸೂಕ್ತಾರ್ಥವು ಹಿಂದಿನ ಸೂಕ್ತಾರ್ಥದೊಂದಿಗೆ ಸಂಗತಿಯನ್ನು ಹೊಂದಿಗೆ ಎಂದು ತಿಳಿದು ಬರುತ್ತದೆ.

ನೂರ ಹದಿಮೂರನೆಯ ಸೂಕ್ತ ಸಮಾಪ್ತ

ಸೂಕ್ತ ೧೧೪

ಮಂತ್ರಸಂಖ್ಯೆ ೧೧ । ಋಷಿಃ - ಕುತ್ಸ ಆಂಗಿರಸಃ । ದೇವತಾ - ರುದ್ರಃ । ಛಂದಃ - ಜಗತೀ, ೧೦-೧೧ ತ್ರಿಷ್ಟುಪ್ ।
ಸ್ವರಃ - ೪, ೫, ೧೦, ೧೧ ಧೈವತಃ, ನಿಷಾದಃ.

ಇದರ ಪ್ರಥಮ ಮಂತ್ರದಲ್ಲಿ ವಿದ್ವದ್ವಿಷಯವನ್ನು ಹೇಳಿದೆ.

ಇಮಾ ರುದ್ರಾಯ ತವಸೇ ಕಪರ್ದಿನೇ ಕ್ಷಯದ್ವೀರಾಯ ಪ್ರ ಭರಾಮಹೇ ಮತೀಃ ।
ಯಥಾ ಶಮಸದ್ ದ್ವಿಪದೇ ಚತುಷ್ಪದೇ ವಿಶ್ವಂ ಪುಷ್ಟಂ ಗ್ರಾಮೇ ಅಸ್ಮಿನ್ನನಾತುರಮ್ ॥೧॥

ಪದಾರ್ಥ:- ಅಧ್ಯಾಪಕೋಪದೇಶಕರಾದ ನಾವು **[ಯಥಾ]** ಹೇಗೆ **[ದ್ವಿಪದೇ]** ಮನುಷ್ಯರು ಮೊದಲಾದ **[ಚತುಷ್ಪದೇ]** ಮತ್ತು ಗೋವು ಮೊದಲಾದವುಗಳಿಗೆ **[ಶಮ್]** ಸುಖವು **[ಅಸತ್]** ಆಗಲಿ. **[ಅಸ್ಮಿನ್]** ಈ **[ಗ್ರಾಮೇ]** ಬಹಳ ಗೃಹಗಳುಳ್ಳ ನಗರ ಮತ್ತು ಗ್ರಾಮಗಳಲ್ಲಿ **[ವಿಶ್ವಮ್]** ಸಮಸ್ತ ಚರಾಚರ ಜೀವರಾಶಿಗಳಿಗೆ **[ಅನಾತುರಮ್]** ಪೀಡಾರಹಿತವಾಗಿ **[ಪುಷ್ಟಮ್]** ಪುಷ್ಟಿಯನ್ನು ಪಡೆದು **[ಅಸತ್]** ಕೊಳ್ಳಲಿ ಹಾಗೂ **[ತವಸೇ]** ಬಲಯುಕ್ತನು **[ಕ್ಷಯದ್ವೀರಾಯ]** ದೋಷಗಳನ್ನು ನಾಶಮಾಡುವವನು ಆದ ವೀರಪುರುಷನು ವಿದ್ಯಮಾನನಾಗುತ್ತಾ **[ಇಮಾಃ]** ಪ್ರತ್ಯಕ್ಷವಾಗಿರುವ ಆಪ್ತರ ಉಪದೇಶ ಮತ್ತು ವೇದಾದಿ ಶಾಸ್ತ್ರಗಳ ಬೋಧೆಯಿಂದ ಕೂಡಿ **[ಮತೀಃ]** ಉತ್ತಮ ಪ್ರಜ್ಞೆಯನ್ನು **[ಪ್ರ ಭರಾಮಹೇ]** ಧಾರಣ ಮಾಡಿಸುತ್ತಾರೆ.

ಭಾವಾರ್ಥ:- ಇಲ್ಲಿ ಉಪಮಾಲಂಕಾರವಿದೆ. ಯಾವಾಗ ಆಪ್ತನೂ, ಸತ್ಯವಾದಿಯೂ, ಧರ್ಮಾತ್ಮನೂ ವೇದಗಳ ಜ್ಞಾತನೂ, ಓದಿಸುವ ಮತ್ತು ಉಪದೇಶ ಮಾಡುವ ವಿದ್ವಾಂಸನು ಹಾಗೂ ಓದಿಸುವ ಉಪದೇಶ ಮಾಡುವ ಸ್ತ್ರೀಯು ಉತ್ತಮ ಶಿಕ್ಷಣದಿಂದ ಬ್ರಹ್ಮಚಾರಿ ಮತ್ತು ಶ್ರೋತಾ ಪುರುಷರು ಹಾಗೂ ಬ್ರಹ್ಮಚಾರಿಣಿ ಮತ್ತು ಆಲಿಸುವಂತಹ ಸ್ತ್ರೀಯರನ್ನು ವಿದ್ಯಾಯುಕ್ತರನ್ನಾಗಿ ಮಾಡುತ್ತಾರೋ, ಆಗಲೇ ಈ ಜನರು ಶರೀರ ಮತ್ತು ಆತ್ಮಗಳ ಬಲವನ್ನು ಪಡೆದು ಎಲ್ಲ ಜಗತ್ತನ್ನೂ ಸುಖಕರವನ್ನಾಗಿ ಮಾಡುತ್ತಾರೆ.

ಈಗ ರಾಜನ್ ವಿಷಯ

ಮೃಳಾ ನೋ ರುದ್ರೋತ ನೋ ಮಯಸ್ಕೃಧಿ ಕ್ಷಯದ್ವೀರಾಯ ನಮಸಾ ವಿಧೇಮ ತೇ ।
ಯಚ್ಛಂ ಚ ಯೋಶ್ಚ ಮನುರಾಯೇಜೇ ಪಿತಾ ತದಶ್ಯಾಮ ತವ ರುದ್ರ ಪ್ರಣೀತಿಷು ॥೨॥

ಪದಾರ್ಥ:- ಹೇ **[ರುದ್ರ]** ದುಷ್ಟಶತ್ರುಗಳನ್ನು ಅಳುವಂತೆ ಮಾಡುವ ರಾಜನೇ! ನಾವು **[ಕ್ಷಯದ್ವೀರಾಯ]** ಅಪಜಯಕ್ಕೊಳಗಾದ ಸೇನೆಯ ವೀರರನ್ನು **[ತೇ]** ನಿನಗಾಗಿ **[ನಮಸಾ]** ಅನ್ನ ಅಥವಾ ಸತ್ಕಾರದಿಂದ **[ವಿಧೇಮ]** ಸೇವೆ ಮಾಡಲಿ. **[ನಃ]** ನಮ್ಮನ್ನು ನೀನು **[ಮೃಡ]** ಸುಖಪಡಿಸು ಮತ್ತು **[ನಃ]** ನಮಗಾಗಿ **[ಮಯಃ]** ಸುಖ **[ಕೃಧಿ]** ಉಂಟು ಮಾಡು. ಹೇ **[ರುದ್ರ]** ನ್ಯಾಯಾಧೀಶನೇ! **[ಮನುಃ]** ಮನನಶೀಲನು **[ಪಿತಾ]** ಪಿತನಂತಿರುವ ನೀನು **[ಯತ್]** ಯಾವ ರೋಗಗಳ **[ಶಮ್]** ನಿವಾರಣೆ **[ಚ]** ಜ್ಞಾನವು **[ಯೋಃ]** ದುಃಖಗಳನ್ನು ಬೇರ್ಪಡಿಸುವ **[ಚ]** ಗುಣಗಳನ್ನು ಪ್ರಾಪ್ತಿಪಡಿಸುವ **[ಆಯೋಜೇ]** ಎಲ್ಲ ಪ್ರಕಾರದ ಸಂಗಗಳನ್ನು ಮಾಡಿಸುತ್ತೀಯೆ. **[ತತ್]** ಅದನ್ನು **[ಅಶ್ಯಾಮ]** ಪಡೆದುಕೊಂಡು **[ಉತ]** ಅವೇ ನಮ್ಮ **[ತವ]** ನಿನ್ನ **[ಪ್ರಣೀತಿಷು]** ಉತ್ತಮನೀತಿಗಳಲ್ಲಿ ಪ್ರವೃತ್ತರಾಗಿ ನಿರಂತರ ಸುಖಿಗಳಾಗುವೆವು.

ಭಾವಾರ್ಥ:- ತಾವೂ ಸುಖಿಗಳಾಗಿ ಎಲ್ಲ ಪ್ರಜೆಗಳನ್ನೂ ಸುಖಪಡಿಸುವುದು ರಾಜಪುರುಷರಿಗೆ ಯೋಗ್ಯವಾಗಿದೆ. ಈ ಕೆಲಸದಲ್ಲಿ ಆಲಸ್ಯವನ್ನು ಎಂದಿಗೂ ಮಾಡಬಾರದು ಮತ್ತು ಪ್ರಜೆಗಳು ರಾಜನೀತಿಯ ನಿಯಮದಲ್ಲಿ ವರ್ತಿಸಿ ರಾಜಪುರುಷರನ್ನು ಸದಾ ಪ್ರಸನ್ನರನ್ನಾಗಿಡಬೇಕು.

ಈಗ ರಾಜನ ವಿಷಯ

ಅಶ್ಯಾಮ ತೇ ಸುಮತಿಂ ದೇವಯಜ್ಯಯಾ ಕ್ಷಯದ್ವೀರಸ್ಯ ತವ ರುದ್ರ ಮೀಢ್ವಃ ।
ಸುಮ್ನಾಯನ್ನಿದ್ ವಿಶೋ ಅಸ್ಮಾಕಮಾ ಚರಾ-ರಿಷ್ಟವೀರಾ ಜುಹವಾಮ ತೇ ಹವಿಃ ॥೩॥

ಪದಾರ್ಥ:- ಹೇ **[ಮೀಢ್ವಃ]** ಪ್ರಜೆಗಳಿಗೆ ಸುಖವನ್ನು ವರ್ಷಿಸಲು ಮತ್ತು **[ರುದ್ರ]** ಸತ್ಯೋಪದೇಶ ಮಾಡುವ ಸಭಾಧ್ಯಕ್ಷನಾದ ರಾಜನೇ! ನಾವು **[ದೇವಯಜ್ಯಯಾ]** ವಿದ್ವಾಂಸರ ಸಂಗ ಮತ್ತು ಸತ್ಕಾರದಿಂದ **[ಕ್ಷಯದ್ವೀರಸ್ಯ]** ವೀರರನ್ನು ನಿವಾಸಗೊಳಿಸುವಂತಹ **[ತವ]** ನಿನ್ನ **[ಸುಮತಿಮ್]** ಶ್ರೇಷ್ಠ ಪ್ರಜ್ಞೆಯನ್ನು **[ಅಶ್ಯಾಮ]** ಪಡೆಯುವಂತಾಗಲಿ. **[ಸುಮ್ನಯನ್]** ಸುಖವನ್ನು ಪಡಿಸುತ್ತಿರುವ ನೀನು **[ಅಸ್ಮಾಕಮ್]** ನಮ್ಮ **[ಅರಿಷ್ಟವೀರಾಃ]** ಹಿಂಸಾರಹಿತ ವೀರರನ್ನುಳ್ಳ **[ವಿಶಃ]** ಪ್ರಜೆಗಳನ್ನು **[ಆ ಚರ]** ಎಲ್ಲ ಕಡೆಗಳಿಂದ ಪಡೆಯುವ ಆ **[ತೇ]** ನಿನ್ನ ಪ್ರಜೆಗಳನ್ನು ನಾವು **[ಇತ್]** ಕೂಡ ಪಡೆಯಲಿ ಮತ್ತು **[ತೇ]** ನಿನಗಾಗಿ **[ಹವಿಃ]** ಕೊಡಲು ಯೋಗ್ಯವಾದ ಪದಾರ್ಥಗಳನ್ನು **[ಜುಹವಾಮ]** ಕೊಡಲ್ಪಡಲಿ.

ಭಾವಾರ್ಥ:- ಪ್ರಜೆಗಳನ್ನು ನಿರಂತರ ಪ್ರಸನ್ನವಾಗಿಡುವುದು ರಾಜನಿಗೆ ಯೋಗ್ಯವಾಗಿದೆ ಮತ್ತು ರಾಜನನ್ನು ಆನಂದಪಡಿಸುವುದು ಪ್ರಜೆಗಳಿಗೆ ಉಚಿತವಾಗಿದೆ. ಯಾವ ರಾಜನು ಪ್ರಜೆಗಳಿಂದ ಕರವನ್ನೂ ಪಡೆದು ಪಾಲಿಸುವುದಿಲ್ಲವೋ, ಅವನನ್ನು ದರೋಡೆಕಾರ ಎಂದು ತಿಳಿಯಬೇಕು. ಪಾಲಿಸಲ್ಪಟ್ಟ ಪ್ರಜೆಗೆ ರಾಜಭಕ್ತಿ ಇಲ್ಲದಿದ್ದಲ್ಲಿ ಅವರನ್ನು ಕಳ್ಳನೆಂದು ತಿಳಿಯಬೇಕು. ಆದುದರಿಂದ ಪ್ರಜೆಗಳು ರಾಜನಿಗೆ ಕರವನ್ನು ಕೊಡುತ್ತಾರೆ. ಯಾಕೆಂದರೆ ಅವನು ನಮ್ಮನ್ನು ಪಾಲಿಸುತ್ತಾನೆ ಮತ್ತು ರಾಜನು ಪಾಲಿಸುವುದೇಕೆಂದರೆ ಪ್ರಜೆಗಳು ತನಗೆ ಕರವನ್ನು ಕೊಡಲಿ- ಎಂದು.

ಮತ್ತೆ ಅದೇ ವಿಷಯ.

ತ್ವೇಷಂ ವಯಂ ರುದ್ರಂ ಯಜ್ಞಸಾಧಂ ವಙ್ಕುಂ ಕವಿಮವಸೇ ನಿ ಹ್ವಯಾಮಹೇ । ಆರೇ
ಅಸ್ಮದ್ ದೈವ್ಯಂ ಹೇಳೋ ಅಸ್ಯತು ಸುಮತಿಮಿದ್ ವಯಮಸ್ಯಾ ವೃಣೀಮಹೇ ॥೪॥

ಪದಾರ್ಥ:- [ವಯಮ್] ನಾವು [ಅವಸೇ] ರಕ್ಷಣಾದಿಗಳಿಗಾಗಿ ಯಾವ [ತ್ವೇಷಮ್] ವಿದ್ಯೆ, ನ್ಯಾಯಗಳ ಪ್ರಕಾಶಕನು [ವಙ್ಕುಮ್] ದುಷ್ಟ ಶತ್ರುಗಳ ಬಗ್ಗೆ ಕುಟಿಲನು [ಕವಿಮ್] ಸಮಸ್ತ ಶಾಸ್ತ್ರಗಳನ್ನು ಕ್ರಮ-ಕ್ರಮವಾಗಿ ನೋಡುವವನು ಮತ್ತು [ಯಜ್ಞಸಾಧಮ್] ಪ್ರಜಾಪಾಲನಾರೂಪ ಯಜ್ಞವನ್ನು ಸಿದ್ಧ ಮಾಡುವ [ದೈವ್ಯಮ್] ವಿದ್ವಾಂಸರಲ್ಲಿ ಕುಶಲನು [ರುದ್ರಮ್] ಶತ್ರುಗಳನ್ನು ತಡೆಯುವವನು [ನಿ ಹ್ವಯಾಮಹೇ] ತಮ್ಮ ಸುಖ-ದುಃಖಗಳನ್ನು ನಿವೇದನೆ ಮಾಡಲಿ. ಹಾಗೂ [ವಯಮ್] ನಾವು [ಅಸ್ಯ] ಈ ರುದ್ರನ [ಸುಮತಿಮ್] ಧರ್ಮಾನುಕೂಲವಾದ ಉತ್ತಮ ಪ್ರಜ್ಞೆಯನ್ನು [ಆ ವೃಣೀಮಹೇ] ಎಲ್ಲ ಕಡೆಗಳಿಂದ ಸ್ವೀಕರಿಸುತ್ತೇವೆ. [ಇತ್] ಅದೇ ಸಭಾಧ್ಯಕ್ಷನು [ಹೇಡಃ] ಧಾರ್ಮಿಕ ಜನರನ್ನು ಅನಾದರ ಮಾಡುವ ಅಧಾರ್ಮಿಕರನ್ನು [ಅಸ್ಮಾತ್] ನಮ್ಮಿಂದ [ಆರೇ] ದೂರ [ಅಸ್ಯತು] ಮಾಡಲಿ.

ಭಾವಾರ್ಥ:- ಹೇಗೆ ಪ್ರಜೆಗಳು ರಾಜನನ್ನು ಸ್ವೀಕರಿಸುವರೋ, ಹಾಗೆಯೇ ರಾಜಪುರುಷರೂ ಪ್ರಜೆಗಳ ಆಜ್ಞೆಯನ್ನು ಒಪ್ಪಬೇಕು.

ಈಗ ವೈದ್ಯರ ವಿಷಯವನ್ನು ಹೇಳಲಾಗಿದೆ.

ದಿವೋ ವರಾಹಮರುಷಂ ಕಪರ್ದಿನಂ ತ್ವೇಷಂ ರೂಪಂ ನಮಸಾ ನಿ ಹ್ವಯಾಮಹೇ ।
ಹಸ್ತೇ ಬಿಭ್ರದ್ ಭೇಷಜಾ ವಾರ್ಯಾಣಿ ಶರ್ಮ ವರ್ಮ ಚ್ಛರ್ದಿರಸ್ಮಭ್ಯಂ ಯಂಸತ್ ॥೫॥

ಪದಾರ್ಥ:- ನಾವು [ನಮಸಾ] ಅನ್ನ ಮತ್ತು ಸೇವೆಯಿಂದ [ಹಸ್ತೇ] ಕೈಯಲ್ಲಿ [ಭೇಷಜಾ] ರೋಗನಿವಾರಕ ಔಷಧ [ವಾರ್ಯಾಣಿ] ಮತ್ತು ಗ್ರಹಣ ಮಾಡಲು ಯೋಗ್ಯವಾದ ಸಾಧನಗಳನ್ನು [ಬಿಭ್ರತ್] ಧಾರಣ ಮಾಡುತ್ತಾ [ಶರ್ಮ] ಗೃಹ, ಸುಖ [ವರ್ಮ] ಕವಚ [ಛರ್ದಿಃ] ಪ್ರಕಾಶಯುಕ್ತ ಶಸ್ತ್ರ ಮತ್ತು ಅಸ್ತ್ರಾದಿಗಳನ್ನು [ಅಸ್ಮಭ್ಯಮ್] ನಮಗಾಗಿ [ಯಂಸತ್] ನಿಯಮದಿಂದ ಇಡೋಣ. ಅವು [ಕಪರ್ದಿನಮ್] ಜಟಾಜೂಟ ಬ್ರಹ್ಮಚಾರಿ ವೈದ್ಯ ವಿದ್ವಾಂಸ ಅಥವಾ [ದಿವಃ] ದಿವ್ಯ ನ್ಯಾಯ ಪ್ರಕಾಶಿತ ವ್ಯವಹಾರಗಳಲ್ಲಿ ಅಥವಾ [ವರಾಹಮ್] ಮೇಘದಂತಿರುವ [ಅರುಷಮ್] ಕುದುರೆ ಮೊದಲಾದವುಗಳ [ತ್ವೇಷಮ್] ಅಥವಾ ಪ್ರಕಾಶಮಾನ [ರೂಪಮ್] ಸುಂದರ ರೂಪವು [ನಿಹ್ವಯಾಮಹೇ] ನಿತ್ಯವೂ ಸ್ಪರ್ಧಿಸಲಿ.

ಭಾವಾರ್ಥ:- ಯಾವ ಮನುಷ್ಯನು ವೈದ್ಯನ ಮಿತ್ರ, ಪಥ್ಯಕಾರಿ, ಜಿತೇಂದ್ರಿಯತೆ, ಉತ್ತಮ ಶೀಲವುಳ್ಳವನಾಗುವನೋ, ಅವನೇ ಈ ಜಗತ್ತಿನಲ್ಲಿ ರೋಗರಹಿತನು ಮತ್ತು ರಾಜ್ಯಾದಿಗಳನ್ನು ಪಡೆದು ಸುಖವನ್ನು ಹೆಚ್ಚಿಸುವನು.

ವೈದ್ಯ ಮತ್ತು ಉಪದೇಶ ಮಾಡುವವನು ಹೇಗೆ ತನ್ನ ವರ್ತನೆಯನ್ನಿಟ್ಟುಕೊಳ್ಳಬೇಕು?

ಇದಂ ಪಿತ್ರೇ ಮರುತಾಮುಚ್ಯತೇ ವಚಃ ಸ್ವಾದೋಃ ಸ್ವಾದೀಯೋ ರುದ್ರಾಯ ವರ್ಧನಮ್ ।
ರಾಸ್ವಾ ಚ ನೋ ಅಮೃತ ಮರ್ತಭೋಜನಂ ತ್ಮನೇ ತೋಕಾಯ ತನಯಾಯ ಮೃಳ ॥೬॥

ಪದಾರ್ಥ:- ಹೇ [ಅಮೃತ] ಮರಣ ದುಃಖವನ್ನು ದೂರಗೊಳಿಸುವ ಹಾಗೂ ಆಯಸ್ಸನ್ನು ವೃದ್ಧಿಸುವ ವೈದ್ಯರಾಜನೇ! ಅಥವಾ ಉಪದೇಶಕ ವಿದ್ವಾಂಸನೇ! ನೀನು [ವಃ] ನಮ್ಮ [ತ್ಮನೇ] ಶರೀರ [ತೋಕಾಯ] ಚಿಕ್ಕ ಚಿಕ್ಕ ಬಾಲಕರು- ಹುಡುಗರು [ತನಯಾಯ] ಯುವಾ ಪುತ್ರರು [ಚ] ಮತ್ತು ವೇತನ ಪಡೆಯುವ ಸೇವಕರು

ಅಥವಾ ಆಯುಧಗಳಿಂದ ಕೂಡಿದ ಭೃತ್ಯರು ಅಂದರೆ ಚಾಕರಿ ಮಾಡುವುದಕ್ಕಾಗಿ [ಸ್ವಾದೋಃ] ಸ್ವಾದಿಷ್ಟದಿಂದ [ಸ್ವಾದೀಯಃ] ಸ್ವಾದಿಷ್ಟ ಅಂದರೆ ಎಲ್ಲ ಪ್ರಕಾರದ ಸ್ವಾದವುಳ್ಳವನ್ನು ತಿನ್ನುವುದರಿಂದ ಬಹಳ ರುಚಿಕರವೂ, ಆ [ಮರ್ತಭೋಜನಮ್] ಮನುಷ್ಯ ಭೋಜನಕ್ಕಾಗಿ ಬಳಸುವ ಪದಾರ್ಥಗಳನ್ನು [ರಾಸ್ವ] ಕೊಡಿರಿ. [ಇದಮ್] ಈ [ಮರುತಾಮ್] ಋತು-ಋತುಗಳಲ್ಲಿಯೂ ಯಜ್ಞ ಮಾಡುವ ವಿದ್ವಾಂಸರನ್ನು [ವರ್ಧನಮ್] ವೃದ್ಧಿಸುವ [ವಚನಃ] ವಚನವು [ಪಿತ್ರೇ] ಪಾಲಿಸಲು [ರುದ್ರಾಯ] ಮತ್ತು ದುಷ್ಟರನ್ನು ಅಳಿಸುವ ಸಭಾಧ್ಯಕ್ಷನಿಗಾಗಿ [ಉಚ್ಯತೇ] ಹೇಳಲ್ಪಡುತ್ತದೆ. ಅದರಿಂದ [ಮೃಡ] ನಮಗೆ ಸುಖವನ್ನುಂಟುಮಾಡು.

ಭಾವಾರ್ಥ:- ತಾವು ನಿರೋಗಿಗಳೂ ಮತ್ತು ಸತ್ಯಾಚಾರಿಗಳೂ ಆಗಿ ಎಲ್ಲ ಮನುಷ್ಯರ ಸುಖಕ್ಕಾಗಿ ಔಷಧ ಕೊಡುವುದು ಮತ್ತು ಉಪದೇಶ ಮಾಡುವುದರಿಂದ ಎಲ್ಲರಿಗೂ ನಿರಂತರ ರಕ್ಷಣೆ ಮಾಡುವುದು ವೈದ್ಯರು ಮತ್ತು ಉಪದೇಶಕರಿಗೆ ಯೋಗ್ಯವಾಗಿದೆ.

ಈಗ ನ್ಯಾಯಾಧೀಶನು ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಲಾಗಿದೆ.

ಮಾ ನೋ ಮಹಾಂತಮುತ ಮಾ ನೋ ಅರ್ಭಕಂ ಮಾ ನ ಉಕ್ಷಂತಮುತ ಮಾ ನ ಉಕ್ಷಿತಮ್।
ಮಾ ನೋ ವಧೀಃ ಪಿತರಂ ಮೋತ ಮಾತರಂ ಮಾ ನಃ ಪ್ರಿಯಾಸ್ತನ್ವೋ ರುದ್ರ ರೀರಿಷಃ ॥೭॥

ಪದಾರ್ಥ:- [ರುದ್ರಃ] ನ್ಯಾಯಕ್ಕಾಗಿ ದುಷ್ಟರನ್ನು ಅಳಿಸುವ ಸಭಾಧ್ಯಕ್ಷನೇ! [ನಃ] ನಮ್ಮಲ್ಲಿನ [ಮಹಾನ್ತಮ್] ವೃದ್ಧನು ಅಥವಾ ಓದು-ಬರಹ ಬಲ್ಲ ಮನುಷ್ಯನನ್ನು [ಮಾ ವಧೀಃ] ಸಾಯಿಸಬೇಡ. [ಉತ] ಮತ್ತು [ನಃ ಅರ್ಭಕಮ್] ನಮ್ಮ ಬಾಲಕರನ್ನು [ಮಾ] ಸಾಯಿಸಬೇಡ. [ನಃ] ನಮ್ಮ [ಉಕ್ಷನ್ತಮ್] ಸ್ತ್ರೀ ಸಂಗ ಮಾಡುವುದರಲ್ಲಿ ಸಮರ್ಥರೂ ಯುವಾವಸ್ಥೆಯಿಂದ ಪರಿಪೂರ್ಣರೂ ಆದ ಮನುಷ್ಯರನ್ನು [ಮಾ] ಸಾಯಿಸಬೇಡ. [ಉತ] ಮತ್ತು [ನಃ] ನಮ್ಮ [ಉಕ್ಷಿತಮ್] ವೀರ್ಯಸೇಚನೆಯಿಂದ ಸ್ಥಿತವಾದ ಗರ್ಭವನ್ನು [ಮಾ] ಸಾಯಿಸಬೇಡ. [ನಃ] ನಮ್ಮನ್ನು [ಪಿತರೇ] ಪಾಲಿಸುವ ಮತ್ತು ಉತ್ಪನ್ನ ಮಾಡುವ ಪಿತನು ಅಥವಾ ಉಪದೇಶ ಮಾಡುವವನನ್ನು [ಮಾ] ಸಾಯಿಸಬೇಡ [ಉತ] ಮತ್ತು [ಮಾತರಮ್] ಮಾನ, ಸಮ್ಮಾನ ಮತ್ತು ಉತ್ಪನ್ನ ಮಾಡುವ ಮಾತೆ ಅಥವಾ ವಿದುಷೀ ಸ್ತ್ರೀಯನ್ನು [ಮಾ] ಸಾಯಿಸಬೇಡ. [ನಃ] ನಮ್ಮ [ಪ್ರಿಯಃ] ಸ್ತ್ರೀ ಮೊದಲಾದ ಪ್ರೀತಿಪಾತ್ರರ [ತನ್ವಃ] ಶರೀರಗಳನ್ನು [ಮಾ] ಸಾಯಿಸಬೇಡ ಮತ್ತು ಅನ್ಯಾಯಕಾರಿಗಳಾದ ದುಷ್ಟರನ್ನು [ರೀರಿಷಃ] ಸಾಯಿಸು.

ಭಾವಾರ್ಥ:- ಹೇ ಮನುಷ್ಯರೇ! ಹೇಗೆ ಈಶ್ವರನು ಪಕ್ಷಪಾತರಹಿತನಾಗಿ ಧಾರ್ಮಿಕ ಸಜ್ಜನರ ಉತ್ತಮ ಕರ್ಮಗಳಿಗೆ ಫಲಕೊಡುವುದರಿಂದ ಸುಖವೂ ಮತ್ತು ಪಾಪಿಗಳಿಗೆ ಪಾಪದ ಫಲಕೊಡುವುದರಿಂದ ಪೀಡೆಯಾಗುತ್ತದೆಯೋ ಹಾಗೆಯೇ ನೀವೂ ಕೂಡ ಒಳ್ಳೆಯ ಯತ್ನ ಮಾಡಿರಿ.

ಮತ್ತೆ ರಾಜಪುರುಷರು ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಿದೆ.

ಮಾ ನಸ್ತೋಕೇ ತನಯೇ ಮಾ ನ ಆಯೌ ಮಾ ನೋ ಗೋಷು ಮಾ ನೋ ಅಶ್ವೇಷು
ರೀರಿಷಃ । ವೀರಾನ್ ಮಾ ನೋ ರುದ್ರ ಭಾಮಿತೋ ವಧೀ-ರ್ಹವಿಷ್ಮಂತಃ ಸದಮಿತ್ ತ್ವಾ
ಹವಾಮಹೇ ॥೮॥

ಪದಾರ್ಥ:- ಹೇ [ರುದ್ರ] ದುಷ್ಟರನ್ನು ಅಳಿಸುವ ಸಭಾಪತಿ! [ಹವಿಷ್ಮನ್ತಃ] ನಾವು ಯಾವ ಕಾರಣದಿಂದ ಪ್ರಶಂಸಾಯುಕ್ತ ಜಗತ್ತಿಗೆ ಉಪಕಾರ ಮಾಡುವ ಕಾರ್ಯಗಳಲ್ಲಿ [ಸದಮ್] ಸ್ಥಿರವಾದ ಜ್ಞಾನವನ್ನು ಪಡೆದ [ತ್ವಾಮ್ ಇತ್] ನಿಮಗೆ ಮಾತ್ರವೇ [ಹವಾಮಹೇ] ಸ್ವೀಕರಿಸುತ್ತೇವೆ. ಇದರಿಂದ [ಭಾಮಿತಃ] ಕ್ರೋಧಗೊಂಡಿರುವ ನೀವು [ನಃ] ನಮ್ಮ [ತೋಕೇ] ಬಾಲಕ ಅಥವಾ [ತನಯೇ] ಬಾಲಿಕೆಯರಿಗಿಂತ ಯಾವನು ಮೇಲಿರುವನೋ ಆ ಬಾಲಕನಲ್ಲಿ [ಮಾ ರೀರಿಷಃ] ಘಾತವನ್ನು ಮಾಡಬೇಡ. [ನಃ] ನಮ್ಮ [ಅಶ್ವೇಷು] ಕುದುರೆಗಳಿಗೆ [ಮಾ] ಘಾತ ಮಾಡಬೇಡ. [ನಃ] ನಮ್ಮ [ವೀರಾನ್] ವೀರರನ್ನು [ಮಾ ವಧೀಃ] ಕೊಲ್ಲಬೇಡ.

ಭಾವಾರ್ಥ:- ಕೋಪೋದ್ರಿಕ್ತನಾದ ಸಜ್ಜನ ರಾಜ-ಪುರುಷನು ಯಾರನ್ನೂ ಅನ್ಯಾಯವಾಗಿ ಕೊಲ್ಲಬಾರದು. ಮತ್ತು ಗೋವು ಮೊದಲಾದ ಪಶುಗಳನ್ನು ಸದಾ ರಕ್ಷಿಸಬೇಕು. ಪ್ರಜೆಗಳಿಗೂ ಕೂಡ ರಾಜನ ಆಶ್ರಯದಿಂದಲೇ ನಿರಂತರವೂ ಆನಂದವನ್ನುಂಟುಮಾಡಬೇಕು. ಮತ್ತು ಎಲ್ಲರೂ ಸೇರಿ, ಹೇ ಪರಮೇಶ್ವರ! ನಿನ್ನ ಕೃಪೆಯಿಂದ ಬಾಲ್ಯಾವಸ್ಥೆಯಲ್ಲಿ ವಿವಾಹ ಮೊದಲಾದ ಕೆಟ್ಟ ಕರ್ಮಗಳನ್ನು ಮಾಡಿ ಪುತ್ರಾದಿಗಳ ವಿನಾಶವನ್ನು ಎಂದಿಗೂ ಮಾಡದಿರಲಿ ಎಂದು ಪ್ರಾರ್ಥಿಸಬೇಕು ಮತ್ತು ನಮ್ಮ ವಿರುದ್ಧದ ಕೆಲಸಗಳನ್ನು ಮಾಡಬಾರದು ಹಾಗೂ ಜಗತ್ತಿಗೆ ಉಪಕಾರ ಮಾಡಲು ಗೋವು ಮೊದಲಾದ ಪಶುಗಳನ್ನು ಎಂದಿಗೂ ವಿನಾಶಗೊಳಿಸಬಾರದು.

ಮತ್ತೆ ರಾಜ ಮತ್ತು ಪ್ರಜೆಗಳು ಪರಸ್ಪರ ಹೇಗೆ ವರ್ತಿಸಬೇಕು.

ಉಪ ತೇ ಸ್ತೋಮಾನ್ ಪಶುಪಾ ಇವಾಕರಂ ರಾಸ್ವಾ ಪಿತರ್ಮರುತಾಂ ಸುಮ್ನಮಸ್ಮೇ ।
ಭದ್ರಾ ಹಿ ತೇ ಸುಮತಿರ್ಮೃಳಯತ್ತಮಾ-ಥಾ ವಯಮವ ಇತ್ ತೇ ವೃಣೀಮಹೇ ॥೯॥

ಪದಾರ್ಥ:- ಹೇ [ಮರುತಾಮ್] ಋತು-ಋತುಗಳಲ್ಲಿ ಯಜ್ಞಮಾಡಲು [ಪಿತಃ] ಪಾಲನೆ ಮಾಡುವುದಕ್ಕಾಗಿ ದುಷ್ಟರನ್ನು ಅಳಿಸುವ ಸಭಾಪತಿಯೇ! [ಹಿ] ಯಾವ ಕಾರಣದಿಂದ [ಪಶುಪಾ ಇವ] ಪಶುಗಳನ್ನು ಪಾಲಿಸುವ ದನಗಾಹಿಯು / ಗೌಳಿಗನು ಗೋವು ಮೊದಲಾದ ಪಶುಗಳಿಂದ ಹಾಲು, ಮೊಸರು, ಮಜ್ಜಿಗೆ, ತುಪ್ಪ, ಬೆಣ್ಣೆ ಮೊದಲಾದವುಗಳನ್ನು ತೆಗೆದು ಪಶುಗಳ ಸ್ವಾಮಿಗೆ ಕೊಡುವಂತೆ [ಸ್ತೋಮಾನ್] ಪ್ರಶಂಸನೀಯವಾದ ರತ್ನ ಮೊದಲಾದವುಗಳನ್ನು [ತೇ] ನಿನಗಾಗಿ [ಉಪ, ಆ ಅಕರಮ್] ಮುಂದೆ ಮಾಡುತ್ತೇನೆ. ಇದರಿಂದ ನೀನು [ಅಸ್ಮೇ] ನಮಗಾಗಿ [ಸುಮ್ನಮ್] ಸುಖ [ರಾಸ್ವ] ಕೊಡಿರಿ. [ಅಥ] ನಂತರ [ತೇ] ನಿನ್ನ [ಮೃಡಯತ್ತಮ] ಎಲ್ಲ ರೀತಿಯಿಂದ ಸುಖವುಂಟುಮಾಡುವ [ಭದ್ರಾ] ಸುಖರೂಪ [ಸುಮತಿಃ] ಶ್ರೇಷ್ಠಮತಿ ಮತ್ತು [ತೇ] ನಿನ್ನ [ಅವಃ] ರಕ್ಷಣೆ ಮಾಡಬೇಕಿದೆ. ಆ ಮತಿ ಮತ್ತು ರಕ್ಷಣೆ ಮಾಡಲು [ವಯಮ್] ನಾವು ಹೇಗೆ [ವೃಣೀಮಹೇ] ಸ್ವೀಕರಿಸುತ್ತೇವೋ, [ಇತ್] ಹಾಗೆಯೇ ತಾವೂ ಕೂಡ ನಮ್ಮನ್ನು ಸ್ವೀಕರಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಪ್ರಜಾಪುರುಷನು ರಾಜಪುರುಷರಿಂದ ರಾಜನೀತಿ ಮತ್ತು ರಾಜಪುರುಷರು ಪ್ರಜಾಪುರುಷರಿಂದ ಪ್ರಜಾವ್ಯವಹಾರವನ್ನು ತಿಳಿದು, ತಿಳಿಯಲು ಯೋಗ್ಯನಾದವನನ್ನು ತಿಳಿಯುತ್ತಾ ಸನಾತನ ಧರ್ಮದ ಆಶ್ರಯ ಮಾಡಬೇಕು.

ಮತ್ತೆ ರಾಜ ಪ್ರಜೆಗಳ ಧರ್ಮದ ಉಪದೇಶ ಎಂಬುದನ್ನು ತಿಳಿಸಿದೆ.

ಆರೇ ತೇ ಗೋಘ್ನಮುತ ಪೂರುಷಘ್ನಂ ಕ್ಷಯದ್ವೀರ ಸುಮ್ನಮಸ್ಮೇ ತೇ ಅಸ್ತು ।
ಮೃಳಾ ಚ ನೋ ಅಧಿ ಚ ಬ್ರೂಹಿ ದೇವಾ-ಧಾ ಚ ನಃ ಶರ್ಮ ಯಚ್ಛ ದ್ವಿಬರ್ಹಾಃ ॥೧೦॥

ಪದಾರ್ಥ:- ಹೇ [ಕ್ಷಯದ್ವೀರ] ಶೂರವೀರರನ್ನು ನಿವಾಸಗೊಳಿಸುವ ಮತ್ತು [ದೇವ] ದಿವ್ಯ ಉತ್ತಮೋತ್ತಮ ಕರ್ಮಗಳನ್ನು ಮಾಡುವಂತಹ ವಿದ್ವಾಂಸನಾದ ಸಭಾಪತಿಯೇ! [ಪೂರುಷಘ್ನಮ್] ಪುರುಷರನ್ನೂ ಕೊಲ್ಲುವ [ಚ] ಮತ್ತು [ಗೋಘ್ನಮ್] ಗೋವು ಮೊದಲಾದ ಉಪಕಾರಕ ಪ್ರಾಣಿಗಳನ್ನು ವಿನಾಶಮಾಡುವ ಪ್ರಾಣಿಗಳನ್ನು ನಿವಾರಿಸಿ [ತೇ] ನಿನ್ನ [ಚ] ಮತ್ತು [ಅಸ್ಮೇ] ನಮಗಾಗಿ [ಸುಮ್ನಮ್] ಸುಖ [ಅಸ್ತು] ಆಗಲಿ. [ಅಥಾ] ನಂತರ [ನಃ] ನಮ್ಮನ್ನು [ಮೃಡ] ಸುಖಪಡಿಸು [ಚ] ಮತ್ತು ನಾನು ನಿನಗೆ ಸುಖ ಕೊಡಲಿ, ನೀನು ನಮಗೆ [ಅಧಿಬ್ರೂಹಿ] ಅಧಿಕ ಉಪದೇಶ ಕೊಡು. [ಚ] ಮತ್ತು ನಾನು ನಿನಗೆ ಅಧಿಕ ಉಪದೇಶ ಮಾಡಲಿ. [ದ್ವಿಬರ್ಹಾಃ] ವ್ಯವಹಾರ ಮತ್ತು ಪರಮಾರ್ಥವನ್ನು ಹೆಚ್ಚಿಸುವಂತಹ ನೀನು [ನಃ] ನಮಗಾಗಿ [ಶರ್ಮ] ಗೃಹಸುಖವನ್ನು [ಯಚ್ಛ] ಕೊಡು. [ಚ] ಮತ್ತು ನಿನಗಾಗಿ ನಾವು ಸುಖವನ್ನು ಕೊಡುತ್ತೇವೆ. ನಾವೆಲ್ಲರೂ ಧರ್ಮಾತ್ಮರ [ಆರೇ] ನಿಕಟ ಮತ್ತು ದುರಾಚಾರಗಳಿಂದ ದೂರವಿರೋಣ.

ಭಾವಾರ್ಥ:- ಯತ್ನದಿಂದ ಪಶುಗಳ ಮತ್ತು ಮನುಷ್ಯರ ನಾಶ ಮಾಡುವ ದುರಾಚಾರಿಗಳಿಂದ ದೂರ ಮತ್ತು ತಮ್ಮಿಂದ ಅವರನ್ನು ದೂರ ನಿವಾಸಗೊಳಿಸೋಣ ಎಂದು ಮನುಷ್ಯನು ಬಯಸಬೇಕು. ರಾಜಾ ಮತ್ತು ಪ್ರಜೆಗಳು ಪರಸ್ಪರ ಒಬ್ಬರು ಇನ್ನೊಬ್ಬರಿಗೆ ಉಪದೇಶ ಮಾಡಿ, ಸಭೆಯನ್ನು ಮಾಡಿಕೊಂಡು ಮತ್ತು ಎಲ್ಲರ ರಕ್ಷಣ ವ್ಯವಹಾರಗಳಲ್ಲಿ ಮತ್ತು ಪರಮಾರ್ಥದ ಸುಖವನ್ನು ಸಿದ್ಧಪಡಿಸಿಕೊಳ್ಳಬೇಕು.

ಈಗ ಅಧ್ಯಾಪಕೋಪದೇಶಕರ ವ್ಯವಹಾರಗಳನ್ನು ತಿಳಿಸಲಾಗಿದೆ.

ಅವೋಚಾಮ ನಮೋ ಅಸ್ಮಾ ಅವಸ್ಯವಃ ಶೃಣೋತು ನೋ ಹವಂ ರುದ್ರೋ ಮರುತ್ವಾನ್।
ತನ್ನೋ ಮಿತ್ರೋ ವರುಣೋ ಮಾಮಹಂತಾ-ಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೧೧॥

ಪದಾರ್ಥ:- [ಅವಸ್ಯವಃ] ತಮ್ಮ ರಕ್ಷಣೆಯನ್ನು ಬಯಸುವ ನಾವು [ಅಸ್ಮೈ] ಮನ್ನಣೆಗೆ ಯೋಗ್ಯವಾದ ಸಭಾಧ್ಯಕ್ಷನಿಗಾಗಿ, [ನಮಃ] ನಮಸ್ತೆ ಎನ್ನುವ ವಾಕ್ಯವನ್ನು [ಅವೋಚಾಮ] ಹೇಳೋಣ ಮತ್ತು ಆ [ಮರುತ್ವಾನ್] ಬಲಶಾಲಿಯಾದ [ರುದ್ರಃ] ವಿದ್ಯೆಯನ್ನು ಓದಿರುವ ಸಭಾಪತಿ [ತತ್] ಆ [ನಃ] ನಮ್ಮ 'ನಮಸ್ತೆ' ಶಬ್ದವನ್ನು [ಮಿತ್ರಃ] ಪ್ರಾಣ [ವರುಣಃ] ಶ್ರೇಷ್ಠ ವಿದ್ವಾಂಸ [ಅದಿತಿಃ] ಅಂತರಿಕ್ಷ [ಸಿಂಧುಃ] ಸಮುದ್ರ [ಪೃಥಿವೀ] ಪೃಥಿವೀ [ಉತ] ಮತ್ತು [ದ್ಯೌಃ] ಪ್ರಕಾಶವನ್ನು ಹೆಚ್ಚಿಸುತ್ತವೆ ಅಂದರೆ ಉಕ್ತ ಪದಾರ್ಥಗಳನ್ನು ತಿಳಿದಿರುವ ಸಭಾಪತಿಗೆ ಮತ್ತೆ ಮತ್ತೆ 'ನಮಸ್ತೇ' ಶಬ್ದ ಹೇಳಲಾಗುತ್ತದೆ. ಅವನನ್ನು ತಾವು [ಮಾಮಹನ್ತಾಮ್] ಮತ್ತೆ ಮತ್ತೆ ಪ್ರಶಂಸಾಯುಕ್ತನನ್ನಾಗಿ ಮಾಡಿರಿ.

ಭಾವಾರ್ಥ:- ಪ್ರಜೆಗಳು ರಾಜಪುರುಷರಿಗೆ ಪ್ರಿಯವಾದ ಆಚರಣೆಯನ್ನು ನಿತ್ಯವೂ ಮಾಡಬೇಕು ಮತ್ತು ರಾಜಪುರುಷರು ಪ್ರಜೆಗಳು ಹೇಳುವ ವಾಕ್ಯಗಳನ್ನು ಆಲಿಸಲು ಯೋಗ್ಯರಾಗಿರಬೇಕು. ಹಾಗೆ ಎಲ್ಲ ರಾಜ ಪ್ರಜೆಗಳು ಸೇರಿ ನ್ಯಾಯದ ಉನ್ನತಿ ಮತ್ತು ಅನ್ಯಾಯದ ದೂರೀಕರಣ ಮಾಡಬೇಕು.

ಈ ಸೂಕ್ತದಲ್ಲಿ ಬ್ರಹ್ಮಚಾರಿ, ವಿದ್ವಾಂಸ, ಸಭಾಧ್ಯಕ್ಷ ಮತ್ತು ಸಭಾಸದರು ಮೊದಲಾದವರ ಗುಣಗಳ ವರ್ಣನೆ ಇರುವುದರಿಂದ ಈ ಸೂಕ್ತದಲ್ಲಿ ಹೇಳಿರುವ ಅರ್ಥಕ್ಕೂ ಹಿಂದಿನ ಸೂಕ್ತದ ಅರ್ಥದೊಂದಿಗೆ ಏಕತೆ ಇದೆ ಎಂದು ತಿಳಿಯಲು ಯೋಗ್ಯವಾಗಿದೆ.

ನೂರ ಹದಿನಾಲ್ಕನೆಯ ಸೂಕ್ತ ಸಮಾಪ್ತ

ಸೂಕ್ತ ೧೧೫

ಮಂತ್ರಸಂಖ್ಯೆ ೬ । ಋಷಿಃ - ಕುತ್ಸ ಆಂಗಿರಸಃ । ದೇವತಾ - ಸೂರ್ಯಃ । ಛಂದಃ - ತ್ರಿಷ್ಟುಪ್ । ಸ್ವರಃ - ಧೈವತಃ.

ಈ ಸೂಕ್ತದ ಮೊದಲ ಮಂತ್ರದಲ್ಲಿ ಈಶ್ವರನ ಗುಣಗಳ ಉಪದೇಶ ಮಾಡಿದೆ.

ಚಿತ್ರಂ ದೇವಾನಾಮುದಗಾದನೀಕಂ ಚಕ್ಷುರ್ಮಿತ್ರಸ್ಯ ವರುಣಸ್ಯಾಗ್ನೇಃ ।
ಆಪ್ರಾ ದ್ಯಾವಾಪೃಥಿವೀ ಅಂತರಿಕ್ಷಂ ಸೂರ್ಯ ಆತ್ಮಾ ಜಗತಸ್ತಸ್ಥುಷಶ್ಚ ॥೧॥

ಪದಾರ್ಥ:- ಹೇ ಮನುಷ್ಯರೇ! ಯಾವುದನ್ನು **[ಅನೀಕಮ್]** ನೇತ್ರಗಳು ನೋಡಲಾಗುವುದಿಲ್ಲವೋ, ಹಾಗೂ **[ದೇವಾನಾಮ್]** ವಿದ್ವಾಂಸ ಮತ್ತು ಉತ್ತಮೋತ್ತಮ ಪದಾರ್ಥಗಳು ಅಥವಾ **[ಮಿತ್ರಸ್ಯ]** ಮಿತ್ರನಂತಿರುವ ಸೂರ್ಯನು ಅಥವಾ **[ವರುಣಸ್ಯ]** ಆನಂದವನ್ನು ಕೊಡುವ ಜಲವು ಚಂದ್ರಲೋಕ ಮತ್ತು ತನ್ನ ವ್ಯಾಪ್ತಿ ಮೊದಲಾದ ಪದಾರ್ಥಗಳು ಅಥವಾ **[ಅಗ್ನೇ]** ವಿದ್ಯುತ್ತು ಮೊದಲಾದ ಅಗ್ನಿಗಳು ಅಥವಾ ಮತ್ತು ಎಲ್ಲ ಪದಾರ್ಥಗಳು **[ಚಿತ್ರಮ್]** ಅದ್ಭುತವಾಗಿ **[ಚಕ್ಷುಃ]** ಕಾಣಿಸುವ ಪದಾರ್ಥಗಳು ಆಗಿವೆ. ಆ ಬ್ರಹ್ಮವು **[ಉದಗಾತ್]** ಉತ್ಕರ್ಷತೆಯಿಂದ ಪ್ರಾಪ್ತವಾಗಿದೆ. ಯಾವ ಜಗದೀಶ್ವರನು **[ಸೂರ್ಯಃ]** ಸೂರ್ಯನಂತೆ ಜ್ಞಾನದ ಪ್ರಕಾಶವನ್ನು ಕೊಡುವ ವಿಜ್ಞಾನದಿಂದ ಪರಿಪೂರ್ಣನು **[ಜಗತಃ]** ಜಂಗಮ **[ಚ]** ಮತ್ತು **[ತಸ್ಥುಷಃ]** ಸ್ಥಾವರ ಅಂದರೆ ಚರಾಚರ ಜಗತ್ತಿನ **[ಆತ್ಮಾ]** ಅಂತರ್ಯಾಮಿ ಅಂದರೆ ಯಾವನು **[ಅಂತರಿಕ್ಷಮ್]** ಆಕಾಶ **[ದ್ಯಾವಾಪೃಥಿವೀ]** ಪ್ರಕಾಶ ಮತ್ತು ಭೂಲೋಕವನ್ನು **[ಆ ಅಪ್ರಾಃ]** ಉತ್ತಮವಾಗಿ ಪರಿಪೂರ್ಣ ಮಾಡಿರುವನೋ, ಅಂದರೆ ಅವನಲ್ಲಿ ತಾವು ತುಂಬಿರುವಿರಿ, ಆ ಪರಮಾತ್ಮನನ್ನೇ ನೀವು ಉಪಾಸನೆ ಮಾಡಿರಿ.

ಭಾವಾರ್ಥ:- ನೋಡಲು ಯೋಗ್ಯವಾದ ಯಾವ ಪದಾರ್ಥಗಳಿವೆಯೋ, ಅವು ಪರಮಾತ್ಮನಾಗಲು ಯೋಗ್ಯವಲ್ಲ. ಯಾವನೂ ಕೂಡ ಆ ಅವ್ಯಕ್ತ ಸರ್ವಶಕ್ತಿವಂತನಾದ ಜಗದೀಶ್ವರನ ಹೊರತು ಸಮಸ್ತ ಜಗತ್ತನ್ನು ಉತ್ಪನ್ನ ಮಾಡಲಾರನು ಮತ್ತು ಯಾವನೂ ಸರ್ವವ್ಯಾಪಕ, ಅನಂತ ಸಚ್ಚಿದಾನಂದರೂಪನು, ಅಂತರ್ಯಾಮಿಯು ಚರಾಚರ ಜಗತ್ತಿನ ಆತ್ಮ ಪರಮೇಶ್ವರನ ಹೊರತು ಜಗತ್ತಿನ ಧಾರಣ ಮಾಡಲಾರನು. ಜೀವಾತ್ಮರ ಪಾಪ ಮತ್ತು ಪುಣ್ಯಗಳ ಸಾಕ್ಷಿತ್ವ ಮತ್ತು ಅವುಗಳ ಅನುಸಾರ ಜೀವರುಗಳಿಗೆ ಸುಖ-ದುಃಖರೂಪದ ಫಲವನ್ನು ಕೊಡಲು ಯೋಗ್ಯನಾಗಲಾರನು. ಈ ಪರಮೇಶ್ವರನ ಉಪಾಸನೆ ಹೊರತು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳನ್ನು ಪಡೆಯಲು ಯಾವನೇ ಜೀವಾತ್ಮನೂ ಸಮರ್ಥನಲ್ಲ. ಆದುದರಿಂದ ಈ ಪರಮೇಶ್ವರನ ಉಪಾಸನೆಯನ್ನೇ ಮಾಡಲು ಯೋಗ್ಯ ಇಷ್ಟದೇವನೆಂದು ಎಲ್ಲರೂ ತಿಳಿಯಬೇಕು.

ಮತ್ತೆ ಈಶ್ವರನ ಕೃತ್ಯವನ್ನು ಹೇಳಲಾಗಿದೆ.

ಸೂರ್ಯೋ ದೇವೀಮುಷಸಂ ರೋಚಮಾನಾಂ ಮರ್ಯೋ ನ ಯೋಷಾಮಭ್ಯೇತಿ ಪಶ್ಚಾತ್।
ಯತ್ರಾ ನರೋ ದೇವಯಂತೋ ಯುಗಾನಿ ವಿತನ್ವತೇ ಪ್ರತಿ ಭದ್ರಾಯ ಭದ್ರಮ್ ॥೨॥

ಪದಾರ್ಥ:- ಹೇ ಮನುಷ್ಯರೇ! ಯಾವ ಈಶ್ವರನು ಉತ್ಪನ್ನ ಮಾಡಿ [ಕಕ್ಷಾ] ನಿಯಮದಲ್ಲಿ ಸ್ಥಾಪಿಸಿರುವ ಈ [ಸೂರ್ಯಃ] ಸೂರ್ಯಮಂಡಲವು [ರೋಚಮಾನಾಮ್] ರುಚಿಕರವಾದ ಮತ್ತು [ದೇವೀಮ್] ಎಲ್ಲ ಪದಾರ್ಥಗಳನ್ನು ಪ್ರಕಾಶಗೊಳಿಸುವ [ಉಷಸಮ್] ಪ್ರಾತಃಕಾಲದ ವೇಳೆಯು ಅದರಲ್ಲಿರುವುದರಿಂದ [ಪಶ್ಚಾತ್] ನಂತರ ಹೇಗೆ

[ಮರ್ಯಃ] ಪತಿಯು [ಯೋಷಾಮ್] ತನ್ನ ಸ್ತ್ರೀಯನ್ನು ಪಡೆಯುತ್ತಾನೋ, [ನ] ಹಾಗೆ [ಅಭ್ಯೇತಿ] ಎಲ್ಲ ಕಡೆಗಳಿಂದ ಓಡುತ್ತದೆ. [ಯತ್ರ] ಯಾವ ವಿದ್ಯಮಾನವಾಗಿರುವ ಸೂರ್ಯನಲ್ಲಿ [ದೇವಯಂತಃ] ಮನೋಹರ ಚಲನೆಗಳಿಂದ ಸುಂದರ ಗಣಿತವಿದ್ಯೆಯನ್ನು ತಿಳಿಯುತ್ತಾ - ತಿಳಿಸುತ್ತಾ [ನರಃ] ಜ್ಯೋತಿಷ್ಯವಿದ್ಯೆಯ ಭಾವನೆಗಳನ್ನು ಇತರರಿಗೆ ತಿಳಿಸುವುದರಲ್ಲಿ ಸಮರ್ಥರಾದ ಜ್ಯೋತಿಷಿಗಳು [ಯುಗಾನಿ] ಐದು-ಐದು ಸಂವತ್ಸರಗಳ ಗಣನೆಯಿಂದ ಜ್ಯೋತಿಷ್ಯದಲ್ಲಿ ಯುಗ ಅಥವಾ ಸತ್ಯಯುಗ, ತ್ರೇತಾಯುಗ, ದ್ವಾಪರಯುಗ ಮತ್ತು ಕಲಿಯುಗದ ಜ್ಞಾನವು [ಭದ್ರಾಯ] ಉತ್ತಮ ಸುಖಕ್ಕಾಗಿ [ಭದ್ರಮ್] ಆ ಉತ್ತಮ ಸುಖವನ್ನು [ಪ್ರತಿ ವಿತನ್ವತೇ] ಪ್ರತಿ ವಿಸ್ತಾರ ಮಾಡುತ್ತಾನೆ. ಆ ಪರಮೇಶ್ವರನನ್ನು ಸಕಲವನ್ನು ತಿಳಿಯುವ ನೀವು ತಿಳಿಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ವಿದ್ವಾಂಸರೇ! ನಿಮ್ಮಿಂದ ಯಾವ ಈಶ್ವರನು ಸೂರ್ಯನನ್ನು ಮಾಡಿ ಪ್ರತ್ಯೇಕ ಬ್ರಹ್ಮಾಂಡದಲ್ಲಿ ಸ್ಥಾಪಿಸಿ, ಅದರ ಆಶ್ರಯದಿಂದ ಗಣಿತ ಮೊದಲಾದ ಸಮಸ್ತ ವ್ಯವಹಾರಗಳನ್ನು ಸಿದ್ಧಗೊಳಿಸಿರುವ ಆ ಈಶ್ವರನನ್ನು ಏತಕ್ಕೆ ಸೇವಿಸಬಾರದು?

ಮತ್ತೆ ಸೂರ್ಯನ ಕೆಲಸವನ್ನು ಹೇಳಲಾಗಿದೆ.

ಭದ್ರಾ ಅಶ್ವಾ ಹರಿತಃ ಸೂರ್ಯಸ್ಯ ಚಿತ್ರಾ ಏತಗ್ವಾ ಅನುಮಾದ್ಯಾಸಃ ।
ನಮಸ್ಯಂತೋ ದಿವ ಆ ಪೃಷ್ಠಮಸ್ಥುಃ ಪರಿ ದ್ಯಾವಾಪೃಥಿವೀ ಯಂತಿ ಸದ್ಯಃ ॥೩॥

ಪದಾರ್ಥ:- **[ಭದ್ರಾಃ]** ಸುಖವನ್ನುಂಟುಮಾಡುವ **[ಅನುಮಾದ್ಯಾಸಃ]** ಆನಂದ ಪಡಿಸುವ ಗುಣಗಳಿಂದ ಪ್ರಶಂಸೆಗೆ ಯೋಗ್ಯನಾದ **[ನಮಸ್ಯನ್ತಃ]** ಸತ್ಕಾರ ಮಾಡುವ ವಿದ್ವಾಂಸರು ಯಾವ **[ಸೂರ್ಯಸ್ಯ]** ಸೂರ್ಯಲೋಕದ **[ಚಿತ್ರಾಃ]** ಚಿತ್ರವಿಚಿತ್ರ **[ಏತಗ್ವಾಃ]** ಈ ಪ್ರತ್ಯಕ್ಷ ಪದಾರ್ಥಗಳನ್ನು ಪಡೆಯುತ್ತಾ **[ಅಶ್ವಾಃ]** ಬಹಳವಾಗಿ ವ್ಯಾಪ್ತವಾಗುವ ಕಿರಣಗಳು **[ಹರಿತಃ]** ದಿಕ್ಕು ಮತ್ತು **[ದ್ಯಾವಾ ಪೃಥಿವೀ]** ಆಕಾಶ-ಭೂಮಿಗಳನ್ನು **[ಸದ್ಯಃ]** ಶೀಘ್ರವಾಗಿ **[ಪರಿ ಯನ್ತಿ]** ಎಲ್ಲ ಕಡೆಗಳಿಂದ ಪಡೆಯುತ್ತಾ **[ದಿವಃ]** ಹಾಗೂ ಪ್ರಕಾಶಪಡಿಸಲು ಯೋಗ್ಯವಾದ ಪದಾರ್ಥಗಳನ್ನು **[ಪೃಷ್ಠಮ್]** ಹಿಂದಿನ ಭಾಗದ ಮೇಲೆ **[ಆ ಅಸ್ಥುಃ]** ಉತ್ತಮವಾಗಿ ನಿಲ್ಲುತ್ತದೆ. ಅವುಗಳನ್ನು ವಿದ್ಯೆಯಿಂದ ಉಪಕಾರಕ್ಕೆ ತನ್ನಿರಿ.

ಭಾವಾರ್ಥ:- ಶ್ರೇಷ್ಠವಾಗಿ ಓದಿಸುವ ಶಾಸ್ತ್ರವೇತ್ತ ವಿದ್ವಾಂಸನನ್ನು ಪಡೆದು, ಅವನನ್ನು ಸತ್ಕರಿಸಿ ಅವನಿಂದ ವಿದ್ಯೆ ಪಡೆದು ಗಣಿತ ಮೊದಲಾದ ಕ್ರಿಯೆಗಳ ಚತುರತೆಯನ್ನು ಗ್ರಹಿಸಿ ಸೂರ್ಯ ಸಂಬಂಧದ ವ್ಯವಹಾರಗಳ ಅನುಷ್ಠಾನ ಮಾಡಿ ಕಾರ್ಯಸಿದ್ಧಿ ಪಡೆಯುವುದು ಮನುಷ್ಯರಿಗೆ ಯೋಗ್ಯವಾಗಿದೆ.

ಮತ್ತೆ ಅದೇ ವಿಷಯ.

ತತ್ ಸೂರ್ಯಸ್ಯ ದೇವತ್ವಂ ತನ್ಮಹಿತ್ವಂ ಮಧ್ಯಾ ಕರ್ತೋರ್ವಿತತಂ ಸಂ ಜಭಾರ ।
ಯದೇದಯುಕ್ತ ಹರಿತಃ ಸಧಸ್ಥಾದಾದ್ರಾತ್ರೀ ವಾಸಸ್ತನುತೇ ಸಿಮಸ್ಮೈ ॥೪॥

ಪದಾರ್ಥ:- ಹೇ ಮನುಷ್ಯರೇ! [ಯದಾ] ಯಾವಾಗ [ತತ್] ಆ ಮೊದಲನೇ ಮಂತ್ರದಲ್ಲಿ ಹೇಳಲ್ಪಟ್ಟ [ಸೂರ್ಯಸ್ಯ] ಸೂರ್ಯಮಂಡಲದ [ಮಧ್ಯಾ] ಮಧ್ಯದಲ್ಲಿ [ವಿತತಮ್] ವ್ಯಾಪ್ತ ಬ್ರಹ್ಮ ಈ ಸೂರ್ಯನ [ದೇವತ್ವಮ್]

ಪ್ರಕಾಶವು [ಮಹಿತ್ವಮ್] ಮಹತ್ವವು [ಕರ್ತೋಃ] ಮತ್ತು ಕಾರ್ಯದ [ಸಂಜಭಾರ] ಸಂಹಾರ ಮಾಡುತ್ತಾ ಅಂದರೆ ಪ್ರಳಯಕಾಲದಲ್ಲಿ ಸೂರ್ಯನ ಸಮಸ್ತ ವ್ಯವಹಾರಗಳನ್ನೂ ಹರಣ ಮಾಡುತ್ತಾ [ಆತ್] ಮತ್ತು ಮತ್ತೆ ಯಾವಾಗ ವೃಷ್ಟಿಯ ಉತ್ಪನ್ನವಾಗುತ್ತದೋ ಆಗ ಸೂರ್ಯನನ್ನು [ಅಯುಕ್ತ] ಯುಕ್ತ ಅಂದರೆ ಉತ್ಪನ್ನ ಮಾಡುತ್ತಾ ಮತ್ತು ನಿಯತ ಕಕ್ಷೆಯಲ್ಲಿ ಸ್ಥಾಪಿಸುತ್ತಾನೆ. ಸೂರ್ಯನು [ಸಧಸ್ಥಾತ್] ಒಂದು ಸ್ಥಾನದಿಂದ [ಹರಿತಃ] ದಿಕ್ಕುಗಳನ್ನು ತನ್ನ ಕಿರಣಗಳಿಂದ ವ್ಯಾಪ್ತನಾಗಿ [ಸಿಮಸ್ಮೈ] ಸಮಸ್ತ ಲೋಕಗಳಿಗಾಗಿ [ವಾಸಃ] ತನ್ನ ನಿವಾಸದ [ತನುತೇ] ವಿಸ್ತಾರ ಮಾಡುತ್ತಾ ಹಾಗೂ ಯಾವ ಬ್ರಹ್ಮತತ್ವದಿಂದ [ರಾತ್ರೀ] ರಾತ್ರಿಯಾಗುತ್ತದೆಯೋ [ತತ್ ಇತ್] ಆ ಬ್ರಹ್ಮನ ಉಪಾಸನೆಯನ್ನು ನೀವು ಮಾಡಿರಿ ಹಾಗೂ ಅವನನ್ನೇ ಜಗತ್ತಿನ ಕರ್ತನೆಂದು ತಿಳಿಯಿರಿ.

ಭಾವಾರ್ಥ:- ಹೇ ಸಜ್ಜನರೇ! [ಒಂದು ವೇಳೆ] ಸೂರ್ಯನ ಆಕರ್ಷಣೆಯಿಂದ ಪೃಥಿವೀ ಮೊದಲಾದ ಪದಾರ್ಥಗಳ ಧಾರಣ ಮಾಡುವುದು, ಪೃಥಿವೀ ಮೊದಲಾದ ಲೋಕಗಳಿಗಿಂತಲೂ ದೊಡ್ಡವು ವರ್ತಮಾನವಾಗಿವೆ. ಜಗತ್ತನ್ನು ಪ್ರಕಾಶಪಡಿಸಿ ವ್ಯವಹಾರಗಳನ್ನು ಕೂಡ ಮಾಡಿಸುತ್ತಾನೆ. ಆದರೂ ಈ ಸೂರ್ಯನು ಪರಮೇಶ್ವರನ ಉತ್ಪಾದನೆ, ಧಾರಣ ಮತ್ತು ಆಕರ್ಷಣೆ ಮೊದಲಾದ ಗುಣಗಳ ಹೊರತು ಉತ್ಪನ್ನನಾಗಲು, ಸ್ಥಿರನಾಗಲು ಮತ್ತು ಪದಾರ್ಥಗಳನ್ನು ಆಕರ್ಷಿಸಲು ಸಮರ್ಥನಾಗಲಾರನು. ಈ ಈಶ್ವರನ ಹೊರತು ಅಂತಹ ಲೋಕ-ಲೋಕಾಂತರಗಳ ರಚನೆ, ಧಾರಣ ಮತ್ತು ಇವುಗಳ ಪ್ರಳಯವನ್ನು ಮಾಡಲು ಯಾವನೂ ಸಮರ್ಥನಲ್ಲ.

ಮತ್ತೆ ಅದೇ ವಿಷಯ.

ತನ್ಮಿತ್ರಸ್ಯ ವರುಣಸ್ಯಾಭಿಚಕ್ಷೇ ಸೂರ್ಯೋ ರೂಪಂ ಕೃಣುತೇ ದ್ಯೋರುಪಸ್ಥೇ ।
ಅನಂತಮನ್ಯದ್ ರುಶದಸ್ಯ ಪಾಜಃ ಕೃಷ್ಣಮನ್ಯದ್ಧರಿತಃ ಸಂ ಭರಂತಿ ॥೫॥

ಪದಾರ್ಥ:- ಹೇ ಮನುಷ್ಯರೇ! ನೀವು ಯಾವನ ಸಾಮರ್ಥ್ಯದಿಂದ [ಮಿತ್ರಸ್ಯ] ಪ್ರಾಣ ಮತ್ತು [ವರುಣಸ್ಯ] ಉದಾನದ [ಅಭಿಚಕ್ಷೈ] ಸಮ್ಮುಖ ದರ್ಶನವಾಗಲು [ದ್ಯೋಃ] ಪ್ರಕಾಶದ [ಉಪಸ್ಥೇ] ಸಮೀಪದಲ್ಲಿ ನಿಲ್ಲುತ್ತಾ [ಸೂರ್ಯಃ] ಸೂರ್ಯಲೋಕವು ಅನೇಕ ಪ್ರಕಾರವಾಗಿ [ರೂಪಮ್] ಪ್ರತ್ಯಕ್ಷವಾಗಿ ನೋಡಲು ಯೋಗ್ಯವಾದ ರೂಪವನ್ನು [ಕೃಣುತೇ] ಪ್ರಕಟವಾಗುವುದು. [ಅಸ್ಯ] ಈ ಸೂರ್ಯನ [ಅನ್ಯತ್] ಬೇರೆಯಾಗಿ [ಕೃಷ್ಣಾಮ್] ಕಪ್ಪು-ಕಪ್ಪಾದ ಅಂಧಕಾರ ರೂಪವನ್ನು [ಹರಿತಃ] ದಿಕ್ಕು-ವಿದಿಕ್ಕುಗಳನ್ನು [ಸಂ ಭರನ್ತಿ] ಧಾರಣ ಮಾಡುತ್ತವೆ. [ತತ್] ಆ [ಅನಂತಮ್] ದೇಶ, ಕಾಲ ಮತ್ತು ವಸ್ತುವಿನ ವಿಭಾಗದಿಂದ ಶೂನ್ಯ ಪರಬ್ರಹ್ಮನ ಸೇವೆ ಮಾಡಿರಿ.

ಭಾವಾರ್ಥ:- ಯಾವನ ಸಾಮರ್ಥ್ಯದಿಂದ ರೂಪ, ದಿನ ಮತ್ತು ರಾತ್ರಿಯ ಪ್ರಾಪ್ತಿಯ ನಿಮಿತ್ತ ಸೂರ್ಯನು ಶ್ವೇತ-ಕೃಷ್ಣ ರೂಪಗಳ ವಿಭಾಗದಿಂದ ದಿನ-ರಾತ್ರಿಗಳನ್ನು ಉತ್ಪನ್ನ ಮಾಡುತ್ತಾನೋ, ಆ ಅನಂತ ಪರಮೇಶ್ವರನನ್ನು ಬಿಟ್ಟು ಬೇರೆ ಯಾವನ ಉಪಾಸನೆಯನ್ನೂ ಮನುಷ್ಯನು ಮಾಡಬಾರದು. ಇದನ್ನು ವಿದ್ವಾಂಸರು ನಿರಂತರ ಉಪದೇಶ ಮಾಡಬೇಕು.

ಮತ್ತೆ ಅದೇ ವಿಷಯ.

ಅದ್ಯಾ ದೇವಾ ಉದಿತಾ ಸೂರ್ಯಸ್ಯ ನಿರಂಹಸಃ ಪಿಪೃತಾ ನಿರವದ್ಯಾತ್ । ತನ್ನೋ ಮಿತ್ರೋ
ವರುಣೋ ಮಾಮಹಂತಾಮದಿತಿಃ ಸಿಂಧುಃ ಪೃಥಿವೀ ಉತ ದ್ಯೌಃ ॥೬॥

ಪದಾರ್ಥ:- ಹೇ [ದೇವಾಃ] ವಿದ್ವಾಂಸರೇ! [ಸೂರ್ಯಸ್ಯ] ಸಮಸ್ತ ಜಗತ್ತನ್ನು ಉತ್ಪನ್ನಮಾಡುವ ಜಗದೀಶ್ವರನ ಉಪಾಸನೆಯಿಂದ [ಉದಿತಾ] ಉದಯ ಅಂದರೆ ಎಲ್ಲ ಪ್ರಕಾರಗಳಿಂದ ಉತ್ಕರ್ಷದ ಪ್ರಾಪ್ತಿಯಲ್ಲಿ ಪ್ರಕಾಶಮಾನರಾಗುತ್ತಾ ನೀವು [ನಿಃ] ನಿರಂತರ [ಅವದ್ಯಾತ್] ನಿಂದಿತ [ಅಂಹಸಃ] ಪಾಪ ಮೊದಲಾದ ಕರ್ಮಗಳಿಂದ [ನಿಪಿಪೃತಾ] ನಿರ್ಗತಿಕರಾಗಿ ಅಂದರೆ ತಮ್ಮ ಆತ್ಮ, ಮನ ಮತ್ತು ಶರೀರಾದಿಗಳನ್ನು ದೂರವಿಡಿರಿ ಹಾಗೂ ಯಾವನನ್ನು [ಮಿತ್ರಃ] ಪ್ರಾಣವು [ವರುಣಃ] ಉದಾನವು [ಅದಿತಿಃ] ಅಂತರಿಕ್ಷವು [ಸಿಂಧುಃ] ಸಮುದ್ರವು [ಪೃಥಿವೀ] ಪೃಥಿವಿಯು [ಉತ] ಮತ್ತು [ದ್ಯೌಃ] ಪ್ರಕಾಶವು ಮೊದಲಾದ ಪದಾರ್ಥಗಳನ್ನು ಸಿದ್ಧಗೊಳಿಸುತ್ತದೆಯೋ, [ತತ್] ಆ ವಸ್ತು ಅಥವಾ ಕರ್ಮವು [ನಃ] ನಮಗೆ ಸುಖವನ್ನು ಕೊಡುತ್ತದೆ, ಅದನ್ನು ನೀವು [ಅದ್ಯ] ಇಂದು [ಮಾಮಹನ್ತಾಮ್] ಮತ್ತೆ - ಮತ್ತೆ ಪ್ರಶಂಸಿಸಿರಿ.

ಭಾವಾರ್ಥ:- ಪಾಪಗಳಿಂದ ದೂರವಿದ್ದು ಧರ್ಮದ ಆಚರಣೆ ಮತ್ತು ಜಗದೀಶ್ವರನ ಉಪಾಸನೆಯನ್ನು ಮಾಡಿ ಶಾಂತಿಯಿಂದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಸಿದ್ಧಿಯನ್ನು ಮನುಷ್ಯರು ಪರಿಪೂರ್ಣವಾಗಿ ಸಿದ್ಧಿಸಿಕೊಳ್ಳಬೇಕು.

ಈ ಸೂಕ್ತದಲ್ಲಿ ಸೂರ್ಯಶಬ್ದದಿಂದ ಈಶ್ವರ ಮತ್ತು ಸೂರ್ಯಲೋಕದ ಅರ್ಥದ ವರ್ಣನೆಯಿಂದ ಈ ಸೂಕ್ತದ ಅರ್ಥಕ್ಕೂ ಹಿಂದಿನ ಸೂಕ್ತದ ಅರ್ಥದೊಂದಿಗೆ ಏಕತೆ ಇದೆಯೆಂದು ತಿಳಿಯಬೇಕು.

ನೂರ ಹದಿನೈದನೆಯ ಸೂಕ್ತ ಸಮಾಪ್ತ

ಸೂಕ್ತ ೧೧೬

ಮಂತ್ರಸಂಖ್ಯೆ ೨೫ । ಋಷಿಃ - ಕಕ್ಷೀವಾನ್ ದೈರ್ಘತಮಸ ಔಶಿಜಃ । ದೇವತಾ - ಅಶ್ವಿನೌ । ಛಂದಃ - ತ್ರಿಷ್ಟುಪ್ ।

ಸ್ವರಃ - ೬, ೧೧, ೧೬, ೧೭, ೧೯ ಪಂಚಮಃ, ಧೈವತಃ.

ಇದರ ಮೊದಲ ಮಂತ್ರದಲ್ಲಿ ಶಿಲ್ಪವಿದ್ಯೆಯ ವಿಷಯದ ವರ್ಣನೆಮಾಡಿದೆ.

ನಾಸತ್ಯಾಭ್ಯಾಂ ಬರ್ಹಿರಿವ ಪ್ರ ವೃಂಜೇ ಸ್ತೋಮಾँ ಇಯರ್ಮ್ಯಭ್ರಿಯೇವ ವಾತಃ ।
ಯಾವರ್ಭಗಾಯ ವಿಮದಾಯ ಜಾಯಾಂ ಸೇನಾಜುವಾ ನ್ಯೂಹತೂ ರಥೇನ ॥೧॥

ಪದಾರ್ಥ:- ಹೇ ಮನುಷ್ಯರೇ! ಹೇಗೆ [ನಾಸತ್ಯಾಭ್ಯಾಮ್] ಸತ್ಯ ಪುಣ್ಯಾತ್ಮನಾದ ಶಿಲ್ಪಿಯು ಅಂದರೆ ಶಿಲ್ಪಿಗಳಿಂದ ಜೋಡಿಸಲ್ಪಟ್ಟ [ರಥೇನ] ವಿಮಾನಾದಿ ರಥಗಳಿಂದ [ಯೌ] ಯಾವ [ಸೇನಾಜುವಾ] ವೇಗದೊಂದಿಗೆ ಸೇನೆಯನ್ನು ನಡೆಸುವಂತಹ ಇಬ್ಬರು ಸೇನಾಪತಿಗಳು [ಅರ್ಭಗಾಯ] ಚಿಕ್ಕ ಬಾಲಕನ ಅಥವಾ [ವಿಮದಾಯ] ವಿಶೇಷವಾಗಿ ಯಾವುದರಿಂದ ಆನಂದವಾಗುವುದೋ ಆ ಯೌವ್ವನಕ್ಕಾಗಿ [ಜಾಯಾಮ್] ಸ್ತ್ರೀಯಂತಿರುವ ಪದಾರ್ಥಗಳನ್ನು [ನ್ಯೂಹತುಃ] ನಿರಂತರ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಕಳುಹಿಸಲಾಗುತ್ತವೋ, ಹಾಗೆ ಉತ್ತಮ ಯತ್ನ ಮಾಡುವ ನಾನು [ಸ್ತೋಮಾನ್] ಮಾರ್ಗವು (ನೇರವಾಗುವುದಕ್ಕಾಗಿ) ಸಫಲತೆಗಾಗಿ ದೊಡ್ಡ ದೊಡ್ಡ ಪೃಥಿವೀ, ಪರ್ವತ ಮೊದಲಾದವುಗಳನ್ನು [ಬರ್ಹಿರಿವ] ಹೆಚ್ಚಾಗಿರುವ ಜಲವನ್ನು ಹೇಗೋ ಹಾಗೆ [ಪ್ರ, ವೃಂಜೇ] ಭಿನ್ನ ಭಿನ್ನ ಮಾಡುತ್ತಾ ಹಾಗೂ [ವಾತಃ] ಪವನವು ಹೇಗೆ [ಅಭ್ರಿಯೇವ] ಮೇಘಗಳನ್ನು ಪಡೆಯುವುದೋ ಹಾಗೆ ಒಂದು ದೇಶಕ್ಕೆ [ಇಯರ್ಮಿ] ಹೋಗುತ್ತೇನೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ರಥ ಮೊದಲಾದ ಯಾನಗಳಲ್ಲಿ ಉಪಕಾರಿಗಳಾದ ಪೃಥಿವೀ, ಜಲ ಮತ್ತು ಅಗ್ನಿ ಮೊದಲಾದ ಪದಾರ್ಥಗಳು ಯಾವ-ಯಾವ ಅದ್ಭುತ ಕಾರ್ಯಗಳನ್ನು ಸಿದ್ಧಗೊಳಿಸುವುದಿಲ್ಲ?

ಈಗ ಯುದ್ಧದ ವಿಷಯವನ್ನು ತಿಳಿಸಲಾಗಿದೆ

ವೀಳುಪತ್ಮಭಿರಾಶುಹೇಮಭಿರ್ವಾ ದೇವಾನಾಂ ವಾ ಜೂತಿಭಿಃ ಶಾಶದಾನಾ ।
ತದ್ ರಾಸಭೋ ನಾಸತ್ಯಾ ಸಹಸ್ರ-ಮಾಜಾ ಯಮಸ್ಯ ಪ್ರಧನೇ ಜಿಗಾಯ ।।೨।।

ಪದಾರ್ಥ:- ಹೇ [ಶಾಶದಾನಾ] ಪದಾರ್ಥಗಳನ್ನು ಯಥಾಯೋಗ್ಯವಾಗಿ ಭಿನ್ನ-ಭಿನ್ನಗೊಳಿಸುವಂತಹ [ನಾಸತ್ಯಾ] ಸತ್ಯ ಸ್ವಭಾವದ ಸಭಾಪತಿ ಮತ್ತು ಸೇನಾಪತಿ! ತಾವು ಹೇಗೆ [ವೀಡುಪತ್ಮಭಿಃ] ಬಲದಿಂದ ಬೀಳಿಸುತ್ತಾ ಮತ್ತು [ಆಶುಹೇಮಭಿಃ] ಶೀಘ್ರವಾಗಿ ಕಳುಹಿಸುತ್ತಿರುವ ಪದಾರ್ಥಗಳಿಂದ [ವಾ] ಅಥವಾ [ದೇವಾನಾಮ್] ವಿದ್ವಾಂಸರ [ಜೂತಿಭಿಃ] ಯಾರಿಂದ ತಾನು ಬಯಸುವ ಕಾರ್ಯವು ದೊರೆತು ಸಿದ್ಧವಾಗುವುದೋ, ಆ ಯುದ್ಧದ ಕ್ರಿಯೆಗಳಿಂದ [ವಾ] ನಿಶ್ಚಯ ಮಾಡಿ ತನ್ನ ಕರ್ಮಗಳನ್ನು ನಿರಂತರವೂ ತರ್ಕ-ವಿತರ್ಕಗಳಿಂದ ಸಿದ್ಧಗೊಳಿಸುವನೋ, ಹಾಗೆ [ತತ್] ಆ ಆಚರಣೆಯನ್ನು ಮಾಡುತ್ತಾ [ರಾಸಭಃ] ಹೇಳಲ್ಪಟ್ಟ ಉಪಯೋಗವನ್ನು ಯಾವನು ಪಡೆದು ಆ ಪೃಥಿವೀ ಮೊದಲಾದ ಪದಾರ್ಥ ಸಮೂಹಗಳಂತೆ ಪುರುಷನು [ಪ್ರಧನೇ] ಉತ್ತಮೋತ್ತಮ ಗುಣಗಳು ಯಾವನಲ್ಲಿ ಪ್ರಾಪ್ತವಾಗುವುವೋ ಅವನು [ಆಜಾ] ಸಂಗ್ರಾಮದಲ್ಲಿ [ಯಮಸ್ಯ] ಹತ್ತಿರಕ್ಕೆ ಬಂದ ಮೃತ್ಯುವಿನಂತೆ ಶತ್ರುಗಳಾದ [ಸಹಸ್ರಮ್] ಅಸಂಖ್ಯಾತ ವೀರರನ್ನು [ಜಿಗಾಯ] ಗೆಲ್ಲಲಿ.

ಭಾವಾರ್ಥ:- ಹೇಗೆ ಅಗ್ನಿ ಅಥವಾ ಜಲವು ವನ ಅಥವಾ ಭೂಮಿಯಲ್ಲಿ ಪ್ರವೇಶಿಸಿ ಅದನ್ನು ಸುಡುವುದೋ ಅಥವಾ ಭಿನ್ನ-ಭಿನ್ನ ಮಾಡುತ್ತದೋ, ಹಾಗೆ ಅತ್ಯಂತ ವೇಗವಾಗಿ ಮಾಡುವ ವಿದ್ಯುತ್ತು ಮೊದಲಾದ ಪದಾರ್ಥಗಳಿಗಾಗಿ ಶಸ್ತ್ರ ಮತ್ತು ಅಸ್ತ್ರಗಳಿಂದ ಶತ್ರುಗಳನ್ನು ಜಯಿಸಬೇಕು.

ಈಗ ನಾವೆ ಮೊದಲಾದವುಗಳನ್ನು ತಯಾರು ಮಾಡುವ ವಿದ್ಯೆಯ ಉಪದೇಶವನ್ನು ಹೇಳಲಾಗಿದೆ.

ತುಗ್ರೋ ಹ ಭುಜ್ಯುಮಶ್ವಿನೋದಮೇಘೇ ರಯಿಂ ನ ಕಶ್ಚಿನ್ಮಮೃವಾ ಅವಾಹಾಃ ।
ತಮೂಹಥುರ್ನೌಭಿರಾತ್ಮನ್ವತೀಭಿ-ರಂತರಿಕ್ಷಪ್ರುದ್ಭಿರಪೋದಕಾಭಿಃ ।।೩।।

ಪದಾರ್ಥ:- ಹೇ [ಅಶ್ವಿನಾ] ಪವನ ಮತ್ತು ವಿದ್ಯುತ್ತಿನಂತೆ ಬಲಶಾಲಿಯಾದ ಸೇನಾಧೀಶರೇ! ನೀವು [ತುಗ್ರಃ] ಶತ್ರುಗಳನ್ನು ಕೊಲ್ಲುವಂತಹ ಸೇನಾಪತಿಯು ಶತ್ರುಗಳನ್ನು ಕೊಲ್ಲಲು ಯಾವ [ಭುಜ್ಯಮ್] ರಾಜ್ಯವನ್ನು ಪಾಲಿಸಲು ಅಥವಾ ಸುಖವನ್ನು ಭೋಗಿಸುವಂತಹ ಪುರುಷನನ್ನು [ಉದಮೇಘೇ] ಯಾವ ಜಲಗಳಿಂದ ಜಗತ್ತು ತೋಯಿಸಲ್ಪಡುತ್ತದೋ ಆ ಸಮುದ್ರದಲ್ಲಿ ಹೇಗೆ [ಕಶ್ಚಿತ್] ಯಾವನು [ಮಮೃವಾನ್] ಸಾಯುತ್ತಿರುವವನು [ರಯಿಮ್] ಧನವನ್ನು [ನ] ಹೇಗೆ [ಅವಾಹಾಃ] ಬಿಡುವನೋ, ಹಾಗೆ [ತಂ ಹ] ಅವನನ್ನು [ಅಪೋದಕಾಭಿಃ] ಜಲವು ಯಾವುದರಲ್ಲಿ ಬಂದು ಹೋಗುತ್ತದೋ [ಅಂತರಿಕ್ಷಪ್ರುದ್ಭಿಃ] ಅವಕಾಶದಲ್ಲಿ ಚಲಿಸುವಂತಹ ಮತ್ತು [ಆತ್ಮನ್ವತೀಭಿಃ] ಪ್ರಶಂಸಿತ ವಿಚಾರವುಳ್ಳ ಕ್ರಿಯೆ ಮಾಡುವುದರಲ್ಲಿ ಚತುರನು ಯಾವುದರಲ್ಲಿ ವಿದ್ಯಮಾನನೋ ಆ [ನೌಭಿಃ] ನಾವೆಗಳಿಂದ [ಊಹಥುಃ] ಒಂದು ಸ್ಥಾನದಿಂದ ಮತ್ತೊಂದು ಸ್ಥಾನಕ್ಕೆ ಕಳುಹಿಸಿರಿ.

ಭಾವಾರ್ಥ:- ಹೇಗೆ ಮರಣೋನ್ಮುಖನಾದ ಮನುಷ್ಯನು ಧನ, ಪುತ್ರ, ಮೊದಲಾದವುಗಳ ಮೋಹವನ್ನು ಬಿಟ್ಟು ಶರೀರದಿಂದ ಹೊರಗಾಗುವನೋ, ಹಾಗೆ ಯುದ್ಧವನ್ನು ಬಯಸುವ ಶೂರರು ಅನುಭವಿಸುವಂತೆ ಮಾಡಬೇಕು. ಯಾವಾಗ ಮನುಷ್ಯನು ಪೃಥಿವಿಯ ಯಾವುದೇ ಭಾಗದಿಂದ ಸಮುದ್ರದಲ್ಲಿ ಇಳಿದು ಶತ್ರುಗಳನ್ನು ಜಯಿಸಲು ಹೋಗಬಯಸಿದರೆ, ಆಗ ಪುಷ್ಟವೂ ದೊಡ್ಡ-ದೊಡ್ಡವೂ ಆದವುಗಳ ಒಳಭಾಗದಲ್ಲಿ ನೀರು ಬರುವುದಿಲ್ಲವೋ, ಮತ್ತು ಆತ್ಮಜ್ಞಾನವುಳ್ಳ ವಿಚಾರವುಳ್ಳವರು ಕುಳಿತಿರುವರೋ ಮತ್ತು ಶಸ್ತ್ರ-ಅಸ್ತ್ರ ಮೊದಲಾದವುಗಳಿಂದ ಯುದ್ಧ ಸಾಮಗ್ರಿಗಳಿಂದ ಸಂಶೋಭಿತವಾಗಿರುವುವೋ, ಅಂತಹ ನಾವೆಗಳೊಡನೆ ಹೋಗಬೇಕು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ತಿಸ್ರಃ ಕ್ಷಪಸ್ತ್ರಿರಹಾತಿವ್ರಜದ್ಭಿ-ರ್ನಾಸತ್ಯಾ ಭುಜ್ಯುಮೂಹಥುಃ ಪತಙ್ಗೈಃ ।
ಸಮುದ್ರಸ್ಯ ಧನ್ವನ್ನಾರ್ದ್ರಸ್ಯ ಪಾರೇ ತ್ರಿಭೀ ರಥೈಃ ಶತಪದ್ಭಿಃ ಷಳಶ್ವೈಃ ।।೪।।

ಪದಾರ್ಥ:- ಹೇ [ನಾಸತ್ಯಾ] ಸತ್ಯದಿಂದ ಪರಿಪೂರ್ಣರಾದ ಸಭಾಪತಿ ಮತ್ತು ಸೇನಾಪತಿಗಳೇ! ನೀವೀರ್ವರೂ [ತಿಸ್ರಃ] ಮೂರು [ಕ್ಷಪಃ] ರಾತ್ರಿ [ಅಹಾ] ಮೂರು ದಿನಗಳು [ಅತಿವ್ರಜದ್ಭಿಃ] ಅತ್ಯಂತವಾಗಿ ಚಲಿಸುವಂತಹ ಪದಾರ್ಥಗಳು [ಪತಂಗೈಃ] ಕುದುರೆಗಳಂತೆ ವೇಗವುಳ್ಳವು ಅವುಗಳೊಡನಿರುವ [ಷಡಶ್ವೈಃ] ಯಾವವುಗಳಲ್ಲಿ ಶೀಘ್ರವಾಗಿ ತೆಗೆದುಕೊಂಡು ಹೋಗುವ ಆರು ಕಲೆಗಳುಳ್ಳ ಗೃಹದಲ್ಲಿರುವ ಆ [ಶತಪದ್ಭಿಃ] ನೂರಾರು ಹೆಜ್ಜೆಗಳಂತೆ ವೇಗವಾಗಿರುವ [ತ್ರಿಭಿಃ] ಭೂಮಿ, ಅಂತರಿಕ್ಷ ಮತ್ತು ಜಲದಲ್ಲಿ ಚಲಿಸುವಂತಹ [ರಥೈಃ] ರಮಣೀಯ ಸುಂದರ ಮನೋಹರ ವಿಮಾನ ಮೊದಲಾದ ರಥಗಳಿಂದ [ಭುಜ್ಯವಮ್] ರಾಜ್ಯದ ಪಾಲನೆ ಮಾಡುವಂತಹವನನ್ನು [ಸಮುದ್ರಸ್ಯ] ಯಾವುದರಲ್ಲಿ ಉತ್ತಮವಾಗಿ ಪರಮಾಣುರೂಪ ಜಲವು ಹೋಗುವುದೋ, ಆ ಅಂತರಿಕ್ಷ ಅಥವಾ [ಧನ್ವನ್] ಬಹಳ ಮರಳಿರುವ ಭೂಮಿಯಲ್ಲಿ ಅಥವಾ [ಆರ್ದ್ರಸ್ಯ] ಕೆಸರಿನಿಂದ ಕೂಡಿದ ಸಮುದ್ರದಲ್ಲಿ [ಪಾರೇ] ತೀರಕ್ಕೆ [ತ್ರಿಃ] ಮೂರು ಸಲ [ಊಹಥುಃ] ಕಳುಹಿಸಿರಿ.

ಭಾವಾರ್ಥ:- ಆಶ್ಚರ್ಯವು ಯಾವುದೆಂದರೆ ಮನುಷ್ಯನು ೩ ಹಗಲು ರಾತ್ರಿಗಳಲ್ಲಿ ಸಮುದ್ರ ಮೊದಲಾದ ಸ್ಥಾನಗಳ ಆಚೆಯ ತೀರಕ್ಕೆ ಹೋಗಿ ಬರುವುದಾದಲ್ಲಿ ಯಾವುದೇ ಸುಖವು ದುರ್ಲಭವಾಗುವುದೇ? ಅಂದರೆ ಯಾವುದೂ ದುರ್ಲಭವಲ್ಲ.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಅನಾರಮ್ಭಣೇ ತದವೀರಯೇಥಾ-ಮನಾಸ್ಥಾನೇ ಅಗ್ರಭಣೇ ಸಮುದ್ರೇ ।
ಯದಶ್ವಿನಾ ಊಹಥುರ್ಭುಜ್ಯುಮಸ್ತಂ ಶತಾರಿತ್ರಾಂ ನಾವಮಾತಸ್ಥಿವಾಂಸಮ್ ।।೫।।

ಪದಾರ್ಥ:- ಹೇ [ಅಶ್ವಿನಾ] ವಿದ್ಯೆಯಲ್ಲಿ ವ್ಯಾಪ್ತರಾಗುವ ಸಭಾಪತಿ ಮತ್ತು ಸೇನಾಪತಿಗಳೇ! [ಯತ್] ಯಾವ ನೀವೀರ್ವರೂ [ಅನಾರಂಭಣೇ] ಯಾವುದರಲ್ಲಿ ಹೋಗಿ ಬರುವ ಆರಂಭವು [ಅನಾಸ್ಥಾನೇ] ವಾಸಸ್ಥಳ ಮತ್ತು [ಅಗ್ರಭಣೇ] ಆಧಾರವಿಲ್ಲ (ಹಿಡಿಯಲಾರ)ದ ಆ [ಸಮುದ್ರೈಃ] ಅಂತರಿಕ್ಷ ಅಥವಾ ಸಾಗರದಲ್ಲಿ [ಶತಾರಿತ್ರಮ್] ಆಳವನ್ನರಿಯಲು ನೂರಾರು ಬಳ್ಳಿಗಳು ಅಥವಾ ನೂರಾರು ಕಂಭಗಳು ಬೇಕಾಗುವುವೋ ಮತ್ತು [ನಾವಮ್] ನಾವೆಯನ್ನು ವಿದ್ಯುತ್ತು ಮತ್ತು ಪವನ ವೇಗದಂತೆ [ಊಹಥುಃ] ಹಾಯಿಸಿರಿ ಮತ್ತು [ಅಸ್ತಮ್] ದುಃಖವನ್ನು

ದೂರಗೊಳಿಸುವ ಗೃಹದಲ್ಲಿ [ಆತಸ್ಥಿವಾಂಸಮ್] ಇಡುವಂತೆ [ಭುಜ್ಯುಮ್] ತಿನ್ನುವ- ಕುಡಿಯುವ ಪದಾರ್ಥಗಳನ್ನು [ಅವೀರಯೇಥಾಮ್] ಒಂದು ದೇಶದಿಂದ ಇನ್ನೊಂದು ದೇಶಕ್ಕೆ ತೆಗೆದುಕೊಂಡು ಹೋಗಿರಿ. [ತತ್] ಆ ನಿಮ್ಮನ್ನು ನಾವು ಸದಾ ಸತ್ಕರಿಸುತ್ತೇವೆ.

ಭಾವಾರ್ಥ:- ನಿರಾಲಂಬ ಮಾರ್ಗದಲ್ಲಿ ಅಂದರೆ ಯಾವುದರಲ್ಲಿ ನೆಲೆಸಲು ಸ್ಥಾನವಿಲ್ಲವೋ, ಅಲ್ಲಿ ವಿಮಾನ ಮೊದಲಾದವುಗಳಿಂದ ಹೋಗಿರಿ. ಯುದ್ಧದಲ್ಲಿ ಹೋರಾಡುವ ವೀರರ ರಕ್ಷಣೆ ಹೇಗೆ ಬೇಕೋ ಹಾಗೆ ಸಿಗುವುದಿಲ್ಲವೋ ಅಲ್ಲಿಯವರೆಗೂ ಶತ್ರುಗಳನ್ನು ಗೆಲ್ಲಲಾಗದು. ಯಾವುದರಲ್ಲಿ ನೂರು ಬಳ್ಳಿಗಳ ಆಳವುಳ್ಳ ಸಮುದ್ರದಲ್ಲಿ ವಿಸ್ತಾರವುಳ್ಳ ನಾವೆಯನ್ನು ಮಾಡಿ ಹೋಗಬಹುದು. ಈ ಮಂತ್ರದಲ್ಲಿ ಶತಶಬ್ದವು ಅಸಂಖ್ಯವಾಚಿಯನ್ನಾಗಿಯೂ ತೆಗೆದುಕೊಳ್ಳಬಹುದು. ಆದುದರಿಂದ ಅತಿದೀರ್ಘ ನೌಕೆಯನ್ನು ಮಾಡಬೇಕೆಂದು ಈ ಮಂತ್ರದಿಂದ ತಿಳಿಯಲ್ಪಡುತ್ತದೆ. ಮನುಷ್ಯನು ಎಷ್ಟು ದೊಡ್ಡ ನೌಕೆಯನ್ನು ಮಾಡಬಹುದೋ ಅಷ್ಟು ದೊಡ್ಡದನ್ನು ಮಾಡಬೇಕು. ಈ ರೀತಿ ಶೀಘ್ರವಾಗಿ ಹೋಗುವಂತಹ ಪುರುಷನು ಭೂಮಿ ಮತ್ತು ಅಂತರಿಕ್ಷದಲ್ಲಿ ಹೋಗಿಬರುವುದಕ್ಕಾಗಿ ಯಾನಗಳನ್ನು ತಯಾರಿಸಬೇಕು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಯಮಶ್ವಿನಾ ದದಥುಃ ಶ್ವೇತಮಶ್ವ-ಮಘಾಶ್ವಾಯ ಶಶ್ವದಿತ್ ಸ್ವಸ್ತಿ । ತದ್ ವಾಂ ದಾತ್ರಂ
ಮಹಿ ಕೀರ್ತೇನ್ಯಂ ಭೂತ್ ಪೈದ್ವೋ ವಾಜೀ ಸದಮಿದ್ಧವ್ಯೋ ಅರ್ಯಃ ॥೬॥

ಪದಾರ್ಥ:- ಹೇ [ಅಶ್ವಿನಾ] ಜಲ ಮತ್ತು ಪೃಥಿವಿಗಳಂತೆ ಶೀಘ್ರ ಸುಖವನ್ನೀಯುವಂತಹ ಸಭಾ ಸೇನಾಪತಿಗಳೇ! ನೀವೀರ್ವರೂ [ಅಘಾಶ್ವಾಯ] ಯಾವನು ಮರಣಿಸಲು ಯೋಗ್ಯನಲ್ಲವೋ ಮತ್ತು ಶೀಘ್ರ ಕಳುಹಿಸುವವನಾಗಿರುವನೋ, ಆ ವೈಶ್ಯನಿಗಾಗಿ [ಯಮ್] ಯಾವ [ಶ್ವೇತಮ್] ಉತ್ತಮವಾಗಿ ದೊಡ್ಡದಾಗಿ ಬೆಳೆದಿರುವ [ಅಶ್ವಮ್] ಮಾರ್ಗದಲ್ಲಿ ವ್ಯಾಪ್ತವೂ ಪ್ರಕಾಶಮಾನವೂ ಆದ ವಿದ್ಯುತ್ ರೂಪಾಗ್ನಿಯನ್ನು [ದದಥುಃ] ಕೊಡುತ್ತದೋ ಹಾಗೂ ಯಾವುದರಲ್ಲಿ [ಶಶ್ವತ್] ನಿರಂತರ [ಸ್ವಸ್ತಿ] ಸುಖವನ್ನು ಪಡೆದು [ವಾಮ್] ನೀವೀರ್ವರ [ಕೀರ್ತೇನ್ಯಮ್] ಕೀರ್ತಿಗಾಗಿ [ಮಹಿ] ದೊಡ್ಡ ರಾಜ್ಯಪದವಿಯು [ದಾತ್ರಮ್] ಕೊಡಬಲ್ಲ [ಇತ್] ಪದಾರ್ಥಗಳನ್ನು ಗ್ರಹಣ ಮಾಡಿ [ಪೈದ್ವಃ] ಸುಖವಾಗಿ ಕರೆದುಕೊಂಡು ಹೋಗುವ [ವಾಜೀ] ಉತ್ತಮ ಜ್ಞಾನವುಳ್ಳ ಪುರುಷನು ಆ [ಸದಮ್] ಕುಳಿತುಕೊಳ್ಳುವಂತಹ ರಥವನ್ನು ರಚಿಸಿ [ಅರ್ಯಃ] ವಾಣಿಗಳು [ಹವ್ಯಃ] ಪದಾರ್ಥಗಳನ್ನು ತೆಗೆದುಕೊಂಡು ಹೋಗುವಂತಹ [ಭೂತ್] ಆಗುತ್ತದೆ. [ತತ್ ಇತ್] ಅಂತಹ ಪೂರ್ವೋಕ್ತ ವಿಮಾನಗಳನ್ನು ರಚಿಸಿರಿ.

ಭಾವಾರ್ಥ:- ಸಭೆ ಮತ್ತು ಸೇನಾಧಿಪತಿಗಳು ವಾಣಿಗಳನ್ನು ಚೆನ್ನಾಗಿ ವೃದ್ಧಿಸುತ್ತಾ, ರಕ್ಷಿಸುತ್ತಾ, ರಥ ಮೊದಲಾದ ಯಾನಗಳಲ್ಲಿ ಕುಳಿತು ದ್ವೀಪ-ದ್ವೀಪಾಂತರಗಳಿಗೆ ಕಳುಹಿಸುತ್ತಿದ್ದಲ್ಲಿ ಅವರು ಬಹಳ ಧನಯುಕ್ತರಾಗಿ ನಿರಂತರವೂ ಸುಖಿಗಳಾಗುವರು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಯುವಂ ನರಾ ಸ್ತುವತೇ ಪಜ್ರಿಯಾಯ ಕಕ್ಷೀವತೇ ಅರದತಂ ಪುರಂಧಿಮ್ ।
ಕಾರೋತರಾಚ್ಛಫಾದಶ್ವಸ್ಯ ವೃಷ್ಣಃ ಶತಂ ಕುಮ್ಭಾ ಅಸಿಂಚತಂ ಸುರಾಯಾಃ ॥೭॥

ಪದಾರ್ಥ:- ಹೇ [ನರಾ] ವಿನಯವಂತರಾದ ಸಭೆ ಸೇನಾಪತಿಗಳೇ! [ಯುವಮ್] ನೀವೀರ್ವರೂ [ಪಜ್ರಿಯಾಯ] ಪದವಿಗಳಲ್ಲಿ ಪ್ರಸಿದ್ಧರಾಗಿರುವ [ಕಕ್ಷೀವತೇ] ಉತ್ತಮ ಉಪದೇಶಗಳನ್ನು ಆಲಿಸಿ ಮತ್ತು [ಸ್ತುವತೇ] ಸ್ತುತಿ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ [ಪುರಂಧಿಮ್] ಅನೇಕ ಪ್ರಕಾರದ ಬುದ್ಧಿ ಮತ್ತು ಉತ್ತಮ ಮಾರ್ಗಗಳನ್ನು [ಅರದತಂ] ಚಿಂತೆಗಳು ಹಾಗೂ [ವೃಷ್ಣಃ] ಬಲಶಾಲಿಯಾದ [ಅಶ್ವಸ್ಯ] ಕುದುರೆಯಂತೆ ಅಗ್ನಿ ಸಂಬಂಧಿಯಾದ ಶಿಲ್ಪಿಗಳ [ಕಾರೋತರಾತ್] ವ್ಯವಹಾರಗಳನ್ನು ಮಾಡುತ್ತಿರುವ ಶಿಲ್ಪಿಗಳು ತರ್ಕದೊಂದಿಗೆ ಪಾರಾಗುತ್ತಾರೆ. ಆ [ಶಫಾತ್] ಜಲವನ್ನು ಸೇಚನೆ ಮಾಡುವ ಸ್ಥಳಗಳಲ್ಲಿ [ಸುರಾಯಾಃ] ಹಿಂಡಲ್ಪಟ್ಟು ರಸದಿಂದ ತುಂಬಿರುವ [ಶತಮ್] ನೂರು [ಕುಂಭಾನ್] ಕೊಡಗಳನ್ನು ತೆಗೆದುಕೊಂಡು [ಅಸಿಂಚತಾಮ್] ಸಿಂಚನೆ ಮಾಡಿರಿ.

ಭಾವಾರ್ಥ:- ಯಾವ ಶಾಸ್ತ್ರವೇತ್ತನೂ, ಅಧ್ಯಾಪಕನೂ ಆದ ವಿದ್ವಾಂಸನು ಶಾಂತಿಪೂರ್ವಕವಾಗಿ ಇಂದ್ರಿಯಗಳನ್ನು ವಿಷಯಗಳಿಂದ ತಡೆಯುವುದೇ ಮೊದಲಾದ ಗುಣಗಳಿಂದ ಕೂಡಿದ ಸಜ್ಜನ ವಿದ್ಯಾರ್ಥಿಗಾಗಿ ಶಿಲ್ಪಕಾರ್ಯ ಅಂದರೆ ಶಿಲ್ಪಕಲೆಯನ್ನು ಕಲಿಸಲು ಕೈನ ಚತುರತೆಯಿಂದ ಕೂಡಿದ ಬುದ್ಧಿಯನ್ನು ಉತ್ಪನ್ನ ಮಾಡುತ್ತಾನೆ ಅಂದರೆ ಕಲಿಸುತ್ತಾನೆ. ಅವನು ಪ್ರಶಂಸಾಯುಕ್ತ ಶಿಲ್ಪಿಯಾಗಿ ರಥ ಮೊದಲಾದ ಯಾನಗಳನ್ನು ಮಾಡುತ್ತಾನೆ. ಶಿಲ್ಪಿಗಳು ಯಾನ ಅಂದರೆ ಉತ್ತಮ ವಿಮಾನ ಮೊದಲಾದ ರಥಗಳಲ್ಲಿ ಜಲಗೃಹಗಳನ್ನು ಜಲಗಳಿಂದ ತುಂಬಿ ಮತ್ತು ಕೆಳಗೆ ಬೆಂಕಿಯನ್ನು ಜ್ವಲಿಸಿ ಆವಿಯಿಂದ ಅದನ್ನು ಚಾಲಿಸುತ್ತಾರೆ. ಆದರಿಂದ ಅವು ಕುದುರೆಗಳಂತೆ ವಿದ್ಯುತ್ತು ಮೊದಲಾದ ಪದಾರ್ಥಗಳಿಂದ ಶೀಘ್ರವಾಗಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹೋಗಬಲ್ಲದು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಹಿಮೇನಾಗ್ನಿಂ ಘ್ರಂಸಮವಾರಯೇಥಾಂ ಪಿತುಮತೀಮೂರ್ಜಮಸ್ಮಾ ಅಧತ್ತಮ್ ।
ಋಬೀಸೇ ಅತ್ರಿಮಶ್ವಿನಾವನೀತ-ಮುನ್ನಿನ್ಯಥುಃ ಸರ್ವಗಣಂ ಸ್ವಸ್ತಿ ॥೮॥

ಪದಾರ್ಥ:- ಹೇ [ಅಶ್ವಿನಾ] ಯಜ್ಞಾನುಷ್ಠಾನವನ್ನು ಮಾಡುವ ಪುರುಷರೇ! ನೀವೀರ್ವರೂ [ಹಿಮೇನ] ಶೀತಲ ಜಲದಿಂದ [ಅಗ್ನಿಮ್] ಅಗ್ನಿ ಮತ್ತು [ಘ್ರಂಸಮ್] ರಾತ್ರಿಯೊಡನೆ ಹಗಲನ್ನು [ಅವಾರಯೇಥಾಮ್] ತಿಳಿಸಿರಿ, ತೋರಿಸಿರಿ. [ಅಸ್ಮೈ] ಇದಕ್ಕಾಗಿ [ಪಿತುಮತೀಮ್] ಪ್ರಶಂಸಿತ ಅನ್ನದಿಂದ ಕೂಡಿದ [ಊರ್ಜಮ್] ಬಲರೂಪೀ ನೀತಿಯನ್ನು [ಅಧತ್ತಮ್] ಪುಷ್ಟಗೊಳಿಸಿರಿ, ಮತ್ತು [ಋಬೀಸೇ] ದುಃಖದಿಂದ ಪ್ರತಿಷ್ಠೆಗಳಿಸುವ ವ್ಯವಹಾರಗಳಲ್ಲಿ [ಅತ್ರಿಮ್] ಭೋಗಿಸುವಂತಹ [ಅವನೀತಮ್] ಹಿಂದೆ ಪಡೆಯುವಂತಹ [ಸರ್ವಗಣಂ] ಸಮಸ್ತ ಉತ್ತಮ ಪದಾರ್ಥಗಳಿವೆಯೋ, ಅವು [ಸ್ವಸ್ತಿ] ಸುಖವನ್ನು [ಉನ್ನಿನ್ಯಥುಃ] ಉನ್ನತಿಗೊಳಿಸಲಿ.

ಭಾವಾರ್ಥ:- ಈ ಜಗತ್ತಿನ ಸುಖಕ್ಕಾಗಿ ಯಜ್ಞದಿಂದ ಸಂಶೋಧಿಸಿದ ಜಲ ಮತ್ತು ವನಗಳನ್ನು ಬೆಳೆಸುವ ರಕ್ಷಣೆಗಳಿಂದ ಅತ್ಯುಷ್ಣತೆಯನ್ನು (ಬಿಸಿಲಬೇಗೆಯನ್ನು) ದೂರಗೊಳಿಸಬೇಕು. ಚೆನ್ನಾಗಿ ತಯಾರಿಸಿದ ಅನ್ನದಿಂದ ಬಲವನ್ನು ಉತ್ಪಾದಿಸಿ ಮತ್ತು ಯಜ್ಞದ ಆಚರಣೆಯಿಂದ ಮೂರು ಪ್ರಕಾರದ ದುಃಖಗಳನ್ನು ನಿವಾರಿಸಿ ಸುಖವನ್ನು ಉನ್ನತಿಗೊಳಿಸಬೇಕು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಪರಾವತಂ ನಾಸತ್ಯಾನುದೇಥಾ-ಮುಚ್ಚಾಬುಧ್ನಂ ಚಕ್ರಥುರ್ಜಿಹ್ಮಬಾರಮ್ ।
ಕ್ಷರನ್ನಾಪೋ ನ ಪಾಯನಾಯ ರಾಯೇ ಸಹಸ್ರಾಯ ತೃಷ್ಯತೇ ಗೋತಮಸ್ಯ ॥೯॥

ಪದಾರ್ಥ:- ಹೇ [ನಾಸತ್ಯಾ] ಬೆಂಕಿ ಮತ್ತು ಗಾಳಿಯಂತೆ ಇರುವ ಸಭಾಪತಿ ಮತ್ತು ಸೇನಾಪತಿ! ನೀವಿಬ್ಬರೂ [ಜಿಹ್ಮವಾರಮ್] ವಕ್ರನಡತೆಯುಳ್ಳ [ಉಚ್ಚಾಬುಧ್ನಮ್] ಉನ್ನತ ಆಕಾಶ ಶೂನ್ಯದಲ್ಲಿ ಚಲಿಸುವ ವಿಮಾನಗಳನ್ನು [ಅವತಮ್] ಇಡಿರಿ ಮತ್ತು ಅನೇಕ ಕಾರ್ಯಗಳ ಸಿದ್ಧಿ [ಚಕ್ರಥುಃ] ಗೊಳಿಸಿರಿ ಮತ್ತು ಅದನ್ನು ಯಥಾಯೋಗ್ಯ ವ್ಯವಹಾರಗಳಲ್ಲಿ [ಪರಾ ಅನುದೇಥಾಮ್] ತೊಡಗಿಸಿರಿ. ಯಾವ [ಗೋತಮಸ್ಯ] ಅತ್ಯಂತ ಸ್ತುತಿಸುವವರ ರಥದ ಮೇಲೆ [ತೃಷ್ಯತೇ] ಬಾಯಾರಿಕೆಗೆ [ಪಾಯನಾಯ] ಕುಡಿಯಲು [ಆಪಃ] ಆವಿಯ ರೂಪದ ಜಲವು [ನ] ಹೇಗೆ ಬೀಳುವುದೋ [ಸಹಸ್ರಾಯ] ಅಸಂಖ್ಯಾತ [ರಾಯೇ] ಧನಕ್ಕಾಗಿ ಅಂದರೆ ಧನಕ್ಕಾಗಿ ಪ್ರಸಿದ್ಧನಾಗುತ್ತಾನೋ ಹಾಗೆ ರಥ ಮೊದಲಾದವುಗಳನ್ನು ತಯಾರಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಶಿಲ್ಪಿಗಳು ಯಾನಗಳಲ್ಲಿ ಅತಿಮಧುರವಾದ ಜಲಧಾರೆ ಬರುವಂತಹ ಕುಂಡಗಳನ್ನು ನಿರ್ಮಿಸಿ, ಬೆಂಕಿಯಿಂದ ಆ ವಿಮಾನ ಮೊದಲಾದವುಗಳನ್ನು ಚಲಿಸಿ, ಅವುಗಳಲ್ಲಿ ಸಾಮಗ್ರಿಗಳನ್ನು ಶೇಖರಿಸಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಹೋಗಿ ಮತ್ತು ಅಸಂಖ್ಯಾತ ಧನವನ್ನು ಪಡೆದು ಪರೋಪಕಾರವನ್ನು ಮಾಡಬೇಕು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಜುಜುರುಷೋ ನಾಸತ್ಯೋತ ವವ್ರಿಂ ಪ್ರಾಮುಂಚತಂ ದ್ರಾಪಿಮಿವ ಚ್ಯವಾನಾತ್ ।
ಪ್ರಾತಿರತಂ ಜಹಿತಸ್ಯಾಯುರ್ದಸ್ರಾ-ದಿತ್ ಪತಿಮಕೃಣುತಂ ಕನೀನಾಮ್ ॥೧೦॥

ಪದಾರ್ಥ:- ಹೇ [ನಾಸತ್ಯಾ] ರಾಜಧರ್ಮದ, ಸಭೆಯ ಪತಿಯೇ! ನೀವೀರ್ವರೂ [ಚ್ಯವಾನಾತ್] ಓಡಿಹೋದವರಿಂದ [ದ್ರಾಪಿಮಿವ] ಕವಚದಂತೆ [ವವ್ರಿಮ್] ಉತ್ತಮವಿಭಾಗ ಮಾಡುವವರನ್ನು [ಪ್ರಾಮುಂಚತಮ್] (ಪೂರ್ಣವಾಗಿ) ದುಃಖದಿಂದ ಬೇರೆ ಮಾಡಿರಿ. [ಉತ] ಮತ್ತು [ಜುಜುರುಷಃ] ವೃದ್ಧನೂ, ವಿದ್ಯಾವಂತನೂ, ಶಾಸ್ತ್ರಜ್ಞನೂ ಆದ ಅಧ್ಯಾಪನ ಮಾಡುವವನಿಂದ [ಕನಿನಾಮ್] ಯೌವ್ವನದಿಂದ ತೇಜಧಾರಿಣಿ, ಬ್ರಹ್ಮಚಾರಿಣಿ ಕನ್ಯೆಯರಿಗೆ ಶಿಕ್ಷಣವನ್ನು [ಅಕೃಣುತಮ್] ಕೊಡಿರಿ. [ಅತ್] ನಂತರ ನಿಯತ ಸಮಯ ಬಂದಾಗ ಅವರಲ್ಲಿ ಒಬ್ಬೊಬ್ಬರಿಗೆ [ಇತ್] ಒಬ್ಬೊಬ್ಬನನ್ನೇ [ಪತಿಮ್] ರಕ್ಷಕ-ಪತಿಯನ್ನಾಗಿ ಮಾಡಿರಿ. ಹೇ [ದಸ್ರಾ] ವೈದ್ಯರಂತೆ ಪ್ರಾಣವನ್ನು ಕೊಡುವವರೇ! [ಜಹಿತಸ್ಯ] ತ್ಯಾಗಿಯ [ಆಯುಃ] ಆಯಸ್ಸನ್ನು [ಪ್ರಾತಿರತಮ್] ಉತ್ತಮವಾಗಿ ತೀರಕ್ಕೆ ಕಳುಹಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ರಾಜಪುರುಷ ಮತ್ತು ಉಪದೇಶ ಮಾಡುವವರು ದಾತೃಗಳ ದುಃಖವನ್ನು ದೂರಗೊಳಿಸಬೇಕು. ವಿದ್ಯೆಗಳಲ್ಲಿ ಪ್ರವೃತ್ತಿಯನ್ನುಂಟುಮಾಡುತ್ತಾ ಕುಮಾರ ಮತ್ತು ಕುಮಾರಿಯರ ರಕ್ಷಣೆ ಮಾಡಿ ವಿದ್ಯೆ ಮತ್ತು ಉತ್ತಮ ಶಿಕ್ಷಣವನ್ನು ಅವರಿಗೆ ಕೊಡಿಸಬೇಕು. ಬಾಲ್ಯದಲ್ಲಿ ಅಂದರೆ ೨೪ ವರ್ಷಗಳ ಒಳಗೆ ಪುರುಷ ಮತ್ತು ೧೬ ವರ್ಷಗಳ ಒಳಗೆ ಸ್ತ್ರೀಯ ವಿವಾಹವನ್ನು ತಡೆದು, ಇದರ ನಂತರ ೪೮ ವರ್ಷಗಳ ತನಕ ಪುರುಷನು, ೨೪ ವರ್ಷಗಳ ಪರ್ಯಂತ ಸ್ತ್ರೀಯ ಸ್ವಯಂವರ ವಿವಾಹವನ್ನು ಮಾಡಿ ಎಲ್ಲರ ಆತ್ಮ ಮತ್ತು ಶರೀರದ ಬಲವನ್ನು ಪೂರ್ಣಗೊಳಿಸಬೇಕು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ತದ್ ವಾಂ ನರಾ ಶಂಸ್ಯಂ ರಾಧ್ಯಂ ಚಾ-ಭಿಷ್ಟಿಮನ್ನಾಸತ್ಯಾ ವರೂಥಮ್ ।
ಯದ್ ವಿದ್ವಾಂಸಾ ನಿಧಿಮಿವಾಪಗೂಳ್ಹ-ಮುದ್ದರ್ಶತಾದೂಪಥುರ್ವಂದನಾಯ ॥೧೧॥

ಪದಾರ್ಥ:- ಹೇ [ನರಾ] ಧರ್ಮದ ಪ್ರಾಪ್ತಿ [ನಾಸತ್ಯಾ] ಮತ್ತು ಸದಾಸತ್ಯದ ಪಾಲನೆ ಮಾಡುವುದು ಮತ್ತು [ವಿದ್ವಾಂಸಾ] ಸಮಸ್ತ ವಿದ್ಯೆಯನ್ನು ತಿಳಿಯುವ ಧರ್ಮರಾಜ ಸಭಾಪತಿ ವಿದ್ವಾಂಸರೇ! [ವಾಮ್] ನಿಮ್ಮೀರ್ವರ [ಯತ್] ಯಾವ [ಶಂಸ್ಯಮ್] ಪ್ರಶಂಸನೀಯ [ಚ] ಮತ್ತು [ರಾಧ್ಯಮ್] ಸಿದ್ಧ ಮಾಡಲು ಯೋಗ್ಯ [ಅಭಿಷ್ಟಿಮತ್] ಯಾವುದರಲ್ಲಿ ಬಯಸುವಂತಹ ಪ್ರಶಂಸಿತ ಸುಖವು ಇದೆಯೋ, [ವರೂಥಮ್] ಸ್ವೀಕರಿಸಲು ಯೋಗ್ಯವಾದ [ಅಪಗೂಢಮ್] ಯಾವುದರಲ್ಲಿ ಗೋಪ್ಯವು ಬೇರೆಯಾಗಿದೆಯೋ ಅಂತಹ ಮೊದಲು ಹೇಳಿರುವ ಗೃಹಸ್ಥಾಶ್ರಮ ಸಂಬಂಧ ಕರ್ಮವಿದೆಯೋ [ತತ್] ಅದನ್ನು [ನಿಧಿಮಿವ] ಧನದ ಕೋಶದಂತೆ [ದರ್ಶನಾತ್] ದರ್ಶಿಸುವಂತಹ ರೂಪದಿಂದ [ವನ್ದನಾಯ] ಎಲ್ಲ ಕಡೆಗಳಿಂದ ಸತ್ಕರಿಸಲು ಯೋಗ್ಯವಾದ, ಸಂತಾನ ಮತ್ತು ಪ್ರಶಂಸೆಗಾಗಿ [ಉತ ಊಪಥುಃ] ಉಚ್ಚ ಶ್ರೇಣಿಗೆ ಕಳುಹಿಸಿರಿ ಅಂದರೆ ಉನ್ನತಿಯನ್ನು ನೀಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮನುಷ್ಯರೇ! ವಿದ್ಯಾನಿಧಿಗಿಂತ ಬೇರೆ ಸುಖವನ್ನು ಕೊಡುವ ಧನವು ಯಾವುದಾದರೂ ಇದೆ ಎಂದು ನೀವು ತಿಳಿಯದಿರಿ. ಈ ಕರ್ಮದ ಹೊರತು ಬಯಸಿದ ಸಂತಾನ ಮತ್ತು ಸುಖವು ದೊರೆಯುವುದಿಲ್ಲ ಮತ್ತು ಸತ್ಯಾಸತ್ಯ ವಿಚಾರದಿಂದ ನಿರ್ಣಯಿಸಿದ ಜ್ಞಾನದ ಹೊರತು ವಿದ್ಯೆಯ ವೃದ್ಧಿಯಾಗದು. ಇದನ್ನು ತಿಳಿಯಿರಿ.

ಮತ್ತೆ ಅದೇ ವಿಷಯ ಹೇಳಲಾಗಿದೆ.

ತದ್ ವಾಂ ನರಾ ಸನಯೇ ದಂಸ ಉಗ್ರ-ಮಾವಿಷ್ಕೃಣೋಮಿ ತನ್ಯತುರ್ನ ವೃಷ್ಟಿಮ್ ।
ದಧ್ಯಙ್ ಹ ಯನ್ಮಧ್ವಾಥರ್ವಣೋ ವಾ-ಮಶ್ವಸ್ಯ ಶೀರ್ಷ್ಣಾ ಪ್ರ ಯದೀಮುವಾಚ ॥೧೨॥

ಪದಾರ್ಥ:- ಹೇ [ನರಾ] ಉತ್ತಮ ನೀತಿಯುಕ್ತ ಸಭೆ ಸೇನೆಯ ಪತಿಗಳಾದ ಜನರೇ! [ವಾಮ್] ನೀವೀರ್ವರಿಂದ [ದಧ್ಯಙ್] ವಿದ್ಯಾ ಧರ್ಮದ ಧಾರಣ ಮಾಡುವವರ ಆದರ ಮಾಡುವವನನ್ನು [ಅಥರ್ವಣಃ] ರಕ್ಷಿಸುತ್ತಿರುವ ಸಂತಾನವನ್ನು ನಾನು [ಸನಯೋ] ಉತ್ತಮವಾಗಿ ಸುಖಪಡಿಸಲು ಹೇಗೆ [ತನ್ಯತುಃ] ವಿದ್ಯುತ್ತು [ವೃಷ್ಟಿಮ್] ಮಳೆಯನ್ನು [ನ] ಹೇಗೆ ಯಾವ [ಉಗ್ರಮ್] ಉತ್ಕೃಷ್ಟ [ದಂಸಃ] ಕರ್ಮವನ್ನು [ಆವಿಷ್ಕೃಣೋಮಿ] ಪ್ರಕಟಿಸುತ್ತೇನೆ, ಯಾವ [ಯತ್] ವಿದ್ವಾಂಸನು [ವಾಮ್] ನಿಮ್ಮೀರ್ವರಿಗಾಗಿ ಮತ್ತು ನನಗಾಗಿ [ಅಶ್ವಸ್ಯ] ಶೀಘ್ರ ಗಮನ ಮಾಡುವಂತಹ ಪದಾರ್ಥಗಳನ್ನು [ಶೀರ್ಷ್ಣಾ] ಶಿರದಂತೆ ಉತ್ತಮ ಕಾರ್ಯಗಳಿಂದ [ಮಧು] ಮಧುರ [ಈಮ್] ಶಾಸ್ತ್ರದ ಬೋಧೆಯನ್ನು [ಹ ಪ್ರೋವಾಚ] ಹೇಳಲಿ. [ತತ್] ಅದನ್ನು ನೀವೀರ್ವರೂ ಲೋಕದಲ್ಲಿ ನಿರಂತರ ಪ್ರಕಟಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ವೃಷ್ಟಿಯ ವಿನಾ ಯಾರಿಗೂ ಸುಖವುಂಟಾಗುವುದಿಲ್ಲವೋ, ಹಾಗೆಯೇ ವಿದ್ವಾಂಸರ ಮತ್ತು ವಿದ್ಯೆಯ ವಿನಾ ಸುಖ ಮತ್ತು ಬುದ್ಧಿಯ ವೃದ್ಧಿ ಮತ್ತು ಇವುಗಳ ಹೊರತು ಧರ್ಮ ಮೊದಲಾದ ಪದಾರ್ಥಗಳು ಸಿದ್ಧಿಸುವುದಿಲ್ಲ, ಆದುದರಿಂದ ಈ ಕರ್ಮದ ಅನುಷ್ಠಾನವನ್ನು ಮನುಷ್ಯರು ಸದಾ ಮಾಡಬೇಕು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಅಜೋಹವೀನ್ನಾಸತ್ಯಾ ಕರಾ ವಾಂ ಮಹೇ ಯಾಮನ್ ಪುರುಭುಜಾ ಪುರಂಧಿಃ ।
ಶ್ರುತಂ ತಚ್ಛಾಸುರಿವ ವಧ್ರಿಮತ್ಯಾ ಹಿರಣ್ಯಹಸ್ತಮಶ್ವಿನಾವದತ್ತಮ್ ॥೧೩॥

ಪದಾರ್ಥ:- ಹೇ [ನಾಸತ್ಯಾ] ಅಸತ್ಯ ಅಜ್ಞಾನದ ವಿನಾಶದಿಂದ ಸತ್ಯದ ಪ್ರಕಾಶ ಮಾಡಲು [ಪುರುಭುಜಾ] ಬಹಳ ಆನಂದಗಳನ್ನು ಭೋಗಿಸಲು ಹಾಗೂ [ಅಶ್ವಿನೌ] ಶುಭಗುಣ ಮತ್ತು ವಿದ್ಯೆಯಲ್ಲಿ ವ್ಯಾಪ್ತರಾಗುವ ಅಧ್ಯಾಪಕರೇ! [ಪುರಂಧಿಃ] ಬಹಳ ವಿದ್ಯೆಯುಳ್ಳ ವಿದ್ವಾಂಸನು [ವಧ್ರಿಮತ್ಯಾಃ] ಯಾವಳಿಗೆ ಪ್ರಶಂಸಿತ ವೃದ್ಧಿ ಇದೆಯೋ ಆ ಉತ್ತಮ ಸ್ತ್ರೀಯ [ಕರಾ] ಕರ್ಮ ಮಾಡುತ್ತಾ ಈರ್ವರು ಪುತ್ರರ [ಮಹೇ] ಅತ್ಯಂತ [ಯಾಮನ್] ಸುಖಪಡಲಿಕ್ಕಾಗಿ [ಅಜೋಹವೀತ್] ನಿರಂತರ ಗ್ರಹಣ ಮಾಡಲಿ. ಮತ್ತು [ವಾಮ್] ನೀವೀರ್ವರು [ಶ್ರುತಮ್] ಯಾವುದನ್ನು ಕೇಳಿ-ಓದಿರುವಿರೋ [ತತ್] ಅದನ್ನು [ಶಾಸುರಿವ] ಹೇಗೆ ಪೂರ್ಣವಿದ್ಯಾಯುಕ್ತ ಅಧ್ಯಾಪನ ಮಾಡುವವನಿಂದ ಶಿಷ್ಯನು ಗ್ರಹಿಸುವನೋ ಹಾಗೆ ನಿರಂತರ ಗ್ರಹಿಸಿರಿ. ಅವರು ನಿಮ್ಮೀರ್ವರಿಗೂ ವಿದ್ಯೆಯನ್ನು ಬಯಸುವ ಎಲ್ಲರಿಗೂ [ಹಿರಣ್ಯಹಸ್ತಮ್] ಯಾವುದರಿಂದ ಕೈಯಲ್ಲಿ ಸುವರ್ಣವು ಬರುವುದೋ, ಅದನ್ನು ಓದಿ ತಿಳಿಯುವ ಬೋಧೆಯನ್ನು [ಅದತ್ತಮ್] ನಿರಂತರ ಕೊಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ವಿದ್ವಾಂಸರು ವಿದುಷಿ ಸ್ತ್ರೀಯ ಪಾಣಿಗ್ರಹಣ ಮಾಡಿ ಗೃಹಾಶ್ರಮ ವ್ಯವಹಾರವನ್ನು ಸಿದ್ಧಿಸುವರೋ, ಹಾಗೆ ಬುದ್ಧಿವಂತರಾದ ವಿದ್ಯಾರ್ಥಿಗಳನ್ನು ಸಂಗ್ರಹಿಸಿ ಪೂರ್ಣವಿದ್ಯಾ ಪ್ರಚಾರ ಮಾಡಿರಿ ಮತ್ತು ಹೇಗೆ ಓದಿಸುವವನಿಂದ ಓದುವವನು ವಿದ್ಯೆಯ ಸಂಗ್ರಹ ಮಾಡಿ ಆನಂದಿತನಾಗುವನೋ, ಹಾಗೆ ವಿದ್ವಾಂಸರಾದ ಸ್ತ್ರೀ-ಪುರುಷರು ತಮ್ಮ ಹಾಗೂ ಬೇರೆಯವರ ಸಂತಾನಕ್ಕೆ ಉತ್ತಮ ಶಿಕ್ಷಣದಿಂದ ವಿದ್ಯೆಯನ್ನಿತ್ತು ಸದಾ ಪ್ರಮೋದಿತರಾಗಬೇಕು.

ಮತ್ತೆ ಮನುಷ್ಯರು ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಲಾಗಿದೆ.

ಆಸ್ನೋ ವೃಕಸ್ಯ ವರ್ತಿಕಾಮಭೀಕೇ ಯುವಂ ನರಾ ನಾಸತ್ಯಾಮುಮುಕ್ತಮ್ ।
ಉತೋ ಕವಿಂ ಪುರುಭುಜಾ ಯುವಂ ಹ ಕೃಪಮಾಣಮಕೃಣುತಂ ವಿಚಕ್ಷೇ ॥೧೪॥

ಪದಾರ್ಥ:- ಹೇ [ಪುರುಭುಜಾ] ಬಹಳ ಜನರಿಗೆ ಸುಖದ ಭೋಗವನ್ನುಂಟುಮಾಡಲು [**ನಾಸತ್ಯಾ**] ಅಸತ್ಯದಿಂದ ಬೇರೆ ಇರಲು [ನರಾ] ಮತ್ತು ಸುಖಗಳನ್ನು ತಲುಪಿಸುವ ಸಭಾ ಸೇನಾಪತಿಗಳೇ! [**ಯುವಮ್**] ನೀವಿಬ್ಬರು [ಅಭೀಕೇ] ಬಯಸುವಂತಹ ವ್ಯವಹಾರಗಳಲ್ಲಿ [ವೃಕಸ್ಯ] ತೋಳಗಳ [ಆಸ್ನಃ] ಮುಖದಿಂದ [**ವರ್ತಿಕಾಮ್**] ಚಿರೋಟಿಯಂತೆ ಎಲ್ಲ ಮನುಷ್ಯರಿಗೆ ಅವಿದ್ಯಾಜನ್ಯ ದುಃಖದಿಂದ [ಮುಮುಕ್ತಮ್] ಬಿಡಿಸಿರಿ. [ಉತೋ] ಮತ್ತು [ಹ] ಕೂಡ [ಯುವಮ್] ನೀವಿಬ್ಬರೂ ಎಲ್ಲ ವಿದ್ಯೆಗಳು [ವಿಚಕ್ಷೇ] ವಿಖ್ಯಾತಗೊಳಿಸಲು [ಕೃಪಮಾಣಮ್] ಕೃಪೆ ಮಾಡುವ [ಕವಿಮ್] ವಿದ್ಯಾಪಾರಂಗತ ಪುರುಷನನ್ನು [ಅಕೃಣುತಮ್] ಸಿದ್ಧಗೊಳಿಸಿರಿ.

ಭಾವಾರ್ಥ:- ಸುಖರೂಪರೆಲ್ಲರೂ ಬಯಸುವ ವಿದ್ಯಾಗ್ರಹಣ ಮಾಡುವ ವ್ಯವಹಾರಗಳಲ್ಲಿ ಎಲ್ಲ ಮನುಷ್ಯರೂ ಪ್ರವೃತ್ತರಾಗಿ ಯಾರಿಗೆ ದುಃಖರೂಪದ ಫಲವಿದೆಯೋ, ಆ ಅನ್ಯಾಯ ರೂಪ ಕೆಲಸಗಳಿಂದ ನಿವೃತ್ತರಾಗಿ ಅವರು ಎಲ್ಲ ಪ್ರಾಣಿಗಳ ಮೇಲೆ ಕೃಪೆಯಿಂದ ಮನುಷ್ಯರಿಗೆ ಸುಖವನ್ನೀಯಬೇಕು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಚರಿತ್ರಂ ಹಿ ವೇರಿವಾಚ್ಛೇದಿ ಪರ್ಣ-ಮಾಜಾ ಖೇಲಸ್ಯ ಪರಿತಕ್ಮ್ಯಾಯಾಮ್ ।
ಸದ್ಯೋ ಜಂಘಾಮಾಯಸೀಂ ವಿಶ್ಪಲಾಯೈ ಧನೇ ಹಿತೇ ಸರ್ತವೇ ಪ್ರತ್ಯಧತ್ತಮ್ ॥೧೫॥

ಪದಾರ್ಥ:- ಹೇ ಸೇನಾಧಿಪತಿ! ನಿಮ್ಮಿಬ್ಬರಿಂದ [ಆಜಾ] ಸಂಗ್ರಾಮದಲ್ಲಿ [ಪರಿತಕ್ಮ್ಯಾಯಾಮ್] ರಾತ್ರಿಯಲ್ಲಿ [ಖೇಲಸ್ಯ] ಶತ್ರುವಿನ ಅವಹೇಳನದ [ಚರಿತ್ರಮ್] ಸ್ವಾಭಾವಿಕ ಚರಿತ್ರೆ ಅಂದರೆ ಶತ್ರುಜನಗಳ ಬೇರೆ ಬೇರೆಯಾದ ಸಣ್ಣ ಸಣ್ಣ ಗುಂಪುಗಳ ಚಾಲಾಕಿತನವು [ವೇರಿವ] ಹೇಗೆ ಹಾರುತ್ತಿರುವ ಪಕ್ಷಿಯ [ಪರ್ಣಮ್] ರೆಕ್ಕೆಗಳನ್ನು ಕತ್ತರಿಸಲಾಗುವುದೋ ಹಾಗೆ [ಸದ್ಯಃ] ಶೀಘ್ರ [ಅಚ್ಛೇದಿ] ಭಿನ್ನ ಭಿನ್ನವಾಗಿಸಿ ಹಾಗೂ ನೀವು [ಹಿತೇ] ಸುಖವನ್ನು ಹೆಚ್ಚಿಸುವ [ಧನೇ] ಸುವರ್ಣ ಮೊದಲಾದ ಧನದ ನಿಮಿತ್ತ [ವಿಶ್ಪಲಾಯೈ] ಪ್ರಜೆಗಳಿಗೆ ಸುಖತಲುಪಿಸುವ ನೀತಿಗಾಗಿ [ಆಯಸೀಮ್] ಲೋಹದಿಂದ ಮಾಡಲ್ಪಟ್ಟ [ಜಂಘಾಮ್] ಕೊಲ್ಲಲು ಪ್ರಯೋಗಿಸುವುದನ್ನಿಡುವ ಕವಚವನ್ನು [ಸರ್ತವೇ] ಶತ್ರುಗಳನ್ನು ತಿಳಿಯಲು ಅಂದರೆ ಎದುರ್ಗೊಳ್ಳಲು [ಹಿ] ಮಾತ್ರವೇ [ಪ್ರತ್ಯಧತ್ತಮ್] ಪ್ರತ್ಯಕ್ಷಧಾರಣ ಮಾಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಪ್ರಜೆಗಳನ್ನು ಪಾಲಿಸಲು ಅತ್ಯಂತ ಚಿತ್ತವನ್ನಿಟ್ಟ ಭದ್ರರಾಜ ಮೊದಲಾದ ಜನರು ಹಾರುವ ಹಕ್ಕಿಗಳ ರೆಕ್ಕೆಗಳಂತೆ ದುಷ್ಟರ ಚರಿತ್ರೆಯನ್ನು ಯುದ್ಧದಲ್ಲಿ ಭಿನ್ನ-ಭಿನ್ನ ಮಾಡಲಿ. ಶಸ್ತ್ರ ಮತ್ತು ಅಸ್ತ್ರಗಳನ್ನು ಧರಿಸಿ ಪ್ರಜೆಗಳನ್ನು ಪಾಲಿಸಲಿ. ಏಕೆಂದರೆ ಯಾವ ಪ್ರಜೆಗಳಿಂದ ಕರವನ್ನು ಪಡೆಯಲಾಗುವುದೋ, ಅದರ ಬದಲಿಗೆ ಕೊಡುವುದು ಆ ಪ್ರಜೆಗಳ ರಕ್ಷಣೆ ಮಾಡುವುದೇ ಎಂದು ತಿಳಿಯಬೇಕು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಶತಂ ಮೇಷಾನ್ ವೃಕ್ಯೇ ಚಕ್ಷದಾನ-ಮೃಜ್ರಾಶ್ವಂ ತಂ ಪಿತಾಂಧಂ ಚಕಾರ ।
ತಸ್ಮಾ ಅಕ್ಷೀ ನಾಸತ್ಯಾ ವಿಚಕ್ಷ ಆಧತ್ತಂ ದಸ್ರಾ ಭಿಷಜಾವನರ್ವನ್ ॥೧೬॥

ಪದಾರ್ಥ:- ಯಾವ [**ವೃಕ್ಯೇ**] ವೃಕೀ ಅಂದರೆ ಕಳ್ಳನ ಪತ್ನಿಗಾಗಿ [**ಶತಮ್**] ನೂರು [**ಮೇಷಾನ್**] ಈರ್ಷೆ ಮಾಡುವವರನ್ನು ಕೊಡಲಿ ಅಥವಾ ಹಾಗೆ ಉಪದೇಶ ಮಾಡಲಿ ಮತ್ತು ಕಳ್ಳರಲ್ಲಿ ಸಫಲ ಕುದುರೆಗಳುಳ್ಳವನೋ [**ತಮ್**] ಆ [**ಚಕ್ಷದಾನಮ್**] ಸ್ಪಷ್ಟ ಉಪದೇಶ ಮಾಡುವ ಅಥವಾ [**ಋಜ್ರಾಶ್ವಮ್**] ಸಫಲ ಕುದುರೆಗಳುಳ್ಳವನನ್ನು [**ಪಿತಾ**] ಪ್ರಜೆಗಳನ್ನು ಪಾಲಿಸಲು ರಾಜನು, ಹೇಗೆ [**ಅಂಧಮ್**] ಕುರುಡನು ದುಃಖಿಯಾಗುವನೋ ಹಾಗೆ ದುಃಖಿಗಳನ್ನಾಗಿ [**ಚಕಾರ**] ಮಾಡಲಿ. ಹೇ [**ನಾಸತ್ಯಾ**] ಸತ್ಯದೊಂದಿಗೆ ವರ್ತಿಸುವವನೇ ಮತ್ತು [**ದಸ್ರಾ**] ರೋಗಗಳನ್ನು ನಾಶಗೊಳಿಸುವ ಧರ್ಮರಾಜ ಸಭಾಪತಿ [**ಭಿಷಜೌ**] ವೈದ್ಯರಂತೆ ವರ್ತಿಸುವವರೇ! ನೀವೀರ್ವರೂ ಯಾವ ಅಜ್ಞಾನಿಯು ಕುಮಾರ್ಗದಲ್ಲಿ ನಡೆಯುವ ವ್ಯಭಿಚಾರಿ ಮತ್ತು ರೋಗಿಯಾಗಿರುವನೋ, [**ತಸ್ಮೈ**] ಆ [**ಅನರ್ವನ್**] ಅಜ್ಞಾನಿಗಾಗಿ [**ವಿಚಕ್ಷೇ**] ಅನೇಕ ವಿಧವಾಗಿ ನೋಡಲು [**ಅಕ್ಷೀ**] ವ್ಯವಹಾರ ಮತ್ತು ಪರಮಾರ್ಥ ವಿದ್ಯಾರೂಪೀ ಕಣ್ಣುಗಳನ್ನು [**ಆ ಅಧತ್ತಮ್**] ಉತ್ತಮವಾಗಿ ಪುಷ್ಟಗೊಳಿಸಿರಿ.

ಭಾವಾರ್ಥ:- ಸಭೆ ಸಹಿತವಾಗಿ ರಾಜನು ಹಿಂಸೆ ಮಾಡುವವರ, ಕಳ್ಳರ, ಕಪಟಿಗಳ, ಛಲವುಳ್ಳ ಮನುಷ್ಯರನ್ನು ಜೈಲಿನಲ್ಲಿ ಕುರುಡರಂತೆ ಇಟ್ಟು ಮತ್ತು ತನ್ನ ಉಪದೇಶ ಅಂದರೆ ಆಜ್ಞಾರೂಪ ಶಿಕ್ಷಣ ಮತ್ತು ವ್ಯವಹಾರಗಳ ಶಿಕ್ಷಣದಿಂದ ಧರ್ಮಾತ್ಮರನ್ನಾಗಿಸಿ ಮತ್ತು ವಿದ್ಯೆಯಲ್ಲಿ ಪ್ರೀತಿ ಇಟ್ಟಿರುವವರನ್ನು ಅವರ ಪ್ರಕೃತಿಗೆ ಅನುಸಾರ ಓಷಧಿ ಕೊಟ್ಟು ಅವರನ್ನು ಆರೋಗ್ಯವಂತರನ್ನಾಗಿ ಮಾಡಬೇಕು.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಆ ವಾಂ ರಥಂ ದುಹಿತಾ ಸೂರ್ಯಸ್ಯ ಕಾರ್ಷ್ಮೇವಾತಿಷ್ಠದರ್ವತಾ ಜಯಂತೀ ।
ವಿಶ್ವೇ ದೇವಾ ಅನ್ವಮನ್ಯಂತ ಹೃದ್ಭಿಃ ಸಮು ಶ್ರಿಯಾ ನಾಸತ್ಯಾ ಸಚೇಥೇ ॥೧೭॥

ಪದಾರ್ಥ:- ಹೇ [ನಾಸತ್ಯಾ] ಉತ್ತಮ ವಿಜ್ಞಾನದ ಪ್ರಕಾಶ ಮಾಡುವ ಸಭೆ ಸೇನಾಪತಿಗಳೇ! [ಸೂರ್ಯಸ್ಯ] ಸೂರ್ಯನ [ದುಹಿತಾ] ದೂರದೇಶದಲ್ಲಿರುವ ಕನ್ಯೆಯಂತೆ ಕಾಂತಿಯುತ ಪ್ರಭಾತವೇಳೆ ಮತ್ತು [ಕಾರ್ಷ್ಮೇವ] ಕಟ್ಟಿಗೆ ಮೊದಲಾದ ಪದಾರ್ಥಗಳಂತೆ [ವಾಮ್] ನಿಮ್ಮಿಬ್ಬರ [ಜಯಂತೀ] ಶತ್ರುಗಳನ್ನು ಜಯಿಸುವ ಸೇನೆಯು [ಅರ್ವತಾ] ಕುದುರೆಗಳನ್ನು ಜೋಡಿಸಿದ [ರಥಮ್] ರಥವನ್ನು [ಆ ಅತಿಷ್ಠತ್] ಸ್ಥಿತ ಪಡಿಸಲಿ ಅಂದರೆ ರಥದ ಮೇಲೆ ಸಿದ್ಧನಾಗಲಿ ಅಥವಾ [ವಿಶ್ವೇ] ಸಮಸ್ತ [ದೇವಾಃ] ವಿದ್ವಾಂಸರು [ಹೃದ್ಭಿಃ] ತಮ್ಮ ಚಿತ್ತಗಳಿಂದ [ಅನು ಅಮನ್ಯಂತ] ಊಹಿಸಲಿ. ಅದನ್ನು [ಉ] ಆದರೆ [ಶ್ರಿಯಾ] ಶುಭಲಕ್ಷಣಗಳುಳ್ಳ ಲಕ್ಷ್ಮಿ ಅಂದರೆ ಉತ್ತಮ ಧನದಿಂದ ಕೂಡಿದ ಸೇನೆಯನ್ನು ನೀವು [ಸಂ ಸಚೇಥೇ] ಉತ್ತಮವಾಗಿ ಶೇಖರಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಮನುಷ್ಯರೇ! ಸಮಸ್ತ ವಿದ್ವಾಂಸರಿಂದ ಪ್ರಶಂಸಿಸಲ್ಪಟ್ಟ ಶಸ್ತ್ರ, ಅಸ್ತ್ರ, ವಾಹನ ಹಾಗೂ ಸಾಮಗ್ರಿ ಮೊದಲಾದವುಗಳಿಂದ ಕೂಡಿ ಧನವುಳ್ಳ ಸೇನೆಯನ್ನು ಸಿದ್ಧಗೊಳಿಸಿ, ಹೇಗೆ ಸೂರ್ಯನು ತನ್ನ ಪ್ರಕಾಶವನ್ನು ಬೀರುವನೋ ಹಾಗೆ ನೀವು ಧರ್ಮ ಮತ್ತು ನ್ಯಾಯದ ಪ್ರಕಾಶಗೊಳಿಸಿರಿ.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಯದಯಾತಂ ದಿವೋದಾಸಾಯ ವರ್ತಿ-ರ್ಭರದ್ವಾಜಾಯಾಶ್ವಿನಾ ಹಯಂತಾ ।
ರೇವದುವಾಹ ಸಚನೋ ರಥೋ ವಾಂ ವೃಷಭಶ್ಚ ಶಿಂಶುಮಾರಶ್ಚ ಯುಕ್ತಾ ॥೧೮॥

ಪದಾರ್ಥ:- ಹೇ [ಹಯಂತಾ] ಚಲಿಸಲು [ಯುಕ್ತಾ] ಯೋಗಾಭ್ಯಾಸ ಮಾಡಲು ಮತ್ತು [ಅಶ್ವಿನಾ] ಶತ್ರುಸೇನೆಯಲ್ಲಿ ವ್ಯಾಪ್ತರಾಗುವ ಸಭೆ ಸೇನೆಯ ಪತಿಗಳೇ! ನೀವೀರ್ವರು [ದಿವೋದಾಸಾಯ] ನ್ಯಾಯ ಮತ್ತು ವಿದ್ಯೆಯ ಪ್ರಕಾಶ ಕೊಡುವ [ಭರದ್ವಾಜಾಯ] ಪುಷ್ಟನಾಗುತ್ತಾ ಪುಷ್ಟಿವಂತ ವೇಗವುಳ್ಳ ಯೋಧನಿಗಾಗಿ [ಯತ್] ಯಾವ [ವರ್ತಿಃ] ವರ್ತಮಾನ [ರೇವತ್] ಅತ್ಯಂತ ಧನದಿಂದ ಕೂಡಿದ ಗೃಹ ಮೊದಲಾದ ವಸ್ತುಗಳನ್ನು [ಅಯಾತಾಮ್] ಪಡೆಯಿರಿ. [ಚ] ಮತ್ತು [ವಾಮ್] ನಿಮ್ಮ [ವೃಷಭಃ] ವಿಜಯದ ವರ್ಷ ಮಾಡುವಂತಹ [ಶಿಂಶುಮಾರಃ] ಧರ್ಮದ ಉಲ್ಲಂಘನೆ ಮಾಡುವವರನ್ನು ನಾಶಗೊಳಿಸುವ [ಸಚನಃ] ತನ್ನ ಸಮಸ್ತ ಸೇನಾಂಗಗಳಿಂದ ಕೂಡಿದ [ರಥಃ] ಮನೋಹರ ವಿಮಾನಾದಿ ರಥಗಳನ್ನು ಬಯಸುವ ಸ್ಥಾನದಲ್ಲಿ [ಉವಾಹ] ಕಳುಹಿಸುವನೋ, ಅವನ [ಚ] ಹಾಗೂ ಉಕ್ತ ಗೃಹ ಆದಿಗಳ ರಕ್ಷಣೆ ಮಾಡಿರಿ.

ಭಾವಾರ್ಥ:- ರಾಜ ಮೊದಲಾದ ರಾಜಪುರುಷರು ತಮ್ಮ ಸಮಸ್ತ ಸಾಮಗ್ರಿನ್ಯಾಯದಿಂದ ರಾಜ್ಯದ ಪಾಲನೆ ಮಾಡಲು ನಿರ್ಮಿಸಬೇಕು.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ರಯಿಂ ಸುಕ್ಷತ್ರಂ ಸ್ವಪತ್ಯಮಾಯುಃ ಸುವೀರ್ಯಂ ನಾಸತ್ಯಾ ವಹಂತಾ ।
ಆ ಜಹ್ನಾವೀಂ ಸಮನಸೋಪ ವಾಜೈ-ಸ್ತ್ರಿರಹ್ನೋ ಭಾಗಂ ದಧತೀಮಯಾತಮ್ ॥೧೯॥

ಪದಾರ್ಥ:- ಹೇ [ಸಮನಸಾ] ಸಮಾನ ವಿಜ್ಞಾನವುಳ್ಳವನೇ! [ವಹಂತಾ] ಉತ್ತಮ ಸುಖವನ್ನು ಪಡೆದ [ನಾಸತ್ಯಾ] ಸತ್ಯಧರ್ಮಪಾಲಕ ಸಭೆ ಸೇನೆಯ ಅಧಿಪತಿಗಳೇ! ನೀವು ಇಬ್ಬರು ಸನಾತನ ನ್ಯಾಯದ ಸೇವನೆಯಿಂದ

[ರಯಿಮ್] ಧನ ಸಮೂಹವನ್ನು [ಸುಕ್ಷತ್ರಮ್] ಉತ್ತಮರಾಜ್ಯ [ಸ್ವಪತ್ಯಮ್] ಉತ್ತಮ ಸಂತಾನ [ಆಯುಃ] ಚಿರಕಾಲ ಜೀವನ [ಸುವೀರ್ಯಮ್] ಉತ್ತಮ ಪರಾಕ್ರಮ ಮತ್ತು [ವಾಜೈಃ] ಜ್ಞಾನ ಅಥವಾ ವೇಗಯುಕ್ತ ಸೇವಕರು ಮೊದಲಾದವರೊಂದಿಗಿದ್ದು [ಜಹ್ನಾವೀಮ್] ತ್ಯಜಿಸಲು ಯೋಗ್ಯರಾದ ಶತ್ರುಗಳ ಸೇನೆಯ ವಿರೋಧಿಯಾದ ಈ ಸೇನೆಯನ್ನು ಹಾಗೂ [ಅಹ್ನಃ] ದಿನದ [ಭಾಗಮ್] ಸೇವನೆ ಯೋಗ್ಯವಿಭಾಗ ಅಂದರೆ ಸಮಯವನ್ನು ಮತ್ತು [ತ್ರಿಃ] ಮೂರು ಸಲ [ದಧತೀಮ್] ಧಾರಣ ಮಾಡುತ್ತಿರುವ ಸೇನೆಯನ್ನು [ಉಪ ಆ ಅಯಾತಮ್] ಸಮೀಪಕ್ಕೆ ಉತ್ತಮವಾಗಿ ಪ್ರಾಪ್ತರಾಗಿರಿ.

ಭಾವಾರ್ಥ:- ಯಾವುದೇ ವಿದ್ಯೆ ಮತ್ತು ಸತ್ಯನ್ಯಾಯಗಳ ಸೇವನೆಯ ಹೊರತು ಧನ ಮೊದಲಾದ ಪದಾರ್ಥಗಳನ್ನು ಪಡೆಯಲು ಮತ್ತು ಅವುಗಳನ್ನು ರಕ್ಷಿಸಿ ಸುಖ ಪಡೆಯಲಾಗುವುದಿಲ್ಲ. ಇದರಿಂದ ಧರ್ಮದ ಸೇವನೆಯಿಂದಲೇ ರಾಜ್ಯ ಮೊದಲಾದವುಗಳು ಪ್ರಾಪ್ತವಾಗುತ್ತವೆ.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಪರಿವಿಷ್ಟಂ ಜಾಹುಷಂ ವಿಶ್ವತಃ ಸೀಂ ಸುಗೇಭಿರ್ನಕ್ತಮೂಹಥೂ ರಜೋಭಿಃ ।
ವಿಭಿಂ ದುನಾ ನಾಸತ್ಯಾ ರಥೇನ ವಿ ಪರ್ವತಾಂ ಅಜರಯೂ ಅಯಾತಮ್ ॥೨೦॥

ಪದಾರ್ಥ:- ಹೇ [ನಾಸತ್ಯಾ] ಸತ್ಯಧರ್ಮವನ್ನು ಪಾಲಿಸುವ ಸಭಾಸೇನಾಧೀಶರೇ! ನೀವೀಬ್ಬರೂ ಹೇಗೆ [ಅಜರಯೂ] ಜೀರ್ಣತೆ ಮೊದಲಾದ ದೋಷರಹಿತ ಸೂರ್ಯ ಮತ್ತು ಚಂದ್ರ [ಸುಗೇಭಿಃ] ಸುಖವಾಗಿ ನಡೆಯುವಂತಹ ಮಾರ್ಗ ಮತ್ತು [ರಜೋಭಿಃ] ಲೋಕಗಳೊಂದಿಗೆ [ನಕ್ತಮ್] ರಾತ್ರಿ [ಚ] ಮತ್ತು [ಪರ್ವತಾನ್] ಮೇಘ ಅಥವಾ ಬೆಟ್ಟಗಳನ್ನು ಯಥಾಯೋಗ್ಯ ವ್ಯವಹಾರಗಳಲ್ಲಿ ತರುತ್ತಾರೋ ಹಾಗೆ [ವಿಭಿಂದುನಾ] ವಿವಿಧ ಪ್ರಕಾರದ ಭಿನ್ನ ಭಿನ್ನ ಮಾಡುವಂತಹ [ರಥೇನ] ರಥದಿಂದ ಸೇನೆಯನ್ನು ಯಥಾಯೋಗ್ಯ ಕಾರ್ಯಗಳಲ್ಲಿ [ಊಹಥಃ] ಕಳುಹಿಸಿರಿ. [ವಿಶ್ವತಃ] ಎಲ್ಲ ಕಡೆಗಳಿಂದ [ಸೀಮ್] ಮರ್ಯಾದೆಯನ್ನು [ಪರಿವಿಷ್ಟಮ್] ವ್ಯಾಪ್ತರಾಗಿರಿ. [ಜಾಹುಷಮ್] ಪಡೆಯಲು ಯೋಗ್ಯವಾದ ನಗರಗಳ ರಾಜ್ಯವನ್ನು ಪಡೆದು ಪರ್ವತದಂತಿರುವ ಶತ್ರುಗಳನ್ನು [ವಿ ಅಯಾತಮ್] ವಿಭೇದ ಮಾಡಿ ಪಡೆಯಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ರಾಜನ ಸಭಾಸದರು ಧರ್ಮಾನುಕೂಲ ಮಾರ್ಗಗಳಿಂದ ರಾಜ್ಯವನ್ನು ಪಡೆದು ಕೋಟೆಯಲ್ಲಿ ಅಥವಾ ಪರ್ವತ ಮೊದಲಾದ ಸ್ಥಾನಗಳಲ್ಲಿ ನಿಂತಿರುವ ಶತ್ರುಗಳನ್ನು ವಶಕ್ಕೆ ತೆಗೆದುಕೊಂಡು ತಮ್ಮ ಪ್ರಭಾವವನ್ನು ಪ್ರಕಾಶಿಸುತ್ತಾರೋ, ಹಾಗೆ ಸೂರ್ಯ ಮತ್ತು ಚಂದ್ರರು ಪೃಥಿವಿಯಲ್ಲಿನ ಪದಾರ್ಥಗಳನ್ನು ಪ್ರಕಾಶಿತಗೊಳಿಸುತ್ತಾರೆ. ಹೇಗೆ ಈ ಸೂರ್ಯ ಮತ್ತು ಚಂದ್ರರು ಹತ್ತಿರವಿಲ್ಲದಿದ್ದರೆ, ಅಂಧಕಾರವು ಉತ್ಪನ್ನವಾಗುವುದೋ ಹಾಗೆಯೇ ರಾಜಪುರುಷರ ಅಭಾವದಲ್ಲಿ ಅನ್ಯಾಯರೂಪೀ ಅಂಧಕಾರವು ಪ್ರವೃತ್ತವಾಗುತ್ತದೆ.

ಮತ್ತೆ ಅದೇ ವಿಷಯ ಹೇಳಲಾಗಿದೆ.

ಏಕಸ್ಯಾ ವಸ್ತೋರಾವತಂ ರಣಾಯ ವಶಮಶ್ವಿನಾ ಸನಯೇ ಸಹಸ್ರಾ ।
ನಿರಹತಂ ದುಚ್ಛುನಾ ಇಂದ್ರವಂತಾ ಪೃಥುಶ್ರವಸೋ ವೃಷಣಾವರಾತೀಃ ॥೨೧॥

ಪದಾರ್ಥ:- ಹೇ [ವೃಷಣೌ] ಶಸ್ತ್ರಾಸ್ತ್ರಗಳನ್ನು ವರ್ಷಿಸುವವರೇ! [ಇಂದ್ರವಂತಾ] ಬಹಳ ಐಶ್ವರ್ಯಯುಕ್ತ [ಅಶ್ವಿನಾ] ಸೂರ್ಯಚಂದ್ರರಂತಿರುವ ಸಭೆ ಮತ್ತು ಸೇನೆಯ ಅಧೀಶರೇ! [ದುಚ್ಛುನಾಃ] ಯಾವುದರಲ್ಲಿ ಸುಖವು ಹೊರಟು ಹೋಗಿರುವುದೋ ಅಂತಹ ಶತ್ರುಸೇನೆಯನ್ನು ಹೇಗೆ ಅಂಧಕಾರ ಮತ್ತು ಮೇಘಗಳನ್ನು ಸೂರ್ಯನು ಗೆಲ್ಲುವನೋ ಹಾಗೆ [ಏಕಸ್ಯಾಃ] ಒಂದು ಸೇನೆಯ [ರಣಾಯ] ಸಂಗ್ರಾಮಕ್ಕಾಗಿ ಯಾವ ಯೋಧನಿರುವನೋ ಅವನಿಂದ ಒಂದು ದಿನದ ಒಳಗೆ [ಅವತಮ್] ತನ್ನ ಸೇನೆಯ ವಿಜಯವನ್ನು ಬಯಸುವವನು ಮತ್ತು ಆ ಸೇನೆಯನ್ನು ತನ್ನ [ವಶಮ್] ವಶಕ್ಕೆ ತೆಗೆದುಕೊಂಡು [ಸಹಸ್ರಾ ಸನಯೇ] ಸಾವಿರಾರು ಧನಾದಿ ಪದಾರ್ಥಗಳನ್ನು ಭೋಗಿಸುವುದಕ್ಕಾಗಿ [ಪೃಥುಶ್ರವಸಃ] ಯಾವನಲ್ಲಿ ಬಹಳ ಅನ್ನಾದಿ ಪದಾರ್ಥಗಳಿವೆಯೋ ಮತ್ತು [ಅರಾತೀಃ] ಯಾವನು ಯಾರಿಗೂ ಸುಖವನ್ನು ಕೊಡುವುದಿಲ್ಲವೋ ಆ ಶತ್ರುಸೇನೆಯನ್ನು [ನಿರಹತಮ್] ನಿರಂತರವಾಗಿ ಕೊಲ್ಲಿರಿ.

ಭಾವಾರ್ಥ:- ಹೇ ಮನುಷ್ಯರೇ! ನೀವು ಶತ್ರುಗಳ ನಾಶ ಮತ್ತು ಮಿತ್ರರ ಪ್ರಶಂಸೆ ಮಾಡುವ ಜನರನ್ನು ಸತ್ಕರಿಸಿರಿ ಮತ್ತು ಅವರಿಗಾಗಿ ಪೃಥಿವಿಯನ್ನು ಕೊಡಿರಿ. ಹೇಗೆ ಸೂರ್ಯ, ಭೂಮಿ ಮತ್ತು ವೃಕ್ಷಗಳಿಂದ ಜಲವನ್ನು ಹೀರಿ ವರ್ಷಿಸಿ ಎಲ್ಲರನ್ನು ವೃದ್ಧಿಸುತ್ತವೋ, ಹಾಗೆಯೇ ಉತ್ತಮ ಕರ್ಮಗಳಿಂದ ಜಗತ್ತನ್ನು ವೃದ್ಧಿಸಿರಿ.

ಈಗ ಓದಿಸುವವರು ಮತ್ತು ಉಪದೇಶ ಮಾಡುವವರು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ಶರಸ್ಯ ಚಿದಾರ್ಚತ್ಕಸ್ಯಾವತಾದಾ ನೀಚಾದುಚ್ಚಾ ಚಕ್ರಥುಃ ಪಾತವೇ ವಾಃ ।
ಶಯವೇ ಚಿನ್ನಾಸತ್ಯಾ ಶಚೀಭಿ-ರ್ಜಸುರಯೇ ಸ್ತರ್ಯಂ ಪಿಪ್ಯಥುರ್ಗಾಮ್ ॥೨೨॥

ಪದಾರ್ಥ:- ಹೇ [ನಾಸತ್ಯಾ] ಸತ್ಯವಿಜ್ಞಾನಯುಕ್ತ ಸಭಾಸೇನಾಧೀಶರೇ! ನೀವೀರ್ವರೂ [ಶಚೀಭಿಃ] ತಮ್ಮ ಬುದ್ಧಿಯಿಂದ [ಶರಸ್ಯ] ಕೊಲ್ಲುವವನ ಕಡೆಯಿಂದ ಬರುವ [ನೀಚಾತ್] ಕೆಟ್ಟ ಕೆಲಸಗಳ ಸೇವನೆ ಮಾಡುತ್ತಾ [ಅವತತ್] ಹಿಂಸೆ ಮಾಡುವವರಿಂದ [ಚಿತ್] ಮತ್ತು [ಆರ್ಚತ್ಕಸ್ಯ] ಇತರರನ್ನು ಪ್ರಶಂಸೆ ಮಾಡುವ ಅಥವಾ ಸತ್ಕಾರ ಮಾಡುವ ಶಿಷ್ಟ ಜನರ ಕಡೆಯಿಂದ ಬರುವ [ಉಚ್ಚಾ] ಉತ್ತಮ ಕರ್ಮಗಳನ್ನು ಸೇವಿಸುತ್ತಾ ರಕ್ಷಣೆ ಮಾಡುವವನಿಂದ ಪ್ರಜೆಗಳನ್ನು [ಪಾತವೇ] ಪಾಲಿಸಲು ಬಲವನ್ನು [ಆ ಚಕ್ರಥುಃ] ಉತ್ತಮವಾಗಿ ಮಾಡಿರಿ. [ಚಿತ್] ಮತ್ತು [ಶಯವೇ] ಮಲಗಿರುವಾಗ ಮತ್ತು [ಜಸುರಯೇ] ಹಿಂಸಕರಿಗಾಗಿ [ಸ್ತರ್ಯಮ್] ಯಾವ ನೌಕೆ ಮೊದಲಾದ ಯಾನಗಳಲ್ಲಿ ಉತ್ತಮವಾಗಿವೆಯೋ, ಆ [ವಾಃ] ಜಲ ಮತ್ತು [ಗಾಮ್] ಪೃಥಿವಿಯನ್ನು [ಪಿಪ್ಯಥುಃ] ವೃದ್ಧಿಸಿರಿ.

ಭಾವಾರ್ಥ:- ಹೇ ಮನುಷ್ಯರೇ! ನೀವು ಶತ್ರುಗಳ ನಾಶ ಮತ್ತು ಮಿತ್ರರ ಪ್ರಶಂಸೆ ಮಾಡುವ ಜನರನ್ನು ಸತ್ಕರಿಸಿರಿ ಮತ್ತು ಅವರಿಗಾಗಿ ಪೃಥಿವಿಯನ್ನು ಕೊಡಿರಿ.

ಈಗ ಓದಿಸುವವರು ಮತ್ತು ಉಪದೇಶ ಮಾಡುವವರು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ಅವಸ್ಯತೇ ಸ್ತುವತೇ ಕೃಷ್ಣಿಯಾಯ ಋಜೂಯತೇ ನಾಸತ್ಯಾ ಶಚೀಭಿಃ ।
ಪಶುಂ ನ ನಷ್ಟಮಿವ ದರ್ಶನಾಯ ವಿಷ್ಣಾಪ್ವಂ ದದಥುರ್ವಿಶ್ವಕಾಯ ॥೨೩॥

ಪದಾರ್ಥ:- ಹೇ [ನಾಸತ್ಯಾ] ಅಸತ್ಯವನ್ನು ತ್ಯಜಿಸಿ ಸತ್ಯವನ್ನು ಗ್ರಹಿಸಲು, ಓದಿಸುವ ಮತ್ತು ಉಪದೇಶ ಮಾಡುವವರೇ! ನೀವೀರ್ವರೂ [ಶಚೀಭಿಃ] ಉತ್ತಮ ಶಿಕ್ಷಣ ಕೊಡುವ ವಾಣಿಯಿಂದ [ಅವಸ್ಯತೇ] ತನ್ನ ರಕ್ಷಣೆ

ಮತ್ತು [ಸ್ತುವತೇ] ಧರ್ಮವನ್ನು ಬಯಸುವ [ಋಜೂಯತೇ] ನೇರ ಸ್ವಭಾವವುಳ್ಳವರಂತೆ ವರ್ತಿಸುವ [ಕೃಷ್ಣಿಯಾಯ] ಆಕರ್ಷಣೆಗೆ ಯೋಗ್ಯವು ಅಂದರೆ ಬುದ್ಧಿಯ ಯಾವುದನ್ನು ಬಯಸುವುದೋ ಅದನ್ನು [ವಿಶ್ವಕಾಯ] ಜಗತ್ತಿನ ಮೇಲೆ ದಯೆ ತೋರುವ [ದರ್ಶನಾಯ] ಧರ್ಮ-ಅಧರ್ಮಗಳನ್ನು ನೋಡುತ್ತಿರುವ ಮನುಷ್ಯನಿಗಾಗಿ [ಪಶುಮ್ ನ] ಹೇಗೆ ಪಶುವಿಗೆ ಪ್ರತ್ಯಕ್ಷ ತೋರಿಸಿದಂತೆ ಮತ್ತು ಹೇಗೆ [ನಷ್ಟಮಿವ] ಕಳೆದು ಹೋದ ವಸ್ತುಗಳನ್ನು ಹುಡುಕಿ ತಿಳಿಸುವಂತೆ [ವಿಷ್ಣಾಪ್ವಮ್] ವಿದ್ಯೆಯಲ್ಲಿ ರಮಿಸುವ ವಿದ್ವಾಂಸರಿಗೆ ಯಾವ ಬೋಧೆಯು ಪ್ರಾಪ್ತವಾಗುತ್ತದೋ ಅದನ್ನು [ದದಥುಃ] ಕೊಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಶಾಸ್ತ್ರದ ವಕ್ತನು ಉಪದೇಶ ಮಾಡುವವನು ಮತ್ತು ವಿದ್ಯೆಯನ್ನು ಬೋಧಿಸುವ ವಿದ್ವಾಂಸರು ಹೇಗೆ ಪ್ರತ್ಯಕ್ಷ ಗೋವು ಮೊದಲಾದ ಪಶುಗಳನ್ನು ಅಥವಾ ಅಡಗಿರುವ ವಸ್ತುಗಳನ್ನು ತೋರಿಸಿ ಪ್ರತ್ಯಕ್ಷಗೊಳಿಸುವರೋ, ಹಾಗೆಯೇ ಶಮ, ದಮ ಮೊದಲಾದ ಗುಣಗಳಿಂದ ಕೂಡಿದ ಬುದ್ಧಿವಂತನಾದ ಶ್ರೋತಾ ಮತ್ತು ಅಧ್ಯೇತರನ್ನು ಪೃಥಿವಿಯಿಂದ ಮೊದಲ್ಗೊಂಡು ಈಶ್ವರ ಪರ್ಯಂತ ಪದಾರ್ಥಗಳ ವಿಜ್ಞಾನವನ್ನು ಕೊಡುವ ಸಾಂಗೋಪಾಂಗ ವಿದ್ಯೆಗಳನ್ನು ಪ್ರತ್ಯಕ್ಷಗೊಳಿಸಬೇಕು ಮತ್ತು ಈ ವಿಷಯದಲ್ಲಿ ಕಪಟ ಮತ್ತು ಆಲಸ್ಯ ಮೊದಲಾದ ನಿಂದಿತ ಕರ್ಮವನ್ನು ಎಂದಿಗೂ ಮಾಡಬಾರದು.

ಮತ್ತೆ ಅದೇ ವಿಷಯ

ದಶ ರಾತ್ರೀರಶಿವೇನಾ ನವ ದ್ಯೂ-ನವನದ್ಧಂ ಶ್ನಥಿತಮಪ್ಸ್ವ೧ ನ್ತಃ ।
ವಿಪ್ರುತಂ ರೇಭಮುದನಿ ಪ್ರವೃಕ್ತ-ಮುನ್ನಿನ್ಯಥುಃ ಸೋಮಮಿವ ಸ್ರುವೇಣ ॥೨೪॥

ಪದಾರ್ಥ:- ಹೇ [ನಾಸತ್ಯಾ] ಅಸತ್ಯವನ್ನು ಬಿಟ್ಟು ಸತ್ಯವನ್ನು ಗ್ರಹಣ ಮಾಡುವ, ಓದಿಸುವ ಮತ್ತು ಉಪದೇಶ ಮಾಡುವವರೇ! ನೀವಿಬ್ಬರೂ ಹೇಗೆ [ಶಚೀಭಿಃ] ಉತ್ತಮ ಶಿಕ್ಷಣ ಕೊಡುವ ವಾಣಿಯಿಂದ [ಅಶಿವೇನ] ಅಮಂಗಳ ಮಾಡುವ ಯುದ್ಧದೊಂದಿಗಿರುವ ಶಿಲ್ಪಿ ಜನರು [ಅವನದ್ಧಮ್] ಕೆಳಗೆ ಬಂಧಿಸಿದ [ಶ್ನಥಿತಮ್] ಸಡಿಲವಾಗಿ ಮಾಡಿದ [ಉದನಿ] ಜಲದಲ್ಲಿ [ವಿಪ್ರುತಮ್] ನಡೆಸುವ [ಪ್ರವೃಕ್ತಮ್] ಮತ್ತು ಇತ್ತ-ಅತ್ತ ಹೋಗುವುದರಿಂದ ತಡೆದಿರುವ ನೌಕೆ ಮೊದಲಾದವನ್ನು [ದಶಾ] ಹತ್ತು [ರಾತ್ರೀಃ] ರಾತ್ರಿಗಳು [ನವ] ಒಂಬತ್ತು [ದ್ಯೂನ್] ದಿನಗಳವರೆಗೆ [ಅಪ್ಸು] ಜಲಗಳ [ಅಂತಃ] ಒಳಗೆ ಸ್ಥಿರಪಡಿಸಿ ಮತ್ತೆ ಮೇಲಕ್ಕೆ ಕಳುಹಿಸುವಂತೆ ಮತ್ತು [ಸ್ರುವೇಣ] ತುಪ್ಪ ಮೊದಲಾದವನ್ನು ತೆಗೆದುಕೊಳ್ಳುವ ಸಾಧನವಾದ (ಸೌಟು) ಸ್ರುವದಲ್ಲಿ [ಸೋಮಮಿವ] ಸೋಮಲತೆ ಮುಂತಾದ ಔಷಧಿಗಳನ್ನು ಎತ್ತಿಕೊಳ್ಳುವಂತೆ [ರೇಭಮ್] ಎಲ್ಲರ ಪ್ರಶಂಸೆ ಮಾಡುವ ಉತ್ತಮ ಸಜ್ಜನನನ್ನು [ಉನ್ನಿನ್ಯಥುಃ] ಉನ್ನತಿಗೆ ಕಳುಹಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹಿಂದಿನ ಮಂತ್ರದಿಂದ (ನಾಸತ್ಯಾ, ಶಚೀಭಿಃ) ಇವೆರಡು ಪದಗಳ ಅನುವೃತ್ತಿಯು ಬಂದಿದೆ. ಹೇ ಮನುಷ್ಯರೇ! ಹೇಗೆ ಜಲದ ಮಧ್ಯೆ ನೌಕಾದಿಗಳು ಸ್ಥಿತವಾಗಿರುವ ಸೇನೆಯ ಶತ್ರುಗಳಿಂದ ಕೊಲ್ಲದಂತಿರುವಂತೆ, ವಿದ್ಯೆ ಮತ್ತು ಸತ್ಯಧರ್ಮದ ಉಪದೇಶಗಳಿಂದ ಸ್ಥಾಪಿತವಾದ ಜನರು ಅವಿದ್ಯಾಯುಕ್ತ ದುಃಖಗಳಿಂದ ಪೀಡೆಗೊಳಗಾಗುವುದಿಲ್ಲ. ಹೇಗೆ ನಿಯತ ಸಮಯದಲ್ಲಿ ಶಿಲ್ಪಿ ಜನರು ನೌಕಾದಿಯಾನಗಳನ್ನು ನೀರಿನಲ್ಲಿ ಅತ್ತಿತ್ತ ತೆಗೆದುಕೊಂಡು ಹೋಗಿ ಶತ್ರುಗಳನ್ನು ಗೆಲ್ಲುತ್ತಾರೋ ಹಾಗೆ ವಿದ್ಯಾದಾನದಿಂದ ಅವಿದ್ಯೆ ಎನ್ನುವ ಪಾಪವನ್ನು ಗೆಲ್ಲಿರಿ. ಹೇಗೆ ಯಜ್ಞಕರ್ಮದಲ್ಲಿ ಹೋಮ ಮಾಡಲ್ಪಟ್ಟ ದ್ರವ್ಯ ವಾಯು ಮತ್ತು ಜಲ ಮೊದಲಾದವುಗಳನ್ನು ಶುದ್ಧಿ ಮಾಡುವವನು ಹೋತನಾಗುವನೋ, ಹಾಗೆಯೇ ಸಜ್ಜನರ ಉಪದೇಶವು ಆತ್ಮದ ಶುದ್ಧಿ ಮಾಡುವುದಾಗಿ ಇರುವುದು.

ಮತ್ತೆ ಅದೇ ವಿಷಯ

ಪ್ರ ವಾಂ ದಂಸಾಂಸ್ಯಶ್ವಿನಾವವೋಚ-ಮಸ್ಯ ಪತಿಃ ಸ್ಯಾಂ ಸುಗವಃ ಸುವೀರಃ ।

ಉತ ಪಶ್ಯನ್ನಶ್ನುವನ್ ದೀರ್ಘಮಾಯು-ರಸ್ತಮಿವೇಜ್ಜರಿಮಾಣಂ ಜಗಮ್ಯಾಮ್ ॥೨೫॥

ಪದಾರ್ಥ:- ಹೇ **[ಅಶ್ವಿನಾ]** ಸಮಸ್ತ ಶುಭಕರ್ಮ ಮತ್ತು ವಿದ್ಯೆಯಲ್ಲಿ ರಮಿಸುವಂತಹ ಸಜ್ಜನರೇ! ನಾನು **[ವಾಮ್]** ನೀವಿಬ್ಬರೂ ಉಪದೇಶ ಮಾಡುವವರ ಮತ್ತು ಓದಿಸುವವರ **[ದಂಸಾಂಸಿ]** ಉಪದೇಶ ಮತ್ತು ವಿದ್ಯೆಯನ್ನು ಓದಿಸುವುದು ಮೊದಲಾದ ಕಾರ್ಯಗಳನ್ನು **[ಪ್ರ ಅವೋಚಮ್]** ಹೇಳುತ್ತೇನೆ. ಅದರಿಂದ **[ಸುಗವಃ]** ಉತ್ತಮೋತ್ತಮ ಹಸು ಮತ್ತು ಉತ್ತಮೋತ್ತಮ ವಾಣಿ ಆದಿ ಪದಾರ್ಥಗಳುಳ್ಳ **[ಸುವೀರಃ]** ಪುತ್ರ-ಪೌತ್ರ ಮೊದಲಾದ ಭೃತ್ಯರಿರುವ **[ಪಶ್ಯನ್]** ಸತ್ಯಾಸತ್ಯವನ್ನು ನೋಡುತ್ತಾ **[ಉತ]** ಮತ್ತು **[ದೀರ್ಘಮ್]** ದೊಡ್ಡ **[ಆಯುಃ]** ಆಯುಸ್ಸನ್ನು **[ಅಶ್ನುವನ್]** ಸುಖದಿಂದ ವ್ಯಾಪ್ತವಾದ **[ಅಸ್ಯ]** ಈ ರಾಜ್ಯದ ವ್ಯವಹಾರದ **[ಪತಿಃ]** ಪಾಲನೆ ಮಾಡುವವನು **[ಸ್ಯಾಮ್]** ಆಗು. ಹಾಗೂ ಸಂನ್ಯಾಸೀ ಮಹಾತ್ಮನು ಹೇಗೆ **[ಅಸ್ತಮಿವ]** ಮನೆಯನ್ನು ಪಡೆದು ನಿರ್ಲೋಭದಿಂದ ಬಿಡುವನೋ ಹಾಗೆ **[ಜರಿಮಾಣಮ್]** ವಯಸ್ಸಾದ ಶರೀರವನ್ನು ಬಿಟ್ಟು ಸುಖದಿಂದ **[ಇತ್]** ಮಾತ್ರವೇ **[ಜಗಮ್ಯಾತ್]** ಶೀಘ್ರವಾಗಿ ಹೋಗುವೆನು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಮನುಷ್ಯನು ಸದಾ ಧಾರ್ಮಿಕ ಶಾಸ್ತ್ರವಕ್ತರ ಕರ್ಮಗಳಲ್ಲಿ ಸೇವೆ ಮಾಡಿ ಧರ್ಮ ಮತ್ತು ಜಿತೇಂದ್ರಿಯತ್ವದಿಂದ ವಿದ್ಯೆಯನ್ನು ಪಡೆದು ಆಯಸ್ಸನ್ನು ಹೆಚ್ಚಿಸಿಕೊಂಡು ಉತ್ತಮ ಸಹಾಯಯುಕ್ತನಾಗಿ ಸಂಸಾರವನ್ನು ಪಾಲಿಸಲಿ ಮತ್ತು ಯೋಗಾಭ್ಯಾಸದಿಂದ ಜೀರ್ಣವಾದ ಅಂದರೆ ವೃದ್ಧ ಶರೀರವನ್ನು ಬಿಡುವ ವಿಜ್ಞಾನದಿಂದ ಮುಕ್ತಿಯನ್ನು ಪಡೆಯಲಿ.

ಈ ಸೂಕ್ತದಲ್ಲಿ ಪೃಥಿವೀ ಮೊದಲಾದ ಪದಾರ್ಥಗಳ ಗುಣಗಳ ದೃಷ್ಟಾಂತ ಹಾಗೂ ಅನುಕೂಲತೆಯಿಂದ ಸಭೆ ಸೇನಾಪತಿಗಳು ಮೊದಲಾದವರ ಗುಣಕರ್ಮಗಳ ವರ್ಣನೆಯಿಂದ ಈ ಸೂಕ್ತದಲ್ಲಿ ಹೇಳಿರುವ ಅರ್ಥಕ್ಕೂ ಹಿಂದಿನ ಸೂಕ್ತದಲ್ಲಿ ಹೇಳಿರುವ ಅರ್ಥಕ್ಕೂ ಸಂಬಂಧವಿದೆಯೆಂದು ತಿಳಿಯಬೇಕು.

ನೂರ ಹದಿನಾರನೆಯ ಸೂಕ್ತ ಸಮಾಪ್ತ

ಸೂಕ್ತ ೧೧೭

ಮಂತ್ರಸಂಖ್ಯೆ ೨೫ । ಋಷಿಃ - ಕಕ್ಷೀವಾನ್ ದೈರ್ಘತಮಸ ಔಶಿಜಃ । ದೇವತಾ - ಅಶ್ವಿನೌ । ಛಂದಃ - ತ್ರಿಷ್ಟುಪ್ ।
ಸ್ವರಃ - ೬, ೧೧, ೨೧, ೨೨, ೨೫ ಪಂಚಮಃ, ಧೈವತಃ.

ಇದರ ಮೊದಲ ಮಂತ್ರದಲ್ಲಿ ರಾಜಧರ್ಮದ ಉಪದೇಶ ಮಾಡಿದೆ.

ಮಧ್ವಃ ಸೋಮಸ್ಯಾಶ್ವಿನಾ ಮದಾಯ ಪ್ರತ್ನೋ ಹೋತಾ ವಿವಾಸತೇ ವಾಮ್ ।

ಬರ್ಹಿಷ್ಮತೀ ರಾತಿರ್ವಿಶ್ರಿತಾ ಗೀ-ರಿಷಾ ಯಾತಂ ನಾಸತ್ಯೋಪ ವಾಜೈಃ ॥೧॥

ಪದಾರ್ಥ:- ಹೇ **[ಅಶ್ವಿನಾ]** ವಿದ್ಯೆಯಲ್ಲಿ ರಮಿಸುವ **[ನಾಸತ್ಯಾ]** ಅಸತ್ಯದಿಂದ ದೂರವಿರುವ ಸಭೆ-ಸೇನಾಧೀಶರೇ! ನೀವಿಬ್ಬರೂ **[ಇಷಾ]** ತಮ್ಮ ಇಚ್ಛೆಯಿಂದ **[ಪ್ರತ್ನಃ]** ಪುರಾತನ ವಿದ್ಯೆಯನ್ನು ಓದುವ **[ಹೋತಾ]** ಸುಖದಾತನು ಹೇಗೆ **[ವಾಜೈಃ]** ವಿಜ್ಞಾನಾದಿ ಗುಣಗಳೊಡನೆ **[ಮದಾಯ]** ರೋಗ ದೂರವಾಗುವ ಆನಂದಕ್ಕಾಗಿ

[ವಾಮ್] ನಿಮ್ಮಿಬ್ಬರ **[ಮಧ್ವಃ ಸೋಮಸ್ಯ]** ಮಧುರವಾದ ಸೋಮಲತೆ ಆದಿ ಔಷಧಿಗಳ ಯಾವ **[ಬರ್ಹಿಷ್ಮತೀ]** ಪ್ರಶಂಸಿತವಾಗಿ ಪ್ರಸಿದ್ಧವಾದಂತಹ **[ರಾತಿಃ]** ದಾನಕ್ರಿಯೆ ಮತ್ತು **[ವಿಶ್ರಿತ]** ವಿವಿಧ ಪ್ರಕಾರದ ಶಾಸ್ತ್ರವಕ್ತರು ವಿದ್ವಾಂಸರಿಂದ ಸೇವಿಸಲ್ಪಟ್ಟ **[ಗೀಃ]** ವಾಣಿ ಇದೆಯೋ ಅದನ್ನು **[ಆ ವಿ ವಾಸತೇ]** ಯಾವನು ಉತ್ತಮವಾಗಿ ಸೇವಿಸುವನೋ, ಅವನಂತೆ **[ಉಪಯಾತಮ್]** ಹತ್ತಿರಕ್ಕೆ ಬನ್ನಿರಿ, ಅಂದರೆ ಉಕ್ತ ತಮ್ಮ ಕ್ರಿಯೆ .ಮತ್ತು ವಾಣಿಯನ್ನು ಹೇಗಿದೆಯೋ ಹಾಗೆ ಪ್ರಚಾರ ಮಾಡುತ್ತಾ ಇರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಸಭೆ ಮತ್ತು ಸೇನೆಯ ಅಧೀಶರೇ! ನೀವು ಉತ್ತಮಶಾಸ್ತ್ರವೇತ್ತರಾದ ವಿದ್ವಾಂಸರ ಗುಣಕರ್ಮಗಳ ಸೇವೆಯಿಂದ ವಿಶೇಷಜ್ಞಾನ ಪಡೆದು, ಶರೀರದ ರೋಗವನ್ನು ದೂರಮಾಡಲು, ಸೋಮಲತೆ ಮೊದಲಾದ ಓಷಧಿಗಳನ್ನು ವಿದ್ಯೆ ಮತ್ತು ಅವಿದ್ಯೆ ಅಜ್ಞಾನದ ದೂರ ಮಾಡಲು ವಿದ್ಯೆಯ ಸೇವನೆ ಬಯಸುತ್ತಾ ಸುಖವನ್ನು ಸಿದ್ಧಿಗೊಳಿಸಿರಿ.

ಮತ್ತೆ ರಾಜಧರ್ಮವನ್ನು ಹೇಳಲಾಗಿದೆ.

ಯೋ ವಾಮಶ್ವಿನಾ ಮನಸೋ ಜವೀಯಾನ್ ರಥಃ ಸ್ವಶ್ವೋ ವಿಶ ಆಜಿಗಾತಿ ।

ಯೇನ ಗಚ್ಛಥಃ ಸುಕೃತೋ ದುರೋಣಂ ತೇನ ನರಾ ವರ್ತಿರಸ್ಮಭ್ಯಂ ಯಾತಮ್ ॥೨॥

ಪದಾರ್ಥ:- ಹೇ **[ನರಾ]** ನ್ಯಾಯವನ್ನು ಪ್ರಾಪ್ತಿ ಪಡಿಸುವವನೇ! **[ಅಶ್ವಿನಾ]** ವಿಚಾರಶೀಲ ಸಭಾಸೇನಾಧೀಶರೇ! **[ಯಃ]** ಯಾವ **[ಸುಕೃತಃ]** ಉತ್ತಮ ಸಾಧನಗಳಿಂದ ಮಾಡಲ್ಪಟ್ಟ **[ಸ್ವಶ್ವಃ]** ಯಾವುದರಲ್ಲಿ ಉತ್ತಮ ವೇಗವಂತವಾದ ವಿದ್ಯುತ್ತು ಮೊದಲಾದ ಪದಾರ್ಥಗಳು ಅಥವಾ ಕುದುರೆಗಳನ್ನು ಜೋಡಿಸಿದ ಆ **[ಮನಸಃ]** ವಿಚಾರಶೀಲ ಅತ್ಯಂತ ವೇಗವಾದ ಮನಸ್ಸಿನಿಂದಲೂ ಕೂಡ **[ಜವೀಯಾನ್]** ಅಧಿಕ ವೇಗವುಳ್ಳ ಮತ್ತು **[ರಥಃ]** ಯುದ್ಧದಲ್ಲಿ ಅತ್ಯಂತ ಕ್ರೀಡೆ ಮಾಡುವ ರಥವಿದೆಯೋ, ಆ **[ವಿಶಃ]** ಪ್ರಜೆಗಳ **[ಅಜಿಗಾತಿ]** ಉತ್ತಮವಾಗಿ ಪ್ರಶಂಸೆ ಮಾಡಿಸುವ ಮತ್ತು **[ವಾಮ್]** ನೀವಿಬ್ಬರೂ **[ಯೇನ]** ಯಾವ ರಥದಿಂದ **[ವರ್ತಿಃ]** ವರ್ತಿಸಿ **[ದುರೋಣಮ್]** ಮನೆಗೆ **[ಗಚ್ಛಥಃ]** ಹೋಗುವಿರೋ **[ತೇ]** ಅದರಿಂದ **[ಅಸ್ಮಭ್ಯಮ್]** ನಮ್ಮನ್ನು **[ಯಾತಮ್]** ಪ್ರಾಪ್ತರಾಗಿರಿ.

ಭಾವಾರ್ಥ:- ಮನಸ್ಸಿನಂತೆ ವೇಗವುಳ್ಳ ವಿದ್ಯುತ್ತು ಮೊದಲಾದ ಪದಾರ್ಥಗಳಿಂದ ಕೂಡಿದ, ಅನೇಕ ಪ್ರಕಾರದ ರಥ ಮೊದಲಾದವುಗಳನ್ನು ನಿಶ್ಚಿತಗೊಳಿಸಿ ಪ್ರಜೆಗಳಿಗೆ ಸಂತೋಷಕೊಡಿರಿ. ಮತ್ತು ಯಾವ ಯಾವ ಕರ್ಮದ ಪ್ರಶಂಸೆ ಇದೆಯೋ, ಅದನ್ನು ನಿರಂತರ ಸೇವಿಸಿರಿ. ಅದರಿಂದ ಬೇರೆಯಾದ ಕರ್ಮದ ಸೇವನೆಯನ್ನು ಮಾಡದಿರಿ.

ಈಗ ಓದುವ ಮತ್ತು ಓದಿಸುವ ರಾಜಧರ್ಮದ ಉಪದೇಶವನ್ನು ಮಾಡಲಾಗಿದೆ.

ಋಷಿಂ ನರಾವಂಹಸಃ ಪಾಂಚಜನ್ಯ -ಮೃಬೀಸಾದತ್ರಿಂ ಮುಂಚಥೋ ಗಣೇನ ।

ಮಿನಂತಾ ದಸ್ಯೋರಶಿವಸ್ಯ ಮಾಯಾ ಅನುಪೂರ್ವಂ ವೃಷಣಾ ಚೋದಯಂತಾ ॥೩॥

ಪದಾರ್ಥ:- ಹೇ **[ನರೌ]** ವಿದ್ಯೆಯನ್ನು ಪ್ರಾಪ್ತಿಗೊಳಿಸುವ **[ವೃಷಣಾ]** ಸುಖವನ್ನು ವರ್ಷಿಸುವ **[ಚೋದಯನ್ತಾ]** ಮತ್ತು ವಿದ್ಯೆ ಮೊದಲಾದ ಶುಭಗುಣಗಳ ಪ್ರೇರಣೆ ಮಾಡುವ ಹಾಗೂ **[ಅಶಿವಸ್ಯ]** ಎಲ್ಲರಿಗೂ ದುಃಖವನ್ನು ಕೊಡುವ **[ದಸ್ಯೋಃ]** ತಸ್ಕರ **[ಮಾಯಾಃ]** ಕಪಟಕ್ರಿಯೆಗಳನ್ನು **[ಮಿನಂತಾ]** ಕತ್ತರಿಸುವ ಸಭೆ ಸೇನಾಧೀಶರೇ! ನೀವಿಬ್ಬರೂ **[ಅನುಪೂರ್ವಮ್]** ಅನುಕೂಲಕರವಾದ, ವೇದದಲ್ಲಿ ಹೇಳಿದ ಮತ್ತು ಉತ್ತಮ ವಿದ್ವಾಂಸರು ಒಪ್ಪಿರುವ ಸಿದ್ಧಾಂತವು ಯಾವುದೋ ಅದು **[ಪಾಂಚಜನ್ಯಮ್]** ಪ್ರಾಣ, ಅಪಾನ, ಉದಾನ, ವ್ಯಾನ ಮತ್ತು ಸಮಾನದಲ್ಲಿ

ಸಿದ್ಧವಾದ ಯೋಗಸಿದ್ಧಿಯನ್ನು ಮತ್ತು ಯಾವುದರ ಸಂಬಂಧದಲ್ಲಿ [ಅತ್ರಿಮ್] ಆತ್ಮ, ಮನಸ್ಸು ಮತ್ತು ಶರೀರದ ದುಃಖಗಳು ನಷ್ಟವಾಗುವುವೋ, ಆ [ಗಣೇನ] ಓದುವ - ಓದಿಸುವವರೊಂದಿಗೆ ವರ್ತಿಸುವ [ಋಷಿಮ್] ವೇದಪಾರಂಗತ ಅಧ್ಯಾಪಕನಿಗೆ [ಋಬೀಸಾತ್] ಯಾವ ಅವಿದ್ಯಾರೂಪ ಅಂಧಕಾರವು ನಷ್ಟವಾಗಿ [ಅಂಹಸಃ] ಮತ್ತು ವಿದ್ಯೆ ಓದುವುದನ್ನು ನಿಲ್ಲಿಸುವಂತಹ ಅತ್ಯಂತ ಪಾಪದಿಂದ [ಮುಂಚಥಃ] ಬೇರೆ ಇಡುವನು.

ಭಾವಾರ್ಥ:- ವಿದ್ಯೆಯ ಪ್ರಚಾರ ಮಾಡುವವರನ್ನು ದುಃಖದಿಂದ ಬಿಡಿಸಿ, ಅವರನ್ನು ಸುಖದಲ್ಲಿ ಇಡುವುದು ಮತ್ತು ಕಳ್ಳರು, ಠಕ್ಕರು ಮೊದಲಾದ ದುಷ್ಟರಿಂದ ದೂರ ಇಡುವುದು ರಾಜಪುರುಷರ ಅತ್ಯಂತ ಉತ್ತಮ ಕಾರ್ಯವಾಗಿದೆ. ಮತ್ತು ರಾಜಪುರುಷರು ಸ್ವತಃ ವಿದ್ಯೆ ಮತ್ತು ಧರ್ಮದ ಪ್ರಚಾರದಲ್ಲಿ ತೊಡಗಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಸಿದ್ಧಿಯನ್ನು ಪಡೆಯಬೇಕು.

ಮತ್ತೆ ಅದೇ ವಿಷಯ

ಅಶ್ವಂ ನ ಗೂಳ್ಹಮಶ್ವಿನಾ ದುರೇವೈ-ಋಷಿಂ ನರಾ ವೃಷಣಾ ರೇಭಮಪ್ಸು । ಸಂ ತಂ
ರಿಣೀಥೋ ವಿಪ್ರುತಂ ದಂಸೋಭಿ-ರ್ನ ವಾಂ ಜೂರ್ಯಂತಿ ಪೂರ್ವ್ಯಾ ಕೃತಾನಿ ॥೪॥

ಪದಾರ್ಥ:- ಹೇ [ನರಾ] ಸುಖದಪ್ರಾಪ್ತಿ [ವೃಷಣಾ] ಮತ್ತು ವಿದ್ಯೆಯನ್ನು ವರ್ಷಿಸುವ [ಅಶ್ವಿನಾ] ಸಭೆ-ಸೇನಾಧೀಶರೇ! ನೀವಿಬ್ಬರೂ [ದುರೇವೈಃ] ದುಃಖವನ್ನುಂಟುಮಾಡುವ ದುಷ್ಟರು ಮೊದಲಾದ ಪ್ರಾಣಿಗಳು [ದಂಸೋಭಿಃ] ಮತ್ತು ಶ್ರೇಷ್ಠ ವಿದ್ವಾಂಸರು ಆಚರಿಸಿದ ಕರ್ಮಗಳಿಂದ ತಾಡನೆಗೆ ಪ್ರಾಪ್ತರು [ಅಶ್ವಮ್] ಅತಿಯಾಗಿ ಚಲಿಸುವ ವಿದ್ಯುತ್ತಿನಂತೆ [ವಿಪ್ರುತಮ್] ವಿವಿಧ ರೀತಿಯ ಉತ್ತಮ ವ್ಯವಹಾರಗಳನ್ನು ತಿಳಿಯಲು [ರೇಭಮ್] ಸಮಸ್ತ ವಿದ್ಯೆ ಗುಣಗಳ ಪ್ರಶಂಸೆ ಮಾಡಲು [ಅಪ್ಸು] ವಿದ್ಯೆಯಲ್ಲಿ ಪ್ರಾಪ್ತವಾಗಲು ಮತ್ತು ವೇದಾದಿ ಶಾಸ್ತ್ರಗಳಲ್ಲಿ ನಿಶ್ಚಯವನ್ನು ಇಡುವ [ತಮ್] ಆ ಪೂರ್ವಮಂತ್ರದಲ್ಲಿ ಹೇಳಿದ [ಋಷಿಮ್] ವೇದಪಾರಂಗತ ವಿದ್ವಾಂಸನ [ನ] ಸಮಾನ [ಗೂಢಮ್] ತನ್ನ ಆಶಯವನ್ನು ಗುಪ್ತವಾಗಿಡುವ ಸಜ್ಜನ ಪುರುಷನಿಗೆ ಸುಖದಿಂದ [ಸಂ ರಿಣೀಥಃ] ಉತ್ತಮವಾಗಿ ಯುಕ್ತಗೊಳಿಸಿರಿ. ಅದರಿಂದ [ವಾಮ್ ಪೂರ್ವ್ಯಾಕೃತಾನಿ] ನಿಮ್ಮ ಪೂರ್ವಜರು ಮಾಡಿರುವ ವಿದ್ಯಾ ಪ್ರಚಾರ ಮಾಡುವ ಮನುಷ್ಯರನ್ನು ಸಮಸ್ತ ಪೀಡೆಗಳಿಂದ ಬೇರ್ಪಡಿಸಿ, ಸತ್ಕಾರದೊಂದಿಗೆ ಸಂಗಮಾಡಿ ಇವರು ಸೇವೆಗೆ ಪ್ರಾಪ್ತರಾಗುವರು ಮತ್ತು ಯಾರಿಗೆ ಅವರ ವಿದ್ಯುತ್ತಿನ ವಿದ್ಯೆಯ ಪ್ರಚಾರ ಕೆಲಸವಿದೆಯೋ, ಅವರು ಅಜರರು - ಅಮರರು ಆಗುವರು, ಇದನ್ನು ತಿಳಿಯಬೇಕು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ರಾಜಪುರುಷರಿಂದ ಹೇಗೆ ಕಳ್ಳರು, ಠಕ್ಕರು, ಅಡಗಿದ್ದು ಪೀಡೆಯನ್ನುಂಟುಮಾಡುವ ದುಷ್ಟರನ್ನು ಶಿಕ್ಷಿತ ಕುದುರೆಗಳನ್ನು ತೆಗೆದುಕೊಂಡು ಹೋಗಿ ಬಂಧಿಸಿ ಉಚಿತ ರೀತಿಯಲ್ಲಿ ಶಿಕ್ಷಿಸುತ್ತಾರೋ ಹಾಗೆ ಮೂಢ ದುರಾಚಾರಿ ಮನುಷ್ಯರಿಂದ ತಿರಸ್ಕರಿಸಿದ, ವಿದ್ಯಾಪ್ರಚಾರ ಮಾಡುವ ಮನುಷ್ಯರನ್ನು ಸಮಸ್ತ ಪೀಡೆಗಳಿಂದ ಬೇರ್ಪಡಿಸಿ, ಸತ್ಕಾರದೊಂದಿಗೆ ಸಂಗಮಾಡಿ ಇವರು ಸೇವೆಗೆ ಪ್ರಾಪ್ತರಾಗುವರು. ಮತ್ತು ಯಾರಿಗೆ ಅವರ ವಿದ್ಯುತ್ತಿನ ವಿದ್ಯೆಯ ಪ್ರಚಾರದ ಕೆಲಸವಿದೆಯೋ, ಅವರು ಅಜರರು- ಅಮರರು ಆಗುವರು, ಇದನ್ನು ತಿಳಿಯಬೇಕು.

ಈಗ ರಾಜಧರ್ಮದ ವಿಷಯ.

ಸುಷುಪ್ವಾಂಸಂ ನ ನಿರ್ಋತೇರುಪಸ್ಥೇ ಸೂರ್ಯಂ ನ ದಸ್ರಾ ತಮಸಿ ಕ್ಷಿಯಂತಮ್ ।
ಶುಭೇ ರುಕ್ಮಂ ನ ದರ್ಶತಂ ನಿಖಾತ-ಮುದೂಪಥುರಶ್ವಿನಾ ವಂದನಾಯ ॥೫॥

ಪದಾರ್ಥ:- ಹೇ [ದಸ್ರಾ] ದುಃಖದ ವಿನಾಶ ಮಾಡುವ [ಅಶ್ವಿನಾ] ಕೃಷಿಯ ವಿದ್ಯೆಯಲ್ಲಿ ಪರಿಪೂರ್ಣರಾದ ಸಭಾ-ಸೇನಾಧೀಶರೇ! ನೀವಿಬ್ಬರೂ [ವಂದನಾಯ] ಪ್ರಶಂಸೆ ಮಾಡುವುದಕ್ಕಾಗಿ [ನಿರ್ಋತೇಃ] ಭೂಮಿಯ [ಉಪಸ್ಥೇ] ಮೇಲೆ [ತಮಸಿ] ರಾತ್ರಿಯಲ್ಲಿ [ಕ್ಷಿಯಂತಮ್] ನಿವಾಸ ಮಾಡುತ್ತಾ ಮತ್ತು [ಸುಷುಪ್ವಾಂಸಮ್] ಸುಖದಿಂದ ನಿದ್ರಿಸುವವನ [ನ] ಸಮಾನ ಅಥವಾ [ಸೂರ್ಯಮ್] ಸೂರ್ಯನ [ನ] ಸಮಾನ. ಮತ್ತು [ಶುಭೇ] ಶೋಭೆಗಾಗಿ [ರುಕ್ಮಮ್] ಸುವರ್ಣದ [ನ] ಸಮಾನ [ದರ್ಶತಮ್] ನೋಡಲು ಯೋಗ್ಯವಾದ ರೂಪ [ನಿಖಾತಮ್] ನೇಗಿಲಿನಿಂದ ಉಳುಮೆ ಮಾಡಿದ ಹೊಲದಲ್ಲಿ [ಉದೂಪಥುಃ] ಮೇಲಿನಿಂದ ಬಿತ್ತಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಮೂರು ಉಪಮಾಲಂಕಾರಗಳಿವೆ. ಹೇಗೆ ಉತ್ತಮರಾಜ್ಯದಲ್ಲಿ ಪ್ರಜೆಗಳು ಸುಖವಾಗಿ ನಿದ್ರಿಸಿ ಹಗಲಿನಲ್ಲಿ ಇಷ್ಟ ಕಾರ್ಯಗಳಲ್ಲಿ ಮನಸ್ಸನ್ನು ತೊಡಗಿಸಿ ಅಥವಾ ಶೋಭೆಗಾಗಿ ಸುವರ್ಣ ಮೊದಲಾದ ವಸ್ತುಗಳನ್ನು ಪಡೆಯುವರೋ ಅಥವಾ ಹೊಲ ಮೊದಲಾದವುಗಳಲ್ಲಿ ಕಾರ್ಯ ಮಾಡುವರೋ ಹಾಗೆ ಉತ್ತಮ ಪ್ರಜೆಗಳನ್ನು ಪಡೆದು ರಾಜಪುರುಷರು ಪ್ರಶಂಸೆ ಪಡೆಯುವರು.

ಮತ್ತೆ ಅದೇ ವಿಷಯ

ತದ್ ವಾಂ ನರಾ ಶಂಸ್ಯಂ ಪಜ್ರಿಯೇಣ ಕಕ್ಷೀವತಾ ನಾಸತ್ಯಾ ಪರಿಜ್ಮನ್ ।
ಶಫಾದಶ್ವಸ್ಯ ವಾಜಿನೋ ಜನಾಯ ಶತಂ ಕುಂಭಾ ಅಸಿಂಚತಂ ಮಧೂನಾಮ್ ॥೬॥

ಪದಾರ್ಥ:- ಹೇ [ಪಜ್ರಿಯೇಣ] ಪ್ರಾಪ್ತವಾಗುವ ಯೋಗ್ಯರಲ್ಲಿ ಪ್ರಸಿದ್ಧರಾಗುತ್ತಾ [ಕಕ್ಷೀವತಾ] ಶಿಕ್ಷಣವನ್ನು ಕೊಡುವಂತಹ ವಿದ್ವಾಂಸನೊಂದಿಗೆ ವರ್ತಿಸುವ [ನಾಸತ್ಯಾ] ಸತ್ಯವ್ಯವಹಾರಗಳಲ್ಲಿ ವರ್ತಿಸುವ [ನರಾ] ಮನುಷ್ಯರಲ್ಲಿ ಉತ್ತಮರೂ ಎಲ್ಲರಿಗೂ ತಮ್ಮ ತಮ್ಮ ಯೋಗ್ಯತಾನುಸಾರ ನಿಯಮಿಸುವ ಸಭಾ ಸೇನಾಧೀಶರೇ! ನೀವಿಬ್ಬರೂ [ಪರಿಜ್ಮನ್] ಎಲ್ಲರೂ ನಡೆಯುವ ಮಾರ್ಗದಲ್ಲಿ [ವಾಜಿನಃ] ವೇಗವಂತ [ಅಶ್ವಸ್ಯ] ಕುದುರೆಗಳ [ಶಫಾತ್] ಗೊರಸುಗಳಂತೆ ವಿದ್ಯುದ್‌ವೇಗದಿಂದ [ಜನಾಯ] ಉತ್ತಮ ಗುಣ ಮತ್ತು ಉತ್ತಮ ವಿದ್ಯೆಯಿಂದ ಪ್ರಸಿದ್ಧರಾಗಿರುವ ವಿದ್ವಾಂಸರಿಗಾಗಿ [ಮಧೂನಾಮ್] ಜಲಗಳ [ಶತಮ್] ನೂರಾರು [ಕುಂಭಾನ್] ಕೊಡಗಳನ್ನು [ಅಸಿಂಚತಮ್] ಸುಖವಾಗಿ ತುಂಬಿರಿ. [ತತ್] ಅಂತಹ [ವಾಮ್] ನಿಮ್ಮ [ಶಂಸ್ಯಮ್] ಪ್ರಶಂಸಿಸಲು ಯೋಗ್ಯವಾದ ಕೆಲಸಗಳನ್ನು ನಾವು ತಿಳಿದಿದ್ದೇವೆ.

ಭಾವಾರ್ಥ:- ಮನುಷ್ಯ ಮೊದಲಾದ ಪ್ರಾಣಿಗಳ ಸುಖಕ್ಕಾಗಿ ಮಾರ್ಗದಲ್ಲಿ ಅನೇಕ ಕೊಡಗಳ ಜಲದಿಂದ ನಿತ್ಯವೂ ಸಿಂಪಡಿಸಿ, ಅದರಿಂದ ಕುದುರೆ, ಎತ್ತುಗಳ ತುಳಿತದಿಂದ ಧೂಳು ಏಳಬಾರದಂತೆ ರಾಜಪುರುಷರು ಮಾಡಿಸಬೇಕು. ಮತ್ತು ಮಾರ್ಗದಲ್ಲಿ ತನ್ನ ಸೇನೆಯ ಜನ ಸುಖದಿಂದ ಹೋಗಿ ಬರುವಂತಿರಬೇಕು. ಹೀಗೆ ಪ್ರಶಂಸಿತ ಕಾರ್ಯಗಳನ್ನು ಮಾಡಿ ಪ್ರಜೆಗಳಿಗೆ ನಿರಂತರ ಆನಂದವುಂಟುಮಾಡಬೇಕು.

ಮತ್ತೆ ಅಧ್ಯಾಪಕ ಮತ್ತು ಉಪದೇಶಕರ ಗುಣವನ್ನು ತಿಳಿಸಲಾಗಿದೆ.

ಯುವಂ ನರಾ ಸ್ತುವತೇ ಕೃಷ್ಣಿಯಾಯ ವಿಷ್ಣಾಪ್ವಂ ದದಥುರ್ವಿಶ್ವಕಾಯ ।
ಘೋಷಾಯೈ ಚಿತ್ ಪಿತೃಷದೇ ದುರೋಣೇ ಪತಿಂ ಜೂರ್ಯಂತ್ಯಾ ಅಶ್ವಿನಾವದತ್ತಮ್ ॥೭॥

ಪದಾರ್ಥ:- ಹೇ [ನರಾ] ಎಲ್ಲ ಕೆಲಸಗಳ ಪ್ರಧಾನ ಮತ್ತು [ಅಶ್ವಿನೌ] ಎಲ್ಲ ವಿದ್ಯೆಗಳಲ್ಲಿ ವ್ಯಾಪ್ತ ಸಭಾಸೇನಾಧೀಶರೇ! [ಯುವಮ್] ನೀವಿಬ್ಬರೂ [ಕೃಷ್ಣಿಯಾಯ] ಕೃಷಿಕಾರ್ಯದ ಯೋಗ್ಯತೆಯುಳ್ಳ ಮತ್ತು [ಸ್ತುವತೇ] ಸತ್ಯವನ್ನು ಹೇಳುವ [ಪಿತೃಷದೇ] ವಿದ್ಯೆ ವಿಜ್ಞಾನಗಳುಳ್ಳ [ವಿಶ್ವಕಾಯ] ಎಲ್ಲರ ಮೇಲೆ ದಯೆಯುಳ್ಳ ರಾಜನಿಗಾಗಿ [ದುರೋಣೇ] ಮನೆಯಲ್ಲಿ [ವಿಷ್ಣಾಪ್ವಮ್] ನಿರಂತರವೂ ಹೊಲಗದ್ದೆಗಳಲ್ಲಿ ಕೆಲಸ ಮಾಡುವವರನ್ನಿಟ್ಟಿರುವ ಭೂಸ್ವಾಮಿಗೆ [ದದಥುಃ] ಕೊಡು. [ಚಿತ್] ಮತ್ತು [ಜೂರ್ಯನ್ತ್ಯೈ] ವೃದ್ಧಾವಸ್ಥೆಯನ್ನುಂಟುಮಾಡುವ [ಘೋಷಾಯೈ] ಯಾವುದರಲ್ಲಿ ಪ್ರಶಂಸಿತ ಶಬ್ದ ಅಥವಾ ಗೋ ಮೊದಲಾದವುಗಳು ವಾಸಿಸುವ ಆ ಹೊಲಕ್ಕಾಗಿ [ಪತಿಮ್] ಸ್ವಾಮಿ ಅಂದರೆ ಅದನ್ನು ರಕ್ಷಿಸುವವರನ್ನು [ಅದತ್ತಮ್] ಕೊಡಿರಿ.

ಭಾವಾರ್ಥ:- ರಾಜ ಮೊದಲಾದ ನ್ಯಾಯಾಧೀಶರು ವ್ಯವಸಾಯ ಮೊದಲಾದ ಕಾರ್ಯ ಮಾಡುವ ಪುರುಷರಿಂದ ಎಲ್ಲ ಉಪಕಾರಗಳ ಪಾಲಿಸುವ ಪುರುಷ ಮತ್ತು ಸತ್ಯ ನ್ಯಾಯಗಳನ್ನು ಪ್ರಜೆಗಳಿಗೆ ಕೊಟ್ಟು ಅವರನ್ನು ಪುರುಷಾರ್ಥದಲ್ಲಿ ಪ್ರವೃತ್ತಗೊಳಿಸಬೇಕು. ಈ ಕಾರ್ಯಗಳ ವೃದ್ಧಿ ಮಾಡುತ್ತಾ ಪ್ರಜೆಗಳಿಂದ ಧರ್ಮಾನುಕೂಲ ತನ್ನ ಭಾಗವನ್ನು ಯಥಾಯೋಗ್ಯ ಗ್ರಹಿಸಬೇಕು.

ಮತ್ತೆ ಇಲ್ಲಿ ರಾಜಧರ್ಮದ ಉಪದೇಶವನ್ನು ಮಾಡಲಾಗಿದೆ.

ಯುವಂ ಶ್ಯಾವಾಯ ರುಶತೀಮದತ್ತಂ ಮಹಃ, ಕ್ಷೋಣಸ್ಯಾಶ್ವಿನಾ ಕಣ್ವಾಯ ।
ಪ್ರವಾಚ್ಯಂ ತದ್ ವೃಷಣಾ ಕೃತಂ ವಾಂ ಯನ್ನಾರ್ಷದಾಯ ಶ್ರವೋ ಅಧ್ಯಧತ್ತಮ್ ॥೮॥

ಪದಾರ್ಥ:- ಹೇ [ವೃಷಣಾ] ಬಲವಾನ್ [ಅಶ್ವಿನಾ] ಬಹಳ ಜ್ಞಾನ-ವಿಜ್ಞಾನಗಳ ವಿಚಾರಗಳನ್ನು ತಿಳಿದಿರುವ ಸಭಾಸೇನಾಧೀಶರೇ! **[ಯುವಮ್]** ನೀವಿಬ್ಬರೂ **[ಮಹಃ]** ದೊಡ್ಡ **[ಕ್ಷೋಣಸ್ಯ]** ಓದಿಸುವವರ ಬಾಣಗಳಿಂದ **[ಶ್ಯಾವಾಯ]** ಜ್ಞಾನಿ **[ಕಣ್ವಾಯ]** ಬುದ್ಧಿವಂತನಿಗಾಗಿ **[ರುಶತೀಮ್]** ಪ್ರಕಾಶಪಡಿಸುವ ವಿದ್ಯೆಯನ್ನು **[ಅದತ್ತಮ್]** ಕೊಡಿರಿ. ಹಾಗೂ **[ಯತ್]** ಯಾವ **[ವಾಮ್]** ನಿಮ್ಮಿಬ್ಬರ **[ಪ್ರವಾಚ್ಯಮ್]** ಚೆನ್ನಾಗಿ ಹೇಳುವಂತಹ ಶಾಸ್ತ್ರವನ್ನು **[ಕೃತಮ್]** ಮಾಡಬೇಕಾದ ಕಾರ್ಯ ಮತ್ತು **[ಶ್ರವಃ]** ಕೇಳಬೇಕಾದ **[ತತ್]** ಅದನ್ನು ಹಾಗೂ **[ನಾರ್ಷದಾಯ]** ಉತ್ತಮೋತ್ತಮ ವ್ಯವಹಾರಗಳಲ್ಲಿ ಮನುಷ್ಯ ಮೊದಲಾದವರಿಗೆ ತಲುಪಿಸುವವರಲ್ಲಿ ಸ್ಥಿತರಾಗುವ ಬಾಲಕರನ್ನು **[ಅಧ್ಯಧತ್ತಮ್]** ತಾವು ಧರಿಸಿರಿ (ಸ್ವೀಕರಿಸಿರಿ).

ಭಾವಾರ್ಥ:- ಸಭಾಧ್ಯಕ್ಷನಾದ ಪುರುಷನಿಂದ ಯಾವ ರೀತಿಯ ಉಪದೇಶವು ಉತ್ತಮ ಬುದ್ಧಿವಂತರಿಗಾಗಿ ಮಾಡಲ್ಪಡುತ್ತದೋ, ಹಾಗೆಯೇ ಎಲ್ಲ ಲೋಕಗಳ ಸ್ವಾಮಿಗಾಗಿ ಉಪದೇಶ ಮಾಡಬೇಕು. ಹಾಗೆಯೇ ಎಲ್ಲ ಮನುಷ್ಯರ ಬಗ್ಗೆ ವರ್ತಿಸಬೇಕು.

ಈಗ ಇಲ್ಲಿ ತಂತಿ ಸಮಾಚಾರ ವಿದ್ಯೆಯ ಮೂಲದ ಉಪದೇಶವನ್ನು ಮಾಡಲಾಗಿದೆ.

ಪುರೂ ವರ್ಪಾಂಸ್ಯಶ್ವಿನಾ ದಧಾನಾ ನಿ ಪೇದವ ಊಹಥುರಾಶುಮಶ್ವಮ್ ।
ಸಹಸ್ರಸಾಂ ವಾಜಿನಮಪ್ರತೀತ-ಮಹಿಹನಂ ಶ್ರವಸ್ಯ೧ಂ ತರುತ್ರಮ್ ॥೯॥

ಪದಾರ್ಥ:- ಹೇ [ಅಶ್ವಿನಾ] ಶಿಲ್ಪಿಜನರೇ! [ಪುರು] ಬಹಳ [ವರ್ಪಾಂಸಿ] ರೂಪಗಳನ್ನು [ದಧಾನಾ] ಧಾರಣ ಮಾಡಿರುವ ನೀವಿಬ್ಬರೂ [ಪೇದವೇ] ಶೀಘ್ರವಾಗಿ ಹೋಗಲು [ಶ್ರವಸ್ಯಾಮ್] ಪೃಥಿವೀ ಮೊದಲಾದ

ಪದಾರ್ಥಗಳಲ್ಲಿರುವ [ಅಪ್ರತೀತಮ್] ಗುಪ್ತವು [ವಾಜೀನಮ್] ವೇಗವಂತವೂ [ಅಹಿಹನಮ್] ಮೇಘವನ್ನು ನಾಶಪಡಿಸುವಂತಹ [ಸಹಸ್ರಸಾಮ್] ಸಾವಿರಾರು ಕೆಲಸಗಳನ್ನು ಮಾಡುವ [ಆಶುಮ್] ಶೀಘ್ರವಾಗಿ ತಲುಪಿಸುವಂತಹ [ತರುತ್ರಮ್] ಮತ್ತು ಸಮುದ್ರ ಮೊದಲಾದವುಗಳನ್ನು ಪಾರಾಗಿಸುವ [ಅಶ್ವಮ್] ವಿದ್ಯುತ್ ರೂಪ ಅಗ್ನಿಯನ್ನು [ನ್ಯೂಹಥುಃ] ನಡೆಸಿರಿ.

ಭಾವಾರ್ಥ:- ಹೀಗೆ ಶೀಘ್ರವಾಗಿ ಸೇರಿಸುವ ವಿದ್ಯುತ್ತು ಮೊದಲಾದ ಅಗ್ನಿಯ ಹೊರತು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಸುಖವಾಗಿ ಹೋಗಿ ಬರುವಂತಹ ಹಾಗೂ ಶೀಘ್ರ ಸಮಾಚಾರ ಪಡೆಯಲು ಯಾವನೂ ಸಮರ್ಥನಾಗುವುದಿಲ್ಲ.

ಈಗ ವಿದ್ಯುತ್ತು ಮೊದಲಾದ ಪದಾರ್ಥರೂಪ ಜಗತ್ತನ್ನು ಮಾಡುವ ಪರಮೇಶ್ವರನೇ ಉಪಾಸನೀಯನು.

ಏತಾನಿ ವಾಂ ಶ್ರವಸ್ಯಾ ಸುದಾನೂ ಬ್ರಹ್ಮಾಙ್ಗೂಷಂ ಸದನಂ ರೋದಸ್ಯೋಃ । ಯದ್ ವಾಂ
ಪಜ್ರಾಸೋ ಅಶ್ವಿನಾ ಹವಂತೇ ಯಾತಮಿಷಾ ಚ ವಿದುಷೇ ಚ ವಾಜಮ್ ॥೧೦॥

ಪದಾರ್ಥ:- ಹೇ [ಸುದಾನೂ] ಉತ್ತಮ ದಾನ ಮಾಡುವ [ಅಶ್ವಿನೌ] ಸಭಾಸೇನಾಧೀಶರೇ! [ವಾಮ್] ನೀವಿಬ್ಬರ [ಏತಾನಿ] ಯಾವ [ಶ್ರವಸ್ಯಾ] ಅನ್ನ ಮೊದಲಾದ ಪದಾರ್ಥಗಳಲ್ಲಿ ಉತ್ತಮ ಪ್ರಶಂಸಾಯೋಗ್ಯ ಕರ್ಮವಿದೆಯೋ, ಈ ಕಾರಣದಿಂದ **[ವಾಮ್]** ನೀವಿಬ್ಬರೂ **[ಪಜ್ರಾಸಃ]** ವಿಶೇಷ ಜ್ಞಾನವನ್ನು ಕೊಡುವ ಮಿತ್ರರು **[ಯತ್]** ಯಾವ **[ರೋದಸ್ಯೋಃ]** ಪೃಥಿವೀ ಮತ್ತು ಸೂರ್ಯನ **[ಸದನಮ್]** ಆಧಾರ ರೂಪ **[ಆಂಗೂಷಮ್]** ವಿದ್ಯೆಗಳ ಜ್ಞಾನವನ್ನು ಕೊಡುವ **[ಬ್ರಹ್ಮ]** ಸರ್ವಜ್ಞ ಪರಮೇಶ್ವರನನ್ನು **[ಹವಂತೇ]** ಧ್ಯಾನಮಾರ್ಗದಿಂದ ಗ್ರಹಣ ಮಾಡುತ್ತಾ **[ಚ]** ಮತ್ತು ಅವನನ್ನು ನೀವು **[ಯಾತಮ್]** ಪ್ರಾಪ್ತರಾಗುವಿರಿ. ಅವನ **[ವಾಜಮ್]** ವಿಜ್ಞಾನವನ್ನು **[ಇಷಾ]** ಇಚ್ಛೆ ಮತ್ತು **[ಚ]** ಉತ್ತಮ ಯತ್ನ ಹಾಗೂ ಯೋಗಾಭ್ಯಾಸದಿಂದ **[ವಿದುಷೇ]** ವಿದ್ವಾಂಸನಿಗಾಗಿ ಉತ್ತಮವಾಗಿ ಕಳುಹಿಸಿರಿ.

ಭಾವಾರ್ಥ:- ಎಲ್ಲರ ಆಧಾರ, ಎಲ್ಲರಿಗೂ ಉಪಾಸನಾಯೋಗ್ಯ, ಎಲ್ಲವನ್ನೂ ರಚಿಸುವ ಬ್ರಹ್ಮನನ್ನು ಯಾವ ಉಪಾಯಗಳಿಂದ ತಿಳಿಯಲಾಗುತ್ತದೋ, ಅವುಗಳಿಂದ ತಿಳಿದು ಇತರರಿಗಾಗಿಯೂ ಕೂಡ ಹಾಗೆಯೇ ತಿಳಿಸಿ ಪೂರ್ಣ ಆನಂದವನ್ನು ಪಡೆಯುವುದು ಎಲ್ಲ ಮನುಷ್ಯರೂ ಬಯಸಬೇಕಾದುದಾಗಿದೆ.

ಮತ್ತೆ ವಿದ್ಯುತ್ತಿನ ವಿದ್ಯೆಯ ಉಪದೇಶವನ್ನು ಹೇಳಲಾಗಿದೆ.

ಸೂನೋರ್ಮಾನೇನಾಶ್ವಿನಾ ಗೃಣಾನಾ ವಾಜಂ ವಿಪ್ರಾಯ ಭುರಣಾ ರದಂತಾ ।
ಅಗಸ್ತ್ಯೇ ಬ್ರಹ್ಮಣಾ ವಾವೃಧಾನಾ ಸಂ ವಿಶ್ಪಲಾಂ ನಾಸತ್ಯಾರಿಣೀತಮ್ ॥೧೧॥

ಪದಾರ್ಥ:- ಹೇ [ರದಂತಾ] ಚೆನ್ನಾಗಿ ಬರೆಯುವವನೇ! [ಸೂನೋಃ] ತನ್ನ ಪುತ್ರನಂತೆ [ಮಾನೇನ] ಸತ್ಕಾರದಿಂದ [ವಿಪ್ರಾಯ] ಉತ್ತಮ ಜ್ಞಾಪಕಶಕ್ತಿಯುಳ್ಳ ಬುದ್ಧಿಶಾಲಿಗಳಿಗಾಗಿ [ವಾಜಮ್] ಉತ್ತಮ ಬೋಧೆಯನ್ನು [ಗೃಣಾನಾ] ಉಪದೇಶ ಮತ್ತು [ಭುರಣಾ] ಸುಖವನ್ನು ಧಾರಣ ಮಾಡುತ್ತಾ [ನಾಸತ್ಯಾ] ಸತ್ಯದಿಂದ ತುಂಬಿದ [ವಾವೃಧಾನಾ] ಬುದ್ಧಿಯನ್ನು ಪಡೆದ ಮತ್ತು [ಬ್ರಹ್ಮಣಾ] ವೇದದಿಂದ [ಅಗಸ್ತ್ಯೇ] ತಿಳಿದುಕೊಳ್ಳಬೇಕಾದ ವ್ಯವಹಾರಗಳಲ್ಲಿ

ಉತ್ತಮ ಕಾರ್ಯಕ್ಕಾಗಿ [ವಿಶ್ವಲಾಮ್] ಪ್ರಜೆಗಳನ್ನು ಪಾಲಿಸುವ ವಿದ್ಯೆಯನ್ನು [ಅಶ್ವಿನಾ] ಪ್ರಾಪ್ತಿ ಮಾಡಿಕೊಳ್ಳುವ ಸಭಾಸೇನಾಧೀಶರೇ! ನೀವಿಬ್ಬರೂ ಮಿತ್ರತ್ವದಿಂದ ಪ್ರಜೆಗಳೊಂದಿಗೆ [ಸಮರಿಣೀತಮ್] ಸೇರಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಹೇಗೆ ತಾಯಿತಂದೆಯರು ಸಂತಾನದೊಂದಿಗೆ ಮತ್ತು ಸಂತಾನವು ಮಾತಾಪಿತರೊಂದಿಗೆ ಓದಿಸುವವರು ಓದುವವರೊಂದಿಗೆ ಮತ್ತು ಓದುವವರು ಓದಿಸುವವರೊಂದಿಗೆ, ಪತಿಯು ಪತ್ನಿಯೊಂದಿಗೆ ಮತ್ತು ಪತ್ನಿಯು ಪತಿಯೊಂದಿಗೆ ಹಾಗೂ ಮಿತ್ರರು ಮಿತ್ರರನ್ನು ಪ್ರಸನ್ನಗೊಳಿಸುವರೋ, ಹಾಗೆಯೇ ರಾಜಪ್ರಜೆಗಳೊಂದಿಗೆ ಮತ್ತು ಪ್ರಜೆಗಳು ರಾಜರೊಂದಿಗೆ ನಿರಂತರ ಪ್ರಸನ್ನರಾಗಿರಬೇಕು.

ಮತ್ತೆ ಅದೇ ವಿಷಯ

ಕುಹ ಯಾಂತಾ ಸುಷ್ಟುತಿಂ ಕಾವ್ಯಸ್ಯ ದಿವೋ ನಪಾತಾ ವೃಷಣಾ ಶಯುತ್ರಾ ।
ಹಿರಣ್ಯಸ್ಯೇವ ಕಲಶಂ ನಿಖಾತ-ಮುದೂಪಥುರ್ದಶಮೇ ಅಶ್ವಿನಾಹನ್ ॥೧೨॥

ಪದಾರ್ಥ:- ಹೇ [**ಯಾಂತಾ**] ಗಮನ ಮಾಡುವ [**ನಪಾತಾ**] ಕೆಳಗೆ ಬೀಳದ [**ವೃಷಣಾ**] ಶ್ರೇಷ್ಠಕಾಮನೆಗಳನ್ನು ವರ್ಷಿಸುವ ಮತ್ತು [**ಶಯುತ್ರಾ**] ನಿದ್ರಿಸುವ ಪ್ರಾಣಿಗಳನ್ನು ರಕ್ಷಿಸುವ [**ಅಶ್ವಿನಾ**] ಸಭಾಸೇನಾಧೀಶರೇ! ನೀವಿಬ್ಬರೂ [**ದಶಮೇ**] ಹತ್ತನೇ [**ಅಹನ್**] ದಿನ [**ಹಿರಣ್ಯಸ್ಯೇವ**] ಸುವರ್ಣದ [**ನಿಖಾತಮ್**] ಮಧ್ಯೆ ತುಂಬಿದ [**ಕಲಶಮ್**] ಕೊಡದಂತೆ [**ದಿವಃ**] ವಿಜ್ಞಾನಯುಕ್ತ [**ಕಾವ್ಯಸ್ಯ**] ಕವಿತ್ವವನ್ನು [**ಸುಷ್ಟುತಿಮ್**] ಉತ್ತಮ ಅಭಿವೃದ್ಧಿಯನ್ನು [**ಕುಹ**] ಎಲ್ಲಿ [**ಉದೂಪಥುಃ**] ಉತ್ತಮವಾಗಿ ನಾಟುವೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಧನವಂತರು ಚಿನ್ನ ಮೊದಲಾದ ಧಾತುಗಳ ಪಾತ್ರೆಗಳಲ್ಲಿ ಹಾಲು, ತುಪ್ಪ, ಮೊಸರು ಮೊದಲಾದ ಪದಾರ್ಥಗಳನ್ನು ಶೇಖರಿಸಿ ಮತ್ತು ಅವುಗಳನ್ನು ಬೇಯಿಸಿ ತಿನ್ನುತ್ತಾ ಪ್ರಶಂಸೆಯನ್ನು ಪಡೆಯುವರೋ, ಹಾಗೆ ಇಬ್ಬರು ಶಿಲ್ಪಿಗಳು ಈ ವಿದ್ಯೆ ಮತ್ತು ನ್ಯಾಯಮಾರ್ಗದಲ್ಲಿ ಪ್ರಜೆಗಳನ್ನು ಪ್ರವೇಶಪಡಿಸಿ ಧರ್ಮ ಮತ್ತು ನ್ಯಾಯದ ಉಪದೇಶಗಳಿಂದ ಅವರನ್ನು ನಿಪುಣರನ್ನಾಗಿ ಮಾಡಿ ರಾಜ್ಯ ಮತ್ತು ಧನದ ಸುಖಗಳನ್ನು ಭೋಗಿಸುತ್ತಾ ಎಲ್ಲಿ ಪ್ರಶಂಸಿತರಾಗಿವರು? ಇದಕ್ಕೆ ಉತ್ತರವೇನೆಂದರೆ, ಧಾರ್ಮಿಕ ಜನರಲ್ಲಿ ಪ್ರಶಂಸಿಸಲ್ಪಡುವರು.

ಮತ್ತೆ ಯೌವ್ವನಾವಸ್ಥೆಯಲ್ಲಿಯೇ ವಿವಾಹ ಮಾಡಿಕೊಳ್ಳುವುದು ಆವಶ್ಯಕವು ಎಂಬುದನ್ನು ಇಲ್ಲಿ ಹೇಳಲಾಗಿದೆ.

ಯುವಂ ಚ್ಯವಾನಮಶ್ವಿನಾ ಜರಂತಂ ಪುನರ್ಯುವಾನಂ ಚಕ್ರಥುಃ ಶಚೀಭಿಃ ।
ಯುವೋ ರಥಂ ದುಹಿತಾ ಸೂರ್ಯಸ್ಯ ಸಹ ಶ್ರಿಯಾ ನಾಸತ್ಯಾವೃಣೀತ ॥೧೩॥

ಪದಾರ್ಥ:- ಹೇ [ನಾಸತ್ಯಾ] ಸತ್ಯಾಚರಣೆ ಮಾಡುವ [ಅಶ್ವಿನಾ] ಶರೀರ ಮತ್ತು ಆತ್ಮ ಬಲದಿಂದ ಕೂಡಿದ ಸಭಾಸೇನಾಧೀಶರೇ! [ಯುವಮ್] ನೀವಿಬ್ಬರೂ [ಶಚೀಭಿಃ] ಉತ್ತಮ ಬುದ್ಧಿ ಅಥವಾ ಕರ್ಮಗಳೊಂದಿಗೆ ವರ್ತಿಸುವ ತಮ್ಮ ಸಂತಾನವನ್ನು ಉತ್ತಮವಾಗಿ ಸೇವಿಸುವ ಯುವಕರನ್ನಾಗಿ [ಚಕ್ರಥುಃ] ಮಾಡಿರಿ. [ಪುನಃ] ಮತ್ತೆ [ಯುವೋಃ] ನಿಮ್ಮಿಬ್ಬರ ಯುವತಿ ಅಂದರೆ ಯೌವ್ವನಾವಸ್ಥೆಯನ್ನು ಪಡೆದ [ಸೂರ್ಯಸ್ಯ] ಸೂರ್ಯನ ಪ್ರಾತಃ

ಸಮಯದಂತೆ [ದುಹಿತಾ] ಕನ್ಯೆಯು [ಶ್ರಿಯಾ] ಧನ, ಶೋಭೆ, ವಿದ್ಯೆ ಅಥವಾ ಸೇವೆ [ಸಹ] ಯೊಂದಿಗೆ ವರ್ತಿಸುವ [ಚ್ಯವಾನಮ್] ಗಮನ ಮತ್ತು [ಜರಂತಮ್] ಪ್ರಶಂಸೆ ಮಾಡುವ [ಯುವಾನಮ್] ಯೌವ್ವನದಿಂದ ಪರಿಪೂರ್ಣವಾದ [ರಥಮ್] ರಮಣ ಮಾಡಲು ಯೋಗ್ಯವಾದ ಮನೋಹರವಾದ ಪತಿಯನ್ನು [ವೃಣೀತ] ವರಿಸಲಿ ಮತ್ತು ಪುತ್ರನೂ ಹಾಗೆ ಯೌವ್ವನವಂತನಾಗಿ ಯುವತಿ ಸ್ತ್ರೀಯನ್ನು ವರಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ತಾಯಿ-ತಂದೆ ಮುಂತಾದ ಹಿರಿಯರು ತಮ್ಮ ಸಂತಾನವು ಉತ್ತಮ ಪೂರ್ಣ ವಿದ್ಯಾಭ್ಯಾಸ, ಶರೀರ ಮತ್ತು ಆತ್ಮ ಬಲ, ರೂಪ, ಲಾವಣ್ಯ, ಸ್ವಭಾವ ಆರೋಗ್ಯ ಧರ್ಮ ಮತ್ತು ಪರಮಾತ್ಮನನ್ನು ತಿಳಿಯುವ ಕೋರಿಕೆ ಮೊದಲಾದ ಉತ್ತಮ ಗುಣಗಳೊಡನೆ ವರ್ತಿಸಲು ಸಮರ್ಥರಾಗಿರುವಾಗ ತಮ್ಮ ಇಚ್ಛೆ ಮತ್ತು ಪರೀಕ್ಷೆಯೊಂದಿಗೆ ತಾವೇ ಸ್ವಯಂವರ ವಿಧಿಯಿಂದ ಇಬ್ಬರೂ ಸುಂದರ ಸಮಾನ ಗುಣಕರ್ಮ ಮಾಡುವವರಾಗಿ ಧರ್ಮದೊಂದಿಗೆ ತಮ್ಮ ಪ್ರವರ್ತನೆಯನ್ನಿಟ್ಟು ಪ್ರಜೆ ಅಂದರೆ ಸಂತಾನವನ್ನು ಉತ್ತಮವಾಗಿ ಉತ್ಪನ್ನಮಾಡಿ ಈ ಉಪದೇಶವನ್ನು ಕೊಡಬೇಕು. ಇದರ ಹೊರತು ಎಂದಿಗೂ ಕುಲದ ಉನ್ನತಿಯಾಗುವುದಿಲ್ಲ. ಇದರಿಂದ ಸಜ್ಜನ ಪುರುಷರು ಹೀಗೆಯೇ ಸದಾ ಮಾಡಬೇಕು

ಮತ್ತೆ ಅದೇ ವಿಷಯ

ಯುವಂ ತುಗ್ರಾಯ ಪೂರ್ವ್ಯೇಭಿರೇವೈಃ ಪುನರ್ಮನ್ಯಾವಭವತಂ ಯುವಾನಾ ।
ಯುವಂ ಭುಜ್ಯುಮರ್ಣಸೋ ನಿಃ ಸಮುದ್ರಾದ್ ವಿಭಿರೂಹಥುರ್ಋಜ್ರೇಭಿರಶ್ವೈಃ ॥೧೪॥

ಪದಾರ್ಥ:- ಹೇ [**ಪುನರ್ಮನ್ಯಾ**] ಮತ್ತೆ ಮತ್ತೆ ತಿಳಿದುಕೊಳ್ಳುವಂತಹ [**ಯುವಾನ**] ಯುವಾವಸ್ಥೆಯನ್ನು ಪಡೆದ ವಿದ್ಯಾವಂತರಾದ ಸ್ತ್ರೀ-ಪುರುಷರೇ! [**ಯುವಮ್**] ನೀವಿಬ್ಬರೂ [**ತುಗ್ರಾಯ**] ಬಲಕ್ಕಾಗಿ [**ಪೂರ್ವ್ಯೇಭಿಃ**] ಬೇರೆ ಸಜ್ಜನರಿಂದ ಮಾಡಲ್ಪಟ್ಟ [**ಏವೈಃ**] ವಿಜ್ಞಾನ ಮೊದಲಾದ ಉತ್ತಮ ವ್ಯವಹಾರಗಳಿಂದ ಸುಖಿಗಳು [**ಅಭವತಮ್**] ಆಗಿರಿ. [**ಯುವಮ್**] ನೀವಿಬ್ಬರು [**ವಿಭಿಃ**] ಆಕಾಶದಲ್ಲಿ ಹಾರುವ ಪಕ್ಷಿಗಳಂತೆ [**ಋಜ್ರೇಭಿಃ**] ಅಲ್ಲಾಡದಂತೆ ಜೋಡಿಸಿದ ಸರಳವಾಗಿ ನಡೆಸುವ ಮತ್ತು [**ಅಶ್ವೈಃ**] ಶೀಘ್ರವಾಗಿ ಹೋಗುವ ವಿದ್ಯುತ್ ಮೊದಲಾದ ಪದಾರ್ಥಗಳಿಂದ ಮಾಡಿದ ವಿಮಾನ ಮೊದಲಾದ ಯಾನಗಳಿಂದ [**ಅರ್ಣಸಃ**] ಅಗಾಧ ಜಲದಿಂದ ತುಂಬಿರುವ [**ಸಮುದ್ರಾತ್**] ಸಮುದ್ರದಿಂದ ಹೊರಗೆ [**ಭುಜ್ಯುಮ್**] ಶರೀರ ಮತ್ತು ಆತ್ಮದ ಪಾಲನೆ ಮಾಡುವ ಪದಾರ್ಥಗಳನ್ನು [**ನಿರೂಹಥುಃ**] ನಿರ್ವಹಿಸಿರಿ. ಅಂದರೆ ನಿರಂತರ ಕಳುಹಿಸಿರಿ.

ಭಾವಾರ್ಥ:- ಸ್ತ್ರೀ ಪುರುಷರು ಪೂರ್ವಿಕರಾದ ಮಹಾತ್ಮರು, ಋಷಿ, ಮಹರ್ಷಿಗಳು ಆಚರಿಸಿದ ಕಾರ್ಯಗಳನ್ನು ಆಚರಿಸಿ ಧರ್ಮಯುಕ್ತ ಬ್ರಹ್ಮಚರ್ಯದಿಂದ ಶೀಘ್ರವಾಗಿ ಪೂರ್ಣವಿದ್ಯೆಯನ್ನು ಪಡೆದು ಕ್ರಿಯಾಕುಶಲತೆಯಿಂದ ವಿಮಾನ ಮೊದಲಾದ ಯಾನಗಳನ್ನು ಮಾಡಿ ಭೂಗೋಳದ ಎಲ್ಲ ಕಡೆ ವಿಹರಿಸಿ ನಿತ್ಯವೂ ಆನಂದದಿಂದಿರಬೇಕು.

ಮತ್ತೆ ಅದೇ ವಿಷಯ

ಅಜೋಹವೀದಶ್ವಿನಾ ತೌಗ್ರ್ಯೋ ವಾಂ ಪ್ರೋಳ್ಹಃ ಸಮುದ್ರಮವ್ಯಥಿರ್ಜಗನ್ವಾನ್ ।
ನಿಷ್ಟಮೂಹಥುಃ ಸುಯುಜಾ ರಥೇನ ಮನೋಜವಸಾ ವೃಷಣಾ ಸ್ವಸ್ತಿ ॥೧೫॥

ಪದಾರ್ಥ:- ಹೇ [ವೃಷಣಾ] ಉತ್ತಮ ಬಲಶಾಲಿಗಳು [ಅಶ್ವಿನಾ] ವಿದ್ಯೆ ಮತ್ತು ಉತ್ತಮಶೀಲದಲ್ಲಿ ವ್ಯಾಪ್ತರಾದ ಸ್ತ್ರೀ-ಪುರುಷರೇ! ನೀವಿಬ್ಬರೂ ಯಾವ [ವಾಮ್] ನಿಮ್ಮ [ತೌಗ್ರ್ಯಃ] ಬಲದಿಂದ ಸಿದ್ಧವಾದ [ಪ್ರೋಢಃ] ಉತ್ತಮವಾಗಿ ಪಡೆದ [ಅವ್ಯಥಿ] ವ್ಯಥೆಗಳು, ಕಷ್ಟಗಳು ಇಲ್ಲದ [ಜಗನ್ವಾನ್] ನಿರಂತರ ಗಮನಮಾಡುವ ಸೇನಾ ಸಮುದಾಯಿಗಳು [ಸಮುದ್ರಮ್] ಸಮುದ್ರದ [ಅಜೋಹವೀತ್] ಮತ್ತೆ ಮತ್ತೆ ತಿರಸ್ಕರಿಸುವ ಅಂದರೆ ಗಂಭೀರತೆಯನ್ನು ಲಕ್ಷಿಸದೆ [ತಮ್] ಆ ಸೇನಾಸಮುದಾಯವನ್ನು [ಸುಯುಜಾ] ಸುಂದರವಾಗಿ ಜೋಡಿಸಿದ [ಮನೋಜವಸಾ] ಮನದಂತೆ ವೇಗವಾಗಿ ಹೋಗುವ [ರಥೇನ] ರಮಣೀಯ ವಿಮಾನ ಮೊದಲಾದ ಯಾನ ಸಮುದಾಯಗಳಿಂದ [ಸ್ವಸ್ತಿ] ಸುಖಪೂರ್ವಕವಾಗಿ [ನಿರೂಹಥುಃ] ನಿರ್ವಹಿಸಿರಿ ಅಂದರೆ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಕಳುಹಿಸಿರಿ.

ಭಾವಾರ್ಥ:- ಬ್ರಹ್ಮಚರ್ಯೆಯನ್ನು ಪೂರ್ಣಗೊಳಿಸಿದ ಪುರುಷರು ಶತ್ರುಗಳನ್ನು ಗೆಲ್ಲಲು ಸಮುದ್ರದಿಂದಾಚೆ ಹೋಗಲಿಚ್ಛಿಸಿದಲ್ಲಿ ಆಗ ಸ್ತ್ರೀ ಮತ್ತು ಸೇನೆಯೊಂದಿಗೆ ವೇಗವಂತ ಯಾನಗಳಲ್ಲಿ ಹೋಗಿಬರಲಿ.

ಮತ್ತೆ ರಾಜಧರ್ಮ ವಿಷಯವನ್ನು ಹೇಳಲಾಗಿದೆ.

ಅಜೋಹವೀದಶ್ವಿನಾ ವರ್ತಿಕಾ ವಾ-ಮಾಸ್ನೋ ಯತ್ ಸೀಮಮುಂಚತಂ ವೃಕಸ್ಯ ।
ವಿ ಜಯುಷಾ ಯಯಥುಃ ಸಾನ್ವದ್ರೇ-ರ್ಜಾತಂ ವಿಷ್ವಾಚೋ ಅಹತಂ ವಿಷೇಣ ॥೧೬॥

ಪದಾರ್ಥ:- ಹೇ [ಅಶ್ವಿನಾ] ಶೀಘ್ರವಾಗಿ ಹೋಗುವಂತಹ ಸಭಾಸೇನಾಧೀಶರೇ! [ವರ್ತಿಕಾ] ಸಂಗ್ರಾಮದಲ್ಲಿ ತೊಡಗಿರುವ ಸೇನೆಯು [ಯತ್ಸೀಮ್] ಯಾನ ಸಮಯದಲ್ಲಿ [ವಾಮ್] ನಿಮ್ಮಿಬ್ಬರನ್ನು [ಅಜೋಹವೀತ್] ನಿರಂತರ ಕರೆಯುವುದೋ ಆಗ ಅದನ್ನು [ವೃಕಸ್ಯ] ತೋಳದ [ಆಸ್ನಃ] ಮುಖಗಳಂತಹ ಶತ್ರುಸೈನ್ಯವನ್ನು [ಅಮುಂಚತಮ್] ಬಿಡಿಸಿರಿ ಅಂದರೆ ಆ ಸೈನ್ಯವನ್ನು ಗೆದ್ದು ನಿಮ್ಮ ಸೈನ್ಯವನ್ನು ಉಳಿಸಿರಿ. ನೀವಿಬ್ಬರೂ [ಜಯುಷಾ] ಜಯಕೊಡುವ ನಿಮ್ಮ ರಥಗಳಿಂದ [ಅದ್ರೇಃ] ಪರ್ವತದ [ಸಾನು] ಶಿಖರವನ್ನು [ವಿ ಯಯಥುಃ] ವಿವಿಧ ಪ್ರಕಾರಗಳಲ್ಲಿ ಸೇರಿರಿ ಮತ್ತು [ವಿಷ್ವಾ ಚಃ] ವಿವಿಧ ಗತಿಯುಳ್ಳ ಶತ್ರುಸೈನ್ಯದಿಂದ [ಜಾತಮ್] ಉತ್ಪನ್ನವಾದ ಬಲವನ್ನು [ವಿಷೇಣ] ಪರಿವರ್ತನಗೊಳಿಸುವ ವಿಷರೂಪವಾದ ನಿಮ್ಮ ಬಲದಿಂದ [ಅಹತಮ್] ವಿನಾಶಗೊಳಿಸಿರಿ.

ಭಾವಾರ್ಥ:- ರಾಜಪುರುಷರು ಹೇಗೆ ಬಲಶಾಲಿ, ದಯಾಳು, ಶೂರವೀರರು, ಹುಲಿಯ ಬಾಯಿಯಿಂದ ಮೇಕೆಯನ್ನು ಬಿಡಿಸುವರೋ ಹಾಗೆ ಕಳ್ಳರ ಭಯದಿಂದ ಪ್ರಜೆಗಳನ್ನು ಬೇರೆ ಇಡಬೇಕು. ಯಾವಾಗ ಶತ್ರುಗಳು ಪರ್ವತಗಳಲ್ಲಿ ಸ್ಥಿತರಾಗಿರುವುದರಿಂದ ಕೊಲ್ಲಲಾಗುವುದಿಲ್ಲವೋ, ಆಗ ಅವರ ಅನ್ನ ಪಾನಾದಿಗಳನ್ನು ವಿದೂಷಿತಗೊಳಿಸಿ ಅವರನ್ನು ವಶಕ್ಕೆ ತೆಗೆದುಕೊಳ್ಳಬೇಕು.

ಮತ್ತೆ ಅದೇ ವಿಷಯ

ಶತಂ ಮೇಷಾನ್ ವೃಕ್ಯೇ ಮಾಮಹಾನಂ ತಮಃ ಪ್ರಣೀತಮಶಿವೇನ ಪಿತ್ರಾ ।
ಆಕ್ಷೀ ಋಜ್ರಾಶ್ವೇ ಅಶ್ವಿನಾವಧತ್ತಂ ಜ್ಯೋತಿರಂಧಾಯ ಚಕ್ರಥುರ್ವಿಚಕ್ಷೇ ॥೧೭॥

ಪದಾರ್ಥ:- ಹೇ [ಅಶ್ವಿನೌ] ಸಭಾಸೇನಾಧೀಶರೇ! ನೀವಿಬ್ಬರೂ [ಅಶಿವೇನ] ಅಮಂಗಳಕಾರಿಯು [ಪಿತ್ರಾ] ಪ್ರಜೆಗಳನ್ನು ಪಾಲಿಸುವ ನ್ಯಾಯಾಧೀಶನು [ತಮಃ] ದುಃಖರೂಪ ಅಂಧಕಾರವನ್ನು [ಪ್ರಣೀತಮ್] ಉಂಟು

ಮಾಡುವಾಗ [ವೃಕ್ಯೇ] ತೋಳಗಳಿಗಾಗಿ [ಶತಮ್] ನೂರಾರು [ಮೇಷಾನ್] ಕುರಿಗಳನ್ನು [ಮಾಮಹಾನಮ್] ಕೊಡುವಂತೆ ಪ್ರಜೆಗಳಿಗೆ ಪೀಡೆಯನ್ನುಂಟುಮಾಡುವ ರಾಜ್ಯಾಧಿಕಾರಿಯನ್ನು ತೊಲಗಿಸಿರಿ, ಬೇರೆ ಇಡಿರಿ. [ಋಜ್ರಾಶ್ವೇ] ಉತ್ತಮವಾಗಿ ಶಿಕ್ಷಣವನ್ನಿತ್ತ ಕುದುರೆ ಮೊದಲಾದ ಪದಾರ್ಥಗಳಿಂದ ಕೂಡಿದ ಸೇನೆಯಲ್ಲಿ [ಅಕ್ಷೀ] ಕಣ್ಣುಗಳಿಂದ [ಆ ಅಧತ್ತಮ್] ಆಧಾನ ಮಾಡಿರಿ ಅಂದರೆ ದೃಷ್ಟಿಯಿಡಿರಿ. ಅಲ್ಲಿನ ಒಳಿತುಕೆಡುಕುಗಳನ್ನು ವಿಚಾರಿಸಿರಿ. ಮತ್ತು [ಅಂಧಾಯ] ಕುರುಡನಂತೆ ಅಜ್ಞಾನಿಗಾಗಿ [ವಿಚಕ್ಷೇ] ವಿಜ್ಞಾನಪೂರ್ವಕವಾಗಿ ನೋಡುವುದಕ್ಕಾಗಿ [ಜ್ಯೋತಿಃ] ವಿದ್ಯಾ ಪ್ರಕಾಶವನ್ನು [ಚಕ್ರಥುಃ] ಪ್ರಕಾಶಿತಗೊಳಿಸಿರಿ.

ಭಾವಾರ್ಥ:- ಹೇ ಸಭೆ -ಸೇನಾ ಮೊದಲಾದವುಗಳ ಪುರುಷರೇ! ನೀವು ಪ್ರಜೆಗಳಲ್ಲಿ ಅನ್ಯಾಯದಿಂದ ತೋಳವು ತನ್ನ ಪ್ರಯೋಜನಕ್ಕಾಗಿ ಕುರಿಮೇಕೆಗಳಲ್ಲಿ ಹೇಗೆ ಪ್ರವೃತ್ತವಾಗುವುದೋ, ಹಾಗೆ ವರ್ತಿಸುವಂತಹ ತನ್ನ ಭೃತ್ಯರನ್ನು ಸೂಕ್ತವಾಗಿ ದಂಡಿಸಿ ಅನ್ಯ ಧರ್ಮಾತ್ಮರಾದ ಭೃತ್ಯರಿಂದ ಪ್ರಜೆಗಳಲ್ಲಿ ಸೂರ್ಯನಂತೆ ರಕ್ಷಣೆ ಮೊದಲಾದ ವ್ಯವಹಾರಗಳಲ್ಲಿ ನಿರಂತರ ಪ್ರಕಾಶಿಸಿರಿ. ಹೇಗೆ ಕಣ್ಣುಳ್ಳವನು ಬಾವಿಯಿಂದ ಕುರುಡನನ್ನು ರಕ್ಷಿಸಿ ಸುಖಪಡಿಸುವನೋ, ಹಾಗೆ ಅನ್ಯಾಯ ಮಾಡುವ ಭೃತ್ಯರಿಂದ ಪೀಡೆಗೊಳಗಾದ ಜನರನ್ನು ಬೇರೆ ಇಡಿರಿ.

ಮತ್ತೆ ಅದೇ ವಿಷಯ

ಶುನಮಂಧಾಯ ಭರಮಹ್ವಯತ್ ಸಾ ವೃಕೀರಶ್ವಿನಾ ವೃಷಣಾ ನರೇತಿ ।
ಜಾರಃ ಕನೀನ ಇವ ಚಕ್ಷದಾನ ಋಜ್ರಾಶ್ವಃ ಶತಮೇಕಂ ಚ ಮೇಷಾನ್ ॥೧೮॥

ಪದಾರ್ಥ:- ಹೇ [ವೃಷಣಾ] ಸುಖವನ್ನು ವರ್ಷಿಸುವ ಮತ್ತು [ನರಾ] ಧರ್ಮ-ಅಧರ್ಮದ ವಿವೇಕ ಮಾಡುವಂತಹ [ಅಶ್ವಿನಾ] ಸಭಾಸೇನಾಧೀಶರೇ! [ಸಾ] ಆ [ವೃಕೀಃ] ತೋಳಗಳಿಂದ ಚೋರನ ಪತ್ನಿಯು [ಶತಮ್] ನೂರು [ಚ] ಮತ್ತು [ಏಕಮ್] ಒಂದು [ಮೇಷಾನ್] ಕುರಿಗಳ ಮಂದೆಯಲ್ಲಿ [ಆಹ್ವಯತ್] ಗರ್ಜಿಸುವಂತೆ [ಇತಿ] ಈ ರೀತಿ ಅಥವಾ [ಋಜ್ರಾಶ್ವಃ] ನೇರ ನಡತೆಯುಳ್ಳ ಕುದುರೆ ಸವಾರ [ಚಕ್ಷದಾನಃ] ವಿದ್ಯಾವಚನವನ್ನು ಕೊಡುವ ಆ [ಜಾರಃ] ವೃದ್ಧ ಅಥವಾ ಜಾರಕರ್ಮ ಮಾಡುವ ಚಾಲಾಕಿಯು [ಕನೀನ ಇವ] ಪ್ರಕಾಶಮಾನ ಮನುಷ್ಯನಂತೆ ನೀವು [ಅಂಧಾಯ] ಅಂಧನಿಗಾಗಿ [ಭರಮ್] ಪೋಷಣೆ ಅಂದರೆ ಅವನ ಪಾಲನೆ ಮತ್ತು [ಶುನಮ್] ಸುಖಧಾರಣೆ ಮಾಡಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ರಾಜಪುರುಷರು, ಅವಿದ್ಯೆಯಿಂದ ಅಂಧರಾಗಿ ಹೋಗುವ ಜನರನ್ನು, ಅನ್ಯಾಯಕಾರಿಗಳಿಂದ ಉತ್ತಮ ಸತಿಯರಾದ ಸ್ತ್ರೀಯರನ್ನು ಲಂಪಟರಿಂದ, ವಿಟರಿಂದ ಹೇಗೆ ತೋಳಗಳಿಂದ ಕುರಿಮೇಕೆಗಳನ್ನು ರಕ್ಷಿಸಲಾಗುತ್ತದೋ ಹಾಗೆ ನಿರಂತರವೂ ರಕ್ಷಿಸಿ ಪಾಲಿಸಲಿ.

ಮತ್ತೆ ಅದೇ ವಿಷಯ

ಮಹೀ ವಾಮೂತಿರಶ್ವಿನಾ ಮಯೋಭೂ -ರುತ ಸ್ರಾಮಂ ಧಿಷ್ಣ್ಯಾ ಸಂ ರಿಣೀಥಃ ।
ಅಥಾ ಯುವಾಮಿದಹ್ವಯತ್ ಪುರಂಧಿ-ರಾಗಚ್ಛತಂ ಸೀಂ ವೃಷಣಾವವೋಭಿಃ ॥೧೯॥

ಪದಾರ್ಥ:- ಹೇ [ವೃಷಣೌ] ಸುಖವನ್ನು ವರ್ಷಿಸುವವರೇ! [ಧಿಷ್ಣ್ಯಾ] ಬುದ್ಧಿವಂತರಾದ [ಅಶ್ವಿನಾ] ಸಭಾಸೇನೆಗಳಲ್ಲಿ ಅಧಿಕಾರವನ್ನು ಪಡೆದಿರುವ ಜನರೇ! [ವಾಮ್] ನಿಮ್ಮೀರ್ವರ ಯಾವ [ಮಹೀ] ದೊಡ್ಡದು

[ಉತ] ಮತ್ತು [ಮಯೋಭೂಃ] ಸುಖವನ್ನು ಉತ್ಪನ್ನಮಾಡುವ [ಊತಿಃ] ರಕ್ಷಣೆ ಮೊದಲಾದ ಯುಕ್ತ ನೀತಿ ಇದೆಯೋ, ಅದರಿಂದ [ಸ್ರಾಮಮ್] ದುಃಖವನ್ನು ಕೊಡುವ ಅನ್ಯಾಯವನ್ನು [ಯುಯೂಥಾಮ್] ನೀವು [ಸಂ ರಿಣೀಥಃ] ಉತ್ತಮವಾಗಿ ದೂರೀಕರಿಸಿರಿ. [ಅಥ] ಅದರ ನಂತರ [ಪುರಂಧಿಃ] ಅತಿಬುದ್ಧಿವಂತಳಾದ ಪೂರ್ಣಯೌವ್ವನದಿಂದ ಕೂಡಿದ ಸ್ತ್ರೀಯನ್ನು [ಅಹ್ವಯತ್] ಕರೆಯಿರಿ. [ಇತ್] ಅವಳಂತೆ [ಅವೋಭಿಃ] ರಕ್ಷಣೆ ಮೊದಲಾದವುಗಳೊಂದಿಗೆ [ಸೀಮ್] ನಿಶ್ಚಯವಾಗಿ [ಆ ಅಗಚ್ಛತಮ್] ಬನ್ನಿರಿ.

ಭಾವಾರ್ಥಃ:- ನ್ಯಾಯದಿಂದ ಅನ್ಯಾಯವನ್ನು ಬೇರೆ ಮಾಡಿ, ಧರ್ಮದಲ್ಲಿ ಪ್ರವೃತ್ತರಾದವರೂ, ಶರಣು ಬಂದವರನ್ನು ರಾಜಪುರುಷರು ಉತ್ತಮವಾಗಿ ಪಾಲಿಸಿ ಎಲ್ಲ ಕಡೆಗಳಿಂದ ಕೃತಕೃತ್ಯರಾಗಬೇಕು.

ಈಗ ಸ್ತ್ರೀ-ಪುರುಷರ ವಿಷಯವನ್ನು ತಿಳಿಸಲಾಗಿದೆ.

ಅಧೇನುಂ ದಸ್ರಾ ಸ್ತರ್ಯ೧ಂ ವಿಷಕ್ತಾ-ಮಪಿನ್ವತಂ ಶಯವೇ ಅಶ್ವಿನಾ ಗಾಮ್ ।
ಯುವಂ ಶಚೀಭಿರ್ವಿಮದಾಯ ಜಾಯಾಂ ನ್ಯೂಹಥುಃ ಪುರುಮಿತ್ರಸ್ಯ ಯೋಷಾಮ್ ॥೨೦॥

ಪದಾರ್ಥಃ:- ಹೇ [ದಸ್ರಾಃ] ದುಃಖವನ್ನು ದೂರ ಮಾಡುವವರೇ! [ಅಶ್ವಿನಾ] ಭೂಗರ್ಭವಿದ್ಯೆಯನ್ನು ತಿಳಿಯುತ್ತಿರುವ ಸ್ತ್ರೀ-ಪುರುಷರೇ! **[ಯುವಮ್]** ನೀವಿಬ್ಬರೂ **[ಶಚೀಭಿಃ]** ಕರ್ಮಗಳೊಂದಿಗೆ **[ವಿಷಕ್ತಾಮ್]** ವಿವಿಧ ಪ್ರಕಾರದ ಪದಾರ್ಥಗಳಿಂದ ಕೂಡಿದ **[ಸ್ತರ್ಯಮ್]** ಸುಖಗಳಿಂದ ಕೂಡಿರುವ ನಾವೆಯ ಅಥವಾ **[ಅಧೇನುಮ್]** ಹಾಲು ಹಿಂಡದಿರುವ **[ಗಾಮ್]** ಹಸುವನ್ನು **[ಅಪಿನ್ವತಮ್]** ನೀರಿನಿಂದ ಸೇಚನೆ ಮಾಡಿರಿ. **[ವಿಮದಾಯ]** ವಿಶೇಷ ಮದದಿಂದ ಕೂಡಿದ ಅಂದರೆ ಪೂರ್ಣಯುವಾವಸ್ಥೆಯುಳ್ಳ **[ಶಯವೇ]** ಮಲಗಿರುವ ಮನುಷ್ಯನಿಗಾಗಿ **[ಪುರುಮಿತ್ರಸ್ಯ]** ಬಹಳ ಮಿತ್ರರುಳ್ಳವನಿಗೆ **[ಯೋಷಾಮ್]** ಯುವತಿ ಕನ್ಯೆಯನ್ನು **[ಜಾಯಾಮ್]** ಪತ್ನಿತ್ವಕ್ಕಾಗಿ **[ನ್ಯೂಹಥುಃ]** ನಿರಂತರ ಪ್ರಾಪ್ತಿಗೊಳಿಸಿರಿ.

ಭಾವಾರ್ಥಃ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಹೇ ರಾಜಪುರುಷರೇ! ನಿಮ್ಮಂತೆ ಎಲ್ಲರ ಮಿತ್ರನ, ಸುಲಕ್ಷಣ ಮನಸ್ಸುಳ್ಳ ಬ್ರಹ್ಮಚಾರಿ ಪಂಡಿತ ಉತ್ತಮಶೀಲ ಸ್ವಭಾವವುಳ್ಳ ನಿರಂತರ ಸುಖವನ್ನು ಕೊಡುವ, ಧರ್ಮಶೀಲಳಾದ ಕುಮಾರಿಯನ್ನು ಪತ್ನಿಯನ್ನಾಗಿ ಮಾಡಲು ಸ್ವೀಕರಿಸಿ ಅವಳ ರಕ್ಷಣೆಯನ್ನು ಮಾಡುತ್ತೀರೋ, ಹಾಗೆಯೇ ಸಾಮ, ಭೇದ, ದಾನ, ದಂಡ ಅಂದರೆ ಶಾಂತಿ, ಯಾವುದೇ ರೀತಿಯ ದಬಾಯಿಸುವಿಕೆ, ದಂಡ ಕೊಡುವುದು ಮತ್ತು ಒಬ್ಬನಿಂದ ಇನ್ನೊಬ್ಬನನ್ನು ಒತ್ತಡವುಂಟುಮಾಡಿ ದೂರ ಮಾಡುವುದು, ಅವನನ್ನು ವಿಮನಸ್ಕನನ್ನಾಗಿ ಮಾಡುವುದು ಮುಂತಾದ ರಾಜಕಾರ್ಯಗಳಿಂದ ಭೂಮಿಯ ರಾಜ್ಯವನ್ನು ಪಡೆದು ಧರ್ಮದಿಂದ ಯಾವಾಗಲೂ ರಕ್ಷಿಸಿರಿ.

ಮತ್ತೆ ರಾಜಧರ್ಮದ ವಿಷಯವನ್ನು ತಿಳಿಸಲಾಗಿದೆ.

ಯವಂ ವೃಕೇಣಾಶ್ವಿನಾ ವಪಂತೇ-ಷಂ ದುಹಂತಾ ಮನುಷಾಯ ದಸ್ರಾ ।
ಅಭಿ ದಸ್ಯುಂ ಬಕುರೇಣಾ ಧಮಂತೋ-ರು ಜ್ಯೋತಿಶ್ಚಕ್ರಥುರಾರ್ಯಾಯ ॥೨೧॥

ಪದಾರ್ಥಃ:- ಹೇ [ದಸ್ರಾ] ದುಃಖವನ್ನು ದೂರ ಮಾಡುವ [ಅಶ್ವಿನಾ] ಸುಖದಲ್ಲಿ ರಮಣ ಮಾಡುವ ಸಭಾಸೇನಾಧೀಶರೇ! ನೀವಿಬ್ಬರೂ [ಮನುಷಾಯ] ವಿಚಾರವಂತನಾದ ಮನುಷ್ಯನಿಗಾಗಿ [ವೃಕೇಣ] ಭಿನ್ನ ಭಿನ್ನ

ಮಾಡುವ ನೇಗಿಲು ಮೊದಲಾದ ಅಸ್ತ್ರ-ಶಸ್ತ್ರಗಳಿಂದ [ಯವಮ್] ಗೋಧಿ ಮೊದಲಾದ ಅನ್ನಾದಿಗಳಂತೆ [ವಪಂತಾ] ಬಿತ್ತುವ ಮತ್ತು [ಇಷಮ್] ಅನ್ನವನ್ನು [ದುಹಂತಾ] ಪೂರ್ಣ ಮಾಡುತ್ತಾ ಹಾಗೂ [ಆರ್ಯಾಯ] ಈಶ್ವರನ ಪುತ್ರನಂತಿರುವ ಧಾರ್ಮಿಕ ಮನುಷ್ಯನಿಗಾಗಿ [ಬಕುರೇಣ] ಪ್ರಕಾಶಮಾನ ಸೂರ್ಯನು ಮಾಡಿದ [ಜ್ಯೋತಿಃ] ಪ್ರಕಾಶವು ಹೇಗೆ ಅಂಧಕಾರವನ್ನು ತೊಲಗಿಸುವಂತೆ [ದಸ್ಯುಮ್] ದರೋಡೆಕಾರರನ್ನು ದುಷ್ಟ ಪ್ರಾಣಿಗಳನ್ನು [ಅಭಿ ಧಮಂತಾ] ಅಗ್ನಿಯಿಂದ ಸುಡುತ್ತಾ [ಉರು] ಅತ್ಯಂತ ದೊಡ್ಡ ರಾಜ್ಯವನ್ನು [ಚಕ್ರಥುಃ] ಮಾಡಿರಿ.

ಭಾವಾರ್ಥಃ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ರಾಜಪುರುಷರು ಪ್ರಜೆಗಳಲ್ಲಿರುವ ಕಪಟ, ಲಂಪಟ, ಕಳ್ಳರು, ಸುಳ್ಳರು ಮತ್ತು ಹೊಟ್ಟೆಕಿಚ್ಚುಪಡುವ ದುಷ್ಟರನ್ನು ತಡೆದು ವ್ಯವಸಾಯ ಮೊದಲಾದ ಕೆಲಸಗಳಲ್ಲಿ ತೊಡಗಿರುವ ವೈಶ್ಯರ ರಕ್ಷಣೆ ಮತ್ತು ವ್ಯವಸಾಯ ಮೊದಲಾದವುಗಳ ಉನ್ನತಿ ಮಾಡಿ ಅತ್ಯಂತ ವಿಸ್ತೀರ್ಣದ ರಾಜ್ಯವನ್ನು ಸೇವಿಸಬೇಕು.

ಮತ್ತೆ ಅದೇ ವಿಷಯ

ಆಥರ್ವಣಾಯಾಶ್ವಿನಾ ದಧೀಚೇಽಶ್ವ್ಯಂ ಶಿರಃ ಪ್ರತ್ಯೈರಯತಮ್ ।
ಸ ವಾಂ ಮಧು ಪ್ರ ವೋಚದೃತಾಯನ್ ತ್ವಾಷ್ಟ್ರಂ ಯದ್ದಸ್ರಾವಪಿಕಕ್ಷ್ಯಂ ವಾಮ್ ॥೨೨॥

ಪದಾರ್ಥಃ:- ಹೇ [ದಸ್ರೋ] ದುಃಖವನ್ನು ನಿವೃತ್ತಿ ಮಾಡುವ ಮತ್ತು [ಅಶ್ವಿನಾ] ಉತ್ತಮಕರ್ಮಗಳಲ್ಲಿ ಪ್ರವೃತ್ತರಾದ ಸಭಾಸೇನಾಧೀಶರೇ! **[ವಾಮ್]** ನೀವಿಬ್ಬರೂ **[ಯತ್]** ಯಾವ **[ಆಥರ್ವಣಾಯ]** ಯಾವನ ಸಂಶಯವು ಕತ್ತರಿಸಲ್ಪಟ್ಟಿದೆಯೋ ಅವನ ಪುತ್ರನಿಗಾಗಿ ಹಾಗೂ **[ದಧೀಚೇ]** ವಿದ್ಯೆ ಮತ್ತು ಧರ್ಮಗಳನ್ನು ಧಾರಣ ಮಾಡಿದ ಮನುಷ್ಯನನ್ನು ಪ್ರಶಂಸೆ ಮಾಡುವವನಿಗಾಗಿ **[ಅಶ್ವ್ಯಮ್]** ಕುದುರೆಗಳಲ್ಲಿರುವ **[ಶಿರಃ]** ಉತ್ತಮ ಅಂಗವನ್ನು **[ಪ್ರತ್ಯೈರಯತಮ್]** ಪ್ರಾಪ್ತಿಸಿಕೊಳ್ಳಿರಿ. **[ಸಃ]** ಆತನು **[ಋತಾಯನ್]** ತನ್ನ ಸತ್ಯ ವ್ಯವಹಾರಗಳನ್ನು ಬಯಸುತ್ತಾ **[ವಾಮ್]** ನಿಮ್ಮಿಬ್ಬರಿಗಾಗಿ **[ಅಪಿಕಕ್ಷ್ಯಮ್]** ವಿದ್ಯೆಯ ತರಗತಿಗಳಲ್ಲಿರುವ ಬೋಧನೆಗಳ ಬಗ್ಗೆ ವರ್ತಮಾನನಾಗಿರುವ ಆ **[ತ್ವಾಷ್ಟ್ರಮ್]** ಶೀಘ್ರವಾಗಿ ಸಮಸ್ತ ವಿದ್ಯೆಗಳಲ್ಲಿ ವ್ಯಾಪ್ತನಾಗುವ ವಿದ್ವಾಂಸನ **[ಮಧು]** ಮಧುರವಿಜ್ಞಾನವನ್ನು **[ಪ್ರವೋಚತ್]** ಉಪದೇಶ ಮಾಡಿರಿ.

ಭಾವಾರ್ಥಃ:- ಸಭಾಸೇನಾಧೀಶ ಮೊದಲಾದ ರಾಜಪುರುಷರು ವಿದ್ವಾಂಸರಲ್ಲಿ ಶ್ರದ್ಧೆ ಇಡಲಿ ಮತ್ತು ಉತ್ತಮಕರ್ಮಗಳಿಗೆ ಪ್ರೇರಣೆ ನೀಡಲಿ. ಮತ್ತು ನಿಮಗಾಗಿ ಸತ್ಯದ ಉಪದೇಶ ಮಾಡಿ ಪ್ರಮಾದ ಮತ್ತು ಅಧರ್ಮಗಳಿಂದ ನಿವೃತ್ತಮಾಡಲಿ.

ಮತ್ತೆ ಅದೇ ವಿಷಯ

ಸದಾ ಕವೀ ಸುಮತಿಮಾ ಚಕೇ ವಾಂ ವಿಶ್ವಾ ಧಿಯೋ ಅಶ್ವಿನಾ ಪ್ರಾವತಂ ಮೇ ।
ಅಸ್ಮೇ ರಯಿಂ ನಾಸತ್ಯಾ ಬೃಹಂತ-ಮಪತ್ಯಸಾಚಂ ಶ್ರುತ್ಯಂ ರರಾಥಾಮ್ ॥೨೩॥

ಪದಾರ್ಥಃ:- ಹೇ [ನಾಸತ್ಯಾ] ಸತ್ಯವ್ಯವಹಾರಯುಕ್ತ [ಕವೀ] ಎಲ್ಲ ಪದಾರ್ಥಗಳಲ್ಲಿ ಬುದ್ಧಿಯನ್ನೋಡಿಸುವ ಮತ್ತು [ಅಶ್ವಿನಾ] ವಿದ್ಯೆಯ ಪ್ರಾಪ್ತಿ ಮಾಡಿಸುವ ಸಭಾಸೇನಾಧೀಶರೇ! [ವಾಮ್] ನಿಮ್ಮಿಬ್ಬರ [ಸುಮತಿಮ್] ಧರ್ಮಯುಕ್ತ ಉತ್ತಮಬುದ್ಧಿಯನ್ನು ನಾನು [ಆ ಚಕೇ] ಉತ್ತಮವಾಗಿ ಕೇಳಲಿ. ನೀವಿಬ್ಬರೂ [ಮೇ] ನನಗಾಗಿ

[ವಿಶ್ವಾಃ] ಸಮಸ್ತ [ಧಿಯಃ] ಧಾರಣಾವತಿ ಬುದ್ಧಿಯನ್ನು [ಸದಾ] ಎಲ್ಲ ಕಾಲದಲ್ಲೂ [ಪ್ರ ಅವತಮ್] ಪ್ರವೇಶಗೊಳಿಸಿರಿ ಹಾಗೂ [ಅಸ್ಮೇ] ನಮಗಾಗಿ [ಬೃಹಂತಮ್] ಅತಿ ದೊಡ್ಡದಾದ [ಅಪತ್ಯಸಾಚಮ್] ಪುತ್ರ-ಪೌತ್ರ ಮೊದಲಾದವರಿಂದ ಕೂಡಿದ [ಶ್ರುತ್ಯಮ್] ಕೇಳಲು ಯೋಗ್ಯವಾದ [ರಯಿಮ್] ಧನವನ್ನು [ರರಾಥಾಮ್] ಕೊಡುತ್ತಿರಿ.

ಭಾವಾರ್ಥ:- ವಿದ್ಯಾರ್ಥಿಗಳು ಮತ್ತು ರಾಜ ಮೊದಲಾದ ಗೃಹಸ್ಥರು, ಶಾಸ್ತ್ರವೇತ್ತನಾದ ವಿದ್ವಾಂಸನ ಹತ್ತಿರದಿಂದ ಉತ್ತಮಬುದ್ಧಿಯನ್ನು ಪಡೆಯಬೇಕು ಮತ್ತು ಆ ವಿದ್ವಾಂಸನೂ ಕೂಡ ಅವರಿಗಾಗಿ ವಿದ್ಯೆ ಮೊದಲಾದ ಧನವನ್ನು ಕೊಡಲಿ. ನಿರಂತರವೂ ಅವರಿಗೆ ಉತ್ತಮ ಶಿಕ್ಷಣವನ್ನು ಕಲಿಸಿ ಧರ್ಮಾತ್ಮರಾದ ವಿದ್ವಾಂಸರನ್ನಾಗಿ ಮಾಡಲಿ.

ಈಗ ಅಧ್ಯಾಪಕರ ಕೃತ್ಯವನ್ನು ಹೇಳಲಾಗಿದೆ.

ಹಿರಣ್ಯಹಸ್ತಮಶ್ವಿನಾ ರರಾಣಾ ಪುತ್ರಂ ನರಾ ವಧ್ರಿಮತ್ಯಾ ಅದತ್ತಮ್ ।
ತ್ರಿಧಾ ಹ ಶ್ಯಾವಮಶ್ವಿನಾ ವಿಕಸ್ತ-ಮುಜ್ಜೀವಸ ಐರಯತಂ ಸುದಾನೂ ॥೨೪॥

ಪದಾರ್ಥ:- ಹೇ [ರರಾಣಾ] ಉತ್ತಮಗುಣವನ್ನು ಕೊಡುವ [ನರಾ] ಶ್ರೇಷ್ಠ ಪದಾರ್ಥಗಳನ್ನು ಪ್ರಾಪ್ತಿ ಮಾಡಿಸುವ ಮತ್ತು [ಅಶ್ವಿನಾ] ರಕ್ಷಣೆ ಮೊದಲಾದ ಕರ್ಮಗಳಲ್ಲಿ ವ್ಯಾಪ್ತರಾಗಿರುವ ಅಧ್ಯಾಪಕರೇ! ನೀವಿಬ್ಬರೂ [ಹಿರಣ್ಯಹಸ್ತಮ್] ಯಾವನ ಕೈಯಲ್ಲಿ ಸುವರ್ಣ ಮೊದಲಾದ ಧನ ಅಥವಾ ಹಸ್ತದಂತಿರುವ ವಿದ್ಯೆ ಮತ್ತು ತೇಜಸ್ಸು ಮೊದಲಾದ ಪದಾರ್ಥಗಳಿವೆಯೋ ಆ [ವಧ್ರಿಮತ್ಯಾಃ] ಬುದ್ಧಿಯನ್ನು ಕೊಡುವ ವಿದ್ಯೆಯ [ಪುತ್ರಮ್] ರಕ್ಷಣೆ ಮಾಡುವ ಜನರನ್ನು ನನಗಾಗಿ [ಅದತ್ತಮ್] ಕೊಡಿರಿ. ಹೇ [ಸುದಾನೂ] ಉತ್ತಮದಾನಶೀಲ ಸಜ್ಜನರಂತೆ ಇರುವ [ಅಶ್ವಿನಾ] ಐಶ್ವರ್ಯಯುಕ್ತರಾದ ಓದಿಸುವವರೇ! ನೀವಿಬ್ಬರೂ ಆ [ಶ್ಯಾವಮ್] ವಿದ್ಯೆಯನ್ನು ಪಡೆದ [ವಿಕಸ್ತಮ್] ಅನೇಕ ಪ್ರಕಾರದ ಶಿಕ್ಷಣವನ್ನು ಕೊಡುವ ಮನುಷ್ಯನ [ಜೀವಸೇ] ಜೀವನಕ್ಕಾಗಿ [ಹ] ನಿಶ್ಚಯವಾಗಿ [ತ್ರಿಧಾ] ಮೂರು ಪ್ರಕಾರದ ಅಂದರೆ ಮನ, ವಾಣಿ ಮತ್ತು ಶರೀರದ ಶಿಕ್ಷಣ ಮೊದಲಾದವುಗಳೊಂದಿಗೆ [ಉದ್ ಐರಯತಂ] ಪ್ರೇರಣೆ ಕೊಡಿರಿ, ಅಂದರೆ ತಿಳಿಸಿರಿ.

ಭಾವಾರ್ಥ:- ಓದಿಸುವ ಸಜ್ಜನ ಪುತ್ರರು ಮತ್ತು ಓದಿಸುವ ಸಜ್ಜನ ಸ್ತ್ರೀಯರು ಪುತ್ರಿಯರನ್ನು ಬ್ರಹ್ಮಚರ್ಯನಿಯಮದಲ್ಲಿ ತೊಡಗಿಸಿ, ಅವರಿಗೆ ಎರಡನೆಯ ವಿದ್ಯಾಜನ್ಮವನ್ನು ಸಿದ್ಧಮಾಡಿ ಜೀವನೋಪಾಯವನ್ನು ಉತ್ತಮವಾಗಿ ಕಲಿಸಿ, ಸಮಯಕ್ಕೆ ಸರಿಯಾಗಿ ಅವರ ಮಾತಾಪಿತೃಗಳಿಗೆ ಕೊಡಲಿ. ಮತ್ತು ಅವರು ಮನೆಯನ್ನು ಪಡೆದುಕೊಂಡರೂ ಗುರುಜನರ ಶಿಕ್ಷಣವನ್ನು ಮರೆಯದಿರಲಿ.

ಪುನಃ ಸ್ತ್ರೀ ಪುರುಷರು ಯಾವಾಗ ವಿವಾಹ ಮಾಡಿಕೊಳ್ಳಬೇಕು ಎಂಬುದನ್ನು ತಿಳಿಸಿದೆ.

ಏತಾನಿ ವಾಮಶ್ವಿನಾ ವೀರ್ಯಾಣಿ ಪ್ರ ಪೂರ್ವ್ಯಾಣ್ಯಾಯವೋಽವೋಚನ್ ।
ಬ್ರಹ್ಮ ಕೃಣ್ವಂತೋ ವೃಷಣಾ ಯುವಭ್ಯಾಂ ಸುವೀರಾಸೋ ವಿದಥಮಾ ವದೇಮ ॥೨೫॥

ಪದಾರ್ಥ:- ಹೇ [ವೃಷಣಾ] ವಿದ್ಯೆಯನ್ನು ವರ್ಷಿಸುವ ಮತ್ತು [ಅಶ್ವಿನೌ] ಪ್ರಶಂಸಿತ ಕರ್ಮಗಳಲ್ಲಿ ವ್ಯಾಪ್ತರಾದ ಸ್ತ್ರೀ-ಪುರುಷರೇ! [ವಾಮ್] ನಿಮ್ಮೀರ್ವರ ಯಾವ [ಏತಾನಿ] ಯಾವ ಪ್ರಶಂಸಿತ [ಪೂರ್ವ್ಯಾಣಿ]

ಪೂರ್ವ ವಿದ್ವಾಂಸರು ನಿಯತಗೊಳಿಸಿರುವ [ವೀರ್ಯಾಣಿ] ಪರಾಕ್ರಮಯುಕ್ತ ಕೆಲಸಗಳಿವೆಯೋ, ಅವುಗಳನ್ನು [ಆಯವಃ] ಮನುಷ್ಯನು [ಪ್ರವೋಚನ್] ಬಹಳ ಚೆನ್ನಾಗಿ ಹೇಳಲಿ. [ಯುವಾಭ್ಯಾಮ್] ತರುಣ ಅವಸ್ಥೆಯುಳ್ಳ ನಿಮ್ಮಿಬ್ಬರಿಗಾಗಿ [ಬ್ರಹ್ಮ] ಅನ್ನ ಮತ್ತು ಧನವನ್ನು [ಕೃಣ್ವಂತಃ] ಸಿದ್ಧಗೊಳಿಸುತ್ತಾ [ಸುವೀರಾಸಃ] ಉತ್ತಮ ಕಲಿಕೆ ಮತ್ತು ಉತ್ತಮ ವಿದ್ಯೆಯಿಂದ ಕೂಡಿದ ವೀರಪುತ್ರ, ಪೌತ್ರ ಮತ್ತು ಸೇವಕರಿರುವರೋ, ಅವರು ಮತ್ತು ನಾವು [ವಿದಥಮ್] ವಿಜ್ಞಾನವನ್ನುಂಟು ಮಾಡುವ, ಓದುವ-ಓದಿಸುವ ರೂಪಯಜ್ಞದ [ಆ ವದೇಮ] ಉಪದೇಶ ಮಾಡಲಿ.

ಭಾವಾರ್ಥ:- ಮನುಷ್ಯನು ಯಾವ ವಿದ್ವಾಂಸರು ಲೋಕೋಪಕಾರಕ ವಿದ್ಯೆ ಮತ್ತು ಧರ್ಮೋಪದೇಶದ ಪ್ರಚಾರ ಮಾಡುವ ಕಾರ್ಯ ಮಾಡಿದರೋ ಅಥವಾ ಯಾವನಿಂದ ಮಾಡಿಸುವರೋ, ಅವನನ್ನು ಪ್ರಶಂಸೆ ಮತ್ತು ಅನ್ನ ಅಥವಾ ಧನ ಮೊದಲಾದವುಗಳಿಂದ ಸೇವಿಸಲಿ. ಏಕೆಂದರೆ ಯಾವನೂ ವಿದ್ವಾಂಸರ ಸಂಗದ ಹೊರತು ವಿದ್ಯೆ ಮೊದಲಾದ ಉತ್ತಮೋತ್ತಮ ರತ್ನಗಳನ್ನು ಪಡೆಯಲಾರನು. ಯಾವನು ಕಪಟ ಮೊದಲಾದ ದೋಷಗಳಿಲ್ಲದೆ ಶಾಸ್ತ್ರವನ್ನು ತಿಳಿದ ವಿದ್ವಾಂಸನ ಸಂಗ ಮತ್ತು ಅವನಿಂದ ವಿದ್ಯೆಯನ್ನು ಕಲಿಯದ ಹೊರತು ಉತ್ತಮ ಶೀಲ ಮತ್ತು ವಿದ್ಯೆಯ ವೃದ್ಧಿ ಮಾಡಲು ಸಮರ್ಥನಾಗುವುದಿಲ್ಲ.

ಈ ಸೂಕ್ತದಲ್ಲಿ ರಾಜ, ಪ್ರಜೆ ಮತ್ತು ಓದುವ-ಓದಿಸುವ ಮೊದಲಾದ ಕರ್ಮಗಳ ವರ್ಣನೆ ಇರುವುದರಿಂದ ಪೂರ್ವಸೂಕ್ತದೊಂದಿಗೆ ಈ ಸೂಕ್ತಾರ್ಥವು ಸಂಬಂಧಿಸಿದೆ ಎಂದು ತಿಳಿಯಬೇಕು.

ನೂರ ಹದಿನೇಳನೆಯ ಸೂಕ್ತ ಸಮಾಪ್ತ

ಸೂಕ್ತ ೧೧೮

ಮಂತ್ರಸಂಖ್ಯೆ ೧೧ । ಋಷಿಃ - ಕಕ್ಷೀವಾನ್ ದೈರ್ಘತಮಸ ಔಶಿಜಃ । ದೇವತಾ - ಅಶ್ವಿನೌ । ಛಂದಃ - ತ್ರಿಷ್ಟುಪ್ । ಸ್ವರಃ - ೧೧ ಪಂಚಮಃ, ಧೈವತಃ.

ಮೊದಲ ಮಂತ್ರದಲ್ಲಿ ವಿದ್ವಾಂಸರಾದ ಸ್ತ್ರೀ-ಪುರುಷರು ಏನು ಮಾಡಬೇಕು ಎಂಬ ವಿಷಯವಿದೆ.

ಆ ವಾಂ ರಥೋ ಅಶ್ವಿನಾ ಶ್ಯೇನಪತ್ವಾ ಸುಮೃಳೀಕಃ ಸ್ವವಾँ ಯಾತ್ವರ್ವಾಙ್ ।
ಯೋ ಮರ್ತ್ಯಸ್ಯ ಮನಸೋ ಜವೀಯಾನ್ ತ್ರಿವಂಧುರೋ ವೃಷಣಾ ವಾತರಂಹಾಃ ॥೧॥

ಪದಾರ್ಥ:- ಹೇ [ವೃಷಣಾ] ಬಲಶಾಲಿಗಳಾದ [ಅಶ್ವಿನಾ] ಶಿಲ್ಪಕಾರ್ಯಗಳನ್ನು ತಿಳಿದ ಸ್ತ್ರೀ-ಪುರುಷರೇ! [ವಾಮ್] ನಿಮ್ಮಿಬ್ಬರನ್ನು [ಯಃ] ಯಾವ [ತ್ರಿವಂಧುರಃ] ಯಾವುದರಲ್ಲಿ ಕೆಳಗೆ, ಮಧ್ಯೆ ಮತ್ತು ಮೇಲೆ ಬಂಧನವಿದೆಯೋ, [ಶ್ಯೇನಪತ್ವಾ] ಗಿಡುಗದಂತೆ ಹಾರುವ [ವಾತರಂಹಾಃ] ವಾಯುವಿನಂತೆ ವೇಗವುಳ್ಳ [ಮರ್ತ್ಯಸ್ಯ] ಮನುಷ್ಯನ [ಮನಸಃ] ಮನಸ್ಸಿಗೂ ಕೂಡ [ಜವೀಯಾನ್] ಅತ್ಯಂತ ವೇಗವಾಗಿ ಓಡುವ ಮತ್ತು [ರಥಃ] ರಥವಿದೆಯೋ, ಅದು [ಅರ್ವಾಂಚ್] ಕೆಳಕ್ಕೆ [ಆ ಯಾತು] ಬರಲಿ.

ಭಾವಾರ್ಥ:- ಸ್ತ್ರೀ-ಪುರುಷರು ಯಾವಾಗ ಅಂತಹ ಯಾನವನ್ನು ರಚಿಸಿ ಉಪಯೋಗಕ್ಕೆ ತರುತ್ತಾರೋ, ಆಗ ಅವರು ಸಾಧಿಸಲಾರದ ಸುಖಗಳು ಇರುವುದೇ ಇಲ್ಲ.

ಈಗ ರಾಜ್ಯದ ಸಹಾಯದಿಂದ ಸ್ತ್ರೀ-ಪುರುಷರ ವಿಷಯವನ್ನು ತಿಳಿಸಲಾಗಿದೆ.

ತ್ರಿವಂಧುರೇಣ ತ್ರಿವೃತಾ ರಥೇನ ತ್ರಿಚಕ್ರೇಣ ಸುವೃತಾ ಯಾತಮರ್ವಾಕ್ ।
ಪಿನ್ವತಂ ಗಾ ಜಿನ್ವತಮರ್ವತೋ ನೋ ವರ್ಧಯತಮಶ್ವಿನಾ ವೀರಮಸ್ಮೇ ॥೨॥

ಪದಾರ್ಥ:- ಹೇ [ಅಶ್ವಿನಾ] ಸಭಾಸೇನಾಧೀಶರೇ! ನೀವಿಬ್ಬರೂ [ತ್ರಿವಂಧುರೇಣ] ಮೂರು ಪ್ರಕಾರದ ಬಂಧನಗಳಿಂದ ಕೂಡಿದ [ತ್ರಿಚಕ್ರೇಣ] ಮೂರು ಚಕ್ರಗಳಿರುವ [ತ್ರಿವೃತ್] ಮತ್ತು ಮೂರು ಹೊದೆಯುವ ವಸ್ತ್ರಗಳಿಂದ ಕೂಡಿರುವ [ಸುವೃತಾ] ಉತ್ತಮ ಪುರುಷರು ಶೃಂಗಾರಗಳಲ್ಲಿ ವರ್ತಿಸುವ [ರಥೇನ] ಯಾವ ರಥವಿದೆಯೋ ಅದರಿಂದ [ಅರ್ವಾಕ್] ಭೂಮಿಯ ಕೆಳಗೆ [ಆ ಯಾತಮ್] ಬನ್ನಿರಿ. [ನಃ] ನಮ್ಮ [ಗಾಃ] ಪೃಥಿವಿಯಲ್ಲಿ ಯಾವ ಭೂಮಿ ಇದೆಯೋ ಅದರ [ಪಿನ್ವತಮ್] ಸೇವನೆ ಮಾಡಿರಿ. [ಅರ್ವತಃ] ರಾಜ್ಯವನ್ನು ಪಡೆದ ಮನುಷ್ಯನಿಗೆ ಅಥವಾ ಕುದುರೆಗಳಿಗೆ [ಜಿನ್ವತಮ್] ಜೀವಿಗಳಿಗೆ ಸುಖವನ್ನು ಕೊಡಿರಿ. [ಅಸ್ಮೇ] ನಮ್ಮನ್ನು ಮತ್ತು ನಮ್ಮ [ವೀರಮ್] ಶೂರವೀರ ಪುರುಷರನ್ನು [ವರ್ಧಯತಮ್] ಹೆಚ್ಚಿಸಿರಿ, ವೃದ್ಧಿಸುವಂತೆ ಮಾಡಿರಿ.

ಭಾವಾರ್ಥ:- ರಾಜ ಪುರುಷರು ಉತ್ತಮ ಸಾಮಗ್ರಿ ಮತ್ತು ಉತ್ತಮ ಶಾಸ್ತ್ರವೇತ್ತರಾದ ವಿದ್ವಾಂಸರ ಸಹಾಯ ಪಡೆಯಲಿ ಮತ್ತು ಎಲ್ಲ ಸ್ತ್ರೀ-ಪುರುಷರಿಗೆ ಸಮೃದ್ಧಿ ಮತ್ತು ಸಿದ್ಧಿಯುಕ್ತರನ್ನಾಗಿ ಮಾಡಿ ಪ್ರಶಂಸಿತಗೊಳಿಸಲಿ.

ಮತ್ತೆ ಅದೇ ವಿಷಯ

ಪ್ರವದ್ಯಾಮನಾ ಸುವೃತಾ ರಥೇನ ದಸ್ರಾವಿಮಂ ಶೃಣುತಂ ಶ್ಲೋಕಮದ್ರೇಃ ।
ಕಿಮಙ್ಗ ವಾಂ ಪ್ರತ್ಯವರ್ತಿಂ ಗಮಿಷ್ಠಾ-ಹುರ್ವಿಪ್ರಾಸೋ ಅಶ್ವಿನಾ ಪುರಾಜಾಃ ॥೩॥

ಪದಾರ್ಥ:- ಹೇ [ಪ್ರವದ್ಯಾಮನಾ] ಚೆನ್ನಾಗಿ ನಡೆಯುವ [ಸುವೃತಾ] ಉತ್ತಮೋತ್ತಮ ಸಾಧನಗಳಿಂದ ಕೂಡಿದ [ರಥೇನ] ವಿಮಾನ ಮೊದಲಾದ ರಥಗಳಿಂದ [ಅದ್ರೇಃ] ಪರ್ವತದ ಮೇಲೆ ಹೋಗಲು ಮತ್ತು [ದಸ್ರೌ] ದಾನ ಮೊದಲಾದ ಉತ್ತಮ ಕರ್ಮಗಳನ್ನು ಮಾಡುವ [ಅಶ್ವಿನಾ] ಸಭಾಸೇನಾಧೀಶರೇ ಅಥವಾ ಸ್ತ್ರೀ ಪುರುಷರೇ! [ವಾಮ್] ನೀವಿಬ್ಬರೂ [ಇಮಮ್] ಈ [ಶ್ಲೋಕಮ್] ವಾಣಿಯನ್ನು [ಶೃಣುತಂ] ಕೇಳಿರಿ. [ಅಂಗ] ಹೇ ಉಕ್ತ ಸಜ್ಜನರೇ! [ಪುರಾಜಾಃ] ಪೂರ್ವದ ವೃದ್ಧರು [ವಿಪ್ರಾಸಃ] ಉತ್ತಮ ಬುದ್ಧಿಯುಳ್ಳ ವಿದ್ವಾಂಸರು [ಗಮಿಷ್ಠಾ] ಅತಿಯಾಗಿ ನಡೆಯುವ ನಿಮ್ಮಿಬ್ಬರ [ಪ್ರತಿ] ಬಗ್ಗೆ [ಕಿಮ್] ಹೇಗೆ [ಅವರ್ತಿಮ್] ವರ್ತಿಸಲು ಹೇಳಲು, ಯೋಗ್ಯವಲ್ಲದ ವ್ಯವಹಾರಗಳನ್ನು [ಆಹುಃ] ಉಪದೇಶ ಮಾಡಬಲ್ಲರು? ಅಂದರೆ ಯಾವುದೂ ಇಲ್ಲ.

ಭಾವಾರ್ಥ:- ಹೇ ರಾಜ ಮೊದಲಾದ ಸ್ತ್ರೀ-ಪುರುಷರೇ! ನೀವು ಯಾವ-ಯಾವ ವಿದ್ವಾಂಸರು ಉಪದೇಶಿಸಿದ ಅವವುಗಳನ್ನು ಸ್ವೀಕರಿಸಿರಿ. ಏತಕ್ಕೆಂದರೆ, ಸತ್ಪುರುಷರ ಉಪದೇಶದ ಹೊರತು ಜಗತ್ತಿನಲ್ಲಿ ಮನುಷ್ಯರ ಉನ್ನತಿಯಾಗುವುದಿಲ್ಲ. ಎಲ್ಲಿ ಉತ್ತಮ ವಿದ್ವಾಂಸರ ಉಪದೇಶವು ಪ್ರವೃತ್ತವಾಗುವುದಿಲ್ಲವೋ, ಅಲ್ಲಿ ಎಲ್ಲರೂ ಅಜ್ಞಾನರೂಪದ ಅಂಧಕಾರದಲ್ಲಿ ಮುಳುಗಿರುವ ಪಶುಗಳಂತೆ ವರ್ತಿಸಿ ದುಃಖಗಳನ್ನು ಪಡೆಯುವರು.

ಮತ್ತೆ ಸ್ತ್ರೀ ಪುರುಷರು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಿದೆ.

ಆ ವಾಂ ಶ್ಯೇನಾಸೋ ಅಶ್ವಿನಾ ವಹಂತು ರಥೇ ಯುಕ್ತಾಸ ಆಶವಃ ಪತಙ್ಗಾಃ ।
ಯೇ ಅಪ್ತುರೋ ದಿವ್ಯಾಸೋ ನ ಗೃಧ್ರಾ ಅಭಿ ಪ್ರಯೋ ನಾಸತ್ಯಾ ವಹಂತಿ ॥೪॥

ಪದಾರ್ಥ:- ಹೇ [ನಾಸತ್ಯಾ] ಸತ್ಯದೊಂದಿಗೆ ವರ್ತಿಸುವ [ಅಶ್ವಿನಾ] ಎಲ್ಲ ವಿದ್ಯೆಗಳಲ್ಲಿ ವ್ಯಾಪ್ತರಾದ ಸ್ತ್ರೀ-ಪುರುಷರೇ! [ಯೇ] ಯಾವ [ಅಪ್ತುರಃ] ಅಂತರಿಕ್ಷದಲ್ಲಿ ಶೀಘ್ರವಾಗಿಸಲು [ದಿವ್ಯಾಸಃ] ಮತ್ತು ಉತ್ತಮವಾಗಿ ಕ್ರೀಡಿಸುವ [ಗೃಧ್ರಾಃ] ಹದ್ದುಗಳು ಮುಂತಾದ ಪಕ್ಷಿಗಳ [ನ] ಹಾಗೆ [ಪ್ರಯಃ] ಪ್ರೀತಿ ಮಾಡಿದ ಅಂದರೆ ಬಯಸಿದ ಸ್ಥಾನಕ್ಕೆ [ಅಭಿ ವಹಂತಿ] ಎಲ್ಲ ಕಡೆಗಳಿಂದ ತಲುಪುತ್ತವೆ. ಅವು [ಶ್ಯೇನಾಸಃ] ಗಿಡುಗಗಳಂತೆ ಚಲಿಸುವ [ಪತಂಗಾಃ] ಸೂರ್ಯನಂತೆ ನಿರಂತರ ಪ್ರಕಾಶಮಾನವು [ಆಶವಃ] ಮತ್ತು ಶೀಘ್ರವಾಗಿ ಕುದುರೆಗಳಂತೆ ಅಗ್ನಿ ಮೊದಲಾದ ಪದಾರ್ಥಗಳು [ರಥೇ] ವಿಮಾನ ಮೊದಲಾದ ರಥಗಳನ್ನು [ಯುಕ್ತಾಸಃ] ಹೊಂದಿರುವ [ವಾಮ್] ನಿಮ್ಮಿಬ್ಬರನ್ನು [ಆ ವಹಂತಿ] ತಲುಪಿಸುತ್ತವೆ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಸ್ತ್ರೀ- ಪುರುಷರೇ! ಹೇಗೆ ಆಕಾಶದಲ್ಲಿ ತಮ್ಮ ರೆಕ್ಕೆಗಳಿಂದ ಹಾರುವ ಹದ್ದು ಮೊದಲಾದವು ಸುಖದಿಂದ ಹೋಗಿ ಬರುವುವೋ, ಹಾಗೆಯೇ ನೀವು ಕೂಡ ಉತ್ತಮವಾಗಿ ಸಿದ್ಧಪಡಿಸಿದ ವಿಮಾನ ಮೊದಲಾದ ಯಾನಗಳಿಂದ ಅಂತರಿಕ್ಷಕ್ಕೆ ಹೋಗಿಬನ್ನಿರಿ.

ಮತ್ತೆ ಅದೇ ವಿಷಯ

ಆ ವಾಂ ರಥಂ ಯುವತಿಸ್ತಿಷ್ಠದತ್ರ ಜುಷ್ಟ್ವೀ ನರಾ ದುಹಿತಾ ಸೂರ್ಯಸ್ಯ ।
ಪರಿ ವಾಮಶ್ವಾ ವಪುಷಃ ಪತಂಗಾ ವಯೋ ವಹಂತ್ವರುಷಾ ಅಭೀಕೇ ॥೫॥

ಪದಾರ್ಥ:- ಹೇ [ನರಾ] ಎಲ್ಲರ ನಾಯಕರಾದ ಸಭಾಸೇನಾಧೀಶರೇ! [ವಪುಷಃ] ಸುಂದರ ರೂಪದ [ಜುಷ್ಟ್ವೀ] ಪ್ರೀತಿಯನ್ನು ಪಡೆದ ಅಥವಾ ಸುಂದರ ರೂಪದ ಸೇವೆ ಮಾಡುವ ಸುಂದರೀ [ಯುವತಿಃ] ನವಯೌವ್ವನೆ [ದುಹಿತಾ] ಕನ್ಯೆಯು [ಸೂರ್ಯಸ್ಯ] ಸೂರ್ಯನ ಪ್ರಾತಃಕಾಲದ ಕಿರಣಗಳು ಹೇಗೆ ಪೃಥಿವಿಯ ಮೇಲೆ ಬೀಳುತ್ತವೋ, ಹಾಗೆ [ವಾಮ್] ನೀವಿಬ್ಬರೂ [ರಥಮ್] ರಥದ ಮೇಲೆ [ಆ ತಿಷ್ಠತ್] ಬಂದು ಕುಳಿತುಕೊಳ್ಳಿ. [ಅತ್ರ] ಇಲ್ಲಿ [ಅಭೀಕೇ] ಸಂಗ್ರಾಮದಲ್ಲಿ [ಪತಂಗಾಃ] ಗಮನ ಮಾಡುತ್ತಾ [ಅರುಷಾಃ] ಕೆಂಪು ಬಣ್ಣದ [ವಯಃ] ಪಕ್ಷಿಗಳಂತೆ [ಅಶ್ವಾಃ] ಶೀಘ್ರಗಾಮಿಗಳಾದ ಅಗ್ನಿ ಮೊದಲಾದ ಪದಾರ್ಥಗಳು [ವಾಮ್] ನಿಮ್ಮಿಬ್ಬರನ್ನು [ಪರಿ ವಹಂತು] ಎಲ್ಲ ಕಡೆಗಳಿಂದ ಕಳುಹಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಹೇಗೆ ಸೂರ್ಯನ ಕಿರಣಗಳು ಎಲ್ಲ ಕಡೆಗಳಿಂದ ಹೋಗಿಬರುತ್ತವೋ ಅಥವಾ ಹೇಗೆ ಪತಿವ್ರತಾ ಸ್ತ್ರೀಯು ಪತಿಗೆ ಸುಖಕೊಡುವಳೋ ಅಥವಾ ಹೇಗೆ ಪಕ್ಷಿಗಳು ಮೇಲೆ ಕೆಳಗೆ ಹೋಗುತ್ತವೋ, ಹಾಗೆ ಯುದ್ಧದಲ್ಲಿ ಉತ್ತಮ ಯಾನ ಮತ್ತು ಉತ್ತಮ ವೀರರು ಬಯಸಿದ ಸುಖವನ್ನು ಸಿದ್ಧಪಡಿಸುವರು.

ಮತ್ತೆ ಅದೇ ವಿಷಯ

ಉದ್ ವಂದನಮೈರತಂ ದಂಸನಾಭಿ-ರುದ್ರೇಭಂ ದಸ್ರಾ ವೃಷಣಾ ಶಚೀಭಿಃ ।
ನಿಷ್ಟೌಗ್ರ್ಯಂ ಪಾರಯಥಃ ಸಮುದ್ರಾತ್ ಪುನಶ್ಚ್ಯವಾನಂ ಚಕ್ರಥುರ್ಯುವಾನಮ್ ॥೬॥

ಪದಾರ್ಥ:- ಹೇ [ದಸ್ರಾಃ] ದುಃಖಗಳನ್ನು ದೂರ ಮಾಡುವ ಮತ್ತು [ವೃಷಣಾ] ಸುಖವನ್ನು ವರ್ಷಿಸುವ ಸಭಾಸೇನಾಧೀಶರೇ! ನೀವಿಬ್ಬರೂ [ಶಚೀಭಿಃ] ಕರ್ಮ ಮತ್ತು ಬುದ್ಧಿಗಳು ಅಥವಾ [ದಂಸನಾಭಿಃ] ವಚನಗಳೊಂದಿಗೆ

ಹೇಗೆ [ತೌಗ್ರ್ಯಮ್] ಬಲಶಾಲಿಯು, ಸಂಹಾರಿಯೂ ಆದ ರಾಜನು ಪುತ್ರನು [ಚ್ಯವಾನಮ್] ಗಮನ ಮಾಡುವ ಬಲವುಳ್ಳ [ಯುವಾನಾಮ್] ಯುವಕನಿರುವನೋ ಅವನನ್ನು [ಸಮುದ್ರಾತ್] ಸಾಗರದಿಂದ [ನಿಃ ಪರಾಯಯಃ] ನಿರಂತರ ಪಾರುಮಾಡುತ್ತಾರೆ. [ಪುನಃ] ಮತ್ತೆ ಈ ಕಡೆ ಬಂದವನನ್ನು [ಉತ್, ಚಕ್ರಥುಃ] ಆ ಕಡೆ ಕಳುಹಿಸುತ್ತಾರೋ ಹಾಗೆಯೇ [ವಂದನಮ್] ಪ್ರಶಂಸೆ ಮಾಡಲು ಯೋಗ್ಯವಾದ ಯಾನ ಮತ್ತು [ರೇಭಮ್] ಪ್ರಶಂಸೆ ಮಾಡುವ ಮನುಷ್ಯನನ್ನು [ಉದ್ಯೈರತಮ್] ಅತ್ತಿತ್ತ ಕಳುಹಿಸಿರಿ.

ಭಾವಾರ್ಥ:- ಹೇಗೆ ನಾವೆಯನ್ನು ನಡೆಸುವ ಅಂಬಿಗ ಮೊದಲಾದವರು ಮನುಷ್ಯರನ್ನು ಸಮುದ್ರದಾಚೆಗೆ ತಲುಪಿಸಿ ಸುಖಪಡಿಸುವರೋ, ಹಾಗೆಯೇ ರಾಜಸಭೆ ಶಿಲ್ಪಿಜನರು ಮತ್ತು ಉಪದೇಶ ಮಾಡುವವರನ್ನು ದುಃಖದಿಂದ ಪಾರುಮಾಡಿ ನಿರಂತರವೂ ಆನಂದಕೊಡಲಿ.

ಮತ್ತೆ ಅದೇ ವಿಷಯ

ಯುವಮತ್ರಯೇಽವನೀತಾಯ ತಪ್ತ-ಮೂರ್ಜಮೋಮಾನಮಶ್ವಿನಾವಧತ್ತಮ್ ।
ಯುವಂ ಕಣ್ವಾಯಾಪಿರಿಪ್ತಾಯ ಚಕ್ಷುಃ ಪ್ರತ್ಯಧತ್ತಂ ಸುಷ್ಟುತಿಂ ಜುಜುಷಾಣಾ ॥೭॥

ಪದಾರ್ಥ:- ಹೇ [ಜುಜುಷಾಣಾ] ಸೇವೆ ಅಥವಾ ಪ್ರೀತಿಯನ್ನು ಪಡೆದ [ಅಶ್ವಿನೌ] ಸಮಸ್ತ ಗುಣಗಳಲ್ಲಿ ವ್ಯಾಪ್ತರಾದ ಸ್ತ್ರೀ ಪುರುಷರೇ! [ಯುವಮ್] ನೀವಿಬ್ಬರೂ [ಅವನೀತಾಯ] ಅವಿದ್ಯೆ ಅಜ್ಞಾನವನ್ನು ದೂರ ಮಾಡುವ [ಅಪಿರಿಪ್ತಾಯ] ಮತ್ತು ಸಮಸ್ತ ವಿದ್ಯೆಗಳನ್ನು ವೃದ್ಧಿಸುವುದಕ್ಕಾಗಿ [ತಪ್ತಮ್] ತಪಸ್ಸಿನಿಂದ ಉತ್ಪನ್ನವಾದ [ಓಮಾನಮ್] ರಕ್ಷಣೆ ಮೊದಲಾದ ಉತ್ತಮ ಕರ್ಮಗಳನ್ನು ಪಾಲನೆ ಮಾಡುವ [ಊರ್ಜಮ್] ಪರಾಕ್ರಮವನ್ನು [ಅಧತ್ತಮ್] ಧಾರಣ ಮಾಡಿರಿ ಮತ್ತು [ಯುವಮ್] ನೀವಿಬ್ಬರೂ ಅದರಿಂದ [ಚಕ್ಷುಃ] ಸಕಲ ವ್ಯವಹಾರಗಳನ್ನು ತೋರಿಸುವ ಉತ್ತಮ ಜ್ಞಾನ ಮತ್ತು [ಸುಷ್ಟುತಿಮ್] ಸುಂದರ ಪ್ರಶಂಸೆಯನ್ನು [ಪ್ರತಿ ಅಧತ್ತಮ್] ಪ್ರತೀತಿಯೊಂದಿಗೆ ಧಾರಣ ಮಾಡಿರಿ.

ಭಾವಾರ್ಥ:- ಸಭಾಸೇನಾಧೀಶ ಮೊದಲಾದ ರಾಜಪುರುಷರು ಧರ್ಮಾತ್ಮರು, ವೇದಗಳು ಮುಂತಾದ ವಿದ್ಯೆಗಳನ್ನು ಪ್ರಚಾರಮಾಡಲು ಉತ್ತಮ ವ್ಯವಸ್ಥೆಯನ್ನು ಮಾಡುತ್ತಾರೋ, ಆ ವಿದ್ವಾಂಸರ ರಕ್ಷಣೆಯು ವಿಧಾನ ಮಾಡಿ ಅವರಿಂದ ವಿನಯವನ್ನು ಪಡೆದು ಪ್ರಜೆಗಳನ್ನು ಪಾಲಿಸಬೇಕು.

ಮತ್ತೆ ಅದೇ ವಿಷಯ

ಯುವಂ ಧೇನುಂ ಶಯವೇ ನಾಧಿತಾಯಾ-ಪಿನ್ವತಮಶ್ವಿನಾ ಪೂರ್ವ್ಯಾಯ ।
ಅಮುಂಚತಂ ವರ್ತಿಕಾಮಂಹಸೋ ನಿಃ ಪ್ರತಿ ಜಂಘಾಂ ವಿಶ್ಪಲಾಯಾ ಅಧತ್ತಮ್ ॥೮॥

ಪದಾರ್ಥ:- ಹೇ [ಅಶ್ವಿನಾ] ಉತ್ತಮ ಶಿಕ್ಷಣ ಪಡೆದ ಸಮಸ್ತ ವಿದ್ಯೆಗಳಲ್ಲಿ ರಮಿಸುವ ಸ್ತ್ರೀ- ಪುರುಷರೇ! [ಯುವಮ್] ನೀವಿಬ್ಬರು [ನಾಧಿತಾಯ] ಐಶ್ವರ್ಯಯುಕ್ತ [ಪೂರ್ವ್ಯಾಯ] ಪೂರ್ವವಿದ್ವಾಂಸರು ಮಾಡಿರುವ [ಶಯವೇ] ವಿದ್ವಾಂಸರು ಸುಖವಾಗಿ ನಿದ್ರಿಸುವುದಕ್ಕಾಗಿ [ಧೇನುಮ್] ಉತ್ತಮವಾಗಿ ಶಿಕ್ಷಣವನ್ನಿತ್ತ ವಾಣಿಯನ್ನು [ಅಪಿನ್ವತಮ್] ಸೇವಿಸಿರಿ. ಅದನ್ನು [ಅಂಹಸಃ] ಅಧರ್ಮದ ಆಚರಣೆಯಿಂದ [ನಿರಮುಂಚತಮ್] ನಿರಂತರ ಬಿಡಿಸಿರಿ. ಅದರಿಂದ [ವಿಶ್ಪಲಾಯಾಃ] ಪ್ರಜೆಗಳ ಪಾಲನೆಗಾಗಿ [ಜಂಘಾಮ್] ಎಲ್ಲ ಸುಖಗಳನ್ನು ಉತ್ಪನ್ನ ಮಾಡುವ

[ವರ್ತಿಕಾಮ್] ವಿನಯ, ನಮ್ರತೆ ಮೊದಲಾದ ಗುಣಗಳಿಂದ ಕೂಡಿದ ಉತ್ತಮ ನೀತಿಯನ್ನು [ಪ್ರತ್ಯಧತ್ತಮ್] ಪ್ರತೀತಿಯಿಂದ ಧಾರಣ ಮಾಡಿರಿ.

ಭಾವಾರ್ಥ:- ರಾಜಪುರುಷರು ಸರ್ವ ಐಶ್ವರ್ಯಯುಕ್ತ ಪರಸ್ಪರ ಧನಿಕರಾದವರ ಕುಲದಲ್ಲಿರುವ ಪ್ರಜೆಗಳನ್ನು ಸತ್ಯನ್ಯಾಯಗಳಿಂದ ಸಂತೋಷವನ್ನಿತ್ತು ಅವರನ್ನು ಬ್ರಹ್ಮಚರ್ಯದ ನಿಯಮದಿಂದ ವಿದ್ಯೆಯನ್ನು ಗ್ರಹಣ ಮಾಡುವುದಕ್ಕಾಗಿ ಪ್ರವೃತ್ತಗೊಳಿಸಬೇಕು. ಅದರಿಂದ ಯಾವನ ಪುತ್ರನೂ ಮತ್ತು ಪುತ್ರಿಯೂ ವಿದ್ಯೆ ಮತ್ತು ಉತ್ತಮ ಶಿಕ್ಷಣವಿಲ್ಲದೆ ಇರದಿರಲಿ.

ಈಗ ವಿದ್ಯುತ್ತಿನ ವಿದ್ಯೆಯನ್ನು ಸ್ತ್ರೀ-ಪುರುಷರು ಗ್ರಹಿಸಲಿ.

ಯುವಂ ಶ್ವೇತಂ ಪೇದವ ಇಂದ್ರಜೂತ-ಮಹಿಹನಮಶ್ವಿನಾದತ್ತಮಶ್ವಮ್ ।
ಜೋಹೂತ್ರಮರ್ಯೋ ಅಭಿಭೂತಿಮುಗ್ರಂ ಸಹಸ್ರಸಾಂ ವೃಷಣಂ ವೀಡ್ವಙ್ಗಮ್ ॥೯॥

ಪದಾರ್ಥ:- ಹೇ [ಅಶ್ವಿನಾ] ಯಜ್ಞಾದಿ ಕರ್ಮ ಮಾಡುವ ಸ್ತ್ರೀ ಮತ್ತು ಸಮಸ್ತ ಲೋಕಗಳ ಅಧಿಪತಿಯಾದ ಪುರುಷನೇ! [ಯುವಮ್] ನೀವಿಬ್ಬರೂ [ಪೇದವೇ] ಹೋಗಿ ಬರಲಿಕ್ಕಾಗಿ [ಅರ್ಯಃ] ಎಲ್ಲರ ಸ್ವಾಮಿ, ಎಲ್ಲ ಸಭೆಗಳ ಪ್ರಧಾನ ರಾಜ [ಇಂದ್ರಜೂತಮ್] ಸಭಾಧ್ಯಕ್ಷನಾದ ರಾಜನು ಪ್ರೇರಣೆ ಮಾಡಿದ [ಜೋಹೂತ್ರಮ್] ಅತ್ಯಂತ ಈರ್ಷ್ಯೆ ಮಾಡುವ ಅಥವಾ ಶತ್ರುಗಳನ್ನು ಹೊಸಕಿ ಹಾಕುವ [ವೃಷಣಮ್] ಶತ್ರುಗಳ ಸೇನೆಯ ಮೇಲೆ ಶಸ್ತ್ರ ಮತ್ತು ಅಸ್ತ್ರಗಳನ್ನು ವರ್ಷಿಸುವ [ವೀಡ್ವಂಗಮ್] ಬಲಶಾಲಿ, ಶಿಥಿಲಾಂಗದಿಂದ ಕೂಡಿದ [ಉಗ್ರಮ್] ದುಷ್ಟ ಶತ್ರುಗಳಿಂದ ಸಹಿಸಲಾಗದ [ಅಭಿಭೂತಿಮ್] ಮತ್ತು ಶತ್ರುಗಳನ್ನು ತಿರಸ್ಕಾರಮಾಡಲು [ಸಹಸ್ರಸಾಮ್] ಅಥವಾ ಸಾವಿರಾರು ಕಾರ್ಯಗಳನ್ನು ಸೇವಿಸುವ [ಶ್ವೇತಮ್] ಬಿಳಿಯ [ಅಶ್ವಮ್] ಸಭೆಯಲ್ಲಿ ವ್ಯಾಪ್ತವಾದ ವಿದ್ಯುದ್ರೂಪಾಗ್ನಿಯನ್ನು [ಅಹಿಹನಮ್] ಮೇಘವನ್ನು ಛಿನ್ನ-ಭಿನ್ನ ಮಾಡುವ ಸೂರ್ಯನಂತೆ ನಿಮ್ಮಿಬ್ಬರಿಗಾಗಿ ಕೊಡುತ್ತಾನೆ. ಅವನಿಗಾಗಿ ನಿರಂತರ ಸುಖವನ್ನು [ಅದತ್ತಮ್] ಕೊಡಿರಿ.

ಭಾವಾರ್ಥ:- ಹೇಗೆ ಸೂರ್ಯನು ಮೇಘವನ್ನು ವರ್ಷಿಸುವಂತೆ ಮಾಡಿ ಎಲ್ಲ ಪ್ರಜೆಗಳಿಗೂ ಸುಖವುಂಟು ಮಾಡುವನೋ, ಹಾಗೆಯೇ ವಿದ್ಯೆಯನ್ನು ತಿಳಿದ ಸ್ತ್ರೀ-ಪುರುಷರು ಸಮಸ್ತ ಪ್ರಜೆಗಳಿಗಾಗಿ ಸುಖಕೊಡಲಿ ಮತ್ತು ತಮ್ಮ ಮಧ್ಯದಲ್ಲಿರುವ ಯಾವ ಅತಿರಥ ವೀರ ಸ್ತ್ರೀ ಪುರುಷರಿರುವರೋ, ಅವರನ್ನು ಸದಾ ಸತ್ಕಾರ ಮಾಡಿರಿ.

ಮತ್ತೆ ಅದೇ ವಿಷಯ

ತಾ ವಾಂ ನರಾ ಸ್ವವಸೇ ಸುಜಾತಾ ಹವಾಮಹೇ ಅಶ್ವಿನಾ ನಾಧಮಾನಾಃ ।
ಆ ನ ಉಪ ವಸುಮತಾ ರಥೇನ ಗಿರೋ ಜುಷಾಣಾ ಸುವಿತಾಯ ಯಾತಮ್ ॥೧೦॥

ಪದಾರ್ಥ:- ಹೇ [ಸುಜಾತಾ] ಶ್ರೇಷ್ಠ ವಿದ್ಯಾಗ್ರಹಣ ಮಾಡುವ ಮೊದಲಾದ ಉತ್ತಮ ಕರ್ಮಗಳಲ್ಲಿ ಪ್ರಸಿದ್ಧವಾದ [ಗಿರಃ] ಶುಭವಾಣಿಯು [ಜುಷಾಣಾ] ಸೇವನೆ ಮತ್ತು [ಅಶ್ವಿನಾ] ಪ್ರಜೆಗಳ ಅಂಗಗಳನ್ನು ಪಾಲನೆ ಮಾಡುವ [ನರಾ] ನ್ಯಾಯದಲ್ಲಿ ಪ್ರವೃತ್ತ ಮಾಡುವ ಸ್ತ್ರೀ-ಪುರುಷರೇ! [ನಾಧಮಾನಾಃ] ಬಹಳ ಐಶ್ವರ್ಯದಿಂದ ಕೂಡಿದ ನಾವು [ವಾಮ್] ನಿಮ್ಮಿಬ್ಬರನ್ನು [ಅವಸೇ] ರಕ್ಷಣೆ ಮೊದಲಾದವುಗಳಿಗಾಗಿ [ಸು, ಹವಾಮಹೇ] ಸಮ್ಮಾನ ಪೂರ್ವಕವಾಗಿ ಕರೆಯಿರಿ. [ತಾ] ಆ ನೀವು, [ವಸುಮತಾ] ಯಾವುದರಲ್ಲಿ ಪ್ರಶಂಸಿತ ಸುವರ್ಣ ಮೊದಲಾದ

ಸಂಪತ್ತಿದೆಯೋ, ಆ [ರಥೇನ] ಮನೋಹರವಾದ ವಿಮಾನ ಮೊದಲಾದ ಯಾನಗಳಿಂದ [ನಃ] ನಮ್ಮನ್ನು [ಸುವಿತಾಯ] ಐಶ್ವರ್ಯಕ್ಕಾಗಿ [ಉಪ, ಆ ಯಾತಮ್] ಬಂದು ಭೇಟಿಯಾಗಿರಿ.

ಭಾವಾರ್ಥ:– ಪ್ರಜೆಗಳಾದ ಸ್ತ್ರೀ ಪುರುಷರಿಂದ ರಾಜಪುರುಷರು ಪ್ರೀತಿಯನ್ನು ಪಡೆದು ಪ್ರಸನ್ನರಾಗಲಿ. ಅವರೂ ಪ್ರಜೆಗಳನ್ನು ಪ್ರಸನ್ನಗೊಳಿಸಲಿ. ಅದರಿಂದ ಒಬ್ಬರು ಇನ್ನೊಬ್ಬರಿಗೆ ರಕ್ಷಣೆಯಿಂದ ಐಶ್ವರ್ಯವು ಸದಾ ವೃದ್ಧಿಯಾಗಲಿ.

ಮತ್ತೆ ಅದೇ ವಿಷಯ

ಆ ಶ್ಯೇನಸ್ಯ ಜವಸಾ ನೂತನೇನಾ-ಸ್ಮೇ ಯಾತಂ ನಾಸತ್ಯಾ ಸಜೋಷಾಃ ।
ಹವೇ ಹಿ ವಾಮಶ್ವಿನಾ ರಾತಹವ್ಯಃ ಶಶ್ವತ್ತಮಾಯಾ ಉಷಸೋ ವ್ಯುಷ್ಟೌ ॥೧೧॥

ಪದಾರ್ಥ:– ಹೇ [ನಾಸತ್ಯಾ] ಸತ್ಯಯುಕ್ತರು [ಅಶ್ವಿನಾ] ಸಮಸ್ತ ಗುಣಗಳಲ್ಲಿ ರಮಿಸುವಂತಹ ಸ್ತ್ರೀ-ಪುರುಷರು ಅಥವಾ ಸಭಾಸೇನಾಧೀಶರೇ! [ಸಜೋಷಾಃ] ಒಂದೇ ತರಹದ ಪ್ರೇಮವುಳ್ಳ [ರಾತಹವ್ಯಃ] ಉತ್ತಮವಾಗಿ ಹೋಮ ಮಾಡಿ (ಸಾಮಗ್ರೀ) ಕೊಟ್ಟದ್ದನ್ನು ನಾನು [ಶಶ್ವತ್ತಮಾಯಾಃ] ಅತಿ ಅನಾದಿರೂಪವಾದ [ಉಷಸಃ] ಪ್ರಾತಃಕಾಲದ ವೇಳೆಯ [ವ್ಯುಷ್ಟೌ] ವಿಶೇಷವಾಗಿ ಬಯಸಿದ ಸಮಯದಲ್ಲಿ [ವಾಮ್] ನಿಮ್ಮನ್ನು [ಹವೇ] ಸ್ತುತಿಪೂರ್ವಕ ಕರೆಯುತ್ತೇವೋ ಆ ನೀವು [ಹಿ] ನಿಶ್ಚಯದೊಂದಿಗೆ [ಶ್ಯೇನಸ್ಯ] ಗಿಡುಗದ [ಜವಸಾ] ವೇಗದಂತೆ [ನೂತನೇನ] ಹೊಸರಥದಿಂದ [ಅಸ್ಮೇ] ನಮ್ಮನ್ನು [ಆ ಯಾತಮ್] ಬಂದು ಸೇರಿರಿ.

ಭಾವಾರ್ಥ:– ಸ್ತ್ರೀ-ಪುರುಷರು ರಾತ್ರಿಯ ನಾಲ್ಕನೇ ಪ್ರಹರದಲ್ಲಿ ಎದ್ದು ತಮ್ಮ ಆವಶ್ಯಕ ಅಂದರೆ ಶರೀರ ಶುದ್ಧಿ ಮೊದಲಾದ ಕಾರ್ಯಗಳನ್ನು ಮಾಡಿ ನಂತರ ಜಗದೀಶ್ವರನ ಉಪಾಸನೆ ಮತ್ತು ಯೋಗಾಭ್ಯಾಸಗಳನ್ನು ಮಾಡಿ ರಾಜ ಮತ್ತು ಪ್ರಜೆಗಳ ಕಾರ್ಯಗಳನ್ನು ಆಚರಣೆ ಮಾಡಲು ಪ್ರವೃತ್ತರಾಗಬೇಕು. ರಾಜ ಮೊದಲಾದ ಸಜ್ಜನರು ಪ್ರಶಂಸೆಗೆ ಯೋಗ್ಯರಾದ ಪ್ರಜೆಗಳನ್ನು ಸತ್ಕರಿಸಬೇಕು ಮತ್ತು ಪ್ರಜೆಗಳು ಸ್ತುತಿಗೆ ಯೋಗ್ಯರಾದ ರಾಜಪುರುಷರ ಸ್ತುತಿ ಮಾಡಲಿ. ಏಕೆಂದರೆ ಯಾರೂ ಅಧರ್ಮಿಗಳಾದ ದುಷ್ಟರನ್ನು ಸ್ತುತಿಸುವಿಕೆ, ಮತ್ತು ಧರ್ಮಕಾರ್ಯಗಳನ್ನು ಮಾಡುವ ಧರ್ಮಾತ್ಮರ ನಿಂದೆ ಮಾಡುವುದು ಯೋಗ್ಯವಲ್ಲ. ಆದುದರಿಂದ ಎಲ್ಲರೂ ಧಾರ್ಮಿಕ ವ್ಯವಸ್ಥೆಯ ಆಚರಣೆ ಮಾಡಬೇಕು.

ಈ ಸೂಕ್ತದಲ್ಲಿ ಸ್ತ್ರೀ ಪುರುಷರ ಮತ್ತು ರಾಜ-ಪ್ರಜೆಗಳ ಧರ್ಮದ ವರ್ಣನೆ ಇರುವುದರಿಂದ ಈ ಸೂಕ್ತದ ಅರ್ಥಕ್ಕೂ ಹಿಂದಿನ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಹದಿನೆಂಟನೆಯ ಸೂಕ್ತ ಸಮಾಪ್ತ

ಸೂಕ್ತ ೧೧೯

ಮಂತ್ರಸಂಖ್ಯೆ ೧೦ । ಋಷಿಃ - ಕಕ್ಷೀವಾನ್ ದೈರ್ಘತಮಸ ಔಶಿಜಃ । ದೇವತಾ - ಅಶ್ವಿನೌ । ಛಂದಃ - ಜಗತೀ ।
ಸ್ವರಃ - ೨, ೫, ೯ ಧೈವತಃ, ನಿಷಾಧಃ.

ಇದರ ಮೊದಲ ಮಂತ್ರದಲ್ಲಿ ಮತ್ತೆ ಸ್ತ್ರೀ ಪುರುಷರು ಹೇಗೆ ತಮ್ಮ ವರ್ತನೆಯನ್ನಿಡಬೇಕು ಎನ್ನುವ ಉಪದೇಶ ಮಾಡಿದೆ.

ಆ ವಾಂ ರಥಂ ಪುರುಮಾಯಂ ಮನೋಜುವಂ ಜೀರಾಶ್ವಂ ಯಜ್ಞಿಯಂ ಜೀವಸೇ ಹುವೇ।
ಸಹಸ್ರಕೇತುಂ ವನಿನಂ ಶತದ್ವಸುಂ ಶ್ರುಷ್ಟೀವಾನಂ ವರಿವೋಧಾಮಭಿ ಪ್ರಯಃ ॥೧॥

ಪದಾರ್ಥ:– ಹೇ ಸಮಸ್ತ ಗುಣಗಳಲ್ಲಿ ವ್ಯಾಪ್ತರಾದ ಸ್ತ್ರೀ-ಪುರುಷರೇ! [ಪ್ರಯಃ] ಪ್ರೀತಿ ಮಾಡುವವರಲ್ಲಿ [ಜೀವಸೇ] ಜೀವಿಸುವುದಕ್ಕಾಗಿ [ವಾಮ್] ನಿಮ್ಮಿಬ್ಬರ [ಪುರುಮಾಯಮ್] ಬಹಳ ಉತ್ತಮ ಬುದ್ಧಿಯಿಂದ ಮಾಡಿದ [ಜೀರಾಶ್ವಮ್] ಪ್ರಾಣಧಾರಿಗಳಾದ ಜೀವರಿಗೆ ಅದರಿಂದ ಪ್ರಾಪ್ತವಾಗುವ ಅಥವಾ ಅದನ್ನು ಒಗ್ಗೂಡಿಸುವ [ಯಜ್ಞಿಯಮ್] ಯಜ್ಞದ ಪ್ರದೇಶಕ್ಕೆ ಹೋಗುವ ಯೋಗ್ಯತೆಯು [ಸಹಸ್ರಕೇತುಮ್] ಸಾವಿರಾರು ಪತಾಕೆಗಳುಳ್ಳ [ಶತದ್ವಸುಮ್] ನೂರಾರು ರೀತಿಯ ಸಂಪತ್ತು [ವನಿನಮ್] (ವನಮಿತಿ ಉದಕನಾಮ ನಿಘ. ೧-೧೨) ಮತ್ತು ಅಧಿಕ ಜಲವಿರುವ [ಶ್ರುಷ್ಟೀವಾನಮ್] ಶೀಘ್ರವಾಗಿ ನಡೆಯುವಂತಹ [ಮನೋಜುವಮ್] ಮನಸ್ಸಿನಂತೆ ವೇಗವುಳ್ಳ [ವರಿವೋಧಾಮ್] ಯಾವುದರಿಂದ ಮನುಷ್ಯರು ಸುಖಸೇವನೆಯನ್ನು ಧಾರಣ ಮಾಡುತ್ತಾರೋ, [ರಥಮ್] ಆ ಮನೋಹರವಾದ ವಿಮಾನ ಮೊದಲಾದ ಯಾನಗಳನ್ನೂ [ಅಭ್ಯಾಹುವೇ] ಎಲ್ಲಾ ರೀತಿಯ ಪ್ರಶಂಸೆ ಮಾಡುತ್ತೇನೆ.

ಭಾವಾರ್ಥ:– ಈ ಮಂತ್ರದಲ್ಲಿ ಹಿಂದಿನ ಮಂತ್ರದಿಂದ (ಅಶ್ವಿನಾ) ಈ ಪದದ ಅನುವೃತ್ತಿಯು ಬಂದಿದೆ. ಉತ್ತಮ ಯತ್ನವನ್ನು ಮಾಡುತ್ತಾ ವಿದ್ವಾಂಸರಾದ ಶಿಲ್ಪಿಗಳು ಹೇಗೆ ಬಯಸುತ್ತಾರೋ, ಹಾಗೆ ಎಲ್ಲ ಗುಣಗಳಿಂದ ಕೂಡಿದ ವಿಮಾನ ಮೊದಲಾದ ರಥಗಳನ್ನು ಈ ಮಂತ್ರದಲ್ಲಿ ವರ್ಣನೆ ಮಾಡಿದೆಯೋ ಹಾಗೆ ಮಾಡುವಂತಹವರಾಗಲಿ.

ಮತ್ತೆ ಮನುಷ್ಯನು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ಊರ್ಧ್ವಾ ಧೀತಿಃ ಪ್ರತ್ಯಸ್ಯ ಪ್ರಯಾಮ-ನ್ಯಧಾಯಿ ಶಸ್ಮನ್ತ್ಸಮಯಂತ ಆ ದಿಶಃ ।
ಸ್ವದಾಮಿ ಘರ್ಮಂ ಪ್ರತಿ ಯಂತ್ಯೂತಯ ಆ ವಾಮೂರ್ಜಾನೀ ರಥಮಶ್ವಿನಾರುಹತ್ ॥೨॥

ಪದಾರ್ಥ:– ಹೇ [ಅಶ್ವಿನಾ] ಸಭಾಸೇನಾಧೀಶರೇ! [ವಾಮ್] ನಿಮ್ಮಿಬ್ಬರ [ಶಸ್ಮನ್] ಪ್ರಶಂಸೆಗೆ ಯೋಗ್ಯವಾದ [ಪ್ರಯಾಮನಿ] ಅತಿ ಉತ್ತಮಯಾತ್ರೆಯಲ್ಲಿ ಯಾವ [ಊರ್ಜಾನಿ] ಪರಾಕ್ರಮಯುಕ್ತ ನೀತಿ ಮತ್ತು [ಊರ್ಧ್ವಾ ಧೀತಿಃ] ಉನ್ನತಿಯುಕ್ತ ಧಾರಣ ಅಥವಾ ಉಚ್ಚಧಾರಣೆಯುಳ್ಳ ಮನುಷ್ಯರು [ಅಧಾಯಿ] ಧಾರಣ ಮಾಡಿರುವ ಅವರು [ದಿಶಃ] ದಾನ ಮೊದಲಾದ ಉತ್ತಮ ಕಾರ್ಯಗಳನ್ನು ಮಾಡುವ ಮನುಷ್ಯರು [ಸಮ್, ಆ ಅಯಂತೇ] ಚೆನ್ನಾಗಿ ಬರುವರು, ಯಾವ [ರಥಮ್] ಮನೋಹರವಾದ ವಿಮಾನ ಮೊದಲಾದ ಯಾನದ ಶಿಲ್ಪಿಕಾರರು [ಆ ಅರೂಹತ್] ಆರೋಹಣ ಮಾಡುತ್ತಾ ಅಂದರೆ ಅದರ ಮೇಲೆ ಏರುತ್ತಾರೋ, ಅದರ ಮೇಲೆ ನೀವೂ ಹತ್ತಿರಿ. ಯಾವ [ಘರ್ಮಮ್] ಉಜ್ವಲ ಸುಗಂಧ ಯುಕ್ತ ಭೋಜನ ಮಾಡಲು ಯೋಗ್ಯ ಪದಾರ್ಥಗಳನ್ನು [ಊತಯಃ] ಮನೋಹರ ರಕ್ಷಣೆ ಮೊದಲಾದ ವ್ಯವಹಾರಗಳು ನಮಗಾಗಿ [ಯಂತಿ] ಪ್ರಾಪ್ತ ಮಾಡುತ್ತವೆ. ಅವುಗಳನ್ನು [ಪ್ರತಿ] ನೀವು ಪಡೆಯಿರಿ ಮತ್ತು ಯಾವ ಉಜ್ವಲ ಸುಗಂಧಯುಕ್ತ ಭೋಜನ ಮಾಡಲುಯೋಗ್ಯ ಪದಾರ್ಥಗಳನ್ನು ನಾನು [ಸ್ವದಾಮಿ] ತಿನ್ನುವೆನು. [ಅಸ್ಯ] ಇದರ ಸ್ವಾದವನ್ನು ನೀವು [ಪ್ರತಿ] ಪ್ರತೀತಿಯಿಂದ ಪಡೆಯಿರಿ.

ಭಾವಾರ್ಥ:– ಹೇ ಮನುಷ್ಯರೇ! ನೀವು ಒಳ್ಳೆಯವರಾಗಿ, ರೋಗಗಳನ್ನು ತೊಲಗಿಸುವ ಮತ್ತು ಬಲವನ್ನು ಕೊಡುವ ಅನ್ನವನ್ನು ಸೇವಿಸಿರಿ. ಯಾತ್ರೆಯಲ್ಲಿ ಎಲ್ಲ ಸಾಮಗ್ರಿಗಳನ್ನು ತೆಗೆದುಕೊಂಡು ಒಬ್ಬರು ಇನ್ನೊಬ್ಬರಿಂದ ಪ್ರೀತಿ ಮತ್ತು ರಕ್ಷಣೆ ಮಾಡಿ-ಮಾಡಿಸಿ ದೇಶ-ಪರದೇಶಗಳಿಗೆ ಹೋಗಿರಿ. ಆದರೆ ಎಲ್ಲಿಯೂ ನೀತಿಯನ್ನು ಬಿಡಬೇಡಿರಿ.

ಮತ್ತೆ ಮುಂದಿನ ಮಂತ್ರದಲ್ಲಿ ಸ್ತ್ರೀ-ಪುರುಷರು ಮಾಡಲು ಯೋಗ್ಯವಾದ ಕಾರ್ಯಗಳ ಉಪದೇಶ ಮಾಡಿದೆ.

ಸಂ ಯನ್ಮಿಥಃ ಪಸ್ಪೃಧಾನಾಸೋ ಅಗ್ಮತ ಶುಭೇ ಮಖಾ ಅಮಿತಾ ಜಾಯವೋ ರಣೇ।
ಯುವೋರಹ ಪ್ರವಣೇ ಚೇಕಿತೇ ರಥೋ ಯದಶ್ವಿನಾ ವಹಥಃ ಸೂರಿಮಾ ವರಮ್ ॥೩॥

ಪದಾರ್ಥ:- ಹೇ [ಅಶ್ವಿನಾ] ಸ್ತ್ರೀ-ಪುರುಷರೇ! [ಯತ್] ಯಾವ ವಿದ್ವಾಂಸನು [ಚೇಕಿತೇ] ಯುದ್ಧ ಮಾಡಲು ತಿಳಿದಿದೆಯೋ ಅಥವಾ ಯಾವ [ಯುವೋಃ] ನಿಮ್ಮಿಬ್ಬರ [ರಥಃ] ಅತಿ ಸುಂದರ ರಥವು [ಮಿಥಃ] ಪರಸ್ಪರ ಯುದ್ಧದ ಮಧ್ಯೆ ಯುದ್ಧ ಮಾಡುವುದೋ ಅಥವಾ ಯಾವ [ವರಮ್] ಅತಿಶ್ರೇಷ್ಠ [ಸೂರಿಮ್] ಯುದ್ಧವಿದ್ಯೆಯನ್ನು ತಿಳಿದ ಧಾರ್ಮಿಕ ವಿದ್ವಾಂಸನನ್ನು ನೀವು [ವಹಥಃ] ಪಡೆಯುತ್ತಾ ಅದರ ಜೊತೆಯಿದ್ದು [ಅಹ] ಶತ್ರುಗಳನ್ನು ಬಂಧಿಸಲು ಅಥವಾ ಅವರನ್ನು ಸೋಲಿಸುವುದರಲ್ಲಿ [ಯತ್] ಯಾವ [ಶುಭೇ] ಉತ್ತಮ ಗುಣವನ್ನು ಪಡೆಯುವುದಕ್ಕಾಗಿ [ಪ್ರವಣೇ] ಯಾವುದರಲ್ಲಿ ವೀರರು ಹೋಗುತ್ತಾರೋ ಆ [ರಣೇ] ಸಂಗ್ರಾಮದಲ್ಲಿ [ಪಸ್ಪೃಧಾನಾಸಃ] ಈರ್ಷ್ಯೆಯಿಂದ ಒಬ್ಬರು ಇನ್ನೊಬ್ಬನನ್ನು ಕರೆಯುತ್ತಾ [ಮಖಾಃ] ಯಜ್ಞದಂತೆ ಉಪಕಾರ ಮಾಡುವ [ಅಮಿತಾಃ] ಬೀಳದಿರುವ [ಜಾಯವಃ] ಶತ್ರುಗಳನ್ನು ಗೆಲ್ಲುವ ವೀರಪುರುಷನು [ಸಮಗ್ಮತ] ಉತ್ತಮವಾಗಿ ಹೋಗಲಿ, ಅವನಿಗಾಗಿ [ಆ] ಉತ್ತಮ ಯತ್ನವನ್ನೂ ಕೂಡ ಮಾಡಲಿ.

ಭಾವಾರ್ಥ:- ರಾಜಪುರುಷರು ಯಾವಾಗ ಶತ್ರುಗಳನ್ನು ಗೆಲ್ಲಲು ತಮ್ಮ ಸೇನೆ ಕಳುಹಿಸುವರೋ, ಆಗ ಧನವುಳ್ಳವರು, ಯುದ್ಧದಲ್ಲಿ ಚತುರರು, ಇತರರಿಂದ ಯುದ್ಧ ಮಾಡಿಸುವ ವಿದ್ವಾಂಸರು ಸೇನೆಯ ಜೊತೆ ಅವಶ್ಯವಾಗಿ ಹೋಗಲಿ. ಮತ್ತು ಎಲ್ಲ ಸೇನೆಯು ಆ ವಿದ್ವಾಂಸನ ಅನುಕೂಲತೆಯಿಂದ ಯುದ್ಧಮಾಡಲಿ. ಅದರಿಂದ ಅವರು ಎಲ್ಲರೂ ಯುದ್ಧ ಮಾಡಲು ಉತ್ಸಾಹವುಂಟಾಗಿ ಶತ್ರುಗಳನ್ನು ಅವಶ್ಯವಾಗಿ ಗೆಲ್ಲುವರು.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಯುವಂ ಭುಜ್ಯುಂ ಭುರಮಾಣಂ ವಿಭಿರ್ಗತಂ ಸ್ವಯುಕ್ತಿಭಿರ್ನಿವಹಂತಾ ಪಿತೃಭ್ಯ ಆ ।
ಯಾಸಿಷ್ಟಂ ವರ್ತಿರ್ವೃಷಣಾ ವಿಜೇನ್ಯ೧ಂ ದಿವೋದಾಸಾಯ ಮಹಿ ಚೇತಿ ವಾಮವಃ ॥೪॥

ಪದಾರ್ಥ:- [ವೃಷಣಾ] ಸುಖಗಳನ್ನು ವರ್ಷಿಸುವ ಮತ್ತು ಎಲ್ಲ ಗುಣಗಳಲ್ಲಿ ರಮಣ ಮಾಡುವ ಸಭಾ ಸೇನಾಧೀಶರೇ! **[ಯುವಮ್]** ನೀವಿಬ್ಬರೂ **[ವಾಮ್]** ತಮ್ಮ **[ಭುರಮಾಣಮ್]** ಪುಷ್ಟಿಯುಂಟುಮಾಡುವ **[ಭುಜ್ಯಮ್]** ಭೋಜನ ಮಾಡಲು ಯೋಗ್ಯವಾದ ಪದಾರ್ಥಗಳನ್ನು **[ವಿಭಿಃ]** ಪಕ್ಷಿಗಳು **[ಗತಮ್]** ಪಡೆದಿರುವಂತೆ **[ಸ್ವಯುಕ್ತಿಭಿಃ]** ತಮ್ಮ ರೀತಿಗಳಿಂದ **[ಪಿತೃಭ್ಯಃ]** ರಾಜ್ಯದ ಪಾಲನೆ ಮಾಡುವ ವೀರರಿಗಾಗಿ **[ನಿವಹಂತಾ]** ನಿರಂತರ ಕಳುಹಿಸುತ್ತಾ **[ಮಹಿ]** ಅತಿಯಾಗಿ **[ಅವಃ]** ರಕ್ಷಣೆ ಮಾಡುವ ಪದಾರ್ಥ ಮತ್ತು **[ವರ್ತಿಃ]** ಸೇನಾ ಸಮೂಹವು **[ಚೇತಿ]** ಹೋಗುವುದೋ ಅದನ್ನು ಕೂಡ ತೆಗೆದುಕೊಂಡು **[ದಿವೋದಾಸಾಯ]** ವಿದ್ಯೆಯ ಪ್ರಕಾಶ ಮಾಡುವ ಸೇನಾಧ್ಯಕ್ಷನಿಗಾಗಿ **[ವಿಜೇನ್ಯಮ್]** ಗೆಲ್ಲಲು ಯೋಗ್ಯವಾದ ಸೇನಾಸಮೂಹವನ್ನು **[ಆ ಯಾಸಿಷ್ಟಂ]** ಪಡೆಯಿರಿ.

ಭಾವಾರ್ಥ:- ಸೇನಾಪತಿಗಳಿಂದ ಹೃಷ್ಟಪುಷ್ಟವಾದ ಸೇನಾ ಸಮೂಹ ಅಂದರೆ ಸುಖ ಸಂತೋಷಗಳಿಂದಲೂ, ಚೆನ್ನಾಗಿ ತಿಂದು ಕುಡಿಯುವುದರಿಂದ ಪುಷ್ಟವಾಗಿರುವ ತನ್ನನ್ನು ಬಯಸುತ್ತಿರುವ ಅವರನ್ನು ಅನೇಕ ಪ್ರಕಾರಗಳ ಭೋಗ ಮತ್ತು ಉತ್ತಮ ಶಿಕ್ಷಣದಿಂದ ಕೂಡಿರುವಂತೆ ಮಾಡಿ ಅಂದರೆ ಉಕ್ತ ಪದಾರ್ಥಗಳನ್ನು ಅವರಿಗೆ ಕೊಟ್ಟು ಮುಂದೆ ಬರುವ ಲಾಭಕ್ಕಾಗಿ ಪ್ರವೃತ್ತಗೊಳಿಸಿದಂತಹ ಸೇನಾ ಸಮೂಹದಿಂದ ಯುದ್ಧಮಾಡಿ ಶತ್ರುಗಳನ್ನು ಗೆಲ್ಲಬಹುದು.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಯುವೋರಶ್ವಿನಾ ವಪುಷೇ ಯುವಾಯುಜಂ ರಥಂ ವಾಣೀ ಯೇಮತುರಸ್ಯ ಶರ್ಧ್ಯಮ್ ।
ಆ ವಾಂ ಪತಿತ್ವಂ ಸಖ್ಯಾಯ ಜಗ್ಮುಷೀ ಯೋಷಾವೃಣೀತ ಜೇನ್ಯಾ ಯುವಾಂ ಪತೀ ॥೫॥

ಪದಾರ್ಥ:- ಹೇ [ಅಶ್ವಿನಾ] ಸಭಾಸೇನಾಧೀಶರೇ! [ಯುವೋಃ] ನೀವು ನಿಮ್ಮ [ಶರ್ಧ್ಯಮ್] ಬಲದಿಂದ ಕೂಡಿದ [ಯುವಾಯುಜಮ್] ನೀವು ಜೋಡಿಸಿದ [ರಥಮ್] ಮನೋಹರವಾದ ಸೇನೆ ಮೊದಲಾದವುಗಳಿಂದ ಕೂಡಿದ ಯಾನವನ್ನು [ಅಸ್ಯ] ಈ ರಾಜಕಾರ್ಯದ ಮಧ್ಯದಲ್ಲಿ ಸ್ಥಿರವಾದ [ವಾಣೀ] ಉಪದೇಶ ಮಾಡುವವನಂತೆ [ವಪುಷೀ] ಉತ್ತಮ ರೂಪವಂತನಾಗುವುದಕ್ಕಾಗಿ [ಯೇಮತುಃ] ನಿಯಮದಲ್ಲಿಡುವನೋ [ವಾಮ್] ನಿಮ್ಮಿಬ್ಬರ [ಸಖ್ಯಾಯ] ಸ್ನೇಹತ್ವ ಅಂದರೆ ಅತಿಯಾದ ಪ್ರೀತಿಗಾಗಿ [ಜೇನ್ಯಾ] ನಿಯಮ ಮಾಡುವುದರಲ್ಲಿ ಶ್ರೇಷ್ಠನು [ಪತಿ] ಪಾಲನೆ ಮಾಡುವ [ಯುವಾಮ್] ನಿಮ್ಮೊಡನೆ [ಪತಿತ್ವಮ್] ಪತಿಭಾವವನ್ನು [ಜಗ್ಮುಷೀ] ಪಡೆಯುವಂತಹ [ಯೋಷಾ] ಯೌವ್ವನಾವಸ್ಥೆಯಿಂದ ಪರಿಪೂರ್ಣಳಾದ ಬ್ರಹ್ಮಚಾರಿಣೀ ಯುವತಿಯು ಆದ ಸ್ತ್ರೀಯು, ನಿಮ್ಮಲ್ಲಿ ತನ್ನ ಮನಸ್ಸಿಗೆ ಒಪ್ಪುವಂತಹ ಪತಿಯನ್ನು [ಆ ಅವೃಣೀತ] ಚೆನ್ನಾಗಿ ವರಿಸಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇಗೆ ಬ್ರಹ್ಮಚರ್ಯವನ್ನು ಪಾಲನೆಮಾಡಿ ಯೌವ್ವನಾವಸ್ಥೆಯನ್ನು ಪಡೆದ ವಿದುಷೀ ಕುಮಾರಿ ಕನ್ಯೆಯು ತನಗೆ ಪ್ರಿಯನಾದ ಪತಿಯನ್ನು ಪಡೆದು ನಿರಂತರ ಅವನ ಸೇವೆ ಮಾಡುವಳೋ ಮತ್ತು ಹೇಗೆ ಬ್ರಹ್ಮಚರ್ಯೆಯನ್ನು ಮಾಡಿದ ಯುವಕನಾದ ಪುರುಷನು ತನ್ನ ಪ್ರೀತಿಗೆ ಅನುಕೂಲಳಾದ ಸ್ತ್ರೀಯನ್ನು ಪಡೆದು ಆನಂದಿತನಾಗುವನೋ ಹಾಗೆಯೇ ಸಭಾಸೇನಾಧೀಶರು ಸದಾ ವರ್ತಿಸಲಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಯುವಂ ರೇಭಂ ಪರಿಷೂತೇರುರುಷ್ಯಥೋ ಹಿಮೇನ ಘರ್ಮಂ ಪರಿತಪ್ತಮತ್ರಯೇ ।
ಯುವಂ ಶಯೋರವಸಂ ಪಿಪ್ಯಥುರ್ಗವಿ ಪ್ರ ದೀರ್ಘೇಣ ವಂದನಸ್ತಾರ್ಯಾಯುಷಾ ॥೬॥

ಪದಾರ್ಥ:- ಹೇ ಎಲ್ಲ ವಿದ್ಯೆಗಳಲ್ಲಿ ವ್ಯಾಪ್ತರಾದ ಸ್ತ್ರೀ-ಪುರುಷರೇ! ಹೇಗೆ **[ಯುವಮ್]** ನೀವಿಬ್ಬರೂ **[ಅತ್ರಯೇ]** ಆಧ್ಯಾತ್ಮಿಕ, ಆಧಿಭೌತಿಕ, ಆಧಿ ದೈವಿಕ ಈ ಮೂರು ದುಃಖಗಳು ಯಾವುದರಲ್ಲಿ ಇಲ್ಲವೋ ಆ ಉತ್ತಮ ಸುಖಕ್ಕಾಗಿ **[ಪರಿಷೂತೇ]** ಎಲ್ಲ ಕಡೆಗಳಿಂದ ಎರಡನೇ ವಿದ್ಯೆಯು ಜನ್ಮದಲ್ಲಿ ಪ್ರಸಿದ್ಧನಾಗಿರುವ ವಿದ್ವಾಂಸನಿಂದ ವಿದ್ಯೆಯನ್ನು ಪಡೆದ **[ಪರಿತಪ್ತಮ್]** ಎಲ್ಲ ರೀತಿಯ ಕ್ಲೇಶಗಳನ್ನು ಹೊಂದಿದ **[ರೇಭಮ್]** ಸಮಸ್ತ ವಿದ್ಯೆಗಳಿಂದ ಪ್ರಶಂಸೆಯನ್ನು ಮಾಡುವ ವಿದ್ವಾಂಸನಾದ ಮನುಷ್ಯನನ್ನು **[ಹಿಮೇನ]** ಶೀತದ **[ಘರ್ಮಮ್]** ಧಾಮದಂತೆ **[ಉರುಷ್ಯಥಃ]** ಪಾಲಿಸಿ ಅಂದರೆ ಶೀತದಿಂದ ಧಾಮವು ಹೇಗೆ ರಕ್ಷಿಸುವುದೋ ಹಾಗೆ ಪಾಲಿಸಿರಿ. **[ಯುವಮ್]** ನೀವಿಬ್ಬರೂ **[ಗವಿ]** ಪೃಥಿವಿಯಲ್ಲಿ **[ಶಯೋಃ]** ಮಲಗಿರುವವನ **[ಅವಸಮ್]** ರಕ್ಷಣೆ ಮೊದಲಾದವುಗಳನ್ನು **[ಪಿಪ್ಯಥುಃ]** ಹೆಚ್ಚಿಸಿರಿ. **[ವಂದನಃ]** ಪ್ರಶಂಸೆ ಮಾಡಲು ಯೋಗ್ಯವಾದ ವ್ಯವಹಾರಗಳು **[ದೀರ್ಘೇಣ]** ಅತಿದೀರ್ಘವಾದ ದಿನಗಳ **[ಆಯುಃ]** ಆಯುಸ್ಸಿನಿಂದ ನೀವಿಬ್ಬರೂ **[ತಾರಿ]** ಪಾರುಗೊಳಿಸಿದಿರಿ. ಹಾಗೆಯೇ ನಾವೂ ಕೂಡ **[ಪ್ರ]** ಪ್ರಯತ್ನ ಮಾಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ವಿವಾಹ ಮಾಡಿಕೊಂಡ ಸ್ತ್ರೀ-ಪುರುಷರೇ! ಹೇಗೆ ಶೀತದಿಂದ ಉಷ್ಣವನ್ನು ಕೊಲ್ಲಲಾಗುತ್ತದೋ ಹಾಗೆಯೇ ಅವಿದ್ಯೆಯನ್ನು ವಿದ್ಯೆಯಿಂದ ಕೊಲ್ಲಿರಿ. ಅದರಿಂದ ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ ಈ ಮೂರೂ ಪ್ರಕಾರದ ದುಃಖಗಳು ನಾಶವಾಗಲಿ. ಹೇಗೆ ಧಾರ್ಮಿಕ ರಾಜಪುರುಷರು ಕಳ್ಳರು, ಮೊದಲಾದವರನ್ನು ದೂರ ಮಾಡಿ, ಮಲಗಿರುವ ಪ್ರಜೆಗಳಿಗೆ ರಕ್ಷಣೆ ಕೊಡುತ್ತಾರೋ ಮತ್ತು ಹೇಗೆ ಸೂರ್ಯಚಂದ್ರರು ಸಂಪೂರ್ಣ ಜಗತ್ತಿಗೆ ಪುಷ್ಟಿಯನ್ನು ಕೊಟ್ಟು ಜೀವಿಸಲು ಆನಂದವನ್ನು ಕೊಡುತ್ತಾರೋ ಹಾಗೆ ಈ ಜಗತ್ತಿನಲ್ಲಿ ಪ್ರವೃತ್ತರಾಗಿರಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಯುವಂ ವಂದನಂ ನಿರ್ಋತಂ ಜರಣ್ಯಯಾ ರಥಂ ನ ದಸ್ರಾ ಕರಣಾ ಸಮಿನ್ವಥಃ ।
ಕ್ಷೇತ್ರಾದಾ ವಿಪ್ರಂ ಜನಥೋ ವಿಪನ್ಯಯಾ ಪ್ರ ವಾಮತ್ರ ವಿಧತೇ ದಂಸನಾ ಭುವತ್ ॥೭॥

ಪದಾರ್ಥ:- ಹೇ [ಕರಣಾ] ಉತ್ತಮ ಕರ್ಮಗಳನ್ನು ಮಾಡುವ ಅಥವಾ [ದಸ್ರಾ] ದುಃಖಗಳನ್ನು ದೂರ ಮಾಡುವ ಸ್ತ್ರೀ-ಪುರುಷರೇ! [ಯುವಮ್] ನೀವಿಬ್ಬರೂ [ಜರಣ್ಯಾಯ] ವಿದ್ಯಾವೃದ್ಧರು ಅಂದರೆ ಅತಿಯಾದ ವಿದ್ಯಾಭ್ಯಾಸ ಮಾಡಿದ ವಿದ್ವಾಂಸರ ಯೋಗ್ಯ ವಿದ್ಯೆಯಿಂದ ಕೂಡಿರುವ [ನಿರ್ಋತಮ್] ಯಾವುದರಲ್ಲಿ ಸತ್ಯವು ವಿದ್ಯಮಾನವಾಗಿದೆಯೋ [ವಂದನಾ] ಪ್ರಶಂಸೆ ಮಾಡಲು ಯೋಗ್ಯವೂ [ವಿಪ್ರಮ್] ವಿದ್ಯೆ ಮತ್ತು ಉತ್ತಮ ಶಿಕ್ಷಣದ ಯೋಗದಿಂದ ಉತ್ತಮ ಬುದ್ಧಿಯುಳ್ಳ ವಿದ್ವಾಂಸನನ್ನು [ರಥಮ್] ವಿಮಾನ ಮೊದಲಾದ ಯಾನಗಳ [ನ] ಅಂತೆ [ಸಮಿನ್ವಥಃ] ಉತ್ತಮವಾಗಿ ಪಡೆಯಿರಿ ಮತ್ತು [ಕ್ಷೇತ್ರಾತ್] ಗರ್ಭದಿಂದ ಉತ್ಪನ್ನವಾದ ಸಂತಾನದಂತೆ ತನ್ನ ನಿವಾಸದಿಂದ ಉತ್ತಮ ಕಾರ್ಯಗಳನ್ನು [ಆ ಜನಥಃ] ಚೆನ್ನಾಗಿ ಪ್ರಕಟಿಸಿರಿ. [ಅತ್ರ] ಈ ಜಗತ್ತಿನಲ್ಲಿ [ವಾಮ್] ನಿಮ್ಮಿಬ್ಬರ ಗೃಹಸ್ಥಾಶ್ರಮದ ಮಧ್ಯೆ ಸಂಬಂಧವು [ಪ್ರ ಭುವತ್] ಪ್ರಬಲವಾಗಲಿ. ಅದರಲ್ಲಿ [ವಿಪನ್ಯಯಾ] ಪ್ರಶಂಸೆ ಮಾಡಲು ಯೋಗ್ಯರಾದ ಧರ್ಮದ ನೀತಿಯಿಂದ ಕೂಡಿದ [ದಂಸನಾ] ಕಾರ್ಯಗಳನ್ನು [ವಿಧತೇ] ವಿಧಾನ ಮಾಡುವುದರಲ್ಲಿ ಪ್ರವೃತ್ತರಾಗಿರುವ ಮನುಷ್ಯರಿಗಾಗಿ ಉತ್ತಮ ರಾಜ್ಯಾಧಿಕಾರಗಳನ್ನು ಕೊಡಿರಿ.

ಭಾವಾರ್ಥ:- ಆಲೋಚನಾಪರರಾದ ಸ್ತ್ರೀ- ಪುರುಷರು ಹುಟ್ಟಿದಾರಭ್ಯ ಎಲ್ಲಿಯವರೆಗೂ ಬ್ರಹ್ಮಚರ್ಯೆಯಿಂದ ಸಮಸ್ತ ವಿದ್ಯೆಗಳನ್ನೂ ಗ್ರಹಿಸಲಾಗುವುದೋ ಅಲ್ಲಿಯವರೆಗೂ ಉತ್ತಮ ಶಿಕ್ಷಣ ಕೊಟ್ಟು ಸಂತಾನವನ್ನು ಯಥಾಯೋಗ್ಯ ವ್ಯವಹಾರಗಳಲ್ಲಿ ನಿರಂತರ ತೊಡಗಿಸಿರಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಅಗಚ್ಛತಂ ಕೃಪಮಾಣಂ ಪರಾವತಿ ಪಿತುಃ ಸ್ವಸ್ಯ ತ್ಯಜಸಾ ನಿಬಾಧಿತಮ್ ।
ಸ್ವರ್ವತೀರಿತ ಊತೀರ್ಯುವೋರಹ ಚಿತ್ರಾ ಅಭೀಕೇ ಅಭವನ್ನಭಿಷ್ಟಯಃ ॥೮॥

ಪದಾರ್ಥ:- ಹೇ ವಿದ್ಯೆಯ ವಿಚಾರದಲ್ಲಿ ರಮಣ ಮಾಡುವ ಸ್ತ್ರೀ-ಪುರುಷರೇ! ತಾವು [ಸ್ವಸ್ಯ] ತಮ್ಮ [ಪಿತುಃ] ತಂದೆಯಂತಿರುವ ಓದಿಸುವವನಿಂದ [ಪರಾವತಿ] ದೂರ ದೇಶದಲ್ಲಿದ್ದರೂ ಕೂಡ ಮತ್ತು [ತ್ಯಜಸಾ] ಜಗತ್ತಿನ ಸುಖವನ್ನು ತ್ಯಜಿಸುವುದರಿಂದ [ನಿಬಾಧಿತಮ್] ಕಷ್ಟವನ್ನು ಪಡೆಯುತ್ತಾ [ಕೃಪಮಾಣಮ್] ಕೃಪೆ ಮಾಡುವ ಶೀಲವಂತನಾದ ಸಂನ್ಯಾಸಿಯನ್ನು ನಿತ್ಯವೂ [ಅಗಚ್ಛತಮ್] ಪಡೆಯಿರಿ. [ಇತಃ] ಈ ಯತಿಯಿಂದ [ಯುವೋಃ] ನಿಮ್ಮಿಬ್ಬರ [ಅಭೀಕೇ] ಸಮೀಪದಲ್ಲಿ [ಅಹ] ನಿಶ್ಚಯವಾಗಿ [ಚಿತ್ರಾಃ] ಅದ್ಭುತವನ್ನು [ಅಭೀಷ್ಟಯಃ] ಬಯಸುತ್ತಿರುವ [ಸ್ವರ್ವತೀಃ] ಪ್ರಶಂಸಿತ ಸುಖವನ್ನು ವಿದ್ಯಮಾನವಾಗಿರುವ [ಊತೀಃ] ರಕ್ಷಣೆ ಮೊದಲಾದ ಕಾಮನೆಗಳು [ಅಭವನ್] ಸಿದ್ಧವಾಗಲಿ.

ಭಾವಾರ್ಥ:- ಎಲ್ಲ ಮನುಷ್ಯರೂ ಪೂರ್ಣವಿದ್ಯೆಯನ್ನು ತಿಳಿದ ಮತ್ತು ಶಾಸ್ತ್ರ ಸಿದ್ಧಾಂತದಲ್ಲಿ ರಮಿಸುವ, ರಾಗ-ದ್ವೇಷ ಮತ್ತು ಪಕ್ಷಪಾತರಹಿತ ಎಲ್ಲರ ಮೇಲೂ ಕೃಪೆ ಮಾಡುವ, ಯಾವಾಗಲೂ ಸತ್ಯದಿಂದಿದ್ದು ಅಸತ್ಯದಿಂದ ದೂರವಾಗಿ ಇಂದ್ರಿಯಗಳನ್ನು ಗೆದ್ದು ಮತ್ತು ಯೋಗದ ಸಿದ್ಧಾಂತವನ್ನು ಪಡೆದಿರುವ, ಹಿಂದು-ಮುಂದಿನ ವ್ಯವಹಾರಗಳನ್ನು ತಿಳಿದಿರುವ ಜೀವನ್ಮುಕ್ತನಾದ ಸಂನ್ಯಾಸಿಯ ಆಶ್ರಯದಲ್ಲಿ ಸ್ಥಿತವಾದ ಜಗತ್ತಿನಲ್ಲಿ ಉಪದೇಶ ಮಾಡುವುದಕ್ಕಾಗಿ ನಿತ್ಯ

ಭ್ರಮಣಮಾಡುವ ವೇದವಿದ್ಯೆಯನ್ನು ತಿಳಿದ ಸಂನ್ಯಾಸಿಗಳನ್ನು ಪಡೆದು ಧರ್ಮ, ಅರ್ಥ, ಕಾಮ ಮತ್ತು ಮೋಕ್ಷದ ಸಿದ್ಧಿಯ ವಿಧಾನವನ್ನು ಪಡೆಯಿರಿ. ಅಂತಹ ಸಂನ್ಯಾಸಿ ಮೊದಲಾದ ಉತ್ತಮ ವಿದ್ವಾಂಸರ ಸಂಗ ಮತ್ತು ಉಪದೇಶವನ್ನು ಕೇಳದ ಹೊರತು ಯಾವನೇ ಮನುಷ್ಯನು ಯಥಾರ್ಥ ಬೋಧೆಯನ್ನು ಪಡೆಯಲಾರನು.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಉತ ಸ್ಯಾ ವಾಂ ಮಧುಮನ್ಮಕ್ಷಿಕಾರಪನ್ಮದೇ ಸೋಮಸ್ಯೌಶಿಜೋ ಹುವನ್ಯತಿ ।
ಯುವಂ ದಧೀಚೋ ಮನ ಆ ವಿವಾಸಥೋಽಥಾ ಶಿರಃ ಪ್ರತಿ ವಾಮಶ್ವ್ಯಂ ವದತ್ ॥೯॥

ಪದಾರ್ಥ:- ಹೇ ಮಂಗಳಯುಕ್ತ ರಾಜ ಮತ್ತು ಪ್ರಜೆಗಳೇ! [ಯುವಮ್] ನೀವಿಬ್ಬರೂ [ಔಶಿಜಃ] ಮನೋಹರ ಉತ್ತಮ ಪುರುಷನ ಪುತ್ರನಾದ ಸಂನ್ಯಾಸಿಯು [ಮದೇ] ಮದದ ನಿಮಿತ್ತ ಪ್ರವರ್ತಮಾನವಾದ [ಸ್ಯಾ] ಆ [ಮಕ್ಷಿಕಾ] ಶಬ್ದ ಮಾಡುವ ಜೇನುನೊಣವು ಹೇಗೆ [ಅರಪತ್] ಶಬ್ದ ಮಾಡುವಂತೆ [ವಾಮ್] ನಿಮ್ಮಿಬ್ಬರನ್ನು [ಮಧುಮತ್] ಮಧುವಿನಂತೆ ಅಂದರೆ ಯಾವುದರಲ್ಲಿ ಪ್ರಶಂಸಿತ ವ್ಯವಹಾರಗಳಿವೆಯೋ, ಆ ವ್ಯವಹಾರಗಳಂತೆ [ಹುವನ್ಯತಿ] ತಮಗೆ ಕೊಟ್ಟು ತೆಗೆದುಕೊಳ್ಳುವಂತಹ ಆ [ಸೋಮಸ್ಯ] ಧರ್ಮದ ಪ್ರೇರಣೆ ಮಾಡುವ ಮತ್ತು [ದಧೀಚಃ] ವಿದ್ಯಾಧರ್ಮದ ಧಾರಣ ಮಾಡುವವರಿಂದ [ಮನಃ] ವಿಜ್ಞಾನವನ್ನು [ಆ ವಿವಾಸಥಃ] ಉತ್ತಮವಾಗಿ ಸೇವಿಸಿರಿ. [ಅಥ] ಅನಂತರ [ಉತ] ತರ್ಕ ವಿತರ್ಕಗಳಿಂದ ಆ [ವಾಮ್] ನಿಮ್ಮಿಬ್ಬರ ಬಗ್ಗೆ ಪ್ರೀತಿಯಿಂದ ಈ ಜ್ಞಾನವನ್ನು ಮತ್ತು [ಅಶ್ವ್ಯಮ್] ವಿದ್ಯೆಯಲ್ಲಿ ವ್ಯಾಪ್ತರಾಗಿರುವ ವಿದ್ವಾಂಸರಲ್ಲಿ ಉತ್ತಮ [ಶಿರಃ] ಶಿರದಂತೆ ಪ್ರಶಂಸಿತ ವ್ಯಾಖ್ಯಾನವನ್ನು [ಪ್ರತಿ, ವದತ್] ಹೇಳಲಿ.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ಹೇಗೆ ಜೇನುನೊಣವು ಪೃಥಿವಿಯಲ್ಲಿ ಉತ್ಪನ್ನವಾದ ವೃಕ್ಷ ವನಸ್ಪತಿಗಳಿಂದ ಜೇನು ರಸವನ್ನು ಪಡೆದು ತನ್ನ ನಿವಾಸ ಸ್ಥಾನದಲ್ಲಿ ಒಗ್ಗೂಡಿಸಿ ಆನಂದ ಪಡುವುದೋ, ಹಾಗೆಯೇ ಯೋಗವಿದ್ಯೆಯ ಐಶ್ವರ್ಯವನ್ನು ಪಡೆದು ಸತ್ಯೋಪದೇಶದ ಸುಖದ ವಿಧಾನವನ್ನು ಮಾಡುವ ಬ್ರಹ್ಮವಿಚಾರದಲ್ಲಿ ಸ್ಥಿರನಾದ ವಿದ್ವಾನ್ ಸಂನ್ಯಾಸಿಯ ಸಮೀಪದಲ್ಲಿ ಸತ್ಯಶಿಕ್ಷಣವನ್ನು ಆಲಿಸಿ, ಒಪ್ಪಿ ಮತ್ತು ವಿಚಾರಿಸಿ ಸದಾ ನೀವು ಸುಖಿಗಳಾಗಿರಿ.

ಈಗ ವಿದ್ಯುದ್ರೂಪ ಅಗ್ನಿಯಿಂದ ಯಾವ ತಂತಿ ಸಮಾಚಾರ ವಿದ್ಯೆಯು ಪ್ರಕಟವಾಗುವುದೋ ಅದರ ವಿಷಯವನ್ನು ಹೇಳಲಾಗಿದೆ.

ಯುವಂ ಪೇದವೇ ಪುರುವಾರಮಶ್ವಿನಾ ಸ್ಪೃಧಾಂ ಶ್ವೇತಂ ತರುತಾರಂ ದುವಸ್ಯಥಃ ।
ಶರ್ಯೈರಭಿದ್ಯುಂ ಪೃತನಾಸು ದುಷ್ಟರಂ ಚರ್ಕೃತ್ಯಮಿಂದ್ರಮಿವ ಚರ್ಷಣೀಸಹಮ್ ॥೧೦॥

ಪದಾರ್ಥ:- ಹೇ [ಅಶ್ವಿನಾ] ಎಲ್ಲ ವಿದ್ಯೆಗಳಲ್ಲಿ ವ್ಯಾಪ್ತರಾದ ಸಭಾಸೇನಾಧೀಶರೇ! [ಯುವಮ್] ನೀವಿಬ್ಬರೂ [ಪೇದವೇ] ಕಳುಹಿಸಲು ಅಥವಾ ಹೋಗಲು [ಸ್ಪೃಧಾಮ್] ಶತ್ರುಗಳನ್ನು ಈರ್ಷ್ಯೆಯಿಂದ ಕರೆಯುವವರನ್ನು [ಪೃತನಾಸು] ಸೇನೆಗಳಲ್ಲಿ [ಚರ್ಕೃತ್ಯಮ್] ನಿರಂತರ ಮಾಡಲು ಯೋಗ್ಯವಾದ [ಶ್ವೇತಮ್] ಅತಿಯಾಗಿ ಗಮನಮಾಡಲು ವೃದ್ಧಿಯಾದ [ಪುರುವಾರಮ್] ಯಾವುದರಿಂದ ಬಹಳ ತೆಗೆದುಕೊಳ್ಳಲು ಯೋಗ್ಯವಾದ ಕೆಲಸವಾಗುವುದೋ [ದುಷ್ಟರಮ್] ಯಾವುದು ಶತ್ರುಗಳಿಂದ ದುಃಖದೊಂದಿಗೆ ಲಂಘನ ಮಾಡುವಂತಹ [ಚರ್ಷಣೀಸಹಮ್] ಯಾವುದರಿಂದ ಮನುಷ್ಯನು ಶತ್ರುಗಳನ್ನು ಸಹಿಸುವುದನ್ನು ಯಾವ [ಶರ್ಯೈಃ] ಮಡಿಸಿ, ಮುರಿದುಹಾಕುವ ಯೋಗ್ಯತೆಯುಳ್ಳ

ಹುರಿಯಿಂದ ಬಂಧಿಸಿದ ಅಥವಾ [ಅಭಿದ್ಯುಮ್] ಎಲ್ಲೆಡೆಯೂ ವಿದ್ಯುತ್ತಿನ ಬೆಂಕಿಯು ಹೊಳೆಯುವುದೋ, ಆ [ಇಂದ್ರಮಿವ] ಸೂರ್ಯನ ಪ್ರಕಾಶದಂತೆ ವರ್ತಿಸುವ [ತರುತಾರಮ್] ಸಂದೇಶಗಳನ್ನು ರವಾನಿಸುವ ಅಂದರೆ ಇತ್ತ-ಅತ್ತ ಕಳುಹಿಸುವಂತಹ ತಾರಯಂತ್ರವನ್ನು [ದುವಸ್ಯಥಃ] ಸೇವಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇಗೆ ಮನುಷ್ಯರಿಂದ ವಿದ್ಯುತ್ತಿನಿಂದ ಸಿದ್ಧಪಡಿಸಿದ ತಂತಿ (ಸಮಾಚಾರ) ವಿದ್ಯೆಯಿಂದ ಬೇಕಾದ ಆವಶ್ಯಕತೆಗಳನ್ನು ಸಿದ್ಧಗೊಳಿಸಲಾಗುವುದೋ, ಹಾಗೆಯೇ ಸಂನ್ಯಾಸಿಯ ಸಂಗದಿಂದ ಸಮಸ್ತ ವಿದ್ಯೆಗಳನ್ನು ಪಡೆದು ಧರ್ಮ ಮೊದಲಾದ ಕಾರ್ಯಗಳನ್ನು ಮಾಡಲು ಸಮರ್ಥರಾಗುವರು. ಈ ಎರಡು (ವ್ಯವಹಾರ)ಗಳಿಂದ ವ್ಯವಹಾರ ಮತ್ತು ಪರಮಾರ್ಥ ಸಿದ್ಧಮಾಡಿಕೊಳ್ಳಲಾಗುತ್ತದೆ. ಆದುದರಿಂದ ಯತ್ನದೊಂದಿಗೆ ವಿದ್ಯುತ್-ತಂತಿವಿದ್ಯೆಯನ್ನು ಅವಶ್ಯವಾಗಿ ಸಿದ್ಧಪಡಿಸಬೇಕು.

ಈ ಸೂಕ್ತದಲ್ಲಿ ರಾಜಪ್ರಜೆ, ಸಂನ್ಯಾಸೀ ಮಹಾತ್ಮರ ವಿದ್ಯೆಯ ವಿಚಾರ ಮಾಡಿದ ಆಚರಣೆ ಹೇಳಿರುವುದರಿಂದ ಈ ಸೂಕ್ತಾರ್ಥಕ್ಕೂ ಪೂರ್ವಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಹತ್ತೊಂಬತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೧೨೦

ಮಂತ್ರಸಂಖ್ಯೆ ೧೨ । ಕಕ್ಷೀವಾನ್ ದೈರ್ಘತಮಸ ಔಶಿಜಃ । ದೇವತಾ - ಅಶ್ವಿನೌ (೧೨ ದುಃಸ್ವಪ್ನನಾಶನಮ್) । ಛಂದಃ - ಗಾಯತ್ರೀ, ೨ ಕಕುಪ್, ೩ ಕಾ-ವಿರಾಟ್, ೪ ನಷ್ಟರೂಪೀ, ೫ ತನುಶಿರಾ, ೬ ಉಷ್ಣಿಕ್, ೭ ವಿಷ್ಟಾರ-ಬೃಹತೀ, ೮ ಕೃತಿಃ, ೯ ವಿರಾಟ್ । ಸ್ವರಃ - ೧, ೧೨, ೨, ೧೦, ೧೧ ಷಡ್ಜಃ, ೩, ೫, ೬, ೮ ಋಷಭಃ, ೪, ೭, ೯ ಗಾಂಧಾರಃ.

ಮೊದಲ ಮಂತ್ರದಲ್ಲಿ ಪ್ರಶ್ನೋತ್ತರ ವಿಧಿಯ ಉಪದೇಶ ಮಾಡಿದೆ.

ಕಾ ರಾಧದ್ಧೋತ್ರಾಶ್ವಿನಾ ವಾಂ ಕೋ ವಾಂ ಜೋಷ ಉಭಯೋಃ । ಕಥಾ ವಿಧಾತ್ಯಪ್ರಚೇತಾಃ ॥೧॥

ಪದಾರ್ಥ:- ಹೇ [**ಅಶ್ವಿನಾ**] ಗೃಹಸ್ಥಾಶ್ರಮಧರ್ಮದಲ್ಲಿ ವ್ಯಾಪ್ತರಾದ ಸ್ತ್ರೀ ಪುರುಷರೇ! [**ವಾಮ್**] ನೀವು [**ಉಭಯೋಃ**] ಇಬ್ಬರಲ್ಲಿ [**ಕಾ**] ಯಾರು [**ಹೋತ್ರಾ**] ಸೇನಾಶತ್ರುಗಳ ಬಲವನ್ನು ಪಡೆಯಲು ಮತ್ತು ಉತ್ತಮ ಜಯಕೊಡಲು [**ರಾಧತ್**] ಸಿದ್ಧಿಮಾಡಲಿ. [**ವಾಮ್**] ನಿಮ್ಮಿಬ್ಬರ [**ಜೋಷೀ**] ಪ್ರೀತಿ ಉಂಟುಮಾಡುವ ವ್ಯವಹಾರಗಳಲ್ಲಿ [**ಕಥಾ**] ಹೇಗೆ [**ಕಃ**] ಯಾರು [**ಅಪ್ರಚೇತಾಃ**] ವಿದ್ಯಾವಿಜ್ಞಾನ ರಹಿತ ಅಂದರೆ ಮೂಢಶತ್ರುವಿನ ಸೋಲನ್ನು [**ವಿಧಾತಿ**] ವಿಧಾನಮಾಡಲಿ.

ಭಾವಾರ್ಥ:- ಸಭಾಸೇನಾಧೀಶರು ಶೂರರು ಮತ್ತು ವಿದ್ವಾಂಸರ ವ್ಯವಹಾರಗಳನ್ನು ತಿಳಿದವರೊಂದಿಗೆ ತಮ್ಮ ವ್ಯವಹಾರ ಮಾಡಲಿ. ಮತ್ತೆ ಶೂರರು ಮತ್ತು ವಿದ್ವಾಂಸರನ್ನು ಸೋಲಿಸುವುದು ಮತ್ತು ಅದರ ವಿಜಯವನ್ನು ತಡೆಯಲು ಸಮರ್ಥರಾಗಲಿ, ಎಂದಿಗೂ ಯಾವನೇ ಮೂಢನ ಸಹಾಯದಿಂದ ಪ್ರಯೋಜನವು ಸಿದ್ಧವಾಗುವುದಿಲ್ಲ. ಆದುದರಿಂದ ಯಾವಾಗಲೂ ವಿದ್ವಾಂಸರೊಡನೆ ಮಿತ್ರತೆ ಇಟ್ಟುಕೊಳ್ಳಬೇಕು.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ವಿದ್ವಾಂಸಾವಿದ್ ದುರಃ ಪೃಚ್ಛೇ-ದವಿದ್ವಾನಿತ್ಥಾಪರೋ ಅಚೇತಾಃ । ನೂ ಚಿನ್ನು ಮರ್ತೇ ಅಕ್ರೌ ॥೨॥

ಪದಾರ್ಥ:- ಹೇಗೆ [ಅಚೇತಾಃ] ಅಜ್ಞಾನಿಗಳು [ಅವಿದ್ವಾನ್] ಮೂರ್ಖರು [ವಿದ್ವಾಂಸೌ] ವಿದ್ವಾಂಸರು ಪಂಡಿತರೂ ಆದ ಇಬ್ಬರನ್ನು [ದುರಃ] ಶತ್ರುಗಳನ್ನು ಕೊಲ್ಲಲು ಅಥವಾ ಮನಸ್ಸಿಗೆ ಅತ್ಯಂತ ಕ್ಲೇಶವನ್ನುಂಟು

ಮಾಡುವ ಮಾತುಗಳನ್ನು [ಪೃಚ್ಛೇತ್] ಕೇಳಿದರೆ [ಇತ್ಥಾ] ಅಂತಹ [ಅಪರಃ] ಮತ್ತು ವಿದ್ವಾಂಸರಾದ ಮಹಾತ್ಮರು ತಮ್ಮ ಪದ್ಧತಿಯಲ್ಲಿ [ಇತ್] ಮಾತ್ರವೇ [ನು] ಶೀಘ್ರವಾಗಿ ಹೇಳಲಿ. [ಅಕ್ರೌ] ಮಾಡಲಾಗದ [ಮರ್ತೇ] ಮನುಷ್ಯನ ನಿಮಿತ್ತ [ಚಿತ್] ಕೂಡ [ನು] ಶೀಘ್ರವಾಗಿ ಹೇಳಲಿ. ಅದರಿಂದ ಇವನು ಆಲಸ್ಯವನ್ನು ಬಿಟ್ಟು ಪುರುಷಾರ್ಥದಲ್ಲಿ ಪ್ರವೃತ್ತನಾಗುವನು.

ಭಾವಾರ್ಥ:- ಹೇಗೆ ವಿದ್ವಾಂಸನು ವಿದ್ವಾಂಸರ ಸಮ್ಮತಿಯಿಂದ ವರ್ತಿಸುವನೋ ಹಾಗೆಯೇ ಮತ್ತು ಕೂಡ ವರ್ತಿಸಲಿ. ಯಾವಾಗಲೂ ವಿದ್ವಾಂಸರನ್ನು ಕೇಳಿ ಸತ್ಯ ಮತ್ತು ಅಸತ್ಯದ ನಿರ್ಣಯ ಮಾಡಿ ಆಚರಣೆ ಮಾಡಬೇಕು. ಮತ್ತು ಸುಳ್ಳನ್ನು ತ್ಯಜಿಸಬೇಕು. ಈ ವಿಷಯದಲ್ಲಿ ಯಾರೂ ಎಂದಿಗೂ ಆಲಸ್ಯ ಮಾಡಬಾರದು. ಏಕೆಂದರೆ ಕೇಳದ ಹೊರತು ಯಾವನೂ ತಿಳಿಯಲಾರನು. ಆದುದರಿಂದ ಯಾವನೇ ಮೂರ್ಖನ ಮೇಲೆ ವಿಶ್ವಾಸವನ್ನಿಡಬಾರದು.

ಈಗ ಅಧ್ಯಾಪಕರು ಮತ್ತು ಉಪದೇಶಕರಾದ ವಿದ್ವಾಂಸರು ಏನು ಮಾಡಬೇಕು ಎಂಬುದನ್ನು ತಿಳಿಸಿದೆ.

ತಾ ವಿದ್ವಾಂಸಾ ಹವಾಮಹೇ ವಾಂ ತಾ ನೋ ವಿದ್ವಾಂಸಾ ಮನ್ಮ ವೋಚೇತಮದ್ಯ ।
ಪ್ರಾರ್ಚದ್ದಯಮಾನೋ ಯುವಾಕುಃ ॥೩॥

ಪದಾರ್ಥ:- ಯಾವ [**ವಿದ್ವಾಂಸಾ**] ಪೂರ್ಣವಿದ್ಯೆಯನ್ನು ಓದಿದ ಉತ್ತಮನೂ, ಆಪ್ತನೂ ಆದ ಅಧ್ಯಾಪಕನು ಹಾಗೂ ಉಪದೇಶಕ ವಿದ್ವಾಂಸರು [**ಅದ್ಯ**] ಈಗ [**ನಃ**] ನಮಗಾಗಿ [**ಮನ್ಮ**] ಒಪ್ಪಲು ಯೋಗ್ಯವಾದ ವೇದಗಳಲ್ಲಿ ಹೇಳಿರುವ ಜ್ಞಾನದ [**ವೋಚೇತಮ್**] ಉಪದೇಶ ಮಾಡಲಿ. [**ತಾ**] ಆ ಸಮಸ್ತ ವಿದ್ಯೆಯಿಂದ ಉತ್ಪನ್ನವಾದ ಪ್ರಶ್ನೆಗಳಿಗೆ ಉತ್ತರ ಕೊಡಲು ಮತ್ತು [**ವಿದ್ವಾಂಸಾ**] ಎಲ್ಲ ಉತ್ತಮ ವಿದ್ಯೆಗಳನ್ನು ಮುಂಚೆಯೇ ತಿಳಿಸುವಂತೆ [**ವಾಮ್**] ನೀವಿಬ್ಬರು ವಿದ್ವಾಂಸರನ್ನು ನಾವು [**ಹವಾಮಹೇ**] ಸ್ವೀಕರಿಸುತ್ತೇವೆ. ಯಾವ [**ದಯಮಾನಃ**] ಎಲ್ಲರ ಮೇಲೆ ದಯೆಯನ್ನು ಮಾಡುತ್ತಿರುವ [**ಯುವಾಕುಃ**] ಮನುಷ್ಯರನ್ನು ಸಮಸ್ತ ವಿದ್ಯೆಗಳೊಂದಿಗೆ ಸಂಯೋಗ ಮಾಡುವ ಮನುಷ್ಯರಾದ [**ತಾ**] ಆ ನೀವಿಬ್ಬರು ವಿದ್ವಾಂಸರ [**ಪ್ರ, ಅರ್ಚತ್**] ಸತ್ಕಾರಮಾಡಲಿ. ಅವರಿಗೆ ನೀವು ಸತ್ಕಾರ ಮಾಡಿರಿ.

ಭಾವಾರ್ಥ:- ಈ ಪ್ರಪಂಚದಲ್ಲಿ ಯಾವನಿಗಾಗಿ ಸತ್ಯವಿದ್ಯೆಗಳನ್ನು ಕೊಡುವುದು ಅವರಿಗೆ ಮನಸ್ಸು, ವಾಣಿ ಮತ್ತು ಶರೀರದಿಂದ ಸೇವಿಸಿ ಮತ್ತು ಯಾರು ಕಪಟದಿಂದ ವಿದ್ಯೆಯನ್ನು ಮುಚ್ಚಿಡುವನೋ, ಅವನನ್ನು ನಿರಂತರ ತಿರಸ್ಕರಿಸಿರಿ. ಹಾಗೆ ಎಲ್ಲರೂ ಸೇರಿ ವಿದ್ವಾಂಸರಿಗೆ ಗೌರವ ಮತ್ತು ಮೂರ್ಖರಿಗೆ ಅವಮಾನ ನಿರಂತರ ಮಾಡಲಿ. ಅದರಿಂದ ಸತ್ಕಾರವನ್ನು ಪಡೆದ ವಿದ್ವಾಂಸನು ವಿದ್ಯೆಯ ಪ್ರಚಾರ ಮಾಡುವುದರಲ್ಲಿ ಉತ್ತಮೋತ್ತಮ ಯತ್ನಗಳನ್ನು ಮಾಡಲಿ ಮತ್ತು ಅವಮಾನವನ್ನು ಪಡೆದ ಮೂರ್ಖನೂ ಕೂಡ ಮಾಡಲಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ವಿ ಪೃಚ್ಛಾಮಿ ಪಾಕ್ಯಾ೩ ನ ದೇವಾನ್ ವಷಟ್ಕೃತಸ್ಯಾದ್ಭುತಸ್ಯ ದಸ್ರಾ ।
ಪಾತಂ ಚ ಸಹ್ಯಸೋ ಯುವಂ ಚ ರಭ್ಯಸೋ ನಃ ॥೪॥

ಪದಾರ್ಥ:- ಹೇ [ದಸ್ರಾ] ದುಃಖಗಳನ್ನು ದೂರ ಮಾಡುವ, ಓದಿಸುವ ಮತ್ತು ಉಪದೇಶ ಮಾಡುವ ವಿದ್ವಾಂಸರೇ! ನಾನು [ಯುವಮ್] ನಿಮ್ಮಿಬ್ಬರನ್ನು [ಸಹ್ಯಸಃ] ಅತ್ಯಂತ ವಿದ್ಯಾಬಲದಿಂದ ತುಂಬಿರುವ [ರಭ್ಯಸಃ]

ಅತ್ಯಂತ ಉತ್ತಮ ಪುರುಷಾರ್ಥದಿಂದ ಕೂಡಿರುವ [ಪಾಕ್ಯಾ] ವಿದ್ಯೆ ಮತ್ತು ಯೋಗಾಭ್ಯಾಸದಿಂದ ಯಾವ ಬುದ್ಧಿಯು ಪಕ್ವವಾಗಿದೆಯೋ ಆ [ದೇವಾನ್] ವಿದ್ವಾಂಸನ [ನ] ಅಂತೆ [ವಷಟ್ಕೃತಸ್ಯ] ಕ್ರಿಯೆಯಿಂದ ಸಿದ್ಧವಾದ ಶಿಲ್ಪ ವಿದ್ಯೆಯಿಂದ ಉಂಟಾಗುವ [ಅದ್ಭುತಸ್ಯ] ಆಶ್ಚರ್ಯರೂಪ ಕಾರ್ಯಗಳ ವಿಜ್ಞಾನಕ್ಕಾಗಿ ಪ್ರಶ್ನೆಗಳನ್ನು [ವಿ ಪೃಚ್ಛಾಮಿ] ಕೇಳುತ್ತೇನೆ. [ಚ] ಮತ್ತು ನೀವಿಬ್ಬರೂ ಅವರಿಗೆ ಉತ್ತರವನ್ನು ಕೊಡಿರಿ. ಅದರಿಂದ ನಾನು ನಿಮ್ಮ ಸೇವೆಯನ್ನು ಮಾಡುತ್ತೇನೆ [ಚ] ಮತ್ತು ನೀವು [ನಃ] ನಮ್ಮ [ಪಾತಮ್] ರಕ್ಷಣೆ ಮಾಡಿರಿ.

ಭಾವಾರ್ಥ:- ವಿದ್ವಾಂಸರು ನಿತ್ಯ ಬಾಲಕರಿಂದ ಮೊದಲ್ಗೊಂಡು ವೃದ್ಧರ ಪರ್ಯಂತ ಮನುಷ್ಯರಿಗೆ ಸಿದ್ಧಾಂತ ವಿದ್ಯೆಗಳ ಉಪದೇಶ ಮಾಡಲಿ. ಅದರಿಂದ ಅವರ ರಕ್ಷಣೆ ಮತ್ತು ಉನ್ನತಿಯಾಗುವುದು ಮತ್ತು ಅವರೂ ಕೂಡ ಅವರ ಸೇವೆ ಮಾಡಿ ಉತ್ತಮ ಸ್ವಭಾವದಿಂದ ಪ್ರಶ್ನಿಸಿ ವಿದ್ವಾಂಸರಿಗೆ ಕೊಟ್ಟ ಉತ್ತರಗಳನ್ನು ಧಾರಣ ಮಾಡಲಿ. ಹಾಗೆ ಕಲೆತು ಬೆರೆತು ಒಬ್ಬರು ಇನ್ನೊಬ್ಬರಿಗೆ ಉಪಕಾರದಿಂದ ಎಲ್ಲರೂ ಸುಖಿಗಳಾಗಲಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಪ್ರ ಯಾ ಘೋಷೇ ಭೃಗವಾಣೇ ನ ಶೋಭೇ ಯಯಾ ವಾಚಾ ಯಜತಿ ಪಜ್ರಿಯೋ
ವಾಮ್ । ಪ್ರೈಷಯುರ್ನ ವಿದ್ವಾನ್ ॥೫॥

ಪದಾರ್ಥ:- ಹೇ ಸಮಸ್ತ ವಿದ್ಯೆಗಳಲ್ಲಿ ರಮಿಸುವ, ಓದಿಸುವ ಮತ್ತು ಉಪದೇಶ ಮಾಡುವ ವಿದ್ವಾಂಸರೇ! [ಪಜ್ರಿಯಃ] ಪಡೆಯಲು ಯೋಗ್ಯವಾದ ಬೋಧೆಗಳನ್ನು ಪಡೆದ [ಇಷಯುಃ] ಎಲ್ಲ ಜನರ ಅಭೀಷ್ಟ ಸುಖವನ್ನು ಪ್ರಾಪ್ತಿ ಮಾಡಿಸುವ ಮನುಷ್ಯನು [ವಿದ್ವಾನ್] ವಿದ್ಯಾವಂತ ಸಜ್ಜನನ [ನ] ಅಂತೆ [ಯಯಾ] ಯಾವ [ವಾಚಾ] ವಾಣಿಯಿಂದ [ವಾಮ್] ನಿಮ್ಮ [ಪ್ರಯಜತಿ] ಉತ್ತಮ ಸತ್ಕಾರ ಮಾಡುತ್ತಾನೋ ಆ ವಾಣಿಯಿಂದ ನಾನು [ಶೋಭೇ] ಶೋಭಿಸಲಿ. [ಪ್ರ] ಯಾವ ವಿದುಷೀ ಸ್ತ್ರೀ [ಭೃಗವಾಣೇ] ಉತ್ತಮ ಗುಣಗಳಿಂದ ಪಕ್ವವಾದ ಬುದ್ಧಿಯುಳ್ಳ ವಿದ್ವಾಂಸನಂತೆ ಆಚರಣೆ ಮಾಡುವುದರಲ್ಲಿ [ಘೋಷೇ] ಉತ್ತಮವಾಣಿಯ ನಿಮಿತ್ತ ಸತ್ಕಾರ ಮಾಡುವ [ನ] ಅದರಂತೆ ಕಾಣಿಸುವ ವಾಣಿಗಳಲ್ಲಿ ನಾನು ಮೇಲೆ ತಿಳಿಸಿದ ಸ್ತ್ರೀಯ [ಪ್ರ] ಸತ್ಕಾರ ಮಾಡುವೆನು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾಲಂಕಾರವಿದೆ. ಹೇ ಓದಿಸುವ ಮತ್ತು ಉಪದೇಶ ಮಾಡುವ ವಿದ್ವಾಂಸರೇ! ತಾವು ಉತ್ತಮ ಶಾಸ್ತ್ರವನ್ನು ತಿಳಿದ ಶ್ರೇಷ್ಠ ಸಜ್ಜನರಂತೆ ಎಲ್ಲರ ಸುಖಕ್ಕಾಗಿ ನಿತ್ಯವೂ ಪ್ರವೃತ್ತರಾಗಿರಿ. ಹಾಗೆ ವಿದುಷೀ ಸ್ತ್ರೀ ಕೂಡ ಮಾಡಲಿ. ಎಲ್ಲ ಮನುಷ್ಯರು ವಿದ್ಯಾಧರ್ಮ ಮತ್ತು ಉತ್ತಮ ಶೀಲಯುಕ್ತರಾಗುತ್ತಾ ನಿರಂತರ ಶೋಭಾಯುಕ್ತರಾಗಲಿ. ಯಾವನೇ ವಿದ್ವಾಂಸನು ಮೂರ್ಖ ಸ್ತ್ರೀಯೊಂದಿಗೆ ವಿವಾಹ ಮಾಡಿಕೊಳ್ಳಬಾರದು ಮತ್ತು ಯಾವಳೇ ವಿದ್ಯಾವಂತಳಾದ ಸ್ತ್ರೀಯು ಮೂರ್ಖನೊಂದಿಗೆ ವಿವಾಹ ಮಾಡಿಕೊಳ್ಳಬಾರದು. ಆದರೆ ಮೂರ್ಖರು ಮೂರ್ಖರೊಂದಿಗೆ ಮತ್ತು ವಿದ್ವಾಂಸನು ವಿದುಷಿಯೊಂದಿಗೆ ವಿವಾಹ ಸಂಬಂಧ ಮಾಡಬೇಕು.

ಮತ್ತೆ ಓದುವ ಮತ್ತು ಓದಿಸುವವರ ವಿಧಿಯ ಉಪದೇಶವನ್ನು ಹೇಳಲಾಗಿದೆ.

ಶ್ರುತಂ ಗಾಯತ್ರಂ ತಕವಾನಸ್ಯಾ-ಹಂ ಚಿದ್ಧಿ ರಿರೇಭಾಶ್ವಿನಾ ವಾಮ್ ।
ಆಕ್ಷೀ ಶುಭಸ್ಪತೀ ದನ್ ॥೬॥

ಪದಾರ್ಥ:- ಹೇ [ಆಕ್ಷೀ] ರೂಪಗಳನ್ನು ತೋರಿಸುವ ಕಣ್ಣುಗಳಂತೆ ಇರುವ [ಶುಭಸ್ಪತೀ] ಧರ್ಮವನ್ನು ಪಾಲಿಸುವ ಮತ್ತು [ಅಶ್ವಿನಾ] ವಿದ್ಯೆಯನ್ನು ಪಡೆದ ವಿದ್ವಾಂಸನ [ಚಿತ್] ಕೂಡ [ಗಾಯತ್ರಮ್] ಆ ಜ್ಞಾನವನ್ನು ಯಾವ ಗಾನ ಮಾಡುವವನನ್ನು ರಕ್ಷಣೆ ಮಾಡುತ್ತಾನೋ ಅಥವಾ [ಶ್ರುತಮ್] ಕೇಳಿದ ಉತ್ತಮ ವ್ಯವಹಾರಗಳನ್ನು [ಆ ದನ್] ಗ್ರಹಣ ಮಾಡುತ್ತಾ [ಅಹಮ್] ನಾನು [ಹಿ] ನಿಶ್ಚಯವಾಗಿ [ರಿರೇಭ] ಉಪದೇಶ ಮಾಡುವೆನು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ಯಾವ ವಿದ್ವಾಂಸರಿಂದ ಓದಿದ ಮತ್ತು ಆಲಿಸಿದ ಅದನ್ನು ಬೇರೆಯವರಿಗೆ ಮನುಷ್ಯರು ನಿತ್ಯವೂ ಓದಿಸುವುದು ಮತ್ತು ಉಪದೇಶವನ್ನು ಮಾಡಲಿ. ಮನುಷ್ಯನು ಹೇಗೆ ಬೇರೆಯವರಿಂದ ವಿದ್ಯೆ ಪಡೆಯುತ್ತಾನೋ ಹಾಗೆಯೇ ಕೊಡಲಿ. ಏಕೆಂದರೆ ವಿದ್ಯಾದಾನಕ್ಕೆ ಸಮಾನವಾಗಿ ಯಾವುದೇ ಬೇರೆ ಧರ್ಮವೂ ದೊಡ್ಡದಲ್ಲ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಯುವಂ ಹ್ಯಾಸ್ತಂ ಮಹೋ ರನ್ ಯುವಂ ವಾ ಯನ್ನಿರತತಂಸತಮ್ ।
ತಾ ನೋ ವಸೂ ಸುಗೋಪಾ ಸ್ಯಾತಂ ಪಾತಂ ನೋ ವೃಕಾದಘಾಯೋಃ ॥೭॥

ಪದಾರ್ಥ:- ಹೇ [ವಸೂ] ನಿವಾಸ ಮಾಡುವ ಅಧ್ಯಾಪಕೋಪದೇಶಕರೇ! [ರನ್] ಬೇರೆಯವರಿಗೆ ಸುಖವನ್ನುಂಟು ಮಾಡುವ [ಯುವಮ್] ನೀವು [ಯತ್] ಯಾವುದರ ಮೇಲೆ [ಆಸ್ತಂ] ಕುಳಿತುಕೊಳ್ಳುವಿರೋ [ವಾಃ] ಅಥವಾ [ಯುವಮ್] ನೀವಿಬ್ಬರೂ [ನಃ] ನಮಗೆ [ಸುಗೋಪಾ] ಚೆನ್ನಾಗಿ ರಕ್ಷಿಸುವವರು [ಸ್ಯಾತಮ್] ಆಗಿರಿ. ಅವರು [ಮಹಃ] ದೊಡ್ಡ [ಅಘಾಯೋಃ] ತನಗೆ ಅನ್ಯಾಯ ಮಾಡುವುದರಿಂದ ಪಾಪವನ್ನು ಬಯಸುವ [ವೃಕಾತ್] ಆ ಕಳ್ಳರು, ದರೋಡೆಕಾರರಿಂದ [ನಃ] ನಮ್ಮನ್ನು [ಪಾತಮ್] ರಕ್ಷಿಸಿರಿ ಮತ್ತು [ತಾ] ಅವರು [ಹಿ] ನಿಶ್ಚಯವಾಗಿ ನೀವಿಬ್ಬರು [ನಿರತತಂಸತಮ್] ವಿದ್ಯೆ ಮೊದಲಾದ ಉತ್ತಮ ಭೂಷಣಗಳಿಂದ ಪರಿಪೂರ್ಣ ಶೋಭಾಯಮಾನರಾಗಿರಿ.

ಭಾವಾರ್ಥ:- ಹೇಗೆ ಸಭೆ, ಸೇನಾಧೀಶರು ಕಳ್ಳರು ಮೊದಲಾದವರ ಭಯದಿಂದ ಪ್ರಜೆಗಳನ್ನು ರಕ್ಷಿಸುವರೋ ಹಾಗೆಯೇ ಇವರೂ ಕೂಡ ಎಲ್ಲ ಪ್ರಜೆಗಳ ಪಾಲನೆ ಮಾಡಲು ಯೋಗ್ಯರಾಗಲಿ. ಎಲ್ಲ ಅಧ್ಯಾಪಕೋಪದೇಶಕರು ಹಾಗೂ ಶಿಕ್ಷಕರು ಮೊದಲಾದವರು ಧರ್ಮದಲ್ಲಿ ಸ್ಥಿರರಾಗಿ ಅಧರ್ಮದ ವಿನಾಶ ಮಾಡಲಿ.

ಈಗ ರಾಜಧರ್ಮದ ಉಪದೇಶವನ್ನು ಹೇಳಲಾಗಿದೆ.

ಮಾ ಕಸ್ಮೈ ೃ ಧಾತಮಭ್ಯಮಿತ್ರಿಣೇ ನೋ ಮಾಕುತ್ರಾ ನೋ ಗೃಹೇಭ್ಯೋ ಧೇನವೋ ಗುಃ ।
ಸ್ತನಾಭುಜೋ ಅಶಿಶ್ವೀಃ ॥೮॥

ಪದಾರ್ಥ:- ಹೇ ರಕ್ಷಣೆಯನ್ನು ಮಾಡುವ ಸಭಾಸೇನಾಧೀಶರೇ! ನೀವು [ಕಸ್ಮೈ ೃ] ಯಾವ [ಅಮಿತ್ರಿಣೇ] ಯಾವನಿಗೆ ಮಿತ್ರನಿಲ್ಲವೋ ಅಂತಹವನಿಗಾಗಿ ಅಥವಾ ಎಂದರೆ ಎಲ್ಲರ ಶತ್ರುವಿಗಾಗಿ [ನಃ] ನಮ್ಮನ್ನು [ಮಾ ಅಭಿಧಾತಮ್] ಹೇಳಬೇಡಿ, ತಮ್ಮ ರಕ್ಷಣೆಯಿಂದ [ನಃ] ನಮ್ಮ [ಸ್ತನಾಭುಜಃ] ಹಾಲುತುಂಬಿರುವ ಸ್ತನಗಳಿಂದ ತಮ್ಮ ಮಕ್ಕಳ ಸಮೇತ ಮನುಷ್ಯ ಮೊದಲಾದ ಪ್ರಾಣಿಗಳನ್ನು ಸಲಹುವ [ಧೇನವಃ] ಗೋವುಗಳು [ಅಶಿಶ್ವೀಃ] ಕರುಗಳು ರಹಿತ ಅಂದರೆ ಬಂಜೆಯು [ಮಾ] ಆಗದಿರಲಿ ಮತ್ತು ಅವು ನಮ್ಮ [ಗೃಹೇಭ್ಯಃ] ಮನೆಗಳಲ್ಲಿ [ಅಕೃತ್ರ ಗುಃ] ವಿದೇಶಗಳಲ್ಲಿ ಹೋಗದಿರಲಿ.

ಭಾವಾರ್ಥ:- ಪ್ರಜೆಗಳು ರಾಜಪುರುಷರಿಗೆ ಎಂತಹ ಶಿಕ್ಷಣ ಕೊಡಬೇಕೆಂದರೆ ನಮ್ಮನ್ನು ಶತ್ರುಗಳು ಪೀಡಿಸಬಾರದು ಮತ್ತು ನಮ್ಮ ಗೋವು, ಎತ್ತು, ಕುದುರೆ ಮೊದಲಾದ ಪಶುಗಳನ್ನು ಕಳ್ಳರು ಅಪಹರಿಸಬಾರದು. ಹಾಗೆ ತಾವು ಯತ್ನ ಮಾಡಿರಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ದುಹೀಯನ್ ಮಿತ್ರಧಿತಯೇ ಯುವಾಕು ರಾಯೇ ಚ ನೋ ಮಿಮೀತಂ ವಾಜವತ್ಯೈ ।
ಇಷೇ ಚ ನೋ ಮಿಮೀತಂ ಧೇನುಮತ್ಯೈ ॥೯॥

ಪದಾರ್ಥ:- ಹೇ ಎಲ್ಲ ವಿದ್ಯೆಗಳಲ್ಲಿ ವ್ಯಾಪ್ತರಾದ ಸಭಾ ಸೇನಾಧೀಶರೇ! ನೀವಿಬ್ಬರೂ ಯಾವ ಗೋವುಗಳು [ದುಹೀಯನ್] ಹಾಲು ಮೊದಲಾದವುಗಳನ್ನು ಪೂರ್ಣಗೊಳಿಸುತ್ತವೋ ಅವುಗಳನ್ನು [ನಃ] ನಮ್ಮ [ಮಿತ್ರಧಿತಯೇ] ಮಿತ್ರರು ಧಾರಣ ಮಾಡಲಿ ಹಾಗೂ [ಯುವಾಕು] ಸುಖದಿಂದ ಕೂಡಿರಲಿ ಹಾಗೂ ದುಃಖದಿಂದ ಬೇರೆಯಾಗುವ, ಆ [ರಾಯೇ] ಧನದಿಂದ [ಚ] ಮತ್ತು ಜೀವನಕ್ಕಾಗಿ [ಮಿಮೀತಮ್] ಒಪ್ಪಲಿ ಹಾಗೂ [ವಾಜವತ್ಯೈ] ಪ್ರಶಂಸಿತ ಜ್ಞಾನ ಅಥವಾ [ಧೇನುಮತ್ಯೈ] ಗೋವುಗಳ ಜೊತೆ ಇರುವರೋ ಅವರ [ಚ] ಮತ್ತು [ಇಷೇ] ಇಚ್ಛೆಗಾಗಿ [ನಃ] ನಮಗೆ [ಮಿಮೀತಮ್] ಪ್ರೇರಣೆ ಕೊಡಲಿ ಅಂದರೆ ಕಳುಹಿಸಲಿ.

ಭಾವಾರ್ಥ:- ಯಾವನು ಗೋವು ಮೊದಲಾದ ಪಶುಗಳ ಮಿತ್ರರ ಪಾಲನೆ ಮಾಡುತ್ತಾನೋ, ಜ್ಞಾನ ಮತ್ತು ಧನದ ಕಾರಣ ಅವನನ್ನು ಮನುಷ್ಯನು ನಿರಂತರವೂ ಇಟ್ಟುಕೊಳ್ಳಬೇಕು ಮತ್ತು ಎಲ್ಲರನ್ನೂ ಪುರುಷಾರ್ಥದಲ್ಲಿ ಪ್ರವೃತ್ತರಾಗುವಂತೆ ಮಾಡಬೇಕು. ಅದರಿಂದ ಸುಖದಿಂದ ಕೂಡಿ ದುಃಖದಿಂದ ಬೇರೆಯಾಗಲಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಅಶ್ವಿನೋರಸನಂ ರಥ ಅನಶ್ವಂ ವಾಜಿನೀವತೋಃ । ತೇನಾಹಂ ಭೂರಿ ಚಾಕನ ॥೧೦॥

ಪದಾರ್ಥ:- [ಅಹಮ್] ನಾನು [ವಾಜಿನೀವತೋಃ] ಯಾವನು ಪ್ರಶಂಸಿತ ವಿಜ್ಞಾನಯುಕ್ತ ಸಭೆ ಮತ್ತು ಸೇನೆಯಿದೆಯೋ ಆ [ಅಶ್ವಿನೋಃ] ಸಭಾ ಸೇನಾಧೀಶರ [ಅನಶ್ವಮ್] ಅನಶ್ವ ಅಂದರೆ ಯಾವುದರಲ್ಲಿ ಕುದುರೆ ಮೊದಲಾದವುಗಳನ್ನು ತೊಡಗಿಸುವುದಿಲ್ಲವೋ [ರಥಮ್] ಆ ರಮಣ ಮಾಡಲು ಯೋಗ್ಯವಾದ ವಿಮಾನ ಮೊದಲಾದವುಗಳು [ಅಸನಮ್] ಸೇವನೆ ಮಾಡಲಿ ಮತ್ತು [ತೇನ] ಅದರಿಂದ [ಭೂರಿ] ಬಹಳ [ಚಾಕನ] ಪ್ರಕಾಶಿತನಾಗಲಿ.

ಭಾವಾರ್ಥ:- ಯಾವ ಭೂಮಿ, ಜಲ ಮತ್ತು ಅಂತರಿಕ್ಷದಲ್ಲಿ ಚಲಿಸುವ ವಿಮಾನ ಮೊದಲಾದ ಯಾನಗಳನ್ನು ಸಿದ್ಧಪಡಿಸಲಾಗುವುದೋ, ಅವುಗಳಲ್ಲಿ ಪಶುಗಳನ್ನು ಜೋಡಿಸಲಾಗುವುದಿಲ್ಲ. ಆದರೆ ಅವು ನೀರು ಮತ್ತು ಅಗ್ನಿಯ ಕಲಾಯಂತ್ರಗಳಿಂದ ಚಲಿಸುತ್ತವೆ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಅಯಂ ಸಮಹ ಮಾ ತನೂ-ಹ್ಯಾತೇ ಜನಾ ಅನು ।
ಸೋಮಪೇಯಂ ಸುಖೋ ರಥಃ ॥೧೧॥

ಪದಾರ್ಥ:- ಹೇ [ಸಮಹ] ಸತ್ಕಾರ ಸಮೇತರಾಗಿರುವ ವಿದ್ವಾಂಸರೇ! ತಾವು ಯಾವ [ಅಯಮ್] ಈ [ಸುಖ] ಸುಖ ಅಂದರೆ ಯಾವುದರಲ್ಲಿ ಉತ್ತಮೋತ್ತಮ ಅವಕಾಶ ಹಾಗೂ [ರಥಃ] ರಮಣ-ವಿಹಾರ ಮಾಡುವುದಕ್ಕಾಗಿ ಯಾವುದರಲ್ಲಿ ಇರುವುವೋ ಆ ವಿಮಾನ ಮೊದಲಾದವುಗಳಿವೆಯೋ, ಅವುಗಳಿಂದ ಓದಿಸುವ ಮತ್ತು ಉಪದೇಶ ಮಾಡುವವರಿಗೆ [ಅನೂಹ್ಯಾತೇ] ಅನುಕೂಲವಾಗಿ ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಕಳುಹಿಸಲಾಗುತ್ತದೋ ಅದರಿಂದ [ಮಾ] ನನಗೆ [ಜನಾನ್] ಅಥವಾ ಮನುಷ್ಯರು ಅಥವಾ [ಸೋಮಪೇಯಮ್] ಐಶ್ವರ್ಯಯುಕ್ತ ಮನುಷ್ಯರು ಕುಡಿಯಲು ಯೋಗ್ಯವಾದ ಉತ್ತಮ ರಸವನ್ನು [ತನು] ವಿಸ್ತರಿಸಿರಿ ಅಂದರೆ ಉನ್ನತಿ ಮಾಡಿರಿ.

ಭಾವಾರ್ಥ:- ಯಾವ ಅತ್ಯಂತ ಉತ್ತಮ ಅಂದರೆ ಯಾವುದನ್ನು ಸಾಮಾನ್ಯರು ನಿರ್ಮಿಸಲಾದ ವಿಮಾನ ಮುಂತಾದ ಯಾನಗಳನ್ನು ಮಾಡುವ ಶಿಲ್ಪಿಯೋ, ಅವನು ಎಲ್ಲರ ಸತ್ಕಾರಕ್ಕೆ ಯೋಗ್ಯನಾಗಲಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಅಧ ಸ್ವಪ್ನಸ್ಯ ನಿರ್ವಿದೇಽಭುಂಜತಶ್ಚ ರೇವತಃ । ಉಭಾ ತಾ ಬಸ್ರಿ ನಶ್ಯತಃ ॥೧೨॥

ಪದಾರ್ಥ:- ನಾನು [ಸ್ವಪ್ನಸ್ಯ] ನಿದ್ರೆಯ [ಅಭುಂಜತಃ] ತಾವು ಕೂಡ ಭೋಗಿಸದ ಆ [ಚ] ಮತ್ತು [ರೇವತಃ] ಧನಿಕನ ಹತ್ತಿರ [ನಿರ್ವಿದೇ] ಉದಾಸೀನ ಭಾವ ಹೊಂದುವಂತಾಗಲಿ. [ಅಧ] ನಂತರ [ಉಭಾ] ಇಬ್ಬರು ಪುರುಷಾರ್ಥಹೀನರಿದ್ದಾರೋ, [ತಾ] ಅವರಿಬ್ಬರೂ [ಬಸ್ರಿ] ಸುಖವನ್ನು ತಡೆಯುವುದರಿಂದ [ನಶ್ಯತಃ] ನಷ್ಟರಾಗುವರು.

ಭಾವಾರ್ಥ:- ದಾನ ಮಾಡದ ಐಶ್ವರ್ಯವಂತನು ಮತ್ತು ದರಿದ್ರನಾದ ಉದಾರಚಿತ್ತನು ಅವರೀರ್ವರೂ ಆಲಸಿಗಳಾಗುತ್ತಾ ನಿರಂತರ ದುಃಖವನ್ನು ಭೋಗಿಸುವವರಾಗುವರು. ಆದುದರಿಂದ ಎಲ್ಲರೂ ಪುರುಷಾರ್ಥಕ್ಕೋಸ್ಕರ ಅವಶ್ಯವಾಗಿ ಯತ್ನ ಮಾಡಬೇಕು.

ಈ ಸೂಕ್ತದಲ್ಲಿ ಪ್ರಶ್ನೋತ್ತರ ಓದುವ - ಓದಿಸುವ ಮತ್ತು ರಾಜಧರ್ಮದ ವಿಷಯದ ವರ್ಣನೆ ಇರುವುದರಿಂದ ಇದರ ಅರ್ಥಕ್ಕೂ ಪೂರ್ವ ಸೂಕ್ತಾರ್ಥಕ್ಕೂ ಸಂಬಂಧವಿದೆ ಎಂದು ತಿಳಿಯಬೇಕು.

ನೂರ ಇಪ್ಪತ್ತನೆಯ ಸೂಕ್ತ ಸಮಾಪ್ತ

ಸೂಕ್ತ ೧೨೧

ಮಂತ್ರಸಂಖ್ಯೆ ೧೫ । ಋಷಿಃ - ಕಕ್ಷೀವಾನ್ ದೈರ್ಘತಮಸ ಔಶಿಜಃ । ದೇವತಾ - ಇಂದ್ರೋ ವಿಶ್ವೇ ದೇವಾ ವಾ।
ಛಂದಃ - ತ್ರಿಷ್ಟುಪ್ । ಸ್ವರಃ - ೧, ೭, ೧೩ ಪಂಚಮಃ, ಧೈವತಃ.

ಸೂಕ್ತದ ಮೊದಲ ಮಂತ್ರದಲ್ಲಿ ಸ್ತ್ರೀ-ಪುರುಷರು ಹೇಗೆ ವರ್ತಿಸಬೇಕು ಈ ಉಪದೇಶ ಮಾಡಿದೆ.

ಕದಿತ್ಥಾ ನೄಃ ಪಾತ್ರಂ ದೇವಯತಾಂ ಶ್ರವದ್ ಗಿರೋ ಅಂಗಿರಸಾಂ ತುರಣ್ಯನ್ ।
ಪ್ರ ಯದಾನಡ್ವಿಶ ಆ ಹರ್ಮ್ಯಸ್ಯೋ-ರು ಕ್ರಂಸತೇ ಅಧ್ವರೇ ಯಜತ್ರಃ ॥೧॥

ಪದಾರ್ಥ:- ಹೇ ಪುರುಷ! ನೀನು [ಅಧ್ವರೇ] ವಿನಾಶ ಮಾಡಲು ಯೋಗ್ಯವಲ್ಲದ ಪ್ರಜಾಪಾಲನೆ ರೂಪೀ ವ್ಯವಹಾರಗಳಲ್ಲಿ [ಯಜತ್ರಃ] ತೊಡಗಿಕೊಳ್ಳುವ [ತುರಣ್ಯನ್] ಶೀಘ್ರವಾಗಿ ಜ್ಞಾನವನ್ನು ಬಯಸುವಂತಹ [ನೄನ್]

ಕಲಿಸಲು ಯೋಗ್ಯನಾದ ಬಾಲಕ ಅಥವಾ ಮನುಷ್ಯನ [ಪಾತ್ರಮ್] ಪಾಲನೆ ಮಾಡಲು ಹಾಗೂ [ದೇವಯತಾಮ್] ಬಯಸುವ [ಅಂಗಿರಸಾಮ್] ಮತ್ತು ವಿದ್ಯೆಯ ಸಿದ್ಧಾಂತ ರಸವನ್ನು ಪಡೆದಿರುವ ವಿದ್ವಾಂಸರ [ಯತ್] ಯಾವ [ಗಿರಃ] ವೇದವಿದ್ಯೆಯ ಶಿಕ್ಷಾರೂಪ ವಾಣಿಗಳನ್ನು [ಶ್ರವತ್] ಕೇಳಲಿ. ಅವುಗಳನ್ನು [ಇತ್ಥಾ] ಈ ಪ್ರಕಾರವಾಗಿ [ಕತ್] ಯಾವಾಗ ಕೇಳುತ್ತೇವೆ ಮತ್ತು ಹೇಗೆ ಧರ್ಮಾತ್ಮ ರಾಜನು [ಹರ್ಮ್ಯಸ್ಯ] ನ್ಯಾಯಾಲಯದ ಮಧ್ಯೆ ಇರುವ ವಿನಯದಿಂದ [ವಿಶಃ] ಪ್ರಜೆಗಳಿಗೆ [ಪ್ರಾವಟ್] ಪ್ರಾಪ್ತನಾಗಲಿ. [ಉರು] ಮತ್ತು ಬಹಳ [ಆ ಕ್ರಂಸತೇ] ಆಕ್ರಮಣ ಮಾಡಲಿ, ಅಂದರೆ ಅವರ ವ್ಯವಹಾರಗಳಲ್ಲಿ ಬುದ್ಧಿಯನ್ನು ಶೀಘ್ರವಾಗಿಸಲಿ, ಈ ರೀತಿ ಯಾವಾಗ ಆಗುವುದು?

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಹೇ ಸ್ತ್ರೀ-ಪುರುಷರೇ! ಹೇಗೆ ಶಾಸ್ತ್ರವೇತ್ತನಾದ ವಿದ್ವಾಂಸನು ಎಲ್ಲ ಮನುಷ್ಯರಿಗೂ ಸತ್ಯದ ಬೋಧೆ ಮಾಡುವನೋ ಮತ್ತು ಅಸತ್ಯದಿಂದ ತಡೆಯುತ್ತಾ ಉತ್ತಮ ಶಿಕ್ಷಣ ಕೊಡುವನೋ ಹಾಗೆ ತನ್ನ ಸಂತಾನ ಮೊದಲಾದವುಗಳಿಗೆ ತಾವು ಉತ್ತಮ ಶಿಕ್ಷಣವನ್ನು ನಿರಂತರ ಕೊಡಿರಿ, ಅದರಿಂದ ನಿಮ್ಮ ಕುಲದಲ್ಲಿ ಅಯೋಗ್ಯ ಸಂತಾನವು ಎಂದಿಗೂ ಉತ್ಪನ್ನವಾಗದಿರಲಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಸ್ತಂಭೀದ್ಧ ದ್ಯಾಂ ಸ ಧರುಣಂ ಪ್ರುಷಾಯ-ದೃಭುರ್ವಾಜಾಯ ದ್ರವಿಣಂ ನರೋ ಗೋಃ ।
ಅನು ಸ್ವಜಾಂ ಮಹಿಷಶ್ಚಕ್ಷತ ವ್ರಾಂ ಮೇನಾಮಶ್ವಸ್ಯ ಪರಿ ಮಾತರಂ ಗೋಃ ॥೨॥

ಪದಾರ್ಥ:- ಹೇಗೆ [ಮಹಿಷಃ] ಮಹಾಸೂರ್ಯನು [ಗೌಃ] ಭೂಮಿಯ ಧಾರಣ ಮಾಡುವನೋ ಹಾಗೆ [ಋಭುಃ] ಸಕಲ ವಿದ್ಯಾಯುಕ್ತ ಆಪ್ತಬುದ್ಧಿಯ ಮೇಧಾವಿಯು [ನರಃ] ಧರ್ಮ ಮತ್ತು ವಿದ್ಯೆಯ ಪ್ರಾಪ್ತಮಾಡುವ ಸಜ್ಜನನು [ವಾಜಾಯ] ವಿಜ್ಞಾನ ಅಥವಾ ಅನ್ನಕ್ಕಾಗಿ [ಅಶ್ವಸ್ಯ] ವ್ಯಾಪ್ತವಾಗುವ ಯೋಗ್ಯ ರಾಜ್ಯದ [ಸ್ವಜಾಮ್] ತಮ್ಮಿಂದ ಉತ್ಪನ್ನ ಮಾಡಲ್ಪಟ್ಟ [ವ್ರಾಮ್] ಸ್ವೀಕರಿಸಲು ಯೋಗ್ಯವಾದ [ಮಾತರಮ್] ತಾಯಿಯಂತೆ ಪಾಲಿಸುವ [ಮೇನಾಮ್] ವಿದ್ಯೆ ಮತ್ತು ಉತ್ತಮ ಶಿಕ್ಷಣದಿಂದ ಪಡೆದ ವಾಣಿಯನ್ನು [ಪರಿ, ಚಕ್ಷತ] ಎಲ್ಲ ಕಡೆಗಳಿಂದ ಹೇಳುವ ಅಥವಾ ಹೇಗೆ ಸೂರ್ಯನು [ದ್ಯಾಮ್] ಪ್ರಕಾಶವನ್ನು [ಸ್ತಂಭೀತ್] ಧಾರಣ ಮಾಡುತ್ತಾನೋ ಹಾಗೆ [ಸ ಹ] ಆ [ಗೋಃ] ಪೃಥಿವಿಯ ಮೇಲೆ [ದ್ರವಿಣಾಮ್] ಧನವನ್ನು ವೃದ್ಧಿಸುವ ಹೊಲವನ್ನು [ಧರುಣಮ್] ಜಲದಂತೆ [ಅನು ಪ್ರುಷಾಯತ್] ಸಿಂಪಡಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ಆಪ್ತನು ಅಂದರೆ ಉತ್ತಮ ಶಾಸ್ತ್ರೀ ವಿದ್ವಾಂಸನು ಸಂಗದಿಂದ ವಿದ್ಯೆ, ವಿನಯ ಮತ್ತು ನ್ಯಾಯ ಮೊದಲಾದವುಗಳನ್ನು ಧಾರಣ ಮಾಡಲಿ. ಅವನು ಸುಖದಿಂದ ವೃದ್ಧಿಸಲಿ ಮತ್ತು ಹೆಚ್ಚಿನ ಸತ್ಕಾರಕ್ಕೆ ಯೋಗ್ಯನಾಗಲಿ.

ಈಗ ರಾಜಧರ್ಮದ ವಿಷಯವನ್ನು ಹೇಳಲಾಗಿದೆ.

ನಕ್ಷದ್ಧವಮರುಣೀಃ ಪೂರ್ವ್ಯಂ ರಾಟ್ ತುರೋ ವಿಶಾಮಂಗಿರಸಾಮನು ದ್ಯೂನ್ ।
ತಕ್ಷದ್ ವಜ್ರಂ ನಿಯುತಂ ತಸ್ತಂಭದ್ ದ್ಯಾಂ ಚತುಷ್ಪದೇ ನರ್ಯಾಯ ದ್ವಿಪಾದೇ ॥೩॥

ಪದಾರ್ಥ:- ಯಾವ [ತುರಃ] ಶೀಘ್ರವಾಗಿ ಆಲಸ್ಯವನ್ನು ಬಿಟ್ಟ ವಿದ್ವಾಂಸನು [ಚತುಷ್ಪದೇ] ಗೋವು ಮೊದಲಾದ ಪಶುಗಳು ಅಥವಾ [ದ್ವಿಪಾದೇ] ಮನುಷ್ಯ ಮೊದಲಾದ ಪ್ರಾಣಿಗಳು ಅಥವಾ [ನರ್ಯಾಯ]

ಮನುಷ್ಯರಲ್ಲಿ ಅತ್ಯುತ್ತಮ ಮಹಾತ್ಮರಿಗಾಗಿ [ಅನು ದ್ಯೂನ್] ಪ್ರತಿದಿನ [ಪೂರ್ವ್ಯಮ್] ಪೂರ್ವ ವಿದ್ವಾಂಸರು ಅನುಷ್ಠಾನ ಮಾಡಿರುವ [ಹವಮ್] ಕೊಡು-ತೆಗೆದುಕೊಳ್ಳುವ ಯೋಗ್ಯ ಮತ್ತು [ಅರುಣೀಃ] ಪ್ರಾತಃಕಾಲದ ಕೆಂಪು ಬಣ್ಣದ ಪ್ರಕಾಶಕ್ಕೆ ಸಮಾನವಾಗಿ ರಾಜನೀತಿಯನ್ನು [ನಕ್ಷತ್] ಪಡೆಯಲಿ. [ನಿಯುತಮ್] ನಿತ್ಯ ಕಾರ್ಯಗಳಲ್ಲಿ ಯುಕ್ತರಾಗಿರುವ [ವಜ್ರಮ್] ಶಸ್ತ್ರಾಸ್ತ್ರಗಳನ್ನು [ತಕ್ಷತ್] ಹರಿತ (ಚೂಪು) ಮಾಡಿ ಶತ್ರುಗಳನ್ನು ವಧಿಸಲಿ. ಹಾಗೂ ಅವರ [ದ್ಯಾಮ್] ವಿದ್ಯೆ ಮತ್ತು ನ್ಯಾಯದ ಪ್ರಕಾಶವನ್ನು [ತಸ್ತಂಭತ್] ನಿಬಂಧಗೊಳಿಸಲಿ. ಆ [ಅಂಗಿರಸಾಮ್] ಅಂಗಗಳ ರಸ ಅಥವಾ ಪ್ರಾಣದಂತೆ ಪ್ರಿಯವಾದ [ವಿಶಾಮ್] ಪ್ರಜೆಗಳ ಮಧ್ಯೆ [ರಾಟ್] ಪ್ರಕಾಶಮಾನರಾಜನಾಗುವನು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವ ಮನುಷ್ಯನು ವಿನಯ ಮೊದಲಾದವುಗಳಿಂದ ಮನುಷ್ಯ ಮೊದಲಾದ ಪ್ರಾಣಿಗಳು ಮತ್ತು ಗೋವು ಮೊದಲಾದ ಪಶುಗಳಿಂದ ವ್ಯತೀತವಾದ ಆಪ್ತರು, ನಿಷ್ಕಪಟರು, ಸತ್ಯವಾದಿಗಳು ಆದ ರಾಜರಂತೆ ಪಾಲಿಸುವ ಮತ್ತು ಅನ್ಯಾಯದಿಂದ ಯಾರಿಗೂ ದಂಡಿಸುವುದಿಲ್ಲವೋ ಅವರೇ ಸುಖಗಳನ್ನು ಪಡೆಯುತ್ತಾರೆ, ಬೇರೆಯವರಲ್ಲ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಅಸ್ಯ ಮದೇ ಸ್ವರ್ಯಂ ದಾ ಋತಾಯಾ-ಪೀವೃತಮುಸ್ರಿಯಾಣಾಮನೀಕಮ್ ।
ಯದ್ಧ ಪ್ರಸರ್ಗೇ ತ್ರಿಕಕುಮ್ನಿವರ್ತ-ದಪ ದ್ರುಹೋ ಮಾನುಷಸ್ಯ ದುರೋ ವಃ ॥೪॥

ಪದಾರ್ಥ:- [ಯತ್] ಯಾವ [ತ್ರಿಕಕುಪ್] ಯಾವನ ಪೂರ್ವ ಮೊದಲಾದ ದಿಕ್ಕುಗಳಲ್ಲಿ ಸೇನೆ ಅಥವಾ ಓದಿಸುವ ಮತ್ತು ಉಪದೇಶ ಮಾಡುವವರಿಂದ ಕೂಡಿರುವ ಮನುಷ್ಯನಿರುವನೋ, [ಅಸ್ಯ] ಈ ಪ್ರತ್ಯಕ್ಷ [ಮಾನುಷಸ್ಯ] ಮನುಷ್ಯನ [ಉಸ್ರಿಯಾಣಾಮ್] ಗೋವುಗಳ [ಪ್ರಸರ್ಗೇ] ಉತ್ತಮತೆಯಿಂದ ಉತ್ಪನ್ನಮಾಡುವ ರೂಪವು [ಮದೇ] ಆನಂದದ ನಿಮಿತ್ತ [ಋತಾಯ] ಸತ್ಯ ವ್ಯವಹಾರ ಅಥವಾ ಜಲಕ್ಕಾಗಿ [ಅಪೀವೃತಮ್] ಸುಖ ಮತ್ತು ಬಲದಿಂದ ಕೂಡಿದ [ಸ್ವರ್ಯಮ್] ವಿದ್ಯೆ ಮತ್ತು ಉತ್ತಮ ಶಿಕ್ಷಣರೂಪ ವಚನಗಳಲ್ಲಿ ಶ್ರೇಷ್ಠವಾದ [ಅನೀಕಮ್] ಸೇನೆಯನ್ನು [ದಾಃ] ಕೊಡಲಿ ಹಾಗೂ ಈ [ದ್ರುಹಃ] ಗೋವು ಮೊದಲಾದ ಪಶುಗಳ ದ್ರೋಹಿ ಅಂದರೆ ಕೊಲ್ಲುವ ಪಶುಹಿಂಸಕ ಮನುಷ್ಯರನ್ನು [ನಿವರ್ತತ್] ತಡೆಯಲಿ, ಹಿಂಸೆಯಾಗದಿರಲಿ, [ದುರಃ] ಉಕ್ತ ದುಷ್ಟರನ್ನು ದಾರಗಳಲ್ಲಿ [ಅಪ ವಃ] ಬಂಧಿಸಲಿ. [ಹ] ಅವನೇ ಚಕ್ರವರ್ತಿ ರಾಜನಾಗಲು ಯೋಗ್ಯನು.

ಭಾವಾರ್ಥ:- ಯಾವನು ಪ್ರಜೆಗಳ ಮತ್ತು ಗೋವು ಮೊದಲಾದ ಪ್ರಾಣಿ(ಪಶು)ಗಳ ಸುಖಕ್ಕಾಗಿ ಹಿಂಸಕರಾದ ದುಷ್ಟರನ್ನು ನಿವೃತ್ತಿಪಡಿಸಿ ಧರ್ಮದಲ್ಲಿ ಪ್ರಕಾಶಮಾನನಾಗುವನೋ ಮತ್ತು ಪರೋಪಕಾರಿಯಾಗುವನೋ ಅವನೇ ರಾಜಪುರುಷರಲ್ಲಿ ಉತ್ತಮನಾಗುವನು. ಯಾರು ಅಧರ್ಮ ಮಾರ್ಗಗಳನ್ನು ತಡೆದು ಪ್ರಕಾಶಿತರಾಗುವರೋ, ಅವರೇ ರಾಜಕರ್ಮಗಳಿಗೆ ಯೋಗ್ಯರಾಗುವರು.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ತುಭ್ಯಂ ಪಯೋ ಯತ್ ಪಿತರಾವನೀತಾಂ ರಾಧಃ ಸುರೇತಸ್ತುರಣೇ ಭುರಣ್ಯೂ ।
ಶುಚಿ ಯತ್ತೇ ರೇಕ್ಣ ಆಯಜಂತ ಸಬರ್ದುಘಾಯಾಃ ಪಯ ಉಸ್ರಿಯಾಯಾಃ ॥೫॥

ಪದಾರ್ಥ:- ಹೇ ಸಜ್ಜನನೇ! [ಯತ್] ಯಾವ [ತುರಣೇ] ಹಾಲು ಮೊದಲಾದ ಪದಾರ್ಥಗಳನ್ನು ಕುಡಿಯಲು ಶೀಘ್ರಗೊಳಿಸುತ್ತಾ [ತುಭ್ಯಮ್] ನಿನಗಾಗಿ [ಭುರಣ್ಯೂ] ಧಾರಣ ಮತ್ತು ಪುಷ್ಟಿ ಮಾಡುವ [ಪಿತರೌ] ತಾಯಿ-ತಂದೆ [ಸುರೇತಃ] ಯಾವುದರಿಂದ ಉತ್ತಮ ವೀರ್ಯ ಉತ್ಪನ್ನವಾಗುವುದೋ ಆ [ಪಯಃ] ಹಾಲು ಮತ್ತು [ರಾಧಃ] ಉತ್ತಮ ಸಿದ್ಧಿಪಡಿಸುವ ಧನದ [ಅನೀತಾಮ್] ಪ್ರಾಪ್ತಿ ಮಾಡಿಸಲಿ ಮತ್ತು ಹೇಗೆ [ಯತ್] ಹಾಲು ಮೊದಲಾದವುಗಳನ್ನು ಕುಡಿಯಲು ಶೀಘ್ರ ಪಡುತ್ತಾ ಯಾವ [ತೇ] ನಿನಗಾಗಿ ದಯಾಳುವಾದ ಗೋವು ಮೊದಲಾದ ಪಶುಗಳನ್ನು ಇಟ್ಟುಕೊಳ್ಳುವ ಮನುಷ್ಯನು [ಸಬರ್ದುಘಾಯಾಃ] ಯಾವುದರಿಂದ ಒಂದೇ ತೆರನಾದ ಸುಖವನ್ನು ಧಾರಣ ಮಾಡಿಸುವ ಆ ಹಾಲನ್ನು ಪೂರ್ಣಗೊಳಿಸುವಂತಹ [ಉಸ್ರಿಯಾಯಾಃ] ಉತ್ತಮ ಪುಷ್ಟಿಯನ್ನು ಕೊಡುವ ಗೋವಿನ [ಶುಚಿ] ಶುದ್ಧವು ಪವಿತ್ರವು [ಪಯಃ] ಕುಡಿಯಲು ಯೋಗ್ಯವು ಆದ ಹಾಲನ್ನು [ರೇಕ್ಣಃ] ಪ್ರಶಂಸಿತ ಧನದಂತೆ [ಆ, ಅಯಜಂತ] ಚೆನ್ನಾಗಿ ಕೊಡಲಿ. ಹಾಗೆಯೇ ಆ ಮನುಷ್ಯರನ್ನು ನೀನು ನಿರಂತರ ಸೇವಿಸು ಮತ್ತು ಅವರ ಉಪಕಾರವನ್ನು ಎಂದಿಗೂ ಬಿಡಬೇಡ.

ಭಾವಾರ್ಥ:- ಮನುಷ್ಯರು ಹೇಗೆ ತಾಯಿ-ತಂದೆ ಮತ್ತು ವಿದ್ವಾಂಸರ ಸೇವೆಯಿಂದ ಧರ್ಮದೊಂದಿಗೆ ಸುಖಗಳನ್ನು ಪಡೆಯುವರೋ, ಹಾಗೆಯೇ ಗೋವು ಮೊದಲಾದ ಪಶುಗಳ ರಕ್ಷಣೆಯಿಂದ ಧರ್ಮದೊಂದಿಗೆ ಸುಖ ಪಡೆಯುವರು. ಇವರ ಮನಸ್ಸಿಗೆ ವಿರುದ್ಧವಾದ ಆಚರಣೆಯನ್ನು ಎಂದಿಗೂ ಮಾಡಬಾರದು. ಏತಕ್ಕೆಂದರೆ, ಇವು ಎಲ್ಲರಿಗೂ ಉಪಕಾರ ಮಾಡುವ ಪ್ರಾಣಿಗಳಾಗಿವೆ.

ಮತ್ತೆ ಮನುಷ್ಯನು ಹೇಗೆ ವರ್ತಿಸಬೇಕು ಎಂಬುದನ್ನು ತಿಳಿಸಲಾಗಿದೆ.

ಅಧ ಪ್ರ ಜಜ್ಞೇ ತರಣಿರ್ಮಮತ್ತು ಪ್ರ ರೋಚ್ಯಸ್ಯಾ ಉಷಸೋ ನ ಸೂರಃ ।
ಇಂದುರ್ಯೇಭಿರಾಷ್ಟ ಸ್ವೇದುಹವ್ಯೈಃ ಸ್ರುವೇಣ ಸಿಂಚಂಜರಣಾಭಿ ಧಾಮ ॥೬॥

ಪದಾರ್ಥ:- ಹೇ ಉತ್ತಮ ಕರ್ಮಗಳ ಅನುಷ್ಠಾನವನ್ನು ಮಾಡುವ ಮನುಷ್ಯನೇ! ನೀನು [ಉಪಸಃ] ಪ್ರಭಾತ ವೇಳೆಯಿಂದ [ಸೂರಃ] ಸೂರ್ಯನ [ನ] ಅಂತೆ [ಯೇಭಿಃ] ಯಾವುದರಿಂದ [ಸ್ವೇದುಹವ್ಯೈಃ] ತಾನು ಕೊಟ್ಟು ತೆಗೆದುಕೊಳ್ಳಲು ಯೋಗ್ಯವಾದ ಹಾಲು ಮೊದಲಾದ ಪದಾರ್ಥಗಳಿಂದ ಐಶ್ವರ್ಯ ಅಂದರೆ ಉತ್ತಮ ಪದಾರ್ಥಗಳು ಸಿದ್ಧವಾಗುತ್ತವೋ, ಅವುಗಳಿಂದ ಮತ್ತು [ಸ್ರುವೇಣ] ಸ್ರುವ ಮೊದಲಾದವುಗಳ ಯೋಗದಿಂದ [ಧಾಮ] ಯಜ್ಞಭೂಮಿಯನ್ನು [ಅಭಿಸಿಂಚನ್] ಎಲ್ಲ ಕಡೆಗಳಿಂದ ಸಿಂಚನೆ ಮಾಡುತ್ತಾ ಸಜ್ಜನರಂತೆ [ಅಸ್ಯಾಃ] ಈ ಗೋವುಗಳ ಹಾಲು ಮೊದಲಾದ ಪದಾರ್ಥಗಳಿಂದ [ಪ್ರ ರೋಚಿ] ಪ್ರಪಂಚದಲ್ಲಿ ಚೆನ್ನಾಗಿ ಪ್ರಕಾಶಮಾನನಾಗು ಮತ್ತು [ಇಂದು] ಐಶ್ವರ್ಯದಿಂದ ಕೂಡಿ [ಜರಣಾ] ಪ್ರಶಂಸಿತ ಕರ್ಮಗಳನ್ನು [ಅಷ್ಟ] ಪಡೆದುಕೋ. [ತರಣಿಃ] ದುಃಖದಿಂದ ಪಾರಾಗುವ ಸುಖದ ವಿಸ್ತಾರ ಮಾಡುವ ಅಂದರೆ ವೃದ್ಧಿಸುವ ನೀನು [ಮಮತ್ತು] ಆನಂದವನ್ನು ಭೋಗಿಸು. [ಅಧ] ಇದರ ಅನಂತರ [ಪ್ರ ಜಜ್ಞೇ] ಪ್ರಸಿದ್ಧನಾಗು.

ಭಾವಾರ್ಥ:- ಈ ಮಂತ್ರದಲ್ಲಿ ಉಪಮಾ ಮತ್ತು ವಾಚಕಲುಪ್ತೋಪಮಾಲಂಕಾರಗಳಿವೆ. ಮನುಷ್ಯನು ಗೋವು ಮೊದಲಾದ ಪಶುಗಳನ್ನು ಇಟ್ಟುಕೊಂಡು ಮತ್ತು ಅವುಗಳನ್ನು ವೃದ್ಧಿಸಿ ವೈದ್ಯಶಾಸ್ತ್ರಾನುಸಾರ ಆ ಪಶುಗಳ ಹಾಲು ಮೊದಲಾದವುಗಳನ್ನು ಸೇವಿಸುತ್ತಾ ಬಲಿಷ್ಠ ಮತ್ತು ನಿರಂತರ ಐಶ್ವರ್ಯಯುಕ್ತರಾಗಲಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಸ್ವಿಧ್ಮಾ ಯದ್ ವನಧಿತಿರಪಸ್ಯಾತ್ ಸೂರೋ ಅಧ್ವರೇ ಪರಿ ರೋಧನಾ ಗೋಃ ।
ಯದ್ಧ ಪ್ರಭಾಸಿ ಕೃತ್ವ್ಯಾ ಅನು ದ್ಯೂನನರ್ವಿಶೇ ಪಶ್ವಿಷೇ ತುರಾಯ ॥೭॥

ಪದಾರ್ಥ:- ಹೇ ಸಜ್ಜನನೇ! ನೀನು [ಯತ್] ಯಾವ ಕ್ರಿಯೆಯ [ಸ್ವಿಧ್ಮಾ] ಯಾವುದರಿಂದ ಸುಂದರ ಸುಖದ ಪ್ರಕಾಶವಾಗುವುದೋ ಆ [ವನಧಿತಿಃ] ವನಗಳ ಧಾರಣ ಅಂದರೆ ರಕ್ಷಣೆ ಮಾಡಿದ ಮತ್ತು ಯಾವ [ಗೌಃ] ಗೋವುಗಳ [ರೋಧನಾ] ರಕ್ಷಣೆಗಾಗಿ ಕಾರ್ಯ ಮಾಡಿರುವ ಅವುಗಳಿಂದ ನೀನು [ಅಧ್ವರೇ] ಯಾವುದರಲ್ಲಿ ಹಿಂಸೆ ಮೊದಲಾದ ದುಃಖಗಳಿಲ್ಲವೋ, ಆ ರಕ್ಷಣೆಯ ನಿಮಿತ್ತ [ಕೃತ್ವ್ಯಾನ್] ಉತ್ತಮ ಕಾರ್ಯಗಳನ್ನು [ಅನು ದ್ಯೂನ್] ಪ್ರತಿದಿನ [ಸೂರಃ] ಪ್ರೇರಣೆಯನ್ನೀಯುವ ಸೂರ್ಯಲೋಕದಂತೆ [ಅನರ್ವಿಶೇ] ಕುಳಿತು ಪಯಣಿಸುವ ಎತ್ತಿನಗಾಡಿ ಮೊದಲಾದವುಗಳಿಗಾಗಿ ಮತ್ತು [ಪಶ್ವಿಷೇ] ಪಶುಗಳನ್ನು ವೃದ್ಧಿಸುವ ಇಚ್ಛೆಗಾಗಿ ಮತ್ತು [ತುರಾಯ] ಶೀಘ್ರಗಮನಕ್ಕಾಗಿ [ಯತ್] ಯಾವ [ಹ] ನಿಶ್ಚಯವಾಗಿ [ಪ್ರಭಾಸಿ] ಪ್ರಕಾಶಿತವಾಗುತ್ತದೋ, ಅಂತಹ ನೀನು [ಪರ್ಯಪಸ್ಯಾತ್] ನಿನಗಾಗಿ ಉತ್ತಮೋತ್ತಮ ಕರ್ಮಗಳನ್ನು ಅಪೇಕ್ಷಿಸು.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಯಾವನು ಪಶುಗಳ ರಕ್ಷಣೆ ಮತ್ತು ವೃದ್ಧಿ ಮೊದಲಾದವುಗಳಿಗಾಗಿ ವನಗಳ ರಕ್ಷಣೆ, ಅವುಗಳಲ್ಲಿ ಪಶುಗಳ ಓಡಾಟ, ಹಾಲು ಮುಂತಾದವುಗಳ ಸೇವನೆ ಮಾಡಿ ವ್ಯವಸಾಯ ಮೊದಲಾದ ಕಾರ್ಯಗಳನ್ನು ಯಥಾರೀತಿ ಮಾಡಲಿ. ಅವರು ರಾಜ್ಯದ ಐಶ್ವರ್ಯದಿಂದ ಸೂರ್ಯನಂತೆ ಪ್ರಕಾಶಮಾನರಾಗುವರು. ಮತ್ತು ಗೋವು ಮೊದಲಾದ ಪಶುಗಳನ್ನು ಕೊಲ್ಲುವವರಲ್ಲ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ಅಷ್ಟಾ ಮಹೋ ದಿವ ಆದೋ ಹರೀ ಇಹ ದ್ಯುಮ್ನಾಸಾಹಮಭಿ ಯೋಧಾನ ಉತ್ಸಮ್ ।
ಹರಿಂ ಯತ್ತೇ ಮಂದಿನಂ ದುಕ್ಷನ್ ವೃಧೇ ಗೋರಭಸಮದ್ರಿಭಿರ್ವಾತಾಪ್ಯಮ್ ॥೮॥

ಪದಾರ್ಥ:- ಹೇ ರಾಜ! [ತೇ] ನಿನ್ನ [ಯತ್] ಯಾವ [ಯೋಧಾನಃ] ಯುದ್ಧ ಮಾಡುವವರು [ವೃಧೇ] ಸುಖಗಳನ್ನು ಹೆಚ್ಚಿಸುವುದಕ್ಕಾಗಿ [ಆದಃ] ರಸ ಮೊದಲಾದ ಪದಾರ್ಥಗಳನ್ನು ಭಕ್ಷಿಸಲು ಮತ್ತು [ಅಷ್ಟಾ] ಎಲ್ಲ ಕಡೆ ವ್ಯಾಪ್ತವಾಗುವ ಸೂರ್ಯಲೋಕವು [ಮಹಃ] ಅಧಿಕ [ದಿವಃ] ದೀಪ್ತಿಯಿಂದ ತನ್ನ [ಹರಿ] ಪ್ರಕಾಶ ಮತ್ತು ಆಕರ್ಷಣೆಯನ್ನು [ಅದ್ರಿಭಿಃ] ಮೇಘ ಅಥವಾ ಪರ್ವತಗಳೊಂದಿಗೆ ಪ್ರತ್ಯಕ್ಷವಾಗುವಂತೆ [ಇಹ] ಈ ಪ್ರಪಂಚದಲ್ಲಿ [ಉತ್ಸಮ್] ಭಾವಿಯನ್ನು ತೋಡಿ [ದ್ಯುಮ್ನಾಸಾಹಮ್] ಧನವು ಲಭಿಸುವಂತಹ [ಹರಿಮ್] ಕುದುರೆ ಮತ್ತು [ಮಂದಿನಮ್] ಮನೋಹರವಾದ [ವಾತಾಪ್ಯಮ್] ಶುದ್ಧ ವಾಯುವಿನಿಂದ ಪಡೆಯಲು ಯೋಗ್ಯವಾದ [ಗೋರಭಸಮ್] ಗೋವುಗಳ ವೃದ್ಧಾವಸ್ಥೆಯನ್ನು [ಅಭಿ ದುಕ್ಷನ್] ಎಲ್ಲ ಪ್ರಕಾರಗಳಿಂದ ಪೂರ್ಣಗೊಳಿಸಲಿ. ಅವು ತಮಗೆ ಸತ್ಕಾರ ಮಾಡಲು ಯೋಗ್ಯವಾಗಿವೆ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ನೀವು ಹೇಗೆ ಸೂರ್ಯನು ತನ್ನ ಪ್ರಕಾಶದಿಂದ ಎಲ್ಲ ಜಗತ್ತನ್ನು ಆನಂದಪಡಿಸಿ ತನ್ನ ಆಕರ್ಷಣಶಕ್ತಿಯಿಂದ ಭೂಗೋಳದ ಧಾರಣ ಮಾಡುತ್ತಾನೋ, ಹಾಗೆಯೇ ನದಿ, ಪ್ರವಾಹ, ಬಾವಿಗಳು, ಕೆರೆಗಳು, ಕುಂಟೆಗಳು ಮುಂತಾದವುಗಳನ್ನು ನಿರ್ಮಿಸಿ

ವನ ಮತ್ತು ಪರ್ವತಗಳಲ್ಲಿ ಹುಲ್ಲು ಮೊದಲಾದವುಗಳನ್ನು ಹೆಚ್ಚಿಸಿ ಗೋವು ಮತ್ತು ಕುದುರೆ ಮೊದಲಾದವುಗಳ ರಕ್ಷಣೆ ಮತ್ತು ವೃದ್ಧಿ ಮಾಡಿ, ಹಾಲು ಮೊದಲಾದವುಗಳನ್ನು ಸೇವಿಸಿ ನಿರಂತರ ಆನಂದ ಪಡೆಯಿರಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ತ್ವಮಾಯಸಂ ಪ್ರತಿ ವರ್ತಯೋ ಗೋ-ರ್ದಿವೋ ಅಶ್ಮಾನಮುಪನೀತಮೃಭ್ವಾ ।
ಕುತ್ಸಾಯ ಯತ್ರ ಪುರುಹೂತ ವನ್ವ-ಞ್ಛುಷ್ಣಮನಂತೈಃ ಪರಿಯಾಸಿ ವಧೈಃ ॥೯॥

ಪದಾರ್ಥ:- ಹೇ **[ವನ್ವನ್]** ಉತ್ತಮವಾಗಿ ಸೇವಿಸುವ ಮತ್ತು **[ಪುರುಹೂತ]** ಬಹಳ ಮನುಷ್ಯರನ್ನು ಈರ್ಷ್ಯೆಯಿಂದ ಕರೆಯುವ ಮನುಷ್ಯನೇ! **[ತ್ವಮ್]** ನೀನು ಹೇಗೆ ಸೂರ್ಯನು **[ದಿವಃ]** ದಿವ್ಯಸುಖವನ್ನು ಕೊಡುವ ಪ್ರಕಾಶದಿಂದ ಅಂಧಕಾರವನ್ನು ದೂರಮಾಡಿ **[ಅಶ್ಮಾನಮ್]** ವ್ಯಾಪ್ತವಾಗುವ **[ಉಪನೀತಮ್]** ತನ್ನ ಸಮೀಪಕ್ಕೆ ಬಂದ ಮೇಘವನ್ನು ಛಿನ್ನ-ಭಿನ್ನ ಮಾಡಿ ಜಗತ್ತಿಗೆ ಕಳುಹಿಸುವನೋ ಹಾಗೆ **[ಋಭ್ವಾ]** ಮೇಧಾವಿ ಅಂದರೆ ಧೀರ ಬುದ್ಧಿಯ ಪುರುಷನೊಂದಿಗೆ **[ಆಯಸಮ್]** ಲೋಹಗಳಿಂದ ಮಾಡಿದ ಶಸ್ತ್ರಾಸ್ತ್ರಗಳನ್ನು ತೆಗೆದುಕೊಂಡು **[ಕುತ್ಸಾಯ]** ವಜ್ರಕ್ಕಾಗಿ **[ಶುಷ್ಣಮ್]** ಶತ್ರುಗಳ ಪರಾಕ್ರಮವನ್ನು ಶುಷ್ಕಗೊಳಿಸುವ ಬಲವನ್ನು ಧಾರಣ ಮಾಡುತ್ತಾ **[ಯತ್ರ]** ಎಲ್ಲಿ ಗೋವುಗಳನ್ನು ಕೊಲ್ಲವರೋ ಅಲ್ಲಿ ಅವನನ್ನು **[ಅನಂತೈಃ]** ಅಸಂಖ್ಯಾತರಾದ **[ವಧೈಃ]** ಗೋಹಿಂಸಕರನ್ನು ಕೊಲ್ಲುವ ಉಪಾಯಗಳಿಂದ **[ಪರಿಯಾಸಿ]** ಎಲ್ಲ ಕಡೆಗಳಿಂದ ಪ್ರಾಪ್ತರಾಗುವರೋ, ಅವರನ್ನು **[ಗೋಃ]** ಗೋವು ಮೊದಲಾದ ಪಶುಗಳ ಸಮೀಪದಿಂದ **[ಪ್ರತಿ ವರ್ತಯಃ]** ಓಡಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ಹೇ ಮನುಷ್ಯರೇ! ನೀವು ಹೇಗೆ ಸೂರ್ಯನು ಮೋಡಗಳ ಮಳೆ ಮತ್ತು ಅಂಧಕಾರವನ್ನು ದೂರ ಮಾಡಿ ಎಲ್ಲರಿಗೂ ಹರ್ಷ-ಆನಂದಗೊಳಿಸುವನೋ, ಹಾಗೆ ಗೋವು ಮೊದಲಾದ ಪಶುಗಳನ್ನು ರಕ್ಷಿಸಿ ಅವುಗಳನ್ನು ಕೊಲ್ಲುವವರನ್ನು ತಡೆದು ನಿರಂತರ ಸುಖಿಗಳಾಗಿರಿ. ಈ ಕಾರ್ಯವು ಬುದ್ಧಿವಂತರ ಸಹಾಯದ ಹೊರತು ಸಾಧ್ಯವಾಗುವುದಿಲ್ಲ. ಆದುದರಿಂದ ಬುದ್ಧಿವಂತರ ಸಹಾಯದಿಂದಲೇ ಉಕ್ತ ಕಾರ್ಯಗಳ ಆಚರಣೆ ಮಾಡಿರಿ.

ಮತ್ತೆ ಮನುಷ್ಯನು ಏನು ಮಾಡಬೇಕು ಎಂಬುದನ್ನು ಮುಂದಿನ ಮಂತ್ರದಲ್ಲಿ ತಿಳಿಸಲಾಗಿದೆ.

ಪುರಾ ಯತ್ ಸೂರಸ್ತಮಸೋ ಅಪೀತೇ-ಸ್ತಮದ್ರಿವಃ ಫಲಿಗಂ ಹೇತಿಮಸ್ಯ ।
ಶುಷ್ಣಸ್ಯ ಚಿತ್ ಪರಿಹಿತಂ ಯದೋಜೋ ದಿವಸ್ಪರಿ ಸುಗ್ರಥಿತಂ ತದಾದಃ ॥೧೦॥

ಪದಾರ್ಥ:- [ಅದ್ರಿವಃ] ಯಾವನ ರಾಜ್ಯದಲ್ಲಿ ಪ್ರಶಂಸಿತವಾದ ಪರ್ವತಗಳಿವೆಯೋ, ಹಾಗೆ ವಿಖ್ಯಾತನಾದ ರಾಜನೇ! ನಿನ್ನಂತೆ **[ಸೂರಃ]** ಸೂರ್ಯನು **[ಫಲಿಗಮ್]** ಮೇಘವನ್ನು ಛಿನ್ನ-ಭಿನ್ನ ಮಾಡಿ **[ತಮಸಃ]** ಅಂಧಕಾರದ [ಅಪೀತೇಃ] ವಿನಾಶ ಮಾಡುವಂತೆ [ದಿವಃ] ಪ್ರಕಾಶದಿಂದ ಪ್ರಕಾಶವಾಗುವಂತೆ, ನಿನ್ನ ಸೇನೆಯಿಂದ **[ತಮ್]** ಆ ಶತ್ರು ಬಲವನ್ನು [ಆ ಅದಃ] ನಾಶಗೊಳಿಸು. **[ಯತ್]** ಯಾವುದು **[ಪುರಾ]** ಮೊದಲು ನಿವೃತ್ತವಾಗುವುದೋ ಅದನ್ನು **[ಸುಗ್ರಥಿತಮ್]** ಚೆನ್ನಾಗಿ ಬಂಧಿಸಿ ನಿಲ್ಲಿಸು. **[ಯತ್]** ಯಾವುದು **[ಅಸ್ಯ]** ಇದರ **[ಪರಿಹಿತಮ್]** ಎಲ್ಲ

ಕಡೆಗಳಿಂದ ಸುಖವನ್ನು ಕೊಡುವ **[ಓಜಃ]** ಬಲವಿದೆಯೋ **[ತತ್]** ಅದನ್ನು ನಿವೃತ್ತಗೊಳಿಸಿ **[ಶುಷ್ಣಸ್ಯ]** ಶುಷ್ಕಿಸುವಂತೆ ಮಾಡುವ ಶತ್ರುಗಳನ್ನು **[ಪರಿ]** ಎಲ್ಲ ಕಡೆಗಳಿಂದ **[ಚಿತ್]** ಕೂಡ **[ಹೇತಿಮ್]** ವಜ್ರವನ್ನು ಅವನ ಕೈಯಿಂದ ಬೀಳಿಸು. ಅದರಿಂದ ಈ ಗೋವುಗಳನ್ನು ಕೊಲ್ಲುವವನು ಇರದಿರಲಿ.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರವಿದೆ. ಹೇ ರಾಜಪುರುಷರೇ! ಹೇಗೆ ಸೂರ್ಯನು ಮೋಡವನ್ನು ಕೊಂದು ಮತ್ತು ಅದನ್ನು ಭೂಮಿಯ ಮೇಲೆ ಬೀಳಿಸಿ ಎಲ್ಲ ಪ್ರಾಣಿಗಳನ್ನು ಪ್ರಸನ್ನಗೊಳಿಸುವನೋ, ಹಾಗೆಯೇ ಗೋವುಗಳನ್ನು ಕೊಲ್ಲುವವನನ್ನು ಕೊಂದು ಗೋವು ಮೊದಲಾದ ಪಶುಗಳನ್ನು ನಿರಂತರ ಸುಖಪಡಿಸಿರಿ.

ಮತ್ತೆ ರಾಜ ಮತ್ತು ಪ್ರಜೆಗಳ ಕಾರ್ಯವನ್ನು ಹೇಳಲಾಗಿದೆ.

ಅನು ತ್ವಾ ಮಹೀ ಪಾಜಸೀ ಅಚಕ್ರೇ ದ್ಯಾವಾಕ್ಷಾಮಾ ಮದತಾಮಿಂದ್ರ ಕರ್ಮನ್ ।
ತ್ವಂ ವೃತ್ರಮಾಶಯಾನಂ ಸಿರಾಸು ಮಹೋ ವಜ್ರೇಣ ಸಿಷ್ವಪೋ ವರಾಹುಮ್ ॥೧೧॥

ಪದಾರ್ಥ:- ಹೇ **[ಇಂದ್ರ]** ಪರಮೈಶ್ವರ್ಯವನ್ನು ಪಡೆದ ಸಭಾಧ್ಯಕ್ಷ ಮೊದಲಾದ ಸಜ್ಜನರೇ! **[ತ್ವಮ್]** ತಾವು ಸೂರ್ಯನು ಹೇಗೆ **[ವೃತ್ರಮ್]** ಮೇಘವನ್ನು ಛಿನ್ನ-ಭಿನ್ನಗೊಳಿಸುವನೋ ಹಾಗೆ **[ಸಿರಾಸು]** ಬಂಧನರೂಪ ನಾಡಿಗಳಲ್ಲಿ **[ಮಹಃ]** ದೊಡ್ಡ **[ವಜ್ರೇಣ]** ಶಸ್ತ್ರ ಮತ್ತು ಅಸ್ತ್ರಗಳ ಸಮೂಹದಿಂದ **[ವರಾಹುಮ್]** ಧರ್ಮಯುಕ್ತ ಉತ್ತಮ ವ್ಯವಹಾರಗಳು ಅಥವಾ ಧಾರ್ಮಿಕ ಜನರನ್ನು ಕೊಲ್ಲುವ ದುಷ್ಟಶತ್ರುಗಳನ್ನು ಕೊಂದು **[ಆಶಯಾನಮ್]** ಯಾವನು ಎಲ್ಲ ಕಡೆಗಳಿಂದ ಗಾಢ ನಿದ್ರೆಯಲ್ಲಿರುವವನಂತೆ **[ಸಿಷ್ವಪಃ]** ಮಲಗಿಸು. ಅದರಿಂದ **[ಮಹೀ]** ದೊಡ್ಡ **[ಪಾಜಸೀ]** ರಕ್ಷಣೆ ಮಾಡುವ ಮತ್ತು ತನ್ನ ಪ್ರಕಾಶಪಡಿಸುವುದರಲ್ಲಿ **[ಅಚಕ್ರೇ]** ನಿಲ್ಲದಂತಹ **[ದ್ಯಾವಾಕ್ಷಮಾ]** ಸೂರ್ಯ ಮತ್ತು ಪೃಥಿವೀಯು **[ತ್ವಾ]** ತಮಗೆ ಪ್ರಾಪ್ತವಾಗಿ ಅವುಗಳಿಂದ ಪ್ರತ್ಯೇಕ **[ಕರ್ಮನ್]** ರಾಜಕಾರ್ಯಗಳಲ್ಲಿ ನಿಮಗೆ ಅನುಕೂಲತೆಯಿಂದ ಆನಂದ ಕೊಡಲಿ.

ಭಾವಾರ್ಥ:- ಈ ಮಂತ್ರದಲ್ಲಿ ವಾಚಕಲುಪ್ತೋಪಮಾಲಂಕಾರವಿದೆ. ರಾಜಪುರುಷರು ವಿನಯ ಮತ್ತು ಪರಾಕ್ರಮದಿಂದ ದುಷ್ಟಶತ್ರುಗಳನ್ನು ಬಂಧಿಸುವುದು, ಕೊಲ್ಲುವುದು ಮತ್ತು ನಿವಾರಿಸುವುದು ಅಂದರೆ ಅವರನ್ನು ಧಾರ್ಮಿಕ ಮಿತ್ರರನ್ನಾಗಿ ಮಾಡಿ ಸಮಸ್ತ ಪ್ರಜೆಗಳನ್ನು ಉತ್ತಮ ಕರ್ಮಗಳಲ್ಲಿ ಪ್ರವೃತ್ತರನ್ನಾಗಿ ಮಾಡಿ ಆನಂದಿತರಾಗಬೇಕು.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ತ್ವಮಿಂದ್ರ ನರ್ಯೋ ಯಾँ ಅವೋ ನೄನ್ ತಿಷ್ಠಾ ವಾತಸ್ಯ ಸುಯುಜೋ ವಹಿಷ್ಠಾನ್ । ಯಂ
ತೇ ಕಾವ್ಯ ಉಶನಾ ಮಂದಿನಂ ದಾದ್ ವೃತ್ರಹಣಂ ಪಾರ್ಯಂ ತತಕ್ಷ ವಜ್ರಮ್ ॥೧೨॥

ಪದಾರ್ಥ:- ಹೇ **[ಇಂದ್ರ]** ಪ್ರಜಾಪಾಲನೆ ಮಾಡುವ **[ಕಾವ್ಯಃ]** ಧೀರ, ಉತ್ತಮ ಬುದ್ಧಿವಂತನ ಪುತ್ರನೇ! **[ಉಶನಾ]** ಧರ್ಮದ ಕಾಮನೆ ಮಾಡುವ **[ನರ್ಯಃ]** ಮನುಷ್ಯರಲ್ಲಿ ಸಾಧುಶ್ರೇಷ್ಠರಾದ ಜನರೇ! **[ತ್ವಮ್]** ತಾವು **[ಯಾನ್]** ಯಾವ **[ವಹಿಷ್ಠಾನ್]** ಅತಿಯಾದ ವಿದ್ಯಾಧರ್ಮವನ್ನು ಪ್ರಾಪ್ತಿಮಾಡಿಸುವ **[ವಾತಸ್ಯ]** ಪ್ರಾಣದ ಮಧ್ಯೆ ಯೋಗಾಭ್ಯಾಸದಿಂದ **[ಸುಯುಜಃ]** ಚೆನ್ನಾಗಿ ಕೂಡಿರುವಂತಹ ಯೋಗಿಯು **[ನೄನ್]** ಧಾರ್ಮಿಕ ಜನರ **[ಅವಃ]** ರಕ್ಷಣೆ ಮಾಡುತ್ತಾನೋ, ಅವನೊಂದಿಗೆ ಧರ್ಮದಲ್ಲಿ **[ತಿಷ್ಠ]** ಸ್ಥಿರರಾಗಿರಿ. ಯಾವ **[ತೇ]** ತಮಗಾಗಿ **[ಯಮ್]**

ಯಾವ [ವೃತ್ರಹಣಮ್] ಶತ್ರುಗಳನ್ನು ಕೊಲ್ಲುವ ವೀರನು [ಮಂದಿನಮ್] ಪ್ರಶಂಸೆಗೆ ಯೋಗ್ಯನು [ಪಾರ್ಯಂ] ಯಾವನಿಂದ ಪೂರ್ಣಕಾರ್ಯವಾಗುವುದೋ ಆ ಮನುಷ್ಯನನ್ನು [ದಾತ್] ಕೊಡಲಿ ಅಥವಾ ಯಾವ ಶತ್ರುಗಳ ಮೇಲೆ [ವಜ್ರಮ್] ಅತಿಹರಿತವಾದ ಶಸ್ತ್ರ ಮತ್ತು ಅಸ್ತ್ರಗಳನ್ನು [ತತಕ್ಷ] ಎಸೆಯಲಿ. ಅವು ಅವುಗಳೊಂದಿಗೆ ಕೂಡ ಧರ್ಮದಿಂದ ವರ್ತಿಸಲಿ.

ಭಾವಾರ್ಥ:- ಹೇಗೆ ರಾಜಪುರುಷರು ಪರಮೇಶ್ವರನ ಉಪಾಸನೆ ಮಾಡಲು, ಓದಲು ಮತ್ತು ಉಪದೇಶ ಮಾಡುವ ಹಾಗೂ ಉತ್ತಮ ವ್ಯವಹಾರಗಳಲ್ಲಿ ಸ್ಥಿರರಾದ ಪ್ರಜೆಗಳು ಮತ್ತು ಸೇನೆಯನ್ನು ರಕ್ಷಿಸುವರೋ ಹಾಗೆ ಅವರೂ ಕೂಡ ಅವರನ್ನು ನಿರಂತರ ರಕ್ಷಣೆ ಮಾಡಲಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ತ್ವಂ ಸೂರೋ ಹರಿತೋ ರಾಮಯೋ ನೄನ್ ಭರಚ್ಚಕ್ರಮೇತಶೋ ನಾಯಮಿಂದ್ರ ।
ಪ್ರಾಸ್ಯ ಪಾರಂ ನವತಿಂ ನಾವ್ಯಾನಾ-ಮಪಿ ಕರ್ತಮವರ್ತಯೋಽಯಜ್ಯೂನ್ ॥೧೩॥

ಪದಾರ್ಥ:- ಹೇ [ಇಂದ್ರ] ಐಶ್ವರ್ಯವನ್ನು ಕೊಡುವ ಸಭಾಧ್ಯಕ್ಷನೇ! **[ತ್ವಮ್]** ನೀನು **[ಅಯಮ್]** ಈ **[ಸೂರಃ]** ಸೂರ್ಯಲೋಕವು ಹೇಗೆ **[ಹರಿತಃ]** ಕಿರಣಗಳನ್ನು ಅಥವಾ ಹೇಗೆ **[ಏತಶಃ]** ಉತ್ತಮ ಕುದುರೆಯು **[ಚಕ್ರಮ್]** ಯಾವುದರಿಂದ ರಥವು ಚಲಿಸುವುದೋ ಅದು **[ನ]** ಅಂತೆ **[ಅಯಜ್ಯೂನ್]** ವಿಷಯಗಳಲ್ಲಿ ತೊಡಗದಿರುವ ಮತ್ತು **[ನೄನ್]** ಪ್ರಜೆಗಳಿಗೆ ಧರ್ಮದ ಪ್ರಾಪ್ತಿ ಮಾಡಿಸುವ ಮನುಷ್ಯರ **[ಭರತ್]** ಪುಷ್ಟಿ ಮತ್ತು ಪಾಲನೆ ಮಾಡಿರಿ ಹಾಗೂ **[ನಾವ್ಯಾನಾಮ್]** ನೌಕೆಗಳಿಂದ ಪಾರಾಗಲು ಯೋಗ್ಯವಾದ ಯಾವ **[ನವತಿಮ್]** ಜಲಾಶಯಗಳಲ್ಲಿ ಚಲಿಸುವುದಕ್ಕಾಗಿ ರಥಗಳನ್ನು **[ಪಾರಮ್]** ಸಮುದ್ರದ ಆಚೆ **[ಪ್ರಾಸ್ಯ]** ಉತ್ತಮತೆಯಿಂದ ಕಳುಹಿಸಿರಿ. ಹಾಗೂ ಆ ಉಕ್ತ ಪುರುಷಾರ್ಥಿಗಳನ್ನು **[ಅಪಿ]** ಕೂಡ **[ಕರ್ತಮ್]** ಬಾವಿ ತೋಡಲು ಮತ್ತು ಕಾರ್ಯಗಳನ್ನು ಮಾಡಲು **[ಅವರ್ತಯಃ]** ಪ್ರವೃತ್ತ ಪಡಿಸಿರಿ ಮತ್ತು ತಾವು ಇಲ್ಲಿ ನಮ್ಮನ್ನು ಸದಾ **[ರಮಯಃ]** ಆನಂದದಿಂದ ರಮಿಸಿರಿ.

ಭಾವಾರ್ಥ:- ಈ ಮಂತ್ರದಲ್ಲಿ ಲುಪ್ತೋಪಮಾಲಂಕಾರ ಮತ್ತು ಶ್ಲೇಷಾಲಂಕಾರಗಳಿವೆ. ಹೇಗೆ ಸೂರ್ಯನು ಎಲ್ಲರನ್ನೂ ತಮ್ಮ ತಮ್ಮ ಕಾರ್ಯಗಳಲ್ಲಿ ತೊಡಗಿಸುವನೋ, ಹಾಗೆ ಉತ್ತಮ ಶಾಸ್ತ್ರವನ್ನು ತಿಳಿದ ವಿದ್ವಾಂಸರು ಮೂರ್ಖರನ್ನು ಶಾಸ್ತ್ರ ಮತ್ತು ಶರೀರ ಕರ್ಮಗಳಲ್ಲಿ ಪ್ರವೃತ್ತರನ್ನಾಗಿ ಮಾಡಿ ಎಲ್ಲ ಸುಖಗಳನ್ನು ಸಿದ್ಧಪಡಿಸಲಿ.

ಮತ್ತೆ ಅದೇ ವಿಷಯವನ್ನು ಹೇಳಲಾಗಿದೆ.

ತ್ವಂ ನೋ ಅಸ್ಯಾ ಇಂದ್ರ ದುರ್ಹಣಾಯಾಃ ಪಾಹಿ ವಜ್ರಿವೋ ದುರಿತಾದಭೀಕೇ । ಪ್ರ ನೋ
ವಾಜಾನ್ ರಥ್ಯೋ ೩ ಅಶ್ವಬುಧ್ಯಾ -ನಿಷೇ ಯಂಧಿ ಶ್ರವಸೇ ಸೂನೃತಾಯೈ ॥೧೪॥

ಪದಾರ್ಥ:- [ವಜ್ರಿವಃ] ಯಾವನಲ್ಲಿ ಪ್ರಶಂಸಿತ ವಿಶೇಷ ಜ್ಞಾನದಿಂದ ಕೂಡಿದ ನೀತಿಯು ವಿದ್ಯಮಾನ ವಾಗಿದೆಯೋ ಅವನು [ಇಂದ್ರ] ಅಧರ್ಮದ ನಾಶ ಮಾಡುವ ಸೇನಾಧ್ಯಕ್ಷನೇ! [ರಥ್ಯಃ] ರಥವನ್ನು ತೆಗೆದುಕೊಂಡು ಹೋಗುವಂತಹ [ತ್ವಮ್] ನೀನು [ಅಭೀಕೇ] ಸಂಗ್ರಾಮದಲ್ಲಿ [ಅಸ್ಯಾಃ] ಈ ಪ್ರತ್ಯಕ್ಷ [ದುರ್ಹಣಾಯಾಃ] ದುಃಖದಿಂದ ಕೊಲ್ಲಲು ಯೋಗ್ಯವಾದ ಶತ್ರುಗಳ ಸೇನೆ ಮತ್ತು [ದುರಿತಾತ್] ದುಷ್ಟ ಆಚರಣೆಯಿಂದ [ನಃ] ನಮ್ಮನ್ನು [ಪಾಹಿ]

ರಕ್ಷಿಸು. ಹಾಗೂ [ಇಷೇ] ಇಚ್ಛೆ [ಶ್ರವಸೇ] ಕೇಳುವ ಅಥವಾ ಅನ್ನ ಮತ್ತು [ಸೂನೃತಾಯೈ] ಉತ್ತಮ ಸತ್ಯ ಹಾಗೂ ಪ್ರಿಯವಾಣಿಗಾಗಿ [ನಃ] ನಮ್ಮನ್ನು [ಅಶ್ವಬುಧ್ಯಾನ್] ಅಂತರಿಕ್ಷದಲ್ಲಿರುವ ಅಗ್ನಿ ಮೊದಲಾದ ಪದಾರ್ಥಗಳನ್ನು ಚಲಿಸುವ ಅಥವಾ ಹೆಚ್ಚಿಸುವುದನ್ನು ಯಾವನು ತಿಳಿದಿರುವನೋ ಅವನನ್ನು ಮತ್ತು [ವಾಜಾನ್] ವಿಶೇಷ ಜ್ಞಾನ ಅಥವಾ ವೇಗಯುಕ್ತ ಸಂಬಂಧಿಗಳನ್ನು [ಪ್ರ ಯಂಧಿ] ಚೆನ್ನಾಗಿ ಕೊಡು.

ಭಾವಾರ್ಥ:- ತನ್ನ ಸೇನೆಯನ್ನು ಶತ್ರುಗಳು ಕೊಲ್ಲುವುದರಿಂದ ಮತ್ತು ದುಷ್ಟ ಆಚರಣೆಯಿಂದ ಸೇನಾಧೀಶನು ಪ್ರತ್ಯೇಕವಾಗಿ ಇಡಬೇಕು. ಹಾಗೂ ವೀರರಿಗಾಗಿ ಬಲ ಹಾಗೂ ಅವರ ಇಚ್ಛೆಗೆ ಅನುಕೂಲವಾಗಿ ಬಲವನ್ನು ವೃದ್ಧಿಸುವ, ಕುಡಿಯಲು ಯೋಗ್ಯವಾದ ಪದಾರ್ಥಗಳು ಹಾಗೂ ಪುಷ್ಕಲ ಅನ್ನವನ್ನು ಕೊಡಲಿ. ಅವರನ್ನು ಪ್ರಸನ್ನರಾಗಿ ಮತ್ತು ಶತ್ರುಗಳನ್ನು ಉತ್ತಮವಾಗಿ ಗೆದ್ದು ಪ್ರಜೆಗಳನ್ನು ನಿರಂತರ ರಕ್ಷಿಸಲಿ.

ಈಗ ಈಶ್ವರನ ವಿಷಯವನ್ನು ತಿಳಿಸಲಾಗಿದೆ.

ಮಾ ಸಾ ತೇ ಅಸ್ಮತ್ ಸುಮತಿರ್ವಿ ದಸದ್ ವಾಜಪ್ರಮಹಃ ಸಮಿಷೋ ವರಂತ ।
ಆ ನೋ ಭಜ ಮಘವನ್ ಗೋಷ್ವರ್ಯೋ ಮಂಹಿಷ್ಠಾಸ್ತೇ ಸಧಮಾದಃ ಸ್ಯಾಮ ॥೧೫॥

ಪದಾರ್ಥ:- ಹೇ [ವಾಜಪ್ರಮಹಃ] ವಿಶೇಷ ಜ್ಞಾನ ಅಥವಾ ವಿದ್ವಾಂಸರಿಂದ ಉತ್ತಮ ಸತ್ಕಾರ ಪಡೆದ [ಮಘವನ್] ಪ್ರಶಂಸಿತ ಸತ್ಕಾರಕ್ಕೆ ಯೋಗ್ಯವಾದ ಧನದಿಂದ ಕೂಡಿದ ಜಗದೀಶ್ವರನೇ! **[ತೇ]** ನಿನ್ನ ಕೃಪೆಯಿಂದ ಯಾವನು **[ಸುಮತಿಃ]** ಉತ್ತಮ ಬುದ್ಧಿ ಪಡೆದಿರುವನೋ **[ಸಾ]** ಅವನು **[ಅಸ್ಮತ್]** ನಮ್ಮ ಹತ್ತಿರದಲ್ಲಿ **[ಮಾ ವಿ ವಸತ್]** ವಿನಾಶವಾಗದಿರಲಿ. ಎಲ್ಲ ಮನುಷ್ಯರು **[ಇಷಃ]** ಇಚ್ಛೆ ಮತ್ತು ಅನ್ನ ಮೊದಲಾದ ಪದಾರ್ಥಗಳನ್ನು **[ಪರಿ ವರಂತ]** ಉತ್ತಮವಾಗಿ ಸ್ವೀಕರಿಸಲಿ. **[ಅರ್ಯಃ]** ಸ್ವಾಮಿ ಈಶ್ವರನಾದ ನೀನು **[ನಃ]** ನಮ್ಮನ್ನು **[ಗೋಷು]** ಪೃಥಿವೀ, ವಾಣಿ ಧೇನು ಮತ್ತು ಧರ್ಮದ ಪ್ರಕಾಶದಲ್ಲಿ **[ಆ ಭಜ]** ಬಯಸುವಂತಾಗಲಿ. ಅದರಿಂದ **[ಮಂಹಿಷ್ಠಾಃ]** ಅತ್ಯಂತ ಸುಖ ಮತ್ತು ವಿದ್ಯೆ ಮೊದಲಾದ ಪದಾರ್ಥಗಳಿಂದ ಬುದ್ಧಿಯನ್ನು ಪಡೆದ ನಾವು **[ತೇ]** ನಿನ್ನ **[ಸಧಮಾದಃ]** ಅತ್ಯಾನಂದದಿಂದ ಅಂದರೆ **[ಸ್ಯಾಮ]** ನಿನ್ನ ವಿಚಾರದಲ್ಲಿ ಮಗ್ನರಾಗಲಿ.

ಭಾವಾರ್ಥ:- ಉತ್ತಮ ಬುದ್ಧಿ ಮೊದಲಾದವುಗಳ ಪ್ರಾಪ್ತಿಗಾಗಿ ಮಾನವರು ಪರಮೇಶ್ವರನನ್ನು ಸ್ವಾಮಿ ಎಂದು ಸ್ವೀಕರಿಸಿ ಮತ್ತು ಅವನ ಪ್ರಾರ್ಥನೆ ಮಾಡಬೇಕು. ಅದರಿಂದ ಹೇಗೆ ಈಶ್ವರನ ಗುಣ ಕರ್ಮ ಸ್ವಭಾವಗಳಿವೆಯೋ, ಹಾಗೆ ತಮ್ಮನ್ನು ಸಿದ್ಧ ಪಡಿಸಿಕೊಂಡು ಪರಮಾತ್ಮನೊಂದಿಗೆ ಆನಂದದಲ್ಲಿ ನಿರಂತರ ಸ್ಥಿತರಾಗಬೇಕು.

ಈ ಸೂಕ್ತದಲ್ಲಿ ಸ್ತ್ರೀ-ಪುರುಷರ, ಮತ್ತು ರಾಜ-ಪ್ರಜೆಗಳ ಮೊದಲಾದ ಧರ್ಮದ ವರ್ಣನೆ ಇರುವುದರಿಂದ ಪೂರ್ವ ಸೂಕ್ತಾರ್ಥದೊಂದಿಗೆ ಈ ಅರ್ಥದ ಸಂಬಂಧವಿದೆ ಎಂದು ತಿಳಿಯಬೇಕು.

ಹೇ ಜಗದೀಶ್ವರ! ಹೇಗೆ ನಿನ್ನ ಕೃಪಾಕಟಾಕ್ಷದ ಸಹಾಯವು ಯಾವನಿಗೆ ಪ್ರಾಪ್ತವಾಗಿರುವುದೋ, ಆ ನಾನು ಋಗ್ವೇದದ ಪ್ರಥಮ ಅಷ್ಟಕದ ಭಾಷ್ಯವನ್ನು ಸುಖವಾಗಿ ಮಾಡಿದೆನು. ಹಾಗೆಯೇ ಮುಂದೆಯೂ ಆ ಋಗ್ವೇದದ ಭಾಷ್ಯವೂ ನನ್ನಿಂದ ಮಾಡಲ್ಪಡಲಿ.

ಈ ಪ್ರಥಮ ಅಷ್ಟಕದ ಎಂಟನೇ ಅಧ್ಯಾಯದ ೨೬ನೇ ವರ್ಗ ಮತ್ತು ೧೨೧ ಸೂಕ್ತ ಸಮಾಪ್ತ

॥ ಇತಿ ಅಷ್ಟಮೋಽಧ್ಯಾಯಃ ॥